ಕರ್ನಾಟಕ ಸರ್ಕಾರ

ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

ಸಂಪಾದಕರು : ಡಾ. ಆರ್. ಗೋಪಾಲ್



ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು
2013

ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

ದಿನಾಂಕ 12 ಮತ್ತು 13ನೇ ಏಪ್ರಿಲ್ 2011 ರಂದು ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯಲ್ಲಿ ನಡೆದ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳು

ಸಂಪಾದಕರು

ಡಾ. ಆರ್. ಗೋಪಾಲ್

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ವಸ್ತುಪ್ರದರ್ಶನ ಆವರಣ, ಮೈಸೂರು - ೫೭೦ ೦೧೦
೨೦೧೩

BENGALURU JILLEYA ITIHASA MATTU PURATATVA

Publisher
Commissioner
Department of Archaeology, Museums and Heritage
Exhibition Complex, Mysore - 570 010
Ph: 0821-2424673, 2424674

First Edition : 2013

Copies: 500
Pages : 582 + xiii

Price : ₹ 400-00

Cover Page : Sri Muralidhar, Suhas Graphics, Bangalore
DTP : Sri Sadguru Printers, Mysore
Printed at : Sri Sadguru Printers, Mysore

ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

ಪ್ರಕಾಶಕರು
ಆಯಕ್ತರು
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ವಸ್ತುಪ್ರದರ್ಶನ ಆವರಣ, ಮೈಸೂರು – ೫೭೦ ೦೧೦
ದೂರವಾಣಿ : ೦೮೨೧– ೨೪೨೪೬೭೩ / ೨೪೨೪೬೭೪

ಮೊದಲ ಮುದ್ರಣ : ೨೦೧೩

ಪುಟಗಳು : ೫೮೨ + xiii   ಪ್ರತಿಗಳು : ೫೦೦

ಬೆಲೆ : ರೂ. ೪೦೦

ಮುಖಪುಟ ವಿನ್ಯಾಸ : ಸುಹಾಸ್ ಗ್ರಾಫಿಕ್ಸ್, ಬೆಂಗಳೂರು
ಅಕ್ಷರ ಜೋಡಣೆ ಮತ್ತು ಮುದ್ರಣ : ಶ್ರೀ ಸದ್ಗುರು ಪ್ರಿಂಟರ್ಸ್, ಮೈಸೂರು – ೫೭೦ ೦೦೪

ಜಗದೀಶ ಶೆಟ್ಟರ
ಮುಖ್ಯ ಮಂತ್ರಿಗಳು
ನಂ. ಸಿಎಂ/ಪಿಎಸ್/143/2012

ವಿಧಾನ ಸೌಧ
ಬೆಂಗಳೂರು-560 001

ಸಂದೇಶ

ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಮಿಥಿಕ್ ಸೊಸೈಟಿಯ ಸಹಯೋಗದೊಂದಿಗೆ 12.4.2011 ಹಾಗೂ 13.4.2011ರಂದು ಹಮ್ಮಿಕೊಂಡಿದ್ದ ಬೆಂಗಳೂರು ನಗರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಕುರಿತಾದ ವಿಚಾರ ಸಂಕಿರಣದ ಫಲಶೃತಿಯಾಗಿ ಬೆಂಗಳೂರು ನಗರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವಕ್ಕೆ ಸಂಬಂಧಿಸಿದ ಸಂಪುಟವನ್ನು ಪ್ರಕಟಿಸುತ್ತಿರುವುದು ಸಂತಸದ ಸಂಗತಿ.

ನಮ್ಮ ಸರ್ಕಾರದ ಅವಧಿಯಲ್ಲಿ ಬೆಂಗಳೂರು ಮಹಾನಗರದ ಹಿರಿಮೆಯ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿಯೂ ಸೇರಿದಂತೆ ರಾಜ್ಯಾದ್ಯಂತ ಎಲ್ಲಾ ವಲಯಗಳ ಸಬಲೀಕರಣಕ್ಕೆ ದಾಖಲೆ ನೆರವು ನೀಡಲಾಗಿದೆ. ಹಾಲಿ ಪ್ರಕಟಣೆಯೂ ಸೇರಿದಂತೆ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಉಪಯುಕ್ತ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಿರುವುದು ಶ್ಲಾಘನೀಯ. "ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ" ಕುರಿತಾದ ಪುಸ್ತಕವು ಓದುಗರಿಗೆ ಉಪಯುಕ್ತ ಮಾಹಿತಿಯನ್ನು ಒದಗಿಸಲಿ ಎಂದು ಆಶಿಸುತ್ತಾ, ಈ ಪ್ರಕಟಣೆಗೆ ಸರ್ವ ರೀತಿಯಲ್ಲಿಯೂ ಶುಭ ಹಾರೈಸುತ್ತೇನೆ.

(ಜಗದೀಶ ಶೆಟ್ಟರ)

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ
ಸಚಿವರು ಹಾಗೂ ಬಾಗಲಕೋಟೆ
ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಸಂಖ್ಯೆ: 22033167
ಫ್ಯಾಕ್ಸ್: 22253578

ಕೊಠಡಿ ಸಂಖ್ಯೆ: 339, 3ನೇ ಮಹಡಿ,
ವಿಧಾನ ಸೌಧ, ಬೆಂಗಳೂರು-560 001

ಸಂದೇಶ

2011ರ ಏಪ್ರಿಲ್ ಮಾಹೆಯ ದಿನಾಂಕ 12 ಮತ್ತು 13 ರಂದು ಬೆಂಗಳೂರಿನ ದಿ. ಮಿಥಿಕ್ ಸೊಸೈಟಿಯ ಸಹಯೋಗದೊಂದಿಗೆ ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ದಿ. ಮಿಥಿಕ್ ಸೊಸೈಟಿಯ ಸಭಾಂಗಣದಲ್ಲಿ ಬೆಂಗಳೂರು ನಗರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಕುರಿತಾದ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದು ನನಗೆ ಬಹಳ ಸಂತಸವನ್ನು ತಂದಿರುತ್ತದೆ.

ಕ್ರಿಪೂ. ಸು. 1000 ವರ್ಷಗಳಷ್ಟಾದರೂ ಹಿಂದಕ್ಕೆ ಹೋಗುವ ಬೆಂಗಳೂರು ಪ್ರದೇಶದ ಇತಿಹಾಸವು ವಿದ್ವಾಂಸರಿಗೆ ಮಾತ್ರವೇ ಅಲ್ಲದೆ ಜನಸಾಮಾನ್ಯರಿಗೂ ಒಂದು ಆಸಕ್ತಿಯ ವಿಷಯವಾಗಿದೆ. ಇದರ ಪುರಾತತ್ವ, ಇತಿಹಾಸ ಮತ್ತು ಸಂಸ್ಕೃತಿಯ ವಿವಿಧ ಮಜಲುಗಳನ್ನು ತಮ್ಮ ವಿದ್ವತ್ಪೂರ್ಣ ಲೇಖನಗಳಿಂದ ನಮ್ಮ ಮುಂದೆ ತೆರೆದಿಟ್ಟಿರುವ ಇತಿಹಾಸಕಾರರು, ಪುರಾತತ್ವ ಶಾಸ್ತ್ರಜ್ಞರು, ಸಾಹಿತಿಗಳು ಮತ್ತು ಇತರ ವಿದ್ವಾಂಸರ ಶ್ರಮವನ್ನು ಕಂಡು ವಿಸ್ಮಿತನಾಗಿದ್ದೇನೆ. ಈಗ ಆಗಿರುವ ಸಂಶೋಧನೆಗಳ ಫಲವನ್ನು ಉಣಬಡಿಸಿರುವುದರ ಜೊತೆಗೆ ಮುಂದೆ ಆಗಬೇಕಾಗಿರುವ ಸಂಶೋಧನೆ ಅಧ್ಯಯನ ಕುರಿತಂತೆಯೂ ಇವರುಗಳು ನಮಗೆ ಮಾಹಿತಿ ನೀಡಿ ಉಪಕರಿಸಿರುತ್ತಾರೆ.

ಈ ಕುತೂಹಲಭರಿತ ವಿಚಾರ ಸಂಕಿರಣದಲ್ಲಿ ವಿದ್ವಾಂಸರು ಮಂಡಿಸಿದ ಮಹತ್ವಪೂರ್ಣ ಲೇಖನಗಳನ್ನು ಸಂಗ್ರಹಿಸಿ ಸಮರ್ಥವಾಗಿ ಸಂಪಾದಿಸಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರ ಉಪಯೋಗಕ್ಕಾಗಿ ಪ್ರಕಟಿಸಿರುವುದು ನಿಜಕ್ಕೂ ಒಂದು ಪ್ರಶಂಸನೀಯ ಕಾರ್ಯವಾಗಿದೆ. ಈ ಸಂಪುಟವನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಹೊರತರುವಲ್ಲಿ ಯಶಸ್ಸನ್ನು ಕಂಡಿರುವ ಅಧಿಕಾರಿಗಳನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಗ್ರಂಥವು ಇಂದಿನ ಮತ್ತು ಮುಂದಿನ ಪೀಳಿಗೆಯ ಜ್ಞಾನ ಜಿಜ್ಞಾಸುಗಳಿಗೆ ಒಂದು ಅಪೂರ್ವ ಕೊಡುಗೆಯಾಗಿ ಪರಿಣಮಿಸಲಿ ಎಂದು ಮನದಾಳದಿಂದ ಹಾರೈಸುತ್ತೇನೆ.

(ಗೋವಿಂದ ಎಂ. ಕಾರಜೋಳ)

ಮುನ್ನುಡಿ

ಪ್ರಾಚೀನವೂ, ಪುರಾತನವೂ ಆದ ಇತಿಹಾಸದಲ್ಲಿ ಮಿಂದು, ಅತ್ಯಾಧುನಿಕತೆಯ ಕಂಪನ್ನು ಬೀರುತ್ತಿರುವ ಭಾರತೀಯ ನಗರಗಳಲ್ಲಿ ನಿಸ್ಸಂದೇಹವಾಗಿ ಬೆಂಗಳೂರು ಮುಖ್ಯವಾದುದು. ಬೆಂದಕಾಳೂರಿನ ನಗರವಾಗಿರದೆ ಬೆಂಗಳೂರು ಇಂದು ಇಡೀ ಪ್ರಪಂಚವನ್ನೇ ಸಿಲಿಕಾನ್ ವ್ಯಾಲಿಯ ಖ್ಯಾತಿಯಿಂದಾಗಿ ಬೆರಗುಗೊಳಿಸುತ್ತಿದೆ. ಇದೊಂದು ವೈಶಿಷ್ಟ್ಯವೇ ಸರಿ. ಇದು ಕನ್ನಡಿಗರೆಲ್ಲರಿಗೂ ಹೆಮ್ಮೆ ತರುವ ಸಂಗತಿ ಎಂದರೆ ಅತಿಶಯೋಕ್ತಿಯಲ್ಲ. ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಇತಿಹಾಸವನ್ನುಳ್ಳ ಬೆಂಗಳೂರಿನ ಇತಿಹಾಸ ಮತ್ತು ಪುರಾತತ್ವ ರೋಚಕವೂ ಹಾಗೂ ಬೋಧಪ್ರದವೂ ಆಗಿರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಇತ್ತೀಚಿನ ವರ್ಷಗಳಲ್ಲಿ ಜಿಲ್ಲಾವಾರು ಸಮ್ಮೇಳನಗಳನ್ನು ಏರ್ಪಡಿಸುತ್ತಿರುವುದು ಎಲ್ಲರೂ ಮೆಚ್ಚಬೇಕಾದ ಸಂಗತಿಯೇ ಹೌದು. ಈಗಾಗಲೇ ಅನೇಕ ಜಿಲ್ಲೆಗಳಲ್ಲಿ ಇತಿಹಾಸ ಮತ್ತು ಪುರಾತತ್ವಕ್ಕೆ ಸಂಬಂಧಿಸಿದಂತೆ ಸಮ್ಮೇಳನಗಳು ನಡೆದಿದ್ದು, ಆ ಸಮ್ಮೇಳನಗಳಲ್ಲಿ ವಿದ್ವಾಂಸರು ಮಂಡಿಸಿದ ಸಂಶೋಧನಾತ್ಮಕ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದೂ ಶ್ಲಾಘನೀಯ ವಿಷಯ. ಈ ಮಾಲಿಕೆಯಲ್ಲಿ ಕೆಲವು ತಿಂಗಳುಗಳ ಹಿಂದೆ ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ಬೆಂಗಳೂರು ಜಿಲ್ಲೆಯನ್ನು ಕುರಿತಂತೆ ಒಂದು ಸಮ್ಮೇಳನವನ್ನು ಏರ್ಪಡಿಸಲಾಗಿದ್ದಿತು. ಅದರಲ್ಲಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳನ್ನು ಈ ಇಲಾಖೆಯ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಕರ್ನಾಟಕದ ಇತಿಹಾಸ ಮತ್ತು ಪುರಾತತ್ವ ವಿಷಯಗಳಿಗೆ ಸಂಬಂಧಿಸಿದ ಸಾಹಿತ್ಯಕ್ಕೆ ಇದೊಂದು ಉಪಯುಕ್ತ ಕೊಡುಗೆಯಾಗಿದ್ದು, ಹತ್ತಾರು ವರ್ಷ ನಿಲ್ಲುವ ಕೃತಿಯಾಗಿದೆ. ಈ ದೃಷ್ಟಿಯಿಂದ ಇದೊಂದು ಉತ್ತಮ ಪರಾಮರ್ಶನ ಗ್ರಂಥವಾಗಿ ಉಳಿಯಬಲ್ಲ ಸತ್ವ ಹೊಂದಿದೆ.

ಈ ಸಂಪುಟದಲ್ಲಿ ಒಟ್ಟು 72 ಲೇಖನಗಳಿವೆ. ಇವುಗಳ ಹರವು ವಿಶಾಲವಾದುದು. ಇದರಲ್ಲಿ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳಿವೆ; ಆಕರಗಳಿಗೆ ಸಂಬಂಧಿಸಿದ ಲೇಖನಗಳಿವೆ; ಶಾಸನಗಳನ್ನು ಕುರಿತಾದ ಲೇಖನಗಳಿವೆ; ಕೆಲವು ರಾಜವಂಶಗಳ ಕಾಲಘಟ್ಟದಲ್ಲಿ ಈ ನಗರ ಯಾವರೀತಿ ಇತ್ತು ಎನ್ನುವುದರ ಪರಿಚಯವಿದೆ; ಕೆಲವು ಪಾಳೆಯಗಾರರ ಇತಿಹಾಸ ಇಲ್ಲಿ ಕಾಣಸಿಗುತ್ತದೆ; ಸ್ಥಳನಾಮಗಳ ಅಧ್ಯಯನವೂ ಇಲ್ಲಿ ಸೇರಿದೆ. ಬೆಂಗಳೂರಿಗೆ ಸೇರಿದ ವಿವಿಧ ಶೈಲಿಯ ದೇವಾಲಯಗಳ ವಿಷಯಗಳನ್ನು ಇಲ್ಲಿ ಗಮನಿಸಲಾಗಿದೆ. ಇಲ್ಲಿ ಕೋಟೆ-ಕೊತ್ತಲಗಳಿಗೂ ಅವಕಾಶವಿದೆ. ಬ್ಯಾಂಕಿಂಗ್ ಉದ್ಯಮ, ಹಬ್ಬ ಹರಿದಿನಗಳು ಮತ್ತು ಜಾತ್ರೆಗಳು ಹಾಗೂ ಪರಿಷೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಎಲ್ಲರಿಗೂ ಆಸಕ್ತಿಯನ್ನುಂಟು ಮಾಡುವ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೆಂಗಳೂರಿನ ಪಾತ್ರವನ್ನೂ ಇಲ್ಲಿ ಚರ್ಚಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಮಹಾತ್ಮ ಗಾಂಧೀಜಿಯವರಿಗೂ, ಬೆಂಗಳೂರಿಗೂ ಇದ್ದ ನಂಟನ್ನು ಇಲ್ಲಿ ದೀರ್ಘವಾಗಿ ವಿವರಿಸಲಾಗಿದೆ. ಇದೊಂದು ಅಪೂರ್ವ ಲೇಖನವೇ ಸರಿ. ಬೆಂಗಳೂರಿಗೆ ವಿಶಿಷ್ಟವಾದ ಕೆಲವು ಸ್ಥಳಗಳಿವೆ. ಬೆಂಗಳೂರು ಎಂದೊಡನೆ ಕಂಟೋನ್ಮೆಂಟ್ ನಮಗೆ ಜ್ಞಾಪಕಕ್ಕೆ ಬರುತ್ತದೆ. ಇಂತಹ ಬೆಂಗಳೂರಿನ ಕಂಟೋನ್ಮೆಂಟ್‌ಗೆ ಸಂಬಂಧಿಸಿದ ಕೆಲವು ನೋಟಗಳನ್ನು ಇಲ್ಲಿ ಕಾಣಬಹುದು. ಬೆಂಗೂರಿನ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್ ಮನೆ ಮಾತಾಗಿವೆ. ಈ ಸುಂದರ

ಉದ್ಯಾನಗಳಿಗೆ ಸಂಬಂಧಿಸಿದಂತೆ ಅನೇಕ ಐತಿಹಾಸಿಕ ಸಂಗತಿಗಳನ್ನು ಇಲ್ಲಿ ಕಲೆಹಾಕಲಾಗಿದೆ. ಬೆಂಗಳೂರು ಹಿಂದಿನ ಕಾಲದಿಂದಲೂ ಪತ್ರಿಕೋದ್ಯಮಕ್ಕೆ ಹೆಸರುವಾಸಿಯಾಗಿದ್ದಿತು. ಇಲ್ಲಿಂದ ಅನೇಕ ಪತ್ರಿಕೆಗಳು ಪ್ರಕಾಶನಗೊಳ್ಳುತ್ತಿದ್ದವು. ಅವುಗಳ ರೋಚಕ ಇತಿಹಾಸವನ್ನು ಇಲ್ಲಿ ವಿಶದವಾಗಿ ಗಮನಿಸಲಾಗಿದೆ. ಒಳಚರಂಡಿ ವ್ಯವಸ್ಥೆ ನಮ್ಮ ದೇಶದಲ್ಲಿ ಬೆಳವಣಿಗೆ ಹೊಂದದ ಸಮಯದಲ್ಲಿ ಬೆಂಗಳೂರಿಗೆ ಆ ಸುಯೋಗ ದೊರಕಿತ್ತು. ಅದರ ವಿವರಗಳು ಬೋಧಪ್ರದವಾಗಿವೆ. ಬೆಂಗಳೂರು ಅನೇಕ ಜಾತಿಗಳಿಗೆ ತವರೂರಾಗಿತ್ತು ಮತ್ತು ಬೆಂಗಳೂರಿನ ವಿಕಾಸದಲ್ಲಿ ಅವು ಪಾತ್ರ ವಹಿಸಿದ್ದವು. ಈ ಹಿನ್ನೆಲೆಯಲ್ಲಿ ಒಕ್ಕಲಿಗರ ಸಂಘ ಹಾಗೂ ಬಂಟರನ್ನು ಕುರಿತಾದ ಲೇಖನಗಳು ಪ್ರಸ್ತುತವೆನಿಸುತ್ತವೆ.

ಬೆಂಗಳೂರಿನ ಬೆಳವಣಿಗೆಗೆ ಅನೇಕ ದಿವಾನರು ಮತ್ತು ಅಧಿಕಾರಿಗಳು ವಿಶೇಷ ಕೊಡುಗೆಗಳನ್ನು ನೀಡಿದ್ದಾರೆನ್ನುವುದು ಗಮನಾರ್ಹ ಸಂಗತಿ. ದಿವಾನರುಗಳಾದ ಸರ್. ಕೆ. ಶೇಷಾದ್ರಿ ಅಯ್ಯರ್ ಮತ್ತು ವಿ. ಪಿ. ಮಾಧವರಾಯರಿಗೆ ಸಂಬಂಧಿಸಿದಂತೆ ಇರುವ ಲೇಖನ ಗಮನ ಸೆಳೆಯುತ್ತದೆ. ಪ್ರಥಮ ಮಹಾ ಯುದ್ಧದಲ್ಲಿ ಬೆಂಗಳೂರು ವಹಿಸಿದ ಪಾತ್ರವನ್ನು ಕುರಿತು ಇಲ್ಲಿ ವಿಮರ್ಶಿಸಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕೊಡುಗೆ ಏನೆಂಬುದನ್ನು ಇಲ್ಲಿ ವಿವರವಾಗಿ ವರ್ಣಿಸಲಾಗಿದೆ. ಅದೊಂದು ಸಂಚಲನ ಸಾಧನೆಯಾಗಿದ್ದಿತೆಂಬುದನ್ನು ಇಲ್ಲಿನ ಪ್ರಬಂಧ ಹೃದಯಂಗಮವಾಗಿ ವರ್ಣಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಬೆಂಗಳೂರಿಗೆ ವಲಸೆ ಬರುವವರ ಸಂಖ್ಯೆ ಹೆಚ್ಚಾಗಿದೆ ಎಂಬುದನ್ನು ಸಮಾಜ ಶಾಸ್ತ್ರ ವಿಜ್ಞಾನಿಗಳು ಹೇಳುತ್ತ ಬಂದಿದ್ದಾರೆ. ಇದು ಬೆಂಗಳೂರಿನ ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನದ ಮೇಲೆ ಏನು ಪರಿಣಾಮ ಬೀರುತ್ತಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಬೆಂಗಳೂರನ್ನು ಬ್ರಿಟಿಷರು ಆಳುತ್ತಿದ್ದಾಗ, ಅವರ ಉಪಯೋಗಕ್ಕಾಗಿ ಅನೇಕ ಕಟ್ಟಡಗಳನ್ನು ಕಟ್ಟಿಸಿದರು. ಅವುಗಳ ವಾಸ್ತು ಶೈಲಿಯ ವಿನ್ಯಾಸವೇ ಬೇರೆ; ಅದನ್ನೂ ಇಲ್ಲಿ ಗಮನಿಸಲಾಗಿದೆ.

ಕೆರೆ ಕಟ್ಟೆಗಳು ಒಂದು ನಗರದ ಜೀವನಾಡಿಗಳು ಎಂಬುದನ್ನು ಬೆಂಗಳೂರಿನ ನಿರ್ಮಾಪಕರು ಅರಿತಿದ್ದರು, ಅದರ ಕುರುಹಾಗಿ ಪ್ರಾಚೀನ ಕಾಲದಿಂದ ಇತ್ತೀಚಿನ ಕಾಲದವರೆಗೆ ನಿರ್ಮಿಸಲಾದ ಕೆರೆ ಕಟ್ಟೆಗಳ ವಿಷಯ ಇಲ್ಲಿ ಪ್ರಸ್ತಾಪಿತವಾಗಿದೆ. ಬೆಂಗಳೂರು ಈಗಂತೂ ಹೊಟೆಲುಗಳ ನಗರ ಎನ್ನುವ ಖ್ಯಾತಿಗೆ ಭಾಜನವಾಗಿದೆ. ಜನ ಸಾಮಾನ್ಯರಿಂದ ಹಿಡಿದು ಸಪ್ತತಾರಾ ಅಂತಸ್ತಿನ ಹತ್ತಾರು ಹೋಟೆಲುಗಳ ಬೆಂಗಳೂರಿನಲ್ಲಿ ಪ್ರಸಿದ್ಧಿ ಪಡೆದಿವೆ. ಅವೆಲ್ಲುವುಗಳ ವಿವರಗಳು ಇಲ್ಲಿ ಕಾಣಬರುತ್ತದೆ. ಹೀಗೆ ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದ ಎಲ್ಲ ಸಂಗತಿಗಳೂ ಇಲ್ಲಿ ಅಡಕವಾಗಿವೆ. ಅಂದರೆ ಒಂದು ಅರ್ಥದಲ್ಲಿ ಇದು ಬೆಂಗಳೂರಿನ ಜ್ಞಾನಕೋಶದಂತಿದೆ ಎಂದರೆ ಅತಿಶಯೋಕ್ತಿಯಲ್ಲ.

ಮೇಲೆ ಹೆಸರಿಸಿದ ಕೆಲವು ಲೇಖನಗಳು ಕೇವಲ ಸಂಶೋಧನಾತ್ಮಕ ಮಾತ್ರವಲ್ಲದೆ, ನಮ್ಮ ಅಧ್ಯಯನದಲ್ಲಿರುವ ಕೆಲವು ನ್ಯೂನ್ಯತೆಗಳ ಬಗೆಗೂ ನಮ್ಮ ಗಮನ ಸೆಳೆಯುತ್ತವೆ. ಉದಾಹರಣಗೆ ಡಾ. ಅ. ಸುಂದರ ಅವರ ಲೇಖನವನ್ನು ಗಮನಿಸಬಹುದು. ಬೆಂಗಳೂರು ನಗರ ಪ್ರದೇಶದಲ್ಲಿ ಪ್ರಾಗ್-ಇತಿಹಾಸವನ್ನು ವಿಮರ್ಶಿಸುವಾಗ ಇಲ್ಲಿ ಕಂಡು ಬಂದಿರುವ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಗಳು ಮತ್ತು ಬೃಹತ್ ಶಿಲಾ ಸಂಸ್ಕೃತಿ ನೆಲೆಗಳನ್ನು ವಿವರವಾಗಿ ಪರಾಮರ್ಶಿಸಿದ್ದಾರೆ. ಆದರೆ ಈ ಪ್ರದೇಶದಲ್ಲಿ ಹಳೇ ಶಿಲಾಯುಗ ಹಾಗೂ ನೂತನ ಶಿಲಾಯುಗಗಳಿಗೆ ಸಂಬಂಧಿಸಿದ ನೆಲೆಗಳು ಕಂಡುಬಂದಿಲ್ಲ. ಆದರೆ ಸುತ್ತಮುತ್ತಲ ಪ್ರದೇಶದಲ್ಲಿ ಈ ಎರಡೂ ಸಂಸ್ಕೃತಿಗಳಿಗೆ ಸೇರಿದ ನೆಲೆಗಳು ಕಂಡು ಬಂದಿರುವುದರಿಂದ ಅವು ಈ ಪ್ರದೇಶದಲ್ಲಿ ಕಾಣಬರದಿರುವುದು

ನಿಜವಲ್ಲ. ಇಲ್ಲಿ ಇದನ್ನು ಕುರಿತಾದ ಅನ್ವೇಷಣೆ ನಡೆದಿರುವುದು ಇದಕ್ಕೆ ಮುಖ್ಯ ಕಾರಣ ಎನ್ನುವ ಸೂಚನೆ ಇಲ್ಲಿ ಕಾಣ ಬರುತ್ತದೆ. ಇದು ಬಲು ಮುಖ್ಯವಾದ ಅಂಶ.

ಬೆಂಗಳೂರಿನ ಯಶವಂತಪುರದಲ್ಲಿ ದೊರಕಿದ ರೋಮನ್ ನಾಣ್ಯಗಳು ಕರ್ನಾಟಕದಲ್ಲಿ ಒಂದು ವೈಶಿಷ್ಟ್ಯ ಪೂರ್ಣ ಸಂಗತಿಯಾಗಿದೆ. ಇವು ಕರ್ನಾಟಕದಲ್ಲಿ ದೊರಕಿರುವ ಮೊಟ್ಟ ಮೊದಲ ರೋಮನ್ ನಾಣ್ಯ ರಾಶಿ ಎಂಬುದನ್ನು ಮರೆಯುವಂತಿಲ್ಲ. ಇದೇ ರೀತಿ ಬೆಂಗಳೂರಿನ ಎಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿಯೂ ರೋಮನ್ ನಾಣ್ಯಗಳು ದೊರಕಿವೆ. ಇವುಗಳ ಜೊತೆಗೆ ರೋಮನ್ ಸಂಸ್ಕೃತಿಗೆ ಸಂಬಂಧಿಸಿದ ಸಣ್ಣ ಪುಟ್ಟ ಅವಶೇಷಗಳೂ ದೊರಕಿವೆ. ಅಂದರೆ ಇಲ್ಲಿಗೆ ರೋಮನ್ನರು ಒಂದು ಕೆಲ ಕಾಲ ಇದ್ದು ತಮ್ಮ ವ್ಯಾಪಾರ ಮುಗಿದ ನಂತರ ತಮ್ಮ ದೇಶಕ್ಕೆ ಹಿಂತಿರುಗುತ್ತಿದ್ದರು ಎನ್ನುವ ಸೂಚನೆ ಇದೆ. ಇದನ್ನು ದೃಢ ಪಡಿಸುವುದಕ್ಕಾಗಿ ಇದರ ಸಮೀಪದ ನೆಲೆಗಳಲ್ಲಿ ಉತ್ಖನನಗಳನ್ನು ನಡೆಸುವ ಅವಶ್ಯಕತೆ ಇದೆ. ಎಂಬುದರ ಸೂಚನೆಯೂ ಇದರಿಂದ ದೊರೆಯುತ್ತದೆ.

ಇದೇ ರೀತಿ ಡಾ. ದೇವರ ಕೊಂಡಾ ರೆಡ್ಡಿಯವರು. ಬನ್ನೇರು ಘಟ್ಟದ ಬಗೆಗೆ ಬರೆದಿರುವ ಲೇಖನವೂ ಮುಂದಿನ ಸಂಶೋಧನೆಗಳಿಗೆ ಅವಕಾಶ ಮಾಡಿಕೊಡುವ ಸೂಚನೆಗಳನ್ನು ಒಳಗೊಂಡಿದೆ. ಇಲ್ಲಿ ಉತ್ಖನನ ನಡೆದರೆ ಚಿನ್ನಕ್ಕೆ ಸಂಬಂಧಿಸಿದ ಹೆಚ್ಚಿನ ವಿಷಯಗಳು ದೊರಕಬಹುದು ಎನ್ನುವುದನ್ನು ತಳ್ಳಿ ಹಾಕುವಂತಿಲ್ಲ.

ಬೆಂಗಳೂರಿನ ಬ್ಯಾಂಕಿಂಗ್ ಉದ್ಯಮದ ಬೆಳವಣಿಗೆಯನ್ನು ಡಾ. ಎಂ. ಬಿ. ಪಾಟೀಲ್ ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಇದನ್ನು ಅವರು 1956ರವರೆಗೆ ಸೀಮಿತಗೊಳಿಸಿರುತ್ತಾರೆ. ಇದರ ಕಾಲಘಟ್ಟವನ್ನು ಪ್ರಸ್ತುತದವರೆಗೆ ವಿಸ್ತರಿಸಿದರೆ ಬೆಂಗಳೂರಿನ ಆರ್ಥಿಕ ಅಧ್ಯಯನಕ್ಕೆ ಉತ್ತಮ ಕೊಡುಗೆಯಾಗುತ್ತದೆ.

ಬೆಂಗಳೂರಿನ ಧಾರ್ಮಿಕ ಸಮುದಾಯಗಳು ಎಂಬ ಶೀರ್ಷಿಕೆಯಡಿ ಬರೆದಿರುವ ಶ್ರೀ ಚಿಕ್ಕಚೆನ್ನಯ್ಯನವರ ಲೇಖನದಲ್ಲಿ ಮುಂದಿನ ಸಂಶೋಧನೆಗಳಿಗೆ ಪೂರಕವಾಗುವಂತಹ ಉತ್ತಮ ಅಂಶಗಳಿವೆ.

ಈ ರೀತಿ ಈ ಸಂಪುಟ ವಿಚಾರ ಪೂರಿತ ಹತ್ತಾರು ಲೇಖನಗಳನ್ನು ಒಳಗೊಂಡಿದ್ದು, ಸಂಗ್ರಹಯೋಗ್ಯವಾಗಿದೆ ಮತ್ತು ಬೆಂಗಳೂರು ಜಿಲ್ಲೆಯ ವಿವಿಧ ಮುಖಗಳ ಪರಿಚಯ ಮಾಡಿಕೊಡುವುದರಲ್ಲಿ ಯಶಸ್ವಿಯಾಗಿದೆ. ಈ ಸಮ್ಮೇಳನವನ್ನು ಯಶಸ್ವಿಯಾಗಿ ಏರ್ಪಡಿಸಿದ ಬೆಂಗಳೂರಿನ ಖ್ಯಾತ ಸಾಂಸ್ಕೃತಿಕ ಸಂಸ್ಥೆಯಾದ ಮಿಥಿಕ್ ಸೊಸೈಟಿಗೆ ಇತಿಹಾಸ ಪ್ರಿಯರು ಋಣಿಗಳಾಗಿರಬೇಕು. ಜಿಲ್ಲಾ ಇತಿಹಾಸ ಸಮ್ಮೇಳನ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿರುವ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆಯ ಇಲಾಖೆಯನ್ನು, ಅದರಲ್ಲಿಯೂ ಪ್ರಧಾನವಾಗಿ ಅದರ ನಿರ್ದೇಶಕ ಡಾ. ಆರ್. ಗೋಪಾಲ್ ಅವರನ್ನು ನಾನು ಅಭಿನಂದಿಸುತ್ತೇನೆ. ಕರ್ನಾಟಕದ ಸಂಸ್ಕೃತಿ ಪ್ರಿಯರು ಈ ಬೃಹತ್ ಹೊತ್ತಗೆಯನ್ನು ಸ್ವಾಗತಿಸುತ್ತಾರೆಂದು ನಾನು ಭಾವಿಸುತ್ತೇನೆ.

– ಡಾ. ಎ. ವಿ. ನರಸಿಂಹಮೂರ್ತಿ

(ನಿ) ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ
ಮತ್ತು ಪುರಾತತ್ವ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

ಮೈಸೂರು
27.12.2012

ಭೂಮಿಕಾ

ಕರ್ನಾಟಕ ಸರಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಮುಖ್ಯವಾಗಿ ನಮ್ಮ ರಾಜ್ಯದ ಜನತೆಯಲ್ಲಿ ಐತಿಹಾಸಿಕ ವಿಷಯಗಳ ಬಗೆಗೆ ತಿಳುವಳಿಕೆ ಹೆಚ್ಚಿಸಿ ಜಾಗೃತಿ ಮೂಡಿಸುವ ಉದ್ದೇಶದಿಂದ ರಾಜ್ಯದಲ್ಲಿರುವ ಎಲ್ಲಾ ಜಿಲ್ಲೆಗಳ ಇತಿಹಾಸ ಮತ್ತು ಪುರಾತತ್ವ ಕುರಿತಂತೆ ವಿಚಾರ ಸಂಕಿರಣಗಳನ್ನು ನಡೆಸುತ್ತಾ ಬರುತ್ತಿದೆ. ಈಗಾಗಲೇ ಕೋಲಾರ, ತುಮಕೂರು, ಚಿತ್ರದುರ್ಗ, ಹಾಸನ, ದಕ್ಷಿಣ ಕನ್ನಡ, ಗದಗ, ಬಾಗಲಕೋಟೆ, ಮೈಸೂರು, ಮಂಡ್ಯ ಮುಂತಾದ ಜಿಲ್ಲೆಗಳಲ್ಲಿ ಇಂತಹ ವಿಚಾರ ಸಂಕಿರಣಗಳು ಯಶಸ್ವಿಯಾಗಿ ನಡೆದು ಅಲ್ಲೆಲ್ಲಾ ವಿದ್ವಾಂಸರು ಮಂಡಿಸಿದ ಪ್ರಬಂಧಗಳು ಗ್ರಂಥರೂಪದಲ್ಲಿ ಪ್ರಕಟವಾಗಿವೆ.

ಪ್ರಸ್ತುತ ಬೆಂಗಳೂರು ನಗರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವವನ್ನು ಕುರಿತಾದ ವಿಚಾರ ಸಂಕಿರಣವನ್ನು ಬೆಂಗಳೂರಿನ ಮಿಥಿಕ್ ಸೊಸೈಟಿಯ ಸಹಯೋಗದೊಂದಿಗೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ದಿನಾಂಕ 12 ಮತ್ತು 13ನೇ ಏಪ್ರಿಲ್ 2011 ರಂದು ಏರ್ಪಡಿಸಿತ್ತು.

ಸುವಿಖ್ಯಾತ ಸಂಶೋಧಕರೂ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಅಭಿಮಾನಿಗಳೂ ಆಗಿರುವ ಡಾ. ಎಂ. ಚಿದಾನಂದಮೂರ್ತಿಯವರ ಅಧ್ಯಕ್ಷತೆಯಲ್ಲಿ ಈ ವಿಚಾರ ಸಂಕಿರಣವು ಯಶಸ್ವಿಯಾಗಿ ನಡೆಯಿತು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ವಿದ್ವಾಂಸರು ಬೆಂಗಳೂರು ನಗರ ಜಿಲ್ಲೆಯ ಪುರಾತತ್ವ, ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಪ್ರಬಂಧಗಳನ್ನು ಮಂಡಿಸಿ ಆಸಕ್ತರೆಲ್ಲರ ಗಮನ ಸೆಳೆದರು ಅನೇಕ ಹೆಸರಾಂತ ಇತಿಹಾಸಕಾರರು, ಪುರಾತತ್ವ ಶಾಸ್ತ್ರಜ್ಞರು, ಸಾಹಿತಿಗಳು, ಕಲಾವಿದರು ಮುಂತಾದವರು ಹಾಜರಿದ್ದು, ಚರ್ಚೆಗಳಲ್ಲಿ ಭಾಗವಹಿಸಿ ಸಮ್ಮೇಳನಕ್ಕೆ ಕಳೆಕಟ್ಟಿದರು.

ಬೆಂಗಳೂರು ನಗರದ ಇತಿಹಾಸವನ್ನು ಕುರಿತಂತೆ ಇದುವರೆಗೆ ಅನೇಕ ಗ್ರಂಥಗಳು ಪ್ರಕಟವಾಗಿರುವುದನ್ನು ನಾವು ಗಮನಿಸಬಹುದು. ಅವುಗಳನ್ನೆಲ್ಲಾ ನಾನು ಇಲ್ಲಿ ಹೆಸರಿಸ ಹೋಗುವುದಿಲ್ಲ. ಪ್ರಸ್ತುತ ಗ್ರಂಥದಲ್ಲಿಯೇ ಅವುಗಳನ್ನೆಲ್ಲಾ ಅರ್ಥಪೂರ್ಣ ರೀತಿಯಲ್ಲಿ ವಿದ್ವಾಂಸರೇ ನೀಡಿರುತ್ತಾರೆ. ಬೆಂಗಳೂರು ನಗರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವದ ಸಂದರ್ಭದಲ್ಲಿ ನಾವು ಗಮನಿಸಲೇಬೇಕಾದ ಸಂಗತಿಯೆಂದರೆ ಇತ್ತೀಚಿನ ದಶಕಗಳಲ್ಲಿ ಸ್ಥಳೀಯ ಚರಿತ್ರೆ ಗಳಿಸಿಕೊಳ್ಳುತ್ತಿರುವ ಜನಪ್ರಿಯತೆ. ಬಹಳ ಹಿಂದಿನಿಂದಲೂ ನಮ್ಮ ದೇಶದಲ್ಲಿ ಸ್ಥಳೀಯ ಚರಿತ್ರೆಯನ್ನು ಕಡೆಗಣಿಸುತ್ತಲೇ ಬರಲಾಗಿದೆ. ಆದರೆ ಪರಿಸ್ಥಿತಿ ಈಗ ಬದಲಾಗಿದೆ. ಜಿಲ್ಲಾ ಮುಖ್ಯ ಸ್ಥಳಗಳು ಮತ್ತು ತಾಲ್ಲೂಕು ಕೇಂದ್ರಗಳನ್ನು ಕುರಿತಾದ ಅನೇಕ ಗ್ರಂಥಗಳು, ಹಲವಾರು ಸಂಶೋಧನಾ ಲೇಖನಗಳು ಪ್ರಕಟವಾಗುತ್ತಿರುವುದು ಈಗ ಹಳೆಯ ಸಂಗತಿಯೆನ್ನಬಹುದು. ಈ ದಿಸೆಯಲ್ಲಿ ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ರಾಜ್ಯ ಗ್ಯಾಸೆಟಿಯರ್ ಇಲಾಖೆ, ದಿ ಮಿಥಿಕ್ ಸೊಸೈಟಿ, ಕರ್ನಾಟಕ ಇತಿಹಾಸ ಅಕಾಡೆಮಿ ಮುಂತಾದ ಸಂಸ್ಥೆಗಳು ಸಕ್ರಿಯವಾಗಿರುವುದು ಸ್ವಾಗತಾರ್ಹ ಬೆಳವಣಿಗೆ.

ಇತಿಹಾಸವು ಪುನರಾವರ್ತನೆಯಾಗುತ್ತದೆ ಎಂದು ಹೇಳಲಾಗುತ್ತದೆ. ಯಾವುದೇ ದೇಶದ ಇತಿಹಾಸವೂ ನಿಂತ ನೀರಲ್ಲ. ಇತಿಹಾಸದಿಂದ ನಾವೇನಾದರೂ ಪಾಠ ಕಲಿಯಬೇಕೆಂದಿದ್ದರೆ ಅದನ್ನು ಸೂಕ್ತವಾಗಿ ಅರ್ಥ ವಿವರಣೆ ಮಾಡಬೇಕು. ಈ ಕಾರ್ಯವನ್ನು ಕಾಲಕಾಲಕ್ಕೆ ಪುನರಾವರ್ತಿಸುವುದು ಅತ್ಯಗತ್ಯ. ಈ ದಿಕ್ಕಿನಲ್ಲಿ

ಯೋಚಿಸಿದಾಗ ಪುರಾತತ್ವ ನಿರ್ದೇಶನಾಲಯವು ನಡೆಸುತ್ತಿರುವ ರಾಜ್ಯದ ಜಿಲ್ಲೆಗಳ ಇತಿಹಾಸ ಕುರಿತಾದ ವಿಚಾರ ಸಂಕಿರಣಗಳ ಉದ್ದೇಶ, ಉಪಯುಕ್ತತೆ ಮತ್ತು ಪ್ರಸಕ್ತತೆ ನಮಗೆಲ್ಲಾ ಮನವರಿಕೆಯಾಗುವುದರಲ್ಲಿ ಸಂಶಯವಿಲ್ಲ.

ಈ ವಿಚಾರ ಸಂಕಿರಣವನ್ನು ಏರ್ಪಡಿಸಲು ಶ್ರೀ ಬಸವರಾಜು ಭಾ.ಆ.ಸೇ. ಮಾನ್ಯ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಇವರು ಎಲ್ಲಾ ರೀತಿಯ ನೆರವನ್ನೂ ನೀಡುವುದರ ಜೊತೆಗೆ ಮಾರ್ಗದರ್ಶನ ಮಾಡಿರುತ್ತಾರೆ. ಇದಕ್ಕಾಗಿ ಇವರಿಗೆ ನಾನು ಸರ್ವ ವಿಧದಲೂ ಕೃತಜ್ಞನಾಗಿದ್ದೇನೆ. ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಇಲ್ಲಿ ಸಹಾಯಕ ನಿರ್ದೇಶಕರಾಗಿ ಆಗ ಕಾರ್ಯ ನಿರ್ವಹಿಸುತ್ತಿದ್ದ ಟಿ.ಎಸ್. ಗಂಗಾಧರ್ ಮತ್ತು ಇತರ ಅಧಿಕಾರಿಗಳು ನೀಡಿದ ಸಹಾಯ/ ಸಹಕಾರಕ್ಕಾಗಿ ಇವರಿಗೆಲ್ಲಾ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ನಿರ್ದೇಶನಾಲಯದಲ್ಲಿ ವಿಶೇಷಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಹೆಚ್.ಪಿ. ಶಶಿಧರಮೂರ್ತಿಯವರು ಸಂಪಾದನಾ ಕಾರ್ಯದಲ್ಲಿ ನೆರವು ನೀಡಿರುವವರಲ್ಲದೇ. ಕರಡು ತಿದ್ದುವ ಕಾರ್ಯವನ್ನೂ ನಿರ್ವಹಿಸಿರುತ್ತಾರೆ. ಇದಕ್ಕಾಗಿ ಇವರಿಗೆ ನಾನು ಆಭಾರಿಯಾಗಿರುತ್ತೇನೆ. ಇನ್ನೊಬ್ಬ ವಿಶೇಷಾಧಿಕಾರಿಯಾದ ಡಾ. ಲ.ನ. ಸ್ವಾಮಿಯವರು ವಿಚಾರ ಸಂಕಿರಣವನ್ನು ವ್ಯವಸ್ಥೆಗೊಳಿಸುವಲ್ಲಿ ವಿಶೇಷ ಆಸ್ಥೆ ವಹಿಸಿ ಶ್ರಮಿಸಿದ್ದನ್ನು ನಾನು ಪ್ರತ್ಯೇಕವಾಗಿ ಉಲ್ಲೇಖಿಸಬೇಕು.

ಅಕ್ಷರ ಜೋಡಣೆ ಕಾರ್ಯವನ್ನು ದಕ್ಷತೆ ಮತ್ತು ತಾಳ್ಮೆಯಿಂದ ನಿರ್ವಹಿಸಿದ ಶ್ರೀಮತಿ ಶ್ವೇತಾ, ಮೈಸೂರು, ಇವರಿಗೂ ಹಾಗೂ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಮುರಳೀಧರ್, ಸುಹಾಸ್ ಗ್ರಾಫಿಕ್ಸ್, ಬೆಂಗಳೂರು ಇವರಿಗೂ ಆಕರ್ಷಕವಾಗಿ ಮುದ್ರಣ ಕಾರ್ಯವನ್ನು ವಿಳಂಬವಿಲ್ಲದೇ ಮಾಡಿಕೊಟ್ಟ ಶ್ರೀ ಸದ್ಗುರು ಪ್ರಿಂಟರ್ಸ್, ಮೈಸೂರು ಇವರಿಗೆ ನನ್ನ ಹೃತ್ಪೂರ್ವಕ ವಂದನೆಗಳು ಸಲ್ಲುತ್ತವೆ.

ಕರ್ನಾಟಕದ ಇತಿಹಾಸ ಪ್ರೇಮಿಗಳು ಈ ಗ್ರಂಥವನ್ನು ಕೊಂಡು ಓದುವ ಉದಾರತೆಯನ್ನು ತೋರಲೆಂಬುದೇ ನನ್ನ ನಿರೀಕ್ಷೆಯಾಗಿದೆ.

ಮೈಸೂರು
ದಿನಾಂಕ: 12.12.2012

(ಡಾ. ಆರ್. ಗೋಪಾಲ್)
ನಿರ್ದೇಶಕರು

ಪರಿವಿಡಿ

1. ಬೆಂಗಳೂರು ನಗರ ವಲಯದ ಭೂವಿಜ್ಞಾನ

ಡಾ. ಎಚ್. ಚಂದ್ರಶೇಖರ್

ಕರ್ನಾಟಕದ ಹೃದಯದಂತಿರುವ ಬೆಂಗಳೂರು ನಗರವು ನಮ್ಮ ದೇಶದಲ್ಲಿ ಅಷ್ಟೇ ಅಲ್ಲ, ಪರದೇಶಗಳಲ್ಲಿಯೂ ಇಂದು ಹಲವಾರು ಕಾರಣಗಳಿಂದ ಪ್ರಸಿದ್ಧಿ ಪಡೆದ ನಗರವಾಗಿದೆ. ಈ ನಗರದ ಸ್ಥಾಪನೆ ಮತ್ತು ಅನಿರೀಕ್ಷಿತ ಬೃಹತ್ ಬೆಳವಣಿಗೆಗೆ ಈ ನಗರದ ಭೂವೈಜ್ಞಾನಿಕ ಲಕ್ಷಣಗಳು ಮತ್ತು ನಗರದ ಆಹ್ಲಾದಕರ ವಾತಾವರಣವೇ ಮೂಲ ಕಾರಣಗಳು ಎಂದು ಹೇಳಿದರೆ ಅತ್ರೇಕ್ಷೆಯಾಗದು. ಪ್ರಸ್ತುತ ಸಂಪ್ರಬಂಧದಲ್ಲಿ ಈ ವೈಜ್ಞಾನಿಕ ಲಕ್ಷಣಗಳನ್ನು ವಿವರಿಸುವುದಲ್ಲದೆ ಅವುಗಳು ನಗರದ ಬೆಳವಣಿಗೆಯ ಮೇಲೆ ಬೀರಿದ ಪ್ರಭಾವಗಳನ್ನು ವಿಶ್ಲೇಷಿಸಲಾಗಿದೆ. ನಂತರ ನಗರದ ಸೂಕ್ತ ಬೆಳವಣಿಗೆಗೆ ನಾವು ಅನುಸರಿಸಬೇಕಾದ ಕೆಲವು ಸಲಹೆಗಳನ್ನು ನೀಡಲಾಗಿದೆ.

ಬೆಂಗಳೂರು ನಗರವು ಜಗತ್ತಿನ ಪೀಠಭೂಮಿಗಳಲ್ಲಿ (Shield Areas) ಒಂದಾದ ದಕ್ಷಿಣ ಭಾರತದ ಪೀಠಭೂಮಿಯಲ್ಲಿದೆ. ಇದರ ಅಕ್ಷಾಂಶ 12^{0} 58' ಮತ್ತು ರೇಖಾಂಶ 77^{0}35' ಆಗಿವೆ. ಈಗ ಇದರ ಮಿತಿಯನ್ನು ಅತಿಕ್ರಮಿಸಿ ನಗರ ಬೆಳೆದಿದೆ. ಬೆಂಗಳೂರು ನಗರ ಸಮುದ್ರ ಮಟ್ಟಕ್ಕಿಂತ 921 ಮೀಟರ್ ಎತ್ತರದಲ್ಲಿದೆ. ಈ ಅಕ್ಷಾಂಶ, ರೇಖಾಂಶ ಮತ್ತು ಎತ್ತರಗಳು ಬೆಂಗಳೂರಿನ ಹವಾಮಾನ ನಿರೀಕ್ಷಣಾಲಯದ (Meteorological Observatory) ನಿವೇಶನಕ್ಕೆ ಸಂಬಂಧಿಸಿವೆ. ಆದರೆ ಇಂದಿನ ಬೆಂಗಳೂರು ಈ ನಿವೇಶನದಿಂದ ತುಂಬಾ ದೂರ ಬೆಳೆದಿರುವುದರಿಂದ ಈ ಭೌಗೋಳಿಕ ಅಂಶಗಳು ಕೊಂಚ ವ್ಯತ್ಯಾಸಗೊಳ್ಳುತ್ತವೆ ಎಂಬುದನ್ನು ಹೇಳಲೇಬೇಕು. ಇಂದಿನ ಬೆಂಗಳೂರಿನ ನಗರಪಾಲಿಕೆಯ ವಿಸ್ತೀರ್ಣ ಸುಮಾರು 250 ಚ.ಕೀ.ಮೀ, ಆದರೆ ಬೆಂಗಳೂರು ನಗರ ಸಂಕೀರ್ಣದ (Bangalore Urban Agglomeration) ವಿಸ್ತೀರ್ಣ ಸುಮಾರು 350 ಚ.ಕೀ.ಮೀ.

ಭೂವೈಜ್ಞಾನಿಕ ಲಕ್ಷಣಗಳು

ಶಿಲೆ: ಬೆಂಗಳೂರು ನಗರದ ಶಿಲೆಯು ಪರ್ಯಾಯ ದ್ವೀಪ ಶಿಲ್ಪದ ಸೀಣಿಕಲ್ಲಿಗೆ (Peninsular Gneiss) ಸೇರಿದೆ. ಈ ಶಿಲೆಯಲ್ಲಿ ಹಲವು ಪ್ರಭೇದಗಳಿದ್ದರೂ ಅವುಗಳೆಲ್ಲವನ್ನು ಪರ್ಯಾಯ ದ್ವೀಪಕಲ್ಪದ ಸೀಣಿಕಲ್ಲು ಎಂದು ಭೂವೈಜ್ಞಾನಿಕವಾಗಿ ಕರೆಯಲಾಗುತ್ತದೆ. ಬಿಳಿ ವರ್ಣದ ಖನಿಜಗಳು (ಬೆಣಚು ಮತ್ತು ಫೆಲ್‌ಸ್ಪಾರ್) ಮತ್ತು ಕೃಷ್ಣ ವರ್ಣದ ಖನಿಜಗಳು (Dark coloured minerals) (ಬಯೋಟೈಟ್, ಹಾರ್ನ್ ಬ್ಲೆಂಡ್ ಇತ್ಯಾದಿ) ಅಲೆಯಾಕಾರದ ಪಟ್ಟೆಗಳಲ್ಲಿ ವ್ಯವಸ್ಥೆಗೊಂಡಿದ್ದು ಅತ್ಯಂತ ಪುರಾತನ ಶಿಲೆಗಳಲ್ಲಿ ಸೇರಿವೆ. ಇದರ ಕಾಲ ಸುಮಾರು 300 ಕೋಟಿ ವರ್ಷಗಳು (3000 million years). ಬಹು ಪುರಾತನವಾದ ಈ ಶಿಲೆಯು ನಗ್ನೀಕರಣಗೊಂಡಿದೆ (weathering). ಈ ನಗ್ನೀಕರಣ ಕ್ರಿಯೆಗೆ ಈ ಶಿಲೆಯು ಹೊಂದಿರುವ ಸಂದುಗಳೇ (joints) ಕಾರಣ.

ಸಂದುಗಳು: ಈ ಸೀಣಿಕಲ್ಲಿನಲ್ಲಿ ಪ್ರಮುಖವಾಗಿ ಎರಡು ಬಗೆಯ ಸಂದುಗಳಿವೆ. ಒಂದು NNE-SSW ದಿಕ್ಕಿನಲ್ಲಿ ಹರಿದಿದೆ. ಇದು ಭೂಮಟ್ಟಕ್ಕೆ ನೆಟ್ಟಗೆ ಇದೆ (Vertical Joint). ಇನ್ನೊಂದು ಸಂದು ಭೂಮಟ್ಟಕ್ಕೆ ಸಮಾನಾಂತರವಾಗಿದೆ. ಈ ಎರಡು ಬಗೆಯ ಸಂದುಗಳೇ ಮಳೆಯ ನೀರು ಆಳಕ್ಕೆ ಇಂಗಿ ಅಂತರ್ಜಲವಾಗಿ ಸಂಗ್ರಹವಾಗಲು ಕಾರಣ. ಇಂಥ ಇಂಗಿದ ನೀರು ಶಿಲೆಯ ಖನಿಜಗಳ ಮೇಲೆ ರಾಸಾಯನಿಕ ಕ್ರಿಯೆ ನಡೆಸಿ

ಶಿಲೆಯನ್ನು ವಿಘಟನೆಗೊಳಿಸುತ್ತದೆ. ಅದರ ಜೊತೆ ಭೂಮಿಯ ಮೇಲೆ ಬೀಳುವ ಸೂರ್ಯ ಕಿರಣದ ಶಾಖ ಬಂಡೆಗಳನ್ನು ಕಾಯಿಸುತ್ತದೆ. ಹಗಲಿನಲ್ಲಿ, ರಾತ್ರಿಯಲ್ಲಿ ಉಷ್ಣತೆ ಕಡಿಮೆಯಾಗುತ್ತದೆ. ಶಾಖ ಹೆಚ್ಚಾದಾಗ ಬಂಡೆಯು ಹಿಗ್ಗುತ್ತದೆ (expands) ಮತ್ತು ಉಷ್ಣತೆ ಕಡಿಮೆಯಾದಾಗ ಕುಗ್ಗುತ್ತದೆ (contracts). ಈ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯ ಪ್ರಕ್ರಿಯೆಯು ಕೋಟ್ಯಾಂತರ ವರ್ಷಗಳ ಕಾಲ ನಡೆಯುವುದರಿಂದ ಗಟ್ಟಿಯಾದ ಬಂಡೆ ಛಿದ್ರಗೊಳ್ಳುತ್ತದೆ (fractures). ಕೊನೆಯಲ್ಲಿ ಈ ಎರಡು ಬಗೆಯ ಪ್ರಕ್ರಿಯೆಗಳು ಬಂಡೆಯನ್ನು ಹುಡಿಗೊಳಿಸಿದಾಗ ಮಣ್ಣು (soil) ಉತ್ಪನ್ನವಾಗುತ್ತದೆ.

ಮಣ್ಣು: ಭೂಮಿಯ ಮೇಲೆ ಜೀವ ಜಗತ್ತಿಗೆ ಆಧಾರ, ಪ್ರಮುಖವಾಗಿ ಮಣ್ಣು, ಮಣ್ಣಿನ ಜೊತೆಗೆ ನೀರು, ಕಲ್ಲು ಇತ್ಯಾದಿಗಳು ಅವಶ್ಯ. ಬೆಂಗಳೂರಿನ ಮಣ್ಣು ಪ್ರಮುಖವಾಗಿ ಮರಳು ಮಿಶ್ರಿತ ಕೆಂಪುಮಣ್ಣು (Red sandy soil). ಆದರೆ ಕೆಲವೆಡೆ ಮರಳಿನ ಪ್ರಮಾಣ ಕಡಿಮೆಯಾಗಿ ಜೇಡು ಹೆಚ್ಚಾಗಿದೆ. ಆಗ ಅದನ್ನು ಜೇಡು ಮಿಶ್ರಿತ ಕೆಂಪುಮಣ್ಣು ಎಂದು ಕರೆಯಲಾಗುತ್ತದೆ. ಈ ಎರಡು ಬಗೆಯ ಮಣ್ಣುಗಳು ಸಸ್ಯ ಸಂಪತ್ತಿನ ಉತ್ಕೃಷ್ಟ ಬೆಳವಣಿಗೆಗೆ ಆಧಾರಗಳು. ಮರಳು ಮಿಶ್ರಿತ ಮಣ್ಣು ಇರುವ ಪ್ರದೇಶದಲ್ಲಿ ಮಳೆನೀರು ಭೂಮಿಯೊಳಕ್ಕೆ ಬೇಗನೇ ಇಂಗಿ (seep) ಹೋಗುವುದರಿಂದ, ಈ ಮಣ್ಣು ಅಂತರ್ಜಲ ಸಂಗ್ರಹಕ್ಕೆ ಅನುಕೂಲಕರ. ಜೇಡು ಮಿಶ್ರಿತ ಕೆಮ್ಮಣ್ಣು ತೇವಾಂಶವನ್ನು ತುಲನಾತ್ಮಕವಾಗಿ ಹೆಚ್ಚು ಕಾಲ ಹಿಡಿದಿಡುವುದರಿಂದ ಸಸ್ಯದ ಬೆಳವಣಿಗೆಗೆ ಅನುಕೂಲಕರ. ನಿದರ್ಶನಕ್ಕಾಗಿ ಹೇಳುವುದೆಂದರೆ, ಬೆಂಗಳೂರು ನಗರದ ಪಶ್ಚಿಮ ಭಾಗದಲ್ಲಿ ಸಿಗುವ ಮಣ್ಣು ಮರಳು ಮಿಶ್ರಿತ ಇರುವುದರಿಂದ ಈ ಭಾಗದಲ್ಲಿ ಅಂತರ್ಜಲದ ಸಮೃದ್ಧಿ ಇದೆ. ಕಬ್ಬನ್ ಪಾರ್ಕ್, ಹೈಗ್ರೌಂಡ್ ಸುತ್ತ ಮುತ್ತಲ ಪ್ರದೇಶದಲ್ಲಿ ಜೇಡು ಮಿಶ್ರಿತ ಮಣ್ಣು ಮರಗಿಡಗಳ ಬೆಳವಣಿಗೆಗೆ ಹೆಚ್ಚು ತೇವಾಂಶ ನೀಡುತ್ತದೆ.

ಭೂಮೇಲ್ಮೈ ಲಕ್ಷಣಗಳು

ಪ್ರಸ್ಥಭೂಮಿ: ಬೆಂಗಳೂರು ನಗರವು ಮೈಸೂರು ಪ್ರಸ್ಥಭೂಮಿಯ ಒಂದು ಭಾಗ. ನಗರದ ಕೇಂದ್ರ ಭಾಗವು ಸಮುದ್ರ ಮಟ್ಟದಿಂದ ಸುಮಾರು 910–933ಮೀ ಎತ್ತರದಲ್ಲಿದೆ. ಆದರೆ ನಗರದ ಕೆಲ ನಿವೇಶನಗಳು 953 ಮೀಟರ್ ಎತ್ತರದಲ್ಲಿದ್ದರೆ ಕೆಲ ನಿವೇಶನಗಳು 874ಮೀಟರ್‌ದಲ್ಲಿವೆ. ಅಂಥ ಕೆಲ ಪ್ರಮುಖ ನಿವೇಶನಗಳ ಎತ್ತರವನ್ನು ಅನುಬಂಧದಲ್ಲಿ ಕೊಡಲಾಗಿದೆ. ಚಿತ್ರ–1ನ್ನು ಗಮನಿಸಿದಾಗ ನಗರದ ಕೇಂದ್ರ ಭಾಗ ಉನ್ನತವಾಗಿದ್ದು ಅಲ್ಲಿಂದ ನೀರು ಸಣ್ಣಹಳ್ಳಗಳ ಮೂಲಕ ಎಲ್ಲಾ ದಿಕ್ಕುಗಳಿಗೂ ಹರಿದು ಹೋಗುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ನೈಸರ್ಗಿಕ ಜಲ ಹರಿಯುವಿಕೆಯನ್ನು ಚದುರುವ ಸಸ್ಯಾಂಕನದ ಜಲ ಚರಂಡಿ ಮಾದರಿ ಎಂದು (Radiating dendritic drainage pattern) ಕರೆಯಲಾಗುತ್ತದೆ.

ಅಕ್ಷಾಂಶ 13^0ರ ಮೇಲೆ, ಪಶ್ಚಿಮದಿಂದ (ಕುಣಿಗಲ್) ಪೂರ್ವಕ್ಕೆ (ಮಾಲೂರು) ಕಂಡುಬರುವ ಮೇಲ್ಮೈ (Surface). ಕುಣಿಗಲ್ ಸುತ್ತಮುತ್ತಲ ಪ್ರದೇಶದ ಎತ್ತರ ಸುಮಾರು 800ಮೀ (ಎಂ.ಎಸ್.ಎಲ್) ಇದ್ದು, ಪೂರ್ವಕ್ಕೆ ಅಂದರೆ ಬೆಂಗಳೂರು ಕಡೆಗೆ ಹೋದಂತೆಲ್ಲಾ ಭೂಮಟ್ಟ ಏರುತ್ತಾ ಹೋಗಿ ಬೆಂಗಳೂರಿನಲ್ಲಿ 949ಮೀ ನಷ್ಟು ಎತ್ತರವನ್ನು ತಲುಪುತ್ತದೆ. ನಂತರ ಪೂರ್ವಕ್ಕೆ ಮಾಲೂರು ಕಡೆಗೆ ಹೋದಂತೆಲ್ಲಾ ಎತ್ತರ ಕಡಿಮೆಯಾಗುತ್ತಾ ಸುಮಾರು 900ಮೀಟರನ್ನು ತಲುಪುತ್ತದೆ. ಅಂದರೆ ಬೆಂಗಳೂರು ನಗರ ಪ್ರದೇಶ ಸುತ್ತಲಿನ ಪ್ರದೇಶಕ್ಕಿಂತ ಹೆಚ್ಚಿನ ಔನ್ನತ್ಯ (higher elevation) ವನ್ನು ಹೊಂದಿದೆ ಎಂಬುದು ಸಿದ್ಧವಾಗುತ್ತದೆ. ಇದರಂತೆಯೇ ರೇಖಾಂಶ $77^0 35'$ರ ಗುಂಟ ಉತ್ತರದಲ್ಲಿ ಯಲಹಂಕದಿಂದ ದಕ್ಷಿಣಕ್ಕೆ ಚುಂಚನಕಟ್ಟೆಯವರೆಗೆ ಕಂಡುಬರುವ ಭೂ ಮೇಲ್ಮೈ ಗಮನಿಸಿದಾಗ ಯಲಹಂಕದ ಬಳಿ ಭೂಮಟ್ಟದ ಎತ್ತರ ಸುಮಾರು 900ಮೀ ಇದ್ದು ದಕ್ಷಿಣಕ್ಕೆ ಹೋದಂತೆಲ್ಲಾ ಭೂಮಟ್ಟ ಏರುತ್ತಾ ಹೋಗಿ ಬೆಂಗಳೂರಿನಲ್ಲಿ 953ಮೀ. ಎತ್ತರವನ್ನು ತಲುಪುತ್ತದೆ.

ನಂತರ ಭೂಮಟ್ಟ ಇಳಿಯುತ್ತಾ ದಕ್ಷಿಣದಲ್ಲಿ 900ಮೀ ಎತ್ತರವು ಜರಗನಹಳ್ಳಿ ಮತ್ತು ಚುಂಚನಕಟ್ಟೆ ಪ್ರದೇಶದಲ್ಲಿ ತಲುಪುತ್ತದೆ. ಅಂದರೆ ಉತ್ತರ ಮತ್ತು ದಕ್ಷಿಣದಲ್ಲಿರುವ ನೆಲೆಗಳಿಗಿಂತ ಬೆಂಗಳೂರಿನ ಮಧ್ಯಭಾಗ ಹೆಚ್ಚಿನ ಎತ್ತರದಲ್ಲಿದೆ ಎಂದಂತಾಯಿತು. ಈ ಭೂಮಟ್ಟದ ರೀತಿಯೇ ಕೆರೆಗಳ ನಿವೇಶನದ ಆಯ್ಕೆ ಮತ್ತು ಅಂತರ್ಜಲದ ಲಭ್ಯತೆಯನ್ನು ನಿರ್ಧರಿಸುತ್ತದೆಂಬುದನ್ನು ಮುಂದೆ ಚರ್ಚಿಸಲಾಗುವುದು.

ಭೂಕಂಪಗಳು

ದಕ್ಷಿಣ ಭಾರತದ ಪೀಠಭೂಮಿ ಇತ್ತೀಚಿನವರೆಗೆ ಸಂಪೂರ್ಣವಾಗಿ ಭೂಕಂಪರಹಿತ ಎಂದು ನಂಬಲಾಗಿತ್ತು. ಆದರೆ ಇತ್ತೀಚಿನ ಅಧ್ಯಯನಗಳು ಮತ್ತು ಸಂಶೋಧನೆಗಳು ಇದು ಸರಿಯಾದ ನಂಬಿಕೆ ಅಲ್ಲವೆಂದು ಸಾಬೀತು ಪಡಿಸಿವೆ. ದಕ್ಷಿಣ ಭಾರತದ ಆರ್ಡಿಯನ್ ಶಿಲಾಸಮುದಾಯ ಎಲ್ಲಾ ಶಿಲೆಗಳಿಗಿಂತ ತುಲನಾತ್ಮಕವಾಗಿ ಅತ್ಯಂತ ಪುರಾತನ ಶಿಲಾಸಮುದಾಯ ಹಾಗೂ ದೃಢ ಎಂಬುದು ನಿಜವಾದರೂ ಸಂಪೂರ್ಣ ಭೂಕಂಪರಹಿತವಾಗಿಲ್ಲ. ಇದುವರೆಗೆ ಲಭ್ಯವಾದ ಮಾಹಿತಿ ಮತ್ತು ಅಧ್ಯಯನಗಳ ಆಧಾರದ ಮೇಲೆ ಹೇಳುವುದಾದರೆ ಬೆಂಗಳೂರು ಸುತ್ತಮುತ್ತಲ ಪ್ರದೇಶದಲ್ಲಿ ತೀರ ಸಣ್ಣ ಪರಿಮಾಣಾಂಶದ (Magnitude) ಭೂಕಂಪಗಳಾಗಿವೆ. ಆದರೆ ಇವುಗಳಿಂದಾಗಿ ಕಟ್ಟಡಗಳಿಗಾಗಲೀ, ಜೀವಕ್ಕಾಗಲೀ ಯಾವ ಹಾನಿಯಾಗಿಲ್ಲ. ಈ ಹಿಂದೆ ಸಂಭವಿಸಿದ ಭೂಕಂಪಗಳನ್ನು ಭೂನಡುಕ (Earth Tremors) ಗಳೆಂದು ಕರೆದರೆ ಸರಿಯಾದೀತು. ಆದ್ದರಿಂದ ಬೆಂಗಳೂರಿನ ಪ್ರದೇಶ ವಿನಾಶಕಾರಿ ಭೂಕಂಪ ಗಳಿಂದ ಸುರಕ್ಷಿತವಾಗಿದೆ ಎಂದು ಹೇಳಬಹುದು. ಈ ಭೂಲಕ್ಷಣ, ಬೆಂಗಳೂರನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಆಕರ್ಷಕ ಕೇಂದ್ರವಾಗಿಸಲು ಕಾರಣ. ಅತಿ ಹೆಚ್ಚೆಂದರೆ 5 ತೀವ್ರತೆಯ (Intensity) ಮತ್ತು ರಿಚ್‌ಟರ್ ಅಳತೆಯಲ್ಲಿ 4 ಪರಿಮಾಣಾಂಶದ ಭೂನಡುಕವನ್ನು ನಿರೀಕ್ಷಿಸಬಹುದು–ಅದೂ ಹಲವಾರು ವರ್ಷಗಳ ಅಂತರದಲ್ಲಿ. ಆದ್ದರಿಂದ ಸಾಮಾನ್ಯ ಕಟ್ಟಡಗಳ ರಚನೆಗಳನ್ನು (ಒಂದೆರಡು ಅಂತಸ್ತಿನ ಕಟ್ಟಡಗಳು) ವಿಶೇಷರೀತಿಯ ಸುರಕ್ಷಾ ವಿನ್ಯಾಸವಿಲ್ಲದೆ ಕಟ್ಟಬಹುದು. ಬಹು ಮಹಡಿ ಕಟ್ಟಡಗಳನ್ನು ಮಾತ್ರ ಸಂಭಾವ್ಯ ಭೂ ನಡುಕದ ಶಕ್ತಿಯನ್ನು ಗಮನದಲ್ಲಿರಿಸಿಕೊಂಡು ವಿನ್ಯಾಸಗೊಳಿಸಿ ಕಟ್ಟಬೇಕು.

ಹವಾಗುಣ

ಬೆಂಗಳೂರಿನ ಹವಾಗುಣವು ಆಹ್ಲಾದಕರವಾಗಿದೆ. ಇದಕ್ಕೆ ಕಾರಣ ಬೆಂಗಳೂರು ನಗರವು ಮೈಸೂರು ಪ್ರಸ್ಥಭೂಮಿಯ ಮೇಲೆ ಪಡೆದಿರುವ ಔನ್ನತ್ಯವೇ ಆಗಿದೆ. ಹಿಂದೆಯೇ ತಿಳಿಸಿದಂತೆ ಬೆಂಗಳೂರಿನ ಎತ್ತರವು ಸಮುದ್ರ ಮಟ್ಟಕ್ಕಿಂತ 900 ರಿಂದ 953ಮೀಟರ್‌ವರೆಗೆ ಇದೆ. ಈ ಔನ್ನತ್ಯವೇ, ಬೆಂಗಳೂರಿನ ಹವಾಗುಣದಲ್ಲಿ ಅಸೌಖ್ಯವನ್ನುಂಟು ಮಾಡುವ ವೈಪರೀತ್ಯಗಳಿಗೆ ಕಾರಣ.

ಬೆಂಗಳೂರಿನ ಹವಾಮಾನ ಕೇಂದ್ರವು ದೇಶದ ಅತ್ಯಂತ ಹಳೆಯ ಕೇಂದ್ರಗಳಲ್ಲಿ ಒಂದು. ಇಲ್ಲಿ ಸುಮಾರು 100 ವರ್ಷಗಳ ದಾಖಲೆಗಳಿವೆ. ಇವುಗಳನ್ನು ಆಧರಿಸಿ ಬೆಂಗಳೂರಿನ ಪ್ರತಿ ತಿಂಗಳ ಸರಾಸರಿ ಸಾಮಾನ್ಯ ಮಳೆ, ಉಷ್ಣತೆ ಮತ್ತು ತೇವಾಂಶಗಳನ್ನು ಅನುಬಂಧ 2, 3 ಮತ್ತು 4ರಲ್ಲಿ ಅನುಕ್ರಮವಾಗಿ ಕೊಡಲಾಗಿದೆ. ಹವಾಗುಣದ ಬಗ್ಗೆ ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಬೆಂಗಳೂರಿನಲ್ಲಿ ವಾರ್ಷಿಕ ಸರಾಸರಿ 970ಮಿ.ಮೀ. ಮಳೆ ಬೀಳುತ್ತದೆ. ವರ್ಷದಲ್ಲಿ ಸರಾಸರಿ 30 ಮಳೆಯ ದಿನಗಳಾಗಿವೆ. ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಅನುಕ್ರಮವಾಗಿ ಸರಾಸರಿ 110.2, 137.0, 194.8 ಮತ್ತು 180.4ಮಿ.ಮೀ ಮಳೆ ಬೀಳುತ್ತದೆ. ವಾಯುಗುಣದ ಉಷ್ಣತೆ ಗರಿಷ್ಠ 32.7ಸೆಂ ಮತ್ತು ಕನಿಷ್ಠ 21.2 ಸೆಂ. ಇರುತ್ತದೆ. ಡಿಸೆಂಬರ್ ತಿಂಗಳು ವರ್ಷದ ಅತಿ ಕಡಿಮೆ

ಉಷ್ಣಾಂಶ ಇರುವ ತಿಂಗಳು (ಗರಿಷ್ಠ 25.9 ಸೆಂ ಮತ್ತು ಕನಿಷ್ಠ 15.6 ಸೆಂ). ಇದರಂತೆಯೇ ಸಾಪೇಕ್ಷ ತೇವಾಂಶ (Relative Humidity) ಮಳೆಗಾಲದ ತಿಂಗಳುಗಳಲ್ಲಿ ಸರಾಸರಿ ಶೇಕಡಾ 85ರಷ್ಟು ಇದ್ದರೆ ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ಶೇಕಡಾ 50ರಷ್ಟು ಇರುತ್ತದೆ. ಈ ಮೇಲಿನ ಅಂಶಗಳನ್ನು ಗಮನಿಸಿದರೆ ಬೆಂಗಳೂರಿನ ಹವಾಗುಣ ಅತಿ ಉಷ್ಣವೂ ಅಲ್ಲ ಅತಿ ತಂಪೂ ಅಲ್ಲ ಎಂಬುದು ವಿದಿತವಾಗುತ್ತದೆ. ಇಂಥ ಆಹ್ಲಾದಕರ ಹವಾಗುಣಕ್ಕೆ ನಗರದ ಭೂಮಟ್ಟದ ಎತ್ತರವೇ ಕಾರಣ.

ಜಲ ಸಂಪತ್ತು

ಯಾವುದೇ ಪ್ರದೇಶದ ಜಲಸಂಪತ್ತನ್ನು ಆಯಾ ಪ್ರದೇಶದ ಭೂರಚನೆ ಬಳಕೆ, ಮಳೆ, ಸಂಭಾವ್ಯ ಬಾಷ್ಪೀಕರಣ (Potential Evapotranspiration) ಅಥವಾ ಬಾಷ್ಪೀಕರಣ (Actual Evapotranspiration-AE) ಎಂಬ ಮೂರು ಪ್ರಮುಖ ನೈಸರ್ಗಿಕ ಅಂಶಗಳು (Natural Factors) ನಿಯಂತ್ರಿಸುತ್ತವೆ. ಆಯಾ ಪ್ರದೇಶದ ಮೇಲೆ ಬೀಳುವ ಮಳೆಯು ಪಿ.ಇ. ಅಥವಾ ಎ.ಇ ಕಡಿಮೆ ಇದ್ದರೆ ಪೂರ್ತಿ ಮಳೆಯು ಭಾಷ್ಪೀಕರಣಗೊಳ್ಳುತ್ತದೆಂದು ಭಾವಿಸಲಾಗುತ್ತದೆ. ಮಳೆಯು ಪಿ. ಇ ಗಿಂತ ಹೆಚ್ಚಾಗಿದ್ದರೆ ಜಲವು ಈ ಎರಡರ ವ್ಯತ್ಯಾಸಕ್ಕೆ ಸಮನಾಗಿರುವಷ್ಟು ಲಭ್ಯವಾಗುತ್ತದೆ. ಹೀಗೆ ಲಭ್ಯವಾದ ಜಲ ಸಂಪತ್ತಿನ ಕೆಲಭಾಗ ಅಂತರ್ಜಲವಾಗಿ ಭೂಮಿಯೊಳಗೆ ಇಂಗಿ ಹೋಗುತ್ತದೆ, ಕೆಲಭಾಗ ಮೇಲು ಜಲದ (Surface Runoff) ರೂಪದಲ್ಲಿ ಹಳ್ಳ, ನದಿ ಇತ್ಯಾದಿಗಳಲ್ಲಿ ಹರಿದು ಕೆರೆ ಕುಂಟೆಗಳಲ್ಲಿ ಸಂಗ್ರಹ ಗೊಳ್ಳುತ್ತದೆ. ನಂತರ ಪುನಃ ಆವಿಯಾಗಿ ಆಕಾಶದತ್ತ ಪಯಣಿಸುತ್ತದೆ. ಇದು ನಿರಂತರ ನಡೆಯುವ (Geological Cycle) ನೈಸರ್ಗಿಕ ಕ್ರಿಯೆ. ಇದನ್ನೇ ಜಲಗೋಳವೆಂದು ಕರೆಯಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಭೂರಚನೆಯ ಶಿಲೆ, ಮಣ್ಣು, ಭೂಮಟ್ಟ ಇತ್ಯಾದಿ ಬಗ್ಗೆ ಹಿಂದೆಯೇ ಚರ್ಚಿಸಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಬೆಂಗಳೂರಿನಲ್ಲಿ ವಿವಿಧ ಕೆಮ್ಮಣ್ಣಿನ ಅಡಿಯಲ್ಲಿ, ಚಿದ್ರಿತವಲಯದ ಅಡಿಯಲ್ಲಿ ಭೇದಗಳಿಂದ ಮತ್ತು ಸಂದುಗಳಿಂದ ಕೂಡಿರುವ ಕಠಿಣಶಿಲೆಯಾದ ಸೀಣಿ ಕಲ್ಲು ಇದೆ. ಬೆಂಗಳೂರು ನಗರದಲ್ಲಿ ಇಂದು ಟಾರ್ ರಸ್ತೆಗಳು, ರಸ್ತೆಗಳು, ಕಟ್ಟಡಗಳ ಛಾವಣಿಗಳು ನಗರದ ಶೇಕಡಾ 90ರಷ್ಟು ಭೂಭಾಗವನ್ನು ಆಕ್ರಮಿಸಿವೆ. ಅಂದರೆ ಬೆಂಗಳೂರಿನ ಬಹುಭಾಗವು ಅಂತರ್ಜಲದ ಇಂಗುವಿಕೆಗೆ ಅನುಕೂಲಕರವಾಗಿರದೆ ಮೇಲು ಜಲ ಹರಿವಿಗೆ (Surface Runoff) ಅನುಕೂಲವಾಗಿದೆ ಎಂದಂತಾಯಿತು.

ಕೆರೆಗಳು

ಬೆಂಗಳೂರು ನಗರ ಪ್ರದೇಶದಲ್ಲಿಯಾಗಲೀ ಅದರ ಸಮೀಪದಲ್ಲಿಯಾಗಲೀ ಯಾವುದೇ ದೊಡ್ಡ ನದಿಯಿಲ್ಲ. ಇರುವ ಚಿಕ್ಕ ಉಪನದಿ ವೃಷಭಾವತಿಯು ತುಂಬಾ ಮಲಿನಗೊಂಡಿದೆ. ಚಿಕ್ಕ ಚಿಕ್ಕ ಹಳ್ಳಗಳ ಮಾರ್ಗಗಳು ತಕ್ಷಣವೇ ನಮ್ಮ ಗಮನವನ್ನು ಸೆಳೆಯುತ್ತವೆ. ಅಂದರೆ ಚಿಕ್ಕ ಚಿಕ್ಕ ಒಡ್ಡುಗಳನ್ನು ನಿರ್ಮಿಸುವುದರಿಂದ ಸಣ್ಣಪುಟ್ಟ ಕೆರೆಗಳನ್ನು ಸೃಷ್ಟಿಸಬೇಕಾಗುತ್ತದೆ. ಇದು ಮೇಲೆ ವಿವರಿಸಲಾದ ಸಸ್ಯಾಂಕನದ ಜಲಚರಂಡಿ ವಿನ್ಯಾಸದ ಪರಿಣಾಮ. ಮೇಲ್ನೋಟಕ್ಕೆ ಇದು ಋಣಾತ್ಮಕ ಅಂಶವಾಗಿ (Minus point) ಕಂಡು ಬಂದರೂ ಇದು ನಿಜವಾಗಿಯೂ ಧನಾತ್ಮಕ ಅಂಶವಾಗಿದೆ (plus point). ನಮ್ಮ ಪೂರ್ವಜರು ಈ ನೈಸರ್ಗಿಕ ಅಂಶವನ್ನು ಗುರ್ತಿಸಿ ಸೂಕ್ತ ಸ್ಥಳಗಳಲ್ಲಿ ಸೂಕ್ತ ಎತ್ತರದ ಕಟ್ಟೆಗಳನ್ನು ಕಟ್ಟಿ ಕೆರೆಗಳನ್ನು ನಿರ್ಮಿಸಿದರು. ಇದರಿಂದ ಸ್ಥಳೀಯವಾಗಿ ನೀರಾವರಿಗಾಗಿ ನೀರು ಲಭ್ಯವಾದದ್ದು ಮಾತ್ರವೇ ಅಲ್ಲದೆ ವಾತಾವರಣವನ್ನು ತಂಪಾಗಿಡಲೂ ಸಾಧ್ಯವಾಯಿತು. ಅಲ್ಲದೆ ಅಂತರ್ಜಲದ ಭರ್ತಿಗೂ ಪರೋಕ್ಷವಾಗಿ ಸಹಾಯಕವಾಯಿತು. ಇಂಥ ಕೆರೆಗಳ ನಿರ್ಮಾಣವು ವಿಜಯನಗರ ಅರಸರ ಕಾಲದಲ್ಲಿ

ಮತ್ತು ನಂತರದ ಯಲಹಂಕ ಪಾಳೇಗಾರರ ಕಾಲದಲ್ಲಿ ನಂತರ ಒಡೆಯರ ಕಾಲದಲ್ಲಿ ನಡೆದು ಬಂತು. ಪ್ರಭುತ್ವ ಮಾತ್ರವೇ ಅಲ್ಲದೆ ಶ್ರೀಮಂತರೂ ಸ್ವಂತ ಖರ್ಚಿನಿಂದ ಕೆರೆಗಳನ್ನು ಸಾರ್ವಜನಿಕರಿಗಾಗಿ ಕಟ್ಟಿಸಿದ ಉದಾಹರಣೆಗಳಿವೆ. ಒಂದು ಕಾಲಕ್ಕೆ ಬೆಂಗಳೂರಿನಲ್ಲಿ ಸುಮಾರು 150 ಕೆರೆಗಳಿದ್ದವಂತೆ. ಆದರೆ ಜನಸಂಖ್ಯೆಯ ಒತ್ತಡ ಮತ್ತು ಆಳುವವರ ಅಸಡ್ಡತೆಯಿಂದಾಗಿ ಈಗ ಕೇವಲ 20 ಕೆರೆಗಳು ಜೀವಂತವಾಗಿ ಉಳಿದಿವೆ. ಕೆರೆಗಳ ಪುನರುಜ್ಜೀವನದ ಬಗ್ಗೆ ವಿವರವಾಗಿ ಚರ್ಚಿಸಲು ಇಲ್ಲಿ ಅವಕಾಶವಿಲ್ಲ. ಆದರೆ ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಭೂರಚನೆಯು ಪ್ರಮುಖ ಪಾತ್ರವಹಿಸುತ್ತದೆಂಬುದಕ್ಕೆ ಎರಡು ಉದಾಹರಣೆಗಳನ್ನು ನೀಡಬಹುದು.

ನಾಗಶೆಟ್ಟಿಹಳ್ಳಿಯ ಬಳಿ ಜನಿಸುವ ಅತಿ ಚಿಕ್ಕಹಳ್ಳ ಹೆಬ್ಬಾಳದ ಕಟ್ಟೆಯಲ್ಲಿ (2900')ನಿಂತು ಹೆಬ್ಬಾಳಕೆರೆಯಾಗಿದೆ. ಇಲ್ಲಿಂದ ಹೆಚ್ಚಾದ ನೀರು ಮುಂದೆ ನಾಗವಾರಕೆರೆ (2895'), ಕಲ್ಕೆರಿ ಕೆರೆ (2850?'), ರಾಮಪುರಕೆರೆ (2845') ಕೊನೆಯಲ್ಲಿ ಎಲೆಮಲ್ಲಪ್ಪ ಶೆಟ್ಟಿಕೆರೆ (280) ಯಾಗಿ ಮಡುಗಟ್ಟುತ್ತದೆ. ಅಂದರೆ, ಕೇವಲ 100' ಎತ್ತರದೊಳಗೆ ಒಟ್ಟು ಐದು ಕೆರೆಗಳನ್ನು ನಮ್ಮ ಪೂರ್ವಜರು ನಿರ್ಮಿಸಿ ನೀರನ್ನು ಸದುಪಯೋಗ ಪಡಿಸುತ್ತಿದ್ದರು ಎಂಬುದು ವ್ಯಕ್ತವಾಗುತ್ತದೆ. ಇದರಂತೆಯೇ ಕೋರಮಂಗಲ ಕೆರೆ (2900?), ಶಿನಿವಾಗಲು ಕೆರೆ (2875?), ಬೆಳ್ಳಂದೂರು ಕೆರೆ (2850') ಮತ್ತು ವರ್ತೂರು ಕೆರೆ (2800') ಎಂಬ ನಾಲ್ಕು ಕೆರೆಗಳನ್ನು ಕೇವಲ 100' ಎತ್ತರದ ವ್ಯತ್ಯಾಸದಲ್ಲಿ ಕಟ್ಟಲಾಗಿದೆ. ಅಂದರೆ ಮೇಲಹರಿವಿನಲ್ಲಿ (up stream) ಇರುವ ಕೆರೆ ಕಲುಷಿತಗೊಂಡರೆ ಕೆಳಹರಿವಿನಲ್ಲಿರುವ (Down stream) ಕೆರೆಗಳೂ ಮಲಿನಗೊಳ್ಳುತ್ತವೆ ಎಂಬುದನ್ನು ನಾವು ಮನಗಾಣಬೇಕು.

ಅಂತರ್ಜಲ

ಅಂತರ್ಜಲ ಲಭ್ಯತೆ ಮತ್ತು ಮರುಭರ್ತಿಯ ಬಗ್ಗೆ ತಿಳಿಯುವುದಕ್ಕಿಂತ ಪೂರ್ವದಲ್ಲಿ ಹನ್ನೆರಡು ತಿಂಗಳಲ್ಲಿ ಬಿದ್ದಮಳೆಯು ಎಷ್ಟು ಭಾಗ ಭಾಷ್ಪೀಕರಣಗೊಳ್ಳುತ್ತದೆ ಮತ್ತು ಉಳಿದದ್ದು ಎಷ್ಟು ಎಂಬುದನ್ನು ತಿಳಿಯುವುದು ಅವಶ್ಯಕ. ಅದಕ್ಕಾಗಿ ಚಿತ್ರಗಳನ್ನು ಸಿದ್ಧಪಡಿಸಲಾಗಿದೆ. ಈ ಚಿತ್ರವನ್ನು ಗಮನಿಸಿದಾಗ ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಬೀಳುವ ಮಳೆ ಭಾಷ್ಪೀಕರಣ ಪ್ರಕ್ರಿಯೆಗಿಂತ ಹೆಚ್ಚಾಗಿದ್ದು, ಈ ನಾಲ್ಕು ತಿಂಗಳುಗಳಲ್ಲಿ ಮಾತ್ರ ಮೇಲುಜಲ ಮತ್ತು ಅಂತರ್ಜಲ ಎಂಬ ಎರಡು ಭಾಗಗಳಲ್ಲಿ ಹಂಚಿಹೋಗುತ್ತದೆ. ಅಂದರೆ ಈ ನಾಲ್ಕು ತಿಂಗಳುಗಳಲ್ಲಿ ಮಾತ್ರ ಕೆರೆಕುಂಟೆಗಳಿಗೆ ನೀರು ಹರಿದು ಬರಲು ಸಾಧ್ಯ ಮತ್ತು ಈ ನಾಲ್ಕು ತಿಂಗಳುಗಳ ಅವಧಿಯಲ್ಲಿ ಮಾತ್ರ ಅಂತರ್ಜಲ ಮರು ಭರ್ತಿಯಾಗಬೇಕು (Recharge). ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ನಾಲ್ಕು ತಿಂಗಳುಗಳಲ್ಲಿ ಅಂತರ್ಜಲದಲ್ಲಿ ಸಂಗ್ರಹವಾಗುವ ನೀರನ್ನು ಮಾತ್ರ ನಾವು ಉಪಯೋಗಿಸಬಹುದಾಗಿದೆ. ವಾಸ್ತವವಾಗಿ ಮಳೆನೀರು ನೆಲದೊಳಕ್ಕೆ ಇಂಗಿಹೋಗಲು ನೆಲದ ಮೈ (surface) ಕಡಿಮೆ ಇರುವ ನಗರದಲ್ಲಿ ಅಂತರ್ಜಲಕ್ಕೆ ಮರುಭರ್ತಿ ಕಡಿಮೆಯಾಗಿ ಅಂತರ್ಜಲದ ಮಟ್ಟ ಕುಸಿಯುತ್ತದೆ. ಇದಲ್ಲದೆ ಅನಿರ್ಭಂಧಿತವಾಗಿ ಕೊಳವೆ ಬಾವಿಗಳನ್ನು ಕೊರೆಯಲಾಗುತ್ತಿದ್ದು, ಅಂತರ್ಜಲವನ್ನು ಮಾರಾಟಮಾಡುವ ಧಂಧೆ ಈಗ ಬೆಂಗಳೂರಿನಲ್ಲಿ ಭರಾಟೆಯಿಂದ ನಡೆಯುತ್ತಲಿದೆ. ಆದ್ದರಿಂದ ಕೇವಲ 20 ವರ್ಷಗಳ ಹಿಂದೆ ಸಮೃದ್ಧಿಯಾಗಿ ನೀರನ್ನು ನೀಡುತ್ತಿದ್ದ ತೆರೆದ ಬಾವಿಗಳು ಇಂದು ಬೆಂಗಳೂರಿನಲ್ಲಿ ಒಣಗಿಹೋಗಿವೆ. ನೆಲಮಟ್ಟದಿಂದ 3–4 ಮೀಟರ್ ಆಳದಲ್ಲಿದ್ದ ಅಂತರ್ಜಲ ಮಟ್ಟ ಇಂದು ಕುಸಿದು ಸುಮಾರು 100 ಮೀಟರ್‌ಗಳಷ್ಟು ಆಳಕ್ಕೆ ಇಳಿದು ಹೋಗಿದೆ. ದುಂದುವೆಚ್ಚಗಾರನೊಬ್ಬ ತನ್ನ ಆದಾಯಕ್ಕಿಂತ ಹೆಚ್ಚಿನ ಖರ್ಚನ್ನು ನಿಭಾಯಿಸಲು ತನ್ನ ಪೂರ್ವಜರು ಸಂಗ್ರಹಿಸಿಟ್ಟ ನಿಧಿಯನ್ನು ಬಳಸುತ್ತಿರುವ ಪರಿಸ್ಥಿತಿ ಇದಾಗಿದೆ. ಈ ಪರಿಸ್ಥಿತಿಯನ್ನು ಸುಧಾರಿಸಲು ಹಲವಾರು ಬಗೆಯ ಕೃತಕ ಮರುಭರ್ತಿ (Artificial Recharge) ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು.

ನಗರೀಕರಣದ ದುಷ್ಪರಿಣಾಮಗಳು ಮತ್ತು ಪರಿಹಾರ

ಬೆಂಗಳೂರು ನಗರವು ಇಂದು ತನ್ನ ನೈಸರ್ಗಿಕ ಸಂಪನ್ಮೂಲಗಳನ್ನು ಅತಿಯಾಗಿ ಬಳಸಿದೆ ಎಂದರೆ ತಪ್ಪಾಗದು. ಅನಿರ್ಬಂಧಿತ ಮತ್ತು ಮುಂದಾಲೋಚನೆ ರಹಿತವಾಗಿ ಯಾವುದೇ ನಗರವು ಬೆಳೆದರೆ ನಾಗರಿಕರ ಜೀವನ ಅಸಹನೀಯವಾಗುತ್ತದೆ. ಬೆಂಗಳೂರಿನಲ್ಲಿ ಕಳೆದ ಸುಮಾರು 40 ವರ್ಷಗಳ ಅವಧಿಯಲ್ಲಿ ಬೆಳೆದ ಜನಸಂಖ್ಯೆ ಮತ್ತು ವಸತಿಗೃಹಗಳಿಂದಾಗಿ ಈಕೆಳಗಿನ ದುಷ್ಪರಿಣಾಮಗಳನ್ನು ಗುರ್ತಿಸಬಹುದು.

(1) ಕಟ್ಟಡಗಳ ಮತ್ತು ರಸ್ತೆಗಳ ನಿರ್ಮಾಣಕ್ಕೆ ಕಲ್ಲು ಬೇಕಾಗುತ್ತದೆ. ದೂರದಿಂದ ಸೈಜುಕಲ್ಲನ್ನು, ಜಲ್ಲಿಕಲ್ಲನ್ನು ಸಾಗಿಸುವುದು ಲಾಭದಾಯಕವಲ್ಲ. ಆದ್ದರಿಂದ ನಗರದ ಹೊರವಲಯಕ್ಕೆ ಸಮೀಪದಲ್ಲಿಯೇ ಕಲ್ಲುಗಣಿಗಳು ಹುಟ್ಟಿಕೊಳ್ಳುತ್ತವೆ. ಕಲ್ಲು ಗಣಿಗಳು ಕಾಲಕ್ರಮೇಣ ಹಲವಾರು ಎಕರೆಗಳ ವಿಸ್ತೀರ್ಣವುಳ್ಳ ದೊಡ್ಡಗುಂಡಿಗಳಾಗುತ್ತವೆ. ಹಾಗೆಯೇ ಅವುಗಳ ಸುತ್ತಲೂ ಜನವಸತಿ ಬೆಳೆದು ಈಗುಂಡಿಗಳು ಅನಾರೋಗ್ಯಕರ ವಾತಾವರಣಕ್ಕೆ ಕಾರಣವಾಗುತ್ತವೆ. ಇಂತಹ ಗುಂಡಿಗಳಿಗೆ ನಿದರ್ಶನಗಳೆಂದರೆ ಲಾಲ್‌ಬಾಗ್ ಕಲ್ಲುಗಣಿ, ಸಾರಕ್ಕಿ ಕಲ್ಲುಗಣಿ, ಬನಶಂಕರಿ ಕಲ್ಲುಗಣಿ ಇತ್ಯಾದಿ. ಇಂತಹ ಗುಂಡಿಗಳನ್ನು ನಗರದ ತ್ಯಾಜ್ಯ ವಸ್ತುಗಳಿಂದ ಮುಚ್ಚಿ ನೆಲಮಟ್ಟಕ್ಕೆ ತಂದು ಆ ಪ್ರದೇಶವನ್ನು ನಿವೇಶನಗಳನ್ನಾಗಿ ಪರಿವರ್ತಿಸುವುದಾಗಿದೆ. ಇದಕ್ಕೆ ಸಾರಕ್ಕಿಯ ಕಲ್ಲುಗಣಿ ಗುಂಡಿಯನ್ನು ಉದಾಹರಣೆಯಾಗಿ ಹೇಳಬಹುದಾಗಿದೆ. ಆದರೆ ಈ ಕ್ರಮದಲ್ಲಿ ತ್ಯಾಜ್ಯವಸ್ತುಗಳು ಗಟ್ಟಿಗೊಳ್ಳದಿದ್ದರೆ (Concentration) ಅಂಥ ನಿವೇಶನದ ಮೇಲೆ ಕಟ್ಟಡ ನಿರ್ಮಿಸುವುದು ಅಪಾಯಕಾರಿ. ಅದರ ಬದಲಾಗಿ ಇಂಥ ಗುಂಡಿಗಳನ್ನು ಭೂಮ್ಯಾಂತರ್ಗತ (Cellar) ಶಾಪಿಂಗ್ ಕಾಂಪ್ಲೆಕ್ಸ್, ವಾಹನಗಳ ಪಾರ್ಕಿಂಗ್‌ಗಳನ್ನಾಗಿ ಪರಿವರ್ತಿಸಿ ಮೇಲೆ ಆರ್. ಸಿ.ಸಿ.ಯ ಚಪ್ಪಡಿಯನ್ನು ಕಂಬಗಳ ಮೇಲೆ ನಿರ್ಮಿಸಿ ನಂತರ ಕಟ್ಟಡಗಳನ್ನು ಕಟ್ಟುವುದು ಸುರಕ್ಷಿತ. ಕೋರಮಂಗಲ, ಹೊಸೂರು ರಸ್ತೆಯ ಬಳಿ ಇಂಥ ತೆರೆದ ಗುಂಡಿಗಳು ಸಾರ್ವಜನಿಕರಿಗೆ ತೊಂದರೆ ಗಳನ್ನುಂಟು ಮಾಡಿರುವುದು ಪತ್ರಿಕೆಗಳಲ್ಲಿ ವರದಿಯಾಗಿವೆ.

(2) ಹಿಂದೆ ವಿವರವಾಗಿ ಚರ್ಚಿಸಲಾದ ಅಂತರ್ಜಲ ಕುಸಿತವನ್ನು ತಡೆಗಟ್ಟಲು ಸಣ್ಣ ಸಣ್ಣ ಕೆರೆಗಳನ್ನು ಸಾಧ್ಯವಾದೆಡೆಗಳಲ್ಲಿ ನಿರ್ಮಿಸಬೇಕು. ಕಟ್ಟಡಗಳ ಮೇಲೆ ಸುರಿದ ಮಳೆ ವ್ಯರ್ಥವಾಗಿ ಹರಿದುಹೋಗದೆ, ನೆಲದೊಳಕ್ಕೆ ಇಂಗುವ ಕೊಯ್ಲು (Roof Water Harvesting) ವ್ಯವಸ್ಥೆಯನ್ನು ಕಡ್ಡಾಯಗೊಳಿಸಬೇಕು.

ಇಂದು ಬೆಂಗಳೂರಿನ ಮೇಲು ಜಲ ಮತ್ತು ಅಂತರ್ಜಲ ಎರಡೂ ಮಲಿನಗೊಂಡಿವೆ. ಒಂದು ಬಹು ಮಹಡಿ ಫ್ಲಾಟ್‌ಗಳಿಗಾಗಿ ಕುಡಿಯುವ ನೀರನ್ನು ಸರಬರಾಜು ಮಾಡಲು ಕೊರೆಸಿರುವ ಕೊಳವೆ ಬಾವಿಯ ನೀರಿನಲ್ಲಿ ಕ್ರೋಮಿಯಂ ಧಾತು 20 ಪಿ.ಪಿ.ಎಂ.ನಷ್ಟು ಇರುವುದು ಕಂಡುಬಂದಿದೆ. ವೈಜ್ಞಾನಿಕವಾಗಿ 0.5 ಪಿ.ಪಿ.ಎಂ. ಕ್ರೋಮಿಯಂ ಮಾತ್ರ ಕುಡಿಯುವ ನೀರಿನಲ್ಲಿ ಸಹನೀಯ. ಇದೊಂದು ಉದಾಹರಣೆ ಮಾತ್ರ. ಸರ್ವೇಕ್ಷಣೆ ಮಾಡಿದರೆ ಇಂಥ ನೂರಾರು ನಿದರ್ಶನಗಳು ಸಿಗಬಹುದು. ಆದ್ದರಿಂದ ಮೇಲುಜಲವನ್ನೂ ಸಂರಕ್ಷಿಸಿದಂತೆ (ಯಾಕೆ ಅದಕ್ಕಿಂತಲೂ ಹೆಚ್ಚುಕಾಳಜಿವಹಿಸಿ) ಅಂತರ್ಜಲದ ಗುಣಮಟ್ಟವನ್ನು ಸಂರಕ್ಷಿಸಬೇಕು.

ಕೊನೆಯ ಮಾತು

ಬೆಂಗಳೂರು ನಗರದ ವಾತಾವರಣ ಮತ್ತು ಬೆಳವಣಿಗೆಗೆ ಇಲ್ಲಿಯ ನೈಸರ್ಗಿಕ ಲಕ್ಷಣಗಳೇ ಕಾರಣ ಎಂಬು ದನ್ನೂ ಮೇಲೆ ವಿವರವಾಗಿ ಚರ್ಚಿಸಲಾಗಿದೆ. ಬೆಂಗಳೂರು ಸುಂದರ ಹಾಗೂ ವಾಸಯೋಗ್ಯ ನಗರವಾಗಿ ಉಳಿಯಬೇಕಾದರೆ ಇಲ್ಲಿ ನೆಲ ಜಲಗಳೆರಡನ್ನೂ ಸಂರಕ್ಷಿಸುವ ಜವಾಬ್ದಾರಿ ಸರ್ಕಾರ, ಮಹಾನಗರ ಪಾಲಿಕೆ ಮತ್ತು ಅದಕ್ಕೂ ಹೆಚ್ಚಾಗಿ ನಾಗರಿಕರ ಮೇಲೆ ಇದೆ.

ಆಕರ ಸಾಹಿತ್ಯ

1. Chandrashekar.H, (1975) "Hydrologic Atlas of Karnataka", Department of Mines and Geology Government of Karnataka, Ground Water Studies No. 166
2. Chandrashekar.H (1993) "Formulation of Better Management Techniques and Legislative Control on Utilisation of Ground Water Resources of Karnataka". Drought Monitoring Cell, Bangalore.
3. Shivashankar G. and Chandrashekar.H (1979), Seismicity of Karnataka. Geological Studies No. 126", Department of Mines and Geology; Government of Karnataka, Bangalore
4. Naganna.C. and Basappa Reddy.M (1975) "Geohydrological Studies in and around Bangalore University," Studies in Precambrian; PP 250-262, Bangalore University: Geology Department.

ಅನುಬಂಧ – 1

ಬೆಂಗಳೂರಿನ ಕೆಲನಿವೇಶನಗಳ ಸಮುದ್ರ ಮಟ್ಟದಿಂದ ಇರುವ ಎತ್ತರ

1. ರಮಣ ಮಹರ್ಷಿ ಪಾರ್ಕನಲ್ಲಿರುವ ಕೆಂಪೇಗೌಡ ಗೋಪುರ (3114')

2. ಬೆಂಗಳೂರು ಪೂರ್ವರೈಲ್ವೇ ಸ್ಟೇಶನ್ (2025?), ಬೆಂಗಳೂರು ದಂಡು ರೈಲ್ವೇ ಸ್ಟೇಶನ್ (ಬಿ.ಎಂ. 3003), (4) ವಿಧಾನ ಸೌಧ (3005), (5) ಹಲಸೂರು ಕೆರೆ ಕಟ್ಟೆ (3000), (6) ಕೃಷ್ಣರಾಜಪುರ (ಬಿ.ಎಂ. 2923?), (7) ಹೈಗ್ರೌಂಡ್ (933ಮೀ) (8) ರಾಜಭವನ (920.4 ಮೀ ಬಿ.ಎಂ), (9) ಬಯ್ಯಪ್ಪನ ಹಳ್ಳಿ ರೇಲ್ವೆ ಸ್ಟೇಶನ್ (911ಮೀ), (10) ಕ್ಷಯ ಆಸ್ಪತ್ರೆ (ಬಿ.ಎಂ.893) (11) ಪಾದರಾಯನ ಪುರ (ಬಿ. ಎಂ. 856.4 ಮೀ), (12) ಬೆಂಗಳೂರು ವಿಶ್ವವಿದ್ಯಾಲಯ (879ಮೀ), (13) ಉತ್ತರಹಳ್ಳಿ (923ಮೀ), (14) ಬನಶಂಕರಿ (918ಮೀ), (15) ಬಾಣಸವಾಡಿ (3021), (16) ಟಾಟಾ ಇನ್ಸ್ಟಿಟ್ಯೂಟ್ (3062), (17) ಸ್ಯಾಂಕಿ ಕೆರೆ (3000), (18) ಯಶವಂತಪುರ (ಬಿ.ಎಂ.2991), (19) ಪೀಣ್ಯ (ಬಿ.ಎಂ. 2957), (20) ಲಗ್ಗೆರೆ (3000), (21) ಯಲಹಂಕ ರೇಲ್ವೇ ಸ್ಟೇಶನ್ (2911).

ವಿ.ಸೂ: ಮೇಲ್ಕಾಣಿಸಿದ ಎತ್ತರಗಳನ್ನು 57 ಜಿ/12 ಮತ್ತು 57 ಎಚ್/9 ಟೋಪೋಶೀಟ್ಸ್‌ಗಳಿಂದ ಆಯ್ದು ಕೊಳ್ಳಲಾಗಿದೆ. ಇದು ಖಚಿತವಾದ ಎತ್ತರವಾಗದಿರಲೂಬಹುದು. ಅವಶ್ಯವಿದ್ದರೆ ಆಯಾ ಎತ್ತರವನ್ನು ಸಮೀಪದ ಬೆಂಮಾರ್ಕ ನಿವೇಶನದ ಸಹಾಯದಿಂದ ಸರ್ವೆ ಮಾಡಿ ನಿರ್ಧರಿಸಬೇಕಾಗುತ್ತದೆ.

ಅನುಬಂಧ – 2

ಬೆಂಗಳೂರಿನಲ್ಲಿ ಬೀಳುವ ಸರಾಸರಿ ಸಾಮಾನ್ಯ ಮಾಸಿಕ ಮಳೆ (1951–1980)

(ಮಳೆ ಮಿ.ಮೀ) ಹವಾಮಾನ ಕೇಂದ್ರದ ಎತ್ತರ 921 ಮೀ

ತಿಂಗಳು	ತಿಂಗಳಿನ ಒಟ್ಟು ಮಳೆ	ತಿಂಗಳಿನ ಒಟ್ಟು ಮಳೆಯ ದಿನಗಳು
ಜನವರಿ	2.7	0.2
ಫೆಬ್ರವರಿ	7.2	0.5
ಮಾರ್ಚ್	4.4	0.4
ಏಪ್ರಿಲ್	46.3	3.0
ಮೇ	119.6	7.0
ಜೂನ್	80.8	6.4
ಜುಲೈ	110.2	8.3
ಆಗಸ್ಟ್	137.0	10.00
ಸೆಪ್ಟೆಂಬರ್	198.8	9.3
ಅಕ್ಟೋಬರ್	180.4	9.0
ನವಂಬರ್	64.5	4.0
ಡಿಸೆಂಬರ್	22.1	1.7
ವರ್ಷದ ಸರಾಸರಿ ಒಟ್ಟು	970.0	59.8

ಆಧಾರ: ಭಾರತ ಸರ್ಕಾರದ ಹವಾಮಾನ ಇಲಾಖೆ, ಬೆಂಗಳೂರು

ಅನುಬಂಧ – 3

ಬೆಂಗಳೂರಿನ ಮಾಸಿಕ ಮತ್ತು ಪ್ರತಿದಿನದ ಸರಾಸರಿ ಗರಿಷ್ಠ ಮತ್ತು ಕನಿಷ್ಠ ಉಷ್ಣಾಂಶ (ಸೆಂಟಿಗ್ರೇಡಿನಲ್ಲಿ)

ಮಾಸ	ಪ್ರತಿ ದಿನದ ಗರಿಷ್ಠ	ಪ್ರತಿ ದಿನದ ಕನಿಷ್ಠ	ಮಾಸದ ಅತಿ ಗರಿಷ್ಠ	ಮಾಸದ ಅತಿ ಕನಿಷ್ಠ
ಜನವರಿ	27.0	15.1	29.7	12.3
ಫೆಬ್ರವರಿ	29.6	16.6	32.3	13.5
ಮಾರ್ಚ್	32.4	19.2	34.6	15.6
ಏಪ್ರಿಲ್	33.6	21.5	35.8	18.6

ಮೇ	32.7	21.2	35.8	18.6
ಜೂನ್	29.2	19.9	32.8	18.6
ಜುಲೈ	27.5	19.5	30.7	18.3
ಆಗಸ್ಟ್	27.4	19.4	30.0	18.3
ಸೆಪ್ಟೆಂಬರ್	28.0	19.3	30.6	17.7
ಅಕ್ಟೋಬರ್	27.7	19.1	30.0	16.6
ನವೆಂಬರ್	26.6	17.2	28.9	13.7
ಡಿಸೆಂಬರ್	25.9	15.6	28.4	12.4
ಒಟ್ಟು ಸರಾಸರಿ	29.0	18.6	36.2	11.5

ಅನುಬಂಧ – 4

ಬೆಂಗಳೂರಿನ ಸಾಪೇಕ್ಷ ತೇವಾಂಶ ಮತ್ತು ಆವಿಯ ಒತ್ತಡ

ಮಾಸ ಸಾಪೇಕ್ಷ ತೇವಾಂಶ % ಆವಿಯ ಒತ್ತಡ


ಹೆಚ್. ಪಿ. ಎ. ಟಿಪ್ಪಣಿ

ಜನವರಿ	78	15.8	ಹೆಚ್. ಪಿ. ಎ.
	40	12.5	ಹೆಕ್ಟೋಪ್ಯಾಸ್ಕಲ್
ಫೆಬ್ರವರಿ	68	15.5	
	31	11.4	
ಮಾರ್ಚ್	63	17.2	
	26	11.0	
ಏಪ್ರಿಲ್	71	21.7	
	34	14.9	
ಮೇ	77	22.6	
	48	19.0	
ಜೂನ್	84	22.0	
	61	20.7	
ಜುಲೈ	88	21.7	
	67	21.0	


ಆಗಸ್ಟ್	89	21.9
	67	21.1
ಸೆಪ್ಟೆಂಬರ್	87	21.6
	64	20.5
ಅಕ್ಟೋಬರ್	84	21.4
	66	20.2
ನವೆಂಬರ್	79	18.8
	61	17.6
ಡಿಸೆಂಬರ್	80	16.8
	53	15.0
ಒಟ್ಟು ಸರಾಸರಿ	69	19.8
	52	17.1




ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಕ್ಷೆ




ಬೆಂಗಳೂರು ನಗರ ಮತ್ತು ಪರಿಸರದ ಪ್ರದೇಶದ ನಕಾಶೆ






13.0' ಅಕ್ಷಾಂಶಗುಂಟ ಬೆಂಗಳೂರು ವಲಯದ ಭೂಮಟ್ಟದ ಅಡ್ಡಛೇದಿತ ಚಿತ್ರ




77.35' ರೇಖಾಂಶದುದ್ದಕ್ಕೆ ಬೆಂಗಳೂರು ವಲಯದ ಭೂಮಟ್ಟದ ಅಡ್ಡಛೇದಿತ ಚಿತ್ರ




ಲಾಲಬಾಗ್‌ದ ಪೆನಿನ್ಸುಲಾರ್ ನೈಸ




ಬೆಂಗಳೂರು ನಗರ ವಲಯದ ನೀರ್ಗಾಲುವೆ ನಕಾಶೆ




ಬೆಂಗಳೂರು ನಗರದ ತಿಂಗಳ ಸರಾಸರಿ ಮಳೆ (ಮಿ.ಮೀ.)




ಬೆಂಗಳೂರು ನಗರದ ವರ್ಷದ ತಿಂಗಳುವಾರು ಹವಾಮಾನದ ಅಂಕಿಅಂಶಗಳ ಚಿತ್ರ







ಬೆಂಗಳೂರು ವಲಯದ ಜಲಾನಯನ ಪ್ರದೇಶಗಳು



ಬೆಂಗಳೂರು ವಲಯದ ಶೇಕಡಾವಾರು ಜಲಾನಯನ ಪ್ರದೇಶಗಳು



ಬೆಂಗಳೂರು ವಲಯದ ಕೆರೆಗಳ ವಿಸ್ತೀರ್ಣವಾರು ವರ್ಗೀಕರಣ




ಬೆಂಗಳೂರಿನ ಧರ್ಮಾಂಬುಧಿ ಕೆರೆ ಈಗ ಬಸ್ ನಿಲ್ದಾಣ



ದ್ವೀಪ ಕಲ್ಪದ
ಸೀಣಿಕಲ್ಲಿನ ಮೇಲೆ
(ದಿಬ್ಬದ) ಬೆಟ್ಟದ
ಮೇಲೆ
ಕೆಂಪೇಗೌಡರ
ಗೋಪುರ





ಕರ್ನಾಟಕ ಸರಕಾರ ಮತ್ತು
ಕೇಂದ್ರ ಸರಕಾರದ ಭೂ
ವೈಜ್ಞಾನಿಕ ಸರ್ವೇಕ್ಷಣ
ಇಲಾಖೆ ಜಂಟಿಯಾಗಿ
ಘೋಷಿಸಿದ ಸಂರಕ್ಷಿತ
ಸ್ಮಾರಕ

2. ಬೆಂಗಳೂರು ನಗರ ಜಿಲ್ಲಾ ಪ್ರದೇಶದ ಪ್ರಾಗ್-ಇತಿಹಾಸ ಒಂದು ಸಮೀಕ್ಷೆ

ಡಾ. ಅ. ಸುಂದರ

ಪೀಠಿಕೆ

ಈಗಿನ ಬೆಂಗಳೂರು (ನಗರ) ಜಿಲ್ಲೆ ಮೂರು ತಾಲೂಕಗಳಿಂದ ಕೂಡಿದೆ. ಅವು ಉತ್ತರದಿಂದ ದಕ್ಷಿಣಕ್ಕೆ ಬೆಂಗಳೂರು (ಉತ್ತರ), ಬೆಂಗಳೂರು (ದಕ್ಷಿಣ) ಮತ್ತು ಆನೇಕಲ್. ಈ ಜಿಲ್ಲೆಯ ದಕ್ಷಿಣ, ಪಶ್ಚಿಮ ಮತ್ತು ಉತ್ತರ ಮತ್ತು ಭಾಗಶಃ ಪೂರ್ವ ಹಾಗು ಆಗ್ನೇಯ ಬದಿಗಳಲ್ಲಿ ಕ್ರಮವಾಗಿ ಬೆಂಗಳೂರು (ಗ್ರಾಮಾಂತರ) ಜಿಲ್ಲೆ ಮತ್ತು ತಮಿಳುನಾಡಿನ ಧರ್ಮಪುರಿ ಜಿಲ್ಲೆ ಅವರಿಸಿವೆ. ಇದರ ಭೌಗೋಳಿಕ ವಿಸ್ತೀರ್ಣ 2,190 ಕಿ.ಮಿ. ಕರ್ನಾಟಕ ರಾಜ್ಯದಲ್ಲಿ ಇದೇ ಅತ್ಯಂತ ಚಿಕ್ಕ ಜಿಲ್ಲೆ. ಈ ಪ್ರದೇಶದಲ್ಲಿ ಯಾವುದೇ ನದಿ ಅಥವಾ ಉಪನದಿಯಾಗಲಿ ಇಲ್ಲ. ಅಲ್ಲಲ್ಲಿ ಗ್ರಾನೈಟ್ ಬೆಟ್ಟ ಗುಡ್ಡಗಳಿವೆ. ಈ ಜಿಲ್ಲೆಯ ಹಾಗು ದಕ್ಷಿಣ ಭಾರತದ ಪ್ರಮುಖ ಪಟ್ಟಣ ಬೆಂಗಳೂರು ನಗರವು ಬೃಹದಾಕಾರವಾಗಿ ಬೆಳೆಯುತ್ತಿರುವುದರ ಜೊತೆಗೆ ಅಲ್ಲಲ್ಲಿ ಇದ್ದಿರಬಹುದಾದ ಪುರಾತತ್ವ ನೆಲೆಗಳನ್ನು ನಿರ್ದಾಕ್ಷಿಣ್ಯವಾಗಿ ನಿರ್ಮೂಲ ಮಾಡಲಾಗಿದೆ[1]. ಈ ಅಂಶಗಳನ್ನು ಜಿಲ್ಲೆಯ ಪ್ರಾಗಿತಿಹಾಸವನ್ನು ಪರಿಶೀಲಿಸುವಾಗ ಗಮನಿಸಬೇಕಾಗುತ್ತದೆ.

ಜಿಲ್ಲೆಯ ಪ್ರಾಗಿತಿಹಾಸ ನೆಲೆಗಳು

ಪ್ರಾಯಶಃ 1881ರಲ್ಲಿ ಬ್ರಾನ್‌ಫ್ಹಿಲ್[2] ಅವರ ಸಾವನದುರ್ಗ (ದೇವನಹಲ್ಲಿ ತಾ.) ದಲ್ಲಿಯ ಕಬ್ಬಿಣಯುಗದ ಬೃಹತ್ ಶಿಲಾಗೋರಿಗಳ ನೆಲೆಯ ಶೋಧನೆ ಪ್ರಥಮ. ತದನಂತರ 1946 ನವೆಂಬರ್‌ನಲ್ಲಿ ಕೆ. ಆರ್. ಯು. ಟಾಡ್[3] ಜಾಲಹಳ್ಳಿ, ಬೆಂಗಳೂರಿನ ಇಂಡೊ-ಬ್ರಿಟಿಷ್ ಜನರಲ್ ಅಸ್ಪತ್ರೆ ಮತ್ತು ಹಿಂದುಸ್ತಾನ್ ಏರ್ ಕ್ರಾಫ್ಟ್ ಫ್ಯಾಕ್ಟರಿ ಹತ್ತಿರ ಒಂದೊಂದು ಸೂಕ್ಷ್ಮ ಶಿಲಾಯುಗ ನೆಲೆಯನ್ನು ಶೋಧಿಸಿದರು. ಅನಂತರ ಮನಗೊಂಡನಹಳ್ಳಿ (ದೇವನಹಳ್ಳಿ ತಾ, ಬೆಂಗಳೂರು ಗ್ರಾಮಾಂತರ)[4] ಮೊದಲಾದೆಡೆಗಳಲ್ಲಿ ಬೃಹತ್ ಶಿಲಾ ಗೋರಿಗಳ ನೆಲೆಗಳು ಬೆಳಕಿಗೆ ಬಂದುವು. 1959-60 ಮತ್ತು 1975-76ರಲ್ಲಿ ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣ ಇಲಾಖೆಯು[5] ಸಿದ್ದಾಪುರ (ಬೆಂಗಳೂರು ಉತ್ತರ ತಾ.) ಮತ್ತು ರಾಗಿಗುಡ್ಡದಲ್ಲಿ ಒಂದೊಂದು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಶೋಧಿಸಿದೆ. 1990 ದಶಕದಿಂದ ವಿಶೇಷವಾಗಿ ಮಹಾವಿದ್ಯಾಲಯಗಳ ಹಾಗು ಇತರ ಯುವ ಪುರಾತತ್ವ ಅನ್ವೇಷಕರು[6] ಇದುವರೆಗೆ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯೂ ಸೇರಿದಂತೆ ಸುಮಾರು 90 ಪ್ರಾಗಿತಿಹಾಸ ಮತ್ತು ಬೃಹತ್ ಶಿಲಾಗೋರಿಗಳ ನೆಲೆಗಳನ್ನು ಶೋಧಿಸಿದ್ದಾರೆ ಮತ್ತು ಶೋಧನೆಗಳು ಆಗುತ್ತಲಿವೆ. ಆದರೆ ಇದುವರೆಗು ಹಳೆ (ಆದಿ-ಮಧ್ಯ-ಅಂತ್ಯ) ಶಿಲಾಯುಗ ಹಾಗು ನೂತನ/ತಾಮ್ರ-ಶಿಲಾಯುಗ ಸಂಸ್ಕೃತಿಗಳ ನೆಲೆಗಳು ಬೆಳಕಿಗೆ ಬಂದಿಲ್ಲದಿರುವುದು ಕುತೂಹಲಕಾರಿಯಾಗಿದೆ. ಅಂದ ಮಾತ್ರಕ್ಕೆ ಇದು ನಿಜಸ್ಥಿತಿಯಲ್ಲ. ಏಕೆಂದರೆ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ ಮತ್ತು ಬೆಂಗಳೂರು (ನಗರ) ಜಿಲ್ಲೆಯ ಕ್ರಮವಾಗಿ ಎಡ ಮತ್ತು ಬಲಬದಿಗಳಲ್ಲಿರುವ ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಈ ಸಂಸ್ಕೃತಿಗಳ ಹಲವಾರು ನೆಲೆಗಳು ಶೋಧವಾಗಿವೆ. ಬನಹಳ್ಳಿ (ಕೋಲಾರ ಜಿ.)ಯಲ್ಲಿಯ ನೂತನ-ಬೃಹತ್ ಶಿಲಾ-ಇತಿಹಾಸ ಆರಂಭಕಾಲದ

ಸಂಸ್ಕೃತಿಗಳ ನೆಲೆಯನ್ನು ಕೇಂದ್ರ ಪುರಾತತ್ವ ಇಲಾಖೆಯು[7] ಉತ್ಖನನವನ್ನು ಮಾಡಿದೆ. ಇದರಲ್ಲಿ ನೂತನ ಶಿಲಾ ಸಂಸ್ಕೃತಿಯು ಬಹುಕಾಲದವರೆಗೆ ಊರ್ಜಿತವಾಗಿದ್ದುದು ಗೊತ್ತಾಗಿದೆ. ಅಷ್ಟೆ ಅಲ್ಲ ತುಲನಾತ್ಮಕವಾಗಿ ಈ ಸಂಸ್ಕೃತಿಯ ಕೆಲವೊಂದು ಹೊಸ ಅಂಶಗಳು ಅಧ್ಯಯನದಲ್ಲಿ ಬೆಳಕಿಗೆ ಬರುತ್ತಿವೆ. ಇವೆಲ್ಲವನ್ನೂ ಗಮನಿಸಿದಾಗ ಪ್ರಸ್ತುತ ಅಧ್ಯಯನಕ್ಕೊಳಗಾದ ಬೆಂಗಳೂರು (ನಗರ) ಜಿಲ್ಲೆಯಲ್ಲಿ ಪುರಾತತ್ವ ಅನ್ವೇಷಣೆಯ ಕೊರತೆಯೆಂದೆ ಹೇಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇದುವರೆಗೆ ಶೋಧವಾದ ಸೂಕ್ಷ್ಮ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಇವೆರಡು ಸಂಸ್ಕೃತಿಗಳ ನೆಲೆಗಳನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ನೆಲೆಗಳು

ಜಾಲಹಳ್ಳಿಯ ನೆಲೆಯು ಸಮೀಪದ ಎರಡು ಬೆಟ್ಟಗಳ ನಡುವಿನ ಕೊಳ್ಳ ಪ್ರದೇಶದಲ್ಲಿದೆ. ಇಲ್ಲಿಯ ಒಂದು ಕೊರಕಲಿನಲ್ಲಿ ಗ್ರನೈಟ್ ಬಂಡೆಯಮೇಲಿನ ಕೆಂಪು ಮಣ್ಣಿನ ಪದರಿನಲ್ಲಿ ಹಾಗು ಸುತ್ತ ಮುತ್ತ ನೆಲದಮೇಲೆ ಸೂಕ್ಷ್ಮ ಶಿಲಾ ಸಂಸ್ಕೃತಿಯ ಅತಿ ಸಣ್ಣ ಸಣ್ಣ ಕಲ್ಲಿನ ಉಪಕರಣಗಳಿದ್ದುದನ್ನು ಟಾಡ್ ಅವರು ಗುರುತಿಸಿದರು. ಅವರು ಸಂಗ್ರಹಿಸಿದ ಉಪಕರಣಗಳು ಲಂಡನ್ನಿನ ಬ್ರಿಟಿಷ್ ಮ್ಯೂಸಿಯಮ್ ನಲ್ಲಿವೆ. ಅವುಗಳನ್ನು ಎಮ್. ಶೇಷಾದ್ರಿಯವರು[8] ತಮ್ಮ ಪಿಹೆಚ್.ಡಿ. ಕಾರ್ಯಕ್ರಮದ ಭಾಗವಾಗಿ ಸೂಕ್ಷ್ಮವಾಗಿ ಮತ್ತು ಕೂಲಂಕಷವಾಗಿ ಅಧ್ಯಯನ ಮಾಡಿದ್ದಾರೆ. ಅವರ ಪ್ರಕಾರ ಇವುಗಳನ್ನು ರಾಕ್ ಕ್ರಿಸ್ಟಲ್ ಮತ್ತು ಹಾಲಿನ ಬಣ್ಣದ ಬೆಣಚಿಕಲ್ಲಿ (white quartz) ನಲ್ಲಿ ಮಾಡಿದ್ದಾಗಿವೆ. ಈ ಕಲ್ಲುಗಳ ಎಳೆಗಳು ಸ್ಥಳಿಯ ಕಲ್ಲು ಬಂಡೆಯ ಬಿರುಕಿನಲ್ಲಿವೆ. ಮತ್ತು ಈ ನೆಲೆಯಲ್ಲಿ ಸೂಕ್ಷ್ಮ ಶಿಲಾ ಉಪಕರಣಗಳಲ್ಲದೆ ಅನುಪಯುಕ್ತ ಈ ಕಲ್ಲುಗಳ ಸಣ್ಣ ಸಣ್ಣ ಚಕ್ಕೆಗಳು, ತುಂಡುಗಳು ಗಣನೀಯವಾಗಿವೆ. ಇದರಿಂದ ಇಂಥ ಉಪಕರಣಗಳನ್ನು ಇಲ್ಲಿಯೆ ಸಿದ್ಧಮಾಡಲಾಗಿದೆಯೆಂಬುದು ಮತ್ತು ಈ ನೆಲೆಯು ಸೂಕ್ಷ್ಮ ಶಿಲಾ ಉಪಕರಣಗಳ ತಯಾರಿಕೆಯ ಸ್ಥಳವೆಂಬುದು ಸ್ಪಷ್ಟ. ಅರ್ಧ ಚಂದ್ರಾಕೃತಿ, ತ್ರಿಕೋಣಾಕೃತಿಯ ಉಪಕರಣಗಳು, ಮೊನೆಚಾದ ತುದಿಯುಳ್ಳ ಸಣ್ಣ ನೀಳ ಚಕ್ಕೆಗಳು, ಕೊರೆಯುಳಿ, ಅಪರೂಪದ ಬಾಣದಮೊನೆ, ಹೆರೆ ಚಕ್ಕೆಗಳು ಮೊದಲಾದ ಉಪಕರಣಗಳಿವೆ. ಒಂದು ಮಾತ್ರ ಕೆಂಪು ಜಾಸ್ಪರ್ ಇನ್ನೊಂದು ಚರ್ಟ್ ಕಲ್ಲಿನದು. ಉಳಿದೆಲ್ಲವೂ ರಾಕ್ ಕ್ರಿಸ್ಟಲ್ ಮತ್ತು ಬಿಳಿ ಬೆಣಚಿಕಲ್ಲಿನವು. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವಿದೆ[9]. ಇಂಥ ಉಪಕರಣಗಳುಳ್ಳ ಬಂಡೆಯ ಮೇಲೆ ನೇರವಾಗಿರುವ ಕೆಂಪು ಮಣ್ಣಿನ ಪದರು ಇದೆ. ಇದರಲ್ಲಿಯೆ ಸೂಕ್ಷ್ಮ ಶಿಲಾ ಉಪಕರಣಗಳಿರುವುದು. ಈ ಪದರಿನಮೇಲೆ ಸ್ವಾಭಾವಿಕವಾಗಿ ಸಂಗ್ರಹವಾದ ಮಣ್ಣಿನ ಪದರು. ಇದರ ಮೇಲೆ ಕಬ್ಬಿಣಯುಗದ (ಬೃಹತ್ ಶಿಲಾ ಸಂಸ್ಕೃತಿಯ ?) ಮಣ್ಪಾತ್ರೆ ಚೂರುಗಳಿರುವ ಮಣ್ಣಿನ ಪದರವಿದೆ. ಈ ರೀತಿ ಸ್ವಾಭಾವಿಕ ಮತ್ತು ಸಾಂಸ್ಕೃತಿಕ ಪದರು ಅನುಕ್ರಮ ಸಂಗನಕಲ್ಲನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಇದುವರೆಗೆ ಶೊಧವಾಗಿಲ್ಲ. ಇದರಿಂದ ಇಲ್ಲಿಯ ಸೂಕ್ಷ್ಮ ಶಿಲಾ ಸಂಸ್ಕೃತಿಯ ಕಾಲಮಾನವನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಶೇಷಾದ್ರಿಯವರು ಈ ನೆಲೆಯಲ್ಲಿ ವಿಶೇಷವಾಗಿ ಕಂಡು ಬರುವ ಬಾಣದ ಮೊನೆಗಳನ್ನು ಗಮನಿಸಿ ಈ ಸಂಸ್ಕೃತಿಯು ಬಹುಮಟ್ಟಿಗೆ ಬೇಟೆಯಾಡುವ ಜನ ಸಮುದಾಯದ್ದೆಂದು ಮತ್ತು ಈ ಸಂಸ್ಕೃತಿಯ ವಿವಿಧ ಹಂತಗಳ ಮಾಲಿಕೆಯಲ್ಲಿ ಇದೇ ಅತ್ಯಂತ ಪ್ರಾಚೀನವೆಂದು ಅಭಿಪ್ರಾಯಪಟ್ಟಿದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ ತೆನ್ಮಲೈ (ಕೇರಳ)ನಲ್ಲಿಯ ಸೂಕ್ಷ್ಮ ಶಿಲಾ ಸಂಸ್ಕೃತಿಯ ಕಾಲಮಾನವನ್ನು ಇಂಗಾಲ–14 ವಿಧಾನದಿಂದ ಕ್ರಿಪೂ. 5000[10] ನಿರ್ಧರಿಸಲಾಗಿದೆ. ಬಹುಶಃ ಜಾಲಹಳ್ಳಿಯದು ಇದೇ ಕಾಲಮಾನದ್ದೆಂದು ಹೇಳಬಹುದು. ಈ ಸಂಸ್ಕೃತಿಯ ಹೆಚ್ಚಿನ ಮಹಿತಿಯನ್ನು ಪಡೆಯಲು ಈ ನೆಲೆ ಉತ್ಖನನಕ್ಕೆ ಯೋಗ್ಯ.

ಬೆಂಗಳೂರಿನಲ್ಲಿ ಎರಡು ನೆಲೆಗಳದ್ದು[11] ಅವುಗಳಲ್ಲಿನ ಉಪಕರಣಗಳು ಜಾಲಹಳ್ಳಿಯ ಉಪಕರಣಗಳನ್ನು ಹೋಲುತ್ತದೆ. ಈ ನೆಲೆಗಳಲ್ಲಿ ಶಿಲಾಯುಧಗಳು ಕಡಿಮೆ ಪ್ರಮಾಣದಲ್ಲಿವೆ. ಸಂಗ್ರಹಿಸಿದ ಉಪಕರಣಗಳು ಈ ಸಂಸ್ಕೃತಿಯ ಸಾಮಾನ್ಯ ಸ್ವರೂಪವನ್ನು ತಿಳಿಸುತ್ತದೆಯೆಂದು ಹೇಳಲಾಗುವುದಿಲ್ಲ. ಆದರೆ ಇವೆಲ್ಲ ಈ ಪ್ರದೇಶವು ಈ ಸಂಸ್ಕೃತಿಯ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿಯಲು ವ್ಯಾಪಕ ಅಧ್ಯಯನಕ್ಕೆ ಯೋಗ್ಯವಾಗಿದೆಯೆಂದು ಸೂಚಿಸುತ್ತವೆ. ಬೆಂಗಳೂರು (ಉತ್ತರ) ಮತ್ತು (ದಕ್ಷಿಣ) ತಾಲ್ಲೂಕುಗಳಲ್ಲಿಯ ಕ್ರಮವಾಗಿ ಸಿದ್ದಾಪುರ ಮತ್ತು ರಾಗಿಗುಡ್ಡದಲ್ಲಿ ಸೂಕ್ಷ್ಮ ಶಿಲಾ ನೆಲೆಗಳನ್ನು ಕೇಂದ್ರ ಪುರಾತತ್ವ ಇಲಾಖೆಯು ಶೋಧಿಸಿದೆ. ಈ ನೆಲೆಗಳಲ್ಲಿಯೂ ಕೂಡ ಕ್ವಾರ್ಟ್ಜ್ ಮತ್ತು ಚಾಲ್ಸಿಡೋಣಿ ಕಲ್ಲಿನ ಅರ್ಧ ಚಂದ್ರಾಕೃತಿ ಮತ್ತು ಮೊನೆಗಳು ದೊರೆತಿವೆ. 1976ರ ಜೂನ್ 19ರ ಪ್ರಜಾವಾಣಿ ಪತ್ರಿಕೆಯಲ್ಲಿ ಈ ಸ್ಥಳದಲ್ಲಿ ಒಂದು ಬೃಹತ್ ಶಿಲಾ ಸಂಸ್ಕೃತಿ ಕಾಲದ ವಾಸ್ತವ್ಯದ ನೆಲೆ ಶೋಧವಾಗಿದೆಯೆಂದು ವರದಿಯಾಗಿತ್ತು. ಇದನ್ನು ಪರಿಶೀಲಿಸಬೇಕಾಗಿದೆ.

ಆನೆಕಲ್ ತಾಲೂಕಿನ ಮುತ್ಯಾಲಮಡುವು[12]ನಲ್ಲಿ ಕೇಂದ್ರ ಪುರಾತತ್ವ ಇಲಾಖೆ ನೂತನ ಶಿಲಾಯುಗದ ಕೆಲವು ಉಪಕರಣಗಳನ್ನು ಸಂಗ್ರಹಿಸಿದೆ. ಇದನ್ನು ಹೊರತುಪಡಿಸಿ ಈ ಜಿಲ್ಲೆಯಲ್ಲಿ ಇದುವರೆಗೆ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಗಳಾಗಲಿ, ಉಪಕರಣಗಳಾಗಲಿ ಬೆಳಕಿಗೆ ಬಂದಿಲ್ಲ. ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ ನಾಲ್ಕು ನೆಲೆಗಳಲ್ಲಿ (ಸಂಬೆಗೌಡನ ದೊಡ್ಡಿ, ಸೂಳೆಕಲ್ ಮಠ, ಕನಕಪುರ ತಾ., ಅಂಕನಪಾಳ್ಯ (ಮೋಟಗಾನ ಹಳ್ಳಿ ಸಾವನದುರ್ಗ, ಮಾಗಡಿ ತಾ.) ನೂತನ ಶಿಲಾಯುಗದ ಉಪಕರಣಗಳು ದೊರೆತಿವೆ. ಆದ್ದರಿಂದ ಈ ಪ್ರದೇಶದಲ್ಲಿ ನೂತನ ಶಿಲಾಯುಗ ನೆಲೆಗಳು ಗಣನೀಯ ಪ್ರಮಾಣದಲ್ಲಿ ದೊರೆಯುವ ಸಾಧ್ಯತೆಯಿದೆ.

ಬೃಹತ್ ಶಿಲಾ ಸಂಸ್ಕೃತಿ ನೆಲೆಗಳು

1990 ದಶಕದ ಮಧ್ಯದಿಂದ ಕರ್ನಾಟಕದಲ್ಲಿ ಯುವ ಸಂಶೋಧಕರು ಬಹಳಷ್ಟು ಬೃಹತ್ ಶಿಲಾಯುಗದ ಜನ ಸಮುದಾಯಗಳ ನೆಲೆಗಳನ್ನು ಪತ್ತೆ ಹಚ್ಚುತ್ತಿದ್ದಾರೆ. ಸಾಮಾನ್ಯವಾಗಿ ಈ ಶೋಧನೆಗಳು ಇತಿಹಾಸ ದರ್ಶನ ದಲ್ಲಿ[13] ವರದಿಯಾಗಿವೆ. ತತ್ಪರಿಣಾಮವಾಗಿ, ಬೆಂಗಳೂರು (ನಗರ) ಜಿಲ್ಲೆಯಲ್ಲಿ (ಸಧ್ಯಕ್ಕೆ ನನಗೆ ಲಭ್ಯವಿದ್ದ ಈ ನಿಯತಕಾಲಿಕೆಗಳ ಆಧಾರದ ಮೇಲೆ) ಸುಮಾರು 17 ಬೃಹತ್ ಶಿಲಾ ಸಂಸ್ಕೃತಿ ಸಮಾಧಿ ನೆಲೆಗಳು ಬೆಳಕಿಗೆ ಬಂದಿವೆ. ಅವುಗಳ ತಾಲೂಕವಾರು ಪ್ರಸರಣ ಹೀಗಿವೆ: ಬೆಂಗಳೂರು(ಉತ್ತರ) 1; ಬೆಂಗಳೂರು (ದಕ್ಷಿಣ) 12 ಮತ್ತು ಆನೆಕಲ್ 5. ಒಟ್ಟಾರೆ ಈ ಜಿಲ್ಲೆಯಲ್ಲಿಯ ಕಲ್ಗೋರಿಗಳನ್ನು ಈ ರೀತಿ ವಿಂಗಡಿಸಬಹುದು:

1. ಕಂಡಿ ಕಲ್ಮನೆಗಳು (ನೆಲದ ಮೇಲೆ ನಿರ್ಮಿಸಿದ ಕಂಡಿ ಕೋಣೆಗಳು Port-hole dolmen)
2. ನೆಲ ಕಂಡಿ ಕೋಣೆಗಳು (Port-hole cists)
3. ಅರೆ ಕಂಡಿ ಕೋಣೆಗಳು (Dolmenoid cists)
4. ಶವಕುಣಿ ವೃತ್ತಗಳು (Pit-circles)
5. ಕಲ್ಗುಪ್ಪೆಗಳು (Round barrows)
6. ನಿಲಸ(ನಿಲುವು) ಗಲ್ಲುಗಳು (Menhirs)
7. ನೆಲಮಾಳಿಗೆ ಕೋಣೆಗಳು (Rock-excavated chambers)

ಹೀಗೆ ಏಳು ಪ್ರಕಾರಗಳಿವೆ. ಇವಲ್ಲದೆ ಬನ್ನೇರುಘಟ್ಟದಲ್ಲಿ ಶಿಲಾ ಮಂಟಪಗಳಿವೆ. ಈ ಪ್ರಕಾರಗಳಲ್ಲಿ ಎರಡು ಮತ್ತು ಮೂರನೆ ಬಗೆಯ ಗೋರಿಗಳು ಈ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಬಹಳಷ್ಟು ನೆಲೆಗಳಲ್ಲಿವೆ. ಇಲ್ಲಿ ಹಾಗು ಇತರೆಡೆಗಳಲ್ಲಿ ಕಂಡು ಬಂದಂತೆ ಇವುಗಳಲ್ಲಿಯ ವೃತ್ತಾಕಾರದ ಕಂಡಿ ಸಾಮಾನ್ಯವಾಗಿ ಪೂರ್ವಾಮುಖಿಯಾಗಿರುತ್ತದೆ. ಹೊರಬದಿಯಿಂದ ಕಂಡಿಯನ್ನು ಒಂದು ಕಲ್ಲು ಹಲಗೆಯಿಂದ ಮುಚ್ಚಿರುತ್ತೆ. ಕಂಡಿಯ ಮುಂದೆ ಸಾಮಾನ್ಯವಾಗಿ ಕಾಲುವೆ ತರಹ ಒಂದು ಸಣ್ಣ ಹಾದಿ ಇರುತ್ತದೆ. ಅಳತೆ ಪ್ರಮಾಣದಲ್ಲಿ ಒಂದು ಪರಿಮಿತಿಯಲ್ಲಿರುತ್ತದೆ. ಈ ಪ್ರದೇಶದಲ್ಲಿ ಮಾತ್ರವಲ್ಲ, ಇಡೀ ದಕ್ಷಿಣ ಭಾರತದಲ್ಲಿಯೆ ಇದು ಹೀಗಿದೆ. ಈ ಪ್ರಕಾರಕ್ಕೆ ಬ್ರಹ್ಮಗಿರಿಯ ನೆಲ ಕಂಡಿ ಕೋಣೆ ಗೋರಿಗಳು (cist-circles) ಅತ್ಯುತ್ತಮ ಉದಾಹರಣೆ

ಒಂದನೆಯದು ಅಲ್ಲಲ್ಲಿ ಅಪರೂಪವಾಗಿ ಇವೆ. ಉದಾ: ಗಿರಿಗೌಡನ ದೊಡ್ಡಿ ಈ ಪ್ರಕಾರದಲ್ಲಿ ಕಂಡಿ ಯಾವ ದಿಕ್ಕಿಗಾದರೂ ಅಭಿಮುಖವಾಗಿರಬಹುದು. ಮತ್ತು ಕಂಡಿ ವೃತ್ತ ಇಲ್ಲವೆ ತ್ರಿಕೋಣ, ಚೌಕಾಕಾರವಾಗಿರಬಹುದು. ಹೊರ ಬದಿಯಲ್ಲಿ ಸುತ್ತಲೂ ತಲೆಕಲ್ಲಿಗೆ ಆನಿಸಿ ಒಂದರಪಕ್ಕದಲ್ಲೊಂದರಂತೆ ಹಾಸುಗಲ್ಲುಗಳನ್ನು ನಿಲ್ಲಿಸಿ ಒಳಗಿನ ಕೋಣೆಯನ್ನು ಮುಚ್ಚಲಾಗಿರುತ್ತದೆ. ಕಾಲಾಂತರದಲ್ಲಿ ಇವು ಬಿದ್ದು ಹೋಗಿ ಕ್ರಮೇಣ ಕೋಣೆ ಮಾತ್ರ ಕಾಣುತ್ತಿರುತ್ತದೆ. ಅಳತೆ ಪ್ರಮಾಣದಲ್ಲಿ ಬಹಳ ಏರು–ಪೇರು ಇರಬಹುದು. ಹಿರೆ ಬೆನಕಲ್[14] ಅತ್ಯುತ್ತಮ ಉದಾಹರಣೆ. ಐಹೊಳೆ[15], ಬೋರ್ಕಟ್ಟೆ (ಕಾರ್ಕಳ ತಾ. ಉಡುಪಿ ಜಿ.), ಬಡ ಕಜೆಕಾರು[16] ಇತ್ಯಾದಿ, ನೆಲೆಗಳಲ್ಲಿಯೂ ಈ ಮಾದರಿಯ ಕಲ್ಮನೆಗಳಿವೆ. ಈ ಮಾದರಿಯವು ಸಾಮಾನ್ಯವಾಗಿ ಬಂಡೆಯ ಮೇಲೆ ಇರುತ್ತದೆ. ಸುಸ್ಥಿತಿಯಲ್ಲಿರುವ ಇಂಥ ಕಲ್ಮನೆಯನ್ನು ಕಂಡಿಯಿಂದ ಒಳಗೆ ನೋಡಿದರೆ ಏನೂ ಇರುವುದಿಲ್ಲ. ಹಾಗಾದರೆ ಇವು ಸಮಾಧಿಗಳೆ? ಇಲ್ಲದಿದ್ದರೆ ಇಂಥ ಕಲ್ಮನೆಗಳನ್ನು ಯಾವ ಉದ್ದೇಶಕ್ಕಾಗಿ ನಿರ್ಮಿಸಲಾಗುತ್ತಿತ್ತು? ಇದುವರೆಗೆ ಸಮಾಧಾನಕರ ಉತ್ತರ ಸಿಕ್ಕಿಲ್ಲ. ಇತ್ತೀಚೆಗೆ ನನಗನಿಸುವುದು. ಇವನ್ನು ಅವರವರ ಸಂಪ್ರದಾಯದಂತೆ ಶವ ಸಂಸ್ಕಾರಕ್ಕೋಸ್ಕರ ಬೇಕಾದವರಿಗೆ ಮೊದಲೆ ಇಂಥ ಕಲ್ಮನೆಗಳನ್ನು ನಿರ್ಮಿಸುತ್ತಿದ್ದರೆ? ಶವ ಸಂಸ್ಕಾರವಾದ ಮೇಲೆ ಕೋಣೆಯ ಸುತ್ತಲೂ ಕಲ್ಲು ಚಪ್ಪಡಿ ನಿಲ್ಲಿಸಿ ಅದನ್ನು ಮುಚ್ಚುತ್ತಿದ್ದರೇನೋ? ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಇವರದು ಪೂರ್ವಮುಖಿ ಕಂಡಿ ಕೋಣೆ ಗೋರಿ ಸಂಪ್ರದಾಯಕ್ಕಿಂತ ಭಿನ್ನವೆಂದು ತೋರುತ್ತದೆ. ಕೆಲವೊಂದೆಡೆಗಳಲ್ಲಿ ಕೋಣೆಯ ಒಂದು ಬದಿಯ ನಿಲುವು ಕಲ್ಲಿನ ಮೇಲ್ಭಾಗದಲ್ಲಿ ಲ್ಯಾಟಿನ್ ಅಕ್ಷರ 'ಗ' ಆಕಾರದಲ್ಲಿ ಕಂಡಿ ಇರುತ್ತದೆ. ಉದಾ: ಬನ್ನೇರುಘಟ್ಟ ಪರಿಸರದ ಷರೀಫ್ ಗಾರ್ಡನ್ ಮತ್ತು ಅದರ ಪಕ್ಕದಲ್ಲಿಯ ನೆಲೆ, ಕಣ್ಣೂರು. ಕೊಡಗಿನ ಬ್ರಹ್ಮಗಿರಿ ಮೊದಲಾದ ನೆಲೆಗಳ ಬೃಹ ಶಿಲಾ ಗೋರಿಗಳಲ್ಲಿ ಕಂಡಿಯು ಯು ಆಕಾರದಲ್ಲಿದೆ. ಇದು ಸಾಮಾನ್ಯವಾಗಿ ಯಾವ ದಿಕ್ಕಿಗೆ ಅಭಿಮುಖವಾಗಿರುತ್ತದೆ ಎಂಬುದನ್ನು ಗೊತ್ತು ಮಾಡಬೇಕಾಗಿದೆ.

ಬೆಂಗಳೂರಿನ (ದಕ್ಷಿಣ) ಮಾದಾಪಟ್ನದಲ್ಲಿ ಏಕ ವೃತ್ತ ಶಿಲಾ ಗೋರಿಗಳಲ್ಲದೆ, ಐದು ಮತ್ತು ಒಂಬತ್ತು ಏಕ ಕೇಂದ್ರಿಯ ಶಿಲಾ ವೃತ್ತಗಳಿವೆ ಇದು ಬಹಳ ಅಪರೂಪದ ವಿಷಯ. ಏಳು ಸುತ್ತಿನ ಶಿಲಾ ಗೋರಿಗಳು ಸಾವನದುರ್ಗ, ಆಂಧ್ರ ಪ್ರದೇಶದ ಕದರಿರಾಯ ಚೆರುವು, ಇರಳಬಂಡ (ಅನಂತಪುರ ಜಿಲ್ಲೆ) ಮೊದಲಾದೆಡೆ ಗಳಲ್ಲಿರುವುದು ಈಗಾಗಲೆ ತಿಳಿದ ವಿಷಯ. ಆದರೆ ಐದು ಮತ್ತು ಒಂಬತ್ತು ವೃತ್ತ ಗೋರಿಗಳು ಇದೇ ಮೊದಲನೆ ಬಾರಿಗೆ ತಿಳಿದು ಬರುತ್ತಿರುವುದು. ಕೇಂದ್ರದಲ್ಲಿ ನೆಲ ಕಂಡಿ ಕೋಣೆಯಿರುತ್ತದೆ. ಕಂಡಿ ಪೂರ್ವಮುಖಿಯಾಗಿರುತ್ತದೆ. ಶಿಲಾ ವೃತ್ತಗಳಲ್ಲಿ ಕಲ್ಲುಹಲಗೆಗಳನ್ನು ಒಂದರಪಕ್ಕದಲ್ಲೊಂದರಂತೆ ನಿಲ್ಲಿಸಲಾಗಿರುತ್ತದೆ. ಒಂದರನಂತರ ಒಂದರಂತೆ ಹಲಗೆಯ ಮೇಲಂಚು ನೇರವಾಗಿರುತ್ತದೆ ಇಲ್ಲವೆ ಅರ್ಧ ಗೋಲಾಕೃತಿಯದಾಗಿರುತ್ತದೆ. ಕೇಂದ್ರದ ಕೋಣೆಯ ಕಂಡಿಗೆ ನೇರವಾಗಿ ಪ್ರತಿಯೊಂದು ಶಿಲಾವೃತ್ತದ ಕಲ್ಲು ಹಲಗೆಯಲ್ಲಿ ಕಂಡಿಯಿರುತ್ತದೆ. ಹೀಗಾಗಿ ಕಂಡಿಗಳು ಒಂದೇ ಸರಳ ರೇಖೆಯಲ್ಲಿರುತ್ತವೆ. ಮಾದಾಪಟ್ನದಲ್ಲಿ ಹೇಗಿದೆಯೆಂಬುದನ್ನು ಪರಿಶೀಲಿಸಬೇಕಾಗಿದೆ.

ಬನ್ನೇರುಘಟ್ಟದ ಷರೀಫ್ ಗಾರ್ಡನ್ನಲ್ಲಿಯ ಕಲ್ಗೋರಿಗಳ ಮಧ್ಯದಲ್ಲಿ ಆಕಡೆ ಈಕಡೆ ಕೋಡುಗಳಂತೆ ಎರಡು ಬೃಹತ್ ಶಿಲೆಗಳಿವೆ. ಈ ತರಹದ ಕೋಡುಗಳು ಕೊಡಗಿನ ಬ್ರಹ್ಮಗಿರಿಯ ಬೃಹತ್ ಶಿಲಾ ಸಮಾಧಿ ನೆಲೆಯಲ್ಲಿಯೂ ಇವೆ. ಬಹುಶಃ ಇವುಗಳಿರುವ ಗೋರಿಗಳು ಆ ಜನಸಮುದಾಯದ ಮುಖ್ಯಸ್ಥನದಾಗಿದ್ದಿರಬಹುದು.

ನಾಲ್ಕು ಮತ್ತು ಐದನೇ ಪ್ರಕಾರದ ಗೋರಿಗಳು ಜಾಲಗೆರೆ, ಕಲ್ಕುಂಟೆ, ಬಸವನ ಬೆಟ್ಟ, ಮೊದಲಾದ ನೆಲೆಗಳಲ್ಲಿವೆ. ಶಿಲಾ ವೃತ್ತಗಳ ಕೇಂದ್ರದಲ್ಲಿ ಕೇವಲ ಶವಕುಣಿ ಇರಬಹುದು. ಇಲ್ಲವೆ ಒಂದೊಂದರಲ್ಲಿ ನೆಲಕೋಣೆಯಿದ್ದರಬಹುದು. ಕಲ್ಲುಗ್ಗಪ್ಪೆಗಳ ತಳದಲ್ಲಿ ಸಾಮಾನ್ಯವಾಗಿ ಶವಕುಣಿಯಿರುತ್ತದೆ. ಇವುಗಳ ನೈಜ ಸ್ಥಿತಿ ಉತ್ಖನನದಿಂದ ಗೊತ್ತಾಗುವುದು.

ಆರನೆ ಪ್ರಕಾರದ ನಿಲಸುಗಲ್ಲುಗಳ ನೆಲೆಗಳು ಬನ್ನೇರುಘಟ್ಟ, ಉಜನಿ, ಜಾಲಗೆರೆ, ಹಾಲು ಚಿಲುಮೆ ಮೊದಲಾದ ಸ್ಥಳಗಳಲ್ಲಿವೆ. ಉಜನಿಯಲ್ಲಿ ಸುಮಾರು 21 ನಿಲಸಗಲ್ಲುಗಳಿವೆ. ತುಲನಾತ್ಮಕವಾಗಿ ಈ ಪ್ರದೇಶದಲ್ಲಿ ಇವುಗಳು ಬಹಳಷ್ಟು ನೆಲೆಗಳಲ್ಲಿರುವುದು ಗಮನಾರ್ಹ. ಇವು ಕೇರಳ, ಬೆಂಗಳೂರು (ಗ್ರಾಮಾಂತರ), ಕೊಡಗು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿಯ ಗರುಡನ ಪಾಳ್ಯ (ಹಾಸನ ಜಿ.), ನಿಲಸಕಲ್ಲು, ಬೈಸೆ, ಹೇರಗಲ್, ಮುರುಮ್ಬ (ಹೊಸನಗರ ತಾ, ಶಿವಮೊಗ್ಗ ಜಿಲ್ಲೆ) ಮೊದಲಾದೆಡೆಗಳಲ್ಲಿವೆ

ಏಳನೆ ಪ್ರಕಾರದ ನೆಲಮಾಳಿಗೆ ಗೋರಿಗಳು ಬೆಟ್ಟದಕೋಟೆಯಲ್ಲಿಯ ಜಂಬಿಟ್ಟಿಗೆ ಕಲ್ಲಿನ ಸಮತಟ್ಟು ಪ್ರದೇಶದಲ್ಲಿ 'ಹತ್ತಿಪ್ಪತ್ತು' ಅಗೆದು ಮಾಡಿದ ನೆಲಮಾಳಿಗೆ ಕೋಣೆಗಳಿವೆ. ಇಂಥ ಗೋರಿಗಳು ಉಡುಪಿ, ಮಂಗಳೂರು ಮತ್ತು ಕೇರಳ ಪ್ರದೇಶಗಳಲ್ಲಿ ಬಹಳಷ್ಟು ನೆಲೆಗಳಲ್ಲಿವೆ.

ಈ ಪ್ರಕಾರಗಳ ಗೋರಿಗಳಲ್ಲದೆ, ಆನೆಗೊಟ್ಟಳ್ಳಿಯಲ್ಲಿ ಶವಕುಣಿಯಲ್ಲಿ ಬಹು ಕಾಲಿನ ಆಯತ ವೃತ್ತಾಕಾರದ ಮಣ್ಣಿನ ತೊಟ್ಟಿಯಿದ್ದು ಅದರಲ್ಲಿ ಅಸ್ಥಿಅವಶೇಷ, ಮಣ್ಪಾತ್ರೆಗಳಿದ್ದುವು. ಈ ತರಹದ್ದು ಜಡಿಗೆನಹಳ್ಳಿಯಲ್ಲಿ ಉತ್ಖನನ ಮಾಡಿದ ನಾಲ್ಕು ಶವಕುಣಿಗಳಲ್ಲೂ ಇದ್ದುವು. ತಮಿಳುನಾಡಿನ ಚಿಂಗಲ್ಪುಟ್‌ನಲ್ಲಿಯ ಕುನ್ನತ್ತೂರಿನಲ್ಲಿ ಇಂಥ ಗೋರಿಗಳು ಉತ್ಖನನದಲ್ಲಿ ಪತ್ತೆಯಾದುವು. ಆಂಧ್ರ ಪ್ರದೇಶದ ಸಂಖಾವರಮ್ ನಲ್ಲಿಯ ಮಣ್ಣಿನ ಶವ ಪೆಟ್ಟಿಗೆಗೆ ಹೋತದ ತಲೆಯಿದ್ದು ಅಪರೂಪದ್ದಾಗಿದೆ.

ಕಾಳನಾಯಕನ ಹಳ್ಳಿಯ ಸುಡಾವೆ ಮಣ್ಣಿನ ಗೊಂಬೆಗಳು, ಹೂಜಿಗಲ್ಲಿನ ಕಬ್ಬಿಣದ ತ್ರಿಶೂಲವನ್ನು ಬಿಟ್ಟರೆ, ಸಾಮಾನ್ಯವಾಗಿ ಬಹಳಷ್ಟು ನೆಲೆಗಳಲ್ಲಿಯ ದುಸ್ಥಿತಿಯಲ್ಲಿರುವ ಗೋರಿಗಳಿಂದ ಹೊರಬಂದ ಮಣ್ಪಾತ್ರೆ, ಕಬ್ಬಿಣದ ಸಾಮಾನುಗಳು ಉತ್ಖನನ ಮಾಡಿದ ಇತರ ನೆಲೆಗಳಲ್ಲಿಯ ಗೋರಿಗಳಲ್ಲಿ ಕಂಡುಬಂದ ವಸ್ತುಗಳಂತಿವೆ.

ಈ ಜಿಲ್ಲೆಯ ಬೃಹತ್ ಶಿಲಾ ನೆಲೆಗಳನ್ನು ಸುತ್ತಮುತ್ತಲಿನ ಪ್ರದೇಶಗಳನ್ನು ನೋಡಿದಾಗ, ಬೆಂಗಳೂರು (ಗ್ರಾಮಾಂತರ) ಪ್ರದೇಶದಲ್ಲಿ ಸುಮಾರು 65ಕ್ಕೂ ಹೆಚ್ಚಿನ ನೆಲೆಗಳು ಬೆಳಕಿಗೆ ಬಂದಿರುವುದು ಗಮನಾರ್ಹ. ಅದ್ದರಿಂದ ಬೆಂಗಳೂರು ನಗರ ಭಾಗ ಈ ಸಂಸ್ಕೃತಿಯ ಕೇಂದ್ರಭಾಗವಾಗಿದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಈ ಕೇಂದ್ರದ ಅಂಚಿನ ಭಾಗವೆಂದು ಅನಿಸಬಹುದು. ಆದರೆ ಇವೆರಡು ಪ್ರದೇಶಗಳಲ್ಲಿ ಅನ್ವೇಷಣೆ ಪ್ರಮಾಣವನ್ನೂ ಗಮನಿಸಬೇಕಾಗುತ್ತದೆ. ಅದ್ದರಿಂದ ಇನ್ನೂ ಹೆಚ್ಚಿನ ಪ್ರಮಾಣದ ಅನ್ವೇಷಣೆ ಅಗತ್ಯ


ಈಗಾಗಲೆ ಹೇಳಿದಂತೆ ನಿಲಸುಗಲ್ಲುಗಳ ನೆಲೆಗಳು ಹೆಚ್ಚಿನ ಸಂಖ್ಯೆಯಲ್ಲಿರುವುದು ಗಮನಾರ್ಹ. ಕರ್ನಾಟಕದಲ್ಲಿ ಈ ಪ್ರಕಾರದ ಕಲ್ಗೋರಿಯನ್ನು ಉತ್ಖನನ ಮಾಡಿಲ್ಲ. ಮನಗೊಂಡನಹಳ್ಳಿ (ದೇವನಹಳ್ಳಿ ತಾ. ಬೆಂಗಳೂರು ಗ್ರಾಮಾಂತರ)ಯಲ್ಲಿ ಇಂಥ ಕಲ್ಗೋರಿಗಳಿವೆ. ಇಲ್ಲಿಯ ಗುಡಾಣದಂಥ ಅಸ್ಥಿಪಾತ್ರೆ ಗಮನಾರ್ಹ.

ಪರಾಮರ್ಶೆ


ಹೀಗೆ ಈ ಪ್ರದೇಶದಲ್ಲಿ ಮಾನವರ ಜೀವನ ಶೈಲಿಯ ವಿಕಸನ ಮತ್ತು ಬೆಳವಣಿಗೆಯನ್ನು ಅಲ್ಲಲ್ಲಿಯ ಕೆಲವು ಹಂತಗಳು ತಿಳಿಯದಿದ್ದರೂ ಕನಿಷ್ಠ ಪಕ್ಷ ಸೂಕ್ಷ್ಮ ಶಿಲಾಯುಗ ಹಂತದಿಂದ ಅಂದರೆ ಸುಮಾರು 7–8 ಸಾವಿರ ವರ್ಷಗಳ ಹಿಂದಿನಿಂದ ಅಲ್ಪ ಸ್ವಲ್ಪ ಗೊತ್ತು ಮಾಡಲು ಸಾಧ್ಯವಾಗಿದೆ. ಕೂಲಂಕಷ ಮತ್ತು ವ್ಯಾಪಕ ಪುರಾತತ್ವ ಅನ್ವೇಷಣೆ ಅಗತ್ಯ. ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲಾ ಪ್ರದೇಶದಲ್ಲಿ ನಿಲಸಗಲ್ಲು ಪ್ರಕಾರದ ಹೆಚ್ಚಿನ ಪ್ರಮಾಣದಲ್ಲಿ ಕಲ್ಗೋರಿಗಳಿರುವುದರ ಮಹತ್ವವನ್ನು ತಿಳಿಯಬೇಕಾಗಿದೆ.

ಗ್ರಂಥ ಮತ್ತು ಲೇಖನಗಳು


1. ಅಲ್ಮಿತ್ರ, ಎಚ್. ಪಟೇಲ್ : ಕಿಂಡಿ ಕೊಠಡಿಯ ಚಪ್ಪಡಿ ಸಮಾಧಿಗಳು : ತಳಹದಿಗಳೆ ಅಥವ ಸಮಾಧಿಗಳೆ? ಇತಿಹಾಸ ದರ್ಶನ, ಸ. 10. 1995
2. ಬ್ರ್ಯಾನ್ ಫ್ಲಿಲ್, ಬಿ. ಆರ್., ಆನ್ ದಿ ಸಾವನದುರ್ಗ ರೂಡ್ ಸ್ಟೋನ್ ಸಿಮೆಟರಿ. ಸೆಂಟ್ರಲ್ ಮೈಸೂರ್, ಇಂಡಿಯನ್ ಆಂಟಿಕ್ವೆರಿ, ಸಂ 10. 1881
3. ಟಾಡ್, ಕೆ. ಆರ್. ಯು., ಎ ಮೈಕ್ರೊಲಿಥಿಕ್ ಇಂಡಸ್ಟ್ರಿ ಇನ್ ಈಸ್ಟರ್ನ್ ಮೈಸೂರ್, ಮ್ಯಾನ್ 48, ನಂ. 27. ಲಂಡನ್. 1948
4. ಡಾ. ಎಮ್. ಶೇಷಾದ್ರಿಯವರಿಂದ ಮಾಹಿತಿ. ಅವರಿಗೆ ಕೃತಜ್ಞ, ಮತ್ತು ನನ್ನ ಸ್ಥಳ ಪರಿಶೀಲನೆ.
5. ಇಂಡಿಯನ್ ಆರ್ಕಿಯಾಲಜಿ, ಎ ರಿವ್ಯೂ 1975–76. ಪು. 18.
6. ಇತಿಹಾಸ ದರ್ಶನ ಸಂಪುಟಗಳು 9 (1994), ಲೇಖನ 2: ಸಂ. 10 (1995), ಲೇಖನಗಳು 3, 5; ಸಂ 11 (1996), ಲೇಖನ 5; ಸಂ. 12 (1997), ಲೇಖನಗಳು 4.5.6; ಸಂ 14 (1999), ಲೇಖನಗಳು 4,5,6,7; ಸಂ. 17. (2002), ಲೇಖನ 7; ಸಂ. 18 (2003), ಲೇಖನ 3 ಇತ್ಯಾದಿ
7. ಇಂಡಿಯನ್ ಆರ್ಕಿಯಾಲಜಿ, ಎ ರಿವ್ಯೂ 1984–86
8. ಶೇಷಾದ್ರಿ, ಎಮ್. ದಿ ಸ್ಟೋನ್ ಯೂಸಿಂಗ್ ಕಲ್ಚರ್ಸ್ ಆಫ್ ಪ್ರಿಹಿಸ್ಟಾರಿಕ್ ಅಂಡ್ ಪ್ರೋಟೊ ಹಿಸ್ಟಾರಿಕ್ ಮೈಸೂರ್, ಲಂಡನ್. 1956.
9. ಅದೇ
10. ರಾಜೇಂದ್ರನ್, ಪಿ.: ದಿ ಪ್ರಿಹಿಸ್ಟಾರಿಕ್ ಕಲ್ಚರ್ಸ್ ಅಂಡ್ ಎನ್ವೈರ್ನಮೆಂಟ್, ಕ್ಲಾಸಿಕಲ್ ಪಬ್ಲಿಷಿಂಗ್ ಕಂಪನಿ, ನವದೆಹಲಿ ಡೆಲ್ಲಿ. 1989.
11. ಶೇಷಾದ್ರಿ ಪೂರ್ವೋಕ್ತ
12. ಇಂಡಿಯನ್ ಆರ್ಕಿಯಾಲಜಿ, ಎ ರಿವ್ಯೂ, 1979–80 ಕರ್ನಾಟಕ.
13. ಸುಂದರ, ಎ: ಅರ್ಲಿ ಚೇಂಬರ್ ಟೂಂಬ್ಸ್ ಆಫ್ ಸೌತ್ ಇಂಡಿಯಾ, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ, ನ್ಯೂ ಡೆಲ್ಲಿ.
14. ಅದೇ.,
15. ಗುರುರಾಜ ಭಟ್, ಪಿ.: ದಿ ಆಂಟಿಕ್ವಿಟೀಸ್ ಅ ಸೌಥ್ ಕೆನರ.
18. ಅದೇ.,



ಸೂಕ್ಷ್ಮ ಶಿಲಾಯುಗದ ಆಯುಧಗಳು



ಸೂಕ್ಷ್ಮ ಶಿಲಾಯುಗದ ಆಯುಧಗಳು



ಸೂಕ್ಷ್ಮ ಶಿಲಾಯುಗದ ಆಯುಧಗಳು



ನೂತನ ಶಿಲಾಯುಗದ ಶವಕುಳಿಯ ಮಡಕೆ



ಬೃಹತ್ ಶಿಲಾಯುಗದ ಗೋರಿಯ ನೆಲೆ



ಬೃಹತ್ ಶಿಲಾಯುಗದ ಮೆನ್‌ಹೀರ್ ಗೋರಿ

3. ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೆ ಬನ್ನೇರುಘಟ್ಟ

ಡಾ. ದೇವರ ಕೊಂಡಾರೆಡ್ಡಿ

ಬನ್ನೇರುಘಟ್ಟವು ಬೆಂಗಳೂರಿನ ದಕ್ಷಿಣಕ್ಕೆ 16 ಕಿ.ಮೀ ದೂರದಲ್ಲಿದೆ. ಇದಕ್ಕೆ ಹೊಂದಿಕೊಂಡಂತೆ ಸಣ್ಣ ಬೆಟ್ಟವೊಂದಿದ್ದು ಇದರ ತಪ್ಪಲಿನಲ್ಲಿ ವಿಜಯನಗರದ ಆರಂಭ ಕಾಲದಲ್ಲಿ ರಚಿತವಾದ ಚಂಪಕಧಾಮ ಅಥವಾ ಶಾಸನಗಳಲ್ಲಿ ಕರೆದಿರುವಂತೆ ದಾಮೋದರ ಪೆರುಮಾಳ್ ದೇವಾಲಯವಿದೆ. ಈಗ ಈ ಗ್ರಾಮದ ಮುಖ್ಯ ಆಕರ್ಷಣೆಯೆಂದರೆ ಈ ದೇವಾಲಯ, ಬೆಟ್ಟದ ಮೇಲಿರುವ ಸುವರ್ಣಮುಖಿ ತೀರ್ಥ ಮತ್ತು ರಾಷ್ಟ್ರೀಯ ಉದ್ಯಾನವನ.

ಬನ್ನೇರುಘಟ್ಟ ಪ್ರದೇಶವನ್ನು ಇವೆರಡೂ ಅಲ್ಲದೆ ಇನ್ನೊಂದು ದೃಷ್ಟಿಯಿಂದಲೂ ಗಮನಿಸಬಹುದಾಗಿದೆ. ಬಹುತೇಕ ಜನರ ಗಮನಕ್ಕೆ ಇವು ಬಂದಿರುವುದಿಲ್ಲ. ಇಲ್ಲಿನ ಚಂಪಕಧಾಮ ದೇವಾಲಯವು ಹೊಯ್ಸಳರ ಅಂತ್ಯಕಾಲ ಇಲ್ಲವೆ ವಿಜಯನಗರದ ಆರಂಭಕಾಲಕ್ಕೆ ಸೇರಿದ ಕಟ್ಟಡವಾಗಿದೆ. ಮುಂಬದಿಯ ಅಪೂರ್ಣವಾದ ಪ್ರವೇಶ ಗೋಪುರ, ಮತ್ತು ಎತ್ತರವಾದ ವೇದಿಕೆ ಮೇಲೆ ರಚಿತವಾಗಿರುವ ದೇವಾಲಯ ಮತ್ತು ದೇವಾಲಯಕ್ಕೆ ಹತ್ತುವ ಮೆಟ್ಟಿಲುಗಳು ಹುಟ್ಟುಗಲ್ಲುಗಳಿಂದ ರಚಿತವಾಗಿದ್ದು ಆಕರ್ಷಣೀಯವಾಗಿದೆ. ಈ ದೇವಾಲಯದ ಮುಂಬದಿಯ ನೇರಕ್ಕೆ ಬಿಸಿಲು ಮಾರಮ್ಮ ಮತ್ತು ಅವುಗಳ ಹಿಂಬದಿಯಲ್ಲಿ ಆತ್ಮಾಹುತಿ ಕಲ್ಲುಗಳಿವೆ. ಇವುಗಳ ಹಿಂದೆ ಹನುಮಂತರಾಯನ ದೇವಾಲಯವಿದೆ. ರಸ್ತೆಯ ಬಲಬದಿಗೆ ಸು. 11ನೆಯ ಶತಮಾನಕ್ಕೆ ಸೇರಬಹುದಾದ ಎರಡು ವೀರಗಲ್ಲುಗಳಿವೆ. ಇಲ್ಲಿಂದ ಸಂಪಿಗೆ ಹಳ್ಳಿಗೆ ಹೋಗುವ ದಾರಿಯಲ್ಲಿ ಕಲ್ಲಿನಿಂದ ರಚಿತವಾದ ಮೂರು ಕೊಳಗಳಿವೆ. ಸಂಪಿಗೆ ಹಳ್ಳಿಯ ಊರ ಒಳಗೆ ಬೃಹತ್ ಶಿಲಾಯುಗದ ಸಮಾಧಿಯ ರಚನೆಯೊಂದು ಉಳಿದಿದೆ. ಅದಕ್ಕೆ ನೇರವಾಗಿ ಮನೆಯ ಹಿತ್ತಲೊಂದರಲ್ಲಿ ಹಾಳಾದ ಶಿಲಾಸಮಾಧಿಯ ಎರಡು ತಲೆಕಲ್ಲುಗಳು ಕಾಣಬರುತ್ತವೆ.

ದೇವಾಲಯದ ಹಿಂಬದಿಗೆ ಬೆಟ್ಟವಿದ್ದು ಬೆಟ್ಟದ ವಾಯವ್ಯಕ್ಕೆ ಶಾನುಬೋಗನ ಹಳ್ಳಿಗೆ ಹೋಗುವ ದಾರಿಯಲ್ಲಿ ಷರೀಫ್‌ಗಾರ್ಡನ್‌ನಲ್ಲಿ ಮತ್ತು ಅದರ ಪಕ್ಕದಲ್ಲಿ ನಿವೇಶನಗಳಾಗಿ ವಿಂಗಡಿಸಿರುವ ಸ್ಥಳದಲ್ಲಿ ಶಿಲಾಯುಗದ ಅನೇಕ ಸಮಾಧಿಗಳಿದ್ದು ಅವುಗಳಲ್ಲಿ ಬಹಳಷ್ಟು ಹಾಳಾಗಿವೆ. ಕೆಲವನ್ನು ಅದರಲ್ಲಿ ನಿಧಿಯಿದೆಯೆಂಬ ತಪ್ಪುಕಲ್ಪನೆಯಿಂದ ಸ್ಫೋಟಿಸಿರುತ್ತಾರೆ. ಒಂದೆರಡು ನಿಲವು ಕಲ್ಲುಗಳೂ ಇಲ್ಲಿ ಕಂಡುಬರುತ್ತವೆ. ಕೆಲವು ಸಮಾಧಿಗಳು ಸುಸ್ಥಿತಿಯಲ್ಲವೆ.

ಚಂಪಕಧಾಮ ಸ್ವಾಮಿ ದೇವಾಲಯದ ಹಿಂಬದಿಗೆ ಸುವರ್ಣಮುಖಿ ತೀರ್ಥದ ಮಾರ್ಗವಾಗಿ ಬೂತೇನ ಹಳ್ಳಿಗೆ ಕಾಲು ದಾರಿಯೊಂದು ಸಾಗುತ್ತದೆ. ಬೆಟ್ಟದ ಮೇಲೆ ದೀಪದ ಕಂಬ, ನರಸಿಂಹಸ್ವಾಮಿ ದೇವಾಲಯ ಮತ್ತು ಅಪೂರ್ಣ ದೇವಾಲಯವೊಂದು ಕಾಣಬರುತ್ತವೆ. ದೀಪದ ಕಂಬದ ದಕ್ಷಿಣಕ್ಕೆ ಶಿಲಾಯುಗದ ಕಾಲದ ಒಂದು ಮಂಟಪದ ರಚನೆ ಇದೆ. ಬೆಟ್ಟವಿಳಿದು ಸುವರ್ಣ ಮುಖಿಯ ಕಡೆಗೆ ಹೆಜ್ಜೆ ಹಾಕಿದ ಕೂಡಲೇ ಸಾವಿರಾರು ಸಣ್ಣಮಟ್ಟ ಕಲ್ಲಿನ ಗುಡ್ಡೆಗಳು ಕಾಣಬರುತ್ತವೆ. ಇವು ಪ್ರಾಚೀನ ಕಾಲದಿಂದ ಅರ್ವಾಚೀನ ಕಾಲದಿಂದಲೂ ರಚಿತವಾಗಿರುವ ಅವಶೇಷಗಳು. ಅನೇಕ ರಚನೆಗಳು ಬಿದ್ದಿರುತ್ತವೆ. ಆ ಅವಶೇಷಗಳನ್ನೇ ಎತ್ತಿತಂದು ಬೇರೊಂದು ಕಲ್ಲಗುಡ್ಡೆ ನಿರ್ಮಿತವಾಗುತ್ತದೆ. ಇವುಗಳ ಗಾತ್ರವೂ ನಾನಾ ರೀತಿ ಅಂಗೈ ಅಗಲದಿಂದ ಹಿಡಿದು, ಇಬ್ಬರು ಅಥವಾ ಮೂವರು ಮಲಗಿಕೊಳ್ಳಬಹುದಾದಷ್ಟು ವಿಸ್ತಾರವಾಗಿರುತ್ತವೆ. ಈ ಕಲ್ಲಗುಡ್ಡೆಗಳನ್ನು ಗಮನಿಸುತ್ತಾ ಮುಂದೆ

ಸಾಗಿದರೆ ಏಳು ಸುತ್ತಿನ ಕೋಟೆಯೆಂಬ ರಚನೆ ಕಂಡುಬರುತ್ತದೆ. ಇದರ ಬಳಿಯೂ ಸಾವಿರಾರು ಕಲ್ಲುಗುಡ್ಡೆಗಳು ಕಾಣಬರುತ್ತವೆ. ಏಳುಸುತ್ತಿನ ಕೋಟೆಯೆಂಬುದು ಸಣ್ಣ ಕಲ್ಲುಗಳನ್ನು ಸಾಲಾಗಿ ಜೋಡಿಸಿ ಏಳುಸುತ್ತುಗಳನ್ನು ರಚಿಸಿದೆ. ಈ ಸುತ್ತುಗಳಲ್ಲಿ ಯಾವುದಾದರೂ ಒಂದು ಕಡೆಗೆ ಪ್ರವೇಶಿಸಿ ಏಳು ಪ್ರದಕ್ಷಣೆಗಳನ್ನು ಮಾಡಿ ಇನ್ನೊಂದು ಕಡೆಯಿಂದ ಹೊರಗೆ ಬರಬಹುದು. ಇದರ ಮುಂದೆ ಇರುವ ಮಂಟಪ ನೂತನದ್ದಾದರೂ ಅದಕ್ಕೆ ಬಳಸಿರುವ ತಲೆಕಲ್ಲು (ಮುಚ್ಚಿಗೆ ಕಲ್ಲು) ಶಿಲಾಯುಗದ ಕಾಲದ್ದಾಗಿದೆ. ಇಲ್ಲಿಂದ ಮುಂದೆ ಸಾಗಿದರೆ ಸುವರ್ಣಮುಖಿತೀರ್ಥ ಸ್ನಾನಘಟ್ಟ ಕಾಣಬರುತ್ತದೆ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಹಿಂದೆ ಇದ್ದಿರಬಹುದಾದ ರಚನೆಯನ್ನು ಕಿತ್ತು ಹೊಸದಾಗಿ ಸೋಪಾನ ರಚನೆಯನ್ನು ಮಾಡಿರುತ್ತಾರೆ. ಮಳೆಗಾಲದಲ್ಲಿ ಹರಿದು ಬೇಸಿಗೆಯಲ್ಲಿ ನಿಂತ ನೀರಾಗುವ ಈ ಕೊಳ ಬಹುಕಾಲದಿಂದಲೂ ಈ ಪ್ರದೇಶದ ಕೇಂದ್ರ ಸ್ಥಾನವಾಗಿದ್ದಿರಬೇಕು. ಇಲ್ಲಿಂದ ಮುಂದಕ್ಕೆ ದಾರಿಯು ಬೆಟ್ಟದ ತಪ್ಪಲಲ್ಲಿರುವ ಬೂತೇನ ಹಳ್ಳಿಗೆ ಹೋಗುತ್ತದೆ.

ಬನ್ನೇರುಘಟ್ಟದ ಸುತ್ತಮುತ್ತ ಇರುವ ಶಿಲಾಯುಗದ ಸಮಾಧಿಗಳನ್ನು ಪರಿಶೀಲಿಸಿದಾಗ ಇವೆಲ್ಲವೂ ಬೃಹತ್ ಶಿಲಾಯುಗದ ಕಾಲಕ್ಕೆ ಸೇರಿದ್ದವೆಂಬುದು ದೃಢಪಡುತ್ತದೆ. ಸಂಪಿಗೆ ಹಳ್ಳಿಯಲ್ಲಿನ ಸಮಾಧಿಯು ಕಲ್ಲುಗಳಿಂದ ಮಾಡಿದ ತೊಟ್ಟಿಯಂತಿದ್ದು ಇದರ ಮೇಲಿನ ಮುಚ್ಚಳದ ಕಲ್ಲು ಸು. 50 ಸೆಂ.ಮೀ. ದಪ್ಪ 4. ಮೀಟರ್ ಅಗಲ ಮತ್ತು 5.5 ಮೀಟರ್ ಉದ್ದವಾಗಿದೆ. ಸುತ್ತಲೂ ಮಣ್ಣಿನ ಕೊರೆತದಿಂದ ಸ್ವಲ್ಪ ಶಿಥಿಲವಾಗಿದೆ. ಮುಚ್ಚಳದ ಕಲ್ಲು ದಕ್ಷಿಣದಿಕ್ಕಿಗೆ ಉದ್ದಕ್ಕೆ ಮುರಿದಿದೆ. ಇದರ ಸುತ್ತಲೂ ಬಯಲಿದೆ. ಇದೇ ತರಹದ ಸಮಾಧಿಗಳು ಇಲ್ಲಿ ಸಾಕಷ್ಟು ಇದ್ದಿರಬೇಕು. ಅದರೆ ಮೇಲೆ ಹೇಳಿದುದು ಬಿಟ್ಟರೆ ಉಳಿದಂತೆ ರಚನೆಗಳು ಹಾಳಾಗಿವೆ. ಇದರ ಸಮೀಪದ ಮನೆಯೊಂದರ ಹಿತ್ತಲಿನಲ್ಲಿ ಮುಚ್ಚಳದ ಕಲ್ಲುಗಳೂ ಎರಡು ಕಾಣಬರುತ್ತವೆ. ಇವುಗಳು ಭಾಗಶಃ ಹಾಳಾಗಿವೆ. ಈ ನ್ಯಾಷನಲ್ ಪಾರ್ಕ್‌ನೊಳಗೆ ಬೂತೆನಹಳ್ಳಿಗೆ ಹೋಗುವ ದಾರಿಯಲ್ಲಿನ ಕೊಳದಲ್ಲಿ ಕೆಲವು ಬೃಹತ್ ಚಪ್ಪಡಿಗಳು ಕಾಣಬರುತ್ತದೆ. ಇವು ಯಾವುದೋ ಪ್ರಾಗೈತಿಹಾಸಿಕ ಸಮಾಧಿಯೊಂದರ ಚಪ್ಪಡಿಗಳಾಗಿದ್ದವು. ಇವನ್ನು ಬಿಟ್ಟರೆ ಬೇರೆ ಅವಶೇಷಗಳು ಇಲ್ಲಿ ಕಾಣಬರುವುದಿಲ್ಲ.

ಶ್ಯಾನುಬೋಗನ ಹಳ್ಳಿಗೆ ಹೋಗುವ ದಾರಿಯಲ್ಲಿ ಷರೀಫ್ ಗಾರ್ಡನ್ ಬಳಿ ಇರುವ ಪ್ರಾಗೈತಿಹಾಸಿಕ ಗೋರಿಗಳು ಬೃಹತ್ ಶಿಲಾಯುಗದ ಕಾಲಕ್ಕೆ ಸೇರಿದ್ದರೂ ಈ ಪ್ರದೇಶದ ಇತರೆಡೆಗಳಲ್ಲಿ ಕಾಣುವಂತೆ ವೃತ್ತಾಕಾರವಾದ ಕಟ್ಟು ಉರುಟುಗಲ್ಲುಗಳನ್ನು ಹೊಂದಿರುವುದಿಲ್ಲ. ಅಲ್ಲಿಯೇ ದೊರೆಯುವ ಚಪ್ಪಡಿಗಲ್ಲುಗಳನ್ನೇ ವೃತ್ತಾಕಾರವಾಗಿ ಬಳಸಿದೆ. ಅನೇಕ ಸಮಾಧಿಗಳು ತೆರೆದಿರುವುದರಿಂದ ಅವುಗಳ ಒಳರಚನೆಯನ್ನು ಕೂಲಂಕಷವಾಗಿ ಗಮನಿಸಬಹುದಾಗಿದೆ. ಈ ಸಮಾಧಿಗಳು ಒಳರಚನೆಯಲ್ಲಿ ಆಯತಾಕಾರವಾಗಿದ್ದು, ನಾಲ್ಕೂ ಕಡೆ ಚಪ್ಪಡಿಗಲ್ಲುಗಳನ್ನು ಜೋಡಿಸಿ ತೊಟ್ಟಿಯಂತೆ ರಚಿತವಾಗಿವೆ. ಪೂರ್ವಭಾಗದ ಕಲ್ಲಿನಲ್ಲಿ ಸ್ವಲ್ಪ ಭಾಗವನ್ನು ಅರ್ಧ ಚಂದ್ರಾಕಾರವಾಗಿ ಕೊರೆದಿದೆ. ಬಳಸಿರುವ ಚಪ್ಪಡಿಗಳು ತೆಳುವಾಗಿವೆ. ಮತ್ತು ಅಳತೆಗೆ ಕತ್ತರಿಸಿದಂತೆ ಭಾಸವಾಗುತ್ತದೆ. ಮೇಲಿನ ಮುಚ್ಚಳದ ಕಲ್ಲು ಸಹ ಸ್ಥಳೀಯವಾಗಿ ದೊರೆಯುವ ಕಲ್ಲಾಗಿದ್ದು ಸುತ್ತಲೂ ತೆಳುವಾಗಿ ಮಧ್ಯೆ ಮಂದವಾಗಿರುವುದು ಕಂಡುಬರುತ್ತದೆ. ಇಲ್ಲಿನ ಅನೇಕ ಸಮಾಧಿಗಳು ಹಾಳಾಗಿವೆ. ಹಾಳಾಗದೆ ಉಳಿದಿರುವ ಸಮಾಧಿಗಳ ಮೇಲೆ ಸಣ್ಣ ಸಣ್ಣ ಕಲ್ಲುಗಳ ರಾಶಿ ಕಂಡುಬರುತ್ತವೆ. ಈ ಸಮಾಧಿಗಳ ರಚನೆಗಳ ಮಧ್ಯೆ ಮತ್ತು ಆಕಡೆ ಈಕಡೆಗಳಲ್ಲಿ ಕೆಲವು ಕೋಡುಗಲ್ಲುಗಳಿವೆ. ಇವುಗಳಲ್ಲಿ ದಾರಿಕಡೆ ಇರುವ ಕಲ್ಲು ಹಾವಿನಂತೆ ಬಾಗಿರುವುದರಿಂದ ಇದಕ್ಕೆ ಇಂದಿಗೂ ಪೂಜೆ ಮಾಡುತ್ತಿದ್ದಾರೆ. ಮಧ್ಯದಲ್ಲಿ ಮತ್ತು ಅಂತ್ಯದಲ್ಲಿರುವ ಕಲ್ಲುಗಳ ಬಳಿ ಅನೇಕ ಕುಳಿಗಳನ್ನು ಬಿಡಿಸಿರುತ್ತಾರೆ. ಅಂತ್ಯದ ಕಲ್ಲು ಎತ್ತರವಾಗಿದ್ದು ಅದರ ಪಕ್ಕದಲ್ಲೂ ಅನೇಕ ಕುಳಿಗಳನ್ನು ಕೆತ್ತಿರುತ್ತಾರೆ. ಹೀಗಾಗಿ ಈ ಸ್ಥಳವು ಪ್ರಾಗೈತಿಹಾಸಿಕ ಸಮಾಧಿಗಳ ಸ್ಥಳವಾಗಿತ್ತೆಂಬುದನ್ನು ಇಲ್ಲಿನ ಅವಶೇಷಗಳು ಸಾಬೀತುಪಡಿಸುತ್ತವೆ.

ಚಂಪಕಧಾಮಸ್ವಾಮಿ ದೇವಾಲಯದಿಂದ ಸುವರ್ಣಮುಖಿ ತೀರ್ಥಕ್ಕೆ ಹೋಗುವ ದಾರಿಯಲ್ಲಿ ದೊಡ್ಡ ಮತ್ತು ಚಿಕ್ಕದಾದ ಶಿಲಾ ಮಂಟಪಗಳು ಇರುವ ಬಗ್ಗೆ ಹಿಂದೆ ಹೇಳಿದೆ. ಈ ಶಿಲಾ ಮಂಟಪಗಳು ಬನ್ನೇರುಘಟ್ಟದ ಬೆಟ್ಟದ ಮೇಲಿನಿಂದ ಪ್ರಾರಂಭವಾಗಿ ಬೂತೇನಹಳ್ಳಿ ಕಡೆಗೆ ಬೆಟ್ಟದ ಇಳಿಜಾರು ಪ್ರಾರಂಭವಾಗುವವರೆಗೆ ಕಂಡುಬರುತ್ತವೆ. ಅಂದರೆ ಸು.3 ಕಿಮೀ. ಹರವಿನಲ್ಲಿ ಕಾಣಬರುತ್ತವೆ. ಈ ರಚನೆಗಳು ಚಂಪಕಧಾಮಸ್ವಾಮಿ ದೇವಾಲಯದ ಬಳಿಯಲ್ಲಾಗಲಿ ಬೂತೇನಹಳ್ಳಿಯ ಬಳಿಯಲ್ಲಾಗಲಿ ಕಾಣಬರುವುದಿಲ್ಲ. ಬೆಟ್ಟದ ಮೇಲಿನ ಬಯಲಿನಲ್ಲಿ ಮಾತ್ರ ಕಾಣಬರುತ್ತವೆ. ಇಲ್ಲಿನ ಕಲ್ಲು ಗುಪ್ಪೆಗಳ ಸ್ಥೂಲ ರಚನೆಯೆಂದರೆ ಮೂರು ಕಲ್ಲುಗಳನ್ನು ಇಟ್ಟು ಅದರ ಮೇಲೆ ಮತ್ತೊಂದು ಕಲ್ಲನ್ನು ಇಟ್ಟಿರುವುದು. ಇವು ಎಷ್ಟೇ ದೊಡ್ಡ ರಚನೆಗಳಾಗಿದ್ದರೂ ಬಹುತೇಕ ಇದೇ ನಿಯಮವನ್ನು ಪಾಲಿಸಿರುತ್ತಾರೆ. ಬನ್ನೇರುಘಟ್ಟದ ಬೆಟ್ಟದ ಮೇಲಿನ ದೀಪದ ಕಂಬದ ದಕ್ಷಿಣಕ್ಕಿರುವ ಶಿಲಾ ಮಂಟಪದ ರಚನೆ ಹೀಗೆಯೇ ಇದೆ. ಉದ್ದವಾದ ಚಪ್ಪಡಿಗೆ ಮೂರು ಕಡೆ ಒಂದರ ಮೇಲೊಂದರಂತೆ ಕಲ್ಲುಗಳನ್ನು ಜೋಡಿಸಿ ಮೂರು ಕಂಬಗಳನ್ನು ರಚಿಸಿ ಅದರ ಮೇಲೆ ಅಗಲವಾದ ಆದರೆ ತ್ರಿಕೋಣಾಕಾರದ ರಚನೆಯನ್ನು ಹೋಲುವ ಚಪ್ಪಡಿಯನ್ನು ಇಟ್ಟಿರುತ್ತಾರೆ. ಕಲ್ಲಿನ ತೋಕೆ (ಬಾಲ) ಬರುವ ಕಡೆ ಒಂದು ಕಾಲನ್ನೂ ತಲೆಯ ಕಡೆ (ಅಗಲವಾಗಿರುವ) ಎರಡು ಕಾಲುಗಳನ್ನು ಇಟ್ಟಿರುತ್ತಾರೆ. ಈ ಬೆಟ್ಟದ ಮೇಲೆ ಕಾಣುವ ಎಲ್ಲಾ ದೊಡ್ಡ ರಚನೆಗಳಲ್ಲಿ ಈ ಬಗೆಯ ಅಂತರ್ ರಚನೆಗಳನ್ನು ಕಾಣಬಹುದಾಗಿದೆ. ಇಲ್ಲಿನ ದೊಡ್ಡ ರಚನೆಗಳು ಬನ್ನೇರುಘಟ್ಟದ ಬೆಟ್ಟದ ಸಾಲಿನ ಮೂರು ಗುಡ್ಡಗಳಲ್ಲಿ ಕಾಣಬರುತ್ತದೆ. ಕಾಲದ ರಚನೆಯ ದೃಷ್ಟಿಯಿಂದ ಬೃಹತ್ ರಚನೆಗಳು ಪ್ರಾಚೀನವಾದವುಗಳಾಗಿದ್ದು ತೀರಾ ಸಣ್ಣವು ಇತ್ತೀಚಿನವು. ಪ್ರಾಚೀನ ರಚನೆಗಳ ಅನುಕರಣೆಗಳು ಈ ಸಣ್ಣ ರಚನೆಗಳಾಗಿವೆ. ಇವೆರಡರ ಮಧ್ಯದ ರಚನೆಗಳು ವಿವಿಧ ಗಾತ್ರಗಳಲ್ಲಿ ಕಾಣಬರುತ್ತವೆ.

ಮೇಲಿನ ರಚನೆಗಳ ಮಧ್ಯದಲ್ಲಿ ಏಳುಸುತ್ತಿನ ಕೋಟೆಯೆಂಬ ರಚನೆಯಿದೆ. ಪಶ್ಚಿಮಕ್ಕೆ ಮುಖ ಮಾಡಿರುವ ಈ ರಚನೆ ಮೊದಲು ಅಲ್ಲಲ್ಲಿ ಕಲ್ಲುಗಳನ್ನು ನೆಟ್ಟು ನಡೆಯುವ ದಾರಿಯನ್ನು ಸೂಚಿಸಿತ್ತು. ಮುಂದೆ ನೆಟ್ಟ ಕಲ್ಲುಗಳ ಮಧ್ಯೆ ಕಲ್ಲುಗಳನ್ನಿಟ್ಟು ಗೆರೆಗಳನ್ನು ಸ್ಪಷ್ಟವಾಗಿಸಿರುತ್ತಾರೆ. ಈ ಬಗೆಯ ರಚನೆಗಳು ಶಿಲಾಯುಗದ ಸಂಸ್ಕೃತಿಯಿದ್ದ ಸ್ಥಳಗಳ ಬಳಿಯಲ್ಲಿ ಬೆಟ್ಟದ ಇಳಿಜಾರುಗಳಲ್ಲಿ ಕಂಡುಬರುತ್ತದೆ. ಹಂಪೆಯಲ್ಲಿಯೂ ಈ ರಚನೆ ಕಾಣಬರುತ್ತದೆ. ಇಂತಹ ಕೋಟೆಗಳು ಇದೊಂದೇ ಕಡೆ ಅಲ್ಲದೆ ಚಿತ್ರದುರ್ಗದ ಬಳಿ ದೊಡ್ಡ ಸಿದ್ದವ್ವನಹಳ್ಳಿ ಬಳಿ ಕೊಳಗಳ ಬಳಿ, ದೇವಾಲಯಗಳ ಬಳಿ ಕಾಣಬರುತ್ತವೆ. ಬೇರೆಡೆ ಕಾಣಬರುವ ರಚನೆಗಳಿಗೂ ಇದಕ್ಕೂ ಸ್ವಲ್ಪ ವ್ಯತ್ಯಾಸವಿದ್ದು ಬೇರೆಯವುಗಳಲ್ಲಿ ಒಳಗೆ ಪ್ರವೇಶಿದರೆ ಹೊರಗೆ ಬರಲು ಆಗುವುದಿಲ್ಲ. ಆದರೆ ಇದರಲ್ಲಿ ಹೊರಗೆ ಬರಲು ಸಾಧ್ಯವುಂಟು. ಹೀಗಾಗಿ ಒಂದೆರಡು ಗೆರೆಗಳು ಹಾಳಾಗಿವೆ. ಕೆಲವರು ಇದನ್ನು ಮಹಾಭಾರತದ ಅಭಿಮನ್ಯುವಿನ ಪದ್ಮವ್ಯೂಹದ ಪ್ರವೇಶಕ್ಕೆ ನಂಟುಹಾಕುವುದುಂಟು. ಮೇಲು ನೋಟದಲ್ಲಿ ಇದನ್ನು ಸತ್ಯವೆಂದು ನಂಬಿದರೂ ಇದು ಅಲ್ಲವೆಂದೆನಿಸುತ್ತದೆ.

ಈ ಬೆಟ್ಟದಲ್ಲಿ ಕಾಣಬರುವ ಶಿಲಾಮಂಟಪಗಳು ಶಿಲಾಯುಗದ ಜನರು ತಮ್ಮ ಹಿರಿಯರ ನೆನಪಿನಲ್ಲಿ ರಚಿಸಿದವುಗಳಾಗಿರಬೇಕು. ಇಲ್ಲಿ ಬಹು ಹಿಂದೆಯೇ ನಾಗರೀಕತೆಯ ವಸತಿಯೊಂದಿದ್ದು ಸತ್ತವರ ನೆನಪಿನಲ್ಲಿ ಇಲ್ಲಿನ ಬೆಟ್ಟಗಳ ಮೇಲೆ ಸಮಾಧಿಗಳನ್ನು ನೆನಪಿಸುವಂತಹ ರಚನೆಗಳನ್ನು ರಚಿಸಿರುವರೆಂದು ಊಹಿಸಬಹುದಾಗಿದೆ. ಸದಾ ನೀರಿನ ಆಸರೆಯಿದ್ದ ಈ ಪ್ರದೇಶವು ಪ್ರಾಚೀನನಾಗರೀಕತೆಯ ನೆಲೆಯಾಗಿದ್ದರಲ್ಲಿ ಸಂಶಯವಿಲ್ಲ. ಹೀಗಾಗಿ ಮೂರು ಬಿಡಿ ಬಿಡಿ ಕಲ್ಲುಗಳನ್ನು ಜೋಡಿಸಿ ಮೂರು ಕಂಬಗಳನ್ನು ಸುಮಾರು ಎರಡು ಅಡಿಯಷ್ಟು ಎತ್ತರ ಮಾಡಿ ಅದರ ಮೇಲೆ ತ್ರಿಕೋನಾಕಾರವನ್ನು ಹೋಲುವ ಚಪ್ಪಡಿಯನ್ನು ಇಡುತ್ತಿದ್ದರು. ಮುಂದೆ ಅದರ ಸುತ್ತಲೂ ಕಲ್ಲುಗಳನ್ನು ಜೋಡಿಸಿ ಮುಚ್ಚಿ ಸಣ್ಣ ಕಲ್ಲುಗಳ ರಾಶಿಯನ್ನು ಅದರ ಸುತ್ತಲೂ ಹಾಕುತ್ತಿದ್ದರು. ಈಗ ಅನೇಕ

ಶಿಲಾ ಮಂಟಪಗಳು ಹಾಳಾಗಿ ಮುಚ್ಚಿಗೆಯ ಕಲ್ಲುಗಳು ಮಾತ್ರ ನಿಂತಿವೆ. ಕಾರಣಾಂತರಗಳಿಂದ ಈ ನೆಲೆಯನ್ನು ಬಿಟ್ಟ ಜನ ತಮಗೆ ಕಷ್ಟ ಬಂದಾಗ ಅಥವಾ ಇತರೆ ಸಂದರ್ಭಗಳಲ್ಲಿ ತಮ್ಮ ಹಿರಿಯರು ನೆಲೆಸಿದ್ದ ಈ ಸ್ಥಳಕ್ಕೆ ಬಂದು ಸುವರ್ಣಮುಖಿ ತೀರ್ಥದಲ್ಲಿ ಸ್ನಾನ ಮಾಡಿ ತಮ್ಮ ಹಿರಿಯರ ನೆನಪಿನಲ್ಲಿ ಮೂರು ಕಲ್ಲುಗಳನ್ನಿಟ್ಟು ಅದರ ಮೇಲೆ ಒಂದು ಕಲ್ಲನ್ನಿರಿಸಿ ಮಂಟಪದಂತಹ ರಚನೆಯನ್ನು ನಿರ್ಮಿಸಿ ಅದರಲ್ಲಿ ಒಂದೆರಡು ಸಣ್ಣ ಕಲ್ಲುಗಳನ್ನಿರಿಸಿ ಪೂಜಿಸಿ ಅಲ್ಲಿನ ಏಳು ಸುತ್ತಿನ ಕೋಟೆಯನ್ನು ಪ್ರದಕ್ಷಿಸಿ ಅಲ್ಲಿನ ಮರ ಅಥವಾ ಗಿಡವೊಂದಕ್ಕೆ ತೊಟ್ಟಿಲನ್ನು ಕಟ್ಟಿ ಇಷ್ಟಾರ್ಥ ಸಿದ್ಧಿ ಅಥವಾ ಮಕ್ಕಳಿಗಾಗಿ ಪ್ರಾರ್ಥಿಸುತ್ತಾರೆ. ಇಂತಹ ರಚನೆಗಳು ನೀರಿನ ಆಸರೆ ಇರುವ ಬಳಿ ಬೆಟ್ಟಗಳ ಇಳಿಜಾರಿನಲ್ಲಿ ಕಾಣಬರುತ್ತವೆ. ಹಂಪೆಯಲ್ಲಿಯೂ ಇಂತಹ ರಚನೆಗಳನ್ನು ಇಂದಿಗೂ ಗಮನಿಸಬಹುದು. ಈ ಏಳುಸುತ್ತಿನ ಕೋಟೆಯೆಂಬುದು ಕೋಟೆ ಎಂಬ ಅರ್ಥ ಮಾಡುವುದಕ್ಕಿಂತ ಯಾವುದೇ ಗೂಢ ರಚನೆಯೆಂದು ಪರಿಗಣಿಸಿದಲ್ಲಿ ಇದನ್ನು ಇಷ್ಟಾರ್ಥಸಿದ್ಧಿಯ/ಕಷ್ಟಗಳ ಪರಿಹಾರ ಮಾಡುವ ಯಂತ್ರವೊಂದಾಗಿರಬೇಕು. ಇಂತಹ ಯಂತ್ರಗಳು ಕೊಳಗಳ ಬಳಿ ದೇವಾಲಯಗಳ ಬಳಿ ಕಾಣಬರುವುದೂ ಇದೇ ಕಾರಣಕ್ಕೆ ಇರಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿ ಈ ಬಗೆಯ ರಚನೆಗಳು ಕಾಣಬರುತ್ತವೆ. ಬಿಜಾಪುರ ಪ್ರದೇಶದಲ್ಲಿ ಹೆರಿಗೆ ಕಷ್ಟವಾದಾಗ ವೀಳೆಯದೆಲೆಯ ಮೇಲೆ ಇಂತಹ ಚಕ್ರಬಿಂಬವನ್ನು ಬರೆದು ಅದನ್ನು ತೋರಿಸಿದ್ದಲ್ಲಿ ಹೆರಿಗೆ ಸುಲಭವಾಗುವುದೆಂಬ ನಂಬಿಕೆ ಇದೆ. (ಕರ್ನಾಟಕ ಜಾನಪದ ಚಿತ್ರಕಲೆ ಪು.367 ಎಸ್. ಸಿ. ಪಾಟೀಲ ಅಪ್ರಕಟಿತ ಪಿ.ಎಚ್.ಡಿ.,ಸಂಪ್ರಬಂಧ, ಕ.ವಿ.ವಿ, 1990) ಹೀಗಾಗಿ ಇದನ್ನು ಕಷ್ಟ ಪರಿಹಾರ ಯಂತ್ರವೆಂದು ಭಾವಿಸಬಹುದು. ಪ್ರಾಚೀನ ನೆಲೆಯಾದ ಬನ್ನೇರುಘಟ್ಟದಲ್ಲಿ ಹಿರಿಯರ ಪೂಜೆ ಇಂದಿಗೂ ಈ ರೀತಿ ಉಳಿದುಬಂದಿರುವುದನ್ನು ಕಾಣಬಹುದಾಗಿದೆ.

ಬನ್ನೇರುಘಟ್ಟದಲ್ಲಿನ ಸಂಸ್ಕೃತಿಗೆ ಕಾರಣರಾದ ಜನವಸತಿ ಯಾವುದಾಗಿದ್ದಿರಬಹುದು, ಇಲ್ಲಿನ ಜನರ ಮುಖ್ಯ ಕಸುಬೇನಾಗಿದ್ದಿರಬಹುದು ಎಂಬುದನ್ನು ಗಮನಿಸುವುದು ಸೂಕ್ತ. ಇಲ್ಲಿನ ಸುವರ್ಣ ಮುಖಿ ತೀರ್ಥವನ್ನು ಕೇಂದ್ರವಾಗಿಟ್ಟುಕೊಂಡಲ್ಲಿ ಇದರ ಪಶ್ಚಿಮಕ್ಕೆ ಬೂತೇನ ಹಳ್ಳಿಯೂ, ಉತ್ತರಕ್ಕೆ ಕ್ಯಾಸರ ಗುಪ್ಪೆಯೂ, ವಾಯವ್ಯಕ್ಕೆ ಶಾನುಬೋಗನ ಹಳ್ಳಿ, ಕುಲುಮೆ ಪಾಳ್ಯಗಳೂ, ಆಗ್ನೇಯಕ್ಕೆ ಕಸವರಹಳ್ಳಿಯೂ ನೈರುತ್ಯಕ್ಕೆ ವಾಜರ ಹಳ್ಳಿ, ಇದರ ದಕ್ಷಿಣಕ್ಕೆ ಕಾಳೇಶ್ವರಿ ಎಂಬ ಸ್ಥಳ, ದಕ್ಷಿಣಕ್ಕೆ ರಾಗಿಹಳ್ಳಿ ಬೆಟ್ಟ ಮುಂತಾದ ಊರುಗಳು ಕಾಣಬರುತ್ತವೆ. ಈ ಊರುಗಳ ಸ್ಥಳ ನಾಮಗಳು ಒಂದಲ್ಲ ಒಂದು ಲೋಹದ ಸಂಬಂಧವನ್ನು ಹೊಂದಿರುವುದು ಗಮನಾರ್ಹ. ಬೂತೇನ ಹಳ್ಳಿಯು ಹಳೆಯ, ಮಧ್ಯಕಾಲದ, ಹಾಗೂ ಈಗಿನ ನಿವೇಶನದ ಮೂರು ಸ್ಥಳಗಳನ್ನು ಹೊಂದಿದ್ದು ಮೂರು ಸ್ಥಳಗಳಲ್ಲಿಯೂ ಲೋಹವನ್ನು ಕರಗಿಸಿದ ಕಿಟ್ಟದ ಕಲ್ಲುಗಳು ದೊರೆಯುತ್ತವೆ. (ಈಗ ಇಲ್ಲಿ ಯಾರೂ ಲೋಹಗಾರರಿಲ್ಲವೆಂಬುದು ಗಮನಾರ್ಹ) ಕಾಸರಗುಪ್ಪೆ ಕಂಚಿನ ಸಂಬಂಧವನ್ನೂ, ಕುಲುಮೆ ಪಾಳ್ಯ ಲೋಹವನ್ನು ಕರಗಿಸುವ ಸಂಬಂಧವನ್ನೂ, ಕಸವರ ಹಳ್ಳಿ ಚಿನ್ನದ ಸಂಬಂಧವನ್ನೂ, ವಾಜರಹಳ್ಳಿ ಲೋಹಗಾರರ ನೆಲೆಯನ್ನೂ, ಕಾಳೇಶ್ವರಿ ಲೋಹಗಾರರ ದೈವದ ನೆಲೆಯನ್ನೂ, ರಾಗಿಹಳ್ಳಿ ತಾಮ್ರದ ಸಂಬಂಧವನ್ನೂ ಹೊಂದಿವೆ. ಇವೆಲ್ಲದರ ಕೇಂದ್ರವಾಗಿ ಈ ಬನ್ನೇರುಘಟ್ಟವಿತ್ತು. ಹೀಗಾಗಿ ಗಣಿಗಾರರು ಇಲ್ಲಿ ನೆಲೆಸಿದ್ದು ಮುಂದೆ ಬೇರೆ ಬೇರೆ ಕಡೆ ಚದುರಿರಬಹುದು. ಇದು ಮುಖ್ಯವಾಗಿ ಚಿನ್ನದ ಗಣಿಗಾರಿಕೆಯ ಕೇಂದ್ರವಾಗಿತ್ತು.

ಬನ್ನೇರುಘಟ್ಟದ ಹೆಸರಿನ ಮೂಲವೂ ಇದನ್ನು ಸಮರ್ಥಿಸುತ್ತದೆ. ಈಗ ಬಳಕೆಯಲ್ಲಿ ಇದನ್ನು ಬನ್ನೇರುಘಟ್ಟವೆಂದರೂ ಶಾಸನಗಳಲ್ಲಿ ಇದನ್ನು ಬನ್ನೂರುಘಟ್ಟವೆಂದು ಕರೆದಿರುತ್ತಾರೆ. ಸಂಸ್ಕೃತೀಕರಣ ಮಾಡಿದಾಗ ಇದನ್ನು ಸುವರ್ಣಮುಖಿ ತೀರ್ಥವೆಂದು ಕರೆದಿರುತ್ತಾರೆ. ಕ.ವೆಂ.ರಾಜಗೋಪಾಲರು ಇದರ ನಿಷ್ಪತ್ತಿಯನ್ನು ವಹ್ನಿಯೂರು ಘಟ್ಟವೆಂದು ಇದರಿಂದಲೇ ಬನೂರು ಬನ್ನೇರು ಆಯಿತೆಂದು ಹೇಳಿ ಈ ಕ್ಷೇತ್ರವನ್ನು ತಿಗಳರಿಗೆ

ಅಥವಾ ವಹ್ನಿಕುಲ ಕ್ಷತ್ರಿಯರ ಕ್ಷೇತ್ರವೆಂಬುದಾಗಿ ತಿಳಿಸಿರುತ್ತಾರೆ. ಆದರೆ ಕೂಲಂಕಷವಾಗಿ ಪರಿಶೀಲಿಸಿದಾಗ ಸ್ಥಳೀಯರು ಈ ಹೆಸರನ್ನು ಸಂಸ್ಕೃತೀಕರಣಗೊಳಿಸುವಾಗ ಸರಿಯಾದ ಅರ್ಥವನ್ನು ಗ್ರಹಿಸಿರುತ್ತಾರೆಂದು ಭಾವಿಸಬಹುದು. ಅಂದರೆ, ಬನ್ನೇರು –ಪೊನ್ನೂರು ಸುವರ್ಣಾವತಿ ಎಂಬುದಾಗಿರಬೇಕು. ಪೊನ್ನೂರು ಎಂಬುದು ಸ್ಪಷ್ಟವಾಗಿ ಚಿನ್ನವನ್ನು ನಿರ್ದೇಶಿಸುತ್ತದೆ. ಈ ಪೊನ್ನೂರಿನ ಕೊಳವೇ ಪೊನ್ನೂರು ಘಟ್ಟವಾಗಿದ್ದು ಈಗಿನ ಬನ್ನೇರು ಘಟ್ಟವಾಗಿದೆ. ಚಿನ್ನದ ಅದಿರು ಅಥವಾ ಚಿನ್ನದ ಕೆಲಸ ಮಾಡುತ್ತಿದ್ದ ಸ್ಥಳವಿದೆಂಬುದು ಸ್ಪಷ್ಟ.

ಒಟ್ಟಿನಲ್ಲಿ ಬನ್ನೇರುಘಟ್ಟವು ಪ್ರಾಚೀನ ಸಂಸ್ಕೃತಿಯ ಆಚರಣೆಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದು, ಶಿಲಾಯುಗದ ಸಂಸ್ಕೃತಿಯೊಂದರ ಕೇಂದ್ರವಾಗಿತ್ತು. ಲೋಹಗಾರರ ಪ್ರಮುಖ ಕೇಂದ್ರವಾಗಿದ್ದುದಲ್ಲದೆ ವಿಶೇಷವಾಗಿ ಚಿನ್ನದ ಅದಿರು ದೊರೆಯುತ್ತಿದ್ದ ಸ್ಥಳವಾಗಿದ್ದು ಅದರಿಂದ ಆ ಸ್ಥಳಕ್ಕೆ ಪೊನ್ನೂರುಘಟ್ಟವೆಂಬ ಹೆಸರು ಬಂದು ಅದೇ ಈಗಿನ ಬನ್ನೇರುಘಟ್ಟವೆಂಬ ಹೆಸರಿನ ಮೂಲವಾಗಿದೆ.

4. ಮೇಲೂರು ದಿಣ್ಣೆ ಹಾಗೂ ಕಾಳನಾಯಕನಹಳ್ಳಿಯ ಬೃಹತ್ ಶಿಲಾಯುಗದ ನಿವೇಶನಗಳು

ಶ್ರೀಮತಿ ಡಿ. ಸ್ಮಿತಾರೆಡ್ಡಿ

ಬೆಂಗಳೂರು ಜಿಲ್ಲೆಯ ಅನೇಕಲ್ ತಾಲ್ಲೂಕಿಗೆ ಸೇರಿದ ಮೇಲೂರು ದಿಣ್ಣೆ ಹಾಗೂ ಕಾಳನಾಯಕನಹಳ್ಳಿ ಎಂಬ ಕುಗ್ರಾಮದಲ್ಲಿನ ಶಿಲಾಯುಗದ ಅವಶೇಷಗಳ ಬಗ್ಗೆ ಪ್ರಸ್ತುತ ಈ ಲೇಖನವನ್ನು ರಚಿಸಿದ್ದೇನೆ.

ಮೇಲೂರು ದಿಣ್ಣೆ ಎಂದು ಕರೆಯುವ ಸ್ಥಳವು ಆನೇಕಲ್‌ನಿಂದ 8 ಕಿ. ಮೀ. ದೂರದಲ್ಲಿದೆ. ಈ ಸ್ಥಳದ ವ್ಯಾಪ್ತಿಯಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ಸಮಾಧಿಗಳ ದೊಡ್ಡದೊಂದು ನಿವೇಶನವಿದೆ. ಇಲ್ಲಿ ಶಿಲಾವೃತ್ತಗಳುಳ್ಳ ಸು. 95 ಸಮಾಧಿಗಳಿದ್ದು, ಇವುಗಳಲ್ಲಿ ಸು. 75 ಸಮಾಧಿಗಳು ಸಂಪೂರ್ಣ ಹಾಳಾಗಿವೆ. ಇವುಗಳನ್ನು ಅಗೆದು ಆ ಭೂಮಿಯನ್ನು ವ್ಯವಸಾಯಕ್ಕೆ ಬಳಸಿಕೊಳ್ಳಲಾಗಿದೆ. ಹಾಳಾಗದಂತೆ ಉಳಿದಿರುವ ಸಮಾಧಿಗಳ ಸುತ್ತಲೂ ಏಳು ಮೀಟರ್ ವ್ಯಾಸವಿರುವ ಶಿಲಾವೃತ್ತಗಳನ್ನು ಹೊಂದಿವೆ. ಇಲ್ಲಿ ಅಗೆಯಲ್ಪಟ್ಟ ಸಮಾಧಿಗಳನ್ನು ಪರಿಶೀಲಿಸಿದಾಗ, ಕಪ್ಪು ಹಾಗೂ ಕೆಂಪಿನ ಮಡಿಕೆ–ಕುಡಿಕೆ ಚೂರುಗಳು ದೊರೆತವು ಹಾಗೂ ಮೂಳೆ ಚೂರುಗಳೂ ದೊರೆತಿವೆ.

ಮೇಲೂರು ದಿಣ್ಣೆಯ ದಕ್ಷಿಣಕ್ಕೆ ಒಂದು ಕಿ.ಮೀ. ದೂರದಲ್ಲಿರುವ ಕಾಳನಾಯಕನಹಳ್ಳಿಯು ಆನೇಕಲ್‌ನಿಂದ 6 ಕಿ. ಮೀ. ದೂರದಲ್ಲಿದೆ. ಇದು ಬೃಹತ್ ಶಿಲಾಯುಗದ ಮಾನವನ ನೆಲೆಯಾಗಿದ್ದುದಕ್ಕೆ ಸಾಕ್ಷಿಯಾಗಿ ಇಲ್ಲಿ 24 ಸಮಾಧಿಗಳು ಪತ್ತೆಯಾಗಿವೆ. ಇವುಗಳಲ್ಲಿ 14 ಸಮಾಧಿಗಳು ವ್ಯವಸಾಯಗಾರರ ಧಾಳಿಗೆ ಗುರಿಯಾಗಿ ಸಂಪೂರ್ಣ ಹಾಳಾಗಿವೆ. ಸುರಕ್ಷಿತವಾಗಿರುವ ಸಮಾಧಿಗಳ ಸುತ್ತಲೂ ಕಾಡುಗಲ್ಲು (ಉರುಟು ಕಲ್ಲು)ಗಳಿಂದ ನಿರ್ಮಿಸಿದ ವೃತ್ತಗಳಿವೆ.

ಇಲ್ಲಿ ಕ್ಷೇತ್ರ ಕಾರ್ಯ ಕೈಗೊಂಡು ಅಗೆಯಲ್ಪಟ್ಟಿರುವ ಬೃಹತ್ ಶಿಲಾಯುಗ ಸಮಾಧಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಹಲವಾರು ಮಡಿಕೆ, ಕುಡಿಕೆ ಚೂರುಗಳು ಮತ್ತು ಎರಡು ಮಣ್ಣಿನ ಗೊಂಬೆಗಳು ದೊರೆತವು. ಇಲ್ಲಿಯ ಒಂದು ಸಣ್ಣ ಬಂಡೆಯ ಮೇಲೆ ನಾಲ್ಕು ಅಂಗುಲ ಎತ್ತರದ ಜಿಂಕೆಯ ರೇಖಾಚಿತ್ರವು ದೊರೆತಿದೆ. ಇಲ್ಲಿ ಭೂಮಿಯನ್ನು ಉಳುವಾಗ ದೊರೆತ ಕಬ್ಬಿಣದ ಕೊಡಲಿಯೊಂದನ್ನು ಅಲ್ಲಿನ ನಿವಾಸಿಗಳು ನೀಡಿರುತ್ತಾರೆ. ಇಲ್ಲಿ ದೊರೆತ ಮಡಕೆಯ ಚೂರುಗಳು ಕಪ್ಪು ಹಾಗೂ ಕೆಂಪು ಬಣ್ಣದಿಂದ ಕೂಡಿವೆ. ಕೊಡಲಿಯು 23 ಸೆಂ. ಮೀ. ಉದ್ದ ಹಾಗೂ 10 ಸೆಂ. ಮೀ. ಅಗಲವಾಗಿದೆ. ಈ ಸಮಾಧಿಗಳ ಕಾಲವನ್ನು ಕಬ್ಬಿಣದ ಯುಗಕ್ಕೆ ಸೇರಿಸಬಹುದಾಗಿದೆ.

ಗೊಂಬೆಗಳು

ಇಲ್ಲಿ ದೊರೆತ ಗೊಂಬೆಗಳು ಜೇಡಿಮಣ್ಣಿನಿಂದ ಮಾಡಲ್ಪಟ್ಟಿದ್ದು, ಒಂದು ಹೆಣ್ಣು ಹಾಗೂ ಮತ್ತೊಂದು ಗಂಡಿನದಾಗಿದೆ. ಹೆಣ್ಣು ಗೊಂಬೆಯು 6.4 ಸೆಂ. ಮೀ. ಎತ್ತರ ಹಾಗೂ 7.5 ಸೆಂ. ಮೀ. ಅಗಲವಾಗಿದೆ. ಈ ಗೊಂಬೆಯ ತಲೆ ಹಾಗೂ ಕೈ ಕಾಲುಗಳು ತುಂಡಾಗಿವೆ. ಎರಡೂ ತೋಳುಗಳನ್ನು ಅಗಲಿಸಿ ಹಿಡಿದಂತಿರುವ, ಈ ಗೊಂಬೆಯ ಮುಂಗೈವರೆಗಿನ ಭಾಗ ಮಾತ್ರ ಇದ್ದು, ಎರಡೂ ಹಸ್ತಗಳು ಮುರಿದು ಹೋಗಿವೆ. ಕಾಲುಗಳಲ್ಲಿ ಎಡತೊಡೆಯ ಭಾಗ ಮಾತ್ರವಿದೆ. ಬಲಗಾಲು ಸೊಂಟದ ಭಾಗದಿಂದಲೇ ಮುರಿದಿದೆ. ಆದ್ದರಿಂದ ಗೊಂಬೆಯು ಕುಳಿತ ಭಂಗಿಯಲ್ಲಿದ್ದಿತೋ ನಿಂತ ಭಂಗಿಯಲ್ಲಿದ್ದಿತೋ ಎಂಬುದನ್ನು ಗುರುತಿಸುವುದು ಅಸಾಧ್ಯವಾಗಿದೆ. ಗೊಂಬೆಯು

ಸಂಪೂರ್ಣ ನಗ್ನವಾಗಿದ್ದು, ಯಾವುದೇ ರೀತಿಯ ವಸ್ತ್ರಗಳನ್ನು ಧರಿಸಿಲ್ಲ. ಆದರೆ ಸ್ತನಗಳ ಮೇಲ್ಭಾಗದಲ್ಲಿ ಕೊರಳಲ್ಲಿ 'ನೆಕ್ಲೇಸ್' ರೀತಿಯ ಒಡವೆಯೊಂದನ್ನು ಧರಿಸಿರುವಂತೆ ರಚಿಸಿದೆ. ತೆಳುವಾದ ಹೊಟ್ಟೆ, ಸಿಂಹಕಟ್ಟಿ ಹಾಗೂ ಪ್ರಮಾಣಬದ್ಧವಾದ ಅಂಗಸೌಷ್ಟವದಿಂದ ಕೂಡಿರುವ ಈ ಸ್ತ್ರೀ ಗೊಂಬೆಯ ಹೊಕ್ಕಳು ಹಾಗೂ ಕೊರಳಲ್ಲಿರುವ ಒಡವೆ ಸ್ಪಷ್ಟವಾಗಿ ಕಾಣುವಂತೆ ಶಿಲ್ಪಿಯು ನಿರ್ಮಿಸಿರುತ್ತಾನೆ.

ಮತ್ತೊಂದು ಗೊಂಬೆಯು ಪುರುಷನದಾಗಿದ್ದು 7 ಸೆಂ. ಮೀ. ಉದ್ದ ಹಾಗೂ 5.4 ಸೆಂ. ಮೀ. ಅಗಲವಾಗಿದೆ. ಇದೂ ಸಹ ರುಂಡ ಹಾಗೂ ಕೈ ಕಾಲುಗಳನ್ನು ಕಳೆದುಕೊಂಡಿದೆ. ಬಲಗೈ ಮೊಣಕೈವರೆಗೆ ಮಾತ್ರವಿದ್ದು, ಎಡಗೈ ಹಾಗೂ ಎರಡೂ ಕಾಲುಗಳು ಸಂಪೂರ್ಣ ಹಾಳಾಗಿವೆ. ಗೊಂಬೆಯ ದೇಹದ ಮೇಲೆ ಯಾವುದೇ ವಸ್ತ್ರಗಳಿಲ್ಲದಿದ್ದರೂ, ಕೊರಳಲ್ಲಿ ಒಂದು ಆಭರಣ ಧರಿಸಿರುವಂತೆ ಕಂಡುಬರುತ್ತದೆ. ಇದೂ ಸಹ ಅಸಮಗ್ರವಾಗಿ ಲಭಿಸಿರುವುದರಿಂದ ಯಾವ ಭಂಗಿಯಲ್ಲಿದೆ ಎಂದು ಹೇಳುವುದು ಅಸಾಧ್ಯ. ಈ ಗೊಂಬೆಗಳನ್ನು ಜೇಡಿ ಮಣ್ಣಿನಿಂದ ನಿರ್ಮಿಸಿ ನಂತರ ಸುಟ್ಟಿರುವುದರಿಂದ ತುಂಬಾ ಗಟ್ಟಿಯಾಗಿವೆ.

ಬೃಹತ್ ಶಿಲಾಯುಗ ಸಮಾಧಿಗಳಲ್ಲಿ ಈ ರೀತಿಯ ಟೆರಾಕೋಟಾ ಮಣ್ಣಿನ ಗೊಂಬೆಗಳು ದೊರೆತಿರುವ ಹಲವಾರು ನಿದರ್ಶನಗಳು ಇವೆ:

ಘಟಪ್ರಭಾ ನದಿಯ ದಂಡೆಯ ಮೇಲಿನ ಹೆರಕಲ್ ಗ್ರಾಮದ ಶಿಲಾಯುಗದ ನಿವೇಶನದಲ್ಲಿ ಸುಟ್ಟು ಮಣ್ಣಿನ ಗೊಂಬೆಗಳು ಪತ್ತೆಯಾಗಿವೆ. ಬೆಳಗಾವಿ ಹತ್ತಿರದ ವಡಗಾಂವ ಮಾಧವಪುರದಲ್ಲಿ ಸಹ ಸುಟ್ಟ ಮಣ್ಣಿನ ಗೊಂಬೆಗಳು ಪತ್ತೆಯಾಗಿವೆ. ಧಾರವಾಡ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ ಭೈರವನ ಪಾದ ಎಂಬಲ್ಲಿ ಸುಟ್ಟ ಮಣ್ಣಿನ ಗೊಂಬೆಗಳು ದೊರೆತಿವೆ.[1] ಅದೇ ತಾಲ್ಲೂಕಿನ ಸಿರಗುಂಬಿ ಹೊಸಳ್ಳಿ ಎಂಬ ಗ್ರಾಮದಲ್ಲಿ ಸುಟ್ಟು ಮಣ್ಣಿನ ಹೆಣ್ಣು ಗೊಂಬೆ ದೊರೆತಿದೆ.[2] ರಾಯಚೂರು ಜಿಲ್ಲೆಯ ಪಿಕ್ಲಿಹಾಳ್ ಮತ್ತು ತಕ್ಕಲಕೋಟೆಯ ನಿವೇಶನಗಳಲ್ಲಿಯೂ ಸಹ ಕೆಲವು ಮಣ್ಣಿನ ಗೊಂಬೆಗಳು ದೊರೆತಿವೆ.[3] ಬಲೂಚಿಸ್ಥಾನದ ಕಿಲಿಘುಲ್ ಮೊಹಮ್ಮದ್ ಎಂಬ ಪ್ರದೇಶದ ಬಳಿಯಲ್ಲಿರುವ 'ದಾಂಬ್ ಸದಾತ್'ನಲ್ಲಿ ದೊರೆತ ಗಡಸು ಜೇಡಿಮಣ್ಣಿನ ಪ್ರತಿಮೆಗಳು ಕ್ರಿ. ಪೂ. 2300 ವರ್ಷಗಳಷ್ಟು ಹಳೆಯದೆಂದು ವಿದ್ವಾಂಸರು ಗುರುತಿಸಿದ್ದಾರೆ.[4] ಹಾಗೆಯೇ ಕೊಲ್ಹಾಪುರದ ಬಳಿಯ ಬ್ರಹ್ಮಪುರಿ ಎಂಬ ಗ್ರಾಮದ ಬಳಿ ಶಾತವಾಹನರ ಕಾಲದ ಮಣ್ಣಿನ ಗೊಂಬೆಗಳು ಪತ್ತೆಯಾಗಿವೆ. ಸನ್ನತಿಯಲ್ಲೂ ಇದೇ ಕಾಲದ ಮಣ್ಣಿನ ಗೊಂಬೆಗಳು ಪತ್ತೆಯಾದ ವರದಿಯಾಗಿದೆ.

ಬೆಂಗಳೂರು ಜಿಲ್ಲೆಯಲ್ಲಿ ಬೃಹತ್ ಶಿಲಾಯುಗದ ನಿವೇಶನಗಳು ಪತ್ತೆಯಾಗಿದ್ದರೂ ಸಹ ಒಂದರಲ್ಲೂ ಮಣ್ಣಿನ ಗೊಂಬೆಗಳು ಪತ್ತೆಯಾದ ವರದಿಯಾಗಿಲ್ಲದಿರುವುದು ಗಮನಾರ್ಹವಾದ ಅಂಶ. ಆದ್ದರಿಂದ ಪ್ರಸ್ತುತ ಕಾಳನಾಯಕನ ಹಳ್ಳಿಯಲ್ಲಿ ಪತ್ತೆಯಾಗಿರುವ ಮಣ್ಣಿನ ಗೊಂಬೆಗಳು ಪ್ರಾಮುಖ್ಯತೆ ಪಡೆದುಕೊಂಡಿವೆ. ಕಾಳನಾಯಕನಹಳ್ಳಿಯ ಬೃಹತ್ ಶಿಲಾಯುಗ ನಿವೇಶನಗಳಲ್ಲಿ ಉತ್ಖನನ ನಡೆಸಿದರೆ, ಅಮೂಲ್ಯವಾದ ವಿಷಯಗಳು ಹೊರ ಬರಬಹುದಾದ ಸಾಧ್ಯತೆಗಳಿವೆಯೆಂದು ಹೇಳಬಹುದು.

ಟಿಪ್ಪಣಿಗಳು

1. ಡಾ. ಆರ್. ಎಸ್. ಪಂಚಮುಖಿ, ಕರ್ನಾಟಕದ ಇತಿಹಾಸ, ಪುಟ 56
2. ಅದೇ ಪುಟ 57
3. ಡಾ॥ ಬಿ. ಮುದ್ದಾಚಾರಿ, ದಕ್ಷಿಣ ಭಾರತದ ಇತಿಹಾಸ, ಪುಟ 57.
4. (ಮೂಲ) ಕ. ಅಂತೋನವ ಜಿ. ಬೊಂಗಾರ್ಡ್-ಲೆವಿನ್, ಅನು: ಕೆ. ಎಲ್. ಗೋಪಾಲಕೃಷ್ಣರಾವ್, ಭಾರತದ ಇತಿಹಾಸ ಪುಟ 14

5. ದೊಡ್ಡಬಳ್ಳಾಪುರ ಹಾಗೂ ದೇವನಹಳ್ಳಿಯ ಬೃಹತ್ ಶಿಲಾಯುಗ ಸಂಸ್ಕೃತಿ ನಿವೇಶನಗಳು

ಶ್ರೀ ಸಾಸಲು ಜೆ. ವಿಶ್ವನಾಥ್

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಹಾಗೂ ದೇವನಹಳ್ಳಿ ತಾಲೂಕುಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಅಪೂರ್ವ ನೆಲೆಗಳು ಪತ್ತೆಯಾಗಿವೆ. ವಿಭಿನ್ನ ಮಾದರಿಯ ಸಮಾಧಿಗಳ ಜೊತೆಗೆ ನಿಲಸುಗಲ್ಲುಗಳು ಹೇರಳವಾಗಿದ್ದು, ಆ ಪರಿಸರಗಳಲ್ಲಿ ರೇಖಾಚಿತ್ರಗಳು ಬೆಳಕಿಗೆ ಬಂದಿವೆ.

ದೊಡ್ಡಬಳ್ಳಾಪುರ ತಾಲೂಕು ಬೆಣಕಿನ ಮಡಗು ಗ್ರಾಮದ ಪಕ್ಕದಲ್ಲಿರುವ ಸೊಲುಕುಂಟೆ ಗ್ರಾಮದ ಪಕ್ಕದಲ್ಲಿ ಕಾಡಿನ ಮಧ್ಯೆ 13 ಅಡಿ ಉದ್ದ ಹಾಗೂ 3 ಅಡಿ ಅಗಲದ 'ನಿಲುವುಗಲ್ಲು' ಒಂದಿದೆ. ಈ ಸ್ಮಾರಕ ಸ್ತಂಭದ ಪರಿಸರದಲ್ಲಿ 150ಕ್ಕೂ ಹೆಚ್ಚು ಕಲ್ಲುಪ್ಪೆ ಸಮಾಧಿಗಳಿವೆ. ಸ್ಥಳೀಯರು ಇದನ್ನು ಪಾಂಡವರ ದಿನ್ನೆ ಎಂದು ಕರೆಯುವರು. ಈ ಪರಿಸರದಲ್ಲಿ ಉಜ್ಜನಿ ಬೆಟ್ಟವಿದ್ದು, ಒಂದೆರಡು ಗುಹೆ ಕಲ್ಲಾಸರೆಗಳು ಇವೆ. ಶಿಲಾಯುಗ ಜನರ ಯೋಗ್ಯವಾದ ನೆಲೆ ಇದಾಗಿತ್ತೆಂಬುದಕ್ಕೆ ಸಾಕಷ್ಟು ಕುರುಹುಗಳು ದೊರೆತಿವೆ. ಇಲ್ಲಿನ ಸಮಾಧಿಗಳು ಕೆಲವು 'ನಿಧಿ ಶೋಧಕರ' ದಾಳಿಗೆ ಗುರಿಯಾಗಿದ್ದು, ಸ್ವಸ್ತಿಕ್ ಆಕಾರದ ಕಣಜಗಳಂತೆ ಗೋಚರವಾಗುತ್ತವೆ.

ಕಲ್ಕುಂಟೆ ಗ್ರಾಮದ ಬಳಿ 10 ಅಡಿ ಉದ್ದ 4 ಅಡಿ ಅಗಲದ ಇನ್ನೊಂದು ನಿಲುವುಗಲ್ಲು ಇದ್ದು ಇದರ ಸುತ್ತಲೂ 17 ಶಿಲಾವೃತ್ತ ಸಮಾಧಿಗಳಿವೆ. ಇಲ್ಲಿಂದ ಸ್ವಲ್ಪ ಮುಂದೆ ಬೆಟ್ಟದ ತಪ್ಪಲಲ್ಲಿ ಹಾಲು ಚಿಲುಮೆ ಬಳಿ 12 ಅಡಿ ಉದ್ದ 31/2 ಅಡಿ ಅಗಲದ ನಿಲುವು ಗಲ್ಲೊಂದು ಇದ್ದು ಇದರ ಸುತ್ತಲೂ 19 ಮೇಲ್ಗುಪ್ಪೆ ಸಮಾಧಿಗಳಿವೆ. ಸ್ಥಳೀಯರು ಈ ಸ್ಮಾರಕ ಕಲ್ಲನ್ನು ಗೂಡ್ಗಲ್ಲು, ಕೋತಿಕಲ್ಲು, ಪಾಂಡವರ ಕಲ್ಲು, ಎಂದು ಕರೆಯುತ್ತಾರೆ.

ರಾಜಗಟ್ಟ, ಗ್ರಾಮದ ಬಳಿ ಬೂದಿಗುಂಡಿಯಲ್ಲಿ 4 ಹಾದಿ ಕೋಟೆ ಸಮಾಧಿಗಳು ಒಂದು ಅಗೆದು ಹಾಳಾದ ರಂಧ್ರ ಕೋಣೆ ಸಮಾಧಿ ಇದ್ದರೆ ಬೈರಾಪುರ ಗ್ರಾಮದ ಹೊಲಗಳಲ್ಲಿ 32 ಶಿಲಾವೃತ್ತ ಸಮಾಧಿಗಳಿವೆ. ಇದೇ ಹಳ್ಳಿಯ ಪಕ್ಕ ಜಾಲಗೆರೆ ಸಮೀಪ 12 ಅಡಿ ಉದ್ದ 31/2 ಅಡಿ ಅಗಲದ ಒಂದು ನಿಲುವುಗಲ್ಲು ಇದ್ದು, ಈ ಪರಿಸರದಲ್ಲಿ 11 ಕಲ್ಗುಪ್ಪೆ ಸಮಾಧಿಗಳಿವೆ. ದೊಡ್ಡ ಬೆಳವಂಗಲ ಸಕ್ಕರೆಗೊಲ್ಲಹಳ್ಳಿ ಮಧ್ಯೆ ಅಕ್ಕತಮ್ಮನ ಹಳ್ಳಿ ಸಮೀಪ ಮಟಗುಂಟೆಯ ಹತ್ತಿರ ಒಂದು ತುಂಡು ಕಲ್ಲಿನ ಸಮಾಧಿ ಇದೆ. ಒಂದು ಚಿಕ್ಕ ನಿಲಸುಗಲ್ಲು ಇದೆ. ಭಕ್ತರಹಳ್ಳಿ ಆಲಪನಹಳ್ಳಿ ಮಧ್ಯೆ 14 ಅಡಿ ಎತ್ತರ 4 ಅಡಿ ಅಗಲದ ನಿಲಸುಗಲ್ಲು ಇದೆ. ಇದೇ ಪ್ರದೇಶದಲ್ಲಿ 17 ಬೃಹತ್ ಶಿಲಾಸಮಾಧಿಗಳಿವೆ.

ಹುಲುಕಡಿ ಬೆಟ್ಟ, ಮಾಕಳಿ ದುರ್ಗ ಮತ್ತು ಉಜ್ಜನಿ ಬೆಟ್ಟಗಳ ಆವರಣದಲ್ಲಿ ಕೆಲವು ಕಲ್ಲಿನ ಮಂಟಪಗಳಿವೆ. ಶ್ರೀರಾಮನ ಹಳ್ಳಿಯ ಕಾಡಿನ ಗುಡ್ಡದಲ್ಲಿ ಬಂಡೆಗಳ ಮೇಲೆ ಕೆಲವು ರೇಖಾಚಿತ್ರಗಳಿವೆ. ಆನೆ, ಗೂಳಿ, ನವಿಲು, ಮನುಷ್ಯನ ಚಿತ್ರಗಳಿವೆ. ಈ ಪ್ರದೇಶಗಳಲ್ಲಿ ಮಡಿಕೆ ಚೂರುಗಳು ದೊರೆತಿವೆ. ದೇವನ ಹಳ್ಳಿಯ ಕೊಯಿರಾ, ಹೊಸೂರು, ಹರುವನಹಳ್ಳಿ, ಜ್ಯೋತಿಪುರ, ಬೇಡರಹಳ್ಳಿ ಸಮೀಪ ಮೂವತ್ತಕ್ಕೂ ಹೆಚ್ಚು ಸಮಾಧಿಗಳಿವೆ.

ದೇವನಹಳ್ಳಿ ದೊಡ್ಡಬಳ್ಳಾಪುರ ರಸ್ತೆಯ ಹೊಸೂರು ಗ್ರಾಮದಲ್ಲಿ 12 ನಿಲಸುಗಲ್ಲುಗಳು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ನೂರಾರು ಸಮಾಧಿಗಳಿವೆ. ಸನಿಹದಲ್ಲಿರುವ ನಿಲುವುಗಲ್ಲುಗಳಲ್ಲಿ 2 ನಿಲಸುಗಲ್ಲುಗಳು 22 ಅಡಿ ಎತ್ತರವಾಗಿವೆ. ಉಳಿದವು 8 ರಿಂದ 11 ಅಡಿ ಎತ್ತರವಾಗಿವೆ.

ಕೊಯಿರಾದ ಒಂದು ಹೊಲದಲ್ಲಿ 5 ನಿಲಸುಗಲ್ಲುಗಳಿದ್ದು, ಒಂದು 16 ಅಡಿ ಎತ್ತರವಿದೆ. ಇನ್ನೆರಡು 10 ಅಡಿ ಎತ್ತರವಿವೆ. ಒಂದು 7 ಅಡಿ ಎತ್ತರವಿದೆ. ಇಲ್ಲಿರುವ ಸಮಾಧಿಗಳ ಸುತ್ತ ಮೂರರಿಂದ 9 ಶಿಲಾವೃತ್ತಗಳಿವೆ. ಈ ಸಮಾಧಿಗಳ ಪೂರ್ವದಿಕ್ಕಿನ ಚಪ್ಪಡಿಗಳಿಗೆ ವೃತ್ತಾಕಾರದ ರಂಧ್ರಗಳಿವೆ.

ಈ ಅಂಶಗಳನ್ನು ಗಮನಿಸಿದರೆ, ದೊಡ್ಡ ಬಳ್ಳಾಪುರ ಮತ್ತು ದೇವನಹಳ್ಳಿಯು ಬೃ.ಶಿ. ಸಂಸ್ಕೃತಿಯ ಅಪೂರ್ವ ನೆಲೆಗಳಾಗಿತ್ತೆಂದು ಹೇಳಬಹುದು.





6. ಇತಿಹಾಸ ಪೂರ್ವದ ಬೆಂಗಳೂರು

ಡಾ. ಪಿ. ಎನ್. ನರಸಿಂಹಮೂರ್ತಿ

ಹಿಂದಿನ ಪ್ರಯತ್ನಗಳು

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಪ್ರಾಕ್ಚಾರಿತ್ರಿಕ ಪಳೆಯುಳಿಕೆಗಳ ಶೋಧಕಾರ್ಯ 19ನೆಯ ಶತಮಾನದಿಂದ ಪ್ರಾರಂಭವಾಗಿದೆ. ಬ್ರೂಸ್‌ಫುಟ್ ಇದರ ಮುಂಚೂಣಿನಲ್ಲಿದ್ದ ವಿದ್ವಾಂಸ. ಆದರೆ ಬೆಂಗಳೂರು ನಗರ ಹಾಗೂ ಅದರ ಸುತ್ತಲಿನ ಪ್ರದೇಶಕ್ಕೆ ಸಂಬಂಧಿಸಿದಂತೆ ಆದ ಮೊದಲ ಶೋಧ 1896ರಲ್ಲಿ. ಬೆಂಗಳೂರಿನ ಇಂದಿನ ಕೇಂದ್ರ ಭಾಗವಾಗಿರುವ ರೇಸ್‌ಕೋರ್ಸ್ ನಿವೇಶನದಲ್ಲಿ ಸೂಕ್ಷ್ಮಶಿಲಾ ಆಯುಧಗಳು ಪತ್ತೆಯಾದವು. ಐವತ್ತು ವರ್ಷಗಳ ನಂತರ ಹೆಚ್. ಎ. ಎಲ್. ರಸ್ತೆ ಬಳಿ ಮತ್ತು ಜಾಲಹಳ್ಳಿಯಲ್ಲೂ ಸಹ ಇಂತಹುದೇ ವಸ್ತುಗಳು ಪತ್ತೆಯಾದವು. ಈ ವಸ್ತುಗಳೆಲ್ಲಾ ಈಗ ಇರುವುದು ಲಂಡನ್ ವಸ್ತು ಸಂಗ್ರಹಾಲಯದಲ್ಲಿ. ಇವುಗಳನ್ನು ಪರಿಶೀಲಿಸಿ ಅಧ್ಯಯನ ಮಾಡಿದ. ಎಂ. ಹೆಚ್. ಕೃಷ್ಣ ಅವರು ಈ ವಸ್ತುಗಳು ಸುಮಾರು ಕ್ರಿ. ಪೂ 6000ಕ್ಕೆ ಸೇರಿದವು ಎಂದು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೂ ಹಿಂದಿನ ಕಾಲದ ಮಾಹಿತಿ ಆಗ ಲಭ್ಯವಿಲ್ಲದಿದ್ದ ಕಾರಣ ಇದೊಂದು ಪ್ರಮುಖ ಮಾಹಿತಿ ಆಯಿತು.

ಆದರೆ ಪಕ್ಕದ ತುಮಕೂರು ಜಿಲ್ಲೆಯಲ್ಲಿ ಆ ವೇಳೆಗಾಗಲೆ ಹಳೆಶಿಲಾಯುಗ ಕಾಲದ ಪಳೆಯುಳಿಕೆಗಳು ಪತ್ತೆಯಾಗಿದ್ದವು. ಇದು ಅತ್ಯಂತ ಪ್ರಾಚೀನ ಕಾಲದಿಂದ ಮಾನವ ಚಟುವಟಿಕೆಗಳು ಆ ಭಾಗದಲ್ಲಿ ಅದಿಕವಾಗಿದ್ದವು ಎಂಬುದಕ್ಕೆ ಆಧಾರವಾಗಿದೆ. ಆ ಕಾಲದಲ್ಲಿ ಮಾನವ ಅಲೆಮಾರಿಯಾಗಿದ್ದ ಕಾರಣ ಬೆಂಗಳೂರು ಭಾಗದಲ್ಲಿ ಅವನ ಚಟುವಟಿಕೆಗಳು ಇದ್ದಿರಲಾರದು ಎಂದು ಹೇಳಲು ಪ್ರಮುಖ ಆಧಾರಗಳೇನೂ ಇಲ್ಲ. ಆದರೆ ಆಧಾರಗಳೇ ದೊರೆಯದಿರುವಾಗ ಇದನ್ನೂ ಒಪ್ಪಲು ಸಾಧ್ಯವೇ ಎಂಬ ಪ್ರಶ್ನೆ ನಮ್ಮನ್ನು ಕಾಡದೇ ಇರದು.

ಜಾಲಹಳ್ಳಿ ಮತ್ತು ಆನೇಕಲ್ ತಾಲೂಕಿನ ಚೂಡಸಂದ್ರಗಳಲ್ಲಿ (ಸ್ವಲ್ಪ ತಡವಾಗಿಯಾದರೂ) ದೊರೆತಿರುವ ಮೈಕ್ರೋಲಿತ್ ಕ್ವಾರ್ಟ್ಸ್ ವಸ್ತುಗಳು ಈ ಕೊರತೆ ಮತ್ತು ಸಮಸ್ಯೆಯನ್ನು ಪರಿಹರಿಸುವಂತಿದೆ. ಸೂಕ್ಷ್ಮ ಶಿಲಾಯುಗದ ಕಪ್ಪು ಮತ್ತು ಕೆಂಪು ಮಿಶ್ರಿತ ಬೂದುಬಣ್ಣದ ಮಡಿಕೆ ಚೂರುಗಳು ಅಂಕನ ಪಾಳ್ಯದಲ್ಲಿ ದೊರೆತಿವೆ. ಬ್ರೂಸ್ ಫುಟ್ ಪ್ರಕಾರ ಇವು ನವಶಿಲಾಯುಗದ ಆದಿಭಾಗಕ್ಕೆ ಸೇರುತ್ತವೆ. ಬೆಂಗಳೂರು ನಗರ ಸಮೀಪವೇ ಇರುವ ಈ ಸ್ಥಳ ಸಹ ಮಹಾನಗರದ ಪ್ರಾಚೀನ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.

ಬೃಹತ್ ಶಿಲಾಯುಗ

ಬೃಹತ್ ಶಿಲಾಯುಗಕ್ಕೆ ಕಾಲಿಟ್ಟಾಗ ಇಲ್ಲಿದೊರೆಯುವ ಮಾಹಿತಿ ಆಶಾದಾಯಕವಾಗಿದೆ. ಬೆಂಗಳೂರು ಹಾಗು ಸುತ್ತಮುತ್ತಲಿನ ಪ್ರದೇಶ (ಹಳ್ಳಿ)ಗಳೆಲ್ಲಾ ಈ ಕಾಲದ ನೆಲೆಗಳು ಪತ್ತೆಯಾಗಿವೆ. ಇದು ಬೃಹತ್ತಾಗಿ ಬೆಳೆದಿದ್ದ ಒಂದು ಸಮಾಜ ನಮ್ಮ ಕಣ್ಣ ಮುಂದೆ ನಿಲ್ಲುವಂತೆ ಮಾಡುತ್ತದೆ. ಬಾಣಸವಾಡಿಯ ಕಣ್ಣೂರು ಜಾಲಹಳ್ಳಿ, ಭೈರಸಂದ್ರ, ಬೇಗೂರು, ಚಿಕ್ಕಜಾಲ, ದೊಡ್ಡಜಾಲ, ಬೆಳ್ಳಂದೂರು, ಹುಳಿಮಾವು, ಬನ್ನೇರುಘಟ್ಟ, ಚೌಡಸಂದ್ರ, ಬೂದಿಹೊಲ, ಜಡಿಗೇನಹಳ್ಳಿ, ಇತ್ಯಾದಿ ಸ್ಥಳಗಳಲ್ಲಿ ಆ ಕಾಲದ ನೆಲೆಗಳು ಮತ್ತು ಶಿಲಾಗೋರಿಗಳು ಅಧಿಕ

ಸಂಖ್ಯೆಯಲ್ಲಿ ಪತ್ತೆಯಾಗಿವೆ. ಆ ಕಾಲದ ಮಾನವ ಕೃಷಿಯನ್ನು ಅವಲಂಬಿಸಿದ್ದ ಎನ್ನುವುದು ಜಡಿಗೇನ ಹಳ್ಳಿಯಲ್ಲಿ ದೊರೆತಿರುವ ಭತ್ತದ ಹೊಟ್ಟಿನಿಂದ ದೃಡಪಡುತ್ತದೆ. ಬೆಳ್ಳಂದೂರುವಿನಲ್ಲಿ ಕಪ್ಪು, ಕೆಂಪು ಮತ್ತು ಕಪ್ಪು ಮಿಶ್ರಿತ ಕೆಂಪು ಬಣ್ಣಗಳ ಅಧಿಕವಾಗಿ ನಯಮಾಡಲ್ಪಟ್ಟ ಮಡಕೆ ಚೂರುಗಳು ದೊರೆತಿವೆ. ಕೆಲವು ಕಡೆಗಳಲ್ಲಿ ಮಡಕೆ ಚೂರುಗಳ ಜೊತೆಗೆ ಕಬ್ಬಿಣದ ವಸ್ತುಗಳೂ ದೊರೆತಿವೆ. ಈ ಹೆಚ್ಚಿನ ವಸ್ತುಗಳೂ ಈಗ ಮದ್ರಾಸ್ ವಸ್ತುಸಂಗ್ರಹಾಲಯದಲ್ಲಿವೆ. ಈ ಮಡಕೆ ಚೂರುಗಳಲ್ಲಿ ಹೊಳಪಿರುವ ಕೆಲವಾದರೂ ನವಶಿಲಾಯುಗದ ಉತ್ತರಭಾಗಕ್ಕೆ ಸೇರಿರುವ ಸಾಧ್ಯತೆಗಳಿವೆ.

ಇತ್ತೀಚೆಗೆ ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ಪತ್ತೆಯಾಗಿವೆ. ಅಂಕನಪಾಳ್ಯ ಪ್ರಾಯಶಃ ಆ ಕಾಲದ ಒಂದು ಬೃಹತ್ ನೆಲೆಯಾಗಿತ್ತು. ನೆಲಮಂಗಲ ತಾಲ್ಲೂಕಿನ ಬಂಡಿಚಿಕ್ಕನಹಳ್ಳಿ, ಕಗ್ಗಲೀಪುರದ ಗಿರಿಗೌಡನ ದೊಡ್ಡಿ ಮತ್ತು ಮುನಿನಗರ, ಶ್ರೀನಿವಾಸಪುರ ಮತ್ತು ಆದಿಪುರಗಳಲ್ಲಿ ವಿವಿಧ ಮಾದರಿಯ ಶಿಲಾಸಮಾಧಿಗಳು ಅಧಿಕ ಸಂಖ್ಯೆಯಲ್ಲಿ ಪತ್ತೆಯಾಗಿವೆ. ಕೆಲವು ಕಡೆಗಳಲ್ಲಿ ಆ ಕಾಲದ ಮಡಕೆ ಚೂರುಗಳು ದೊರೆತಿವೆ. ಕಬ್ಬಿಣ ಕಟ್ಟದ ಉಂಡೆಗಳು ದೊರೆತಿರುವ ಮಾದಿಪುರ ಆ ಲೋಹದ ವಸ್ತುಗಳ ತಯಾರಿಕಾ ಕೇಂದ್ರವಾಗಿತ್ತೆಂದು ಕಾಣುತ್ತದೆ.

ಪ್ರಾಚೀನ ವಾಣಿಜ್ಯ ಕೇಂದ್ರ

ಕ್ರಿಸ್ತವರ್ಷಾರಂಭ ಕಾಲಕ್ಕೆ ಬೆಂಗಳೂರು ಒಂದು ವಾಣಿಜ್ಯ ಕೇಂದ್ರವಾಗಿತ್ತೆಂದು ಕಾಣುತ್ತದೆ. ಇಲ್ಲಿ ಸ್ಥಳೀಯರ ಜೊತೆಗೆ ವಿದೇಶೀ ವ್ಯಾಪಾರವೂ ನಡೆಯುತ್ತಿತ್ತು ಎಂಬುದು ಇಲ್ಲಿ ದೊರೆತಿರುವ ರೋಮನ್ ನಾಣ್ಯಗಳಿಂದ ತಿಳಿದುಬರುತ್ತದೆ. ಮೊದಲಿಗೆ ಜಾಲಹಳ್ಳಿ ಮತ್ತು ಯಶವಂತಪುರಗಳಲ್ಲಿ ಕ್ರಿ. ಶ. ಒಂದನೆಯ ಶತಮಾನದ ರೋಮನ್ ಚಕ್ರವರ್ತಿಗಳಾದ ಆಗಸ್ಟಸ್ ಮತ್ತು ಟೈಬೀರಿಯಸ್‌ರ ನಾಣ್ಯಗಳು ದೊರೆತವು. ನಂತರ 1965ರಲ್ಲಿ ಬೆಂಗಳೂರು ವಿಮಾನ ನಿಲ್ದಾಣದ ವಿಸ್ತರಣೆ ಸಮಯದಲ್ಲೂ ಇದೇ ಕಾಲದ ರೋಮನ್ ನಾಣ್ಯಗಳು ದೊರೆತವು. ಅಂತರಾಷ್ಟ್ರೀಯ ಖ್ಯಾತಿಯ ಬೆಂಗಳೂರು ನಗರಕ್ಕೆ ಅಂದೇ ಅಡಿಪಾಯ ಹಾಕಿರುವಂತಿರುವುದು ಸೋಜಿಗದ ಸಂಗತಿ.

ಪೌರಾಣಿಕ ಸಂಗತಿಗಳು:

ಬೆಂಗಳೂರು ಹಾಗು ಸುತ್ತಮುತ್ತಲ ಪ್ರದೇಶಗಳು ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳ ಕಾಲಗಳಲ್ಲಿ ಪ್ರಮುಖ ಪಾತ್ರವಹಿಸಿದ್ದ ಬಗ್ಗೆ ಕಥಾನಕಗಳು ಪ್ರಚಲಿತವಿವೆ. ಬೆಂಗಳೂರು ದಂಡಕಾರಣ್ಯದ ಒಂದು ಭಾಗವಾಗಿತ್ತೆಂಬ ನಂಬಿಕೆ ಇದೆ. ರಾಮನಗರದ ಬಳಿಯ ರಾಮಗಿರಿ (ಬೆಟ್ಟಪ್ರದೇಶ) ಸುಗ್ರೀವನ ಸ್ಥಳವಾಗಿತ್ತಂತೆ. ನೆಲಮಂಗಲದ ಹೆಗ್ಗುಂದಕ್ಕೆ ರಾಮನ ಅಶ್ವಮೇಧಯಾಗದ ಕುದುರೆ ಬಂದಿತ್ತಂತೆ.

ಪಾಂಡವರು ಐಗಂಡಪುರ (ಇಂದಿನ ಐವರು ಕಂಡ ಪುರ)ಕ್ಕೆ ಬಂದಿದ್ದರಂತೆ. ಇದರ ಜ್ಞಾಪಕಾರ್ಥ ಇಲ್ಲಿ ಧರ್ಮೇಶ್ವರ ದೇವಾಲಯ ನಿರ್ಮಾಣವಾಯಿತು. ಭೀಮ ಮಾಗಡಿಯ ಮಾಕಳ್ಳಿಗೆ ಹೋಗಿದ್ದ ನೆನಪಿಗೆ ಭೀಮೇಶ್ವರ ದೇವಾಲಯ ನಿರ್ಮಿಸಿದ. ಮಹಾಭಾರತದ ಯಕ್ಷಪ್ರಶ್ನೆ ನಡೆದುದು ಹೊಸಕೋಟೆಯ ಕೊಂಡರಹಳ್ಳಿ ಸರೋವರದಲ್ಲಿ. ಮರಡವ್ಯ ಮುನಿಗಳು ಮಾಗಡಿಯಲ್ಲಿ ವಾಸ್ತವ್ಯವಿದ್ದರು. ಇದೆಲ್ಲವೂ ಆಯಾ ಸ್ಥಳಗಳ ಸ್ಥಳಪುರಾಣಗಳು ಹೇಳುವ ಇತಿಹಾಸ. ಇವುಗಳನ್ನು ಕೇವಲ ಪೌರಾಣಿಕ ಎಂದು ಅಲಕ್ಷಿಸದೆ ಈ ಭಾಗದ ಪ್ರಾಚೀನತೆಯನ್ನು ಅಳೆಯಲು ಇವು ಎಷ್ಟು ಸಹಕಾರಿ ಎಂದು ಆಲೋಚಿಸಿದರೆ ನಮ್ಮ ಅಧ್ಯಯನಕ್ಕೆ ಅನುಕೂಲವಾಗುವ ಹೊಸಮಾರ್ಗಗಳು

ಲಭಿಸುವ ಅವಕಾಶಗಳಿವೆ. ಆಧಾರಗಳು ಇಲ್ಲದ ಸಮಯದಲ್ಲಿ ಪೌರಾಣಿಕ ಕಥಾನಕಗಳು ಪರೋಕ್ಷ ಆಧಾರಗಳನ್ನು ಒದಗಿಸುತ್ತವೆ. ಇಲ್ಲಿ ಆ ಪುರಾಣಗಳ ಕಾಲದ ಕಥಾನಕಗಳು ಘಟಿಸಿವೆ ಎಂಬ ಭ್ರಮೆ ಇರಬೇಕಾದುದೇನಿಲ್ಲ.

ಪಾಂಡವರ ಕಥಾನಕಕ್ಕೆ ಪೂರಕವಾಗಿ ಇಲ್ಲಿ ಒಂದು ದೃಷ್ಟಾಂತ ನೀಡಬಹುದು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಾಂಡವರಕಲ್ಲು ಎಂಬ ಸ್ಥಳಗಳಿವೆ. ಇಲ್ಲೆಲ್ಲಾ ಬೃಹತ್ ಶಿಲಾಯುಗದ ಶಿಲಾಗೋರಿಗಳು ದೊರೆತಿವೆ. ಒಂದು ಕಡೆಯಂತೂ ಇದರ ಸಂಖ್ಯೆ ಅಪಾರವಾಗಿದೆ.

ಇದೇ ರೀತಿಯಲ್ಲಿ ಮಹಾರಾಷ್ಟ್ರದ ಕೊಂಕಣ ತೀರದ ಶಾಸನವೊಂದರಲ್ಲಿ ದಾನ ಭೂಮಿಯ ಗಡಿಗಳನ್ನು ತಿಳಿಸುವಾಗ 'ಮೋರಿಯರ ಮನೆ' ಉಲ್ಲೇಖಿದೆ. ಇದು ಮೌರ್ಯರನ್ನು ನೆನಪಿಗೆ ತರುವಂತಹ ಹೆಸರು. ಆದರೆ ಸ್ಥಳಪರಿಶೀಲನೆ ಸಂದರ್ಭದಲ್ಲಿ ಇಲ್ಲಿ ಕಂಡುಬಂದದ್ದು ಬೃಹತ್ ಶಿಲಾಯುಗದ ಸಮಾಧಿಗಳು. ಹಾಗಾಗಿ ಬೆಂಗಳೂರು ಮತ್ತು ಅದರ ಸುತ್ತಲೂ ಇರುವ ಪ್ರದೇಶಗಳಲ್ಲಿ ಹೆಣೆಯಲ್ಪಟ್ಟಿರುವ ಪೌರಾಣಿಕ ಸ್ಥಳ ಪುರಾಣಗಳನ್ನು ಪ್ರತ್ಯೇಕವಾಗಿ ಕ್ಷೇತ್ರಕಾರ್ಯಸಹಿತ ಪರಿಶೀಲಿಸುವುದು ಸೂಕ್ತ.

ಪರಿಸ್ಥಿತಿಯ ಅವಲಕೋಕನ

1956–66ರ ನಡುವಿನ ಕಾಲದಲ್ಲಿ ಬೆಂಗಳೂರು ಇಂದಿನಂತಿರಲಿಲ್ಲ. ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದರೂ ನಗರದ ಸುತ್ತಾ ಇದ್ದ ಗುಡ್ಡಗಳೂ, ಕಣಿವೆಗಳೂ ಸುಲಭವಾಗಿ ಗೋಚರಿಸುತ್ತಿದ್ದವು. ದಕ್ಷಿಣ ಮತ್ತು ನೈಋತ್ಯ ಭಾಗಗಳಲ್ಲಿನ ನರಸಿಂಹ ರಾಜ ಕಾಲೋನಿಯಿಂದ ಮುಂದೆ ತ್ಯಾಗರಾಜನಗರ ಆಗಷ್ಟೇ ಮೊಳಕೆಯೊಡಿತ್ತು. ಅಲ್ಲಿಂದ ಮುಂದೆ ಮೈಸೂರು ರಸ್ತೆ ದಾಟಿ ಪಶ್ಚಿಮಕ್ಕೆ ಈಗ ತುಮಕೂರು ಮತ್ತು ಮೈಸೂರು ರಸ್ತೆಗಳನ್ನು ಸಂಪರ್ಕಿಸುವ ಹೆದ್ದಾರಿ ನಿರ್ಮಾಣವಾಗಿದೆ. ಅಂದು ಇದರ ಅವಶ್ಯಕತೆ ತೀರ ಕೆಳಹಂತದಲ್ಲಿತ್ತು. ಈ ರಸ್ತೆಯ ಪೂರ್ವ ಮತ್ತು ಪಶ್ಚಿಮ ಭಾಗಗಳುದ್ದಕ್ಕೂ ಹಲವಾರು ಗ್ರಾಮ ಉಪಗ್ರಾಮಗಳಿದ್ದವು. ರಾಜಾಜಿನಗರ ಒಂದು ಬೃಹತ್ ಬಡಾವಣೆಯಾಗಿ ರೂಪುಗೊಳ್ಳುತ್ತಿತ್ತು. ಉಳಿದಂತೆ ಈಗ ಹಳ್ಳಿಗಳು, ಹೊಸಹೊಸ ಬಡಾವಣೆಗಳು ರೂಪುಗೊಂಡಿವೆ. ಅಷ್ಟೇ ಇಲ್ಲ ಅವು ಶೀಘ್ರಗತಿಯಲ್ಲಿ ಬೆಳದೂ ಇವೆ. ಹಾಗಾಗಿ ಈಗ್ಗೆ 50–55 ವರ್ಷಗಳ ಹಿಂದಿನ ಚಿತ್ರಣ ಯೋಚಿಸಲೂ ಸಾಧ್ಯವಿಲ್ಲ. ಈ ಭಾಗ ಹೆಚ್ಚಾಗಿ ಸಣ್ಣ ಮತ್ತು ಮಧ್ಯಮ ಗಾತ್ರದ ಕಲ್ಲುಗುಂಡುಗಳು ಇಟ್ಟ ತ್ರಿಕೋನಾಕೃತಿಯ ನಿರ್ಮಿತಿಗಳೂ ಇದ್ದವು. ಕೆಲವು ಕಡೆಗಳಲ್ಲಿ ನಡೆಯುತ್ತಿದ್ದ ಪ್ರಗತಿ ಕಾರ್ಯದಿಂದಾಗಿ ಈ ಕುರುಹುಗಳು ಭಗ್ನಗೊಂಡು ಚೆಲ್ಲಾಪಿಲ್ಲಿಯಾಗಿದ್ದವು. ಆದರೂ ಸೂಕ್ಷ್ಮ ನೋಟಕ್ಕೆ ಅಲ್ಲಿದ್ದ ಪ್ರಾಚ್ಯಾವಶೇಷದ ಕಡೆ ಬೊಟ್ಟು ಮಾಡುವಂತಿದ್ದುವು. ನೆಲಮಂಗಲದ ಪಶ್ಚಿಮಕ್ಕೆ ಹೋದರೆ ಸುತ್ತಮುತ್ತಲ ಹೊಲಗಳಲ್ಲಿ ಈ ರೀತಿಯ ರಚನೆಗಳು ಇನ್ನೂ ನೋಡ ಸಿಗುತ್ತವೆ. ಆದರೆ ನಗರಭಾಗದಲ್ಲಿ ಆಧುನಿಕ ಅಭಿವೃದ್ಧಿ ಕಾರ್ಯದಿಂದಾಗಿ ಇದ್ದಿರ ಬಹುದಾದ ಕುರುಹುಗಳು ಮಾಯವಾಗಿವೆ. ಶುದ್ಧನೀರು ನಿಂತು ಹರಿಯುತ್ತಿದ್ದ ಕೆಲವು ಸಣ್ಣಹಳ್ಳಗಳು ಈಗ ನಗರದ ಕೊಳಚೆ ನೀರು ಹರಿಯುವ ಚರಂಡಿಗಳಾಗಿವೆ. ಕೆಲವು ಕಡೆ ಅವು ಹಾಕಿದ ಹೊಸಮಣ್ಣಿನಡಿ ಸೇರಿಹೋಗಿವೆ. ಅಂದು ಈ ಭಾಗದಲ್ಲಿ ವ್ಯವಸ್ಥಿತವಾದ ಶೋಧಕಾರ್ಯ ನಡೆದಿದ್ದರೆ ಖಂಡಿತವಾಗಿಯೂ ಗಹನವಾದ ಸಂಗತಿಗಳು ಬೆಳಕಿಗೆ ಬರುತ್ತಿದ್ದವು. ಈಗ ಅವುಗಳು ಅಭಿವೃದ್ಧಿಯ ಕಾರ್ಯಗಳಿಂದಾಗಿ ಶಾಶ್ವತವಾಗಿ ನಷ್ಟವಾಗಿವೆ.

ಪ್ರತಿಕ್ರಿಯೆ:

ಈ ಪ್ರಬಂಧ ಮಂಡನೆಯಾದಾಗ ಬಂದ ಪ್ರತಿಕ್ರಿಯೆಗಳಲ್ಲಿ ಎರಡನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ.

1. ಬೃಹತ್ ಬೆಂಗಳೂರಿನ ಎಲ್ಲೆಡೆ ಬುಲ್ಡೋಜರ್ ಸಂಸ್ಕೃತಿ ರಾರಾಜಿಸುತ್ತಿರುವಾಗ ಪ್ರಾಚೀನ ಕುರುಹುಗಳನ್ನು ಹುಡುಕುವುದು ಕಷ್ಟ. ಅದು ನಾಶವಾಗಿರುವುದಕ್ಕಾಗಿ ನಾವು ಪರಿತಪಿಸಬಹುದು. ಆದರೆ ಅದನ್ನು ಗೊತ್ತಿದ್ದೋ, ಗೊತ್ತಿಲ್ಲದೆಯೋ ನಾಶ ಪಡಿಸುವುದು ಮಾತ್ರ ಇಂದಿನ ಜೀವನದ ವಾಸ್ತವತೆ ಎಂದು ಗೋಷ್ಠಿಯ ಅಧ್ಯಕ್ಷರು ಹೇಳಿದರು.

2. ಗೋಷ್ಠಿಯಲ್ಲಿ ಉಪಸ್ಥಿತರಿದ್ದ ವಿದ್ವಾಂಸರೊಬ್ಬರಿಂದ ವಿಭಿನ್ನ ರೀತಿಯ ಪ್ರತಿಕ್ರಿಯೆ ಬಂತು.

ಪ್ರಕರಣ ನನ್ನ ಮನಸ್ಸಿನಲ್ಲಿ ಅಲ್ಲಿಗೆ ಮುಗಿಯಲಿಲ್ಲ. ನನ್ನ ಅಭಿಪ್ರಾಯಗಳನ್ನು ಹಲವು ಬಾರಿ ಪರಿಶೀಲಿಸಿದ ನಂತರ ಅ. ಸುಂದರ ಅವರಲ್ಲಿ ಕೆಳಗಿನಂತೆ ನನ್ನ ಮನವಿಯನ್ನಿಟ್ಟೆ.

"Please let me know whether you have made any survey of the Bangalore city stretching from Tyagarajanagara, Banasankari, Chikkalasandra, Katriguppe, Avalahalli and Byatarayana Pura in the South and Guddada halli, Vijayanagara, Cholurupalya, Vidyaranya Nagara. Dasarahalli, Ketamaranahalli, Laggere and Nagapura int eh West that leads to Yashavantapura and Jalahalli in the North. I concentrated on the Physical remains of the region which I casually came across between the years 1956 and 1966 about which I found no information published so far. I would be highly obliged if you can throw some light on this based on your survey. Kindly excuse me if I am troubling you in any way". ನನ್ನ ಈ ವಿನಂತಿಗೆ ಡಾ. ಅ. ಸುಂದರ ಅವರು ನೀಡಿದ ಉತ್ತರ ಕೆಳಗಿನಂತಿದೆ.

"With regard to my knowledge of the archaeology of the region in Bangalore district, it is very poor since I have not carried out any field work in Southern Karnataka, let alone Bangalore district. Hence I cannot give you any information on the archaeology of the region other than published about which you already know. In your presentation you made references to the prevailing oral traditions of the region. Can you please give an account of the tradition in relation with the archaeological remains of the region. A paper of the sort will be quite interesting and I am sure you are attempting the same. Of late I am interested in such oral and written traditions in relation with archaeology".

ಸ್ಥಳ ಪುರಾಣಗಳ ತುಲನಾತ್ಮಕ ಅಧ್ಯಯನ ಹಿಂದೆಂದಿಗಿಂತಲೂ ಈಗ ಹೆಚ್ಚು ಪ್ರಸ್ತುತ ಎಂಬ ನನ್ನ ಭಾವನೆಗೆ ವಿದ್ವಾಂಸರ ಮನ್ನಣೆ ಮತ್ತು ಅಭಿಲಾಷೆ ಎರಡೂ ಇದೆ ಎಂಬುದು ಸುಂದರ ಅವರ ಪತ್ರದಲ್ಲಿ ನಿಚ್ಚಳವಾಗಿದೆ.

ಪರಾಮರ್ಶನ ಗ್ರಂಥಗಳು

1. Mysore Gazetteer- Hayavadana Rao (1930)
2. District Gazetteer – Bangalore Urban
3. ಸೂರ್ಯನಾಥ ಕಾಮತ್ (ಮತ್ತು ಇತರರು) ಸಂ. ಬೆಂಗಳೂರು ದರ್ಶನ – ಎರಡು ಸಂಪುಟಗಳಲ್ಲಿ
4. ಇತಿಹಾಸ ದರ್ಶನ – ಸಂಪುಟ 13 ಮತ್ತು 14 (ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಂಚಿಕೆ)

7. ಬೆಂಗಳೂರಿನ ಪ್ರಾಚೀನತೆ ಹಾಗೂ ಪ್ರಾಚೀನ ಬೆಂಗಳೂರಿನ ಅಭಿಜ್ಞೆ

ಡಾ. ಎಂ. ಜಿ. ಮಂಜುನಾಥ್

ಬೆಂಗಳೂರು ಸಾವಿರಾರು ವರ್ಷಗಳಷ್ಟು ಪುರಾತನವಾದ ಊರು. ಈ ಊರಿನ ಪ್ರಾಚೀನತೆಯನ್ನು ಕುರಿತು ವಿವೇಚಿಸುವ ಮೊದಲು ಈ ಪ್ರದೇಶದಲ್ಲಿನ ಜನವಸತಿಯ ಪ್ರಾಚೀನತೆಯನ್ನು ಕುರಿತು ಗಮನಿಸೋಣ. ಈ ಪ್ರದೇಶದಲ್ಲಿ ಕ್ರಿ. ಪೂ. ಹತ್ತು ಸಾವಿರ ವರ್ಷಗಳ ಕಾಲಘಟ್ಟದಿಂದ ಅಂದರೆ ಹನ್ನೆರಡು ಸಾವಿರ ವರ್ಷಗಳಷ್ಟು ಪ್ರಾಚೀನ ಕಾಲದಿಂದಲೂ ಜನವಸತಿಯು ಅಸ್ತಿತ್ವದಲ್ಲಿದ್ದುದಕ್ಕೆ ಆಧಾರಗಳಿವೆ.

ಸೂಕ್ಷ್ಮ ಶಿಲಾಯುಗಕ್ಕೆ (ಮೈಕ್ರೋಲಿಥಿಕ್ ಏಜ್) ಸೇರಿದ ಬೆಣಚು ಕಲ್ಲಿನ (ಕ್ವಾರ್ಟ್ಜ್) ಹಲವಾರು ಆಯುಧಗಳು ಬೆಂಗಳೂರಿನ ರೇಸ್‌ಕೋರ್ಸ್ ಬಳಿ 1896ರಲ್ಲಿ ಪತ್ತೆಯಾದವು. ಜಾಲಹಳ್ಳಿಯಲ್ಲಿ 1938ರಲ್ಲಿ, ಹೆಚ್. ಎ. ಎಲ್. ಫ್ಯಾಕ್ಟರಿಯ ಬಳಿ 1945ರಲ್ಲಿ, ನಂತರ ಚೌಡಸಂದ್ರದಲ್ಲಿ ಪತ್ತೆಯಾದವು. ಈ ಪ್ರದೇಶದಲ್ಲಿ ಕ್ರಿ. ಪೂ. ಹತ್ತು ಸಾವಿರ ವರ್ಷಗಳಷ್ಟು ಹಿಂದಿನ ಕಾಲಘಟ್ಟಕ್ಕೆ ಸೇರಿದ ಶಿಲಾಯುಗದ ಜನವಸತಿಯು ಇದ್ದುದು ಇದರಿಂದ ತಿಳಿದುಬರುತ್ತದೆ.[1]

ನಂತರ ಕ್ರಿ. ಪೂ. ಎರಡು ಸಾವಿರದ ಐದುನೂರು ಅಂದರೆ ನಾಲ್ಕು ಸಾವಿರದ ಐದುನೂರು ವರ್ಷಗಳಷ್ಟು ಪ್ರಾಚೀನವಾದ ನವಶಿಲಾಯುಗಕ್ಕೆ (ನಿಯೋಲಿಥಿಕ್ ಏಜ್) ಸೇರಿದ ಕಲ್ಲಿನ ಕೊಡಲಿಗಳು ಬೆಂಗಳೂರು ನಗರಕ್ಕೆ ಅಂಟಿಕೊಂಡಂತಿರುವ ಕೆಂಗೇರಿಯಲ್ಲಿ, ಬೆಂಗಳೂರು ವಿಶ್ವ ವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನ ಕಣಿವೆಯಲ್ಲಿ, ಬನ್ನೇರು ಘಟ್ಟದಲ್ಲಿ ಮುಂತಾದ ಸ್ಥಳಗಳಲ್ಲಿ ದೊರೆತಿರುವುದರಿಂದ ಈ ಪ್ರದೇಶದಲ್ಲಿ ನವಶಿಲಾಯುಗದ ಜನರೂ ಮುಂದೆ ಸಹ ವಾಸಿಸುತ್ತಿದ್ದುದು ತಿಳಿದುಬರುತ್ತದೆ.

ಕ್ರಿ. ಪೂ. ಸುಮಾರು 1200ರ ಕಾಲಘಟ್ಟಕ್ಕೆ ಅಂದರೆ ಮೂರು ಸಾವಿರದ ಇನ್ನೂರು ವರ್ಷಗಳಷ್ಟು ಪ್ರಾಚೀನ ಕಾಲಕ್ಕೆ ಸೇರಿದ ಬೃಹತ್ ಶಿಲಾಯುಗ ಅಥವಾ ಕಬ್ಬಿಣಯುಗಕ್ಕೆ ಸೇರಿದ ಬೃಹತ್ ಶಿಲಾಸಮಾಧಿಗಳು ಬೆಂಗಳೂರಿನ ಜಡಿಗೇನಹಳ್ಳಿ, ಮಾಗೊಂಡನಹಳ್ಳಿ, ಬೆಳ್ಳಂದೂರು, ಕೋರಮಂಗಲ, ಬನ್ನೇರುಘಟ್ಟ, ಲಿಂಗರಾಜಪುರದ ಹತ್ತಿರವಿರುವ ಕಣ್ಣೂರು, ಕೆಂಗೇರಿ ಹತ್ತಿರದ ಚಿನ್ನಕುರ್ಚಿ ಮುಂತಾದ ಸ್ಥಳಗಳಲ್ಲಿ ಪತ್ತೆಯಾಗಿವೆ.[2]

ಬೆಂಗಳೂರಿನ ಯಶವಂತಪುರ ಹಾಗೂ ಎಚ್. ಎ. ಎಲ್. ಕಾರ್ಖಾನೆಯ ಹತ್ತಿರ ರೋಮನ್ ದೊರೆಗಳಾದ ಅಗಸ್ಟಸ್, ಟೈಬೀರಿಯಸ್, ಕಾಲಿಗುಲ ಮುಂತಾದವರ ಬೆಳ್ಳಿನಾಣ್ಯಗಳು ಪತ್ತೆಯಾಗಿವೆ. ಈ ನಾಣ್ಯಗಳು ಕ್ರಿ. ಪೂ. 21 ರಿಂದ ಕ್ರಿ. ಶ. 51ರವರೆಗೆ ಮುದ್ರಿತವಾದ ನಾಣ್ಯಗಳಾಗಿದ್ದುದರಿಂದ ಕ್ರಿ. ಪೂ. ಒಂದನೆಯ ಶತಮಾನದಿಂದ ಕ್ರಿ. ಶ. ಒಂದನೆಯ ಶತಮಾನದ ಕಾಲಘಟ್ಟದಲ್ಲಿ ಅಂದಿನ ಬೆಂಗಳೂರಿನ ಪ್ರದೇಶದ ಜನರು ರೋಮನ್ನರೊಂದಿಗೆ ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದರೆಂಬುದು ತಿಳಿದುಬರುತ್ತದೆ.[3]

ಕ್ರಿ. ಶ. 2–3ನೆಯ ಶತಮಾನಕ್ಕೆ ಸೇರಿದ ಶಾತವಾಹನರ ಕಾಲದ ಬೌದ್ಧ ಚೈತ್ಯಾಲಯವೊಂದರ ಅವಶೇಷಗಳು ಹಾಗೂ ಮಣ್ಣಿನ ಮುದ್ರೆಯ ಮೇಲೆ ಬರಹವನ್ನು ಹೊಂದಿರುವ ಮುನ್ನೂರಕ್ಕೂ ಹೆಚ್ಚಿನ ಸಂಖ್ಯೆಯ ಹರಕೆಯ ಸ್ತೂಪಗಳು ದೊಡ್ಡಬಳ್ಳಾಪುರ ತಾಲ್ಲೂಕಿನ ರಾಜಘಟ್ಟದಲ್ಲಿ ಪತ್ತೆಯಾಗಿವೆ. ಈ ಹರಕೆಯ ಸ್ತೂಪಗಳ ಮೇಲೆ 'ಯೇ ಧಮಾ ಹೇತುಪ್ಪಭವಾ ತೇಸ ಹೇತು ತಥಾಗತೋ ಆ ಹೇತೇಸಚಯೋ ನಿರೋಧೋ ಏವವಾದೀ ಮಹಾಸಮಣೋ' ಎಂಬ ಬರಹವಿದೆ.[4]

ಈ ಎಲ್ಲ ಆಧಾರದಿಂದ ಕ್ರಿ. ಪೂ. ಹತ್ತು ಸಾವಿರ ವರ್ಷಗಳು ಅಂದರೆ ಸುಮಾರು ಹನ್ನೆರಡು ಸಾವಿರ ವರ್ಷಗಳಷ್ಟು ಪ್ರಾಚೀನ ಕಾಲದಿಂದಲೂ ನಿರಂತರವಾಗಿ ಈ ಪ್ರದೇಶದಲ್ಲಿ ಜನವಸತಿ ಇತ್ತೆಂದು ಹೇಳಬಹುದು.

ಬೆಂಗಳೂರು ಎಂಬ ಊರಿನ ಪ್ರಾಚೀನತೆ

ಬೆಂಗಳೂರು ಎಂಬ ಗ್ರಾಮ ಕ್ರಿ. ಶ. 890 ಕ್ಕಿಂತ ಮೊದಲೇ ಅಸ್ತಿತ್ವದಲ್ಲಿತ್ತು ಎಂಬುದು ಗಮನಾರ್ಹ ಅಂಶ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಗ್ರಾಮದ ಒಂದು ಶಾಸನದಲ್ಲಿ ಬೆಂಗಳೂರಿನ ಉಲ್ಲೇಖವಿದೆ ಎಂದು ಆರ್. ನರಸಿಂಹಾಚಾರ್ ಅವರು ಮೊದಲು ಪತ್ತೆ ಹಚ್ಚಿದರು. ಆರ್. ನರಸಿಂಹಾಚಾರ್ ಅವರು ನೀಡಿರುವ ಬೇಗೂರಿನ ಶಾಸನದ ಪಾಠ ಈ ಕೆಳಗಿನಂತಿದೆ.

1. ಶೀಮತ್‌ನಾಗತ
2. ರನ ಮನೆವಗ
3. ತಿ ಪೆರ್ಮ್ವೊಣಶೆಟ್ಟಿ
4. ಬೆಂಗಳೂರ ಕಾಳೆ
5. ಗದೊಳ್ ನಾಗ
6. ತರನ ಮಗಂ ಬುಟ್ಟಣ
7. ಪತಿ ಸತ್ತಂ 5

ಎಂಬ ಪಾಠವನ್ನು ಆರ್. ನರಸಿಂಹಾಚಾರ್ ಅವರು ನೀಡಿದ್ದಾರೆ. ಆದರೆ ಈ ಶಾಸನವನ್ನು ಸ್ವಲ್ಪ ತಪ್ಪಾಗಿ ಓದಲಾಗಿದೆ. ಸರಿಯಾದ ಪಾಠ ಈ ಕೆಳಗಿನಂತಿದೆ.

1. ಶ್ರೀಮತ್ ನಾಗತ
2. ರನ ಮನೆವಗ
3. ತಿರಪೆರ್ಮ್ಮ್ಯಣ್ಣಶೆಟ್ಟಿ
4. ಬೆಂಗಳೂರ ಕಾಳೆ
5. ಗದೊ (ತಿ)ಳ್ನಾಗ
6. ತರನಮಗಂ ಬುಟ್ಟಣ
7. ದತ ಸತ್ತಂ

ಇದು ಬೆಂಗಳೂರನ್ನು ಉಲ್ಲೇಖಿಸುವ ಅತ್ಯಂತ ಪ್ರಾಚೀನ ಉಪಲಬ್ದ ಶಾಸನ. ಇಲ್ಲಿ ಬೆಂಗಳೂರು ಎಂಬ ಉಲ್ಲೇಖ ಕಂಡುಬರುತ್ತದೆ.

ಪ್ರಾಚೀನ ಬೆಂಗಳೂರಿನ ಅಭಿಜ್ಞೆ

ಪ್ರಾಚೀನ ಬೆಂಗಳೂರು ಎಲ್ಲಿತ್ತು ಎಂಬ ಬಗ್ಗೆ ಹಲವಾರು ಮಂದಿ ವಿದ್ವಾಂಸರು ಹಲವು ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸಿ. ಹಯವದನರಾವ್ ಅವರು ಮೈಸೂರು ಗ್ಯಾಸೆಟಿಯರ್‌ನಲ್ಲಿ 'old Bangalore situated to the north of Kodigehalli' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅಂದರೆ ಬೇಗೂರು ಶಾಸನೋಕ್ತ 'ಹಳೆಯ ಬೆಂಗಳೂರು ಕೊಡಿಗೆ ಹಳ್ಳಿಯಿಂದ ಉತ್ತರಕ್ಕೆ ಇತ್ತು' ಎಂಬುದು ಅವರ ಅಭಿಪ್ರಾಯ.

ಡಾ. ಜೆ. ವಿ. ಗಾಯತ್ರಿ ಅವರು ತಮ್ಮ ಪಿ.ಎಚ್.ಡಿ ಮಹಾಪ್ರಬಂಧದಲ್ಲಿ 'The Old village of Bangalore was situated to the south of Yelahanka' ಎಂದು ಅಭಿಪ್ರಾಯ ಪಟ್ಟಿದ್ದಾರೆ.[6] ಅಂದರೆ ಹಳೆಯ ಬೆಂಗಳೂರು ಗ್ರಾಮವು ಯಲಹಂಕದ ದಕ್ಷಿಣ ದಿಕ್ಕಿನಲ್ಲಿತ್ತು ಎಂಬುದು ಅವರ ಅಭಿಪ್ರಾಯ. ಆದರೆ ಕೊಡಿಗೆ ಹಳ್ಳಿಯ ಸಮೀಪದಲ್ಲಿ ಕೊಡಿಗೆ ಹಳ್ಳಿಯಿಂದ ಉತ್ತರಕ್ಕೆ ಅಥವಾ ಯಲಹಂಕದಿಂದ ದಕ್ಷಿಣಕ್ಕೆ ಹಳೆಯ ಬೆಂಗಳೂರು ಗ್ರಾಮ ಇದ್ದುದಕ್ಕೆ ಯಾವ ಆಧಾರಗಳೂ ಇಲ್ಲ.

ಡಾ. ಎಚ್. ಎಸ್. ಗೋಪಾಲರಾವ್[7] ಅವರು ಬೆಂಗಳೂರು ಎಂಬ ಹೆಸರಿನ ಮೂರು ಊರುಗಳು ಅಸ್ತಿತ್ವದಲ್ಲಿದ್ದವು ಎಂಬ ಅರ್ಥ ಬರುವಂತೆ ಬರೆದಿದ್ದಾರೆ. 'ಬೇಗೂರಿನ ಶಾಸನಗಳು ಬೆಂಪೂರು ಮತ್ತು ಬೆಂಗಳೂರನ್ನು ಕ್ರಿ. ಶ. 9ನೆಯ ಶತಮಾನದ ಅಂತ್ಯಕಾಲಕ್ಕೇ ಪ್ರಸ್ತಾಪಿಸುತ್ತದೆ. ಆ ಸ್ಥಳದ ಶಾಸನಗಳಲ್ಲದೆ ಮತ್ತಾವ ಶಾಸನವೂ ಆ ಕಾಲದಲ್ಲಿ ಬೆಂಗಳೂರನ್ನು ಪ್ರಸ್ತಾಪಿಸುವುದಿಲ್ಲವಾದ್ದರಿಂದ ಶಾಸನಗಳಲ್ಲಿ ಉಲ್ಲೇಖವಾಗಿರುವ ಬೆಂಗಳೂರು ಬೇಗೂರೇ ಆಗಿರಬೇಕು ಅಥವಾ ಸಮೀಪದಲ್ಲೇ ಇದ್ದಿರಬೇಕು.

ನಮಗೆ ತಿಳಿದಿರುವ ಮತ್ತೊಂದು ಬೆಂಗಳೂರೆಂದರೆ ಹಳೆಯ ಬೆಂಗಳೂರು. ಬೇಗೂರಿನ ಶಾಸನಗಳಲ್ಲಿ ಪ್ರಸ್ತಾಪಿತವಾಗಿರುವ ಬೆಂಗಳೂರು ಮತ್ತು ಕೊಡಿಗೆಹಳ್ಳಿಗೆ ಸಮೀಪದ ಬೆಂಗಳೂರು ಒಂದೇ ಆಗಿರಲು ಸಾಧ್ಯವಿಲ್ಲ ಎಂದು ಭಾವಿಸಲಾಗಿದೆ. ಬೇಗೂರಿನ ಸಮೀಪ ಇದ್ದ ಬೆಂಗಳೂರು ಅತ್ಯಂತ ಪ್ರಾಚೀನವಾದದ್ದು. ಕೊಡಿಗೇಹಳ್ಳಿಗೆ ಸಮೀಪ ಇದ್ದ ಹಳೆಯ ಬೆಂಗಳೂರು ಆ ನಂತರದ ಕಾಲದ ಗ್ರಾಮವಾಗಿರಬೇಕು. ಹಾಲಿ ಇರುವ ಬೆಂಗಳೂರು ಐತಿಹ್ಯಗಳ ಮೂಲಕ ತಿಳಿದಿರುವಂತೆ ಕ್ರಿ. ಶ. ಸುಮಾರು 1537ರಲ್ಲಿ ಹಿರಿಯ ಕೆಂಪೇಗೌಡ ನಿರ್ಮಿಸಿದ್ದು ಎಂದು ಗೋಪಾಲ್‌ರಾವ್ ಅಭಿಪ್ರಾಯ ಪಟ್ಟಿದ್ದಾರೆ.[8]

ಆದರೆ ಡಾ. ಎಚ್. ಎಸ್. ಗೋಪಾಲರಾವ್ ಅವರ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲ, ಬೆಂಗಳೂರು ಎಂಬ ಹೆಸರಿನ ಮೂರು ಊರುಗಳು ಅಸ್ತಿತ್ವದಲ್ಲಿದ್ದುದಕ್ಕೆ ಯಾವ ಆಧಾರಗಳೂ ಇಲ್ಲ. ಬೇಗೂರೇ ಪ್ರಾಚೀನ ಬೆಂಗಳೂರು ಆಗಿರಬೇಕು ಎಂಬುದಕ್ಕೂ ಯಾವ ಆಧಾರವೂ ಇಲ್ಲ. ಕೊಡಿಗೆಹಳ್ಳಿಯ ಸಮೀಪದಲ್ಲಿ ಬೆಂಗಳೂರು ಎಂಬ ಹೆಸರಿನ ಒಂದು ಊರು ಇದ್ದುದಕ್ಕೂ ಯಾವ ಆಧಾರಗಳೂ ಇಲ್ಲ. ಹಾಗಾದರೆ ಬೇಗೂರು ಶಾಸನೋಕ್ತ ಬೆಂಗಳೂರು ಯಾವುದು? ಅದು ಎಲ್ಲಿತ್ತು ಎಂಬ ಪ್ರಶ್ನೆಗಳು ಉದ್ಭವವಾಗುತ್ತದೆ. ಈ ಪ್ರಶ್ನೆಗಳಿಗೆ ಶಾಸನಗಳಲ್ಲಿಯೇ ಉತ್ತರಗಳು ದೊರೆಯುತ್ತವೆ.

ಬೆಂಗಳೂರಿನ ಮಡಿವಾಳದ ಸೋಮೇಶ್ವರ ದೇವಸ್ಥಾನದಲ್ಲಿನ ಕ್ರಿ. ಶ. 1247ರ ಒಂದು ತಮಿಳು ಶಾಸನದಲ್ಲಿ ಬೆಂಗಳೂರಿನ ದೊಡ್ಡ ಕೆರೆಯ ಕೆಳಗೆ 32 ಖಂಡುಗ ಭತ್ತ ಬೆಳೆಯಬಹುದಾದಷ್ಟು ಗದ್ದೆಯನ್ನು ವೆಪ್ಪೂರಿನ ಪೆಮ್ಮಟ್ಟಿಯಾರ್ ಎಂಬುವರು ಸೋಮೇಶ್ವರ ದೇವಾಲಯಕ್ಕೆ ದಾನಮಾಡಿದ ವಿವರಗಳಿವೆ.[9] ಪ್ರಸ್ತುತ ಶಾಸನೋಕ್ತ ವೆಂಗಳೂರು ಬೇಗೂರು ಶಾಸನೋಕ್ತ ಬೆಂಗಳೂರು ಎರಡೂ ಒಂದೇ ಆಗಿವೆ. ಈ ಶಾಸನೋಕ್ತ ವೆಪ್ಪೂರು ಹಾಗೂ ಬೇಗೂರು ಎರಡೂ ಒಂದೇ ಆಗಿವೆ.

ಮಡಿವಾಳವು ಬೇಗೂರಿನಿಂದ ಸುಮಾರು 4 ಕಿ. ಮೀ ದೂರದಲ್ಲಿದೆ. ಮಡಿವಾಳದ ಕೆರೆಯ ಕೆಳಗಿನ ಗದ್ದೆಗಳೇ ಮಡಿವಾಳದ ಸೋಮೇಶ್ವರನಿಗೆ ದಾನವಾಗಿ ದೊರೆತಿದ್ದ ಗದ್ದೆಗಳು. ಆ ಗದ್ದೆಗಳು ಭೂಸುಧಾರಣಾ ಕಾಯ್ದೆ ಜಾರಿಗೆ ಬರುವವರೆಗೂ ಸೋಮೇಶ್ವರನ ದೇವಾಲಯದ ಅರ್ಚಕರ ವಶದಲ್ಲಿಯೇ ಇದ್ದವು. ಆದ್ದರಿಂದ ಮಡಿವಾಳ ಶಾಸನೋಕ್ತ ವೆಂಗಳೂರು ಹಾಗೂ ಬೇಗೂರು ಶಾಸನೋಕ್ತ ಬೆಂಗಳೂರು ಇಂದಿನ ಮಡಿವಾಳ ಪ್ರದೇಶದಲ್ಲಿಯೇ ಇತ್ತೆಂಬುದಾಗಿ ಖಚಿತವಾಗುತ್ತದೆ.

ಯಲಹಂಕ ಪ್ರಭುಗಳು ಹಾಗೂ ಬೆಂಗಳೂರಿನ ಸಂಬಂಧ

ಒಂದನೆಯ ಕೆಂಪೇಗೌಡರು ಕ್ರಿ. ಶ. 1537ರಲ್ಲಿ ಬೆಂಗಳೂರು ಪಟ್ಟಣವನ್ನು ಸ್ಥಾಪಿಸಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು ಎಂಬುದಾಗಿ ಬಹುತೇಕ ಎಲ್ಲಾ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಅವರೆಲ್ಲರ ಪ್ರಕಾರ ಯಲಹಂಕ ನಾಡಪ್ರಭುಗಳೆಲ್ಲರೂ ಮೊದಲಿಗೆ ಯಲಹಂಕದಿಂದಲೇ ರಾಜ್ಯಭಾರ ಮಾಡುತ್ತಿದ್ದರು. ಒಂದನೇ ಕೆಂಪೇಗೌಡರು ಬೆಂಗಳೂರು[10] ಪಟ್ಟಣವನ್ನು ನಿರ್ಮಿಸಿದ ನಂತರ ಬೆಂಗಳೂರಿಗೆ ತಮ್ಮ ರಾಜಧಾನಿಯನ್ನು ವರ್ಗಾಯಿಸಿದರು ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಆದರೆ ಕೆಂಪೇಗೌಡರ ತಂದೆ ಕೆಂಪನಂಜೇಗೌಡರ ಕಾಲದಲ್ಲಿಯೇ ಬೆಂಗಳೂರು ಯಲಹಂಕ ನಾಡಪ್ರಭುಗಳ ರಾಜಧಾನಿಯಾಗಿದ್ದುದಕ್ಕೆ ಆಧಾರಗಳಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ಶಿವಗಂಗೆಯ ಶಾಸನದಲ್ಲಿ (ನ.52) 'ಬೆಂಗಳೂರು ಕೆಂಪನಾಚಯಗೌಡರ ಕೊಮಾರ ಕೆಂಪಯಗೌಡ' ಎಂಬ ಒಕ್ಕಣೆಯಿದೆ. ಬೆಂಗಳೂರು ನಗರ ಜಿಲ್ಲೆಯ ಯಶವಂತಪುರ ಶಾಸನದಲ್ಲಿ (ನಂ.14) 'ಬೆಂಗಳೂರು ಕೆಂಪನಂಜಯ ಗೌಡರ ಪುತ್ರ ಕೆಂಪೇಗೌಡರು ಕೊಟ್ಟ ಕೊಡುಗೆ' ಎಂಬ ಉಲ್ಲೇಖವಿದೆ. ಈ ಎರಡು ಶಾಸನಗಳ ಪ್ರಕಾರ ಕೆಂಪನಾಚೇಗೌಡ ಅಥವಾ ಕೆಂಪ ನಂಜೇಗೌಡರು ಬೆಂಗಳೂರಿನವರು. ಪ್ರಾಯಶಃ ಕೆಂಪನಂಜೇಗೌಡರು ಬೆಂಗಳೂರಿನಿಂದಲೇ ಯಲಹಂಕನಾಡನ್ನು ಆಳುತ್ತಿದ್ದರೆಂದು ತೋರುತ್ತದೆ. ಆದ್ದರಿಂದಲೇ ಈ ಎರಡೂ ಶಾಸನಗಳಲ್ಲಿ 'ಬೆಂಗಳೂರ ಕೆಂಪನಂಜೇಗೌಡ' ಎಂಬುದಾಗಿ ಉಲ್ಲೇಖಿಸಲಾಗಿದೆ.

ಕ್ರಿ. ಶ. 890ರ ಬೇಗೂರು ಶಾಸನದಿಂದ[11] ಕ್ರಿ. ಶ. 9ನೆಯ ಶತಮಾನದ ವೇಳೆಗಾಗಲೇ ಬೆಂಗಳೂರು ಎಂಬ ಊರು ಅಸ್ತಿತ್ವದಲ್ಲಿದ್ದುದು ತಿಳಿದುಬರುತ್ತದೆ. ಬೆಂಗಳೂರಿನ ಮಡಿವಾಳದ ಸೋಮೇಶ್ವರ ದೇವಸ್ಥಾನದಲ್ಲಿನ ಕ್ರಿ. ಶ. 1247ರ ಶಾಸನದಲ್ಲಿಯೂ[12] ಬೆಂಗಳೂರಿನ ಉಲ್ಲೇಖ ದೊರೆಯುತ್ತದೆ. ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆ ಡೆಂಕಣಿಕೋಟೆ ತಾಲ್ಲೂಕಿನ ಗುಮ್ಮಳಾಪುರದ ಕ್ರಿ. ಶ. 1402ರ ಶಾಸನದ ಪ್ರಕಾರ ಇಂದಿನ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಡೆಂಕಣಿಕೋಟೆ ತಾಲ್ಲೂಕಿನಲ್ಲೂ ಗುಮ್ಮಳಾಪುರವು ಬೆಂಗಳೂರು ವಳಿತಕ್ಕೆ (ಆಡಳಿತಕ್ಕೆ) ಸೇರಿತ್ತೆಂಬುದು ತಿಳಿದುಬರುತ್ತದೆ.[13] ಹೀಗೆ 1402ರ ವೇಳೆಗಾಗಲೇ ದೊಡ್ಡ ಊರಾಗಿದ್ದ ಬೆಂಗಳೂರು ವಿಸ್ತಾರವಾದ ಪ್ರದೇಶವೊಂದಕ್ಕೆ ಆಡಳಿತದ ಕೇಂದ್ರವಾಗಿದ್ದು ನಂತರದ ಕಾಲಘಟ್ಟದಲ್ಲಿ ಕೆಂಪೇಗೌಡರ ತಂದೆ ಕೆಂಪನಂಜೇಗೌಡರ ಆಳ್ವಿಕೆಯ ಕಾಲದಲ್ಲಿ ಯಲಹಂಕ ನಾಡಿನ ರಾಜಧಾನಿಯಾಯಿತು. ಅನಂತರ ಕೆಂಪೇಗೌಡರು ಬೆಂಗಳೂರನ್ನು ಮತ್ತಷ್ಟು ವಿಸ್ತರಿಸಿ ದೊಡ್ಡ ಪಟ್ಟಣವನ್ನಾಗಿಸಿದರೆಂದು ಹೇಳಬಹುದು.

ಒಂದನೇ ಕೆಂಪೇಗೌಡರು 1537ರಲ್ಲಿ ಬೆಂಗಳೂರಿನಲ್ಲಿ ಕೋಟೆಯನ್ನು ಕಟ್ಟಿ ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡರೆಂದು ಡಾ. ಸೂರ್ಯನಾಥ ಕಾಮತ್ ಅವರು ಅಭಿಪ್ರಾಯ ಪಟ್ಟಿದ್ದಾರೆ.[14] ಪ್ರೊ. ಎಂ. ಜಿ. ನಾಗರಾಜ್ ಅವರು 'ಕೆಂಪೇಗೌಡರು ಬೆಂಗಳೂರು ಕೋಟೆ ಹಾಗೂ ನಗರ ನಿರ್ಮಾಣವನ್ನು 1530ರ ಸಮಯಕ್ಕೆ ಆರಂಭಿಸಿ ಕ್ರಿ. ಶ. 1535ರಲ್ಲಿ ಪೂರ್ಣಗೊಳಿಸಿರುವಂತಿದೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[15] ಆದರೆ

ಇತ್ತೀಚೆಗೆ ಪತ್ತೆಯಾದ 'ಬೆಂಗಳೂರಿನ ಬಖೈರಿನಲ್ಲಿ' ಕೆಂಪೇಗೌಡರು ಶಾಲಿವಾಹನ ಶಕ 1459ನೆಯ ಹೇವಿಳಂಬಿ ಸಂವತ್ಸರದ ಮಾಘ ಶುದ್ಧ ತ್ರಯೋದಶಿ ಶುಕ್ರವಾರದಂದು ಅಂದರೆ ಕ್ರಿ. ಶ 1538 ಜನವರಿ 14ರಂದು ಬೆಂಗಳೂರಿನ ಕೋಟೆಯ ನಿರ್ಮಾಣವನ್ನು ಪ್ರಾರಂಭಿಸಿದರು ಎಂಬ ವಿವರಗಳಿವೆ.[16]

ಒಂದನೇ ಕೆಂಪೇಗೌಡರು ಬೆಂಗಳೂರಿನಲ್ಲಿ ಕೋಟೆಯನ್ನು ನಿರ್ಮಿಸಿದ ನಂತರ ಅಚ್ಯುತರಾಯನಿಂದ ಒಪ್ಪಿಗೆ ಪಡೆದು ಈ ಕೆಳಕಂಡ ಹನ್ನೆರಡು ಹೋಬಳಿಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡರು. ಅವು ಯಾವುವೆಂದರೆ

1. ಕಸಬಾ ಹಳೆಯ ಬೆಂಗಳೂರು,
2. ವರ್ತೂರು ಹೋಬಳಿ,
3. ಯಲಹಂಕನಾಡು,
4. ಬೇವೂರು ಹೋಬಳಿ,
5. ಹಲಸೂರು ಹೋಬಳಿ,
6. ಕೆಂಗೇರಿ ಹೋಬಳಿ,
7. ತಲಘಟ್ಟಪುರ ಹೋಬಳಿ,
8. ಜಿಗಣಿ ಹೋಬಳಿ,
9. ಕುಂಬಳಗೋಡು ಹೋಬಳಿ,
10. ಕನ್ನೇಲಿ ಹೋಬಳಿ,
11. ಬಾಣಾವರ ಹೋಬಳಿ,
12. ಹೆಸರುಘಟ್ಟ ಹೋಬಳಿ

ಈ ಹನ್ನೆರಡು ಹೋಬಳಿಗಳಿಂದ ಒಟ್ಟು ಮೂವತ್ತು ಸಾವಿರ ರೂಗಳ ಕಂದಾಯ ಬರುತ್ತಿತ್ತು ಎಂಬ ವಿವರ ಬೆಂಗಳೂರಿನ ಐತಿಹಾಸಿಕ ಬಖೈರಿನಲ್ಲಿ ದೊರೆಯುತ್ತದೆ.[17] ಆದರೆ 1538ರ ನಂತರ ಈ ಹನ್ನೆರಡು ಹೋಬಳಿಗಳು ಕೆಂಪೇಗೌಡರ ರಾಜ್ಯಕ್ಕೆ ಸೇರಿದವು ಎಂದು ಹೇಳಲು ಯಾವ ಆಧಾರಗಳೂ ದೊರೆಯುವುದಿಲ್ಲ.

ಕ್ರಿ. ಶ. 1532ಕ್ಕಿಂತಲೂ ಮೊದಲೇ ಈ ಎಲ್ಲಾ ಪ್ರದೇಶಗಳು ಕೆಂಪೇಗೌಡರ ಅಧೀನದಲ್ಲಿದ್ದುದಕ್ಕೆ ಶಾಸನಾಧಾರಗಳಿವೆ.

ಬೆಂಗಳೂರು ನಗರ ಜಿಲ್ಲೆಯ ವರ್ತೂರು ಹೋಬಳಿ ದಾಸನಪುರ ಶಿಲಾ ಶಾಸನದ ಪ್ರಕಾರ (ನ.13)

ಕ್ರಿ. ಶ. 1532ರಲ್ಲಿ ಕೆಂಪೇಗೌಡರು ಶಿವನಸಮುದ್ರ ಸೀಮೆಗೆ ಸೇರಿದ ಚೊಕ್ಕನಾಥಪುರ ಎಂಬ ಗ್ರಾಮವನ್ನು ಅಚ್ಯುತರಾಯನಿಗೆ ಪುಣ್ಯವಾಗಬೇಕೆಂದು ಹೇಳಿ ಭೈರವನ ದೇವಾಲಯವೊಂದಕ್ಕೆ ದಾನ ಕೊಟ್ಟ ವಿವರಗಳಿವೆ. ಪ್ರಸ್ತುತ ಶಾಸನೋಕ್ತ ಶಿವನ ಸಮುದ್ರದ ಮತ್ತೊಂದು ಹೆಸರು ಹೆಸರುಘಟ್ಟ, ಚೊಕ್ಕನಾಥಪುರದ ಮತ್ತೊಂದು ಹೆಸರು ದೊಮ್ಮಲೂರು. ಅದು ವರ್ತೂರು ಗ್ರಾಮದಿಂದ ಸುಮಾರು 6 ಕಿ. ಮೀ ದೂರದಲ್ಲಿದೆ. ಈ ಶಾಸನದ ಆಧಾರದಿಂದ ಕ್ರಿ. ಶ. 1532ರ ವೇಳೆಗಾಗಲೇ ಹೆಸರುಘಟ್ಟ ಹಾಗೂ ವರ್ತೂರು ಹೋಬಳಿಗಳು ಕೆಂಪೇಗೌಡರ ಅಧೀನದಲ್ಲಿದ್ದವು ಎಂಬುದು ಖಚಿತವಾಗುತ್ತದೆ.

ಉಲ್ಲೇಖಗಳು

1. ಡಾ. ಎಂ. ಜಿ. ಮಂಜುನಾಥ, ಬೆಂಗಳೂರು ಜಿಲ್ಲೆಯ ಪ್ರಾಗಿತಿಹಾಸ, (ಸಂ) ಡಾ. ಎಚ್. ಎಸ್. ಗೋಪಾಲ್‌ರಾವ್, ಪ್ರೊ. ಜಿ. ಅಬ್ದುಲ್ ಬಷೀರ್; ಕನಕಸಿರಿ, ಪು. 84.
2. ಸಿ. ಹಯವದನರಾವ್, ಮೈಸೂರು ಗ್ಯಾಸೆಟಿಯರ್, ಸಂಪುಟ–2, ಭಾಗ–1; ಪು–81.
3. ಡಾ. ಎಂ. ಎಸ್. ಕೃಷ್ಣಮೂರ್ತಿ, ಡಾ. ಎಂ. ಪಿ. ಮಹದೇವಯ್ಯ, ಕರ್ನಾಟಕದ ಬೌದ್ಧ ಧರ್ಮದ ಮೇಲೆ ಹೊಸ ಬೆಳಕು; ರಾಜಘಟ್ಟ ಉತ್ಖನನ(ಸಂ.), ಎಂ. ಜಿ. ನಾಗರಾಜ್, ಡಾ. ಪಿ. ವಿ. ಕೃಷ್ಣಮೂರ್ತಿ; ಇತಿಹಾಸ ದರ್ಶನ, ಸಂ–17, ಪು.9.
4. ಆರ್. ನರಸಿಂಹಾಚಾರ್: ಒ.ಂ.ಖ. 1915, ಪು.4.
5. ಸಿ. ಹಯವದನರಾವ್, ಮೈಸೂರು ಗ್ಯಾಸೆಟಿಯರ್, ಸಂಪುಟ–5, ಪು–93
6. ಡಾ. ಜೆ. ವಿ. ಗಾಯತ್ರಿ, ಹಿಸ್ಟರಿ ಆಫ್ ಬೆಂಗಳೂರು.
7. ಡಾ. ಎಚ್. ಎಸ್. ಗೋಪಾಲರಾವ್, ಬೆಂಗಳೂರು ಕೆಂಪೇಗೌಡ (ಸಂ.), ಪ್ರೊ. ಎಂ. ಎಸ್. ಕೃಷ್ಣಯ್ಯ, ಡಾ. ದೇವರಕೊಂಡಾರೆಡ್ಡಿ, ಬೆಂಗಳೂರು ಕೆಂಪೇಗೌಡರ ವಂಶಸ್ಥರು, ಪು.25.
8. ಇ.ಸಿ.9. ಬೆಂಗಳೂರು.83, ಬೇಗೂರು. ಪು.30.
9. ಬಿ.ಎಲ್.ರೈಸ್, ಸಂ.ಎಪಿಗ್ರಾಫಿಯಾ ಕರ್ನಾಟಕ ಸಂ.9, ಇಂಗ್ಲೀಷ್ ಆವೃತ್ತಿ; ಬೆಂಗಳೂರು–68, ಪು.15.
10. – ಅದೇ –
11. ಇ. ಸಿ. 9. ಬೆಂಗಳೂರು.68. ಮಡಿವಾಳ. ಪು.15.
12. (ಸಂ) ಡಾ. ಎಚ್. ಎಸ್. ಗೋಪಾಲರಾವ್, ಡಾ. ಪಿ. ವಿ. ಕೃಷ್ಣಮೂರ್ತಿ, ತಮಿಳುನಾಡಿನ ಕನ್ನಡ ಶಾಸನಗಳು: ಗುಮ್ಮಳಾಪುರ, ನಂ. 61, ಪು.71.
13. ಡಾ. ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಪು.231.
14. ಡಿ. ಲಿಂಗಯ್ಯ, (ಸಂ.) ಬೆಳ್ಳಿ ಬಾಗಿನ, ಪು.160.
15. ಡಾ. ಎಂ. ಜಿ. ಮಂಜುನಾಥ (ಸಂ): ಬೆಂಗಳೂರಿನ ಬಖೈರುಗಳು, ಪು.19.
16. ಅದೇ.

8. ಬೆಂಗಳೂರು ನಗರ ಇತಿಹಾಸ ಕುರಿತ ಆಕರಗಳು

ಡಾ. ಜೆ. ವಿ. ಗಾಯತ್ರಿ

ಯಾವುದೇ ನಗರದ ಇತಿಹಾಸ ರಚನೆಯಲ್ಲಿ ಆಕರ ಸಾಮಗ್ರಿಗಳ ಪಾತ್ರ ಬಹುಮುಖ್ಯ. ಈ ದಿಸೆಯಲ್ಲಿ ಶಾಸನಗಳು, ತಾಮ್ರಪಟಗಳು, ಹಸ್ತಪ್ರತಿಗಳು, ಕಾಗದದ ದಾಖಲೆಗಳಲ್ಲಿ ಲಭ್ಯವಿರುವ ಮಾಹಿತಿಯ ಬಳಕೆಯತ್ತ ಗಮನ ಹರಿಸುವುದು ಅತ್ಯಗತ್ಯ. ಪ್ರಾಚೀನ ದೇವಾಲಯಗಳ ಹಾಗೂ ಪರಂಪರೆಯ ಕಟ್ಟಡಗಳ ವಾಸ್ತುಶಿಲ್ಪ-ಶಿಲ್ಪಕಲೆ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಇತಿಹಾಸ ರಚನೆಗೆ ಪ್ರಮುಖ ಆಧಾರವಾಗಬಲ್ಲದು. ಕನ್ನಡ ಸಾಹಿತ್ಯವು ಸಮಾಜದ ಬಹುಮುಖ ಜೀವನವನ್ನು ವೈವಿಧ್ಯಮಯವಾಗಿ ಚಿತ್ರಿಸಿದೆ. ಬೇರೆ ಬೇರೆ ವರ್ಗದ ಜನರ ಬದುಕು, ಕಸಬು, ನಂಬಿಕೆಗಳು, ಕರಕುಶಲಕಲೆ, ಸಂಗೀತ, ನೃತ್ಯ, ಚಿತ್ರಕಲೆ, ಜಾನಪದಕಲೆ, ರಾಜಕೀಯ ವಿವರಗಳು, ಆಡಳಿತ ನಿರ್ವಹಣೆಯ ವ್ಯವಸ್ಥೆಗಳು – ಮುಂತಾದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಆಡಳಿತ ಇತಿಹಾಸಕ್ಕೆ ಸಂಬಂದಿಸಿದ ಮಾಹಿತಿ ಇತಿಹಾಸದ ದಾಖಲೆ-ಪತ್ರಗಳಲ್ಲಿ ಲಭ್ಯವಿದೆ.

ಬೆಂಗಳೂರಿನ ಪೂರ್ವೋತ್ತರ

ಕೆಂಪೇಗೌಡನಿಂದ ಸಾಪಿಸಲ್ಪಟ್ಟ ಬೆಂಗಳೂರು ಮೈಸೂರು ಒಡೆಯರ್, ಹೈದರ್, ಟಿಪ್ಪುರವರ ಆಡಳಿತವನ್ನು ಅನುಭವಿಸಿದ ನಂತರ ಬ್ರಿಟಿಷ್ ಕಮೀಷನರುಗಳ 50 ವರ್ಷದ ಆಳ್ವಿಕೆ (1831–81)ಯಲ್ಲಿ ರಾಜ್ಯಾಡಳಿತದ ಕೇಂದ್ರವಾಗಿದ್ದು ಆಗ ಆಧುನಿಕ ನಗರವಾಗಿ ಪರಿವರ್ತನೆಗೊಳ್ಳತೊಡಗಿತು.ಮದ್ರಾಸಿಗೆ 1864ರಲ್ಲಿ ರೈಲ್ವೆ ಸಂಪರ್ಕವನ್ನು ಕಲ್ಪಿಸಲಾಯಿತು. ಇತರ ಪಟ್ಟಣಗಳಿಗೆ ರಸ್ತೆಗಳನ್ನು ಹಾಕಲಾಯಿತು. ಮಿಶನರಿ ಚಟುವಟಿಕೆಗಳಿಂದ ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದವು. ಇಂಗ್ಲೀಷ ಶಿಕ್ಷಣ ನೀಡುವ ಶಾಲೆ:ಕಾಲೇಜುಗಳು ಆರಂಭಿಸಲ್ಪಟ್ಟವು. ನೀರು ಸರಬರಾಜು-ಒಳಚರಂಡಿ ವ್ಯವಸ್ಥೆ, ದೂರವಾಣಿ, ವಿದ್ಯುದ್ದೀಪಗಳ ವ್ಯವಸ್ಥೆ, ಮುಂತಾದ ಪೌರ ಸೌಲಭ್ಯಗಳಿಂದಾಗಿ ಬೇರೆ ಸ್ಥಳಗಳಿಂದ ಬೆಂಗಳೂರಿಗೆ ಬಂದು ನೆಲಸುವವರ ಸಂಖ್ಯೆ ಹೆಚ್ಚಾಗಲು ಕಾರಣವಾಯಿತು. ಬೆಂಗಳೂರಿಗೆ ಮಹಾತ್ಮಾ ಗಾಂಧಿಯಂತಹ ರಾಷ್ಟ್ರೀಯ ನಾಯಕರ ಭೇಟಿ, ರಾಷ್ಟ್ರೀಯ ಚಳುವಳಿ ಜಾಗೃತಗೊಳ್ಳಲು ಕಾರಣವಾಯಿತು. ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮುಂತಾದ ಕಾರ್ಖಾನೆಗಳಿಂದಾಗಿ ಬೆಂಗಳೂರಿನಲ್ಲಿ ಬಸ್, ರೈಲು, ವಿಮಾನ ಸಂಚಾರಗಳಿಗೂ ಯೋಗ್ಯ ವಾತಾವರಣ ಕಲ್ಪಿಸಲಾಯಿತು. ಸಾಂಕ್ರಾಮಿಕ ರೋಗ ನಿರೋಧಕ ಕಾಯಿದೆ, ಕಟ್ಟಡ ನಿರ್ಮಾಣ ಬೈಲಾ ಮುಂತಾದ ಕಾಯಿದೆಗಳು ಜಾರಿಗೆ ಬಂದವು. ಹೀಗೆ ಶಿಕ್ಷಣ, ವೈದ್ಯಕೀಯ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಪ್ರಗತಿ ಉಂಟಾಗಿ ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ, ರಾಜಕೀಯ ವ್ಯವಸ್ಥೆಗಳಲ್ಲಿ ಬದಲಾವಣೆಗಳುಂಟಾದವು.

ಈ ಹಿನ್ನಲೆಯಲ್ಲಿ ಬೆಂಗಳೂರು ಇತಿಹಾಸ ಮತ್ತು ಅದರ ಬೆಳವಣಿಗೆಗೆ ಸಂಬಂಧಿಸಿದ ಲಭ್ಯವಿರುವ ಆಕರ ಸಾಮಗ್ರಿಗಳ ಸಮೀಕ್ಷೆಯನ್ನು ಮಾಡಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ. ವಿವಿಧ ಸರ್ಕಾರಿ ದಾಖಲೆಗಳು, ಖಾಸಗಿ ಮೂಲಗಳು, ವಿಶ್ವವಿದ್ಯಾನಿಲಯಗಳು, ಶೈಕ್ಷಣಿಕ ಸಂಸ್ಥೆಗಳು, ವಿವಿಧ ರಾಜ್ಯ, ರಾಷ್ಟ್ರೀಯ ಪತ್ರಾಗಾರಗಳು, ಗ್ಯಾಜೆಟಿಯರ್ ಇಲಾಖೆ ಮುಂತಾದ ಕಡೆ ಲಭ್ಯವಿರುವ ಪ್ರಾಥಮಿಕ ಮತ್ತು ಮಾಧ್ಯಮಿಕ ಪ್ರಕಟಿತ ಮತ್ತು ಅಪ್ರಕಟಿತ ದಾಖಲೆಗಳ ಪರಿವೀಕ್ಷಣೆಯನ್ನು ಇಲ್ಲಿ ಮಾಡಲಾಗಿದೆ.

ಬೆಂಗಳೂರು ನಗರದ ಇತಿಹಾಸ ಶೋಧನೆಗೆ ಅಗತ್ಯವಿರುವ ಪ್ರಾಥಮಿಕ ಮೂಲ ಆಧಾರಗಳಲ್ಲಿ ಅಪ್ರಕಟಿತ ಹಾಗೂ ಪ್ರಕಟಿತ ದಾಖಲೆ:ಪುಸ್ತಕಗಳಲ್ಲದೆ ಪ್ರವಾಸಿ ಕಥನಗಳು, ಸಮಕಾಲೀನ ಬರಹಗಳು, ಲೇಖನಗಳು ಸ್ಮರಣ ಸಂಚಿಕೆಗಳು, ನಿಯತ ಕಾಲಿಕೆಗಳು, ಆತ್ಮಚರಿತ್ರೆಗಳು, ದಿನಚರಿಗಳು, ವೃತ್ತಪತ್ರಿಕೆಗಳು ಮುಂತಾದ ಆಕರ ಸಾಮಗ್ರಿಗಳು ಅತ್ಯಂತ ಉಪಯುಕ್ತ ಮಾಹಿತಿ ಹೊಂದಿವೆ.ಇಂತಹ ಬಹುತೇಕ ದಾಖಲೆಗಳು ಕರ್ನಾಟಕ ರಾಜ್ಯ ಪತ್ರಾಗಾರ, ಮೈಸೂರು ಪತ್ರಾಗಾರ, ತಮಿಳುನಾಡು ಪತ್ರಾಗಾರ, ಮುಂಬೈ ಪತ್ರಾಗಾರ, ರಾಷ್ಟ್ರೀಯ ಪತ್ರಾಗಾರ, (ನವದೆಹಲಿ) ಬ್ರಿಟಿಷ್ ಲೈಬ್ರರಿ, ಲಂಡನ್ನಿನಲ್ಲಿರುವ ಇಂಡಿಯಾ ಆಫೀಸ್ ರೆಕಾರ್ಡುಗಳು, ಚೆನ್ನೈ, ಮುಂಬೈ, ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳು, ಕನ್ಯಾಮರ ಪಬ್ಲಿಕ್ ಲೈಬ್ರರಿ, ಚೆನ್ನೈ, ಬೆಂಗಳೂರಿನ ಮಿಥಿಕ್ ಸೊಸೈಟಿ, ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್, ಯುನೈಟೆಡ್ ಥಿಯೊಲಾಜಿಕಲ್ ಕಾಲೇಜು, ಕನ್ನಡ ಸಾಹಿತ್ಯ ಪರಿಷತ್ತು, ಬ್ರಿಟಿಷ್ ಸಾರ್ವಜನಿಕ ಗ್ರಂಥಾಲಯ ಲೈಬ್ರರಿ ಮುಂತಾದ ಗ್ರಂಥಾಲಯಗಳಲ್ಲಿ ಲಭ್ಯವಿದೆ. ಇದಲ್ಲದೆ ರಾಜ್ಯ ಪತ್ರಾಗಾರದಲ್ಲಿರುವ ಬಿ.ಪುಟ್ಟಯ್ಯ, ಡಿ.ವಿ.ಜಿ., ಫೀಲ್ಡ್ ಮಾರ್ಷಲ್ ಕಾರಿಯಪ್ಪ, ಸಿ. ಜೆ. ದೇವನಾಥ್, ಡಬ್ಲ್ಯು ಎಚ್. ಹನುಮಂತಪ್ಪ, ಎಂ. ಎಲ್. ಬಸವಣ್ಣ, ಮುಂತಾದ ಗಣ್ಯವ್ಯಕ್ತಿಗಳ ಖಾಸಗಿ ಕಾಗದ-ಪತ್ರಗಳ ಸಂಗ್ರಹಗಳು, ಮೌಖಿಕ ದಾಖಲೆಗಳು, ಬೆಂಗಳೂರಿನ ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ, ರಾಜಕೀಯ ಇತಿಹಾಸದ ಬಗ್ಗೆ ಬೆಳಕನ್ನು ಚೆಲ್ಲುವ ಮಾಹಿತಿ ಹೊಂದಿವೆ.

ಪ್ರಕಟಿತ ಮಾಧ್ಯಮಿಕ ಆಧಾರಗಳು

ಬೆಂಗಳೂರು ಇತಿಹಾಸದ ಬಗ್ಗೆ ಸಮಗ್ರ ಮಾಹಿತಿ ನೀಡುವ ಅನೇಕ ಕನ್ನಡ ಕೃತಿಗಳಿವೆ. ಬೆಂಗಳೂರು ಸ್ಥಾಪಕರಾದ ಒಂದನೆಯ ಕೆಂಪೇಗೌಡ, ಎರಡನೆಯ ಕೆಂಪೇಗೌಡ (1570-1633) ಮತ್ತು ಮೂರನೆಯ ಕೆಂಪೇಗೌಡ (1633-78)ರ ಆಳ್ವಿಕೆ, ಬಿಜಾಪುರದ ರಣದುಲ್ಲಾಖಾನನ ದಾಳಿ, ಬೆಂಗಳೂರನ್ನು ಜಹಗೀರಾಗಿ ಪಡೆದ ಮರಾಠಾ ಅಧಿಪತಿ ಷಹಜಿ ಭೋನ್ಸ್ಲೆ, ಮೊಘಲ್ ಸರ್ದಾರ ಖಾಸೀಮ ಖಾನನ ದಾಳಿ, ಮೈಸೂರು ಮಹಾರಾಜ ಚಿಕ್ಕದೇವರಾಜ ಒಡೆಯರ್, ಹೈದರ್, ಟಿಪ್ಪು ಕಾಲದಲ್ಲಿ ಜರುಗಿದ ಆಂಗ್ಲೋ-ಮೈಸೂರು ಯುದ್ಧಗಳು, ಕಂಟೋನ್ಮೆಂಟಿನ ಸ್ಥಾಪನೆ, ಕ್ಷಾಮ (1876-77), ಪ್ಲೇಗು (1898)ಗಳ ಪ್ರಭಾವ, ಹೊಸ ಬಡಾವಣೆಗಳ ಪ್ರಾರಂಭ, ಸಮಾಜದ ಜನ ಜೀವನದಲ್ಲುಂಟಾದ ಬದಲಾವಣೆ, ಗಾಂಧೀಜಿಯವರ ಭೇಟಿ, ರಾಷ್ಟ್ರೀಯ ಚಳವಳಿ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ನೀಡುವ ಕೃತಿಗಳ ಪೈಕಿ ಹೆಸರಿಸಬೇಕಾದುವು.

ಕರ್ಲ ಮಂಗಲಂ ಶ್ರೀಕಂಠಯ್ಯನವರು ಸಂಪಾದಿಸಿರುವ 'ಕೆಂಪೇಗೌಡ ಜಯಪ್ರಶಸ್ತಿ' (1961), ಎಂ. ವಿ. ಕೃಷ್ಣರಾವ್‌ರವರ 'ಬೆಂಗಳೂರು ಕೆಂಪೇಗೌಡ' (1964), ಬ.ನ.ಸುಂದರ ರಾವ್ ರವರ 'ಬೆಂಗಳೂರಿನ ಭವ್ಯ ಇತಿಹಾಸ (1985), ದೇ. ಜವರೇಗೌಡರ 'ಬೆಂಗಳೂರು-ಮಾಗಡಿ ಕೆಂಪೇಗೌಡ' (1957), ಡಿ. ವಿ. ಗುಂಡಪ್ಪನವರ 'ಜ್ಞಾಪಕ ಚಿತ್ರಶಾಲೆ (1977)ಯ ಒಂಭತ್ತು ಸಂಪುಟಗಳು, ಡಾ. ಸೂರ್ಯನಾಥ ಕಾಮತರು ಸಂಪಾದಿಸಿರುವ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' (1980)-ಮೂರು ಸಂಪುಟಗಳು, ಹಾಗೂ ಸಿದ್ದವನಹಳ್ಳಿ ಕೃಷ್ಣ ಶರ್ಮ ರವರು ಸಂಪಾದಿಸಿರುವ 'ಗಾಂಧೀ ಮತ್ತು ಕರ್ನಾಟಕ' (1970), ಉದಯಭಾನು ಕಲಾ ಸಂಘ, ಬೆಂಗಳೂರು, ಹೊರ ತಂದಿರುವ 'ಬೆಂಗಳೂರು' ಕುರಿತ ಎರಡು ಸಂಪುಟಗಳು, ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಬೆಂಗಳೂರು ಬಬ್ಬೈರುಗಳು', ಸುರೇಶ್ ಮೂನರವರ 'ನಮ್ಮ ಬೆಂಗಳೂರು' ಮುಂತಾದವು.

ಇದಲ್ಲದೆ, ಸಂಸ್ಕೃತ ಕೃತಿಗಳಾದ ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯಂ' ಹಾಗೂ ಜಯರಾಮ ಪಿಂಡ್ಯೆರವರ 'ರಾಧಾ ಮಾಧವ ವಿಲಾಸ ಚಂಪೂ' ಗಳು ಬೆಂಗಳೂರಿನಲ್ಲಿ ಮರಾಠ ಮತ್ತು ಮೊಘಲರ ಪ್ರಭಾವ ಕುರಿತು ಮಾಹಿತಿ ನೀಡುತ್ತವೆ.

ಆಂಗ್ಲ ಭಾಷೆಯಲ್ಲಿ ರಚಿಸಿರುವ ಗ್ರಂಥಗಳ ಪೈಕಿ ಮೂಲ ಸಾಮಗ್ರಿಗಳನ್ನು ಯಶಸ್ವಿಯಾಗಿ ಬಳಸಿಕೊಂಡು ಸಿದ್ದಪಡಿಸಿರುವ ಫಜಲುಲ್ ಹಸನ್‌ರವರ 'Bangalore Through the Centuries' (1970) ಉತ್ತಮ ಕೃತಿಯಾಗಿದೆ. ಪ್ರೊ: ಕೆ. ಎನ್. ವೆಂಕಟರಾಯಪ್ಪನವರ 'Bangalore: A Socio-Ecological Study' (Bombay, 1951) ಕೃತಿಯು ಬೆಂಗಳೂರಿನ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಸೌಲಭ್ಯಗಳು, ಕೈಗಾರಿಕೆಗಳು ಕಾರ್ಮಿಕ ಗಲಭೆಗಳು ಇತ್ಯಾದಿಗಳ ಬಗ್ಗೆ ಮಾಹಿತಿ ನೀಡುವ ಮಹತ್ವದ ಕೃತಿಯಾಗಿದೆ.

ಬಿ. ರಾಮಕೃಷ್ಣ ರಾವ್‌ರವರ ಎರಡು ಭಾಗಗಳ 'The Annals of the Royal Family' (1916-1922), ಎಸ್. ಶ್ರೀಕಂಠಯ್ಯನವರ 'The Mysore Through the Ages' (1934), ಎಂ. ಶಾಮರಾವ್‌ರವರ 'ಮಾಡರ್ನ್ ಮೈಸೂರ್' (1936)–ಎರಡು ಸಂಪುಟಗಳು, ಕೆ. ಎನ್. ವಿ. ಶಾಸ್ತ್ರಿಯವರ 'The Administration of Mysore under Sir Mark Cubbon', ಜೇಮ್ಸ್ ಮ್ಯಾನರ್‌ರವರ 'Political changes in an Indian State: Mysore' (1977), ಬೋರ್ನ್ ಹೆಟ್ನೆಯವರ 'The Political Economy of Indirect Rule', ಆರ್. ರಾಮಕೃಷ್ಣನ್‌ರವರ 'Press and Politics in Princely Mysore' –ಉಪಯುಕ್ತ ಮಾಹಿತಿ ನೀಡುವ ಕೃತಿಗಳಾಗಿವೆ. ಇದಲ್ಲದೆ ಅಪ್ರಕಟಿತ ಮಹಾ ಪ್ರಬಂಧಗಳ ಪೈಕಿ ಎ. ಎಚ್. ಗಾಯತ್ರಿದೇವಿಯವರ 'Local Self Government in Mysore', ಡಾ. ಬಸವರಾಜ ಅಕ್ಕಿಯವರ, 'History of Municipal Administration in Mysore,' ಡಾ. ಅಂಬುಜಾಕ್ಷಿಯವರ 'Labour Movement and Labour Legislation in Princely Mysore,' ಡಾ. ಜೆ. ವಿ. ಗಾಯತ್ರಿಯವರ 'History of Bangalore: The City's Growth as Modern Metropolis (1799-1947) – ಡಾ. ಎಚ್. ಪಿ. ಶಶಿಧರಮೂರ್ತಿಯವರ 'The Agrarian Conditions of Mysore State during the decade after the Famine 1876-77' ಮುಂತಾದ ಮಹಾ ಪ್ರಬಂಧಗಳು ಮೂಲ ಸಾಮಗ್ರಿಗಳನ್ನೊಳಗೊಂಡು ಉಪಯುಕ್ತ ಮಾಹಿತಿ ನೀಡುತ್ತವೆ.

ಪ್ರಕಟಿತ ಮೂಲ ಆಧಾರಗಳು

ಪ್ರಾಚ್ಯವಸ್ತು ಇಲಾಖೆಯು ಪ್ರಕಟಿಸಿರುವ 'ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್‌ಗಳು (1906–1956)', ಮೈಸೂರು ವಿಶ್ವಾವಿದ್ಯಾನಿಲಯ ಹೊರತಂದಿರುವ 'ಎಪಿಗ್ರಾಫಿಯಾ ಕರ್ನಾಟಿಕ' ಸಂಪುಟಗಳು, ಬೆಂಗಳೂರು ಜಿಲ್ಲಾ ಗ್ಯಾಜೆಟಿಯರ್ (1998)ಗಳು, ಕೆಂಪೇಗೌಡನ ಪೂರ್ವದ ಬೆಂಗಳೂರಿನ ನೆಲೆಯಿಂದ ಹಿಡಿದು 20ನೇ ಶತಮಾನದವರೆಗೆ ಅನೇಕ ಉಪಯುಕ್ತ ಮಾಹಿತಿ ನೀಡುತ್ತವೆ. ಪ್ರಾದೇಶಿಕ ಮಾಹಿತಿ ಕೋಶಗಳೆಂದು ಕರೆಯಬಹುದಾದ ಗ್ಯಾಜೆಟಿಯರ್‌ಗಳು ವಿಶೇಷವಾಗಿ ಬೆಂಗಳೂರು ನಗರದ ಇತಿಹಾಸ, ಭೌಗೋಳಿಕ ಹಿನ್ನಲೆ, ಅದರ ಸಾಮಾಜಿಕ, ಸಾಂಸ್ಕೃತಿಕ, ಆಡಳಿತಾತ್ಮಕ ಪರಿಸ್ಥಿತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ 9 (1905)ರಲ್ಲಿ ಗಂಗರ ಕಾಲದಲ್ಲಿ 9ನೇ ಶತಮಾನಕ್ಕೂ ಪೂರ್ವದಲ್ಲಿಯೇ ಬೆಂಗಳೂರು ಅಸ್ತಿತ್ವದಲ್ಲಿ ಇದ್ದ ಬಗ್ಗೆ ಉಲ್ಲೇಖಿಸಲಾಗಿದೆ. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ (1915)ನಲ್ಲಿ ಬೇಗೂರು ನಾಗೇಶ್ವರ ದೇವಾಲಯದಲ್ಲಿರುವ ಗಂಗರ ಶಾಸನವು ಕ್ರಿ. ಶ. 890ರಲ್ಲಿ 'ಬೆಂಗಳೂರಿ'ನಲ್ಲಿ ಯುದ್ಧ ನಡೆದ ಬಗ್ಗೆ ಮಾಹಿತಿ

ನೀಡುತ್ತದೆ ಹಾಗೂ ಗವಿ ಗಂಗಾಧರೇಶ್ವರ ಹಾಗೂ ಚೊಕ್ಕಪೆರುಮಾಳ್ ದೇವಾಲಯಗಳಲ್ಲಿರುವ ಶಿಲ್ಪಗಳು ಮತ್ತು ವಾಸ್ತುಶಿಲ್ಪ ವಿನ್ಯಾಸ ಚೋಳರ ವಾಸ್ತುಶಿಲ್ಪ ಶೈಲಿಯನ್ನು ಹೋಲುತ್ತವೆ ಎಂಬುದನ್ನು ದಾಖಲಿಸುತ್ತದೆ.

ಮೈಸೂರು ಆಡಳಿತ ವರದಿಗಳು (1863–1984), ಮೈಸೂರು ಗೆಜೆಟ್‌ಗಳು (1866–2011), ಪ್ರೊಸೀಡಿಂಗ್ಸ್ ಆಫ್ ಹಿಸ್ ಹೈನೆಸ್ ದಿ ಮಹಾರಾಜ ಆಫ್ ಮೈಸೂರು (1868–1963), ಸೆನ್ಸಸ್ ವರದಿಗಳು (1871–2001), ಮಹಾರಾಜರ ಭಾಷಣಗಳು, ಬಡ್ಜೆಟ್ ಎಸ್ಟಿಮೇಟ್ಸ್ (1868–2009), ದಿವಾನರ ಭಾಷಣಗಳು (1881–1935), ಮ್ಯಾನ್ಯುಯೆಲ್‌ಗಳು, ಕೋಡ್‌ಗಳು, ವಿವಿಧ ಇಲಾಖಾ ವರದಿಗಳು (1886–1961), ಹ್ಯಾಂಡ್ ಬುಕ್‌ಗಳು, ಆಕ್ಟ್‌ಗಳು, ರೂಲ್ಸ್‌ಗಳು, ವಿಚಾರಣಾ ವರದಿಗಳು (ಬೆಂಗಳೂರು ಗಣಪತಿ ಗಲಭೆ ವರದಿ 1928 ಇತ್ಯಾದಿ ವರದಿಗಳು (ಮಿಲ್ಲರ್ ಕಮಿಟಿ ವರದಿ, 1916 ಇತ್ಯಾದಿ), ಪ್ರಜಾಪ್ರತಿನಿಧಿ ಸಭೆ ಹಾಗೂ ವಿಧಾನ ಪರಿಷತ್ತುಗಳ ಡಿಬೇಟ್‌ಗಳು, ಪ್ರೊಸೀಡಿಂಗ್ಸ್‌ಗಳು, ದಿವಾನರ ಭಾಷಣಗಳು, ಮೆಮೊರಾಂಡಂಗಳು ಮುಂತಾದ ಪ್ರಕಟಿತ ಸರ್ಕಾರಿ ಪ್ರಾಥಮಿಕ ದಾಖಲೆಗಳು ಸಹ ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿ ಲಭ್ಯವಿದ್ದು ಆಧುನಿಕ ಮೈಸೂರು ಸಂಸ್ಥಾನದ ಇತಿಹಾಸ ಕುರಿತಾದ ಅನೇಕ ಸಂಗತಿಗಳ ಬಗ್ಗೆ ಹೇರಳ ಮಾಹಿತಿಯನ್ನು ಒದಗಿಸುತ್ತವೆ.

ಬೆಂಗಳೂರಿನ ಇತಿಹಾಸದಲ್ಲಿ ಉಲ್ಲೇಖಿಸಲೇಬೇಕಾದ '1928ರ ಗಣಪತಿ ಗಲಭೆ'ಗೆ ಸಂಬಂಧಿಸಿದಂತೆ ಸರ್. ಎಂ. ವಿಶ್ವೇಶ್ವರಯ್ಯನವರು ನೀಡಿದ ವಿಚಾರಣಾ ವರದಿ, ಅರ್ಕಾಟ್ ಶ್ರೀನಿವಾಸಚಾರ್ಲು ರಸ್ತೆಯಲ್ಲಿ ಅಂದಿನ ಮುನಿಸಿಪಲ್ ಪ್ರೆಸಿಡೆಂಟ್‌ರಾಗಿದ್ದ ಅಬ್ಬಾಸ್ ಖಾನ್ ಮನೆ ಎದುರಿಗಿದ್ದ ಸರ್ಕಾರಿ ಶಾಲೆಯಲ್ಲಿ ಗಣಪತಿ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದುದರ ಪರಿಣಾಮ ಆದಂತಹ ಗಲಭೆಗಳು, ಮಿರ್ಜಾ ಇಸ್ಮಾಯಿಲ್‌ರ ದಿವಾನಗಿರಿಯಲ್ಲಿ ಜರುಗಿದ ಮರೆಯಲಾರದ ಘಟನೆ. ಆಗ ವಿಚಾರಣೆಯು ಡ್ಯಾಲಿ ಮೆಮೋರಿಯಲ್ ಹಾಲ್ (ಇಂದಿನ ಮಿಥಿಕ್ ಸೊಸೈಟಿ)ನಲ್ಲಿ ನಡೆದು ಸಾಕ್ಷ್ಯಾಧಾರಗಳ ಮೇರೆಗೆ ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ವರದಿಯಲ್ಲಿ 'ಜವಾಬ್ದಾರಿ ಸರ್ಕಾರ' ಸ್ಥಾಪನೆಗೆ ಒತ್ತುಕೊಟ್ಟಿದ್ದು ಆಗತಾನೆ ಪ್ರಾರಂಭವಾಗುತ್ತಿದ್ದ ರಾಷ್ಟ್ರೀಯ ಚಳವಳಿಗೆ ಪ್ರೇರಣೆ ದೊರೆಯಿತೆನ್ನಬಹುದು.

ಇವುಗಳೇ ಅಲ್ಲದೆ ಬೆಂಗಳೂರಿನ ಬಗ್ಗೆ ಇರುವ ಡೈರೆಕ್ಟರಿಗಳು, ಇಯರ್ ಬುಕ್ಕುಗಳು, ಪ್ರವಾಸಿ ಮಾರ್ಗದರ್ಶಿಗಳು, ದೇಶ ವಿದೇಶೀಯರ ಪ್ರವಾಸ ಕಥನಗಳು, ನೀಲಿ ಪುಸ್ತಕಗಳು, ಸಿವಿಲ್ ಲಿಸ್ಟ್‌ಗಳು (1882–1973), ಹಿಸ್ಟರಿ ಆಫ್ ಸರ್ವೀಸಸ್ ಆಫ್ ಗೆಜೆಟೆಡ್ ಆಫೀಸರ್ಸ್ (1898–1941) ಮುಂತಾದ ಸರ್ಕಾರಿ, ಅರೆ ಸರ್ಕಾರಿ ದಾಖಲೆ ಪುಸ್ತಕಗಳಲ್ಲಿ ಕುತೂಹಲಕರ ಮಾಹಿತಿ ಲಭ್ಯವಿದೆ. ಬೆಂಗಳೂರು ನಗರದ ಇತಿಹಾಸವಲ್ಲದೆ ಅದರ ವಿವಿಧ ಪೇಟೆಗಳು, ಕೋಟೆ, ಬಡಾವಣೆಗಳು, ಥಿಯೇಟರ್‌ಗಳು, ಕರಗ, ಕಡ್ಲೇಕಾಯಿ ಪರಿಷೆಯಂತಹ ಹಬ್ಬಗಳ ಆಚರಣೆ, ದಿವಾನರುಗಳು, ಕೌನ್ಸಿಲರುಗಳು, ಐರೋಪ್ಯ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು, ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು ಮುಂತಾದ ಗಣ್ಯರ ವಿಳಾಸ, ದೂರವಾಣಿಗಳ ವಿವರಗಳು, ಡೈರೆಕ್ಟರಿಗಳಲ್ಲಿ ಲಭ್ಯವಿದೆ. ಅಂದಿನ ಸರ್ಕಾರದಲ್ಲಿ ಉನ್ನತ ಹುದ್ದೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿದಂತಹ ಮೇಖ್ರಿ, ರಾಯನ್, ಬಾದಾಮಿ, ಬಿ. ಪಿ. ವಾಡಿಯಾ, ಟಿ. ಪಿ. ಕೈಲಾಸಂ ಮುಂತಾದವರ ಬಗ್ಗೆ ಸಹ ಇವು ಮಾಹಿತಿ ನೀಡುತ್ತವೆ. ಇಂತಹ ಮಹನೀಯರ ಜೀವನ:ಸಾಧನೆ:ಯಶೋಗಾಥೆಗಳನ್ನು ಕುರಿತ ಕಥನ ರಚನೆಗೆ ಬಳಸಬಲ್ಲ ಸಾಮಗ್ರಿಗಳಾಗಿವೆ.

ವಿದೇಶಿ ಬರಹಗಳು

ಪ್ರವಾಸಿ ಕಥನಗಳ ಪೈಕಿ ಫ್ರಾನ್ಸಿಸ್ ಬುಕನಾನ್ ಬರೆದಿರುವ 'A Journey from Madras Through the Countries of Mysore, Canara and Malabar' (1807)- 3 Vols ನಲ್ಲಿ 19ನೇ ಶತಮಾನದಲ್ಲಿ ಬೆಂಗಳೂರಿನ

ಸಾಮಾಜಿಕ ಜನಜೀವನ, ವಿವಿಧ ಕಸಬುಗಳು, ಟಿಪ್ಪುಸುಲ್ತಾನರ ಕಾಲದಲ್ಲಿ ರೇಷ್ಮೆ ವಸ್ತ್ರಗಳಿಗೆ ಇದ್ದ ಬೇಡಿಕೆ, ಟಿಪ್ಪುಸುಲ್ತಾನರ ಕಾಲಾನಂತರ ಬೆಂಗಳೂರಿನಲ್ಲಿ ನೇಯ್ಗೆಕಾರರು ಸಿದ್ಧಪಡಿಸುತ್ತಿದ್ದ ಬಟ್ಟೆಗಳು, ನೇಯುವುದು, ಬಣ್ಣ ಹಾಕುವುದು ಮುಂತಾದ ವಿವಿಧ ಹಂತಗಳ ಬಗ್ಗೆ ದೇವಾಂಗ, ಪಟ್ಟೆಗಾರ, ನೀಲಗಾರ ಮುಂತಾದ ಕಸಬುದಾರರು 18–19ನೇ ಶತಮಾನದಲ್ಲಿ ಕೈಗೊಳ್ಳುತ್ತಿದ್ದ ನೇಯ್ಗೆ ವಿಧಾನಗಳ ಬಗ್ಗೆ ಮಾಹಿತಿ ಲಭ್ಯವಿದೆ. ಮತ್ತೊಬ್ಬ ವಿದೇಶಿ ಪ್ರವಾಸಿಗ ಹೋಮ್ಸ್‌ರವರ 'ಸೆಲೆಕ್ಟ್ ವ್ಯೂಸ್' (1808)ರಲ್ಲಿ ಬೆಂಗಳೂರಿನ ಟಿಪ್ಪು ಅರಮನೆ, ಅಲಸೂರು ಕೆರೆ ಮುಂತಾದ ದೃಶ್ಯಗಳನ್ನು ಕಣ್ಣಾರೆ ಕಂಡು ಸ್ವತಃ ಹೋಮ್‌ರವರೇ ಚಿತ್ರಿಸಿರುವುದು ವಿಶೇಷ. ಇವಾನ್ಸ್ ಬೆಲ್‌ರವರ 'ಮೆಮಾಯಿರ್ಸ್ ಆಫ್ ಜನರಲ್ ಜಾನ್ ಬ್ರಿಗ್ಸ್ ಆಫ್ ಮದ್ರಾಸ್ ಆರ್ಮಿ ವಿತ್ ಕಾಮೆಂಟ್ಸ್ ಆನ್ ಸಮ್ ಆಫ್ ಹಿಸ್ ವರ್ಡ್ಸ್ ಎಂಡ್ ವರ್ಕ್ಸ್ (1885)' ಎಂಬ ಪುಸ್ತಕದಲ್ಲಿ ಬ್ರಿಟಿಷ್ ಕಮೀಷನರುಗಳ ಪ್ರಾರಂಭಿಕ ಆಡಳಿತದಲ್ಲಿ ಸೀನಿಯರ್ ಕಮೀಷನರ್ ಆಗಿದ್ದ ಕರ್ನಲ್ ಬ್ರಿಗ್ಸ್‌ರವರು ಬೆಂಗಳೂರಿನ ಮಿಲಿಟರಿ ಸ್ಟೇಷನ್‌ನಲ್ಲಿ ಎದುರಿಸಿದ ಸಮಸ್ಯೆಗಳ ಬಗ್ಗೆ ವಿವರಿಸಲಾಗಿದೆ. ಆಡಳಿತದ ವಿರುದ್ಧ ಸೇನೆಯಲ್ಲಿದ್ದ ಮುಸಲ್ಮಾನ ಸೈನಿಕರು ಎಬ್ಬಿಸಿದ ದಂಗೆಯ ಬಗ್ಗೆ, ಬೆಂಗಳೂರಿನ ಸೇಂಟ್ ಮೇರಿ ಚರ್ಚಿನಲ್ಲಿ ಹಂದಿಯ ತಲೆ ಎಸೆದು ಮಾಡಿಸಿದಂತಹ ಗಲಭೆ ಇತ್ಯಾದಿ ಕುರಿತಂತೆ ಇದು ಮಾಹಿತಿ ನೀಡುತ್ತದೆ. ಮತ್ತೊಬ್ಬ ಕಮೀಷನರ್ ಆಗಿದ್ದ ಲೆವಿನ್ ಬೆಂಥಾಮ್ ಬೌರಿಂಗ್‌ರ 'Eastern Experiences (1872)' ಎಂಬ ಅನುಭವ ಕಥನದಲ್ಲಿ ಬೆಂಗಳೂರಿನ ಕಂಟೋನ್ಮೆಂಟ್‌ನಲ್ಲಿ ಅರಬ್ಬರು, ಆಫ್ಘಾನರು, ಪಾರ್ಸಿಗಳು, ಯುರೋಪಿಯನ್ನರು ಹಾಗೂ ಇಂಗ್ಲಿಷ್, ತಮಿಳು, ತೆಲುಗು ಭಾಷೆಗಳನ್ನು ಮಾತನಾಡುತ್ತಿದ್ದ ಜನಗಳಿದ್ದರೆಂದು ಮಾಹಿತಿ ನೀಡುತ್ತಾ ಅಂದಿನ ಬೆಂಗಳೂರು ಮದ್ರಾಸ್ ನಂತರದ ಎರಡನೆಯ ದೊಡ್ಡ ಪಟ್ಟಣವಾಗಿತ್ತೆಂದು ಹಾಗೂ ಶ್ರೀರಂಗಪಟ್ಟಣದ ನಾಲ್ಕು ಪಟ್ಟು ಮುನಿಸಿಪಲ್ ಆದಾಯವಿತ್ತೆಂದು ತಿಳಿಸುತ್ತಾರೆ.

ಜೆ. ಹೆಚ್. ಸ್ಟೀಫನ್‌ರವರ 'ಪ್ಲೇಗ್ ಪ್ರೂಫ್ ಟೌನ್ ಪ್ಲಾನಿಂಗ್ ಇನ್ ಬೆಂಗಳೂರು, ಸೌತ್ ಇಂಡಿಯಾ' (1914) ಎಂಬ ಪುಸ್ತಕ 1898ರಲ್ಲಿ ಬೆಂಗಳೂರಿನಲ್ಲಿ ಉಂಟಾದ ಪ್ಲೇಗ್ ಪಿಡುಗಿನಿಂದಾದ ಬದಲಾವಣೆಗಳು, ಆಧುನಿಕ ಅವಿಷ್ಕಾರಗಳು, ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅನುಸರಿಸಬಹುದಾದ ವಿಧಾನಗಳು ಮುಂತಾದವುಗಳ ಬಗ್ಗೆ ಮಾಹಿತಿ ನೀಡುತ್ತದೆ. ಮೇಜರ್ ಇಲಿಯಟ್‌ರವರ 'ರಿಪೋರ್ಟ್ ಆನ್ ಮೈಸೂರು ಫ್ಯಾಮಿನ್' (1878) ಮತ್ತು ವಿಲಿಯಂ ಡಿಗ್ಬಿಯವರ 'ಫ್ಯಾಮಿನ್ ಕ್ಯಾಂಪೇನ್ ಇನ್ ಸದರನ್ ಇಂಡಿಯಾ (1876–78)' (1878) ಕೃತಿಗಳು ಬೆಂಗಳೂರಿನಲ್ಲಿ 1876–78ರಲ್ಲಿ ಉಂಟಾದ ಭೀಕರ ಕ್ಷಾಮದ ಬಗ್ಗೆ ಬೆಳಕನ್ನು ಚೆಲ್ಲುತ್ತವೆ. ಮತ್ತೊಂದು ಉಲ್ಲೇಖಿಸಬಹುದಾದ ಕೃತಿಯೆಂದರೆ ಅಬ್ಬೆ ದುಬ್ಬಾಯ್ಸ್‌ರವರ 'ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಎಂಡ್ ಸೆರೆಮೋನೀಸ್, (1906), ಕರ್ನಲ್ ಮೆಕೆಂಜಿಯ ಅಪ್ರಕಟಿತ 'ರಿಪೋರ್ಟ್ ಆನ್ ಸರ್ವೇ ಆಫ್ ಮೈಸೂರು' (7 ಸಂಪುಟಗಳು) (1801–06) ಮೈಸೂರು, ಬೆಂಗಳೂರು, ಚಿತ್ರದುರ್ಗ, ಬಿದನೂರು ಮುಂತಾದ ಜಿಲ್ಲೆಗಳ ಬಗ್ಗೆ ಮಾಹಿತಿ ನೀಡುತ್ತದೆ.

ಅಪ್ರಕಟಿತ ಪ್ರಾಥಮಿಕ ಆಧಾರಗಳು

ಮೇಲ್ಕಂಡ ವಿಷಯಗಳ ಸಮಗ್ರ ಅಧ್ಯಯನದಲ್ಲಿ ಮೈಸೂರು ಸರ್ಕಾರದ ಸಚಿವಾಲಯದ ದಾಖಲೆಗಳು ಪ್ರಾಥಮಿಕ ಆಕರ ಸಾಮಗ್ರಿಗಳಾಗಿ ಬಹು ಮುಖ್ಯವಾಗಿವೆ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು, ಇಲ್ಲಿ ಲಭ್ಯವಿರುವ ಸುಮಾರು 30 ಇಲಾಖೆಗಳ (1811 ರಿಂದ 1947) ಸ್ವಾತಂತ್ರ್ಯ ಪೂರ್ವ ದಾಖಲೆಗಳ ಪೈಕಿ ಅವಶ್ಯಕವಾಗಿ ಅಧ್ಯಯನ ಮಾಡಲೇಬೇಕಾದ ದಾಖಲೆಗಳೆಂದರೆ.

ಜನರಲ್ ಮಿಸಲ್ಲೇನಿಯಸ್, (1836–1942)

ಮುನಿಸಿಪಲ್ (1811–1945)

ಮೆಡಿಕಲ್ (1831–1942)

ವಿದ್ಯಾ ಇಲಾಖೆ (1851–1953)

ಕೈಗಾರಿಕೆ ಮತ್ತು ವಾಣಿಜ್ಯ (1872–1946)

ಗೃಹ (ಇಲಾಖೆಯ ಕಡತಗಳಲ್ಲಿ ವಿಶೇಷವಾಗಿ ಪೋಲೀಸ್ (1832–1942) ಮತ್ತು ಕೋರ್ಟ್ಸ್ (1855–1925)

ಕಂದಾಯ (1904–1924)

ಸಾಮಾನ್ಯ ಹಣಕಾಸು (1845–1940)

ಲೆಜಿಸ್ಲೇಟಿವ್ (1904–1942)

ಗಾರ್ಡನ್ಸ್ (1926–1942)

ದಿವಾನರ ಕಛೇರಿ ಕಡತಗಳು (1899–1906)

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ರೆಸಿಡೆನ್ಸಿ 1881–1947)

ಇದರೊಂದಿಗೆ ಬೆಂಗಳೂರು ಡಿವಿಜನ್ ಮತ್ತು ಜಿಲ್ಲಾ ಆಡಳಿತಕ್ಕೆ ಸಂಬಂಧಿಸಿದ ದಾಖಲೆಗಳು, ಫಿರ್ಯಾದ್ ಪುಸ್ತಕಗಳು ಇತ್ಯಾದಿ ಬೆಂಗಳೂರಿನಲ್ಲಿ ಕಮೀಷನರ್ ಕಾಲದ ಆಡಳಿತ ಕುರಿತಂತೆ ಮಾಹಿತಿ ಮೂಲಗಳಾಗಿವೆ.

ಮೈಸೂರು ವಿಭಾಗೀಯ ಪತ್ರಾಗಾರ ಕಛೇರಿಯಲ್ಲಿರುವ ಅರಮನೆಯ 39 ಇಲಾಖೆಗಳ ಕಡತಗಳಲ್ಲಿ ಬೆಂಗಳೂರು ಅರಮನೆ ಕಛೇರಿ ದಾಖಲೆಗಳು ಸಹ ಬೆಂಗಳೂರಿಗೆ ಸಂಬಂಧಿಸಿದ ಮಾಹಿತಿ ನೀಡುತ್ತವೆ.

ವೃತ್ತ ಪತ್ರಿಕೆಗಳು

ಬೆಂಗಳೂರಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಆಡಳಿತಾತ್ಮಕ ವ್ಯವಸ್ಥೆಗಳಲ್ಲುಂಟಾಗುತ್ತಿದ್ದ ಲೋಪ ದೋಷಗಳು, ಮುಂತಾದವುಗಳನ್ನು ಟೀಕೆ–ಟಿಪ್ಪಣಿಗಳೊಂದಿಗೆ ವೃತ್ತ ಪತ್ರಿಕೆಗಳು, ನಿಯತಕಾಲಿಕೆಗಳಲ್ಲಿ ವಿಮರ್ಶಿಸುತ್ತಿದ್ದುದು ಉಲ್ಲೇಖನೀಯ. ದಿವಾನ್ ವಿ. ಪಿ. ಮಾಧವರಾಯರ ಕಾಲದಲ್ಲಿ ಜಾರಿಗೆ ಬಂದ ವೃತ್ತ ಪತ್ರಿಕಾ ಕಾನೂನು ಪತ್ರಿಕಾ ಸ್ವಾತಂತ್ರ್ಯಕ್ಕೆ ಭಂಗ ಉಂಟುಮಾಡಿದರೂ ಸಾರ್ವಜನಿಕರಲ್ಲಿ ಜಾಗೃತಿ ಉಂಟು ಮಾಡಲು ಕಾರಣವಾಯಿತು. ಈ ಪೈಕಿ ಮುಖ್ಯವಾಗಿ ಉಲ್ಲೇಖಿಸಬಹುದಾದ ಪತ್ರಿಕೆಗಳೆಂದರೆ–'ಬೆಂಗಳೂರು ಮೇಲ್', 'ಡೈಲಿ ಪೋಸ್ಟ್', 'ಈವನಿಂಗ್ ಮೇಲ್', 'ಗಾರ್ಡಿಯನ್', 'ಡೆಕ್ಕನ್ ಹೆರಾಲ್ಡ್', ಮದ್ರಾಸಿನ 'ಇಂಡಿಯನ್ ರಿವ್ಯೂ', 'ಜಸ್ಟಿಸ್', 'ಯುನೈಟೆಡ್ ಇಂಡಿಯಾ ಅಂಡ್ ದಿ ನೇಟಿವ್ ಸ್ಟೇಟ್ಸ್', ಯಂಗ್ ಥಿಯೋಸೊಫಿಸ್ಟ್, ಮುಂತಾದವು. ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಕನ್ನಡ ಪತ್ರಿಕೆಗಳಾದ 'ಕರ್ನಾಟಕ', 'ಕರ್ನಾಟಕ ಪ್ರಕಾಶಿಕಾ', 'ವೃತ್ತಾಂತ ಪತ್ರಿಕೆ', 'ವಿಶ್ವ ಕರ್ನಾಟಕ', 'ತಾಯಿನಾಡು', ಮೊದಲಾದ ವೃತ್ತ ಪತ್ರಿಕೆಗಳು ಹತ್ತನೆಯ ಚಾಮರಾಜ ಒಡೆಯರ್ (1881–1894), ನಾಲ್ವಡಿ ಕೃಷ್ಣರಾಜ ಒಡೆಯರ್ (1902–1940) ಮತ್ತು ಕೊನೆಯ ರಾಜರಾದ ಜಯಚಾಮರಾಜ ಒಡೆಯರ್ (1940–47)ರವರ ಆಡಳಿತಾವಧಿಯ ಪ್ರಮುಖ ಪ್ರಸಂಗಗಳ ಬಗ್ಗೆ ಮಾಹಿತಿ ನೀಡುತ್ತವೆ.

ಮೈಸೂರಿನಿಂದ ಹೊರಡುತ್ತಿದ್ದ 'ಪಂಚಾಚಾರ್ಯಪ್ರಭ', 'ಮೈಸೂರು ಸ್ಟಾರ್', ಸಂಪದಭ್ಯುದಯ, 'ಸಾಧ್ವಿ', 'ದಿ ರ್‍ಯಾಷನಲಿಸ್ಟ್', 'ಸಮಾಚಾರ್' ಮುಂತಾದ ಪತ್ರಿಕೆಗಳು ಆಡಳಿತದ ಕೆಲವು ಕುತೂಹಲಕಾರಿ ಘಟನೆಗಳ ಬಗ್ಗೆ ವಿವರ ನೀಡುತ್ತವೆ. ಇದಲ್ಲದೆ ಮೈಸೂರು ವಿಭಾಗೀಯ ಪತ್ರಾಗಾರದಲ್ಲಿರುವ 'ಮೈಸೂರು ಅರಮನೆ ಪ್ರೆಸ್ ಕಟಿಂಗ್ಸ್' (1906–30) ಸಂಪುಟಗಳಲ್ಲಿ, ಬೆಂಗಳೂರಿನ ಮಾರುಕಟ್ಟೆ, ವೃತ್ತಗಳು, ಕುದುರೆ ರೇಸ್, ಗಾಲ್ಫ್, ಕ್ರಿಕೆಟ್, ಅಲಂಕೃತ ಸೈಕಲ್ ರೇಸ್, ಮುಂತಾದ ಸಂಗತಿಗಳ ಬಗೆಗೆ ಸ್ವಾರಸ್ಯಕರ ಮಾಹಿತಿ ನೀಡುತ್ತವೆ. ಬಹುತೇಕ ಈ ವೃತ್ತ ಪತ್ರಿಕೆಗಳು ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು, ಮೈಸೂರು ವಿಭಾಗೀಯ ಪತ್ರಾಗಾರ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು, ಇಲ್ಲಿ ಪರಾಮರ್ಶನೆಗೆ ಲಭ್ಯವಿವೆ.

ಮತ್ತೊಂದು ವಿಶೇಷ ಸಂಗ್ರಹವೆಂದರೆ 'ಮದ್ರಾಸ್ ನೇಟಿವ್ ನ್ಯೂಸ್ ಪೇಪರ್ ರಿಪೋರ್ಟ್‌ಗಳು' (1886–1936). ಇವು ತಮಿಳುನಾಡು ಪತ್ರಾಗಾರ, ಚೆನ್ನೈ, ಹಾಗೂ ನವದೆಹಲಿಯ ರಾಷ್ಟ್ರೀಯ ಪತ್ರಾಗಾರದಲ್ಲಿಯೂ ಲಭ್ಯವಿದ್ದು ವೃತ್ತ ಪತ್ರಿಕಾ ವರದಿಗಳನ್ನೊಳಗೊಂಡು ಉತ್ತಮ ಆಕರ ಸಾಮಗ್ರಿಗಳೆನಿಸಿವೆ.

ಜರ್ನಲ್, ಸ್ಮರಣ ಸಂಚಿಕೆಗಳು ಇತ್ಯಾದಿ

ಇದಲ್ಲದೆ ಕ್ವಾರ್ಟರ್‌ಲೀ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ, Quarterly Journal of Mythic Society (QJMS) ಸಂಪುಟಗಳು, ಮೈಸೂರು ದಸರಾ ಸ್ಮರಣ ಸಂಚಿಕೆಗಳು, ಬೆಂಗಳೂರಿನ ಒಕ್ಕಲಿಗರ ಸಂಘ, ಮಹಿಳಾ ಸಮಾಜ, ಆರ್ಯ ಸಮಾಜ, ಬ್ರಹ್ಮ ಸಮಾಜ, ರಾಮಕೃಷ್ಣ ಆಶ್ರಮ, ಶಾರದಾ ಸ್ತ್ರೀ ಸಮಾಜ, ಕನ್ನಡ ಸಾಹಿತ್ಯ ಪರಿಷತ್ತು, ಮುಂತಾದೆಡೆ ಲಭ್ಯವಿರುವ ಸ್ಮರಣ ಸಂಚಿಕೆಗಳು ಬೆಂಗಳೂರನ್ನು ಕುರಿತ ಉಪಯುಕ್ತ ಲೇಖನಗಳನ್ನು ಹೊಂದಿವೆ. ಇದಲ್ಲದೆ 1987ರಲ್ಲಿ ಬೆಂಗಳೂರು ಮಿಥಿಕ್ ಸೊಸೈಟಿಯಲ್ಲಿ ಜರುಗಿದ 'ಬೆಂಗಳೂರು ಇತಿಹಾಸ' ಕುರಿತ ವಿಚಾರ ಸಂಕಿರಣದಲ್ಲಿ ಅನೇಕ ಹಿರಿಯ ಸಂಶೋಧಕರುಗಳು ಮಂಡಿಸಿದ ಪ್ರಬಂಧಗಳು ಉಪಯುಕ್ತ ವಿವರಗಳನ್ನೊಳಗೊಂಡಿವೆ.

ಇದರೊಂದಿಗೆ Indian Institute of Science ಸಂಸ್ಥೆಯಿಂದ ಅಮೂಲ್ಯ ರೆಡ್ಡಿಯವರು ಸಂಪಾದಿಸಿರುವ 'Essays on Bangalore' (1985) ಬೆಂಗಳೂರಿನ ನೀರು ಸರಬರಾಜು, ಒಳಚರಂಡಿ ಮುಂತಾದ ನಾಗರೀಕ ಸೌಲಭ್ಯಗಳ ಬಗ್ಗೆ ಹಾಗೂ ಹೌಸ್ ಆಫ್ ಬಿನ್ನಿ ದಾಖಲೆ ಬಿನ್ನಿ ಮಿಲ್‌ಗೆ ಸಂಬಂಧಿಸಿದಂತೆಯೂ ಇವೆ.

ಹೀಗೆ ಬೆಂಗಳೂರು ನಗರದ ಇತಿಹಾಸ ಪುನರ್ರಚನೆಗೆ ಸಂಬಂಧಿಸಿದ ಮೂಲ ಆಕರ ಸಾಮಗ್ರಿಗಳು ಬಹು ತೇಕ ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿ ಲಭ್ಯವಿದ್ದು ಉಪಯುಕ್ತ ಮಾಹಿತಿ ಒದಗಿಸುತ್ತವೆ. ಇದಲ್ಲದೆ ರಾಜ್ಯ ಪತ್ರಾಗಾರದಲ್ಲಿ ಸಂಗ್ರಹಿಸಲ್ಪಟ್ಟಿರುವ ಮೌಖಿಕ ದಾಖಲೆಗಳು ಸಹ ಬೆಂಗಳೂರಿನಲ್ಲಿ ನಡೆದ ಅನೇಕ ಸ್ಮರಣೀಯ ಘಟನೆಗಳ ಬಗ್ಗೆ ವಿವರಗಳನ್ನು ನೀಡುತ್ತವೆ.

9. ಬೇಲಿಮಠದ ಶಾಸನ

ಡಾ. ಡಿ. ವಿ. ಪರಮಶಿವಮೂರ್ತಿ

ಪ್ರಸ್ತುತ ಶಾಸನವು ಬೆಂಗಳೂರು ನಗರದ ಬಿನ್ನಿಮಿಲ್ಲಿನ ಬಲಪಕ್ಕಕ್ಕಿರುವ ಬೇಲಿಮಠದ ಆವರಣದಲ್ಲಿದೆ. ಮಠದ ಆವರಣದಲ್ಲಿರುವ ದೇವಾಲಯದ ಬಲಪಕ್ಕಕ್ಕಿರುವ ಬಸವನ ಮಂಟಪದ ಹಿಂಭಾಗದ ಗೋಡೆಯ ತಳಭಾಗದಲ್ಲಿ ಈ ಶಾಸನವಿದೆ. ಶಾಸನದ ಕಾಲ ಕ್ರಿ. ಶ. 1761, ಶಾಸನದ ಉದ್ದ 88 ಸೆಂ.ಮೀ., ಅಗಲ 20 ಸೆಂ.ಮೀ. ಶಾಸನದ ಪಾಠ ಐದುಸಾಲುಗಳಿದ್ದು, ಲಿಪಿಯು ಸ್ಫುಟವಾಗಿದೆ. ಈ ಶಾಸನದ ಶಿಲೆಯ ಹಿಂಭಾಗದಲ್ಲಿ ಮಂಟಪದ ಒಳಗೆ ಉತ್ತರಕ್ಕೆ ಅಭಿಮುಖವಾಗಿ ಪಾದಗಳನ್ನು ಕೆತ್ತಲಾಗಿದೆ.

ಈ ಶಾಸನದಲ್ಲಿ ಹೊಸಕೋಟೆಯ ಮಹಂತೇಶ್ವರ ಪ್ರಭು ಮತ್ತು ಅವರ ಆಪ್ತಶಿಷ್ಯರಾದ ಮರಿಸಿದ್ಧಲಿಂಗ ದೇಶಿಕರ ಉಲ್ಲೇಖವಿದೆ. ಮಹಂತೇಶ್ವರ ಪ್ರಭುವು ಶಿವೈಕ್ಯರಾದಾಗ ಶಿಷ್ಯರಾದ ಮರಿಸಿದ್ದಲಿಂಗ ದೇಶಿಕರು ಸಮಾಧಿಯನ್ನು ನಿರ್ಮಿಸಿದ ವಿಷಯವನ್ನು ಇದು ಹೇಳುತ್ತದೆ. ಶಾಸನದಲ್ಲೇ ಅಲ್ಲದೆ ಕಾವ್ಯಗಳಲ್ಲಿಯೂ ನಾವು ಈ ಗುರು–ಶಿಷ್ಯರ ಸಂಬಂಧವನ್ನು ಗುರುತಿಸಬಹುದು. ಈ ಮರಿಸಿದ್ದಲಿಂಗ ದೇಶಿಕರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳಾದ 'ಮಾಲಾಟೀಕೆ' ಮತ್ತು 'ಏಕೋತ್ತರಶತಸ್ಥಲ ವಾಖ್ಯಾನ'ಗಳಲ್ಲಿ ತಮ್ಮ ಗುರುಗಳಾದ ಹೊಸಕೋಟೆ ಮಹಂತೇಶ್ವರ ಪ್ರಭುಗಳನ್ನು ಉಲ್ಲೇಖಿಸಿದ್ದಾರೆ:

ವರ ಹೊಸಕೋಟೆಯ ಮಹಾಂತೇ
ಶ್ವರನನು ಭವದೊಳಗೆ ಪೇಳ್ದ ಶಬ್ದ ಸಮೂಹನ
ಪರಿವಿಡಿಗಳಿಂದ ಸೇರಿಸಿ
ಬರೆದ ಮರಿಸಿದ್ಧಲಿಂಗ ದೇಶಿಕದೇವಂ[1]

ಶಿವಾನುಭಾವಿಗಳಾದ ಹೊಸಕೋಟೆಯ
ಮಹಾಂತಸ್ವಾಮಿಯವರ ವಂಶೋದ್ಭವ
ರಾದ ಮರಿಸಿದ್ಧಲಿಂಗಯ್ಯನವರು
ಬರೆಸಿದ ಸ್ಥಲದ ವ್ಯಾಖ್ಯಾನದ ಯಥಾಪ್ರತಿಯು[2]

ಮೇಲೆ ಉಲ್ಲೇಖವಾಗಿರುವ 'ಮಹಂತೇಶ್ವರನನು ಭವದೊಳಗೆ ಪೇಳ್ದ ಶಬ್ದ ಸಮೂಹನ. . .', 'ಶಿವಾನು ಭವಿಗಳಾದ' ಮುಂತಾದ ಮಾತುಗಳಿಂದ ಮತ್ತು ಶಾಸನದಲ್ಲಿ ಬಂದಿರುವ 'ಸಡುಸ್ತಲ ಚಕ್ರವರ್ತಿ' (ಷಟ್‌ಸ್ಥಲ ಚಕ್ರವರ್ತಿ) ಎಂಬ ಉಲ್ಲೇಖಗಳಿಂದ ಮಹಂತೇಶ ಪ್ರಭುಗಳು ಅನುಭಾವಿಗಳೂ, ದಾರ್ಶನಿಕರೂ ಮತ್ತು ಧಾರ್ಮಿಕ ಸಾಧನೆ ಸಿದ್ದಿಯನ್ನು ಪಡೆದವರೂ ಆಗಿದ್ದರು ಎಂಬು ಹೇಳಬಹುದು.

ಡಾ॥ ವೀರಣ್ಣ ರಾಜೂರ ಅವರು 'ಮಹಂತಿನ ತಾರಾವಳಿ' ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಇದರ ಕರ್ತೃ ಮರಿಸಿದ್ಧಲಿಂಗ ದೇಶಿಕ ಎಂಬುವನೇ, ಅವರು ತಮ್ಮ ಕೃತಿಯ ಪ್ರಸ್ತಾಪದಲ್ಲಿ ". . .ಇವನು ತೋಂಟದ

ಸಿದ್ಧಲಿಂಗ ಯತಿಗಳ ಶಿಷ್ಯ ಪರಂಪರೆಗೆ ಸೇರಿದವನಾಗಿದ್ದು, ಸುಮಾರು 17ನೇ ಶತಮಾನದಲ್ಲಿ ಆಗಿ ಹೋದವನಿರಬೇಕೆಂದು ಊಹಿಸಬಹುದಾಗಿದೆ" ಎಂದಿದ್ದಾರೆ. [3] ಈ ತಾರಾವಳಿಯ ಕೊನೆಯಲ್ಲಿರುವ ಒಂದು ಕಂದ ಪದ್ಯ ಹೀಗಿದೆ:

ಧರೆಯೊಳು ಗುರುಮಹಂತಿನ
ಬಿರುದಾವಳಿ ಮಹಿಮೆಯೆನಿಪ ತಾರಾವಳಿಯಂ
ಶರಣರು ಬರೆದೋದೆ ಮೋಕ್ಷವು
ದೊರೆವುದು ಮರಿಸಿದ್ಧಲಿಂಗದೇಶಿಕ ರಜತಂ। [4]

ಈ ಪದ್ಯದಿಂದ ಮಹಂತಿನ ತಾರಾವಳಿಯನ್ನು ಬರೆದವರು ಯಾರೆಂಬುದು ಸ್ಪಷ್ಟವಾಗುತ್ತದೆ. ಈ ಶಾಸನದಲ್ಲೂ ಇದೇ ಹೆಸರಿರುವುದರಿಂದ ಇವರಿಬ್ಬರೂ ಒಬ್ಬನೇ ಆಗಿರಬೇಕು. ಶಾಸನದ ಕಾಲ ಕ್ರಿ. ಶ. 1761 ಎಂದು ಖಚಿತವಾಗಿರುವುದರಿಂದ, ಮೇಲಿನ ತಾರಾವಳಿಯ ಸಂಪಾದಕರು ಹೇಳಿರುವಂತೆ ಮರಿಸಿದ್ಧಲಿಂಗ ದೇಶಿಕರ ಕಾಲ ಸುಮಾರು 17ನೇ ಶತಮಾನವಲ್ಲ, ಅದು 18ನೇ ಶತಮಾನ (ಕ್ರಿ. ಶ. 1761) ಎಂದು ಹೇಳಬಹುದಾಗಿದೆ.[5] ಕವಿಚರಿತಕಾರರು ಉಲ್ಲೇಖ ಮಾಡಿರುವ ಪಟ್ಟುಗಂಬಳಿ ಸಿದ್ಧಲಿಂಗಸ್ವಾಮಿ[6] (ಕಾಲ:ಕ್ರಿ. ಶ. 1700) ಯನ್ನು ಶ್ರೀ ಎಸ್. ಶಿವಣ್ಣನವರು ಇವನು ಮರಿಸಿದ್ಧಲಿಂಗ ದೇಶಿಕನಿರಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ, ಮತ್ತು 'ಅಷ್ಟಾವರಣ ಪ್ರಶಸ್ತಿ' ಹಾಗೂ 'ಭಾವಚಿಂತಾರತ್ನ ಟೀಕೆ' ಎಂಬ ಕೃತಿಗಳನ್ನು ಅವನ ಹೆಸರಿನಲ್ಲಿ ಉಲ್ಲೇಖಿಸಿದ್ದಾರೆ.[7]

ಈ ಶಾಸನದ ಮತ್ತೊಂದು ಮುಖ್ಯ ವೈಶಿಷ್ಟವೆಂದರೆ, ಈ ಶಾಸನದಲ್ಲಿ 'ಶಿವಾನುಭಾವಿ', 'ಶಿವಯೋಗ', 'ಶೂನ್ಯಸಿಂಹಾಸನ', 'ಅನುಭವ ಮಂಟಪ', ಸಡುಸ್ತಲ ಚಕ್ರವರ್ತಿ (ಷಟ್‌ಸ್ಥಲ ಚಕ್ರವರ್ತಿ), 'ಮುಕ್ತಿ ಮಂಟಪ' ಮುಂತಾದ ವೀರಶೈವ ಪಾರಿಭಾಷಿಕ ಶಬ್ದಗಳ ಪ್ರಯೋಗಗಳಿವೆ. ಒಂದೇ ಶಾಸನದಲ್ಲಿ ಇಷ್ಟೊಂದು ವೀರಶೈವ ಪಾರಿಭಾಷಿಕ ಪದಗಳ ಪ್ರಯೋಗ ಅಪರೂಪವಾದುದಾಗಿದೆ. ಈ ದೃಷ್ಟಿಯಿಂದ ಈ ಶಾಸನ ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಶಾಸನದಲ್ಲಿ ಮಹಂತೇಶ್ವರ ಪ್ರಭುಗಳನ್ನು 'ಹೊಸ ಕೋಟೆಯ ಮಹಂತೇಶ್ವರ ಪ್ರಭು' ಎಂದು ಕರೆದಿರುವುದರಿಂದ, ಹೊಸಕೋಟೆಗೆ ಭೇಟಿಯಿತ್ತು ಪರಿಶೀಲಿಸಿದಾಗ, ಅಲ್ಲಿ ಮಹಂತೇಶ್ವರ ಮಠವಿರುವುದು ಕಂಡುಬಂದಿದೆಯಾದರೂ ಶಾಸನಕ್ಕೆ ಪೂರಕವಾದ ಯಾವ ದಾಖಲೆಗಳೂ ಕಂಡುಬರುವುದಿಲ್ಲ.[8] ಆದರೂ ಹೊಸಕೋಟೆಯ ಮಹಂತೇಶಮಠಕ್ಕೂ, ಬೆಂಗಳೂರಿನ ಬೇಲಿಮಠಕ್ಕೂ ಯಾವ ರೀತಿಯದಾದರೂ ಸಂಬಂಧ ಇದ್ದಿರಬಹುದು. ಈ ಎಲ್ಲ ವಿಷಯಗಳ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

ಶಾಸನ ಪಾಠ

1. ಶ್ರೀಮತು ಶಿವಾನುಭಾವಿಗಳಾದ ಹೊಸಕೋಟೆಯ ಮಹಂತೇಶ್ವರ ಪ್ರಭು ಉವಿಸು ಸಂವತ್ಸರ
2. ದ ಮಾರ್ಗಶಿರ ಮಾಸ ಶುದ್ಧ ಪಂಚಮಿಯ ಸೋಮವಾರದಲ್ಲಿ ಶಿವಯೋಗದೊಳು ನೆಲಸಿ
3. ದ ಶೂನ್ಯಸಿಂವ್ಹಾಸನದ ಮೇಲಣ ಅನುಭವ ಮಂಟಪ ಪಾಲ್ಗುಣದಲ್ಲಿ ನಿರ್ಮಿತವಾಯ್ತು
4. ಶ್ರೀಮತು ಸಡುಸ್ತಲ ಚಕ್ರವರ್ತಿ ಯೆಂನೊಡೆಯ ಹೊಸಕೋಟೆಯ ಮಹಂತ ಗುರುಮೂರ್ತಿಯ ಪಾದಾ

5. ಂಬುಜಭೃಂಗ ಮರಿಸಿದ್ಧಲಿಂಗ ದೇಸಿಕ ರಚಿತ ಮುಕ್ತಿಮಂಟಪ ಕುಸುಮ ತವ ಚರಣ ಸಮರ್ಪಣಂ

ಸಾರಾಂಶ: ಶಿವಯೋಗಿಗಳಾದ ಹೊಸ ಕೋಟೆಯ ಮಹಾಂತೇಶ್ವರ ಪ್ರಭುಗಳು ಶಿವೈಕ್ಯರಾದಾಗ ಈ ಶೂನ್ಯಸಿಂಹಾಸನದ ಮೇಲಣ ಅನುಭವಮಂಟಪ ಫಾಲ್ಗುಣದಲ್ಲಿ ನಿರ್ಮಿತವಾಯಿತು. ಇದನ್ನು ಷಟ್‌ಸ್ಥಲ ಚಕ್ರವರ್ತಿಯಾದ ಮಹಂತೇಶ್ವರ ಪ್ರಭುಗಳ ಆಪ್ತ ಶಿಷ್ಯನಾದ ಮರಿಸಿದ್ಧಲಿಂಗದೇಶಿಕನು ರಚಿಸಿ ಅವರ ಪಾದಗಳಿಗೆ ಅರ್ಪಿಸಿದನು.

ಉಲ್ಲೇಖಗಳು

1. ಜಿ. ಎಮ್. ಉಮಾಪತಿಶಾಸ್ತ್ರಿ (ಸಂ.); *ಮರಿಸಿದ್ಧಲಿಂಗನ 'ಮಾಲಾಟೀಕೆ',* ಅಂತ್ಯೋಲ್ಲೇಖ (107–13)
2. ಡಾ. ಬಿ. ಆರ್. ಹಿರೇಮಠ: *ಹಸ್ತಪ್ರತಿ–ಲಿಪಿಕಾರರು* (ಏಕೋತ್ತರ ಶತಸ್ಥಲದ ಉಲ್ಲೇಖ) ಸಾಧನೆ 12–2 (1987), ಪು.48
3. ಡಾ. ವೀರಣ್ಣ ರಾಜೂರ: *ಮಹಂತಿನ ತಾರಾವಳಿ,* ಪರಂಜ್ಯೋತಿ, 16–4 (1983), ಪು.204
4. ಅದೇ, ಅಂತ್ಯದ ಕಂದ ಪದ್ಯ, ಪು.209
5. ಇವರು ತಮ್ಮ 'ಮಹಂತಿನ ತಾರಾವಳಿ'ಯ ಅನೇಕ ಕಡೆ 'ಗುರುಮಹಂತ', 'ಮಹಂತಿನಿ' ಎಂಬ ಮಾತುಗಳನ್ನು ಬಳಸಿರುವುದರಿಂದ, ಅವರು 'ಮಹಂತೇಶ್ವರ ಪ್ರಭುಗಳು' ಆಗಿರಬಹುದು ಎಂದು ಊಹಿಸಬಹುದು.
6. ಆರ್. ನರಸಿಂಹಚಾರ್: *ಕರ್ನಾಟಕ ಕವಿಚರಿತೆ,* ಸಂ.2, ಪು.498
7. ಎಸ್. ಶಿವಣ್ಣ: ಸಮಗ್ರ *ಕನ್ನಡ ಸಾಹಿತ್ಯ ಚರಿತ್ರೆ,* ಸಂ.4, ಅನುಬಂಧ, ಪು.476
8. ಇಂದು ಆ ಮಠ ಮನೆಯಾಗಿ ಪರಿವರ್ತನೆಯಾಗಿ ಅಸ್ತಿತ್ವ ಕಳೆದುಕೊಂಡಿದೆ.

10. ಬೆಂಗಳೂರಿನ ದೊಡ್ಡ ಬಸವಣ್ಣ ದೇವಾಲಯದ ಶಾಸನಗಳು

ಶ್ರೀ ವೇಮಗಲ್ ಸೋಮಶೇಖರ್

ಬೆಂಗಳೂರು ನಗರದ ಬಸವನಗುಡಿಯಲ್ಲಿರುವ ದೊಡ್ಡ ಬಸವಣ್ಣನ ದೇವಾಲಯದ ಮುಂಭಾಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನೈಸರ್ಗಿಕವಾದ ಕಪ್ಪು ಬಣ್ಣದ ಕಲ್ಲುಬಂಡೆಗಳು ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಬೃಹದಾಕಾರವಾದವು. ಈ ಬಂಡೆಗಳ ಮೇಲೆ ತಟ್ಟೆಯಾಕಾರದ ಕುಳಿಗಳು ಇರುವುದು ಇಲ್ಲಿಯ ವಿಶೇಷ. ಒಂದೇ ಬಂಡೆಯ ಮೇಲೆ ಸುಮಾರು ಇಪ್ಪತ್ತು ಕುಳಿಗಳಿರುವುದನ್ನು ಇಲ್ಲಿ ಕಾಣಬಹುದು. ಈ ಎಲ್ಲಾ ಕುಳಿಗಳ ವ್ಯಾಸ ಸುಮಾರು ಒಂದು ಅಡಿ, ಆಳ ಮೂರು ಅಂಗುಲ, ಗಮನಾರ್ಹ ಸಂಗತಿಯೆಂದರೆ ಈ ಕುಳಿಗಳ ಮಧ್ಯದಲ್ಲಿ ಎರಡು ಅಂಗುಲ ಆಳವುಳ್ಳ ಒಂದು ಸಣ್ಣ ಕುಳಿ ಇರುವುದು. ಒಂದು ಅಡಿಗಿಂತ ಹೆಚ್ಚು ಅಂತರವಿರುವ ಈ ಎಲ್ಲಾ ಕುಳಿಗಳು ಇಂದಿಗೂ ಸ್ವಲ್ಪವೂ ಸವೆಯದೆ ಕೆತ್ತಲು ಬಳಸಲಾಗಿರುವ ಕಬ್ಬಿಣದ ಕುಳಿಗಳ ಗುರುತುಗಳನ್ನು ಕಾಣಬಹುದು.

ಒಂದನೆಯ ಶಾಸನ

ಈ ಬಂಡೆಗಳ ಸಮೂಹದಲ್ಲಿರುವ ಎತ್ತರವಾದ ಒಂದು ಬಂಡೆಯ ಮೇಲೆ ಕೆಂಪೇಗೌಡರ ಕಾಲದಲ್ಲಿ ಕಹಳೆ ಇರುತ್ತಿದ್ದರಿಂದ ಇದಕ್ಕೆ **'ಕಹಳೆ ಬಂಡೆ'** ಎಂದು ಹೆಸರು ಬಂದಿದ್ದು. ಈಗಲೂ ಇದೇ ಹೆಸರು ಮುಂದುವರೆದಿದೆ. ಈ ಬಂಡೆಯ ಪಕ್ಕದಲ್ಲಿ ಪೂರ್ವಾಭಿಮುಖವಾಗಿ ಒಂದು ಸಾಲಿನ ಶಾಸನವಿದೆ. **'ದೀವಟಿಗೆ ಸೋಮನು... ಕುಲಗುರುಲಿಂಗ'** ಎಂಬುದು ಇದರ ಪಾಠ. ಅಕ್ಷರಗಳ ಲಕ್ಷಣಗಳಿಂದ ಇದು ಹದಿನಾರನೇ ಶತಮಾನದ್ದೆನ್ನಬಹುದು. ಈ ಶಾಸನದ ಕೆಲವೇ ಅಡಿಗಳ ಎದುರಿಗೆ ಹುಟ್ಟು ಬಂಡೆಯಲ್ಲಿಯೇ ಒಂದು ವೇದಿಕೆಯನ್ನು ನಿರ್ಮಿಸಲಾಗಿದೆ. ಸುಮಾರು ನಾಲ್ಕು ಜನ ಕುಳಿತುಕೊಳ್ಳಬಹುದಾದ 12 ಅಡಿ ಉದ್ದ 6 ಅಡಿ ಅಗಲವಿರುವ ಪೀಠ ಇದು. ಸುತ್ತಲೂ ಹೂವಿನ ಬಳ್ಳಿಯ ರೇಖಾಚಿತ್ರಗಳನ್ನು ಹೊಂದಿದ್ದು ಸುಂದರವಾಗಿ ತೋರುತ್ತದೆ. ಮೇಲ್ಭಾಗದಲ್ಲಿ ವೃತ್ತಾಕಾರದ ರೇಖಾಚಿತ್ರವನ್ನು ಹೊಂದಿದೆ.

ಕುಳಿಗಳ ಬಳಿ ಸುತ್ತಲೂ ಎಣ್ಣೆಯ ಜಿಡ್ಡಿನ ಕಪ್ಪಾದ ಗುರುತುಗಳು ಕಾಣಬರುವುದರಿಂದ ಇವುಗಳು ನಾನಾ ಬಗೆಯಲ್ಲಿ ಕುತೂಹಲವನ್ನು ಕೆರಳಿಸುತ್ತವೆ. ಇವುಗಳ ಸ್ವರೂಪ ಮತ್ತು ಇಲ್ಲಿಯೇ ದೊರೆತ ಹಾಗೂ ಮೇಲೆ ಪ್ರಸ್ತಾಪಿಸಿದ ಶಾಸನದ ಹಿನ್ನೆಲೆಯಲ್ಲಿ ಈ ಕುಳಿಗಳೆಲ್ಲವೂ ದೀವಟಿಗೆ (ದೀಪ)ಗಳಿಗೆ ಉಪಯೋಗಿಸುತ್ತಿದ್ದರೆಂಬುದಾಗಿ ಹೇಳಬಹುದು. ಈ ಕುಳಿಗಳ ಮಧ್ಯೆ ಇರುವ ಚಿಕ್ಕ ಕುಳಿಯಲ್ಲಿ ಬತ್ತಿಯನ್ನು ಉದ್ದದ ಕೊಳವೆಯ ಆಧಾರದಿಂದ ನಿಲ್ಲಿಸುವುದಕ್ಕೆ ಅನುಕೂಲವಾಗಲು ಕೆತ್ತಿರುವುದು ಇದನ್ನು ಸಮರ್ಥಿಸುತ್ತದೆ. ಇದೊಂದು ಬಯಲು ಸಂಸ್ಕೃತಿಗೆ ಸಂಬಂಧಿಸಿದ ವಿಶಿಷ್ಟ ಆಚರಣೆಯ ಕುಳಿಗಳು.

ಕೆಂಪೇಗೌಡರ ಕಾಲದಲ್ಲಿ ಶತ್ರುಗಳು ಬರುವುದನ್ನು ಗುರುತಿಸುವುದಕ್ಕಾಗಿ ಬಹು ಎತ್ತರವಾಗಿದ್ದ ಈ ಪ್ರದೇಶದಲ್ಲಿ ಒಂದು ಪಡೆಯನ್ನು ಇರಿಸಲಾಗಿದ್ದಿತು. ಈ ಪಡೆಯ ನಾಯಕನಾಗಿದ್ದವನು ಗುಜ್ಜಲನಾಯಕ ಎಂಬುವನು. ಈತ ತನ್ನ ಜನಾಂಗ (ಬೇಡ)ದ ಕುಲದೇವರಾದ ಬೇಡರಕಣ್ಣಪ್ಪನ ದೇವಾಲಯವನ್ನು ನಿರ್ಮಿಸಿರುವುದು

ಕಾಣಬಹುದು. ಈ ಬೇಡ ಪಡೆಯವರೇ ಇಲ್ಲಿನ ದೀಪಗಳನ್ನು ಹಚ್ಚುತ್ತಿದ್ದರೆನ್ನಬಹುದು. ಇದೇ ರೀತಿಯಾದಂಥ ಒಂದು ಕುಳಿಯನ್ನು ಕೆಂಪಾಂಬುಧಿ ಕೆರೆಯ ಬಳಿ ಇರುವ ನಂಜಾಂಬ ಅಗ್ರಹಾರದ ಬಂಡೆ ಪ್ರದೇಶದಲ್ಲಿನ ಎತ್ತರವಾದ ಒಂದು ಬಂಡೆಯ ಮೇಲಿನ ಕಹಳೆ (ಕಾವಲು) ಗೋಪುರದ ಬಳಿ ಕಾಣಬಹುದಾಗಿದೆ.

ಎರಡನೆಯ ಶಾಸನ

ಬಸವಣ್ಣನ ದೇವಾಲಯದ ಹೊರಭಾಗದಲ್ಲಿನ ಮೆಟ್ಟಲುಗಳ ಬಲಭಾಗದಲ್ಲಿರುವ 5 ಅಡಿ ಅಗಲ 14 ಅಡಿ ಎತ್ತರದ ಬಂಡೆಯ ಮೇಲೆ ಮೂರು ಸಾಲಿನ ಶಾಸನವೊಂದು ಇದೆ. ಇದು ಈಗಾಗಲೇ ಬಸವನ ಪೀಠದಲ್ಲಿರುವ, ಪ್ರಕಟಿತ ಶಾಸನ ಪಾಠವನ್ನು ಹೋಲುತ್ತದೆ. ಆ ಶಾಸನ **'ಯೀ ಬಸವೇಶ್ವರನ'** ಎಂದು ಪ್ರಾರಂಭವಾದರೆ ಬಂಡೆಯ ಮೇಲಿರುವ ಅಪ್ರಕಟಿತ ಶಾಸನ 'ದೊಡ್ಡ ಬಸವೇಶ್ವರ' ಎಂಬ ನಾಮದಿಂದ ಪ್ರಾರಂಭಗೊಳ್ಳುತ್ತದೆ. ಈ ಶಾಸನದ ಪಾಠ ಇಂತಿದೆ:

1. ದೊಡ್ಡ ಬಸವೇಶ್ವರನ ಪಾ
2. ದದಲಿ। ವ್ರಿಶಭಾವತಿಯೆಂಬ ನದಿ ಹು
3. ಟ್ಟಿ । ಪಶ್ಚಿಮ ವಾಹಿನಿಯಾಗಿ ನಡೆಯಿತು

ಈ ಶಾಸನವನ್ನು ದೇವಾಲಯ ನಿರ್ಮಾಣವಾದ ನಂತರದಲ್ಲಿ ದೇವಾಲಯಕ್ಕೆ ಭೇಟಿ ಕೊಡುವ ಜನರಿಗೆ ಸೂಚನೆ ನೀಡುವ ನಾಮಫಲಕದಂತೆ ಹಾಕಿಸಿರಬಹುದು ಎಂದು ಕಂಡುಬರುತ್ತದೆ. ಅನೇಕ ರೇಖಾಚಿತ್ರಗಳನ್ನು ಬಂಡೆಗಳ ಮೇಲೆ ಕಾಣಬಹುದು. ಈ ಪರಿಸರದಲ್ಲಿ ಅಲ್ಲಲ್ಲಿ ಇದ್ದ ಅನೇಕ ವೀರಗಲ್ಲುಗಳನ್ನು ಈಗ ಒಂದು ಕಡೆ ಸಾಲಾಗಿ ಇರಿಸಲಾಗಿದ್ದು ಅವುಗಳಿಗೆ ಪೂಜೆಯನ್ನು ಸಲ್ಲಿಸಲಾಗುತ್ತಿದೆ.

ಇಲ್ಲಿಯ ದೊಡ್ಡ ಬಸವಣ್ಣನ ಎತ್ತರ 11 ಅಡಿ ಇದ್ದರೆ, ಸನಿಹದಲ್ಲೇ ಇರುವ ಕಾರಂಜಿ ಆಂಜನೇಯ ವಿಗ್ರಹ 12 ಅಡಿ ಇದ್ದು, ಗಣೇಶನ ವಿಗ್ರಹ 13 ಅಡಿ ಇದೆ. ಅನುಕ್ರಮವಾಗಿರುವುದು ಗಮನಾರ್ಹ. 'ಕಾರಂಜಿ ಆಂಜನೇಯ' ಹೆಸರಿನಿಂದ ಈ ಪರಿಸರದಲ್ಲಿ ಹುಟ್ಟುವ ವೃಷಭಾವತಿ ನದಿಯು ಕಾರಂಜಿಯ ಹಾಗೆ ಹೊರ ಚಿಮ್ಮಿ ಹರಿಯುತ್ತಿದ್ದಿತೆಂದು ತಿಳಿದುಬರುತ್ತದೆ.

ಇಲ್ಲಿ ಕೆಂಪೇಗೌಡರ ಕಾಲದಲ್ಲಿ 'ಬಸವನಹಳ್ಳಿ' ಎಂಬ ಹೆಸರಿನಿಂದ ಒಂದು ಹಳ್ಳಿ ಪ್ರಾರಂಭವಾಗಿ ಕ್ರಮೇಣ 'ಬಸವನಪುರ' ಆಗಿ ಈಗ ಬಸವನಗುಡಿ ಎಂಬ ಹೆಸರು ಪಡೆದಿರುವುದು ಪ್ರಸ್ತುತ ಅಧ್ಯಯನದಿಂದ ವ್ಯಕ್ತಪಟ್ಟಿದೆ. ಡಾ॥ ಎಸ್. ಆರ್. ರಾವ್ ಅವರು ಈ ಬಂಡೆ ಪ್ರದೇಶವನ್ನು 'ಚರಿತ್ರಾರ್ಹ ಪೂರ್ವ ಕಾಲದ ನೆಲೆ' ಎಂದು ಅಭಿಪ್ರಾಯ ಪಟ್ಟಿರುವರು. ಸಾಂಸ್ಕೃತಿಕವಾಗಿ ಕೆಂಪೇಗೌಡರ ಕಾಲದಲ್ಲಿ ಹಬ್ಬ. ಹರಿದಿನ ಮತ್ತು ಜಾತ್ರೆಯ ಸಂದರ್ಭಗಳಲ್ಲಿ ಇಲ್ಲಿನ ಬಂಡೆಗಳ ಮೇಲಿನ ಕುಳಿಗಳು ಯಾವ ಪಾತ್ರವಹಿಸಿದ್ದವೆಂಬುದನ್ನು ಅಧಿಕ ಅಧ್ಯಯನದಿಂದ ಅರಿಯಲು ಅವಕಾಶವಿದೆ. ಈ ಎಲ್ಲಾ ಕುಳಿಗಳಲ್ಲಿನ ದೀಪಗಳನ್ನು ಹಚ್ಚಿಸಿದಾಗ ಈ ಪ್ರದೇಶ ಅದೆಷ್ಟು ಸುಂದರವಾಗಿ ಕಾಣುತ್ತಿದ್ದಿರಬಹುದೆಂಬುದೂ ಕುತೂಹಲಕರ ಸಂಗತಿ. ಕೆಂಪೇಗೌಡರ ವಂಶಸ್ಥರಿಂದ ಬಸವನಗುಡಿ ಮತ್ತು ಗವಿಪುರದ ಪ್ರದೇಶದಲ್ಲಿ ಅನೇಕ ದೇವಾಲಯಗಳು, ಮಠಗಳು, ನಿರ್ಮಾಣಹೊಂದಿ ಉತ್ತಮ ಧಾರ್ಮಿಕ ನೆಲೆಯಾಗಿದ್ದಿತೆಂದು ಹೇಳಬಹುದು.

ಗ್ರಂಥ ಋಣ

1. ಕರ್ನಾಟಕ ದೇವಾಲಯಗಳು (ಸಂ) ಸು.ರಂಗಸ್ವಾಮಿ, ಹಂಸಧ್ವನಿ ಪ್ರಕಾಶನ, 1994
2. ಬೆಂಗಳೂರಿನ ಇತಿಹಾಸ, (ಸಂ) ಬ.ನ. ಸುಂದರರಾವ್, 1985
3. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ
4. ಎ.ಕ.ಸಂಪುಟ 9, ಬೆಂಗಳೂರು 70
5. ಲಕ್ಷ್ಮಣ್ ತೆಲಗಾವಿ, 'ಚರಿತ್ರಾರ್ಹ ಪೂರ್ವ ಕಾಲದ ನೆಲೆಗಳು' ಕನ್ನಡಪ್ರಭ, 18.9.94

11. ಬೆಂಗಳೂರು ಜಿಲ್ಲೆಯ ತಮಿಳು ಶಾಸನಗಳು

ಡಾ. ಎಚ್. ಎಸ್. ಗೋಪಾಲರಾವ್

ಬೆಂಗಳೂರು ಜಿಲ್ಲೆಯು ಸಾಂಸ್ಕೃತಿಕ ವೈವಿಧ್ಯತೆಗಳ ಪ್ರದೇಶ. ಕ್ರಿ. ಶ. 21ನೆಯ ಶತಮಾನದಲ್ಲಿ ಮಾತ್ರವಲ್ಲದೆ ಕ್ರಿ. ಶ. 11ನೆಯ ಶತಮಾನದಲ್ಲೂ ಬೆಂಗಳೂರು ಜಿಲ್ಲೆ ಈಗಿನಂತೆಯೇ ಬಹುಮುಖೀ ಸಂಸ್ಕೃತಿಯ ಪ್ರದೇಶವಾಗಿತ್ತು. ಬಹುತೇಕ ಎಲ್ಲ ದೇವತೆಯರಿಗೆ ಪೂಜೆ ಸಲ್ಲುತ್ತಿತ್ತು ಎಲ್ಲ ಧರ್ಮದವರು ಪ್ರೀತಿಯಿಂದ ಸಹಜೀವನ ನಡೆಸುತ್ತಿದ್ದರು. ಎಲ್ಲ ಭಾಷೆಗಳ, ವಿಶೇಷವಾಗಿ ಕನ್ನಡ ಭಾಷೆಯ ಜೊತೆಗೆ ತಮಿಳು ಭಾಷೆಯ ಬಳಕೆ ಕಡಿಮೆ ಎನ್ನುವಂತೇನೂ ಇರಲಿಲ್ಲ. ಬೆಂಗಳೂರಿಗೆ ಸಂಬಂಧಿಸಿದಂತೆ ಎಪಿಗ್ರಾಫಿಯಾ ಕರ್ನಾಟಿಕದ 9ನೆಯ ಸಂಪುಟದಲ್ಲಿ ಪ್ರಕಟವಾಗಿರುವ ಶಾಸನಗಳನ್ನು ಮಾತ್ರ ಗಮನಿಸಿ, ಈ ಲೇಖನವನ್ನು ಸಿದ್ಧಗೊಳಿಸಲಾಗಿದೆ.

1905ನೆಯ ವರ್ಷದಲ್ಲಿದ್ದ ಬೆಂಗಳೂರು ಜಿಲ್ಲೆಯ ಸ್ವರೂಪಕ್ಕೂ ಈಗಿನ ಬೆಂಗಳೂರು ಜಿಲ್ಲೆಯ ಸ್ವರೂಪಕ್ಕೂ ತುಂಬ ವ್ಯತ್ಯಾಸಗಳಿವೆ. ಸ್ವಾತಂತ್ರ್ಯಾನಂತರ ಆಗಿರುವ ಹಲವು ಆಡಳಿತಾತ್ಮಕ ಬದಲಾವಣೆಗಳಿಂದಾಗಿ ಮೊದಲಿನ ಬೆಂಗಳೂರು ಜಿಲ್ಲೆ ಈಗ ಎರಡಾಗಿರುವುದು ಮಾತ್ರವಲ್ಲದೆ, ತಾಲ್ಲೂಕುಗಳೂ ಬದಲಾಗಿವೆ. ಮೊದಲಿಗೆ ನೆಲಮಂಗಲ ತಾಲ್ಲೂಕಿಗೆ ಸೇರಿದ್ದ ಎಷ್ಟೋ ಊರುಗಳು ಈಗ ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿವೆ. ಈಗ ಆನೇಕಲ್ ತಾಲ್ಲೂಕು ಬೆಂಗಳೂರು ನಗರ ಜಿಲ್ಲೆಯ ಭಾಗವಾಗಿದೆ. ಬೆಂಗಳೂರು ನಗರವು ಈಗ ಮಹಾನಗರವಾಗಿ ಬೆಳೆದಿದೆ. ಈ ಮಹಾನಗರದಲ್ಲಿ ಬೆಂಗಳೂರಿನ ಸುತ್ತಮುತ್ತ ಇದ್ದ ಅದೆಷ್ಟೋ ಹಳ್ಳಿಗಳು ಹೆಸರಿಸಲೂ ಈಗ ಉಳಿದಿಲ್ಲ. ಬೆಳೆಯುತ್ತಲೇ ಇರುವ ನಗರದ ಒಳಗೆ ಇನ್ನೂ ಅದೆಷ್ಟು ಹಳ್ಳಿಗಳು ಸೇರಿಹೋಗುತ್ತವೆ ಎಂದು ಅಂದಾಜು ಮಾಡಲೂ ಈಗ ಸಾಧ್ಯವಿಲ್ಲ. ಇಲ್ಲಿನ ಮಿಶ್ರಸಂಸ್ಕೃತಿಯ ಬಗ್ಗೆ ಸ್ಥಳೀಯರು ಆತಂಕಗೊಂಡಿರುವ ವಿಚಾರ ಹೊಸದೂ ಅಲ್ಲ. ಮತ್ತು ಸುಲಭವಾಗಿ ತಳ್ಳಿಹಾಕುವಂತಹುದೂ ಅಲ್ಲ. ವಿಶೇಷವಾಗಿ ಬೃಹತ್ ಮತ್ತು ವಿಶಿಷ್ಟ ಕೈಗಾರಿಕೆಗಳಿಗೆ ಆಶ್ರಯ ನೀಡಿ, ಬೆಳೆದಿರುವ/ಬೆಳೆಯುತ್ತಿರುವ ಮತ್ತು ಬೆಳೆಯುವ ಯಾವುದೇ ನಗರ ಬಹುಮುಖೀ ಸಂಸ್ಕೃತಿಗೆ ಆಶ್ರಯ ನೀಡಬೇಕಾದ್ದು ಅನಿವಾರ್ಯ ಎಂದು ಒಪ್ಪಿಕೊಂಡರೂ, ಬಹುಮುಖೀ ಸಂಸ್ಕೃತಿ, ಅದರಲ್ಲೂ ವಿಶೇಷವಾಗಿ ಭಾಷಿಕ ಸಂಸ್ಕೃತಿ ಸೃಷ್ಟಿಸುವ ಆತಂಕಗಳು ಮತ್ತು ಸಮಸ್ಯೆಗಳನ್ನು ಹಗುರವಾಗಿ ಕಾಣುವಂತಿಲ್ಲ.

1991ರ ಅಂಕಿ ಅಂಶಗಳ ಪ್ರಕಾರ ಬೆಂಗಳೂರಿನಲ್ಲಿರುವ ಕನ್ನಡಿಗರ ಸಂಖ್ಯೆ ಶೇ. 38.47ರಷ್ಟು ನಂತರದ ಸ್ಥಾನ ತಮಿಳರದು. ಅವರ ಸಂಖ್ಯೆ ಶೇ. 21.43 ಇದರಿಂದ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ಭಾಷಿಕರ ಸಂಖ್ಯೆ ಶೇ. 50ಕ್ಕಿಂತಲೂ ಕಡಿಮೆ ಎಂಬ ಆತಂಕಕಾರಿ ಅಂಶ ತಿಳಿಯುತ್ತದೆ. ಯಾವುದೇ ಸಂಕೀರ್ಣ (ಕಾಸ್ಮೋ ಪಾಲಿಟನ್) ನಗರದಲ್ಲಿ ಬಹು ಭಾಷೆ, ಬಹು ಧರ್ಮ, ಬಹು ವೃತ್ತಿ ಇತ್ಯಾದಿಗಳು ಸಹಜ. ಅಂತೆಯೇ ಬೆಂಗಳೂರು ನಗರದಲ್ಲಿ ಹಲವು ಬೃಹತ್ ಕೈಗಾರಿಕೆಗಳು ಮಾತ್ರವಲ್ಲದೆ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉದ್ಯಮಗಳು ಹೆಚ್ಚಿರುವುದರಿಂದ ಇಡೀ ರಾಷ್ಟ್ರ ಮಾತ್ರವಲ್ಲದೆ ವಿಶ್ವದ ಎಲ್ಲಾ ಭಾಗಗಳಿಂದ ಬರುವ ಉದ್ಯೋಗಿಗಳ ನೆಲೆ ಬೆಂಗಳೂರೇ ಆಗಿದೆ. ಇಂತಹ ನಗರಗಳಲ್ಲಿ ವಿಶೇಷವಾಗಿ ಸೊರಗುವುದು ಮತ್ತು ದುರ್ಬಲವಾಗುವುದು ಸ್ಥಳೀಯ ಭಾಷೆ. ಅಲ್ಪಸಂಖ್ಯಾತ ಸ್ಥಾನಕ್ಕೆ ಇಳಿಯುವ ಸ್ಥಳೀಯ ಭಾಷೆಯ ಮೇಲೆ ಎಲ್ಲರನ್ನೂ ಸಂಪರ್ಕಿಸುವ ಶಕ್ತಿ ಇರುವ ಯಾವುದೇ ಪ್ರಬಲ ಭಾಷೆ ಸವಾರಿ ಮಾಡುತ್ತದೆ. ಈಗ ಬೆಂಗಳೂರು ಎದುರಿಸುತ್ತಿರುವುದು

ಇದೇ ಸಮಸ್ಯೆಯನ್ನು, ಈ ಸಮಸ್ಯೆ ಇಂದು ಸೃಷ್ಟಿಯಾಗಿರುವುದಿಲ್ಲ. ಸುಮಾರು ಒಂದು ಸಾವಿರ ವರ್ಷಗಳಿಂದಲೂ ಬೆಂಗಳೂರು ನಗರ ಮಾತ್ರವಲ್ಲದೆ, ಬೆಂಗಳೂರಿಗೆ ಹೊಂದಿಕೊಂಡ ಕೆಲವು ಗ್ರಾಮಗಳು, ತಾಲ್ಲೂಕುಗಳು ಮತ್ತು ಜಿಲ್ಲೆಗಳೂ ಸಹ ಈ ಸಮಸ್ಯೆಯ ಶಿಶುಗಳಾಗಿವೆ. ತಮಿಳು ಭಾಷೆಯ ಶಾಸನಗಳು ದೊರೆತಿರುವ ಪ್ರದೇಶಗಳಲ್ಲಿ ಈಗ ಇರುವುದು ಕನ್ನಡ ಜನ. ಆಕಸ್ಮಾತ್ತಾಗಿ ಇರುವ ತಮಿಳು ಭಾಷಿಕರೂ ತಮಿಳು ಭಾಷೆಯನ್ನು ಸಂಪೂರ್ಣವಾಗಿ ಮರೆತು ಕನ್ನಡಿಗರೇ ಆಗಿಬಿಟ್ಟಿದ್ದಾರೆ. ಜನಾಂಗೀಯವಾಗಿ ಕೆಲವು ಜನವರ್ಗವನ್ನು ತಮಿಳು ಭಾಷಿಕರು ಎನ್ನಬಹುದಾದರೂ, ಈಗ ಅವರಿಗೆ ಕನ್ನಡದ ವಿನಹ ಬೇರೆ ಯಾವ ಭಾಷೆಯೂ ತಿಳಿಯುವುದಿಲ್ಲ. ಈಗ ಪ್ರಸ್ತಾಪಿಸುತ್ತಿರುವ ಶಾಸನಗಳನ್ನು ಬರೆಸಿದ ಕಾಲಕ್ಕೆ ಆಯಾ ಪ್ರದೇಶಗಳಲ್ಲಿ ಬಹುತೇಕ ವಲಸೆ ಬಂದಿದ್ದ ತಮಿಳು ಭಾಷಿಕರು ನೆಲೆಸಿದ್ದರು ಎಂದು ತಿಳಿಯಬಹುದು. ಈಗ ತಮಿಳು ಶಾಸನಗಳು ದೊರೆತಿರುವ ಪ್ರದೇಶಗಳಲ್ಲಿ ಅಲ್ಪಸಂಖ್ಯಾತರಂತೆ ತಮಿಳು ಭಾಷಿಕರು ನೆಲೆಸಿದ್ದರೇ ಹೊರತು. ಅದು ಅವರ ಮೂಲನೆಲೆಯಾಗಲೀ ಶಾಶ್ವತ ನೆಲೆಯಾಗಲೀ ಆಗಿರಲಿಲ್ಲ ಎಂಬುದನ್ನು ಮೊದಲೇ ಸ್ಪಷ್ಟಪಡಿಸಿಕೊಳ್ಳುವುದು ಅವಶ್ಯಕ. ಶಾಸನಗಳ ಭಾಷೆ ತಮಿಳಾದರೂ, ಲಿಪಿಯಾದರೂ ಕನ್ನಡವಾಗಬೇಕಾಗಿತ್ತಲ್ಲವೆ ಎಂಬ ಅನುಮಾನ ಯಾರಿಗಾದರೂ ಬರಬಹುದು. ಆದರೆ, ಇಲ್ಲಿ ನೆಲೆಸಿದ್ದ ತಮಿಳು ಭಾಷಿಕರಿಗೆ ತಮಿಳು ಲಿಪಿಯ ವಿನಹ ಬೇರೆ ಯಾವ ಲಿಪಿಯೂ ತಿಳಿದಿರಲಿಲ್ಲ ಎಂಬ ಕಾರಣದಿಂದ ಶಾಸನಗಳ ಭಾಷೆ ಮತ್ತು ಲಿಪಿಗಳು ತಮಿಳೇ ಆಗಿವೆ ಎಂದು ತಿಳಿಯಬೇಕಾಗುತ್ತದೆ.

ಕರ್ನಾಟಕದ ಗಡಿ ಭಾಗಗಳಲ್ಲಿರುವ ಕನ್ನಡ ಶಾಸನಗಳನ್ನು ಗಮನಿಸಿ. ಹೆಚ್ಚಾಗಿ ಕನ್ನಡ ಶಾಸನಗಳು ದೊರೆತಿರುವ ಪ್ರದೇಶಗಳು ಮೊದಲಿಗೆ ಕನ್ನಡ ಭಾಷಿಕ ಪ್ರದೇಶಗಳು ಎಂದು ತಿಳಿಯುತ್ತೇವೆ. ಅದೇ ಮಾನದಂಡವನ್ನು ಬಳಸಿ, ಹೆಚ್ಚಾಗಿ ತಮಿಳು ಶಾಸನಗಳಿರುವ ಪ್ರದೇಶಗಳು ತಮಿಳು ಭಾಗ ಪ್ರದೇಶಗಳು ಎಂಬ ಸರಳ ತೀರ್ಮಾನಕ್ಕೆ ಬರುವದು ಅಪಾಯಕಾರಿ. ಈಗ ಎಲ್ಲಿ ತಮಿಳು ಶಾಸನಗಳು ಹೆಚ್ಚಾಗಿ ದೊರೆತಿವೆಯೋ ಅಲ್ಲೆಲ್ಲಾ ಈಗಿನಂತೆಯೇ ಹಿಂದೆಯೂ ಕನ್ನಡ ಭಾಷಿಕರ ಪ್ರಮಾಣ ಹೆಚ್ಚಾಗಿಯೇ ಇತ್ತು. ಸುಮಾರು 100 ರಿಂದ 300 ವರ್ಷಗಳ ಕಾಲವಾದರೂ ಆ ಪ್ರದೇಶಗಳಲ್ಲಿ ತಮಿಳು ಭಾಷಿಕರು ತಾತ್ಕಾಲಿಕವಾಗಿ ನೆಲೆಸಿದ್ದರು ಮತ್ತು ಕ್ರಮೇಣ ಅವರು ಕನ್ನಡ ಭಾಷಿಕರೇ ಆಗಿಬಿಟ್ಟರು ಎಂಬ ಅಭಿಪ್ರಾಯದಲ್ಲಿ ಉತ್ಪ್ರೇಕ್ಷೆಯನ್ನು ಹುಡುಕಬೇಕಾಗಿಲ್ಲ.

ತಮಿಳು ಶಾಸನಗಳನ್ನು ಕುರಿತ ನಮ್ಮ ಅಧ್ಯಯನ ಹಿಂದಿನ ಸಂಯುಕ್ತ ಬೆಂಗಳೂರು ಜಿಲ್ಲೆಗೆ ಸೀಮಿತಗೊಳಿಸಿಕೊಳ್ಳಲಾಗಿದೆ. 1905ರಲ್ಲಿ ಪ್ರಕಟವಾದ ಅಂದಿನ ಬೆಂಗಳೂರು ಜಿಲ್ಲೆಯ ಶಾಸನ ಸಂಪುಟಗಳಲ್ಲಿ ಪ್ರಕಟಗೊಂಡಿರುವ ತಮಿಳು ಶಾಸನಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ನಮ್ಮ ಅಧ್ಯಯನದ ಸಂದರ್ಭದಲ್ಲಿ ದೊರೆತ ಮಾಹಿತಿಯನ್ನು ಲಕ್ಷಿಸಿ, ಮಾಡಿಕೊಂಡಿರುವ ಪಟ್ಟಿ ಈ ಕೆಳಕಂಡಂತಿದೆ.

ಕ್ರ. ಸಂ	ತಾಲ್ಲೂಕು	ಒಟ್ಟು ಶಾಸನಗಳು	ತಮಿಳು ಶಾಸನಗಳು	ಶೇ.	ಪ್ರಾಚೀನ	ನೂತನ
1	ಬೆಂಗಳೂರು	1142	50	35%	ಕ್ರಿ. ಶ. 1033	ಕ್ರಿ. ಶ. 1876
2	ನೆಲಮಂಗಲ	89	12	13%	ಕ್ರಿ. ಶ. 1100	ಕ್ರಿ. ಶ. 1152
3	ಮಾಗಡಿ	82	1	1%	ಕ್ರಿ. ಶ.	ಕ್ರಿ. ಶ. 1280
4	ದೊಡ್ಡಬಳ್ಳಾಪುರ	68	4	6%	ಕ್ರಿ. ಶ. 1115	ಕ್ರಿ. ಶ. 1316
5	ದೇವನಹಳ್ಳಿ	81	17	21%	ಕ್ರಿ. ಶ. 1046	ಕ್ರಿ. ಶ. 1358

6	ಹೊಸಕೋಟೆ	163	53	33%	ಕ್ರಿ. ಶ. 1043	ಕ್ರಿ. ಶ. 1411
7	ಆನೇಕಲ್	94	31	30%	ಕ್ರಿ. ಶ. 1130	ಕ್ರಿ. ಶ. 1384
8	ಕಾನಕಾನಹಳ್ಳಿ	110	21	28%	ಕ್ರಿ. ಶ. 1118	ಕ್ರಿ. ಶ. 1445
9	ಚನ್ನಪಟ್ಟಣ	186	80	43%	ಕ್ರಿ. ಶ. 1000	ಕ್ರಿ. ಶ. 1339
	ಒಟ್ಟು	1015	269	27%	ಕ್ರಿ. ಶ. 1000	ಕ್ರಿ. ಶ. 1876

ಮೇಲಿನ ಪಟ್ಟಿಕೆಯಿಂದ ಕ್ರಿ. ಶ. 1000ಕ್ಕೆ ಮೊದಲು ಬೆಂಗಳೂರು ಜಿಲ್ಲೆಯಲ್ಲಿ ತಮಿಳು ಶಾಸನಗಳಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ.[1] ಕ್ರಿ. ಶ. 1384ರವರೆಗೆ ತಮಿಳು ಶಾಸನಗಳು ನಿರಂತರವಾಗಿ ಮುಂದುವರಿದುಕೊಂಡೇ ಬಂದಿವೆ. ನಂತರದ ಕ್ರಿ. ಶ. 1876ರವರೆಗಿನ ಶಾಸನಗಳು ಸೂಚನಾಫಲಕಗಳಂತಿವೆಯಾದರೂ ಅವುಗಳ ಐತಿಹಾಸಿಕ ಮತ್ತು ಸಾಮಾಜಿಕ ಮಹತ್ವವನ್ನೇನೂ ಲಘುವಾಗಿ ಪರಿಗಣಿಸುವಂತಿಲ್ಲ.

ಕ್ರಿ. ಶ. ಸು. 1000ರ ಶಾಸನವು ಚನ್ನಪಟ್ಟಣ ತಾಲ್ಲೂಕಿನ ಮಳೂರಿನ ಕೈಲಾಸೇಶ್ವರ ದೇವಾಲಯಕ್ಕೆ ಸಂಬಂಧಿಸಿದೆ. ಇದರ ಉದ್ದೇಶವು ರಾಜರಾಜ ಚೋಳನ ಅಧಿಕಾರಿಗಳಲ್ಲೊಬ್ಬನಾದ ಶಿವಜ್ಞಾನ ಗಂಡರಾದಿತ್ಯನು ಭೂಮಿಯನ್ನು ಕೊಂಡು, ಅದನ್ನು ಪೆರಿಯಮಳವೂರಿನ ರಾಜೇಂದ್ರಸಿಂಹೇಶ್ವರ ದೇವಲಾಯದಲ್ಲಿ ತಾನು ಪ್ರತಿಷ್ಠಾಪಿಸಿದ ಗಂಡರಾದಿತ್ಯ ವಿಣ್ಣಗರ್ ದೇವರಿಗೆ ತೆರಿಗೆರಹಿತವಾಗಿ ದಾನ ನೀಡಿರುವುದನ್ನು ದಾಖಲಿಸುವುದೇ ಆಗಿದೆ. ಈಗ ಚನ್ನಪಟ್ಟಣಕ್ಕೆ ಹೊಂದಿಕೊಂಡಂತೆಯೇ ಇರುವ ಮಳೂರಿನ ಕೈಲಾಸೇಶ್ವರ ದೇವಾಲಯವು ಕ್ರಿ. ಶ. 10ನೆಯ ಶತಮಾನದ ಕೊನೆಗೆ ಅಥವಾ ಕ್ರಿ. ಶ. 11ನೆಯ ಶತಮಾನದ ಆರಂಭದ ಕಾಲಕ್ಕಾಗಲೇ ಅಸ್ತಿತ್ವದಲ್ಲಿದ್ದ ದೇವಾಲಯ. ಇಲ್ಲಿನ ಬಹುತೇಕ ಎಲ್ಲ ಶಾಸನಗಳೂ ಗ್ರಂಥ ಲಿಪಿಯಲ್ಲಿ ಮತ್ತು ತಮಿಳು ಭಾಷೆಯಲ್ಲೇ ಇವೆ. ಕಾಲದ ದೃಷ್ಟಿಯಿಂದ ನಂತರದ ಶಾಸನವು ಮಳೂರುಪಟ್ಟಣದ ನಾಲ್ಕು ಶಾಸನಗಳು ಕ್ರಿ. ಶ. 1007ರ ಕಾಲದವು. ಮಳೂರುಪಟ್ಟಣದ ನಾರಾಯಣಸ್ವಾಮಿ ದೇವಾಲಯದಲ್ಲೇ ಇರುವ ಈ ನಾಲ್ಕೂ ಶಾಸನಗಳಲ್ಲಿ ರಾಜರಾಜ ದೇವನ ಆಳ್ವಿಕೆಯ 23ನೆಯ ವರ್ಷದ ಉಲ್ಲೇಖ ಇದೆ. ಅವನ ಆಳ್ವಿಕೆ ಮುಗಿದದ್ದು ಕ್ರಿ. ಶ. 1011ರ ಸುಮಾರಿನಲ್ಲಿ. ನಂತರ ರಾಜೇಂದ್ರ ಚೋಳದೇವನ ಆಳ್ವಿಕೆ ಆರಂಭವಾಗುತ್ತದೆ. ಪ್ರಸ್ತಾಪಿಸಿದ ಶಾಸನಗಳಲ್ಲಿ ರಾಜರಾಜ ದೇವನ ಆಳ್ವಿಕೆಯನ್ನು ಪ್ರಸ್ತಾಪಿಸಲಾಗಿದ್ದರೂ, ದಾನವನ್ನು ನೀಡಿದವನು ಅವನಲ್ಲ. ಈ ಶಾಸನಗಳಲ್ಲಿ ರಾಜೇಂದ್ರರಸ ಚತುರ್ವೇದಿ ಮಂಗಲವಾದ ಪೆರಿಯಮಳವೂರಿನ ಸಭೆಯಲ್ಲಿ ಆಶೇಷ ಸದಸ್ಯರು ಸೇರಿ ನೀಡಿದ ವಿವಿಧ ದಾನಗಳ ಪ್ರಸ್ತಾಪವಿದೆ. ರಾಜನ ಹೆಸರನ್ನು ಮತ್ತು ಅವನ ಆಳ್ವಿಕೆಯ ಕಾಲವನ್ನು ಉಲ್ಲೇಖಿಸುವುದು ವಾಡಿಕೆ. ರಾಜನೇ ನೇರವಾಗಿ ದಾನ ನೀಡಿರುವ ಸಂದರ್ಭಗಳು ಕಡಿಮೆ. ಯಾರಾದರೊಬ್ಬ ರಾಜನ ಆಳ್ವಿಕೆಯ ಕಾಲದಲ್ಲಿ, ಸ್ಥಳೀಯ ಅಧಿಕಾರಿ ಅಥವಾ ಮಹಾ ಜನರು ದಾನಗಳನ್ನು ನೀಡುತ್ತಿದ್ದರು. ಹಾಗೆ ದಾನ ನೀಡುವ ಕೆಲವು ಸಂದರ್ಭಗಳಲ್ಲಿ ರಾಜನ ಆಳ್ವಿಕೆ, ಯುದ್ಧಗಳು, ಗೆಲುವು ಇತ್ಯಾದಿಗಳ ವಿವರವಾದ ಮತ್ತು ಉತ್ಪ್ರೇಕ್ಷೆ ಎನ್ನಬಹುದಾದ ವಿವರಗಳನ್ನು ದಾಖಲಿಸುತ್ತಿದ್ದರು. ನಮ್ಮ ಅಧ್ಯಯನಕ್ಕೆ ಪರಿಶೀಲಿಸುತ್ತಿರುವ ಹೆಚ್ಚಿನ ಶಾಸನಗಳು ಚೋಳರ ಆಳ್ವಿಕೆಯ ಅವಧಿಗೆ ಸೇರಿರುವುದು ಸಹಜ. ಹೊಯ್ಸಳರ ಶಾಸನಗಳೇ ಅಧಿಕವೆಂದು ಮಾನ್ಯ ರೈಸ್‌ರವರೇ ಹೇಳಿದ್ದಾರೆ. ಕರ್ನಾಟಕದ ಕೋಲಾರ, ಬೆಂಗಳೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಚೋಳರ ಪ್ರಭಾವ ಅಧಿಕವಾಗಿತ್ತು. ಈ ಎಲ್ಲ ಪ್ರದೇಶಗಳೂ ತಮಿಳುನಾಡಿನ ಗಡಿಭಾಗಗಳು, ಗಂಗರು ಮತ್ತು ಹೊಯ್ಸಳರೊಡನೆ ಹೆಚ್ಚು ಸೆಣಸಾಟ ನಡೆಸಿದ ಚೋಳರು ತಮ್ಮ ಆಸುಪಾಸಿನ ಪ್ರದೇಶಗಳ ಮೇಲೆ ತಮ್ಮ ಆಡಳಿತದ ಹಿಡಿತ ಇರಿಸಿಕೊಂಡಿದ್ದರು; ಅದಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕ ಪ್ರಭಾವ ದಟ್ಟವಾಗಿಯೇ ಇತ್ತು. ತಮಿಳು ಶಾಸನಗಳು ದೊರೆತಿರುವ ಸ್ಥಳಗಳಲ್ಲಿ ಅಗ್ರಹಾರಗಳಿದ್ದುವು

ಮತ್ತು ಅವುಗಳಿಗೆ ಹೊಂದಿಕೊಂಡಂತೆ ದೇವಾಲಯಗಳಿದ್ದವು. ಅಗ್ರಹಾರದಲ್ಲಿ ಮಹಾಜನರದೇ ಪರಮಾಧಿಕಾರ. ಆ ಮಹಾಜನರು ದೇವಾಲಯದ ಸೇವೆಗಾಗಿ ನೇಮಕಗೊಂಡು ವಲಸೆ ಬಂದು ನೆಲೆ ನಿಂತವರು. ಅವರ ಭಾಷೆ ಸಹಜವಾಗಿಯೇ ತಮ್ಮನ್ನು ನೇಮಕ ಮಾಡಿದವರ ಆಡಳಿತ ಭಾಷೆ. ಅದು ತಮಿಳು. ಹೆಚ್ಚಾಗಿ ದೇವಸ್ಥಾನಗಳ ಒಳಗೇ ಬದುಕು ನಡೆಸುವ ಅರ್ಚಕರಿಗೆ ಜನರ ಜೊತೆಗೆ ಸಂಬಂಧ ಬರುವುದು ಪೂಜೆಯ ಸಂದರ್ಭದಲ್ಲಿ ಮಾತ್ರ. ಉಳಿದಂತೆ ಸಾಮಾಜಿಕ ಬದುಕಿನಲ್ಲಿ ಅವರು ಹೊರಗೆ ಕಾಣಿಸಿಕೊಳ್ಳುವುದೇ ಕಡಿಮೆ. ಹೀಗೆ ಹೆಚ್ಚು ಜನ ಸಂಪರ್ಕವಿಲ್ಲದ ಅರ್ಚಕರು ಸ್ಥಳೀಯ ಭಾಷೆಯನ್ನು ಕಲಿಯುವ ಅವಕಾಶಗಳು ಕಡಿಮೆ. ಭಕ್ತರಿಗೂ ದೇವರು ಮತ್ತು ದೇವರಿಗೆ ಸಲ್ಲಿಸುವ ಪೂಜೆ ಮುಖ್ಯವೇ ಹೊರತು, ಅರ್ಚಕನ ಭಾಷೆ ಮುಖ್ಯವಲ್ಲ. ಅರ್ಚನೆಯಂತೂ ಸಂಸ್ಕೃತ ಭಾಷೆಯಲ್ಲಿ ನಡೆಯುವುದರಿಂದ ಕನ್ನಡ ಅಥವಾ ತಮಿಳು ಭಾಷೆ ಸಂಪರ್ಕಕ್ಕೆ ಅವಶ್ಯಕವಲ್ಲ. ಆದ್ದರಿಂದ ಚೋಳರ ಕಾಲಕ್ಕೆ ಚತುರ್ವೇದಿ ಮಂಗಲ ಎನಿಸಿಕೊಂಡ ಅಗ್ರಹಾರಗಳು ಮತ್ತು ಅಲ್ಲಿಗೆ ಹೊಂದಿಕೊಂಡ ದೇವಾಲಯಗಳಲ್ಲಿ ತಮಿಳು ಭಾಷಿಕ ಅರ್ಚಕರು ಹೆಚ್ಚಾಗಿದ್ದುದರಿಂದ ಅಲ್ಲೆಲ್ಲಾ ಸಹಜವಾಗಿಯೇ ತಮಿಳು ಶಾಸನಗಳ ಸಂಖ್ಯೆ ಹೆಚ್ಚು.

ಪ್ರಸ್ತಾಪಿಸಲಾಗುತ್ತಿರುವ ತಮಿಳು ಶಾಸನಗಳಲ್ಲಿ ಹೆಚ್ಚು ಶಾಸನಗಳು ದಾನಗಳು ಉಲ್ಲೇಖಗಳೇ ಆಗಿವೆ. ಈ ದಾನಗಳನ್ನು ನೀಡಿರುವವರು ನೇರವಾಗಿ ಯಾವುದೇ ದೊರೆಯಲ್ಲ. ಬಹುತೇಕ ಎಲ್ಲ ದಾನಿಗಳು ಸ್ಥಳೀಯ ಅಧಿಕಾರಿಗಳಾಗಿರುವುದು ಮತ್ತು ಹೆಚ್ಚು ಶಾಸನಗಳು ಆಗಿನ ಅಗ್ರಹಾರಗಳಿಗೆ ಸಂಬಂಧಿಸಿದಂತಿರುವುದು ಗಮನಿಸಬೇಕಾದ ವಿಚಾರ ಅಗ್ರಹಾರಗಳ ಮಹಾಜನರು ಹೆಚ್ಚು ದಾನಗಳಿಗೆ ಕಾರಣಕರ್ತರಾಗಿದ್ದಾರೆ. ಆದ್ದರಿಂದ ಶಾಸನಗಳಲ್ಲಿ ಬಳಸಲಾಗಿರುವ ಭಾಷೆ ಮತ್ತು ಲಿಪಿಯು ಅವರಿಗೆ ತಿಳಿಯುವ ಮತ್ತು ಅರ್ಥವಾಗುವ ಸ್ವರೂಪ ದಲ್ಲಿರುವುದು ಸಹಜ. ದಾನವನ್ನು ಪಡೆದವರೂ ಸಹ ತಮಿಳು ಭಾಷಿಕರು ಎಂದು ಅವರ ಹೆಸರುಗಳೇ ಸೂಚಿಸುತ್ತವೆ. ದಾನ ನೀಡಿದ ಮತ್ತು ಪಡೆದ ಇಬ್ಬರೂ ತಮಿಳು ಭಾಷಿಕರಾಗಿದ್ದಾರೆ. ಆದ್ದರಿಂದ ಆ ಇಬ್ಬರಿಗೆ ಮಾತ್ರ ಅರ್ಥವಾಗುವ ಭಾಷೆ ಮತ್ತು ಲಿಪಿಯಲ್ಲಿ ಶಾಸನಗಳಿವೆ ಎಂಬ ತೀರ್ಮಾನಕ್ಕೆ ಬರುವ ಸಾಧ್ಯತೆಗಳಿವೆಯಾದರೂ ಆಯಾ ಪ್ರದೇಶಗಳ ಮೂಲ ನಿವಾಸಿಗಳಿಗೆ, ಅಂದರೆ ಕನ್ನಡಿಗರಿಗೆ ಓದಲೂ ಬಾರದ ಅಕ್ಷರಗಳಲ್ಲಿ ಮತ್ತು ಭಾಷೆಯಲ್ಲಿ ಶಾಸನಗಳಿರುವುದು ಸ್ಥಳೀಯ ಆಡಳಿತಗಾರರ ದೋಷ ಎಂದು ಒಪ್ಪಿಕೊಳ್ಳಬೇಕಾದ್ದು ಅನಿವಾರ್ಯ. ಸ್ಥಳೀಯರಿಗೆ ಪಾರದರ್ಶಕವಾಗಿಲ್ಲದ ದಾನದ ವಿವರಗಳು ಏಕಪಕ್ಷೀಯವಾದ ದಾಖಲೆಗಳಾಗಿ ಉಳಿದಿವೆ.

ಗ್ರಂಥ ಲಿಪಿ ಮತ್ತು ತಮಿಳು ಭಾಷೆಯ ಶಾಸನಗಳು ಎಲ್ಲ ಕನ್ನಡ ಭಾಷಿಕ ಪ್ರದೇಶಗಳಲ್ಲಿ ಕಂಡುಬರುವುದಿಲ್ಲ. ಕೆಲವು ಆಯ್ದ ಪ್ರದೇಶಗಳಲ್ಲಿ ಮಾತ್ರ ಹೆಚ್ಚು ಸಂಖ್ಯೆಯ ತಮಿಳು ಶಾಸನಗಳಿವೆ. ಬೆಂಗಳೂರು ತಾಲ್ಲೂಕಿನ ದೊಮ್ಮಲೂರು, ಮಡಿವಾಳ, ಸಾದರಮಂಗಲ, ಬೇಲೂರು ಮತ್ತು ಬೇಗೂರುಗಳಲ್ಲಿ ಹಿಂದಿನ ನೆಲಮಂಗಲ ತಾಲ್ಲೂಕಿನ ಮತ್ತು ಈಗ ಬೆಂಗಳೂರು ಉತ್ತರ ತಾಲ್ಲೂಕಿನ ಐಗಂಡಪುರ, ದೇವನಹಳ್ಳಿ ತಾಲ್ಲೂಕಿನ ಗಂಗವಾರಪಲ್ಲಿ, ಹೊಸಕೋಟೆ ತಾಲ್ಲೂಕಿನ ಮುಗಬಾಳ, ಕಾಡುಗೋಡಿ ಮತ್ತು ಚನ್ನಪಟ್ಟಣ ತಾಲ್ಲೂಕಿನ ಮಳೂರು ಹಾಗೂ ಮಳೂರುಪಟ್ಟಣಗಳಲ್ಲಿ ತಮಿಳು ಶಾಸನಗಳ ಸಂಖ್ಯೆ ಹೆಚ್ಚು.

ದೇವಾಲಯಗಳಿಗೆ ಸಂಬಂಧಿಸಿದ ದಾನ ಶಾಸನಗಳಲ್ಲದೆ, ಕನಕಪುರ ತಾಲ್ಲೂಕಿನ ಲೇವರಹಳ್ಳಿ.[2] ಎಲಚವಾಡಿ[3], ನಲ್ಲಹಳ್ಳಿ[4], ಶಾಸನಗಳು ವಿಶೇಷ ವೀರಗಲ್ಲು ಶಾಸನಗಳೂ ತಮಿಳು ಲಿಪಿ ಮತ್ತು ಭಾಷೆಯಲ್ಲಿವೆ. ಈ ವೀರರ ಹೆಸರುಗಳೂ ತಮಿಳು ಹೆಸರುಗಳಾಗಿವೆ. ಇವರು ಅಗ್ರಹಾರಗಳಲ್ಲಿದ್ದ ಬ್ರಾಹ್ಮಣ ಕುಟುಂಬಗಳಿಗೆ ಸೇರಿದವರಲ್ಲ. ದೇವಾಲಯುಗಳಿಗೆ ಸಂಬಂಧಿಸಿದಂತೆ ದಾನ ನೀಡಿದವರು ಮತ್ತು ಪಡೆದವರು ಇಬ್ಬರೂ ಹೆಚ್ಚಿಗೆ ಬ್ರಾಹ್ಮಣ

ವರ್ಗಕ್ಕೇ ಸೇರಿದವರು. ಅಕಸ್ಮಾತಾಗಿ ದಾನ ನೀಡಿದ ಅಧಿಕಾರ ವರ್ಗದವರು ಬ್ರಾಹ್ಮಣೇತರರಾದರೂ ದಾನ ಪಡೆದವರು ಯಾವುದೇ ಅನುಮಾನವಿಲ್ಲದೆ ಬ್ರಾಹ್ಮಣ ವರ್ಗಕ್ಕೇ ಸೇರಿದವರು. ಆದ್ದರಿಂದ ಅಗ್ರಹಾರ ಮತ್ತು ದೇವಾಲಯಗಳಿಗೆ ಸಂಬಂಧಿಸಿದಂತೆ ಮಾತ್ರ ತಮಿಳು ಭಾಷೆಯಲ್ಲಿ ಶಾಸನಗಳು ದಾಖಲಾಗಿಲ್ಲ. ಸಾಮಾನ್ಯ ವರ್ಗಕ್ಕೆ ಸಂಬಂಧಿಸಿದ ವೀರರ ಸಾಹಸ ಮತ್ತು ಸಾವನ್ನು ಕುರಿತ ಶಾಸನಗಳೂ ತಮಿಳು ಭಾಷೆಯಲ್ಲಿವೆ.

ಚೋಳರು ಮಾತ್ರವಲ್ಲದೆ ಹೊಯ್ಸಳರ ಮತ್ತು ಪೂರ್ವಾಧಿರಾಯರ ಹಲವು ಶಾಸನಗಳೂ ತಮಿಳು ಭಾಷೆಯಲ್ಲಿವೆ. ಇವರುಗಳ ಕಾಲದಲ್ಲಿ ದಾನ ಅಥವಾ ಮತ್ತಾವುದೇ ವಿಚಾರಗಳು ತಮಿಳು ಭಾಷೆಯಲ್ಲಿ ದಾಖಲಾಗಲು ಆಯಾ ರಾಜ ಮನೆತನಗಳ ದೊರೆಗಳನ್ನು ನೇರವಾಗಿ ಹೊಣೆಗಾರರನ್ನಾಗಿಸಲು ಸಾಧ್ಯವಿಲ್ಲ. ಶಾಸನಗಳನ್ನು ಹಾಕಿಸಿರುವವರು ಸ್ಥಳೀಯರಿಗೆ ಅರ್ಥವಾಗುವುದಕ್ಕಿಂತ ದಾನ ನೀಡಿದವರಿಗೆ ಮತ್ತು ಪಡೆದವರಿಗೆ ಅರ್ಥವಾಗಬೇಕು ಎಂಬ ಕಲ್ಪನೆ ಇದ್ದಂತೆ ಕಾಣುತ್ತದೆ.

ತಮಿಳು ಭಾಷೆಯ ಕೆಲವು ಶಾಸನಗಳು ಮುಖ್ಯ ಮತ್ತು ವಿಶೇಷ ಎನಿಸುವ ವಿಷಯಗಳನ್ನು ದಾಖಲಿಸಿವೆ. ಪಾಂಚಾಲರ ನಡುವೆ ಆದ ಒಪ್ಪಂದವನ್ನು ಉಲ್ಲೇಖಿಸಿ ಬಡಗಿಗಳು ಹಾಕಿಸಿದ ದಾನವನ್ನು ದೊಮ್ಮಲೂರಿನ ಒಂದು ಶಾಸನ ದಾಖಲಿಸಿದೆ.[5] ಗುಂಜೂರಿನ ಒಂದು ಶಾಸನವು ಅಂದು ಈ ಭಾಗದಲ್ಲಿ ಅಸ್ತಿತ್ವದಲ್ಲಿದ್ದ ಹಲವು ನಾಡುಗಳ ಹೆಸರನ್ನು ದಾಖಲಿಸಿದೆ.[6] ಆ ಹೆಸರುಗಳೆಂದರೆ, ಕುಂದಾಣಿನಾಡು, ವಿರಿವಿನಾಡು, ಮಾಸಂದಿನಾಡು, ಮುರಸುನಾಡು, ಚೊಕ್ಕನಾಯನ್‌ಪಳ್ಳಿ, ಪೆಣ್ಣೈಯಾಂಡಾರ್ ಮಾಡನಾಡು, ಐಂಬುಟಿಗೂರುನಾಡು, ಎಳವೂರುನಾಡು, ಕುವಳಾಳನಾಡು, ಕೈವಾರನಾಡು ಮತ್ತು ಇಳೈಪಾಕ್ಕನಾಡು. ವೊಳಗೆರೆಹಳ್ಳಿಯ ಒಂದು ಶಾಸನವು ಕರಿಕಾಲ ಚೋಳ ಎಂಬ ಬಿರುದು ಹೊಂದಿದ್ದ ರಾಜೇಂದ್ರ ದೇವನ ಕಾಲಕ್ಕೆ ಸೇರಿದ್ದು, ಅದರಲ್ಲಿ ಚೋಳರು ಮತ್ತು ಚಾಲುಕ್ಯರಿಗೆ ಕೊಪ್ಪಂನಲ್ಲಿ ನಡೆದ ಯುದ್ಧ ಆಗ ಸಂಭವಿಸಿದ ಸಾವು ನೋವುಗಳ ವಿವರ ನೀಡುತ್ತದೆ.[7] ಈ ಹಿಂದೆ ಪ್ರಸ್ತಾಪಿಸಲಾದ ಗುಂಜೂರಿನ ಶಾಸನದ ಪ್ರತಿಕೃತಿಯಂತೆಯೇ ಕಾಣುವ ಒಂದು ಶಾಸನ ಐಗಂಡಪುರದಲ್ಲಿದೆ.[8] ಚಿಕ್ಕನಲ್ಲೂರಿನ ಒಂದು ಶಾಸನವು ವೈಯಣ್ಣನ್ ಕಟ್ಟಿಸಿದ್ದ ಕೆರೆಯ ಹೂಳನ್ನು ಮಹಾಸಾಮಂತಾಧಿಪತಿ ಸೋಮನಾಥ ಎತ್ತಿಸಿದ್ದನ್ನು ದಾಖಲಿಸಿದೆ.[9] ಅದರಂತೆಯೇ ಪಟ್ಟಂದೂರಿನ ಕೆರೆಯನ್ನು ರಾಜರಾಜ ವೇಲನ್ ನಿರ್ಮಿಸಿದ್ದನ್ನು ಕಾಡಗೋಡಿಯ ಶಾಸನ ದಾಖಲಿಸಿದೆ.[10] ಮಳೂರಿನ ನಾಲ್ಕು ಶಾಸನಗಳು ಅಲ್ಲಿಯ ಕಂಬಗಳನ್ನು ಮಾಡಿಸಿದವರ ಹೆಸರುಗಳನ್ನು ದಾಖಲಿಸಿವೆ.[11] ಬೆಂಗಳೂರಿನಲ್ಲಿ ಸಿಗುವ ಇತ್ತೀಚಿನದು ಎಂದು ನಮೂದಾಗಿರುವ ಶಾಸನ ಹಲಸೂರಿನ ಸುಬ್ರಹ್ಮಣ್ಯ ದೇವಾಲಯದ ಬಳಿಯ ಕಲ್ಯಾಣ ಮಂಟಪದಲ್ಲಿದೆ. ಇದು ಕ್ರಿ. ಶ. 1821ರಲ್ಲಿ ಕಲ್ಯಾಣ ಮಂಟಪ ನಿರ್ಮಾಣ ಆದ ವಿಷಯವನ್ನು ದಾಖಲಿಸಿದೆ.[12]

ಮಾಗಡಿ ತಾಲ್ಲೂಕಿನಲ್ಲಿ ಮಾತ್ರ ಕೇವಲ ಒಂದು ತಮಿಳುಶಾಸನ ದೊರೆತರೆ, ಚನ್ನಪಟ್ಟಣ ತಾಲ್ಲೂಕಿನಲ್ಲಿ ಅತಿ ಹೆಚ್ಚು ಎಂದರೆ ಒಟ್ಟು 186 ಶಾಸನಗಳ ಪೈಕಿ 80 ಶಾಸನಗಳು ತಮಿಳುಭಾಷೆ ಮತ್ತು ಲಿಪಿಯಲ್ಲಿವೆ. 19ನೆಯ ಶತಮಾನದಲ್ಲಿ ದಾಖಲಾಗಿರುವ ಕೊನೆಯ ತಮಿಳು ಶಾಸನವು ಹಲಸೂರಿನ ಸೋಮೇಶ್ವರ ದೇವಾಲಯಕ್ಕೆ ಸಂಬಂಧಿಸಿದ್ದು ಅದು ಸೋಮೇಶ್ವರಸ್ವಾಮಿಯ ಕಾರ್ತೀಕ ಉತ್ಸವಕ್ಕೆ ದಾನವಾಗಿ ನೀಡಲಾದ ಮನೆಯನ್ನು ಉಲ್ಲೇಖಿಸಿದೆ.[13]

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಚಿತ್ರದುರ್ಗ ಜಿಲ್ಲೆಯ ತಮಟಕಲ್ಲಿನಲ್ಲಿ ಕರ್ನಾಟಕದಲ್ಲಿ ಅತಿ ಪ್ರಾಚೀನ ಎನ್ನಬಹುದಾದ ವಟ್ಟೆಳುತ್ತು ಶಾಸನ ಇದೆ.
2. ಎ.ಕ. IX, ಕನಕ 11, ಕ್ರಿ. ಶ. 1310.
3. ಎ.ಕ. IX, ಕನಕ 12, ಕ್ರಿ. ಶ. 1118
4. ಎ.ಕ. IX, ಕನಕ 35, ಕ್ರಿ. ಶ. 1178
5. ಎ.ಕ. IX, ಬೆಂಗ 12, ಕ್ರಿ. ಶ. ಸು. 1300
6. ಎ.ಕ. IX, ಬೆಂಗ 51, ಕ್ರಿ. ಶ. ಸು. 1301
7. ಎ.ಕ. IX, ಬೆಂಗ 108, ಕ್ರಿ. ಶ. ಸು. 1060
8. ಎ.ಕ. IX, ನೆಲ, ಕ್ರಿ. ಶ. 1301
9. ಎ.ಕ. IX, ಹೊಸ 81, ಕ್ರಿ. ಶ. 1330
10. ಎ.ಕ. IX, ಹೊಸ 142, ಕ್ರಿ. ಶ. 1043
11. ಎ.ಕ. IX, ಚನ್ನಪ್ಪ 101, 102 ಮತ್ತು 107, ಕ್ರಿ. ಶ. ಸು. 1100
12. ಎ.ಕ. IX, ಬೆಂಗ 14, ಕ್ರಿ. ಶ. 1821
13. ಎ.ಕ. IX, ಬೆಂಗ 15, ಕ್ರಿ. ಶ. 1876

12. ಶಾಸನಗಳ ಹಿನ್ನೆಲೆಯಲ್ಲಿ ಸಾಮಾಜಿಕ ಇತಿಹಾಸ

ಶ್ರೀ ಸುಂಕಂ ಗೋವರ್ಧನ

ಸಾಮಾನ್ಯವಾಗಿ ಶಾಸನಗಳ ಉದ್ದೇಶವಿರುವುದೇ ಸಮಕಾಲೀನ ಘಟನೆಯೊಂದರನ್ನು ಸಾರ್ವಕಾಲಿಕವಾಗಿ ದಾಖಲಿಸುವುದು. ರಾಜಕೀಯ ಹಾಗೂ ಧಾರ್ಮಿಕ ನೇತಾರರು ತಮ್ಮ ವಲಯದ ಬದುಕನ್ನು ಈ ಮೂಲಕ ಇತಿಹಾಸವಾಗಿಸಿದ್ದಾರೆ. ಹಾಗಾಗಿ ನಮಗೆ ಶಾಸನಗಳಲ್ಲಿ ಯಥೇಚ್ಛವಾಗಿ ದೊರಕುವ ವಿಷಯಗಳೆಂದರೆ: (1) ರಾಜ–ಮಹಾರಾಜರ ವೈಯಕ್ತಿಕ ಹಾಗೂ ರಾಜಕೀಯ; (2) ಅಧಿಕಾರಿ ವರ್ಗದವರ; (3) ಧಾರ್ಮಿಕ; (4) ದೇವಾಲಯಗಳಿಗೆ ಸಂಬಂಧಿಸಿದ; (5) ಬ್ರಾಹ್ಮಣರಿಗೆ ಸಂಬಂಧಿಸಿದ; ಹಾಗೂ (6) ನಾಡಿಗಾಗಿ ಪ್ರಾಣಾರ್ಪಣೆ ಮಾಡಿದ ವೀರರ ಹಾಗೂ ಪತಿನಿಷ್ಠ ಮಾಸ್ತಿಯರಿಗೆ ಸಂಬಂಧಿಸಿದ ಸಂಗತಿಗಳು. ಈ ಎಲ್ಲಾ ಸಂದರ್ಭಗಳಲ್ಲಿ ನೀಡಲಾಗುವ ದಾನ–ದತ್ತಿಗಳಲ್ಲಿ ಇವುಗಳಿಗೆ ಪೂರಕವಾಗಿ ಸಿಗುವ ಸಂಗತಿಗಳೆಂದರೆ ದೇವಾಲಯ, ಕೆರೆ, ಕಟ್ಟೆ ಮುಂತಾದವುಗಳ ನಿರ್ಮಾಣಗಳು ಹಾಗೂ ಕೃಷಿ–ವ್ಯಾಪಾರ–ತೆರಿಗೆ ವ್ಯವಸ್ಥೆಯ ಚಿತ್ರಣ. ಇವುಗಳನ್ನು ಆಧಾರವಾಗಿಟ್ಟುಕೊಂಡು ಇದುವರೆಗೂ ಅನೇಕ ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಆದರೆ ಒಂದು ನಾಡಿನ ಅಧ್ಯಯನ ಸಮಗ್ರವಾಗಬೇಕಾದರೆ ಅಲ್ಲಿನ ಜನ ಸಾಮಾನ್ಯರ ಬದುಕನ್ನು, ಬದುಕಿನ ಸಣ್ಣ–ಪುಟ್ಟ ಸಂಗತಿಗಳನ್ನು ದಾಖಲಿಸದೇ ಹೋದರೆ ಪೂರ್ಣವಾಗುವುದಿಲ್ಲ.

ಶಾಸನಗಳಲ್ಲಿ ಸಾಮಾಜಿಕ ಸಂಗತಿಗಳು ಯಥೇಚ್ಛವಾಗಿ ದೊರೆಯುವುದಿಲ್ಲ. ಸಿಗುವ ಮಾಹಿತಿಗಳನ್ನು ಹೆಕ್ಕಿ ತೆಗೆದು ಸಾಮಾಜಿಕ ಸಂಕಥನವನ್ನು ಸೃಷ್ಟಿಮಾಡಿಕೊಳ್ಳುವ ಅನಿವಾರ್ಯತೆ ಇಂದು ಹೆಚ್ಚಿದೆ. ಹೀಗೆ ಬೆಂಗಳೂರು ನಗರ ಜಿಲ್ಲೆಯ ಶಾಸನಗಳಲ್ಲಿ ಕಂಡುಬರುವ ಬಿಡಿ ಬಿಡಿ ಸಂಗತಿಗಳಲ್ಲಿ ಹುದುಗಿರುವ ಸಾಮಾಜಿಕ ಸಂಗತಿಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಅಗರದ ಕ್ರಿ. ಶ. 870 ಕ್ಕೆ ಸೇರಿದ ಶಾಸನವು ಇರ್ವ್ವಲಿಯೂರಿನ ಒಡೆಯನಾದ ಇರುಗಮಯ್ಯನ ಮಗ ಸಿರಿಯಮಯ್ಯನು ಎರಡು ಕೆರೆಗೆ ತೂಬನ್ನು ಕಟ್ಟಿಸಿ ಮೂರನೆಯದಾದ ಮೂಡಣ ಕೆರೆಯೊಂದನ್ನು ಕಟ್ಟಿಸಿ ಬಿತ್ತುವಟ್ಟವನ್ನು ಪಡೆದನು. (ಬೆಂ. 79)

ಹಾರಗದ್ದೆ ಗ್ರಾಮದ ಶಾಸನವು (ಆ.64) ವೀರಕೊಡೆ ಬಣಕ್ಕೆ ಸೇರಿದ ವ್ಯಾಪಾರಿಗಳು ಈ ಊರಲ್ಲಿ ಕಟ್ಟಡವೊಂದನ್ನು ಕಟ್ಟಿಸುತ್ತಾರೆ. ಹೀಗೆ ಕಟ್ಟಿಸಿದ ಕಟ್ಟಡವನ್ನು ಸಮಯ ಮಂತ್ರಿಗೆ ಒಪ್ಪಿಸುವಾಗ ಯಾರಾದರೂ ಅತಿಕ್ರಮಿಸಿದರೆ ಬಲಗೈ ಪಡೆಯವರ ಶಿಕ್ಷೆಗೆ ಗುರಿಯಾಗುತ್ತಾರೆ ಎಂಬ ಮಾತನ್ನು ಇಲ್ಲಿ ಹೇಳುತ್ತಾರೆ. ಈ ಶಾಸನದ ಕಾಲ ಕ್ರಿ. ಶ. 1200.

ಕ್ರಿ. ಶ. 1301ಕ್ಕೆ ಸೇರಿದ ಗುಂಜೂರು (ಬೆಂ 51) ಹಾಗೂ ಮಡಿವಾಳದ (ಬೆಂ. 65) ಶಾಸನಗಳು ಮೂರನೆ ಬಲ್ಲಾಳನ ಕಾಲದಲ್ಲಿ ತನ್ನ ಆಡಳಿತಕ್ಕೆ ಸೇರಿದ ಹೆಸರ್ ಕುಂದಾಣಿ ರಾಜ್ಯದಲ್ಲಿರುವ ವಿರವಿನಾಡು, ಮಾಸಂದಿ ನಾಡು, ಪಿಂಬುಟುಗೂರ್ ನಾಡು, ಮೊರಸು ನಾಡು, ಎಳವೂರು ನಾಡು, ಕುವಳಾಲ ನಾಡು, ಇಲೈಪಾಕ್ಕುನಾಡು ಮತ್ತಿತರ ನಾಡುಗಳ ಮಠಾಧಿಪತಿಗಾಗಿ, ಸ್ಥಾನೀಕರಿಗೆ ಒಂದು ನಿರೂಪವನ್ನು ಕಳುಹಿಸಿ ಈ ನಾಡುಗಳಲ್ಲಿದ್ದ

ಮಗ್ಗದ ಮೇಲೆ, ಅಕ್ಕಸಾಲಿಗರ ಮೇಲೆ, ಚಮ್ಮಾರರ ಮೇಲೆ ಹಾಕುತ್ತಿದ್ದ ತೆರಿಗೆಯನ್ನು ಮನ್ನಾ ಮಾಡಲಾಗಿದ್ದು, ಇದನ್ನು ತೆಗೆದುಕೊಳ್ಳತಕ್ಕದ್ದಲ್ಲ ಎಂದು ತಿಳಿಸಿದೆ.

ಕ್ರಿ. ಶ. 1302ಕ್ಕೆ ಸೇರಿದ ಬೊಂಮೊಂಡಹಳ್ಳಿಯ ಶಾಸನವು ಸಿರಿಕೋಶ ಮಾರಪ್ಪ ಎಂಬಾತ ಸುಗಣಿಯಲ್ಲಿ ಹಾಳಾಗಿದ್ದ ಕೆರೆಯನ್ನು ತನ್ನ ಕೈಯಿಂದ ದುಡ್ಡು ಹಾಕಿ ರಿಪೇರಿ ಮಾಡಿಸುವ ಸಂಗತಿಯನ್ನು ತಿಳಿಸುತ್ತದೆ. ವೈಚಯ್ಯನಾಯಕ ಹಾಗೂ ಸಿಂಗಯ್ಯ ನಾಯಕರು ಈ ಸಂದರ್ಭದಲ್ಲಿ ಸುಗಣಿಯನ್ನು (ಇಂದಿನ ಜಿಗಣಿ) ಆಳುತ್ತಿದ್ದರು. ಈ ಕೆಲಸ ಮಾಡಿದ್ದಕ್ಕಾಗಿ ಮಾರಪ್ಪನಿಗೆ ಈ ಊರಿನ ಮಹಾಜನರು ಕೆಲವು ದಾನಗಳನ್ನು ನೀಡುತ್ತಾರೆ.

ಕ್ರಿ. ಶ. 1302ಕ್ಕೆ ಸೇರಿದ ವಿಭೂತಿಪುರದ ಶಾಸನವು ಒಂದು ಗ್ರಾಮ ನಿರ್ಮಾಣದ ವಿಷಯವನ್ನು ತಿಳಿಸುತ್ತದೆ. ನಿನ್ರಾನ್ ಎಂಬ ವ್ಯಕ್ತಿಯು ಮಾಸಂದಿ ನಾಡಿನ ಸೆಂಬಿ ದೇವ, ವಿಳ್ಳ ಗಾಮುಂಡ ಮುಂತಾದವರನ್ನು ಸೇರಿಸಿಕೊಂಡು ಪೆರು–ಏರುಮಾರಿಗೆ ಹತ್ತಿರವಿದ್ದ ಕಾಡನ್ನು ಕಡಿದು ಸಮತಟ್ಟು ಮಾಡಿ ಗ್ರಾಮವೊಂದನ್ನು ಮಾಡಿ ಅದಕ್ಕೆ ವಾಚ್ಚಿದೇವರ ಪುರ ಎಂದು ಹೆಸರಿಟ್ಟನು. ಈ ಊರಿನ ಅಗತ್ಯಕ್ಕಾಗಿ ಅಲ್ಲಿ ಕೆರೆಯೊಂದನ್ನು ಕೂಡ ಕಟ್ಟಿಸಿದರು (ಬೆಂ. 135)

ಹೀಲಲ್ಲಿಗೆ ಗ್ರಾಮದ ಕ್ರಿ. ಶ. 1330ರ ಶಾಸನವು (ಆ 65) ಮೂರನೆ ಬಲ್ಲಾಳನ ಎಕ್ಕಟಿಗನಾದ ವೀರಕಂತ ಸೋಮೇಶರಾಯ ನಾಯಕನನ್ನು ಉಲ್ಲೇಖಿಸುತ್ತದೆ. (ಎಕಟಿಗ ವೀರಪಡೆಯ ಬಗ್ಗೆ ಹೆಚ್ಚಿಗೆ ತಿಳಿಯಲು 'ಇತಿಹಾಸ ದರ್ಶನ' ಸಂ.25ರಲ್ಲಿರುವ ಎನ್. ಆರ್. ಲಲಿತಾಂಬಾರವರ ಲೇಖನ ನೋಡಿ).

ಕ್ರಿ. ಶ. 1330ಕ್ಕೆ ಸೇರಿದ ಕಿತ್ತನಲ್ಲಿ ಗ್ರಾಮದ ಶಾಸನವು ತುಂಬಾ ವಿಶಿಷ್ಟವಾದ ಸಂಗತಿಯೊಂದನ್ನು ದಾಖಲಿಸುತ್ತದೆ. (ನೆ.12) ಈ ಶಾಸನವು ರೈತವರ್ಗದ ವ್ಯಕ್ತಿಯೊಬ್ಬನ ಸಾವಿನ ನಂತರ ಆತನ ಆಸ್ತಿ ಯಾರಿಗೆ ಸೇರಬೇಕು ಎಂಬ ವಿಷಯದಲ್ಲಿ ವ್ಯಾಜ್ಯಕ್ಕೆ ಬಂದಾಗ ದಂಬಾಳದ ಹಲರು (ರೈತವರ್ಗದವರು) ಮಾಡಿಕೊಂಡ ನಿಯಮವೆಂದರೆ ಈ ಕುಲದಲ್ಲಿ ಯಾರಾದರೂ ಸತ್ತರೆ ಆತನಿಗೆ ಗಂಡು ಮಕ್ಕಳಿಲ್ಲದಿದ್ದರೆ ಆಸ್ತಿಯು ಅಣ್ಣ–ತಮ್ಮಂದಿರಿಗೆ ದೊರೆಯುತ್ತದೆ. ಅಣ್ಣ–ತಮ್ಮಂದಿರು ಇಲ್ಲದಿದ್ದರೆ, ಅಳಿಯ ಹಾಗೂ ಮೊಮ್ಮಗಳಿಗೆ ಸೇರುತ್ತದೆ. ಇವರಾರೂ ಇಲ್ಲದಿದ್ದರೆ ಆ ಹಲರು ಯಾವ ಜಾತಿಗೆ ಸೇರುತ್ತಾರೋ ಆ ಜಾತಿಗೆ ಸೇರಿದ ಸಂಸ್ಥೆಗೆ (?) ಸೇರಿಸಬೇಕು ಈ ಶಾಸನವು ತಾಮ್ರ ಶಾಸನವೊಂದರ ನಕಲು ಎಂದೂ, ಇದೇ ನಿಯಮವನ್ನು ವೀರಬಲ್ಲಾಳನು ದೋರಸಮುದ್ರದಲ್ಲಿ ಪಾಲಿಸುತ್ತಾನೆ ಎಂದೂ ಈ ಶಾಸನ ತಿಳಿಸುತ್ತದೆ.

ಕ್ರಿ. ಶ. 1333ರ ಹೂಡಿಯ ಶಾಸನವು (ಬೆಂ. 61) ಈ ಪರಿಸರದಲ್ಲಿ ಸಂತೆಯೊಂದನ್ನು ಏರ್ಪಡಿಸಿ ಈ ಗ್ರಾಮವನ್ನು ಪಟ್ಟಣವನ್ನಾಗಿ ಮಾಡಿದ ಶಾಸನವಾಗಿದೆ. ಬೆಳಗನ ಬೆಂಮೆಯ ನಾಯಕ, ತೆಂಬೆ ನಾಯಕ, ತೊರವಳಿಯ ನಾಡ ಸಮಸ್ತ ಪ್ರಭುಗೌಡುಗಳು ತೊಳವಂಡಿಯ ಬೊಮ್ಮಿಸೆಟ್ಟಿಯ ಮಗ ಮುಕುತಿ ಸೆಟ್ಟಿಗೆ ಈ ಚಿಕ್ಕಹೂಡಿಯ ಪಟ್ಟಣಸ್ವಾಮಿಯಾಗಿ ನೇಮಿಸಿ ಆತನಿಗೆ ಸಂತೆಯನ್ನು ಕಟ್ಟುವುದಕ್ಕೆ ಚಿಕ್ಕಹೂಡಿಯ ಹಿರಿಯ ಕೆರೆಯ ಬಳಿ 1 ಕೊಳಗ, ಸಿಂಗನ ಕೆರೆಯಲಿ 15 ಕೊಳಗ, ಊರ ಮುಂದಣ ತಾಟ–ಕುಂಟೆಯಲಿ 5 ಕೊಳಗ ಮುಂತಾಗಿ ಭೂದಾನವನ್ನು ನೀಡಲಾಗಿದೆ. ಈ ಪಟ್ಟಣ ಸ್ವಾಮಿಗೆ 2 ಮನೆಯನ್ನು ಕೂಡ ನೀಡಲಾಯಿತು.

ನಾಗಶೆಟ್ಟಿಹಳ್ಳಿಯ ಶಾಸನವು (ಬೆಂ. 129) ಕೂಡ ಮೂರನೇ ಬಲ್ಲಾಳನ ಇನ್ನೊಬ್ಬ ಎಕ್ಕಟಿಗನಾದ ಚಿಕ್ಕಬೈರೇ ನಾಯಕನನ್ನು ದಾಖಲಿಸುತ್ತದೆ. ಈ ಶಾಸನದ ಕಾಲ ಕ್ರಿ. ಶ. 1342.

ಕೃಷ್ಣರಾಜಪುರ ಹೋಬಳಿಯ ಕಲ್ಲುಕೆರೆ ಗ್ರಾಮದ ಶಾಸನವು (ಎಪಿಗ್ರಾಫಿಯಾ ಕರ್ನಾಟಿಕ; ಬೆಂಗಳೂರು ಅನುಬಂಧ ಸಂಪುಟ–ಬೆಂ.166) ವೀರಬಲ್ಲಾಳನ ಕಾಲದಲ್ಲಿ ನಡೆದ ಅಪರೂಪವಾದ ಘಟನೆಯೊಂದನ್ನು ದಾಖಲಿಸುತ್ತದೆ. ವಿಪರೀತ ಮಳೆಯಿಂದ ಕಲ್ಲುಕೆರೆಯು ಎರಡು ಕಡೆ ಒಡೆದುಹೋಯಿತು. ಕಲ್ಲುಕೆರೆಯ ಭಾಗದ ಒಡ್ಡನ್ನು ಈ ಊರಿನ ದಾಮೋದರ ಶೆಟ್ಟಿಯು ಹಣ ಹಾಕಿ ಕಟ್ಟಿಸಿದನು. ಆದರೆ ತೆರಳಬ್ಬನಹಳ್ಳಿಯ ಜನ ಮಾತ್ರ ತಮ್ಮ ಭಾಗದ ಒಡ್ಡನ್ನು ಕಟ್ಟಲಾರೆವು ಎಂಬುದಕ್ಕೆ ಈ ದಾಮೋದರ ಸೆಟ್ಟಿಯೇ ಆ ಭಾಗದ ಒಡ್ಡನ್ನು ಸಹ ಕಟ್ಟಿಸಿಕೊಟ್ಟನು.

ಬೇಗೂರಿನ ನಗರೇಶ್ವರ ದೇಗುಲದ ಕ್ರಿ. ಶ. 1402ಕ್ಕೆ ಸೇರಿದ ಶಾಸನವೊಂದರಲ್ಲಿ (ಬೆಂ. 96) ಶೆಟ್ಟಿ ಕುಲಕ್ಕೆ ಸೇರಿದ ಜನರು ಈ ದೇವಾಲಯಕ್ಕೆ ನಡೆದುಕೊಂಡ ಬಗೆಯನ್ನು ವರ್ಣಿಸಲಾಗಿದೆ. ಕಾವ್ಯಾತ್ಮಕವಾದ ಈ ಶಾಸನವು ನಗರೇಶ್ವರ ದೇವಾಲಯದ ಪಡಿತರ, ದೀಪಾರಾಧನೆ, ಅರ್ಚನಾವೃತ್ತಿ ಮುಂತಾದ ದೇವತಾ ಸೇವೆಗೋಸ್ಕರವಾಗಿ ಇಲ್ಲಿನ ಅರ್ಚಕರಾದ ಕುಶೈಯ್ಯನವರಿಗೆ ತಿರುಮಲ ಶೆಟ್ರು, ಲಕ್ಷ್ಮೀಪತಿ ಶೆಟ್ರು, ಪಿಂಗಾಣಿ ಶೆಟ್ರು, ಕೃಷ್ಣ ಶೆಟ್ರು, ಚಿನ್ನಾರಿ ಶೆಟ್ರು, ಮೊದಲಾದ ಸ್ಥಳ–ಪರಸ್ಥಳದ ಶೆಟ್ರುಗಳೆಲ್ಲಾ ಸೇರಿ ಇಲ್ಲಿ ಕೆಲವು ದಾನವನ್ನು ನೀಡಿರುತ್ತಾರೆ. ಮುಖ್ಯವಾದ ಸಂಗತಿಯೆಂದರೆ ಮೂರನೇ ಜಾತಿಗೆ ಸೇರಿದ ಅವರು (ವೈಶ್ಯರು) ಎಲ್ಲಿದ್ದರೂ ಸರಿ ಈ ದೇಗುಲಕ್ಕೆ ಪ್ರತೀ ವರುಷ ಮನೆಯೊಂದಕ್ಕೆ ಒಂದು ಹಣದಂತೆ, ಮದುವೆಯೊಂದಕ್ಕೆ 2 ಹಣದಂತೆ ನೀಡುವುದಾಗಿ ನಿಯಮವೊಂದನ್ನು ರೂಪಿಸಿಕೊಂಡರು.

ಕನ್ನಲ್ಲಿ ಗ್ರಾಮದ ಕ್ರಿ. ಶ. 1408ಕ್ಕೆ ಸೇರಿದ ಶಾಸನವು (ಬೆಂ. 122) ವೀರದೇವರಾಯನ ಕಾಲದಲ್ಲಿ ಕುಕ್ಕಲ ನಾಡಿನಲ್ಲಿದ್ದ ಕನ್ನಲ್ಲಿಯ ತಿರುಮಲೆನಾಥ ದೇವರಿಗೆ ಕನ್ನಲ್ಲಿಯಲ್ಲಿದ್ದ ಎರಡು ಮಗ್ಗಗಳನ್ನು ದಾನ ನೀಡಿರುವ ಅಪರೂಪದ ವಿಷಯವನ್ನು ತಿಳಿಸುತ್ತದೆ. ವಿಶೇಷವೆಂದರೆ ಈ ದೇಗುಲಕ್ಕೆ ಈ ಊರಿನಲ್ಲಿದ್ದ ಎರಡು ಮಗ್ಗಗಳನ್ನು ನೀಡಿರುವುದನ್ನು ನೋಡಿದರೆ ಇದರ ಆದಾಯವು ಎಷ್ಟಿದ್ದಿರಬಹುದು ಎಂದು ಯೋಚಿಸಬೇಕಾಗುತ್ತದೆ.

ಮಾಯಿಸಂದ್ರದ ಶಾಸನವೊಂದು (ಆ.44) ಕ್ರಿ. ಶ. 1410ಕ್ಕೆ ಸೇರಿದ್ದು ಅದರಲ್ಲಿ ದೇವರಾಯ ಒಡೆಯನ ಕಾಲದಲ್ಲಿ ಜುಂಜೋಜಿನಾಯಕರ ಮಕ್ಕಳು ಹಿರಿಯ ಮುದಿಯ ನಾಯಕರು ತಮ್ಮ ನಾಯಕತನಕ್ಕೆ ಸಲ್ಲುವ ಹಿರಸುನಾಡ ಸೋಮಗೊಂಡನಹಳ್ಳಿಯಲ್ಲಿ ಸಂತೆಯನ್ನು ಕಟ್ಟಿಸಿದ ವಿಷಯವಿದೆ. ಮಾರಿಸೆಟ್ಟಿಯ ಮಕ್ಕಳಾದ ದಂಡಿಸೆಟ್ಟಿ ಹಾಗೂ ತಿರುಮಲ ಸೆಟ್ಟಿಗಳಿಗೆ ಪಟ್ಟಣಸ್ವಾಮಿತನವನ್ನ ಕೊಟ್ಟರು. ಇವರಿಬ್ಬರ ಜೊತೆ ಮಂಚಿಶೆಟ್ಟಿಯ ಸಮೇತ ದಾನನೀಡಿದ ಭೂಮಿಯನ್ನು 3 ಭಾಗವನ್ನಾಗಿ ಮಾಡಿಕೊಂಡು ಹಂಚಿಕೊಂಡರು. ಈ ಕಾರ್ಯಕ್ಕಾಗಿ ಈ ಮೂವರಿಗೆ 10 ಅಂಕಣದ ಮನೆಯನ್ನು ಕೂಡ ನೀಡಲಾಯಿತು. ಇಂತದೇ ಸಂತೆ ನಿರ್ಮಾಣದ ಇನ್ನೊಂದು ಶಾಸನವು ಸರ್ಜಾಪುರದಲ್ಲಿದ್ದು (ಆ.4) ಕ್ರಿ. ಶ. 1418ಕ್ಕೆ ಸೇರಿದ್ದಾಗಿದೆ. ಜಕ್ಕಮದ್ದೆ ನಾಯಕರು ತಮ್ಮ ನಾಯಕತನಕ್ಕೆ ಸಲ್ಲುವ ಹಿಮ್ಮರಿ ನಾಡಿನ ಬಲ್ಲಗೌಡನ ಕೈಯಲ್ಲಿ ಸಂತೆಯನ್ನು ಕಟ್ಟಿಸಿ ಮಣಿಗ ಸೆಟ್ಟಿಗೆ ದಾನವನ್ನು ನೀಡಲಾಗಿದೆ.

ದೊಡ್ಡಬೊಮ್ಮಸಂದ್ರದ ಕ್ರಿ. ಶ. 1430ರ ಶಾಸನವು (ಬೆಂ. 26) ದೇವರಾಯನ ಕಾಲದಲ್ಲಿ ಕುಕ್ಕಲನಾಡನ್ನು ಬುಕ್ಕನಾಯಕನು ಆಳುತ್ತಿದ್ದ ಕಾಲದಲ್ಲಿ ಬಂಮಹಳ್ಳಿಯೆಂಬ ಅಗ್ರಹಾರವನ್ನು ಮಾಡಿ ಸರ್ವಮಾನ್ಯವನ್ನಾಗಿ ದಾನ ನೀಡಿದ್ದಾನೆ. ಹೀಗೆ ದಾನ ಮಾಡುವಾಗ ಅವರಿಗೆ ಒಮ್ಮುಖಾ ಸುಂಕವನ್ನು ಬಿಟ್ಟಿದ್ದಾನೆ.

ಈ ಹಿಂದೆ ಗಮನಿಸಿದಂತೆ ಅಗರದಲ್ಲಿ ಕ್ರಿ. ಶ. 870ರಲ್ಲಿ ನಿರ್ಮಾಣವಾಗಿದ್ದ ಕೆರೆಯ ಹೊಳೆತ್ತಲು ಭಂಡಿ ನಡೆವುದಕ್ಕೆಂದು ಕೃಷ್ಣದೇವರಾಯನ ಕಾಲದಲ್ಲಿ ಸಿವಣ್ಣಪ್ಪ ನಾಯಕನು ತಮ್ಮ ತಂದೆಗೆ ಪುಣ್ಯವಾಗಲಿ ಎಂದು ದಾನವನ್ನು ನೀಡಿದ್ದಾನೆ. ಈ ಶಾಸನದ (ಬೆಂ. 80) ಕಾಲ ಕ್ರಿ. ಶ. 1515.

ಕ್ರಿ. ಶ. 1524ರ ಚಿಕ್ಕಬೆಟ್ಟಹಳ್ಳಿಯ ಶಾಸನವು (ಬೆಂ. 19) ಸಿಂಗಾಪುರದಲ್ಲಿ ರಾಮಾನುಜಕೂಟವೊಂದು ಇದ್ದುದನ್ನು ತಿಳಿಸುತ್ತದೆ.

ಹೆಸರುಘಟ್ಟದ ಚಂದ್ರಮೌಳೇಶ್ವರ ದೇಗುಲದ ಶಾಸನವು ಅತ್ಯಂತ ವಿಶಿಷ್ಟವಾದ ಸಂಗತಿಯೊಂದನ್ನು ದಾಖಲಿಸುತ್ತದೆ (ನೆ. 31) ಕ್ರಿ. ಶ. 1433ರಲ್ಲಿ ಬೇಲೂರು ಚಾವಡಿಗೆ ಸೇರಿದ ಯಲಹಂಕ ನಾಡಿನ ಸಿವನಸಮುದ್ರದ ಸೀಮೆಯೊಳಗಡೆ ಕಾಕೋಳ ಸ್ಥಳದ ಹೆಸರಘಟ್ಟದಲ್ಲಿ ಕಾಶಿಯಿಂದ ಲಿಂಗವೊಂದನ್ನು ತರಿಸಿ ಚಂದ್ರಮೌಳೇಶ್ವರ ದೇವಾಲಯವನ್ನು ನಿರ್ಮಿಸಿದಾಗ ಅನೇಕ ದಾನಗಳನ್ನು ನೀಡಲಾಯಿತು. ಇದರಲ್ಲಿ ಒಂದು ನಿವೇಶನಕ್ಕೆಂದು 25 ಮಾರು ಅಗಲ ಹಾಗೂ 20 ಮಾರು ಉದ್ದದ ನಿರ್ವೇಶವೊಂದರಲ್ಲಿ ಅಳತೆ ಕೊರತೆಯಾದಾಗ ಅಲ್ಲಿನ ಮಹಾಜನರು ಮಧ್ಯೆಪ್ರವೇಶಿಸಿ ಆ ಕೊರತೆಯಾದ ಜಾಗವನ್ನೇ ತುಂಬಿಕೊಟ್ಟರು. ಈ ಘಟನೆಯಾದದ್ದು ಮನ್ಮಥ ಸಂವತ್ಸರದಲ್ಲಿ. ಒಂದು ಘಟನೆ ಹೇಗೆ ಮತ್ತೊಂದು ಘಟನೆಗೆ ಸಾಕ್ಷಿಯಾಗುತ್ತದೆ ಎಂಬುದಕ್ಕೆ ಈ ಶಾಸನ ಅತ್ಯುತ್ತಮ ಉದಾಹರಣೆ. ಮರುವರ್ಷವೇ ಶಕ 930ರಲ್ಲಿ ದೇವರ ಗುಡಿಯ ದಾಸಿಗೆ ಒಂದು ತೋಟವನ್ನು ದಾನ ನೀಡಲಾಗಿತ್ತು. ಈ ಅಳತೆಯಲ್ಲಿ ಕೂಡ ಕೊರತೆಯಿತ್ತು. ಆಕೆ ತನಗೆ ಕೊರತೆಯಾದ ಜಾಗವನ್ನು ಕೆರೆಗೆ ಹೋಗುವ ದಾರಿಯಲ್ಲಿ ಪಡೆದುಕೊಳ್ಳುವಲ್ಲಿ ಯಶಸ್ವಿಯಾದಳು. ಹಿಂದಿನ ವರ್ಷದಲ್ಲಿ ಕೊರತೆಯಾದ ನಿವೇಶನಕ್ಕೆ ಜಾಗ ಕೊಟ್ಟಿದ್ದು ಈಕೆಯ ಮನಸ್ಸಿನಲ್ಲಿದ್ದು ತಕ್ಷಣ ತನಗೆ ಅನ್ಯಾಯವಾದಾಗ ಈಕೆ ನ್ಯಾಯವನ್ನು ಪಡೆಯುವುದರಲ್ಲಿ ಯಶಸ್ವಿಯಾದಳು.

ಸರ್ಜಾಪುರದ ಎರಡು ಶಾಸನಗಳು (ಆ.2 ಮತ್ತು ಆ.8) ಇಲ್ಲಿನ ಮುಸಲ್ಮಾನರಿಗೆ ದಾನ ನೀಡಿರುವ ವಿಷಯವನ್ನು ತಿಳಿಸುತ್ತವೆ. ಕ್ರಿ. ಶ. 1650ರ ಶಾಸನವು ಹಫಿಜ್ ಮಹಮದ್ ಖಾನ್ ಸಾಹೇಬರು ಮೊಹಬ್ಬತ್ ಕಬರಸ್ಥಾನಕ್ಕೆಂದು ದಾನ ನೀಡುತ್ತಾನೆ. 1652ರ ಶಾಸನವು ರಮ್ಜಾನ್ ತಿಂಗಳಲ್ಲಿ ಮಹಮ್ಮದ್ ಅಬ್ದುಲ್ ಬಿ ಯ ಮಗಳಾದ ಆಶ್ರು ಬೀ, ಮೊಗದುಂ ಸಾಹೇಬನ ಹೆಂಡತಿಗೆ ಹಜರತ್ ಖಾನ್ ಸಾಹೇಬನು ಮಾನ್ಯದ ಹೊಲವನ್ನು ನೀಡುತ್ತಾನೆ.

ಹುಳಿಮಾವಿನ ಶಾಸನವು ಕ್ರಿ. ಶ. 1652ರಲ್ಲಿ (ಬೆಂ. 105) ಚೆನ್ನಪ್ಪಣ್ಣ ಅಯ್ಯನವರ ಕಾರ್ಯಕ್ಕೆ ಕರ್ತರಾದ ಯಲ್ಲಪ್ಪ ನಾಯಕರು ನೌಋತಿಯ ಸೀಮೆಗೆ ಮದುವೆ ಸುಂಕವನ್ನು ಬಿಟ್ಟ ವಿಷಯವನ್ನು ತಿಳಿಸುತ್ತದೆ. ಬಿಂಗೀಪುರದ ಕ್ರಿ. ಶ. 1760ರ ಶಾಸನವೊಂದು (ಆ.90) ಮೈಸೂರಿನ ಒಡೆಯ ಚಿಕ್ಕು ಕೃಷ್ಣರಾಜ ಒಡೆಯರು ಅತವಲ ಶಾಹನಿಗೆ ಬರೆಸಿಕೊಟ್ಟ ತಾಮ್ರಶಾಸನವಾಗಿದೆ. "ನೀನು ಮಾಡುವ ಫಕೀರ ಧರ್ಮಕ್ಕೆ ಬೆಂಗಳೂರು ಸ್ಥಳದ ಜಿಗಣಿ ಹೋಬಳಿಯ ಬಿಂಗೀಪುರ ಗ್ರಾಮದ ಹುಟ್ಟುವಳಿಯಾದ 2000 ವರಹವನ್ನು ಹೈದರಾಲಿ ಬಹದ್ದೂರನು ಬೊಕ್ಕಸಕ್ಕೆ ವೊಪ್ಪಿಸಿದ ಕಾರಣ ಈ ಗ್ರಾಮವನ್ನು ನಿರುಪಾಧಿಕ ಸರ್ವಮಾನ್ಯವಾಗಿ ಫಕೀರ ಧರ್ಮಕ್ಕೆ ಕೊಡಿಸಿದ್ದೇನೆ. ನೀನು ಮುಂತಾಗಿ ಎಲ್ಲಾ ಫಕೀರರು ಯೀ ಧರ್ಮವನ್ನು ಶಾಶ್ವತವಾಗಿ ನಡೆಸಿ" ಎಂದು ತಿಳಿಸುತ್ತದೆ.

ಸೊಂಡೆಕೊಪ್ಪದ ಕ್ರಿ. ಶ. 1761ಕ್ಕೆ ಸೇರಿದ ಶಾಸನವು (ನೆ.8) ಮೈಸೂರು ಕೃಷ್ಣರಾಜ ಒಡೆಯರು ಅಹಮದ್ ಸಯ್ಯದ್ ಷೇಕ್ ಯಿಮಾಮ್‌ಗೆ ಬರೆಸಿಕೊಟ್ಟ ತಾಮ್ರಶಾಸನವಾಗಿದೆ. ನೆಲಮಂಗಲದ ಸ್ಥಳದ ಸೊಂಟೆಕೊಪ್ಪದಲ್ಲಿ ನೀನು ಮಾಡಿರುವ ಮಸೀದಿ ಧರ್ಮಕ್ಕೆ ಅಠವಣೆಯಿಂದ (ಕಂದಾಯ ಇಲಾಖೆ) 1 ವರುಷಕ್ಕೆ 27 ವರಹ ಮೇರೆಗೆ ಕೊಟ್ಟು ಬರುವುದು. ಈ ತಣವಿಗೆ ಉತ್ತಾರವಾಗಿ ನೆಲಮಂಗಲದ ಸ್ಥಳದ ದಾಬನಾಯಕನಹಳ್ಳಿ ಗ್ರಾಮದ ಹುಟ್ಟುವಳಿಯಾದ 20 ವರಹ ಮಟ್ಟವಕುರುಚಿ ಗ್ರಾಮದ ಹುಟ್ಟುವಳಿ 7 ವರಹ. ಈ ಉಭಯವನ್ನು ಕಂಠೀರವ ಗುಳಿಗೆ 27 ವರಹದ ಹುಟ್ಟುವಳಿಯೆಂದು ಈ ಗ್ರಾಮ ಹೊಲ ಸಹಾ ಮಸೀದಿ ಸರ್ಮಕ್ಕೆ ನಿರುಪಾಧಿಕ ಸರ್ವಮಾನ್ಯವೆಂದು ದಾನ ನೀಡಲಾಗಿದೆ.

ಶಿಡಿಹೊಸಕೋಟೆಯ 1801ಕ್ಕೆ ಸೇರಿದ ಶಾಸನವೊಂದು ಈ ಊರಿನಲ್ಲಿ ಮರಿಗೌಡ ಹಾಗೂ ರಾಮಶೆಟ್ಟಿ ಇಬ್ಬರೂ ಸೇರಿ ಕೆರೆ, ಕುಂಟೆ, ತೋಪನ್ನು ಕಟ್ಟಿಸಿದರು ಎಂದು ತಿಳಿಸುತ್ತದೆ. ಕ್ರಿ. ಶ. 1819ಕ್ಕೆ ಸೇರಿದ ಬನ್ನೇರುಘಟ್ಟದ ಸುವರ್ಣ ಮುಖಿ ತೀರ್ಥದ ಬಳಿ ಇರುವ ಶಾಸನವು ಬೇವೂರು ಸ್ಥಳದ ಬೆಂಗಳೂರು ಫೌಜುದಾರನಾಗಿದ್ದ ಲಿಂಗರಾಜೈಯ್ಯನನ್ನು ಉಲ್ಲೇಖಿಸುತ್ತದೆ.

ಬೆಂಗಳೂರಿನ ಅರಳೆಪೇಟೆಗೆ ಸೇರಿದ ಮಂಚಿ ಸೋಮೇಶ್ವರ ಸ್ವಾಮಿಗೆ ಪಡಿತರ ದೀಪಾರಾಧನೆ ಹಾಗೂ ಅರ್ಚಕ ಪರಿಚಾರಕನಿಗೆ ದೇವಾಲಯದಲ್ಲಿ ಪೂಜೆ ಚೆನ್ನಾಗಿ ನಡೆಯಲು ಸೋಮವಾರ ಪೇಟೆಯಲ್ಲಿರುವ ಭಗವಂತಗಿರಿ ಗೋಸಾಯಿಯ ಬೆಂಗಳೂರಿನ ವಳಗೆಡಿಯಾರ ಬೇಗೂರು ತಾಲ್ಲೂಕಿನಲ್ಲಿರುವ ತಾವರೆಕೆರೆ ಗ್ರಾಮಕ್ಕೆ ಪೂರ್ವದಿಕ್ಕಿನಲ್ಲಿರುವ ಧರ್ಮಾದೀಕ್ಷಿತರ ಭಟ್ಟಮಾನ್ಯದ ಹೊಲವನ್ನು (180 ಖಂಡುಗ) ವಠಾರ, ಕಣ, ತಿಪ್ಪೆ ಮುಂತಾದ ಸಮೇತ ಶಾಂಭಟರ ಕಡೆಯಿಂದ ಕಂಪನಿ ಸರ್ಕಾರ 400 ರೂಪಾಯಿಗೆ ಶುದ್ಧಕ್ರಯಕ್ಕೆ ತೆಗೆದುಕೊಂಡು ಈ ಭಟ್ಟಮಾನ್ಯವನ್ನು ದಾನ ನೀಡಿದ್ದಾನೆ. (ಬೆಂ. 3) ಈ ಶಾಸನದ ಕಾಲ ಕ್ರಿ. ಶ. 1855.

ಕ್ರಿ. ಶ. 1876ರ ಹಲಸೂರಿನ ಶಾಸನವೊಂದು (ಬೆಂ.15) ಈ ಹಲಸೂರಿನ ಸೋಮೇಶ್ವರ ದೇವಾಲಯದ ಧರ್ಮಕ್ಕಾಗಿ ತನ್ನ ಮನೆಯನ್ನು ಬಿಟ್ಟುಕೊಟ್ಟ ವಿಷಯವನ್ನು ತಿಳಿಸುತ್ತದೆ.

ಹೀಗೆ 8ನೆಯ ಶತಮಾನದಿಂದ 19ನೆಯ ಶತಮಾನದವರೆಗಿನ ಶಾಸನಗಳಲ್ಲಿರುವ ಬಿಡಿಬಿಡಿ ಸಂಗತಿಗಳು ಬೆಂಗಳೂರು ನಗರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಾದ ಬೆಂಗಳೂರು ಉತ್ತರ–ದಕ್ಷಿಣ–ಪೂರ್ವ ಹಾಗೂ ಆನೇಕಲ್ ತಾಲ್ಲೂಕುಗಳ ಸಾಮಾಜಿಕ ಇತಿಹಾಸವನ್ನು ಅಲ್ಪ–ಸ್ವಲ್ಪ ಪ್ರಮಾಣದಲ್ಲಿ ದಾಖಲಿಸಿದೆ. ಇವುಗಳ ಮೂಲಕ, ಸಮಗ್ರವಾದ ಚಿತ್ರಣವನ್ನು ಕಟ್ಟಿಕೊಡಲು ಸಾಧ್ಯವಾಗುವುದಿಲ್ಲವಾದರೂ, ಕೆಲವಾರು ಘಟನೆಗಳು ಇತಿಹಾಸದಲ್ಲಿ ದಾಖಲಾಗಿರುವುದು ವಿಶೇಷವಾದ ಸಂಗತಿ. ಇದರ ಮೂಲಕ ಒಂದು ಸೀಮಿತ ಪ್ರದೇಶದ ಜನರ ಸ್ವಲ್ಪಮಟ್ಟಿಗಿನ ಜೀವನ ಪದ್ಧತಿಯ ಪರಿಚಯವಾಗುವುದು.

13. ವಿಜಯನಗರ ಮತ್ತು ಬೆಂಗಳೂರು

ಡಾ. ಎಚ್. ಎಸ್. ಗೋಪಾಲರಾವ್

ಹೊಯ್ಸಳ ಸಾಮ್ರಾಜ್ಯ ದುರ್ಬಲಗೊಳ್ಳುತ್ತಿದ್ದ ಸಂದರ್ಭದಲ್ಲಿ ಪ್ರಾಬಲ್ಯಕ್ಕೆ ಬಂದ ವಿಜಯನಗರ ಸಾಮ್ರಾಜ್ಯದ ಸದ್ದು ಗದ್ದಲಗಳು ದಕ್ಷಿಣ ಕರ್ನಾಟಕದಲ್ಲಿ ಕೇಳಲೇ ಇಲ್ಲ. ಹೊಯ್ಸಳರ ಸಾಮಂತರಾಗಿ ಅಥವಾ ನಾಯಕರಾಗಿ ಆಳುತ್ತಿದ್ದ ಕುಕ್ಕಲನಾಡಿನ ನಾಯಕರು ಮತ್ತು ಎಲಹಂಕ ನಾಡಿನ ನಾಯಕರು ವಿಜಯನಗರದ ಆಡಳಿತಕ್ಕೂ ಸಹಜವಾಗಿ ಸ್ಪಂದಿಸಿದರು.

ಈ ಇತಿಹಾಸವನ್ನು ಮರೆತು ಬೆಂಗಳೂರು ಮತ್ತು ಅದರ ಪರಿಸರದ ಇತಿಹಾಸದ ಅಧ್ಯಯನ ಮಾಡಹೊರಟರೆ ಯಾವ ಬದಲಾವಣೆಯೂ ತಿಳಿಯುವುದಿಲ್ಲ. ಹೊಯ್ಸಳ ವೀರಬಲ್ಲಾಳನಿಂದ ಸಂಗಮ ವಂಶದ ಹರಿಯಪ್ಪ ಮತ್ತು ಬುಕ್ಕಣ್ಣ ಸಹಜವಾಗಿಯೇ ಅಧಿಕಾರ ಸ್ವೀಕರಿಸಿರುವಂತೆ ಕಾಣುತ್ತದೆ. ಅಧಿಕಾರ ಹಸ್ತಾಂತರದ ಮಾತೇ ಇಲ್ಲಿ ಅರ್ಥ ಕಳೆದುಕೊಳ್ಳುತ್ತದೆ.

ವಿಜಯನಗರ ಸಾಮ್ರಾಜ್ಯ ಬಲಗೊಳ್ಳುತ್ತಿದ್ದ ಸಮಯದಲ್ಲಿ ಬೆಂಗಳೂರು ಎಂಬ ಜನವಸತಿಯ ನೆಲೆ ಅಸ್ತಿತ್ವದಲ್ಲಿತ್ತೆಂಬ ಪ್ರಶ್ನೆ ಕುತೂಹಲದ್ದಾಗಬಹುದು. ಅಪ್ರಸ್ತುತ ಎನಿಸಿಕೊಳ್ಳುವುದಿಲ್ಲ. ಈಗಿನ ಬೆಂಗಳೂರು ಆಗ ಇರಲಿಲ್ಲ, ಬೇರೊಂದು ಬೆಂಗಳೂರು ಇತ್ತು ಎನ್ನುವುದನ್ನು ಇತಿಹಾಸಕಾರರು ಸ್ಪಷ್ಟಪಡಿಸಿದ್ದಾರೆ. ಆ ಬೆಂಗಳೂರನ್ನು ಪತ್ತೆಹಚ್ಚುವ ಪ್ರಯತ್ನಗಳು ನಿರಂತರವಾಗಿ ಮುಂದುವರಿದಿವೆ.

ಶಾಸನಗಳಲ್ಲಿ ವ್ಯಕ್ತಗೊಂಡಿರುವ ರಾಜರ ಹೆಸರು ಮತ್ತು ಅವರ ಬಿರುದುಗಳ ಮೂಲಕವಷ್ಟೆ ವಿಜಯನಗರ ಸಾಮ್ರಾಜ್ಯದ ಸುಳಿವನ್ನು ಗುರುತಿಸಬೇಕಾಗಿದೆ. 'ಸ್ವಸ್ತಿ ಶ್ರೀಮತ್ರಿಭುವನಾಶ್ರಯಂ ಮಹಾರಾಜಾಧಿರಾಜಂ ರಾಜಪರಮೇಶ್ವರ ಯಾದವ ಕುಲಾಂಬರ ದ್ಯುಮಣಿ ಸರ್ಬ್ಬಜ್ಞ ಚೂಡಾಮಣಿ ಪ್ರತಾಪ ಚಕ್ರವರ್ತಿ ಶ್ರೀ ಹೊಯ್ಸಳ ವೀರಬಲ್ಲಾಳ' ಎಂದು ಶಕ ವರುಷ 1264, ಚಿತ್ರಭಾನು ಸಂವತ್ಸರದ ಶಾಸನ ದಾಖಲಿಸಿದರೆ, [1] ಮತ್ತೊಂದು ಶಾಸನವು 'ಸ್ವಸ್ತಿಶ್ರೀ ಶಕಾಬ್ದ 1265ನೆಯ ಚಿತ್ರಭಾನು ಸಂವತ್ಸರದ ಪುಷ್ಯ ಶು. 10 ಸೋ. ಸ್ವಸ್ತಿಶ್ರೀಮತು ಪ್ರತಾಪಚಕ್ರವರ್ತಿ ಶ್ರೀ ಹೊಯ್ಸಳ ಶ್ರೀ ವೀರಬಲ್ಲಾಳ ದೇವರ್‍ಸುರು ಹೊಸಮಲೆ ಪಟ್ಟಣದಲ್ಲಿ ಸುಖ ರಾಜ್ಯಂ ಗೈಯಿವುತ್ತಿರಲು'[2] ಎಂದು ದಾಖಲಿಸಿದೆ. ಸಮಕಾಲೀನ ಶಾಸನವೊಂದು 'ಸ್ವಸ್ತಿಶ್ರೀಸುಖವರುಸಂಗಳು 1289ನೆಯ ಸರ್ವಜಿತು ಸಂವತ್ಸರದ ಕಾರ್ತಿಕ ಬ 10 ಸೋ. ಶ್ರೀಮನ್ಮಹಾಮಂಡಳೇಶ್ವರ ಅರಿರಾಯ ವಿಭಾಡ ಭಾಷೆಗೆ ತಪ್ಪುವ ರಾಯರ ಗಂಡ ಶ್ರೀ ವೀರ ಹರಿಯಪ್ಪ ವೊಡೆಯರು ಪಿಥ್ವೀರಾಜ್ಯಗೆಯಿವಲ್ಲಿ' ಎಂದು ದಾಖಲಿಸಿದೆ.[3] ಇದು ಸದ್ದುಗದ್ದಲವಿಲ್ಲದೆ ಅಧಿಕಾರ ಬದಲಾದ ಸಂದರ್ಭವನ್ನು ಸ್ಪಷ್ಟಪಡಿಸುತ್ತದೆ. ಇನ್ನೂ ಚಕ್ರವರ್ತಿ ಎಂದು ಕರೆಸಿಕೊಳ್ಳುತ್ತಿದ್ದ ವೀರಬಲ್ಲಾಳ ಮತ್ತು ಮಹಾಮಂಡಳೇಶ್ವರ ಎಂದೇ ಸಂಬೋಧಿಸಲ್ಪಡುತ್ತಿದ್ದ ಹರಿಯಪ್ಪರು ಪ್ರತಿಸ್ಪರ್ಧಿಗಳಂತೆ ಕಾಣುವುದಿಲ್ಲ.

ಬೆಂಗಳೂರು ಪರಿಸರದ ವಿಜಯನಗರ ಕಾಲದ ಆರಂಭಿಕ ಶಾಸನಗಳಲ್ಲಿ ತಮಿಳು ಭಾಷೆಯ ಶಾಸನಗಳೂ ಇವೆ. ಕೊನೆಯ ಕಾಲಕ್ಕೆ ತೆಲುಗು ಶಾಸನಗಳು ಹೆಚ್ಚಾಗಿ ಕಾಣುತ್ತವೆ. ಇದಕ್ಕೆ ಸ್ಥಳೀಯ ಕಾರಣಗಳನ್ನು ಹುಡುಕುವುದು ಅವಶ್ಯಕ ಎನಿಸುತ್ತದೆ. ಸ್ಥಳೀಯ ಅಧಿಕಾರಿಗಳು ಬಹುತೇಕ ತಮಿಳರೇ ಆಗಿದ್ದ ಕಾರಣ ಮೊದಲಿನ ಶಾಸನಗಳು

ತಮಿಳು ಭಾಷೆಯಲ್ಲೂ, ಅರವೀಡು ವಂಶದ ಅಧಿಕಾರಿಗಳ ಕಾಲಕ್ಕೆ ತೆಲುಗು ಶಾಸನಗಳೂ ಬಳಕೆಗೆ ಬಂದಿರುವ ಸಾಧ್ಯತೆಗಳಿವೆ.

ದೊಡ್ಡಕನ್ನೆಲ್ಲಿಯ ಕ್ರಿ. ಶ. ಸು. 1346ರ ತಮಿಳು ಭಾಷೆಯ ಶಾಸನವು ಮಹಾಮಂಡಲೇಶ್ವರ ವೀರ ಹರಿಯಪ್ಪ ಒಡೆಯ ಮತ್ತು ವೆಲ್ಲಪ್ಪ ದಣಾಯಕನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[4] ವೆಲ್ಲಪ್ಪ ದಂಡನಾಯಕನು ವೀರಬಲ್ಲಾಳನ ಸೋದರಳಿಯ ಮತ್ತು ಹರಿಯಪ್ಪ ಒಡೆಯನ ಅಳಿಯ (ಮಗಳ ಗಂಡ) ಎಂಬುದು ತಿಳಿದಿರುವ ವಿಷಯ.[5] ಇದರಿಂದ ಹೊಯ್ಸಳ ಮತ್ತು ಸಂಗಮ ವಂಶದ ಸಂಬಂಧಗಳು ಹಾರ್ದಿಕವಾಗಿತ್ತು ಎಂದು ಸ್ಪಷ್ಟವಾಗುತ್ತದೆ. ಕ್ರಿ. ಶ. 1361ರ ವೇಳೆಗೂ ಹರಿಯಪ್ಪ ಒಡೆಯ ಮತ್ತು ವ(ಬ)ಲ್ಲಪ್ಪ ದಣ್ಣಾಯಕ ಒಟ್ಟಗೇ ಆಳುತ್ತಿದ್ದುದನ್ನು ಕೋನಪ್ಪನ ಅಗ್ರಹಾರದ ಒಂದು ಶಾಸನ ಖಚಿತಪಡಿಸಿದೆ.[6]

ಕ್ರಿ. ಶ. 1363ರ ವೇಳೆಗೆ ಹರಿಯಪ್ಪ ಒಡೆಯ ಅಥವಾ ಹರಿಹರರಾಯನ ಹೆಸರು ಮರೆಯಾಗಿ ಬುಕ್ಕಣ್ಣ ವೊಡೆಯನೇ ಪೂರ್ಣಾಧಿಕಾರ ವಹಿಸಿಕೊಂಡಂತೆ ಅಗರದ ಶಾಸನ ಸೂಚಿಸುತ್ತದೆ.[7] ಅದೇ ಶಾಸನವು ಬುಕ್ಕರಾಯನ ಮಗ ಕಂಪಣ ಒಡೆಯ ಮುಳಬಾಗಿಲಿನಿಂದ ಅಳುತ್ತಿದ ಮತ್ತು ಅವನ ಮಗ ಕಾಮೈಯ ನಾಯಕ ಎಲಹಂಕ ನಾಡ ಅಲ್ಲಾಳ ಜೀಯನ ಮಗ ತಣ್ಣಿಯಪ್ಪನಿಗೆ ಶಿಲಾಶಾಸನ ಮಾಡಿಕೊಟ್ಟ ವಿಷಯವನ್ನೂ ದಾಖಲಿಸಿದೆ. ಮುಳುಬಾಗಿಲು ಮತ್ತು ಎಲಹಂಕ ನಾಡಿನ ಆಡಳಿತಗಾರರ ನಡುವೆ ಇದ್ದ ಒಳ್ಳೆಯ ಸಂಬಂಧಕ್ಕೆ ಇದು ಉದಾಹರಣೆಯಾಗಿದೆ. ಅದೇ ಕಂಪಣ (ಕೆಂಪಣ್ಣ ಒಡೆಯ) ತಾಮರೈಕ್ಕೇಜೆಯ (ಈಗಿನ ತಾವರೆಕೆರೆ) ಸೋಮೇಶ್ವರ ದೇವಸ್ಥಾನಕ್ಕೆ ನೀಡಿದ ದಾನವನ್ನು ಮಡಿವಾಳದ ಒಂದು ಶಾಸನ ದಾಖಲಿಸಿದೆ.[8] ಈ ಶಾಸನದಿಂದ ದೇವಸ್ಥಾನದಲ್ಲಿ ನ್ಯಾಯಪೀಠ ಇದ್ದ ವಿಷಯ ತಿಳಿಯುತ್ತದೆ. ಬುಕ್ಕಣ್ಣನ ಆಡಳಿತದ ಸಮಯದಲ್ಲೇ ಮಯಿಲೆಯ ನಾಯಕನ (ಕುಕ್ಕಲನಾಡಿನ ಅಧಿಕಾರಿ) ಮಗ ದೇವನಾಯಕನು ಹಲವು ಬ್ರಾಹ್ಮಣರಿಗೆ ಇಲ್ಮೈಪಾಕ್ಕ ನಾಡಿನ ದೇವಸಮುದ್ರದಲ್ಲಿ ಭೂದಾನ ಮಾಡಿರುವುದನ್ನು ಬೇಚಿರಾಖ್ ದ್ಯಾವಸಂದ್ರದ ಶಾಸನ ತಿಳಿಸಿದೆ.[9]

ಬೇಲೂರು (ಎನ್.ಎ.ಎಲ್.ನ ರಕ್ಷಿತ ಆವರಣದಲ್ಲಿದೆ) ಎರಡನೆಯ ಹರಿಹರನ ಕಾಲದ ಒಂದು ಶಾಸನವು ಅವನು ಮುಳುಬಾಗಿಲಿನಲ್ಲಿದ್ದಾಗ ವೇಲೂರಿನ ಶಿವನೇಶ್ವರ ದೇವರಿಗೆ ನೀಡಿದ ದಾನವನ್ನು ದಾಖಲಿಸಿದೆ.[10] ಬುಕ್ಕಣ್ಣ ಮತ್ತು ಕಂಪಣನಿಂದ ತರಬೇತಿ ಪಡೆಯಲು ಎರಡನೆಯ ಹರಿಹರನು ಮುಳುಬಾಗಿಲಿನಲ್ಲಿ ನೆಲೆಸಿದ್ದ ವಿಷಯವನ್ನು ಅಲ್ಲಗಳೆಯುವಂತಿಲ್ಲ. ಪುನಃ ಎರಡನೆಯ ಹರಿಹರ ಮತ್ತು ಬುಕ್ಕಣ್ಣ ಒಡೆಯರು ಒಟ್ಟಿಗೇ ಆಳುತ್ತಿದ್ದುದನ್ನು ಕ್ಯಾತಮಾರನಹಳ್ಳಿ ಶಾಸನ ದಾಖಲಿಸಿದೆ.[11] ವಿಜಯನಗರ ಸಾಮ್ರಾಜ್ಯದ ಆರಂಭದ ವರ್ಷಗಳಲ್ಲಿ, ವಿಶೇಷವಾಗಿ ಸಂಗಮ ವಂಶದ ಅರಸುಗಳ ಕಾಲದಲ್ಲಿ ಸಹೋದರರು ಒಟ್ಟಿಗೆ ಆಳ್ವಿಕೆ ನಡೆಸಿರುವುದು ಉಲ್ಲೇಖನೀಯ ಅಂಶ. ಕ್ಯಾತಮಾರನಹಳ್ಳಿಯ ಶಾಸನವು ಮಹಾಸಾಮಂತಾಧಿಪತಿ ಮಯಿಲೆಯ ನಾಯಕನ ಕುಮಾರ ಕೋಟೆಯ ನಾಯಕನು ದೇವರಿಗೆ ದಾನ ನೀಡಿದ ವಿಷಯವನ್ನು ದಾಖಲಿಸಿದೆ. ದಾನದ ಗಡಿಗಳ ಉಲ್ಲೇಖದ ಸಮಯದಲ್ಲಿ ಜಾಲನಹಳ್ಳಿಯ ಉಲ್ಲೇಖ ಇದೆ. ಅದು ಈಗಿನ ಜಾಲಹಳ್ಳಿ ಎಂಬುದರಲ್ಲಿ ಅನುಮಾನವಿಲ್ಲ. ಇಬ್ಬಲೂರಿನ ಒಂದು ಶಾಸನವು ಯಿಮಡಿ ಬುಕ್ಕಂಣನನ್ನು ಮಹಾಮಂಡಳೇಶ್ವರ ಎಂದು ಸಂಬೋಧಿಸಿದೆ.[12]

ಕ್ರಿ. ಶ. 1408ರ ವೇಳೆಗೆ ಅಧಿಕಾರವು ಒಂದನೆಯ ದೇವರಾಯನಿಗೆ ಹಸ್ತಾಂತರವಾಗಿತ್ತು. ಈ ವಿಷಯವನ್ನು ಕನ್ನೆಲ್ಲಿಯ ಒಂದು ಶಾಸನ ಖಚಿತಪಡಿಸಿದೆ. ವೀರ ದೇವರಾಯನ ಆಳ್ವಿಕೆಯಲ್ಲಿ ಅಧಿಕಾರಿಯಾಗಿದ್ದ ಹಯಕರಸ ಎಂಬ ವ್ಯಕ್ತಿಯು ಕುಕ್ಕಲನಾಡ ಕಂನ್ನೆಲ್ಲಿಯ ತಿರುಮಲೆನಾಥ ದೇವರಿಗೆ ಎರಡು ಮಗ್ಗವನ್ನು ಸುಂಕಮಾನ್ಯವಾಗಿ ಕೊಟ್ಟ ವಿಷಯವನ್ನು ದಾಖಲಿಸಿದೆ.[13] ಅದೇ ದೇವರಾಯನ ಆಳ್ವಿಕೆಯ ಕಾಲದಲ್ಲಿ ಬೊಂಮಂಣ ಅಯ್ಯಗಳ

ಧರ್ಮ್ಮ ಶಾಸನದ ಬಂಮಣ ಸೆಟ್ಟಿಯ ಮಗ ಮಾಚೆರೂಶ ಸೆಟ್ಟಿ ಮಾಡಿಸಿಕೊಟ್ಟ ದೀಪಮಾಲೆಯ ಕಂಬದ ವಿಷಯವನ್ನು ಯಲಹಂಕದ ಒಂದು ಶಾಸನ ಪ್ರಸ್ತಾಪಿಸಿದೆ.[14] ಯಲಹಂಕಕ್ಕೆ ಮತ್ತೊಂದು ದಿಕ್ಕಿನಲ್ಲಿರುವ ದೊಮ್ಮಲೂರಿನ ಚೊಕ್ಕನಾಥ ದೇವರಿಗೆ ವೀರಪ್ರತಾಪ ದೇವರಾಯನ ದಂಣಾಯ್ಕ ನಾಗಪ್ಪ ಎಂಬುವವನು ದಿನಕಟ್ಟಲೆಯ ಸೇವೆಗೆ ಕರಡಿಹಳ್ಳಿಯಲ್ಲಿ ಭೂಮಿದಾನ ಮಾಡಿರುವುದಲ್ಲದೆ, ಗ್ರಾಮದ ಮಗ್ಗದೆಜೆ, ಮಧುಭಡಗಿ, ಕಂಮಾಜಿ, ಅಗಸ, ಕುಂಬಾರ, ಮಾದೆಗಕಯ್ಯಗಾಣ, ಯೆತ್ತುಗಾಣಗಳ ಮೇಲಿನ ಸುಂಕವನ್ನಲ್ಲದೆ ಎತ್ತು, ತೊತ್ತು, ಬಂಡಿ, ಕುದುರೆ ಇತ್ಯಾದಿಗಳ ಮೇಲಿನ ಸುಂಕವನ್ನೂ ಬಿಡುತ್ತಾನೆ.[15] ಈ ಶಾಸನವು ಆ ಕಾಲದಲ್ಲಿ ಪ್ರಚಲಿತವಿದ್ದ ಹಲವು ಬಗೆಯ ಸುಂಕಗಳ ಬಗ್ಗೆ ತಿಳಿಸುತ್ತದೆ. ಕುಳಿ ಮಾಜೆದ ಸುಂಕ, ಕೋಣ, ಕುರಿ, ಎಮ್ಮೆ, ಆಲೆ, ಅಡಕೆ, ಮರವಳಿ, ತೋಟ, ತುಡಿಕೆ, ಅಕ್ಕಸಾಲೆ ಇತ್ಯಾದಿ ಹಲವು ಸುಂಕಗಳನ್ನು ಚೊಕ್ಕನಾಥ ದೇವರಿಗೆ ನೀಡಲಾಗಿದೆ. ದಾನಿಯೇ ಈ ಶಾಸನವನ್ನು ಬರೆದಂತೆ ತೋರುತ್ತದೆ. ಏಕೆಂದರೆ ಸಾಶನಕೆ ನಾಗಪ ದಂಣಾಯ್ಕರ ಬರಹ ಎಂದೇ ಇದೆ. ವೀರ ವಿಜಯ ಭೂಪತಿ ರಾಯನ ಕುಮಾರ ದೇವರಾಯ ಮಹಾರಾಯನನ್ನು ಉಲ್ಲೇಖಿಸುವ ಶಾಸನವು ಅವನನ್ನು ಶ್ರೀಮನ್ಮಹಾರಾಜ ಎಂದೇ ಸಂಬೋಧಿಸಿದೆ. ಅವನು ವಿಜಯನಗರದ ಸಿಂಹಾಸನದಲ್ಲಿ ಕುಳಿತು ರಾಜ್ಯಭಾರ ಮಾಡುತ್ತಿದ್ದ ವಿಷಯವನ್ನು ಸ್ಪಷ್ಟಪಡಿಸಿ, ಅವನ ಸಮ್ಮುಖದಿಂದ ಹೊರಟ ಶಾಸನದ ವಿವರಗಳನ್ನು ನೀಡಿರುವ ಕೊಡಿಗೇಹಳ್ಳಿ ಶಾಸನವು ಸಾಂಸ್ಕೃತಿಕವಾಗಿ ಅತ್ಯಂತ ಮುಖ್ಯ ವಿಷಯಗಳನ್ನು ಪ್ರಸ್ತಾಪಿಸಿದೆ. [16] ದಾನ ನೀಡಿದವನು ಮಹಾಪ್ರಧಾನ ಮಂಗಪ್ಪ ದಂಣಾಯಕರ ಮಗ ಪ್ರಧಾಪರಾಯ. ದಾನವು ಕಟ್ಟಳೆಯ ಸ್ವರೂಪದಲ್ಲಿದೆ. ಇದು ಸೋಮೆಯ ದೇವರ ನಯಿವೇದ್ಯ ಅಂಗರಂಗಭೋಗಕ್ಕೆ ಮಾಡಿದ ಕಟ್ಟಳೆ. ಪ್ರತಾಪ ರಾಯನ ನಾಯಕತನಕ್ಕೆ ಆಗ ಸಲ್ಲುತ್ತಿದ್ದ ಸ್ಥಳ ಶಿವನಸಮುದ್ರ. ಅದರ ಕೆಳಗೆ ಯೆಲಹಕ್ಕ ನಾಡಿನ ತರಣಿಯಪ್ಪನ ಬಾಗಿಯೊಳಗಣ ದೇವಸಮುದ್ರದ ಕಾಲುವಳಿ ಆಗಿದ್ದುದು ವಿರೂಪಾಕ್ಷಪುರ. ಆ ಗ್ರಾಮಕ್ಕೆ ಪ್ರಾಕು ಗುತ್ತಗೆಯ ಪ್ರಮಾಣ ಕಾಣಿಕೆಯ ವಿವರಗಳು ಶಾಸನದಲ್ಲಿವೆ. ಮೊದಲೇ ಇದ್ದ 16 1/2 ಹುಟ್ಟುವಳಿಯ ಜೊತೆಗೆ ಅಂದಿನ ಆದಾಯ ಮತ್ತು ಆ ಪೂರ್ವದ ಆದಾಯಕ್ಕೆ ಬಿಟ್ಟುಕೊಟ್ಟದ್ದು 3ಳಿ ಒಟ್ಟು 20 ಗದ್ಯಾಣ ವರಹಗಳನ್ನು ನೀಡಿ, ವಿಜಯದೇವರಾಯಪುರ ಎಂಬ ಗ್ರಾಮವನ್ನು ಮಾಡಿ, ದೇವರಾಯ ಮಹಾರಾಯರಿಗೆ ಆಯುರಾರೋಗ್ಯ ಐಶ್ವರ್ಯ ವೃದ್ಧಿಯಾಗಲಿ ಎಂದು ದಾನ ನೀಡಲಾಗಿದೆ. [17] ವಿರೂಪಾಕ್ಷಪುರವು ದೇವಸಮುದ್ರದ ಕಾಲುವಳಿಯಾಗಿತ್ತು. ಅದಕ್ಕೆ ವಿಜಯದೇವರಾಯಪುರ ಎಂದು ಮರುನಾಮಕರಣ ಮಾಡಿ ಅಲ್ಲಿಯ ಸೋಮೆಯ ದೇವರಿಗೆ ಎರಡು ಹೊತ್ತಿನ ನೈವೇದ್ಯಕ್ಕೆ ಮಾತ್ರವಲ್ಲದೆ ಪಾತ್ರಭೋಗಕ್ಕೂ ನೀಡಿದ ದಾನವು ಉಲ್ಲೇಖಾರ್ಹ. ಪಾತ್ರದ ಜನ 2, ನಟ್ಟವನ ಜನ 1, ಮದ್ದಳಿಕಾಱನ ಜನ 1, ಸಿತಾರನ ಜನ 1, ಉಪಾಂಗದ ಜನ 1, ಕಂಸಾಳೆ ಜನ 1, ಅಂತು ಏಳು ಜನರಿಗೆ ದಾನ ನೀಡಲಾಗಿದೆ.

ದೇವರಾಯನ ಆಳ್ವಿಕೆಯ ಕಾಲದಲ್ಲಿ ಪಟ್ಟಣದ ರಾಯಂಣಗಳು ಕಳುಹಿಸಿದ ಸೊಂಡೆಯಕೊಪ್ಪದ ವೇಂಠೆಯದ ಹೆಜ್ಜುಂಕದ ಅಧಿಕಾರಿ ಮಲ್ಲರಸ ಡೊಂಬಲೂರ ಚೊಕ್ಕನಾಥ ದೇವರಿಗೆ ನೀಡಿದ ದಾನವನ್ನು ಒಂದು ಶಾಸನ ಪ್ರಸ್ತಾಪಿಸಿದೆ.[18] ಸೊಂಡೆಯಕೊಪ್ಪದ ವೇಂಠೆಯಕ್ಕೆ ಸುಂಕದವರು ಯಾರು ಬಂದರೂ, ಹೆಜ್ಜುಂಕದ ವರ್ತನೆಯ ಉಡುಗೊರೆಯನ್ನು ನೀಡಬೇಕೆಂದು ಆದೇಶಿಸಲಾಗಿದೆ.

ಮುಂದೆ ಸಾಳುವ ವಂಶವನ್ನು ಪ್ರತಿನಿಧಿಸಿದ ನರಸಪ್ಪನಾಯಕನ ವಿಚಾರವನ್ನು ಸುಲ್ತಾನಪಾಳ್ಯದ ಒಂದು ಶಾಸನ ನೀಡಿದೆ.[19] ಉಲ್ಲೇಖಿತ ಕಾಲದಲ್ಲಿ ನರಸಪ್ಪನಾಯಕನು ಯೆಲಹಕ್ಕ ನಾಡಿನ ಅಧಿಕಾರಿಯಾಗಿದ್ದುದನ್ನು ಶಾಸನ ಸ್ಪಷ್ಟಪಡಿಸಿದೆ. ತನಗೆ ಸಲುವ ಯೆಲಹಕ್ಕ ನಾಡ ಸೀಮೆಯೊಳಗಣ ಅಣಿಲಕುಱಿಕೆ ಗ್ರಾಮವನ್ನು ತನ್ನ ತಂದೆ ಈಶ್ವರನಾಯಕನ ಹೆಸರಿನಲ್ಲಿ, ಬಹುಶಃ ಪರೋಕ್ಷ ವಿನಯವಾಗಿ, ಈಶ್ವರಪುರ ಎಂದು ಮರುನಾಮಕರಣ

ಮಾಡಿ ನರಸಪ್ಪನಾಯಕನಿಗೆ ಪುಣ್ಯವಾಗಬೇಕೆಂದು ಚೆಂನಮ ನಾಯಕರು ದಾನ ನೀಡಿರುವಂತೆ ಕಾಣುತ್ತದೆ. ನರಸಪ್ಪನಾಯಕನ ಮೊದಲ ಮಗ ವೀರ ನರಸಿಂಹನ ನಂತರ ವಿಜಯನಗರದ ದೊರೆಯಾದ ಮತ್ತು ಅವನ ನಂತರ ಅವನ ತಮ್ಮ ಕೃಷ್ಣದೇವರಾಯ ಅಧಿಕಾರ ವಹಿಸಿಕೊಂಡ ವಿಷಯ ಕರ್ನಾಟಕದ ಇತಿಹಾಸ ಬಲ್ಲವರಿಗೆ ಚೆನ್ನಾಗಿ ತಿಳಿದಿರುತ್ತದೆ. ಎಲಹಂಕ ನಾಡಿನ ನಾಯಕತನವು ನರಸಪ್ಪ ನಾಯಕನಿಗೆ ಸೇರಿದ್ದ ಕಾರಣ ಕೃಷ್ಣದೇವರಾಯನು ತನ್ನ ಬಾಲ್ಯವನ್ನು ಬೆಂಗಳೂರಿನ ಪರಿಸರದಲ್ಲೇ ಕಳೆದಿರುವ ಸಾಧ್ಯತೆಗಳಿವೆ.

ಸಾಳುವ ವಂಶದ ಎರಡನೆಯ ನರಸಿಂಹನ ಆಳ್ವಿಕೆಯ ಕಾಲಕ್ಕೆ ಸೇರಿದ ಒಂದು ಶಾಸನ ಗೊಂಗಡಿಪುರದಲ್ಲಿ ಸಿಕ್ಕಿದೆ.[20] ಸಾಳುವ ಇಮ್ಮಡಿ ಶ್ರೀ ನರಸಿಂಹ ಮಹಾರಾಯರು ಪ್ರಿಥ್ವಿರಾಜ್ಯಂಗೆಯಿಉತ್ತಿರಲು ಶ್ರೀಮನ್ಮಹಾಮಂಡಳೇಶ್ವರ ಗೂಡೆರಾಯ ಮತ್ತು ಇನ್ನೂ ಹಲವರು ಅವರ ನಾಯಕತನಕ್ಕೆ ಸಲ್ಲುವ ಕುಕ್ಕಲನಾಡ ಕಂನೆಲ್ಲಿಯ ಸ್ಥಳದಲ್ಲಿ ನೀಡಿದ ದಾನದ ವಿವರಗಳು ಶಾಸನದಲ್ಲಿವೆ. ಗೊಂಗಡಿ ಹಳ್ಳಿಯ ಪ್ರತಿನಾಮವು ತಿಂಮಂಣರಾಜಪುರ ಎಂದೂ ಶಾಸನದಿಂದ ತಿಳಿಯುತ್ತದೆ. ಕ್ರಿ. ಶ. 1508ರಲ್ಲಿ ಇನ್ನೂ ವೀರನರಸಿಂಗರಾಯ ಆಳುತ್ತಿದ್ದ ಸುಳಿವನ್ನು ಮಾರತ್ತಹಳ್ಳಿಯ ಒಂದು ಶಾಸನ ನೀಡಿದೆ. ತೆಲುಗು ಭಾಷೆಯಲ್ಲಿರುವ ಈ ಶಾಸನವು ನರಸಿಂಗರಾಯನೇ ಮಾಡಿದ ಧರ್ಮವನ್ನು ಪ್ರಸ್ತಾಪಿಸಿದೆ.[21] ಇದು ಕೃಷ್ಣದೇವರಾಯನು ಅಧಿಕಾರಕ್ಕೆ ಬರುವ ಒಂದು ವರ್ಷದ ಮೊದಲಿನ ಮಾತು.

ಅಗರದ ಒಂದು ಶಾಸನವು ಕೃಷ್ಣರಾಯ ಮಹಾರಾಯನ ಆಳ್ವಕೆಯನ್ನೇ ಪ್ರಸ್ತಾಪಿಸಿ, ಕ್ರಿ. ಶ. 1515ರಲ್ಲಿ ಸಿವಂಣಪ ನಾಯಕನು ತನ್ನ ತಂದೆಗೆ ಧರ್ಮವಾಗಬೇಕೆಂದು ಅಗರದ ಕೆಱೆಗೆ ಭಂಡಿ ನಡವುದಕ್ಕೆ ದಾರಿಗಾಗಿ ಹೊಲವನ್ನು ಬಿಟ್ಟ ವಿಷಯ ದಾಖಲಾಗಿದೆ.[22] ಕೃಷ್ಣದೇವರಾಯನ ಕಾಲದಲ್ಲಿ ಕುಕ್ಕಲನಾಡಿನ ನಾಯ್ಕತನವನ್ನು ಕೊಮನಾಯಕನಿಗೆ ನೀಡಲಾದ ಮತ್ತು ಅಲ್ಲಿನ ತಿರುವೆಂ(ಕಟ)ಡ ನಾಥನಿಗೆ ನೀಡಿದ ದಾನವನ್ನು ದಾಸನಪುರದ ಒಂದು ಶಾಸನ ತಿಳಿಸಿದೆ.[23] ಯಾವುದೇ ಪ್ರದೇಶದ ನಾಯಕತನವನ್ನು ಬದಲಾಯಿಸುವ ಅಧಿಕಾರ ರಾಜನಿಗೆ ಇರುತ್ತಿತ್ತು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಕೃಷ್ಣದೇವರಾಯನ ಕಾಲದಲ್ಲೇ ಸಿಂಗಪನಾಯಕರು ಸಿಂಗಾಪುರ ದಲ್ಲಿರುವ ದೇವರ ಅಮೃತಪಡಿ ಮತ್ತು ರಾಮಾನುಜ ಕೂಟಕ್ಕೆ ಚಿಕ್ಕಬೆಟ್ಟಹಳ್ಳಿಯನ್ನು ದಾನವಾಗಿ ಬಿಟ್ಟ ವಿಷಯವನ್ನು ಅಲ್ಲಿಯದೇ ಒಂದು ಶಾಸನ ತಿಳಿಸಿದೆ.[24]

1530ರ ವೇಳೆಗೆ ಅಚ್ಯುತರಾಯ ಅಧಿಕಾರ ಸ್ವೀಕರಿಸಿದ್ದ ವಿಷಯವು ಹಾರೋಹಳ್ಳಿಯ ಒಂದು ಶಾಸನದಿಂದ ತಿಳಿಯುತ್ತದೆ.[25] ಹೆಸರುಘಟಕೆ ಪ್ರತಿನಾಮವಾಗಿ... ಪಸಮುದ್ರ ಎಂದೂ ಆ ಸೀಮೆಯು ಸಿವನಸಮುದ್ರ ಸೀಮೆ ಎಂದು ಎಲಹಂಕ ನಾಡಿಗೆ ಸೇರಿತ್ತೆಂದೂ, ಅಲ್ಲಿಯ ಅರ್ಕಾವತೀ ನದಿಯ ತಟಾಕದಲ್ಲಿ ಚಂದ್ರಮೌಳೀಶ್ವರ ಮತ್ತು ಇತರ ಕೆಲವು ದೇವತೆಗಳನ್ನು ಪ್ರತಿಷ್ಠೆ ಮಾಡಲಾಯಿತೆಂದೂ ಶಾಸನ ತಿಳಿಸುತ್ತದೆ. 1532ರಲ್ಲಿ ಅಚ್ಯುತರಾಯನು ಕೆಂಪದೇವರಸನಿಗೆ ನಾಯಕತನಕ್ಕೆ ಪಾಲಿಸಿದ ಎಲಹಂಕ ರಾಜ್ಯದ ವಿಷಯವನ್ನು ದಾಸರಹಳ್ಳಿಯ ಒಂದು ಶಾಸನವು ದಾಖಲಿಸಿದೆ.[27] ಈ ಕೆಂಪದೇವರಸನು ಯಲಹಂಕ ನಾಡ ಪ್ರಭುಗಳ ವಂಶಕ್ಕೆ ಸೇರಿದವನಾಗಿರುವ ಸಾಧ್ಯತೆಗಳಿವೆ.

ಅಲ್ಲಾಳಸಂದ್ರದ ಒಂದು ಶಾಸನವು ಸದಾಶಿವರಾಯನ ಕಾಲಕ್ಕೆ ಸೇರಿದ್ದು, ಅದು ಮರಾಟೆಯ ವಿಟಲೇಶ್ವರ ದೇವ ಎನ್ನುವವನನ್ನು ಮಹಾಮಂಡಲೇಶ್ವರ ಎಂದು ಸಂಬೋಧಿಸಿ, ಅವನ ಕಾರ್ಯಕ್ಕೆ ಕರ್ತರಾದ ರಾಚುರ ನರಸಿಂಹಯ್ಯಗಳು ಜಕ್ಕೂರ ಅಲ್ಲಾಳನಾಥ ದೇವರ ಸೇವೆಗೆ ನೀಡಲಾದ ಗ್ರಾಮದಾನದ ವಿಷಯವನ್ನು ತಿಳಿಸಿದೆ. ಇದರಿಂದ ಇಲ್ಲಿ ಆ ಹೊತ್ತಿಗೆ ಆರಂಭವಾಗಿದ್ದ ಮರಾಠಾ ಪ್ರಭಾವವನ್ನು ಗುರುತಿಸಲು ಅವಕಾಶವಾಗುತ್ತದೆ.

ಈ ನಿಟ್ಟಿನಲ್ಲಿ ಬೆಂಗಳೂರಿನ ಭಾಷಿಕ ಪರಿಸ್ಥಿತಿಯು ಅಂದಿನಿಂದಲೂ ಅಧಿಕಾರಿಗಳ ಮರ್ಜಿಯನ್ನೇ ಅವಲಂಬಿಸಿದೆ ಮತ್ತು ಅನ್ಯಭಾಷಿಕರ ವಲಸೆಯು ಮೊದಲಿನಿಂದಲೂ ಇದೆ ಎಂದು ಸ್ಪಷ್ಟವಾಗುತ್ತದೆ.

ಆಕರ ಸೂಚಿ

1. ಎ.ಕ. 9 ಬೆಂಗಳೂರು 34, ಕ್ರಿ. ಶ. 1342
2. ಎ. ಕ. 9 ಬೆಂಗಳೂರು 41, ಕ್ರಿ. ಶ. 1343
3. ಎ. ಕ. 9 ಬೆಂಗಳೂರು 97, ಕ್ರಿ. ಶ. 1347
4. ಎ. ಕ. 9 ಬೆಂಗಳೂರು 47, ಕ್ರಿ. ಶ. ಸು. 1346
5. ಪ್ರಧಾನ ಸಂಪಾದಕರು: ಎಲ್. ಎಸ್. ಶೇಷಗಿರಿರಾವ್, ಕರ್ನಾಟಕ ದರ್ಶನ, ಬೆಂಗಳೂರು, 1965, ಪು.9
6. ಎ. ಕ. 9 ಬೆಂಗಳೂರು 101, ಕ್ರಿ. ಶ. 1361
7. ಎ. ಕ. 9 ಬೆಂಗಳೂರು 81, ಕ್ರಿ. ಶ. 1363
8. ಎ. ಕ. 9 ಬೆಂಗಳೂರು 67, ಕ್ರಿ. ಶ. 1365
9. ಎ. ಕ. 9 ಬೆಂಗಳೂರು 132, ಕ್ರಿ. ಶ. 1376
10. ಎ. ಕ. 9 ಬೆಂಗಳೂರು 73, ಕ್ರಿ. ಶ. 1381
11. ಎ. ಕ. 9 ಬೆಂಗಳೂರು 139, ಕ್ರಿ. ಶ. 1386
12. ಎ. ಕ. 9 ಬೆಂಗಳೂರು 71, ಕ್ರಿ. ಶ. 1394
13. ಎ. ಕ. 9 ಬೆಂಗಳೂರು 122, ಕ್ರಿ. ಶ. 1408
14. ಎ. ಕ. 9 ಬೆಂಗಳೂರು 16, ಕ್ರಿ. ಶ. 1410
15. ಎ. ಕ. 9 ಬೆಂಗಳೂರು 162, ಕ್ರಿ. ಶ. 1411
16. ಎ. ಕ. 9 ಬೆಂಗಳೂರು 147, ಕ್ರಿ. ಶ. 1431
17. ಎ. ಕ. 9 ಬೆಂಗಳೂರು 127, ಕ್ರಿ. ಶ. 1431
18. ಎ. ಕ. 9 ಬೆಂಗಳೂರು 8, ಕ್ರಿ. ಶ. 1440
19. ಎ. ಕ. 9 ಬೆಂಗಳೂರು 161 (ಸಪ್ಲಿ), ಕ್ರಿ. ಶ. 1469
20. ಎ. ಕ. 9 ಬೆಂಗಳೂರು 123, ಕ್ರಿ. ಶ. 1495
21. ಎ. ಕ. 9 ಬೆಂಗಳೂರು 52, ಕ್ರಿ. ಶ. 1508
22. ಎ. ಕ. 9 ಬೆಂಗಳೂರು 80, ಕ್ರಿ. ಶ. 1515
23. ಎ. ಕ. 9 ಬೆಂಗಳೂರು 186, ಕ್ರಿ. ಶ. 1523
24. ಎ. ಕ. 9 ಬೆಂಗಳೂರು 19, ಕ್ರಿ. ಶ. 1524
25. ಎ. ಕ. 9 ಬೆಂಗಳೂರು, 28, ಕ್ರಿ. 1530
26. ಎ. ಕ. 9, ನೆಲಮಂಗಲ, 31 ಕ್ರಿ. ಶ. 1532
27. ಎ. ಕ. 9, ಬೆಂಗಳೂರು, 57. ಕ್ರಿ. ಶ. 1532

14. ಬೆಂಗಳೂರು ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು

ಡಾ. ಪಿ. ವಿ. ಕೃಷ್ಣಮೂರ್ತಿ

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಅರಸರ ಆಳ್ವಿಕೆಯು ವಿಶಿಷ್ಟ ಸ್ಥಾನವನ್ನು ಪಡೆದಿದೆ. ದಕ್ಷಿಣದ ನಾಲ್ಕೂ ಭಾಷಾ ಪ್ರದೇಶಗಳ ಬಹುಭಾಗವನ್ನು ಒಳಗೊಂಡಿದ್ದ ಅವರ ಸಾಮ್ರಾಜ್ಯದಲ್ಲಿ ಆಡಳಿತದ ಅನುಕೂಲಕ್ಕಾಗಿ ಹಲವು ಹಂತಗಳ ಆಡಳಿತ ವಿಭಾಗಗಳನ್ನು ಅವರು ರೂಪಿಸಿಕೊಂಡಿದ್ದರು. ಕರ್ನಾಟಕ ಪ್ರದೇಶವನ್ನು ಆಳಿದ ಗಂಗ ಮತ್ತು ಚಾಲುಕ್ಯರಿಂದ ಪ್ರಾರಂಭಿಸಿ ಕಲ್ಯಾಣದ ಚಾಲುಕ್ಯರವರೆಗಿನ ಕಾಲಾವಧಿಯಲ್ಲಿ ಪ್ರಚಲಿತವಿದ್ದ ಬಹಳಷ್ಟು ಆಡಳಿತ ವಿಭಾಗಗಳೂ ಸಂಖ್ಯೆಗಳಿಂದ ಕೂಡಿದ್ದು, ಅದು ಕರ್ನಾಟಕ ಅರಸು ಮನೆತನಗಳ ವಿಶೇಷತೆಯೂ ಕೂಡ ಆಗಿದ್ದಿತೆಂಬ ಅಂಶ ಸರಿಯಷ್ಟೆ. ಆದರೆ ಈ ಅವಧಿಯಲ್ಲೇ ಆಳಿದ ಹೊಯ್ಸಳರು ಮಾತ್ರ ಈ ವಿಷಯದಲ್ಲಿ ತುಸು ಭಿನ್ನವಾಗಿರುವುದನ್ನು ನಾವು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಹೊಯ್ಸಳರ ಸಾಮ್ರಾಜ್ಯದ ವಿಸ್ತಾರ, ಕಾವೇರಿಯಿಂದ ದಕ್ಷಿಣಕ್ಕೆ, ಅಂದರೆ ತಮಿಳು ಪ್ರಾಂತ್ಯದ ಅನೇಕ ಪ್ರದೇಶಗಳನ್ನು ಒಳಗೊಂಡಿದ್ದು, ಆಯಾ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದ ಆಡಳಿತ ವಿಭಾಗ ಕ್ರಮವನ್ನೇ ಅವರು ಹೆಚ್ಚಿನ ಬದಲಾವಣೆಯಿಲ್ಲದೆ ಉಳಿಸಿಕೊಂಡಿದ್ದುದೇ ಆಗಿದೆ. ಅಂದರೆ ಹೊಯ್ಸಳರ ಇಡೀ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ವಾಸ್ತವವಾಗಿ ಏಕರೂಪತೆಯಿರಲಿಲ್ಲವೆನ್ನ ಬಹುದು. ಹೊಯ್ಸಳರ ನಂತರ ವಿಜಯನಗರದ ಅರಸರು ಈ ಪ್ರದೇಶಗಳನ್ನು ಆಳತೊಡಗಿದಾಗ, ಹಿಂದೆ ಆಯಾ ಪ್ರದೇಶಗಳಲ್ಲಿ ಪ್ರಚಲಿತವಿದ್ದ ಬೇರೆ ಬೇರೆ ತೆರನಾದ ಆಡಳಿತ ವಿಭಾಗ ಕ್ರಮಗಳನ್ನು ಕ್ರೋಢೀಕರಿಸಿ ಒಂದು ಸಾಮಾನ್ಯೀಕರಣಗೊಂಡ ಇಡೀ ಸಾಮ್ರಾಜ್ಯಕ್ಕೆ ಸೂಕ್ತವೆನಿಸಬಹುದಾದ ಪದ್ಧತಿಯೊಂದನ್ನು ಜಾರಿಗೆ ತರಬೇಕಾದ ಅಗತ್ಯವಿದ್ದಿತು. ಈ ಹಿನ್ನೆಲೆಯಲ್ಲಿ ಮೂಡಿಬಂದ ಅವರ ಕಾಲದ ಆಡಳಿತ ವಿಭಾಗಗಳೇ ರಾಜ್ಯ: ವೇಂಠೆ/ವಳಿತ/ಚಾವಡಿ; ನಾಡು/ಸೀಮೆ: ಸ್ಥಳ ಮತ್ತು ಗ್ರಾಮಗಳಾಗಿದ್ದವು.

ಆಡಳಿತ ವಿಭಾಗಗಳಿಗೆ ಸಂಬಂಧಿಸಿದಂತೆ ಶಾಸನೋಕ್ತವಾಗಿರುವ ಅಂಶಗಳ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳ ಅನುಶ್ರೇಣಿಯನ್ನು ಗುರುತಿಸ ಹೊರಟರೆ ಅನೇಕ ತೊಡಕುಗಳು ಎದುರಾಗುತ್ತವೆ. ಅನೇಕ ಶಾಸನಗಳಲ್ಲಿ 'ರಾಜ್ಯ'ದ ಬದಲು ಸೀಮೆ, ಸ್ಥಳ, ವಳಿತ ಮತ್ತು ವೇಂಠೆ ಎಂಬ ಪದಗಳನ್ನು ಉಪಯೋಗಿಸಲಾಗಿದೆ. ಹಲವು ಸ್ಥಳಗಳಲ್ಲಿ ಅವುಗಳನ್ನು ರಾಜ್ಯದೊಳಗಿನ ಸಣ್ಣ ವಿಭಾಗಗಳನ್ನು ಸೂಚಿಸಲು ಉಪಯೋಗಿಸಲಾಗಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಆದರೆ, ಅದು ಮೈಸೂರು ರಾಜ್ಯದ, ಮೈಸೂರು ಜಿಲ್ಲೆಯ, ಮೈಸೂರು ತಾಲ್ಲೂಕಿನ, ಮೈಸೂರು ಸ್ಥಳದ ಎಂಬ ರೀತಿಯಲ್ಲಿ ಉಕ್ತವಾಗಿದ್ದಿರಬೇಕೆಂದು ತೋರುತ್ತದೆ. ಆದರೂ ಈ ದಿಸೆಯಲ್ಲಿ ತುಸುಮಟ್ಟಿನ ಗೊಂದಲವಿರುವುದು ನಿಜ. ಇಂತಹ ಗೊಂದಲ ಕೇವಲ ವಿಜಯನಗರ ಆಳ್ವಿಕೆಗೆ ಮಾತ್ರ ಅನ್ವಯವಾಗುವುದಿಲ್ಲ. ಭಾರತದ ಇತರ ಪ್ರದೇಶಗಳ, ರಾಜವಂಶಗಳ, ಬೇರೆ ಬೇರೆ ಕಾಲಗಳ ಈ ಆಡಳಿತ ವಿಭಾಗಗಳ ಅನುಶ್ರೇಣಿಯ ಕ್ರಮವು ಇಂತಹ ಗೊಂದಲಗಳಿಂದ ಕೂಡಿರುವುದನ್ನು ಡಾ॥ ಡಿ. ಸಿ. ಸರ್ಕಾರ್‌ರವರು ಸಾಧಾರವಾಗಿ ಗುರುತಿಸಿರುತ್ತಾರೆ. ಅಷ್ಟೇ ಅಲ್ಲದೆ ಕೆಲವೊಂದು ಪ್ರದೇಶಗಳಿಗೇ ಸೀಮಿತವಾದ ಕೆಲವು ವಿಶಿಷ್ಟ ಆಡಳಿತ ವಿಭಾಗ ಸೂಚಿ ಪದಗಳು ಕೂಡ ಗಮನ ಸೆಳೆಯುತ್ತವೆ. ಉದಾಹರಣೆಗೆ ಕೋಲಾರ ಮತ್ತು ಬೆಂಗಳೂರು ಜಿಲ್ಲಾ ಪ್ರದೇಶಗಳಲ್ಲಿ ಕಂಡುಬರುವ 'ಷಟ್ಪದಿ' ಎಂಬ ಆಡಳಿತ ವಿಭಾಗದ

ಉಲ್ಲೇಖಗಳು, ಹಾಗೆಯೇ ಬೆಂಗಳೂರು ಜಿಲ್ಲಾ ಪ್ರದೇಶದ ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಅಂದರೆ ಕ್ರಿ. ಶ. 1506ರಷ್ಟು ಹಿಂದೆ, ಅಷ್ಟು ಪ್ರಚಲಿತವಲ್ಲದ 'ಚಾವಡಿ' ಪ್ರಯೋಗವು ಶಾಸನವೊಂದರಲ್ಲಿ ಪ್ರದೇಶವಾಚಕವಾಗಿ ಪ್ರಯೋಗವಾಗಿರುವುದು ಪರಿಶೀಲನಾರ್ಹ.

ಒಟ್ಟಾರೆ, ವಿಜಯನಗರ ಕಾಲದ ಆಡಳಿತ ವಿಭಾಗಗಳ ಹಂತಗಳನ್ನು ಸ್ಥೂಲವಾಗಿ,

1. ದೇಶ / ರಾಜ್ಯ
2. ಚಾವಡಿ/ಮಾಗಣಿ/ವಳಿತ/ವೇಂಠೆ
3. ನಾಡು/ಸೀಮೆ
4. ಸ್ಥಳ
5. ಗ್ರಾಮ

ಎಂಬುದಾಗಿ ಗುರುತಿಸಬಹುದಾಗಿದೆ. ಇವಲ್ಲದೆ, ಪಟ್ಟಣ, ಅಗ್ರಹಾರ ಮತ್ತು ವೃತ್ತಿಯಾಗಿ ನೀಡಲಾಗಿದ್ದ ಸ್ಥಳಗಳು ಪ್ರತ್ಯೇಕ ಸ್ವಾಯತ್ತ ಆಡಳಿತ ಘಟಕಗಳಾಗಿದ್ದುವೆಂದು ತೋರುತ್ತದೆ.

ಇವುಗಳಲ್ಲಿ ಮೇಲಿನ ಸ್ತರದ ಆಡಳಿತ ವಿಭಾಗಗಳಾದ ರಾಜ್ಯ, ಚಾವಡಿ/ಮಾಗಣಿ/ವಳಿತ/ವೇಂಠೆಗಳೆಂಬುವು ಕಾಲಾಂತರದಲ್ಲಿ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡು ಆ ಜಾಗಗಳಲ್ಲಿ ಹೊಸ ಆಡಳಿತ ವಿಭಾಗಗಳು ತಲೆಯೆತ್ತುತ್ತಿದ್ದುದು ಕೂಡ ಕಂಡುಬರುತ್ತದೆ. ಇದಕ್ಕೆ ಕಾರಣ ರಾಜವಂಶಕ್ಕೆ ಸೇರಿದ ವ್ಯಕ್ತಿಗಳನ್ನು ಇಂತಹ ರಾಜ್ಯಗಳ ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸುತ್ತಿದ್ದುದೇ ಆಗಿದೆ. ವಿಜಯನಗರವನ್ನು ಆಳಿದ ಮೊದಲನೆಯ ವಂಶದ ರಾಜಕುಮಾರರು, ಒಡೆಯ ಅಥವಾ ಒಡೆಯರ್ ಎಂಬ ಬಿರುದನ್ನು ಪಡೆದುಕೊಳ್ಳುತ್ತಿದ್ದರು. ಮೊದಲನೇ ಹರಿಹರನು ಸಾಮ್ರಾಟನಾಗಿದ್ದಾಗ, ಮಾರಪ್ಪ ಅರಗದ ಪ್ರಾಂತ್ಯಾಧಿಕಾರಿಯಾಗಿ ಚಂದ್ರಗುತ್ತಿಯನ್ನು ರಾಜಧಾನಿಯನ್ನಾಗಿ ಹೊಂದಿದ್ದನು. ಮೊದಲನೆಯ ಕಂಪಣನು ಉದಯಗಿರಿ ರಾಜ್ಯದ ಪ್ರಾಂತ್ಯಾಧಿಕಾರಿಯಾಗಿದ್ದನು, ಎರಡನೆಯ ಹರಿಹರನ ಮಗ ವಿರೂಪಾಕ್ಷನು ತುಂಡೀರ, ಚೋಳ ಮತ್ತು ಪಾಂಡ್ಯರಾಜ್ಯಗಳ ಅಧಿಕಾರವನ್ನು ಹೊಂದಿದ್ದು ಸಿಂಹಳವನ್ನು ಆಕ್ರಮಿಸಿಕೊಂಡನು. ಹೀಗೆ ಅನೇಕ ಉದಾಹರಣೆಗಳನ್ನು ನೀಡುತ್ತಾ ಹೋಗಬಹುದು.

ಈ ಹಿನ್ನೆಲೆಯಲ್ಲಿ, ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ಪ್ರದೇಶದಲ್ಲಿ ಕ್ರಿ. ಶ. 1400ರ ಸುಮಾರಿನಲ್ಲಿ ಅಸ್ತಿತ್ವದಲ್ಲಿದ್ದ ಅರುಳ ಹಾಳ ರಾಜ್ಯ ನಂತರದ ಕಾಲದಲ್ಲಿ ಪ್ರಸ್ತಾಪಿತವಾಗುವುದೇ ಇಲ್ಲ. ಮುಳಬಾಗಿಲು ರಾಜ್ಯ ಮತ್ತು ಹೊಯ್ಸಳ ರಾಜ್ಯಗಳು ವಿಜಯನಗರ ಸಾಮ್ರಾಜ್ಯದ ಪ್ರಾರಂಭ ಕಾಲದಿಂದ ತುಳುವ ವಂಶದ ಆಳ್ವಿಕೆಯ ಕಾಲದವರೆಗೂ ಹೆಚ್ಚು ಪ್ರಬಲ ಹಾಗೂ ಗಮನಾರ್ಹ ರಾಜ್ಯಗಳಾಗಿ ಈ ಪ್ರದೇಶದಲ್ಲಿನ ನಾಡು/ಸೀಮೆಗಳ ಮೇಲೆ ಅಧಿಕಾರವನ್ನು ಪಡೆದಿದ್ದವು. ಕ್ರಿ. ಶ. 1551ರ ಸುಮಾರಿನಲ್ಲಿ ಈ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಶಾಸನಗಳಲ್ಲಿ ಪೆನುಗೊಂಡೆ ರಾಜ್ಯದ ಪ್ರಸ್ತಾಪ ಕಂಡುಬರುತ್ತದೆ.

ಮುಳವಾಯಿ ಅಥವಾ ಮುಳುಬಾಗಿಲು ರಾಜ್ಯದಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು, ಮಾಲೂರು, ಬೆಂಗಳೂರು ಜಿಲ್ಲೆಯ ಹೊಸಕೋಟೆ, ಬೆಂಗಳೂರು ದಕ್ಷಿಣ, ಆನೇಕಲ್ಲು ತಾಲ್ಲೂಕುಗಳ ಪ್ರದೇಶಗಳ ಜೊತೆಗೆ ಇಂದಿನ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಅನೇಕ ಭಾಗಗಳು ಈ ರಾಜ್ಯದಲ್ಲಿ ಅಂತರ್ಗತವಾಗಿದ್ದವು. ಬೆಂಗಳೂರು ಜಿಲ್ಲಾ ಪ್ರದೇಶದ ಮಟ್ಟಿಗೆ ಮುಳವಾಯಿ ರಾಜ್ಯದಲ್ಲಿ ಬೇಹೂರುನಾಡು ಮತ್ತು ತುರ್ಯೆವಳಿನಾಡುಗಳು

ಸೇರಿದ್ದುವೆಂಬ ಅಂಶ ಶಾಸನಗಳಲ್ಲಿ ಉಕ್ತವಾಗಿದೆ. ಬೆಂಗಳೂರು ಜಿಲ್ಲೆಯ ಸಾರಕ್ಕಿ, ಬೇಹೂರು (ಬೇಗೂರು), ಹುಸುಕೂರು, ಬೇಲೂರು, ಬೆಟ್ಟದಹಳ್ಳಿ, ವೊಗಟ್ಟ (ವಾಗಟ) ಮುಂತಾದ ಗ್ರಾಮಗಳು ಶಾಸನೋಕ್ತವಾಗಿವೆ.

ಪೊಯಿಸಣನಾಡು ಅಥವಾ ಹೊಯಿಸಣ ನಾಡೆಂದು ಕರೆಯಲ್ಪಟ್ಟಿರುವ ಹೊಯ್ಸಳ ದೇಶದಲ್ಲಿ ಬೆಂಗಳೂರು ಜಿಲ್ಲೆಯ ಪಶ್ಚಿಮ ದಿಸೆಯ ಚನ್ನಪಟ್ಟಣ, ರಾಮನಗರ, ಮಾಗಡಿ ತಾಲ್ಲೂಕಿನ ಭಾಗಗಳು ಸೇರಿದ್ದವು. ಚನ್ನಪಟ್ಟಣ ರಾಜ್ಯ ಹೊಯ್ಸಳ ದೇಶದ ಭಾಗವಾಗಿತ್ತು. ಒಟ್ಟಾರೆ, ವಿಜಯನಗರ ಕಾಲದ ಆಡಳಿತ ವಿಭಾಗಗಳಲ್ಲಿ ಹೊಯ್ಸಳ ರಾಜ್ಯವು ಬಹು ವಿಸ್ತಾರವಾಗಿದ್ದಿತು. ಅಂದರೆ ವಿಜಯನಗರದ ಸ್ಥಾಪನೆಗೆ ಮೊದಲು ಹೊಯ್ಸಳರ ಆಳ್ವಿಕೆಯಲ್ಲಿದ್ದ ಕರ್ನಾಟಕದ ಮತ್ತು ತಮಿಳುನಾಡಿನ ಹಲವು ಭಾಗಗಳು ಈ ದೇಶ/ರಾಜ್ಯದಲ್ಲಿ ಸೇರ್ಪಡೆಗೊಂಡಿದ್ದವು.

ಇಂದಿನ ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ಪ್ರದೇಶವು ಅರುಳಹಾಳ ರಾಜ್ಯದಲ್ಲಿ ಅಂತರಗತ ವಾಗಿದ್ದಿತು. ಈ ಭಾಗವನ್ನು ಕಾಚಣ ಒಡೆಯನೆಂಬುವನು ಆಳುತ್ತಿದ್ದ. ಅರುಳಹಾಳ ವೂರಗೌಡನ ಮಗ ಅಲ್ಲಗವುಡನು ಸಿಗಲನಾಡ ಪ್ರಭುವಾಗಿದ್ದನು. ಸಿಗಲನಾಡನ್ನು ಶೀಗಲನಾಡು, ಸಿಂಗಲನಾಡು ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಕನಕಪುರ ತಾಲ್ಲೂಕಿನ ಗ್ರಾಮಗಳಾದ ಮಾರೇನಹಳ್ಳಿ (ಎಡಮಾರನಹಳ್ಳಿ), ಅರುಳಹಾಳ, ಮಾರಸಮುದ್ರ ಮುಂತಾದವು ಈ ರಾಜ್ಯದ ಗ್ರಾಮಗಳೆಂದು ಶಾಸನೋಕ್ತವಾಗಿವೆ.

ಚನ್ನಪಟ್ಟಣ ರಾಜ್ಯದಲ್ಲಿ ಕಿತಲೆನಾಡು ಮತ್ತು ಹೊಂಮಳಿಗೆ ನಾಡುಗಳು ಅಂತರ್ಗತವಾಗಿದ್ದವು. ಕೋಡಂಬಳ್ಳಿ, ನಿಟ್ಟೂರು, ಸರಗೂರು, ಹಲಸನಹಳ್ಳಿ, ಅಂಕನಹಳ್ಳಿ, ಯಲೆಯೂರು, ಕಟಿಗೆರೆ, ತಾರಾಂಕನ ಹಳ್ಳಿ, ಕೂಚಗೆರೆ, ಸಿಧಾಪುರ ಮುಂತಾದ ಊರುಗಳು ಈ ರಾಜ್ಯಕ್ಕೆ ಸೇರಿದ್ದವು.

ಪೆನುಗೊಂಡೆ ರಾಜ್ಯವನ್ನು ಉಲ್ಲೇಖಿಸುವ ಕ್ರಿ. ಶ. 1551ರ ಶಾಸನ ನೆಲಮಂಗಲ ತಾಲ್ಲೂಕಿನ ಬೂದಿಹಾಳು ಗ್ರಾಮದಲ್ಲಿದ್ದು, ಮುರುಗುಳುನಾಡು ಮತ್ತು ಗೂಳೂರು ಸೀಮೆಗಳು ಈ ರಾಜ್ಯದ ಭಾಗಗಳೆಂದು ತಿಳಿದುಬರುತ್ತದೆ. ಈ ರಾಜ್ಯವನ್ನು ವಿಜಯನಗರದ ಅರಸು ಇಮ್ಮಡಿ ದೇವರಾಯನು ತನ್ನ ಜ್ಯೇಷ್ಠ ಸೋದರನಿಗಾಗಿ ಸ್ಥಾಪಿಸಿದನೆಂಬ ಅಂಶ ಶ್ರೀಶೈಲಂ ತಾಮ್ರಶಾಸನದಲ್ಲಿ ಉಕ್ತವಾಗಿದೆ. ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲ ಗ್ರಾಮದ ಶಾಸನದಲ್ಲೂ ಪೆನುಗೊಂಡೆ ರಾಜ್ಯದ ಪ್ರಸ್ತಾಪವಿದ್ದು, 'ಬಿಂಣಮಂಗಲ' ಗ್ರಾಮವು ಆ ರಾಜ್ಯದ ಗ್ರಾಮವೆಂದು ಗೊತ್ತಾಗುತ್ತದೆ. ಪೆನುಗೊಂಡೆ ರಾಜ್ಯದಲ್ಲಿ ತುಮಕೂರು ಜಿಲ್ಲೆಯ ತುಮಕೂರು, ಸಿರಾ ಮತ್ತು ಪಾವಗಡ ತಾಲ್ಲೂಕುಗಳು, ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು ಮತ್ತು ಆಂಧ್ರಪ್ರದೇಶದ ಪೆನುಗೊಂಡೆಯು ಸೇರಿದಂತೆ ಅನಂತಪುರ ಜಿಲ್ಲೆಯ ಭಾಗಗಳು ಅಂತರ್ಗತವಾಗಿದ್ದವು. ತ್ಯಾಮಗೊಂಡ್ಲು, ಗಂಡನಹಳ್ಳಿ, ವಿಶ್ವನಾಥಪುರ, ಜಖನಹಳ್ಳಿ, ಹರಿವೇಸಂದ್ರ, ಕೋಡಿಹಳ್ಳಿ, ತಿಲ್ಲಗಟ್ಟ, ಶ್ರೀನಿವಾಸಪುರವೆಂಬ ನೃಸಿಂಹ್ಯಪುರ ಗ್ರಾಮ, ಬಿಲನಕೋಟೆ, ಹೊಸಹಳ್ಳಿ (ದೇವರ ಹೊಸಹಳ್ಳಿ) ಮುಂತಾದ ಬೆಂಗಳೂರು ಜಿಲ್ಲೆಯ ಗ್ರಾಮಗಳು ಈ ರಾಜ್ಯದಲ್ಲಿ ಅಂರ್ತಗತವಾಗಿದ್ದವು.

ಬೆಂಗಳೂರು ಜಿಲ್ಲೆಯ ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕಿನ ಕೆಲವು ಶಾಸನಗಳಲ್ಲಿ ರಾಜ್ಯದ ನಂತರ, ಆದರೆ ನಾಡಿನ ಮೇಲಿನ ಸ್ತರದಲ್ಲಿ 'ಚಾವಡಿ' ಎಂಬ ಪದದ ಪ್ರಯೋಗ ಬಂದಿದೆ. ವಿಜಯನಗರ ಕಾಲದ ತಮಿಳು ಶಾಸನಗಳಲ್ಲಿ ಇದನ್ನು ನಾಡು ಅಥವಾ ಕುಟ್ರಂಗೆ ಸಮಾನಾರ್ಥದಲ್ಲಿ ಉಶಾವಡಿ/ಚಾವಡಿ ಎಂದು ಬಳಸಿರುವ ಹಾಗೂ ಇದನ್ನು ಅನೇಕ ಪಟ್ಟಗಳಾಗಿ ವಿಭಾಗಿಸಿದ್ದ ಬಗ್ಗೆ ಟಿ. ವಿ. ಮಹಾಲಿಂಗಂರವರು ತಮ್ಮ South Indian Polityಯಲ್ಲಿ ಹೇಳಿರುತ್ತಾರೆ. ವಿಜಯನಗರ ಪೂರ್ವದಲ್ಲಿ 'ನಾಡು' ಎಂಬುದು ಒಂದು ಪ್ರಾದೇಶಿಕ ವಿಭಾಗವಾಗಿರುವಂತೆಯೇ ಸ್ಥಳೀಯ ಮುಖಂಡರಿಂದ ಕೂಡಿದ ಒಂದು ಸಭೆ (ಗ್ರಾಮಕೂಟ) ಕೂಡ ಆಗಿದ್ದಿತು. ಆದರೆ ವಿಜಯನಗರ ಕಾಲದಲ್ಲಿ ನಾಡು ಎಂಬುದು ಸಭೆಯೆಂಬ ಅರ್ಥಕ್ಕಿಂತ ಒಂದು

ಪ್ರಾದೇಶಿಕ ವಿಭಾಗ ಎಂಬ ಅರ್ಥದಲ್ಲಿ ಬಳಕೆಯಾಗತೊಡಗಿದಾಗ ಅದಕ್ಕೆ ಪರ್ಯಾಯವಾಗಿ ಸ್ಥಳೀಯ ಆಡಳಿತ ಕೂಟ ಅಥವಾ ಸಭೆಯ ಸೂಚಕವಾಗಿ ಈ ಚಾವಡಿ ಎಂಬ ಪದವು ಬಳಕೆಗೆ ಬಂದಿತೆಂದು ಹೇಳಬಹುದು. ಮೈಸೂರು ಅರಸರ ಕಾಲದ ಶಾಸನಗಳಲ್ಲಿ ಚಾವಡಿ ಎಂಬುದು ಕೆಳಸ್ತರದಲ್ಲಿದ್ದ ಆಡಳಿತಕ್ಕೆ ಸಂಬಂಧಿಸಿದ ಪಂಚಾಯಿತಿ ಸಭೆ, ಕಟ್ಟೆ, ಕಛೇರಿ ಎಂದು ಪ್ರಯೋಗವಾಗಿರುವುದನ್ನು ಇಲ್ಲಿ ಗಮನಿಸಬೇಕಾಗಿದೆ. (ಉದಾ: ಶೂರಗಿರಿಚಾವಡಿ). ಕೋಳಾಲ ಚಾವಡಿಯು ಬೆಂಗಳೂರು ಜಿಲ್ಲೆಯ ವಿಜಯನಗರ ಕಾಲದ ಶಾಸನಗಳಲ್ಲೂ ಬೇಲೂರು ಚಾವಡಿಗಳು ಹೊಸಕೋಟೆ ತಾಲ್ಲೂಕಿನ ಶಾಸನಗಳಲ್ಲೂ ಚೇಲೂರು (ಬೇಲೂರು) ಚಾವಡಿ ಎಂಬುದು ನೆಲಮಂಗಲ ತಾಲ್ಲೂಕಿನ ಶಾಸನಗಳಲ್ಲೂ ರಾಜ್ಯದ ನಂತರ ಮತ್ತು ನಾಡಿನ ಮೇಲಿನ ಸ್ತರದಲ್ಲಿ ಪ್ರಯುಕ್ತವಾಗಿರುವ ಚಾವಡಿಗಳಾಗಿವೆ.

ವಿಜಯನಗರ ಕಾಲದ ಕರ್ನಾಟಕದ ಇತರ ಕಡೆಯ ಶಾಸನಗಳಲ್ಲಿ ಅಷ್ಟಾಗಿ ಕಂಡುಬರದ 'ಷಟ್ಪದಿ' ಎಂಬ ಆಡಳಿತ ವಿಭಾಗಸೂಚಕ ಪದ ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ಶಾಸನಗಳಲ್ಲಿ ಪ್ರಯೋಗವಾಗಿರುವುದು ಗಮನಾರ್ಹ ಅಂಶವಾಗಿದೆ:

1. 'ಕೋಳಾಲ ಸೀಮೆಯೊಳಗಣ ಕೊತನೂರ ಪಟ್ಟಡೆ ಸ್ಥಳದ ಕೆಂದಟ್ಟು ಗ್ರಾಮ 1' (*ಎ.ಕ.*, 17, ಕೋಲಾರ 304, ಕೆಂದಟ್ಟಿ, ಕ್ರಿ. ಶ. 1565);
2. "ಹೊಸಕೋಟೆ ಸೀಮೆಯ ಹುಲೂರು ಪಟ್ಟಡಿಯ ಮುಗುಬಾಳು ಎಂಬ ಗ್ರಾಮಕ್ಕೆ ಪ್ರತಿನಾಮ ವೀರಭದ್ರಪುರ ಗ್ರಾಮ 1" (*ಎ.ಕ.*, 9, ಹೊಸಕೋಟೆ 94, ಮುಗುಬಾಳು, ಕ್ರಿ. ಶ. 1564)
3. 'ಹೊಳಲಿ ಪಟಿಡೆಯ ಹರಳೂಕುಂಟೆಗೆ ಪ್ರತಿನಿದ್ಯವಾದಂಥ ಶಿವಕಾಂಚಿಪುರವೆಂಬ ಅಗ್ರಹಾರ' (*ಎ.ಕ.*, 10, ಕೋಲಾರ 247, ಹರಳಕುಂಟೆ, ಕ್ರಿ. ಶ. 1637).

ಈ ಪ್ರಯೋಗಗಳನ್ನು ಗಮನಿಸಿದರೆ ಪಟ್ಟಡಿಯನ್ನು ಪಟ್ಟಡೆ, ಪಟ್ಟಿಡೆಯೆಂದು ಕರೆದಿರುವುದು ಕಂಡುಬರುತ್ತದೆ. ಇದು ನಾಡು ಅಥವಾ ಸೀಮೆಯ ಕೆಳಸ್ತರದಲ್ಲಿ ಅಂದರೆ ಸ್ಥಳದ ಸಮನಾಂತರದಲ್ಲಿ ಬಳಕೆಯಾಗಿದೆ.

'ಪಟ್ಟ' ಎಂಬ ಪದವು ಒಂದು ಸಣ್ಣ ಪ್ರಾದೇಶಿಕ ವಿಭಾಗ ಎಂಬ ಅರ್ಥದಲ್ಲಿ ಕೆಲವು ಪ್ರಾಚೀನ ಶಾಸನಗಳಲ್ಲಿ (ಎ.ಇಂ., 33, ಪು.304) ಪ್ರಯೋಗವಾಗಿದೆ. ಪಟ್ಟಡಿ ಎಂಬುದು ಪಟ್ಟ + ವಾಡಿ ಎಂಬ ಪದಗಳಿಂದಾದ ಪಟ್ಟವಾಡಿ, ಪಟ್ಟಡಿ ಆಗಿರಬೇಕೆಂದು ತೋರುತ್ತದೆ. ವಾಡಿ ಎಂಬುದು 'ಬಾಡ' ದಿಂದ ನಿಷ್ಪನ್ನವಾದ ಗ್ರಾಮಸ್ಥಳ ಎಂಬ ಅರ್ಥವುಳ್ಳದ್ದೆಂಬುದು ತಿಳಿದ ವಿಷಯವೇ ಆಗಿದೆ.

ಕ್ರಿ. ಶ. 1140ರ ದೊಮ್ಮಲೂರಿನ ಶಾಸನದಲ್ಲಿ ಸೊಂಡೆಕೊಪ್ಪ ವೇಂಠೆಯ ಪ್ರಸ್ತಾಪ ಬಂದಿದೆ. ಇದು ರಾಜ್ಯದೊಳಗಣ ಅಂತರ್ಭಾಗ; ಸೀಮೆ ಅಥವಾ ನಾಡುಗಳು ವೇಂಠೆಯದೊಳಗೆ ಅಂತರ್ಗತವಾಗಿರುತ್ತವೆ. 'ವೇಂಠೆ' ಮತ್ತು 'ವಳಿತ'ಗಳು ಅಭಿನ್ನವೆಂದು ಅಭಿಪ್ರಾಯ ವ್ಯಕ್ತಪಟ್ಟಿದೆ. ಆದರೆ ಬೆಂಗಳೂರು ಜಿಲ್ಲೆಯ ಶಾಸನಗಳಲ್ಲಿ ಪ್ರಯುಕ್ತವಾಗಿರುವ 'ವಳಿತ' ಪದವು ನಾಡು ಅಥವಾ ಸೀಮೆಯ ಕೆಳಸ್ತರದಲ್ಲಿ, ಅಂದರೆ ಸ್ಥಳಕ್ಕೆ ಸಮಾನ ಸ್ತರದಲ್ಲಿ ಪ್ರಯೋಗವಾಗಿದ್ದು, ಅವೆಲ್ಲವೂ 1686ರ ನಂತರ ಅವಧಿಗೆ ಸೇರಿದವಾಗಿವೆ.

ಇನ್ನು ಕೆಳಹಂತದ ಆಡಳಿತ ವಿಭಾಗಗಳಲ್ಲಿ ನಾಡು ಅಥವಾ ಸೀಮೆ, ಸ್ಥಳ ಮತ್ತು ಗ್ರಾಮಗಳೂ ಮುಖ್ಯವಾಗುತ್ತವೆ. ನಾಡು ಎಂಬುದು ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಬಳಕೆಯಲ್ಲಿದ್ದ ಪದವೆಂತಲೂ ಸೀಮೆ ಎಂಬುದು ತೆಲುಗು ಪ್ರದೇಶಗಳಲ್ಲಿ ಹೆಚ್ಚು ಪ್ರಚಲಿತವಿದ್ದ ಸಮಾನ ಸ್ತರದ ಪ್ರಾದೇಶಿಕ ವಿಭಾಗಗಳಂತಲೂ ವಿದ್ವಾಂಸರು ಅಭಿಪ್ರಾಯ

ಪಟ್ಟಿರುತ್ತಾರೆ. ಆದರೂ ಕೆಲವು ಕಡೆ ಸೀಮೆ ಎಂಬುದು ನಾಡಿನ ಒಂದು ಉಪಭಾಗವಾಗಿ ಕ್ವಚಿತ್ತಾಗಿ ಪ್ರಯೋಗಗೊಂಡಿರುವುದುಂಟು.

ಬೆಂಗಳೂರು ಜಿಲ್ಲೆಯಲ್ಲಿನ ಕ್ರಿ. ಶ. 1400 ಕ್ಕಿಂತಲೂ ಹಿಂದಿನ ಪ್ರಯೋಗಗಳೆಲ್ಲ 'ನಾಡು' ಎಂಬ ಪ್ರತ್ಯಯವನ್ನೇ ಪಡೆದಿರುವುದು ಕಂಡುಬರುತ್ತದೆ. ಅವುಗಳಲ್ಲಿ ಬಹಳಷ್ಟು ಗಂಗ, ಚೋಳ ಮತ್ತು ಹೊಯ್ಸಳರ ಕಾಲದಲ್ಲೇ ಪ್ರಚಲಿತವಿದ್ದ ನಾಡುಗಳಾಗಿರುತ್ತವೆ. ಉದಾಹರಣೆಗೆ, ಎಲಹಂಕನಾಡು, ಕಿಳಲೈನಾಡು, ಕುಕ್ಕಲನಾಡು, ಕೈವಾರನಾಡು, ಪುಲ್ಲಿಯೂರುನಾಡು, ತುರೈವಳಿನಾಡು, ವೆಪ್ಪೂರುನಾಡು, ಮೊರಸುನಾಡು, ಸೀಗಲನಾಡು, ಹೊಂಮ್ಮಳಿಗೆನಾಡು, ಸಣ್ಣೆನಾಡು, ನಲ್ಲೂರುನಾಡು, ಹುಲುಕಡಿನಾಡು ಮುಂತಾದವು. ಆದರೆ ಕ್ರಿ. ಶ. 1400ರ ನಂತರದ ಶಾಸನಗಳಲ್ಲಿ ಬಹುಮಟ್ಟಿಗೆ ವಿಜಯನಗರದ ಕಾಲದಲ್ಲೇ ಹೊಸದಾಗಿ ಸೇರ್ಪಡೆಯಾದ ಹೊಸ ನಾಡುಗಳೆಲ್ಲವೂ 'ಸೀಮೆ' ಎಂಬ ಪ್ರತ್ಯಯವನ್ನು ಮಾತ್ರ ಪಡೆದಿರುವುದು ಕಂಡುಬರುತ್ತದೆ. ಉದಾಹರಣೆಗೆ, ಸೋಲೂರು ಸೀಮೆ, ಹಣಬೆಯ ಸೀಮೆ, ಕೋಡಂಬಳ್ಳಿ ಸೀಮೆ, ಚಂನಪಟ್ಟಣ ಸೀಮೆ, ನೆಲಮಂಗಲ ಸೀಮೆ, ಹೆಜಾಜಿ ಸೀಮೆ, ಹೊಸ ಕೋಟೆ ಸೀಮೆ, ತಿಪ್ಪೂರು ಸೀಮೆ, ಗೂಳೂರು ಸೀಮೆ, ಚಳ್ಳಕನ ಸೀಮೆ, ನೆಲವಾಗಿಲ ಸೀಮೆ ಮುಂತಾದವು. ಆದ್ದರಿಂದ ಸೀಮೆ ಎಂಬುದು ತೆಲುಗು ಪ್ರದೇಶಗಳಲ್ಲಿ ಹೆಚ್ಚು ಪ್ರಚಲಿತವಿದ್ದ ಪ್ರಾದೇಶಿಕ ವಿಭಾಗ ಎಂಬ ವಿದ್ವಾಂಸರ ಅಭಿಪ್ರಾಯ ತಪ್ಪಾಗುತ್ತದೆ. ಆದರೆ ಅದು ವಿಜಯನಗರ ಆಳ್ವಿಕೆಯಲ್ಲಿ, ಒಂದು ಆಡಳಿತ ವಿಭಾಗ ಎಂಬ ಸ್ಪಷ್ಟ ಅರ್ಥದಲ್ಲಿ, ಸೇರ್ಪಡೆಯಾದ ಹೊಸ ಪದವಾಗಿದೆ.

ಸೀಮೆ ಎಂಬುದು ಸಂಸ್ಕೃತದ 'ಸೀಮಾ' ಪದವೇ ಆಗಿದ್ದು ವಿಜಯನಗರ ಕಾಲದಲ್ಲಿ ಒಂದು ಆಡಳಿತ ವಿಭಾಗ ಎಂಬರ್ಥದಲ್ಲಿ ಪ್ರಯೋಗವಾಗಿದೆ. ಆದರೆ ಕ್ರಿ. ಶ. 1400ಕ್ಕಿಂತ ಹಿಂದಿನ ಕನ್ನಡ ಶಾಸನಗಳಲ್ಲಿ ಸೀಮೆ ಎಂಬುದು ಎಲ್ಲೆ ಎಂಬ ಅರ್ಥದಲ್ಲೇ ಪ್ರಯೋಗವಾಗಿರುವುದು ಗಮನಾರ್ಹ ಸಂಗತಿ.

ನಾಡು ಅಥವಾ ಸೀಮೆಯ ಕೆಳಸ್ತರದಲ್ಲಿ ಸ್ಥಳ ಮತ್ತು ಗ್ರಾಮಗಳು ಬರುತ್ತವೆ. ಅನೇಕ ಗ್ರಾಮಗಳ ಸಮೂಹವೇ 'ಸ್ಥಳ'. 'ಅಷ್ಟಗ್ರಾಮ ಸೀಮೆ' ಎಂಬುದು ಸ್ಥಳದ ಪರಿಮಿತಿಗೆ ಸಂಬಂಧಪಟ್ಟಿರಬಹುದು. ಸ್ಥಳಕ್ಕೆ ಪರ್ಯಾಯವಾಗಿ 'ಸಂಮತು' ಎಂಬ ಪ್ರಯೋಗವು ಉಂಟು. ವಿಜಯನಗರ ಅರಸರ ಕಾಲದಲ್ಲಿ ವಿಶೇಷವಾಗಿ ಬಳಕೆಯಾಗಿರುವ ಈ ಪ್ರದೇಶವಾಚಕ ಪದವು ಬಹುಮಟ್ಟಿಗೆ ಇಂದಿನ ಫಿರ್ಕದೊಂದಿಗೆ ಹೊಂದುತ್ತದೆ. ಬೆಂಗಳೂರು ಜಿಲ್ಲೆಯಲ್ಲಿನ ವಿಜಯನಗರ ಕಾಲದಲ್ಲಿ ಪ್ರಯುಕ್ತವಾಗಿರುವ ಸ್ಥಳಗಳಲ್ಲಿ ಅಂಣಿಗನಹಳ್ಳಿ ಸ್ಥಳ, ಅತ್ತಿಬೆಲೆ ಸ್ಥಳ, ಕಲೆಯದ ಸ್ಥಳ, ಕಾಕೋಳಲ ಸ್ಥಳ, ಕೂಡಲೂರ ಸ್ಥಳ, ಚಪಗಾಳಿ ಸ್ಥಳ, ಸಿವಮುಂದೂರ ಸ್ಥಳ, ನಿಜಗಲು ಸ್ಥಳ, ನಂಜಿಗುಳಿ ಸ್ಥಳ, ಬಾಣವಾಡಿ ಸ್ಥಳ, ಸುಂಣಬರೆಯ ಸ್ಥಳ, ಹಲಸೂರು ಸ್ಥಳ, ಹೊಂಗನೂರು ಸ್ಥಳ ಮುಂತಾದವು ಶಾಸನೋಕ್ತವಾಗಿವೆ. (ಈ ಸ್ಥಳಗಳಲ್ಲಿ ಅಂತರ್ಗತವಾಗಿದ್ದ ಶಾಸನೋಕ್ತ ಗ್ರಾಮಗಳನ್ನು ಅನುಬಂಧದಲ್ಲಿ ಸೂಚಿಸಲಾಗಿದೆ).

ಒಟ್ಟಾರೆ, ವಿಜಯನಗರ ಸಾಮ್ರಾಜ್ಯದ ಆಡಳಿತ ವಿಭಾಗಗಳಿಗೆ ಸಂಬಂಧಿಸಿದ ಈ ಪರಿಶೀಲನೆಯಿಂದ ತಿಳಿದುಬರುವ ಮುಖ್ಯವಾದ ಅಂಶಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

1. ವಿಜಯನಗರ ಅರಸರು ತಮ್ಮ ವಿಶಾಲವಾದ ಸಾಮ್ರಾಜ್ಯದಲ್ಲಿ ಏಕರೂಪವಾದ ಆಡಳಿತ ವಿಭಾಗಗಳನ್ನು ಜಾರಿಗೊಳಿಸಲು ಸತತ ಪ್ರಯತ್ನವನ್ನು ಮಾಡಿದ್ದರು.
2. ಅವರ ಈ ಪ್ರಯತ್ನ ಮೇಲಿನ ಮತ್ತು ಕೆಳಗಿನ ಸ್ತರದ ಆಡಳಿತ ವಿಭಾಗಗಳ ವಿಷಯದಲ್ಲಿ ಮಾತ್ರ ಯಶಸ್ಸನ್ನು ತಂದಿದ್ದಿತು.

3. ಮಧ್ಯಸ್ತರದ ಆಡಳಿತ ವಿಭಾಗಗಳು ಹಿಂದಿನಂತೆಯೇ ವೈವಿಧ್ಯಮಯವಾಗಿಯೇ ಉಳಿದುಕೊಂಡಿದ್ದವು.
4. ಇವರು ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಭಾಗಗಳಲ್ಲಿ ಹಿಂದೆ ಇದ್ದ ನಾಡು ಎಂಬ ಪ್ರದೇಶವಾಚಕಕ್ಕೆ ಪರ್ಯಾಯವಾಗಿ ಮತ್ತು ಪೂರಕವಾಗಿ 'ಸೀಮೆ' ಎಂಬ ಪದವನ್ನು ಹೆಚ್ಚು ಬಳಕೆಗೆ ತಂದರು.
5. ಕೆಳಸ್ತರದ 'ಸ್ಥಳ' ಎಂಬ ಆಡಳಿತ ಉಪವಿಭಾಗವನ್ನು ಇವರು ಹೆಚ್ಚು ವ್ಯಾಪಕವಾಗಿ ಮತ್ತು ನಿರ್ಧಿಷ್ಟವಾಗಿ ಬಳಸಿದರು.

ಅನುಬಂಧ

ಕ್ರ.ಸಂ	ಮೇಲ್‌ಸ್ತರದ ಆಡಳಿತ ವಿಭಾಗಗಳು ದೇಶ/ರಾಜ್ಯ/ನಾಡು/ಸೀಮೆ/ವಳಿತ/ವೇಂಠೆ ಇತ್ಯಾದಿ		ಕೆಳಸ್ತರದ ಆಡಳಿತ ವಿಭಾಗಗಳು ಸ್ಥಳ ಅಂತರಗತ ಗ್ರಾಮಗಳು	ಆಕರ
	1	2	3	4
1		ಕಲೆಯದ ಸ್ಥಳ	ಕಲೆಯ (ಕಲ್ಯ)	ಎಪಿಗ್ರಾಫಿಯ ಕರ್ನಾಟಿಕ, ಸಂಪುಟ.9, ಮಾಗಡಿ 17 ಕಲ್ಯ (1362) ಮಾಗಡಿ 27 ಕಲ್ಯ (1649?)
2	ಹೊಂಮಳಿಗೆ ನಾಡು	ಸುಂಣಬರೆಯ ಸ್ಥಳ (ಸುಣವಾರ?)	ಸುಂಣಬರೆ	ಅದೇ, ಆನೇಕಲ್ 82 ಬನ್ನೇರುಘಟ್ಟ (1363)
3		ಹಲಸೂರು ಸ್ಥಳ	ಇಲಿತೊರೆ ಮಾದಿಗೊಂಡನ ಹಳ್ಳಿ ಸಾದುಹಳ್ಳಿ	ಅದೇ, ದೇವನಹಳ್ಳಿ 81 ಜೋಡಿಸಾದರ ಹಳ್ಳಿ (1425)
4	ಹುಲುಕಡಿನಾಡು	ತಿಪ್ಪೂರಸ್ಥಳ	ಹೆಜ್ಜಾಜಿ, ವರದೋಹಳ್ಳಿ ಬಯಿರಾಪುರ	ಅದೇ, ದೊಡ್ಡಬಳ್ಳಾಪುರ 42 ಪುಟ್ಟೈನ ಅಗ್ರಹಾರ (1493)
5	ಕುಕ್ಕಲನಾಡು	ಕಂನೆಲ್ಲಿಯ ಸ್ಥಳ	ಕೆಂಪಬಸವಯ್ಯನ ಹಳ್ಳಿ ಕಾಚುಹಳ್ಳಿ, ಹಾರೋಹಳ್ಳಿ,	ಅದೇ ಬೆಂಗಳೂರು 123 ಗೊಂಗಡಿಪುರ

			ಬಸಹಳ್ಳಿ ಗಂಗಾಧರಪುರ ಪ್ರಾಕುಗೊಂಗಡಿಹಳ್ಳಿ ತಿಂಮಣರಾಜಪುರ	(1493)
6	ಪೊಯಿಸಣನಾಡು ಚಂನಪಟ್ಟಣ (ರಾಜ್ಯ) ಕೋಡಂಬಳ್ಳಿ ಸೀಮೆ	ನಿಟ್ಟೂರಭಟ್ಟವೃತ್ತಿಯ ಸ್ಥಳ	ಎಳಸಿಗೆ ಗ್ರಾಮ, ಕೋಡಂಬಳ್ಳಿ	ಅದೇ, ಚನ್ನಪಟ್ಟಣ 52 ಕೋಡಂಬಳ್ಳಿ (1499)
7		ಸಿವಮುಂದೂರ ಸ್ಥಳ	(ಹನ್ನೆರಡುಹಳ್ಳಿ ವೊಳಗಾದ)	ಅದೇ, ಹೊಸಕೋಟೆ 121 ಜೋತಿಪುರ (1506)
8		ಕೂಡಲೂರ ಸ್ಥಳ	ಹೊಸಹಳ್ಳಿ, ಮೊಗೆಹಳ್ಳಿ, ಕೂಡಲೂರು	ಅದೇ, ಚನ್ನಪಟ್ಟಣ 156 ಹೊಟ್ಟೇನ ಹೊಸಹಳ್ಳಿ (1513)
9	ಅರುಳಹಾಳರಾಜ್ಯ ಸಿಗಲನಾಡು, ಮುಕೊಡಲಸೀಮೆ	ಅಂಣಿಗನಹಳ್ಳಿ ಸ್ಥಳ	ನಲ್ಲಹಳ್ಳಿ	ಅದೇ ಕನಕಪುರ 31 ನಲ್ಲಹಳ್ಳಿ (1570)
10	ಬೇಲೂರು ಚಾವಡಿ ಎಲಹಂಕ ನಾಡು ಶಿವನಸಮುದ್ರ ಸೀಮೆ	ಕಾಕೋಳಲ ಸ್ಥಳ	ಕಾಕೋಳಲ	ಅದೇ, ನೆಲಮಂಗಲ 31 ಹೆಸರುಘಟ್ಟ (1535)
11	ಸೊಂಡೇಕೊಪ್ಪ ವೇಂಠೆ	ಸೊಂಡೆಕೊಪ್ಪ ಸ್ಥಳ	ಹಾರೋ ಕೇತನಹಳ್ಳಿ	ಅದೇ, ನೆಲಮಂಗಲ 10 ಹಾರೋಕ್ಯಾತನಹಳ್ಳಿ (1533)
12		ಬಾಣವಾಡಿ ಸ್ಥಳ	ರಾಮಾಪುರ ಬಾಣವಾಡಿ	ಅದೇ, ಮಾಗಡಿ 74 (1547)
13		ನಂಜಿಗುಳಿಯ ಸ್ಥಳ	ವಿಟ್ಟಸಂದ್ರ	ಅದೇ, ಹೊಸಕೋಟೆ 2 ನಂದಗುಡಿ (1559)
14		ಚಪಗಾಳಿ ಸ್ಥಳ	ಚನ್ನಸಮುದ್ರ ಚಂನಸಂದ್ರದೊಡ್ಡಿ	ಅದೇ, ಕನಕಪುರ 32 (1563)

15	ಬೇಲೂರು ಚಾವಡಿ ಎರ್ಸನಾಡು ನೆಲವಾಗಿಲ ಸೀಮೆ	ನೆಲಮಾಗಿಲ ಸ್ಥಳ	ಅನುಪಹಳ್ಳಿ	ಅದೇ, ಹೊಸಕೋಟೆ 73 ಅನುಪಹಳ್ಳಿ (1620)
16	ಕಾನಲೂರ ವಳಿತ?	ರಾಮರಹಳ್ಳಿಯ ಸ್ಥಳ	ಖನಮಂಗಲ ಬನ್ನೇರುಘಟ್ಟ	ಅದೇ, ಆನೇಕಲ್ 81
17	ಕಟ್ಟಹಳ್ಳಿ ಸ್ಥಳ	(ಗುಂಮಳಾಪುರದ ಸಿಂಹಾಸನ)		ಅದೇ, ಕನಕಪುರ 123 ದೊಡ್ಡ ಕಬ್ಬಹಳ್ಳಿ (1726)
18	ನೆಲಮಂಗಲದ ಸೀಮೆ	ನೆಲಮಂಗಲ ಸ್ಥಳ	ಸೊಂಡೆಕೊಪ್ಪ, ದಾಬನಾಯಕನ ಹಳ್ಳಿ ಮಟ್ಟನ ಕುರುಚಿಹಳ್ಳಿ	ಅದೇ, ನೆಲಮಂಗಲ 8 ಸೊಂಡೇಕೊಪ್ಪ (1763)
19		ಬೆಂಗಳೂರು ಸ್ಥಳ	ಬಿಂಗೀಪುರ (ಜಿಗಣಿ ಹೋಬಳಿ)	ಅದೇ, ಆನೇಕಲ್ 90 ಬಿಂಗಿಪುರ (1760)

ಗ್ರಂಥಋಣ

1. Epigraphia Carnatica, Vol.IX
2. Epigrahia Indica, Vol.XXXIII
3. D.C. Sircar, Indian Epigraphy
4. T.V. Mahalingam, South Indian Polity
5. ಎ.ವಿ. ವೆಂಕಟರತ್ನಂ, ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ
6. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು

15. ಬೆಂಗಳೂರು ನಗರ ಜಿಲ್ಲಾ ಪ್ರದೇಶದ ಪ್ರಾಚೀನ ಆಡಳಿತ ಘಟಕಗಳು

ಡಾ. ಪಿ. ವಿ. ಕೃಷ್ಣಮೂರ್ತಿ

ಬೆಂಗಳೂರು ಜಿಲ್ಲಾ ಪ್ರದೇಶದ ಮೇಲೆ ಶಾತವಾಹನರ ಆಡಳಿತ ನಡೆದಿದ್ದರ ಬಗ್ಗೆ ನೇರ ಆಧಾರಗಳು ಅಲಭ್ಯ. ಆದರೆ ಪಲ್ಲವರ ಮತ್ತು ಅವರ ಮಾಂಡಲಿಕರಾಗಿದ್ದ ಬಾಣರಸರ ಆಳ್ವಿಕೆ ಈ ಜಿಲ್ಲಾ ಪ್ರದೇಶದ ಮೇಲೆ ನಡೆದಿದ್ದಿತೆಂಬುದಕ್ಕೆ ಅನೇಕ ಸಾಂದರ್ಭಿಕ ಆಧಾರಗಳು ನೆರವಿಗೆ ಬರುತ್ತವೆ. ಬಾಣರಸರು ತಮ್ಮನ್ನು ನಂದಿಗಿರಿ ನಾಥರೆಂದೂ, ಪದವಿಪುರಾಧೀಶ್ವರರೆಂದೂ ಕರೆದುಕೊಂಡಿದ್ದಾರೆ. ಈ ಜಿಲ್ಲೆಯ ಪಶ್ಚಿಮಕ್ಕಿರುವ ಮಾಗಡಿ ತಾಲ್ಲೂಕಿನ ಕಲ್ಯ, ಉತ್ತರಕ್ಕಿರುವ ದೊಡ್ಡಬಳ್ಳಾಪುರ–ನಂದಿ ಸಮೀಪದ ರಾಜಘಟ್ಟಗಳಲ್ಲಿ ಬೌದ್ಧಾವಶೇಷಗಳು ಹಾಗೂ ಬೌದ್ಧ ನೆಲೆಗಳು ಶೋಧವಾಗಿವೆ. ಈ ಪ್ರದೇಶ ಗಂಗರ ಆಳ್ವಿಕೆಯ ಪೂರ್ವದಲ್ಲಿ ಬೃಹತ್ಬಾಣರ ಆಳ್ವಿಕೆಗೆ ಒಳಪಟ್ಟಿದ್ದಿತೆಂದು ತೋರುತ್ತದೆ. ಪಲ್ಲವರ ಮಾಂಡಲಿಕರಾಗಿ ನಂದಗಿರಿನಾಥರಾಗಿದ್ದ ಬೃಹತ್ಬಾಣರು ಕದಂಬ ಮಯೂರಶರ್ಮನ ಕಾಲದಲ್ಲಿ ಕದಂಬರ ಮಾಂಡಲಿಕರಾಗಿ ಮಾರ್ಪಟ್ಟರು. ಆಗ ಪಲ್ಲವರು ತಮ್ಮ ನಿಷ್ಠಾವಂತ ಮಾಂಡಲಿಕನೋರ್ವನನ್ನು ಕಳೆದುಕೊಂಡು, ಅವರನ್ನು ನಿಗ್ರಹಿಸಲು ತಮ್ಮ ಇನ್ನೋರ್ವ ನಿಷ್ಠಾವಂತ ಮಾಂಡಲಿಕರಾಗಿದ್ದ ಕೊಂಗುನಾಡಿನ ಅಧಿಪತಿ ಗಂಗರಸ ಕೊಂಗುಣಿವರ್ಮನನ್ನು ಅಧಿಕೃತಗೊಳಿಸಿದುದರ ಪರಿಣಾಮವಾಗಿ ಗಂಗರು ಬಾಣರನ್ನು ಪೆರ್ಬಾಣವಾಡಿ (ಬೃಹದ್ಬಾಣವಾಡಿ) ಯಿಂದ ಉತ್ತರಕ್ಕೆ ಓಡಿಸಿ ಕುವಳಾಲ (ಕೋಲಾರ) ಪುರಾಧೀಶ್ವರರೆಂದು ಹೆಸರುಪಡೆದು ನಂದಗಿರಿನಾಥರೆನಿಸಿಕೊಂಡರು. ಹೀಗೆ ಗಂಗರಸರ ಆಡಳಿತ ಪೆರ್ಬಾಣವಾಡಿ ಪ್ರದೇಶದ ಮೇಲೆ ನೆಲೆಗೊಂಡಾಗ ದಡಿಗಾವಳಿ / ದಡಿಗವಾಡಿ ಎಂದು ಹೆಸರಾಯಿತು. ಗಂಗರ ಕೊಂಗುಣಿವರ್ಮಾನಿಗೆ ದಡಿಗ ಎಂಬ ಹೆಸರಿದ್ದಿತು. ದಡಿಗವಾಡಿ ಪ್ರದೇಶದ ವ್ಯಾಪ್ತಿಯಲ್ಲಿದ್ದ ಬೆಂಗಳೂರು ಜಿಲ್ಲಾ ಪ್ರದೇಶ ಸಹಜವಾಗಿ ಗಂಗರ ಆಳ್ವಿಕೆಗೆ ಒಳಪಟ್ಟಿತು. ಕ್ರಿ. ಶ. 5ನೇ ಶತಮಾನದಿಂದ 10ನೇ ಶತಮಾನದ ಕೊನೆಯವರೆಗೆ ಆಡಳಿತ ನಡೆಸಿದ ಗಂಗರಸರ ಅನೇಕ ಶಾಸನಗಳು ಬೆಂಗಳೂರು ಜಿಲ್ಲಾ ಪ್ರದೇಶದಲ್ಲಿ ಕಾಣಿಸಿಕೊಂಡಿವೆ. ಬೆಂಗಳೂರು ಉತ್ತರ ತಾಲ್ಲೂಕಿನ ದಾಸರಹಳ್ಳಿ, ತೋಟಗೆರೆ, ಬೆಂಗಳೂರು ಪೂರ್ವ ತಾಲ್ಲೂಕು ಮತ್ತು ಅದಕ್ಕೆ ಹೊಂದಿಕೊಂಡಿರುವ ಬೆಂಡಿಗಾನಹಳ್ಳಿ, ಖಾಜಿಹೊಸಹಳ್ಳಿ, ವರ್ತೂರು, ಮೋಡಹಳ್ಳಿ, ಮಾರೇನಹಳ್ಳಿ, ನಾಗೊಂಡಳ್ಳಿ, ಕಂಮಸಂದ್ರ, ಕೃಷ್ಣರಾಜಪುರ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಅಗರ, ಬೇಗೂರು, ಆನೇಕಲ್ ತಾಲ್ಲೂಕಿನ ರಾಜಾಪುರ, ಆನೇಕಲ್, ಜಿಗಣಿ, ಬೊಮ್ಮಂಡಳ್ಳಿ, ಹಳೇಹಳ್ಳಿ, ಮರಸೂರು ಮಡಿವಾಳ ಮೊದಲಾದ ಸ್ಥಳಗಳಲ್ಲಿ ಗಂಗರ ಶಾಸನಗಳಿದ್ದು, ಕೊಂಗಣಿ ಮಹಾರಾಜ, ಶ್ರೀಪುರುಷ, ದುಗ್ಗನೂರ, ಮಾರಸಿಂಹ, ರಾಚಮಲ್ಲ, ಎರೆಯಪುರಸರೇ ಮೊದಲಾದ ಗಂಗರಸರ ಆಳ್ವಿಕೆಗೆ ಸೇರಿದವಾಗಿವೆ.

ಈ ಜಿಲ್ಲೆಯ ಗಂಗರಸರ ಶಾಸನಗಳಲ್ಲಿ ಅವರ ವಿಶಾಲ ಸಾಮ್ರಾಜ್ಯವಾದ 'ಗಂಗವಾಡಿ' ಗಂಗವಾಡಿ ತೊಂಬತ್ತಾರು ಸಾವಿರ, 'ಗಂಗಮಂಡಲಷಣ್ಣವತಿಸಹಸ್ರ' ಎಂಬ ಉಲ್ಲೇಖಗಳು ಬಂದಿವೆ. ಹಾಗೇ ಅವರ ಆರಂಭಕಾಲದ ಮೂಲತಃ ಪೆರ್ಬಾಣವಾಡಿ ಪ್ರದೇಶದ ಭಾಗವಾಗಿದ್ದ ದಡಿಗಾವಳಿಪ್ರದೇಶ ಅಂದರೆ ಗಂಗಜು ಸಾಸಿರ, ಕುಕ್ಕರ ಪಾಜಿಕಾಜೆನಾಡು (ಕುಕ್ಕನರೆನಾಡು), ಕರಿಕನಾಡು ಕುರುಕುನ್ದಾಜ್ಜೆ ಮೂನೂರು, ಮೊರಸುನಾಡು, ಸಣ್ಣೆನಾಡು, ಬೆಂಪೂರ–12 ಮತ್ತು ಮಣ್ಣೆನಾಡುಗಳು ಉಲ್ಲೇಖಗೊಂಡಿವೆ. ಈ ನಾಡುಗಳೆಲ್ಲಾ ದಡಿಗಾವಳಿ

ಪ್ರದೇಶದಲ್ಲಿ ಅಂತರ್ಗತವಾಗಿದ್ದ ಸಂಗತಿ ಹತ್ತನೇ ಶತಮಾನದ ಕೊನೆಯ (ಕ್ರಿ. ಶ. 998) ಅವಧಿಗೆ ಸೇರಿದ ಚೋಳ ರಾಜರಾಜನ ಶಾಸನದಿಂದ ಖಚಿತವಾಗುತ್ತದೆ. ಗಂಗವಾಡಿ ತೊಂಭತ್ತಾರು ಸಾವಿರ ಅಥವಾ ಗಂಗಮಂಡಲ ಷಣ್ಣವತಿ ಸಹಸ್ರ ಎಂಬುದು ಗಂಗರಸರ ಆಳ್ವಿಕೆಯ ಪೂರ್ಣ ಪ್ರದೇಶವನ್ನು ನಿರ್ದೇಶಿಸುತ್ತದೆ. ಪ್ರಸಿದ್ಧ ಬೇಗೂರು ವೀರಗಲ್ಲು ಮತ್ತು ರಾಜಾಪುರ ತಾಮ್ರ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಹಳೇ ಮೈಸೂರು ಸಂಸ್ಥಾನದ ಪೂರ್ಣಭಾಗ ಮತ್ತು ಅದಕ್ಕೆ ಹೊಂದಿಕೊಂಡಿರುವ ಇಂದಿನ ತಮಿಳುನಾಡಿನ ಗಡಿಜಿಲ್ಲೆಗಳು ಗಂಗವಾಡಿ ಪ್ರದೇಶದಲ್ಲಿ ಅಂತರ್ಗತವಾಗಿದ್ದವು.

ಕ್ರಿ. ಶ. ಸು.820ರ ವರ್ತೂರು ಕೆರೆಕೋಡಿ ಶಿಲಾಶಾಸನದಲ್ಲಿ ಗಂಗರು ಸಾಸಿರ (ಗಂಗ–6000) ಪ್ರದೇಶದ ಉಲ್ಲೇಖ ಬಂದಿದೆ. ಈ ವಿಭಾಗದಲ್ಲಿ ಮೊರುಸುನಾಡು, ಕುರುಕುನ್ನಾಳ್ಚಿ–300, ಸಣ್ಣೆನಾಡು ಮತ್ತು ಬೆಂಪೂರು–12 ಪ್ರದೇಶಗಳು ಸಮಾವೇಶಗೊಂಡಿದ್ದವು. ಗಂಗ–6000 ಎಂಬುದು ಕೋಲಾರ ಜಿಲ್ಲೆಯ ಭಾಗಗಳು ಬೆಂಗಳೂರು ಜಿಲ್ಲೆಯ ಈಶಾನ್ಯ ಮತ್ತು ಪೂರ್ವ ಭಾಗಗಳು ಅದಕ್ಕೆ ಹೊಂದಿಕೊಂಡಿರುವ ಇಂದಿನ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಭಾಗಗಳನ್ನು ಒಳಗೊಂಡಿದ್ದರಿಂದ ಗಂಗರ ಆರಂಭಕಾಲದ ಪ್ರಸಿದ್ಧ ಆಡಳಿತ ಘಟಕವಾಗಿತ್ತು. ಈ ಪ್ರದೇಶಕ್ಕಾಗಿ ಗಂಗ, ಬಾಣ ಮತ್ತು ನೊಳಂಬರ ಮಧ್ಯೆ ಅನೇಕ ಕಾಳಗಗಳು ನಡೆದಿರುವುದಕ್ಕೆ ಈ ಪ್ರದೇಶದಲ್ಲಿ ದೊರೆತಿರುವ ವೀರಗಲ್ಲುಗಳು ಸಾಕ್ಷಿಯಾಗಿವೆ.

ಬೆಂಗಳೂರು ಉತ್ತರ ತಾಲ್ಲೂಕಿನ ದಾಸರಹಳ್ಳಿಯ ಕ್ರಿ. ಶ. ಸು. 750ರ ಶಾಸನದಲ್ಲಿ ಕರಿಕನಾಡಿನ ಉಲ್ಲೇಖ ಬಂದಿದ್ದು ಅದರಲ್ಲಿ ಬಿದಿರ್ಕಲ್ಲು ಗ್ರಾಮವಿದ್ದಿತೆಂದು ತಿಳಿಯುತ್ತದೆ. ಇದು ಈಗಿನ ಪೀಣ್ಯದ ಪಶ್ಚಿಮಕ್ಕಿರುವ ದೊಡ್ಡಬಿದರಕಲ್ಲು ಗ್ರಾಮವೇ ಆಗಿದೆ. ಬೆಂಗಳೂರು ನಗರದ ನೈರುತ್ಯ ಮತ್ತು ಉತ್ತರಕ್ಕೆ ಹೊಂದಿಕೊಂಡಂತಿರುವ ದಾಸನಪುರ, ಎಲಹಂಕ, ಯಶವಂತಪುರ, ಪ್ರದೇಶಗಳನ್ನು ಒಳಗೊಂಡಂಥ ಒಂದು ಪ್ರಾಚೀನ ಆಡಳಿತ ಘಟವಾಗಿದ್ದಿತೆಂದು ತೋರುತ್ತದೆ. ಈ ಕರಿಕನಾಡಿನ ಪಶ್ಚಿಮ ಭಾಗದಲ್ಲಿ ಕುಕ್ಕರಪಾಳಿಕಾರೆನಾಡು ಅಥವಾ ಕುಕ್ಕಲನಾಡು ಸಮಾವೇಶಗೊಂಡಿದ್ದಿತು ಅದರ ಪಶ್ಚಿಮಕ್ಕೆ ಮಣ್ಣೆನಾಡು ಇದ್ದಿತು. ಕುಕ್ಕಲನಾಡಿನಲ್ಲಿ ಬಾಣಾವರ, ಐಗಂಡಪುರ, ಸೋಕದೇವನಹಳ್ಳಿ, ವಸಂತನಹಳ್ಳಿ, ಬ್ಯಾಡರಹಳ್ಳಿ, ಹಲಗೇವಡೇರಹಳ್ಳಿ, ರಾಮಸಮುದ್ರ, ತಿಪ್ಪೂರುನಗರ, ಕಿತ್ತನೆಲ್ಲೆ, ಚಟ್ಟನಕುಂಟೆ–ಬಯಿರವ್ವೆಹಳ್ಳಿಗಳು ಸೇರಿದ್ದವು. ಒಟ್ಟಾರೆ ಬೆಂಗಳೂರು ನಗರದ ಪಶ್ಚಿಮ ಪ್ರದೇಶಗಳು ಸೇರಿದಂತೆ ರಾಮನಗರ, ಮಾಗಡಿ ತಾಲ್ಲೂಕಿನ ಪೂರ್ವಭಾಗದ ಹಲವಾರು ಗ್ರಾಮಗಳು, ನೆಲಮಂಗಲ ತಾಲ್ಲೂಕಿನ ಕೆಲವು ಗ್ರಾಮಗಳು ಒಳಗೊಂಡಂತೆ ಕೊರಕಲುಗಳಿಂದ ಕೂಡಿದ ಅರ್ಕಾವತಿಯ ಇಕ್ಕೆಲೆಗಳ ಪ್ರದೇಶವು ಅಂದರೆ ಬೆಂಗಳೂರು ದಕ್ಷಿಣ, ಉತ್ತರ ಮಾಗಡಿ ಮತ್ತು ನೆಲಮಂಗಲ ತಾಲ್ಲೂಕುಗಳ ಗ್ರಾಮಗಳನ್ನು ಒಳಗೊಂಡಂಥ ಅರ್ಕಾವತೀ ಕಣಿವೆಯ ಕೊರಕಲುಗಳಿಂದ ಕೂಡಿದ ಒಂದು ವಿಶಿಷ್ಟ ಭೌಗೋಳಿಕ ಆಡಳಿತ ಘಟಕವಾಗಿ ಇದು ರೂಪುಗೊಂಡಿತ್ತು.

ಕ್ರಿ. ಶ. ಸು. 800ರ ಖಾಜಿ ಹೊಸಹಳ್ಳಿ ಶಾಸನದಲ್ಲಿ ಕೋಟೆ ಕುನ್ನಾಳ್ಳೆ ಮೂನೂರು ಎಂಬ ಉಲ್ಲೇಖ ಬಂದಿದೆ. ಕ್ರಿ.ಶ. 998ರ ಕಂದುಸಂದ್ರದ ಶಾಸನದಲ್ಲಿ ದಳಿಗವಾಡಿಯ ಕುಜುಕ್ಷನ್ದಟ್ಟಿ ಎಂಬ ಉಲ್ಲೇಖ ಕಂಡುಬರುತ್ತದೆ. ಕ್ರಿ. ಶ. 1029ರ ಚೋಳರ ಕಾಲದ ಸೋಲದೇವನಹಳ್ಳಿಯ ಶಾಸನದಲ್ಲಿ ಕುಜುಕ್ಷನ್ದಟ್ಟಿ ನಾಡು ಎಂಬ ಉಲ್ಲೇಖ ಬಂದಿದೆ. ಹೊಸಕೋಟೆ, ಬೆಂಗಳೂರು ಉತ್ತರ ಮತ್ತು ದೇವನಹಳ್ಳಿ ತಾಲ್ಲೂಕುಗಳ ಹಲವು ಗ್ರಾಮಗಳನ್ನು ಒಳಗೊಂಡಂತೆ ತೀರ ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಒಂದು ಆಡಳಿತ ಘಟಕ ಇದಾಗಿದ್ದಿತೆಂದು ತೋರುತ್ತದೆ. ಮುಂದೆ ಇದೇ ಪ್ರದೇಶದಲ್ಲಿ ಸಣ್ಣೆನಾಡು ಎಂಬುದು ಕಾಣಿಸಿಕೊಳ್ಳುವುದು ಗಮನಾರ್ಹ ಸಂಗತಿಯಾಗಿದೆ.

'ಕುಱು' ಎಂಬುದಕ್ಕೆ ಗುರುತಿಸು, ಗಮನಿಸು, ಉದ್ದೇಶಿಸು, ಗುರುತು, ಚಿಹ್ನೆ ಎಂಬರ್ಥಗಳಿವೆ. 'ಕುಂದ' ಎಂಬುದಕ್ಕೆ ಬೆಟ್ಟ, ಗುಡ್ಡ, ಎಂಬರ್ಥಗಳಿವೆ. 'ಅಳಿಕೆ/ಅಚ್ಚೆ/ಅಟ್ಟೆ' ಎಂಬುದಕ್ಕೆ ಅಳಸಿಹೋದ, ನಾಶವಾಗಿಹೋದ ಎಂಬರ್ಥಗಳನ್ನು ನೀಡಬಹುದೆಂದು ತೋರುತ್ತದೆ. ಭೌಗೋಳಿಕವಾಗಿ ಬೆಂಗಳೂರು ನಗರ ಜಿಲ್ಲೆಯ ಪೂರ್ವಭಾಗಗಳು ತೀವ್ರ ಶಿಥಿಲೀಕರಣಕ್ಕೆ ಈಡಾಗುವ ಮೇಲ್ಮೈಯನ್ನು ಪಡೆದಿರುವ ಕಾರಣ ಹಿಂದೆ ಇದ್ದ ಗುಡ್ಡಗಳು ಶಿಥಿಲೀಕರಣಕ್ಕೆ ಈಡಾಗಿ ನಶಿಸಿ ಹೋಗಿರುವುದರ ಕುರುಹು ಅಥವಾ ಗುರುತಾಗಿ 'ಕುರುಕುಂದಳ್ಚಿ' ಎಂದು ಕರೆದಿರಬಹುದು. ಮುಂದೆ ಅದೇ ಪ್ರದೇಶವನ್ನು ಶಾಸನಗಳಲ್ಲಿ ಸಣ್ಣೆನಾಡೆಂದು ಕರೆದಿರುವುದು ಕಂಡುಬರುತ್ತದೆ.

ಸಣ್ಣೆನಾಡು ಅಥವಾ ಸಟ್ನೆ – 300: ಕ್ರಿ. ಶ. 900ರ ರಾಷ್ಟ್ರಕೂಟರ ಅರದೇಶನಹಳ್ಳಿಯ ಶಾಸನದಲ್ಲಿ ಮೊದಲಿಗೆ ಉಲ್ಲೇಖಗೊಂಡಿದೆ. ಬ್ಯಾಡರಹಳ್ಳಿ, ಗಂಗವಾರ, ಪಟ್ಟಂದೂರು, ಆವತಿ ಮತ್ತು ಕಾರಹಳ್ಳಿ ಗ್ರಾಮಗಳ ಶಾಸನಗಳಲ್ಲಿ ಈ ನಾಡಿನ ಉಲ್ಲೇಖ ಬಂದಿದೆ. ಈ ನಾಡಿನ ದಕ್ಷಿಣಕ್ಕೆ ತೊರೆವಳಿನಾಡಿದ್ದಿತೆಂದು ಪಟ್ಟಂದೂರು ಶಾಸನದಿಂದ ತಿಳಿದುಬರುತ್ತದೆ. ಹಾಗಾಗಿ ಪಟ್ಟಂದೂರಿನ ಉತ್ತರಕ್ಕೆ ಬೆಂಗಳೂರು ಉತ್ತರ ತಾಲ್ಲೂಕಿನ ಹಾಗೂ ದೇವನಹಳ್ಳಿ ತಾಲ್ಲೂಕಿನ ಹಲವು ಗ್ರಾಮಗಳನ್ನು ಒಳಗೊಂಡಂತೆ ಸಣ್ಣೆನಾಡು ರೂಪುಗೊಂಡಿದ್ದಿತೆಂದು ಶಾಸನಗಳಿಂದ ಮನಗಾಣಬಹುದು. ಸೋಲದೇವನಹಳ್ಳಿ, ಗಂಗವಾರ, ಬ್ಯಾಡರಹಳ್ಳಿ, ಆವತಿ ಗ್ರಾಮಗಳು ಈ ನಾಡಿನ ಗ್ರಾಮಗಳಾಗಿದ್ದವು. ಈ ನಾಡಿನ ಉತ್ತರಕ್ಕೆ ಕೊಡವತ್ತಿಯ ಕುಳ್ಳೈಮಾಂಪಳ್ಳ ನಂದಿಸಮುದ್ರ ಎಂಬ ಸ್ಥಳಗಳಿದ್ದ ಬಗ್ಗೆ ಶಾಸನವೊಂದು ಬೆಳಕು ಚೆಲ್ಲುತ್ತದೆ.

ಮೊರಸುನಾಡಿನ ಉಲ್ಲೇಖ: ಈ ಜಿಲ್ಲೆಯ ಪೂರ್ವ ತಾಲ್ಲೂಕಿನ ವರ್ತೂರು ಕೆರೆಕೋಡಿಯ ಕ್ರಿ. ಶ. 820ರ ಶಾಸನದಲ್ಲಿ ಬಂದಿದೆ. ಇದು ಗಂಗ ಅಱುಸಾವಿರ ಪ್ರದೇಶದ ಪರ್ಯಾಯವೆಂದು ಕೆಲವರು ಅದರ ಒಂದು ಭಾಗವೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಇತಿಹಾಸ ಕಾಲದುದ್ದಕ್ಕೂ ಈ ಪ್ರದೇಶವನ್ನು ತಮ್ಮ ತಮ್ಮ ಆಳ್ವಿಕೆಗೆ ಒಳಪಡಿಸಿಕೊಳ್ಳಲು ಗಂಗ, ಬಾಣ ಹಾಗೂ ನೊಳಂಬರ ಮಧ್ಯೆ ಅನೇಕ ಕಾಳೆಗಗಳು ನಡೆದಿರುವುದನ್ನು ಈ ಪ್ರದೇಶದಲ್ಲಿ ದೊರೆತಿರುವ ಆಯಾ ರಾಜವಂಶೀಯರ ಶಾಸನಗಳಿಂದ ಮನಗಾಣಬಹುದಾಗಿದೆ. ಈ ಪ್ರದೇಶ ಪದೇ ಪದೇ ತಮ್ಮ ವಶತಪ್ಪಿ ಬೇರೆಯವರ ವಶವಾಗುತ್ತಿದ್ದ ಕಾರಣ ಈ ಪ್ರದೇಶಕ್ಕೆ ಮೊರಸು ನಾಡೆಂದು ಹೆಸರು ಬಂದಿರಬೇಕು. ಮೊರಸು ಎಂಬುದಕ್ಕೆ ಕೈತಪ್ಪು, ನುಣಿಚಿಕೊಳ್ಳು ಎಂಬರ್ಥಗಳು ಇದ್ದಂತಿದೆ. ಮೆರೂರು ಕುಂದಾಣಿ, ಎರೆಯ ಪಮಂಗಲಗಳು ಈ ನಾಡಿನ ಶಾಸನೋಕ್ತ ಗ್ರಾಮಗಳು ಆನೇಕಲ್ಲು ತಾಲ್ಲೂಕಿನ ಹಳೇಹಳ್ಳಿ ಗ್ರಾಮದ ಶಾಸನದಲ್ಲಿ ಈ ನಾಡನ್ನು 'ಮುರುಕುನಾಡು' ಎಂದು ಕರೆದಿದೆ. ಬೆಂಗಳೂರು ದಕ್ಷಿಣ ಪೂರ್ವ ತಾಲ್ಲೂಕಿನ ಕೆಲವು ಗ್ರಾಮಗಳು, ಹೊಸಕೋಟೆ, ಆನೇಕಲ್ಲು ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಹೊಸೂರು, ಡೆಂಕಣಿಕೋಟೆ ತಾಲ್ಲೂಕು ಪ್ರದೇಶ ಈ ನಾಡಿನಲ್ಲಿ ಅಂತರ್ಗತವಾಗಿದ್ದಿತು.

ಬೆಂಪೂರು–12: ಪ್ರಸಿದ್ಧ ಬೇಗೂರು ವೀರಗಲ್ಲು ಶಾಸನದಲ್ಲಿ ಉಲ್ಲೇಖಗೊಂಡಿದೆ. ಇದು ಗಂಗವಾಡಿ ಪ್ರಾಂತ್ಯದ ಮೊರಸು ನಾಡಿನಲ್ಲಿ ಅಂತರ್ಗತವಾಗಿದ್ದ 12 ಗ್ರಾಮಗಳನ್ನು ಒಳಗೊಂಡಿದ್ದಂಥ ಒಂದು ಸಣ್ಣ ಆಡಳಿತ ಘಟಕ. ಈ ಆಡಳಿತ ಘಟಕದಲ್ಲಿ ಬೆಂಪೂರು (ಬೇಗೂರು), ತೊವಗೂರು (ತೋಗೂರು), ಪೂವಿನ ಪುಲ್ಲಿಮಂಗಲ (ಹುಲಿಮಂಗಲ), ಇಗ್ಗಲೂರು, ಕೂಡಲ್, ಸಾರಮು (ಸಾರಕ್ಕೆ?), ಎಟ್ಟುಣ್ಪೆ (ಎಳ್ಳುಕುಂಟೆ), ಪರವೂರು (ಹರಳೂರು), ಕೊವರುಂಗುಂದ (ಕೋರಮಂಗಲ?), ಡುಗ್ಮನೆಲ್ಮಲ್ಲಿ (ಗುಳಕಮಲ್ಲಿ), ಗಳಂಜವಾಗಿಲು (ಸೀನಿವಾಗಿಲು) ಎಂಬ ಹನ್ನೆರಡೂ ಗ್ರಾಮಗಳ ಹೆಸರುಗಳು ಈ ವೀರಗಲ್ಲು ಶಾಸನದಲ್ಲಿ ಉಲ್ಲೇಖಗೊಂಡಿರುವುದು ಗಮನಾರ್ಹ ಸಂಗತಿಯಾಗಿದೆ. ಮುಂದಿನ ಶತಮಾನಗಳಲ್ಲಿ ಈ ಪ್ರದೇಶವನ್ನು ವೆಪ್ಪೂರುನಾಡು ಎಂದು

ಕರೆಯಲಾಗಿದೆ. ಬೆಂಗಳೂರು ನಗರದ ಆಗ್ನೇಯ ಭಾಗವು ಸೇರಿದಂತೆ ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ತಾಲ್ಲೂಕಿನ ಮೇಲೆ ಉಲ್ಲೇಖಿತ ಗ್ರಾಮಗಳನ್ನು ಒಳಗೊಂಡಂತೆ ರೂಪುಗೊಂಡಿದ್ದ ನಾಡಾಗಿದ್ದಿತು. ಇದು ಗಂಗರ ಕಾಲದಲ್ಲಿ ನಾಗತ್ತರನೆಂಬ ಸಾಮಂತನ ನೆಲೆವೀಡಾಗಿದ್ದಿತು. ಬೆಂಗಳೂರಿನ ವಾಯವ್ಯ ಗಡಿಪ್ರದೇಶವು ಕಾಡನೂರು–70, ಅದರಲ್ಲಿ ಹೆಜ್ಜಾಜಿ–12, ಇದ್ದಿತೆಂದು ಶಾಸನವೊಂದರಿಂದ ತಿಳಿಯುತ್ತದೆ.

ಕರ್ನಾಟಕ ಚಕ್ರವರ್ತಿಗಳಾಗಿದ್ದ ಬಾದಾಮಿಯ ಚಾಲುಕ್ಯರು (540–753) ಮತ್ತು ಮಳಖೇಡದ ರಾಷ್ಟ್ರಕೂಟ (753–973)ರ ಜೊತೆ ಸ್ನೇಹದಿಂದಿದ್ದ ಗಂಗರಸರು ತಮ್ಮ ಗಂಗವಾಡಿ ರಾಜ್ಯವನ್ನು ಪಲ್ಲವರು ಮತ್ತು ಚೋಳರ ಆಕ್ರಮಣಗಳಿಂದ ರಕ್ಷಿಸಿದ್ದರು. ರಾಷ್ಟ್ರಕೂಟರ ಪರವಾಗಿ ತಕ್ಕೋಳದಲ್ಲಿ ಚೋಳರ ವಿರುದ್ಧ ಹೋರಾಡಿ ರಾಷ್ಟ್ರಕೂಟರ ದೃಢ ಆಡಳಿತ ತೊಂಡೆಮಂಡಲದ ಮೇಲೆ ಹಲವಾರು ವರ್ಷ ನೆಲೆನಿಲ್ಲುವಂತೆ ಅವರು ಮಾಡಿದ್ದರು. ಆದರೆ ಮುಂದೆ ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಮರಣದ ನಂತರ ಗಂಗರು ದುರ್ಬಲರಾದರು. ಅದೇ ಕಾಲಕ್ಕೆ ಗಂಗವಾಡಿ ಪ್ರದೇಶದ ಮೇಲೆ ದಕ್ಷಿಣದಿಂದ ಚೋಳರ ಆಕ್ರಮಣಗಳು ನಡೆದು 10ನೆಯ ಶತಮಾನದ ಕೊನೆಯವೇಳೆಗೆ ಗಂಗರಾಜ್ಯ ನಾಮಾವಶೇಷವಾಯಿತು. ಮುಂದೆ ಚೋಳರ ಆಡಳಿತ ಆರಂಭಕಾಲದಲ್ಲಿ ಮುಡಿಗೊಂಡ ಚೋಳಮಂಡಲ ಎಂಬ ವಿಶಾಲವಾದ ಆಡಳಿತ ವಿಭಾಗ ರೂಪುಗೊಂಡಿದ್ದಿತು. ಆ ಮಂಡಲದಲ್ಲಿ ಕರಿಕಾಲ ಚೋಳವಳನಾಡು, ಕ್ಷತ್ರಿಯ ಶಿಖಾಮಣಿ ಒಳನಾಡು, ರಾಜರಾಜ ಚೋಳ ಒಳನಾಡುಗಳು ಅಂತರ್ಗತವಾಗಿದ್ದವು. ಅದೇ ಮುಂದೆ ರಾಜೇಂದ್ರ ಚೋಳ ವಳನಾಡೆಂದು ಪ್ರಸಿದ್ಧವಾಯಿತು. ರಾಜೇಂದ್ರ ಚೋಳ ವಳನಾಡಿನಲ್ಲಿ ಮುರುಶುನಾಡು, ಸಿಸಲನಾಡು, ಇಲ್ಯೆಪಾಕ್ಕನಾಡು, ಕಿಲ್ಯೆನಾಡುಗಳು ಸಮಾವೇಶಗೊಂಡಿದ್ದ ಬಗ್ಗೆ ಶಾಸನಗಳು ಆಧಾರ ಒದಗಿಸುತ್ತವೆ. ಒಟ್ಟಾರೆ ಬೆಂಗಳೂರು ಜಿಲ್ಲೆಯ ದಕ್ಷಿಣ ಮತ್ತು ಪಶ್ಚಿಮಭಾಗಗಳು ಚೋಳರ ಆಳ್ವಿಕೆಯ ಆರಂಭ ಕಾಲದಲ್ಲಿ ಅವರು ರೂಪಿಸಿದ್ದ ಮುಡಿಗೊಂಡ ಚೋಳ ಮಂಡಲದಲ್ಲಿ ಸಮಾವೇಶಗೊಡಿದ್ದವು.

ಕ್ರಿ ಶ 1046ರ ನಾಗವಾರ, 1067ರ ಬ್ಯಾಡರಹಳ್ಳಿ ಸೋಲದೇವನಹಳ್ಳಿಯ 1027ರ ಶಾಸನಗಳಲ್ಲಿ ವಿಕ್ರಮಚೋಳ ಮಂಡಲದ ಉಲ್ಲೇಖ ಬಂದಿದೆ. ಈ ವಿಕ್ರಮ ಚೋಳಮಂಡಲದಲ್ಲಿ ಸಣ್ಣೆನಾಡು, ಕುಕ್ಕನೂರು (ಕುಕ್ಕಲ) ನಾಡು, ಮಣ್ಣೆನಾಡುಗಳು ಅಂತರ್ಗತವಾಗಿದ್ದವು. ಅಂದರೆ ಇಂದಿನ ಬೆಂಗಳೂರು ಜಿಲ್ಲೆಯ ಪಶ್ಚಿಮ, ವಾಯವ್ಯ ಮತ್ತು ಈಶಾನ್ಯ ಭಾಗಗಳು ವಿಕ್ರಮಚೋಳ ಮಂಡಲದಲ್ಲಿ ಸಮಾವೇಶಗೊಂಡಿದ್ದವು. ಸ್ಥೂಲವಾಗಿ ಬೆಂಗಳೂರಿನ ಪೂರ್ವ ಮತ್ತು ಉತ್ತರ ಭಾಗಗಳು ಈ ವಿಕ್ರಮ ಚೋಳಮಂಡಲದ ವ್ಯಾಪ್ತಿಯಲ್ಲಿ ಇದ್ದವು. ಗಂಗವಾಡಿಯ ಭಾಗವಾಗಿದ್ದ ದಡಿಗಾವಳಿಯನ್ನೇ ಚೋಳರ ಕಾಲದ ಶಾಸನಗಳಲ್ಲಿ ವಿಕ್ರಮಚೋಳ ಮಂಡಲವೆಂದು ಕರೆಯಲಾಗಿದೆ. 'ದಡಿಗಾವಳಿಯಾದ ವಿಕ್ರಮಚೋಳಮಂಡಲ', 'ವಿಕ್ರಮಚೋಳಮಂಡಲವೆಂಬ ತಡಿಗೈವಳಿ' ಎಂಬ ಶಾಸನೋಲ್ಲೇಖ ಗಳಿಂದ ಇದನ್ನು ಮನಗಾಣಬಹುದಾಗಿದೆ. ಮುಂದೆ ಮುಡಿಗೊಂಡಚೋಳಮಂಡಲ ಹಾಗೂ ವಿಕ್ರಮ ಚೋಳ ಮಂಡಲಗಳಲ್ಲಿನ ಅನೇಕ ನಾಡುಗಳು ನಿಗರಿಲಿ ಚೋಳಮಂಡಲದಲ್ಲಿ ಸಮಾವೇಶಗೊಂಡಿರುವುದನ್ನು ಶಾಸನಗಳು ದೃಢೀಕರಿಸುತ್ತವೆ. ರಾಜೇಂದ್ರ ಚೋಳ ವಳನಾಡು ಈ ಮಂಡಲದ ಭಾಗವಾಗಿದ್ದಿತು. ಅಲ್ಲದೆ ಸಣ್ಣೈನಾಡು, ಕುರುವಂಜಿನಾಡು, ಪುಲ್ಲಿಯೂರ್‌ನಾಡು, ಮಾಶಂದಿನಾಡು, ಇಲ್ಯೆಪಾಕ್ಕನಾಡು (ಎಲಹಕ್ಕನಾಡು), ವೆಪ್ಪೂರುನಾಡು (ಬೇಗೂರು ನಾಡು)ಗಳು ಈ ಮಂಡಲದ ಭಾಗಗಳಾಗಿದ್ದವೆಂದು ತಿಳಿದುಬರುತ್ತದೆ. ಹಾಗಾಗಿ ಸ್ಥೂಲವಾಗಿ ಇಂದಿನ ಬೆಂಗಳೂರಿನ ಉತ್ತರ ಮತ್ತು ಪೂರ್ವ ಭಾಗದ ಪ್ರದೇಶಗಳು ನಿಗರಿಲಿ ಚೋಳಮಂಡಲದಲ್ಲಿ ಅಂತರ್ಗತವಾಗಿದ್ದವು. ಕರ್ನಾಟಕದ ಮಲೆನಾಡಿನಲ್ಲಿ ತಲೆಯೆತ್ತಿದ್ದ ಹೊಯ್ಸಳರು, ಗಂಗರ ಪ್ರಾಚೀನ ರಾಜಧಾನಿ ತಲಕಾಡನ್ನು ವಶಪಡಿಸಿಕೊಳ್ಳುವುದರ ಮೂಲಕ ಚೋಳರನ್ನು ಈ ಪ್ರದೇಶದಿಂದ ಹಿಮ್ಮೆಟ್ಟಿಸಿದರು. ಆಗ ಬೆಂಗಳೂರು ಪ್ರದೇಶವೂ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತು. ಕ್ರಿ ಶ. 1110ರ ಬೇಗೂರಿನ ಶಾಸನ ಹೊಯ್ಸಳ ವಿಷ್ಣುವರ್ಧನನ

ಅಧಿಕಾರಿಯೊಬ್ಬನು ವೆಪ್ಪೂರು (ಬೇಗೂರು) ಕೆರೆಯ ಪರಿಸರದ ಭೂಮಿಯನ್ನು ನಾಗೇಶ್ವರ ದೇವಾಲಯಕ್ಕೆ ದಾನ ನೀಡಿರುವುದನ್ನು ದಾಖಲಿಸುತ್ತದೆ. ಚಿಕ್ಕಬಾಣಾವರ, ಚಿಕ್ಕಜಾಲ, ಬನ್ನೇರುಘಟ್ಟ, ತಾವರೆಕೆರೆ, ದೊಮ್ಮಲೂರು, ಹೂಡಿ, ಗಾಣಿಗರಹಳ್ಳಿ, ಅಲ್ಲಾಳಸಂದ್ರ, ನಾರಾಯಣಘಟ್ಟ, ಸೊಂಡೆಕೊಪ್ಪ, ಬೇಚಿರಾಕ್ ಬೇಲೂರು, ಯಂಬ್ರಹಳ್ಳಿ, ನಾಗಟ, ಗುಂಜೂರು, ದೊಡ್ಡನೆಕ್ಕುಂದಿ, ಕೆಂಪಾಪುರ, ವಿಭೂತಿಪುರ, ಗಾಣಾಳುಕೊಪ್ಪ, ಕಲ್ಲುಕೆರೆ, ಇಂಮಡಹಳ್ಳಿ, ಮೊದಲಾದ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯ ಹೊಯ್ಸಳರ ಶಾಸನಗಳು ಲಭ್ಯವಾಗಿವೆ. ಅವರ ಆಳ್ವಿಕೆಯ ಕಾಲದಲ್ಲಿ ಮೊರಸುನಾಡು, ವೆಪ್ಪೂರುನಾಡು, ಕುಕ್ಕಲನಾಡು, ಸಣ್ಣೆನಾಡು, ಹೆಯರೆನಾಡು, ಎಲಹಕ್ಕನಾಡು, ಕಿಳಲೆನಾಡು, ಕುರು ಕುಂಜಿನಾಡು–ಪುಲ್ಲಿಯುರುನಾಡು, ತೊರೆವಳಿನಾಡು, ಪೆರಿಯನಾಡು, ಮಾಶಂದಿನಾಡು, ಸಾವಿತೆಯನಾಡು ಹೊಮ್ಮಳಿಗೆನಾಡು, ಮೊದಲಾದ ನಾಡುಗಳು ಶಾಸನೋಕ್ತವಾಗಿವೆ. ಇವುಗಳಲ್ಲಿ ಹಲವು ಗಂಗರಸರ ಕಾಲದಲ್ಲೇ ಇದ್ದ ನಾಡುಗಳಾಗಿದ್ದವು. ಅಲ್ಲದೆ ಚೋಳರ ಕಾಲದಲ್ಲಿ ರೂಪುಗೊಂಡು ಹೊಯ್ಸಳರ ಕಾಲದಲ್ಲಿ ಮುಂದುವರೆದವುಗಳನ್ನು ಗುರುತಿಸಬಹುದಾಗಿದೆ.

ವೆಪ್ಪೂರುನಾಡು ಎಂಬುದು ಗಂಗರಸರ ಕಾಲದ ಬೆಂಪೂರು 12ರ ಪರ್ಯಾಯ. ಮಾಶಂದಿ ಮತ್ತು ತುರುವಳಿ (ತೊರೆವಳಿ) ನಾಡುಗಳು–ಅದಕ್ಕೆ ಸೇರಿದ್ದ ಕುರುಕುಂಜಿನಾಡು ಎಂಬ ಪುಲ್ಲಿಯೂರುನಾಡು ಗಮನಾರ್ಹವಾದುದಾಗಿವೆ.

ಚೋಳರ ಕಾಲದಲ್ಲಿ ಪ್ರಸಿದ್ಧವಾಗಿದ್ದ ಮಾಶಂದಿನಾಡು ಪ್ರದೇಶದಲ್ಲಿ ಬೆಂಗಳೂರಿನ ಎನ್. ಎ. ಎಲ್. ಆವರಣದಲ್ಲಿದ್ದ ಬೇಚಿರಾಕ್ ಬೇಲೂರು, ವಿಭೂತಿಪುರ, ಸರ್ಜಾಪುರ, ಮಾಲೂರು ತಾಲ್ಲೂಕಿನ ದಕ್ಷಿಣ ಭಾಗಗಳು ಹಾಗೂ ಕೃಷ್ಣಗಿರಿ ಜಿಲ್ಲೆಯ ಹೊಸೂರು ತಾಲ್ಲೂಕಿನ ಬಾಗಲೂರು, ಬೇರಿಕೆ ಮೊದಲಾದ ಪ್ರದೇಶಗಳು ಸಮಾವೇಶಗೊಂಡಿದ್ದ ಬಗ್ಗೆ ಶಾಸನಗಳು ಆಧಾರ ಒದಗಿಸುತ್ತವೆ. ಎಮರೆನಾಡು, ಕುಂಜಿನಾಡು–ಪುಲ್ಲಿಯೂರು ನಾಡುಗಳು ಇದರಲ್ಲಿ ಅಂತರ್ಗತವಾಗಿದ್ದವು. ಇದು ಬೆಂಗಳೂರು ನಗರದ ಪೂರ್ವ ಗಡಿಯಿಂದ ಪೂರ್ವದ ಕೋಲಾರ, ಮತ್ತು ಕೃಷ್ಣಗಿರಿ ಜಿಲ್ಲೆಗಳಿಗೆ ಸೇರಿದ ಬೆಂಗಳೂರು ಪೂರ್ವ, ಮಾಲೂರು, ಹೊಸೂರು ತಾಲ್ಲೂಕು ಪ್ರದೇಶಗಳಿಗೆ ಸೇರಿದ ಹಲವಾರು ಪ್ರದೇಶಗಳನ್ನು ಒಳಗೊಂಡಂತೆ ಅಸ್ತಿತ್ವದಲ್ಲಿದ್ದ ಒಂದು ವಿಸ್ತಾರವಾದ ಭೂಪ್ರದೇಶದ ವ್ಯಾಪ್ತಿಯನ್ನು ಹೊಂದಿದ್ದಿತು. ಇದು ಒಂದು ಆಡಳಿತ ಘಟಕ ಎನ್ನುವುದಕ್ಕಿಂತ ಹೆಚ್ಚಾಗಿ, ಒಂದು ವಿಶಿಷ್ಟ ಭೂಪ್ರದೇಶದ ಸೂಚಕವಿದ್ದಂತೆ ತೋರುತ್ತದೆ. ಇದು ಮುಖ್ಯವಾಗಿ ದಕ್ಷಿಣ ಪಿನಾಕಿನಿನದಿಗೆ ನೀರೊದಗಿಸುವ ಪಶ್ಚಿಮದಿಂದ ಪೂರ್ವಕ್ಕೆ ಚಾಚಿಕೊಂಡಿರುವ ಹತ್ತಾರು ಕೆರೆಗಳ ಸರಮಾಲೆಯಿದ್ದಂತೆ ಭಾಸವಾಗುತ್ತದೆ. ಈ ಮಾಶಂದಿನಾಡಿನ ಮಧ್ಯಪ್ರದೇಶದಲ್ಲಿ ಉತ್ತರದಿಂದ ದಕ್ಷಿಣಕ್ಕೆ ವ್ಯಾಪಿಸಿದ್ದ ತುರೈವಳಿ ಅಥವಾ ತೊರವಳಿನಾಡು ತನ್ನ ಅಸ್ಥಿತ್ವವನ್ನು ಪಡೆದುಕೊಂಡಿದ್ದಿತು. ಈ ನಾಡನ್ನು ಉಲ್ಲೇಖಿಸುವ ಶಾಸನಗಳು ಬೆಂಗಳೂರು ಪೂರ್ವ ತಾಲ್ಲೂಕಿನ ಇಮ್ಮಡಿಹಳ್ಳಿ, ಸಾದರಮಂಗಲ, ಹೂಡಿ. ಪಟ್ಟಂದೂರು, ಕಾಡುಗೋಡಿ, ಹೊಸಕೋಟೆ ತಾಲ್ಲೂಕಿನ ಸತ್ಯವಾರ, ಮುಗಬಾಳ ಮೊದಲಾದ ಸ್ಥಳಗಳಲ್ಲಿವೆ. ಈ ನಾಡಿನಲ್ಲಿ ಪಮ್ಮೆಸಂದ್ರ, ಪಮ್ಮೆಕಿರೈ, ನಾಗವುಂಡನಹಳ್ಳಿ, ಚಿಕ್ಕ ಹೂಡಿ ಮೊದಲಾದ ಗ್ರಾಮಗಳು ಅಂತರ್ಗತವಾಗಿದ್ದವು. ಇದು ಮುಖ್ಯವಾಗಿ ದಕ್ಷಿಣ ಪಿನಾಕಿನಿಗೆ ನಿರೊದಗಿಸುವ ಕಣಿವೆ ಪ್ರದೇಶವಾಗಿದ್ದು, ತೊರೆವಳಿ ಅಂದರೆ ತೊರೆಯದಾರಿ ಆಗಿದ್ದಿತೆಂದು ಅರ್ಥೈಸಬಹುದಾಗಿದೆ? ಈ ತೆರೆವಳಿ ನಾಡಿನ ಉತ್ತರಕ್ಕೆ ಸಣ್ಣೆನಾಡು ಇದೆಯೆಂದು ಕ್ರಿ. ಶ. 1343ರ ಪಟ್ಟಂದೂರು ಶಾಸನ ಉಲ್ಲೇಖಿಸುತ್ತದೆ.

ಹೊಯ್ಸಳರ ಶಾಸನಗಳಲ್ಲಿ ಕಂಡುಬರುವ ಕುರುಕುಂಜಿನಾಡು ಎಂಬುದು ಪ್ರಾಯಶಃ ಇಂದಿನ ವರ್ತೂರು ಸಮೀಪದಲ್ಲಿರುವ ಗುಂಜೂರನ್ನು ಕೇಂದ್ರವನ್ನಾಗಿ ಪಡೆದಿದ್ದ ನಾಡಾಗಿದ್ದಿತೆಂದು ತೋರುತ್ತದೆ. ಆದರೆ ಮುಂದೆ ಕ್ರಿ. ಶ. 1297ರ ನಂತರದ ಅನೇಕ ಶಾಸನಗಳಲ್ಲಿ ನಿಗಿರಿಲಿ ಚೋಳಮಂಡಲದ ಈರುಕ್ಕುಂಜಿನಾಡಾದ ಪುಲ್ಲಿಯೂರು

ನಾಡು ಎಂದು ಹೊಸಕೋಟೆ ತಾಲ್ಲೂಕಿನ ಅನೇಕ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಮುಖ್ಯವಾಗಿ ವಾಗಟ, ಮುಗಬಾಳ, ನಿಡುಗಟ್ಟ, ಚಿಕ್ಕನಲ್ಲೂರು, ಸತ್ಯವಾರ, ಜೋಡಿದಾಸರಹಳ್ಳಿ, ದೇವಸೆಟ್ಟಿಹಳ್ಳಿ, ಪರಮನಹಳ್ಳಿ, ತಾವರೆಕೆರೆ, ಚಿಕ್ಕನಲ್ಲಾಳ, ಚೋಳಪ್ಪನಹಳ್ಳಿ, ಸತ್ಯವಾರ, ಹಸಿಗಾಳ ಗ್ರಾಮಗಳಲ್ಲಿನ ಹೊಯ್ಸಳರ ಶಾಸನಗಳಲ್ಲಿ ಈ ಪುಲ್ಲಿಯೂರು ನಾಡಿನ ಉಲ್ಲೇಖ ಕಂಡುಬರುತ್ತದೆ. ಇಲ್ಲಿ ಉಲ್ಲೇಖಗೊಂಡಿರುವ ಪುಲ್ಲಿಯೂರು ಎಂಬುದು ಹೊಸಕೋಟೆ ತಾಲ್ಲೂಕಿನ ಹುಲ್ಲೂರು ಗ್ರಾಮವೇ ಆಗಿದ್ದು, ವಿಜಯನಗರ ಕಾಲದ ಹುಲ್ಲೂರು ನಾಡಿನ ಹಿಂದಿನ ರೂಪವೇ ಆಗಿದೆ. ಅಂದರೆ ಪ್ರಸ್ತುತ ಬೆಂಗಳೂರು ನಗರ ಜಿಲ್ಲೆಯ ಪೂರ್ವದ ಗಡಿಪ್ರದೇಶ ಪುಲ್ಲಿಯೂರು ನಾಡಿನ ಭಾಗವಾಗಿದ್ದಿತೆಂದು ಹೇಳಬಹುದಾಗಿದೆ. ಪ್ರಧಾನವಾಗಿ ಹೊಸಕೋಟೆ ತಾಲ್ಲೂಕಿನ ಕೇಂದ್ರ ಭಾಗದ ಪ್ರದೇಶಗಳು ಹುಲ್ಲೂರು ನಾಡಿನಲ್ಲಿ ಅಂತರ್ಗತವಾಗಿದ್ದವು.

ಕ್ರಿ. ಶ. 1330ರ ಇಗ್ಗಲೂರು, 1297ರ ಬನ್ನೇರುಘಟ್ಟದ ಶಾಸನಗಳಲ್ಲಿ ಪೆರಿಯನಾಡಿನ ಉಲ್ಲೇಖ ಬಂದಿದೆ. ಇದು ಪೊನ್ನಣಿನ ನಾಡಿನ ಒಂದು ಉಪವಿಭಾಗವಾಗಿದ್ದ ಬಗ್ಗೆ ಶಾಸನವೊಂದರಿಂದ ತಿಳಿಯುತ್ತದೆ. ಪೊನ್ನಣಿಗನಾಡು ಎಂಬುದು ಹೊಮ್ಮಳಿಗೆನಾಡಿನ ಪೂರ್ವರೂಪವಾಗಿದೆ. ಬನ್ನೇರುಘಟ್ಟದ ಸುತ್ತಮುತ್ತಲ ಪ್ರದೇಶ ಈ ಪೆರಿಯನಾಡಿನ ವ್ಯಾಪ್ತಿಯಲ್ಲಿ ಬರುತ್ತಿತ್ತೆಂದು ತೋರುತ್ತದೆ. ಪೆರಿಯನಾಡು ಅಥವಾ ಹಿರಿಯನಾಡು ಎಂಬುವು ಬೇರೆ ಬೇರೆ ಜಿಲ್ಲಾ ಪ್ರದೇಶಗಳಲ್ಲೂ ಕಂಡುಬಂದಿದ್ದು, ಸಾಮಾನ್ಯವಾಗಿ ಅಂತಹ ನಾಡುಗಳ ಮೇಲೆ ರಾಜಕುಮಾರರನ್ನು ಆಡಳಿತದ ತರಬೇತಿಗಾಗಿ ನೇಮಿಸುತ್ತಿದ್ದರೆಂದು ಭಾವಿಸಲಾಗಿದೆ.

ಬೆಂಗಳೂರಿನ ದಕ್ಷಿಣಕ್ಕಿರುವ ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟ ಹೊಮ್ಮಳಿಗೆನಾಡಿನ ಕೇಂದ್ರ ಸ್ಥಳವಾಗಿದ್ದಿತು. ಬನ್ನೇರುಘಟ್ಟ ಮತ್ತು ಹೊಮ್ಮಳಿಗೆನಾಡು ಎಂಬ ಸ್ಥಳ ಮತ್ತು ನಾಡಿನ ಹೆಸರುಗಳೆರಡೂ ಹೊನ್ನಿಗೆ (ಚಿನ್ನಕ್ಕೆ) ಸಂಬಂಧಿಸಿವೆ. ಪೂನ್ ಎರಡಪಟ್ಟು ಎಂಬುದು ಬನ್ನೇರುಘಟ್ಟದ ಮೂಲ. ಪೊನ್ ಎಂದರೆ ಚಿನ್ನ, ಎರೆಪಟ್ಟು ಎಂದರೆ ಮೂಲಸ್ಥಾನ. ಅಂದರೆ ಇಂದಿನ ಬನ್ನೇರುಘಟ್ಟದ ಪಶ್ಚಿಮಕ್ಕೆ ಇರುವ 'ಸುವರ್ಣಮುಖಿ' ಸ್ಥಳವನ್ನು ಒಳಗೊಂಡಂತೆ ಈ ಪ್ರದೇಶವನ್ನು ಹೆಸರಿಸುತ್ತಿದ್ದರೆಂದು ತೋರುತ್ತದೆ. ಪೊನ್ನೆರೆಪಟ್ಟೆ ಕಾಲಾಂತರದಲ್ಲಿ ಬನ್ನೇರು ಗಟ್ಟವಾಗಿ ರೂಪಾಂತರವಾಗಿರುವ ಸಾಧ್ಯತೆಗಳಿವೆ. ಹಾಗೇ ಹೊಮ್ಮಳಿಗೆನಾಡಿನ ಕೇಂದ್ರಸ್ಥಳ. ಬನ್ನೇರುಘಟ್ಟ ಎಂಬುದು ಸರಿಯಷ್ಟೆ. ಹೊಮ್ಮಳಿಗೆನಾಡನ್ನು ಪೊನ್‌ಮಣಿಗ ನಾಡೆಂದು ಕರೆದಿರುವುದಕ್ಕೆ ಶಾಸನಾಧಾರವಿದೆ. ಹೊನ್+ಅಳಿಕೆ ಎಂಬುದೇ ಹೊನ್ನಳಿಕೆ ಹೊಮ್ಮಳಿಗೆ ಆಗಿರಬೇಕು. ಅಳಿಕೆ ಎಂದರೆ ವ್ಯವಸಾಯಕ್ಕೆ ಒಳಪಡದ ಗುಡ್ಡಗಾಡು ಎಂಬರ್ಥವಿದೆ. ಚಿನ್ನದೊರೆಯುತ್ತಿದ್ದ ಸಣ್ಣಪುಟ್ಟ ಗುಡ್ಡಗಳಿಂದ ಕೂಡಿದ ಪ್ರದೇಶವೇ ಹೊಮ್ಮಳಿಗೆನಾಡು ಆಗಿದ್ದಿತೆಂದು ಹೇಳಬಹುದಾಗಿದೆ. ಈ ಪ್ರದೇಶದಲ್ಲಿ ಆರಂಭದಲ್ಲಿ ಮೇಲ್ಪಡದ ಚಿನ್ನದ ಕಣಗಳು ಇಲ್ಲಿನ ಗುಡ್ಡಗಳಲ್ಲಿ ಇದ್ದಿತೆಂದು ತೋರುತ್ತದೆ. ಮಳೆ, ಗಾಳಿ, ಬಿಸಿಲಿಗೆ, ಸಿಲುಕಿ ಈ ಸುವರ್ಣಮುಖಿಯ ಬಳಿ ಸಂಗ್ರಹವಾಗುತ್ತಿತ್ತೆಂದು ತೋರುತ್ತದೆ.

ಅದನ್ನು ಜಲಗಾರರು ಬೇರ್ಪಡಿಸುತ್ತಿದ್ದರೆಂದು ತೋರುತ್ತದೆ. ಈಗ ಈ ನಾಡಿನಲ್ಲಿ ಚಿನ್ನದೊರೆಯದಿದ್ದರು, ಪ್ರಾಚೀನ ಕಾಲದಲ್ಲಿ ಇದು ಚಿನ್ನಕ್ಕೆ ಹೆಸರಾಗಿ ಹೊಮ್ಮಳಿಗೆನಾಡು ಎನಿಸಿಕೊಂಡಿತ್ತೆಂದು ಹೇಳಬಹುದಾಗಿದೆ. ಬೆಂಗಳೂರು ದಕ್ಷಿಣ ತಾಲ್ಲೂಕಿನ ದಕ್ಷಿಣ ಭಾಗ, ಆನೇಕಲ್ ತಾಲ್ಲೂಕಿನ ಪಶ್ಚಿಮ ಭಾಗ ಬಹುಮಟ್ಟಿಗೆ ಗುಡ್ಡಗಾಡು ಮತ್ತು ಕುರುಚಲು ಕಾಡಿನಿಂದ ಕೂಡಿರುವ ಪ್ರದೇಶ ಈ ಹೊನ್ನಳಿಗೆ ನಾಡಿನ ವ್ಯಾಪ್ತಿಯಲ್ಲಿ ಇದ್ದಿತೆಂದು ಹೇಳಬಹುದಾಗಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ದೊಡ್ಡ ಕನ್ನೆಲ್ಲಿ ಗ್ರಾಮದ ಕ್ರಿ. ಶ. 1346ರ ಶಾಸನವೊಂದರಲ್ಲಿ ಇರುಂಬರಿಯೂರು (ಇಬ್ಬಲೂರು) ಮತ್ತು ಉದ್ಯೆಯನ ಪಳ್ಳಿಗಳು ವೆಯ್ಯೂರಾನಾದೀನ ಗ್ರಾಮಗಳೆಂದು ಉಲ್ಲೇಖಿತವಾಗಿವೆ. ಇಲ್ಲಿನ ವೆಯ್ಯೂರು ಎಂಬುದು ವೆಪ್ಪೂರಿನ ಪರ್ಯಾಯವೆಂದೇ ತೋರುತ್ತದೆ. ಏಕೆಂದರೆ ಇಬ್ಬಲೂರು ವೆಪ್ಪೂರುನಾಡಿನ ಭಾಗವಾಗಿದ್ದಿತು. ವೆಪ್ಪೂರುನಾಡು ಎಂಬುದು ಗಂಗರ ಕಾಲದ ಬೆಂಪೂರು-12ರ ಪರ್ಯಾಯ ಪ್ರದೇಶವಾಗಿದ್ದಿತು.

ಆನೇಕಲ್ ತಾಲ್ಲೂಕಿನ ಗೆರಟಿಗನಬೆಲೆಯ ಕ್ರಿ. ಶ. 1325ರ ಶಾಸನದಲ್ಲಿ 'ಸಾವಿತೆಯನಾಡಿದು' ಉಲ್ಲೇಖವಾಗಿದ್ದು, ಅದರಲ್ಲಿ ಗೆರಟಿಗನ ಬೆಲೆಗ್ರಾಮವು ಸಮಾವೇಶಗೊಂಡಿದ್ದಿತೆಂದು ತಿಳಿಯುತ್ತಾರೆ. ಅಂದರೆ ಆನೇಕಲ್ ತಾಲ್ಲೂಕಿನ ಆಗ್ನೇಯ ಭಾಗ ಹಾಗೂ ಅದಕ್ಕೆ ಹೊಂದಿಕೊಂಡಿರುವ ತಮಿಳುನಾಡಿನ ಡೆಂಕಣಿಕೋಟೆ ತಾಲ್ಲೂಕಿನ ವಾಯವ್ಯ ಭಾಗವು ಸಾವಿತೆಯ ನಾಡಿನಲ್ಲಿ ಇದ್ದವೆಂದು ಹೇಳಬಹುದಾಗಿದೆ. ಇದು ಮೊರಸುನಾಡಿನ ಒಂದು ಉಪವಿಭಾಗವಾಗಿದ್ದಿತು.

ಸುಮಾರು ಕ್ರಿ. ಶ. 1200ರ ಶಾಸನದಲ್ಲಿ 'ಇಲೈಪಾಕ್ಕನಾಟ್ಟು' ಎಂಬ ನಾಡಿನ ಉಲ್ಲೇಖ ಕಂಡುಬರುತ್ತದೆ. ಅದು ರಾಜರಾಜಚೋಳ ವಳನಾಡಿನ ಭಾಗವಾಗಿದ್ದಿತು. ದೇಶಿಯಮಾಣಿಕ್ಕ ಪಟ್ಟಣವೆಂದು ಹಿಂದೆ ಹೆಸರಾಗಿದ್ದ ದೊಮ್ಮಲೂರು ಈ ನಾಡಿನ ಸ್ಥಳವಾಗಿದ್ದಿತು. 'ಇಲೈಪಾಕ್ಕ' ಎಂಬುದು 'ಎಲಹಕ್ಕ' ಅಥವಾ ಇಂದಿನ ಯಲಹಂಕದ ತಮಿಳೀಕರಣಗೊಂಡ ರೂಪ. ಮಧ್ಯಕಾಲೀನ ಬೆಂಗಳೂರು ಜಿಲ್ಲೆಯ ಇತಿಹಾಸದಲ್ಲಿ ಎಲಹಂಕನಾಡು ಪ್ರಖ್ಯಾತವಾಗಿದ್ದಿತು. ಈ ಪ್ರಸಿದ್ಧನಾಡಿನಲ್ಲಿ ಇಂದಿನ ಬೆಂಗಳೂರು ನಗರವೂ ಸೇರಿದಂತೆ ಬೆಂಗಳೂರು ಉತ್ತರ, ಪೂರ್ವ, ದಕ್ಷಿಣ ತಾಲ್ಲೂಕುಗಳ ಪ್ರದೇಶಗಳು ಪೂರ್ಣವಾಗಿ ಸಮಾವೇಶಗೊಂಡಿದ್ದವು. ಪ್ರಾಚೀನ ಕಾಲದ ಕರಿಕನಾಡನ್ನು ಕೇಂದ್ರವಾಗಿಟ್ಟುಕೊಂಡು ಕುಕ್ಕಱಪಾಟಿಕ್ಕಾರಿನಾಡು (ಕುಕ್ಕರಪಾಳಿಕಾರಿನಾಡು) ಕುಕ್ಕನೂರುನಾಡು, ತೊರೆವಳಿನಾಡು, ಬೆಂಪೂರುನಾಡು ಹಾಗೂ ಮಾಶಂದಿನಾಡಿನ ಬಹುಭಾಗಗಳನ್ನು ಒಳಗೊಂಡಂತೆ 'ಎಲಹಂಕನಾಡು' ಚೋಳರ ಆಳ್ವಿಕೆಯ ಕಾಲದಲ್ಲೇ ರೂಪುಗೊಂಡಿತ್ತೆಂದು ಹೇಳಬಹುದು. ಶಾಸನಗಳಲ್ಲಿ 'ಎಲಹಂಕ' ಎಲವಕ ಮುಂತಾದ ಪ್ರಯೋಗಗಳಿರುವುದರಿಂದ ಎಲವ+ಹಕ್ಕ ಎಂಬ ಪದಗಳು ಕೂಡಿ ಎಲವಹಕ್ಕ ಎಂದಾಗಿರಬೇಕು. ಅದು ಮುಂದೆ ಎಲವ್ಹಕ್ಕ-ಎಲಹ್ವಕ್ಕ-ಎಲವ್ಹಂಕ-ಎಲಹಂಕ-ಯಲಹಂಕ ಎಂದು ರೂಪಾಂತರ ಗೊಂಡಿರಬೇಕು. 'ಎಲವ' ಎಂದರೆ ಬೂರುಗದ ಮರ (ಶಾಲ್ಮಲೀವೃಕ್ಷ), 'ಹಕ್ಕ' ಎಂಬ ಪದವು ಪಕ್ಕ ಎಂಬ ಅರ್ಥದಲ್ಲಿ ಬಳಕೆಯಾಗಿರಬೇಕು. (ವಂಕ ಎಂಬುದು ಪಕ್ಕ, ಭಾಗ ಎಂಬ ಅರ್ಥದಲ್ಲಿ ಪಂಪಭಾರತ, ಸಿದ್ಧರಾಮ ಪುರಾಣ, ಸಾನಂದ ಚರಿತ್ರೆ, ಕುಮಾರವ್ಯಾಸ ಭಾರತ ಮುಂತಾದ ಕೃತಿಗಳಲ್ಲಿ ಪ್ರಯೋಗವಾಗಿದೆ. ಕ್ರಿ. ಶ. 1044ರ ಗಂಗವಾರದ ಶಾಸನದಲ್ಲಿ 'ಇಲೈಪಾಕ್ಕ'ದ ಪ್ರಾಚೀನ ಉಲ್ಲೇಖವಿದ್ದು, ಚೋಳವೇಳಾನ್ ಎಂಬುವ ಚೋಳರ ಅಧಿಕಾರಿ ಆ ಸ್ಥಳದಲ್ಲಿದ್ದನೆಂದು ತಿಳಿಯುತ್ತದೆ. ಹಾಗಾಗಿ ಅದಕ್ಕೂ ಮೊದಲೇ ಅಂದರೆ ಗಂಗರ ಆಳ್ವಿಕೆಯ ಕಾಲದಲ್ಲೇ 'ಎಲಹಕ್ಕು' ಸ್ಥಳವು ಇದ್ದಿತೆನ್ನಬಹುದು. ಆನಂತರದಲ್ಲಿ ಎಲಹಕ್ಕವು ಒಂದು ನಾಡಿನ ಕೇಂದ್ರಸ್ಥಳವಾಗಿದ್ದಂತೆಯೇ ಹೊಯ್ಸಳ ಮಾಂಡಲಿಕರ ನೆಲೆವೀಡಾಗಿದ್ದಿತು. ಹೊಯ್ಸಳ ನರಸಿಂಹನ ಕಾಲದಲ್ಲಿ ಅವನ ಮಹಾಮಂಡಳೇಶ್ವರನಾದ ದೇಚಿದೇವರಸನು ಎಲಹಕ್ಕದ ನೆಲೆವೀಡಿನೊಳು ಸುಖಸಂಕಥಾವಿನೋದದಿಂದ ರಾಜ್ಯಪಾಲನೆ ಮಾಡುತ್ತಿದ್ದ ಬಗ್ಗೆ ತಿಳಿಯುತ್ತದೆ. ಕ್ರಿ. ಶ. 1301ರ ಹೊಯ್ಸಳರ ಹಲವು ಶಾಸನಗಳಲ್ಲಿ ಎಲಹಕ್ಕನಾಡು ಹೆಸರ್‌ಕುಂದಾಣಿರಾಜ್ಯದ ನಾಡುಗಳಲ್ಲಿ ಒಂದಾಗಿದ್ದಿತೆಂದು ಉಲ್ಲೇಖಗೊಂಡಿದೆ. ಹೆಸರ್ ಕುಂದಾಣಿ ರಾಜ್ಯದಲ್ಲಿ ವಿರವಿನಾಡು, ಮಾಶಂದಿನಾಡು, ಮುರುಶುನಾಡು, ಶೊಕ್ಕನಾಯನ್‌ಪಟ್ರು, ಪೆಂಣೆಯಂಡಾರ್ ಮಡನಾಡು, ಐಂಬುಳುಗೂರುನಾಡು, ಎಲವೂರ್‌ನಾಡು, ಕುವಳಾಲನಾಡು ಮತ್ತು ಕೈವಾರನಾಡುಗಳೇ ಮೊದಲಾದವು ಸೇರ್ಪಡೆಯಾಗಿದ್ದವು. ಇಂದಿನ ಕೃಷ್ಣಗಿರಿ ಜಿಲ್ಲೆಯ

ದೇವರ ಕುಂದಣಿ ಗ್ರಾಮವೇ ಶಾಸನೋಕ್ತ ಹೆಸರ್‌ಕುಂದಾಣಿ ಆಗಿದೆ. ಇದು ಹೊಯ್ಸಳ ರಾಮನಾಥನ ರಾಜಧಾನಿಗಳಲ್ಲಿ ಒಂದೆಂದು ಪ್ರಸಿದ್ಧವಿದ್ದಿತು. ಹೊಯ್ಸಳರ ಆಡಳಿತ ಈ ಜಿಲ್ಲಾಪ್ರದೇಶದ ಮೇಲೆ ಕ್ರಿ. ಶ. ಸು. 1340ರವರೆಗೂ ನಡೆಯಿತು.

ಅನಂತರ ಆರಂಭಗೊಂಡ ವಿಜಯನಗರದ ಕರ್ನಾಟಕಾಧೀಶರ ಆಳ್ವಿಕೆಯಲ್ಲಿ ಹೊಯ್ಸಳರ ಕಾಲದಲ್ಲೇ ರೂಪುಗೊಂಡಿದ್ದ ಎಲಹಂಕನಾಡು ಹೆಚ್ಚು ಪ್ರಸಿದ್ಧವಾಗಿದ್ದಿತು. ಆ ನಾಡಿನ ಅಧಿಪತಿಗಳಾಗಿ ಎಲಹಂಕನಾಡ ಪ್ರಭುಗಳೆಂದು ಖ್ಯಾತರಾದ ಕೆಂಪೇಗೌಡರ ವಂಶೀಯರು ಬೆಂಗಳೂರು ಅದಕ್ಕೆ ಹೊಂದಿಕೊಂಡಂಥ ಮಾಗಡಿ, ಕುಣಿಗಲ್, ಪ್ರದೇಶಗಳ ಮೇಲೆ ಆಳ್ವಿಕೆ ನಡೆಸಿದರು.

ಬೆಂಗಳೂರು ನಗರ ಜಿಲ್ಲೆಯ ಪೂರ್ವದ ಗಡಿ ಪ್ರದೇಶಗಳನ್ನು ಒಳಗೊಂಡಂತೆ ಆನೇಕಲ್ ತಾಲ್ಲೂಕು ಅದಕ್ಕೆ ಹೊಂದಿಕೊಂಡಂತಿರುವ ಇಂದಿನ ಕೃಷ್ಣಗಿರಿ ಜಿಲ್ಲೆಯ ಡೆಂಕಣಿ ಕೋಟೆ ತಾಲ್ಲೂಕಿನ ಗುಮ್ಮಳಾಪುರವೂ ಸೇರಿದಂತೆ ಹೊಸೂರು ತಾಲ್ಲೂಕಿನ ಪಶ್ಚಿಮ ಭಾಗಗಳು ಹಾಗೂ ಕೋಲಾರ ಜಿಲ್ಲೆಯ ಮಾಲೂರು ಮೊದಲಾದ ಪ್ರದೇಶಗಳನ್ನೊಳಗೊಂಡಂತೆ ಸುಗುಟೂರು ಅರಸರು ವಿಜಯನಗರದ ವಿಧೇಯ ಅಮರನಾಯಕರಾಗಿ ಆಡಳಿತ ನಡೆಸಿದರು. ಇವರ ಆಳ್ವಿಕೆಯ ಕಾಲದಲ್ಲಿ ಮುಳುವಾಯಿ ರಾಜ್ಯದ ಭಾಗವಾಗಿ ಬೆಂಗಳೂರು ದಕ್ಷಿಣ, ಪೂರ್ವ ಹಾಗೂ ಆನೇಕಲ್ ತಾಲ್ಲೂಕು ಪ್ರದೇಶಗಳು ಸಮಾವೇಶಗೊಂಡಿದ್ದವು. ಬೇಹೂರುನಾಡು, ತೊರೆವಳಿನಾಡು, ಎಲಹಂಕನಾಡುಗಳು ಆ ರಾಜ್ಯದ ಭಾಗವಾಗಿದ್ದವು. ಸಾರಕ್ಕಿ, ಬೇಹೂರು, ಹುಸುಕೂರು, ಬೇಲೂರು, ಬೆಟ್ಟದಹಳ್ಳಿ, ವಾಗಟ ಮುಂತಾದವು ಶಾಸನೋಕ್ತವಾಗಿವೆ. ದಕ್ಷಿಣದಲ್ಲಿ ಅರುಳಹಾಳರಾಜ್ಯ, ಪಶ್ಚಿಮದಲ್ಲಿ ಚನ್ನಪಟ್ಟಣ ರಾಜ್ಯಗಳು ಹೊಯ್ಸಳದೇಶ/ರಾಜ್ಯದ ಭಾಗವಾಗಿ ಅಸ್ತಿತ್ವವನ್ನು ಪಡೆದಿದ್ದವು. ಚನ್ನಪಟ್ಟಣ ರಾಜ್ಯದಲ್ಲಿ ಕಳಲೆನಾಡು, ಹೊಮ್ಮಳಿಗೆ ನಾಡುಗಳು ಅಂತರ್ಗತವಾಗಿದ್ದವು. ಪೆನುಗೊಂಡೆ ರಾಜ್ಯದಲ್ಲಿ ನೆಲಮಂಗಲ ತಾಲ್ಲೂಕಿನ ಪ್ರದೇಶ ಅಂದರೆ ಭಿನ್ನಮಂಗಲ ಸೇರಿದ್ದಿತು. ಅಂದರೆ ಬೆಂಗಳೂರು ನಗರ ಜಿಲ್ಲೆಯ ಆಚೆಗಿನ ಕೋಲಾರ ಜಿಲ್ಲೆಯ ಭಾಗಗಳು, ತುಮಕೂರು ಜಿಲ್ಲೆಯ ಭಾಗಗಳು ಪೆನುಗೊಂಡೆ ರಾಜ್ಯದಲ್ಲಿ ಅಂತರ್ಗತವಾಗಿದ್ದವು. ತ್ಯಾಮಗೊಂಡ್ಲು, ಗಂಡನಹಳ್ಳಿ, ವಿಶ್ವನಾಥಪುರ, ಜಖನಹಳ್ಳಿ, ಹರಿವೇಸಂದ್ರ, ಕೋಡಿಹಳ್ಳಿ, ತಿಲ್ಲಘಟ್ಟ, ಬಿಲನಕೋಟೆ, ದೇವರಹೊಸಹಳ್ಳಿ ಮೊದಲಾದ ಸ್ಥಳಗಳು ಈ ರಾಜ್ಯಕ್ಕೆ ಸೇರಿದ್ದ ಸ್ಥಳಗಳೆಂದು ಶಾಸನಗಳಿಂದ ತಿಳಿದುಬರುತ್ತದೆ.

ವಿಜಯನಗರ ಅರಸರ ಕಾಲದ ಶಾಸನಗಳಲ್ಲಿ ಕಂಡುಬರುವ ನಾಡುಗಳೆಂದರೆ: ಎಲಹಕ್ಕನಾಡು, ಸಣ್ಣೆನಾಡು, ತೊರೆವಳಿನಾಡು, ಸಾವಿತೆಯನಾಡು, ಅಂಜುಡುನಾಡು, ವೆಪ್ಪೂರನಾಡು/ಬೇಹೂರನಾಡು, ಹೊಮ್ಮಳಿಗೆನಾಡು, ಮಾಶಂದಿನಾಡು, ಹುಲ್ಲೂರುನಾಡು, ಕುಕ್ಕಲನಾಡು, ಹಿರಿಸುನಾಡು, ಎರುಮರೈನಾಡು/ ಹಿಂಮರೆನಾಡು, ಮೊರಸುನಾಡು, ಹುಲುಕಡಿನಾಡು ಮುಂತಾದವು. ಇವುಗಳಲ್ಲಿ ಅನೇಕವು ಗಂಗ, ಚೋಳ, ಹೊಯ್ಸಳರ ಕಾಲದಿಂದಲೂ ಅಸ್ಥಿತ್ವವನ್ನು ಪಡೆದಿದ್ದವು.

ಕ್ರಿ. ಶ. 1353ರ ವಡಿಗೆಹಳ್ಳಿ ಶಾಸನದಲ್ಲಿ ಆ ಗ್ರಾಮವು ಅಂಜುಡ ನಾಡಿನಲ್ಲಿದ್ದಿತೆಂದು ಉಲ್ಲೇಖಿಸುತ್ತದೆ.

ಕ್ರಿ ಶ 1408ರ ಮಂಕಸಂದ್ರ ಗ್ರಾಮದ ಶಾಸನವು 'ಅಂಜುಡುನಾಡ ಹೊಳಗಣ ಮಂಗಸಂದ್ರ' ಎಂದು ಉಲ್ಲೇಖಿಸುತ್ತದೆ. ಬೆಂಗಳೂರು ನಗರ ಜಿಲ್ಲೆಯ ಉತ್ತರಕ್ಕೆ ದೇವನಹಳ್ಳಿ ತಾಲ್ಲೂಕಿಗೆ ಹೊಂದಿಕೊಂಡಿರುವ ಪ್ರದೇಶ ಈ ಅಂಜುಡುನಾಡಿನಲ್ಲಿ ಸೇರ್ಪಡೆಯಾಗಿದ್ದಿತೆಂದು ಭಾವಿಸಬಹುದು. ಕ್ರಿ. ಶ. 1380ರ ಜೋಡಿ ಲಕ್ಕೊಂಡಹಳ್ಳಿ ಶಾಸನದಲ್ಲಿ ಹುಲ್ಲೂರು ನಾಡಿನ ಉಲ್ಲೇಖ ಬಂದಿದೆ. ಇದು ವಿಜಯನಗರ ಪೂರ್ವದಲ್ಲಿ ಪುಲ್ಲಿಯೂರು ನಾಡು ಎಂದು ಪ್ರಸಿದ್ಧವಾಗಿದ್ದಿತು. ಆನೇಕಲ್ ತಾಲ್ಲೂಕು ಮೂರುಸಂದ್ರ ಗ್ರಾಮದ ಶಾಸನವೊಂದರಲ್ಲಿ

ಹಿರಸುನಾಡ ಸೋಮಗೊಂಡನ ಹಳ್ಳಿ ಎಂಬ ಉಲ್ಲೇಖ ಬಂದಿದೆ. ಸೋಮಗೊಂಡನಹಳ್ಳಿ ಯಾವುದೆಂಬುದು ತಿಳಿದಿಲ್ಲ. ಈ ಹಿರಸುನಾಡೆಂಬುದು ಮೊರಸುನಾಡಿನ ಅಪಲಿಖಿತವೆ? ಪರ್ಯಾಯವೇ? ಎಂಬುದು ಖಚಿತವಾಗಿ ತಿಳಿದುಬಂದಿಲ್ಲ. ಹುಲುಕಡಿನಾಡು ಬೆಂಗಳೂರಿನ ಉತ್ತರಕ್ಕೆ ಕೋಡಿಹಳ್ಳಿ ಹೋಬಳಿ ಕಾಡನೂರಿನ ಶಾಸನದಲ್ಲಿ ಉಲ್ಲೇಖಗೊಂಡಿದೆ. ಆ ನಾಡಿನಲ್ಲಿ 'ಹಣಬೆಯ ಸೀಮೆಯೊಳಗಣ ಕಾಡನೂರು' ಇದ್ದಿತು.

ಕ್ರಿ. ಶ. ಸು. 1400ರ ಅನಂತರದ ವಿಜಯನಗರ ಅರಸರ ಶಾಸನಗಳಲ್ಲಿ ಬಹುಮಟ್ಟಿಗೆ ವಿಜಯನಗರ ಕಾಲದಲ್ಲೇ 'ನಾಡು'ಗಳಿಗೆ ಪರ್ಯಾಯವಾಗಿ 'ಸೀಮೆ'ಗಳು ಸ್ಥಾನ ಪಡೆದವು. ಅವುಗಳಲ್ಲಿ ಶಿವನಸಮುದ್ರ ಸೀಮೆ. ಹುಲ್ಲೂರು ಸೀಮೆ, ಹಣಬೆಯ ಸೀಮೆ, ಹೊಸಕೋಟೆ ಸೀಮೆ, ಸಾರಕಿಯ ಸೀಮೆ, ನೆಲವಂಗಲ ಸೀಮೆ ಮುಂತಾದವು ಶಾಸನೋಕ್ತವಾಗಿವೆ.

ಪ್ರತಿಯೊಂದು ಸೀಮೆಯಲ್ಲೂ ಅನೇಕ ಸ್ಥಳಗಳು ಅಂತರ್ಗತವಾಗಿರುತ್ತಿದ್ದವು. ಪ್ರತಿ ಸ್ಥಳದಲ್ಲೂ ಅನೇಕ ಗ್ರಾಮಗಳಿರುತ್ತಿದ್ದವು. ವಿಜಯನಗರ ಕಾಲದ ಆಳ್ವಿಕೆಯಲ್ಲಿ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ, ಹಲಸೂರು ಸ್ಥಳ, ಕೊಳಲ ಸ್ಥಳ, ನೆಲವಂಗಲ ಸ್ಥಳ, ಬೆಂಗಳೂರು ಸ್ಥಳ, ಬೇವೂರು ಸ್ಥಳ, ಶಿವನಸಮುದ್ರ ಸ್ಥಳ, ಸೊಂಡೆಕೊಪ್ಪ ಸ್ಥಳ, ಬಾಣವಾಡಿ ಸ್ಥಳ, ರಾಮಹಳ್ಳಿ ಸ್ಥಳ ಮುಂತಾದವು ಶಾಸನೋಕ್ತವಾಗಿವೆ.

ಕ್ರಿ. ಶ. 1638ರಲ್ಲಿ ವಿಜಾಪುರದ ಸೇನಾನಿ ರಣದುಲ್ಲಾಖಾನನ ಆಕ್ರಮಣ ಬೆಂಗಳೂರು, ಹೊಸಕೋಟೆ ಮೊದಲಾದ ಪ್ರದೇಶಗಳ ಮೇಲೆ ನಡೆಯಿತು. ಆಗ ಆ ಸ್ಥಳಗಳು ಮರಾಠರ ಷಹಜಿಗೆ ಜಾಗೀರಾಗಿ ಹೋದವು. ಆ ಸಂದರ್ಭದಲ್ಲಿ ಎಲಹಂಕನಾಡ ಪ್ರಭುಗಳಾದ ಕೆಂಪೇಗೌಡನ ವಂಶೀಯರು ಬೆಂಗಳೂರನ್ನು ಬಿಟ್ಟು ಮಾಗಡಿ ಸೀಮೆಗೆ ಹೋಗಿ ನೆಲೆಸುವಂತಾಯಿತು. ಹಾಗೇ ಸುಗುಟೂರು ಪ್ರಭುಗಳು ಹೊಸಕೋಟೆಯನ್ನು ಬಿಟ್ಟು ಬೆಂಗಳೂರಿನ ದಕ್ಷಿಣಕ್ಕಿದ್ದ ಆನೆಮಲೆ – ಹುಲಿಕಲ್ಲು ಪ್ರದೇಶದಲ್ಲಿ ಆನೇಕಲ್ಲು ಪಟ್ಟಣವನ್ನು ಕಟ್ಟಿ ಅಲ್ಲಿಗೆ ಹೋಗಿ ನೆಲೆಸಿದರು. ಕ್ರಿ. ಶ. 1638ರಲ್ಲಿ ಬೆಂಗಳೂರು ಪ್ರದೇಶದ ಮೇಲೆ ಆರಂಭವಾದ ಷಹಜಿಯ ಆಡಳಿತ ಕ್ರಿ. ಶ. 1675ರ ವರೆಗೂ ನಡೆಯಿತು. ಷಹಜಿಯ ಮಗ ಏಕೋಜಿ ತಮಿಳುನಾಡಿನ ತಂಜಾವೂರನ್ನು ಆಕ್ರಮಿಸಿಕೊಂಡನು. ಆಗ ಆನೇಕಲ್, ಹೊಸಕೋಟೆ ಪ್ರದೇಶಗಳನ್ನು ಸುಗುಟೂರು ಪ್ರಭುಗಳಿಗೆ ಕಪ್ಪಕಾಣಿಕೆ ಮತ್ತು ಸೈನಿಕ ನೆರವುಗಳ ಬಗ್ಗೆ ಕರಾರು ಮಾಡಿಕೊಂಡು ಹಿಂತಿರುಗಿಸಿದ್ದನು.

ಮೊಗಲರ ಸೇನೆ 1687ರಲ್ಲಿ ಸಿರಾ, ಬೆಂಗಳೂರುಗಳನ್ನು ಗೆದ್ದಿತು. ಮರಾಠರ ವೈರಿಯಾಗಿದ್ದ ಮೈಸೂರು ಅರಸ ಚಿಕ್ಕದೇವರಾಯನು ಬೆಂಗಳೂರನ್ನು ಗುತ್ತಿಗೆಗೆ (ಇಜಾರಾ) ಪಡೆದುಕೊಂಡನು. ಚಿಕ್ಕದೇವರಾಯ (1673–1704) ಬೆಂಗಳೂರಿನ ಆಡಳಿತವನ್ನು ನಿರ್ವಹಿಸಿದ ಮೊದಲ ಮೈಸೂರು ಅರಸು. ಈತನು ಹನ್ನೆರಡು ಹೋಬಳಿಗಳನ್ನು ಒಳಗೊಂಡ ಬೆಂಗಳೂರು ಪ್ರದೇಶವನ್ನು ನೋಡಿಕೊಳ್ಳಲು ದಳವಾಯಿ ದೊಡ್ಡಯ್ಯನನ್ನು ನೇಮಿಸಿದ್ದನು.

ಆ ಹೋಬಳಿಗಳೆಂದರೆ ಕಸಬಹಳೇ ಬೆಂಗಳೂರು, ವರ್ತೂರು, ಎಲಹಂಕ, ಬೇವೂರು, ಹಲಸೂರು, ಕೆಂಗೇರಿ, ತಲಘಟ್ಟಪುರ, ಜಿಗಣಿ, ಕುಂಬಳಗೋಡು, ಕನ್ನೆಲ್ಲಿ, ಬಾಣಾವರ ಮತ್ತು ಹೆಸರು ಘಟ್ಟ ಮುಂತಾದ ವಿವರಗಳು Historical Memoir of Bangalore ಎಂಬ ಬಖೈರಿನಲ್ಲಿ ದಾಖಲಾಗಿವೆ.

ಆಧಾರ ಸೂಚಿ

1. Epigraphia Carnatica Vol. IX, Bangalore, 1905; Annual Reports of Mysore Archaeological Department Mysore, Gazetteer Vol.IV, and Bangalore District Gazetteer respectively edited by L. Rice, Hayavadana Rao and Suryanath U. Kamath.
2. ಕರ್ನಾಟಕ ವಿಷಯ ವಿಶ್ವ ಕೋಶ, ಮೈಸೂರು 2005.
3. ಬೆಂಗಳೂರು ದರ್ಶನ (2 ಸಂಪುಟಗಳು) ಸಂ. ಡಾ. ಸೂರ್ಯನಾಥ ಕಾಮತ್ ಮತ್ತು ಎಂ. ಎಚ್. ಕೃಷ್ಣಯ್ಯ, ಉದಯಭಾನು ಕಲಾಸಂಘ, ಬೆಂಗಳೂರು, 2005.
4. ಬೆಂಗಳೂರು ಬಖೈರುಗಳು., ಸಂ. ಎಂ. ಜಿ. ಮಂಜುನಾಥ, ಬೆಂಗಳೂರು.
5. ಡಾ. ಸಿ. ವಿ. ಕೃಷ್ಣಮೂರ್ತಿ, ಬೆಂಗಳೂರು ಜಿಲ್ಲೆಯ ಪ್ರಾಚೀನ ಪ್ರಾದೇಶಿಕ ವಿಭಾಗಗಳು, ಇತಿಹಾಸ ದರ್ಶನ ಸಂಪುಟ–1, ಬೆಂಗಳೂರು ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು, ಇ.ದ.ಸಂ.5, ಶಾಸನಗಳ ಹಿನ್ನೆಲೆಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು ಒಂದು ಅಧ್ಯಯನ, ಇ.ದ.ಸಂ.20, ಶಾಸನಗಳ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ಪರಿಸರ ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ.ಸಂ.
6. ಪಿ. ವಿ. ಕೃಷ್ಣಮೂರ್ತಿ, ಶಾಸನಗಳಲ್ಲಿ ಎಲಹಂಕನಾಡು, ಕರ್ನಾಟಕ ಲೋಚನ, ಸಂ.1–1 (1988); ಕುಕ್ಕಲನಾಡು ಒಂದು ಪ್ರಾಚೀನ ಪ್ರಾದೇಶಿಕ ವಿಭಾಗ ಇ.ದ.7(1991); ಹೊಮ್ಮಳಿಗೆನಾಡು ಬನ್ನೇರುಘಟ್ಟ–ಸ್ಥಳನಾಮ ಪರಿಶೀಲನೆ, ಸಾಧನೆ ಸಂ. 25–1,2 (ಜೂ. ಜು. 1996); ಪ್ರಾಚೀನ ಭೌಗೋಳಿಕ ಪ್ರಾದೇಶಿಕ ವಿಭಾಗಗಳ ಹಿನ್ನೆಲೆಯಲ್ಲಿ ಆನೇಕಲ್ ತಾಲ್ಲೂಕು, ಕ.ಸಾ.ಪ.ಪ 76–1 (1998); ಸಿಗಲ್‌ನಾಡು–ಒಂದು ನೈಜ ಭೌಗೋಳಿಕ ಪ್ರಾದೇಶಿಕ ವಿಭಾಗ, ಇ.ದ.13(1998); ಮುಮ್ಮಡಿ ವೀರಬಲ್ಲಾಳನ ಕಾಲದ ಹೆಸರ್ ಕುಂದಾಣಿ ರಾಜ್ಯದ ನಾಡುಗಳು, ಇ.ದ.15 (2000).

16. ಯಲಹಂಕ ನಾಡಪ್ರಭುಗಳ ಇತಿಹಾಸ

ಡಾ. ಲ. ನ. ಸ್ವಾಮಿ

ಯಲಹಂಕ ನಾಡಪ್ರಭುಗಳ ಬಗೆಗಿನ ಇತಿಹಾಸ ಅಧ್ಯಯನ ಮಾಡಲು ಇತ್ತೀಚಿನವರೆಗೆ ಐತಿಹಾಸಿಕ ಕೃತಿಗಳ ಕೊರತೆ ಎದ್ದುಕಾಣುತ್ತಿತ್ತು. ವಿಜಯನಗರದ ಬಗೆಗಿನ ಅಧ್ಯಯನವನ್ನು ಹೊರತು ಪಡಿಸಿದರೆ ದಕ್ಷಿಣ ಕರ್ನಾಟಕದಲ್ಲಿ ವಿದ್ವಾಂಸರ ಗಮನಸೆಳೆದು ಹಾಗೂ ಅಧಿಕವಾಗಿ ಅಧ್ಯಯನಗೊಂಡ ರಾಜಮನೆತನದ ಇತಿಹಾಸವೆಂದರೆ ಮೈಸೂರಿನ ಒಡೆಯರ್ ಮನೆತನ. ಈ ಮನೆತನದ ಬಗೆಗೆ ರೂಪುಗೊಂಡ ಸರ್‌ಮಾರ್ಕ್ ವಿಲ್ಕ್ಸರ, ಸಿ. ಹಯವದನರಾಯರ ಹಾಗೂ ಎಂ. ಶಾಮರಾವ್‌ರವರ ಕೃತಿಗಳಲ್ಲಿ ದಕ್ಷಿಣದ ಮತ್ತೊಂದು ರಾಜ ಕುಟುಂಬವಾದ ಯಲಹಂಕ ನಾಡಪ್ರಭುಗಳ ಬಗೆಗೆ ಉಲ್ಲೇಖವಿಲ್ಲದಿರುವುದು ವಿಷಾದನೀಯ. ಬುಕನನ್‌ನ ಕೃತಿಯಲ್ಲಿ ಸಹ ಕೆಂಪೇಗೌಡರ ಬಗೆಗಿನ ಉಲ್ಲೇಖ ಕಂಡು ಬರುವುದಿಲ್ಲ. ಆದರೆ ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ *'ಕ್ವಾರ್ಟರ್ಲೀ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ'*ಯು ನಿಯತ ಕಾಲಿಕದಲ್ಲಿ ಬೆರಳೆಣಿಕೆ ಸಂಖ್ಯೆಯಲ್ಲಿ ಕೆಂಪೇಗೌಡ ಮನೆತನದ ಪರಿಚಯಾತ್ಮಕ ಮತ್ತು ಸಂಶೋಧನಾ ಲೇಖನಗಳು ಪ್ರಕಟವಾದವು. ಇತ್ತೀಚಿನ ಕೆಲವು ದಶಕಗಳಲ್ಲಿ ಈ ಮನೆತನದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಬಗೆಗಿನ ಸಂಶೋಧನೆಗಳು ನಡೆದದ್ದು. ಅವು ತುಲನಾತ್ಮಕವೂ, ವಿಮರ್ಶಾತ್ಮಕವೂ ಹಾಗೂ ವಸ್ತು ನಿಷ್ಠವಾದ ಬರವಣಿಗೆಗೆ ಒತ್ತು ನೀಡಿದೆ. ಈ ನಿಟ್ಟಿನಲ್ಲಿ ದೊರೆಯುವ ಆಕರ ಗ್ರಂಥಗಳೆಂದರೆ, ಬೆಂಗಳೂರು ವಿಶ್ವವಿದ್ಯಾನಿಲಯದ ಕೆಂಪೇಗೌಡ ಅಧ್ಯಯನ ಪೀಠ ಹೊರತಂದಿರುವ *ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ* ಮತ್ತು *ಬೆಂಗಳೂರಿನ ಬಖೈರುಗಳು* ಪ್ರಮುಖವಾದವುಗಳು. ಇದಲ್ಲದೆ ಡಾ. ದಯಾನಂದ ಪಟೇಲ್ ಮತ್ತು ಡಾ. ಜಿ. ಟಿ. ವೀರಪ್ಪ ಸಂಪಾದಿಸಿರುವ *ಯಲಹಂಕ ಪ್ರಭುಗಳು ಒಂದು ಅಧ್ಯಯನ* ಪ್ರೊ. ಎಂ. ಎಚ್. ಕೃಷ್ಣಯ್ಯ ಮತ್ತು ಡಾ. ದೇವರಕೊಂಡಾರೆಡ್ಡಿ ಸಂಪಾದಿಸಿರುವ *ಬೆಂಗಳೂರು ಕೆಂಪೇಗೌಡರ ವಂಶಸ್ಥರು* ಕೃತಿಗಳನ್ನು ಉಲ್ಲೇಖಿಸಬಹುದು. ಇವಲ್ಲದೆ ಬೆಂಗಳೂರು, *ತುಮಕೂರು ಜಿಲ್ಲೆಯ ಗೆಜೆಟಿಯರ್‌ಗಳಲ್ಲಿ* ಸಹ ಈ ವಂಶದ ಅರಸರ ಬಗೆಗೆ ಮಾಹಿತಿಗಳು ದೊರೆಯುತ್ತವೆ. ರಾಜ್ಯ ಪುರಾತತ್ವ ಇಲಾಖೆಯ 1914–15, 1935 ಮತ್ತು 1945ರ ವಾರ್ಷಿಕ ವರದಿಗಳಲ್ಲಿ ಯಲಹಂಕ ನಾಡಪ್ರಭುಗಳ ಸ್ಮಾರಕಗಳ ಬಗೆಗಿನ ವಿವರಗಳು ಪ್ರಕಟವಾಗಿವೆ. ಯಲಹಂಕ ನಾಡಪ್ರಭುಗಳು ವಿಜಯನಗರ ಸಾಮ್ರಾಜ್ಯದ ಅಧೀನರಾಗಿದ್ದು ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿಕೊಂಡು ಆಳ್ವಿಕೆ ನಡೆಸಿದರೆಂದು ಖಚಿತವಾಗುತ್ತದೆ. ಐತಿಹ್ಯಗಳು, ವದಂತಿಗಳು ಮತ್ತು ಊಹಾಪ್ರಪಂಚದ ವಿಷಯಗಳಿಗೆ ಒತ್ತು ನೀಡಿ ನಿಜವಾದ ಹಾಗೂ ಸಾಧಾರವಾದ ಐತಿಹಾಸಿಕ ವಿವರಗಳನ್ನು ಮುಂದಿಡುವಲ್ಲಿ ಕೆಲವು ಪ್ರಕಟಿತ ಕೃತಿಗಳು ಹಿಂದೆ ಸರಿದಿರುವುದು ಕಂಡುಬರುತ್ತದೆ.

ಬಿ. ಎಲ್. ರೈಸರ ಮೈಸೂರು ಗೆಜೆಟಿಯರ್‌ನ ಎರಡನೆ ಸಂಪುಟದಲ್ಲಿ ಯಲಹಂಕ ನಾಡಪ್ರಭುಗಳ ಇತಿಹಾಸವನ್ನು ಮೊರಸು ವಕ್ಕಲಿಗ ಇತಿಹಾಸವಾಗಿ ಗುರುತಿಸಿ ಅಧ್ಯಯನ ಮಾಡಿದ್ದಾರೆ. ಆದರೆ ಬೆಂಗಳೂರು ವಿಶ್ವವಿದ್ಯಾನಿಲಯದ ಕೆಂಪೇಗೌಡ ಅಧ್ಯಯನ ಪೀಠ ಹೊರತಂದಿರುವ ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ ಮತ್ತು ಬೆಂಗಳೂರಿನ ಬಖೈರುಗಳು ಯಲಹಂಕ ನಾಡಪ್ರಭುಗಳ ಮತ್ತು ಬೆಂಗಳೂರಿನ ಇತಿಹಾಸದ

ಬಗ್ಗೆ ಮೂಲ ಆಕರಗಳನ್ನು ಒದಗಿಸುವ ವಸ್ತು ನಿಷ್ಠ ಇತಿಹಾಸಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿವೆ. ಇವುಗಳ ಅಧ್ಯಯನದಿಂದಾಗಿ ಯಲಹಂಕ ನಾಡಪ್ರಭುಗಳ ಬಗೆಗಿನ ಇತಿಹಾಸದ ಬಗೆಗೆ ಸತ್ಯಕ್ಕೆ ಹತ್ತಿರವಾದ ಇತಿಹಾಸ ರಚಿಸಲು ಸಾಧ್ಯವಾಗಿದೆ ಎಂದು ಭಾವಿಸಿದರೆ ಉತ್ಪ್ರೇಕ್ಷೆಯಾಗಲಾರದು.

ಯಲಹಂಕ ನಾಡಪ್ರಭುಗಳ ಮೂಲದ ಬಗೆಗಿನ ವಿವರಗಳು

ಯಲಹಂಕ ನಾಡಪ್ರಭುಗಳ ಉಲ್ಲೇಖವಿರುವ ಹೊಯ್ಸಳ ಮೂರನೆಯ ಬಲ್ಲಾಳನ ಕಾಲದ ಶಾಸನಗಳನ್ನು ಆಧರಿಸಿ, ಯಲಹಂಕ ನಾಡಪ್ರಭುಗಳು ಹೊಯ್ಸಳ ಬಲ್ಲಾಳನ ಅಧೀನದಲ್ಲಿದ್ದವರೆಂದು ಹೇಳುವ ಕೆಲವು ವಿವರಗಳು ದೊರೆಯುತ್ತವೆ. ಹೊಯ್ಸಳ ಮೂರನೆಯ ಬಲ್ಲಾಳನ ಕಾಲದ ಆರು ಶಾಸನಗಳಲ್ಲಿ ಯಲಹಂಕ ನಾಡಪ್ರಭುಗಳ ಉಲ್ಲೇಖಗಳಿವೆ.[1]

ದೊಮ್ಮಲೂರಿನ ಕ್ರಿ.ಶ. 1327ರ ಶಾಸನದಲ್ಲಿ[2] ಯಲಹಂಕ ನಾಡ ಮಯಿಲುಗಉಡನ ಮಾರಗೌಡ, ಮಲ್ಲಯ್ಯಗಉಡ, ತಾಮಿಯಪ್ಪ ಅನಾಡ ಸೇನಾಬೋವ ಅಲ್ಲಾಳರ ಉಲ್ಲೇಖವಿದೆ. ಯಲಹಂಕ ನಾಡನ್ನು ಉಲ್ಲೇಖಿಸಿದಾಗ ಮಯಿಲುಗಉಡನನ್ನಾಗಲೀ, ಮಾರಗೌಡನನ್ನಾಗಲೀ ಯಲಹಂಕ ನಾಡಗೌಡ ಅಥವಾ ನಾಡಪ್ರಭು ಎಂದು ಉಲ್ಲೇಖಿಸಿಲ್ಲ. ಚಿಕ್ಕಚಾಲದ ಕ್ರಿ. ಶ. 1328ರ ಶಾಸನದಲ್ಲಿ[3] ಸಹ "ಎಲಹಕ್ಕ ಗೌಡ, ಮಯಿಲುಗಉಡ, ಮಾರಗಉಡ, ಮಲಯನಗಉಡ, ತಾಮಿಯಪ್ಪಗಉಡ ಸೇನಾಬೋವಲಲಾಳ" ಎಂದು ಉಲ್ಲೇಖಿಸಿದೆ.

ನಾಗಶೆಟ್ಟಿಹಳ್ಳಿಯ ಕ್ರಿ. ಶ. 1341ರ ಶಾಸನದಲ್ಲಿ[4] 'ಅವರ ಮನೆಯೆಕ್ಕಟಿಗ ಶ್ರೀಮನು ಮಹಾಸಾಮನ್ತಾಧಿಪರೆ ಸೀಮೆಯರ ಗಂಡ ಚಿಕ್ಕ ಬಯಿರೆಯನಾಯಕರು, ಅವರ ಮಇದುನ ತೊಳೆಯ ನಾಯಕರು, ಶ್ರೀಮನುಮಹಾಯೆಲಹಕ್ಕ ನಾಡಪ್ರಭುಗಳು ಬಇರಿದೇವ, ತಾಮಿಯೆಪ್ಪ, ಮಾಚಿದೇವ, ಕಂನಗೋಡ, ನಾಡಸೇನಬೋವರಲ್ಲಾಳಜೀಯರು' ಎಂದು ಉಲ್ಲೇಖಿಸುತ್ತದೆ.

ಯಲಹಂಕ ನಾಡಪ್ರಭು ಎಂದು ಉಲ್ಲೇಖಿಸುವ ಪ್ರಪ್ರಥಮ ಶಾಸನವಿದಾಗಿದೆ. ಅಲ್ಲದೆ ಇದಕ್ಕೆ ಪೂರ್ವದ ಎರಡು ಶಾಸನಗಳಲ್ಲಿ ಯಲಹಂಕ ನಾಡಿನ ಎಂದು ಹೇಳಿ ಮುಂದೆ ದಾನಿಗಳ ಹೆಸರನ್ನು ಉಲ್ಲೇಖಿಸುತ್ತದೆ. ಕ್ರಿ. ಶ. 1342ನ್ನು ಬಲ್ಲಾಳನ ಅಂತ್ಯದ ದಿನಗಳೆಂದು ಗುರುತಿಸಿದೆಯಾದರೂ ಆ ಕಾಲಕ್ಕಾಗಲೇ ಹೊಯ್ಸಳ ಸಾಮ್ರಾಜ್ಯ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಾರಂಭಿಸುವ ಸೂಚನೆ ಈ ಶಾಸನದಲ್ಲಿದೆ ಎಂದು ಭಾವಿಸಬೇಕಾಗುತ್ತದೆ. ಏಕಾಏಕಿ ಇಲ್ಲಿಯವರೆಗೆ ಪದವಿಯ ಪ್ರಯೋಗವಿಲ್ಲದೆ ಶಾಸನ ಹೊರಡಿಸಿದ ಯಲಹಂಕದ (ನಾಡಪ್ರಭುಗಳು) ಮೇಲಿನ ಶಾಸನದ ದಾನಿಗಳು ಪ್ರಾಯಶಃ ಬಲ್ಲಾಳನು ದಕ್ಷಿಣದಲ್ಲಿ ತುರಕರೊಂದಿಗಿನ ಯುದ್ಧದಲ್ಲಿ ಹೋರಾಡುವ ಪೂರ್ವದಲ್ಲಿಯೇ ಯಲಹಂಕದಲ್ಲಿ ಸಾಮಾನ್ಯ ಆಡಳಿತದಲ್ಲಿದ್ದ ಇವರು, ನಾಡಗೌಡ ಶಬ್ದವನ್ನು, ಬಲ್ಲಾಳನ ಮನೆಯ ನಂಬಿಕಸ್ಥನೆಂದೂ ಕರೆದುಕೊಂಡಿದ್ದಾರೆ. ಆದರೆ ಅವರು ತಮಗೆ ನಾಡಗೌಡತ್ವ ಬಲ್ಲಾಳನಿಂದ ಪ್ರಾಪ್ತಿಯಾಗಿದ್ದನ್ನು ಶಾಸನದಲ್ಲಿ ಹೇಳಿಕೊಳ್ಳದಿರುವುದನ್ನು ಗಮನಿಸಿದಾಗ ಇದು ಅವರ ಸ್ವಘೋಷಣೆಯಾಗಿರಬೇಕೆಂದು ಸಹ ಊಹಿಸಬಹುದಾಗಿದೆ.

ಅಲ್ಲದೆ ಕ್ರಿ. ಶ. 1348ರ ಕಟ್ಟಿಗೆಹಳ್ಳಿಯ ಶಾಸನ ಯಲಹಂಕ ನಾಡಪ್ರಭುವನ್ನು ಬೈರೇದೇವನೆಂದು ಗುರುತಿಸುತ್ತದೆ. ಈ ಶಾಸನಗಳಿಂದ ತಿಳಿಯುವುದೇನೆಂದರೆ ಬಹುಶಃ 1341ರ ಶಾಸನದ ಕಾಲಕ್ಕಾಗಲೇ ಬಲ್ಲಾಳನು ಅಂತ್ಯ ಕಂಡಿರುವ ಸಾಧ್ಯತೆ ಕಂಡು ಬರುತ್ತದೆ. ಆದರೆ 1342ರ ಮಾರ್ಚ್ 20ರ ಇವರ ಶಾಸನದಲ್ಲಿ 'ಶ್ರೀ ವೀರಬಲ್ಲಾಳ ರಾಜ್ಯಂಗೆ ಇವಲ್ಲಿ' ಎಂದು ಉಲ್ಲೇಖಿಸಿರುವುದನ್ನು ಗಮನಿಸಿದರೆ ಆ ಕಾಲಕ್ಕಾಗಲೇ ಬಲ್ಲಾಳನು ಇತಿಹಾಸವಾಗಿದ್ದನ್ನು ಪರೋಕ್ಷವಾಗಿ ದಾಖಲಿಸಿರುವಂತಿದೆ.

ಈ ಸಾಧ್ಯತೆಗಳು ಏನೇ ಇರಲಿ, ಶಾಸನ ಸಂಪುಟದ ಪ್ರಸ್ತಾವನೆಯಲ್ಲಿ ಹೊಯ್ಸಳ ಶಾಸನಗಳಲ್ಲಿ ಕಂಡುಬರುವ ಯಲಹಂಕ ನಾಡಪ್ರಭುಗಳು ಮತ್ತು ಕೆಂಪೇಗೌಡ ವಂಶಸ್ಥರ ನಡುವಿನ ಸಂಬಂಧವನ್ನು ಕುರಿತು ಹೀಗೆ ಅಭಿಪ್ರಾಯಿಸುತ್ತಾರೆ. ಶಾಸನ ಸಂಪುಟದಲ್ಲಿ ಪ್ರಕಟವಾಗಿರುವ ಪ್ರಾರಂಭದ ಒಂಭತ್ತು ಶಾಸನದಲ್ಲಿ ಉಲ್ಲೇಖವಾಗಿರುವ ಯಲಹಂಕ ನಾಡಪ್ರಭುಗಳಿಗೂ, ಕೆಂಪೇಗೌಡ ವಂಶದವರಿಗೂ ಇರುವ ರಕ್ತಸಂಬಂಧದ ಬಗೆಗೆ ಹಾಗೂ ಅವರೆಲ್ಲರ ಆಳ್ವಿಕೆಯ ಕಾಲಮಾನದ ಬಗೆಗೆ ಸದ್ಯದ ಆಕರಗಳ ಪ್ರಾಪ್ತಿಯ ಹಿನ್ನೆಲೆಯಲ್ಲಿ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಈ ಬಗ್ಗೆ ಮತ್ತಷ್ಟು ಸಂಶೋಧನೆಗಳು ನಡೆದರೆ ಮಾತ್ರ ಇದಮಿತ್ಥಂ ಎಂದು ಹೇಳಬಹುದು. ಅಲ್ಲಿಯವರೆಗೆ ಊಹೆಯ ಕುದುರೆಯನ್ನೇ ಓಡಿಸಬೇಕಾಗುತ್ತದೆ.[5]

ಯಲಹಂಕ ನಾಡಿನ ಪ್ರಭುಗಳು ಹೊಯ್ಸಳ ವಂಶದ ಪ್ರಸಿದ್ಧ ದೊರೆ ವಿಷ್ಣುವರ್ಧನ ಹಾಗೂ ಶಾಂತಲೆಯರ ಪುತ್ರಿಯಾದ ಹರಿಯಲದೇವಿಯ ದತ್ತುಪುತ್ರನಾದ ದೇವರಸೇಗೌಡನ ವಂಶಸ್ಥರು ಎಂಬ ಅಭಿಪ್ರಾಯ ಸಹ ವ್ಯಕ್ತವಾಗಿದೆ.[6] ಆದರೆ ಯಲಹಂಕ ನಾಡಪ್ರಭುಗಳ ಶಾಸನ ಸಂಪುಟದ ಪ್ರಸ್ತಾವನೆಯಲ್ಲಿ ಅದನ್ನು ನಿರಾಧಾರವೆಂದು ತಳ್ಳಿಹಾಕಿದ್ದಾರೆ.[7]

ಯಲಹಂಕ ನಾಡಪ್ರಭುಗಳ ಮೊರಸು ನಾಡಿನ ಉತ್ಪತ್ತಿಯನ್ನು ಬಿ. ಎಲ್. ರೈಸ್‌ರವರು *ಮೈಸೂರು ಗೆಜೆಟಿಯರ್‌*ನಲ್ಲಿ ಉಲ್ಲೇಖಿಸಿದ್ದಾರೆ.[8] ಈ ಬಗೆಯ ಉಲ್ಲೇಖವನ್ನು *ಬೆಂಗಳೂರಿನ ಬಖೈರಿ*ನಲ್ಲಿ ಸಹ ಕಾಣುತ್ತೇವೆ.[9] ಆದರೆ ಪಾಳೆಯಗಾರರ ಬಗ್ಗೆ ಬರೆಯುತ್ತಾ *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*ದಲ್ಲಿ ಮೂಲತಃ ತೆಲುಗರಾದ ಇವರು ಮೊರಸು ಒಕ್ಕಲು ಎಂದು ಕರೆಯಲ್ಪಡುತ್ತಿದ್ದರು ಎಂದು ಉಲ್ಲೇಖಿಸಿದ್ದಾರೆ.[10] ಇವರ ಮೂಲನೆಲೆಯನ್ನು ಪಿ. ವಿ. ಕೃಷ್ಣಮೂರ್ತಿಯವರು ಇಳವಂಜಿ ನಾಡಿನಲ್ಲಿ ಅಥವಾ ಯಳಮಂಜಿನಾಡಿನಲ್ಲಿ ಗುರುತಿಸಿದ್ದಾರೆ. ಇಳವಂಜಿನಾಡು ಬಂಗಾರಪೇಟೆ ತಾಲ್ಲೂಕಿನಲ್ಲಿ ಇದ್ದುದನ್ನು ನಿಖರವಾಗಿ ಶಾಸನಗಳ ಆಧಾರದಿಂದ ಗುರುತಿಸಿರುವುದರಿಂದ ಅವರ ವಲಸೆಯ ಪ್ರಶ್ನೆಯನ್ನು ಪುನಃ ಅವಲೋಕಿಸಬೇಕಾದ ಔಚಿತ್ಯವೇರ್ಪಡುತ್ತದೆ.[10ಅ]

ಯಲಹಂಕ ನಾಡಪ್ರಭುಗಳ ಮೂಲದ ಬಗ್ಗೆ ಈ ಮೇಲಿನ ವಿವರಗಳನ್ನು ಗಮನಿಸಿದಾಗ ಸಾಕಷ್ಟು ಗೊಂದಲಗಳಿರುವುದು ಕಂಡುಬರುತ್ತದೆ. ಆದರೆ ಶಾಸನ ಸಂಪುಟದ ಪ್ರಸ್ತಾವನೆಯಲ್ಲಿ ಕಂಡುಬರುವ ವಂಶಾವಳಿಯನ್ನು ಗಮನಿಸಿದಾಗ ಮತ್ತು ಹೊಯ್ಸಳ ಶಾಸನಗಳಲ್ಲಿ ಕಂಡುಬರುವ ಯಲಹಂಕ ನಾಡಪ್ರಭುಗಳ ಹೆಸರುಗಳನ್ನು ಅವಲೋಕಿಸಿದಾಗ ಮೊರಸು ನಾಡಿನ ಮೂಲವನ್ನು ಗಮನದಲ್ಲಿರಿಸಿಕೊಂಡು ಇವುಗಳೆಲ್ಲದರ ನಡುವೆ ಒಂದು ಸಂಬಂಧವನ್ನು ಹುಡುಕುವುದು ಅವಶ್ಯಕವೆಂದು ತೋರುತ್ತದೆಯಾದರೂ ಲಭ್ಯವಿರುವ ಮಾಹಿತಿಯಲ್ಲಿ ಸಂಬಂಧಗಳನ್ನು ಬೆಸೆಯಲು ಅವಶ್ಯಕವಿರುವ ಮಾಹಿತಿಗಳ ಕೊರತೆಯಿಂದಾಗಿ ಸದ್ಯದ ಸ್ಥಿತಿಯಲ್ಲಿ ಹಾಗೆಯೇ ಬಿಟ್ಟು ಮುಂದುವರಿಯುವುದು ಸೂಕ್ತವೆಂದು ಭಾವಿಸಲಾಗಿದೆ.

ಯಲಹಂಕ ನಾಡಪ್ರಭುಗಳ ವಂಶಾವಳಿ[11]

ಭೈರೇಗೌಡ (ರಣಭೈರೇಗೌಡ)

↓

ಜಯಗೌಡ

↓

ಗಿಡ್ಡೇಗೌಡ

↓

ನಾಚೇಗೌಡ (ನಂಜೇಗೌಡ)

↓

ಕೆಂಪನಾಚೇಗೌಡ (ಕೆಂಪನಂಜೇಗೌಡ)

↓

ಒಂದನೇ ಕೆಂಪೇಗೌಡ (ಬೆಂಗಳೂರು ಕೆಂಪೇಗೌಡ)

↓

ಇಮ್ಮಡಿ ಕೆಂಪೇಗೌಡ

↓

ಮುಮ್ಮಡಿ ಕೆಂಪೇಗೌಡ

↓

ಮುಮ್ಮಡಿ ದೊಡ್ಡವೀರಪ್ಪಗೌಡ

↓

ಇಮ್ಮಡಿ ಕೆಂಪವೀರಪ್ಪಗೌಡ

↓

ಮುಮ್ಮಡಿ ಕೆಂಪವೀರಪ್ಪಗೌಡ

ಮುಮ್ಮಡಿ ಕೆಂಪವೀರಪ್ಪಗೌಡರ ಆಸ್ಥಾನ ಕವಿಯಾದ ಏಕಾಂಬರ ದೀಕ್ಷಿತನಿಂದ ರಚಿತವಾದ *ವೀರಭದ್ರ ವಿಜಯವೆಂಬ* ಚಂಪೂಕಾವ್ಯದಲ್ಲಿ ಯಲಹಂಕ ನಾಡಪ್ರಭುಗಳ ವಂಶವೃಕ್ಷವನ್ನು ನೀಡಲಾಗಿದೆ. ಅದರಲ್ಲಿ ವಂಶದ ಮೂಲ ಪುರುಷನನ್ನು ಜಯಗೌಡನೆಂದು ಗುರುತಿಸುತ್ತಾರೆ.[12] ಈತನನ್ನೇ ಬಿ. ಎಲ್. ರೈಸ್ ಸಹ ಯಲಹಂಕ ನಾಡಪ್ರಭುಗಳ ಮೂಲಪುರುಷನೆಂದು ಗುರುತಿಸುತ್ತಾರೆ.[13] ಆತನ ಆಡಳಿತ ಕಾಲವನ್ನು 1418 ರಿಂದ 1433 ಎಂದು ಉಲ್ಲೇಖಿಸಿದ್ದಾರೆ.[14] ಇವರ ನಂತರ ಕೆಂಪನಂಜಗೌಡರು 1443 ರಿಂದ 1513ರವರೆಗೆ ಆಳಿದರೆಂದು ಗುರುತಿಸುತ್ತಾರೆ.[15] ಇವರ ನಂತರ ಅಧಿಕಾರಕ್ಕೆ ಬಂದವರೇ ನಾಡಪ್ರಭು ಬೆಂಗಳೂರು ನಗರ ನಿರ್ಮಾತೃ ಕೆಂಪೇಗೌಡರು. ಇವರು 1513 ರಿಂದ 1569ರವರೆಗೆ ಆಡಳಿತ ನಡೆಸಿದರೆಂದು ದಾಖಲಿಸಿದ್ದಾರೆ.[16]

ಪ್ರಾರಂಭಿಕ ಅರಸರುಗಳು

ಜಯಗೌಡ: ಜಯಗೌಡರು ಯಲಹಂಕ ನಾಡಪ್ರಭುವೆಂಬ ಅಭಿದಾನದೊಂದಿಗೆ ವಿಜಯನಗರದ ಸಾಮಂತಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಇವರು ಸುಮಾರು 15 ವರ್ಷಗಳ ಕಾಲ ಅಂದರೆ 1418ರಿಂದ 1433 ರವರೆಗೆ ಆಳ್ವಿಕೆಯನ್ನು ನಡೆಸಿದರು.[17] ಇವರ ಕಾಲದಲ್ಲಿ ರಾಜಧಾನಿಯನ್ನು ಆವತಿಯಿಂದ ಯಲಹಂಕಕ್ಕೆ ಬದಲಾಯಿಸಿಕೊಂಡರು.

ಗಿಡ್ಡೇಗೌಡ ಮತ್ತು **ಕೆಂಪೇಗೌಡ:** ಜಯಗೌಡರ ನಂತರ ಅಧಿಕಾರಕ್ಕೆ ಬಂದವರೆ ಗಿಡ್ಡೇಗೌಡರು. ಇವರು ಅಧಿಕಾರಕ್ಕೆ ಬಂದಾಗ ಗಂಡು ಸಂತಾನವಿಲ್ಲದೇ ಇದ್ದುದರಿಂದ ತಮ್ಮ ಕುಲದೇವಿಯಾದ ಕೆಂಪಮ್ಮನಲ್ಲಿ ಹರಕೆಯನ್ನು

ಸಲ್ಲಿಸಿ, ತಮಗೆ ಗಂಡು ಸಂತಾನವಾದಲ್ಲಿ ತಮ್ಮ ವಂಶದವರು ಮುಂದಿನ ದಿನಗಳಲ್ಲಿ ಎಲ್ಲಾ ಗಂಡು ಮಕ್ಕಳಿಗೂ ಬೀರೆದೇವರ ಪತ್ನಿಯಾದ ಕೆಂಪಮ್ಮನ ಹೆಸರಿಡುವುದಾಗಿ ಭಾಷೆಯಿತ್ತರು.[18] ಅದರಂತೆ ಅವರಿಗೆ ಕೆಂಪಮ್ಮದೇವಿಯ ಅನುಗ್ರಹದಿಂದ ಗಂಡು ಸಂತಾನವಾಯಿತು. ಆತನನ್ನು ಕೆಂಪನಂಜಗೌಡನೆಂದು ಹೆಸರಿಸಲಾಯಿತು. ಗಿಡ್ಡೇಗೌಡರು 1433 ರಿಂದ 1443ರವರೆಗೆ ಆಳ್ವಿಕೆ ನಡೆಸಿದರು. ಗಿಡ್ಡೇಗೌಡರ ನಂತರ ಅಧಿಕಾರಕ್ಕೆ ಬಂದ ಕೆಂಪನಂಜೇಗೌಡರು ಪ್ರಜಾನುರಾಗಿಗಳಾಗಿ, ಧರ್ಮದಿಂದ ಸುಮಾರು 70 ವರ್ಷಗಳು ಆಡಳಿತ ನಡೆಸಿದರು.[19] ಇವರ ಆಡಳಿತಾವಧಿಯನ್ನು 1443 ರಿಂದ 1513 ಎಂದು ಗುರುತಿಸಲಾಗಿದೆ.[20]

ಒಂದನೆಯ ಕೆಂಪೇಗೌಡ (ಸು. 1513–1569):

ಇವರು ವಿಜಯನಗರದ ಸಾಮ್ರಾಟ ಕೃಷ್ಣದೇವರಾಯ ಮತ್ತು ಅಚ್ಯುತರಾಯರ ಅನುಗ್ರಹಕ್ಕೆ ಪಾತ್ರರಾಗಿದ್ದರು. ಕೆಂಪೇಗೌಡರು ತಮ್ಮ ಆಡಳಿತ ಕ್ಷೇತ್ರವಾದ ಯಲಹಂಕ ನಾಡಿನಲ್ಲಿ ಪ್ರವಾಸ ಮಾಡುತ್ತಾ ಅಂದಿನ ಶಿವನಸಮುದ್ರ ಗ್ರಾಮಕ್ಕೆ ಭೇಟಿ ನೀಡಿದಾಗ, ಆ ಪ್ರದೇಶವು ತಮ್ಮ ರಾಜಧಾನಿಗೆ ಸೂಕ್ತವಾದ ಸ್ಥಳವೆಂದು ಕಂಡುಕೊಂಡರು. (ಶಿವನಸಮುದ್ರವು ಯಲಹಂಕದಿಂದ ದಕ್ಷಿಣಕ್ಕೆ 10 ಮೈಲಿಗಳ ದೂರದಲ್ಲಿ ಇಂದಿನ ಬೆಂಗಳೂರಿಗೆ ದಕ್ಷಿಣದಲ್ಲಿ ಮೂರು ಮೈಲಿ ದೂರದಲ್ಲಿದ್ದಿತು. ಇದನ್ನು ಹಳೆ ಬೆಂಗಳೂರು ಎಂದು ಗುರುತಿಸಲಾಗುತ್ತಿತ್ತು[21]). ಇಲ್ಲಿ ಕೋಟೆಯನ್ನು ಕಟ್ಟುವುದಕ್ಕಾಗಿ ಅಚ್ಯುತರಾಯರಿಂದ ಒಪ್ಪಿಗೆಯನ್ನು ಪಡೆದು ಅಲ್ಲಿ 1537ರಲ್ಲಿ ಕೋಟೆಯನ್ನು ನಿರ್ಮಿಸಿದರು.[22] ಇದನ್ನು ಶಾಸನಗಳು ಖಚಿತಪಡಿಸುವುದಿಲ್ಲ.[23] ಶಾಸನ ಸಂಪುಟದ ಪ್ರಸ್ತಾವನೆಯಲ್ಲಿ ಬೆಂಗಳೂರು ಒಂದನೆಯ ಕೆಂಪೇಗೌಡರ ಪೂರ್ವ ದಲ್ಲಿಯೇ ಅಸ್ತಿತ್ವದಲ್ಲಿತ್ತೆಂದು[24] ಶಾಸನಾಧಾರದಿಂದ ಹೇಳಿರುವುದರಿಂದ, ಇವರು ಬೆಂಗಳೂರನ್ನು ಮತ್ತು ಅಲ್ಲಿನ ಕೋಟೆಯನ್ನು ಅಭಿವೃದ್ಧಿಪಡಿಸಿದರೆಂಬ ಅಭಿಪ್ರಾಯವನ್ನು ತಳ್ಳಿಹಾಕಬೇಕೆಂಬ ಕಡ್ಡಾಯವೇನು ಇಲ್ಲ.

ಒಂದನೆ ಕೆಂಪೇಗೌಡರು ಬೆಂಗಳೂರಿನ ಕೋಟೆಯನ್ನು ಕಟ್ಟುವ ಸಂದರ್ಭದಲ್ಲಿ ನಡೆಯಿತೆನ್ನಲಾದ ಘಟನೆಯ ವಿವರಗಳು ಇಂತಿವೆ:

ಒಂದು ಕಥೆಯ ಪ್ರಕಾರ[25] ಬೆಂಗಳೂರು ಕೋಟೆಯ ಪ್ರವೇಶದ್ವಾರ ನಿರ್ಮಾಣ ಕಾಲದಲ್ಲಿ ಪದೇಪದೇ ಕುಸಿದು ಬೀಳುತ್ತಿತ್ತು. ಇದು ಕೆಂಪೇಗೌಡರನ್ನು ಚಿಂತೆಗೆ ಈಡುಮಾಡಿತು. ಹೀಗೆ ನಡೆಯುತ್ತಿದ್ದ ಸಂದರ್ಭದಲ್ಲಿ ಒಂದು ರಾತ್ರಿ ಕೆಂಪೇಗೌಡರಿಗೆ ನರಬಲಿ ನೀಡಿದರೆ ಕೋಟೆಯ ಪ್ರವೇಶದ್ವಾರ ಸುಸ್ಥಿರವಾಗಿ ನಿಲ್ಲುತ್ತದೆ ಎಂಬ ಕನಸಾಯಿತು. ಮಾವನ ಚಿಂತೆಗೆ ಕಾರಣವನ್ನು ಹಾಗೂ ಕನಸಿನ ವೃತ್ತಾಂತವನ್ನು ತಿಳಿದ ಆತನ ಸೊಸೆ ಲಕ್ಷ್ಮಮ್ಮ ಸ್ವಯಂಪ್ರೇರಣೆಯಿಂದ ಕೋಟೆಯ ಬಾಗಿಲಿಗೆ ಆತ್ಮಾರ್ಪಣೆ ಮಾಡಿಕೊಂಡಳೆಂದು ತಿಳಿದುಬರುತ್ತದೆ. ಕಥೆಯು ಮುಂದುವರಿದು ಕೆಂಪೇಗೌಡರು ಆಕೆಯ ಹೆಸರನ್ನು ಚಿರಸ್ಥಾಯಿಯಾಗಿಸಲು ದೇವಾಲಯವೊಂದನ್ನು ನಿರ್ಮಿಸಿ ಆಕೆಯ ಬಿಂಬವನ್ನು ಅಲ್ಲಿ ಸ್ಥಾಪಿಸಿದರೆಂದು ತಿಳಿಸುತ್ತದೆ. ಇದಕ್ಕೆ ಐತಿಹ್ಯವನ್ನು ಹೊರತು ಪಡಿಸಿದರೆ ಮತ್ತಾವ ಆಕರಗಳು ಲಭ್ಯವಿಲ್ಲ. ಕೋಟೆಯ ನಿರ್ಮಾಣದಿಂದ ಸಂಪ್ರೀತರಾದ ಅಚ್ಯುತರಾಯರಿಂದ ಒಪ್ಪಿಗೆ ಪಡೆದು ಈ ಕೆಳಕಂಡ 12 ಹೋಬಳಿಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡರು.[26] ಅವುಗಳೆಂದರೆ:

1. ಕಸಬಾ – ಹಳೆ ಬೆಂಗಳೂರು ಹೋಬಳಿ
2. ವರ್ತೂರು
3. ಯಲಹಂಕನಾಡು

4. ಬೇವೂರು
5. ಹಲಸೂರು
6. ತೆಂಗರ ಅಥವಾ ಕೆಂಗೇರಿ
7. ತಲಘಟಪುರ
8. ಜಿಗಣಿ
9. ಕುಂಬಳಗೋಡು
10. ಕನ್ನೇಲಿ
11. ಬಾಣಾವರ
12. ಹೆಸರುಘಟ್ಟ

ಈ ಹನ್ನೆರಡು ಹೋಬಳಿಗಳಿಂದ ಒಟ್ಟು ಮೂವತ್ತು ಸಾವಿರ ಪಗೋಡಗಳು ಕಂದಾಯ ರೂಪದಲ್ಲಿ ಸಂಗ್ರಹವಾಗುತ್ತಿತ್ತೆಂದು ತಿಳಿದು ಬರುತ್ತದೆ.[27] ಹೀಗೆ ಸಂಗ್ರಹವಾದ ದ್ರವ್ಯದಿಂದ ಬೆಂಗಳೂರು ನಗರವನ್ನು ಅಭಿವೃದ್ಧಿಪಡಿಸಿದರಲ್ಲದೆ ಬೆಂಗಳೂರಿನಲ್ಲಿ ಹಲವಾರು ದೇವಾಲಯಗಳನ್ನು ಹಾಗೂ ಬೃಹತ್ತಾದ ಕೆರೆಯೊಂದನ್ನು ನಿರ್ಮಿಸಿದರು. ಬಿ. ಎಲ್. ರೈಸರ ಗೆಜೆಟಿಯರ್ ಕೋಟೆ ವೆಂಕಟರಮಣ ಸ್ವಾಮಿ ದೇವಾಲಯ ಈತನ ಕಾಲದ ನಿರ್ಮಾಣವೆನ್ನುತ್ತದೆ.[28] ಬೆಂಗಳೂರಿನಲ್ಲಿ ಕೆಂಪಾಂಬುಧಿ ಕೆರೆಯನ್ನು ಮನೆದೇವತೆಯ ಹೆಸರಿನಲ್ಲಿ ನಿರ್ಮಿಸಿದರು. ಅಲ್ಲದೆ ಬಸವನಗುಡಿಯ ಬಸವಣ್ಣನ ದೇವಾಲಯ, ಗವಿ ಗಂಗಾಧರೇಶ್ವರ ಸ್ವಾಮಿಯ ಆಲಯ, ದೊಡ್ಡ ಗಣಪತಿಯ ದೇವಾಲಯ, ಆಂಜನೇಯಸ್ವಾಮಿಯ ಗುಡಿ, ಮತ್ತು ಚನ್ನಿಗರಾಯ ಸ್ವಾಮಿ ದೇವಾಲಯಗಳನ್ನು ನಿರ್ಮಿಸಿದ್ದಾರೆ.[29] ಇವುಗಳಲ್ಲದೆ ಕರಿಯಮ್ಮ ಅಗ್ರಹಾರ, ಕೆಂಪಸಮುದ್ರ ಅಗ್ರಹಾರ ಮತ್ತು ಜಡೆಹಳ್ಳಿ ಅಗ್ರಹಾರಗಳನ್ನು ನಿರ್ಮಿಸಿದರು.[30]

ಇವರು ಟಂಕಸಾಲೆಯನ್ನು ಸ್ಥಾಪಿಸಿ ಭೈರವ ನಾಣ್ಯಗಳನ್ನು ಅಚ್ಚುಹಾಕಿಸಿದರೆಂದು ಸಹ ಇತಿಹಾಸ ಗ್ರಂಥಗಳಲ್ಲಿ ಉಲ್ಲೇಖಿತವಾಗಿವೆ.[31] ಕೆಂಪೇಗೌಡರು ವಿಜಯನಗರದ ಸಾಮ್ರಾಟ ಸದಾಶಿವರಾಯನ ಪಾಲಕನಾದ ರಾಮರಾಯನ ಅನುಮತಿಯಿಲ್ಲದೆ ಈ ಟಂಕಸಾಲೆಯನ್ನು ನಿರ್ಮಿಸಿದ್ದನ್ನು ಕಂಡು ಕೋಪಗೊಂಡ ರಾಮರಾಯ ಕೆಂಪೇಗೌಡರನ್ನು ರಾಜಧಾನಿಗೆ ಕರೆಸಿಕೊಂಡು ಆನೆಗೊಂದಿಯಲ್ಲಿ ದೀರ್ಘಕಾಲದವರೆಗೆ ಸೆರೆಯಲ್ಲಿರಿಸಿ ಆತನ ರಾಜ್ಯವನ್ನು ಮುಟ್ಟುಗೋಲು ಹಾಕಿಕೊಂಡು ಜಗದೇವರಾಯನ ಆಡಳಿತಕ್ಕೆ ಆ ಪ್ರದೇಶವನ್ನು ಒಪ್ಪಿಸಿದರು. ಐದು ವರ್ಷಗಳ ತರುವಾಯ ಕೆಂಪೇಗೌಡರು ರಾಮರಾಯನ ಆಸ್ಥಾನದಲ್ಲಿದ್ದ ತನ್ನ ಸ್ನೇಹಿತರ ಪ್ರಭಾವವನ್ನು ಬಳಸಿಕೊಂಡು ಅಪಾರವಾದ ದಂಡವನ್ನು ತೆತ್ತು ಸೆರೆಮನೆಯಿಂದ ಮುಕ್ತರಾದರು ಮತ್ತು ತಮ್ಮ ಸೀಮೆಯ ಆಡಳಿತವನ್ನು ಹಿಂದೆಪಡೆದರೆಂದು ಇತಿಹಾಸ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.[32] ಆದರೆ ಈ ಘಟನೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾ ಶಾಸನ ಸಂಪುಟದ ಪ್ರಸ್ತಾವನೆಯಲ್ಲಿ ಇವು ಆಧಾರ ರಹಿತವಾದದ್ದೆಂದು ಅಭಿಪ್ರಾಯಿಸಿದ್ದಾರೆ. ಅಲ್ಲದೆ ಈ ದೆಸೆಯಲ್ಲಿ ಸಂಶೋಧನೆಯ ಆವಶ್ಯಕತೆಯನ್ನು ಎತ್ತಿಹಿಡಿದಿದ್ದಾರೆ.[33] ಕೆಂಪೇಗೌಡರು ಕೃಷ್ಣದೇವರಾಯನ ಕಾಲದಲ್ಲಿ ಶ್ರೀರಂಗಪಟ್ಟಣ ಪ್ರಾಂತ್ಯದಲ್ಲಿ ಆತನಿಂದ ನೇಮಿಸಲ್ಪಟ್ಟ ಅಧಿಕಾರಿಗಳಲ್ಲಿ ಒಬ್ಬರಾಗಿದ್ದರೆಂದು ಗುರುತಿಸುವ ಪ್ರಯತ್ನ ಜಿ. ಎಸ್. ದೀಕ್ಷಿತ್,[34] ಎಂ. ವಿ. ಕೃಷ್ಣರಾವ್[35] ರವರಿಂದ ನಡೆದಿದೆಯಾದರೂ ಇದಕ್ಕೆ ಸರಿಯಾದ ಆಕರಗಳಿಲ್ಲವೆನ್ನುವುದು ಗಮನಾರ್ಹವಾದ ಅಂಶ.

ಈ ಮೇಲೆ ಹೇಳಿದ ಎಲ್ಲಾ ಘಟನೆಗಳಿಗೆ ಸಾಕ್ಷಿಯಾದ ಕೆಂಪೇಗೌಡರು ಕ್ರಿ. ಶ. 1608ರವರೆಗೆ ಜೀವಿಸಿದ್ದರೆಂದು ತಿಳಿದುಬರುತ್ತದೆ.[36] ಕ್ರಿ. ಶ. 1588ರಲ್ಲಿ ತಮ್ಮ ಪ್ರೀತಿಯ ದೈವವಾದ ಶಿವಗಂಗೆಯ ಶಿವನ ಸಾನ್ನಿಧ್ಯದಲ್ಲಿ ತಾವು ಸದಾ ಭಕ್ತರಾಗಿರಬೇಕೆಂಬ ಭಾವದಿಂದ ತಮ್ಮ ಕಂಚಿನ ಪ್ರತಿಮೆಯನ್ನು ಮಾಡಿಸಿ ದೇವಾಲಯದಲ್ಲಿರಿಸಿದರು.[37]

ಕೆಂಪೇಗೌಡರ ರಾಜ್ಯವಿಸ್ತಾರ

ಇವರ ಅಧಿಪತ್ಯಕ್ಕೆ ಒಳಪಟ್ಟ ಪ್ರದೇಶಗಳ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಯಲಹಂಕ ನಾಡಪ್ರಭುಗಳ ರಾಜ್ಯವು ಇಂದಿನ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆಯ ಕೆಲವು ಭಾಗಗಳು, ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಕೆಲವು ಪ್ರದೇಶಗಳನ್ನು ಒಳಗೊಂಡಿತ್ತೆಂದು ಭಾವಿಸಲಾಗಿದೆ.[38]

ಕೆಂಪೇಗೌಡರು ತಮ್ಮ ಮನೆತನದಲ್ಲಿ ಆಚರಿಸಿಕೊಂಡು ಬಂದಿದ್ದ ಕಂದಾಚಾರವನ್ನು ನಿಲ್ಲಿಸಿದರು. ಅವರ ಕುಲದಲ್ಲಿ ವಿವಾಹವಯಸ್ಕ ಕನ್ಯೆಯರ ಬೆರಳುಗಳನ್ನು ಅಂದರೆ ಉಂಗುರದ ಬೆರಳು ಮತ್ತು ಕಿರುಬೆರಳುಗಳನ್ನು ಕತ್ತರಿಸುವ ಸಂಪ್ರದಾಯವಿತ್ತು. ಅದನ್ನು ಇವರು ತಮ್ಮ ಕುಟುಂಬದಲ್ಲಿ ನಿಲ್ಲಿಸಿದರು.[39] ಈ ಪದ್ಧತಿ ಅವರ ವಂಶಜರ ಇತರ ಕುಟುಂಬಗಳಲ್ಲಿ 1874ರವರೆಗೆ ಬಳಕೆಯಲ್ಲಿದ್ದುದು ಇತಿಹಾಸ ಗ್ರಂಥಗಳಲ್ಲಿ ದಾಖಲಾಗಿದೆ.[40]

ಎರಡನೇ ಕೆಂಪೇಗೌಡ

ಇವರು ಯಲಹಂಕ ಪಾಳೆಯಗಾರರ ವಂಶದ ಮತ್ತೊಬ್ಬ ಪ್ರಮುಖ ಆಡಳಿತಗಾರ. ಈತನ ಆಡಳಿತಾವಧಿಯನ್ನು ಸು. ಕ್ರಿ. ಶ. 1578 ರಿಂದ 1658 ಎಂದು ಗುರುತಿಸಲಾಗಿದೆ.[41] ಕ್ರಿ.ಶ. 1623ರಲ್ಲಿ ಗುಡೇಮಾರನ ಹಳ್ಳಿಯ ತಳವಾರ ಗಂಗನು ಮಾಗಡಿಯ ಮೇಲೆ ಆಕ್ರಮಣ ಮಾಡಿ ಅದನ್ನು ವಶಪಡಿಸಿಕೊಂಡನು. ಕೆಂಪೇಗೌಡರು ಮಾಗಡಿಯ ಮೇಲೆ ದಂಡೆತ್ತಿ ತಳವಾರ ಗಂಗನನ್ನು ಸೋಲಿಸಿ ಆತನಿಂದ ಮಾಗಡಿಯನ್ನು ಪುನಃ ವಶಪಡಿಸಿ ಕೊಂಡರು.[42] ಇದಾದನಂತರ ಕ್ರಿ. ಶ. 1638ರಲ್ಲಿ ಬಿಜಾಪುರದ ಆದಿಲ್‌ಷಾಹಿಗಳ ಸೇನಾನಿ ರಣದುಲ್ಲಾಖಾನನು ದಂಡೆತ್ತಿ ಬಂದಾಗ ಆತನನ್ನು ವೀರಾವೇಶದಿಂದ ಎದುರಿಸಿ, ಮೂರು ದಿನಗಳ ಮುತ್ತಿಗೆಯ ನಂತರ ಖಾನನಿಗೆ ಶರಣಾಗಿ ತನ್ನ ಎಲ್ಲಾ ರಾಜ್ಯವನ್ನು ಆತನಿಗೆ ಇತ್ತು ಸಂಧಿಯನ್ನು ಮಾಡಿಕೊಂಡು, ಆತನ ಸಾಮಂತನಾಗಿ ಆಡಳಿತ ಪ್ರಾರಂಭಿಸಿದನೆಂದು *ಕಂಠೀರವ ನರಸರಾಜ ವಿಜಯ, ಚಿಕ್ಕದೇವರಾಜ ವಂಶಾವಳಿ* ನಿರೂಪಿಸುತ್ತವೆ.[43] ತದನಂತರ ರಣದುಲ್ಲಾಖಾನನ ಸೈನ್ಯವನ್ನು ಎದುರಿಸಲು ಸಾಧ್ಯವಾಗುವಂತೆ, ರಣಧೀರ ಕಂಠೀರವರು ಇವರ ಆಳ್ವಿಕೆಯ ಪ್ರದೇಶಗಳನ್ನು ದಾಳಿಮಾಡಿ ವಶಪಡಿಸಿಕೊಳ್ಳುತ್ತಾರೆ. ರಣದುಲ್ಲಾ ಖಾನನಿಂದ ಪರಾಜಿತನಾಗಿ ಬೆಂಗಳೂರನ್ನು ಆತನಿಗೆ ಬಿಟ್ಟುಕೊಟ್ಟು ಮಾಗಡಿಗೆ ಬಂದ ಇವರು, ಮಾಗಡಿಯನ್ನು ರಾಜಧಾನಿಯನ್ನಾಗಿ ಪರಿವರ್ತಿಸಿಕೊಂಡರು.[44] ಅಲ್ಲಿನ ಕೋಟೆಯನ್ನು ಪಟ್ಟಣವನ್ನು ಅಭಿವೃದ್ಧಿಪಡಿಸಿದುದರಿಂದ ಮಾಗಡಿಯ ಕೆಂಪೇಗೌಡರೆಂದು ಖ್ಯಾತರಾದರು.[45] ಇದಾದ ನಂತರ ಮತ್ತೆ ನಮಗೆ ಇವರ ಸಾಧನೆಯ ಬಗ್ಗೆ ತಿಳಿಯುವ ವಿಷಯ 1650ರಲ್ಲಿ ಹೆಬ್ಬೂರಿನ ಮೇಲೆ ರಣಧೀರ ಕಂಠೀರವರು ದಾಳಿಮಾಡಿ, ಅದನ್ನು ವಶಪಡಿಸಿಕೊಂಡು,[46] ಕಂಠೀರವರು ಮುಂದುವರಿದು ಯಲಹಂಕ ನಾಡನ್ನು ಸಹ ವಶಪಡಿಸಿಕೊಳ್ಳುತ್ತಾರೆ.[47] ಇದಕ್ಕಿಂತ ಹೆಚ್ಚಿನ ರಾಜಕೀಯ ಸಾಧನೆಯ ವಿವರಗಳು ಇವರ ಆಡಳಿತಾವಧಿಗೆ ಸಂಬಂಧಪಟ್ಟಂತೆ ತಿಳಿದುಬರುವುದಿಲ್ಲ. ಇವರ ಸಾಂಸ್ಕೃತಿಕ ಸಾಧನೆಗಳನ್ನು ಬ. ನ ಸುಂದರರಾವ್‌ರವರ ಬೆಂಗಳೂರಿನ ಇತಿಹಾಸ ಕೃತಿಯಲ್ಲಿ ಕಾಣಬಹುದಾಗಿದೆ.

ಮುಮ್ಮಡಿ ಕೆಂಪೇಗೌಡರು (1658-1667) ಮತ್ತು ಆನಂತರದ ಅರಸರು

ಇವರು ಅಧಿಕಾರಕ್ಕೆ ಬಂದ ತಕ್ಷಣ ಮೈಸೂರಿನ ಅರಸರಾದ ದೊಡ್ಡದೇವರಾಜ ಒಡೆಯರ್‌ರವರ ದಾಳಿಯನ್ನು ಎದುರಿಸಬೇಕಾಯಿತು. ಈ ಯುದ್ಧದಲ್ಲಿ ಕಂದಹಾಳ ಬೆಳವತ್ತಗಳನ್ನು[48] 1660ರಲ್ಲಿ ಅಮೃತ್ತೂರು, ಚೆನ್ನಗರ ಮತ್ತು ಕುಣಿಗಲ್‌ಗಳನ್ನು ಕಳೆದುಕೊಂಡರು.[49] ಮತ್ತೆ ಕುಣಿಗಲ್ ಪ್ರಾಂತ್ಯದ ಹೆಬ್ಬೂರು, ಅಮೃತ್ತೂರು ಪ್ರದೇಶಗಳನ್ನು ದೊಡ್ಡದೇವರಾಜ ಒಡೆಯರು ಯಲಹಂಕ ನಾಡಪ್ರಭುಗಳಿಂದ ಕಿತ್ತುಕೊಂಡರು.[50] 1667ರಲ್ಲಿ ಕುಣಿಗಲ್ ಮತ್ತು ಹುಲಿಯೂರು ದುರ್ಗಗಳನ್ನು ಮೈಸೂರು ಅರಸರು ಪಡೆದುಕೊಂಡರು.[51] 1667ರ ನಂತರ 1728 ಅವಧಿಯಲ್ಲಿ ಮುಮ್ಮಡಿ ದೊಡ್ಡವೀರಪ್ಪಗೌಡ, ಇಮ್ಮಡಿ ಕೆಂಪವೀರಪ್ಪಗೌಡ ಹಾಗೂ ಮುಮ್ಮಡಿ ಕೆಂಪವೀರಪ್ಪಗೌಡರು ಮಾಗಡಿ ಸಂಸ್ಥಾನ ಅಥವಾ ಯಲಹಂಕ ನಾಡಪ್ರಭುಗಳಾಗಿ ಆಳಿದರು. ಇದರ ತರುವಾಯ 1728ರಲ್ಲಿ ಮೈಸೂರಿನ ರಾಜರಾದ ದೊಡ್ಡಕೃಷ್ಣರಾಜ ಒಡೆಯರ ದಳವಾಯಿ ದೇವರಾಜಯ್ಯನು ಮಾಗಡಿಯ ಮೇಲೆ ದಾಳಿಮಾಡಿ ಮುಮ್ಮಡಿ ಕೆಂಪವೀರಪ್ಪಗೌಡರನ್ನು ಬಂಧಿಸಿ ಶ್ರೀರಂಗಪಟ್ಟಣದಲ್ಲಿ ಗೃಹಬಂಧನದಲ್ಲಿರಿಸಿದನು.[52] ಅವರು ಅಲ್ಲಿಯೇ ತಮ್ಮ ಕೊನೆಯ ದಿನಗಳನ್ನು ಕಳೆದರು.[53]

ಯಲಹಂಕ ನಾಡಪ್ರಭುಗಳು ತಮ್ಮ ರಾಜಕೀಯ ಜೀವನವನ್ನು ಸಾಮಂತರಾಗಿ ಪ್ರಾರಂಭಿಸಿ, ಸಾಮಂತರಾಗಿಯೇ ಉಳಿದು, ಸಂಸ್ಥಾನವನ್ನು ನಿರ್ಮಿಸಿ, ಸಾಂಸ್ಕೃತಿಕವಾಗಿ ಪೋಷಿಸಿ ಒಂದು ಪ್ರದೇಶದ ಸರ್ವಾಂಗೀಣ ಬೆಳವಣಿಗೆಗೆ ಕಾರಣರಾದರು.

ನಾಡಪ್ರಭುಗಳ ಶಾಸನಗಳ ಸಮೀಕ್ಷೆ

ಯಲಹಂಕ ನಾಡಪ್ರಭುಗಳ ಶಾಸನಗಳನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಕೆಂಪೇಗೌಡ ಅಧ್ಯಯನ ಪೀಠ ಹೊರತಂದಿದೆ. ಇದರಲ್ಲಿ ಒಟ್ಟು 95 ಶಾಸನಗಳನ್ನು ಯಲಹಂಕ ನಾಡಪ್ರಭುಗಳ ಕಾಲದ್ದು ಎಂದು ಗುರ್ತಿಸಿ ಪ್ರಕಟಿಸಲಾಗಿದೆ. ಪ್ರಾರಂಭದ ಕೆಲವು ಶಾಸನಗಳನ್ನು, ಅಂದರೆ ಕ್ರಮಸಂಖ್ಯೆ ಒಂದರಿಂದ ಒಂಭತ್ತರವರೆಗಿನ ಶಾಸನಗಳನ್ನು, ಬೆಂಗಳೂರಿನ ಕೆಂಪೇಗೌಡರ ವಂಶದ ಅರಸರ ಶಾಸನಗಳೆಂದು ಗುರುತಿಸಲು ಸಾಧ್ಯವಿಲ್ಲವೆಂದು ಶಾಸನ ಸಂಪುಟದ ಸಂಪಾದಕರು ಪ್ರಸ್ತಾವನೆಯಲ್ಲಿ ಭಾವಿಸುತ್ತಾರೆ.

ಯಲಹಂಕ ನಾಡು ಕೆಂಪೇಗೌಡರ ವಂಶಸ್ಥರಿಗಿಂತ ಮುಂಚಿನಿಂದಲೆ ಅಸ್ತಿತ್ವದಲ್ಲಿತ್ತೆಂದು ಶಾಸನಗಳು ನಿರೂಪಿಸುತ್ತವೆ. ಅಂದರೆ ಮೂರನೆಯ ಬಲ್ಲಾಳನ ಕಾಲಕ್ಕಾಗಲೇ ಯಲಹಂಕ ನಾಡು ಆಡಳಿತ ಘಟಕವಾಗಿದ್ದನ್ನು ಶಾಸನ ಸಂಪುಟಗಳಲ್ಲಿ ಪ್ರಕಟಿಸಿರುವ ಶಾಸನಗಳಿಂದಲೇ ತಿಳಿದು ಬರುತ್ತದೆ. ಎಲ್ಲಾ ಇತಿಹಾಸಕಾರರು, ರಣಭೈರೇಗೌಡನನ್ನು ಈ ವಂಶದ ಮೂಲ ಪುರುಷನೆಂದು ಒಪ್ಪಿಕೊಳ್ಳುತ್ತಾರೆ. 1887ರಲ್ಲಿ ಪ್ರಕಟಗೊಂಡಿರುವ ಮಹೀಶೂರು ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್‌ರವರ ವಂಶಾವಳಿಯಲ್ಲಿ ಸಹ ಈ ಉಲ್ಲೇಖವಿದೆ. ಆನಂತರ ಬಿ.ಎಲ್. ರೈಸ್‌ರ (1897) ಮತ್ತು ಹಯವದನ ರಾವ್‌ರವರ, ಮೈಸೂರು ಗೆಜೆಟಿಯರ್, ಸಂಪುಟ 5 (1930), ಸೂರ್ಯನಾಥ ಯು ಕಾಮತ್‌ರವರು ಸಂಪಾದಿಸಿರುವ (1989 ಪು. 69-72) ಬೆಂಗಳೂರು ಗ್ರಾಮಾಂತರ ಜಿಲ್ಲೆ ಗೆಜೆಟಿಯರ್ ಹಾಗೂ ಎಂ. ಜಿ. ಮಂಜುನಾಥರು ಸಂಪಾದಿಸಿರುವ ಶಾಸನ ಸಂಪುಟಗಳಲ್ಲಿ (2006-ಪ್ರಸ್ತಾವನೆ) ಈ ಉಲ್ಲೇಖಗಳನ್ನು ಕಾಣಬಹುದು. ಆದರೆ ಈ ಕೃತಿಗಳು 3ನೇ ಬಲ್ಲಾಳನ ಕಾಲದ ಶಾಸನಗಳಲ್ಲಿ ಕಂಡುಬರುವ ಬೈಯಿರೆಗೌಡನೇ ಬೆಂಗಳೂರಿನ ಕೆಂಪೇಗೌಡರ ಮೂಲ ಪುರುಷನೆಂದು ಒಪ್ಪಿಕೊಂಡಿಲ್ಲ. ಬಹುತೇಕ ಎಲ್ಲಾ ಅರಸರುಗಳನ್ನು ಉಲ್ಲೇಖಿಸುವ ಕುಕ್ಕೆಸುಬ್ರಮಣ್ಯದ ಕ್ರಿ.ಶ. 1698ರ ಮುಮ್ಮಡಿ ದೊಡ್ಡ ವೀರಪ್ಪಗೌಡರ

ಶಾಸನದಲ್ಲಿ ಸಹ ಇವರ ಅಂದರೆ ಭೈರೇಗೌಡರ ಹೆಸರಿನ ಉಲ್ಲೇಖವಿಲ್ಲ. ಅಂದರೆ ಅದು ಜೀಯಪ್ಪಗೌಡನಿಂದ ವಂಶಾವಳಿಯನ್ನು ಉಲ್ಲೇಖಿಸುತ್ತದೆ. ಹೀಗೆಂದ ಮಾತ್ರಕ್ಕೆ ಭೈರೇಗೌಡರ ಅಸ್ತಿತ್ವವನ್ನು ತಳ್ಳಿಹಾಕುವಂತಿಲ್ಲ. ಕ್ರಿ. ಶ. 14ನೇ ಶತಮಾನದ ಆದಿ ಭಾಗದಲ್ಲಿ ಆಗಿಹೋದ ಭೈರೇಗೌಡರನ್ನು ಕ್ರಿ. ಶ. 1698ರ ಶಾಸನ ನಿಖರವಾಗಿ ಗುರ್ತಿಸಬೇಕೆಂದು ಭಾವಿಸುವುದು ಅಸಾಧ್ಯವಾದುದು.

ಆದರೆ ಈ ಮೇಲೆ ಹೇಳಿದ ಶಾಸನಗಳಲ್ಲಿ ಯಾವುದೂ ಅವರಿಗೆ ಯಲಹಂಕ ನಾಡಪ್ರಭುತ್ವ ಬಂದ ಬಗೆಯನ್ನು ತಿಳಿಸುವುದಿಲ್ಲ. ಆದರೆ ಕ್ರಿ. ಶ. 1512ರ ಕೆಂಪನಂಜೇಗೌಡರ ಕಾಲದ ಶಾಸನವು 'ಶ್ರೀಮನ್ಮಹಾ ಕೃಷ್ಣರಾಯ'ರ ಕಾಲದಲ್ಲಿ ಯಲಹಂಕ ನಾಡಪ್ರಭು ಅಮರನಾಯಕ ಕೆಂಪನಂಜೇಗಉಡರು ಎಂದು ಉಲ್ಲೇಖಿಸುತ್ತದೆ. ಇದೇ ಬಗೆಯ ಉಲ್ಲೇಖ ಕ್ರಿ. ಶ. 1515ರ ಕೆಂಪೋಹಳ್ಳಿ ಶಾಸನದಲ್ಲಿ ಸಹ ಕಂಡುಬರುತ್ತದೆ. ಆದರೆ ಕ್ರಿ. ಶ. 1532ನೇ ವರ್ಷದ ದಾಸರಹಳ್ಳಿಯ ಶಾಸನ 'ಅಚ್ಯುತರಾಯ ಮಹಾರಾಯರು ಕೆಂಪದೇವರಸಗೌಡರಿಗೆ ನಾಯಕ ತನಕೆ ಪಾಲಿಸಿದ ಎಲಹಂಕ ರಾಜ್ಯಕ್ಕೆ' ಎಂದು ಉಲ್ಲೇಖಿಸುತ್ತದೆ. ಅಂದರೆ ಕ್ರಿ. ಶ. 1532ರ ಆಸುಪಾಸಿನಲ್ಲಿ ಯಲಹಂಕ ರಾಜ್ಯವನ್ನು ಕೆಂಪನಂಜಗೌಡರು ಅಥವಾ ಕೆಂಪನಂಜೇಗೌಡರಿಗೆ ನಾಯಕತನಕ್ಕೆ ನೀಡಿದ್ದು ಖಚಿತವಾಗುತ್ತದೆ. ಈ ಉಲ್ಲೇಖದಿಂದ ವೇದ್ಯವಾಗುವುದೇನೆಂದರೆ ನಾಡಪ್ರಭುಗಳಾಗಿದ್ದವರನ್ನು ಅಚ್ಯುತರಾಯನು ರಾಜ್ಯದ ಅಧಿಕಾರಿಗಳಾಗಿ ಉನ್ನತ ದರ್ಜೆಗೇರಿಸಿದನು. ಇದಕ್ಕೆ ಪೂರ್ವದಲ್ಲಿ ಯಲಹಂಕ ನಾಡಿನ ನಾಡಗೌಡತನ ಬೆಳೆದದ್ದನ್ನು ಇಲ್ಲಿ ಗಮನಿಸುವುದು ಅತ್ಯವಶ್ಯಕವಾಗುತ್ತದೆ. ಈ ದಿಸೆಯಲ್ಲಿ ಯಲಹಂಕನಾಡನ್ನು ಉಲ್ಲೇಖಿಸುವ ಶಾಸನ ಸಂಪುಟದ ಪ್ರಾರಂಭದ ಶಾಸನಗಳನ್ನು ಗಮನಿಸೋಣ. ಕ್ರಿ. ಶ. 1341ರ ನಾಗಶೆಟ್ಟಿಹಳ್ಳಿಯ ಶಿಲಾಶಾಸನದಲ್ಲಿ ಚಿಕ್ಕಬಯಿರೆಯ ನಾಯಕರನ್ನು 'ಅವರ ಮನೆಯ ಯೆಕ್ಕಟಿಗ ಶ್ರೀಮನು ಮಹಾಸಾಮಸ್ತಾಧಿಪತಿ ಮೀಸೆಯರ ಗಂಡ ಚಿಕ್ಕಬಯಿರೆಯ ನಾಯಕರೂ ಅವರ ಮಇದುನ ತೊಳೆಯ ನಾಯಕರೂ ಶ್ರೀಮನು ಮಹಾಯೆಲಹಕ್ಕನಾಡ ಪ್ರಭುಗಳು ಬಇರಿದೇವ, ಕಾಮಿಯಪ್ಪ' ಇತ್ಯಾದಿಗಳನ್ನು ಉಲ್ಲೇಖಿಸುತ್ತದೆ. ಇದೇ ಬಗೆಯ ಉಲ್ಲೇಖವನ್ನು ಗಾಣಿಗರಹಳ್ಳಿಯ ಶಾಸನದಲ್ಲಿ ಸಹ ಕಾಣಬಹುದು. ಕ್ರಿ. ಶ. 1471ರ ನಂದಿಗುಂದದ ಶಾಸನ 'ಹಕ್ಕನಾಡ ಹಿರಿಯ ಬಯರೆಗೌಡನ ಮಗ ಮಂಜೇಗೌಡನಿಗೆ ನಂದಿಗುಂದ' ಎಂದು ಉಲ್ಲೇಖಿಸುತ್ತದೆ.

ಈ ಉಲ್ಲೇಖಗಳಲ್ಲಿ ಎರಡು ನಮ್ಮ ಗಮನಸೆಳೆಯುತ್ತವೆ. ಚಿಕ್ಕ ಭೈರೇಗೌಡನನ್ನು ಯಲಹಂಕ ನಾಡಿನ ನಾಯಕನೆಂದು ಕ್ರಿ. ಶ. 1341ರ ಶಾಸನ ಗುರುತಿಸಿದೆಯಲ್ಲದೆ ಯಲಹಂಕ ನಾಡಪ್ರಭುವನ್ನು ಹೆಸರಿಸುವಾಗ ಮತ್ತೆ ಭೈರೇಗೌಡನನ್ನು ಹೆಸರಿಸುತ್ತದೆ. ಎರಡನೆಯ ಬಾರಿ ಬರುವ 'ಬಯಿರೆದೇವ'ನ ಉಲ್ಲೇಖ ಮತ್ತು ಕ್ರಿ. ಶ. 1471ರ ಶಾಸನದಲ್ಲಿ ಕಂಡುಬರುವ ಯಲಹಂಕ ನಾಡಪ್ರಭು ಹಿರಿಯ ಬಯಿರೆಗೌಡನ ಮಗ ಮಂಜೇಗೌಡನಿಗೆ ಎಂಬ ಪ್ರಯೋಗ ಮತ್ತೆ ನಮ್ಮನ್ನು ಗೊಂದಲಕ್ಕೆ ಈಡು ಮಾಡುತ್ತದೆ.

ಹಿರಿಯ ಭೈರೇಗೌಡರಿಗೆ ಬಹುಶಃ ಚಿಕ್ಕ ಭೈರೇಗೌಡ (ಕ್ರಿ. ಶ. 1342ರ ಶಾಸನದ ಯಲಹಂಕ ನಾಡಿನ ನಾಯಕ) ಆತನ ಮಗ ಬಯರೆಗೌಡ (ಕ್ರಿ. ಶ. 1471ರ ಶಾಸನದಲ್ಲಿನ ಉಲ್ಲೇಖದಂತೆ) ಎಂಬ ಮಕ್ಕಳಿದ್ದಂತೆ ತೋರುತ್ತದೆ. ಯಲಹಂಕ ನಾಡಪ್ರಭುಗಳು ತಮಿಳುನಾಡಿನ ಪ್ರದೇಶದಿಂದ ವಲಸೆ ಬಂದವರೆಂದು ಒಪ್ಪಿಕೊಂಡಲ್ಲಿ ಎಲ್ಲಾ ಇತಿಹಾಸ ವಿದ್ವಾಂಸರು ಹೇಳಿರುವಂತೆ ಭೈರೇಗೌಡರೆ ಯಲಹಂಕ ನಾಡಪ್ರಭುಗಳ ವಂಶಸ್ಥರೆಂದು ಒಪ್ಪಿಕೊಂಡಲ್ಲಿ ಭೈರೇಗೌಡರನ್ನು ಈ ಮೇಲಿನ ಶಾಸನಗಳಲ್ಲಿ ಉಲ್ಲೇಖಿತವಾದ ಹಿರಿಯ ಭೈರೇಗೌಡರೊಂದಿಗೆ ಸಮೀಕರಿಸಬಹುದು. ಮೂರನೆಯ ಹೊಯ್ಸಳ ಬಲ್ಲಾಳನು, ಅಣ್ಣಾಮಲೈ ಮತ್ತು ದೊರಸಮುದ್ರಗಳ ನಡುವೆ ಸಾಮ್ರಾಜ್ಯದ ರಕ್ಷಣೆಗಾಗಿ ಒದ್ದಾಡುತ್ತಿದ್ದ ಕಾಲದಲ್ಲಿ ರಣಭೈರೇಗೌಡರು ಅವರೊಡನೆ ಸಹಕರಿಸಿದ್ದರಿಂದ ಆ ಪ್ರದೇಶದ ನಾಯಕತನವನ್ನು

ರಣಭೈರೇಗೌಡನ ಮಗ ಚಿಕ್ಕಭೈರೇಗೌಡ, ಅಥವಾ ಯಲಹಂಕ ನಾಡಪ್ರಭು ಭೈರೇಗೌಡರಿಗೆ ನೀಡಿರಬೇಕೆಂದು ಭಾವಿಸಬೇಕಾಗುತ್ತದೆ.

ಹೀಗೆ ನಾಯಕತನ ಬಂದನಂತರ ತಮ್ಮ ಎಲ್ಲೆಗಳನ್ನು ಆಡಳಿತದ ಅನುಕೂಲಕ್ಕಾಗಿ ವಿಭಾಗಿಸಿಕೊಂಡದ್ದನ್ನು ಉಮ್ಮತ್ತೂರಿನ ನಾಯಕರು ಮತ್ತು ಮೈಸೂರು ಒಡೆಯರ್ ಕುಟುಂಬದಲ್ಲಿ ಕಾಣುತ್ತೇವೆ. ಉಮ್ಮತ್ತೂರಿನ ನಾಯಕರ ಮತ್ತೊಂದು ಶಾಖೆಯಾದ ಹುರದ ಅರಸರು ಉಮ್ಮತ್ತೂರಿನ ನಾಯಕರ ವಂಶದವರೇ, ಹಾಗಾಗಿ ಅದು ಅಂದಿನ ಕಾಲದ ವ್ಯವಸ್ಥೆಯಾಗಿತ್ತೆಂದು ಭಾವಿಸಿ, ಹೊಯ್ಸಳ ಶಾಸನಗಳಲ್ಲಿನ ಭೈರೇಗೌಡರನ್ನು ಯಲಹಂಕ ನಾಡಪ್ರಭುಗಳ ಮೂಲ ಪುರುಷರೆಂದು ಭಾವಿಸಬೇಕಾಗುತ್ತದೆ.

ವಂಶಾವಳಿ ಶಾಸನಗಳಲ್ಲಿ ಉಲ್ಲೇಖವಾಗಿರುವ ಅವರ ವಂಶಾವಳಿಯನ್ನು ಮತ್ತು ಶಾಸನಗಳಲ್ಲಿ ಕಂಡುಬರುವ ಕಾಲಗಳನ್ನು ಈ ಮುಂದಿನಂತೆ ಗುರುತಿಸಬಹುದು.

ಭೈರೇಗೌಡ ಅಥವಾ ರಣಭೈರೇಗೌಡ [54]

↓

ಜೀಯಪ್ಪ

↓

ಗಿಡ್ಡಪ್ಪ

↓

ನಾಚಪ್ಪ

↓

ಕೆಂಪನಾಚಪ್ಪ[55] (ಕ್ರಿ. ಶ. 1512–1533*)

↓

ಒಂದನೆ ಕೆಂಪೇಗೌಡ[56] (ಕ್ರಿ. ಶ. 1533–1599)

↓

ಇಮ್ಮಡಿ ಕೆಂಪೇಗೌಡ[57] (ಕ್ರಿ. ಶ. 1599–1656)

↓

ಮುಮ್ಮಡಿ ಕೆಂಪೇಗೌಡ[58] (ಕ್ರಿ. ಶ. 1656–1681)

↓

ಮುಮ್ಮಡಿ ದೊಡ್ಡವೀರಪ್ಪಗೌಡ[59] (ಕ್ರಿ. ಶ. 1681–1697)

↓

ಇಮ್ಮಡಿ ಕೆಂಪೇಗೌಡ[60] (ಕ್ರಿ. ಶ. 1697–1708)

↓

ಮುಮ್ಮಡಿ ಕೆಂಪವೀರಪ್ಪ ಗೌಡ[61] (ಕ್ರಿ. ಶ. 1708–1728)

(* ಆವರಣದಲ್ಲಿ ಕೊಟ್ಟಿರುವ ಅವರ ಆಡಳಿತ ಕಾಲವನ್ನು ಯಲಹಂಕ ನಾಡಪ್ರಭುಗಳ ಶಾಸನ ಸಂಪುಟದಲ್ಲಿ ಪ್ರಕಟವಾಗಿರುವ ಅವರ ಪ್ರಥಮ ಮತ್ತು ಕೊನೆಯ ಶಾಸನಗಳ ಕಾಲವನ್ನು ಆಧರಿಸಿ ನೀಡಲಾಗಿದೆ).

ಯಲಹಂಕ ನಾಡಪ್ರಭುಗಳ ವಂಶದ ಪ್ರಾರಂಭದ ಅರಸು ಭೈರೇಗೌಡರನ್ನು ಉಲ್ಲೇಖಿಸುವ ಪ್ರಥಮ ಶಾಸನ. ಕ್ರಿ. ಶ. 1471ರ ನಂದಿಗುಂದದ ಶಾಸನ. ಹಾಗಾಗಿ ಬಲ್ಲಾಳನ ಕಾಲದಲ್ಲಿ ಉಲ್ಲೇಖ ವಾಗುವ ಬಯಿರೆಗಉಡನ ಕಾಲಕ್ಕೂ ಇವರ ಕಾಲಕ್ಕೂ ಕಂಡುಬರುವ ಕಾಲದ ಅಂತರ ಸುಮಾರು 130 ವರ್ಷಗಳು. ಆದರೆ ಇಲ್ಲಿ ಗಮನಿಸಬೇಕಾಗಿರುವುದೇನೆಂದರೆ ಕ್ರಿ. ಶ. 1342ರಲ್ಲಿ ಪ್ರಥಮವಾಗಿ ಬಯಿರೆಗವುಡನನ್ನು ಯಲಹಂಕ ನಾಡಪ್ರಭುವೆಂದು ಕರೆಯಲಾಗಿದೆ. ಯಲಹಂಕ ನಾಡಪ್ರಭುಗಳ ಶಾಸನದಲ್ಲಿ ಉಲ್ಲೇಖಿತವಾದ ಭೈರೇಗೌಡರನ್ನು ಕ್ರಿ. ಶ. 1342 ಶಾಸನದ ಭೈರೇಗೌಡರೊಂದಿಗೆ ಸಮೀಕರಿಸುವುದಾದಲ್ಲಿ ಅವರು ನೂರ ಮೂವತ್ತು ವರ್ಷಗಳು ಆಳ್ವಿಕೆ ಮಾಡಿದರೆಂದಾಗುತ್ತದೆ. ಇದು ಅಸಂಬದ್ಧ. ಪ್ರಾರಂಭದ ಅರಸರುಗಳನ್ನು ಅಂದರೆ ಜಯ್ಯಪ್ಪ, ಗಿಡ್ಡೇಗೌಡ, ನಾಚಪ್ಪರನ್ನು ಕ್ರಿ. ಶ. 1697ರ ಕುಕ್ಕೆಸುಬ್ರಮಣ್ಯದ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಅದಕ್ಕೆ ಪೂರ್ವದ ಯಾವ ಶಾಸನಗಳಲ್ಲಿಯೂ ಇವರ ಉಲ್ಲೇಖವಿಲ್ಲ. ಆದ್ದರಿಂದ ಏಕಾಏಕಿ 1697ರಲ್ಲಿ ಉಲ್ಲೇಖಿತವಾದ ಈ ಹೆಸರುಗಳು ಸರಿ ಎಂದು ಸಾರಾಸಗಟಾಗಿ ಒಪ್ಪಿಕೊಳ್ಳಲಾಗುವುದಿಲ್ಲ. ಈ ಕಾಲದ ಹೊತ್ತಿಗೆ ಏಕಾಂಬರ ದೀಕ್ಷಿತನ ವೀರಭದ್ರ ವಿಜಯ ಕಾವ್ಯವು ರಚನೆಯಾಗಿತ್ತು ಮತ್ತು ಪ್ರಚಾರದಲ್ಲಿತ್ತು. ಕುಕ್ಕೆಸುಬ್ರಮಣ್ಯದ ಶಾಸನದ ಕರ್ತೃ ಅಲ್ಲಿ ಉಲ್ಲೇಖಿತವಾಗಿರುವ ವಂಶಾವಳಿಯನ್ನು ಉಲ್ಲೇಖಿಸಿರುವ ಎಲ್ಲಾ ಸಾಧ್ಯತೆಗಳಿವೆ. ಹಾಗಾಗಿ ಈ ಹೆಸರುಗಳ ಮರು ಪರಿಶೀಲನೆ ಅವಶ್ಯಕವೆಂದಾಗುತ್ತದೆ. ಹಾಗೆಂದಾದರೂ ಏಕಾಂಬರ ದೀಕ್ಷಿತನು ಕುಕ್ಕೆಯ ಶಾಸನದಲ್ಲಿ ಬರುವ ಗಿಡ್ಡೇಗೌಡನ ನಂತರದ ನಾಚೇಗೌಡನನ್ನು ಕೈಬಿಟ್ಟಿದ್ದಾನೆ. ಅಂದಮೇಲೆ ಇಲ್ಲಿ ತೊಡಕುಗಳು ಮತ್ತಷ್ಟು ಜಟಿಲವಾಗುತ್ತವೆ. ಎಲ್ಲಾ ಇತಿಹಾಸಕಾರರು ಭೈರೇಗೌಡನನ್ನು ಈ ವಂಶದ ಮೂಲಪುರುಷನೆಂದು ಒಪ್ಪಿಕೊಂಡಿದ್ದಾರೆ. ಆದರೆ ಆತನನ್ನು ಗುರುತಿಸುವಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಕ್ರಿ. ಶ. 1342ರ ಶಾಸನ ಭೈರೇಗೌಡನೆಂದು ಒಪ್ಪಿಕೊಂಡರೆ ಕೆಲವರು ಕ್ರಿ. ಶ. 1471ರ ನಂದಿಗುಂದದ ಶಾಸನದ ಭೈರೇಗೌಡರೆಂದು ಸಮೀಕರಿಸಿಕೊಂಡಿದ್ದಾರೆ. ಹಿಂದಿನ ಅರಸು ಮನೆತನಗಳು ಒಂದೇ ಹೆಸರನ್ನು ಪದೇ ಪದೇ ಬಳಸಿರುವುದನ್ನು ಗಮನಿಸಿದಾಗ ಹಾಗೂ ಗಿಡ್ಡೇಗೌಡರ ಕಾಲದಲ್ಲಿ ನಡೆದ ಪವಾಡದ ಐತಿಹ್ಯವನ್ನು ಗಮನದಲ್ಲಿಟ್ಟುಕೊಂಡು ಅಲ್ಲಿಂದಾಚೆಗೆ ಕೆಂಪ ಪದ ಎಲ್ಲಾ ಅರಸರ ಹೆಸರಲ್ಲಿರುವುದನ್ನು ಗಮನಿಸಿ, ಅವರಿಗಿಂತ ಹಿಂದೆ ಸಹ ಭೈರೇಗೌಡ ಹೆಸರು ಹಲವಾರು ಬಾರಿ ಬಳಕೆಯಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹಾಗಾದರೆ ರಣಭೈರೇಗೌಡರನ್ನು 1342ರ ಶಾಸನದ ಭೈರೇಗೌಡರೊಂದಿಗೆ ಸಮೀಕರಿಸಿದಾಗ ಅದೇ ಶಾಸನದಲ್ಲಿ ಕಂಡುಬರುವ ಚಿಕ್ಕಬಯಿರೇ ನಾಯಕರು ನಮ್ಮ ಗಮನ ಸೆಳೆಯುತ್ತಾರೆ. ಇದನ್ನು ಹೀಗೆ ಗುರುತಿಸಬಹುದು.

ರಣಭೈರೇಗೌಡ (ನಾಡಗೌಡ)

↓

ಚಿಕ್ಕ ಬಯಿರೇ ನಾಯಕ (ಮಹಾಪಾಸಾಯಿತ)

↓

ಭೈರೇಗೌಡ (1471ರ ಶಾಸನದ ವ್ಯಕ್ತಿ)

↓

ನಾಚಪ್ಪ ಅಥವಾ ನಾಚೇಗೌಡ

ಹೀಗೆಂದಾದರೆ 130 ವರ್ಷಗಳ ಅವಧಿಗೆ ಇಬ್ಬರು ಮಹನೀಯರು ಅಂದರೆ ಕ್ರಿ. ಶ. 1342 ಶಾಸನದ ನಾಡಗೌಡ ಬಯಿರೆಗೌಡರ ಮಗ ಚಿಕ್ಕ ಭೈರೇಗೌಡ ಹಾಗೂ ಕ್ರಿ. ಶ. 1471ರ ಶಾಸನದ ಭೈರೆಗೌಡರು ಆಳಿರಬೇಕೆಂದು ಊಹಿಸಿದಲ್ಲಿ ಐತಿಹ್ಯಗಳು ಹೇಳುವಂತೆ ಮೊರಸುನಾಡಿನಿಂದ ವಲಸೆ ಬಂದ ರಣಭೈರೇಗೌಡರೇ ಕ್ರಿ. ಶ. 1342ರ ಶಾಸನದಲ್ಲಿನ ಭೈರೇಗೌಡರೆಂದು ಒಪ್ಪಿ ಈ ಪ್ರಾರಂಭದ ಅರಸರುಗಳನ್ನು ಈ ಮೇಲಿನಂತೆ ಗುರುತಿಸುವ ಪ್ರಯತ್ನ ಮಾಡಬಹುದು. ಈ ನಿಟ್ಟಿನಲ್ಲಿ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಎದ್ದು ಕಾಣುತ್ತದೆ.

ಇತ್ತೀಚೆಗೆ ಮೈಸೂರಿನಲ್ಲಿ ನಾಡಪ್ರಭು ಕೆಂಪೇಗೌಡರ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧದಲ್ಲಿ ಯಲಹಂಕ ನಾಡಪ್ರಭುಗಳ ಶಾಸನಗಳ ಬಗೆಗೆ ಬರೆಯುತ್ತಾ 30 ಶಾಸನಗಳನ್ನು ಕೂಟ ಶಾಸನಗಳೆಂದು ಕರೆದಿದ್ದಾರೆ. ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಯಲಹಂಕ ನಾಡಪ್ರಭುಗಳ ಗೋತ್ರಗಳನ್ನು ಮತ್ತು ಶಾಸನಗಳಲ್ಲಿ ಉಲ್ಲೇಖಿತವಾಗಿರುವ ವಿಜಯನಗರ ಸಾಮ್ರಾಟನ ಹೆಸರು ಮತ್ತು ಆತನ ಆಡಳಿತಾವಧಿಯನ್ನು ಆಧರಿಸಿ ಈ ನಿರ್ಣಯವನ್ನು ಕೈಗೊಂಡಿದ್ದಾರೆ. ಇಲ್ಲಿ ಕೆಲವು ವಿಚಾರಗಳನ್ನು ಗಮನಿಸಬೇಕಾದ್ದು ಅವಶ್ಯವೆನಿಸುತ್ತದೆ.

ಯಲಹಂಕ ನಾಡಪ್ರಭುಗಳ ಶಾಸನಗಳಲ್ಲಿ ಅವರನ್ನು ಚತುರ್ಥಗೋತ್ರದ, ಸದಾಶಿವಗೋತ್ರದ ಮತ್ತು ಕಾಶ್ಯಪಗೋತ್ರದವರೆಂದು ಹಲವು ದಾನಶಾಸನಗಳು ಉಲ್ಲೇಖಿಸುತ್ತವೆ. ಬಹುತೇಕವಾಗಿ ಗೋತ್ರ ಉಲ್ಲೇಖಿಸುವ ಈ ಎಲ್ಲಾ ದಾನಶಾಸನಗಳು ಬ್ರಾಹ್ಮಣರಿಗೆ ನೀಡಿದ ದಾನಗಳನ್ನು ಉಲ್ಲೇಖಿಸುತ್ತವೆ. ಬ್ರಾಹ್ಮಣ, ವೈಶ್ಯ ಮತ್ತು ಕ್ಷತ್ರಿಯರಿಗೆ ಋಷಿ ಮೂಲದ ಗೋತ್ರಗಳಿವೆ. ಅದಿಲ್ಲದವರನ್ನು ಚತುರ್ಥಗೋತ್ರ ವೆಂದು ಕರೆಯುವುದು ಪ್ರಾಚೀನ ಕಾಲದ ಶಾಸನಗಳಲ್ಲಿ ಕಂಡು ಬರುತ್ತದೆ. ಹಾಗೆಯೇ ಯಲಹಂಕ ನಾಡಪ್ರಭುಗಳು ತಮ್ಮ ಮೂಲವನ್ನು ಈ ಮೇಲಿನ ಮೂರು ವರ್ಗಗಳಿಗೆ ಜೋಡಿಸಿಕೊಳ್ಳದ್ದರಿಂದ ಅವರನ್ನು ಚತುರ್ಥಗೋತ್ರದವರೆಂದು ಶಾಸನದ ಕರ್ತೃಗಳು ಕರೆದಿದ್ದಾರೆ. ವಿಶೇಷವೆಂದರೆ ಒಂದು ಶಾಸನದಲ್ಲಿ ವೀರಶೈವ ಪಂಥದ ವೀರೇಶನನ್ನು ಚತುರ್ಥ ಗೋತ್ರದವನೆಂದು ಉಲ್ಲೇಖಿಸಿರುವುದು ಇಲ್ಲಿ ಗಮನಾರ್ಹ. ಈ ಕಾರಣಗಳಿಂದ ಚತುರ್ಥಗೋತ್ರದವನೆಂದು ಉಲ್ಲೇಖಿಸಿದ ಎಲ್ಲಾ ಶಾಸನಗಳು ಕೂಟ ಶಾಸನಗಳೆಂದು ಕರೆಯಲಾಗುವುದಿಲ್ಲ. ಈ ಬಗೆಯ ಗೋತ್ರಾರೋಪಣೆಯು ಶಾಸನದ ಕತೃಗಳಿಂದಾಗಿದೆಯೇ ಹೊರತು, ಮೂಲದಲ್ಲಿ ಅವರುಗಳು ಗೋತ್ರಗಳನ್ನು ಹೊಂದಿರಲಿಲ್ಲ.

ಶಾಸನಗಳಲ್ಲಿ ಕಂಡು ಬರುವ ವಿಜಯನಗರದ ಅರಸನ ಹೆಸರು ಮತ್ತು ಆತನ ಆಡಳಿತಾವಧಿಯ ಉಲ್ಲೇಖದ ತಪ್ಪು ಆಧಾರದ ಮೇಲೆ ಈ ವಂಶದ ಹಲವಾರು ಶಾಸನಗಳನ್ನು ಕೂಟ ಶಾಸನವೆಂದು ಕರೆದಿದ್ದಾರೆ. 1639ರ ತರುವಾಯ ಇವರು ವಿಜಯನಗರದ ಸಾಮಂತರಾಗಿ ಉಳಿದಿರಲಿಲ್ಲ. 1639ರಿಂದ 1650ರವರೆಗೆ ಬಿಜಾಪುರದ ಸಾಮಂತರಾಗಿ 1650ರ ನಂತರ ಮೈಸೂರು ಒಡೆಯರ ಸಾಮಂತರಾಗಿ ಬದಲಾದರೂ ಅವರು ಈ ವಿವರಗಳನ್ನು ಯಾವ ಶಾಸನಗಳಲ್ಲೂ ಉಲ್ಲೇಖ ಮಾಡಿಲ್ಲ. ಕೇವಲ ಎರಡು ಶಾಸನಗಳಲ್ಲಿ ಚಿಕ್ಕದೇವರಾಜ ಒಡೆಯರ ಪ್ರದೇಶವೆಂಬ ಉಲ್ಲೇಖ ಕಂಡು ಬರುತ್ತದೆ. ದೊಡ್ಡದೇವರಾಜರ ಕಾಲದಲ್ಲಿ ವಿಜಯನಗರ ಮತ್ತು ಅದರ ಸಾಮಂತ ಸಂಸ್ಥಾನ ಜಗದೇವರಾಯನ ಪ್ರದೇಶ ಸಂಪೂರ್ಣವಾಗಿ ಮೈಸೂರು ಸಂಸ್ಥಾನದ ಅಧಿಪತ್ಯಕ್ಕೆ ಒಳಪಟ್ಟಿತ್ತು. ವಿಜಯನಗರದ ಅರಸನೇ ಕರ್ನಾಟಕದಲ್ಲಿ ತನ್ನ ನೆಲೆಯನ್ನು ಕಳೆದುಕೊಂಡು ಚಂದ್ರಗಿರಿಗೆ ಸೀಮಿತಗೊಂಡನು. ಅನಂತರ ಆತನ ಅಂತಿಮ ಶಾಸನ ತಿರುಪತಿಯಲ್ಲಿ ದೊರೆತಿದ್ದು, ದೇವರ ಸೇವೆಯಲ್ಲಿ ಎಲ್ಲವನ್ನು ಕಳೆದುಕೊಂಡು ನಿಂತ ಈ ರಾಜ ತನ್ನನ್ನು ತಿರುಮಲನ ಸೇವೆಯಲ್ಲಿ ಎಂದು ಕರೆದುಕೊಂಡಿದ್ದಾನೆ. ಅದೇನೆ ಇರಲಿ ಬಹುತೇಕ ಈ ರಾಜಕೀಯ ಚಟುವಟಿಕೆಯ ಅರಿವಿರದ ಸ್ಥಾನಿಕ ಶಾಸನ ಕರ್ತೃಗಳು ವಿಜಯನಗರದ ಅರಸರಿಗೆ ಈ ಮನೆತನದ ಅರಸರು ನಿಷ್ಠರಾಗಿದ್ದರಿಂದ ಅವರ ಹೆಸರನ್ನು ಅಂದಿನ ಕಾಲದ ರಾಜಕೀಯ ಮೇಲಾಟದ ಅರಿವಿಲ್ಲದೆ ಬಳಸಿದ್ದಾರೆ. ಅಲ್ಲದೆ ಇತಿಹಾಸಕಾರರಿಗೆ ಆ ಕಾಲದ ಅರಸರುಗಳ ಹೆಸರು ಮತ್ತು ಕಾರ್ಯಾವಧಿ ಗೊಂದಲದಗೂಡಾ

ಗಿರುವ ಸಮಯದಲ್ಲಿ ಸಣ್ಣ ಸಂಸ್ಥಾನವೊಂದರ ಶಾಸನ ಕರ್ತೃ ಅದನ್ನು ನಿಖರವಾಗಿ ಬಳಸಬೇಕೆಂಬ ಚಿಂತನೆ ಸಾಧುವಲ್ಲ.

ಈ ಹಿನ್ನೆಲೆಯಲ್ಲಿ ಶಾಸನಗಳನ್ನು ಅವಲೋಕಿಸಿದರೆ ಬಹುತೇಕ ಬೆರಳೆಣಿಕೆಯ ಕೆಲವೇ ಕೆಲವು ಶಾಸನಗಳು ಮಾತ್ರ ಇದರಿಂದ ಹೊರಗುಳಿಯುತ್ತವೆ. ಹಾಗಾಗಿ ಶಾಸನಗಳ ಈ ಇತಿ–ಮಿತಿಯಲ್ಲಿ ಯಲಹಂಕ ನಾಡಪ್ರಭುಗಳ ಶಾಸನ ಸಂಪುಟದಲ್ಲಿ ಆ ಕಾಲದ ಎಲ್ಲಾ ಶಾಸನಗಳನ್ನು ಗುರುತಿಸಲಾಗಿದೆ. ಆದ್ದರಿಂದ ಕೂಟ ಶಾಸನಗಳನ್ನು ಗುರುತಿಸುವಾಗ ಈ ಮನೆತನದ ಶಾಸನಗಳನ್ನು ಪ್ರತ್ಯೇಕವಾಗಿ ಪರಿಗಣಿಸಬೇಕಾಗುತ್ತದೆ. ಮೈಸೂರು ಸಂಸ್ಥಾನವು ತನ್ನ ಗಡಿ ವಿಸ್ತರಣಾ ನೀತಿಯಿಂದ 1650ರ ನಂತರ ಯಲಹಂಕ ನಾಡಪ್ರಭುಗಳು ಮಾಗಡಿ ಸೀಮೆಗೆ ಸೀಮಿತವಾಗುವಂತೆ ಮಾಡಿತ್ತು. ಈ ಹೊತ್ತಿಗಾಗಲೇ ಚನ್ನಪಟ್ಟಣ ಮತ್ತಿತರ ವಿಜಯನಗರ ಸಂಸ್ಥಾನದ ಕೆಲವು ಪ್ರದೇಶಗಳು ಮೈಸೂರಿನ ವಶವಾಗಿದ್ದವು. ಒಂದು ಸಣ್ಣ ಪ್ರದೇಶದ ಅಧೀನ ಆಡಳಿತಗಾರರಾಗಿ ಮುಂದುವರಿದ ಯಲಹಂಕ ನಾಡ ಪ್ರಭುಗಳ ಶಾಸನ ಕರ್ತೃಗಳು ಅಂದಿನ ರಾಜಕೀಯ ಮೇಲಾಟಗಳ ಸಂಪೂರ್ಣ ಜ್ಞಾನಹೊಂದಿದ್ದರೆಂದು ಭಾವಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ ಆ ದಿನಗಳಲ್ಲಿ ಇದ್ದ ರಾಜಕೀಯ ಗೊಂದಲಗಳು ಈ ನಿಟ್ಟಿನಲ್ಲಿ ಸಾಕಷ್ಟು ಕೊಡುಗೆಯನ್ನು ನೀಡಿವೆ. ಹನುಮಂತೇಗೌಡರು ಹೇಳುವಂತೆ ಎಲ್ಲಾ ಕೂಟ ಶಾಸನಗಳನ್ನು ಕಡೆಗಣಿಸಿ ಉಳಿಯುವ ಶಾಸನಗಳ ಆಧಾರದ ಮೇಲೆ ಯಲಹಂಕ ಪ್ರಭುಗಳ ಚರಿತ್ರೆಯನ್ನು ರಚಿಸಲು ಪ್ರಯತ್ನಿಸಿದರೆ ಅದಕ್ಕೆ ದೊರೆಯುವ ಪ್ರತಿಫಲ ಶೂನ್ಯವೆಂದೇ ಹೇಳಬೇಕಾಗುತ್ತದೆ.

ಕೆಲವು ಶಾಸನಗಳಲ್ಲಿ ಕೆಂಪೇಗೌಡರಿಗೆ ಹಾಗೂ ಅವರ ವಂಶಸ್ಥರಿಗೆ ಗೋತ್ರವನ್ನು ಆರೋಪಿಸಿರುವುದನ್ನು ಕಾಣುತ್ತೇವೆ. ಅದರಲ್ಲಿ ಮೂರು ಬಗೆಯನ್ನು ಕಾಣಬಹುದು. ಕ್ರಿ. ಶ. 1578ರ ಮಾಸ್ತಿಯ ಒಂದನೇ ಕೆಂಪೇಗೌಡರ ಕಾಲದ ಶಾಸನವು ಅವರನ್ನು "ಚತುರ್ಥಗೋತ್ರದ ಯಲಹಕ್ಕ ನಾಡಪ್ರಭುಗಳಾದ ನಂಜೇಗೌಡರ ಪೌತ್ರರಾದ, ಕೆಂಪನಂಜೇಗೌಡರ ಪುತ್ರರಾದ ಹಿರಿಯ ಕೆಂಪೇಗೌಡರು" ಎಂದು ಗುರುತಿಸುತ್ತದೆ. ಕ್ರಿ. ಶ. 1599ರ ಕೃಷ್ಣಸಾಗರದ ಶಾಸನದಲ್ಲಿ ಸಹ ಇದೇ ವಕ್ಕಣೆ ಕಂಡುಬರುತ್ತಿದೆ. ಐಗಂಡಪುರದ ಕ್ರಿ. ಶ. 1605ರ ಶಾಸನ, ಕ್ರಿ. ಶ. 1605ರ ಕೆಂಪಾಪುರ ಅಗ್ರಹಾರದ ಶಾಸನ, 1606ರ ಗುಮ್ಮಳಾಪುರದ ಶಾಸನ, ಕ್ರಿ. ಶ. 1627ರ ಸೋಸಲೆ ಮಠದ ತಾಮ್ರ ಶಾಸನದಲ್ಲಿ, ಕ್ರಿ. ಶ. 1630 ಮತ್ತು 1631 ಮಾಗಡಿಯ ತಾಮ್ರ ಶಾಸನಗಳಲ್ಲಿ ಸಹ ಇದೇ ಬಗೆಯ ಉಲ್ಲೇಖವಿದೆ. ಕ್ರಿ. ಶ. 1667ರ ನಂತರದ ಶಾಸನಗಳಲ್ಲಿ ಇವರನ್ನು ಸದಾಶಿವ ಗೋತ್ರದವರೆಂದು ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಶಾಸನಗಳಲ್ಲಿ ಕಂಡುಬರುವ ಚತುರ್ಥ ಗೋತ್ರದ ಮತ್ತು ಸದಾಶಿವಗೋತ್ರದ ಉಲ್ಲೇಖಗಳು ಸಾಮಾನ್ಯವಾಗಿ ಕಂಡುಬರುವುದು ಬ್ರಾಹ್ಮಣರಿಗೆ ನೀಡಿದ ದಾನಗಳನ್ನು ಉಲ್ಲೇಖಿಸುವಾಗ ಎಂಬುದು ಮಹತ್ವದ ಅಂಶ. ಪ್ರಾಯಶಃ ದಾನ ಪಡೆಯುವವನ ಶ್ರೇಷ್ಠತೆಯ ಮನಸ್ಸು ನಾಡಪ್ರಭುಗಳ ಗೋತ್ರವನ್ನು ಉಲ್ಲೇಖಿಸುವಾಗ ಅಥವಾ ಆರೋಪಿಸುವಾಗ ಇಲ್ಲಿ ಕೆಲಸ ಮಾಡಿದೆ.

ಅಲ್ಲದೆ ಸದಾಶಿವ ಗೋತ್ರದ ಉಲ್ಲೇಖ ಅವರು ವೀರಶೈವ ಅನುಯಾಯಿಗಳಾಗಿದ್ದನ್ನು ಉಲ್ಲೇಖಿಸುತ್ತದೆ. ಕ್ರಿ. ಶ. 1670ರ ಮಾಗಡಿಯ ಶಾಸನದವರೆಗೆ ಚತುರ್ಥ ಗೋತ್ರವೆಂದು ಕಂಡುಬರುವ ಉಲ್ಲೇಖ ಈ ಶಾಸನದ ಕಾಲದಿಂದ ಸದಾಶಿವ ಗೋತ್ರವಾಗಿ ಬದಲಾಗಿದೆ. ಅಂದರೆ ಕ್ರಿ. ಶ. 1670ರ ಹೊತ್ತಿಗೆ ಇವರು ವೀರಶೈವ ಮತಾವಲಂಬಿಗಳಾಗಿದ್ದರೆಂದು ಭಾವಿಸಬಹುದಾಗಿದೆ. ಕ್ರಿ. ಶ. 1670ರ ಮಾಗಡಿಯ ಶಾಸನ ಇಮ್ಮಡಿ ಕೆಂಪೇಗೌಡ ನೀಡಿದ್ದ ದಾನವನ್ನು ಉಲ್ಲೇಖಿಸುತ್ತದೆ. ಅಂದಮೇಲೆ ಐತಿಹ್ಯಗಳು ಹೇಳುವಂತೆ, ಮುಮ್ಮಡಿ ಕೆಂಪೇಗೌಡನ ಬದಲಿಗೆ ಇಮ್ಮಡಿ ಕೆಂಪೇಗೌಡನೇ ವೀರಶೈವ ಮತಾವಲಂಬಿಯಾಗಿದ್ದನೆಂದು ಸ್ಪಷ್ಟವಾಗುತ್ತದೆ.

ಒಂದೇ ಒಂದು ಶಾಸನ ಇವರನ್ನು ಕಾಶ್ಯಪಗೋತ್ರದವರೆಂದು ಉಲ್ಲೇಖಿಸುತ್ತದೆ. ಕ್ರಿ. ಶ. 1712ರ ಮಾಯಿನಾಯಕನಹಳ್ಳಿಯ ಮುಮ್ಮಡಿ ಕೆಂಪವೀರಪ್ಪಗೌಡರು ಹೊರಡಿಸಿದ ಶಿಲಾಶಾಸನದಲ್ಲಿ ಇವರನ್ನು ಕಾಶ್ಯಪಗೋತ್ರದ ಯಲಹಂಕ ನಾಡಪ್ರಭುಗಳಾದ ಮುಮ್ಮಡಿ ಕೆಂಪೇಗೌಡರ ಪೌತ್ರರಾದ ಮುಮ್ಮಡಿ ಕೆಂಪ ವೀರಪ್ಪಗೌಡರೆಂದು ದಾಖಲಿಸಿದೆ.

ಶಾಸನಗಳಲ್ಲಿನ ದಾನಗಳನ್ನು ಕಂಡಾಗ ನಮಗೆ ತಿಳಿಯುವುದೇನೆಂದರೆ ಪ್ರಾರಂಭದಲ್ಲಿ ಕಲಿನಾಥ ದೇವರಿಗೆ ದಾನ ನೀಡಿರುವುದು ತಿಳಿದುಬರುತ್ತದೆ.[62] ತಿರುವೆಂಗಳನಾಥನಿಗೆ[63], ತಿರುಪತಿಯ ತಿಮ್ಮಪ್ಪನಿಗೆ[64] ಸಹ ದಾನ ನೀಡಿದ್ದು ಕಂಡುಬರುತ್ತದೆ. ಕೆಂಪದೇವರಸೇಗೌಡರು ಭೈರವನಿಗೆ ಅಚ್ಯುತ ಮಹಾರಾಯರಿಗೆ ಧರ್ಮವಾಗಲೆಂದು ದಾನ ನೀಡಿದ್ದು ವಿಶೇಷವೆನಿಸುತ್ತದೆ[65]. ಕುಕ್ಕೆಸುಬ್ರಮಣ್ಯದ ಶಾಸನ ಪುತ್ರಪ್ರಾಪ್ತಿಗಾಗಿ ಸಲ್ಲಿಸಿದ ಹರಕೆಯು ಫಲಿಸಿದ್ದರ ಹಿನ್ನೆಲೆಯಲ್ಲಿ ನೀಡಿದ ದಾನ ಶಾಸನವಾಗಿದೆ.[66] ಇವರ ಕಾಲದ ಮತ್ತೊಂದು ವಿಶೇಷತೆ, ಶಿವಗಂಗೆಯ ದೇವಾಲಯಕ್ಕೆ ಗಂಟೆಗಳನ್ನು ದಾನವಾಗಿ ನೀಡಿರುವುದನ್ನು ಕಾಣಬಹುದು.[67] ಕ್ರಿ. ಶ. 1580ರ ಶಿವಗಂಗೆಯ ಗಂಟೆ ಶಾಸನ, ಒಂದನೆಯ ಕೆಂಪೇಗೌಡರು ನೀಡಿದ್ದು, ನಂತರ ಕ್ರಿ. ಶ. 159268 ಮತ್ತು 1597ರಲ್ಲಿ ಜುಟ್ಟನ ಹಳ್ಳಿ ಶಾಖೆಯ ಹುಲಿಕಲ್ಲಿನ ಚಿಕ್ಕಹೊನ್ನೇಗೌಡರು ನೀಡಿದ ಗಂಟೆ ಶಾಸನಗಳನ್ನು ಉಲ್ಲೇಖಿಸಬಹುದು [69] ತಮ್ಮ ಪರಂಪರೆ ವೃದ್ಧಿಯಾಗಲೆಂದು ಹಾಗೂ ತಮ್ಮ ಪಿತೃಗಳಿಗೆ ಮೋಕ್ಷವಾಗಲೆಂಬ ಉದ್ದೇಶದಿಂದ ಹಾಗೂ ಪುಣ್ಯಾರ್ಥವಾಗಿ ಭಕ್ತಿ ಸಮರ್ಪಣೆಯಾದ ದಾನಗಳಾಗಿವೆ. ಬಹುಶಃ ಗಂಟೆಗಳು ಹರಕೆಯ ಹಿನ್ನೆಲೆಯಲ್ಲಿ ನೀಡಿದವುಗಳೆಂದು ಊಹಿಸಬಹುದು.

ಭಾಷೆ

ಈ ಶಾಸನಗಳಲ್ಲಿ ಕಂಡುಬರುವ ವಿಶೇಷತೆ ಎಂದರೆ ಕೆಲವು ಶಾಸನಗಳನ್ನು ಶಕ ಕಾಲವಿಲ್ಲದೇ ಕೇವಲ ಸಂವತ್ಸರ ಮತ್ತು ಇತರ ವಿವರಗಳೊಂದಿಗೆ ಹೊರಡಿಸಿರುವುದು ಕಂಡುಬರುತ್ತದೆ. ಭಾಷೆಯ ದೃಷ್ಟಿಯಲ್ಲಿ ಇವು ಸರಳ ಗದ್ಯ ರಚನೆಯಾಗಿವೆ. ಬಹುತೇಕವಾಗಿ ಇವರ ಶಾಸನಗಳೆಲ್ಲಾ ಕನ್ನಡ ಶಾಸನಗಳು, ಬೆರಳೆಣಿಕೆಯ ಸಂಸ್ಕೃತ ಮತ್ತು ತೆಲುಗು ಶಾಸನಗಳು ಲಭ್ಯವಿವೆ. ಇಮ್ಮಡಿ ಕೆಂಪೇಗೌಡರ ಕೆಂಪಾಪುರ ಅಗ್ರಹಾರದ ದಾನ ಶಾಸನ ಸಂಸ್ಕೃತ ಭಾಷೆಯಲ್ಲಿ ರಚಿತವಾಗಿದೆ[70]. ಬೆಂಗಳೂರಿನ ಇಮ್ಮಡಿ ಕೆಂಪೇಗೌಡರ ಕ್ರಿ. ಶ. 1628ರ[71] ಮತ್ತು 1633ರ[72] ಶಾಸನಗಳು ತೆಲುಗು ಭಾಷೆ ಮತ್ತು ಲಿಪಿಯಲ್ಲಿ ಬರೆದವುಗಳಾಗಿವೆ. ಕನ್ನಡ ಭಾಷೆಯ ಬರವಣಿಗೆಯಲ್ಲೂ ಪ್ರೌಢತೆ ಎದ್ದು ಕಾಣುವುದಿಲ್ಲ.

ಅಗ್ರಹಾರಗಳು

ಈ ಕಾಲದ ಶಾಸನಗಳಲ್ಲಿ ಹಲವಾರು ಅಗ್ರಹಾರಗಳು ರಚನೆಯಾಗಿರುವುದು ಕಂಡುಬರುತ್ತದೆ. ಒಂದನೇ ಕೆಂಪೇಗೌಡರು ಐಗಂಡಪುರವನ್ನು[73] ಪರಿವರ್ತಿಸಿ ಅಗ್ರಹಾರವಾಗಿ ಬ್ರಾಹ್ಮಣರಿಗೆ ನೀಡಿದ್ದು ಕಂಡು ಬರುತ್ತದೆ. ಇವರ ಪತ್ನಿಯಾದ ವೆಂಕಟಕೃಷ್ಣಾಜಮ್ಮನು 1599ರಲ್ಲಿ ವೆಂಕಟ ಕೃಷ್ಣಸಾಗರ ಅಗ್ರಹಾರವನ್ನು ತಮ್ಮ ಅತ್ತೆ-ಮಾವನಿಗೆ ಪುಣ್ಯವಾಗಲಿ ಎಂದು ದಾನ ನೀಡಿದ್ದಾರೆ.[74] ಹಿರಿಯ ಕೆಂಪೇಗೌಡರ ಉಪಪತ್ನಿ ಯಾದ ಶೃಂಗಾರಮ್ಮ ಶೃಂಗಾರ ಸಾಗರವನ್ನು ನಿರ್ಮಿಸಿದಂತೆ ತಿಳಿದುಬರುತ್ತದೆ.[75]

ಇಮ್ಮಡಿ ಕೆಂಪೇಗೌಡರ ಕಾಲದಲ್ಲಿ ಅಂದರೆ ಕ್ರಿ. ಶ. 1627ರಲ್ಲಿ ಕೆಂಪಸಾಗರ ಅಗ್ರಹಾರವನ್ನು ನಿರ್ಮಿಸಿ ಬ್ರಾಹ್ಮಣರಿಗೆ ಹಾಗೂ ಚತುರ್ಥಗೋತ್ರದ ಶೂದ್ರ ವರ್ಗಕ್ಕೆ ಸೇರಿದ ದೇವಪೂಜಾರನಾದ ವೀರೇಶನಿಗೂ ದಾನ

ನೀಡಿರುವುದು ಮಹತ್ವದ ಅಂಶವಾಗಿದೆ.[76] ಈತ ಬಹುಶಃ ವೀರಶೈವ ಪಂಥದವನಾಗಿರುವ ಸಾಧ್ಯತೆಗಳಿವೆ. ಆನಂತರದ ಕಾಲದಲ್ಲಿ ಅಧಿಕವಾದ ಬ್ರಾಹ್ಮಣ ದಾನಗಳನ್ನು ಮುಮ್ಮಡಿ ಕೆಂಪವೀರಗೌಡರು ನೀಡಿದ್ದಾರೆ. ಈ ಕಾಲದಲ್ಲಿ ಜುಟ್ಟನಹಳ್ಳಿ ಅಗ್ರಹಾರ,[77] ಮಾಯನಾಯಕನ ಹಳ್ಳಿ ಅಗ್ರಹಾರ,[78] ಮತ್ತು ಮಾಗಡಿ[79] ಗಳನ್ನು ಅಗ್ರಹಾರವಾಗಿ ಪರಿವರ್ತಿಸಿ ದಾನ ನೀಡಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ. ಇವಲ್ಲದೆ 1656ರಲ್ಲಿ ಮತ್ತು 1678ರಲ್ಲಿ ಮುಮ್ಮಡಿ ಕೆಂಪೇಗೌಡರು ಶಿದ್ದಪ್ಪನ ಹಳ್ಳಿಯನ್ನು[80] ಮತ್ತು ಹರಿಗನಹಳ್ಳಿ[81] ಕ್ರಮವಾಗಿ ನಿರ್ಮಿಸಿ ದಾನ ನೀಡಿದ್ದು ತಿಳಿದುಬರುತ್ತದೆ. 1697ರಲ್ಲಿ ಇಮ್ಮಡಿ ಕೆಂಪವೀರಪ್ಪಗೌಡರು ಹುತ್ರಿದುರ್ಗವನ್ನು ದೊಡ್ಡವೀರಸಾಗರ ವೆಂಬ ಅಗ್ರಹಾರವಾಗಿ ನಿರ್ಮಿಸಿ ಬ್ರಾಹ್ಮಣರಿಗೆ ದಾನ ನೀಡಿದ ವಿವರಗಳು ಲಭ್ಯವಿದೆ.[82] ಮುಮ್ಮಡಿ ಕೆಂಪವೀರಪ್ಪ ಗೌಡರು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಕೆಂಪನಹಳ್ಳಿಯನ್ನು ಅಗ್ರಹಾರವಾಗಿಸಿದ್ದರೆಂದು ತಿಳಿದು ಬರುತ್ತದೆ.[83]

ಈ ಅಗ್ರಹಾರಗಳ ರಚನೆಯ ಉದ್ದೇಶ ಪುಣ್ಯಪ್ರಾಪ್ತಿಗಾಗಿ, ಮೋಕ್ಷಪ್ರಾಪ್ತಿಗಾಗಿ, ಇವು ಪುತ್ರ, ಪೌತ್ರ ಪರಂಪರೆಯ ಅಭಿವೃದ್ಧಿಗೆ ನೀಡಿದ ದಾನಶಾಸನಗಳಾಗಿವೆಯೇ ಹೊರತು ವಿದ್ಯಾದಾನಕ್ಕೆ ಮೀಸಲಾದ ಶಾಸನಗಳಾಗಿಲ್ಲ. ಅಂದಮೇಲೆ ಶಾಸನಗಳು ವಿದ್ಯಾಭಿವೃದ್ಧಿಗೆ ನೀಡಿದ ಮಹತ್ವವನ್ನಾಗಲೀ ಅಥವಾ ಅಧ್ಯಯನ ವಿಷಯಗಳನ್ನಾಗಲೀ ತಿಳಿಯಪಡಿಸುವುದಿಲ್ಲ. ಶಾಸನಗಳು ಬಹಳ ವಿಸ್ತಾರವಾದ ಆಡಳಿತದ ವಿವಿಧ ಮುಖಗಳನ್ನು ಹೊರಹಾಕುವಲ್ಲಿ ಸಹ ಸಹಾಯಕವಾಗಿಲ್ಲವೆಂದು ಹೇಳದೇ ವಿಧಿಯಿಲ್ಲ.

ನಾಡಪ್ರಭುಗಳ ಮನೆತನದ ಸ್ತ್ರೀಯರು

ಕರ್ನಾಟಕದ ಇತರ ರಾಜಮನೆತನಗಳ ಸ್ತ್ರೀಯರಂತೆ ಯಲಹಂಕ ನಾಡಪ್ರಭುಗಳ ಸ್ತ್ರೀಯರೂ ಕೂಡ ಸಮಾಜಮುಖಿ ಜನಹಿತ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಅವರ ಶಾಸನಗಳಿಂದಲೇ ಖಚಿತವಾಗುತ್ತದೆ. ವಂಶದ ಪ್ರಾರಂಭದ ದಿನಗಳಿಂದಲೇ ಅದರ ಅಭಿವೃದ್ಧಿಯಲ್ಲಿ ಸ್ತ್ರೀಯರ ಪಾತ್ರವನ್ನು ಕಾಣುತ್ತೇವೆ. ಪ್ರಕಟಿತ ಐತಿಹ್ಯಗಳ ಆಧಾರದ ಮೇಲೆ ಮತ್ತು ಇತಿಹಾಸ ಆಕರಗಳಿಂದ ದೊರೆಯುವ ಈ ಮನೆತನದ ಸ್ತ್ರೀಯರ ಸಾಧನೆಯನ್ನು ಕುರಿತಾದ ಕೆಲವು ವಿವರಗಳನ್ನು ಇಲ್ಲಿ ಸಂಗ್ರಹಿಸಿ ಓದುಗರ ಮುಂದಿಡುವ ಪ್ರಯತ್ನ ಮಾಡಲಾಗಿದೆ.

ಯಲಹಂಕ ನಾಡಪ್ರಭುಗಳ ಸಂಸ್ಥಾಪಕರಾದ ರಣಭೈರೇಗೌಡರು ಕಂಚಿಯ ಸಮೀಪವಿರುವ ಯಣಮಂಚಿ ಪುತ್ತೂರಿನಿಂದ ತನ್ನ ಏಳು ಮಂದಿ ಸಹೋದರರೊಂದಿಗೆ ಅಲ್ಲಿಂದ ವಲಸೆ ಹೊರಟು ಆವತಿಯ ಪ್ರದೇಶವನ್ನು ಬಂದು ಸೇರಿದರೆಂದು ಬಹುತೇಕ ಎಲ್ಲಾ ಐತಿಹಾಸಿಕ ಗ್ರಂಥಗಳು ಉಲ್ಲೇಖಿಸುತ್ತವೆ. ಈ ವಲಸೆಗೆ ಪ್ರಕಟವಾಗಿರುವ ಗ್ರಂಥಗಳಲ್ಲಿ ಸಾಮಾನ್ಯವಾಗಿ ಎರಡು ಕಾರಣಗಳನ್ನು ಮುಂದಿಡಲಾಗಿದೆ. ಮೊದಲನೆಯದಾಗಿ ಆ ಪ್ರದೇಶದಲ್ಲಿ ಆ ಕಾಲದಲ್ಲಿ ಪ್ರಾರಂಭವಾದ ಬರಗಾಲವನ್ನು ಒಂದು ಗುಂಪಿನ ವಿದ್ವಾಂಸರು ಕಾರಣವಾಗಿ ಕೊಟ್ಟಿದ್ದಾರೆ, ಮತ್ತೊಂದು ಗುಂಪಿನ ವಿದ್ವಾಂಸರು ಯಣಮಂಚಿ ಪುತ್ತೂರಿನ ಕೀಳು ಜಾತಿಯ ಪಾಳೇಗಾರನು ರಣಭೈರೇಗೌಡರ ಮಗಳಾದ ಅಪ್ರತಿಮ ಸುಂದರಿ ದೊಡ್ಡಮ್ಮನನ್ನು ಮದುವೆಯಾಗಲು ಇಚ್ಛಿಸಿದ ವಿಷಯವನ್ನು ರಣಭೈರೇಗೌಡರಿಗೆ ತಲುಪಿಸಿದನೆಂತಲೂ ಪಾಳೇಗಾರರನ್ನು ಎದುರಿಸಲು ಸಾಧ್ಯವಾಗದೆ ದೊಡ್ಡಮ್ಮನೊಂದಿಗೆ ತನ್ನೆಲ್ಲ ಸಹೋದರರನ್ನು ಒಟ್ಟುಗೂಡಿಸಿಕೊಂಡು ರಾತ್ರೋರಾತ್ರಿ ಅಲ್ಲಿಂದ ವಲಸೆ ಹೊರಟನೆಂಬುದಾಗಿಯೂ ಹೇಳುತ್ತಾನೆ. ಈ ಹಂತದಲ್ಲಿ ನಡೆಯಿತೆನ್ನಲಾದ ಕೌತುಕಮಯ ಪ್ರಸಂಗವೇ ದೊಡ್ಡಮ್ಮನನ್ನು ಅವರು ದೈವತ್ವಕ್ಕೇರಿಸುವಂತಾಯಿತು.

ಈ ವಲಸೆ ಬರುತ್ತಿದ್ದ ಸಮಯದಲ್ಲಿ ರಣಭೈರೇಗೌಡರ ಕುಟುಂಬ ಪಾಲಾರ್ ನದಿಯ ದಡವನ್ನು ಬಂದು ತಲುಪಿತು. ಆ ಸಂದರ್ಭದಲ್ಲಿ ನದಿಯು ಉಕ್ಕಿ ಹರಿಯುತ್ತಿತ್ತು. ನದಿಯನ್ನು ದಾಟಿ ಪಾರಾಗಬೇಕು ಇಲ್ಲವೇ

ತುಸು ತಡವಾದರೂ ಹಿಂಬಾಲಿಸಿ ಬರುತ್ತಿದ್ದ ಪಾಳೇಗಾರನ ಸೈನಿಕರ ಕೈವಶವಾಗಬೇಕು. ಇಂತಹ ವಿಷಮ ಪರಿಸ್ಥಿತಿಯಲ್ಲಿ ರಣಭೈರೇಗೌಡನ ಮಗಳಾದ ದೊಡ್ಡಮ್ಮ ತನ್ನ ಕಿವಿಯ ಓಲೆಗಳನ್ನು ಬಿಚ್ಚಿ ಗಂಗಾ ಭವಾನಿಗೆ ಸಮರ್ಪಿಸಿ ತನ್ನ ಕುಟುಂಬ ಸುರಕ್ಷಿತವಾಗಿ ನದಿ ದಾಟಲು ಅನುವು ಮಾಡಿಕೊಡಬೇಕೆಂದು ಪ್ರಾರ್ಥಿಸಲಾಗಿ ನದಿ ಅದಕ್ಕೆ ಅವಕಾಶ ಮಾಡಿಕೊಟ್ಟಿತೆಂದು ಐತಿಹ್ಯವಿದೆ. ಇಂತಹ ಶಕ್ತಿ ಹೊಂದಿದ್ದ ದೊಡ್ಡಮ್ಮನನ್ನು ಆ ನಂತರದ ದಿನಗಳಲ್ಲಿ ವೈಭವೀಕರಿಸಿ ದೈವತ್ವಕ್ಕೇರಿಸಿದ ವಿವರ ಜಾನಪದ ಕಾವ್ಯ ಮತ್ತು ಮೌಖಿಕ ಆಧಾರಗಳಲ್ಲಿ ದೊರೆಯುತ್ತವೆ. ಆದರೂ ಇದಕ್ಕೆ ಐತಿಹಾಸಿಕ ಆಧಾರಗಳು ಲಭ್ಯವಿರುವುದಿಲ್ಲ.[84]

ಇವೆಲ್ಲವನ್ನು ಒತ್ತಟ್ಟಿಗೆ ಸರಿಸಿ ನೋಡಿದಾಗ ಬಹುಶಃ ರಣಭೈರೇಗೌಡರ ವಲಸೆಯ ಈ ಪ್ರಕ್ರಿಯೆ ದಕ್ಷಿಣ ಭಾರತದ ಮೇಲೆ ಮಲ್ಲಿಕಾಫರನು ದಾಳಿ ಮಾಡಿದ ಸಮಯದಲ್ಲಿ ನಡೆದಿರುವ ಎಲ್ಲಾ ಸಾಧ್ಯತೆಗಳಿವೆ. ದಾಳಿಯ ಸಮಯದಲ್ಲಿ ಸೇನೆಗೆ ಸಿಕ್ಕು ಅಪಮಾನಕ್ಕೀಡಾಗುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ವಲಸೆ ಬಂದಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಮದುವೆಯಾಗದ ಹೆಣ್ಣುಮಕ್ಕಳ ಕೈಬೆರಳುಗಳ ಛೇದನ ಪದ್ಧತಿ ಯಲಹಂಕ ನಾಡಪ್ರಭುಗಳ ಮನೆತನದಲ್ಲಿ ಆಚರಣೆಯಾಗಿ ಬಂದುದನ್ನು ಈ ಹಿನ್ನೆಲೆಯಲ್ಲೂ ನೋಡಬೇಕೆನಿಸುತ್ತದೆ. ಇದಕ್ಕೂ ಯಾವುದೇ ಆಧಾರಗಳಿಲ್ಲ.

ಅಂದಿನ ಮುಸಲ್ಮಾನ ಸೈನ್ಯ ಸೆರೆಸಿಕ್ಕ ಹೆಣ್ಣುಮಕ್ಕಳನ್ನು ಮತಾಂತರಗೊಳಿಸಿಕೊಂಡು ಮದುವೆಯಾಗುತ್ತಿದ್ದುದನ್ನು ಕಂಡುಕೊಂಡ ಈ ಕುಟುಂಬ ಹೆಣ್ಣುಮಕ್ಕಳ ಶೀಲರಕ್ಷಣೆಗೆ ಈ ಕ್ರೂರ ಪದ್ಧತಿಯನ್ನು ಜಾರಿಗೆ ತಂದಿರುವ ಸಾಧ್ಯತೆ ಇದೆ. ಅಂದಿನ ದಾಳಿಯಲ್ಲಿ ಸುಂದರವಾದ ಹೆಣ್ಣುಮಕ್ಕಳೇ ಅಧಿಕವಾಗಿ ಪರಿವರ್ತನೆಗೆ ದೊರೆಯುತ್ತಿದ್ದಾಗ ಬೆರಳುಗಳನ್ನು ಕಳೆದುಕೊಂಡು ಅವಲಕ್ಷಣವಾದ ಈ ಹೆಣ್ಣು ಮಕ್ಕಳನ್ನು ದಾಳಿಕೋರರು ಮುಟ್ಟುವುದಿಲ್ಲವೆಂಬ ಭಾವನೆಯಿಂದ ಈ ರೀತಿಯ ಆಚರಣೆಯನ್ನು ಜಾರಿಗೆ ತಂದಿರಬೇಕು. ಈ ವಿಶ್ಲೇಷಣೆಗಳಿಗೂ ಸಹ ಯಾವುದೇ ಐತಿಹಾಸಿಕ ಆಕರಗಳ ಆಧಾರಗಳಿಲ್ಲ. ಆದರೂ ಅಂದು ನಡೆಯುತ್ತಿದ್ದ ಆಚರಣೆಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಸಾಧ್ಯಾಸಾಧ್ಯತೆಯನ್ನು ಮಾತ್ರ ವಿವೇಚಿಸಲಾಗಿದೆ.

ದೊಡ್ಡಮ್ಮನ ಐತಿಹ್ಯವನ್ನು ಅಥವಾ ಆಕೆಯ ಅತಿಮಾನುಷ ಶಕ್ತಿಯನ್ನು ನಾವು ಒಪ್ಪಿಕೊಳ್ಳದಿದ್ದರು ಬಹುಶಃ ಆಕೆಯ ರಕ್ಷಣೆಗೆ ಅಥವಾ ಆಕೆಯನ್ನು ಸಂರಕ್ಷಿಸಿ ಪೋಷಿಸಿ ಬೆಳೆಸಿ ನೀತಿವಂತನಿಗೆ ಮದುವೆ ಮಾಡಿಕೊಡಬೇಕೆಂಬ ರಣಭೈರೇಗೌಡರ ಹಂಬಲ ಅವರು ವಲಸೆ ಬರಲು ಕಾರಣವೆಂದು ಒಪ್ಪಿಕೊಂಡಲ್ಲಿ ಆ ಪ್ರೇರಣೆ ಕುಟುಂಬದ ಶ್ರೇಯಸ್ಸಿಗೆ ಕಾರಣವಾಯಿತೆಂದು ಹೇಳಬಹುದು.

ಈ ವಂಶದ ಕೀರ್ತಿ ಪರಾಕಾಷ್ಠೆಯ ಬೆಳವಣಿಗೆಯಲ್ಲಿ ಸ್ತ್ರೀಯರ ಪಾತ್ರ ದೊಡ್ಡಮ್ಮನೊಂದಿಗೆ ಮುಕ್ತಾಯ ವಾಗುವುದಿಲ್ಲ. ಮೊದಲನೇ ಕೆಂಪೇಗೌಡರ ಸೊಸೆ ಲಕ್ಷ್ಮಮ್ಮನ ತ್ಯಾಗ ಬಹುಶಃ ಕೆಂಪೇಗೌಡ ವಂಶದ ಸ್ತ್ರೀಯರ ಎಲ್ಲಾ ತ್ಯಾಗಗಳಿಗೂ ಮಿಗಿಲಾದುದು. ಬೆಂಗಳೂರಿನ ಕೋಟೆಯ ನಿರ್ಮಾಣದ ಕಾಲದಲ್ಲಿ ನಡೆಯಿತೆನ್ನಲಾದ ಘಟನೆ ಈಕೆಯ ಸಾಧನೆಯ ಮಹತ್ವವನ್ನು ನಮ್ಮ ಮುಂದೆ ತೆರೆದಿಡುತ್ತದೆ. ಬೆಂಗಳೂರಿನ ಕೋಟೆ ಗೋಡೆಗಳ ನಿರ್ಮಾಣದ ತರುವಾಯ ನಾಲ್ಕು ಮಹಾದ್ವಾರ ನಿರ್ಮಿಸುವ ಕಾರ್ಯವನ್ನು ಪ್ರಾರಂಭಿಸಿದರು. ದಕ್ಷಿಣ ದ್ವಾರವೊಂದನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ದ್ವಾರಗಳ ಕೆಲಸ ಅತೀ ಶೀಘ್ರವಾಗಿ ಮತ್ತು ಸುಲಭವಾಗಿ ನೆರವೇರಿತು. ಆದರೆ ದಕ್ಷಿಣ ದ್ವಾರವನ್ನು ಪ್ರತಿ ಬಾರಿ ಕಟ್ಟಿದಾಗಲೂ ಮರು ದಿನವೇ ಬಿದ್ದು ಹೋಗುತ್ತಿತ್ತು. ಅದರ ಬಗೆಗಿನ ಪ್ರಚಲಿತ ಐತಿಹ್ಯ ಈ ಕೆಳಗಿನಂತಿದೆ.

"ಆಳುಗಳೆಲ್ಲ ಸೇರಿ ದ್ವಾರವನ್ನು ನಿಲ್ಲಿಸಿ ಸಂಜೆಯ ವೇಳೆಗೆ ಮನೆಗೆ ಹೋಗುತ್ತಿದ್ದರು. ಮರುದಿನ ಬೆಳಿಗ್ಗೆ ಬಂದು ನೋಡಿದಾಗ ಆ ಬಾಗಿಲು ಬಿದ್ದು ಹೋಗಿರುತ್ತಿತ್ತು. ಒಂದಲ್ಲ – ಎರಡಲ್ಲ – ಹಲವಾರು ಸಲ ಹೀಗೆಯೇ ಆಯಿತು. ಇದರಿಂದಾಗಿ ಕೆಂಪೇಗೌಡನಿಗೆ ತುಂಬಾ ಚಿಂತೆಯಾಯಿತು. ಜೋಯಿಸರ ಬಳಿಗೆ ಹೋಗಿ ಇದಕ್ಕೆ ಪರಿಹಾರ ಕೇಳಿದಾಗ ಅವರು "ಒಂದು ನರಬಲಿ. ಅದರಲ್ಲಿಯೂ ಒಬ್ಬ ಗರ್ಭಿಣಿ ಸ್ತ್ರೀಯನ್ನು ಆಹುತಿಯಾಗಿತ್ತರೆ ಕೋಟೆಯ ಬಾಗಿಲು ಸ್ಥಿರವಾಗಿ ನಿಲ್ಲುವುದು" ಎಂದರು. ಈ ಪರಿಹಾರ ಗೌಡನಿಗೆ ಸಮ್ಮತವಾಗಲಿಲ್ಲ. ಅವನಂತೂ ದಿಕ್ಕು ತೋಚದೆ ಯೋಚನೆಗೊಳಗಾದ. ಈ ವಿಚಾರ ಅವರಿವರ ಕಿವಿಗೆ ಬಿದ್ದಿತು. ರಾಣಿ ವಾಸದವರಿಗೂ ತಿಳಿಯಿತು. ಈ ಸಂದರ್ಭದಲ್ಲಿ ಗೌಡನ ಸೊಸೆ ಲಕ್ಷ್ಮಮ್ಮ ಗರ್ಭಿಣಿಯಾಗಿದ್ದಳು. ಕೋಟೆಯ ಬಾಗಿಲಿಗೆ ಗರ್ಭಿಣಿ ಸ್ತ್ರೀಯ ಆಹುತಿಯಾಗಬೇಕಾಗಿದೆಯೆಂಬ ವಿಚಾರ ಅವಳಿಗೂ ತಿಳಿಯಿತು. "ಈ ಕೋಟೆಯ ನಿರ್ಮಾಣಕ್ಕೆ ನಾನೇ ಅಹುತಿಯಾಗಬಾರದೇಕೆ? ನನ್ನದೂ ಒಂದು ತ್ಯಾಗವಿರಲಿ' ಎಂದು ನಿರ್ಧಾರ ಮಾಡಿಕೊಂಡಳು.

ಮರುದಿನವೂ ಕೋಟೆಯ ಬಾಗಿಲು ಉರುಳಿಬಿದ್ದಿತು. ಈ ಸುದ್ದಿ ಕೇಳಿ ಗೌಡನಿಗೆ ಅಪಾರ ದುಃಖವಾಯಿತು. ಮತ್ತೂ ಎರಡು ದಿನ ನೋಡೋಣವೆಂದು ಮರಳಿ ಯತ್ನ ಮಾಡುವಂತೆ ಆಳುಗಳಿಗೆ ಆದೇಶವಿತ್ತನು. ಮತ್ತೊಂದು ದಿನ ರಾತ್ರಿ ಎಲ್ಲೆಲ್ಲೂ ಕಗ್ಗತ್ತಲು. ಜನಸಂಚಾರ ನಿಂತು ಎಲ್ಲೆಲ್ಲಿಯೂ ಭೀಕರ ಮೌನ ಆವರಿಸಿತ್ತು. ಅಂತಹ ವೇಳೆಯಲ್ಲಿ ಲಕ್ಷ್ಮಮ್ಮನು ತನ್ನ ಅರಮನೆಯಿಂದ ಹೊರಟಳು. ಕೋಟೆಯ ಮಹಾದ್ವಾರವಿದ್ದ ಸ್ಥಳಕ್ಕೆ ಬಂದು ಸೇರಿದಳು. ಅದೇ ಸಂಜೆಯಷ್ಟೆ ಆಳುಗಳು ದ್ವಾರವನ್ನು ನಿಲ್ಲಿಸಿ ಹೋಗಿದ್ದರು. ಮಹಾದ್ವಾರದ ಬಳಿ ನಿಂತು ತನ್ನ ಕುಲದೇವತೆಯಾದ ಕೆಂಪಮ್ಮನನ್ನು ಸ್ಮರಿಸಿ, "ಇದೋ ನನ್ನ ದೇಹವನ್ನು ಸಮರ್ಪಿಸುತ್ತಿದ್ದೇನೆ. ಕೋಟೆಯ ಬಾಗಿಲು ಇನ್ನಾದರೂ ಸ್ಥಿರವಾಗಿ ನಿಲ್ಲಲಿ. ನನ್ನ ಮಾವನವರಿಗೆ ಕೀರ್ತಿ ಬರಲಿ ಪ್ರಜೆಗಳಿಗೆ ಮಂಗಳವುಂಟಾಗಲಿ." ಎಂದು ಹೇಳಿ ತನ್ನ ಕೈಯಲ್ಲಿದ್ದ ಕತ್ತಿಯಿಂದ ತನ್ನ ತಲೆಯನ್ನು ಕತ್ತರಿಸಿಕೊಂಡಳು. ಕ್ಷಣಮಾತ್ರದಲ್ಲಿ ಅವಳ ರುಂಡ ಮುಂಡಗಳು ಬೇರೆಯಾದವು. ಆದರೂ ಕೈ ಮಾತ್ರ ಕತ್ತಿಯನ್ನು ಹಿಡಿದೇ ಇತ್ತು.

ಮರುದಿನ ಬೆಳಗ್ಗೆ ಕಾಮಟಿಗರು ಮಹಾದ್ವಾರದ ಬಳಿಗೆ ಬಂದರು. ಮಹಾದ್ವಾರ ಉರುಳದೆ ಸ್ಥಿರವಾಗಿ ನಿಂತಿದ್ದುದು ದೂರದಿಂದಲೇ ಅವರಿಗೆ ಕಾಣಿಸಿತು. ತಮ್ಮ ಶ್ರಮ ಸಾರ್ಥಕವಾಯಿತೆಂದು ಸಂತೋಷ, ಸಮಾಧಾನ ಗಳಿಂದ ಮಹಾದ್ವಾರವನ್ನು ಸಮೀಪಿಸಿದರು. ದ್ವಾರದ ಬಳಿಯಲ್ಲಿ ರುಂಡದಿಂದ ಬೇರ್ಪಟ್ಟ ಸ್ತ್ರೀ ದೇಹ ಬಿದ್ದಿದ್ದುದು ಗೋಚರಿಸಿತು. ಅದನ್ನು ಕಂಡೊಡನೆ ಆಳುಗಳು ಭೀತಿಗೊಂಡು ಓಡುತ್ತ ಹೋಗಿ ಕೆಂಪೇಗೌಡನಿಗೆ ಸುದ್ದಿಯನ್ನು ಮುಟ್ಟಿಸಿದರು.

ಗೌಡನು ಒಂದು ಕ್ಷಣವೂ ತಡಮಾಡದೆ ಮಹಾದ್ವಾರದ ಬಳಿಗೆ ಓಡೋಡಿ ಬಂದನು. ಆಹುತಿಯಾಗಿದ್ದುದು ತನ್ನ ಸೊಸೆಯೇ ಎಂಬುದು ಖಾತ್ರಿಯಾಯಿತು. ಅವನಿಗೆ ಸಹಿಸಲಾರದಷ್ಟು ವ್ಯಸನವಾಯಿತು. ಹೊಸ ಬೆಂಗಳೂರಿಗೆ ಪೂರ್ವದಿಕ್ಕಿನಲ್ಲಿದ್ದ ಕೋರಮಂಗಲದ ಬಳಿ ಶವಸಂಸ್ಕಾರಕ್ಕಾಗಿ ತಾನೇ ಸ್ವತಃ ಒಂದು ಪ್ರಶಸ್ತವಾದ ಸ್ಥಳವನ್ನು ಗೊತ್ತುಪಡಿಸಿ ಮುಂದಿನ ಕರ್ಮಾಂತರಗಳನ್ನು ಶ್ರದ್ಧೆಯಿಂದ ಆಗಗೊಳಿಸಿದನು.

ಕೋರಮಂಗಲದಲ್ಲಿ ಲಕ್ಷ್ಮಮ್ಮನ ಶವ ಸಂಸ್ಕಾರ ನಡೆಯಿತು. ಅನಂತರ ಕೆಲವು ದಿನಗಳಲ್ಲಿ ಕೆಂಪೇಗೌಡನು ಅದೇ ಕೋರಮಂಗಲದಲ್ಲಿ ಆ ಮಹಾಸತಿಯ ಹೆಸರಿನಲ್ಲಿ ಒಂದು ಗುಡಿಯನ್ನು ಕಟ್ಟಿಸಿದನು. ಈಗಲೂ ಕೋರ ಮಂಗಲದಲ್ಲಿ ಈ ಗುಡಿಯಿದೆ. ಗುಡಿಯ ಸಮೀಪದಲ್ಲಿ ಲಕ್ಷ್ಮಮ್ಮನ ಸಮಾಧಿಯೂ ಇದೆ. ದೇವಸ್ಥಾನದಲ್ಲಿ ಇತ್ತೀಚಿನ ಒಂದು ಶಿಲಾ ಲೇಖನವಿದೆ. ಅದರಲ್ಲಿ ಈ ರೀತಿ ಬರಹವಿದೆ–

"ಬೆಂಗಳೂರಿನ ಮಹಾ ಸಂಸ್ಥಾಪಕರು ಹಾಗೂ ಯಲಹಂಕ ನಾಡಿನ ಪ್ರಭುಗಳೂ ಆದ ಶ್ರೀ ಕೆಂಪೇಗೌಡರವರು ತಮ್ಮ ಸೊಸೆಯ ಜ್ಞಾಪಕಾರ್ಥವಾಗಿ ಸ್ಥಾಪಿಸಿದ ಶ್ರೀ ಮಹಾಲಕ್ಷ್ಮೀ ಮಂದಿರದ ಮೇಲೆ ದಿ. ಪಟೇಲ್ ಸಿದ್ದೇಗೌಡರ ಮಗ ಎಲ್. ಎಸ್. ರಾಮಲಿಂಗಯ್ಯನು ಕಟ್ಟಿಸಿದ ಗೋಪುರದ ಪ್ರತಿಷ್ಠೆಯು ಶೃಂಗೇರಿ ಶಿವಗಂಗಾ ಮಠಾಧೀಶರ ಸಮ್ಮುಖದಲ್ಲಿ ಮೈಸೂರು ರಾಜ್ಯದ ರಾಜ್ಯಪಾಲ ಶ್ರೀ ಧರ್ಮವೀರ ಅವರಿಂದ ಉದ್ಘಾಟಿಸಲ್ಪಟ್ಟಿತು. ದಿನಾಂಕ 16.5.1971".

ಹೀಗೆ ಕೋರಮಂಗಲ ಒಂದು ಚರಿತ್ರಾರ್ಹ ಸ್ಥಳವಾಗಿದೆ. ಲಕ್ಷ್ಮಮ್ಮನ ಗುಡಿಯು ಬೆಂಗಳೂರಿನ ಇತಿಹಾಸಕ್ಕೆ ಒಂದು ಸಾಕ್ಷಿಯಾಗಿ ಶೋಭಿಸುತ್ತಿದೆ. ಗತಕಾಲದ ಈ ಕುರುಹನ್ನು ಮುಂದಿನ ಪೀಳಿಗೆಯವರು ಕಾಪಾಡಿಕೊಳ್ಳಬೇಕೆಂಬುದು ಗಮನಾರ್ಹ ವಿಚಾರ. ಲಕ್ಷ್ಮಮ್ಮನ ತ್ಯಾಗದ ಪ್ರತಿಫಲವೋ ಎಂಬಂತೆ ಕೋಟೆಯ ಮಹಾದ್ವಾರ ಉರುಳದೆ ಸ್ಥಿರವಾಗಿ ನಿಂತಿತು. ಕೋಟೆಯ ಮುಂದಿನ ಕೆಲಸಗಳು ನಿರ್ವಿಘ್ನವಾಗಿ ಸಾಗಿದವು." [85]

ಈ ಲಕ್ಷ್ಮಮ್ಮನ ಸಮಾಧಿಯ ಬಗ್ಗೆ ಮತ್ತು ಆಕೆ ಹೀಗೆ ಆಹುತಿಯಾದುದಕ್ಕೆ ಐತಿಹಾಸಿಕ ಆಕರಗಳಿಲ್ಲವೆಂಬ ಹಿನ್ನೆಲೆಯಲ್ಲಿ ಕೋರಮಂಗಲದ ಈ ಸ್ಮಾರಕವನ್ನು ಕೆಲವು ವಿದ್ವಾಂಸರು ಲಕ್ಷ್ಮಮ್ಮನ ತ್ಯಾಗದ ಪ್ರತೀಕವೆಂದು ನಂಬಲು ಸಾಧ್ಯವಿಲ್ಲ ಎಂದಿದ್ದಾರೆ. ಎಷ್ಟೋ ವೀರವನಿತೆಯರು ಗಂಡನ ಮರಣದ ತರುವಾಯ ಗಂಡನ ಶವದೊಂದಿಗೆ ಸಹಗಮನವನ್ನು ಮಾಡಿದ್ದಾರೆ. ಆ ಎಲ್ಲಾ ಸ್ತ್ರೀಯರ ತ್ಯಾಗಕ್ಕೂ ಆಕರಗಳಿಲ್ಲ. ಹಾಗೆಂದರೆ ಅದು ನಡೆಯಲಿಲ್ಲವೇ? ಇಲ್ಲ ನಡೆದ ಕಹಿ ಘಟನೆಗಳನ್ನು ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುವುದು ಮತ್ತು ವೇದನೆ ಪಡುವುದು ನಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲ. ಅದಕ್ಕೆ ಬದಲಾಗಿ ಅಂತಹ ತ್ಯಾಗಿಗಳನ್ನು ದೈವತ್ವಕ್ಕೇರಿಸಿ ಪ್ರತಿ ದಿನವು ಆ ತ್ಯಾಗವನ್ನು ಸ್ಮರಿಸುತ್ತಿದ್ದರು. ಇಂತಹ ಕಾರ್ಯಗಳಿಗೆ ಶಾಸನಗಳು ಅತ್ಯಲ್ಪ ಅಥವಾ ಬೆರಳೆಣಿಕೆಯಲ್ಲಿ ಕಂಡುಬರುತ್ತವೆ. ಹಾಗೆ ಲಕ್ಷಮ್ಮನ ತ್ಯಾಗ ಸಹ ಜನಜನಿತವಾಗಿ ಕೆರೆಗೆ ಹಾರ ಕಥೆಯಂತೆ ಮೌಖಿಕವಾಗಿ ಜನರಲ್ಲಿ ಉಳಿದುಕೊಂಡಿದೆ.

ಇದಾದ ನಂತರ ನಮ್ಮ ಗಮನಸೆಳೆಯುವ ಇಬ್ಬರು ಮಹಿಳೆಯರೆಂದರೆ ಹಿರಿಯ ಕೆಂಪೇಗೌಡರ ಪಟ್ಟಮಹಿಷಿ ವೆಂಕಟಕೃಷ್ಣಾಜಮ್ಮ[86] ಮತ್ತು ಆತನ ಪಟ್ಟದ ನಾಟಕ ಶಾಲೆಯ ಶೃಂಗಾರಮ್ಮ.[87] ವೆಂಕಟಕೃಷ್ಣಾಜಮ್ಮನು ತನ್ನ ಅತ್ತೆ-ಮಾವಂದಿರಿಗೆ ಪುಣ್ಯವಾಗಲೆಂದು 1599ರಲ್ಲಿ ವೆಂಕಟಕೃಷ್ಣಸಾಗರವೆಂಬ ಅಗ್ರಹಾರವನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ನೀಡಿದ ಉಲ್ಲೇಖವನ್ನು ಯಲಹಂಕ ನಾಡಪ್ರಭುಗಳ ಶಾಸನ ಸಂಪುಟದ 43ನೇ ಶಾಸನ ಉಲ್ಲೇಖಿಸುತ್ತದೆ. ಇದೇ ಕಾಲದಲ್ಲಿ ಹಿರಿಯ ಕೆಂಪೇಗೌಡರ ಉಪ ಪತ್ನಿಯಾದ ಶೃಂಗಾರಮ್ಮನು ಶೃಂಗಾರ ಸಾಗರವನ್ನು ನಿರ್ಮಿಸಿ ಜನೋಪಯೋಗಿ ಕಾರ್ಯಗಳನ್ನು ನೆರವೇರಿಸಿದ್ದನ್ನು ಮೇಲೆ ಉಲ್ಲೇಖಿಸಿದ ಶಾಸನ ಸಂಪುಟದ ಶಾಸನ ಸಂಖ್ಯೆ 44ರಲ್ಲಿ ಕಾಣಬಹುದು.

ಹೀಗೆ ಯಲಹಂಕ ನಾಡಪ್ರಭುಗಳ ಮನೆಯ ಹೆಣ್ಣುಮಕ್ಕಳು ಮನೆತನದ ಒಳಿತಿಗಾಗಿ ಅತ್ತೆಮಾವಂದಿರಿಗೆ ಪುಣ್ಯವಾಗಲೆಂದು ಸಮಾಜದ ಎಲ್ಲಾ ವರ್ಗದವರಿಗೂ ಅನುಕೂಲವಾಗಲೆಂದು ಹಲವಾರು ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿದ್ದಾರೆ. ಇವೆಲ್ಲವೂ ಅಂದಿನ ಸ್ತ್ರೀಯರು ಧರ್ಮಭೀರುಗಳು ಮತ್ತು ಸಮಾಜಸೇವಾ ಮನೋಭಾವವನ್ನು ಹೊಂದಿದ್ದವರೆಂದು ನಿರೂಪಿಸುತ್ತವೆ.

ನಾಡಪ್ರಭುಗಳು ಮತ್ತು ಮೈಸೂರು ಸಂಸ್ಥಾನದ ಸಂಬಂಧಗಳು

ಮೈಸೂರು ಒಡೆಯರ್ ಮನೆತನ ಹಾಗೂ ಯಲಹಂಕ ನಾಡಪ್ರಭುಗಳು ತಮ್ಮ ರಾಜಕೀಯ ಇತಿಹಾಸವನ್ನು ವಿಜಯನಗರದ ಸಾಮ್ರಾಟ ಕೃಷ್ಣರಾಯರ ಉಮ್ಮತ್ತೂರಿನ ದಾಳಿಯ ಆಸುಪಾಸಿನಲ್ಲಿ ರೂಪಿಸಿಕೊಂಡಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಯಲಹಂಕ ನಾಡಪ್ರಭುಗಳು ಈ ಕಾಲಘಟ್ಟದಲ್ಲಿ ಅಮರನಾಯಕರಾಗಿ ಬೆಳೆದರು. ಆದರೆ ಮೈಸೂರು ಒಡೆಯರ್ ಮನೆತನದವರು ಅಮರನಾಯಕರ ಕೈ ಕೆಳಗೆ ಸಣ್ಣ ಪ್ರದೇಶ ಒಂದರ ಅಧಿಕಾರಿಗಳಾಗಿದ್ದರು. ಯಲಹಂಕ ನಾಡಪ್ರಭುಗಳು ತಮ್ಮ ಅಮರ ನಾಯಕತ್ವದಿಂದ ಸ್ವತಂತ್ರ ಸಾಮ್ರಾಜ್ಯ ಅಥವಾ ರಾಜ್ಯ ನಿರ್ಮಿಸುವ ನಿಟ್ಟಿನಲ್ಲಿ ಕಾರ್ಯ ತತ್ಪರರಾದರೂ ಅದೂ ಸಾಧ್ಯವಾಗಲಿಲ್ಲ.

ಮೈಸೂರು ಅರಸರು ಕೃಷ್ಣರಾಯನ ಕಾಲದಲ್ಲಿ ಅಮರ ನಾಯಕರ ಕೈಕೆಳಗೆ ಅಧಿಕಾರಿಗಳಾಗಿದ್ದವರು. ವಿಜಯನಗರದ ಪತನಾನಂತರ ಅದರಲ್ಲೂ ರಾಜ ಒಡೆಯರ ಕಾಲದಲ್ಲಿ ವಿಜಯನಗರದ ಸಾಮ್ರಾಜ್ಯದ, ಶ್ರೀರಂಗಪಟ್ಟಣ ರಾಜ್ಯದ, ರಾಜಧಾನಿ ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಂಡು ತಮ್ಮ ರಾಜಕೀಯ ಶಕ್ತಿಯನ್ನು ಅತಿ ಶೀಘ್ರವಾಗಿ ಮತ್ತು ಸುಲಭದಲ್ಲಿ ಬಳಸಿಕೊಂಡರು. ಶ್ರೀರಂಗಪಟ್ಟಣದ ಪ್ರಾಂತ್ಯಾಧಿಕಾರಿಯ ಅಶಕ್ತತೆ, ಅವಿಧೇಯತೆ, ಅನಾರೋಗ್ಯಗಳು ಮತ್ತು ತನ್ನ ಕಾರ್ಯಸಾಧನೆಗಾಗಿ ಅಧೀನ ನಾಯಕರ ಅತಿಯಾದ ಅವಲಂಬನೆಗಳನ್ನು ಒಂದು ನಿಟ್ಟಿನ ಕಾರಣಗಳಾಗಿ ಇದಕ್ಕೆ ಕೊಡಬಹುದು. ಮತ್ತೊಂದೆಡೆ ಸಾಮ್ರಾಟ ಮತ್ತು ಪ್ರಾಂತ್ಯಾಧಿಪತಿಯ ನಡುವಿನ ವಿರಸ, ರಾಜಒಡೆಯರ ಬಗ್ಗೆ ಸಾಮ್ರಾಟ ತಾಳಿದ್ದ ಮೃದು ಧೋರಣೆ ಹಾಗೂ ಈ ಪ್ರಾಂತ್ಯದಲ್ಲಿ ಸಶಕ್ತ ಸಾಮಂತ ರಾಜನನ್ನು ಬೆಳೆಸುವ ಬಯಕೆ ಇವರ ಯಶೋಗಾಥೆಯ ಮತ್ತೊಂದು ಕಾರಣ.

ರಾಜ ಒಡೆಯರು ಮೈಸೂರಿನ ತಮ್ಮ ಮನೆತನದ ಆಡಳಿತದ ಚುಕ್ಕಾಣಿಯನ್ನು ಹಿಡಿದ ತಕ್ಷಣ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸುವುದರ ಜೊತೆಗೆ ವಿಭಜನೆಗೊಂಡಿದ್ದ ತಮ್ಮ ಪಾಳೆಯ ಪಟ್ಟನ್ನು ಒಂದುಗೂಡಿಸಿ ಸುತ್ತಮುತ್ತಲಿನ ಎಲ್ಲಾ ಪಾಳೆಯಗಾರರನ್ನು ಜಯಿಸಿ ತಮ್ಮ ಶಕ್ತಿ ವೃದ್ಧಿಸಿಕೊಂಡರು. ಇದನ್ನು ವಿರೋಧಿಸಿದ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಪ್ರಾಂತ್ಯಾಧಿಕಾರಿ ತನ್ನ ಬೆಂಬಲಿಗರ ಸಹಕಾರದೊಂದಿಗೆ ರಾಜ ಒಡೆಯರ ಮೇಲೆ ಯುದ್ಧ ಸಾರಿದನು. ಈ ಗುಂಪಿನಲ್ಲಿ ಯಲಹಂಕ ನಾಡಪ್ರಭುಗಳು ಇದ್ದರೆಂದು ಕಂಠೀರವ ನರಸರಾಜ ವಿಜಯವು ಹೀಗೆ ಉಲ್ಲೇಖಿಸುತ್ತದೆ.[88]

ಕೋಳಾಲಬಳಲಾಪುರ ಬೆಂಗಳೂರು ಭೂ
ಪಾಲರು ಮಾರ್ಬಲಸಹಿತ
ಮೇಳದೆ ತಿರುಮಲೇಶ್ವರನ ಕೂಟಕೆ ಬಂ
ದಾಳಾಪವನೇನನೆಂಬೆ 30
ತಿರುವೇಂಕಟನಾಥ ಮೊರಸರ ಗಂಡನು
ಪರಬಲ ದುಂಪಾದೂಳಿ
ಕರಿಗಳರಸ ಕಸ್ತೂರಿರಂಗ ಮೊದಲಾದ
ಬಿರುದಿನಾನೆಗಳೈದಿದುವು. 42

ಕೆಸರೆಯ ಯುದ್ಧದ ಹಿನ್ನೆಲೆಯಲ್ಲಿ ಯಲಹಂಕ ನಾಡಪ್ರಭು ಅಂದರೆ ಒಂದನೇ ಕೆಂಪೇಗೌಡನು ಶ್ರೀರಂಗ ಪಟ್ಟದಲ್ಲಿದ್ದ ವಿಜಯನಗರದ ಪ್ರಾಂತ್ಯಾಧಿಪತಿಯ ಸಹಕಾರಕ್ಕೆ ನಿಂತು, ಮೈಸೂರು ಸಂಸ್ಥಾನದ ವಿರೋಧಿಗಳೆನಿಸಿದರು. ಯಲಹಂಕ ನಾಡಪ್ರಭು ವಿಜಯನಗರ ಸಾಮ್ರಾಜ್ಯದ ಅತ್ಯಂತ ನಿಷ್ಠಾವಂತ ಸಾಮಂತರಾಗಿದ್ದುದೇ ಇದಕ್ಕೆ ಕಾರಣವಾಯಿತು. ಮೈಸೂರು ಅರಸರ ಸಾಮಂತರಾದ ನಂತರವೂ ಇವರು ತಮ್ಮ ವಿಜಯನಗರದ ನಿಷ್ಠೆಯನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಅವರ ಶಾಸನಗಳ ಪ್ರಶಸ್ತಿ ಭಾಗದಲ್ಲಿ ವಿಜಯನಗರದ ಅರಸರನ್ನು ಉಲ್ಲೇಖಿಸುವುದೊಂದಿಗೆ ವ್ಯಕ್ತಪಡಿಸಿದ್ದಾರೆ. ಕೇವಲ ಎರಡು ಶಾಸನಗಳಲ್ಲಿ ಅದರಲ್ಲೂ 1714 ಮತ್ತು 1717ರ ಶಾಸನಗಳಲ್ಲಿ ಮೈಸೂರಿನ ಒಡೆಯ ಕೃಷ್ಣರಾಜನನ್ನು ಉಲ್ಲೇಖಿಸಿದ ಪ್ರಶಸ್ತಿ ಕಂಡುಬರುತ್ತದೆ.[89] ಮತ್ತೆ ಎರಡು ಶಾಸನಗಳಲ್ಲಿ ತಾವು ದಾನ ನೀಡಿದ ಪ್ರದೇಶಗಳನ್ನು ಉಲ್ಲೇಖಿಸುವಾಗ 'ಚಿಕ್ಕದೇವರಾಜರಿಗೆ ಸಲುವ' ಎಂಬ ಉಲ್ಲೇಖಗಳನ್ನು ಕಾಣಬಹುದಾಗಿದೆ. ಹದಿನೆಂಟನೆ ಶತಮಾನದ ಪ್ರಾರಂಭದ ದಿನಗಳ ಶಾಸನಗಳಲ್ಲಿ ಅಂದರೆ ಯಲಹಂಕ ನಾಡಪ್ರಭುಗಳ ಶಾಸನ ಸಂಪುಟದ ಕ್ರಿ. ಶ. 1708 ಮತ್ತು 1713ರ ಶಾಸನಗಳಲ್ಲಿ ಈ ಉಲ್ಲೇಖವನ್ನು ಕಾಣಬಹುದು.[90]

ರಣಧೀರ ಕಂಠೀರವ ನರಸರಾಜನ ಕಾಲದಲ್ಲಿಯೇ ಮೈಸೂರು ರಾಜ್ಯ ವಿಸ್ತರಣಾ ನೀತಿಯನ್ನು ಅನುಸರಿಸಿ ತನ್ನ ಎಲ್ಲೆಗಳನ್ನು ವಿಸ್ತರಿಸುವ ಕಾರ್ಯಕ್ಕೆ ತನ್ನನ್ನು ಈಡು ಮಾಡಿಕೊಂಡಿತು. ಇದಕ್ಕೆ ಪೂರ್ವದಲ್ಲಿಯೇ ಯಲಹಂಕ ನಾಡಪ್ರಭುಗಳ ಎಲ್ಲೆಗಳ ಮೇಲೆ ಮೈಸೂರು ಅರಸರು ದಾಳಿ ಮಾಡಿದ್ದನ್ನು ಕಂಠೀರವ ನರಸರಾಜ ವಿಜಯದ ಈ ಪದ್ಯ ಹೀಗೆ ಉಲ್ಲೇಖಿಸುತ್ತದೆ.[91]

ಬಳಲಾಪುರ ಬೆಂಗಳೂರು ಕೊಳಾಲಗ
ಳಿಳೆಯಾಣ್ಮರುರೆ ಕಂಗೆಟ್ಟು
ತಳತಂತ್ರವ ನೀಗಿ ತಮ್ಮಯ ಪುರಗಳ್ಗೆ
ತಳುವುದೆ ಸರಿದರೇವೇಳೆವ
ಸುತ್ತಣ ಪ್ರಭು ಮನ್ನೆಯರೆಲ್ಲರು ನಿಜ
ಪತ್ತಿಗಳನು ನೀಗಿ ನೊಂದು
ಮತ್ತಾಗ ನಿಂದಲ್ಲಿ ನಿಲ್ಲದೆ ಸರಿದ ವಿ
ಪತ್ತ ನಾನೇನ ಬಣ್ಣಿಪೆನು (ಸಂಧಿ 3–ಪದ್ಯ 92 ಮತ್ತು 93)

ಇದಕ್ಕೆ ಭಿನ್ನವಾದ ಪರಿಸರವನ್ನು ಸೃಷ್ಟಿಸುವ ದಾಖಲೆಗಳನ್ನು ಸತ್ಯನಾರಾಯಣ[92] ಅವರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಕೆಂಪೇಗೌಡರ ಜಯಪ್ರಶಸ್ತಿ ಮತ್ತು ಮದ್ರಾಸಿನ ಪತ್ರಾಗಾರ ಇಲಾಖೆಯ ವಶದಲ್ಲಿರುವ ಪತ್ರಗಳನ್ನು ಆಧರಿಸಿ ಮೈಸೂರಿನ ಅರಸು ಚಾಮರಾಜ ಒಡೆಯರು ಮತ್ತು ವಿಜಯನಗರದ ಅರಸರ ನಡುವಿನ ಭಿನ್ನಾಭಿಪ್ರಾಯವನ್ನು ತೊಡೆದುಹಾಕುವಲ್ಲಿ ಇಮ್ಮಡಿ ಕೆಂಪೇಗೌಡನು ಸಹಕರಿಸಿದರೆಂದು ತಿಳಿಸುತ್ತಾರೆ. ಆದರೆ ಈ ಅಭಿಪ್ರಾಯ ಏಕಮುಖಿ ಆಧಾರಗಳನ್ನು ಆಧರಿಸಿದ್ದರಾದ್ದರಿಂದ ಒಪ್ಪಲು ಸಾಧ್ಯವಿಲ್ಲ[93].

ಕ್ರಿ. ಶ. 1623ರ ಶಾಸನಗಳಲ್ಲಿ ಚಾಮರಾಜ ಒಡೆಯನು ವಿಜಯನಗರ ಸಾಮ್ರಾಟನನ್ನು ನೆಪ ಮಾತ್ರಕ್ಕೆ ಉಲ್ಲೇಖಿಸಿ ಸ್ವತಂತ್ರ ರಾಜರಂತೆ ಕಾರ್ಯ ನಿರ್ವಹಿಸಿದ ಉಲ್ಲೇಖಗಳಿವೆ.6 ಚಾಮರಾಜ ಒಡೆಯರು ಶಕ

1543ನೇ (ಕ್ರಿ. ಶ. 1621) ಪ್ರಮೋದೂತ ಸಂವತ್ಸರದಲ್ಲಿ ಚನ್ನಪಟ್ಟಣ, ಕಾನಕಾನಹಳ್ಳಿಯನ್ನು ಶಕ 1544ನೇ (ಕ್ರಿ. ಶ. 1622) ಪ್ರಜೋತ್ಪತ್ತಿ ಸಂವತ್ಸರದಲ್ಲಿ ಮಳವಳ್ಳಿ, ಶಕ 1547ನೇ (ಕ್ರಿ. ಶ. 1625) ರಕ್ತಾಕ್ಷಿ ಸಂವತ್ಸರದಲ್ಲಿ ಬೂಕಿನಕೆರೆ, ಸಿಂಧಘಟ್ಟ ಮುಂತಾದುವುಗಳನ್ನು ಚನ್ನಪಟ್ಟಣದ ಜಗದೇವರಾಯನಿಂದ ಪಡೆದುಕೊಂಡರೆಂದು ತಿಳಿದುಬರುತ್ತದೆ.95 ಇದಕ್ಕೆ ಇತರ ಆಕರಗಳು ಲಭ್ಯವಿದೆ.[96] ಚನ್ನಪಟ್ಟಣ ರಾಜ್ಯವು 1630ರ ಹೊತ್ತಿಗೆ ಸಂಪೂರ್ಣವಾಗಿ ಮೈಸೂರು ಒಡೆಯರ ಕೈವಶವಾಗಿತ್ತು. ಅಂದ ಮೇಲೆ ಚನ್ನಪಟ್ಟಣ ಎಲ್ಲೆಯಲ್ಲಿದ್ದ ಬೆಂಗಳೂರಿನ ಭೂಪಾಲರನ್ನು ಅಂದರೆ ಯಲಹಂಕ ನಾಡಪ್ರಭುಗಳು ಚಾಮರಾಜ ಒಡೆಯರ್‌ರವರಿಂದ ಸೋತಿರಬೇಕೆಂದು ಕಂಠೀರವ ನರಸರಾಜ ವಿಜಯದ ಉಲ್ಲೇಖದ ಆಧಾರದ ಮೇಲೆ ಭಾವಿಸಬಹುದು.

ಇದಕ್ಕೆ ಎರಡು ಕಾರಣಗಳನ್ನು ನೀಡಬಹುದು. ರಾಜ ಒಡೆಯರ್ 1610ರಲ್ಲಿ ಶ್ರೀರಂಗಪಟ್ಟಣ ವನ್ನು ಆಕ್ರಮಿಸಿಕೊಂಡುದುದು ಕೆಂಪೇಗೌಡನು ಮೈಸೂರು ಅರಸರನ್ನು ದ್ವೇಷಿಸಲು ಕಾರಣವಾಯಿತು. ವಿಜಯನಗರ ಸಾಮ್ರಾಜ್ಯಕ್ಕೆ ನಿಷ್ಠರಾಗಿದ್ದ ಇವರು ಕೆಸರೆಯ ಯುದ್ಧದಲ್ಲಿ ರಾಜ ಒಡೆಯರ ವಿರುದ್ಧ ಯುದ್ಧಕ್ಕೆ ಇಳಿದು ಒಡೆಯರ ವಿರೋಧಿಗಳಾಗಿ ರೂಪುಗೊಂಡಿದ್ದರು. ಈ ಮೊದಲೇ ಹೇಳಿದಂತೆ ಜಗದೇವರಾಯನ ಎರಡು ರಾಜಧಾನಿಗಳಾದ ಚನ್ನಪಟ್ಟಣ ಮತ್ತು ಸಿಂಧಘಟ್ಟಗಳನ್ನು ವಶಪಡಿಸಿಕೊಂಡ ಚಾಮರಾಜ ಒಡೆಯನು ವಿಜಯನಗರ ಸಾಮ್ರಾಜ್ಯದ ಆದಾಯವನ್ನು ತಮ್ಮ ಸಂಸ್ಥಾನಕ್ಕೆ ಬರಮಾಡಿಕೊಂಡು ಯಲಹಂಕ ನಾಡಪ್ರಭುಗಳ ವಿಜಯನಗರ ಸಾಮ್ರಾಜ್ಯದ ನಿಷ್ಠೆಗೆ ವಿರುದ್ಧವಾಗಿ ನಡೆದು ಅವರ ಕೋಪಕ್ಕೆ ಗುರಿಯಾದರು. ಪ್ರಾಯಶಃ, ಯಲಹಂಕ ನಾಡಪ್ರಭುಗಳು ಜಗದೇವರಾಯನ ಪರವಾಗಿ ಮೈಸೂರು ಒಡೆಯರ ವಿರುದ್ಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವ ಎಲ್ಲಾ ಸಾಧ್ಯತೆಗಳಿವೆ. ಚನ್ನಪಟ್ಟಣದ ನಂತರ ಯಲಹಂಕ ನಾಡಪ್ರಭುಗಳು ತಮ್ಮ ನಾಡಿನ ಎಲ್ಲೆಯಲ್ಲಿ ಚಾಮರಾಜ ಒಡೆಯನನ್ನು ಸಂಧಿಸಿ ಅವರಿಂದ ಸೋತು ಹಿಂದೆ ಸರಿದಿರಬೇಕೆಂದು ಭಾವಿಸಲು ಸಾಕಷ್ಟು ಪುರಾವೆಗಳಿವೆ.

ರಣಧೀರ ಕಂಠೀರವ ನರಸರಾಜ ಒಡೆಯ ಶಕ 1573ನೇ (ಕ್ರಿ. ಶ. 1650) ವಿಕೃತಿ ಸಂವತ್ಸರದಲ್ಲಿ ಯಲಹಂಕ ನಾಡಪ್ರಭು ಕೆಂಪೇಗೌಡನಿಂದ ಕುಣಿಗಲು, ಹೆಬ್ಬೂರು ಮುಂತಾದ ಪ್ರದೇಶಗಳನ್ನು ವಶಪಡಿಸಿ ಕೊಂಡರೆಂದು ವಂಶರತ್ನಾಕರ ಗ್ರಂಥವು ಉಲ್ಲೇಖಿಸುತ್ತದೆ[97]. ಇದನ್ನೇ ಇತರ ಹಲವಾರು ಕೃತಿಗಳು ಉಲ್ಲೇಖಿಸಿವೆ.[98] ಈ ಕಾಲಕ್ಕಾಗಲೇ ಇಮ್ಮಡಿ ಕೆಂಪೇಗೌಡರು ರಣದುಲ್ಲಾಖಾನನಿಗೆ ಸೋತು ತಮ್ಮ ಪ್ರದೇಶದ ಬಹುಭಾಗವನ್ನು ಖಾನನಿಗೆ ಕೊಟ್ಟು ಆತ ನೀಡಿದ ಕುಣಿಗಲು ಅಥವಾ ಮಾಗಡಿ ಸೀಮೆಯನ್ನು ತಮ್ಮ ಆಡಳಿತಕ್ಕೆ ಹೊಂದಿದ್ದರೆಂದು ಕಂಠೀರವ ನರಸರಾಜ ವಿಜಯ ಕೃತಿ ಹೀಗೆ ವಿವರಿಸುತ್ತದೆ.

ರಣದುಲ್ಲಾಖಾನ್‌ನು ಶಿವಗಂಗೆಯಲ್ಲಿ ಬೀಡುಬಿಟ್ಟು ಅದನ್ನು ಕೈವಶಮಾಡಿಕೊಂಡು ಮುಂದುವರಿದು ಬೆಂಗಳೂರನ್ನು ಮುತ್ತಿ ಮೂರು ದಿನಗಳ ಸತತ ಹೋರಾಟದ ತರುವಾಯ ಖಾನನು ಬೆಂಗಳೂರನ್ನು ವಶಮಾಡಿಕೊಂಡನು.[99] ಮುಂದುವರಿದು ಬೆಂಗಳೂರಿನ ಇಮ್ಮಡಿ ಕೆಂಪೇಗೌಡನು ಖಾನನಿಗೆ ನೀಡಿದ ಸೀಮೆಗಳನ್ನು ಹೀಗೆ ಉಲ್ಲೇಖಿಸುತ್ತದೆ.[100]

ಅನಿತರೊಳಗೆ ಕಂಗೆಟ್ಟು ಖಾನನಿಗೆ ತನ್ನ
ತನುಜರ ಕೈಸೆರೆಗಟ್ಟಿ
ಘನನಂಬುಗೆಗೊಂಡು ದುರ್ಗವನಿತ್ತಾಗ
ಮನನೊಂದು ತೆರಳಿದ ಗೌಡ 61

ರಾಮಗಿರಿಯದುರ್ಗ ಮೊದಲಾದ ಘನವಹ
ಸೀಮೆಯ ಖಳನಿಗೆ ಕೊಟ್ಟು
ನೇಮವಳಿದು ನೆರೆಯವನಿತ್ತ ಕುಣಿಗಿಲ
ಸೀಮೆಗೈದಿದನೇವೇಳ್ವೆ 62

ಬಲ್ಲಾಳಪುರ ಕೋಳಾಲ ಬಿಜ್ಜಾವರ
ದಲ್ಲಿಯ ಪ್ರಭುಮನ್ನೆಯರು
ತಲ್ಲಣಗೊಂಡು ಖಾನನಿಗೆ ಬೇಡಿದುದಿತ್ತು
ನಿಲ್ಲದೆ ಕೂಟಕೈದಿದರು 63

ಚಿಕ್ಕಬಳ್ಳಾಪುರ ನೆರೆ ಹೊಳವನಹಳ್ಳಿ
ಯಕಳಂಕ ಹೊಸಕೋಟೆಯವರು
ಮುಖಭಂಗಿತರಾಗಿ ಖಾನನ ಸಂಗಡ
ಸಕಲಬಲದೆ ತೆರಳಿದರು 64

ಬಾವಲೂರುರೆ ಹೊಸ ಊರು ಕಗ್ಗೊಂದಿಯ
ತೀವಿದ ಮಾಸ್ತಿಯ ನೃಪರು
ದೇವಂಡಪುರಿ ಸೂರೆಬಲೆ ಸಿಡಿಲ್‌ಗಟ್ಟದ
ಭೂವರೊಡನೈದಿದರು 65

ಈ ಮೇಲಿನ ಪದ್ಯಗಳ ಅಧ್ಯಯನದಿಂದ ಯಲಹಂಕ ನಾಡಿನ ಬಹುತೇಕ ಪ್ರದೇಶಗಳು ಖಾನನಿಗೆ ವಶವಾದುದು ನಿಖರವಾಗುತ್ತದೆ. ಅಲ್ಲದೆ ಖಾನನು ನೀಡಿದ ಕುಣಿಗಲು ಸೀಮೆಯ ಮಾಗಡಿಗೆ ಅವರ ಅಧಿಕಾರ ಸೀಮಿತವಾಗಿದ್ದುದು ಕಂಡುಬರುತ್ತದೆ. ಅದರಲ್ಲಿಯೂ ಕುಣಿಗಲನ್ನು 1650ರಲ್ಲಿ ರಣಧೀರ ಕಂಠೀರವ ವಶಪಡಿಸಿಕೊಳ್ಳುವುದರೊಂದಿಗೆ ಯಲಹಂಕ ನಾಡಪ್ರಭುಗಳ ಅಧಿಕಾರ ಮಾಗಡಿಗೆ ಸೀಮಿತವಾಗಿದ್ದುದು ಖಚಿತವಾಗುತ್ತದೆ.

1650ಕ್ಕೆ ಪೂರ್ವದಲ್ಲಿ ಕುಣಿಗಲು ಅಥವಾ ಯಲಹಂಕ ನಾಡನ್ನು ಗೆಲ್ಲುವ ಸಲುವಾಗಿ ಶ್ರೀರಂಗರಾಯನಿಗೆ ಉಮ್ಮತ್ತೂರು ಪ್ರದೇಶದಲ್ಲಿ ಕಂಠೀರವನು ಅಶ್ರಯ ನೀಡಿದ್ದನ್ನು ಸಹ ಇಲ್ಲಿ ಉಲ್ಲೇಖಿಸಬಹುದು.[101] ಮಾಗಡಿಯನ್ನು ರಣದುಲ್ಲಾಖಾನನು ಕೆಂಪೇಗೌಡನಿಗೆ ಹಿಂದಿರುಗಿಸಿದ್ದು ಮೈಸೂರು ಅರಸರು ಬೆಂಗಳೂರನ್ನು ಮುಟ್ಟದಂತೆ ಬೆಂಗಳೂರು ಮತ್ತು ಮೈಸೂರು ಗಡಿಯ ನಡುವೆ ತನ್ನ ಸ್ನೇಹಿತನೋರ್ವನನ್ನು ನಿಲ್ಲಿಸಿ ಆತನ ಮೂಲಕವಾಗಿ ಮೈಸೂರು ಅರಸರು ಬೆಂಗಳೂರನ್ನು ವಶಮಾಡಿಕೊಳ್ಳುವುದನ್ನು ತಡೆಗಟ್ಟುವ ಉದ್ದೇಶದಿಂದಲೇ ಎಂದು ಇತಿಹಾಸಕಾರರು ವ್ಯಾಖ್ಯಾನಿಸಿದ್ದಾರೆ.[102]

ಕಂಠೀರವ 1650ರಲ್ಲಿ ಮಾಗಡಿಯನ್ನು ಮುತ್ತಿದಾಗ 1630ರ ಕರಾರಿನಂತೆ ಬೆಂಗಳೂರಿನ ಏಕೋಜಿಯು ಕೆಂಪೇಗೌಡನಿಗೆ ಕಂಠೀರವರ ವಿರುದ್ಧ ಸಹಕರಿಸಬೇಕಾಗಿತ್ತು. ಆದರೆ ಅದಕ್ಕೆ ವಿರುದ್ಧವಾಗಿ ಏಕೋಜಿಯು ತಟಸ್ಥ ನೀತಿಯನ್ನು ಅನುಸರಿಸಿದನು. ಇದು ಮುಂದೆ ಆತನಿಗೇ ಮುಳುವಾಯಿತು. ಮುದ್ದಾಚಾರಿಯವರು[103] ರಣಧೀರ

ಕಂಠೀರನು 1650ರಲ್ಲಿ ಮಾಗಡಿಯನ್ನು ಮುತ್ತಿ ಇಮ್ಮಡಿ ಕೆಂಪೇಗೌಡನನ್ನು ಯುದ್ಧದಲ್ಲಿ ಸೋಲಿಸಿ ಆತನಿಂದ ಕಪ್ಪಕಾಣಿಕೆಗಳನ್ನು ಪಡೆದುಕೊಂಡು ಮಾಗಡಿ ಸಂಸ್ಥಾನವನ್ನು ಮೈಸೂರಿನ ಅಧೀನ ರಾಜ್ಯವನ್ನಾಗಿ ಮಾಡಿ ಕೊಂಡನೆಂದು ವ್ಯಾಖ್ಯಾನಿಸಿದ್ದಾರೆ.

ತರುವಾಯದಲ್ಲಿ ದೊಡ್ಡದೇವರಾಜ ಒಡೆಯನು ಶಕ 1590ನೇ (ಕ್ರಿ. ಶ. 1668) ಪ್ಲವಂಗ ಸಂವತ್ಸರದ ಮಾರ್ಗಶಿರ ಶುದ್ಧ 3ರಲ್ಲಿ ಕೆಂಪೇಗೌಡನಿಂದ ಹುಲಿಯೂರುದುರ್ಗ, ಮಾಘ 10ರಲ್ಲಿ ಕುಣಿಗಲು ಪ್ರದೇಶವನ್ನು ಮತ್ತೆ ಆಕ್ರಮಿಸಿಕೊಳ್ಳುತ್ತಾನೆ.[104]

ಏಕೋಜಿಯು ಇಮ್ಮಡಿ ಕೆಂಪೇಗೌಡರಿಗೆ 1650ರಲ್ಲಿ ಕಂಠೀರವ ನರಸರಾಜನ ವಿರುದ್ಧ ಸಹಾಯ ಮಾಡದಿದ್ದುದರ ಫಲವಾಗಿ 1659ರಲ್ಲಿ ಮುಮ್ಮಡಿ ಕೆಂಪೇಗೌಡನನ್ನು ಎದುರಿಸಬೇಕಾಗಿ ಬಂದಿತು. ಈ ಯುದ್ಧದಲ್ಲಿ ಮುಮ್ಮಡಿ ಕೆಂಪೇಗೌಡನು ಏಕೋಜಿಯನ್ನು ಸೋಲಿಸಿದನು.[105] ಈ ಕಾಲದಲ್ಲಿ ಏಕೋಜಿಯ ಸಹಾಯಕ್ಕೆ ಬಿಜಾಪುರದ ಸುಲ್ತಾನನು ಬರುವ ಪರಿಸ್ಥಿತಿಯಲ್ಲಿರಲಿಲ್ಲ. ಆತನು ಔರಂಗಜೇಬನ ದಾಳಿಯನ್ನು ಎದುರಿಸುತ್ತಿದ್ದನು. ಏಕೋಜಿ ಮತ್ತು ಕೆಂಪೇಗೌಡನ ನಡುವಿನ ಭಿನ್ನಾಭಿಪ್ರಾಯವನ್ನು ಬಳಸಿಕೊಂಡು ದೊಡ್ಡದೇವರಾಜ ಒಡೆಯನು ಮತ್ತೆ ಮಾಗಡಿಯನ್ನು ಮುತ್ತಲು ಕಾರ್ಯಾಚರಣೆ ಪ್ರಾರಂಭಿಸಿದನು. ಅವನು ಅಮೃತೂರು, ಜಿನ್ನಗರ ಕೋಟೆಗಳನ್ನು ವಶಪಡಿಸಿಕೊಂಡನು. ಮಾಗಡಿಯ ಆಡಳಿತದಲ್ಲಿದ್ದ ಕುಣಿಗಲುವನ್ನು ವಶಪಡಿಸಿಕೊಳ್ಳುವ ಯೋಜನೆಯ ಹಿನ್ನೆಲೆಯಲ್ಲಿ 1667ರಲ್ಲಿ ಮಾಗಡಿ ವಿರುದ್ಧ ದಾಳಿಮಾಡಿ ಅವರ ವಶದಲ್ಲಿದ್ದ ಹುಲಿಯೂರುದುರ್ಗ, ಕುಣಿಗಲು ಕೋಟೆಗಳನ್ನು ಮತ್ತು ಅದಕ್ಕೆ ಸೇರಿದ್ದ ಪ್ರದೇಶಗಳನ್ನು ಅದೇ ವರ್ಷ ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡರು.[106]

ಬೆಂಗಳೂರಿನಿಂದ ಶಹಜಿಯು ಕಾಲುತೆಗೆಯುವಂತೆ ಮಾಡುವಲ್ಲಿ ಮುಮ್ಮಡಿ ಕೆಂಪೇಗೌಡರು ಮತ್ತು ದೊಡ್ಡದೇವರಾಜ ಒಡೆಯರ್ ಕಾರಣರೆಂದು ಮುದ್ದಾಚಾರಿಗಳು[107] ಹೇಳುತ್ತಾರೆ. ಹಾಗಾದರೆ ಮುಮ್ಮಡಿ ಕೆಂಪೇಗೌಡನು ರಣಧೀರ ಕಂಠೀರವರ ತರುವಾಯದಲ್ಲಿ ಮೈಸೂರು ಅರಸರೊಂದಿಗೆ ಸಾಮರಸ್ಯದಿಂದಿದ್ದು ಮೈಸೂರಿಗರಿಗೆ ಸಹಕರಿಸಿ ಮರಾಠೆಯವರನ್ನು ಕನ್ನಡ ನೆಲದಿಂದ ಓಡಿಸಲು ಸಹಕಾರಿಯಾದನೆಂದು ಭಾವಿಸ ಬೇಕಾಗುತ್ತದೆ.[108] ಹಾಗೆಂದ ಮೇಲೆ ಇವರು ಮೈಸೂರಿನ ಸಾಮಂತರಾಗಿ ಆಳ್ವಿಕೆ ಮುಂದುವರಿಸಿದ್ದಾರೆ. ಆದರೆ ಶಾಸನಗಳಲ್ಲಿ ತಮ್ಮ ನಿಷ್ಠೆಯನ್ನು ವಿಜಯನಗರದ ಅರಸರಿಗೆ ವ್ಯಕ್ತಪಡಿಸಿದ್ದಾರೆ. [109]

ಮಾಗಡಿಯ ಕುಣಿಗಲು, ಹೆಬ್ಬೂರು, ಅಮೃತೂರು, ಹುಲಿಯೂರುದುರ್ಗ ಮತ್ತದರ ಪ್ರದೇಶಗಳನ್ನು ಮೈಸೂರು ರಾಜ್ಯಕ್ಕೆ ಬಿಟ್ಟುಕೊಟ್ಟ ಮಾಗಡಿ ಸಂಸ್ಥಾನವು ವಿಸ್ತಾರದಲ್ಲಿ ಮತ್ತು ಅಧಿಕಾರದಲ್ಲಿ ಹಿನ್ನೆಡೆ ಅನುಭವಿಸುವಂತಾಯಿತು. ಅಲ್ಲದೆ ಕಂಠೀರವ ನರಸನನ್ನು ಈ ಪ್ರದೇಶದ ಅಧಿಕಾರಿಯಾಗಿ ನೇಮಿಸುವ ಮೂಲಕ ಮತ್ತೆ ಈ ಪ್ರದೇಶಗಳು ಮೈಸೂರಿನ ವಿರುದ್ಧ ದನಿ ಎತ್ತದಂತೆ ಮಾಡಿದರು. ಇದು ಮುಂದೆ ಬೆಂಗಳೂರನ್ನು ಮೈಸೂರು ಅರಸರು ಪಡೆಯುವಂತೆ ಪ್ರೇರೇಪಿಸಲು ಸಹಕಾರಿಯಾಯಿತು.

1638ರ ರಣದುಲ್ಲಾಖಾನನ ದಾಳಿಯಿಂದ ತಮ್ಮ ಎಲ್ಲೆಯನ್ನು ಮಾಗಡಿ-ಕುಣಿಗಲು ಸೀಮೆಗೆ ಸೀಮಿತಗೊಳಿಸಿಕೊಂಡ ಯಲಹಂಕ ನಾಡಪ್ರಭುಗಳು ರಣಧೀರ ಕಂಠೀರವನು ಮತ್ತು ದೊಡ್ಡ ದೇವರಾಜ ಒಡೆಯರ ದಾಳಿಗಳಿಂದಾಗಿ ಮೈಸೂರು ಸಂಸ್ಥಾನದ ಸ್ಥಾನಿಕ ಅಧಿಕಾರಿಗಳಾಗಿ ಮತ್ತು ತಮ್ಮ ಕಾರ್ಯ ಕ್ಷೇತ್ರವನ್ನು ಮಾಗಡಿ ಪ್ರದೇಶಕ್ಕೆ ಸೀಮಿತಗೊಳಿಸಿಕೊಂಡರು. ಇದಾದ ನಂತರ ಚಿಕ್ಕದೇವರಾಜನು ಬೆಂಗಳೂರನ್ನು ಪಡೆದು ಕೊಳ್ಳುವುದರೊಂದಿಗೆ ಯಲಹಂಕ ನಾಡಪ್ರಭುಗಳ ಎಲ್ಲೆ ಮೈಸೂರಿನ ಎಲ್ಲೆಯಲ್ಲಿ ಲೀನವಾಯಿತು. ಯಲಹಂಕ

ನಾಡಪ್ರಭುಗಳ ಒಂದೆರಡು ಶಾಸನಗಳಲ್ಲಿ 'ಚಿಕ್ಕದೇವರಾಜರಿಗೆ ಸಲುವ'[110] ಉಲ್ಲೇಖದಿಂದ ಪ್ರಾಯಶಃ ಇವರು ಚಿಕ್ಕದೇವರಾಜನ ಕಾಲದಲ್ಲಿಯೂ ಅಸ್ತಿತ್ವವನ್ನು ಉಳಿಸಿಕೊಂಡಿದ್ದು ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದರೆಂದು ಭಾವಿಸಬೇಕಾಗುತ್ತದೆ.

ಇದಾದ ನಂತರ ಮೈಸೂರಿನ ಇತಿಹಾಸದ ಆಕರಗಳಲ್ಲಿ ದೊರೆಯುದ ವಿವರವೆಂದರೆ ಶಕ 1650ರ ಅಂದರೆ ಕ್ರಿ. ಶ. 1728ರಲ್ಲಿ ಈ ವಂಶವನ್ನು ಮೈಸೂರು ದೊಡ್ಡ ಕೃಷ್ಣರಾಜ ಒಡೆಯರವರು. ನಾಶಮಾಡಿದರು ಎಂಬ ಉಲ್ಲೇಖ.[111] ಇದಕ್ಕೆ ಸಂವೇದಿಯಾಗಿ ಮುಮ್ಮಡಿ ಕೆಂಪವೀರಪ್ಪಗೌಡರು ಶ್ರೀರಂಗಪಟ್ಟಣದ ಸೆರೆಮನೆಯಿಂದ ಬರೆದರೆನ್ನಲಾದ ತಾಡೋಲೆಪತ್ರವನ್ನು ಉದಾಹರಿಸಬಹುದು[112]. ಅದನ್ನು ಯಲಹಂಕ ನಾಡಪ್ರಭುಗಳ ಶಾಸನ ಸಂಪುಟದಲ್ಲಿ ಕಾಣಬಹುದು. ಆ ಪತ್ರವನ್ನು ಪ್ರಕಟಿಸುವಾಗ ಅದರ ಕಾಲವನ್ನು 1728ರ ಮಾರ್ಚಿ 13 ಎಂದು ದಾಖಲಿಸಿದ್ದಾರೆ.[113]

ಹಯವದನರಾಯರು[114] ಈ ಘಟನೆಯನ್ನು ಕುರಿತು ಬರೆಯುತ್ತ ಮುಮ್ಮಡಿ ಕೆಂಪವೀರಪ್ಪಗೌಡನು (1705–1728) ಮೈಸೂರು ಸಂಸ್ಥಾನದ ವಿರುದ್ಧ ಕಾರ್ಯಾಚರಣೆ ಮಾಡಲಾರಂಭಿಸಿದ್ದರಿಂದ ಅದನ್ನು ತಡೆಯುವ ಸಲುವಾಗಿ ಒಂದನೆ ಕೃಷ್ಣರಾಜ ಒಡೆಯನ ದಳವಾಯಿ ದೇವರಾಜಯ್ಯನು 1728ರ ಅಕ್ಟೋಬರ್ 12 ರಂದು ಮಾಗಡಿಯನ್ನು ಮುತ್ತಿ ಸಾವನದುರ್ಗ, ನೆಲಪಟ್ಟಣಗಳನ್ನು ವಶಪಡಿಸಿಕೊಂಡು ಮುಮ್ಮಡಿ ಕೆಂಪವೀರಪ್ಪಗೌಡನನ್ನು ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಕರೆತರಲಾಯಿತು. ಅಲ್ಲಿ ಅವನು ತಮ್ಮ ಅಂತ್ಯದ ದಿನಗಳನ್ನು ಸೆರೆಮನೆಯಲ್ಲಿಯೇ ಕಳೆದರೆಂದು ವಿವರಣೆ ನೀಡುತ್ತಾರೆ.

ಮುಮ್ಮಡಿ ಕೆಂಪವೀರಪ್ಪ ಗೌಡನು ತನ್ನ ಕೊನೆಯ ಪತ್ರದಲ್ಲಿ ಕೇವಲ ಮಾಸವನ್ನು ಅಂದರೆ "ಅದಾಗಿ ಯಿ ಫಾಲ್ಗುಣ ಬ10ವರಿಗೆ" ಎಂದು ದಿನಾಂಕವನ್ನು ಉಲ್ಲೇಖಿಸಿದೆ. ಅದನ್ನು 1728ರ ಮಾರ್ಚ್ 13 ಎಂದು ಗುರುತಿಸಿದ್ದಾರೆ.[115] ಹಯವದನರಾಯರು[116] ಈ ಘಟನೆಯ ದಿನಾಂಕವನ್ನು 1728ರ ಅಕ್ಟೋಬರ್ 13ರಂದು ಗುರುತಿಸಿರುವರು. ಪತ್ರದ ಮಾಸ ಫಾಲ್ಗುಣವಾಗಿರುವುದರಿಂದ ಆ ಸಂವತ್ಸರದ ಕೊನೆಯ ತಿಂಗಳಾಗಿರುವುದರಿಂದ 1929ರ ಮಾರ್ಚ್‌ದೆಂದು ಗುರುತಿಸಬೇಕಾಗುತ್ತದೆ. ಹಯವದನರಾಯರು[117] ಹೇಳುವಂತೆ ಮುಮ್ಮಡಿ ಕೆಂಪವೀರಪ್ಪ ಗೌಡನು ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ಗತಿಸಿದ್ದಾರೆ. ಅದರ ಎಲ್ಲಾ ಸೂಚನೆಗಳು ಅವರ ಪತ್ರದಲ್ಲಿದೆ. ಇದರೊಂದಿಗೆ ಯಲಹಂಕ ನಾಡಪ್ರಭುಗಳ ವಂಶ ಅಂತ್ಯಕಂಡಿತು.

ಯಲಹಂಕ ನಾಡಪ್ರಭುಗಳು ತಮ್ಮ ಸಾಮ್ರಾಟರಾದ ವಿಜಯನಗರದ ಅರಸರಿಗೆ ನಿಷ್ಠರಾಗಿದ್ದರು. ಅವರನ್ನು ಬೆಂಬಲಿಸಿ ಮೈಸೂರು ಅರಸರ ವಿರುದ್ಧ ತಮ್ಮನ್ನು ಕೆಸರೆಯ ಯುದ್ಧದಲ್ಲಿ ತೊಡಗಿಸಿಕೊಂಡು ಹಿನ್ನಡೆ ಅನುಭವಿಸಿದರು. ಆದರೆ ರಾಜ್ಯ ವಿಸ್ತರಣೆಗಾಗಿ ಮೈಸೂರು ಅರಸರು ಯಲಹಂಕ ನಾಡನ್ನು ಪದೇ ಪದೇ ಮುತ್ತಿದರು. ರಣದುಲ್ಲಾಖಾನನ ದಾಳಿ ಯಲಹಂಕ ನಾಡಿನ ಶಕ್ತಿಯನ್ನು ಅತಿ ಕಡಿಮೆಯಾಗಿಸಿತು. ಇದಾದ ನಂತರ ನಾಡಪ್ರಭುಗಳು ತಮ್ಮ ಶಕ್ತಿಯನ್ನು ಮರುಗೂಡಿಸಿಕೊಳ್ಳುವ ವ್ಯರ್ಥ ಪ್ರಯತ್ನ ಮಾಡಿದರು. ಚಾಮರಾಜ ಒಡೆಯ, ರಣಧೀರ ಕಂಠೀರವ ನರಸರಾಜ ಒಡೆಯ ಮತ್ತು ದೊಡ್ಡ ದೇವರಾಜ ಒಡೆಯರವರುಗಳು ಮಾಗಡಿಯ ಮೇಲೆ ದಾಳಿಮಾಡಿ ಅದರ ಎಲ್ಲಾ ಪ್ರದೇಶವನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಂಡರು.

ಈ ಪ್ರಕ್ರಿಯೆ ರಣಧೀರ ಕಂಠೀರವ ನರಸರಾಜ ಒಡೆಯನ ಕಾಲದಲ್ಲಿಯೇ ಪೂರ್ಣಗೊಂಡಿತ್ತು. ಆನಂತರ ಯಲಹಂಕ ನಾಡಪ್ರಭುಗಳು ಪದೇ ಪದೇ ಮೈಸೂರಿನಿಂದ ಸ್ವತಂತ್ರವಾಗಲು ಪ್ರಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಯಲಹಂಕ ನಾಡಪ್ರಭುಗಳು ಮತ್ತು ಮೈಸೂರು ಒಡೆಯರ ಸಂಬಂಧ ವಿರೋಧಿಗಳಾಗಿ

ಪ್ರಾರಂಭವಾಗಿ ಮಧ್ಯದಲ್ಲಿ ಸಹಯೋಗಿಗಳಾಗಿ, ಅಂತ್ಯದಲ್ಲಿ ವಿರೋಧಿಗಳಾಗಿ ಯಲಹಂಕ ನಾಡಪ್ರಭುಗಳ ಮನೆತನ ಅಂತ್ಯಗೊಳ್ಳುವುದರೊಂದಿಗೆ ಪರ್ಯವಸಾನವಾಯಿತು.

ಯಲಹಂಕ ನಾಡಪ್ರಭುಗಳ ವಾಸ್ತು ರಚನೆಗಳು

ಯಲಹಂಕ ನಾಡಪ್ರಭುಗಳು ಹೊಯ್ಸಳರ ಅಂತ್ಯಕಾಲದಲ್ಲಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿ ವಿಜಯನಗರ ಸಾಮ್ರಾಜ್ಯದಲ್ಲಿ ಅಮರನಾಯಕರಾಗಿ ಮತ್ತು ಯಲಹಂಕ ರಾಜ್ಯದ ಪ್ರಾಂತ್ಯಾಧಿಕಾರಿಗಳಾಗಿ ಆಡಳಿತ ನಡೆಸಿದರು. ಅನಂತರದಲ್ಲಿ ಅಂದರೆ ಕ್ರಿ. ಶ. 1639ರಲ್ಲಿ ವಿಜಾಪುರದ ಸುಲ್ತಾನನ ಅಧೀನರಾಗಿ 1650ರ ನಂತರ ಮೈಸೂರು ಸಂಸ್ಥಾನದ ಸ್ಥಾನಿಕರಾಗಿ ಮುಂದುವರೆದರು. ಆದರೆ ಶಾಸನಗಳಲ್ಲಿ ವಿಜಯನಗರಕ್ಕೆ ನಿಷ್ಠೆ ತೋರಿದ್ದಾರೆ. ಇವರ ಕಾಲದ ವಾಸ್ತುಶೈಲಿಯಲ್ಲಿ ಮಹತ್ವದ ಬೆಳವಣಿಗೆ ಅಥವಾ ಬದಲಾವಣೆಯನ್ನು ಕಾಣಲಾಗುವುದಿಲ್ಲ. ಇತರ ಮನೆತನಗಳ ಆಡಳಿತಾವಧಿಯಲ್ಲಿ ರೂಪುಗೊಂಡ ವಾಸ್ತುಶೈಲಿಯ ಪ್ರಕಾರಗಳಂತೆ ಈ ಮನೆತನದ ಆಳ್ವಿಕೆಯ ಕಾಲದಲ್ಲಿ ಹೊಸ ವಾಸ್ತುಶೈಲಿಯ ಬಗ್ಗೆ ಪ್ರಾರಂಭವಾಗಲಿಲ್ಲವೆಂಬುದು ಗಮನಿಸಬೇಕಾದ ಅಂಶ. ಹೊಯ್ಸಳರ ಅಂತಿಮ ದಿನಗಳಲ್ಲಿ ಅಧಿಕಾರಕ್ಕೆ ಬಂದ ಇವರು ತಮ್ಮ ವಾಸ್ತು ರಚನಾ ಕಾರ್ಯಗಳನ್ನು ವಿಜಯನಗರದ ಕಾಲದಲ್ಲಿ ಪ್ರಾರಂಭಿಸಿರುವಂತೆ ಕಂಡುಬರುತ್ತದೆ. ಈ ಸಮಯದಲ್ಲಿ ಸಹ ಹೊಸತನವನ್ನು ಸೃಷ್ಟಿಸುವ ಪ್ರಯತ್ನ ಮಾಡದೆ, ಹೊಸ ದೇವಾಲಯಗಳನ್ನು ರಚಿಸುವುದಕ್ಕಿಂತ ಹೆಚ್ಚಾಗಿ ಇದ್ದ ದೇವಾಲಯಗಳನ್ನು ಪುನರುತ್ಥಾನ ಮಾಡುವ, ಹಳೆಯ ಆಲಯಗಳಿಗೆ ಅವಶ್ಯಕವಿರುವ ಹೊಸ ಭಾಗಗಳನ್ನು ಸೇರಿಸುವ, ಹಾಳಾಗಿದ್ದನ್ನು ಜೀರ್ಣೋದ್ಧಾರ ಗೊಳಿಸುವ ಕಾರ್ಯಕ್ಕೆ ಹೆಚ್ಚಿನ ಒತ್ತು ನೀಡಿದರು. ಇವರು ನಿರ್ಮಿಸಿದ ವಾಸ್ತು ಪ್ರಕಾರವನ್ನು ಹೊಸ ಬಗೆಯದ್ದೆಂದು ಗುರುತಿಸಲಾಗದಿದ್ದರೂ ವಿಜಯನಗರೋತ್ತರ ಶೈಲಿಯನ್ನು ಮುಂದುವರಿಸಿಕೊಂಡು ಬಂದರೆನ್ನಬಹುದು. ಮಾಗಡಿಯ ಸೋಮೇಶ್ವರ ದೇವಾಲಯ, ರಂಗನಾಥ ದೇವಾಲಯ, ಬೆಂಗಳೂರಿನ ಕಾವಲುಗೋಪುರಗಳು, ದೊಡ್ಡಬಸವಣ್ಣನ ಗುಡಿ, ಗಣೇಶನ ಗುಡಿ ಯಲಹಂಕ ನಾಡಪ್ರಭುಗಳ ಪ್ರಮುಖ ನಿರ್ಮಾಣಗಳು. ಇವುಗಳನ್ನು ಹೊರತುಪಡಿಸಿದರೆ ಬೆಂಗಳೂರಿನ ಕೋಟೆ ವೇಂಕಟರಮಣ ದೇವಾಲಯ ಈ ಕಾಲದ ರಚನೆಯೆಂದು ಒಂದು ಅಭಿಪ್ರಾಯವಿದೆ. ಬೆಂಗಳೂರಿನ ಗವಿಗಂಗಾಧರ ಸ್ವಾಮಿಯ ಆಲಯ, ಅಲಸೂರಿನ ಸೋಮೇಶ್ವರ ಸ್ವಾಮಿಯ ದೇವಾಲಯಗಳನ್ನು ಈ ಕಾಲದಲ್ಲಿ ಜೀರ್ಣೋದ್ಧಾರ ಮಾಡಲಾಯಿತು.

ಕಾವಲುಗೋಪುರಗಳು ಇವರ ಕಾಲದಲ್ಲಿ ನಿರ್ಮಿಸಲಾದ ಗಡಿಗೋಪುರಗಳೆಂದು ಭಾವಿಸಲಾಗಿದ್ದರೂ ಅವು ಕೋಟೆಯ ಬತೇರಿಗಳಾಗಿದ್ದು ಆನಂತರದಲ್ಲಿ ಅವುಗಳನ್ನು ಎಲ್ಲೆಯ ಗೋಪುರಗಳೆಂದು ಭಾವಿಸಿರುವ ಸಾಧ್ಯತೆಯನ್ನು ಅ. ಲ. ನರಸಿಂಹನ್ ಮುಂದಿಡುತ್ತಾರೆ. ಆದರೆ 1935 ಮತ್ತು 1945ರ ಎಂ.ಎ.ಆರ್. ವರದಿ ಯಲ್ಲಿನ ವಿವರಗಳನ್ನು ಗಮನಿಸಿದಾಗ ಇದರ ಬಗ್ಗೆ ಹಿಂದಿನಿಂದ ಬಂದ ನಂಬಿಕೆಯಂತೆ ಇವು ಗಡಿಯ ಕಾವಲುಗೋಪುರಗಳಾಗಿದ್ದವೆಂಬುದನ್ನು ತಳ್ಳಿಹಾಕಲು ಸಾಧ್ಯವಾಗುವುದಿಲ್ಲ. ಅ. ಲ. ನರಸಿಂಹನ್ ಮತ್ತೂ ಮುಂದುವರಿದು 1800ರಲ್ಲಿ ರಚಿತವಾದ ಕೆಲವು ವರ್ಣಚಿತ್ರಗಳ ಆಧಾರದ ಮೇಲೆ ಇವುಗಳು ದೇವಾಲಯದ ಅಂಗವಾಗಿದ್ದಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇವೆಲ್ಲವನ್ನೂ ಮೇಲೆ ಹೇಳಿದ ಪುರಾತತ್ವ ವರದಿಗಳು ತಳ್ಳಿ ಹಾಕುತ್ತವೆ. ಆದರೂ ಕೆಂಪೇಗೌಡನ ಕಾಲದಲ್ಲಿ ನಡೆಯಿತೆನ್ನಲಾದ ಕೆಲವು ನಿರ್ಮಾಣಗಳ ಅಥವಾ ಆ ಕಾಲದ ದೇವಾಲಯಗಳು ಮತ್ತು ದುರ್ಗಗಳ ಕಿರುಪರಿಚಯವನ್ನಿಲ್ಲಿ ನೀಡಲಾಗಿದೆ.

ಬೆಂಗಳೂರಿನ ಇತಿಹಾಸ ಪರಿಚಯವಿರುವವರೆಲ್ಲರಿಗೂ ಇಲ್ಲಿನ ಕಾವಲು ಗೋಪುರಗಳೂ ಪರಿಚಿತವಾಗಿವೆ. ಬೆಂಗಳೂರಿನ ಕಾವಲುಗೋಪುರಗಳ ನಿರ್ಮಾಣ ಕಾಲದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಅದೇನೆಂದರೆ ಎರಡನೆಯ

ಕೆಂಪೇಗೌಡನು ಕ್ರಿ. ಶ. 1567ರಲ್ಲಿ ಬೆಂಗಳೂರಿನ ಕಾವಲು ಗೋಪುರವನ್ನು ನಿರ್ಮಾಣ ಮಾಡಿದನು ಎಂಬ ವಿಷಯಕ್ಕೆ ಕೆಲವು ವಿದ್ವಾಂಸರು ಬಳಸಿಕೊಂಡಿರುವ ದಾಖಲೆಯೇ ಕೂಟ ಶಾಸನವೆಂದು ನಿರ್ಧರಿಸಿರುವುದರಿಂದ ಇದರ ಬಗೆಗೆ ಸಂದೇಹಗಳೇರ್ಪಟ್ಟಿವೆ.[118] ಆದರೆ ಇದಕ್ಕೆ ವಿರುದ್ಧವಾಗಿ ಈ ಕಾವಲು ಗೋಪುರಗಳು 1521 ರಿಂದ 1569ರ ಅವಧಿಯಲ್ಲಿ ಆಳಿದ ಮಾಗಡಿ ಕೆಂಪೇಗೌಡನು ಕಟ್ಟಿದರೆಂದು ಎಂ.ಎ.ಆರ್‌ನಲ್ಲಿ ಪ್ರಕಟವಾಗಿರುವ ಶಾಸನ ದೃಢಪಡಿಸುತ್ತದೆ ಅದರ ಶಾಸನ ಪಾಠ 1945ರ ಎಂ.ಎ.ಆರ್.ನಲ್ಲಿ ಪ್ರಕಟವಾಗಿದೆ[119].

> "This is one of the four watch
> towers said to have been built
> by the famous Kempe Gowda
> of Magadi 1521-1569, and mark
> the limits to watch it was predicted
> that the town of Bangalore would extend".

ಈ ಮೇಲಿನ ಶಾಸನವು ಸಹ ಸಂದೇಹಕ್ಕೆ ಎಡೆಮಾಡಿ ಕೊಡುತ್ತದೆ. ಕಾಲ ನಿರ್ದೇಶಿಸುವಾಗ ಒಂದನೆ ಕೆಂಪೇಗೌಡನ ಕಾಲವನ್ನು ನಿರ್ದೇಶಿಸಿದೆ. ಆದರೆ ಹೆಸರಿಸುವಾಗ, ಎರಡನೆಯ ಕೆಂಪೇಗೌಡನ ಅನ್ವರ್ಥನಾಮವಾದ ಮಾಗಡಿ ಕೆಂಪೇಗೌಡನನ್ನು ಹೆಸರಿಸಿದೆ. ಒಂದನೆ ಕೆಂಪೇಗೌಡನನ್ನು ಹೊರತು ಪಡಿಸಿದರೆ ಯಲಹಂಕ ನಾಡಪ್ರಭುಗಳೆಲ್ಲರನ್ನು ಮಾಗಡಿಯವರೆಂದೇ ಗುರುತಿಸಿರುವ ಹಿನ್ನೆಲೆಯಲ್ಲಿ ಈ ಶಾಸನವನ್ನು ಹಾಕಿಸುವಾಗ ನಿರ್ಮಾತೃವಿನ ಹೆಸರನ್ನು ಉಲ್ಲೇಖಿಸುವಾಗ ಅಂದು ಬಳಕೆಯಲ್ಲಿದ್ದ ಹೆಸರನ್ನು ಬಳಸಿದ್ದಾರೆಂದು ಒಪ್ಪಿಕೊಂಡಲ್ಲಿ ಈ ಶಾಸನದಂತೆ ಒಂದನೆ ಕೆಂಪೇಗೌಡನೇ ಈ ಕಾವಲುಗೋಪುರಗಳ ನಿರ್ಮಾತೃವೆಂದಾಗುತ್ತದೆ. ಆದರೆ ಇತರ ಎಲ್ಲಾ ಆಕರಗಳು ಎರಡನೆಯ ಕೆಂಪೇಗೌಡ ಈ ಎಲ್ಲಾ ಗೋಪುರಗಳ ನಿರ್ಮಾತೃ ಎಂದು ಉಲ್ಲೇಖಿಸಿದೆ. ಇತ್ತೀಚಿನ ಶಾಸನ ಸಂಪುಟದಲ್ಲಿ ಒಂದನೆಯ ಕೆಂಪೇಗೌಡನು ಕ್ರಿ.ಶ. 1608ರವರೆಗೆ ಜೀವಿಸಿದ್ದರೆಂದು ನಿರೂಪಿಸಿ ದ್ದಾರೆ.[120] ಹಾಗಾಗಿ ಒಂದನೇ ಕೆಂಪೇಗೌಡನ ಆಡಳಿತಾವಧಿ ಮತ್ತು ಎರಡನೆ ಕೆಂಪೇಗೌಡನ ಆಡಳಿತಾವಧಿಗಳು ಮುಂದಿನ ಸಂಶೋಧನೆಯಿಂದ ಖಚಿತವಾಗಿ ನಿಗದಿಯಾಗುವವರೆಗೆ ಎಲ್ಲರೂ ಒಪ್ಪಿಕೊಂಡಿರುವಂತೆ ಇಮ್ಮಡಿ ಕೆಂಪೇಗೌಡನು ಬೆಂಗಳೂರಿನ ಎಲ್ಲೆಗಳನ್ನು ನಿರ್ಧರಿಸುವ ಗೋಪುರಗಳನ್ನು ನಾಲ್ಕು ದಿಕ್ಕುಗಳಲ್ಲಿ ನಿರ್ಮಿಸಿದರೆಂದು ಭಾವಿಸುವುದು ಸೂಕ್ತವೆನಿಸುತ್ತದೆ. ಬೆಂಗಳೂರಿನ ಇತಿಹಾಸ ಕೃತಿಯಲ್ಲಿ

ಬ.ನ. ಸುಂದರ ರಾವ್[121], ಸಹ ಬೆಂಗಳೂರಿನ ಪೌರೋಹಿತ್ಯದ ಶಾಸನದ ಅಧಾರದ ಮೇಲೆ ಇಮ್ಮಡಿ ಕೆಂಪೇಗೌಡನೇ ಬೆಂಗಳೂರಿನ ಕಾವಲು ಗೋಪುರಗಳನ್ನು ನಿರ್ಮಿಸಿರುವರೆಂದು ತಿಳಿಸುತ್ತಾರೆ.

ಈ ಗಡಿ ಗೋಪುರಗಳು ಇರುವ ಸ್ಥಳಗಳೆಂದರೆ ಪೂರ್ವದಿಕ್ಕಿನಲ್ಲಿ ಅಲಸೂರು ಕೆರೆಯ ಏರಿಯಮೇಲೆ, ಪಶ್ಚಿಮ ದಿಕ್ಕಿನಲ್ಲಿ ಕೆಂಪಾಂಬುಧಿ ಕೆರೆಯ ಏರಿಯಮೇಲೆ, ಉತ್ತರದಿಕ್ಕಿನಲ್ಲಿ ವೈಹಾಳಿಕಾವಲಿನ ದಿನ್ನೆಯ ಮೇಲೆ, ದಕ್ಷಿಣದಲ್ಲಿ ಲಾಲ್‌ಬಾಗ್ ಗುಡ್ಡದ ಮೇಲೆ ಇದಲ್ಲದೆ ಬ್ಯೂಗಲ್‌ರಾಕ್ ಉದ್ಯಾನವನದಲ್ಲಿ, ಅಂದರೆ ಬಸವನಗುಡಿಯ ಬಸವಣ್ಣನ ದೇವಾಲಯದ ಹಿಂದೆ, ಮತ್ತೊಂದು ಗೋಪುರವಿದೆ. ದಕ್ಷಿಣ ದಿಕ್ಕಿನಲ್ಲಿ ಎರಡು ಗೋಪುರಗಳಿವೆ. ಬ್ಯೂಗಲ್‌ರಾಕ್ ಮೇಲಿರುವ ಮಂಟಪವನ್ನು ಕಹಳೆ ಗೋಪುರವೆಂದು ಕರೆಯುತ್ತಾರೆ. ಈ ಐದೂ ಗೋಪುರಗಳನ್ನು ಇಮ್ಮಡಿ ಕೆಂಪೇಗೌಡನೇ ನಿರ್ಮಿಸಿದನೆಂದು ತಿಳಿದು ಬರುತ್ತದೆ.[122]

ಈ ಗೋಪುರಗಳು ಬೆಂಗಳೂರಿನ ಎಲ್ಲೆಯನ್ನು ನಿಷ್ಕರ್ಷೆ ಮಾಡಲು ಕಟ್ಟಿಸಿದ್ದೇ ಹೊರತು ಈ ಗಡಿಯನ್ನು ದಾಟಿ ನಗರವು ಬೆಳೆದರೆ ಹಾನಿಯು ಸಂಭವಿಸುವುದೆಂದು ಎಲ್ಲಿಯೂ ಉಲ್ಲೇಖವಾಗಿಲ್ಲ.[123] ಈ ವಿಷಯಕ್ಕೆ ಸಂಬಂಧಿಸಿದಂತೆ ಎಂಭತ್ತರ ದಶಕದಲ್ಲಿ ಹಬ್ಬಿದ ಭೀತಿಗೆ ಕಾರಣವಾದ ಗಾಳಿ ಸುದ್ದಿಯ ಬಗೆಗೆ ಬ.ನ ಸುಂದರರಾವ್ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ಇದರ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳದೆ ಜನರು ಊಹಾ – ಪೋಹಗಳನ್ನೆಬ್ಬಿಸಿ ಅನರ್ಥಕಾರಿಯಾದ ಟೀಕೆಗಳನ್ನು ಮಾಡಿ ಜನರಲ್ಲಿ ಭೀತಿಗೊಳಿಸುವುದನ್ನು ನಾವು ಗಮನಿಸಿದ್ದೇವೆ. ಈಗಲಾದರು ಬೆಂಗಳೂರಿನ ಮಹಾಜನರು ಈ ಅಪಪ್ರಚಾರವನ್ನು ನಂಬದೆ ವಾಸ್ತವಾಂಶವನ್ನು ಅರಿತುಕೊಳ್ಳುವರೆಂದು ನಂಬಿದ್ದೇನೆ."

ಈ ಎಲ್ಲಾ ಕಾವಲು ಗೋಪುರಗಳು ದ್ರಾವಿಡ ಶೈಲಿಯ ನಾಲ್ಕು ಕಂಬಗಳ ಮಂಟಪದ ಮೇಲೆ ನಿರ್ಮಿಸಲ್ಪಟ್ಟಿವೆ. ಕಂಬಗಳು ನಾಲ್ಕು ಅಡಿ ಎತ್ತರದ ಅದಿಷ್ಠಾನದ ಮೇಲೆ ನಿಂತಿವೆ. ಈ ಕಂಬಗಳು 6 ಅಡಿ ಎತ್ತರವಾಗಿವೆ. ಅವುಗಳ ಮೇಲೆ ಛಾವಣಿಯಿದ್ದು ಛಾವಣಿಯ ಪ್ರಾರಂಭದಿಂದ ಕಲಶದ ತುದಿಯವರೆಗೆ ಹತ್ತು ಅಡಿ ಎತ್ತರದ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲಾದ ಗೋಪುರವನ್ನು ಹೊಂದಿದೆ.[123] ಒಟ್ಟಾರೆಯಾಗಿ ಈ ಗೋಪುರಗಳು ನೆಲಮಟ್ಟದಿಂದ ಅಧಿಷ್ಠಾನ 4 ಅಡಿ ಮತ್ತು ಕಂಬಗಳು 6 ಅಡಿ ಹಾಗೂ ಶಿಖರ 10 ಅಡಿ, ಅಂದರೆ ಭೂಮಟ್ಟದಿಂದ ಇಪ್ಪತ್ತು ಅಡಿ ಎತ್ತರವಾಗಿವೆ.

ಅಲಸೂರಿನ ಈ ಗೋಪುರ ಅಡಿಕಲ್ಲಿನಲ್ಲಿಯೇ ಈ ಮೇಲೆ ಉಲ್ಲೇಖಿಸಿದ ಇಂಗ್ಲೀಷ್ ಶಾಸನವಿದೆ.[124] ಗೋಪುರದ ಪೂರ್ವದಲ್ಲಿ ಕುಳಿತ ಗಂಗಾಧರನ ಗಾರೆಯ ಶಿಲ್ಪ, ದಕ್ಷಿಣದಲ್ಲಿ ಅರ್ಧನಾರೀಶ್ವರನ ಶಿಲ್ಪ, ಪಶ್ಚಿಮದಲ್ಲಿ ವೇಣುಗೋಪಾಲನ ಹಾಗೂ ಉತ್ತರದಲ್ಲಿ ಕಮಲದ ಮೇಲೆ ಕುಳಿತ ಲಕ್ಷ್ಮಿಯ ವಿಗ್ರಹಗಳಿವೆ. ಎಲ್ಲಾ ಮೂಲೆಗಳಲ್ಲಿ ಕುಳಿತ ನಂದಿಯ ವಿಗ್ರಹಗಳಿವೆ.[125] ಶಿಖರವು ವೃತ್ತಾಕಾರದ ಗುಮ್ಮಟವನ್ನು ಹೊಂದಿದೆ. ಇವುಗಳನ್ನು ಪ್ರಾರಂಭದ ದಿನಗಳಲ್ಲಿ ಇಟ್ಟಿಗೆ ಮತ್ತು ಸುಣ್ಣದ ಗಾರೆಯಿಂದ ನಿರ್ಮಿಸಲಾಗಿದ್ದಿತು. ಅಲಸೂರಿನಲ್ಲಿರುವ ಗೋಪುರ ಅಧಿಷ್ಠಾನದಳತೆಯಲ್ಲಿ ಮಾತ್ರ ವ್ಯತ್ಯಾಸವಿದ್ದು ಅಂದರೆ ಎರಡು ಅಡಿ ಎತ್ತರವಾಗಿದೆ. ಉಳಿದಂತೆ, ಅಲಸೂರಿನ ಗೋಪುರವನ್ನು ಹೋಲುತ್ತದೆ.[126] ಗವೀಪುರ ಅಥವಾ ಕೆಂಪಾಂಬುಧಿ ಕೆರೆಯ ಏರಿಯಲ್ಲಿದ್ದ ಗೋಪುರ ಸಹ ಹೆಬ್ಬಾಳದ ಗೋಪುರವನ್ನು ಹೋಲುತ್ತದೆ.[127] ಲಾಲ್‌ಬಾಗ್‌ನ ಸಮೀಪವಿರುವ ಗೋಪುರವು ಶೈಲಿಯಲ್ಲಿ ಈ ಮೇಲೆ ಹೇಳಿದ ಗೋಪುರಗಳಿಗಿಂತ ಭಿನ್ನವಾಗಿದ್ದು ಇತ್ತೀಚಿನ ಕಾಲದ ರಚನೆಯಾಗಿರಬೇಕೆನಿಸುತ್ತದೆ.[128]

ಈ ಗೋಪುರ ಕಟ್ಟಡಕ್ಕೆ ಅದಿಷ್ಠಾನವಿಲ್ಲ, ಕಂಬಗಳನ್ನು ಇತರ ಗೋಪುರಗಳ ಕಂಬಗಳಂತೆ ನಿರ್ಮಿಸಿಲ್ಲ. ಅಲ್ಲದೆ ಇದರ ಗೋಪುರದಲ್ಲಿ ಹಿಂದೂ ದೇವಾನುದೇವತೆಗಳ ವಿಗ್ರಹಗಳಿರಲಿಲ್ಲವೆಂದು ಐವತ್ತರ ದಶಕದಲ್ಲಿಯೇ ಉಲ್ಲೇಖಿಸಲಾಗಿದ್ದು, ಇದು ಇಸ್ಲಾಂ ಶೈಲಿಯಲ್ಲಿ 18ನೇ ಶತಮಾನದಲ್ಲಿ ನಿರ್ಮಿತವಾಗಿದ್ದಿರಬೇಕೆಂಬ ಅಭಿಪ್ರಾಯವಿದೆ.[129] ಭ್ಯೂಗಲ್‌ರಾಕ್‌ನ ಮಂಟಪ ಲಾಲ್‌ಬಾಗ್ ಮಂಟಪವನ್ನು ಹೋಲುತ್ತದೆ ಎಂದು ಉಲ್ಲೇಖಿಸಲಾಗಿದೆ.

ಗವಿ ಗಂಗಾಧರೇಶ್ವರಸ್ವಾಮಿ ದೇವಾಲಯ

ಬೆಂಗಳೂರಿನ ಗವಿಪುರಂ ಬಡಾವಣೆಯಲ್ಲಿರುವ ಅತ್ಯಂತ ಪ್ರಾಚೀನ ದೇವಾಲಯವೇ ಗವಿಗಂಗಾಧರೇಶ್ವರಸ್ವಾಮಿ ದೇವಾಲಯ. ನೈಸರ್ಗಿಕ ಗುಹೆಯಲ್ಲಿರುವ ದೇವಾಲಯದಲ್ಲಿ ಉದ್ಭವ ಲಿಂಗವಿದ್ದು ಮಳೆಗಾಲದಲ್ಲಿ ಝುರಿಯೊಂದು ದೇವಾಲಯದ ಆವರಣದಲ್ಲಿ ಬಿದ್ದು, ಅಲ್ಲಿಂದ ಮುಂದೆ ಸರಿದು ಕೆಂಪಾಂಬುದಿಕೆರೆಯನ್ನು ಸೇರುತಿತ್ತು. ಇಲ್ಲಿನ

ಐತಿಹ್ಯಗಳ ಪ್ರಕಾರ ಇಲ್ಲಿ ಗೌತಮ ಮುನಿಯು ತಪಸ್ಸನ್ನಾಚರಿಸಿ, ಈ ಲಿಂಗವನ್ನು ಪೂಜಿಸಿದ್ದನೆಂದು ತಿಳಿದುಬರುತ್ತದೆ. ದೇವಾಲಯದ ಮುಂದೆ ಇರುವ ಕುಂಭಾಕಾರದ ಬಲಿ ಕಂಬವೂ ಚೋಳರ ಕಾಲದ ರಚನೆಯಾಗಿದ್ದು, ಆ ಕಾಲದಲ್ಲಿಯೇ ಇಲ್ಲಿ ಪೂಜೆ ಹಾಗೂ ಇತರ ಧಾರ್ಮಿಕ ಕಾರ್ಯಗಳು ನೆರವೇರುತ್ತಿದ್ದವೆಂದು ತಿಳಿಯಲಾಗಿದೆ. ಕೆಂಪೇಗೌಡರ ಕಾಲದಲ್ಲಿ ಗವಿಗಂಗಾಧರನ ಗುಹೆಯನ್ನು ಎರಡು ಗುಡಿಗಳಾಗಿ ಪ್ರತ್ಯೇಕಿಸಿ ಶಿವ ಮತ್ತು ಪಾರ್ವತಿಯರ ಗುಡಿಗಳನ್ನು ಪ್ರತ್ಯೇಕಗೊಳಿಸಲಾಯಿತು. ಎರಡೂ ಗುಡಿಗಳಿಗೆ ಪ್ರತ್ಯೇಕವಾದ ಪ್ರದಕ್ಷಿಣಾ ಪಥವಿದೆ. ಅಲ್ಲದೆ ಎರಡು ಗುಡಿಗಳನ್ನು ಒಟ್ಟಿಗೆ ಪ್ರದಕ್ಷಿಣೆ ಮಾಡುವಂತಹ ಪ್ರದಕ್ಷಿಣಾ ಪಥ ಸಹ ಇದೆ. ಶಿವ ದೇವಾಲಯದ ಪ್ರಾಕಾರದಲ್ಲಿ ಭಾರದ್ವಾಜ, ಷಣ್ಮುಖ, ಚಂಡಿಕೇಶ್ವರ, ದಕ್ಷಿಣಾಮೂರ್ತಿ ಮತ್ತು ಸುಬ್ರಹ್ಮಣ್ಯನ ಮೂರ್ತಿಗಳಿವೆ. ಶಿವ ಮತ್ತು ಪಾರ್ವತಿಯರ ಗುಡಿಗಳನ್ನು ಒಟ್ಟಿಗೆ ಪ್ರದಕ್ಷಿಣೆ ಮಾಡುವ ಪ್ರಾಕಾರದಲ್ಲಿ ಯಜ್ಞೇಶ್ವರ, ಸಪ್ತಮಾತೃಕೆಯರು, ಕಾಲಭೈರವ, ವೀರಭದ್ರ ಹೊನ್ನಾದೇವಿ ಮತ್ತು ಸುಬ್ರಹ್ಮಣ್ಯನ ವಿಗ್ರಹಗಳಿವೆ. ದೇವಾಲಯದ ಮುಖ ಮಂಟಪವು ಕಲ್ಲಿನ ಕಂಬಗಳಿಂದ ಆಧರಿಸಿದ ಕಲ್ಲಿನ ಛಾವಣಿಯನ್ನು ಹೊಂದಿದೆ. ದೇವಾಲಯದ ಮುಂಭಾಗದಲ್ಲಿ ಸೂರ್ಯ ಚಂದ್ರಮಂಡಲಗಳು, ತ್ರಿಶೂಲ, ಡಮರುಗ, ಮತ್ತು ಏಕಶಿಲಾ ಛತ್ರಿಯು ಕಂಡುಬರುತ್ತವೆ. ಇವುಗಳೆಲ್ಲವೂ ಕೆಂಪೇಗೌಡನ ಕಾಲದಲ್ಲಿ ರಚಿತವಾದವುಗಳು. ಈ ದೇವಾಲಯ ರಾಜ್ಯ ಪುರಾತತ್ವ ಇಲಾಖೆಯ (ಎಂ. ಎ. ಆರ್. 1935, ಪುಟ. 29) ಸಂರಕ್ಷಿತ ಸ್ಮಾರಕ.[130]

ಬಸವನಗುಡಿಯ ಬಸವಣ್ಣನ ದೇವಾಲಯ

ಬೆಂಗಳೂರಿನ ಬುಲ್‌ಟೆಂಪಲ್ ರಸ್ತೆಯ ಎತ್ತರವಾದ ಕಲ್ಲಿನ ಮೇಲೆ ನಿರ್ಮಿಸಿರುವ ಆಲಯವಾಗಿದೆ. ಇದು ಗರ್ಭಗುಡಿ ಮತ್ತು ಮುಖಮಂಟಪವನ್ನು ಹೊಂದಿರುವ ದೇವಾಲಯ. ಗರ್ಭಗುಡಿಯಲ್ಲಿ ಸುಂದರವಾದ ಮತ್ತು ಭವ್ಯವಾದ ನಂದಿಯ ಏಕಶಿಲಾ ವಿಗ್ರಹವಿದೆ. ಕುಳಿತಿರುವ ನಂದಿಯ ವಿಗ್ರಹವು 10 ಅಡಿ ಎತ್ತರ ಮತ್ತು 15 ಅಡಿ ಉದ್ದವಾಗಿದೆ. ಲೇಪಾಕ್ಷಿಯ ನಂದಿಯ ಮಾದರಿಯಲ್ಲಿ ರಚಿತವಾಗಿರುವ ನಂದಿಯು ಅತ್ಯಂತ ಸುಂದರ ಮತ್ತು ನೈಜತೆಗೆ ಹೆಸರಾಗಿದೆ. ಈ ದೇವಾಲಯವು ಒಂದನೆಯ ಕೆಂಪೇಗೌಡರ ಕಾಲದ ರಚನೆಯೆಂದು ಎಂ. ಎಚ್. ಕೃಷ್ಣ ಅಭಿಪ್ರಾಯ ಪಡುತ್ತಾರೆ.[131]

ಅಲಸೂರಿನ ಸೋಮೇಶ್ವರ ದೇವಾಲಯ

ಅಲಸೂರಿನ ಕೇಂದ್ರ ಭಾಗದಲ್ಲಿರುವ ಸೋಮೇಶ್ವರ ದೇವಾಲಯವು ಚೋಳರ ಕಾಲದಲ್ಲಿ ರಚಿಸಲ್ಪಟ್ಟು, ಆನಂತರ ಕೆಂಪೇಗೌಡರ ಕಾಲದಲ್ಲಿ ಪುನರುಜ್ಜೀವನಗೊಂಡಿತೆಂದು ತಿಳಿದುಬರುತ್ತದೆ.[132] ದೇವಾಲಯವು ಗರ್ಭಗೃಹ, ಸುಕನಾಸಿ ಮತ್ತು ತೆರೆದ ಸುಕನಾಸಿ ಹಾಗೂ ಅದಕ್ಕೆ ಹೊಂದಿಕೊಂಡ ಮೂರು ಅಂಕಣದ ನವರಂಗವನ್ನು ಹೊಂದಿದೆ. ಇಲ್ಲಿನ ಕಂಬಗಳು 17ನೇ ಶತಮಾನದ ಕಂಬದ ಮಾದರಿಯಲ್ಲಿವೆ. ಪ್ರಾಯಶಃ ದೇವಾಲಯದ ತೆರೆದ ಸುಕನಾಸಿಯವರೆಗೆ ಚೋಳರರ ಕಾಲದಲ್ಲಿ ರಚಿತವಾಗಿರುವ ಎಲ್ಲಾ ಕುರುಹುಗಳಿವೆ.[133] ಇದಾದ ನಂತರದ ಮುಖಮಂಟಪ ಅಥವಾ ನವರಂಗದ ಕಂಬಗಳ ರಚನಾ ಶೈಲಿಯ ಆಧಾರದ ಮೇಲೆ 17ನೇ ಶತಮಾನದ ರಚನೆ ಎಂದು ಗುರುತಿಸಲಾಗಿದೆ. ದೇವಾಲಯದ ಸುತ್ತಲೂ ಎರಡನೆಯ ಘಟ್ಟದ ರಚನೆಯನ್ನು ಸೇರಿಸುವ ಪ್ರದಕ್ಷಿಣಾ ಪಥವಿದೆ. ದೇವಾಲಯದ ಪೂರ್ವದಲ್ಲಿ 48 ಕಂಬಗಳಿರುವ ಕಲ್ಯಾಣ ಮಂಟಪವಿದೆ. ಈ ಕಂಬಗಳು ವಿಶೇಷ ರಚನೆಗಳಾಗಿವೆ. ಈ ಮಂಟಪದ ಉತ್ತರದಲ್ಲಿ ನವಗ್ರಹಗಳನ್ನು ಪೂಜಿಸಲಾಗುತ್ತದೆ. ಈ ದೇವಾಲಯದ ಹೊರ ಗೋಡೆಯಲ್ಲಿರುವ ಗಿರಿಜಾ–ಕಲ್ಯಾಣದ ಶಿಲ್ಪಗಳು ಗಮನ ಸೆಳೆಯುತ್ತವೆ. ದೇವಿಯ ಆಲಯದ ಮುಂದಿನ

ಅರ್ಧ ಮಂಟಪ ಸಿಂಹಕಂಬಗಳಿಂದ ರಚಿತವಾಗಿದೆ.[134] ದೇವಿಯ ಮತ್ತು ಸೋಮೇಶ್ವರನ ಗರ್ಭಗುಡಿಯ ಮೇಲೆ ಶಿಖರಗಳಿವೆ. ದೇವಾಲಯದ ಮುಂಭಾಗದಲ್ಲಿ ನಂದಿ ಮಂಟಪ, ಬಲಿಪೀಠ ಮತ್ತು ವೃಷಭ ಧ್ವಜಸ್ತಂಭ ಇವೆ. ಅಲ್ಲದೆ ಮಹಾದ್ವಾರವಿದೆ ಮೇಲೆ ದ್ರಾವಿಡ ಶೈಲಿಯ ಗೋಪುರವಿದೆ.[135]

ಮಾಗಡಿಯ ರಂಗನಾಥ ದೇವಾಲಯ:[136]

ಮಾಗಡಿಯ ಹೊರಭಾಗದಲ್ಲಿನ ಎತ್ತರವಾದ ಸ್ವರ್ಣಾದ್ರಿ ಪರ್ವತವೆಂದು ಕರೆಯುವ ಗುಡ್ಡದ ಮೇಲೆ ನಿರ್ಮಿತವಾಗಿರುವ ದೇವಾಲಯವೇ ರಂಗನಾಥಸ್ವಾಮಿಯ ದೇವಾಲಯ. ದೇವಾಲಯದ ಪ್ರದೇಶವನ್ನು 'ತಿರುಮಲೆ' ಎಂದೂ ಕರೆಯುತ್ತಾರೆ. ಮಾಗಡಿಯ ರಂಗನಾಥ ದೇವಾಲಯವು ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಮಹಾದ್ವಾರಗಳನ್ನು ಹೊಂದಿರುವ ದೊಡ್ಡ ದೇವಾಲಯ. ಈ ಮಹಾದ್ವಾರಗಳ ಮೇಲೆ ಎತ್ತರವಾದ ದ್ರಾವಿಡ ಶೈಲಿಯ ಗೋಪುರಗಳಿವೆ. ದೇವಾಲಯವು ಗರ್ಭಗೃಹ, ಸುಕನಾಸಿ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಚೌಕಾಕಾರದ ಪೀಠದ ಮೇಲಿರುವ ಲಿಂಗಾಕೃತಿಯನ್ನು ರಂಗನಾಥನೆಂದು ಪೂಜಿಸುತ್ತಾರೆ. ಇದರ ಹಿಂಭಾಗದಲ್ಲಿ 1.2 ಮೀಟರ್ ಎತ್ತರದ ಶ್ರೀನಿವಾಸನ ವಿಗ್ರಹವಿದೆ. ಗರ್ಭಗೃಹದಲ್ಲಿ ಕುಳಿತ ಋಷಿಯ ವಿಗ್ರಹವಿದ್ದು ಅದನ್ನು ಮಾಂಡವ್ಯ ಋಷಿಯೆಂದು ಗುರುತಿಸುತ್ತಾರೆ. ಪ್ರಾಕಾರದಲ್ಲಿ ಹಲವಾರು ಉಪದೇವಾಲಯಗಳಿದ್ದು ಅವುಗಳಲ್ಲಿ ರಾಮ, ಸೀತಾ, ಆಳ್ವಾರರು, ರಂಗನಾಥ ಮುಂತಾದ ವಿಗ್ರಹಗಳಿವೆ. ಗರ್ಭಗೃಹದ ಹಿಂಭಾಗದಲ್ಲಿ ಆದಿಶೇಷನ ಮೇಲೆ ಮಲಗಿರುವ ರಂಗನಾಥನ ವಿಗ್ರಹವಿದೆ. ದೇವಾಲಯದ ಸುತ್ತಲೂ ಹಲವಾರು ಮಂಟಪಗಳಿವೆ.

ಮಾಗಡಿಯ ಸೋಮೇಶ್ವರ ದೇವಾಲಯ[137]

ಮಾಗಡಿಯ ಸೋಮೇಶ್ವರ ದೇವಾಲಯವನ್ನು ಮುಮ್ಮಡಿ ಕೆಂಪವೀರಪ್ಪಗೌಡನ 1712ರಲ್ಲಿ ನಿರ್ಮಿಸಿದರೆಂದು ತಿಳಿದುಬರುತ್ತದೆ. ವಿಸ್ತಾರವಾದ ಪ್ರಾಕಾರದಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ. ದೇವಾಲಯಕ್ಕೆ ಉತ್ತರ ದಿಕ್ಕಿನಲ್ಲಿ ಮತ್ತು ದಕ್ಷಿಣ ದಿಕ್ಕಿನಲ್ಲಿ ಎತ್ತರವಾದ ಗೋಪುರಗಳು ಮಹಾದ್ವಾರಗಳ ಮೇಲೆ ನಿರ್ಮಿತವಾಗಿವೆ. ದೇವಾಲಯದ ಆವರಣದಲ್ಲಿ ಹಲವಾರು ಉತ್ತಮ ಮಂಟಪಗಳಿವೆ. ಮುಖ್ಯ ದೇವಾಲಯವು ಉತ್ತರ ದಿಕ್ಕಿಗೆ ಮುಖ ಮಾಡಿದೆ. ದೇವಾಲಯವು ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳನ್ನು ಹೊಂದಿದೆ. ದೇವಾಲಯದ ಸುಕನಾಸಿಯಲ್ಲಿ ಅತ್ಯುತ್ತಮವಾದ ನಂದಿಯ ವಿಗ್ರಹವಿದೆ ನವರಂಗದಲ್ಲಿ ನಾಲ್ಕು ಪ್ರಮುಖ ಕಂಬಗಳಿದ್ದು ಅವುಗಳು ವಿಜಯನಗರದ ಚಿತ್ರಖಂಡ ಕಂಬಗಳನ್ನು ಹೋಲುತ್ತವೆ. ಇವುಗಳಲ್ಲಿ ದೇವಾನುದೇವತೆಗಳು, ಪಕ್ಷಿಗಳು ಮುಂತಾದ ಕೆತ್ತನೆಗಳನ್ನು ಕಾಣಬಹುದಾಗಿದೆ. ಇದರ ಮುಂಭಾಗದಲ್ಲಿ ತೆರೆದ ಮುಖಮಂಟಪವಿದ್ದು ವಿಜಯನಗರೋತ್ತರ ಶೈಲಿಯ ಕಂಬಗಳಿಂದ ನಿರ್ಮಿತವಾಗಿದೆ.

ದೇವಾಲಯವು ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ವಿಶಾಲವಾದ ಮಂಟಪಗಳನ್ನು ಹೊಂದಿದೆ. ಪಶ್ಚಿಮದ ಮಂಟಪವನ್ನು ಕೆಂಪೇಗೌಡ ಹಜಾರವೆಂದು ಕರೆಯುತ್ತಾರೆ ಮತ್ತು ಪೂರ್ವದ ಮಂಟಪವನ್ನು ನೃತ್ಯ ಮಂಟಪವೆಂದು ಕರೆಯಲಾಗುತ್ತದೆ. ನೃತ್ಯ ಮಂಟಪದ ಕಂಬ ಒಂದರ ಮೇಲಿರುವ ಸುಮಾರು 1.5 ಅಡಿ ಎತ್ತರದ ಪುರುಷ ವಿಗ್ರಹವನ್ನು ಒಂದನೇ ಕೆಂಪೇಗೌಡನದೆಂದು ಗುರುತಿಸುತ್ತಾರೆ. ದೇವಾಲಯದ ಪಶ್ಚಿಮದ ಮೂಲೆಯಲ್ಲಿ ಸತ್ಯನಾರಾಯಣ ಸ್ವಾಮಿಯ ಒಂದೇ ಕೊಠಡಿಯ ಆಲಯವಿದೆ. ಶಿವ ದೇವಾಲಯದ ಪಶ್ಚಿಮ ಭಾಗದಲ್ಲಿ ಅಮ್ಮನವರ ದೇವಾಲಯವಿದೆ. ಅದರಲ್ಲಿ ಸುಂದರವಾದ ಸುಮಾರು ಒಂದು ಮೀಟರ್ ಎತ್ತರದ ಪಾರ್ವತಿಯ ಮೂರ್ತಿಯಿದೆ. ಈ ದೇವಾಲಯದ ನಾಲ್ಕು ಮೂಲೆಗಳಲ್ಲಿ ಸುಂದರವಾದ ಕಿರು ಗೋಪುರಗಳಿವೆ. ಕೆಂಪೇಗೌಡರ ಹಜಾರದ ಮೇಲ್ಛಾವಣಿಯಲ್ಲಿ ಪುರಾಣ ಕಥೆಗಳ ಚಿತ್ರಗಳಿವೆ. ಆದರೆ ಅವುಗಳಲ್ಲಿ ಬಹಳಷ್ಟು ನಶಿಸಿವೆ.

ಬೆಂಗಳೂರು ಕೋಟೆ [138]

ಬೆಂಗಳೂರು ಕೋಟೆಯನ್ನು ಒಂದನೆಯ ಕೆಂಪೇಗೌಡ ನಿರ್ಮಿಸಿದನೆಂದು ಹೇಳುತ್ತಾರಾದರೂ ಅದಕ್ಕೆ ಪೂರ್ವದಲ್ಲಿಯೇ ಬೆಂಗಳೂರು ಇದ್ದುದಕ್ಕೆ ಶಾಸನ ಪುರಾವೆಗಳಿವೆ. ಇದನ್ನು ಮನಗಂಡ ಕೆಲವರು ಹಳೇ ಬೆಂಗಳೂರು ಮತ್ತು ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ಬೇರೆ ಬೇರೆಯೆಂದು ಗುರುತಿಸುವ ಪ್ರಯತ್ನ ಮಾಡಿರುತ್ತಾರೆ. ಆದರೆ ಈ ಪ್ರಯತ್ನವನ್ನು ಕೆಲವು ವಿದ್ವಾಂಸರು ಒಪ್ಪುವುದಿಲ್ಲ. ಇದೆಲ್ಲದರ ಮಧ್ಯೆ ಯಲಹಂಕ ನಾಡಪ್ರಭುಗಳು ತಾವು ಅಮರನಾಯಕರಾದ ಮೇಲೆ ಬೆಂಗಳೂರಿನ ಮಹತ್ತರ ಅಭಿವೃದ್ಧಿಗೆ ಪ್ರಯತ್ನಿಸಿದ್ದನ್ನು ತಳ್ಳಿಹಾಕುವಂತಿಲ್ಲ. ಆ ಹೊತ್ತಿಗಾಗಲೇ ಬೆಂಗಳೂರು ಕೋಟೆ ಅಸ್ತಿತ್ವದಲ್ಲಿರಬೇಕೆಂಬ ಅಭಿಪ್ರಾಯ ವಿದ್ವಾಂಸರದು. ಈ ಬಗ್ಗೆ ಆಕರಗಳ ಕೊರತೆಯ ಹಿನ್ನೆಲೆಯಲ್ಲಿ ಹೆಚ್ಚಿನದೇನನ್ನೂ ಹೇಳಲಾಗುವುದಿಲ್ಲ. ಬೆಂಗಳೂರು ಕೋಟೆ ಮತ್ತು ನಗರದ ಬೆಳವಣಿಗೆಗೆ ವಿಜಯನಗರದ ಅರಸರು, ಯಲಹಂಕ ನಾಡಪ್ರಭುಗಳು, ವಿಜಾಪುರದ ಸುಲ್ತಾನರ ಅಧಿಕಾರಿಗಳಾದ ಮರಾಠರು, ಮೈಸೂರಿನ ಒಡೆಯರು, ಹೈದರ್ ಮತ್ತು ಟೀಪು ಕಾರಣರಾಗಿದ್ದಾರೆ. ಈ ಆಡಳಿತಗಾರರು ಅಂದಿನ ಕಾಲದ ಅವಶ್ಯಕತೆಗೆ ತಕ್ಕಂತೆ ಬೆಂಗಳೂರು ಕೋಟೆಯನ್ನು ಅಭಿವೃದ್ಧಿಪಡಿಸುತ್ತಾ ಮುಂದುವರೆದರು. 1791ರಲ್ಲಿ ಬ್ರಿಟಿಷರ ವಶವಾಗುವುದರೊಂದಿಗೆ ಬೆಂಗಳೂರು ಕೋಟೆ ತನ್ನ ಮಹತ್ವವನ್ನು ಕಳೆದುಕೊಂಡಿತು. ಬೆಂಗಳೂರು ಕೋಟೆಯ ಹರವನ್ನು ಮತ್ತು ಅದರ ವಿನ್ಯಾಸವನ್ನು 18ನೇ ಶತಮಾನದ ಕೊನೆಯಲ್ಲಿ ಮತ್ತು 19ನೇ ಶತಮಾನದ ಪ್ರಾರಂಭದಲ್ಲಿ ಬೆಂಗಳೂರನ್ನು ಸಂದರ್ಶಿಸಿದ ವ್ಯಕ್ತಿಗಳು ರಚಿಸಿದ ನಕಾಶೆಗಳು, ಪ್ರವಾಸಿ ಕಥನಗಳು, ತೈಲಚಿತ್ರಗಳು ಮುಂತಾದವನ್ನು ಆಧರಿಸಿ ನಿರ್ಧರಿಸಬೇಕಾಗಿದೆ. ಕಾರಣ ಇಂದು ಉಳಿದುಕೊಂಡು ಬಂದಿರುವ ಕೋಟೆಯ ಅವಶೇಷಗಳು ಹೈದರಾಲಿ ಮತ್ತು ಟೀಪುವಿನ ಕಾಲದಲ್ಲಿ ಅಂದಿನ ಅವಶ್ಯಕತೆಗೆ ತಕ್ಕಂತೆ ಪುನರ್ ನಿರ್ಮಾಣಗೊಂಡ ಭಾಗಗಳು. ಹಾಗಾಗಿ ಇದರ ಮೂಲ ಸ್ವರೂಪವನ್ನಾಗಲೀ ಅಥವಾ ವಿನ್ಯಾಸವನ್ನಾಗಲೀ ಆ ಕಾಲದಲ್ಲಿ ರಚಿತವಾದ ಚಿತ್ರಗಳು ಬಿಂಬಿಸುವುದಿಲ್ಲ. ಇದನ್ನು ಅವಲೋಕಿಸಿದಾಗ ಬೆಂಗಳೂರು ಕೋಟೆಯ ಪ್ರಾಚೀನ ವಿನ್ಯಾಸದ ಬಗ್ಗೆ ಲಿಖಿತ ಆಧಾರದ ಮೇಲೆ ಅವಲಂಬಿತವಾಗಬೇಕೇ ಹೊರತು ದೃಶ್ಯಮಾಧ್ಯಮಗಳ ವಿವರಗಳಮೇಲಲ್ಲ. ಬೆಂಗಳೂರು ಕೋಟೆಯು ಎರಡು ಭಾಗಗಳನ್ನು ಹೊಂದಿತ್ತೆಂದು 1800ರ ಆಸುಪಾಸಿನಲ್ಲಿ ರಚಿತವಾದ ನಕ್ಷೆಯ ಆಧಾರದ ಮೇಲೆ ನಿರ್ಧರಿಸುತ್ತಾರೆ. ಕೋಟೆಯ ಒಂದು ಭಾಗ ರಾಜಾಂಗಣ ಪ್ರದೇಶವಾಗಿದ್ದು ಅದರ ಹೊರಗೆ ಸಾಮಾನ್ಯರು ಮತ್ತು ಪೇಟೆಯ ಪ್ರದೇಶವಿತ್ತೆಂದು ಗುರುತಿಸುತ್ತಾರೆ. ಆದರೆ ಬೆಳವಣಿಗೆಯಾದ ಬಗೆಯನ್ನು ಮತ್ತು ಬೆಳವಣಿಗೆಯ ಹಂತಗಳನ್ನು ನಿಖರವಾಗಿ ಗುರುತಿಸಲಾಗುವುದಿಲ್ಲ. ಕಾರಣ ಕೋಟೆಯ ವೆಂಕಟರಮಣ ದೇವಾಲಯವನ್ನು ಕೆಲವು ಆಕರಗಳು ಒಂದನೇ ಕೆಂಪೇಗೌಡರ ಕಾಲಕ್ಕೆ ಕೊಂಡೊಯ್ಯುತ್ತವೆ. ಇದನ್ನು ಕೆಲವರು ಪ್ರಾರಂಭದಲ್ಲಿ ಶಿವಾಲಯವಾಗಿತ್ತೆಂದು ನಂತರ ಚಿಕ್ಕದೇವರಾಜ ಒಡೆಯರು ವೈಷ್ಣವ ದೇವಾಲಯವಾಗಿ ಮಾರ್ಪಡಿಸಿದರೆಂದು ವಾದಿಸುತ್ತಾರೆ. ಅಲ್ಲದೆ ಇಂದು ನಾವು ಗುರುತಿಸುವ ಕೋಟೆಯ ಆವರಣದಲ್ಲಿ ಪ್ರಾರಂಭದ ದೇವಾಲಯಗಳು ಅಥವಾ ಆ ಕಾಲವನ್ನು ನಿರ್ದೇಶಿಸಬಹುದಾದ ಕಟ್ಟಡಗಳನ್ನು ಕಾಣದಿರುವುದರಿಂದ ಕೋಟೆಯ ವಿಸ್ತಾರದ ಬಗ್ಗೆ ಕೆಲವು ಸಂದೇಹಗಳು ಎದುರಾಗುತ್ತವೆ. ಪ್ರಾಚೀನ ದೇವಾಲಯಗಳೆಂದು ಗುರುತಿಸುವ ಗವಿಪುರದ ಗವಿಗಂಗಾಧರ ದೇವಾಲಯ, ಅಲಸೂರಿನ ಸೋಮೇಶ್ವರ ದೇವಾಲಯಗಳು ಅಂದಿನ ಕೋಟೆಯ ಹೊರಗಿದ್ದವು. ಈ ಎಲ್ಲ ಕಾರಣಗಳಿಂದ ಬೆಂಗಳೂರಿನ ಕೋಟೆಯ ಬೆಳವಣಿಗೆಯ ಹಂತಗಳನ್ನು ಗುರುತಿಸಲು ಅಪಾರವಾದ ಅಧ್ಯಯನದ ಅವಶ್ಯಕತೆ ಇದೆಯೆಂದು ಮಾತ್ರ ಹೇಳಬಹುದು. ಆದರೆ ಇಂದಿನ ನಗರೀಕರಣದ ಬಿರುಸಿನಲ್ಲಿ ಮತ್ತು ಬದಲಾವಣೆಯ ವೇಗದಲ್ಲಿ ಈ ಅಧ್ಯಯನ ಒಮ್ಮುಖವಾಗುವ ಎಲ್ಲ ಸಾಧ್ಯತೆಗಳಿವೆ. ಅಂದರೆ ಹಿಂದಿನ ಕಡತಗಳಲ್ಲಿ ಲಭ್ಯವಿರುವ ಮಾಹಿತಿಯನ್ನು ಆಧರಿಸಿ

ನಡೆಸಬೇಕಾಗಿದೆ. ಪುರಾತತ್ವ ಸರ್ವೇಕ್ಷಣೆ, ಉತ್ಖನನ ಈ ದಿಸೆಯಲ್ಲಿ ಇಂದು ಸಾಧ್ಯವಿಲ್ಲವೆಂಬುದು ನನ್ನ ಅಭಿಮತ.

ಮಾಗಡಿ ಕೋಟೆ: [139]

ಮಾಗಡಿ ಸುಮಾರು 1130ರಲ್ಲಿ ಚೋಳರಾಜನೊಬ್ಬನಿಂದ ಸ್ಥಾಪಿತವಾಯಿತೆಂಬ ಐತಿಹ್ಯವಿವೆ. ಮುಂದೆ ಇದು ಹೊಯ್ಸಳರ ವಶವಾಗಿ ಮತ್ತೆ ವಿಜಯ ನಗರದ ಅರಸರ ಕೈಸೇರಿತು. ಅಚ್ಯುತರಾಯ ತನ್ನ ಕಾಲದಲ್ಲಿ ಈ ಪ್ರಾಂತ್ಯಕ್ಕೆ ಸಾವಂತರಾಯನನ್ನು ಪ್ರಾಂತ್ಯಾಧಿಕಾರಿಯಾಗಿ ನೇಮಿಸಿದ. ಸಾವಂತರಾಯ ನಗರವನ್ನು ವಿಸ್ತರಿಸಿ ಸಾವನದುರ್ಗದ ಗೋಡೆ ಎತ್ತರಿಸಿ ಭದ್ರಪಡಿಸಿದ. ಮುಂದೆ ಸಾವಂತರಾಯನಿಗೆ ಈ ಭಾಗ ಜಹಗಿರಿಯಾಗಿ ದೊರೆಯಿತು. 1543ರಿಂದ 1571ರ ವರೆಗೆ ಆತ ಮಾಗಡಿಯನ್ನು ಆಳಿದ. ಅವನ ಮಗ ಸಂಪಾಜರಾಜ 17ವರ್ಷ ಆಳಿ ತಿರುಮಲೆಯ ರಂಗಸ್ವಾಮಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ. ಇವನ ಮಗ ಚಿಕ್ಕರಾಯ (ಮೂಲಕರಾಯ) 16 ವರ್ಷ ಆಳಿದ. ಇವನಿಗೆ ಮಕ್ಕಳಿರಲಿಲ್ಲವಾಗಿ ವಿಜಯನಗರದ ಅರಸ ತನ್ನ ಪ್ರತಿನಿಧಿಯೊಬ್ಬನನ್ನಿರಿಸಿದ. ಈತ ಸುತ್ತಮುತ್ತಣ ಸಾಮಂತ ಪಾಳೆಯಗಾರರಿಂದ ಕಪ್ಪ ಸಂಗ್ರಹಿಸಿ ವಿಜಯನಗರಕ್ಕೆ ಕಳುಹಿಸುತ್ತಿದ್ದ. 1623ರಲ್ಲಿ ಗಂಗಪ್ಪನಾಯಕನೆಂಬ ಪಾಳೆಯಗಾರ ದುರ್ಗದ ಮೇಲೇರಿ ಹೋಗಿ ವಿಜಯನಗರದ ರಾಯಭಾರಿಯನ್ನು ಸದೆಬಡಿದು ಮಾಗಡಿಯನ್ನು ವಶಪಡಿಸಿಕೊಳ್ಳಲು ಯತ್ನಿಸಿದ. ಗಂಗಪ್ಪನ ಅತಿವರ್ತನೆಯ ಸುದ್ದಿ ವಿಜಯನಗರಕ್ಕೆ ತಲುಪಿತು. ಗಂಗನನ್ನು ಬಡಿದಟ್ಟಿ ಮಾಗಡಿಯನ್ನೂ ಸಾವನದುರ್ಗವನ್ನೂ ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳುವಂತೆ ಇಮ್ಮಡಿ ಕೆಂಪೇಗೌಡನಿಗೆ ವಿಜಯನಗರದಿಂದ ನಿರೂಪ ಹೋಯಿತು. ಗಂಗನು ಕೆಂಪೇಗೌಡನನ್ನೇ ಒಲಿಸಿಕೊಂಡು ಅವನ ನೆರವಿನಿಂದ ಸಾವನದುರ್ಗವನ್ನು ವಶಪಡಿಸಿಕೊಂಡು ಪ್ರತಿಯಾಗಿ ಮಾಗಡಿಯನ್ನು ಅವನಿಗೆ ಒಪ್ಪಿಸುವುದಾಗಿ ಆಸೆ ತೋರಿಸಿ ಕೊನೆಗೆ ದುರ್ಗ ವಶವಾದ ಮೇಲೆ ಗೌಡನ ಮೇಲೆ ತಿರುಗಿಬಿದ್ದು ಅವನನ್ನು ಜಯಿಸುವ ಹಂಚಿಕೆ ಹೂಡಿದ. ಆದರೆ ಸ್ವಾಮಿನಿಷ್ಠನಾದ ಇಮ್ಮಡಿ ಕೆಂಪೇಗೌಡ ಆ ಪ್ರಲೋಭಕ್ಕೆ ಬಲಿಯಾಗದೆ ಗಂಗನನ್ನು ಕೊಂದು ಮಾಗಡಿಯನ್ನೂ ಸಾವನದುರ್ಗವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಇಮ್ಮಡಿ ಕೆಂಪೇಗೌಡ 14 ವರ್ಷಕಾಲ ಇವೆರಡೂ ಊರುಗಳನ್ನು ಬೆಂಗಳೂರಿನಿಂದಲೇ ಆಳಿದನು. ಮಾಗಡಿಯಲ್ಲಿ ಬಲವಾದ ಕೋಟೆ ಕಟ್ಟಿಸಿ ಕಂದಕಗಳನ್ನು ತೋಡಿಸಿದ, ದೇಗುಲಗಳನ್ನು, ಕೆರೆ ಕಟ್ಟೆಗಳನ್ನೂ ನಿರ್ಮಿಸಿ, ಅಲ್ಲಿಗೆ ಹೊರಗಡೆಯ ಜನ ಬಂದು ನೆಲೆಸಲು ಅನುಕೂಲ ಮಾಡಿಕೊಟ್ಟನು. ಸುಮಾರು 1638ರಲ್ಲಿ ಬಿಜಾಪುರದ ಸೇನಾಪತಿ ರಣದುಲ್ಲಾಖಾನ್ ಬೆಂಗಳೂರನ್ನು ಆಕ್ರಮಿಸಿದ, ಅಪಾರ ಸೈನ್ಯದೊಡನೆ ಬಂದ ಖಾನನನ್ನು ಎದುರಿಸುವುದು ದುಸ್ತರವೆಂದೂ ಅಲ್ಲದೆ ವ್ಯರ್ಥ ಪ್ರಾಣ ಹಾನಿಗೆ ಕಾರಣವೆಂದೂ ಮನಗಂಡ ಇಮ್ಮಡಿ ಕೆಂಪೇಗೌಡ ವರ್ಷಂಪ್ರತಿ ಪೊಗದಿ ಕೊಡುವುದಾಗಿ ವಾಗ್ದಾನ ಮಾಡಿ, ಸೆರೆ ಬಿಡಿಸಿಕೊಂಡರು. ತಾನು ಬೆಂಗಳೂರಿನಲ್ಲಿಯೇ ನೆಲೆಸಿದಲ್ಲಿ ಮುಂದೇ ಇಂಥದೇ ಆಕ್ರಮಣಗಳನ್ನು ಇದಿರಿಸಬೇಕಾಗುವುದೆಂದು ಭಾವಿಸಿದ ಗೌಡನು 1638ರಲ್ಲಿ ರಾಜಧಾನಿಯನ್ನೇ ಮಾಗಡಿಗೆ ಸ್ಥಳಾಂತರಿಸಿದ. ಮಾಗಡಿ, ಸಾವನದುರ್ಗಗಳನ್ನು ಮತ್ತಷ್ಟು ಬಲಪಡಿಸಿಕೊಂಡು ಹದಿನೆಂಟು ವರ್ಷಕಾಲ ಮಾಗಡಿಯಿಂದ ಆಳಿದನು. ಅಂದು ಮೊದಲುಗೊಂಡು ಅವರೂ ಅವರ ವಂಶಜರೂ ಮಾಗಡಿ ಕೆಂಪೇಗೌಡರೆಂಬ ಹೆಸರಿನಿಂದ ಪ್ರಸಿದ್ಧರಾದರು. ಸಾವನದುರ್ಗ 1728ರ ವರೆಗೆ ಇಮ್ಮಡಿ ಕೆಂಪೇಗೌಡನ ವಂಶಜರ ಅಧೀನವಾಗಿತ್ತು. ಅನಂತರ ಮೈಸೂರಿನ ದಳವಾಯಿ ದೇವರಾಜ ಸಾವನದುರ್ಗವನ್ನು ವಶಪಡಿಸಿಕೊಂಡು, ಆಗ ಅರಸನಾಗಿದ್ದ ಮುಮ್ಮಡಿ ಕೆಂಪವೀರಪ್ಪ ಗೌಡನನ್ನು ಶ್ರೀರಂಗಪಟ್ಟಣಕ್ಕೆ ಬಂದಿಯಾಗಿ ಕರೆದೊಯ್ದನು. ಕೆಂಪೇಗೌಡನು ಅಲ್ಲೇ ಮೃತರಾದನು. 1791ರಲ್ಲಿ ದುರ್ಗ ಬ್ರಿಟಿಷರ ವಶವಾಯಿತು.

ಮಾಗಡಿಯಲ್ಲಿ ಕೆಂಪೇಗೌಡ ಕಟ್ಟಿದುದೆಂದು ಹೇಳುವ ಒಂದು ಕೋಟೆ ಜೀರ್ಣಾವಸ್ಥೆಯಲ್ಲಿದೆ. ಸಾವನದುರ್ಗದಲ್ಲಿ ಮಾಗಡಿ ಪಾಳೆಯಗಾರರ ಕುಲದೈವವಾದ ರಾಮೇಶ್ವರ ದೇವರ ಗುಡಿಯಿದೆ. ಗೌಡನ ಅರಮನೆಯ ಅವಶೇಷ ಈ ಗುಡಿಯ ನೈಋತ್ಯಕ್ಕಿದೆ. ರಾಮೇಶ್ವರ ಗುಡಿಯಲ್ಲಿ ಗರ್ಭಗೃಹ, ಸುಕನಾಸಿ, ನವರಂಗಗಳಿವೆ. ಈ ಗುಡಿಯಲ್ಲಿರುವ ಉತ್ಸವ ವಿಗ್ರಹದ ಎಡಬಲಗಳಲ್ಲಿ ಗಂಗೆ ಪಾರ್ವತಿಯರ ವಿಗ್ರಹಗಳಿವೆ. ಮಾಗಡಿಯಿಂದ ಸುಮಾರು ಎರಡೂವರೆ ಕಿ.ಮೀ. ಪಶ್ಚಿಮಕ್ಕೆ ಮುಮ್ಮಡಿ ಕೆಂಪೇಗೌಡ ಕಟ್ಟಿಸಿದ ಸೋಮೇಶ್ವರ ದೇವಾಲಯ ಈಗ ಜೀರ್ಣಾವಸ್ಥೆಯಲ್ಲಿದೆ.

ಹುತ್ರಿದುರ್ಗ [140]

ಕುಣಿಗಲು ತಾಲ್ಲೂಕಿನಲ್ಲಿ ಕುಣಿಗಲಿನ ಆಗ್ನೇಯಕ್ಕೆ 19ಕಿ.ಮೀ. ದೂರದಲ್ಲಿರುವ ಗ್ರಾಮ ಹುತ್ರಿದುರ್ಗ ಹಾಗೂ ಈ ಬೆಟ್ಟ ಸಮುದ್ರಮಟ್ಟದಿಂದ 3,708 ಅಡಿ ಎತ್ತರದಲ್ಲಿದೆ. ಇದನ್ನು ದೊಡ್ಡ ಬೆಟ್ಟವೆಂದು ಕರೆಯುತ್ತಾರೆ. ಬೆಟ್ಟದ ಮೇಲೆ ಕೋಟೆ ಇದೆ. ಇದಕ್ಕೆ 8 ಹೆಬ್ಬಾಗಿಲುಗಳಿವೆ. ಇವುಗಳಲ್ಲದೆ ಎಲೆಯೂರು ಬಾಗಿಲು, ಬಾಲಿಕಟ್ಟೆ ಬಾಗಿಲು, ಮಾಗಡಿ ಬಾಗಿಲು ಎಂಬ ಹೊರಬಾಗಿಲುಗಳು ಇವೆ. ಇಲ್ಲಿರುವ ಶಂಕರೇಶ್ವರ ದೇವಾಲಯದಲ್ಲಿರುವ ಕೆಲವು ವಿಗ್ರಹಗಳು ಬಹು ಸುಂದರವಾಗಿವೆ. ಈ ದೇವಾಲಯವನ್ನು ಶಂಕರಾಚಾರ್ಯರು ಪ್ರತಿಷ್ಠಾಪಿಸಿದರೆಂದು ಪ್ರತೀತಿ. ದುರ್ಗದ ಮೇಲ್ಭಾಗದಿಂದ ನೋಡಿದರೆ ಸುತ್ತಲ ರಮಣೀಯ ಪ್ರಕೃತಿ ದೃಶ್ಯವನ್ನು ಕಾಣಬಹುದು. ಬೆಟ್ಟದ ಬುಡದಲ್ಲಿರುವ ಊರಿನಲ್ಲಿ ಅನೇಕ ಪುರಾತನ ದೇವಾಲಯಗಳಿವೆ. ಇವುಗಳಲ್ಲಿ ಆದಿನಾರಾಯಣ, ವೀರಭದ್ರ ಮತ್ತು ಆಂಜನೇಯ ದೇವಸ್ಥಾನಗಳು ಪ್ರಸಿದ್ಧವಾದವು.

ಹುಲಿಕಲ್ಲು [141]

ಮಾಗಡಿ ತಾಲ್ಲೂಕಿನ ಈ ಗ್ರಾಮ. ತುಮಕೂರಿಗೆ 29 ಕಿಲೋಮೀಟರ್ ದೂರದಲ್ಲಿದೆ. ಇಲ್ಲಿ ಹೊಯ್ಸಳ ಶೈಲಿಯಲ್ಲಿ ಕಟ್ಟಿದ ಮಲ್ಲೇಶ್ವರ, ಸಂಗಮೇಶ್ವರ ದೇವಾಲಯಗಳಿವೆ. ಮಲ್ಲೇಶ್ವರ ದೇವಾಲಯ ಉತ್ತರಾಭಿಮುಖವಾಗಿದ್ದು ಗರ್ಭಗೃಹ, ಸುಕನಾಸಿ ಮತ್ತು ನವರಂಗಗಳನ್ನೊಳಗೊಂಡಿದೆ. ಸುಮಾರು ಒಂದು ಅಡಿ ಆಳದವರೆಗೂ ಕೆತ್ತಿರುವ ಮೇಲ್ಛಾವಣಿಯಲ್ಲಿ ಕಮಲದ ಮೊಗ್ಗುಗಳನ್ನು ಅಲ್ಲಲ್ಲಿ ಬಿಡಿಸಿದೆ. ತ್ರಿಕೇಂದ್ರಿತ ದಳಗಳುಳ್ಳ ಒಂದು ದೊಡ್ಡ ಕಮಲದ ಮೊಗ್ಗು ನವರಂಗದ ಮಧ್ಯದಲ್ಲಿದೆ. ನವರಂಗದಲ್ಲಿ ಗಣಪತಿ, ಭೈರವ, ಸುಬ್ರಹ್ಮಣ್ಯ, ಹಾಗೂ ವಿಷ್ಣುವಿನ ವಿಗ್ರಹಗಳಿವೆ. ಸಂಗಮೇಶ್ವರ ದೇವಾಲಯವನ್ನು ಇದೇ ಗ್ರಾಮದಲ್ಲಿದ್ದ ಕಾಮತೇಶ್ವರ ದೇವಾಲಯದ ಭಗ್ನವಸ್ತುಗಳಿಂದ ಕಟ್ಟಲಾಯಿತೆಂದು ತಿಳಿದುಬರುತ್ತವೆ. ಈ ದೇವಾಲಯದ ನವರಂಗದಲ್ಲಿ ವೇಣುಗೋಪಾಲ, ನಾರಾಯಣ ಮತ್ತು ಸೂರ್ಯನ ವಿಗ್ರಹಗಳಿವೆ. ಎದುರಿನಲ್ಲಿ ಹೊಯ್ಸಳ ವೀರಬಲ್ಲಾಳನ ಕಾಲಕ್ಕೆ ಸೇರಿದ ಒಂದು ವೀರಗಲ್ಲು ಇದೆ.

ಈ ಗ್ರಾಮದಲ್ಲಿನ ಕೆಂಪಮ್ಮನ ದೇವಾಲಯ ಇತ್ತೀಚಿನ ರಚನೆ. ಈ ದೇವಾಲಯದಲ್ಲಿ ತ್ರಿಶೂಲ, ಕತ್ತಿ, ಮದ್ದಲೆ ಹಾಗೂ ಕಪೋಲಗಳನ್ನಿಡಿದಿರುವ 3 ಅಡಿ ಎತ್ತರವಿರುವ ದೇವತೆಯ ವಿಗ್ರಹವಿದೆ. ಇದನ್ನು ಬಣ್ಣದ ಗಾರೆ ಹಾಗೂ ಸೀಮೆಂಟ್‌ನಿಂದ ನಿರ್ಮಿಸಲಾಗಿದೆ. ಈ ಊರಿನಲ್ಲಿ ಪಾಳೆಯಗಾರರ ಕಾಲದಲ್ಲಿ ಕಟ್ಟಿದ ಅರಮನೆಯ ಭಗ್ನಾವಶೇಷವನ್ನು ಕಾಣಬಹುದು.

ಸಾವನದುರ್ಗ ಕೋಟೆ: [142]

ಸಾವನದುರ್ಗ ಕೋಟೆ ಮಾಗಡಿ ಪ್ರದೇಶದ ಅದ್ಭುತ ಕೋಟೆಗಳಲ್ಲಿ ಒಂದೆಂದು ಹೆಸರಾದುದು. ಸಾವನದುರ್ಗವು ಮಾಗಡಿಯಿಂದ 12 ಕಿಲೋಮೀಟರ್ ದೂರದಲ್ಲಿ ಅಗ್ನೇಯ ದಿಕ್ಕಿನಲ್ಲಿದೆ. ಕೋಟೆಯು ರಾಜ್ಯ ಪುರಾತತ್ವ

ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿದೆ. ಸಾವನದುರ್ಗವನ್ನು 1915, 1925 ಮತ್ತು 1934ರಲ್ಲಿ ರಾಜ್ಯ ಪುರಾತತ್ವ ಇಲಾಖೆಯ ಅಧಿಕಾರಿಗಳು ಸಂದರ್ಶಿಸಿ ಆಯಾ ವರ್ಷದ ವರದಿಗಳಲ್ಲಿ ಅಲ್ಲಿನ ಪುರಾತತ್ವ ಅವಶೇಷಗಳ ಬಗ್ಗೆ ನಮೂದಿಸಿದ್ದಾರೆ. 1934ರ ವರದಿಯಲ್ಲಿ ಎಂ. ಎಚ್. ಕೃಷ್ಣರವರು ಈ ಎರಡೂ ವರದಿಗಳು ಬಿಳಿಗುಡ್ಡಕ್ಕೆ ಸೀಮಿತವಾಗಿವೆಯೆಂದು ನಮೂದಿಸಿದ್ದಾರೆ. ಸಾವನದುರ್ಗದಲ್ಲಿನ ಪ್ರಾಚ್ಯ ಅವಶೇಷಗಳು ಮತ್ತು ಕೋಟೆಯ ಕುರುಹುಗಳು ಬಿಳಿಗುಡ್ಡ, ಕರಿಗುಡ್ಡ ಮತ್ತು ಎರಡುಗುಡ್ಡಗಳ ನಡುವಿನ ಕಣಿವೆ ಪ್ರದೇಶ, ಬಸವನದುರ್ಗ ಹಾಗೂ ಇವುಗಳನ್ನೆಲ್ಲವನ್ನು ಒಳಗೊಂಡ ವಿಸ್ತಾರವಾದ ಪ್ರದೇಶವನ್ನು ಕೋಟೆಯು ಆವರಿಸಿದ್ದಿತು.

ಸಾವನದುರ್ಗದ ಪಾದದಲ್ಲಿರುವ ಪಟ್ಟಣವನ್ನು ನೆಲಪಟ್ಟಣವೆಂದು ಕರೆಯುತ್ತಾರೆ. ಕರಿಗುಡ್ಡ ಮತ್ತು ಬಿಳಿಯ ಗುಡ್ಡದಲ್ಲಿನ ಸ್ಮಾರಕಗಳನ್ನು ನೋಡಲು ಅಥವಾ ಅಂದಿನ ಕಾಲದಲ್ಲಿ ಬಿಳಿಗುಡ್ಡದ ಕೋಟೆ ಮತ್ತು ಕರಿಗುಡ್ಡದ ಕೋಟೆಯನ್ನು ತಲುಪಬೇಕಾದರೆ ನೆಲಪಟ್ಟಣವನ್ನು ದಾಟಿ ಕರಿಗುಡ್ಡವನ್ನು ಹಾದು ನಂತರ ಬಿಳಿಗುಡ್ಡವನ್ನು ತಲುಪಬೇಕಾಗಿದ್ದಿತು. ಇಂದಿನ ದಿನಗಳಲ್ಲಿ ನೆಲಪಟ್ಟಣದಿಂದ ಬಿಳಿಗುಡ್ಡಕ್ಕೆ ಹೋಗುವ ರೀತಿಯಲ್ಲಿ ದಾರಿಯನ್ನು ಮಾಡಿಕೊಳ್ಳಲಾಗಿದೆ. ದಕ್ಷಿಣ ದಿಕ್ಕಿನಲ್ಲಿರುವ ಕೋಟೆಯ ಪ್ರವೇಶದ್ವಾರವನ್ನು ದಾಟಿದ ನಂತರ ನೆಲಪಟ್ಟಣವನ್ನು ಸಂಪರ್ಕಿಸುವ ಎರಡನೆಯ ಕೋಟೆಯ ಆವರಣ ಮತ್ತು ಕೋಟೆಯ ಮಹಾದ್ವಾರವಿದೆ. ಇದನ್ನು ದಾಟಿದರೆ ಅಲ್ಲಿಯೇ ಸಮೀಪದಲ್ಲಿ ಇತ್ತೀಚೆಗೆ ನಿರ್ಮಿಸಲಾದ ನೀರಾಸರೆಗಳಿವೆ. ಅದನ್ನು ಬಯಲು ಬಸಪ್ಪಸ್ವಾಮಿ ಪಾದವೆಂದು ಕರೆಯುತ್ತಾರೆ.

ಇದರಿಂದ ಮುಂದುವರೆದರೆ ಕೆಂಪೇಗೌಡನ ಕಾಲದಲ್ಲಿ ಇಟ್ಟಿಗೆಗಳಿಂದ ನಿರ್ಮಿತವಾದ ನೆಲಮಾಳಿಗೆ ಇದೆ. ಇದು ಹತ್ತಿರದಲ್ಲಿದ್ದ ಮದ್ದಿನಮನೆ ಮತ್ತು ಶಸ್ತ್ರಾಗಾರವನ್ನು ಕಾಯುವ ಕಾವಲು ಪಡೆಗಳ ಅಡಗುದಾಣವಾಗುತ್ತೆಂದು ಗುರುತಿಸಲಾಗಿದೆ. ಅಲ್ಲಿಂದ ಮುಂದುವರಿದರೆ ಓಜೇಶ್ವರ ದೇವಾಲಯವಿದೆ. ಅದನ್ನು ದಾಟಿ ಮುಂದುವರೆದರೆ ಎರಡನೆಯ ಕೋಟೆಯ ಗೋಡೆ ಮತ್ತು ಮಹಾದ್ವಾರ ಎದುರಾಗುತ್ತದೆ. ನಂತರ ವಿಶ್ವೇಶ್ವರನ ದೇವಾಲಯವಿದೆ. ದೇವಾಲಯದ ಸಮೀಪದಲ್ಲಿಯೇ ಅರಮನೆ ಇದ್ದುದರ ಕುರುಹಾಗಿ ಅರಮನೆಯ ಎರಡನೆಯ ಮಹಾದ್ವಾರ ಕಂಡುಬರುತ್ತದೆ. ಇವುಗಳನ್ನು ದಾಟಿ ಮುಂದುವರೆದರೆ ಅರಮನೆಯ ಆವರಣ, ಅದಕ್ಕೆ ಸೇರಿದ ಕಲ್ಯಾಣಿ ಕಂಡುಬರುತ್ತವೆ. ಇವುಗಳೆಲ್ಲವನ್ನು ದಾಟಿ ಕರಿಬೆಟ್ಟದ ಕಡೆಗೆ ಮುಂದುವರೆದರೆ ನರಸಿಂಹ ಮತ್ತು ಕಾಳಮ್ಮನ ದೇವಾಲಯಗಳಿವೆ. ಅಲ್ಲಿಂದ ತುಸು ದೂರದಲ್ಲಿ ಗುಹೆಬಂದಿಖಾನೆಯಿದೆ. ಹಾಗೆಯೇ ಮುಂದುವರೆದರೆ ಪ್ರಾಕೃತಿಕ ಕಲ್ಲುಗಳಿಂದ ನಿರ್ಮಿಸಿದ ಪ್ರಾಚೀನ ಕೋಟೆಯ ಗೋಡೆಯಿದೆ. ಈ ಗೋಡೆಯನ್ನು ಕೇವಲ ಕಲ್ಲುಗಳನ್ನು ಕ್ರಮವಾಗಿ ಜೋಡಿಸಿ ನಿರ್ಮಿಸಿದ್ದಾರೆ. ಕಲ್ಲುಗಳನ್ನು ಭದ್ರಪಡಿಸಲು ಗಾರೆಯನ್ನು ಬಳಸಿಲ್ಲ. ಅಲ್ಲದೆ ಮುಂಚಾಚಿದ ಬುರುಜುಗಳಿವೆ ಇದನ್ನು ದಾಟಿದರೆ ಟೀಪುವಿನ ಕಾಲದಲ್ಲಿ ನಿರ್ಮಿಸಿದರೆನ್ನಲಾದ ಕಾವಲುಗಾರರ ಗೃಹ ಮತ್ತು ನಯಮಾಡಿದ ಕಲ್ಲಿನಿಂದ ನಿರ್ಮಿಸಿದ ಕೋಟೆಯಿದೆ. ಇದೆಲ್ಲವನ್ನು ದಾಟಿ ಕರಿಗುಡ್ಡದ ಮೇಲೆ ಏರಿದರೆ ಒಂದು ನಂದಿ ಮಂಟಪ, ಮುಂತಾದ ಕಟ್ಟಡಗಳಿವೆ. ಬಿಳಿಗುಡ್ಡದಲ್ಲಿ ಸಹ ಇದೇ ಮಾದರಿಯ ಕೋಟೆಯ ಅವಶೇಷಗಳಿವೆ.

ಕಂಚಿನ ವಿಗ್ರಹಗಳು

ಯಲಹಂಕ ನಾಡಪ್ರಭುಗಳ ಕಾಲದಲ್ಲಿ ಕಂಚಿನ ವಿಗ್ರಹಗಳ ರಚನೆಗೆ ಸಾಕಷ್ಟು ಮಹತ್ವವಿತ್ತೆಂದು ತಿಳಿದುಬರುತ್ತದೆ. ಶಿವಗಂಗೆಯ ದೇವಾಲಯದಲ್ಲಿರುವ ಮೂರು ಕಂಚಿನ ವಿಗ್ರಹಗಳು ಮತ್ತು ಘಂಟೆಗಳು ಆ ಕಾಲದಲ್ಲಿ ಕಂಚನ್ನು ಎರಕಹೊಯ್ಯುವ ಕಲೆಯು ಅತ್ಯುತ್ತಮವಾಗಿದ್ದರ ನಿದರ್ಶನಗಳಾಗಿವೆ. ಒಂದು ವಿಗ್ರಹದ ಪಾದದ ಮೇಲೆ

ಕ್ರಿ.ಶ. 1608ರ ಶಾಸನವಿರುವುದರಿಂದ ಅದನ್ನು 17ನೇ ಶತಮಾನದ ಪ್ರಾರಂಭದ ದಿನಗಳ ಕಲಾಕಾರಿಕೆಯೆಂದು ನಿಖರವಾಗಿ ಗುರುತಿಸಲಾಗಿದೆ.[143] ಅಲ್ಲದೆ ಆ ವಿಗ್ರಹವನ್ನು ಒಂದನೆಯ ಕೆಂಪೇಗೌಡನೆಂದು ಶಾಸನ ಉಲ್ಲೇಖಿಸುತ್ತದೆ. ಮತ್ತೆರಡು ವಿಗ್ರಹಗಳನ್ನು ಊಳಿಗಂ ಬಸವಯ್ಯ ಮತ್ತು ಕೆಂಪಸೋಮಣ್ಣನೆಂದು ಕರೆಯುತ್ತಾರೆ. ಪ್ರಾರ್ಥನಾ ಮುದ್ರೆಯಲ್ಲಿ ಕೈಯಲ್ಲಿ ನಂದಾದೀಪವನ್ನು ಹಿಡಿದಿರುವ ವ್ಯಕ್ತಿಯನ್ನು ಕೆಂಪ ಸೋಮಣ್ಣನೆಂದೂ, ನಮಸ್ಕಾರ ಭಂಗಿಯಲ್ಲಿ ತಲೆಯ ಮೇಲಿನ ಪೇಟ ಹಿಂದಕ್ಕೆ ಬಾಗಿದಂತೆ ಇರುವ ವಿಗ್ರಹವನ್ನು ಊಳಿಗಂ ಬಸವಯ್ಯನೆಂದು ಗುರುತಿಸಲಾಗಿದೆ. ಇವರುಗಳನ್ನು ಒಂದನೇ ಕೆಂಪೇಗೌಡನ ತಮ್ಮಂದಿರೆಂದು 1915ರ ಎಂ.ಎ.ಆರ್. ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದಲ್ಲದೆ ಮಾಗಡಿಯ ರಂಗನಾಥ, ಸೋಮೇಶ್ವರ, ಶಿವಗಂಗೆಯ ಗಂಗಾಧರೇಶ್ವರ, ಬೆಂಗಳೂರಿನ ಅಲಸೂರಿನಲ್ಲಿರುವ ಶ್ರೀ ಸೋಮೇಶ್ವರ ದೇವಾಲಯ, ಗವಿಗಂಗಾಧರೇಶ್ವರ ದೇವಾಲಯಗಳಲ್ಲಿ ಆ ಕಾಲದ ಹಲವಾರು ಕಂಚಿನ ಉತ್ಸವ ಮೂರ್ತಿಗಳಿವೆ. ಅವುಗಳೆಲ್ಲವೂ ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಿತವಾಗಿರುವುದೇ ಅವುಗಳ ವಿಶೇಷತೆ. ಈ ದೇವಾಲಯಗಳಲ್ಲಿನ ಶಿಲಾಮೂರ್ತಿಗಳು ವಿಜಯನಗರೋತ್ತರ ಶೈಲಿಯ ಛಾಯೆಯನ್ನು ಹೊಂದಿರುವುದನ್ನು ಕಾಣಬಹುದು. ಹೀಗಾಗಿ ಯಲಹಂಕ ನಾಡಪ್ರಭುಗಳು ವಿಜಯನಗರೋತ್ತರ ಶೈಲಿಯನ್ನು ಮುಂದುವರಿರೆಸಿಕೊಂಡು ಹೋದರೆಂದು ಹೇಳಬಹುದು.

ಅಡಿ ಟಿಪ್ಪಣಿಗಳು

1. ಡಾ. ಎಂ. ಜಿ. ಮಂಜುನಾಥ್ (ಸಂ) ಪ್ರಸ್ತಾವನೆ, ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, XXXIII : ಶಾಸನ ಸಂಖ್ಯೆ 1–6
2. ಅದೇ, ಶಾಸನ ಸಂಖ್ಯೆ – 1
3. ಅದೇ, ಶಾಸನ ಸಂಖ್ಯೆ – 2
4. ಅದೇ, ಶಾಸನ ಸಂಖ್ಯೆ – 4
5. ಅದೇ, ಪ್ರಸ್ತಾವನೆ ಪುಟ XXVIII – XXIX
6. ಅದೇ, ಪ್ರಸ್ತಾವನೆ ಪುಟ – XXIX
7. ಅದೇ, ಪ್ರಸ್ತಾವನೆ ಪುಟ – XXIX – XXX
8. ಬಿ. ಎಲ್. ರೈಸ್, 1897 ಮೈಸೂರು ಗೆಜೆಟಿಯರ್, ಸಂಪುಟ 1 ಪು. 20
9. ಬೆಂಗಳೂರಿನ ಬಖೈರುಗಳು, 2006, ಡಾ. ಎಂ. ಜಿ. ಮಂಜುನಾಥ್ (ಸಂ) ಪುಟ 38–39
10. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ 1999, ಹಾಮಾನಾ, ಪ್ರಧಾನ ಸಂಪಾದಕರು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ವಿಶ್ವ ವಿದ್ಯಾನಿಲಯ, ಮೈಸೂರು – ಪುಟ–63

10.ಅ. ಪಿ. ವಿ. ಕೃಷ್ಣಮೂರ್ತಿ, 'ಇಳವಂಜಿನಾಡು ಮತ್ತು ಇಳವಂಜಿರಾಯರು,' ಇತಿಹಾಸ ದರ್ಶನ ಸಂಪುಟ 22, 2007 ಪುಟ 182–187.

11. ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಪ್ರಸ್ತಾವನೆ, XXXIII
12. ಅದೇ,
13. ಬಿ. ಎಲ್. ರೈಸ್ ಪೂರ್ವೋಕ್ತ ಪು.20
14. ಅದೇ,
15. ಅದೇ,

16. ಅದೇ,
17. ಅದೇ,
18. ಅದೇ,
19. ಅದೇ,
20. ಅದೇ,
21. ಅದೇ,
22. ಅದೇ,
23. ಶಾಸನ ಸಂಪುಟ – ಪ್ರಸ್ತಾವನೆ – xxxvi
24. ಅದೇ, – ಶಾಸನಸಂಖ್ಯೆ – 52 ಮತ್ತು 14
25. ಅದೇ, – ಪ್ರಧಾನ ಸಂಪಾದಕರ ಮಾತು – xii & ಬ ನ ಸುಂದರ ರಾವ್, ಬೆಂಗಳೂರಿನ ಇತಿಹಾಸ 1985, ಪು. 17–19
26. ಬೆಂಗಳೂರಿನ ಬಖೈರುಗಳು, ಪುಟ. 42
27. ಅದೇ,
28. ರೈಸ್, ಪೂರ್ವೋಕ್ತ, ಪು. 21
29. ಬೆಂಗಳೂರಿನ ಬಖೈರುಗಳು – ಪು. 42–43
30. ಅದೇ,
31. ಅದೇ, ರೈಸ್, ಪೂರ್ವೋಕ್ತ, ಪು.21
32. ಅದೇ,
33. ಶಾಸನ ಸಂಪುಟ, ಪ್ರಸ್ತಾವನೆ, ಪುಟ xlix
34. ಜಿ. ಎಸ್. ದೀಕ್ಷಿತ (ಸಂ) ಕೃಷ್ಣದೇವರಾಯನ ಜೀವನ ಮತ್ತು ಸಾಧನೆ, 1996,
35. ಡಾ. ಎಂ. ವಿ. ಕೃಷ್ಣರಾವ್ ಮತ್ತು ಕೇಶವ ಭಟ್ಟ, ಕರ್ನಾಟಕ ಇತಿಹಾಸದರ್ಶನ, ಪು, 279
36. ಶಾಸನ ಸಂಪುಟ, ಪ್ರಸ್ತಾವನೆ,
37. ಅದೇ,
38. ಅದೇ,
39. ಬಿ. ಎಲ್. ರೈಸ್, ಪೂರ್ವೋಕ್ತ, ಪು. 21
40. ಅದೇ,
41. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, 366
42. ಶಾಸನ ಸಂಪುಟ, ಪೂರ್ವೋಕ್ತ,
43. ಸತ್ಯನಾರಾಯಣ, 1996 ಹಿಸ್ಟರಿ ಆಫ್ ದಿ ಒಡೆಯರ್ಸ್ ಆಫ್ ಮೈಸೂರು. ಪು.64
44. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಪು.366
45. ಅದೇ,
46. ಸತ್ಯನಾರಾಯಣ, ಪೂರ್ವೋಕ್ತ,
47. ಅದೇ,

48. ಅದೇ,
49. ಅದೇ,
50. ಅದೇ,
51. ಅದೇ,
52. ಅದೇ,
53. ಶಾಸನ ಸಂಪುಟ, ಪೂರ್ವೋಕ್ತ,
54. ರಣಭೈರೇಗೌಡರನ್ನು ಈವಂಶದ ಮೂಲ ಪುರುಷನೆಂದು ಮಹೀಶೂರು ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ವಂಶಾರತ್ನಾಕರ ಗ್ರಂಥ ಸಹ ಉಲ್ಲೇಖಿಸಿದೆ ಅಲ್ಲದೆ ಇಮ್ಮಡಿ ಕೆಂಪೇಗೌಡನನ್ನು ಐದನೆಯ ತಲೆಮಾರಿನವನೆಂದು ಗುರುತಿಸುತ್ತದೆ. ಪ್ರಾಯಶಃ ಇದು ಏಕಾಂಬರ ದೀಕ್ಷಿತನ 'ವೀರಭದ್ರ ವಿಜಯದ' ವಂಶಾವಳಿಯನ್ನು ಅನುಸರಿಸಿದೆ ಎಂದು ಭಾವಿಸಬೇಕಾಗುತ್ತದೆ. ರಣಭೈರೇಗೌಡರಿಗೆ ಅಥವ ಚಿಕ್ಕಬೈಯಿರೆ ನಾಯಕರಿಗೆ ನಾಯಕತನ ಬಂದ ಬಗ್ಗೆ ಶಾಸನಗಳಿಂದ ತಿಳಿದುಬಂದಿಲ್ಲ.
55. ಕೆಂಪನಾಚೇಗೌಡರ ಯಾವ ಶಾಸನಗಳಲ್ಲಿಯೂ ಅವರ ಪೂರ್ವಜರ ಹೆಸರುಗಳನ್ನು ಉಲ್ಲೇಖಿಸಿಲ್ಲ. ಇವರನ್ನು ಕ್ರಿ. ಶ. 1512ರ ಕಾಲದ ಶಾಸನ ಪ್ರಥಮವಾಗಿ ಉಲ್ಲೇಖಿಸಿದೆ. ಶಾಸನ ಸಂಪುಟದ 11ನೇ ಶಾಸನ. ಕ್ರಿ. ಶ. 1532ರ ದಾಸರಹಳ್ಳಿಯ ಶಾಸನದ ಕೆಂಪದೇವರಸೆಗೌಡರನ್ನು ಕೆಂಪನಾಚೇಗೌಡರೆಂದು ಭಾವಿಸಬಹುದು.
56. ಒಂದನೇ ಕೆಂಪೇಗೌಡರ ಪ್ರಥಮ ಶಾಸನ ಕ್ರಿ. ಶ. 1533ರ ಕಲ್ಯದ ಶಿಲಾಶಾಸನ ಹಾಗೂ ಕೊನೆಯ ಶಾಸನ ಕ್ರಿ. ಶ. 1608ರ ಶಿವಗಂಗೆಯ ದೇವಾಲಯದ ಕಂಚಿನ ಭಕ್ತ ವಿಗ್ರಹದ ಪಾದದ ಮೇಲಿನ ಶಾಸನ. ಆದರೆ ಕ್ರಿ. ಶ. 1599ಕ್ಕೆ ಇವರ ಇತರ ಶಾಸನಗಳು ನಿಲ್ಲುತ್ತದೆ.
57. ಒಂದನೆ ಕೆಂಪೇಗೌಡರ ಶಾಸನನಗಳು ಈ ಅವಧಿಯ ನಂತರ ಸಧ್ಯದಲ್ಲಿ ದೊರಕದಿರುವುದರಿಂದ ಕ್ರಿ. ಶ. 1599ರಲ್ಲಿ ಇಮ್ಮಡಿ ಕೆಂಪೇಗೌಡರ ಶಾಸನಗಳು ದೊರಕುವ ಹಿನ್ನೆಲೆಯಲ್ಲಿ ಇವರು ಕ್ರಿ. ಶ. 1599 ರಿಂದಲೇ ಅಧಿಕಾರಕ್ಕೆ ಬಂದಿರಬೇಕೆಂದು ಊಹಿಸ ಬೇಕಾಗುತ್ತದೆ.
58. ಮುಮ್ಮಡಿ ಕೆಂಪೇಗೌಡರ ಶಾಸನಗಳು ಕ್ರಿ. ಶ. 1656ರಲ್ಲಿ ಪ್ರಾರಂಭವಾಗಿ 1674ರವರೆಗೆ ಲಭ್ಯವಿವೆ.
59. ಮುಮ್ಮಡಿ ದೊಡ್ಡವೀರಪ್ಪಗೌಡರ ಪ್ರಥಮ ಶಾಸನ ಕ್ರಿ. ಶ. 1681ರಲ್ಲಿ ದೊರಕುತ್ತದೆ. ಅಲ್ಲದೆ 1697ರವರೆಗೆ ಮುಂದುವರೆಯುತ್ತದೆ
60. ಇಮ್ಮಡಿ ಕೆಂಪೇಗೌಡರ ಶಾಸನ ಕ್ರಿ. ಶ. 1697ರಲ್ಲಿ ಪ್ರಾರಂಭವಾಗಿ ಕ್ರಿ. ಶ. 1708ರವರೆಗೆ ಲಭ್ಯವಿವೆ.
61. ಮುಮ್ಮಡಿ ಕೆಂಪವೀರಪ್ಪಗೌಡರ ಶಾಸನಗಳು 1708ರಲ್ಲಿ ಪ್ರಾರಂಭವಾಗಿ 1728ರವರೆಗೆ ಲಭ್ಯವಿದೆ. 1728ರ ಶಾಸನದಲ್ಲಿ ಅವರು ಶ್ರೀರಂಗಪಟ್ಟಣದಲ್ಲಿ ಮರಣಶಯ್ಯೆಯಲ್ಲಿರುವುದನ್ನು ದಾಖಲಿಸಿ ಪಟ್ಟದ ಕತ್ತಿಯನ್ನು ಮುತ್ತಿನ ಕುಚ್ಚನ್ನು ಕಳುಹಿಸಿರುವುದು ಅವರ ಅಂತ್ಯದ ದಿನಗಳನ್ನು ಸೂಚಿಸುವ ಹಿನ್ನೆಲೆಯಲ್ಲಿ ಅವರ ಅಂತ್ಯಕಾಲವನ್ನು ಅದೇ ದಿನಾಂಕವೆಂದು ಭಾವಿಸಬೇಕಾಗುತ್ತದೆ.
62. ಎಂ. ಜಿ. ಮಂಜುನಾಥ (ಸಂ) 2006, ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ಶಾಸನ ಸಂಖ್ಯೆ □ 11.
63. ಅದೇ. 12
64. ಅದೇ. 20
65. ಅದೇ. 13
66. ಅದೇ. 24

67. ಅದೇ. 24
68. ಅದೇ. 40
69. ಅದೇ. 41
70. ಅದೇ. 50
71. ಅದೇ. 61
72. ಅದೇ. 60
73. ಅದೇ. 49
74. ಅದೇ. 43
75. ಅದೇ. 44
76. ಅದೇ. 50
77. ಅದೇ. 79
78. ಅದೇ. 80
79. ಅದೇ. 81
80. ಅದೇ. 62
81. ಅದೇ. 65
82. ಅದೇ. 73
83. ಅದೇ. 76
84. ಬ. ನ. ಸುಂದರ ರಾವ್, 1985, ಬೆಂಗಳೂರಿನ ಇತಿಹಾಸ, ಬೆಂಗಳೂರು. ಪುಟ–8
85. ಅದೇ, ಪುಟ–17–19
86. ಎಂ.ಜಿ. ಮಂಜುನಾಥ್, 2006, ಪೂರ್ವೋಕ್ತ ಶಾಸನ ಸಂಖ್ಯೆ–43.
87. ಅದೇ, 44.
88. ಗೋವಿಂದ ವೈದ್ಯ, 1971, ಕಂಠೀರವ ನರಸರಾಜ ವಿಜಯ, ಆರ್. ಶಾಮಾಶಾಸ್ತ್ರಿ (ಸಂ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಸಂಧಿ–3, ಪದ್ಯ 30, 42 ಮತ್ತು ಹಯವದನರಾವ್. ಸಿ, 1943, ಹಿಸ್ಟರಿ ಆಫ್ ಮೈಸೂರು, ಬೆಂಗಳೂರು, ಸಂಪುಟ.1, ಪುಟ 525
89. ಎಂ. ಜಿ. ಮಂಜುನಾಥ(ಸಂ) 2006, ಪೂರ್ವೋಕ್ತ ಶಾಸನ ಸಂಖ್ಯೆ 84 ಮತ್ತು 89
90. ಅದೇ.
91. ಗೋವಿಂದ ವೈದ್ಯ 1971 ಪೂರ್ವೋಕ್ತ– ಸಂಧಿ 3, ಪದ್ಯ 92–93
92. ಸತ್ಯನಾರಾಯಣ. ಎ. 1996, ಹಿಸ್ಟರಿ ಆಫ್ ಒಡೆಯರ್ಸ್ ಆಫ್ ಮೈಸೂರು. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಪು–40
93. ಬ. ನ. ಸುಂದರರಾವ್ 1985, ಬೆಂಗಳೂರಿನ ಇತಿಹಾಸ, ಬೆಂಗಳೂರು, ಪುಟ–43
94. ಎಕ,
95. ಮಹೀಶೂರ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ವಂಶರತ್ನಾಕರ, ಜಗನ್ಮೋಹನ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತ, 1887, ಪುಟ.51, (ಮುಂದೆ ಮಹೀಶೂರ ಎಂದು ನಮೂದಿಸಲಾಗಿದೆ)

96. ಹಯವದನರಾವ್. ಸಿ, 1943, ಪೂರ್ವೋಕ್ತ ಪುಟ.526
97. ಅದೇ ಪು.68-69
98. ಹಯವದನರಾವ್, 1945, ಪೂರ್ವೋಕ್ತ, ಸಂಪುಟ.1, ಪುಟ.143 ಮತ್ತು 146
99. ಗೋವಿಂದ ವೈದ್ಯ, ಪೂರ್ವೋಕ್ತ, ಸಂಧಿ.11, ಪದ್ಯ 50-60
100. ಅದೇ ಸಂಧಿ. 11
101. ಸತ್ಯನಾರಾಯಣ, ಪೂರ್ವೋಕ್ತ ಪುಟ. 63-64
102. ಅದೇ.
103. ಮುದ್ದಾಚಾರಿ, 1969, ದಿ ಮೈಸೂರ್ - ಮರಾಠ ರಿಲೇಷನ್ಸ್ ಇನ್ ಸೆವೆನ್ಟೀನ್ತ್ ಸೆಂಚುರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.41
104. ಮಹೀಶೂರ, ಪೂರ್ವೋಕ್ತ, ಪು.92-93 ಮತ್ತು ಹಯವದನರಾವ್, ಸಿ. 1942, ಪೂರ್ವೋಕ್ತ, ಸಂ.1, ಪುಟ.230
105. ಮುದ್ದಾಚಾರಿ, 1969, ಪೂರ್ವೋಕ್ತ, ಪುಟ.41
106. ಸತ್ಯನಾರಾಯಣ, 1996 ಪೂರ್ವೋಕ್ತ, ಪುಟ. 75
107. ಮುದ್ದಾಚಾರಿ, 1969, ಪೂರ್ವೋಕ್ತ, ಪುಟ. 64-65
108. ಶಾಸನ ಸಂಪುಟ ಪೂರ್ವೋಕ್ತ,
109. ಅದೇ ಶಾಸನಸಂಖ್ಯೆ, 83,89
110. ಮಹೀಶೂರ, ಪೂರ್ವೋಕ್ತ, ಪುಟ-69, ಅಡಿಟಿಪ್ಪಣಿ
111. ಶಾಸನ ಸಂಪುಟ ಪೂರ್ವೋಕ್ತ
112. ಹಯವದನ ರಾವ್.ಸಿ, 1945, ಪೂರ್ವೋಕ್ತ, ಸಂಪುಟ, 2 ಪುಟ, 26
113. ಎಂ. ಜಿ. ಮಂಜುನಾಥ್ (ಸಂ)2006, ಪೂರ್ವೋಕ್ತ ಶಾಸನಸಂಖ್ಯೆ 91
114. ಹಯವದನರಾವ್. ಸಿ, 1945, ಪೂರ್ವೋಕ್ತ, ಸಂಪುಟ.2, ಪುಟ,26
115. ಅದೇ.
116. ರೈಸ್ ಬಿ.ಎಲ್, 1897, ಮೈಸೂರು ಗೆಜೆಟಿಯರ್, ಸಂಪುಟ.2, ಪುಟ.20-22 ಮತ್ತು
117. ಹಯವದನರಾವ್.ಸಿ, 1930, ಮೈಸೂರು ಗೆಜೆಟಿಯರ್, ಸಂಪುಟ-5, ಬೆಂಗಳೂರು
118. ಶಾಸನ ಸಂಪುಟ ಪೂರ್ವೋಕ್ತ, ಪ್ರಸ್ತಾವನೆ
119. ಎಂ.ಎ.ಆರ್. 1985 ಮತ್ತು 1986
120. ಶಾಸನ ಸಂಪುಟ ಪೂರ್ವೋಕ್ತ
121. ಬ. ನ. ಸುಂದರರಾವ್, 1985 ಪೂರ್ವೋಕ್ತ
122. ಅದೇ.
123. ಎಂ.ಎ.ಆರ್. 1935, ಪುಟ,
124. ಎಂ.ಎ.ಆರ್. 1945, ಪುಟ,
125. ಅದೇ.
126. ಅದೇ.

127. ಅದೇ.

128. ಅದೇ.

129. ಅದೇ.

130. ಎಂ.ಎ.ಆರ್. 1935, ಪು.20–29

131. ಅದೇ. ಪುಟ–27,

132. ಅದೇ. ಪುಟ

133. ಅದೇ. ಪುಟ

134. ಅದೇ. ಪುಟ

135. ಅದೇ. ಪುಟ

136. ಸೂರ್ಯನಾಥ್ ಯು. ಕಾಮತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ಗೆಜೆಟಿಯರ್.

137. ಅದೇ.

138. ಬ. ನ. ಸುಂದರರಾವ್, ಪೂರ್ವೋಕ್ತ.

139. ಕರ್ನಾಟಕ ವಿಷಯ ವಿಶ್ವಕೋಶ,

140. ಅದೇ.

141. ಅದೇ.

142. ಎಂ.ಎ.ಆರ್. 1934.

143. ಎಂ.ಎ.ಆರ್. 1915, ಪುಟ 12–16

17. ಯಲಹಂಕ ನಾಡಪ್ರಭುಗಳ ರಾಣಿಯರು

ಕನ್ಯಾಕುಮಾರ್ ಪಿ.

ಸ್ತ್ರೀ ಮತ್ತು ಪುರುಷ ಸಮಾಜದ ತೀರಾ ಅವಶ್ಯಕ ಮತ್ತು ಅನಿವಾರ್ಯ ಘಟಕಗಳು. ಈ ಇಬ್ಬರೂ ಒಂದೇ ನಾಣ್ಯದ ಎರಡು ಮುಖಗಳು. ಸ್ತ್ರೀ ಪುರುಷನಿಗೆ ಮಗಳಾಗಿ, ಮಡದಿಯಾಗಿ, ಮಾತೆಯಾಗಿ, ಕೌಟುಂಬಿಕ ಮತ್ತು ಸಾಮಾಜಿಕ ರಂಗಗಳಲ್ಲಿ ನಡೆದು ಬಂದ ವಿಷಯ ಮನುಕುಲದ ಚರಿತ್ರೆಯಲ್ಲಿ ವ್ಯಾಪಕವಾಗಿ ವರ್ಣಿತವಾಗಿದೆ. ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದ ರಾಜವಂಶಗಳ ರಾಜರುಗಳು ಅನೇಕರು ದೊರೆಯುತ್ತಾರೆ. ಅಂತೆಯೇ ಆಯಾ ರಾಜವಂಶಗಳ ರಾಣಿಯರು ಮತ್ತು ಸಾಮಂತರಾಜರ ರಾಣಿಯರು ದೊರೆಯುತ್ತಾರೆ. ಸಾಮಾನ್ಯವಾಗಿ ಶಾಸನಗಳ ಕಾಲದಿಂದ ವಿಜಯನಗರದ ಕಾಲದವರೆವಿಗೂ ಶಾಸನಗಳ ಒಡಲಲ್ಲಿ ಮೂಡಿ ನಿಂತವರು ಪ್ರಭುವರ್ಗದ ಮತ್ತು ಉನ್ನತ ಮಹಿಳೆಯರು. ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಅವರ ಪರಂಪರೆಯನ್ನು ಚಿಕ್ಕ ಮನೆತನಗಳು (ಪಾಳೆಯಗಾರರು) ಮುಂದುವರಿಸಿಕೊಂಡು ಬಂದವು. ಅವುಗಳಲ್ಲಿ ಯಲಹಂಕ ನಾಡಪ್ರಭುಗಳು ಪ್ರಮುಖರಾಗಿದ್ದಾರೆ.

ಯಲಹಂಕ ನಾಡಪ್ರಭುಗಳ ಚರಿತ್ರೆಯ ಬಗ್ಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಅಧ್ಯಯನಗಳು ನಡೆಯುತ್ತಲಿವೆ. ಇದುವರೆವಿಗೂ ಪ್ರಕಟವಾಗಿರುವ ಎಲ್ಲಾ ಕೃತಿಗಳು ಯಲಹಂಕ ನಾಡಪ್ರಭುಗಳ ರಾಜ್ಯ, ಯುದ್ಧ, ರಾಜ್ಯ ವಿಸ್ತಾರ, ಆರ್ಥಿಕ ವ್ಯವಸ್ಥೆಯ ಕಲೆ ಮತ್ತು ವಾಸ್ತುಶಿಲ್ಪಗಳ ಬಗೆಗೆ ಹೆಚ್ಚು ಅಧ್ಯಯನಗಳಾಗಿವೆಯೇ ಹೊರತು, ರಾಣಿಯರ (ಮಹಿಳೆಯರ) ಬಗೆಗೆ ಅಲ್ಲಲ್ಲಿ ಪ್ರಾಸಂಗಿಕವಾದ ವಿವರಗಳು ಮಾತ್ರ ಲಭ್ಯವಿದೆ. ಇದಕ್ಕೆ ಅಪವಾದವೆಂಬಂತೆ 'ಯಲಹಂಕ ನಾಡಪ್ರಭುಗಳ ಸ್ತ್ರೀ ಸಮಾಜ', [1] ಎಂಬ ಡಾ. ಜಯಮ್ಮ ಕರಿಯಣ್ಣ ಅವರ ಲೇಖನಪ್ರಕಟಗೊಂಡಿದ್ದರೂ ಅದು ಪರಿಪೂರ್ಣವಾಗಿ 'ಯಲಹಂಕ ಪ್ರಭುಗಳ ಕುಟುಂಬದ ಮಹಿಳೆಯರ ಮೇಲೆ ಬೆಳಕು ಚೆಲ್ಲುವುದಿಲ್ಲ. ಒಬ್ಬ ಪುರುಷನ ಸಫಲತೆಯ ಹಿಂದೆ ಒಬ್ಬ ಹೆಣ್ಣು ಇದ್ದೇ ಇರುತ್ತಾಳೆ ಎಂಬುದಕ್ಕೆ ಇತಿಹಾಸದ ಪುಟಗಳಲ್ಲಿ ಸಾಕಷ್ಟು ಉದಾಹರಣೆಗಳಿವೆ. ಅಂತೆಯೇ ಒಬ್ಬ ರಾಜ, ನಾಡಪ್ರಭು ತಮ್ಮ ಆಡಳಿತದಲ್ಲಿ ಯಶಸ್ಸು ಕಾಣಬೇಕಾದರೆ, ಆ ಕುಟುಂಬದ ಮಹಿಳೆಯರ ಪಾತ್ರ ಮುಖ್ಯ ಎಂಬುದನ್ನು ನಾವು ಅರಿತಿದ್ದೇವೆ. ಈ ಹಿನ್ನೆಲೆಯಲ್ಲಿ ಯಲಹಂಕ ನಾಡಪ್ರಭುಗಳ ಕುಟುಂಬ ರಾಣಿಯರು' ಕುರಿತು ಗಮನಿಸಲಾಗಿದೆ. ಯಲಹಂಕ ನಾಡಪ್ರಭುಗಳ ಇತಿಹಾಸದ ಬಗೆಗೆ ಬೆಳಕು ಚೆಲ್ಲುವ ಪ್ರಾಥಮಿಕ ಆಕರವಾದ, ಎಫಿಗ್ರಫಿಯಾ ಕರ್ನಾಟಿಕಾ ಸಂಪುಟಗಳು,[2] ಯಲಹಂಕ ಪ್ರಭುಗಳು ಒಂದು ಅಧ್ಯಯನ[3] ಬೆಂಗಳೂರು ಕೆಂಪೇಗೌಡ[4] ಬೆಂಗಳೂರಿನ ಇತಿಹಾಸ[5] ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ[6] ಯಲಹಂಕ ನಾಡಪ್ರಭುಗಳ ಜಾನಪದ ಸಾಹಿತ್ಯ ಸಂಪುಟ[7] ಬೆಂಗಳೂರು ಕೆಂಪೇಗೌಡ ವಂಶಸ್ಥರು[8] ಸುಗುಟೂರು ಪಾಳೆಯಗಾರರು[9] ವೀರಭದ್ರ ವಿಜಯ ಯಲಹಂಕ ನಾಡಪ್ರಭುಗಳ ವಾಸ್ತುಶಿಲ್ಪ–ಶಿಲ್ಪಕಲೆ[10] ಬೆಂಗಳೂರಿನ ಬಖೈರುಗಳು[11] ಮತ್ತು ಬಿಡಿ–ಬಿಡಿ ಲೇಖನಗಳನ್ನು ಸಂಗ್ರಹಿಸಿ ಅದನ್ನು ವಿಶ್ಲೇಷಿಸುವ ಮೂಲಕ ಯಲಹಂಕ ನಾಡಪ್ರಭುಗಳ ಕಟುಂಬದ ಮಹಿಳೆಯರ ನಿಖರವಾದ ಚಿತ್ರಣವನ್ನು ನೀಡಲು ಪ್ರಯತ್ನಿಸಲಾಗಿದೆ. ಈ ಆಕರಗಳ ಜೊತೆಗೆ ನಮಗೆ 'ಜಾನಪದ ಸಾಹಿತ್ಯ ಹೆಚ್ಚು ಬೆಳಕನ್ನು ಚೆಲ್ಲುತ್ತದೆ. ಈ ಜಾನಪದ ಸಾಹಿತ್ಯ ಅಂದಿನ ಬದುಕಿನ ಪ್ರತಿಬಿಂಬ. ಅಲ್ಲಿ ಬರುವ ಘಟನೆಗಳು ವೈಭವೀಕರಣದಿಂದ ಕೂಡಿದ್ದರೂ, ಅವು ಸುಳ್ಳನ್ನು ಹೇಳುವುದಿಲ್ಲ. ಆದ್ದರಿಂದ ಜಾನಪದ ಆಕರವನ್ನೂ ಕೂಡ ಈ ಲೇಖನದಲ್ಲಿ ಬಳಸಿಕೊಳ್ಳಲಾಗಿದೆ.

ಏಕಮ್ರದೀಕ್ಷಿತನ ವೀರಭದ್ರವಿಜಯ[12] ಕಾವ್ಯವು ಯಲಹಂಕ ನಾಡಪ್ರಭುಗಳ ವಂಶಾವಳಿಯನ್ನು ನೀಡಿದೆ. ಆ ವಂಶಾವಳಿಯಲ್ಲಿ ಅನೇಕ ರಾಣೀಯರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಅವರುಗಳೆಂದರೆ ಇಮ್ಮಡಿ ಕೆಂಪೇಗೌಡನ ರಾಣಿಯರಾದ ಕೆಂಪಮ್ಮ ಮತ್ತು ಲಿಂಗಮ್ಮಾಂಬೆ, ದೊಡ್ಡವೀರ ಭೂಪಾಲನ ರಾಣಿಯರಾದ ಮುದ್ದು ವೀರಮಾಂಬೆ, ಈ ಕೃತಿ ಕೇವಲ ರಾಣಿಯರ ಹೆಸರುಗಳನ್ನು ಉಲ್ಲೇಖಿಸಿದೆಯೇ ಹೊರತು ಅವರ ಕಾರ್ಯಗಳನ್ನು ವಿವರಿಸಿಲ್ಲ.

ಪುರುಷ ಪ್ರಧಾನ ಸಮಾಜದಲ್ಲಿ ಇದು ಸಹಜವಾದದ್ದೇ ಆಗಿದೆ. ಆದರೂ ಈ ರಾಣಿಯರು ಅರಮನೆಯಲ್ಲಿದ್ದುಕೊಂಡೇ ತಮ್ಮ ರಾಜರಿಗೆ ಕೌಟುಂಬಿಕ ವಿಚಾರದಲ್ಲೇ ಆಗಲಿ ಸಲಹೆಗಳನ್ನು ನೀಡಿರಬಹುದು. ಜಾನಪದ ಸಾಹಿತ್ಯವೂ ಈ ಕೃತಿಗಿಂತ ಭಿನ್ನವಾಗಿ ರಾಣಿಯರ ಕಾರ್ಯಗಳನ್ನು ಬಿಂಬಿಸಿದೆ. ಅದನ್ನು ಈ ಕೆಳಕಂಡಂತೆ ಸಂಗ್ರಹಿಸಲಾಗಿದೆ.

ಬೆಂಗಳೂರು ಕೆಂಪೇಗೌಡ (ಇಮ್ಮಡಿ ಕೆಂಪೇಗೌಡ)ನ ತಾಯಿ ಮತ್ತು ಪತ್ನಿ ಇಬ್ಬರ ಊರು ಬೆಂಗಳೂರು ಆದ್ದರಿಂದ ಕೆಂಪೇಗೌಡ ತನ್ನ ರಾಜಧಾನಿಯನ್ನು ಯಲಹಂಕದಿಂದ ಬೆಂಗಳೂರಿಗೆ ಬದಲಾಯಿಸಿದ. ಇದರಿಂದ ರಾಜಕುಟುಂಬದ ಮಹಿಳೆಯರು ಪ್ರಾಚೀನ ಕಾಲದ ರಾಣೀಯರಂತೆ ಪ್ರಭುವರ್ಗದವರ ಮೇಲೆ ಪ್ರಭಾವ ಬೀರುತ್ತಿದ್ದರೆಂದು ಅರಿಯಬಹುದಾಗಿದೆ. ನಂತರ ಕೆಂಪೇಗೌಡ ಬೆಂಗಳೂರಿನ ದಕ್ಷಿಣ ಭಾಗದ ಕೋಟೆಯ ಬಾಗಿಲನ್ನು ನಿರ್ಮಿಸುವ ಕಾರ್ಯದಲ್ಲಿದ್ದಾಗ ಹೆಬ್ಬಾಗಿಲಿನ ಕಾರ್ಯ ಎಷ್ಟೇ ಭದ್ರವಾಗಿರುತ್ತಿದ್ದರೂ ಅದು ಬೆಳಗಾಗುವ ಹೊತ್ತಿಗೆ ಉರುಳಿ ಹೋಗುತ್ತಿದ್ದು ಇದನ್ನು ಅಪಶಕುನದ ಸೂಚನೆಯೆಂದು ತಿಳಿದ ಕೆಂಪೇಗೌಡ ಜ್ಯೋತಿಷ್ಯವನ್ನು ಕೇಳಿದಾಗ "ಗರ್ಭಿಣಿಯೋರ್ವಳ ರಕ್ತ ತರ್ಪಣದಿಂದ ಮಾತ್ರ ಶಾಶ್ವತ ಕೋಟೆ ಬಾಗಿಲು ಸಾಧ್ಯವೆಂದು ಅರಿತ ಕೆಂಪೇಗೌಡ ಚಿಂತಾಕ್ರಾಂತನಾದನು. ಸೊಸೆ ಲಕ್ಷ್ಮೀದೇವಿ ಸಮಸ್ತ ವಿಷಯವನ್ನು ಅರಿತಿದ್ದು ತುಂಬುಗರ್ಭಿಣಿಯಗಿದ್ದರೂ ಸಹ ಕೋಟೆಯ ಹೆಬ್ಬಾಗಿಲಿಗೆ ಬಲಿ ಹೋದಳು. ತರುವಾಯ ಕೋಟೆಯ ಹೆಬ್ಬಾಗಿಲು ಭದ್ರವಾಗಿ ನಿಂತಿತು. ನಂತರ ವಿಷಯವನ್ನು ಅರಿತ ಕೆಂಪೇಗೌಡ ಆಕೆಯ ದೇಹವನ್ನು ತವರೂರಾಗಿದ್ದ ಕೋರಮಂಗಲಕ್ಕೆ ತಂದು ಸಕಲ ಪೂಜಾವಿಧಿಗಳಿಂದ ಆಕೆಯ ದೇಹವನ್ನು ಸಮಾಧಿಗೊಳಿಸಿದನು.[13] ಈ ಮಾಖಿಕ ಆಕರವನ್ನು ದಾಖಲಿಸಿದ ಶಾಸನಗಳಿಂದ ಪ್ರತ್ಯೇಕವಾಗಿ ಗಮನಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಕೋರಮಂಗಲದಲ್ಲಿರುವ ಸಮಾಧಿಯ ಬಳಿ ಇರುವ ಸ್ಮಾರಕವನ್ನು ಹಂದಿಯ ಬೇಟೆಯ ಕಲ್ಲೆಂದು ವಿದ್ವಾಂಸರು ಭಾವಿಸಿ ಈ ಘಟನೆಯನ್ನೇ ತಳ್ಳಿಹಾಕಿದ್ದಾರೆ.

ಈ ಲಕ್ಷ್ಮೀದೇವಿಯು ಕೋರಮಂಗಲದ ನಂಜೇಗೌಡನ ಹಿರಿಯ ಮಗಳು. ಅವಳನ್ನು ಕೆಂಪೇಗೌಡ ತನ್ನ ಹಿರಿಯ ಮಗ ದೊಡ್ಡ ವೀರಪ್ಪಗೌಡನಿಗೆ ಮದುವೆ ಮಾಡಿಸಿದ್ದನು. ಈ ವಿಷಯವನ್ನು 'ಕೆಂಪೇಗೌಡನ ಜಯ ಪ್ರಶಸ್ತಿ,[14] ಕೃತಿಯು ವಿವರಿಸುತ್ತದೆ. ತ್ಯಾಗ ಬಲಿದಾನಕ್ಕೆ ಸಂಬಂಧಿಸಿದ ಘಟನೆಗಳು ಕರ್ನಾಟಕದಾದ್ಯಂತ ಕಂಡುಬರುತ್ತದೆ. ಇವುಗಳಲ್ಲಿ ಕೆರೆಗೆ ಬಲಿಯಾದವರ ಕತೆಗಳು ಸಾಕಷ್ಟಿವೆ. ಆದರೆ ಕೋಟೆಗೆ ಬಲಿಯಾದವರ ಕಥೆಗಳು ಬಹಳಷ್ಟು ಕಡಿಮೆ. ಆದ್ದರಿಂದ ಈ ನಾಡ ಪ್ರಭುಗಳ ಮನೆತನದಲ್ಲಿ ಇದು ವಿಶೇಷವಾದ ಘಟನೆಯಾಗಿದ್ದು ಈ ರೀತಿ ತನ್ನ ಜೀವನವನ್ನು ರಾಜ್ಯದ ರಕ್ಷಣೆಗಾಗಿ ಅರ್ಪಿಸಿದ ಲಕ್ಷ್ಮಿದೇವಿ ದೈವತ್ವ ಪಟ್ಟವನ್ನು ಪಡೆದಳು ಎಂದು ಹೇಳಬಹುದು. ಇದಕ್ಕೆ ಅಂದಿನ ಸಮಾಜವೂ ಪರೋಕ್ಷವಾಗಿ ಬೆಂಬಲ ನೀಡಿರಲೂಬಹುದು. ಇಂದಿಗೂ ಕೂಡ ಕೋರಮಂಗಲದಲ್ಲಿ ಲಕ್ಷ್ಮಮ್ಮನ ದೇವಸ್ಥಾನದಲ್ಲಿ ಪೂಜೆ ಉತ್ಸವಗಳು ನಡೆಯುತ್ತಲಿವೆ.

ಕೆಂಪೇಗೌಡ ನೀರಿನ ವ್ಯವಸ್ಥೆಗಾಗಿ ಕೆರೆ-ಕಾಲುವೆಗಳನ್ನು ನಿರ್ಮಿಸಿದ್ದನು. ಆದರೆ ಅವುಗಳು ಹೆಚ್ಚಾಗಿ ಅವರ ಮಹಿಳೆಯರ ಹೆಸರುಗಳಲ್ಲೇ ಇರುವುದನ್ನು ಗಮನಿಸಿದರೆ ಅದು ಮಹಿಳೆಯರ ಪ್ರಾಮುಖ್ಯತೆಯನ್ನು ನೆನಪಿಸುತ್ತದೆ.

ಕೆಂಪೇಗೌಡನ ಸೋದರ ಮಾವನ ಮಗಳಾದ ಚೆನ್ನಮ್ಮ ಕೆಂಪೇಗೌಡರ ಪಟ್ಟದರಸಿಯಾಗಿದ್ದಳು. ಪಟ್ಟದರಸಿ ಚೆನ್ನಮ್ಮಳ ಹೆಸರಿನಲ್ಲಿ ಕೆಂಪೇಗೌಡ 'ಚೆನ್ನಮ್ಮನಕೆರೆ'ಯನ್ನು ತನ್ನ ಅರಮನೆಯ ಕುಟುಂಬದ ರಾಣಿಯರಲ್ಲೇ ಒಬ್ಬರಾದ ಸಿದ್ದಮ್ಮನ ಹೆಸರಿನಲ್ಲಿ ಈಗಿನ ಸಿಟಿ ಮಾರ್ಕೆಟಿನ 'ಸಿದ್ದಿಕಟ್ಟೆ'ಯನ್ನು ತನ್ನ ಕುಲದೇವತೆ ಕೆಂಪಮ್ಮಳ ಹೆಸರಿನಲ್ಲಿ ನೆನಪಿನಾರ್ಥ ಈಗಿನ ರೈಲ್ವೆ ನಿಲ್ದಾಣದಲ್ಲಿ 'ಧರ್ಮಾಂಬುದಿ ಕೆರೆಯನ್ನು' ಮತ್ತು ಅಲಸೂರಿನ ಬಳಿ ಕೆಂಪಾಂಬುದಿ ಕೆರೆಯನ್ನು ನಿರ್ಮಿಸಿದನು. ಇನ್ನು ಕೆಂಪೇಗೌಡ ತನ್ನ ತಂಗಿ-ಹೊಂಬಾಳಮ್ಮನ ಹೆಸರಿನಲ್ಲಿ ಕುಡಿಯುವ ನೀರಿನ ಸೌಕರ್ಯಕ್ಕಾಗಿ, 'ಹೊಂಬಾಳಮ್ಮನ ಕೆರೆ' ಎಂದು ಒಂದು ಕೆರೆಯನ್ನು ನಿರ್ಮಿಸಿದನು. ಇದು ಇಂದು ಮಾಗಡಿ ಪ್ರದೇಶಕ್ಕೆ ಸೇರಿದೆ. ಇಂದಿಗೂ ಇದರ ಪಕ್ಕದಲ್ಲಿ ಆಕೆ ನೆಲೆಸಿದ್ದಂತಹ ಪ್ರದೇಶವನ್ನು 'ಹೊಂಬಾಳಮ್ಮನ ಪೇಟೆ" ಎಂತಲೇ ಕರೆಯಲಾಗುತ್ತಿದೆ. ಇದಕ್ಕೆ "ಗಟ್ಟಿಯಾದ ಆಕರ' ಜಾನಪದ ಸಾಹಿತ್ಯ.

ಡಾ. ಎಂ.ವಿ. ಕೃಷ್ಣರಾವ್‌ರವರು ತಮ್ಮ ಪುಸ್ತಕ ಬೆಂಗಳೂರು ಕೆಂಪೇಗೌಡದಲ್ಲಿ ಮುಮ್ಮಡಿ ಕೆಂಪೇಗೌಡನಿಗೆ ಬಸಮ್ಮ, ತೋಟದಮ್ಮ, ಬೈಯಮ್ಮ ಎಂಬ ಮೂವರು ಪತ್ನಿಯರು ಇದ್ದರೆಂದಿದ್ದಾರೆ. ಇದನ್ನು ಗಮನಿಸಿದರೆ ಅಂದು ರಾಜಕುಟುಂಬದಲ್ಲಿ ಬಹುಪತ್ನಿತ್ವ ರೂಢಿಯಲ್ಲಿದ್ದು ಮಹಿಳೆಯರು ಪ್ರಧಾನ ಭಾಗವಾಗಿದ್ದರೆಂಬುದನ್ನು ಗುರುತಿಸಬಹುದಾಗಿದೆ. ಜೊತೆಗೆ ಮಾಗಡಿ ದಕ್ಷಿಣ ದಿಕ್ಕಿನಲ್ಲಿ ಇರುವ ಭಾರ್ಗವತಿ ಮತ್ತು ಜಾಪಮುದ್ರಿ ಎಂಬ ಹೆಸರಿನಲ್ಲಿರುವ ಕೆರೆಗಳು ಮುಮ್ಮಡಿ ಕೆಂಪೇಗೌಡನಿಗೆ ಇವರು ಮೆಚ್ಚಿನ ರಾಣಿಯರೆಂದು ತಿಳಿಸುವಂತಿದೆ.[15]

ಮೇಲು ಜಗಳಕನುವಾದ ಪಟುಭಟರು ವೂಳಿಗದವರು ಮಿಗೆ, ವೀರ ವಿಕ್ರಮಾರ್ಕರು ರಾಹುತರು /
ಸುಗುಣ ಮಂತ್ರಿ ಪ್ರಧಾನರು ರಾಣಿವಾಸ, ದಂಡಿಗೆಯ ಪಲ್ಲಕ್ಕಿ ಸಾಲುಗಳಾಯಿನ್ನುಪೊಗಳಲರಿ ದೈಯಾ.....[16]

ಎಂಬ ಬಣ್ಣನೆಯನ್ನು ಗಮನಿಸಿದಾಗ ಯುದ್ಧ ರಣರಂಗಕ್ಕೆ ಕೇವಲ, ವೀರಾಧಿವೀರರು ಮಾತ್ರ ಹೋಗುತ್ತಿರಲಿಲ್ಲ. ಬದಲಾಗಿ ಸೇವಕರು, ಅಡಿಗೆಯವರು, ಹಾಸ್ಯಗಾರರು, ನರ್ತಕಿಯರು, ಮಂತ್ರಿ, ರಾಜಕುಟುಂಬದ ರಾಣಿ ವಾಸದವರೂ ಹೋಗತ್ತಿದ್ದರೆಂದು ನಾವು ಅರಿಯಬಹುದು.

ಯಲಹಂಕ ನಾಡಪ್ರಭುಗಳ ಕುಟುಂಬದ ಮಹಿಳೆಯರು ಹಲವಾರು ಧಾರ್ಮಿಕ ದಾನ ದತ್ತಿಗಳನ್ನು ಲೋಕೋಪಯೋಗಿ ಕಾರ್ಯಗಳನ್ನು ಮಾಡಿರುವ ಬಗೆಗೆ ಶಾಸನಗಳು ಬೆಳಕು ಚೆಲ್ಲಿವೆ. ಅವುಗಳೆಂದರೆ,

ಇಮ್ಮಡಿ ಕೆಂಪೇಗೌಡನ ಹಿರಿಯ ಸೊಸೆ ಅಂದರೆ 1ನೇ ಮಗನಾದ ಇಮ್ಮಡಿ ಹಿರಿಯ ಕೆಂಪೇಗೌಡನ ರಾಣಿ ವೆಂಕಟಕೃಷ್ಣಾಜಮ್ಮ ವಾಸ್ತವವಾಗಿ ಯಲಹಂಕ ವಂಶದ ರಾಣಿಯರಲ್ಲಿ ಹೆಚ್ಚು ಧಾರ್ಮಿಕ ಆಸಕ್ತಿವುಳ್ಳವಳಾಗಿ ಕಾಣುತ್ತಾಳೆ. "ನಂಮಾನ ಯಿಂಮಡಿ ಕೆಂಪೇಗೌಡರೈಯವರಿಗು ನಂಮ ಅತ್ತೆ ಲಿಂಗಾಜಮ್ಮನವರಿಗೂ ಪುಣ್ಯವಾಗಲಿ" ಎಂದು ಕುಣಿಗಲಿಗೆ ಪಶ್ಚಿಮ ದ್ವಾರದಲ್ಲಿ ವೆಂಕಟಸಾಗರ ಎಂಬ ಅಗ್ರಹಾರವನ್ನು ಮತ್ತು ಕೆರೆಯನ್ನು ಸ್ಥಾಪಿಸಿ, ದಾನ ನೀಡಿರುವುದು ತನ್ನ ಅತ್ತೆ-ಮಾವರ ಸ್ಮರಣೆಗೋಸ್ಕರವೇ. ಇದು 1659ರ ಕುಣಿಗಲ್ ದಾನ ಶಾಸನದಲ್ಲಿ ಉಕ್ತವಾಗಿದೆ.[17]

ಕ್ರಿ. ಶ. 1599ರ ಕೃಷ್ಣಸಾಗರ ಶಾಸನದಲ್ಲಿ ಇಮ್ಮಡಿ ಕೆಂಪೆಯ್ಯನವರ ಪುಣ್ಯಸ್ತ್ರೀಗಳಾದ ವೆಂಕಟಕೃಷ್ಣಾಜಮ್ಮನ ಉಲ್ಲೇಖವಿದೆ[18]

ಕ್ರಿ. ಶ. 1599ರ ಶೃಂಗಾರ ಸಾಗರದ 2 ಶಿಲಾಶಾಸನಗಳಲ್ಲಿ[19] ಇಮ್ಮಡಿ ಕೆಂಪೇಗೌಡನ ಉಪ ಪತ್ನಿಯಾಗಿದ್ದಂತಹ ಪಟ್ಟದ ನಾಟಕ ಶಾಲೆಯ ಶೃಂಗಾರಮ್ಮನ ಉಲ್ಲೇಖ ದೊರೆತಿದ್ದು, ಆಕೆ ಒಂದು ಕೆರೆಯನ್ನು ಕಟ್ಟಿಸಿರುವ ಉಲ್ಲೇಖ ದೊರೆಯುತ್ತದೆ. ಅಂತೆಯೇ ಕ್ರಿ. ಶ. 1599ರ ಶೃಂಗಾರ ಸಾಗರದ 1ನೇ ಶಿಲಾಶಾಸನವು [20] ಈಕೆಯೇ 'ಶೃಂಗಾರ ಸಾಗರ' ಎಂಬ ಅಗ್ರಹಾರವನ್ನು ನಿರ್ಮಿಸಿದ ಬಗ್ಗೆ ವಿವರಗಳಿವೆ.

ಕ್ರಿ. ಶ. 1597ರ ಒಂದು ಶಾಸನದಿಂದ [21] ಯಲಹಂಕ ನಾಡಪ್ರಭು ಜುಟ್ಟನಹಳ್ಳಿಯ ಗಿರಿಯಪ್ಪಗೌಡರ ಮಗ ಚಿಕ್ಕ ಹೊನ್ನೇಗೌಡನ ಪತ್ನಿ ಅಗಜಮ್ಮ ಶಿವಗಂಗೆಯ ಗಂಗಾಧರೇಶ್ವರನಿಗೆ ಒಂದು ಘಂಟೆಯನ್ನು ಮಾಡಿಸಿಕೊಟ್ಟ ವಿವರಣೆಗಳು ಮತ್ತು ಗಂಟೆಯನ್ನು ಎರಕ ಹೊಯ್ದವನ ಹೆಸರು ಗಂಗಯ್ಯ ಎಂಬ ವಿವರಗಳು ಲಭಿಸಿದೆ. ಇದು ನಾಡ ಪ್ರಭುಗಳ ಮಹಿಳೆಯರ-ಧಾರ್ಮಿಕ ರಂಗದಲ್ಲಿ ಹೊಂದಿರುತ್ತಿದ್ದ ಸ್ವಾತಂತ್ರ್ಯವನ್ನು ಆಸಕ್ತಿಯನ್ನು ತಮ್ಮ ಪ್ರಾಮುಖ್ಯತೆಯನ್ನು ತಿಳಿಯಪಡಿಸುತ್ತದೆ. ಈ ಶಾಸನ ಅಗಜಮ್ಮಳನ್ನು 'ಪುಂಣ್ಯಾರ್ತ್ತಿಯು[22] ಎಂಬ ಉಲ್ಲೇಖಿಸಿದೆ.

ಸುಮಾರು ಕ್ರಿ. ಶ. 1600ರ ಶಾಸನವೊಂದರಲ್ಲಿ ಯಲಹಂಕ ನಾಡಪ್ರಭುಗಳ ಕಾಲದ ಅರಸಿಯೊಬ್ಬಳಾದ ನಾಗಮ್ಮ ಎಂಬುವಳ ಉಲ್ಲೇಖ ಶಿವಗಂಗೆ ಬೆಟ್ಟದ ಮೇಲಿನ ನಂದಿ ಮಂಟಪದ ಪಕ್ಕದಲ್ಲಿರುವ ಭಕ್ತವಿಗ್ರಹದ ಪಕ್ಕ ದೊರೆತಿದೆ. ಆದರೆ ಶಾಸನದ ಅಕ್ಷರಗಳು ತ್ರುಟಿತವಾಗಿದ್ದು:

'................ನ ಅರಸಿ ನಾಗಮ್ಮ' ಎಂದು ಮಾತ್ರ ತೋರಿದೆ. ಆಕೆ ಯಾರ ರಾಣಿಯೆಂಬುದು ತಿಳಿಯದೇ ಹೋದರೂ, ಮತ್ತು ಆಕೆ ಮಾಡಿದ ದಾನ ಯಾವುದೆಂದು ತಿಳಿಯದೇ ಹೋದರೂ, ಯಲಹಂಕ ನಾಡ ಪ್ರಭುಗಳ ರಾಣಿಯರ ಸಾಲಿಗೆ ಮತ್ತೊಂದು ಹೆಸರು ಸೇರ್ಪಡೆಯಾಗಿದೆ.

ಸುಗಟೂರು ಪಾಳೆಯಗಾರಲ್ಲೊಬ್ಬನಾಗಿದ್ದ ಮುಮ್ಮಡಿ ತಮ್ಮೇಗೌಡನು ಕ್ರಿ. ಶ. 1640-42ರ ಸುಮಾರಿನಲ್ಲಿ ಗತಿಸಿಹೋದನೆಂದು, ಆತನ ಹೆಂಡತಿ ಹಲಸಮ್ಮನೆಂದು, ಈಕೆ ಬಹುಮಟ್ಟಿಗೆ ಯಲಹಂಕ ನಾಡಪ್ರಭುಗಳ ಇಮ್ಮಡಿ ಕೆಂಪೇಗೌಡನ ಮಗಳಾಗಿರಬೇಕು.[23] ಚಿಕ್ಕರಾಜ ಚಿಕ್ಕತಮ್ಮೇಂದ್ರನ ಮರಣದ ತರುವಾಯ ಅವನ ಮಗ ಚಿಕ್ಕರಾಯ ಬಸವನಗೌಡ ಇನ್ನೂ 6 ವರ್ಷದ ಅಪ್ರಾಪ್ತ ಬಾಲಕನಾಗಿದ್ದರಿಂದ ಆತನ ಪೋಷಕಳಾಗಿ ಕೆಲಸ ನಿರ್ವಹಿಸುತ್ತಾಳೆ.[24] ಆಕೆಯ ಆಡಳಿತ ಕಾಲದಲ್ಲಿ ಬಿಜಾಪುರದ ಪರವಾಗಿ ಆಕ್ರಮಣ ನಡೆಸಿದ ರಣದುಲ್ಲಾಖಾನ್ ಮತ್ತು ಮರಾಠರು ಸರದಾರ ಷಹಜಿ ಬೆಂಗಳೂರು ಮತ್ತು ಹೊಸಕೋಟೆಗಳನ್ನು ವಶಪಡಿಸಿಕೊಂಡು ಕೋಲಾರವನ್ನಾಕ್ರಮಿಸಿದರು. ಆ ಸಂದಿಗ್ಧ ಸಂದರ್ಭದಲ್ಲಿ ಹಲಸಮ್ಮ ಕೋಲಾರವನ್ನು ಬಿಟ್ಟು ಆವಪಲ್ಲಿಗೆ ಬಂದು ನೆಲೆಸಿದಳು.[25]

ಇದು ಯಲಹಂಕ ನಾಡಪ್ರಭುಗಳು ಮತ್ತು ಸುಗಟೂರು ಪಾಳೆಯಗಾರರ ನಡುವೆ ವೈವಾಹಿಕ ಸಂಬಂಧಗಳು ಬೆಳೆದಿದ್ದವು ಮತ್ತು ನಾಡ ಪ್ರಭುಗಳು ಕುಟುಂಬದ ಮಹಿಳೆಯರೂ ರಾಜಕೀಯ ಆಡಳಿತದಲ್ಲಿ ಪಾಲ್ಗೊಳ್ಳುತ್ತಿದ್ದರೆಂದು ಗುರುತಿಸಬಹುದಾಗಿದೆ.

ರಾಣಿಯರ ಶಿಲ್ಪಗಳು

ಯಲಹಂಕ ನಾಡಪ್ರಭುಗಳ ದೇವಾಲಯ, ವಾಸ್ತುಶಿಲ್ಪ ಕಲೆಯು ಅನೇಕ ವೈಶಿಷ್ಟ್ಯಗಳಿಂದ ಕೂಡಿವೆ. ದೇವಾಲಯಗಳ ಮಂಟಪಗಳಲ್ಲಿ ಹಜಾರಗಳಲ್ಲಿ ಉಪಲಬ್ಧವಿರುವ ಶಿಲ್ಪಗಳನ್ನು ಆಳವಾಗಿ ಅಧ್ಯಯನ ಮಾಡಿದರೆ ಯಲಹಂಕ ನಾಡಪ್ರಭುಗಳ - ಶಿಲ್ಪಗಳ ಜೊತೆಗೆ ರಾಣಿಯರ ಶಿಲ್ಪಗಳನ್ನು ಕೂಡ ಕಾಣಬಹುದು.

ಸಾಮಾನ್ಯವಾಗಿ ದಕ್ಷಿಣ ಭಾರತದ ದೇವಾಲಯಗಳಲ್ಲಿ 'ನಮಸ್ಕಾರ ಮುದ್ರೆಯಲ್ಲಿರುವ ಅರಸನ ಹಾಗೂ ಆತನ ರಾಣಿಯರ ಶಿಲ್ಪಗಳು'-ಕಂಬಗಳ ಮೇಲೆ ಅಥವಾ ಗೋಡೆಗಳ ಮೇಲೆ ಕಾಣಬಹುದು. ಅದರಂತೆ ಯಲಹಂಕ ನಾಡಪ್ರಭುಗಳ ಕಾಲದಲ್ಲಿ ಈ ಸಂಪ್ರದಾಯ ಮುಂದುವರೆದು ಅರಸ ಮತ್ತು ರಾಣಿ ಶಿಲ್ಪಗಳ ರಚನೆಯಲ್ಲಿ ಕಾಣಬಹುದು. ಈ ಶಿಲ್ಪಗಳು ರಾಜ-ಲಕ್ಷಣಗಳಿಂದ ಕೂಡಿದ್ದು, ಅತ್ಯಂತ ಸುಂದರ ಶಿಲ್ಪಗಳಾಗಿವೆ. ರಾಜನ ಬಲಭಾಗದ ರಾಣಿಯ ಶಿಲ್ಪದಲ್ಲಿ ವಿವಿಧ ಆಭರಣಗಳಿಂದ ಕಿವಿಯೋಲೆ, ತೋಳಬಂಧ, ಕಾಲ್ಗಡಗ, ಸರಮಾಲೆ, ಬೈತಲೆಸರ ಹಾಗೂ ವಿಶಿಷ್ಟ ಕೇಶಲಂಕಾರ ಇತ್ಯಾದಿಗಳಿಂದ ರಚಿಸಲಾಗಿದೆ. ನಿರಿಗೆ ಸೀರೆ, ಧರಿಸಿ ನಯವಾಗಿ ದೇವರಿಗೆ ನಮಸ್ಕರಿಸುತ್ತಾ ನಿಂತಿರುವಂತೆ ಶಿಲ್ಪವನ್ನು ಕಂಡರಿಸಲಾಗಿದೆ.[26]

ಆವತಿಯ ಪ್ರದೇಶದಲ್ಲಿರುವ ತಿಮ್ಮರಾಯ ದೇವಸ್ಥಾನ, ಒಂದು ವೈಷ್ಣವ ದೇವಾಲಯವಾಗಿದ್ದು, ಸುಂದರ ಕೆತ್ತನೆಗಳಿಗೆ ಒಳಗಾಗಿದೆ. ಇಲ್ಲಿ ಭಕ್ತನ ರೂಪದಲ್ಲಿ ಅರಸನ ಒಂದು ಉಬ್ಬು ಶಿಲ್ಪವಿದೆ. ನವರಂಗದ ಬಲಭಾಗದ ಕಂಬದಲ್ಲಿ ಅನೇಕ ಆಭರಣಗಳನ್ನು ಧರಿಸಿರುವ ರಾಣಿಯನ್ನು ಹೋಲುವ ಶಿಲ್ಪವಾಗಿದ್ದು, ದೇವಾಲಯ ನಿರ್ಮಿಸಿದ ಅರಸನ ರಾಣಿಯ ಶಿಲ್ಪವೆಂದು ಅದರ ಲಕ್ಷಣಗಳನ್ನು ನೋಡಿ ಗುರುತಿಸಬಹುದಾಗಿದೆ.[27]

ಕೆಂಪೇಗೌಡ ಹಜಾರದ ಮುಖಮಂಟಪ ಕಂಬಗಳ ಮೇಲಿನ ಶಿಲ್ಪಗಳು ಅರಸ ಕೆಂಪೇಗೌಡ ಮತ್ತು ಅವರ ಅರಸಿಯದು ಎಂದು ಅಭಿಪ್ರಾಯಪಡಲಾಗಿದೆ.[28]

ಗಂಗಾಧರೇಶ್ವರ ಗರ್ಭಗುಡಿಯ ಎಡಗಡೆ ಆಳವಾಗಿ ಕೊರೆದ ಇನ್ನೊಂದು ಗರ್ಭಗುಡಿ ಇದೆ. ಇದನ್ನು ಹೊನ್ನಾದೇವಿ ಗುಡಿ ಎಂದು ಕರೆಯಲಾಗಿದ್ದು, ಈ ಗರ್ಭಗುಡಿ ಪೂರ್ವಾಭಿಮುಖವಾಗಿದೆ. ಆದರೆ ಅದು ಆಳವಾಗಿದ್ದು, ಒಳಗಡೆ ರಾಜನ ಶಿಲ್ಪದ ಪಕ್ಕದಲ್ಲಿ ರಾಣಿಯ ಶಿಲ್ಪವಿದೆ. [29] ಇಲ್ಲಿ ರಾಣಿ ವಿವಿಧ ಆಭರಣಗಳು, ನಿರಿಗೆಯ ಸೀರೆ ಮತ್ತು ಕುಪ್ಪಸ ಧರಿಸಿ ನಮಸ್ಕಾರ ಮುದ್ರೆಯಲ್ಲಿ ನಿಂತಿದ್ದಾಳೆ. ರಾಣಿಯ ಕೇಶಾಲಂಕಾರವಂತೂ ಗಮನ ಸೆಳೆಯುತ್ತದೆ.

ಯಲಹಂಕ ನಾಡಪ್ರಭುಗಳ ನಾಡಿನ ಮತ್ತೊಂದು ಪ್ರಮುಖ ಪ್ರದೇಶ ಹಲಸೂರು. ಇಲ್ಲಿ ಯಲಹಂಕ ನಾಡಪ್ರಭುಗಳು ಸುಪ್ರಸಿದ್ಧ ಸೋಮೇಶ್ವರ ದೇವಾಲಯವನ್ನು ನಿರ್ಮಿಸಿದ್ದಾರೆ. ಇದರ ನಿರ್ಮಾಣದ ವ್ಯಕ್ತಿಗಳ ಬಗ್ಗೆ ಏನೇ ಭಿನ್ನಾಭಿಪ್ರಾಯಗಳಿದ್ದರೂ ಕೆಂಪೇಗೌಡ ಸೋಮೇಶ್ವರನ ಭಕ್ತನಾಗಿದ್ದು, ಅಲಸೂರಿನಲ್ಲಿ ಸೋಮೇಶ್ವರನ ದೇವಾಲಯವನ್ನು ನಿರ್ಮಿಸಿದವನೆಂದು ಅಭಿಪ್ರಾಯಪಟ್ಟಿದ್ದಾರೆ.[30]

ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ರಾಜನ ಮತ್ತು ರಾಣಿಯರ ಶಿಲ್ಪಗಳನ್ನು ನವರಂಗದ ಸಾಲಿನ ಎಡಗಡೆಯ ಕಂಬದಲ್ಲಿ ರಚಿಸಲಾಗಿದೆ. ಶಿವಗಂಗೆಯಲ್ಲಿ ರಾಣಿಯ ಶಿಲ್ಪದ ಪಕ್ಕದಲ್ಲಿ ಪುತ್ರನನ್ನು ಕೂಡ ತೋರಿಸಲಾಗಿದೆ. ಇಲ್ಲಿ ರಾಣಿಯನ್ನು ಏಕಾಂಗಿಯಾಗಿ ತೋರಿಸಲಾಗಿದೆ. ಅರಸನ ಶಿಲ್ಪಕಂಬದ ಪಶ್ಚಿಮ ದಿಕ್ಕಿನಲ್ಲಿ ನಮಸ್ಕರಿಸುತ್ತ ನಿಂತಿರುವ ರಾಣಿಯ ಶಿಲ್ಪವಿದೆ.[31] ಈ ಶಿಲ್ಪವು ಗರ್ಭಗುಡಿಗೆ ಮುಖ ಮಾಡಿದೆ. ಇಲ್ಲಿ ರಾಣಿಯ ಶಿಲ್ಪವು ವಿಶೇಷ ಆಭರಣಗಳಿಂದ ಕೂಡಿದೆ. ನಮಸ್ಕಾರದ ಮುದ್ರೆಯ ಭಂಗಿಯಲ್ಲಿ ನಿಂತಿರುವ ರಾಣಿಯ ಶಿಲ್ಪ ನೀಳದೇಹ, ಉದ್ದನೆಯ ಕೇಶ, ದುಂಡನೆಯ ಮುಖಲಕ್ಷಣಗಳಿಂದ ಕೂಡಿದೆ. ನಿರಿಗೆ ಸೀರೆಯನ್ನು ಧರಿಸಿದ್ದು, ವಿವಿಧ ಆಭರಣಗಳನ್ನು ಧರಿಸಿ ವಂದಿಸುತ್ತಾ ನಿಂತಿರುವ ರಾಣಿಯ ಶಿಲ್ಪವಂತೂ ಆಕರ್ಷಣೀಯವಾಗಿದೆ. ಇದು ರಾಣಿ ಹಲಸಮ್ಮನ ಶಿಲ್ಪವೆಂದು ತಿಳಿಯಬಹುದು. ಸ್ವಲ್ಪ ಹೆಚ್ಚು ಕಡಿಮೆ ಶಿವಗಂಗೆಯ ದ್ವಾರದ ಮೇಲಿನ ರಾಣಿಯ ಶಿಲ್ಪವನ್ನು ಹೋಲುತ್ತದೆ. ಶಿಲ್ಪಗಳನ್ನು ವೀಕ್ಷಿಸಿದಾಗ ಅವುಗಳು ರಾಣಿಯರ ಚಿತ್ರವೆಂದು ಗುರುತಿಸ ಬಹುದಾಗಿದೆ.

ಒಟ್ಟಾರೆ ಯಲಹಂಕ ನಾಡ ಪ್ರಭುಗಳ ಕುಟುಂಬದ ಮಹಿಳೆಯರ ಬಗ್ಗೆ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ನಾವು ಈ ಕೆಳಗಿನ ತೀರ್ಮಾನಗಳಿಗೆ ಬರಬಹುದು.

* ಯಲಹಂಕ ನಾಡಪ್ರಭುಗಳ ರಾಣಿಯರು ಪ್ರಾಚೀನ ಕಾಲದ ರಾಣಿಯರಂತೆ ತಮ್ಮ ಪ್ರಭು ವರ್ಗದ ಮೇಲೆ ಪ್ರಭಾವ ಬೀರುತ್ತಿದ್ದರು.
* ಯಲಹಂಕ ನಾಡಪ್ರಭುಗಳಲ್ಲಿ ಬಹುಪತ್ನಿತ್ವ ರೂಢಿಯಲ್ಲಿತ್ತು.
* ಯಲಹಂಕ ನಾಡಪ್ರಭುಗಳ ಕಾಲದಲ್ಲಿ ಮಹಿಳೆಯರು ರಾಣಿಯರು ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳನ್ನು ಹೊಂದಿದ್ದರು.

* ರಾಜಮನೆತನದ ರಾಣಿಯರು ಬಹುಶಃ ಯುದ್ಧ, ಶಸ್ತ್ರಾಭ್ಯಾಸದಲ್ಲಿ ಪರಿಣಿತಿ ಹೊಂದಿರುತ್ತಿದ್ದರು.
* ಯಲಹಂಕ ನಾಡಪ್ರಭುಗಳ ಅರಮನೆಯಲ್ಲಿ ರಾಣಿಯರು ಲೋಕ ಕಲ್ಯಾಣಕಾರಕ ಕಾರ್ಯಗಳಲ್ಲಿ ಆಸಕ್ತಿಹೊಂದಿದ್ದರು ಮತ್ತು ಹಲವಾರು ದಾನ, ದತ್ತಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.
* ರಾಣಿಯರು ನಾಡಪ್ರಭುಗಳಂತೆ ರಾಜ್ಯಭಾರ ಮಾಡಿರಬಹುದು ಎಂದು ಹಲಸಮ್ಮನ ವಿವರದಿಂದ ಗುರುತಿಸಬಹುದು.
* ರಾಣಿಯರು ಧಾರ್ಮಿಕ ರಂಗದಲ್ಲಿ ಉನ್ನತ ಸ್ಥಾನಮಾನ ಹೊಂದಿದ್ದರು.
* ದೇವಾಲಯಗಳನ್ನು ನಿರ್ಮಿಸಲು ಮತ್ತು ಜೀರ್ಣೋದ್ಧಾರಗೊಳಿಸುವಲ್ಲಿ ರಾಣಿಯರ ಪಾಲು ಇತ್ತು ಎಂಬುದನ್ನು ದೇವಾಲಯಗಳಲ್ಲಿ ಭಕ್ತರಂತೆ ವಂದಿಸುತ್ತಿರುವ ತಮ್ಮ ಶಿಲ್ಪಗಳನ್ನು ಹಾಕಿಸುವ ಸಂಪ್ರದಾಯದಲ್ಲಿ ಗುರುತಿಸಬಹುದು.
* ಯಲಹಂಕ ನಾಡಪ್ರಭುಗಳಿಗೂ ಸುಗುಟೂರು ಪಾಳೆಯಗಾರರಿಗೂ ವೈವಾಹಿಕ ಸಂಬಂಧ ಇತ್ತು ಎಂಬುದಕ್ಕೆ ಹಲಸಮ್ಮನ ನಿದರ್ಶನ ಕೊಡಬಹುದಾಗಿದೆ.

ಹೀಗೆ ಯಲಹಂಕ ನಾಡಪ್ರಭುಗಳ ಕುಟುಂಬದ ರಾಣಿಯರು ಮತ್ತು ರಾಣಿ ವರ್ಗದವರು, ತಮ್ಮನ್ನು ಸಾಮಾಜಿಕ ರಂಗಗಳಲ್ಲಿ, ಧಾರ್ಮಿಕ ರಂಗಗಳಲ್ಲಿ, ಸಾಂಸ್ಕೃತಿಕ ವಲಯಗಳಲ್ಲಿ ಪ್ರಭುಗಳ ಆಳ್ವಿಕೆಯ ಅವಧಿಯಲ್ಲಿ ತಮ್ಮ ವೈಭವದಿಂದ ಮಾತ್ರ ಪ್ರಸಿದ್ಧಿಯಾಗಿರದೆ ತಮ್ಮ ವಿಶಿಷ್ಟ ಸೇವೆಗಳಿಂದಲೂ ಮೆರೆದಿರುವುದನ್ನು ಇದುವರೆವಿಗೂ ದೊರೆತ ಮಾಹಿತಿಗಳಿಂದ ನಾವು ಅರಿಬಹುದಾಗಿದೆ. ಇದರಿಂದ ನಮಗೆ ಇತಿಹಾಸವೆಂದರೆ ಕೇವಲ ಪುರುಷರ ಇತಿಹಾಸ ಮಾತ್ರವಲ್ಲ, ಮಹಿಳೆಯರ ಇತಿಹಾಸವನ್ನು ಒಳಗೊಂಡಿರುತ್ತದೆ ಮತ್ತು ರಾಜರ ಯಶಸ್ಸಿನ ಹಿಂದೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕುಟುಂಬ ವರ್ಗದ ಮಹಿಳೆಯರು ಇದ್ದೇ ಇರುತ್ತಾರೆ ಎಂದು ಅರಿಯಬಹುದು.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. ಬೆಂಗಳೂರು ಕೆಂಪೇಗೌಡ ವಂಶಸ್ಥರು, ಪ್ರೊ. ಎಂ. ಎಚ್. ಕೃಷ್ಣಯ್ಯ, ಡಾ. ದೇವರಕೊಂಡಾರೆಡ್ಡಿ, ಪುಟ 123, ಜನತಾ ಶಿಕ್ಷಣ ಸಂಸ್ಥೆ, ಬೆಂಗಳೂರು, 1996
2. ಎ.ಕ.IX, XII
3. ದಯಾನಂದ ಪಟೇಲ್ ಮತ್ತು ಜೆ. ಟಿ. ವೀರಪ್ಪ, ಮಂಡ್ಯ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್, ಮಂಡ್ಯ, 1994.
4. ಪ್ರೊ. ಎಂ. ವಿ. ಕೃಷ್ಣರಾವ್, ಬೆಂಗಳೂರು ಕೆಂಪೇಗೌಡ, ಬೆಂಗಳೂರು, 1964.
5. ಬಿ. ಎನ್. ಸುಂದರರಾವ್, ಬೆಂಗಳೂರು ಇತಿಹಾಸ, ಬೆಂಗಳೂರು, 1985
6. ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಡಾ. ಎಂ. ಜಮುನ, ಬೆಂಗಳೂರು ವಿಶ್ವ ವಿದ್ಯಾನಿಲಯ, 2006
7. ಯಲಹಂಕ ನಾಡಪ್ರಭುಗಳ ಜಾನಪದ ಸಾಹಿತ್ಯ, ಡಾ. ಎಂ. ಜಮುನ, ಬೆಂಗಳೂರು ವಿಶ್ವ ವಿದ್ಯಾನಿಲಯ, 2007
8. ಪ್ರೊ. ಎಂ. ಎಚ್. ಕೃಷ್ಣಯ್ಯ ಮತ್ತು ಡಾ. ದೇವರಕೊಂಡಾರೆಡ್ಡಿ, ಅದೇ
9. ಡಾ. ಪಿ. ವಿ. ಕೃಷ್ಣಮೂರ್ತಿ, ಸುಗುಟೂರು ಪಾಳೆಯಗಾರರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1994
10. ಯಲಹಂಕ ನಾಡಪ್ರಭುಗಳ ವಾಸ್ತುಶಿಲ್ಪ, ಶಿಲ್ಪಕಲೆ, ಡಾ. ಎಂ. ಜಮುನ, ಬೆಂಗಳೂರು ವಿಶ್ವ ವಿದ್ಯಾನಿಲಯ, 2007

11. ಡಾ. ಎಂ. ಜಮುನ, ಬೆಂಗಳೂರಿನ ಬಖೈರುಗಳು, ಪ್ರಸಾರಾಂಗ, ಬೆಂಗಳೂರು ವಿಶ್ವ ವಿದ್ಯಾನಿಲಯ, 2006
12. ಏಕಾಮ್ರ ದೀಕ್ಷಿತರ ವೀರಭದ್ರವಿಜಯ
13. ಡಾ. ಎಂ. ಜಮುನ, ಯಲಹಂಕ ನಾಡಪ್ರಭುಗಳ ಜಾನಪದ ಸಾಹಿತ್ಯ, ಪುಟ 411–412
14. ಕರ್ಲಮುಂಗಲಂ, ಶ್ರೀಕಂಠಯ್ಯ ಕೆಂಪೇಗೌಡ ಜಯಪ್ರಶಸ್ತಿ, ಪುಟ ಬೆಂಗಳೂರು
15. ಎಂ. ವಿ. ಕೃಷ್ಣರಾವ್, ಅದೇ ಪುಟ 156
16. ಪ್ರೊ. ಎಂ. ಎಚ್. ಕೃಷ್ಣಯ್ಯ ಮತ್ತು ಡಾ. ದೇವರಕೊಂಡಾರೆಡ್ಡಿ, ಪುಟ 128, ಅದೇ
17. ಎ.ಕ. IX, ಕುಣಿಗಲ್, ಶಾಸನ ಸಂಖ್ಯೆ 12
18. ಅದೇ
19. ಎ.ಕ. ಸಂಪುಟ, IX ಕುಣಿಗಲ್ ತಾಲ್ಲೂಕು, ಶೃಂಗಾರಸಾಗರ, ಶಾಸನ ಸಂಖ್ಯೆ 30, 1599
20. ಎ.ಕ. ಸಂಪುಟ, IX ಕುಣಿಗಲ್ ತಾಲ್ಲೂಕು, ಶೃಂಗಾರಸಾಗರ, ಶಾಸನ ಸಂಖ್ಯೆ 29, 1599
21. ಎ.ಕ. ಸಂಪುಟ, IX ನೆಲಮಂಗಲ ತಾಲ್ಲೂಕು, ಶೃಂಗಾರಸಾಗರ, ಶಾಸನ ಸಂಖ್ಯೆ III.
22. ಅದೇ
23. ಡಾ. ಪಿ. ವಿ. ಕೃಷ್ಣಮೂರ್ತಿ, ಅದೇ ಪುಟ 22
24. ಅದೇ
25. ಅದೇ ಪುಟ 27, 28
26. ಡಾ. ಎಂ. ಜಮುನ, ಯಲಹಂಕ ನಾಡಪ್ರಭುಗಳ ವಾಸ್ತು ಶಿಲ್ಪ–ಶಿಲ್ಪಕಲೆ, ಪುಟ 267, ಅದೇ
27. ಡಾ. ಎಸ್. ಎಸ್. ಗೋಪಾಲರಾವ್ ಮತ್ತು ಡಾ. ಡಿ. ಎನ್. ಯೋಗೀಶ್ವರಪ್ಪರವರು, ಡಾ. ಪಿ. ವಿ. ಕೃಷ್ಣಮೂರ್ತಿ ಅವರು ಮಾಹಿತಿಯನ್ನು ಮೌಖಿಕವಾಗಿ ವಿವರಿಸಿದರು.
28. ಡಾ. ಎಂ. ಜಮುನ, ಯಲಹಂಕ ನಾಡಪ್ರಭುಗಳ ವಾಸ್ತು ಶಿಲ್ಪ–ಶಿಲ್ಪಕಲೆ, ಪುಟ 270, ಅದೇ
29. ಅದೇ ಪುಟ 260
30. ಅದೇ ಪುಟ 168
31. ಅದೇ ಪುಟ 176
32. ಕ್ಷೇತ್ರ ಕಾರ್ಯ

18. ಬೆಂಗಳೂರಿನ ಹಿರಿಯ ಕೆಂಪೇಗೌಡ ಹಾಗೂ ವಂಶಿಕರ ಧಾರ್ಮಿಕ ದತ್ತಿಗಳು

ಡಾ. ತುಳಸಿರಾಮ್ ನಾಯಕ್

ಬೆಂಗಳೂರನ್ನು ನಿರ್ಮಿಸಿದ ಒಂದನೇ ಕೆಂಪೇಗೌಡ, ಯಲಹಂಕ ನಾಡ ಪ್ರಭುಗಳ ರಾಜವಂಶಸ್ಥ, ಕೆಂಪೇಗೌಡನ ವಂಶಸ್ಥರು ಮತ್ತು ಬೆಂಗಳೂರು ನಿರ್ಮಾಣದ ಬಗ್ಗೆ ದೊರೆಯುವ ಎಲ್ಲಾ ಚಾರಿತ್ರಿಕ ಮೂಲಗಳನ್ನು ಇಟ್ಟುಕೊಂಡು ಅಧ್ಯಯನ ನಡೆಸಿದ ನೇರ ಕೃತಿಗಳು ತೀರಾ ಕಡಿಮೆ. ಕೆಂಪೇಗೌಡ ವಂಶಸ್ಥರನ್ನು ಪಾಳೆಯಗಾರರೆಂದು ಹೊಯ್ಸಳರ ಸಾಮಂತರೆಂದು ಹಾಗೂ ನಂತರದಲ್ಲಿ ವಿಜಯನಗರದ ಅರಸರ ಸಾಮಂತರೆಂದೂ ಮತ್ತು ಮೈಸೂರು ಅರಸರ ಸಾಮಂತರೆಂದು ಗುರುತಿಸಲಾಗಿದೆ.[1]

ಯಲಹಂಕ ಪ್ರಭುಗಳು ವಿಜಯನಗರದರಸರ ರಾಜಕೀಯ ನೀತಿ, ಧಾರ್ಮಿಕ ಏಕಸಾಮ್ಯತೆಗಳನ್ನು ಅನುಸರಿಸಿದ್ದರೂ ವಿಜಯನಗರಕ್ಕಿಂತ ಭಿನ್ನವಾದ ಅನೇಕ ಉದಾತ್ತ ಅಂಶಗಳನ್ನು ಇವರ ಅಧಿಕಾರಾವಧಿಯಲ್ಲಿ ಕಾಣಬಹುದಾಗಿದೆ. ಆಕ್ರಮಣಶೀಲ ಮನೋಭಾವಕ್ಕೆ ಹೆಚ್ಚು ಒತ್ತು ಕೊಡುತ್ತಿರಲಿಲ್ಲ. ಬಿಜಾಪುರದ ಸುಲ್ತಾನನ ಷಾಜಿರಣದುಲ್ಲಾ ಸೇನಗಳ ಜೊತೆಯಲ್ಲಿ ಕೆಂಪೇಗೌಡನು ಶೀಘ್ರಗತಿಯಲ್ಲಿ ಎಚ್ಚೆತ್ತುಕೊಂಡು ವೀರಾವೇಶದಿಂದ ಸೆಣಸಿದನಾದರೂ ತೀವ್ರ ಸೋಲನ್ನು ಅನುಭವಿಸಬೇಕಾಯಿತು. ಈ ಯುದ್ಧದ ಬಗೆಗೆ ವಿವರಣೆ ನೀಡುತ್ತಾ ಕವೀಂದ್ರ ಪರಮಾನಂದರು ಕೆಂಪೇಗೌಡನ ವ್ಯಕ್ತಿತ್ವವನ್ನು ಹೀಗೆ ವಿವರಿಸುತ್ತಾರೆ. "ಕೆಂಪೇಗೌಡನು ಅತ್ಯಂತ ಚಾಣಾಕ್ಷ ಮತ್ತು ಧೈರ್ಯಶಾಲಿ ರಾಜನಾಗಿದ್ದನು. ಆದ್ದರಿಂದಲೇ ಅನೇಕ ದಿನಗಳ ಕಾಲ ಯುದ್ಧವನ್ನು ಮುಂದುವರಿಸಿ ಕೊಂಡು ಹೋಗಲು ಸಫಲನಾದರೂ ಕಡೆಗೆ ಬೆಂಗಳೂರು (ಬೆಂಗ್ಳೂರು) ಕೋಟೆಯನ್ನು ಬಿಟ್ಟು ಕೊಡಲೇ ಬೇಕಾಯಿತು. ಕೊನೆಗೂ ಯುದ್ಧವು ಒಪ್ಪಂದದಲ್ಲಿ ಅಂತ್ಯಗೊಂಡಿತು" ಎನ್ನುತ್ತಾರೆ. ಪ್ರಜಾಹಿತ ಕಾರ್ಯಗಳ ಶ್ರಮವಹಿಸಿದ ಇವರ ಸಂಕಲ್ಪ ಶಕ್ತಿಯ ಮತ್ತು ಆಡಳಿತವು ಧರ್ಮದ ತಳಹದಿಯ ಮೇಲೆ ನಿಂತಿದೆಯೆಂದರೆ ತಪ್ಪಾಗಲಾರದು. ಅಂತೆಯೇ ಇವರುಗಳ ಕಾಲದಲ್ಲಿ ಕಾರ್ಯರೂಪಗೊಂಡ ಹಲವು ದೇವಾಲಯಗಳು, ಅನ್ನಸತ್ರಗಳು, ಕೆರೆಗಳು, ತಟಾಕಗಳು, ಮಠ ಮತ್ತು ಅಗ್ರಹಾರಗಳು ಜನಪರವಾದ ಹಾಗೂ ಜನೋಪಯೋಗಿಯಾದ ಚಟುವಟಿಕೆಗಳಾಗಿದ್ದು, ಧಾರ್ಮಿಕ ಮನೋಭಾವದ ಹಿನ್ನೆಲೆಯಲ್ಲಿ ಬಿಂಬಿತವಾಗಿವೆ. ಸುಮಾರು 450 ವರ್ಷಗಳ ಕಾಲ ರಾಜ್ಯಾಡಳಿತ ಸೂತ್ರವನ್ನು ನಡೆಸಿದ ಯಲಹಂಕ ಪ್ರಭುಗಳ ಕಾಲದ ಧಾರ್ಮಿಕ ಪರಿಸ್ಥಿತಿ ಹಾಗೂ ಕೊಡುಗೆಗಳೂ ದಾಖಲೆಗಳ ಪ್ರಕಾರ ಮೊದಲನೇ ಕೆಂಪೇಗೌಡನ ಕಾಲದಿಂದ ಆರಂಭಗೊಳ್ಳುತ್ತವೆ. ಅಂದರೆ, ಈ ಹಿಂದಿನ ರಣಭೈರೇಗೌಡ, ಜಯಗೌಡ, ಗಿಡ್ಡೇಗೌಡ, ಕೆಂಪನಂಜೇಗೌಡರ ಕಾಲಕ್ಕೆ ಧಾರ್ಮಿಕ ಪರಿಸ್ಥಿತಿಯನ್ನು ಕುರಿತಂತೆ ಲಿಖಿತ ದಾಖಲೆಗಳ ಉಪಲಬ್ಧದ ಕೊರತೆಯ ಕಾರಣ ಬೆಂಗಳೂರು ಕೆಂಪೇಗೌಡನ ಆಳ್ವಿಕೆಯ ಕಾಲದಿಂದ ಮಾತ್ರ ದಾಖಲಿಸಬೇಕಾಗುತ್ತದೆ. ಈತನ ಕಾಲದಲ್ಲಿ ನಿರ್ಮಿತಗೊಂಡ ಬೆಂಗಳೂರಿನ ಗವಿಗಂಗಾಧರೇಶ್ವರ ಬಸವನಗುಡಿಯಲ್ಲಿರುವ ಸುಂದರ ಸಾಲಂಕೃತ ಬಸವ, ಬೃಹತ್ ಗಣಪತಿ, ಆಂಜನೇಯ, ನಂದೀಶ್ವರ, ಪ್ರಳಯ ಕಾಲದ ವೀರಭದ್ರ ಮನೋಹರವಾದ ರಚನೆಗಳಾಗಿವೆ.

ಭೈರವ ಉಪಾಸಕನಾದ ಕೆಂಪೇಗೌಡನು ಶಿವನ ಆರಾಧಕನಾದನೆಂದೂ, ಅಂತಾಗಿ ಶಿವದೇವಾಲಯವನ್ನು ನಿರ್ಮಿಸಿದನೆಂದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಇದಕ್ಕೆ ಪೂರಕವೆಂಬಂತೆ ಮಾಗಡಿಯ ನೈರುತ್ಯಕ್ಕಿರುವ

ಕೆಂಪಸಾಗರ ಗ್ರಾಮದಲ್ಲಿ ಒಂದು ವೀರಶೈವ ಮಠದ ನವರಂಗದ ಒಂದು ಕಂಬದ ಮೇಲೆ ಒಂದು ಲಿಂಗ ಮಡಿಕೆಯಿಂದ ಹೊರಬರುತ್ತಿರುವಂತೆ ಕೆತ್ತಿಸಿದ್ದು, ಅದರ ಮುಂದುಗಡೆಯ ಕಂಬದಲ್ಲಿ ಕೆಂಪೇಗೌಡನ ಪ್ರತಿಕೃತಿಯನ್ನು ಕೆತ್ತಲಾಗಿದೆ. ಭಕ್ತಿ ದ್ಯೋತಕವಾಗಿ ಇದನ್ನು "ಸುರ ಬಾಂಡೇಶ್ವರ" ಎಂದು ಕರೆಯಲಾಗಿದೆ.

ಗೌಡನು ಬೆಂಗಳೂರಿನ ಕೋಟೆಯ ದಕ್ಷಿಣ ದಿಗ್ಭಾಗಕ್ಕೆ ಕಲ್ಯಾಣ ಬಸವೇಶ್ವರನ ಗುಡಿಯನ್ನು ಅದರ ಮುಂಭಾಗದಲ್ಲಿ ಒಂದು ಸುಂದರವಾದ ಕೊಳವನ್ನು ನಿರ್ಮಿಸಿದುದ್ದಾಗಿ ಡಾ. ಗುಂಡಪ್ಪ ದೀಕ್ಷಿತರು ತಿಳಿಸುತ್ತಾರೆ. ಮುಂದೆ ಕ್ರಿ. ಶ. 1690ರಲ್ಲಿ ಮೂಲರಂಗಯ್ಯನೆಂಬ ಪಾರುಪತ್ಯಗಾರನ ಮೂಲಕ ಮೈಸೂರಿನ ಚಿಕ್ಕದೇವರಾಜ ಒಡೆಯುರು ಈ ದೇಗುಲವನ್ನು ವೆಂಕಟರಮಣಸ್ವಾಮಿ ದೇವಾಲಯವನ್ನಾಗಿ ಪರಿವರ್ತಿಸಿರುತ್ತಾರೆ. ಹಲಸೂರಿನ ಸೋಮೇಶ್ವರ, ರಾಮಗಿರಿಯ ರಾಮದೇವ ಗುಡಿಯ ರಂಗಮಂಟಪ, ಹುತ್ರಿ ದುರ್ಗದ ಬುಡದಲ್ಲಿ ಆದಿನಾರಾಯಣ, ವೀರಭದ್ರ ಹಾಗೂ ಆಂಜನೇಯ ದೇವಾಲಯಗಳು ಕೆಂಪೇಗೌಡನ ಕಾಲದಲ್ಲಿ ನಿರ್ಮಾಣಗೊಂಡವು. [2] ಹಾಗೂ ಅವು ಪರಧರ್ಮ ಸಹಿಷ್ಣುತೆಯನ್ನು ವ್ಯಕ್ತಪಡಿಸುತ್ತವೆ.

ಬೆಂಗಳೂರಿನ ಸಂಪಂಗಿಕೆರೆ, ಧರ್ಮಾಂಬುಧಿ ಕೆರೆ, ಜಕರಾಯನ ಕೆರೆ, ಕೆಂಪಾಂಬುದಿ ಕೆರೆ ಹಾಗೂ ಕಾರಂಜಿ ಕೆರೆ ಕಟ್ಟಿಸಿ ಜನರಿಗೆ ಹಾಗೂ ಜಾನುವಾರುಗಳಿಗೆ ಮತ್ತು ವ್ಯವಸಾಯಕ್ಕೆ ಅನುಕೂಲವಾಗುವ ಹಾಗೆ ಹಿರಿಯ ಕೆಂಪೇಗೌಡನು ಮಾಡಿಸಿದ್ದನು.

ಕ್ರಿ. ಶ. 1550ರಲ್ಲಿ ಶಿವಗಂಗೆಯು ಕೆಂಪೇಗೌಡನ ಸ್ವಾಧೀನವಾಯಿತು. ಶಿವಗಂಗಾ ಗಿರಿಯ ಭವ್ಯ ಪ್ರಕೃತಿಯ ಸೌಂದರ್ಯ ಮನಮಿಡಿದುದರ ಫಲವಾಗಿ ಭಕ್ತಿಪೂರ್ವಕವಾಗಿ ಗಿರಿಯ ಸುತ್ತೆಲ್ಲಾ ಹಲವು ಗುಡಿ ಗೋಪುರಗಳನ್ನು ಅನ್ನಸತ್ರಗಳನ್ನು ಕಟ್ಟಿಸಿ, ಆ ಗುಡಿಗಳಲ್ಲಿ ನಿತ್ಯಾರಾಧನೆಗೆ, ಪೂಜೆ ಪುನಸ್ಕಾರಗಳಿಗೆ ಆದಾಯ ಬರುವಂತೆ ಸೂಕ್ತ ವ್ಯವಸ್ಥೆ ಮಾಡಿದನು. ಅಲ್ಲದೇ ಮೂಲ ದೇವಾಲಯ ಶಿಥಿಲಗೊಂಡಿದ್ದರಿಂದ ಜೀರ್ಣೋದ್ಧಾರ ಮಾಡಿಸಿದ್ದುದಲ್ಲದೇ ದೇಗುಲದಲ್ಲಿ ವಿಶಾಲವಾದ ಸಭಾಂಗಣವನ್ನು ಕಟ್ಟಿಸಿಕೊಟ್ಟನು. ಈಗಲೂ ಸಹ ಈ ಸಭಾಂಗಣವನ್ನು ಕೆಂಪೇಗೌಡ ಹಜಾರವೆಂದೇ ಕರೆಯುತ್ತಾರೆ. ಇಲ್ಲಿನ ಗಂಗಾಧರೇಶ್ವರ ಗುಡಿಯಲ್ಲಿರುವ ಒಂದು ಮತ್ತು ಮೂರನೆಯ ಘಂಟೆಯ ಶಾಸನಗಳಲ್ಲಿ "ಚೆಲುವನಹಳ್ಳಿಯ ಜ್ಞಾನಮೂರ್ತಿ ದೇವರು ತಮ್ಮ ಗುರುಗಳೆಂದು" ಭಕ್ತಿಪೂರ್ವಕವಾಗಿ ಸ್ಮರಣೆ ಮಾಡಿರುವ ದಾಖಲೆಗಳಿವೆ. ಸ್ವತಃ ಹಿರಿಯ ಕೆಂಪೇಗೌಡರೆ ಅರ್ಪಿಸಿರುವ ಇಲ್ಲಿನ ದೇವಾಲಯದ ದೊಡ್ಡ ಗಂಟೆಯೊಂದರ ಮೇಲೆ "ಸಂಕ್ರಾಂತಿಯ ಪುಣ್ಯ ಕಾಲದಲ್ಲಿ ಶ್ರೀಮಾನ್ ಮಹಾದೇವ ದಕ್ಷಿಣ ವಾರಣಾಸಿ ಶ್ರೀ ಕಕ್ಕುದ್ಗಿರಿವಾಸ ಶ್ರೀ ಗಂಗಾಧರ ಸ್ವಾಮಿಯ ಶ್ರೀಪಾದಕ್ಕೆ ಶ್ರೀಮಾನ್ ಮಹಾಯಲಹಂಕ ನಾಡಪ್ರಭು ಕೆಂಪನಾಚೇಗೌಡರ ಮಕ್ಕಳು ಕೆಂಪೇಗೌಡರು ತಮಗೆ ಪುತ್ರ, ಪೌತ್ರ ಪಾರಂಪರ್ಯ ಅಭಿವೃದ್ಧಿಯಾಗಲೆಂದೂ ತಮ್ಮ ಮಾತಾಪಿತೃಗಳಿಗೆ ಮೋಕ್ಷವಾಗಲೆಂದು ಅರ್ಪಿಸಿದ ಗಂಟೆ"[3] ಎಂದೇ ಉಲ್ಲೇಖಿಸಲಾಗಿದೆ. ಈ ಗಂಟೆಯು ಶಾಸನವನ್ನು ಶಿವಗಂಗೆಯ ಕಾಶ್ಯಪ ಗೋತ್ರದ ಕೇತಿಯ ಒಡೆಯರ ಮಕ್ಕಳು ನಮಃಶಿವಾಯ ಒಡೆಯರು ಯೆರೆದುದಾಗಿ ತಿಳಿದು ಬರುತ್ತದೆ.

ಶಿವಗಂಗೆಯ ಬೆಟ್ಟದ ಮೇಲೆ ಗಂಗಾಧರೇಶ್ವರನ ದೇವಸ್ಥಾನದ ಗವಿಯ ಒಳಗೆ ಕೆಂಪೇಗೌಡನ ಕಂಚಿನ ಪ್ರತಿಮೆಯಿದೆ. ಈ ಪ್ರತಿಮೆಯ ಪೀಠ ಭಾಗದಲ್ಲಿರುವ ಶಾಸನದಲ್ಲಿ "ಬೆಂಗಳೂರ ಕೆಂಪನಾಚೇಗೌಡರ ಕುಮಾರ ಕೆಂಪಯ್ಯಗೌಡನು ಗಂಗಾಧರಸ್ವಾಮಿಯ ಪಾದಕ್ಕೆ ಸದಾ ನಮಸ್ಕಾರ"[4] ಎಂದೇ ಉಲ್ಲೇಖಿಸಲಾಗಿದ್ದು, ಗೌಡನಿಗೆ ಗಂಗಾಧರ ಸ್ವಾಮಿಯ ಮೇಲೆ ಇದ್ದ ಅಪಾರ ಭಕ್ತಿಯ ಸಂಕೇತಕ್ಕೆ ಈ ರಚನೆ ಸಾಕ್ಷಿಯಾಗಿದೆ.

ಮತ್ತೊಂದು ತಾಮ್ರ ಶಾಸನದಲ್ಲಿ "ಚತುರ್ಥ ಗೋತ್ರದ ಯಲಹಂಕ ನಾಡ ಪ್ರಭುಗಳಾದ ನಂಜೇಗೌಡರ ಪೌತ್ರರಾದ ಕೆಂಪನಂಜೇಗೌಡರ ಪುತ್ರರಾದ ಹಿರಿಯ ಕೆಂಪೇಗೌಡರು ಶ್ರೀವತ್ಸ ಗೋತ್ರದ ಅಪಸ್ತಂಭ ಸೂತ್ರದ

ಯಜುಶಾಖಾಧ್ಯಾಯಿಗಳಾದ ವರದ ಅಯ್ಯಂಗಾರರ ಪೌತ್ರರಾದ ತಿಮ್ಮಪ್ಪಯ್ಯನವರ ಪುತ್ರರಾದ ತಿರುಮಲ್ಲಯ್ಯನವರಿಗೆ– ಬೆಂಗಳೂರು ಸೀಮೆಯ ವೊರತೊರು ಹೋಬಳಿಗೆ ಸೇರಿ ವೊರತೊರು, ಸೋರುಹುಣಿಸೆ, ಹಾರುವಹಳ್ಳಿ ಈ ಮೂರು ಗ್ರಾಮಗಳನ್ನು ಶಿವಗಂಗೆಯ ಶ್ರೀ ಗಂಗಾಧರೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಪರಮೇಶ್ವರಾರ್ಪಣ ಬುಧ್ಧಿಯಿಂದ ಸರ್ವಮಾನ್ಯವಾಗಿ ಅಗ್ರಹಾರದ ಗ್ರಾಮಗಳನ್ನಾಗಿ ದಾನ ಮಾಡಿದ"[5] ವಿಚಾರಗಳಿವೆ.

ಇಮ್ಮಡಿ ಕೆಂಪೇಗೌಡನು (ಕ್ರಿ. ಶ. 1569–1638) ಸಹ ತನ್ನ ತಾತನಂತೆ ಧಾರ್ಮಿಕ ಸಹಿಷ್ಣುತೆಯನ್ನು ಮೆರೆದನು. ಈತನ ಕಾಲದಲ್ಲಿ ಹೆಚ್ಚಿನ ಶಾಸನಗಳು ರಚಿತವಾಗಿದ್ದು, ಧಾರ್ಮಿಕ ಅಂಶಗಳಿಂದ ಕೂಡಿದೆ. ಈತನು ಸಹ ಅನೇಕ ದೇವಾಲಯಗಳನ್ನು ಅನ್ನಸತ್ರಗಳು, ಮಠಗಳು ಮತ್ತು ಅಗ್ರಹಾರಗಳನ್ನು ಕಟ್ಟಿಸಿದ್ದಾನೆ. ಈತನು "ಚಿಕ್ಕರಾಯ"ನೆಂದೇ ಪ್ರಸಿದ್ಧನಾಗಿದ್ದ. ಇಮ್ಮಡಿ ಕೆಂಪೇಗೌಡನು ಅಧಿಕಾರಕ್ಕೆ ಬಂದಾಗ ವಿಜಯನಗರದ ಪರವಾಗಿ ವೆಂಕಟಪತಿರಾಯನು ಪೆನುಗೊಂಡೆಯ ಮಂಡಲಾಧಿಪತಿಯಾಗಿ ಆಡಳಿತ ನಡೆಸುತ್ತಿದ್ದನು. ದೈವಭಕ್ತನಾಗಿದ್ದ ಈತ ಶಿವಮತಾಭಿಮಾನಿಯಾಗಿದ್ದು, ತಾನು ಸದಾಶಿವ ಗೋತ್ರಕ್ಕೆ ಸೇರಿದವನೆಂದು ಈತನ ಶಾಸನಗಳಲ್ಲಿಯೇ ಉಲ್ಲೇಖವಿದೆ. ಮಾಗಡಿಯ ಸೋಮೇಶ್ವರ ದೇವಾಲಯಕ್ಕೆ ಶಕ 1592ರಲ್ಲಿ ಮಾಗಡಿ ಸೀಮೆಯ ಹಂಚಿಕುಪ್ಪೆ, ಪೋತ, ಕೆಂಪಾಪುರಗಳನ್ನು ದಾನವಾಗಿ ನೀಡಿರುವ ಈ ಶಾಸನದಲ್ಲಿ ಸದಾಶಿವಗೋತ್ರದ ಯಲಹಂಕ ನಾಡಪ್ರಭುಗಳಾದ ಕೆಂಪನಂಜೇಗೌಡರ ಹಿರಿಯ ಕೆಂಪೇಗೌಡರ ಪುತ್ರರಾದ ಇಮ್ಮಡಿ ಕೆಂಪೇಗೌಡರ ಬಿನ್ನಹ ಎಂದೇ ಪ್ರಸ್ತಾಪಿಸಲಾಗಿದೆ.

ಬೆಂಗಳೂರಿನ ಕೆಂಪಾಪುರ ಹಾಗೂ ಹೆಸರು ಘಟ್ಟದ ಬಳಿಯ ಐಗಂಡಪುರ ಅಗ್ರಹಾರಗಳು ಈತನ ಕಾಲದಲ್ಲಿ ನಿರ್ಮಾಣವಾಗಿದ್ದವು. ಕೆಂಪಾಪುರ ಅಗ್ರಹಾರದ ದಾನಶಾಸದಲ್ಲಿ ಈ ಅಗ್ರಹಾರಗಳನ್ನು 48 ಮಂದಿಗೆ ದಾನ ನೀಡಿದ ವಿವರಗಳಿವೆ. ಇದರಲ್ಲಿ 47 ಮಂದಿ ನಾನಾ ಗೋತ್ರ, ಸೂತ್ರ, ಸಂಪ್ರದಾಯಗಳಿಗೆ ಸೇರಿದ ಬ್ರಾಹ್ಮಣ ವಿದ್ವಾಂಸರಾದರೆ, ಒಬ್ಬ ಮಾತ್ರ ತುರಿಯ ಜಾತಿಯ ಧರ್ಮಿಷ್ಠನಾದ ವಿರೇಶನೆಂಬುವವನಿಗೆ ಭೂದಾನ ನೀಡಲಾಗಿದೆ. ಈತ ಶ್ರೀರಂಗಪಟ್ಟಣದ ರಾಜ ಸಮ್ಮುಖದಲ್ಲಿ ನಡೆದ ವಿದ್ವತ್ ಸಭೆಯಲ್ಲಿ ರಾಜನಿಂದ ಬಹುಮಾನಿತನಾಗಿದ್ದುದಾಗಿ ತಿಳಿದುಬರುತ್ತದೆ.

ಇಮ್ಮಡಿ ಕೆಂಪೇಗೌಡನು ಹಲಸೂರಿನ ಸೋಮೇಶ್ವರ ದೇವಾಲಯವನ್ನು ಸಮಗ್ರವಾಗಿ ಪುನರುಜ್ಜೀವನಗೊಳಿಸಿದ್ದುದ್ದಲ್ಲದೆ, ಇದಕ್ಕೆ ಒಂದು ಭವ್ಯವಾದ ಗೋಪುರವನ್ನು ಕಟ್ಟಿಸಿದ ಕೀರ್ತಿಯೂ ಈತನಿಗೆ ಸಲ್ಲುತ್ತದೆ. ಈ ದೇವಾಲಯದ ಹೊರಗೋಡೆಯ ಮೇಲೆ ಕೆತ್ತಿರುವ ಗಿರಿಜಾ ಕಲ್ಯಾಣದ ಚಿತ್ರಗಳು ಪಕ್ಕದ ಕಾಮಾಕ್ಷಿ ಅಮ್ಮನವರ ಪ್ರತ್ಯೇಕಗುಡಿ ಇವೆಲ್ಲಾ ಮನೋಜ್ಞವಾಗಿವೆ. ಇಲ್ಲಿ ದಿನವಹಿ ನಡೆಯುವ ನಿತ್ಯ ಪಡಿತರ ಪೂಜೆ, ದೀಪಾರಾಧನೆ, ಆಗಾಗ್ಗೆ ನಡೆಯುವ ಉತ್ಸವಗಳು ವರ್ಷಂಪ್ರತಿ ನಡೆಯುವ ರಥೋತ್ಸವಗಳ ಖರ್ಚುವೆಚ್ಚಗಳ ಸಲುವಾಗಿ ಹಲಸೂರು ಹೋಬಳಿಗೆ ಸೇರುವ 33 ಹಳ್ಳಿಗಳಲ್ಲಿ ಉತ್ಪನ್ನವಾಗುವ ಬೆಳೆಯಲ್ಲಿ ಖಂಡುಗ ಒಂದಕ್ಕೆ ಒಂದು ಕೊಳಗದ ದವಸದಂತೆ ಸೋಮೇಶ್ವರನ ದೇವಾಲಯಕ್ಕೆ ಕಟ್ಟು ನಿಟ್ಟಾಗಿ ಒಪ್ಪಿಸುವಂತೆ ಇಮ್ಮಡಿ ಕೆಂಪೇಗೌಡನು ರಾಜಾಜ್ಞೆ ಮಾಡಿದ್ದುದಾಗಿ ತಿಳಿದುಬರುತ್ತದೆ. ಇವೆಲ್ಲದರ ಸ್ಮರಣಾರ್ಥವಾಗಿ ಹಲಸೂರಿನ ಸೋಮೇಶ್ವರನ ದೇವಾಲಯದಲ್ಲಿ ಇಮ್ಮಡಿ ಕೆಂಪೇಗೌಡನ ಭಕ್ತ ವಿಗ್ರಹ ಇರುವುದನ್ನು ಇಂದಿಗೂ ನೋಡಬಹುದು.

ಈತನ ಕಾಲದ ಮತ್ತೊಂದು ಮುಖ್ಯ ವಿಷಯವೇನೆಂದರೆ, ಬೆಂಗಳೂರು ಪಟ್ಟಣದ ಪೌರೋಹಿತ್ಯದ ಹಕ್ಕನ್ನು ವೇದಟ್ಲೆ ಅನಂತ ಭಟ್ಟ ಎಂಬಾತನಿಗೆ ದಾನ ನೀಡಿದ್ದುದು. ಈ ದಾನ ಶಾಸನದ ಮುಖ್ಯಾಂಶಗಳೆಂದರೆ, ಶಕ 1619ರಲ್ಲಿ ಇಮ್ಮಡಿ ಕೆಂಪೇಗೌಡನು ಕೌಂಡಿನ್ಯ ಗೋತ್ರದ ಅಪಸ್ತಂಭ ಸೂತ್ರದ ಯಜುಶಾಖಾಧ್ಯಾಯಗಳಾದ

ದೇವರಾಯ ಪಟ್ಟಣಕ್ಕೆ ಪ್ರತಿ ನಾಮವಾದ ಬೆಂಗಳೂರಿನ ವಾಸಿಗಳಾದ ವೇದಟ್ಲೆ ಅನಂತ ಭಟ್ಟರ ಪೌತ್ರರಾದ ಸಂಗನಭಟ್ಟರ ಪುತ್ರರಾದ ಅನಂತಭಟ್ಟರಿಗೆ ಬರೆಸಿಕೊಟ್ಟ ಪುರೋಹಿತ ದಾನ ಧರ್ಮ ಶಾಸನ...ಸಂಗಮೇಶ್ವರ ಗದ್ದುಗೆಯ ಪೂಜಾ ಕಾಲದಲ್ಲಿ ಇವರ ಕೋರಿಕೆಯ ಮೇರೆಗೆ ಇಮ್ಮಡಿ ಕೆಂಪೇಗೌಡನು ಅನಂತಭಟ್ಟರಿಗೆ ಬೆಂಗಳೂರು ಕಸಬೆ ಒಳಗೆ ಇರುವ ದೇಶದವರು ಮುಂತಾದ 18 ಪಣಸ್ತರ ಪೌರೋಹಿತ್ಯವನ್ನು ಮುಂದೆ ಈ ಗ್ರಾಮವು ವೃದ್ಧಿಯಾಗತಕ್ಕ ಬಗೆಗೆ ಯಂತ್ರೋದ್ಧಾರಣೆ ಮಾಡಿಸಿ ಈ ಊರಿನ ಚತುರ್ದಿಕ್ಕುಗಳಿಗೂ ಶಿಖರಗಳನ್ನು ನಿರ್ಮಿಸಿ ಎಲ್ಲ ಕಟ್ಟು ನಿಬಂಧನೆ ಮಾಡಿಸಿ, ಇಲ್ಲಿನ ಪೌರೋಹಿತ್ಯಾ ವಿಶಿಷ್ಟವನ್ನು ನಿಮ್ಮ ಪುತ್ರ ಪೌತ್ರ ಪಾರಂಪರ್ಯ ವಾಗಿ ಅನುಭವಿಸಿಕೊಂಡು ಬರುವುದೆಂದು ಬರೆಸಿಕೊಟ್ಟ ಪುರೋಹಿತ ಧರ್ಮಶಾಸನ ಇದಾಗಿದೆ. ಅಂದರೆ ಪ್ರಾಚೀನ ಬೆಂಗಳೂರಿನ ಗುಡಿ ಗೋಪುರಗಳನ್ನು ನಿರ್ಮಾಣ ಮಾಡಿಸಿದವನು ಇಮ್ಮಡಿ ಕೆಂಪೇಗೌಡನೆ ಎಂಬುದಾಗಿ ಮೇಲ್ಕಂಡ ಶಾಸನದಲ್ಲಿ ಉಲ್ಲೇಖವಾಗಿರುವುದು ಗಮನಾರ್ಹ.

ನಗರದ ಚಿಕ್ಕಪೇಟೆಯ ತೂಗದ ಅಚ್ಚಪ್ಪನ ಮನೆಯ ಮಗುಲಿಗೆ ಸಿಕ್ಕಿದ ತೆಲುಗು ಶಾಸನದ ಪಾಠ ಹೀಗಿದೆ:

ಮತು ಯಲಹಂಕ
ನಾಡ ಪ್ರಭುವುಲೈನ ಯಿಮ್ಮಡಿ ಕೆಂ
ಪಯಗೌನಿ ಅಯವಾರಿಕಿ ಆ ಚಂದ್ರಾ
ರ್ಕಂಗಾನು ಪುತ್ರ ಪೌತ್ರ ಪಾರಂಪಾರ್ಯಮುಗ ಧ
ರ್ಮಂ ಕೊರಕು ಗುಜ್ಜರಿ ವಿಶ್ವನಾಥು
ಕಟ್ಟಿಂಚಿನ ಧರ್ಮಶಾಲಾ ಮಠಂ
ಶ್ರೀಮುಖ ಸಂವತ್ಸರದ ವೈಶಾಖ ಶು
ಧ ತ್ರಿತಿಯ್ಯಂದು....

ಇಲ್ಲಿ ಇಮ್ಮಡಿ ಕೆಂಪೇಗೌಡರ ಅಯ್ಯನವರಿಗೆ ಅಂದರೆ ಕುಲಗುರುಗಳಿಗೆ ಧರ್ಮಾರ್ಥವಾಗಿ ಗುಜ್ಜರಿ ವಿಶ್ವನಾಥ ಎಂಬುವವನು ಧರ್ಮಶಾಲಾ ಮಠವನ್ನು ಕಟ್ಟಿಸಿಕೊಟ್ಟ ವಿವರಗಳಿವೆ. ಹಾಗಾದರೆ ಇಲ್ಲಿ ಬರುವ ಇಮ್ಮಡಿ ಕೆಂಪೇಗೌಡನ ಕುಲಗುರು ಯಾರು ಎಂಬುದು ಪ್ರಶ್ನೆ? ಇತ್ತೀಚೆಗೆ ಬೆಳಕು ಕಂಡಿರುವ ಕ್ರಿ. ಶ. 1606ರ ಉಮ್ಮಳಾಪುರದ ಶಾಸನ ಒಂದರಲ್ಲಿ ಯಲಹಂಕ ನಾಡ ಪ್ರಭುವಾದ ಇಮ್ಮಡಿ ಕೆಂಪೇಗೌಡನು ಭಾರಧ್ವಾಜ ಗೋತ್ರದ ಪಡಿವಿಡಿ ವರ್ಗದ ಕೊಲ್ಲಿಪಾಕೆಯ ರೇವಣ ಸಿದ್ದೇಶ್ವರ ಸಂಪ್ರದಾಯದವರಾದ–ಗುಮ್ಮಳಾಪುರ ಸಿಂಹಾಸನದ ಕರ್ತೃವಾದ ನಂಜೇದೇವರು ಅಯ್ಯನವರು ಪೌತ್ರರಾದ ಚೆನ್ನಮಲ್ಲಿಕಾರ್ಜುನದೇವರ ಪುತ್ರರಾದ ನಂಜೇದೇವಪ್ಪ ಅಯ್ಯನವರಿಗೆ ಮೇಲೂರಿಗೆ ಸೇರಿದ ಗುಮ್ಮಳಾಪುರವನ್ನು ದಾನವಾಗಿ ನೀಡಿದ್ದ ವಿವರಗಳು[6] ಇವೆ. ಇಲ್ಲಿ ಉಲ್ಲೇಖವಾಗಿರುವ ಗುಮ್ಮಳಾಪುರದ ಮಠವು ಈಗಲೂ ಅಸ್ತಿತ್ವದಲ್ಲಿದ್ದು, ಇದು ವೀರಶೈವ ಗುರುವರ್ಗಕ್ಕೆ ಸೇರಿದ ಮಠವಾಗಿದೆ. ಇಮ್ಮಡಿ ಕೆಂಪೇಗೌಡನು ಇಲ್ಲಿ ಪ್ರಸ್ತಾಪವಾಗಿರುವ ನಂಜೇದೇವಪ್ಪನವರಿಗೆ ಭಕ್ತಿ ಗೌರವವುಳ್ಳವನಾಗಿದ್ದುದು ಈ ಶಾಸನದಿಂದ ವ್ಯಕ್ತವಾಗಿದೆ. ಹೀಗಾಗಿ ಬೆಂಗಳೂರಿನ ಗುಜರಿ ವಿಶ್ವನಾಥನ ಶಾಸನದಲ್ಲಿ ಬರುವ ಇಮ್ಮಡಿ ಕೆಂಪೇಗೌಡನ ಅಯ್ಯನವರು ಹಾಗೂ ಗುಮ್ಮಳಾಪುರದ ಶಾಸನದಲ್ಲಿ ಬರುವ ನಂಜೇದೇವಪ್ಪ ಅಯ್ಯನವರು ಒಬ್ಬರೇ ಎಂದು ಊಹಿಸಲು ಅವಕಾಶವಿದೆ. ಅಂದರೆ ಈ ನಂಜೇದೇವಪ್ಪ ಅಯ್ಯನವರು ಒಬ್ಬರೇ ಎಂದು ಊಹಿಸಲು ಅವಕಾಶವಿದೆ. ಅಂದರೆ, ಈ ನಂಜೇದೇವಪ್ಪ ಅಯ್ಯನವರು ಇಮ್ಮಡಿ ಕೆಂಪೇಗೌಡನ ಮೇಲೆ ವಿಶೇಷವಾದ ಪ್ರಭಾವ ಬೀರಿದ್ದಿರ ಬಹುದಾಗಿದೆ. ಆದಕಾರಣ ಮೇಲ್ಕಂಡ ಶಾಸನಗಳಲ್ಲಿನ ದತ್ತಿಗಳು ಹುಟ್ಟಿಕೊಂಡಂತಿವೆ.

ಇಮ್ಮಡಿ ಕೆಂಪೇಗೌಡನ ಶೌರ್ಯ ಸಾಹಸಗಳನ್ನು, ಕೀರ್ತಿ ಪ್ರತಿಷ್ಠೆಗಳನ್ನು ಬಿಂಬಿಸುವ "ಕೆಂಪೇಗೌಡನ ಜಯಪ್ರಶಸ್ತಿಯು" ಐತಿಹಾಸಿಕವಾಗಿ ಅನೇಕ ಸಂಗತಿಗಳನ್ನು ಹೊರಚೆಲ್ಲುತ್ತದೆ. ಈ ಪುಟ್ಟ ಕೃತಿಯು ಎರಡು ಭಾಗಗಳಿದ್ದು ಮೊದಲನೆಯ ಭಾಗದಲ್ಲಿ 19 ಪದ್ಯಗಳು, ಎರಡನೆಯ ಭಾಗದಲ್ಲಿ 39 ಪದ್ಯಗಳು ಇವೆ. ಮೊದಲ ಭಾಗದ ಕೊನೆಯ ಪದ್ಯದಲ್ಲಿ "...ಶ್ರೀ ಸದ್ಗುರು ನಂಜೇಶ್ವರನ ಕೃಪೆಯು ಸಮಾಪ್ತಾ ಎಂದು ಹೇಳಿ" ಸುಖದಿ ಸುಸ್ಥಿರ ಬಾಳು ಸುಪ್ರತಾಪಾನುಚಯ ಕೆಂಪ ಧರಣೀಶನಣುಗ, ಯಿಮ್ಮಡಿ ಕೆಂಪ ಭೂಪಾಲ!![7] ಎಂದು ಮುಕ್ತಾಯವಾಗಿದೆ. ಇದೇ ರೀತಿ ಎರಡನೇ ಭಾಗದ 37ನೇ ಪದ್ಯದಲ್ಲಿ "ಧರೆಯೊಳೆಲಹಂಕದ ನಾಡ ವರಶಾನೋಧಾರ! ವರ ಕಕುದ್ಗಿರಿ ಗಂಗೇಶನ ಭಕ್ತ ಮಂದಾರಾ ! ಹರುಷದಲ್ಲಿ ಹಲಸೂರವಾಸ ಸೋಮೇಶ್ವರನ! ಕರುಣದಲಿ ವರ ಬೆಂಗಳೂರಾ ಸ್ಥಳದಲ್ಲಿ! ಮೆರೆವಾ ದೊಡ್ಡ ಬಸವೇಶ್ವರನ ದಯದಿ!! ಗುರು ನಂಜೇಶ್ವರರ ಕೃಪೆಯನು ಸಲಿಪಡೆದು ! ಹಿರಿಯ ಕೆಂಪ ಭೂವರನ ಚೆನ್ನಾಂಬಿಯ ಕುಮಾರ! ನೀ ಬಾಳು ! ಶುಭಕರದಿ ರವಿಚಂದ್ರರುಳ್ಳ ನಕಾ! ಕೆಂಪಾ! ಧರಣಿಪತಿನೀ ವಿಭೀಷಣಪಟ್ಟವಾಳೋ ! ಎಂದು ಮುಕ್ತಾಯವಾಗಿದೆ.

ಈ ಕಿರುಕಾವ್ಯದ ಎರಡು ಭಾಗಗಳ ಅಂತ್ಯದ ಪದ್ಯದಲ್ಲಿ ಉಲ್ಲೇಖವಾಗಿರುವ ಶ್ರೀ ಗುಮ್ಮಳಾಪುರದ ಸದ್ಗುರು ನಂಜೇಶ ಮೇಲ್ಕಂಡ 1606ರ ಗುಮ್ಮಳಾಪುರದ ಶಾಸನ ಭಾಗದಲ್ಲಿ ಉಲ್ಲೇಖವಾಗಿರುವ ಗುಮ್ಮಳಾಪುರದ ನಂಜೇದೇವಪ್ಪ ಅಯ್ಯನವರು, ಇವರಿಬ್ಬರೂ ಒಬ್ಬರೇ ಎಂಬುದು ಖಚಿತವಾಗುತ್ತದೆ. ಜೊತೆಗೆ ಇಮ್ಮಡಿ ಕೆಂಪೇಗೌಡನ ಕುಲಗುರುವು ಇದೇ ಸದ್ಗುರು ನಂಜೇದೇವಪ್ಪ ಅಯ್ಯನವರೇ ಎಂಬುದು ಸ್ಪಷ್ಟವಾದಂತಾಗಿದೆ. ಜೊತೆಗೆ ಈ ನಂಜೇದೇವಪ್ಪ ಅಯ್ಯನವರೇ ಸದ್ಗುರು ನಂಜೇಶ್ವರನೆಂಬ ಅಂಕಿತದಲ್ಲಿ ತಮ್ಮ ಶಿಷ್ಯ ಭೂಪಾಲ ಇಮ್ಮಡಿ ಕೆಂಪೇಗೌಡನ ಕುರಿತಾದ "ಕೆಂಪೇಗೌಡನ ಜಯ ಪ್ರಶಸ್ತಿ"ಯನ್ನು ರಚಿಸಿದ್ದಿರಬಹುದಾಗಿ ತರ್ಕಿಸಲು ಅವಕಾಶವಿದ್ದು, ಈ ತರ್ಕ ಸತ್ಯಕ್ಕೆ ಹೆಚ್ಚು ಹತ್ತಿರವಿದೆ ಎಂದರೆ ತಪ್ಪಾಗಲಾರದು.

ಕ್ರಿ. ಶ. 1633ರ ಬೆಂಗಳೂರಿನ ಗುಜ್ಜರಿ ವಿಶ್ವನಾಥನ ಶಾಸನದಲ್ಲಿ ಉಲ್ಲೇಖವಾಗಿರುವಂತೆ ಇಮ್ಮಡಿ ಕೆಂಪೇಗೌಡನ ಅಯ್ಯನವರು ಗುಮ್ಮಳಾಪುರದ ನಂಜೇದೇವಪ್ಪ ಅಯ್ಯನವರೇ ಎಂಬುದಾಗಿ ಮೇಲ್ಕಂಡ ತರ್ಕಗಳಿಂದ ಪಕ್ಕವಾದ, ವಿಚಾರವಾದ ಕಾರಣ, ಬೆಂಗಳೂರಿನ ಚಿಕ್ಕಪೇಟೆಯ ಗುರುವರ್ಗದ ಈಗಿನ ಮಹಂತಿನ ಮಠವೇ ಗುಜ್ಜರಿ ವಿಶ್ವನಾಥನು ನಿರ್ಮಿಸಿದ ಧರ್ಮಶಾಲಾ ಮಠ ಎಂಬುದಾಗಿತ್ತೆಂದು ಅಭಿಪ್ರಾಯಪಡಲು ಸಾಕಷ್ಟು ಆಧಾರಗಳು ದೊರಕಿದಂತಾಗಿದೆ. ಇದೇ ಮಹಂತಿನ ಮಠಕ್ಕೆ ಜಕ್ಕರಾಯನ ಕೆರೆಯ ಬಳಿ ಸಂಗನಕೊಡುಗೆಯ ಮಾನ್ಯವಾಗಿ ನೀಡಿದ್ದ ಗದ್ದೆಯ ವಿಚಾರಗಳು ಮಹಂತಿನ ಮಠದ ಗದ್ದೆಯ ಶಾಸನ ಒಂದರಲ್ಲಿ ಪ್ರಸ್ತಾಪವಾಗಿದೆ.

ಇಮ್ಮಡಿ ಕೆಂಪೇಗೌಡನ ಕಾಲದ ಬೆಂಗಳೂರಿನ ಮತ್ತೊಂದು ಪ್ರಮುಖ ಶಾಸನ ನಗರದ ಮುತ್ಯಾಲಪೇಟೆಯ ರಂಗನಾಥ ಸ್ವಾಮಿ ದೇವಾಲಯದಲ್ಲಿರುವ ಶ.ಕ.1549ರ ಶಾಸನ. ಈ ಶಾಸನದಲ್ಲಿ ಗೌಡನ ಅನುಮತಿಯಂತೆ ಅಯ್ಯಾ ಹೊಳೆ ವರ್ತಕ ಸಂಘದ ಉಭಯ ನಾನಾ ದೇಶಗಳ ಪಡಿತರ ನೈವೇದ್ಯ ಶ್ರೀಮದ್ ಜಾತ್ರಾ ಮಹೋತ್ಸವಗಳಿಗೆ ದತ್ತಿಯನ್ನು ನೀಡಿದ ವಿಚಾರಗಳಿವೆ. ಈ ಜಾತ್ರಾದಿಗಳಿಗೆ ದತ್ತು ನೀಡಿದ ವಂತಿಗೆದಾರರು-ಪೆನುಕೊಂಡ, ಗೂಳೂರು, ಚಿಕ್ಕನಾಯಗಿ ಪಲ್ಲಿ ಬಳ್ಳಾಪುರ, ತಾಟಿಪರ್ತಿ, ಅವರೆ, ಚಂದ್ರಗಿರಿ, ಕೋಳಾಲ, ಕೊತ್ತಕೋಟ, ಕಾವೇರಿ ಪಟ್ಟಣ, ರಾಯಕೋಟಂ, ಶ್ರೀರಂಗಪಟ್ಟಣ, ನರಸೀಪುರ, ಬೇಲೂರು, ನಾಗಮಂಗಲ, ಇಕ್ಕೇರಿ, ಬಸ್ತಿ ಇತ್ಯಾದಿ ಸ್ಥಳಗಳು ಜನರು ಸೇರುತ್ತಿದ್ದರು. 17 ಎಂಬ ವಿಚಾರಗಳಿವೆ. ಇನ್ನೂ ಕೆಲವು ಕಾವ್ಯಗಳನ್ನು ಅವಲೋಕಿಸಿ ನೋಡಿದಾಗ, ಶಾಂತವೀರದೇಶಿಕನ (ಕ್ರಿ. ಶ. 1650) 'ಶಿವಲಿಂಗ ಚಾರಿತ್ರ್ಯ'ದಲ್ಲಿ ಬೆಂಗಳೂರಿನ ಪ್ರಭುವೆನಿಸಿದ್ದ ಇಮ್ಮಡಿ ಕೆಂಪೇಗೌಡನು ಶಿವಲಿಂಗಾರ್ಯರ ಪುತ್ರ ವೀರಣಾರ್ಯರು ಬೆಂಗಳೂರಿಗೆ ಬಂದಾಗ ಅವರನ್ನು ಸ್ವಾಗತಿಸಿ, "ನಿಲಯ, ಹಿತ್ತಿಲ,

ಬಿತ್ತಿ, ಮಹಾಕೂಪಂಗಳಂ ನಿರ್ಮಿಸಿ, ನೀವಿರ್ಪುದೆಂದು ವೀರಣಾರ್ಯಂಗೊಪ್ಪಿಸಿದನು...ಎಂಬ ಮಾತುಗಳಿವೆ.[8] "ನಿರಂಜನ ವಂಶ ರತ್ನಾಕರ"ದಲ್ಲಿ ಉಲ್ಲೇಖಿತವಾಗಿರುವ ಮಾಗಡಿಯ ನಾಡಗೌಡನೇ ಇಮ್ಮಡಿ ಕೆಂಪೇಗೌಡನಾಗಿದ್ದು, ಈತ ಕಲ್ಯಾಣದ ಬಸವ ಪರಂಪರೆಯ 22ನೆಯ ಗುರುವಾಗಿದ್ದ ಗಗನದಾರ್ಯರ ಶಿಷ್ಯತ್ವ ಪಡೆದು ಅವರಿಂದ ಶಿವಲಿಂಗಧಾರಿಯಾದುದಾಗಿ ತಿಳಿದುಬರುತ್ತದೆ. ಹೀಗೆ ಗಗನದಾರ್ಯರ ಶಿಷ್ಯತ್ವವನ್ನು ಪಡೆದ ಮೇಲೆ ಇದುವರೆಗೆ ಚತುರ್ಥ ಗೋತ್ರದವನೆಂದು ಗುರುತಿಸಿಕೊಳ್ಳುತ್ತಿದ್ದ ಇಮ್ಮಡಿ ಕೆಂಪೇಗೌಡನು ಅನಂತರ ತಾನು ಸದಾಶಿವ ಗೋತ್ರದವನೆಂದು ಎಲ್ಲೆಡೆ ಶಾಸನಗಳಲ್ಲಿ ಹೇಳಿಕೊಂಡಂತಿದೆ.[9]

ವಿಜಯನಗರದ ಅರಸರ ಕಾಲದಲ್ಲಿ (ಕ್ರಿ.ಶ. 1336–1646) ಸಾಮಾನ್ಯವಾಗಿ ಶಿವಭಕ್ತರಿಗೆ ಬಿಟ್ಟ ಗ್ರಾಮಗಳನ್ನು ಶಿವಪುರಗಳೆಂದೂ, ಬ್ರಾಹ್ಮಣರಿಗೆ ಬಿಟ್ಟ ಗ್ರಾಮಗಳನ್ನು ಅಗ್ರಹಾರಗಳೆಂದೂ, ಕರೆಯವುದು ರೂಢಿಯಲ್ಲಿತ್ತು. ಇದೇ ಸಂದರ್ಭದಲ್ಲಿ ಬೆಂಗಳೂರು ಪ್ರಾಂತ್ಯದಲ್ಲಿ ಯಲಹಂಕದ ಪ್ರಭುಗಳ ಕಾಲಕ್ಕೆ (ಕ್ರಿ.ಶ. 1418–1728) ಇಂತಹ ನೂರಾರು ಪುರಗಳು, ಮಠ ಮಾನ್ಯಗಳ ಉಂಬಳಿ ಗ್ರಾಮಗಳು ಹುಟ್ಟಿಕೊಂಡಿರುವಂತಿದೆ. ಇಂದಿಗೂ ಬೆಂಗಳೂರು ನಗರದ ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳು ಎರಡೂ ಸೇರಿ ಇಂತಹ 74 ಪುರಗಳು ಹಾಗೂ ಸರಿ ಸುಮಾರು ಇಷ್ಟೇ ಸಂಖ್ಯೆಯ ಅಗ್ರಹಾರಗಳು ಇರುವುದನ್ನು ಗುರುತಿಸಬಹುದಾಗಿದೆ. ಇಂತಹ ಅನೇಕ ಪುರಗಳು ಹಾಗೂ ಅಗ್ರಹಾರಗಳು ಗೌಡ ದೊರೆಗಳ ಕಾಲದಲ್ಲಿ ಅದರಲ್ಲೂ ಇಮ್ಮಡಿ ಕೆಂಪೇಗೌಡನ ಕಾಲದಲ್ಲಿ ಈತ ಉದಾರವಾಗಿ ಬಿಟ್ಟ ದಾನ ದತ್ತಿಗಳ ಫಲವಾಗಿ ಹುಟ್ಟಿಕೊಂಡಿದ್ದವು ಎಂದು ಹೇಳಬಹುದಾಗಿದೆ.

ಬೆಂಗಳೂರಿನ ಇಂತಹ ಒಂದು ಪ್ರಮುಖ ನಗರದ ವಿಮಾನ ಕಾರ್ಖಾನೆಯ ಬಳಿ ಇರುವ ವಿಭೂತಿ ಪುರ ಇಲ್ಲಿನ ಸ್ಥಳೀಯ ಹಿರಿಯರು ಹೇಳುವ ಐತಿಹ್ಯಗಳ ಪ್ರಕಾರ ಈ ಮಠದ ಪ್ರಾಚೀನ ಕಟ್ಟಡವನ್ನು ಬೆಂಗಳೂರಿನ ದೊರೆ ಇಮ್ಮಡಿ ಕೆಂಪೇಗೌಡನೇ ಕಟ್ಟಿಸಿದುದಾಗಿ ಬಲವಾದ ನಂಬಿಕೆ. ಇದಕ್ಕೆ ಸಾಕ್ಷಿ ಎಂಬಂತೆ ಇಲ್ಲಿನ ಮಠದ ಒಳಭಾಗದಲ್ಲಿ ಉತ್ತರಾಭಿಮುಖವಾಗಿಯಿರುವ ವೀರಭದ್ರಸ್ವಾಮಿಯ ಗರ್ಭಗುಡಿಯ ಮುಂಭಾಗದ ಸ್ತಂಭವೊಂದರ ಮೇಲೆ ಇಮ್ಮಡಿ ಕೆಂಪೇಗೌಡನು ತನ್ನ ಇಬ್ಬರು ಅರಸಿಯರಾದ ಕೆಂಪಮಾಂಬೆ ಮತ್ತು ಲಿಂಗಮಾಂಬೆಯರ ಜೊತೆ ನಿಂತಿರುವ ಉಬ್ಬು ಶಿಲ್ಪವಿಲ್ಲಿದೆ.

ಶಾಸನಗಳಲ್ಲಿ ಉಲ್ಲೇಖಗೊಂಡಂತೆ ಸಾವನದುರ್ಗದ ಲಕ್ಷ್ಮಿ ನರಸಿಂಹಸ್ವಾಮಿ, ವೀರಭದ್ರ ದೇವಾಲಯ, ಮಾಗಡಿ ರಂಗನಾಥ ಸ್ವಾಮಿ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದ್ದಾನೆ ಹಾಗೂ ಅನೇಕ ಗ್ರಾಮಗಳನ್ನು ದಾನ ನೀಡಿದ್ದಾನೆ. ಕ್ರಿ. ಶ. 1627ರ ತಾಮ್ರ ಶಾಸನದ ಪ್ರಕಾರ ಬೆಂಗಳೂರು ಸೀಮೆಯ ಸೊಂಡೇಕೊಪ್ಪದ ಬಳಿಯ ವ್ಯಾಸರಾಯ ಸಮುದ್ರವನ್ನು ವ್ಯಾಸರಾಯ ಮಠದ ರಾಮಚಂದ್ರ ಒಡೆಯರ "ಮಠ ಧರ್ಮಕ್ಕೆ' ದಾನ ನೀಡಿದ ಸಂಗತಿ ಹಾಗೂ ಕ್ರಿ. ಶ. 1630ರ ಶಿಲಾಶಾಸನದ ಪ್ರಕಾರ ಮಾಗಡಿ ಸೀಮೆಗೆ ಸೇರಿದ ಕಂಚುಗ್ರಾರಹಳ್ಳಿ ಮತ್ತು ಹಾಲುಶಿಂಗನಹಳ್ಳಿಗಳನ್ನು ಸೋಮೇಶ್ವರ ದೇವಾಲಯದಲ್ಲಿ "ನಿತ್ಯಕಟ್ಲೆ, ಪಡಿತರ ದೀಪಾರಾಧನೆ, ಮಹಾ ರಥೋತ್ಸವ, ಪರ್ವತಿಥಿ, ಸಕಲ ಉತ್ಸವಗಳು ಸಾಂಗವಾಗಿ ಜರುಗಲೆಂದು ದಾನವಿತ್ತನೆಂದು ವಿವರಗಳಿವೆ.[10]

ಮುಂದೆ ದೊಡ್ಡ ವೀರಪ್ಪಗೌಡನ ಕಾಲದಲ್ಲಿ ಕಲ್ಲಿಕೆರೆ ಹಾಗೂ ಡೊಂಕನಪುರ ಗ್ರಾಮಗಳನ್ನು ಬ್ರಾಹ್ಮಣರಿಗೆ ದತ್ತಿ ದಾನ ಕೊಟ್ಟ ವಿವರ ಹಾಗೂ ಮಾತಾಪಿತೃಗಳಿಗೆ ಪುಣ್ಯವಾಗಲೆಂದೂ ದೇವನಹಳ್ಳಿ, ನೇಕಲವಾಡಿ ಹಾಗೂ ಸಾತನೂರು ಗ್ರಾಮಗಳನ್ನು ದತ್ತಿ ಬಿಟ್ಟ ವಿವರಗಳು ಅಲ್ಲದೆ ಶೀಗುಪ್ಪೆ ಗ್ರಾಮವನ್ನು ಶೃಂಗೇರಿ ಮಠಕ್ಕೆ ಅರಬೀಡರಹಳ್ಳಿ ಯನ್ನು ಸುಬ್ರಹ್ಮಣ್ಯ ಸ್ವಾಮಿಗೆ ಅಳುಕೆಪ್ಪ ಗ್ರಾಮವನ್ನು ಕಾಶೀಧರ್ಮ ಪೀಠಕ್ಕೆ ದಾನವಿತ್ತ ವಿವರಗಳಿವೆ ಹಾಗೂ 1698ರ ಶಾಸನವೊಂದರಲ್ಲಿ ತನಗೆ ಸಂತಾನಾಭಿವೃದ್ಧಿಯಾಗಬೇಕೆಂಬ ಫಲಾಪೇಕ್ಷೆಯಿಂದ ಸುಬ್ರಹ್ಮಣ್ಯ ಸ್ವಾಮಿಗೆ

ಹರಕೆ ಹೊತ್ತ ವಿವರ ಧಾರ್ಮಿಕ ನಂಬಿಕೆಯ ದ್ಯೋತಕವಾಗಿದೆ. ದೊಡ್ಡ ವೀರಪ್ಪಗೌಡನ ನಂತರ ಕೊನೆಯ ಪ್ರಭುವಾದ ಮುಮ್ಮಡಿ ಕೆಂಪವೀರಪ್ಪಗೌಡನು ಸಹ ಪಿತೃವಾಕ್ಯ ರೀತ್ಯಾ ತನ್ನ ಆಡಳಿತಾವಧಿಯಲ್ಲಿ ಧರ್ಮ ಪರಿಪಾಲನೆ ಕ್ರಮಗಳನ್ನು ಕೈಗೊಂಡಿದ್ದು, ತನ್ನ ಧಾರ್ಮಿಕ ಸಹಿಷ್ಣುತೆಯನ್ನು ಮುಂದುವರೆಸಿದ್ದನು. 1697ರ ಶಾಸನದಲ್ಲಿ ಹುತ್ತರಿ ದುರ್ಗಕ್ಕೆ "ದೇವಗಿರಿ" ಎಂಬ ಪ್ರತಿನಾಮದಿಂದ ಕರೆದು "ಮುಮ್ಮಡಿ ದೊಡ್ಡವರ ಸಾಗರ" "ಕಲಿಕೆರೆ" ಎಂಬ ಗ್ರಾಮವನ್ನು ಶಂಕರೇಶ್ವರ ಸ್ವಾಮಿಯ ದಿವ್ಯ ಸನ್ನಿಧಿಯಲ್ಲಿ ದಾನ ಮಾಡಿದನೆಂದು ತಿಳಿಸಿದೆ. ಹಾಗೂ ಶಾಸನದಲ್ಲಿ ಯಲಹಂಕ ಪ್ರಭುವನ್ನು ಸದಾಶಿವ ಗೋತ್ರದ ರಾಜರೆಂದು ಕರೆದಿದೆ. ಅಲ್ಲದೆ ಮಾಗಡಿಯ ಸೋಮೇಶ್ವರ ದೇವಾಲಯದ ಎಲ್ಲಾ ಬಗೆಯ ಉತ್ಸವಾದಿ ಆರಾಧನೆಗೆ ಉದ್ದೂರದ ಹಳ್ಳಿಯನ್ನು ಉಂಬಳಿಯಾಗಿ ದಾನ ನೀಡಿದ ಬಗ್ಗೆ ವಿವರಗಳಿವೆ. ಜತೆಗೆ ಸೋಮೇಶ್ವರ ದೇವಾಲಯದ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಮಾಯನಾಯಕನಹಳ್ಳಿ, ಮಾದನಾಯಕನಹಳ್ಳಿ ಮತ್ತು ಕೆಂಪಸಾಗರ ಹಾಗೂ ಅಲ್ಲಿನ 200 ಮಠಗಳನ್ನು ಸಹ "ಮುಮ್ಮಡಿ ಕೆಂಪಸಾಗರ ಅಗ್ರಹಾರ" ಎಂದು ಹೆಸರಿಟ್ಟು, 24 ಮಹಾಜನರಿಗೆ ವೃತ್ತಿಗಳಾಗಿ ವಿಭಜಿಸಿ ದಾನ ನೀಡಿದನೆಂದು ಶಾಸನೋಕ್ತವಾಗಿ ತಿಳಿದುಬಂದಿದೆ. ತನ್ನ ವೃದ್ಧ ತಾಯಿ ಕಂಚಿಗೆ ಹೋಗಿ ವರದರಾಜ ದೇವರ ದರ್ಶನ ಮಾಡಲು ಅಸಮರ್ಥಳಾದ್ದುದರಿಂದ ಬೈಚಾಪುರ ಗ್ರಾಮದಲ್ಲೇ ವರದಸ್ವಾಮಿ ದೇವಾಲಯವನ್ನು ಕಟ್ಟಿಸಿದನೆಂದು ಪ್ರತೀತಿಯಿದ್ದು, ಅದು ಮಾತೃ ಪ್ರೇಮದ ದ್ಯೋತಕವಾಗಿದೆ. ಯಲಹಂಕ ಪ್ರಭುಗಳ ಕಾಲಾವಧಿಯಲ್ಲಿ ನಾಡಪ್ರಭುಗಳಲ್ಲದೆ, ಇತರೆ ಸಾರ್ವಜನಿಕರು ಸಹ ಧಾರ್ಮಿಕವಾದ ದಾನ ದತ್ತಿಗಳನ್ನು ನೀಡಿರುವುದನ್ನು ಇವರ ಕಾಲದ ಶಾಸನಗಳಲ್ಲಿ ದಾಖಲೆಯಾಗಿವೆ. ಜತೆಗೆ ಧರ್ಮ ಕಾರ್ಯಗಳಿಗಾಗಿ ಧರ್ಮಶಾಲೆಗಳು, ಅನ್ನಸತ್ರಗಳು, ತಟಾಕಗಳನ್ನು ನಿರ್ಮಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಈ ಕಾಲದ ಇನ್ನೂ ಕೆಲವು ಶಾಸನಗಳು ಸರಿಯಾದ ತೇದಿಗಳನ್ನು ಹೊಂದಿರದೆ ದಾನ ದತ್ತಿಗಳನ್ನು ನೀಡಿರುವ ಪಟ್ಟಿಯೇ ಇವರ ಕಾಲದಲ್ಲಿ ದೊಡ್ಡದಾಗಿದ್ದು, ಧಾರ್ಮಿಕ ಪರಿಸ್ಥಿತಿಯು ಉತ್ತಮ ಸ್ಥಿತಿಯಲ್ಲಿತ್ತೆಂದು ಹೇಳಬಹುದಾಗಿದೆ ಮತ್ತು ವಾಸ್ತು ಮತ್ತು ಮೂರ್ತಿ ಶಿಲ್ಪಗಳ ರಚನೆಗಳನ್ನು ನೋಡಿದಾಗ ಧಾರ್ಮಿಕತೆಯ ಭಾವನೆಗಳಿಗೆ ಸ್ಪಂದಿಸಿರುವುದು ತಿಳಿಯುತ್ತದೆ. ಆ ಹಿನ್ನೆಲೆಯಲ್ಲಿ ದೇವಾಲಯ ಮಂಟಪಗಳು ನೆಲಗೊಂಡಿದ್ದು, ಧಾರ್ಮಿಕ ಕೊಡುಗೆ ಹಾಗೂ ಪರಿಸ್ಥಿತಿಗಳು ನಿರಂತರವಾದ ಚಲನಶಕ್ತಿ ಪಡೆದಿದ್ದುವು. ಒಟ್ಟಾರೆಯಾಗಿ ಹೇಳುವುದಾದರೆ ಕೇಂದ್ರಿಕೃತ ಸಮಾಜ ವ್ಯವಸ್ಥೆಯಡಿಯಲ್ಲಿಯೇ ವಿಕೇಂದ್ರಿಕೃತ ಸಮಾಜ ರಚನೆಗೊಂಡಿದ್ದು, ಅದರ ಹಿನ್ನೆಲೆಯಲ್ಲಿ ರೂಪ ತಳೆದವು. ಇವನ್ನು ಧಾರ್ಮಿಕ ರಿವಾಜು ಕೊಡುಗೆ, ಪರಿಸ್ಥಿತಿ ಹಾಗೂ ಸಂಘಟನೆ ಇತ್ಯಾದಿ ಎನ್ನಬೇಕು. ಮುಂದೆ ವಿಜಯನಗರ ಸಾಮ್ರಾಜ್ಯ ಪತನವಾದರೂ, ಸ್ಥಳೀಯ ಸರ್ಕಾರವಾದ ಯಲಹಂಕ ನಾಡಿನ ಗಡಿ ಗೆರೆಗಳು ವಿಸ್ತಾರವಾದಂತೆ ರಾಜಕೀಯ, ಆಡಳಿತ ಜೊತೆಗೆ ಧಾರ್ಮಿಕ ಚಟುವಟಿಕೆಗಳು ಅವ್ಯಾಹತವಾಗಿ ನಡೆದುಕೊಂಡೇ ಬಂದವು. ನಂತರ ರಾಜಕೀಯವಾಗಿ ಏರಿಳಿತಗಳು ಕಂಡುಬಂದಿದ್ದರೂ, ನಿರಂತರವಾದ ಅವರ ಧಾರ್ಮಿಕ ಕೊಡುಗೆಗಳನ್ನು, ಆಳ್ವಿಕೆಯನ್ನು, ಮುಂದುವರೆಸಿಕೊಂಡು ಬಂದ ರಾಜತ್ವ ಯಲಹಂಕನಾಡ ಅರಸರದಾಗಿತ್ತು.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. ಡಾ. ಸೂರ್ಯನಾಥ ಕಾಮತ್., (ಬೆಂಗಳೂರು-ಒಂದು ಲೇಖನ) **ಬೆಂಗಳೂರು ದರ್ಶನ**, 1975, ಹ.ಕ. ರಾಜೇಗೌಡ, ಕೆಂಪೇಗೌಡನ ಜೀವನ ಚರಿತ್ರೆ, **ಯಲಹಂಕ ನಾಡಪ್ರಭುಗಳು ಒಂದು ಅಧ್ಯಯನ**, ಪ್ರಸಂ. ಡಾ. ರಾಮೇಗೌಡ, ಪುಟ 96.
2. ಎಂ. ಫಜ್ಲುಲ್ ಹಸನ್., ಕೆಂಪೇಗೌಡನ ಕಾಲಕ್ಕೂ ಹಿಂದಿನ ಬೆಂಗಳೂರಿನ ಇತಿಹಾಸ, ಪು. 1 (ಇದೊಂದು ಬಿಡಿ ಲೇಖನ, ಕೃಪೆ: ಡಾ. ಎಂ. ಚಿದಾನಂದಮೂರ್ತಿ)

3. ಎಂ. ಫಜ್ಲುಲ್ ಹಸನ್., ಅದೇ ಪುಟ (ಇ.ಸಿ. 9, ಬಿ–68).
4. ಕೆಂಪೇಗೌಡನ ಜಯ ಪ್ರಶಸ್ತಿ, ಸಂ. ಕರ್ಲಮಂಗಲಂ ಶ್ರೀಕಂಠಯ್ಯ, ಮುನ್ನುಡಿ, ಪು. 36
5. ಇಲ್ಲಿ ಪ್ರಸ್ತಾಪವಾಗಿರುವ ಗುಮ್ಮಳಾಪುರವು ಅನೇಕಲ್ಲಿನಿಂದ 8 ಕಿ. ಮೀ. ದೂರದಲ್ಲಿದ್ದು, ಇದು ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಡೆಂಕಣಿಕೋಟೆ ತಾಲೂಕಿಗೆ ಸೇರಿದೆ. ಇಂದಿಗೂ ಕೂಡ ಇಲ್ಲೊಂದು ವೀರಶೈವ ಗುರುವರ್ಗದ ಮಠವಿದ್ದು, ಇದು ಬಾಳೇಹೊನ್ನೂರು ಪೀಠ ಪರಂಪರೆಗೆ ಸೇರಿದುದಾಗಿದೆ. ಡಾ. ದೇವರಕೊಂಡಾರೆಡ್ಡಿಯವರ ಸ್ವಂತ ಸಂಗ್ರಹದಲ್ಲಿ ಈ ವೇಲೂರಿನ ಶಾಸನದ ಬಗ್ಗೆ ವಿಶೇಷ ಬೆಳಕು ಚೆಲ್ಲಲಾಗಿದೆ. (ನೋಡಿ: ಇತಿಹಾಸ ದರ್ಶನ, ಸಂ. 4–1986, ಪು. 118).
6. ಕೆಂಪೇಗೌಡನ ಜಯ ಪ್ರಶಸ್ತಿ, ಸಂ. ಕರ್ಲಮಂಗಲಂ ಶ್ರೀಕಂಠಯ್ಯ, ಕಾವ್ಯ ಭಾಗ ಪುಟ 7 ಮತ್ತು 18.
7. ಎಂ. ಜಿ. ನಾಗರಾಜ್, 'ಕೆಂಪೇಗೌಡ ದೊರೆಗಳು–ಜೀವನ ಸಂಗಾತಿಗಳು', ಬೆಳ್ಳಿ ಬಾಗಿನ, 1994 (ಪ್ರ.ಸಂ. ಡಿ. ಲಿಂಗಯ್ಯ, ಬೆಂಗಳೂರು), ಪು. 163–65.
8. i ಇ. ಸಿ. 9, ಮಾಗಡಿ–2.
   ii ನಿರಂಜನ ವಂಶ ರತ್ನಾಕರ, ಸಂ.ಫ.ಗು. ಹಳಕಟ್ಟಿ, ವಿಜಾಪುರ 1937, ಪು. 58.
9. ಕರ್ನಾಟಕ ಗ್ರಾಮ ಸೂಚಿ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ 190–194 (ಪುರ: ಹಿಂದಿನಿಂದಲೂ ವೀರಭದ್ರನ ನೃತ್ಯ ಮಾಡುವವರನ್ನು, ಪುರವಂತರೆಂದು ಕರೆಯಲಾಗುತ್ತಿದೆ. ಇಂತಹ ಪುರವಂತರು, ಶಿವಶರಣರು, ವೀರ ಮಹೇಶ್ವರರುಗಳಿಗೆ ಬಿಟ್ಟ ದತ್ತಿ ಗ್ರಾಮಗಳಿಗೆ ಪುರಗಳೆಂದೇ ಕರೆಯಲಾಗುತ್ತಿತ್ತು).
10. ಇ. ಸಿ. 9, ಮಾಗಡಿ, 2.

19. ಆನೇಕಲ್ ಪಾಳೆಯಗಾರರ ಕೈಫಿಯತ್ತು

ಡಾ|| ದೇವರಕೊಂಡಾರೆಡ್ಡಿ

ಇತ್ತೀಚೆಗೆ ಆನೇಕಲ್ ಪಾಳೆಯಗಾರರ ಮನೆತನಕ್ಕೆ ಸೇರಿದ ಶ್ರೀ ಪಿ. ಎಸ್. ಶಿವಕುಮಾರ್ ಅವರು ತಮ್ಮ ಬಳಿಯಿದ್ದ ಅವರ ವಂಶಿಕರ ಕೈಫಿಯತ್ತಿನ ಝೆರಾಕ್ಸ್ ಪ್ರತಿಯನ್ನು ಹಾಗೂ ಅನೇಕ ಕಾಗದ ಪತ್ರಗಳನ್ನೂ ನೀಡಿದರು. ಅವುಗಳ ಪರಿಶೀಲನೆಯಿಂದ ಆನೇಕಲ್ ಪಾಳೆಯಗಾರರ ಬಗ್ಗೆ ಕೆಲವು ಹೊಸ ವಿವರಗಳು ಬೆಳಕಿಗೆ ಬಂದಿರುತ್ತವೆ. ಈ ಕೈಫಿಯತ್ತನ್ನು ಉದ್ದವಾದ ಕಾಗದದಲ್ಲಿ ಬರೆದು ಸುರಳಿಯಂತೆ ಇಟ್ಟಿರುತ್ತಾರೆ. ಈ ಕೈಫಿಯತ್ತಿನಲ್ಲಿ ಬರುವ ಅನೇಕ ಉಲ್ಲೇಖಿತ ವರ್ಷಗಳು ಕಲ್ಪಿತವಾಗಿದ್ದು, ಶಕ 1679 (ಕ್ರಿ. ಶ. 1757) ರಿಂದ ಸರಿಯಾದ ಕಾಲಮಾನವನ್ನು ತೋರಿಸುತ್ತದೆ. ಅನಂತರ ಘಟನಾವಳಿಗಳನ್ನು ನಿಖರ ಕಾಲದಿಂದ ಸೂಚಿಸುವುದಾಗಿದೆ. ಈ ವಂಶದವರು ತಮ್ಮನ್ನು 'ಮುನಗಿನ' ವಕ್ಕಲಿನವರೆಂದು ಕರೆದುಕೊಂಡಿರುತ್ತಾರೆ. ಇದು 'ಮುಸುಗು' ಎಂದಿರಬೇಕು. ಮೊರಸು ವಕ್ಕಲಿಗರಲ್ಲಿ 'ಮುಸುಗು' ಎಂಬ ಗುಂಪಿದೆ. ಹೀಗಾಗಿ ಇವರು ಮೂಲತಃ ಮೊರಸು ಒಕ್ಕಲಿಗರ ಒಂದು ಪ್ರಬೇಧವಾದ ಮುಸುಕು ಒಕ್ಕಲಿಗರು ಎಂಬುದು ಸ್ಪಷ್ಟ.

ಈ ವಂಶದ ಮೂಲ ಪುರುಷ ದೇವಪ್ಪಗೌಡ. ಈತ ಕಂಚಿ ಕಡೆಯ ಅಲಕೂರು ವಡೇರಹಳ್ಳಿಯಿಂದ ಸುಗಟೂರು ಕಡೆಗೆ ಬರುತ್ತಾನೆ. ಈತನ ಮಗ ತಮ್ಮೇಗೌಡ, ಮಗಳು ಬಯ್ಯಮ್ಮ. ಈ ತಮ್ಮೇಗೌಡನೇ ಹೊಸಕೋಟೆಯಲ್ಲಿ ಆಯಿಮುಕ್ತೇಶ್ವರ ದೇವಾಲಯವನ್ನು ಕಟ್ಟಿಸಿದ್ದು. ಹೊಸಕೋಟೆಯಲ್ಲಿ 'ತಮ್ಮಾಂಬುಧಿ' ಎಂಬ ಕೆರೆಯನ್ನು ಈತನೇ ಕಟ್ಟಿಸಿದಂತೆ ಈ ಕೈಫಿಯತ್ತು ಸೂಚಿಸುತ್ತದೆ. ಈ ತಮ್ಮೇಗೌಡನಿಗೆ ಮೂವರು ಗಂಡುಮಕ್ಕಳಿದ್ದು, ಅವರಲ್ಲಿ ಮೊದಲ ಮಗ ಐಯಮಗವುಡ ಹೊಸಕೋಟೆಯನ್ನೂ, ಇಮ್ಮಡಿನಂಜುಂಡ ತಮ್ಮೇಗೌಡನು ಕೋಲಾರವನ್ನೂ, ಶಿವನೇಗೌಡನು ಶಿಡ್ಲಘಟ್ಟವನ್ನು ಹಂಚಿಕೊಂಡು ತಮ್ಮ ಪ್ರದೇಶಗಳನ್ನು ಆಳಿದರು. ಹೊಸಕೋಟೆಯನ್ನು ಆಳಿದ ಮುಮ್ಮಡಿ ಅಯ್ಯಮಗೌಡನ ಮೊಮ್ಮಗ ಮುಮ್ಮಡಿ ವೀರ ನಂಜುಂಡ ತಮ್ಮೇಗೌಡನ ಮಗ ಚಿಕ್ಕರಾಯ ತಮ್ಮೇಗೌಡ. ಈತನೇ ಆನೇಕಲ್‌ನ ಸ್ಥಾಪಕ. ಇವನು ಆನೇಕಲ್‌ನಲ್ಲಿ ಅಮೃತ ಮಲ್ಲಿಕಾರ್ಜುನ ದೇವಾಲಯ, ತಮ್ಮಸಂದ್ರ ಅಗ್ರಹಾರ, ದೊಡ್ಡಕೆರೆಗಳನ್ನು ಕಟ್ಟಿಸಿದ್ದಾನೆ. ಹಾಗೆಯೇ ಆನೇಕಲ್, ಅತ್ತಿಬೆಲೆಯಲ್ಲಿ ಕೋಟೆಗಳನ್ನು ವಿಸ್ತಾರವಾಗಿ ಕಟ್ಟಿಸಿದಂತೆ ಇದರಲ್ಲಿ ಹೇಳಿದೆ. ಇವನ ಮಗ ಮುಮ್ಮಡಿ ಕರಡು ತಮ್ಮೇಗೌಡ ಇವನ ಮಗ ವೀರನಂಜುಂಡ ತಮ್ಮೇಗೌಡ. ಈತನನ್ನು ಕ್ರಿ. ಶ. 1757ರಲ್ಲಿ ಹೈದರಾಲಿ ಸೆರೆಹಿಡಿದು 34 ವರ್ಷ ಬೆಂಗಳೂರಿನಲ್ಲಿ ಸೆರೆಹಾಕುತ್ತಾನೆ. ಬಹುಶಃ ಆತ ಅಲ್ಲಿಯೇ ಗತಿಸಿದ್ದಿರಬೇಕು. ಇವನ ಮಗ ಮುಮ್ಮಡಿ ಐಯಮಗೌಡ. ಈತನೂ ಸು. ಕ್ರಿ. ಶ. 1793ರ ವೇಳೆಗೆ ತೀರಿಹೋಗಿರಬೇಕು. ಹೀಗಾಗಿ ಈತನ ಹಿರಿಯ ಪತ್ನಿ ಗವುರಮ್ಮನಿಗೆ ಪಟ್ಟವಾಗುತ್ತದೆ. ಆದರೆ ಆನೇಕಲ್ಲು ಇವರ ಕಾಲಕ್ಕೂ ಇವರ ವಶವಾಗುವುದಿಲ್ಲ. ಬ್ರಿಟೀಷರ ಮೊರೆಹೊಕ್ಕು ಕೃಷ್ಣಗಿರಿಯಲ್ಲಿ ವಾಸವಾಗಿರುತ್ತಾರೆ. ಈ ವಂಶಸ್ಥರಲ್ಲಿ ದೊರೆತ ಇನ್ನೊಂದು ಪತ್ರದಲ್ಲಿ ಪಾಲ್ಕೋಡು, ಮಾರಂಡಹಳ್ಳಿ ಸ್ಥಳಗಳು ಇವರ ವಶದಲ್ಲಿದ್ದಂತೆಯೂ, ಗೌರಮ್ಮನನ್ನು 'ದೊರೆಸಾನಿ'ಯೆಂದು ಸಂಬೋಧಿಸಿರುವುದನ್ನು ಕಾಣ ಬಹುದಾಗಿದೆ.

ರಾಣಿ ಗೌರಮ್ಮನವರಿಗೆ ಕರ್ನಲ್ 'ಅಲಕ ಸೌಂದರ ರೀಟು' (Alexander Reade) ಸಾಹೇಬನು ಇವರ ಕೈಫಿಯತ್ತು ವಿಚಾರಿಸಿ ಕೃಷ್ಣಗಿರಿಯಲ್ಲಿ ಉಳಿಯುವಂತೆಯೂ ಸ್ವಲ್ಪ ದಿನದ ನಂತರ ದೇವರು ನಿಮ್ಮ ಸಂಸ್ಥಾನವನ್ನು ದಯಮಾಡುವನು ಎಂದು ಆಶ್ವಾಸನೆ ನೀಡುತ್ತಾನೆ. ಆಗ ಈ ಸೀಮೆಯ ಹಕ್ಕುದಾರಳಾಗಿದ್ದ ಗೌರಮ್ಮ ಕುಂಪಣಿ (East India Company) ಯವರಿಗೆ ದವಲತ್ತಾಗಬೇಕೆಂದು ಸದಾ ದೇವರನ್ನು ಪ್ರಾರ್ಥನೆ ಮಾಡುತ್ತಿದ್ದಳೆಂದು ಇದರಲ್ಲಿ ಹೇಳಿದೆ.

ಕ್ರಿ. ಶ. 1798ರಲ್ಲಿ (ಶಕ 1720) ಕುಂಪಣಿ ದಂಡು ಶ್ರೀರಂಗಪಟ್ಟಣದ ಕಡೆ ಬಂದಾಗ ಅಲೆಕ್ಸಾಂಡರ್ ರೀಡ್ ಇವರನ್ನು ಕರೆಸಿ 'ನಿಮ್ಮ ಸ್ಥಳವಂತರ ಕರಶಿ ದಂಡಿಗೆ ಸಹಾಯ, ಆಹಾರ ಸಾಮಗ್ರಿಗಳ ಸಹಾಯ ಮಾಡಬೇಕೆಂಬ ಬೇಡಿಕೆಯನ್ನು ಸಲ್ಲಿಸುತ್ತಾನೆ. ಆಗ ಇವರು ವರ್ತಕರನ್ನು ಕರೆಸಿ ದವಸ ಧಾನ್ಯಗಳನ್ನು ಸಂಗ್ರಹಿಸಿ ಸೈನ್ಯದ ಬರವಿಗೆ ಮೂರು ಪಾಳಿಯಲ್ಲಿ ಕಾದುಕೊಂಡಿದ್ದರು. ಆಗ 'ಜನಮಹಾರಿಸು ಬಹದರು' ರವರ (ಜಾನ್ ಹ್ಯಾರೀಸ್) ದಂಡು ಬರೋ ಮಾರ್ಗದಲ್ಲಿ ಅವರನ್ನು ಹೊಸೂರು ತಾಲ್ಲೂಕು ಕೆಲಮಂಗಲದಲ್ಲಿ ಭೇಟಿ ಮಾಡಿ ಸನ್ನದನ್ನು ಹೇಳಿಕೊಂಡಾಗ ಆನೇಕಲ್ಲು ಮೇಲೆ ಲಡಾಯಿ ಮಾಡಿ ಸುಲ್ತಾನನ ಟಾಣ್ಯ ತೆಗೆಸಿ ಕುಂಪಣಿ ಸರ್ಕಾರದ ಪರವಾಗಿ ಇವರು (ಕುಂಪಣಿ ಕೆಲಸ ಮುಖ್ಯವಾಗಿ) ಆಡಳಿತ ನಡೆಸುತ್ತಿದ್ದರು. ಕ್ರಿ.ಶ 1799ರ (ಶಕ 1821 ಸಿದ್ಧಾರ್ಥಿ ನಾಮ ಸಂವತ್ಸರ) ಶ್ರಾವಣ ಮಾಸದಲ್ಲಿ ಸಂಸ್ಥಾನ ಮೈಸೂರಿಗೆ ಸೇರಿತೆಂದೂ ಅವರ ಪರವಾಗಿ ಅಮಲರು ಈ ಸಂಸ್ಥಾನವನ್ನು ಜಪ್ತಿ ಮಾಡುತ್ತಾರೆ (ಕಿತ್ತುಕೊಳ್ಳುತ್ತಾರೆ). ಆದರೆ ಇದರ ನೆರೆಯ ಸಂಸ್ಥಾನಗಳಾದ ಅಂಕುಸಗಿರಿ, ಸೊಳಗಿರಿ, ಬಾಗಲೂರುಗಳು ಕುಂಪಣಿಗೆ ಸೇರಿದ್ದರೂ ಜಪ್ತಿ ಮಾಡಿರಲಿಲ್ಲ. ಹೀಗಾಗಿ ತಮಗೆ ಸಂಸ್ಥಾನ ಕೊಡಿಸಬೇಕೆಂದು 'ಲಾಟು ಬಹುದರು', ಕ್ಲೋಸ್ ಬಹದರು ಮತ್ತು ಪೂರ್ನಯ್ಯನವರಿಗೆ ಕೈಫಿಯಿತ್ತು ಕೊಟ್ಟಾಗ, ಕಛೇರಿಯಲ್ಲಿ ಪಂಚರಾಗಿಯಿರಿ ಎಂದು ಆದೇಶಿಸುತ್ತಾರೆ. ಕೆಲವು ದಿವಸದ ಮೇಲೆ ಸಾವಿರ ವರಹ ಕೊಡುತ್ತೇವೆ. ನೆಮ್ಮದಿಯಾಗಿರಿ ಮುಂದೆ ತೇರುಗಡೆ ಮಾಡುತ್ತೇವೆ ಎಂಬ ಆರ್ಶವಾಸನೆ ನೀಡುತ್ತಾರೆ. ಆದರೆ ಅಧಿಕಾರವಿಲ್ಲದ ಪೆನ್‌ಷನ್ ಮಾತ್ರ ಇವರಿಗೆ ಲಭಿಸುತ್ತದೆ.

ಇಲ್ಲಿ ಕುಂಪಣಿ ಸೀಮೆಯಲ್ಲಿದ್ದ ಸಂಸ್ಥಾನಗಳ ಅರಸುಗಳಿಗೆ ಕಂದಾಯದ ವಸೂಲಿ ಮುಂತಾದ ಅಧಿಕಾರಗಳನ್ನು ನೀಡಿದ ಬ್ರಿಟೀಷರು ಮೈಸೂರು ಸಂಸ್ಥಾನದಲ್ಲಿ ಅಧಿಕಾರವನ್ನು ನೀಡದೆ ಉಪಾಯದಿಂದ ಅವರಿಗೆ ಪೆನ್‌ಷನ್ ನೀಡಿ ಅಧಿಕಾರ ಕೊಡುತ್ತೇವೆ ಎಂಬ ಆಶ್ವಾಸನೆ ಸಂಸ್ಥಾನದಲ್ಲಿದ್ದ ಹಿಂದಿನ ಸಂಸ್ಥಾನಿಕರು ಮತ್ತು ಅವರ ಸಂತತಿಯವರು ಪೆನ್‌ಷನ್‌ಗೆ ಹೊಡೆದಾಡಿದರೆ ಹೊರತು ಅಧಿಕಾರಕ್ಕೆ ಹೊಡೆದಾಡಲಿಲ್ಲ. ಬ್ರಿಟೀಷರ ಅಧೀನದಲ್ಲಿದ್ದ ಸಂಸ್ಥಾನಿಕರು ಪೆನ್‌ಷನ್ ಜೊತೆಗೆ ತಮ್ಮ ಕಂದಾಯ ವಸೂಲಿ, ಪೊಲೀಸ್ ಅಧಿಕಾರಗಳನ್ನು ಹೊಂದಿದ್ದರಿಂದ ಇಂದಿಗೂ ಜಮೀನುದಾರರಾಗಿ ಶ್ರೀಮಂತರಾಗಿರುತ್ತಾರೆ.

ಈ ಕೈಫಿಯತ್ತಿನಿಂದ ತಿಳಿಯುವುದೇನೆಂದರೆ ಬ್ರಿಟಿಷರು ಟೀಪೂವನ್ನು ಸೋಲಿಸಲು ಅವನಿಂದ ಪರಾಜಿತರಾಗಿ ರಾಜ್ಯ ಕಳೆದುಕೊಂಡಿದ್ದವರು ತಮ್ಮ ಬಳಿ ಬಂದಾಗ ಅವರ ಬಗ್ಗೆ ಅನುಕಂಪ ತೋರಿಸಿ, ಅವರನ್ನು ತಮ್ಮ ಕಡೆಗೆ ಒಲಿಸಿಕೊಂಡಿದ್ದು, ಸೋತಿದ್ದ ಅರಸರೂ ಸಹ ಟೀಪೂವಿನ ವೈರಿಗಳಾಗಿದ್ದು ಬ್ರಿಟಿಷರು ಟೀಪೂವನ್ನು ಸೋಲಿಸಿ ತಾವು ಕಳೆದುಕೊಂಡಿದ್ದ ರಾಜ್ಯವನ್ನು ಮರಳಿ ಕೊಡಿಸುತ್ತಾರೆಂದು ನಂಬಿದ್ದಲ್ಲದೆ ಟೀಪೂವಿನ ವಿರುದ್ಧ ಬ್ರಿಟಿಷರು ದಾಳಿ ಮಾಡಲು ಬಂದಾಗ ಅವರಿಗೆ ಮತ್ತು ಅವರ ಸೈನ್ಯಕ್ಕೆ ಆಹಾರ ಧಾನ್ಯಗಳ ಹಾಗೂ ಸೈನಿಕರ ಪೂರೈಕೆ ಮಾಡಿದ್ದು, ಇದೇ ಅಲ್ಲದೆ ಟೀಪೂವಿನ ರಾಜ್ಯದಲ್ಲಿದ್ದು ಅವನಿಗೆ ಉಪಟಳ ನೀಡಿದ್ದು. ಈ ಕಾರಣಗಳಿಂದ ಬ್ರಿಟಿಷ್ ಸೈನ್ಯ ಆಹಾರ ಧಾನ್ಯಗಳ ಕೊರತೆಯಿಂದ ಬಳಲಲಿಲ್ಲ ಹಾಗೂ ಸ್ಥಳೀಯರ ವಿರೋಧವನ್ನು ಎದುರಿಸಲಿಲ್ಲ.

ಹೀಗಾಗಿ ಬೆಂಗಳೂರು ಹಾಗೂ ಶ್ರೀರಂಗಪಟ್ಟಣದ ಕಡೆಗೆ ಬ್ರಿಟಿಷ್ ಸೈನ್ಯ ಹೆಚ್ಚಿನ ಹುರುಪಿನಿಂದ ಮುನ್ನುಗ್ಗಲು ಸಾಧ್ಯವಾಯಿತು. ಬಹುಶಃ ಟೀಪೂವಿನ ಪತನಕ್ಕೆ ಇಂತಹ ಸಣ್ಣ ಪಾಳೆಯಗಾರರು ಹೆಚ್ಚಿನ ಮಟ್ಟಿಗೆ ಕಾರಣರಾಗಿರುತ್ತಾರೆ. ಹಾಗೆಯೇ ಮೈಸೂರಿನ ದಿವಾನರಾಗಿ ಪೂರ್ಣಯ್ಯನು ತನ್ನ ಮಿತ್ರನ ಮಗ ಟೀಪು ಸೋಲಲು ಕಾರಣರಾದ ಪಾಳೆಯಗಾರರ ರಾಜ್ಯವನ್ನು ಮೈಸೂರಿಗೆ ಸೇರಿಸುವಲ್ಲಿ ಯಶಸ್ವಿಯಾದ ಹಾಗೆಯೇ ಈ ಪಾಳೆಯಗಾರರು ಅಥವಾ ಅವರ ವಂಶಸ್ಥರು ಜೀವನಾಂಶಕ್ಕಾಗಿ ಮೈಸೂರು ಅರಸರನ್ನು ಬೇಡಿಕೊಳ್ಳುವ ಸ್ಥಿತಿಗೆ ತರುತ್ತಾರೆ.

ಈ ಕೈಫಿಯತ್ತು ಟೀಪೂ ಸೋತಮೇಲೆ ಮೈಸೂರಿನ ಅಮಲರು ಆನೇಕಲ್‌ಗೆ ಬಂದು ಅವರ ಪಾಳೆಯ ಪಟ್ಟನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಬ್ರಿಟಿಷರಿಗೆ ಹಾಗೂ ಮೈಸೂರರಸರಿಗೆ ಸಲ್ಲಿಸಲು ಬರೆದುದಾಗಿದೆ. ಹೀಗಾಗಿ ಇದರ ಕಾಲ ಸು. 1800 ಆಗಿದೆಯೆಂದು ಹೇಳಬಹುದಾಗಿದೆ. ಬಹುಶಃ ಬಹಳಷ್ಟು ಇಂತಹ ಕೈಫಿಯತ್ತುಗಳು ಈ ಕಾಲದಲ್ಲೆ ಉದಿಸಿವೆಯೆಂದರೆ ತಪ್ಪಾಗಲಾರದು.

ಈ ಕೈಫಿಯತ್ತಿನಿಂದ ತಿಳಿದುಬರುವ ಆನೇಕಲ್ ಪಾಳೆಯಗಾರರ ವಂಶಾವಳಿ: (ಈ ವಂಶಾವಳಿಗೂ ಶಾಸನಗಳಿಂದ ಲಭಿಸುವ ವಂಶಾವಳಿಗೂ ವ್ಯತ್ಯಾಸವಿದೆ).

ವಂಶಾವಳಿ

ದೇವಪ್ಪಗೌಡ

↓

ತಮ್ಮೇಗೌಡ | ಬಯ್ಯಮ್ಮ

ಮುಮ್ಮಡಿ ಐಯ್ಯಮಗೌಡ (ಹೊಸಕೋಟೆ) | ಯಿಮ್ಮಡಿ ವೀರನಂಜುಂಡ ತಮ್ಮೇಗೌಡ (ಕೋಲಾರ) | ಶಿವನೇಗೌಡ (ಶಿಡ್ಲಘಟ್ಟ)

↓

ಮುಮ್ಮಡಿ ವೀರನಂಜುಂಡ ತಮ್ಮೇಗೌಡ

↓

ಚಿಕ್ಕರಾಯ ತಮ್ಮೇಗೌಡ (ಆನೇಕಲ್ ಸ್ಥಾಪಕ)

↓

ಮುಮ್ಮಡಿ ಕರಡು ತಮ್ಮೇಗೌಡ

↓

ಮುಮ್ಮಡಿ ಚಿಕ್ಕರಾಯ ತಮ್ಮೇಗೌಡ

↓

ವೀರನಂಜುಂಡ ತಮ್ಮೇಗೌಡ (ಮೂವತ್ನಾಲ್ಕು ವರ್ಷಗಳ ಕಾಲ ಸೆರೆ) ಪತ್ನಿಯರು: 1)ಕೆಂಪಮ್ಮ, 2) ಪಾರ್ವತಮ್ಮ

↓

ಮುಮ್ಮಡಿ ಐಯ್ಯಮಗೌಡ

↓

ಪತ್ನಿಯರು: 1) ರಾಣಿ ಗವುರಮ್ಮ, 2) ಚಂನಮ್ಮ, 3) ಚಿಕ್ಕಮ್ಮ

↓

ಚಿಕ್ಕರಾಯ ತಮ್ಮೇಗೌಡ (ದತ್ತು), ಪತ್ನಿ: ಚೊಕ್ಕಮ್ಮಣ್ಣಿ

↓

ಚಿಕ್ಕರಾಯ, ಪತ್ನಿ: ಅಕ್ಕಾಜಮ್ಮಣ್ಣಿ

↓ ↓

ವೀರಚಿಕ್ಕರಾಯ (ದತ್ತು) ಮಲ್ಲಿಗಂಮಣ್ಣಿ,

ಗಂಡ (ಶೂಲಗಿರಿಯ ಪಾಳೆಯಗಾರ ಚೊಕ್ಕೇಗೌಡ)

↓ ↓ ↓ ↓ ↓ ↓

ಚಿಕ್ಕರಾಯ (ದತ್ತು) ನಂಜುಂಡರಾಯ ಪುಟ್ಟಸ್ವಾಮಿರಾಯ ಚೆನ್ನಮ್ಮಣ್ಣಿ ಪಾರ್ವತಮ್ಮಣ್ಣಿ ಚೊಕ್ಕಮ್ಮಣ್ಣಿ

ಅವರ ಕೈಕೆಳಗೆ ಪ್ರಭುತ್ವ ಮಾಡಿಕೊಂಡು ಯಿದನೂ ಕೆಲವು ದಿವಸದ ಮೇಲೆ ದೇ(ವ)ಪ್ಪ ಗವುಡರು ಶ್ಯಾಲಿವಾಹನ ಷಕವರುಷ. . . ಶಿದ್ದಾರ್ಥಿ ನಾಮ ಸಂವತ್ಸರದಲ್ಲು. . . ಕ್ಕೆ ಆಲಕುರುವಡೇರಹಳ್ಳಿ ಗ್ರಾಮದಲ್ಲು ಬ. . . ಹೋಗಲಾಗಿ ಯಿ ದೇವಪ್ಪ ಗವುಡರ ಗರ್ಭದಲ್ಲೂ ಗಂಡುತ್ತಂಮೆಗವುಡರು ಹೆಂಣುಮೊಗ ಬೈಯಂಮ್ಮನು ಅತ್ತಿರು ಪುರಕ್ಕೆ ಸವೊಂದರ್ಯವಾಗಿ ಹುಟಿಯಿರಲಾಗಿ ಕಂಚಿ ಮೇಲೆ ಯೇಕಲ್ಲಿ ಚತ್ತಿಯವನು ಯಿವರ ಕಡೆ ವೊಳಿಗದವನು ಬಂದು ಯೂ ಹೆಣ್ಣು ಮೊಗ ಬೈಯಂಮ್ಮನ ರೂಪು ರೆಕ್ಕೆ ಸವುಂದರ್ಯವಂ ಕಂಡು ಕಂಚಿ ದೊರೆತೆ ತ್ತಿಳಿ ಪಡಿಸಲಾಗಿ ಅಲಕೂರು ವಡೇರಹಳ್ಳಿ ಮೇಲೆ ಸ್ವಾರಿಮಾರ್ಗವಾಗಿ ಬಂದು ದೇವಪ್ಪ ಗವುಡರ ಕರೆಶಿ ನಿಂಮ್ಮ ಕರ್ನಿಕ್ಕೆ ನಮಗೆ ಕೊಡಿಯೆಂಬುದಾಗಿ ಕೇಳಿ ಯೆರಡು ದಿವಸ ಬಿಟ್ಟು ತಂಮ ನಿಯೋಗಿಗಳ ಸಂಗಾತ್ತ ಸಕಲ ಸೊಬಸ್ಕರ ಮಂಗಳ ದ್ರವ್ಯ ಮುಂತಾಗಿ ಕಳುಹಿಸಿ ಕರ್ನಿಕ್ಕೆ ನಿಷ್ಕರಿಷೆ ಮಾಡಿಕೊಂಡು ಬನ್ನಿಯೆಂದು ಕಳುಹಿಸಲಾಗಿ ನಿಯೋಗಿಗಳು ಬಂದು ಹೇಳಿದ ಮಾತು ಕೇಳಿ ತಂದ ಸೊಬಸ್ಕರ ವಂದು ಕಡೆವಿ ಯಿರಶಿ ಯೀ ದೇವಪ್ಪಗವುಡರ ಅಂಣ ತಂಮಿಂದರು ಹತ್ತು ಕುಲಾಚಾರದವರು ಕುಳಿತುಕೊಂಡು ಮಾತನಾಡಿಯಿ ಕಂಚಿ ದೊರೆ ಯೆಕಲಿ ಜಾತಿಯವನು ನಾವೂ ಮುನಗಿನ ವಕ್ಕಲಿನವರು ಯಿವರಿಗೆ ಹೆಂಣು ಕೊಟ್ಟರೆ ನಂಮ ಕುಲ ಕೆಟು ಹೋದಿತ್ತು ಯಿವರ ದೇಶ ಬಿಟ್ಟು ಮತ್ತೊಂದು ಕಡಿಗೆ ಹೋಗುವಾ ಯೆಂಬುದಾಗಿ ಮಾತನಾಡಿ ಬಂದ ನಿಯೋಗಿಗಳ ಸಂಗಾತ್ತ ನಿಮ್ಮ ದೊರೆನ ಕರದುಕೊಂಡು ಬಂಬಿಯೆಂಬುದಾಗಿ ಹೇಳಿಕಳಾ ವಿಶಿ ಆರಾತ್ರಿ ಬಂಡಿಗಳು ಕಟ್ಟಿಕೊಂಡು ಪಡುವಲ ದೇಶಕೆ ಹೋಗುವಾ ಯಂಬುದಾಗಿ ಸಾಗಿ ಬರುತ್ತಾಯಿರಲು ಕ್ಷೀರನದಿ ತುಂಬಿ ಆಚೆಗಡೆಯಿಚೆಗಡಿಗೆ ಸರಿದು ಕುಂಭಾರ್ರ . . . .ನಂಮಾ ಗರ್ಬದಲ್ಲು ಯಿ ಹೆಣ್ಣು ಮೊಗ ಹುಟ್ಟಿಯೇಳು ಮನೆ ಯವರು ಹತವಾಗುವ ಕಾಳ ಬಂತೂ ಯಂಬುದಾಗಿ ವಿಚ್ಯರನಂ ಕುರಿತು ಚಿಂತೆಯ ಮಾಡುತ್ತಾ ಯಿರಲು ಯಿ ಬೈಯಂಮನ್ನು ಬಂದೂ ನೀವು ಯಾಕೆ ಚಿಂತೆ ಮಾಡುತ್ತೀರಿ ನಂನ ಪತಿವ್ರತದರ್ಮಾ ನಿಮಗೆ ತೋರಿಶಿ ಕೊಟ್ಟೇನು ಯಂಬುದಾಗಿ ಗಂಗಾಭವಾನಿಯಂ ಕುರ್ತೂ ಅರ್ರಿಶಿನ ಕುಂಕುಮ ಕಸ್ತೂರ್‍ಯಾದಿ ಪರಿಮಳ ದ್ರವ್ಯದಿಂದಾ ಪೂಜೆಯಂ ಮಾಡಿ ದೂಪ ದೀಪ ನೈವೇದ್ಯ ತಾಂಬೂಲವನ್ನು ಗಂಗಾಭವಾನಿಗೆ ಸಮರ್ಪಿಶಿ ನಮಸ್ಕಾರವಂ

ಮಾಡಿ ನಂ ನಕುಲ ವುದಾರ ಮಾಡಿಯೆಂದು ಕೈ ಮುಗಿದು ಕೇಳಿಕೊಂಡುದರಿಂದಾ ಶ್ಯಾಲಿವಾಹನ ಷಕ 1012ನೇ ಪ್ರಜೋತ್ಪತ್ತಿ ಸಂವತ್ಸರ ಆಶ್ವಿಜಬ 1ರಲ್ಲಿ ಕ್ಷೀರ ನದಿಯು ಭಾಗವಾಗಿ ದಾರಿ ಕೊಡಲಾಗಿ ಯೇಳು ಬಂಡಿಯವರು ಯೀಚೆಗೆ ಸಾಗಿ ಬಂದರು ಪುನಹ ಪ್ರಾರ್ತನೆ ಮಾಡಿಕೊಳಲಾಗಿ ಯತ್ತಾ ಪ್ರಕಾರ ಪ್ರಭಾವಾಯಿತ್ತು ಆ ಕಂಚಿ ದೊರೆ ಮಂದಿ ಮಾರ್ಬಲ ಸಹಿತ್ತ ಬೆಂನಾಡಿ ಬಂದು ಆಚೆ ಹೊಳೆಗಡೆ ನಿಂತ್ತುಕೊಂಡು ನಮಗೆ ಮೋಸ ಮಾಡಿ ಹೋಗುತ್ತಿದ್ದೀರ ಯಂಬುದಾಗಿ ಕೇಳಿದನು. ನಮಗೆ ದೈವ ಸಹಾಯದಿಂದಾ ನವೂ ಸಾಗಿ ಬಂದೆವೂ ನಿಂಮಿಂದ ಆಗತಕ್ಕದೇನು ಯೆಂಬುದಾಗಿ ಪಡುವಲ ದೇಶದಲ್ಲಿ ಆರಾಂಬವಾಗಿ ಯಿರುವ ಸ್ಥಳದಲ್ಲಿ ನಿಂತೂ ಸುತ್ತ ಗಿಡವಂನು ಕಡಿದು ಬೈಲು ಮಾಡಿ ವಂದು ಗ್ರಾಮವನು ಕಟ್ಟಿ ಸುರಗುತ್ತಳಿ ಕಟ್ಟಿದರಿಂದ ಸುಗಟೂರು ಯೆಂಬ ನಾಮದೇಹವಿಟು ಆ ಗ್ರಾಮದಲ್ಲು. . . ಯಿರಲು ಶ್ಯಾಲಿವಾಹನ ಷಕ 1014ನೇ ಶ್ರೀಮುಕ ಸಂವತ್ಸರ ಮಗ ಬ 14 ಯಿ ದೇವಪ್ಪ ಗವೂಡರ ಕೊಮಾರ್ರು ತಂಮೆಗವುಡರು ವೂರು ಮುಂದೆ ವಟ ರುಕ್ಷ ಆಲದ ಮರದ ಕೆಳಗೆ ಮಲಗಿ ಯಿರಲು ಸರ್ಪ ಬಂದು ತಲೆ ತಾವೂ ಟಿಕ್ಕೆ ಹಾಕಿಕೊಂಡು ಚತ್ರಿಯೋಪಾದಿಯಲ್ಲಿ ಬಿಸಿಲಿಗೆ ಮರೆಯಾಗಿ ಹೆಡೆಯೆತ್ತಿಕೊಂಡು ಯಿರಲಾಗಿತ್ತಾ ಯಿ ತಂದೆಗಳು ಕಂಡು ಆ ಸರ್ಪಕ್ಕೆ ದುಪದೀಪ ನೈವ್ಯಾದ ದಿಂದ ಪೂಜೆಯಂ ಮಾಡಿ ಕೈಮುಗಿದು ಕೇಳಿಕೊಳಲಾಗಿ ಸರ್ಪ (ವಂನ್ನು) ಹರಿದು ಹೋಯಿತ್ತು ತಾಯಿ ತಂದೆ ಮಕ್ಕಳು ಸಂತೋಷದಲ್ಲಿಯಿದ್ದುಕೊಂಡು ಕಾಲಕ್ಷೇಪಕ್ಕೆ ಮಾರ್ಗವಾಗಬೇಕೆಂದು ಆ ಸುಗಟೂರು ಗ್ರಾಮದ ಸುತ್ತಾ ಗಿಡವನ್ನು ಕಡಿದು ಹೊಲವನ್ನು ಮಾಡಿ ವೂಸುತ್ತ ಯಿರಲಾಗಿ ವುಳುವ ನೇಗಿಲ ಕೊನೆಗೆ ನಿಕ್ಷೇಪವನ್ನು ಯೇಳು ಕೊಪ್ಪರಿಗೆ ಶಿಕ್ಕಲಾಗಿ ಯಿ ದ್ರವ್ಯ ಶಿರ್ಕ ಮಾಡಬಾರದುಯೆಂದು ವಿಸ್ತಾರವಾಗಿ ಕಾಡುವನ್ನು ಕಡಿಶಿ ಹೊಸಕೋಟೆ ಕೋಟೆ ಕೊತ್ತಲ ಶ್ಯಾರುಪಾನು ಹಾಕಿಶಿ ಸೀಮೆ ವಿಸ್ತಾರ ಮಾಡಿ ಹೊಸಕೋಟೆಯೆಂಬ ನಾಮದೇಯ ವಿಟುಯಿೂ ಕೋಟೆವಳಗೆ ಅಯಿಮಮುಕ್ತೇಶ್ವರ ದೇವಸ್ಥಾನವನ್ನು ಕಟ್ಟಿಶಿ ತ್ತಾಮಾಂಬುಧಿ ಯಂಬದೊಡ್ಡಕೆರೆ ಕಟ್ಟಿಶಿ ಮುತ್ತೂಕೂರು ಅಗ್ರಹಾರ ಸಹ ನಿರ್ಮಿಶಿ ಯಿೂ ಮೂರಂನ್ನು ಯೆಕ ಕಾಲದಲ್ಲಿ ಪ್ರದಿಷ್ಟೆಯನ್ನು ಶಾಲಿವಾಹನ ಶಕೆ 1016ನೆ ಯುವ ಸಂವತ್ಸರ ಮಾಗ ಶುದ್ಧ 15ಲು ಪುಂಣ್ಯ ಕಾಲದಲ್ಲಿ ನಿರ್ನಯಿಸಿ ಪ್ರಭುತ್ವ ಮಾಡಿಕೊಂಡು ಶೀಮೆಗೆ ಕವೂಯಿ ಕೊಟು ಪೈಯಿಸ್ತಾರ ತಂದ್ದೂ ಶೀಮೆ ವಿಸ್ತಾರ ಮಾಡಿಕೊಂಡೂ ಯಿರಲು ಯಿೂ ಹೊಸಕೋಟೆಗೆ ಮುಖ್ಯ ಸ್ಥಳವಾಗಿ ಯಿರುವ ಗಡಿವನ್ನು ನಡಿಶಿ ಕೋಲಾರ ಶಿಡ್ಲಗಟ್ಟ ಕೋಟೆಯನ್ನು ಕಟ್ಟಿಶಿ ಪ್ರಭುತ್ವ ಮಾಡಿಕೊಂಡು ಯಿರಲಾಗಿ ಶ್ಯಾಲಿವಾಹನ ಶಕೆ 1079ನೆ ಯೀಶ್ವರ ಸಂವತ್ಸರಲು ಪೆನಗೊಂಡೆನಗರ ನರಶಿಂಗರಾಯರ ಮೇಲೆ ಚೆದುಪಟು ಚಂಗಲಪಟು ಅರಸುಗಳು ಪೊವುಜು ತೆಗೆದುಕೊಂಡು ಯುದ್ಧಕ್ಕೆ ಬಂದು ಯುದ್ಧದ ಕಾಲದಲ್ಲೂ ರಾಯರ ಪವುಜು ಆಸತ್ತೂ ಆಗಿ ರಾಯರ ಕುಟುಂಬವನ್ನೂ ಚೆದ್ದುಪಟ್ಟು ಚಂಗಲಪಟ್ಟು ಅರಸುಗಳು ತೆಗೆದುಕೊಂಡು ಹೋಗುವ ಕಾಲದಲ್ಲಿ ಯಿೂ ಹೊಸಕೋಟೆ ತಂಮೆಗವುಡರು ರಾಯರ ಶೀಮೆಯಲಿ ತಾವೂ ಯಿದ್ದು ರಾಯರ ಕುಟುಂಬವನ್ನು ತೆಗೆದುಕೊಂಡು ಹೋಗುವಾಗ ತಾವೂ ಸುಂಮನೆ ಯಿರಬಾರದು ಯೆಂದು ತಂಮ್ಮ ಸ್ವಸಾಮರ್ಥ್ಯದಿಂದ ಚೆದ್ದುಪಟ್ಟು ಚಂಗಲಪಟ್ಟು ಅರಸುಗಳ ಮೇಲೆ ಯುದ್ಧ ಮಾಡಿ ರಾಯರ ಕುಟುಂಬವನ್ನು ಬಿಡಿಶೀ ರಾಯರಿಗೆ ವಹಿಸಲಾಗಿ ರಾಯರು ಕುಟುಂಬದ ಮೊಕವನ್ನು ನೋಡಿ ಅನುಮಾನಪಟ್ಟರು ಯಿೂ ತಂಮೆಗವುಡರು ಅವಾಗ (ಯಿೂ ತಂಮೆಗವುಡರು) ಹೇಳಿದ ಮಾತು ತಂಮ ಕುಟುಂಬವಂ ನಮಗೆ ತಾಯಿ ಬಾವನೆಯಾಗಿ ನೋಡಿಕೊಂಡು ಯಿದ್ದದ್ದುವುಂಟೂ. ಆ ತಾಯಿಸ್ತಂನ್ಯಾದಲ್ಲಿ ಯಿರು ಹಾಲಂನ್ನು ನಂನ ಮೊಕದ ಮೇಲೆ ಬೀಳುತ್ತೆಂಬುದಾಗಿ ರಾಯರ ಕುಕಡೆ ಹೇಳಲಾಗಿ ಪರದೆಯಂನು ಕಟ್ಟಿಶಿ ಪರದೆ ಆಚೆ ರಾಯರ ಕುಟುಂಬ ಪರದೆಯೀಚೆ ತಂಮೆಗವುಡರು ನಿಂದಿರಲಾಗಿ ಆಚೆ ಪ್ರಕಾರಕ್ಕೆ ರಾಯರ ಕುಟುಂಬದ ಸ್ತಂನ್ಯಾದಲ್ಲಿಯಿರುವ ಹಾಲನ್ನು ಯಿೂ ತಂಮೆಗವುಡರ ಮೊಕದ ಮೇಲೆ ಬೀಳಲಾಗಿ ರಾಯರು ಮೆಚ್ಚಿ ಕೊಟ್ಟ ಬಿರುದು ಶ್ಯಾಲಿವಾಹನ ಶಕ 1079ನೆ ಬಹುದಾಂನ್ಯ ಸಂವತ್ಸರದಲು 1. .

. . 1 ಚಿಕ್ಕರಾಯರೆಂಬ ಕಿತ್ತಪು – 1 ಪಟ್ಟದ ಕತ್ತಿ–1 ಶಿಕಾ ವುಂಗರ–1 ಮುವತ್ತೆರಡು ಬಿರುದು ಯಿ ಪ್ರಕಾರಕ್ಕೆ ಶಿರೋಪಾವು ಮುಂತಾಗಿ ಕೊಟು ನೀವು ಸ್ವಸಾಮಾರ್ತ್ಯದಿಂದ ಮಾಡಿದಂತ ಹೊಸಕೋಟೆ ಕೋಲಾರ ಶಿಡ್ಲಗಟ್ಟ ಮೂರು ಸ್ಥಳವನ್ನು ಸರ್ವಮಾನ್ಯವಾಗಿ ಅನುಭವಿಶಿಕೊಂಡು ಯಿರಿಯೆಂದು ಮಂನಿಶಿದರು. ಪ್ರಭುತ್ವ ಮಾಡಿಕೊಂಡು ಯಿರಲಾಗಿ ಯಿ ತಂಮೆಗವುಡರಿಗೆ ಹಿರಿಯ ಕೊಮಾರ್ರು ಐಮಾಗವುಡರು ಮಾರನೆಯಾವರು ಶಿವನೆಗವುಡರು ಯಿ ತಂಮೆಗವುಡರು ಕಾಲವಾದ ಮೇಲೆ ವಭರಿಗೆ ವಭರು ಅನುಕೂಲವಿಲದೆ ಶೀಮೆ ಹಂಚಿಕೊಂಡ ವಿವರಾ॥ 1 ಹೊಸಕೋಟೆ ದೊರೆ ಮುಂಮಡಿ ಐಮಗವುಡರ ಕೊಮಾರ್ರು ವೀರ ನಂಜುಂಡ ತಂಮೆಗವುಡರು 1 ಯಿವರ ಕೊಮಾರ್ರು ಚಿಕರಾಯ ತಂಮೆಗವುಡರು ಪ್ರಭುತ್ವ ಮಾಡಿಕೊಂಡು ಯಿರಲಾಗಿ ಅರಾಂಣ್ಯದಲ್ಲು ಆನೆಗಳು ಯಿದೆ ಯಂಬುದಾಗಿ ರಾಯರ ಕಡೆಯಿಂದ ವೂಳಿಗದವರು ಬಂದು ಯೀ ತಾಲ್ಲೂಕದಲ್ಲಿ ಆನೆಗಳು ಯಿದೆ ಯಿಪ್ಪತ್ತು ಆನೆ ಬೇಕು ಯಂಬುದಾಗಿ ವುತ್ತರ ಸಹ ಬರಲಾಗಿ ಅವಾಗ ಯಿ ಹೊಸಕೋಟೆಗೆ ದಕ್ಷಿಣ ದಿಕ್ಕಿನಲ್ಲಿ ಯಿದೆಯಂಬುದಾಗಿ ಸಮಾಚಾರ ತರಲು ಯಿ ತಂಮೆಗವುಡರು ಸ್ವಾರಿ ಬರಲಾಗಿ ಅರಾಂಣ್ಯದಲ್ಲು ಹುಲಿಕಲ್ಲು ಬಂಡೆ ಬಳಿಯಲು ಆನೆ ತವುತ ಗಿಣಿ ಆನೆಗಳು ಯಿಡಿಶಿ ರಾಯರಿಗೆ ಕಳುವಿಸಿ ಯಿ ಆನೆಗಳು ಶಿಕ್ಕಿದ ಸ್ತಳದಲ್ಲು ವಂದು ಸ್ತಳ ಮಾಡಬೇಕೆಂಬುದಾಗಿ ವಂದು ಗ್ರಾಮವನ್ನು ಕಟ್ಟಿಶಿ ಅಲ್ಲಿ ತಂಮ ಕಡೆಯಿಂದಾ ಲಿಂಗೆಗವುಡ ಯಂಬುವನ ಮಾಡಿಸಿ ಯಿರಲಾಗಿ ಅವಾಗ ಆ ಗ್ರಾಮದ ಬಳಿ ನಿಂಗೆಗವುಡನಕೆರೆ ಲ್ಲಿಂಗೆ ಗವುಡನ ತೋಪು ಬಾವಿ ಸಹ ಕಟ್ಟಿಶಿ ಯಿರಲಾಗಿ ಆರಾಂಣ್ಯದಲ್ಲು ತೋಟಾಗಾರ್ರುಪಾಳ್ಯ ಪಂಟ್ಲುಗೆರೆ ಶಿಡಿಹೊಸಕೋಟೆ ಮಾಸ್ತಿ ಮಾದಾಪಂಟ್ಲದಲ್ಲಿ ತೋಟಾ ಗಾರ್ರು ಯಿದ್ದು ಕೊಂಡು ಯಿ ಲಿಂಗೆಗವುಡನ ಗ್ರಾಮದ ಮೇಲೆ ಕಲಹ ಮಾಡಲಾಗಿ ಆ ಲಿಂಗೆ ಗವುಡನ್ನು ಹೊಸ ಕೋಟೆಗೆ ಚಿಕ್ಕರಾಯ ತಂಮೆಗವುಡರ ಸಂಗತ ಅರಿಕೆ ಪಡಿಸಲಾಗಿ ಅವಾಗ ತಮಮೆಗವುಡರು ಪೊವಜು ತೆಗೆದುಕೊಂಡು ಹೋಗಿ ತೋಟಾಗಾರ್ರ ಸ್ಥಳಗಳ ಮೇಲೆ ಯುದ್ಧ ಮಾಡಿ ಸ್ತಳಗಳ ಸ್ವಾಧೀನ ಮಾಡಿಕೊಂಡು ಲಿಂಗೆಗವೂಡನ್ನು ಯಿ ರುವ ಸ್ತಳದಲ್ಲು ಕೆಲವು ಪೊವುಜು ಮಾಡಿಸಿ ಯಿ ಹೊಸಕೋಟೆಯು ಸಹ ಪ್ರಭುತ್ವ ಮಾಡಿಕೊಂಡು ಯಿರಲಾಗಿ ಕೆಲವೂ ದಿವಸದ ಮೇಲೆ ವುತ್ತರ ದೇಶದಿಂದಾ ಶ್ಯಾಲಿವಾಹನ ಶಕ 1328ನೇ ವ್ಯಾಯ ಸಂವತ್ಸರದಲ್ಲು ಪೆಷ್ವಾಮಿಯವರ ಕಡೆಯಿಂದಾ ಯೆಕೋಜಿ ಶಿವೋಜಿ ಯಂಬ ಸರದಾರ್ರು ಪವುಜು ಸಮೇತವಾಗಿ ಬಂದು ಹೊಸಕೋಟೆ ಮೇಲೆ ಬಹಳ ಯುದ್ಧ ಮಾಡಿ ಕಾಶಿಂಕಾನರೆಂಬ ಸರದಾರ್ರ ಕವೊಲಿನಲ್ಲಿ ಹೊಸಕೋಟೆ ಸ್ವಾಧೀನ ಮಾಡಿಕೊಂಡು ದಕ್ಷಿಣ ದಿಕ್ಕಿನಲ್ಲಿ ಆನೆಮಲೆಯಾಗಿಯಿರುವ ತೊಟಗಾರ ಸ್ತಳವನ್ನು ನಮಗೆ ಕೊಟ್ಟು ಅಲ್ಲಿ ಸ್ಥಳಮನೆ ಮಾಡುವ ಪರಿ ಯಂತ್ರ ಆರು ತಿಂಗಳು ಯಿ ಹೊಸಕೋಟೆಯಲ್ಲಿ ಯಿಂದ್ದು ಅಲ್ಲಿ ಸ್ತಳಮನೆ ಆದ ತರುವಾಯ ತಂಮ ಜಿಂದಾಗಾನಿ ಸಹಾ ವಾಗಿ ನವೂಸಾಗಿ ಹೋಗುವ ಮೇರೆಗೆ ಕರಾರು ಆಯಿತ್ತು ಅವಾಗ ಲಿಂಗೆಗವುಡನ ವ ಶಾ ಕೆ ಹಣ ಹೊಂನ್ನು ಕೊಟು ಅಲ್ಲಿ ದೊಡದಾಗಿ ವೂರು ಕಟ್ಟಿಶಿ ಕೆರೆಯಂನ್ನು ಕಟ್ಟಿಸುವ ಮೇರಿಗೆ ಕಳುವಿಸಿ ಕೊಡಲಾಗಿ ಆವಾಗ ಲಿಂಗೆ ಗವುಡನು ಹೋಗಿ ಗಿಡವಂನ್ನು ಕಡಿಶಿ ಸ್ವಲ್ಪಪವಾಗಿ ಕೋಟೆಯಂನ್ನು ಹಾಕಿಶಿ ದೊಡ ಕೆರೆಯನ್ನು ಕಟಿಶಿ ದೊರೆ ಬಳಿಗೆ ಹೇಳಿಕಳುವಿಸಲಾಗಿ ಅವಾಗ ತಂಮೆಗವೂಡರು ಬಂದು ಅಮೃತ ಮಲ್ಲಿಕಾರ್ಜುನ ದೇವಸ್ಥಾನ ತಂಮಸಂದ್ರ ಅಗ್ರಹಾರ ಸಹ ಮಾಡಿಶಿ ಆನೆಕಲ್ಲು ಯಂಬುದಾಗಿ ನಾಮದೇಯವಿಟು ಶ್ಯಾಲಿವಾಹನ ಶಕ 1329ನೆ ಸರ್ವಜಿತು ಸಂಮತ್ಸರ ಮಾಗಮಾಸದಲು ಆನೆಕಲ್ಲು ಸಂಸ್ತಾನಕ್ಕೂ ಅಮೃತ ಮಲ್ಲಿಕಾರ್ಜುನ ದೇವರಿಗೂ ತಂಬಾಬುಧಿಯೆಂಬ ದೊಡ್ಡಕೆರೆಗೂ ತಂಮ ಸಂದ್ರ ಆ ಗ್ರಾಮದಕ್ಕೂ ಯೇಕ ಕಾಲದಲ್ಲಿ ಪ್ರದಿಕ್ಷೆಯಂನ್ನು ಮಾಡಿಶಿ ಪುನಹ ಆನೇಕಲ್ಲು ಅತ್ತಿಬೆಲೆ ಕೋಟೆ ವಿಸ್ತಾರವಾಗಿ ಶ್ಯಾರುಪಾನ ಹಾಕಿಶಿ ಶೀಮೆ ವಿಸ್ತಾರ ಮಾಡಿಕೊಂಡು ಪ್ರಭುತ್ವ ಮಾಡಿಕೊಂಡು ಯಿರಲಾಗಿ 1 ಚಿಕ್ಕರಾಯ ತಂಮೆಗವುಡರ ಕೊಮಾರ್ರು–1 ಮುಂಮಡಿ ಕರಡು ತಂಮೆಗವುಡರು–1 ಯಿವರ

ಕೊಮಾರ್ರು ಮುಂಮಡಿ ಚಿಕರಾಯರು ತಂಮೆಗವುಡರು 1 ಯಿವರ ಕೊಮಾರ್ರು ವೀರ ನಂಜುಂಡ ತಂಮೆಗವೂಡರ್ರು– ಪ್ರಭುತ್ವ ಮಾಡಿಕೊಂಡು ಯಿರಲಾಗಿ ಶ್ಯಾಲಿವಾಹನ ಶಕೆ 1679ನೆ ಬಹುಧಾನ್ಯ ಸಂವತ್ಸರಲು ನಾಬಬು ಹೈದರಲ್ಲಿ ಬಹುದರ್ರು ಸಂಸ್ತಾನಕೆ ಗದ್ದುಕೊಂಡು ಬೆಂಗುಳೂರಲ್ಲು ಮೂವತ್ತ ನಾಲ್ಕು ವರುಷ ಶರೆ ಹಾಕಿ ಯಿರಲಾಗಿ ಶಾಲಿವಾಹನ ಶಕೆ 1713ನೆ ವಿರೋಧಿ ಕೃತುಸಂವತ್ಸರದಲು ಲಾಟು ವಾಲಿಸು ಮೆಂಡಿಸು ಬಹದರರರ್ರು ಶ್ರೀರಂಗಪಟಲದ ಮೇಲೆ ಪೊವುಜು ತೆಗೆದುಕೊಂಡು ಬರುವಲ್ಲು ಬೆಂಗುಳೂರ ಮೇಲೆ ಲಡಾಯಿ ಮಾಡಿ ಹಲ್ಲ ಮಾಡಿ. . . ಣ್ಯ ಹಾಕಿದಾಗ ವೀರ ನಂಜು ತಮ್ಮೆಗವುಡರ ಕೊಮಾರ್ರು ಮುಂಮಡಿ ಐಮಗವು ಡರು ವುಬಯ ದಣಿಗಳಿಗೂ ಬೇಟಿ ಆಗಿ ನಜರುಹುಜ ರಾಯಿಶಿ ಕೈಫಿಯತ್ತೂ ಸಂಸ್ತಾನದ ವಿದಿಮಾನ ಹೇಳಿ ಕೊಂಡದ್ದರಿಂದಾ ಸಂನ್ನದ್ದು ಶಿರೋನಾವೂ ಕೊಟು ಸಂಸ್ತನಕ್ಕೆ ಅಪ್ಪಣೆ ಕೊಡಲಾಗಿ ಅವಾಗ ಆನೆಕಲ್ಲಿಗೆ ಟಣ್ಯ ಹಾಕಿ ದೊರೆತನ ಮಾಡಿಕೊಂಡೂ ಯಿರಲಾಗಿ ಶ್ರೀರಂಗಪಟ್ಟಣ ಸಲ್ಲ ಆಗಿ ಪೊವುಜು ಹಿಂದಕ್ಕೆ ಕಣಿವೆ ಕೆಳಗೆ ಬರುವಲ್ಲು ನವುಂನ್ನು ಕುಂಪಣಿ ಸೀಮೆಯಲ್ಲಿ ಯಿರಲಾಗಿ ಶ್ಯಾಲಿವಾಹನ ಶಕೆ 1715 ಪ್ರಮಾದೀಚ ಸಂವತ್ಸರದಲು ಐಯಮಗವುಡರ ಪಟ್ಟದ ಶ್ರೀ ಗವುರಂಮನವರು ಕಿರಿ ಹೆಂಡತಿ ಚಂನಂಮನ್ನು ಚಿಕಂಮನ್ನು ದೊಡ್ಡ ದೊರೆ ಹೆಂಡತಿ ಕೆಂಪಮ್ಮ ಪಾರ್ವತಂಮನ್ನು ಯಿೂವರು ಪ್ರಕೃತ್ಯಾ ದಲ್ಲಿ ಅನುಕೂಲವಿಲ್ಲದ್ದರಿಂದ ಕರ್ನಲು ಅಲಕ ಸೌಂದರ ರೀಟು ಬಹದದವರು ಕರಶಿ ಕೈಫಿಯಿತ್ತು ವಿಚಾರಿಶಿ ಕೆಂಪಮ್ಮಾ ಪಾರ್ವತೆಂಮ್ಮನವರಿಗೆ ಯಿಂದಕ್ಕೆ ದೊಡ್ಡ ದೊರೆ ಯಿರುವಾಗೇ ಪಾಲು ತೇರುಗಡೆಯಾಗಿ ಯಿರೋದ್ರರಿಂದ ಸಂಸ್ತಾನದ ಹಕ್ಕಿಗೆ ಬಾಧಕವಿಲ್ಲವೆಂದು ಚಂನಂಮ್ಮಗೆ ವಂದು ಭಾಗ ತೇರುಗಡೆ ಮಾಡಿ ಚಿಕ್ಕಂ ಮನವ ಪಾದಲ್ಲಿ ಐಮಗವುಡರು ಕೊಟ್ಟ ವಡಿವೆ ಅವಳಿಗೆ ಕೊಡಿಸಿ ಪೈಸಲ್ ಮಾಡಿ ಪೈಸಲು ನಾಮ ಬರೆಶಿಕೊಟು. ಐಮಗವುಡರ ಪಟ ಶ್ರೀಗವುರಂಮ್ಮನವರಿಗೆ ಕರ್ನಲು ಆಲಕ ಸೌಂದರ ರೀಟು ಬಹದರವರು ಹೇಳಿದ್ದು ಕ್ರಿಷ್ಣ ಗಿರಿಯಲ್ಲಿ ನೀವೂ ಯಿೂರಿ ಸ್ವಲ್ಪ ದಿನ ಸದರಿ ನಿಂಮ್ಮ ಸಂಸ್ತಾನ ನಿಮಗೆ ದೇವರು ದಯಾ ಮಾಡೆನು ಯಂಬುದಾಗಿ ಅಪ್ಪಣೆ ಕೊಡಲಾಗಿ ಆದೆ ಪ್ರಕಾರಕ್ಕೆ ಕುಂಪಿಣಿಯವರಿಗೆ ದವಲಾ ಮಾಡಬೇಕ್ಕು ಯಂಬುದಾಗಿ ಸದಾ ದೇವರಿಗೆ ಪಾರ್ತನೆ ಮಾಡಿಕೊಂಡು ಯಿರಲಾಗಿ ಶ್ಯಾಲಿ ವಾಹನ ಶಕೆ 1720 ಕಾಳಾಯುಕ್ತಿ ಸಂವತ್ಸರದಲು ಕುಂಪಣಿ ದಂಡು ಶ್ರೀರಂಗಪಟ್ಟಣಕ್ಕೆ ಬರುವಲು ಕರ್ನಲು ಅಲಾಕ ಸಾದರ ರೀಟು ಬಹದರವರು ಕರಶಿ ನಿಂಮಸ್ತಳ ವಂತರ ಕರಶಿ ದಂಡಿಗೆ ರಸ್ತೂಮ ವೇಶಿಯಂನ್ನು ನೆಡಿಶಿ ಖಬರ ವಗ್ಯೆರೆ ಬಾತಮಯನ್ನು ಜನವಿಟ್ಟು ಹಾಜರಾಗಿಯಿರಬೇಕೆಂದು ಅಪ್ಪಣೆ ಕೊಡಲಾಗಿ ಅಪ್ಪಣೆ ಪ್ರಕಾರಕ್ಕೆ ದಂಡಿಗೆ ರಸ್ತೂಮ ವೇಶಿಯು ನಡೆಸುವ ಬಗ್ಗೆ ಬೇಪಾರಿ ವರ್ತಕಜನವಿಟ್ಟು ಆ ಖಬರ ವಗ್ಯೆರ ಬಾತ್ತಮ ಜನವಿಟ್ಟು ಕಾದುಕೊಂಡು ಯಿರಲಾಗಿ ಆ ತರುವಾಯ್ಯ ಕರ್ನಲ್ಲು ಅಲಕ ಸೌಂದರರೀಟು ಬಹದರವರು ಜನಮಹಾರಿಸು ಬಹದರವರ ದಂಡು ಬರೋಮಾರ್ಗ ಕಾದುಕೊಂಡೂ ಆ ಮೂರು ಪಾಳಿಯಲ್ಲಿ ಯಿೂ ಜನಲು ಹರಿಸಬ ಹದರರ ಬೇಟಿ ಮಾಡಿಶಿ ಪ್ರಕಾರಕ್ಕೆ ನೆಡಿಶಿ ಕೊಡಲಾದಿತ್ತು ಯೆಂಬದಾಗಿ ಕವುಲು ವುತ್ರ ಬರಶಿ ಕಳಿವಿಸದರಿಂದ ಅಪ್ಪಣೆ ಪ್ರಕಾರಕ್ಕೆ ಆ ಮೂರು ಬಳಿಲ್ಲಿ ಕಾದುಕೊಂಡು ಯಿದ್ದು ದಂಡಿನ ಕುಡಾ ಪೈಗಾಟು ಶೀಮೆಗೆ ರಾದಾರಿ ತೆಗೆದುಕೊಂಡು ಹೋಗಲಾಗಿ ಹೊಸೂರು ತಾಲೂಕು ಕೆಲಮಂಗಲ ಮಜರಿನಲ್ಲಿ ಜನಲ್ಲು ಹಾರಿಸು ಬಹದರವರು ನಂಮ ಮೆನತ್ತಾದಬೆ ಯಾಮ ಮಾಡಿ ಚಿಕ್ಕರಾಯರ ಹೆಸರಿನಲ್ಲೂ ಸಂನದೂ ಶಿರೋನಾವೂ ಕೊಟ್ಟೂ ಸಂಸ್ತಾನಕ್ಕೆ ಅಪ್ಪಣೆ ಕೊಡಲಾಗಿ ಆನೇಕಲ್ಲು ಮೇಲೆ ಲಡಾಯಿ ಮಾಡಿ ಸುಲತ್ತಾನ ಟಾಣ್ಯ ತೆಗೆಸಿ ಟಾಣ್ಯ ಹಾಕಿಕೊಂಡು ಕುಂಪಣಿ ಕೆಲಸ ಮುಕ್ಯವಾಗಿ ಸಂಸ್ತಾನದಲ್ಲಿ ದೊರೆತನ ಮಾಡಿಕೊಂಡು ಯಿದೆವೂ ಶ್ಯಾಲಿವಾಹನ ಶಕೆ 1721ನೆ ಶಿರಾರ್ತಿ ನಾಮ ಸಂಮತ್ಸರ ಶ್ರಾವಣ ಮಾಸದಲೂ ಸಂಸ್ತಾನ ಮೈಸೂರಿಗೆ ಶೇರಿತೆಂದು ಮೈಸೂರವರ ಕಡೆ ಅಮಲರು ಬಂದೂ ಜೆಪ್ತಿ ಮಾಡಲಾಗಿ ಕುಂಪಣಿಗೆ ಶೇರಿದ ಪಾಳೆಗಳು ಅಂಕುಸಗಿರಿ ಸುಳಿಗಿ (ರಿ) ಬಗಲೂರು

ಮುಂತಾಗಿ ನೆಡಶಿ ಕೊಟ್ಟು ಯಿದಿದಾಗಿ ನಂಮ ಸಂಸ್ತಾನವು ನಮಗೆ ಕೊಡಬೇಕು ಅಹಬೆತ್ತು ಯಿಂಯತಲಪರ. . . ಕೀರ್ತಿ ಪೂರ್ತಿ ನವಾಸಿ ಯಿವೂ. . ಯಂಬದಾಗಿ ಚಂನಪಟದಲ್ಲಿ ಲಾಟು ಬಹದರವರುರಿಗೆ ಕೈಪಿಯತ್ತು ಬರೆದುಕೊಡಲಾಗಿ ಕರಿಕಟ್ಟಲ್ಲಿ ಅಲೆ. . . ಮಾಡಿ ಯಿ ಕೈಪಿಯತ್ತು ಮೇಲೆ ಕ್ಲೋಸು ಬಹದರವರಿಗೂ ಪೂರ್ನಯ್ಯನವರಿಗೂ ಬರದು ಕೊಟ್ಟರು ಯಿ ಕೈಪಿಯತ್ತು ಕೊಡಲಾಗಿ ಕಚೇರಿಲಿ ಪಂಚರಾಗಿಯಿರಿ ಯಂಬುದಾಗಿ ಹೇಳಿದರು ಕೆಲದಿವಸದ ಮೇಲೆ ಸಾವಿರ ವರಹ ಕೊಡಿಸುತ್ತೇವೆ ಯಿವಾಗೆ ನೆಂಮದಿಯಾಗಿಯಿರಿ ಮುಂದೆ ತೆರುಗಡೆ ಮಾಡಿ. . . . ಯಂಬುದಾಗಿ ಹೆ. . . ಯ. . . ನಮ ಸಂಸ್ತಾನ ನನ. . ಗೆ ಕೊಡಿ. . . ಕುಂಪಣಿ ಶೀಮೆ. ....

1. ನಂ. 72, 1ನೇ ಅಡ್ಡರಸ್ತೆ, ಲಕ್ಕಸಂದ್ರ, ಬೆಂಗಳೂರು–560030

2. ಈ ವಂಶೀಯರ ಶಾಸನ, ಸಾಹಿತ್ಯ ಇತ್ಯಾದಿಗಳನ್ನು ಆಧರಿಸಿ ಶ್ರೀ ಪಿ.ವಿ. ಕೃಷ್ಣಮೂರ್ತಿಯವರು 'ಸುಗಟೂರು ವೀರಶೈವ ಅರಸು ಮನೆತನ' ಎಂಬ ಪುಸ್ತಿಕೆಯನ್ನು ರಚಿಸಿದ್ದು, ಅದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುತ್ತದೆ.

20. ಸುಗುಟೂರು ಅರಸರು

ಶ್ರೀಮತಿ ಗಂಗಾಂಬಿಕೆ. ಎಸ್

ಬೆಂಗಳೂರು ನಗರ ಜಿಲ್ಲೆಯ ದಕ್ಷಿಣಕ್ಕಿರುವ ಆನೇಕಲ್ ತಾಲೂಕು ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಹೊಸಕೋಟೆ, ಹೊಸೂರು, ಡೆಂಕಣಿಕೋಟೆ ಪ್ರದೇಶಗಳು ವಿಜಯನಗರದ ಸಾಳುವ ಅರಸರ ಕಾಲದಿಂದಲೂ ಅವರ ಅಮರನಾಯಕರಾಗಿದ್ದ ಸುಗುಟೂರು ಅರಸರ ಆಳ್ವಿಕೆಗೆ ಒಳಪಟ್ಟಿದ್ದವು. ಪ್ರಧಾನವಾಗಿ ಆನೇಕಲ್ ಪ್ರದೇಶದಲ್ಲಿ ಸುಗುಟೂರು ಅರಸರ ಆಳ್ವಿಕೆಯನ್ನು ಗ್ರಹಿಸುವ ಪ್ರಯತ್ನ ಈ ಲೇಖನದ ಉದ್ದೇಶವಾಗಿದೆ.

ಸುಗುಟೂರು ಅರಸರ ಇತಿಹಾಸ ರಚನೆಗೆ ಇರುವ ಆಕರಗಳೆಂದರೆ,

1. ಇವರ ಆಳ್ವಿಕೆಗೊಳಪಟ್ಟ ಪ್ರದೇಶಗಳಲ್ಲಿ ದೊರೆತಿರುವ ನೂರಕ್ಕೂ ಹೆಚ್ಚು ಶಾಸನಗಳು
2. ಸುಗುಟೂರು ಅರಸರಲ್ಲಿ ಪ್ರಸಿದ್ಧನಾದ ಮುಮ್ಮಡಿ ತಮ್ಮೇಗೌಡನು ವಿರಚಿಸಿದ 'ಶಂಕರಸಂಹಿತೆ' ಎಂಬ ಷಟ್ಪದಿ ಕಾವ್ಯ
3. ಮುಮ್ಮಡಿ ತಮ್ಮೇಗೌಡನ ಆಶ್ರಯದಲ್ಲಿದ್ದ ಸೆಜ್ಜೆಯ ಸಿದ್ಧಲಿಂಗಾರ್ಯ ಮತ್ತು ಬದ್ದೆವೀಟದತ್ತಯ್ಯರ ಕೃತಿಗಳು ಮತ್ತು ಅಜ್ಞಾತ ಕವಿಯೋರ್ವನ 'ಇಮ್ಮಡಿ ತಮ್ಮರಾಯ ಕೆಂಪರಾಯನ ಪದಗಳು' ಎಂಬ ಕೆಂಪೇಗೌಡ ಜಯಪ್ರಶಸ್ತಿ.
4. ಬೆಂಗಳೂರು, ಕೋಲಾರ, ಮೈಸೂರು ಮತ್ತು ಉತ್ತರ ಆರ್ಕಾಟ್ ಜಿಲ್ಲೆಗಳ ಗ್ಯಾಜೆಟಿಯರ್‌ಗಳು
5. ಪತ್ರಾಗಾರಗಳಲ್ಲಿ ದೊರೆತಿರುವ ದಾಖಲೆಗಳು ಇತ್ಯಾದಿ.

ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಈ ಅರಸರ ಮೂಲನೆಲೆಯಾಗಿದ್ದ ಸುಗುಟೂರನ್ನು 'ಸುಕುಟೂರು', 'ಸುಗ್ಗುಟೂರು', 'ಸುಗುಟೂರು' ಎಂಬುದಾಗಿ ಕರೆಯಲಾಗಿದೆ. ಸುಗುಟೂರಿಗೆ 'ಅರುಮೊಳಿದೇವ ಚತುರ್ವೇದಿ ಮಂಗಲಂ', 'ದಕ್ಷಿಣದ ಅಹಿಚ್ಛತ್ರಪುರ' ಎಂಬ ಹೆಸರುಗಳಿದ್ದವು.

ಮೂಲತಃ ಸುಗುಟೂರು ಅರಸರು ಮೊರಸು ಒಕ್ಕಲಿಗ ಪಂಗಡಕ್ಕೆ ಸೇರಿದ ರೈತರು. 'ಆನೇಕಲ್ ಪಾಳೆಯಗಾರರ ಕೈಫಿಯತ್ತಿ'ನಲ್ಲಿ ಇವರ ಮೂಲದ ಬಗ್ಗೆ ಹೀಗೆ ಹೇಳಲಾಗಿದೆ: ಕ್ಷೀರನದಿ (ಪಾಲಾರ್)ಯ ಪೂರ್ವಕ್ಕಿದ್ದ ಆಲಕೂರು ವಡೇರಹಳ್ಳಿ ಎಂಬ ಗ್ರಾಮದಲ್ಲಿ ದೇವಪ್ಪಗೌಡ ಎಂಬುವವನಿದ್ದನು. ಅವನಿಗೆ ತಮ್ಮೇಗೌಡ ಮತ್ತು ಬೈಯ್ಯಮ್ಮ ಎಂಬ ಮಕ್ಕಳಿದ್ದರು. ಬೈಯ್ಯಮ್ಮನ ಪರಮ ಲಾವಣ್ಯಾತಿಶಯಕ್ಕೆ ಕಂಚಿ ದೊರೆಯು ಸೋತು, ವಿವಾಹ ನಿಷ್ಕರ್ಷೆ ಮಾಡಿಕೊಂಡು ಬರಲು ತನ್ನ ನಿಯೋಗಿಗಳನ್ನು ಕಳುಹಿಸುತ್ತಾನೆ. ಅವರ ಮಾತನ್ನು ಕೇಳಿದ ದೇವಪ್ಪಗೌಡರು ದೊರೆಗೆ ಹೆಣ್ಣು ಕೊಟ್ಟರೆ ತಮ್ಮ ಕುಲಗೆಡುತ್ತದೆ; ದೇಶ ಬಿಟ್ಟು ಹೋಗುವುದೇ ಸೂಕ್ತ ಎಂದೆಣಿಸುತ್ತಾನೆ. ಅದೇ ಇರುಳು ಬಂಡಿಗಳನ್ನು ಕಟ್ಟಿಕೊಂಡು ತನ್ನ ಬಳಗವೆರಸಿ ಪಡುವಣ ದೇಶದೆಡೆಗೆ ಪ್ರಯಾಣ ಬೆಳೆಸುತ್ತಾನೆ. ಆದರೆ ಪಾಲಾರ್ ನದಿಯೆಡೆಗೆ ಸಮೀಪಿಸಿದಾಗ ನದಿಯು ತುಂಬಿಹರಿಯುತ್ತಿದ್ದುದನ್ನು ಕಂಡು ದಾಟಲಾಗದೆ ಚಿಂತಾಕ್ರಾಂತರಾಗುತ್ತಾರೆ. ಆಗ ಬೈಯ್ಯಮ್ಮ ಗಂಗಾಭವಾನಿಯನ್ನು ಪ್ರಾರ್ಥಿಸಲಾಗಿ, ಕ್ಷೀರನದಿಯು ಭಾಗವಾಗಿ

ದಾರಿಕೊಡುತ್ತದೆ. ಏಳು ಬಂಡಿಯವರು ಸುರಕ್ಷಿತವಾಗಿ ಈಚೆ ದಡವನ್ನು ಸೇರುತ್ತಾರೆ. ಅಷ್ಟರಲ್ಲಿ ಕಂಚಿದೊರೆಯು ತನ್ನ ಮಂದಿ ಮಾರ್ಬಲ ಸಹಿತ ಹೊಳೆಯ ಆಚೆ ದಡಕ್ಕೆ ಬಂದನಾದರೂ ಅನ್ಯಮಾರ್ಗವಿಲ್ಲದೆ ಹಿಂದಿರುಗುತ್ತಾನೆ. ಇತ್ತ ದೇವಪ್ಪಗೌಡನ ಕುಟುಂಬದವರು ಪಡುವಣ ದೇಶದಲ್ಲಿ ಸೂಕ್ತ ಸ್ಥಳವನ್ನು ಗುರುತಿಸಿ, ಕಾಡು ಕಡಿದು ಬಯಲು ಮಾಡಿ 'ಸುರಗುತ್ತಳಿ' ಕಟ್ಟಿಕೊಂಡು ನೆಲೆಸುತ್ತಾರೆ. ಆದ್ದರಿಂದಲೇ ಈ ಸ್ಥಳಕ್ಕೆ ಸುಗುಟೂರು ಎಂದು ಹೆಸರಾಯಿತು. ಇದು ಈಗಿನ ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆ ಸಮೀಪದ ಸುಗುಟೂರೇ ಆಗಿದೆ. ಮುಂದೆ ಈ ವಂಶಜನಾದ ಹಿರಿಯ ತಮ್ಮಪ್ಪಗೌಡನು ಹೊಸದಾಗಿ ಕೋಟೆಯನ್ನು ಕಟ್ಟಿಸಿ ತಮ್ಮ ನೆಲೆಯನ್ನು ಸುಭದ್ರಗೊಳಿಸಿದನು (ಈ ಕೋಟೆಗೆ ಹೊಂದಿಕೊಂಡಿದ್ದ ಪ್ರದೇಶಗಳು ಸೇರಿ ಈಗಲೂ ಹೊಸಕೋಟೆ ಎಂದು ಕರೆಯಲಾಗುತ್ತಿದೆ). ಕಾಲಾನಂತರದಲ್ಲಿ ಸುಗುಟೂರು ಸಂಸ್ಥಾನವು ಪೂರ್ವಕ್ಕೆ ಮಾಲೂರು, ಕೋಲಾರ, ಮುಳಬಾಗಿಲು, ಉತ್ತರಕ್ಕೆ ಶಿಡ್ಲಘಟ್ಟ, ದಕ್ಷಿಣಕ್ಕೆ ಆನೇಕಲ್ ಮತ್ತು ಹೊಸೂರು, ಡೆಂಕಣಿಕೋಟೆಯ ಹಲವು ಭಾಗಗಳನ್ನು ಒಳಗೊಂಡಿದ್ದಿತು. ಈ ಪ್ರದೇಶಗಳು ಮೊದಲು ಬಾಣ, ಗಂಗ, ನೊಳಂಬ, ಪಲ್ಲವ, ಚೋಳ, ಹೊಯ್ಸಳರ ಆಳ್ವಿಕೆಗೂ ಒಳಪಟ್ಟಿದ್ದವು.

ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಜೋಡಿಪುರದ ಶಾಸನವು ಸುಗುಟೂರು ಅರಸರ ಆಳ್ವಿಕೆಯನ್ನು ಉಲ್ಲೇಖಿಸುವ ಪ್ರಾಚೀನ ಶಾಸನವಾಗಿದೆ. ಕ್ರಿ. ಶ. 1422ಕ್ಕೆ ಸಲ್ಲುವ ಈ ಶಾಸನದಲ್ಲಿ ಸುಗುಟೂರು ತಮ್ಮೇಗೌಡನ ತಂದೆಯ ಹೆಸರು 'ದೇವಪ್ಪಗೌಡ' ಎಂದಿದೆ. ಆದರೆ ಕ್ರಿ. ಶ. 1379ರ ಹೊಸಕೋಟೆ ತಾಲ್ಲೂಕಿನ ಶಾಸನವೊಂದರಲ್ಲಿ ನಾಗಣ್ಣ ಒಡೆಯರ ಕುಮಾರ ದೇವಪ್ಪ ಒಡೆಯ ಎಂದಿದೆ. ಈ ಎರಡು ಶಾಸನಗಳಲ್ಲಿ ಉಕ್ತವಾಗಿರುವ 'ದೇವಪ್ಪ' ಅಭಿನ್ನರೇ ಎಂಬುದು ತೀರ್ಮಾನವಾಗಬೇಕಾಗಿದೆ. ಸದ್ಯಕ್ಕೆ ವಿದ್ವಾಂಸರ ಅಭಿಪ್ರಾಯದಂತೆ, ಜೋಡಿಪುರದ ಶಾಸನೋಕ್ತ ದೇವಪ್ಪಗೌಡನೇ ಸುಗುಟೂರು ಅರಸರ ಮೂಲಪುರುಷ.

ಸುಗುಟೂರು ಸಂಸ್ಥಾನದ ದಕ್ಷಿಣಕ್ಕಿರುವ ಆನೇಕಲ್ ಮೊದಲು ಜನವಸತಿ ಪ್ರದೇಶವಾಗಿರಲಿಲ್ಲ. ದಟ್ಟಾರಣ್ಯವಿದ್ದ ಈ ಪ್ರದೇಶದಲ್ಲಿ ಆನೆಗಳ ಬಾಹುಳ್ಯವಿದ್ದುದರಿಂದ ಇದಕ್ಕೆ 'ಆನೆಮಲೆ' ಎಂಬ ಹೆಸರಿತ್ತು. ಈ ಅರಣ್ಯದಿಂದ 20 ಆನೆಗಳನ್ನು ಹಿಡಿದು ಕಳುಹಿಸುವಂತೆ ಮುಮ್ಮಡಿ ತಮ್ಮೇಗೌಡನಿಗೆ ವಿಜಯನಗರದ ಅರಸರಿಂದ ಕರೆಬಂದಿತು. ಅವರ ನಿರೂಪದ ಮೇರೆಗೆ ಆನೆಮಲೆ ಪ್ರದೇಶದ ಹುಲಿಕಲ್ಲು ಬಂಡೆ ಬಳಿಯಲ್ಲಿ ಆನೆಗಳನ್ನು ಹಿಡಿದು ರಾಯರಿಗೆ ಕಳುಹಿಸಲಾಯಿತು. ತದನಂತರ ಮುಮ್ಮಡಿ ತಮ್ಮೇಗೌಡನು ಈ ಸ್ಥಳದಲ್ಲಿ ಊರೊಂದನ್ನು ಕಟ್ಟಿಸಿ, ಅಲ್ಲಿ ತಮ್ಮ ಕಡೆಯವನಾದ ಲಿಂಗೇಗೌಡ ಎಂಬುವವನನ್ನು ನೇಮಿಸಿದನು. ಅಲ್ಲದೆ ಲಿಂಗೇಗೌಡನಕೆರೆ, ಲಿಂಗೇಗೌಡನ ತೋಪು, ಬಾವಿಗಳನ್ನು ಸಹ ನಿರ್ಮಿಸಲಾಯಿತು. ಕೆಲಕಾಲದಲ್ಲಿಯೇ ಲಿಂಗೇಗೌಡನಿಗೆ ಈ ಗ್ರಾಮದ ನೆರೆಹೊರೆಯವರಾದ ತೋಟಗಾರ್ರಪಾಳ್ಯ, ಪಂಟ್ಲುಗೆರೆ, ಸಿಡಿಹೊಸಕೋಟೆ, ಮಾಸ್ತಿ, ಮಾದಾಪಂಟ್ಲಗಳಲ್ಲಿನ ತೋಟಗಾರರ ಉಪಟಳವು ಸಹಿಸಲಸದಳವಾಯಿತು. ಈ ಉಪದ್ರವವನ್ನು ಕುರಿತು ಲಿಂಗೇಗೌಡನು ಮುಮ್ಮಡಿ ತಮ್ಮೇಗೌಡನಲ್ಲಿ ಅರಿಕೆ ಮಾಡಲಾಗಿ, ತಮ್ಮೇಗೌಡನು ಸೈನ್ಯ ಸಮೇತ ಬಂದು ತೋಟಗಾರರ ಸ್ಥಳಗಳ ಮೇಲೆ ದಾಳಿಮಾಡಿ ಅವುಗಳನ್ನು ಸ್ವಾಧೀನಪಡಿಸಿಕೊಂಡು ಅವರ ಸ್ಥಳಗಳಲ್ಲಿ ತನ್ನ ಸೈನ್ಯವನ್ನು ನೆಲೆಗೊಳಿಸಿದನು. ಮುಂದೆ ಕ್ರಿ. ಶ. 1638ರಲ್ಲಿ ರಣದುಲ್ಲಾಖಾನನು ನಡೆಸಿದ ದಾಳಿಗಳಿಗೆ ತುತ್ತಾದ ಬೆಂಗಳೂರು, ಕೋಲಾರ, ಹೊಸಕೋಟೆ, ಮೊದಲಾದ ಪ್ರದೇಶಗಳು ಮರಾಠರ ಷಹಜಿಗೆ ಜಹಗೀರಾಗಿ ದೊರೆತವು. ಹೊಸಕೋಟೆಯ ದಕ್ಷಿಣ ದಿಕ್ಕಿನಲ್ಲಿ ಆನೆಮಲೆಯಾಗಿರುವ ಸ್ಥಳವನ್ನು ಮುಮ್ಮಡಿ ತಮ್ಮೇಗೌಡನಿಗೆ ಕೊಟ್ಟು ಅಲ್ಲಿ ಸ್ಥಳ-ಮನೆಮಾಡಿಕೊಳ್ಳುವ ಪರ್ಯಂತ ಆರು ತಿಂಗಳು ಮಾತ್ರ ಹೊಸಕೋಟೆಯಲ್ಲಿರಬೇಕೆಂದು ಷಹಜಿಯೊಡನೆ ಕರಾರು ಆಯಿತು. ಅದರಂತೆ ಮುಮ್ಮಡಿ ತಮ್ಮೇಗೌಡನು ಲಿಂಗೇಗೌಡನಿಗೆ ಆದೇಶ ನೀಡಿ ಊರು, ಕೆರೆ, ಕೋಟೆಗಳನ್ನು ಆನೆಮಲೆ

ಪ್ರದೇಶದ ಹುಲಿಕಲ್ಲಿನಲ್ಲಿ ಕಟ್ಟಿಸಿದನು. ಕೆರೆಗೆ 'ತಮ್ಮಾಂಬುಧಿ' ಎಂದು ಹೆಸರಿಟ್ಟನಲ್ಲದೆ, ಅಮೃತಮಲ್ಲಿಕಾರ್ಜುನ ದೇವಸ್ಥಾನವನ್ನು, ತಮ್ಮಸಂದ್ರ ಎಂಬ ಅಗ್ರಹಾರವನ್ನು ಮಾಡಿಸಿ ಆ ಸ್ಥಳಕ್ಕೆ 'ಆನೇಕಲ್ಲು' ಎಂದು ನಾಮಕರಣಮಾಡಿದನು. ಕಾಡು ಅಳಿದು ನಾಡಾದುದರಿಂದ 'ಆನೆಮಲೆ' ಆಗಿದ್ದ ಈ ಪ್ರದೇಶ 'ಆನೇಕಲ್ಲು' (ಪ್ರಾಣಿ ಮತ್ತು ಕಲ್ಲು ಸೂಚಕ ಸ್ಥಳನಾಮ) ಎಂದಾಯಿತು. ಹೀಗಾಗಿ ಮುಮ್ಮಡಿ ತಮ್ಮೇಗೌಡನೇ ಆನೇಕಲ್ ಪಟ್ಟಣದ ಸ್ಥಾಪಕ ಎಂಬುದು ವೇದ್ಯವಾಗುತ್ತದೆ.

ಆನೇಕಲ್ ಈ ಮೊದಲು 'ಗಂಗ ಅಱುಸಾಸಿರದ' ವ್ಯಾಪ್ತಿಗೆ ಒಳಪಟ್ಟಿತ್ತು. ಗಂಗರು ಮಾತ್ರವಲ್ಲದೇ ಚೋಳರ ಮತ್ತು ಹೊಯ್ಸಳರ ಆಳ್ವಿಕೆಗೊಳಗಾಗಿದ್ದ ಆನೇಕಲ್ ಮುಮ್ಮಡಿ ಬಲ್ಲಾಳನ ಕಾಲದಲ್ಲಿ 'ಹೆಸರ್ ಕುಂದಾಣಿ ರಾಜ್ಯ'ದ ಒಂದು ಭಾಗವಾಗಿದ್ದಿತು. ಮುಂದೆ ವಿಜಯನಗರದ ಕಾಲದಲ್ಲಿ 'ಮುಳಬಾಗಿಲು ರಾಜ್ಯ'ದ ಭಾಗವಾಗಿ ಸೇರಿಹೋಗಿತ್ತು.

ಆನೇಕಲ್ ತಾಲೂಕಿನ ಪೂರ್ವಭಾಗವು ಸಾವಿತೆಯನಾಡು, ಪಶ್ಚಿಮಭಾಗವು ಹೊಮ್ಮಳಿಗೆ ನಾಡು, ಮಧ್ಯಭಾಗವು ಮೊರಸುನಾಡು, ವಾಯುವ್ಯ ಭಾಗವು ಬೆಂಪೂರುನಾಡು, ಈಶಾನ್ಯಭಾಗವು ಮಾನಂದಿನಾಡಿನ ಭಾಗವಾಗಿದ್ದ ಎಱುಮರೈನಾಡುಗಳಲ್ಲಿ ಅಂತರ್ಗತವಾಗಿದ್ದವು.

ಆನೇಕಲ್‌ಗೆ 'ಗಜಶಿಲಾಪುರ' ಅಥವಾ 'ಗಜಶೈಲಪುರಿ' ಎಂಬ ಸಂಸ್ಕೃತೀಕರಣಗೊಂಡ ಹೆಸರುಗಳಿವೆ. ಆನೇಕಲ್ ಪ್ರದೇಶದಲ್ಲಿ ಸುಗುಟೂರು ಅರಸರ ಆಳ್ವಿಕೆಯ ವಿವರ ಇಂತಿದೆ.

ಚಿಕ್ಕರಾಯ ಚಿಕ್ಕತಮ್ಮೇಗೌಡ

ದೇವಪ್ಪಗೌಡ ಮತ್ತು ಹಿರಿಯ ತಮ್ಮಪ್ಪಗೌಡ ಸುಗುಟೂರು ಸಂಸ್ಥಾನದ ಆರಂಭಿಕ ದೊರೆಗಳು. ಈ ಹಿರಿಯ ತಮ್ಮಪ್ಪಗೌಡನ ಮಗನೇ ಚಿಕ್ಕರಾಯ ಚಿಕ್ಕತಮ್ಮೇಗೌಡ. ಈತ ಆನೇಕಲ್ ಪ್ರದೇಶದ ಮೇಲೆ ಆಳ್ವಿಕೆ ನಡೆಸಿದ ಮೊದಲ ಸುಗುಟೂರು ದೊರೆ. ಚಿಕ್ಕರಾಯ ಚಿಕ್ಕತಮ್ಮೇಗೌಡನು ವಿಜಯನಗರ ದೊರೆ ಇಮ್ಮಡಿ ನರ ಸಿಂಹನ ಕಾಲದಲ್ಲಿ ಮುಸ್ಲಿಮರ ದಾಳಿಯ ಸಂದರ್ಭದಲ್ಲಿ ಶತ್ರುಗಳನ್ನು ಸದೆಬಡಿದು, ಅಧಿರಾಜನನ್ನು ಮೆಚ್ಚಿಸಿ 'ಕನಕಧ್ವಜ', 'ಗಂಡಪೆಂಡೇರ' ಮತ್ತು 'ಚಿಕ್ಕರಾಯ' ಮುಂತಾದ ಬಿರುದುಗಳನ್ನು ಪಡೆದಿದ್ದನು. ಈತನ ಹೆಂಡತಿ ವೀರಾಂಬಿಕೆ. ಈತನು ಹರಭಜನೆ, ಗುರುಭಕ್ತಿ ಮತ್ತು ಜಂಗಮಾರಾಧನೆಗಳನ್ನು ಶ್ರದ್ಧಾಭಾವದಿಂದ ಮಾಡುತ್ತಿದ್ದನು.

ಆನೇಕಲ್‌ನ ದಕ್ಷಿಣಕ್ಕಿರುವ ಪ್ರಸಿದ್ಧ ವೀರಶೈವ ಕೇಂದ್ರವಾದ ಗುಮ್ಮಳಾಪುರದಲ್ಲಿ ದೊರೆತಿರುವ ಕ್ರಿ. ಶ. 1474ರ ತಾಮ್ರಶಾಸನದಲ್ಲಿ ಉಕ್ತವಾಗಿರುವ 'ಚಿಕ್ಕರಾಯ' ಈತನನ್ನೇ ಸೂಚಿಸುತ್ತದೆ ಎಂಬ ಅಭಿಪ್ರಾಯವಿದೆ. ಹೊಸೂರಿನಲ್ಲಿ ಸುಜ್ಞಾನಮೂರ್ತಿ ಶಿವಾಚಾರದ ಮಠವೊಂದಿದ್ದು, ಈ ಮಠದ ಪರಂಪರೆಗೆ ಸೇರಿದ ಹಲವು ಮಠಗಳು ಸಂಸ್ಥಾನದ ಬೇರೆ ಕಡೆಗಳಲ್ಲಿಯೂ ಇವೆ. ಈ ಮಠಗಳಿಗೆ ಸುಗುಟೂರು ಅರಸರು ಅಪಾರ ದಾನದತ್ತಿಗಳನ್ನು ನೀಡಿರುವುದಕ್ಕೆ ಶಾಸನಾಧಾರಗಳಿವೆ. ಶಾಸನಗಳು ಮಾತ್ರವಲ್ಲದೆ 'ಶಂಕರಸಂಹಿತೆ' ಮತ್ತು 'ಮಳೆಯರಾಜ ಚಾರಿತ್ರ' ಕೃತಿಗಳು ಸುಗುಟೂರು ಅರಸರು ಸುಜ್ಞಾನಮೂರ್ತಿ ಗುರುಗಳ ಕರಜಾತರು ಎಂಬ ಅಂಶವನ್ನು ದೃಢಪಡಿಸುತ್ತವೆ. ಹಾಗಾಗಿ ಹೊಸೂರಿನ ಸುಜ್ಞಾನಮೂರ್ತಿ ಶಿವಾಚಾರದ ಮಠವು ಚಿಕ್ಕರಾಯ ಚಿಕ್ಕತಮ್ಮೇಗೌಡನಿಂದ ಪೋಷಿಸಲ್ಪಟ್ಟಿದ್ದಿರಬೇಕು. ಒಟ್ಟಿನಲ್ಲಿ ಗುಮ್ಮಳಾಪುರ ಹಾಗೂ ಹೊಸೂರು ಪ್ರದೇಶಗಳು ಆನೇಕಲ್‌ಗೆ ಹೊಂದಿಕೊಂಡಂತೆ ಇದ್ದುದರಿಂದ ಈ ಪ್ರದೇಶಗಳಲ್ಲಿ ಈತನ ಪ್ರಭಾವಮುದ್ರೆಯಿತ್ತು ಎಂದು ಹೇಳಬಹುದಾಗಿದೆ.

ಕ್ರಿ. ಶ. 1526ರಲ್ಲಿ ಚಿಕ್ಕರಾಯ ಚಿಕ್ಕತಮ್ಮೇಗೌಡನು ಬಲಗೊಂಡನಹಳ್ಳಿ (ಈಗಿನ ಸರ್ಜಾಪುರ)ಯಲ್ಲಿ ಚನ್ನಕೇಶವ ದೇವಾಲಯವನ್ನು ನಿರ್ಮಿಸಿದ್ದನೆಂದು, "ಈಗ ಅಳಿದುಳಿದಿರುವ ಹೊರಭಿತ್ತಿಗಳ ಮೇಲಿರುವ ನರಸಿಂಹ, ಕೃಷ್ಣ, ವಿಷ್ಣುಬಿಂಬಗಳಿಂದ ಇದು ಪ್ರಾಯಶಃ ಬಹುಸುಂದರವಾದ ದೇವಾಲಯವಾಗಿದ್ದಿರಬೇಕೆಂದು" (MAR, 1919). ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿರುತ್ತಾರೆ.

ಇಮ್ಮಡಿ ತಮ್ಮೇಗೌಡ

ಈತನು ಚಿಕ್ಕರಾಯ ಚಿಕ್ಕತಮ್ಮೇಗೌಡ ಮತ್ತ ವೀರಾಂಬಿಕೆಯರ ಕುಮಾರ, ಇಮ್ಮಡಿ ತಮ್ಮೇಗೌಡನಿಗೆ ಹಲಸರ ಎಂಬ ಸೋದರಿ ಮತ್ತು ಕೆಂಪಮ್ಮ ಎಂಬ ಮಗಳಿದ್ದಳು. ಇವನ ಸೋದರರು ಸುಗುಟೂರು ಸಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಆಳುತ್ತಿದ್ದರು. ಓರ್ವ ಸೋದರ ಅಯಮಗೌಡನು ಕೋಲಾರ ಮತ್ತು ಮುಳಬಾಗಿಲುಗಳನ್ನು, ಇನ್ನೋರ್ವ ಸೋದರ ನಂಜೇಗೌಡನು ಜಂಗಮಕೋಟೆಯನ್ನು, ಮತ್ತೋರ್ವ ಸೋದರ ತಿಮ್ಮಪ್ಪಗೌಡನು ಪುಂಗನೂರನ್ನು ನೋಡಿಕೊಳ್ಳುತ್ತಿದ್ದರು. ಈ ತಿಮ್ಮಪ್ಪ ಗೌಡನೇ ಪುಂಗನೂರು ಜಮೀನ್ದಾರರ ಮೂಲ ಪುರುಷನು.

ವೆಂಕಟಾಂಬೆ ಎಂಬಾಕೆ ಇಮ್ಮಡಿ ತಮ್ಮೇಗೌಡನ ಮಡದಿ. ಈತನು ಗುರುಭಕ್ತಿ, ಸೋಮಧರನ ಭಜನೆ, ಜಂಗಮಪೂಜೆಗಳಲ್ಲಿ ನಿರತನಾಗಿರುತ್ತಿದ್ದನು. ಪುರ ಮತ್ತು ಅಗ್ರಹಾರಗಳನ್ನು ನಿರ್ಮಿಸಿ ಪ್ರಜಾಹಿತಾಕಾಂಕ್ಷೆಯಿದ್ದ ದೊರೆಯಾಗಿದ್ದನು.

ವಿರೂಪಾಕ್ಷಪಂಡಿತನ 'ಚನ್ನಬಸವಪುರಾಣ'ದಲ್ಲಿ ಪ್ರಾಸಂಗಿಕವಾಗಿ ವೀರಶೈವ ಧರ್ಮದ ಪ್ರೋತ್ಸಾಹಕರಾಗಿದ್ದ ಕೆಲವು ಅರಸರ ಉಲ್ಲೇಖ ಬಂದಿದ್ದು, ಇದರಲ್ಲಿ 'ಸುಕುಟೂರು ತಮ್ಮಣಗೌಡ' ದೊರೆಯ ಹೆಸರು ಇದೆ. ಇದು ಇಮ್ಮಡಿ ತಮ್ಮೇಗೌಡನನ್ನೇ ಸೂಚಿಸುತ್ತದೆ ಎನ್ನಬಹುದು. ಇಮ್ಮಡಿ ತಮ್ಮೇಗೌಡನು ತನ್ನ ಅಧಿಪನಾದ ಸದಾಶಿವರಾಯನ ಪರವಾಗಿ ಕೈಗೊಂಡ ಯುದ್ಧಗಳಲ್ಲಿ ಹೋರಾಡಿದ ವೀರರಿಗೆ ಅನೇಕ ನೆತ್ತರು ಕೊಡುಗೆ ದತ್ತಿಗಳನ್ನು ನೀಡಿರುವುದಕ್ಕೆ ಶಾಸನಗಳು ಆಧಾರವೊದಗಿಸುತ್ತವೆ. ಅಂತೆಯೇ ಆನೇಕಲ್ ತಾಲ್ಲೂಕಿನ ಕಾಡಜಕ್ಕನಹಳ್ಳಿಯಲ್ಲಿ ದೊರೆತಿರುವ ಶಾಸನವು 'ತಿಮ್ಮ' ಎಂಬಾತನಿಗೆ ಕಾಡಜಕ್ಕನಹಳ್ಳಿಯನ್ನು ನೆತ್ತರುಕೊಡುಗೆಯಾಗಿ ನೀಡಿರುವ ವಿಚಾರದ ಮೇಲೆ ಬೆಳಕು ಚೆಲ್ಲುತ್ತದೆ.

ಮುಮ್ಮಡಿ ತಮ್ಮೇಗೌಡ

ಮುಮ್ಮಡಿ ತಮ್ಮೇಗೌಡನು ಸುಗುಟೂರು ಅರಸರಲ್ಲಿ ಅತ್ಯಂತ ಪ್ರಸಿದ್ಧನಾದ ದೊರೆ. ಈತ ಇಮ್ಮಡಿ ತಮ್ಮೇಗೌಡ ಮತ್ತು ವೆಂಕಟಾಂಬೆಯರ ಸುಪುತ್ರ ಮುಮ್ಮಡಿ ತಮ್ಮೇಗೌಡನಿಂದ ಆಶ್ರಿತನಾದ ಸೆಜ್ಜೆ ಸಿದ್ಧಲಿಂಗ ಕವಿಯು ತನ್ನ 'ಮಳೆಯರಾಜ ಚಾರಿತ್ರದ' ಅವತರಣಿಕಾ ಭಾಗದಲ್ಲಿ ಮುಮ್ಮಡಿ ತಮ್ಮೇಗೌಡನು ತನ್ನ 11ನೆಯ ವಯಸ್ಸಿನಲ್ಲಿ ಶೌರ್ಯದಿಂದ ಸಿಕಂದರ್ ಬಾದ್‌ಷಹನನ್ನು ಸೋಲಿಸಿದನೆಂದು ಹೇಳಿದ್ದಾನೆ. ವಿಜಯಗರದ ಮೇಲೆ ಬಿಜಾಪುರದ ಆದಿಲ್‌ಷಾಹಿಗಳು ಆಗಾಗ ಯುದ್ಧಗಳನ್ನು ಮಾಡುತ್ತಲೇ ಇದ್ದರು. ಅಂತಹ ಯಾವುದೋ ಯುದ್ಧವೊಂದರಲ್ಲಿ ಬಾಲಕ ಮುಮ್ಮಡಿ ತಮ್ಮೇಗೌಡನು ತನ್ನ ತಂದೆಯಾದ ಇಮ್ಮಡಿ ತಮ್ಮೇಗೌಡನ ಜೊತೆಯಲ್ಲಿ ಸಾಗಿ ಯುದ್ಧವನ್ನು ಮಾಡಿದ್ದಿರಬೇಕು. ಆದಿಲ್ ಷಾಹಿ ಮನೆತನದ ಎರಡನೇ ಇಬ್ರಾಹಿಂನನ್ನೋ ಅಥವಾ ಆತನ ಮಗ ಮಹ್ಮದ್‌ನನ್ನೋ ಸಿದ್ಧಲಿಂಗ ಕವಿಯು ಸಿಕಂದರ್ ಬಾದಷಹ (ಪಾದವ) ಎಂದು ಕರೆದಿರಬೇಕೆಂದು ಅಭಿಪ್ರಾಯಪಡಲಾಗಿದೆ.

ಮುಮ್ಮಡಿ ತಮ್ಮೇಗೌಡನು ವಿದ್ವಜ್ಜನರ ಆಶ್ರಯದಾತನಾಗಿದ್ದುದು ಮಾತ್ರವಲ್ಲದೆ ಸ್ವತಃ ವಿದ್ವಾಂಸನೂ ಕವಿಯೂ ಆಗಿದ್ದನು. 'ತ್ರಿವಿಧ ಕವೀಶ್ವರ' (ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಕಾವ್ಯರಚನಾ ಸಾಮರ್ಥ್ಯವುಳ್ಳವನು) ನಾದ ಆತ ಕನ್ನಡದಲ್ಲಿ 'ಶಂಕರಸಂಹಿತೆ'ಯನ್ನು ರಚಿಸಿದ್ದಾನೆ. ಶಬ್ದ, ತರ್ಕ, ವೇದಾಂತ ವಿಷಯಗಳಲ್ಲಿ ಪಾಂಡಿತ್ಯ ಪಡೆದಿದ್ದ ಈತನು 'ರಾಜೇಂದ್ರ ಚೋಳಚರಿತೆ', 'ನಂದಿನಾಥ ಚರಿತೆ', 'ಕಾಮುದೀ ವ್ಯಾಖ್ಯಾನ' ಮೊದಲಾದ ಕೃತಿಗಳ ಕರ್ತೃವಾಗಿದ್ದ.

ಮುಮ್ಮಡಿ ತಮ್ಮೇಗೌಡನ ಆರಂಭದ ರಾಜಕೀಯ ಜೀವನ ಸುಗಮವಾಗಿರಲಿಲ್ಲ. ಇಮ್ಮಡಿ ತಮ್ಮೇಗೌಡನು ಶಿವೈಕ್ಯನಾದಾಗ ಅವನ ಸೋದರನಾದ ಅಯಮಗೌಡನು ಇಮ್ಮಡಿ ತಮ್ಮೇಗೌಡನ ಆಳ್ವಿಕೆಗೊಳಪಟ್ಟಿದ್ದ ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತಾನೆ. ಅಲ್ಲದೆ ಅವನ ಮಗ ಮುಮ್ಮಡಿ ತಮ್ಮೇಗೌಡನನ್ನು ರಾಜ್ಯಭ್ರಷ್ಟನನ್ನಾಗಿ ಮಾಡುತ್ತಾನೆ. ಆಗ ಬೆಂಗಳೂರಿನ ಇಮ್ಮಡಿ ಕೆಂಪೇಗೌಡನು ಮುಮ್ಮಡಿ ತಮ್ಮೇಗೌಡನಿಗೆ ಆಶ್ರಯವಿತ್ತು ಬಿಲಗೊಂಡನಹಳ್ಳಿ, ಕೋಲಾರ, ಬೇಟೆರಾಯನಗುಡಿ ದುರ್ಗಗಳನ್ನು ಗೆದ್ದು, ಭದ್ರಪಡಿಸಿ ಅಯಮಗೌಡನನ್ನು ಸದೆಬಡಿದು ಮುಮ್ಮಡಿ ತಮ್ಮೇಗೌಡನಿಗೆ ಸುಗುಟೂರು ಸಂಸ್ಥಾನವನ್ನು ದಕ್ಕಿಸಿಕೊಡುತ್ತಾನೆ. 'ಇಮ್ಮಡಿ ತಮ್ಮರಾಯ ಕೆಂಪರಾಯನ ಪದಗಳು' ಎಂಬ ಹಾಡುಗದ್ಯದಲ್ಲಿ ಉಕ್ತವಾಗಿರುವ ಈ ಘಟನೆಗೆ ಶಾಸನಾಧಾರಗಳಿಲ್ಲ. ಆದಾಗ್ಯೂ ಇಲ್ಲಿ ಲಕ್ಷ್ಯಾರ್ಹ ಅಂಶವೆಂದರೆ, ಇಮ್ಮಡಿ ತಮ್ಮೇಗೌಡನ ಉಲ್ಲೇಖವಿರುವ ಕೊನೆಯ ಶಾಸನದ ಕಾಲ ಕ್ರಿ. ಶ. 1600. ಮುಮ್ಮಡಿ ತಮ್ಮೇಗೌಡನನ್ನು ಉಲ್ಲೇಖಿಸುವ ಪ್ರಥಮ ಶಾಸನದ ಕಾಲ ಕ್ರಿ. ಶ. 1608. ಹೀಗಾಗಿ 1600–1608ರವರೆಗೆ ಕೋಲಾರ, ಹೊಸಕೋಟೆ, ಆನೇಕಲ್‌ನ ಬಿಲಗೊಂಡನಹಳ್ಳಿಗೆ ಹೊಂದಿಕೊಂಡಂತಿದ್ದ ಪ್ರದೇಶಗಳನ್ನು ಅಯಮಗೌಡನು ಕಬಳಿಸಿರಬೇಕೆಂದು ತೋರುತ್ತದೆ.

ಆನೇಕಲ್ ನಲ್ಲಿ ದೊರೆತ ಕ್ರಿ. ಶ. 1614ಕ್ಕೆ ಸಲ್ಲುವ ಶಾಸನದಲ್ಲಿ ಮುಮ್ಮಡಿ ತಮ್ಮೇಗೌಡನು ಕಾಡುಭಾರತಿ ತಿಮ್ಮಯ್ಯ ಎಂಬ ವಿಪ್ರನಿಗೆ ಹೊಸಕೋಟೆ ಸೀಮೆ, ಸಮೇತನಹಳ್ಳಿ ವಳಿತ, ಹಲಸಿಹಳ್ಳಿ ಗ್ರಾಮಕ್ಕೆ ಸೇರಿದ ಉಪಗ್ರಾಮವಾದ ತಿಪ್ಪಸಂದ್ರವನ್ನು ಮಾನ್ಯವಾಗಿ ನೀಡಿದ ವಿಚಾರವಿದೆ. ಈ ಬಗೆಯಲ್ಲಿ ಗ್ರಾಮಗಳನ್ನು ಮಾನ್ಯವಾಗಿ ಕೊಟ್ಟು ಗೌರವಿಸಿರುವುದು ಕೋಲಾರ, ಹೊಸಕೋಟೆಗಳ ಶಾಸನಗಳಲ್ಲಿ ಉಕ್ತವಾಗಿದೆ. ಹೀಗಾಗಿ ಇವರ ಆಳ್ವಿಕೆಯ ಪೂರ್ವಾರ್ಧದಲ್ಲಿ ಶಾಂತಿ ನೆಲೆಸಿದ್ದಿತು ಎನ್ನಬಹುದು.

ಆನೇಕಲ್ ತಾಲ್ಲೂಕಿನ ಕಾಳನಾಯಕನಹಳ್ಳಿಯಲ್ಲಿ ದೊರೆತ ಶಾಸನದಲ್ಲಿ (ಕ್ರಿ. ಶ. 1624) ಜಯಶಿಂಗನ ಮಗ ಮುಮ್ಮಡಿ ಶಿಂಗಸೇನನಾಯಕನು ಅರಸನೊಡಗೂಡಿ ಸಾಹಸದಿಂದ ಶತ್ರುಗಳೊಂದಿಗೆ ಹೋರಾಡಿ ಪ್ರಾಣಾರ್ಪಣೆ ಮಾಡಿದ್ದಕ್ಕಾಗಿ ಕಾಳಿನಾಯಕನಹಳ್ಳಿ (ಕಾಮನಾಯಕನಹಳ್ಳಿ)ಯನ್ನು ನೆತ್ತರು ಕೊಡುಗೆಯಾಗಿ ನೀಡಿದ ವಿಷಯ ಉಕ್ತವಾಗಿದೆ. ತನ್ನ ಅಧಿರಾಜನಾದ ವೆಂಕಟಪತಿರಾಯನಿಗೆ ಪೆನುಗೊಂಡೆಯ ಸಿಂಹಾಸನವನ್ನು ದಕ್ಕಿಸಲು ನಡೆಸಿದ ಹೋರಾಟದ ಸಂದರ್ಭದಲ್ಲಿ ಈ ಶಾಸನ ಹುಟ್ಟಿರಬಹುದು. ಅಲ್ಲದೆ ಈ ಅವಧಿಯಲ್ಲಿ ನೆತ್ತರುಕೊಡುಗೆ ದತ್ತಿಗಳು ಅಧಿಕವಾಗಿ ಕಂಡುಬರುವುದರಿಂದ ಮುಮ್ಮಡಿ ತಮ್ಮೇಗೌಡನ ಉತ್ತರಾರ್ಧದ ಆಳ್ವಿಕೆಯು ಸುಗಮವಾಗಿರಲಿಲ್ಲ ಎಂಬುದು ವಿದ್ವಾಂಸರ ಅಭಿಮತ. ಸರ್ಜಾಪುರದ ಶಾಸನದಲ್ಲಿ (ಕ್ರಿ. ಶ. 1629) ಮುಮ್ಮಡಿ ತಮ್ಮೇಗೌಡನು ಬೆಳನಹಳ್ಳಿಯನ್ನು 'ನಂಚಂಣದೇವ'ರಿಗೆ ಮಾನ್ಯವಾಗಿ ನೀಡಿದನೆಂದು ಉಲ್ಲೇಖಗೊಂಡಿದೆ. ಕೋಲಾರ ಮತ್ತು ಗುಮ್ಮಳಾಪುರ ಶಾಸನಗಳಲ್ಲಿ ಉಕ್ತವಾಗಿರುವ ವೀರಶೈವ ಮಠದ 'ನಂಜೇದೇವರು' ಬೆಳನಹಳ್ಳಿಯ 'ನಂಚಂಣದೇವರು' ಅಭಿನ್ನರು ಎಂದು ಈಗಾಗಲೇ ದೃಢಪಟ್ಟಿದೆ. ಈ ನಂಜೇದೇವರು ಮುಮ್ಮಡಿ ತಮ್ಮೇಗೌಡನಿಗೆ ಗುರುಸ್ಥಾನದಲ್ಲಿದ್ದರು. ಅರಸನು ಈ ವೀರಶೈವ ಮಠಕ್ಕೆ ಮತ್ತು ಗುರುಗಳಿಗೆ ಮಾನ್ಯಗಳನ್ನು ನೀಡಿ ಪುರಸ್ಕರಿಸಿ, ತನ್ನ ಪೂರ್ವಕರಂತೆ ನಿಷ್ಠನಾಗಿ ನಡೆದುಕೊಳ್ಳುತ್ತಿದ್ದನು.

ಕ್ರಿ. ಶ. 1635ರಲ್ಲಿ ಪೆನುಗೊಂಡೆಯ ಸಿಂಹಾಸನದಲ್ಲಿ ಮುಮ್ಮಡಿ ವೆಂಕಟಪತಿರಾಯನು ಆಸೀನನಾಗಲು ಇಮ್ಮಡಿ ಕೆಂಪೇಗೌಡನೊಡಗೂಡಿ ಮುಮ್ಮಡಿ ತಮ್ಮೇಗೌಡನು ಸಹಕರಿಸಿದ್ದನು. ಕ್ರಿ. ಶ. 1638ರಲ್ಲಿ ರಣದುಲ್ಲಾಖಾನನ ದಾಳಿಯ ವಿಷಮ ಪರಿಸ್ಥಿತಿಯಲ್ಲಿ ಕೋಲಾರ, ಜಂಗಮಕೋಟೆ, ಹೊಸಕೋಟೆ ಮತ್ತು ಸುಗುಳರು ಪ್ರದೇಶಗಳು ಷಹಜಿಯ ವಶವಾಗಿ, ಮುಮ್ಮಡಿ ತಮ್ಮೇಗೌಡನು ಆನೇಕಲ್‌ಗೆ ಬಂದು ನೆಲೆಸುವಂತಾಯಿತು. ಮರಾಠರ ಅಧೀನನಾಗಿ ಅವರಿಗೆ ಕಪ್ಪಕಾಣಿಕೆಗಳನ್ನು ಕೊಡುವುದರ ಮೂಲಕ ತಮ್ಮ ಆಡಳಿತವನ್ನು ಆನೇಕಲ್‌ನಲ್ಲಿ ಮುಂದುವರಿಸಿದನು. ಕ್ರಿ. ಶ. 1640ಕ್ಕೆ ಸಲ್ಲುವ ಶಾಸನವು ಆನೇಕಲ್‌ನ ಬಿದುರುಗೆಯಲ್ಲಿ ದೊರೆತಿದ್ದು, ಮುಮ್ಮಡಿ ತಮ್ಮೇಗೌಡನು ಬಿದುರುಗೆಜೆಯನ್ನು ಗೌಡನೋರ್ವನಿಗೆ ಕೊಡುಗೆಯಾಗಿ ನೀಡಿದ ವಿವರವನ್ನೊಳಗೊಂಡಿದೆ. ಅರಸರು ಹಲವು ಗ್ರಾಮಗಳನ್ನು ಗೌಡಾಳಿಕೆಗೆ ನೀಡಿ, ಗೌಡರು ಗ್ರಾಮಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಪಕ್ಷದಲ್ಲಿ ಅವರಿಗೆ 'ಗೌಡುಕೊಡುಗೆ'ಯಾಗಿ ಕೆಲವು ಹಳ್ಳಿಗಳನ್ನು ನೀಡಿ ಅವರ ಕಾರ್ಯಕ್ಷಮತೆಯನ್ನು ಪ್ರೋತ್ಸಾಹಿಸಿ, ಗೌರವಿಸುತ್ತಿದ್ದರೆಂಬುದು ಈ ಶಾಸನದ ಸೂಕ್ಷ್ಮ ಅವಲೋಕನದಿಂದ ಗ್ರಹಿಸಬಹುದಾಗಿದೆ.

ಚಿಕ್ಕರಾಯ ತಮ್ಮೇಗೌಡ

ಈತ ಮುಮ್ಮಡಿ ತಮ್ಮೇಗೌಡನ ಮಗ. ಚಿಕ್ಕರಾಯ ತಮ್ಮೇಗೌಡನು ಆನೇಕಲ್‌ನಲ್ಲಿ ಕಪ್ಪಕಾಣಿಕೆಗಳನ್ನು ಸಂಗ್ರಹಿಸಿ ಕೊಡುವ ಮೂಲಕ ತನ್ನ ಆಡಳಿತವನ್ನು ಮುಂದುವರೆಸಿದ್ದನು.

ಮುಮ್ಮಡಿ ಚಿಕ್ಕರಾಯ ತಮ್ಮೇಗೌಡ

ಈತ ಚಿಕ್ಕರಾಯ ತಮ್ಮೇಗೌಡನ ಕುಮಾರ. ಇವನು ಸಹ ಆನೇಕಲ್‌ನಲ್ಲಿ ಮರಾಠರ ಅಧೀನನಾಗಿದ್ದುಕೊಂಡು ಅವರಿಗೆ ಕಪ್ಪುಕಾಣಿಕೆಗಳನ್ನು ಸಂಗ್ರಹಿಸಿಕೊಡುವ ಕಾರ್ಯದಲ್ಲಿ ಮುಂದುವರಿಯುತ್ತಾನೆ. ಇವನ ಕಾಲದಲ್ಲಿ ನಡೆದ ಸ್ವಾರಸ್ಯಕರ ಸಂಗತಿಯೊಂದು ಹೊಸಕೋಟೆ ತಾಲೂಕಿನ ಶಾಸನದಿಂದ ತಿಳಿದುಬರುತ್ತದೆ. ಅದೇನೆಂದರೆ, ಆನೇಕಲ್‌ನಲ್ಲಿ ದೇಶದ ಪೇಟೆಯಲ್ಲಿ ನಂದಿಕೋಲು ಮೆರವಣಿಗೆ ಮತ್ತು ನಗರ್ತರ ಪೇಟೆಯಲ್ಲಿ ಕಾಳಿಕಾದೇವಿ ಮೆರವಣಿಗೆ ವಿಷಯದಲ್ಲಿ ಸಮಯಗಾರನಾದ ಮುತ್ತುದಾಸರಿಯಿಂದ ಕಲಹವೇರ್ಪಡುತ್ತದೆ. ಆಗ ಹೊಸಕೋಟೆ ಸ್ಥಳದ ವೆಂಕಟಾಚಾರ್ಯರೆಂಬ ಗುರುಗಳನ್ನು ಆನೇಕಲ್ಲಿಗೆ ಕರೆಸಿಕೊಳ್ಳಲಾಗುತ್ತದೆ. ವೆಂಕಟಾಚಾರ್ಯರು ಉಭಯಪೇಟೆಗಳ ಸೆಟ್ಟಿವರ್ತಕರು ಮುಂತಾದ ಫಣಕಟ್ಟು ಜನರನ್ನು ಕರೆಸಿಕೊಂಡು ಸಮಸ್ಯೆಯನ್ನು ಸರ್ವಸಮ್ಮತವಾಗುವಂತೆ ಇತ್ಯರ್ಥಮಾಡುತ್ತಾರೆ. ಅದರಂತೆ ಹಿಂದೆ ನಡೆಯುತ್ತಿದ್ದಂತೆಯೇ ದೇಶದಪೇಟೆಯಲ್ಲಿ ನಂದಿಕೋಲು ಮೆರವಣಿಗೆ ಮುಂದುವರೆಯುತ್ತದೆ. ನಗರ್ತರಪೇಟೆಯಲ್ಲಿ ಕಾಳಿಕಾದೇವಿ ಮೆರವಣಿಗೆಯನ್ನು ನಡೆಸಿಕೊಂಡು ಹೋಗುವಂತೆ ಸೂಚಿಸುತ್ತಾರೆ. ಕಲಹವನ್ನು ಪರಿಹರಿಸಿ, ಅರಮನೆ ಮತ್ತು ಪ್ರಜೆಗಳ ಶ್ರೇಯಸ್ಸನ್ನು ಬಯಸಿದ್ದುದನ್ನು ಮೆಚ್ಚಿಕೊಂಡು ಮುಮ್ಮಡಿ ಚಿಕ್ಕರಾಯ ತಮ್ಮೇಗೌಡನು ವೆಂಕಟಾಚಾರ್ಯರಿಗೆ ಭೂದಾನದ ಜೊತೆಗೆ ನೆಲ್ಲು, ರಾಗಿ ಮತ್ತು ಹಣದ ರೂಪದಲ್ಲಿ ವಾರ್ಷಿಕ ವರಮಾನವು ಬರುವಂತೆ ಉದಾರವಾದ ದತ್ತಿಗಳನ್ನು ನೀಡುತ್ತಾನೆ.

ಕ್ರಿ. ಶ. 1699ರ ತಾಮ್ರಶಾಸನದಲ್ಲಿ ಮುಮ್ಮಡಿ ಚಿಕ್ಕರಾಯ ತಮ್ಮೇಗೌಡನು ಧೋಂಡಭಟ್ಟ ಎಂಬ ಬ್ರಾಹ್ಮಣನಿಗೆ ಆನೇಕಲ್ಲು ಸೀಮೆವಳಿತವಾದ ಅತ್ತಿಬೆಲೆ ಸ್ಥಳದ ಪೂರ್ವ ಮತ್ತು ಪಶ್ಚಿಮಕ್ಕಿರುವ ಹೊಲಗದ್ದೆಗಳನ್ನು ಚಂದ್ರಗ್ರಹಣ ಕಾಲದಲ್ಲಿ ಧಾರಾಪೂರ್ವಕವಾಗಿ ದತ್ತಿಬಿಟ್ಟಿರುವ ವಿಚಾರ ಉಕ್ತವಾಗಿದೆ. ಇವರ ಕಾಲದಲ್ಲಿಯೂ ಆನೇಕಲ್ಲು ಕೋಳಾಲಸೀಮೆ, ಹೊಸಕೋಟೆ ಸೀಮೆಗಳಂತೆಯೇ ಆಡಳಿತ ವಿಭಾಗವಾಗಿತ್ತು. ಸುಗುಟೂರು ಸಂಸ್ಥಾನದಲ್ಲಿ ಈ ಆನೇಕಲ್ ಸೀಮೆಯ ಕೆಳಸ್ತರದಲ್ಲಿ ಅತ್ತಿಬೆಲೆಯಸ್ಥಳ (ಅನೇಕ ಗ್ರಾಮಗಳ ಸಮೂಹ) ವಾಗಿತ್ತು ಎಂಬುದು ವಿದಿತವಾಗುತ್ತದೆ.

ಇಮ್ಮಡಿ ದೇವಪ್ಪಗೌಡ

ಸುಗುಟೂರು ಅರಸರ ವಂಶೀಯನೇ ಆದ ಇಮ್ಮಡಿ ದೇವಪ್ಪಗೌಡನ ಆಳ್ವಿಕೆಗೆ ಆನೇಕಲ್ ಪ್ರದೇಶವು ಒಳಪಟ್ಟಿತ್ತೆಂಬುದು ಪತ್ರಾಗಾರದ ದಾಖಲೆಯೊಂದರಿಂದ ತಿಳಿದುಬರುತ್ತದೆ. ಕ್ರಿ. ಶ. 1733ರ ಸರ್ಜಾಪುರದ ಶಾಸನವು ರಾಜೇಶ್ರೀ ಸುಬ್ಬರಾವು ವೆಂಕಾಜಿ ಎಂಬುವವನು ತೇಕೂರಿನ ರಾಮಾಭಟ್ಟ ಎಂಬುವವನಿಗೆ ಭೂದಾನ ನೀಡಿರುವ ವಿಷಯವನ್ನು ತಿಳಿಸುತ್ತದೆ. ಇದೇ ಸುಮಾರಿನ ಇನ್ನೊಂದು ದಾಖಲೆಯು ಶಿವರಾಂಪತ್ ವೆಂಕಟಸುಬ್ಬರಾಯನನ್ನು ಹೆಸರಿಸುತ್ತದೆ. ಅರಸನ ಆಳ್ವಿಕೆಯ ಆನೇಕಲ್ ಪ್ರದೇಶದಲ್ಲಿ ಮರಾಠ ಅಧಿಕಾರಿಗಳ ಪ್ರಾಬಲ್ಯವಿದ್ದುದು ಇದರಿಂದ ವೇದ್ಯವಾಗುತ್ತದೆ. ಕ್ರಿ. ಶ. 1729 ಮತ್ತು ಕ್ರಿ ಶ 1735ಕ್ಕೆ ಸೇರಿದ 2 ಶಾಸನಗಳಿಂದ ಆನೇಕಲ್ಲನ್ನು ಆಳುತ್ತಿದ್ದ ಸುಗುಟೂರು ಅರಸರ ದಳವಾಯಿ ವೀರಗೌಡನೆಂಬುವವನ ವಿಚಾರ ತಿಳಿದುಬರುತ್ತದೆ.

ಕ್ರಿ. ಶ. 1758ರಲ್ಲಿ ಹೈದರ್–ಅಲಿಯು ಆನೇಕಲ್ಲನ್ನು ಆಕ್ರಮಿಸಿ ಇಮ್ಮಡಿ ದೇವಪ್ಪಗೌಡನನ್ನು ಬಂಧಿಸಿದನು. ಇಸ್ಮಾಯಿಲ್–ಅಲಿ ಎಂಬ ತನ್ನ ಅಳಿಯನನ್ನು ಆನೇಕಲ್‌ನ ಕಿಲ್ಲೇದಾರನನ್ನಾಗಿ ನೇಮಿಸುತ್ತಾನೆ. ಕ್ರಿ.ಶ. 1770ರ ಹೊತ್ತಿಗೆ ಪಾಳೆಯಗಾರನನ್ನು ಸೆರೆಯಿಂದ ಬಿಡುಗಡೆಮಾಡಿ, ಆನೆಕಲ್ಲನ್ನು ಮಾತ್ರ ಅವನಿಗೆ ಕೊಟ್ಟು ಉಳಿದ ಭಾಗಗಳನ್ನು ತನ್ನ ವಶದಲ್ಲಿರಿಸಿಕೊಂಡನು. ಇವರ ಮರಣದ ತರುವಾಯ ಮಗನಾದ ಚಿಕ್ಕರಾಯನು ಅಧಿಕಾರಕ್ಕೆ ಬಂದನಾದರೂ, ಆತನು ಬ್ರಿಟಿಷ್ ಸೈನ್ಯಕ್ಕೆ ಸಾಮಾನು ಸರಂಜಾಮುಗಳನ್ನು ಸರಬರಾಜು ಮಾಡುವ ಕೆಲಸದಲ್ಲಿ ತೊಡಗಿದ್ದನೆಂಬುದು ಸರ್ಕಾರಿ ದಾಖಲೆಯಿಂದ ತಿಳಿದುಬರುತ್ತದೆ.

ಕ್ರಿ. ಶ. 1791ರಲ್ಲಿ ಬ್ರಿಟಿಷರು ಬೆಂಗಳೂರನ್ನು ವಶಪಡಿಸಿಕೊಂಡಾಗ ಆನೇಕಲ್ ಸಹ ಅವರ ವಶವರ್ತಿಯಾಯಿತು. ಆಗ ಸುಗುಟೂರು ವಂಶೀಯನಾದ ವೀರನಂಜುಂಡ ತಮ್ಮೇಗೌಡನ ಮಗ ಮುಮ್ಮಡಿ ಆಯಮ ಗೌಡನಿಗೆ ಆನೇಕಲ್ ನಲ್ಲಿ ಪ್ರಭುತ್ವ ವಹಿಸಿಕೊಡಲಾಯಿತು. ಕ್ರಿ ಶ. 1793ರ ವೇಳೆಗೆ ಅಯಮಗೌಡನು ಸಂತಾನವಿಲ್ಲದೆ ಗತಿಸಿದರು. ಈತನಿಗೆ ಗೌರಮ್ಮ, ಚನ್ನಮ್ಮ ಮತ್ತು ಚಿಕ್ಕಮ್ಮ ಎಂಬ ಮೂವರು ರಾಣಿಯರಿದ್ದರು. ಇವರಿಗೂ ಹಾಗೂ ಹಿರಿಯ ದೊರೆ ವೀರನಂಜುಂಡ ತಮ್ಮೇಗೌಡನ ಪತ್ನಿಯರಾದ ಕೆಂಪಮ್ಮ, ಮತ್ತು ಪಾರ್ವತಮ್ಮನವರಿಗೂ ಅಧಿಕಾರಕ್ಕಾಗಿ ವೈಮನಸ್ಯ ಉಂಟಾಯಿತು. ಆಗ ಕರ್ನಲ್ ಅಲೆಗ್ಸಾಂಡರ್ ರೀಡ್ ಸಾಹೇಬನು ಕೆಂಪಮ್ಮ ಮತ್ತು ಪಾರ್ವತಮ್ಮನಿಗೆ ಹಿರಿಯ ದೊರೆ ಜೀವಂತವಾಗಿದ್ದಾಗಲೇ ಪಾಲಾಗಿದೆಯೆಂದೂ ಸಂಸ್ಥಾನದ ಮೇಲೆ ಅವರ ಹಕ್ಕಿಲ್ಲವೆಂದು ತಿಳಿಸಿದ. ಮುಮ್ಮಡಿ ಅಯಮಗೌಡನ ಕೊನೆಯ ರಾಣಿ ಚಿಕ್ಕಮ್ಮನಿಗೆ ದೊರೆಯ ಒಡವೆಗಳನ್ನು ಕೊಡಿಸಿದ, ಕಿರಿಯ ರಾಣಿಗೆ ಕೆಲವು ಪ್ರದೇಶಗಳ ಭಾಗವನ್ನು ನೀಡಿದ, ಹಿರಿಯ ರಾಣಿ ಗೌರಮ್ಮನಿಗೆ ಸಂಸ್ಥಾನದ ಪಟ್ಟಕ್ಕೆ ಬಾಧ್ಯಳೆಂದು ಹೇಳಿ, ಕೃಷ್ಣಗಿರಿಯಲ್ಲಿ ಕೆಲವು ಕಾಲ ಇರಿ, ನಂತರದಲ್ಲಿ ಸಂಸ್ಥಾನವನ್ನು ನಿಮಗೆ ದಯಪಾಲಿಸಲಾಗುತ್ತದೆಂದು ಭರವಸೆಯಿತ್ತ. ಗೌರಮ್ಮನು ಕೃಷ್ಣಗಿರಿ ಮತ್ತು ಅದರ ಆಸುಪಾಸಿನ ಪ್ರದೇಶಗಳಲ್ಲಿ 'ದೊರೆಸಾನಿ' ಎಂದು ಸಂಭೋಧಿಸಲ್ಪಡುತ್ತಿದ್ದಳು. ಟಿಪ್ಪುಸುಲ್ತಾನನ ದಾಳಿಗೆ ನಲುಗಿ ಆನೇಕಲ್ ಅವನ ವಶವರ್ತಿಯಾಯಿತು. ಗೌರಮ್ಮನಿಗೆ ಮಕ್ಕಳಿಲ್ಲದೇ ಇದ್ದುದರಿಂದ ದತ್ತುಸ್ವೀಕಾರಮಾಡಿ 'ಚಿಕ್ಕರಾಯ' ಎಂದು ಹೆಸರಿಟ್ಟು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸಲಾಗುತ್ತದೆ. ಕ್ರಿ ಶ. 1799ರಲ್ಲಿ ಕಂಪೆನಿಯ ಸೈನ್ಯವು ಶ್ರೀರಂಗಪಟ್ಟಣದ ಕಡೆಗೆ ಬಂದಾಗ, ಅಲೆಗ್ಸಾಂಡರ್ ರೀಡ್‌ನ ಬೇಡಿಕೆಯಂತೆ ಸಂಸ್ಥಾನಿಕರು ಬ್ರಿಟಿಷ್ ಸೈನ್ಯಕ್ಕೆ ಆಹಾರಧಾನ್ಯಗಳನ್ನು ಮತ್ತು ಸೈನಿಕರನ್ನು ಪೂರೈಸುತ್ತಾರೆ. ಜನರಲ್ ಹ್ಯಾರಿಸ್‌ನು ಸೈನ್ಯದೊಂದಿಗೆ ಹೊಸೂರಿನ ಕೆಲಮಂಗಲಕ್ಕೆ ತಲುಪಿದಾಗ ಅವನನ್ನು ಭೇಟಿಯಾಗಿ ಸನ್ನದನ್ನು ಹೇಳಿಕೊಂಡಾಗ ಯುದ್ಧಮಾಡಿ ಸುಲ್ತಾನನ ಠಾಣ್ಯ ತೆಗೆಸಲಾಯಿತು. ಆದರೂ ಆನೇಕಲ್ ಅರಸರ ವಶವಾಗುವುದಿಲ್ಲ (ಕ್ರಿ. ಶ. 1799ರಲ್ಲಿ ಸುಗುಟೂರು ಸಂಸ್ಥಾನವನ್ನು ಮೈಸೂರಿನ ಅಮಲ್ದಾರರು

ಜಪ್ತಿಮಾಡುತ್ತಾರೆ. ಸಂಸ್ಥಾನಿಕರು ಬ್ರಿಟಿಷ್ ಅಧಿಕಾರಿಗಳಿಗೆ ಮತ್ತು ಪೂರ್ಣಯ್ಯನವರಿಗೆ ಕೈಫಿಯತ್ತು ಸಲ್ಲಿಸುತ್ತಾರೆ. ಅಧಿಕಾರವನ್ನು ನೀಡದೆ ಪೆನಷನ್ನನ್ನು ಕೊಟ್ಟು, ಆನಂತರದಲ್ಲಿ ಅಧಿಕಾರ ಕೊಡುತ್ತೇವೆ ಎಂದು ಆಶ್ವಾಸನೆ ನೀಡಿ ವಂಚಿಸುತ್ತಾರೆ. ಕೊನೆಗೂ ಉಳಿದ ಅನೇಕ ಪಾಳೇಗಾರ ವಂಶದವರಂತೆ ಅಧಿಕಾರವಿಲ್ಲದೆ ಪೆನ್‌ಷನ್ ಮಾತ್ರ ಇವರಿಗೆ ಲಭಿಸುತ್ತದೆ. ಸುಗುಟೂರು ವಂಶೀಯರಾದ ಚಿಕ್ಕರಾಯ, ಆನಂತರದಲ್ಲಿ ಆತನ ಮಗ ಚಿಕ್ಕರಾಜಯ್ಯ, ಚಿಕ್ಕರಾಜಯ್ಯನ ಮರಣದ ತರುವಾಯ ಅವನ ಮಡದಿ ಅಕ್ಕಾಜಮ್ಮಣ್ಣಿ ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೂ ಪೆನಷನ್ ಪಡೆಯುತ್ತಿರುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಆನೇಕಲ್ ಪ್ರದೇಶದಲ್ಲಿ ಸುಗುಟೂರು ಅರಸರು ಅನೇಕ ಏಳುಬೀಳುಗಳ ನಡುವೆಯೂ ಕ್ರಿ. ಶ. 15 ರಿಂದ 17ನೆಯ ಶತಮಾನದವರೆಗೆ ವಿಜಯನಗರದ ದೊರೆಗೆ ನಿಷ್ಠರಾಗಿ ಆಳ್ವಿಕೆ ನಡೆಸಿದರು. 17ನೆಯ ಶತಮಾನದಲ್ಲಿ ಬಿಜಾಪುರದ ಸುಲ್ತಾನರ ಸೇನಾನಿ ರಣದುಲ್ಲಾಖಾನ್ ಮತ್ತು ಮರಾಠ ಸರದಾರ ಷಹಜಿಯ ದಾಳಿಯನ್ನು ಅನುಭವಿಸಬೇಕಾಯಿತು. 18ನೆಯ ಶತಮಾನದಲ್ಲಿ ಹೈದರ್-ಆಲಿ ಮತ್ತು ಟಿಪ್ಪುವಿನ ರಾಜ್ಯಭಾರದ ಸಮಯದಲ್ಲಿ ಈ ಸಂಸ್ಥಾನ ಮೂಲೆಗುಂಪಾಯಿತು.

ಆನೇಕಲ್ ಪ್ರದೇಶದಲ್ಲಿ ಮೂರು ಶತಮಾನಕ್ಕಿಂತ ಹೆಚ್ಚು ಕಾಲ ಬಾಳಿದ ಸುಗುಟೂರು ಅರಸರು ಸ್ಥಳೀಯ ಚರಿತ್ರೆಯ ಅಧ್ಯಯನದ ಸಂದರ್ಭದಲ್ಲಿ ವಿಶೇಷವಾದವರಾಗುತ್ತಾರೆ. ಈ ಸುಗುಟೂರು ಅರಸರ ವಂಶಸ್ಥರು ಇಂದಿಗೂ ಪುಂಗನೂರಿನಲ್ಲಿ ಜಮೀನ್ದಾರರಾಗಿ ಮುಂದುವರೆದಿದ್ದು, ಸಂಸ್ಥಾನದ ಸಂಪ್ರದಾಯ, ಆಚರಣೆಗಳನ್ನು ಪರಿಪಾಲಿಸುತ್ತ ಸಾಮಾನ್ಯ ಜನಜೀವನದೊಂದಿಗೆ ಬೆರೆತು ಬಾಳುತ್ತಿದ್ದಾರೆ.

ಗ್ರಂಥ ಋಣ

1. ಡಾ. ಪಿ. ವಿ. ಕೃಷ್ಣಮೂರ್ತಿ: 'ಸುಗುಟೂರು ವೀರಶೈವ ಅರಸುಮನೆತನ', ಕರ್ನಾಟಕ ವಿ.ವಿ. ಧಾರವಾಡ, 1994
2. ಡಾ. ಪಿ. ವಿ. ಕೃಷ್ಣಮೂರ್ತಿ: 'ಶಾಸನಗಳ ಹಿನ್ನಲೆಯಲ್ಲಿ ಆನೇಕಲ್ ತಾಲ್ಲೂಕು', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ.76-1, 1998
3. ಡಾ. ದೇವರಕೊಂಡಾರೆಡ್ಡಿ: 'ಆನೇಕಲ್ ಪಾಳೆಯಗಾರರ ಕೈಫಿಯಿತ್ತು', ಇತಿಹಾಸ ದರ್ಶನ, ಸಂ-10, 1985
4. ಎಪಿಗ್ರಾಫಿಯ ಕರ್ನಾಟಿಕ (ರೈಸ್ ಸಂಪುಟ): 9, ಬೆಂಗಳೂರು, 1905
5. ಆನೇಕಲ್ ಪಾಳೆಯಗಾರರ ಕೈಫಿಯತ್ತಿನಲ್ಲಿರುವ ವಂಶಾವಳಿಗೂ ಶಾಸನೋಕ್ತ ಈ ಅರಸರ ವಂಶಾವಳಿಗೂ ವ್ಯತ್ಯಾಸವಿದೆ.

21. ಬೆಂಗಳೂರು ನಗರದ ಕೆಂಪೇಗೌಡ ವೃತ್ತದ (ಮೆಜೆಸ್ಟಿಕ್) ಇತಿಹಾಸ

ಡಾ. ತುಳಸಿ ರಾಮನಾಯ್ಕ

ಸುಮಾರು ಮೂರು ಶತಮಾನಗಳ ಸುದೀರ್ಘ ಇತಿಹಾಸದಲ್ಲಿ ನಡೆದ ಸ್ಥಿತ್ಯಂತರದ ಕತೆಯನ್ನು ಇಲ್ಲಿ ಬಿಚ್ಚಿಕೊಡುವ ಪ್ರಯತ್ನ ಮಾಡಲಾಗಿದೆ. ನಗರೀಕರಣದ ಪ್ರಭಾವದಿಂದ ಮಠಗಳಂತಹ ಧಾರ್ಮಿಕ ಸಂಸ್ಥೆಗಳು ಕ್ಷೀಣಿಸಿದವು. ಕೆಲವು ಮಾಯವಾದವು. ನಗರದ ಕೇಂದ್ರ ಭಾಗದಲ್ಲಿದ್ದ ವಸತಿ ಗೃಹಗಳು ಬಡಾವಣೆಗಳಿಗೆ ಸ್ಥಳಾಂತರವಾದವು. ಈ ಎಲ್ಲಾ ಬದಲಾವಣೆ ವರ್ಗಾವಣೆಗಳ ನಡುವೆ ನಿಶ್ಚಲವಾಗಿ ನಿಂತಿರುವ 7 ಅಡಿ 2 ಅಂಗಲ ಎತ್ತರದ ಕಂಬ ಮೂರೂವರೆ ಶತಮಾನಗಳ ಹಿಂದಿನ ಇತಿಹಾಸದ ಏಕೈಕ ಸಾಕ್ಷಿಯಾಗಿದೆ.

ಬೆಂಗಳೂರು ನಗರದ ಕೇಂದ್ರಬಿಂದುವಾದ ಕೆಂಪೇಗೌಡ ವೃತ್ತವು (1958–ಮೆಜೆಸ್ಟಿಕ್) ಇಂದು ದಟ್ಟವಾದ ಸಂಚಾರ ವ್ಯವಸ್ಥೆ ಬಹು ಅಂತಸ್ತಿನ ವ್ಯಾಪಾರಿ ಮಳಿಗೆ ಹಾಗೂ ಅಂಗಡಿ ಮುಗ್ಗಟ್ಟುಗಳಿಂದ ಜನನಿಬಿಡ ಪ್ರದೇಶವಾಗಿ ಕಂಗೊಳಿಸುತ್ತಿದೆ. ಆದರೆ ಈ ಪ್ರದೇಶಕ್ಕೆ ಸುಮಾರು 500 ವರ್ಷಗಳ ಇತಿಹಾಸವಿದ್ದು, ಅದು ಹಲವಾರು ದೇವಾಲಯ, ಮಠ ಹಾಗೂ ಧಾರ್ಮಿಕ ಸಂಸ್ಥೆಗಳ ಕೇಂದ್ರವಾಗಿತ್ತು. ಅದರ ಪ್ರಮುಖ ಮಜಲುಗಳನ್ನು ನಿರೂಪಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಈ ವೃತ್ತವು ಸುತ್ತಲೂ ರಸ್ತೆಯಿಂದ ಕೂಡಿದ್ದು, ಮಧ್ಯೆ ಭಕ್ತ ಮಾರ್ಕಂಡೇಯ ಹಾಗೂ ಗಣಪತಿ ದೇವಸ್ಥಾನ, ಅರಳೀಮರ ಹಾಗೂ ದೊಡ್ಡದಾದ ಎರಡು ಗಂಟೆಗಳಿಂದ ಕಂಗೊಳಿಸುತ್ತಿದೆ. ಇದರ ಹತ್ತಿರದಲ್ಲಿಯೇ ದಕ್ಷಿಣ ಭಾಗದಲ್ಲಿ ಮೆಜೆಸ್ಟಿಕ್ ಹೆಸರಿನ ಚಿತ್ರಮಂದಿರ ಇದ್ದುದರಿಂದ ಮೆಜೆಸ್ಟಿಕ್ ಎಂದೂ ಸಹ ಕರೆಯುತ್ತಾರೆ. ಹಿಂದೆ ಬೆಂಗಳೂರು ಪಟ್ಟಣದ ಸುತ್ತಿ ಇತಿಹಾಸ ಪ್ರಸಿದ್ಧವಾಗಿದ್ದ ಕೆಂಪೇಗೌಡನ ಕೋಟೆಯ ಉತ್ತರ ದಿಗ್ಭಾಗಕ್ಕೆ ಎರಡು ಹೆಬ್ಬಾಗಿಲುಗಳಿದ್ದವು. ಅವುಗಳೇ ಯಲಹಂಕದ ಬಾಗಿಲು ಮತ್ತು ಯಶವಂತಪುರ ಬಾಗಿಳುಗಳು, ಯಶವಂತಪುರ ಬಾಗಿಲನ್ನು ಬಳೆಯ ಬಾಗಿಲು ಅಥವ ನೆಲಮಂಗಲದ ಬಾಗಿಲು ಎಂದೂ ಕರೆಯುವುದು ರೂಢಿಯಲ್ಲಿತ್ತು. ಈ ಬಾಗಿಲಿಗೆ ಅಭಿಮುಖವಾಗಿ ಹಾಗೂ ಧರ್ಮಾಂಬುಧಿ (ದೊಡ್ಡ ಕೆರೆ) ಕೆರೆಯ ಪೂರ್ವದ ದಂಡೆಗೆ ಬೆಂಗಳೂರು ಪಟ್ಟಣದಿಂದ ಪ್ರತ್ಯೇಕ್ಷವಾಗಿ ಒಂದು ಸಣ್ಣ ಗ್ರಾಮವಿತ್ತು.[1] ಆ ಸಣ್ಣ ಗ್ರಾಮವೇ ಹನುಮಂತಪುರ (ನಕ್ಷೆ ನೋಡಿ).

ನಗರದ ಹೃದಯ ಭಾಗದಂತಿರುವ ಇಂದಿನ ಗಾಂಧಿನಗರ ಹಾಗೂ ಅದರ ಸುತ್ತಮುತ್ತಲ ಭಾಗದಲ್ಲಿರುವ ಹಲವಾರು ದೇವಾಲಯ, ಮಠ ಹಾಗೂ ಧಾರ್ಮಿಕ ಸಂಸ್ಥೆಗಳು ಹನುಮಂತಪುರ ಗ್ರಾಮಕ್ಕೆ ಒಳಪಟ್ಟಿದ್ದವು. ಈ ಹೆಸರಿನ ಹಿಂದೆ, ಜನಸಾಮಾನ್ಯರು ಮಾತನಾಡಿಕೊಳ್ಳುವ ಪ್ರಕಾರ, ಇಮ್ಮಡಿ ಕೆಂಪರಾಯನು ಬೆಂಗಳೂರು ಪಟ್ಟಣದ ಜನತೆಗೆ ನೀರಿನ ಸೌಲಭ್ಯಕ್ಕಾಗಿ ಹಾಲಿ ಇದ್ದ ದೊಡ್ಡ ಕೆರೆಯನ್ನು ಜೀರ್ಣೋದ್ಧಾರ ಮಾಡಿ ಆ ಕೆರೆಯಿಂದ ನೀರು ಪೂರೈಸುವ ವ್ಯವಸ್ಥೆ ಮಾಡಿದ್ದನು. ಆ ಸಂದರ್ಭದಲ್ಲಿ ಹಿರಿಯ ಕೆಂಪೇಗೌಡನ ಧಾರ್ಮಿಕ ಕೆಲಸ ಕಾರ್ಯಗಳನ್ನು ಅರಿತು, ವಿಜಯನಗರದ ಅರಸರು ಧರ್ಮಪ್ರಭು ಕೆಂಪೇಗೌಡ ಎಂಬ ಬಿರುದನ್ನು ಕೊಟ್ಟರು.[2] ಕಾಲಕ್ರಮೇಣ, ಕಾಲನ ದವಡೆಯಲ್ಲಿ ಸಿಕ್ಕಿ ನೀರು ಬತ್ತಿಹೋಗಿ ಕೆರೆ ರೂಪ ಬದಲಿಸಿತು. ಇತ್ತೀಚೆಗೆ ಕೆರೆಗೆ ಕೆಂಪೆಗೌಡ ಬಸ್ ನಿಲ್ದಾಣ ಎಂದು ನಾಮಕರಣ ಮಾಡಿದ್ದರೂ ಸಹ ಜನರು ಇದನ್ನು ಧರ್ಮಾಂಬುಧಿ (ದೊಡ್ಡ ಕೆರೆ) ಕೆರೆ ಇದ್ದ ಪ್ರದೇಶ ಎಂದು ಗುರುತಿಸುತ್ತಾರೆ. ಈ ಕೆರೆಯ ಕಟ್ಟಡಗಳನ್ನು ಕಟ್ಟಲು ರಾಯರ ಬಲಗೈ

ಭಂಟನಾದ ಹನುಮಂತ ನಾಯಕ ಎಂಬುವನು ಮುಂದೆ ನಿಂತು ಯಶಸ್ವಿಯಾಗಿ ಪೂರ್ಣಗೊಳಿಸಿ ರಾಯರ ಕೃಪೆಗೆ ಪಾತ್ರನಾದನು. ಸಂತುಷ್ಟನಾದ ರಾಜನು ಕೆರೆಯ ಆಸುಪಾಸಿನ ಭಾಗವನ್ನು ಹನುಮಂತನಾಯಕನಿಗೆ ಉಂಬಳಿಯಾಗಿಕೊಟ್ಟನು, ಆ ಭಾಗವೇ ಈ ಹನುಮಂತಪುರ ಹನುಮಂತನಾಯಕನು ಕೆರೆಯ ದುರಸ್ತಿ ಕೆಲಸ ಕಾರ್ಯಗಳನ್ನು ಮಾಡಿಸುತ್ತಿರುವಾಗ ಕೋಡಿಯಲ್ಲಿ ಲಭಿಸಿದ ಎರಡು ಮೂರ್ತಿಗಳ ಸ್ಮರಣಾರ್ಥವಾಗಿ ಹನುಮಂತನಾಯಕನು ತನ್ನ ಹಾಗೂ ತನ್ನ ಮಡದಿ ಅಣ್ಣಮ್ಮಳ ಹೆಸರಿನಲ್ಲಿ ಧರ್ಮಾಂಬುಧಿ (ದೊಡ್ಡ ಕೆರೆ) ಕೆರೆದಂಡೆಗೆ ಅಭಿಮುಖವಾಗಿ ಎರಡು ಪುಟ್ಟ ಗುಡಿಗಳನ್ನು ಕಟ್ಟಿಸಿದ್ದನು.3 ಅವೇ ಈಗಿನ ಗಾಂಧಿನಗರದ ಸುಭೇದಾರ ಛತ್ರಂ ರಸ್ತೆಯಲ್ಲಿರುವ ಆಂಜನೇಯ ಮತ್ತು ನಗರದೇವತೆ ಅಣ್ಣಮ್ಮ ದೇಗುಲಗಳು. ಇವು ಈ ಶತಮಾನದ ಆರಂಭದ ವೇಳೆಗೆ ಪೂರ್ವಾಭಿಮುಖವಾಗಿ ಪುನರುಜ್ಜೀವನಗೊಂಡವೆಂದು ಹೇಳಲಾಗುತ್ತದೆ.

ಈ ವೃತ್ತದ ಅಕ್ಕಪಕ್ಕ ಕೆಂಪೇಗೌಡನ ಕಾಲದಲ್ಲಿ ಹಲವಾರು ಮಠಗಳು, ದೇವಾಲಯಗಳು ಈತನ ಪ್ರೋತ್ಸಾಹದಿಂದ ಸ್ಥಾಪಿಸಲ್ಪಟ್ಟವು ಎಂದು ಬಲವಾದ ನಂಬಿಕೆ. ಬೆಂಗಳೂರಿನಲ್ಲಿ ಈತನ ಕಾಲದಲ್ಲಿ 100ಕ್ಕೂ ಹೆಚ್ಚಿನ ಮಠ ಮಾನ್ಯಗಳು ಸ್ಥಾಪಿಸಲ್ಪಟ್ಟವೆ ಎಂದು ಹೇಳಲಾಗುತ್ತದೆ. ಇದರಲ್ಲಿ ಸುಮಾರು 74 ಮಠಗಳು ಗುರುತಿಸಲ್ಪಟ್ಟಿವೆ. ಉಳಿದವುಗಳ ದಾಖಲೆಗಳು ಅಪೂರ್ಣವಾಗಿದ್ದು ಇನ್ನುಳಿದ ಸ್ಥಳಗಳಲ್ಲಿ ಮೂಲ ವಿನ್ಯಾಸಗಳು ಪರಿವರ್ತನೆಯಾಗಿರುವ ಸಾಧ್ಯತೆಗಳಿವೆ.

ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಹೊಸಪೇಟೆಯ ಪೂರ್ಣಯ್ಯನವರ ಛತ್ರದ ಹಿಂಭಾಗದಲ್ಲಿದ್ದ ಗೊಟ್ಟೂರಯ್ಯನ ಮೂಲಮಠವಾಗಿತ್ತು. ದಿವಾನ್ ಪೂರ್ಣಯ್ಯನವರು ಕ್ರಿ. ಶ. 1806ರಲ್ಲಿ ಧರ್ಮಾಂಬುಧಿ ಕೆರೆಯ ಹಿಂಬದಿಗೆ ತಮ್ಮ ಸ್ಮರಣಾರ್ಥವಾಗಿ ಸಾರ್ವಜನಿಕರಿಗೆ ಸಹಯೋಗವಾಗುವಂತೆ ಒಂದು ಧರ್ಮಛತ್ರವನ್ನು ನಿರ್ಮಿಸಿದ್ದಾರೆ.[4] ಪೂರ್ಣಯ್ಯನವರ ಈ ಧರ್ಮಛತ್ರದ ನಿರ್ಮಾಣಕ್ಕೆ ತಮ್ಮ ಮಠದ ಮುಂಭಾಗದಲ್ಲಿ ಅನುಕೂಲ ಮಾಡಿಕೊಟ್ಟಿದ್ದವರೆ ಆಗಿನ ಕಲ್ಲುಮಠದ ಗುರುಗಳಾಗಿದ್ದ ಪೂರ್ಣಯ್ಯನವರು, ಇದರ ಸಹಾಯಾರ್ಥವಾಗಿ ಪೂರ್ಣಯ್ಯನವರು ಮುಮ್ಮಡಿ ಕೃಷ್ಣರಾಜ ಒಡೆಯರಲ್ಲಿ ಬೀರಿ ಗೊಟ್ಟೂರಯ್ಯನವರಿಗೆ ಪಕ್ಕದ ಹನುಮಂತಪುರ ಧರ್ಮಾಂಬುಧಿ ಕೆರೆಯ ಪೂರ್ವದ ದಂಡೆಗೆ ಸಂಖ್ಯೆ 25ರಲ್ಲಿ 8 ಕೊಳಗ 2 ಪಡಿ ಬೀಜವರಿ (7 ಎಕರೆ, 11 ಗುಂಟೆ) ಜಮೀನನ್ನು ಇನಾಮಾಗಿ ಕೊಡಿಸಿ ಕೊಟ್ಟಿದ್ದಕ್ಕೆ ಕ್ರಿ. ಶ. 1810ರ ಪೂರ್ಣಯ್ಯನವರ ಹುಜೂರು ಜಾರಿ ದಾಖಲೆಯು 'ಗೊಟ್ಟೂರಯ್ಯನವರ ಮಠ'ವೆಂದು ದೃಢೀಕರಿಸಿದೆ.[5]

ಮುಂದೆ 1831ರ ಹುಜೂರ್ ಜಾರಿ ದಾಖಲೆ ಪ್ರಕಾರ ಗೊಟ್ಟೂರಯ್ಯನವರ ನಂತರ ಅಧಿಕಾರಕ್ಕೆ ಬಂದವರು ಚನ್ನವೀರ ಒಡೆಯ (ದೇವ)ರು. ಬಹುಶಃ ಈ ವೇಳೆಗಾಗಲೇ ಗೊಟ್ಟೂರಯ್ಯನವರು ತೀರಿಕೊಂಡಿರಬೇಕು. ಗೊಟ್ಟೂರಯ್ಯನವರ ಗದ್ದುಗೆಯನ್ನು ಹನುಮಂತಪುರದ ಇನಾಂ ಜಮೀನಿನಲ್ಲೇ ಮಾಡಲಾಗಿತ್ತು. ಚನ್ನವೀರ ಒಡೆಯ (ದೇವ)ರು 1848ರವರೆಗೂ ಸದರಿ ಗೊಟ್ಟೂರಯ್ಯನವರ ಮಠದ ಅಧಿಪತಿಗಳಾಗಿ ಮುಂದುವರೆದಿದ್ದರು. ಇವರ ಕಾಲದಲ್ಲಿ ಗ್ರಾಮದ ಇನಾಂ ಜಮೀನಿನಲ್ಲಿ ಗೊಟ್ಟೂರಯ್ಯನವರ ಗದ್ದುಗೆ ಜೊತೆಗೆ ನಂಜುಂಡೇಶ್ವರನ ಸಣ್ಣ ಗುಡಿ ಹಾಗೂ ಹದಿನೈದು ಅಂಕಣಗಳ ಕಲ್ಲು ಮಠವನ್ನು ನಿರ್ಮಾಣ ಮಾಡಲಾಗಿತ್ತು. ಇವರ ಕಾಲದ ವ್ಯವಹಾರದ ದಾಖಲೆಗಳನ್ನು ಆಧರಿಸಿ ಹೇಳುವುದಾದರೆ, 'ಗೊಟ್ಟೂರಯ್ಯನವರ ಮಠವು ಮುರಿಗಾ ಸಮಯಕ್ಕೆ ಸೇರಿದ್ದ ಮಠವಾಗಿತ್ತು.'[6] ಗೊಟ್ಟೂರಯ್ಯನವರ ಮಠದ ಮೂಲಮಠ ಕಲ್ಲುಮಠವೇ ಆಗಿದ್ದರೂ ಗೊಟ್ಟೂರಯ್ಯನವರಿಗೆ ಮಹಾರಾಜರಿಂದ ಇನಾಮತಿ ಬಂದಿದ್ದ ಹನುಮಂತಪುರದ ಜಮೀನಿನಲ್ಲಿ 1850ರಯ್ಯನವರ ಮಠವೆಂದೂ ಕರೆಯುವುದು ರೂಢಿಗೆ ಬಂದಿತ್ತು.

ಚನ್ನವೀರ ಒಡೆಯ (ದೇವ)ರ ನಂತರ ಮಠಾಧಿಕಾರಕ್ಕೆ ಬಂದವರೇ ಸಿದ್ಧರಾಮ (ಒಡೆಯರು) ದೇವರು. ಇವರ ಕಾಲದ ಬಗೆಗೆ ಖಚಿತವಾದ ಮಾಹಿತಿ ಲಭ್ಯವಾಗಿಲ್ಲವಾದರೂ ಇವರು 1849ರಿಂದ ಅಧಿಕಾರದಲ್ಲಿದ್ದುದಕ್ಕೆ ಸೂಚನೆಗಳಿವೆ.[7] ಆಗ ಮಠದ ಭಕ್ತರಾಗಿದ್ದ ಉದ್ದಣ್ಣ ಎಂಬುವರು ತಮ್ಮ ಸ್ವಂತ ಖರ್ಚಿನಲ್ಲಿ ವರ್ಷಂಪ್ರತಿ ಮಠದಲ್ಲಿ ನಡೆಯುವ ಹಿರಿಯ ಗುರುಗಳ ಗಣಾರಾಧನೆಯನ್ನು ನಡೆಸಿಕೊಡಲು ಪ್ರಾರಂಭಿಸಿದರು. ಈ ಕಾರ್ಯವು 1849 ರಿಂದ 1863ರವರೆವಿಗೂ ನಿರಂತರವಾಗಿ ನಡೆದುಬಂದಿತ್ತು. ಮುಂದೆ 1863ರಲ್ಲಿ ಸಿದ್ಧಲಿಂಗದೇವರು ಗೊಟ್ಟೂರಯ್ಯನವರ ಮಠದ ಅಧಿಪತಿಗಳಾಗಿದ್ದರು ಇವರ ಕಾಲದಲ್ಲಿ ಮಠದ ಜಮೀನುಗಳನ್ನು ಸಾಲಗುತ್ತಿಗೆ ಕರಾರು ಮಾಡಿಕೊಂಡಿದ್ದಕ್ಕೆ ಕೆಲವು ದಾಖಲೆಗಳಿವೆ. ಗೊಟ್ಟೂರಯ್ಯ (ಗೋದೂರಯ್ಯ) ಮಠದ ಸಿದ್ದಲಿಂಗದೇವರು 1867ರಲ್ಲಿ ಮೊಟ್ಟ ಮೊದಲಿಗೆ ಭಕ್ತರ ಮನೆಯ ಮಂಗಳ ಕಾರ್ಯಗಳಿಗೋಸ್ಕರವೇ ದೊಡ್ಡ ದೊಡ್ಡ ಕಂಬಗಳಿಂದ (ಸು.20 ಯಿಂದ) ಕೂಡಿದ ಛತ್ರ ಹಾಗೂ ಉಯ್ಯಾಲೆಯನ್ನು ನಿರ್ಮಾಣ ಮಾಡಿಸಿದರು. ಮುಂದೆ ಈ ಛತ್ರವನ್ನು ಜನರು ಉಯ್ಯಾಲೆ ಛತ್ರವೆಂದು ಕರೆಯಲಾರಂಭಿಸಿದರು.[8] 1930ರವರೆವಿಗೂ ಇಲ್ಲಿ ಮದುವೆ, ಮುಂಜಿಗಳು, ಪಕ್ಕದಲ್ಲಿರುವ ಗ್ರಾಮದೇವತೆ ಅಣ್ಣಮ್ಮ ದೇವಿಯ ಉತ್ಸವ, ಜಾತ್ರೆಗಳ ಸಮಯದಲ್ಲಿ ದೇವಿಗೆ ಉಯ್ಯಾಲೆ ಆಡಿಸುವುದು ತಪ್ಪದೆ ನಡೆಯುತ್ತಿತ್ತು. ದೇವಿಯ ಸೇವಕ ಅಥವ ಕಾವಲುಗಾರ ಅಥವಾ ಸೈನ್ಯಾಧಿಪತಿ ಎಂದು ಕರೆಯಿಸಿಕೊಳ್ಳುತ್ತಿದ್ದ ವಿಶಿಷ್ಟ ವೇಷ, ಭೂಷಣದಿಂದ ಅಲಂಕರಿಸಿಕೊಂಡ ಸಿಡೀರಣ್ಣ ವೇಷಧಾರಿಯು ಆಟವಾಡಿ ನೆರೆದಿದ್ದ ಜನಸ್ತೋಮವನ್ನು ಸಂತೋಷಪಡಿಸುತ್ತಿದ್ದ. ಇದನ್ನು ನೋಡಿದ ಜನರು ಸಂತೋಷದಿಂದ ಕುಣಿದು ಕುಪ್ಪಳಿಸುತ್ತಿದ್ದರು ಎಂದು ಸ್ಥಳೀಯರು ಈಗಲೂ ಜ್ಞಾಪಿಸಿಕೊಳ್ಳುತ್ತಾರೆ.

ಗೊಟ್ಟೂರಯ್ಯನವರ ಮಠದ ಕೊನೆಯ ಅಧಿಪತಿಗಳಾಗಿದ್ದವರೇ ಅನ್ನದಾನಿ ಸ್ವಾಮಿಗಳು. ಇವರು 1889ರವರೆವಿಗೂ ಅಧಿಕಾರದಲ್ಲಿದ್ದುದಾಗಿ ಸಪ್ಪಣ್ಣಸ್ವಾಮಿ ಮಠದ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಹನುಮಂತಪುರ ಗ್ರಾಮದ ಗೊಟ್ಟೂರಯ್ಯನವರ ಮಠಕ್ಕೆ ಮೈಸೂರು ದೊರೆಗಳ ಸರಕಾರದಿಂದ ದಿನಾಂಕ 01-01-1876 ರಂದು ಅಧಿಕೃತವಾದ ಇನಾಂ ಸರ್ಟಿಫಿಕೇಟ್ ನೀಡಲಾಗಿದೆ. ಇದರಲ್ಲಿ ಗೋದೂರಯ್ಯನವರ ಮಠವೆಂದು ಸಂಬೋಧಿಸಿರುತ್ತಾರೆ.

ಸುಮಾರು 1800 ರಿಂದ 1886ರವರೆವಿಗೂ ಗೊಟ್ಟೂರಯ್ಯನವರ ಮಠದಲ್ಲಿ ಆಗಿ ಹೋದ ಐವರು ಮಠಾಧೀಶ್ವರರ ಸಂಕ್ಷಿಪ್ತ ಮಾಹಿತಿ ಲಭ್ಯವಿದೆಯೇ ಹೊರತು, ಅವರ ಕಾಲದ ಹೆಚ್ಚಿನ ವಿವರಗಳೇನೂ ದೊರೆಯುವುದಿಲ್ಲ. ಈ ಅವಧಿಯಲ್ಲಿ ಬಳೇಪೇಟೆಯ ಕಲ್ಲು ಮಠ ಹಾಗೂ ಹನುಮಂತಪುರದ ಗೊಟ್ಟೂರಯ್ಯನವರ ಮಠಗಳೆರಡೂ ಒಂದೇ ಆಡಳಿತದಲ್ಲಿದ್ದವು. ಕೊನೆಯ ಗುರುಗಳಾಗಿದ್ದ ಅನ್ನದಾನಯ್ಯನವರು 1886ರಲ್ಲಿ ಶಿವಾಧೀನರಾದ ಮೇಲೆ ಸದರಿ ಮಠಗಳು ಗುರುವಣ್ಣದೇವರ ಮಠದ ಗುರುಮಹಾಂತ ಒಡೆಯರ ಸ್ವಾಧೀನದಲ್ಲಿದ್ದವು. ಇವರು ತಮ್ಮ ಸೋದರ ಸಂಬಂಧಿಯಾಗಿದ್ದ ಬಳೇಪೇಟೆಯ ಸಿದ್ಧಲಿಂಗಪ್ಪನ ಮಗ ಸಿದ್ಧಯ್ಯ ಎಂಬುವವನು 1888ರಲ್ಲಿ ಮೇಲ್ಕಂಡ ಕಲ್ಲುಮಠ ಹಾಗೂ ಗೊಟ್ಟೂರಯ್ಯನವರ ಮಠಗಳ ಅಧಿಕೃತ ವಹಿವಾಟುದಾರರೆಂದು ನೇಮಿಸಿಕೊಂಡರು. ಮುಜರಾಯಿ ಇಲಾಖೆ ಕೂಡ ಇದನ್ನು ಮಾನ್ಯ ಮಾಡಿತ್ತು.[9] ಆಗ ಸಾಕಷ್ಟು ವ್ಯತ್ಯಾಸವಾಗಿದ್ದ ಮಠಗಳ ಆಸ್ತಿ ಪಾಸ್ತಿಗಳ ರಕ್ಷಣೆಗಾಗಿ ಸಿದ್ಧಯ್ಯ ಅವಿರತ ಪ್ರಯತ್ನ ನಡೆಸಿದ್ದರು. ಈ ಮಧ್ಯೆ ಮಠದ ಭಕ್ತರೆಲ್ಲಾ ಸೇರಿ ಸಿದ್ಧಯ್ಯನೇ ಮಠದ ಅಧಿಕೃತ ವಹಿವಾಟುದಾರರೆಂದು ಸರಕಾರ ಒಪ್ಪಿಕೊಂಡಿರುವುದು ಸರಿಯಲ್ಲವೆಂದು ಮಠದ ಐತಿಹಾಸಿಕ ಪರಂಪರೆಗೆ ಅನುಗುಣವಾಗಿ ವಿದ್ಯಾವಂತ ಪಟು ಒಬ್ಬರನ್ನು ಸ್ವಾಮಿಗಳನ್ನಾಗಿ ಆಯ್ಕೆ ಮಾಡಲು ಸರಕಾರ ಅನುವು ಮಾಡಿಕೊಡಬೇಕೆಂದು ಸುದೀರ್ಘವಾದ ಅಹವಾಲು ಸಲ್ಲಿಸಿದ್ದರು. 1926ರ ವೇಳೆಗೆ ಮಠದ ಇನಾಮ್ ಜಮೀನುಗಳನ್ನು ಗುತ್ತಿಗೆ ಮಾಡಿಕೊಂಡಿದ್ದ ರೈತರು ಹಾಗೂ ಅರ್ಚಕರು ಸೇರಿ, ಮಠದ ಜಮೀನಿನಲ್ಲಿ ನೂರಾರು

ತಾತ್ಕಾಲಿಕ ಗುಡಿಸಲುಗಳನ್ನು ನಿರ್ಮಾಣ ಮಾಡಿ ಮಾಹೆಯಾನ ಗುಡಿಸಲೊಂದಕ್ಕೆ 4 ರಿಂದ 6 ಆಣೆಗಳ ಬಾಡಿಕೆ ವಸೂಲಿ ಮಾಡುತ್ತಿದ್ದರು.[10] ಈ ವೇಳೆಗೆ ಮಠದಲ್ಲಿ ಹಿಂದಿನ ಕಾಲದಿಂದಲೂ ನಡೆದು ಬಂದಿದ್ದ ಸಂಪ್ರದಾಯಗಳಿಗೆ ಪುರಸ್ಕಾರವೇ ಇಲ್ಲದಂತಾಗಿ ಮಠದ ಮೂಲ ಧಾರ್ಮಿಕ ಪರಂಪರೆಗೆ ಬಲವಾದ ಹೊಡೆತ ಬಿದ್ದಿತ್ತು.

ಮಠದ ಹೆಸರಿನಲ್ಲಿದ್ದ ಒಟ್ಟು ಆಸ್ತಿ 7 ಎಕರೆ 10 ಗುಂಟೆ ಜಮೀನಿನಲ್ಲಿ 5 ಎಕರೆ 30.5 ಗುಂಟೆ ವಿಸ್ತೀರ್ಣದ ಭೂಮಿಯನ್ನು ಗಾಂಧಿನಗರದ ನೂತನ ಬಡಾವಣೆಯ ನಿರ್ಮಾಣಕ್ಕೆ ಸ್ವಾಧಿನ ಪಡಿಸಿಕೊಳ್ಳಲು ದಿನಾಂಕ 31-03-1928 ರಂದು ಸರಕಾರವು ಪುರಸಭೆಗೆ ಅನುಮತಿ ನೀಡಿತ್ತು.[11] ಮಠದ ಕಟ್ಟಡ, ಗದ್ದುಗೆ ಇತ್ಯಾದಿಗಳಿದ್ದ ಪ್ರದೇಶ 8 ಗುಂಟೆ ಉಳಿದು, ಬೇರೆ 2 ಗುಂಟೆಯ ಭಾಗವನ್ನು ಸರಕಾರವೇ ರಾಮಚಂದ್ರಯ್ಯ ಎಂಬುವರಿಗೆ ಪರಭಾರೆ ಮಾಡಿತ್ತು. ಈ ಪೈಕಿ 11 ಗುಂಟೆ ಜಮೀನನ್ನು ಸರಕಾರದ ಪರವಾಗಿ ಕಲ್ಯಾಣಪ್ಪ ಎಂಬುವವರಿಗೆ ಗುತ್ತಿಗೆಗೆ ನೀಡಲಾಗಿತ್ತು. ಉಳಿದ ಭೂಮಿಯಲ್ಲಿ 2 ಗುಂಟೆಯಷ್ಟು ಜಾಗ ಸಿ. ವಇ. ನರಸಿಂಹಯ್ಯಂಗಾರ್ ಅವರ ಅನುಭೋಗದಲ್ಲೂ ಇನ್ನುಳಿದಿದ್ದ 37.05 ಗುಂಟೆಯಷ್ಟು ಜಮೀನು ಸಯ್ಯದ್ ಮಸ್ತಾಫ ಮತ್ತು ಸಯ್ಯದ್ ಹುಸೇನ್ ಸ್ವಾಧೀನದಲ್ಲೂ ಇತ್ತು. ಉಯ್ಯಾಲೆ ರಾಜಮ್ಮ ಎಂಬ ಹೆಸರಿನಿಂದ ಕರೆಯುತ್ತಿದ್ದ ಮಹಿಳೆಯೂ ಸಹ ಅಲ್ಲಿ ಕಾರ್ಯಕರ್ತೆಯಾಗಿದ್ದಳು. ಹೀಗೆ 1945ರ ವೇಳೆಗೆ ಗೊಟ್ಟೂರಯ್ಯ (ಗೋದೂರಯ್ಯ) ನವರ ಮಠದ ಆಸ್ತಿಯು ಸರಿಯಾದ ವಾರಸುದಾರರಿಲ್ಲದೆ ಹರಿದು ಹಂಚಿಹೋಗಿತ್ತು. ಈ ಮಧ್ಯೆ ಮಠದ ವಹಿವಾಟುದಾರನಾಗಿದ್ದ ಸಿದ್ಧಯ್ಯ 1942ರಲ್ಲಿ ತೀರಿಕೊಂಡಿದ್ದನು. ಸಿದ್ಧಯ್ಯನು ಬರೆದಿದ್ದ ಮರಣ ಶಾಸನ ಪ್ರಕಾರ ಈತನ ಸಾಕು ಮಗನಾದ ವೀರಭದ್ರಯ್ಯನೇ ಮಠದ ಮುಂದಿನ ವಹಿವಾಟುದಾರನಾಗಬೇಕಾಗಿತ್ತು. ಆದರೆ 1938ರಿಂದ 1942ರವರೆಗೆ ನಡೆದ ಇವರ ಕೌಟುಂಬಿಕ ಜಗಳಗಳಿಂದಾಗಿ ಮಠದ ಆಸ್ತಿ-ಪಾಸ್ತಿಗಳ ಸಂಪೂರ್ಣ ಅಧಿಕಾರವನ್ನು ಸರಕಾರವೇ ವಹಿಸಿಕೊಂಡು ವೀರಭದ್ರಯ್ಯನನ್ನು ಕೇವಲ ಅರ್ಚಕನನ್ನಾಗಿ ಮಾತ್ರ ಮುಂದುವರೆಸಿತ್ತು.12

ಸರಕಾರವು ಮುಂದೆ ಗೊಟ್ಟೂರಯ್ಯನವರ ಮಠದ ಆಸ್ತಿ ಪಾಸ್ತಿಗಳ ವಿಲೇವಾರಿಯಿಂದ ಸಂಗ್ರಹವಾಗಿದ್ದ ಹಣವನ್ನು ಮಠದ ಹೆಸರಿನಲ್ಲಿ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಕಾಯ್ದಿರಿಸಿತ್ತು. ದಿನಾಂಕ: 24-10-1979ರಲ್ಲಿ ಒಂದು ಆದೇಶವನ್ನು ಹೊರಡಿಸಿದ್ದ ಧಾರ್ಮಿಕ ದತ್ತಿ ಇಲಾಖೆಯು ಮೇಲ್ಕಂಡ ನಿಧಿಯಿಂದ ಬರುವ ವಾರ್ಷಿಕ ಬಡ್ಡಿ ಹಣವನ್ನು ಈ ಕೆಳಕಂಡ ಧರ್ಮಕಾರ್ಯಗಳಿಗೆ ಖಾಯಂ ಆಗಿ ವಿನಿಯೋಗವಾಗುವಂತೆ ಸೂಚನೆ ನೀಡಿತ್ತು.[13] ಅದರಂತೆ, ಪ್ರತಿವರ್ಷ ಕೆಳಕಂಡಂತೆ ವಿನಿಯೋಗಿಸಲಾಗುತ್ತಿತ್ತು.

ಗೊಟ್ಟೂರಯ್ಯನವರ ಮಠದ ಗುರು ಪರಂಪರೆ

1. ಗೊಟ್ಟೂರಯ್ಯನವರು ಸು. ಕ್ರಿ. ಶ. 1800-1830
2. ಚನ್ನವೀರ ಒಡೆಯ (ದೇವ) ಸು. ಕ್ರಿ. ಶ. 1831-1848
3. ಸಿದ್ಧರಾಮ (ಒಡೆಯರು) ದೇವರು ಸು. ಕ್ರಿ. ಶ. 1849-1862
4. ಸಿದ್ಧಲಿಂಗ ದೇವರು ಸು. ಕ್ರಿ. ಶ. 1863-1872
5. ಅನ್ನದಾನಯ್ಯಸ್ವಾಮಿ ಸು. ಕ್ರಿ. ಶ. 1872-1886
6. ನಂತರ ಗುರುವಣ್ಣದೇವರ ಮಠದ ಗುರುಮಹಾಂತ ಒಡೆಯರು 20ನೆಯ ಶತಮಾನದ ಮಧ್ಯಭಾಗದವರೆಗೂ ಈ ಮೂಲ ಮಠದ ಉತ್ತರಾಧಿಕಾರಿಗಳು, ಅರ್ಚಕರಾಗಿದ್ದರು.[14]

ಕ್ರ.ಸಂ	ವಿವರಗಳು	ಮೊತ್ತ
1	ಗೊಟ್ಟೂರಯ್ಯನವರ ಮಠದ ನಿತ್ಯ ಖರ್ಚಿಗಾಗಿ (ವಾರ್ಷಿಕ)	1800.00
2	ಅರ್ಚಕನ ವೇತನ	2700.00
3	ವಿದ್ಯುತ್, ನೀರು, ಇತರೆ ಸಾದಿಲ್ವಾರು ವೆಚ್ಚ	300.00
4	ಮಠದ ದುರಸ್ತಿ, ಕಂದಾಯ ವಗೈರೆ	2700.00
5	ವೀರಶೈವ ಆಗಮ ಅಧ್ಯಯನದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕ್ಕಾಗಿ	2400.00
6	ಅಕ್ಕಮಹಾದೇವಿ ಸಮಾಜದ ವಿದ್ಯಾರ್ಥಿನಿಯರಿಗಾಗಿ	3800.00
7	ಬಸವ ಸಮಿತಿಯಲ್ಲಿ ಗೊಟ್ಟೂರಯ್ಯನವರ ಸ್ಮರಣಾರ್ಥ ಕಾರ್ಯಗಳಿಗಾಗಿ	4000.00
	ಒಟ್ಟು	17700.00

ಬೆಂಗಳೂರು ಆಧುನಿಕ ಯುಗದಲ್ಲಿ ಒಂದು ಪ್ರಮುಖ ನಗರವಾಗಿ ಅಭಿವೃದ್ಧಿಗೊಂಡಾಗ 11 ಗುಂಟೆ (11,333 ಚದರ ಅಡಿಗಳು) ಅಥವಾ 1869 ಗಜಗಳು, 711 ಗಜ ವಿಸ್ತೀರ್ಣ (ಅಳತೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ) ದ ಜಮೀನನ್ನು ಸುತ್ತಲೂ ಇದ್ದ ಮಠಗಳು, ಅಂಗಡಿಯವರು, ಖಾಸಗಿಯವರೂ ಸಹ ವೈಯಕ್ತಿಕವಾಗಿ ತಮ್ಮ ಸ್ವಾಧೀನಪಡಿಸಿಕೊಳ್ಳಲು ಸುಧೀರ್ಘವಾದ ಹೋರಾಟ ನಡೆಸಿದರು.

ಶ್ರೀ ಗೋವಿಂದಪ್ಪ (ಪಿಳ್ಳಪ್ಪ) ಬಿನ್ ಲೇಟ್ ಪಟಡಿ ತಿಮ್ಮರಾಯಪ್ಪನವರು ಸರ್ವೆ ಸಂಖ್ಯೆ 13/3 ಹನುಮಂತಪುರ ಗ್ರಾಮದಲ್ಲಿ ಮುಜರಾಯಿ ಇಲಾಖೆಯಿಂದ ಆತನ ತಂದೆಯ ಹೆಸರಿಗೆ 11 ಗುಂಟೆ ಅಥವಾ 11,333 ಚದರ ಅಡಿಗಳು ಗುತ್ತಿಗೆ ಆಧಾರದ ಮೇಲೆ 50 ವರ್ಷಗಳ ಷರತ್ತಿನೊಡನೆ ದಿನಾಂಕ: 29–11–1924ರಲ್ಲಿ ಪಡೆದರು. ಸದರಿ ಸ್ವತ್ತಿನಲ್ಲಿ 34 ಚಿಕ್ಕ ಸಂಸಾರಗಳು ಹಾಗೂ 5 ಸಣ್ಣ ಅಂಗಡಿಗಳನ್ನು ನಿರ್ಮಿಸಿ, ಬಾಡಿಗೆ ಹಣವನ್ನು ವಸೂಲಿ ಮಾಡುತ್ತಿದ್ದು ಸರ್ಕಾರಕ್ಕೆ 1978–79ರವರೆವಿಗೆ ಕಂದಾಯ ಪಾವತಿ ಮಾಡುತ್ತಿದ್ದುದು ದಾಖಲೆಗಳಿಂದ ತಿಳಿದುಬರುತ್ತದೆ. 50 ವರ್ಷ ಗುತ್ತಿಗೆ ಮುಗಿದ ನಂತರ ದಿನಾಂಕ 29–11–1974ರಲ್ಲಿ ಗೋವಿಂದಪ್ಪನವರು ಈ ಜಾಗವನ್ನು ಬಿಟ್ಟುಕೊಟ್ಟರು. ಹಾಗೂ ಅಲ್ಲಿ ತಮ್ಮ ಪೂರ್ವಿಕರ ಕಾಲದಿಂದಲೂ ವಾಸ ಮಾಡಿಕೊಂಡಿದ್ದ ಬಡಜನರಿಗೆ ಸದರಿ ಸ್ವತ್ತು ವಿತರಣೆ ಮಾಡಬೇಕೆಂದು ಸಹ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಾರೆ.[15] ಅದೇ ಅವಧಿಯಲ್ಲಿ ಅಲ್ಲಿದ್ದವರು ಒಟ್ಟಾರೆ ಸೇರಿ ಉಯ್ಯಾಲೆ ಛತ್ರ ಅಸೋಸಿಯೇಷನ್ ಸ್ಥಾಪಿಸಿ ಇದರ ಮುಖಾಂತರ ಸ್ವತ್ತು ಪಡೆಯಲು ಸರ್ಕಾರಕ್ಕೆ ಪತ್ರ ವ್ಯವಹಾರ ಮಾಡಿದ್ದರು. ಉಯ್ಯಾಲೆ ರಾಜಮ್ಮ ಎಂದೇ ಹೆಸರುವಾಸಿಯಾಗಿದ್ದ ಛತ್ರದ ಕಾರ್ಯಕರ್ತೆ ಏಕಾಂಗಿಯಾಗಿ ಹೋರಾಟ ಮಾಡಿದರೂ ಸಹ ಆಕೆಗೆ ಈ ಸ್ಥಳ ದಕ್ಕಲಿಲ್ಲ.

ಗೊಟ್ಟೂರಯ್ಯ (ಗೋದೂರಯ್ಯ) ನವರ ಮಠದ ಸ್ವತ್ತು ಕ್ರಿ. ಶ. 1493ರಲ್ಲಿ ಕೆಳದಿ ಅರಸರಿಂದ ದಾನವಾಗಿ ಬಂದಿರುತ್ತದೆಂದೂ ತಿಳಿದುಬರುತ್ತದೆ. ದಿನಾಂಕ 9–8–1911ರಲ್ಲಿ ಶಾನ್‌ಭೋಗ್‌ರಂಗಪ್ಪ ಹರದನಹಳ್ಳಿ ಕಸಬಾ ಶಿವಮೊಗ್ಗ ಜಿಲ್ಲೆ ಹಾಗು ಟಿ. ಎನ್. ಶ್ರೀಕಂಠಶಾಸ್ತ್ರಿ (ಜಿ. ಪಿ. ಎ. ಹೊಲ್ಡರ್) ರವರು ಶ್ರೀ ರಾಮಲಿಂಗೇಶ್ವರ ಸ್ವಾಮಿ ಮಠ, ಇವರುಗಳು ಅಂದಿನ ರೆವೆನ್ಯೂ ಕಮೀಷನರ್ ಕಛೇರಿಯಲ್ಲಿ ಪತ್ರ ವ್ಯವಹಾರ ಮಾಡಿದ್ದು, ಶ್ರೀ ಗುರುಲಿಂಗರಾಜ ಒಡೆಯರ್ ವಂಶದವರು ಕೆಳದಿ ರಾಜರಿಗೆ ಕುಲಬೋಧ ಗುರುಗಳಾಗಿದ್ದರು. ಶ್ರೀ ರಾಮರಾಜ ನಾಯಕ, ಕೆಳದಿಯ ರಾಜ ಈತನ ಹೆಸರಿನಲ್ಲಿ ಹರದನಹಳ್ಳಿ (ಶಿವಮೊಗ್ಗ ಜಿಲ್ಲೆ) ಯಲ್ಲಿ ಶ್ರೀ ರಾಮಲಿಂಗೇಶ್ವರ

ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿರುತ್ತಾರೆ. ಇದೇ ತರಹ ಕೆಳದಿಯಲ್ಲಿ ಕೌಲೇಗುಡ್ಡ ಮತ್ತು ಬೆಂಗಳೂರಿನಲ್ಲಿರುವ ಹನುಮಂತಪುರ ಗ್ರಾಮದಲ್ಲಿ ಶ್ರೀ ರಾಮಲಿಂಗೇಶ್ವರ ಮಠ ಸ್ಥಾಪಿಸಿದರು.[16] ಈ ರಾಜರು ಪ್ರವಾಸ ಹೋಗುವ ಕಡೆ, ಅವರು ಇಳಿದುಕೊಂಡ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿ ಅವುಗಳಲ್ಲಿ ವಿಗ್ರಹ ಪ್ರತಿಷ್ಠಾಪನೆ ಮಾಡುವುದು ಅವರ ಅಂದಿನ ಧ್ಯೇಯಗಳಾಗಿದ್ದವು. ಈ ಮಠ, ದೇವಸ್ಥಾನ ಮತ್ತು ಕೆರೆ ಕುಂಟೆಗಳು ಇನಾಂ ಜಮೀನುಗಳಿಗೆ ಒಳಪಡುತ್ತಿತ್ತು. ಇವುಗಳನ್ನು ಧಾರ್ಮಿಕ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದರು. ಈ ರಾಜರು ಹೋಗುವ ಎಲ್ಲಾ ಕಡೆ ಶ್ರೀ ಗುರುಲಿಂಗರಾಜ ಒಡೆಯರ್‌ರವರ ವಂಶಸ್ಥರು ಜೊತೆಯಲ್ಲಿ ಹೋಗುತ್ತಿದ್ದರು. ಶ್ರೀ ಗಂಗಾಧರಯ್ಯ ಬಿನ್ ಶ್ರೀ ಶಿವನಂಜಯ್ಯ, ಶ್ರೀ ರಾಮಲಿಂಗೇಶ್ವರ ಮಠದ ಕೆಳದಿ ಸಂಸ್ಥಾನಕ್ಕೆ ಸರ್ವಾಧಿಕಾರಿಯಾಗಿದ್ದು ಈತನಿಗೆ ಮೂರು ಜನ ಗಂಡು ಮಕ್ಕಳು–ನಂಜುಂಡಾರಾಧ್ಯ, ಬಸವಾರಾಧ್ಯ ಹಾಗೂ ಈಶ್ವರಾರಾಧ್ಯರು – ಉತ್ತರಾಧಿಕಾರಿಗಳು, ಆದ್ದರಿಂದ ಬೆಂಗಳೂರು ಹನುಮಂತಪುರ ಗ್ರಾಮದಲ್ಲಿರುವ ಗೊಟ್ಟೂರಯ್ಯನ (ಗೋದೂರಯ್ಯ) ಮಠವು ಸಹ ಶ್ರೀ ರಾಮಲಿಂಗೇಶ್ವರ ಮಠದ ಶಾಖಾ ಮಠವಾಗಿರುತ್ತದೆ ಎಂದು ಮುಜರಾಯಿ ಇಲಾಖೆಯವರ ಜೊತೆಯಲ್ಲೇ ಪತ್ರ ವ್ಯವಹಾರ ಮಾಡಿದ್ದು ತಿಳಿದುಬರುತ್ತದೆ.[17] ಬೆಂಗಳೂರಿನಲ್ಲಿರುವ ಹನುಮಂತಯ್ಯಪುರದ ಗ್ರಾಮದಲ್ಲಿನ ಗೋದೂರಯ್ಯನವರ ಮಠದ ಪರಂಪರೆಯಲ್ಲಿನ ನಾಮಧೇಯಗಳು (ಒಡೆಯರ್, ಮುರಿಗಾ ಸಮಯ ಭೇದಕ್ಕೆ ಸೇರಿದ್ದರು) ಹಾಗೂ ಕೆಳದಿರಾಜರ ಕಾಲದಲ್ಲಿದ್ದ ಅವರ ಕುಲಗುರುಗಳ ನಾಮಧೇಯಗಳು (ಜಂಗಮ ವಂಶ) ಸ್ವಲ್ಪ ಹೆಚ್ಚು ಕಡಿಮೆ ತಾಳೆಯಾಗುತ್ತದೆ. ಆದರೂ ಸಹ ಯಾರಿಗೂ ಮಠದ ಸ್ವತ್ತು ದಕ್ಕಲಿಲ್ಲ.

ಮೈಸೂರು ವೀರಶೈವರ ಸಂಘದ ಬೆಂಗಳೂರಿನ ಪದಾಧಿಕಾರಿಗಳು ಪಕ್ಕದಲ್ಲಿರುವ ಶ್ರೀ ಸಯ್ಯದ್ ಹುಸೇನ್ ಹಿಮಾಲಯ ಚಿತ್ರಮಂದಿರದ ಮಾಲಿಕರ ಹಾಗೂ ಸರ್ಕಾರದ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಇದೂ ಕೂಡ ಇವರ ಕೈವಶವಾಗದೆ ಗೋದೂರಯ್ಯನ ಮಠಕ್ಕೆ ಪೂಜಾ ಪುರಸ್ಕಾರಗಳಿಗೆ ಹಣ ಕೊಡುವಂತೆ ನಿಗಧಿಪಡಿಸಿ ರೂ. 1,34,485/– ಗಳನ್ನು ಸರ್ಕಾರಕ್ಕೆ ಪಾವತಿ ಮಾಡಿಸಿ, ಸ್ವತ್ತು ಶ್ರೀ ಸೈಯದ್ ಹುಸೇನ್‌ರವರ ಪರವಾಗಿ ನ್ಯಾಯಾಲಯದಲ್ಲಿ ತೀರ್ಮಾನವಾಗಿರುತ್ತದೆ.[18] (ದಾವೆ ಸಂಖ್ಯೆ 805/1966) ಈಗ ಈ ಜಾಗದಲ್ಲಿ ವಾಣಿಜ್ಯ ಕಟ್ಟಡವಿದೆ. ಇದರ ಪಕ್ಕದಲ್ಲಿಯೇ ಗೋದೂರಯ್ಯನ ಮಠ, ಉಯ್ಯಾಲೆ ಛತ್ರ, ಶ್ರೀ ರಾಮಲಿಂಗೇಶ್ವರ ಸ್ವಾಮಿ ಮಠ ಎಂದು ವಿವಿಧ ಹೆಸರುಗಳಿಂದ ಕರೆಯುತ್ತಿದ್ದ ಸ್ಮಾರಕದ ಕುರುಹಾಗಿ ಒಂದು ಕಲ್ಲಿನ ಕಂಬ ಉಳಿದಿದೆ. ಇದಕ್ಕೆ ಸಾರ್ವಜನಿಕರಿಂದ ಪೂಜೆ ಪುರಸ್ಕಾರಗಳು ನಡೆಯುತ್ತಿರುತ್ತದೆ. (ಚಿತ್ರ ನೋಡಿ) ಇದನ್ನು ಬೆಂಗಳೂರು ಮೂಲದ 'ಗಡಿಗಂಭ' ವಿರಬಹುದು ಎಂದೂ ಸಹ ಊಹಿಸಬಹುದಾಗಿದೆ. ಇದು ಸಿಡಿಗಂಬ ಎಂಬ ಅಭಿಪ್ರಾಯವೂ ರೂಢಿಯಲ್ಲಿದೆ.

ಈ ಕಂಬದ ಒಟ್ಟು ಉದ್ದ 7 ಅಡಿ, 2 ಇಂಚು ಇರುತ್ತದೆ. ಕಂಬದ ಕೆಳಭಾಗದಲ್ಲಿ (ನೆಲದ ಮೇಲೆ) 8" ಉದ್ದವಿದ್ದು ಸುತ್ತಳತೆ 9 ಅಡಿ 10 ಅಂಗುಲವಿರುತ್ತದೆ. ಇದರ ಮೇಲೆ ಸುತ್ತಲೂ 4 ದಿಕ್ಕುಗಳಲ್ಲಿ ದೀವಟಿಗೆ (ತ್ರಿಕೋನಾಕಾರದ) ಗೂಡುಗಳಾಗಿ ಸುಟ್ಟ ಇಟ್ಟಿಗೆ ಮತ್ತು ಸಿಮೆಂಟಿನಿಂದ ಮಾರ್ಪಡಿಸಿರುತ್ತಾರೆ. ಕಂಬದ ಮೇಲೆ ತುದಿಯಲ್ಲಿ 1 ಅಡಿ ಉದ್ದ 6 ಅಂಗುಲ ಗೋಳಾಕಾರವಾಗಿರುತ್ತದೆ. ಹಾಗು ಇದರ ಸುತ್ತಳತೆ 1.7 ಅಡಿಯಾಗಿರುತ್ತದೆ. ಮೇಲೆ ಗೋಳಾಕಾರ ಭಾಗದಿಂದ ಕೆಳಗಡೆ ದೀಪಗಳಿರುವ ಭಾಗದವರೆಗೆ ಸುತ್ತಳತೆ 4 ಅಡಿ 1 ಇಂಚು ಆಗಿದ್ದು ಇದು ಚಚ್ಚೌಕವಾಗಿದ್ದು ಕೆಂಪು (ಮೆರಿನ್) ಮತ್ತು ಬಿಳಿ ಬಣ್ಣದ ಪಟ್ಟೆಗಳಿಂದ ಕಂಬ ಪೂರ್ತಿ ಕಾಣುತ್ತದೆ. ಇಲ್ಲಿ ಎಲ್ಲಿಯೂ ಶಾಸನ ಕಂಡುಬರುವುದಿಲ್ಲ.

ಒಟ್ಟಿನಲ್ಲಿ ಬೆಂಗಳೂರು ನಗರದ ಹೃದಯಭಾಗದಲ್ಲಿದ್ದ ಅತ್ಯಂತ ಬೆಲೆ ಬಾಳುವ ಈ ಜಾಗವು ಸುಮಾರು ಇನ್ನೂರು ವರ್ಷಗಳ ಅವಧಿಯಲ್ಲಿ ರೂಪಾಂತರಗೊಂಡು ಕಡೆಗೆ ಒಂದು ವಾಣಿಜ್ಯ ಸಂಕೀರ್ಣವಾಗಿ ತಲೆ ಎತ್ತಿದ ಕತೆ ವಿಚಿತ್ರವಾದರೂ ಬೆಂಗಳೂರಿನ ನಗರೀಕರಣದ ಪ್ರಕ್ರಿಯೆಯ ಒಂದು ಸ್ವಾರಸ್ಯಕರ ಭಾಗವಾಗಿದೆ. ಇತ್ತೀಚಿನವರೆವಿಗೂ ಹನುಮಂತಪುರ ಎಂಬ ಹೆಸರಿನ ಗ್ರಾಮಕ್ಕೆ ಸೇರಿದ್ದ 7 ಎಕರೆ 11 ಗುಂಟೆ ಜಮೀನು ಹೇಗೆ ಹಂತ ಹಂತವಾಗಿ ಛಿದ್ರಗೊಂಡು ಬೆಂಗಳೂರು ನಗರದ ಬೆಳವಣಿಗೆಯಲ್ಲಿ ಲೀನವಾಗಿ ಹೋದ ಕತೆ ಕುತೂಹಲಕಾರಿಯಾದುದು. ಕೆಳದಿರಾಜ್ಯದ ದೊರೆಗಳು ಯಾತ್ರೆಗೆ ಹೋಗುವಾಗ ನಿರ್ಮಿಸಿಕೊಂಡಿದ್ದ ಈ ಸ್ಥಳ ಅವರ ಧಾರ್ಮಿಕ ವಿಧಿಗಳು ಹಾಗೂ ವಿಹಾರಕ್ಕೆಂದು ಮೀಸಲಾಗಿದ್ದಿದು ಕಡೆಗೆ ಆ ರಾಜ ವಂಶ ನಿರ್ನಾಮ ಆದ ಮೇಲೆ ವೀರಶೈವ ಗುರುಗಳ ಅಧೀನಕ್ಕೆ ಬಂದು ಒಂದು ಮಠವೆಂಬ ರೂಪವನ್ನು ಪಡೆದುಕೊಂಡದ್ದು, ಅನಂತರ ಈ ಗುರು ಪರಂಪರೆಯು ಶಿಥಿಲವಾಗಿ ಅದು ಪರಭಾರೆಯಾಗಬೇಕಾದ ಪ್ರಸಂಗವು ಆಡಳಿತದ ನಿರ್ಲಕ್ಷವನ್ನು ಸೂಕ್ತವಾದ ಕಾನೂನುಗಳ ಅಭಾವವನ್ನು ಎತ್ತಿ ತೋರಿಸುತ್ತದೆ. ಉಯ್ಯಾಲೆ ಛತ್ರ ಮೊದಲಾದ ಹೆಸರುಗಳಿಂದ ಬೆಳೆದು ಬಂದ ಈ ಪ್ರಮುಖ ಆಸ್ತಿಯು ಹಂತ ಹಂತವಾಗಿ ಆಡಳಿತದ ಅದಕ್ಷತೆಯಿಂದಲೂ, ಆಸಕ್ತರ ಕುತಂತ್ರದಿಂದಲೂ ಕೈತಪ್ಪಿ ಹೋದ ಕತೆ ನಿಜಕ್ಕೂ ಬೋಧಪ್ರದವಾದುದು. ಈ ಪ್ರಕ್ರಿಯೆಯ ಅಧ್ಯಯನವು ರೂಢಿಯಲ್ಲಿದ್ದ ಭೂವ್ಯವಸ್ಥೆ ಮತ್ತು ಮುಜರಾಯಿ ಇಲಾಖೆಯ ಆಡಳಿತ ವೈಖರಿಯ ಒಳನೋಟವನ್ನು ನೀಡುತ್ತದೆ. ಈಗಿನ ಗಾಂಧಿನಗರದ ಅದರಲ್ಲೂ ಮೆಜೆಸ್ಟಿಕ್ ವೃತ್ತದ ಅತ್ಯಧಿಕ ಬೆಲೆಯುಳ್ಳ ಈ ಸ್ಥಿರಾಸ್ತಿಯನ್ನು ಕೆಲವು ಸ್ವಾರ್ಥಿಗಳು ಕಬಳಿಸಿದ ಸಂದರ್ಭದಲ್ಲಿ ಧಾರ್ಮಿಕ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ನಿರ್ಲಕ್ಷ ಭಾವನೆಯಿಂದಲೂ ಅಥವಾ ಪಟ್ಟಭದ್ರ ಹಿತಾಸಕ್ತಿಗೆ ಮಣಿದು ಕಾನೂನು ಉಲ್ಲಂಘಿಸಿ ಈ ಬೆಲೆ ಬಾಳುವ ಸ್ವತ್ತನ್ನು ಕಾಪಾಡಿಕೊಳ್ಳಲು ವಿಫಲರಾದರೋ ಎಂಬುದನ್ನು ಊಹಿಸಿಕೊಳ್ಳಬಹುದು. ಈ ಸುಂದರವಾದ ಉದ್ಯಾನ ನಗರಿಯಲ್ಲಿ ಇಂತಹ ಅನೇಕ ಪ್ರಕರಣಗಳು ನಡೆದಿದ್ದು, ಇಂದಿಗೂ ನಡೆಯುತ್ತಿದ್ದು ಸರ್ಕಾರದ ಅದಕ್ಷತೆ ಮತ್ತು ಭ್ರಷ್ಟಾಚಾರ ಮತ್ತು ಭೂಗಳ್ಳರ ಕೃತಿಮ ವ್ಯವಹಾರ ಜಾಲಕ್ಕೆ ಬಲಿಯಾಗಿ ಎಷ್ಟೋ ಅಮೂಲ್ಯವಾದ ನಿವೇಶನಗಳು, ವಿಸ್ತಾರವಾದ ಸ್ವತ್ತುಗಳು ಬಲಿಪಶುಗಳಾಗಿ ಸರ್ಕಾರಕ್ಕೆ, ಸಂಬಂಧಪಟ್ಟವರಿಗೆ ಅಪಾರವಾದ ಹಾನಿಯನ್ನುಂಟು ಮಾಡಿವೆ. ಸರ್ಕಾರದ ಮುಜರಾಯಿ ಇಲಾಖೆಯ ಕಡತಗಳಲ್ಲೂ ಭೂಮಾಪನಾ ಇಲಾಖೆ ಮತ್ತು ನಗರಸಭೆಯ ಪುರಾತನ ದಾಖಲೆಗಳನ್ನು ಪರಿಶೀಲಿಸಿದರೆ ಇಂತಹ ಅಸಂಖ್ಯಾತ ಪ್ರಸಂಗಗಳು ಬೆಳಕಿಗೆ ಬಂದು ನಗರೀಕರಣದ ಇತಿಹಾಸವನ್ನು ಶ್ರೀಮಂತಗೊಳಿಸುವುದರಲ್ಲಿ ಸಂದೇಹವಿಲ್ಲ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. 1904ರಲ್ಲಿ ತಯಾರಿಸಿರುವ ಹನುಮಂತಪುರ ಗ್ರಾಮದ ನಕ್ಷೆ, ಭೂಮಾಪನ ಇಲಾಖೆ, ಬೆಂಗಳೂರು.
2. ವರದಿ ಪು.106, ಡಾ. ಬಿ. ಸಿ. ವೀರಪ್ಪ, 2001, ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು, 2001. ಹೇಳಿಎಕ: ಶ್ರೀ ವೈ. ರೂಪ್ಲ ನಾಯಕ್, ಐ.ಎ.ಎಸ್., (ನಿವೃತ್ತಿ) ವಯಸ್ಸು ಸುಮಾರು 86.
3. ಅದೇ ಪು.106, ಹಾಗೂ ಶ್ರೀ ವೈ. ರೂಪ್ಲ ನಾಯಕ್, ಐ.ಎ.ಎಸ್., (ನಿವೃತ್ತಿ) ವಯಸ್ಸು ಸುಮಾರು 86.
4. ಅದೇ ಪು.118.
5. ಅದೇ ಪು.121.
6. ಅದೇ ಪು.120.

7. ಅದೇ ಪು.120.
8. ಮುಜರಾಯಿ ಇಲಾಖೆಯ ದಾಖಲೆಗಳು, ಹೇಳಿಕೆ: ಶ್ರೀ ಸುಬ್ಬಣ್ಣ, ವಯಸ್ಸು 70, ಅಣ್ಣಮ್ಮದೇವಿಯ ಕಾರ್ಯಕರ್ತರು.
9. ಅದೇ ಪು.120.
10. ಅದೇ ಪು.122.
11. ಅದೇ ಪು.122.
12. ಅದೇ ಪು.122.
13. ಅದೇ ಪು.122.
14. ಅದೇ ಪು.123.
15. ಮುಜರಾಯಿ ಇಲಾಖೆಯ ಪತ್ರ ವ್ಯವಹಾರದ ನಕಲಿನ ದಾಖಲೆಗಳು.
16. ಮುಜರಾಯಿ ಇಲಾಖೆಗೆ ಬರೆದಿರುವ ದಿನಾಂಕ 9–8–1911ರ ಪತ್ರದ ನಕಲಿನ ವಿವರಗಳು.
17. ನ್ಯಾಯಾಲಯದ ದಾವೆ ಸಂಖ್ಯೆ 805/1966ರ ನಕಲು.

ಇತರ ಆಕರಗಳು

1. ಡಾ. ಬ. ನ. ಸುಂದರರಾವ್, ಬೆಂಗಳೂರಿನ ಇತಿಹಾಸ, ಬೆಂಗಳೂರು 1985.
2. ಪಿ. ಎಚ್. ಕೃಷ್ಣರಾವ್, 1931, ಸಿಟಿ ಆಫ್ ಬೆಂಗಳೂರು ಮುನಿಸಿಪಲ್ ಹ್ಯಾಂಡ್ ಬುಕ್, ಬೆಂಗಳೂರು.
3. ಕಾರ್ಪೋರೇಷನ್ ಆಫ್ ದಿ ಸಿಟಿ ಆಫ್ ಬೆಂಗಳೂರು, ಬೆಂಗಳೂರು ಆನ್ ದಿ ಮೂವ್ ಸಿವಿಕ್ ಅಫೇರ್ಸ್ (ಡಿಸೆಂಬರ್ 1976 ಜರ್ನಲ್ ವಾಲ್ಯೂಂ 24 ಸಂಖ್ಯೆ 5).
4. ಟಿ. ಪಿ. ಇಸ್ಸಾರೆ, ದಿ ಸಿಟಿ ಬ್ಯೂಟಿಫುಲ್, ಬೆಂಗಳೂರು ಅರ್ಬನ್ ಆರ್ಟ್ಸ್‌ಕಮೀಷನ್, 1988.
5. ಕರ್ನಾಟಕ ಪತ್ರಾಗಾರ ಇಲಾಖೆ, ಬೆಂಗಳೂರು.
6. ಭೂ ಮಾಪನ ಇಲಾಖೆ, ಬೆಂಗಳೂರು.
7. ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಮುಜರಾಯಿ ಇಲಾಖೆ, ಬೆಂಗಳೂರು.
9. 'ಅನುಭವ ಮಾರ್ಗ'., 1987 (ಸಂ.) ವೈ. ರಾಮಚಂದ್ರ ಮಾಜಿ ಮೇಯರ್, ಬೆಂಗಳೂರು ಮಹಾನಗರ ಪಾಲಿಕೆ, ಪ್ರಕಟಣೆ ರಾಮಚಂದ್ರ ಎಜುಕೇಷನಲ್ ಟ್ರಸ್ಟ್, ಬೆಂಗಳೂರು.

22. ಬೆಂಗಳೂರಿನ ಸ್ಥಳನಾಮಗಳು ಬದಲಾಗುವ ಪ್ರವೃತ್ತಿ

ಡಾ. ಬಿ. ಆರ್. ಸತ್ಯನಾರಾಯಣ

ಬೆಂಗಳೂರಿನ ಸ್ಥಳನಾಮಗಳ ಬಗ್ಗೆ ಈಗಾಗಲೇ ಹಲವಾರು ವಿದ್ವಾಂಸರು ಬೆಳಕು ಚೆಲ್ಲಿದ್ದಾರೆ. 'ಬೆಂಗಳೂರು' ಎಂಬ ಸ್ಥಳನಾಮದ ಬಗೆಗೆ ನಡೆದ ಅಧ್ಯಯನಗಳು ಅನೇಕ. ಬೆಂಗಳೂರು ಪದದ ಪ್ರಾಚೀನ ರೂಪಗಳು ಯಾವ ಶಾಸನದಲ್ಲಾಗಲೀ, ಸಾಹಿತ್ಯಕೃತಿಯಲ್ಲಾಗಲೀ ಉಲ್ಲೇಖಗೊಂಡಿಲ್ಲ. ಅತ್ಯಂತ ಪ್ರಾಚೀನ ಉಲ್ಲೇಖವಾಗಿ ದೊರೆತಿರುವ ಬೇಗೂರಿನ ಶಾಸನದಲ್ಲಿಯೂ 'ಬೆಂಗಳೂರು' ಎಂದು ಸ್ಪಷ್ಟವಾಗಿಯೇ ಇದೆ. ಬೆಂದಕಾಳು ಊರು, ಬೆಂದಕಾಡು ಊರು, ಬೆಂಗಾಡು ಊರು, ಬೆಣಚುಕಲ್ಲು ಊರು. ಇತ್ಯಾದಿ ಹಲವಾರು ನಿಷ್ಪತ್ತಿಗಳಲ್ಲಿ, ಊಹೆಗಳಲ್ಲಿ ಯಾವುದನ್ನು ಒಪ್ಪಿಕೊಳ್ಳಬೇಕು ಬಿಡಬೇಕು ಎಂಬುದೇ ಬಹುದೊಡ್ಡ ಸಮಸ್ಯೆಯಾಗಿದೆ.

ಸಾಮಾನ್ಯವಾದ ಐತಿಹಾಸಿಕ ಆಕರಗಳನ್ನು ಬಿಟ್ಟು ಸ್ವಲ್ಪ ಭಿನ್ನವಾಗಿ ನೋಡಲೆತ್ನಿಸಿದಾಗ ದೊರೆತಿದ್ದು, ಕೆನೆತ್ ಅಂಡರ್‌ಸನ್ ಉಲ್ಲೇಖಿಸಿರುವ ವಿಷಯ. 'ಇಲ್ಲಿಯ ಜನ ಹೆಚ್ಚಾಗಿ ತಿನ್ನುವ, ರುಚಿಕಟ್ಟಾದ ಹಾಗೂ ತರಾವರಿ ಕಾಳುಗಳಿಂದಲೇ ಈ ಹೆಸರು ಬಂದಿದೆಯೆಂದು ಇಲ್ಲಿನ ಜನ ನಂಬಿದ್ದಾರೆ' ಎಂಬುದನ್ನು ಅಂಡರ್‌ಸನ್ ದಾಖಲಿಸಿದ್ದಾನೆ. ಬೇಯಿಸಿ ತಿನ್ನಬಹುದಾದ ಕಾಳುಗಳ ದೆಸೆಯಿಂದಲೇ ಬೆಂಗಳೂರು ಹೆಸರು ರೂಪಗೊಂಡಿರುವ ಸಾಧ್ಯತೆಯೇ ಹೆಚ್ಚು ಎಂದು ಹೇಳಬಹುದು, ಅಷ್ಟೆ.

ಬೃಹದಾಕಾರವಾಗಿ ಹಾಗೂ ಕ್ಷಿಪ್ರವಾಗಿ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಸ್ಥಳನಾಮಗಳು ನೆಲೆಗೊಳ್ಳುವುದು, ಬದಲಾಗುವುದು, ಸಂಕ್ಷಿಪ್ತಗೊಳ್ಳುವ ಪ್ರಕ್ರಿಯೆಯೇ ವಿಶೇಷವಾದುದು. ಮೊದಲ ಹಂತದಲ್ಲಿ ಕನ್ನಡ ಅಥವಾ ದ್ರಾವಿಡ ಮೂಲದಲ್ಲಿದ್ದ ಹೆಸರುಗಳು, ಸಂಸ್ಕೃತೀಕರಣಗೊಳ್ಳುತ್ತಿದ್ದವು. ನಂತರದಲ್ಲಿ ಕನ್ನಡ ಹಾಗೂ ಸಂಸ್ಕೃತ ಭಾಷಾಮೂಲದಿಂದ ಇಂಗ್ಲೀಷ್ ಭಾಷೆಗೆ, ಇಂಗ್ಲೀಷ್ ಭಾಷೆಯಿಂದ ಇಂಗ್ಲೀಷ್ ಭಾಷೆಯ ಸಂಕ್ಷಿಪ್ತರೂಪದೆಡೆಗೆ ಬದಲಾಗಿರುವುದನ್ನು ಕಾಣಬಹುದು. ಮತ್ತೊಂದು ಬೆಳವಣಿಗೆಯೆಂದರೆ ಇಂಗ್ಲೀಷ್ ಭಾಷೆಯಿಂದ ಮತ್ತೆ ಭಾರತೀಯ ಹೆಸರುಗಳನ್ನು ಪಡೆದಿರುವುದನ್ನು ನೋಡಬಹುದು. ಭಾರತೀಯ ಹೆಸರುಗಳನ್ನು ಸಂಕ್ಷಿಪ್ತಗೊಳಿಸಿರುವುದೂ ಉಂಟು.

ಕೆಲವು ಉದಾಹರಣೆಗಳ ಮೂಲಕ ಈ ಬದಲಾಗುವ ಪ್ರವೃತ್ತಿಯನ್ನು ಅರ್ಥ ಮಾಡಿಕೊಳ್ಳಬಹುದು.

ಮೂಲ ಹೆಸರುಗಳ ನಿರಾಕರಣೆಯ ಪ್ರವೃತ್ತಿ

ಬಸವನಹಳ್ಳಿ > ಬಸವನಪುರ > ಬಸವಣ್ಣನಗುಡಿ > ಬಸವನಗುಡಿ > ಬುಲ್‌ಟೆಂಪಲ್

ಬಸವನಹಳ್ಳದ ಪಕ್ಕದಲ್ಲಿದ್ದ ಊರು ಬಸವನಹಳ್ಳಿ. ಬಹುಶಃ ಅಲ್ಲಿ ಬಸವಣ್ಣನ ದೇಗುಲ ಬಂದ ಮೇಲೆ ಬಸವಣ್ಣನಗುಡಿ ಆಗಿತ್ತು. ನಗರೀಕರಣಕ್ಕೆ ಒಳಗಾಗಿ ಬಸವನಪುರ ಎಂದು ಬದಲಾಯಿತು. ಈಗ ಬಸವನಗುಡಿ ಎಂದಾಗಿದೆ. ಆದರೆ ಬಸವನಗುಡಿ ರಸ್ತೆ ಎಂಬುದು ಮಾತ್ರ 'ಬುಲ್‌ಟೆಂಪಲ್ ರೋಡ್', 'ಬುಲ್‌ಟೆಂಪಲ್ ರಸ್ತೆ' ಎಂದು ಬದಲಾಗಿದೆ.

ಜಯನಗರ ತಾಯಪ್ಪನಹಳ್ಳಿ ಬ್ಲಾಕ್ > ಜಯನಗರದ ಟಿ ಬ್ಲಾಕ್

ಪ್ರಸಿದ್ಧ ಪಡೆಯುತ್ತಿದ್ದ ಜಯನಗರ ಬಡಾವಣೆಗಳಿಗೆ ಆಧುನಿಕವಾಗಿ ಫರ್ಸ್ಟ್ ಬ್ಲಾಕ್, ಸೆಕೆಂಡ್ ಬ್ಲಾಕ್ ಎಂದು ಹೆಸರು ಕೊಡುವುದನ್ನು ತಾಯಪ್ಪನಹಳ್ಳಿಯ ಜನ ವಿರೋಧಿಸುತ್ತಾರೆ. ಅವರನ್ನು ಸಮಾಧಾನ ಮಾಡಲೋ ಎಂಬಂತೆ, ತಾಯಪ್ಪನಹಳ್ಳಿಯ ಆರಂಭದ ಅಕ್ಷರ 'ಟಿ' ಯನ್ನು ಬಳಸಿ ಜಯನಗರ 'ಟಿ' ಬ್ಲಾಕ್ ಎಂದು ಹೆಸರು ನೀಡಲಾಗಿದೆ.

ಭೈರಸಂದ್ರ ತಾವರೆಕೆರೆ ಮಡಿವಾಳ ಲೇಔಟ್ > ಬಿ.ಡಿ.ಎಂ. ಲೇಔಟ್

ಈ ಮೂರು ಹಳ್ಳಿಗಳನ್ನು ಒಳಗೊಂಡಂತೆ ರೂಪುಗೊಂಡ ಬಡಾವಣೆ ಇಂದಿನ ಬಿ.ಟಿ.ಎಂ. ಲೇಔಟ್ ಸುಂದರವೂ ಆಕರ್ಷಕವೂ ಆದ ಮೂಲ ಹೆಸರುಗಳನ್ನು ಮರೆಮಾಚಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ತಾರಾಮಂಡಲ್ ಪೇಟೆ > ಕಬ್ಬನ್ ಪೇಟೆ

ಟಿಪ್ಪುವಿನ ಕಾಲದಲ್ಲಿ ಆಯುಧ ಕಾರ್ಖಾನೆಯಿದ್ದ ಜಾಗದಲ್ಲಿ ತಲೆಯೆತ್ತಿದ್ದ ಜನವಸತಿ ಪ್ರದೇಶಕ್ಕೆ ತಾರಾಮಂಡಲ್‌ಪೇಟೆ ಎಂದು ಹೆಸರಾಗಿತ್ತು. ಕ್ಷಿಪಣಿಗಳು ಅಲ್ಲಿ ಸಿದ್ಧಗೊಂಡು ಪರೀಕ್ಷೆಗೆ ಒಳಪಡುತ್ತಿದ್ದವು ಎನ್ನಲಾಗುತ್ತಿದೆ. ಅವುಗಳನ್ನು ಪರೀಕ್ಷಿಸುವಾಗ ಆಕಾಶದಲ್ಲಿ ಉಂಟಾಗುತ್ತಿದ್ದ ಬೆಳಕಿನ ವರ್ಣವೈಭವವನ್ನು ಸೂಚಿಸು ವಂತೆ ತಾರಾಮಂಡಲ್‌ಪೇಟೆ ಎಂದಾಗಿದ್ದಿರಬೇಕು. ನಂತರ ಮಾರ್ಕ್ ಕಬ್ಬನ್ ಸ್ಮರಣಾರ್ಥ ಕಬ್ಬನ್ ಪೇಟೆ ಎಂದು ಹೆಸರು ಬದಲಾಯಿಸಲಾಯಿತು. ಅಲ್ಲಿರುವ ಮಸೀದಿಗೆ ಈಗಲೂ ತಾರಾಮಂಡಲ್‌ಪೇಟೆ ಮಸೀದಿ ಎಂದೇ ಕರೆಯುವರು.

ಶಾಸನದಲ್ಲಿ ದೇಶೀಪಟ್ಟಣಂ, ದೊಂಬಲೂರು, ತೊಂಬಲೂರು, ತೊಮ್ಮಲೂರು ಎಂದೆಲ್ಲಾ ಕಾಣಿಸಿಕೊಂಡು ದೊಮ್ಮಲೂರು ಎಂದಾಗಿರುವ ಬಡಾವಣೆಗೆ ಹಿಂದೆ ಭಗತ್‌ಸಿಂಗ್‌ನಗರ ಎಂದು ಹೆಸರು ಇಡುವ ಪ್ರಯತ್ನ ನಡೆದು, ಕೆಲವು ಹೋರಾಟಗಾರರ ವಿರೋಧದಿಂದಾಗಿ ದೊಮ್ಮಲೂರು ಎಂದೇ ಉಳಿದಿದೆ. ಆದರೆ ಈ ವಿರೋಧಿ ದೀವಟಿಗೆ ರಾಮನಹಳ್ಳಿ ದೀಪಾಂಜಲಿನಗರವಾದಾಗ ವ್ಯಕ್ತವಾಗಿದ್ದರೆ, ದೀವಟಿಗೆ ಎಂಬ ಅಚ್ಚಗನ್ನಡದ ಪದಕ್ಕೊಂದು ಶಾಶ್ವತ ನೆಲೆ ಸಿಕ್ಕುತ್ತಿತ್ತು.

ಮೂಲಹೆಸರುಗಳನ್ನು ಮರೆಸಿ ಹೆಚ್ಚಾಗಿ ಆಂಗ್ಲ ಪದಗಳ ವ್ಯಕ್ತಿಗಳ ಹೆಸರುಗಳನ್ನು ಮೆರೆಸುವ ಪ್ರವೃತ್ತಿ ಮೇಲಿನ ಉದಾಹರಣೆಗಳದ್ದಾದರೆ, ಕೆಲವು ಸ್ಥಳಗಳಲ್ಲಿ ಅದಕ್ಕೆ ವಿರುದ್ಧವಾದ ಪ್ರವೃತ್ತಿಯನ್ನೂ ಕಾಣಬಹುದಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಖಾಸಗಿ ಶಿಕ್ಷಕರಾಗಿದ್ದು, ಮುಂದೆ ಮೈಸೂರು ರೆಸಿಡೆಂಟ್ ಆಗಿ ಕಾರ್ಯ ನಿರ್ವಹಿಸಿದ ಸ್ಟೂವರ್ಟ್ ಫ್ರೇಜರ್ ಸ್ಮರಣಾರ್ಥ ಫ್ರೇಜರ್‌ಟೌನ್ ಅಸ್ತಿತ್ವಕ್ಕೆ ಬಂದಿತ್ತು. ಈಗ ಅದನ್ನು ಪುಲಕೇಶಿನಗರ ಎಂದು ಮರುನಾಮಕರಣ ಮಾಡಲಾಗಿದೆ.

ರೈಲ್ವೆ ಪ್ಯಾರಲಲ್ ಕಾಲೋನಿ ಎಂಬುದು ಸಂಕ್ಷಿಪ್ತಗೊಂಡು ಆರ್. ಪಿ. ಸಿ. ಲೇಔಟ್ ಆಗಿತ್ತು. ಈಗ ಹಂಪಿನಗರವಾಗಿದೆ. ಒಂದು ಕಾಲದಲ್ಲಿ ಸೌತ್ ಪೆರೇಡ್ ರಸ್ತೆಯಾಗಿದ್ದ ಇಂದಿನ ಎಂ. ಜಿ. ರೋಡ್ ಎಂದು ಸಂಕ್ಷಿಪ್ತವಾಗುವ ಮುನ್ನ ಮಹಾತ್ಮಗಾಂಧಿ ರಸ್ತೆ ಎಂದೇ ಕರೆಸಿಕೊಳ್ಳುತ್ತಿತ್ತು.

ಸಂಸ್ಕೃತೀಕರಣಗೊಳಿಸುವ ಪ್ರವೃತ್ತಿ

ಬಸವನಹಳ್ಳಿ > ವೃಷಭಾವತಿ

ನಂಜನಗೂಡು ಗರಳಪುರಿಯಾದಂತೆ, ಹುಲ್ಲಹಳ್ಳಿ ತೃಣಪುರಿಯಾದಂತೆ ಬಸವನಹಳ್ಳ ವೃಷಭಾವತಿ ಆಗಿರುವುದನ್ನು ಕಾಣಬಹುದು.

ದೀವಟಿಗೆ ರಾಮನಹಳ್ಳಿ > ದೀಪಾಂಜಲಿನಗರ

ದೀವಟಿಗೆ ಎಂಬ ಅಚ್ಚಗನ್ನಡದ ಪದವನ್ನು, ಅದರ ಮುಂದಿದ್ದ ರಾಮನಹಳ್ಳಿಯನ್ನು ನಿರಾಕರಿಸಿ ದೀಪಾಂಜಲಿನಗರ ಎಂದು ಸಂಸ್ಕೃತೀಕರಣಗೊಳಿಸಿರುವುದು ಸ್ಪಷ್ಟವಾಗಿದೆ.

ಆಂಗ್ಲೀಕರಣಗೊಳಿಸುವ ಪ್ರವೃತ್ತಿ

ಮದರಾಸಿನಿಂದ ಭೂಮಿ ಅಳತೆ ಮಾಡಲು ಬಂದಿದ್ದ ಮೋಜಣಿದಾರರುಗಳಿಗೆ ಬಸವನಗುಡಿಯಲ್ಲಿ ನಿವೇಶನ ನೀಡಲಾಯಿತು. ಆ ಭಾಗದ ರಸ್ತೆಗೆ ಬಾಂದುನವರ ರಸ್ತೆ ಎಂದು ಹೆಸರು ನೀರಲಾಯಿತು. ಮುಂದೆ ಅದು ಸರ್ವೆಯರ್ಸ್ ಸ್ಟ್ರೀಟ್ ಎಂದಾಯಿತು. ಬಸವನಗುಡಿ ರಸ್ತೆ ಬುಲ್ ಟೆಂಪಲ್ ರೋಡ್, ಕೆ. ಆರ್. ಮಾರುಕಟ್ಟೆ ಕೆ. ಆರ್. ಮಾರ್ಕೆಟ್ ಎಂದು ಬದಲಾಗಿರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ.

ಕಹಳೆ ಬಂಡೆ > ಬ್ಯೂಗಲ್ ರಾಕ್

ವ್ಯಕ್ತಿಗಳ ಹೆಸರುಗಳನ್ನು ಇಡುವ ಪ್ರವೃತ್ತಿ

ಇದು ಬೆಂಗಳೂರಿನಲ್ಲಿ ಹಿಂದಿನಿಂದಲೂ ವ್ಯಾಪಕವಾಗಿ ನಡೆದುಕೊಂಡು ಬಂದಿರುವುದನ್ನು ನೋಡಬಹುದಾಗಿದೆ. ಅದು ಇನ್ನೂ ನಿಂತಿಲ್ಲ! ಅದರಲ್ಲಿ ಕೆಲವು ವಿಶೇಷವಾದವುಗಳನ್ನು ಇಲ್ಲಿ ಗಮನಿಸಲಾಗುವುದು.

1934ರಲ್ಲಿ ಬೆಂಗಳೂರಿಗೆ ಬಂದಿದ್ದ ಮಹಾತ್ಮಗಾಂಧಿಯವರು, ಬಸವನಗುಡಿಯ ಅಂಗಡಿಬೀದಿಗೆ ಬಂದು ಅಲ್ಲಿ ವಾಚನಾಲಯವೊಂದನ್ನು ಉದ್ಘಾಟಿಸಿದ್ದರು. ಅದರ ಸ್ಮರಣಾರ್ಥ ಆ ಅಂಗಡಿ ಬೀದಿಗೆ ಗಾಂಧಿಬಜಾರ್ ಎಂದೇ ಹೆಸರಾಯಿತು. ಪ್ರಥಮ ಭಾರತೀಯ ಗೌರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿಯವರ ಸ್ಮರಣಾರ್ಥ ಬಡಾವಣೆಯೊಂದಕ್ಕೆ ಇಟ್ಟ ಹೆಸರು ರಾಜಾಜಿನಗರ.

1960ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ 65ನೆಯ ಅಧಿವೇಶನ ಬೆಂಗಳೂರಿನಲ್ಲಿ ನಡೆದಾಗ, ಅಧಿವೇಶನ ನಡೆದ ಸ್ಥಳಕ್ಕೆ ಗಾಂಧೀವಾದಿ, ಸ್ವಾತಂತ್ರ್ಯ ಹೋರಾಟಗಾರ ಕನ್ನಡಿಗ ಕಾರ್ನಾಡು ಸದಾಶಿವರಾಯರ ಹೆಸರನ್ನು ಇಡಲಾಗಿತ್ತು. ಆ ಸ್ಥಳದಲ್ಲಿ ಬಡಾವಣೆಯೊಂದು ನಿರ್ಮಾಣವಾದಾಗ ಅವರ ಸ್ಮರಣಾರ್ಥ ಸದಾಶಿವನಗರ ಎಂದೇ ಹೆಸರಿಸಲಾಯಿತು. 1894ರಷ್ಟು ಹಿಂದೆಯೇ ರಚನೆಯಾದ ಬೆಂಗಳೂರಿನ ಪ್ರಥಮ ಬಡಾವಣೆಗೆ 28.12.1894ರಂದು ಕಲ್ಕತ್ತದಲ್ಲಿ ನಿಧನರಾದ ಚಾಮರಾಜ ಒಡೆಯರ ಸ್ಮರಣಾರ್ಥ ಚಾಮರಾಜೇಂದ್ರ ಪೇಟೆ ಎಂದು ಹೆಸರಿಡಲಾಯಿತು. ಅದೀಗ ಚಾಮರಾಜಪೇಟೆ ಎಂದಾಗಿದೆ. ಮಹಾರಾಜ ಜಯಚಾಮರಾಜೇಂದ್ರ ಒಡೆಯರ ಸ್ಮರಾಣಾರ್ಥ ಜಯನಗರ, ರಾಷ್ಟ್ರಪತಿಯಾಗಿದ್ದ ವಿ.ವಿ.ಗಿರಿಯವರ ಸ್ಮರಣಾರ್ಥ ಗಿರಿನಗರ ಹೆಸರುಗಳು ರೂಪುಗೊಂಡಿವೆ.

ವ್ಯಕ್ತಿಯ ಹೆಸರುಗಳು ಸಂಕ್ಷಿಪ್ತಗೊಳ್ಳುವ ಪ್ರವೃತ್ತಿ

ಜಯಪ್ರಕಾಶ ನಾರಾಯಣ ನಗರ > ಜೆ.ಪಿ.ನಗರ

ಜಯಚಾಮರಾಜೇಂದ್ರನಗರ > ಜೆ. ಸಿ. ನಗರ

ಕೃಷ್ಣರಾಜೇಂದ್ರನಗರ > ಕೆ. ಆರ್. ನಗರ

ಕೃಷ್ಣರಾಜೇಂದ್ರ ರಸ್ತೆ > ಕೆ. ಆರ್. ರೋಡ್

ಸಿಲ್ವರ್ ಜ್ಯೂಬಿಲಿ ಪಾರ್ಕ್ ರೋಡ್ > ಎಸ್. ಜೆ. ಪಿ. ರೋಡ್

ಕೃಷ್ಣರಾಜೇಂದ್ರ ಮಾರುಕಟ್ಟೆ > ಕೆ. ಆರ್. ಮಾರ್ಕೆಟ್

ನರಸಿಂಹರಾಜ ಕಾಲೋನಿ > ಎನ್. ಆರ್. ಕಾಲೋನಿ

ರವೀಂದ್ರನಾಥ ಟ್ಯಾಗೋರ್ ನಗರ > ಆರ್. ಟಿ. ನಗರ

ತ್ಯಾಗರಾಜನಗರ > ಟಿ. ಆರ್. ನಗರ

ವಿಶ್ವೇಶ್ವರಪುರಂ > ವಿವಿಪುರಂ

ಮೊದಲಿದ್ದ ವ್ಯಕ್ತಿಯ ಹೆಸರುಗಳನ್ನು ಬಿಟ್ಟು ಬೇರೊಬ್ಬ ವ್ಯಕ್ತಿಯ ಹೆಸರನ್ನು ನೀಡುವ ಪ್ರವೃತ್ತಿ

ದಿಗ್ವಿಜಯ ಮುಗಿಸಿದ ಭರತ ಶಾಸನ ಕೆತ್ತಿಸಲು ಹೋದಾಗ ಪರ್ವತ ಆಗಲೇ ವಿಜಯಶಾಸನಗಳಿಂದ ತುಂಬಿಹೋಗಿರುತ್ತದೆ. ಆಗ ಭರತ ಅದರಲ್ಲಿ ಒಂದಷ್ಟನ್ನು ಅಳಿಸಿ ತನ್ನ ವಿಜಯಶಾಸನವನ್ನು ಹಾಕಿಸುತ್ತಾನಂತೆ. ಹಾಗೆ, ಆಯಾ ಕಾಲದ ವ್ಯಕ್ತಿಗಳ ಗೌರವಾರ್ಥ ಇಟ್ಟ ಹೆಸರುಗಳ ಬದಲಿಗೆ, ವರ್ತಮಾನದ ವ್ಯಕ್ತಿಯ ಹೆಸರನ್ನಿಡುವ ಪ್ರವೃತ್ತಿ ಇದಾಗಿದೆ.

ಭಾರತದ ವೈಸ್‌ರಾಯ್ ಹಾಗೂ ಗವರ್ನರ್ ಜನರಲ್ ಆಗಿದ್ದ ಚಾರ್ಲ್ಸ್ ಬ್ಯಾರನ್ ಹಾರ್ಡಿಂಜ್ 1913ರ ನವಂಬರ್‌ನಲ್ಲಿ ಬೆಂಗಳೂರಿಗೆ ಭೇಟಿ ನೀಡಿದ್ದ ನೆನಪಿಗಾಗಿ ಹಾರ್ಡಿಂಜ ರಸ್ತೆ ಎಂದು ಹೆಸರಿಟ್ಟಿದ್ದರು. ಮುಂದೆ ಆ ರಸ್ತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಟ್ಟಡ ಬಂದಮೇಲೆ, ಅದು ಪಂಪಮಹಾಕವಿ ರಸ್ತೆ ಎಂದು ಬದಲಾಗಿದೆ.

1791 ಮತ್ತು 1799ರಲ್ಲಿ ನಡೆದ ಮೈಸೂರು ಯುದ್ಧಗಳಲ್ಲಿ ಬ್ರಿಟಿಷರ ಪರವಾಗಿ ಹೋರಾಡಿ ಮಡಿದ 427 ಜನ ಸೈನಿಕರಿಗೆ ಶ್ರದ್ಧಾಂಜಲಿ ಪೂರ್ವಕವಾಗಿ, ಯುದ್ಧನಡೆದ ಸ್ಥಳದಲ್ಲಿಯೇ 35 ಅಡಿ ಎತ್ತರದ ಸ್ತಂಭವನ್ನು ನಿರ್ಮಾಣ ಮಾಡಿ, ಸುತ್ತಲೂ ಶಿಲಾಶಾಸನವನ್ನು ಹಾಕಿಸಿ ಸೆನೋಟಾಪ್ ನಿರ್ಮಿಸಲಾಗಿರುತ್ತದೆ. ಅದರ ಎದುರಿಗೆ ರಸ್ತೆಯನ್ನು ನಿರ್ಮಿಸಿ ಸೆನೊಟಾಪ್ ರಸ್ತೆ ಎಂದು ನಾಮಕರಣ ಮಾಡಲಾಗಿರುತ್ತದೆ. 1964ರಲ್ಲಿ ಕನ್ನಡ ಚಳವಳಿಗಾರರು ಈ ಸ್ಮಾರಕವನ್ನು ನೆಲಸಮಗೊಳಿಸಿದಾಗ ರಸ್ತೆಗೆ ನೃಪತುಂಗ ರಸ್ತೆ ಎಂದು ಮರುನಾಮಕರಣ ಮಾಡಲಾಗಿದೆ.

ಭಾರತದ ವೈಸ್‌ರಾಯ್ ಹಾಗೂ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಇರ್ವಿನ್ ಅವರು 1927ರಲ್ಲಿ ಬೆಂಗಳೂರಿಗೆ ಬಂದಿದ್ದರ ಸ್ಮರಣಾರ್ಥ ಸ್ಕೌಟ್ ಕಛೇರಿಯ ಬಳಿಯ ವೃತ್ತಕ್ಕೆ ಇರ್ವಿನ್ ಸರ್ಕಲ್ ಎಂದು ನಾಮಕರಣ ಮಾಡಲಾಗಿತ್ತು. ಮುಂದೆ ಸ್ಕೌಟ್ ಸಂಸ್ಥೆಗೆ ವಿಶೇಷ ಸೇವೆ ಸಲ್ಲಿಸಿದ

ಪ್ರೊ. ಪಿ. ಶಿವಶಂಕರ್ ಅವರ ಹೆಸರನ್ನು ಇಡಲಾಯಿತು.

ಈ ಹೆಸರುಗಳ ಗೊಡವೆಯೇ ಬೇಡ ಎಂದು ಇದ್ದ ಹೆಸರುಗಳನ್ನು ನಿರಾಕರಿಸಿ ಕೇವಲ ಸಂಖ್ಯೆಗಳಿಗೆ ಜೋತುಬಿದ್ದಿರುವ ಪ್ರವೃತ್ತಿಯೂ ಇದೆ. ಉದಾಹರಣೆಗೆ ಚಾಮರಾಜಪೇಟೆಯ ಆಲ್ಬರ್ಟ್ ವಿಕ್ಟರ್ ರಸ್ತೆ, ಆಂಜನೇಯ ದೇವಸ್ಥಾನದ ರಸ್ತೆ, ರಾಮೇಶ್ವರ ಗುಡಿ ರಸ್ತೆ, ಸೆಂಟ್ರಲ್ ಬ್ಯಾಂಕ್ ರಸ್ತೆ ಮತ್ತು ಕೆ. ಪಿ. ಪುಟ್ಟಣಚೆಟ್ಟಿ ರಸ್ತೆ ಎಂಬುವುಗಳು ಕ್ರಮವಾಗಿ ಚಾಮರಾಜಪೇಟೆ ಫರ್ಸ್ಟ್ ಮೈನ್, ಸೆಕೆಂಡ್ ಮೈನ್, ಥರ್ಡ್ ಮೈನ್, ಫೋರ್ಥ್ ಮೈನ್ ಮತ್ತು ಫಿಫ್ತ್ ಮೈನ್ ಎಂದು ಬಳಕೆಯಲ್ಲಿರುವುದನ್ನು ನೋಡಬಹುದಾಗಿದೆ.

ಹೊಸ ಹೆಸರು ಕೊಟ್ಟರೂ ಹಳೆಯ ಹೆಸರನ್ನು ಬಿಟ್ಟುಕೊಡದ ಪ್ರವೃತ್ತಿ

1830–40ರ ದಶಕದಲ್ಲಿ ರೆಸಿಡೆನ್ಸಿ ಕಟ್ಟಡಕ್ಕೆ ಅಭಿಮುಖವಾಗಿದ್ದ ರಸ್ತೆಗೆ ರೆಸಿಡೆನ್ಸಿ ರಸ್ತೆ ಎಂದು ಹೆಸರೂ ಚಾಲ್ತಿಗೆ ಬಂದಿತ್ತು. ಇತ್ತೀಚೆಗೆ ಅದಕ್ಕೆ ಜನರಲ್ ಕಾರಿಯಪ್ಪ ರಸ್ತೆ ಎಂದು ಹೆಸರಿಟ್ಟಿದ್ದರೂ, ಜನಮಾನಸದಲ್ಲಿ ರೆಸಿಡೆನ್ಸಿ ರಸ್ತೆಯಾಗಿಯೇ ಉಳಿದಿದೆ. ಸೌತ್ ಎಂಡ್ ಸರ್ಕಲ್‌ನಲ್ಲಿ ತೀನಂಶ್ರೀಯವರ ಪ್ರತಿಮೆಯನ್ನೂ ಸ್ಥಾಪಿಸಿ, ವೃತ್ತಕ್ಕೆ ತೀನಂಶ್ರಿ ವೃತ್ತ ಎಂದು ಹೆಸರು ನೀಡಿ ದೊಡ್ಡದಾಗಿ ಫಲಕ ಕೂಡ ಹಾಕಿಸಲಾಗಿದೆ. ಆದರೆ ಈಗಲೂ ಸೌತ್ ಎಂಡ್ ಸರ್ಕಲ್ ಎಂದೇ ಜನಜನಿತವಾಗಿದೆ. ಸೌತ್ ಎಂಡ್ ವೃತ್ತದಿಂದ ನಾಗಸಂದ್ರ ವೃತ್ತದವರೆಗಿನ ರಸ್ತೆಗೆ, ಅದೇ ರಸ್ತೆಯಲ್ಲಿ ವಾಸವಾಗಿದ್ದ ಶತಾಯುಷಿ ದಿವಂಗತ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಅವರ ಸ್ಮರಣಾರ್ಥ ನಿಟ್ಟೂರು ಶ್ರೀನಿವಾಸರಾವ್ ರಸ್ತೆ ಎಂದು ನಾಮಕರಣ ಮಾಡಿದ್ದರೂ, ಸೌತ್ ಎಂಡ್ ರೋಡ್ ಎಂದೇ ಚಾಲ್ತಿಯಲ್ಲಿದೆ.

ಮೇಲಿನ ಮೂರು ಉದಾಹರಣೆಗಳು ತೀರಾ ಇತ್ತೀಚಿನವುಗಳು. ಬಹಳ ಹಿಂದೆಯೇ, 1870–1875ರ ನಡುವೆ ಮೈಸೂರು ರಾಜ್ಯದ ಚೀಫ್ ಕಮಿಷನರ್ ಆಗಿದ್ದ ಸರ್ ರಿಚರ್ಡ್ ಮೀಡ್ ಅವರ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದ ಮೀಡ್ಸ್ ಪಾರ್ಕ್ ಇಂದಿನ ಕಬ್ಬನ್ ಪಾರ್ಕ್. ಸ್ವತಃ ಮೀಡ್ಸ್ ಅವರೇ ದೀರ್ಘಾವದಿಗೆ ಕಮಿಷನರ್ ಆಗಿ ಜನಪ್ರಿಯಗೊಂಡಿದ್ದ ಸರ್ ಮಾರ್ಕ್ ಕಬ್ಬನ್ ಸ್ಮರಣಾರ್ಥ, 1873ರಲ್ಲಿ ಕಬ್ಬನ್ ಪಾರ್ಕ್ ಎಂದು ಹೆಸರು ನೀಡುತ್ತಾರೆ. ಅದು ಜನಪ್ರಿಯವಾಗಿದ್ದಾಗಲೇ, 1927ರಲ್ಲಿ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ರಜತ ಪಟ್ಟಬಂಧ ಮಹೋತ್ಸವ ಸಮಾರಂಭದ ನೆನಪಿಗೋಸ್ಕರ ಕಬ್ಬನ್ ಪಾರ್ಕಿನಲ್ಲಿ, ಅವರ ತಂದೆ ಚಾಮರಾಜೇಂದ್ರ ಒಡೆಯರ್ ಅವರ ಪ್ರತಿಮೆಯನ್ನು ಪ್ರತಿಷ್ಠಾಪಿಸಿ, 'ಚಾಮರಾಜೇಂದ್ರ ಪಾರ್ಕ್' ಎಂದು ಮರುನಾಮಕರಣ ಮಾಡಲಾಯಿತು. ಆದರೆ ಇಂದಿಗೂ ಕಬ್ಬನ್ ಪಾರ್ಕ್ ಎಂದೇ ಜನಪ್ರಿಯವಾಗಿದೆ.

ಇದ್ದ ಹೆಸರನ್ನು ಮರೆಮಾಚಿಸಿ, ತಮಗೆ ಬೇಕಾದ ಹೆಸರನ್ನು ಇಟ್ಟರೂ, ಜನಮಾನಸದಲ್ಲಿ ಬೇರೆ ಇನ್ನಾವುದೋ ಹೆಸರು ನೆಲೆಸಿಬಿಡುತ್ತದೆ. ಅಂತಹ ಉದಾಹರಣೆಯೆಂದರೆ, ಇಂದಿನ ಗೂಡ್ಸ್ ಷೆಡ್ ರಸ್ತೆ. ಮೊದಲು ಈ ರಸ್ತೆಗೆ ಕೆಮ್ಮಣ್ಣುಗುಂಡಿ ರಸ್ತೆ ಎಂದು ಅಚ್ಚಗನ್ನಡದ ಹೆಸರಿತ್ತು. 1945–46ರಲ್ಲಿ ಆ ರಸ್ತೆಗೆ ಕಾಂಕ್ರೀಟ್ ಹಾಕಲಾಯಿತು. ಅದಕ್ಕೆ ಕಾರಣಕರ್ತರಾಗಿದ್ದ ಡಾ. ಟಿ. ಸಿ. ಎಮ್, ರಾಯನ್ ಅವರ ಸ್ಮರಣಾರ್ಥ ಟಿಸಿಎಮ್ ರಾಯನ್ ರಸ್ತೆ ಎಂದು ನಾಮಕರಣ ಮಾಡಲಾಯಿತು. ಆದರೆ ಇಂದು ಜನಬಳಕೆಯಲ್ಲಿ ಅದು ಗೂಡ್ಸ್‌ಷೆಡ್ ರಸ್ತೆಯೆಂದೇ ಚಿರಪರಿಚಿತವಾಗಿದೆ. ಆಶ್ಚರ್ಯವೆಂದರೆ ರಾಯನ್ ವೃತ್ತ ಎಂಬುದು ಚಾಲ್ತಿಯಲ್ಲಿದೆ.

ಇಂದಿನ ಮೆಜೆಸ್ಟಿಕ್ ಪ್ರದೇಶಕ್ಕೆ ಯಾರೂ ಆ ಹೆಸರು ಇಟ್ಟು ಕರೆಯಲಿಲ್ಲ. ಅಲ್ಲಿದ್ದ ಮೆಜೆಸ್ಟಿಕ್ ಚಿತ್ರಮಂದಿರದ ಆವತ್ತಿನ ಸಾಂಸ್ಕೃತಿಕ ಪ್ರಾಮುಖ್ಯತೆಯ ಫಲವಾಗಿ, ಚಲನಚಿತ್ರ ಪ್ರದರ್ಶನಗಳಿಲ್ಲದ ಕಾಲದಲ್ಲಿ ಹಲವಾರು ಸಾಂಸ್ಕೃತಿಕ

ಕಾರ್ಯಕ್ರಮಗಳು ಇಲ್ಲಿ ನಡೆಯುತ್ತಿದ್ದುದರಿಂದ ಸುತ್ತಮುತ್ತಲಿನ ಜನ 'ಮೆಜೆಸ್ಟಿಕ್ಕಿಗೆ ಹೋಗೋಣ' ಎಂದು ಹೆಚ್ಚಾಗಿ ಬಳಸುತ್ತಿದ್ದುದರಿಂದ 'ಮೆಜೆಸ್ಟಿಕ್' ಎಂಬ ಹೆಸರು ಸಹಜವಾಗಿಯೇ ನಿಂತುಬಿಟ್ಟಿತು. ಇದೇ ಸಾಲಿಗೆ ಸೇರಿಸಬಹುದಾದ ಇನ್ನೊಂದು ಸ್ಥಳನಾಮವೆಂದರೆ ದೊಡ್ಡಣ್ಣ ಹಾಲ್.

ಬಸ್ ನಿಲ್ದಾಣಗಳ ಸ್ಥಳನಾಮಗಳು ರೂಪುಗೊಳ್ಳುವುದು ಸಹಜವಾಗಿಯೇ. ಸಿನಿಮಾ ಥಿಯೇಟರ್‌ಗಳಿದ್ದಂತಹ ಸ್ಥಳಗಳು ಬಹುಬೇಗ ಚಾಲ್ತಿಗೆ ಬಂದುಬಿಡುತ್ತವೆ. ಶಾಂತಿ, ಉಮಾ, ನಂದ ಮುಂತಾದವು. ಈಗ ಶಾಂತಿ ಮತ್ತು ನಂದ ಚಿತ್ರ ಮಂದಿರಗಳು ಈಗ ಇಲ್ಲದಿದ್ದರೂ ಅದೇ ಹೆಸರಿನಿಂದ ಕರೆಯುವುದನ್ನು ಕಾಣಬಹುದಾಗಿದೆ. ಕಾಲೇಜು, ಆಸ್ಪತ್ರೆ, ದೇವಸ್ಥಾನಗಳಿದ್ದರೆ ಅವುಗಳ ಹೆಸರಿನಿಂದಲೇ ಕರೆಯುವುದುಂಟು. ನ್ಯಾಷನಲ್ ಕಾಲೇಜು ಸ್ಟಾಪ್, ಗಣೇಶನ ಗುಡಿ ಸ್ಟಾಪ್, ರಾಮ ಮಂದಿರ ಸ್ಟಾಪ್, ನಿಮ್ಹಾನ್ಸ್ ಸ್ಟಾಪ್, ಜಯದೇವ ಸ್ಟಾಪ್ ಇತ್ಯಾದಿ. ಇತ್ತೀಚೆಗೆ ನಮ್ಮ ಕಾಲೇಜಿನ ವಿದ್ಯಾರ್ಥಿಯೊಬ್ಬ ಎಂ. ಟಿ. ಸರ್ಕಲ್ ಎಂದು ಹೇಳಿದ. ನಾನು ಕುತೂಹಲದಿಂದ ಅದ್ಯಾವದು ಎಂ.ಟಿ. ಸರ್ಕಲ್ ಎಂದು ಕೇಳಿದರೆ, ಅದು 'ಮೀಸೆ ತಿಮ್ಮಯ್ಯ ಸರ್ಕಲ್' ಎಂಬುದರ ಸಂಕ್ಷಿಪ್ತ ರೂಪವಾಗಿತ್ತು. ಆದರೆ ಇವುಗಳಿಗೆ ಆಯುಷ್ಯ ಕಡಿಮೆ ಎಂದು ಹೇಳಬಹುದು. ಆದರೆ ಇದೆಲ್ಲವೂ ಸಹಜವಾಗಿ ನಡೆಯುವ ಕ್ರಿಯೆಯಾಗಿದ್ದರಿಂದ ಮಹತ್ವದ್ದಾಗುತ್ತದೆ.

ಒಂದು ಸ್ಥಳಕ್ಕೆ ಸ್ಥಳನಾಮ ರೂಪುಗೊಳ್ಳುವುದು ಸಹಜ ಪ್ರಕ್ರಿಯೆ. ಅಲ್ಲಿ ಒಳ್ಳೆಯದು ಕೆಟ್ಟದು ಎಂಬುದರ, ಹಳೆಯದು ಹೊಸದು ಎಂಬುದರ, ತನ್ನದು ಪರಕೀಯರದು ಎಂಬುದರ ವರ್ತಮಾನದ ವಿವೇಚನೆ ಆ ಪ್ರಕ್ರಿಯೆಗೆ ಇರುವುದಿಲ್ಲ. (ಕಳ್ಳತನವನ್ನೇ ವೃತ್ತಿಯನ್ನಾಗಿಸಿಕೊಂಡು, ಊರವರಿಂದ ಬಹಿಷ್ಕೃತನಾಗಿ, ಊರಿನಿಂದ ಹೊರಗೆ ನೆಲೆನಿಂತು, ಅಲ್ಲಿಯೇ ಒಂದು ಊರು ಬೆಳೆಯಲು ಕಾರಣನಾದ ವ್ಯಕ್ತಿಯ ಹೆಸರಿನಿಂದ ಕಳ್ಳಬೋರನಕೊಪ್ಪಲು ಎಂಬ ಊರು ಇಂದೂ ಇದೆ.) ಒಂದು ಸ್ಥಳದ ಹೆಸರನ್ನು ಬದಲಾಯಿಸುವ ಕ್ರಿಯೆ ಜನಜೀವನದ ಚಲನಶೀಲತೆಯ ಫಲವಾಗಿ ಮೂಡಿದರೆ ಅದು ಚಿರಕಾಲ ನಿಲ್ಲುತ್ತದೆ. ಇಲ್ಲದಿದ್ದರೆ, ಭರತನಂತವರು ಹುಟ್ಟಿ ಇರುವ ಶಾಸನಗಳನ್ನು ಅಳಿಸಿ ಹೊಸ ಶಾಸನ ಬರೆಸುತ್ತಲೇ ಇರುತ್ತಾರೆ. ಇರುವುದನ್ನು ಬದಲಾಯಿಸುವ ಪ್ರವೃತ್ತಿ ಸಲ್ಲದು. ಅದರಿಂದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಕೊಂಡಿಗಳು ಕಳಚಿಹೋಗುತ್ತವೆ. ಅದರಿಂದ ನಷ್ಟವಾಗುವುದು ಇತಿಹಾಸದಲ್ಲಿ ಆಗಿ ಹೋದ ವ್ಯಕ್ತಿ ಅಥವಾ ಘಟನೆಗಳಿಗಲ್ಲ; ಬದಲಾಗಿ ವರ್ತಮಾನದಲ್ಲಿ ಬದುಕುತ್ತಿರುವ ನಮಗೆ ಹಾಗೂ ನಾಡಿನ ಸಾಂಸ್ಕೃತಿಕ ಭವಿಷ್ಯಕ್ಕೆ.

23. ಬೆಂಗಳೂರು ಜಿಲ್ಲೆಯ ಧಾರ್ಮಿಕ ಇತಿಹಾಸ

ಡಾ. ಬೆಂ. ಶಾ. ಶ್ಯಾಮಲಾ ರತ್ನ ಕುಮಾರಿ

ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರನ್ನು ಒಳಗೊಂಡು ಅದೇ ಹೆಸರಿನಿಂದ ಪ್ರಖ್ಯಾತವಾಗಿರುವ ಬೆಂಗಳೂರು ನಗರ ಜಿಲ್ಲೆಯು ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ, ವೈಜ್ಞಾನಿಕ ದೃಷ್ಟಿಯಿಂದ ತೀವ್ರವಾದ ಬೆಳವಣಿಗೆಯನ್ನು ಹೊಂದಿರುವ, ಎಲ್ಲರನ್ನೂ ತನ್ನೆಡೆಗೆ ಆಕರ್ಷಿಸಿ ಸಮೃದ್ಧಿಗೊಂಡು ಮಹತ್ವಪೂರ್ಣ ಸ್ಥಾನವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನೆಲೆಯಲ್ಲಿ ಗಳಿಸಿದೆ.

ಭಾರತದಲ್ಲಿ ಧಾರ್ಮಿಕ ಇತಿಹಾಸವು ರಾಜಕೀಯ ಇತಿಹಾಸದೊಂದಿಗೆ ಹೆಣೆದುಕೊಂಡಿರುತ್ತದೆ. ಈ ರೀತಿಯ ಅನ್ಯೋನ್ಯ ಸಂಬಂಧವು ಕರ್ನಾಟಕದ ಮತ್ತು ಬೆಂಗಳೂರು ಜಿಲ್ಲೆಯ ವಿಚಾರಕ್ಕೂ ಅನ್ವಯಿಸುತ್ತದೆ. ಬೆಂಗಳೂರು ಜಿಲ್ಲೆಯಲ್ಲಿ ಪ್ರಾಚೀನ ಕಾಲಘಟ್ಟದ ಬೃಹತ್ ಶಿಲಾಯುಗ ಮತ್ತು ನವ ಶಿಲಾಯುಗದಿಂದ ಜನವಸತಿ ಇದ್ದುದು ವಾಸ್ತವವಾದರೂ ಧಾರ್ಮಿಕ ಇತಿಹಾಸದ ದೃಷ್ಟಿಯಿಂದ ವಿವರಗಳು ನಮಗೆ ಆಧಾರಪೂರ್ವಕವಾಗಿ ದೊರೆಯಲು ಪ್ರಾರಂಭವಾಗುವುದು ಕ್ರಿ. ಶ. 6ನೇ ಶತಮಾನದಿಂದ ಹಾಗೂ ಗಂಗರ ಆಳ್ವಿಕೆಯ ಕಾಲದಿಂದ.

ಬೆಂಗಳೂರಿನ ಮೊಟ್ಟಮೊದಲ ಹೆಸರಾದ 'ಬೆಂಗಳೂರು' ಎಂಬ ಶಾಸನೋಲ್ಲೇಖ ದೊರೆತಿರುವುದು ಇಂದಿನ ಬೇಗೂರಿನಲ್ಲಿರುವ ನಾಗೇಶ್ವರ ದೇವಾಲಯದಲ್ಲಿ. ಇಂದಿನ ಬೇಗೂರು ಗಂಗರ ಆಳ್ವಿಕೆಯ ಕಾಲದಲ್ಲಿ ಬೆಂಪೂರು 12 ಎಂಬ ಆಡಳಿತ ಘಟಕವಾಗಿದ್ದಿತು. ಈ ಬೆಂಪೂರು ಈಶ್ವರ ಸ್ಥಾನವಾಗಿದ್ದಿತೆಂದು ಕ್ರಿ. ಶ. 512ರ ಮಾಲೋಹಳ್ಳಿ ತಾಮ್ರಪಟ ಶಾಸನದಿಂದ ತಿಳಿದುಬರುತ್ತದೆ (ಎ.ಕ.9 ದೊಡ್ಡಬಳ್ಳಾಪುರ.68).

ಗಂಗದೊರೆ ಮೊದಲನೇ ನೀತಿಮಾರ್ಗನ ಆಳ್ವಿಕೆ (853–869) ಯಲ್ಲಿ ಬೇಗೂರಿನ ಕೇಂದ್ರ ಸ್ಥಾನದಲ್ಲಿರುವ ನಗರೇಶ್ವರ ದೇವಾಲಯವು ನಿರ್ಮಿಸಲ್ಪಟ್ಟಿತು. ಇಲ್ಲಿನ ನಾಗೇಶ್ವರ ದೇವಾಲಯವನ್ನು ಗಂಗರಸರ ಕೈಕೆಳಗೆ ಬೆಂಪೂರು 12ನ್ನು ಆಡಳಿತಾಧಿಕಾರಿಯಾಗಿ ನೋಡಿಕೊಳ್ಳುತ್ತಿದ್ದ ನಾಗತ್ತರನು ಕಟ್ಟಿಸಿದನು. ಈ ದೇವಾಲಯದ ನವರಂಗದಲ್ಲಿ ಕಾಲಭೈರವ, ವಿಷ್ಣು, ಮಹಿಷಾಸುರ ಮರ್ಧಿನಿ, ಚಂದ್ರ, ಪಾರ್ವತಿ, ಸಪ್ತಮಾತೃಕೆಯರು, ನಂದಿ ಮತ್ತು ದುಂಡನೆಯ ಬೃಹತ್ ಲಿಂಗ ಶಿಲ್ಪಗಳಿವೆ. ಗಂಗರ ಕಾಲದಲ್ಲಿ ಬೇಗೂರು ಜೈನ ಕೇಂದ್ರವೂ ಆಗಿದ್ದಿತು. ಈ ಮಾತಿಗೆ ಸಾಕ್ಷಿಯಾಗಿ ಜಿನಶಿಲ್ಪಗಳೂ, ನಿಷದಿಗಲ್ಲುಗಳೂ ದೊರೆತಿವೆ. ಬೇಗೂರು ಕೋಟೆಯ ದ್ವಾರದ ಬಳಿಯಲ್ಲಿರುವ ಕಂಬವೊಂದರ ಮೇಲೆ ಕ್ರಿ. ಶ. 900ರಲ್ಲಿ ಹಾಕಿಸಲ್ಪಟ್ಟ ಶಾಸನ ನಾಗತ್ತರನ ಮಗಳು ತೊಂಡಬ್ಬೆಯು ಜೈನ ಸನ್ಯಸನ ವಿಧಿಯಿಂದ ಮರಣಿಸಿದಳೆಂದು ತಿಳಿಸುತ್ತದೆ (ಎ.ಕ.9 ಬೆಂ.94). ಕ್ರಿ. ಶ. 950ರ ಶಾಸನವು ಜೈನಾಚಾರ್ಯ ರವಿಕಾಂತ ಸಿದ್ಧಾಂತಿಯನ್ನು ಉಲ್ಲೇಖಿಸುತ್ತದೆ (ಎ.ಕ 9, ಬೆಂ.93). ಕ್ರಿ. ಶ. 1422ರ ಶಾಸನವು ವಿಜಯನಗರದ ಕಾಲದಲ್ಲಿ ಮೊರಸುನಾಡಿನ ಅಧಿಕಾರಿಯಾಗಿದ್ದ ನಾಗಿಯ ಕರಿಯಪ್ಪನ ಮಗ ಚೊಕ್ಕಿಮಯ್ಯನು ಜಿನಾಲಯ ನಿರ್ಮಿಸಿ ಕಲಿಯೂರು ಅಗ್ರಹಾರವನ್ನು ದಾನ ನೀಡಿದ್ದ. ನಾಗೇಶ್ವರ ದೇವಾಲಯದಲ್ಲಿರುವ ಕ್ರಿ. ಶ. 950ರ ಶಾಸನವು ಇನ್ನೊಬ್ಬ ಜೈನಾಚಾರ್ಯ ಕುಮಾರನಂದಿ ಭಟಾರರನ್ನು ಹೆಸರಿಸುತ್ತದೆ. ಶ್ರವಣಪ್ಪನ ದಿಣ್ಣೆ ಎಂದು ಕರೆಯಲಾಗುವ ಸ್ಥಳದಲ್ಲಿ ಜಿನಾಲಯವಿದ್ದಿರಬೇಕು. ಇಲ್ಲಿ ತೀರ್ಥಂಕರನ ಮುಂಡ ಶಿಲ್ಪವೂ ದೊರೆತಿದೆ. ನಾಗೇಶ್ವರ ದೇವಾಲಯದ ಬಲಭಾಗದಲ್ಲಿರುವ ಕಾಳಿ–ಕಮ್ಮಟೇಶ್ವರ ದೇವಾಲಯವು ಮೂಲತಃ ಗಂಗರಿಂದ ಕಟ್ಟಲ್ಪಟ್ಟಿದ್ದು

ನಂತರದ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ಇದು ಭಾಸ್ಕರ ಕ್ಷೇತ್ರವೆಂದೂ ಹೆಸರಾಗಿದೆ. ಇಲ್ಲಿನ ಸುಬ್ಬರಾಮ ಶಾಸ್ತ್ರಿಗಳ ಮನೆ ಮುಂದೆ 1 1/2 ಅಡಿ ಎತ್ತರದ ಒಂದು ಬುದ್ಧನ ಮೂರ್ತಿ ಇದೆ. ನಗರೇಶ್ವರ ದೇವಾಲಯದ ನವರಂಗದಲ್ಲಿ ಮಹಿಷಾಸುರಮರ್ಧಿನಿ, ಗಣಪತಿ, ಭೈರವ ಶಿಲ್ಪಗಳಿವೆ. ಇದರ ಮುಂದೆ ತೆರೆದ ನಂದಿಮಂಟಪವಿದೆ. ಇದರ ಬಳಿ ಸೂರ್ಯನ ಚಿಕ್ಕ ಗುಡಿಯಿದೆ. ಇದರ ಛಾವಣಿಯಲ್ಲಿ ಅಷ್ಟದಿಕ್ಪಾಲಕರ ಮೂರ್ತಿಗಳಿವೆ. ಈ ದೇವಾಲಯ ಸಂಕೀರ್ಣದ ಹೊರಗೆ ವಾಯವ್ಯದ ಕಡೆಗೆ ಪ್ರತ್ಯೇಕವಾಗಿ ಒಂದು ಬಸವಣ್ಣನ ಗುಡಿಯಿದೆ. ಚೆನ್ನಕೇಶವ ದೇವಾಲಯದ ಬಳಿ ದುರ್ಗಾ, ಗರುಡ ಮತ್ತು ತೀರ್ಥಂಕರನ ಶಿಲ್ಪಗಳು ಗಂಗರ ಕಲಾಶೈಲಿಯಲ್ಲಿರುವುದು ಕಂಡುಬರುತ್ತದೆ. ಹೀಗೆ ಗಂಗರು ಜೈನ ಮತ್ತು ಶೈವ ಧರ್ಮಗಳಿಗೆ ಪ್ರೋತ್ಸಾಹ, ಪೋಷಣೆ ನೀಡಿದರು. ಗಂಗರ ಸಾಮಂತರಾಗಿದ್ದ ನೊಳಂಬರು (ನೊಳಂಬ–ಪಲ್ಲವರು) ಬೆಂಗಳೂರು ಜಿಲ್ಲೆಯ ಭಾಗಗಳನ್ನಾಳುತ್ತಿದ್ದು ಗಂಗವಾರದಲ್ಲಿ ಸೋಮೇಶ್ವರ ದೇವಾಲಯವನ್ನು ಕಟ್ಟಿದರು. ಈ ದೇವಾಲಯದಲ್ಲಿ ಪಲ್ಲವ ಶೈಲಿಯ ಸಿಂಹಪೀಠದ ಸ್ತಂಭಗಳಿವೆ. ಇದು ಕ್ರಿ. ಶ. 9ನೇ ಶತಮಾನಕ್ಕೆ ಸೇರುತ್ತದೆ. ಜಿಗಣಿ ಗಂಗರ ಕಾಲದ ಅಗ್ರಹಾರವಾಗಿದ್ದಿತು. ಅಗರವೂ ಗಂಗರ ಕಾಲದಿಂದ ವಿಜಯನಗರದವರೆಗೆ ಅಗ್ರಹಾರವಾಗಿದ್ದಿತು. ಮಡಿವಾಳ (ಚೋಳ) ಅಗ್ರಹಾರದಾಸರಹಳ್ಳಿ ಗಂಗರನ್ನು ತಂಜಾವೂರಿನ ಚೋಳರು ಜಯಿಸಿ ಗಂಗವಾಡಿಯನ್ನು ವಶಪಡಿಸಿಕೊಂಡರು. ಬೆಂಗಳೂರು ಜಿಲ್ಲೆಯಲ್ಲಿ ಚೋಳರ ಆಳ್ವಿಕೆಯ ಮೊದಲ ಶಾಸನವು ಕ್ರಿ. ಶ. 997ರಲ್ಲಿ ರಾಜರಾಜಚೋಳನು ಹೊಸಕೋಟೆಯ ಭಾಗವನ್ನು ಆಳುತ್ತಿದ್ದುದನ್ನು ತಿಳಿಸುತ್ತದೆ. (ಎ.ಕ.9, ಹೊಸಕೋಟೆ ಸಂ.111) ಹೊಸಕೋಟೆಗೆ ಸೇರಿದ ಈಗಿನ ಕಾಡುಗೋಡಿಯಲ್ಲಿ 'ಕಾಡಮಂಗಲಂ' ಎಂಬ ಚತುರ್ವೇದಿ ಮಂಗಲ ಎಂದರೆ ಅಗ್ರಹಾರವನ್ನು ರಾಜೇಂದ್ರ ಚೋಳನು ಸ್ಥಾಪಿಸಿದನು. ಚೋಳರು ಬೆಂಗಳೂರಿನಲ್ಲಿ ಕಟ್ಟಿದ ದೇವಾಲಯಗಳೆಂದರೆ ಅಲಸೂರಿನ ಸೋಮೇಶ್ವರ, ಗವಿಪುರಂನ ಗವಿಗಂಗಾಧರೇಶ್ವರ, ಬಸವನಗುಡಿಯ ದೊಡ್ಡ ಬಸವಣ್ಣ ಮತ್ತು ವಸಂತಪುರದ ವಸಂತ ವಲ್ಲಭರಾಯಸ್ವಾಮಿ. ಒಂದನೇ ರಾಜೇಂದ್ರ ಚೋಳನು ಐಗಂಡಪುರ (ಐವರು ಕಂಡಪುರ) ದಲ್ಲಿ ಸಿದ್ಧೇಶ್ವರ ದೇವಾಲಯವನ್ನು ನಿರ್ಮಿಸಿದನು. ದೊಮ್ಮಲೂರಿನಲ್ಲಿ ಚೊಕ್ಕನಾಥ ಪೆರುಮಾಳ್ (ವಿಷ್ಣು), ಕೊಂಡರಹಳ್ಳಿಯಲ್ಲಿ ಸೋಮೇಶ್ವರ ದೇವಾಲಯವನ್ನು ರಾಜಾ ಮಹೇಂದ್ರ ನಿರ್ಮಿಸಿದನು. ಎರಡನೇ ರಾಜೇಂದ್ರ (ಕುಲೋತ್ತುಂಗ) ನು ಬಿನ್ನಮಂಗಲದಲ್ಲಿ ಮುಕ್ತೇಶ್ವರ ದೇವಾಲಯವನ್ನು, ನೆಲಮಂಗಲದಲ್ಲಿ ಶಿವನ ದೇವಾಲಯವನ್ನು ಕಟ್ಟಿಸಿದನು. ರಾಜಾಧಿರಾಜ ಚೋಳನು ಕಾಡುಗೋಡಿಯಲ್ಲಿ (ಭಂಗಿಯ ಕುಲ) ಭಂಗೇಶ್ವರ ಉಡೈಯರ್ ಅಥವಾ ಕಾಶಿ ವಿಶ್ವೇಶ್ವರ ದೇವಾಲಯವನ್ನು ನಿರ್ಮಿಸಿದನು. ಸನ್ನೈ ನಾಡಿನ (ದಡಿಗಾವಳಿ ಅಥವಾ ವಿಕ್ರಮ ಚೋಳಮಂಡಲಂ) ಗಾವುಂಡ ರಾಜರಾಜ ವೇಲನ್ ಪಟ್ಟಂದೂರಿನಲ್ಲಿ ಅಗ್ರಹಾರವನ್ನೂ, ಕೆರೆಯನ್ನೂ ನಿರ್ಮಿಸಿದನು. ಹೀಗೆ ಚೋಳರು ಅಗ್ರಹಾರಗಳನ್ನು ಸ್ಥಾಪಿಸಿ ವೈದಿಕ ಬ್ರಾಹ್ಮಣ ಧರ್ಮವನ್ನೂ, ಶೈವ ಮತ್ತು ವೈಷ್ಣವ ಧರ್ಮಗಳನ್ನು ದೇವಾಲಯಗಳ ನಿರ್ಮಾಣ ಮತ್ತು ದೇವದಾನಗಳ ಮೂಲಕ ಪೋಷಿಸಿ ಬೆಳೆಸಿದರು.

ಗಂಗರನ್ನು ಜಯಿಸಿ ಗಂಗವಾಡಿಯಲ್ಲಿ ತಮ್ಮ ಅಧಿಪತ್ಯ ಸ್ಥಾಪಿಸಿದ್ದ ಚೋಳರನ್ನು ಹೊಯ್ಸಳರು ಸೋಲಿಸಿ ತಮ್ಮ ಪ್ರಭುತ್ವವನ್ನು ನೆಲೆಗೊಳಿಸಿದರು. ಶಾಸನಗಳಲ್ಲಿ ಹೊಯ್ಸಳರ ಆಳ್ವಿಕೆಯಲ್ಲಿ ಇದ್ದ ಮಂಡಲಗಳ ನಾಡುಗಳ ಉಲ್ಲೇಖಗಳು ದೊರೆಯುತ್ತವೆ. ನಿಗಿರಿಲಿ ಚೋಳ ಮಂಡಲ, ಮುಡಿಗೊಂಡ ಚೋಳ ಮಂಡಲ, ವಿಕ್ರಮಚೋಳ ಮಂಡಲ (ಹೊಸಕೋಟೆ, 40,49, ಬೆಂಗಳೂರು 85 (ಸಿ); ಪುಲ್ಲಿಯೂರ್ ನಾಡು, ಕುರುಕ್ಕುಂಜಿ, ಕುರವಂಜಿ, ಹಾಗೂ ಇಳೈಪಕ್ಕ ನಾಡು (ಹೊಸಕೋಟೆ 56, 81, 96, 136,138, ಬೆಂಗಳೂರು 10,13,21). ಅಂತೆಯೇ ಹೊಯ್ಸಳರ ಕಾಲದಲ್ಲಿ ಬೆಂಗಳೂರಿನಲ್ಲಿದ್ದ ಅಗ್ರಹಾರ ಅಥವಾ ಚತುರ್ವೇದಿ ಮಂಗಲಗಳೆಂದರೆ ಹೊಸಕೋಟೆಯ ವರದರಾಜ (ಇಂದಿನ ವಾಗಟ), ಬೆಂಗಳೂರಿನ ವೀರಬಲ್ಲಾಳ ಮಂಗಲಂ (ಇಬ್ಬಲೂರು–ಗಂಗರ ಕಾಲದ

ಇವ್ವೂರ್ಲಿಯೂರು), ರಾಮ ಮಂಗಲಂ (ಕಾಚರಕನಹಳ್ಳಿ ಹಾಗೂ ಸೇವಿದ್ಯೆನಾರಾಯಣ ಮಂಗಲಂ (ಅರೇಹಳ್ಳಿ) (ಹೊಸಕೋಟೆ 136–138). ಚಿಕ್ಕಜಾಲ (ಶಾ.ಸ.139, ಎ, ಬಿ), ವಿಷ್ಣುವರ್ಧನ ಚತುರ್ವೇದಿ ಮಂಗಲ. ಹೊಯ್ಸಳರು ಬೆಂಗಳೂರು ಮತ್ತು ಅದರ ಸುತ್ತಮುತ್ತ ಇದ್ದ ಬ್ರಾಹ್ಮಣ ಧರ್ಮದ ದೇವಾಲಯಗಳಿಗೆ ದೇವಾದೇಯಗಳನ್ನು ತೆರಿಗೆ ವಿನಾಯಿತಿ ಕೊಡುಗೆಗಳನ್ನು ನೀಡಿದ್ದಾರೆ. ವಿಷ್ಣುವರ್ಧನನು ಬೇಗೂರಿನ ನಾಗೇಶ್ವರ ದೇವಾಲಯದ ಆವರಣಗೋಡೆಯ ನಿರ್ಮಾಣಕ್ಕಾಗಿ ದಾನ ನೀಡಿದನು. (ಬೆಂ.85) ಇಮ್ಮಡಿ ಬಲ್ಲಾಳನು ದೊಮ್ಮಲೂರಿನ ತ್ರಿಪುರಾಂತಕ ಪೆರುಮಾಳ್ ದೇವಾಲಯಕ್ಕೆ ದೀಪಾರಾಧನೆಗಾಗಿ ದಾನ ನೀಡಿದನು (ಬೆಂ. 13); ಇಮ್ಮಡಿ ನರಸಿಂಹನು ಕಾಚರಕನ ಹಳ್ಳಿಯ ಸಿವಣೀಶ್ವರನಿಗೆ ಗೋಪುರ ನಿರ್ಮಾಣಕ್ಕಾಗಿ ದಾನ ನೀಡಿದನು. (ಬೆಂ. 139); ಸೋಮೇಶ್ವರನು ತಾವರೇಕೆರೆಯ ಸೆಯಮಿಸ್ಸುರಂ ಉಡೈಯ ನಾಯನಾರ್–ಸೋಮೇಶ್ವರ ದೇವರಿಗೆ ದಾನ ನೀಡಿದನು. (ಬೆಂ. 68); ರಾಮನಾಥನು ದೊಮ್ಮಲೂರಿನ ಚೊಕ್ಕ ಪೆರುಮಾಳ್‌ನ ಉತ್ಸವ ಮೂರ್ತಿ ಮತ್ತು ಬಾಗಿಲುವಾಡಕ್ಕಾಗಿ ದಾನ ನೀಡಿದನು, ತ್ರಿಪುರಾಂತಕ ಪೆರುಮಾಳನ ದೇವಾಲಯಕ್ಕೆ ಭೂದಾನ ನೀಡಿದನು, ಐಗಂಡಪುರದ ನಾಯನಾರ್ ಶಿವ ದೇವಾಲಯಕ್ಕೆ ಭೂದಾನ ನೀಡಿದನು (ಬೆಂ. 11, ನೆಲಮಂಗಲ 38–ಬಿ), ಬನ್ನೇರುಘಟ್ಟದ ದಾಮೋದರ ಪೆರುಮಾಳ್ ದೇವಾಲಯಕ್ಕೆ ಭೂದಾನ ನೀಡಿದನು. ಮುಮ್ಮಡಿ ಬಲ್ಲಾಳನು ತೆರಿಗೆ ವಿನಾಯಿತಿ ದಾನ ನೀಡಿದನು. (ಬೆಂ. 83, 85, 12, 65, ಹೊಸಕೋಟೆ 132–ಬಿ) ಬೇಗೂರಿನ ತಿರುನಾಗೇಶ್ವರನಿಗೆ ಮೆರವಣಿಗೆಯುತ್ಸವಕ್ಕಾಗಿ ದಾನ ನೀಡಿದನು. ದೊಮ್ಮಲೂರಿನ ಚೊಕ್ಕ ಪೆರುಮಾಳನಿಗೆ ಬಡಗಿಗಳ ಸಂಘವು ದಾನ ನೀಡಿತು. ವಾಗಟದ ವರದರಾಜನ ಅಂಕುರಾರ್ಪಣ ಉತ್ಸವಕ್ಕಾಗಿ ದಾನ ನೀಡಲಾಯಿತು.

ಹೊಯ್ಸಳರು ಹೊಸದಾಗಿ ದೇವಾಲಯಗಳನ್ನು ನಿರ್ಮಿಸಿದ ಹಾಗೆ ಕಂಡುಬರದಿದ್ದರೂ ಇದ್ದ ದೇವಾಲಯಗಳ ವಿಸ್ತರಣೆ, ಜೀರ್ಣೋದ್ಧಾರ ಮತ್ತು ಅನೇಕ ಉತ್ಸವಾದಿಗಳಿಗೆ ಧಾರಾಳವಾಗಿ ಭೂಮಿ, ಧಾನ್ಯ ಮತ್ತು ದ್ರವ್ಯ ದಾನಗಳನ್ನು ನೀಡಿ ವೈದಿಕ ಬ್ರಾಹ್ಮಣ ಧರ್ಮ, ಶೈವ ಮತ್ತು ವೈಷ್ಣವ ಧರ್ಮಗಳಿಗೆ ಪೋಷಣೆ ನೀಡಿದರು.

ವಿಜಯನಗರದರಸರ ಆಳ್ವಿಕೆಯ ಕಾಲದಲ್ಲಿ ಬೆಂಗಳೂರು (ಪೂರ್ವ) ಮತ್ತು ಹೊಸಕೋಟೆ ತಾಲ್ಲೂಕುಗಳು ನಲ್ಲೂರ ರಾಜ್ಯಾಂತರ್ಗತವಾಗಿದ್ದವು. ಬೆಂಗಳೂರು ದಕ್ಷಿಣ ತಾಲ್ಲೂಕು ವೆಪ್ಪೂರು (ಬೇಗೂರು) ನಾಡಿನಲ್ಲಿ, ಬೆಂಗಳೂರು ಉತ್ತರ ತಾಲ್ಲೂಕು ಎಲೆಪಕ್ಕ–ಯಲಹಂಕ ನಾಡಿನಲ್ಲಿ ಅಂತರ್ಗತವಾಗಿದ್ದವು. ಹೊಸಕೋಟೆ, ನಂದಗುಡಿ, ನೆಲವಾಗಿಲು ಸೀಮೆಗಳು, ಶಿವನಸಮುದ್ರ (ಬೆಂಗಳೂರು ಉತ್ತರ) ಸೀಮೆಗಳು; ದೊಡ್ಡಬೊಮ್ಮಸಂದ್ರ, ದೇವಸಮುದ್ರ (ದ್ಯಾವಸಂದ್ರ), ಗಂಗಸಂದ್ರ–ತಿಮ್ಮರಾಜಪುರ ಅಗ್ರಹಾರಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ದೇವಾಲಯಗಳ ವಿಸ್ತರಣೆ, ಜೀರ್ಣೋದ್ಧಾರ, ಉತ್ಸವಗಳಿಗೆ ದಾನದತ್ತಿಗಳು ವಿಜಯನಗರ ಕಾಲದಲ್ಲಿ ಮುಂದುವರೆದವು. ದಾಮೋದರ (ಬನ್ನೇರುಘಟ್ಟ) ದೇವಾಲಯಕ್ಕೆ ಪಾತ್ರೆಗಳ ದಾನ (ಹರಿಹರ–1), ಮಾಲಾರ್ಪಣೆ ಮತ್ತು ಶಾಶ್ವತ ದೀಪಾರಾಧನೆಗೆ ದಾನ (ಬುಕ್ಕ–1), ನಂದಗುಡಿಯ ಸೆಲ್ವನಾರಾಯಣ ಪೆರುಮಾಳನಿಗೆ ನೀರ್ಮಣ್ಣು (ಗದ್ದೆ ದಾನ), ಬೇಲೂರಿನ ಸಿವನೇಶ್ವರಂ ದೇವಾಲಯಕ್ಕೆ ಭೂದಾನ, ಕಾಡುಗೋಡೆಯ ಹನುಮಂತನಿಗೆ ದೀಪಮಾಲೆಸ್ತಂಭ ದಾನ, ಕನ್ನೆಳ್ಳಿಯ ತಿರುಮಲನಾಥನಿಗೆ ಎರಡು ಮಗ್ಗಗಳ ದಾನ, ಚಿಕ್ಕಜಾಲದ ಚನ್ನಕೇಶವನಿಗೆ ಭೂದಾನ, ಬನ್ನೇರುಘಟ್ಟದ ದಾಮೋದರನಿಗೆ ಪುಷ್ಪಹಾರ ಮತ್ತು ನಿತ್ಯದೀಪಾರಾಧನೆಗಾಗಿ ದಾನವನ್ನು ಇಮ್ಮಡಿ ಹರಿಹರನು ನೀಡಿದನು. ಇಮ್ಮಡಿ ದೇವರಾಯನು ಬನ್ನೇರುಘಟ್ಟದ ದಾಮೋದರ, ದೊಮ್ಮಲೂರಿನ ಚೊಕ್ಕನಾಥ ದೇವರಿಗೆ ದಾನದತ್ತಿ ನೀಡಿದನು. ಸಾಳ್ವ ವಂಶದ ಅರಸರು ವಾಗಟದ ವರದರಾಜನಿಗೆ ಭೂದಾನ, ಜಕ್ಕಸಂದ್ರದ ಚೆನ್ನಕೇಶವನಿಗೆ, ಬೇಲೂರಿನ ನಾಗನಾಥನಿಗೆ, ಸಾತನೂರಿನ ವಿಠಲನಿಗೆ ದತ್ತಿಯನ್ನು ನೀಡಿದರು. ತುಳುವ ವಂಶದ ಕೃಷ್ಣದೇವರಾಯನು ಕಲ್ಯದ ಕಲಿನಾಥನಿಗೆ ಮತ್ತು ತಿರುಮಲೆಯ ತಿರುವೇಂಗಳನಾಥನಿಗೆ ಭೂಮಿ ಮತ್ತು ತೆರಿಗೆಗಳನ್ನು ದಾನಮಾಡಿದನು.

ಅಚ್ಯುತದೇವರಾಯನು ಹೆಸರಘಟ್ಟದ ಚಂದ್ರಮೌಳೀಶ್ವರನಿಗೆ ಅಗ್ರಹಾರ ದಾನ ನೀಡಿದನು. ಸದಾಶಿವರಾಯನು ಧರ್ಮೇಶ್ವರನಿಗೆ ದಾನಶಾಸನ ಹಾಕಿಸಿದನು.

ಈ ಮೇಲಿನ ವಿವರಗಳನ್ನು ಪರಿಶೀಲಿಸಿದಾಗ ವಿಜಯನಗರದ ಸಂಗಮ ಅರಸರು ಬಹುತೇಕ ಶೈವ ಧರ್ಮ, ದೇವಾಲಯಗಳಿಗೆ ಹಾಗೂ ಸಾಳ್ವ ಮತ್ತು ತುಳುವ ಅರಸರು ಬಹುತೇಕ ವಿಷ್ಣು ದೇವಾಲಯಗಳಿಗೆ ಕೆಲವೊಮ್ಮೆ ಶೈವ ದೇವಾಲಯಗಳಿಗೆ ದಾನದತ್ತಿ ನೀಡಿ ಪೋಷಿಸಿದ ಅಂಶ ವಿದಿತವಾಗುತ್ತದೆ.

ವಿಜಯನಗರದ ತುಳುವರಸರ ಕಾಲದಲ್ಲಿ ಯಲಹಂಕ ನಾಡಪ್ರಭುಗಳಾಗಿ ಪ್ರವರ್ಧಮಾನಕ್ಕೆ ಬಂದವರು ಮೊರಸು ಒಕ್ಕಲಿಗ ಕುಲದ ಕೆಂಪೇಗೌಡ ಮತ್ತು ಅವನ ವಂಶಜರು. ವಿಜಯನಗರದರಸ ಅಚ್ಯುತರಾಯನು ಯಲಹಂಕ ನಾಡಪ್ರಭು ಕೆಂಪೇಗೌಡನಿಗೆ ವಾರ್ಷಿಕ 20,000 ಪಗೋಡಗಳ ಆದಾಯವಿದ್ದ ಬೆಂಗಳೂರು, ವರ್ತೂರು, ಯಲಹಂಕ, ಬೇವೂರು, ಹಲಸೂರು, ಕೆಂಗೇರಿ, ತಲಘಟ್ಟಪುರ, ಜಿಗಣಿ, ಕುಂಬಳಗೂಡು, ಕನ್ನೆಲ್ಲಿ, ಬಾಣಾವರ ಮತ್ತು ಹೆಸರುಘಟ್ಟ ಹೋಬಳಿಗಳನ್ನು ನೀಡಿದನು. ಈ ಆದಾಯದ ಹಣವನ್ನು ಬಹುಮಟ್ಟಿಗೆ ದೇವಾಲಯ, ಕೆರೆ, ಅಗ್ರಹಾರ ನಿರ್ಮಾಣಕ್ಕಾಗಿ ವಿನಿಯೋಗಿಸಲಾಯಿತು. ಇವರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳೆಂದರೆ ಕೋಟೆ ಆಂಜನೇಯ, ಕಾರಂಜಿ ಆಂಜನೇಯ ಯಲಹಂಕಬಾಗಿಲು ಆಂಜನೇಯ, ದೊಡ್ಡ ಬಸವಣ್ಣ, ಬೇಡರಕಣ್ಣಪ್ಪ, ಸಂಪಿಗೆ ಬೀರೇಶ್ವರ, ಪ್ರಸನ್ನ ಗಣಪತಿ, (ಬೆಳ್ಳಕಳ್ಳಿ), ದೊಡ್ಡಗಣಪತಿ, ಗವಿಗಂಗಾಧರೇಶ್ವರ ದೇವಾಲಯದ ವಿಸ್ತರಣೆ, ಹಲಸೂರು ಸೋಮೇಶ್ವರ ದೇವಾಲಯ, ಕೋಟೆ ಕಾಲಭೈರವ ಅಥವಾ ಬಾಗಿಲ ಭೈರವ, ಚೆನ್ನಿಗರಾಯಸ್ವಾಮಿ ದೇವಾಲಯ, ಮುತ್ಯಾಲಪೇಟೆ ರಂಗನಾಥ ದೇವಾಲಯ, ತುಪ್ಪದ ಆಂಜನೇಯ ದೇವಾಲಯ. ಹಲಸೂರು ಅಗ್ರಹಾರ, ಸೊಂಡೆಕೊಪ್ಪ ಅಗ್ರಹಾರ, ಕೆಂಪಾಪುರ ಅಗ್ರಹಾರ ಈ ಯಲಹಂಕ ನಾಡಪ್ರಭುಗಳ ನಿರ್ಮಾಣಗಳೇ ಆಗಿದೆ.

ಮರಾಠಾ ರಾಜ್ಯಸ್ಥಾಪಕನಾದ ಶಿವಾಜಿಯ ತಂದೆ ಶಹಜಿ ಭೋಸ್ಲೆಗೆ ಬಿಜಾಪುರದ ಆದಿಲ್‌ಷಾಹಿ ಸುಲ್ತಾನನು ಬೆಂಗಳೂರನ್ನು ಜಹಗೀರಿಯಾಗಿ ನೀಡಿದನು. ಕ್ರಿ. ಶ. 1638ರಿಂದ 1687ರವರೆಗೆ ಮರಾಠರು ಬೆಂಗಳೂರನ್ನೇ ತಮ್ಮ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ಆಳಿದರು. ಇದೇ ಕಾಲದಲ್ಲಿ ಇವರೇ ಸ್ಥಾಪಿಸಿದ ಸಂತೂಸಾಪೇಟೆ (ನೇಯ್ಗೆಯವರ ಪೇಟೆ)ಯಲ್ಲಿ ವಿಠೋಬಾ–ಪಾಂಡುರಂಗ ದೇವಾಲಯ, ವಸಂತಪುರದಲ್ಲಿ ಶಿವಾಜಿಯ ಆಧ್ಯಾತ್ಮಿಕ ಗುರುವಾಗಿದ್ದ ಸಮರ್ಥರಾಮದಾಸರಿಂದ ನಿರ್ಮಿತವಾದ ಭವಾನೀ ಶಂಕರ ದೇವಾಲಯ ಹಾಗೂ ಮರಾಠಗೋಸಾವಿ ಮಠ (ಗವಿಗಂಗಾಧರೇಶ್ವರ ದೇವಾಲಯದ ಬಳಿ) ಶಹಜಿಯಿಂದ ನಿರ್ಮಿಸಲ್ಪಟ್ಟವು. ಶಿವಾಜಿಯ ತಮ್ಮ ಏಕೋಜಿ (ವೆಂಕೋಜಿ) ಮಲ್ಲೇಶ್ವರದಲ್ಲಿರುವ ಕಾಡು ಮಲ್ಲೇಶ್ವರ ಅಥವಾ ಮಲ್ಲಿಕಾರ್ಜುನ ದೇವಾಲಯಕ್ಕೆ ಮೇದರನಿಂಗನ ಹಳ್ಳಿಯನ್ನು ದಾನ ನೀಡಿ ಶಾಸನವನ್ನು ಹಾಕಿಸಿದ್ದಾನೆ.

ಮೈಸೂರು ಒಡೆಯರು

ಚಿಕ್ಕದೇವರಾಜ ಒಡೆಯರು ಬೆಂಗಳೂರು ಕೋಟೆಯಲ್ಲಿ ಕೆಂಪೇಗೌಡನು ಕಟ್ಟಿಸಿದ್ದ ಕಾಲಭೈರವನ ದೇವಾಲಯದ ಗರ್ಭಗುಡಿಯಲ್ಲಿ ವೆಂಕಟರಮಣ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ನಂತರ 19ನೇ ಶತಮಾನದಲ್ಲಿ ಅನೇಕ ದೇವಾಲಯಗಳು ನಿರ್ಮಿಸಲ್ಪಟ್ಟವು. ಅವೆನ್ಯೂ ರಸ್ತೆಯಬದಿಗಿದ್ದ ಕೋಮಟಿಪೇಟೆಯಲ್ಲಿ ವೆಂಕಟರಮಣಸ್ವಾಮಿ ದೇವಾಲಯವಿದೆ. ಇದರಲ್ಲಿ ವೆಂಕಟರಮಣ, ಶ್ರೀದೇವಿ, ಭೂದೇವಿಯರಲ್ಲದೆ ಪಾರ್ಶ್ವದ ಗರ್ಭಗುಡಿಗಳಲ್ಲಿ ರಾಮ ಲಕ್ಷ್ಮಣ ಸೀತಾ ಹಾಗು ಗೋಪಾಲಕೃಷ್ಣ, ವೇಣುಗೋಪಾಲ ಮತ್ತು ಲಕ್ಷ್ಮಿಯ ಮೂರ್ತಿಗಳಿವೆ. ಈ

ದೇವಾಲಯಕ್ಕೆ ಚಿಕ್ಕಬಾಣಾವರದ ಸಮೀಪವಿರುವ ಕಾಮಗೊಂಡನಹಳ್ಳಿಯನ್ನು ದಾನವಾಗಿ ನೀಡಲಾಗಿದ್ದಿತು. ಈ ದೇವಾಲಯದ ಎದುರಿಗೆ ಕ್ಷೌರಿಕ ಅಥವಾ ನಾಯಂದ ಸಮುದಾಯದವರು ಕಟ್ಟಿಸಿದ ಚಿಕ್ಕದಾದ ರಾಮ ದೇವಾಲಯವಿದೆ. ಇದರ ಹತ್ತಿರವೇ ವೇದಿಕೆಯ ಮೇಲೆ ಮೂರು ಬಿಸಿಲು ಮಾರಮ್ಮನ ಮೂರ್ತಿಗಳಿವೆ. ಹಳೇ ತಾಲ್ಲೂಕು ಕಛೇರಿ ರಸ್ತೆಯಲ್ಲಿ ವಿಶ್ವಕರ್ಮ ಸಮುದಾಯದ ಕಾಳಿಕಾಂಬಾ-ಕಮ್ಮಟೇಶ್ವರ ದೇವಾಲಯವಿದೆ. ಅಕ್ಕ-ಪಕ್ಕದ ಗರ್ಭಗುಡಿಗಳಲ್ಲಿ ನಂಜುಂಡೇಶ್ವರ ಲಿಂಗ ಹಾಗೂ ಸುಬ್ರಹ್ಮಣ್ಯನ ಶಿಲ್ಪಗಳಿವೆ. ನವರಂಗದ ಬಲಗಡೆಗೆ ಅನೇಕ ಚಿಕ್ಕ ಕೋಣೆಗಳಲ್ಲಿ ವೀರಭದ್ರ, ಹನುಮಂತ, ಶಾರದಾಂಬ ಮುಂತಾದ ದೇವತಾ ಮೂರ್ತಿಗಳಿವೆ. ಅಲ್ಲಿಂದ ಸ್ವಲ್ಪ ದೂರದಲ್ಲಿ ಲಕ್ಷ್ಮೀನಾರಾಯಣ ದೇವಾಲಯ, ಗಾಣಿಗರ ಪೇಟೆಯಲ್ಲಿ ಚೆನ್ನಿಗರಾಯ (ಚನ್ನಕೇಶವ) ದೇವಾಲಯ, ಪಕ್ಕದಲ್ಲಿ ಮಕ್ಕಳ ಬಸವಣ್ಣ ದೇವಾಲಯ (ಈಗಿನ ರಾಮಲಿಂಗೇಶ್ವರ ದೇವಾಲಯ), ಜ್ಯೋತಿ ನಗರೇಶ್ವರ ದೇವಾಲಯ, ಗಂಗಾ ಮತಸ್ಥರ (ಬೆಸ್ತ) ಗಂಗಾ ಪರಮೇಶ್ವರಿ ದೇವಾಲಯ, ಯಾದವ (ಗೊಲ್ಲ) ವೇಣುಗೋಪಾಲಸ್ವಾಮಿ ದೇವಾಲಯ, ಪ್ರಸನ್ನ ಗಂಗಾಧರಸ್ವಾಮಿ ದೇವಾಲಯ, ತಿಗಳರ ಪೇಟೆಯ ಧರ್ಮರಾಯ ದೇವಾಲಯ ಇವೆ. ಇಲ್ಲಿ ಕೃಷ್ಣ, ದ್ರೌಪದಿ, ಅರ್ಜುನ, ಭೀಮ, ನಕುಲ, ಸಹದೇವ ಮತ್ತು ಪೋತರಾಜರ ಲೋಹದ ಮೂರ್ತಿಗಳೂ ಇವೆ. ಈ ದೇವಾಲಯ ಬೆಂಗಳೂರಿನ ಸುಪ್ರಸಿದ್ಧ ಕರಗದ ಉತ್ಸವದ ಕೇಂದ್ರವಾಗಿದೆ. ತುಳಸೀತೋಟ ಅಥವಾ ಚಿಕ್ಕಲಾಲ್‌ಬಾಗ್ ಪ್ರದೇಶದಲ್ಲಿ ಬಿ. ಕೆ. ಗರುಡಾಚಾರ್ ನಿರ್ಮಿಸಿದ ಹೊಸ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯವಿದೆ. ಅದರ ಪ್ರಧಾನ ಗರ್ಭಗೃಹದಲ್ಲಿ ನವನೀತ ಕೃಷ್ಣ (ಬೆಣ್ಣೆ ಕೃಷ್ಣ), ಪಾರ್ಶ್ವದ ಗರ್ಭಗುಡಿಗಳಲ್ಲಿ ಆಸೀನ ಲಕ್ಷ್ಮೀನರಸಿಂಹ ಮತ್ತು ತುಳಸೀ ರಾಮದಾಸರು ಪ್ರತಿಷ್ಠಾಪಿಸಿದ ಸ್ಥಾನಕ ರಾಮ, ಲಕ್ಷ್ಮಣ ಮತ್ತು ಸೀತಾ ವಿಗ್ರಹಗಳಿವೆ. ಬಳೇಪೇಟೆಯ ಲಕ್ಷ್ಮೀನರಸಿಂಹ ದೇವಾಲಯವನ್ನು ಹೂವಾಡಿಗ ಬಣಜಿಗರು ಕಟ್ಟಿಸಿದರು. ಬಳೇಪೇಟೆಯ ಮಧ್ಯಭಾಗದಲ್ಲಿ ಶ್ರೀನಿವಾಸ ಮಂದಿರ ಇದೆ. ಇಲ್ಲಿ ಅನಾಥಾಶ್ರಮವೂ ಇದೆ. ಇದಕ್ಕೆ ಎದುರಾಗಿ ಉಪ್ಪಾರ ಸಮುದಾಯದ ಸುಗ್ರೀವ ವೆಂಕಟರಮಣಸ್ವಾಮಿ ದೇವಾಲಯವಿದೆ. ಇದರ ಆವರಣದಲ್ಲಿ 2.5 ಮೀಟರ್ ಎತ್ತರದ ಸುಗ್ರೀವ ಮತ್ತು 1 ಮೀಟರ್ ಎತ್ತರದ ಆಂಜನೇಯನ ಮೂರ್ತಿಗಳಿವೆ. ಬಳೇಪೇಟೆಯ ಕೊನೆಯಲ್ಲಿ ಕಾಶಿ ವಿಶ್ವೇಶ್ವರ ದೇವಾಲಯವಿದ್ದು ಅದರಲ್ಲಿ ವಿಶ್ವೇಶ್ವರ ಲಿಂಗವೇ ಅಲ್ಲದೆ ಗಣಪತಿ, ಅನ್ನಪೂರ್ಣ, ವಿಶಾಲಾಕ್ಷಿ, ಸೋಮೇಶ್ವರ, ಸುಬ್ರಮಣ್ಯ, ಅಗಸ್ತ್ಯ ಚಂದ್ರಮೌಳೀಶ್ವರ, ಬೊಮ್ಮಲಿಂಗೇಶ್ವರ, ರಾಮಲಿಂಗೇಶ್ವರ ಹಾಗೂ ಕೇದಾರೇಶ್ವರ ಗುಡಿ ಇವೆ. ವಿಜಯನಗರ ಕಲಾಶೈಲಿಯಲ್ಲಿರುವ ಈ ದೇವಾಲಯವನ್ನು ಸದಾಶಿವ ಸಾಹುಜಿ ಕಟ್ಟಿಸಿದನೆಂದು ಹೇಳಲಾಗುತ್ತದೆ. ಮೈಸೂರು ಚಿತ್ರಕಲಾ ಶೈಲಿಯಲ್ಲಿರುವ ರಾಜರಾಜೇಶ್ವರಿ, ಯಶೋದಾ, ಕೃಷ್ಣ ಮತ್ತು ರಾಮ ಪಂಚಾಯತನ ಚಿತ್ರಪಟಗಳೂ ಇಲ್ಲಿವೆ. ಬಳೇ ಪೇಟೆಯಲ್ಲಿಯೇ ಲಾಲ್‌ದಾಸ ಎಂಬ ಗುಜರಾತೀ ವ್ಯಾಪಾರಿಯು ಕಟ್ಟಿಸಿದ ವೆಂಕಟರಮಣ, ಶ್ರೀರಾಮ ಮತ್ತು ಗಂಗಾಧರೇಶ್ವರನ ಗುಡಿಗಳಿವೆ. ಹಳೇ ತಾಲ್ಲೂಕು ಕಛೇರಿ ರಸ್ತೆಯ ಕೊನೆಯಲ್ಲಿ ಇರುವ ಸೋಮೇಶ್ವರ ದೇವಾಲಯವನ್ನು ಲಿಂಗಾಯತ ಪಂಗಡವಾದ ಶೇಣಿಗರು ಕಟ್ಟಿಸಿದರು. ಈ ರಸ್ತೆಯಲ್ಲಿಯೇ ವೀರಶೈವರ ಮುತ್ತಿನ ಕಂತೆ ಮಠ ಮತ್ತು ವೀರಭದ್ರೇಶ್ವರನ ದೇವಾಲಯವೂ ಇವೆ. ಕೊಡಗಿನ ವೀರರಾಜೇಂದ್ರನ ರಾಣಿ ಮಹಾದೇವಮ್ಮನ ದಿವಾನನಾಗಿದ್ದ ಮಂಜಯ್ಯನು ಕಟ್ಟಿಸಿದ ಮಂಜಿ ಸೋಮೇಶ್ವರ ದೇವಾಲಯವೂ ಇಲ್ಲಿಯೇ ಇದೆ. ಎರಡು ಕನ್ನಡ ಶಾಸನಗಳೂ ದೇವಾಲಯದಲ್ಲಿವೆ. ಅರಳೇಪೇಟೆಯಲ್ಲಿ ಆದಿ ನಾರಾಯಣ ಸ್ವಾಮಿ ದೇವಾಲಯವಿದೆ. ಇದು ಯಾಗಕ್ಷತ್ರಿಯ ಸಾಧುಚೆಟ್ಟಿಗಳ ಅಥವಾ ಗೋಣಿಗರ (ನೇಯ್ಗೆ) ದೇವಾಲಯವಾಗಿದೆ. ಅರುಣಾಚಲೇಶ್ವರ ಮತ್ತು ಅದಕ್ಕೆ ಸೇರಿದಂತೆ ಕಲ್ಯಾಣ ಮಂಟಪವೂ ಇವೆ.

ಬೆಂಗಳೂರು ನಗರದ ಇತರ ಬಡಾವಣೆಗಳಲ್ಲಿರುವ 19-20ನೇ ಶತಮಾನದ ಪ್ರಮುಖ ದೇವಾಲಯಗಳೆಂದರೆ ಸಾರಕ್ಕಿಯ ವೀರಭದ್ರ ದೇವಾಲಯ, ಶಾವಿಗೆ ಮಲ್ಲೇಶ್ವರ ದೇವಾಲಯ,

ಜೆ. ಪಿ. ನಗರದ ಸಾರಂಗಧರ ಅಥವಾ ಕುಮಾರ ರಾಮನ ಬಗ್ಗೆ ತಿಳಿಸುವ ವೀರಗಲ್ಲು, ಬನಶಂಕರಿ ದೇವಾಲಯ (ಕನಕಪುರ ರಸ್ತೆ), ಭೈರಸಂದ್ರದ ವೆಂಕಟರಮಣ, ಶ್ರೀನಗರದ ವೆಂಕಟರಮಣ, ಬನಶಂಕರಿ 2ನೇ ಹಂತದ ದೇವಗಿರಿ ವೆಂಕಟೇಶ್ವರ, ವಿಶ್ವೇಶ್ವರಪುರದ ವೆಂಕಟರಮಣ, ಮಹಾಲಕ್ಷ್ಮೀ ಲೇಔಟ್‌ನ ವೆಂಕಟೇಶ ದೇವಾಲಯಗಳು, ಜಯನಗರದ ರಾಗಿ ಗುಡ್ಡದ ಆಂಜನೇಯ, ಮೈಸೂರು ರಸ್ತೆಯ ಗಾಳಿ ಆಂಜನೇಯ, ಕರೇಕಲ್ಲು ಆಂಜನೇಯ, ನಗರದ ಮಾರುತಿ ದೇವಾಲಯ, ಲಾಲ್‌ಬಾಗಿನ ಗುಡ್ಡೆ ಆಂಜನೇಯ, ಮಹಾಲಕ್ಷ್ಮೀ ಲೇಔಟ್‌ನ ಆಂಜನೇಯ, ಹನುಮಂತನಗರದ ರಾಮಾಂಜನೇಯ, ಪ್ಯಾಲೇಸ್ ರಸ್ತೆಯ ಓಣಿ ಆಂಜನೇಯ ನಾಗಸಂದ್ರದ ಆಂಜನೇಯ, ರೇಸ್‌ಕೋರ್ಸ್ ಬಳಿ ದಿವಾನ್ ಕೃಷ್ಣಮೂರ್ತಿ ಬಂಗಲೆಯ ಆಂಜನೇಯ, ಬಾಣಸವಾಡಿ ಆಂಜನೇಯ ದೇವಾಲಯ, ವಿಶ್ವೇಶ್ವರಪುರದ ಸಜ್ಜನರಾವ್ ವೃತ್ತದ ಸುಬ್ರಮಣ್ಯ ದೇವಾಲಯ, ಹನುಮಂತನಗರದ ನರಹರಿರಾಯರ ಗುಡ್ಡದ ಮೇಲಿರುವ ಸುಬ್ರಹ್ಮಣ್ಯ ದೇವಾಲಯ, ಸುಬ್ರಮಣ್ಯಪುರದ ಯಾದಾಳಂ ಕೃಷ್ಣಶೆಟ್ಟರು ಕಟ್ಟಿಸಿದ ಸುಬ್ರಮಣ್ಯ ದೇವಾಲಯ, ಕುಮಾರ ಪಾರ್ಕ್‌ನಲ್ಲಿರುವ ಸುಬ್ರಮಣ್ಯ ದೇವಾಲಯ, ಅಲಸೂರಿನ ಸುಬ್ರಮಣ್ಯೇಶ್ವರ ದೇವಾಲಯ, ಯಶವಂತಪುರದ ಅಯ್ಯಪ್ಪ ಶಾಸ್ತ, ಕಲಾಸಿಪಾಳ್ಯದ ಅಯ್ಯಪ್ಪ ಶಾಸ್ತ, ಬಿನ್ನಿಮಿಲ್ ಎದುರಿನಲ್ಲಿರುವ ಅಯ್ಯಪ್ಪ ಶಾಸ್ತ ಸಂಜಯನಗರದ ಅಯ್ಯಪ್ಪ, ಎಂ. ಎಸ್. ರಾಮಯ್ಯ ನಗರದ ಅಯ್ಯಪ್ಪ ದೇವಾಲಯ. ಮುನೀಶ್ವರ ಬ್ಲಾಕ್‌ನ ಮುನೀಶ್ವರ, ಕಲಾಸಿಪಾಳ್ಯದ ಮುನೀಶ್ವರ, ಮತ್ತಿಕೆರೆಯ ಮುನೀಶ್ವರ, ತ್ಯಾಗರಾಜನಗರದ ಬೋವಿ ಕಾಲೋನಿಯ ಮುನೀಶ್ವರ ಗುಡಿ, ತ್ಯಾಗರಾಜನಗರ, ವಿಜಯನಗರ, ಹನುಮಂತನಗರಗಳ ಶನೈಶ್ವರ ದೇವಾಲಯಗಳು, ಕೆಂಪೇಗೌಡ ನಗರದ ಜಲಕಂಠೇಶ್ವರ, ಅಲಸೂರುಪೇಟೆಯ ಜಲಕಂಠೇಶ್ವರ, ಶಾಂತಿನಗರದ ಜಲಕಂಠೇಶ್ವರ ದೇವಾಲಯಗಳು, ಶಕ್ತಿ ಗಣಪತಿ, ಸರ್ಕಲ್ ಗಣಪತಿ, ಈಶಾನ್ಯ ಗಣಪತಿ, ವರಸಿದ್ಧಿ ಗಣಪತಿ, ಪಂಚಮುಖ ಗಣಪತಿ, ತ್ರಿಮುಖ ಗಣಪತಿ, ಧನ್ವಂತರಿ ಗಣಪತಿ, ಐಶ್ವರ್ಯ ಗಣಪತಿ ಮುಂತಾದ ದೇವಾಲಯಗಳು. ಸಾಮಾನ್ಯವಾಗಿ ಪ್ರತಿಯೊಂದು ಬಡಾವಣೆಯಲ್ಲಿಯೂ ಗಣೇಶನ ದೇವಾಲಯವಿರುತ್ತದೆ. ಭಾದ್ರಪದ ಮಾಸದಲ್ಲಿ ಗಣೇಶೋತ್ಸವವನ್ನು ಬಡಾವಣೆಯ ಬೀದಿಗಳಲ್ಲಿ ಅನೇಕ ದಿನಗಳವರೆಗೆ ನಡೆಸುತ್ತಾರೆ.

ಬೆಂಗಳೂರಿನಲ್ಲಿ ಶಕ್ತಿ ಆರಾಧನೆಯ ಸಂಕೇತವಾಗಿ ಅನೇಕ ಸ್ತ್ರೀ ದೇವತೆಗಳ ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಸುಪ್ರಸಿದ್ಧವಾದವುಗಳೆಂದರೆ, ಶಿವಾಜಿನಗರದ ದಂಡಿನ ಮಾರಮ್ಮ, ಮೀನಾಕ್ಷಿಯಮ್ಮ, ವಿಲ್ಸನ್ ಗಾರ್ಡನ್‌ನ ಮಾರಿಯಮ್ಮ, ಮಾವಳ್ಳಿಯ ಬಿಸಿಲು ಮಾರಮ್ಮ, ಸೌತ್ ಎಂಡ್ ಸರ್ಕಲ್ ಬಳಿಯ ಪಟಾಲಮ್ಮ, ನಾಗಸಂದ್ರದ ದಾಳಮ್ಮ, ತ್ಯಾಗರಾಜನಗರದ ರಾಜರಾಜೇಶ್ವರಿ, ಪ್ಲೇಗಮ್ಮ, ಗಂಗಮ್ಮ, ನ. ರಾ. ಕಾಲೋನಿಯ ಅಂಬಾ ಭವಾನಿ, ಶಂಕರ ಮಠದ ಶಾರದಾ, ವಿಶ್ವೇಶ್ವರಪುರ ಮತ್ತು ಮಲ್ಲೇಶ್ವರಂ 6ನೇ ಕ್ರಾಸಿನ ಕನ್ನಿಕಾ ಪರಮೇಶ್ವರಿ, ರಾಜರಾಜೇಶ್ವರಿ ನಗರದ ರಾಜ ರಾಜೇಶ್ವರಿ, ಮಾಗಡಿ ರಸ್ತೆಯ ಅಂಗಾಳ ಪರಮೇಶ್ವರಿ, ಕರುಮಾರಿಯಮ್ಮ, ಹುಳಿಮಾವಿನ ಮೀನಾಕ್ಷಿ, ಯಶವಂತಪುರದ ಗಾಯತ್ರಿ, ರವೀಂದ್ರನಾಥ ಠಾಕೂರ್ ನಗರದ ಯಲ್ಲಮ್ಮ ಮುಂತಾದವು. ಈ ದೇವಾಲಯಗಳಲ್ಲಿ ರಥೋತ್ಸವ, ಶುಕ್ರವಾರ ಮಂಗಳವಾರಗಳಂದು, ನವರಾತ್ರಿಯಂದು ವಿಶೇಷ ಅಲಂಕಾರ, ಸೌಂದರ್ಯ ಲಹರೀ ವ್ಯಾಖ್ಯಾನ, ಐಶ್ವರ್ಯ ಲಕ್ಷ್ಮೀ ಮತ್ತು ಅಷ್ಟ ಲಕ್ಷ್ಮೀ ಪೂಜೆ, ಸಂತೋಷಿ ಮಾ ಪೂಜೆಗಳೂ ಮಹಿಳಾ ಸಂಘಗಳಿಂದ ಮಂಡಲಿಗಳಿಂದ ನಡೆಯುತ್ತವೆ. ಬೇಗೂರಿನ ಚೌಡೇಶ್ವರಿ, ಅಗರದ ಕರಗದಮ್ಮ, ಆನೇಕಲ್ಲಿನ ಕನ್ನಿಕಾ ಪರಮೇಶ್ವರಿ, ಕಾಳಿಕಾ, ಬನ್ನೇರುಘಟ್ಟದ ಬಿಸಿಲು ಮಾರಮ್ಮ ಹೆಸರಿಸಬೇಕಾದವು. ದತ್ತಾತ್ರೇಯನ ಆರಾಧನೆಯೂ ಬೆಂಗಳೂರಿನ ತ್ಯಾಗರಾಜನಗರದ ಸಂಕಣ್ಣಾಚಾರ್ಯ ದತ್ತಾತ್ರೇಯ ಆಶ್ರಮದಲ್ಲಿ, ಗಾಂಧಿಬಜಾರಿನ ದತ್ತಾತ್ರೇಯ ಗುಡಿಯಲ್ಲಿ, ಮಲ್ಲೇಶ್ವರದ ಈಜುಕೊಳ ಬಡಾವಣೆಯಲ್ಲಿರುವ ದತ್ತಾತ್ರೇಯ ದೇವಸ್ಥಾನದಲ್ಲಿ, ಹೊಸಕೆರೆಹಳ್ಳಿಯ ದತ್ತಾತ್ರೇಯ ಆಶ್ರಮದಲ್ಲಿ ನಡೆಯುತ್ತದೆ. ದತ್ತ ಜಯಂತಿಯನ್ನು ಕೆಲವರು ದತ್ತಾತ್ರೇಯನ ಭಕ್ತರು ತಮ್ಮ ಮನೆಗಳಲ್ಲಿ ಆಚರಿಸುತ್ತಾರೆ.

ಕಾಲಭೈರವನ ದೇವಸ್ಥಾನವು ಕುಮಾರಸ್ವಾಮಿ ಲೇಔಟ್‌ನಲ್ಲಿದೆ. ಮಂಗಳವಾರಗಳಂದು, ಕಾಲಭೈರವ ಷಷ್ಠಿಯಂದು ವಿಶೇಷ ದೀಪಾರಾಧನೆ ಮತ್ತು ಪೂಜೆಗಳು ನಡೆಯುತ್ತವೆ. ಪ್ರಳಯ ಕಾಲದ ವೀರಭದ್ರ ಗುಡಿಯು ಗವೀಪುರ ಗುಟ್ಟಹಳ್ಳಿಯಲ್ಲಿದ್ದು ವೀರಶೈವರೂ, ಮರಾಠರೂ ವಿಶೇಷ ಭಕ್ತಿಯಿಂದ ಈ ದೇವರನ್ನು ಆರಾಧಿಸುತ್ತಾರೆ. ರಾಮಭಕ್ತಿಯ ಕೇಂದ್ರಗಳಾಗಿ ರಾಮಮಂದಿರಗಳು ನರಸಿಂಹರಾಜಾ ಕಾಲೋನಿ, ರಾಜಾಜಿನಗರ, ಜಯನಗರ, ಚಾಮರಾಜಪೇಟೆ, ಅಲಸೂರು ಪೇಟೆ, ವಿಜಯನಗರ, ರಾಜಾಜಿನಗರ, ಪಾದರಾಯನ ಪುರ, ಶ್ರೀರಾಮಪುರ, ಕಾಮರಾಜ ರಸ್ತೆ, ಮಲ್ಲೇಶ್ವರಂ ಮುಂತಾದೆಡೆಗಳಲ್ಲಿವೆ. ಇಲ್ಲಿ ರಾಮನವಮಿಯ ಸಂದರ್ಭದಲ್ಲಿ 9 ದಿನ ಹರಿಕಥೆ, ಭಜನೆ, ಸಂಗೀತ (ಗಾಯನ ವಾದ್ಯ), ನಾಟಕ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ. ರಾಮನ ಪಟ್ಟಾಭಿಷೇಕ ಉತ್ಸವದೊಂದಿಗೆ ರಾಮೋತ್ಸವ ಕಾರ್ಯಕ್ರಮಗಳು ಕೊನೆಗೊಳ್ಳುತ್ತವೆ. ಈ ರಾಮೋತ್ಸವ ಕಾರ್ಯಕ್ರಮಗಳಲ್ಲಿ ಮುಖ್ಯವಾದುವು ಬೆಂಗಳೂರು ಸಿಟಿ ಇನ್ಸಿಟ್ಯೂಟ್ ಚಾಮರಾಜಪೇಟೆಯ ಫೋರ್ಟ್ ಹೈಸ್ಕೂಲು ಆವರಣದಲ್ಲಿ ನಡೆಸುವ ಸಂಗೀತೋತ್ಸವ, ನರಸಿಂಹರಾಜ ಕಾಲೋನಿ ರಾಮಮಂದಿರ ನಡೆಸುವ ಸಂಗೀತ, ಶೇಷಾದ್ರಿಪುರಂ, ಶಂಕರಪುರಂಗಳಲ್ಲಿ ನಡೆಸುವ ಕಾರ್ಯಕ್ರಮಗಳು. ಕುರುಬರ ಸಂಘವು ಗಾಂಧಿನಗರದಲ್ಲಿದ್ದು ಬೆನ್‌ಸನ್ ಟೌನಿನ ಬೀರೇಶ್ವರ ದೇವಾಲಯ ಮತ್ತು ವಿದ್ಯಾರ್ಥಿನಿಲಯ, ಸಂಪಿಗೆ ಬೀರೇಶ್ವರ ದೇವಾಲಯ ಮತ್ತು ವಿದ್ಯಾರ್ಥಿನಿಲಯ ಮತ್ತು ರಾಣಾಸಿಂಗ್ ಪೇಟೆಯ ಬೀರೇಶ್ವರ ದೇವಾಲಯವನ್ನು ನಿರ್ವಹಿಸುತ್ತಿದೆ.

ಬೆಂಗಳೂರಿನಲ್ಲಿ ವಿವಿಧ ಧಾರ್ಮಿಕ ಪಂಥಗಳಿಗೆ ಸೇರಿದ ಮಠಗಳು, ಸಂಸ್ಥೆಗಳೂ ಇವೆ. ಆದಿ ಶಂಕರಾಚಾರ್ಯರ ಶಂಕರ ಮಠ, ಆವನಿ ಶಂಕರ ಮಠ, ವೆಸ್ಟ್ ಆಫ್ ಕಾರ್ಡ್ ರೋಡ್‌ನ ಕೂಡಲಿ ಶೃಂಗೇರಿ ಮಠ, ಕಾಶಿ ವಿಶ್ವೇಶ್ವರ ಶೃಂಗೇರಿ ಮಠ (ಶೇಷಾದ್ರಿ ಪುರಂ) ಮತ್ತು ಶಿವಗಂಗಾ ಮಠ (ಚಾಮರಾಜಪೇಟೆ); ಮಧ್ವಾಚಾರ್ಯರ ಮಾಧ್ವ ಮಠಗಳಾದ ಉಡುಪಿ ಕೃಷ್ಣಾಪುರದ ಮಠ (ಸಿಟಿ ಮಾರ್ಕೆಟ್ ಹಿಂದಿನ ಗುಂಡೋಪಂತ್ ರಸ್ತೆಯಲ್ಲಿ), ಕಾಣಿಯೂರು ಮಠ, ತ್ಯಾಗರಾಜನಗರದಲ್ಲಿ, ಪುತ್ತಿಗೆ ಮಠ (ಬಸವನ ಗುಡಿ ರಸ್ತೆ, ಎನ್. ಆರ್. ಕಾಲೋನಿ), ಸೋಸಲೆ ವ್ಯಾಸರಾಜರ ಮಠ (ಗಾಂಧೀ ಬಜಾರ್, ಬೆಣ್ಣೆ ಗೋವಿಂದಪ್ಪ ರಸ್ತೆ), ಉತ್ತರಾದಿ ಮಠ–ಟೀಕಾಚಾರ್ಯ, ಜಯತೀರ್ಥರ ಮಳಖೇಡ ಮಠ (ನ್ಯಾಷನಲ್ ಕಾಲೇಜ್ ಬಳಿ, ಬಸವನಗುಡಿ), ಶ್ರೀಪಾದರಾಜರ ಮುಳಬಾಗಿಲು ಮಠ (ಚಾಮರಾಜಪೇಟೆ ರಾಘವೇಂದ್ರ ಕಾಲೋನಿ), ಹವ್ಯಕರ ರಾಮಚಂದ್ರಾಪುರ ಮಠ (ಗಿರಿನಗರ); ಗೌಡ ಸಾರಸ್ವತರ ಚಿತ್ರಾಪುರ ಮಠ (ಮಲ್ಲೇಶ್ವರಂ) ಮತ್ತು ಪರ್ತಗಾಳಿ ಮಠ, ದ್ವಾರಕಾನಾಥ ಭವನ (ಕೆ. ಆರ್. ರಸ್ತೆ, ಬಸವನಗುಡಿ); ರಾಮಾನುಜಾಚಾರ್ಯರ ಶ್ರೀ ವೈಷ್ಣವ ಸಿದ್ಧಾಂತದ ಯತಿರಾಜ ಮಠ (ಮಲ್ಲೇಶ್ವರಂ), ರಾಮಾನುಜ ಶ್ರೀ ವೈಷ್ಣವ ಭವನ (ಶೇಷಾದ್ರಿ ರಸ್ತೆ), ಪರಕಾಲ ಮಠ (ಮೆಜೆಸ್ಟಿಕ್); ವೀರಶೈವ ಮಠಗಳಾದ ಚಿಕ್ಕಪೇಟೆಯ ಮಹಂತ ಮಠ (ಧಾರ್ಮಿಕ ಶಿಕ್ಷಣ ಕೇಂದ್ರ), ಸರ್ಪಭೂಷಣ ಮಠ (ಮೆಜೆಸ್ಟಿಕ್), ಬೇಲಿ ಮಠ (ಬಿನ್ನಿ ಮಿಲ್ ಬಳಿ), ಕೊಳದ ಮಠ (ಲಾಲ್ ಬಾಗ್, ಹತ್ತಿರ), ಜಂಗಮ ಮಠ (ಮೌಂಟ್ ಜಾಯ್ ರಸ್ತೆ), ಸಿದ್ಧಾರೂಢ ಆಶ್ರಮ, ಶಂಭಪ್ಪನ ಮಠ, ಕೊಂಡಜ್ಜಿ ಬಸಪ್ಪ ಸರ್ಕಲ್ (ಕಲಾಸಿಪಾಳ್ಯ); ಅನಂತಸಾಮಿ ಶರಣ ಸಮಾಜ (ರಾಜಾಜಿನಗರ); ಭದ್ರಗಿರಿ ಕೇಶವದಾಸ ದಾಸಾಶ್ರಮ (ರಾಜಕುಮಾರ್ ರಸ್ತೆ, ರಾಜಾಜಿನಗರ); ಇಸ್ಕಾನ್ ಸಂಸ್ಥೆ (ಯಶವಂತಪುರ); ಚಿನ್ಮಯಾನಂದ ಮಿಷನ್, ಕಾಳಿಂಗ ಮರ್ಧನ ದೇವಾಲಯ (ಇಂದಿರಾನಗರ); ರಾಮಕೃಷ್ಣ ಮಠ (ಬಸವನ ಗುಡಿ ರಸ್ತೆ); ಶ್ರದ್ಧಾನಂದ ಭವನ, ಆರ್ಯಸಮಾಜ (ವಿಶ್ವೇಶ್ವರ ಪುರಂ); ದೈವತತ್ವ ಸಮಾಜ (ಕೆ. ಆರ್. ರೋಡ್), ಜಯನಗರ 5ನೇ ಬ್ಲಾಕ್, (ಮಂತ್ರಾಲಯದ ಮೂಲ ಮಠದ ನಿರ್ವಹಣೆ) ನರಸಿಂಹರಾಜಾ ಕಾಲೋನಿ, ಮುಂತಾದೆಡೆಗಳಲ್ಲಿರುವ ರಾಘವೇಂದ್ರ ಮಠಗಳು ಧಾರ್ಮಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿವೆ. ಪೇಜಾವರದ ವಿಶ್ವೇಶತೀರ್ಥರು ಸ್ಥಾಪಿಸಿದ ಪೂರ್ಣಪ್ರಜ್ಞ ವಿದ್ಯಾಪೀಠ ದ್ವೈತ ಸಿದ್ಧಾಂತದ ಶಿಕ್ಷಣ ಮತ್ತು

ಸಂಶೋಧನಾ ಕೇಂದ್ರವಾಗಿದೆ. ಗಣಪತಿ ಸಚ್ಚಿದಾನಂದ ಆಶ್ರಮವು ಗಿರಿನಗರದಲ್ಲಿ, ಸತ್ಯಸಾಯಿಬಾಬಾರವರ ಕೇಂದ್ರ ವೈಟ್‌ಫೀಲ್ಡ್‌ನಲ್ಲಿ, ಶಿರಡಿಸಾಯಿಬಾಬಾ ಮಂದಿರ ತ್ಯಾಗರಾಜನಗರದಲ್ಲೂ ಇವೆ. ನಾಥ ಪಂಥವೂ ಬೆಂಗಳೂರಿನಲ್ಲಿ ಪ್ರಚಲಿತವಾಗಿದ್ದಿತು ಎಂಬುದಕ್ಕೆ ಸಾಕ್ಷಿಯಾಗಿ ಕಲಾಸಿಪಾಳ್ಯದಲ್ಲಿನ ಜಲಕಂಠೇಶ್ವರ ದೇವಾಲಯದಲ್ಲಿ ಮೀನಾನಾಥ, ಗೋರಕ್ಷನಾಥ ಮುಂತಾದ ನವನಾಥ ಸಿದ್ಧರ ಶಿಲ್ಪಗಳಿವೆ. ಅಲಸೂರಿನ ಸೋಮೇಶ್ವರ ದೇವಾಲಯದಲ್ಲಿಯೂ ನವನಾಥಸಿದ್ಧರ ಶಿಲ್ಪಗಳಿವೆ. ತೋಂಟದ ವೀರಭದ್ರ ದೇವಾಲಯದಲ್ಲಿ, ಮಾಮೂಲು ಪೇಟೆಯ ಮುನೀಶ್ವರ ದೇವಾಲಯದಲ್ಲಿ ಒಂದೆರಡು ನಾಥ ಶಿಲ್ಪಗಳಿವೆ. ಅಂತೆಯೇ ಬಸವನಗುಡಿಯ ಕಹಳೆ ಗೋಪುರದ ತಗ್ಗಿನಲ್ಲಿ ಕಾಪಾಲಿಕರ ನೆಲೆ 20ನೇ ಶತಮಾನದ ಮಧ್ಯದವರೆಗೆ ಇದ್ದಿತೆಂಬ ಪ್ರತೀತಿಯಿದೆ. ಕಲ್ಕಿ ಭಗವಾನನ ಅನುಯಾಯಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ಸಂಸ್ಥೆ ಹಾಗೂ ಮಾತೆ ಮಹಾದೇವಿ, ಆಂಡಾಳ ಮಠ, ಕೈಲಾಸ ಆಶ್ರಮ ಮುಂತಾದವೂ ಇತ್ತೀಚೆಗೆ ಬೆಂಗಳೂರಿಗೆ ಭಾರತದ ಬೇರೆ ಬೇರೆ ರಾಜ್ಯಗಳಿಂದ ವಲಸೆ ಬಂದಿವೆ. ರಾಜಸ್ಥಾನದಿಂದ, ಗುಜರಾತಿನಿಂದ ವಿಶೇಷವಾಗಿ ವ್ಯಾಪಾರಕ್ಕಾಗಿ ಜೈನರು ಬಂದು ಇಲ್ಲಿ ನೆಲೆಸಿದ್ದಾರೆ. ಆ ಕಾರಣ ಶ್ವೇತಾಂಬರ ಜೈನ ಪಂಥದ ಜೈನ ಮಂದಿರಗಳು, ಶ್ರಾವಕ ಸಂಘಗಳೂ, ದಾದಾವಾಡಿಗಳು, ಶಿಕ್ಷಣ ಕೇಂದ್ರಗಳು ಬೆಂಗಳೂರಿನಲ್ಲಿ ತಲೆಯೆತ್ತಿವೆ. ಚಿಕ್ಕಪೇಟೆಯ ಆದಿನಾಥ ಜಿನಮಂದಿರವೇ ಬೆಂಗಳೂರಿನಲ್ಲಿ 17ನೇ ಶತಮಾನದಲ್ಲಿ ಕಟ್ಟಲ್ಪಟ್ಟ ಪ್ರಾಚೀನ ಜೈನಮಂದಿರ. ಇದು ವಿಜಯಲಬ್ದಿ ಸೂರಿ ಎಂಬ ಜೈನಾಚಾರ್ಯರ ಹೆಸರಿನಲ್ಲಿ ಧಾರ್ಮಿಕ ಪಾಠಶಾಲೆಯನ್ನೂ ನಡೆಸುತ್ತಿದೆ. ಇದೇ ಜೈನಮಂದಿರದ ಧರ್ಮದರ್ಶಿ ಮಂಡಲಿಯು ವಿಶ್ವೇಶ್ವರ ಪುರದಲ್ಲಿ ಸಂಭವನಾಥ ಜೈನಮಂದಿರ ಮತ್ತು ಜೈನಧರ್ಮದ ಪಾಠಶಾಲೆಯನ್ನು ನಡೆಸುತ್ತಿದೆ. ರಾಜಾಜಿನಗರ, ಜಯನಗರ, ತ್ಯಾಗರಾಜನಗರ, ಬಸವನಗುಡಿ ಮುಂತಾದೆಡೆಗಳಲ್ಲಿ ಗುಜರಾತಿನ ಶೈಲಿಯಲ್ಲಿ ಅಮೃತ ಶಿಲೆಯನ್ನು ಬಳಸಿ ಸುಂದರ ಸೂಕ್ಷ್ಮ ಕೆತ್ತನೆಯುಳ್ಳ ಜೈನಮಂದಿರಗಳು ನಿರ್ಮಿತವಾಗಿವೆ. ನಿಯಮಿತವಾಗಿ ಬೆಳಿಗ್ಗೆ ಮತ್ತು ಸಾಯಂಕಾಲ ತೀರ್ಥಂಕರರಿಗೆ ಪೂಜೆ-ಮಂಗಳಾರತಿಗಳು ನಡೆಯುತ್ತವೆ. ಜೈನ ಆಚಾರ್ಯ ಮಂಡಲಿ ಶ್ರಾವಕರಿಗಾಗಿ ಧಾರ್ಮಿಕ ಪ್ರವಚನಗಳನ್ನು ನಡೆಸುತ್ತದೆ. ಮುನಿಗಳು, ಕಂತಿಯರು (ಆರ್ಯಿಕೆ)ಯರು ಉತ್ತರ ಭಾರತದಿಂದ ಚಾತುರ್ಮಾಸವನ್ನಾಚರಿಸಲು ಇಲ್ಲಿಗೆ ಬರುತ್ತಾರೆ. ಆಗ ವಿದಶ್ಚರಣ, ದೀಕ್ಷಾ ಸಮಾರಂಭಗಳೂ ಜರುಗುತ್ತವೆ. ಮಹಾವೀರ ಜಯಂತಿ, ಶ್ರುತ ಪಂಚಮಿ ಮುಂತಾದ ಪರ್ವ ದಿನಗಳಲ್ಲಿ ವಿಶೇಷ ಪೂಜೆ, ಅನ್ನ ಸಂತರ್ಪಣೆ ಮುಂತಾದವುಗಳನ್ನು ನಡೆಸುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ಜೈನ ಸಂಘಗಳು ಶುದ್ಧವಾದ ಕುಡಿಯುವ ನೀರಿನ ಅರವಟ್ಟಿಗೆಗಳನ್ನು ಸ್ಥಾಪಿಸಿ ಜನೋಪಕಾರ ಮಾಡುತ್ತಿವೆ. ಇತ್ತೀಚೆಗೆ ಜೈನ ಶಿಕ್ಷಣ ಸಂಸ್ಥೆಗಳ ನಿರ್ವಹಣೆಗಾಗಿ ಸ್ವತಂತ್ರ ಜೈನ ವಿಶ್ವವಿದ್ಯಾನಿಲಯವನ್ನೂ ಸ್ಥಾಪಿಸಲಾಗಿದೆ.

ಬೌದ್ಧ ಧರ್ಮ ಬೆಂಗಳೂರಿನಲ್ಲಿ ಜೈನಧರ್ಮದಷ್ಟು ವ್ಯಾಪಕವಾಗಿ ಕಂಡುಬರದಿದ್ದರೂ 20ನೇ ಶತಮಾನದ ಅರವತ್ತರ ದಶಕದಲ್ಲಿ ಗಾಂಧಿನಗರದಲ್ಲಿ ಸ್ಥಾಪಿಸಲ್ಪಟ್ಟ ಬುದ್ಧರಖಿತಥೇರಾರವರ ಮಹಾಬೋಧಿ ಸೊಸೈಟಿ ಬೌದ್ಧಧರ್ಮವನ್ನು ಸಾಕಷ್ಟು ಪುನರುಜ್ಜೀವನಗೊಳಿಸಿದೆ. ಅಲ್ಲಿ ಬೌದ್ಧ ಸನ್ಯಾಸಿಗಳಿಗೂ ಅರ್ಚಕರಿಗೂ ತರಬೇತು ನೀಡುವ ಕಾರ್ಯಕ್ರಮಗಳು ನಡೆಯುತ್ತವೆ ಮತ್ತು ನೇಪಾಳ, ಟಿಬೆಟ್ ಮೊದಲಾದ ಬೌದ್ಧ ದೇಶಗಳಿಂದ ಬರುವ ಬಾಲಕರಿಗೆ ಉಚಿತವಾಗಿ ವಸತಿ ಊಟೋಪಚಾರಗಳೊಂದಿಗೆ ದೊರಕುತ್ತಿವೆ. ಭಾನುವಾರಗಳಂದು ಸಂಘದ ಸಭಾಭವನದಲ್ಲಿರುವ ಬುದ್ಧನ ಮೂರ್ತಿಗೆ ಪೂಜೆ ಹಾಗೂ ವಿಶೇಷ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮಗಳು ನಡೆಯುತ್ತವೆ. ವಿದ್ಯಾರ್ಥಿಗಳು, ಅಧ್ಯಾಪಕ ಮತ್ತು ಸಿಬ್ಬಂದಿ ವರ್ಗ ದಿನಾಲೂ ಬೋಧಿವೃಕ್ಷ ಮತ್ತು ಸ್ತೂಪಗಳೆಡೆಯಲ್ಲಿ ಪ್ರಾರ್ಥನೆ, ಅಧ್ಯಯನ ಗೋಷ್ಠಿಗಳನ್ನು ನಡೆಸುತ್ತಾರೆ. ಅಲ್ಲಿರುವ ವೃಕ್ಷಗಳಿಗೆ, ಗಿಡಗಳಿಗೆ ನೀರೆರೆದು ಪೋಷಿಸುವುದಲ್ಲದೇ

ಸಭಾಭವನ, ಗ್ರಂಥಾಲಯ ಮುಂತಾದ ಕೆಲಸಗಳೆಲ್ಲವನ್ನೂ ವಿದ್ಯಾರ್ಥಿಗಳೇ ಮಾಡುತ್ತಾರೆ. ಕೆಲವು ಬೌದ್ಧ ಧರ್ಮದ ಗ್ರಂಥಗಳನ್ನೂ ಮಹಾಬೋಧಿ ಸಂಘವು ಪ್ರಕಟಿಸುತ್ತಿದೆ. 1907ರಷ್ಟು ಹಿಂದೆಯೇ ಫ್ರೇಜರ್ ಟೌನಿನ ಬುದ್ಧ ವಿಹಾರ ರಸ್ತೆಯಲ್ಲಿ ಬೆಂಗಳೂರು ಬೌದ್ಧ ಸಂಘ ಸ್ಥಾಪಿಸಲ್ಪಟ್ಟಿದ್ದಿತು.

ಅಲಸೂರಿನಲ್ಲಿ ಸಿಖ್ಖರ ಶ್ರೀ ಗುರುಸಿಂಗ್ ಸಭಾ ಗುರುದ್ವಾರವಿದೆ. ಇದು ಪಬ್ಲಿಕ್ ಶಾಲೆಯೊಂದನ್ನು ನಡೆಸುತ್ತಿದೆ. ಗಂಗೇನಹಳ್ಳಿ ಮತ್ತು ಓಕಳಿಪುರಂಗಳಲ್ಲಿ ಗುರುದ್ವಾರಗಳಿವೆ. ಯಶವಂತಪುರದಲ್ಲಿ ಬಲಬೀರ್ ಸಿಂಗ್ ಬಾವಾ ಮಕ್ಕಳಿಗೆ ಗುರುಮುಖೀ ಲಿಪಿಯಲ್ಲಿರುವ ಗ್ರಂಥ್ ಸಾಹಿಬ್‌ನ ಶಿಕ್ಷಣವನ್ನು ನೀಡುತ್ತಿದ್ದಾರೆ. ಅಲಸೂರಿನ ಗುರುದ್ವಾರದಲ್ಲಿ ವಿಶೇಷ ದಿನಗಳಂದು ಲಂಗರ್ (ಸಾರ್ವಜನಿಕ ಭೋಜನ) ಇರುತ್ತದೆ.

ಪರ್ಷಿಯಾದ ಜೊರಾಸ್ಟ್ರಿಯನ್ ಪಂಥವನ್ನು ಅನುಸರಿಸುವ ಪಾರ್ಸಿಗಳ ಅಗ್ನಿದೇವಾಲಯವು ಕ್ವೀನ್ಸ್ ರೋಡ್ ಪ್ರಾರಂಭದಲ್ಲಿ ರತನ್‌ಜಿ ಜಹಂಗೀರ್ ಹಾಲ್ ಬಳಿ ಇದೆ. ಇವರ ಶವಸಂಸ್ಕಾರ ಸ್ಥಳವು 'ಟವರ್ ಆಫ್ ಸೈಲೆನ್ಸ್' ಎಂಬ ಹೆಸರಿನಿಂದ ಹೆಬ್ಬಾಳದ ರಸ್ತೆಯ ಬದಿಯಲ್ಲಿದೆ.

ಬೆಂಗಳೂರಿಗೆ ಇಸ್ಲಾಂ ಧರ್ಮ ಮೊಘಲರ ಕಾಲದಲ್ಲಿ ಪ್ರವೇಶಿಸಿತು. ಅದರ ಪರಿಣಾಮವಾಗಿ ಅನೇಕ ಮಸೀದಿಗಳೂ, ದರ್ಗಾಗಳೂ, ಮುಸಲ್ಮಾನರ ಬಡಾವಣೆಗಳೂ ಏರ್ಪಟ್ಟವು. ಬೆಂಗಳೂರಿನಲ್ಲಿರುವ ಅತ್ಯಂತ ಪ್ರಾಚೀನ ಮಸೀದಿಯೆಂದರೆ ಸಿಟಿಮಾರ್ಕೆಟ್ ಬಳಿ ಇರುವ ದೊಡ್ಡದಾದ ಜಾಮಿಯಾ ಮಸೀದಿ. ಇದು 1687ರಲ್ಲಿ ನಿರ್ಮಿಸಲ್ಪಟ್ಟ ಕಟ್ಟಡ. ಇಲ್ಲಿ ಸುನ್ನಿ ಮುಸ್ಲಿಮರ ಶಿಕ್ಷಣಕ್ಕಾಗಿ ಜಾಮೆಉಲ್ ಉಲೂಂ ಎಂಬ ಹೆಸರಿನ ಸಂಸ್ಥೆ ಶಾಲಾ ಕಾಲೇಜನ್ನು ನಡೆಸುತ್ತಿದೆ. ಬೆಂಗಳೂರಿನಲ್ಲಿ ಸುಮಾರು 400 ಮಸೀದಿಗಳಿವೆಯೆಂದು ಅಂದಾಜು ಮಾಡಲಾಗಿದೆ. ಕುಂಬಾರ ಪೇಟೆಯಲ್ಲಿರುವ ಇಬ್ರಾಹಿಂ ಖಾನ್ ಸಾಹೇಬ್ ಮಸೀದಿಯನ್ನು ಹೈದರನ ಕೈಕೆಳಗೆ ಬೆಂಗಳೂರಿನ ಕಿಲ್ಲೇದಾರನಾಗಿದ್ದ ಇಬ್ರಾಹಿಂ ಖಾನ್ 1761ರಲ್ಲಿ ಕಟ್ಟಿಸಿದನೆಂದು ಹೇಳಲಾಗುತ್ತದೆ. ಸಿದ್ಧಯ್ಯ ರಸ್ತೆಯಲ್ಲಿ ಅಲ್ ಅಮೀನ್ ಕಾಲೇಜಿನ ಹಿಂದೆ ಇರುವ ಬಡೇ ಮಕಾನ್ ಮಸೀದಿಯೂ ಹೈದರಾಲಿಯ ಕಾಲದಲ್ಲಿಯೇ ನಿರ್ಮಿತಗೊಂಡಿತು. ಈ ಮಸೀದಿಯನ್ನು ಸೂಫಿ ಸಂತರಾದ ಸೈಯದ್ ತಾವು ಅಲ್ಲಾ ಖದ್ರಿ ಶುಕ್ತರಿ ಮತ್ತು ಸೈಯದ್ ನಬಿಶಾ ಶುಕ್ತರಿ ರಹಮತ್ ಉಲ್ಲಾ ಅತೀ ಬಿಜಾಪುರದಿಂದ ಬೆಂಗಳೂರಿಗೆ ಬಂದು ನೆಲೆಸಿದಾಗ ಕಟ್ಟಿಸಿದರು. ಈ ಮಸೀದಿಯ ಸಮೀಪದಲ್ಲೇ ಈ ಸೂಫಿ ಸಂತರ ದರ್ಗಾವನ್ನು ಹೈದರನೇ ನಿರ್ಮಿಸಿದನು. ಕಂಟೋನ್ಮೆಂಟಿನ ಓಲ್ಡ್ ಪೂರ್ ಹೌಸ್ ರೋಡಿನ ಜುಮ್ಮ ಮಸೀದಿಯನ್ನು ಅಬ್ದುಲ್ಲಾ ಖುದ್ದುಸ್ ಎಂಬುವನು ಕಟ್ಟಿಸಿದನು. ರಸೆಲ್ ಮಾರುಕಟ್ಟೆ ಹಿಂಭಾಗದಲ್ಲಿ ಮಸೀದ್-ಎ ಆಜಂ ಇದ್ದು ಶ್ರೀರಂಗಪಟ್ಟಣದ ಮಸೀದಿಯನ್ನು ಇದು ನೆನಪಿಸುತ್ತದೆ. ಬಸಪ್ಪ ಸರ್ಕಲ್‌ನಲ್ಲಿ ಇರುವ ದವೂದಿ ಬೋಹ್ರಾ ಷಿಯಾಗಳ ಮಸೀದಿಯಾಗಿದೆ. ಇಲ್ಲಿ ಷಿಯಾ ಮುಸಲ್ಮಾನ ಮಕ್ಕಳಿಗೆ ಧಾರ್ಮಿಕ ಶಿಕ್ಷಣ ನೀಡಲಾಗುತ್ತದೆ. ಇತರ ಮಸೀದಿಗಳೆಂದರೆ ಫ್ರೇಜರ್ ಟೌನ್‌ನಲ್ಲಿರುವ ಹಾಜಿ ಇಸ್ಮಾಯಿಲ್ ಸೇಟರಿಂದ ನಿರ್ಮಿತವಾದ ಮಸೀದಿ, ಕ್ವೀನ್ಸ್ ರಸ್ತೆಯಲ್ಲಿರುವ ಅಬ್ದುಲ್‌ಗಫೂರ್ ಮೋದಿ ಕಟ್ಟಿಸಿದ ಮೋದಿ ಮಸೀದಿ, ಲಬ್ಬೆ (ಮಲಯಾಳಿ ಮುಸ್ಲಿಮರು) ಮಸೀದಿ, ಕಾಡುಗೊಂಡನಹಳ್ಳಿಯ ಅರಾಬಿಕ್ ಕಾಲೇಜ್ ದರ್-ಉಲ್-ಉಲೂಂ ಸಬೀಲುರ್ ರಶದ್ ಮಸೀದಿ, ಹೊಸೂರು ರಸ್ತೆಯ ಜಾನ್‌ಸನ್ ಮಾರುಕಟ್ಟೆಯ ಬಳಿ ಇರುವ ಷಿಯಾಗಳ ಮಸೀದಿ (ಸರ್ ಮಿರ್ಜಾ ಇಸ್ಮಾಯಿಲ್‌ರ ಕುಟುಂಬ ಇದರ ಬೆಳವಣಿಗೆಯಲ್ಲಿ ಭಾಗವಹಿಸಿದೆ), ಬಸವನಗುಡಿಯ ಖಾಜಿ ರಸ್ತೆ (ಮೊಹಮಡನ್ ಬ್ಲಾಕ್) ಯಲ್ಲಿರುವ ಜುಮ್ಮಾ ಮಸೀದಿ, ಜನಜೀವನರಾಮ್‌ನಗರ (ಗೋರಿಪಾಳ್ಯ)ದಲ್ಲಿರುವ ಜಾಮಿಯಾ ಮಸೀದಿ, ಹೊಸಹಳ್ಳಿ ರಸ್ತೆಯ ಶಫೀ ಮಸೀದಿ, ಪಾದರಾಯನಪುರದಲ್ಲಿರುವ ರಹಮಾನಿಯಾ ಮಸೀದಿ, ಶಿವಾಜಿನಗರದಲ್ಲಿರುವ ಮಲಬಾರ್ ಮುಸ್ಲಿಂ ಅಸೋಸಿಯೇಷನ್ ನಿರ್ಮಿಸಿದ ಮಸೀದ್-ಎ-ನೂರ್, ಕೋಟೆ-ಲಾಲ್‌ಬಾಗ್ ರಸ್ತೆಯಲ್ಲಿರುವ ಮಸೀದಿ, ಇತ್ಯಾದಿ.

ಸೂಫಿ ಮುಸ್ಲಿಂ ಸಂತರ ಗೋರಿಗಳನ್ನು ಪೂಜಾ ಸ್ಥಳಗಳಾಗಿ ಹರಕೆ ಸಲ್ಲಿಸಲು ಕಟ್ಟಿದ ಕಟ್ಟಡಗಳೇ ದರ್ಗಾಗಳು. ಬೆಂಗಳೂರಿನಲ್ಲಿರುವ ಕೆಲವು ಪ್ರಮುಖ ದರ್ಗಾಗಳೆಂದರೆ ಕಬ್ಬನ್ ಪೇಟೆಯಲ್ಲಿರುವ ಹಜರತ್ ಹಮೀದ್ ಷಾ ಖಾದರಿ (ಟಿಪ್ಪುವಿನ ಸಮಕಾಲೀನ) ದರ್ಗಾ, ಹಳೆಯ ಬ್ರಾಡ್‌ವೇ ಹತ್ತಿರವಿರುವ ಹಜರತ್ ಸಯ್ಯದ್ ಷಾ ಮೊಹಿಯುದ್ದೀನ್ ಖಾದರಿ ದರ್ಗಾ. ಅದರ ಸಮೀಪವಿರುವ ಹಜರತ್ ಅಬ್ದುಲ್ ಗಫೂರ್ (ಚಾದರ್ ವಾಲೆ ಬಾಬಾ) ಮತ್ತು ಹಜರತ್ ಖಾದಿರ್ ಹುಸ್ಸೇನ್ ಭಾವಾರ ಸಮಾಧಿಗಳು, ಹಳೇ ತಾಲ್ಲೂಕು ಕಛೇರಿ ರಸ್ತೆಯಲ್ಲಿರುವ ಹಜರತ್ ತವಕ್ಕಲ್ ಮಸ್ತಾನ್ ಷಾ ದರ್ಗಾ (ಹೈದರನ ಸಮಕಾಲೀನ, ಹೈದರನು ಬೆಂಗಳೂರು ಕೋಟೆ ಕಟ್ಟಿದಾಗ ಗಾರೆ ಕೆಲಸದವನಾಗಿದ್ದವನು, ಕರಗ ಸಂದರ್ಶಿಸುವ ದರ್ಗಾ), ಅವೆನ್ಯೂ ರಸ್ತೆಯಲ್ಲಿ ಇರುವ ಹಜರತ್ ಸೈಯದ್ ಮಣಿಕ್‌ಷಾನ ದರ್ಗಾ, ರೋಯನ್ ಸರ್ಕಲ್‌ನಲ್ಲಿರುವ ಹಜರತ್ ಕಾಸ್‌ಕೆ ಪೀರ್ ಮತ್ತು ಶಮ್‌ಪೀಕ್ ಆಲಿ ಷಾನ ದರ್ಗಾಗಳು ಸಿಲ್ವರ್ ಜ್ಯೂಲಿ ಪಾರ್ಕ್ ರಸ್ತೆಯಲ್ಲಿರುವ ಹಜರತ್ ಸಯ್ಯದ್ ಪಾದ್‌ಷಾ ಶಹೀದ್ ಅಥವಾ ಮೀರ್‌ಬಹದ್ದೂರ್ ಷಾನ ದರ್ಗಾ, ಸಿಟಿ ಮಾರ್ಕೆಟ್ ಮುಂದೆ ಇರುವ ಮಹಿಳಾ ಸಂತಳಾದ ಹಜರತ್ ಸೈದಾನಬೀ ಮತ್ತು ಮೈಸೂರು ರಸ್ತೆಯಲ್ಲಿರುವ ಹಜರತ್ ನಜಿರ್ ಜೌಲಿಯಂ ಎಂಬ ಮಹಿಳಾ ಸಂತಳ ದರ್ಗಾ ಮುಂತಾದವು. ಈ ದರ್ಗಾಗಳಲ್ಲಿ ಸಂತರ ಆರಾಧನಾ ದಿನಗಳಂದು ಉರುಸ್ (ಉತ್ಸವ)ಗಳನ್ನು ನಡೆಸಲಾಗುತ್ತದೆ. ಮುಸ್ಲಿಮರೇ ಅಲ್ಲದೆ ಇತರ ಕೋಮಿನವರೂ ಈ ಉರುಸ್‌ಗಳಲ್ಲಿ ಪಾಲ್ಗೊಳ್ಳುತ್ತಾರೆ.

ರಂಜಾನ್, ಬಕ್ರೀದ್ ಮುಂತಾದ ಮುಸ್ಲಿಮರ ಹಬ್ಬದ ದಿನಗಳಂದು ಪ್ರಾರ್ಥನೆ, ಪ್ರವಚನ ಮತ್ತು ಸ್ನೇಹಮಿಲನಕ್ಕಾಗಿ ವಿಶಾಲವಾದ ಈದ್‌ಗಾಹ್ ಮೈದಾನಗಳನ್ನು ಅಲ್ಲಿ ಮೆಹ್ರಾಗೋಡೆಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ ಪ್ರಮುಖವಾದುವೆಂದರೆ ಚಾಮರಾಜ ಪೇಟೆಯಲ್ಲಿರುವ ಈದಗಾಹ್ ಮೈದಾನ, ಮಿಲ್ಲರ್ ರಸ್ತೆ (ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹಿಂದೆ) ಯಲ್ಲಿರುವ ಈದ್‌ಗಾಹ್ ಮೈದಾನ, ಮತ್ತು ಜಯನಗರ ನಾಲ್ಕನೇ ಬ್ಲಾಕ್ (ಬಸ್ ಸ್ಟೇಷನ್ ಪಕ್ಕ) ನಲ್ಲಿರುವ ಈದಗಾಹ್ ಮೈದಾನ.

ಬೆಂಗಳೂರಿನ ಕ್ರಿಶ್ಚಿಯನರಲ್ಲಿ ಕ್ಯಾಥೋಲಿಕರು, ಪ್ರಾಟೆಸ್ಟಂಟರೂ, ಸಿರಿಯನ್ ಕ್ರಿಶ್ಚಿಯನ್ನರೂ, ಮಾರ್ಥೋಮರೂ, ಸೆವೆನ್ತ್ ಡೇ ಅಡ್ವೆಂಟಿಸ್ಟ್ಸ್ ಮುಂತಾದ ಪಂಗಡದವರಿದ್ದಾರೆ. ಇವರು ಪ್ರಾರ್ಥನೆಗಾಗಿ, ಧಾರ್ಮಿಕ ಸಂಸ್ಕಾರಗಳಿಗಾಗಿ ಹಾಗೂ ಶಿಕ್ಷಣಕ್ಕಾಗಿ ಚರ್ಚುಗಳನ್ನೂ, ಚಾಪೆಲ್, ಬೆಸಿಲಿಕಾ, ಸೆಮಿನರಿ, ಕೆಥೆಡ್ರಲ್ ಮತ್ತು ಶಾಲಾಕಾಲೇಜುಗಳನ್ನು ಸ್ಥಾಪಿಸಿದ್ದಾರೆ. ಬೆಂಗಳೂರು ನಗರದಲ್ಲಿ 100 ಚರ್ಚುಗಳೂ ಚಾಪೆಲ್‌ಗಳೂ ಇವೆಯೆಂದು ಹೇಳಲಾಗಿದೆ. ಬೆಂಗಳೂರಿನಲ್ಲಿ ಅತ್ಯಂತ ಪ್ರಾಚೀನ ಕ್ಯಾಥೋಲಿಕರ ಚರ್ಚ್ ಶಿವಾಜಿನಗರದಲ್ಲಿರುವ ಸೇಂಟ್ ಮೇರಿ ಬೆಸಿಲಿಕಾ. ತಮಿಳುನಾಡಿನ ಧರ್ಮಪುರಿಯಿಂದ ಬಂದು ಇಲ್ಲಿ ನೆಲೆಸಿದ ಕ್ರಿಶ್ಚಿಯನ್ನರು 1674ರಲ್ಲಿ ಅಂದಿನ ಬ್ಲಾಕ್‌ಪಲ್ಲಿಯಲ್ಲಿ 'ಕನ್ನಿಕಾಮಾತಾ ದೇವಸ್ಥಾನ' ಎಂಬ ಹೆಸರಿನಲ್ಲಿ ಗೋಥಿಕ್ ಶೈಲಿಯಲ್ಲಿ ನಿರ್ಮಿಸಿದರು. ಇಲ್ಲಿ 19ನೇ ಶತಮಾನದಲ್ಲಿ ಅಬ್ಬೆ ದುಬೋಯ್ ಎಂಬ ಫ್ರೆಂಚ್ ಪಾದ್ರಿಯು ಕೆಲವು ಕಾಲ ತಂಗಿದ್ದನು. ಪ್ರತೀ ಸೆಪ್ಟೆಂಬರ್ ತಿಂಗಳಲ್ಲಿ ಸೆಂಟ್ ಮೇರಿ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ನಡೆಸಲಾಗುತ್ತದೆ.

ಅತ್ಯಂತ ದೊಡ್ಡದಾದ ಕ್ಯಾಥೋಲಿಕ್ ಚರ್ಚ್–ಸೇಂಟ್ ಜಾನ್ ಹಿಲ್ ಪ್ರದೇಶದಲ್ಲಿ ಕಟ್ಟಿರುವ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕೆಥಿಡ್ರೆಲ್. ಇದನ್ನು ಫಾರಿನ್ ಮಿಷನ್ ಸೊಸೈಟಿ ಆಫ್ ಪ್ಯಾರಿಸ್‌ನ ರೆವರೆಂಡ್ ಚೆವಲಿಯರ್ ಎಂಬ ಪಾದ್ರಿ ರೋಮನ್ (ಯುರೋಪಿಯನ್) ರೆನೈಸಾನ್ಸ್ ಶೈಲಿಯಲ್ಲಿ 34000 ಚದರಡಿ ವಿಸ್ತೀರ್ಣದ ಜಾಗದಲ್ಲಿ ನಿರ್ಮಿಸಿದನು. ಚರ್ಚಿನೊಳಗೆ ಸೇಂಟ್ ಜೂಡ್, ಸೇಂಟ್ ತೆರೇಸ, ಸೇಂಟ್ ಆಂತೋನಿ, ಸೇಂಟ್ ಕ್ಸೇವಿಯರ್, ಸೇಂಟ್ ಲೂರ್ದೂಸ್, ಸೇಂಟ್ ಜೋಸೆಫ್ ಮತ್ತು ಹೋಲಿ ಮೇರಿಯವರೊಂದಿಗೆ ಸಂಭಾಷಿಸುತ್ತಿರುವ ಮಾನವ ಪ್ರಮಾಣದ ಮೂರ್ತಿಗಳನ್ನು ಇಡಲಾಗಿದೆ. ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆಯಲ್ಲಿರುವ

ಸೇಂಟ್ ಲುಕಾಸ್ ಚರ್ಚ್, ಮಾರ್ಕೆಟ್ ಬಳಿ ಬ್ರಿಯಾಂಡ್ ಸ್ಕ್ವೇರ್‌ನಲ್ಲಿರುವ ಸೇಂಟ್ ಜೋಸೆಫರ ಚರ್ಚ್, (ಮೇ ತಿಂಗಳಿನ ಎರಡನೇ ಭಾನುವಾರ ಇಲ್ಲಿ ವಾರ್ಷಿಕ ಉತ್ಸವವಿರುತ್ತದೆ), ಬ್ರಿಗೇಡ್ ರಸ್ತೆಯಲ್ಲಿರುವ ಸೇಂಟ್ ಪ್ಯಾಟ್ರಿಕ್ಸ್ ಚರ್ಚ್ (ಐರಿಶ್ ಚರ್ಚ್, ಶ್ರೀಮತಿ ಬೌರಿಂಗರ ಸಮಾಧಿ ಇಲ್ಲಿದೆ. ಫ್ರೆಂಚ್ ಇಂಡಾಲಜಿಸ್ಟ್ ರೆ. ಟ. ಬಾರ್ಡ್ ಇಲ್ಲಿ ಪ್ಯಾರಿಷ್ ಪ್ರೀಸ್ಟ್ ಆಗಿದ್ದರು). ರಿಚ್ಮಂಡ್ ರಸ್ತೆಯಲ್ಲಿರುವ ಸೇಕ್ರೆಡ್ ಹಾರ್ಟ್ಸ್ ಚರ್ಚ್ ಲ್ಯಾಟಿನ್ ಕ್ರಾಸ್‌ನ ಆಕಾರದಲ್ಲಿದ್ದು ಒಳಗಡೆ ಸೇಂಟ್ ಮೈಕೇಲ್, ಸೇಂಟ್ ಕ್ಸೇವಿಯರ್, ಸೇಂಟ್ ಆಂತೋನಿಯ ಪ್ರತಿಮೆಗಳೂ ಹೊರಗಡೆ ಸೇಂಟ್ ಜೋಸೆಫನ ಪ್ರತಿಮೆಯೂ ಇವೆ. ಫ್ರೇಜರ್ ಟೌನ್‌ನಲ್ಲಿ ಹೋಲಿ ಘೋಸ್ಟ್ ಚರ್ಚನ್ನು ರೋಮನ್ ರಿಡೆಮ್ಟನಿಸ್ಟ್ಸ್ ಆರ್ಡರ್ 1953ರಲ್ಲಿ ನಿರ್ಮಿಸಿತು. ಇದೂ ಲ್ಯಾಟಿನ್ ಕ್ರಾಸಿನ ವಿನ್ಯಾಸದಲ್ಲಿದೆ. ಸೇಂಟ್ ಮೇರಿಟೌನ್‌ನಲ್ಲಿ ಡೈಯೋಸಿಯನ್ ಆರ್ಡರ್ ಆಫ್ ಪ್ರೀಸ್ಟ್ಸ್ (ರೋಂ) ನಿರ್ಮಿಸಿದ ಅಸೆನ್ಷನ್ ಚರ್ಚ್ ಭಾರತೀಯ ಶೈಲಿಯಲ್ಲಿದೆ. ಇದರ ಸಮೀಪದಲ್ಲಿ ನ್ಯಾಷನಲ್ ಬಿಬ್ಲಿಕಲ್, ಕಟೆಕೆಟಿಕಲ್ ಅಂಡ್ ಲಿಟರ್‌ಜಿಕಲ್ ಸೆಂಟರ್, ಚತುರ್ಮುಖ ದೇವಸ್ಥಾನದ ಮಾದರಿಯಲ್ಲಿರುವ ಸಚ್ಚಿದಾನಂದ ಚಾಪಲ್, ಹೊಸೂರು ರಸ್ತೆಯ ಕೇರಳದ ಚೇತಿಪುಳ ಮೂಲದ ಧರ್ಮಾರಾಮ್ ಕಾಲೇಜಿನ ಪ್ರಾಂಗಣದ ಹೊಸ ವಿನ್ಯಾಸದ ಚರ್ಚ್, ಮಲ್ಲೇಶ್ವರಂನ ಕ್ರೈಸ್ಟ್ ದಿ ಕಿಂಗ್ ಚರ್ಚ್, ಜಯನಗರದ ಕ್ರಿಸ್ತ ಪ್ರಭಾಲಯ, ಮರ್ಫಿ ಟೌನಿನ ಗುಡ್ ಷೆಪರ್ಡ್ಸ್ ಚರ್ಚ್, ಕನ್ಸೆಪ್ಷನ್ ಚರ್ಚ್, ಅಲಸೂರಿನ ಅವರ್ ಲೇಡಿ ಆಫ್ ಲೂರ್ದೆಸ್ ಚರ್ಚ್, ಹೊಸೂರು ರಸ್ತೆಯ ಇನ್‌ಫೆಂಟ್ ಜೀಸಸ್ ಚರ್ಚ್ ಮುಂತಾದುವು ಹೆಸರಿಸಬೇಕಾದವು.

ಪ್ರಾಟೆಸ್ಟೆಂಟ್ ಕ್ರಿಶ್ಚಿಯನ್ನರ 35 ಚರ್ಚುಗಳು ಬೆಂಗಳೂರಿನಲ್ಲಿವೆ. ಅವುಗಳಲ್ಲಿ ಪ್ರಮುಖವಾದುದೆಂದರೆ ಮಹಾತ್ಮಾ ಗಾಂಧಿ ರಸ್ತೆಯ ಸೇಂಟ್ ಮಾರ್ಕ್ಸ್ ಕೆಥೆಡ್ರಲ್. ಇದು ಮೊಟ್ಟ ಮೊದಲ ಆಂಗ್ಲಿಕನ್ ಚರ್ಚ್, 1808–12ರ ನಡುವೆ ಕಟ್ಟಲ್ಪಟ್ಟಿತು. 1947ರಲ್ಲಿ ಚರ್ಚ್ ಆಫ್ ಸೌತ್ ಇಂಡಿಯಾ ಅಸ್ತಿತ್ವಕ್ಕೆ ಬಂದ ನಂತರ ಇದು ಬಿಷಪ್‌ನ ಕೇಂದ್ರಸ್ಥಾನವಾಗಿದೆ. ಮಹಾತ್ಮಾ ಗಾಂಧೀ ರಸ್ತೆಯ ದಿ ಹೋಲಿ ಟ್ರಿನಿಟಿ ಚರ್ಚ್ ಆಂಗ್ಲಿಕನ್ ಚರ್ಚ್‌ನ ಅಧಿಕೃತ ಚರ್ಚ್ ಆಗಿದ್ದಿತು. 1851ರಿಂದ ಕಬ್ಬನ್ ರಸ್ತೆಯಲ್ಲಿ ಸ್ಕಾಟಿಷ್ ಸೈನಿಕರಿಗಾಗಿ ನಿರ್ಮಿಸಲ್ಪಟ್ಟ ಸೇಂಟ್ ಆಂಡ್ರೂಸ್ ಚರ್ಚ್ ಇದೆ. ಪೇರೇಡ್ ಗ್ರೌಂಡ್ಸ್‌ನ ಪೂರ್ವಕ್ಕೆ ದಿ ಈಸ್ಟರ್ನ್ ಪೆರೇಡ್ ಚರ್ಚ್ ಇದೆ. ಇದನ್ನು ವೆಸ್ಲೆಯನ್ ಮೆಥಾಡಿಸ್ಟ್ ಮಿಷನರಿ ಸೊಸೈಟಿಯು 1862ರಲ್ಲಿ ನಿರ್ಮಿಸಿತು. ಇದರೊಳಗೆ ಆಲ್ಫಾ (ಸೃಷ್ಟಿ) ಒಮೇಗಾ (ಲಯ) ಮತ್ತು ಹೋಲಿ ಘೋಸ್ಟ್‌ನ ಸಂಕೇತಗಳಿವೆ. ಬೆಂಗಳೂರು ನಗರ ಮಹಾಪಾಲಿಕೆಯ ಎದುರಿನಲ್ಲಿರುವ ಹಡ್ಸನ್ ಮೆಮೋರಿಯಲ್ ಚರ್ಚ್ ಖ್ಯಾತ ಮಿಷನರಿ ಮತ್ತು ಶಿಕ್ಷಣತಜ್ಞ ಜೋಷುವಾ ಹಡ್ಸನ್ ಹೆಸರಿನಲ್ಲಿ 1904ರಲ್ಲಿ ನಿರ್ಮಿತಗೊಂಡಿದೆ. ಇಲ್ಲಿ ಗೋಥಿಕ್ ಮತ್ತು ಕ್ಲಾಸಿಕಲ್ ಕಲಾಶೈಲಿಗಳ ಸುಂದರ ಸಮ್ಮಿಳನವನ್ನು ಕಾಣಬಹುದಾಗಿದೆ. ಅವೆನ್ಯೂ ರಸ್ತೆಯಲ್ಲಿರುವ ರೈಸ್ ಮೆಮೋರಿಯಲ್ ಚರ್ಚ್ ಬೆಂಜಮಿನ್ ರೈಸರ ಸ್ಮಾರಕವಾಗಿದೆ. ಕಮಿಸ್ಸೇರಿಯಟ್ ರಸ್ತೆಯಲ್ಲಿರುವ ಮಾರ್ಥೋಮಾ ಚರ್ಚ್, ಜಾನ್ಸನ್ ಮಾರುಕಟ್ಟೆ ಹಿಂಭಾಗದ ದಿ ಸಿರಿಯನ್ ಚರ್ಚ್ ಮತ್ತು ಕೋಲ್ಸ್ ರಸ್ತೆಯ ಸೆವೆನ್ತ್ ಡೇ ಅಡ್ವೆಂಟಿಸ್ಟ್ಸ್ ಚರ್ಚ್. ಮಿಲ್ಲರ್ ರಸ್ತೆಯ ಥಿಯಲಾಜಿಕಲ್ ಕಾಲೇಜು, ಕ್ರಿಶ್ಚಿಯನ್ ಧಾರ್ಮಿಕ ಶಿಕ್ಷಣವನ್ನು ನೀಡಿ ಪ್ರಾಟೆಸ್ಟೆಂಟ್ ಕ್ರೈಸ್ತ ಧರ್ಮದ ಪ್ರಚಾರಕರನ್ನು ತಯಾರಿಸಿ ಕಳುಹಿಸಿಕೊಡುತ್ತದೆ.

ಬೆಂಗಳೂರು ನಗರದ ದೇವತೆ ಅಣ್ಣಮ್ಮದೇವಿ. ಅಣ್ಣಮ್ಮನ ದೇವಾಲಯವು ಮೆಜೆಸ್ಟಿಕ್ ಪ್ರದೇಶದ ಸುಬೇದಾರ ಛತ್ರಂ ರಸ್ತೆಯಲ್ಲಿದೆ. ಇಲ್ಲಿ ಸಪ್ತಮಾತೃಕೆಯರ ಶಿಲಾರೂಪದ 2 ಗುಂಡುಗಳಿವೆ. ಸಿಡುಬು ಅಥವಾ ದೇವಿ ಉಪದ್ರವ ಉಂಟಾದಾಗ ಎಲ್ಲ ಕೋಮಿನ ಜನರೂ ಈ ದೇವಾಲಯದಲ್ಲಿ ದೇವಿಗೆ ಮೊಸರನ್ನು ತಂಪೆಂದು ಎರೆಯುತ್ತಾರೆ. ಉಪ್ಪು, ಮೆಣಸುಗಳನ್ನು ಎರೆಯುತ್ತಾರೆ. ಹೂವು ಮತ್ತು ಬೇವಿನ ಸೊಪ್ಪಿನ ಪೂಜೆಯೂ

ನಡೆಯುತ್ತದೆ. ನಗರದ ನಾನಾ ಕಡೆಗಳಲ್ಲಿ ಫಾಲ್ಗುಣ ಮಾಸದಲ್ಲಿ ಅಣ್ಣಮ್ಮ ದೇವಿಯ ರಥೋತ್ಸವ, ಮೆರವಣಿಗೆ, ಅನ್ನಸಂತರ್ಪಣೆಗಳನ್ನು ಅಣ್ಣಮ್ಮ ದೇವಿಯ ಸಂಘಗಳು ನಡೆಸಿಕೊಂಡು ಬರುತ್ತಿವೆ.

ಬೆಂಗಳೂರಿನಲ್ಲಿ ಪ್ರಸಿದ್ಧ ಶಕ್ತಿ ಪರಿಷೆಯಾದ 'ಕರಗದ' ಉತ್ಸವವು 'ತಿಗಳ' ರಿಂದ ನಡೆಸಲ್ಪಡುತ್ತದೆ. ರಾಜ್ಯದ ಮತ್ತು ದೇಶದ ನಾನಾ ಭಾಗಗಳಿಂದ ಚೈತ್ರಮಾಸದ ಹುಣ್ಣಿಮೆಯಂದು ಮಧ್ಯರಾತ್ರಿಯಲ್ಲಿ ನಡೆಯುವ ಧರ್ಮರಾಯನ ಕರಗದ ಉತ್ಸವಕ್ಕೆ ಸಾವಿರಾರು ಸಂಖ್ಯೆಯಲ್ಲಿ ಜನರು ನೆರೆಯುತ್ತಾರೆ. ಕರಗದ ಉತ್ಸವವು ಚೈತ್ರ ಹುಣ್ಣಿಮೆಗೆ 9 ದಿನ ಮೊದಲು ಧ್ವಜಾರೋಹಣದೊಂದಿಗೆ ಪ್ರಾರಂಭವಾಗುತ್ತದೆ. ಅಂದು ಧರ್ಮರಾಯ ದೇವಸ್ಥಾನದ ಪೂಜಾರಿ, ಗಣಾಚಾರಿ, ಗಂಟೆ ಪೂಜಾರಿ, ಕರಗವನ್ನು ಹೊರುವವರು, ಉತ್ಸವದ ಯಶಸ್ವಿಗಾಗಿ ಧ್ವಜಸ್ತಂಭಕ್ಕೆ ಕಂಕಣ ಕಟ್ಟಿ ತಾವೂ ಕಂಕಣ ಧರಿಸುತ್ತಾರೆ. ಅಂದಿನಿಂದ ಕರಗದ ಅಂಗವಾಗಿ ನಡೆಸುವ ಪುಣ್ಯಸ್ನಾನಗಳು, ತಂಬಿಟ್ಟಿನ ದೀಪಾರತಿಗಳು, ಹಸಿಕರಗ, ಪೊಂಗಲು ಸೇವೆ, ಪೇಟೆ ಕರಗ, ಮೆರವಣಿಗೆ, ವಸಂತೋತ್ಸವ ಮತ್ತು ಗಾವು ಮತ್ತು ಧ್ವಜದ ಆರೋಹಣ ಕಾರ್ಯಕ್ರಮಗಳು ಕ್ರಮಬದ್ಧವಾಗಿ ನಡೆಯುತ್ತವೆ. ದೇವಸ್ಥಾನದ ದಕ್ಷಿಣ ಭಾಗದಲ್ಲಿರುವ ಜರಗನಹಳ್ಳಿಯ ತಿಗಳರು ವರ್ಷವಿಡೀ ಹಿಂದಿನ ವರ್ಷವೇ ಆರಿಸಿ ಗುರ್ತಿಸಲ್ಪಟ್ಟಿರುವ ಬಿದಿರನ್ನು ಕಾಡಿನಿಂದ ಕಡಿದು ತಂದು ವರ್ಷವಿಡೀ ಪೂಜೆ ಮಾಡಿ ಧ್ವಜಾರೋಹಣ ದಿನದಂದು ದೇವಸ್ಥಾನದ ಉತ್ಸವ ಮೂರ್ತಿಗಳನ್ನು (ದ್ರೌಪದಿ(ಕರಗ)ಯ ಅಂಗರಕ್ಷಕ)ನ ಮನೆಯವರು ಧ್ವಜದಂಡವನ್ನು ಸಿದ್ಧಪಡಿಸಿ ಅದಕ್ಕೆ ಹಳದಿ ಬಣ್ಣದ ತ್ರಿಕೋಣಾಕಾರದ ಧ್ವಜವನ್ನೇರಿಸಿ ಪೂಜಾ ಸಾಮಗ್ರಿಗಳೊಂದಿಗೆ ಧ್ವಜವನ್ನು ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತರುತ್ತಾರೆ. ಇಲ್ಲಿಂದ ಕರಗದ ಉತ್ಸವ ಪ್ರಾರಂಭವಾಗುತ್ತದೆ. ನಂತರ ವಹ್ನಿಕುಲಕ್ಷತ್ರಿಯ ತಿಗಳರು ತಮ್ಮ ಮನೆಗಳನ್ನು ಶುದ್ಧಿಗೊಳಿಸಿ ಹೊಸ ಮಡಕೆ ಅಥವಾ ಹೊಸ ಪಾತ್ರೆಯಲ್ಲಿ ತಮ್ಮ ಮನೆಯಲ್ಲಿಯೇ ಸಿದ್ಧಪಡಿಸಿದ ಶಾಖಾಹಾರವನ್ನು ಹಸಿರು ಎಲೆ ಮೇಲೆ ಬಡಿಸಿಕೊಂಡು ಊಟಮಾಡುವರು. ಧೂಮಪಾನ ಮದ್ಯಪಾನ ಇತ್ಯಾದಿಗಳು ವರ್ಜ್ಯ. ಕರಗ ಶಕ್ತ್ಯೋತ್ಸವದಲ್ಲಿ ಪಾಲ್ಗೊಳ್ಳುವ ವೀರ ಕತ್ತಿಯ ಕುಮಾರರು, ಗಣಾಚಾರಿ, ಗಂಟೆ ಪೂಜಾರಿ, ಪೂಜಾರಿ ಒಂಭತ್ತು ದಿನಗಳಲ್ಲಿ ಒಂಭತ್ತು ಕೊಳಗಳಲ್ಲಿ (ಕೆರೆ) ಮಿಂದು 9 ಕಡೆ ದೇವಸ್ಥಾನಗಳಲ್ಲಿ ಪೂಜಾದಿ ಕೈಂಕರ್ಯ ಮುಗಿಸಿ ದೇವಸ್ಥಾನದಲ್ಲಿ ಮಂಗಳಾರತಿ ಆದ ನಂತರ ಮನೆಗೆ ತೆರಳಿ ಊಟ ಮಾಡುವ ಕ್ರಮ ಇದೆ. ಧ್ವಜಾರೋಹಣ ದಿನದಿಂದ 9ನೆಯ ದಿನ ಮಾವಳ್ಳಿ, ಸಿದ್ಧಾಪುರದಲ್ಲಿರುವ ತಿಗಳ ಕುಲಬಾಂಧವರ ಮನೆಗಳಿಗೆ ತ್ರಿಶೂಲಧಾರಿಗಳಾದ ಸೇವಾಕರ್ತರು ಪೋತರಾಜನ ವಿಗ್ರಹವನ್ನು ಉತ್ಸವದಲ್ಲಿ ಪಂಜಿನವರು ಮತ್ತು ವಾದ್ಯ ವೃಂದದೊಂದಿಗೆ ಮೆರವಣಿಗೆಯಲ್ಲಿ ಹೋಗಿ ಪೂಜೆ ಸ್ವೀಕರಿಸಿ ದೇವಸ್ಥಾನಕ್ಕೆ ಹಿಂದಿರುಗುತ್ತಾರೆ. ಈ ಜನಾಂಗದ ಮಹಿಳೆಯರು ಅಕ್ಕಿ, ಬೆಲ್ಲಗಳಿಂದ ತಂಬಿಟ್ಟು ತಯಾರಿಸಿ ಅಂದವಾದ ಪಾತ್ರೆಗಳಲ್ಲಿಟ್ಟು, ಅದನ್ನು ವಿವಿಧ ಬಣ್ಣದ ಹೂಗಳಿಂದ ಸಿಂಗರಿಸಿ ಅದರೊಳಗೆ ತುಪ್ಪದ ದೀಪ ಹಚ್ಚಿ ತಲೆಯ ಮೇಲಿಟ್ಟುಕೊಂಡು ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತರುತ್ತಾರೆ. ಪೈಲ್ವಾನ್ ಅಣ್ಣಯ್ಯಪ್ಪನ ಗರಡಿ ಮತ್ತು ಪೈಲ್ವಾನ್ ಕುಂಜಣ್ಣನ ಗರಡಿಗಳಿಂದ ತರಬೇತು ಹೊಂದಿದ ಕುಸ್ತಿ ಪಟುಗಳು ದೇವಸ್ಥಾನಕ್ಕೆ ಬಂದು ಮಕ್ಕಳಿಂದ ರಾತ್ರಿಯಿಡೀ ಕತ್ತಿವರಸೆ, ಕೋಲುವರಸೆ, ಬೆಂಕಿಚೆಂಡಿನ ಪ್ರದರ್ಶನ, ಹಿಡಿತ, ಜಿಗಿತದ ಪ್ರದರ್ಶನ ನಡೆಸುತ್ತಾರೆ. ಏಳನೇ ದಿನದಂದು ಹಸಿಕರಗ ನಡೆಯುತ್ತದೆ. ಇದೊಂದು ಮಹತ್ವದ ದಿನ. ಸಂಪಂಗಿ ಕೆರೆಯ ಅಂಗಳದಲ್ಲಿ ಸ್ಥಳ ಶುದ್ಧಿ ಮಾಡಿ ಪೀಠಸ್ಥಾನದಲ್ಲಿ ಪೂಜಾದ್ರವ್ಯ ಪವಿತ್ರವಸ್ತುಗಳನ್ನಿರಿಸಿ ಕರಗವನ್ನು ಹೊರುವ ಪೂಜಾರಿಗೆ ಮಂಗಳ ದ್ರವ್ಯ ಸ್ನಾನ ಮಾಡಿಸುತ್ತಾರೆ, ಬಿಳಿ ಪೈಜಾಮ ಅಥವಾ ಕಚ್ಚೆ ಪಂಚೆ, ಸೊಂಟಕ್ಕೆ ಕೆಂಪುವಸ್ತ್ರ ಕಟ್ಟಿ ತಲೆಗೆ ಜರಿಯಂಚಿನ ಪೇಟ ಮತ್ತು ಹಣೆಯಲ್ಲಿ ಎರಡು ಬಿಳಿ ನಾಮ ಮಧ್ಯೆ ಕೆಂಪು ನಾಮ ಧರಿಸಿ, ಕೈಯಲ್ಲಿ ಹರಿತವಾದ ಖಡ್ಗ ಹಿಡಿದ ಕತ್ತಿಕುರಮಾರರು ಅರ್ಧಚಂದ್ರಾಕಾರವಾಗಿ ನಿಂತು ಕಣದ ಮಂಟಪದಲ್ಲಿ ಕೆಂಪುವಸ್ತ್ರ, ಆಭರಣಗಳಿಂದ ಅಲಂಕೃತವಾಗಿ ಸ್ಥಾಪಿಸಲ್ಪಟ್ಟ ಹಸಿ ಕರಗ ಹೊರುವ ಪೂಜಾರಿಯಿಂದ

ಪೂಜೆ ಮಾಡಿಸಿ ಶಕ್ತಿ ಆವಾಹನೆಯ ನಂತರ 'ಧಿಕ್ ಧೀ' ಎಂದು ಕೂಗುತ್ತಾ ತಮ್ಮ ಎದೆಗಳಿಗೆ ಖಡ್ಗದಿಂದ ಹೊಡೆದುಕೊಳ್ಳುತ್ತಾ ಅಲಗು ಸೇವೆ ಸಲ್ಲಿಸುವರು. ಪೀಠವನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿ ಗೋವಿಂದನ ನಾಮಾವಳಿಯೊಂದಿಗೆ ದೇವಿಯನ್ನು ಪ್ರಾರ್ಥಿಸಿ ಹಸಿಕರಗವನ್ನು ಪೂಜಾರಿಯು ಎಡಭಾಗದ ಕಂಕುಳಲ್ಲಿ ಇರಿಸಿಕೊಂಡು, ಕೈಯಲ್ಲಿ ಹರಿತವಾದ ಬಾಕು ಮತ್ತು ಮಂತ್ರದಂಡವನ್ನು ಹಿಡಿದು ಮೆರವಣಿಗೆ ಬರುವಾಗ ಮಾರ್ಗ ಮಧ್ಯೆ ಸಿಗುವ ಆಂಜನೇಯ, ಶ್ರೀರಾಮ ಮತ್ತು ಈಶ್ವರನ ದೇವಸ್ಥಾನಗಳಲ್ಲಿ ಮಂಗಳಾರತಿ ಸ್ವೀಕರಿಸಿ ದೇವಸ್ಥಾನಕ್ಕೆ ಬರುತ್ತಾನೆ. ಮೂರುಸಲ ಪೊಂಗಲು ತಯಾರಿಸಿ ನೈವೇದ್ಯಕ್ಕಿಟ್ಟು ಪ್ರಸಾದ ಸ್ವೀಕರಿಸಿ ರಾತ್ರಿಯಿಡೀ ದೇವಾಲಯದಲ್ಲಿ ಕಥಾ ಪಾರಾಯಣ ನಡೆಸಿ ಬೆಳಗಿನ ಜಾವ ಮನೆಗೆ ಹಿಂದಿರುಗುವರು. 9ನೇ ಹಾಗೂ ಕೊನೆಯ ದಿನ ಹಳದಿ ಬಣ್ಣದ ಸೀರೆ ಉಟ್ಟು ಪುಷ್ಪಾಭರಣ ಧರಿಸಿ ಕೈಯಲ್ಲಿ ಮಂತ್ರದಂಡ, ನಿಂಬೆಹಣ್ಣು ಚುಚ್ಚಿದ ಬಾಕುವನ್ನು ಹಿಡಿದು ಗಣಾಚಾರಿ, ಘಂಟೆ ಪೂಜಾರಿ ಮತ್ತು ವೀರಕುಮಾರರ ರಕ್ಷೆಯಲ್ಲಿ ಮಂಗಳವಾದ್ಯಗಳೊಡನೆ ಸಪ್ತಮಾತೃಕೆಯರಿರುವ 'ಏಳು ಸುತ್ತಿನ ಕೋಟೆ'ಗೆ ಪ್ರದಕ್ಷಿಣೆ ಮಾಡಿ ದೇವಸ್ಥಾನದಲ್ಲಿ ಆರತಿ ಸ್ವೀಕರಿಸಿ ಶ್ರೀ ಧರ್ಮರಾಯ ಸ್ವಾಮಿ ರಥಕ್ಕೆ ಮೂರು ಬಾರಿ ಪ್ರದಕ್ಷಿಣೆ ಹಾಕಿ ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ಬಂದು ಕತ್ತಿ ಕುಮಾರರು ಅಲಗು ಸೇವೆ ಮಾಡಿ. ಆರತಿ ಸ್ವೀಕರಿಸಿ ನಗರದ ಪ್ರಮುಖ ಬೀದಿಗಳಲ್ಲಿ ಹಾದು 9 ಬಾಗಿಲುಗಳಿಗೂ ದರ್ಶನ ನೀಡಿ ಮಧ್ಯೆ ಸಿಗುವ ಎಲ್ಲ ಪುರಾತನ ದೇವಾಲಯಗಳಲ್ಲಿ ಪೂಜೆ ಸ್ವೀಕರಿಸಿ ಮಾಮೂಲ್ ಪೇಟೆಯಲ್ಲಿರುವ ಸೂಫಿ ಸಂತ ಮಸ್ತಾನ್‌ಸಾಬಿಯ ದರ್ಗಾದೊಳಕ್ಕೆ ಹೋಗಿ ಮುಸ್ಲಿಂ ಬಾಂಧವರಿಂದಲೂ ಪೂಜೆಗೊಂಡು ಬೆಳಗಿನ ಜಾವದ ವೇಳೆಗೆ ಹಿಂದಿರುಗುತ್ತಾ ಭಕ್ತರ ಮನೆಗಳಿಗೂ ಹೋಗಿ ಪೂಜೆ ಸ್ವೀಕರಿಸಿ ದೇವಸ್ಥಾನಕ್ಕೆ ಮರಳುತ್ತಾರೆ. ಧರ್ಮರಾಯನ ರಥ ಮತ್ತು ಇತರ ದೇವತಾಮೂರ್ತಿಗಳು ಪಲ್ಲಕ್ಕಿಯಲ್ಲಿ ಕರಗದ ಹಿಂದೆ ಮೆರವಣಿಗೆಯಲ್ಲಿ ಹೋಗಿ ಮೂರು ಕಟ್ಟೆಯ ಚೌಕದಲ್ಲಿ ಸೇರಿ ಮೂರನೇ ದಿನ ಹಿಂದಿರುಗುತ್ತದೆ. ಅದೇ ದಿನ ರಾತ್ರಿ ನಾರಾಯಣ ಮತ್ತು ಬೆಳಗಿನ ಜಾವ ಪೋತರಾಜನನ್ನು ಅರ್ಚಿಸಿ ಅವನ ಪ್ರೀತ್ಯರ್ಥ ಹನ್ನೊಂದನೆಯ ದಿನ ರಾತ್ರಿ ಧ್ವಜದ ಅವರೋಹಣ ಮಾಡುತ್ತಾರೆ. ಕಂಕಣ ವಿಸರ್ಜನೆಯೊಂದಿಗೆ ಕರಗದ ಉತ್ಸವ ಪೂರ್ಣಗೊಳ್ಳುತ್ತದೆ. ಈ ಧರ್ಮರಾಯನ ಹೂ ಕರಗದ ಉತ್ಸವದ ನಂತರ ವೈಶಾಖ ಹುಣ್ಣಿಮೆಯಂದು ನಗರದ ಕಲಾಸಿಪಾಳ್ಯದಲ್ಲಿರುವ ದ್ರೌಪದಿ ದೇವಸ್ಥಾನದಿಂದ ದ್ರೌಪದಿ ಕರಗವು ನಡೆಯುತ್ತದೆ. ಈ ಕರಗದ ವಿಶೇಷವೆಂದರೆ ಕೊಂಡ ಹಾಯುವುದು. ಇದನ್ನು ಚಿಕ್ಕ ಕರಗವೆಂದು ಕರೆಯಲಾಗುತ್ತದೆ.

ಬೆಂಗಳೂರಿನಲ್ಲಿ ಇತರ ಧಾರ್ಮಿಕ ಜಾತ್ರೆ ಉತ್ಸವ ಪರಿಷೆಗಳೆಂದರೆ ದೊಡ್ಡ ಬಸವಣ್ಣನ ಗುಡಿಯಲ್ಲಿ ಕಾರ್ತೀಕ ಮಾಸದ ಕಡೆಯ ಮಂಗಳವಾರ ನಡೆಯುವ ಕಡಲೆಕಾಯಿ ಪರಿಷೆ. ನಗರದ ಸುತ್ತಮುತ್ತಲಿಂದ ಕಡಲೆ ಕಾಯಿಯನ್ನು ತಂದು ಬಸವಣ್ಣನಿಗೆ ನೈವೇದ್ಯ ಮಾಡಿ ಮಾರಲಾಗುತ್ತದೆ. ಕುಮಾರಸ್ವಾಮಿ ದೇವಾಲಯ (ನರಹರಿರಾಯರ ಗುಡ್ಡ)ದಲ್ಲಿ ಆಷಾಡ ಕೃತ್ತಿಕಾ ನಕ್ಷತ್ರದಲ್ಲಿ ನಡೆಯುವ 'ಹರೋಹರ' ಎಂದರೆ ಕಾವಡಿಗಳಲ್ಲಿ ಕಜ್ಜಾಯ ಮತ್ತು ಪೂಜಾವಸ್ತುಗಳನ್ನು ಹೊತ್ತು ಹಳದಿ ಅಥವಾ ಕೇಸರಿ ವಸ್ತ್ರಗಳನ್ನು ಧರಿಸಿ ಕಾಲ್ನಡಿಗೆಯಲ್ಲಿ ಕುಮಾರಸ್ವಾಮಿ ದೇವಾಲಯಕ್ಕೆ ಬಂದು ಹರಕೆ ಸಲ್ಲಿಸುವ ಒಂದು ಭಕ್ತಿ ಕಾರ್ಯಕ್ರಮ. ಸಾಮಾನ್ಯವಾಗಿ 'ಹರೋಹರ' ಕಾವಡಿ ಉತ್ಸವ ನಡೆಸುವ ಭಕ್ತರು ತಮಿಳರು.

ಪೌರ್ಣಮಿಗಳಂದು, ಭಾನುವಾರಗಳಂದು ವ್ಯಕ್ತಿಗಳು ಮನೆಗಳಲ್ಲಿ, ವಿವಾಹದ ಮರುದಿನ ನವದಂಪತಿಗಳಿಂದ ಮತ್ತು ಕೆಲವೊಮ್ಮೆ ಸಾಮೂಹಿಕವಾಗಿ ಸತ್ಯನಾರಾಯಣ ಪೂಜೆ, ವ್ರತಕಥಾ ಪ್ರವಚನ ನಡೆಸುವರು. ಹಬ್ಬಗಳಲ್ಲಿ, ವಿಶೇಷ ದಿನಗಳಲ್ಲಿ ದೇವತಾಪ್ರೀತ್ಯರ್ಥವಾಗಿ ಸಾಮಾಜಿಕರ ಹಿತಕ್ಕಾಗಿ ಮಳೆಬೆಳೆಗಾಗಿ ಆಚರಿಸಲ್ಪಡುವ ಸುದರ್ಶನ ಹೋಮ, ಪವಮಾನ ಹೋಮ, ನವಗ್ರಹ ಹೋಮ, ದುರ್ಗಾ ಪರಮೇಶ್ವರಿ, ಲಲಿತಾ ತ್ರಿಪುರಸುಂದರಿ,

ನರಸಿಂಹ, ಆಂಜನೇಯ ಚಕ್ರಪೂಜೆ, ಗಾಯತ್ರೀ ಯಜ್ಞ, ಗೃಹಪ್ರವೇಶ ಮಹೋತ್ಸವದಲ್ಲಿ ವಾಸ್ತು ಪುರುಷ ಹೋಮ, ಭೂತಬಲಿ, ಗೋಪ್ರವೇಶ ನಡೆಯುತ್ತವೆ. ಕಾಶಿ ರಾಮೇಶ್ವರ ತೀರ್ಥಯಾತ್ರೆ ಮುಗಿಸಿ ಬಂದ ನಂತರ ಮಾಡುವ 'ಕಾಶಿ–ಗಂಗಾ ಸಮಾರಾಧನೆ' ಇತ್ಯಾದಿ ಆಚರಣೆ ಸಹ ನಡೆಯುತ್ತಿರುತ್ತವೆ. ಡಿಸೆಂಬರ್–ಜನವರಿ ತಿಂಗಳಿನಲ್ಲಿ ದೀಕ್ಷೆ ಪಡೆದ ಅಯ್ಯಪ್ಪ ಅಥವಾ ಧರ್ಮಶಾಸ್ತನ ಭಕ್ತರು ನಡೆಸುವ ಭಜನೆ, ಸಮಾರಾಧನೆ ಕಾರ್ಯಕ್ರಮಗಳು ಸಹ ಗಮನಿಸಬೇಕಾದವು. ಸುಬ್ರಾಯ ಷಷ್ಠಿಯಂದು ವಿಶ್ವೇಶ್ವರಪುರದ ಸುಬ್ರಮಣ್ಯಸ್ವಾಮಿಯ ಬೆಳ್ಳಿರಥೋತ್ಸವ, ನರಸಿಂಹ ಜಯಂತಿ, ಹನುಮ ಜಯಂತಿ, ದತ್ತಾತ್ರೇಯ ಜಯಂತಿ, ರಾಮೋತ್ಸವ, ದಸರಾ, ಕಾರ್ತಿಕ ಮಾಸದ ದೀಪೋತ್ಸವ, ಇತ್ಯಾದಿ, ಬಹಳ ಜನಪ್ರಿಯ ಉತ್ಸವಗಳಾಗಿವೆ.

ಮುಸ್ಲಿಮರು ಮೊಹರಂ ಸಂದರ್ಭದಲ್ಲಿ 'ಬಾಬಯ್ಯನ ಜಲ್ದಿ' ಎಂದು ಹುಲಿವೇಷ ಹಾಕಿ, ಹಸ್ಸೇನ್ ಹುಸ್ಸೇನ್ ಬಾವ್ಸೇನ್ ಎಂದು ಕೂಗುತ್ತಾ ಮೆರವಣಿಗೆ ನಡೆಸುವರು. ಕ್ರಿಶ್ಚಿಯನರು ಡಿಸೆಂಬರ್‌ನಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಕ್ರಿಸ್‌ಮಸ್ ಮರದ ಶೃಂಗಾರ, ಸಾಂತಾಕ್ರಾಸ್‌ನ ಆಗಮನ, ಸತ್ಕಾರ ಕಿರೋಲ್ಸ್ ಹರಡುವಿಕೆ, ಕ್ರಿಸ್ತನ ಜನನದ ದೃಶ್ಯ ಪ್ರದರ್ಶನ (ಗೊಂಬೆ ಚಿತ್ರಗಳ ಮೂಲಕ) ಮುಂತಾದ ಕಾರ್ಯಕ್ರಮಗಳ ಮೂಲಕ ಪ್ರತಿ ವರ್ಷ ಒಂದು ವಾರದ ಕಾಲ ಆಚರಿಸುತ್ತಾರೆ.

ಕೆಲವು ಮನೆತನಗಳಲ್ಲಿ ಶುಭ ಸಮಾರಂಭಗಳಲ್ಲಿ ಧಾರ್ಮಿಕವಾಗಿ ಎಲ್ಲಮ್ಮನನ್ನು ಜೋಗಿತಿಯರ ಮೂಲಕ ಕರೆತರಿಸಿ ಪೂಜಿಸುವರು, ಮನೆತನದ ಕುಲವಂತ ಸ್ತ್ರೀಯ ಪ್ರತಿನಿಧಿಯಾಗಿ ಸಹದೇವಿ (ಮಾಸ್ತಿ) ಯನ್ನು ಪೂಜಿಸುವರು. ಗೊಂದಲಿಗರಿಂದ ಗೊಂದಲ ಹಾಕಿಸುವರು ಸಂತಾನಾಪೇಕ್ಷೆಯಾಗಿ ನಾಗಪ್ರತಿಷ್ಠೆ, ನಾಗಮಂಡಲವನ್ನು ಆಚರಿಸುವುದುಂಟು. ವಿವಾಹಾಪೇಕ್ಷಿಗಳು ಬಿಳಿ ಎಕ್ಕದ ಗಿಡದ ಪೂಜೆ, ಅರಳಿ ಮತ್ತು ಬೇವು ಮರಗಳಿಗೆ ಮದುವೆ ಮಾಡಿಸುವದು, ಶ್ರೀನಿವಾಸ ಕಲ್ಯಾಣ, ಗಿರಿಜಾ ಕಲ್ಯಾಣ ಮತ್ತು ಸೀತಾ ಕಲ್ಯಾಣದ ಉತ್ಸವವನ್ನು ಸಹ ನಡೆಸುತ್ತಾರೆ. ಇತ್ತೀಚೆಗೆ ಸಾಮೂಹಿಕ ಉಪನಯನ, ಸಾಮೂಹಿಕ ವಿವಾಹ, ಸಾಮೂಹಿಕ ಬೌದ್ಧ ಧರ್ಮ ದೀಕ್ಷೆ (ಬುದ್ಧ ಜಯಂತಿಯಂದು) ಯ ಸಮಾರಂಭಗಳೂ ನಡೆಯುತ್ತಿವೆ.

ಈ ಮೇಲಿನ ಕಥನದಿಂದ ತಿಳಿದುಬರುವುದೇನೆಂದರೆ ಬೆಂಗಳೂರು ಜಿಲ್ಲೆ ಇತಿಹಾಸದುದ್ದಕ್ಕೂ ಧಾರ್ಮಿಕವಾಗಿ ಕ್ರಿಯಾಶೀಲವಾಗಿದ್ದಿತು. ವಿಭಿನ್ನ ಧರ್ಮ, ಮತ, ಸಂಪ್ರದಾಯಗಳ ಮೂಸೆಯಾಗಿದ್ದಿತು. ಎಲ್ಲ ಕೋಮಿನ ಜನರೂ ಸಾಮಾನ್ಯವಾಗಿ ಪರಸ್ಪರ ಸಹಕಾರ, ಸೌಹಾರ್ದತೆ ಮತ್ತು ಸಮಾನ ಮನಸ್ಕರಾಗಿ ಸಹಬಾಳ್ವೆ ನಡೆಸುತ್ತ ಬಂದಿದ್ದಾರೆ. ಕೆಲವೊಮ್ಮೆ ರಾಜಕೀಯ ತಾರತಮ್ಯ, ದುರ್ವರ್ತನೆ ಮತ್ತು ಶೋಷಣೆಗೊಳಗಾದ ಕೋಮಿನ, ಪಂಥದ ಜನರು ಸಂಘರ್ಷವನ್ನು ನಡೆಸಿದ್ದಾರೆ. ಉದಾಹರಣೆಗೆ ಸುಲ್ತಾನ್ ಪೇಟೆಯ ಗಣೇಶನ ಗಲಾಟೆ, ಕ್ರಿಶ್ಚಿಯನ್ನರ ಮೇಲೆ ಅನ್ಯತ್ರ ನಡೆದ ಹಿಂಸಾಚಾರದ ವಿರುದ್ಧ ಪ್ರತಿಭಟನಾತ್ಮಕ ಗಲಭೆ ಇತ್ಯಾದಿ. ಆದರೆ ಇವೆಲ್ಲವೂ ತಾತ್ಕಾಲಿಕ ಮಾತ್ರ.

ಆಕರ ಗ್ರಂಥಗಳು

1. ಎ.ಕ.ಸಂಪುಟ.9 (ಬೆಂಗಳೂರು ಜಿಲ್ಲೆಯ ಶಾಸನಗಳು)
2. ಬೆಂಗಳೂರು ನಗರ ಜಿಲ್ಲಾ ಗೆಜೆಟಿಯರ್ – ಸಂ. ಡಾ. ಸೂರ್ಯನಾಥ ಕಾಮತ್
3. ಬೆಂಗಳೂರು ದರ್ಶನ ಸಂ.2– ಉದಯಬಾನು ಕಲಾಸಂಘದ ಪ್ರಕಟಣೆ
4. ಬೆಂಗಳೂರು ಟು ಬ್ಯಾಂಗಲೋರ್ – ಪ್ರೀ ಹಿಸ್ಟಾರಿಕ್ ಟೈಮ್ಸ್ ಟು ದಿ 18 ಸೆಂಚುರಿ; ಅಣ್ಣಾಸ್ವಾಮಿ.
5. ತಿಗಳ ಜನಾಂಗದ ಇತಿಹಾಸ ಮತ್ತು ಕರಗ ಶಕ್ತ್ಯೋತ್ಸವ – ಕೆ. ಲಕ್ಷ್ಮಣ

24. ಬೆಂಗಳೂರು ಪರಿಸರದ ಹಸ್ತಪ್ರತಿ ನೆಲೆಗಳು ಮತ್ತು ಲಿಪಿಕಾರರು

ಡಾ. ಎಫ್. ಬಿ. ಹಳ್ಳಿಕೇರಿ

ಕರ್ನಾಟಕದ ರಾಜಧಾನಿ ಕೇಂದ್ರವಾಗಿರುವ ಬೆಂಗಳೂರು ನಗರ ಮತ್ತು ಗ್ರಾಮೀಣ ಎಂದು ಎರಡು ಜಿಲ್ಲೆಗಳಾಗಿ ವಿಭಜನೆಗೊಂಡಿದೆ. ಆನೇಕಲ್, ಬೆಂಗಳೂರು ಉತ್ತರ, ದಕ್ಷಿಣ ಮತ್ತು ಪೂರ್ವ ತಾಲ್ಲೂಕುಗಳು ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟರೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ ತಾಲ್ಲೂಕುಗಳು ಬೆಂಗಳೂರು ಗ್ರಾಮೀಣ ಜಿಲ್ಲೆಯ ವ್ಯಾಪ್ತಿಗೆ ಬರುತ್ತವೆ. ಈ ಪರಿಸರದಲ್ಲಿ ಹಸ್ತಪ್ರತಿ ನೆಲೆಗಳು ಮತ್ತು ಲಿಪಿಕಾರರ ಕುರಿತು ಲಭ್ಯ ಆಕರಗಳ ನೆರವಿನಿಂದ ಕಂಡು ಬರುವ ವಿಷಯಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಅವಲೋಕಿಸಲಾಗಿದೆ.

ಹಸ್ತಪ್ರತಿ ನೆಲೆಗಳು

ಬೆಂಗಳೂರು ಕರ್ನಾಟಕದ ರಾಜಧಾನಿ, ಹೀಗಾಗಿ ಇಲ್ಲಿ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ಚಟುವಟಿಕೆಗಳು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿವೆ. ಇದಕ್ಕೆ ಇಲ್ಲಿ ಆಗಿಹೋದ ಕವಿಗಳು, ರಚನೆಗೊಂಡ ಕಾವ್ಯ ಪುರಾಣಗಳು ನಿದರ್ಶನವಾಗಿವೆ. ಆಧುನಿಕಪೂರ್ವ ಕನ್ನಡ ಸಾಹಿತ್ಯದ ಪ್ರಮುಖ ಆಕರ ಸಾಮಗ್ರಿಗಳಾದ ತಾಡೋಲೆ, ಕೋರಿಕಾಗದ ರೂಪದ ಹಸ್ತಪ್ರತಿಗಳು ಈ ಪರಿಸರದಲ್ಲಿ ಸಂಗ್ರಹಗೊಂಡಿವೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ, ಕನ್ನಡ ಸಾಹಿತ್ಯ ಪರಿಷತ್ತು, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬಸವ ಸಮಿತಿ ಮುಂತಾದ ಸರಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳು ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂರಕ್ಷಿಸಿಕೊಂಡು ಬರುತ್ತಿವೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರ: 1971ರಲ್ಲಿ ಸ್ಥಾಪಿತವಾದ ಈ ಭಂಡಾರದಲ್ಲಿ ಕನ್ನಡ ತೆಲುಗು ತಮಿಳು ಸಂಸ್ಕೃತ ಪ್ರಾಕೃತ ಹಿಂದಿ ಉರ್ದು ಭಾಷೆಗಳಿಗೆ ಸಂಬಂಧಿಸಿದಂತೆ ಅಂದಾಜು 2000 ಹಸ್ತಪ್ರತಿಗಳ ಸಂಗ್ರಹವಿದೆ. ಇಲ್ಲಿನ ಬಹುಭಾಗ ಹಸ್ತಪ್ರತಿಗಳು ಬಿ. ಶಿವಮೂರ್ತಿ ಶಾಸ್ತ್ರಿ ಅವರ ಸಂಗ್ರಹದಿಂದ ಬಂದವುಗಳಾಗಿವೆ.

ನಡೆದಾಡುವ ಹಸ್ತಪ್ರತಿ ಭಂಡಾರ ರೂಪು ತಳೆದಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಹಸ್ತಪ್ರತಿ ಭಂಡಾರದ ಪ್ರಯೋಜನವನ್ನು ನಾಡಿನ ಅನೇಕ ವಿದ್ವಾಂಸರು ಪಡೆದುಕೊಂಡು ಅನೇಕ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. 1982ರಲ್ಲಿ ಶಿವಣ್ಣನವರೇ ಒಂದು ವಿವರಣಾತ್ಮಕ ಸೂಚಿ ಸಂಪುಟವನ್ನು ಪ್ರಕಟಿಸಿದ್ದಾರೆ. ಕೆಂಭಾವಿ ಭೋಗಣ್ಣನ ಸಾಂಗತ್ಯ, ನಾಗಕುಮಾರ ಷಟ್ಪದಿ, ಗುರುಭಕ್ತನ ಕಥೆ ಇತ್ಯಾದಿ ಕೃತಿಗಳು ಇಲ್ಲಿನ ಹಸ್ತಪ್ರತಿಗಳ ನೆರವಿನಿಂದ ಎಸ್. ಶಿವಣ್ಣ, ಎಸ್. ವಿದ್ಯಾಶಂಕರ, ಹಂಪ ನಾಗರಾಜಯ್ಯ ಮೊದಲಾದ ವಿದ್ವಾಂಸರು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಆದರೆ ಈವರೆಗೆ ಇಲ್ಲಿ ವ್ಯವಸ್ಥಿತವಾದ ಸಂಪಾದನ ಕಾರ್ಯ ನಡೆದಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ಭಂಡಾರ: ಆಧುನಿಕ ನಾಡು ನುಡಿ ನಿರ್ಮಾಣಕ್ಕಾಗಿ ತಲೆಯೆತ್ತಿದ ಸಾರ್ವಜನಿಕ ಸಂಸ್ಥೆಗಳಲ್ಲಿ ಬಹುಮುಖ್ಯವಾದುದು. ಕನ್ನಡ ಸಾಹಿತ್ಯ ಪರಿಷತ್ತು. 1975ರಿಂದ ಈಚೆಗೆ 500ಕ್ಕೂ ಹೆಚ್ಚು ತಾಡೋಲೆ, ಕೋರಿಕಾಗದ ಹಾಗೂ ಕಡತರೂಪದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂರಕ್ಷಿಸುವ ಕಾರ್ಯಕ್ಕೆ

ಈ ಸಂಸ್ಥೆ ಮುಂದಾಗಿದೆ. ವಡ್ಡಾರಾಧನೆ, ರಾಮಚಂದ್ರಚರಿತ ಪುರಾಣ, ಭರತೇಶ ವೈಭವ, ಪ್ರಭುಲಿಂಗಲೀಲೆ, ಕುಮಾರವ್ಯಾಸ ಭಾರತ ಮುಂತಾದ ಹಸ್ತಪ್ರತಿಗಳು ಇಲ್ಲಿವೆ. ಪಂಪನ ಆದಿಪುರಾಣದ ಒಂದು ಹಸ್ತಪ್ರತಿಯಲ್ಲಿ ಆರು ಹೊಸ ಪದ್ಯಗಳಿರುವುದು ಈ ಭಂಡಾರದ ವಿಶೇಷವಾಗಿದೆ. 1995ರಲ್ಲಿ ಎಸ್. ಶಿವಣ್ಣ ಅವರು ಹಸ್ತಪ್ರತಿ ಸೂಚಿಯನ್ನು ಪ್ರಕಟಿಸಿದ್ದಾರೆ. ಇಲ್ಲಿರುವ ಅನೇಕ ಹಸ್ತಪ್ರತಿಗಳನ್ನು ಪರಿಷ್ಕರಣೆಗೆ ಬಳಸಿಕೊಳ್ಳಬೇಕಾದ ಅಗತ್ಯವಿದೆ.

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರ: ಸಾಹಿತ್ಯ ಸಂಸ್ಕೃತಿ ಪೋಷಣೆಗಾಗಿ ಸ್ಥಾಪಿತವಾದ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನದ ಬಹುಮುಖ್ಯ ಭಾಗವಾಗಿದೆ. ಹಸ್ತಪ್ರತಿ ಭಂಡಾರ. ಈ ಪ್ರತಿಷ್ಠಾನದ ಅಧ್ಯಕ್ಷರಾದ ಎಂ. ವಿ. ಸೀತಾರಾಮಯ್ಯನವರ ಆಸಕ್ತಿ ಕಾರಣವಾಗಿ 1500 ಕನ್ನಡ, ತಿಗಳಾರಿ, ಮೋಡಿ, ನಾಗರಿ, ತೆಲುಗು, ತಮಿಳು ಮತ್ತು ಸಂಸ್ಕೃತ ಲಿಪಿಯಲ್ಲಿರುವ ಹಸ್ತಪ್ರತಿಗಳು ಸಂಗ್ರಹಗೊಂಡಿವೆ. ಕುಮಾರವ್ಯಾಸ ಭಾರತ, ಶ್ರೀಮದ್ರಾಮಾಯಣ, ಸೂತ್ರರತ್ನಾಕರ, ಕೀರ್ತನೆಗಳು, ಶ್ರೀಕೃಷ್ಣದೇವರಾಯ ದಿನಚರಿ ಇತ್ಯಾದಿ ವೈವಿಧ್ಯಮಯವಾದ ಹಸ್ತಪ್ರತಿಗಳು ಇಲ್ಲಿವೆ. ಹಸ್ತಪ್ರತಿ ಕ್ಷೇತ್ರಕ್ಕೆ ಸಂಬಂಧಿಸಿದ ಡಿಪ್ಲೋಮಾ ತರಗತಿ, ತರಬೇತಿ ಶಿಬಿರ, ವಿಚಾರ ಸಂಕಿರಣ, ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿ ಜನಜಾಗೃತಿಗೊಳಿಸುತ್ತಿರುವಲ್ಲಿ ಈ ಪ್ರತಿಷ್ಠಾನದ ಕೊಡುಗೆ ಅಪಾರವಾಗಿದೆ.

ಮಠಮಾನ್ಯಗಳಲ್ಲಿರುವ ಹಸ್ತಪ್ರತಿಗಳು: ಬೆಂಗಳೂರು ಪರಿಸರದ ಕೆಲವು ಮಠಮಾನ್ಯಗಳಲ್ಲಿ ಹಸ್ತಪ್ರತಿ ಸಂಗ್ರಹಗಳಿರುವುದನ್ನು ನಾವು ಕಾಣಬಹುದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ದೊಡ್ಡಬೆಲೆ ಗ್ರಾಮದ ದೊಡ್ಡಮಠದ ರುದ್ರದೇವರಿಗೆ ಸಂಬಂಧಿಸಿದ ಸಚಿತ್ರವಾದ ಹಸ್ತಪ್ರತಿಯನ್ನು

ಎಂ. ಚಿದಾನಂದಮೂರ್ತಿ ಅವರು ಸಂರಕ್ಷಿಸಿಕೊಂಡು ಬಂದಿದ್ದಾರೆ. ಶರಣರ ವರ್ಣಚಿತ್ರಗಳನ್ನು ಒಳಗೊಂಡ ಈ ಹಸ್ತಪ್ರತಿಯು ಸಕೀಲಗಳ ಬಗೆಗೆ ತಿಳಿಸುತ್ತದೆ. ಸ್ವತಃ ರುದ್ರದೇವರೇ ಪಠ್ಯಕ್ಕೆ ಪೂರಕವಾದ ಚಿತ್ರಗಳನ್ನು ಬಿಡಿಸಿರುವುದು ನೋಡುಗರಿಗೆ ಹಾಗೂ ಓದುಗರಿಗೆ ಕುತೂಹಲವನ್ನು ಮೂಡಿಸುತ್ತವೆ. ಬಸವಣ್ಣ, ಅಲ್ಲಮ, ಮಡಿವಾಳ ಮಾಚಿದೇವ, ಚೆನ್ನಬಸವಣ್ಣ ಮೊದಲಾದ ಶರಣರ ಚಿತ್ರಗಳು ಈ ಹಸ್ತಪ್ರತಿಯ ವೈಶಿಷ್ಟ್ಯತೆಯನ್ನು ಎತ್ತಿ ಹೇಳುತ್ತವೆ. ಇನ್ನು ಇದೇ ತಾಲ್ಲೂಕಿನ ತ್ಯಾಮಗೊಂಡ್ಲು ಗ್ರಾಮದ ಮಹಂತಿನ ಮಠದ ಲಿಂಗೈಕ್ಯ ವೇದಮೂರ್ತಿ ಪಟ್ಟಾರಾಧ್ಯರ ಸಂಗ್ರಹದಲ್ಲಿ ಸಕಲಾಗಮ ಚಿಂತಾಮಣಿ, ಕುಶಲವರ ಕಥೆ, ಗಣಸಹಸ್ರ ನಾಮಾವಳಿ ಇತ್ಯಾದಿ ಕೆಲವು ಹಸ್ತಪ್ರತಿಗಳು ಇದ್ದ ಬಗೆಗೆ ನಂಜುಂಡಸ್ವಾಮಿ ಅವರು ತಮ್ಮ ಲೇಖನ (ಹಸ್ತಪ್ರತಿ ವ್ಯಾಸಂಗ 1, ಪುಟ.79)ದಲ್ಲಿ ಉಲ್ಲೇಖಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹುಣಸಮಾರನಹಳ್ಳಿ ಮಠದಲ್ಲಿ ಪ್ರಭುಚರಿತ್ರೆ ಯಕ್ಷಗಾನ, ಸುಜ್ಞಾನ ಬೋಧೆ, ಬತ್ತೀಸ ಪುತ್ಥಳಿ ಕಥೆ, ಪ್ರಭುಲಿಂಗಲೀಲೆ, ಕರ್ನಾಟಕ ಭಾರತ ಕಥಾಮಂಜರಿ, ಶಿವಾಧಿಕ್ಯ, ಶಿಖಾಮಣಿ ಹಾಗೂ ಸೋಮನಾಥ ಭಾಷ್ಯಗಳ ಹಸ್ತಪ್ರತಿಗಳು ಸಂರಕ್ಷಣೆಗೊಂಡಿವೆ. ಹಾಗೆಯೇ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಹೊಂದಿಕೊಂಡಿರುವ ಮಾಗಡಿ ತಾಲ್ಲೂಕು ಜಡೇಸ್ವಾಮಿಗಳ ಮಠದಲ್ಲಿ ಕರಣ ಹಸಿಗೆ ಹೆಸರಿನ ಹಸ್ತಪ್ರತಿಯೊಂದು ಲಭ್ಯವಿದೆ.

ಬಸವ ಸಮಿತಿಯ ಹಸ್ತಪ್ರತಿಗಳು: ಶರಣ ಸಾಹಿತ್ಯ–ಸಂಸ್ಕೃತಿಯನ್ನು ಪ್ರಸಾರಗೊಳಿಸುವ ಉದ್ದೇಶದಿಂದ ಸ್ಥಾಪಿತವಾದ ಸಾರ್ವಜನಿಕ ಸಂಸ್ಥೆಗಳಲ್ಲಿ ಬಸವ ಸಮಿತಿಯೂ ಒಂದು. ಶರಣರ ಜೀವನ, ಸಾಹಿತ್ಯ, ತತ್ವ ಸಿದ್ಧಾಂತಗಳ ಕುರಿತು ಅಧ್ಯಯನ, ವಿಚಾರ ಸಂಕಿರಣ ವಿಶೇಷ ಉಪನ್ಯಾಸ ಕಮ್ಮಟಗಳನ್ನು ಏರ್ಪಡಿಸುವುದು, ಪುಸ್ತಕ ಪ್ರಕಟಣೆ ಹೀಗೆ ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವ ಈ ಸಂಸ್ಥೆಯೂ ಸಹ ಕೆಲವು ತಾಡೋಲೆ ಕೋರಿಕಾಗದ ರೂಪದ ಹಸ್ತಪ್ರತಿಗಳನ್ನು ಸಂಗ್ರಹಿಸಿದೆ.

ವ್ಯಕ್ತಿಗಳ ನೆಲೆಯಲ್ಲಿರುವ ಹಸ್ತಪ್ರತಿಗಳು: ಬೆಂಗಳೂರು ಪರಿಸರದಲ್ಲಿ ಕೆಲವು ವ್ಯಕ್ತಿಗಳು ತಮ್ಮ ಆಸಕ್ತಿ ಹಾಗೂ ಅಧ್ಯಯನಕ್ಕಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸಿಕೊಂಡ ಬಗೆಗೆ ನಿದರ್ಶನಗಳಿವೆ. ನೆಲಮಂಗಲ ನಿವಾಸಿಯಾದ ಕಪ್ಪಣ್ಣ ಶಾಸ್ತ್ರಿಗಳ ಪುತ್ರ ಸದಾಶಿವಯ್ಯನವರಲ್ಲಿ ಶರಣ ಲೀಲಾಮೃತ, ಜೈಮಿನಿ ಭಾರತ, ವೀರಶೈವ ಆಚಾರ ದೀಪಿಕೆ, ನಾನಾರ್ಥ ರತ್ನಮಾಲೆ, ಗಣಭಾಷ್ಯ ರತ್ನಮಾಲೆ ಮುಂತಾದ ಹಸ್ತಪ್ರತಿಗಳ ಸಂಗ್ರಹವಿತ್ತು. ಹಿರಿಯ ವಿದ್ವಾಂಸರಾದ ಸಿ. ಮಹಾದೇವಪ್ಪನವರು ಪ್ರಾಚೀನ ಕಾವ್ಯ ಪುರಾಣಗಳ ಪರಿಷ್ಕರಣೆ ಹಾಗೂ ಅಧ್ಯಯನಕ್ಕಾಗಿ ಸಂಸ್ಕೃತ ಮತ್ತು ಕನ್ನಡ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಪ್ರಭುಗೀತೆ, ಉದಯಾದಿತ್ಯಲಂಕಾರ, ಗುಬ್ಬಿಮಲ್ಲಣಾರ್ಯನ ಭಾವಚಿಂತಾರತ್ನ, ಗೋರಕ್ಷ ಶತಕಂ, ಗುಬ್ಬಿ ಶಾಂತೇಶನ ಸಿದ್ದೇಶ್ವರ ಪುರಾಣ ಇತ್ಯಾದಿ ಕೃತಿಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ತಾವೇ ಪ್ರಕಟಿಸಿರುವುದು ಸಾಹಸವೇ ಸರಿ. ಈಗಲೂ ಅವರ ಮನೆ ಹಸ್ತಪ್ರತಿ ಮತ್ತು ಪುಸ್ತಕಗಳಿಂದ ಕಂಗೊಳಿಸುತ್ತಿರುವುದನ್ನು ನೋಡಬಹುದು.

ಇನ್ನು ಈ ಪರಿಸರದ ಮತ್ತೊಬ್ಬ ಪ್ರಸಿದ್ಧ ಹಸ್ತಪ್ರತಿ ತಜ್ಞರಾಗಿದ್ದವರು, ಎಸ್. ಶಿವಣ್ಣ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರದ ಕ್ಯುರೇಟರ್ ಆಗಿದ್ದ ಇವರು ನಾಡಿನಾದ್ಯಂತ ಸಂಚರಿಸಿ ಹಸ್ತಪ್ರತಿಗಳಲ್ಲಿರುವ ಅನೇಕ ಹೊಸ ಸಂಗತಿಗಳನ್ನು ಶೋಧಿಸಿದ್ದಾರೆ. ಅಪ್ರಕಟಿತ ಕೃತಿ, ವಿವಿಧ ಛಂದಸ್ಸಿನ ಕಾವ್ಯ ಪುರಾಣಗಳ ಲಪ್ತವಾದ ಸಂಧಿ ಪದ್ಯ, ಶಿವಶರಣರ ವಚನಗಳ ಲುಪ್ತಭಾಗವನ್ನು ಹಸ್ತಪ್ರತಿಗಳ ನೆರವಿನಿಂದ ಶೋಧಿಸಿದ್ದು ಶಿವಣ್ಣನವರ ವಿಶೇಷತೆಯಾಗಿದೆ. ಗದಗ, ಚಿತ್ರದುರ್ಗ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರಗಳ ಹಸ್ತಪ್ರತಿ ಸೂಚಿಗಳನ್ನು ಸಿದ್ಧಪಡಿಸಿ ಪ್ರಕಟಿಸಿರುವುದು, ಜೊತೆಗೆ ಕರ್ನಾಟಕದ ಕವಿಚರಿತೆಯ ಅನುಕ್ತ ಕೃತಿಸೂಚಿ, ವೀರಶೈವ ಅಪ್ರಕಟಿತ ಗ್ರಂಥಸೂಚಿ, ವೀರಶೈವ ಹಸ್ತಪ್ರತಿ ಪುಷ್ಟಿಕೆಗಳು ಇತ್ಯಾದಿ ಕೃತಿಗಳು ಹಸ್ತಪ್ರತಿ ಅಧ್ಯಯನಾಸಕ್ತರಿಗೆ ಬಹುಮುಖ್ಯ ಆಕರಗಳಾಗಿವೆ. ಶಿವಣ್ಣನವರು ತಮ್ಮ ಜೀವನದುದ್ದಕ್ಕೂ ಹಸ್ತಪ್ರತಿಗಳ ಜೊತೆಗೆ ಬದುಕಿದ್ದರು ಎಂಬುದು ಗಮನಾರ್ಹ ಸಂಗತಿಯಾಗಿದೆ.

ಹಾಗೆಯೇ ನೆಲಮಂಗಲ ತಾಲ್ಲೂಕು ಕಂಬಾಳು ಗ್ರಾಮದ ಸಿದ್ಧಗಂಗಯ್ಯನವರು ಸಂಸ್ಕೃತ ವಿದ್ವಾಂಸರು. ಇವರು ವಾತುಲಾಗಮ ಟೀಕು, ಪ್ರಭುಲಿಂಗಲೀಲೆ, ಹನುಮ ವಿಜಯ, ನಂಜುಂಡೇಶ್ವರ ಶತಕ, ಬೇತಾಳ ಪಂಚತಂತ್ರ ಚೋರಕಥೆ ಮೊದಲಾದ ಹದಿನೈದಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಹೀಗೆ ಈ ಪರಿಸರದಲ್ಲಿ ಅನೇಕ ವ್ಯಕ್ತಿಗಳು ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ಪರಿಷ್ಕರಣೆ ಮತ್ತು ಪ್ರಕಟಣೆ ಕಾರ್ಯದಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಆ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಯ ಪುನಾರಚನೆಗೆ ಬೇಕಾದ ಆಧಾರ ಸಾಮಗ್ರಿಗಳನ್ನು ಒದಗಿಸಿದ್ದಾರೆ.

ಹಸ್ತಪ್ರತಿ ಲಿಪಿಕಾರರು

ಹಸ್ತಪ್ರತಿಗಳ ಪರಿಚಲನೆಯಲ್ಲಿ ಲಿಪಿಕಾರರ ಪಾತ್ರ ತುಂಬ ದೊಡ್ಡದು. ಇವರು ಒಂದು ಕಾವ್ಯವನ್ನು ಪ್ರತಿ ಮಾಡುವುದರ ಮೂಲಕ ಆ ಕಾವ್ಯ ಮತ್ತು ಆ ಕವಿಯನ್ನು ಲೋಕಕ್ಕೆ ಪರಿಚಯಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಹೀಗಾಗಿ ಇವರನ್ನು ಸಂಸ್ಕೃತಿಯ ಸಂವಹನಕಾರ, ಸಾಹಿತ್ಯಕ ಪರಿಚಾರಕರೆಂದೂ ಹೇಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಪರಿಸರದಲ್ಲಿ ಹಸ್ತಪ್ರತಿಗಳನ್ನು ಪ್ರತಿ ಮಾಡುವುದರ ಮೂಲಕ ಕೆಲವು ಲಿಪಿಕಾರರು ಚರಿತ್ರೆಯಲ್ಲಿ ದಾಖಲಾಗಿದ್ದಾರೆ. ಅಂಥ ಲಿಪಿಕಾರರ ಇತಿವೃತ್ತ ವಿಚಾರ, ಪ್ರತಿ ಮಾಡಿದ ಸ್ಥಳ, ಸಮಯ ಮತ್ತು ಸಂದರ್ಭ, ಮನೋಧರ್ಮ, ಪ್ರಾಮಾಣಿಕತೆ ಇತ್ಯಾದಿ ವಿವರಗಳನ್ನು ಈಗ ತಿಳಿದುಕೊಳ್ಳಬಹುದು.

ಚನ್ನಬಸಯ್ಯ: ಬೆಂಗಳೂರಿನ ಅಮೃತಸಾಗರದ ಅರಳೇಪೇಟೆಯ ಹುಮನಾಬಾದು ಈರಭದ್ರಯ್ಯನ ಕುಮಾರ ಚೆನ್ನಬಸಯ್ಯನು 'ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಭ್ಯ 1763ನೇ ಸನ್ 1841ನೇ ಪರಾಭವನಾಮ ಸಂ. ವೈಶಾಖ ಶು 14 ಸ್ಥಿರವಾರ (ಶನಿವಾರ) ದಿವಸ ಸುಮಾರು ಎರಡು ಗಂಟೆ ವ್ಯಾಳ್ಯಕ್ಕೆ' ನಿಜಗುಣ ಶಿವಯೋಗಿಯ ವಿವೇಕ ಚಿಂತಾಮಣಿ ಕೃತಿಯನ್ನು ಹುಬ್ಬಳ್ಳಿ ಸ್ವಾಮಿಗಳ (ಮೂರುಸಾವಿರ ಮಠದ ಜಗದ್ಗುರು) ವರಿಗೆ ಬರೆದು ಕೊಟ್ಟಿದ್ದಾರೆ. ಈಗಿನ ಬೆಂಗಳೂರು ಮೆಜೆಸ್ಟಿಕ್, ಅರಳೇಪೇಟೆ ಪ್ರದೇಶವನ್ನು ಹಿಂದೆ ಅಮೃತಸಾಗರ ಎಂದು ಕರೆಯುತ್ತಿದ್ದರು. ಈ ಮಾಹಿತಿಯನ್ನು ಹಸ್ತಪ್ರತಿ ಪ್ರಶಸ್ತಿಯ ಮೂಲಕ ಲಿಪಿಕಾರ ಚೆನ್ನಬಸಯ್ಯನು ದಾಖಲಿಸಿದ್ದಾನೆ. (ಹಸ್ತಪ್ರತಿ ಅಧ್ಯಯನ 2-1, ಪುಟ. 28)

ಅಪ್ಪಯ್ಯಣ್ಣ: ಅಂಗೀರಸ ಸಂವತ್ಸರ ಪುಷ್ಯ ಬಹುಳ 6 ಶನಿವಾರದ ಘಂಟೆ 12ರಲ್ಲು ಬೆಂಗಳೂರು ಡಿವಿಜನ್ ದೇವನಾಹಳಿ ತಾಲ್ಲೂಕು. . . ಳಿ ಪೈಕು ಬೆಟ್ಟಹಲಸೂರು ಕಲಿವೀರೇಗೌಡರವರ ಕೊಮಾರ ಅಪ್ಪಯಂಣನುಯಿದೆ ವೂರದಲ್ಲಿರುವ ತೆಲುಗರ ವೆಂಕಟ್ಯಾ ಚೆಲುವಂಣನವರ ಕೊಮಾರ. . . ಬರೆದು ಕೊಟ್ಟಂತ್ತಾ ನಳಚರಿತ್ರೆ ಸಂಪೂರ್ಣ ಮಂಗಳಮಹಾ ಶ್ರೀಶ್ರೀಶ್ರೀ ಅಂದರೆ ಅಪ್ಪಯ್ಯಣ್ಣನು ಬೆಂಗಳೂರು ಜಿಲ್ಲೆಯ (ಡಿವಿಜನ್) ದೇವನಹಳ್ಳಿ ತಾಲ್ಲೂಕಿನ ಬೆಟ್ಟಹಲಸೂರು ಗ್ರಾಮದ ಕಲವೀರೇಗೌಡ ಸುಪುತ್ರನು. ಕೆಂಪಣ್ಣ ವಿರಚಿತ ನಳಚರಿತ್ರೆ ಎಂಬ ಯಕ್ಷಗಾನ ಕೃತಿಯನ್ನು ಬರೆದು ಅದೇ ಊರಿನವನಾದ ತೆಲುಗರ ವೆಂಕಟ ಚಲುವಣ್ಣನ ಮಗನಿಗೆ ಅಪ್ಪಣ್ಣಯ್ಯ ಕೊಟ್ಟಿದ್ದಾನೆ. ಆದರೆ ಹಸ್ತಪ್ರತಿ ತ್ರುಟಿತಗೊಂಡಿದ್ದರಿಂದ ಚಲುವಣ್ಣನ ಮಗನ ಹೆಸರು ಸ್ಪಷ್ಟವಾಗುತ್ತಿಲ್ಲ. (ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ಸೂಚಿ ಪುಟ-66)

ಸಿದ್ಧಲಿಂಗದೇವರು: ಬೆಂಗಳೂರು ಶ್ರೀಸಂಸ್ಥಾನ ಕೊಳಲ ಮಠದ ಶ್ರೀ ಶಿವಲಿಂಗ ದೇಶೀ ಕೇಂದ್ರರವರ ಕರಕಮಲ ಸಂಜಾತರಾದ ಸಿದ್ಧಲಿಂಗದೇವರು ಕರಣ ಹಸಿಗೆ ಸಟೀಕುವನ್ನು ಪ್ರತಿಮಾಡಿದ ಬಗೆಗೆ ಹಸ್ತಪ್ರತಿ ಪ್ರಶಸ್ತಿಯು ಹೀಗೆ ಉಲ್ಲೇಖಿಸುತ್ತದೆ:

ಶಾಲಿವಾಹನ ಶಕ 1807 ಪಾರ್ಥಿವ ನಾಮ ಸಂವತ್ಸರದ ಜೇಷ್ಠ ಶುದ್ಧ 10 ಮಿ ಸೋಮವಾರದಲ್ಲು ಯಿ ತತ್ವವಿಭಾಗಯೆಂಬ ಗ್ರಂಥವನ್ನು ಶ್ರೀಗುರು ಶಿವಲಿಂಗ ದೇಶೀಕೇಂದ್ರ ಸ್ವಾಮಿಗಳವರ ಕರುಣಕಟಾಕ್ಷದಿಂದ ಬರದು ಲಿಖಿಸಿ ಸಮಾಪ್ತಿಯಾಗುವ ಕಾಲದಲ್ಲಿ ಸದ್ಗುರು ದೇವಂಗೆರಗಿ ಅಷ್ಟಾಂಗ ಪ್ರಣುತನಾಗಿ ಯಿ ಅನುಭವಶಾಸ್ತ್ರ ಪರಿಸಮಾಪ್ತಿಯಾದುದುಯಲ್ಲೆಂದರೆ ಶ್ರೀ ಶೀಲ ಸಂಪ್ರದಾಯ ಸಮಯ ಬೆಂಗಳೂರು ಶ್ರೀ ಸಂಸ್ಥಾನ ಕೊಳದ ಮಠದ ಅಧಿಕಾರಿಗಳಾದ ಶ್ರೀ ಶಿವಲಿಂಗ ದೇಶೀಕೇಂದ್ರರವರ ಕರಕಮಲ ಸಮದ್ಭೂತರಾದಂತ್ತ ಸಿದ್ಧಲಿಂಗದೇವರು ಯಿ ತತ್ವಶಾಸ್ತ್ರವನ್ನು ಬರದು ಸಮಾಪ್ತಿಯಾಗಿರುತ್ತೆ, ಯಿದರಲ್ಲಿಯ ಶಾಸ್ತ್ರದಲ್ಲಿ ಕೈತಪ್ಪುಯಿದಾಗ್ಯೂ ತತ್ವಜ್ಞರು ತಿದ್ದಿಕೊಳುವುದು. ತಂಮ ಬಾಲಕನಾದ ಯಂನ ತಪ್ಪುಗಳು ಅನಂತವಾಗಿ ಯಿದ್ದಾಗ್ಯೂ ಕ್ಷಮಿಸಿ ಯಿ ತತ್ವ ಶಾಸ್ತ್ರ ಗ್ರಂಥವಂನು ತಾಉಗಳು ತಿಳಿದು ಅರಿದು ನೋಡಿಕೊಂಡು ಚಂನ್ನಾಗಿ ಪರಾಂಬರಿಸಿ ಅಥ ವಂದುವೇಳೆ ತಪ್ಪು ಗಳು ಇದ್ದಗ್ಯೂ ನಂನ ಶತಾಪರಾಧವೆಂದು ಕ್ಷಮಿಸಬೇಕೆಂದು ಯರಡು ಕರಗಳನೊಡ್ಡಿ ಬೇಡಿಕೊಳುವೆನು ಶ್ರೀಗುರುವೇ॥ ಯಲ್ಲಾ ಶಿವಶರಣರದಯ ಯಮಗಿರಲಿ॥ ಶ್ರೀಗುರುವೇ ಗತಿ॥ ಶ್ರೀಗುರು ತೋಂಟದ ಸಿದ್ಧಲಿಂಗಾಯನಮ॥ ಶ್ರೀಗುರು ಶಿವಲಿಂಗ ದೇಸೀಕೇಂದ್ರಾಯ ನಮಃ॥ ಶ್ರೀಗುರು ದೇಶೀಕೇಂದ್ರ ಬಸವಾಯನಮಃ॥ ಶ್ರೀಗುರು ಷಟ್‌ಸ್ಥಲ ಬ್ರಹ್ಮಿಯಾದ ಚಂನಬಸವೇಶಾಯ ನಮಃ॥ ಬಸವ ಚಂನಬಸವ ಪ್ರಭುಸ್ವಾಮಿಗಳು ಯಲ್ಲಾ ಶಿವಶರಣರ ಶ್ರೀ ಚರಣ ಕಮಲಂಗಳೆ ಯಮಗೆ ಮಂಗಳವೀಯಲಿ॥

(ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಪುಟ-261)

ಕೈತಪ್ಪಿನಿಂದಾಗಿ ಇದರಲ್ಲಿ ಅನೇಕ ತಪ್ಪುಗಳಿರಬಹುದು. ಅವೆಲ್ಲವುಗಳನ್ನು ಪರಾಮರ್ಶಿಸಿ ಎಂದು ಲಿಪಿಕಾರನಾದ ಸಿದ್ಧಲಿಂಗದೇವರು ವಿಧೇಯತೆಯಿಂದ ಓದುಗರಲ್ಲಿ ಬೇಡಿಕೊಂಡಿದ್ದಾರೆ. ಈ ಮಾತುಗಳು ಲಿಪಿಕಾರನ ವಿಧೇಯತೆ ಹಾಗೂ ಪ್ರಾಮಾಣಿಕತೆಗೆ ನಿದರ್ಶನವಾಗಿದೆ.

ಕರಿಯಪ್ಪ: 1650ರಲ್ಲಿದ್ದ ನರಹರಿ ಕವಿಯ ಶಕೆ 1786 ರಕ್ತಾಕ್ಷಿನಾಮ ಸಂವತ್ಸರದ ಭಾದ್ರಪದ ಬಹುಳ 10 ಭಾನುವಾರ ದಿವಿ 28 ಘಳಿಗೆಯಲ್ಲಿ ಪ್ರಹ್ಲಾದ ಚರಿತೆ ಎಂಬ ಭಾಮಿನಿ ಷಟ್ಪದಿ ಕೃತಿಯನ್ನು ದೊಡ್ಡಬಳ್ಳಾಪುರ ತಾಲೂಕಿನ ಮದಗೊಂಡನಹಳ್ಳೀಯ ಸುಬ್ಬರಾಯಪ್ಪನ ಮಗನಾದ ಕರಿಯಪ್ಪನು ಪ್ರತಿ ಮಾಡಿದ್ದಾನೆ (ಕನ್ನಡ ಹಸ್ತಪ್ರತಿ ಲಿಪಿಕಾರರ ಚರಿತೆ ಪುಟ–31)

ಕೆಂಪನಂಜೇಸ್ವಾಮಿ: ಶಾಲಿವಾಹನ ಶಕೆ 1736ರಲ್ಲಿ ಬೆಂಗಳೂರಿನ ಮಹಾಮಹಂತಿನ ಸಿಂಹಾಸನಕ್ಕೆ ಕಾರಣಕರ್ತರಾದ ಕೆಂಪನಂಜೇಸ್ವಾಮಿಯವರು ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣವನ್ನು ಪ್ರತಿ ಮಾಡಿಕೊಂಡಿದ್ದಾರೆ. ಆ ವಿವರಗಳು ಹೀಗಿವೆ:

ಶ್ರೀ ಕಲಿಯುಗ ಪ್ರಮಾಣ 432000ಕ್ಕೆ ಭಾವನಾಮ ಸಂವತ್ಸರಕೆ ಸಂದಿರುವದು 4903 ಮುಂದೆ ಕಲಿಯುಗ ನಿಂತಿರುವದು ಬಾಕಿ 42797 ವರುಷದ ಸ್ವಸ್ಥಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ ಶಕವರುಷಂಗಳು 1736ಕ್ಕೆ ಸಲುವ ಭಾವನಾಮ ಸಂವತ್ಸರದ ಮಾಘ ಶುದ್ಧ 5 ಸೋಮವಾರ ರೇವತಿ ನಕ್ಷತ್ರ ರಾತ್ರೆಗಳಿಗೆ 9ರಲ್ಲಿ ಕನ್ಯಾಲಗ್ನದಲ್ಲೂ, ಬೆಂಗಳೂರು ಮಹಾಮಹಂತಿನ ಸಿಂಹಾಸನಕ್ಕೆ ಕಾರಣಕರ್ತರಾದ ಕೆಂಪನಂಜೇಸ್ವಾಮಿಯವರು ಶ್ರೀಮದ್ಗುರು ಚನ್ನಬಸವೇಶ್ವರ ಸ್ವಾಮಿಯವರ ಪುರಾಣ ಬರವಹಿಗೆ ಸಂಪೂರ್ಣಕ್ಕೆ ಸಾಷ್ಟಾಂಗವೆರಗಿ ಮಂಗಳಮಹಾಶ್ರೀಶ್ರೀಶ್ರೀ॥

(ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂ:6, ಮೈಸೂರು, ಪುಟ–25) ಇಲ್ಲಿ ಉಕ್ತವಾದ ಮಹಾಮಹಂತಿನ ಮಠವು ಬೆಂಗಳೂರು ಮಹಾನಗರದ ಚಿಕ್ಕಪೇಟೆಯೊಳಗೆ ಹಾದು ಹೋಗುವ ಓ.ಟಿ.ಸಿ. ರಸ್ತೆ ಹಾಗೂ ಅರ್ಕಾಟ್ ಶ್ರೀನಿವಾಸಜಾರ್ ರಸ್ತೆ ಇವೆರಡೂ ಕೂಡುವ ಚೌಕದಲ್ಲಿ ಪಶ್ಚಿಮ ಭಾಗದಲ್ಲಿ ಇದೆ. ಈ ಮಠದ ಮೊದಲ ಪೀಠಾಧಿಪತಿಗಳಾದ ಕೆಂಪನಂಜೇಸ್ವಾಮಿ (1800–1876) ಯವರು ಲಿಪಿಕಾರರಾಗಿಯೂ ಕೃತಿಗಳನ್ನು ಪ್ರತಿ ಮಾಡಿದ್ದರೆಂಬುದು ಇದರಿಂದ ತಿಳಿದುಬರುತ್ತದೆ. ಮಹಾಮಹಂತಿನ ಮಠಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಜಯದೇವಪ್ಪ ಜೈನಕೇರಿ ಹಾಗೂ ಜಗದೀಶ ಅವರು ಸಂಪಾದಿಸಿದ ಮಹಾಮಹತ್ತಿನ ಮಠಗಳು ಪುಸ್ತಕ (ಮರುಳಸಿದ್ಧೇಶ್ವರ ವೀರಶೈವ ಅಧ್ಯಯನ ಕೇಂದ್ರ ಕವಲೇದುರ್ಗ, 2008)ವನ್ನು ಗಮನಿಸಬಹುದು.

ಗಿರಿಯಪ್ಪ: ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಕಾಕೋಳು ಗ್ರಾಮದ ಕರಣಿಕ ಹನುಮಂತರಾಯರ ಮಗನಾದ ಗಿರಿಯಪ್ಪನು ನಿತ್ಯಾತ್ಮಕ ಶುಕಯೋಗಿಯ ಭಾಗವತ ಕೃತಿಯನ್ನು "ಶಕೆ 1783ನೆಯ ದುರ್ಮತಿನಾಮ ಸಂವತ್ಸರ ಘ್ರೀಷ್ಮಋತು ಜೇಷ್ಠಮಾನ ಕೃಷ್ಣಪಕ್ಷ ಪಂಚಮಿ" ಯಲ್ಲಿ ಪ್ರತಿಮಾಡಿ ಮುಗಿಸಿದ್ದಾನೆ. ಹಾಗೆಯೇ "ಶಕೆ 1714 ವಿರೋಧಿಕೃತು ಸಂವತ್ಸರದ ಆಶ್ವೀಜ ಶುದ್ಧ 10ರಲ್ಲು" ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ಕೃತಿಯನ್ನು ಬರೆದುಮುಕ್ತಾಯಗೊಳಿಸಿರುವುದು ಇನ್ನೊಂದು ಹಸ್ತಪ್ರತಿ ಪ್ರಶಸ್ತಿಯು ತಿಳಿಸುತ್ತದೆ. (ಕನ್ನಡ ಹಸ್ತಪ್ರತಿ ಲಿಪಿಕಾರರ ಚರಿತೆ ಪುಟ. 54)

ಚಾಯಪ್ಪ: ಈತ ಬೆಂಗಳೂರಿನ ಕೃಷ್ಣರಾಜಪುರಕ್ಕೆ ಸೇರಿರುವ ಹಲಸೂರು ನಿವಾಸಿಯಾದ ಸುಬ್ಬಯ್ಯನವರ ಮಗ. "ಶಕೆ 1587 ವಿಶ್ವಾವಸುನಾಮ ಸಂವತ್ಸರದ ಶ್ರಾವಣ ಬಹುಳ 12 ಗುರುವಾರ" ದಿವಸ ಸಂಕನ ಪಾರ್ವತಿ ಕೊರವಂಜಿ ಎಂಬ ಕೃತಿಯನ್ನು ಪ್ರತಿಮಾಡಿಕೊಂಡಿದ್ದಾನೆ. (ಕನ್ನಡ ಹಸ್ತಪ್ರತಿ ಲಿಪಿಕಾರರ ಚರಿತೆ ಪುಟ. 86)

ಚನ್ನವೀರಪ್ಪ: ವಿರೂಪಾಕ್ಷಪಂಡಿತನ ಚನ್ನಬಸವ ಪುರಾಣವನ್ನು "ರುಧಿರೋದ್ಗಾರಿ ಸಂವತ್ಸರದ ಪುಶ್ಯ ಶುದ್ಧ 5ಲ್ಲು ಶುಭನಕ್ಷತ್ರದಲ್ಲಿ ಪ್ರಾರಂಭ" ಮಾಡಿದ ಬೆಂಗಳೂರು ಜಿಲ್ಲೆಯ ಅತ್ತಿಬೆಲೆ ರೊಟ್ಟಿ ವೀರಪ್ಪನವರ ಕುಮಾರನಾದ ಚನುವೀರಪ್ಪನು "ಶಾಲಿವಾಹನ ಶಕ 1867ನೆ... ಶುದ್ಧ 1 ಶುಕ್ರವಾರ ಅಗ 10 ಘಳಿಗೆ" ಯಲ್ಲಿ ಪೂರ್ಣಗೊಳಿಸಿದ್ದಾನೆ. (ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಪುಟ. 194)

ಚೌರಿಶೆಟ್ಟಿ: "ಸ್ವಸ್ತಿಶ್ರೀ ಶಾಲಿವಾಹನ ಶಕವರುಷ 1687ನೆಯ ವಿಶ್ವಾವಸು ಸಂವತ್ಸರದ ಜೇಷ್ಠ ಬಹುಳ 10 ಸೌಮ್ಯವಾರ" ದಲ್ಲಿ ನೆಲಮಂಗಲದ ನಿವಾಸಿಯಾದ ಚನ್ನಣ್ಣನ ಮಗನಾದ ಚೌರಿಶೆಟ್ಟಿಯು ಭರತೇಶ ವೈಭವವನ್ನು ಪ್ರತಿಮಾಡಿದ್ದಾನೆ. (ಕನ್ನಡ ಹಸ್ತಪ್ರತಿ ಲಿಪಿಕಾರರ ಚರಿತೆ ಪುಟ.105)

ನಾಗಕುಮಾರ: ಸ್ವಸ್ತಿಶ್ರೀ ಮಡ್ಡಿಹಳ್ಳಿ ಕೊಲ್ಲಾಪುರ ಜಿನಕಂಚಿ ಪೆನಗೊಂಡೆ ಚತುಸಿದ್ಧ ಸಿಂಹಾಸನಾಧೀಶ್ವರನಾದ ಬೆಂಗಳೂರಿನ ಶ್ರೀ ವರ್ಧಮಾನ ಸ್ವಾಮಿಯವರ ಅನುಗ್ರಹದಿಂದ "ಶಾಲಿವಾಹನ ಶಕವರ್ಷ 1819 ಹೇವಿಳಂಬಿ ಸಂವತ್ಸರದ ಆಶ್ವೀಜ ಶುದ್ಧ ಬಹುಳ ಭಾರ್ಗವವಾರ" ದಂದು ಮಂಗರಸನ ನೇಮಿಜಿನೇಶ ಸಂಗತಿಯನ್ನು ನಾಗಕುಮಾರನು ಪ್ರತಿಮಾಡಿದ್ದಾನೆ. ಬೆಂಗಳೂರಿನ ಕೆಂಚಪ್ಪನ ಮಗನಾದ ನಾಗಕುಮಾರನು "ನನ್ನ ಜ್ಞಾನಾವರಣೀಯ್ಯ ಕರ್ಮಕ್ಷಯ ನಿಮಿತ್ತವಾಗಿ ಶ್ರೀ ನೇಮಿ ತೀರ್ಥಂಕರ ಪುರಾಣ ಬರೆದೆ" ಎಂದು ಹೇಳಿಕೊಂಡಿದ್ದಾರೆ.

ನಾರಾಣಪ್ಪ: ಮಧ್ವದಾಸ ವಿರಚಿತ ವಿಷ್ಣು ಚಾಪದನ ಗ್ರಂಥವನ್ನು ಶಕೆ 1695 ವಿಜಯನಾಮ ಸಂವತ್ಸರದ ಮಾಘ ಶುದ್ಧ 7 ಭಾನುವಾರದಂದು ನಾರಾಣಪ್ಪನು ಪ್ರತಿಮಾಡಿ ಬಳಾಪುರದ ಚೆನಿವೀರದೇವರಿಗೆ ಕೊಟ್ಟಿದ್ದಾನೆ. ಕೆಂಗೇರಿ ಶಾಂತವೀರಪ್ಪನ ಮಗನಾದ ನಾರಾಣಪ್ಪನು ಗಂಗಶೆಟ್ಟಿಹೆಗ್ಗೆರೆಯಲ್ಲಿ ಶಾನುಭೋಗನಾಗಿ ಕಾರ್ಯನಿರ್ವಹಿಸುತ್ತಿದ್ದನು.

ಪುಟ್ಟಣ್ಣ: ಬೆಂಗಳೂರು ವ್ಯಾಪ್ತಿಗೆ ಒಳಪಡುವ ಯಲಹಂಕದ ಸೀನಪ್ಪನಿಗೆ ಮಧುಗಿರಿ ತಾಲೂಕಿನ ದೊಡ್ಡಮಲ್ಲೂರು ಗ್ರಾಮದ ಶಾನಭಾಗ ಭಾವಪ್ಪನವರ ಮಗನಾದ ಪುಟ್ಟಣ್ಣನು ಕುಮಾರವ್ಯಾಸ ಭಾರತದೊಳಗಿನ ಸಭಾಪರ್ವವನ್ನು ಬರೆದುಕೊಟ್ಟ ವಿಷಯವನ್ನು ಹೀಗೆ ಹೇಳಲಾಗಿದೆ.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು 1773ನೆ ದುರ್ಮತಿ ಸಂವತ್ಸರದ ಕಾರ್ತೀಕ ಶುದ್ಧ 1 ಭಾನುವಾರದವರಿಗೆ ಮದ್ದಗಿರಿ ತಾಲ್ಲುಕವಳಿತವಾದ ದೊಡ್ಡಮಲ್ಲೂರು ಶಾನಭಾಗ ಭಾನಪವಪನವರ ಕುಮಾರ ಪುಟ್ಟಣ್ಣನು ಯಲಹಂಕದ ಕಸಬೆ ವೆಂಕಂಣನವರ ಕೊಮಾರ ಶೀನಪ್ಪಗೆ ಬರಕೊಟ್ಟ ಸಭಾಪರ್ವಕ್ಕೆ ಶ್ರೀರಸ್ತು॥ (ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂ:7, ಮೈಸೂರು, ಪುಟ–185)

ಬಸವಯ್ಯ: ಷಣ್ಮುಖಸ್ವಾಮಿಗಳ ಅಖಂಡೇಶ್ವರ ವಚನಗಳ ಕಾಗದ ಪ್ರತಿಯೊಂದನ್ನು 'ಬೆಂಗಳೂರು ತಾಲ್ಲೂಕು ಕೆಂಗೇರಿ ಚಿಕ್ಕನಹಳ್ಳಿಮಠದ ಆರಾಧ್ಯ ಬಸವಯ್ಯನು ಗುರುಪುತ್ರರಾದ ತುರುವೇಕೆರೆ ಕೊಮಾರಪ್ಪನವರಿಗೆ' ಬರೆದುಕೊಟ್ಟಿದ್ದಾನೆ. (ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಪುಟ–13)

ಶರಭಯ್ಯ: ಬೆಂಗಳೂರಿನ ಕೋಟಿಲಿಂಗ ಶಾಸ್ತ್ರಿಗಳ ಮಗನಾದ ಶರಭಯ್ಯನು ಶಕೆ 1763 ಪ್ಲವಸಂವತ್ಸರದ ಚೈತ್ರ ಶುದ್ಧ 2 ಇಂದು (ರವಿ)ವಾರದಲ್ಲಿ ಉದ್ಧರಣೆಯ ವಾಚ್ಯ ಎಂಬ ಸಚಿತ್ರವಾದ ಕೃತಿಯನ್ನು ಪ್ರತಿಮಾಡಿ ಕಂಪ್ಲಿಯ ಕಲ್ಲುಗುಡಿ ದೊಡ್ಡಪ್ಪನವರಿಗೆ ನೀಡಿದ್ದಾನೆ. (ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂ.1, ಪುಟ42)

ನಂಜಯ್ಯ: ಬೆಂಗಳೂರಿನ ಅರಳೇಪೇಟೆಯ ಮಠದ ನಂಜಯ್ಯನು ಚನ್ನಪ್ಪ ಕವಿಯ ಶರಣಲೀಲಾಮೃತವನ್ನು ಪ್ರತಿ ಮಾಡಿಕೊಂಡಿದ್ದಾನೆ. ಈ ಕೃತಿಯನ್ನು ಜಗದೇವಯ್ಯನ ಮೊಮ್ಮಕ್ಕಳಾದ ದೊಡ್ಡವೀರಪ್ಪ, ಚಿಕ್ಕವೀರಪ್ಪ,

ಹುಚ್ಚವೀರಪ್ಪ ಹಾಗೂ ಹೊಸಹಳ್ಳಪ್ಪ ಹೀಗೆ ನಾಲ್ಕೈದು ಜನರಿಗೆ ಆಶೀರ್ವಾದ ಮಾಡಿ ಪುತ್ರ ಸಂಪತ್ತು ಪ್ರಾಪ್ತಿಯಾಗಲೆಂದು ಹರಸಿ ಕೊಟ್ಟಿದ್ದಾನೆ. (ಯಕ್ಷಗಾನ ಹಸ್ತಪ್ರತಿಗಳ ಸೂಚಿ ಧರ್ಮಸ್ಥಳ, ಪುಟ–242)

ಹರಿದಾಸ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶಿವಗಂಗೆಯ ಹರಿದಾಸನು ಪ್ರಮಾತಿನಾಮ ಸಂವತ್ಸರದ ಮಾಘ ಬಹುಳ 2ರಲ್ಲಿ ಕುಮಾರವ್ಯಾಸ ಭಾರತವನ್ನು ಪ್ರತಿಮಾಡಿ ನರಸಿಂಗಪ್ಪ ಎಂಬುವವನಿಗೆ ಕೊಟ್ಟಿದ್ದಾನೆ.

(ಬಿ. ಎಂ. ಶ್ರೀ ಪ್ರತಿಷ್ಠಾನದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಪುಟ–13)

ಹೊನ್ನಪ್ಪ: ಈತನೂ ಸಹ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶಿವಗಂಗೆಯ ನಿವಾಸಿ, ಶಾಲಿವಾಹನ ಶಕೆ 1597 ರಾಕ್ಷಸನಾಮ ಸಂವತ್ಸರದ ಜೇಷ್ಠ ಬಹುಳ 6 ಬುಧವಾರದಂದು ಕಳಲೆ ನಂಜರಾಜರ ಕಾಶೀಮಹಿಮಾರ್ಥ ದರ್ಪಣ ಎಂಬ ಗದ್ಯಕೃತಿಯನ್ನು ಪ್ರತಿಮಾಡಿದ್ದಾನೆ. (ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂ.1, ಮೈಸೂರು, ಪುಟ–302)

ಮಲ್ಲಪ್ಪ: ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ದೊಡ್ಡಬೆಲೆಯ ದೊಡ್ಡಮಠದಲ್ಲಿದ್ದ ಶರಣರ ವರ್ಣಚಿತ್ರಗಳನ್ನೊಳಗೊಂಡ ಸಕೀಲಗಳ ವಿವರಗಳನ್ನು ನೀಡುವ ಹಸ್ತಪ್ರತಿಯನ್ನು ಸಿದ್ಧಗಂಗಯ್ಯನವರ ಮೂಲಕ ಚಿದಾನಂದಮೂರ್ತಿಯವರು ಸಂಗ್ರಹಿಸಿದ್ದಾರೆ. ಚಿತ್ರಗಳನ್ನು ಬಿಡಿಸಿದವರು ಈ ಮಠದ ರುದ್ರದೇವರು. ಬೆಂಗಳೂರು ಮಾಮೂಲ್ ಪೇಟೆಯ ಗುರುಬಸಣ್ಣನವರ ಸೋದರಳಿಯನಾದ ಮಲ್ಲಪ್ಪನು ಪ್ರತಿಮಾಡಿದ್ದನ್ನು ಈ ಕೆಳಗಿನ ಪ್ರಶಸ್ತಿ ಭಾಗ ತಿಳಿಸುತ್ತದೆ.

'ಯೀ ಪುಸ್ತಕ ಬೆಂಗಳೂರು ಮಾಮೂಲೆ ಪ್ಯಾಟೆಯಲ್ಲಿ ಯಿರ್ರುವ ಸರಾಪು ಚಿಂನ್ನಕೋಟೆ ಅಂಣ್ಣೈಯ್ಯಪ್ಪನವರ ಕೊಮಾರ್ರು ಗುರ್ರುಬ್ಬಂಣವರ ಸೊದರಹಳಿ ಮಲ್ಲಪ್ಪನ ಸ್ವದಸ್ತೂರು ಬರವಣಿಗೆ ಬುಕ್ ಸನ್ 1880 ಯ್ಸಿವಿ ಜನವರಿ ತಾರಿಕ್ಕು 1ನೆ ಬುಧವಾರ ಪ್ರಾರಂಭವು ಬರಿಯುವುದಕ್ಕೆ ಶುಭ. (ಚಿದಾನಂದ ಸಮಗ್ರ ಸಂಪುಟ:4, ಪುಟ–333) ಇದಕ್ಕೆ ಪೂರಕವೆಂಬಂತೆ ಹಸ್ತಪ್ರತಿಯ ಮೇಲ್ಭಾಗದಲ್ಲಿ This book belongs to the son-in-law of Goorubasanna living in Mamoolpetta, Bangalore ಎಂಬ ಇಂಗ್ಲೀಷ್ ಬರಹವಿದೆ.

ಚನ್ನಂಜಪ್ಪ: ಸ್ವಸ್ತಿಶ್ರೀ... ಸಂದ ವರ್ತಮಾನ 1732ನೆಯ ಪ್ರಮೋದೂತ ನಾಮ ಸಂವತ್ಸರದ ಮಾರ್ಗಶಿರ ಬ 6 ಸೋಮವಾರ ಪೂರ್ವ ಭದ್ರಪದ ನಕ್ಷತ್ರ ರಾತ್ರೆಗಳಿಗೆ 8ರಲ್ಲಿ... ಚೋರಬಸವಚಾರಿತ್ರ ಬರವಣಿಗೆ ಸಂಪೂರ್ಣಕ್ಕೆ.. ಬೆಂಗಳೂರು ದೊಡ್ಡಪ್ಯಾಟಿ ಕೆಂಪನಂಜಪ್ಪನವರ ಕುಮಾರ ಚಂನಂಜಪ್ಪನವರ ಚೋರಬಸವ... (ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂ:6, ಮೈಸೂರು, ಪುಟ–88)

ಕೋಳೂರು ಶಂಕರ ಕವಿಯ ಚೋರಬಸವೇಶ್ವರ ಚರಿತ್ರೆಯನ್ನು ಬೆಂಗಳೂರು ದೊಡ್ಡಪ್ಯಾಟಿ ಕೆಂಪನಂಜಯ್ಯನವರ ಮಗನಾದ ಚನ್ನಂಜಪ್ಪನು ಶಾಲಿವಾಹನ ಶಕೆ 1732ರಲ್ಲಿ ಪ್ರತಿಮಾಡಿ ಮುಗಿಸಿದ್ದನ್ನು ಮೇಲಿನ ಪ್ರಶಸ್ತಿಯಿಂದ ತಿಳಿದುಬರುತ್ತದೆ.

ಶಾಂತದೇವರು (ಸಾಂತಯ್ಯ): ಮುಖಬೋಳು ಸಿದ್ಧರಾಮನ ಷಟ್ಪಲ ತಿಲಕವನ್ನು ಶಾಂತದೇವರು ಬೆಂಗಳೂರಲ್ಲಿ ಪ್ರತಿ ಮಾಡಿ ಚಂದ್ರಶೇಖರ ದೇವರಿಗೆ ಕೊಟ್ಟದ್ದನ್ನು ಪ್ರಶಸ್ತಿಯು ಹೀಗೆ ಉಲ್ಲೇಖಿಸುತ್ತದೆ.

ಶಕ 1518 ಅಂಗೀರಸಂ ಭಾದ್ರಚಾಳ ಬಿದಿಗೆಯಲ್ಲು ಮಂಗಳವಾರದಲ್ಲಿ ಶ್ರೀಮತು ಶಾಂತದೇವಿ ದನುಗೂರು ಚಂದ್ರಶೇಕ್ರದೇವರಿಗೆ ಬರೆದುಕೊಟ್ಟ ಷಟ್ಪಲ ತಿಲಕ..ಯಿ ಪುಸ್ತಕ ಮೌನದೇವರ ಪುಸ್ತಕ. ಬೆಂಗಳೂರಲ್ಲಿ ಬರದಾತ ಸಾಂತಯ್ಯನು... (ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂ.1, ಚಿತ್ರದುರ್ಗ, ಪುಟ–393)

ಹೀಗೆ ಬೆಂಗಳೂರು ಪರಿಸರದಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಅವುಗಳ ಪರಿಚಲನೆ ಕಾರ್ಯ ವ್ಯಾಪಕವಾಗಿ ನಡೆದಿತ್ತು ಎಂಬುದು ಈವರೆಗಿನ ಅವಲೋಕನದಿಂದ ಸ್ಪಷ್ಟವಾಗುತ್ತದೆ. ಅಲ್ಲದೇ ಅನೇಕ ಲಿಪಿಕಾರರು ವಿವಿಧ ಕೃತಿಗಳನ್ನು ಪ್ರತಿಮಾಡುವುದರ ಮೂಲಕ ಕನ್ನಡ ಕಾವ್ಯಪುರಾಣಗಳ ಪರಿಚಲನೆಗೆ ಕಾರಣರಾಗಿದ್ದಾರೆ. ಇನ್ನೂ ಹಸ್ತಪ್ರತಿಗಳು ಶೋಧಗೊಂಡ ಹಾಗೆ ಬೆಂಗಳೂರು ಪರಿಸರದ ಲಿಪಿಕಾರರ ಬಗೆಗೆ ಹೊಸ ಸಂಗತಿಗಳು ತಿಳಿಯುವ ಸಾಧ್ಯತೆಗಳಿವೆ.

ಸಹಾಯಕ ಗ್ರಂಥಗಳು

1. ಹಳ್ಳಿಕೇರಿ ಎಫ್. ಟಿ, ಕನ್ನಡ ಹಸ್ತಪ್ರತಿ ಲಿಪಿಕಾರರ ಚರಿತೆ, (ಯುಜಿಸಿ ಪ್ರಧಾನ ಸಂಶೋಧನ ಯೋಜನೆ, ಅಪ್ರಕಟಿತ), 2005.
2. ಸಣ್ಣಯ್ಯ ಬಿ. ಎಸ್., (ಸಂ) ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟಗಳು, ಮೈಸೂರು ವಿಶ್ವವಿದ್ಯಾಲಯ ಮೈಸೂರು
3. ಶಿವಣ್ಣ. ಎಸ್., ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, 1994
4. ಶಿವಣ್ಣ. ಎಸ್., (ಸಂ) ಚಿತ್ರದುರ್ಗ ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ ಸಂಪುಟ.1, ಚಿತ್ರದುರ್ಗ, 1991
5. ಶಿವಣ್ಣ. ಎಸ್., (ಸಂ) ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ.1, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, 1982
6. ಗವರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ಸ್ ಲೈಬ್ರರಿ ಸೂಚಿ ಸಂಪುಟಗಳು, ಮದ್ರಾಸ್
7. ಚಿದಾನಂದಮೂರ್ತಿ. ಎಂ., ಚಿದಾನಂದ ಸಮಗ್ರ ಸಂಪುಟ.4, ಸಪ್ನ ಬುಕ್ ಹೌಸ್, ಬೆಂಗಳೂರು, 2004
8. ಎಂ. ಎಂ. ಕಲಬುರ್ಗಿ, ಕನ್ನಡ ಹಸ್ತಪ್ರತಿಶಾಸ್ತ್ರ, ಸ್ನೇಹ ಪ್ರಕಾಶನ ಬೆಂಗಳೂರು, 1993
9. ಎಫ್. ಟಿ. ಹಳ್ಳಿಕೇರಿ, ಕೆ. ರವೀಂದ್ರ ನಾಥ (ಸಂ), ಹಸ್ತಪ್ರತಿ ವ್ಯಾಸಂಗ.2, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, 2002.
10. ಎಫ್. ಟಿ. ಹಳ್ಳಿಕೇರಿ, ಕೆ. ರವೀಂದ್ರ ನಾಥ್ (ಸಂ), ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ. 1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
11. ಎ. ವಿ. ನಾವಡ, ಎಸ್. ಎಸ್. ಅಂಗಡಿ (ಸಂ), ಹಸ್ತಪ್ರತಿ ವ್ಯಾಸಂಗ.1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.

25. ಬೆಂಗಳೂರು ಜಿಲ್ಲಾ ಪರಿಸರದ ಶಾಸನೋಕ್ತ ಕೆರೆಗಳು

ಡಾ. ಪಿ. ವಿ. ಕೃಷ್ಣಮೂರ್ತಿ

ಮಾನವನ ಸಂಸ್ಕೃತಿಯ ವಿಕಸನದಲ್ಲಿ 'ನೀರು' ಅಮೋಘವಾದ ಪ್ರಭಾವವನ್ನು ಬೀರಿದೆ. ಪ್ರಾಗೈತಿಹಾಸಿಕ ಕಾಲದ ಮಾನವನು, ತನ್ನ ವಾಸಕ್ಕಾಗಿ ಆಯ್ದುಕೊಂಡ ಎಡೆಗಳು; ಸಾಮಾನ್ಯವಾಗಿ ನೀರು ಸಿಗುವಂತಹ ನೈಸರ್ಗಿಕ ತಾಣಗಳೇ ಆಗಿದ್ದವು. ನದಿಯ ದಡ, ಸರೋವರ, ಕುಂಟೆಗಳ ಸಾನಿಧ್ಯ ಇತ್ಯಾದಿ. ಕಾಲಾಂತರದಲ್ಲಿ ಮಾನವನು; ಬೇಟೆ, ಪಶುಪಾಲನಾ ಹಂತಗಳನ್ನು ದಾಟಿ ಕೃಷಿಯನ್ನು ತನ್ನ ಮುಖ್ಯ ಜೀವನಾಧಾರ ಕಸಬೆಂದು ಭಾವಿಸತೊಡಗಿದ ಕಾಲದಿಂದಲೇ ಮಳೆಯ ಅಥವಾ ಹೊಳೆಯ ನೀರನ್ನು ಸಾಕಷ್ಟು ಕಾಲ ಹಿಡಿದಿಟ್ಟುಕೊಳ್ಳುವ ಅವಶ್ಯಕತೆ ಕಂಡುಬಂದಿತು. ಅವನು ಈ ದಿಸೆಯಲ್ಲಿ ಮುನ್ನಡೆದು ಕೃತಕವಾಗಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು, ತನ್ನ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲು ನಡೆಯಿಸಿದ ಪ್ರಯತ್ನಗಳ ಫಲಗಳೇ ಕೆರೆ-ಕಟ್ಟೆಗಳಾಗಿ ರೂಪ ತಾಳಿದವು. ಇಂತಹ ಪ್ರಯತ್ನಗಳು ನೂತನ ಶಿಲಾಯುಗದ ಅಂತಮ ಘಟ್ಟಕ್ಕಾಗಲೇ ವ್ಯಾಪಕವಾಗಿ ನಡೆದು, ಮಾನವ ಒಂದೆಡೆ ನೆಲೆನಿಂತು ತನ್ನ ಅಶನ-ವಸನಗಳನ್ನು ಪೂರೈಸಿಕೊಳ್ಳತೊಡಗಿದ್ದನು. ಆದರೆ ಕೆರೆಗಳ ರಚನೆಯೇ ಒಂದು ತಂತ್ರಜ್ಞಾನವಾಗಿ ಆಗ ರೂಪುಗೊಂಡಿರಲಿಲ್ಲವೆನ್ನಬಹುದು. ಮುಂದಿನ ಕಾಲಮಾನದಲ್ಲಿ, ಅದರಲ್ಲೂ ಬಯಲು ನಾಡಿನ ಪ್ರದೇಶಗಳಲ್ಲಿ ವ್ಯವಸ್ಥಿತವಾಗಿ ಕೆರೆ ಕಾಲುವೆಗಳ ರಚನಾಕಾರ್ಯ ಆರಂಭಗೊಂಡಿತೆಂದು ಹೇಳಬಹುದು. ಆಳರಸರು, ಅಧಿಕಾರಿಗಳು, ಸ್ಥಳೀಯರು ತಮ್ಮ ರಾಜ್ಯದ, ಪ್ರದೇಶದ, ಊರಿನ ಅಭಿವೃದ್ಧಿಯ ದೃಷ್ಟಿಯಿಂದ ಅಗತ್ಯ ನೀರಿನ ತಾಣಗಳಾದ ಕೆರೆಗಳನ್ನು ಅವಿಭಾಜ್ಯವಾಗಿ ನಿರ್ಮಿಸಿರುವುದನ್ನು ಬಯಲು ಪ್ರದೇಶದ ಪ್ರತಿಯೊಂದು ಊರಿನಲ್ಲೂ ಕೆರೆಯೊಂದಿರುವುದರ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ, ಅಲ್ಲದೆ ಆ ತಾಣಗಳನ್ನು ಸಮುದ್ರ, ಸಾಗರ ಮುಂತಾದ ವೈಭವಯುತವಾದ ವಿಶೇಷಣಗಳಿಂದ ಕರೆದುಕೊಂಡಿರುವುದು ಕಂಡುಬರುತ್ತದೆ. ಅಂತೆಯೇ ಕೆರೆ, ಸಮುದ್ರ (ಸಂದ್ರ), ಏರಿ, ಕಟ್ಟೆ, ಕೊಳ, ಕುಂಟೆ, ತೀರ್ಥ, ದೊಣೆ ಇತ್ಯಾದಿ ಜಲಾಶಯ ಸೂಚಿ ಪದಗಳನ್ನು ಪ್ರತ್ಯಯಗಳಾಗಿ ಪಡೆದ ಊರ ಹೆಸರುಗಳಿಗೇನೂ ಕೊರತೆಯಿಲ್ಲ.

ಜೀವಂಗಳಿಗೆಲ್ಲಾ ಉದಕವೇ ಪ್ರಾಣ. ಅಂತೆಯೇ 'ಭೂಮಿಯ ಮೇಲಿನ ದೇವ, ನರ, ಮೃಗ ಪಕ್ಷಿ ಮೊದಲಾದ ಯೋನಿ ಜೀವರಾಶಿಗಳೆಲ್ಲವನ್ನೂ ರಕ್ಷಿಸಲೆಂದು ಕೆರೆಗಳನ್ನು ಕಟ್ಟಿಸಿದ ಪುಣ್ಯಾತ್ಮರು ಇದ್ದಾರೆ. ಅಷ್ಟೇ ಅಲ್ಲ ಅಂದಿನ ತಾಯಂದಿರು ತಮ್ಮ ಮಕ್ಕಳಿಗೆ 'ಕೆರೆಯಂ ಕಟ್ಟಿಸು, ಭಾವಿಯಂ ಸವಸು' ಎಂದು ಮುಂತಾಗಿ ಕಿವಿಯಲ್ಲಿ ಉಸಿರಿಸುತ್ತ ಹಾಲೆರೆಯುತ್ತಿದ್ದರು. ಅಂದಿನ ಆಳರಸರಾದರೂ, 'ಆರುಂ ಒಲ್ಲದ ಕಲ್ಕಾಡ ಬೆಟ್ಟಂ ಸವತಳಂ ಮಾಡಿಯೋಡಿಲ ಮನೆಯು ನನ್ದನವನವುಮಂ ಮಾಡಿಸಿ ಕೆರೆಯಂ ಕಟ್ಟಿಸಿ ತೊರೆಯ ಸೆರೆಯಿಟ್ಟು ಓವ ನೆಲನಂ ಪಿರಿದುಂಯಾಯಸದಿಂಸುಕ್ಷೇತ್ರಂ' ಮಾಡಿಸುತ್ತಿದ್ದರು. ಈ ರೀತಿಯಾಗಿ ನಮ್ಮ ಪೂರ್ವಜರು ನೀರು-ಕೆರೆಗಳ ಮಹತ್ವವನ್ನು ಮನಗಂಡಿದ್ದರು.

ಒಟ್ಟಾರೆ ಮಾನವ ಒಂದೆಡೆ ನೆಲೆನಿಲ್ಲಲು ಕಾರಣ ಕೆರೆಯೋ, ಕೆರೆಯೇ ಕಾರಣವಾಗಿ ಊರೋ ರಚನೆಗೊಂಡು ಪರಸ್ಪರ ಪೂರಕವಾಗಿ ಬೆಳೆದುಕೊಂಡು ಮಾನವನ ಜೀವನ ವಿಕಸನದಲ್ಲಿ ಕೆರೆಕಟ್ಟೆಗಳು ಪರೋಕ್ಷವಾಗಿ ಪ್ರಮುಖ ಸ್ಥಾನ ಪಡೆದಿದ್ದವು ಎಂಬುದು ಸರಿಯಷ್ಟೆ.

ಬೆಂಗಳೂರು ನಗರವೂ ಸೇರಿದಂತೆ ಬೆಂಗಳೂರು ಉತ್ತರ, ಪೂರ್ವ ಮತ್ತು ದಕ್ಷಿಣ ಹಾಗೂ ಆನೇಕಲ್ ತಾಲ್ಲೂಕುಗಳನ್ನು ಒಳಗೊಂಡಂತೆ ಇರುವ ಈ ಜಿಲ್ಲೆಯ ವಿಸ್ತಾರ ಕೇವಲ 2191 ಚ.ಕಿ.ಮೀ. ಮಾತ್ರ. ರಾಜ್ಯದ ಅತ್ಯಂತ ಚಿಕ್ಕ ಜಿಲ್ಲೆ. ಆದರೆ ಅತ್ಯಧಿಕ ಜನ ಸಾಂದ್ರತೆಯುಳ್ಳದ್ದಾಗಿದೆ. ಈ ಜಿಲ್ಲೆ ಭೌಗೋಳಿಕವಾಗಿ ಬಯಲುನಾಡಿನ ಪ್ರದೇಶವೆಂದು ಗುರುತಿಸಲಾಗಿದೆ. ಬೆಂಗಳೂರು ಜಿಲ್ಲಾ ಪ್ರದೇಶವು, ಈಶಾನ್ಯ ಮತ್ತು ಪೂರ್ವಕ್ಕೆ ಬಹುಮಟ್ಟಿಗೆ ಸಮತಟ್ಟಾಗಿದ್ದು ದಕ್ಷಿಣ ಪಿನಾಕಿನೀ ನದಿಯ ಜಲಾನಯನ ಪ್ರದೇಶವಾಗಿದೆ. ವಾಯವ್ಯ ಮತ್ತು ಪಶ್ಚಿಮ ಪ್ರದೇಶಗಳು ಅರ್ಕಾವತೀ ನದಿಗೆ ನೀರುಣಿಸುವ ಕೊರಕಲು ಪ್ರದೇಶದಿಂದ ಕೂಡಿದೆ. ದಕ್ಷಿಣ ಭಾಗದಲ್ಲಿ ಬನ್ನೇರುಘಟ್ಟದ ಬೆಟ್ಟ ಗುಡ್ಡಗಳ ಸಾಲುಗಳಿದ್ದು ಇದರ ಪಶ್ಚಿಮಕ್ಕಿರುವ ಪ್ರದೇಶಗಳು ಅರ್ಕಾವತಿಗೂ, ಪೂರ್ವಕ್ಕಿರುವ ಪ್ರದೇಶಗಳು ದಕ್ಷಿಣ ಪಿನಾಕಿನಿಗೂ ನೀರೊದಗಿಸುತ್ತವೆ. ಬೆಂಗಳೂರು ಜಿಲ್ಲಾ ಪ್ರದೇಶದಲ್ಲಿ ಸುಮಾರು ನಾನೂರಕ್ಕೂ ಹೆಚ್ಚು ಕೆರೆಗಳು ಅಸ್ತಿತ್ವ ಪಡೆದಿದ್ದು ಅವುಗಳಲ್ಲಿ ಕೆಲವು ಬಹಳ ಹಿಂದಿನಿಂದಲೇ ಇದ್ದು ಶಾಸನೋಕ್ತವಾಗಿರುವುದು ಗಮನಾರ್ಹ. ಪ್ರಸ್ತುತ ಆ ಶಾಸನೋಕ್ತ ಕೆರೆಗಳ ಅವಲೋಕನ ಈ ಬರಹದ ಉದ್ದೇಶವಾಗಿದೆ.

ಗಂಗರಸರ ಆಳ್ವಿಕೆಯ ಕಾಲಕ್ಕಾಗಲೇ ಈ ಜಿಲ್ಲಾ ಪ್ರದೇಶದಲ್ಲಿ ಅನೇಕ ಕೆರೆಗಳು ಅಸ್ತಿತ್ವ ಪಡೆದಿದ್ದವು. ಮುಖ್ಯವಾಗಿ ಗಂಗರಸರ ಕಾಲದ ಕೆರೆಗಳಲ್ಲಿ ಕ್ರಿ. ಶ. 870ರಲ್ಲಿ ಸತ್ಯವಾಕ್ಯ ಪೆರ್ಮಾಡಿಯ ಸಾಮಂತನಾದ ಕಲಿಯುಗದಣುಗ ನಾಗತ್ತರನ ಆಳೂ, ಇರ್ವ್ವಲಿಯೂರಿನ ಒಡೆಯ, ಇರುಗಮಯ್ಯನ ಮಗ ಸಿರಿಯಮಯ್ಯ ಎಂಬುವನು ಬೆಂಗಳೂರು ದಕ್ಷಿಣ ತಾಲ್ಲೂಕು ಅಗರದ ಬಳಿ ಮೂಡಣ ಕೆರೆಯೊಂದನ್ನು ಕಟ್ಟಿಸಿದ ವಿವರ ಹಾಗೂ ಅದಕ್ಕೂ ಮೊದಲು ಅಲ್ಲಿನ ಎರಡು ಕೆರೆಗಳಿಗೆ ತೂಬುಗಳನ್ನು ಇಡಿಸಿದ ವಿವರ ಶಾಸನೋಕ್ತವಾಗಿದೆ. ಇನ್ನೂ ಅನೇಕ ಕೆರೆಗಳು ಗಂಗರಸರ ಕಾಲದಲ್ಲಿ ರಚನೆಯಾಗಿರಬಹುದಾದರೂ, ಶಾಸನೋಲ್ಲೇಖಗಳು ಅಲಭ್ಯ. ಕ್ರಿ. ಶ. 10ನೇ ಶತಮಾನದ ಕೊನೆಕೊನೆಗೆ ಬೆಂಗಳೂರು ಜಿಲ್ಲಾ ಪ್ರದೇಶವು ಚೋಳರ ಆಳ್ವಿಕೆಗೆ ಒಳಪಟ್ಟಿತು. ಆಗಲೂ ಕೆರೆಗಳ ನಿರ್ಮಾಣಕಾರ್ಯ ಅವಿರತನಾಗಿ ಮುಂದುವರೆದಿರುವುದು ಕಂಡುಬರುತ್ತದೆ. ಸಣ್ಣೈನಾಡ ಗಾಮುಂಡನ ಮಗ ರಾಜರಾಜ ವೇಳಾನ್ ಎಂಬುವನು ಪಟ್ಟಂದೂರು ಕೆರೆಯನ್ನು ಕಟ್ಟಿಸಿದ ವಿವರ ಕ್ರಿ. ಶ. 1043ರ ಚೋಳ ರಾಜೇಂದ್ರನ ಕಾಡುಗೋಡಿಯ ಶಾಸನದಲ್ಲಿ ಬಂದಿದೆ. ಹನ್ನೆರಡನೆಯ ಶತಮಾನದ ವೇಳೆಗೆ ಹೊಯ್ಸಳರ ಆಳ್ವಿಕೆ ಬೆಂಗಳೂರು ಜಿಲ್ಲಾ ಪ್ರದೇಶದ ಮೇಲೆ ನೆಲೆಗೊಂಡಿತು. ಕೆರೆಕಟ್ಟೆಗಳ ರಚನಾ ಕಾರ್ಯ ನಿಲ್ಲಲಿಲ್ಲ. ಹೊಯ್ಸಳರ ಮಹಾಮಂಡಲೇಶ್ವರರಾದ ಕಜ್ಜಡ ಮಹಾರಾಯರೂ, ಪೂರ್ವಾದಿರಾಯರೂ ಆನೇಕಲ್ ತಾಲ್ಲೂಕು ಪ್ರದೇಶದಲ್ಲಿ ಅನೇಕ ಕೆರೆಕಟ್ಟೆಗಳ ನಿರ್ಮಾಣ ಕಾರ್ಯವನ್ನು ಕೈಗೊಂಡ ವಿವರ ಗಮನ ಸೆಳೆಯುತ್ತದೆ. ಕ್ರಿ. ಶ. 1265ರ ಹಂದೇನಹಳ್ಳಿ ಗ್ರಾಮದ ಶಾಸನವು ಮಂಡಲರಾಯ ತ್ರಿಭುವನಮಲ್ಲ ಕಜ್ಜಡ ಮಹಾರಾಯನಿಂದ ಆ ಗ್ರಾಮದ ಕೆರೆ ರಚನೆಗೊಂಡಿದ್ದನ್ನು ಉಲ್ಲೇಖಿಸುತ್ತದೆ. ತ್ರಿಭುವನಮಲ್ಲ ಪೂರ್ವಾದಿರಾಯ ವೆಲ್ಲಾಳ ಪೆರಮಾಳ್ ಎಂಬುವನಿಗಾಗಿ ಸೋಮ ಗಾವುಂಡನ ಮದ್ಯೆಯನ್ನನ ಮಗ ವೈರವನ್ ಎಂಬುವನು ಕೆರೆಯೊಂದನ್ನು ಕಟ್ಟಿಸಿದ ವಿವರ ಕ್ರಿ. ಶ. 1274ರ ಮಾಯಸಂದ್ರ ಗ್ರಾಮದ ಶಾಸನದಲ್ಲಿ ಬಂದಿದೆ. ಬೆಂಗಳೂರು ಪೂರ್ವ ತಾಲ್ಲೂಕಿನ ವಿಭೂತಿಪುರ ಗ್ರಾಮದ ಶಾಸನವು ಕ್ರಿ. ಶ. 1307ರಲ್ಲಿ ಮಾಸಂದಿನಾಡಿನ ಪಶ್ಚಿಮ ಭಾಗದ ಅಧಿಕಾರಿ ಸೆಂಬಿದೇವನ್, ನಾಡಗೌಡ ವಿಲ್ಲಗಾವುಂಡನ್ ಮುಂತಾದವರು ಸೇರಿ ಕಾಡನ್ನು ಕಡಿದು, ಮರಳನ್ನು ತೆಗೆದು, ಮಟ್ಟಮಾಡಿ ಕೆರೆಯೊಂದನ್ನು ರಚಿಸಿ, ಊರೊಂದನ್ನು ಕಟ್ಟಿ ಆ ಊರಿಗೆ ವಾಚ್ಚಿದೇವಪುರವೆಂದು ನಾಮಕರಣ ಮಾಡಿ, ವಾಚ್ಚಿದೇವ ಯತಿಗೆ ಮಡಪುರಂ ಅಂದರೆ ಪುರಧರ್ಮವಾಗಿ ದತ್ತಿಬಿಟ್ಟ ಸಂಗತಿಯನ್ನು ತಿಳಿಸುತ್ತದೆ. ಕ್ರಿ. ಶ. 1310ರಲ್ಲಿ ಹೊಯ್ಸಳ ವೀರಬಲ್ಲಾಳನ ಸಾಮಂತಾಧಿಪತಿಯಾದ ಗರಲೋಕ ಗಂಡ ಮಯಿಲೆಯನಾಯಕರ ಸೋದರ ಚೆಂನಯನಾಯಕನು ಮೂರು ಸಾವಿರ ಹೊನ್ನನಿಕ್ಕೆ 'ರಾಮಸಮುದ್ರ' ಎಂಬ ಕೆರೆಯನ್ನು ಕಟ್ಟಿಸಿದ

ವಿವರ ಬೆಂಗಳೂರು ದಕ್ಷಿಣ ತಾಲ್ಲೂಕು ರಾಮಸಂದ್ರದ ಅರೇಕೆರೆ ಸಮೀಪದ ಶಾಸನದಿಂದ ತಿಳಿಯುತ್ತದೆ. ಇದೇ ವರ್ಷಕ್ಕೆ ಸೇರಿದ ಬೆಂಗಳೂರು ಪೂರ್ವ ತಾಲ್ಲೂಕಿನ ಕಲ್ಲುಕೆರೆಯ ಶಾಸನವು ಅತಿವೃಷ್ಟಿಯಾಗಿ ಕಲಕೆರೆ ಮತ್ತು ಕೆರಳಬೆನಹಳ್ಳಿಯ ಕೆರೆಗಳ ವಡವುಗಳು ಒಡೆದು ಹೋದ ಸಂದರ್ಭದಲ್ಲಿ ಕಲುಕೆರೆಯ ದಾಮೋದರಸೆಟ್ಟಿ, ಆ ಎರಡೂ ಕೆರೆಗಳ ವಡವನ್ನು ಪುನರ್ ನಿರ್ಮಾಣ ಮಾಡಿಸುತ್ತಾನೆ. ಆಗ ನಾಡಿನ ದಂಡನಾಯಕರು, ನಾಡ ಸಮಸ್ತರು, ಪ್ರಜೆಗೌಡುಗಳು ಒಟ್ಟಿಗೆ ಸೇರಿ ಅವನಿಗೆ ಕಟ್ಟುಕೊಡುಗೆಯಾಗಿ ಹೊಲ, ಗದ್ದೆಗಳನ್ನು ಸರ್ವಮಾನ್ಯವಾಗಿ ದತ್ತಿ ನೀಡಿರುವುದನ್ನು ವಿವರಿಸುತ್ತದೆ.

ಈ ಮೇಲಿನ ಶಾಸನೋಕ್ತ ವಿವರಗಳನ್ನು ಗಮನಿಸಿದರೆ, ನಮ್ಮ ಪೂರ್ವಿಕರು ಕೆರೆ–ಕಟ್ಟೆಗಳ ರಚನೆಗೆ ಎಷ್ಟು ಮಹತ್ವವನ್ನು ನೀಡಿದ್ದರು ಎಂಬುದನ್ನು ತಿಳಿಯಬಹುದಾಗಿದೆ. ರಾಜ ಮಹಾರಾಜರಿಗಿಂತ ಹೆಚ್ಚಾಗಿ ಅವರ ಕೈಕೆಳಗಿನ ಮಹಾಮಂಡಳೇಶ್ವರರು, ಸಾಮಂತರು ಅಧಿಕಾರಿಗಳು, ನಾಡಗೌಡ, ಪ್ರಜೆ, ಸೆಟ್ಟಿ ವರ್ತಕರೇ ಮೊದಲಾದವರು ಪುಣ್ಯಾರ್ಜನೆಯ ನೆಪದಲ್ಲಿ ಕೆರೆಕಟ್ಟೆಗಳ ರಚನೆಯನ್ನು ಕೈಗೊಂಡಿರುವುದು ಗಮನ ಸೆಳೆಯುತ್ತದೆ. ಕೆರೆಕಟ್ಟೆಗಳ ರಚನಾ ಕಾರ್ಯ ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲೂ ನಡೆದಿರುವುದಕ್ಕೆ ಸಾಕ್ಷಿಯಾಗಿ ಆನೇಕಲ್ ತಾಲ್ಲೂಕು ಸಿಡಿಹೊಸಕೋಟೆಯ ಕ್ರಿ. ಶ. 1801ರಲ್ಲಿ ಮರಿಗೌಡ ಮತ್ತು ರಾಮಶೆಟ್ಟಿ ಎಂಬುವರು ಕೆರೆಕುಂಟೆ ಮುಂತಾದವುಗಳನ್ನು ಮಾಡಿಸಿರುವುದಕ್ಕೆ ಪ್ರತಿಫಲವಾಗಿ ಹೊಲದ ಕೊಡುಗೆ ನೀಡಿರುವುದನ್ನು ಶಾಸನವೊಂದು[12] ದಾಖಲಿಸುತ್ತದೆ. ಕ್ರಿ ಶ. 1834ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಮತ್ತಿಕೆರೆಯಲ್ಲಿ ನೆಲುವಲೂರು ವೀರಾಸಾಮಿಪಿಳ್ಳೆ ಎಂಬುವನು ಕೆರೆಯನ್ನು ಕಟ್ಟಿಸಿದ (ಬೆಂಗಳೂರು 160).

ಕೇವಲ ಕೆರೆಯನ್ನು ಕಟ್ಟುವುದಷ್ಟೇ ಅಲ್ಲ, ಅದರಿಂದ ಕ್ರಮವಾಗಿ, ನೀರನ್ನು ಪಡೆದುಕೊಳ್ಳಲು ತೂಬುಗಳು ಕೂಡ ಅಷ್ಟೇ ಮುಖ್ಯ. ಅಂದರೆ ಕೆರೆಗಳ ರಚನೆಯೊಂದಿಗೆ ಸೂಕ್ತವಾದ ರೀತಿಯಲ್ಲಿ ತೂಬುಗಳನ್ನು ಕೆರೆಗಳ ಅವಿಭಾಜ್ಯ ಅಂಗವಾಗಿ ಯೋಜಿಸುವುದು ಬಹುಮುಖ್ಯವಾದ ಅಂಶ. ಬಹುಶಃ ಆ ಕಾರಣದಿಂದಲೇ ಇರಬೇಕು ಕೆರೆಗಳ ರಚನೆಯೊಂದಿಗೆ ಅಥವಾ ಪ್ರತ್ಯೇಕವಾಗಿ ತೂಬುಗಳನ್ನು ಇಡಿಸಿದ ಬಗ್ಗೆ ಶಾಸನಗಳು ವಿವರಿಸುತ್ತವೆ. ಉದಾ: ಕ್ರಿ. ಶ.870ರ ಅಗರದ ಎರಡು ಕೆರೆಗಳಿಗೆ ತೂಬನ್ನಿರಿಸಿದ ವಿವರಗಳನ್ನು ಉಲ್ಲೇಖಿಸಲಾಗಿದೆ. ಕ್ರಿ. ಶ. 1316ರ ಆನೇಕಲ್ ತಾಲ್ಲೂಕು ಬಿದುರುಗೆರೆಯ ಶಾಸನ ಕೆರೆಯ ತೂಬಿನ ಮೇಲಿದ್ದು ತ್ರಿಭುವನಮಲ್ಲ ಪೂರ್ವಾದಿರಾಯ ಶಂಬಾಂಡೈ ಎಂಬುವ ಪೂರ್ವರಾಯನ್ 'ಈ ಶಿವಸಮುತ್ತಿರ ಕೆರೆಯ ತೂಬನ್ನು ಮಾಡಿಸಿದ' ಎಂದು ತಿಳಿಸುತ್ತದೆ.

ಯಾವುದೇ ವಾಸ್ತು ರಚನೆಯು ಅನುಗಾಲವೂ ಉಳಿದುಬರಬೇಕಾದರೆ ಅವುಗಳ ನಿರ್ವಹಣೆಯ ಕಾರ್ಯ ಕಾಲಕಾಲಕ್ಕೆ ನಡೆಯುತ್ತಿರಬೇಕು. ಇದಕ್ಕೆ ಕೆರೆಗಳಾದರೂ ಹೊರತಲ್ಲ. ಅವುಗಳ ದುರಸ್ತಿ ಮತ್ತು ನಿರ್ವಹಣೆ ಕಾರ್ಯ ಬಹು ಮುಖ್ಯ ಎಂಬ ಅಂಶವನ್ನು ನಮ್ಮ ಪೂರ್ವಜರು ಸರಿಯಾಗಿಯೇ ಮನಗಂಡಿದ್ದರು. ಹಾಗಾಗಿ ಕೆರೆಗಳ ರಚನೆಯೊಂದಿಗೆ ಅವುಗಳ ದುರಸ್ತಿ ಮತ್ತು ನಿರ್ವಹಣೆಯ ಬಗ್ಗೆಯು ಕ್ರಮ ತೆಗೆದುಕೊಂಡಿದ್ದರು. ಬಹುಮಟ್ಟಿಗೆ ಕೆರೆಯ ನಿರ್ವಹಣೆಯನ್ನು ಅದನ್ನು ಕಟ್ಟಿಸಿದವರ ಜವಾಬ್ದಾರಿಗೇ ವಹಿಸಿರುವುದು ಕಂಡುಬರುತ್ತದೆ. ಅಂತೆಯೇ ಅದಕ್ಕಾಗಿಯೇ ದತ್ತಿಯನ್ನು ನೀಡಿರುತ್ತಿದ್ದರು. ಅಲ್ಲದೆ ಅತಿವೃಷ್ಟಿ ಅಥವಾ ಬೇರೆ ಕಾರಣಗಳಿಂದ ಕೆರೆಯ ವಡವು ಕಿತ್ತುಹೋದರೆ ಅದರ ಜೀರ್ಣೋದ್ಧಾರ ಕಾರ್ಯವನ್ನು ನಿರ್ವಹಿಸಿದ ಬಗ್ಗೆ ಕಲ್ಲುಕೆರೆ ಕೆರಳಬೆನಹಳ್ಳಿ ಕೆರೆಗಳ ಉಲ್ಲೇಖದ ಸಂದರ್ಭದಲ್ಲಿ ಗಮನಿಸಿದ್ದೇವೆ. ಕ್ರಿ ಶ. 1302ರಲ್ಲಿ ಆನೇಕಲ್ ತಾಲ್ಲೂಕು ಜಿಗಣಿ ಗ್ರಾಮದ ಕೆರೆ ಒಡೆದಿದ್ದಾಗ ಶಿರಿಕೋಶ ಮಾರಪ್ಪ ಎಂಬುವನು ಜೀರ್ಣೋದ್ಧಾರ ಮಾಡಿಸಿದ ವಿವರ ಶಾಸನೋಕ್ತವಾಗಿದೆ. ಆ ಕೆಲಸಕ್ಕಾಗಿ ನಾಡಿನ ನಾಯಕರು, ಗೌಡಪ್ರಜೆಗಳು ಹಲವು ಭೂಮಿ ಕಾಣಿಗಳನ್ನು ಆತನಿಗೆ ಕೊಡುಗೆಯಾಗಿ ನೀಡಿರುವುದನ್ನು ಅದು ಉಲ್ಲೇಖಿಸುತ್ತದೆ.

ಕೆರೆಗಳನ್ನು ಕಟ್ಟಿಸುವುದನ್ನೇನೋ ಜನರು ಪುಣ್ಯಕಾರ್ಯವೆಂದು ಭಾವಿಸಿದ್ದರು; ಆದರೆ ಆ ಕಾರ್ಯವನ್ನು ಕೈಗೊಳ್ಳಲು ಅಪಾರ ಆರ್ಥಿಕ ಮತ್ತು ಮಾನವ ಸಂಪನ್ಮೂಲ ಅಗತ್ಯವಿದ್ದಿತು. ಅಂತಹ ಶಕ್ತಿ ಸಾಮರ್ಥ್ಯವನ್ನು ಹೊಂದಿರುವ ಸಂಘಟಿಸುವ ವ್ಯಕ್ತಿ ಅಥವಾ ಸಂಸ್ಥೆಗಳು ಆ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದವು. ಆಗ ಅವರು ಆ ಕೆರೆ–ಕಟ್ಟೆಯ ಕೆಳಗೆ ಒಂದು ನಿರ್ದಿಷ್ಟ ಪ್ರಮಾಣದ ಗದ್ದೆ ಭೂಮಿಗೆ ಹಕ್ಕುದಾರರಾಗುತ್ತಿದ್ದರು. ಅದನ್ನು 'ಕೆರೆಕಟ್ಟು ಕೊಡುಗೆ' ಎಂದು ಕರೆದಿರುವುದು ಕಂಡುಬರುತ್ತದೆ. ಇದನ್ನೇ 'ಬಿತ್ತುವಟ್ಟ' ಎಂದು ಕಾಲದಲ್ಲಿ ಕರೆದಿರುವುದು. ಅದರ ಪ್ರಮಾಣ ಬಹುತೇಕ ಹತ್ತನೇ ಒಂದು ಭಾಗದಷ್ಟಾಗಿರುತ್ತಿತ್ತೆಂದು ತೋರುತ್ತದೆ. ಹಾಗಾಗಿ ಅದನ್ನೇ 'ದಶವಂದ' ಎಂದೂ ಕರೆದಿರುತ್ತಾರೆ. ಪ್ರಸ್ತುತ 'ಕೆರೆಕಟ್ಟು ಕೊಡುಗೆ'ಯನ್ನು ಪ್ರಸ್ತಾಪಿಸುವ ಶಾಸನಗಳು ಬೆಂಗಳೂರು ಪೂರ್ವ ತಾಲ್ಲೂಕಿನ ಹೂಡಿ. ಗುಬ್ಬಿಹೊಸಹಳ್ಳಿ, ಗಾಣಿಗರಹಳ್ಳಿ, ಆನೇಕಲ್ ತಾಲ್ಲೂಕಿನ ಸರ್ಜಾಪುರ[18] ಸಿಡಿಹೊಸಕೋಟೆ ಮೊದಲಾದ ಸ್ಥಳಗಳ ಕೆರೆಗಳಿಗೆ ಸಂಬಂಧಿಸಿದಂತೆ ಲಭ್ಯವಾಗಿವೆ.

ಕೆರೆಕಟ್ಟೆಗಳ ಸಮೀಪದಲ್ಲಿ ಹಲವು ನಿರ್ದಿಷ್ಟ ದೇವತೆಗಳ ಶಿಲ್ಪಗಳು ಅಥವಾ ಅವುಗಳನ್ನೊಳಗೊಂಡ ಮಂಟಪ ಅಥವಾ ದೇವಾಲಯಗಳು ಇರುವುದನ್ನು ನಾವು ಅನೇಕ ಕಡೆ ಕಾಣಬಹುದಾಗಿದೆ. ಪ್ರಾಯಶಃ ಕೆರೆಯ ರಚನೆಯೊಂದಿಗೆ ಅದನ್ನು ನಿಯತವಾಗಿ ಪ್ರತಿಷ್ಠಾಪಿಸಬೇಕಾದ ಒಂದು ಸಂಪ್ರದಾಯ ಪ್ರಚಲಿತವಿದ್ದಿತೆಂದು ತೋರುತ್ತದೆ. ಅನೇಕ ಕೆರೆಕಟ್ಟೆಗಳ ಮೇಲೆ ದುರ್ಗಾದೇವಿಯ ಶಿಲ್ಪವಿರುವುದು ಸಾಮಾನ್ಯ. ಪ್ರಸ್ತುತ ಕ್ರಿ. ಶ. 1043ರ ಪಟ್ಟಂದೂರು ಕೆರೆಯ ಶಾಸನವು ಈ ಕೆರೆಯ ರಚನೆಯೊಂದಿಗೆ ದುರ್ಗಾ, ಕ್ಷೇತ್ರಪಾಲ ಮತ್ತು ಗಣಪತಿ ದೇವರುಗಳನ್ನು ಅಲ್ಲಿ ಸ್ಥಾಪಿಸಿದ ವಿವರವನ್ನು ನೀಡುತ್ತದೆ.

ನಾಡ ಶ್ರೀಮಂತರು ಅಥವಾ ನಾಡ ಒಡೆಯರು ತಮ್ಮ ಹಾಗೂ ತಮ್ಮ ಕುಟುಂಬದವರ ಇಲ್ಲವೆ ರಾಜನ ಶ್ರೇಯೋಭಿವೃದ್ಧಿಯನ್ನು ಬಯಸಿ ವಿಪ್ರರಿಗೆ ದಾನದತ್ತಿಗಳನ್ನು ನೀಡುವ ಸಂಪ್ರದಾಯ ಅನಾದಿ ಕಾಲದಿಂದ ಬಂದಿದೆ. ಹಾಗೆ ನೀಡುವಾಗ ಅನೇಕ ಕೆರೆಕಟ್ಟೆಗಳ ಕೆಳಗಿನ ಗದ್ದೆ ಭೂಮಿಯನ್ನು ದಾನ ನೀಡಿರುವುದುಂಟು. ಬೆಂಗಳೂರು ದಕ್ಷಿಣ ತಾಲ್ಲೂಕಿನ ಹೊಂಗಸಂದ್ರದ ಕ್ರಿ. ಶ. 1262 ಮತ್ತು 1294ರ ಶಾಸನಗಳಲ್ಲಿ ಉದಯ ಸಮುತ್ತಿರಂ, ಅನುಮಸಮುತ್ತಿರ ಮತ್ತು ಉಣಂಗಿಮಾರನ್‌ಕುಟ್ಟೈ ಕೆಳಗಿನ ಗದ್ದೆಭೂಮಿಯನ್ನು ಮಹಾಜನ–28 ಜನ ಬ್ರಾಹ್ಮಣರಿಗೆ ದತ್ತಿ ನೀಡಿರುವ ಸಂಗತಿ ಬಂದಿದೆ. ಆನೇಕಲ್ ತಾಲ್ಲೂಕಿನ ಹಂದೇನಹಳ್ಳಿ ಗ್ರಾಮದ ಕ್ರಿ. ಶ. 1265ರ ಹೊಯ್ಸಳ ಮಹಾಮಂಡಲೇಶ್ವರ ಕ ಡ ಮಹಾರಾಯನ ಶಾಸನವು ಆತನಿಂದ ರಚನೆಗೊಂಡ ಅಲ್ಲನ ಕೆರೆಯ ಕೆಳಗೆ 12 ಜನ ಬ್ರಾಹ್ಮಣರಿಗೆ ದತ್ತಿ ನೀಡಿದ ವಿವರವನ್ನು ನೀಡುತ್ತದೆ.

ಈ ಜಿಲ್ಲಾ ಪರಿಸರದಲ್ಲಿ ಹೊಯ್ಸಳರ ಕಾಲದ ಶಾಸನಗಳಲ್ಲೇ ಹೆಚ್ಚಿನ ಕೆರೆಕಟ್ಟೆಗಳ ಉಲ್ಲೇಖಗಳು ಕಂಡುಬಂದಿವೆ. ಕ್ರಿ. ಶ. 1110ರ ಶಾಸನವು ಬೇಗೂರಿನ ದೊಡ್ಡ ಕೆರೆಯನ್ನು ಉಲ್ಲೇಖಿಸುತ್ತದೆ. ಕ್ರಿ. ಶ. 1212ರ ಹೊಂಗಸಂದ್ರದ ಶಾಸನವು[24] ಅನುಮಸಮುತ್ತಿರಂ, ಉಣಂಗಿ ಮಾರನ್‌ಕುಟ್ಟೈ, ಅದೇ ಸ್ಥಳದ 1294ರ ಶಾಸನವು ಉದಯ ಸಮುತ್ತಿರ; ಕ್ರಿ. ಶ. 1266ರ ಶಾಸನವು ದೊಮ್ಮಲೂರಿನ ದೊಡ್ಡಕೆರೆ, ವಿಣ್ಣಮಂಗಲದ ಕೆರೆ, ಕೆಂಪಾಪುರ ಕೆರೆ (1306), ಚೊಕ್ಕಿಸೆಟ್ಟಿಕೆರೆ (1310), ಹೂಡಿ ಶಾಸನೋಕ್ತ ಮರಿಯ ಕೆರೆ, ಪಿಡಾರಿಕೆರೆ (1332) ಮುಖ್ಯವಾದುವಾಗಿವೆ.

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಶಾಸನಗಳಲ್ಲೂ ಅನೇಕ ಊರುಗಳ ಕೆರೆಗಳ ಉಲ್ಲೇಖಗಳು ಬಂದಿವೆ. ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟ (1396), ಮಾಯಸಂದ್ರ (1412), ಚಿಂತಲಮಡಿವಾಳ (1433), ಆನೇಕಲ್ (1614), ಸರ್ಜಾಪುರ (1650) ಶಾಸನಗಳಲ್ಲಿ ತತ್ತನಕೆರೆ, ಬೆಳಿವಾರಣದಕೆರೆ, ಹಿರಿಯಕೆರೆ, ದೊಡ್ಡಕೆರೆ ಎಂಬುವ ಉಲ್ಲೇಖಗಳು ಬಂದಿವೆ. ಬೆಂಗಳೂರು ಉತ್ತರ ತಾಲ್ಲೂಕಿನ ನಾಗಿಸೆಟ್ಟಿಹಳ್ಳಿ (1342), ಕೊಡಿಗೆಹಳ್ಳಿ

(1431), ಗೊಂಗಡಿಪುರ (1495), ಹೆಸರುಘಟ್ಟ (1532), ಹೆಬ್ಬಾಳ (1676)ದ ಶಾಸನಗಳಲ್ಲಿ ಹಿರಿಯಕೆರೆ, ಹೊನ್ನಸಮುದ್ರದಕೆರೆ, ಶಿವನಸಮುದ್ರದ ಕೆರೆ, ದೇವಸಮುದ್ರದ ಹಿರಿಯಕೆರೆ, ಕೆಂಪಬಸವಂಣನಕೆರೆ, ಹಬ್ಬಳಲ ಹಿರಿಯಕೆರೆ, ರೂಪಸಮುದ್ರ ಎಂಬುವ ಉಲ್ಲೇಖಗಳನ್ನು ಕಾಣಬಹುದಾಗಿದೆ. ಬೆಂಗಳೂರು ಪೂರ್ವ ತಾಲ್ಲೂಕು ಜ್ಯೋತಿಪುರ (ಸು.1600), ಗುಬ್ಬಿ ಹೊಸಹಳ್ಳಿ (1644), ದೊಮ್ಮಲೂರು, ಸ್ಥಳಗಳಿಗೆ ಸೇರಿದ ಶಾಸನಗಳಲ್ಲಿ ಚೊಕ್ಕನಾಥಸ್ವಾಮಿ ಹಿರಿಯಕೆರೆ, ಬಾಳೆಯಕೆರೆ ಎಂಬಿವೆ ಮುಂತಾದ ಕೆರೆಗಳು ಉಲ್ಲೇಖ ಬಂದಿವೆ.

ಹತ್ತೊಂಬತ್ತನೆಯ ಶತಮಾನದ ಅವಧಿಯಲ್ಲೂ ಜಲಾಶ್ರಯ ತಾಣಗಳಾದ ಕೆರೆ, ಕಟ್ಟೆ, ಕೊಳಗಳ ರಚನಾಕಾರ್ಯ ಮುಂದುವರಿದಿರುವುದನ್ನು ಕ್ರಿ. ಶ. 1801ರ ಸಿಡಿಹೊಸಕೋಟೆ ಮತ್ತು ಕ್ರಿ. ಶ. 1818ರ ಬನ್ನೇರುಘಟ್ಟ, ಕ್ರಿ. ಶ. 1834ರ ಮತ್ತಿಕೆರೆ (ಬೆಂಗಳೂರು 160) ಶಾಸನಗಳು ಬಿಂಬಿಸುತ್ತವೆ.

ನೀರನ್ನು ಸಂಗ್ರಹಿಸಿಟ್ಟುಕೊಂಡು ಅದನ್ನು ತನ್ನ ಅಗತ್ಯಕ್ಕೆ ತಕ್ಕ ಹಾಗೆ ಉಪಯೋಗವಾಗುವಂತೆ ಮಾಡಿಕೊಂಡ ಮಾನವನ ಪ್ರಯತ್ನದ ಫಲವಾಗಿ ಕೆರೆಕಟ್ಟೆಗಳ ರಚನಾ ಕಾರ್ಯವು ನಾಗರೀಕತೆಯ ಬೆಳವಣಿಗೆಯಲ್ಲಿ ಒಂದು ಬಹುಮುಖ್ಯ ಸೋಪಾನ ಅಥವಾ ಅಡಿಗಲ್ಲಾಗಿ ನಿಂತಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಇಂದಿನ ಬೆಂಗಳೂರು ಜಿಲ್ಲಾ ಪ್ರದೇಶದಲ್ಲಿ ಶೇ.20ರಷ್ಟು ಪ್ರದೇಶ ನಗರೀಕರಣಕ್ಕೆ ಈಡಾಗಿ ನೂರಾರು ಕೆರೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಪರಿಸರದ ವೈಪರೀತ್ಯಕ್ಕೂ ಕಾರಣವಾಗಿರುವುದು. ನೀರಿಗಾಗಿ ಪರಾವಲಂಬನೆ ಅಧಿಕಗೊಂಡು ಅದರ ವ್ಯವಸ್ಥೆಯಲ್ಲಿ ತುಸು ಏರು ಪೇರಾದರೂ ಉಂಟಾಗುವ ಪರಿಣಾಮಗಳು ಊಹಾತೀತ ನೆಲೆಯನ್ನು ತಲುಪಿವೆ ಎಂಬುದು ಮಾತ್ರ ಸತ್ಯ.

ಒಟ್ಟಾರೆ ಮಾನವ ಒಂದೆಡೆ ನೆಲೆ ನಿಲ್ಲಲು ಕಾರಣ ಕೆರೆ. ಇದೇ ಕಾರಣವಾಗಿ ಊರು ರಚನೆಗೊಂಡು ಪರಸ್ಪರ ಪೂರಕವಾಗಿ ಬೆಳೆದುಕೊಂಡು ಮಾನವನ ಜೀವನದಲ್ಲಿ ಕೆರೆಕಟ್ಟೆಗಳು ಪ್ರಮುಖ ಸ್ಥಾನ ಪಡೆದಿದ್ದವು ಎಂದು ಭಾವಿಸಬಹುದು.

26. ಬೆಂಗಳೂರಿನ ಕೆರೆಗಳು

ಡಾ. ಟಿ. ವಿ. ನಾಗರಾಜು

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಹಲವು ಕಿರುಶಿಲಾಯುಗದ ಕುರುಹುಗಳು ಕಂಡುಬಂದಿವೆ. ಬೃಹತ್ ಶಿಲಾಯುಗದ ಅವಶೇಷಗಳು ಬಾಣಸವಾಡಿ, ಕಣ್ಣೂರು, ಜಾಲಹಳ್ಳಿ, ಬೈರಸಂದ್ರ, ಬೇಗೂರು, ಚಿಕ್ಕಜಾಲ, ದೊಡ್ಡಜಾಲ ಅಲ್ಲದೆ ನಗರ ಪರಿಸರದ ಬನ್ನೇರುಘಟ್ಟ, ಬಾಚಸಂದ್ರಗಳಲ್ಲೂ ದೊರೆತಿವೆ. ಜೊತೆಗೆ ಚಿಕ್ಕಜಾಲದಲ್ಲಿ ದೊರೆತ ಬೃಹತ್ ಶಿಲಾಗೋರಿಗಳಲ್ಲಿ ಸಿಕ್ಕ ಕಬ್ಬಿಣದ ವಸ್ತುಗಳು ಮಡಿಕೆ ಕುಡಿಕೆಗಳು ಇಲ್ಲಿನ ಮಾನವ ಸಮುದಾಯಗಳು ಆ ವೇಳೆಗಾಗಲೆ ಮಳೆ ಹಾಗು ಕೆರೆಯ ನೀರನ್ನು ಬಳಸಿ, ಕೃಷಿ ಮಾಡುತ್ತಿದ್ದುದನ್ನು ಸೂಚಿಸುತ್ತವೆ. ಮುಂದೆ ಕ್ರಿ. ಶ. ದ ಆರಂಭದಲ್ಲಿ ಈ ಪ್ರದೇಶದಲ್ಲಿ ಜನವಸತಿ ಇದ್ದಂತಹ ಕುರುಹುಗಳು ಕಂಡು ಬಂದಿದ್ದು ಸಹಜವಾಗಿ ಜನವಸತಿಗಳನ್ನು ನೀರಿನ ಮೂಲಗಳಿಲ್ಲದ ಪ್ರದೇಶಗಳಲ್ಲಿ ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಆದರೆ ಆ ಕಾಲದ ನೀರಾವರಿ ಮೂಲಗಳ ಬಗ್ಗೆ ಖಚಿತ ಆಧಾರಗಳು ಲಭ್ಯವಿಲ್ಲದಿದ್ದರೂ ನೀರನ್ನು ಸಂಗ್ರಹಿಸಿಕೊಳ್ಳುವ, ಅಡ್ಡಕಟ್ಟೆಗಳನ್ನು ಮಣ್ಣುಮರ-ಕಲ್ಲುಗಳನ್ನು ಬಳಸಿ ನಿರ್ಮಿಸಿಕೊಳ್ಳುತ್ತಾ, ಮಳೆಯ ಕೊರತೆಯ ಸಂದರ್ಭಗಳಲ್ಲಿ ಬಳಸಿಕೊಳ್ಳುವ ತಂತ್ರಗಾರಿಕೆ ರೂಪುಪಡೆದಿರಲೇಬೇಕು.

ಬೆಂಗಳೂರು ನಗರ ಪರಿಸರದ ನೀರಾವರಿ ಚೌಕಟ್ಟನ್ನು ಪರಿಚಯಿಸುವ ಪ್ರಪ್ರಥಮ ಶಾಸನೋಕ್ತ ಆಧಾರವೆಂದರೆ, ಅಗರದ ಶಾಸನ. ಇದು ಗಂಗರ ಕಾಲದಲ್ಲಿ ಅಗ್ರಹಾರವಾಗಿದ್ದು ಅಲ್ಲಿ ಎರಡು ಕೆರೆಗಳಿದ್ದು, ಅವುಗಳಿಗೆ ತೂಬುಗಳನ್ನು ಇರಿಸಿದುದನ್ನು ಹಾಗು ಪೂರ್ವದ ಕೆರೆಯನ್ನು ನಿರ್ಮಿಸಿರುವುದನ್ನು ದಾಖಲಿಸುತ್ತಾ, ಮೂರು ಕೆರೆಗಳ 'ಬಿಟ್ಟುವಟ್ಟಿ' ಪಡೆದಿದ್ದನ್ನು ಉಲ್ಲೇಖಿಸಿದೆ. ಕ್ರ. ಶ. 1043ರ ಶಾಸನದಲ್ಲಿ ತಡೆಗೈಮಾಳಿಯ ಸಣ್ಣ ನಡುವಿನ ಪಟ್ಟಂದೂರು ಕೆರೆ ನಿರ್ಮಿಸಿ ಮೂರು ತೂಬುಗಳನ್ನು ಇರಿಸಿದ್ದನ್ನು ದಾಖಲಿಸಿದೆ. ಚೋಳರ ಕಾಲಾವಧಿಯಲ್ಲಿ ಕಾಡುಗೋಡು ಬಳಿ ಪಟ್ಟಂದೂರು ಕೆರೆ ಕಟ್ಟಿಸಿ, ಅದರ ದುರಸ್ತಿಗಾಗಿ 250 ಕುಳಿ ಭೂಮಿಯನ್ನು ದಾನವಾಗಿ ನೀಡಿರುವುದು ದಾಖಲಾಗಿದೆ. ಕ್ರಿ. ಶ. 1110ರ ಶಾಸನದಲ್ಲಿ ಮೊರಸುನಾಡುವಿನ ಅಧಿಕಾರಿ ಬೇಗೂರು ಕೆರೆ ಪರಿಸರದ ಭೂಮಿಯನ್ನು ದೇವಾಲಯಕ್ಕೆ ದತ್ತಿ ನೀಡಿದ್ದನ್ನು ದಾಖಲಿಸಿದೆ. ಕ್ರಿ. ಶ. 1247ರ ಶಾಸನ ತಾವರೆಕೆರೆ ದೊಡ್ಡಕೆರೆ ಕೆಳಗಿನ ಭೂಮಿಯನ್ನು ಅಲ್ಲಿನ ಅಧಿಕಾರಿಯೊಬ್ಬ ದೇವಾಲಯಕ್ಕೆ ನೀಡಿದ್ದನ್ನು ದಾಖಲಿಸಿದೆ. ಕ್ರಿ. ಶ. 1253ರ ತಾಮ್ರಪಟಗಳಲ್ಲಿ (ಬೇಗೂರು) ಅಗ್ರಹಾರದ ಬ್ರಾಹ್ಮಣರಿಗೆ ಭಟ್ಟವೃತ್ತಿಗಾಗಿ 62 ಪಾಲು ನೀಡಿದ್ದನ್ನು ದಾಖಲಿಸಿದೆ. ಅಗ್ರಹಾರದ ಚಟುವಟಿಕೆಗಳಿಗಾಗಿ ಪ್ರಾಯೋಜಕತ್ವ ಪಡೆದ ಭೂದಾನಗಳಲ್ಲಿ ಎರಡು ಪಾಲು ಅಲ್ಲಿನ ಕೆರೆಯ ನಿರ್ವಹಣೆಗಾಗಿ ನೀಡಿರುವುದು ಕೃಷಿ ಆದಾಯದ ಹೆಚ್ಚಳಕ್ಕೆ ನೀರಾವರಿ ಸೌಲಭ್ಯದ ನಿರ್ವಹಣೆಗೆ ಮಹತ್ವ ನೀಡಿರುವುದು ಕಂಡುಬರುತ್ತದೆ. ವಿಭೂತಿಪುರದ ಕ್ರಿ. ಶ. 1307ರ ಶಾಸನ ಮಾಸಂದಿ ನಡುವಿನ ಆಡಳಿತಗಾರ ಹಾಗು ನಡುವಿನ ನಿವಾಸಿಗಳು ಕಾಡನ್ನು ಕಡಿದು, ಭೂಮಿಯನ್ನು ಸಮತಟ್ಟುಗೊಳಿಸಿ ಹಳ್ಳದ ಮರಳನ್ನು ತೆಗೆದು, ಕೆರೆ ನಿರ್ಮಿಸಿದುದನ್ನು ಉಲ್ಲೇಖಿಸಿದೆ.

ಕ್ರಿ. ಶ 1303ರ ಶಾಸನ ಪಟ್ಟಣ ಸ್ವಾಮಿಯೊಬ್ಬ ಹೂಡಿಗ್ರಾಮದ ಕೆರೆಯ ರಕ್ಷಣೆಗಾಗಿ 'ಕಟ್ಟುಕೊಡುಗೆ' ನೀಡಿರುವುದನ್ನು ದಾಖಲಿಸಿದೆ. ಕ್ರಿ. ಶ. 1302ರ ಜಾಗಣೆಯ ಶಾಸನದಲ್ಲಿ ಮಾರಪ್ಪ ಎಂಬುವನು ಒಡೆದುಹೋಗಿದ್ದ ಕೆರೆಯನ್ನು ತನ್ನ ಸ್ವಂತ ವೆಚ್ಚದಿಂದ ದುರಸ್ತಿಗೊಳಸಿದನೆಂದು, ಅದಕ್ಕಾಗಿ ಅವನಿಗೆ ಭೂದಾನ ನೀಡಿರುವುದು

ದಾಖಲಾಗಿದೆ. ಕ್ರಿ. ಶ. 1303ರ ಕಲ್ಕೆರೆ ಶಾಸನದಲ್ಲಿ ಹೆಚ್ಚಿನ ಮಳೆಯಿಂದಾಗಿ, ಕೆರೆ ಒಡೆದುಹೋಗಿದ್ದು ಕೋಡಿಯೊಪ್ಪ, ರಾಮಾಧರಶೆಟ್ಟರು ದುರಸ್ತಿಗೊಳಿಸಿದ್ದಕ್ಕಾಗಿ ಭೂದಾನಗಳನ್ನು ನೀಡಿರುವುದನ್ನು ದಾಖಲಿಸಿದೆ. ಬೇಗೂರಿನ ಮತ್ತೊಂದು ಶಾಸನದಲ್ಲಿ ನಾಗೇಶ್ವರ ದೇವಾಲಯಕ್ಕೆ ಪೂಜಾ ಕಾರ್ಯಗಳಿಗಾಗಿ ಯಡಿಯೂರು ಕೆರೆ ಕೆಳಗಿನ ಭತ್ತದ ಭೂಮಿಯನ್ನು ನಿರ್ದಿಷ್ಟಪಡಿಸಿ, ದತ್ತಿ ಬಿಟ್ಟಿರುವುದನ್ನು ದಾಖಲಿಸಿದೆ. ಕ್ರಿ. ಶ. 1247ರ ಮಡಿವಾಳ ಶಾಸನದಲ್ಲಿ ವೆಂಗಳೂರಿನ ದೊಡ್ಡಕೆರೆ ಕೆಳಗಿನ ಭೂಮಿಯನ್ನು ಹಲವು ಮಂದಿಗೆ ದಾನ ನೀಡಿರುವುದನ್ನು ದಾಖಲಿಸಲಾಗಿದೆ. ಕ್ರಿ. ಶ. 1226ರ ಶಾಸನ ಜಾಲಪಲ್ಲಿಯ ನಾಲ್ಕುದಿಕ್ಕಿನ ಖುಷ್ಕಿ ಭೂಮಿಯಲ್ಲದೆ ವಿನ್ನಮಂಗಲದ ಕೆರೆ ಹಾಗು ಅಚ್ಚುಕಟ್ಟಿನ ಭಾಗಗಳನ್ನು ದೇವಾಲಯವೊಂದಕ್ಕೆ ದತ್ತಿಬಿಟ್ಟಿದ್ದನ್ನು ದಾಖಲಿಸಿದೆ. ಕ್ರಿ. ಶ. 1305ರ ಜಕ್ಕೂರಿನ ಶಾಸನದಲ್ಲಿ ಕೃಷಿ ಹಾಗು ನೀರಾವರಿ ಭೂಮಿಗಳನ್ನು, ಕೊಳ, ಕೆರೆ, ಹಾಗು ಇನ್ನಿತರೆ ಸ್ವರೂಪದ ಭೂಮಿಯೂ ಸೇರಿದಂತೆ 'ಸರ್ವ ಮಾನ್ಯ'ವಾಗಿ ನೀಡಿದ್ದನ್ನು ದಾಖಲಿಸಿದೆ. ಕ್ರಿ ಶ. 1342ರ ನಾಗಶೆಟ್ಟಿಹಳ್ಳಿ ಶಾಸನದಲ್ಲಿ ಮಹಾಸಾಮಂತ, ಚಿಕ್ಕಬೈರಯ್ಯ ಮತ್ತು ಇತರ ನಿವಾಸಿಗಳು, ನಾಗವಾರ ಮಾರಗೌಡರ ಮಾರಪ್ಪನಿಗೆ ನಾಗಶೆಟ್ಟಿಹಳ್ಳಿಯ ಹಳೆಕೆರೆಯ ಅಚ್ಚುಕಟ್ಟಿನ ಅರ್ಧ ಭೂಮಿಯನ್ನು ದಾನವಾಗಿ ನೀಡಿದ್ದನ್ನು ದಾಖಲಿಸಲಾಗಿದೆ.

ಕ್ರಿ. ಶ. 1515ರ ಮತ್ತೊಂದು ಶಾಸನದಲ್ಲಿ ಅಗರದ ಕೆರೆಯ ನಿರ್ವಹಣೆಗಾಗಿ ಗಾಡಿಯೊಂದನ್ನು ನಿರ್ವಹಿಸಲು ಭೂದಾನ ನೀಡಿರುವುದು ದಾಖಲಾಗಿದೆ.

ಅಚ್ಯುತರಾಯ ಕೆಂಪೇಗೌಡರಿಗೆ ಯಲಹಂಕದ ನಾಯಕತ್ವ ನೀಡಿದ ಸಂದರ್ಭದಲ್ಲಿ ಹೆಸರುಘಟ್ಟದ ಕೆರೆ ನಿರ್ಮಿಸಿ, ಶಿವಸಂದ್ರ ಎಂಬ ಅಗ್ರಹಾರ ನಿರ್ಮಿಸಿ, ಅಲ್ಲಿನ ಅರ್ಕಾವತಿಗೆ ಕಟ್ಟೆ ಕಟ್ಟಿಸಿ, ಶಿವನಸಮುದ್ರ, ಎಂದು ಹೆಸರಿಸಿರುವುದನ್ನು ಶಾಸನದಲ್ಲಿ ದಾಖಲಿಸಿದೆ.

ನಾಡಪ್ರಭು ಕೆಂಪೇಗೌಡರು ಕೋಟೆ ಕಟ್ಟಿದ್ದಲ್ಲದೆ, ಪೇಟೆ ನಿರ್ಮಿಸಿ ಬೆಂಗಳೂರನ್ನು ಕಟ್ಟಿದ ರೂವಾರಿ. ಜೊತೆಯಲ್ಲಿ ಅಗತ್ಯವಾಗಿದ್ದ ನೀರಾವರಿ ಮೂಲಗಳನ್ನು ಗಣನೀಯವಾಗಿ ಅಭಿವೃದ್ಧಿ ಪಡಿಸುವಲ್ಲಿ ತೋರಿದ ಆಸಕ್ತಿ ಗಮನಾರ್ಹ. ಹಿರಿಯ ಕೆಂಪೇಗೌಡ ತಮ್ಮ ಕುಲದೇವತೆಯಾದ ಕೆಂಪಮ್ಮನ ಹೆಸರಿನಲ್ಲಿ ನಿರ್ಮಿಸಿದ 'ಕೆಂಪಾಂಬುಧಿ ಕೆರೆ' ಅತ್ಯಂತ ಪ್ರಮುಖವಾದುದು. ಧರ್ಮದೇವತೆಯ ಹೆಸರಿನಲ್ಲಿ 'ಧರ್ಮಾಂಬುಧಿ ಕೆರೆ' ನಿರ್ಮಿಸಿದರು. ಇಮ್ಮಡಿ ಕೆಂಪೇಗೌಡನು ಕೋಟೆಯ ದಕ್ಷಿಣ ದಿಕ್ಕಿನಲ್ಲಿ ಕಾರಂಜಿಕೆರೆ ನಿರ್ಮಿಸಿ, ಕಾಲುವೆಗಳ ಮೂಲಕ ಆ ನೀರನ್ನು ಕೋಟೆಯೊಳಗೆ ಹರಿಸುವ ವ್ಯವಸ್ಥೆ ಮಾಡಿದ್ದನು. ತನ್ನ ಪೂರ್ವಿಕ ಗಿಡ್ಡಪ್ಪಗೌಡನ ಹೆಸರಿನಲ್ಲಿ ಒಂದು ಕೆರೆಯನ್ನು (ಬಿನ್ನಿಮಿಲ್ ಕೆರೆ) ನಿರ್ಮಿಸಿದನೆಂದು ಅಭಿಪ್ರಾಯ ಇದೆ. ಕೆಂಪಾಪುರ ಅಗ್ರಹಾರ ಮತ್ತು ಸಂಪಂಗಿ ಕೆರೆಗಳನ್ನು ಕೃಷಿ ಚಟುವಟಿಕೆಗಳ ವಿಸ್ತರಣೆಗೆ ಪೂರಕವಾಗಿ ನಿರ್ಮಿಸಲಾಗಿದ್ದಿತು. ಸರಣಿಯೋಪಾದಿ ಯಲ್ಲಿ ನಿರ್ಮಾಣಗೊಂಡಿರುವ ಕೋರಮಂಗಲ ಕೆರೆ, ಆಡುಗೋಡುಕೆರೆ, ಚೋಳಘಟ್ಟ ಕೆರೆಗಳಿಂದ ಹರಿದು ಹೋಗಿ ದೊಮ್ಮಲೂರು, ಬೆಳ್ಳಂದೂರು ಕೆರೆ ಸೇರುವ ಮುಂದೆ ವರ್ತೂರು ಬಳಿ ಅಡ್ಡಕಟ್ಟೆ ನಿರ್ಮಿಸಿದನೆಂದು ಅಭಿಪ್ರಾಯವಿದೆ. ಚೆನ್ನಮ್ಮನ ಕೆರೆ, ಅಲಸೂರು ಕೆರೆ, ಯಡಿಯೂರು ಕೆರೆಗಳು ಸಹ ನಾಡಪ್ರಭುಗಳ ಕೊಡುಗೆಯಾಗಿವೆ ಎಂಬ ಅಭಿಪ್ರಾಯವಿದೆ.

ಮೊದಲಿಗೆ ಬೆಂಗಳೂರಿನ ಬಹುಪಾಲು ಅವಶ್ಯಕತೆಯನ್ನು ಪೂರೈಸುತ್ತಿದ್ದ ನೀರಿನ ಮೂಲವೆಂದರೆ ಧರ್ಮಾಂಬುದಿ ಮತ್ತು ಕೆಂಪಾಂಬುದಿ ಕೆರೆಗಳೇ. ಇವುಗಳಲ್ಲಿ ಧರ್ಮಾಂಬುಧಿ ಕೆರೆ ನೀರು ಹೆಚ್ಚಿನ ಜನರ ವ್ಯವಸಾಯೇತರ ಅವಶ್ಯಕತೆಗಳಿಗೆ ಮೀಸಲಾಗಿದ್ದಂತೆ ತೋರುತ್ತದೆ. ಈಗಿನ ಲಾಲ್‌ಬಾಗ್ ಬಳಿ ಇದ್ದ ತೂಬಿನ ಮೂಲಕ ನೀರು ಜನವಸತಿ ಪ್ರದೇಶಕ್ಕೆ ಹರಿದು ಹೋಗಲು ಕಾಲುವೆಗಳಿದ್ದವು. ಈ ಕಾಲುವೆಗಳ ಮಧ್ಯೆ ಅಲ್ಲಲ್ಲಿ

ಇದ್ದ ತೊಟ್ಟಿಗಳಲ್ಲಿ ತುಂಬಿದ ನೀರನ್ನು ಜನ ತಮ್ಮ ಅವಶ್ಯಕತೆಗಳಿಗೆ ಬಳಸಿಕೊಳ್ಳುತ್ತಿದ್ದರು. ಕುಡಿಯುವ ನೀರಿಗೆ ಮನೆಗಳ ಒಳಗೆ ಖಾಸಗಿಯಾಗಿ ಅಥವಾ ಬಹುಮುಖ್ಯ ಸ್ಥಳಗಳಲ್ಲಿ ಸಾರ್ವಜನಿಕ ಬಾವಿಗಳು ಇದ್ದವು. ಬೆಂಗಳೂರಿಗೆ ನಳದ ನೀರು ಸರಬರಾಜಿಗೆ ಮುನ್ನ ಶ್ರೀಮಂತರ ಮನೆಗಳಿಗೆ ನೀರನ್ನು ಸರಬರಾಜು ಮಾಡಲು ಪ್ರತ್ಯೇಕ ಜನರೇ ಇರುತ್ತಿದ್ದರು.

1800ರಲ್ಲಿ 'ಫ್ರಾನ್ಸಿಸ್ ಬುಖಾನನ್' ನೀರಾವರಿ ಸೌಲಭ್ಯಗಳು ವ್ಯವಸ್ಥಿತವಾಗಿ ನಿರ್ಮಾಣಗೊಂಡಿವೆ. ಕೆರೆ ಹಾಗು ಬಾವಿಗಳಿಂದ, ನೀರನ್ನು ಪ್ರತಿ ದಿಕ್ಕಿಗೂ ಪೂರೈಸುವಂತಹ ವ್ಯವಸ್ಥೆ ಇದೆ. ಟಿಪ್ಪು ದಕ್ಷಿಣದಲ್ಲಿ ಒಂದು ಕೆರೆ ನಿರ್ಮಿಸಿದ್ದನೆಂದು ಜೊತೆಗೆ ಹೆಚ್ಚುವರಿಯಾಗಿ ಮೂರು ಬಾವಿಗಳನ್ನು ತೋಡಿಸಿದ್ದು, ಬಾವಿಗಳಿಂದ ನೀರನ್ನು ಕಪಿಲೆ ಸಹಾಯದಿಂದ ಎತ್ತಲಾಗುತ್ತಿತ್ತು. ಎಂದು ತನ್ನ ಪ್ರವಾಸ ವರದಿಯಲ್ಲಿ ದಾಖಲಿಸಿದ್ದಾನೆ. ಷಹಜಿ ಕಾಲದಲ್ಲಿ ಕೋಟೆ ನವೀಕರಣ ಸಂದರ್ಭದಲ್ಲಿ ನಾಲ್ಕು ಗೋಪುರಗಳು, ಒಂಬತ್ತು ಬಾಗಿಲುಗಳು ಮತ್ತು ಒಂಬತ್ತು ಕೆರೆಗಳು ಉಲ್ಲೇಖಿತಗೊಂಡಿವೆ. ಏಕೋಜಿ ಹಲವು ಕಾಲುವೆಗಳನ್ನು ಹಾಗು ಬಾವಿಗಳನ್ನು ನಿರ್ಮಿಸಿದನೆಂದು ಹೇಳಲಾಗಿದೆ. 1808ರಲ್ಲಿ ದಂಡು ಪ್ರದೇಶ ಪ್ರಾರಂಭವಾಗಲು ಬಹುತೇಕ ಅಲಸೂರು ಕೆರೆಯೇ ಕಾರಣವಾದ ಅಂಶಗಳಲ್ಲಿ ಪ್ರದಾನವಾದುದು. ಬೌರಿಂಗ್ ಅಲಸೂರು ಕೆರೆಯ ಸುತ್ತಲೂ ಜೌಗು ಪ್ರದೇಶವನ್ನು ಮುಚ್ಚಿಸಿ, ಕೆರೆಯ ಸುತ್ತ ರಸ್ತೆ ನಿರ್ಮಾಣ ಮಾಡಿಸಿದ್ದಲ್ಲದೆ ಕೆರೆ ಏರಿಯನ್ನು ಎತ್ತರಿಸಿ, ಕೆರೆಯ ನೀರನ್ನು ಕುಡಿಯಲು ಯೋಗ್ಯವಾಗಿಸಿದನು. ಇದಲ್ಲದೆ ಮಿಲ್ಲರ್ ಕೆರೆ ಬಳಿ ನಾಲ್ಕು ಲಕ್ಷ ಗ್ಯಾಲನ್ ಸಾಮರ್ಥ್ಯದ ಒಂದು ಜಲಸಂಗ್ರಹಾಲಯವನ್ನು ನಿರ್ಮಿಸಿದನು.

1897ರಲ್ಲಿ ಮೇಜರ್ ಸ್ಯಾಂಕಿ ನಿರ್ಮಿಸಿದ ಕೆರೆ, 5.24ಲಕ್ಷ ರೂ.ಗಳಲ್ಲಿ ನಿರ್ಮಾಣವಾಯಿತು. ಇದರ ಕೋಡಿ ಹರಿದಾಗ ಆ ನೀರು ಧರ್ಮಾಂಬುಧಿ ಕೆರೆಗೆ ಬರುವಂತೆ ಕಾಲುವೆ ವ್ಯವಸ್ಥೆ ಮಾಡಲಾಯಿತು. 1843ರಲ್ಲಿ ಮತ್ತಿಕೆರೆ ಭಾಗದ ಕೆರೆ ನಿರ್ಮಾಣಗೊಂಡಿತು. ದಂಡು ಪ್ರದೇಶಕ್ಕೆ ಅಲಸೂರಿನ ಕೆರೆ ನೀರು ಸಾಲದಾದಾಗ ಮಿಲ್ಲರ್ ಮೂರು ಕೆರೆಗಳನ್ನು ನಿರ್ಮಿಸಿದರು.

ಬೆಂಗಳೂರು ಮುನಿಸಿಪಲ್ ಸಾಮರ್ಥ್ಯಕ್ಕೆ ಮೀರಿ ಬೆಳೆದಂತೆ ನೀರಿನ ಪೂರೈಕೆ ಸವಾಲಿನದಾಯಿತು. 1890ರ ವೇಳೆಗೆ ಬೆಂಗಳೂರು ನಗರ ಮತ್ತು ದಂಡು ಪ್ರದೇಶದ ನೀರಿನ ಬೇಡಿಕೆ ಪೂರೈಸಲು ಹೆಚ್ಚು ನೀರಿಗಾಗಿ ಹುಡುಕಾಟ ನಡೆದಿತ್ತು. 1894ರಲ್ಲಿ ಹೆಸರುಘಟ್ಟ ಕೆರೆ ವಿಸ್ತರಣಾಕಾರ್ಯ ನಡೆದು ಮುಖ್ಯ ಇಂಜಿನಿಯರ್ ಹುಲ್ಸ್‌ನ ಯೋಜನೆಯಂತೆ, ನಗರದ ಪ್ರತಿ ವ್ಯಕ್ತಿಗೆ ತಲಾ 55 ಲೀಟರ್‌ನಂತೆ, ಕಾಲುವೆಗಳ ಮೂಲಕ ನೀರು ಸರಬರಾಜು ವ್ಯವಸ್ಥೆ ಜಾರಿಗೊಂಡಿತು. ಬೆಂಗಳೂರಿನ ಬಾವಿಗಳಲ್ಲಿ ಉಪ್ಪಿನ ಅಂಶ ಹೆಚ್ಚಾಗಿದ್ದುದರಿಂದ ಹೆಸರುಘಟ್ಟದ ನಲ್ಲಿ ನೀರು ಶೇಷಾದ್ರಿ ಕಾಫಿ ಎಂದು ಹೆಸರು ಪಡೆಯಿತು.

1930ರ ವೇಳೆಗೆ ಈ ಪ್ರದೇಶದಲ್ಲಿ ಇದ್ದಂತಹ ಕೆರೆಗಳ ಸಂಖ್ಯೆ 347 ದೊಡ್ಡ ಕೆರೆಗಳು ಹಾಗು 1258 ಸಣ್ಣಕೆರೆಗಳು. ದೇಶದ ಯಾವುದೇ ನಗರಕ್ಕೆ ಇರದ 'ಜಲಸಿರಿ' ಬೆಂಗಳೂರಿಗೆ ಕೆರೆಗಳ ರೂಪದಲ್ಲಿ ಇದ್ದಿತು. ಆಗಿನ ಕಾಲಘಟ್ಟದಲ್ಲಿ ನೀರಿನ ಬೇಡಿಕೆ ಮಳೆಗಾಲದಲ್ಲಿ ಪ್ರತಿದಿನ 3 ಲಕ್ಷ ಗ್ಯಾಲನ್. ಇದನ್ನು ಹೆಸರುಘಟ್ಟ ಕೆರೆಯೇ ಬಹುದಿನದವರೆಗೆ ಪೂರೈಸಿತು. 1922ರಲ್ಲಿ ಹೆಸರುಘಟ್ಟದ ಕೆರೆಗೆ ಸಾಕಷ್ಟು ನೀರು ಬರದ ಹಿನ್ನಲೆಯಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯ ಸಮಿತಿಯ ಶಿಫಾರಸ್ಸಿನ ಪ್ರಕಾರ ಅರ್ಕಾವತಿ ನದಿಗೆ ತಿಪ್ಪಗೊಂಡನ ಹಳ್ಳಿ ಜಲಾಶಯ ನಿರ್ಮಾಣಗೊಂಡಿತು. ಈ ಯೋಜನೆಯ ಅನುಷ್ಠಾನದೊಂದಿಗೆ ಬೆಂಗಳೂರಿನ ನೀರಿನ ಪೂರೈಕೆ ವ್ಯವಸ್ಥೆ ಸ್ವಾತಂತ್ರ್ಯ ಕಾಲಘಟ್ಟದವರೆಗೆ ವ್ಯವಸ್ಥಿತವಾಗಿ ಮುಂದುವರೆಯಿತು. ಪ್ರಥಮ ಹಂತದಲ್ಲಿ ಪ್ರತಿನಿತ್ಯ 2.7 ದಶಲಕ್ಷ ಗ್ಯಾಲನ್ ನೀರು ಪೂರೈಕೆ 1933ರಲ್ಲಿ ಪ್ರಾರಂಭವಾಯಿತು. ಮೂರು ಲಕ್ಷ ಜನಸಂಖ್ಯೆ ಮೀರಿದ್ದ

ನಗರಕ್ಕೆ ಈ ಸಾಧನೆ ಮೈಲಿಗಲ್ಲಾಯಿತು. ಜನಸಂಖ್ಯೆ ಏರುತ್ತಲೇ ಹೋದ ಬೆಂಗಳೂರಿಗೆ ನೀರು ಪೂರೈಸಲು 1942ರಲ್ಲಿ ಜಲಾಶಯ ಸಂಗ್ರಹವನ್ನು ಮತ್ತಷ್ಟು ಏರಿಸಲಾಯಿತು.

ಇದರಿಂದಾಗಿ 1942 ರಿಂದ 1951ರ ಅವಧಿಯಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಪ್ರತಿನಿತ್ಯ 10.8 ದಶಲಕ್ಷ ಗ್ಯಾಲನ್ ನೀರು ಹಾಗು ಹೆಸರುಘಟ್ಟದಿಂದ 1.3 ದಶಲಕ್ಷ ಗ್ಯಾಲನ್ ನೀರು ಸರಬರಾಜು ಮಾಡಲಾಗುತ್ತಿತ್ತು. 1953–54ರಲ್ಲಿ ಜಲಾಶಯದ ಪೂರ್ಣ ಪ್ರಮಾಣದ ಸಂಗ್ರಹಕ್ಕೆ ಒಪ್ಪಿಗೆ ದೊರೆಯಿತು. ಕಾಮಗಾರಿ ಪೂರ್ಣಗೊಂಡು 1960ರಲ್ಲಿ ಪ್ರತಿನಿತ್ಯ 25 ದಶಲಕ್ಷ ಗ್ಯಾಲನ್ ನೀರನ್ನು ಸರಬರಾಜು ಮಾಡಲಾಯಿತು. ತಜ್ಞರ ಶಿಫಾರಸ್ಸಿನ ಮೇರೆಗೆ 1964ರಲ್ಲಿ ಕೈಗೆತ್ತಿಕೊಂಡ ಕಾವೇರಿ ಮೊದಲ ಹಂತದ ನೀರು ಪೂರೈಕೆ ಯೋಜನೆ 1974ರಲ್ಲಿ ಅನುಷ್ಠಾನಕ್ಕೆ ಬಂದಾಗ 35 ಕೋಟಿ ರೂಪಾಯಿ ವೆಚ್ಚವಾಗಿತ್ತು. ವಿಶ್ವ ಬ್ಯಾಂಕ್‌ನ ಆರ್ಥಿಕ ನೆರವು ಸಹ ಪಡೆಯಲಾಗಿತ್ತು. ಶಿವನ ಸಮುದ್ರದ ಬಳಿ ಕಾವೇರಿ ನೀರನ್ನು ಮೇಲಕ್ಕೆತ್ತಿ, 69 ಅಂಗಲಗಳ ಕೊಳವೆಗಳ ಮುಖಾಂತರ, ಅಲ್ಲಿಂದ 10 ಕಿ. ಮೀ ದೂರದ ತೊರೆಕಾಡನಹಳ್ಳಿ ಜಲಾಶಯಕ್ಕೆ ಹರಿಯಬಿಟ್ಟು, ಅಲ್ಲಿ ಸಂಸ್ಕರಿಸಿದ ನೀರನ್ನು 48 ಅಂಗುಲ ವ್ಯಾಸದ ಕೊಳವೆ ಮೂಲಕ 75 ಕಿ. ಮೀ ದೂರದ ಬೆಂಗಳೂರಿಗೆ ಹರಿಸಲಾಯಿತು. 1982ರಲ್ಲಿ 55 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಎರಡನೆ ಹಂತದ ಯೋಜನೆ ಅನುಷ್ಠಾನಗೊಂಡಿತು. 1985ರಲ್ಲಿ ಮೂರನೇ ಹಂತದ ಯೋಜನೆ ಅನುಷ್ಠಾನಗೊಂಡಿತು. ನಾಲ್ಕನೇ ಹಂತಹ ಯೋಜನೆ 1998ರಲ್ಲಿ ಆರಂಭಗೊಂಡು 2002ರ ಜುಲೈನಲ್ಲಿ ಅನುಷ್ಠಾನಗೊಂಡಾಗ, ಬೆಂಗಳೂರು ಮಿತಿ ಮೀರಿ ಬೆಳೆದಿತ್ತು.

ಬೆಂಗಳೂರು ನಗರ ಮತ್ತು ಪರಿಸರದ ಚಾರಿತ್ರಿಕ ಬೆಳವಣಿಗೆಯಲ್ಲಿ ಕೆರೆಗಳು ಅವಿಭಾಜ್ಯ ಅಂಗವಾಗಿ ಹಾಸುಹೊಕ್ಕಿರುವುದು ವೇದ್ಯವಾಗುತ್ತದೆ. ಯಾವುದೇ ಜೀವನದಿ ಇಲ್ಲದ ಪರಿಸರದಲ್ಲಿ ಹಳ್ಳ ಕೊಳ್ಳ ಕುಂಟೆ, ಕೆರೆ ಹಾಗು ಬಾವಿಗಳೇ ನೀರಿನ ಆಸೆರೆಗಳಾಗಿದ್ದವು. ಕಾವೇರಿ ಯೋಜನೆ ಅನುಷ್ಠಾನಗೊಳ್ಳುವವರೆಗೂ, ಬೆಂಗಳೂರು ಮತ್ತು ಪರಿಸರದ ಕೆರೆಗಳೇ ಬಹುತೇಕ ಬೆಂಗಳೂರಿನ ಅಗತ್ಯಗಳನ್ನು ಪೂರೈಸಿಕೊಂಡು ಬಂದಿದ್ದ ಹಿನ್ನೆಲೆಯಲ್ಲಿ ಕೆರೆಗಳು ಎಂತಹ ಮಹತ್ವಪೂರ್ಣ ಪಾತ್ರವಹಿಸಿವೆ ಎಂಬುದು ಮನವರಿಕೆಯಾಗುತ್ತದೆ. ಕೆಲವು ದಶಕಗಳ ಹಿಂದೆ ನಗರದ ನಿವಾಸಿಗಳ ಜೀವಜಲದ ಕೇಂದ್ರ ಬಿಂದುವಾಗಿದ್ದ ಕೆರೆಗಳಲ್ಲಿ ಕೆಲವು ಅಭಿವೃದ್ಧಿಯ ಹೆಸರಿನಲ್ಲಿ ನಿರ್ನಾಮವಾಗಿವೆ. ಪ್ರಸ್ತುತ ಸಂದರ್ಭದಲ್ಲಿ ಬೆಂಗಳೂರಿನ ಕೆರೆಗಳ ವಾಸ್ತವ ಸಂಖ್ಯೆಯೇ ವಿವಿಧ ದಾಖಲೆಗಳ ಪ್ರಕಾರ ವ್ಯತ್ಯಯಗೊಳ್ಳುತ್ತದೆ. ಬೆಂಗಳೂರು ಬೆಳೆಯುತ್ತಿದ್ದಂತೆ, ಬಡಾವಣೆಗಳು ವಿಸ್ತರಿಸಿದಂತೆ ಪ್ರತಿ ನಿವೇಶನದಲ್ಲಿ ಕೊಳವೆ ಬಾವಿಗಳನ್ನು ಕೊರೆಯುತ್ತಾ ಹೋಗಿರುವುದು ಅಂತರ್ಜಲದ ಮೇಲ್ಮೈಯನ್ನು ಪಾತಾಳಕ್ಕೆ ತಳ್ಳಿದೆ. ಹಿಂದಿನ ಕಾಲದಿಂದಲೂ ಬಾವಿಗಳು ಸಹ ಬೆಂಗಳೂರಿನ ನೀರಿನ ಮೂಲಗಳಾಗಿ ಮುಖ್ಯ ಪಾತ್ರ ವಹಿಸಿದ್ದವು. ಅಂತರ್ಜಲ ಮಟ್ಟ ಕುಸಿಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಕಣ್ಮರೆಯಾಗುತ್ತಿರುವ ಕೆರೆಗಳು ಅಮೂಲ್ಯವಾಗಬಲ್ಲವು. ಪಾರಂಪರಿಕವಾಗಿ ನೈಸರ್ಗಿಕ ಭೂಮೇಲ್ಮೈಯ ಜಲತಾಣಗಳಾಗಿರುವ ಕೆರೆಗಳು ಅಂತರ್ಜಲ ರಕ್ಷಣೆಗೆ ಇರುವ ಮುಖ್ಯ ಸಾಧನಗಳು ಹೌದು.

ಗ್ರಂಥ ಋಣ

1. ಎಪಿಗ್ರಾಫಿಯಾ ಕರ್ನಾಟಕ – ಸಂಪುಟ 9
2. ಬೆಂಗಳೂರು ಜಿಲ್ಲಾ ಗ್ಯಾಸೆಟಿಯರ್, (ಸಂ) ಸೂರ್ಯನಾಥ ಕಾಮತ್
3. ನರಸಿಂಹಯ್ಯ ಎನ್. ಕೆ. – ಮಾಗಡಿ ಕೆಂಪೇಗೌಡ
4. ಬ. ನ. ಸುಂದರರಾವ್ – ಬೆಂಗಳೂರಿನ ಭವ್ಯ ಇತಿಹಾಸ (1985)
5. ಡಾ. ರಾಮೇಗೌಡ (ಸಂ), ಯಲಹಂಕ ಪ್ರಭುಗಳು
6. ಎಂ. ಎಚ್. ಕೃಷ್ಣಯ್ಯ ಮತ್ತು ಡಾ. ದೇವರಕೊಂಡಾರೆಡ್ಡಿ–ಕೆಂಪೇಗೌಡನ ವಂಶಸ್ಥರು
7. ಎಂ. ವಿ. ಕೃಷ್ಣರಾವ್ – ಬೆಂಗಳೂರಿನ ಕೆಂಪೇಗೌಡ
8. ಕರ್ನಾಟಕ ಇತಿಹಾಸ ದರ್ಶನ: ಎಂ. ವಿ. ಕೃಷ್ಣರಾವ್ ಮತ್ತು ಕೇಶವಭಟ್ಟ
9. ಚಂದ್ರಮೌಳಿ, ಕೆ. – ಬೆಂಗಳೂರಿನ ಇತಿಹಾಸ
10. Fazlull Hassan - Bangalore Through the Ages
11. ಆರ್. ಮಂಜುನಾಥ್ – ಕೆರೆ ಕರಗುವ ಸಮಯ
12. ಬೆಂಗಳೂರು ದರ್ಶನ: ಸಂಪುಟ 3 (ಸಂ) ಶೇಷಗಿರಿರಾವ್ ಮತ್ತು ಇತರರು

27. ಬೆಂಗಳೂರು ನಗರ ಜಿಲ್ಲೆಯ ಕೃಷಿ ಪದ್ಧತಿ

ಶ್ರೀಮತಿ ಶಕುಂತಲಾ ಸಿಂಧೂರ

ಬೆಂಗಳೂರು ಜಿಲ್ಲೆಯು ಆಗಸ್ಟ್ 15, 1986ರಂದು ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಂದು ವಿಭಾಗಿಸಲ್ಪಟ್ಟು ಅಸ್ತಿತ್ವಕ್ಕೆ ಬಂದಿತು. ಬೆಂಗಳೂರು ನಗರ ಜಿಲ್ಲೆ ಕರ್ನಾಟಕದ ಜಿಲ್ಲೆಗಳಲ್ಲಿಯೇ ಅತ್ಯಂತ ಚಿಕ್ಕ ಜಿಲ್ಲೆಯಾಗಿದ್ದು ಕೇವಲ 2191 ಚದರ ಕಿ.ಮೀ ವ್ಯಾಪ್ತಿ ಹೊಂದಿದೆ. ಜನಸಂಖ್ಯೆಯ ದೃಷ್ಟಿಯಿಂದ ಈ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದು 2011ರ ಜನಗಣತಿಯ ಪ್ರಕಾರ ಒಟ್ಟ 95,88,910 ಜನರಿದ್ದಾರೆ. ಜಿಲ್ಲೆಯ ಮಧ್ಯದಲ್ಲಿ ಬೆಂಗಳೂರು ನಗರ ಪಾಲಿಕೆ 15 ಚದರ ಕಿ.ಮೀ ಪ್ರದೇಶದಲ್ಲಿದೆ. ಈ ಜಿಲ್ಲೆಯು ಐದು ತಾಲ್ಲೂಕುಗಳನ್ನೊಳಗೊಂಡಿದೆ. ಅವುಗಳೆಂದರೆ ಆನೇಕಲ್, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಪೂರ್ವ ಹಾಗೂ ಬೆಂಗಳೂರು ನಗರ. ಬೆಂಗಳೂರು ನಗರದ ಕೆಲವಷ್ಟು ಭಾಗ ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣದಲ್ಲಿದೆ. ಈ ನಗರವು ರಾಜ್ಯದ ರಾಜಧಾನಿಯಾಗಿರುವುದರಿಂದ ಹಲವಾರು ಆಡಳಿತ ಕೇಂದ್ರ ಕಛೇರಿಗಳನ್ನು ಹೊಂದಿದೆ. ಬೆಂಗಳೂರು ನಗರದ ಪ್ರಮುಖ ಲಕ್ಷಣವೆಂದರೆ ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಿ ನೌಕರರಿದ್ದಾರೆ. ಬೆಂಗಳೂರು ನಗರವು ಬೆಂಗಳೂರು ಗ್ರಾಮೀಣ ಮತ್ತು ಬೆಂಗಳೂರು ನಗರ ಜಿಲ್ಲೆಯ ಕೇಂದ್ರ ಕಛೇರಿಗಳನ್ನು ಹೊಂದಿರುತ್ತದೆ.

ಬೆಂಗಳೂರು ಜಿಲ್ಲೆಯಲ್ಲಿ ಕ್ರಿ. ಶ. 4ನೇ ಶತಮಾನದ ನಂತರ ಕೃಷಿ ಅಭಿವೃದ್ಧಿಗೆ ಗಮನಾರ್ಹ ಲಕ್ಷ್ಯ ವಹಿಸಿದ್ದರಲ್ಲದೆ ನೀರಾವರಿಗೂ ಕೂಡಾ ಹೆಚ್ಚು ಆದ್ಯತೆ ಕೊಟ್ಟಿದ್ದರೆಂಬುದು ಗಂಗರ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ ಶ. 870ರ ದಾಖಲೆ ಪ್ರಕಾರ ಗಂಗರು ಬೆಂಗಳೂರ ಸಮೀಪ ಅಗರ ಎಂಬಲ್ಲಿ ಕೆರೆ ನಿರ್ಮಾಣದಲ್ಲಿ ತೊಡಗಿದ್ದರು. ಬೆಂಗಳೂರಿನ ನೆರೆ-ಹೊರೆಯಲ್ಲಿ ಮೂರು ಕೆರೆಗಳನ್ನು ನಿರ್ಮಿಸಿದ್ದರು. ಮತ್ತು ಇವುಗಳ ನಿರ್ವಹಣೆಗೆ ಬಿತ್ತುವತ್ತಾ (Bittuvatta Grant) ಅನುದಾನದಿಂದ (ಬಿತ್ತುವತ್ತಾ ಅಂದರೆ ಭೂಮಿ ಅನುದಾನದಿಂದ) ಬಂದ ಆದಾಯವನ್ನು ಕೆರೆಗಳ ನಿರ್ವಹಣೆಗೆ ಬಳಸುವುದು ಜವಾಬ್ದಾರಿಯಾಗಿತ್ತು. ಕೃಷಿ ಮತ್ತು ನೀರಾವರಿಗೆ ಹೆಚ್ಚಿನ ಮಹತ್ವ ಕೊಟ್ಟಿರುವ ಕುರಿತು ಹಲವಾರು ದಾಖಲೆಗಳು ಸ್ಪಷ್ಟವಾಗಿರುತ್ತವೆ. ಹಳ್ಳಿಗಳಲ್ಲಿಯ ಕೆರೆ-ಕುಂಟೆ, ಗದ್ದೆ-ಬಿದ್ದಲು (Wet and Dry lands) ಗುಡಿ ಗುಯಲು (Huts and plots), ತೋಟಾ-ತುಡಕೀ (Orchard and flower gardens), ಕದಾರಂಭಾ-ನೀರಾರಂಭಾ (Land cultivated by rain water and Irrigation water) ಈ ಮೊದಲಾದವುಗಳ ಬಗ್ಗೆ 1544ರ ಅಲಾಲಸಂದ್ರ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಗಂಗರು ಕೃಷಿಗೆ ಸಾಕಷ್ಟು ಒತ್ತು ಕೊಟ್ಟಿದ್ದರೆಂಬುದು ಈ ಶಾಸನದಿಂದ ತಿಳಿದುಬರುತ್ತದೆ.

ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ಕೃಷಿ ಪ್ರಮುಖ ಉದ್ಯೋಗವಾಗಿದೆ. ಭತ್ತ, ರಾಗಿ ಮತ್ತು ದ್ವಿದಳ ಧಾನ್ಯಗಳು ಮುಖ್ಯ ಬೆಳೆಗಳಾಗಿವೆ. ನಗರ ವಾತಾವರಣದಲ್ಲಿ ಭೂಮಿಯ ಬೇಡಿಕೆ ನಿರಂತರವಾಗಿ ಹೆಚ್ಚುತ್ತಿದ್ದು ಕೃಷಿಯೇತರ ಉದ್ದೇಶಗಳಿಗಾಗಿ ಭೂಮಿಯನ್ನು ನಗರ ಪ್ರದೇಶದಲ್ಲಿ ಹೆಚ್ಚೆಚ್ಚು ಬಳಸುವುದರಿಂದ ಭೂಮಿಯ ಬೆಲೆ ಏರುಗತಿಯಲ್ಲಿದೆ. ಈ ಜಿಲ್ಲೆಯ ಒಟ್ಟು ಕೃಷಿ ಭೂಮಿಯಲ್ಲಿ ನಿವ್ವಳ ಬಿತ್ತನೆಯಾದ ಭೂಮಿಯ ಪ್ರಮಾಣ 58884 ಹೆಕ್ಟೇರುಗಳಷ್ಟಿದೆ. ಸಾಗುವಳಿ ಭೂಮಿಯು ಮಳೆಯನ್ನವಲಂಬಿಸಿದ್ದು ಒಣ ಪ್ರದೇಶಕ್ಕೆ ನೀರು ಪೂರೈಸ

ಲಾಗುತ್ತಿದೆ. ಕೆರೆ ನೀರಿನ ಮೂಲಕ ತೋಟಗಳ ಕಾಯಿಪಲ್ಲೆ ಬೆಳೆಯುವುದು ಸಾಮಾನ್ಯವಾಗಿ ಕಂಡುಬರುವ ದೃಶ್ಯವಾಗಿದೆ. ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ತೋಟಗಾರಿಕೆಯ ಬಹುಪಾಲು ಕೊಡುಗೆ ಇದೆ. ಒಂದು ಹೆಕ್ಟೇರಿಗಿಂತ ಕಡಿಮೆ ಭೂಮಿ ಹೊಂದಿದ ಕೃಷಿಕರ ಸಂಖ್ಯೆ 26000. ಪಶುಸಂಗೋಪನೆ ಮುಖ್ಯ ಉಪ ಕಸುಬಾಗಿದೆ.

ಪ್ರಪಂಚದಲ್ಲಿಯೆ ಐಟಿ ಮತ್ತು ಬಿಟಿಯ ಕ್ಷೇತ್ರದಲ್ಲಿ ಬಹಳ ಮುಖ್ಯವಾದ ದ್ವಿತೀಯ ನಗರವೆಂದು ಪ್ರಖ್ಯಾತಿಪಡೆದಿದೆ. ಸಿಲಿಕಾನ್ ಸಿಟಿಯೆಂದು ಕೂಡಾ ಈ ನಗರಕ್ಕೆ ಕರೆಯಲಾಗಿದೆ. ಏಷ್ಯಾ ಖಂಡದಲ್ಲಿಯೆ ಅತ್ಯಂತ ವೇಗದಿಂದ ಬೆಳೆಯುತ್ತಿರುವ ನಗರವಿದಾಗಿದೆ.

ಈ ಜಿಲ್ಲೆಯು ಕರ್ನಾಟಕ ರಾಜ್ಯದ ಆಗ್ನೇಯ ದಿಕ್ಕಿನಲ್ಲಿದೆಯಲ್ಲದೆ ಒಟ್ಟು 2191 ಚದರ ಕಿ.ಮೀ ನಷ್ಟು ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಹಾಗೂ $12'39^0$ ಮತ್ತು 13 ಅಕ್ಷಾಂಶ ಮತ್ತು $77'22^0$ ಇ ಮತ್ತು $77'52^0$ ಇ ರೇಖಾಂಶ ಮಧ್ಯೆ ಇದೆ. ದಕ್ಷಿಣದಿಂದ ಉತ್ತರಕ್ಕೆ 58 ಕಿ.ಮೀ ಅಂತರ ಮತ್ತು ಪಶ್ಚಿಮದಿಂದ ಪೂರ್ವಕ್ಕೆ 50 ಕಿ. ಮೀ ಅಂತರ ಹೊಂದಿದೆ. ಈ ಜಿಲ್ಲೆಯ ಉತ್ತರಕ್ಕೆ ಬೆಂಗಳೂರು (ಗ್ರಾಮೀಣ), ಪಶ್ಚಿಮಕ್ಕೆ ದಕ್ಷಿಣ ಮತ್ತು ಪೂರ್ವಕ್ಕೆ ತಮಿಳುನಾಡಿನ ಜಿಲ್ಲೆಯಾದ ಧರ್ಮಪುರಿಯಿಂದ ಸುತ್ತುವರಿದಿದೆ.

ಕೃಷಿ ಅವಲಂಬಿ ಜನಸಂಖ್ಯೆ:

ಬೆಂಗಳೂರು ನಗರ ಜಿಲ್ಲೆ ನಗರೀಕರಣದಲ್ಲಿ ಮುಂಚೂಣಿಯಲ್ಲಿರುವ ಜಿಲ್ಲೆಯಾಗಿದ್ದು ಕೆಲಸಗಾರರಲ್ಲಿ ಕೃಷಿಕರ ಸಂಖ್ಯೆಗೆ ಹೋಲಿಸಿದರೆ ಮುಖ್ಯ ಹಾಗೂ ಅತಿಸಣ್ಣ ಕೃಷಿಕರ ಸಂಖ್ಯೆ ಕಡಿಮೆ ಇರುತ್ತದೆ. ಮುಖ್ಯ ಕೆಲಸಗಾರರೆಂದರೆ ಒಂದು ವರ್ಷದ ಅವಧಿಯಲ್ಲಿ 183 ದಿನಗಳಿಗಿಂತ ಹೆಚ್ಚು ದಿನ ಉತ್ಪಾದಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದವರು. ಇದಕ್ಕೆ ಪ್ರತಿಯಾಗಿ ಯಾವ ಕೆಲಸಗಾರನು 183 ದಿನಗಳಿಗಿಂತಲೂ ಕಡಿಮೆ ಅವಧಿ ಉತ್ಪಾದಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುತ್ತಾನೆಯೋ ಅವನು ಅಲ್ಲೇ ಸಣ್ಣ ಕೃಷಿ ಕಾರ್ಮಿಕ ಗುಂಪಿಗೆ ಸೇರಿದವರಾಗಿರುತ್ತಾನೆ. ಯಾರು ಉತ್ಪಾದಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲವೋ ಅವರು ಕೃಷಿ ಕೆಲಸಗಾರರಲ್ಲದವರ ಗುಂಪಿಗೆ ಸೇರುತ್ತಾರೆ. ಈ ಜಿಲ್ಲೆಯಲ್ಲಿ ಸು.7ರಷ್ಟು ಜನ ಕೃಷಿ ಸಂಬಂಧೀ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಬೆಂಗಳೂರು ನಗರದಲ್ಲಿ ಸು. 97% ರಷ್ಟು ಜನರು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.

1981ರ ಜನಗಣತಿ ಪ್ರಕಾರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಒಟ್ಟು ಕೆಲಸಗಾರರ ಸಂಖ್ಯೆ ಸಾಗುವಳಿದಾರರು ಮತ್ತು ಕೃಷಿಕಾರ್ಮಿಕರ ಪ್ರಮಾಣವನ್ನು ಈ ಕೆಳಗಿನ ಪಟ್ಟಿ 1ರಲ್ಲಿ ತೋರಿಸಲಾಗಿದೆ.

ಪಟ್ಟಿ – 1

ಕ್ರ.ಸಂ	ತಾಲ್ಲೂಕು	ಮುಖ್ಯ ಕೆಲಸಗಾರರು	ಸಾಗುವಳಿ ದಾರರು	ಕೃಷಿ ಕಾರ್ಮಿಕರು	ಅರೆಕಾಲಿಕ ಕೆಲಸಗಾರರು
1	ಆನೇಕಲ್	6280	654	369	339
2	ಬೆಂಗಳೂರು ಪೂರ್ವ	66273	2315	2432	1431
3	ಬೆಂಗಳೂರು ಉತ್ತರ	67499	3628	4124	990
4	ಬೆಂಗಳೂರು ನಗರ	734684	1903	1158	12208

ಮೂಲ: ಗೆಝೆಟಿಯರ್

ಪಟ್ಟಿ – 2

ಕ್ರ. ಸಂ	ತಾಲ್ಲೂಕು	ಭೌಗೋಳಿಕ	ಅರಣ್ಯ	ವ್ಯವಸಾಯೇತರ	ಬಂಜರು	ಒಟ್ಟು	ಸಾಗುವಳಿಗೆ ಯೋಗ್ಯ	ಖಾಯಂ ಗೋಮಾಳ	ವೃಕ್ಷ ತೋಪು	ಒಟ್ಟು
1	ಆನೇಕಲ್	53518	2215	21396	1322	22718	1465	1552	2381	5398
2	ಬೆಂಗಳೂರು ಉತ್ತರ	78411	1145	38484	1994	40478	965	1197	3607	5769
3	ಬೆಂಗಳೂರು ದಕ್ಷಿಣ	55609	1345	34804	1037	35841	854	1852	1029	3735
4	ಬೆಂಗಳೂರು ಪೂರ್ವ	29872	0350	16752	558	17310	1160	1073	481	2741
	ಒಟ್ಟು	217410		111436	4911	116347	4444	5674	7498	17643

ಈ ಮೇಲಿನ ಪಟ್ಟಿಯಿಂದ ತಿಳಿದುಬರುವುದೇನೆಂದರೆ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ 217410 ಹೆ. ಗಳಲ್ಲಿ 2008–09ರಲ್ಲಿ ವ್ಯವಸಾಯೇತರ ಮತ್ತು ಬಂಜರು ಭೂಮಿಯ ಪ್ರಮಾಣ ಒಟ್ಟು ಭೌಗೋಳಿಕ ವಿಸ್ತೀರ್ಣದ 1.51 ರಷ್ಟಾಗಿರುತ್ತದೆ.

ಪಟ್ಟಿ – 3

ಭೂ ಹಿಡುವಳಿಗಳು ಮತ್ತು ವಿಸ್ತೀರ್ಣ 2005–06ರಲ್ಲಿ

ವಿಸ್ತೀರ್ಣ – ಹೆಕ್ಟೇರ್

ಈ ಮೇಲಿನ ಪಟ್ಟಿ 3 ರಿಂದ ತಿಳಿದು ಬರುವುದೇನೆಂದರೆ ಈ ಜಿಲ್ಲೆಯು ಒಟ್ಟು 59629 ಭೂ ಹಿಡುವಳಿದಾರರನ್ನು ಹೊಂದಿದ್ದು ಇದರಲ್ಲಿ 38272 ಹಿಡುವಳಿದಾರರು ಅತಿ ಸಣ್ಣ ಅಂದರೆ ಒಂದು ಹೆಕ್ಟೇರಿಗಿಂತ ಕಡಿಮೆ ಭೂಮಿ ಹೊಂದಿದವರಾಗಿದ್ದಾರೆ. ಆನೇಕಲ್ ತಾಲ್ಲೂಕು ಅತೀ ಹೆಚ್ಚು ಅಂದರೆ 17524 ಸಣ್ಣ ಹಿಡುವಳಿದಾರರನ್ನು ಹೊಂದಿದೆ. ಇದೇ ರೀತಿಯಾಗಿ ಜಿಲ್ಲೆಯ ಆನೇಕಲ್ ತಾಲ್ಲೂಕು ಸಣ್ಣ ಅರೆಮಧ್ಯಮ, ಮಧ್ಯಮ ಹಾಗೂ ದೊಡ್ಡ ಹಿಡುವಳಿದಾರರ ಸಂಖ್ಯೆ ಅತೀ ಹೆಚ್ಚು ಇರುವುದು ಕಂಡುಬರುತ್ತದೆ. ಅಂದರೆ ಆನೇಕಲ್ ತಾಲ್ಲೂಕು ಕೃಷಿ ಪ್ರಧಾನ ಹಾಗೂ ಕೃಷಿ ಅವಲಂಬಿತ ಜನಸಂಖ್ಯೆ ಮತ್ತು ಹಿಡುವಳಿದಾರರ ಸಂಖ್ಯೆ ಹೆಚ್ಚು ಹೊಂದಿದ್ದು ಕಂಡುಬರುತ್ತದೆ.

ಈ ಜಿಲ್ಲೆಯ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಪೂರ್ವ ತಾಲ್ಲೂಕುಗಳು ಅನುಕ್ರಮವಾಗಿ 7114, 4473 ಮತ್ತು 9161 ಅತಿ ಸಣ್ಣ ಕೃಷಿಕರನ್ನು ಹೊಂದಿದೆ. ಜಿಲ್ಲೆಯಲ್ಲಿ ಅತಿಸಣ್ಣ ಕೃಷಿಕರ ಸರಾಸರಿ ಭೂಹಿಡುವಳಿ ಪ್ರಮಾಣ ಕೇವಲ 0.44 ಹೆಕ್ಟೇರಿನಷ್ಟಿರುವುದು ಕಂಡುಬರುತ್ತದೆ. ವಿಷರ್‍ಯಾಸವೆಂದರೆ ಜಿಲ್ಲೆಯು ಕೇವಲ 270 ದೊಡ್ಡ ಕೃಷಿಕರನ್ನು ಹೊಂದಿದ್ದು ಅವರ ಒಟ್ಟು ಹಿಡುವಳಿ 4192 ಹೆಕ್ಟೇರಿನಷ್ಟಿದೆ. ದೊಡ್ಡ ಕೃಷಿಕರ ಸರಾಸರಿ ಭೂಹಿಡುವಳಿ ಪ್ರಮಾಣ 15.52 ಹೆಕ್ಟೇರಿನಷ್ಟಿದೆ.

ಕೃಷಿ ಹವಾಮಾನ ವಲಯ (Agro-climatic Zones): ಬೆಂಗಳೂರು ನಗರ ಜಿಲ್ಲೆಯೊಂದಿಗೆ ಕೋಲಾರ ಮತ್ತು ತುಮಕೂರು ಜಿಲ್ಲೆಯ ಕೆಲವು ಭಾಗಗಳನ್ನು ಪೂರ್ವಶುಷ್ಕವಲಯ (Eastern Dry Zone)ದ ಅಡಿಯಲ್ಲಿ ಗುರುತಿಸಲಾಗಿದೆ. ಈ ವಲಯದಲ್ಲಿ ವಾರ್ಷಿಕ ಸರಾಸರಿ ಮಳೆ 679.1ರಿಂದ 888.9ಮಿಲಿ ಮೀಟರ್ ಆಗುತ್ತದೆಯಲ್ಲದೆ ಎರಡು ಅವಧಿಯಲ್ಲಿ ಮಳೆ ಬರುತ್ತದೆ. ಮೊದಲನೆಯದಾಗಿ ಮೇ ತಿಂಗಳಲ್ಲಿ ಮತ್ತು ಎರಡನೆಯದಾಗಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಮುಂಗಾರು ಬೆಳೆ ಪ್ರಮುಖವಾಗಿದೆ. ಈ ಜಿಲ್ಲೆಯಲ್ಲಿ ರಾಗಿ ಪ್ರಮುಖ ಬೆಳೆಯಾಗಿದೆ. ಸು. 10 ರಿಂದ 12% ರಷ್ಟು ನೆಲಗಡಲೆ ಬೆಳೆ ಹೊಂದಿದೆ. ಈ ವಲಯದ ಶೇಕಡ 10 ರಷ್ಟು ಪ್ರದೇಶದಲ್ಲಿ ಮುಂಗಾರಿನಲ್ಲಿ ಹುರುಳಿಯನ್ನು ಬೆಳೆಯಲಾಗುತ್ತದೆ. ನೀರಾವರಿ ಹೊಂದಿದ ಪ್ರದೇಶದಲ್ಲಿ ಭತ್ತ, ಮಲ್ಲಬರಿ ಮತ್ತು ಕಬ್ಬು ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಭೂಸಾರ (ಮಣ್ಣಿನ) ರಕ್ಷಣೆ: ಈ ಜಿಲ್ಲೆಯಲ್ಲಿ ರೈತರು ಎದುರಿಸುತ್ತಿರುವ ಗಂಭೀರ ಸಮಸ್ಯೆಯೆಂದರೆ ಭೂ ಸವೆತ. ನಿಸರ್ಗದಲ್ಲಿ 3 ಸೆಂಟಿಮೀಟರ್ ದಪ್ಪ ಮಣ್ಣು ರಚನೆಯಾಗಲು 500 ರಿಂದ 1000 ವರ್ಷಗಳು ಬೇಕಾಗುತ್ತದೆ. ಆದ್ದರಿಂದ ಭೂಮಿಯ ಮೇಲ್ಮೈಯ ಮೇಲೆ ಇರುವ ಫಲವತ್ತಾದ ಮಣ್ಣನ್ನು ಸವೆಯದಂತೆ ಕಾಪಾಡುವುದು ಅತೀ ಅವಶ್ಯ. ಬೆಳೆ ಬೆಳೆಯಲು ಭೂಮಿಯ ಮೇಲೆ 30 ಸೆಂ.ಮೀ ದಪ್ಪದಷ್ಟು ಫಲವತ್ತಾದ ಮಣ್ಣು ಅತ್ಯವಶ್ಯ. ಸರಿಯಾದ ನಿರ್ವಹಣೆ ಇಲ್ಲದಿದ್ದರೆ ಒಂದೆರಡು ವರ್ಷಗಳಲ್ಲಿ ಈ ಫಲವತ್ತಾದ ಮಣ್ಣು ಕೊಚ್ಚಿ ಹೋಗುವುದಲ್ಲದೆ ಇದ್ದ ಭೂಮಿ ಬಂಜರು ಭೂಮಿಯಾಗಿ ಪರಿವರ್ತನೆಯಾಗಿ ಹವಾಮಾನದಲ್ಲಿ ತೇವಾಂಶ ಪ್ರಮಾಣ ಕುಂದುತ್ತದೆ. ಇದರಿಂದ ಉಷ್ಣತೆ ಪ್ರಮಾಣ ದಿನದಿನಕ್ಕೆ ಅಧಿಕವಾಗುತ್ತ ಸಾಗುತ್ತದೆ. ಇದನ್ನು ಮನಗಂಡ ಸರ್ಕಾರವು ಕರ್ನಾಟಕ ಭೂ ಸುಧಾರಣೆ ಕಾನೂನನ್ನು 1961ರಲ್ಲಿ ಪಾಸುಮಾಡಿತು. ಈ ಕಾನೂನಿನ ಒಂದು ಮುಖ್ಯ ಉದ್ದೇಶವೆಂದರೆ ಮಳೆ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ನಿರ್ದಿಷ್ಟ ಪ್ರದೇಶದಲ್ಲಿ ಬೆಳೆಗಳ ಮಾದರಿ ಅಭಿವೃದ್ಧಿ ಪಡಿಸುವುದರ ಜೊತೆಗೆ ಭೂಸವೆತ ತಡೆಗಟ್ಟಿ ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವುದಾಗಿದೆ.

ಒಣಬೇಸಾಯ/ಮಳೆಯಾಶ್ರಿತ ಸಾಗುವಳಿ: ಬೆಂಗಳೂರು ನಗರ ಜಿಲ್ಲೆಯನ್ನು ಒಣಬೇಸಾಯ ವಲಯವೆಂದು ಗುರುತಿಸಲಾಗಿದ್ದು ಈ ವಲಯ ಮಿಶ್ರ ಬೆಳೆಗಳಿಗೆ ಅತ್ಯಂತ ಸೂಕ್ತವಾಗಿದೆ. ಈ ವಲಯವು ಪ್ರಮುಖವಾಗಿ ಮುಂಗಾರು ವಲಯವಾಗಿದೆ. ಅನುಕ್ರಮವಾಗಿ ಎರಡು ಬೆಳೆ ಬೆಳೆಯಲು ಶಿಫಾರಸ್ಸು ಮಾಡಿದ ಪ್ರದೇಶವಾಗಿದೆ. ಈ ವಲಯದಲ್ಲಿರುವ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ 1000 ಹೆಕ್ಟೇರ ಭೂಮಿ ಆಯ್ಕೆಮಾಡಿ ಒಣಬೇಸಾಯ ಸಾಗುವಳಿ ಯೋಜನೆ ಅಡಿಯಲ್ಲಿ ಸೇರಿಸಲಾಯಿತು. ಒಟ್ಟು ಜಿಲ್ಲೆಯ 41 ಹಳ್ಳಿಗಳಲ್ಲಿ 3130 ಹೆಕ್ಟೇರ್ ಭೂಮಿಯನ್ನು ಒಣಬೇಸಾಯ ಸಾಗುವಳಿ ಪ್ರೊಜೆಕ್ಟ್ ಅಡಿಯಲ್ಲಿ ತರಲಾಯಿತು. ಒಣಬೇಸಾಯ ಸಾಗುವಳಿ ಕೆಳಗಿನವುಗಳನ್ನು ಒಳಗೊಂಡಿದೆ.

1. ಬೀಳುಭೂಮಿ ಸಾಗುವಳಿ;
2. ಪ್ರತಿ 9 ರಿಂದ 12 ಮೀ. ಅಂತರದಲ್ಲಿ ಇಳಕಲಿಗೆ ಅಡ್ಡಲಾಗಿ ಬದುಗಳ ನಿರ್ಮಾಣ;
3. ನಿರುಪಯುಕ್ತ ಭೂಮಿಯನ್ನು ಅಭಿವೃದ್ಧಿಪಡಿಸುವುದು;
4. ರಾಗಿ ಮತ್ತು ನೆಲಗಡಲೆ ಬೆಳೆಗಳಲ್ಲಿ ಪ್ರತಿ 3 ಮೀಟರ್ ಅಂತರದಲ್ಲಿ ನೇಗಿಲ ಸಾಲು ನಿರ್ಮಾಣದ ಮೂಲಕ ತೇವಾಂಶ ಹಾಗೂ ಭೂಸವೆತ ತಡೆಗಟ್ಟುವುದು;
5. ತೊಗರಿ ಬೆಳೆಯಲ್ಲಿ ನೇಗಿಲ ಸಾಲು ನಿರ್ಮಿಸುವುದು.

ಸಮಗ್ರ ಮಳೆಕೊಯ್ಲು ಮತ್ತು ಮಳೆಯಾಧಾರಿತ ಪ್ರದೇಶಗಳಿಗೆ ಜಾಗತಿಕ ಬ್ಯಾಂಕಿನ ಧನಸಹಾಯ ಸದುಪಯೋಗದ ಮತ್ತು ಭೂ ಅಭಿವೃದ್ಧಿಗಾಗಿ 1984-85ರಲ್ಲಿ ಒಣಬೇಸಾಯ ಭೂ ಅಭಿವೃದ್ಧಿ ಸಮಿತಿಯನ್ನು ಸ್ಥಾಪಿಸಲಾಯಿತು. ಈ ಜಾಗತಿಕ ಬ್ಯಾಂಕ್ ಯೊಜನೆಯ ಮುಖ್ಯ ಉದ್ದೇಶ ಮುಂದಿನ ಏಳು ವರ್ಷಗಳಲ್ಲಿ ಸೂಕ್ತ ತಂತ್ರಜ್ಞಾನದ ಬಳಕೆಯಿಂದ ಆಯ್ದ ಮಳೆಯಾಧಾರಿತ ಪ್ರದೇಶದಲ್ಲಿ ಮರಮಟ್ಟು ಬೆಳೆಸುವುದಾಗಿದೆ. ಕಿರು ನೀರಾವರಿ ಅಭಿವೃದ್ಧಿ ಅಡಿಯಲ್ಲಿ ತಾಲ್ಲೂಕುಗಳಲ್ಲಿ 200 ರಿಂದ 250 ಬ್ಲಾಕ್‌ಗಳನ್ನು ಆಯ್ಕೆಮಾಡಿ ಒಣ ಭೂಮಿ ಅಭಿವೃದ್ಧಿ ಕೈಕೊಳ್ಳುವುದಾಗಿದೆ. ಈ ಕಿರು ನೀರಾವರಿ ಅಭಿವೃದ್ಧಿ ಮಾದರಿ ಅಡಿಯಲ್ಲಿ ಭೂಮಿ ಹದಗೊಳಿಸುವುದು, ಸಣ್ಣ ಬದುಗಳ ನಿರ್ಮಾಣ ಸದ್ಯ ಜಾರಿಯಲ್ಲಿದೆ. ಬದುಗಳನ್ನು ಸಶಕ್ತಗೊಳಿಸುವುದು, ಕಾಂಟೂರ ಸಾಗುವಳಿ ಇತ್ಯಾದಿಗಳನ್ನು ಒಳಗೊಂಡಿದೆ. ಆಯ್ಕೆಯಾದ ಪ್ರತಿ ಮಳೆಯಾಧಾರಿತ ಬ್ಲಾಕ್ 100 ಹೆಕ್ಟೇರ್ಸ್‌ನಷ್ಟಿದೆ. ಈ ಬ್ಲಾಕ್‌ಗಳಲ್ಲಿ ಆನೇಕಲ್ ತಾಲ್ಲೂಕಿನ ಅತ್ತಿಬೆಲೆ, ಸೋಲ ದೇವನಹಳ್ಳಿ, ಬೆಂಗಳೂರು ಉತ್ತರ ಭಾಗದ ಚಿಕ್ಕಜಾಲ ಬೆಂಗಳೂರು ದಕ್ಷಿಣ ತಾಲ್ಲೂಕುಗಳಲ್ಲಿ ಬರುವ ತಾವರಗೇರಿ ಮತ್ತು ಕಾಡುಗೋಡಿಗಳಿವೆ.

ಪಟ್ಟಿ - 4

1988-89ರಲ್ಲಿ ಕಿರುಜಲಾನಯನ ಮಾದರಿಯಲ್ಲಿ ಸಾಧಿಸಿದ ಪ್ರಗತಿ.

ಕ್ರ. ಸಂ ವಿವರಣೆ ಆನೇಕಲ್ ತಾಲ್ಲೂಕು ಹುಲಿಮಂಗಲಾಬೆಂಗಳೂರು ಉತ್ತರ ತಾಲ್ಲೂಕು ಸಿಂಗನಾಯಕನಹಳ್ಳಿ ಬೆಂಗಳೂರು ದಕ್ಷಿಣ ತಾಲ್ಲೂಕು ತಾವರಗೇರಿ

1	ಪ್ರದೇಶ ಚದರ ಕಿ. ಮೀ ಗಳು	250	250	260
2	ಒಟ್ಟು ರೈತರ ಭಾಗವಹಿಸುವಿಕೆ	392	264	‘308
3	ಸಣ್ಣ ಮತ್ತು ಅತಿಸಣ್ಣ ರೈತರು	250	234	248
4	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ರೈತರು	98	32	62
5	ಕಾಂಟೂರ ಪ್ಲೇಯಿಂಗ್ (ಹೆ.ಗಳಲ್ಲಿ)	250	250	215
6	ಸಣ್ಣ ಪ್ರಮಾಣದ ಬದುವುಗಳು (ಹೆ.ಗಳಲ್ಲಿ)	165	130	215
7	ಸಾಗುವಳಿ ಸಾಮಗ್ರಿ ವಿತರಣೆ (ಸಂಖ್ಯೆಗಳಲ್ಲಿ)	399	190	380

ಮಣ್ಣು ಆರೋಗ್ಯ ಕೇಂದ್ರ (Soil Health Centre)

ಮಣ್ಣಿನಲ್ಲಿರುವ ಪಿ. ಎಚ್. ಮತ್ತು ಆರಗ್ಯಾನಿಕ್ ಕಾರ್ಬನ್ ಫಾಸ್ಪರಸ್ ಮತ್ತು ಪೋಟ್ಯಾಸಿಯಂ ಕಂಡುಹಿಡಿಯಲು ಬೆಂಗಳೂರಿನ ಹೆಬ್ಬಾಳದಲ್ಲಿರುವ ಮಣ್ಣು ಆರೋಗ್ಯ ಕೇಂದ್ರ ಸಹಾಯಮಾಡುತ್ತದೆ. ವಿಶೇಷ ಸಂದರ್ಭಗಳಲ್ಲಿ ಮಣ್ಣಿನಲ್ಲಿರುವ ಉಪ್ಪಿನ (ಲವಣ) ಪ್ರಮಾಣವನ್ನು ಕಂಡುಹಿಡಿಯುವಲ್ಲಿ ಇಲ್ಕಟ್ರೋ ಕಂಡಕ್ಟಿವಿಟಿಯನ್ನು ಪರೀಕ್ಷಿಸಲಾಗುವುದು. ಈ ಪರೀಕ್ಷೆಗಳ ಆಧಾರದ ಮೇಲೆ ಹಾಗೂ ಬೆಳೆ ಮಾದರಿಯನ್ನು ಪರಿಗಣಿಸಿ ಮಣ್ಣಿನ ಆರೋಗ್ಯ ಕಾಪಾಡುವ ಸಲುವಾಗಿ ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಜಿಪ್ಸಂ ಪೂರೈಸಲಾಗುವುದು. ಮಣ್ಣು ಆರೋಗ್ಯ ಕೇಂದ್ರದಿಂದ ಪಡೆದ ಮಾಹಿತಿ ಆಧರಿಸಿ 1970-71ರಲ್ಲಿ ಜಿಲ್ಲೆಯಲ್ಲಿ ಗುಣಮಟ್ಟದ ಮಣ್ಣು ನಿಯಂತ್ರಣ ಪರೀಕ್ಷಾ ಕೇಂದ್ರವನ್ನು ಪ್ರಾರಂಭಿಸಲಾಯಿತು. ಗುಣಮಟ್ಟದ ಮಣ್ಣು ಪರೀಕ್ಷಾ ಕೇಂದ್ರದ ಮುಖ್ಯ ಉದ್ದೇಶಗಳೆಂದರೆ:-

1. ಹಲವಾರು ವಿಧದ ಮಣ್ಣುಗಳ ಗುಣಮಟ್ಟ ಪರೀಕ್ಷಿಸುವುದು;
2. ಮಣ್ಣು ಆರೋಗ್ಯಕೇಂದ್ರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುವುದು;
3. ತರಬೇತಿ ನೀಡುವುದು. ಗುಣಮಟ್ಟ ನಿಯಂತ್ರಣದ ಬಗ್ಗೆ ಪ್ರತಿವರ್ಷ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು;
4. ಪ್ರತಿವರ್ಷ ನವೆಂಬರ್ ತಿಂಗಳಿಂದ ಜನವರಿ ತಿಂಗಳವರೆಗೆ ನೀರಿನ ಮಾದರಿ ಬಾವಿಗಳಿಂದ ಸಂಗ್ರಹಿಸಿದ ನೀರು ನೀರಾವರಿಗೆ ಸೂಕ್ತವಾಗಿದೆ ಎಂಬುದನ್ನು ಪರೀಕ್ಷಿಸುವುದು;
5. ಬೆಂಗಳೂರಿನಲ್ಲಿ ಕೇಂದ್ರೀಯ ಸಂಚಾರಿ ಮಣ್ಣು ಆರೋಗ್ಯಕೇಂದ್ರವಿದೆಯಲ್ಲದೆ ಮೈಕ್ರೋ ನ್ಯೂಟ್ರಿಯಂಟ್ಸ್ ಕೊರತೆಯನ್ನು ಸರಿಪಡಿಸಿ ಗರಿಷ್ಠ ಉತ್ಪಾದನೆ ಪಡೆಯುವುದು. 1988–89ರಲ್ಲಿ ಜಿಲ್ಲೆಯಲ್ಲಿ ಸಂಗ್ರಹಿಸಿದ ಮಣ್ಣು ಮಾದರಿಗಳ ವಿವರಣೆ ಈ ರೀತಿಯಾಗಿದೆ. ಆನೇಕಲ್–2287:2287; ಬೆಂಗಳೂರು ಉತ್ತರ ತಾಲ್ಲೂಕಿನಿಂದ 3938:3906 'ಬೆಂಗಳೂರು ದಕ್ಷಿಣ ತಾಲ್ಲೂಕಿನಿಂದ 3177:3141', ಮತ್ತು ಜಿಲ್ಲೆಯಲ್ಲಿ ಒಟ್ಟು ಮಾದರಿಗಳ ಸಂಖ್ಯೆ9402:9334. 1989–90ರಲ್ಲಿ ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದ 1100 ರಷ್ಟು ಮಣ್ಣು ಮಾದರಿ ಹೊಂದುವ ಗುರಿ ಇದೆ.

ಸ್ಥಳೀಯ ತಿಪ್ಪೆಗೊಬ್ಬರ ಸಂಪನ್ಮೂಲ (Local Manurial Resources)

ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕ ಪದ್ಧತಿಯ ಪ್ರಕಾರ ಮಿಶ್ರಗೊಬ್ಬರ ಅಥವಾ ತಿಪ್ಪೆಗೊಬ್ಬರ ಅಭಿವೃದ್ಧಿ ಪಡಿಸುವುದು ಅವಶ್ಯವಾಗಿದೆ. ಈ ಯೋಜನೆಯು ಜಿಲ್ಲೆಯಲ್ಲಿ ಅನುಷ್ಠಾನದಲ್ಲಿದೆ. ಈ ಯೋಜನೆಯ ಅಡಿಯಲ್ಲಿ ಕೈಗೊಂಡ ಕಾರ್ಯಗಳೆಂದರೆ:–

1. ನಗರ ಮತ್ತು ಗ್ರಾಮೀಣ ಮಿಶ್ರಗೊಬ್ಬರ ತಯಾರಿಕೆಯನ್ನು ತೀವ್ರಗೊಳಿಸುವುದು;
2. ನೀರಾವರಿ ಹಾಗೂ ಮಳೆಯಾಧಾರಿತ ಪ್ರದೇಶದಲ್ಲಿ ಹಸಿರು ಎಲೆಗೊಬ್ಬರ ತಯಾರಿಕೆ ತೀವ್ರಗೊಳಿಸುವುದು;
3. ಗ್ರಾಮೀಣ ಮುಖಂಡರಿಗೆ ಮಿಶ್ರಗೊಬ್ಬರ ತಯಾರಿಕೆ ಬಗ್ಗೆ ತರಬೇತಿ ಕೊಡುವುದು;
4. ನೈಟ್ ಸಾಯಿಲ್ ರಕ್ಷಣೆ ಮಾಡುವುದು;
5. ಸುಧಾರಿತ ದನಗಳ ಕೊಟ್ಟಿಗೆ ಮತ್ತು ತಿಪ್ಪೆಗೊಬ್ಬರ ಕೊಟ್ಟಿಗೆ ನಿರ್ಮಿಸುವುದು;
6. ಗೊಬರ್‌ಗ್ಯಾಸ್ ಪ್ಲಾಂಟ್‌ಗಳನ್ನು ಹೆಚ್ಚಿಸುವುದು;
7. ಮೆಕ್ಯಾನಿಕಲ್ ಕಾಂಪೋಸ್ಟ್ ಪ್ಲಾಂಟ್‌ಗಳನ್ನು ನಿರ್ಮಿಸುವುದು;
8. ಗಟಾರ (ಒಳಚರಂಡಿ) ನೀರನ್ನು ಉಪಯೋಗ ಮಾಡಿಕೊಳ್ಳುವುದು;
9. ಉತ್ತಮ ದರ್ಜೆಯ ಮಿಶ್ರಗೊಬ್ಬರ ತಯಾರಿಸಿದ ಸ್ಥಳೀಯ ಸಂಸ್ಥೆಗಳಿಗೆ ಬಹುಮಾನ ಕೊಡುವುದು.

ಸ್ಥಳೀಯ ತಿಪ್ಪೆಗೊಬ್ಬರ ಸಂಪನ್ಮೂಲ ಕಾರ್ಯಕ್ರಮದ ಅಡಿಯಲ್ಲಿ 2,89,650 ಟನ್ ಗ್ರಾಮೀಣ ಮಿಶ್ರಗೊಬ್ಬರ ಮತ್ತು 1,68,700ಟನ್ ಶಹರ ಮಿಶ್ರಗೊಬ್ಬರವನ್ನು ಜಿಲ್ಲೆಯಲ್ಲಿ 1988–89ರಲ್ಲಿ ತಯಾರಿಸಲಾಯಿತು.

ಕೃಷಿ ವಿಭಾಗವು ಕೃಷಿಕರಿಗೆ ಬೇಕಾದ ಸಲಕರಣೆಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಹಾಗೂ ಸೂಕ್ತ ಬೆಲೆಗಳಲ್ಲಿ ಪೂರೈಸುವ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಕೃಷಿ ವಿಭಾಗವು 3 ಪ್ರಮುಖ ಸಲುವಳಿಗಳಾದ ಬಿತ್ತನೆ ಬೀಜ ರಸಗೊಬ್ಬರ ಮತ್ತು ಬೆಳೆ ರಕ್ಷಣಾ ರಸಾಯನಿಕಗಳನ್ನು ಪೂರೈಸುತ್ತದೆ. ಇತ್ತೀಚಿನ ದಿನಗಳಲ್ಲಿ ಬಿತ್ತನೆ ಬೀಜ ಅತ್ಯಂತ ಪ್ರಮುಖ ಸಲುವಳಿಯಾಗಿದೆ. ನವೀನ ಹೈಬ್ರಿಡ್ ಮತ್ತು ಅಧಿಕ ಇಳುವರಿ ಕೊಡುವ ವಿವಿಧ ತಳಿಗಳ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಕೃಷಿ ವಿಭಾಗವು ಪ್ರತಿವರ್ಷ ಎಷ್ಟು ಗುಣಮಟ್ಟದ ಬಿತ್ತನೆ ಬೀಜ ಬೇಕಾಗಬಹುದೆಂಬುದನ್ನು ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ರಾಷ್ಟ್ರೀಯ ಬೀಜ ನಿಗಮಗಳ ಮುಖಾಂತರ ಅಂದಾಜು ಮಾಡುತ್ತದೆ. ಗುಣಮಟ್ಟ ಬಿತ್ತನೆ ಬೀಜ ಪೂರೈಸುವ ಸಲುವಾಗಿ ಆನೇಕಲ್ ತಾಲ್ಲೂಕು ಕಿಟ್ಟಗನಹಳ್ಳಿ ಎಂಬಲ್ಲಿ 'ಬಿತ್ತನೆ ಬೀಜಗಳ ಫಾರ್ಮ' ಹೊಂದಿದೆ. ಈ ಫಾರ್ಮ 1970–71ರಲ್ಲಿ 17–47 ಹೆಕ್ಟೇರು ಪ್ರದೇಶ ಹೊಂದಿದ್ದು ಈ 17–47 ಹೆಕ್ಟೇರು ಪ್ರದೇಶದಲ್ಲಿ ನಿವ್ವಳ ಬೀಜದ ಪ್ರದೇಶ ಕೇವಲ 1461 ಹೆಕ್ಟೇರಿನಷ್ಟಿದೆ. ಈ ಬಿತ್ತನೆ ಬೀಜದ ಫಾರ್ಮ ಫೌಂಡೇಶನ್ ಬೀಜಗಳನ್ನು ಹಾಗೂ ಕೃಷಿ ವಿಶ್ವವಿದ್ಯಾಲಯದಿಂದ ಪೂರೈಸಲ್ಪಡುವ ತಳಿಬೀಜಗಳನ್ನು ಕೃಷಿಕರಿಗೆ ಪೂರೈಸುತ್ತಿದೆ. ಫೌಂಡೇಶನ್ ಬೀಜಗಳನ್ನು ಕರ್ನಾಟಕ ರಾಜ್ಯ ಬೀಜ ನಿಗಮಗಳ ಮೂಲಕ ಧೃಢೀಕರಿಸಿ (Certified Seeds) ಮಾರಾಟ ಮಾಡಲಾಗುತ್ತದೆ. ಹೀಗೆ ಧೃಢೀಕರಿಸಿದ ಬೀಜಗಳನ್ನು ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ರಾಷ್ಟ್ರೀಯ ಬೀಜ ನಿಗಮದ ಮೂಲಕ ಮತ್ತು ಖಾಸಗಿ ಬೀಜ ಮಾರಾಟಗಾರರ ಮೂಲಕ ಮಾರಾಟ ಮಾಡಲಾಗುತ್ತದೆ.

ಈ ಜಿಲ್ಲೆಯಲ್ಲಿ ಕೃಷಿಕರಿಗೆ ಗುಣಮಟ್ಟದ ಬೀಜಗಳನ್ನು ಪೂರೈಸುವ ಸಲುವಾಗಿ 1966ರ ಬೀಜ ಕಾನೂನು ಮತ್ತು 1968ರ ಬೀಜ ನೀತಿಯನ್ನು ಪರಿಣಾಮಕಾರಿಯಾಗಿ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗಿದೆ. ಬಿತ್ತನೆ ಬೀಜಗಳನ್ನು ಈಗ ಅವಶ್ಯಕ ಸರಕುಗಳ ಕಾನೂನು ಅಡಿಯಲ್ಲಿ ತರಲಾಗುತ್ತದೆಯಲ್ಲದೆ ದಿನಾಂಕ 30–12–1983 ರಂದು ವಿಶೇಷ ಬೀಜ ನಿಯಂತ್ರಣ ಆದೇಶ ಪಾಸುಮಾಡಲಾಗಿದೆ. ಕಾನೂನಿನ ಅಡಿಯಲ್ಲಿ ಗುಣಮಟ್ಟದ ಬೀಜಗಳನ್ನು ಪೂರೈಸುವ ಸಲುವಾಗಿ ಹೆಬ್ಬಾಳದಲ್ಲಿ ಬೀಜ ಪರೀಕ್ಷಣಾ ಪ್ರಯೋಗಾಲಯವನ್ನು ಸ್ಥಾಪಿಸಲಾಗಿದೆ. ಹೆಬ್ಬಾಳದಲ್ಲಿರುವ ಬೀಜ ಪರೀಕ್ಷಣಾ ಪ್ರಯೋಗಾಲಯವು ದಕ್ಷಿಣ ಕರ್ನಾಟಕ ಹಾಗೂ ಬೆಂಗಳೂರು ಗ್ರಾಮೀಣ ಜಿಲ್ಲೆಯ ವ್ಯಾಪ್ತಿ ಹೊಂದಿದೆ. ಈ ಪ್ರಯೋಗಾಲಯವಲ್ಲದೆ ತುಮಕೂರು, ಕೋಲಾರ, ಮಂಡ್ಯ ಮತ್ತು ಬೆಂಗಳೂರು ನಗರ ಜಿಲ್ಲೆಯನ್ನೊಳಗೊಂಡು ತೋಟಗಾರಿಕೆ ಇಲಾಖೆ ಬೆಂಗಳೂರಿನ ಲಾಲಬಾಗದಲ್ಲಿ ಪ್ರಯೋಗಾಲಯ ಹೊಂದಿದೆ. ಕೃಷಿ ವಿಭಾಗ ಫೌಂಢೇಶನ್ ಬೀಜಗಳ ಫಾರ್ಮ ಮತ್ತು ಕೃಷಿ ಅಭಿವೃದ್ಧಿ ಕೇಂದ್ರ ಹೊಂದಿದ್ದು ಫೌಂಡೇಶನ್ ಬೀಜಗಳನ್ನು ಕರ್ನಾಟಕ ರಾಜ್ಯ ಬೀಜ ನಿಗಮ ಮತ್ತು ಖಾಸಗಿ ಬೀಜ ಮಾರಾಟ ಮಳಿಗೆಗಳು ಮಾರಾಟ ಮಾಡುತ್ತಿವೆ.

ರಾಸಾಯನಿಕ ಗೊಬ್ಬರ ಬಳಕೆ

ಈ ಜಿಲ್ಲೆಯಲ್ಲಿ ಅತೀ ಹೆಚ್ಚು ಪ್ರದೇಶದಲ್ಲಿ ಅಧಿಕ ಇಳುವರಿ ಕೊಡುವ ತಳಿಗಳ ಉಪಯೋಗ ಹಾಗೂ ರಾಸಾಯನಿಕ ಗೊಬ್ಬರ ಬಳಕೆ ಬಗ್ಗೆ ರೈತರಲ್ಲಿ ಜಾಗೃತಿಯುಂಟಾಗಿರುವುದರಿಂದ 1977–78ರಿಂದ ರಸಾಯನಿಕ ಗೊಬ್ಬರ ಬಳಕೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಯಿತು. ಇದರ ಪರಿಣಾಮವಾಗಿ ಜಿಲ್ಲೆಯಲ್ಲಿ ರೈತರು ಒಣ ಬೇಸಾಯ ಬೆಳೆಗಳಾದ ರಾಗಿ ಮತ್ತು ನೆಲಗಡಲೆಗೆ ಹೆಚ್ಚು ರಾಸಾಯನಿಕ ಗೊಬ್ಬರ ಬಳಸತೊಡಗಿದ್ದಾರೆ.

28. ಬೆಂಗಳೂರಿನ ಪ್ರಾಚೀನ ಸ್ಮಾರಕಗಳು

ಡಾ. ಮುತ್ತುರಾಜು

ಬೆಂಗಳೂರು ನಗರದ ಅತ್ಯಂತ ಪ್ರಾಚೀನ ಶಾಸನೋಕ್ತ ವೀರಗಲ್ಲು ಬೇಗೂರಿಲ್ಲಿದ್ದು, ಇದು ಕ್ರಿ. ಶ. ಸುಮಾರು 890ರ ಕಾಲದ್ದಾಗಿದೆ. ಈ ವೀರಗಲ್ಲು ಕುರಿತು ಶಾಸನ ತಜ್ಞರಲ್ಲಿ ವಿಸ್ತೃತವಾದ ಚರ್ಚೆ ಮತ್ತು ವಿವರಣೆಗಳು ನಡೆದಿವೆ. ಪ್ರಸ್ತುತ ಈ ವೀರಗಲ್ಲು ಶಾಸನವು ಬೆಂಗಳೂರಿನಲ್ಲಿರುವ ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿದೆ.

ವೀರಗಲ್ಲು ಪ್ರಕಾರಗಳಲ್ಲೇ ವಿಶಿಷ್ಟವಾದ ಒಂದು ವೀರಗಲ್ಲು ಸ್ಮಾರಕವು ಬನಶಂಕರಿ ಎರಡನೇ ಹಂತದಲ್ಲಿರುವ ನಾಗಲಕ್ಷ್ಮಿ ಕಲ್ಯಾಣ ಮಂಟಪದ ಪಾಳುಗೋಡೆಯ ಬಳಿ ಇದೆ. ಈ ಸ್ಥಳದ ಪ್ರಾಚೀನ ನಾಮ ನಾಗಸಂದ್ರ ಎಂದಿದ್ದು, ನಾಗ ಎಂಬ ವ್ಯಕ್ತಿಯ ಹೆಸರಿನಲ್ಲಿ ಕೆರೆಯೊಂದು ನಿರ್ಮಾಣವಾಗಿದ್ದನ್ನು ಸೂಚಿಸುತ್ತದೆ. ಪೂರ್ವಾಭಿಮುಖ ವಾಗಿ ನಿಲ್ಲಿಸಿರುವ ಈ ಸ್ಮಾರಕ ಶಿಲೆಯು ನಾಲ್ಕು ಅಡಿ ಅಗಲ ಮತ್ತು ನಾಲ್ಕು ಅಡಿ ಉದ್ದವಿದ್ದು ಎರಡು ಹಂತ ಗಳಲ್ಲಿ ನಿರ್ಮಾಣವಾಗಿದೆ. ವೀರಗಲ್ಲಿನ ಕೆಳಹಂತದಲ್ಲಿ ವೀರನೊಬ್ಬನು ತನ್ನ ಬಲಗೈಯಲ್ಲಿ ಬಿಲ್ಲನ್ನು ಹಿಡಿದು ಬಾಣವನ್ನು ಕಡವೆಯೊಂದರ ಮೇಲೆ ಪ್ರಯೋಗಿಸುತ್ತಿದ್ದಾನೆ. ಎಡಭಾಗಕ್ಕೆ ಮುಖಮಾಡಿ ನಿಂತಿರುವ ಈ ಜಿಂಕೆಯ ಕೊಂಬುಗಳಲ್ಲಿ ಕವಲುಗಳಿರುವುದನ್ನು ಗುರುತಿಸಬಹುದಾಗಿದೆ. ವೀರನು ಹೂಡಿರುವ ಬಾಣದ ತುದಿಗೆ ತಾಗಿರುವಂತೆ ಸಣ್ಣ ಪ್ರಮಾಣದಲ್ಲಿ ಜಿಂಕೆಯನ್ನು ಚಿತ್ರದಲ್ಲಿ ಮೂಡಿಸಲಾಗಿದೆ. ಈ ವೀರನು ಬೇಡರು ತೊಡುತ್ತಿದ್ದಂತಹ ಉಡುಗೆಯನ್ನು ತೊಟ್ಟಿದ್ದು ಶಿರದಲ್ಲಿ ಅಗಲವಾಗಿರುವ ಪೇಟವನ್ನು ಹೊಂದಿದ್ದಾನೆ. ಕಿವಿಯಲ್ಲಿ ಕುಂಡಲಗಳಿದ್ದು ನಡುವಿನಲ್ಲಿ ಅಗಲವಾದ ಬಿಚ್ಚುಗತ್ತಿ ಇದೆ. ಕಾಲುಗಳಲ್ಲಿ ಕಡಗಗಳು ಇವೆ. ಈತ ಬೇಟೆಗೆ ಹೋಗಿ ಜಿಂಕೆಯೊಡನೆ ಹೋರಾಡಿ ಮರಣವನ್ನು ಹೊಂದಿದ್ದಾನೆ. ಸೌಮ್ಯ ಸ್ವಭಾವದ ಜಿಂಕೆಯೊಡನೆ ಮಾನವನು ಹೋರಾಡುವುದೆಂದರೇನು? ಎಂಬ ಪ್ರಶ್ನೆ ಎದುರಾಗುವುದು ಸಹಜ. ಆದರೆ ಇದಕ್ಕೆ ಪುಷ್ಟಿಕೊಡುವ ಘಟನೆಯೊಂದು ಇತ್ತೀಚೆಗೆ ಚಿತ್ರದುರ್ಗದ ಬಳಿಯಲ್ಲಿ ನಡೆದಿದ್ದು ಇದೂ ಸಹ ಸಹಜ ಘಟನೆ ಆಗಿದೆ. ಈ ವೀರಗಲ್ಲಿನ ಮೇಲುಭಾಗದಲ್ಲಿ ಮಡಿದಿರುವ ಈ ವೀರನನ್ನು ಅಪ್ಸರೆಯರು ಚಾಮರಧಾರಿಣಿಯರಾಗಿ ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಈ ಒಂದು ಲಕ್ಷಣವು ವೀರಗಲ್ಲುಗಳನ್ನು ಹಾಕಿಸುತ್ತಿದ್ದಂತಹ ಪ್ರಾಚೀನ ಲಕ್ಷಣವನ್ನು ಸೂಚಿಸುವುದರಿಂದ ಈ ವೀರಗಲ್ಲು ಕ್ರಿ. ಶ. ಸುಮಾರು ಹತ್ತನೆಯ ಶತಮಾನಕ್ಕೆ ಸೇರುತ್ತದೆ. ಇಂದಿನ ಸಾರಕ್ಕಿಯು ಪ್ರಾಚೀನಕಾಲದಲ್ಲಿ ಸಾರಂಗರಾಮಪಟ್ಟಣ, ಸಾರಂಗ ಪಟ್ಟಣ, ಸಾರಮು ಎಂದು ಕರೆಸಿಕೊಂಡಿರುವುದರಿಂದ 'ನಾಗಸಂದ್ರ ಮತ್ತು ಸಾರಕ್ಕಿಯ' ನಡುವಣ ಪ್ರದೇಶದಲ್ಲಿ ಹೇರಳ ಜಿಂಕೆಗಳು ನೆಲೆಸಿದ್ದವು ಅಂತೆಯೇ ಬೇಡರ ಪಡೆಗಳೂ ಸಹ ಇಲ್ಲಿ. ಇದ್ದವು ಎಂದು ನಿರ್ಧರಿಸಬಹುದಾಗಿದೆ. ಸಾರಮು ಎಂದು ಕ್ರಿ. ಶ. ಸುಮಾರು 9ನೇ ಶತಮಾನದ ಬೇಗೂರು ಶಾಸನದಲ್ಲಿ ಉಕ್ತವಾಗಿರುವ ಇಂದಿನ ಸಾರಕ್ಕಿಯ ರಾಜಶೇಖರ ನರ್ಸಿಂಗ್ ಹೋಂನ ಹಿಂಭಾಗದ ಮನೆಯೊಂದರ ಪೌಳಿಗೆ ಹೊಂದಿಸಿ ನಿಲ್ಲಿಸಿರುವ ವೀರಮಾಸ್ತಿ ಸ್ಮಾರಕವೊಂದು ಇದ್ದು ಇದು 120 ಸೆಂ.ಮೀ ಎತ್ತರ ಮತ್ತು ಅಷ್ಟೇ ಅಗಲವನ್ನು ಹೊಂದಿದೆ. ಎರಡು ಹಂತಗಳಲ್ಲಿ ಚಿತ್ರಣ ಮೂಡಿಸಿರುವ ಗ್ರಾನೈಟ್‌ಕಲ್ಲಿನ ಈ ಶಿಲ್ಪಸ್ಮಾರಕದಲ್ಲಿ ಮೊದಲ ಹಂತದಲ್ಲಿ ರಾಜನು ಯುದ್ಧಕ್ಕಾಗಿ ಹೊರಡುವ ಮುನ್ನಿನ ಕ್ಷಣದ ಚಿತ್ರಣವಿದೆ. ರಾಜನು ತನ್ನ ಒಡ್ಡೋಲಗದ

ಮೇಲೆ ಪಾರ್ಶ್ವರೀತಿಯಲ್ಲಿ ಕುಳಿತು ಹಿಂಬದಿಯ ದಿಂಬಿಗೆ ಒರಗಿ ಕಾಲಮೇಲೆ ಕಾಲುಹಾಕಿ ಠೀವಿಯಿಂದ ಕುಳಿತಿದ್ದಾನೆ. ಈತನ ಎದುರಿಗೆ ರಾಣಿಯು ಪಾರ್ಶ್ವರೀತಿಯಲ್ಲಿ ಕುಳಿತು ರಾಜನೊಂದಿಗೆ ಸಂಭಾಷಣೆ ನಡೆಸುತ್ತಿದ್ದಾಳೆ. ಇವರ ಎರಡೂ ಪಾರ್ಶ್ವಗಳಲ್ಲಿ ಇಬ್ಬರು ಸೇವಕಿಯರು ಚಾಮರ ಬೀಸುತ್ತಿದ್ದಾರೆ. ಇವರ ಮುಂದೆ ನಾಲ್ವರು ಸ್ತ್ರೀಯರ ಚಿತ್ರಣವಿದ್ದು ಒಬ್ಬಾಕೆಯು ತಮಟೆ ಬಾರಿಸುತ್ತಿದ್ದರೆ, ಮತ್ತೊಬ್ಬಾಕೆಯು ಓಲಗ ಊದುತ್ತಿದ್ದಾಳೆ, ಮಗದೊಬ್ಬಾಕೆಯು ತನ್ನೆರಡೂ ಕೈಗಳಿಂದ ಮೃದಂಗ ಬಾರಿಸುತ್ತಿದ್ದಾಳೆ. ಇವರ ಮುಂದೆ ಇನ್ನೊಬ್ಬಾಕೆಯು ಚಕ್ರಾಸನ ನರ್ತನ ಭಂಗಿಯಲ್ಲಿದ್ದಾಳೆ. ಈ ಬಗೆಯ ಸಂಗೀತ ಮತ್ತು ನರ್ತನದ ಚಿತ್ರಣವು ಕರ್ನಾಟಕದಲ್ಲಿ ಈವರೆಗೆ ದೊರೆತಿರುವ ವೀರ ಮಾಸ್ತಿ ಸ್ಮಾರಕಗಳಲ್ಲೇ ಅಪೂರ್ವವಾದುದಾಗಿದೆ.

ಮುಂದಿನ ಹಂತಹ ಚಿತ್ರಣದಲ್ಲಿ ಮಡಿದ ರಾಜನು ವೈಕುಂಠದಲ್ಲಿ ವಿಷ್ಣುವಿನ ಮುಂದೆ ಹಸ್ತಗಳನ್ನು ಜೋಡಿಸಿ ನಿಂತಿದ್ದಾನೆ. ಈ ರಾಜನನ್ನು ಸಾವಿನಲ್ಲೂ ಹಿಂಬಾಲಿಸುವ ಸಲುವಾಗಿ ಸತಿಪದ್ಧತಿ ಅನುಸರಿಸಿ ತಮ್ಮ ಪ್ರಾಣತ್ಯಾಗ ಮಾಡಿರುವ ಈತನ ಐವರು ರಾಣಿಯರೂ ತಮ್ಮ ಹಸ್ತಗಳನ್ನು ಜೋಡಿಸಿ ನಿಂತಿದ್ದಾರೆ. ಈ ಶಿಲ್ಪದಲ್ಲಿಯ ವೈಕುಂಠದ ಕಲ್ಪನೆ ಬೆಂಗಳೂರಿನಲ್ಲಿ ಈವರೆಗೆ ದೊರೆತಿರುವ ವೀರ ಮಾಸ್ತಿ ಸ್ಮಾರಕಶಿಲೆಗಳಲ್ಲಿ ಪ್ರಥಮವಾಗಿದೆ. ಇಲ್ಲಿ ಮಡಿದ ರಾಜ ಪರಿವಾರದವರು ವೈಷ್ಣವ ಪಂಥಕ್ಕೆ ಸೇರಿದವರಾಗಿದ್ದು ಆ ವೇಳೆಗೆ ವೈಷ್ಣವ ಪಂಥ ಈ ಭಾಗದಲ್ಲಿ ಪ್ರವರ್ಧಮಾನದಲ್ಲಿತ್ತೆಂದು ನಿರ್ಧರಿಸಬಹುದು.

ಯಾವುದೋ ಯುದ್ಧವೊಂದರಲ್ಲಿ ಇಲ್ಲಿನ ರಾಜನು (ಸಾರಂಗರಾಯ) ತನ್ನ ಶತೃಗಳೊಂದಿಗೆ ಹೋರಾಡಿ ಮಡಿಯಲಾಗಿ ಈ ಸ್ಮಾರಕ ನಿರ್ಮಾಣವಾಗಿದೆ. ಹೋರಾಟದ ಹೆಚ್ಚಿನ ಮಾಹಿತಿ ಈ ಸ್ಮಾರಕದಲ್ಲಿ ಲಭ್ಯವಿಲ್ಲ. ಈ ವೀರ–ಮಾಸ್ತಿಕಲ್ಲು ಕ್ರಿ. ಶ. ಸುಮಾರು ಹತ್ತರಿಂದ ಹನ್ನೆರಡನೇ ಶತಮಾನದ ಕಾಲಕ್ಕೆ ಸೇರಿದುದಾಗಿದ್ದು, ಸಾರಕ್ಕಿಯ ಸಾಮಾಜಿಕ, ಧಾರ್ಮಿಕ ಪ್ರಾಚೀನತೆಗೆ ಸಾಕ್ಷಿಯಾಗಿದೆ.

ಇದೇ ಸಾರಕ್ಕಿಯಲ್ಲಿನ ಜೆ. ಪಿ. ನಗರ 1ನೇ ಹಂತದ ರಸ್ತೆಯ ಮಧ್ಯದಲ್ಲಿ ವೀರಗಲ್ಲೆಂದು ಭೂಮಿಯಲ್ಲಿ ಬಹುತೇಕ ಮುಚ್ಚಿಹೋಗಿದ್ದು ಎರಡೂವರೆ ಅಡಿ ಎತ್ತರ ಮತ್ತು ಅಷ್ಟೇ ಅಗಲ ಭಾಗವನ್ನು ಕಾಣಬಹುದಾಗಿದೆ. ಇದರಲ್ಲಿ ಬೇಡನ ವೇಷಭೂಷಣ ಧರಿಸಿರುವ ವೀರ ಮತ್ತು ಆತನ ಸತಿಯೋರ್ವಳ ಚಿತ್ರವಿದೆ. ಇಲ್ಲಿನ ಯೋಧನು ಶತೃಗಳೊಡನೆ ನಡೆದ ಕದನದಲ್ಲಿ ಮರಣವನ್ನು ಹೊಂದಲಾಗಿ ಈತನ ಪತ್ನಿಯು ಸಹಗಮನ ಮಾಡಿದ್ದಾಳೆ. ಈ ವೀರಗಲ್ಲಿನ ಕಾಲಮಾನ ಕ್ರಿ. ಶ ಸುಮಾರು ಹದಿನೈದನೇ ಶತಮಾನ.

ಲಾಲ್‌ಬಾಗ್‌ನಲ್ಲಿರುವ ಕಾವಲುಗೋಪುರ ಬಂಡೆಯ ಬುಡದಲ್ಲಿ ಉತ್ತರ ದಿಕ್ಕಿಗೆ ಮುಖಮಾಡಿ ನಿಲ್ಲಿಸಿರುವ ಮೂರು ಅಡಿ ಎತ್ತರವಿರುವ ಗ್ರಾನೈಟ್‌ಕಲ್ಲು ಇದಾಗಿದ್ದು ಒಂದೇ ಹಂತದ ನಿರ್ಮಾಣವನ್ನು ಹೊಂದಿದೆ. ಇದರಲ್ಲಿ ವೀರ ಮತ್ತು ಈತನ ಸತಿಯಿರುವ ಚಿತ್ರಣಗಳಿವೆ. ವೀರನು ತನ್ನ ಎಡಗಾಲನ್ನು ಮುಂದೆ ಮಾಡಿ ತನ್ನ ಎರಡೂ ಕೈಗಳಲ್ಲಿ ಎದೆಯ ಭಾಗಕ್ಕೆ ಬರುವ ಹಾಗೆ ಉದ್ದನೆಯ ಈಟಿಯನ್ನು ಹಿಡಿದು ಹೋರಾಟ ನಡೆಸುತ್ತಿದ್ದಾನೆ. ವೀರನ ಚಿತ್ರಣದಲ್ಲಿ ಬಲಿಷ್ಠವಾದ ಶರೀರವಿದ್ದು ವೇಷ, ಭೂಷಣಗಳಿಂದ ಅಲಂಕೃತವಾಗಿದೆ. ಬಲಭಾಗದಲ್ಲಿರುವ ಸ್ತ್ರೀಯ ಚಿತ್ರಣವು ಈ ವೀರನ ಸತಿಯದ್ದಾಗಿದ್ದು, ಅಂದಿನ ಪದ್ಧತಿಯಂತೆ ಚಿತೆ ಏರಿ ಸಹಗಮನ ಮಾಡಿದ್ದಾಳೆ. ಈಕೆಯ ಚಿತ್ರಣವೂ ಸಹ ವೀರನಂತೆಯೇ ಸಮ ಪ್ರಮಾಣದಾಗಿದ್ದು ತನ್ನ ಕೈಗಳಲ್ಲಿ ನಿಂಬೆಹಣ್ಣು ಮತ್ತು ಕನ್ನಡಿಯನ್ನು ಹಿಡಿದುಕೊಂಡಿದ್ದಾಳೆ. ಶಿರದಲ್ಲಿ ದೊಡ್ಡ ತುರುಬು ಇದ್ದು ಉಡುಗೆಯೂ ಆಕರ್ಷಕವಾಗಿದೆ. ಈ ವೀರಗಲ್ಲಿನ ಮೇಲು ಭಾಗದಲ್ಲಿ ಸೂರ್ಯಚಂದ್ರರ ಕೆತ್ತನೆಗಳಿದ್ದು ಹೋರಾಟದ ಇನ್ನಾವುದೇ ವಿವರಗಳು ಇಲ್ಲವಾದರೂ ಇದೊಂದು ರಾಜಕಾರಣದ ಕದನದ ವೀರಗಲ್ಲು ಸ್ಮಾರಕವೆಂದು ನಿರ್ಧರಿಸಬಹುದಾಗಿದೆ. ಪ್ರಾಚೀನತೆಯ ದೃಷ್ಟಿಯಿಂದ ಇದು ಹತ್ತನೆಯ ಶತಮಾನಕ್ಕೆ ಸೇರುವ ವೀರಗಲ್ಲು ಸ್ಮಾರಕವಾಗಿದೆ.

ಇದೇ ಲಾಲ್‌ಬಾಗ್ ಗಾಜಿನ ಮನೆಯ ಎದುರಿಗಿರುವ ಬ್ಯಾಂಡ್‌ಸ್ಟ್ಯಾಂಡ್ ಬಳಿಯ ವೃತ್ತಕ್ಕೆ ಹೊಂದಿಸಿ ನಿಲ್ಲಿಸಿರುವ ಮತ್ತೊಂದು ವೀರಗಲ್ಲು ಐದು ಅಡಿ ಎತ್ತರ ಮತ್ತು ಮೂರು ಅಡಿ ಅಗಲವನ್ನು ಹೊಂದಿದ್ದು, ಎರಡು ಹಂತಗಳಲ್ಲಿ ಚಿತ್ರಿತವಾಗಿದೆ. ಓರ್ವ ವೀರ ಮತ್ತು ಮೂರು ಜನ ಸ್ತ್ರೀಯರ ಚಿತ್ರಣ ಈ ಸ್ಮಾರಕದಲ್ಲಿದೆ. ಇವರೆಲ್ಲಾ ಸೇವಕಿಯರಾಗಿದ್ದು, ಓರ್ವ ಸೇವಕಿ ಮಡಿದಿರುವ ವೀರನಿಗೆ ಛತ್ರಿ ಹಿಡಿದಿದ್ದಾಳೆ. ಮತ್ತಿಬ್ಬರು ಸೇವಕಿಯರು ಚಾಮರ ಬೀಸುತ್ತಿದ್ದಾರೆ. ವೀರನು ತನ್ನೆರಡೂ ಕೈಗಳಲ್ಲಿ ಖಡ್ಗ ಮತ್ತು ಗುರಾಣಿಯನ್ನು ಹಿಡಿದಿದ್ದಾನೆ. ಈ ವೀರಗಲ್ಲಿನ ಎರಡನೇ ಹಂತದಲ್ಲಿ ನಂದಿ ಮತ್ತು ಶಿವಲಿಂಗಗಳಿವೆ. ವೀರನು ಯಾರೊಡನೆ ಯುದ್ಧಮಾಡಿ ಹತನಾದ ಎಂಬುದರ ವಿವರಗಳು ಇಲ್ಲಿ ಲಭ್ಯವಿಲ್ಲ. ಆದರೂ ಇದೊಂದು ರಾಜಕೀಯ ಕದನವೆಂದು ಪರಿಗಣಿಸಬಹುದು. ಕ್ರಿ. ಶ. ಹದಿಮೂರನೇ ಶತಮಾನಕ್ಕೆ ಈ ವೀರಗಲ್ಲು ಸೇರುತ್ತದೆ.

ಚಾಮರಾಜಪೇಟೆಯ ಅಪ್ಪುರಾವ್ ರಸ್ತೆಯ ಅರಳಿ ಕಟ್ಟೆಯ ಬಳಿ ವೀರಗಲ್ಲೊಂದು ಇದ್ದು ಮೂರು ಅಡಿ ಎತ್ತರ ಮತ್ತು ಎರಡು ಅಡಿ ಅಗಲ ಇರುವ ಗ್ರಾನೈಟ್ ಕಲ್ಲಿನ ಸ್ಮಾರಕವಾಗಿದೆ. ಇದರಲ್ಲಿ ಓರ್ವ ವೀರ ಮತ್ತು ಆತನ ಇಬ್ಬರು ಪತ್ನಿಯರ ಚಿತ್ರಣವಿದೆ. ವೀರನು ಸ್ಮಾರಕ ಶಿಲೆಯ ಎಡಭಾಗದಲ್ಲಿ ವೀರ ಭಂಗಿಯಲ್ಲಿ ನಿಂತಿದ್ದು ತನ್ನ ಎರಡೂ ಕೈಗಳಿಂದ ಉದ್ದನೆಯ ಈಟಿಯೊಂದನ್ನು ಹಿಡಿದಿದ್ದಾನೆ. ಶಿರದ ಮೇಲೆ ಎತ್ತಿಕಟ್ಟಿರುವ ತುರುಬು, ಕಿವಿಗಳಲ್ಲಿ ಕುಂಡಲಗಳು, ಕಾಲುಗಳಲ್ಲಿ ಕಡಗಗಳು, ತೋಳು ಮತ್ತು ಮುಂಗೈಗಳಲ್ಲಿ ಆಭರಣಗಳನ್ನು ಧರಿಸಿದ್ದು ಕೊರಳಲ್ಲಿ ಮಣಿಸರವಿದೆ. ಈ ವೀರನ ಚಿತ್ರವು ಲಾಲ್‌ಬಾಗ್‌ನ ಕಾವಲುಗೋಪುರ ಬಳಿಯ ವೀರಗಲ್ಲಿನ ಚಿತ್ರವನ್ನು ಹೋಲುತ್ತದೆ. ವೀರನ ಬಲಬದಿಯಲ್ಲಿ ಇಬ್ಬರು ಸ್ತ್ರೀಯರ ಚಿತ್ರಣವಿದ್ದು, ಅವರು ತಮ್ಮ ಬಲಬದಿಗೆ ಬರುವಂತೆ ಶಿರದ ತುರುಬುಗಳನ್ನು ಎತ್ತಿ ಕಟ್ಟಿದ್ದಾರೆ. ಕಿವಿಗಳಲ್ಲಿ, ತೋಳು ಮತ್ತು ಮುಂಗೈಗಳಲ್ಲಿ ಆಭರಣಗಳನ್ನು ಧರಿಸಿದ್ದು ಕೊರಳಲ್ಲಿ ಮಣಿಸರವಿದೆ. ವೀರನ ಬಲಬದಿಯಲ್ಲಿ ಇಬ್ಬರು ಸ್ತ್ರೀಯರ ಚಿತ್ರಣವಿದ್ದು, ಅವರು ತಮ್ಮ ಬಲಬದಿಗೆ ಬರುವಂತೆ ಶಿರದ ತುರುಬುಗಳನ್ನು ಎತ್ತಿಕಟ್ಟಿದ್ದಾರೆ. ಕಿವಿಗಳಲ್ಲಿ ಆಭರಣಗಳು, ತೋಳು ಮತ್ತು ಮುಂಗೈಗಳಲ್ಲಿ ಕಡಗಗಳಿವೆ. ಉಡುಗೆಯ ಅಲಂಕಾರ ಆಕರ್ಷಕವಾಗಿ ಮೂಡಿಬಂದಿದೆ. ಇವರಿರ್ವರೂ ತಮ್ಮ ಬಲದ ಕೈಗಳನ್ನು ಎತ್ತಿ ಹಿಡಿದಿದ್ದು ವಸ್ತುವೊಂದನ್ನು ಕೈಗಳಲ್ಲಿ ಹಿಡಿದಿರುವಂತಿದೆ (ಹೂ ಮಾಲೆ) ಎಡದ ಕೈಗಳನ್ನು ಇಳಿಬಿಟ್ಟಿರುವ ಹಾಗೆ ಬಿಡಿಸಲಾಗಿದೆ. ವೀರಗಲ್ಲಿನ ಮೇಲು ಭಾಗದಲ್ಲಿ ಅಲಂಕಾರವನ್ನು ಮೂಡಿಸಲಾಗಿದೆ. ಇಲ್ಲಿಯೂ ಸಹ ಯುದ್ಧದ ಹೆಚ್ಚಿನ ಚಿತ್ರಣವು ಲಭ್ಯವಿಲ್ಲವಾಗಿದ್ದು ಯಾವುದೋ ರಾಜಕೀಯ ಕಾರಣಕ್ಕಾಗಿ ವೀರನು ತನ್ನ ಶತೃಗಳ ಜೊತೆ ಕಾದಾಡಿ ಹತನಾಗಿದ್ದಾನೆ. ಈತನ ಇಬ್ಬರು ಸತಿಯರು ಚಿತೆ ಏರಿ ಸಹಗಮನ ಮಾಡಿದ್ದಾರೆ. ಈ ವೀರ ಮಾಸ್ತಿ ಸ್ಮಾರಕವು ಕ್ರಿ. ಶ. ಸು. ಹದಿನೈದನೆಯ ಶತಮಾನಕ್ಕೆ ಸೇರುತ್ತದೆ.

ಕಲಾಸಿಪಾಳ್ಯದ ಅಯ್ಯಪ್ಪ ದೇವಾಲಯದ ಬಳಿ ಬೃಂದಾವನದ ವೇದಿಕೆಯ ಮೇಲೆ ಮುನೇಶ್ವರ ದೇವರ ವಿಗ್ರಹದ ಜೊತೆಯಲ್ಲಿ ಇಟ್ಟು ಪೂಜಿಸಲ್ಪಡುತ್ತಿರುವ ಪ್ರಾಚೀನ ವೀರಗಲ್ಲು ಎರಡೂವರೆ ಅಡಿಗಳ ಎತ್ತರವಿದ್ದು ಒಂದೂವರೆ ಅಡಿ ಅಗಲವನ್ನು ಹೊಂದಿದೆ. ಗ್ರಾನೈಟ್ ಶಿಲೆ ಇದಾಗಿದ್ದು, ಇದರಲ್ಲಿ ವೀರನೊಬ್ಬನ ಚಿತ್ರಣವನ್ನು ಮಾತ್ರ ಮೂಡಿಸಲಾಗಿದೆ. ಈ ವೀರನ ಮುಖ ಅಂದವಾಗಿದ್ದು ತನ್ನ ಬಲದ ಕೈನಲ್ಲಿ ಖಡ್ಗವನ್ನು ತನ್ನ ಶಿರೋಭಾಗಕ್ಕೆ ಬರುವಂತೆ ಎತ್ತಿ ಹಿಡಿದಿದ್ದಾನೆ. ಎಡದ ಕೈನಲ್ಲಿ ಗುರಾಣಿಯನ್ನು ಬೆನ್ನಿನ ಹಿಂಭಾಗಕ್ಕೆ ಬರುವಂತೆ ಹಿಡಿದಿದ್ದಾನೆ. ನಡುವಿನಲ್ಲಿ ಬಿಚ್ಚುಗತ್ತಿ, ಕಿವಿಯಲ್ಲಿ ಕುಂಡಲಗಳು, ಶಿರದಲ್ಲಿ ಎತ್ತಿ ಕಟ್ಟಿರುವ ತುರುಬು, ಎದೆಯ ಮೇಲೆ ಮಣಿಸರ, ಮುಂಗೈ ಮತ್ತು ತೋಳುಗಳಲ್ಲಿ ಕಡಗಗಳನ್ನು ಧರಿಸಿರುವುದೇ ಅಲ್ಲದೆ, ವೀರಗಚ್ಚೆಯ ಉಡುಪನ್ನು ಧರಿಸಿದ್ದಾನೆ. ಈ ಸ್ಮಾರಕದಲ್ಲಿಯೂ ಸಹ ಹೋರಾಟದ ಇತರ ಯಾವ ವಿವರಗಳೂ ಲಭ್ಯವಾಗಿಲ್ಲ. ಈ ವೀರಗಲ್ಲು ಸ್ಮಾರಕವು ಕ್ರಿ. ಶ. ಸು. ಹದಿನೈದನೆಯ ಶತಮಾನಕ್ಕೆ ಸೇರಿರುತ್ತದೆ.

ಬಳೇಪೇಟೆ ರಸ್ತೆಯಲ್ಲಿನ ಕಟ್ಟಡ ಒಂದಕ್ಕೆ ಒರಗಿಸಿ ನಿಲ್ಲಿಸಿ ಪೂಜಿಸುತ್ತಿರುವ ವೀರಗಲ್ಲು ಎರಡು ಅಡಿ ಎತ್ತರ ಮತ್ತು ಒಂದೂವರೆ ಅಡಿ ಅಗಲವಿದೆ. ಇದರಲ್ಲಿ ವೀರ ಮಹಿಳೆಯೋರ್ವಳ ಚಿತ್ರಣ ಮಾತ್ರವೇ ಇದ್ದು ಈಕೆಯು ತನ್ನ ಬಲದ ಕೈನಲ್ಲಿ ಕಠಾರಿಯೊಂದನ್ನು ಎತ್ತಿ ಹಿಡಿದಿದ್ದಾಳೆ. ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಈಕೆ ತನ್ನ ಶತೃಗಳೊಡನೆ ಕಠಾರಿ ಹಿಡಿದು ಹೋರಾಡಿ ಮೃತಳಾಗಿದ್ದಾಳೆ. ಕರ್ನಾಟಕದ ವೀರಗಲ್ಲು ಸ್ಮಾರಕಗಳಲ್ಲಿ ಮಹಿಳೆಯು ಕಾದಾಡಿ ಮಡಿದ ಸ್ಮಾರಕವು ಶ್ರವಣಬೆಳಗೊಳದಲ್ಲಿ ಮಾತ್ರವೇ ಲಭ್ಯವಾಗಿದ್ದು, ಇದು ಮಹಿಳೆ ಹೋರಾಟದ ಎರಡನೇ ವೀರಗಲ್ಲು ಸ್ಮಾರಕವಾಗಿದೆ. ಹೆಚ್ಚಿನ ಯುದ್ಧದ ಚಿತ್ರಣವು ಇಲ್ಲಿ ಲಭ್ಯವಿಲ್ಲದ ಕಾರಣ ಈ ವೀರ ವನಿತೆ ಯಾರು ಎಂಬುದು ಕಾಲನ ದವಡೆಯಲ್ಲಿ ನಶಿಸಿಹೋಗಿದೆ. ಕ್ರಿ. ಶ. ಸು. ಹದಿನಾಲ್ಕನೆಯ ಶತಮಾನಕ್ಕೆ ಈ ವೀರಗಲ್ಲು ಸೇರುತ್ತದೆ.

ಟೌನ್‌ಹಾಲ್ ಬಳಿಯ ಉಸ್ಮಾನ್ ಖಾನ್ ರಸ್ತೆಯಲ್ಲಿನ ಮದ್ದೂರಮ್ಮ ದೇವಾಲಯದ ಆವರಣದಲ್ಲಿ ಒಂದು ವೀರ ಮಾಸ್ತಿಕಲ್ಲು ಇದ್ದು ಇದು ಎರಡೂವರೆ ಅಡಿ ಎತ್ತರ ಮತ್ತು ಎರಡು ಅಡಿ ಅಗಲದ ಗ್ರಾನೈಟ್ ಕಲ್ಲಿನದಾಗಿದೆ. ಕಲ್ಲಿನ ಎಡಭಾಗದಲ್ಲಿ ವೀರನು ವೀರತನದಿಂದ ನಿಂತಿದ್ದು, ಬಲದ ಕೈನಿಂದ ಖಡ್ಗವನ್ನು ಶಿರೋಭಾಗಕ್ಕೆ ಬರುವಂತೆ ಎತ್ತಿ ಹಿಡಿದಿದ್ದಾನೆ. ಎಡದ ಕೈನಲ್ಲಿ ಗುರಾಣಿ ಹಿಡಿದಿದ್ದಾನೆ. ಈತನಿಗೆ ಶಿರದಲ್ಲಿ ದೊಡ್ಡದಾದ ತುರುಬು ಇದ್ದು, ಕೈ ಮತ್ತು ಕಾಲುಗಳಲ್ಲಿ ಕಡಗಗಳಿವೆ. ಜೊತೆಗೆ ಸುಂದರ ವೀರಗಚ್ಚೆಯ ಉಡುಪಿನ ಅಲಂಕಾರವಿದೆ. ಈ ವೀರನ ಹಿಂಬದಿಯಲ್ಲಿ ಇವನ ಸತಿಯ ಚಿತ್ರಣವಿದ್ದು ಈಕೆ ಬಲದ ಕೈಯನ್ನು ಇಳಿಬಿಟ್ಟಿದ್ದು ಎಡದ ಕೈಯನ್ನು ತನ್ನ ಶಿರೋಭಾಗಕ್ಕೆ ಬರುವಂತೆ ಎತ್ತಿ ಅಭಯಹಸ್ತವನ್ನು ತೋರುತ್ತಿದ್ದಾಳೆ. ಸಾಮಾನ್ಯವಾಗಿ ಈವರೆಗೆ ದೊರೆತಿರುವ ಕರ್ನಾಟಕದ ಮಾಸ್ತಿಕಲ್ಲುಗಳಲ್ಲಿ ಬಲಗೈನಿಂದ ಅಭಯವನ್ನು ಸೂಚಿಸಿರುವ ಶಿಲ್ಪಗಳೇ ಪ್ರಧಾನವಾಗಿದೆ. ಆದರೆ ಈ ಶಿಲ್ಪದಲ್ಲಿ ಪ್ರಥಮವಾಗಿ ಎಡದಕೈನಿಂದ ಅಭಯವನ್ನು ಸೂಚಿಸಿರುವುದು ವಿಶೇಷವಾಗಿದೆ. ಈಕೆಯ ಶಿರದಲ್ಲಿ ಬಲಭಾಗಕ್ಕೆ ಬರುವಂತೆ ಹಿರಿದಾದ ಪಾರ್ಶ್ವ ತುರುಬು ಇದ್ದು, ಮುಖ ಅಂದವಾಗಿದೆ. ತೋಳು ಮತ್ತು ಮುಂಗೈಗಳಲ್ಲಿ ಆಭರಣಗಳಿದ್ದು ತುಂಬು ವಸ್ತ್ರದ ಅಲಂಕಾರ ಈಕೆಗಿದೆ. ಈ ಸ್ಮಾರಕದಲ್ಲಿನ ವೀರನು ರಾಜಕೀಯ ಕಾರಣವೊಂದರಿಂದ ಶತೃಗಳ ಜೊತೆ ಯುದ್ಧಮಾಡಿ ಹತನಾದಾಗ ಈತನ ಸತಿ ಸಹಗಮನ ಮಾಡಿದ್ದಾಳೆ. ಈಕೆಯು ಎಡಗೈಯನ್ನು ಪ್ರಧಾನವಾಗಿ ತನ್ನ ಕೆಲಸ ಕಾರ್ಯಗಳಿಗೆ ಬಳಸುತ್ತಿದ್ದಳೆಂದು ನಿರ್ಧರಿಸಬಹುದಾಗಿದೆ. ಈ ಸ್ಮಾರಕ ಕ್ರಿ. ಶ. ಹದಿನಾಲ್ಕನೆಯ ಶತಮಾನದ್ದಾಗಿದೆ.

ಮೈಸೂರು ಬ್ಯಾಂಕ್ ವೃತ್ತದ ಬಳಿಯಿರುವ ಬೆಂಗಳೂರು ವಿಶ್ವವಿದ್ಯಾಲಯದ ಕೆನರಾ ಬ್ಯಾಂಕ್ ತರಬೇತಿ ಕಟ್ಟಡದ ಬಳಿ ಎರಡು ವೀರಗಲ್ಲು ಸ್ಮಾರಕಗಳಿವೆ. 95 ಸೆಂ.ಮೀ. ಎತ್ತರ ಮತ್ತು 100 ಸೆಂ. ಮೀ. ಅಗಲದ ಮೊದಲನೆಯ ವೀರಗಲ್ಲು ಗ್ರಾನೈಟ್‌ದಾಗಿದ್ದು ಕಲ್ಲಿನ ಎಡಪಾರ್ಶ್ವದಲ್ಲಿ ಶಿಲ್ಪವಿದೆ. ವೀರನು ಶತೃಗಳ ಎದುರು ನಿಂತು ಖಡ್ಗ ಮತ್ತು ಗುರಾಣಿ ಹಿಡಿದು ವೀರಾವೇಶದಿಂದ ಹೋರಾಡುತ್ತಿದ್ದಾನೆ. ಈತ ಯುದ್ಧದಲ್ಲಿ ಮಡಿದಾಗ ಸಹಗಮನ ಪದ್ಧತಿ ಅನುಸರಿಸಿರುವ ಈತನ ಪತ್ನಿ ವೀರನ ಬಲಬದಿಗೆ ನಿಂತಿದ್ದಾಳೆ. ಈಕೆಯು ಸಹ ಪಾರ್ಶ್ವನೋಟದಲ್ಲೇ ಇದ್ದು ಅಲಂಕೃತವಾದ ಉಡುಗೆ ತೊಡುಗೆಗಳನ್ನು ಧರಿಸಿದ್ದಾಳೆ. ಬಲಗೈನಲ್ಲಿ ಪುಷ್ಪಗುಚ್ಛವನ್ನು ಹಿಡಿದಿದ್ದಾಳೆ. ಸಾಮಾನ್ಯವಾಗಿ ಸತಿ ಹೋಗಿರುವ ಶಿಲ್ಪಗಳಲ್ಲಿ ಮಾದಲ ಅಥವಾ ನಿಂಬೆ ಹಣ್ಣನ್ನು ಚಿತ್ರಿಸುವುದು ಸಂಪ್ರದಾಯ. ಈ ಶಿಲ್ಪದಲ್ಲಿ ಪುಷ್ಪಗುಚ್ಛದ ದಿಂಡನ್ನು ಹಿಡಿದಿರುವುದು ವಿಶೇಷ. ಇಳಿಬಿಟ್ಟಿರುವ ಎಡಗೈನಲ್ಲಿ ಏನೂ ಇಲ್ಲ. ಯಾವುದೋ ರಾಜಕೀಯ ಕಾರಣದ ಯುದ್ಧವೊಂದರಲ್ಲಿ ವೀರನು ತನ್ನ ಶತೃಗಳ ಜೊತೆ ಹೋರಾಡಿ ಮಡಿದಿದ್ದಾನೆ. ಅಂದಿನ ಪದ್ಧತಿಯಂತೆ ಪತ್ನಿಯು ಸಹಗಮನ ಪದ್ಧತಿ ಅನುಸರಿಸಿದ್ದಾಳೆ. ಕ್ರಿ. ಶ. ಸುಮಾರು ಹದಿಮೂರನೆಯ ಶತಮಾನಕ್ಕೆ ಈ ವೀರಗಲ್ಲು ಸೇರುತ್ತದೆ.

ಬಳಿಯಲ್ಲಿರುವ ಕ್ರಿ. ಶ. ಸು. 12ನೇ ಶತಮಾನದ ಮತ್ತೊಂದು ವೀರಗಲ್ಲಿನಲ್ಲಿ ವೀರನ ಚಿತ್ರಣ ಮಾತ್ರವೇ ಇದ್ದು, ಇದು 70 ಸೆಂಮೀ ಎತ್ತರ 80 ಸೆಂ.ಮೀ. ಅಗಲ ಮತ್ತು 14 ಸೆಂ.ಮೀ ದಪ್ಪವಾಗಿದೆ, ಗ್ರಾನೈಟ್ ಕಲ್ಲಿನ ಈ ಶಿಲ್ಪದಲ್ಲಿ ಮೇಲೆ ಸೂರ್ಯ ಚಂದ್ರರ ಚಿತ್ರಗಳಿವೆ. ವೀರನು ತನ್ನ ಎಡಗೈನಲ್ಲಿ ಗುರಾಣಿ, ಬಲಗೈನಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ನಡುವಿನಲ್ಲಿ ಬಿಚ್ಚುಗತ್ತಿಯಿದೆ. ಚೋಳ-ರಾಜರ ಕಾಲದ ವೇಷಭೂಷಣಗಳನ್ನು ಧರಿಸಿರುವ ಈ ವೀರನು ತನ್ನ ಶತೃಗಳೊಡನೆ ಯಾವುದೋ ಕಾರಣಕ್ಕಾಗಿ ಹೋರಾಡಿ ಮಡಿದಿದ್ದಾನೆ.

ಬಸವೇಶ್ವರ ವೃತ್ತದ ಬಳಿಯ ಓಣಿ ಮುನೇಶ್ವರ ದೇವಾಲಯದ ಹೊರಗೋಡೆಯ ಹಿಂಭಾಗದಲ್ಲಿ ಉತ್ತರ ದಿಕ್ಕಿಗೆ ಮುಖ ಮಾಡಿರುವಂತೆ ಎರಡು ವೀರಗಲ್ಲುಗಳಿವೆ. ಅಶ್ವತ್ಥಕಟ್ಟೆಯ ಮೇಲೆ ಬಲಭಾಗದಲ್ಲಿರುವ ವೀರಗಲ್ಲು ಎರಡೂವರೆ ಅಡಿ ಎತ್ತರ ಮತ್ತು ಅಷ್ಟೇ ಅಗಲವನ್ನು ಉಳ್ಳದ್ದಾಗಿದೆ. ಅತ್ಯಂತ ದಪ್ಪನಾದ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿರುವ ಈ ಶಿಲ್ಪದಲ್ಲಿ ವೀರ ಮತ್ತು ಆತನ ಸತಿಯ ಚಿತ್ರಣವಿದೆ. ವೀರನು ತನ್ನ ಬಲ ಕೈನಲ್ಲಿ ಖಡ್ಗವನ್ನು ಹಿಡಿದಿದ್ದು ಎಡಗೈನಲ್ಲಿ ನಡುವಿನಲ್ಲಿರುವ ಬಿಚ್ಚುಗತ್ತಿಯನ್ನು ಹಿಡಿದಿದ್ದಾನೆ. ಶಿರದಲ್ಲಿ ಕಿರೀಟ ಮಾದರಿಯ ವಸ್ತ್ರವಿದೆ. ಕಿವಿಯಲ್ಲಿ ಕುಂಡಲಗಳಿದ್ದು ಅಲಂಕಾರಿಕವಾದ ಉಡುಗೆ ತೊಡುಗೆಗಳನ್ನು ಈತ ಧರಿಸಿದ್ದಾನೆ. ಈತ ತನ್ನ ಶತೃಗಳೊಡನೆ ಯಾವುದೋ ರಾಜಕೀಯ ಕಾರಣಕ್ಕಾಗಿ ಯುದ್ಧಮಾಡಿ ಮಡಿದಿದ್ದಾನೆ. ಸತಿಪದ್ಧತಿ ಅನುಸರಿಸಿರುವ ಈತನ ಮಡದಿಯು ತನ್ನ ಎರಡೂ ಕೈಗಳನ್ನು ಮೇಲೆ ಎತ್ತಿ ಹಿಡಿದಿದ್ದು, ಒಂದು ಕೈನಲ್ಲಿ ಕನ್ನಡಿ ಮತ್ತೊಂದು ಕೈನಲ್ಲಿ ನಿಂಬೆಯ ಹಣ್ಣನ್ನು ಹಿಡಿದಿದ್ದಾಳೆ. ನೃತ್ಯಭಂಗಿಯಲ್ಲಿರುವ ಈ ಸ್ತ್ರೀಯ ಶಿರದಲ್ಲಿ ತುರುಬನ್ನು ಕಾಣಬಹುದಾಗಿದ್ದು, ಅಲಂಕಾರಿಕವಾದ ಉಡುಗೆ ತೊಡುಗೆಗಳನ್ನು ಧರಿಸಿದ್ದಾಳೆ. ಸೂರ್ಯಚಂದ್ರರನ್ನು ಈ ಶಿಲ್ಪದ ಮೇಲ್ಭಾಗದಲ್ಲಿ ಕೆತ್ತಿದ್ದು, ಮಧ್ಯದಲ್ಲಿ ಅಲಂಕಾರವನ್ನು ಬಿಡಿಸಲಾಗಿದೆ. ಈ ವೀರಗಲ್ಲು ಕ್ರಿ. ಶ. ಸುಮಾರು ಹದಿನೈದನೆಯ ಶತಮಾನಕ್ಕೆ ಸೇರಿದುದಾಗಿದೆ.

ಅಶ್ವತ್ಥಕಟ್ಟೆಯ ಎಡಭಾಗದಲ್ಲಿ ಮತ್ತೊಂದು ವೀರಗಲ್ಲು ಇದ್ದು, ಇದು ಮೂರು ಅಡಿ ಎತ್ತರ ಮತ್ತು ಎರಡೂವರೆ ಅಡಿ ಅಗಲವನ್ನು ಹೊಂದಿದ ಗ್ರಾನೈಟ್ ಶಿಲೆಯಾಗಿದೆ. ಈ ಸ್ಮಾರಕದಲ್ಲಿಯೂ ಸಹ ವೀರ ಮತ್ತು ಆತನ ಸತಿಯ ಚಿತ್ರಣವಿದ್ದು, ವೀರನು ತನ್ನ ಬಲಗೈನಲ್ಲಿ ಖಡ್ಗವನ್ನು ಹಿಡಿದಿದ್ದು, ಎಡಗೈನಲ್ಲಿ ಸೊಂಟದಲ್ಲಿರುವ ಬಿಚ್ಚುಗತ್ತಿಯನ್ನು ಹಿಡಿದಿದ್ದಾರೆ. ಶಿರದಲ್ಲಿ ಎತ್ತಿಕಟ್ಟಿದ ತುರುಬನ್ನು ಹೊಂದಿದ್ದು, ಅಲಂಕಾರಿಕವಾದ ಉಡುಗೆ ತೊಡುಗೆಗಳನ್ನು ಧರಿಸಿದ್ದಾನೆ. ಇವನು ಯಾವುದೋ ರಾಜಕೀಯ ಕಾರಣಕ್ಕಾಗಿ ಶತೃಗಳೊಡನೆ ಖಡ್ಗವಿಡಿದು ಹೋರಾಡಿ ಮಡಿದಿದ್ದಾನೆ. ಸತಿಪದ್ಧತಿಯನ್ನು ಅನುಸರಿಸಿರುವ ಈತನ ಪತ್ನಿಯ ಚಿತ್ರಣವು ಬಳಿಯಲ್ಲಿದ್ದು ಈಕೆಯು ತನ್ನೆರಡೂ ಕೈಗಳನ್ನು ಮೇಲಕ್ಕೆ ಎತ್ತಿ ಹಿಡಿದು ನೃತ್ಯಭಂಗಿಯಲ್ಲಿದ್ದಾಳೆ. ಬಲದ ಕೈನಲ್ಲಿ ನಿಂಬೆಯ ಹಣ್ಣು ಮತ್ತು ಎಡದ ಕೈನಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ. ಅಲಂಕಾರಿಕವಾದ ಉಡುಗೆ ತೊಡುಗೆಗಳನ್ನು ಧರಿಸಿದ್ದಾಳೆ. ಕ್ರಿ. ಶ. ಸುಮಾರು ಹದಿನೈದನೆಯ ಶತಮಾನಕ್ಕೆ ಈ ವೀರಗಲ್ಲು ಸೇರುತ್ತದೆ.

ರೇಸ್‌ಕೋರ್ಸ್ ರಸ್ತೆಯಲ್ಲಿನ ವೃತ್ತದೊಳಗಿನ ಒಂದು ಮರದ ಕೆಳಗೆ ಮಾಸ್ತಿ ಕಲ್ಲೊಂದು ಇದ್ದು, ಇದನ್ನು ಕಪ್ಪು ಗ್ರಾನೈಟ್ ಕಲ್ಲಿನಿಂದ ಮೂಡಿಸಲಾಗಿದೆ. ಎರಡೂ ಕಾಲು ಅಡಿಗಳ ಉದ್ದ ಮತ್ತು ಒಂದೂವರೆ ಅಡಿಗಳ ಅಗಲವನ್ನುಳ್ಳ ಈ ಸ್ಮಾರಕದ ಮೇಲುಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಕೆತ್ತನೆಗಳಿವೆ. ಕಲ್ಲಿನ ಬಲಭಾಗದಲ್ಲಿ ಸ್ತ್ರೀ ಚಿತ್ರವನ್ನು ಬಿಡಿಸಲಾಗಿದ್ದು, ಈಕೆಯು ಪಾರ್ಶ್ವಮುಖಿ ಭಂಗಿಯಲ್ಲಿದ್ದಾಳೆ. ಈಕೆಯು ತನ್ನ ಎಡ ಭಾಗದಲ್ಲಿರುವ ಪುರುಷನನ್ನು ನೋಡುತ್ತಿದ್ದಾಳೆ. ಶಿರದಲ್ಲಿ ದೊಡ್ಡದಾದ ತುರುಬು ಮತ್ತು ಅಂದವಾದ ಕಣ್ಣೊಂದನ್ನು ಗುರುತಿಸಬಹುದಾಗಿದೆ. ಎಡದ ಕೈನಲ್ಲಿ ನಿಂಬೆಯ ಹಣ್ಣನ್ನು ಎತ್ತಿ ಹಿಡಿದಿದ್ದಾಳೆ, ಬಲಗೈಯನ್ನು ಇಳಿಬಿಟ್ಟಿರುವಂತೆ

ಚಿತ್ರಿಸಲಾಗಿದೆ. ಕಿವಿಯಲ್ಲಿ ಆಭರಣಗಳು, ಕೊರಳಲ್ಲಿ ಒಂದು ಪದಕವಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ತೋಳುಗಳಲ್ಲಿ ತೋಳುಬಂದಿ ಇದ್ದು, ದೇಹದ ಚಿತ್ರಣ ಸಮಪ್ರಮಾಣವಾಗಿ ಬಂದಿಲ್ಲ. ಆದರೂ ಈಕೆಯು ಧರಿಸಿರುವ ಉಡುಗೆ ಇಂದಿನ ಆಧುನಿಕ ಉಡುಗೆಯೊಂದನ್ನು ನೆನಪಿಗೆ ತರುತ್ತದೆ.

ಈಕೆಯ ಎಡಬದಿಯಲ್ಲಿರುವ ಪುರುಷನ ಚಿತ್ರಣ ಸ್ವಲ್ಪ ದೊಡ್ಡದಾಗಿದೆ. ಪುರುಷನೂ ಸಹ ತನ್ನ ಬಲಗಡೆಯಿರುವ ಸ್ತ್ರೀಯನ್ನು ಪಾರ್ಶ್ವ ಮುಖವಾಗಿ ನೋಡುತ್ತಿದ್ದಾನೆ. ಶಿರದಲ್ಲಿ ಬಾಯಿಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಈತನು ತನ್ನ ಬಲಗೈನಲ್ಲಿ ದೊಡ್ಡದಾದ ಖಡ್ಗವನ್ನು ಎತ್ತಿ ಹಿಡಿದಿದ್ದು, ಎಡದ ಕೈನಲ್ಲಿ ಗುರಾಣಿಯೊಂದನ್ನು ಹಿಡಿದಿದ್ದಾನೆ. ಈತನು ಧರಿಸಿರುವ ವಸ್ತ್ರಗಳನ್ನು ಶಿಲ್ಪದಲ್ಲಿ ಗುರುತಿಸಬಹುದಾಗಿದೆ. ಈತನು ಸಹ ಯುದ್ಧವೊಂದರಲ್ಲಿ ಶತೃಗಳೊಡನೆ ಹೋರಾಡಿ ಹತನಾಗಿದ್ದಾನೆ. ಈತನ ಸತಿ ಸಹಗಮನ ಮಾಡಿದ್ದಾಳೆ. ವೀರ-ಮಾಸ್ತಿಶಿಲ್ಪಗಳಲ್ಲಿ ಸತಿಪತಿಯರು ಮುಖಾಮುಖಿ ನೋಡುತ್ತಿರುವ ಶಿಲ್ಪಗಳು ಲಭ್ಯವಾಗುವುದು ಅತಿ ವಿರಳ. ಆದರೆ ಇಲ್ಲಿ ಅಂತಹ ದೃಶ್ಯ ಇರುವುದು ವಿಶೇಷ. ಈ ಸ್ಮಾರಕದ ಕಾಲ ಕ್ರಿ. ಶ. ಸುಮಾರು 16ನೇ ಶತಮಾನ.

ಬಸವೇಶ್ವರ ವೃತ್ತದಿಂದ ರಾಜಭವನಕ್ಕೆ ತೆರಳುವ ಮಾರ್ಗದಲ್ಲಿ ಜವಾಹರ್‌ಲಾಲ್ ನೆಹರು ತಾರಾಲಯದ ಹೊರಗೋಡೆಗೆ ಹೊಂದಿಕೊಂಡಿರುವ ಚರಂಡಿಯಲ್ಲಿ ವೀರಮಾಸ್ತಿ ಸ್ಮಾರಕವೊಂದು ಕಂಡುಬಂದಿದೆ. ನಾಲ್ಕೂವರೆ ಅಡಿ ಎತ್ತರ ಎರಡು ಅಡಿ ಅಗಲ ಮತ್ತು ಒಂದು ಅಡಿ ದಪ್ಪವಿರುವ ಸ್ಥಳೀಯ ಗ್ರಾನೈಟ್‌ಕಲ್ಲಿನ ಶಿಲ್ಪದಲ್ಲಿ ಪತಿ ಮತ್ತು ಪತ್ನಿಯರ ನಡುವೆ ಗಾಯನ ಮತ್ತು ನರ್ತನ ಮಾಡುತ್ತಿರುವ ಇಬ್ಬರು ಕುಬ್ಜರ ಚಿತ್ರಗಳಿವೆ. ಸ್ತ್ರೀಯು ಎಡಗೈಯನ್ನು ಸಂಪೂರ್ಣವಾಗಿ ಕೆಳಗಿಳಿಸಿ ಬಲದಕೈಯನ್ನು ಎತ್ತಿ ಹಿಡಿದಿದ್ದಾಳೆ. ಅಂಗೈ ಚಿತ್ರವು ಸ್ಪಷ್ಟವಾಗಿದ್ದು, ಅದರಲ್ಲಿ ನಿಂಬೆಯ ಹಣ್ಣನ್ನಾಗಲೀ, ಮಾದಲದ ಹಣ್ಣನಾಗಲೀ ಹಿಡಿದಿರುವಂತೆ ಚಿತ್ರಿಸಿರುವುದಿಲ್ಲ. ಈಕೆ ಧರಿಸಿರುವ ವಸ್ತ್ರ ಸುಂದರವಾಗಿ ಮೂಡಿಬಂದಿದ್ದು, ಕೊರಳಲ್ಲಿ ಸರ, ತೋಳಲ್ಲಿ ತೋಳಬಂದಿ, ಮುಂಗೈಯಲ್ಲಿ ಆಭರಣ, ಶಿರದಲ್ಲಿ ಹಿರಿದಾದ ತುರುಬು, ಮಂದಹಾಸ ಬೀರುವ ಮುಖಲಕ್ಷಣಗಳಿಂದ ಕೂಡಿರುವಂತೆ ಕಾಣುವ ಈಕೆಯ ಚಿತ್ರಣವು ಚೆನ್ನಾಗಿ ಮೂಡಿಬಂದಿದೆ. ಬದಿಯಲ್ಲಿರುವ ಈಕೆಯ ಪತಿ ಓರ್ವ ಪಾಳೇಗಾರ ಆಗಿದ್ದಂತೆ ತೋರುತ್ತದೆ. ಈತ ಶಿರದಲ್ಲಿ ಭರ್ಜರಿಯಾದ ಪೇಟ, ಕಿವಿಗಳಲ್ಲಿ ಕುಂಡಲಗಳು, ಕೊರಳಲ್ಲಿ ಸರ, ಭುಜಕೀರ್ತಿ, ಮುಂಗೈಯಲ್ಲಿ ಕಡಗಗಳನ್ನು ಧರಿಸಿದ್ದು, ಸೊಂಟದಲ್ಲಿ ಧರಿಸಿರುವ ವಸ್ತ್ರವು ಆತನ ಎಡತೋಳನ್ನು ಬಳಸಿ ಬದಿಯಲ್ಲಿ ನರ್ತನ ಮಾಡುತ್ತಿರುವ ಕುಬ್ಜನವರೆಗೂ ಇಳಿಬಿದ್ದಿದೆ. ಒಂದೇ ಹಂತದಲ್ಲಿ ಮೂಡಿಸಿರುವ ಈ ಶಿಲ್ಪದಲ್ಲಿ ವೀರನು ಯುದ್ಧ ಇಲ್ಲವೇ ಹೋರಾಟವೊಂದರಲ್ಲಿ ಶತೃಗಳೊಡನೆ ಹೋರಾಡಿ ಮಡಿದಿದ್ದಾನೆ. ಈತನ ಪತ್ನಿ ಅಗ್ನಿಪ್ರವೇಶಮಾಡಿ ಸಹಗಮನ ಮಾಡಿದ್ದಾಳೆ. ಈ ಮಾಸ್ತಿಕಲ್ಲಿನ ಮೇಲುತುದಿಯಲ್ಲಿ ಸೂರ್ಯಚಂದ್ರರ ಕೆತ್ತನೆಗಳಿದ್ದು, ಕೆಳಭಾಗದಲ್ಲಿ ಸರಳವಾದ ಅಲಂಕಾರ ಬಿಡಿಸಲಾಗಿದೆ. ಕ್ರಿ. ಶ. ಸುಮಾರು ಹದಿನೈದನೆಯ ಶತಮಾನಕ್ಕೆ ಈ ವೀರ ಮಾಸ್ತಿಕಲ್ಲು ಸೇರುತ್ತದೆ.

ಕೇಂದ್ರ ರೈಲ್ವೆ ನಿಲ್ದಾಣದ ಬಳಿ ಇರುವ ಅರಳಿ ಕಟ್ಟೆಯ ಮೇಲೆ ವೀರ ಮಾಸ್ತಿಕಲ್ಲು ಒಂದು ಇದ್ದು, ಇದು ಎರಡೂವರೆ ಅಡಿ ಎತ್ತರ ಮತ್ತು ಎರಡು ಅಡಿ ಅಗಲದ ಗ್ರಾನೈಟ್ ಶಿಲ್ಪವಾಗಿದೆ. ಕುದುರೆ ಲಾಳದ ಆಕಾರದಲ್ಲಿ ಈ ಸ್ಮಾರಕವಿದೆ. ಇಲ್ಲಿನ ಚಿತ್ರಣದಲ್ಲಿ ವೀರನ ಚಿತ್ರವನ್ನು ಪ್ರಧಾನವಾಗಿ ಬಿಡಿಸಲಾಗಿದೆ. ಇಲ್ಲಿ ವೀರನು ಸಾಕ್ಷಾತ್ ವಿಷ್ಣುವಿನ ಹಾಗೆ ಹೋರಾಡಿ ಅಮರನಾಗಿರುವಂತೆ ಚಿತ್ರಿಸಲಾಗಿದೆ. ವೀರನಿಗೆ ಚತುರ್ಭುಜಗಳನ್ನು ಚಿತ್ರಿಸಿದ್ದು, ಶಂಖ, ಚಕ್ರ, ಖಡ್ಗ ಮತ್ತು ಡಾಳುಗಳನ್ನು ಹಸ್ತಗಳಲ್ಲಿ ಹಿಡಿದುಕೊಂಡಿದ್ದಾನೆ. ಶತೃಗಳೊಡನೆ ಹೋರಾಡಿ ಮಡಿದ ಈ ವೀರನ ಎಡ ಮತ್ತು ಬಲಭಾಗಗಳಲ್ಲಿ ಈತನ ಇಬ್ಬರು ಪತ್ನಿಯರು ಚಿತೆಏರಿ ಸಹಗಮನ ಮಾಡಿರುವ

ಆಶಯವನ್ನು ಬಿಡಿಸಲಾಗಿದೆ. ಪತಿಯ ಮರಣದಿಂದಾಗಿ ಇಬ್ಬರೂ ಸಹಗಮನ ಮಾಡಿಕೊಂಡಿದ್ದು ಬಳಿಯಲ್ಲಿ ಸೇವಕನೊಬ್ಬನು ವೀರನಿಗೆ ಛತ್ರಿಯೊಂದನ್ನು ಹಿಡಿದಿದ್ದಾನೆ. ಮಡಿದ ವೀರನ ಚಿತ್ರಣ ಎಡಭಾಗದ ಕಡೆಗೆ ನಡೆಯುವಂತಿದ್ದು, ನೇರವಾದ ನೋಟದ ಚಿತ್ರಣವಿದೆ. ಶಿರದಲ್ಲಿ ತುರುಬು ಇದ್ದು, ವಸ್ತ್ರ ಮತ್ತು ಆಭರಣಗಳನ್ನು ಶರೀರದಲ್ಲಿ ಗುರುತಿಸಬಹುದಾಗಿದೆ. ಬೆಂಗಳೂರು ನಗರದಲ್ಲಿ ಇದೇ ಪ್ರಥಮ ಬಾರಿಗೆ ಈ ಬಗೆಯ ಚಿತ್ರಣವುಳ್ಳ ವೀರಗಲ್ಲು ದೊರೆತಿದ್ದು, ವೈಷ್ಣವ ಪಂಥದಲ್ಲಿ ವಿಶ್ವಾಸವುಳ್ಳ ವೀರನು ಯಾವುದೋ ರಾಜಕೀಯ ಕಾರಣಕ್ಕಾಗಿ ಶತೃಗಳ ಜೊತೆ ಹೋರಾಡಿ ಹತನಾಗಿದ್ದಾನೆ. ಕ್ರಿ. ಶ. ಸುಮಾರು ಹದಿನೈದನೆಯ ಶತಮಾನಕ್ಕೆ ಈ ಸ್ಮಾರಕವು ಸೇರಿದುದಾಗಿದೆ.

ಬೆಂಗಳೂರು ರೈಲ್ವೆ ನಿಲ್ದಾಣದ ಕೆಲಸಗಾರರ ನಿವಾಸಗಳ ಹತ್ತಿರ ಆಲದ ಮರವೊಂದರ ಬಳಿಯಲ್ಲಿ ತುರುಗಾಳಗದ ವೀರಗಲ್ಲೊಂದು ಇದ್ದು, ಇದು ಒಂದುವರೆ ಅಡಿ ಎತ್ತರ ಮತ್ತು ಅಷ್ಟೆ ಅಗಲವನ್ನು ಉಳ್ಳದ್ದಾಗಿದೆ. ಈ ವೀರಗಲ್ಲಿನಲ್ಲಿ ತುರುವು ತನ್ನ ಬಲಗಾಲನ್ನು ಮೇಲೆ ಎತ್ತಿ ಹೆಜ್ಜೆ ಇಡಲು ಸಜ್ಜಾಗಿರುವಂತೆ ಚಿತ್ರಣವಿದ್ದು, ಸಮಪ್ರಮಾಣದಲ್ಲಿ ಸೊಗಸಾಗಿ ಮೂಡಿ ಬಂದಿದೆ. ಈ ತುರುವು ಬಲಭಾಗಕ್ಕೆ ಮುಖ ಮಾಡಿರುವುದರಿಂದ ಶತೃಗಳ ದಾಳಿಯಿಂದ ವೀರನು ತುರುಗಳನ್ನು ವಿಮುಕ್ತಿಗೊಳಿಸಿದ್ದಾನೆ. ಹಿಂಬದಿಯಲ್ಲಿಯೇ ವೀರನ ಚಿತ್ರಣವಿದ್ದು, ತನ್ನ ಎಡದ ಕೈನಿಂದ ನಡುವಿನಲ್ಲಿರುವ ಬಿಚ್ಚುಗತ್ತಿಯನ್ನು ಹಿಡಿದುಕೊಂಡಿದ್ದಾನೆ. ಬಲದ ಕೈನಲ್ಲಿರುವ ಆಯುಧದ ಸ್ವಲ್ಪ ಭಾಗವು ಒಡೆದುಹೋಗಿದ್ದು ಅದು ಖಡ್ಗವೆಂದು ಹೇಳಬಹುದಾಗಿದೆ. ಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದು, ಕೊರಳಿನಲ್ಲಿ ಮಣಿಸರವಿದೆ. ಶತೃಗಳು ಅಪಹರಿಸಲೆತ್ನಿಸಿದ ಗೋವುಗಳನ್ನು ಬಿಡಿಸುವಲ್ಲಿ ಈ ವೀರನು ಯಶಸ್ವಿಯಾಗಿದ್ದು, ತಾನು ಮಾತ್ರ ಹೋರಾಟದಲ್ಲಿ ಮಡಿದಿದ್ದಾನೆ. ಈ ವೀರಗಲ್ಲಿನಲ್ಲಿಯೂ ಹೋರಾಟದ ಇತರ ಚಿತ್ರಣವು ಇಲ್ಲ. ಕ್ರಿ. ಶ. 14ನೇ ಶತಮಾನದ ಅಂತ್ಯಭಾಗಕ್ಕೆ ಸೇರುವ ವೀರಗಲ್ಲಿನ ಮೇಲುಭಾಗ ಒಡೆದು ವೀರನ ಶಿರೋಭಾಗ ಇಲ್ಲವಾಗಿದೆ. ಇದೇ ಪರಿಸರದ ಎಂ. ಜಿ. ಕಾಲೋನಿಯ ಅರಳಿಮರದ ಬಳಿ ವೀರಮಾಸ್ತಿಕಲ್ಲು ಸ್ಮಾರಕವೊಂದು ಇದ್ದು, ಇದನ್ನು ರೈಲ್ವೆ ಹಳಿಗಳ ಬಳಿಯಿಂದ ಇಲ್ಲಿಗೆ ಸಾಗಿಸಲಾಗಿದೆ. ಮೂರು ಅಡಿಗಳ ಎತ್ತರ ಎರಡೂವರೆ ಅಡಿಗಳ ಅಗಲದ ಗ್ರ್ಯಾನೈಟ್ ಕಲ್ಲಿನ ಈ ಶಿಲ್ಪದಲ್ಲಿ ನಾಲ್ವರು ಸತಿಯರು ಸಹಗಮನ ಪದ್ಧತಿ ಅನುಸರಿಸಿರುವ ಘಟನೆ ನಿರೂಪಿಸಲ್ಪಟ್ಟಿರುವುದು ಮಹತ್ವಪೂರ್ಣವಾಗಿದೆ. ಎರಡು ಹಂತಗಳಲ್ಲಿ ಮೂಡಿಸಿರುವ ಈ ಸ್ಮಾರಕದ ಕೆಳಹಂತದಲ್ಲಿ ಇಬ್ಬರು ಸ್ತ್ರೀಯರು ತಮ್ಮ ಬಲದ ಕೈಗಳನ್ನು ಮೇಲೆ ಎತ್ತಿ ಅಭಯಹಸ್ತದಂತೆ ಹಿಡಿದಿದ್ದಾರೆ. ಮೇಲಿನ ಹಂತದಲ್ಲಿ ಇಬ್ಬರು ಸ್ತ್ರೀಯರು ಸಹ ಇದೇ ರೀತಿಯಲ್ಲಿ ನಿಂತಿದ್ದಾರೆ. ಈ ಹಂತದಲ್ಲಿ ವಾದ್ಯಗಾರನಾದ ಕುಬ್ಜನ ಚಿತ್ರಣವಿದೆ. ಇವರ ಬಲತುದಿಯಲ್ಲಿ ವೀರನೊಬ್ಬನು ಕುಳಿತಿರುವ ಚಿತ್ರಣವಿದೆ. ಈ ಸ್ತ್ರೀಯರ ಪತಿಯು ಪ್ರಮುಖ ವ್ಯವಕ್ತಿಯಾಗಿದ್ದು ಹೋರಾಟವೊಂದರಲ್ಲಿ ಶತೃಗಳೊಡನೆ ಹೋರಾಡಿ ಮಡಿದಿದ್ದಾನೆ. ಈತನ ನಾಲ್ವರು ಮಡದಿಯರು ಚಿತೆಏರಿ ಸಹಗಮನ ಮಾಡಿದ್ದಾರೆ. ಹಲವಾರು ಕಡೆ ಒಡೆದು ಹೋಗಿರುವ ಈ ಸ್ಮಾರಕ ಶಿಲ್ಪದ ಕಾಲಮಾನ ಕ್ರಿ. ಶ. 15ನೇ ಶತಮಾನವಾಗಿದೆ.

ಕೆಂಗೇರಿಯ ಮುಖ್ಯ ರಸ್ತೆಯಲ್ಲಿನ ವಾಟರ್‌ಟ್ಯಾಂಕ್ ಬಳಿಯಲ್ಲೊಂದು ವೀರಗಲ್ಲು ಬಿದ್ದಿದ್ದು, ಎಂಟು ಅಡಿ ಎತ್ತರ ಐದು ಅಡಿ ಅಗಲವಾಗಿದೆ. ಒಂದೇ ಸ್ತರದಲ್ಲಿ ಎರಡು ಚಿತ್ರಣಗಳನ್ನು ಇದರಲ್ಲಿ ಮೂಡಿಸಲಾಗಿದ್ದು ಹೋರಾಟದ ಚಿತ್ರಣದಲ್ಲಿ ಇಲ್ಲಿನ ವೀರನು ವೀರಾವೇಶದಿಂದ ತನ್ನ ಕಾಲನ್ನು ಮುಂದುಮಾಡಿ ಎಡಗೈನಿಂದ ಶತೃವಿನ ಮುಡಿಯನ್ನು ಹಿಡಿದುಕೊಂಡು ಬಲಗೈನಲ್ಲಿ ಹಿಡಿದಿರುವ ಖಡ್ಗದಿಂದ ಇರಿಯುತ್ತಿದ್ದಾನೆ. ಈತನ ನಡುವಿನಲ್ಲಿ ಉದ್ದನೆಯ ಖಡ್ಗವೊಂದು ಇದೆ. ವೀರನ ಹಿಡಿತಕ್ಕೆ ಸಿಕ್ಕಿ ನರಳುತ್ತಿರುವ ಶತೃವಿನ ಚಿತ್ರಣವು ಪುಟ್ಟ ಪ್ರಮಾಣದಲ್ಲಿದ್ದು, ಈತನು ಯಾವುದೇ ಪ್ರತಿಕ್ರಿಯೆಯನ್ನು ತೋರಿಸದಿರುವಂತೆ ಚಿತ್ರಣವಿರುವುದು ವಿಶೇಷವಾಗಿದೆ.

ಆದರೂ ಈ ಹೋರಾಟದಲ್ಲಿ ವೀರನು ಹತನಾಗಿದ್ದಾನೆ. ಈ ಕುರಿತು ವೀರಗಲ್ಲಿನಲ್ಲಿ ಖಚಿತವಾದ ಸೂಚನೆಗಳು ಇಲ್ಲ. ವೀರನು ಯುದ್ಧದಲ್ಲಿ ಹಲವಾರು ಸೈನಿಕರನ್ನು ಕೊಂದು ಶತೃಗಳ ಬಾಣಕ್ಕೆ ತುತ್ತಾಗಿರುವಂತೆ ಕಾಣುತ್ತದೆ. ಈತನ ಹಿಂಭಾಗದಲ್ಲಿ ಬೃಹತ್ತಾದ ಬಾಣದ ಗುರುತೊಂದನ್ನು ಮೂಡಿಸಲಾಗಿದೆ. ಕಲ್ಲಿನ ಮೇಲು ಭಾಗದಲ್ಲಿ ಮಡಿದಿರುವ ಈ ವೀರನನ್ನು ಅಪ್ಸರೆಯರಿಬ್ಬರು ಚಾಮರಧಾರಿಣಿಯರಾಗಿ ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಕ್ರಿ.ಶ. ಸುಮಾರು ಹತ್ತನೆಯ ಶತಮಾನದ ಗಂಗರ ಕಾಲಕ್ಕೆ ಈ ವೀರಗಲ್ಲು ಸೇರುತ್ತದೆ.

ದೊಡ್ಡನಕ್ಕುಂದಿಯಲ್ಲಿ ಐದು ವೀರ-ಮಾಸ್ತಿಕಲ್ಲುಗಳು ದೊರೆತಿದ್ದು ವಿಭಿನ್ನವಾಗಿವೆ. ಕೋದಂಡರಾಮ ದೇವಾಲಯದ ರಸ್ತೆಯ ಮಣ್ಣಿನಲ್ಲಿ ಎರಡು ಅಡಿ ಆಳದಲ್ಲಿ ಹೂತು ಹೋಗಿದ್ದ ಬೃಹತ್ ವೀರಗಲ್ಲೊಂದನ್ನು ಅಗೆದು ಹೊರತೆಗೆಯಲಾಗಿ ಇದು ಆರೂವರೆ ಅಡಿ ಎತ್ತರ ಮತ್ತು ನಾಲ್ಕೂವರೆ ಅಡಿ ಅಗಲವಾಗಿದೆ. ಅರ್ಧ ಅಡಿ ದಪ್ಪವಾದ ಗ್ರಾನೈಟ್‌ಕಲ್ಲು ಇದಾಗಿದೆ. ಯುದ್ಧದಲ್ಲಿ ಭಾಗವಹಿಸಿದ ಅಶ್ವದ ಚಿತ್ರಣ ಮತ್ತು ಯುದ್ಧದಲ್ಲಿ ಮಡಿದ ವೀರನ ಸತಿಯು ಚಿತೆ ಏರುತ್ತಿರುವ ಸ್ಪಷ್ಟ ಚಿತ್ರಣವು ಇಲ್ಲಿದ್ದು ವಾದ್ಯಗಾರರಾದ ಮೂರು ವ್ಯಕ್ತಿಗಳ ಚಿತ್ರಣ ಇಲ್ಲಿದೆ. ಈ ವೀರಗಲ್ಲಿನಲ್ಲಿ ಪ್ರಮುಖವಾದ ಎರಡನೇ ಹಂತದಲ್ಲಿ ಕಳಸ ಕರಡಿಗೆ ಅಲ್ಲದೇ ಗಂಟೆಯ ಚಿತ್ರಣವಿದ್ದು ಎರಡೂವರೆ ಅಡಿ ಎತ್ತರದ ಸತಿಹೋದ ಸ್ತ್ರೀಯ ಚಿತ್ರಣವಿದೆ. ಸತಿಯು ಎಲ್ಲಾ ಮಾಸ್ತಿಕಲ್ಲುಗಳಲ್ಲಿ ಸಲ್ಲುವಂತೆ ಸಮಭಂಗಿಯಲ್ಲಿ ನಿಲ್ಲದೇ, ತನ್ನ ಎಡಕೈಯನ್ನು ತನ್ನ ಎಡಗಾಲಿನ ಮಂಡಿಯ ಮೇಲೆ ಬರುವಂತೆ ಬಳಸಿ ಹಿಡಿದಿದ್ದು ಬಲದ ಕೈನಲ್ಲಿ ದುಂಡನೆಯ ಕನ್ನಡಿ ಹಿಡಿದಿದ್ದಾಳೆ. ಇಲ್ಲಿ ಈಕೆಯ ಮುಂದೆ ವೀರನು ಧ್ಯಾನಾರೂಢನಾಗಿ ಕುಳಿತಿರುವ ಚಿತ್ರಣವಿದೆ. ಇತರ ವೀರಗಲ್ಲುಗಳಲ್ಲಿ ವೀರನು ಶತೃಗಳೊಡನೆ ಹೋರಾಡುತ್ತಿರುವಂತೆಯೇ ಅಥವಾ ಆಯುಧಗಳನ್ನು ಹಿಡಿದಿರುವಂತೆಯೇ ಚಿತ್ರಣಗಳಿರುವುದು ಸಾಮಾನ್ಯ. ಆದರೆ ಇಲ್ಲಿನ ವೀರನು ಸಿದ್ಧಾಸನದಲ್ಲಿ ಕುಳಿತು ಎರಡೂ ಕೈಗಳನ್ನು ಜೋಡಿಸಿ ಮುಗಿಯುತ್ತಿರುವಂತೆ ಚಿತ್ರಣವಿರುವುದು ವಿಶೇಷವಾಗಿದೆ. ವೀರಗಲ್ಲಿನ ಮೇಲ್ಭಾಗದ ಎರಡೂ ತುದಿಯನ್ನು ಅಪ್ಸರೆಯರು ದೇವಲೋಕಕ್ಕೆ ಕೊಂಡೊಯ್ಯುವ ಪುಟ್ಟ ಪ್ರಮಾಣದ ಚಿತ್ರಣವಿದೆ.

ಇಲ್ಲಿಯೇ ವರ್ತುಲ ರಸ್ತೆಯ ರೈಲ್ವೆ ಹಳಿಯ ಬಳಿ ನಾಲ್ಕು ವೀರಗಲ್ಲುಗಳು ದೊರೆತಿದ್ದು, ಎರಡು ವೀರಗಲ್ಲುಗಳಲ್ಲಿ ವೀರರು ತಮ್ಮ ಕೈಗಳಲ್ಲಿ ಭಿನ್ನ ಭಂಗಿಗಳಲ್ಲಿ ಆಯುಧಗಳನ್ನು ಹಿಡಿದುಕೊಂಡಿದ್ದಾರೆ. ಮತ್ತೆರಡು ವೀರಗಲ್ಲುಗಳು ವೀರತನವನ್ನು-ಮಾಸ್ತಿತನವನ್ನು ಸೂಚಿಸುವ ಸ್ಮಾರಕಗಳಾಗಿವೆ. ನಾಲ್ಕು ಅಡಿ ಎತ್ತರ ಮತ್ತು ನಾಲ್ಕು ಅಡಿ ಅಗಲದ ಕಲ್ಲಿನ ಬಲಭಾಗದಲ್ಲಿ ಸತಿಹೋಗಿರುವ ಸ್ತ್ರೀ ಚಿತ್ರಣವಿದ್ದು, ಈಕೆ ತನ್ನ ಕೈಗಳನ್ನು ಮೇಲೆ ಎತ್ತಿ ಹಿಡಿದಿದ್ದು ಕ್ರಮವಾಗಿ ಕನ್ನಡಿ ಮತ್ತು ನಿಂಬೆಹಣ್ಣನ್ನು ಹಿಡಿದಿದ್ದಾಳೆ. ಬದಿಯಲ್ಲಿ ಯುದ್ಧದಲ್ಲಿ ಹೋರಾಡಿ ಮಡಿದ ವೀರನ ಚಿತ್ರಣವಿದೆ. ಈತನು ತನ್ನ ಕೈನಲ್ಲಿ ಖಡ್ಗ ಮತ್ತು ಗುರಾಣಿ ಹಿಡಿದಿದ್ದಾನೆ. ಇದರ ಬಳಿಯಲ್ಲಿಯೇ ಇರುವ ಮತ್ತೊಂದು ವಿಭಿನ್ನ ಬಗೆಯ ವೀರಗಲ್ಲಿನಲ್ಲಿ ಬೇಡನಂತೆ ವೇಷಭೂಷಣ ಧರಿಸಿರುವ ವೀರನ ಚಿತ್ರಣವಿದ್ದು ಈತ ತನ್ನ ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದಾನೆ. ಈತನ ಬಲಬದಿಯಲ್ಲಿ ಇಬ್ಬರು ಸತಿಯರ ಚಿತ್ರಣವಿದ್ದು ಒಬ್ಬಾಕೆಯು ತನ್ನ ಕೈಗಳಲ್ಲಿ ಕಮಂಡಲ ಮತ್ತು ಕನ್ನಡಿ ಹಿಡಿದಿದ್ದರೆ, ಮತ್ತೊಬ್ಬ ಸ್ತ್ರೀ ಕನ್ನಡಿ ಮತ್ತು ನಿಂಬೆಹಣ್ಣನ್ನು ಹಿಡಿದಿದ್ದಾಳೆ. ದೊಡ್ಡನಕ್ಕುಂದಿಯ ಎಲ್ಲಾ ವೀರಗಲ್ಲುಗಳೂ ರಾಜಕಾರಣಕ್ಕಾಗಿ ನಡೆದ ಕದನದ ಸ್ಮಾರಕಗಳ ನಿರ್ಮಾಣಗಳಾಗಿದ್ದು ಕ್ರಿ. ಶ. ಸುಮಾರು ಹನ್ನೊಂದನೆಯ ಶತಮಾನದಿಂದ ಹದಿನೈದನೆಯ ಶತಮಾನದ ಕಾಲಕ್ಕೆ ಸೇರಿದವುಗಳಾಗಿವೆ.

ಕೃಷ್ಣರಾಜಪುರದ ಬಳಿಯಿರುವ ವೆಂಗವಿಲ್ಯನ ಕೆರೆಯ ಬಳಿಯ ಮಹಾಬಲೇಶ್ವರ ಸ್ವಾಮಿ ದೇವಾಲಯದ ಮುಂದುಗಡೆ ಐದು ವೀರಗಲ್ಲುಗಳು ಮತ್ತು ಒಂದು ಲಿಂಗಮುದ್ರೆ ಕಲ್ಲು ಸ್ಮಾರಕ ಕಂಡುಬಂದಿವೆ. ಇಲ್ಲಿನ ಒಂದನೆಯ ವೀರಗಲ್ಲು ನಾಲ್ಕು ಅಡಿ ಎತ್ತರ ಮತ್ತು ಮೂರೂವರೆ ಅಡಿ ಅಗಲವಿದೆ. ಕಲ್ಲಿನ ಮಧ್ಯಭಾಗದಲ್ಲಿ ಸತಿ ಪತಿಯರ ಚಿತ್ರಣವಿದ್ದು ಸತಿಯು ಎಡಪಾರ್ಶ್ವಮುಖಿಯಾಗಿದ್ದು, ಎಡದಕೈನಲ್ಲಿ ತಾವರೆ ಮೊಗ್ಗನ್ನು ಹಿಡಿದಿದ್ದು ಇಳಿಬಿಟ್ಟ ಬಲದಕೈನಲ್ಲಿ ನಿಂಬೆಹಣ್ಣು ಹಿಡಿದಿದ್ದಾಳೆ. ಶಿರದಲ್ಲಿ ಹಿರಿದಾದ ತುರುಬು ಇದೆ. ವಿಶಾಲವಾದ ನಯನಗಳು, ಕೊರಳಲ್ಲಿ ಸರಗಳು, ಭುಜಕೀರ್ತಿ, ತೋಳುಬಂದಿ ಮತ್ತು ಮುಂಗೈ ಕಡಗಗಳಿವೆ, ಪಾದಗಳವರೆಗೂ ಇಳಿಬಿಟ್ಟಿರುವ ಪೋಷಾಕು ಧರಿಸಿದ್ದಾಳೆ. ಬಳಿಯಲ್ಲಿರುವ ವೀರನು ತನ್ನ ಇಳಿಬಿಟ್ಟ ಬಲಗೈನಿಂದ ಖಡ್ಗವನ್ನು ಹಿಡಿದಿದ್ದಾನೆ. ಈತ ಸರಳವಾದ ಉಡುಗೆ ತೊಡುಗೆ ಧರಿಸಿದ್ದು, ಶಿರದಲ್ಲಿ ಮೇಲೆ ಎತ್ತಿಕಟ್ಟಿರುವ ಕೇಶಮುಡಿ ಇದೆ. ಕಿವಿಯಲ್ಲಿ ಕುಂಡಲಗಳಿದ್ದು ಮುಖ ಪ್ರಶಾಂತ ಭಾವದಿಂದ ಕೂಡಿದೆ. ಕೊರಳಲ್ಲಿ ಎರಡು ಸುತ್ತಿನ ಮಣಿಸರ ಮತ್ತು ತೋಳುಬಂದಿ ಇವೆ. ಈತ ತನ್ನ ಎಡದಕೈನಿಂದ ಉಡುಪನ್ನು ತಬ್ಬಿದ್ದಾನೆ. ಕಾಲುಗಳಲ್ಲಿ ಕಡಗಗಳಿವೆ. ಸಾಮಾನ್ಯ ವೀರನಾದ ಇವನು ಯಾವುದೋ ಕಾರಣಕ್ಕಾಗಿ ಶತೃಗಳ ಜೊತೆ ಹೋರಾಡಿ ಮಡಿದಿದ್ದಾನೆ. ಇವನ ಹೆಂಡತಿ ಅಗ್ನಿಪ್ರವೇಶ ಮಾಡಿದ್ದಾಳೆ. ಈ ವೀರ–ಮಾಸ್ತಿ ಸ್ಮಾರಕದ ಕಾಲಮಾನ ಕ್ರಿ. ಶ. ಸು. ಹದಿನಾಲ್ಕನೆಯ ಶತಮಾನವಾಗಿದೆ. ಬಳಿಯಲ್ಲಿ ಎರಡು ಅಡಿ ಎತ್ತರದ ಲಿಂಗಮುದ್ರೆಕಲ್ಲಿನ ಸ್ಮಾರಕವಿದೆ.

ಈ ಸ್ಮಾರಕಗಳ ಎಡಬದಿಯಲ್ಲಿರುವ ವೀರಗಲ್ಲೊಂದು ಐದು ಅಡಿ ಎತ್ತರ ಮತ್ತು ಮೂರು ಅಡಿ ಅಗಲ ಉಳ್ಳದ್ದಾಗಿದೆ. ಇಲ್ಲಿಯೂ ಸಹ ಕಲ್ಲಿನ ಮಧ್ಯಭಾಗದಲ್ಲಿ ವೀರನ ಚಿತ್ರವಿದೆ. ಬಲದಕೈನಲ್ಲಿ ಖಡ್ಗ ಹಿಡಿದಿದ್ದು ಎಡದ ಕೈಯನ್ನು ಮುಷ್ಠಿ ಮಡಚಿ ಹಿಡಿದಿದ್ದಾನೆ. ನಡುವಿನಲ್ಲಿ ಬಿಚ್ಚುಗತ್ತಿ ಇದೆ. ಶಿರದಲ್ಲಿ ಬಲಭಾಗಕ್ಕೆ ಬರುವಂತೆ ಕಟ್ಟಿದ ತುರುಬು ಇದೆ. ಕಾಲುಗಳಲ್ಲಿ ಕಡಗಗಳಿವೆ. ಈತನನ್ನು ಶತೃಗಳು ಬಾಣ ಮತ್ತು ಈಟಿಗಳಿಂದ ಇರಿದು ಕೊಂದಿದ್ದಾರೆ. ಸ್ಮಾರಕದ ಬಲಪಾರ್ಶ್ವದ ಮೇಲೆ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ಚಿತ್ರಣವಿದೆ. ಕೆಳಗೆ ಕೆಲವು ಅಲಂಕಾರಗಳಿವೆ. ಈ ಪ್ರಾಚೀನ ವೀರಗಲ್ಲು ಸ್ಮಾರಕದ ಕಾಲ ಕ್ರಿ. ಶ. ಸುಮಾರು 800.

ಈ ಸ್ಮಾರಕದ ಬಳಿಯಲ್ಲಿಯೇ ವಿಜಯನಗರ ಕಾಲದ ಮತ್ತೊಂದು ವೀರ–ಮಾಸ್ತಿಕಲ್ಲು ಸ್ಮಾರಕವಿದ್ದು ಐದೂವರೆ ಅಡಿ ಎತ್ತರ ಮತ್ತು ಎರಡೂವರೆ ಅಡಿ ಅಗಲ ಇದೆ. ಸ್ಮಾರಕದ ಬಲಬದಿಯಲ್ಲಿರುವ ಸ್ತ್ರೀ ಶಿರದಲ್ಲಿ ದೊಡ್ಡದಾದ ತುರುಬನ್ನು ಹೊಂದಿದ್ದಾಳೆ. ಕಿವಿಯಲ್ಲಿ ದೊಡ್ಡ ಕುಂಡಲಗಳಿದ್ದು ಆಕರ್ಷಕವಾದ ಉಡುಪನ್ನು ಧರಿಸಿದ್ದಾಳೆ. ಕೊರಳಸರ, ತೋಳುಬಂದಿಗಳನ್ನು ಹೊಂದಿದ್ದು ಎಡ–ಬದಿಯಲ್ಲಿರುವ ಪತಿಗೆ ಕೈಜೋಡಿಸಿ ನಮಸ್ಕರಿಸುತ್ತಿದ್ದಾಳೆ. ಬಳಿಯಲ್ಲಿರುವ ವೀರನು ತನ್ನ ಇಳಿಬಿಟ್ಟ ಬಲದ ಕೈನಿಂದ ಖಡ್ಗ ಹಿಡಿದಿದ್ದಾನೆ. ಎಡಗೈನಿಂದ ತಾನು ತೊಟ್ಟಿರುವ ವಸ್ತ್ರವನ್ನು ತಬ್ಬಿ ಹಿಡಿದುಕೊಂಡಿದ್ದಾನೆ. ಶಿರದಲ್ಲಿ ಮುಕುಟವಿದ್ದು, ಕಿವಿಯಲ್ಲಿ ಕುಂಡಲಗಳು, ಕೊರಳಿನಲ್ಲಿ ಮಣಿಸರ, ಪದಕಗಳು, ಭುಜಕೀರ್ತಿ, ತೋಳುಬಂದಿ ಹಾಗೂ ಮುಂಗೈನಲ್ಲಿ ಕಡಗಗಳಿವೆ. ಸ್ಮಾರಕದಲ್ಲಿರುವ ಸ್ತ್ರೀಯನ್ನು ಶತೃಗಳು ಅಪಹರಿಸಲೆತ್ನಿಸಿದಾಗ ಈ ವೀರನು ಶತೃಗಳೊಡನೆ ಹೋರಾಡಿ ಮಹಿಳೆಯನ್ನು ರಕ್ಷಿಸಿ ತಾನು ಹತನಾಗಿದ್ದಾನೆ. ಕ್ರಿ. ಶ ಸುಮಾರು ಹದಿನೈದನೆಯ ಶತಮಾನಕ್ಕೆ ಈ ವೀರಗಲ್ಲು ಸೇರುತ್ತದೆ.

ಈ ಸ್ಮಾರಕದ ಬಳಿಯಲ್ಲಿಯೇ ಇರುವ ನಾಲ್ಕನೆಯ ವೀರಗಲ್ಲು ಮೂರೂವರೆ ಅಡಿ ಎತ್ತರ ಮತ್ತು ಒಂದೂವರೆ ಅಡಿ ಅಗಲವನ್ನು ಹೊಂದಿದ್ದು, ಎಕ್ಸ್ ಆಕಾರದ ರೂಪದ ಮಾನವನ ಚಿತ್ರಣವನ್ನು ಹೊಂದಿದೆ. ಬಲದಕೈಯಲ್ಲಿ ಖಡ್ಗ ಎಡದಕೈಯಲ್ಲಿ ಗುರಾಣಿ ಹಿಡಿದ ಈತ ಯಾವುದೋ ಕಾರಣಕ್ಕಾಗಿ ಶತೃಗಳೊಡನೆ ಹೋರಾಡಿ ಮಡಿದಿದ್ದಾನೆ. ಕಾಲ ಕ್ರಿ. ಶ. ಸುಮಾರು ಹದಿನಾರನೇ ಶತಮಾನಕ್ಕೆ ಈ ಸ್ಮಾರಕವು ಸೇರುತ್ತದೆ.

ಬಳಿಯ ಲಕ್ಷ್ಮಿನಾರಾಯಣಸ್ವಾಮಿ ದೇವಾಲಯದ ಎದುರುಗಡೆಯ ಕೆರೆಯ ಅಂಚಿನಲ್ಲಿ ನಿಲ್ಲಿಸಿದ್ದ ವೀರಗಲ್ಲನ್ನು ಈಗ ಮೇಲಿನ ನಾಲ್ಕು ವೀರಗಲ್ಲುಗಳ ಜೊತೆಯಲ್ಲಿ ಇರಿಸಲಾಗಿದೆ. ಇದು ಈಗ ಪೂರ್ಣ ಭೂಮಿಯಿಂದ ಹೊರತೆಗೆಯಲಾಗಿದ್ದು, ಏಳು ಅಡಿ ಎತ್ತರ ಮತ್ತು ಆರು ಅಡಿ ಅಗಲವನ್ನು ಉಳ್ಳದ್ದಾಗಿದೆ. ಈ ಕಲ್ಲಿನ ಮಧ್ಯಭಾಗದಲ್ಲಿ ಕಾಳಗದ ಚಿತ್ರಣವಿದ್ದು ಇದರಲ್ಲಿ ಇಬ್ಬರು ವೀರರು ಮಡಿದ ಒಬ್ಬ ಯೋಧ ಅಲ್ಲದೇ ಅಶ್ವವೊಂದರ ಚಿತ್ರಣಗಳಿವೆ. ಇಲ್ಲಿ ಇವುಗಳ ಚಿತ್ರಣಗಳನ್ನು ಎತ್ತರೆತ್ತರಕ್ಕೆ ಎಳೆದು ಬಿಡಿಸಿರುವುದು ವಿಶೇಷವಾಗಿದೆ. ವೀರಗಲ್ಲಿನ ಎಡಭಾಗದಲ್ಲಿ ಅಶ್ವವು ಮಡಿದಿರುವ ಯೋಧನ ಶಿರದ ಮೇಲೆ ತನ್ನ ಮುಂಗಾಲನ್ನು ಎತ್ತಿ ಇಡುತ್ತಿದ್ದರೆ ಇನ್ನೊಂದು ಕಾಲನ್ನು ಮಡಸಿ ಮೇಲಕ್ಕೆ ಎತ್ತಿ ಹಿಡಿದಿದೆ. ಹಿಂಭಾಗದ ಎರಡೂ ಕಾಲುಗಳಿಂದ ವೀರನನ್ನು ತುಳಿಯುತ್ತಿರುವಂತೆ ಚಿತ್ರಣವಿದೆ.

ಈ ಚಿತ್ರಣದಲ್ಲಿನ ಮತ್ತೊಬ್ಬ ವೀರನು ತಾನು ಹಿಡಿದಿರುವ ಅಗಲವಾದ ಸಣ್ಣಕತ್ತಿಯಿಂದ ಅಶ್ವವನ್ನು ಕೊಲ್ಲಲು ಹವಣಿಸುತ್ತಿದ್ದಾನೆ. ಭೂಮಿಯ ಮೇಲೆ ಬಿದ್ದಿರುವ ಯೋಧ ಕುದುರೆಯಿಂದ ಕೆಳಕ್ಕೆ ಬಿದ್ದವನಾಗಿದ್ದಾನೆ. ಕುದುರೆಯ ಬೆನ್ನಿನ ಭಾಗದಲ್ಲಿ ಮನುಷ್ಯ ಕುಳಿತುಕೊಳ್ಳಲು ಅರ್ಧಚಂದ್ರಾಕೃತಿಯ ಆಸನವಿದೆ. ಇಲ್ಲಿನ ಮತ್ತೊಬ್ಬ ವೀರನು ಕುದುರೆಯ ಕಡೆಗೆ ಮುಖ ಮಾಡಿ ಮುನ್ನುಗ್ಗುತ್ತಿದ್ದಾನೆ. ಬಲಗೈನಲ್ಲಿ ಖಡ್ಗ ಎಡಗೈನಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ವೀರಗಲ್ಲಿನಲ್ಲಿ ಅಲ್ಲಲ್ಲಿ ಬಾಣದ ರೇಖಾ ಚಿತ್ರಣಗಳಿವೆ. ಈ ವೀರಗಲ್ಲಿನಲ್ಲಿರುವ ವೀರರ ವೇಷಭೂಷಣಗಳು ಗಂಗರ ಕಾಲದ ಇನ್ನಿತರ ವೀರಗಲ್ಲುಗಳನ್ನು ಹೋಲುತ್ತವೆ. ಅಲ್ಲದೇ ಗಂಗರ ಕಾಲದ ಮೂರು ಸಾಲುಗಳ ಶಾಸನವು ಮೇಲಿನಿಂದ ಪ್ರಾರಂಭವಾಗಿ ಕಲ್ಲಿನ ಎಡಭಾಗದ ಕೆಳ ತುದಿಯವರೆವಿಗೂ ಮುಂದುವರೆದಿದೆ.

1. ಶ್ರೀ ಪುರುಷ ಮಹಾರಾಜರರಸುಗೆಯೆ ಕನ್ನರ. . . . .ರಡು. . . .
2. ವೊರ್ಬಾಕರುರಾಳಿವೊಸೂರರಲ್ಯೆಯನು ಮಾರೆಯನುಟಿ
3. ಉರಟಿಶಿ. . . ವಿಟೆದು ಬಿಟ್ಟಿ

ಗಂಗರ ಶ್ರೀ ಪುರುಷ ಮಹಾರಾಜನ ಕಾಲದಲ್ಲಿ ಮಾರೆಯನೆಂಬುವ ವ್ಯಕ್ತಿಯು ಊರನ್ನು ಉಳಿಸಿ ಶತೃಗಳಿಂದ ಹತನಾಗಿ ಬಿದ್ದ ವಿಷಯವನ್ನು ತಿಳಿಸುವ ಈ ಶಾಸನವು ಊರಳಿವಿನ ಪ್ರಕಾರಕ್ಕೆ ಸೇರಿದ್ದಾಗಿದೆ. ಬೆಂಗಳೂರಿನಲ್ಲಿ ಈಗ ಉಳಿದಿರುವ ಗಂಗರ ಕಾಲದ ಲಿಪಿಯ ಒಂದು ಉತ್ತಮ ಶಾಸನ ಇದಾಗಿದೆ.

29. ಬೆಂಗಳೂರು ನಗರ ಜಿಲ್ಲೆಯ ದೇವಾಲಯಗಳು – ಒಂದು ಅಧ್ಯಯನ

ಡಾ. ವಿ. ಅನುರಾಧ

ಬೆಂಗಳೂರು ನಗರ ಜಿಲ್ಲೆ ಇಡೀ ವಿಶ್ವದಲ್ಲೇ ಇಂದು ಖ್ಯಾತಿ ಹೊಂದಿದ ನಗರವಾಗಿದ್ದು, ಪ್ರತಿ ದಿನ ಇದರ ಮಾನ್ಯತೆ ವಿಶ್ವದಾದ್ಯಂತ ಪ್ರಚಲಿತವಾಗಿದೆ. ಇಂಥಹ ನಗರವೊಂದು ಪ್ರಾಚೀನ ಕಾಲದಿಂದಲೂ ತನ್ನ ವಾಸ್ತುಶಿಲ್ಪ, ಶಿಲ್ಪಕಲೆಗೂ ಹೆಸರಾಗಿತ್ತು. ಈ ನಗರವನ್ನು ಗಂಗರು, ನೊಳಂಬರು, ಹೊಯ್ಸಳರು, ಚೋಳರು, ವಿಜಯನಗರದ ಅರಸರು ಆಳಿ, ಇಲ್ಲಿ ತಮ್ಮ ವಾಸ್ತು ರಚನೆಗಳನ್ನು ನಿರ್ಮಿಸಿ ಈ ನಗರವನ್ನು ಹೆಚ್ಚು ಶ್ರೀಮಂತಗೊಳಿಸಿದ್ದಾರೆ. ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬೆಂಗಳೂರು, ಆನೇಕಲ್ ಮತ್ತು ನೆಲಮಂಗಲ ಪ್ರಾಂತ್ಯಗಳು ಒಳಗೊಂಡಿದ್ದು, ಇಲ್ಲಿ ಸುಮಾರು 65ಕ್ಕೂ ಹೆಚ್ಚು ದೇವಾಲಯಗಳು, ಮಂಟಪಗಳು ದೊರೆತಿದ್ದು, – ಈ ವಾಸ್ತು ರಚನೆಗಳ ಶಾಸ್ತ್ರೀಯ ಅಧ್ಯಯನ ಈ ಲೇಖನದ ಆಶಯ. ದೇವಾಲಯದ ಯಾವುದೇ ಭಾಗ ಶಾಸ್ತ್ರೀಯವಾಗಿ ನಿರ್ಮಿತವಾಗಿದ್ದಲ್ಲಿ, ಅದನ್ನು ಈ ಅಧ್ಯಯನದಲ್ಲಿ ಒಳಪಡಿಸಲು ಪ್ರಯತ್ನಿಸಲಾಗಿದೆ.

"ಉಪನಾದಿ ಸ್ತೂಪಿಪರ್ಯಾಂತಂ ವಿಮಾನ" ಎಂದು ದೇವಾಲಯವನ್ನು ವ್ಯಾಖ್ಯಾನಿಸಲಾಗಿದೆ. ಹೀಗಾಗಿ ದೇವಾಲಯವು ಉಪಾನ–ಅಧಿಷ್ಠಾನ, ಭಿತ್ತಿ, ಪ್ರಸ್ತರ, ಪ್ರಾಸಾದ, ಶಿಖರ, ಸ್ತೂಪಿಗಳನ್ನು ಒಳಗೊಂಡಿದೆ. ಇದಲ್ಲದೆ ವಾತಾಯನ, ಸ್ತಂಭ, ಭುವನೇಶ್ವರಿ, ಪ್ರಣಾಳ, ಹಸ್ತಿ–ಹಸ್ತ ಮುಂತಾದ ಭಾಗಗಳ ಅಧ್ಯಯನವನ್ನೂ ಒಳಗೊಂಡಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಉಳಿದು ಬಂದಿರುವ ದೇವಾಲಯಗಳಲ್ಲಿ ಬೇಗೂರಿನ – ನಗರೇಶ್ವರ ದೇವಾಲಯ ಸಂಕೀರ್ಣ ಅತ್ಯಂತ ವಿಶೇಷವಾಗಿದ್ದು, ಇದು ಮಯಮತ್ತಪ್ಪ ವಿವರಣೆ ನೀಡುವಂತೆ ನಿರ್ಮಿಸಲಾಗಿದೆ. ಈ ಜಿಲ್ಲೆಯಲ್ಲಿನ ಅತ್ಯಂತ ವಿಶಿಷ್ಠವಾದ ದೇವಾಲಯ. ಗಂಗ/ನೊಳಂಬರ ಕಾಲದ್ದಾಗಿದ್ದು ದೇವಾಲಯದ ಆವರಣದಲ್ಲಿ ಗಂಗರ ಶಾಸನವಿದೆ. ದೇವಾಲಯದ ಎಲ್ಲಾ ಭಾಗಗಳೂ ಅಡಿಯಿಂದ ಮುಡಿಯವರೆಗೂ ಶಾಸ್ತ್ರೀಯವಾಗಿ ರಚನೆಯಾಗಿವೆ. ಬೆಂಗಳೂರಿನ ದೇವಾಲಯಗಳ ಅಧಿಷ್ಠಾನಗಳನ್ನು ಈ ಕೆಳ ಕಂಡಂತೆ ಅಧ್ಯಯನ ಮಾಡಬಹುದು.

ಅಧಿಷ್ಠಾನ: ಅತ್ಯಂತ ಪ್ರಾಚೀನವಾದ ಅಧಿಷ್ಠಾನ ಮನೆಯ ಇಟ್ಟಿಗೆಯ ಅಧಿಷ್ಠಾನ, ನಂತರದು ಬೇಗೂರಿನ ನಗರೇಶ್ವರ ದೇವಾಲಯದ ಅಧಿಷ್ಠಾನ. ಮನ್ನೆಯ ದೇವಾಲಯ ಕಲ್ಲಿನದ್ದಾಗಿದ್ದು, ಇದರ ಅಧಿಷ್ಠಾನ ಭಾಗ ಇಟ್ಟಿಗೆಯಿಂದ ರಚನೆಯಾಗಿದೆ.[1] ಈ ಅಧಿಷ್ಠಾನವು ಪಾದ–ಬಂದ ಮಾದರಿಯದ್ದಾಗಿದೆ. ತ್ರಿಪಟ್ಟ ಕುಮುದ ಭಾಗವನ್ನು ಇಟ್ಟಿಯಲ್ಲಿ ಅಚ್ಚುಕಟ್ಟಾಗಿ ರಚಿಸಲಾಗಿದೆ. ಜಗತಿ, ಗಳು, ತ್ರಿಪಟ್ಟಕುಮುದಗಳ, ಭಾಗಗಳು ಇಟ್ಟಿಗೆಯಲ್ಲಿದ್ದು,– ಪ್ರತಿ ಭಾಗವು ಕಲ್ಲಿನಲ್ಲಿ ರಚಿತವಾಗಿದೆ. ಪಾದ ಬಂಧ ಅಧಿಷ್ಠಾನವು ಇಟ್ಟಿಗೆಯಲ್ಲಿ ರಚಿತವಾಗಿರುವ ಏಕೈಕ ದೇವಾಲಯವಿದ್ದು[2].

ಬೇಗೂರಿನ ನಗರೇಶ್ವರ ದೇವಾಲಯ ಸಂಕೀರ್ಣದಲ್ಲಿ ಪಾದ ಬಂಧ, ಕಪೋತ ಬಂಧ ಮತ್ತು ಪ್ರತಿ ಬಂಧ ಅಧಿಷ್ಠಾನಗಳು ಇವೆ. ಪಾದ ಬಂಧವು ಜಗತಿ ತ್ರಿಪಟ್ಟಕುಮುದ, ಗಳ, ಪ್ರತಿ ಭಾಗಗಳನ್ನು ಹೊಂದಿದೆ. ಕಪೋಚ ಬಂಧವು ಜಗತಿ, ತ್ರಿಪಟ್ಟಕುಮುದ, ಕಂಪಗಳ, ಕಂಪ, ಕಪೋತ, ಕಂಪ–ಗಳ–ಕಂಚ, ಪ್ರತಿ ಭಾಗಗಳನ್ನು ಹೊಂದಿವೆ.[3]

ಪ್ರತಿ ಬಂಧ ಅಧಿಷ್ಠಾನವು ಜಗತಿ, ವೃತ್ತಕುಮುದ, ಕಂಪ–ಗಳ–ಕಂಪ (ಪ್ರತಿ–ವಾಜನ) ಮತ್ತು ಪ್ರತಿ ಭಾಗವನ್ನು ಹೊಂದಿವೆ.[4]

ಬನ್ನೇರು ಘಟ್ಟದ ಚಂಪಕಧಾಮ ಸ್ವಾಮಿ ದೇವಾಲಯದಲ್ಲಿ, ದೊಡ್ಡಗುಬ್ಬಿಯ ಸೋಮೇಶ್ವರ ದೇವಾಲಯದಲ್ಲಿ ಉಪಪೀಠದ ರಚನೆ ಕಂಡು ಬರುತ್ತದೆ.[5] ಚಂಪಕಧಾಮ ದೇವಾಲಯವು ಪ್ರತಿ ಭದ್ರ ಉಪಪೀಠವನ್ನು ಹೊಂದಿದ್ದು, ಗಳದ ಭಾಗವು ಎತ್ತರವಾಗಿದ್ದು, ಗಳ ಪಾದಗಳನ್ನು ರಚಿಸಲಾಗಿದೆ. ಉಪ ಪೀಠವು ಉಪಾನ, ಜಗತಿ, ಕಂಪ, ಪಟ್ಟಿಕಾ, ಕಂಪ, ಗಳ ಕಂಪ, ಕಪೋತ ಮತ್ತು ಪ್ರತಿಯನ್ನು ಹೊಂದಿದ್ದು, ಅದರ ಮೇಲಿನ ಪಾದಬಂಧವು ಎರಡು ಪಟ್ಟಿಕೆಗಳನ್ನು ಹೊಂದಿದೆ.[6] ದೊಡ್ಡಗುಬ್ಬಿಯ ಸೋಮೇಶ್ವರ ದೇವಾಲಯವು ಅತ್ಯಂತ ಸುಂದರವಾದ ಪ್ರತಿಭದ್ರ ಉಪಪೀಠವನ್ನು ಹೊಂದಿದೆ. ಈ ಉಪಪೀಠವು, ಉಪಾನ, ಜಗತಿ, ಪದ್ಮಜಗತಿ, ಗಳ ಕಂಪ, ಕಪೋತ ಮತ್ತು ಪ್ರತಿ ಭಾಗಗಳನ್ನು ಹೊಂದಿದೆ.[7] ಕಪೋತವುಡ ಸುಂದರವಾದ ಕೂಡುಗಳನ್ನು ಹೊಂದಿದ್ದು, ಕೂಡುಗಳ ಪಕ್ಕದಲ್ಲಿ ಕಪೋತದಲ್ಲಿ ಪದ್ಮ ದಳಗಳನ್ನು ಬಿಡಿಸಲಾಗಿದೆ. ಈ ಪದ್ಮ ದಳಗಳ ಮಧ್ಯ ಭಾಗದಲ್ಲಿ ಮುಕ್ತಾಗ್ರಾಸಗಳಿವೆ. ಇಲ್ಲಿನ ಕೊಡುಗಳ ಮಧ್ಯ ಭಾಗವು ಗಂಧರ್ವ ಮುಖಗಳನ್ನು ಹೊಂದಿದೆ. ಸಾವನ ದುರ್ಗದ ಸೋಮೇಶ್ವರ ದೇವಾಲಯ ಮಂಚಭದ್ರ ಉಪಪೀಠವನ್ನು ಹೊಂದಿದೆ.

ಆನೇಕಲ್ಲಿನ ವೆಂಕಟರಮಣ ದೇವಾಲಯ[8] ಪಾದಬಂಧ ಅಧಿಷ್ಠಾನವನ್ನು ಹೊಂದಿದೆ. ಇದು ಉಪಾನ, ಜಗತಿ, ತ್ರಿಪಟ್ಟ, ಕುಮುದ, ಕಂಪಗಳ ಕಂಪ ಪಟ್ಟಿಕಾ, ಕಂಪ–ಗಳ ಕಂಪ ಪಟ್ಟಿಕಾ ಪ್ರತಿ ಭಾಗವನ್ನು ಹೊಂದಿದೆ.

ಹಲಸೂರಿನ ಸೋಮೇಶ್ವರ ದೇವಾಲಯದ ಗೋಪುರದ ಅಧಿಷ್ಠಾನದಲ್ಲಿ ಪ್ರತಿ ಭದ್ರ ಉಪಪೀಠವಿದ್ದು, ಪಾಥ ಬಂಧ ಅಧಿಷ್ಠಾನ, ಕಪೋತ ಬಂಧ, ಅಧಿಷ್ಠಾನಗಳನ್ನು ಹೊಂದಿದ್ದು, ರಮಣೀಯವಾಗಿ ರಚಿಸಲಾಗಿದೆ.[9]

ಹೆಸರು ಘಟ್ಟದ ಈಶ್ವರ ದೇವಾಲಯಲ್ಲಿ ಪದ್ಮಕ ಅಧಿಷ್ಠಾನವಿದೆ.[10] ಉಪಾನ, ಪದ್ಮ ಜಗತಿ, ಸ್ಪಷ್ಟವಾದ ಪದ್ಮ ದಳಗಳನ್ನು ಹೊಂದಿದೆ. ಪಟ್ಟಿಕಾ, ಗಳ, ಪ್ರತಿ ಈ ಅಂಗಗಳು ಸುಂದರವಾಗಿ ರಚನೆಯಾಗಿವೆ.

ಹಲಸೂರಿನ ಸೋಮೇಶ್ವರ ದೇವಾಲಯವು ಪದ್ಮಬಂಧ ಅಧಿಷ್ಠಾನವನ್ನು ಹೊಂದಿದ್ದು, ಕಪೋತ ಪಟ್ಟಿಕೆಗಳು ಪದ್ಮ ದಳಗಳಿಂದ ಅಲಂಕೃತವಾಗಿದೆ.[11]

ದೇವರ ಚಿಕ್ಕನಹಳ್ಳಿಯ–ಈಶ್ವರ ದೇವಾಲಯವು ಉರಗ ಬಂಧ ಅಧಿಷ್ಠಾನವನ್ನು ಹೊಂದಿದೆ.[12]

ಹಲಸೂರು ಸೋಮೇಶ್ವರ ಗುಡಿಯ ಮಹಾ ಮಂಟಪವು ಶ್ರೀ ಬಂಧ ಅಧಿಷ್ಠಾನವನ್ನು ಹೊಂದಿದೆ. ಈ ಅಧಿಷ್ಠಾನದ ಎಲ್ಲಾ ಭಾಗಗಳೂ ಸುಂದರವಾಗಿ ನಿರ್ಮಾಣಗೊಂಡಿವೆ.

ಮನ್ನೆಯ ಅಕ್ಕ – ತಂಗಿ ದೇವಾಲಯ ಪ್ರತಿಕ್ರಮ ಅಧಿಷ್ಠಾನವನ್ನು ಹೊಂದಿದ್ದು, ಜಗತಿ, ತ್ರಿಪಟ್ಟು ಕುಮುದ, ಪ್ರತಿ ವಾಜನ ಮತ್ತು ಪ್ರತಿ ಭಾಗಗಳನ್ನು ಬಿಡಿಸಲಾಗಿದೆ. ಹೀಗೆ ಬೆಂಗಳೂರಿನ ದೇವಾಲಯಗಳು ಸುಂದರವಾದ ಶಾಸ್ತ್ರೀಯವಾಗಿ ನಿರ್ಮಿಸಲ್ಪಟ್ಟಿರುವ ಅಧಿಷ್ಠಾನಗಳನ್ನು ಹೊಂದಿವೆ.

ಭಿತ್ತಿ: ಬೆಂಗಳೂರಿನ ದೇವಾಲಯದ ಭಿತ್ತಿಗಳು ಹೆಚ್ಚಾಗಿ ಸರಳವಾಗಿದ್ದು, ಅಲಂಕರಣಗಳನ್ನು ಹೊಂದಿರುವುದು ಅಪರೂಪ ಸುಮಾರು ಶೇ. 90 ರಷ್ಟು ದೇವಾಲಯಗಳು ಭಿತ್ತಿಯ ಮೇಲೆ ಅಲಂಕರಣವಿಲ್ಲದೆ ಸರಳವಾಗಿ ರಚನೆಯಾಗಿವೆ. ಕೆಲವು ಭಿತ್ತಿಗಳು ವಾಸ್ತು ಅಲಂಕರಣಗಳಾದ ಭಿತ್ತಿಪಾದಗಳನ್ನು ಹೊಂದಿವೆ. ಇನ್ನು ಕೆಲವು ಮಧ್ಯದಲ್ಲಿ ಕೋಷ್ಠಗಳನ್ನು ಹೊಂದಿವೆ. ಸಾಮಾನ್ಯವಾಗಿ ಭಿತ್ತಿಯ ಮೂಲೆಗಳಲ್ಲಿ ಭಿತ್ತಿ ಪಾದಗಳಿವೆ. ಕುಂಭ ಪಂಜರಗಳು ತೀರ ಅಪರೂಪ. ಅಮ್ಮನವರ ಗುಡಿಯ ಮೇಲೆ ಗಿರಿಜಾ ಕಲ್ಯಾಣದ ದೃಶ್ಯಗಳನ್ನು ಭಿತ್ತಿಯ ಕೆಳಭಾಗದಲ್ಲಿ ಅಧಿಷ್ಠಾನದ ಮೇಲ್ಭಾಗದಲ್ಲಿ ರಚಿಸಲಾಗಿದೆ.[13]

ಜಿಗಣಿಯ ಈಶ್ವರ ದೇವಾಲಯ, ಯಲಹಂಕದ ಈಶ್ವರ ದೇವಾಲಯ, ಚಾಮರಾಜ ಪೇಟೆಯ ರಾಮೇಶ್ವರ ಗುಡಿ ಹಲವು ಗುಡಿಗಳು ಭಿತ್ತಿಯ ಮೇಲೆ ಯಾವುದೇ ಅಲಂಕರಣ ಹೊಂದಿಲ್ಲ.

ಯಲಹಂಕದ ಕೋಟೆಯ ಒಳಗಿನ ಗುಡಿ, ನಾರಾಯಣ ಘಟ್ಟದ ವಿಷ್ಣು ಗುಡಿ, ಮಡಿವಾಳದ ಸೋಮೇಶ್ವರ ಗುಡಿ, ಹೆಸರು ಘಟ್ಟದ ಲಕ್ಷ್ಮೀ ನರಸಿಂಹ ದೇವಾಲಯಗಳು ಭಿತ್ತಿ ಪಾದಗಳನ್ನು ಕೋಷ್ಠಗಳನ್ನೂ ಹೊಂದಿವೆ.[14]

ಅನೇಕಲ್ಲಿನ ಭವಾನೀ ಶಂಕರ ಗುಡಿ, ಸರ್ಜಾಪುರದ ಕೋದಂಡ ರಾಮನ ಗುಡಿ, ಮಡಿವಾಳದ ಸೋಮೇಶ್ವರ ಗುಡಿಗಳು ಭಿತ್ತಿ ಶಿಲ್ಪಗಳನ್ನು ರಾಮಾಯಣ, ಮಹಾಭಾರತ, ಶಿವಪುರಾಣಗಳನ್ನು ವಿವರಿಸುವ ಕಥಾನಕಗಳನ್ನು ಹೊಂದಿವೆ.[15]

ಬೇಗೂರಿನ ನಗರೇಶ್ವರ ದೇವಲಯದ ಭಿತ್ತಿಯ ಮೇಲೆ ಭಿತ್ತಿ ಪಾದಗಳು, ಮಕರ ತೋರಣಗಳೂ ರಚನೆಯಾಗಿವೆ. ಮನ್ನೆಯ ಅಕ್ಕ ತಂಗಿ ದೇವಾಲಯದ ಭಿತ್ತಿಯ ಮೇಲಿರುವ ಭಿತ್ತಿ ಪಾದಗಳು ಪೀಠಗಳನ್ನು ಹೊಂದಿವೆ. ಭಿತ್ತಿಪಾದಗಳು ಸರಳವಾಗಿದ್ದು, ಕುಂಭ, ಮಂಡಿಗಳನ್ನು ಹೊಂದಿವೆ. ಬೇಗೂರಿನ ದೇವಾಲಯಗಳೂ, ಮನ್ನೆಯ ದೇವಾಲಯಗಳು ಬ್ರಹ್ಮಕಾಂತ ಭಿತ್ತಿ ಪಾದಗಳನ್ನು ಹೊಂದಿವೆ.[16]

ದೊಡ್ಡ ಗುಬ್ಬಿಯ ಸೋಮೇಶ್ವರ ದೇವಾಲಯ ವಿಷ್ಣುಕಾಂತ ಭಿತ್ತಿಪಾದಗಳನ್ನೂ ಅತ್ಯಂತ ಸುಂದರವಾದ ಕುಂಭಪಂಜರಗಳನ್ನೂ ಹೊಂದಿದೆ. ಆನೇಕಲ್ಲಿನ ಚೆನ್ನಕೇಶವ ಗೋಪಾಲಸ್ವಾಮಿ ದೇವಾಲಯವೂ ಸುಂದರವಾದ ಕುಂಭ ಪಂಜರಗಳನ್ನು ಹೊಂದಿದೆ. ಹಲಸೂರಿನ ಸೋಮೇಶ್ವರ ದೇವಾಲಯವು ಬ್ರಹ್ಮಕಾಂತ ಭಿತ್ತಿ ಪಾದಗಳನ್ನೂ, ಕುಂಭ ಪಂಜರಗಳನ್ನೂ ಭಿತ್ತಿ ಶಿಲ್ಪಗಳನ್ನೂ ಹೊಂದಿದೆ.

ಹಲಸೂರಿನ ಸೋಮೇಶ್ವರ ದೇವಾಲಯದ ಗೋಪುರದ ಮೇಲಿರುವ ಕುಂಭ ಪಂಜರವೊಂದು ವಿಶೇಷವಾಗಿದೆ. ಇದರ ಪೀಠ ಭಾಗದಿಂದ ಇಕ್ಕೆಲಗಳನ್ನೂ ಎರಡು ವಲ್ಲಿಗಳು ಹೊರಬಂದು, ಆದರಿಂದ ಕಮಲದ ಹೂಗಳು ಹೊರಬಂದಿದ್ದು ಆ ಹೂವಿನ ಮಧ್ಯಭಾಗದಿಂದ ಯುವತಿರಿಬ್ಬರು ನಿಂತಿರುವಂತಹ ಶಿಲ್ಪಗಳಿವೆ. ಕುಂಭ ಪಂಜರಗಳು ಕೆಳಗೆ ಕುಂಭ, ಮೇಲೆ ದಿಂಡು ಅದರ ಮೇಲ್ಭಾಗದಲ್ಲಿ ಕಳಶ, ತಡಿ, ಬೋದಿಗೆ, ಫಲಕ, ಅದರ ಮೇಲೆ ಪಂಜರವಿರುತ್ತದೆ. ಕುಂಭವು ಚೌಕಾಕಾರವಾಗಿ, ಗೋಳಾಕಾರವಾಗಿ ರಚನೆಯಾಗಿರುತ್ತದೆ. ಕುಂಭವು ರತ್ನಪಟ್ಟಿಕೆಯಿಂದ ಮಧ್ಯ ಭಾಗದಲ್ಲಿ ರಚನೆಯಾಗಿರುತ್ತದೆ. ಸುತ್ತ ಹೊರಭಾಗವು ಕಟಕಾವೃತ ಕುಮುದದಂತೆ ಅಲಂಕೃತಗೊಂಡಿರುತ್ತದೆ.[17]

ಚಂಪಕ ಧಾಮ ದೇವಾಲಯದ ಗೋಪುರದಲ್ಲಿ ಸೌಮ್ಯಕಾಂತ, ಮತ್ತು ವಿಷ್ಣುಕಾಂತ ಭಿತ್ತಿ ಪಾದಗಳಿವೆ. ಮನ್ನೆಯ ಅಕ್ಕ-ತಂಗಿ ದೇವಾಲಯದ ಭಿತ್ತಿಯ ಮೇಲೆ ಬ್ರಹ್ಮಕಾಂತ ಭಿತ್ತಿ ಪಾದಗಳಿದ್ದು-ಪೀಠಗಳನ್ನು ಹೊಂದಿವೆ. ಸರ್ಜಾಪುರದ ಕೋದಂಡರಾಮು ದೇವಾಲಯದ ಭಿತ್ತಿ ಪಾದಗಳ ಮೇಲೆ ವಲ್ಲಿಗಳನ್ನು ಕೆತ್ತಲಾಗಿದೆ. ಆನೇಕಲ್ಲಿನ ಗೋಪಾಲ ಗುಡಿಯ ಭಿತ್ತಿ ಪಾದಗಳೂ ವಿಷ್ಣುಕಾಂತ ಭಿತ್ತಿ ಪಾದಗಳಾಗಿವೆ.

ಜಾಲವಾತಾಯಾನಗಳು: ಬೇಗೂರಿನ ನಗರೇಶ್ವರ ದೇವಾಲಯದ ಸಂಕೀರ್ಣ ಮನ್ನೆಯ ಸೋಮೇಶ್ವರ ದೇವಾಲಯ ಮತ್ತು ಚಂಪಕ ಧಾಮ ದೇವಾಲಯದ ಭಿತ್ತಿಯಲ್ಲಿ ಶಾಸ್ತ್ರೀಯವಾಗಿ ರಚಿಸಲ್ಪಟ್ಟಿರುವ ಜಾಲಗಳು ಇವೆ. ಚಂಪಕ ಧಾಮ ದೇವಾಲಯ ತುಯಾಶ್ರಿ ಜಾಲಕವನ್ನು ಹೊಂದಿದ್ದು, ಕೋಷ್ಠದ ಮಧ್ಯಭಾಗದಲ್ಲಿ ರಚನೆಯಾಗಿದೆ.

ಬೇಗೂರಿನ ಜಾಲಕವು ವಲ್ಲಿ ಜಾಲಕ ಮತ್ತು ಗುಳಿಕ ಜಾಲವಾತಾಯನವಾಗಿದೆ. ಮನ್ನೆಯ ಜಾಲಕವು ವಿಶೇಷ ಜಾಲಕವಾಗಿದೆ. ಈ ಜಾಲಕವು ಆ ಕಾಲದ ಶಿಲ್ಪಿಗಳು ಪ್ರೌಢಿಮೆ, ಕಲಾ ಕೌಶಲ್ಯಕ್ಕೆ ಕನ್ನಡಿಯಾಗಿದೆ. ಆ ಜಾಲಕವು ಶಿಲ್ಪಿಗಳಿಗಿದ್ದ ವಾಸ್ತು ಜ್ಞಾನ ಮತ್ತು ವಿಷಯ ಸಂಪನ್ನತೆಯನ್ನು ಸೂಚಿಸುತ್ತದೆ. ಈ ಜಾಲಕವು

ತ್ರಾಮದ ಹಂತಗಳನ್ನು ವಿವರಿಸುತ್ತದೆ. ವಾತ್ಸಾಯನನು ಕಾಮ ಸೂತ್ರವನ್ನು ರಚಿಸಿದ್ದು, ಅದರಲ್ಲಿ ಪ್ರೀತಿಯ ಹಲವು ಹಂತಗಳನ್ನು ವಿವರಿಸಲಾಗಿದೆ. ಈ ಹಂತಗಳನ್ನು ಮನ್ನೆಯೀ ಜಾಲವಾತಾಯನವು ರಸವತ್ತಾಗಿ ಬಿಂಬಿಸಿದೆ. ಈ ವಾತಾಯನದಲ್ಲಿ ಆರು ಹಂತಗಳನ್ನು ಬಿಡಿಸಲಾಗಿದೆ. ಈ ಎಲ್ಲ ಹಂತಗಳೂ ಬಳಿಯೊಂದರ ಮಧ್ಯದಲ್ಲಿ ಚಿತ್ರಿಸಲಾಗಿದೆ. ಈ ಹಂತಗಳನ್ನು ಆಲಿಂಗನಾಧಿಕಾರ, ದಂತಶಾಧಿಕಾರ, ನಖಶಾಧಿಕಾರ, ಚುಂಬನಾಧಿಕಾರ, ಸಂಭೋಗಾಧಿಕಾರ, ವಾಜೀಕರಣಾಧಿಕಾರ ಎಂದು ಕಾಮಸೂತ್ರವು ತಿಳಿಸಿದೆ.

ಭಿತ್ತಿಯ ಮೇಲೆ ಹಲವು ಹಲವು ರೀತಿಯ ತೋರಣಗಳು ಕಂಡು ಬರುತ್ತದೆ. ತೋರಣಗಳನ್ನು ಕೋಷ್ಠಕಗಳಿಗೆ ಅಲಂಕಾರಣವಾಗಿ ಮಾಡಲ್ಪಟ್ಟಿರುತ್ತದೆ. ಅವುಗಳನ್ನು ದೇವಕೋಷ್ಠಗಳೆಂದು ಕರೆಯುತ್ತಾರೆ.[18] ಈ ಕೋಷ್ಠಗಳು ಎರಡು ಸೀಳು ಭಿತ್ತಿಪಾದಗಳನ್ನು ಅಥವಾ ಅರ್ಧ ಭಿತ್ತಿಪಾದಗಳನ್ನು ಹೊಂದಿರುತ್ತವೆ. ಈ ಸೀಳು ಭಿತ್ತಿಪಾದಗಳನ್ನು ಹೊಂದಿರುತ್ತವೆ. ಈ ಸೀಳು ಭಿತ್ತಿಪಾದಗಳು ಭಿತ್ತಿಪಾದಗಳ ಎಲ್ಲಾ ಅವಯವಗಳನ್ನೂ ಹೊಂದಿರುತ್ತವೆ.[19]

ಬನ್ನೇರು ಘಟ್ಟದ ಚಂಪಕಧಾಮ ಸ್ವಾಮಿ ದೇವಾಲಯ, ದೊಮ್ಮ ಊರಿನ ವರದರಾಜ ಪೆರುಮಾಳ್–ಚೊಕನಾಥ ದೇವಾಲಯದ ಕೋಷ್ಠಗಳು ಶಾಲ ಶಿಖರವನ್ನು ಹೊಂದಿವೆ, ಯಲಹಂಕದ ಕೋಟೆಯೊಳಗಿನ ದೇವಾಲಯದ ಕೋಷ್ಠವು ಶಾಲಾಕಾರವಾಗಿದೆ. ಹೊಸಕೋಟೆಯ ಮಡಿವಾಳದ ಸೋಮೇಶ್ವರ ದೇವಾಲಯವು ಭಿತ್ತಿಯ ಮೇಲೆ ಎರಡೆರಡು ಕೋಷ್ಠಗಳನ್ನು ಹೊಂದಿದ್ದು,

ಇವು ಶಾಲಾಕಾರವಾಗಿದೆ. ಇವು ಅತ್ಯಂತ ಸುಂದರವಾದ ಕೋಷ್ಠಗಳಾಗಿವೆ. ದೊಡ್ಡ ಗುಬ್ಬಿಯ ಸೋಮೇಶ್ವರ ದೇವಾಲಯವು ಅತ್ಯಂತ ಮನೋಹರವಾದ ಕೋಷ್ಠವನ್ನು ಹೊಂದಿದ್ದು, ಕಪೋತ ಭಾಗದ ಮೇಲೆ ಎರಡು ಕೀರ್ತಿ ಮುಖಗಳಿದ್ದು, ಅದರ ಮೇಲೆ ನೀಳವಾದ ಪದ್ಮದಳಗಳಿಂದ ಅಲಂಕೃತವಾಗಿವೆ. ಕಪೋತದ ಮೇಲೆ ಶಾಲಾಕಾರವಿದ್ದು, ಅದರ ಮಧ್ಯ ಭಾಗದಲ್ಲಿ ಕೀರ್ತಿ ಮುಖವಿದ್ದು, ಎರಡೂ ತುದಿಗಳಲ್ಲಿ ಚಂದ್ರ ಮಂಡಲವಿದೆ. ಆನೇಕಲ್ ಆಂಜನೇಯ ಗುಡಿಯ ಭಿತ್ತಿಯ ಮೇಲೆ ಕೋಷ್ಠವು ಮಕರ ತೋರಣವನ್ನು ಹೊಂದಿದೆ.

ಬೆಂಗಳೂರಿನ ರಂಗನಾಥಸ್ವಾಮಿ[20] ದೇವಾಲಯದ ಭಿತ್ತಿಯ ಮೇಲೆ ಎರಡು ದೊಡ್ಡ ಮೀನುಗಳು ಗೋಲಾಕಾರದ ಚಿನ್ಹೆಯ ಮಧ್ಯೆ ಇರುವಂತೆ ತೆಳುವಾದ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ನಾರಾಯಣ ಘಟ್ಟದ ವಿಷ್ಣು ದೇವಾಲಯದ ಭಿತ್ತಿಯ ಮೇಲೆ ರಾಮಾಯಣದ ಚಿತ್ರಗಳಿವೆ. ಆನೇಕಲ್ಲಿನ ಭವಾನಿ ಶಂಕರ ದೇವಾಲಯದ ಭಿತ್ತಿಯ ಮೇಲೆ ಪಟ್ಟಿಕೆಯಂತೆ ರಚಿಸಿರುವ ವೈಷ್ಣವೀ, ನಟರಾಜ, ಮಹಾವಿಷ್ಣುವಿನ ಉಬ್ಬು ಶಿಲ್ಪಗಳಿವೆ.

ಹಲಸೂರಿನ ಸೋಮೇಶ್ವರ ಗುಡಿಯ ಭಿತ್ತಿಯ ಮೇಲೆ ರಾಶಿ ಚಿನ್ಹೆಗಳು, ಸೂರ್ಯ, ದಕ್ಷಿಣಾಮೂರ್ತಿ, ರಾವಣನು ಕೈಲಾಸ ಪರ್ವತವನ್ನು ಎತ್ತುತ್ತಿರುವ ದೃಶ್ಯ ಮಹಿಷ ಮರ್ದಿನಿಯ ಉಬ್ಬು ಶಿಲ್ಪಗಳು ಇವೆ.

ಪ್ರಣಾಳ: ಬೆಂಗಳೂರಿನ ಅತ್ಯಂತ ಸುಂದರವಾದ ಪ್ರಣಾಳವು ದೊಡ್ಡ ಗುಬ್ಬಿಯ ಸೋಮೇಶ್ವರ ದೇವಾಲಯದಲ್ಲಿದೆ. ಇದು ಸಿಂಹ ವಕ್ತ್ರ ಪ್ರಣಾಳವಾಗಿದ್ದು, ಸಿಂಹದ ಮುಖದಿಂದ ತಾವರೆಯ ಹೂವೊಂದು –ಮೃಣಾಳಿಕ ರೂಪದಿಂದ ಹೊರಬಂದಂತೆ ರಚಿಸಲಾಗಿದೆ. ಸಿಂಹದ ಮುಂಗಾಲುಗಳು ಮೇಲೆತ್ತಿ ಆ ತಾವರೆಯ ದಳಿಣನ್ನು ಮುಟ್ಟುತ್ತಿವೆ.[21]

ಬೇಗೂರಿನ ನಗರೇಶ್ವರ ದೇವಾಲಯವು ಗಜವಕ್ತ್ರ ಪ್ರಣಾಳವನ್ನು ಹೊಂದಿದೆ. ಅಗರದ ಈಶ್ವರ ದೇವಾಲಯವು ಉತ್ತಮವಾದ ಮೃಣಾಳಿಕಾ ಪ್ರಣಾಳವನ್ನು ಹೊಂದಿದೆ. ಮಡಿವಾಳದ – ಸೋಮೇಶ್ವರ ದೇವಾಲಯದಲ್ಲಿ ಚಿಕ್ಕದಾದ ಚಿತ್ರಗಳಿವೆ. ಮುಕ್ತಾಗಾತ್ರದ ಮೇಲ್ಭಾಗದಲ್ಲಿ ಸಿಂಹ ಮುಖಗಳಿದ್ದು, ಆ ಸಿಂಹದ ಬಾಯಿಂದ, ಮುಕ್ತಾಗ್ರಾಸಗಳು ಹೊರಬರುತ್ತಿರುವಂತೆ ಕೆತ್ತಲಾಗಿದೆ. ಪಕ್ಕದಲ್ಲಿರುವ ನಾಗೇಶ್ವರ ಸ್ವಾಮಿ ದೇವಾಲಯಲ್ಲಿರುವ

ರುದ್ರಕಾಂಡ ಸ್ತಂಭಗಳು ಇದೇ ರೀತಿಯ ಮುಕ್ತಾಗ್ರಾಸಗಳನ್ನು ಹೊಂದಿದ್ದು, ಅದರ ಮೇಲ್ಭಾಗ ಕಲ್ಯವಲ್ಲಿಯಿಂದ ಅಲಂಕೃತಗೊಂಡಿದೆ. ಅದರ ಮೇಲೆ ರಜ್ಜುಕದ ಅಲಂಕರಣವಿದ್ದು, ಉದ್ಯಪದ್ಮ ಮತ್ತು ಅರ್ಥ ಪದ್ಮಗಳು ಬಿಡಿಬಿಡಿಯಾಗಿ, ಸರಳವಾಗಿ ರಚನೆಯಾಗಿವೆ. ಮೇಲಿನ ಲಕುನ ಭಾಗದಲ್ಲಿ ತಾವರೆಯ ಎಲೆ ಮತ್ತು ಕಾಂಡಗಳನ್ನು ಬಿಡಿಸಲಾಗಿದೆ. ಅದರ ಮೇಲಿನ ದಿಂಡಿನ ಭಾಗವು ಎರಡು ಬಳ್ಳಿಗಳು, ಬಳ್ಳಿಗಳ ಮಧ್ಯೆ ಮುತ್ತಿನ ಹಾರಗಳನ್ನು ಹೊಂದಿದೆ. ಅದರ ಮೇಲೆ ಮತ್ತೆ ಪದ್ಮಕಾರದ (ಇದ್ದೈ) ಮತ್ತು ಫಲಕ (ಫಲಗೈ) ರಚನೆಗಳು ಇವೆ. ಈ ಸ್ಥಂಭಗಳು ಬೆಂಗಳೂರಿನ ಗಂಗರ ಕಾಲದ ಅತ್ಯಂತ ಸುಂದರ ರಚನೆಗಳಾಗಿವೆ. ಹೊರಗಿನ ಮುಖಮಂಟಪದಲ್ಲಿ ಬ್ರಹ್ಮಕಾಂತ ಸ್ಥಂಭಗಳು ಇದ್ದು, ಅದರ ಮಧ್ಯ ಭಾಗದಲ್ಲೂ ನರ್ತಕಿಯರನ್ನು ರಚಿಸಲಾಗಿದೆ. ರುದ್ರಕಾಂತ ಸ್ಥಂಭಗಳಲ್ಲಿ ಕೆಲವು ಯಾವುದೇ ಅಲಂಕರಣವಿಲ್ಲದೆ, ಸರಳವಾಗಿ ರಚನೆಯಾಗಿರುವಂತಹವು ಇಲ್ಲಿ ಕಂಡು ಬಂದಿವೆ. ಹಲಸೂರಿನ ಸೋಮೇಶ್ವರ ಗುಡಿಯ ಮುಖ ಮಂಟಪವು ಚಿತ್ರ ಖಂಡ ಸ್ಥಂಭಗಳಾಗಿದ್ದು, ಆ ಸ್ಥಂಭಗಳ ಮೇಲೆ ವಿಜಯನಗರ ಕಾಲದ, ಧಾರ್ಮಿಕ, ಸಾಮಾಜಿಕ ಜೀವನವನ್ನು ಪ್ರತಿಬಿಂಬಿಸುವ ಹಲವಾರು ಉಬ್ಬು ಶಿಲ್ಪಗಳು ಇವೆ. ಇವು ಬೇಟೆಗಾರನೊಬ್ಬ ಹುಲಿಯೊಡನೆ ಸೆಣಸಾಡುವ, ತನ್ನ ಕೈಯಲ್ಲಿರುವ ಚೂರಿಯಿಂದ ಅದನ್ನು ಕೊಲ್ಲುತ್ತಿರುವ ದೃಶ್ಯ ಹುಲ್ ವೇಷ ಧರಸಿ ನಡೆಸುವ ನೃತ್ಯ, ನರ್ತಕಿಯರು ನರ್ತನ ಭಂಗಿಗಳಲ್ಲಿರುವ ದೃಶ್ಯ, ಬಾಲಕೃಷ್ಣನ ತುಂಟಾಟವನ್ನು ಬಣ್ಣಿಸುವ ದೃಶ್ಯ, ವೀರಭದ್ರ ಲಿಂಗದ ಪೂಜೆ, ಮಹಿಷ ವರ್ಧಿನಿ ಮುಂತಾದ ದೃಶ್ಯಗಳನ್ನು ಹಲವು ರೀತಿಯ ವಾದ್ಯಗಳನ್ನು ನುಡಿಸುತ್ತಿರುವ ವಾದ್ಯಗಾರರ ದೃಶ್ಯಗಳನ್ನು ಒಳಗೊಂಡಿದೆ. ಇಲ್ಲಿ 6 ಯಾಳಿ ಸ್ಥಂಭಗಳೂ ಇವೆ. ಇವು ಸಿಂಹಕಾಂತ ಸ್ಥಂಭಗಳಾಗಿವೆ. ಸಂಯುಕ್ತ ಸ್ಥಂಭಗಳು ಮೂಲೆಗಳಲ್ಲಿ ರಚಿಸಲಾಗಿದೆ. ಸುಪ್ರತೀಕಾಂತ, ಸ್ಥಂಭಗಳೂ ಇಲ್ಲಿವೆ. ಪಕ್ಕದಲ್ಲಿರುವ ಅಮ್ಮನವರ ಗುಡಿಯ ಮುಂಭಾಗದಲ್ಲೂ ವ್ಯಾಳಕಾಂಡ ಸ್ಥಂಭಗಳಿವೆ. ಬಳ್ಳಾಪುರದ ಪೇಟೆಯಲ್ಲಿರುವ ರಂಘನಾಥಸ್ವಾಮಿ ದೇವಾಲಯದ ಮುಂಭಾಗದ ಮುಖ ಮಂಟಪದಲ್ಲಿ ಅಶ್ವಕಾಂತ ಸ್ಥಂಭಗಳನ್ನು ರಚಿಸಲಾಗಿದೆ. ಈ ಅಶ್ವಗಳು ಕುದುರೆ ಸವಾರರನ್ನು ಹೊಂದಿವೆ. 26 ದೇವಾಲಯದ ನವರಂಗದಲ್ಲಿ ಚಿತ್ರಖಂಡ ಸ್ಥಂಭಗಳಿವೆ. ಚಾಮರಾಜಪೇಟೆಯ ಕೋಟೆ ವೆಂಕಟರಮಣ ದೇವಾಲಯದಲ್ಲಿ ಸಿಂಹಕಾಂತ ಸ್ಥಂಭಗಳಲ್ಲಿ ಸಿಂಹಗಳನ್ನು ಕಾಂಡದ ನಾಲ್ಕೂ ಭಾಗಗಳಲ್ಲಿ ರಚಿಸಲಾಗಿದೆ. ಇಲ್ಲಿನ ಮೂಲೆಗಂಬಗಳು ಸಂಯುಕ್ತ ಸ್ಥಂಭಗಳಾಗಿವೆ. ಚಿತ್ರಖಂಡ ಸ್ಥಂಭಗಳು ವೆಂಕಟರಮಣನ ಗುಡಿಯಲ್ಲೂ ಪಕ್ಕದ ಅಮ್ಮನವರ ಗುಡಿಯಲ್ಲೂ ಇವೆ.[27] ದೊಮ್ಮಲೂರಿನಲ್ಲಿರುವ ಚೊಕ್ಕನಾಥ ದೇವಾಲಯ ಹರಿಹರ ಗುಡ್ಡದ ಮೇಲಿರುವ ಶಿವನ ಗುಡಿಯಲ್ಲೂ, ಜಿಗಣಿಯಲ್ಲಿರುವ ಚೆನ್ನಕೇಶವ ದೇವಾಲಯ [28] ಬಿದಿರ ಹಳ್ಳಿಯ ಕಾಶೀ ವಿಶ್ವೇಶ್ವರ ದೇವಾಲಯ ಚಿಕ್ಕಜಾಲದ, ಚೆನ್ನಕೇಶವ ದೇವಾಲಯ[29], ಸೊಂಡೇ ಕೊಪ್ಪದ ಈಶ್ವರ ಗುಡಿ, ವನಕನ ಹಳ್ಳಿಯ– ದೊಡ್ಡ ಗೂಳಿ ಬಸವಣ್ಣನ ಗುಡಿ, ವರ್ತೂರಿನ ಕಾಶೀ ವಿಶ್ವೇಶ್ವರ ಗುಡಿ, ವೇದವತಿ ನದಿಯ ದಡದಲ್ಲಿರುವ ತೇರುಮಲ್ಲೇಶ್ವರ ಗುಡಿ, ತಿಗಳರ ಪೇಟೆಯಲ್ಲಿರುವ ಧರ್ಮರಾಯನ ಗುಡಿಯಲ್ಲಿ ಚಿತ್ರಖಂಡ ಸ್ಥಂಭಗಳು ಕಂಡುಬರುತ್ತವೆ. ವಿಶೇಷವಾದ ಸೂರ್ಯಪಾನ–ಚಂದ್ರಪಾನ ಡಮರು ತ್ರಿಶೂಲ ಸ್ಥಂಭಗಳು ಗವಿಗೂ .... ಗುಡಿಯಲ್ಲಿವೆ.

ಮಂಟಪಗಳು: ಬೆಂಗಳೂರಿನ ಹಲವು ದೇವಾಲಯ ಸಂಕೀರ್ಣಗಳು ವಿವಿಧ ಬಗೆಯ ಮಂಟಪಗಳನ್ನು ಹೊಂದಿವೆ. ಬಹುಪಾಲು ದೇವಾಲಯಗಳಲ್ಲಿ ಮುಖ ಮಂಟಪವಿದೆ. ಇದು ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಚಿಕ್ಕ ಮಂಟಪ [30] ಈ ಮಂಟಪಗಳು ಸ್ಥಂಭಗಳನ್ನು ಹೊಂದಿರುತ್ತವೆ. ಇವು ಸಾಮಾನ್ಯವಾಗಿ ನವರಂಗಕ್ಕೆ ಹೊಂದಿಕೊಂಡಂತೆ ರಚಿಸಲ್ಪಟ್ಟಿರುತ್ತದೆ. ಕೆಲವೊಮ್ಮೆ ಗೋಪುರದ ದ್ವಾರಕ್ಕೆ ಹೊಂದಿಕೊಂಡಂತೆಯೂ ಮುಖಮಂಟಪ ಗಳನ್ನು ರಚಿಸಿರುತ್ತಾರೆ. ಸಾವನದುರ್ಗದಲ್ಲಿ ಈ ರೀತಿಯ ಮುಖಮಂಟಪವಿದೆ. ಹಲಸೂರಿನ ಸೋಮೇಶ್ವರ

ದೇವಾಲಯ, ಚಾಮರಾಜಪೇಟೆಯ ವೆಂಕಟರಮಣ ದೇವಾಲಯದ ಮುಖಮಂಟಪಗಳು ವೈಭವಪೂತವಾಗಿ ನಿರ್ಮಿಸಲ್ಪಟ್ಟಿದ್ದು, ಈ ಮಂಟಪಗಳಲ್ಲಿ ಸುಂದರವಾದ ಸ್ಥಂಭಗಳು ಇವೆ. ಈ ಮಂಟಪಗಳು ಶ್ರೀ ಬಂಧ ಅಧಿಷ್ಠಾನವನ್ನು ಹೊಂದಿವೆ. ಸಾಮಾನ್ಯವಾಗಿ ಮುಖಮಂಟಪದ ಮುಂದಿನ ಕಂಬಗಳು ಯಾಳಿ ಕಂಬಗಳಾಗಿರುತ್ತವೆ. ಮೂಲೆ ಕಂಬಗಳು ಸಂಯುಕ್ತ ಸ್ಥಂಭಗಳಾಗಿರುತ್ತವೆ.

ವಾಹನ ಮಂಟಪ: ದೇವಾಲಯದಲ್ಲಿರುವ ಮೂಲ ಮೂರ್ತಿಗಾಗಿ ನಿರ್ಮಿಸುವ ಮಂಟಪವೇ ವಾಹನ ಮಂಟಪ. ವಾಸ್ತು ಗ್ರಂಥಗಳು ವಾಹನ ಮಂಟಪದ ಕುರಿತು ತಿಳಿಸುತ್ತದೆ [32] ಸಾಮಾನ್ಯವಾಗಿ ಮೂಲ ದೇವರ ಗರ್ಭ ಗೃಹದ ಮುಂಭಾಗದಲ್ಲಿರುವ ಲಂಬರೇಖೆಯಲ್ಲಿ ವಾಹನ ಮಂಟಪವಿರುತ್ತದೆ. ಕೆಲವೊಮ್ಮೆ ವಾಹನಕ್ಕಾಗಿ ಮಂಟಪ ನಿರ್ಮಿಸುವಷ್ಟು ಸ್ಥಳಾವಕಾಶವಿಲ್ಲದಿದ್ದಾಗ ಗರ್ಭ ಗೃಹದ ಮುಂಭಾಗದ ಅಂತರಾಳದಲಿ, ನವರಂಗದಲ್ಲಿ, ಮುಖಮಂಟಪದಲ್ಲಿ, ವಾಹನವನ್ನು ನಿರ್ಮಿಸುವುದು ರೂಢಿಯಲ್ಲಿದೆ. [33] ಈ ಪದ್ಧತಿ ವಿಜಯನಗರ ಕಾಲದವರೆಗೂ ಮುಂದುವರಿಯುವುದು. ಕಂಡು ಬರುತ್ತದೆ. ಸಾಮಾನ್ಯವಾಗಿ ವಾಹನ ಮಂಟಪವು ಚೌಕಾಕಾರದ ಮಂಟಪವಾಗಿದ್ದು, 4 ಕಂಬಗಳನ್ನು ಹೊಂದಿದ್ದು, ಷಡ್ವರ್ಗಯುತವಾಗಿ ಇರುತ್ತದೆ. ಮೂಲ ದೇವರ ಗುಡಿಯಷ್ಟೇ ವಾಹನ ಮಂಟಪಕ್ಕೂ ಪ್ರಾಮುಖ್ಯತೆ ನೀಡಿರುವುದು ಕೆಲವು ಕಡೆ ಕಂಡು ಬಂದಿದೆ. ವಾಹನ ಮಂಟಪಗಳು ಎರಡುವಿಧವಾಗಿದ್ದು, ಒಂದು ನಂದಿ ಮಂಟಪ, ಇನ್ನೊಂದು ಗರುಡ ಮಂಟಪ, ಬೆಂಗಳೂರಿನಲ್ಲಿ ಶೈವ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ನಂದಿ ಮಂಟಪಗಳು ಹೆಚ್ಚಾಗಿ ದೊರೆತಿದ್ದು, ಗರುಡ ಮಂಟಪಗಳು ವಿರಳವಾಗಿವೆ. ನಂದಿ ಮಂಟಪಗಳು ತೆರೆದ ಮಂಟಪಗಳಾಗಿದ್ದು, ಗರುಡ ಮಂಟಪಗಳು ಗೋಡೆ ನಿರ್ಮಿತ ಮಂಟಪಗಳಾಗಿರುವುದು ಕಂಡು ಬಂದಿದೆ.[34] ಚಾಮರಾಜ ಪೇಟೆಯ ರಾಮೇಶ್ವರ ಗುಡಿ, ಅಲಸೂರಿನ ಸೋಮೇಶ್ವರ ಗುಡಿ, ಗಾಂಧಿನಗರದ ಈಶ್ವರ ಗುಡಿ, ಇಲ್ಲೆಲ್ಲಾ ಷಡ್ವರ್ಗಗಳನು ಹೊಂದಿರುವ ನಂದಿಮಂಟಪವಿದೆ. ಬೆಂಗಳೂರಿನ ಕಾರಂಜೀ ಆಂಜನೆಯ ಗುಡಿಯ, ಬಂದಿರುವ ಶ್ರೀರಾಮ ದೇವಾಲಯದ ಮುಂಭಾಗದಲ್ಲಿ ಷಡ್ವರ್ಗಗಳ ಗರುಡಮಂಟಪಿದೆ. ದೊಮ್ಮ ಊರಿನ ಚೊಕ್ಕನಾಥ ದೇವಾಲಯದ ಗರುಡ ಮಂಟಪದ ಎತ್ತರವಾದ ಕಂಬದ ಮೇಲಿದೆ. ದೇವಾಲಯವು ಎತ್ತರವಿರುವುದರಿಂದ, ಮೂಲವಿಗ್ರಹವೂ ಎತ್ತರದಲ್ಲಿದ್ದು, ಆ ಎತ್ತರಕ್ಕೆ ಸರಿಹೊಂದುವಂತೆ ನೇರವಾಗಿ, ಲಂಬರೇಖೆಯ್ಲಿ ಸಮಾನಾಂತರವಾದ ಎತ್ತರದಲ್ಲಿ ಈ ಗರುಡ ಮಂಟಪವೂ ರಚನೆಯಾಗಿದೆ. ಬೆಂಗಳೂರಿನ ಕೆಲವು ಪ್ರಮುಖ ದೇವಾಲಯಗಳಲ್ಲಿ ವಿಶೇಷವಾಗಿ ಬೇರೆ ವಾಹನ ಮಂಟಪಗಳು ರಚನೆಯಾಗದಿರುವ ಉದಾಹರಣೆಗಳೂ ಸಾಕಷ್ಟಿವೆ. [35]

ಅಮ್ಮನವರ ಗುಡಿ: ಬೆಂಗಳೂರಿನ ಹಲವು ದೇವಾಲಯಗಳಲ್ಲಿ ಬೇರೆಯ ಅಮ್ಮನವರ ಗುಡಿ ರಚನೆಯಾಗಿರುವುದು ಕಂಡು ಬರುತ್ತದೆ. ಆದರೆ ಬಹುಪಾಲು ಗುಡಿಗಳಲ್ಲಿ ಅಮ್ಮನವರಿಗಾಗಿ ಬೇರೆಯದೇ ಗುಡಿ ರಚನೆಯಾಗಿಲ್ಲ. ಶೇ. 80 ರಷ್ಟು ದೇವಾಲಯಗಳಲ್ಲಿ ಮೂಲಗುಡಿಯ ಪಕ್ಕದಲ್ಲೇ ಅಮ್ಮನವರ ಗುಡಿ ರಚನೆಯಾಗಿರುವುದು ಕಂಡು ಬರುತ್ತದೆ. ಮಾನಸಾ... ಗ್ರಂಥದಲ್ಲಿ 'ಶಕ್ತಿ' ಅಥವಾ 'ವನಿತಾ'ಗಾಗಿ ಗುಡಿ ನಿರ್ಮಿಸಬೇಕೆಂದು ತಿಳಿಸಲಾಗಿದೆ.[36] ಸಾಮಾನ್ಯವಾಗಿ ಅಮ್ಮನವರ ಗುಡಿ ಆಯತಾಕಾರವಾಗಿ ಇರಬೇಕೆಂದು ವಾಸ್ತು ಶಾಸ್ತ್ರ ಸೂಚಿಸುತ್ತದೆ. ಈಶ್ವರ ಸಂಹಿತವು, ಅಮ್ಮನವರ ಗುಡಿಯನ್ನು ಮೊದಲನೆ, ಎರಡನೆ ಅಥವಾ ಮೂರನೇ ಪ್ರಕಾರದಲ್ಲಿ ರಚಿಸಬಹುದೆಂದು ಸೂಚಿಸುತ್ತದೆ. ಸಾಮಾನ್ಯವಾಗಿ ಶೈವ ದೇವಾಲಯಗಳಲ್ಲಿ ಅಮ್ಮನವರ ಗುಡಿ ಮೂಲ ಮೂರ್ತಿಯಂತೆ ಎಡಭಾಗಕ್ಕೆ ರಚನೆಯಾದರೆ, ಶ್ರೀ ವೈಷ್ಣವ ದೇವಾಲಯಗಳಲ್ಲಿ ಬಲಭಾಗಕ್ಕೆ ರಚನೆಯಾಗಿರುವುದು ಕಂಡು ಬರುತ್ತದೆ. ಇದಲ್ಲದೆ ಹಲವು ಬಗೆಯ ಮಂಟಪಗಳ ರಚನೆಯನ್ನು ದೇವಾಲಯ ಸಂಕೀರ್ಣದಲ್ಲಿ ಗಮನಿಸಬಹುದು. ಅವು ಮಹಾಮಂಟಪ, ದ್ವಾರ ಮಂಟಪ, ಪುತೋಳಿ ಪಾತಾಳಂಕಟ, ರಂಗಮಂಟಪ, ಕಲ್ಯಾಣ ಮಂಟಪ ಮುಂತಾದವು

ವಸಂತ ಮಂಟಪ ಡೋಲೋತ್ಸವ ಮಂಟಪ, ಸ್ನಪನ ಮಂಟಪ, ಉತ್ಸವ ಮಂಟಪ, ಶಯನ ಮಂಟಪಗಳು ವಿಶಾಲವಾದ ದೇವಾಲಯ ಸಂಕೀರ್ಣಗಳಲ್ಲಿ ಕಂಡು ಬರುತ್ತವೆ.

ಅಡಿಟಿಪ್ಪಣಿ

1. ಮನ್ನೆಯ ಈ ದೇವಾಲಯವನ್ನು ಈಶ್ವರ ದೇವಾಲಯವೆಂದೂ, ಸೂರ್ಯ ದೇವಾಲಯವೆಂದೂ ಹಲವು ಇತಿಹಾಸಕಾರರು ವಿಮರ್ಶಿಸಿದ್ದಾರೆ. ಈ ದೇವಾಲಯವು ನೆಲಮಂಗಲ ತಾಲೂಕಿನ ಮನ್ನೆ ಗ್ರಾಮದಲ್ಲಿದ್ದು 4 ದೇವಾಲಯಗಳಿವೆ.
2. ಮನ್ನೆಯಲ್ಲಿರುವ ಸೂಳೆದೇವಾಲಯ, ಅಕ್ಕ-ತಂಗಿ ದೇವಾಲಯಗಳು ಕಲ್ಲಿನ ಅಧಿಷ್ಠಾನವನ್ನು ಹೊಂದಿವೆ.
3. ಬೇಗೂರಿನ ನಗರೇಶ್ವರ ದೇವಾಲಯದ ಕಪೋತ ಬಂಧ ಅಧಿಷ್ಠಾನವು ಈ ಪ್ರಾಂತ್ಯದ ಅತ್ಯಂತ ಹಳೆಯ ಅಥವಾ ಮೊದಲ ಕಪೋತ ಬಂಧವಾಗಿದ್ದು, ಕಪೋತದ ಮೇಲೆ ಕೂಡುಗಳ ರಚನೆ ಇದೆ. ಕೂಡುಗಳ ಮಧ್ಯಭಾಗ (ನಿಮ್ನಕ ಭಾಗ) ಖಾಲಿ ಇದ್ದು, ಮೇಲೆ ಶಿಖೆಯಲ್ಲಿ ಸಿಂಹ ಮುಖಗಳಿವೆ.
4. ಪ್ರತಿ ವಾಜನವು ವ್ಯಾಳಗಳನ್ನು ಹೊಂದಿದ್ದು, ರ ವ್ಯಾಳಗಳು ಕತ್ತನ್ನು ಹಿಂದೆ ತಿರುಗಿಸಿ ನೋಡುತ್ತಿರುವಂತೆ ಕೆತ್ತಲಾಗಿದೆ. ಸಾಮಾನ್ಯವಾಗಿ ಅಧಿಷ್ಠಾನದಲ್ಲಿ ಮತ್ತು ಪ್ರಸ್ತರದಲ್ಲಿ ಗಂಗರು ಈ ರೀತಿಯ ವ್ಯಾಳಗಳನ್ನು ರಚಿಸುತ್ತಿದ್ದರು.
5. ಚಂಪಕ ಧಾಮ ದೇವಾಲಯದ ಅಧಿಷ್ಠಾನದಲ್ಲಿ ಮತ್ತು ಅದೇ ದೇವಾಲಯದ ಗೋಪುರದ ಅಧಿಷ್ಠಾನದಲ್ಲಿ ಉಪಪೀಠದ ಮೇಲೆ ಆಧಿಷ್ಠಾನದ ರಚನೆ ಕಂಡು ಬರುತ್ತದೆ. ಸಾಮಾನ್ಯವಾಗಿ ಬೆಂಗಳೂರಿನ ಎಲ್ಲಾ ದೇವಾಲಯಗಳ ಗೋಪುರಗಳ ಅಧಿಷ್ಠಾನದಲ್ಲಿ ಉಪಪೀಠದ ಪ್ರಯೋಗವಿದೆ. ದೇವಾಲಯ ರಾಜ ಗೋಪುರಕ್ಕೆ ಎತ್ತರ ಹೆಚ್ಚಿಸಲು ಸೊಬಗನ್ನು ನೀಡಲು ಉಪಪೀಠಗಳನ್ನು ಬಳಸಲಾಗಿದೆ.
6. ಅಧಿಷ್ಠಾನದಲ್ಲಿ ಎರಡು ಪಟ್ಟಿಕೆಗಳನ್ನು ಕಪೋತ ಅಥವಾ ಕುಮುದದ ಮೇಲೆ ರಚಿಸುವ ವಾಡಿಕೆ 10ನೇ ಶತಮಾನದಲ್ಲಿ ಈ ಭಾಗದಲ್ಲಿ ಪ್ರಾರಂಭವಾಗುವುದು. ಇದೇ ದೇವಾಲಯದ ಗೋಪುರದಲ್ಲಿ ವೇದಿ ಭದ್ರ ಉಪಪೀಠದ ರಚನೆ ಇದೆ. ಇದು ಉಪಾನ ಜಗತಿ, ಕಂಪ, ಗಳ, ಕಂಪಗಳನ್ನು ಹೊಂದಿದ್ದು, ಗಳ ಭಾಗವು ಎತ್ತರವಾಗಿದ್ದು, ಗಳ ಪಾದಗಳನ್ನು ಹೊಂದಿದೆ.
7. ದೊಡ್ಡ ಗುಬ್ಬಿಯ ಸೋಮೇಶ್ವರ ದೇವಾಲಯದ ಗಳ ಭಾಗದಲ್ಲಿ ಗಳಪಾದಗಳ ರಚನೆಯಿದ್ದು, ಗಳ ಪಾದಗಳ ಮಧ್ಯ ಭಾಗದಲ್ಲಿ ರಾಮಾಯಣದ ಶಿಲ್ಪಗಳ ಚಿತ್ರಣವಿದೆ. ಗಳ ಪಾದಗಳ ಮೇಲ್ಭಾಗದಲ್ಲಿ ವಲ್ಲಿಬಂಧವಿದೆ. ಇದು ವಿಜಯನಗರದ ಅರಸನಾದ ಎರಡನೇ ದೇವರಾಯನ ಕಾಲದ ನಿರ್ಮಿತಿ.
8. ಈ ದೇವಾಲಯವನ್ನು ತಿಮ್ಮರಾಯ ಸ್ವಾಮಿ ದೇವಾಲಯವೆಂದು ಕರೆಯುತ್ತಾರೆ. ಎದುರಿಗಿರುವ ಆಂಜನೇಯ ಗುಡಿಯ ಪಾದಬಂಧ ಅಧಿಷ್ಠಾನ ಹೊಂದಿದೆ.
9. ಈ ದೇವಾಲಯದ ಅಧಿಷ್ಠಾನ ಭಾಗದಲ್ಲಿ ಪದ್ಮಜಗತಿ, ಆನೆಗಳನ್ನು ರಚಿಸಿರುವ ಜಗತಿ, ಒಂದರ ಪಕ್ಕದಲ್ಲಿ ಒಂದರಂತೆ ರಚಿಸಲಾಗಿದೆ. ಇಲ್ಲಿ ತ್ರಿಪಟ್ಟೆ ಕುಮುದ, ಧಾರಾವೃತ್ತ ಕುಮುದಗಳು ಒಂದರ ಪಕ್ಕದಲ್ಲಿ ಒಂದರಂತಿದೆ. ಇದರ ಮೇಲ್ಭಾಗದಲ್ಲಿ ಕಪೋತದ ಪಕ್ಕ ಪಟ್ಟಿಕೆಯ ರಚನೆ ಇದೆ.
10. ಇಡೀ ಬೆಂಗಳೂರು ನಗರ ಜಿಲ್ಲೆಯಲ್ಲಿ ದೊರೆತಿರುವ ಏಕೈಕ ಪದ್ಮಕಅಧಿಷ್ಠಾನವಿದು. ಇದು ವಿಜಯನಗರ ಕಾಲದಲ್ಲಿ ನಿರ್ಮಾಣವಾದದ್ದು.
11. ಈ ಅಧಿಷ್ಠಾನವು ಸುಂದರವಾಗಿ ರಚಿಸಲ್ಪಟ್ಟಿದ್ದು, ಕಟಕಾವೃತ್ತ, ಕುಮುದುವಿದ್ದು, ಮಧ್ಯದಲ್ಲಿ ಮುಕ್ತಾಗ್ರಾಸಗಳು, ಪಟ್ಟಿಕೆಯ ಮೇಲೆ ಪದ್ಮಗಳ ರಚನೆ ಇದೆ. ಪದ್ಮ ಬಂಧ ಅಧಿಷ್ಠಾನದ ಪ್ರತಿ ಅಂಗವೂ ಪದ್ಮ ದಳಗಳಿಂದ ಅಲಂಕೃತವಾಗಿರುತ್ತದೆ.

12. ಉರಗ ಬಂಧ ಅಧಿಷ್ಠಾನವು ಹಾವಿನ ರೀತಿಯ ದಪ್ಪದಾದ ವೃತ್ತ ಕುಮುದವನ್ನು ಹೊಂದಿರುತ್ತದೆ.
13. ದೇವಾಲಯದಲ್ಲಿ ಅಮ್ಮನವರ ಗುಡಿಯ ಭಿತ್ತಿಯ ಮೇಲೆ ಗಿರಿಜಾ ಕಲ್ಯಾಣ, ಸೀತಾ ಕಲ್ಯಾಣದ ದೃಶ್ಯಗಳನ್ನು ರಚಿಸುವ ವಾಡಿಕೆ ವಿಜಯನಗರದ ಕಾಲದಲ್ಲಿ ಆರಂಭವಾಗುತ್ತದೆ. ಬೆಂಗಳೂರಿನ ಕೋಟೆ ವೆಂಕಟರಮಣ, ಹಲಸೂರಿನ ಸೋಮೇಶ್ವರ ದೇವಾಲಯದ ಅಮ್ಮನವರ ಗುಡಿಯ ಮೇಲೆ ಈ ದೃಶ್ಯಗಳು ಕಂಡು ಬರುತ್ತವೆ. ಕೋಟೆ ವೆಂಕಟರಮಣ ದೇವಾಲಯ ಹಲಸೂರಿನ ಒಡೆಯರ ನಿರ್ಮಿತಿ ಹಲಸೂರು ಸೋಮೇಶ್ವರ ದೇವಾಲಯ ಕೆಂಪೇಗೌಡರ ಕಾಲದ ನಿರ್ಮಿತಿ.
14. ದೊಮ್ಮಲೂರಿನ ವರದ ಪೆರುಮಾಳ್ ಗುಡಿ, ಚಂಪಕದಾಮ ಬನ್ನೇರುಘಟ್ಟ, ಸರ್ಜಾಪುರದ ಆಂಜನೇಯ ಗುಡಿ, ಬೆಂಗಳೂರಿನ ಕಾಶೀ ವಿಶ್ವೇಶ್ವರ ಗುಡಿ ಭಿತ್ತಿ ಪಾದಗಳನ್ನು ಕೋಷ್ಠಗಳನ್ನೂ ಹೊಂದಿವೆ.
15. ಬೆಂಗಳೂರಿನ ಬಳ್ಳಾಪುರದ ಪೇಟೆಯಲ್ಲಿರುವ ರಂಗನಾಥಸ್ವಾಮಿ ದೇವಾಲಯದ ಭಿತ್ತಿಯ ಮೇಲೆ ಎರಡು ದೊಡ್ಡ ಮೀನುಗಳನ್ನು ರಚಿಸಲಾಗಿದೆ.
16. ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗಂಗ /ನೊಳಂಬ ಕಾಲದ ದೇವಾಲಯಗಳು ಬ್ರಹ್ಮಕಾಂತ ಭಿತ್ತಿ ಪಾದಗಳನ್ನು ಹೊಂದಿವೆ.
17. ಈ ರೀತಿಯ ಕುಂಭಪಂಜರಗಳು ದೊಡ್ಡ ಗುಬ್ಬಿಯ ಸೋಮೇಶ್ವರ ಬನ್ನೇರುಘಟ್ಟದ ಚಂಪಕದಾಮನ ಗೋಪುರ, ಆನೇಕಲ್ಲಿನ ಗೋಪಾಲಸ್ವಾಮಿ ದೇವಾಲಯದಲ್ಲಿ ಕಂಡು ಬರುತ್ತದೆ. ಕುಂಭವು ಅಲಂಕೃಣವಿಲ್ಲದಿರುವ ಸಾಧರಣವಾಗಿರುವವು ಹಲಸೂರಿನ ಸೋಮೇಶ್ವರ ದೇವಾಲಯದ ಭಿತ್ತಿ, ಮಲ್ಲಿಕಾರ್ಜುನ ದೇವಾಲಯದ ರಾಯ ಗೋಪುರದಲ್ಲಿದೆ.
18. ಹಲಸೂರಿನ ಸೋಮೇಶ್ವರ ದೇವಾಲಯ, ಪ್ರಸನ್ನ ವೆಂಕಟೇಶ್ವರ ದೇವಾಲಯಗಳಲ್ಲಿ ದೇವಕೋಷ್ಠಗಳಿವೆ.
19. ಕರ್ನಾಟಕ ಶೈಲಿಯ ವಾಸ್ತು ರಚನೆಗಳಲ್ಲಿ ಈ ಕೋಷ್ಠ ಭಿತ್ತಿ ಪಾದಗಳು ಸೀಳಾಗಿ/ಅರ್ಧ ರಚಿಸಲ್ಪಟ್ಟಿರುವುದಿಲ್ಲ. ಉದಾ: ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಹೊಯ್ಸಳ ದೇವಾಲಯಗಳ ಕೋಷ್ಠಗಳಲ್ಲಿ ಪೂರ್ಣ ಭಿತ್ತಿಪಾದಗಳಿರುತ್ತವೆ.
20. ಬೆಂಗಳೂರಿನ ಬಳ್ಳಾಪುರದ ಪೇಟೆಯ ರಂಗನಾಥ ಸ್ವಾಮಿ ದೇವಾಲಯ ಕೆಂಪೇಗೌಡರ ಕಾಲದ್ದಾಗಿದೆ.
21. ದೊಡ್ಡ ಗುಬ್ಬಿಯ ಸೋಮೇಶ್ವರ ದೇವಾಲಯವು 1426ರಲ್ಲಿ ಪ್ರತಾಪ ದೇವಾಲಯನ ಕಾಲದ್ದಾಗಿದೆ. ಈ ರೀತಿಯ ಪ್ರಣಾಳವು ಈ ಕಾಲದ ದೇವಾಲಯಗಳಲ್ಲಿ ಎಲ್ಲೂ ಕಂಡು ಬಂದಿಲ್ಲ ಸಿಂಹದ ಮುಖವನ್ನು ವಿಶಾಲವಾಗಿ, ಸ್ಪಷ್ಟವಾಗಿ ಕೆತ್ತಲಾಗಿದೆ. ದೊಡ್ಡ ಕಣ್ಣುಗಳು, ಕಿವಿಗಳು ತೆರೆದ ಬಾಯಿ, ಕತ್ತಿನಲ್ಲಿ ಸರಗಳು ಅಲಂಕೃತಗೊಂಡಿವೆ.
22. ಬನ್ನೇರು ಘಟ್ಟದ ಈ ದೇವಾಲಯ 1295 ರಿಂದ ಹೊಯ್ಸಳ ರಾಮನಾಥ ದೇವರ, ಹೊಯ್ಸಳ ಕೀರ್ತಿಯ ದಂಡನಾಯಕ ಹೊಯ್ಸಳರ ಮೂರನೆಯ ನರಸಿಂಹನ ಶಾಸನವನ್ನು ಹೊಂದಿದ್ದು, ಇವರ ಕಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯ ಚೋಳರ ಶೈಲಿಯಲ್ಲಿದೆ. ದೇವಾಲಯದ ಅಂಗಗಳೂ, ಕೋಷ್ಠ, ಭಿತ್ತಿಯ ಮೇಲಿನ ಭಿತ್ತಿಪಾದ, ಗರ್ಭ ಗೃಹಕ್ಕೆ ಪಕ್ಕದಲ್ಲಿಯೇ ಕಟ್ಟಿರುವ ಪ್ರದಕ್ಷಿಣ ಪಥ ಆಳ್ವಾರರ ಮೂರ್ತಿಗಳು ಇವೆಲ್ಲಾ ಚೋಳರ ಪ್ರಭಾವವನ್ನು ಸೂಚಿಸುತ್ತವೆ.
23. ಇದು ಮೊದಲು ಚೋಳರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಶಿಥಿಲವಾದ ನಂತರ ಕೆಂಪೇಗೌಡರ ಕಾಲದಲ್ಲಿ ಪುನರ್ ನಿರ್ಮಾಣಗೊಂಡಿದೆ.
24. ಆರು ರುದ್ರಕಾಂತ ಸ್ಥಂಭಗಳೂ, ಎಂಟು ಬ್ರಹ್ಮ ಶಾಂತ ಸ್ಥಂಭಗಳೂ ಈ ದೇವಾಲಯದಲ್ಲಿ ಇವೆ.
25. ಇಡೀ ಬೆಂಗಳೂರು ನಗರದಲ್ಲಿಯೇ ಶಾಸ್ತ್ರೀಯವಾಗಿ ನಿರ್ಮಾಣವಾಗಿರುವ ದೇವಾಲಯಗಳಲ್ಲಿ ಇದೇ ದೊಡ್ಡದು.

26. ಈ ದೇವಾಲಯವನ್ನು ಎರಡನೇ ಕೆಂಪೇಗೌಡರ –1628ರಲ್ಲಿ ನಿರ್ಮಿಸಿದರು. ಈ ದೇವಾಲಯದಲ್ಲಿನ ಶಾಸನವೊಂದು ಈ ಮಾಹಿತಿಯನ್ನು ನೀಡುತ್ತದೆ.

27. ಈ ದೇವಾಲಯವನ್ನು 1709ರ ಶಾಸನದ ಪ್ರಕಾರ ಚಿಕ್ಕದೇವರಾಯರು ನಿರ್ಮಿಸಿದರೆಂದು ತಿಳಿದುಬಂದಿದೆ. ಈ ಭಾಗದ ಶ್ರೀವೈಷ್ಣವರಿಗೆ ಪೂಜಾ ವಿಧಿಗಳನ್ನು ನಡೆಸುವಂತೆ ಸೂಚಿಸಲಾಗಿತ್ತು.

28. ಜಿಗಣಿಯ ಚೆನ್ನಕೇಶವ ದೇವಾಲಯವು ಚೋಳ–ಹೊಯ್ಸಳ ಶೈಲ್ಲಿಯಲ್ಲಿದ್ದು, ಕ್ರಿ.ಶ. 1200 ರಲ್ಲಿ ನಿರ್ಮಿತವಾಗಿದೆ.

29. ಚಿಕ್ಕ ಜಾಲದಲ್ಲಿರುವ ಚೆನ್ನಕೇಶವ ದೇವಾಲಯಕ್ಕೆ ಹೊಯ್ಸಳ ಪರ್ಮನಂದಿ–1275ರಲ್ಲಿ ದಾನ ನೀಡಿರುವ ಶಾಸನವಿದ್ದು, ಈ ದೇವಾಲಯ ಚೋಳ–ಹೊಯ್ಸಳ ಶೈಲಿಯಲ್ಲಿದೆ.

30.& 31. ಬಾದಮಿ ಚಾಲುಕ್ಯರು ಮತ್ತು ಪಲ್ಲವರ ಕಾಲದಿಂದಲೂ ಮುಖಮಂಟಪದ ರಚನೆಗಳು ಕಂಡು ಬರುತ್ತವೆ.

32. ಮಯಮತದ– 23 ಅಧ್ಯಾಯ–40ನೇ ಶ್ಲೋಕವು ವಾಹನ ಮಂಟಪವನ್ನು ಕುರಿತು ವಿವರಿಸುತ್ತದೆ.

33. ಕರ್ನಾಟಕದ ಚಾಲುಕ್ಯರ ಸಮಕಾಲೀನರಾದ ಪಲ್ಲವರು ತಮ್ಮ ದೇವಾಲಯಗಳಲ್ಲಿ ವಾಹನ ಮಂಟಪವನ್ನು ನಿರ್ಮಿಸಿಲ್ಲ. ನಂತರದ ಚೋಳರಲ್ಲಿ ವಾಹನ ಮಂಟಪವನ್ನು ನಿರ್ಮಿಸುವ ಪರಿಪಾಠ ಉಂಟಾಯಿತು.

34. ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಅದು ಗರುಡನನ್ನು ಪಕ್ಷಿಯ ರೂಪದಲ್ಲಿ ರಚಿಸಿದಾಗ, ಮಂಟಪವು ಗೂಡಿನಂತೆ, ಮೂರು ಭಾಗ ಗೋಡೆ, ಮುಂಭಾಗದಲ್ಲಿ ಬಾಗಿಲು ಇರುತ್ತದೆ. ಅದೇ ಗರುಡನನ್ನು ಮಾನವ ರೂಪಿಯಾಗಿ ನಿರ್ಮಿಸಿದ್ದು, ಗರುಡನಂತೆ ರೆಕ್ಕೆ ಮತ್ತು ಕೊಕ್ಕು ಇದರಲ್ಲಿ ತರೆದ ಮಂಟಪವಾಗಿರುತ್ತದೆ.

35. ಕೋಟೆ ವೆಂಕಟರಮಣ, ಕೋಟೆ ಆಂಜನೇಯ, ದೊಡ್ಡ ಗಣಪತಿ, ದೊಡ್ಡ ಬಸವ, ಕಾಶೀ ವಿಶ್ವೇಶ್ವರ ಗುಡಿ ಇಲ್ಲೆಲ್ಲಾ ವಾಹನ ಮಂಟಪದ ರಚನೆ ಇಲ್ಲ.

36. ಮಾನಸಾರ – ಅಧ್ಯಾಯ – 19 – ಶ್ಲೋಕ 8 ಮತ್ತು 9.

30. ಬೆಂಗಳೂರಿನ ಪ್ರಾಚೀನ ಶಿಲ್ಪಗಳು

ಶ್ರೀಮತಿ ಕನಕ ಮೂರ್ತಿ

ನನ್ನ ಇಂದಿನ ಮಾತುಗಳು, ಬೆಂಗಳೂರಿನ ಪ್ರಾಚೀನ ಶಿಲ್ಪಗಳನ್ನು ಕುರಿತು. ನನ್ನ ಅಧ್ಯಯನ ಕೂಡ ಮೂರ್ತಿಶಿಲ್ಪಗಳಿಗೆ ಮಾತ್ರ ಸೀಮಿತವಾಗಿದೆ. ಮೊದಲಿಗೆ ನಾನು ಕೋಟೆ ವೆಂಕಟರಮಣಸ್ವಾಮಿ ದೇವಾಲಯದ ಶಿಲ್ಪಗಳ ಬಗ್ಗೆ ಹೇಳುತ್ತೇನೆ. ಸುಮಾರು ಮೂವತ್ತು ವರ್ಷಗಳ ಕೆಳಗೆ ಯಾವ ಸಮಯದಲ್ಲಿ ಹೋದರೂ ದೇವಾಲಯ ತೆರೆದೇ ಇರುತ್ತಿತ್ತು. ಗರ್ಭಗುಡಿಗೆ ಮಾತ್ರ ಬೀಗ ಹಾಕುತ್ತಿದ್ದರು. ಮಿಕ್ಕ ಭಾಗಗಳಲ್ಲಿ ಆರಾಮವಾಗಿ ಕುಳಿತು ರೇಖಾ ಚಿತ್ರಗಳನ್ನು ಬರೆದುಕೊಳ್ಳಬಹುದಾಗಿತ್ತು. ಅಲ್ಲಿಯ ಕಂಬಗಳಲ್ಲಿರುವ ಉಬ್ಬುಶಿಲ್ಪಗಳು ಬಹಳ ಆಕರ್ಷಣೀಯವಾಗಿವೆ. ಹೊರಗೋಡೆಯಲ್ಲಿ ಕಡೆದಿರುವ ಉಬ್ಬುಶಿಲ್ಪಗಳ ಸಾಲುಗಳು 'ಗಿರಿಜಾ ಕಲ್ಯಾಣ' ಎಂತಹ ಸುಂದರವಾದ ರಚನೆಗಳು! ಬ್ರಹ್ಮ, ವಿಷ್ಣು, ಮುಂತಾದ ದೇವತೆಗಳು ಋಷಿಮುನಿಗಳೊಂದಿಗೆ ದಿಬ್ಬಣವನ್ನು ನೋಡುತ್ತಾ ಹೋದಂತೆ ನಾವುಕೂಡ ದಿಬ್ಬಣದ ಭಾಗವೇನೋ ಎಂಬಂತೆ ಭಾಸವಾಗುತ್ತದೆ. ಅಲ್ಲಿಯ ಋಷಿಗಳ ಮುಖದಲ್ಲಿ ಕಾಣುವ ಸಂತೋಷ, ಕೈ ಎತ್ತಿ ತೋರಿಸುವ ಭಂಗಿ, ಒಂದಕ್ಕಿಂತ ಒಂದು ಪಟ್ಟದಕಲ್ಲಿನಲ್ಲೂ ಇಷ್ಟೊಂದು ಭಾವಪ್ರದರ್ಶನ ಮಾಡಲು ಸಾಧ್ಯವೇ ಎನ್ನಿಸುತ್ತದೆ. ಇದರಿಂದ ನಾವೆಲ್ಲರೂ ಕಲಿತಿದ್ದೇನೆಂದರೆ, ಮಾಧ್ಯಮ ಹೇಗೇ ಇರಲಿ ಶಿಲ್ಪಿ ಎಷ್ಟೊಂದು ಭಾವನೆಗಳನ್ನು ತೋರಿಸಬಹುದು ಎಂದು. ಒಳಭಾಗದ ಕಂಬಗಳಲ್ಲಿದ್ದ ನರ್ತಕಿಯರು, ಮೋಹಿನಿ, ನೃತ್ಯಗಾರ್ತಿಯರು, ವಾದ್ಯಗಾರರು, ಎಲ್ಲರನ್ನೂ ರೇಖಾ ಚಿತ್ರದಲ್ಲಿ ಸೆರೆಹಿಡಿಯುತ್ತಿದ್ದೆವು. ಶೈಲಿ ಯಾವುದೇ ಇರಲಿ, ಮಾಧ್ಯಮ ಹೇಗೇ ಇರಲಿ, ಮಾಧ್ಯಮಕ್ಕೆ ತಕ್ಕಂತೆ ಶಿಲ್ಪ ರಚಿಸುವುದನ್ನು ಕಲಿಯಬಹುದೆಂಬುದು ಖ್ಯಾತ ಶಿಲ್ಪಿ ದೇವಲಕುಂದ ವಾದಿರಾಜರ ಅಭಿಪ್ರಾಯವಾಗಿತ್ತು.

ಮುಂದೆ ಗವಿಗಂಗಾಧರೇಶ್ವರ ದೇವಾಲಯ ಬಹುಶಃ ಬೆಂಗಳೂರಿನ ಬಹಳ ಹಳೆಯ ದೇವಾಲಯ ಇದ್ದಿರಬಹುದು. ಬಂಡೆಯನ್ನು ಕೊರೆದು ದೇವಾಲಯ ಮಾಡಿರುವುದು. ಬಹುಶಃ ಬೆಂಗಳೂರಿನ ಬಹಳ ಹಳೆಯ ಹುಟ್ಟು ಬಂಡೆಯಿಂದ ಕೊರೆದ ದೇವಾಲಯವೆಂದು ಡಾ. ವಸಂತಲಕ್ಷ್ಮೀಯವರು 'ಪೂಜೆ ಮತ್ತು ಪ್ರಾರ್ಥನಾ ಕೇಂದ್ರಗಳು' ಎಂಬ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಮುಖ್ಯವಾಗಿ ಅಧ್ಯಯನ ದೃಷ್ಟಿಯಿಂದ ನಾವು ನೋಡಿದ್ದು ಏಕಶಿಲಾರಚನೆಗಳು 10 ಅಡಿ ಎತ್ತರದ ಡಮರು, ತ್ರಿಶೂಲ ಮತ್ತು ಸೂರ್ಯಪಾನವಿರುವ ಕಂಬಗಳು. ಇವೆಲ್ಲದರಲ್ಲೂ ಅತಿ ನವಿರಾದ, ಸುಂದರವಾದ ಬಳ್ಳಿಗಳನ್ನು, ಜಾಗಕ್ಕೆ ತಕ್ಕಂತೆ ಬಸವ, ಸಿಂಹಗಳ ಶಿಲ್ಪಗಳನ್ನು ಬಳಸಿ, ಏಕಶಿಲಾ ಕಂಬಗಳಿಗೆ ಅಪೂರ್ವ ಸೌಂದರ್ಯವನ್ನು ತಂದಿದ್ದಾರೆ.

ಹಲಸೂರಿನ ಸೋಮನಾಥ ದೇವಾಲಯವಂತೂ ಬಹಳ ವಿಸ್ತಾರವಾಗಿದೆ. ಎಲ್ಲ ಕಂಬಗಳಲ್ಲೂ ಉಬ್ಬು ಶಿಲ್ಪಗಳು, ನೃತ್ಯಗಾತಿಯರು, ಬೇಡರು, ಋಷಿಗಳು ಯಾವುದೋ ಸನ್ನಿಧಾನದಲ್ಲಿ ಸೇರಿ ಸುಖಿಸುತ್ತಿರುವಂತಿದೆ. ಬೆಂಗಳೂರಿನಂತಹ ಬೃಹತ್‌ನಗರದಲ್ಲಿ ಇಂದಿಗೂ ಪ್ರಾಚೀನ ಶಿಲ್ಪಗಳು ಉಳಿದಿದ್ದು ನಮ್ಮಂತಹ ಅಧ್ಯಯನಶೀಲರಿಗೆ ಮಾದರಿಯಾಗಿವೆ.

ಇನ್ನು ಸೂರಾಲ್ ವೆಂಕಟರಮಣ ಭಟ್ ಮತ್ತು ರತ್ನಾಭಟ್ ಸೇರಿ ಕನಕಪುರ ರಸ್ತೆಯಲ್ಲಿರುವ 'ಅಗರ'ದಲ್ಲಿ ಒಂದು ಹೊಯ್ಸಳ ಶೈಲಿಯ ದೇವಾಲಯವನ್ನೇ ನಿರ್ಮಿಸಿದ್ದಾರೆ. ಬೆಂಗಳೂರಿನ ಎಲಹಂಕದ ಬಳಿಯ ಸಿ.ಆರ್.ಪಿ.ಎಫ್. ಗಾಗಿ ಮಾಡಿದ ಹೊಯ್ಸಳ ಶೈಲಿಯ ಮಹಾದ್ವಾರವನ್ನು ಅಶೋಕ ಗುಡಿಗಾರ್ ನಿರ್ಮಿಸಿದ್ದಾರೆ. ಮತ್ತು ಜಿ.ಎಲ್.ಭಟ್ ವಾದಿರಾಜರು ಶಿಲ್ಪ ಕಲಿಸಿದ ರೀತಿಯಲ್ಲೇ ಹಲವಾರು ಯುವ ಶಿಲ್ಪಿಗಳಿಗೆ ತರಬೇತಿ ಕೊಟ್ಟಿದ್ದಾರೆ. ಹಾಗೂ ಬಹಳಷ್ಟು ಸಂಖ್ಯೆಯಲ್ಲಿ ಹೊಯ್ಸಳ ವಿಗ್ರಹಗಳನ್ನು ನಿರ್ಮಿಸಿ ದೇಶವಿದೇಶಗಳಿಗೆ ಕಳುಹಿಸುತ್ತಿದ್ದಾರೆ.

31. ಕಾಡುಗೋಡಿಯ ಗಂಗರ ದೇವಾಲಯ

ಶ್ರೀ ಆದಪ್ಪ ಪಾಸೋಡಿ

ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಗೊಳಪಡುವ 'ಕಾಡುಗೋಡಿ' ಗ್ರಾಮವು ಈ ಹಿಂದೆ ಮಹದೇವಪುರ ನಗರಸಭೆಯ ಸರಹದ್ದಿನಲ್ಲಿತ್ತು. ತಾಲ್ಲೂಕು ಕೇಂದ್ರವಾದ ಕೃಷ್ಣರಾಜಪುರದಿಂದ ಸಾದರಮಂಗಲ, ಕುಂಬೇನ ಅಗ್ರಹಾರ ಮಾರ್ಗವಾಗಿ ಅಥವಾ ಬೆಂಗಳೂರಿನಿಂದ ವೈಟ್‌ಫೀಲ್ಡ್, ಹೋಫಾರ್ಮ್ ಮಾರ್ಗವಾಗಿ ಕಾಡುಗೋಡಿ ತಲುಪಬೇಕಾಗುತ್ತದೆ.

'ಕಾಡುಮಂಗಲಂ'[1], 'ಕಾಡಗೊಡಿ ಸ್ಥಳ'[2], ಕಾಡುಗೋಡಿ ಗ್ರಾಮದ ಪೂರ್ವಕ್ಕೆ ಸರ್ವೆ ನಂ. 110ರಲ್ಲಿ (ಸರ್ಕಾರಿ ಧರ್ಮತೋಪು) 'ಕಾಶಿ ವಿಶ್ವೇಶ್ವರ' (ಈಶ್ವರ) ದೇವಾಲಯವಿದೆ.

ಬೆಂಗಳೂರು ನಗರದಲ್ಲಿ 64 ಕಿ.ಮೀ. ಉದ್ದದ ಹೊರವರ್ತುಲ ರಸ್ತೆಯು ಮಾರತ್‌ಹಳ್ಳಿ, ಅಗರ, ಬಿ. ಟಿ. ಎಂ. ಲೇಔಟ್, ಹೆಬ್ಬಾಳ, ಟಿನ್‌ಫಾಕ್ಟರಿ ಮೂಲಕ ಹಾಯ್ದು ಹೋಗುತ್ತದೆ. ಅದರ ನಂತರ ಬರುವ 110 ಕಿ.ಮೀ ಉದ್ದದ ಪೆರಿಫೆರಲ್ ವರ್ತುಲ ರಸ್ತೆಯು ನಗರಕ್ಕೆ ಬರುವ ಎಲ್ಲ ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಮುಖ್ಯ ರಸ್ತೆಗಳನ್ನು ಜೋಡಿಸುವುದಲ್ಲದೆ, ಹೊಸಕೋಟೆ, ವೈಟ್‌ಫೀಲ್ಡ್, ವರ್ತೂರು, ಸರ್ಜಾಪುರ, ಹೊಸೂರು, ಬನ್ನೇರುಘಟ್ಟ, ಕನಕಪುರ, ಮೈಸೂರು, ಮಾಗಡಿ, ತುಮಕೂರು ಮತ್ತು ದೊಡ್ಡಬಳ್ಳಾಪುರ ರಸ್ತೆಗಳನ್ನು ಸಂಪರ್ಕಿಸುತ್ತದೆ. ಅಂದರೆ ಪೆರಿಫೆರಲ್ ವರ್ತುಲ ರಸ್ತೆಯು ಉತ್ತರದಿಂದ ಕೊಡಿಗೇನಹಳ್ಳಿ, ಕೆ. ಆರ್. ಪುರ, ಕಾಡುಗೋಡಿ, ವರ್ತೂರು, ಸಿಂಗಸಂದ್ರ, ಬೇಗೂರು, ಗೊಟ್ಟಿಗೆರೆ, ಉತ್ತರಹಳ್ಳಿ, ಕೆಂಗೇರಿ, ರಾಮಸಂದ್ರ, ಮಾಚೋಹಳ್ಳಿ, ಗಂಗೊಂಡನಹಳ್ಳಿ, ದೊಡ್ಡಬಿದರಕಲ್ಲು, ಬಾಗಲಕುಂಟೆ, ಚಿಕ್ಕಸಂದ್ರ ಮತ್ತು ತಿಂಡ್ಲು ಮಾರ್ಗವಾಗಿ ಹಾಯ್ದು ಹೋಗುತ್ತದೆ.[3] ಈ ರಸ್ತೆ ಅಷ್ಟಪಥವಾಗಿದ್ದು 58–60 ಮೀಟರು ಅಗಲವಾಗಿರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಹತ್ತರವಾದ ಈ ರಸ್ತೆಯೋಜನೆಯ ಸರ್ವೇ ಕೆಲಸ ಮುಗಿದು ಗುರುತು ಕಲ್ಲುಗಳನ್ನು ಹಾಕಲಾಗಿದೆ. ಇತಿಹಾಸ ಪ್ರಸಿದ್ಧ ಗಂಗರ ದೇವಾಲಯಕ್ಕೆ ತೀರ ಹತ್ತಿರದಲ್ಲಿರುವ ಪೆರಿಫೆರಲ್ ಸರ್ವೀಸ್ ರಸ್ತೆಯಿಂದ ಅಪಾಯವಿರುತ್ತದೆ. ಉದಾ: ಹೊರವರ್ತುಲ ರಸ್ತೆಯಲ್ಲಿ ಅರ್ಧ ಭಾಗ ಮುಚ್ಚಿಹೋಗಿರುವ ಇಬ್ಬಲೂರು ವೀರಗಲ್ಲು. ಒಂದೆಡೆ ಶಿಥಿಲಾವಸ್ಥೆಯ ಕಾರಣದಿಂದ ಬಿದ್ದು ಹೋಗುತ್ತಿರುವ ಭಾಗಗಳು ಇನ್ನೊಂದೆಡೆ ಪೆರಿಫೆರಲ್ ವರ್ತುಲ ರಸ್ತೆಯಿಂದ ಆತಂಕ ಎದುರಿಸುತ್ತಿರುವ ಕಾಡುಗೋಡಿ ಈಶ್ವರ ದೇವಾಲಯದ ಪ್ರಾಕಾರ ಪರಿವಾರ ದೇವರು, ತಲವಿನ್ಯಾಸ, ಅಧಿಷ್ಠಾನ, ಭಿತ್ತಿ, ಅಂತರಾಳ, ಕಂಬಮಾದರಿ, ಗರ್ಭಗೃಹ ಹಾಗೂ ಅಲ್ಲಿರುವ ಮೂರ್ತಿಶಿಲ್ಪಗಳ ಮಾಹಿತಿಯನ್ನು ದಾಖಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

'ಕಾಡುಗೋಡಿ', 'ಕಾಡುಗುಡಿ' ಎಂದು ಕರೆಯಲ್ಪಡುವ ಸ್ಥಳನಾಮವನ್ನು ವಿಶ್ಲೇಷಿಸುವುದು ಅನಿವಾರ್ಯವೆನಿಸುತ್ತದೆ. ಸಾಮಾನ್ಯವಾಗಿ ಸ್ಥಳನಾಮಗಳು ಕೂಡುನುಡಿಗಳು. ಇದರಲ್ಲಿ ಪೂರ್ವಭಾಗವು ವಿಶಿಷ್ಟವಾದ ನಿರ್ದಿಷ್ಟ ಲಕ್ಷಣವನ್ನು ಸೂಚಿಸುವ ನಿರ್ದಿಷ್ಟ ಅಕೃತಿಮ, ಉತ್ತರ ಭಾಗವು ಹೆಸರಿನ ಸಾಮಾನ್ಯ ವರ್ಗವನ್ನು, ಪ್ರತಿನಿಧಿಸುವ ವಾರ್ಗಿಕ ಆಕೃತಿಮವೆಂದು ಕರೆಯಲ್ಪಡುತ್ತದೆ.[5] ಗ್ರಾಮಗಳಿಗೆ ಹೆಸರಿಡುತ್ತ ಬಂದ ಇತಿಹಾಸದಲ್ಲಿ ಸಾಮಾನ್ಯವಾಗಿ ಪ್ರಕೃತಿ ನಾಮಸೂಚಿ ಆಮೇಲೆ ಜನಾಂಗನಾಮಸೂಚಿ ತದನಂತರ ವ್ಯಕ್ತಿನಾಮಸೂಚಿ ಧೋರಣೆಗಳು ಕಂಡುಬರುತ್ತವೆ.[6]

'ಗೋಡು' ಇದು ಒಂದು ಬಗೆಯ ಮಣ್ಣು, ಕೆರೆ, ಬಾವಿ, ಕೊಳ ಮುಂತಾದವುಗಳಿಂದ ತೆಗೆದುಹಾಕಿರುವ ಸಾರವತ್ತಾದ ಹೂಳುಮಣ್ಣು.[9] 'ಗೋಡುನೆಲ'ವೂ ಮೆಕ್ಕಲು ಮಣ್ಣಿನಿಂದ ಕೂಡಿದ ಫಲವತ್ತಾದ ಭೂಮಿಯಾಗಿರುತ್ತದೆ.[10] ಬಹುಶಃ ಕಾಡಿನ ಅಂಚಿನಲ್ಲಿರುವ ಫಲವತ್ತಾದ ಗೋಡು ಪ್ರದೇಶದಿಂದಾಗಿ 'ಕಾಡುಗೋಡು' ಎಂದು ಕರೆಯಲ್ಪಟ್ಟು 'ಕಾಡುಗೋಡಿ' ಆಗಿರುವ ಸಾಧ್ಯತೆಯೂ ಇಲ್ಲದಿಲ್ಲ.

ಬೆಂಗಳೂರು ಪರಿಸರದಲ್ಲಿರುವ ಕಮ್ಮಸಂದ್ರದ ಸೋಮೇಶ್ವರ ದೇವಾಲಯ, ಬೇಗೂರಿನ ಸೋಮನಾಥ, ಮಡಿವಾಳದ ಸೋಮೇಶ್ವರ, ಮಣ್ಣೆಯ ಶಾಸನೋಕ್ತ ಸೋಮೇಶ್ವರ ಹಾಗೂ ಯಲಹಂಕದ ಅಳ್ಳಳ್ಳಪ್ಪನ ಏಕತಳದ ಶಿಲಾ ದೇವಾಲಯಗಳು ಗಂಗರ ದೇವಾಲಯಗಳೆಂದು ಡಾ. ದೇವರಕೊಂಡಾರೆಡ್ಡಿರವರು ಉಲ್ಲೇಖಿಸಿದ್ದಾರೆ. ಬೆಂಗಳೂರು ಪೂರ್ವ ತಾಲ್ಲೂಕಿನ ಜ್ಯೋತಿಪುರ ಗ್ರಾಮದ ಹೊರವಲಯದಲ್ಲಿರುವ ಶಿಥಿಲಾವಸ್ಥೆಯ ಸೋಮೇಶ್ವರ ಹಾಗೂ ಕಾಡುಗೋಡಿಯ ಕಾಶಿ ವಿಶ್ವೇಶ್ವರ (ಈಶ್ವರ) ದೇವಾಲಯಗಳು ಈ ಪಟ್ಟಿಗೆ ಸೇರುತ್ತವೆ. ಕಾರಣ ಇವು ಗಂಗರ ದೇವಾಲಯಗಳನ್ನು ಗುರುತಿಸುವ ಪ್ರಮುಖ ಲಕ್ಷಣಗಳನ್ನು ಹೊಂದಿವೆ. ಅಂದರೆ ದೇವಾಲಯಗಳ ಅಗಲ ಮತ್ತು ಉದ್ದ ಕಡಿಮೆಯಿದ್ದು ಚಿಕ್ಕದಾಗಿರುವುದು. ಚಿಕ್ಕ ಗರ್ಭಗೃಹ, ಕಡಿಮೆ ಎತ್ತರ, ಕಡಿಮೆ ಎತ್ತರದ ಬಾಗಿಲು, ಕಡಿಮೆ ಅಲಂಕಾರ, ಬಹುತೇಕ ಊರ ಹೊರಗೆ ಇರುವುದು ಹಾಗೂ ಇವುಗಳ ಪ್ರಾಚೀನತೆಯನ್ನು ಗುರುತಿಸುವಲ್ಲಿ ಚೋಳರು ಪ್ರತಿಷ್ಠೆ ಮಾಡಿದ್ದರೆಂದು ಗುರುತಿಸುವುದು. ಕ್ರಿ. ಶ. 997 ರಿಂದ 1000 ವರೆಗಿನ ಅವಧಿಯಲ್ಲಿ ಚೋಳರ ಆಕ್ರಮಣ ನಡೆದಿದ್ದು, ಶೈವ-ವೈಷ್ಣವ-ಜೈನ ಎಂಬ ಭೇದಭಾವವಿಲ್ಲದೆ ಎಲ್ಲ ದೇವಾಲಯಗಳನ್ನು ಪ್ರಾಯಶಃ 'ಕಾಡುಗೋಡಿ' ಇದು ಪ್ರಕೃತಿ ನಾಮಸೂಚಿಯಾಗಿದೆ. ಅಂದರೆ ನಾಮವಿಜ್ಞಾನದ 'Microtoponomy' ಮತ್ತು 'Hydronymy' ಶಾಖೆಗಳು ಇಲ್ಲಿ ಮೇಳೈಸಿವೆ. ಮೂರನೆಯ ಹೊಯ್ಸಳ ವೀರಬಲ್ಲಾಳ ದೊರೆಯ ಕ್ರಿ. ಶ. 1342ರ ಪಟ್ಟಂದೂರು ಶಾಸನವು 'ಶ್ರೀ ಮನುಮಹಾ ಸಣ್ಣೆನಾಡ ತೆಂಕಣ ಬಾಗೆಯ ತೊರೆವಳ ವಿತ್ತಿಯ ಕಾಡುಗೋಡಿ ಸ್ಥಳ' ಎಂದು ಉಲ್ಲೇಖಿಸುವುದರಿಂದ ಕಾಡಿನ + ಗುಡಿ = ಕಾಡುಗುಡಿ ಎಂಬ ಅರ್ಥವು ತನ್ನ ಮಹತ್ವ ಕಳೆದುಕೊಂಡು 'ಕಾಡುಗೋಡಿ' ಅಥವಾ 'ಕಾಡುಗೊಡಿ' ಸ್ಥಳನಾಮಗಟ್ಟಿಗೊಳ್ಳುತ್ತದೆ. 'ಕಾಡಿನ ಕೋಡಿ' ಯೇ ಸ್ಥಳನಾಮದ ಉದಯಕ್ಕೆ ಕಾರಣವಾಗಿದೆಯೆನ್ನಬಹುದು. 'ಕಾಡು' ಪದವನ್ನು ಅಡವಿ ಅಥವಾ ಹೊಲ ಎಂದೂ; 'ಕೋಡಿ' ಯು ಕೆರೆಕಟ್ಟೆಗಳಲ್ಲಿ ಹೆಚ್ಚಿನ ನೀರು ಹರಿದುಹೋಗಲು ಮಾಡಿರುವ ದಾರಿಯಾಗಿಯೂ ಅರ್ಥ ಕೊಡುತ್ತದೆ.[8] ಭೌಗೋಳಿಕವಾಗಿ ಈಗಲೂ ಗ್ರಾಮದ ಉತ್ತರದಿಂದ ಈಶಾನ್ಯಕ್ಕೆ ಅಡವಿಯಲ್ಲಿ ಕೆರೆ ಕೋಡಿ ಇದೆ.

ಗ್ರಾಮದಾನದ ಇನ್ನೊಂದು ಹಾದಿ ಹಿಡಿದು ಹೊರಟರೆ, ಕಾಡುಗೋಡಿ>ಕಾಡುಗೋಡಿ ಆಗಿರುವ ಸಾಧ್ಯತೆಯೂ ಇದೆ. ಲೂಟಿ ಮಾಡಿ ಮುಂದೆ ಹಲವಾರು ವರ್ಷಗಳ ಕಾಲ ಪೂಜಾ ಕೈಂಕರ್ಯಗಳು ನಡೆಯದಂತೆ ಸುಮಾರು ಸ್ಥಗಿತವಾಗಿರಬೇಕು. ಸುಮಾರು 40-50 ವರ್ಷಗಳ ನಂತರದಲ್ಲಿ ಜೀರ್ಣೋದ್ಧಾರ ಹೊಂದಿ, ಪೂಜೆ-ಪುನಸ್ಕಾರಗಳಿಗೆ ಚೋಳರೇ ವ್ಯವಸ್ಥೆ ಮಾಡಿರುವುದು ಕಂಡುಬರುತ್ತದೆ. ಹಾಗಾಗಿ ಅನೇಕ ಪ್ರಾಚೀನ ಗಂಗರ ದೇವಾಲಯಗಳನ್ನು ಜನಬಳಕೆಯಲ್ಲಿ 'ಚೋಳ ಪ್ರತಿಷ್ಠೆ' ಎಂದು ಕರೆದಿರುವಂತೆ ಕಾಣುತ್ತದೆ. ಅಂಥ ಸಂದರ್ಭದಲ್ಲಿ ಅರ್ಚಕರೂ ತಮಿಳುನಾಡಿನಿಂದ ಬಂದಿರಬಹುದು. ಉದಾ: ಕಾಡುಗೋಡಿ ಈಶ್ವರ ದೇವಸ್ಥಾನದ ಅರ್ಚಕರಾದ ನರಸಿಂಹ ದೀಕ್ಷಿತ್‌ರು ತಮ್ಮ ಪೂರ್ವಜರು (ಶಿಖಾಮಣಿ ದೀಕ್ಷಿತ್?) ತಮಿಳುನಾಡಿನಿಂದ ಬಂದವರು ಎಂದು ಸ್ಪಷ್ಟಪಡಿಸುತ್ತಾರೆ.

ಕಾಡುಗೋಡಿಯ ಕಾಶಿ ವಿಶ್ವೇಶ್ವರ ದೇವಾಲಯವು ಅಧಿಷ್ಠಾನಸಹಿತವಾಗಿದೆ. ಏಕಾಂತ ಪ್ರದೇಶದ ಸಹಜ ನೀರಿನ ಆಸರೆಯ ಸ್ಥಳದಲ್ಲಿ (ಕೆರೆ ಕೋಡಿ ಮತ್ತು ಪಿನಾಕಿನಿ ದಂಡೆ ನಿರ್ಮಿತವಾಗಿದ್ದು ಪೂರ್ವಾಭಿಮುಖವಾಗಿದೆ.

ಅಧಿಷ್ಠಾನ: ಕಾಶಿವಿಶ್ವೇಶ್ವರ ದೇವಾಲಯಕ್ಕೆ ಸರಳವಾದ ಪಾದಬಂಧ ಅಧಿಷ್ಠಾನವಿದ್ದು, ಜಗತಿ, ತ್ರಿಪಟ್ಟಕುಮುದ, ಗಳ ಮತ್ತು ಅದರಲ್ಲಿ ಗಳಪಾದ–ಪಟ್ಟಿಗಳು ಬಂದಿರುತ್ತವೆ. ನೆಲಮಟ್ಟದಿಂದ 2'8" ಎತ್ತರದ ಅಧಿಷ್ಠಾನವಿದೆ. ಕಪೋತ ಭಾಗದಲ್ಲಿ ಯಾವುದೇ ಅಲಂಕಾರಗಳಿಲ್ಲ. ಹುನ್ಕುಂದದ ಸೋಮೇಶ್ವರ, ಬೇಗೂರಿನ ನಗರೇಶ್ವರ ದೇವಾಲಯಗಳಲ್ಲೂ ಇಂತಹ ಅಧಿಷ್ಠಾನಗಳಿರುತ್ತವೆ. ಇವು ತಮ್ಮ ಸಮಕಾಲೀನರಾದ ಚಾಲುಕ್ಯರಿಂದಾಗಲಿ, ಪಲ್ಲವರಿಂದಾಗಲಿ ಪೂರ್ಣ ಪ್ರಭಾವಿತರಾಗದೆ, ಸ್ಥಳೀಯವಾಗಿ ಲಭ್ಯವಿರುವ ವಾಸ್ತುಪ್ರಕಾರ ಬಳಸಿರುವುದು ಕಂಡುಬರುತ್ತದೆ. ದೇವಾಲಯದ ಬಲಪಕ್ಕದ ಜಗತಿಯ ಮೇಲೆ ಹಸು ಪಶ್ಚಿಮಕ್ಕೆ ಮುಖ ಮಾಡಿದ್ದು ಅದರ ಮುಂದೆ ಕರುವಿನ (ಚಿಕಣಿ) ಶಿಲ್ಪ ಕೆತ್ತಲಾಗಿದೆ.

ಬಿತ್ತಿ: ಅಧಿಷ್ಠಾನದ ಮೇಲೆ ಬರುವ ಭಾಗವೇ ಭಿತ್ತಿ (ಗೋಡೆ) ಯಾಗಿದ್ದು, ಇದು ಶಿಲಾನಿರ್ಮಿತಿಯಾಗಿರುವುರಿಂದ ಸುಸ್ಥಿತಿಯಲ್ಲಿದೆ. ನವರಂಗ ಮಂಟಪದ ದಕ್ಷಿಣದ ಹೊರಭಿತ್ತಿಯ ಮೇಲೆ ದೇವಕೋಷ್ಠದಲ್ಲಿ ಹಾವಿನ ಬಾಲವನ್ನು ಬಲಗೈಯಿಂದ ಹಿಡಿದು ಮೇಲೆತ್ತಿ ಹೆಡೆಯ ಮೇಲೆ ನೃತ್ಯ ಮಾಡುತ್ತಿರುವ ಕಾಳಿಂಗ ಮರ್ದನನ ಉಬ್ಬುಶಿಲ್ಪ ಸುಂದರವಾಗಿದೆ. ಅಂತರಾಳದ ದಕ್ಷಿಣ ಹೊರಭಿತ್ತಿಯಲ್ಲಿ ಅಂಜಲಿ ಭಂಗಿ (ಎರಡೂ ಕೈ ಮುಗಿದು ನಿಂತಿರುವ) ಸ್ತ್ರೀಯ ಉಬ್ಬುಶಿಲ್ಪವಿದೆ. ಸ್ತ್ರೀಯ ಇಕ್ಕೆಲಗಳಲ್ಲಿ ಸಸ್ಯ ಹಾಗೂ ಕೆಳಗೆ ಇಬ್ಬರು ವ್ಯಕ್ತಿಗಳನ್ನು ಕುಳ್ಳಿರಿಸಿರುವಂತೆ ತೋರಿಸಲಾಗಿದೆ. ಗರ್ಭಗೃಹದ ದಕ್ಷಿಣ ಹೊರಭಿತ್ತಿಯಲ್ಲಿ ನಟರಾಜ (ಜಟಾಧರ) ತನ್ನ ಬಲಗಾಲನ್ನು ಪುರುಷನ ಮೇಲಿರಿಸಿ ನೃತ್ಯ ಸ್ಥಿತಿಯಲ್ಲಿರುವನು. ಗರ್ಭಗೃಹದ ಹಿಂಭಾಗದ ಭಿತ್ತಿಯ ದೇವಕೋಷ್ಠದಲ್ಲಿ ಚಂದ್ರಶೇಖರಮೂರ್ತಿಯ ಉಬ್ಬುಶಿಲ್ಪವಿದೆ. ಒಂದು ಬಲಗೈಯಲ್ಲಿ ಡಮರುಗ, ಇನ್ನೊಂದು ಬಲಗೈ ಅಭಯ ಸ್ಥಿತಿ, ಎಡಗೈ ಕಟಿಹಸ್ತ, ಇನ್ನೊಂದು ಎಡಗೈಯಲ್ಲಿ ಹೂವು ಹಿಡಿದಿರುವಂತಿದೆ. ಗರ್ಭಗೃಹದ ಎಡಭಾಗದಲ್ಲಿ ಉತ್ತರದ ಭಿತ್ತಿಯ ದೇವಕೋಷ್ಠದಲ್ಲಿ ಕಂಕಾಳಮೂರ್ತಿಯ ಉಬ್ಬುಶಿಲ್ಪ ತ್ರಿಭಂಗಿಯಲ್ಲಿರುತ್ತದೆ. ನಾಲ್ಕು ಕೈಗಳನ್ನು ತೋರಿಸಲಾಗಿದೆ. ಬಲಗೈಯಲ್ಲಿ ಡಮರುಗ ಇದೆ. ಗರ್ಭಗೃಹದ ಎಡಭಾಗದಲ್ಲಿ ಉತ್ತರಕ್ಕೆ ಅಂತರಾಳದ ಹೊರಭಿತ್ತಿಯಲ್ಲಿ ವೃಷಭಾರೂಢ ಉಮಾ ಮಹೇಶ್ವರನಿದ್ದಾನೆ. ಹಿನ್ನೆಲೆಯಲ್ಲಿ ಮರವನ್ನು ತೋರಿಸಿದೆ. ಆದರೆ ಬೇಗೂರಿನ ನಾಗೇಶ್ವರ ದೇವಾಲಯದ ನವರಂಗದ ಛತ್ತಿನಲ್ಲಿ ಉಮಾಮಹೇಶ್ವರ ಶಿಲ್ಪವಿದೆ. ನವರಂಗ ಮಂಟಪದ ಎಡಭಾಗದಲ್ಲಿ ಉತ್ತರಕ್ಕೆ ಭಿತ್ತಿಯಲ್ಲಿರುವ ಸಂಹಾರ ಮೂರ್ತಿಯು ಎಡಗಾಲನ್ನು ಬಲಗಾಲಿನ ಮೊಣಕಾಲ ಮೇಲಿಟ್ಟು, ಬಲಗಾಲೊಂದರ ಮೇಲೆಯೇ ನಿಂತಿರುವಂತಿದೆ. ಒಂದು ಬಲಗೈ, ಒಂದು ಎಡಗೈ ಮೇಲಕ್ಕೆತ್ತಿ ಇನ್ನೊಂದು ಬಲಗೈಯಲ್ಲಿ ಉದ್ದನೆಯ ತ್ರಿಶೂಲ ಇರುತ್ತದೆ.

ಭಿತ್ತಿಯಲ್ಲಿ ಉಬ್ಬು ಕಂಬಗಳನ್ನು ಬಿಡಿಸಿರುತ್ತಾರೆ. ಸಾಮಾನ್ಯವಾಗಿ ದಪ್ಪ ದಪ್ಪ ಕಲ್ಲು ಚಪ್ಪಡಿಗಳನ್ನು ಜೋಡಿಸಿ ಅನಂತರ ಉಬ್ಬು ಕಂಬಗಳನ್ನು ಬಿಡಿಸುತ್ತಿದ್ದಿರಬೇಕು. ಇಲ್ಲವೆ ಅರೆ ಬರೆಯಾಗಿ ಉಬ್ಬು ಕಂಬಗಳನ್ನು ಚಪ್ಪಡಿಯಲ್ಲಿ ಬಿಡಿಸಿ ದೇವಾಲಯದ ಭಾಗಗಳಿಗೆ ಜೋಡಿಸಿದ ನಂತರ ಪೂರ್ಣವಾಗಿ ಕೆತ್ತುತ್ತಿದ್ದಿರಬೇಕು. ಒಟ್ಟಾರೆ ಭಿತ್ತಿಭಾಗವು 4'6" ಎತ್ತರ ಮಾತ್ರ ಇದ್ದು, ಮಟ್ಟಸವಾಗಿರುತ್ತದೆ.

ವ್ಯಾಳವಾರಿ: ಈ ಭಾಗವು ಕಟ್ಟಕಡೆಯ (ಅಂತಿಮ) ಹಂತವಾಗಿರುವುದರಿಂದ, ಕಲ್ಲಿನ ಹೊರ ಅಂಚುಗಳು ಬೋಳಾಗಿ ಕಾಣಬಾರದೆಂದು ಸಿಂಹಗಳನ್ನು ಸಾಲಾಗಿ ಒಂದರ ಹಿಂದೆ ಬಂದಂತೆ ಬಿಡಿಸಲಾಗಿದೆ. ಇಲ್ಲಿಯ ಸಿಂಹಗಳು ಬಲಗಾಲು ಎತ್ತಿ ಮುಂದೆ ಸಾಗುತ್ತಿರುವುದನ್ನು ಸುಂದರವಾಗಿ ಕೆತ್ತಲಾಗಿದೆ. ಎಲ್ಲ ಸಿಂಹಶಿಲ್ಪಗಳಲ್ಲಿ ಬಾಲವನ್ನು ಮೇಲಕ್ಕೆತ್ತಿದಂತೆ ಕಂಡರಿಸಲಾಗಿದೆ. ಪ್ರಸಕ್ತ ಮಳೆ ಬಿಸಿಲಿನಿಂದ ಸಿಂಹಶಿಲ್ಪಗಳು ಸವಕಳಿಯಾಗಿರುತ್ತವೆ. ದೇವಾಲಯದ ಬಲಗಡೆಯಿಂದ ಆರಂಭವಾದ ವ್ಯಾಳವಾರಿ ಕ್ರಮ ಎಡಭಾಗಕ್ಕೆ ಮುಂದುವರೆದಿದೆ.

ಶಿಖರ: ಇದು ಏಕತಳ ದೇವಾಲಯವಾಗಿರುವುದರಿಂದ ಕಪೋತದ ಮೇಲಿನ ಭಾಗಕ್ಕೆ ಛಾವಣಿ ಹಾಕಿ ಕೊನೆ ಮಾಡಲಾಗಿದೆ. ಇಂತಹ ಮಟ್ಟಸ ಛಾವಣಿಯ ದೇವಾಲಯಗಳನ್ನು ಮುಂಡಮಾಲಾ ಎಂದು ಕರೆಯುತ್ತಾರೆ.[11] ಕೆಲವೊಮ್ಮೆ ಇಂತಹ ಮುಂಡಮಾಲ ದೇವಾಲಯಕ್ಕೆ ಮೇಲೆ ಶಿಖರ ನಿರ್ಮಿಸಿರುವ ಉದಾಹರಣೆಗಳೂ ಇವೆ. ಕಾಡುಗೋಡಿಯ ಈಶ್ವರ ದೇವಾಲಯದ ಮುಂಡಮಾಲಾದ ಮೇಲೆ ಗಾರೆಯ ಕಳಶವನ್ನು ಸ್ಥಾಪಿಸಲಾಗಿದೆ. ಸದ್ಯಕ್ಕೆ ಇದೂ ತ್ರುಟಿತವಾಗಿದೆ. 'The Shikhara over the garbhagriha has totally fallen now'[12] ಎಂಬ ಮಾತು ಹಿಂದಿನದಾಗಿದೆ.

ಮುಖಮಂಟಪ: ಗಂಗರ ದೇವಾಲಯಗಳಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗ ಮಂಟಪಗಳು ಮಾತ್ರ ಕಾಣಬರುತ್ತವೆ. ಕಾಡುಗೋಡಿಯಲ್ಲೂ ಈ ಮೂರು ಭಾಗಗಳು ಇದ್ದು, ನಂತರದ ಅವಧಿಯಲ್ಲಿ ಮುಖಮುಂಪಟ ಕಟ್ಟಿಸಲಾಗಿದೆ. 12'x12' ಅಳತೆಯ ಮುಖಮಂಟಪದಲ್ಲಿ ನಾಲ್ಕು ಚೌಕಾಕಾರದ ಪೂರ್ಣಕಂಬಗಳಿರುತ್ತವೆ. ಇವುಗಳ ಅಳತೆ ಗಾತ್ರದಲ್ಲಿ ಸಾಮ್ಯತೆ ಇರುವುದಿಲ್ಲ. ಛತ್ತಿಗೆ 5 ಕಲ್ಲುಚಪ್ಪಡಿಗಳನ್ನು ಹೊದಿಸಲಾಗಿದೆ. ಎಡಭಾಗದ ಕಂಬದ ಮೇಲೆ ಶಿವಲಿಂಗದ ಚಿತ್ರ ಕಂಡರಿಸಲಾಗಿದೆ.

ನವರಂಗ ಮಂಟಪ: ನವರಂಗದ ಪ್ರವೇಶದ್ವಾರ ತೀರ ಕಿರಿದಾಗಿರುತ್ತದೆ. ದ್ವಾರಶಾಖೆಯ ಹಣೆಪಟ್ಟಿಯಲ್ಲಿ ಗಜಲಕ್ಷ್ಮಿಯನ್ನು ಹಾಗೂ ದ್ವಾರದ ಎಡಬಲಕ್ಕೆ ತ್ರಿಭಂಗಿಯಲ್ಲಿರುವ ದ್ವಾರಪಾಲಕರನ್ನು ತೋರಿಸಲಾಗಿದೆ. ಇವರಿಗೆ ನಾಲ್ಕು ಕೈಗಳಿರುತ್ತವೆ. ಒಂದು ಬಲಗೈ ಅಭಯ, ಇನ್ನೊಂದು ಬಲಗೈಯಲ್ಲಿ ಹೂವಿನ ಪೊಕಳೆ, ಎಡಗೈಯಲ್ಲಿ ಖಡ್ಗವನ್ನು ಕೊಟ್ಟು, ನೆಲಕ್ಕೆ ತಾಕಿಸಿಡಲಾಗಿದೆ. ಇನ್ನೊಂದು ಎಡಗೈ ಮೇಲಕ್ಕೆತ್ತಲಾಗಿದೆ. 10'5 x12' ವಿಸ್ತೀರ್ಣದ ನವರಂಗ ಮಂಟಪವು ಅಲಂಕಾರರ ಹಿತವಾಗಿದ್ದು, ಮಧ್ಯಭಾಗದಲ್ಲಿ ವೇದಿಕೆ ಇರುವುದಿಲ್ಲ. ಛತ್ತಿನಲ್ಲಿ ಕಮಲ ದಳಗಳ ಅಲಂಕಾರವಿರುತ್ತದೆ. ಇಲ್ಲಿ ಮಧ್ಯದ ನಾಲ್ಕು ಕಂಬಗಳು ಪ್ರಧಾನವಾಗಿದ್ದು, ಪಿಂಡಿಯಿಂದ ಕಂಠದವರೆಗೆ 4'4" ಎತ್ತರವಾಗಿರುತ್ತವೆ. ಶಲಾಕದ ಮೇಲ್ಭಾಗದಲ್ಲಿ ಮಾಲಾಲಂಕಾರವಿದ್ದು ಈ ಭಾಗದ ಸುತ್ತಳತೆ 2'8" ಇರುತ್ತದೆ. ಕಂಬಗಳ ಮೇಲೆ ಉದ್ದ ಮತ್ತು ಅಡ್ಡ ತೊಲೆಗಳು ಬಂದಿರುವುದರಿಂದ ಛತ್ತಿನಲ್ಲಿ ಒಂಭತ್ತು ಸಮಭಾಗಗಳ ವಿಂಗಡಣೆ ಕಾಣಬಹುದು. ನವರಂಗಮಂಟಪದ ಸುತ್ತು ಗೋಡೆಯಲ್ಲಿನ 12 ಕಂಬಗಳು ಅರ್ಧ ಮಾತ್ರ ಹೊರಗೆ ಕಾಣುವಂತಿದ್ದು, ಉಳಿದು ಅರ್ಧ ಭಾಗ ಗೋಡೆಯೊಳಗೆ, ದೇವಾಲಯದ ಮೇಲ್ಛಾವಣಿಯ ಭಾರ ಹೊತ್ತಿರುತ್ತವೆ. ಕಂಬಗಳ ಮುಚ್ಚಳದ ಕಂಠದ ಮೇಲೆ ಸರಳ ಬೋದಿಗೆಗಳಿದ್ದು, ತಳಭಾಗದಿಂದ ಮೇಲಕ್ಕೆ ಇಳಿಜಾರಾಗಿ ಮುಂಚಾಚಿರುತ್ತವೆ. ಅನಂತರ ಮೇಲಕ್ಕೆ ನೇರವಾಗಿ ಸಾಗುತ್ತವೆ. ವ್ಯಾಪಕ ಬಳಕೆ ದೃಷ್ಟಿಯಿಂದ ಇಂತಹ ಸರಳ ಬೋದಿಗೆಗಳನ್ನು ಗಂಗರ ಕೊಡುಗೆಗಳೆಂದು ಹೇಳಬೇಕಾಗುತ್ತದೆ. ಗಂಗರ ನಂತರದಲ್ಲಿ ಬಂದ ಅರಸರು ಬೋದಿಗೆಯ ಮಧ್ಯದಲ್ಲಿ ಸೀಳುಗಳನ್ನು ಪರಿಚಯಿಸಿದ್ದಾರೆ. ಅಂದರೆ ಸಪಾಟಾದ ಸರಳ ಬೋದಿಗೆ ಬಳಸಿದವರಲ್ಲಿ ಗಂಗರೇ ಪ್ರಸಿದ್ಧರು.[13]

ಸಪ್ತಮಾತೃಕೆಯರು: ನವರಂಗ ಮಂಟಪದಲ್ಲಿ ಉತ್ತರಾಭಿಮುಖವಾಗಿ ಸಪ್ತಮಾತೃಕೆಯರ ಶಿಲಾಫಲಕ ಪ್ರತಿಷ್ಠಾಪಿಸಲಾಗಿದೆ. ಆರು ದೇವತೆಗಳು ಮಾತ್ರ ಇದ್ದು, ಇಂದ್ರಾಣಿ ಶಿಲ್ಪ ಒಡೆದು ಹೋಗಿರುವ ಸಾಧ್ಯತೆ ಇದೆ. ಎಲ್ಲ ಆರು ದೇವಿಯರು ಬಲಪಾದವನ್ನು ಇಳಿಬಿಟ್ಟು ಕುಳಿತಿದ್ದಾರೆ. ಚತುರ್ಬಾಹುಗಳಿದ್ದು, ಅಭಯ-ಚಕ್ರ-ಶಂಖ ಹಾಗೂ ಎಡೆ ತೊಡೆ ಮೇಲೆ ಆರಾಮ ಹಸ್ತ ತೋರಿಸಲಾಗಿದೆ. ಸಾಮಾನ್ಯವಾಗಿ ಸಪ್ತಮಾತೃಕಾ ಶಿಲ್ಪಗಳು ಅಥವಾ ಗುಡಿಗಳು ಕೆರೆಯ ದಂಡೆಯಲ್ಲಿ ಕಾಣಬರುತ್ತವೆ ಎಂಬುದು ಇಲ್ಲಿಯೂ ಅನ್ವಯವಾಗುತ್ತದೆ. ಕಾಡುಗೋಡಿ ದೇವಾಲಯದ ಸಪ್ತಮಾತೃಕೆಯರ ಪೀಠಗಳಲ್ಲಿ ವಾಹನ ಬಿಡಿಸಿರುವುದಿಲ್ಲ. ವಾರಾಹಿ ಬಿಂಬ ಸ್ಪಷ್ಟವಾಗಿದೆ.

ಸಪ್ತಮಾತೃಕೆಯರ ಪ್ರತೀಕವಾಗಿ ಕರ್ನಾಟಕದ ಉತ್ತರ ಭಾಗದ ಜಿಲ್ಲೆಗಳಲ್ಲಿ 'ಏಳು ಮಕ್ಕಳ ತಾಯಿ' ಎಂದು ಕರೆಯಲ್ಪಡುವ ಏಳು ಕಲ್ಲುಗಳು ಅಲ್ಲಿಲ್ಲಿ ಕಂಡುಬರುತ್ತವೆ.

ವಿಷ್ಣು: 2'1" ಎತ್ತರ ಹಾಗೂ 1 ಅಡಿ ಅಗಲವಿರುವ ಕಪ್ಪು ಶಿಲೆಯಲ್ಲಿ ಕಾಣಿಸಿರುವ ವಿಷ್ಣುವಿನ ಎಡ ಕೆಳಗೈಯಲ್ಲಿ ಗದೆ, ಎಡಮೇಲುಗೈಯಲ್ಲಿ ಶಂಖ, ಬಲಮೇಲಗೈಯಲ್ಲಿ ಚಕ್ರ, ಬಲ ಕೆಳಗೈ ಅಭಯ ಮುದ್ರೆಯಲ್ಲಿರುತ್ತವೆ. ಸರ್ವಾಭರಣಗಳಿದ್ದು, ಕಿರೀಟ ಮುಕುಟ ತೋರಿಸಲಾಗಿದೆ. ಶಿಲೆಯ ಆಕಾರಕ್ಕೆ ಹೊಂದಿಸಿ ಶಿಲ್ಪವನ್ನು ಕಂಡರಿಸಲಾಗಿದೆ. ಈಗ ಉತ್ತರ ದಿಕ್ಕಿಗೆ ಮುಖಮಾಡಿ ಇಡಲಾಗಿದೆ.

ಗಣಪತಿ: ಶಿವನ ಪಂಚಾಯತನದಲ್ಲಿ ಬರುವ ವಿಗ್ರಹಗಳಲ್ಲಿ ಗಣಪತಿಯದೂ ಒಂದು. ಕಾಡುಗೋಡಿಯಲ್ಲಿರುವ ಎಡಮುರಿ ಗಣಪತಿ ಶಿಲ್ಪ ಪೂರ್ವಾಭಿಮುಖವಿದ್ದು, ಹುಸ್ಕುಂದದಲ್ಲಿರುವಂತೆ ಪ್ರಾಚೀನವಾದುದಾಗಿದೆ. ಹೆಚ್ಚಿನ ಅಲಂಕಾರಗಳಿರುವುದಿಲ್ಲ.

ಷಣ್ಮುಖ: ಗಂಗರ ದೇವಾಲಯಗಳಲ್ಲಿ ಸ್ಕಂದ ಅಥವಾ ಷಣ್ಮುಖನ ವಿಗ್ರಹಗಳು ದೊರೆಯುವುದು ಅಪರೂಪ. ಆದರೆ ಇಲ್ಲೆ ಕಾಡುಗೋಡಿ ವಿಶ್ವೇಶ್ವರ, ದೇವಾಲಯದಲ್ಲಿ ಅಂತರಾಳ ದ್ವಾರದ ಬಲಕ್ಕೆ 2' 2" ಎತ್ತರ 1' 6" ಅಗಲದ ಕಪ್ಪು ಶಿಲೆಯಲ್ಲಿ ಅಭಯಹಸ್ತದ ಷಣ್ಮುಖನಿದ್ದಾನೆ. ಆಪಮಾಲೆ ತೋರಿಸಲಾಗಿದೆ. ಮೂರು ಮುಖಗಳಿರುತ್ತವೆ. ಇಂತಹದೇ ಶಿಲ್ಪ ಹೊಸಕೋಟೆ ತಾಲ್ಲೂಕಿನ ಕಮ್ಮಸಂದ್ರದಲ್ಲೂ ಇರುತ್ತದೆ.

ಸೂರ್ಯ ಶಿಲ್ಪ: 2' 5" ಎತ್ತರ ಹಾಗೂ 1'6" ಅಗಲವಿರುವ ಶಿಲೆಯಲ್ಲಿ ಸಮಭಂಗಿಯಲ್ಲಿ ನಿಂತಿರುವ ಸೂರ್ಯನು ತಾವರೆ ದಂಟು ಬಿಗಿಯಾಗಿ ಹಿಡಿದಿರುತ್ತಾನೆ. ಪಾದಗಳ ಬಳಿ ಚಿಕಣಿ ಶಿಲ್ಪಗಳಿಲ್ಲ. ಸೌರಮತದವರ ಪ್ರಭಾವ ಅಲ್ಲಲ್ಲಿ ಕಂಡುಬಂದರೂ, ಗಂಗವಾಡಿಯಲ್ಲಿ ಅದು ಕಡಿಮೆ ಇತ್ತು. ಬಹುಶಃ ಸೌರಮತ ಪ್ರತಿಪಾದಕರಾಗಿದ್ದ ವರ್ತಕರಿಂದ ಸೂರ್ಯೋಪಾಸನೆ ಬಂದಿರಬೇಕು.

ಭೈರವ ಶಿಲ್ಪ ಸಮಪಾದದಲ್ಲಿ ನಿಂತಿದ್ದು ನಗ್ನವಾಗಿದೆ. ಸ್ಥಳೀಯವಾಗಿ ಪಾರ್ವತಿ ಅಥವಾ ವಿಶಾಲಾಕ್ಷಿ ಅಮ್ಮನವರೆಂದು ಕರೆಯಲಾಗುತ್ತಿರುವ ದುರ್ಗಾಶಿಲ್ಪವೂ ಇರುತ್ತದೆ. ಇದು ನಂತರದ ಕಾಲದ್ದಾಗಿದ್ದು 3'8" x 1'7" ಅಗಲವಾದ ಶಿಲೆಯಲ್ಲಿ ಕೆತ್ತಲಾಗಿದೆ.

ಅಂತರಾಳ: ದೇವಾಲಯದ ಗರ್ಭಗೃಹ ಹಾಗೂ ನವರಂಗ ಮಂಟಪದ ನಡುವೆ ಸಣ್ಣ ತೆರೆದ ಕೋಣೆಯಂತಿರುವ ಅಂತರಾಳ ಮಂಟಪವು 5'9"x5'9" ವಿಸ್ತೀರ್ಣದ ಗರ್ಭಗೃಹವು ನಿರಂಧಾರ ಮಾದರಿಯದಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ.

ಪರಿವಾರ ದೇವಾಲಯಗಳು: ಮುಖಮಂಟಪದ ಮುಂಭಾಗದ ಪ್ರಾಕಾರ ಗೋಡೆಗೆ ಹೊಂದಿಕೊಂಡಂತೆ ಎರಡು ಪರಿವಾರ ದೇವಾಲಯಗಳು ಇರುತ್ತವೆ. ಒಂದು ದಕ್ಷಿಣಕ್ಕೆ ಮುಖ ಮಾಡಿದ್ದರೆ, ಇನ್ನೊಂದು ಉತ್ತರಾಭಿಮುಖವಾಗಿರುತ್ತದೆ. ಈ ದೇವಾಲಯಗಳ ಒಳಗೆ ವಿಗ್ರಹಗಳು ಇರುವುದಿಲ್ಲ. ಮುಖ್ಯ ದೇವಸ್ಥಾನದ ಬಲಗಡೆ ಅಂದರೆ ನವರಂಗ ಮಂಟಪದ ಭಿತ್ತಿಯ ಎದುರು ಮುಖ ಮಾಡಿದ ಪರಿವಾರ ದೇವಾಲಯದ ಬಾಗಿಲು ಉತ್ತರಕ್ಕಿದ್ದು, ಎರಡೂ ಕಡೆಗಳಲ್ಲಿ ದ್ವಾರಪಾಲಕರಿದ್ದಾರೆ. ಇವರ ಬಲಗೈಯಲ್ಲಿ ಹೂವಿನ ಪಕಳೆ ಎಡಗೈಯಲ್ಲಿ ಖಡ್ಗವನ್ನು, ನೆಲಕ್ಕೆ ಮುಖ ಮಾಡಿ ಇಡಲಾಗಿದೆ. ಗರ್ಭಗೃಹದ ಬಲಭಾಗದ ಭಿತ್ತಿಯ ಪಕ್ಕ ಪ್ರಾಕಾರ ಗೋಡೆಗೆ ಹೊಂದಿಕೊಂಡಂತೆ ಪೂರ್ವಕ್ಕೆ ಮುಖ ಮಾಡಿರುವ ಪರಿವಾರ ದೇವಾಲಯಕ್ಕೂ ದ್ವಾರಪಾಲಕರಿದ್ದಾರೆ. ಇನ್ನು ಹಿಂದಿನ ಪ್ರಾಕಾರ ಗೋಡೆಗೆ ಹೊಂದಿಕೊಂಡು, ಪೂರ್ವಕ್ಕೆ ಮುಖ ಮಾಡಿರುವ

ಎರಡೂ ಪರಿವಾರ ದೇವಾಲಯಗಳು ಶೀಥಿಲವಾಗಿರುತ್ತವೆ. ಈ ಎಲ್ಲ ಪರಿವಾರ ದೇವಾಲಯಗಳು ನಾಲ್ಕು ದೊಡ್ಡ ಚಪ್ಪಡಿಗಳಿಂದ ನಿರ್ಮಿಸಿದ ವೀರರ ಗುಡಿಗಳನ್ನು ನೆನಪಿಸುತ್ತವೆ. ನವರಂಗ ಮಂಟಪದ ಪ್ರವೇಶದ್ವಾರದಲ್ಲಿರುವ ದ್ವಾರಪಾಲಕರಂತೆಯೇ ಪರಿವಾರ ದೇವಾಲಯಗಳಿಗೂ ಖಡ್ಗವನ್ನು ನೆಲಕ್ಕೆ ತಾಕಿಸಿರುವ ದ್ವಾರಪಾಲಕರಿರುತ್ತಾರೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಇಲ್ಲಿ ಒಟ್ಟು ಆರು ಪರಿವಾರ ದೇವಾಲಯಗಳಿರುವುದು ಕಂಡುಬಂದಿದೆ.

ತ್ರುಟಿತ ಶಿಲ್ಪಗಳು: ಮುಖಮಂಟಪದ ಎದುರು ಪ್ರಾಕಾರ ಗೋಡೆಗೆ ನಿಲ್ಲಿಸಲಾದ ಎರಡು ಕಲ್ಲು ಚಪ್ಪಡಿಗಳ ಮೇಲೆ ರಾಮಾಯಣದ ಕಥಾರೂಪ ಬಿಡಿಸಲಾಗಿದೆ. 2'10" ಎತ್ತರ ಹಾಗೂ 3'3" ಅಗಲವಿರುವ ಒಂದು ಫಲಕದ ಮೇಲೆ ಸ್ತೂಪಿ, ಕಲಶ ಕಂಡರಿಸಿ ಅದರಲ್ಲಿ ಆಸೀನ ಸ್ಥಿತಿಯಲ್ಲಿರುವ ಸೀತಾಮಾತೆಯನ್ನು ದರ್ಶನ ಮಾಡುತ್ತಿರುವ ಆಂಜನೇಯ, ಇನ್ನೊಂದು ಶಿಲಾಫಲಕವು 2'11" ಎತ್ತರವಿದ್ದು, 3'6" ಅಗಲದ ವಿನ್ಯಾಸ ಹೊಂದಿದೆ. ಇದರಲ್ಲಿ ಬಿಲ್ಲು ಬಾಣ ಹಿಡಿದು ನಿಂತಿರುವ ಶ್ರೀರಾಮ ಮತ್ತು ಮೊಣಕಾಲೂರಿ ವಿನೀತ ಭಾವದಿಂದ ತನ್ನೆರಡೂ ಕೈ ಮುಗಿದಿರುವ ಆಂಜನೇಯನನ್ನು ತೋರಿಸಲಾಗಿದೆ.

ಪ್ರಾಕಾರ ಗೋಡೆ: ಪೂರ್ವ ಪಶ್ಚಿಮದಲ್ಲಿ 75 ಅಡಿ ದಕ್ಷಿಣೋತ್ತರವಾಗಿ 50 ಅಡಿ ಅಳತೆ ಹೊಂದಿರುವ ಪ್ರಾಕಾರ ಗೋಡೆಯ ನಿರ್ಮಾಣ ವಿಶೇಷವೆನಿಸುತ್ತದೆ. 2'6" ಅಗಲ, 6'5" ಉದ್ದದ ಗಾತ್ರ ಹೊಂದಿರುವ ಎರಡು ಕಲ್ಲಿನ ಥಾವಣೆಗಳನ್ನು ಉದ್ದುದವಾಗಿ ನೆಲದಲಿ ನೆಟ್ಟು, ಅವುಗಳ ಮೇಲೆ ಒಂದು ಥಾವಣಿ, ಮತ್ತೆರಡು ಥಾವಣಿ ಉದ್ದುದ್ದ ಇಟ್ಟು, ಅದರ ಮೇಲೆ ಟೋಪಿಕಲ್ಲು ಹೊದಿಸಲಾಗಿದೆ. ನೆಲಮಟ್ಟದಿಂದ ವೀಕ್ಷಿಸಿದರೆ ಬಲಭಾಗದ ಪ್ರಾಕಾರ ಗೋಡೆಯ ಎಡಭಾಗದ ಪ್ರಾಕಾರ ಗೋಡೆಗಿಂತ ಸ್ವಲ್ಪ ಎತ್ತರದಲ್ಲಿರುವುದು ಸ್ಪಷ್ಟವಾಗುತ್ತದೆ. ಪ್ರಾಕಾರದ ಪೂರ್ವ, ದಕ್ಷಿಣ ದಿಕ್ಕುಗಳಿಂದ ಪ್ರವೇಶಾವಕಾಶ ಕಲ್ಪಿಸಿದ್ದು, ಅಲ್ಲಲ್ಲಿ ಶಿಥಿಲವಾಗಿ ಟೋಪಿಕಲ್ಲುಗಳು ಕೆಳಗೆ ಬಿದ್ದಿರುತ್ತವೆ. ಬಳಸಿರುವ ಎಲ್ಲ ಥಾವಣಿ ಕಲ್ಲುಗಳು ಸಾಮಾನ್ಯವಾಗಿ ಮೇಲೆ ಹೇಳಲಾದ ಅಳತೆಯ ದಪ್ಪ ಮತ್ತು ಅಗಲವನ್ನು ಹೊಂದಿದ್ದು, ಉದ್ದ ಮಾತ್ರ ಲಭ್ಯತೆಯನ್ನನುಸರಿಸಿದೆ. ಕಾಡುಗೋಡಿ ಸುತ್ತಮುತ್ತಲಿನ ಪಟ್ಟಂದೂರು ಮತ್ತು ಹೂಡಿ ಪರಿಸರಕ್ಕೆ 'ಸಣ್ಣೆನಾಡು' ಎಂದು ಕರೆಯುತ್ತಿದಿದ್ದುದಾಗಿ ತಿಳಿದುಬರುತ್ತದೆ.[14] ಕಾಡುಗೋಡಿಯ ಆರಾಧ್ಯದೈವ ಕಾಶಿ ವಿಶ್ವೇಶ್ವರನನ್ನು 'ರಾಜಾಧಿರಾಜ ಬಂಗೀಶ್ವರಂ', 'ವಂಗೀಶ್ವರಂ ಉದ್ಯೆಯಾರ್' ಎಂಬುದಾಗಿ ಸಂಬೋಧಿಸಿದ ಅಂಶ ದೇವಾಲಯದ ಅಧಿಷ್ಠಾನದಲ್ಲಿರುವ ಶಾಸನಗಳಿಂದ ತಿಳಿದುಬರುತ್ತದೆ. ಪಾರಜ್ವಾದಿ ಗೋತ್ರದ ದಾಮೇದರ ಚಾಮುಂಡನ್ ಎಂಬ ಶಿವಬ್ರಾಹ್ಮಣನು ರಾಜಾಧಿರಾಜ ಬಂಕೀಶ್ವರ ಮುಡಿಯ ಮಹಾದೇವರಿಗೆ ಮುಡಿಗುಂಡ, ಚೋಳ ಬ್ರಹ್ಮ ಮಾರಾಯನ್ ದತ್ತಿ ಬಿಟ್ಟಿರುವುದು; ಕಶ್ಯಪ ಗೋತ್ರದ ಕುಲತ್ತುಂಗ ಚೋಳ, ಸಣ್ಣೈನಾಟ್ಟು ಕುಲರಾಜರ್ ರಾಜಾಧಿರಾಜ ವಂಗೀಶ್ವರ ಮುಡಿಯಾರ್ ದೇವಸ್ಥಾನಕ್ಕೆ 500 ಕುಳ ಭೂಮಿಯನ್ನು ಕಾಣಿಕೆ ಕೊಟ್ಟಿರುವುದು ಸ್ಪಷ್ಟವಾಗುತ್ತದೆ. ಕಾಡುಗೋಡಿ ಸ್ಮಶಾನದಲ್ಲಿರುವ ಶಾಸನದಲ್ಲಿ ಪೂರ್ವ ದೇಶವನ್ನು ಗಂಗೆಯನ್ನು ಗೆದ್ದಂತಹ ರಾಜೇಂದ್ರ ಚೋಳನ ಆಡಳಿತಾವಧಿಯ 32ನೇ ವರ್ಷದಲ್ಲಿ ವಿಕ್ರಮ ಚೋಳಮಂಡಲದ ಸಣ್ಣೈನಾಡಿನ ಪೆರ್ಮಾಡಿ ಗಾವುಂಡನ ಮಗ ರಾಜರಾಜವೇಳಾನ್ ಪಟ್ಟಂದೂರು ಏರಿ ಕಟ್ಟಿಸಿ, 2 ತೂಬುಗಳನ್ನು ಇಟ್ಟು ದುರ್ಗಾದೇವಿ, ಕ್ಷೇತ್ರಪಾಲ ಮತ್ತು ಗಣಪತಿಯರನ್ನು, ಪ್ರತಿಷ್ಠಾಪಿಸಿ ಮಾಡಿಸಿದನೆಂದು ಹೇಳಲಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಕಾಡುಗೋಡಿಯ ಕಾಶಿ ವಿಶ್ವೇಶ್ವರ (ಈಶ್ವರ) ದೇವಾಲಯವು ಗಂಗರಸರು ಕಟ್ಟಿಸಿದ ನಿರ್ಮಿತಿಯಾಗಿದ್ದು, ನಂತರದಲ್ಲಿ ಚೋಳರು ಜೀರ್ಣೋದ್ಧಾರ ಮಾಡಿರುವ ಪ್ರಸಂಗಗಳು ಕಂಡುಬರುತ್ತವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್, ಬೆಂಗಳೂರು ಜಿಲ್ಲೆ, 1990, ಪುಟ 960, 961
2. ಎಪಿಗ್ರಾಫಿಯಾ ಕರ್ನಾಟಕ 9, ಬೆಂಗಳೂರು ರೈಸ್ ಬಿ. ಎಲ್. 1898, ಪುಟ.19
3. ಡೆಕ್ಕನ್ ಹೆರಾಲ್ಡ್ 'ಸರ್ವೆ ಫಾರ್ ಪೆರಿಫೆರಲ್ ರಿಂಗ್ ರೋಡ್ ಸೂನ್' ದಿನಾಂಕ 28-1-2008
4. ಶಂಭಾ ಜೋಶೀ, 'ಎಡೆಗಳೂ ಹೇಳುವ ಕಂನಾಡ ಕಥೆ' ಪುಟ.6
5. ಚಿದಾನಂದಮೂರ್ತಿ ಎಂ., 'ಕರ್ನಾಟಕ ಸ್ಥಳನಾಮಗಳು' ವಾಗಾರ್ಥ, ಪುಟ 14-15
6. ಕಲಬುರ್ಗಿ ಎಂ. ಎಂ., 'ಧಾರವಾಡ ಗ್ರಾಮನಾಮ ವಿವೇಚನೆ' ಜಾನಪದ ಜಗತ್ತು, ಸಂ.1, 6, ಪುಟ.19
7. ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಸಂ-7, 1976, ಪು.1695.
8. ಅದೇ., ಪು. 2231
9. ಅದೇ., ಸಂ.3, 1977, ಪು.2631
10. ಅದೇ., 1977, ಪು.2632
11. ಡಾ. ದೇವರಕೊಂಡರೆಡ್ಡಿ, 'ತಲಕಾಡಿನ ಗಂಗರ ದೇವಾಲಯಗಳು-ಒಂದು ಅಧ್ಯಯನ', ಕನ್ನಡ ಸಾಹಿತ್ಯ ಪರಿಷತ್ತು, 1994, ಪು.53
12. ಕರ್ನಾಟಕ ಸ್ಟೇಟ್ ಗೆಸೆಟಿಯರ್ ಬೆಂಗಳೂರು ಜಿಲ್ಲೆ, 1990, ಪು.960-961
13. ಡಾ. ದೇವರಕೊಂಡರೆಡ್ಡಿ, 'ತಲಕಾಡಿನ ಗಂಗರ ದೇವಾಲಯಗಳು' ಕ.ಸಾ.ಪ., 1994, ಪು.72
14. ಡಾ. ಪಿ. ವಿ. ಕೃಷ್ಣಮೂರ್ತಿ, 'ಬೆಂಗಳೂರು ಜಿಲ್ಲೆಯ ಪ್ರಾಚೀನ ಆಡಳಿತ ವಿಭಾಗಗಳು', ಇತಿಹಾಸ ದರ್ಶನ, ಸಂ.1

32. ಶ್ರೀ ರಾಮೇಶ್ವರ ದೇವಾಲಯ ಒಂದು ಅವಲೋಕನ

ಡಾ. ಬಿ. ಎಸ್. ಪುಟ್ಟಸ್ವಾಮಿ

ಬೆಂಗಳೂರು ನಗರದಲ್ಲಿ ಆಧ್ಯಾತ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮಹತ್ವವುಳ್ಳ ಅನೇಕ ದೇವಾಲಯಗಳಿವೆ. ಪ್ರಾಚೀನ ಕಾಲದಿಂದ ಆತ್ಯಾಧುನಿಕ ಕಾಲದವರೆಗೆ ದೇವಾಲಯ ನಿರ್ಮಾಣ ನಡೆಯುತ್ತಲಿದೆ. ಶೈವ–ವೈಷ್ಣವ, ಶಾಕ್ತ ಗಣಪತಿ ಮೊದಲಾಗಿ ಹಲವಾರು ಪಂಥಗಳ ದೇವಾಲಯಗಳು ಸ್ಥಳೀಯ ಮತೀಯ ದೇವ–ದೇವತೆಗಳ ಮಂದಿರಗಳನ್ನು ಕಾಣಬಹುದು. ಈ ಎಲ್ಲಾ ದೇವಾಲಯಗಳು ತಮ್ಮದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಮತ್ತು ಧಾರ್ಮಿಕ ಮಹತ್ವವನ್ನು ಹೊಂದಿವೆ.

ಬೆಂಗಳೂರಿನ ಪ್ರಥಮ ಬಡಾವಣೆ ಎನ್ನಲಾದ 'ಚಾಮರಾಜೇಂದ್ರ ಪೇಟೆ' 1894ರಲ್ಲಿ ನಿರ್ಮಾಣ ಹಂತದಲ್ಲಿದ್ದು, ಈ ಹೊಸ ಬಡಾವಣೆಗೆ ಹೆಸರು ಸೂಚಿಸಲು ಕಾಯುವ ಸಂದರ್ಭದ ಕಾಲ. ಆಗ ಕಲ್ಕತ್ತದಲ್ಲಿ 10ನೇ ಚಾಮರಾಜೇಂದ್ರ ಒಡೆಯರ್ (28–12–1894) ಹಠಾತ್ ನಿಧನರಾದರು. ಅವರ ಸ್ಮರಣಾರ್ಥ ಈ ಬಡಾವಣೆಗೆ 'ಚಾಮರಾಜೇಂದ್ರ ಪೇಟೆ' ಎಂದು ನಾಮಕರಣ ಮಾಡಲಾಯಿತು. ಕಾಲಾನಂತರ ಚಾಮರಾಜಪೇಟೆ ಎಂಬ ಹೆಸರು ರೂಢಿಗೆ ಬಂತು.

ಚಾಮರಾಜಪೇಟೆಯಲ್ಲಿರುವ ಶ್ರೀ ರಾಮೇಶ್ವರ ದೇವಾಲಯವು ಹಲವಾರು ದೃಷ್ಟಿಗಳಿಂದ ವೈಶಿಷ್ಟ್ಯ ಪೂರ್ಣವೂ ಹಾಗೂ ಮಹತ್ವವುಳ್ಳ ಹಿಂದೂ ದೇವಾಲಯ. ಚಾಮರಾಜಪೇಟೆಯ 3ನೇ ಮುಖ್ಯರಸ್ತೆಯಲ್ಲಿರುವ ಈ ದೇವಾಲಯ ರಚನೆ ಧಾರ್ಮಿಕ, ಸಾಮಾಜಿಕ ಹಿನ್ನೆಲೆ, ಐತಿಹ್ಯ ಮತ್ತು ಪರಿಸರ ಈ ಎಲ್ಲಾ ದೃಷ್ಟಿಗಳಿಂದ ಕುತೂಹಲಕಾರಿ ಅಂಶಗಳನ್ನು ಒಳಗೊಂಡಿದ್ದು ತನ್ನದೇ ಆದ ರೋಚಕವಾದ ಇತಿಹಾಸವನ್ನು ಹೊಂದಿದೆ. ಮೊದಲನೆಯದಾಗಿ ಈ ದೇವಾಲಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಮೂರ್ತಿಗಳು ಬಹು ಹಿಂದಿನ ಕಾಲದ ದೇವಾಲಯಗಳಲ್ಲಿದ್ದ ವಿಗ್ರಹಗಳು. ಅವುಗಳನ್ನು ಬೇರೆ ಬೇರೆ ಸ್ಥಳಗಳಿಂದ ತಂದು ಈ ದೇವಾಲಯದಲ್ಲಿ ಪೂಜೆ ಮಾಡಲಾಗುತ್ತಿದೆ. ಇಲ್ಲಿನ ರಾಮಾಂಜನೇಯ ವಿಗ್ರಹ ತುಮಕೂರು ಜಿಲ್ಲೆಯ ಕಡಬ ಗ್ರಾಮದಿಂದ ಇಲ್ಲಿಗೆ ತಂದುದಾಗಿದೆ. ಕಡಬ ಗ್ರಾಮವು ಒಂದು ಪ್ರಮುಖ ಶ್ರೀವೈಷ್ಣವ ಕೇಂದ್ರವಾಗಿದ್ದಿತು. ಅಲ್ಲಿ ಈಗಲೂ ಹಲವಾರು ಪ್ರಾಚೀನ ವೈಷ್ಣವ ಮಂದಿರಗಳಿವೆ. ಎರಡನೆಯದಾಗಿ ಬೆಂಗಳೂರಿನ ಓಕಳಿಪುರಂನಲ್ಲಿದ್ದ ರಾಮಲಿಂಗೇಶ್ವರ ದೇವಾಲಯದ ಶಿವಲಿಂಗ ಮತ್ತು ನಂದಿ ವಿಗ್ರಹಗಳನ್ನು ಇಲ್ಲಿ ತಂದು ಪ್ರತಿಷ್ಠಾಪಿಸಲಾಗಿದೆ. ಈ ರೀತಿಯಲ್ಲಿ ವಿಗ್ರಹಗಳನ್ನು ಬೇರೆಡೆಯಿಂದ ಏತಕ್ಕೆ ತರಲಾಯಿತು ಎಂಬುದಕ್ಕೆ ಹಲವಾರು ವಿಷಯಗಳು ದೊರೆಯುತ್ತವೆ.

ಆ ಸ್ಥಳಗಳಲ್ಲಿದ್ದ ದೇವಾಲಯಗಳು ಶಿಥಿಲವಾಗಿದ್ದರಿಂದ ಆ ಮೂರ್ತಿಗಳನ್ನು ಇಲ್ಲಿ ತಂದು ಸುರಕ್ಷಿತವಾದ ಸ್ಥಳದಲ್ಲಿ ಸಂರಕ್ಷಿಸಿ, ಈ ದೇವಾಲಯವನ್ನು ನಿರ್ಮಿಸಿದರು. ಸರ್ಕಾರದಲ್ಲಿ ಪ್ರಭಾವಿ ಕುಟುಂಬದವರಾಗಿದ್ದರಿಂದ ನಾಡಿನ ವಿವಿಧ ಭಾಗಗಳಿಂದ ವಿಗ್ರಹಗಳನ್ನು ತಂದು ಈ ದೇವಾಲಯವನ್ನು ನಿರ್ಮಿಸಿದಂತೆ ಕಾಣುತ್ತದೆ.

ಶ್ರೀ ರಾಮೇಶ್ವರ ದೇವಾಲಯವನ್ನು ಅಂದು ಮೈಸೂರಿನಲ್ಲಿ ಆಳುತ್ತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ 21ನೇ ವರ್ಧಂತಿ ಉತ್ಸವದ ಕಾಲದಲ್ಲಿ ನಿರ್ಮಿಸಲಾಗಿದೆ. ದೇವಾಲಯದಲ್ಲಿರುವ ಶಂಕುಸ್ಥಾಪನಾ ಶಿಲೆಯಲ್ಲಿ

25ನೇ ಜೂನ್ 1905ರಲ್ಲಿ ಇದರ ಶಂಕು ಸ್ಥಾಪನೆಯಾಯಿತೆಂದು ಹೇಳಲಾಗಿದೆ. ಮತ್ತೊಂದು ಸ್ವಾರಸ್ಯದ ಸಂಗತಿ ಎಂದರೆ ಈ ದೇವಾಲಯವನ್ನು ಮೈಸೂರಿನ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರ ತಾಯಿ ವೆಂಕಟಲಕ್ಷ್ಮಮ್ಮ, ಸೋದರ ಮಾವ ಶ್ರೀ ರಾಮಯ್ಯ, ಕರ್ಪೂರ ಶ್ರೀನಿವಾಸರಾಯರು ಮತ್ತು ಬಸ್ ಗರುಡಾಚಾರ್‌ರವರು ಸೇರಿ ನಿರ್ಮಿಸಿರುತ್ತಾರೆ. ಹೀಗೆ ಈ ದೇವಾಲಯ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಯುಗಗಳನ್ನು ಬೆಸೆಯುವ ಕೊಂಡಿಯಾಗಿ ನಿಂತಿರುವ ಕಲಾ ಕೃತಿಯಾಗಿದೆ. ಮೂರು ತಲೆಮಾರುಗಳ ಕಲೆ, ಧರ್ಮ, ರಾಜಕಾರಣ, ಸಮಾಜ ವ್ಯವಸ್ಥೆ ಇವುಗಳ ಹಿನ್ನೆಲೆಯಲ್ಲಿ ಈ ದೇವಾಲಯವು ತನ್ನದೇ ಆದ ಭವ್ಯ ಐತಿಹಾಸಿಕ ಪರಂಪರೆಯಿಂದ ಎದ್ದು ನಿಲ್ಲುತ್ತದೆ. ಪ್ರಾಯಶಃ, ಬೆಂಗಳೂರು ನಗರದಲ್ಲಿ ಈ ರೀತಿಯಲ್ಲಿ ವಿವಿಧ ಯುಗಗಳ, ಪಂಥಗಳ ದೇವತಾಮೂರ್ತಿಗಳನ್ನು ಹೊಂದಿರುವ ದೇವಾಲಯಗಳು ಅತಿ ವಿರಳ ಎಂದೇ ಹೇಳಬೇಕು. ಮೇಲಾಗಿ ರಾಮೇಶ್ವರ ದೇವಾಲಯಗಳು ಶೈವ ವೈಷ್ಣವ ಪರಂಪರೆಗಳ ಮಧುರ ಮಿಶ್ರಣವಾಗಿರುವುದಲ್ಲದೆ ಅನೇಕ ಭಕ್ತರನ್ನು ಆಹ್ವಾನಿಸುವ ಆಶ್ಚರ್ಯಕರವಾದ ಅಂಶಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿವೆ.

ಉತ್ತರಾಭಿಮುಖವಾಗಿರುವ ಈ ದೇವಾಲಯದ ಹೊರಭಾಗದಲ್ಲಿ ರಾಯಗೋಪುರದಂತಿರುವ ಸಾಧಾರಣ ಮಂಟಪವನ್ನು ಕಲ್ಲುಗಳಿಂದ ನಿರ್ಮಿಸಿದೆ. ಸುಮಾರು 20 ಅಡಿ ಎತ್ತರವಿರುವ ಈ ಮಂಟಪ ನವರಂಗವನ್ನು ಹೊಂದಿದೆ. ಮಂಟಪದ ಒಳಭಾಗಕ್ಕೆ ಶಂಕುಸ್ಥಾಪನೆಯ ಕಲ್ಲುಗಳನ್ನು ಗೋಡೆಗೆ ಹೊಂದಿಕೊಂಡಂತೆ ಇರಿಸಲಾಗಿದೆ. ದೇವಾಲಯ ಉತ್ತರಾಭಿಮುಖವಾಗಿದ್ದು ದಕ್ಷಿಣಕ್ಕೆ ಆಳೆತ್ತರದ ಮಂಟಪದ ಒಳಗೆ ಸುಂದರವಾದ ನಂದಿ ವಿಗ್ರಹವಿದೆ.

ದೇವಾಲಯದ ಮಧ್ಯ ಭಾಗದ ಮೇಲಣ ಮಂಟಪದಲ್ಲಿ ಪಾರ್ವತಿ-ಪರಮೇಶ್ವರರ ಗಚ್ಚುಗಾರೆಯ ಮೂರ್ತಿ ಇದೆ. ಬಲ ಪಕ್ಕದಲ್ಲಿ ಗಣಪತಿ ಮೂರ್ತಿ, ಎಡ ಪಕ್ಕದಲ್ಲಿ ಸ್ಕಂದ ಮೂರ್ತಿ ವಿಗ್ರಹವಿದೆ. ಬಲಗಡೆಯ ಕೊನೆಯಲ್ಲಿ ಬಾಗಿಲಿದ್ದು ಅದರ ಮೇಲಿನ ಮಂಟಪದಲ್ಲಿ ಕಮಲೋದ್ಭವ ಮಹಾವಿಷ್ಣುವಿನ ಮೂರ್ತಿ ಗಚ್ಚುಗಾರೆಯಲ್ಲಿದೆ. ಈ ಮೂರ್ತಿಗಳೆಲ್ಲಾ ದೇವಾಲಯ ನಿರ್ಮಾಣ ಕಾಲಕ್ಕೆ ರೂಪಿತವಾದಂತೆ ಕಾಣುವುದಿಲ್ಲ. ಬಹುಶಃ ಸ್ವಾತಂತ್ರೋತ್ತರ ಕಾಲದ ನಿರ್ಮಾಣವಾಗಿವೆ.

ಉತ್ತರದ ದ್ವಾರಪಾಲಕರು

ದೇವಾಲಯದ ಮುಖ್ಯದ್ವಾರದ ಮುಂದೆ ಇಕ್ಕೆಲಗಳಲ್ಲಿ ಎರಡು ಸಣ್ಣ ಮಂಟಪಗಳಿವೆ. ಎಡ ಭಾಗಕ್ಕಿರುವ ದ್ವಾರಪಾಲಕನ ಬಲಗಾಲು ಗದೆಯ ಮೇಲಿದ್ದು, ಬಲಗೈಯಲ್ಲಿ ಗದೆಯನ್ನು ಹಿಡಿದಿದ್ದು, ಬಲಗೈ ಮತ್ತು ಬಲಗಾಲು ಎಡಕ್ಕೆ ಚಾಚಿದೆ. ಮತ್ತೊಂದು ಬಲಗೈನ ಮೂರು ಬೆರಳುಗಳಲ್ಲಿ ಒಂದು ಮೃಗವನ್ನು ಹಿಡಿದಿದೆ. ಎಡಗೈ ದರ್ಜಿಸಿ ಬೆರಳನ್ನು ಮೇಲಕ್ಕೆತ್ತಿದೆ. ಮತ್ತೊಂದು ಎಗಡೈನ ಮೂರು ಬೆರಳುಗಳಿಂದ ಒಂದು ಮೃಗವನ್ನು ಹಿಡಿದಿದೆ.

ಬಲ ಭಾಗಕ್ಕಿರುವ ದ್ವಾರ ಪಾಲಕನ ಎಡಗಾಲು ಗದೆಯ ಮೇಲಿದ್ದು ಎಡಗೈಯಲ್ಲಿ ಗದೆಯನ್ನು ಹಿಡಿದಿದ್ದು, ಎಡಗೈ ಮತ್ತು ಎಡಗಾಲು ಬಲಗಡೆ ಚಾಚಿದೆ. ಬಲಗೈಯ ದರ್ಜಿಸಿ ತೋರು ಬೆರಳನ್ನು ಮಾತ್ರ ಮೇಲಕ್ಕೆತ್ತಿದೆ. ಮತ್ತೊಂದು ಎಡಗೈನ ಮೂರು ಬೆರಳುಗಳಿಂದ ಒಂದು ಮೃಗವನ್ನು ಹಿಡಿದಿದೆ. ಈ ಎರಡು ದ್ವಾರಪಾಲಕರ ಸೊಂಟದಲ್ಲಿ ಬಾಕು ಇಟ್ಟುಕೊಂಡಿದ್ದು, ಕಂಠಾಭರಣ, ಕರ್ಣಾಭರಣ, ಕಿರೀಟ, ತೋಳ್ಕಡಗ, ಕಾಲು ಬಂದಿಗಳಿವೆ. ಈ ದ್ವಾರಪಾಲಕರ ಭಂಗಿಗಳನ್ನು ನೋಡಿದರೆ ನಾಟ್ಯ ಶಿವನ ಸೂಚ್ಯವಾಗಿ ಇರುವಂತಿದೆ.

ಪೂರ್ವದ ದ್ವಾರಪಾಲಕರು

ಶ್ರೀ ರಾಮೇಶ್ವರ ದೇವಾಲಯದ ಮತ್ತೊಂದು ವಿಶೇಷವೆಂದರೆ ಪೂರ್ವಾಭಿಮುಖವಾಗಿ ಹೊರಭಾಗದಲ್ಲಿ ಧ್ವಜಸ್ತಂಭವಿದ್ದು ದೇವಾಲಯದ ಪಶ್ಚಿಮ ಭಾಗದ ಗರ್ಭಗುಡಿಯಲ್ಲಿ ಶ್ರೀರಾಮ-ಲಕ್ಷ್ಮಣ, ಸೀತೆ ಮತ್ತು ಆಂಜನೇಯ ವಿಗ್ರಹಗಳಿವೆ. ದೇವಾಲಯದ ಪೂರ್ವ ದ್ವಾರದ ಇಕ್ಕೆಲಗಳಲ್ಲಿ ಇಬ್ಬರು ದ್ವಾರ ಪಾಲಕರಿದ್ದು ಜಯ-ವಿಜಯರೆಂದು ಗುರುತಿಸಬಹುದು. ಈ ದ್ವಾರಪಾಲಕರು ಶಂಖ, ಚಕ್ರ, ಗದೆಯನ್ನು ಹಿಡಿದಿರುವುದು ಗಮನಾರ್ಹವಾಗಿದೆ. ರಾಮೇಶ್ವರನ ಗುರುತಿಸುವ ಸಲುವಾಗಿ ದೇಗುಲದ ಪೂರ್ವ ಬಾಗಿಲ ಮೇಲೆ ಮಂಟಪದಲ್ಲಿ ರಾಮ ಪಂಚಾಯ್ತನ ಗಚ್ಚುಗಾರೆಯ ರಾಮ ಸಮೂಹ ಮೂರ್ತಿಗಳಿವೆ.

ಗೋಪುರಗಳು

ದೇವಾಲಯದ ದಕ್ಷಿಣ ಮತ್ತು ಪಶ್ಚಿಮ ಭಾಗದ ಗರ್ಭಗುಡಿಯ ಮೇಲೆ ಎರಡು ಗೋಪುರಗಳಿದ್ದು ದ್ರಾವಿಡ ಶೈಲಿಯದಾಗಿರುತ್ತವೆ. ದಕ್ಷಿಣ ಭಾಗಕ್ಕಿರುವ ಗೋಪುರ ಸ್ವಲ್ಪ ಎತ್ತರವಾಗಿದ್ದು ಅಷ್ಟೇನು ಕಲಾತ್ಮಕ ಕುಸುರಿ ಕೆಲಸ ಅಥವಾ ವಿಗ್ರಹಗಳಿಂದ ಕೂಡಿದ ಗೋಪುರವಾಗಿಲ್ಲ.

ದೇವಾಲಯದ ಒಳಭಾಗವು ಯಾವುದೇ ಕುಸುರಿ, ಕೆತ್ತನೆ ಕೆಲಸವಿಲ್ಲದೆ ಕಂಬಗಳು ಹಾಗು ಮೇಲ್ಛಾವಣಿ ಕಲ್ಲುಗಳಿಂದ ಕೂಡಿದೆ. ಗರ್ಭಗೃಹ, ಸುಕನಾಸಿ, ನವರಂಗವನ್ನು ಹೊಂದಿದ್ದು ಶಿಲೆಗಳಿಂದ ನಿರ್ಮಿಸಿದೆ. ಈಶ್ವರ (ರಾಮೇಶ್ವರ) ಗರ್ಭಗೃಹ ಉತ್ತರಾಭಿಮುಖವಾಗಿಯೂ, ಶ್ರೀರಾಮರ ವಿಗ್ರಹಗಳ ಗರ್ಭಗೃಹ ಪೂರ್ವಾಭಿಮುಖ ವಾಗಿಯೂ ಇರುತ್ತವೆ. ದಕ್ಷಿಣದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು ಮೂರು ಅಡಿ ಅಂತರದಲ್ಲಿಯೇ ನಂದಿ ವಿಗ್ರಹವಿದೆ. ಇದೇ ಮೂಲ ಮಂದಿರದಲ್ಲಿ ಕರೆಯಲ್ಪಡುವ ಶ್ರೀರಾಮೇಶ್ವರ, ಪಶ್ಚಿಮ ಗರ್ಭಗೃಹದಲ್ಲಿ ಶ್ರೀರಾಮ, ಲಕ್ಷ್ಮಣ, ಸೀತೆ ಮತ್ತು ಆಂಜನೇಯ ವಿಗ್ರಹಗಳಿವೆ. ಇವುಗಳಲ್ಲದೆ ಶ್ರೀ ವಿದ್ಯಾಗಣಪತಿ, ಶ್ರೀಪ್ರಸನ್ನ ಪಾರ್ವತಿ, ಶ್ರೀಚಂಡಿಕೇಶ್ವರ, ಶ್ರೀಸೂರ್ಯನಾರಾಯಣ, ಶ್ರೀದಂಡಪಾಣಿ ಸುಬ್ರಹ್ಮಣ್ಯೇಶ್ವರ, ನವಗ್ರಹಗಳ ಮೂರ್ತಿಗಳು, ಶ್ರೀಸತ್ಯನಾರಾಯಣ ಹಾಗು ವೀರಾಂಜನೇಯ ವಿಗ್ರಹಗಳೆಲ್ಲವೂ ಕಪ್ಪು ಶಿಲೆಯಿಂದ ನಿರ್ಮಿತವಾಗಿವೆ.

ದೇವಾಲಯದ ವಿಶೇಷತೆಯೆಂದರೆ ಶ್ರೀರಾಮನಿಗೆ ಯಾವುದೇ ವಿಶೇಷ ಕೈಂಕರ್ಯ, ಪೂಜಾದಿಗಳು, ರಥೋತ್ಸವಗಳಿರುವುದಿಲ್ಲ. ಶ್ರೀ ರಾಮೇಶ್ವರನಿಗೆ ಮಾತ್ರ ಕಾಮನ ಹುಣ್ಣಿಮೆಯ ದಿನದಂದು ರಥೋತ್ಸವವಿರುತ್ತದೆ. ಸಾಮಾನ್ಯವಾಗಿ ಶೈವ ದೇವಾಲಯಗಳಲ್ಲಿ ಲಿಂಗದ ಪಾಣಿಪೀಠ ಉತ್ತರಾಭಿಮುಖವಾಗಿ ಇರುತ್ತದೆ. ಇಲ್ಲಿ ಲಿಂಗದ ಪಾಣಿಪೀಠ ಪಶ್ಚಿಮದ ಕಡೆ ಇರುವುದು ವಿಶೇಷವಾಗಿದೆ. ಎರಡು ದೀಪ ಸ್ಥಂಭಗಳು ಹಾಗು ಎರಡು ಗರ್ಭಗುಡಿಗಳ ದೇವಾಲಯವಾಗಿದ್ದು ಶೈವಾಗಮ ಪದ್ಧತಿಯಂತೆ ಪೂಜಾದಿ ಉತ್ಸವಗಳು ಜರುಗುತ್ತವೆ.

ದಕ್ಷಿಣಾ ಮೂರ್ತಿ

ದಕ್ಷಿಣ - ಉತ್ತರಾಭಿಮುಖವಾಗಿರುವ ಈ ದೇವಾಲಯದ ದಕ್ಷಿಣದ ಕಡೆ ಇರುವ ಗರ್ಭಗೃಹದಲ್ಲಿ ಶ್ರೀ ರಾಮೇಶ್ವರ ಲಿಂಗವಿದೆ. ಗರ್ಭಗುಡಿಯ ಹಿಂಭಾಗ (ದಕ್ಷಿಣಕ್ಕೆ) ಒಂದು ಸಣ್ಣ ಮಂಟಪವಿದ್ದು ಇಲ್ಲಿ ಗಚ್ಚುಗಾರೆಯ ಶಿಲ್ಪಗಳಿವೆ. ಅದರಲ್ಲಿ ಪ್ರಧಾನವಾಗಿ ಶಿವನು ಬಲಗಾಲಿನಲ್ಲಿ ರಾಕ್ಷಸನೊಬ್ಬನನ್ನು (ಮೈಯಲಗ?) ತುಳಿಯುತ್ತಾ, ಎಡಗೈಯಲ್ಲಿ ತಾಳೆ ಓಲೆ ಗ್ರಂಥವನ್ನು ಬಲಗೈಯಲ್ಲಿ ಅಭಯ ಹಸ್ತ ತೋರುತ್ತಿದೆ. ಮೇಲಿನ ಬಲಗೈಯಲ್ಲಿ ಹೆಡೆಯನ್ನು ಹಿಡಿದಿರುವ ಸರ್ಪದ ಚಿತ್ರವಿದೆ. ಮೇಲಿನ ಎಡಗೈಯಲ್ಲಿ ಅಗ್ನಿಯನ್ನು ಹಿಡಿದಿದೆ. ಹಿಂಬದಿಯಲ್ಲಿ

ಒಂದು ವೃಕ್ಷವಿದೆ. ಶಿವನ ಜಟೆ ಎಡ-ಬಲಗಳಿಗೆ ಇಳಿ ಬಿದ್ದಿದೆ. ಇಕ್ಕೆಲಗಳಲ್ಲಿ ಇಬ್ಬಿಬ್ಬರು ಋಷಿಗಳು ಕುಳಿತಿದ್ದಾರೆ. ನಾಲ್ವರು ಅಂಜಲಿ ಬದ್ಧರಾಗಿದ್ದಾರೆ. ಶಿವನ ಪಕ್ಕದಲ್ಲೇ ಇರುವ ಇಬ್ಬರಲ್ಲಿ ಬಲಗಡೆಯವ ಬಲಕ್ಕೆ ಪೆಡಗಾಲು ಎಡಗಡೆಯವ ಎಡಕ್ಕೆ ಪೆಡಗಾಲು ಹಾಕಿ ಕುಳಿತಿದ್ದಾರೆ. ಅಚೀನ ಇಬ್ಬರು ಋಷಿಗಳು ಪದ್ಮಾಸನದಲ್ಲಿ ಕುಳಿತಿದ್ದಾರೆ. ಎಲ್ಲವೂ ಗಚ್ಚುಗಾರೆಯಿಂದ ಕೂಡಿದ್ದು ವರ್ಣರಂಜಿತವಾಗಿವೆ. ಈ ಮಂಟಪದ ಇಕ್ಕೆಡೆ ಮತ್ತು ಕೆಳಗೆ ಮಂಟಪಗಳಿದ್ದು ಎಲ್ಲವೂ ಖಾಲಿ ಇವೆ.

ಉಯ್ಯಾಲೆ ಮಂಟಪ

ಶ್ರೀ ರಾಮೇಶ್ವರ ದೇವಾಲಯದ ಪಶ್ಚಿಮಕ್ಕೆ ಎರಡು ಅಡಿ ಎತ್ತರವಾದ ಎಂಟು ಮೂಲೆಯ ಜಗಲಿ ಮಧ್ಯೆ ನಾಲ್ಕು ಕಂಬಗಳ ಮಂಟಪ ಇದೆ. ಈ ನಾಲ್ಕು ಕಂಬಗಳ ಎಂಟು ಪಟ್ಟಿಕೆಗಳು ಸಾದಾ ಕಂಬಗಳ ಸುಮಾರು 14 ಅಡಿ ಎತ್ತರದಿಂದ ಕೂಡಿವೆ. ನಾಲ್ಕು ಕಡೆ ಪಾವಟಿಗೆ ಮಾತ್ರ ಮೆಟ್ಟಿಲುಗಳಿವೆ. ಮಂಟಪದ ಮೇಲೆ ಎಂಟು ಕಲ್ಲು ಚಪ್ಪಡಿಗಳ ಪಟ್ಟಿಗಳಿಂದ ಕೂಡಿದ್ದು ಮೇಲ್ಭಾಗ ಮಂಟಪವಿದೆ. ಪೂರ್ವಕ್ಕೆ ಪಾರ್ವತಿ ಪರಮೇಶ್ವರರ ಕಲ್ಯಾಣ ದೃಶ್ಯ, ಫಲವನ್ನು ನೀಡುತ್ತಿರುವುದು, ಪಶ್ಚಿಮಕ್ಕೆ ನಾಗಾಲಂಕೃತ ಶಿವಲಿಂಗ, ಉತ್ತರಕ್ಕೆ ರಾಮ, ಲಕ್ಷ್ಮಣ, ಸೀತೆ, ಆಂಜನೇಯ ವಿಗ್ರಹಗಳು, ದಕ್ಷಿಣಕ್ಕೆ ಚತುರ್ಭುಜಾಕೃತಿಯ ಮೋದಕ ಹಸ್ತ, ಪಾಶ, ಅಂಕುಶ ಗಣಪತಿಯ ವಿಗ್ರಹವಿದೆ.

ಈ ರೀತಿಯಲ್ಲಿ ಬಹು ಪ್ರಾಚೀನವೂ, ಭವ್ಯವೂ ಆದ ಧಾರ್ಮಿಕ ಪರಂಪರೆಯನ್ನು ಹೊಂದಿರುವ ರಾಮೇಶ್ವರ ದೇವಾಲಯವು ಒಂದು ಶತಮಾನಕ್ಕೂ ಹೆಚ್ಚು ಕಾಲ ಬೆಂಗಳೂರಿನ ನಾಗರೀಕರಿಗೆ, ಒಂದು ಪವಿತ್ರವಾದ ಪೂಜಾ ಸ್ಥಳವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇದು ತನ್ನ ಗತಕಾಲದ ವೈಭವದಿಂದ ಮಾತ್ರವಲ್ಲದೆ ಆಧುನಿಕ ಯುಗದ ಜನಾಂಗಕ್ಕೂ ಅತ್ಯಂತ ಪ್ರಸ್ತುತವೂ, ಉಪಯುಕ್ತವೂ ಆದ ಪಾತ್ರವನ್ನು ವಹಿಸುತ್ತಾ ಬಂದಿದೆ. ಎರಡು ಎಕರೆಗಳಿಗಿಂತಲೂ ಹೆಚ್ಚು ಭಾಗವನ್ನು ಆಕ್ರಮಿಸಿಕೊಂಡಿರುವ ಈ ದೇವಾಲಯವು ಅನೇಕ ರೀತಿಯಲ್ಲಿ ಸಾರ್ವಜನಿಕರಿಗೆ ಉಪಯುಕ್ತವಾಗಿರುವುದು ಗಮನಾರ್ಹವಾದ ಸಂಗತಿ. ಇಲ್ಲಿ ಒಂದು ಶಾಲೆ, ಕಲ್ಯಾಣ ಮಂಟಪ ಉದ್ಯಾನವನ, ವಿಹಾರಸ್ಥಳ ಮುಂತಾದ ಸಾರ್ವಜನಿಕ ಸೌಲಭ್ಯಗಳು ಲಭ್ಯವಿದ್ದು ಬೆಂಗಳೂರಿನಲ್ಲಿ ಪ್ರಾಯಶಃ ಇಂತಹ ಅನುಕೂಲಗಳನ್ನು ನೀಡಬಲ್ಲ ದೇವಾಲಯಗಳು ಅತಿ ವಿರಳವೆನ್ನಬಹುದು. ದೇವಾಲಯದ ಮುಂದೆ ಮರಗಳ ತೋಪನ್ನು ಬೆಳೆಸಲಾಗಿದ್ದು ನಗರ ಮಧ್ಯದಲ್ಲಿ ಇದು ಶುದ್ಧ ಗಾಳಿಯನ್ನು, ನೆರಳನ್ನು ನೀಡಿ ವಾಯು ಮಾಲಿನ್ಯವನ್ನು ತಡೆದು ಸ್ವಚ್ಛ ಗಾಳಿ ಬೆಳಕು ಲಭಿಸಲು ಅವಕಾಶ ಮಾಡಿಕೊಟ್ಟಿದೆ. ಇಲ್ಲಿ ಇನ್ನು ಕೂಡ ಮುಕ್ತವಾದ, ವಿಶಾಲವಾದ ಜಾಗವಿದ್ದು ಇದನ್ನು ಆಧ್ಯಾತ್ಮಿಕ, ನೈತಿಕ ಚಟುವಟಿಕೆಗಳಿಗೆ ಮಾತ್ರ ಉಪಯೋಗವಾಗುವಂತಹ ಯೋಜನೆಗಳನ್ನು ಹಮ್ಮಿಕೊಂಡು ನಗರದ ಜನರಿಗೆ ಬಹು ಉಪಯೋಗಿ ಸೇವೆಗಳನ್ನು ನೀಡಬಹುದಾಗಿದೆ.

ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ಶ್ರೀ ರಾಮೇಶ್ವರ ದೇವಾಲಯವು ಒಟ್ಟಿನಲ್ಲಿ ಒಂದು ಸುಂದರವಾದ ಭವ್ಯವೂ ಪವಿತ್ರವೂ ಸಂಕೀರ್ಣವೂ ಆದ ವೈಶಿಷ್ಟ್ಯಪೂರ್ಣ ದೇವಾಲಯವಾಗಿದೆ. ಈ ದೇವಾಲಯದಲ್ಲಿ ಇತಿಹಾಸವಿದೆ. ಕಲೆ ಇದೆ, ಆಧ್ಯಾತ್ಮವಿದೆ, ಆರೋಗ್ಯವಿದೆ, ಶುದ್ಧ ಪರಿಸರದ ಸುಂದರ ವಾತಾವರಣದಲ್ಲಿ ಆನಂದಾನುಭೂತಿಯನ್ನು ಸವಿಯುವ ಅತ್ಯಮೂಲ್ಯ ಅವಕಾಶಗಳಿವೆ.

33. ಬೇಗೂರಿನ ಜೋಡಿ ಶಿವಾಲಯಗಳು

ಶ್ರೀ ಎಂ. ಎನ್. ಪ್ರಭಾಕರ್

ಬೆಂಗಳೂರು ನಗರಜಿಲ್ಲೆಯ ಬೇಗೂರಿನ ಪ್ರಾಚೀನ ದೇವಾಲಯವು ಗಂಗರ ಕಾಲದ ಪ್ರಮುಖ ಜೋಡಿ ಶಿವಾಲಯ ರಚನೆಯಾಗಿದ್ದು ಕ್ರಿ. ಶ. ಒಂಬತ್ತನೆಯ ಶತಮಾನದ ಮೊದಲ ಅರ್ಧಭಾಗದಲ್ಲಿ ರಚನೆಗೊಂಡಿದೆ ಎಂದು ಗುರುತಿಸಬಹುದು.

ಕರ್ನಾಟಕದ ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯಗಳನ್ನು ಮೂರು ಹಂತಗಳಲ್ಲಿ ಅಧ್ಯಯನ ಮಾಡಬಹುದು. ಬಾದಾಮಿ ಚಾಲುಕ್ಯರ ಕಾಲದಲ್ಲಿ ಆರಂಭದ ಹಂತವನ್ನು ಕಾಣಬಹುದು. ಮಧ್ಯದ ಹಂತವನ್ನು ಗಂಗ ಹಾಗೂ ನೊಳಂಬರಕಾಲದಲ್ಲಿ ಗುರುತಿಸಬಹುದು. ಇದೇ ಅವಧಿಯಲ್ಲಿ ಭಿತ್ತಿ ಹಾಗೂ ತಲ ರಚನೆಗಳಲ್ಲಿ ಸ್ಪಷ್ಟ ಅಲಂಕಾರಗಳೂ ಮೂಡಿದವು, ಅಂತಿಮವಾಗಿ ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ದೇವಾಲಯ ಸಂಕೀರ್ಣಗಳು ವಿಸ್ತಾರವಾಗಿ ಬೆಳೆದವೇ ವಿನಃ ವಾಸ್ತು ವಿಕಾಸದೃಷ್ಟಿಯಿಂದ ಮಹತ್ವದ್ದೆನಿಸಿಲ್ಲ.

ವಾಸ್ತುಗ್ರಂಥಗಳನ್ನು ಆಧರಿಸಿದ ಮಧ್ಯಕಾಲೀನ ದೇವಾಲಯಗಳು ಮಹತ್ವದ್ದೆನಿಸಿವೆ. ಈ ವಿವರಣೆಯನ್ನು ಅನುಸರಿಸಿ ಆರಂಭದ ಹಾಗೂ ನಂತರದ ದೇವಾಲಯಗಳನ್ನು ಗುರುತಿಸಬೇಕು. ಮಧ್ಯಕಾಲೀನ ದೇವಾಲಯಗಳಲ್ಲಿ ಪ್ರಮುಖವಾಗಿ ನರಸಮಂಗಲದ ರಾಮಲಿಂಗೇಶ್ವರ, ಕಂಬದ ಹಳ್ಳಿಯ ಪಂಚಕೂಟ ಬಸದಿ, ಬೇಗೂರಿನ ಜೋಡಿ ಶಿವಾಲಯ, ಶ್ರವಣಬೆಳಗೊಳದ ಚಾಮುಂಡರಾಯ ಬಸದಿ, ನಂದಿಯ ಭೋಗ ನಂದೀಶ್ವರ ಹಾಗೂ ಅವನಿಯ ಲಕ್ಷ್ಮಣೇಶ್ವರ ದೇವಾಲಯಗಳನ್ನು ಹೆಸರಿಸಬಹುದು. ಇವಲ್ಲದೆ ಇನ್ನಿತರ ದೇವಾಲಯಗಳೂ ಹಲವೆಡೆ ರಚನೆಗೊಂಡಿದ್ದು, ಈ ಪ್ರಮುಖ ದೇವಾಲಯಗಳ ಹಿನ್ನೆಲೆಯಲ್ಲಿ ಅವುಗಳನ್ನು ಗಮನಿಸಬಹುದು. ಈ ಕಾಲದ ಕೆಲವು ದೇವಾಲಯಗಳ ಅಲಂಕಾರಿಕ ಕೈಪಿಡಿ, ದೇವಕೋಷ್ಠಗಳು, ಶಿಖರಗಳು ಹಾಗೂ ಗೋಪುರಗಳು ಇಟ್ಟಿಗೆ, ಗಾರೆಗಳಿಂದ ರಚನೆಗೊಂಡಿವೆ. ನರಸಮಂಗಲದ ರಾಮಲಿಂಗೇಶ್ವರ, ನಂದಿಯ ಅರುಣಾಚಲೇಶ್ವರ ದೇವಾಲಯಗಳಲ್ಲಿ ಮೇಲೆ ಹೇಳಿದ ರಚನೆಗಳನ್ನು ಕಾಣಬಹುದು.

ಬೆಂಗಳೂರಿನ ಹೆಸರನ್ನು ಗುರುತಿಸಲು ಸಾಧ್ಯವಾಗುವ ಅತಿ ಪ್ರಾಚೀನ ಶಾಸನ ಲಭ್ಯವಾಗಿರುವುದು ಬೇಗೂರಿನಲ್ಲಿ. ಗಂಗರ ಅಧಿಕಾರಿ ನಾಗತ್ತರನ ಶಾಸನವು ಬೇಗೂರಿನ ದೇವಾಲಯದ ಸಮೀಪದಲ್ಲಿ ದೊರೆತದ್ದರಿಂದ ಬೇಗೂರಿನ ನಾಗೇಶ್ವರ ದೇವಾಲಯವು ನಾಗತ್ತರನು ಪ್ರತಿಷ್ಠಾಪಿಸಿರಬಹುದೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ದೇವಾಲಯದ ವಾಸ್ತುರಚನೆಯನ್ನು ಗಮನಿಸಿದಾಗ ಇದನ್ನು ಕ್ರಿ. ಶ. ಒಂಬತ್ತನೆ ಶತಮಾನದ ಮೊದಲ ಅರ್ಧಭಾಗಕ್ಕೆ ಸೇರಿಸಬಹುದು. ಈ ದೇವಾಲಯ ರಚನೆ ಕಂಬದ ಹಳ್ಳಿಯ ಬಸದಿಗಳ ರಚನೆಯನ್ನು ಹೋಲುತ್ತದೆ.

ಗಂಗರು ಆರಂಭದಲ್ಲಿ ಶೈವ ಸಂಪ್ರದಾಯದ ಅನುಯಾಯಿಗಳಾಗಿದ್ದು, ಜೈನ ಧರ್ಮವನ್ನೂ ಪುರಸ್ಕರಿಸಿದರು. ಧರ್ಮದ ವಿಷಯದಲ್ಲಿ ವೈಯಕ್ತಿಕ ರೀತಿನೀತಿಗಳನ್ನು ಬದಿಗಿಟ್ಟು ಎಲ್ಲರಲ್ಲಿ ಸಮಾನತೆಯನ್ನೂ, ಗೌರವಾದರಗಳನ್ನು ಪೋಷಿಸಿದರು. ಇದರ ಫಲವಾಗಿ, ಪಂಚಕೂಟ ಬಸದಿಯ ಸಂಕೀರ್ಣ, ಶ್ರವಣಬೆಳಗೊಳದಲ್ಲಿ ಬಸದಿಗಳ ಸಮೂಹ, ಬೇಗೂರು, ನಂದಿ, ಆವನಿಗಳಲ್ಲಿ ದೇವಾಲಯಗಳ ಸಂಕೀರ್ಣಗಳನ್ನು ಕಾಣಬಹುದು. ಜೋಡಿ ಶಿವಾಲಯಗಳ ಪರಂಪರೆ ನಂದಿಯಲ್ಲಿ ಮುಂದುವರೆದು, ಹೊಯ್ಸಳರ ಕಾಲಕ್ಕೂ ಅಡಿಇಟ್ಟಿತು. ಶಿವಾಲಯಗಳಿಗೆ

ಸೀಮಿತವಾಗದೆ ಶೈವ, ವೈಷ್ಣವ ದೇವಾಲಯಗಳೂ ಜೊತೆಗೂಡಿ ರಚನೆಗೊಂಡವು. ಬೇಗೂರಿನ ಸಂಕೀರ್ಣದಲ್ಲಿ ಪ್ರಮುಖವಾಗಿ ನಾಗೇಶ್ವರ, ಚೋಳೇಶ್ವರ ದೇವಾಲಯಗಳಲ್ಲದೆ, ನಗರೇಶ್ವರ, ಕಮಠೇಶ್ವರ, ಕರ್ಣೇಶ್ವರ ದೇವಾಲಯಗಳಿವೆ. ಸ್ಥಳೀಯರು ಪಂಚಲಿಂಗೇಶ್ವರವೆಂದು ವ್ಯವಹರಿಸುತ್ತಾರೆ.

ನಾಗೇಶ್ವರ ದೇವಾಲಯವು ನಾಗತ್ತರನ ಪ್ರತಿಷ್ಠೆ ಎಂದು ಊಹಿಸಿದರೆ, ಚೋಳೇಶ್ವರ ದೇವಾಲಯದ ಮೂಲ ಕೊಂಚ ಗಲಿಬಿಲಿಗೊಳಿಸುತ್ತದೆ. ದಾಕ್ಷಿಣಾತ್ಯ ದೇವಾಲಯಗಳನ್ನು ಚೋಳ ಪ್ರತಿಷ್ಠೆ ಎಂದು ಗುರುತಿಸುವುದು ಜನಸಾಮಾನ್ಯರಲ್ಲಿ ರೂಢಿಯಲ್ಲಿದೆ. ಈ ವಿಷಯವನ್ನು ಬದಿಗಿಟ್ಟು ದೇವಾಲಯದ ರಚನೆಯನ್ನು ಗುರುತಿಸಬೇಕು.

ದಾಕ್ಷಿಣಾತ್ಯ ಸಂಪ್ರದಾಯದ ನಾಗರ–ದ್ರಾವಿಡ–ವೇಸರ ಶೈಲಿಗಳು ಅರಳಿದ್ದು ಬಾದಾಮಿ ಚಾಲುಕ್ಯರ ಕಾಲದಲ್ಲಿ, ಈ ಶೈಲಿಗಳು ಖಚಿತವಾಗಿ ಪ್ರದರ್ಶಿಸಲ್ಪಟ್ಟಿದ್ದು ಗಂಗ ನೊಳಂಬರ ಕಾಲದಲ್ಲಿ. ಬೇಗೂರಿನ ನಾಗೇಶ್ವರ ದೇವಾಲಯವು ವೇಸರ ಶೈಲಿಯ ಶಿಖರವನ್ನೂ, ಚೋಳೇಶ್ವರ ದೇವಾಲಯವು ನಾಗರಶೈಲಿಯ ಶಿಖರವನ್ನೂ ಪ್ರದರ್ಶಿಸಿವೆ. ಈ ದೇವಾಲಯಗಳನ್ನು ಅಡಿಯಿಂದ ಮುಡಿಯವರೆಗೆ ಗರ್ಭಗೃಹದ ಭಾಗದಲ್ಲಿ ಗುರುತಿಸಲು ಸಾಧ್ಯವಾಗಿದೆ.

ಗಂಗರ ಕಾಲದ ದೇವಾಲಯಗಳನ್ನು ಸುಲಭವಾಗಿ ಗುರುತಿಸುವುದು ಅವುಗಳ ಕಂಬಗಳ ಆಕಾರದಿಂದ. ದೇವಾಲಯಗಳು ನಾಶವಾಗಿ ಅವುಗಳ ಭಾಗಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದರೂ ಸ್ಥಂಭಗಳ ಆಕಾರ, ಸ್ತರಗಳು ಮತ್ತು ಅಲಂಕರಣದಿಂದ ಗುರುತಿಸಬಹುದು. ಕೆಲವೆಡೆ ದೇವಾಲಯಗಳು ಪುನರ್‌ನಿರ್ಮಾಣಗೊಂಡಿದ್ದರೂ ಸ್ತಂಭಗಳನ್ನು ಸಾಧ್ಯವಾದಷ್ಟು ಬಳಸಿರುವುದರಿಂದ ಇವು ಗಂಗರಕಾಲದ್ದೆಂದು ನಿರ್ಣಯಿಸಲು ಸಹಾಯಕವಾಗಿದೆ.

ಈ ದೇವಾಲಯ ಸಂಕೀರ್ಣದಲ್ಲಿ ನಾಗೇಶ್ವರ ಹಾಗೂ ಚೋಳೇಶ್ವರ ದೇವಾಲಯಗಳು ಕ್ರಮವಾಗಿ ಬಲ ಹಾಗೂ ಎಡಬದಿಯಲ್ಲಿವೆ. ಇವುಗಳಲ್ಲಿ ನಾಗೇಶ್ವರ ದೇವಾಲಯವು ಬಹುಶಃ ಮೊದಲ ರಚನೆ. ನಾಗೇಶ್ವರ ದೇವಾಲಯದ ಅಧಿಷ್ಠಾನವು ಕಪೋತಬಂಧವೆನಿಸಿದ್ದು ಜಗತಿ, ತ್ರಿಪಟ್ಟಕುಮುದ, ಕಂಠ, ಕಪೋತ ಸ್ತರಗಳು ನಂತರ ವೇದಿಕಾ ಭಾಗವಿದೆ. ಜಗತಿಯ ರಚನೆ ಕೊಂಚ ಎತ್ತರವಾದದ್ದು, ಆದರೆ ಜಗತಿಯ ಕೆಳಭಾಗ ನೆಲ ಹಾಸಿನಿಂದ ಕಾಣೆಯಾಗಿದೆ. ಈ ರೀತಿಯ ರಚನೆಯನ್ನು ಕಂಬದ ಹಳ್ಳಿಯಲ್ಲಿಯೂ ಕಾಣಬಹುದು.

ಜಗತಿಯ ನಂತರ ತ್ರಿಪಟ್ಟಕುಮುದವಿದೆ. ತ್ರಿಪಟ್ಟಕುಮುದದ ಭಾಗದಲ್ಲಿ ಹಲವೆಡೆ ಗ್ರಂಥ ಲಿಪಿಯ ತಮಿಳು ಶಾಸನಗಳನ್ನು ಕಂಡರಿಸಿದ್ದಾರೆ. ಈ ಭಾಗದಲ್ಲಿ ಚೋಳರ ಆಳ್ವಿಕೆ ಆರಂಭಗೊಂಡದ್ದು ಹನ್ನೊಂದನೆಯ ಶತಮಾನದ ಆರಂಭದಲ್ಲಿ. ತ್ರಿಪಟ್ಟಕುಮುದ ರಚನೆಯ ನಂತರ ಗ್ರೀವ ಅಥವ ಕಂಠಭಾಗವಿದ್ದು ಕಂಸ, ಕಂಠ, ಕಂಸಸ್ತರಗಳನ್ನು ಗುರುತಿಸಬಹುದು. ನಂತರ ಕಪೋತಭಾಗವೂ, ಕಪೋತದ ಮೇಲೆ ನಾಸಿಕಾ ಅಲಂಕರಣವನ್ನೂ ಕಾಣಬಹುದು. ಕಪೋತಾನಂತರ ವೇದಿಕೆ ಇದ್ದು, ವೇದಿಕೆಯ ಸ್ತರಗಳಾಗಿ ಕಂಸ, ಕಂಠ, ಕಂಸ, ಪದ್ಮ ಹಾಗೂ ಊರ್ಧ್ವಕಂಸಗಳಿವೆ. ಇವಿಷ್ಟೂ ಅಧಿಷ್ಠಾನದ ಭಾಗಗಳು. ದೇವಾಲಯದ ಪಾದ ಅಥವಾ ಭಿತ್ತಿಭಾಗದಲ್ಲಿ ಕುಡ್ಯಸ್ತಂಭ. ಕೋಷ್ಠಪಂಜರ ರಚನೆಗಳಿವೆ. ಭಿತ್ತಿಯ ಕರ್ಣ ಹಾಗೂ ಭದ್ರದ ನಡುವಿನ ಭಾಗವು ಕಪೋತ ಪಂಜರ ರಚನೆಗೆ ಅವಕಾಶ ಕಲ್ಪಿಸಿದೆ. ಮಧ್ಯದ ಭದ್ರಭಾಗದಲ್ಲಿ ಕೋಷ್ಠದ ಮೇಲೆ ಸರಳ ತೋರಣವಿದೆ. ಈ ತೋರಣವು ಕೋಷ್ಠ ಸ್ತಂಭಗಳನ್ನಾಧರಿಸಿ ನಿಂತಿದ್ದು, ಇವು ಅರೆಗಂಬಗಳಾಗಿವೆ. ಈ ಅರೆಗಂಬಗಳಲ್ಲಿಯೂ ದಂಡ ಹಾಗೂ ವಿಷ್ಕಂಭದ ಸ್ತರಗಳಿದ್ದು, ಮೇಲ್ತುದಿಯಲ್ಲಿ ಎರಡೂ ಕಡೆ ಮಕರಮುಖಗಳಿವೆ. ಇವು ಅರ್ಧಚಂದ್ರಾಕೃತಿಯನ್ನು ಮೇಲ್ಮುಖವಾಗಿ ಎತ್ತಿ ಹಿಡಿದಿದ್ದು, ಸರಳವಾದ ಪತ್ರತೋರಣವೆಂದು ಗುರುತಿಸಲಾಗಿದೆ. ಕರ್ಣ ಹಾಗೂ ಭದ್ರಭಾಗದ ನಡುವೆ ಕಪೋತ ಪಂಜರವಿದ್ದು, ಪಂಜರವು ವಿಮಾನದ ಪ್ರಸ್ತರ ಭಾಗವನ್ನು ಮೀರಿ ಮೇಲಕ್ಕೆ ಜಾಚಿನಿಂತಿದೆ. ಕಪೋತ ಪಂಜರವೂ ಎರಡು ಕುಡ್ಯ ಸ್ತಂಭಗಳ ಮೇಲೆ ನಿಂತಿದ್ದು ಪ್ರಸ್ತರ, ವೇದಿ, ಪಂಜರ ರಚನೆಗಳನ್ನು ಹೊಂದಿದೆ.

ಕಪೋತ ಪಂಜರದ ಮೇಲ್ಭಾಗವು, ಪಂಜರದ ವೇದಿಭಾಗವನ್ನು ಹೊಂದಿದ್ದು, ನಂತರ ಎರಡನೆಯ ಹಂತದ ಕಿರುಸ್ತಂಭವಿದ್ದು, ಇದರ ಮೇಲೆ ಪುನಃ ಕಪೋತ ರಚನೆಯಿದೆ. ಈ ಕಪೋತವನ್ನಾವರಿಸಿದಂತೆ ಮುಖ ಪಟ್ಟಿಕೆ ಹಾಗೂ ಕುಕ್ಷಿಭಾಗಗಳಿವೆ. ಮುಖಪಟ್ಟಿಕೆ ಹಾಗೂ ಕುಕ್ಷಿಭಾಗವು ದೇವಾಲಯದ ಮೂಲ ಪ್ರಸ್ತರದ ಕಪೋತ ಭಾಗವನ್ನು ಆಶ್ರಯಿಸಿದ್ದು ಮುಖಪಟ್ಟಿಕೆಯ ಮೇಲ್ಭಾಗದಲ್ಲಿ ಕಂಠ ಹಾಗೂ ಸಿಂಹವಕ್ತ್ರಗಳಿವೆ.

ಇವಿಷ್ಟು ಗರ್ಭಗೃಹದ ಹೊರಭಾಗದ ಭಿತ್ತಿ ಅಲಂಕಾರವು. ಅಂತರಾಳದ ಭಾಗವು ಕೊಂಚ ಓಂಸರಿದಿದ್ದು, ಪತ್ರತೋರಣವನ್ನು ಭಿತ್ತಿಭಾಗದಲ್ಲಿ ಕಾಣಬಹುದು. ನವರಂಗದ ಹೊರಭಿತ್ತಿಯಲ್ಲಿ ಜಾಲಕೆಗಳನ್ನು ಅಳವಡಿಸಲಾಗಿದೆ. ಈ ಭಾಗದ ಕುಡ್ಯಸ್ತಂಭ ರಚನೆಯಲ್ಲಿ ನೀಳವಾದ ದಂಡಭಾಗವಿದ್ದು, ನಂತರ ವಿಷ್ಕಂಧದ ಸ್ತರಗಳಾಗಿ ಮೂಲಸ್ಥಾನ, ಆಸ್ಯ ಅಥವಾ ಪದ್ಮಬಂಧ, ಕಲಶ, ಸ್ಕಂದ, ಕುಂಭ, ಮಧ್ಯಮೂಲ, ಪದ್ಮ, ಫಲಕ, ವೀರಗಂಡ, ಮತ್ತು ಬೋದಿಗೆಗಳನ್ನು ಕಾಣಬಹುದು. ಗಂಗರ ಕಾಲದ ದೇವಾಲಯಗಳಲ್ಲಿ ಮಧ್ಯೆಪಟ್ಟಿಕೆ ಇದ್ದು, ಇಕ್ಕೆಲಗಳಲ್ಲಿ ಅಲೆಅಲೆಯಾಕಾರದ ತರಂಗ ರಚನೆಯಿದೆ. ಆದ್ದರಿಂದಲೇ ತರಂಗಬೋದಿಗೆ ಎಂದು ಹೆಸರು. ಬೋದಿಗೆಯನ್ನು ಸ್ತಂಭ ಶೀರ್ಷ ಎಂದು ಗುರುತಿಸುವುದುಂಟು. ಬೋದಿಗೆಯ ನಂತರ ಪ್ರಸ್ತರದ ಭಾಗವಿದೆ. ಪ್ರಸ್ತರದಲ್ಲಿ ಮೂರು ಭಾಗಗಳು. ಕಪೋತಪೂರ್ವಭಾಗ ಕಪೋತಭಾಗ, ಕಪೋತೋತ್ತರಭಾಗ. ಕಪೋತ ಪೂರ್ವಭಾಗದಲ್ಲಿ ಉತ್ತರ, ವಾಜನ, ವಲಭೀ ಸ್ತರಗಳು. ನಂತರ ಕಪೋತಭಾಗ. ಕಪೋತದ ಕೆಳಗೆ ವಲಭೀ ಭಾಗದಲ್ಲಿ ಹಂಸ, ಯಕ್ಷ, ವಿಧ್ಯಾಧರ ಶಿಲ್ಪಗಳು ಆವರಿಸಿವೆ. ಈ ಭಾಗವು ಹೆಚ್ಚು ಸುಣ್ಣ, ಗಾರೆಯಿಂದ ಆವೃತವಾಗಿದ್ದು ಸೂಕ್ಷ್ಮವಾಗಿ ಗುರುತಿಸಲು ಅಸಾಧ್ಯವಾಗಿದೆ. ಬಲಭಾಗದ ಕೆಲವು ರಚನೆಗಳನ್ನು ಗುರುತಿಸಬಹುದಾಗಿದ್ದು, ಇಲ್ಲಿ ಪಂಚತಂತ್ರದ ಮೊಸಳೆ–ಕಪಿಯ ಕಥೆ ಇದೆ. ಮೊಸಳೆಯೊಂದಿಗೆ ಕಪಿಯ ಸಂಭಾಷಣೆ, ಮೊಸಳೆಯ ಬೆನ್ನಿನ ಮೇಲೆ ಕುಳಿತು ಸಾಗುತ್ತಿರುವ ಕಪಿಯ ಚಿತ್ರಣವನ್ನು ಗುರುತಿಸಬಹುದು. ಗಂಗರಕಾಲದ ದೇವಾಲಯಗಳಲ್ಲಿ ಪ್ರಸ್ತರದ ವಲಭಿಭಾಗವನ್ನು ಹಲವು ದೃಶ್ಯಗಳ ಚಿತ್ರಣಕ್ಕೆ ಬಳಸಿದ್ದಾರೆ. ಮೈಸೂರಿನ ವರುಣದಲ್ಲಿರುವ ಮಹಲಿಂಗೇಶ್ವರ ದೇವಾಲಯದಲ್ಲಿ ಪೌರಾಣಿಕ ದೃಷ್ಟಾಂತಗಳ ಚಿತ್ರಣವಿದೆ.

ಕಪೋತಭಾಗದಲ್ಲಿ ಕುಡ್ಯಸ್ತಂಭಗಳಿಗೆ ನೇರವಾಗಿ ನಾಸೀ ರಚನೆ ಇದೆ. ಕೆಲವೆಡೆ ಕುಕ್ಷಿಭಾಗದಲ್ಲಿ ಅಸ್ಪಷ್ಟ ಚಿತ್ರಣವಿದೆ. ಕಪೋತೋತ್ತರ ಭಾಗದಲ್ಲಿ ಆಲಿಂಗ, ಅಂತರಿತ, ಪ್ರತಿ, ವಾಜನ, ಸ್ತರಗಳಿವೆ. ಪ್ರತಿ, ವಾಜನಸ್ತರಗಳ ಮುಂದೆ ಸಿಂಹ, ಮಕರ, ನೀರುಕುದುರೆ ಮೊದಲಾದ ವಿಚಿತ್ರಮುಖಗಳುಳ್ಳ ಪ್ರಾಣಿಗಳ ಸಾಂಕೇತಿಕ ಕಂಡರಣೆಗಳಿವೆ. ಪ್ರಸ್ತರದ ನಂತರ ಮೊದಲ ತಲರಚನೆ; ಈ ತಲದಲ್ಲಿ ಕರ್ಣಕೂಟ–ಹಾರಾಂತರ–ಶಾಲಾ–ಹಾರಾಂತರ–ಕರ್ಣಕೂಟ ಭಾಗಗಳಿವೆ. ಹಾರಾಂತರ ಭಾಗದಲ್ಲಿ ನೇತ್ರನಾಸೀರಚನೆ; ಕೆಳಗೆ ನಾಸೀಪಾದ. ಈ ರೀತಿಯ ರಚನೆಯನ್ನು ಕಂಬದ ಹಳ್ಳಿಯ ಬಸದಿಯಲ್ಲಿಯೂ ಕಾಣಬಹುದು. ಶಾಲಾ ಹಾಗೂ ಕರ್ಣಕೂಟಗಳಲ್ಲಿ ಅಲ್ಪನಾಸೀ; ಇಕ್ಕೆಲಗಳಲ್ಲಿ ಲತಾಲಂಕಾರ, ಕಂಠಭಾಗದಲ್ಲಿ ಸ್ತಂಭಿಕೆಗಳು, ಶಾಲಾರಚನೆಯ ಎರಡೂಕಡೆ ಲಲಾಟನಾಸೀ; ಮುಂಭಾಗದಲ್ಲಿ ಮುಖಪಟ್ಟಿಕೆ.

ಮೊದಲ ತಲ ರಚನೆಯನಂತರ ಎರಡನೆಯ ತಲದ ಭಿತ್ತಿಭಾಗವಿದೆ. ಈ ಭಿತ್ತಿಯಲ್ಲಿ ಕುಡ್ಯಸ್ತಂಭಗಳನ್ನು ಮಾತ್ರ ಕಾಣಬಹುದು. ನಂತರ ಪ್ರಸ್ತರ ಅಥವಾ ಕಪೋತರಚನೆ. ನಂತರ ಕರ್ಣಭಾಗದಲ್ಲಿ ಸ್ವತಂತ್ರವಾಗಿ ನಿಂತ ಕರ್ಣಕೂಟಗಳು; ಇವು ವಿಶಿಷ್ಟ ರಚನೆಗಳೆನಿಸಿವೆ. ಇವು ಮೊದಲ ತಲದ ಕರ್ಣಕೂಟಗಳಂತಿವೆ. ಮಧ್ಯದಲ್ಲಿ ಶಿಖರದ ಪಿಂಡೀ ಅಥವಾ ಕಂಠದ ಭಾಗವಿದೆ. ಶಿಖರವು ವೃತ್ತಾಕಾರದಲ್ಲಿದ್ದು ವೇಸರ ಶೈಲಿಎನಿಸಿದೆ. ಶಿಖರದ ನಾಲ್ಕು ದಿಕ್ಕುಗಳಲ್ಲಿ ವೃತ್ತಸ್ಫುಟಿತದಂತಹ ಮಹಾನಾಸೀ ರಚನೆಯಿದ್ದು ಗುಹಾಭಾಗದಲ್ಲಿ ಮೂರ್ತಿಶಿಲ್ಪಗಳಿವೆ.

ಕಂಠಭಾಗದಲ್ಲಿ ಸಾಮಾನ್ಯವಾಗಿ ಕಾಣುವ ವೇದಿಕಾರಚನೆ ಇಲ್ಲ. ಬದಲಿಗೆ ನಾಲ್ಕು ದಿಕ್ಕಿನಲ್ಲಿ ಮಹಾನಾಸೀ ರಚನೆಯ ಕೆಳಗೆ ಮಾತ್ರ ವೇದಿಕಾ ರಚನೆ ಇದೆ. ಕರ್ಣಕೂಟ ಹಾಗೂ ಪಿಂಡೀ ಭಾಗದ ನಡುವೆ ನಂದಿವಾಹನವಿದೆ. ಈ ರಚನೆ ತದನಂತರ ಕಾಲದಲ್ಲಿ ಜೋಡಣೆಗೊಂಡಿರಲು ಸಾಧ್ಯ. ಮಹಾನಾಸೀ ಮೇಲ್ಭಾಗದಲ್ಲಿ ಕೀರ್ತಿಮುಖವಿದೆ.

ಶಿಖರದ ಶೀರ್ಷಭಾಗದ ಕೆಳಗೆ ಪ್ರಸ್ತರದ ಪೂರ್ವರಚನೆಯಂತೆ ದಲೋದಯಭಾಗವಿದ್ದು ಉತ್ತರ, ವಾಜನ, ವಲಭೀಭಾಗಗಳಿವೆ. ವಲಭೀಭಾಗದ ಅಲಂಕಾರಿಕ ರಚನೆಯು ಅಸ್ಪಷ್ಟ. ಹಂಸಮಾಲಾ ರಚನೆ ಇರುವ ಸಾಧ್ಯತೆ ಹೆಚ್ಚು. ಶಿಖರದ ಶೀರ್ಷಭಾಗದ ಕೆಳ ತುದಿಯಲ್ಲಿ ಮಹಾನಾಸಿಯ ಎರಡೂ ಕಡೆ ಚಂದ್ರಮಂಡಲ ಪಟ್ಟಿಕೆಯು ಸುತ್ತುವರೆದಿದೆ. ಶಿಖರದ ಮೇಲ್ತುದಿಯಲ್ಲಿ ಫಲಿಕಾಮಂಡಲವಿದ್ದು ಮಧ್ಯೆ ಪದ್ಮರಚನೆ ಇದೆ. ನಡುವೆ ದುಂಡಾದ ಸ್ತೂಪಿಯಿದೆ. ಫಲಿಕಾ ಮಂಡಲವು ಕಂಬದಹಳ್ಳಿಯ ರಚನೆಯಂತಿದೆ. ಇವಿಷ್ಟೂ ಊರ್ಧ್ವ ಕ್ರಮದ ಸ್ತರಗಳು.

ಚೋಳೇಶ್ವರ ದೇವಾಲಯವು ನಾಗೇಶ್ವರ ದೇವಾಲಯದ ಎಡಕ್ಕಿದ್ದು ಕೊಂಚ ಸರಳವಾದ ರಚನೆ ಎನಿಸಿದೆ. ಚೋಳೇಶ್ವರ ದೇವಾಲಯದ ಅಧಿಷ್ಠಾನವು ಪ್ರತಿಬಂಧ ರಚನೆ ಎನಿಸಿದ್ದು ಈ ಅಧಿಷ್ಠಾನದಲ್ಲಿ (ಜಗತಿ) ವೃತ್ತಕುಮುದ-ಅಲಿಂಗ-ಅಂತರಿತ-ಪ್ರತಿ-ವಾಜನ ಸ್ತರಗಳೂ ನಂತರ ವೇದಿಕಾ ರಚನೆ ಇದೆ. ವೇದಿಕೆಯ ಭಾಗಗಳಾಗಿ ಕಂಪ-ಕಂಠ-ಕಂಪ-ಪದ್ಮ-ಪಟ್ಟಿಕೆ ಹಾಗೂ ಊರ್ಧ್ವಕಂಪಗಳಿವೆ. ಪ್ರತಿ ಮತ್ತು ವಾಜವ ಸ್ತರಗಳ ಮೇಲೆ ಹಲವು ಬಗೆಯ ಪ್ರಾಣಿಮುಖಗಳುಳ್ಳ ಅಲಂಕಾರವಿದೆ. ಜಗತಿಯ ಭಾಗವು ನೆಲದೊಳಗೆ ಸೇರಿದ್ದು ವೃತ್ತಕುಮುದ ಮಟ್ಟದಲ್ಲಿ ನೆಲಹಾಸನ್ನು ಕಾಣಬಹುದು. ಗರ್ಭಗೃಹ ಹಾಗೂ ಅಂತರಾಳದ ಭಿತ್ತಿರಚನೆ ನೇರವಾದುದು. ಚೋಳೇಶ್ವರ ದೇವಾಲಯದ ಕುಮುದ ರಚನೆಯ ಮೇಲೆ ಗ್ರಂಥಲಿಪಿಯ ಶಾಸನಗಳನ್ನು ಕಂಡರಿಸಲಾಗಿದೆ. ಭಿತ್ತಿಭಾಗದಲ್ಲಿ ಕುಡ್ಯಸ್ತಂಭಗಳು ಭದ್ರಭಾಗದಲ್ಲಿ ಪತ್ರತೋರಣವಿದ್ದು, ಕಪೋತಪಂಜರ ರಚನೆಗಳಿಲ್ಲ. ಪ್ರಸ್ತರದ ವಲಭೀಭಾಗದಲ್ಲಿರುವ ಅಲಂಕಾರವು ಸುಣ್ಣಗಾರೆಗಳಿಂದ ಕೂಡಿ ಅಸ್ಪಷ್ಟವೆನಿಸಿದೆ. ಇಲ್ಲಿ ಯಕ್ಷ, ವಿದ್ಯಾಧರರ ಶಿಲ್ಪಗಳಿರುವ ಸಾಧ್ಯತೆ ಹೆಚ್ಚು.

ಮೊದಲ ತಲ ರಚನೆಯಲ್ಲಿ ಕರ್ಣಕೂಟ-ಹಾರಾಂತರ-ಶಾಲಾ-ಹಾರಾಂತರ-ಕರ್ಣಕೂಟಗಳಿದ್ದು, ಶೀರ್ಷಭಾಗದಲ್ಲಿ ನಾಸಿಕೆಗಳು ಕಂಠಭಾಗದಲ್ಲಿ ಕಿರುಸ್ತಂಭಗಳಿವೆ. ಎರಡನೆಯ ತಲದಲ್ಲಿ ಕುಡ್ಯಸ್ತಂಭಗಳುಳ್ಳ ಭಿತ್ತಿ ನಂತರ ಪ್ರಸ್ತರದ ಕಪೋತ ಭಾಗವಿದೆ. ಕಪೋತೋತ್ತರ ಭಾಗದಲ್ಲಿ ಪ್ರತಿ ವಾಜನ ಸ್ತರಗಳ ಮೇಲೆ ಅಲಂಕಾರವಿದೆ. ಈ ಸ್ತರಗಳ ನಂತರ ಮೂಲೆಗಳಲ್ಲಿ ನಂದಿವಾಹನವಿದ್ದು, ಮಧ್ಯೆ ಚತುರಶ್ರಾಕಾರದ ವೇದಿ, ನಂತರ ಕಂಠಭಾಗ ಹಾಗೂ ಶಿಖರ ರಚನೆ ಇದೆ.

ಕಂಠದ ಗಲೋದಯ ಭಾಗದಲ್ಲಿ ಉತ್ತರ, ವಾಜನ, ವಲಭೀ ಸ್ತರಗಳಿದ್ದು ವಲಭಿಯಲ್ಲಿ ಹಂಸಮಾಲಾ ರಚನೆಯನ್ನು ಕಾಣಬಹುದು. ಶೀಖರದ ಶೀರ್ಷಭಾಗದಲ್ಲಿ ನಾಲ್ಕು ದಿಕ್ಕಿನಲ್ಲಿ ಮಹಾನಾಸೀ ರಚನೆ, ಗುಹಾಭಾಗದಲ್ಲಿ ಮೂರ್ತಿಗಳಿವೆ. ಈ ಶಿಖರವು ಚತುರಶ್ರ ರಚನೆಯಿಂದಾಗಿ ನಾಗರ ಶೀಖರ ಎನ್ನಿಸಿದೆ. ಮಹಾನಾಸೀ ರಚನೆಯು ಲಾಳಾಕಾರದ ಮೂಲ ಪಟ್ಟಿಕೆಯನ್ನು ಹೊಂದಿದ್ದು, ಮೇಲ್ತುದಿಯಲ್ಲಿ ಕಂಠ ಹಾಗೂ ಸಿಂಹ ವಕ್ತ್ರಗಳಿವೆ. ಶೀರ್ಷದ ಕೆಳತುದಿಯಲ್ಲಿ ಮಹಾನಾಸಿಯ ಎರಡೂ ಕಡೆ ಚಂದ್ರಮಂಡಲ ಪಟ್ಟಿಕೆ, ಮೂಲೆಗಳಲ್ಲಿ ಕೋಣಪಟ್ಟ ಅಥವಾ ಲತಾಲಂಕಾರವಿದೆ. ಶಿಖರದ ಮೇಲ್ತುದಿಯಲ್ಲಿ ಫಲಿಕಾಮಂಡಲ ನಂತರ ಕುಂಭದಂಥ ಸ್ತೂಪವಿದೆ.

ಶಿಖರ ರಚನೆಯು ಕಂಬದ ಹಳ್ಳಿಯಲ್ಲಿರುವ ನಾಗರ ಶೈಲಿಯ ಶಿಖರದಂತಿದೆ. ನಾಗೇಶ್ವರ ಮತ್ತು ಚೋಳೇಶ್ವರ ದೇವಾಲಯಗಳ ಸ್ತೂಪಿ ರಚನೆ ಕೊಂಚ ಹಸಿರು, ಕಪ್ಪುಮಿಶ್ರಿತ ಶಿಲೆಯಲ್ಲಿ ರೂಪುಗೊಂಡಿದೆ. ತಿರ್ಯಕ್ರಮದಲ್ಲಿ ಎರಡೂ ದೇವಾಲಯಗಳಲ್ಲಿ ಚೌಕಾಕಾರದ ಗರ್ಭಗೃಹ, ಅದಕ್ಕೆ ಹೊಂದಿಕೊಂಡಂತೆ ಅಂತರಾಳ ಹಾಗೂ

ನವರಂಗಗಳಿವೆ. ನಾಗೇಶ್ವರ ದೇವಾಲಯದ ಗರ್ಭಗೃಹ ದ್ವಾರದ ಎರಡೂ ಕಡೆ ಅರೆಗಂಬಗಳಿದ್ದು, ಮೇಲ್ಗಡೆ ಗಜಲಕ್ಷ್ಮೀ ಶಿಲ್ಪವನ್ನು ಕಂಡರಿಸಿದ್ದಾರೆ. ಚೋಳೇಶ್ವರ ದೇವಾಲಯದ ಗರ್ಭಗೃಹದ ದ್ವಾರದ ಮೇಲೆ ಗಜಲಕ್ಷ್ಮೀ ವಿಗ್ರಹವನ್ನು ಕಂಡರಿಸಿದ್ದಾರೆ. ಅಂತರಾಳದಲ್ಲಿ ನಾಲ್ಕು ಸ್ತಂಭಗಳು ನವರಂಗದಲ್ಲಿ ನಾಲ್ಕು ಸ್ತಂಭಗಳು ಪ್ರಧಾನವೆನಿಸಿವೆ. ಅಂತರಾಳದ ಸ್ತಂಭಗಳು ತುಸು ಎತ್ತರ ಮಟ್ಟದಲ್ಲಿವೆ.

ಅಂತರಾಳವು ನೇರವಾಗಿ ನವರಂಗಕ್ಕೆ ತೆರೆದುಕೊಂಡಿದ್ದು, ಮಧ್ಯೆ ಈಗ ಕಾಣುವ ಭಿತ್ತಿ ನಂತರದ ಕಾಲದ್ದು. ನಗರೇಶ್ವರ ದೇವಾಲಯದ ಅಂತರಾಳದಲ್ಲಿ ಚೌಕಾಕೃತಿಯ ಸ್ತಂಭಗಳು ನವರಂಗದಲ್ಲಿ ವೃತ್ತಾಕೃತಿಯ ಸ್ತಂಭಗಳಿವೆ. ನವರಂಗದ ಮೇಲ್ಛಾವಣಿಯಲ್ಲಿ ನಾಲ್ಕು ಸ್ತಂಭಗಳ ಮಧ್ಯೆ ಅಷ್ಟದಿಕ್ಪಾಲಕರು, ಮಧ್ಯೆ ಸುಖಾಸೀನನಾದ ಶಿವನು ಪಾರ್ವತಿಯೊಡನಿರುವ ಫಲಕ ರಚನೆಯಿದೆ. ನಾಗೇಶ್ವರ ದೇವಾಲಯದ ನವರಂಗದ ಭಿತ್ತಿಯಲ್ಲಿ ಲತಾಲಂಕಾರದಿಂದ ಕೂಡಿದ ಎರಡೆರಡು ಜಾಲಂದ್ರಗಳಿವೆ. ಚೋಳೇಶ್ವರ ದೇವಾಲಯದಲ್ಲಿ ಪುಟ್ಟಕಿಂಡಿಗಳಂತೆ ಎಡಬಲಗಳಲ್ಲಿ ಜಾಲಂದ್ರಗಳನ್ನು ಜೋಡಿಸಿದ್ದಾರೆ.

ನಾಗೇಶ್ವರ ದೇವಾಲಯದಲ್ಲಿ, ನವರಂಗದಲ್ಲಿ ಎಡಕ್ಕೆ ಮಹಿಷಮರ್ದಿನಿ, ಜನಾರ್ದನ, ಈಶಾನ್ಯದಲ್ಲಿ ಭೈರವ, ಆಗ್ನೇಯದಲ್ಲಿ ಚಂದ್ರ ಅಥವಾ ಸೂರ್ಯ ವಿಗ್ರಹಗಳಿವೆ. ದಕ್ಷಿಣದಲ್ಲಿ ಸಪ್ತಮಾತೃಕೆಯರು, ಬಲಭಾಗದಲ್ಲಿ ಗಣಪನಿದ್ದಾನೆ. ಸಪ್ತಮಾತೃಕೆಯರ ಪಟ್ಟಿಕೆಯಲ್ಲಿ ಬಲಕ್ಕೆ ವೀಣಾಧರ ವೀರಭದ್ರನಿದ್ದಾನೆ, ಎಡದಲ್ಲಿರಬೇಕಾದ ಗಣೇಶನಿಲ್ಲ. ಸಪ್ತಮಾತೃಕಾ ಪಟ್ಟಿಕೆ ಬಹುಶಃ ನಂತರದ ಕಾಲದ್ದು, ನಾಗೇಶ್ವರ ದೇವಾಲಯದ ನವರಂಗದ ಪೂರ್ವಭಾಗದಲ್ಲಿ ದ್ವಾರವಿದ್ದು ಎರಡೂ ಕಡೆ ಅರೆಗಂಭಗಳ ರಚನೆಯಿದ್ದು, ಭಿತ್ತಿಭಾಗದಲ್ಲಿ ದ್ವಾರಪಾಲಿಕಾ ಶಿಲ್ಪಗಳುಳ್ಳ ಫಲಕಗಳನ್ನು ಜೋಡಿಸಿದ್ದಾರೆ. ಈ ಫಲಕಗಳು ಜಾಲಂಧ್ರದ ಫಲಕಗಳಂತಿವೆ. ನಾಗೇಶ್ವರ ದೇವಾಲಯದ ಮುಂದೆ ಪ್ರತ್ಯೇಕ ನಂದೀಮಂಟಪವಿದ್ದು, ಮಧ್ಯೆ ನಂದಿಯಿದೆ. ವಿಜಯನಗರದ ಕಾಲದಲ್ಲಿ ಈ ನಂದಿಮಂಟಪವನ್ನೂ ಸೇರಿದಂತೆ ಎರಡೂ ದೇವಾಲಯಗಳ ಮುಂದೆ ಹಲವು ಒರಟು ಕಂಭಗಳುಳ್ಳ ವಿಶಾಲವಾದ ಮಂಟಪವನ್ನು ನಿರ್ಮಿಸಿದ್ದಾರೆ. ನಂದಿ ಮಂಟಪ ಅಧಿಷ್ಠಾನ ಹಾಗೂ ಕಂಭಗಳನ್ನು ಗಂಗರ ಕಾಲದ್ದೆಂದು ಗುರುತಿಸಬಹುದು. ಅಧಿಷ್ಠಾನಭಾಗದಲ್ಲಿ ಗ್ರಂಥಲಿಪಿಯ ತಮಿಳು ಶಾಸನವಿದೆ.


ಇತರ ದೇವಾಲಯಗಳು: ನಾಗೇಶ್ವರ ದೇವಾಲಯದ ಬಲಭಾಗದಲ್ಲಿ ಪ್ರತ್ಯೇಕವಾಗಿ ನಗರೇಶ್ವರ ದೇವಾಲಯವಿದೆ. ಇದರ ಅಧಿಷ್ಠಾನ, ನವರಂಗದ ಕಂಭಗಳು ಹಾಗೂ ಮುಂದಿರುವ ನಂದಿ ಮಂಟಪ ಪ್ರಾಚೀನ ರಚನೆಗಳು.

ನಾಗೇಶ್ವರ ದೇವಾಲಯದ ನಂದಿಮಂಟಪದ ಬಲಭಾಗದಲ್ಲಿ ಕಮಠೇಶ್ವರ ದೇವಾಲಯವಿದೆ. ಈ ದೇವಾಲಯದ ಗರ್ಭಗೃಹ, ಅಂತರಾಳ ಮತ್ತು ನವರಂಗಗಳು ಪ್ರಾಚೀನ ರಚನೆಗಳು. ಗರ್ಭಗೃಹದ ಮೇಲ್ಗಡೆ ಚತುರಶ್ರಕಾರದ ನಾಗರ ಶಿಖರವಿದೆ. ನವರಂಗದ ಹೊರಭಾಗದಲ್ಲಿ ಕುಡ್ಯ ಸ್ತಂಭಗಳನ್ನು ಗುರುತಿಸಬಹುದು. ಕುಡ್ಯಸ್ತಂಭಗಳ ನಂತರದ ಭಾಗವು ನಾಶನಾಗಿದ್ದು ಇತ್ತೀಚೆಗಿನ ಮೇಲ್ಛಾವಣೆ ರಚನೆಯನ್ನು ಕಾಣಬಹುದು. ನವರಂಗದ ಮುಂದೆ ಮಂಟಪಗಳನ್ನು ತದ ನಂತರದ ಕಾಲದಲ್ಲಿ ಜೋಡಿಸಿದ್ದಾರೆ. ನವರಂಗದ ಕಂಭಗಳನ್ನು ಕಿತ್ತು ಬೇರೆಡೆ ಬಳಸಿರಬಹುದು. ಚೋಳೇಶ್ವರ ದೇವಾಲಯದ ಎಡಕ್ಕೆ ಪ್ರತ್ಯೇಕವಾಗಿನಿಂತ ಕರ್ಣೇಶ್ವರ ದೇವಾಲಯದಲ್ಲಿ ಮುಂದುಗಡೆ ಕಾಣುವ ನಾಲ್ಕು ಸ್ತಂಭಗಳನ್ನು ಗಂಗರ ಕಾಲದ್ದೆಂದು ಗುರುತಿಸಲು ಸಾಧ್ಯ.

ದೇವಾಲಯಗಳ ಆವರಣದಲ್ಲಿರುವ ಹಲವು ಪ್ರಾಚೀನ ವೀರಗಲ್ಲುಗಳು ಸ್ಥಳೀಯರ ಅವಜ್ಞೆಯಿಂದಾಗಿ ವಿನಾಶದ ಅಂಚನ್ನು ತಲುಪಿವೆ.




1. ಅಧಿಷ್ಠಾನ



2. ಅಧಿಷ್ಠಾನ



3. ದೇವಾಲಯದ ಭಿತ್ತಿ ಮತ್ತು ಶಿಖರ




4. ದೇವಾಲಯದ ಪಾರ್ಶ್ವನೋಟ



5. ಭಿತ್ತಿಯ ಅಲಂಕರಣ




6. ದೇವಾಲಯದ ಪ್ರವೇಶ ದ್ವಾರ



7. ಪಾರ್ಶ್ವದ ಪ್ರವೇಶ ದ್ವಾರ ಮತ್ತು ಮಂಟಪ

8. ಕೋಷ್ಠ ಮತ್ತು ಮಕರ ತೋರಣ





9. ದೇವಾಲಯದ ಶಿಖರ



10. ದೇವಾಲಯದ ಶಿಖರ




11. ದೇವಕೋಷ್ಠದಲ್ಲಿರುವ ವಿಗ್ರಹ



12. ದೇವಕೋಷ್ಠದಲ್ಲಿರುವ ವಿಗ್ರಹ



13. ನವರಂಗದ ಕಂಬ



14. ದೇವಾಲಯದ ಆವರಣದಲ್ಲಿರುವ ವೀರಗಲ್ಲಿನ ಭಾಗ

34. ಮಯಮತದ ಹಿನ್ನೆಲೆಯಲ್ಲಿ ಬೇಗೂರಿನ ದೇವಾಲಯಗಳು

ಡಾ. ಮನೋಜ್

ಬೆಂಗಳೂರು ಜಿಲ್ಲೆಯ ದಕ್ಷಿಣಕ್ಕಿರುವ ಬೇಗೂರು ಒಂದು ಹೋಬಳಿ ಕೇಂದ್ರ. ಕರ್ನಾಟಕದ ಪ್ರಾಚೀನತಮ ನಗರಗಳಲ್ಲೊಂದಾದ ಬೇಗೂರು, ಇಂದು ನಗರ ವಿಸ್ತರಣದ ಫಲವಾಗಿ ಆಧುನಿಕ ಬೆಂಗಳೂರು ನಗರ ವ್ಯಾಪ್ತಿಗೆ ಸೇರಿದೆ. ಗಂಗರ ಕಾಲದಲ್ಲಿಯೇ ಪ್ರಮುಖ ಕೇಂದ್ರವೆನಿಸಿದ ಬೇಗೂರಿನಲ್ಲಿ, ಅವರ ಕಾಲ ವ್ಯಾಪ್ತಿಗೆ ಸೇರಿದ ಮತ್ತು ವಾಸ್ತುಲಕ್ಷಣಗಳನ್ನುಳ್ಳ ದೇವಾಲಯಗಳ ಸಮುಚ್ಚಯವಿದೆ (ನೋಡಿ ಚಿತ್ರ–1). ಸುತ್ತಲೂ ಹೊಸ ಕಟ್ಟಡಗಳಿಂದ ಆವೃತವಾದ, ಒಂಬತ್ತನೆಯ ಶತಮಾನಕ್ಕೆ ಸೇರಿದ ಈ ದೇವಾಲಯಗಳು, ಅದೃಷ್ಟವಶಾತ್ ತಮ್ಮ ಸ್ವರೂಪವನ್ನು ಸಾಕಷ್ಟು ಉಳಿಸಿಕೊಂಡಿವೆ. ಇವುಗಳು, ಶಾಸನಾಧಾರಗಳಿಂದ, ಗಂಗರ ಪೋಷಣೆಯಲ್ಲಿ ನಿರ್ಮಿತವಾದದ್ದೆಂದು ತಿಳಿದು ಬರುತ್ತದೆ. ಇಲ್ಲಿ ನಾಗೇಶ್ವರ, ನಗರೇಶ್ವರ, ಚೋಳೇಶ್ವರ, ಕಲಿಕಮಟೇಶ್ವರ ಮತ್ತು ಕರ್ಣೇಶ್ವರ ಎಂಬ ಐದು ದೇವಾಲಯಗಳು ಇರುವವು, ಪಂಚಲಿಂಗಗಳ ಪರಿಕಲ್ಪನೆಯ ಹಿನ್ನೆಯಲ್ಲಿ ನಿರ್ಮಿತವಾಗಿರಬಹುದೆಂದು ಅಭಿಪ್ರಾಯ ಪಡಬಹುದಾಗಿದೆ. ಪ್ರಸ್ತುತ ಐದು ದೇವಾಲಯಗಳಲ್ಲಿ ಮೂರು ದೇವಾಲಯಗಳು ಅಂದರೇ, ನಾಗೇಶ್ವರ, ಚೋಳೇಶ್ವರ ಮತ್ತು ಕಲಿಕಮಟೇಶ್ವರ ದೇವಾಲಯಗಳು, ಸಂಪೂರ್ಣ ಸ್ವಸ್ವರೂಪವನ್ನು ಉಳಿಸಿಕೊಂಡಿವೆ. ಗಮನಾರ್ಹವೆಂದರೆ, ದೇವಾಲಯದ ಷಡ್ವರ್ಗಗಳು ಶಿಲಾಘಟಿತವಾಗಿದ್ದು ಮೂಲಸ್ವರೂಪದಲ್ಲಿಯೇ ಇರುವವು. ಪ್ರಸ್ತುತ ಲೇಖನದ ಉದ್ದೇಶ ವಾಸ್ತು ಶಾಸ್ತ್ರ ಗ್ರಂಥವಾದ ಮಯಮತದ ಆಧಾರದ ಮೇಲೆ ಈ ದೇವಾಲಯಗಳನ್ನು ಸೂಕ್ಷ್ಮಾವಲೋಕನ ಮಾಡಿ ವಿಶ್ಲೇಶಿಸುವುದಾಗಿದೆ.

ಈವರೆಗಿನ ಸಂಶೋಧನೆಗಳಿಂದ ಮಯಮತದ ಕಾಲವು ಹತ್ತನೇ ಶತಮಾನಕ್ಕೆ ಸೇರಿದ್ದೆಂದೂ, ದಕ್ಷಿಣ ಭಾರತದ ವಾಸ್ತುಗ್ರಂಥಗಳಲ್ಲಿ ಪ್ರಾಚೀನತಮವಾದದ್ದೆಂದು ತಿಳಿದುಬಂದಿದೆ. ಬೇಗೂರಿನ ದೇವಾಲಯಗಳು ಒಂಬತ್ತನೆಯ ಶತಮಾನಕ್ಕೆ ಸೇರಿದವು. ಶತಮಾನ ವ್ಯತ್ಯಾಸವಿರುವ ನಿರ್ಮಾಣ ಮತ್ತು ಗ್ರಂಥಗಳಲ್ಲಿ ಪರಸ್ಪರ ವಿನಿಮಯ ಇರುವುದರಲ್ಲಿ ಸಂದೇಹವೇನೂ ಇಲ್ಲ. ವಿಶೇಷವೆಂದರೆ ಮಯಮತದಲ್ಲಿ ಬರುವ ದೇವಾಲಯ ವಾಸ್ತು ಲಕ್ಷಣಗಳ ವರ್ಣನೆಗಳಿಗೆ ಪ್ರತ್ಯಕ್ಷ ಉದಾಹರಣೆಯಂತೆ ಬೇಗೂರಿನ ದೇವಾಲಯ ಸಮುಚ್ಚಯವಿರುವುದು. ಅಧಿಷ್ಠಾನದಿಂದ ಸ್ತೂಪಿಯವರೆಗಿನ ಷಡ್ವರ್ಗಗಳು, ಸ್ತಂಭಗಳು, ವಿತಾನ, ದ್ವಾರಬಂಧ, ಹಸ್ತಿಹಸ್ತ, ಸೋಪಾನ ಮೊದಲಾದ ಎಲ್ಲಾ ವಾಸ್ತು ಅಂಗಗಳು ಶಾಸ್ತ್ರೋಕ್ತವಾಗಿ ನಿರ್ಮಾಣಗೊಂಡಿದೆ. ತಲವಿನ್ಯಾಸದಲ್ಲಿಯೂ ಪರಿಪೂರ್ಣ ಪಕ್ವವಾದ ದ್ರಾವಿಡ ದೇವಾಲಯವಿದಾಗಿದೆ.

ತಲವಿನ್ಯಾಸ

ತಲವಿನ್ಯಾಸದಲ್ಲಿ ಎಲ್ಲಾ ದೇವಾಲಯಗಳು ಏಕಪ್ರಕಾರವಾಗಿದ್ದರೂ, ವಿನ್ಯಾಸೂತ್ರದ ಅಂಗವಿಭಕ್ತಿಗಳಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಗರ್ಭಗೃಹ, ಅಂತರಾಲ ಮತ್ತು ಗೂಢಮಂಟಪ ಎಲ್ಲಾ ದೇವಾಲಯಗಳಿಗು ಸಾಮಾನ್ಯವಾಗಿದ್ದು, ನಾಗೇಶ್ವರ ದೇವಾಲಯಕ್ಕೆ ಮೂರಂಕಣದ ಮುಖಮಂಟಪ/ನಂದಿಮಂಟಪವಿದೆ. ಇದೇ ರೀತಿಯ ಮಂಟಪ ನಗರೇಶ್ವರ ದೇವಾಲಯದಲ್ಲೂ ಕಾಣಬಹುದು. ನಾಗೇಶ್ವರ ಮತ್ತು ನಗರೇಶ್ವರ ದೇವಾಲಯಗಳು ವಿನ್ಯಾಸಸೂತ್ರದಲ್ಲಿ ಭದ್ರ, ಕರ್ಣ ಮತ್ತು ಪ್ರತಿಕರ್ಣಗಳನ್ನು ಹೊಂದಿವೆ. ಚೋಳೇಶ್ವರ ದೇವಾಲಯವು ಕರ್ಣ ಮತ್ತು ಭದ್ರಗಳನ್ನು

ಹೊಂದಿದ್ದು, ಕಲಿಕಮಟೇಶ್ವರ ದೇವಾಲಯವು ಕೇವಲ ಭದ್ರಗಳನ್ನು ಮಾತ್ರ ಹೊಂದಿದೆ. ಕರ್ಣೇಶ್ವರ ದೇವಾಲವು ಸಂಪೂರ್ಣ ಭಗ್ನವಾಗಿರುವುದರಿಂದ ಯಾವುದೇ ಅಂಗವಿಭಕ್ತಿಗಳು ಕಾಣುವುದಿಲ್ಲ. ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ಅಂತರಾಲಗಳ ಅಂತರ್ಭಿತ್ತಿಗಳು ಮಾತ್ರವಿದ್ದು ಗೂಢಮಂಪದ ಅಧಿಷ್ಠಾನದ ವಿನ್ಯಾಸ ಗೋಚರವಾಗುತ್ತದೆ. ಗೂಢಮಂಟಪದ ಮಧ್ಯದ ನಾಲ್ಕು ಪೂರ್ವಾಶ್ರ ಕಂಬಗಳು ಮತ್ತು ಮೇಲಿನ ಅಷ್ಟದಿಕ್ಪಾಲಕರಿರುವ ಪಟ್ಟಿಕೆಯ ವಿತಾನ ಮಾತ್ರ ಉಳಿದಿದೆ. ನಗರೇಶ್ವರ ದೇವಾಲಯದಲ್ಲಿ ಅಧಿಷ್ಠಾನವು ಮಾತ್ರ ಉಳಿದ್ದಿದ್ದು, ಮೇಲಿನ ಭಿತ್ತಿಯು ಇತ್ತೀಚಿನ ನಿರ್ಮಾಣವಾಗಿದೆ.

ಚೋಳೇಶ್ವರ ದೇವಾಲಯದ ತಲವಿನ್ಯಾಸದಲ್ಲಿ ಗಮನಾರ್ಹ ಅಂಶವೆಂದರೇ ಅಂತರಾಲಕ್ಕೆ ಪ್ರತಿಯಾಗಿ ಅರ್ಧಮಂಟಪದ ಉಪಸ್ಥಿತಿ. ಹೆಸರೇ ಸೂಚಿಸುವಂತೆ ಇದು ಚೋಳಪ್ರತಿಷ್ಠೆ. ಚೋಳರ ದೇವಾಲಯಗಳ ವಿನ್ಯಾಸದಲ್ಲಿ ಕೇವಲ ಗರ್ಭಗೃಹ ಮತ್ತು ಅರ್ಧಮಂಟಪಗಳನ್ನು ಮಾತ್ರ ಕಾಣಬಹುದೇ ಹೊರತು ಗೂಢಮಂಟಪದ ನಿರ್ಮಾಣವನ್ನು ಸಾಮಾನ್ಯವಾಗಿ ಮಾಡುತ್ತಿರಲ್ಲಿಲ್ಲ. ಆದರೇ ಈ ದೇವಾಲಯವು ಗಂಗರ ಪ್ರಾಂತ್ಯದಲ್ಲಿರುವುದರಿಂದ, ಅವರ ಪ್ರಭಾವದಿಂದ ಗೂಢಮಂಟಪವನ್ನು ನಿರ್ಮಿಸಲಾಗಿದೆ. ಗಂಗರ ಪ್ರಭಾವವೆಂದು ಧೃಡೀಕರಿಸಲು ವಿತಾನದಲ್ಲಿ ಅಷ್ಟದಿಕ್ಪಾಲಕರ ಪಟ್ಟಿಯನ್ನು ಮತ್ತು ಗೂಢಮಂಟಪದ ಭಿತ್ತಿಯಲ್ಲಿ ಗುಳಿಕ ಜಾಲವಾತಾಯನವನ್ನು ಗಮನಿಸಬಹುದು. ದೇವಾಲಯವನ್ನು ನಿರ್ಮಿಸಿದವರು ಚೋಳರಾದರು ಕೆತ್ತಿದ ಓಜರು ಗಂಗಸೀಮೆಯವರಾದ್ದರಿಂದ ಈ ರೀತಿಯಾಗಿರಬಹುದು.

ಅಧಿಷ್ಠಾನ

ಈ ದೇವಾಲಯ ಸಮುಚ್ಚಯದಲ್ಲಿ ನಗರೇಶ್ವರ ದೇವಾಲಯಕ್ಕೆ ಪಾದಬಂಧ ಅಧಿಷ್ಠಾನವನ್ನು, ನಾಗೇಶ್ವರ ಮತ್ತು ಕಲಿಕಮಟೇಶ್ವರ ದೇವಾಲಯಗಳಿಗೆ ಕಪೋತಬಂಧ ಅಧಿಷ್ಠಾನವನ್ನು ಹಾಗೂ ಚೋಳೇಶ್ವರ ದೇವಾಲಯಕ್ಕೆ ಪ್ರತಿಕ್ರಮ ಅಧಿಷ್ಠಾನವನ್ನು ಅಳವಡಿಸಲಾಗಿದೆ. ಮಯಮತದ ಹದಿನಾಲ್ಕನೆಯ ಅಧ್ಯಾಯದಲ್ಲಿ ಅಧಿಷ್ಠಾನಗಳನ್ನು ಕುರಿತ ವ್ಯಾಖ್ಯೆ ಹೆಚ್ಚು ಸ್ಪಷ್ಟವಾಗಿಯೂ ನಿಖರವಾಗಿದೆ. ಸಾಮಾನ್ಯವಾಗಿ ಅಧಿಷ್ಠಾನಗಳನ್ನು ಗುರುತಿಸುವಾಗ ಅವುಗಳ ಪ್ರಧಾನ ಅಂಗಗಳಾದ ಉಪಾನ, ಜಗತಿ, ಕುಮುದ, ಗಳ ಮತ್ತು ಪ್ರತಿಗಳನ್ನು ಪರಿಗಣಿಸಬೇಕೇ ಹೊರತು, ಉಪಾಂಗಗಳಾದ ಕಂಪ, ಅಲಿಂದ, ಮೊದಲಾದವುಗಳನ್ನು ಪರಿಗಣಿಸ ತಕ್ಕದಲ್ಲ. ಪ್ರಧಾನ ಅಂಗಗಳಲ್ಲಿ ಕಂಡುಬರುವ ಸೇರ್ಪಡೆಗಳಿಂದ ಅಥವಾ ಕೆಲವು ಅಂಗಗಳ ಪ್ರಾಮುಖ್ಯತೆಯ ಆಧಾರದ ಮೇಲೆ ಅಥವಾ ಅವುಗಳ ಅಂಗಗಳ ಅಲಂಕರಣ-ಸ್ವರೂಪಗಳಿಂದ ಅಧಿಷ್ಠಾನಗಳನ್ನು ವರ್ಗೀಕರಿಸಲಾಗುವುದು. ಈ ವರ್ಗೀಕರಣವನ್ನು ಹೆಚ್ಚು ಸೂಕ್ತರೀತಿಯಲ್ಲಿ ಮಯಮತ ವಿವರಿಸುತ್ತದೆ.

ಪಾದಬಂಧ ಅಧಿಷ್ಠಾನ ನಮಗೆ ಹೇರಳವಾಗಿ ಕಾಣಸಿಗುವ ಅಧಿಷ್ಠಾನ. ಇದಕ್ಕೆ ಕಾರಣ ಇದರ ಸರಳತೆ ಮತ್ತು ನಿರ್ಮಾಣದಲ್ಲಿ ಸೌಲಭ್ಯ. ಈ ಅಧಿಷ್ಠಾನದ ಅಂಗಗಳು ಉಪಾನ, ಜಗತಿ, ತ್ರಿಪಟ್ಟ ಕುಮುದ, ಗಳ ಮತ್ತು ಪ್ರತಿ. ಸರಳವಾದರೂ ಇದು ಬಹಳ ಒಪ್ಪುವಂತಹ ಬಾಹ್ಯಾಕೃತಿಯನ್ನು ಉಳ್ಳದ್ದು. ಇದು ಮನುಷ್ಯ ಶರೀರದಲ್ಲಿ ಹೇಗೆ ಪಾದಗಳು ಮುಂಚಾಚಿ ಆಧಾರವಾಗಿರುತ್ತದೆಯೋ ಅದೇ ರೀತಿ ದೇವಾಲಯದ ಷಡ್ವರ್ಗದಲ್ಲಿ ಮುಂಚಾಚಿರುತ್ತದೆ. ಆದ್ದರಿಂದಲೇ ಇದನ್ನು ಪಾದಬಂಧವೆಂದು ಸಂಬೋಧಿಸುವುದು (ನೋಡಿ ಚಿತ್ರ-2).

ಕಪೋತಬಂಧ ಅಧಿಷ್ಠಾನ ಇದೇ ರೀತಿಯ ಅಂಗಗಳನ್ನು ಹೊಂದಿದ್ದು, ಇವುಗಳೊಂದಿಗೆ ಗಳ ಮತ್ತು ಪ್ರತಿಗಳ ಮಧ್ಯದಲ್ಲಿ ಒಂದು ಕಪೋತವನ್ನು ಹೊಂದಿರುತ್ತವೆ (ನೋಡಿ ಚಿತ್ರ-3). ಗಮನಾರ್ಹ ಅಂಶವೆಂದರೇ, ಕಪೋತಬಂಧ ಅಧಿಷ್ಠಾನದ ಬಳಕೆ ಹೆಚ್ಚಾಗಿ ಕರ್ನಾಟ ದ್ರಾವಿಡ ಶೈಲಿಯಲ್ಲಿಯೇ ಕಂಡುಬರುವುದು. ಬಾದಾಮಿ

ಚಾಲುಕ್ಯರ ಬಹುಪಾಲು ದೇವಾಲಯಗಳಿಗೆ ಇದೇ ಪ್ರಕಾರದ ಅಧಿಷ್ಠಾನವನ್ನೇ ಅಳವಡಿಸಿರುವುದು. ಚೋಳದ್ರಾವಿಡ ಶೈಲಿಯಲ್ಲಿ ಪಾದಬಂಧದ ಬಳಕೆ ಹೆಚ್ಚು. ಬೇಗೂರು ಈ ಎರಡೂ ಶೈಲಿಗಳ ಕೇಂದ್ರಗಳ ಮಧ್ಯ ಪ್ರದೇಶದಲ್ಲಿರುವುದರಿಂದ ಎರಡು ಪ್ರಕಾರದ ಅಧಿಷ್ಠಾನಗಳ ಬಳಕೆಯನ್ನು ಕಾಣಬಹುದು. ಕಮಟೇಶ್ವರ ದೇವಾಲಯದ ಅಧಿಷ್ಠಾನದಲ್ಲಿ ಕಪೋತದ ಮೇಲಿನ ಪ್ರತಿ ಭಾಗ ಕಾಣುವುದಿಲ್ಲಾ. ಇದು ನಷ್ಟವಾಗಿ ಜೀರ್ಣೋದ್ಧಾರದ ಸಮಯದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದೆಯೋ ಅಥವಾ ನಿರ್ಮಾಣವೇ ಆಗಿಲ್ಲವೋ ಹೇಳುವುದು ಕಷ್ಟ

ಪ್ರತಿಕ್ರಮ ಅಧಿಷ್ಠಾನವು ಉಪಾನ, ಜಗತಿ, ವೃತ್ತ ಕುಮುದ ಮತ್ತು ವಿಶಾಲವಾದ ಪ್ರತಿಮುಖವನ್ನು ಹೊಂದಿರುತ್ತದೆ. ಪ್ರತಿಮುಖದ ತುದಿಗಳಲ್ಲಿ ಮಕರಮುಖಗಳನ್ನೂ ಮತ್ತು ಪ್ರತಿಯ ಕೆಳಗೆ ನಕ್ರಗಳ ಬಿಂಬವನ್ನು ಹೊಂದಿರುತ್ತವೆ. ಈ ಅಧಿಷ್ಠಾನದಲ್ಲಿ ಮುಖ್ಯ ಅಂಗಗಳೆಂದರೆ ವೃತ್ತ ಕುಮುದ ಮತ್ತು ಪ್ರತಿಮುಖ. ನಾಗೇಶ್ವರ ದೇವಾಲಯದ ಅಧಿಷ್ಠಾನದಲ್ಲಿ ಗಾತ್ರದಲ್ಲಿ ಮಂದವಾದ ವೃತ್ತ ಕುಮುದವನ್ನು ಹೊಂದಿದೆ. ಆದರೇ ಸುತ್ತಲಿನ ಅಂಗಳದ ನೆಲವನ್ನು ಎತ್ತರ ಮಾಡಿರುವ ಕಾರಣ ಈ ಕುಮುದದ ಅರ್ಧಭಾಗ ನೆಲದಲ್ಲಿ ಮುಚ್ಚಿಹೋಗಿದೆ. ಕ್ರಮವಾಗಿ ಸಂರಕ್ಷಣ ಕಾರ್ಯವನ್ನು ಕೈಗೊಂಡರೆ ಇದನ್ನು ಹೊರಕ್ಕೆ ತೆಗಿಯ ಬಹುದು. ಕರ್ನಾಟಕದ ಪ್ರಾಚೀನತಮ ಪ್ರತಿಕ್ರಮ ಅಧಿಷ್ಠಾನಗಳಲ್ಲಿ ಇದು ಪ್ರಮುಖವಾದದ್ದು (ನೋಡಿ ಚಿತ್ರ–4).

ಇಲ್ಲಿಯ ದೇವಾಲಯಗಳ ಅಧಿಷ್ಠಾನಗಳು ಮೂರು ಪ್ರಕಾರದ್ದಾಗಿದ್ದರೂ, ಭೀತ್ತಿಯ ಅಲಂಕರಣದಲ್ಲಿ ಹೆಚ್ಚು ವ್ಯತ್ಯಾಸವೇನೂ ಕಾಣುವುದಿಲ್ಲ. ಅದೇ ರೀತಿ ಪ್ರಸ್ತರ ಮತ್ತು ಹಾರಾಗಳು ಏಕಪ್ರಕಾರವಾಗಿದೆ.

ಭಿತ್ತಿ

ಭಿತ್ತಿಗಳು ಭಿತ್ತಿಪಾದಗಳು, ತೋರಣಗಳು ಮತ್ತು ಜಾಲವಾತಾಯನಗಳನ್ನು ಹೊಂದಿವೆ. ಭಿತ್ತಿಪಾದಗಳಲ್ಲೆವು ಬ್ರಹ್ಮಕಾಂತ ವರ್ಗದ್ದಾಗಿವೆ. ಭಿತ್ತಿಪಾದಗಳು ಪೀಠರಹಿತವಾಗಿದ್ದು, ಚೌಕಾಕಾರದ ದಿಂಡು, ಮಲಾಸ್ಥಾನ, ಕುಂಭ, ತಡಿ, ಮಂಡಿ ಮತ್ತು ಫಲಕಗಳನ್ನು ಹೊಂದಿವೆ. ಇವುಗಳಲ್ಲಿ ಚೋಳ (ತಮಿಳು) ದ್ರಾವಿಡ ಶೈಲಿಯಲ್ಲಿ ಬಳಸಲಾಗುವ ಕುಂಭವನ್ನು ದಿಂಡಿನ ಮೇಲೆ ಅಳವಡಿಸಲಾಗಿದೆ. ಇವುಗಳ ಮೇಲೆ ಪ್ರಸ್ತರದ ಉತ್ತರಕ್ಕೆ ಹೊಂದಿಕೊಂಡಂತೆ ಆಧಾರಪೋತಿಕೆಗಳಿವೆ (ನೋಡಿ ಚಿತ್ರ–5).

ತೋರಣಗಳೆಲ್ಲವು ಮಕರತೋರಣೆಗಳೇ ಆಗಿವೆ. ಇವುಗಳಿಗೆ ಮತ್ತೆ ಬ್ರಹ್ಮಕಾಂತ ವರ್ಗದ ಸ್ತಂಭಿಕೆಗಳನ್ನು ನೀಡಿದ್ದು, ಈ ಸ್ತಂಭಿಕೆಗಳು ತೋರಣದ ಉತ್ತರದವರೆಗು ಸೀಳಲ್ಪಟ್ಟ ಅರ್ಧಸ್ತಂಭಿಕೆಗಳಾಗಿವೆ. ಇದು ಮತ್ತೆ ಚೋಳದ್ರಾವಿಡ ಶೈಲಿಯ ಪ್ರಭಾವ. ತೋರಣದ ಮಕರಗಳು ಪರಸ್ಪರ ಅಭಿಮುಖವಾಗಿ ಕೆತ್ತಲಾಗಿವೆ ಮತ್ತು ಇವುಗಳ ಬಾಯಿಂದ ಹೊರಟ ಪುಷ್ಪಪಟ್ಟಿಕೆಯು ಕಮಾನಿನಾಕಾರದಲ್ಲಿದ್ದು ಮುಕ್ತಾಗ್ರಾಸಗಳಿಂದ ಕೂಡಿದೆ. ಮೇಲ್ತುದಿಯಲ್ಲಿ ಪುಷ್ಪಪದಕವಿರುವುದು. ಮಕರಗಳ ಪುಚ್ಛಗಳು ವಲ್ಲಿಮಂಡಲಗಳಂತಿವೆ. ನಾಗೇಶ್ವರ ದೇವಾಲಯದಲ್ಲಿ ಭದ್ರಭಾಗದಲ್ಲಿ ಮತ್ತು ಪ್ರತಿಕರ್ಣಗಳಲ್ಲಿ ಮಕರತೋರಣಗಳನ್ನು ಕಾಣಬಹುದು (ನೋಡಿ ಚಿತ್ರ–6–7).

ಜಾಲವಾತಾಯನಗಳನ್ನು ಕಪಿಲಿಯಲ್ಲಿ, ಅಂದರೇ ಅಂತರಾಲದ ಹೊರಭಿತ್ತಿಯಲ್ಲೂ ಮತ್ತು ಗೂಢಮಂಟಪದ ಹೊರಭಿತ್ತಿಯಲು ನಿಯೋಜಿಸಲಾಗಿದೆ. ಇವುಗಳಲ್ಲಿ ತುರ್ಯಾಶ್ರ , ಗವಾಕ್ಷ ಮತ್ತು ವಲ್ಲಿ ಮಂಡಲ ಜಾಲಕಗಳನ್ನು ಬಳಸಿದ್ದಾರೆ. ತುರ್ಯಾಶ್ರ ಜಾಲಕಗಳು ಚೌಕಾಕಾರದ ರಂಧ್ರಗಳನ್ನು ಹೊಂದಿರುತ್ತವೆ. ರಂಧ್ರಗಳ ಸುತ್ತಲಿರುವ ಪತ್ತಿಗಳ ಮೇಲೆ ರತ್ನಪಟ್ಟಿಕೆಗಳಿವೆ (ನೋಡಿ ಚಿತ್ರ–8). ಗವಾಕ್ಷ ಜಾಲಕಗಳು ರೊಂಬಸ್ ಆಕಾರದ ರಂಧ್ರಗಳನ್ನು ಹೊಂದಿವೆ ಮತ್ತು ಇವುಗಳ ನಡುವಿನ ಪಟ್ಟಿಕೆಗಳಲ್ಲಿ ಪುಷ್ಪಪಟ್ಟಿಕೆಗಳಿವೆ (ನೋಡಿ ಚಿತ್ರ–9). ವಲ್ಲಿಮಂಡಲ

ಜಾಲಕಗಳಲ್ಲಿ, ಪತ್ರಗಳ ನಡುವೆ ನರ್ತಕಿಯರು ಮೊದಲಾದ ವಿವಿಧ ಬಿಂಬಗಳನ್ನು ಚಿತ್ರಿಸಲಾಗಿರುವುದು. ಮಯಮತದಲ್ಲಿ ವಲ್ಲಿಮಂಡಲ ಜಾಲಕಗಳ ಪ್ರಸ್ತಾಪ ಬರುವುದಿಲ್ಲಾ. ಇದರಲ್ಲಿ ಮೇಲಿನ ಅಲಂಕರಣಕ್ಕೆ ಪ್ರಾಶಸ್ತ್ಯ ಕೊಡದೆ, ವಾತಾಯನಕ್ಕೆ ಅನುಕೂಲವಾದ ರಂಧ್ರಗಳ ಆಕಾರಕ್ಕೆ ಪ್ರಾಶಸ್ತ್ಯ ಕೊಟ್ಟಂತೆ ತೋರುತ್ತದೆ. ಹೀಗಾಗಿ ಉಬ್ಬುಶಿಲ್ಪಗಳ ಮಧ್ಯದಲ್ಲಿ ಗಾಳಿ ಮತ್ತು ಬೆಳಕಿನ ಪ್ರವೇಶಕ್ಕೆ ಮಾಡಲಾದ ಕಿಂಡಿಗಳು ಗುಳಿಕಾ (ಗುಂಡಗೆ) ಆಕಾರವಾಗಿರುವುದರಿಂದ ಇವುಗಳನ್ನು ಗುಳಿಕ ಜಾಲವಾತಾಯನಗಳೆಂದೆ ಪರಿಗಣಿಸಿದೆ (ನೋಡಿ ಚಿತ್ರ–10).

ಪ್ರಸ್ತರ

ಪಸ್ತರದ ಅಂಗಗಳೆಂದರೆ ಉತ್ತರ, ವಲಭಿ, ಕಪೋತ ಮತ್ತು ವಾಜನ. ಉತ್ತರವು ಸಾಮಾನ್ಯವಾಗಿ ನಿರಂಲಕೃತವಾಗಿರುತ್ತದೆ. ಈ ದೇವಾಲಯಗಳಲ್ಲಿ ವಲಭಿಯಲ್ಲಿ ಭೂತಮಾಲಿಕೆಯ ಅಲಂಕರಣವಿದೆ (ನೋಡಿ ಚಿತ್ರ–11). ಇದು ಹತ್ತನೆಯ ಶತಮಾನಕ್ಕಿಂತಲೂ ಪೂರ್ವದ ಲಕ್ಷಣ. ಹತ್ತನೆಯ ಶತಮಾನಕ್ಕೆ ಪೂರ್ವದಲ್ಲಿ ನಿರ್ಮಾಣವಾಗಿರುವ ದೇವಾಲಯಗಳು ಭೂತಮಾಲೆಯನ್ನೋ ಚಕ್ರವಾಕಮಾಲೆಯನ್ನೊ ಹೊಂದಿರುತ್ತವೆ. ನಂತರದ ಕಾಲದಲ್ಲಿ ಕೇವಲ ಪದ್ಮದಳಗಳನ್ನೇ ಬಹುಪಾಲು ಬಳಸಿರುವುದು. ನಗರೇಶ್ವ ದೇವಾಲಯದ ವಲಭಿಯು ಚಕ್ರವಾಕ ಮಾಲಿಕರಯನ್ನು ಹೊಂದಿದೆ. ಆದರೇ ಈಗ ಅದು ಸಾಕಷ್ಟು ಸವೆದಿದೆ.

ಕಪೋತವು, ಹೆಸರೇ ಸೂಚಿಸುವಂತೆ ಕಪೋತ ಪಕ್ಷಿಯ, ಅಂದರೇ ಪಾರಿವಾಳದ ಶಿರೋಭಾಗದ ಹೊರ ರೇಖೆಯನ್ನು ಹೋಲುತ್ತದೆ. ಪ್ರಾರಂಭ ಕಾಲಗಳಲ್ಲಿ ಕಾಲುವೃತ್ತಾಕಾರವಿದ್ದ ಈ ಕಪೋತ ನಂತರ ತನ್ನ ಸ್ವರೂಪದಲ್ಲಿ ಕೆಲವೊಂದು ಬದಲಾವಣೆಗಳನ್ನು ಹೊಂದುವುದು ಕಾಣಬಹುದು. ಆದರೇ ಈ ದೇವಾಲಯಗಳಲ್ಲಿ ಕಾಣುವ ಕಪೋತಗಳು ಪ್ರಾಚೀನ ಪದ್ಧತಿಯ ಕಪೋತಗಳೇ ಆಗಿವೆ. ಕಪೋತಗಳ ಮೇಲ್ಮುಖದಲ್ಲಿ ನಾಸಿಗಳನ್ನು ಕೆತ್ತಲಾಗಿವೆ. ಭಿತ್ತಯ ಪ್ರತಿಕರ್ಣಗಳ ಮೇಲಿನ ಕಪೋತಗಳ ನಾಸಿಗಳ ನೈಕಟ್ಯ, ಅವುಗಳು ನೇತ್ರನಾಸಿಗಳೋ ಎಂಬ ಸಂದೇಹಕ್ಕೆ ಎಡೆಮಾಡುತ್ತವೆ.

ಕಪೋತದ ಮೇಲೆ ವಾಜನವಿರುವುದು. ಇದನ್ನು ಶಾಸ್ತ್ರಗ್ರಂಥಗಳು 'ಪ್ರಚ್ಛಾದನಸ್ಯ ಆಸ್ಯ' ಎಂದು ಕರೆದಿವೆ. ಈ ವಾಜನವು ದೇವಾಲಯದ ವಿತಾನದ ಹಾಸುಗಲ್ಲುಗಳಾಗಿದ್ದು ಅಂತರ್ಭಿತ್ತಿ ಮತ್ತು ಬಾಹ್ಯಭಿತ್ತಿಗಳ ಮೇಲೆ ಅವುಗಳನ್ನು ಸೇರಿಸುವ ರೀತಿ ಕೂಡಿಸಲಾಗಿರುತ್ತದೆ. ಆದ್ದರಿಂದಲೇ ಇದಕ್ಕೆ ಪ್ರಚ್ಛಾದನಸ್ಯಾಸ್ಯವೆಂದು ಕರೆಯುವುದು. ಇದರ ಹೊರಮುಖದಲ್ಲಿ ವ್ಯಾಳಮಾಲೆಯನ್ನೋ ಚಕ್ರವಾಕ ಮಾಲೆಯನ್ನೊ ಕೆತ್ತಿರುತ್ತಾರೆ. ಬೇಗೂರಿನ ದೇವಾಲಯಗಳಲ್ಲಿ ವ್ಯಾಳಮಾಲೆಯ ಅಲಂಕರಣವನ್ನು ಕಾಣಬಹುದು.

ಹಾರಾ

'ಹಾರಾ' ಎಂಬುದು ವಾಜನದ ಮೇಲಿನ ಕೈಪಿಡಿಯನ್ನು ಉದ್ದೇಶಿಸುತ್ತದೆ. ಇದು ಶಾಲಾ, ಕೂಟ ಮತ್ತು ಪಂಜರಗಳೆಂಬ ವಾಸ್ತು ಅಂಗಗಳನ್ನು ಸರಣಿಯಾಗಿ ಜೋಡಿಸಿ ರೂಪಿಸಲಾಗುತ್ತದೆ (ನೋಡಿ ಚಿತ್ರ–12). ವಿಮಾನದ ಮೇಲೆ ಬರುವ ಹಾರಾ, ಕ್ರಮೇಣ ಮೇಲಕ್ಕೆ ಹೋದಂತೆ ಗಾತ್ರದಲ್ಲಿ ಕುಗ್ಗಿ, ತಲಗಳ ಎಣಿಕೆಗೆ ಸಹಾಯಕವಾಗುತ್ತವೆ. ಆದರೇ ಗೂಢಮಂಟಪದಮೇಲೆ ಒಂದೇ ಸಾಲಿನ ಹಾರವನ್ನು ನಿರ್ಮಿಸಲಾಗುವುದು. ಬೇಗೂರಿನಲ್ಲಿ ಕಾಣುವ ಹಾರದ ಅಂಗಗಳು ಬಹಳ ಸ್ಫಷ್ಟವಾದ ಅವಯವಗಳನ್ನು ಹೊಂದಿವೆ. ಆಯತಾಕಾರದ ಶಾಲಾ ಮಧ್ಯದಲ್ಲಿ ಭದ್ರದ ಮೇಲ್ಭಾದಲ್ಲಿ ಮತ್ತು ಚತುರಶ್ರಾಕಾರದ ಕೂಟಗಳು ಮೂಲೆಯ ಕರ್ಣಗಳ ಮೇಲೆ ನಿಂತಿವೆ. ಇವುಗಳ ಮಧ್ಯದಲ್ಲಿ ಪಂಜರಗಳನ್ನು ಯೋಜಿಸಲಾಗಿದೆ. ವಿಶೇಷವೆಂದರೇ ಇಲ್ಲಿಯ ಹಾರಾ

ಅನರ್ಪಿತವರ್ಗಕ್ಕೆ ಸೇರುತ್ತದೆ (ನೋಡಿ ಚಿತ್ರ-13). ಗಮನಾರ್ಹವೆಂದರೆ, ನಾಗೇಶ್ವರ ದೇವಾಲಯದಲ್ಲಿ ಎರಡನೆಯ ತಲದ ಭಿತ್ತಿಯಮೇಲಿರುವ ವೃತ್ತಸ್ಫುಟಿತಗಳಿಗೆ ಮೇಲಿನ ಕಪೋತದ ನಾಸಿಗಳನ್ನು ಹೊಂದುವಂತೆ ಜೋಡಿಸಿ ಪಂಜರಗಳನ್ನು ರೂಪಿಸಿದ್ದಾರೆ (ನೋಡಿ ಚಿತ್ರ-14). ಮಯಮತದಲ್ಲಿ ಎರಡನೆಯ ತಲದ ಭಿತ್ತಿಯನ್ನಾಗಲೀ, ಹಾರದ ಅಂಗಗಳ ನಡುವೆಯಾಗಲಿ ವೃತ್ತಸ್ಫಟಿತಗಳ ಅಲಂಕರಣವಿರಬೇಕು ಎನ್ನಲಾಗಿದೆ. ಈ ದೇವಾಲಯವು ಈ ವ್ಯಾಖ್ಯೆಯನ್ನು ಯಶಸ್ವಿಯಾಗಿ ಪೂರೈಸಿದೆ. ಈ ದೇವಾಲಯವು ದ್ವಿತಲ ವಿಮಾನವನ್ನು ಹೊಂದಿದ್ದರೂ 'ಹಾರಾ'ವನ್ನು ಮೊದಲನೆಯ ತಲದ ಮೇಲೆ ಮಾತ್ರ ನಿರ್ಮಿಸಲಾಗಿದೆ.

ಪ್ರಾಸಾದ-ಶಿಖರ

ದೇವಾಲಯದ ವಿಮಾನದ ಮೇಲ್ಭಾಗದಲ್ಲಿ ನಿರ್ಮಿಸಲಾಗುವ ಐದನೇ ವರ್ಗವೇ ಶಿಖರ ಅಥವಾ ಪ್ರಸಾದ. ಶಿಖರವೆಂಬುದು ಗ್ರೀವದ ಮೇಲಿರುವ ಭಾಗವಾದ್ದರಿಂದ, ಇಡೀ ವಿಮಾನದ ಮೇಲ್ಭಾಗವನ್ನು ನಿರ್ದಿಷ್ಟ ಪ್ರಕಾರಗಳಾಗಿ ವಿಭಜಿಸಲು ತಲಗಳನ್ನೂ ಪರಿಗಣಿಸಿಬೇಕಾಗುತ್ತದೆ. ಅಲ್ಲದೆ ಪ್ರಾಸಾದಗಳ ಪ್ರಕಾರ-ಪ್ರಭೇದವನ್ನು ಗುರುತಿಸಲು ಶಾಲಾ ಮತ್ತು ಕೂಟಗಳು ಮತ್ತು ಅವುಗಳ ಮೇಲಿರುವ ಅಲ್ಪನಾಸಿಗಳ ಸಂಖ್ಯೆಯು ಮುಖ್ಯವಾಗುತ್ತದೆ. ಹೀಗಾಗಿ ಇಂತಹ ಸಂದರ್ಭಗಳಲ್ಲಿ ಪ್ರಸಾದವೆಂಬ ಪದದ ಬಳಕೆಯೇ ಹೆಚ್ಚು ಸೂಕ್ತವಾಗುತ್ತದೆ. ಪ್ರಸಾದದಲ್ಲಿ ಪ್ರಸ್ತರದ ಮೇಲಿನ ಉಳಿದ ಮೂರು ವರ್ಗಗಳು ಸೇರಿಕೊಳ್ಳುತ್ತವೆ. ಗ್ರೀವವು ಸಾಮಾನ್ಯವಾಗಿ ಶಿಖರದ ಆಕಾರದಲ್ಲಿಯೇ ಇರುತ್ತವೆ. ಮೇಲಿನ ಸ್ತೂಪಿಯು ಶಿಲೆಯಲ್ಲಿ ಅಥವಾ ಲೋಹದಲ್ಲಿ ನಿರ್ಮಿಸಲಾದ ಕಳಶವಾಗಿರುತ್ತವೆ. ಶಿಖರವು ಮಾತ್ರ ವೃತ್ತ, ಅಷ್ಟಮುಖ ಮತ್ತು ಚತುರ್ಮುಖಗಳನ್ನು ಹೊಂದಿರುತ್ತದೆ.

ಬೇಗೂರಿನ ದೇವಾಲಯಗಳು ಮೂಲ ಶಿಲಾ ಶಿಖರಗಳನ್ನು ಉಳಿಸುಕೊಂಡಿರುವುದು ಅಧ್ಯಾತ್ಯಗಳಿಗೆ ಅದೃಷ್ಟವೇ ಸರಿ. ಕಲಿಕಮಟೇಶ್ವರ ದೇವಾಲಯದಲ್ಲಿ ಶ್ರೀಕರ ಶಿಖರವನ್ನು ಕಾಣಬಹುದು. ವಿತಾನದ ಮೇಲೆ ನೇರವಾಗಿ, ಅಷ್ಟೇನು ಎತ್ತರವಲ್ಲದ ವೇಧಿಯ ಮೇಲೆ ಚತುರಶ್ರಾಕಾರದ ಗ್ರೀವದ ಮೇಲೆ, ಬ್ರಹ್ಮಚ್ಛಂದ ಶಿಖರವನ್ನು ಕೂಡಿಸಲಾಗಿದೆ. ಈ ಶಿಖರದ ನಾಲ್ಕು ಮುಖಗಳಲ್ಲೂ ಭದ್ರಗಳಂತೆ ಮುಂಚಾಚುಗಳಿದ್ದು ಮಹಾನಾಸಿಗಳನ್ನು ಹೊಂದಿರುತ್ತದೆ. ಇದು ಏಕತಲ ವಿಮಾನಗಳ ವರ್ಗಕ್ಕೆ ಸೇರುವ ಶಿಖರವೆಂದು ಮಯಮತದಲ್ಲಿ ಹೇಳಲಾಗಿದೆ (ನೋಡಿ ಚಿತ್ರ-15).

ಚೋಳೇಶ್ವರ ದೇವಾಲಕ್ಕೆ ದ್ವಿತಲ ಸ್ವಸ್ತಿಕ ಪ್ರಾಸಾದವನ್ನು ನಿರ್ಮಿಸಲಾಗಿದೆ. ಈ ಪ್ರಕಾರದ ಪ್ರಾಸಾದವು ನಾಲ್ಕು ಶಾಲಾ, ನಾಲ್ಕು ಕೂಟಗಳು ಮತ್ತು ಎಂಟು ಪಂಜರಗಳನ್ನು ಹೊಂದಿರಬೇಕು. ಇದರ ನಾಸಿಗಳ ಸಂಖ್ಯೆ 48. ಎರಡನೆಯ ತಲದ ಮೇಲೆ ಚತುರಶ್ರಾಕಾರದ ಗ್ರೀವದ ಮೇಲೆ ಬ್ರಹ್ಮಚ್ಛಂದ ಶಿಖರವನ್ನು ಕಾಣಬಹುದು. ಗ್ರೀವದ ಸುತ್ತಲೂ ಗ್ರೀವದೇವತಗಳನ್ನು, ಕ್ರಮವಾಗಿ ಶಿವ, ದಕ್ಷಿಣಾಮೂರ್ತಿ, ವಿಷ್ಣು, ಮತ್ತು ಬ್ರಹ್ಮನ ಶಿಲ್ಪಗಳನ್ನು ನಿರ್ಮಿಸಲಾಗಿದೆ. ವೇಧಿಯ ನಾಲ್ಕು ಮೂಲೆಗಳಲ್ಲಿ ನಂದಿಯ ಪ್ರತಿಮೆಗಳನ್ನು ಕಾಣಬಹುದು. ಗ್ರೀವದೇವತೆಗಳಿಗೆ ಪ್ರಭಾವಲಿಯಂತೆ ಶಿಖರದ ಮಹಾನಾಸಿಗಳನ್ನು ರೂಪಿಸಲಾಗಿದೆ (ನೋಡಿ ಚಿತ್ರ-16).

ನಾಗೇಶ್ವರ ದೇವಾಲಯವೂ ದ್ವಿತಲ ವಿಮಾನವಾಗಿದ್ದು ಮಂದರ ಪ್ರಾಸಾದವನ್ನು ಹೊಂದಿದೆ. ಈ ಪ್ರಾಸಾದದ ಪ್ರಸ್ತಾಪ ಮಯಮತದಲ್ಲಿ ಕಾಣುವುದಿಲ್ಲಾ. ಆದರೇ, ಇದರ ಯಥಾವತ್ತಾದ ವರ್ಣನೆ ವಿಮಾನಾರ್ಚಕಲ್ಪದಲ್ಲಿ ದೊರಕುತ್ತದೆ. ಮೇಲಿನ ಶಿಖರ ವೃತ್ತಾಕಾರದ ರುದ್ರಚ್ಛಂದ ವರ್ಗದ್ದಾಗಿರಬೇಕು. ಪ್ರಸ್ತುತ ಪ್ರಾಸಾದವು ಈ ಎಲ್ಲಾ ಲಕ್ಷಣಗಳನ್ನು ಹೊಂದಿದೆ. ಪ್ರಾಯಶಃ ಮಯಮತದ ಮೂಲಗ್ರಂಥದಲ್ಲಿ ಇದರ ಪ್ರಸ್ತಾಪವಿದ್ದು, ಕಾಲಕ್ರಮೇಣ

ಅವರ್ಣನೀಯ ಕಾರಣದಿಂದ ನಷ್ಟವಾಗಿರಬಹುದು. ದುರದೃಷ್ಟವಶಾತ್ ನಗರೇಶ್ವರ ಮತ್ತು ಕರ್ಣೇಶ್ವರ ದೇವಾಲಯಗಳ ಶಿಖರಭಾಗ ನಷ್ಟವಾಗಿದೆ (ನೋಡಿ ಚಿತ್ರ–17).

ಚೋಳೇಶ್ವರ ಮತ್ತು ನಾಗೇಶ್ವರ ದೇವಾಲಯಗಳಲ್ಲಿ ಗ್ರೀವದೇವತೆಗಳಿರುವುವೆಂದು ಈ ಹಿಂದೆಯೇ ಹೇಳಲಾಗಿದೆ.ಇವುಗಳಲ್ಲಿ ಒಂದು ಮೂರ್ತಿಯು ಗಮನವನ್ನು ಸೆಳೆಯುತ್ತದೆ. ಗ್ರೀವದ ಪೂರ್ವದ ಭದ್ರದಲ್ಲಿ ಗಜಾರೋಹಣನಾದ ಶಿವನ ಪ್ರತಿಮೆಯಿದೆ. ಇದು ಪಲ್ಲವರಲ್ಲಿ ಸಹಜವಾಗಿ ಕಂಡು ಬರುವ ಅಂಶ. ಪ್ರಾಯಶಃ ಇಲ್ಲಿಯ ಶಿವನಿಗೆ ನಾಗೇಶ್ವರ ಎಂಬ ಹೆಸರಿರುವುದರಿಂದ ಶಿವನನ್ನು ಗಜಾರೋಹಣನಾಗಿ ತೋರಿರಬಹುದು. ನಾಗ ಎಂದರೇ ಆನೆಯೆಂಬ ಅರ್ಥವೂ ಇದೆ (ನೋಡಿ ಚಿತ್ರ–18).

ಸ್ತಂಭ

ಬೇಗೂರಿನಲ್ಲಿ ಮಯಮತದಲ್ಲಿ ವಿವರಿಸಲ್ಪಟ್ಟ ಪ್ರಮುಖವಾದ ಸ್ತಂಭಗಳ ಪ್ರಕಾರಗಳನ್ನು ಕಾಣಬಹುದು. ಮೊದಲನೆಯದಾಗಿ ಬ್ರಹ್ಮಕಾಂತ ಸ್ತಂಭವನ್ನು ವಿರಿಸುತ್ತದೆ. ಬ್ರಹ್ಮಕಾಂತ ಸ್ತಂಭದ ದಿಂಡು ನಾಲ್ಕು ಮುಖಗಳನ್ನು ಹೊಂದಿರುತ್ತದೆ. ಇದರ ಕುಂಭ ಮತ್ತು ತಡಿಗಳೂ ಸಹ ಚತುರಶ್ರವಾಗಿಯೇ ಇರುತ್ತವೆ. ಇಂತಹ ಸ್ತಂಭಗಳನ್ನು ಬೇಗೂರಿನ ಚೋಳೇಶ್ವರ ದೇವಾಲಯದ ಅರ್ಧಮಂಟಪದಲ್ಲಿ ಮತ್ತು ನಾಗೇಶ್ವರ ದೇವಾಲಯದ ಮುಖಮಂಟಪದಲ್ಲಿ ಕಾಣಬಹುದು. ಚೋಳೇಶ್ವರ ದೇವಾಲಯದ ಅರ್ಧಮಂಟಪದಲ್ಲಿರುವ ಸ್ತಂಭಗಳಿಗೆ ಫಲಕ ಮತ್ತು ಮಂಡಿಗಳಿಲ್ಲದೇ, ತಡಿಯ ಮೇಲೆ ನೇರವಾಗಿ ಆಧಾರ ಪೋತಿಕೆಯನ್ನು ಸಂಯೋಜಿಸಲಾಗಿದೆ. ಫಲಕ ಮತ್ತು ಮಂಡಿಯ ಅನುಪಸ್ಥಿತಿ ಹತ್ತನೆಯ ಶತಮಾನಕ್ಕೆ ಪೂರ್ವದ ಲಕ್ಷಣ. ಮಹಾಮಂಟಪದಲ್ಲಿರುವ ಬ್ರಹ್ಮಕಾಂತ ಸ್ತಂಭಗಳು ಫಲಕ ಮತ್ತು ಮಂಡಿಗಳನ್ನು ಹೊಂದಿವೆ. ಇವುಗಳ ಮೇಲೆ ತರಂಗ ಪೋತಿಕೆಯನ್ನು ಕಾಣಬಹುದು. ಇದು ಈ ಸಮುಚ್ಚಯದಲ್ಲಿ ಚೋಳದ್ರಾವಿಡ ಮತ್ತು ಕರ್ನಾಟದ್ರಾವಿಡ ಶೈಲಿಯ ಬಳಕೆಗೆ ಮತ್ತೊಂದು ನಿದರ್ಶನವಾಗಿದೆ. ಈ ಪ್ರಕಾರದ ನಾಲ್ಕು ಸ್ತಂಭಗಳನ್ನು .ಕಾಣಬಹುದು (ನೋಡಿ ಚಿತ್ರ–19).

ಅಷ್ಟಮುಖಗಳುಳ್ಳ ದಿಂಡನ್ನು ಹೊಂದಿರುವ ಸ್ತಂಭವನ್ನು ವಿಷ್ಣುಕಾಂತ ಸ್ತಂಬವೆನ್ನಲಾಗಿದೆ . ಇದರ ಕುಂಭ ಮತ್ತು ತಡಿಗಳು ಅಷ್ಟಾಶ್ರವಾಗಿಯೇ ಇರುತ್ತವೆ. ಇಂತಹ ನಾಲ್ಕು ವಿಷ್ಣುಕಾಂತ ಸ್ತಂಭಗಳನ್ನು ಚೋಳೇಶ್ವರ ದೇವಾಲಯದ ಗೂಢಮಂಟಪದಲ್ಲಿ ಕಾಣಬಹುದು. ಈ ಸ್ತಂಭಗಳು ಮುಕ್ತಾಗ್ರಾಸಗಳು ಮತ್ತು ಅವುಗಳ ನಡುವೆ ನರ್ತಕಿಯರ ಬಿಂಬಗಳ ಅಲಂಕರಣವನ್ನು ಹೊಂದಿವೆ (ನೋಡಿ ಚಿತ್ರ–20).

ಮಯಮತದ ಪ್ರಕಾರ ರುದ್ರಕಾಂತ ಸ್ತಂಭವು ವೃತ್ತಾಕಾರದ ದಿಂಡನ್ನು ಹೊಂದಿರುತ್ತದೆ. ಇದರ ಕುಂಭ ಮತ್ತು ತಡಿಗಳು ವೃತ್ತವಾಗಿಯೇ ಇರಬೇಕು. ಇಂತಹ ಸ್ತಂಭಗಳನ್ನು ನಾಗೇಶ್ವರ ದೇವಾಲಯದ ಗೂಢಮಂಟಪ ಮತ್ತು ಅದರ ಮುಂಭಾಗದಲ್ಲಿ ಕಾಣಬಹುದು. ಗೂಢಮಂಟಪದ ಸ್ತಂಭಗಳು ಹೇರಳವಾದ ಅಲಂಕರಣವನ್ನು ಹೊಂದಿದೆ (ನೋಡಿ ಚಿತ್ರ–21).

ಸೌಮ್ಯಕಾಂತಸ್ತಂಭವು ಕುಂಭ ಮತ್ತು ತಡಿ ಸೇರಿದಂತೆ ಹದಿನಾರು ಮುಖಗಳನ್ನು ಹೊಂದಿರುತ್ತದೆ. ಈ ಪ್ರಕಾರದ ಸ್ತಂಭಗಳನ್ನು ನಗರೇಶ್ವರ ದೇವಾಲಯದ ಮುಂದಿರುವ ಮಹಾಮಂಟಪದಲ್ಲಿ ಕಾಣಬಹುದು(ನೋಡಿ ಚಿತ್ರ–22) .

ಮಯಮತದಲ್ಲಿ ಪೂರ್ವಾಶ್ರ ಸ್ತಂಭಗಳ ಪ್ರಸ್ತಾಪವಿರುವುದು. ಸ್ತಂಭದ ಪೀಠ ಚೌಕಾಕಾರವಾಗಿದ್ದು ಮೇಲೆ ದಿಂಡಿನ ಕೆಳಭಾಗ ಅಷ್ಟಾಶ್ರವಾಗಿರುತ್ತದೆ. ದಿಂಡು ಸಾಮಾನ್ಯವಾಗಿ ಘಂಟಾಕಾರವಾಗಿಯೇ ಇರುತ್ತದೆ.

ಘಂಟಾಕಾರದ ದಿಂಡಿನ ಮೇಲೆ ಕುಂಭವೂ ಇರುತ್ತದೆ. ಈ ಸ್ತಂಭಗಳು ತಡಿ, ಮಂಡಿ ಮತ್ತು ಫಲಕಗಳನ್ನೂ ಹೊಂದಿರುತ್ತವೆ. ಗಂಗರು ಈ ಪ್ರಾಕಾರದ ಸ್ತಂಭಗಳನ್ನು ಹೆಚ್ಚು ಬಳಸಿದ್ದಾರೆಂದರೇ ಅತಿಶಯೋಕ್ತಿಯಾಗಲಾರದು. ಬೇಗೂರಿನ ದೇವಾಲಯದ ಒಳ ಆವರಣದಲ್ಲಿ ಇಂತಹ ಹಲವಾರು ಸ್ತಂಭಗಳನ್ನು ಕಾಣಬಹುದು (ನೋಡಿ ಚಿತ್ರ–23).

ಉಳಿದ ಅಂಗಗಳು

ಈ ದೇವಾಲಯ ಸಮುಚ್ಚಯದಲ್ಲಿ ಕೆಲವು ಹಸ್ತಿಹಸ್ತಗಳನ್ನು ಕಾಣಬಹುದು. ಆದರೇ ನಗರೇಶ್ವರ ದೇವಾಯಲದ ಮಹಾಮಂಟಪಕ್ಕೆ ನೀಡಿರುವ ಹಸ್ತಿಹಸ್ತಗಳನ್ನು ಹೊರತು ಪಡಿಸಿ ಉಳಿದ ಹಸ್ತಸ್ತಿ ಹಸ್ತಗಳೆಲ್ಲವು ಅರ್ಧಭಾಗ ಅಥವಾ ಇನ್ನು ಹೆಚ್ಚುಭಾಗ ನೆಲದಲ್ಲಿ ಹೂತುಹೋಗಿದೆ. ಇವುಗಳು ಮಕರಮುಖದ ಹಸ್ತಿಹಸ್ತಗಳಾಗಿವೆ. ನಗರೇಶ್ವರ ದೇವಾಲಯದ ಹಸ್ತಿಹಸ್ತದ ಪಕ್ಷಶಿಲೆಯಲ್ಲಿ ಹೊರಮುಖದ ಮೇಲೇ ನಿಧಿಗಳನ್ನು ಕೆತ್ತಲಾಗಿದೆ (ನೋಡಿ ಚಿತ್ರ–24–25).

ದ್ವಾರಬಂಧಗಳು ಲಲಾಟದಲ್ಲಿ ಗಜಲಕ್ಷ್ಮಿಯನ್ನೂ ಅಷ್ಟಮಂಗಳಗಳನ್ನು ಹೊಂದಿದೆ (ನೋಡಿ ಚಿತ್ರ–26). ಇದು ವಿಶೇಷವಾಗಿ ಗಂಗ–ನೊಳಂಬ ಶೈಲಿಯಲ್ಲಿ ಕಂಡುಬರುವ ಲಕ್ಷಣ. ಪೇದ್ಯಗಳಲ್ಲಿ ನಿಧಿಗಳ ಬಿಂಬವಿರುತ್ತದೆ (ನೋಡಿ ಚಿತ್ರ–27–28).

ಈ ದೇವಾಲಯ ಸಮುಚ್ಚಯದಲ್ಲಿರುವ ಪ್ರಣಾಳಗಳಲ್ಲಿ ನಾಗೇಶ್ವರ ದೇವಾಲಯದಲ್ಲಿ ಭೂತಮುಖ ಪ್ರಣಾಳವನ್ನೂ ನಗರೇಶ್ವರ ಮತ್ತು ಚೋಳೇಶ್ವರ ದೇವಾಲಯಗಳಲ್ಲಿ ಸಿಂಹಮುಖ ಪ್ರಣಾಲಗಳನ್ನು ಕಾಣಬಹುದು (ನೋಡಿ ಚಿತ್ರ–29–30). ಎಲ್ಲವೂ ದೇವಾಯಲದ ಎಡ ಭಿತ್ತಿಯ ಮೇಲೆ, ಅಂದರೇ ಉತ್ತರ ದಿಕ್ಕಿಗೆ ಸಂಯೋಜಿಸಲಾಗಿದೆ. ಇವಲ್ಲದೆ ಪ್ರಸ್ತರದ ಮೇಲ್ಭಾಗದ ಹಾರದ ಮಧ್ಯದಲ್ಲಿ, ಅಲ್ಲಲ್ಲಿ ಅಂಬುಮಾರ್ಗಗಳನ್ನು ಇಡಲಾಗಿದೆ.

ಈ ದೇವಾಲಯದಲ್ಲಿ ಗಮನಾರ್ಹವಾದ ಮತ್ತೊಂದು ಅಂಶವೆಂದರೇ ನಾಗೇಶ್ವರ ದೇವಾಲಯದ ಪ್ರತಿಕರ್ಣಗಳ ಸ್ವರೂಪ. ಪ್ರತಿಕರ್ಣದ ಮೇಲಿನ ಪಂಜರವು ಪ್ರಸ್ತರದ ಮೇಲಿನ ಹಾರದಲ್ಲಿರುವ ಶಾಲಾ ಮತ್ತು ಕೂಟಗಳಿಗಿಂತ ಕೆಳಗಿನ ಸ್ತರದಲ್ಲಿರುವುದು. ಅಧಿಷ್ಠಾನದಿಂದ ಭಿತ್ತಿಯ ಮಧ್ಯಭಾಗದವರೆಗು ಇದರ ಭಿತ್ತಿಯಿದ್ದು, ಮೇಲಿನ ಕಪೋತದ ಮೇಲೆ ಪಂಜರವನ್ನು ನಿರ್ಮಿಸಲಾಗಿದೆ. ಪಂಜರವು ಎತ್ತರವಾಗಿದ್ದು, ಮಹಾನಾಸಿಯ ಕೆಳಗೆ ಕೂಟ ತೋರಣವನ್ನು ಹೊಂದಿದೆ. ಈ ಪ್ರತಿಕರ್ಣದ ವಿನ್ಯಾಸವು ಸ್ತಂಭದಂತೆ ಕೃಶವಾಗಿರುವುದು. ಜೋತೆಗೆ ಮೇಲ್ತುದಿಯಲ್ಲಿ ಪಂಜರ ರೂಪದಲ್ಲಿ ಸ್ವತಂತ್ರವಾದ ಶಿಖರವನ್ನು ಹೊಂದಿರುವುದು. ಈ ವಿನ್ಯಾಸದ ಪ್ರತಿಕರ್ಣವು ನಂತರದ ಕಲ್ಯಾಣ ಚಾಲುಕ್ಯರ ದೇವಾಲಯಗಳಲ್ಲಿ ಬಳಸಲಾಗುತ್ತಿದ್ದ ಶಿಖಾಸ್ತಂಭದ ಪೂರ್ವರೂಪ ಎನ್ನಬಹುದು (ನೋಡಿ ಚಿತ್ರ–31). ಈ ಸಮುಚ್ಚಯದಲ್ಲಿ ನಾಗೇಶ್ವರ ಮತ್ತು ಚೋಳೆಶ್ವರ ದೇವಾಲಗಳನ್ನು ಗಮನಿಸಿದರೇ ಪುರಾತತ್ವ ಅಧ್ಯಾತೃಗಳಿಗೆ ಪಟ್ಟದಕಲ್ಲಿನ ಸ್ಮರಣೆಯಾಗುವುದು. ಗಾತ್ರದಲ್ಲಿ ಸಣ್ಣದಾದರೂ ಇವುಗಳು ಶಾಸ್ತ್ರೋಕ್ತ ನಿರ್ಮಾಣಗಳಾಗಿವೆ. ಇಲ್ಲಿಯ ಶಾಲಾ, ಕೂಟ, ಪಂಜರ ಮೊದಲಾದ ಅಂಗಗಳು ಪಟ್ಟದಕಲ್ಲಿಗಿಂತಲೂ ಹೆಚ್ಚು ಸ್ಫಷ್ಟವಾಗಿವೆ.

ವೇಸರ ನಿರ್ಣಯ


ಈ ದೇವಾಲಯಗಳನ್ನು ಚರ್ಚಿಸುವಾಗ ವೇಸರಶೈಲಿಯ ಪ್ರಸ್ತಾಪವನ್ನು ಮಾಡುವುದು ಅಪ್ರಸ್ತುತವೇನಲ್ಲ. ನಾಗೇಶ್ವರ ದೇವಾಲಯಕ್ಕೆ ವೃತ್ತಾಕಾರವಾದ ಶಿಖರವಿರುವುದರಿಂದ ಅದನ್ನು ವೇಸರ ಶೈಲಿಯೆಂದು ಕೆಲವರು

ಪರಿಗಣಿಸಿದ್ದಾರೆ. ಆದರೇ ಶಿಖರದ ಆಧಾರದಿಂದ ವೇಸರವೆಂದು ತೀರ್ಮಾನಿಸುವುದು ಸೂಕ್ತವಲ್ಲ. ಏಕೆಂದರೆ ವಾಸ್ತು ಗ್ರಂಥಗಳಾಗಲೀ ಆಗಮಗಳಾಗಲಿ ಇದರ ವಿಷಯದಲ್ಲಿ ಸ್ಪಷ್ಟವಾದ ವ್ಯಾಖ್ಯಾನವನ್ನಿತ್ತಿಲ್ಲ. ಎಲ್ಲವು ಗೊಂದಲವಾಗಿಯೇ ಇರುವುದು. ಅಲ್ಲದೇ ಒಂದು ಗ್ರಂಥದ ಅಭಿಪ್ರಾಯವನ್ನೇ ಯಾವುದೇ ಮಾರ್ಪಡಾಗಲೀ ತರ್ಕವಾಗಲಿ ಇಲ್ಲದೇ ಅಕ್ಷರಶಃ ತಥಾವತ್ತಾಗಿ ಹಲವು ಗ್ರಂಥಗಳಲ್ಲಿ ದೊರಕುವುದು ಗಮನಿಸಿದಾಗ ಇದು ಪ್ರಕ್ಷಿಪ್ತ (ಅಸಂಬದ್ಧವಾದ ಸೇರ್ಪಡೆ) ಎಂಬುದರಲ್ಲಿ ಸಂದೇಹವಿಲ್ಲ. ತಕ್ಕಮಟ್ಟಿಗೆ ಗೊಂದಲವಿಲ್ಲದೆ, ಹತ್ತಿರದ ಮತ್ತು ಸಮರ್ಥಿಸಬಹುದಾದ ವ್ಯಾಖ್ಯೆ ನಮಗೆ ಕಾಮಿಕಾಗಮದಲ್ಲಿ ಮಾತ್ರ ದೊರಕುವುದು.


ನಿಘಂಟಿನ ಪ್ರಕಾರ ವೇಸರ ಎಂದರೆ ಹೆಸರಗತ್ತೆ, ಅಂದರೇ ಕುದುರೆ ಮತ್ತು ಕತ್ತೆಗಳ ಮಿಶ್ರ ತಳಿ. ಹೀಗಾಗಿ ಈ ಶೈಲಿಯಲ್ಲಿ ನಾಗರ ಮತ್ತು ದ್ರಾವಿಡ, ಎರಡೂ ಶೈಲಿಗಳ ಮಿಶ್ರ ಅಂಶಗಳಿರಬೇಕು. ಕಾಮಿಕಾಗಮವು, ಈ ಶೈಲಿಯ ದೇವಾಲಯವು ವಿಗತಾಶ್ರವಾಗಿಯೂ ಗಜಪೃಷ್ಠವತ್, ಅಂದರೇ ಗಜಪೃಷ್ಠದಂತೆ ಇರುಬೇಕೆಂದು ವಿವರಿಸಿದೆ. ದೇವಾಲಯದ ಶೈಲಿಯನ್ನು ಗುರುತಿಸುವಾಗ ವಿಮಾನವನ್ನು ಸಂಪೂರ್ಣವಾಗಿ ಪರಿಗಣಿಸಬೇಕು. ರೌರವಾಗಮವು 'ಉಪನಾದಿ ಸ್ತೂಪಿ ಪರ್ಯಂತಂ ವಿಮಾನಂ' ಎಂಬ ವ್ಯಾಖ್ಯೆಯನ್ನು ನೀಡುತ್ತದೆ. ಈ ವ್ಯಾಖ್ಯೆಗೆ ಅನುಗುಣವಾಗಿ ದೇವಾಲಯವನ್ನು ಗಮನಿಸಿದಾಗ ಗರ್ಭಗೃಹದ ಭಾಗವು ಮಾತ್ರವೇ ವಿಮಾನವೆನಿಸುವುದು. ಹೀಗಾಗಿ ವೇಸರ ವಿಮಾನದ ಲಕ್ಷಣಗಳು ಕೇವಲ ಶಿಖರದ ಆಕಾರದಿಂದ ತೀರ್ಮಾನವಾಗುವುದಿಲ್ಲ. ಉಪಾನದಿಂದ ಸ್ತೂಪಿಯವರೆಗು ಪರಿಗಣಿಸಬೇಕು. ವಿನ್ಯಾಸದಲ್ಲಿ ಅಶ್ರಗಳ ಅನುಪಸ್ಥಿತಿಯಿರಬೇಕು. ಸ್ವಾರಸ್ಯವೆಂದರೇ ಎಲ್ಲ ಗ್ರಂಥಗಳು ವೇಸರ ದೇವಾಲಯಗಳು ಗಜಪೃಷ್ಠಾಕಾರವಾಗಿಯೂ ಇರಬೇಕೆಂದು ಒಮ್ಮತದಿಂದ ಹೇಳುತ್ತವೆ. ಇಂತಹ ಸಂದರ್ಭದಲ್ಲಿ ವೇಸರವೆಂಬುದು ಹೆಚ್ಚು ನಕ್ಷತ್ರಾಕಾರದ ತಲವಿನ್ಯಾಗಳಿಗೆ ಸೂಕ್ತವಾಗುತ್ತದೆ. ಹೊಯ್ಸಳರ ಹಲವು ದೇವಾಲಯಗಳು ನಕ್ಷತ್ರಾಕಾರದ ವಿನ್ಯಾಸವನ್ನು ಹೊಂದಿವೆ. ನಕ್ಷತ್ರಾಕೃತಿಯ ವಿಮಾನದ ತಲವಿನ್ಯಾಸದ ವಲಯದಲ್ಲಿ ವೃತ್ತಾಕಾರವಾಗಿ ಭಾಸವಾಗುತ್ತದೆ. ಈ ನಿಟ್ಟಿನಲ್ಲಿ ನೋಡಿದಾಗ ನಕ್ಷತ್ರಾಕಾರ ವಿನ್ಯಾಸ ಉಳ್ಳದ್ದೇ ಬಹುಪಾಲು ವೇಸರವೆನಿಸುವುದು. ಮೇಲಿನ ಎಲ್ಲ ಅಂಶಗಳನ್ನು ವಿಶ್ಲೇಷಿಸಿದಾಗ ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಕೆಲವು ದೇವಾಲಯಗಳನ್ನು ಉದಾಹರಿಸಬಹುದೇ ಹೊರತು, ಪ್ರಸ್ತುತ ದೇವಾಲಯ ಈ ವರ್ಗಕ್ಕೆ ಸೇರುವುದಿಲ್ಲ.

ಬೇಗೂರಿನ ದೇವಾಲಯಗಳು ಸುಸ್ಪಷ್ಟವಾದ ದ್ರಾವಿಡ ಲಕ್ಷಣಗಳನ್ನು ಹೊಂದಿವೆ. ವಿನ್ಯಾಸದಲ್ಲಿ ಭದ್ರಕರ್ಣೋಪೇತವಾದ ವಿಮಾನವನ್ನು, ಶಾಲಾ ಕೂಟ ಮತ್ತು ಪಂಜರಯುಕ್ತವಾದ ಹಾರವನ್ನು ಮತ್ತು ಮೆಟ್ಟಲು ಪಿರಮಿಡ್ಡಿನ ಆಕಾರದ ಪ್ರಸಾದವನ್ನು ಹೊಂದಿದೆ. ವೃತ್ತಾಕಾರದ ಶಿಖರವನ್ನು ಕೆಲವು ಶಾಸ್ತ್ರಗ್ರಂಥಗಳು ರುದ್ರಛ್ಛಂದವೆಂದು ಕರೆದಿವೆ. ಅಲ್ಲದೆ ಏಕತಲ ವಿಮಾನವು ವೃತ್ತಾಕಾರವಾದ ಶಿಖರವನ್ನು ಹೊಂದಿದ್ದರೆ ಅದನ್ನು ವೈಜಯಂತ ಪ್ರಕಾರವೆಂದು ಕರೆಯಲಾಗುವುದು. ಅದೇ ವೃತ್ತಾಕಾರದ ವಿಮಾನವು ದ್ವಿತಲ ವಿಮಾನದಲ್ಲಿ ಯೋಜಿತವಾದರೇ ಅದು ಮಂದರ ಪ್ರಕಾರವೆಂದು ವಿಮಾನಾರ್ಚಕಲ್ಪವು ಹೆಸರಿಸುತ್ತದೆ. ಈ ಎಲ್ಲಾ ಅಂಶಗಳ ಆಧಾರದ ಮೇಲೆ ನಾಗೇಶ್ವರ ದೇವಾಲಯವು ಮಂಧರ ಪ್ರಕಾರದ ಪ್ರಾಸಾದವುಳ್ಳ ದ್ರಾವಿಡ ವಿಮಾನವಾಗಿದೆ. ಇದೇ ರೀತಿ ಸ್ವಸ್ತಿಕ ಶಿಖರವನ್ನು ನಾಗರವೆಂದು ತಪ್ಪಾಗಿ ವಿರಿಸಲಾಗಿದೆ. ಮೇಲಿನ ವಿವರಣೆಯಿಂದ ಅದು ಸೂಕ್ತವಲ್ಲವೆಂಬುದು ಸ್ಪಷ್ಟವಾಗುತ್ತದೆ.


ಒಟ್ಟಾರೆ ಬೇಗೂರಿನ ದೇವಾಲಯಗಳು ದಕ್ಷಿಣಭಾರತದಲ್ಲಿ ದೇವಾಲಯ ವಾಸ್ತು ತನ್ನ ಶೈಶವದಲ್ಲಿದ್ದು, ಗ್ರಂಥ ಸೂತ್ರಗಳಿಗೆ ಒಳಗಾಗುತ್ತಿದ್ದ ಕಾಲದಲ್ಲಿ ನಿರ್ಮಾಣಗೊಂಡವು. ಇವುಗಳನ್ನು ಅವುಗಳ ಮೂಲಸ್ವರೂಪದಲ್ಲಿಯೇ ಉಳಿಸಿ ಮುಂದಿನ ಪೀಳಿಗೆಯ ಪುರಾತತ್ವ ವಿದ್ಯಾರ್ಥಿಗಳಿಗೆ ತಲುಪಿಸ ಬೇಕು.




1. ಗಂಗರ ಕಾಲದ ಬೇಗೂರಿನ ದೇವಾಲಯ




2. ಪಾದಬಂಧ ಅದಿಷ್ಠಾನ



3. ಕಪೋಕಬಂಧ ಅನುಷ್ಠಾನ



4. ದೇವಾಲಯದ ಅನುಷ್ಠಾನ




5. ದೇವಾಲಯದ ಭಿತ್ತಿ




6. ಭಿತ್ತಿಯಲ್ಲಿನ ಮಕರ ತೋರಣ



5. ಮಕರ ತೋರಣ



7. ರತ್ನ ಪಟ್ಟಿಕೆ




9. ಪುಷ್ಪ ಪಟ್ಟಿಕೆ



10. ಜಾಲಾಂಧ್ರ




5. ಭೂತ ಮಾಲಿಕೆ ಅಲಂಕರಣ
ವಿರುವ ಪ್ರಸ್ತರ



12. ಶಾಲ ಕೂಟ ಮತ್ತು ಪಂಜರಗಳಿರುವ ಹಾರ

13. ಆವರ್ಜಿತ ವರ್ಗದ ಹಾರ





14. ಹಾರ: ಕಪೋತಗಳನ್ನು ಹೊಂದಿರುವ ಭಾಗ



15 ಕಲಿಕಾಮಾಟೇಶ್ವರದ ದೇವಾಲಯದ ಶಿಖರ



16. ಕಲಿಕಾಮಾಟೇಶ್ವರದ ದೇವಾಲಯದ ಶಿಖರ



17. ನಗರೇಶ್ವರದ ದೇವಾಲಯದ ನೂತನ ಶಿಖರ



16. ಗಜಾರೋಹಣ ಶಿವ




16. ಬ್ರಹ್ಮಕಾಂತ ಸ್ತಂಭ




20. ವಿಷ್ಣುಕಾಂತ ಸ್ತಂಭ



21. ರುದ್ರಕಾಂತ ಸ್ತಂಭ




20. ಸೌಮ್ಯಕಾಂತ ಸ್ತಂಭ



20. ಪೂರ್ವಾಶ್ರ ಸ್ತಂಭ

24–25. ಹಸ್ತಿ ಹಸ್ತದ ಪಕ್ಷಿಶಿಲೆಯಲ್ಲಿರುವ ನಿಧಿ ವಿಗ್ರಹಗಳು








20. ಲಲಾಟದಲ್ಲಿನ ಗಜಲಕ್ಷ್ಮಿ




27. ಪೇದ್ಯದಲ್ಲಿನ ನಿಧಿಬಿಂಬ



28. ಪೇದ್ಯದಲ್ಲಿನ ನಿಧಿಬಿಂಬ



29. ಪ್ರನಾಳ



30. ಪ್ರನಾಳ



31. ಪ್ರತಿಕರ್ಣಗಳ ಸ್ವರೂಪ

35. ಬೆಂಗಳೂರು ನಗರ ಕೋಟೆಗಳು

ಡಾ. ಎಸ್. ಕೆ. ಜೋಶಿ

ಬೆಂಗಳೂರು ದಕ್ಷಿಣ ಭಾರತದ ಮಧ್ಯಯುಗೀನ ಕಾಲಘಟ್ಟದಲ್ಲಿ ಒಂದು ಮಹತ್ವದ ನಗರವಾಗಿತ್ತು, ಅದನ್ನು ಕ್ರಿ. ಶ. 1537ರಲ್ಲಿ ಯಲಹಂಕಾ ನಾಡಿನ ಪ್ರಭುಗಳ ಮನೆತನದ ಕೆಂಪೇಗೌಡ ಪ್ರಭುವು ಸಂಸ್ಥಾಪಿಸಿದರು. ಯಲಹಂಕಾ ನಾಡಿನ ಪ್ರಭುಗಳು ಇದರ ರಾಜಧಾನಿಯಾದ ಯಲಹಂಕಾದಿಂದ ಬೆಂಗಳೂರಿಗೆ ರಾಜಧಾನಿಯಾಗಿ ಪರಿವರ್ತಿಸಿದರು ಹಾಗೂ ಬೆಂಗಳೂರು ಕ್ರಿ. ಶ. 1537ರಿಂದ 1638ರವರೆಗೆ ಅವರ ರಾಜಧಾನಿಯಾಗಿತ್ತು. ತದನಂತರ ಬಿಜಾಪುರದ ಆದಿಲ್‌ಶಹರು ಕ್ರಿ. ಶ. 1638ರಲ್ಲಿ ಇದನ್ನು ತಮ್ಮ ವಶಪಡಿಸಿಕೊಂಡು, ಶಹಾಜಿ ಭೋಸಲೆಗೆ (ಛತ್ರಪತಿ ಶಿವಾಜಿಯ ತಂದೆ) ಅದನ್ನು ಒಂದು 'ಜಹಾಗೀರ' ಎಂದು ಘೋಷಿಸಿ, ಅದರ ಆಡಳಿತವನ್ನು ಆತನಿಗೆ ಒಪ್ಪಿಸಿದರು. ನಂತರ, ಮೊಘಲರು ಆದಿಲ್‌ಶಹರನ್ನು ಸೋಲಿಸಿ, ಈ ನಗರವನ್ನು ಕ್ರಿ. ಶ. 1686ರಲ್ಲಿ ಮೈಸೂರು ಒಡೆಯರಿಗೆ ಕೊಟ್ಟರು. ಕ್ರಿ. ಶ. 1758–1791ರವರೆಗೆ ಬೆಂಗಳೂರು ನಗರ ಕೋಟೆಯು

(Fort), ಅದರ ಆಯಕಟ್ಟಿನ ಹಾಗೂ ಭೌಗೋಳಿಕ ಫಲವತ್ತಾದ ಪ್ರದೇಶವಾಗಿರುವುದರಿಂದ, ರಾಜಕೀಯವಾಗಿ ಹಾಗೂ ವ್ಯಾಪಾರ ಕ್ಷೇತ್ರದಲ್ಲಿ ಬಹಳ ಮಹತ್ವದ ಕೇಂದ್ರವಾಯಿತು.

ಎಸ್. ಕೆ. ಜೋಶಿ ಅರುಣಿ ಶೋಧ

ಡಾ. ಎಸ್. ಕೆ. ಅರುಣಿಯವರು ಹಾಗೂ ಇನ್ನಿತರರು ಪುರಾತತ್ವ ಸಮೀಕ್ಷೆ ಕೈಗೊಂಡ ಪರಿಣಾಮವಾಗಿ 18ನೇ ಶತಮಾನದಲ್ಲಿ ಕೈಗೊಂಡ ನಕ್ಷೆ ಬಿಡಿಸುವ ಕಾರ್ಯದಲ್ಲಿ ತಯಾರಿಸಿದ ಕೆಲವು ಬೆಂಗಳೂರಿನ ನಕಾಶೆಗಳು ಸುದೈವದಿಂದ ದೊರೆತವು. ಆ ನಕ್ಷೆಗಳು ಆ ಶತಕದಲ್ಲಿದ್ದ ಬೆಂಗಳೂರು ವಿನ್ಯಾಸ ಹಾಗೂ ವಿಸ್ತಾರಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತವೆ. 30ನೇ ಶತಕದಲ್ಲಿ ನಡೆದ ನಗರವಿಸ್ತಾರ ಕಾರ್ಯದಲ್ಲಿ ಮೂಲನಗರದ ಕೋಟೆಯು ನಶಿಸಲ್ಪಟ್ಟು, ಹೊಸ ನವೀನ ಬಡಾವಣೆಗಳು ನಿರ್ಮಾಣವಾದವು. ಕೈಗೊಂಡ ಇಲ್ಲಿಯ ಕ್ಷೇತ್ರಕಾರ್ಯದಲ್ಲಿ (ಡಾ. ಎಸ್. ಕೆ. ಅರುಣಿ) ಬ್ರಿಟೀಶ್ ಕೆಲ ಅಧಿಕಾರಿಗಳಿಂದ ಹದಿನೆಂಟನೆಯ ಶತಮಾನದಲ್ಲಿ ಬಿಡಸಲಾದ, ಬೆಂಗಳೂರು ನಗರದ ನಕ್ಷೆಗಳು ಬಹಳ ಉಪಯೋಗಿಯಾಗಿವೆ. ಈ ನಕ್ಷೆಗಳು ಮೂಲ ಬೆಂಗಳೂರು ನಗರದ ವಿನ್ಯಾಸವನ್ನು ಹಾಗೂ ಅದರ ವಿಸ್ತಾರವನ್ನೂ ತೋರಿಸುತ್ತದೆ.

ಕೋಟೆ ಹಾಗೂ ಪೇಟಾ ವಿಭಾಗಗಳು

ಇಪ್ಪತ್ತನೆಯ ಶತಮಾನದಲ್ಲಿ ನಡೆದ ಅವಿರತ ಈ ನಗರ ಬೆಳವಣಿಗೆಯ ಕಾರಣದಿಂದಾಗಿ ಬೆಂಗಳೂರಿನ ರಕ್ಷಣಾ ಗೋಡೆಗಳು (Fort walls) ಈಗ ಕಾಣಸಿಗುವುದಿಲ್ಲ. ಆದರೂ ಕೂಡ ಹೇಗೋ ಕೆ. ಆರ್. ಮಾರ್ಕೆಟಿನ ಸಮೀಪ ಒಂದು ಪ್ರವೇಶ ದ್ವಾರವು ಈಗಲೂ ಕಾಣಸಿಗುತ್ತದೆ. ಇದರ ಬಗ್ಗೆ ವಿಸ್ತೃತವಾಗಿ ಮುಂದೆ ಇದೇ ಪ್ರಬಂಧದಲ್ಲಿ ಹೇಳಲಾಗಿದೆ. ಲಭ್ಯವಿರುವ ಅನನ್ಯ ನಕ್ಷೆಗಳು ಬೆಂಗಳೂರು ನಗರವು ಎರಡು ಮುಖ್ಯ ವಿಭಾಗಗಳಲ್ಲಿ ನೆಲೆಗೊಂಡಿದ್ದವೆಂದು ತೋರಿಸುತ್ತವೆ–ಮೊದಲನೆಯದಾಗಿ ಸುತ್ತುವರಿದ ಹಾಗೂ ಬುರುಜು ಗಳಿಂದ ಜೋಡಿಸಲ್ಪಟ್ಟ,

ಮತ್ತು ಸಾಮಾನ್ಯವಾಗಿ ದುಂಡನೆ ಇರುವ ವಿನ್ಯಾಸವನ್ನು ಹೊಂದಿದ್ದು ನಾಲ್ಕು ಪ್ರಮುಖ ದಿಕ್ಕುಗಳಲ್ಲಿ ಪ್ರವೇಶ ದ್ವಾರಗಳನ್ನು ಹೊಂದಿದ್ದು ಇರುತ್ತದೆ. ಇದಕ್ಕೆ ಕೋಟೆ (Fort) ಎಂದು ಕರೆಯವಾಗುತ್ತಿದೆ. ಹಾಗೂ ಎರಡನೆಯ ವಿಭಾಗವು 'ಪೇಟೆ' (Peta) ಎಂದು ಕರೆಯಲ್ಪಡುತ್ತಿದ್ದು ಇದಕ್ಕೆ ಸಿವ್ವಿಲಿಯನ್ ಏರಿಯಾ ಎಂದೂ ಪ್ರತೀತಿ ಇದೆ. ಇದರ ಸುತ್ತಲೂ ಕೂಡ ರಕ್ಷಣಾಗೋಡೆಯು ಇದ್ದದ್ದು ಆ ನಕ್ಷೆಗಳಲ್ಲಿ ತೋರಿಸಲಾಗಿದೆ. ಫೋರ್ಟ್ ಏರಿಯಾ ಬೃಹತ್ ಕಲ್ಲುಗಳಿಂದ ಗ್ರಾನೈಟ್ ರಚಿಸಲಾಗಿದ್ದು ಸಿವ್ವಿಲಿಯನ್ ಏರಿಯಾವು ಮಣ್ಣಿನ ಗೋಡೆಗಳಿಂದ ರಚಿತವಾಗಿತ್ತು.

ಟಿಪ್ಪು ಸುಲ್ತಾನ ಪ್ಯಾಲೇಸ್ ಮತ್ತು ಕಾರಾಗೃಹ (Dungeon)

ಈಗ ಕಾಣಸಿಗುವ ಟಿಪ್ಪು ಸುಲ್ತಾನ ಪ್ಯಾಲೇಸವು ಹಲವು ಪ್ಯಾಲೇಸಗಳಲ್ಲಿ ಒಂದಾಗಿತ್ತು. ಇದರ ಪಕ್ಕದಲ್ಲಿರುವ 'ಕೋಟೆ ವೆಂಕಟರಮಣ' ಎಂಬ ದೇವಾಲಯವು ಧಾರ್ಮಿಕ ದೃಷ್ಟಿಯಿಂದ ಬಹಳ ಮಹತ್ವದ್ದು, ಇದು ಈ ಮುಖ್ಯ ಕೋಟೆಯ ಹೃದಯ ಭಾಗದಲ್ಲಿದೆ. ಇನ್ನೊಂದು ಶಿವ ಸಂಪ್ರದಾಯದ ದೇವಾಲಯವು 'ಜಲಕಂಠೇಶ್ವರ' ದೇವಾಲಯವೆಂದು ಪ್ರತೀತಿ ಪಡೆದಿದೆ. ಇದು ಕೂಡ ಈ ಸಿಟಡಲ್ (Citadel) ನ ಒಳಗಡೆಗೆ ಇದೆ. ಈ ಶಿವ ದೇವಾಲಯದಲ್ಲಿ ಸಾಕಷ್ಟು ಗಮನವನ್ನು ಸೆಳೆಯುವ ಶಿಲಾಪ್ರತಿಮೆಗಳು ಇವೆ.

ಬೆಂಗಳೂರಿನ ಇತಿಹಾಸವು, ಬೆಂಗಳೂರಿನ ಸಮೀಪದಲ್ಲಿರುವ ಪಾರ್ವತಿ ನಗರೇಶ್ವರ ದೇವಸ್ಥಾನದಲ್ಲಿ ದೊರೆಯುವ ಕ್ರಿ. ಶ. 890ದ ಶಿಲಾಶಾಸನವು ಬೆಂಗಳೂರನ್ನು ಸ್ಮರಿಸುತ್ತದೆ. ಈ ದೇವಾಲಯವು ಬೇಗೂರಿನಲ್ಲಿದೆ. ಇದರಲ್ಲಿ 'ಬೆಂಗಳೂರು' ಯುದ್ಧವೆಂದು ಬೆಂಗಳೂರನ್ನು ಪ್ರಪ್ರಥಮವಾಗಿ ಕರೆಯಲ್ಪಟ್ಟದುದನ್ನು ದಾಖಲಿಸುತ್ತದೆ. ಈ ಯುದ್ಧದಲ್ಲಿ ಬಟ್ಟಂಚೇರಿ ಎಂಬ ವೀರನು ಹತನಾದುದನ್ನು ನೆನಪಿಸುತ್ತದೆ. ಈತನು ನಾಗಟ್ಟಾ ಎಂಬ ಪುಟ್ಟರಾಜ್ಯದ ಸೇವಕನಾಗಿದ್ದನು.

ಡಾ. ಆರ್. ನರಸಿಂಹಾಚಾರ್ಯ: ಎಪಿಗ್ರಾಫಿಯಾ ಕರ್ನಾಟಕ ಶೋಧ

ಇನ್ನೊಬ್ಬ ಇತಿಹಾಸಕಾರ ಆರ್. ನರಸಿಂಹಚಾರ್ಯರು ಎಪಿಗ್ರಾಫಿಯಾ ಕರ್ನಾಟಿಕಾ (Vol. X ಸಪ್ಲಿಮೆಂಟರಿ) ದಲ್ಲಿ ದಾಖಲಿಸಿರುವಂತೆ ಬೆಗ್ಗುರೆವಾಲಸ (Begurrveals) ಎಂಬ ತಾಣದಲ್ಲಿ ಸಿಕ್ಕ ಇನ್ನೊಂದು ಶಿಲಾಶಾಸನವು ಗಂಗವಾಡಿಯಿಂದ ಆಳುತ್ತಿದ್ದ ಗಂಗರ ರಾಜ್ಯದ ಭಾಗವು 'ಬಂಗವಾಳವೂರು' ಎಂದು ಕರೆಯಲ್ಪಟ್ಟು ಅದು ಕ್ರಿ. ಶ. 1024ಕ್ಕೆ ಸಂಬಂಧಪಟ್ಟಿದೆ. ಇದು ಹಳಗನ್ನಡದಲ್ಲದೆ. 'ಬೆಂಗಾವಲುವೂರು' ಎಂದು ನಗರ ರಕ್ಷಕರ ತಾಣವೂ ಆಗಿತ್ತು. ಕ್ರಿ. ಶ. 1117ರಲ್ಲಿ ಹೊಯ್ಸಳರಾಜ ವೀರಬಲ್ಲಾಳ-2, ನು ಈ ಪ್ರದೇಶವನ್ನು ಆಳುತ್ತಿದ್ದ ಚೋಳರನ್ನು ಸೆದೆ ಬಡಿದು ತನ್ನ ತಳಕಾಡುರಾಜ್ಯಕ್ಕೆ ಸೇರಿಸಿಕೊಂಡನು.

ಬೆಂಗಳೂರು ಹೆಸರಿನ ವ್ಯುತ್ಪತ್ತಿ

ಬೆಂಗಳೂರು ಹೆಸರಿನ ವ್ಯುತ್ಪತ್ತಿನ ಒಂದು ದಂತ ಕತೆಯೂ ಇದೆ. 2ನೆಯ ವೀರಬಲ್ಲಾಳನು ಈ ಭಾಗದಲ್ಲಿ ಭೇಟೆಯಾಡಲು ಬಂದಾಗ ಹಾನಿ ತಪ್ಪಿಸಿಕೊಂಡು ಬಹಳ ದಣಿವು ಹಾಗೂ ಹಸಿವು ಆದ ಕಾರಣ ಅದೇ ಅರಣ್ಯದಲ್ಲಿ ವಾಸಿಸುತ್ತಿದ್ದ ಒಬ್ಬ ವೃದ್ಧೆಯ ಗುಡಿಸಲಿಗೆ ಬಂದು ತನಗೆ ಹಸಿವೆಯಾಗಿರುವುದೆಂದು ಆ ಹಿರಿಯಳಿಗೆ ನಿವೇದಿಸುತ್ತಾನೆ. ಆಗ ಆಕೆ ತನ್ನಲ್ಲಿ ಇದ್ದ ಬೆಂದ (ಜೀಯ್ದ) ಕಾಳನ್ನು ಅವನಿಗೆ ಕೊಡುತ್ತಾಳೆ. ಅದಾಗಿ ಈ ಊರಿಗೆ 'ಬೆಂದಕಾಳೂರು' ಅಥವಾ ಬೆಂಗಳೂರು ಎಂದು ಹೆಸರು ಬಂದಿದೆ.

ಕೆಂಪೇಗೌಡರು: 1510–1570

ಕ್ರಿ. ಶ. 1510–1570ರಲ್ಲಿ ಕೆಂಪೇಗೌಡನೆಂಬ[1] ನಾಯಕನು, ವಿಜಯನಗರದ ಅಳಿಗಾಲದ ತರುವಾಯ ಈ ಪ್ರದೇಶವನ್ನೂ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಇವನ ಪೂರ್ವಜರಿಗೆ ಯಲಹಂಕಾನಾಡ ಪ್ರಭುಗಳು ಎಂದು ಕರೆಯುತ್ತಿದ್ದರು. ಈತನು 1537ರಲ್ಲಿ ಒಂದು ಮಣ್ಣಿನ ಕೋಟೆಯನ್ನು (Mud Fort) ಕಟ್ಟಿಸಿದನು. ಈತನ ಕಾಲದಲ್ಲಿ 'ಕೋಟೆ ಹಾಗೂ 'ಪೇಟೆ' ಎಂಬ ಎರಡು ವಸತಿ ಭಾಗಗಳು ನಿರ್ಮಾಣವಾದವು. ಈ ಸಾರ್ವಜನಿಕ ವಸತಿಯ ಸುತ್ತಲೂ ಮಣ್ಣಿನ ಕೋಟೆ ಇತ್ತು. ಇದರಲ್ಲಿ ಚಿಕ್ಕಪೇಟೆ ಹಾಗೂ ದೊಡ್ಡ ಪೇಟೆ ಎಂಬ ಎರಡು ಪೇಟೆಯ ಮಾರ್ಗಗಳು ಕ್ರಮವಾಗಿ ಪೂರ್ವಪಶ್ಚಿಮ ಹಾಗೂ ದಕ್ಷಿಣೋತ್ತರವಾಗಿ ನಿರ್ಮಾಣವಾಗಿ ಅವುಗಳ ಕೂಟದಲ್ಲಿ ದೊಡ್ಡ ಪೇಟೆಯ ಚೌಕವೆಂದು ಕರೆಯಲ್ಪಟ್ಟು ಇದು ಆಗ ಬೆಂಗಳೂರಿನ ಹೃದಯ ಭಾಗವಾಗಿತ್ತು. ಅದೇ ಈಗ 'ಕೆಂಪೇಗೌಡ ಸರ್ಕಲ್' ಎಂದು ಹೆಸರಾಗಿದೆ.

ನಂತರ ಬಂದ ಕೆಂಪೇಗೌಡನು ಕೆಂಪಾಪುರ ಮತ್ತು ಕಾರಂಜಿಪುರ ಎಂಬ ಎರಡು ಕೆರೆಗಳನ್ನು ಕಟ್ಟಿಸಿದನು. ಅಲ್ಲದೇ ನಾಲ್ಕು ಪ್ರವೇಶ ದ್ವಾರಗಳನ್ನು ಪೂರ್ವ, ಪಶ್ಚಿಮ, ದಕ್ಷಿಣೋತ್ತರ ದಿಕ್ಕುಗಳಲ್ಲಿ ನಿರ್ಮಿಸಿದನು. ಇವುಗಳಿಗೆ ಕ್ರಮವಾಗಿ ಲಾಲಬಾಗ್‌ಗೇಟ್, ಕೆಂಪಾಂಬುಧಿ ಕೆರೆಯಗೇಟ್ ಅಲಸೂರ ಕೆರೆಯಗೇಟ್ ಹಾಗೂ 4ನೆಯದಾಗಿ ಮೆಕ್ರಿಸರ್ಕಲ್ ಗೇಟ್ ಎಂದು ಹೆಸರಿಸಲಾಗಿದೆ. ಈ ನಾಲ್ಕೂ ಗೇಟ್‌ಗಳು ಆ ಕಾಲದ ಹಳೆಯ ಬೆಂಗಳೂರಿನ ಮೇರೆಯನ್ನು ತೋರಿಸುತ್ತಿದ್ದವು. ಈ ನಾಲ್ಕೂ ಪ್ರವೇಶದ್ವಾರಗಳು ಈಗಲೂ ಕಾಣಸಿಗುತ್ತವೆ. ಇವುಗಳಿಗೆ ವೀಕ್ಷಣಾ ಗೋಪುರಗಳೆಂದು ಕರೆಯುತ್ತಾರೆ (Watch Tower).

ಮರಾಠರು, ಆದಿಲ್ ಶಹರು, ಮೊಘಲರು ಮತ್ತು ಹೈದರ ಅಲಿ, ಟಿಪ್ಪು ಸುಲ್ತಾನರ ಕಾಲ

ತದನಂತರ ಈ ಕೋಟೆ–ನಗರವು ಶಿವಾಜಿಯ ತಂದೆಯಾದ ಶಹಾಜಿ ಭೋಸಲೆ ಎಂಬ ಮರಾಠಾ ಸರದಾರನಿಂದ ಕ್ರಿ. ಶ. 1638ರಲ್ಲಿ, ಬಿಜಾಪುರದ ಆದಿಲಶಹರ ಪರವಾಗಿ ವಶಪಡಿಸಿಕೊಳ್ಳಲಾಗಿತ್ತು. ಈ ಬೆಂಗಳೂರಿನ ಮುತ್ತಿಗೆಯಲ್ಲಿ ಶಿವಾಜಿಯ ಹಿರಿಯಣ್ಣ ಸಂಭಾಜಿಯು ಮರಾಠರ ವೈರಿಯಾದ ಮುಧೋಳದ ಘೋರ್ಪಜಿಯಿಂದ ಕೊಲ್ಲಲ್ಪಟ್ಟನು. ಈ ಹತ್ಯೆಯಿಂದ ದುಃಖಿತನಾದ ಶಿವಾಜಿಯು ಘೋರ್ಪಡೆಯ ಮೇಲೆ ಎರಗಿ ಚಿತ್ರ ಹಿಂಸೆಯಿಂದ ಅವನನ್ನು ಕೊಂದನು. ನಂತರ ಕೆಲಕಾಲ ಇದು ಮೊಘಲರ ಕಾಸೀಮ್ ಖಾಗಿ ಕಮಾಂಡರನ ಅಧೀನದಲ್ಲಿ ಬಂದಿತು. ಆದರೆ ಆ ಸ್ವಲ್ಪ ಕಾಲದಲ್ಲಿಯೇ ಮೊಘಲರು ಬೆಂಗಳೂರನ್ನು ತಮ್ಮ ಅಧೀನ ಆಡಳಿತಗಾರರಾದ ಮೈಸೂರು ಒಡೆಯರಿಗೆ (ಚಿಕ್ಕ ದೇವರಾಜ ಒಡೆಯರ್‌ಗೆ) ಕ್ರಿ. ಶ. 1689ರಲ್ಲಿ ಗುತ್ತಿಗೆಗೆ (Lease) ಕೊಡಲಾಯಿತು. ತದ ನಂತರ ನುಸುಳಿದ ಕಾಲದಲ್ಲಿ ಕ್ರಿ. ಶ. 1759ರಲ್ಲಿ ಮೈಸೂರು ಒಡೆಯರ ಸರ್ವಾಧಿಕಾರಿಯಾದ ಹೈದರ ಅಲಿಯು ತಾನೇ ಸ್ವತಂತ್ರ ರಾಜನೆಂದು ಘೋಷಿಸಿ ಬೆಂಗಳೂರು ಸಮೇತ ಮೈಸೂರು ರಾಜ್ಯವನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಹೈದರ ಅಲಿ ತೀರಿಕೊಂಡನು. ತರುವಾಯ ಆತನ ಮಗನಾದ ಟಿಪ್ಪುಸುಲ್ತಾನನು ಬಲಹೀನರಾದ ಮೈಸೂರು ಒಡೆಯರನ್ನು ಕೆಳಗಿಳಿಸಿ ತಾನೇ ಸುಲ್ತಾನನೆಂದು ಘೋಷಿಸಿದನು. ಈ ತಂದೆ ಮಕ್ಕಳ ಆಡಳಿತದ ಕಾಲ ಘಟ್ಟದಲ್ಲಿ ಬೆಂಗಳೂರು ಹಾಗೂ ಮಂಗಳೂರುಗಳನ್ನು ಆರ್ಥಿಕವಾಗಿ ಹಾಗೂ ವ್ಯಾಪಾರಿ ದೃಷ್ಟಿಯಿಂದ ಪ್ರಗತಿಗೊಳಸಿದರು. ಎಷ್ಟೋ ಸಲ ಬೆಂಗಳೂರನ್ನು ವಶಪಡಿಸಿಕೊಳ್ಳಲು ಬ್ರಿಟಿಶ್ ಸೈನ್ಯಾಧಿಕಾರಿಗಳಿಂದ–ವಿಶೇಷವಾಗಿ ಕರ್ನಲ್ ನಿಕೋಲ್‌ನನ್–ಬಹಳ ಪ್ರಯತ್ನಗಳು ನಡೆದವು. 1768 ಆದರೆ ಅವರ ಪ್ರಯತ್ನಗಳು ವಿಫಲವಾದವು. ಟಿಪ್ಪುಸುಲ್ತಾನನಿಗೆ ಫ್ರಾನ್ಸಿನ ನೆಪೋಲಿಯನ್‌ನಿಂದ ಭಾರತದ ನೆಲದಿಂದ

ಬ್ರಿಟೀಶರನ್ನು ಹೊಡೆದೋಡಿಸುವ ಸೈನಿಕ ಸಹಾಯದ ಆಶ್ವಾಸನೆ ದೊರೆತಿದ್ದರೂ ಕೂಡ, ಅದು ಸರಿಯಾದ ಸಮಯಕ್ಕೆ ಸಾಧ್ಯವಾಗಲಿಲ್ಲ. ಟಿಪ್ಪು ಸುಲ್ತಾನನು, ಮೊದಲನೆಯ, ಎರಡನೆಯ ಹಾಗೂ ಮೂರನೆಯ ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ಬ್ರಿಟೀಶರನ್ನು ಸಮೀಪ ಬರದಂತೆ ದೂರ ಇರಿಸಿದನು.

ಬ್ರಿಟಿಷ್ ಅಧೀನ, ಲಾರ್ಡ್ ಕಾರ್ನ ವಾಲೀಸ್ (1791)

ಲಾರ್ಡ್ ಕಾರ್ನವಾಲೀಸ್ (1791 ಮಾರ್ಚ್ 21) ಬೆಂಗಳೂರು ಕೋಟೆಯನ್ನು ತೆಗೆದುಕೊಂಡನು ಮತ್ತು ಆಂಗ್ಲೋ–ಮೈಸೂರು (ವಾರಿನ) ಯುದ್ಧದ ಸಮಯದಲ್ಲಿ ಬೆಂಗಳೂರನ್ನು ಬ್ರಿಟೀಶರ ಬಲಾಢ್ಯ ಸೈನಿಕ ಕೇಂದ್ರವನ್ನಾಗಿ ಮಾಡಿದನು. ಕ್ರಿ. ಶ. 1799 ಮೈಸೂರಿನ 4ನೆಯ ಯುದ್ಧದಲ್ಲಿ ಟಿಪ್ಪು ಸುಲ್ತಾನನ್ನು ಶೋಧಿಸಲ್ಪಟ್ಟು ಆತನ ವಧೆಯೂ ಆಯಿತು. ಈ ಯುದ್ಧದ ಪ್ರಕ್ರಿಯೆಯಲ್ಲಿ ಬ್ರಿಟೀಶರ 'ಮದ್ರಾಸ್ ಶಾಪರ್ಸ' (Madras Shoppers) ಪಾತ್ರವು ಬಹಳೇ ಮಹತ್ವದ್ದಾಗಿತ್ತು. ಹಾಗೂ ಬೆಂಗಳೂರು ಕೋಟೆಯು ಸಂಪೂರ್ಣವಾಗಿ ಬ್ರಿಟೀಶ್ ಆಡಳಿತಕ್ಕೆ ಬಂದಿತು. ಮತ್ತು ಆ ಸಮಯದಲ್ಲಿ ಸೈನ್ಯಕ್ಕೆ ಸಂಬಂಧಪಟ್ಟ ಕ್ಯಾಂಟೋನ್ಮೆಂಟ್ ಹಾಗೂ ನಗರ ಪ್ರದೇಶ ಕಟ್ಟಲ್ಪಟ್ಟವು. ಅಂದಿನಿಂದ 19ನೆಯ ಶತಮಾನದ ಮಧ್ಯದವರೆಗೂ ಬೆಂಗಳೂರ ಕ್ಯಾಂಟೋನ್ಮೆಂಟ್‌ವು ಇಂಡಿಯನ್ ಬ್ರಿಟಿಶ್ ಆರ್ಮಿ ರೆಜಿಮೆಂಟಿನ ಶಾಶ್ವತ ಹೆಡ್ ಕ್ವಾರ್ಟರ್ ಆಯಿತು. 1864ರಲ್ಲಿ ಬೆಂಗಳೂರ ಕ್ಯಾಂಟೋನ್ಮೆಂಟ್‌ದಲ್ಲಿ ಒಂದು ಭವ್ಯ ಆಸ್ಪತ್ರೆಯು ನಿರ್ಮಾಣಗೊಂಡಿತು. ಅದಕ್ಕೆ 1900ನೆಯ ಇಸ್ವಿಯ ಸುತ್ತಮುತ್ತ ಲೇಡಿ ಕರ್ಝನ್ ಆಸ್ಪತ್ರೆ ಎಂದು ಪುನರ್ ನಾಮಕರಣಗೊಂಡಿತು.

ಬ್ರಿಟೀಶ್ ಇಂಡಿಯಾ ಆಡಳಿತ; ಹಾಗೂ ಭಾರತದ ಸ್ವಾತಂತ್ರ್ಯ

ಕ್ರಿ. ಶ. 1799 ಟಿಪ್ಪು ಸುಲ್ತಾನನ ಅಂತ್ಯದ ತರುವಾಯ ಪುನರಪಿ ಮೈಸೂರು ಒಡೆಯರಿಗೆ ಬ್ರಿಟಿಷರ ಛತ್ರ ದಲ್ಲಿ ಪುನರಪಿ ಮೈಸೂರು ರಾಜ್ಯವು ಅವರಿಗೆ ದೊರೆಯಿತು. ಮೈಸೂರು ಒಡೆಯರು ಬ್ರಿಟೀಶರ ಆಧೀನದಲ್ಲಿಯ ರಾಜರಾದರು. ಅಂದಿನಿಂದ ಕ್ರಿ.ಶ . 1947 ಆಗಷ್ಟ 15ರವರೆಗೆ ಬೆಂಗಳೂರು ಕೋಟೆ–ನಗರವು ಬ್ರಿಟೀಶ್ ಈಸ್ಟ್ ಇಂಡಿಯಾದ ಅಧೀನದಲ್ಲಿ ಒಳಪಟ್ಟುತು.

ಬ್ರಿಟಿಶ್ ವಸತಿಯ ಬಡಾವಣೆಗಳು ಹಾಗೂ ರಸ್ತೆಗಳು

ಬ್ರಿಟಿಶ್ ಇಂಡಿಯಾದ ರೆಸಿಡೆನ್ಸಿ ಆಡಳಿತದಲ್ಲಿ (1791–1947) ಬೆಂಗಳೂರು ಬ್ರಿಟಿಶ್ ಮಯವಾಯಿತು. ಬ್ರಿಟಿಶ್ ಹಾಗೂ ಆಂಗ್ಲೋ ಇಂಡಿಯನ್‌ರ ಗಾಢ ವಸತಿ ಪ್ರದೇಶವಾಯಿತು. ಇಲ್ಲಿಯ ಆಹ್ಲಾದಕರ ಹವೆಯು ಆಂಗ್ಲರಿಗೆ ಬಹಳ ಸೇರಿತು. ಬೆಂಗಳೂರಿನಲ್ಲಿ ಹೊಸ ನಗರಗಳು ಬ್ರಿಟಿಶ್‌ರ ಹಾಗೂ ಆಂಗ್ಲೋ ಇಂಡಿಯನ್‌ರ ತಲೆ ಎತ್ತಿದವು. ಕಂಟೋನ್ಮೆಂಟ್, ರಿಚ್‌ಮಂಡ್ ಟೌನ್, ಕ್ಲೀಟ್ ಲ್ಯಾಡ ಟೌನ್, ರೆಸಿಡೆನ್ಸಿ ಏರಿಯಾ, ಇತ್ಯಾದಿಗಳು. ಹಾಗೂ ಬ್ರಿಟಿಶ್ ಹೆಸರು ಹೊತ್ತ ರೋಡ್‌ಗಳು ನಿರ್ಮಾಣವಾದವು. ಇನ್‌ಫಂಟ್ರಿರೋಡ್, ಕಬ್ಬನ್‌ಪಾರ್ಕ ರೋಡ್, ಪರೇಡ ಗ್ರಾಂಡ್‌ರೋಡ್, ಕ್ವೀನ್ಸ್‌ರೋಡ್, ಪ್ಯಾಲೇಸ್‌ರೋಡ್, ಫೋರ್ಟ್‌ರೋಡ್, ಗ್ರಂಟ್‌ರೋಡ್, ಲಾವೆಲ್ (Lavelle) ರೋಡ್, ಸೇಂಟ್‌ಮಾರ್ಕರೋಡ್, (ಚರ್ಚ), ರೆಸಿಡೆನ್ಸಿರೋಡ್, ರಿಚ್‌ಮಂಡ್‌ರೋಡ್, ಕಾನ್‌ವೆಂಟ್ ರೋಡ್, ಬ್ರಿಗೇಡ್‌ರೋಡ್, ಮ್ಯಾಗ್ರಥ್‌ರೋಡ್, ಪ್ರಿಮ್‌ರೋಜ್‌ರೋಡ್, ವಿಕ್ಟೋರಿಯಾರೋಡ್, ಡಿಕೆನ್‌ಸನ್ ರೋಡ್, ಸೇಂಟ್‌ಜಾನ್‌ರೋಡ್, ರೇಸ್‌ಕೋರ್ಸ್‌ರೋಡ್, ಲೇಡಿಲಾರ್ಡ್ ಕರ್ಝನ್ ಹಾಸ್ಪಿಟಲ್ ಹಾಗೂ ರೋಡ್.

ಗಾರ್ಡ್‌ನ್ಸ್ ಸಿಟಿ, ಬೆಂಗಳೂರು

ಇವುಗಳ ಜೊತೆಗೆ ಕಬ್ಬನ್ ಪಾರ್ಕ, ಲಾಲ್ ಬಾಗ್, ತಿಲಸೂರು, ಬೇಕ್ ಗಾರ್ಡ್‌ನ್, ರೆಸಿಡೆನ್ಸಿ ಗಾರ್ಡ್‌ನ್– ಈಗಿನ ಗವ್ನರ್ನರ ಬಂಗಲೆ ಸುತ್ತ ತಿರಸು ಈ ಬಂಗಲೆಯು ಬ್ರಿಟಿಶ್ ರೆಸಿಡೆಂಟ್‌ನ (ಮುಖ್ಯ ಆಡಳಿತಗಾರ) ಪ್ಯಾಲೇಸಿ (ರಾಜರಿಗಾಗಿ ಅರಮನೆ), ಪ್ಯಾಲೇಸ್ ಆರ್ಚ್‌ರ್ಡ್ (ಸದಾಶಿವನಗರ) ಹೀಗಾಗಿ ಗಾರ್ಡನ್ ಸಿಟಿ (Garden city) ಎಂದು ಭಾರತದಲ್ಲಿಯೇ ಹೆಸರು ಪಡೆದಿದೆ.

ಹೊಸ ಲ್ಯಾಂಡ್ ಮಾರ್ಕ್ಸ್‌ಗಳು

ವಿಧಾನಸೌಧ (Seat of Karnataka Legislative Assembly), ಗಾಂಧೀನಗರ, ಮಲ್ಲೇಶ್ವರಂ, ಜಯನಗರ, ಜೆ.ಪಿ. ನಗರ, ಡಾಲರ್ಸ್ ಕಾಲೋನಿ, ಕುಮಾರ ಪಾರ್ಕ, ಯಲಹಂಕಾ ಟೌನ್, ವಾಯಿಟ್ ಫಿಲ್ಡ್, ಇಂದಿರಾನಗರ, ದೇವನಹಳ್ಳಿ ಇಂಟರ್ ನ್ಯಾಶನಲ್ ಎಯರ್ ಫಿಲ್ಡ್, ಇನ್ನೂ ಹತ್ತು ಹಲವಾರು IT, BT ಸೆಂಟರುಗಳು.

ಬೆಂಗಳೂರಿನ ಜನಸಂಖ್ಯೆ ಈಗ ಅನಂತ ಅಧ್ಭುತ 85ಲಕ್ಷ ಬೆಳೆದಿದೆ ನೋಡಾ ಬೆಂಗಳೂರು ನಗರಾ, ಏಶಿಯಾದಲ್ಲಿಯೇ ಅತೀ ತೀವ್ರವಾಗಿ ಬೆಳೆಯುವ ನಗರ ಎಂದು ಕೀರ್ತಿ ಪಡೆದಿದೆ.

ಆಧುನಿಕತೆಯನ್ನು ಬೆಳೆಸುವ ಹುಮ್ಮಸ್ಸಿನಲ್ಲಿ ಬೆಂಗಳೂರು ತನ್ನ ಪ್ರಾಚೀನ ಹಾಗೂ ಮಧ್ಯಯುಗೀನ ಕೋಟೆಗೋಡೆಗಳನ್ನು ಕಳೆದುಕೊಂಡಿತು. ತನ್ನ ನಿನ್ನೆಗಳ (Yester rays and years) ತಳಪಾಯೆಯಲ್ಲಿ ಗಟ್ಟಿಯಾಗಿ ಕಾಲೂರಿದ ಬೆಂಗಳೂರು, ಐತಿಹಾಸಿಕ ಪುಟಗಳಿಂದ ಸಾಯುವುದಿಲ್ಲ, ಬೆಳೆಯುತ್ತಲೇ ಇದೆ.

'ಐತಿಹಾಸಿಕ ನಗರಗಳು ಎಂದೂ ಸಾಯುವುದಿಲ್ಲ ಅವು ಧರ್ಮಫಲದಿಂದೇರಿ ಕರ್ಮಫಲದಿಂದಿಳಿದು ಸಾರುವುವು ಮಮತೆ ತಿಳಿವಂತೆ ತಮ್ಮ ಕಥೆಗಳು'

ಆಧಾರ ಗ್ರಂಥಗಳು

1. ನಿರ್ದೇಶಕರು: ಬೆಂಗಳೂರು ಡಿಸ್ಟ್ರಿಕ್ಟ್, ಗೆಜೆಟಿಯರ್, ಬೆಂಗಳೂರು
2. Department of Tourism, Karnataka: Karnataka-India (The Global Destination, Bangalore)
3. The Mythic Society: Joint conference of place names of India; Epigraphical Soc.of India, Indian Archaeology, Society Indian Historical Society, Indian Society for Pre-historic and Quaternary Studies; Souverir and Abstract of Papers, 2005; Bangalore.
4. ಡಾ. ಚೆನ್ನಬಸಪ್ಪ ಪಾಟೀಲ: ಕರ್ನಾಟಕದ ಕೋಟೆಗಳು, ಹಂಪಿ
5. ಡಾ. ಎಸ್. ಕೆ. ಜೋಶಿ: ಕರ್ನಾಟಕದ ಕೋಟೆಗಳು, ಧಾರವಾಡ

36. ಟಿಪ್ಪು ಸುಲ್ತಾನನ ಬೆಂಗಳೂರು ಅರಮನೆ

ಡಾ. ಎಚ್. ಪಿ. ಶಶಿಧರ ಮೂರ್ತಿ

ಬೆಂಗಳೂರು ಕೋಟೆಯ ದಕ್ಷಿಣ ಭಾಗದ ಪುನರ್ನಿರ್ಮಾಣ ಮಾಡಿದ ಕೆಲವೇ ವರ್ಷಗಳಲ್ಲಿ ಹೈದರಾಲಿ ಖಾನನು ಅರಮನೆಯೊಂದನ್ನು ಅಲ್ಲಿ ಕಟ್ಟಲುಪಕ್ರಮಿಸಿದನು (1779). ಇದು ಶ್ರೀ ವೆಂಕಟರಮಣ ಸ್ವಾಮಿ ದೇವಾಲಯದ ಹಿಂದುಗಡೆಯೇ ಇದೆ. ಈ ಅರಮನೆ ಅಥವಾ ಮಹಲಿನ ನಿರ್ಮಾಣವನ್ನು ಟಿಪ್ಪು ಸುಲ್ತಾನನು 1789ರಲ್ಲಿ ಪೂರ್ತಿಗೊಳಿಸಿದನು. ಈ ಮಹಲಿನಲ್ಲಿಯೇ ಇರುವ ಎರಡು ಪರ್ಶಿಯನ್ ಶಾಸನಗಳು ಇದನ್ನು 'ಆನಂದ ನಿಲಯ' ಮತ್ತು 'ಸ್ವರ್ಗವೇ ಅಸೂಯೆ ಪಡುವಂಥದು' ಎಂದು ಬಣ್ಣಿಸುತ್ತವೆ. ಇದರ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದ್ದು 1789ರಲ್ಲಿಯೇ ಆದರೂ 1784ರ ವೇಳೆಗಾಗಲೇ ಒಂದು ಸುಖಕರ ವಾಸಸ್ಥಳವಾಗಿದ್ದ ಇದಕ್ಕೆ ಬ್ರಿಟಿಷರೊಡನೆ ಮಂಗಳೂರು ಒಪ್ಪಂದ (ಮಾರ್ಚ್, 1784) ಮಾಡಿಕೊಂಡ ನಂತರ ಟಿಪ್ಪುವು ತನ್ನ ಕುಟುಂಬದೊಡನೆ ಪ್ರವೇಶ ಮಾಡಿದನೆಂದು ಹೇಳಲಾಗಿದೆ. ಅವನಿಗೆ ತೀವ್ರ ಬೇಸರವುಂಟಾಗುವಂತೆ ಮಾಡಿದ ಮಾರ್ಚ್ 1791ರ ಮೂರನೇ ಮೈಸೂರು ಯುದ್ಧ ಮತ್ತು ಬೆಂಗಳೂರಿನ ಮುತ್ತಿಗೆಯ ಕಾರಣದಿಂದ ಅವನು ತನ್ನ ಕುಟುಂಬವನ್ನು ಅನಿವಾರ್ಯವಾಗಿ ಶ್ರೀರಂಗಪಟ್ಟಣಕ್ಕೆ ಬದಲಾಯಿಸಬೇಕಾಯಿತು.

ಈ ಅರಮನೆಯ ಅತ್ಯಂತ ಹಳೆಯ ಚಿತ್ರಣ ನಮಗೆ ದೊರಕುವುದು ಇಂಗ್ಲಿಷ್ ಚಿತ್ರಕಾರ ಹೋಮ್‌ನಿಂದ. 1791ರಲ್ಲಿ ಅದನ್ನು ಸಂದರ್ಶಿಸಿದ ಅವನು ತನ್ನ Select Views in Mysore (ಮೈಸೂರಿನಲ್ಲಿಯ ಆಯ್ದ ದೃಶ್ಯಗಳು) ಎಂಬ ಕೃತಿಯಲ್ಲಿ ಹೀಗೆ ಹೇಳಿದ್ದಾನೆ:

". . . ಕೋಟೆಯೊಳಗಿನ ಅತ್ಯಂತ ಭವ್ಯ ಕಟ್ಟಡವೆಂದರೆ ತನ್ನ ಸ್ವಂತ ವಾಸ್ತವ್ಯಕ್ಕಾಗಿ ಟಿಪ್ಪು ಕಟ್ಟಿಸಿದ ಅರಮನೆಯೇ ಆಗಿದೆ. ಇದು ಭವ್ಯವಾಗಿಯೂ ವಿಶಾಲವಾಗಿಯೂ ಇದೆ. ಸ್ವರ್ಗದ ನಾಲ್ಕೂ ದಿಕ್ಕುಗಳಿಂದ ಬರುವ ವಾಯುವಿಗೆ ಅಷ್ಟೇ ಸಂಖ್ಯೆಯ ವಿಸ್ತೃತ ಮುಂಭಾಗಗಳು ತೆರೆದುಕೊಳ್ಳುತ್ತವೆ. ಇವುಗಳಲ್ಲಿ ಪ್ರತಿಯೊಂದೂ ಎತ್ತರವಾದ ಹಜಾರದ ರಚನೆಯಾಗಿದ್ದು ಅವುಗಳ ಮರದಿಂದ ನಿರ್ಮಿತವಾದ ಛಾವಣಿಗಳು ಮರದಿಂದಲೇ ಆದ ಸಾಲುಕಂಬಗಳ ಮೇಲೆ ನಿಂತಿವೆ.

"ಈ ಕಂಬಗಳು ವಕ್ರ ಅಂಚುಗಳನ್ನುಳ್ಳ ಕಮಾನುಗಳಿಂದ ಜೋಡಿಸಲ್ಪಟ್ಟಿವೆ; ಮತ್ತು ಎಲ್ಲವೂ ಉತ್ತಮವಾಗಿ ಬಂಗಾರದ ಬಣ್ಣದ ಲೇಪನದಿಂದ ಕಂಗೊಳಿಸುತ್ತಿವೆ. ಪ್ರತಿಯೊಂದು ಬಾಲ್ಕನಿಯ ನಡುವೆ ಒಂದು ಚೌಕಾಕಾರದ ಮುಂಚಾಚಿದ ಭಾಗವಿದ್ದು ಸುಲ್ತಾನನು ಒಡ್ಡೋಲಗ ನಡೆಸುವಾಗ ರಾಜಪೀಠವನ್ನಿಡಲು ಈ ಏರ್ಪಾಟನ್ನು ಮಾಡಿರಬಹುದೆಂದು ನಮ್ಮ ಅನಿಸಿಕೆ. ಉತ್ತರ ಮತ್ತು ದಕ್ಷಿಣದ ಮುಂಭಾಗಗಳು ಯಾವುದೇ ಗೋಡೆ ಅಥವಾ ತಡೆಗಳಿಲ್ಲದೆ ಕಟ್ಟಡವನ್ನು ಸಂಪೂರ್ಣವಾಗಿ ವೀಕ್ಷಿಸಲು ಅನುಕೂಲವಾಗಿದ್ದು ಹೆಚ್ಚಿನ ಗಾಳಿಯಾಡುವಂತಿವೆ. ಅರಮನೆಯ ಪ್ರತಿಯೊಂದು ಮುಖಭಾಗದಲ್ಲಿಯೂ ಒಂದೊಂದು ಕಾರಂಜಿ ಇವೆ; ಮತ್ತು ಉತ್ತರ, ದಕ್ಷಿಣ ಮತ್ತು ಪಶ್ಚಿಮದಲ್ಲಿ ಇನ್ನೂ ಅಪೂರ್ಣವಾಗಿರುವ, ಕಡಿಮೆ ಎತ್ತರದ ಬಣ್ಣ ಮತ್ತು ಸ್ವರ್ಣಲೇಪನದಿಂದ ಬಹಳವಾಗಿ ಅಲಂಕರಿಸಿರುವ ಜನಾನಾಗಳಿವೆ. ಅರಮನೆಯ ಉತ್ತರ ಮತ್ತು ದಕ್ಷಿಣ ಮುಂಭಾಗದ ಎರಡೂ ಬದಿಗಳಲ್ಲಿರುವ

ಪುಟ್ಟ ಪುಷ್ಪೋದ್ಯಾನಗಳಲ್ಲಿ ಪೌರ್ವಾತ್ಯದ ಬಗೆಬಗೆಯ ಪುಷ್ಪಗಳೊಂದಿಗೆ ಯುರೋಪಿನ ಗುಲಾಬಿ ವರ್ಣದ (ಮಂದಗೆಂಪು ಛಾಯೆಯ) ಹೂಗಳು ಮೇಲಾಟವಾಡುತ್ತವೆ".

ಶಿರಾದ ನವಾಬನೆಂಬ ಅಧಿಕಾರವನ್ನು 1761ರಲ್ಲಿ ಪಡೆದ ಹೈದರನು ದಿಟವಾಗಿಯೂ ಅಲ್ಲಿನ ಮೊಘಲ್ ವಾಸ್ತುಕಲೆಯಿಂದ ಪ್ರಭಾವಿತನಾಗಿದ್ದನು. ಶಿರಾದ ಹಿಂದಿನ ಪ್ರಾಂತಾಧಿಪತಿಗಳಲ್ಲಿ ಒಬ್ಬನಾದ ದಿಲಾವರ್ ಖಾನ್ ಕಟ್ಟಿಸಿದ್ದ ಅರಮನೆಯು ಬೆಂಗಳೂರು ಮತ್ತು ಶ್ರೀರಂಗಪಟ್ಟಣದಲ್ಲಿ (ಬೇಸಿಗೆ ಅರಮನೆ ಅಥವಾ ದರಿಯಾ ದೌಲತ್) ಕಟ್ಟಿಸಿದ ಅರಮನೆಗಳಿಗೆ ಒಂದು ಮಾದರಿಯನ್ನೊದಗಿಸಿತು.

ಸಿ. ಹಯವದನರಾವ್‌ರವರ ಪ್ರಕಾರ, "ಶ್ರೀರಂಗಪಟ್ಟಣದಲ್ಲಿರುವ ದರಿಯಾ ದೌಲತ್ ಮತ್ತು ದುರದೃಷ್ಟವಶಾತ್ ಅಗ್ನಿಗಾಹುತಿಯಾದ (1897) ಮೈಸೂರು ಕೋಟೆಯೊಳಗಣ ಹಳೇ ಅರಮನೆಯ ಸಜ್ಜೆ ಅಥವಾ ದರ್ಬಾರ್ ಸಭಾಂಗಣದಂತೆ ಬೆಂಗಳೂರು ಅರಮನೆಯನ್ನು. . . ಮೊಘಲ್ ವಾಸ್ತುಶಿಲ್ಪ ಶೈಲಿಯಲ್ಲಿ ಭಾರತೀಯ ಮತ್ತು ಸಾರಸೆನಿಕ್ ವಿವರಗಳು ಬೆರೆತಿರುವ ಅಲಹಾಬಾದ್‌ನಲ್ಲಿರುವ ಅಕ್ಬರನ ಪ್ರಸಿದ್ಧ ದರ್ಬಾರ್ ಸಭಾಂಗಣದ ಹೋಲಿಕೆಯಲ್ಲಿ ಕಟ್ಟಲಾಗಿದೆ. ಈ ಕಟ್ಟಡಗಳಲ್ಲಿ ಸರಾಸರಿ ಪ್ರಮಾಣದಲ್ಲಿರುವ ಮುಖ್ಯ ಮಾಳಿಗೆಗಳು ಎತ್ತರದಲ್ಲಿಯೂ ಕಡಿಮೆ ಇದ್ದು ಅತ್ಯಂತ ವಿಲಕ್ಷಣವಾದ ಮೊಝೇಕ್ (Mosaic) ಅಲಂಕಾರಗಳಿಂದ ತುಂಬಿದ್ದರೂ, ಅಡಿಪಾಯ ದಿಂದಾರಂಭಿಸಿ ಮೊದಲನೇ ಮಹಡಿಯ ಒಳ ಮಾಳಿಗೆಯ ತುದಿಯವರೆಗೆ ಸಾಗಿ ಎತ್ತರವಾಗಿಯೂ ಮತ್ತು ಅಂದವಾಗಿಯೂ ಇರುವ ಕೆತ್ತನೆಗಳಿಂದ ಕೂಡಿರುವ ಮರದ ಕಂಬಗಳು ಒಂದು ಆಡಂಬರದ ನೋಟವನ್ನು ಸೃಜಿಸುವಲ್ಲಿ ಸಫಲವಾಗಿವೆ. ಈ ಕಟ್ಟಡಗಳ ಪ್ರವೇಶ ದ್ವಾರಗಳನ್ನು ಬಹಳ ಸುಂದರವಾಗಿ ರಚಿಸಲಾಗಿದೆ. ಈ ಎತ್ತರವಾಗಿರುವ ಸೌಧಗಳನ್ನು ಸಮೀಪಿಸುವಾಗ ಅವುಗಳ ಉನ್ನತವಾದ ಮಾಳಿಗೆಯ ಮುಂಚಾಚಿನಂತ ಬಾಲ್ಕನಿಗಳ ಮೇಲೆ ತಮ್ಮ ದರ್ಬಾರುಗಳನ್ನು ನಡೆಸುವ ಪ್ರಭುಗಳ ಭವ್ಯತೆ ಹಾಗೂ ವೈಭವದ ಎದುರು ತಮ್ಮ ಅಲ್ಪತನದ ಅರಿವು ಯಾರಿಗೇ ಆಗಲಿ ಆಗದಿರದು.

ಕ್ರಿ. ಶ. 1800–01ರಲ್ಲಿ, ಟಿಪ್ಪುವಿನ ಪತನಾನಂತರ ಬೆಂಗಳೂರಿಗೆ ಭೇಟಿನೀಡಿದ್ದ ಫ್ರಾನ್ಸಿಸ್ ಬುಕಾನನ್ ಟಿಪ್ಪುವಿನ ಮಹಲನ್ನು ವರ್ಣಿಸಿರುವುದು ಹೀಗೆ[3]:

"ಮಣ್ಣಿನ ರಚನೆಯಾದರೂ, ಇದೊಂದು ಸಾಕಷ್ಟು ಸೊಗಸಾದ ರಚನೆಯಾಗಿದೆ. ಮೇಲ್ಮಾಳಿಗೆಯಲ್ಲಿ ಸುಲ್ತಾನನಿಗಾಗಿ ಇದು ತಲಾ ಎರಡೆರಡು ಕೈಸಾಲೆಗಳಿರುವ ನಾಲ್ಕು ಹಜಾರ ಅಥವಾ ತೊಟ್ಟಿಗಳನ್ನು ಹೊಂದಿದೆ. ಪ್ರತೀ ಕೈಸಾಲೆಯೂ ಒಂದು ಪ್ರತ್ಯೇಕ ಕಛೇರಿ ಅಥವಾ ಸಂದರ್ಶನ ಕೊಠಡಿಯ ಎದುರಿಗಿರುವಂತೆ ಇದೆ. ಕೆಲವೇ ಕೆಲವು ನಂಬಿಗಸ್ಥ ಕಾವಲು ಪಡೆಯವರನ್ನಲ್ಲದೆ ಮತ್ತಾರನ್ನೂ ಸುಲ್ತಾನನಿರುವ ಹಜಾರ (ತೊಟ್ಟಿ) ದೊಳಕ್ಕೆ ಪ್ರವೇಶಿಸಲು ಬಿಡುತ್ತಿರಲಿಲ್ಲ; ಆದರೆ, ಹಜಾರದ ಇಕ್ಕೆಲಗಳಲ್ಲಿ ಪ್ರತ್ಯೇಕ ಕೈಸಾಲೆಗಳಿದ್ದವು. ಕೆಳ ದರ್ಜೆಯ ಅಧಿಕಾರಿಗಳು ಸುಲ್ತಾನನ ಕೈಸಾಲೆಯ ಕೆಳಗಿನ ತೊಟ್ಟಿಯನ್ನು ಬಳಸುತ್ತಿದ್ದರು. ಮುಂಭಾಗ ತೆರೆದಿರುವ ಈ ಹಜಾರ (ತೊಟ್ಟಿ)ದ ಮೇಲ್ಭಾವಣಿಯನ್ನು ಉನ್ನತವಾದ ಕಂಬಗಳು ಎತ್ತಿ ಹಿಡಿದಿವೆ. ಹವೆಯನ್ನು ತಂಪು ಮಾಡುವ ಕಾರಂಜಿಗಳಿರುವ ತೆರೆದ ತೊಟ್ಟಿ ಅಥವಾ ಹಜಾರದೊಳಕ್ಕೆ ಸಾಮಾನ್ಯ ಜನರು ಪ್ರವೇಶಿಸಬಹುದಾಗಿತ್ತು. ಹಜಾರಗಳ ಎರಡೂ ಬದಿಗಳಲ್ಲಿ ಚಿಕ್ಕಚಿಕ್ಕದಾದ ಮತ್ತು ಹೆಚ್ಚಿನ ಅನುಕೂಲಗಳಿಲ್ಲದ ಖಾಸಗಿ ಕೊಠಡಿಗಳಿವೆ. ಸಾರ್ವಜನಿಕ ಹಜಾರ ಅಥವಾ ತೊಟ್ಟಿಗಳಿಗೆ ಅಂದವಾಗಿ ಬಣ್ಣ ಬಳಿದಿರುತ್ತಾರೆ ಮತ್ತು ಕೃತ್ರಿಮ ಬಂಗಾರದ ಬಣ್ಣವನ್ನು ಲೇಪಿಸಿ ಅಲಂಕರಿಸಿರುತ್ತಾರೆ. ಕಛೇರಿಗಳು ಅಷ್ಟೇನೂ ಉತ್ತಮವಾಗಿಲ್ಲ. . . ಸ್ತ್ರೀಯರಿಗೆಂದು ಎರಡು ಕೊಠಡಿಗಳಿವೆ. ಸುಲ್ತಾನನ ಪ್ರಧಾನ ಪತ್ನಿಯ ಕೊಠಡಿ ಇವುಗಳಲ್ಲೊಂದಾಗಿದ್ದು, ಸುಲ್ತಾನನಂತೆಯೇ ಅವಳು

ಕೂಡಾ (ಸುಲ್ತಾನನ) ಉಪಪತ್ನಿಯರು (concubines) ಮತ್ತು ಮುಸಲ್ಮಾನ್ ಉನ್ನತಾಧಿಕಾರಿಗಳ ಸ್ತ್ರೀಯರಿಗೆ ಸಂದರ್ಶನ ನೀಡುವುದಿತ್ತು. ಇನ್ನೊಂದು ಕೊಠಡಿ ಉಪಪತ್ನಿಯರ ಉಪಯೋಗಕ್ಕಾಗಿ ಇತ್ತು.

"ಇದೊಂದು ಚೌಕಾಕಾರದ ಹಜಾರವಾಗಿದ್ದು (court) ಎರಡೂ ಬದಿಗಳಲ್ಲಿ ಒಂದೊಂದು ಮೊಗಸಾಲೆಗಳಿವೆ (corridors), ಮತ್ತು ಅವುಗಳ ಕೆಳಗೆ ಸ್ತ್ರೀಯರು ಊಟಮಾಡಲು ಅಥವಾ ವಿನೋದ ವಿಲಾಸಗಳಿಗೆಂದು ಕೂರುತ್ತಾರೆ. ಮೊಗಸಾಲೆಯ ಹಿಂದಕ್ಕೆ ಅವರು ಮಲಗುವ ಕೊಠಡಿಗಳಿವೆ. ಇವು ಚಿಕ್ಕದಾದ ಹಾಗು ಸದಾ ಕತ್ತಲೆಯಿಂದ ಕೂಡಿರುವ ಹನ್ನೆರಡು ಚದರಡಿ ವಿಸ್ತೀರ್ಣವುಳ್ಳ ಪ್ರತ್ಯೇಕ ಕೊಠಡಿಗಳು. ಬಾಗಿಲ ಮೂಲಕ ಅಥವಾ ಕೇವಲ ಒಂದಡಿ ಅಗಲವುಳ್ಳ ರಂಧ್ರದ ಮೂಲಕ ಬರುವ ಬೆಳಕು ಮತ್ತು ಗಾಳಿ ಬಿಟ್ಟರೆ ಹೆಚ್ಚಿನ ವ್ಯವಸ್ಥೆ ಇಲ್ಲ. ಇಡೀ ಕಟ್ಟಡದಲ್ಲಿ ಎದ್ದು ಕಾಣುವ ಲೋಪವೆಂದರೆ ಮೇಲ್ಛಾವಣಿಯ ಕನಿಷ್ಠ ಎತ್ತರ. ಅರಮನೆಯ ಎದುರಿಗೆ ಒಂದು ವಿಶಾಲವಾದ ಚೌಕಾಕಾರದ ಹಜಾರವಿದೆ. ಇದರ ಮುಂಭಾಗದಲ್ಲಿ ನೌಬತ್ ಖಾನ (Naubat Khana) ಅಥವಾ ವಾದ್ಯಗೋಷ್ಠಿ ಸ್ಥಾನವಿದ್ದು ಅದನ್ನು ಒಂದು ಸೊಗಸಾದ ಮೊಗಸಾಲೆ (corridor) ಸುತ್ತುವರೆದಿದೆ".

ಟಿಪ್ಪು ಸುಲ್ತಾನನ ಬೆಂಗಳೂರು ಅರಮನೆಯನ್ನು ಕೃತ್ರಿಯ ಬಂಗಾರ ಬಣ್ಣದ ಲೇಪನದಿಂದ ಶೃಂಗರಿಸಲಾಗಿತ್ತು. ಈ ಬಣ್ಣ ಹಚ್ಚುವ ಕಾಮಗಾರಿಯನ್ನು 1791ರಲ್ಲಿ ಪೂರ್ಣಗೊಳಿಸಲಾಯಿತು ಮತ್ತು ಈ ಮಹಲಿನಲ್ಲಿಯೇ ಇರುವ ಪರ್ಶಿಯನ್ ಭಾಷೆಯ ಶಾಸನವೊಂದು[4] ಬಣ್ಣಿಸುವಂತೆ, 'ಇದು ಚೀನಾದ ಸೌಂದರ್ಯವನ್ನು ವಿಸ್ಮರಣೆಗೆ ದೂಡಿತು'. ಈ ಹೇಳಿಕೆಯ ಸತ್ಯಾಸತ್ಯತೆ ಏನೇ ಇದ್ದಿರಬಹುದಾದರೂ, ಬಂಗಾರದ ಬಣ್ಣವನ್ನು ಲೇಪಿಸಿದ ಕಾರ್ಯವು ಸ್ವಲ್ಪಮಟ್ಟಿಗೆ ಅರಮನೆಯ ಭವ್ಯತೆಯನ್ನು ಹೆಚ್ಚಿಸಿತು ಎನ್ನಬಹುದು. ಡಾ. ಬೆಂಜಮಿನ್ ಪೇಯ್ನ್ ಹೇಳಿರುವಂತೆ[5], 'ಹೈದರ್ ಮತ್ತು ಅವನ ಮಗ ಟಿಪ್ಪು ಸುಲ್ತಾನ್ ಕಟ್ಟಿಸಿರುವ ಅರಮನೆಗಳೆಲ್ಲಾ ಒಂದೇ ರೀತಿಯ ರಚನಾಕ್ರಮವನ್ನು ಅನುಸರಿಸಿವೆ. . . ಅವುಗಳಿಗೆ ಲೇಪಿಸಿರುವ ಉಜ್ವಲ ಕಾಂತಿಯುಕ್ತ ಬಣ್ಣಗಳು ನೋಡುಗರೆಲ್ಲರ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ'. ಸುಮಾರು 1909–10ರಲ್ಲಿ ಗೋಡೆಗಳ ಮೇಲಿನ ಸ್ವಲ್ಪ ಭಾಗದ ವರ್ಣಚಿತ್ರಗಳ ಸಂರಕ್ಷಣೆ ಕಾರ್ಯವನ್ನು ಪ್ರಾರಂಭಿಸಲಾಯಿತಾದರೂ ಮಧ್ಯದಲ್ಲಿಯೇ ನಿಲ್ಲಿಸಲಾಯಿತು[6].

ನಾಲ್ಕನೇ ಮೈಸೂರು ಯುದ್ಧ (1799) ಅಂತ್ಯಗೊಂಡಾಗ ಈ ಅರಮನೆಯನ್ನು ಒಂದು ಯುರೋಪಿಯನ್ ರೆಜಿಮೆಂಟಿನ ವಾಸ್ತವ್ಯಕ್ಕಾಗಿ ಕೊಡಲಾಯಿತು. ಅದರ ಮೊಗಸಾಲೆಗಳಲ್ಲಿ (corridor) ಖಾಸಗಿ ಸೈನಿಕರು (Private) ತಂಗುವ ವ್ಯವಸ್ಥೆ ಮಾಡಲಾಯಿತು.[7] ಮೈಸೂರು ಸಂಸ್ಥಾನದ ಆಡಳಿತವನ್ನು ಬ್ರಿಟಿಷ್ ಕಮಿಷನ್‌ಗೆ ವಹಿಸಿಕೊಟ್ಟ ಮೇಲೆ, ಅಂದರೆ 1831ರಿಂದ, ಮೈಸೂರು ಸರ್ಕಾರದ ಇಲಾಖೆಗಳಲ್ಲಿ ಮುಖ್ಯವಾದವುಗಳನ್ನು ಈ ಅರಮನೆಯಲ್ಲಿ ಮತ್ತು ಕೆಲವು ಬಾಡಿಗೆಗೆ ಪಡೆದುಕೊಂಡ ಖಾಸಗಿ ಕಟ್ಟಡಗಳಲ್ಲಿ ನೆಲೆಗೊಳಿಸಲಾಯಿತು. ಮೈಸೂರಿನ ಛೀಫ್ ಇಂಜಿನಿಯರ್ (Chief Engineer) ಆಗಿದ್ದ ಕರ್ನಲ್ ಆರ್. ಎಚ್. ಸ್ಯಾಂಕಿ ಹೇಳಿರುವಂತೆ8, 'ಒಂದು ನಿಡಿದಾದ, ಎತ್ತರವಿಲ್ಲದ, ವಾತಾಯನ ವ್ಯವಸ್ಥೆಯಿಲ್ಲದ, ದುರ್ಗಂಧಮಯ, ಅಸುರಕ್ಷಿತ ಎರಡು ಮಹಡಿಗಳ ಕಟ್ಟಡವಾದ ಈ ಮಹಲಿನ ಪ್ರಧಾನ ಭಾಗವು ಅದನ್ನು ಉಪಯೋಗಿಸಲೇ ಬೇಕಾದವರಿಗೆ ಯಾತನಾಮಯವಾಗಿ ಪರಣಮಿಸಿತ್ತಷ್ಟೇ ಅಲ್ಲದೆ ಅದನ್ನು ಬಿದ್ದು ಹೋಗದಂತೆ ನೋಡಿಕೊಳ್ಳಬೇಕಾದ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳ ಸ್ಥೈರ್ಯಗೆಡಿಸಿತ್ತು".

ಮೈಸೂರು ಸಂಸ್ಥಾನದ ಮುಖ್ಯ ಕಮಿಷನರನಾಗಿದ್ದ (1834–1861) ಸರ್ ಮಾರ್ಕ್ ಕಬ್ಬನ್ ತನ್ನ ಕಛೇರಿಯನ್ನು ಇದೇ ಕಟ್ಟಡದಲ್ಲಿ ಹೊಂದಿದ್ದನು. ಇಲ್ಲಿದ್ದ ಇತರೆ ಕಛೇರಿಗಳೆಂದರೆ: ಖಜಾನೆ, ಮಿಲಿಟರಿ ಸಹಾಯಕನ ಕಛೇರಿ, ಲೋಕೋಪಯೋಗಿ ಇಲಾಖೆ, ಅರಣ್ಯಗಳ ಸಂರಕ್ಷಕನ ಕಛೇರಿ, ಉಪ ಮಹಾಲೆಕ್ಕಾಧಿಕಾರಿ (Deputy Accoun-

tant General), ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕ, ಇತ್ಯಾದಿ. ಮೈಸೂರು ಸಂಸ್ಥಾನದ ಪ್ರಪ್ರಥಮ ದವಾಖಾನೆ (Dispensary) ಕೂಡ 1833ರಿಂದ ಅನೇಕ ವರ್ಷಗಳವರೆಗೆ ಇಲ್ಲಿಂದಲೇ ಕಾರ್ಯ ನಿರ್ವಹಿಸುತ್ತಿತ್ತು.[9]

ಏಪ್ರಿಲ್ 1868ರಲ್ಲಿ ಕಬ್ಬನ್ ಪಾರ್ಕಿನಲ್ಲಿ ಸಾರ್ವಜನಿಕ ಕಛೇರಿಗಳ (Public Officers) ಕಟ್ಟಡವನ್ನು ಪೂರ್ಣಗೊಳಿಸಿದಾಗ ಅಲ್ಲಿಗೆ ಈ ಅರಮನೆಯಲ್ಲಿದ್ದ ಅನೇಕ ಕಛೇರಿಗಳನ್ನು ಸ್ಥಳಾಂತರಿಸಲಾಯಿತು. ಆಗ ಶಿಥಿಲವಾಗಿದ್ದ ಅರಮನೆಯ ಕೆಲವು ಭಾಗಗಳನ್ನು ಕೆಡವಿ ಹಾಕಲಾಯಿತು. ಆದರೆ ಕಬ್ಬನ್ ಪಾರ್ಕ್ ಬಳಿ (ಈಗಿನ ವಿಕಾಸ ಸೌಧದ ನಿವೇಶನದಲ್ಲಿ) ಸ್ವಂತ ಹೊಸ ಕಟ್ಟಡವನ್ನು ಹೊಂದುವವರೆಗೆ ಸರ್ಕಾರಿ ಮುದ್ರಣಾಲಯವು ಕೋಟೆಯ ಮಹಲಿನಲ್ಲಿಯೇ ಮುಂದುವರೆಯಿತು. ಮಹಲಿನ ಇನ್ನುಳಿದ ಭಾಗಗಳಲ್ಲಿ ಅರಣ್ಯ, ಪೊಲೀಸ್ ಮತ್ತು ಅಬಕಾರಿ ಕಾರ್ಯಾಲಯಗಳು ಮುಂದುವರೆದವು. ನಗರ ಸಭೆ ಕಛೇರಿಗಳು ಕೂಡ (ಮೇಯೋ ಹಾಲ್‌ಗೆ ಸ್ಥಳಾಂತರಗೊಳ್ಳುವವರೆಗೆ) ಇಲ್ಲಿಯೇ ಮುಂದುವರೆದವು.[10]

ಮೈಸೂರು ಸರ್ಕಾರವು 1916ರಲ್ಲಿ ಕೋಟೆಯೊಳಗಿನ ಮಹಲನ್ನು ಪುರಾತತ್ವ ಆಸಕ್ತಿಯ ಕಟ್ಟಡವೆಂಬುದಾಗಿ ಪರಿಗಣಿಸಿ ಉಳಿಸಿಕೊಳ್ಳಬೇಕೆಂಬ ನಿರ್ಧಾರ ತಳೆಯಿತು. ಆಗ ಮಹಲಿನಲ್ಲಿ ಜಿಲ್ಲಾ ನಾರ್ಮಲ್ ಶಾಲೆ ಮತ್ತು ಬಾಲಕರ ಕನ್ನಡ ಶಾಲೆ ನೆಲೆ ಹೊಂದಿದ್ದವು. ಅವುಗಳನ್ನು ಅಲ್ಲಿಂದ ಎತ್ತಂಗಡಿ ಮಾಡಲು ಕ್ರಮ ತೆಗೆದುಕೊಳ್ಳುವಂತೆ ಶಿಕ್ಷಣ ಮಹಾ ನಿರೀಕ್ಷಕ (Inspector General of Education) ರಿಗೆ ಮತ್ತು ಬೆಂಗಳೂರು ನಗರ ಸಭೆಯ ಅಧ್ಯಕ್ಷರಿಗೆ ಸರ್ಕಾರವು ತಾಕೀತು ಮಾಡಿತು.[11] ಮಹಲನ್ನು ಒಂದು ಅತಿ ಮಹತ್ವದ ಪುರಾತತ್ವ ಆಸಕ್ತಿಯ ಸ್ಮಾರಕವೆಂದು ಪರಿಗಣಿಸಿ ಸಂರಕ್ಷಿಸಬೇಕೆಂದೂ ಮತ್ತು ಅದನ್ನು ಯಾವುದೇ ವಿಧವಾದ ಪ್ರಯೋಜನಾತ್ಮಕ (Utilitarian) ಉದ್ದೇಶಗಳಿಗೂ ಬಳಸಿಕೊಳ್ಳಬಾರದೆಂದು ನಿರ್ಧರಿಸಲಾಯಿತು. ಈ ಉದ್ದೇಶಕ್ಕೆ ಪೂರಕವಾಗಿ ಎಲ್ಲಾ ಮರದ ಮತ್ತು ಗಾಜಿನ ವಿಂಗಡಣೆಗಳನ್ನು ತೆಗೆದು ಹಾಕಬೇಕೆಂದು ಮತ್ತು ಅದರ ಸುತ್ತುಮುತ್ತಲಿನ ಜಾಗದಲ್ಲಿ ಒಂದು ಉದ್ಯಾನವನ (park) ವನ್ನು ನಿರ್ಮಿಸಬೇಕೆಂದು ಆದೇಶ ಹೊರಡಿಸಲಾಯಿತು.

ಮಹಲಿನ ವಾಯವ್ಯ ದಿಕ್ಕಿನಲ್ಲಿದ್ದ ದೊಡ್ಡ ರ್‍ಯಾಂಪನ್ನು ಮತ್ತು ಮಹಲಿನ ವಾಯವ್ಯ ಮೂಲೆಯಲ್ಲಿದ್ದ ಅಷ್ಟಭುಜಾಕೃತಿಯ (Octogonal) ಬಾವಿಯನ್ನು ಮುಚ್ಚಲು ಅದೇ ಸಮಯದಲ್ಲಿ ಸೂಚನೆ ನೀಡಲಾಯಿತು. ವೆಂಕಟರಮಣಸ್ವಾಮಿ ದೇವಾಲಯವನ್ನು ಇನ್ನೂ ಉತ್ತಮ ರೀತಿಯಲ್ಲಿ ಸಂರಕ್ಷಿಸಬೇಕೆಂದು ಸಹ ಇದೇ ಸಂದರ್ಭದಲ್ಲಿ ಸೂಚನೆ ನೀಡಲಾಯಿತು.

ಉಲ್ಲೇಖಗಳು

1. ಪು.ಸಂಖ್ಯೆ 2–3, ಸೆಲೆಕ್ಟ್ ವ್ಯೂಸ್ ಇನ್ ಮೈಸೂರ್; ಲಂಡನ್, 1794.
2. ಪು. ಸಂಖ್ಯೆ. 373, ಮೈಸೂರು ಗ್ಯಾಸೆಟಿಯರ್, ಸಂಪುಟ–2, ಭಾಗ 1; ಸರ್ಕಾರದ ಮುದ್ರಣಾಲಯ; ಬೆಂಗಳೂರು, 1930
3. ಪು.ಸಂ. 45–46, ಸಂಪುಟ–1. ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಕೆನರಾ ಅಂಡ್ ಮಲಬಾರ್; ಲಂಡನ್, 1807.
4. ಪು.ಸಂ. 340, ಮೈಸೂರು ಗ್ಯಾಸೆಟಿಯರ್, ಸಂಪುಟ–2, ಭಾಗ 1, ಸರ್ಕಾರದ ಮುದ್ರಣಾಲಯ; ಬೆಂಗಳೂರು, 1930.
5. ಪು. ಸಂಖ್ಯೆ. 57, ಸ್ಟ್ಯಾಟಿಸ್ಟಿಕಲ್ ಫ್ರಾಗ್ಮೆಂಟ್ಸ್ ಆನ್ ಮೈಸೂರು.

6. ಪು. ಸಂಖ್ಯೆ. 340, ಮೈಸೂರು ಗ್ಯಾಸೆಟಿಯರ್, ಸಂಪುಟ.2, ಭಾಗ–1, ಸಿ. ಹಯವದನರಾವ್; ಸರ್ಕಾರದ ಮುದ್ರಣಾಲಯ; ಬೆಂಗಳೂರು, 1930.
7. ಅದೇ; ಪುಟ. ಸಂಖ್ಯೆ. 46.
8. ಪುಟ ಸಂಖ್ಯೆ–1, ಪ್ರೊಫೆಷನಲ್ ಪೇಪರ್ಸ್ ಆನ್ ಇಂಡಿಯನ್ ಇಂಜಿನಿಯರಿಂಗ್ (ದ್ವಿತೀಯ ಸರಣಿ), ಸಂಖ್ಯೆ LXIII, 'ಆಫೀಸಸ್ ಆಫ್ ದಿ ಮೈಸೂರು ಗವರ್ನಮೆಂಟ್ ಅಟ್ ಬೆಂಗಳೂರು', ಲೆಫ್ಟಿನೆಂಟ್ ಕರ್ನಲ್ ಆರ್. ಎಚ್. ಸ್ಯಾಂಕಿ.
9. ಪುಟ ಸಂಖ್ಯೆ 110, ದಿ ಆ್ಯನಲ್ಸ್ ಆಫ್ ದಿ ಮೈಸೂರ್ ರಾಯಲ್ ಫ್ಯಾಮಿಲಿ, ಭಾಗ 2, ಬಿ. ರಾಮಕೃಷ್ಣರಾವ್; ಸರ್ಕಾರದ ಮುದ್ರಣಾಲಯ; ಮೈಸೂರು, 1922.
10. ಪುಟ ಸಂಖ್ಯೆ.99. ಮೈಸೂರು ಗ್ಯಾಸೆಟಿಯರ್, ಸಂಪುಟ.5, ಸಿ. ಹಯವದನರಾವ್; ಸರ್ಕಾರದ ಮುದ್ರಣಾಲಯ: ಬೆಂಗಳೂರು, 1930.
11. ಸರ್ಕಾರದ ಆದೇಶ ಸಂಖ್ಯೆ: ಜಿ.6096–100–ಜಿ.ಎಂ.299–15–5 ದಿನಾಂಕ 15ನೇ ನವೆಂಬರ್ 1916.

37. ಚಿತ್ರಕಲೆಯಲ್ಲಿ ಬೆಂಗಳೂರಿನ ಟಿಪ್ಪು ಅರಮನೆ

ಶ್ರೀ ಶೇಕ್ ಇರ್ಫಾನ್ ಕುಂಟಲ್ಪಾಡಿ

ಚಿತ್ರಕಲೆಯು ಮಾನವನ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವ ಮಾಧ್ಯಮ. ಮಾನವನು ತನ್ನ ಆನಂದಕ್ಕಾಗಿ ಚಿತ್ರ ರಚಿಸಲು ಪ್ರಾರಂಭಿಸಿದ. ಸಮಯ ಕಳೆದಂತೆ ಅವನು ಶೋಧಕ ದೃಷ್ಟಿಯಿಂದ ವಿವಿಧ ಕಲಾ ಮಾಧ್ಯಮಗಳನ್ನು, ಪ್ರಕಾರಗಳನ್ನು ಬಳಸಲು ಪ್ರಾರಂಭಿಸಿದ ಕುತೂಹಲದಿಂದ ತನ್ನ ಸಮಕಾಲೀನ ನೈಸರ್ಗಿಕ ಮತ್ತು ಮಾನವ ನಿರ್ಮಿತ ಸೃಷ್ಟಿಯ ತದ್ರೂಪ ರಚನೆಗೆ ಪ್ರಯತ್ನಿಸಿದ. ಈ ಪ್ರಯತ್ನವು ಮುಂದಿನ ಪೀಳಿಗೆಗೆ ಗತಕಾಲದ ವೈಭವಗಳನ್ನು ಪರಿಚಯಿಸುವಲ್ಲಿ ಮುಖ್ಯ ಪಾತ್ರ ವಹಿಸಿತು. ಹೀಗೆ ಚಿತ್ರಕಲೆಯು ಗತಕಾಲದ ವೈಭವವನ್ನು ಅರಿಯಲು ಮುಖ್ಯ ದಾಖಲೆಯಾಯಿತು.

ಇಂತಹದೇ ಕೆಲವು ಚಿತ್ರ ಕಲಾಕೃತಿಗಳ ಸಹಾಯದಿಂದ ಬೆಂಗಳೂರಿನ ಟಿಪ್ಪು ಅರಮನೆಯ ಆವರಣದ ಬಗ್ಗೆ ಪ್ರಕಾಶ ಬೀರುವ ಪ್ರಯತ್ನ ಮಾಡುತ್ತಿದ್ದೇನೆ. ಈ ವಿಷಯಕ್ಕಾಗಿ ನಾನು 1790ರಿಂದ 1804ರ ಒಳಗೆ ರಚಿಸಲಾದ ಕೆಲವು ಚಿತ್ರಗಳನ್ನು ಇಲ್ಲಿ ಪ್ರದರ್ಶಿಸಲು ಆಯ್ಕೆ ಮಾಡಿದ್ದೇನೆ. ಈ ಸಮಯದಲ್ಲಿ ಮೈಸೂರು ಮತ್ತು ಬೆಂಗಳೂರು ವಿವಿಧ ಕಲಾ ಪ್ರಕಾರಗಳನ್ನು ಕಂಡಿದ್ದವು. ಉದಾಹರಣೆಗೆ ಭಿತ್ತಿಚಿತ್ರ, ಗೇಚೆ, ಜಲವರ್ಣ, ತೈಲವರ್ಣ ಮತ್ತು ರೇಖಣೆಗಳು ಇತ್ಯಾದಿ. ಬೆಂಗಳೂರಿನಲ್ಲಿರುವ ಟಿಪ್ಪು ಸುಲ್ತಾನರ ಅರಮನೆ ಬಗ್ಗೆ ದೊರೆತಿರುವ ಹೆಚ್ಚಿನ ಚಿತ್ರಗಳು ಬ್ರಿಟೀಷ್ ಕಲಾವಿದರಿಂದ ರಚಿಸಲ್ಪಟ್ಟವು. ಬ್ರಿಟೀಷರ ಸಂಗ್ರಹಾಲಯದಲ್ಲಿ ಈ ಚಿತ್ರಗಳ ಮೂಲ ಪ್ರತಿಗಳು ಪ್ರದರ್ಶಿಸಲ್ಪಡುತ್ತಿದ್ದರೆ ನಮಗೆ ಸಿಗುವುದು ಕೇವಲ ಛಾಯ ಚಿತ್ರಗಳಲ್ಲಿ ಮಾತ್ರ. ಈ ಕಾಲದಲ್ಲಿ ಇಂಗ್ಲೆಂಡಿನ ಕಲಾವಿದರು ಮನೋವಿಲಾಸಿ ಯುಗಕ್ಕೆ ಮಾರುಹೋಗಿದ್ದರು. ಗುಡ್ಡಗಾಡು, ಬೆಟ್ಟ, ಕಣಿವೆ ಮುಂತಾದವುಗಳನ್ನು ಅಭಿಮಾನ ಮೋಹಗಳಿಂದ ಚಿತ್ರಿಸುವ ಪರಂಪರೆ ಹೆಚ್ಚಾಗಿ ಕಾಣಿಸಿಕೊಂಡಿತು. ಅಲ್ಲಿನ ಪ್ರಭಾವ ನಮ್ಮಲ್ಲಿ ಕೂಡ ಪ್ರತಿಫಲಿಸಲಾರಂಭಿಸಿತು.

ಬೆಂಗಳೂರಿನ ಕೋಟೆ, ಅರಮನೆಗಳ ದೃಶ್ಯಗಳನ್ನು ಸುಂದರವಾಗಿ ಚಿತ್ರಿಸುವ ಖ್ಯಾತಿ ಬ್ರಿಟೀಷ್ ಕಲಾವಿದರಾದ ರಾಬರ್ಟ್ ಹೋಮ್ ಮತ್ತು ಜೇಮ್ಸ್ ಹಂಟರ್‌ರವರಿಗೆ ಸಲ್ಲುತ್ತದೆ. ಭಾರತೀಯ ಕಲಾವಿದರಾದ ಎಸ್. ರಮೇಶ್‌ರವರು ಕರ್ನಲ್‌ರೀಡ್‌ನ ಅಧಿಕೃತ ದಾಖಲೆಯಿಂದ 1791ರ ಬೆಂಗಳೂರಿನ ಭೂಪಟವನ್ನು ಆಧರಿಸಿ ಬೆಂಗಳೂರು ನಗರದ ಕೋಟೆ (ಪೆಟ್ಟ)ಯ ಸುಂದರ ರೇಖಾ ಚಿತ್ರಣವನ್ನು ರಚಿಸಿರುವುದು ಶ್ಲಾಘನೀಯ ವಿಷಯ. ಫಜ್ಲುಲ್ ಹಸನ್‌ರವರು ತಮ್ಮ 'ಬೆಂಗಳೂರ್ ಥ್ರೂ ದಿ ಸೆಂಚುರೀಸ್' ಎಂಬ ಪುಸ್ತಕದ ಒಳ ರಕ್ಷಾಕವಚದಲ್ಲಿ ಇದನ್ನು ಪ್ರಕಟಿಸಿದ್ದಾರೆ. ಕೋಟೆಯ ಸುತ್ತಲಿನ ಕಂದಕ, ಧರ್ಮಾಂಬುಧಿ ಕೆರೆ, ಕೋಟೆಯ ಒಳಗಿನ ಮನೆಗಳು, ಗುಡಿ ಗೋಪುರಗಳು, ಮರಗಳು, ಕೋಟೆಯ ಬತ್ತೇರಿಗಳನ್ನು ನೋಡುತ್ತಿದ್ದಂತೆ ಕೆಂಪೇಗೌಡರ ಆ ಗತಕಾಲದ ವೈಭವ ಕಣ್ಮುಂದೆ ಬರುತ್ತದೆ.

"ಹೋಮ್ಸ್ ಸೆಲೆಕ್ಟ್ ವ್ಯೂಸ್ ಇನ್ ಮೈಸೂರು" 1808ನ ರೇಖಣೆಗಳು, ಮೈಸೂರು ಮತ್ತು ಬೆಂಗಳೂರಿನ ಸುಂದರ ಚಿತ್ರಣಗಳು. 'ಪೆಟ್ಟಾ' (ಬೆಂಗಳೂರು ನಗರ) ಕೋಟೆಯ ದೃಶ್ಯ, ದೆಹಲಿ ದ್ವಾರದ ಹೊರಗಿನ ದೃಶ್ಯ, ದೆಹಲಿದ್ವಾರದ ಒಳಾಂಗಣದ ದೃಶ್ಯ, ಹಲಸೂರು ದ್ವಾರ, ಬೆಂಗಳೂರಿನ ಪೂರ್ವದಿಕ್ಕಿನ ದೃಶ್ಯ, ಕೆಂಪಾಂಬುಧಿ

ಕೆರೆಯಿಂದ ಬೆಂಗಳೂರು ದಕ್ಷಿಣದ ಚಿತ್ರಣ. ಇವು ರಾಬರ್ಟ್ ಹೋಮ್ ರಚಿಸಿದಂತಹ ಬೆಂಗಳೂರಿನ ಚಿತ್ರಗಳು. ಈ ಚಿತ್ರಗಳು ಕಪ್ಪು ಬಿಳುಪಿನ ಸುಂದರ ರಚನೆಗಳಾಗಿದ್ದು, ಮಾನವಾಕೃತಿಯ ಸುಂದರ ಸಂಯೋಜನೆಗಳು ಕಾಣಸಿಗುತ್ತವೆ. ಗಿಡಮರಗಳಲ್ಲಿ ಜೀವಂತಿಕೆ ಕಾಣುತ್ತಿದ್ದು, ಹಿನ್ನೆಲೆಗಳಲ್ಲಿ ಕಾಣುವ ಪ್ರಕೃತಿ ದೃಶ್ಯ, ಆಕಾಶ ಮೋಡಗಳ ಚಿತ್ರಣ ಮನಸೂರೆಗೊಳ್ಳುತ್ತವೆ. ಈ ಕಲಾವಿದ ತನ್ನ ಕ್ರಿಯಾತ್ಮಕ ಸೃಷ್ಟಿಯಿಂದ ಗೋಡೆಗಳ, ಕಲ್ಲುಗಳ ಜೋಡಣೆಗಳ, ಶಿಲ್ಪಗಳ ರಚನೆಯನ್ನು ನೈಜವಾಗಿ ಮೂಡಿಸಿದ್ದಾರೆ. ದೃಶ್ಯಾಂತರ ರಚನೆ ಹಾಗೂ ಸೂಕ್ಷ್ಮವಾದ ಭಾಗಗಳಲ್ಲಿ ನೀಡಲಾದ ಪ್ರಾಮುಖ್ಯತೆಯಿಂದಾಗಿ ಕಲಾವಿದನಿಗೆ ಚಿತ್ರಕಲೆಯಲ್ಲಿದ್ದ ಪ್ರೀತಿ ಹಾಗೂ ಪ್ರಾವಿಣ್ಯತೆ ಎದ್ದು ಕಾಣುತ್ತದೆ.

ಕಪ್ಪು ಬಿಳುಪಿನ ಈ ಸುಂದರ ಚಿತ್ರವನ್ನು (ಚಿತ್ರ–1) ರಾಬರ್ಟ್ ಹೋಮ್ ಪರ್ಷಿಯನ್ ಶಾಸನದ (ಈ ಶಾಸನದ ಪ್ರಕಾರ ಮಹಲಿನ ಹೆಸರು ರಷ್ಕ–ಎ–ಜನ್ನತ್) ಕೆಳ ಭಾಗದಲ್ಲಿ ಕುಳಿತಾಗ ಕಾಣುವಂತೆ ದೃಶ್ಯಾಂತರ ರಚನೆಯ ಒಂದನೆಯ ಸೂತ್ರ ಎಂದರೆ ಪರ್ಸ್‌ಪೆಕ್ಟಿವ್ ಒನ್ ಪಾಯಿಂಟ್ ವ್ಯೂನಲ್ಲಿ (Perspective on e point view) ಚಿತ್ರಿಸಿದ್ದಾರೆ. 1794ರಲ್ಲಿ ರಚಿಸಿದ ಈ ಕಲಾಕೃತಿಯು ಛಾಯಚಿತ್ರವನ್ನೂ ಸೋಲಿಸುವಂತಿದೆ. ಇಲ್ಲಿನ ದ್ವಾರಗಳು, ಮೇಲ್ಚಾವಣಿ, ಮೆಹರಾಬ್ (Niche) ಬಾಲ್ಕನಿ, ಕಮಾನುಗಳು, ಕಂಬಗಳ ಮೇಲೆ ಮೇಲ್ಚಾವಣಿಗೆ ಆಧಾರವಾಗಿರುವ ಮರಗಳ ತುಂಡುಗಳಲ್ಲಿ ಕೆತ್ತಲಾದ ಶಾರ್ದೂಲದ ಶಿಲ್ಪಗಳನ್ನು ತುಂಬಾ ನಾಜೂಕಿನಿಂದ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ಗಮನಿಸಬೇಕಾದ ಮೂರು ವಿಷಯಗಳೇನೆಂದರೆ:

1. ಈ ಮಹಲಿನಲ್ಲಿಯೂ ಟಿಪ್ಪುಸುಲ್ತಾನ್ ತನ್ನ ದರ್ಬಾರು ಹಜಾರಕ್ಕೆ ಶ್ರೀರಂಗಪಟ್ಟಣದ ದರಿಯಾದೌಲತ್ ಬೇಸಿಗೆ ಅರಮನೆ (ಹೆನ್ರಿ ಡಿಕ್ಸನ್‌ರವರು ತೆಗೆದ 1860ರ ಛಾಯಚಿತ್ರದಲ್ಲಿರುವಂತೆ)ಯಲ್ಲಿ ಬಳಸುತ್ತಿದ್ದಂತೆ ದೊಡ್ಡದಾದ ಪರದೆಯನ್ನು ಬಳಸುತ್ತಿದ್ದರು ಎಂಬುದಕ್ಕೆ ಈ ಚಿತ್ರ ಸಾಕ್ಷಿಯಾಗಿದೆ.
2. ಬಲಬದಿಯಲ್ಲಿ ಚಿತ್ರಿಸಲಾದ ಕಟ್ಟಡದ (ವೃತ್ತಾಕಾರದಲ್ಲಿ ತೋರಿಸಿರುವ) ಚಿತ್ರಣವು ಇಲ್ಲಿ ದೊಡ್ಡದಾದ ಕೊಠಡಿಗಳಿದ್ದವು ಎಂದು ಹೇಳುತ್ತದೆ. ಈಗ ಇದೇ ಭಾಗದಲ್ಲಿ ನೋಡಲು ಸಿಗುವ ಕೆಲವು ಮೆಹರಾಬ್‌ಗಳು ಅಲ್ಲಿ ಕೊಠಡಿಗಳಿದ್ದವು ಎಂಬುದಕ್ಕೆ ಪುರಾವೆಯಾಗಿವೆ.
3. ಇಲ್ಲಿ ಚಿತ್ರಿಸಲಾದ ಕಾರಂಜಿ (ಬಾಣದ ಗುರುತಿನಿಂದ ತೋರಿಸಿರುವ, ಹಾಗೂ ತೋಟದ ಚಿತ್ರಣವು ಟಿಪ್ಪುವಿನ ಮಹಲಿನ ಎದುರು ಸುಂದರವಾದ ಹೂದೋಟವಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ.
4. ಟಿಪ್ಪು ಅರಮನೆ ಹಾಗೂ ಬೆಂಗಳೂರು ಕೋಟೆಗಳನ್ನು ತನ್ನ. ಚಿತ್ರಕಲೆಯ ಕೇಂದ್ರ ಬಿಂದುವಾಗಿಸಿದ ಜೇಮ್ಸ್ ಹಂಟರ್‌ರವರು ಜಲವರ್ಣವನ್ನು ಮಾಧ್ಯಮವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಭೂದೃಶ್ಯಗಳನ್ನು ಬೇಗನೆ ಮಾಡಿ ಮುಗಿಸಲು ಜಲ ಮಾಧ್ಯಮವು ಅನುಕೂಲಕರವಾಗಿದ್ದುದು ಇದಕ್ಕೆ ಕಾರಣವಾಗಿರಬಹುದು.

ಬೆಳಗಿನ ಜಾವ ಮಹಲಿನ ಎದುರು ಸಿಪಾಯಿಗಳ ಕವಾಯಿತು ತೋರಿಸುವಂತಹ ನೇರ ಚಿತ್ರಣ (ಚಿತ್ರ–2) (ಜೇಮ್ಸ್ ಹಂಟರ್‌ರವರು ರಚಿಸಿದ ಬೆಂಗಳೂರಿನ ಕೋಟೆಯ ಮೈಸೂರು ದ್ವಾರದ ಚಿತ್ರದಲ್ಲಿ ಓರ್ವ ನೀಲಿವರ್ಣದ ಕೋಟು ಧರಿಸಿದ ಅಧಿಕಾರಿಯು ಸ್ಥಳದಲ್ಲಿಯೇ ಕುಳಿತು ಚಿತ್ರ ಬರೆಯುವ ಚಿತ್ರಣವು ನೇರ ಚಿತ್ರಣ ಮಾಡಿರುವುದಕ್ಕೆ ಸಾಕ್ಷಿ) ಮಹಲು ಹೇಗಿತ್ತು ಎಂಬುದನ್ನು ತೋರಿಸುತ್ತದೆ. ಕೆಂಪು ಅಂಗಿ ಹಾಗೂ ಬಿಳಿಕಚ್ಚೆ ಧರಿಸಿರುವ ಸೇನಾ ತುಕಡಿ, ಹಳದಿ ಬಣ್ಣದ ಸಮವಸ್ತ್ರಧರಿಸಿದ ವಾದ್ಯ ವೃಂದದವರು, ತೆಳು ನೀಲಿ ಬಣ್ಣದ ಕೋಟು, ಬಿಳಿಪ್ಯಾಂಟು ಹಾಗೂ ಟೋಪಿ ಧರಿಸಿದ ಕೆಲ ಅಧಿಕಾರಿಗಳು, ಕುದುರೆ ಸವಾರನ ಚಿತ್ರಣದಿಂದಾಗಿ ಚಿತ್ರ ಪ್ರಬಂಧಕ್ಕೆ ಕಳೆಬಂದಿದೆ. ಟಿಪ್ಪುವಿನ ಮಹಲು, ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ, ವರಾಂಡ, ಗರುಡಸ್ಥಂಭ, ಮೆಟ್ಟಿಲುಗಳು, ಕಂಬಗಳು ದೇವಸ್ಥಾನದ ಮೇಲ್ಚಾವಣಿಯ ಕೈಪಿಡಿ ಗೋಡೆಯ ಮೇಲಿನ ಅಲಂಕಾರಿಕ

ಹೂಗಳು, ಗೋಪುರ, ಮಹಲಿನ ಬಾಲ್ಕನಿ, ಕಿಟಕಿಗಳು, ಆವರಣದ ಗೋಡೆ, ಆವರಣ ದಕ್ಷಿಣ ದಿಕ್ಕಿನ ಹೆಬ್ಬಾಗಿಲು ಇವೆಲ್ಲವನ್ನೂ ತುಂಬಾ ಸೂಕ್ಷ್ಮತೆಯೊಂದಿಗೆ ರಚಿಸಲಾಗಿದೆ. ಜಲವರ್ಣದಲ್ಲಿ ತೆಳ್ಳಗಿನ ನೀಲಿ ವರ್ಣದಲ್ಲಿ ಮೂಡಿಬಂದ ಆಕಾಶ, ಅರಮನೆಯು ಶ್ವೇತವರ್ಣದ್ದಾಗಿದ್ದು, ತೆಳು ಛಾಯೆಯಿಂದ ನೆರಳು ಬೆಳಕಿನ ಪ್ರಭಾವ ನೀಡಲಾಗಿದ್ದು, ಕಂದು ಮತ್ತು ಕಪ್ಪು ಬಣ್ಣಗಳನ್ನು ಬೇಕಾದ ಜಾಗಗಳಲ್ಲಿ ಗಾಢಛಾಯೆಗಾಗಿ ಬಳಸಲಾಗಿದೆ.

ಈ ಚಿತ್ರಕ್ಕೂ (ಚಿತ್ರ–3) ಚಿತ್ರ 2ಕ್ಕೂ ಕೇವಲ ದಿಕ್ಕಿನ ಹಾಗೂ ಮಾನವಾಕೃತಿಯ ವ್ಯತ್ಯಾಸಗಳಲ್ಲದೆ ಬಣ್ಣಗಳ ಬಳಕೆಯಲ್ಲೂ ವ್ಯತ್ಯಾಸಗಳಿವೆ. ಇಲ್ಲಿ ಜಲವರ್ಣದ ಒದ್ದೆ ತಂತ್ರಗಾರಿಕೆಯನ್ನು ಕಾಣಬಹುದಾಗಿದೆ. ನೆರಳಿನ ರಚನೆಗಾಗಿ ಕಡು ಕಪ್ಪು ಬಣ್ಣವನ್ನು ಇಲ್ಲಿ ಬಳಸಲಾಗಿದೆ. ವಿವಿಧ ಬಣ್ಣಗಳಲ್ಲಿ ಸಿಪಾಯಿಗಳನ್ನು, ಅಧಿಕಾರಿಗಳನ್ನು ಹಾಗೂ ಮಹಿಳೆಯರನ್ನು ರಚಿಸಿದ್ದರೂ ಹಿನ್ನೆಲೆಯಲ್ಲಿ ಕಾಣುವ ಮಾನವಾಕೃತಿಗಳನ್ನು ಕೇವಲ ಒಂದೇ ಬಣ್ಣದ ಛಾಯೆಯಲ್ಲಿ ರಚಿಸಲಾಗಿದೆ. ಆವರಣದ ಗೋಡೆಯ ಒಳಭಾಗದಲ್ಲಿ ವರಾಂಡದ ರಚನ ಕಾಣಬಹುದಾಗಿದ್ದು, ಉತ್ತರ ದಿಕ್ಕಿನ ಹೆಬ್ಬಾಗಿಲನ್ನು ತುಂಬಾ ದೊಡ್ಡದಾಗಿ ಚಿತ್ರಿಸಲಾಗಿದೆ. ಜೇಮ್ಸ್ ಹಂಟರ್ ರಚಿಸಿದ ಈ ಮಹಲಿನ ಇನ್ನೊಂದು ಕಲಾಕೃತಿಯೂ (ಪುಟ–143, ದಿ ಸಿಟಿ ಬ್ಯೂಟಿಫುಲ್–ಟಿ.ಪಿ.ಇಸ್ಸಾರ್) ತದ್ರೂಪ ರಚನೆಯಂತಿದ್ದು ಮಾನವಾಕೃತಿಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದಾಗಿದೆ.

ರಫ್ಕ–ಎ–ಜನ್ನತ್, (ಚಿತ್ರ–4) ಟಿಪ್ಪು ಅರಮನೆಯ ಉತ್ತರದಿಕ್ಕಿನ ದರಬಾರು ಹಜಾರ, ಜೇಮ್ಸ್ ಹಂಟರ್–1804, ಈ ಜಲವರ್ಣ ಕಲಾಕೃತಿಯು ಅರಮನೆಯು ಸುಂದರ ಭಿತ್ತಿ ಚಿತ್ರಗಳಿಂದ ಸಂಪೂರ್ಣವಾಗಿ ಅಲಂಕೃತವಾಗಿತ್ತು ಎಂಬುದನ್ನು ತೋರ್ಪಡಿಸುತ್ತದೆ. ಕೆಲಸಗಳಲ್ಲಿ ನಿರತರಾದ ಸೇವಕರ ಹಾಗೂ ಬಿಳಿಯ ನಿಲುವಂಗಿ ಧರಿಸಿರುವ ಅಧಿಕಾರಿಗಳ ಚಿತ್ರಣ ಇಲ್ಲಿ ಸಿಗುತ್ತದೆ. ಈ ದರ್ಬಾರು ಹಜಾರಕ್ಕೆ ಪ್ರವೇಶಿಸಿದಾಗ ಬಲಗಡೆಯ ಗೋಡೆಯಲ್ಲಿ ಮಹಲಿನ ನಿರ್ಮಾಣದ ವಿವರ ನೀಡುವ ಇಂಗ್ಲೀಷ್ ಶಾಸನದ ರಚನೆಯನ್ನು ಈ ಚಿತ್ರದಲ್ಲೂ ಕಾಣಬಹುದಾಗಿದೆ. ಇಲ್ಲಿ ಕಂಬಗಳಿಗೆ ತಿಳಿ ಹಸಿರು ಬಣ್ಣ, ಕಮಾನಿನ ಮೇಲೆ ನೀಲಿ ಬಣ್ಣ, ಕಮಾನಿನ ಒಳ ಭಾಗದಲ್ಲಿ ಕೆಂಪು ಬಣ್ಣ ಬಳಸಲಾಗಿದೆ. ಶಾರ್ದೂಲ ಶಿಲ್ಪದ ಚಿತ್ರಣ ಇಲ್ಲಿ ಸ್ಪಷ್ಟವಾಗಿ ಮೂಡಿಬಂದಿಲ್ಲ.

ಇಲ್ಲಿ ಚಿತ್ರ (ಚಿತ್ರ–5) 4ರಲ್ಲಿ ಬಳಸಿದಂತೆ ಮಹಲಿನ ಕಮಾನುಗಳಿಗೆ ಗಾಢ ಬಣ್ಣವನ್ನು ಬಳಸಿಲ್ಲ. ಇಲ್ಲಿ ತೋರಿಸಿರುವ ಮರ, ಅದರ ಕಟ್ಟೆ, ದೊಡ್ಡದಾದ ದಂಡೆ ಹಾಗೂ ಪಕ್ಕದಲ್ಲಿರುವ ಕಟ್ಟಡಗಳು ಈಗ ಕಾಣಸಿಗುವುದಿಲ್ಲ. ಇಲ್ಲಿಯ ಮೆಟ್ಟಿಲುಗಳು ಈಗಿನ ಮೆಟ್ಟಿಲುಗಳಂತಿಲ್ಲ. ಈ ಚಿತ್ರದ ಎಡ ಭಾಗದಲ್ಲಿರುವ ಕಟ್ಟಡದೊಳಗೆ ಒಂದು ದೊಡ್ಡ ಚಕ್ರದ ರಚನೆ ಕಾಣಬಹುದು. ನೀಲಿ ಆಕಾಶಕ್ಕೆ ಬಳಸಿದ ತೆಳು ಬಣ್ಣ, ಮಾನವಾಕೃತಿಗೆ ಬಳಸಿದ ನೆರಳು ಬೆಳಕು, ಮಹಲಿನ ಮುಂದಿನ ಜಾಗಕ್ಕೆ ಬಳಸಿದ ಕಂದು ಬಣ್ಣದ ಛಾಯೆ ಚಿತ್ರಕ್ಕೆ ಕಳೆತಂದಿವೆ. ಇಲ್ಲಿ ವೃತ್ತಾಕಾರದಲ್ಲಿ ಗುರುತಿಸಿರುವ ಜಾಗದಲ್ಲಿ ಮೇಲ್ಛಾವಣಿಯ ಕೈಪಿಡಿ ಗೋಡೆಯನ್ನು ಚಿತ್ರಿಸಿಲ್ಲದಿರುವುದಕ್ಕೆ ಕಾರಣ ತಿಳಿಯುವುದಿಲ್ಲ.


ನಾವು ಗಮನಿಸಬೇಕಾದ ವಿಷಯವೇನೆಂದರೆ ಈ ಮಹಲಿಗೆ ಸಂಬಂಧಿಸಿದ ಜೇಮ್ಸ್ ಹಂಟರನ ರಚನೆಯ ಒಟ್ಟು ಐದು ಜಲವರ್ಣ ಕಲಾಕೃತಿಗಳಲ್ಲೂ ಕಾಣಸಿರುವ ಮೇಲ್ಛಾವಣೆಯ ಕೈಪಿಡಿ ಗೋಡೆಯ ಅಲಂಕಾರ ಒಂದೇ ಆಗಿದ್ದು, ಈಗ ಉಳಿದಿರುವ ದರ್ಬಾರು ಹಜಾರದ ಮೇಲಿನ ಕೈಪಿಡಿಗೋಡೆಯ ಅಲಂಕಾರದಲ್ಲಿ ವ್ಯತ್ಯಾಸಗಳಿವೆ. ಆದರೆ ರಫ್ಕ–ಎ–ಜನ್ನತ್, ದರಿಯಾ ದೌಲತ್, ಗುಂಬಜ್, ಮಸ್ಜಿದ್–ಏ–ಆಲಾಗಳಲ್ಲಿರುವ ಅಲಂಕಾರಗಳಲ್ಲಿ ಹೋಲಿಕೆಗಳನ್ನು ಕಾಣಬಹುದಾಗಿದೆ.

ಕರ್ನಲ್ ರೀಡ್‌ನ ಅಧಿಕೃತ ದಾಖಲೆಯಿಂದ 1791ರ ಬೆಂಗಳೂರಿನ ಭೂಪಟದಲ್ಲಿ ಎರಡು ಕೋಟೆಗಳ ಚಿತ್ರಣಗಳನ್ನು ಕಾಣಬಹುದಾಗಿದೆ. ಉತ್ತರದ ದಿಕ್ಕಿನಲ್ಲಿ ನಗರದ ಕೋಟೆ ಇದ್ದು, ದಕ್ಷಿಣದಲ್ಲಿರುವ ಸಣ್ಣ ಕೋಟೆಯು


ಅರಮನೆಯ ಆವರಣದ್ದಾಗಿದೆ. ಇಲ್ಲಿ ನಾಲ್ಕು ದಿಕ್ಕಿಗೂ ದ್ವಾರಗಳ ರಚನೆ, ಮಹಲಿನ ಆವರಣ, ದೇವಸ್ಥಾನವನ್ನು ಕಾಣಬಹುದಾಗಿದೆ. ಈ ಭೂಪಟವನ್ನು ಹಾಗೂ ಜೇಮ್ಸ್‌ಹಂಟರ್ ಮತ್ತು ರಾಬರ್ಟ್ ಹೋಮ್‌ರವರ ಚಿತ್ರಗಳನ್ನು ಆಧರಿಸಿ ಆ ಕಾಲದಲ್ಲಿ ಟಿಪ್ಪುಸುಲ್ತಾನ್‌ರವರ ಬೇಸಿಗೆ ಅರಮನೆ ರಫ್ಕ್–ಎ–ಜನ್ನತ್, ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ, ಪ್ರವೇಶದ್ವಾರಗಳು ಹೇಗೆ ಕಾಣುತ್ತಿರಬಹುದೆಂಬುದಾಗಿ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಚಿತ್ರ–7, ಇಲ್ಲಿ ಕಂದುಬಣ್ಣ ದೇವಸ್ಥಾನಕ್ಕೆ ಮತ್ತು ಆವರಣದ ಗೋಡೆಗೆ, ತೆಲುಕಿತ್ತಾಳೆ ಬಣ್ಣವನ್ನು ಮಹಲು (ಜೆನಾನ) ದ್ವಾರಕ್ಕೆ ಕಡು ಹಸಿರು ಬಣ್ಣ ದರ್ಬಾರು ಹಜಾರಕ್ಕೆ ಬಳಸಿದ್ದೇನೆ. ರೇಖಾ ಚಿತ್ರಕ್ಕೆ ಕ್ರೆಯಾನ್ ಬಣ್ಣ ಬಳಸಿ ಕೆಲಜಾಗದಲ್ಲಿ ಪಾರದರ್ಶಕತೆಯನ್ನು ತೋರಿಸಿದ ಕಾರಣ ಕಟ್ಟಡದ ಹಿಂದಿನ ಜಾಗವನ್ನು ಕಾಣಬಹುದಾಗಿದೆ.

ಉಲ್ಲೇಖಗಳು

1. ಫಜ್ಲುಲ್ ಹಸನ್, 'ಬೆಂಗಳೂರು ಥ್ರೂ ದಿ ಸೆಂಚುರೀಸ್'
2. ಟಿ. ಪಿ. ಇಸ್ಸಾರ್, 'ದಿ ಸಿಟಿ ಬ್ಯೂಟಿಫುಲ್'
3. ಡಾ. ಶಿವರಾಮ ಕಾರಂತ 'ಕಲಾ ಪ್ರಪಂಚ'
4. ಪಿ. ಎನ್. ನರಸಿಂಹಮೂರ್ತಿ




ಬೆಂಗಳೂರಿನ ಟಿಪ್ಪು ಮಹಲಿನ ದರ್ಬಾರು ಹಜಾರದ ಒಳಾಂಗಣದ ದೃಶ್ಯ, ರಾಬರ್ಟ್ ಹೋಮ್ 1794.




ಟಿಪ್ಪು ಮಹಲಿನ ಉತ್ತರದಿಕ್ಕಿನಿಂದ ಪ್ರವೇಶದ ದೃಶ್ಯ. ಜೇಮ್ಸ್ ಹಂಟರ್–1804



ಬೆಂಗಳೂರು ಟಿಪ್ಪು ಅರಮನೆಯ ದೃಶ್ಯ, ಜೇಮ್ಸ್‌ಹಂಟರ್ 1804



ದರ್ಬಾರು ಹಜಾರದ ದಕ್ಷಿಣ ದಿಕ್ಕಿನ ದೃಶ್ಯ, ಜೇಮ್ಸ್ ಹಂಟರ್–1804,



ದರ್ಬಾರು ಹಜಾರದ ದಕ್ಷಿಣ ದಿಕ್ಕಿನ ದೃಶ್ಯ, ಜೇಮ್ಸ್ ಹಂಟರ್–1804,

38. ಸ್ವಾತಂತ್ರ್ಯೋತ್ತರ ಬೆಂಗಳೂರಿನ ವಾಸ್ತುಶಿಲ್ಪ: ನೆಲೆ-ಹಿನ್ನೆಲೆ

ಡಾ. ಎಸ್. ವಿ. ರವೀಂದ್ರ

1956ರ ನವೆಂಬರ್ 1ರಂದು ರಾಜ್ಯಗಳ ಪುನರ್ವಿಂಗಡನೆಯಾಗಿ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಾಗ ಎಲ್ಲಾ ಪ್ರಾಂತೀಯ ಭಾವನೆಗಳನ್ನೊಳಗೊಂಡ ಬಹುರೂಪಿ ಪ್ರಾತಿನಿಧಿಕತೆಯನ್ನು ಸಾಧಿಸಬೇಕಾಗಿತ್ತು; ತನ್ನದೇ ಸ್ವಂತ ಛಾಪನ್ನು ರೂಪಿಸಬೇಕಾಗಿತ್ತು. ಸಾಂಸ್ಕೃತಿಕವಾಗಿ ಇದು ವಾಸ್ತುಶಿಲ್ಪಕ್ಕೂ ಅನ್ವಯಿಸುತ್ತದೆ. ಬೆಂಗಳೂರು ನಗರವೇ ಏಕೀಕರಣಗೊಂಡ ಮೈಸೂರು ರಾಜ್ಯದ ರಾಜಧಾನಿಯಾಗಿರಲೆಂಬ ನಿರ್ಧಾರದ ಹಿನ್ನೆಲೆಯಲ್ಲಿ ವಿಧಾನಸೌಧದ ಪರಿಕಲ್ಪನೆ ಹಾಗೂ ಅನಾವರಣ ಎರಡೂ ಪೂರ್ಣಗೊಂಡವು. ವಿಧಾನಸೌಧ ಮುಂಬರುವ ದಶಕಗಳಲ್ಲಿ ರೂಪಿತಗೊಳ್ಳಬಹುದಾದಂಥ ಎಲ್ಲಾ ಸರ್ಕಾರಿ ಕಟ್ಟಡಗಳಿಗೆ ಮೂಲ ಪ್ರತೀಕವಾಯ್ತು, ಮಾದರಿಯಾಯ್ತು.

1950ರ ದಶಕದಲ್ಲಿ ರೂಪುಗೊಂಡ ವಿಧಾನಸೌಧ, ಮೈಸೂರು ಅರಮನೆಯ ಭವ್ಯತೆಯೊಡನೆ ಹೊಸ ರಾಜ್ಯದ ಪ್ರತಿಮಾ ರೂಪವಾಗಿ ದೇಶಿಯ ಅದರಲ್ಲೂ ದ್ರಾವಿಡ ಶೈಲಿಯ ಭಾಷೆಯಲ್ಲಿ ಮೂಡಿಬರಬೇಕೆಂಬದು ಆಗಿನ ಮುಖ್ಯಮಂತ್ರಿ ಹನುಮಂತಯ್ಯನವರ ಆಶಯವಾಗಿತ್ತು. ಈ ಸೌಧ ಆಗಿನ ತರುಣ ನಗರದ ಮನೋಸ್ಥಿತಿಯನ್ನು ಬಿಂಬಿಸಲಿಲ್ಲ ಎಂಬ ಕಟು ಟೀಕೆ ಈಗಲೂ ಇದೆ. ಆಗ ತಾನೇ ವಿಮಾನ ಕಾರ್ಖಾನೆ ಷುರುವಾಗಿತ್ತು. ಅಂತಹ ತಾರುಣ್ಯದ ಮುನ್ನುಗ್ಗುವ ಸ್ವಭಾವ ಈ ಪಾರಂಪರಿಕ ಶೈಲಿ ಬಿಂಬಿಸಬಹುದೇ ಎಂಬ ಸಂದಿಗ್ಧ ಹಾಗೂ ಶಂಕೆ ಇಂದಿನವರೆಗೂ ಚರ್ಚಿತ ವಿಷಯವಾಗಿಯೇ ಉಳಿದಿದೆ. ಇಂದಿಗೂ ಯುವ ವಾಸ್ತುಶಿಲ್ಪಗಳಲ್ಲಿ ಈ ವಿಷಯ ನೆಲೆ ಕಾಣದಂಥ ವಿಷಯವಾಗೇ ಉಳಿದಿದ್ದರೂ ಬೌದ್ಧ, ಮುಸ್ಲಿಂ ಹಾಗೂ ದ್ರಾವಿಡ ರೂಪರೇಖೆಗಳನ್ನು ಹೊಂದಿದ ವಿಧಾನಸೌಧ ಬಹುಜನಕ್ಕೆ ಆತ್ಮೀಯವಾಗುವಂಥ ಭವನ; ಅವರಲ್ಲಿ 'ನಮ್ಮದು' ಎಂಬ ಭಾವನೆಯನ್ನು ಸ್ಫುರಿಸುವಂತಹ ಸೌಧ.

ವಿಶಾಲವಾದ ಮೆಟ್ಟಿಲುಗಳು, ಉನ್ನತವಾದ ಪ್ರದೇಶದ್ವಾರ. ಭವ್ಯವಾದ ಗುಮ್ಮಟ ಮತ್ತು ಅದರ ಮೇಲಿನ ಚತುರ್ಮುಖ ಸಿಂಹದ ಪುತ್ಥಳಿ. ಮೇಲ್ಗಡೆಯಲ್ಲಿರುವ ಧರ್ಮಚಕ್ರ ಎಲ್ಲವೂ, ಎದುರಿನಲ್ಲಿರುವ ಉಚ್ಚ ನ್ಯಾಯಾಲಯದ ಕಟ್ಟಡವನ್ನು ಕುಬ್ಜವಾಗಿಸುತ್ತವೆ. ಮಧ್ಯದಲ್ಲಿರುವ ಚೌಕಾಕಾರದ ಪ್ರಾಂಗಣ, ನಿಶ್ಚಿತರೂಪದ ಸಮಪಾರ್ಶ್ವತೆಯ ಭೂಮಿಕೆ. ಹೊರಗಡೆಯ ಭವ್ಯ ನಿಲುವು ಜೊತೆಯಾಗಿ ನೋಡುಗರಲ್ಲಿ ಭವ್ಯತೆಯ ಅರಿವನ್ನುಂಟುಮಾಡುತ್ತವೆ. ಜನ ಈ ಭವನದ ಜೊತೆ ಭಾವಾನಾತ್ಮಕ ತಾದಾತ್ಮ್ಯತೆಯನ್ನು ಹೊಂದುತ್ತಾರೆ. (ರಾಜಸತ್ತೆಯ ಕುರುಹು ಪ್ರಜಾಪ್ರಭುತ್ವದ ಹೊದಿಕೆಯಲ್ಲಿ ಕಂಡರೂ ಕೂಡ-ಬಹುಶಃ ಕರ್ನಾಟಕದ ಎಲ್ಲಾ ಪರಂಪರೆ ಹಾಗೂ ಭವ್ಯತೆಯನ್ನು ಜನ ಇದರಲ್ಲಿ ರಾಜ್ಯದ ಪ್ರತೀಕವೆಂಬಂತೆ ಕಾಣುತ್ತಾರೆ. ಈ ಶೈಲಿ ನಮ್ಮದೇ ಆದುದರಿಂದ ಹಾಗೂ ಬಹುಕಾಲದಿಂದ ಪರಿಚಿತವಾದುದರಿಂದ, ಭಾವನಾತ್ಮಕ ಸಂಬಂಧ ಮತ್ತಷ್ಟು ಸೂಕ್ಷ್ಮವಾಗುತ್ತದೆ. ವಸಾಹತುಶಾಹಿ ಅಥವಾ ಪಾಶ್ಚಾತ್ಯ ಶೈಲಿಗೆ ನಮ್ಮದೇ ಉತ್ತರದ ಪ್ರತಿಧ್ವನಿಯಾಗುತ್ತದೆ.)

1950ರ ದಶಕದುದ್ದಕ್ಕೂ ಪರಿವರ್ತನೆಯ ಕಾಲವಾಗೇ ಉಳಿಯಿತು. ವಾಸ್ತುಶಿಲ್ಪದಲ್ಲಿ ಹಾಗೂ ಆಡಳಿತಾತ್ಮಕ ಮುಂಬೈ ಕರ್ನಾಟಕ ಮತ್ತು ಹೈದರಾಬಾದು ಕರ್ನಾಟಕ ಆಯಾ ಪ್ರದೇಶಗಳ ಸಾಂಸ್ಕೃತಿಕ ಹಾಗೂ ಕಲಾ ಪರಂಪರೆಯಲ್ಲಿಯೇ ಮುಂದುವರೆದಿದ್ದವು. ಮುಂಬೈನಲ್ಲಿ ಪಾಶ್ಚಾತ್ಯ ಹಾಗೂ ಇಸ್ಲಾಂ ಶೈಲಿ ಹೈದರಾಬಾದಿನಲ್ಲಿ

ಇಸ್ಲಾಂ ಶೈಲಿ. ಹಳೇ ಮೈಸೂರಿನಲ್ಲಿ ಒಡೆಯರುಗಳು ಕಟ್ಟಡ ಶೈಲಿಯು ಬಗ್ಗೆ ಸ್ಪಷ್ಟವಾದ ನೀತಿಯೊಂದನ್ನು ಅಳವಡಿಸಿಕೊಂಡಿದ್ದರು. ಮದರಾಸು ಆಡಳಿತದ ಮಂಗಳೂರು. ಉಡುಪಿ, ಕೊಡಗು ಪ್ರದೇಶಗಳಲ್ಲಿ ಪ್ರಾಂತೀಯ ಲಕ್ಷಣಗಳನ್ನೊಳಗೊಂಡ ಕಟ್ಟಡ ವಿನ್ಯಾಸ ಕಂಡುಬರುತ್ತದೆ. ಮದರಾಸಿನಲ್ಲಿ ಕಟ್ಟಡಗಳನ್ನು ಗಮನಿಸಿದಾಗ ಯಾವುದೇ ನಿರ್ದಿಷ್ಟ ಮಾದರಿಯನ್ನು ಬಳಸಿದಂತೆ ಕಂಡುಬರುವುದಿಲ್ಲ.

1956ರ ತರುವಾಯ ಏಕೀಕರಣಗೊಂಡ ಕರ್ನಾಟಕದ ವಿವಿಧ ಭಾಗಗಳಲ್ಲಿ ಸಾಮಾನ್ಯವಾಗಿ ವಾಸ್ತುಶಿಲ್ಪಕಲೆಯ ಅಸಮವಾದ ಬೆಳವಣಿಗೆ ಕಾಣುತ್ತದೆ. ಬೆಂಗಳೂರು ರಾಜಧಾನಿಯಾದ್ದರಿಂದ ಹಾಗೂ ಆಗಲೇ ಬೆಳವಣಿಗೆಯ ಹಾದಿಯಲ್ಲಿ ಇದ್ದುದರಿಂದ ಕಟ್ಟಡಗಳಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ – ಕಾರ್ಖಾನೆಗಳು, ವಾಣಿಜ್ಯ, ಶೈಕ್ಷಣಿಕ ಸಂಸ್ಥೆಗಳು ಇತ್ಯಾದಿ. ಹೊಸ ರಾಜ್ಯದ ಅಧಿಕಾರ ಸ್ಥಾನ ಬೆಂಗಳೂರೆಂದು ಖಚಿತವಾದ ಬಗ್ಗೆ ಅರಿವು ಇನ್ನೂ ಗಟ್ಟಿಗೊಳ್ಳಬೇಕಾಗಿತ್ತು. ಇಡೀ ರಾಜ್ಯದ ಕಲ್ಪನೆ ಇನ್ನೂ ಬೆಳೆಯಬೇಕಾಗಿತ್ತು; ಬೆಂಗಳೂರು ಈ ಪ್ರಾಂತ್ಯಗಳಿಗೆ ಅಂದಿಗೂ ದೂರವೇ ಮತ್ತು ಮಾನಸಿಕವಾಗಿ ಇಂದಿಗೂ ದೂರವೇ.

ಬೇರೆಲ್ಲೆಡೆ ಕಟ್ಟಡ ಕಲೆ ಬೆಳೆಯಲಿಕ್ಕೆ ಬೇಕಾದಂಥ ವ್ಯವಸ್ಥೆ, ಆರ್ಥಿಕ ಬೆಳವಣಿಗೆಯಿಂದ ಸಿಗಬಹುದಾದಂಥ ಒತ್ತು ಇನ್ನೂ ನಿರ್ಮಾಣವಾಗಿರಲಿಲ್ಲ. ಖೇದದ ಸಂಗತಿಯೆಂದರೆ ಪರಿಸ್ಥಿತಿ ಇಂದಿಗೂ ಸುಧಾರಿಸಿಲ್ಲ. ಪರಿಣಾಮವಾಗಿ, ಎಲ್ಲೆಡೆ ಹೆಚ್ಚಿನ ಹಣಹೂಡಿಕೆ ಹಾಗೂ ಅಭಿವೃದ್ಧಿಗಾಗಿ ಸಂಪುಗಳು, ಹೋರಾಟಗಳು ಎಷ್ಟೊಂದು ನಡೆದಿವೆಯೆಂದರೆ ಪ್ರತ್ಯೇಕ ರಾಜ್ಯಗಳಿಗಾಗಿ (ಕರ್ನಾಟಕದಿಂದ) ಕೂಗು ಕೇಳುತ್ತಿದೆ. ಈ ಪರಿಸ್ಥಿತಿಯಲ್ಲಿ ವಾಸ್ತುಶಿಲ್ಪಕಲೆಯೂ ಕೂಡ ಮೂಲಭೂತವಾದ ವಿಷಯ ಚರ್ಚಿಸದೇ ಕೇವಲ ಹೊರ ಪದರದ ಶೃಂಗಾರದ ಚದುರಂಗದಾಟವಾಗುತ್ತಿದೆ; ಬರೀ ಫ್ಯಾಷನ್ನಿಗೆ ಸೀಮಿತವಾಗುತ್ತಿದೆ. ನಮ್ಮ ವಾತಾವರಣಕ್ಕೆ ತಕ್ಕುದಾದ, ನಮ್ಮ ಅನುಕೂಲಕ್ಕೆ ತಕ್ಕಂಥ, ನಮ್ಮ ಮನೋಭಾವಗಳನ್ನು ಪ್ರತಿಫಲಿಸುವ ಐತಿಹಾಸಿಕತೆಯುಳ್ಳ ಕಟ್ಟಡ ಕಲೆಯ ಶೈಲಿ ರೂಪುಗೊಳ್ಳುವುದಕ್ಕೆ ಅಡಚಣೆಗಳಿವೆ.

ಇಪ್ಪತ್ತನೇ ಶತಮಾನದ 50ರ ಮತ್ತು 60ರ ದಶಕಗಳಲ್ಲಿ ಬಹಳಷ್ಟು ಯೋಜನೆಗಳು ಸರ್ಕಾರದ್ದೇ ಆಗಿದ್ದು ಸರ್ಕಾರವೇ ಯೋಜಿಸಿ ಕಟ್ಟಡ ನಿರ್ಮಾಣ ನಿರ್ವಹಣೆಯನ್ನು ನಿಭಾಯಿಸುತ್ತಿತ್ತು. ಖಾಸಗಿ ಉದ್ದಿಮೆದಾರರು ಸಾಕಷ್ಟು ಬೃಹತ್ ಉದ್ದಿಮೆಗಳಲ್ಲಿ ಪಾಲ್ಗೊಳ್ಳಲಿಲ್ಲ. ಯೋಜನೆಗಳು ಬಹುತೇಕ ತಾಂತ್ರಿಕ ವಲಯಗಳಲ್ಲಿ ಇದ್ದಂಥವು. ಉದಾ: ಬೃಹತ್ ಅಣೆಕಟ್ಟುಗಳು, ವಿದ್ಯುತ್ ಕಾರ್ಯಾಗಾರಗಳು ಇತ್ಯಾದಿ. ಹಾಗಾಗಿ ಕಟ್ಟಡ ಕಲೆ ಅಷ್ಟು ಪ್ರಾಮುಖ್ಯತೆ ಪಡೆಯಲಿಲ್ಲ.

ಕಟ್ಟಡಗಳು ಸಹ ಬಹುಮಟ್ಟಿಗೆ ಸಾರ್ವಜನಿಕ ರಂಗದಲ್ಲೇ ರೂಪುಗೊಂಡಂಥಹವು. ಅಂದರೆ ಸರ್ಕಾರಿ ಕಟ್ಟಡಗಳು, ಶೈಕ್ಷಣಿಕ (ಕ್ಯಾಂಪಸ್‌ಗಳು) ಸಮುದಾಯಗಳು, ಸಾರ್ವಜನಿಕ ಉದ್ದಿಮೆಗಳು ಇತ್ಯಾದಿ. ಇವೆಲ್ಲವೂ ಸಾಂದರ್ಭಿಕ ವಾಸ್ತುಶಿಲ್ಪದ ಪ್ರತಿಮೆಗಳಲ್ಲೇ ತಮ್ಮನ್ನು ಪ್ರತಿನಿಧಿಸಿಕೊಂಡವು. ಹೊಸತನ್ನು ತೆರೆದ ಮನಸ್ಸಿನಿಂದ ಇನ್ನೂ ಸ್ವೀಕರಿಸಲಿಲ್ಲ. ಹಲವಕ್ಕೆ (ಸರ್ಕಾರಿ ಹಾಗೂ ಶೈಕ್ಷಣಿಕ ಸಂಸ್ಥೆಗಳು) ಆಗಲೇ ರೂಪಿಸಿದ್ದ ವಿಧಾನಸೌಧ ಸಿದ್ಧ ಪ್ರತಿಮೆಯಾಗಿ ಸರ್ಕಾರಿ ಹಾಗೂ ಹಲವು ಖಾಸಗಿ ಕಟ್ಟಡಗಳಲ್ಲಿ ಪುನರಾವರ್ತನೆಯಾಯಿತು. ಸುಮಾರಾಗಿ ಸರ್ಕಾರದ ವಾಸ್ತು ನೀತಿಯೂ ಸಹ (ಅಲಿಖಿತ) ಇದನ್ನೇ ಬಳಸಿಕೊಂಡಿತು. ಸರ್ಕಾರ ಎಂದರೆ 'ಮಾ-ಬಾಪ್' (ತಾಯಿ-ತಂದೆ/ಮಾತಾಪಿತೃ) ಗಳೆಂಬ ಮನೋಭಾವ ಜನರ ಮನಸ್ಸಿನಲ್ಲಿ ಇನ್ನೂ ನೆಲೆಸಿತ್ತು. ಸರ್ಕಾರವೇ ಯೋಜಿಸಿ ತಾನೇ ಅದರ ಗ್ರಾಹಕನಾಗುವಂಥ ಪರಿಸ್ಥಿತಿ ಅಂದು ಸಾಮಾನ್ಯ. ಖಾಸಗಿ ರಂಗವು ಆಗಿನ್ನೂ ಗುರಿಗಳನ್ನು ಕಂಡುಕೊಳ್ಳುತ್ತಿತ್ತು. ಹಣ ಹೂಡಿಕೆಯಲ್ಲಾಗಲಿ. ಸಾಂಸ್ಥಿಕ ಸಂಘಟನೆಯಲ್ಲಾಗಲಿ ಅದಿನ್ನೂ ಸರ್ಕಾರಕ್ಕೆ ಸಾಟಿಯಾಗಿರಲಿಲ್ಲ.

ಕೇಂದ್ರೀಕೃತ ಆರ್ಥಿಕ ವ್ಯವಸ್ಥೆ ಮತ್ತು ಅಧಿಕಾರ ಬೇರೆಯವರಲ್ಲಿ ಕ್ರಿಯಾಶೀಲತೆಯನ್ನು ಸ್ಥಗಿತಗೊಳಿಸಿತ್ತು; ಪರಿಣಾಮ, ವೈವಿಧ್ಯತೆ ಇಲ್ಲದ ಕಟ್ಟಡ ಕಲೆ; ಹೊಸ ಮಾದರಿಯ ಕಾರ್ಯರೂಪದಲ್ಲಿ ವೈವಿಧ್ಯತೆ ಉಳ್ಳಂಥ ಕಟ್ಟಡಗಳ ಅವಶ್ಯಕತೆಯೇ ಕಾಣಲಿಲ್ಲ. ಸಂಕೀರ್ಣವಾದ ವ್ಯವಸ್ಥೆ ಅಥವಾ ಸಮಾಜಗಳಲ್ಲಿ ಆಂತರಿಕ ಅವಲಂಬನೆಯ ಜಾಲವೂ ಸಂಕೀರ್ಣವಾಗಿರುತ್ತದೆ ಹಾಗೂ ಕ್ಲಿಷ್ಟವಾಗಿರುತ್ತದೆ; ಹಾಗಾಗಿ ವಿವಿಧ ರೀತಿಯ ಕಟ್ಟಡಗಳ ಸಂಕುಲಗಳೇ ಉದಯವಾಗುತ್ತವೆ; ವಿವಿಧ ಅವಶ್ಯಕತೆಗಳು ವಿವಿಧ ರೂಪದ ಪ್ರತ್ಯೇಕ ವಾಸ್ತುವಿನ ಚಹರೆಯ ಕಟ್ಟಡಗಳಲ್ಲಿ ಆವಿರ್ಭವಿಸುತ್ತವೆ. ಇದು ಕೇಂದ್ರೀಕೃತವಾದ ವ್ಯವಸ್ಥೆಗಳಲ್ಲಿ ಅಪರೂಪ. ಉದಾ:ಕಮ್ಯೂನಿಷ್ಟ್ ರಾಷ್ಟ್ರಗಳು ಅಥವಾ ಸರ್ವಾಧಿಕಾರಗಳು ಬಹುಮುಖವಾದಂಥ ಭಾವರೂಪಗಳು. ಬಹುಮುಖವಾದಂಥ ಅವಶ್ಯಕತೆಗಳಿದ್ದಾಗ ಮಾತ್ರ ಸಾಧ್ಯ. ಅದು ಸರ್ಕಾರದ ಸಹಜವಾದ ಮಂದ ಗಮನದ ನಡೆಯಲ್ಲಿ ಅಸಾಧ್ಯ. ಕ್ಷಿಪ್ರ ಬದಲಾವಣೆ ಬಹುಶಃ ಖಾಸಗಿ ರಂಗಕ್ಕೆ ಮಾತ್ರ ಸಾಧ್ಯ. ಏಕೆಂದರೆ ಅಲ್ಲಿ ಅಲ್ಪ ಸಮಯದಲ್ಲಿ ನಿರ್ಧಾರ ಆಗುತ್ತದೆ. 50ರ ಅಥವಾ 60ರ ದಶಕದಲ್ಲಿ ಈ ಪರಿಸ್ಥಿತಿ ಇನ್ನೂ ಸೃಷ್ಟಿಯಾಗಿರಲಿಲ್ಲ.

ಸ್ಥಿತ್ಯಂತರದ ಈ ಸಮಯದಲ್ಲಿ ಸರ್ಕಾರಿ ಕ್ಷೇತ್ರ, ಖಾಸಗಿಯವರ ಜೊತೆಗೆ ಸಮನಾಗಿ ಬೆಳೆಯುವ ಲಕ್ಷಣಗಳಂತೂ ಕಾಣುತ್ತಿಲ್ಲ. ಹೆಚ್ಚೆಂದರೆ, ಸರ್ಕಾರಿ ಹಾಗೂ ಖಾಸಗಿ ರಂಗಗಳ ಜಂಟಿ ಯೋಜನೆಗಳ ಕಲ್ಪನೆಗೆ ಉತ್ತೇಜನ ಸಿಗುವ ಲಕ್ಷಣಗಳಿವೆ. ಖಾಸಗಿ ಕ್ಷೇತ್ರ ಇಂದು ಹೆಚ್ಚು ಕ್ರಿಯಾಶೀಲವಾಗಿದೆ ಹಾಗೂ ಬರುವ ದಿನಗಳಲ್ಲಿ ಅನೇಕ ರಂಗಗಳಲ್ಲಿ ಅದೇ ಸೂತ್ರಧಾರಿ ಹಾಗೂ ಅದರದೇ ಅಧಿಪತ್ಯ ಕೂಡ ಪರದೇಶಿ ಬಂಡವಾಳದೊಡನೆ ಸಾಧ್ಯವಾದರೆ ಆಶ್ಚರ್ಯವಿಲ್ಲ.

ಇದು ವೇಗದ ಯುಗ. ಯಾರಿಗೂ, ಯಾವುದಕ್ಕೂ ಕಾಯುವ ತಾಳ್ಮೆ ಹಾಗೂ ವೇಳೆಯಿಲ್ಲ. ಇಂದಿನ ಯುವ ಪೀಳಿಗೆಗೂ ಇದು ಅನ್ವಯಿಸುತ್ತದೆ. ಬೆಂಗಳೂರಿಗಷ್ಟೇ ಅಲ್ಲ. ಕರ್ನಾಟಕದ ಇತರ ಎಲ್ಲಾ ಕೇಂದ್ರಗಳೂ ಪ್ರಗತಿಯ ಹಾದಿಯಲ್ಲಿ ಬೆಂಗಳೂರಿಗೆ ಸಮನಾಗಿ ಸಾಧ್ಯವಾದರೆ. ಜಾಗತಿಕ ಮಟ್ಟದಲ್ಲಿ ಮೆರೆಯುವ ಮನೋಸ್ಥಿತಿಯಲ್ಲಿವೆ. ಈ ಪೀಳಿಗೆಯ ಆಶೋತ್ತರಗಳು ಹಿಂದಿನ ಸ್ವಾತಂತ್ರ್ಯೋತ್ತರದ ಪೀಳಿಗೆಗಿಂತ ಭಿನ್ನ. ಇವರ ಆಶೋತ್ತರಗಳು ಯಾವ ರೂಪ ತಾಳುತ್ತವೋ ಹೇಳುವರ‍್ಯಾರು? ಇವರೇ ಅದನ್ನು ರೂಪಿಸುವವರು. ಯಾವ ಆಕೃತಿಗಳು ಘನ ರೂಪಗಳು, ರೂಪರೇಖೆಗಳು ತಾಳುವವೋ ಎಂಬುದು ಮುಕ್ತ ಕಲ್ಪನೆಗೆ ಬಿಟ್ಟದ್ದು. ಆದರೆ ವಾಸ್ತುಶಿಲ್ಪ ಬರೀ ಮೌನಸಾಕ್ಷಿಯಾಗದೇ, ಈ ಆಶೋತ್ತರಗಳಿಗೆಲ್ಲಾ ಮುಖವಾಗಲೇಬೇಕು; ಅವಕ್ಕೆ ಸ್ಪಂದಿಸಬೇಕು; ತಾನೇ ಅದರ ವಕ್ತಾರನಾಗಬೇಕು. ಸ್ವಾತಂತ್ರ್ಯೋತ್ತರದ ಕರ್ನಾಟಕದ ವಾಸ್ತುಶಿಲ್ಪ ಇದನ್ನು ಪೂರೈಸುವ ಭರವಸೆಯ ಸೂಚನೆಗಳನ್ನು ಹಲವು ಮುಖಗಳಲ್ಲಿ ಮಜಲುಗಳಲ್ಲಿ ಪ್ರದರ್ಶಿಸುತ್ತಿದೆ.

ಸ್ವಾತಂತ್ರ್ಯದ ನಂತರದ ಬೆಂಗಳೂರಿನ ವಾಸ್ತುಶಿಲ್ಪದ ಬೆಳವಣಿಗೆಯನ್ನು ಸ್ಥೂಲವಾಗಿ ಕಾಣಲು ವಾಸ್ತು ಶೈಲಿಯ ಪ್ರಕಾರ ಕೆಳಗೆ ವಿವರಿಸಿದಂತೆ ವಿಂಗಡಿಸಬಹುದು.

1. ನವ್ಯಪೂರ್ವ
2. ನವ್ಯ
3. ನವ್ಯೋತ್ತರ (ಮರು–ಪಾರಂಪರಿಕ)
4. ಸಮಕಾಲೀನ (ಬಹುಮುಖಿ ನಿರೂಪಣೆ) ಮತ್ತು
5. ದೇಶಿಯ (ವೆಚ್ಚ ಪರಿಣಾಮಕಾರಿ ಮತ್ತು ಅಯಾ ಜಾಗದ / ಪ್ರದೇಶದ ಕಟ್ಟಡ ಕಲೆ).

ನವ್ಯಪೂರ್ವದ ಹಂತ: ನವ್ಯಪೂರ್ವದ ವಾಸ್ತುಕಲೆಯ ವಿಸ್ತಾರವಾದ ಚರ್ಚೆ ಇಲ್ಲಿ ಉಚಿತವಾಗಲಾರದು. ಬಹುಶಃ ಅದೇ ಬೇರೆಯಾಗಿ ಚರ್ಚಿಸಲ್ಪಡಬಹುದಾದ ವಿಷಯ. ಪ್ರಸ್ತುತದಲ್ಲಿ ಸ್ವಾತ್ರಂತ್ರ್ಯೋತ್ತರ ಬೆಳವಣಿಗೆಯೇ ಸಾಕಷ್ಟು ಮುಖ್ಯವಾಗುತ್ತದೆ. 50ರ ದಶಕದ ಮೊದಲಲ್ಲಿ ಮೊದಲೇ ಚರ್ಚಿಸಿದಂತೆ ಆಯಾ ಪ್ರೆಸಿಡೆನ್ಸಿಯ ಪ್ರಭಾವ ಸಾಕಷ್ಟು ಕಾಣುತ್ತದೆ. ಮೈಸೂರು ಪ್ರಾಂತ ಮಾತ್ರ 'ಗಂಭೀರ' ಶೈಲಿಯ ವಾಸ್ತುಕಲೆ ನೀತಿಯನ್ನು ರೂಪಿಸಿತ್ತು. ವಸಾಹತುಶಾಹಿ, ಪಾಶ್ಚಿಮಾತ್ಯ-ಅದೂ ಗಾಥಿಕ್ ಹಾಗೂ ಪಾರಂಪರಿಕ ರೀತ್ಯ ಹಾಗೂ ದೇಶಿಯ ಕಟ್ಟಡಗಳಿಗೆ ಅದೇ ರೀತಿಯ ಶೈಲಿ-ಭಾರತೀಯ ಮುಸ್ಲಿಮ್ ಶೈಲಿ ಹಾಗೂ ವೈದಿಕ ಶೈಲಿ ಎಂಬ ನಿರೂಪಣೆ.

ಮುಂಬೈ ಪ್ರೆಸಿಡೆನ್ಸಿಯಲ್ಲಿ ವಸಾಹತುಶಾಹಿ ಶೈಲಿಯೇ ಪ್ರಸ್ತುತವಾಗಿತ್ತು. ಆದರೂ ದೇಶೀಯ ಸಂಸ್ಕೃತಿಯನ್ನು ಉದ್ದೇಶಪೂರ್ವಕವಾಗಿ ಪ್ರೋತ್ಸಾಹಿಸಿತು. (ಉದಾ: ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ, ಮುಂಬೈ. ಇಂಡಿಯಾ ಮಹಾದ್ವಾರ. ಇಲ್ಲಿ ಬಿಜಾಪುರ ಶೈಲಿಯ ನಿರೂಪಣೆ ವಿನ್ಯಾಸದಲ್ಲಿ ಕಾಣಬಹುದು. (ಪೀಠದಲ್ಲಿ ಚಜ್ಜಾಗಳಲ್ಲಿ ನಾಗಂಧಿಗಳಲ್ಲಿ ಕಮಾನುಗಳಲ್ಲಿ ಇತ್ಯಾದಿ. ಈ ವಿನ್ಯಾಸದ ಕಾಲ 20ನೇ ಶತಮಾನದ ಮೊದಲ ದಶಕ.

ಹೈದರಾಬಾದ್ ಕರ್ನಾಟಕದಲ್ಲಿ ಕಟ್ಟಡಕಲೆ ಗಮನಾರ್ಹವಾದ ರೀತಿಯಲ್ಲಿ ಬೆಳೆಯಲೇ ಇಲ್ಲ. ಇದ್ದರೂ ಅದು ಹೈದರಾಬಾದಿಗೆ ಮಾತ್ರ ಸೀಮಿತವಾಗಿತ್ತು. ಮೊನಚಾದ ಕಮಾನು, ಬಹು ಚಂದ್ರಾಕಾರದ ಕಮಾನು (Multicusped Arch) ಹಾಗೂ ಗುಮ್ಮಟಗಳ ಗುಂಪು ಸಾಮಾನ್ಯವಾಗಿತ್ತು. ಮದರಾಸು ಪ್ರೆಸಿಡೆನ್ಸಿಯಲ್ಲಿ ಕಲಾ ನೀತಿಗಿಂತ ಆಯಾ ಪ್ರದೇಶದ ಕಟ್ಟಡ ಕಲಾ ನಿರೂಪಣೆಯೇ ಮುಖ್ಯವಾಗಿತ್ತು. (ಕಾರ್ಯರೂಪಿ ವಿನ್ಯಾಸ).

1956ರ ಏಕೀಕರಣದ ಸಂದರ್ಭದಲ್ಲಿ ಹೊಸ ರಾಜ್ಯ ಈ ಪ್ರಾಂತೀಯ ಅಸಾಂಗತ್ಯಗಳನ್ನು ಏಕರೂಪಿ ನೀತಿಯಲ್ಲಿ ಹೊಸೆಯಬೇಕಾಗಿತ್ತು. ಆಗ ರೂಪುಗೊಂಡ ವಿಧಾನಸೌಧ ಹೊಸ ಆಡಳಿತದ, ಹೊಸ ಆಶಯಗಳನ್ನು ಹಳೆಯ ಮೈಸೂರು ಅರಮನೆಯ ಶೈಲಿಪ್ರೌಢತೆಯನ್ನು ಭಾರತೀಯ ಕಲಾಭಾಷೆಯಲ್ಲಿ ಪ್ರಸ್ತುತಪಡಿಸಬೇಕಾಗಿತ್ತು. 'ಭಾರತೀಯತೆ' ಈ ಸೌಧದಲ್ಲಿ ಬರಿ ತೋರಿಕೆಯಾಗದೆ ಅದರ ಅಂತಃ ಸತ್ಯವಾಗಬೇಕಿತ್ತು. ಹಾಗಾಗಿ ಕಟ್ಟಡದ ಮೊತ್ತ ವಿನ್ಯಾಸ ಪಾಶ್ಚಾತ್ಯ ಹೆಜ್ಜೆ ಗುರುತಿನದಾದರೂ ಅದರ ಪೂರ್ಣ ನಿರೂಪಣೆ ದೇಶೀಯ ಬೌದ್ಧ ಚೈತ್ಯದ ಕಿಟಕಿ ಹಾಗೂ ಮೆತ್ತೆಯಾಕಾರದ ಸ್ತಂಭಗಳ/ಕಂಭದ ತಲೆ, ಜ್ಯಾಮಿತಿಯಾಕಾರದ ಮೇಲಿನ ಕೈಪಿಡಿ ಗೋಡೆ (Parapet). ಮೇಲಿನ ಗುಮ್ಮಟದ ಸಿಂಹ ಶಿಲ್ಪ, ಮೊಗಲ್ ಶೈಲಿಯ ಗುಮ್ಮಟ, ಕಮಾನುಗಳು, ಮುಂಬಾಚಿದ ಕಿಟಕಿಗಳು ಮತ್ತು ಅವುಗಳನ್ನು ಎತ್ತಿ ಹಿಡಿದ ಕಮಲಾಕಾರದ ನಾಗಂದಿಗೆಗಳು (ಬ್ರಾಕೆಟ್‌ಗಳು), ಕಂಭಗಳು, ತಲೆಯಲ್ಲಿ ನಾಗಂದಿಗೆಗಳು (ಚಾವಡಿಗಳಲ್ಲಿ-Corridors), ಸೂರಿನಲ್ಲಿ ಮೂಡಿಸಿದ ವಿವಿಧ ರೀತಿಯ ಪುಷ್ಪಗುಚ್ಛಗಳು. (ಇವೆಲ್ಲಾ ಮೈಸೂರು ಅರಮನೆಯಲ್ಲಿ ಸಹಾ ಕಂಡು ಬರುವಂತಹವು-ಕಡೆಯಲ್ಲಿ ಹೆಸರಿಸಿದಂತಹವು).

ಆದರೂ, ಸಾಮಾನ್ಯ ವಿನ್ಯಾಸ ರೀತಿಯಲ್ಲಿ ಪಾಶ್ಚಾತ್ಯ ಪ್ರಭಾವ ವಿಫುಲವಾಗಿತ್ತು. ಘನವಾದ ಕಂಭಗಳು, ಮಾಡುಗಳು (ಕಿಟಕಿ ಹಾಗೂ ದ್ವಾರಗಳ ಮೇಲೆ), ಮಧ್ಯದಲ್ಲಿನ ಮುಖ್ಯಭಾಗ ಮತ್ತು ಎರಡೂ ಕಡೆ ಚಾಚಿದ ರೆಕ್ಕೆಗಳು. ಮೊಗಸಾಲೆಗಳು, ಎತ್ತರದ ಛಾವಣಿಗಳು ಇತ್ಯಾದಿ. ದೇಶೀಯ ಚಹರೆಗಳು ಬಾಗಿದ ಹಾಗೂ ಗುಮ್ಮಟಗಳ ಛಾವಣಿಗಳು. ಪ್ರಾಂತೀಯ ಪದಾರ್ಥಗಳ ಬಳಕೆ ಹಾಗೂ ಅಲಂಕಾರಿಕ ಲಕ್ಷಣಗಳಿಗೆ ಸೀಮಿತವಾಗಿತ್ತು.

ಇವೆಲ್ಲದರ ಸಾಕಾರ ರೂಪ ವಿಧಾನಸೌಧವಾಗಿತ್ತು. ಅಂದಿಗಲ್ಲ ಇಂದಿಗೂ ಅದು ದೇಶೀಯತನಕ್ಕೆ ಒಂದು ಮಾದರಿ ಎಂಬಂತಿದೆ ಇತ್ತೀಚೆಗೆ ತಮಿಳುನಾಡು ಸರ್ಕಾರ ಹೊಸದಾಗಿ ತನ್ನ ಸಂಸದೀಯ ಭವನ ವಿನ್ಯಾಸಕ್ಕೆ ವಿಧಾನಸೌಧವೇ ಮಾದರಿಯಾಗಬೇಕು; ಮೇಲೆ ಅದಕ್ಕಿಂತ ದ್ರಾವಿಡ ಶೈಲಿಯಲ್ಲಿ ವೈಭೋವಪೇತವಾಗಿರಬೇಕು ಎಂದು ವಾಸ್ತುಶಿಲ್ಪಗಳಿಗೆ ನಿರ್ಭಂಧಿಸಿತ್ತು. ಇತ್ತೀಚೆಗೆ ನಿರ್ಮಿತವಾದ ವಿಕಾಸಸೌಧ ಮತ್ತು ಉದ್ಯೋಗ ಸೌಧಗಳು

ವಿಧಾನಸೌಧದ ಅಚ್ಚಿನಲ್ಲೇ ಎರಕ ಹೊಯ್ದಂತಿವೆ. ವಿವಾದಾಸ್ಪದವಾದರೂ, ಈ ಕಟ್ಟಡದ ಶೈಲಿ (ವಾಸ್ತು ಶಿಲ್ಪಿ – ಮಾಣಿಕ್ಯಂ) ಜನಮನದಲ್ಲಿ ಭದ್ರವಾಗಿ ನೆಲೆಯೂರಿದೆ.

ಯಾವುದೇ ವಾಸ್ತುಕಲಾ ಶೈಲಿಯ ಚರ್ಚೆಯಲ್ಲಿ – ಅದೂ ಸ್ವಾತಂತ್ರ್ಯೋತ್ತರ ಕರ್ನಾಟಕದ ಸಂದರ್ಭದಲ್ಲಿ ಬೆಂಗಳೂರಿನ ಕಟ್ಟಡ ಕಲೆಯ ದಶಕಗಳ ಬೆಳವಣಿಗೆ ಗುರುತಿಸುವುದು ಸುಲಭದ ಕಾರ್ಯ. ಬೇರೆ ಜಿಲ್ಲೆಗಳಲ್ಲಾದರೋ ಈ ಬೆಳವಣಿಗೆ ಸಮತೋಲನವಾಗಿರುವುದಿಲ್ಲ; ಆದ್ದರಿಂದ ಬೆಂಗಳೂರಿನ ಶೈಲಿಯನ್ನು ಪ್ರತ್ಯೇಕವಾಗಿ ಚರ್ಚಿಸುವುದು ಉಚಿತ.

50ರ ಹಾಗೂ 60ರ ದಶಕಗಳಲ್ಲಿ ವಿಧಾನಸೌಧದ ಪ್ರಭಾವ ಅಂದಿನ ಸಾರ್ವಜನಿಕ ಹಾಗೂ ಖಾಸಗೀ ಸಂಸ್ಥಾ ಕಟ್ಟಡಗಳಲ್ಲಿ (ಉದಾ: ಕಾಲೇಜುಗಳು. ಶಾಲೆಗಳು, ಕಛೇರಿಗಳು ಇತ್ಯಾದಿ) ನಿಚ್ಚಳವಾಗಿ ಕಾಣುತ್ತದೆ. ಇದೇ ಸಮಯದಲ್ಲಿ ಪಾಶ್ಚಾತ್ಯದಲ್ಲಿ 'ನವ್ಯ' ಹಾಗೂ ಅದರ ಇನ್ನೊಂದು ಮುಖವಾದ 'ಅಂತರರಾಷ್ಟ್ರೀಯ' ವಾಸ್ತುಶೈಲಿಗಳು ಆಗಲೇ ಹಳೆಯದಾಗಿದ್ದರೂ ಬೆಂಗಳೂರು ಅವುಗಳಿಂದ ದೂರವೇ ಉಳಿದಿತ್ತು. ಭಾರತದಲ್ಲೇ 'ಚಂಡೀಘಡ' ರೂಪಿತವಾಗಿದ್ದರೂ ಬೆಂಗಳೂರಿನಲ್ಲಿ ಅದರ ಪ್ರಭಾವ ಕಾಣುವುದೇ ಇಲ್ಲ (ಬಹುಶಃ ಅದು ನಮ್ಮವರ ಮನೋಭಾವಕ್ಕೆ ವಿಧಾನಸೌಧದಂತೆ ಹತ್ತಿರವಾಗಲೇ ಇಲ್ಲ). ಆದರೂ ಕಾರ್ಯರೂಪಿ ಅಂಶ ಮೆಲ್ಲಗೆ ವಿನ್ಯಾಸದಲ್ಲಿ ಅಡಿಯಿಡತೊಡಗಿತ್ತು. (ನವ್ಯ ಶೈಲಿಯ ಅಡಿಗಲ್ಲೇ ಈ ಕಾರ್ಯರೂಪಿತನದ ವಿನ್ಯಾಸ). ಅಲಂಕಾರಿಕ ಕಂಭಗಳು, ಛಾವಣಿಗಳು, ಮಾಡುಗಳು, ವೈಭೋವಪೇತ ಗುಮ್ಮಟಗಳು ಮುಂತಾದವು. (ಎಂ. ಎಸ್. ರಾಮಯ್ಯ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾಲಯದ ರೀತಿಯಲ್ಲಿ) ಮೆಲ್ಲನೆ ನೇಪಥ್ಯಕ್ಕೆ ಸರಿಯುತ್ತಿದ್ದವು. ಬದಲಾಗಿ ಸಪಾಟಾದ ಮೇಲ್ಮೈನ ಗೋಡೆಗಳು, ಸಪಾಟಾದ ಚಜ್ಜಾಗಳು, ನೇರ ಕೈ ಗೋಡೆ (ಛಾವಣಿಯ ಅಂಚಿನಲ್ಲಿ) ಸದ್ದಿಲ್ಲದೆ ಮೂಡಿದವು. ಗೋಖಲೆ ಸಾರ್ವಜನಿಕ ಸಂಸ್ಥೆ – 1950ರ ದಶಕದ ಆದಿಭಾಗ ಇರಲಿ. 60ರ ದಶಕದಲ್ಲಿ ಅನೇಕ ಕಟ್ಟಡಗಳು ವಿಧಾನಸೌಧದ ಅಚ್ಚಿನಲ್ಲಿ ಇಲ್ಲದಿದ್ದರೂ ಸ್ಥೂಲವಾಗಿ ಅದೇ ರೀತಿಯ ಸಮೂಹ ರಚನೆಗಳಿಗೇ ಎಡೆಕೊಟ್ಟಿತು. ಉದಾ: ಅಕೌಂಟೆಂಟ್ ಜನರಲ್‌ರ ಆಫೀಸು. ಜಯಚಾಮ ರಾಜೇಂದ್ರ ಪಾಲಿಟೆಕ್ನಿಕ್, ವಿ. ಎಚ್. ಡಿ. ಗೃಹ ವಿಜ್ಞಾನ ಕಾಲೇಜು, ಆರ್. ವಿ. ಉಪಾಧ್ಯಾಯರ ವಿದ್ಯಾಲಯ, ಪಶು ವೈದ್ಯಕೀಯ ಕಾಲೇಜು, ಹೆಬ್ಬಾಳ, ಇತ್ಯಾದಿ. 1956ರಲ್ಲಿ ಕಾರ್ಯನಿರತ ವಾದ ಬೆಂಗಳೂರು ಡೈರಿ ಈ ರೀತಿಯ ರಚನೆಗೆ ಉತ್ತಮ ಮಾದರಿ. ಸಮ ಪಾರ್ಶ್ವತೆಯ ವಿನ್ಯಾಸ ಹಾಗು ಮುಂಚಾಚಿದ ಚಜ್ಜಾಗಳ ಮಾದರಿ.

ಇವುಗಳಲ್ಲಿನ ಮುಖ್ಯಾಂಶಗಳೆಂದರೆ ಸರಳ ರೀತಿಯ ಮುಖದ್ವಾರದ (ಎದ್ದು ಕಾಣುವ ಚಾಚು ಛಾವಣಿ (canopy) ಅಥವಾ ಮೊಗಸಾಲೆಗಳಿಲ್ಲದೆ, ಮುಖ ದ್ವಾರದ ಮೇಲೆ ಕಾಣುವ ಗಾಜಿನ ಪರದೆ (ಕೆಲವು ಬಾರಿ ಚಜ್ಜಾದೊಡನೆ), ಪಕ್ಕಕ್ಕೆ ಚಾಚುವ ರೆಕ್ಕೆಗಳು (ಮಧ್ಯ ಭಾಗದಿಂದ ಆಚೀಚೆ). ಉದ್ದನೆಯ ಚಾವಡಿಗಳು ಈಗ ಒಳಕ್ಕೆ ಸ್ಥಳಾಂತರಗೊಳ್ಳುತ್ತವೆ; (ಹೊರ ಗೋಡೆಯ) ಗೋಡೆಗಳು ಹೊರಕ್ಕೆ ಮುಖವಾಗಿ ಗೋಡೆಯಲ್ಲಿ ಆಳವಾಗಿ ಕೂಡಿಸಲ್ಪಟ್ಟ ಕಿಟಕಿಗಳೊಂದಿಗೆ ವಿನ್ಯಾಸಗೊಳ್ಳುತ್ತವೆ. ಕಿಟಕಿಗಳ ಮೇಲೆ ಸಪಾಟಾದ ಮಾಡು (ಚಜ್ಜಾ) ತೊಡುತ್ತವೆ; ಉದ್ದರೆಕ್ಕೆಗಳ ಕೊನೆಯಲ್ಲಿ ಮತ್ತೆ ಮುಖ್ಯ ವಿಭಾಗದ (ಬ್ಲಾಕ್‌ನ) ಆಕಾರ ಸಣ್ಣ ರೀತಿಯಲ್ಲಿ ಪುನರಾವರ್ತನೆಯಾಗುತ್ತದೆ; ಮುಖದ್ವಾರದ (ಒಳಗಡೆ) ಎರಡೂ ಕಡೆಯಲ್ಲಿ ಭಾರಿ ಮೆಟ್ಟಿಲುಗಳು ಉಪಸ್ಥಿತವಾಗಿರುತ್ತವೆ. ದ್ವಾರದಿಂದ ನೇರ ತೆರದ ಅಂಗಳಕ್ಕೆ ದಾರಿಯಾಗುತ್ತದೆ. ಅಂಗಳದ ಸುತ್ತ ಮಿಕ್ಕ ಭಾಗಗಳನ್ನು ಜೋಡಿಸಿರುವುದು ಸಾಮಾನ್ಯ. ಎಲ್ಲಾ ಭಾಗಗಳು ಅಂಗಳದತ್ತಲೇ ನೋಡುವಂಥ ಕಲ್ಪನೆ ಇಲ್ಲಿ ಕಾಣುತ್ತದೆ. ಮುಖ್ಯ ಕಟ್ಟಡಗಳು ಸಾಮಾನ್ಯವಾಗಿ ಕಲ್ಲಿನಲ್ಲೇ ರಚನೆಗೊಂಡಂಥ. ಅಲಂಕಾರವು ಕೇವಲ ಮೇಲಿನ ಕೈಮಾಡು, ಚಜ್ಜಾಗಳ ಮಾಡುಗಳು ಹಾಗೂ ಮೆಟ್ಟಿಲ ಕೈಹಿಡಿ ಹಾಗೂ ಕಂಭಗಳಲ್ಲಿ ಮಾತ್ರ ಕಾಣುತ್ತವೆ.

ಇದೇ ಕಾಲದಲ್ಲಿ ಮತ್ತೊಂದು ಪರಿಕಲ್ಪನೆಯಲ್ಲಿ ಸರಳ ಭಾಗಗಳು (ಬ್ಲಾಕ್‌ಗಳು), ಗಿಲಾವಿನ ಇಟ್ಟಿಗೆ ಗೋಡೆಗಳು, ಸರಳ ಚಜ್ಜಾಗಳು, ತೆರದ ಆಳವಾದ ಚಾವಡಿಗಳು (ವರಾಂಡಗಳು). ಎರಡು ಅಥವಾ ಮೂರು ಕಂಭಗಳ ಜೋಡಣೆ (ಮೂಲೆಗಳಲ್ಲಿ), ಕೈ ಮಾಡು/ಗೋಡೆ (ಪ್ಯಾರಾಪೆಟ್) ಮತ್ತು ಚಜ್ಜಾಗಳ ಅಂಚಿನ ಪಟ್ಟಿ (ಸಾಮಾನ್ಯವಾಗಿ ಹಸಿರು ಅಥವಾ ಕೆಂಪು). ಚಂದ್ರಾಕಾರವಾಗಿ ಸುತ್ತವ ಮೂಲೆಗಳು (ಗೋಡೆಗಳು ಹಾಗು ಚಜ್ಜಾಗಳು ಮೂಲೆಗಳಲ್ಲಿ). ಅರ್ಧಚಂದ್ರಾಕಾರದಲ್ಲಿ ಎದ್ದು ಕಾಣುವ ಮಧ್ಯದ ಅಥವಾ ಮೂಲೆಯ ಮೆಟ್ಟಿಲ ಕೋಣೆ / ಭಾಗ (ಬ್ಲಾಕ್) ಇವೆಲ್ಲವೂ 60ರ ದಶಕದ ಮರಾಮತ್ / ಲೋಕೋಪಯೋಗಿ (ಕ.ಲೊ.ಇ) ಇಲಾಖೆಯ ಕಟ್ಟಡಗಳಲ್ಲಿ ಹಾಗೂ ಖಾಸಗಿ ಮನೆಗಳಲ್ಲಿ ಕಾಣಸಿಗುತ್ತವೆ. ಉದಾ: ಮಲ್ಲೇಶ್ವರದ ಅಸೋಸಿಯೇಷನ್ ಹಳೆಯ ಕಟ್ಟಡ; ಬೆಂಗಳೂರು-ಮಂಡ್ಯ-ಮೈಸೂರಿನ ಹೆದ್ದಾರಿಯಲ್ಲಿನ ಹಳೇ ಕಟ್ಟಡಗಳು. (ಈ ಬಗೆಯ ಪರಿಕಲ್ಪನೆಯ ಅವಿರ್ಭಾವ ಹಾರ್ವರ್ಡ್ ವಿಶ್ವವಿದ್ಯಾನಿಲಯದ ವಾಸ್ತುಶಿಲ್ಪಿ ವಾಲ್ಟರ್ ಗ್ರೋಪಿಯಸ್‌ನ ವಿನ್ಯಾಸದ ಕಟ್ಟಡಗಳಲ್ಲಿ ಎದ್ದು ಕಾಣುತ್ತವೆ). 40ರ ಹಾಗೂ 50ರ ದಶಕದಲ್ಲಿ ಅದರ ಬೇರೆ ರೂಪಗಳನ್ನು ಅಂದಿನ ಹಾಲಿವುಡ್ ಚಿತ್ರಗಳಲ್ಲಿ ಕಾಣುತ್ತೇವೆ; ಇದರ ಪರಿವರ್ತಿತ ರೂಪಾಂತರಗಳೇ ಕರ್ನಾಟಕದಲ್ಲೂ ಕಾಣುತ್ತವೆ; ಇವು ಮುಂಬೈ, ದೆಹಲಿಯ ಆಗಿನ ಸರ್ಕಾರಿ ರಚನೆಗಳಲ್ಲೂ ಕಾಣಸಿಗುತ್ತವೆ.

ಮುಂದೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ (60ರ ದಶಕ) ಇದೇ ರೀತಿಯ ಜಾಡನ್ನು ಹಿಡಿಯುತ್ತದೆ. ಸಮ ಪಾರ್ಶ್ವತೆಯ ಘನ ಗಾಂಭೀರ್ಯದ ಮುಖವಾಡ ತೊಟ್ಟು (ಪಕ್ಕದ ಹಿರಿಯಣ್ಣ-ಪುರಭವನನಂತೆ ಎದ್ದು ನಿಲ್ಲುತ್ತದೆ. ಇಲ್ಲಿಯ ಹೊಸ ಅಂಶ ಜಾಲರಿಯ (grille) ಉಪಯೋಗ, ಬಹುಭಾಗದ ಗಾಜಿನ ಮುಖದ್ವಾರ ಮತ್ತು ಅದರ ಮೇಲಿನ ದೀರ್ಘ ಚಂದ್ರಾಕಾರದ ಚಾಚು ಮಾಡು ಅಥವಾ ರಚನೆ. ಆದರೆ ರವೀಂದ್ರ ಭವನದ ಶೈಲಿಯನ್ನು ಸ್ಥೂಲವಾಗಿ ದೆಹಲಿಯಲ್ಲೇ ಬಹುಶಃ ನಿರ್ಧರಿಸಲಾಗಿತ್ತು. ಹೈದರಾಬಾದಿನ ಭವನವೂ ಸಹ ಈ ಮಾದರಿಯನ್ನೇ ಅನುಕರಿಸುತ್ತದೆ. ಇದು ತನ್ನ ಸರಳ ಗಾಂಭೀರ್ಯತೆಯಲ್ಲಿ ಜನಕ್ಕೆ ಹತ್ತಿರವಾಗುವಂಥ ಕಟ್ಟಡ.

2. ನವ್ಯ ಶೈಲಿಯ ಹಂತ (Modern Phase) ಎಪ್ಪತ್ತರ ದಶಕ ಹಾಗೂ ಎಂಭತ್ತರ ಪೂರ್ವಾರ್ಧ

ನವ್ಯದಲ್ಲಿ ಅಂತರ್ಗತವಾದ ಅಂಶವೆಂದರೆ, ಕಲೆಯು ಚರಿತ್ರೆ ಮತ್ತು ಪರಂಪರಾಗತ ಶೈಲಿಯ ಕಲ್ಪನೆಗಳು ಮತ್ತು ಅವಿಷ್ಕಾರಗಳ ಆಗರ, ಎಂಬ ನಂಬಿಕೆಯನ್ನು ತಿರಸ್ಕರಿಸಿದ್ದು. ಅದು ಒತ್ತುಕೊಟ್ಟಿದ್ದು ಕಾರ್ಯರೂಪತನಕ್ಕೆ (Functionalism). ಕಾರ್ಯದ ಬಾಹುಳ್ಯವೇ ರೂಪ ಕೊಡುವಂತಹುದು ಎಂಬ ದೃಢ ನಂಬಿಕೆ; ಕಾರ್ಯಬಾಹುಳ್ಯವೇ ಆಮೂರ್ತ ಕಲ್ಪನೆಯನ್ನು ಘನ ರೂಪದಲ್ಲಿ ಸಾಕಾರಗೊಳಿಸುವ ದಾರಿ/ವಿಧಾನ ಎಂಬ ಧೋರಣೆ (Form Follows Function - ಕಾರ್ಯಬಾಹುಳ್ಯವೇ ಆಕೃತಿಯ ಸಾಕಾರಕ್ಕೆ ಮೂಲ). ಇದು ಲೂಯಿ ಸಲ್ಲೈವಾನ್ ಎಂಬ ವಾಸ್ತುಶಿಲ್ಪಿಯ (ಘೋಷಿತ) ವಾಕ್ಯ; ನವ್ಯಕ್ಕೆ ಪ್ರೇರಣಾತ್ಮಕವಾದ (ಸಾಮಾನ್ಯವಾಗಿ) ಮೂಲ ಚಿಂತನೆ.

ತರ್ಕ ಹಾಗೂ ವೈಚಾರಿಕತೆ ವಾಸ್ತುಕಲೆಯ ಮೂಲಾಧಾರಗಳು ಎಂಬ ಆಶೆ. ಆಧಾರ ಚೌಕಟ್ಟಿನ ವಿನ್ಯಾಸ ಹಾಗೂ ಕಟ್ಟುವ ಪದಾರ್ಥಗಳ / ಉಪಯೋಗಿಸುವ ಸಾಮಗ್ರಿಗಳನ್ನೇ ಕಣ್ಣಿಗೆ ರಾಚುವಂತೆ ನಿರ್ವಹಣೆ. ಗಿಲಾವು ಅಥವಾ ಮೆದುಗಾರೆಯಿಲ್ಲದ ವಿಧಾನ (ಗೋಡೆಗಳಿಗೆ) ರೂಪ (ಆಕಾರ) ಹಾಗೂ ಕಾರ್ಯಗಳ ಸಮ್ಮಿಲಿತ ಫಲಿತಾಂಶ. ಸರಳ ರೇಖೆಗಳಿಗೆ ಘನ ಆಕೃತಿಗೆ ಒತ್ತು. ಅಲಂಕಾರ ರಹಿತ ಕಾರ್ಯವಿಧಾನ ನವ್ಯದ್ದು. ಈ 'ನವ್ಯವಾದ' ಕ್ಕೆ ಆಗಲೇ ಎಪ್ಪತ್ತಾಗಿದ್ದರೂ (ಪಶ್ಚಿಮದಲ್ಲಿ) ಬೆಂಗಳೂರಿಗೆ ಹೊಸತಾಗಿತ್ತು (70ರ ದಶಕ).

ಎಪ್ಪತ್ತರ ದಶಕ ತೊದಲ ನುಡಿಗಳನ್ನಾಡಿದ್ದು ನವ್ಯದಲ್ಲಿ, ಮೊದಲಿಗೆ ಕಂಡಂಥ ಕಟ್ಟಡಗಳಲ್ಲಿ. ನೃಪತುಂಗ ರಸ್ತೆಯ ಭಾರತೀಯ ರಿಸರ್ವ ಬ್ಯಾಂಕ್ ಒಂದು ಕಾರ್ಯಬಾಹುಳ್ಯದ ಅಂಶ ಎದ್ದು ಕಾಣುವಂತಹುದು (ಚಿತ್ರಕಲೆ

ಮತ್ತು ಮಕ್ಕಳು, ಮದರಾಸು). ಆಯತಾಕಾರದ ಇಳಿಜಾರಿನ ಕಪ್ಪನೆಯ ಪೀಠದಿಂದ ಬಿಳಿಬಣ್ಣದ ಉದ್ದ ರೇಖೆಗಳನ್ನು ಸಮರ್ಥಿಸುವ ಘನ ರೂಪ (ಕಿಟಕಿಗಳು ಇಲ್ಲದ) ಮತ್ತು ಅದು ತೇಲುವಂತೆ (ಪೀಠದಿಂದ) ಕಾಣುವ ಅಂಶ ಹೊಸತನದ್ದಾಗಿತ್ತು. ಕಿಟಕಿಗಳನ್ನು ಸಾಮಾನ್ಯವಾಗಿ ಇಟ್ಟಂತೆ ಇಡದೆ ಪಕ್ಕಕ್ಕೆ ತಿರುಗಿಸಿ ಪಶ್ಚಿಮದ ಎದುರು ಬೆಳಕನ್ನು ತಪ್ಪಿಸುತ್ತದೆ. ಅಲಂಕಾರವೇ ಇಲ್ಲದೆ ಬರೀ ಘನಾಕೃತಿಯಿಂದಲೇ ಗಾಂಭೀರ್ಯವನ್ನು ಮೆರೆಯುತ್ತದೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಹೆಬ್ಬಾಳ (ಕನ್‌ವಿಂದೆ) ಮತ್ತು ಜಯನಗರ ಶಾಪಿಂಗ್ ಸಂಕೀರ್ಣ (ಕಾರೆಕರ್ ಮತ್ತು ಸುಂದರಂ) ನವ್ಯದ ಗಮನಾರ್ಹ ಪರಿಕಲ್ಪನೆಗಳು. ಕೃಷಿ ವಿಜ್ಞಾನ ಕೇಂದ್ರ ಸ್ಥಳೀಯ ಕಲ್ಲಿನ ಉಪಯೋಗ ಹಾಗೂ ಸರಳ ಆಕೃತಿಗಳಲ್ಲಿ ಸೂಕ್ಷ್ಮ ಸಂವೇದನೆಯನ್ನು ಸೂಸುತ್ತದೆ.

ಜಯನಗರದ ಸಂಕೀರ್ಣ ಮಾಳಿಗೆ/ಜಗಲಿ ಮತ್ತು ಗೋಪುರ (Podium and tower block) ಪರಿಕಲ್ಪನೆ (ನ್ಯೂಯಾರ್ಕಿನ ಲೆವರ್ ಹೌಸ್‌ನಲ್ಲಿ ಅವಿರ್ಭಾವ) ಬೆಂಗಳೂರಿನಲ್ಲಿ ಹೊಸಗತಿಯನ್ನುಂಟು ಮಾಡಿತು. ಕಾಂಕ್ರೀಟು ಕಟ್ಟಡಗಳಿಗೆ ಸಾಮಗ್ರಿಯಾಯಿತು. ಇದೇ ಕಟ್ಟಡದಲ್ಲಿ ಕಾಂಕ್ರೀಟ್‌ನಲ್ಲಿ ಕಮಾನು ಛಾವಣಿ ಹಾಗೂ ಮಡಚು ಫಲಕ (Folded Plate) ರೀತಿಯ ಮೇಲ್ಛಾವಣಿಗಳು ಬಳಸಲ್ಪಟ್ಟಿವೆ. (ಬೆಂಗಳೂರಿನಲ್ಲಿ ಅದಿನ್ನೂ ಹೊಸತಾಗಿತ್ತು). 'ಸಂಕೀರ್ಣದ ಕಲ್ಪನೆ–ಅಂದರೇ ಒಂದೆಡೆಯಲ್ಲೇ ವಾಣಿಜ್ಯ, ಮನೋರಂಜನಾ ಸಮ್ಮಿಶ್ರ ಯೋಜನೆ; ಜೊತೆಯಲ್ಲಿ ಉಪಾಹಾರ ಗೃಹಗಳು, ಚಿತ್ರಮಂದಿರ, ತರಕಾರಿ ಮಳಿಗೆಗಳು ಇತರ ಅಂಗಡಿಗಳು ಇತ್ಯಾದಿ ಆಗ ನವ ನವೀನವಾದದ್ದು.

ಇದೇ ರೀತಿಯ ಸಂಕೀರ್ಣವನ್ನು ನರಸಿಂಹರಾಜ ರಸ್ತೆಯ ಯೂನಿಟಿ ಕಟ್ಟಡದಲ್ಲೂ ಕಾಣಬಹುದು (ಸ್ವಲ್ಪ ಪರಿವರ್ತಿತ ರೀತಿಯಲ್ಲಿ). ಗಾಜಿನ ಹೊದಿಕೆಯ ಹೆಚ್ಚಳ. ಅಂಗಡಿಗಳಲ್ಲಿನ ಪ್ರದರ್ಶನಾ ಸಾಮಗ್ರಿಗಳು ಕಾಣುವಂತಹ ರಚನೆ, 'ವೀಕ್ಷಕ ವ್ಯಾಪಾರತನ' (Window Shopping) ಪ್ರೋತ್ಸಾಹಿಸುವಂತಹ ಪ್ರದರ್ಶಕ ಮನೋವೃತ್ತಿಯನ್ನು ಗಾಜಿನ ಹೆಚ್ಚಳದ ಬಳಕೆಯಲ್ಲಿ ಕಾಣಬಹುದು. ಮಹಾತ್ಮಾಗಾಂಧಿ ರಸ್ತೆಯ ಯೂಟಿಲಿಟಿ ಕಟ್ಟಡ (ಬಹುಮಹಡಿ ಹಾಗೂ ಸಧ್ಯದಲ್ಲಿ ಬೆಂಗಳೂರಿನ ಅತಿ ಎತ್ತರದ ಕಟ್ಟಡ– ಕೂಡಾ ಮೇಲಿನ ಕಲ್ಪನೆಯನ್ನೇ ದೃಢೀಕರಿಸುತ್ತದೆ. (ಕಾರ್ಯರೂಪತ್ವದ ಅಂಶ). ಯೂನಿಟಿ ಕಟ್ಟಡ ಪಕ್ಕದ ಪುರಭವನದ ಶ್ರೀಮದ್ ಗಾಂಭೀರ್ಯಕ್ಕೆ ಸವಾಲಾಗುತ್ತದೆ.

ಇದೇ ಸಂದರ್ಭದಲ್ಲಿ 70ರ ದಶಕದ ಆದಿಭಾಗದಲ್ಲಿ ಬಂದಂಥ ಅಶೋಕ ಹೋಟೆಲ್ ಕಾರ್ಯಬಾಹುಳ್ಯದ ಹಾಗೂ ತಾರ್ಕಿಕ ನೆಲೆಗಟ್ಟಿನಲ್ಲಿ ರಚನೆಯಾಗಿದೆ. ಸರಳ ರೇಖೆಗಳು ಹಾಗೂ ಶುದ್ಧಘನಾಕೃತಿಗಳು ಕುಮಾರಕೃಪ ಪ್ರದೇಶದಲ್ಲಿ ಬೇರೆಯಾಗಿ ನಿಲ್ಲುತ್ತವೆ. (ಪಕ್ಕದ ಕುಮಾರಕೃಪ ಅತಿಥಿ ಗೃಹ ದೇಶಿಯ ವೈದಿಕ ಶೈಲಿಯ ಭವನ).

ಸಮಕಾಲೀನವಾದ ಬೆಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯೂ ಕೂಡಾ ಇದೇ ಕಾರ್ಯರೂಪಿ ಪ್ರಜ್ಞೆಯನ್ನು ಬಿಂಬಿಸುತ್ತದೆ (ಸೌಂದರ್ಯಕ್ಕಿಂತ ಕಾರ್ಯರೂಪತ್ವವೇ ಮುಂದಾಗುತ್ತದೆ).

ಮೈಸೂರು ಬ್ಯಾಂಕಿನ ಬಳಿಯ ಕಾವೇರಿ ಭವನ ಆಗಿನ ಬೃಹತ್ ಕಛೇರಿ ಸಂಕೀರ್ಣಗಳಲ್ಲಿ ಒಂದು. (ಸರ್ಕಾರಿ ಹಾಗೂ ಖಾಸಗಿ ಕಛೇರಿಗಳನ್ನೊಳಗೊಂಡಂತೆ). ಉದ್ದಗಲಕ್ಕೂ ಮೂಡಿದ ಚಜ್ಜಾಗಳು/ಬಿಸಿಲ ತಡಿಕೆಗಳು, ಚಾಚು ರಚನೆಯ ಮುಖ ಮಂಟಪಗಳು, ತರಕು ಮೃದು ಗಾರೆಗಳು (Textured Plaster), ಬೃಹತ್ ಗೋಡೆ ರಹಿತ. (ಮಧ್ಯೆ ಕೊಠಡಿಗಳು ಎಲ್ಲಾ ಆಗಿನ ಕಛೇರಿ ಕಲ್ಪನೆಯಲ್ಲಿ ಹೊಸತು). ಎದುರಿನ ಮೈಸೂರು ಬ್ಯಾಂಕಿನ ಹೊಸ ಕಟ್ಟಡ. ತನ್ನದೇ ಪಕ್ಕದ ಹಳೆಯ ಪಾರಂಪರಿಕ ಕಟ್ಟಡದಷ್ಟು ಸೊಗಸಾಗಲಿಲ್ಲ. ದೊಡ್ಡ ಗಾತ್ರ ಹಾಗೂ ಪುನರಾವರ್ತನೆಯ ಚೌಕಗಳ ಜಾಲ (ಮುಖ ನೋಟದಲ್ಲಿ) ಬೇಸರವನ್ನು ಉಂಟುಮಾಡುತ್ತದೆ / ಏಕತಾನತೆಯನ್ನು ತರುತ್ತದೆ. ಮತ್ತೊಂದು ಕುತೂಹಲಕಾರಿಯಾದ ಕಟ್ಟಡ: ಟೆಲಿಕಾಂ ಸಂಕೀರ್ಣ (ಬಸವೇಶ್ವರ ವೃತ್ತದ ಎದುರು/ ಶಾಸಕರ ಭವನದ ಎದುರು). ಈ ಬಹುಮಹಡಿ ಕಟ್ಟಡದಲ್ಲಿ ತೆರೆದ ಕಲ್ಲಿನ ಯೋಜನೆ/ಜೋಡಣೆ, ಕಲ್ಲಿನ

ಬೋದಿಗೆ (ಚಾಚೂರೆ)ಯ ಕಲ್ಪನೆಯುಳ್ಳ ಮೊಗಸಾಲೆ/ಮಂಟಪ ಗಮನ ಸೆಳೆಯುವ ತ್ರಿಕೋನಾಕೃತಿಯ ಕಿಟಕಿಗಳು ಹಾಗೂ ಮಂಚಾಚಿದ ಕಿರು ಉಪ್ಪರಿಗೆಗಳು. ಇಲ್ಲಿನ ಘನ-ಶೂನ್ಯಗಳ ಆಯಾ ಇನ್ನೂ ಘನದ ಕಡೆಗೆ ವಾಲಿದೆ (ಮೂರು ದಶಕಗಳ ನಂತರ ಈಗ ಶೂನ್ಯದ/ಟೊಳ್ಳಿನದೇ ಪಾರುಪತ್ಯ (ಆಕೃತಿಗಳ ಸಂಯೋಜನೆಯಲ್ಲಿ). ಸ್ಪಷ್ಟವಾಗಿ ವಾಸ್ತುಕಾರನು (ಶರ್ಮಾ, ಚಂಡೀಘಡ) ಚಂಡೀಘಡದ ಲೇಕಾರ್ಬೂಸಿಯೆ ಹಾಗೂ ಅಹಮದಾಬಾದಿನ ಲೂಯಿ ಕಾನ್‌ರ ಭಾರತೀಯ ನಿರ್ವಹಣಾ ಸಂಸ್ಥೆಗಳಲ್ಲಿನ ರೂಪ ಸತ್ಯತೆ ಹಾಗೂ ವಸ್ತು ಪ್ರಾಮಾಣಿಕತೆ (Material honesty) ಮತ್ತು ದ್ವಾರಗಳ ನಿರ್ವಹಣೆಯಿಂದ ಪ್ರಭಾವಿತನಾಗಿರುವುದು ನಿಚ್ಚಳ.

ಈ ಹಂತದ ನಿರ್ಣಾಯಕ ಲಕ್ಷಣಗಳಲ್ಲಿ ಮುಖ್ಯವಾದದ್ದು ಚಜ್ಜಾಗಳ ಬಹುವಾದ ಬಳಕೆ. ಈ ಸೂರ್ಯನ ಬೆಳಕು ತಡಿಕೆಗಳು (ಸಾಮಾನ್ಯವಾಗಿ ಕಾಂಕ್ರೀಟ್ನಲ್ಲಿ) ಕಟ್ಟಡಗಳ ಉದ್ದಕ್ಕೂ, ಎತ್ತರಕ್ಕೂ ಅಗಲಕ್ಕೂ ಕಿಟಕಿಗಳನ್ನೊಳಗೊಂಡಂತೆ ಕೆಳಗಿನಿಂದ ಮಹಡಿಗಳ ಕೊನೆಯ ಮಾಡಿನವರೆಗೂ ಪಸರಿಸಿದವು. ಉದಾ: ಕೆನರಾ ಬ್ಯಾಂಕಿನ ಕಛೇರಿ, ಅದರ ಪಕ್ಕದ ಜೀವ ವಿಮಾ ಕಟ್ಟಡ ಅಥವಾ ವಿಧಾನ ವೀಧಿಯ ಬಹುಮಹಡಿಗಳ ಸಂಕೀರ್ಣ ಅಥವಾ ಕೆಂಪೇಗೌಡ ರಸ್ತೆಯ ಇಂಡಿಯನ್ ಬ್ಯಾಂಕ್ ಪಕ್ಕದ ಬ್ಯಾಂಕ್ ಆಫ್ ಇಂಡಿಯಾ, ವಿ. ಐ. ಟಿ. ಎಂ. ಇತ್ಯಾದಿ. ಇವೆಲ್ಲವೂ ಪಾರಂಪರಿಕ (ಮುಖ ನೋಟ ಮುಂಬದಿಗಳನ್ನು ಹೊಸ ರೀತಿಯಲ್ಲಿ ನಿರೂಪಿಸಿದವು) (ಕಟ್ಟಡಗಳಲ್ಲಿ). ಇವುಗಳ ಪ್ರಾಥಮಿಕ ಪ್ರಯೋಗಗಳನ್ನು ಮುಂಚಿನ (ಸಪಾಟು) ಹಾಗೂ ಗೂಡು ಚಜ್ಜಾಗಳಲ್ಲಿ ಕಾಣುವೆವು.

ಈ ಪರಿವರ್ತನೆಯಲ್ಲಿ ಕಾಣುವ ಅಂಶ ಅಂತರಾಷ್ಟ್ರೀಯ ಶೈಲಿಯ ಪ್ರಭಾವ. 40ರ, 50ರ ದಶಕಗಳಲ್ಲಿ ಈ ಚಹರೆಗಳು ಆಗಲೇ ಪ್ರಕಟಗೊಂಡಿದ್ದವು. ಇದು 'ಬ್ರೂಟಲಿಸಂ' ಎಂಬ ಶೈಲಿಯ ಪ್ರಭಾವ-ತೆರೆದ ಕಾಂಕ್ರೀಟಿನ ಗಿಲಾವಿಲ್ಲದೇ ಹಾಗೇ ನಿಲ್ಲಿಸಿದ ವೈಖರಿ. ಕಾರ್ಬುಸೀಯೆ, ಸ್ಮಿತ್‌ಸನ್ ಸಹೋದರರು (ಇಂಗ್ಲೆಂಡಿನಲ್ಲಿ), ಸ್ಟರ್‌ಲಿಂಗ್ ಇದರಲ್ಲಿ ನಿಷ್ಣಾತರು. ಉಕ್ಕು, ಗಾಜು, ಕಾಂಕ್ರೀಟ್‌ಗಳ ಹೆಚ್ಚುವರಿ ಉಪಯೋಗ ಬಹುತೇಕವಾಗಿ ಕಾಂಕ್ರೀಟು ಚಜ್ಜಾಪರದೆಗಳು/ಜಾಲಂದ್ರಗಳು ಮತ್ತು ಬೃಹದಾಕಾರದ ಕಾಂಕ್ರೀಟ್ ಕಂಭಗಳು, ಮಾಡುಗಳು ಲೇ ಕಾರ್ಬೂಸೀಯೆಯಿಂದ ಹೆಚ್ಚಾಗಿ ಚಂಡೀಘಡದಲ್ಲಿ (ಮುಖ್ಯ ನ್ಯಾಯಾಲಯ ಹಾಗೂ ಶಾಸಕಾಂಗ ಭವನ) ಮತ್ತು ಇತರೆಡೆಯಲ್ಲಿ ಜನಪ್ರಿಯಗೊಳಿಸಲ್ಪಟ್ಟವು. (ಇದೇ ಅಂಶಗಳನ್ನು ಬ್ರೆಜಿಲ್‌ನ ರಾಜಧಾನಿ 'ಬ್ರಾಸಿಲಿಯಾ' ನಗರದ ವಿನ್ಯಾಸದಲ್ಲೂ ಸ್ಪಷ್ಟವಾಗಿ ಆಸ್ಕರ್ ನಿಮೆಯರ್‌ನ ಕೃತಿಗಳಲ್ಲಿ ಕಾಣಬಹುದು. ಅವೂ ಕೂಡಾ ಕಾರ್ಬೂಸಿಯೆಯಿಂದ ಪ್ರಭಾವಿತವಾದವು. ಇವುಗಳ ಪ್ರಾರಂಭಿಕ ಲಕ್ಷಣಗಳು ನಗರದ ಮುಖ್ಯ ರೈಲ್ವೆ ನಿಲ್ದಾಣದ ಅಥವಾ ಕಾವೇರಿ ಭವನದ ಮುಖ ಮಂಟಪಗಳಲ್ಲಿ ಸ್ಪಷ್ಟ-ಬೃಹತ್ ಕಂಭಗಳು ಹಾಗೂ ಛಾವಣಿಗಳು/ಮಾಡುಗಳಲ್ಲಿ ಕಾಣುತ್ತವೆ.

70ರ ದಶಕದ ಉತ್ತರಾರ್ಧ ಹಾಗೂ 80ರ ದಶಕದ ಪೂರ್ವಾರ್ಧಗಳಲ್ಲಿ ಈ ತೆರೆದ ಕಾಂಕ್ರೀಟಿನ / ಗಿಲಾವು ಕಾಂಕ್ರೀಟಿನ ಸಹಯೋಗಿ ಸರಸ ಮುಂದುವರೆಯುತ್ತದೆ. ಉದಾ: ವಿಶ್ವೇಶ್ವರಯ್ಯ ಶಿಖರ/ಗೋಪುರ. ಇಲ್ಲಿ ಎರಡು ಬಹು ಅಂತಸ್ತಿನ ತೆರೆದ ಕಾಂಕ್ರೀಟ್ ಮೇಲ್ಮೈನ ಶಿಖರಗಳು ತಮ್ಮ ಸಂಬಂಧವನ್ನು ಮಾಳಿಗೆಯ ಮೂಲಕ ಕಲ್ಪಿಸಿಕೊಳ್ಳುತ್ತವೆ (ಚಾರ್ಲ್ಸ್ ಕೊರಿಯಾ); ಪಾರ್ಶ್ವ ಉಪಯೋಗದ ಕಾಂಕ್ರೀಟ್ ಫಲಕಗಳು ಕರ್ನಾಟಕ ಸೋಪ್ ಕಾರ್ಖಾನೆ (ಕಾರೇಕರ್ ಸುಂದರಂ) ಹೊರಭಾಗದಲ್ಲಿ ಕಾಣಸಿಗುವುದು; ನಂತರ, ಜಿ.ಕೆ.ವಿ.ಕೆ. ಕ್ಯಾಂಪಸ್‌ನಲ್ಲಿ (ಕನವಿಂದೆ); ಮತ್ತು ಕೆಲವು ಮನೆಗಳಲ್ಲಿ (ಉದಾ: ಉತ್ತಮ್ ಜೈನ ಕೃತಿ). ಇದೇ ರೀತಿಯ ರಂಗು ರಂಗಿನ ಕುಣಿಗಲ್ ಕಲ್ಲುಗಳನ್ನು ಹೊರಗಡೆ ಮೆದುಗಾರೆಯಲ್ಲಿ ಅಲಂಕಾರಿಕವಾಗಿ ಜೋಡಿಸುವುದು ಜನಪ್ರಿಯವಾಗಿತ್ತು.

ನವ್ಯದ ಧ್ವನಿಯನ್ನು ಉಚ್ಚರಿಸಿದ ಮತ್ತೊಂದು ಕಟ್ಟಡ ಭಾರತೀಯ ನಿರ್ವಹಣಾ ಸಂಸ್ಥೆ (ಐ.ಐ.ಎಂ.ಬೆಂಗಳೂರು) (ಬಾಲಕೃಷ್ಣ ದೋಷಿ–ವಾಸ್ತು ತಜ್ಞ). ತೆರೆದ ಕಾಂಕ್ರೀಟು ಹಾಗೂ ಕಲ್ಲಿನ ಸಮ್ಮಿಶ್ರ ಕಟ್ಟಡ. ಸರಳ ಘನಾಕೃತಿಗಳು, ಕಾರ್ಯಬಾಹುಳ್ಯದ ಭೂಮಿಕೆ ಎಲ್ಲಾ ಸೇರಿ ಅನೇಕ ವಾಸ್ತುಶಿಲ್ಪಗಳಿಗೆ ಮಾದರಿ ಕೃತಿಯಾಯಿತು (ನೋಡಿ ಚಿತ್ರ 021).

ಎಪ್ಪತ್ತರ ದಶಕವೆಂದರೆ ಚಿತ್ರಮಂದಿರಗಳ ಉಚ್ಛ್ರಾಯಕಾಲ (ಬೆಂಗಳೂರು ಆಗ ದೇಶದಲ್ಲೇ ಚಿತ್ರಮಂದಿರಗಳ ರಾಜಧಾನಿಯಾಗಿತ್ತು). ಮೊದಲಿನ ಸರಳ ಸಮಪಾರ್ಶ್ವದ 'ಆರ್ಟ್ ಡೆಕೋ' ತೋರಿಕೆಯ ವಿನ್ಯಾಸದಿಂದ (ಪ್ರಭಾತ್, ಶಿವಾಜಿ, ಪ್ಲಾಜಾ ಚಿತ್ರಮಂದಿರಗಳು) ಚೂಪುಗಾರಿಕೆಯ ಆಕರ್ಷಕ ಅಂಶಗಳುಳ್ಳ ಗಾಜಿನ ಹೊದಿಕೆಯ ಮುಂಬದಿಗಳು. ದೊಡ್ಡ ವಿರಾಮ ವಲಯಗಳು (lounges), ಇಳಿಜಾರಿನ ಸೇತುವೆಗಳು (ರ್‍ಯಾಂಪ್‌ಗಳು), ಚಲಿಸುವ ಮೆಟ್ಟಿಲುಗಳು (Escalators), ಎಪ್ಪತ್ತು ಎಂ.ಎಂ. ಪರದೆ ಎಲ್ಲವೂ ಹೊಸತನದಿಂದಲೇ ಯುವ ದರ್ಶಕರನ್ನು ಆಕರ್ಷಿಸಿದವು. ಉದಾ: ಸಂತೋಷ್, ಸಂಗಮ್, ಅಭಿನಯ್ ಮತ್ತು ಮೆಜೆಸ್ಟಿಕ್ (ಕಡೆಯದರಲ್ಲಿ ಗಾಜು ಮತ್ತು ಲಂಬಿತ ನಾಕು ಮೂಲೆಯ ತಾರೆಯಾಕಾರದ ಸಂಯೋಜನೆ ವಿಶಿಷ್ಟವಾದುದಾಗಿತ್ತು. ಬ್ರಾಸಿಲಿಯಾ ರಾಷ್ಟ್ರಪತಿಯ ಭವನದ ಮುಂಬದಿಯ ತೋರಿಕೆಯಲ್ಲಿ).

ವ್ಯಾಪಾರ ಮಳಿಗೆಗಳಲ್ಲಿ ಡಿಪಾರ್ಟ್‌ಮೆಂಟಲ್ ಸ್ಟೋರುಗಳು ಉದಾ: ನೀಲಗಿರೀಸ್ ಹಾಗೂ ಕೊಷಿಸ್‌ನವರದು. ಬಹು ಸಾಮಗ್ರಿಗಳನ್ನು ಒಂದೇ ಸೂರಿನಡಿ ಮಾರುವಿಕೆ ಹೊಸ ಕಲ್ಪನೆಯಾಗಿತ್ತು. ಯೂನಿಟಿ ಕಟ್ಟಡದಲ್ಲಿ ಕೂಡಾ ಬಹುತೇಕ ಗಾಜು ಬಳಕೆಯಾಯ್ತು (ಇನ್ನುಳಿದ ಮಳಿಗೆಗಳಂತೆ).

ಆಸಕ್ತಿ ಹುಟ್ಟಿಸುವಂತಹ ಪ್ರಯೋಗಗಳೆಂದರೆ 'ತಾರಾಗೃಹ' (planeterium) ಕಟ್ಟಡ (ಶಾಸಕರ ಭವನದ ಬಳಿ) ಜ್ಯಾಮಿತಿಯ ಆಕೃತಿಗಳ ಧೋಲ್‌ಪುರ್ ಕಲ್ಲಿನ ಕವಚ ಹೊಂದಿದ್ದು ತನ್ನ ಗುಮ್ಮಟಗಳಿಂದ, ಪಿರಾಮಿಡ್ ರೂಪದ ಸೂರುಗಳಿಂದ ಗಮನ ಸೆಳೆಯುತ್ತದೆ. ಇನ್ನೊಂದು ಯು.ಬಿ. ಕಟ್ಟಡ (ಕಬ್ಬನ್ ಪಾರ್ಕಿನ ಬಳಿ)–ತನ್ನ ಕಾಂಕ್ರಿಟ್ ಹೊರ ಪರದೆಯಿಂದ ಕಟ್ಟಡವನ್ನು ಹಾಗೂ ಕಿಟಕಿಗಳನ್ನು ನೇರ ಸೂರ್ಯನ ಪ್ರಖರ ಕಿರಣಗಳಿಂದ ರಕ್ಷಿಸುತ್ತದೆ, ಮಂದಗತಿಯಲ್ಲಿ ಒಳ ವಾತಾವರಣವನ್ನು ತಂಪಾಗಿಸುತ್ತದೆ. ಮತ್ತು ನೆರಳನ್ನು ಒದಗಿಸುತ್ತದೆ. ಇದೊಂದು ಪ್ರಯೋಗಿಕ ಹಾಗೂ ಕಾರ್ಯಕಾರಿ ವಿನ್ಯಾಸ.

ಮತ್ತೆರಡು ಆಸಕ್ತಿ ಕೆರಳಿಸುವ ಕಟ್ಟಡಗಳು: ಚೌಡಯ್ಯ ಸ್ಮಾರಕ ಭವನ (ಸ್ಯಾಂಕಿ ರಸ್ತೆ, ಮೂರ್ತಿ–ವಾಸ್ತುಶಿಲ್ಪಿ) (ಚಿತ್ರ 22–ಬಿ), ಹಾಗೂ ಮಹಾಲಕ್ಷ್ಮೀ ಬಡಾವಣೆಯ ಹನುಮಂತನ ದೇವಾಲಯ ಮೊದಲನೆಯದರಲ್ಲಿ ಪಿಟೀಲಿನಾಕಾರದಲ್ಲೇ ರೂಪಿತವಾಗಿರುವ ಕಟ್ಟಡ ಆಕೃತಿ ಹಾಗೂ ಆಶಯ ಎರಡರ ಸಮ್ಮಿಲನ–ವಾಸ್ತು ವಿನ್ಯಾಸದಲ್ಲಿ ಇಂತಹ ಸಮ್ಮಿಲನ ಅತ್ಯಂತ ಫಲಕಾರಿಯಾದ ಪರಿಣಾಮ ತರುತ್ತದೆ. ಆದರೆ ಎಲ್ಲಾ ಪ್ರಯತ್ನಗಳಲ್ಲೂ ಆಗುವುದಿಲ್ಲ ಹಾಗೂ ಆಗುವುದು ಅಪೇಕ್ಷಣೀಯವೂ ಅಲ್ಲ. ಎರಡನೆಯದರಲ್ಲಿ ಅರ್ಧ ಚಂದ್ರಾಕಾರದ ಮಾಳಿಗೆಗಳ ಶಿಖರ ಹಾಗೂ ಮುಂದಿನ ಮೊಗಸಾಲೆಯ ಲಂಬಿತ ಅರ್ಧಚಂದ್ರಾಕಾರದ ಚಾಚು ರಚನೆ. ದೇವಾಲಯ ವಾಸ್ತುವಿನಲ್ಲಿ ಕುತೂಹಲಕಾರಿ ಪ್ರಯೋಗ (ಆಕರ್ಷಣೆಯಲ್ಲಿ ಕಡಿಮೆಯಾದರೂ).

ನವ್ಯೋತ್ತರ ಹಂತ

ಎಂಭತ್ತರ ಉತ್ತರಾರ್ಧ ಮತ್ತು ತೊಂಭತ್ತರ ದಶಕ ನವ್ಯೋತ್ತರದ ಪರಿಕಲ್ಪನೆ ಅರವತ್ತರ ಹಾಗೂ ಎಪ್ಪತ್ತರ ಪ್ರಾರಂಭದಲ್ಲೇ ರೂಪುಗೊಂಡಿತ್ತು. ಸಾಹಿತ್ಯದಲ್ಲಿ ನಾಟಕಗಳಲ್ಲಿ, ಚಿತ್ರಗಳಲ್ಲಿ ಪ್ರಾಯೋಗಿಸಲ್ಪಟ್ಟಿತ್ತು. ವಾಸ್ತು ಕಲೆಯಲ್ಲಿ ಎಪ್ಪತ್ತರ ಪೂರ್ವಾರ್ಧದಲ್ಲಿ ಕಾಣಿಸಿಕೊಂಡಿತು.

ವಾಸ್ತುಕಲೆಯಲ್ಲಿ ಇದು ವ್ಯಕ್ತವಾದದ್ದು ಪಾರಂಪರಿಕ ಶೈಲಿಯ ಮರುಕಳಿಕೆಯಲ್ಲಿ (classical revivalism), ಶೈಲಿ ಪೂರ್ಣ ಪ್ರಮಾಣದಲ್ಲಲ್ಲ ಆದರೆ ಸಾಂಕೇತಿಕ ರೂಪದಲ್ಲಿ–ನವ್ಯೋತ್ತರ ಪಾರಂಪರಿಕ (Post Modern Classicism) ಗುರುತಿಸಲ್ಪಟ್ಟಿತು. ಇದು ನವ್ಯಕ್ಕೆ ಪ್ರತಿರೋಧವಾದಂಥ ಪ್ರತಿಕ್ರಿಯೆ.

ನವ್ಯವು ಅರವತ್ತರ ದಶಕದ ಉತ್ತರಾರ್ಧದ ವೇಳೆಗೆ ಕ್ರಿಯಾಶೀಲತೆಯನ್ನು ಬಹುಮಟ್ಟಿಗೆ ಕಳೆದುಕೊಂಡಿತ್ತು. ಬಹುವಾಗಿ ಏಕತಾನತೆಯನ್ನುಂಟು ಮಾಡುವ, ಯಾಂತ್ರಿಕ ವಿನ್ಯಾಸ ರೀತಿಯ, ಪೂರ್ವಭಾವಿಯಾಗೇ ತಿಳಿಯುವಂತಹ ನಿರೂಪಣೆ. (ನಿರೀಕ್ಷಿತ ರೀತಿಯ, ವೈವಿಧ್ಯತೆಯಿಲ್ಲದ ಕಟ್ಟಡ ಕಲಾಕೃತಿಗಳು), ಗಾಜು, ಕಾಂಕ್ರೀಟಿನ ಅತಿಯಾದ ಬಳಕೆ, ಬೃಹತ್ ಗಾತ್ರದ ಕಾಂಕ್ರೀಟ್ ಕಟ್ಟಡಗಳು ತೋರುವ ದಬ್ಬಾಳಿಕೆ ಮನೋಭಾವ ಎಲ್ಲಾ ಜೊತೆಗೂಡಿ ನೀರಸವಾದ ಕಟ್ಟಡಗಳು ರೂಪುಗೊಳ್ಳುತ್ತಿದ್ದವು.

ಮುಖ್ಯವಾದ ಅಂಶವಾದದ್ದು ಗಾಜು ಮತ್ತು ಕಾಂಕ್ರೀಟ್ ಹಾಗೂ ಉಕ್ಕಿನ ನಿರ್ಜೀವದ ತಣ್ಣಗಿನ ದ್ರವ್ಯಗುಣ. ವಿಶೇಷವಾಗಿ ಉಕ್ಕು ಹಾಗೂ ಕಾಂಕ್ರೀಟ್ ಕಟ್ಟಡಗಳು ಜನರಲ್ಲಿ ಹಿತವಾದ ಬೆಚ್ಚನೆಯ ಮಾನಸಿಕವಾಗಿ ಹತ್ತಿರವಾಗುವ ಸ್ಪಂದಿಸುವ ಸತ್ವವನ್ನೇ ಕಳೆದುಕೊಂಡವು. ತಮಗೂ, ಉಪಭೋಗಿಗಳಿಗೂ, ದರ್ಶಕರಿಗೂ ಸಂಬಂಧ ಉಂಟಾಗುವ ಪ್ರತಿಕ್ರಿಯೆಯನ್ನುಂಟು ಮಾಡಬೇಕೆಂಬುದು ವಿನ್ಯಾಸಕಾರರಿಗೆ ಮುಖ್ಯವಾಗಲೇ ಇಲ್ಲ. ಕಟ್ಟಡಗಳು ತಮ್ಮ ಮನೋಭಾವದ ವಿಸ್ತರಣೆಯಷ್ಟೆ ಎಂಬಂಥ ಧೋರಣೆ ಕಾಣಿಸಿತ್ತು. ಪರಿಣಾಮ ವಾಸ್ತುಕಾರನಿಗೂ ಉಪಯೋಗಿಸುವ ಜನರಿಗೂ ನಡುವೆ ಭಾವನಾತ್ಮಕ ಕಂದರ ಹಿಗ್ಗುತ್ತಲೇ ಹೋಯಿತು.

ಕಟ್ಟಡಗಳಲ್ಲಿ ಸಾಂದರ್ಭಿಕ ಔಚಿತ್ಯ ಇಲ್ಲವಾಗಿತ್ತು. ಒಂದೇ ಕಟ್ಟಡ ಎಲ್ಲಿ ಬೇಕಾದರೂ ಇರುವಂತಹದಾಗಿರಬೇಕು ಎಂಬ ಅಂತರಾಷ್ಟ್ರೀಯ ಶೈಲಿಯ ಧೋರಣೆ. ಮನ ಹಾಗೂ ಕಟ್ಟಡಗಳ ನಡುವೆ ಭದ್ರವಾದ ಭಾವನಾತ್ಮಕ ಸಂಬಂಧ ಸಾರ್ವಕಾಲಿಕ ಸತ್ಯ ಎಂಬುದು ಮರೆಯಾಗಿತ್ತು. ಮಧ್ಯೆ ಒಂದು ತಲೆಮಾರು ವಾಸ್ತುಕಲಾ ಚರಿತ್ರೆಯನ್ನೇ ತಿರಸ್ಕರಿಸಿತ್ತು, ಪಠ್ಯಕ್ರಮದಿಂದಲೇ ಹೊರಗುಳಿದಿತ್ತು. ಇಂತಹ ವಾಸ್ತುಕಲಾ ಶೂನ್ಯತೆಯಲ್ಲಿ ಜನಪರವಾದ ಕಟ್ಟಡಗಳ ರಚನಾಕ್ರಮದಲ್ಲಿ ಭಾವನೆಗಳಿಗೂ ಸ್ಥಾನವಿದೆ. ಚರಿತ್ರೆಯಲ್ಲೂ ಇಂತಹ ಮರು ಜೋಡಣೆಗೆ ತಂತುಗಳು ದೊರಕ ಬಹುದು ಎಂಬ ತಥ್ಯ ಪುನಃ ವಾಸ್ತುಚರಿತ್ರೆಯಲ್ಲಿ ಆಸಕ್ತಿ ಕೆರಳಿಸಿತು. ವಿಜ್ಞಾನ ಹಾಗೂ ತಂತ್ರಜ್ಞಾನ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಎಂಬ ಚಿಂತನೆಯ ಅಸಾಧುತನವನ್ನು ನವ್ಯೋತ್ತರ ಎತ್ತಿ ತೋರಿಸಿತು. ಯಾವೊಂದು ಶೈಲಿಯೂ ಜನರಿಂದ ಪ್ರತ್ಯೇಕವಾಗಿ ಉಳಿಯಬೇಕಿಲ್ಲ ಅದು ಸಮೂಹದ ಎಲ್ಲಾ ವೈವಿಧ್ಯತೆಗಳನ್ನೂ (ಓರೆ ಕೋರೆಗಳನ್ನೂ ಸಹ) ಒಳಗೊಂಡು ಕಾಲ ಪ್ರವಾಹದಲ್ಲಿ ಮುಂದೆ ಸಾಗುವ ಒಂದು ಸಾಂಘಿಕ ಪ್ರಕ್ರಿಯೆ ಎಂಬುದು ನವ್ಯೋತ್ತರದ ನಿಲುವು. ಇದು ಬಹುಮಟ್ಟಿಗೆ ಭಾರತೀಯ ತಾತ್ವಿಕ ಚಿಂತನೆಯೂ ಕೂಡಾ.

ಈ ಮಾರ್ಗ/ಶೈಲಿ ಭಾರತದಲ್ಲಾಗಲೀ ಅಥವಾ ಬೆಂಗಳೂರಿನಲ್ಲಾಗಲೀ ಗಣನೀಯ ವ್ಯತ್ಯಾಸವನ್ನೇನು ಮಾಡಲಿಲ್ಲ (ನವ್ಯವಾಗಲಿ ಅಥವಾ ನವ್ಯೋತ್ತರವಾಗಲಿ). ಮೂಲಭೂತ ಚಿಂತನೆಯಲ್ಲಿ ಬದಲಾವಣೆಯೇನು ಆಗಲಿಲ್ಲ. ಉದ್ದೇಶಪೂರ್ವಕ್ಕಿಂತ ಅನುದ್ದೇಶಿತವಾಗಿ ಆಗಿದ್ದೇ ಹೆಚ್ಚು. ಹಲವಾರು. ಅಂಶಗಳು ಹೊರಗಿನಿಂದ ಕಸಿಯಾದದ್ದೇ ಹೆಚ್ಚು, ಮೂಲಭೂತ ಬದಲಾವಣೆ ಪ್ರಕ್ರಿಯೆ ಕಡಿಮೆ. ಗ್ರಾಹಕರಿಗೆ ಕಟ್ಟಡ ನೋಡಲು ಮಾತ್ರ ನವ್ಯವಾಗಿರಬೇಕು, ಮನೋಭೂಮಿಕೆಯಲ್ಲ ಎಂಬುದು ಹಾಗೂ ನಮ್ಮ ಜೀವನ ಶೈಲಿಯನ್ನು ನೋಡಿದಾಗ ಸಾಧ್ಯವೂ ಇಲ್ಲ ಹಾಗೂ ಪ್ರಸ್ತುತವೂ ಅಲ್ಲ ಎಂದು ಅನ್ನಿಸುವುದು ಸಹಜ. ಪರಿಣಾಮದಲ್ಲಿ ಕಾರ್ಯಕಾರಿ ವಿನ್ಯಾಸ ನವ್ಯದ ಹೊದಿಕೆಯಲ್ಲಿ ಅಲಂಕಾರಗೊಂಡ ಫಲಿತಾಂಶ. ಪಾರಂಪರಿಕತೆ ಸದಾ ನಮ್ಮಲ್ಲಿ ಇದ್ದೇ ಇತ್ತು. (ಒಂದಲ್ಲ ಒಂದು ರೀತಿಯಲ್ಲಿ ಇದರ ಪೂರ್ಣ ತ್ಯಾಜ್ಯ ಸಾಧುವೇ ಎಂಬುದು ಪ್ರತ್ಯೇಕವಾಗೇ ಚರ್ಚೆಗೊಳಗಾಗುವಂತಹ ವಿಷಯ).

ಆದರೂ, ಬೆಂಗಳೂರಿನಲ್ಲಾದ ಕೆಲ ಪ್ರಯತ್ನಗಳೆಂದರೆ (ನವ್ಯೋತ್ತರದವು) 80ರ ಮಧ್ಯದ ವಿಂಡ್ಸರ್ ಮ್ಯಾನರ್ (ಚಿತ್ರ 024) (1984–ರಾಜೇಂದರ್ ಕುಮಾರ್), ಹಾಲಿಡೇ ಇನ್ (1987, ರಾಜೇಂದರ್ ಖನ್ನಾ ಮತ್ತು ಸ್ಟುಪ್ ಸಲಹೆಗಾರರು) ಮುಂದಿನ ಬ್ರೂಕ್ ಫೀಲ್ಡ್ಸ್ (1989 ಥಾಮಸ್ ಮತ್ತು ಜಿಕಾರಿಯ). ಎತ್ತಿ ಕಾಣುವ ಅಂಶವೆಂದರೆ (ಎಲ್ಲದರಲ್ಲೂ) ಶೈಲಿ ಮುಖ್ಯವಾಗಿ ಆಂಗ್ಲ ಗ್ರಾಮಾಂತರದಲ್ಲಿನ ಶ್ರೀಮಂತಿಕೆಯ ಭವ್ಯ ಸೌಧದ ನಕಲು (ಮ್ಯಾನರ್ ಹೌಸ್ – ಜಮೀನುದಾರನ ಮಹಲು) ಇಲ್ಲಿ ಪುನರಾವರ್ತನೆಯಾಗಿರುವುದು. ಉದ್ದದ ಚಾವಡಿಗಳು, ಎತ್ತರದ ಸೂರುಗಳು, ಪಟ್ಟಿ ಕಂಭಗಳು, ವಿವಿಧಾಕೃತಿಯ ಕಿಟಕಿಯ ಮಾಡುಗಳು, ಭವ್ಯ ಮುಖ ದ್ವಾರ ಹಾಗೂ ಮೊಗಸಾಲೆ ಸುತ್ತ ಅಲಂಕಾರಿಕ ತೋಟಗಾರಿಕೆ ಇತ್ಯಾದಿ ಸಂದರ್ಭೋಚಿತ ವಿನ್ಯಾಸವನ್ನೇನು ಸೂಚಿಸುವುದಿಲ್ಲ; ಬರೀ ಕಟ್ಟಡದ ಕಲ್ಪನೆಯ ಸ್ಥಿತ್ಯಂತರವಷ್ಟೇ. ಇನ್ನೂ ಮುಂದಿನ ಮಡಿವಾಳ ರಸ್ತೆಯ 'ಅಕ್ರೋ ಪೋಲಿಸ್' ವಿಕೃತ ಆಕೃತಿ, ಮೂಲ ಸೌಂದರ್ಯವನ್ನೂ ಸಹ ತನ್ನ ವಿನ್ಯಾಸದಲ್ಲಿ ಉಳಿಸಿಕೊಂಡಿಲ್ಲ.

ಇದರ ಇನ್ನೊಂದು ಮುಖ ದೇಶೀಯ ಪಾರಂಪರಿಕ ಭಾಷೆಯ ಮರುಕಳಿಕೆ. ಹೆಚ್ಚೆಂದರೆ ಬರೀ ಮುಂಬದಿಗೆ ಮಾತ್ರ ಸೀಮಿತ. ಉದಾ: ಅಂಬೇಡ್ಕರ್ ಭವನ (90ರ ದಶಕ)ದ ಬೌದ್ಧ ಪ್ರತಿಮೆಗಳ ವಿನ್ಯಾಸ ರೂಪ–ಚೈತ್ಯ ಕಮಾನು, ಕಂಭಗಳು ಇತ್ಯಾದಿ; ಇಲ್ಲಿ ಮುಂಬದಿಗೂ ಪಾರ್ಶ್ವ ಅಥವಾ ಹಿಂಬದಿಗೂ ಸಂಯೋಜನೆಯಲ್ಲಿ ಸಂಬಂಧಗಳು ಕಲ್ಪಿತವಾಗುವುದೇ ಇಲ್ಲಾ.

ಮೇಲಿನ ಎರಡೂ ಸಂದರ್ಭಗಳಲ್ಲಿ ಬರೀ ಹೊರನೋಟಕ್ಕೇ ಸೀಮಿತವಾಗದೆ ಅಂತರ್ಗತವಾಗಿ ಸಮಕಾಲೀನ ಆಶಯಗಳಿಗೇ ಸ್ಪಂದಿಸುವುದೇ ಎಂಬುದೇ ಪ್ರಶ್ನೆ; ಎಷ್ಟರಮಟ್ಟಿಗೆ ಸಾಧು, ಸಾಧ್ಯ ಎಂಬುದು ವಿನ್ಯಾಸಕಾರನ ಸಾಮರ್ಥ್ಯಕ್ಕೆ ಸೇರಿದ್ದು.

ಮರುಕಳಿಕೆಯ ಪ್ರಯತ್ನಗಳು ಎಂದೂ ಮರೆಯಾಗಿರಲಿಲ್ಲ. ಪ್ರಕಟವಾಗಿಯೋ ಅಪ್ರಕಟಿತವಾಗಿಯೋ ಇದ್ದೇ ಇದ್ದವು. ಆದರೆ ಕೆಲವೇ ಉದಾಹರಣೆಗಳು ಮಾತ್ರ ಹಳೆಯದನ್ನು ಹೊಸತರ ಆಕೃತಿಯಲ್ಲಾಗಲಿ ಅಥವಾ ಆಶಯದಲ್ಲಾಗಲಿ ಯಶಸ್ವಿಯಾಗಿ ಸಮ್ಮಿಳಿತಗೊಳಿಸುವುದರಲ್ಲಿ ಸಫಲವಾಗಿವೆ. ರೇಸ್‌ಕೋರ್ಸ್ ರಸ್ತೆಯ ಭಾರತೀಯ ವಿದ್ಯಾ ಭವನದ (70ರ ದಶಕ) ಮುಖದ್ವಾರದ ಚೈತ್ಯದ ಕಮಾನು ಹಾಗೂ ಕಮಾನಿನ ಕಿಟಕಿಗಳು ಮತ್ತು ಮೇಲಿನ ಕೈಗೋಡೆ ಅಥವಾ ಬಸವನಗುಡಿಯ ರಾಮಕೃಷ್ಣ ಮಠದ ಕಟ್ಟಡಗಳು ಸೂಕ್ಷ್ಮವಾಗಿ ಹೊಸ ಆಶಯಗಳಿಗೆ ಅಡ್ಡಿಯಾಗದೇ, ಕಣ್ಣಿಗೆ ರಾಚದೆ, ನಯವಾದ ರೀತಿಯಲ್ಲಿ ಸಂಗಮವನ್ನು ಸಾಧಿಸುತ್ತವೆ. ಈ ಎರಡೂ ಸಂಸ್ಥೆಗಳು ಆರಂಭದಿಂದಲೇ ವೈಯಕ್ತಿಕವಾದ ವಾಸ್ತುಕಲಾ ಶೈಲಿಯ ನೀತಿಯನ್ನು ಅನುಸರಿಸುತ್ತಾ ಬಂದಿರುವುದು ಒಂದು ವಿಶೇಷ. ಎರಡೂ ಬಹುಮಟ್ಟಿಗೆ ಭಾರತೀಯ ಅಂಶಗಳನ್ನು ಎತ್ತಿ ಹಿಡಿಯುವ ಚಿಂತನೆ ಮೈಗೂಡಿಸಿಕೊಂಡಿವೆ. (ಚಿತ್ರ 029, ಭಾರತೀಯ ವಿದ್ಯಾಭವನ).

ಹೊಸ ಜಿ.ಪಿ.ಓ (80ರ ದಶಕದ್ದು) ಮುಖ್ಯ ಅಂಚೆ ಕಛೇರಿ ತನ್ನ ಎದುರಿನ ವಿಧಾನಸೌಧದ ಶೈಲಿಯಲ್ಲಿ ಆಕೃತಿ ಹಾಗೂ ಆಶಯಗಳೆರಡನ್ನೂ ವ್ಯಕ್ತಪಡಿಸ ಹೊರಟರೂ ಸಫಲವಾಗಲಿಲ್ಲ. ಇದು ತನ್ನ ಗುಮ್ಮಟದಲ್ಲಾಗಲೀ, ಕಂಬದ ರಚನೆಯಾಗಲಿ, ಕಿಟಕಿಗಳ ರಚನೆಯಲ್ಲಾಗಲಿ ಅಷ್ಟೇನೂ ಸಮಾಧಾನಕರವಾಗಿಲ್ಲ.

ವಸತಿ ಕ್ಷೇತ್ರ (Housing)ದಲ್ಲಿ 'ಜಲವಾಯು ವಿಹಾರ' (ಕಾನಡೆ ಸಹೋದರರು) ಒಂದು ಹೊಸ ಗತಿಯನ್ನೇ ಮೊದಲು ಮಾಡಿತು. ಕ್ಷೇತ್ರ ಯೋಜನೆ ಹಾಗೂ ಗೃಹ ವಿನ್ಯಾಸದಲ್ಲಿ (ಇಲ್ಲಿ ಬಹುವಾಗಿ ಸ್ಥಳೀಯ ಗ್ರಾನೈಟ್ ಉಪಯೋಗಿಸುವಿಕೆ ಹಾಗೂ ಪ್ರತಿ ಗೃಹಕ್ಕೂ ಸಾಕಷ್ಟು ತನ್ನದೇ ಆದ ಸುತ್ತುವರಿ ಪ್ರದೇಶ/ಜಾಗ) ಮತ್ತು ಸಾರ್ವಜನಿಕ ಕಟ್ಟಡಗಳ ವಿನ್ಯಾಸದಲ್ಲಿ ಗಮನಾರ್ಹ ಸಾಧನೆ ಮಾಡಿತು. ಗೃಹ ರಚನಾ ವಿಧಾನದಲ್ಲಿ ಒಂದು

ಕುತೂಹಲಕಾರಿ ಪ್ರಯೋಗ (80ರ ಉತ್ತರಾರ್ಧ) 'ಚಲಿಸುವ ಮನೆ' (ಕೆ. ಜಯರಾಂ-ಸ್ವಂತ ಮನೆ ಹಾಗೂ ಸ್ವಂತ ವಿನ್ಯಾಸ). ಇಲ್ಲಿ ಪ್ರತಿ ಘಟಕವು ಅಂದರೆ ಅಡುಗೆಮನೆ, ದಿವಾನಖಾನೆ, ಬಚ್ಚಲುಮನೆ ಇತ್ಯಾದಿ. ಬಿಡಿ ಬಿಡಿಯಾಗಿ ಪೂರ್ವದಲ್ಲೇ ಅಥವಾ ಮೊದಲೇ ಬೇಕಾದ ಆಕೃತಿಗೆ ತೆಳು ಕಾಂಕ್ರೀಟಿನ ಅಚ್ಚಿನಲ್ಲಿ ಎರಕ ಹೊಯ್ದು ಬೇಕಾದೆಡೆ ಸಾಗಿಸಿ ಜೋಡಿಸಬಹುದಾದ ರಚನೆಗಳು; ಪೀಠೋಪಕರಣಗಳು ಕೂಡಾ ಕಾಂಕ್ರಿಟ್ ಘಟಕದಲ್ಲೇ ಎರಕ ಹೊಯ್ದಂತವು. ಇದು ಪೂರ್ವನಿರ್ಮಿತ (Precast) ತಂತ್ರದ ಬಳಕೆ. ಇದನ್ನು ಪುನಃ ಬಿಚ್ಚಿ ಬೇಕಾದೆಡೆ ಸಾಗಿಸಬಹುದು.

ಮಣಿಪಾಲ ಟವರ್ಸ್ – ಬೃಹತ್ ವ್ಯಾಪಾರೀ ಮಳಿಗೆಯಲ್ಲೂ ಸಹ ಪಾರಂಪರಿಕ ಅಂಶಗಳು ಕಾಣಿಸಿಕೊಳ್ಳುತ್ತವೆ. ಗಮನೀಯ ಪೀಠ ಭಾಗ, ಸಮಪಾರ್ಶ್ವದ ಗಾಜಿನ ಹೊದಿಕೆಯ ನಡುಭಾಗ ಮತ್ತು ಮೇಲಿನ ಕಪೋತ (cornice) ಗೃಹಸ್ತೋಮಗಳಲ್ಲೂ ಈ ಅನುಕರಣೆ ಸಾಮಾನ್ಯ, ನಿಶ್ಚಿತಪೀಠ. ನಡುಭಾಗ ಹಾಗೂ ಶಿರ/ಸೂರು ಸಂಯೋಜನಾ ಕ್ರಮ ಜನಪ್ರಿಯವಾಯ್ತು. ಹಿಂದಿನ ಎರಡು ದಶಕಗಳಿಂದಲೂ ಸಹ ಉದಾ; ಅಕ್ರೋಪೋಲಿಸ್, ಮಡಿವಾಳ ರಸ್ತೆ, ಬೆಂಗಳೂರು.

ಸ್ಪೆನ್ಸರ್ಸ್‌ರವರ ವ್ಯಾಪಾರೀ ಮಳಿಗೆ (ಚಂದಾವರ್ಕರ್ ಮತ್ತು ಥ್ಯಾಕರ್), ಎಂ.ಜಿ.ರಸ್ತೆಯಲ್ಲಿ ಹೊಸತನ ತಂದಿತು. ಮುಪ್ಪಟ್ಟು ಎತ್ತರದ ಮುಖಾಂಗಣ ಇಲ್ಲಿನ ಆಕರ್ಷಣೆ. ಬಿ. ಡಿ. ಎ. ಯ ಮಳಿಗೆಗಳು ರಾಜಾಜಿನಗರ, ಕೋರಮಂಗಲ ಮತ್ತು ಬನಶಂಕರಿಗಳಲ್ಲಿ ಸದುದ್ದೇಶದಿಂದ ಮಾಡಿದರೂ ಪೂರ್ಣವಾಗಿ ಕಾರ್ಯ ನಿರತವಾಗಿಲ್ಲ (ಬನಶಂಕರಿ ಮಳಿಗೆ ಬಿಟ್ಟು).

90ರ ದಶಕದಲ್ಲಿ ವೈರುಧ್ಯಗಳ ಮಿಶ್ರಣದ ಪಾರಂಪರಿಕತೆ ಒಂದೆಡೆಯಾದರೆ, ವಿರುದ್ಧವಾದ ರೀತಿಯಲ್ಲಿ ಅನಾಮಿಕ / ಅನಾಮಧೇಯ ರೂಪದ ಸಾಂಸ್ಥಿಕ ಮುಖ್ಯ ಕಛೇರಿಗಳು ಹಾಗೂ ಕಟ್ಟಡಗಳು. ಎಲೆಕ್ಟ್ರಾನಿಕ್ ನಗರದ ಯೋಜನೆಗಳು, ಐ.ಟಿ.ಪಿ.ಎಲ್.ಕಟ್ಟಡ, ವೈಟ್‌ಫೀಲ್ಡ್‌ನಲ್ಲಿ ಪ್ರಬುದ್ಧವಾಗಿ ಕಾಣಸಿಗುತ್ತವೆ. ಪೂರ್ಣ ಗಾಜಿನ ಕವಚದ (ಗೋಡೆಯೆಂಬುದೇ ಇಲ್ಲ) ಅವಿಷ್ಕಾರವನ್ನು 'ಸಾಂಸ್ಥಿಕ ರೂಪ' (corporate work) ಎಂದೇ ಸ್ವೀಕರಿಸಲಾಯ್ತು. ಇದು ಸ್ಥಳೀಯ ಬೇಕು ಬೇಡಗಳಿಗೆ ಸರಿಯೋ, ತಪ್ಪೋ ಎಂಬ ಯೋಚನೆ ಯಾರನ್ನೂ ಭಾದಿಸಲೇ ಇಲ್ಲ.

ಸ್ವಾಸ್ಥ್ಯ ಸಂಬಂಧದ ಆಸ್ಪತ್ರೆಗಳು ಕೂಡಾ ಪಂಚತಾರ ಗುಣ ವಿಶೇಷಗಳನ್ನು ತಳೆದವು. ಉದಾ: ಅಪೋಲೋ ಮತ್ತು ಸಾಗರ್ ಆಸ್ಪತ್ರೆಗಳು. ಈ ಕಾರ್ಪೋರೇಟ್ ಆಸ್ಪತ್ರೆಗಳು (ಸಾಂಸ್ಥಿಕ ಆಸ್ಪತ್ರೆಗಳು) ಸ್ವಾಸ್ಥ್ಯಕ್ಕಿಂತ ಉದ್ದಿಮೆಗಳಂತೇ ನಡೆಯುವ ತತ್ವ ಆಧಾರಿತವಾದವು; ಅವು ಮಾರುಕಟ್ಟೆಯ ಬೇಡಿಕೆಗಳಿಗನುಗುಣವಾಗಿ ವರ್ತಿಸುತ್ತವೆ, ಲಾಭಗಳಿಕೆ ಒಂದು ಪ್ರಮುಖ ಅಂಶವಾಗುತ್ತದೆ. ಸರ್ಕಾರಿ ಕ್ಷೇತ್ರದ ಜಯದೇವ ಹೃದ್ರೋಗ ಆಸ್ಪತ್ರೆ ಕಾರ್ಯರೂಪಿ ತತ್ವಾಧಾರಿತ ವಿನ್ಯಾಸವಾದರೂ 70ರ ಹಾಗೂ 80ರ ದಶಕದ ಎಷ್ಟೋ ಆಸ್ಪತ್ರೆಗಳಿಗಿಂತ ಉತ್ತಮವಾಗಿ ಮೂಡಿ ಬಂದಿದೆ.

ಶೈಕ್ಷಣಿಕ ಸಂಸ್ಥೆಗಳೂ ಸಹ (ಹಲವು ಸಂಸ್ಥೆಗಳು) ಅಂತರಾಷ್ಟ್ರೀಯ ವಿನ್ಯಾಸ ಅಂಶಗಳನ್ನು ಅಳವಡಿಸಿಕೊಂಡವು. 90ರ ಉತ್ತರಾರ್ಧ ಮತ್ತು ಮುಂದೆ ಇವು ಕಾರ್ಪೋರೇಟ್ ಕಛೇರಿಗಳೇನೋ ಎಂಬ ಭಾವನೆಯನ್ನುಂಟು ಮಾಡುತ್ತವೆ.

ಸಮಾನಾಂತರವಾಗಿ ಪರಿಣಾಮಕಾರಿ (Cost-effective) ವೆಚ್ಚದ ಕಟ್ಟಡ ನಿರ್ಮಾಣ ಪ್ರಯೋಗಗಳು ಆರಂಭವಾಗಿದ್ದವು (80ರ ದಶಕದಿಂದಲೂ ಆರಂಭದ ಪ್ರಯತ್ನಗಳು ಕಾಣಸಿಗುತ್ತವೆ). ಇವು ಸ್ಥಳೀಯ ಹಾಗೂ ಪ್ರಾಂತೀಯ ರೀತಿ ನೀತಿಗಳನ್ನು ಅಳವಡಿಸುತ್ತವೆ. ಉದಾ ಅವೆ ಮಣ್ಣಿನ ಇಟ್ಟಿಗೆಗಳು. ಟೊಳ್ಳು ಗೂಡಿನ

ಇಟ್ಟಿಗೆಗಳು, ಗಾರೆಗಳು, ಹುಲ್ಲು ಛಾವಣಿ, ಸಿಮೆಂಟ್ ಹಾಗೂ ಸೂರಿಗೂ ಬಳಕೆಯಾಗುತ್ತವೆ. ವಾಸದ ಮನೆಗಳಲ್ಲಿ ಬಳಕೆಯಾದ ಬಳಿಕ ಈಗ ಬೇರೆ ಕಟ್ಟಡಗಳಲ್ಲೂ ಪ್ರಯೋಗಿಸಲಾಗುತ್ತಿವೆ ಪ್ಲಾಂಟೇಶನ್ ಮ್ಯಾನೆಜ್‌ಮೆಂಟ್ ಸಂಸ್ಥೆ (ಜ್ಞಾನ ಭಾರತಿ ಬಳಿ) ಅಥವಾ ಇನ್‌ಫೋಸಿಸ್‌ನ ಮೊದಲ ತಲೆಮಾರಿನ ಕಟ್ಟಡಗಳು (ಎಲೆಕ್ಟ್ರಾನಿಕ್ಸ್ ನಗರ) ಹಾಗೂ ಕೆಲವು ಕಟ್ಟಡಗಳು ಭಾರತೀಯ ವಿಜ್ಞಾನ ಸಂಸ್ಥೆ ಇವುಗಳಲ್ಲಿ ಕಾಣಸಿಗುತ್ತದೆ. ಹೊರಮೈಯಲ್ಲಿ ತೆರೆದ ಇಟ್ಟಿಗೆ ಕವಚದ ಆಚ್ಛಾದನೆ ಮೆಚ್ಚುವ ರೀತಿಯಲ್ಲಿ ಫಲಿತವಾಗಿದೆ.

ವೆಚ್ಚ ಪರಿಣಾಮಕಾರಿ ಕಟ್ಟುವಿಕೆಯಲ್ಲಿ ಹೊಸ ನಿರ್ಮಾಣ ರೀತಿಗಳು, ಸಮ್ಮಿಶ್ರ ಸಾಮಗ್ರಿಗಳು ಹಾಗೂ ಪ್ರಾಂತೀಯ ರೀತಿ ನೀತಿಗಳು ಎಲ್ಲವೂ ಮಿಳಿತವಾಗಿರುತ್ತವೆ. ಕೆಲ ರೀತಿಗಳು ಹೊರಗಡೆಯಿಂದಲೂ ಬಂದಿರಬಹುದು. ಆದರೆ ಅವು ವೆಚ್ಚ ಪರಿಣಾಮಕಾರಿಯಾಗಿರಬೇಕಷ್ಟೆ. ಆದರೆ ದೇಶಿಯ ಪದ್ಧತಿಗಳಲ್ಲಿ ಹೊರಗಿನ ರೀತಿಗಳನ್ನು ಅಳವಡಿಸುವುದು ಕಷ್ಟ. ಒಂದು, ಅನೂಚಾನವಾಗಿ ಬಂದಿರುವ ಪದ್ಧತಿ ಹಾಗೂ ಎರಡನೆಯದು ಆ ರೀತಿಗಳು ಅಲ್ಲಿನ ಸಾಮಗ್ರಿಗಳು ಅಲ್ಲಿನ ಸಾಂಸ್ಕೃತಿಕ ಅಂಶಗಳನ್ನೊಳಗೊಂಡಿರುತ್ತದೆ. ಹೀಗಾಗಿ ಹೊರಗಿನ ಅಂಶಗಳನ್ನು ಅವುಗಳ ಮೇಲೆ ಹೇರುವುದು ಸಮಂಜಸವಲ್ಲ ಮತ್ತು ಸೌಂದರ್ಯಕ್ಕೆ ಧಕ್ಕೆ ಬರಬಹುದು. ಈ ಪ್ರಯೋಗಶೀಲತೆಯ ಸಾಧ್ಯಾಸಾಧ್ಯತೆಗಳು ಮಾತ್ರ ಸಾಂದರ್ಭಿಕ ಅವಶ್ಯಕತೆಗಳನ್ನು ಅವಲಂಬಿಸಿರುತ್ತವೆ.

ಸತ್ಯಸಾಯಿ ಆಸ್ಪತ್ರೆ, ನಿವಾಸಿ ಶಾಲೆಗಳು ಉದಾ: ಬಿ.ಜಿ.ಎಸ್. ಅಂತರಾಷ್ಟ್ರೀಯ ಶಾಲೆಗಳಲ್ಲಿ ಇನ್ನೂ ವಿಧಾನಸೌಧದ ಪ್ರಭಾವ ನಿಚ್ಚಳವಾಗಿದೆ. ಇನ್ನೂ ಹಲವು ಶಾಲೆಗಳು ಗಾಂಭೀರ್ಯದ ಸಮಪಾರ್ಶ್ವದ ವಿನ್ಯಾಸಗಳಲ್ಲಿ ಪಾಶ್ಚಾತ್ಯ ರೀತಿಯಲ್ಲಿ ಅಥವಾ ಮುಂಚಿನ ನಿವಾಸಿ ಶಾಲೆಗಳ ಮಾದರಿಯನ್ನು ಅನುಕರಿಸಿವೆ. ಉದಾ: ಇಂಡಸ್ ಹಾಗೂ ಹಿಲ್‌ವ್ಯೂ ಅಂತರರಾಷ್ಟ್ರೀಯ ಶಾಲೆಗಳು (ಬೆಂಗಳೂರು ಹೊರ ವಲಯದಲ್ಲಿ). ಇತ್ತೀಚಿನ ಸರ್ಲಾಬಿರ್ಲಾ ಶಾಲೆ ಮಧ್ಯಕಾಲೀನ ಗಾಥಿಕ್ ಶೈಲಿಯಲ್ಲೇ ರಚಿತವಾಗಿವೆ. ಇಸ್ಕಾನ್ ದೇವಾಲಯ ಪಾರಂಪರಿಕತೆಯ ಜೊತೆಗೆ ಆಧುನಿಕತೆಯನ್ನು ಮೈಗೂಡಿಸಿಕೊಂಡಿದೆ ಗಾಜಿನ ಕವಚದ ಹೆಚ್ಚಳಿಕೆ ಅನೇಕ ಚರ್ಚುಗಳು. ಭಾರತೀಯ ಪರಿಭಾಷೆಯಲ್ಲಿ (ಅಂದರೆ ಗೋಪುರಗಳು, ಶಿಖರಗಳು, ವಿನ್ಯಾಸ ವಿತರಣೆ ನಕಾಶೆ), ಸಂಭಾಷಿಸಲು ಪ್ರಯತ್ನ ಮಾಡುತ್ತಿರುವುದು–ತನ್ನದೇ ಒಂದು ಹೊಸತನವನ್ನು ಸಾಧಿಸುವ ಹಂಬಲ ಗಮನಾರ್ಹವಾದುದು (ಮತ್ತೊಂದು ಆತಂಕಕಾರಿ ಬೆಳವಣಿಗೆ–ರಸ್ತೆ ಬದಿಯ ಗುಡಿಗಳು. ಎಲ್ಲೆಂದರಲ್ಲಿ ತಲೆಯೆತ್ತುತ್ತಿರುವ ಇವುಗಳ ವಿನ್ಯಾಸದಲ್ಲಾಗಲೀ, ಕಾರ್ಯರೂಪದಲ್ಲಾಗಲಿ, ಗಂಭೀರತನ ನಿರೀಕ್ಷಿಸುವುದು ಅಸಾಧ್ಯ; ಸಮಾಯಾನುಕೂಲತೆಯೇ ಪ್ರಧಾನ; ಇನ್ನೆಲ್ಲವೂ ಗೌಣ. ಹೊಸ ಲೀಲಾ ಪ್ಯಾಲೆಸ್ ಹೋಟೆಲ್ ಕೂಡಾ ವಿನ್ಯಾಸದಲ್ಲಿ ಭಾರತೀಯ ಪೋಷಾಕನ್ನೇ ಧರಿಸುತ್ತದೆ (ಇದು ಮೈಸೂರು ಅರಮನೆಯನ್ನೇ ಹೋಲುವ ರಚನೆ, ಆದರೆ ವಿನ್ಯಾಸಕಾರ ವಾಸ್ತುಶಿಲ್ಪಿಗಳು ಅಮೇರಿಕನ್ನರು).

ಇದಕ್ಕೆ ವಿರುದ್ಧವಾದ ಹಾಗೂ ಕಾರ್ಯಬಾಹುಳ್ಯದ ಕಟ್ಟಡ ಕಂಠೀರವ ಒಳಾಂಗಣ ಕ್ರೀಡಾಗಾರ. ಪೂರ ಕಾಂಕ್ರೀಟಿನ ಉಬ್ಬು–ತಗ್ಗಿನ ಮಡಚು ಕಾಂಕ್ರೀಟ್‌ನ ಕಲ್ಪನೆ. ಗಿಲಾವಿಲ್ಲದ ತೆರೆದ ಕಟ್ಟುವಿಕೆ. ಆಕೃತಿ ಮತ್ತು ಪೂರ್ಣಗೊಳ್ಳುವ ರೀತಿಯೇ ಅದಕ್ಕೇ ಸೌಂದರ್ಯ ನೀಡಬೇಕು.

ವ್ಯಾಪಾರೀ ಮಳಿಗೆಗಳಲ್ಲಿ ಶೀಘ್ರ ಮಾರ್ಪಾಟುಗಳಾಗುತ್ತಿವೆ–ದುಪ್ಪಟ್ಟು ಎತ್ತರದ ಮೊಗಸಾಲೆಗಳು, ಚಾಚಿದ ಅರ್ಧ ಮಾಳಿಗೆಗಳು, ಗಾಜಿನ ಲಿಫ್ಟ್‌ಗಳು, ವೀಕ್ಷಕ ವ್ಯಾಪಾರಿ ಗಾಜಿನ ಕಿಟಕಿಗಳು, ಸಮ್ಮಿಶ್ರ ಸಾಮಗ್ರಿಗಳ ಮೆಟ್ಟಿಲುಗಳು. ರಚನಿಕ ಗಾಜಿನ ಕವಚಗಳು (structural glazing) ಇಂದು ಇರಲೇಬೇಕಾದ ಅಂಶಗಳಾಗುತ್ತಿವೆ. 'ಮಾಲ್'ಗಳು ಮಿಕ್ಕೆಲ್ಲ ರೀತಿಯ ಮಳಿಗೆಗಳನ್ನು ನೇಪಥ್ಯಕ್ಕೆ ಸರಿಸಿವೆ. ಒಂದೇ ನಿಲುಗಡೆ (one stop) ಕಲ್ಪನೆ ಇಂದಿನ ಪರಿಭಾಷೆ ಉದಾ: ಬಿಗ್ ಬಜಾರ್, ಫ್ಯಾಬ್ ಮಾರ್ಟ್, ಶಾಪರ್ಸ್ ಸ್ಟಾಪ್–ವೈವಿಧ್ಯತೆಯಿಂದ ಗ್ರಾಹಕನನ್ನು ಮಂಕುಗೊಳಿಸುತ್ತವೆ.

ವ್ಯಾಪಾರೀ ಮಳಿಗೆಗಳು (shopping complexes) ಮತ್ತು ಮಾಹಿತಿ ತಂತ್ರಜ್ಞಾನದ ಕಟ್ಟಡಗಳ 'ಶೈಲಿ' ಅಂತರಾಷ್ಟ್ರೀಯ ಅಭಿರುಚಿಯನ್ನೇ ಅನುಕರಿಸುತ್ತದೆ. ಇಂದು ಅದು ಗಾಜು, ಲೋಹ ಇತ್ಯಾದಿ. ಮುಂದೇನೋ? ಬಲ್ಲವರ್‍ಯಾರು? ಬೆಚ್ಚಿಸುವ. ಅತಿರಂಜಿತ ಬೃಹದ್ ಕಟ್ಟಡಗಳು ದರ್ಶಕನನ್ನು ಕುಬ್ಜನನ್ನಾಗಿಸಿ ಧೃತಿಗೆಡಿಸುತ್ತವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ಮಿಂಚಿ, ಬೀಗಬೇಕೆಂಬ ಒತ್ತಡ ಇದಕ್ಕೆ ಕಾರಣವಿರಬಹುದು.

ನವ್ಯೋತ್ತರದ ಮುಂದಿನ ಬೆಳವಣಿಗೆ – 'ವಿರಚನಾ' ಶೈಲಿ (De-construction). ಅಲ್ಲಲ್ಲಿ ಕಾಣಿಸುತ್ತಿದೆ. ಈ ತತ್ವದ ಪ್ರತಿಪಾದಕನಾದ ಜಾಕುಸ್ ಡೇರಿಡನ ಪ್ರಕಾರ ಒಂದೇ ಸತ್ಯ ಬಹುಮುಖವಾದ ರೀತಿಯಲ್ಲಿ ಪ್ರಕಟಿತಗೊಳ್ಳಬಹುದು. ಸತ್ಯದ ಏಕಮುಖತೆಯೆಂಬುದು ಸಿದ್ಧಪಡಿಸಲಾಗದ ಸ್ಥಿತಿ. ಕಟ್ಟಡಗಳಲ್ಲಿ/ವಾಸ್ತು ಕಲೆಯಲ್ಲಿ ಇದರ ಪ್ರತಿಪಾದನೆ ವಿಚಿತ್ರ ರೀತಿಯಲ್ಲಿ ಮೂಡಿತು. ಅನೇಕ ರೀತಿಯ ಆಕೃತಿಗಳ ಒಟ್ಟುಗೂಡುವಿಕೆ (ಸಮ್ಮಿಳನಕ್ಕಿಂತ). ಅತಿ ರಂಜಿತ ವರ್ಣ ಸಂಯೋಜನೆ. ಮೊನಚಾದ ಕೋನಗಳ ಗೋಡೆಗಳು. ರಚನೆಯಲ್ಲಿ ಅನೇಕ ಸ್ಥಿರ ರೇಖೆಗಳ ಬಳಕೆ – (axle) ಇವುಗಳ ಸುತ್ತಲೋ ಅಥವಾ ಬದಿಯಲ್ಲೋ ಸಾಮಾನ್ಯವಾಗಿ ಕೋಣೆಗಳೋ/ಕಟ್ಟಡಗಳೋ ಜೋಡಿಸಲ್ಪಡುತ್ತದೆ. 'ಭ್ರಾಮಕತನದ ಬಾಹುಳ್ಯದ ಸಾಕಾರವೇ ಆಕಾರ' ಎಂಬ ಧೋರಣೆ ವಿನ್ಯಾಸಕ್ಕೆ ಆಧಾರ. ವಿನ್ಯಾಸದಲ್ಲಿ ಎಲ್ಲಕ್ಕೂ ಅರ್ಥವಿರಬೇಕಾಗಿಲ್ಲ. ದರ್ಶಕ ಅರ್ಥ 'ಹುಡುಕ' ಬೇಕಾಗುತ್ತದೆ. ದರ್ಶಕನನ್ನು ಗೊಂದಲಗೊಳಿಸಿ ಪ್ರಶ್ನಿಸುವ ಮನೋಭಾವ ಬೆಳೆಸುವುದು ಇದರ ಒಂದು ಉದ್ದೇಶ. ಸಂಯೋಜನೆ ನಿಸೂರಾಗಿ ಯಾ ಸರಳವಾಗಿರಬೇಕು ಎನ್ನುವುದು ಇಲ್ಲಿ ಪಥ್ಯವಾಗುವುದೇ ಇಲ್ಲ. ಅನೇಕಾಂತ ರೀತಿ ಇಲ್ಲಿನ ವಿಶೇಷ. ಘಟಕಗಳ ಘರ್ಷಣೆಯಿಂದ ಹೊರಹೊಮ್ಮುವ ಪ್ರಕ್ಷುಬ್ದ ಸ್ಥಿತಿ ಸಂಯೋಜನೆಯ ಮೂಲ. ಇದು ದರ್ಶಕನಿಗೂ ತಟ್ಟಿ ಆತ ತನ್ನ ನಿರ್ಲಿಪ್ತತೆಯಿಂದ ಹೊರಬಂದು ಎಲ್ಲವನ್ನೂ ಪ್ರಶ್ನಿಸುವಂತಾಗಬೇಕು ಎಂಬುದು ಇಲ್ಲಿ ಮುಖ್ಯ. ಉದಾ: ಕಾರ್ಲೇ ಕೈಗಾರಿಕೆ ಘಟಕದ ಮುಂಬದಿ (ತುಮಕೂರು ರಸ್ತೆ), ಪಕ್ಕದಲ್ಲಿನ ಪಾರ್ಲೆ ಘಟಕದ ಮುಂಬದಿ, ಬಿ.ಜಿ.ಎಸ್. ಪತ್ರಿಕೋದ್ಯಮ ಶಾಲೆ, ಕುಂಬಳಗೋಡು ಟೆಲೋನಿಯಾ ಮ್ಯೂಸಿಯಂ ಮುಂತಾದವು ಈ ಮನೋಭೂಮಿಕೆಯನ್ನಾಧರಿಸಿ (ಬಹುಪಾಲು) ರಚಿತವಾದವು.

ದೇಶೀಯ ಶೈಲಿ

ಬೇರುಗಳಿಂದ ದೂರವಾದ, ಪರದೇಶಿತನದ ಸಿನಿಕತೆ ಗಾಢವಾಗುತ್ತಿದ್ದಂತೆ ಮತ್ತು ಹೆಚ್ಚುತ್ತಿರುವ ಪರಿಸರ ಅವನತಿಯ ಬಗ್ಗೆ ಕಾಳಜಿ ಹಾಗೂ 'ವ್ಯಯಕಾರಿ' (consumerism) ಧೋರಣೆಗಳು ಅನೇಕರನ್ನು ಭಾದಿಸಿವೆ. ಇವಕ್ಕೆ ಪ್ರತಿರೋಧವಾಗಿ 'ದೇಶಿಯ ಜ್ಞಾನ'ದಲ್ಲಿ ಉತ್ತರಗಳನ್ನು ಅರಸುವಂತಾಗಿದೆ. ಪರಿಣಾಮಕಾರಿ ವೆಚ್ಚವಿಲ್ಲದ ಜೀವನ ಶೈಲಿಯಲ್ಲೂ ಈ ಕಾಳಜಿಗಳು ನಮಗೆ ಅನುರೂಪವಾದ ರೀತಿಯಲ್ಲಿ ಕ್ರಮೇಣ ವಿನ್ಯಾಸದಲ್ಲೂ ಹೊರಹೊಮ್ಮುತ್ತಿವೆ.

80ರ ಹಾಗೂ 90ರ ದಶಕಗಳಲ್ಲಿ ಅನೇಕರು ಉದ್ದೇಶಪೂರ್ವಕವಾಗಿ ಪ್ರಕೃತಿದತ್ತ ಸಾಮಗ್ರಿಗಳಾದ ಮರ, ಕಲ್ಲು, ಅವೇ/ಸುಟ್ಟಮಣ್ಣಿನ ಘಟಕಗಳನ್ನು ವಿನ್ಯಾಸದಲ್ಲಿ ಬಳಸಿದರು. ಮುಕ್ತ/ತೆರೆದ ವಿತರಣೆಯ ವಿನ್ಯಾಸ; ಉಕ್ಕು ಯಾ ಕಾಂಕ್ರೀಟಿನ ಮಿತ ಬಳಕೆ ಅಥವಾ ಅನುಪಯೋಗ; ಬೆಳಕು, ಮತ್ತು ಗಾಳಿಗೆ ಪ್ರಾಮುಖ್ಯತೆ; ಹಾಗೂ ಕಟ್ಟುವ ಕ್ರಮದಲ್ಲಿ ಸರಳತೆ ಮುಖ್ಯಾಂಶಗಳಾದವು.

ಒಳಾಂಗಣದಲ್ಲಿ ಪಾರಂಪರಿಕ ನೆಲದ ವಿನ್ಯಾಸ, ಗಿಲಾವಿಲ್ಲದ ಗೋಡೆಗಳು, ಸ್ಥಳೀಯ ಅಲಂಕಾರಿಕ ಗೃಹೋಪಯೋಗಿ ವಸ್ತುಗಳ ಬಳಕೆ, ಪೀಠೋಪಕರಣಗಳು, ಕರಕುಶಲ ಕೃತಿಗಳು, ಕೈಯ್ಯಚ್ಚಿನ ಮುದ್ರಿತ ಬಟ್ಟೆಗಳು/ವಸ್ತ್ರಗಳು ಮುಂತಾದವು ದೇಶೀಯತೆಯ / ಸ್ಥಳೀಯ ಭಾವನೆಯನ್ನು ಅಥವಾ ಭಾವುಕತೆಯನ್ನು ಪ್ರತಿನಿಧಿಸುತ್ತವೆ.

ಹವೆ, ಸ್ಥಳೀಯ ಸಾಮಗ್ರಿಗಳು, ಜೀವನ ಶೈಲಿಗಳು ಒಂದು ಸ್ಥಳದ ವಾಸ್ತುಕಲೆಯನ್ನು ರೂಪಿಸುತ್ತವೆ. ದೇಶಿಯ ಶೈಲೀ ಇವೇ ಗುಣಗಳನ್ನು ಪ್ರತಿಧ್ವನಿಸುತ್ತದೆ. ಸಾಮಾನ್ಯವಾಗಿ ಕಡಿಮೆ ಎತ್ತರದ ಬಹು ಕಾರ್ಯ ಬಾಹುಳ್ಯದ/ಬಹೂಪಯೋಗಿ ಸರಳ ರೂಪಿ ನೆಲೆಗಳನ್ನು (spaces) ಕಲ್ಪಿಸುತ್ತವೆ. ಮಂದಗತಿಯಾಧಾರಿತ ರಚನಾ ಕ್ರಮಗಳು-ಶೀತಲೀಕರಣದ ಕ್ರಮಗಳು ಉದಾ: ದಪ್ಪ ಗೋಡೆಗಳು, ಕಡಿಮೆ ದ್ವಾರಗಳು/ರಂಧ್ರಗಳು, ತಡಿಕೆಗಳನ್ನು ಒದ್ದೆಯಾಗಿರುಸುವಿಕೆ, ನೀರಿನ ಮರುಬಳಕೆ ಹಾಗೂ ಜಲಗ್ರಹಣ (water harvesting) ತಂತ್ರಗಳು, ಆಯ್ದ ಮರಗಿಡಗಳ ಸಂಯೋಜಿತ ಬಳಕೆ, ಬೆಳಕಿನ ಭಾವಿ (ಸೂರಿನಲ್ಲಿ ರಂಧ್ರಗಳು), ದುಪ್ಪಟ್ಟು ಎತ್ತರದ ನೆಲೆಗಳು (ಹಿತವಾದ ವಾತಾವರಣಕ್ಕೆ), ತೆರೆದ ಅಂಗಣಗಳು, ಭೂತಲದ ಕಟ್ಟುವಿಕೆ (earth sheltered construction) ವಾಯು ಸೆಳಕಗಳು (wind catchers) ಇತ್ಯಾದಿ ಹಿಂದಿನ ಗೃಹ ರಚನಾ ಕ್ರಮಗಳ ಪುನರ್ ಬಳಕೆಯಾಗುತ್ತಿದೆ.

ಅಸ್ತ್ರಾ (ಭಾ.ವಿ.ಸಂಸ್ಥೆ) ಬಹಳಷ್ಟು ಕೆಲಸ ಈ ದಿಶೆಯಲ್ಲಿ ಮಾಡಿದೆ. ಎರಡು ಸಾಂಸ್ಥಿಕ ಕಟ್ಟಡಗಳು ಉದಾ: ಟೆರಿ ಕಟ್ಟಡ (The Energy Research Institute) (ಚಂದಾ ವರ್ಕರ್ ಮತ್ತು ಥ್ಯಾಕರ್) ಮತ್ತು ಸಿ.ಐ.ಐ. ಕಟ್ಟಡ (ಕರಣ ಗ್ರೋವರ್-ವಾಸ್ತುಶಿಲ್ಪಿ) ಪ್ರಯತ್ನಪೂರಕವಾಗಿ ಮಂದಗತಿಯ ಶಕ್ತಿ ಬಳಕೆ ಕ್ರಮಗಳನ್ನು ದೇಶೀಯ ಕಟ್ಟಡ ಕ್ರಮಗಳ ಜೊತೆಗೆ ಜೋಡಿಸುವ ಕ್ರಮ ಕೈಗೊಂಡಿವೆ.

ಮತ್ತೆರಡು ಸಂಸ್ಥೆಗಳು ಇದೇ ಆಲೋಚನಾ ಕ್ರಮದಲ್ಲೇ ವಿನ್ಯಾಸ ವಿತರಣೆ ಸಾಧಿಸಿವೆ. ಹೆಸರುಘಟ್ಟದಲ್ಲಿರುವ ನೃತ್ಯ ಗ್ರಾಮ (ಜೆರಾರ್ಡ್ಡ ಕುನ್ಹಾ) 80ರ ದಶಕದಲ್ಲಿ ಇಂತಹ ಒಂದು ಪ್ರಯತ್ನ-ಸಂಪೂರ್ಣವಾಗಿ ಸ್ಥಳೀಯ ಕಲಾ ಕುಶಲತೆಗಳನ್ನು ಸಾಮಗ್ರಿಗಳನ್ನು ಬಳಸಿ ಮಾಡಿದೆ (ಮಣ್ಣು, ಕಲ್ಲು/ಇಟ್ಟಿಗೆ). ಇದೇ ರೀತಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿನ್ಯಾಸದಲ್ಲೂ (ಬೇರೆ ಬೇರೆ ಕಟ್ಟಡಗಳಲ್ಲಿ) ತರುಣ ವಾಸ್ತುಶಿಲ್ಪಿಗಳು 80ರ ದಶಕದಲ್ಲಿ ಅಲ್ಲಿನ ಪರಿಸರಕ್ಕೆ ಹೊಂದುವಂಥ, ಸಂವೇದನಾಶೀಲ ಕಟ್ಟಡಗಳನ್ನೇ ನಿರ್ಮಿಸಿದ್ದಾರೆ. ಸಭಾಂಗಣ, ವಿಭಾಗೀಯ ಕಟ್ಟಡಗಳು, ಮುಕ್ತ ಸಭಾಂಗಣ, ಮ್ಯೂಸಿಯಂ ಮೊದಲಾದವುಗಳು-ಒರಟು ಕಲ್ಲಿನ ಹೆಚ್ಚಿನ ಪ್ರಮಾಣದ ಬಳಕೆ, ಗಿಲಾವಿಲ್ಲದ ಗೋಡೆಗಳು.

ಸಂಪ್ರದಾಯದ ರೀತಿಯ ವಾಸ್ತು ಹಾಗೂ ಫೆಂಗ್ ಶ್ವೇ ಜನಪ್ರಿಯವಾದ ನಿಯೋಜನಾ ಪದ್ಧತಿಗಳು. ಅವುಗಳ ಸತ್ಯಾಸತ್ಯತೆ ಪ್ರಶ್ನಾರ್ಹವಾದರೂ ಅವುಗಳ ಜನಪ್ರಿಯತೆಯಂತೂ ನಿಚ್ಚಳ. ಹಲವು ಬಾರಿ ಮುಕ್ತ ವಿನ್ಯಾಸಕ್ಕೆ ಅಡಚಣೆಯಾಗುವ ಸಂಭವ ಬಹಳ. ಆದರೂ ವಾಸ್ತುಶಿಲ್ಪಿಗಳು ಗ್ರಾಹಕರ ಇಚ್ಛೆಗಳನ್ನು ವಿನ್ಯಾಸದಲ್ಲಿ (ವಾಸ್ತು ಸೇರಿ) ಅಳವಡಿಸಬೇಕಾಗುವುದು.

ಸಮಕಾಲೀನ ಶೈಲಿ – ಕ್ರಿ. ಶ. 2000 ಮುಂದೆ ಜಾಗತೀಕರಣ ತನ್ನ ಜೊತೆಯಲ್ಲೇ 'ಅಂತರಾಷ್ಟ್ರೀಯತೆ'ಯನ್ನು ವಿನ್ಯಾಸದಲ್ಲಿ ಅಂದರೆ ಮುಮ್ಮುಖದ ರಚನೆಗಳಲ್ಲಿ ಸೌಲಭ್ಯಗಳಲ್ಲಿನ ಮಟ್ಟದಲ್ಲಿ ನಿರೂಪಿಸಿತು. ಆದರೂ ಯಾವುದೇ ಒಂದು ಶೈಲಿ ಪ್ರಾಮುಖ್ಯತೆ ಸಾಧಿಸಿಲ್ಲ; ಅನೇಕ ಸಮಾನಾಂತರ ಆದರೇ ಕಾರ್ಯಬಾಹುಳ್ಯದ ಶೈಲಿಗಳು ಉಪಸ್ಥಿತಿಯಲ್ಲಿವೆ.

ವ್ಯಯಕಾರೀ ಚಿಂತನೆ ಹಾಗೂ ಕ್ಷಿಪ್ರ ಪ್ರತಿಫಲಾಪೇಕ್ಷೆಯ ಭಾವನೆ ಇಂದಿನ ಸತ್ಯ. ವಾಸ್ತುಶಿಲ್ಪ ಅದನ್ನೇ ಬಿಂಬಿಸುತ್ತದೆ. 'ಭೋಗಿಸು, ಬಿಸಾಡು' ಎಂಬ ಸಂಸ್ಕೃತಿ ಇಂದಿನದು. ವಿನ್ಯಾಸದಲ್ಲೂ ಇದೇ ಮನೋಭಾವ. ಕಟ್ಟಡಗಳು ಬಹುಕಾಲ ಬಾಳಬೇಕು ಎಂಬ ಧೋರಣೆ ಮರುಕ ಹುಟ್ಟಿಸುವಂತಾದ್ದು! ಅದೂ ವ್ಯಾಪಾರೀ ಮಳಿಗೆಗಳಲ್ಲಿ ಕಛೇರಿ ಕಟ್ಟಡಗಳಲ್ಲಿ ಅವುಗಳ 'ಆರ್ಥಿಕ ಆಯಸ್ಸು' ಜೀವಿತದ ಅವಧಿಯನ್ನು ನಿರ್ಧರಿಸುತ್ತದೆ. ಭಾವನೆಗಳಿಗೆ ಸಂವೇದನೆಗಳಿಗೆ ಇಲ್ಲಿ ಗೌಣವಾದ ಸ್ಥಾನ.

ಕಛೇರಿ ಸಂಕೀರ್ಣಗಳಲ್ಲಿ ಸಂಸ್ಥಾ ಮುಖ್ಯ ಕಛೇರಿಗಳಲ್ಲಿ ಮಾಹಿತಿ ತಂತ್ರಜ್ಞಾನ ಕಛೇರಿಗಳಲ್ಲಿ ಸಮಪಾರ್ಶ್ವತೆಯ ಗಾಜಿನ ಯಾ ಲೋಹ ಕವಚದ ಹೊರಮೈ ಅಥವಾ ನುಣುಪು ಗ್ರಾನೈಟ್ ಕಲ್ಲಿನ ಹೊದಿಕೆಯಾದಿ ಬಳಕೆ ಉದಾ: ಖನಿಜ ಭವನ (ರೇಸ್ ಕೋರ್ಸ್ ಬಳಿ), ವೈವಿಧ್ಯದ ಗಿಲಾವುಗಳ ಜೊತೆಗೆ ಬಣ್ಣಗಳ ಬಳಕೆ. ಅದರಂತೆ ವ್ಯಾಪಾರೀ ಮಳಿಗೆಗಳು. ಬೃಹತ್ ಹಾಗೂ ಅತಿ ಬೃಹತ್ ಗಾತ್ರಗಳೆಡೆ ಸಾಗುತ್ತಿವೆ. ಅಂಗಡಿಗಳ ಜೊತೆ ವ್ಯಾಪಾರೀ ಮಳಿಗೆಗಳು. ಮಲ್ಟಿಪ್ಲೆಕ್ಸ್‌ಗಳು, ಸಭಾಂಗಣಗಳು, ತಾರಾ ಹೋಟೆಲುಗಳು ಉಪಸ್ಥಿತವಿರುತ್ತವೆ ಉದಾ: ಸಿಗ್ಮಾ ಮಾಲ್, ಫ್ಯಾಬ್ ಮಾಲ್ ಇತ್ಯಾದಿ. ಇವುಗಳಲ್ಲಿ ಯಾವುದೇ ಶೈಲಿಯ ಕಟ್ಟುಪಾಡುಗಳು ಕಡಿಮೆ ಮುಕ್ತರೀತಿಯಲ್ಲಿ ಅನೇಕ ಅಂಶಗಳ ಹಾಗೂ ವಿವಿಧ ರೂಪಗಳ ಸಮ್ಮಿಶ್ರ ಪ್ರಯೋಗಶೀಲತೆ ಕಾಣುತ್ತೇವೆ. ಹಾಗಾಗಿ ಅವು ಸಾಂದರ್ಭಿಕತೆಯಲ್ಲಿ ಸೋಲುತ್ತವೆ.

ಸಿನಿಮಾ ಸಮುಚ್ಚಯ (multiplex) ಗಳು ಹಳೆಯ ಚಿತ್ರಮಂದಿರಗಳನ್ನು ಗೌಣವಾಗಿಸಿವೆ. ಟಿ. ವಿ. ವೀಡಿಯೋ ಚಿತ್ರಗಳಿಂದ ಮೊದಲಿನ ರೀತಿಯ ಬೃಹತ್ ಚಿತ್ರಮಂದಿರಗಳು ಮರೆಯಾಗುತ್ತಿವೆ. ಬದಲಾಗಿ ಸಣ್ಣ ಚಿತ್ರಮಂದಿರಗಳ ಸಂಖ್ಯೆ ಹೆಚ್ಚುತ್ತಿದೆ.

ಗೃಹ ವಿನ್ಯಾಸದಲ್ಲಿ ನವ ಪಾರಂಪರಿಕತೆಯ ನಕಲಿತನವೇ ಹೆಚ್ಚಾಗಿದೆ (ನೋಡಿ ಚಿತ್ರ 050). ಇಲ್ಲಾ ಕಾರ್ಯರೂಪಿ ಮನೆಗಳನ್ನು ಕಾಣುತ್ತೇವೆ. ವಿರಚನೆಯ ಪ್ರಯತ್ನಗಳು ನಡೆಯುತ್ತಿವೆ. ದೇಶಿಯ ವಿನ್ಯಾಸಗಳು ಗೃಹಗಳಲ್ಲಿ ಮೈದೋರುತ್ತಿವೆ. (ಸ್ಥಳೀಯ ಸಾಮಗ್ರಿಗಳೊಡನೆ). ಹೊಸ ವೈಪರೀತ್ಯವೆಂದರೆ 'ನಿರ್ಬಂದಿತ ಸಮುದಾಯಗಳು' (Gated communities). ವಿಶೇಷವಾಗಿ ಅನಿವಾಸಿ ಭಾರತೀಯ ಸಂಜಾತರಿಗಾಗಿ ಇವು ಪೂರ್ಣ ಪಾಶ್ಚಿಮಾತ್ಯ ಶೈಲಿಯ ವಿನ್ಯಾಸವನ್ನೇ ಹೋಲುವ ರಚನೆಗಳು – ಸ್ಥಳಾಂತರಿಸಿದ ವಿದೇಶಿ ನಕಲುಗಳು ಮಾಹಿತಿ ತಂತ್ರಜ್ಞಾನದವರಿಗಾಗಿ ನಗರಗಳೇ ಯೋಜಿತವಾಗುತ್ತಿವೆ.

ನವನವೀನ ಕಲ್ಪನೆಗಳೆಂದರೆ, ನಿರ್ಬಂದಿತ ಸಮುದಾಯಗಳು. ಇಟಲಿಯ ವೇನಿಸ್‌ನಂತೆ ಕಾಲುವೆ ಸುತ್ತ ಆವರಿಸುವ ಗೃಹಸ್ತೋಮ, ಅಲ್ಲಿನಂತೆ ಸೇತುವೆಗಳು. ತೆಪ್ಪಗಳೂ ಕೂಡ ಇರುತ್ತವೆ. ಸ್ವಯಂ ಆಡಳಿತದ ನಗರಗಳು ಮತ್ತು ಈಜಿಪ್ಟ್‌ನದೋ, ಸ್ಪೇಯಿನಿನದೋ, ಸ್ವಿಟ್ಜರ್‌ಲ್ಯಾಂಡಿನದೋ ರೂಪಾಂತರಗಳನ್ನು ಇಲ್ಲಿ ಸೃಷ್ಟಿಸುವುದು. ಆದರೆ ಇವೆಲ್ಲಾ ಸಿರಿವಂತರಿಗೆ ಮಾತ್ರ ಮೀಸಲು.

ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಕಲಾ ಸಂಸ್ಥೆಗಳಲ್ಲಿ ಹಾಗೂ ಧಾರ್ಮಿಕ ಕಟ್ಟಡಗಳಲ್ಲಿ ಉದಾ: ದೇವಸ್ಥಾನಗಳು ಹಾಗೂ ಮಠಗಳು, ಪರಂಪರಾಗತ ಶೈಲಿ ಮುಂದುವರೆದಿದೆ. ಉದಾ: ಚಿತ್ರ 053 ಬಿ.ಜಿ.ಎಸ್. ಅಂತರಾಷ್ಟ್ರೀಯ ಶಾಲೆ, ಸರಳ ಬಿರ್ಲಾ ಶಾಲೆ ಕಲಾ ಸಂಸ್ತೆ ಉದಾ: ಪುರಂದರ ಮಂಟಪ, ಇಂದಿರಾನಗರ ಅಥವಾ ಶಿಕ್ಷಣದಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ. ಶ್ರೀ ರವಿಶಂಕರ ಪ್ರಾರ್ಥನಾ ಮಂದಿರ, ಕನ್ನಡ ಭವನ.

ಹೊಸ ಅನುಕೂಲತೆಗಳಾದ ಕ್ರೀಡಾ ಸಂಕೀರ್ಣಗಳು, ವಾಹನಗಳ ತಂಗುದಾಣ ಸಂಕೀರ್ಣ (parking lot). ಬಸ್‌ನಿಲ್ದಾಣಗಳು, ಹರಿಶ್ಚಂದ್ರ ಘಾಟ್‌ಗಳು (ದಹನಾಗಾರಗಳು) ಕಾರ್ಯಕ್ಕೆ ತಕ್ಕಂತೆ ರೂಪಗೊಳ್ಳುತ್ತಿವೆ. ಇಲ್ಲಿ ಶೈಲಿಯ ಸಮಸ್ಯೆ ಅಷ್ಟಿಲ್ಲ. ಶೃಂಗಾರದಂಗಣಗಳು (Beauty parlours) ಜೀವನ ಶೈಲಿ ಕ್ಲಿನಿಕ್ಕುಗಳು ವಾಹನ ವ್ಯಾಪಾರೀ ಮಳಿಗೆಗಳು, ಸೈಬರ್ ಕೆಫೆಗಳು, ಪಿಜ್ಜಾ ಮೂಲೆಗಳು (Pizza corners) ಕ್ಲಬ್ಬುಗಳು, ಕಾಫೀ ಕೆಫೆಗಳಲ್ಲಿ ಶೈಲಿಯ ನಿರ್ಬಂದದ ಬಾಧಕವಿಲ್ಲ. ಮುಕ್ತತೆ ಹಾಗೂ ಪ್ರಚಲಿತ ರೀತಿ ನೀತಿಗಳು, ಮಾರುಕಟ್ಟೆ ನಿರ್ಧಾರಿತ ಅಂಶಗಳೇ ರೂಪ ನಿರ್ಧರಿಸುವುವು. ಉದಾ: ಈಗ ಬರುತ್ತಿರುವ 'ಮಲ್ಯ ಆರ್ಕಿಡ್' (ವಿಜಯಮಲ್ಯ ರಸ್ತೆ) – ನಾನಾ ವಿಧದ ಆಕೃತಿಗಳ ಸಮಾವೇಶದ ಕಲ್ಪನೆ (ಸಂಗತೀ ಅಥವಾ ಅಸಂಗತದ ಪ್ರಶ್ನೆ ಬೇರೆಯದು).

ಕೈಗಾರಿಕಾ ಕಟ್ಟಡಗಳೂ ಸಹ ಪ್ರಯೋಗಶೀಲತೆ ಅಳವಡಿಸಿಕೊಳ್ಳುತ್ತಿವೆ. ಉದಾ: ಹೊಸಕೋಟೆಯ ಕೈಗಾರಿಕೆ ಘಟಕ, ಬಿಡದಿ ಘಟಕ ಇತ್ಯಾದಿ. ಸೂರಿನಾಕೃತಿಗಳಲ್ಲಿ ಕಂಭ-ತೊಲೆಗಳ ವಿನ್ಯಾಸದಲ್ಲಿ ಮುಕ್ತ ಒಳಾಂಗಣಗಳಲ್ಲಿ ಹೊಸ ಅವಿಷ್ಕಾರಗಳಾಗುತ್ತಿವೆ. ಉದಾ: ಕಾರ್ಲೆ ಘಟಕ. ಹಿಮಾಲಯ ಘಟಕ, ಗೋಕಲ್‌ದಾಸ್ ಘಟಕ ಇತ್ಯಾದಿ.

ಖಾಸಗೀ ಕ್ಷೇತ್ರದ ಅಳಿವು-ಉಳಿವುಗಳು ಹೊಸತನವೇ ಮುಂತಾದ ಜನಾಕರ್ಷಕ ಅಂಶಗಳ ಮೇಲೆ ನಿಂತಿರುತ್ತವೆ. ಇಂಥಾ ಸ್ಥಿತಿ ಸರ್ಕಾರೀ ಕ್ಷೇತ್ರಕ್ಕಿಲ್ಲ. ಹಾಗಾಗಿ, ಸರ್ಕಾರಿ ಕಟ್ಟಡಗಳು 'ವಿಧಾನಸೌಧ'ದ ಚೌಕಟ್ಟಿನಿಂದ ಹೊರಬರಲಾಗದ ಸ್ಥಿತಿಯಲ್ಲಿವೆ. ಇದಕ್ಕೆ ಸಮನಾದ ಸಮರ್ಥವಾದ ಮಾದರಿಗಳೇ ಕಾಣುತ್ತಿಲ್ಲ. ಇಂದಿನ ವಿಕಾಸಸೌಧ, ಹೊಸ ಮುಖ್ಯ ನ್ಯಾಯಾಲಯದ ವಿಭಾಗೀಯ ಪೀಠದ ಕಲ್ಪನೆ. ಜಿಲ್ಲೆಗಳಲ್ಲಿನ ಮಿನಿ (ಕಿರು) ವಿಧಾನಸೌಧಗಳು ಮೂಲದ ಮಟ್ಟಕ್ಕೆ ಏರಲಾಗದೇ ಪೇಲವ ಪ್ರತಿಕೃತಿಗಳಾಗಿ ಮಾತ್ರ ಉಳಿಯುತ್ತವೆ. ವಿನ್ಯಾಸದಲ್ಲಿನ ನಿರ್ಭಂಧತೆ ಎದ್ದು ಕಾಣುತ್ತದೆ.

ಗಾಜು, ಲೋಹದ ಹೊಂದಿಕೆಗಳು, ನುಣುಪುಕಲ್ಲಿನ ಹೊದಿಕೆ. ಗಾಢ ವರ್ಣಗಳು, ಮಡಚು ಹಾಳೆ, ವಕ್ರಗತಿಯ ಹಾಗೂ ಸಂಮಿಶ್ರದ ಸಾಮಗ್ರಿಗಳ ಮೆಟ್ಟಿಲುಗಳು. ಗಾಜಿನ ಇಟ್ಟಿಗೆಗಳು. ಪಾಲಿ ಕಾರ್ಬೋನೇಟ್ ಹಾಳೆಗಳು, ಲಘು ಸೂರಿನ ಜಾಲಗಳು ಉದಾ: ಕೊಳವೆಗಳ ಚೌಕಟ್ಟು (Space frame). ಎಳೆತದಲ್ಲಿರುವ ವಸ್ತ್ರದ ಸೂರುಗಳು ಅಥವಾ ಗಾಜಿನ / ಪ್ಲಾಸ್ಟಿಕ್ಕಿನವು ಇತ್ಯಾದಿ. ಲಘು ತೊಲೆಗಳು (ರಂಧ್ರಗಳಿರುವ), ಲೋಹದ ಕಂಭಗಳು ಕಾಂಕ್ರೀಟಿನ ಚಿಪ್ಪು ರಚನೆಗಳು (Shells), ಫೆರ್ರೋ ಸಿಮೆಂಟ್ ಹಾಳೆಗಳು (ಲೋಹದ ಜಾಲರಿಯನ್ನು ಆವರಿಸಿದ ಸಿಮೆಂಟ್ ಹಾಳೆ), ಲೋಹದ ಯಾ ಕಾಂಕ್ರೀಟಿನ ಛಾಯಾ ಚಪ್ಪರಗಳು (ದುಪ್ಪಟ್ಟು ಎತ್ತರದ ಜಾಲಂಧ್ರಗಳು), (Pergolas), 60ರ ಹಾಗೂ 70ತ್ತರ ನೆಳಲು ಚಜ್ಜಾಗಳನ್ನು ಬೇಡವಾಗಿಸಿದ ಬಣ್ಣದ ಗಾಜು, ಹಗುರ ಗಾತ್ರದ ಚಾಚು ದೂಲಗಳು, ವೈವಿಧ್ಯಮಯ ಬೆಳಕಿನ ಸಂಯೋಜನೆ, ಕಂಚು, ತಾಮ್ರ ಹಾಗೂ ಸಮ್ಮಿಶ್ರ ಧಾತುಗಳ, ಉಕ್ಕಿನ ಕೊಳವೆಗಳ ಯಾ ಹಾಳೆಗಳ ಬಳಕೆ-ಇವೆಲ್ಲವುಗಳ ಸಮ್ಮಿಶ್ರ ಪ್ರಯೋಗಗಳು. ಯಾವ ಶೈಲಿಯ ಇತಿಮಿತಿಗಳಿಗೂ ಒಳಗಾಗದೆ ಮುಕ್ತತೆಯನ್ನು ಸಾಧಿಸುತ್ತದೆ. ಉದಾ: ಬನ್ನೇರುಘಟ್ಟ ರಸ್ತೆ ಬದಿಯ ಕಟ್ಟಡಗಳು ಅಥವಾ ಶಿಕ್ಷಕರ ಸದನ.

ಬಹುಶಃ ಇನ್ನೆರಡು/ಮೂರು ದಶಕಗಳ ನಂತರ ಈ ರಚನೆಗಳ ಬಗ್ಗೆ, ಅವುಗಳ ಸಾಧಕ-ಬಾಧಕಗಳ ಬಗ್ಗೆ ತೆರೆದ ಮನಸ್ಸಿನಿಂದ ಚರ್ಚೆ ಮಾಡಲು ಸಾಧ್ಯವಾಗಬಹುದು.

39. ಬೆಂಗಳೂರಿನ ಚರ್ಚುಗಳು

ಶ್ರೀ ಸಿ. ಮರಿಜೋಸೆಫ್

ಪ್ರಸ್ತಾವನೆ :

ಇಂದಿಗೆ ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಯೇಸುಕ್ರಿಸ್ತನು ಯೆಹೂದ್ಯ ನಾಡಿನಲ್ಲಿ ಜೀವಿಸಿದ್ದ. ಆ ಸಂದರ್ಭದಲ್ಲಿ ಅವನ ದೇಶವು ಪರಕೀಯರಾದ ರೋಮನ್ನರ ಆಳ್ವಿಕೆಯಲ್ಲಿ ನಲುಗುತ್ತಿತ್ತು. ದೇಶೀಯರು ಸ್ವತಂತ್ರರಾಗಲೆತ್ನಿಸುವ ಆ ಗುಲಾಮಗಿರಿಯ ದಿನಗಳಲ್ಲಿ ಯುವಕ ಯೇಸುವಿನ ವಿಚಾರಪ್ರದ ಮಾತುಗಳು ಅಲ್ಲಿನ ಜನರಲ್ಲಿ ಹೊಸ ಆಶಾಭಾವನೆ ಮೂಡಿಸಿದ್ದವು. ಆದರೆ ಆ ಸ್ವಾತಂತ್ರ್ಯ ಚಳವಳಿಯ ನೇತಾರನಾಗುವ ಬದಲಿಗೆ ಯೇಸುಕ್ರಿಸ್ತ ತನ್ನ ಜನರ ಮೌಢ್ಯದ ದಾಸ್ಯವನ್ನು ಕಿತ್ತೊಗೆಯಲು ಶ್ರಮಿಸುತ್ತಾನೆ. ಅವನ ಕಣ್ಣಿಗೆ ಬಡವ ಬಲ್ಲಿದ ಮೇಲು ಕೀಳೆಂಬ ತಾರತಮ್ಯ ಭಾವಗಳು, ಡಾಂಭಿಕ ಆಚರಣೆಗಳು, ಮೂಢ ಸಂಪ್ರದಾಯಗಳು, ಹಲ್ಲಿಗೆ ಹಲ್ಲು ಕಣ್ಣಿಗೆ ಕಣ್ಣೆಂಬ ಕ್ರೂರ ನೀತಿಸಂಹಿತೆಗಳು ಕಾಣುತ್ತವೆ. ಇವೆಲ್ಲವನ್ನೂ ಧಿಕ್ಕರಿಸುವ ಆತ ಎಲ್ಲ ಮಾನವರೂ ರಾಜಕುಮಾರರೆನಿಸುವ ಒಂದು ದೈವೀ ರಾಜ್ಯದ ಕನಸು ಕಾಣುತ್ತಾನೆ. ಅವನಿಗೆ ಬಹಿರಂಗ ಮರಣದಂಡನೆ ನೀಡಿ ಕೊಲ್ಲುತ್ತಾರೆ.

ಅದಾದ ನಂತರ ಯೇಸುಕ್ರಿಸ್ತನ ಬಗ್ಗೆ ಅಭಿಮಾನ ಅನುಕಂಪ ಹೊಂದಿದ್ದವರೆಲ್ಲ ಒಟ್ಟು ಸೇರಿ ಅವನ ಮಾತುಗಳನ್ನು ಮೆಲುಕು ಹಾಕುತ್ತಾ ಅವಕ್ಕೆ ನಾನಾರ್ಥಗಳನ್ನು ಕಲ್ಪಿಸುತ್ತಾ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾ ಸಂಘಟಿತರಾಗುತ್ತಾರೆ. ಯಾರದಾದರೂ ಮನೆಯಲ್ಲಿ ವಾರಕ್ಕೊಮ್ಮೆ ಇಂಥ ಸಂಮಿಲನಗಳು ನಡೆಯುತ್ತಿದ್ದವು. ಅಲ್ಲಿ ಅವರೆಲ್ಲ ಯೇಸುಕ್ರಿಸ್ತನ ವಿಚಾರಧಾರೆಗಳೊಂದಿಗೆ ತಮ್ಮ ಬುತ್ತಿಗಳನ್ನೂ, ಕಷ್ಟಸುಖಗಳನ್ನೂ ಹಣಕಾಸನ್ನೂ ಹಂಚಿಕೊಳ್ಳುತ್ತಿದ್ದರು. ಪರಸ್ಪರ ಹಂಚಿಕೊಳ್ಳುವ ಈ ಸಂಸರ್ಗದ ಕೂಟವನ್ನು ಚರ್ಚ್ ಎಂದು ಕರೆಯಲಾಗುತ್ತಿತ್ತು. ಅದು ಸಿಮೋನನ ಮನೆಯಲ್ಲಿ ನಡೆದರೆ ಸಿಮೋನನ ಚರ್ಚು, ಪೌಲನ ಮನೆಯಲಿ ನಡೆದರೆ ಪೌಲನ ಚರ್ಚು ಹೀಗೆ. ಸ್ಥೂಲಾರ್ಥದಲ್ಲಿ ಚರ್ಚ್ ಎಂದರೆ ಕೂಟ, ಸಭೆ ಎಂದರ್ಥ, ಕಾಲಾನಂತರದಲ್ಲಿ ಚರ್ಚು ಎಂಬ ಹೆಸರನ್ನು ಈ ಸಭೆ ನಡೆಯುವ ಮನೆ ಅಥವಾ ಕಟ್ಟಡಕ್ಕೆ ಹೆಸರಿಸಲಾಗಿದೆ.

ನನ್ನ ಈ ಪ್ರಬಂಧದ ಶೀರ್ಷಿಕೆಯು 'ಬೆಂಗಳೂರಿನ ಚರ್ಚುಗಳು' ಎಂದಿದ್ದು, ಇದನ್ನು ಚರ್ಚ್ ಕಟ್ಟಡಗಳು ಎಂಬ ಸ್ಥೂಲಾರ್ಥದಲ್ಲಿ ಪರಿಭಾವಿಸಿಕೊಂಡು ನನ್ನ ಅಧ್ಯಯನದ ಮಾತುಗಳನ್ನು ಐತಿಹಾಸಿಕವಾಗಿ ಮಹತ್ವದ್ದಾಗಿಯೂ ವಾಸ್ತು ವಿನ್ಯಾಸದಲ್ಲಿ ಮನಸೂರೆಗೊಳ್ಳುವಂತವೂ ಆಗಿರುವ ಕೆಲ ಚರ್ಚುಗಳನ್ನಷ್ಟೇ ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಬೆಂಗಳೂರಿನ ಚರ್ಚುಗಳನ್ನು ಚಾರಿತ್ರಿಕ ಕಾಲಘಟ್ಟಗಳನ್ವಯ ವಿಂಗಡಿಸುವುದಾದರೆ ಕಲಾಸಿಪಾಳ್ಯದ ಚರ್ಚನ್ನು ಮೊದಲ ಚರ್ಚು ಎಂದು ಪರಿಗಣಿಸಬಹುದಾಗಿದೆ. ಕ್ರಿಸ್ತಶಕ 1648ರಲ್ಲಿ ಅಂದಿನ ಮೈಸೂರು ದೇಶದ ರಾಜಧಾನಿಯಾದ ಶ್ರೀರಂಗಪಟ್ಟಣಕ್ಕೆ ಕ್ರೈಸ್ತಧರ್ಮ ಕಾಲಿರಿಸಿದಾಗ ಬೆಂಗಳೂರು ಹೇಳಿಕೊಳ್ಳುವಂಥ ದೊಡ್ಡ ಪಟ್ಟಣವೇನೂ ಆಗಿರಲಿಲ್ಲ. ಸುಮಾರು ಕ್ರಿಸ್ತಶಕ 1724ರಲ್ಲಿ ಕಲಾಸಿಪಾಳ್ಯದಲ್ಲಿ ಬೆಂಗಳೂರಿನ ಮೊತ್ತಮೊದಲ ಚರ್ಚನ್ನು ಕಟ್ಟಲಾಗಿತ್ತು. ದುರದೃಷ್ಟವೆಂದರೆ ಇಂದು ಆ ಚರ್ಚು ಅಸ್ತಿತ್ವದಲ್ಲಿಲ್ಲ. ಅದರಂತೆಯೇ ಅನ್ನಮ್ಮ ಬೆಟ್ಟದ ಬುಡದಲ್ಲಿನ ಉತ್ತರಹಳ್ಳಿ

ಚರ್ಚು, ಹಲಸೂರಿನ ಕೆರೆ ಕೋಡಿ ಬಳಿಯ ಗುರುದ್ವಾರದ ಬಳಿಯಿದ್ದ ಚರ್ಚು ಮುಂತಾದವುಗಳು ಒಂದಿಷ್ಟೂ ಕುರುಹು ಇಲ್ಲದಂತೆ ಮಾಯವಾಗಿವೆ.

ಆನಂತರದ ದಿನಗಳಲ್ಲಿ ಕಟ್ಟಿದ ಚರ್ಚುಗಳೆಲ್ಲವೂ ಭದ್ರವಾಗಿ ಉಳಿದುಕೊಂಡಿವೆ ಮಾತ್ರವಲ್ಲ ಎಂದಿಗೂ ಸಾಮಾಜಿಕ ಸಂಘರ್ಷಕ್ಕೆ ಈಡಾಗದೆ ಸುಂದರ ಇತಿಹಾಸ ಹೊಂದಿವೆ. ಆ ದಿನಗಳಲ್ಲಿ ಬೆಂಗಳೂರು ಬ್ರಿಟಿಷರ ಸೇನಾ ನೆಲೆಯಾಗಿತ್ತು ಎಂಬ ಕಾರಣದಿಂದ ಕ್ರೈಸ್ತ ಧಾರ್ಮಿಕ ಕೇಂದ್ರಗಳಿಗೆ ವಿಶೇಷ ನೆರವು ದೊರೆಯಿತೆನ್ನುವುದು ತಪ್ಪಾಗುತ್ತದೆ. ಆದರೆ ಧರ್ಮ ನಿರಪೇಕ್ಷಿಗಳಾಗಿದ್ದ ಬ್ರಿಟಿಷರು ಧರ್ಮಭೀರುಗಳಿಗೆ ಯಾವ ತೊಂದರೆಯನ್ನೂ ಮಾಡಲಿಲ್ಲ ಹಾಗೂ ಅದೇ ವೇಳೆಯಲ್ಲಿ ಚರ್ಚುಗಳ ನಿರ್ಮಾಣಕ್ಕೆಂದು ಹಣಕಾಸಿನ ನೆರವನ್ನೂ ನೀಡಲಿಲ್ಲವೆಂಬುದು ಅಷ್ಟೇ ಸತ್ಯ. ಅವರ ರಾಜಕೀಯ ವೈರಿಗಳಾಗಿದ್ದ ಫ್ರೆಂಚರು ಪಾಂಡಿಚೇರಿಯಲ್ಲಿ ವಸಾಹತು ಹೂಡಿ ಬೆಂಗಳೂರಿನಂತ ನಗರಗಳಲ್ಲಿ ಚರ್ಚುಗಳನ್ನು ಕಟ್ಟಿದ್ದು ಬ್ರಿಟಿಷರ ಧರ್ಮನಿರಪೇಕ್ಷತೆಗೆ ಸಾಕ್ಷಿಯಾಗಿವೆ.

ಬೆಂಗಳೂರು ನಗರದಲ್ಲಿ ಸ್ಥೂಲವಾಗಿ ನಾಲ್ಕು ಕಾಲಘಟ್ಟಗಳಿಗೆ ಸೇರಿದ ಚರ್ಚುಗಳನ್ನು ಗುರುತಿಸಬಹುದಾಗಿದೆ.

1. ಮೊತ್ತಮೊದಲ ಧರ್ಮಪ್ರಚಾರ ನಡೆಸಿದ ಜೆಸ್ವಿತ್ ಮಿಷನರಿಗಳು ಕಟ್ಟಿದ ಧಾರ್ಮಿಕ ಕೇಂದ್ರಗಳ ಪಳೆಯುಳಿಕೆಗಳು.
2. ಟಿಪ್ಪುವಿನ ನಂತರ ಬಂದ ಫ್ರೆಂಚ್ ವಸಾಹತುವಿನಿಂದ ಪೋಷಿತರಾದ ಎಂಇಪಿ ಸಂಸ್ಥೆಯು ಕಟ್ಟಿಸಿದ ಚರ್ಚುಗಳು
3. ಬ್ರಿಟಿಷ್ ಸೇನಾನೆಲೆಯಲ್ಲಿದ್ದ ಆಂಗ್ಲಿಕನ್ ಮತ್ತು ಸ್ಕಾಟಿಷ್ ಧರ್ಮಭೀರುಗಳು ಕಟ್ಟಿಕೊಂಡ ಚರ್ಚುಗಳು.
4. ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಕ್ರೈಸ್ತ ಧರ್ಮದ ವಿವಿಧ ಪಂಥಗಳು ಕಟ್ಟಿಕೊಂಡ ಚರ್ಚುಗಳು

ಜೆಸ್ವಿತ್ ಮಿಷನರಿಗಳು ಕಟ್ಟಿದ ಧಾರ್ಮಿಕ ಕೇಂದ್ರಗಳ ಪಳೆಯುಳಿಕೆಗಳು

2.1 ಕ್ರಿಸ್ತ ಶಕ 1648ರಲ್ಲಿ ಕ್ರೈಸ್ತಧರ್ಮವು ಶ್ರೀರಂಗಪಟ್ಟಣವನ್ನು ಪ್ರವೇಶಿಸಿ ಮೈಸೂರು ಮಿಷನ್ ಸ್ಥಾಪನೆಯಾಗುವ ಮುನ್ನವೇ ತಮಿಳುನಾಡಿನಲ್ಲಿ ಮಧುರಾ ಮಿಷನ್ ಸ್ಥಾಪನೆಯಾಗಿ ಅಲ್ಲೆಲ್ಲಾ ಕ್ರೈಸ್ತಧರ್ಮ ಪಸರಿಸಿತ್ತು. ಬೆಂಗಳೂರಿಗೆ ತಮಿಳುನಾಡಿನ ಸಂಪರ್ಕದ ಕಾರಣದಿಂದಲ್ಲದೆ ಅಂದು ಮೈಸೂರು ಪ್ರಾಂತ್ಯದ ಭಾಗವೇ ಆಗಿದ್ದು ಈಗ ತಮಿಳುನಾಡಿಗೆ ಸೇರಿಹೋಗಿರುವ ಕೊಯಿಮತ್ತೂರು, ಸೇಲಂ, ಧರ್ಮಪುರಿ ಜಿಲ್ಲೆಗಳ ಮೂಲಕ ಕ್ರೈಸ್ತಧರ್ಮವು ಬೆಂಗಳೂರನ್ನು ಮೈಸೂರಿಗೂ ಮುನ್ನವೇ ಪ್ರವೇಶಿಸಿತ್ತು. ಹೀಗಾಗಿ ಬೆಂಗಳೂರಿನ ಆನೇಕಲ್ಲು, ಬೇಗೂರು, ಬನ್ನೇರುಘಟ್ಟದ ಬಳಿಯಿರುವ ಕಾಮನಹಳ್ಳಿ, ಕನಕಪುರ ರಸ್ತೆಯಲ್ಲಿರುವ ಸೋಮನಹಳ್ಳಿ, ಮುಂತಾದೆಡೆಗಳಲ್ಲಿ ಮಿಷನ್ ಕೇಂದ್ರಗಳಿದ್ದವು. ಕುತೂಹಲದ ಸಂಗತಿಯೆಂದರೆ 14ನೇ ಶತಮಾನದಲ್ಲಿ ಆನೇಕಲ್ಲು ಮಾರ್ಗವಾಗಿ ಸಂಚರಿಸುತ್ತಿದ್ದ ಡೊಮಿನಿಕನ್ಸ್ ಆನೇಕಲ್ಲಿನಲ್ಲಿ ಮಿಷನ್ ಕೇಂದ್ರ ಹೊಂದಿದ್ದರು.

ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ ಬೇಗೂರಿನ ಕ್ರೈಸ್ತರ ಇತಿಹಾಸ ಸುಮಾರು 370 ವರ್ಷಗಳಿಗೂ ಹಿಂದಕ್ಕೆ ಸಾಗುತ್ತದೆ. ಜೆಸ್ವಿತರ ನೇತಾರನಾದ ಇಗ್ನೇಷಿಯಸರ ಸ್ಮರಣೆಗಾಗಿ ಈ ಚರ್ಚಿಗೆ ಅವರ ಹೆಸರನ್ನೇ ಇಡಲಾಗಿದೆ. ಆದರೆ ಜೆಸ್ವಿತರ ನಿರ್ಗಮನದ ನಂತರ ತೀವ್ರವಾಗಿ ತತ್ತರಿಸಿದ ಇಲ್ಲಿನ ಕ್ರೈಸ್ತ ಸಮುದಾಯವು 1847ರಲ್ಲಿ ಫ್ರೆಂಚ್ ಪಾದ್ರಿ ಜಾರಿಗೆ ಎಂಬುವರಿಂದ ಪುನಶ್ಚೇತನ ಪಡೆದಂತೆ ತೋರುತ್ತದೆ. ಈಗ ಇಲ್ಲಿರುವ ಚರ್ಚನ್ನು 1960ರ ದಶಕದಲ್ಲಿ ಸ್ಥಳೀಯ ಕಲ್ಲುಗಳಿಂದ ಕಟ್ಟಲಾಗಿದೆಯಲ್ಲದೆ ನೆಲಹಾಸು ಕೂಡ ಕಲ್ಲಿನದೇ ಆಗಿದೆ.

ಬನ್ನೇರುಘಟ್ಟ ರಸ್ತೆಯಲ್ಲಿರುವ ಗೊಟ್ಟಿಗೆರೆ ಒಳದಾರಿಯಲ್ಲಿ ಸಿಗುವ ಕಾಮನಹಳ್ಳಿ, ಅಥವಾ ದೊಡ್ಡಕಮ್ಮನಹಳ್ಳಿಯ ಚರ್ಚು ಸಹ ಜೆಸ್ವಿತ್ ಮಿಷನ್ ಕೇಂದ್ರದ ಮುಂದುವರಿದ ಕಟ್ಟಡವಾಗಿದೆ. ಬಹುಪಾಲು ಶಿಥಿಲಗೊಂಡಿದ್ದ ಈ ಚರ್ಚನ್ನು ಜೀರ್ಣೋದ್ಧಾರ ಮಾಡಿ ನವೀಕರಿಸಲಾಗಿದೆ.

ಎಂಇಪಿ ಸಂಸ್ಥೆಯು ಕಟ್ಟಿಸಿದ ಚರ್ಚುಗಳು

1. ಸಂತ ಮೇರಿ ಚರ್ಚು

ಎಂಇಪಿ (ಫ್ರಾನ್ಸ್ ದೇಶದ ಮಿಸಿಯೋ ಎತ್ರಾಂಜೇರ್‌ದ ಪಾರೀ) ಸಂಸ್ಥೆಗೆ ಮಿಷನರಿಗಳು ಕಟ್ಟಿದ ಚರ್ಚುಗಳು ಫ್ರೆಂಚ್ ವಾಸ್ತುವಿನ ಪ್ರಕಾರವಿದ್ದು ಗಟ್ಟಿಮುಟ್ಟಾಗಿಯೂ ಕಲಾತ್ಮಕವಾಗಿಯೂ ಇವೆ. ಅಂಥವುಗಳಲ್ಲಿ ಪ್ರಸಿದ್ಧವಾದುದು ಸಂತ ಮೇರಿ ಬೆಸಿಲಿಕಾ. ಟಿಪ್ಪುಸುಲ್ತಾನನ ಮರಣಾನಂತರ ಫ್ರೆಂಚ್ ಪಾದ್ರಿ ಅಬ್ಬೆದ್ಯುಬುವಾರವರ ಪ್ರಯತ್ನದಿಂದ ಸುಮಾರು ಕ್ರಿಸ್ತಶಕ 1803ರಲ್ಲಿ ಇಂದು ಶಿವಾಜಿನಗರ ಎನಿಸಿಕೊಂಡಿರುವ ಬಿಳೇಕಹಳ್ಳಿ (ಬಿಳಿ ಅಕ್ಕಿ ಹಳ್ಳಿ) ಎಂಬ ಪುಟ್ಟ ಊರಿನಲ್ಲಿ ಪುಟ್ಟ ಚರ್ಚೊಂದು ತಲೆಯೆತ್ತಿತು. ಕ್ರಿಸ್ತಶಕ 1813ರಲ್ಲಿ ಬ್ರಿಟಿಷರ ಸೇನಾತುಕಡಿಯ ನೌಕರರು ಬಿಳೇಹಳ್ಳಿಯ ಈ ಚರ್ಚ್‌ನ್ನು ಮೇಲ್ದರ್ಜೆಗೇರಿಸಿದರು. ಆದರೆ ಈಗಿರುವ ಭವ್ಯ ಚರ್ಚ್‌ನ್ನು ಫ್ರೆಂಚ್ ಪಾದ್ರಿ ಕ್ಲೈನರ್ ಎಂಬುವರು ಕ್ರಿಸ್ತಶಕ 1875–82ರ ಅವಧಿಯಲ್ಲಿ ಕಟ್ಟಿದರು. ಈ ಗೋಥಿಕ್ ಶೈಲಿಯ ಚರ್ಚು ತನ್ನ ಗಗನಚುಂಬಿ ಗೋಪುರದ ದೆಸೆಯಿಂದ ಕಣ್ಸೆಳೆಯುತ್ತದೆ. ಒಳಗೆ ಪೂಜಾಪೀಠದ ಹಿಂದಿನ ಗೋಡೆಯಲ್ಲಿ ತಂದೆತಾಯಿಯರೊಂದಿಗೆ ಯೇಸುಕ್ರಿಸ್ತನಿರುವ ವರ್ಣಸಂಯೋಜನೆಯ ಗಾಜಿನ ಫಲಕವಿದೆ. ಕಂಬಗಳ ಮೇಲೆ ಗಾರೆಯಿಂದ ಬಿಡಿಸಲಾದ ದ್ರಾಕ್ಷಾಲತೆ ಮುಂತಾದ ಉಬ್ಬುಚಿತ್ರಗಳನ್ನು ಚರ್ಚಿನೊಳಗಿನ ಕರುಣಾರ್ದ್ರಮಯಿ ಮೇರಿತಾಯಿಯ ಪ್ರತಿಮೆ, ಕಲಾತ್ಮಕ ಕುಸುರಿಯ ಮರದ ಪೀಠೋಪಕರಣಗಳು, ಹಾಗೂ ಚರ್ಚಿನ ಒಳಾಂಗಣ ವಿನ್ಯಾಸ ಮನಸೆಳೆಯುವಂತಿವೆ. ಅಂದು ಈ ಚರ್ಚು ಕಟ್ಟಲು 29659 ರೂಪಾಯಿಗಳು ಖರ್ಚಾದವು. ಈ ನೂತನ ಚರ್ಚನ್ನು ಕ್ರಿಸ್ತಶಕ 1882ನೇ ಡಿಸೆಂಬರ್ ತಿಂಗಳ 8ನೇ ತಾರೀಕು ಬಿಷಪ್ ಕಾಡೋ ಅವರು ಸುಮಾರು 4000 ಕ್ರೈಸ್ತಭಕ್ತರ ಸಮ್ಮುಖದಲ್ಲಿ ಪ್ರತಿಷ್ಠಾಪನೆ ಮಾಡಿ ಚರ್ಚಿಗೆ ಮರಿಯಾ ಮಾತೆಯ ಜನನೋತ್ಸವದ ಗುಡಿ ಎಂದು ಹೆಸರಿಟ್ಟರು.

ಅಂದು ಯುರೋಪಿನಿಂದ ತರಿಸಿ ಸ್ಥಾಪಿಸಿದ ಮೇರಿಮಾತೆಯ ಸುಂದರ ಪ್ರತಿಮೆಗೆ ಇಂದು ನಮ್ಮ ದೇಶೀನಾರಿಯ ಉಡುಪಾದ ಸೀರೆಯುಡಿಸಲಾಗಿದೆ. ಆಕೆ ಎಡ ತೋಳಲ್ಲಿ ಹಸನ್ಮುಖಿ ಬಾಲಕ ಯೇಸು ವಿರಾಜಮಾನನಾಗಿದ್ದಾನೆ. ಮೇರಿ ಮಾತೆಯ ಬಲಗೈಯಲ್ಲಿ ಐವತ್ಮೂರು ಮಣಿಗಳ ಜಪಮಾಲೆ ತೂಗುತ್ತಿದೆ. ಭಕ್ತರು ಎಷ್ಟೇ ಪಾಪಿಷ್ಟರಾದರೂ ದೇವರ ಶಿಕ್ಷೆಗೆ ಗುರಿಯಾಗದಂತೆ ಈ ಮಮತಾಮಯಿ ತಾಯಿ ಉದ್ಧರಿಸುತ್ತಾಳೆಂದು ಭಾವಿಸಲಾಗುತ್ತದೆ. ಅಲ್ಲದೆ ಮೇರಿ ಮಾತೆ ಶುಭಪ್ರಸನ್ನಳಾಗಿ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ದಯಪಾಲಿಸುತ್ತಾಳೆಂಬುದು ಭಕ್ತರ ನಂಬಿಕೆ. ಪ್ರತಿವರ್ಷ ಸೆಪ್ಟೆಂಬರ್ ಎಂಟರಂದು ನಡೆವ ಜಾತ್ರೆಯಲ್ಲಿ ಎಲ್ಲ ಪಂಥದವರೂ ಆಕೆಯನ್ನೂ ಆರೋಗ್ಯಮಾತೆ ಎಂದು ಗೌರವಿಸುತ್ತಾ ಈ ದೇವಾಲಯಕ್ಕೆ ನಡೆದುಕೊಳ್ಳುತ್ತಾರೆ.

2. ಸಂತ ಝೇವಿಯರ್ ಕೆಥೆಡ್ರಲ್

ಫ್ರೆಂಚ್ ಪಾದ್ರಿ ಶೆವಾಲಿಯೇ ಅವರು 1851ರಲ್ಲಿ ಫ್ರೆಂಚ್ ವಿಧವೆ ಝುಲೈಮ್ ವ್ಯಾಟ್ಕಿನ್ಸ್ ಅವರಿಂದ ಒಂದು ಸಾವಿರ ರೂಪಾಯಿಗಳಿಗೆ ಕೋಲ್ಸ್ ಪಾರ್ಕ್ ಬಳಿ ಇರುವ ಈ ಜಮೀನನ್ನು ಪಡೆದು 550 ಚದರಡಿಗಳ ಒಂದು

ಪುಟ್ಟ ಚರ್ಚ್‌ನ್ನು ಇಲ್ಲಿ ಕಟ್ಟಿದರು. ಆನಂತರ 1898ರಲ್ಲಿ ಈ ದೇವಾಲಯದ ಧರ್ಮಗುರುವಾಗಿ ನಿಯುಕ್ತರಾದ ಫಾದರ್ ಸರ್ವೆಂಟನ್ ಅವರು ತಮ್ಮ 50 ವರ್ಷಗಳ ದೀರ್ಘ ಆಡಳಿತಾವಧಿಯಲ್ಲಿ ಈಗಿರುವ ಭವ್ಯ ದೇವಾಲಯ ವನ್ನು ಕಟ್ಟಿಸಿದರು. ಮೇಸ್ತ್ರಿ ಚೌರಪ್ಪನವರು ಕಟ್ಟಿದ ಈ ಚರ್ಚು ಸಂಪೂರ್ಣವಾಗಿ ಸ್ಥಳೀಯ ಕಲ್ಲಿನಿಂದಲೇ ನಿರ್ಮಿತವಾಗಿದ್ದು ವಿಶಾಲವಾದ ಹಜಾರ, ಸುಂದರವಾದ ಕಮಾನುಗಳು, ಅಮೃತಶಿಲೆಯ ಸ್ವರೂಪಗಳು, ದೊಡ್ಡದಾದ ಗುಮ್ಮಟ ಹೊಂದಿದೆ. ಶೆವಾಲಯೇ ಅವರ ಕಾಲದಲ್ಲಿ ಆರೋಗ್ಯದ ಪಾಲಕ ಸಂತ ರೋಕ್ ಅವರ ಸ್ಮರಣೆಯಲ್ಲಿ ಕಟ್ಟಿದ್ದ ಪುಟ್ಟ ಚರ್ಚು ಸರ್ವೆಂಟನ್ ಅವರ ಕಾಲದಲ್ಲಿ ಅಂದರೆ 26 ಮೇ 1932ರಂದು ಈಗಿನ ದಿವ್ಯ ಭವ್ಯ ರೂಪ ತಳೆಯಿತು. 1940ರಲ್ಲಿ ಬೆಂಗಳೂರು ಧರ್ಮಪ್ರಾಂತ್ಯವು ಸ್ವಾಯತ್ತವಾದಾಗ ಈ ಚರ್ಚನ್ನು ಪ್ರಧಾನಾಲಯ ವನ್ನಾಗಿ ಆಯ್ಕೆ ಮಾಡಲಾಯಿತು.

3. ಸೇಕ್ರೆಡ್ ಹಾರ್ಟ್ ಚರ್ಚು

ಬೆಂಗಳೂರಿನ ಯೇಸುವಿನ ಪವಿತ್ರ ಹೃದಯಾಲಯವು (ಸೇಕ್ರೆಡ್ ಹಾರ್ಟ್ ಚರ್ಚ್) ಮೊದಲಿಗೆ ವಿಕ್ಟೋರಿಯಾ ರಸ್ತೆಯ ಕೊನೆಯಲ್ಲಿದ್ದ ಹಳೇ ರೇಸ್ ಕೋರ್ಸ್ ರಸ್ತೆಯ ಮೈದಾನದಲ್ಲಿ ಒಂದು ಬಾಡಿಗೆಯ ಬಂಗಲೆಯಲ್ಲಿ ಪ್ರಾರಂಭವಾಯಿತು. ದಂಡುಪ್ರದೇಶದ ಸಂತ ಮೇರಿ ಬೆಸಿಲಿಕಾದ ಅಧೀನದಲ್ಲಿದ್ದ ಕೆಲ ಪ್ರದೇಶಗಳು 1880ರಲ್ಲಿ ಈ ಹೊಸ ಚರ್ಚಿನ ಸುಪರ್ದಿಗೆ ಬಂದವು. ಈ ಚರ್ಚಿನ ವಿಶೇಷವೆಂದರೆ ಇದರ ಆವರಣದಲ್ಲಿ ಬೆಂಗಳೂರಿನಲ್ಲಿ ಸೇವೆಸಲ್ಲಿಸಿದ ಬಹುತೇಕ ಎಲ್ಲ ಕೆಥೋಲಿಕ ಧರ್ಮಗುರುಗಳ ಸಮಾಧಿಭೂಮಿ ಇದೆ.

4. ಮರಿಯಾಪುರದ ಚರ್ಚು

ಯುವಗುರು ಫಾದರ್ ಫಿಲಿಪ್ ಸಿಝುನ್ ಅವರು ಬಿಷಪ್ ಷೆವಾಲಿಯೇ ಅವರ ಅಣತಿಯಂತೆ ಮೈಸೂರು ಮಹಾರಾಜರ ಅಪೇಕ್ಷೆಯ ಮೇರೆಗೆ ಕ್ರಿ.ಶ. 1876–77ರ ಅವಧಿಯ ಭೀಕರ ಬರಗಾಲ ಹಾಗೂ ಪ್ಲೇಗಿನಿಂದ ಅನಾಥರಾದ ಮಕ್ಕಳನ್ನು ಪೋಷಿಸುವ ಹೊಣೆ ಹೊತ್ತು ಆ ಮಕ್ಕಳು ಬೆಳೆದ ಮೇಲೆ ಅವರಿಗಾಗಿ ಈ ಊರನ್ನು ಕಟ್ಟಿದರು. ಈ ಊರಿಗೆ ಸನಿಹದಲ್ಲೇ ಇದ್ದ ತಟ್ಟುಗುಪ್ಪೆ ಎಂಬ ಪಾಳುಬಿದ್ದು ನಿರ್ವಹಿತವಾಗಿದ್ದ ಗ್ರಾಮವನ್ನು ಮಹಾರಾಜರಿಂದ ಪಡೆದು ಮರಿಯಾಪುರವನ್ನು ಕಟ್ಟಿದರು.

ಕ್ರಿ. ಶ. 1899ರಲ್ಲಿ ಪುನರ್ ನಿರ್ಮಾಣಗೊಂಡ ಮರಿಯಾಪುರ ದೇವಾಲಯ ಕ್ರಿ. ಶ. 1986ರಲ್ಲಿ ಜೀರ್ಣೋದ್ಧಾರ ಹೊಂದಿತು. ಖ್ಯಾತ ಉದ್ಯಮಿ ಹರೀಶ್ ಖೋಡೆ ಹಾಗೂ ಅಂದಿನ ಬೆಂಗಳೂರು ಮಹಾಧರ್ಮ ಪ್ರಾಂತ್ಯದ ವರಿಷ್ಠರ ಧನಸಹಾಯದಿಂದ ಮರಿಯಾಪುರ ದೇವಾಲಯ ಹೊಸ ರೂಪ ತಳೆಯಿತು. ಮೂಲತಃ ಮೊಗಲಾಯಿ ಶೈಲಿಯಲ್ಲಿದ್ದ ಈ ದೇವಾಲಯದ ರೂಪ ಈಗ ಮೇಲಿನರ್ಧ ಮೊಗಲಾಯಿ ಶೈಲಿಯಲ್ಲೇ ಇದ್ದು ಕೆಳಗಿನರ್ಧ ಗ್ರೀಕೋ–ರೋಮನ್ ಶೈಲಿ ಹೊಂದಿದೆ. ಆದರೆ ದೇವಾಲಯದ ಒಳಭಾಗ ಮಾತ್ರ ಹಿಂದಿನ ದೃಕ್ ಸಂಪತ್ತನ್ನೇ ಉಳಿಸಿಕೊಂಡಿದೆ. ಪೀಠದ ಮೇಲೆ ಉತ್ತರಿಕೆ ದೇವಮಾತೆಯ ಸುಂದರ ಪ್ರತಿಮೆ ಮಾತೃವಾತ್ಸಲ್ಯದಿಂದ ಸ್ವಾಗತಿಸುತ್ತಿದೆ. ಅಮ್ಮನ ಎರಡೂ ಪಕ್ಕದಲ್ಲಿ ಸಂತ ಅಂತೋಣಿ ಹಾಗೂ ಸಂತ ಝೇವಿಯರ್ ಅವರ ಪ್ರತಿಮೆಗಳಿವೆ. ದೇವಾಲಯದ ಒಳಾಂಗಣವು ಶಿಲುಬೆಯಾಕಾರದಲ್ಲಿದ್ದು ಪೀಠೋಭಿಮುಖವಾಗಿ ನಿಂತರೆ ಬಲಪಾರ್ಶ್ವದಲ್ಲಿ ಸ್ವಾಮಿ ಸಿಝುನ್ ಅವರ ಸಮಾಧಿ ಇದೆ.

ಇಲ್ಲಿನ ನವಜ್ಯೋತಿ ಪ್ರೌಢಶಾಲೆ ಸುತ್ತ ಮುತ್ತಲ ಊರುಗಳಲ್ಲೆಲ್ಲಾ ತುಂಬಾ ಹೆಸರು ಪಡೆದಿದೆ. ಪ್ರತಿವರ್ಷ ಜುಲೈ 16 ರಂದು ಕಾರ್ಮೆಲ್ ಮಾತೆಯ ಉತ್ಸವವನ್ನು ಉತ್ಸಾಹದಿಂದ ಆಚರಿಸಿ ಬೇಡುದಲೆ ಊಟ ಏರ್ಪಡಿಸುತ್ತಾರೆ. ಮರಿಯಾಪುರದ ಸ್ಥಾಪಕ ಫಿಲಿಫ್ ಸಿರ್ಪುನ್ ಸ್ವಾಮಿಯವರ ನೆನಪಿನಲ್ಲಿ ಊರಿನ ಜನರು ಪ್ರತಿವರ್ಷ ತಪಸ್ಸುಕಾಲದ ಒಂದು ಶನಿವಾರದಂದು ರಾತ್ರಿಯಿಡೀ ಧ್ವನಿಬೆಳಕಿನ ಸಂಯೋಜನೆಯಲ್ಲಿ ಬೃಹನ್ನಾಟಕ ಆಡುತ್ತಾರೆ.

5. ಶಿಲ್ವೆಪುರ ಚರ್ಚು

ಬೆಂಗಳೂರಿನಿಂದ ಹೆಸರುಘಟ್ಟಕ್ಕೆ ಹೋಗುವ ದಾರಿಯಲ್ಲಿ ಚಿಕ್ಕಬಾಣಾವರ ಸೋಲದೇವನಹಳ್ಳಿ ದಾಟಿದರೆ ಶಿಲ್ವೆಪುರ ಸಿಗುತ್ತದೆ. ಕ್ರಿ. ಶ. 1876–77ರಲ್ಲಿ ಸಂಭವಿಸಿದ ಭೀಕರ ಬರಗಾಲ ಹಾಗೂ ಪ್ಲೇಗ್ ಹೊಡೆತಕ್ಕೆ ಸಿಕ್ಕಿ ಬದುಕುಳಿದ ಅನಾಥರ ವಸತಿಗಾಗಿ ಈ ಊರನ್ನು ಕಟ್ಟಲಾಯಿತು. ಮೈಸೂರು ಮಹಾರಾಜರ ಸರ್ಕಾರವು ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ ಕಸಘಟ್ಟಪುರ ಗ್ರೂಪ್ ಪಂಚಾಯ್ತಿಗೆ ಸೇರಿದ ಗೋಮಾಳದ 941 ಎಕರೆ ಜಮೀನನ್ನು ಬಿಟ್ಟುಕೊಟ್ಟು ತಲಾ ಎರಡು ರೂಪಾಯಿಗಳನ್ನು ನೀಡಿತು. ಒಂದೊಂದು ಕುಟುಂಬಕ್ಕೂ ಮೂರು ಎಕರೆ ಜಮೀನು, ಮಟ್ಟಾಳೆ ಗುಡಿಸಲು, ಒಂದು ಬಂಡಿ ಹಾಗೂ ಜೊತೆ ಎತ್ತುಗಳನ್ನೂ ಒದಗಿಸಲಾಯಿತು. ಪಾದ್ರಿ ಫಾದರ್ ಈವ್ಸ್ ಮರೀ ಗೋರೇನ್ ಅವರು ಗುಡಿಸಲ ಸೋಗೆಯ ಬದಲಿಗೆ ಹೆಂಚಿನ ಸೂರು ಒದಗಿಸಿದ್ದಲ್ಲದೆ ಇಪ್ಪತ್ತಾರು ವರ್ಷಗಳಷ್ಟು ದೀರ್ಘಕಾಲ ಇಲ್ಲಿದ್ದು ಕೊನೆಗೆ ಇಲ್ಲೇ ಮಣ್ಣಾದರು. ತಬೂರೆಲ್ ಎಂಬ ಪಾದ್ರಿಗಳು ಸ್ವತಃ ಇಂಜಿನಿಯರಾಗಿದ್ದು ಹಳೆಯ ಮಣ್ಣಿನ ಗುಡಿಯನ್ನು ಕೆಡವಿ ಕಲಾನೈಪುಣ್ಯತೆ ತುಂಬಿದ ಹೊಸ ಗುಡಿ ಕಟ್ಟಿದರು. 1904ರ ವೇಳೆಗೆ ಶಿಲ್ವೆಪುರವು ಮೈಸೂರು ಪ್ರಾಂತ್ಯದಲ್ಲಿಯೇ ಮೊತ್ತಮೊದಲ ಬಾರಿಗೆ ಟೊಮೇಟೋ, ದಾಲ್ಚಿನ್ನಿ ಮತ್ತು ಸಾರ್ವೆಮರಗಳನ್ನು ಬಳಕೆಗೆ ತಂದಿತು. ಇಂದು ಶತಮಾನೋತ್ಸವದ ಸ್ಮರಣೆಗಾಗಿ ಕಟ್ಟಲಾದ ಶಿಲ್ವೆಪುರದ ಹೊಸ ದೇವಾಲಯದ 'ಪವಿತ್ರ ಹೃದಯದ ಸ್ವಾಮಿ'ಯ ಪ್ರತಿಮೆಯೊಂದಿಗೆ ನಯನಮನೋಹರವಾಗಿದೆ. ವಿಶ್ವವಿಖ್ಯಾತ ಕಲಾವಿದ ಜ್ಯೋತಿ ಸಾಹಿಯವರ ಕುಂಚ ಯೇಸುಸ್ವಾಮಿಯನ್ನು ದೇಸೀ ಕಲಾಪ್ರಕಾರದಲ್ಲಿ ಚಿತ್ರಿಸಿದೆ. ಕಲಾವಿದ ಅರುಣ್ ಅವರ ಕೈಯಲ್ಲಿ ಶಿಲುಬೆಹಾದಿಯ ಮರದ ಚಿತ್ರಪಟಗಳು ಸುಂದರವಾಗಿ ಕೆತ್ತಲ್ಪಟ್ಟಿವೆ. ವಾಸ್ತುಶಿಲ್ಪಿ ಸೌರಾಜ್ ಅವರ ಪ್ರತಿಭೆ ಕಟ್ಟಡದ ಪ್ರತಿ ಹಂತದಲ್ಲೂ ಪ್ರತಿಬಿಂಬಿತವಾಗಿದೆ.

ಆಂಗ್ಲಿಕನ್ ಮತ್ತು ಸ್ಕಾಟಿಷ್ ಜನರು ಕಟ್ಟಿಸಿದ ಚರ್ಚುಗಳು

1. ಸಂತ ಪ್ಯಾಟ್ರಿಕರ ಚರ್ಚು

19ನೇ ಶತಮಾನದಲ್ಲಿ ಸ್ಕಾಟಿಷ್ ಸೈನಿಕರು ತಮ್ಮ ಉಪಯೋಗಕ್ಕಾಗಿ ಕಟ್ಟಿಕೊಂಡ ಚರ್ಚಿದು. ಸುಂದರವಾದ ಒಳಾಂಗಣ ವಿನ್ಯಾಸ, ಅಷ್ಟೇ ಸುಂದರವಾದ ಹೊರಾಂಗಣ, ಮುಗಿಲಿಗೆ ಚಾಚಿದ ಎರಡು ಗೋಪುರಗಳು, ಬಲು ವಿಸ್ತಾರವಾದ ಜಗಲಿ ಮತ್ತು ವಿಶಾಲವಾದ ನಿವೇಶನದ ಮಧ್ಯೆಯಿದ್ದು ಪ್ರಶಾಂತವಾಗಿದೆ. ಅವಿಭಜಿತ ಮೈಸೂರು ಡಯಾಸೀಸಿನ ಆಡಳಿತ ಕೇಂದ್ರವು ಇದೇ ಆವರಣದಲ್ಲಿದ್ದುದರಿಂದ ಈ ಚರ್ಚು ಪ್ರಧಾನಾಲಯವಾಗಿ ಸಹ ಕಾರ್ಯನಿರ್ವಹಿಸಿದೆ. ಶೂಲೆ ಎಂದು ಕರೆಯಲಾಗುತ್ತಿದ್ದ ಪ್ರದೇಶದಲ್ಲಿ ಪ್ಲೇಗು ಮತ್ತು ಬರಗಾಲಗಳಿಂದ ಅನಾಥರಾದ ಮಕ್ಕಳಿಗೆ ಪುನರ್ವಸತಿ ನೀಡಲಾಗಿತ್ತು.

2. ಸಂತ ಮಾರ್ಕನ ಕೆಥೆಡ್ರಲ್

ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಸಿಎಸ್‌ಐ ಧರ್ಮ ಮಂಡಲಿಯ ಸಂತ ಮಾರ್ಕನ ಕೆಥೆಡ್ರಲ 1812ರಲ್ಲಿ ಅಸ್ತಿತ್ವಕ್ಕೆ ಬಂತು. ಯೇಸುಕ್ರಿಸ್ತನ ಹನ್ನೆರಡು ಶಿಷ್ಯರಲ್ಲಿ ಒಬ್ಬನಾದ ಮಾರ್ಕನ ಹೆಸರಿನ ಈ ಚರ್ಚು ಇಂಗ್ಲಿಷ್ ವಾಸ್ತುವಿನಂತಿದ್ದು ದೊಡ್ಡದಾದ ಗುಮ್ಮಟ ಹೊಂದಿದೆ. ಪ್ರಶಾಂತ ಒಳಾವರಣದ ಗೋಡೆಗಳ ಮೇಲಿನ ಬಿಲ್ಲಾರ ಪ್ರತಿಮೆಗಳು ಚರ್ಚಿನ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ. ಮಧುರ ದನಿಯ ಗಂಟೆಗಳಿಂದ ಸಜ್ಜುಗೊಂಡ ಈ ಗುಡಿಯು 17ನೇ ಶತಮಾನದ ಪೌಲನ ಕೆಥೆಡ್ರಲನ್ನು ಹೋಲುತ್ತದೆ. 1901ರಲ್ಲಿ ವಿಸ್ತೃತಗೊಂಡು 1927ರಲ್ಲಿ ಮರುನಿರ್ಮಾಣವಾದ ಈ ಚರ್ಚು ವಿಶಿಷ್ಟ ಕೆತ್ತನೆಯ ಮುಂಬಾಗಿಲು ಹಾಗೂ ಬಣ್ಣದ ಗಾಜಿನ ಅಳವಡಿಕೆಯಿಂದ ಮತ್ತಷ್ಟು ಸುಂದರವಾಗಿದೆ.

3. ಸಂತ ಅಂಡ್ರೂಸ್ ಚರ್ಚು

ಕಬ್ಬನ್ ರಸ್ತೆಯಲ್ಲಿರುವ ಈ ಚರ್ಚು ಪ್ರೆಸ್‌ಬೈಟೇರಿಯನ್ ಹಿನ್ನೆಲೆಯ ಸ್ಕಾಟಿಷ್ ಯೋಧರು ಮತ್ತು ಜನಸಾಮಾನ್ಯರ ಆಸಕ್ತಿಯ ಫಲವಾಗಿ ಮೈದಳೆಯಿತು. ಮೊದಲಿಗೆ ಈ ಗುಂಪು ದಂಡುಪ್ರದೇಶದ ಮನೆಯೊಂದರಲ್ಲಿ ಸೇರುತ್ತಿತ್ತು. ಹೀಗೆ 1864 ನವೆಂಬರ್ 22ಕ್ಕೆ ಅಸ್ತಿಭಾರ ಬಿದ್ದು 1866 ಮೇ ವೇಳೆಗೆ

ರೂ. 4500ಗಳ ವೆಚ್ಚದಲ್ಲಿ ಈ ಗುಡಿ ಸಿದ್ಧವಾಯಿತು. ಹೆಚ್ಚಿನ ಪಾಲು ಯೋಧರೇ ಇದರ ಸದಸ್ಯರಾಗಿದ್ದ ಕಾರಣದಿಂದ ಚರ್ಚಿನ ಗೋಡೆಗಳ ತುಂಬೆಲ್ಲ ಹಿತ್ತಾಳೆಯ ವೀರಪದಕಗಳೇ ತೂಗುತ್ತಿವೆ. 1947ರಲ್ಲಿ ಈ ಚರ್ಚು ಸಿಎಸ್‌ಐ ಬಗಲಿಗೆ ಬಂತು. ಈ ಚರ್ಚಿನ ಹೊರಗೋಡೆಗಳಿಗೆ ಅಚ್ಚಕೆಂಪು ಬಣ್ಣವನ್ನು ಬಳಿಯಲಾಗಿದ್ದು ನಮ್ಮ ಹೈಕೋರ್ಟು, ಶೇಷಾದ್ರಿ ಮೆಮೋರಿಯಲ್ ಹಾಲ್ ಹಾಗೂ ಸೆಂಟ್ ಜಾನ್ ಚರ್ಚುಗಳು ಕೂಡಾ ಇದೇ ಬಣ್ಣ ಹೊಂದಿವೆಯೆಂಬುದು ಕುತೂಹಲಕಾರಿಯಾಗಿದೆ. ಈ ಚರ್ಚಿನಲ್ಲಿ 1881ರಲ್ಲಿ ಅಳವಡಿಸಲಾದ ಪೈಪ್ ಆರ್ಗನ್ ಎಂಬ ವಾದ್ಯ ಹಾಗೂ ಗೋಪುರದಲ್ಲಿ ಶೋಭಿಸುತ್ತಿರುವ 1893ರಲ್ಲಿ ಅಳವಡಿಸಿದ ಬೃಹತ್ ಗಡಿಯಾರಗಳು ಇನ್ನೂ ಸುಸ್ಥಿತಿಯಲ್ಲಿವೆ.

ಕ್ರೈಸ್ತ ಧರ್ಮದ ವಿವಿಧ ಪಂಥಗಳು ಕಟ್ಟಿಕೊಂಡ ಚರ್ಚುಗಳು

1. ಸಂತ ಮೇರಿ ಕೆಥೆಡ್ರಲ್

ಬೆಂಗಳೂರಿನ ರೋಮನ್ ಕಥೋಲಿಕ ಚರ್ಚುಗಳಲ್ಲಿ ಲ್ಯಾಟಿನ್ ರೀತಿರಿವಾಜುಗಳಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಅದೇ ನೇರದಲ್ಲಿ ಕೇರಳದಿಂದ ಉದರಾಭರಣಕ್ಕಾಗಿ ಬೆಂಗಳೂರಿಗೆ ಬಂದ ಕೆಲ ಸಿರಿಯನ್ ಕಥೋಲಿಕರು ವಿಭಿನ್ನ ರೀತಿರಿವಾಜುಗಳನ್ನು ನಡೆಸುವುದರಿಂದ ತಮ್ಮದೇ ಚರ್ಚುಗಳನ್ನು ಕಟ್ಟಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಸಿರಿಯನ್ ಪೂಜಾ ಪದ್ಧತಿ 1936ರಷ್ಟು ಹಿಂದೆಯೇ ಪ್ರಾರಂಭವಾಯಿತು. ಆ ಪದ್ಧತಿಯನ್ನು ಪಾಲಿಸುವ ಹಲವಾರು ಜಾಕೊಬೈಟ್ ಸಿರಿಯನ್ ಆರ್ಥೋಡಾಕ್ಸ್ ಚರ್ಚುಗಳು ಬೆಂಗಳೂರಿನಲ್ಲಿವೆ. ಅವುಗಳಲ್ಲಿ ಮುಖ್ಯವಾದುದು ಕ್ವೀನ್ಸ್ ರಸ್ತೆಯಲ್ಲಿರುವ ಸಂತ ಮೇರಿ ಕೆಥೆಡ್ರಲ್.

2. ಹಲಸೂರಿನ ಕೇಂಬ್ರಿಜ್ ಲೇಔಟಿನಲ್ಲಿರುವ ಲೂರ್ದು ಮಾತೆಯ ಚರ್ಚನ್ನು 1965ರಲ್ಲಿ ಕಟ್ಟಲಾಗಿದೆ. ಚೂಪಾಗಿ ಗಗನಕ್ಕೆ ಚಿಮ್ಮಿದ ಎರಡು ಗೋಪುರಗಳು, ಕಲಾತ್ಮಕ ಗಾರೆಯ ಕೆಲಸಗಳು ಹಾಗೂ ನುಣುಪಾದ ಗೋಡೆಗಳು ಚರ್ಚಿನ ಅಂದವನ್ನು ಹೆಚ್ಚಿಸಿವೆ.

3. ವಿವೇಕನಗರದ ಬಾಲಯೇಸುವಿನ ಚರ್ಚು:

ಬಾಲಯೇಸುವಿನ ದೇವಾಲಯವು ತನ್ನ ಪವಾಡಶಕ್ತಿಯ ಕಾರಣದಿಂದ ಕ್ರೈಸ್ತ ಕ್ರೈಸ್ತೇತರರೆನ್ನದೆ ಎಲ್ಲರನ್ನೂ ಕೈಬೀಸಿ ಕರೆಯುತ್ತ ಈ ಪ್ರದೇಶದ ಒಂದು ಸುಂದರ ಸುಸಜ್ಜಿತ ಧಾರ್ಮಿಕ ನೆಲೆಯಾಗಿದೆ. ಅರ್ಧ ವರ್ತುಳಾಕಾರದಲ್ಲಿ ಕಟ್ಟಲಾದ ಈ ಬೃಹತ್ ಕಟ್ಟಡದೊಳಗೆ ಪೂಜಾ ಪೀಠದ ಹಿಂಬದಿಯ ಗೋಡೆಯಲ್ಲಿ ಕ್ರಿಸ್ತಜನನದ ಬೃಹತ್ ಪಟವನ್ನು ಚಿತ್ರಿಸಲಾಗಿದೆ. ಏಕಕಾಲಕ್ಕೆ ಹತ್ತುಸಾವಿರ ಮಂದಿ ಪೂಜೆಯಲ್ಲಿ ಭಾಗವಹಿಸುವಂತೆ ಈ ಚರ್ಚನ್ನು ರೂಪಿಸಲಾಗಿದೆ. ಗುಡಿಯ ಕೆಳಗಿನ ನೆಲಮಾಳಿಗೆಯಲ್ಲಿ ಸುಮಾರು ಇನ್ನೂರು ಕಾರುಗಳು ನಿಲ್ಲುವಂತೆ ವ್ಯವಸ್ಥೆ ಮಾಡಲಾಗಿದೆ.

4. ತಂಬುಚೆಟ್ಟಿಪಾಳ್ಯದ ಸಂತ ಅಂತೋಣಿ ಚರ್ಚು:

ತಂಬುಚೆಟ್ಟಿಪಾಳ್ಯದಲ್ಲಿ ನೂರುವರ್ಷಗಳ ಹಳೆಯ ಕಲ್ಲುಕಟ್ಟಡದ ಚರ್ಚ್ ಇದ್ದು ಈಗ ಇದಕ್ಕೆ ಪರ್ಯಾಯವಾಗಿ ಬೃಹತ್ತಾದ ಹಾಗೂ ಚೆಲುವನ್ನೇ ಮೈದುಂಬಿಕೊಂಡ ಚರ್ಚ್ ಒಂದನ್ನು ಕಟ್ಟಲಾಗಿದೆ. ಸಂತ ಅಂತೋಣಿಯವರ ಅದ್ಭುತಗಳಿಗೆ ಹೆಸರಾದ ಈ ಚರ್ಚು ತನ್ನ ಪೂಜಾಪೀಠದ ಬಳಿಯ ವಿಶಿಷ್ಟ ಸಂಪುಟದಲ್ಲಿ 11ನೇ ಶತಮಾನದ ಪವಾಡಪುರುಷ ಸಂತ ಅಂತೋಣಿಯವರ ಎಲುಬಿನ ಚೂರನ್ನು ಹೊಂದಿದೆ.

ಇವಿಷ್ಟಲ್ಲದೆ ಬೆಂಗಳೂರು ನಗರದಲ್ಲಿ ಕ್ರೈಸ್ತ ಧರ್ಮದ ವಿವಿಧ ಪಂಥಗಳಾದ ಅಸೆಂಬ್ಲಿ ಆಫ್ ಗಾಡ್ ಚರ್ಚು, ಪೆಂಟಿಕೋಸ್ಟಲ್ ಚರ್ಚು, ಪ್ರೆಸ್‌ಬೈಟೇರಿಯನ್ ಚರ್ಚು, ಚರ್ಚ್ ಆಫ್ ಕ್ರೈಸ್ಟ್, ಝಿಯೋನ್ ಚರ್ಚು, ನ್ಯೂಲೈಫ್ ಚರ್ಚು, ಫುಲ್ ಗಾಸ್ಪೆಲ್ ಚರ್ಚು, ಮಾರ್ ತೋಮಾ ಚರ್ಚು, ರಿವೈವಲ್ ಚರ್ಚು, ಬ್ಯಾಪ್ಟಿಸ್ಟ್ ಚರ್ಚು, ಸೆವೆಂತ್ ಡೇ ಅಡ್ವೆಂಟಿಸ್ಟ್ ಚರ್ಚು ಮುಂತಾದವುಗಳು ಸಹಾ ಅಸ್ತಿತ್ವ ಹೊಂದಿವೆ. ಹೆಚ್ಚಿನಪಾಲು ಇಂಥ ಚರ್ಚುಗಳು ಚರ್ಚು ಎಂದು ನಾವು ಭಾವಿಸುವಂಥ ಕಟ್ಟಡಗಳಲ್ಲಿರದೇ ಸಾಮಾನ್ಯ ಮನೆಗಳಲ್ಲಿ ಕಾರ್ಯ ನಿರ್ವಹಿಸುತ್ತವೆ. ಮಾರ್ ತೋಮಾ ಚರ್ಚಿನಂತವುಗಳನ್ನು ಹೊರತುಪಡಿಸಿದರೆ ಉಳಿದವಕ್ಕೆ ಕೇಂದ್ರೀಕೃತ ಧರ್ಮಮಂಡಲಿ ಇರುವುದಿಲ್ಲ. ಖಟಿಜುಚಿಟ್ಠುಚಿಣುಂಟಿ ಪಾರಂಪರಿಕ ಶೈಲಿಗಳನ್ನು ಪಾಲಿಸದೆ ದೇಸೀ ಶೈಲಿಯಲ್ಲಿ ಕಟ್ಟಿದ ದೇಸೀ ರೀತಿಯಲ್ಲಿ ಪುರಾಣಾವಿಧಿವಿಧಾನಗಳನ್ನು ಅಳವಡಿಸಿಕೊಂಡ ಚರ್ಚುಗಳೂ ಇವೆ. ಇನ್ನೂ ಕ್ರೈಸ್ತ ಧರ್ಮಾಡಳಿತಕ್ಕೆ ಒಳಪಟ್ಟ ಮಠಗಳು ಆಶ್ರಮಗಳು ವಿದ್ಯಾಸಂಸ್ಥೆ ಆಸ್ಪತ್ರೆಗಳಲ್ಲಿ ಖಾಸಗಿ ಚರ್ಚುಗಳಿವೆ. ಆದರೆ ಅವುಗಳ ಪ್ರಸ್ತಾಪವನ್ನು ಇಲ್ಲಿ ಮಾಡಿಲ್ಲ.

ಉಪಸಂಹಾರ

ಒಟ್ಟಿನಲ್ಲಿ ಚರ್ಚುಗಳು ತಮ್ಮ ಪ್ರಶಾಂತತೆಯ ಪರಿಣಾಮವಾಗಿ ಜನರ ಆಧ್ಯಾತ್ಮದ ನೆಲೆಯನ್ನು ಉದ್ದೀಪನಗೊಳಿಸುತ್ತಾ ಉನ್ನತ ಮಟ್ಟದ ದೈವೀಭಾವವನ್ನು ಸ್ಥಿರಪಡಿಸುತ್ತಿವೆ. ಬೆಂಗಳೂರಿನ ಈ ಎಲ್ಲ ಚರ್ಚುಗಳ ನಿರ್ಮಾಣ ಕೌಶಲ, ಜನಬಳಕೆಗೆ ತೆರೆದುಕೊಂಡ ಪರಿ, ನಡೆವ ರೀತಿರಿವಾಜುಗಳ ಹೊರತಾಗಿ ಹಲವಾರು ಚರ್ಚುಗಳು ಕೆಳಸ್ತರದವರಿಗೆ ವಿದ್ಯಾಭ್ಯಾಸ, ಜೀವನಕೌಶಲ್ಯ, ಗಣಕ ತರಬೇತಿ, ಇಂಗ್ಲೀಷ್ ಮಾತು, ಕಛೇರಿ ಸಹಾಯ, ಆಡಳಿತ ನಿರ್ವಹಣೆಗಳ ನಿಟ್ಟಿನಲ್ಲಿ ತರಬೇತಿ ನೀಡುತ್ತಿದೆ. ಮಾತ್ರವಲ್ಲ ಕಲಿಕೆ ಮುಗಿಯುತ್ತಿದ್ದಂತೆ ಕೆಲಸ ದೊರಕಿಸುವ ಪರಿಪಾಠವನ್ನೂ ಇಟ್ಟುಕೊಂಡಿವೆ. ಚರ್ಚಿನ ಸ್ವಸಹಾಯ ಗುಂಪುಗಳು ಕಡುಬಡವರ ಕಾಳಜಿ ಮಾಡುತ್ತಿವೆ. ಕ್ರೈಸ್ತರು ಇತರರು ಎಂಬ ತಾರತಮ್ಯವಿಲ್ಲದೆ ಆಸರೆಯಿಲ್ಲದ ವೃದ್ಧರನ್ನು ಗುರುತಿಸಿ ವೃದ್ಧಾಶ್ರಮಗಳಿಗೆ ಸೇರಿಸಿ ಅವರ ಜೀವನ ಕೊನೆಯುಸಿರಿನವರೆಗೂ ಅವರ ಜವಾಬ್ದಾರಿ ಹೊರುತ್ತಿವೆ. ಬಹುಪಾಲು ಈ ಎಲ್ಲ ಚರ್ಚುಗಳು ಎಲ್ಲರಿಗೂ ಮುಕ್ತವಾಗಿದ್ದು ಯಾರು ಬೇಕಾದರೂ ಒಳಹೊಕ್ಕು ನೋಡಿ ಬರಬಹುದಾಗಿದೆ.

40. ಕಬ್ಬನ್‌ಪಾರ್ಕಿನ ಇತಿಹಾಸ

ಡಾ. ವೇಮಗಲ್ ಸೋಮಶೇಖರ್

ರಾಜಧಾನಿ ಪಟ್ಟಣ ಬೆಂಗಳೂರಿನಲ್ಲಿರುವ ಕಬ್ಬನ್‌ಪಾರ್ಕ್ ಮೈಸೂರು ರಾಜ್ಯದ ಪ್ರಥಮ ಮುಖ್ಯ ಕಮೀಷನರ್ ಆಗಿದ್ದ ಮಾರ್ಕ್ ಕಬ್ಬನ್ ಅವರ ನೆನಪನ್ನು ಸದಾ ಕಾಲ ಜನಮಾನಸದಲ್ಲಿ ಉಳಿಸಿರುವ ಅಪರೂಪದ ಉದ್ಯಾನವಾಗಿದೆ. ಇವರು ಮೈಸೂರು ರಾಜ್ಯದಲ್ಲಿ 1834ರಿಂದ 1861ರವರೆಗೆ ಕಾರ್ಯನಿರ್ವಹಿಸಿದರು. ದಕ್ಷ ಆಡಳಿತಗಾರರಾಗಿ, ಮಹಾನ್ ಆರ್ಥಿಕ ತಜ್ಞರೆನಿಸಿ ಮೈಸೂರು ರಾಜ್ಯದಲ್ಲಿ ವಿವಿಧ ಬಗೆಯ ಆಧುನೀಕರಣ ಪ್ರಕ್ರಿಯೆಗಳನ್ನು ಪ್ರಾರಂಭಿಸಿ ಸಾರ್ವತ್ರಿಕ ಸ್ತುತಿಗೆ ಪಾತ್ರರಾಗಿದ್ದರು. ಕಬ್ಬನ್ ಮರಣ ಹೊಂದಿದ ನಂತರ ಅವರ ಹುಟ್ಟೂರಲ್ಲಿ ಹಲವು ಶತಮಾನಗಳಲ್ಲಿ ಈ ದ್ವೀಪದಲ್ಲಿ ಹುಟ್ಟಿದವರ ಪೈಕಿ 'ಅತಿ ದೊಡ್ಡ ವ್ಯಕ್ತಿ' ಈತನೆಂದು ಅಲ್ಲಿನ ಜನ ಘೋಷಿಸಿದರು. ಅದೇ ರೀತಿ 19ನೇ ಶತಮಾನದಲ್ಲಿ ಮೈಸೂರು ಸಂಸ್ಥಾನದಲ್ಲಿ ಆಡಳಿತ ನಡೆಸಿದವರ ಪೈಕಿ ಕಬ್ಬನ್ ಬಹು ದೊಡ್ಡ ವ್ಯಕ್ತಿ. ಇವರು ಮೈಸೂರು ಸಂಸ್ಥಾನದಲ್ಲಿ ನಡೆಸಿದ ಸುಮಾರು 27 ವರ್ಷಗಳ ದೀರ್ಘಕಾಲದ ಆಡಳಿತವನ್ನು 'ಸುವರ್ಣಯುಗ' ಎಂದರೆ ತಪ್ಪಾಗಲಾರದು. ಇವರ ಅವಿಸ್ಮರಣೀಯ ಸೇವೆಯ ಕುರುಹಾಗಿ ಉಳಿದಿರುವುದೇ ಕಬ್ಬನ್ ಪಾರ್ಕ್.

ಬೆಂಗಳೂರು ನಗರದ ಹೃದಯ ಭಾಗದಲ್ಲಿರುವ ವಿಶಾಲವಾದ ಈ ಉದ್ಯಾನವನ ಇಲ್ಲಿನ ನಾಗರಿಕರಿಗೆ ಶ್ವಾಸಕೋಶಗಳಿದ್ದಂತೆ. ಇಂತಹ ಪ್ರದೇಶದಲ್ಲಿ ಆಡಳಿತ ಕಚೇರಿಗಳನ್ನು ನಿರ್ಮಿಸುವ ಮೂಲಕ ಕಬ್ಬನ್ ಅವರು ಬೆಂಗಳೂರು ದಂಡು ಪ್ರದೇಶ ಹಾಗೂ ಬೆಂಗಳೂರು ಪೇಟೆ ಭಾಗಗಳನ್ನು ಬೆಸೆಯುವಲ್ಲಿ ಮುಖ್ಯ ಪಾತ್ರವಹಿಸಿದರು. ಈ ಭಾಗ ಕ್ರಮೇಣ ಉದ್ಯಾನವನವಾಗಿ ಬೆಳಗಲು ಮುಖ್ಯ ಕಾರಣರಾದವರು ವಾಸ್ತುಶಿಲ್ಪತಜ್ಞರಾಗಿದ್ದ ರಾಯಲ್ ಇಂಜಿನಿಯರ್ ಆರ್.ಎಚ್.ಸ್ಯಾಂಕಿ.

ಆಡಳಿತ ಕಚೇರಿಯು 1860ರಲ್ಲಿ ಟಿಪ್ಪು ಸುಲ್ತಾನ್ ಅರಮನೆಯೂ ಸೇರಿದಂತೆ ಕೆಲ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಕಬ್ಬನ್ ಅವರು ಆರ್. ಎಚ್. ಸ್ಯಾಂಕಿಯವರ ಜೊತೆಗೂಡಿ ರಾಜ್ಯದ ಬೊಕ್ಕಸದಲ್ಲಿ ಮಿತವ್ಯಯ ಸಾಧಿಸುವ ದೃಷ್ಟಿಯಿಂದ ಎಲ್ಲಾ ಕಚೇರಿಗಳು ಒಂದೇ ಕಡೆ ಕಾರ್ಯನಿರ್ವಹಿಸಬೇಕೆಂದು ಯೋಚಿಸಿದರು. ಯಲಹಂಕ ಗೇಟ್ (ಈಗಿನ ಮೈಸೂರು ಬ್ಯಾಂಕ್ ಸರ್ಕಲ್) ನಿಂದ ದಂಡಿನ ಕಡೆಗೆ ಇದ್ದ ಪೇಟೆ ರಸ್ತೆಯ ಬಲಗಡೆಯ ಎತ್ತರವಾದ ಪ್ರದೇಶದಲ್ಲಿ ನೂತನ ಆಡಳಿತ ಕಚೇರಿ ಕಟ್ಟಡವನ್ನು ನಿರ್ಮಿಸಲು ನಕಾಶೆಯನ್ನು 1861ರ ವೇಳೆಗೆ ಸಿದ್ಧಪಡಿಸಿದರು. ಆದರೆ ನಾನಾ ಕಾರಣಗಳಿಂದ ಈ ನಕಾಶೆಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆಯುವಲ್ಲಿ ತಡವಾಯಿತು. ಏತನ್ಮಧ್ಯೆ ಕಬ್ಬನ್ ಅವರ ಆರೋಗ್ಯವೂ ಕ್ಷೀಣಿಸತೊಡಗಿತು. ತತ್ಪರಿಣಾಮವಾಗಿ ಅವಿವಾಹಿತರಾಗಿದ್ದ ಕಬ್ಬನ್ ಅವರು 1861ರ ಮಾರ್ಚ್ 16ರಂದು ಬೆಂಗಳೂರನ್ನು ಬಿಟ್ಟು ಸ್ವದೇಶಕ್ಕೆ ಹಿಂತಿರುಗುವಾಗ ಮಾರ್ಗಮಧ್ಯೆ ಮರಣಹೊಂದಿದರು. ಆಗ ಅವರಿಗೆ 76 ವರ್ಷ ವಯಸ್ಸಾಗಿತ್ತು.

ಮುಂದೆ, 1863ರ ವೇಳೆಗೆ ಕೇಂದ್ರ ಸರ್ಕಾರದಿಂದ ಕಟ್ಟಡದ ನಕಾಶೆ ಮಂಜೂರಾಗಿ 1864ರ ವೇಳೆಗೆ ಸ್ಯಾಂಕಿಯವರ ನೇತೃತ್ವದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಕಟ್ಟಡ ನಿರ್ಮಾಣವಾಗುತ್ತಿದ್ದಂತೆಯೇ ಮುಂಭಾಗದಲ್ಲಿದ್ದ ಸುಮಾರು 100 ಎಕರೆ ತಗ್ಗು ಪ್ರದೇಶದಲ್ಲಿ ಉದ್ಯಾನವನ ರಚನೆಯ ರೂಪರೇಷೆಗಳನ್ನು

ಸ್ಯಾಂಕಿಯವರೇ ಸಿದ್ಧಪಡಿಸಿದರು. ಆಡಳಿತ ಕಚೇರಿಯ ಮುಖ್ಯ ಪ್ರವೇಶದ್ವಾರವು ಉದ್ಯಾನದ ಕಡೆ ಮುಖ ಮಾಡಿತ್ತು. ಏತನ್ಮಧ್ಯೆ ಕಬ್ಬನ್ ಅವರ ಅನನ್ಯ ಸೇವೆಯನ್ನು ಚಿರಸ್ಥಾಯಿಗೊಳಿಸುವ ಉದ್ದೇಶವನ್ನು ಹೊಂದಿದ್ದ ಸಂಸ್ಥಾನದ ಆಳರಸರು ಹಾಗೂ ಪ್ರಜೆಗಳ ಆಶಯದಂತೆ 1865ರ ವೇಳೆಗೆ ಇಂಗ್ಲೆಂಡಿನಲ್ಲಿ ಸಿದ್ದವಾಗಿದ್ದ ಕಬ್ಬನ್ ಅವರ ಅಶ್ವಾರೂಢ ಕಂಚಿನ ಸುಂದರ ಪ್ರತಿಮೆ ಬೆಂಗಳೂರು ತಲುಪಿತ್ತು[1]. ಕಟ್ಟಡ ಸಿದ್ದವಾಗುತ್ತಿದ್ದಂತೆಯೇ ಕಚೇರಿಯ ಮುಖ್ಯದ್ವಾರದಲ್ಲಿ ಆ ಪ್ರತಿಮೆಯನ್ನು ಸುಮಾರು ಹತ್ತು ಅಡಿ ಎತ್ತರದ ಪೀಠದ ಮೇಲೆ ಉದ್ಯಾನದ ಕಡೆ ಮುಖ ಮಾಡಿರುವ ಹಾಗೆ ಸ್ಥಾಪಿಸಲಾಯಿತು. ಕಬ್ಬನ್ ಅವರು ಬೆಂಗಳೂರು ಬಿಟ್ಟು ಹೋದ ಐದು ವರ್ಷಕ್ಕೆ ಸರಿಯಾಗಿ 1866 ಮಾರ್ಚ್ 16ರಂದು ಸಂಜೆ ಸುಮಾರು ನಾಲ್ಕು ಗಂಟೆಗೆ ಆಗ್ಗೆ ಮುಖ್ಯ ಕಮೀಷನರ್ ಆಗಿದ್ದ ಎಲ್.ಬಿ.ಬೌರಿಂಗ್ ಹಾಗೂ ಇತರೆ ಯೂರೋಪಿಯನ್ ಅಧಿಕಾರಿಗಳ ಸಮ್ಮುಖದಲ್ಲಿ ಮಾರ್ಕ್ ಕಬ್ಬನ್ ಅವರ ಪ್ರತಿಮೆಯ ಅನಾವರಣ ಕಾರ್ಯಕ್ರಮವು ಬಹು ವಿಜೃಂಭಣೆಯಿಂದ ನಡೆಯಿತು. ಛಾಯಾ ಗ್ರಾಹಕರಾದ ಮೇಜರ್ ಡಿಕ್ಸನ್ ಮತ್ತು ಬಾರ್ಟನ್ ಅವರು ಆ ಸಂದರ್ಭದಲ್ಲಿ ಅನೇಕ ಛಾಯಾ ಚಿತ್ರಗಳನ್ನು ತೆಗೆದರು[2]. ಬೆಂಗಳೂರಿನಲ್ಲಿ ಅನಾವರಣಗೊಂಡ ಪ್ರಪ್ರಥಮ ಪ್ರತಿಮೆ ಇದಾಗಿತ್ತು. ಪ್ರಪ್ರಥಮವಾಗಿ ಈ ಉದ್ಯಾನದ ಮೂಲಕ ಒಂದು ರಸ್ತೆಯನ್ನು 1866ರಲ್ಲಿ ನಿರ್ಮಿಸಲಾಯಿತು. ಈ ರಸ್ತೆ ದಂಡಿನಲ್ಲಿದ್ದ ಜೈಲಿನಿಂದ ನೇರವಾಗಿ ನೂತನವಾಗಿ ನಿರ್ಮಾಣವಾಗುತ್ತಿದ್ದ ಸೆಂಟ್ರಲ್ ಜೈಲ್ (ಗಾಂಧಿನಗರದಲ್ಲಿದ್ದ ಜೈಲ್) ಗಳನ್ನು ಜೋಡಿಸುವ ರಸ್ತೆ ಆಗಿತ್ತು. ಈ ಕಾರಣದಿಂದ 'ಜೈಲ್ ರಸ್ತೆ' ಎಂದು ಹೆಸರು ಪಡೆಯಿತು[3]. ಅದಾಗಲೇ ಈ ಉದ್ಯಾನದ ದಕ್ಷಿಣ ದಿಕ್ಕಿನಲ್ಲಿ ನೃಪತುಂಗ ರಸ್ತೆ(ಆಗಿನ ಸೆನೊಟಾಫ್ ರಸ್ತೆ)ಯನ್ನು ನಿರ್ಮಿಸಲಾಗಿತ್ತು. ಇದೇ ರೀತಿ ಉದ್ಯಾನದ ಸರಹದ್ದಿನಲ್ಲಿ ಪೂರ್ವದಿಕ್ಕಿನ ಕಡೆ ಇದ್ದ ಸಿಡ್ನಿ ರಸ್ತೆ (ಈಗಿನ ಕಸ್ತೂರಿ ಬಾ ರಸ್ತೆ) ಪಶ್ಚಿಮಕ್ಕೆ ಪೇಟೆ ರಸ್ತೆ (ಈಗಿನ ವಿಧಾನ ವೀದಿ) ಉತ್ತರಕ್ಕೆ ಸೆಂಟ್‌ಮಾರ್ಕ್ಸ್ ರಸ್ತೆ (ಈಗಿನ ಕ್ವೀನ್ಸ್ ರಸ್ತೆ) ಗಳನ್ನು ವ್ಯವಸ್ಥಿತವಾಗಿ ರಚಿಸಲಾಯಿತು.

ಆಡಳಿತ ಕಚೇರಿಯ ಕಟ್ಟಡ (ಅಠಾರ ಕಚೇರಿ ಕಟ್ಟಡ) 1868ರಲ್ಲಿ ಪೂರ್ಣ ಸಿದ್ಧಗೊಂಡಿತು. ಈ ಕಟ್ಟಡ ಬೌರಿಂಗ್ ಅವರ ಕಾಲದಲ್ಲಿ ನಿರ್ಮಾಣವಾದ ಕಾರಣ 'ಬೌರಿಂಗ್ ಕಟ್ಟಡ' ಎಂದು ಕರೆಯಲಾಯಿತು. ಉದ್ಯಾನ ಕಡೆ ಇದ್ದ ಇಳಿಜಾರು ಪ್ರದೇಶದಲ್ಲಿ ಅಠಾರ ಕಚೇರಿಗೆ ಹೋಗಲು ಮೆಟ್ಟಲುಗಳನ್ನು ನಿರ್ಮಿಸಿ ಮೆಟ್ಟಲುಗಳ ಇಕ್ಕೆಲದಲ್ಲಿ ಎರಡು ಅಲಂಕಾರಿಕ ಹೂವಿನ ಕುಂಡಗಳನ್ನು ಅಳವಡಿಸಲಾಯಿತು. ಈ ಕುಂಡಗಳ ಹೊರಭಾಗದ ಸುತ್ತ ಮಿಥುನ ಶಿಲ್ಪಗಳಿರುವುದನ್ನು ಈಗಲೂ ಕಾಣಬಹುದು. ಭವ್ಯವಾದ ಈ ಕಟ್ಟಡ ಹಾಗೂ ಇಲ್ಲಿನ ಸುಂದರ ಪರಿಸರವನ್ನು ಕಾಣಲು, ಮಿಗಿಲಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದ ಕಬ್ಬನ್ ಅವರ ಪ್ರತಿಮೆಗೆ ಗೌರವವನ್ನು ಅರ್ಪಿಸಲು ಬಹಳಷ್ಟು ಜನರು ಈ ಸ್ಥಳಕ್ಕೆ ಬರತೊಡಗಿದರು. ಅಠಾರ ಕಚೇರಿ ಮುಖ್ಯ ದ್ವಾರದಿಂದ ಈಗಿನ ಕಸ್ತೂರಿ ಬಾ ರಸ್ತೆಯವರೆಗೆ ವಿಶಾಲವಾದ ರಸ್ತೆಯನ್ನು ನಿರ್ಮಿಸಿ 'ಸೆಂಟ್ರಲ್ ಅವಿನ್ಯೂ' ಎಂದು ಹೆಸರಿಟ್ಟು ಆ ರಸ್ತೆಯ ಅಂಚಿನಲ್ಲಿ ಜಾವಾಫಿಗ್ (ಕಲ್ಲತ್ತಿ ಮರ) ಮರಗಳನ್ನು ನೆಡಲಾಯಿತು. ಉದ್ಯಾನವನದಲ್ಲಿ ಅಲ್ಲಲ್ಲಿದ್ದ ಬೇಡವಾದ ಮರಗಳನ್ನು ಕಡಿಸಿದ ಬೌರಿಂಗ್ ಅವರು ಉದ್ಯಾನವನ್ನು ವಿವಿಧ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಂಡರು. 1870ರಲ್ಲಿ ಮೈಸೂರು ರಾಜ್ಯಕ್ಕೆ ಚೀಫ್ ಕಮೀಷನರ್ ಆಗಿ ರಿಚರ್ಡ್ ಮೀಡ್ ಅವರು ನೇಮಕಗೊಂಡರು. ಅವರ ಹೆಸರಲ್ಲೇ 1872 ರಲ್ಲಿ ಈ ಉದ್ಯಾನಕ್ಕೆ 'ಮೀಡ್ಸ್ ಪಾರ್ಕ್' ಎಂದು ಹೆಸರಿಡಲಾಯಿತು. ಆದರೆ ಮೀಡ್ ಅವರೇ ಈ ಪಾರ್ಕ್‌ಗೆ ಕಬ್ಬನ್ ಅವರ ಹೆಸರಿಡುವುದೇ ಬಹುಸೂಕ್ತ ಎಂದು ನಿರ್ಧರಿಸಿ 1873 ರಲ್ಲಿ "ಕಬ್ಬನ್ ಪಾರ್ಕ್" ಎಂದು ಹೆಸರಿಟ್ಟರು.

1875ರಲ್ಲಿ ಸರ್ಕಾರಿ ಉದ್ಯಾನಗಳ ಆಡಳಿತಕ್ಕೆ ಅಂದರೆ ಲಾಲ್ ಬಾಗ್ ಆಡಳಿತಕ್ಕೆ ಸೇರ್ಪಡೆಯಾದ ನಂತರ ಸರ್ವತೋಮುಖವಾಗಿ ಈ ಉದ್ಯಾನ ಬೆಳೆಯತೊಡಗಿತು. 1874–75ರಲ್ಲಿ ಮಳೆ ಬಾರದೆ ಘೋರ ಕ್ಷಾಮ ತಲೆದೋರಿತು. ಆ ಕಾರಣ ಇಲ್ಲಿನ ಬಡಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಆಗ ತಾನೇ ಮೈಸೂರು ಸಂಸ್ಥಾನದಲ್ಲಿ ಪ್ರಾರಂಭವಾಗಿದ್ದ ಸಾರ್ವಜನಿಕ ಕಾಮಗಾರಿ ಇಲಾಖೆಯು ಕೆಲ ಕಾಮಗಾರಿ ಕಾರ್ಯಗಳನ್ನು ಕೈಗೊಂಡಿತು. ಆ ಕಾರ್ಯಗಳಲ್ಲಿ ಮ್ಯೂಸಿಯಂ ಕಟ್ಟಡ ನಿರ್ಮಾಣವೂ ಒಂದು. ಈ ಸುಂದರ ಕಟ್ಟಡವೂ ಸಹ ರಾಯಲ್ ಇಂಜನಿಯರ್ ಸ್ಯಾಂಕಿಯವರ ನೇತೃತ್ವದಲ್ಲಿಯೇ ನಿರ್ಮಾಣಗೊಂಡಿತು. ಅಠಾರ ಕಚೇರಿಯ ಮುಖ್ಯದ್ವಾರಕ್ಕೆ ನೇರವಾಗಿ ನಿರ್ಮಿತವಾದ ಮ್ಯೂಸಿಯಂನ ಪ್ರವೇಶದ್ವಾರವು ಸಹ ಪ್ರಾರಂಭದಲ್ಲಿ ಕಬ್ಬನ್ ಪಾರ್ಕ್ ಕಡೆಗೆ ಇದ್ದಿರಬಹುದೆಂದು ತಿಳಿದುಬರುತ್ತದೆ. ಅಠಾರ ಕಚೇರಿಗೆ ಹೋಗಲು ಮ್ಯೂಸಿಯಂನ ಎಡಗಡೆ ಹಾಗೂ ಬರಲು ಮ್ಯೂಸಿಯಂನ ಬಲಗಡೆ ರಸ್ತೆಯ ವ್ಯವಸ್ಥೆಯಾಯಿತು. ಸ್ಯಾಂಕಿಯವರ ಕೊಡುಗೆಯಾದ ಸುಮಾರು 12 ಅಡಿ ಎತ್ತರದ ಗ್ರೀಕ್ ಶೈಲಿಯ ಬಹುಸುಂದರ ಪುಷ್ಪಕುಂಡವನ್ನು ಕಬ್ಬನ್ ಪಾರ್ಕ್ ಕಡೆಗಾದಂತೆ ಮ್ಯೂಸಿಯಂಗೆ ನೇರವಾಗಿ ಅಳವಡಿಸಿರುವುದನ್ನು ಈಗಲೂ ಕಾಣಬಹುದು[4]. 1877ರ ನವೆಂಬರಿನಲ್ಲಿ ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಿ ತೆರೆಯಲ್ಪಟ್ಟ ಈ ಮ್ಯೂಸಿಯಂ ಅಠಾರ ಕಚೇರಿಯ ಮಧ್ಯಭಾಗ ಕಬ್ಬನ್ ಪಾರ್ಕ್‌ನ ಮುಖ್ಯ ಕೇಂದ್ರಬಿಂದುವಾಯಿತು. ಅದರಿಂದಾಗಿ ಪಾರ್ಕ್‌ಗೆ ಭೇಟಿಕೊಡುವ ಜನರ ಸಂಖ್ಯೆಯೂ ಅಧಿಕಗೊಂಡಿತು. ಉದ್ಯಾನಕ್ಕೆ ಬರುತ್ತಿದ್ದವರ ಮನೋರಂಜನೆಗಾಗಿ ಕಬ್ಬನ್ ಅವರ ಪ್ರತಿಮೆಯ ಮುಂಭಾಗದ ಟರೇಸ್ ಗಾರ್ಡನ್‌ನಲ್ಲಿ ಪ್ರತಿ ಭಾನುವಾರ ಇಂಗ್ಲೀಷ್ ಬ್ಯಾಂಡ್ ವಾದ್ಯ–ಸಂಗೀತ ಕಾರ್ಯಕ್ರಮಗಳು ಆರಂಭಗೊಂಡವು. ಉದ್ಯಾನದ ಕಡೆ ಇದ್ದ ವಿಶಾಲವಾದ ತಗ್ಗು ಪ್ರದೇಶವು ಜನರು ಕುಳಿತು ಕಾರ್ಯಕ್ರಮವನ್ನು ವೀಕ್ಷಿಸಲು ಪ್ರಶಸ್ತವಾಗಿತ್ತು. 1879ರಲ್ಲಿ ಸೆನೊಟಾಫ್ ರಸ್ತೆಯ ಕಡೆ ಪ್ರವೇಶ ಇರುವಂತೆ ಎಲೆ ಮಲ್ಲಪ್ಪ ಶೆಟ್ಟರು ಮೆಟರ್ನಿಟಿ ಆಸ್ಪತ್ರೆಯನ್ನು ನಿರ್ಮಿಸಿದರು[5]. ಆನಂತರ ಇದೇ ರೀತಿ ಈ ರಸ್ತೆಯಲ್ಲಿ ಒಂದೊಂದೇ ಕಟ್ಟಡಗಳು ನಿರ್ಮಾಣವಾಗುವುದಕ್ಕೆ ಪ್ರಾರಂಭವಾಯಿತು. 1880ರಲ್ಲಿ ಪಾರ್ಕ್‌ನ ಒಳಭಾಗದಲ್ಲಿ ಟೆನ್ನೀಸ್ ಕ್ಲಬ್ ಪ್ರಾರಂಭವಾಯಿತು. 1897 ಜೂನ್ 21 ಮತ್ತು 22 ಎರಡು ದಿವಸ ವಿಕ್ಟೋರಿಯಾ ಮಹಾರಾಣಿಯವರ ಆಡಳಿತದ 60ನೇ ವರ್ಷದ ವಜ್ರ ಮಹೋತ್ಸವವು ಬಹು ವಿಜೃಂಭಣೆಯಿಂದ ಕಬ್ಬನ್ ಪಾರ್ಕ್‌ನಲ್ಲಿ ನಡೆಯಿತು. ಆ ಎರಡು ದಿವಸ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನರು ಸೇರಿದ್ದು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮುಖ್ಯವಾಗಿ ಸೈನಿಕ ದಳದವರಿಂದ ನಡೆದ ವಾದ್ಯಸಂಗೀತ ಕಾರ್ಯಕ್ರಮ ಜನರನ್ನು ಬಹಳ ಆಕರ್ಷಿಸಿತು. ಈ ಉತ್ಸವದ ಜ್ಞಾಪಕಾರ್ಥವಾಗಿ ಸುಂದರವಾಗಿ ಹೂ ಬಿಡುವಂತಹ ನೂರಾರು ಗಿಡಗಳನ್ನು ನೆಡಲಾಯಿತು. ಆನಂತರ ಪ್ರತಿ ವರ್ಷ ಡಿಸೆಂಬರ್ ಕೊನೆಯ ವಾರ ಮತ್ತು ಜನವರಿ ಮೊದಲ ವಾರ ಒಟ್ಟು 15 ದಿವಸ 'ಕ್ರಿಸ್ಮಸ್ ಮೇಳ' ಈ ಪಾರ್ಕ್‌ನಲ್ಲಿ ನಡೆಯಲು ಪ್ರಾರಂಭವಾಯಿತು. ಈ ಕ್ರಿಸ್ಮಸ್ ಮೇಳವು ಕ್ರಮೇಣ ಕಬ್ಬನ್ ಪಾರ್ಕ್‌ನ ಸುಮಾರು ಅರ್ಧಭಾಗವನ್ನು ಆವರಿಸುತ್ತಿತ್ತು ಎಂದು ಕಬ್ಬನ್ ಪಾರ್ಕ್‌ನ ವಾರ್ಷಿಕ ವರದಿಯಿಂದ ತಿಳಿದುಬರುತ್ತದೆ. 1900ರಲ್ಲಿ Regulation for the Prevention of Cruelty to Animals Act ಜಾರಿಗೆ ಬರುವುದಕ್ಕೆ ಮೊದಲೇ ಪ್ರಾಣಿ ದಯಾ ಸಂಘ (1875) ಪ್ರಾರಂಭವಾಯಿತು[6]. ಈ ಪ್ರಾಣಿ ದಯಾ ಸಂಘದ ನಿಯಂತ್ರಣದಲ್ಲಿ ಪಶು ವೈದ್ಯಶಾಲೆ (ಕಂಟೋನ್ಮೆಂಟ್ ಬಳಿಯಿದ್ದ) ಕಾರ್ಯನಿರ್ವಹಿಸುತ್ತಿದ್ದ ಅಂಶ ಉಲ್ಲೇಖಾರ್ಹವಾಗಿದೆ. ಈ ಸಂಘಕ್ಕಾಗಿ ಕಬ್ಬನ್ ಪಾರ್ಕ್‌ನಲ್ಲಿ ಒಂದು ಗುಂಟೆ ಜಮೀನನ್ನು ನೀಡಿದರು. ಆ ಸ್ಥಳದಲ್ಲಿ ನಿರ್ಮಿಸಲಾದ ಸಣ್ಣ ಕೊಠಡಿಯಲ್ಲಿ "ಪ್ರಾಣಿ ದಯಾ ಸಂಘ" ಪ್ರಾರಂಭವಾಯಿತು. ಈ ಸಂಘ ಈಗಲೂ 'ಪ್ರಾಣಿ ಹಿಂಸೆ ನಿವಾರಣಾ ಸಂಘ' 'ಕರುಣಾ' ಹೆಸರಿನಿಂದ ವಿಕ್ಟೋರಿಯಾ ರಾಣಿ ಪ್ರತಿಮೆಯ ಬಳಿ ಇದ್ದು ಪ್ರತಿ ವರ್ಷ ಮೂಕ ಪ್ರಾಣಿಗಳ ಬಗ್ಗೆ ಅನುಕಂಪ ತೋರಿಸುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ಈ ಪ್ರದೇಶದಲ್ಲಿ 1903ರಲ್ಲಿ ಸರ್ವೆ ಆಫೀಸ್ ಪ್ರಾರಂಭವಾಯಿತು. ಅದೇ ವರ್ಷ 1903 ನವೆಂಬರ್ 15ರಂದು ಶೇಷಾದ್ರಿ ಅಯ್ಯರ್ ಮೆಮೊರಿಯಲ್ ಹಾಲ್ ನಿರ್ಮಾಣಕ್ಕೂ ಮತ್ತು ವಿಕ್ಟೋರಿಯಾ ರಾಣಿ ಪ್ರತಿಮೆ ಸ್ಥಾಪನೆಗೂ ರೆಸಿಡೆಂಟ್ ರೋನಾಲ್ಡ್ ರಾಬರ್ಟ್‌ಸನ್ ಅವರು ಅಡಿಗಲ್ಲನ್ನು ಹಾಕಿದರು. ವಿಕ್ಟೋರಿಯಾ ರಾಣಿ ಪ್ರತಿಮೆಯ ಸ್ಥಾಪನೆಗೆ ಬಹು ವಿಶಾಲವಾದ ಸ್ಥಳವನ್ನು ಆಯ್ಕೆ ಮಾಡಿದರು. ಆ ಕಾರಣಕ್ಕಾಗಿ ಆ ಸ್ಥಳದಲ್ಲಿದ್ದಂತಹ ಪೋಲಿಸ್ ಸ್ಟೇಷನ್ ಕಟ್ಟಡ ಮತ್ತು ಪೋಲಿಸ್ ಅಧಿಕಾರಿಗಳ ವಸತಿ ಗೃಹಗಳನ್ನು ನೆಲಸಮ ಮಾಡಿ 1906ರಲ್ಲಿ ವಿಕ್ಟೋರಿಯಾ ರಾಣಿಯ ಪ್ರತಿಮೆಯನ್ನು ಅನಾವರಣಗೊಳಿಸಲಾಯಿತು. 1909–10ರಲ್ಲಿ ಈಗಿರುವ ಪೋಲಿಸ್ ಸ್ಟೇಷನ್ ಕಟ್ಟಡ ಮತ್ತು ಪೋಲಿಸ್ ಅಧಿಕಾರಿಗಳು ವಾಸಮಾಡುವ ಗೃಹಗಳನ್ನು ನೂತನವಾಗಿ ನಿರ್ಮಿಸಲಾಯಿತು. 1913ರಲ್ಲಿ ಶೇಷಾದ್ರಿ ಅಯ್ಯರ್ ಪ್ರತಿಮೆಯನ್ನು ವೈಸರಾಯ್ ಹಾರ್ಡಿಂಜ್ ಅವರು ಆನಾವರಣಗೊಳಿಸಿದರು. 1912ರಲ್ಲಿ Y.M.C.A ಪ್ರಾರಂಭವಾದರೆ ಅದೇ ವರ್ಷ ದಿವಾನ್ ವಿಶ್ವೇಶ್ವರಯ್ಯನವರ ಪ್ರೋತ್ಸಾಹದಿಂದ ಸೆಂಚುರಿ ಕ್ಲಬ್‌ಗಾಗಿ ದೊರೆತ ನಿವೇಶನದಲ್ಲಿ 1916 ರಲ್ಲಿ ಸುಸಜ್ಜಿತವಾದ ಕಟ್ಟಡದೊಂದಿಗೆ ಸೆಂಚುರಿ ಕ್ಲಬ್ ಪ್ರಾರಂಭಗೊಂಡಿತು. 1915ರಲ್ಲಿ ಸಿದ್ಧಗೊಂಡ ಶೇಷಾದ್ರಿ ಅಯ್ಯರ್ ಮೆಮೊರಿಯಲ್ ಹಾಲ್‌ನಲ್ಲಿ ಪಬ್ಲಿಕ್ ಲೈಬ್ರರಿ ಪ್ರಾರಂಭವಾಯಿತು. ಈ ಕಟ್ಟಡದ ವಿನ್ಯಾಸ ಮತ್ತು ಮಧ್ಯದಲ್ಲಿನ ವಿಶಾಲವಾದ ಹಾಲ್‌ನ ತಳಭಾಗವು ಮೊದಲಿಗೆ ವುಡನ್ ಫ್ಲೋರ್‌ನಿಂದ ಕೂಡಿದ್ದುದನ್ನು ಗಮನಿಸಿದರೆ ಮುಖ್ಯವಾಗಿ ನೃತ್ಯ ಕಾರ್ಯಕ್ರಮಗಳಿಗಾಗಿಯೇ ಈ ಕಟ್ಟಡವನ್ನು ನಿರ್ಮಿಸಿರಬಹುದು ಎಂದು ತೋರುತ್ತದೆ. ಈ ಕಟ್ಟಡದ ಬಳಿ ಹಾದು ಹೋಗುತ್ತಿದ್ದ ಜೈಲ್ ರಸ್ತೆಗೆ ನಂತರದಲ್ಲಿ ಶೇಷಾದ್ರಿ ರಸ್ತೆ ಎಂದು ಮರುನಾಮಕರಣ ಮಾಡಲಾಯಿತು. ಅದಾಗಲೇ ಸರ್ಕಾರಿ ನೌಕರರಲ್ಲಿ ಒಬ್ಬರಾಗಿದ್ದ ಶ್ರೀಕಂಠಯ್ಯ ಎಂಬುವರೊಬ್ಬರ ಪ್ರಯತ್ನದಿಂದ ಸೆಕ್ರೆಟೇರಿಯಟ್ ಕ್ಲಬ್ (1904) ಪ್ರಾರಂಭವಾಗಿತ್ತು. ಈ ಕ್ಲಬ್‌ನ ಮುಂಭಾಗದಲ್ಲಿನ 50 ಅಡಿ ವ್ಯಾಸವುಳ್ಳ ನಾಲ್ಕು ಎಕರೆ ಪ್ರದೇಶವನ್ನು ಆಯ್ಕೆ ಮಾಡಿ ಕಬ್ಬನ್ ಅವರ ಪ್ರತಿಮೆಯ ಮುಂಭಾಗದಲ್ಲಿ ನಡೆಯುತ್ತಿದ್ದ ವಾದ್ಯ ಸಂಗೀತ ಕಾರ್ಯಕ್ರಮಗಳು ಇಲ್ಲಿ ಮುಂದುವರೆಯುವಂತೆ ಏರ್ಪಾಟಾಯಿತು. ಈ ವಾದ್ಯಸಂಗೀತ ಕಾರ್ಯಕ್ರಮಗಳಿಗಾಗಿಯೇ ಇಂಗ್ಲೆಂಡಿನಿಂದ ಆಮದಾಗಿದ್ದ ಬಿಚ್ಚಿ ಜೋಡಿಸುವಂತ ವಾದ್ಯಮಂಟಪವನ್ನು 1917ರಲ್ಲಿ ನಿರ್ಮಿಸಲಾಯಿತು. 1918ರಲ್ಲಿ ಈಗಿನ ಕಾರ್ಪೊರೇಷನ್ ಆಫೀಸ್ ಕಡೆ ಇರುವ ಪ್ರವೇಶದ್ವಾರದಲ್ಲಿದ್ದ ಹಳೆ ಉಕ್ಕಡ ಕಟ್ಟಡವನ್ನು ನೆಲಸಮಮಾಡಿ ಅಲ್ಲಿಯೇ ಇದ್ದ ಖಾಸಗೀ ತೋಟಗಳನ್ನು ಕಬ್ಬನ್ ಪಾರ್ಕಿನ ವ್ಯಾಪ್ತಿಗೆ ಸ್ವಾಧೀನ ಪಡಿಸಿಕೊಂಡು ತೋಟದಲ್ಲಿದ್ದ ಹಳೆಯ ಬಾವಿಗಳನ್ನು ಮುಚ್ಚಲಾಯಿತು.

1919ರಲ್ಲಿ ಏಳನೇ ಎಡ್ವರ್ಡ್ ಅವರ ಅಮೃತಶಿಲಾ ಪ್ರತಿಮೆಯನ್ನು ವೈಸ್‌ರಾಯ್ ಚಮ್ಸ್ ಫೋರ್ಡ್ ಅವರು ಅನಾವರಣಗೊಳಿಸಿದರು. ಸುಮಾರು 1920ರಲ್ಲಿ M.G.I.D. ಕಛೇರಿ ಪ್ರಾರಂಭವಾಗಿ ಅಲ್ಲಿನ ನೌಕರರ ಕ್ಯಾಂಟೀನ್ ಸೌಲಭ್ಯಕ್ಕಾಗಿ ಪ್ರತ್ಯೇಕ ಕಟ್ಟಡವನ್ನು ನಿರ್ಮಿಸಿದಾಗ ಅಲ್ಲಿ M.G.I.D. ರೆಸ್ಟೋರೆಂಟ್ ಪ್ರಾರಂಭವಾಯಿತು. ಆ ಕಟ್ಟಡವೇ ಈಗಿನ ಪ್ರೆಸ್‌ಕ್ಲಬ್[7]. 1914ರಿಂದ ವಸ್ತು ಪ್ರದರ್ಶನಗಳು ಕಬ್ಬನ್ ಪಾರ್ಕ್‌ನಲ್ಲಿ ನಡೆಯಲು ಪ್ರಾರಂಭವಾಯಿತು. ಆದರೆ 1926ರಲ್ಲಿ ಜಿಲ್ಲಾ ಬೋರ್ಡ್‌ನವರು ನಡೆಸಿದ ಕೈಗಾರಿಕಾ ಮತ್ತು ವ್ಯವಸಾಯ ವಸ್ತು ಪ್ರದರ್ಶನ ಬಹು ಯಶಸ್ವಿಯಾಗಿ ಒಂದು ವಾರ ನಡೆಯಿತು. ಕೊನೆಯ ದಿವಸವಾದ ಡಿಸೆಂಬರ್ 27ರಂದು ರಾತ್ರಿ ಮೈಸೂರು ಸೈನ್ಯ ಶಾಖೆಯವರು ಪ್ರದರ್ಶಿಸಿದ ಬಾಣಬಿರುಸುಗಳ ಪ್ರತಾಪದಿಂದ ಇಲ್ಲಿನ ಬಹು ಮುಖ್ಯ ಭಾಗಗಳು ಬೆಂದು ಬೂದಿಯಾದವು. ಇಷ್ಟಾದರೂ ಈ ವಸ್ತು ಪ್ರದರ್ಶನ 1927ರಿಂದ ಮಾಮೂಲಿನಂತೆ ಮುಂದುವರೆಯಿತು.

1927 ಸೆಪ್ಟೆಂಬರ್ 7 ರಂದು ಸಂಜೆ ಮಹಾರಾಜರ ರಜತ ಮಹೋತ್ಸವ ಮೆರವಣಿಗೆಯು ಮೈಸೂರಿನಲ್ಲಿ ನಡೆದ ರೀತಿಯಲ್ಲಿಯೇ ಕಬ್ಬನ್ ಪಾರ್ಕ್‌ನಲ್ಲಿಯೂ ಬಹು ವಿಜೃಂಭಣೆಯಿಂದ ನಡೆಯಿತು. ಈ ಮಹೋತ್ಸವದ

ನೆನಪಿಗಾಗಿ ಕಬ್ಬನ್ ಪಾರ್ಕ್‌ನಲ್ಲಿ ಚಾಮರಾಜೇಂದ್ರ ಒಡೆಯರ್ ಅವರ ಅಮೃತಶಿಲಾ ಪ್ರತಿಮೆಯನ್ನು ಅನಾವರಣಗೊಳಿಸಿ ಕಬ್ಬನ್ ಪಾರ್ಕ್‌ಗೆ ಶ್ರೀ ಚಾಮರಾಜೇಂದ್ರ ಪಾರ್ಕ್ ಎಂದು ಹೆಸರಿಡಲಾಯಿತು8. ಈ ಪ್ರತಿಮೆಗೆ ನೇರವಾಗಿ ಸಿದ್ದಲಿಂಗಯ್ಯ ಸರ್ಕಲ್‌ವರೆಗೆ ನೂತನವಾಗಿ ರಸ್ತೆಯನ್ನು ನಿರ್ಮಿಸಲಾಯಿತು. 1929ರಲ್ಲಿ ಮ್ಯೂಸಿಯಂ ಹಿಂಭಾಗದಲ್ಲಿನ ಬಂಡೆಗಳ ನಡುವೆ ಕಾಣಿಸಿಕೊಂಡು ಸುಮಾರು ಹತ್ತು ಅಡಿ ಉದ್ದದ ಹೆಬ್ಬಾವೊಂದನ್ನು ಸಾರ್ವಜನಿಕರು ಹಿಡಿದು ಮ್ಯೂಸಿಯಂಗೆ ಒಪ್ಪಿಸಿದರು. ಅಲ್ಲಿ ಅದಕ್ಕೆ ಚರ್ಮ ಪ್ರಸಾದನ ಮಾಡಿ ಸಾರ್ವಜನಿಕರ ಪ್ರದರ್ಶನಕ್ಕೆ ಇಡಲಾಯಿತು. ಪಬ್ಲಿಕ್ ಲೈಬ್ರರಿಯ ನೆಲ ಅಂತಸ್ತಿನಲ್ಲಿ 1930–40ರ ದಶಕದಲ್ಲಿ ಹನುಮಂತರಾವ್ ಎನ್ನುವವರು 'ಹನುಮಂತರಾವ್ ಟಿಫನ್ ರೂಮ್ಸ್' ಎಂಬ ಹೆಸರಿನಿಂದ ಹೋಟಲನ್ನು ನಡೆಸುತ್ತಿದ್ದು ಗಾರ್ಡನ್ ಪಾರ್ಟಿಗಳಿಗೂ ಕೇಟರಿಂಗ್ ವ್ಯವಸ್ಥೆಯನ್ನು ಸಹ ಮಾಡುತ್ತಿದ್ದು ಬಹು ಪ್ರಸಿದ್ಧಿ ಹೊಂದಿದ್ದರು.

ಬಹಳಷ್ಟು ವರ್ಷಗಳಿಂದ ತಮ್ಮದೇ ಸ್ವಂತ ಅರಮನೆಯಲ್ಲಿ ವಾಸಿಸುತ್ತಿದ್ದ ನೇಪಾಳದ ಮಹಾರಾಣಿ ಸಾಹಿಬಾ, 1932ರಲ್ಲಿ ನೇಪಾಳಕ್ಕೆ ಹೋಗಿ ನೆಲೆಸಲು ತೀರ್ಮಾನಿಸಿದಾಗ, ತಮ್ಮಲ್ಲಿದ್ದ ಮಾತನಾಡುವ ಎರಡು ಗಿಣಿಗಳನ್ನು ಏನು ಮಾಡಬೇಕೆಂದು ಯೋಚಿಸಿದಳು. ಆಗ ಮಿರ್ಜಾ ಅವರ ಬಳಿ ಹೋಗಿ ಈ ನನ್ನ ಮುದ್ದಿನ ಗಿಣಿಗಳ ಪೋಷಣೆಗಾಗಿ ಐದು ಸಾವಿರ ರೂಪಾಯಿಗಳನ್ನು ಕೊಡುವುದಾಗಿಯೂ ಇವುಗಳನ್ನು ಲಾಲ್‌ಬಾಗ್‌ನಲ್ಲಿರುವ ಪಕ್ಷಿಗಳ ಗೃಹದಲ್ಲಿ ಸಾಕಬೇಕೆಂದೂ ವಿನಂತಿಸಿದಳು. ಸೌಂದರ್ಯೋಪಾಸಕರಾಗಿದ್ದ ಮಿರ್ಜಾ ಅವರು ಆ ಗಿಣಿಗಳನ್ನು ಲಾಲ್‌ಬಾಗ್‌ನಲ್ಲಿ ಸಾಕಲು ಹಣ ನೀಡುವ ಅಗತ್ಯವಿಲ್ಲವೆಂದು ತಿಳಿಸಿ, ಅದೇ ಹಣದಿಂದ ಈ ಪಾರ್ಕ್‌ನ ಚಾಮರಾಜೇಂದ್ರ ಒಡೆಯರ್ ಅವರ ಪ್ರತಿಮೆಯ ಮುಂಭಾಗದ ವೃತ್ತದಲ್ಲಿ ವರ್ಣರಂಜಿತ ಕಾರಂಜಿಯನ್ನು 1934ರಲ್ಲಿ ನಿರ್ಮಿಸಲು ವ್ಯವಸ್ಥೆಮಾಡಿ, ಮಹಾರಾಣಿಯವರ ಹೆಸರಿನ ಶಿಲಾಫಲಕವನ್ನು ಹಾಕಿಸಿದರು. ನಂತರ ಇಲ್ಲಿನ ಪರಿಸರವನ್ನು ಬಹು ಸುಂದರವಾಗಿ ಕಾಣುವಂತೆ ಮಾರ್ಪಾಟು ಮಾಡಿ ನಾನಾ ಜಾತಿಯ ಅಲಂಕಾರಿಕ ಗಿಡಗಳನ್ನು ನೆಡಲಾಯಿತು.

ಮಿರ್ಜಾ ಇಸ್ಮಾಯಿಲ್ ಅವರು ರೌಂಡ್ ಟೇಬಲ್ ಕಾನ್‌ಫೆರನ್ಸ್‌ಗಾಗಿ ಇಂಗ್ಲೆಂಡಿಗೆ ಹೋಗಿ ಬಂದ ನಂತರ 1932ರ ಜನವರಿಯಲ್ಲಿ ಕಬ್ಬನ್‌ಪಾರ್ಕ್‌ನಲ್ಲಿ ಮ್ಯೂಸಿಯಂ ಹಿಂದೆ ಇದ್ದ ಬಿದಿರು ದ್ವೀಪದಲ್ಲಿ (Bamboo IslandÀ) ಸತ್ಕಾರ ಕೂಟವನ್ನು ಏರ್ಪಡಿಸಲಾಗಿತ್ತು. 1936ರಲ್ಲಿ ಎರಡು ಸಮ್ಮರ್ ಹೌಸ್‌ಗಳನ್ನು ನಿರ್ಮಿಸಲಾಯಿತು. 1936ರವರೆಗೂ ಸೆಕ್ರೆಟರಿಯೇಟ್ ಕ್ಲಬ್ ಮುಂದೆ ಇದ್ದ ವಾದ್ಯ ಮಂಟಪದಲ್ಲಿ ಇಂಗ್ಲಿಷ್ ವಾದ್ಯ ಸಂಗೀತ ಕಾರ್ಯಕ್ರಮಗಳು ನಡೆಯುತ್ತಿದ್ದಾಗ ಯೂರೋಪಿಯನ್ ದಂಪತಿಗಳು ಮಾಡುತ್ತಿದ್ದ ನೃತ್ಯವನ್ನು ಸ್ಥಳೀಯರು, ಸುತ್ತ ವರ್ತುಲಾಕಾರವಿದ್ದ ರಸ್ತೆಯಲ್ಲಿ ಬೈಸಿಕಲ್‌ಗಳ ಮೇಲೆ ಸವಾರಿ ಮಾಡಿಕೊಂಡು ಅಥವಾ ನಡೆದುಕೊಂಡು ಸುತ್ತುತ್ತಾ ನೋಡುತ್ತಿದ್ದರು. ಇದು ಯೂರೋಪಿಯನ್ನರಿಗೆ ಅಸಭ್ಯವಾಗಿ ಕಂಡಿತು. ಈ ಕಾರಣದಿಂದ ಆ ಬ್ಯಾಂಡ್ ಸ್ಟ್ಯಾಂಡನ್ನು ಮಿರ್ಜಾ ಅವರು ಈಗಿರುವ ಸ್ಥಳಕ್ಕೆ 1937ರಲ್ಲಿ ಸ್ಥಳಾಂತರಿಸಿದರು. ಕೆಲವರ್ಷ ಬ್ಯಾಂಡ್ ಸ್ಟ್ಯಾಂಡ್ ಇದ್ದ ಸ್ಥಳವನ್ನು 'ಹಳೆಬ್ಯಾಂಡ್ ಸ್ಟ್ಯಾಂಡ್ ಏರಿಯಾ' ಎಂದೇ ಜನರು ಕರೆಯುತ್ತಿದ್ದರು. ಹಳೇ ಬ್ಯಾಂಡ್ ಸ್ಟ್ಯಾಂಡ್ ಮೆಟ್ಟಲುಗಳ ಬಳಿ ಇದ್ದ ನಾಲ್ಕು ಸಿಂಹದ ಶಿಲ್ಪಗಳನ್ನು ಲಾಲ್‌ಬಾಗಿನ ಉದ್ಯಾನದ ನಿರ್ದೇಶಕರಾಗಿದ್ದ H.C.ಜವರಯ್ಯ ಅವರು ನಂತರ ಲಾಲ್‌ಬಾಗ್‌ಗೆ ಸ್ಥಳಾಂತರಿಸಿದರು. ಅದನ್ನು ಈಗಲೂ ಲಾಲ್‌ಬಾಗ್‌ನಲ್ಲಿ ಕಾಣಬಹುದು.

1938ರಿಂದ 1944 ರವರೆಗೆ ನಡೆದ ದ್ವಿತೀಯ ಜಾಗತಿಕ ಯುದ್ಧದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಪ್ರಾಪ್ತವಾದ ವಿಜಯದ ಸಂಕೇತವಾಗಿ ನಿರ್ಮಾಣವಾದ ಕಟ್ಟಡವೇ ವಿಕ್ಟರಿಹಾಲ್. ಈ ಕಟ್ಟಡ ನಿರ್ಮಾಣವಾಗಲು ಮುಖ್ಯ ಕಾರಣರಾದವರು ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರೇ ಈ ಕಟ್ಟಡಕ್ಕೆ 1944 ಜೂನ್ 19

ರಂದು ಶಿಲಾನ್ಯಾಸ ಮಾಡಿದರು. 1945ರಲ್ಲಿ ಸಿದ್ಧಗೊಂಡ ಈ ವಿಕ್ಟರಿಹಾಲ್‌ನಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸೈನಿಕದಳದ ಕುಟುಂಬದವರಿಗೆ ಮಾತ್ರ ಅವಕಾಶವಿತ್ತು. ಆದರೆ, ಸ್ವಾತಂತ್ರ್ಯ ಬಂದ ನಂತರ ಎಲ್ಲರಿಗೂ ಪ್ರವೇಶ ದೊರೆಯಿತು. 1972 ರಲ್ಲಿ 'ವಿಕ್ಟರಿಹಾಲ್' ಹೆಸರನ್ನು ಕನ್ನಡಕ್ಕೆ ಅನುವಾದ ಮಾಡಿ 'ವಿಜಯ ರಂಗಮಂದಿರ' ವೆಂದು ಹೆಸರಿಟ್ಟರು.

ಕಬ್ಬನ್ ಪಾರ್ಕ್‌ನಲ್ಲಿ ಮಾಮೂಲಿನಂತೆ ವಸ್ತು ಪ್ರದರ್ಶನ 1954ರವರೆವಿಗೂ ನಡೆಯಿತು. ಆದರೆ 1955 ರಲ್ಲಿ ನಡೆದ The All India Industrial and Fine Arts Exhibition ಬೆಂಕಿಗೆ ಆಹುತಿಯಾಯಿತು, ಇದೇ ಕಬ್ಬನ್ ಪಾರ್ಕ್‌ನಲ್ಲಿ ನಡೆದ ಕೊನೆಯ ಪ್ರದರ್ಶನವಾಯಿತು9. ಈಗ 192.19 ಎಕರೆ ವಿಸ್ತೀರ್ಣ ಇರುವ ಈ ಕಬ್ಬನ್‌ಪಾರ್ಕ್‌ನಲ್ಲಿ 6,500 ಕ್ಕೂ ಹೆಚ್ಚು ದೇಶೀಯ ಮತ್ತು ವಿದೇಶೀಯ ಗಿಡಮರಗಳಿವೆ. ಬೆಂಗಳೂರು ನಗರದ ಮಧ್ಯಭಾಗದಲ್ಲಿ ನಿಸರ್ಗ ವೈಭವದಿಂದ ಕೂಡಿರುವ ಇಂತಹ ವಿಶಾಲವಾದ ಉದ್ಯಾನವನ ಸೌತ್ ಏಷ್ಯಾದಲ್ಲೇ ಎಲ್ಲಿಯೂ ಇಲ್ಲ ಎಂದು ಒಬ್ಬ ಪ್ರವಾಸಿಗ ಹೇಳಿರುವುದು ಬಹು ಸಮಂಜಸವಾಗಿದೆ.

ಅಡಿ ಟಿಪ್ಪಣಿಗಳು

1. 1862 ರಲ್ಲಿ ಕಬ್ಬನ್ ಅವರ ಅಶ್ವಾರೂಢ ಕಂಚಿನ ಪ್ರತಿಮೆ ಹೊತ್ತು ಬರುತ್ತಿದ್ದ ಹಡಗು ಸಮುದ್ರ ಮಧ್ಯದಲ್ಲಿ ಚಂಡಮಾರುತಕ್ಕೆ ಸಿಲುಕಿ ಅನಾಹುತಗೊಂಡು ದುರಸ್ತಿಗಾಗಿ ಸ್ಪೈನ್ ದೇಶದ ಬಂದರಿನಲ್ಲಿ ತಂಗಬೇಕಾಯಿತು. ಈ ಕಾರಣದಿಂದ ಪ್ರತಿಮೆ ಬೆಂಗಳೂರು ತಲುಪಲು ಸುಮಾರು ಎರಡು ವರ್ಷ ತಡವಾಯಿತು.
2. ಮೂರು ಛಾಯಾಚಿತ್ರಗಳನ್ನು ಕಬ್ಬನ್ ಅವರ ಸಹೋದರಿಯಾದ ಎಲಿಜಬತ್ ಕಬ್ಬನ್ ಅವರ ಕೋರಿಕೆಯಂತೆ ಇಂಗ್ಲೆಂಡಿಗೆ ಕಳುಹಿಸಿ ಕೊಡಲಾಯಿತು.
3. ದಂಡು ಪ್ರದೇಶದಲ್ಲಿ 1835ರಲ್ಲಿ ನಿರ್ಮಾಣಗೊಂಡ ಒಂದು ಜೈಲ್ ಕಟ್ಟಡವಿತ್ತು. ಆ ಜೈಲಿನಲ್ಲಿ ಕೈದಿಗಳಿಗೆ ನೀಡುತ್ತಿದ್ದ ಶಿಕ್ಷೆಯು ಬಹು ಅಮಾನುಷವಾಗಿದ್ದ ಕಾರಣ ಆ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಲು ಚೀಫ್ ಕಮೀಷನರ್ ಬೌರಿಂಗ್ ಅವರು ಹೊಸ ಸೆರೆಮನೆಯನ್ನು ನಿರ್ಮಿಸಿ ಈಗಿನ ವಿಠಲ್ ಮಲ್ಯ ರಸ್ತೆ, ಸಿದ್ದಲಿಂಗಯ್ಯ ಸರ್ಕಲ್, ಕಬ್ಬನ್ ಪಾರ್ಕ್ ಹಾಗೂ ಕೆ.ಆರ್.ಸರ್ಕಲ್ ಮೂಲಕ ಸೆಂಟ್ರಲ್ ಜೈಲ್ (ಈಗಿನ ಫ್ರೀಡಮ್ ಪಾರ್ಕ್) ಮುಂದೆ ಹಾದು ಹೋಗುವ ರಸ್ತೆಯನ್ನು ನಿರ್ಮಿಸಿದರು.
4. ಕ್ಷಾಮದ ಕಾರಣದಿಂದ ಸ್ಯಾಂಕಿಯವರು ಸಂಪಂಗಿಕೆರೆಯಲ್ಲಿನ ಹೂಳುಮಣ್ಣನ್ನು ಎತ್ತುವ ಕಾರ್ಯವನ್ನು ನಿರ್ವಹಿಸಿದ್ದರು. ಈ ಕಾರಣದಿಂದ ಸ್ಯಾಂಕಿಯವರು ಪುಷ್ಪಕುಂಡವನ್ನು 1876ರಲ್ಲಿ ಸಂಪಂಗಿನಗರದಲ್ಲಿ ಸ್ಥಾಪಿಸಿದ್ದರು. ಈ ಕುಂಡದ ಪಕ್ಕದಲ್ಲಿದ್ದ ಗೋಡೆಯು ಶಿಥಿಲವಾಗಿದ್ದು ಕುಂಡದ ಮೇಲೆ ಬೀಳುವ ಸಂಭವವಿದ್ದುದನ್ನು ಕಂಡ ಸರ್ಕಾರಿ ತೋಟಗಳ (ಲಾಲ್‌ಬಾಗ್) ಮೇಲ್ವಿಚಾರಕರಾಗಿದ್ದ ಜಾನ್‌ಕ್ಯಾಮರಾನ್ ಅವರು ಈಗಿರುವ ಸ್ಥಳಕ್ಕೆ ಸುಮಾರು 1884ರಲ್ಲಿ ಅದನ್ನು ಸ್ಥಳಾಂತರಿಸಿದರು.
5. ಈ ಆಸ್ಪತ್ರೆ ನಗರದಲ್ಲಿ ಪ್ರಾರಂಭಗೊಂಡ ಪ್ರಥಮ ಮೆಟರ್ನಿಟಿ ಆಸ್ಪತ್ರೆ. ಈ ಆಸ್ಪತ್ರೆ ಕಟ್ಟಡ ಈಗ ಪೋಲಿಸ್ ಪ್ರಧಾನ ಕಛೇರಿ ಆಗಿದೆ.
6. Handbook of Bangalore and its Environs by Frank X. Paul: 1929
7. M.G.I.D. ರೆಸ್ಟೋರೆಂಟ್ ಕಟ್ಟಡದಲ್ಲಿ 1969ರಲ್ಲಿ ಪ್ರೆಸ್‌ಕ್ಲಬ್ ಪ್ರಾರಂಭವಾಯಿತು. ಇದಕ್ಕೆ ಕಾರಣರಾದವರು ಟಿ. ಎಸ್. ರಾಮಚಂದ್ರರಾವ್ ಮತ್ತು ನೆಟ್ಟಕಲ್ಲಪ್ಪನವರು.

8. ಆದರೆ ಈ ಹೆಸರನ್ನು ಯಾರೂ ಕರೆಯಲಿಲ್ಲ.

9. ನಂತರ ಸುಭಾಷ್ ನಗರದ ಮೈದಾನ (ಈಗಿನ B.M.T.C. ಬಸ್ ನಿಲ್ದಾಣ) ದಲ್ಲಿ ನಡೆಯಲು ಪ್ರಾರಂಭವಾಯಿತು.

ಪರಾಮರ್ಶನ ಗ್ರಂಥಗಳು

1) ಬೆಂಗಳೂರಿನ ಇತಿಹಾಸ, ಬ. ನ. ಸುಂದರರಾವ್, ಬೆಂಗಳೂರು, 1985.

2) ಕಬ್ಬನ್‌ಪಾರ್ಕ್–ಕಿರುಪರಿಚಯ, ಎಮ್. ಎಸ್. ಅಶ್ವಥ್ ನಾರಾಯಣರಾವ್ (ನಿವೃತ್ತ ಉಪಕಾರ್ಯ ದರ್ಶಿಗಳು), ಸಚಿವ ಸಂಪುಟ, ವ್ಯವಹಾರಗಳ ಕಮಿಟಿ, ಅಪ್ರಕಟಿತ.

3) ವಿಶ್ವಕರ್ನಾಟಕ, ವಾರಪತ್ರಿಕೆ, 1927ರಿಂದ 1932.

4) ಮಿರ್ಜಾಇಸ್ಮಾಯಿಲ್ ಅವರ ಜೀವನ ಚರಿತ್ರೆ, ವಿ. ಎಸ್. ನಾರಾಯಣರಾವ್ 1975.

5) Construction of the Attara Cutchery, A Paper Presented in Mythic Society at Bangalore History Seminar held in 1987. By H. P. Shashidhara Muthy.

6) Annual Administration Reports, Government Gardens 1870-1940.

7) The Administration of Mysore under Sir.Mark Cubbon, 1930, By K. N. Venkata Subba Sastry.

8) Modern Mysore, M. Shama Rao. 1936.

9) Mysore Gazetteer V-II, Part IV, Hayavadana Rao.


10) Mysore Dasara Exhibition, Hand book, 1951.




1. ಕಚೇರಿಗಳ ಕಟ್ಟಡ ಅಠಾರ




2. ಮಾರ್ಕ್ ಕಬ್ಬನ್ ಅವರ ಅಶ್ವಾರೂಢ ಪ್ರತಿಮೆ



3. ಮ್ಯೂಸಿಯಂ ಕಟ್ಟಡ




4. ಮ್ಯೂಸಿಯಂ ಕಟ್ಟಡ



5. ಬೆಂಗಳೂರು ನಕಾಶೆ



6. ಕಟ್ಟಡ ನಿರ್ಮಾತೃ ಸಾಹಿಕಿ ಅವರ ಗೌರವಾರ್ಥ ನಿರ್ಮಿಸಿರುವ ಹೂಕುಂಡ



7. ಹೂಕುಂಡದಲ್ಲಿನ ಬರಹ

41. ಬ್ರಿಟಿಷರ ಕಾಲದ ಸಾರ್ವಜನಿಕ ಕಟ್ಟಡಗಳು

ಶ್ರೀ ತುಳಸೀರಾಮ ನಾಯಕ

1799ರ ನಂತರ ಬ್ರಿಟೀಷರು ಒಂದು ಸೈನ್ಯ ತುಕುಡಿಯನ್ನು ಶ್ರೀರಂಗಪಟ್ಟಣದಲ್ಲಿ ಕಾಪಾಡಿಕೊಂಡು ಬಂದಿದ್ದರು. ಆ ಪ್ರದೇಶದಲ್ಲಿ ಮಲೇರಿಯ ಪಿಡುಗು ಅತಿಯಾದ ಕಾರಣ 1807ರಲ್ಲಿ ಬೆಂಗಳೂರಿನ ಹಲಸೂರು ಕೆರೆಯ ಪರಿಸರಕ್ಕೆ ಸೇನಾ ನೆಲೆಯನ್ನು ಭಾಗಶಃ ವರ್ಗಾಯಿಸಿದರು. ಮುಮ್ಮಡಿ ಕೃಷ್ಣರಾಜನು ಇಲ್ಲಿ 9000 ಸಾವಿರದ ಎಕರೆ ಪ್ರದೇಶವನ್ನು ಸೇನಾ ನೆಲೆಗೆ ಬಿಟ್ಟುಕೊಟ್ಟನು. ಮುಂದೆ ಅದು 12.50ಚದರ ಮೈಲಿ ಪ್ರದೇಶವಾಯಿತು. ಇದೇ ವರ್ಷದಲ್ಲಿ ರೆಸಿಡೆನ್ಸಿ ಅಧಿಕಾರದ ಕಾರ್ಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ, ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. 1809ರಲ್ಲಿ ಬ್ರಿಟಿಷ್ ಸೇನಾ ಪಡೆಗಳು ಹಾಗೂ ಮುಖ್ಯಸ್ಥರು ಶ್ರೀರಂಗಪಟ್ಟಣದಿಂದ ಹಿಂತೆಗೆದು, ಬೆಂಗಳೂರಿನಲ್ಲಿರುವ ಕೋಟೆಯ ಕ್ವಾಟರ್ಸ್‌ಗಳಲ್ಲಿ ತಂಗಿದ್ದರು. ಜನರಲ್ ಕಮ್ಯಾಂಡಿಗೆ ಹಾಗೂ ಕೆಲವರು ಯುರೋಪಿಯನ್ನರು ಆಗ ರೆಸಿಡೆಂಟ್‌ರವರು ಸಹ ಇದೇ ಕೋಟೆಯಲ್ಲಿ ವಾಸಿಸುತ್ತಿದ್ದರು. ಆದರೆ ಮದ್ದು ಗುಂಡುಗಳ ತಯಾರಿಕೆ ಘಟಕ ಆಸ್ರೆನಲ್ ಮಾತ್ರ 1823ರವರೆಗೆ ಅಲ್ಲಿಯೇ ಇತ್ತು. 1831ರಂದು ಆಡಳಿತ ನಡೆಸುತ್ತಿದ್ದ ಮುಖ್ಯ ಕಛೇರಿಗಳು ಬೆಂಗಳೂರಿನ ಟಿಪ್ಪು ಅರಮನೆಗೆ ಸ್ಥಳಾಂತರಿಸಲಾಯಿತು. ಸದರಿ ಅರಮನೆ ಭಾಗಶಃ ಬಿದ್ದಿತು. ನಂತರ ಅದನ್ನುಕೆಡವಿ ದಿನಾಂಕ 2-10-1888ರಲ್ಲಿ ಈ ಕೋಟೆಯನ್ನು ಸಿವಿಲ್ ಆಡಳಿತಕ್ಕೆ ಹಸ್ತಾಂತರಿಸಲಾಯಿತು ಹಾಗೂ ಅಲ್ಲಿದ್ದ ಮಿಲಿಟರಿ ಸೇನೆಯ ಜೊತೆಯಲ್ಲಿ ಮದ್ದು ಗುಂಡುಗಳ ಸಾಮಾಗ್ರಿಗಳನ್ನು ಆಸ್ರೆನಲ್ ತೆಗೆದು ಹಲಸೂರು ಮಿಲಿಟರಿ ಪ್ರದೇಶಕ್ಕೆ ಸ್ಥಳಾಂತರಿಸಲಾಯಿತು. ಇಲ್ಲಿ ಫಾರೆಸ್ಟ್, ಪೊಲೀಸ್, ಮಧ್ಯ ಇಲಾಖೆಗಳು ಹಾಗೂ ಮುನಿಸಿಪಲ್ ಕಛೇರಿಗಳು ಕೆಲಸ ಮಾಡುತ್ತಿದ್ದವು. ಇನ್ನುಳಿದ ಇಲಾಖೆಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಆಡಳಿತ ನಡೆಸಲು 1807ರಲ್ಲಿ ಸೀನಿಯರ್, ಜೂನಿಯರ್ ರೆಸಿಡೆಂಟ್ಸ್, ಕಮೀಷನರ್‌ಗಳು, ಮತ್ತು ದಿವಾನರುಗಳ ಅಧಿಕಾರವನ್ನು ಸ್ಥಾಪಿಸಿ, ಆ ದಿನದಿಂದಲೇ ಕಾರ್ಯೋನ್ಮುಖರಾದರು.

Senior Commissioners

Colonel J. Briggs	4 Oct. 1831
Colonel W. Morison	6 Feb 1833
Junior Commissioners	
Mr. C. M. Lushington	4 Oct 1831
Mr. C.D. Drury	18 Feb 1832
Mr. J. M. Macleod	16 June 1832
Colonel Mark Cubbon	17 Feb 1834

The changes in the appointment of Resident were frequent after this, as the following list from the time of the Rendition will show.

Mr. (afterwards Sir James) Gordon	March 1881 to June 1883
Mr. J. D. Sandford, acting	May 1882 to June 1883
Mr. (afterwards Sir James) Lyall	June 1883 to March 1887
Colonel T.G. Charke, acting	Dec. 1884 to May 1885
Mr. C.E.R. Girdlestone, acting	June 1885 to May 1886
Sri Charles Benard (did not join)	
Mr. (afterwards Sir Dennis) Fitzpatrick	March 1887 to Oct 1887
General Sir Henry prendergast V.C	Oct 1887 to Jan 1889
Colonel Sir Oliver St. John	Jan 1889 to June 1891
General Sir Harry Prendergast	June 1891 to April 1892
Colonel P.D. Henderson	April 1892 to Feb 1895
Colonel H.P.Peacock, acting	July to Oct 1892
Mr. W. Lee-Warner	Feb 1895 to Sep 1895
Mr (now Sir) W. Kackworthyoung	Sep 1895 to Dec 1896
Colonel Donald Robertson	Dec 1896

When it was known that Sir James Gordon would not return to his appointment, in which Mr. Sandford, the Judicial Commissioner, had meanwhile been acting, Mr. Lyall, settlement Commissioner in the Punjab, was made Resident. During most of his absence on leave, Mr. Girdlestone, Resident in Nepal was transferred to Mysore.

The changes of Assistant-Residents, as below, have been even more frequent-

Mr. W. J. Cunningham from March 1881

Major H. Wylie	Nov 1882
Mr. A. H. T. Martindale	Feb 1885
Major J.H. Newill	Oct 1885
Major E.H. Fraser	April 1886

Major D. Robertson	Dec 1886
Mr. L. W. King	July 1887
Major D. Robertson	Dec. 1887
Mr. F. E. K. Wedderlurn	May 1888
Mr. E. G. Colvin	Dec 1888
Mr. J. A. Crawford	April 1889
Captain L.S. Newmarch	Oct 1889
Major C.W. Ravenshaw	April 1891
Mr. H. V. Cobb	Aug 1893

ಕಬ್ಬನ್ ಉದ್ಯಾನವನ

ಕಬ್ಬನ್ ಉದ್ಯಾನವನ 1864ರಲ್ಲಿ ಮೇಜರ್ ಜನರಲ್ ರಿಚಾರ್ಡ್ ಶಾಂಕಿ ಅಂದಿನ ಮೈಸೂರಿನ ಮುಖ್ಯ ಅಭಯಂತರರು ನಕ್ಷೆ ತಯಾರಿಸಿದರು. 1870ರಲ್ಲಿ ಕಲೋನೆಲ್ ಮಿಡೇ ಅಂದಿನ ಪ್ರಭಾರ (ಇನ್‌ಚಾರ್ಜ್) ಕಮೀಷನರ್‌ರವರು ಉದ್ಘಾಟನೆ ಮಾಡಿದರು. ನಂತರ ಹಲವು ವರ್ಷಗಳಿಂದ ಬೆಂಗಳೂರಿನಲ್ಲಿ ಅಧಿಕಾರದಲ್ಲಿದ್ದರಿಂದ ಮೇಜರ್‌ಜನರಲ್ ಸರೆ ಮಾರ್ಕೆ ಕಬ್ಬನ್‌ರವರ ಹೆಸರಿಗೆ 'ಕಬ್ಬನ್ ಪಾರ್ಕ್' ಎಂದು ನಾಮಕರಣ ಮಾಡಿದರು. ಕೃಷ್ಣರಾಜ ಒಡೆಯರ್ ರವರ 25 ವರ್ಷದ ಆಡಳಿತ ಪೂರೈಸಿದ ಅಂಗವಾಗಿ 1927ರಲ್ಲಿ ಸಿಲ್ವರ್‌ಜ್ಯುಬಿಲಿ ಸಮಾರಂಭದ ಸಂದರ್ಭದಲ್ಲಿ ಶ್ರೀ ಚಾಮರಾಜೇಂದ್ರ ಪಾರ್ಕೆ ಎಂಬು ನಾಮಕರಣ ಮಾಡಿದರು. ಇದು ಸುಮಾರು 1000 ಎಕರೆ ಜಮೀನು ಒಳಗೊಂಡಿದೆ. ಈ ಉದ್ಯಾನವನವು ನಗರ ಮತ್ತು ಕಂಟೋನ್ಮೆಂಟ್ ಪ್ರದೇಶದ ಮಧ್ಯದಲ್ಲಿರುತ್ತದೆ. ಶ್ರೀಚಾಮರಾಜೇಂದ್ರ ಒಡೆಯರರವರ ಪ್ರತಿಮೆ ಬ್ಯಾರನ್ ಮಾರೋಚಟ್ಸ್ ರವರು ಕಬ್ಬನ್ ರವರ ಪ್ರತಿಮೆಯನ್ನು ತಯಾರು ಮಾಡು 1866ರಲ್ಲಿ ಅಳವಡಿಸಿದರು. 11 ಅಡಿಯ ಉದ್ಧದ ವಿಕ್ಟೋರಿಯಾ ರಾಣಿರವರ ಪ್ರತಿಮೆ.

ಬೆಂಗಳೂರಿನಲ್ಲಿ ಮೊಟ್ಟ ಮೊದಲನೆಯ ಕಾರಂಜಿ (ಫಾಂಟೇನ) ಪಾರ್ಕ್ ಒಳಗಡೆ ರೂ. 5000–00ಗಳ ಖರ್ಚಿನಲ್ಲಿ ನೇಪಾಳಿನ ರಾಣಿಯವರು 1935–36ರಲ್ಲಿ ಕಟ್ಟಿಸಿ ನೀಡಿದರು.

ಉಚ್ಚ ನ್ಯಾಯಾಲಯ ಕಟ್ಟಡ

ಈಗ ಕರ್ನಾಟಕದ ಅತ್ಯಂತ ಉನ್ನತ ಉಚ್ಚ ನ್ಯಾಯಾಲಯ ಅಠಾರ ಕಛೇರಿಯ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತದೆ. ಈ ಕಟ್ಟಡದಲ್ಲಿ ಹಿಂದಿ 18 ಇಲಾಖೆಗಳು 1868ರಿಮದ 1956ರವರೆಗೆ ಕೆಲಸ ನಿರ್ವಹಿಸುತ್ತಿತ್ತು. ನಂತರ ಎದುರುಗಡೆ ಇರುವ ಪ್ರಸಿದ್ಧ ವಿಧಾನಸೌಧ ಕಟ್ಟಡಕ್ಕೆ ಸ್ಥಳಾಂತರವಾಯಿತು. ಈ ಇಲಾಖೆಗಳು ಹಿಂದೆ 1831ರಿಂದ ಕೋಟೆಯಲ್ಲಿರುವ ಟಿಪ್ಪು ಅರಮನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದವು. ಈ ಅರಮನೆಗೆ ಟಿಪ್ಪು 1799ರಲ್ಲಿ ಕಾಲವಾದ ನಂತರ ಮೈಸೂರಿನಲ್ಲಿದ್ದ ಆಡಳಿತದ ಎಲ್ಲಾ ಇಲಾಖೆಗಳು ಬೆಂಗಳೂರಿನ ಈ ಅರಮನೆಗೆ ಸ್ಥಳಾಂತರಿಸಲಾಯಿತು. ದಿನಾಂಕ 2–10–1888ರಲ್ಲಿ ಅರಮನೆ ಹಾಗೂ ಕೋಟೆ ಸಹಿತ ಸಿವಿಲ್ ಆಡಳಿತಕ್ಕೆ

ಒಪ್ಪಿಸಲಾಯಿತು. ಸೇನೆ ಹಾಗೂ ಯುದ್ಧಕ್ಕೆ ಸಂಬಂಧಪಟ್ಟ ಸಾಮಾಗ್ರಿಗಳೆಲ್ಲವೂ ಹಲಸೂರುಪ್ರದೇಶದಲ್ಲಿ ಸ್ಥಳಾಂತರಿಸಲಾಯಿತು.

ಆನಸಂಖ್ಯೆ ಬೆಳೆದಂತೆ, ಸಾರ್ವಜನಿಕ ಕೆಲಸ ಕಾರ್ಯಗಳು ಹೆಚ್ಚಾಗುತ್ತಾ ಹೋದವು. ಟಿಪ್ಪು ಅರಮನೆಯಲ್ಲಿ ಸ್ಥಳದ ಅಭಾವದಿಂದ ಈ ಕಟ್ಟಡ ಕಟ್ಟಲು ಕಾರಣವಾಯಿತು. ಆರ್. ಹೆಚ್. ಶಾಂಕಿರವರು ಇದರ ನಕ್ಷೆ ತಯಾರಿಸಿದರು. ಕಟ್ಟಡದ ಮೇಲ್ವಿಚಾರಣೆ ರಾವ್ ಬಹದ್ದೂರ್ ಅರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್‌ರವರು ಮಾಡಿದರು. ಈ ಕಟ್ಟಡ 1864ರಲ್ಲಿ ಪ್ರಾರಂಭವಾಗಿ 1868ರಲ್ಲಿ ಪೂರ್ಣವಾಯಿತು. ಈ ಕಟ್ಟಡದ ಖರ್ಚು 4.28ಲಕ್ಷಗಳು, ಈ ಕಟ್ಟಡದ ಒಟ್ಟು ಸುತ್ತಳತೆ ಸುಮಾರು 1 ಲಕ್ಷ ಚದರಡಿಗಳು. ಈ ಎರಡು ಅಚಿತಸ್ತಿನ ಕೆಂಪು ಬಣ್ಣದ ಕಟ್ಟಡ ಬೋರಿಂಗ್ ಅಂದಿನ ಕಮೀಷನರ್ ಕಾಲಾವಧಿಯಲ್ಲಿ ಪೂರ್ಣವಾಯಿತು. ಹಿಂದೂಸ್ಥಾನ ಭಾಷೆಯಲ್ಲಿ ಈ ಕಟ್ಟಡಕ್ಕೆ ಅಠಾರ ಕಛೇರಿ ಎಂದು ಕರೆಯಲಾಯಿತು. ಹಾಗೂ 18 ಇಲಾಖೆಗಳು ಸಹ ಕೆಲಸ ಮಾಡುತ್ತಿದ್ದವು. 1866ರಲ್ಲಿ ಸರ್ ಮಾರ್ಕ್‌ಕಬ್ಬನ್‌ರವರ ಪ್ರತಿಮೆ ಕಟ್ಟಡದ ಹಿಂಭಾಗದಲ್ಲಿ ಅಳವಡಿಸಿದೆ. ಹಾಗೂ ಈ ಕಟ್ಟಡದ ಮಧ್ಯೆ ಸೆಂಟ್ರಲ್ ಹಾಲ್‌ನಲ್ಲಿ ಮೇಲ್ಕಂಡ ಕಬ್ಬನ್‌ರವರ ಮೋರ್ಟ್‌ರೈಟ್ ಸೀಲಿಂಗ್‌ನಲ್ಲಿ ಕೆತ್ತಿ ಅಂದವಾಗಿ ಅಲಂಕರಿಸಿದ್ದಾರೆ. ಈತನ ಪ್ರತಿಮೆ ತಯಾರಿಸಿದವನು ಬ್ಯಾರನೆ ಮಾರೊಚೆಟ್ಟಿ ಎಂಬ ಶಿಲ್ಪಿ.

ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮ್ಯೂಸ್ಯಿಯಂ, ಬೆಂಗಳೂರು

1865ರಲ್ಲಿ ಡಾ. ಇ. ಜಿ. ಎಡ್‌ವಾಡ್ ಬಾರೆ ಫರೆ ಆಕರ್ಷಣೆಯಿಂದ ಕೂಡಿದ ಯಾರಿಗೂ ಗೊತ್ತಿಲ್ಲದ ಹಳೆಯ ವಸ್ತುಗಳನ್ನು ಶೇಖರಿಸಿಡುವ ಕಾರ್ಯವನ್ನು ಮ್ಯೂಸಿಯಂ ರಸ್ತೆಯಲ್ಲಿದ್ದ ಜೈಲು ಕಟ್ಟಡದಲ್ಲಿ ಮೊಟ್ಟ ಮೊದಲು ಪ್ರಾರಂಭಿಸಿದರು. ಈ ಜಾಗಕ್ಕೆ ಸ್ಥಳೀಯರು ತಾಮ್ಮ ಮನೆ ಎಂದು ಕರೆಯುತ್ತಿದ್ದರು. 1876ರಲ್ಲಿ ಹೊಸ ಕಟ್ಟಡ ಕಸ್ತೂರ ಬಾ ರಸ್ತೆಯಲ್ಲಿ ಪೂರ್ಣವಾಯಿತು. 1877ರಲ್ಲಿ ಮೂಲ ಕಟ್ಟಡದಿಂದ ಹೊಸ ಕಟ್ಟಡಕ್ಕೆ ವರ್ಗಾವಣೆಯಾಯಿತು. ಸುಮಾರು 100 ವರ್ಷಗಳ ನಂತರ (1962) ಪುನಃ ಹಾಲಿ ಇರುವ ಕಟ್ಟಡಕ್ಕೆ ಅಂಟಿಕೊಂಡಂತೆ ಹೆಚ್ಚುವರಿ ಕಟ್ಟಡ ಕಟ್ಟಿವಿಸ್ತರಿಸಿದರು. ಇದರಲ್ಲಿ ಪುಸ್ತಕ ಭಂಡಾರವು ಸಹ ಇದೆ.

The building with fluted tall pillars having Corinthian capitals (painted in white) and Roman arches.

ಶೇಷಾದ್ರಿ ಐಯ್ಯರೆ ಮೆಮೋರಿಯಲ್ ಕಟ್ಟಡ

ಈ ಕಟ್ಟಡದಲ್ಲಿ ಈಗ ಕರ್ನಾಟಕದ ಗ್ರಂಥಾಲಯ 1915ರಿಂದ ಕೆಲಸ ನಡೆಯುತ್ತಿದೆ. ಸರ್. ಕೆ. ಶೇಷಾದ್ರಿ ಐಚ್ಯುರ್‌ರವರು ಅಚಿದು ಮೈಸೂರಿನ ದಿವಾನರಾಗಿ 1883ರಿಂದ 1901ರವರೆವಿಗೆ ಬ್ರಿಟೀಷ್ ರಾಜ್ಯಕ್ಕೆ ಸಲ್ಲಿಸಿದ ನಿಸ್ವಾರ್ಥ ಸೇವೆಯನ್ನು ಮನಗಂಡ ಲಾರ್ಡ್ ನಾತಯನಿಲ್ ಕರ್ಜನ್ ಅಂದಿನ ಭಾರತದ ವೈಸ್‌ರಾಯರವರು, ಸರ್ ಡೊನಾಲ್ಡ್ ರಾಬರ್ಟಸನ್, ಬ್ರಿಟೀಷ್ ರೆಸಿಡೆಂಟ್, ಮೈಸೂರುರವರಿಗೆ ಆದೇಶಿಸಿ ದಿವಾನರವರ ನೆನಪಿಗೋಸ್ಕರ ಈ ಕೆಂಪು ಬಣ್ಣದ ಕಟ್ಟಡ ಕಟ್ಟಿ ಅದರಲ್ಲಿ 1915ರಲ್ಲಿ ಗ್ರಂಥಾಲಯ ಪ್ರಾರಂಭಿಸಿದರು. ಇದರಲ್ಲಿ ಬ್ರೆಯಲಿ (ಲೈಬ್ರರಿ) ಒಂದು ಭಾಗವು ಸಹ ತೆರೆದಿದೆ. ಈ ಕಟ್ಟಡದ ಮುಂದೆ ಒಂದು ಗುಲಾಬಿ ತೋಟದಲ್ಲಿ ಇವರ ಪ್ರತಿಮೆಯು ಸಹ ಅಳವಡಿಸಿರುತ್ತಾರೆ.

2000 ಸಾವಿರ ಇಸವಿಯಲ್ಲಿ ಈ ಗ್ರಂಥಾಲಯವು ರಾಜಾರಾಮ ಮೋಹನರಾಯ ಲೈಬ್ರರಿ ಫೌಂಡೇಶನ್‌ರವರು ಭಾರತದಲ್ಲಿ ಇದು ಕರ್ನಾಟಕದ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಸಂಸ್ಥೆ ಎಂದು ಪರಿಗಣಿಸಿ ಪ್ರಶಸ್ತಿ ಪಡೆದಿದೆ.

It is one of the legendary. Treasure Trove of natural splendor culture heritage and hallmark of the British rule in India. It has an apsidal plan with its frontage in Greco-Roman style with ionic Columns, There are symmetrical porches and a frontal portico and the façade is imposing. The Ochre coloured building has its gabled roofs with foliated edges. This is classic European style with Tuscan and Carinthian columns.

ಸರ್ಕಾರಿ ಪೋಸ್ಟ್ ಕಛೇರಿ (ಬಿಪಿಒ) ಕಟ್ಟಡ ಕಬ್ಬನ್ ಪಾರ್ಕನ ಉತ್ತರ ಭಾಗದ ಅಂಚಿನಲ್ಲಿದೆ. ಈಸ್ಟ್ ಇಂಡಿಯ ಕಂಪನಿಯವರು ಬ್ರಿಟೀಷರ ನೆಲೆ ಹಾಗೂ ಇವರ ನೇರವಾದ ಆಡಳಿತ ಕಂಟೋನ್ಮೆಟ್ ಪ್ರದೇಶದಲ್ಲಿರುವುದರಿಂದ, ದಿನನಿತ್ಯ ಕೆಲಸ ಕಾರ್ಯಗಳ ನಿಮಿತ್ತ ಇಂಪೀರಿಯಲ್ ಪೋಸ್ಟ್ ಕಛೇರಿ 1800ರಲ್ಲಿ ಪ್ರಾರಂಭವಾಯಿತು. 1854ರಲ್ಲಿ ಅಂದಿನ ಮೈಸೂರು ಸರ್ಕಾರದವರು ಇದನ್ನು ಮುಖ್ಯ ಪೋಸ್ಟ್ ಕಛೇರಿ ಎಂದು ಮಾನ್ಯತೆ ನೀಡಿತು.

1913ರಲ್ಲಿ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಗಳು ಪ್ರತ್ಯೇಕವಾಯಿತು. ಕೇಂದ್ರೀಯ ಟೆಲಿಗ್ರಾಫ್ ಕಛೇರಿ, ಸರ್ಕಾರಿ ಪೋಸ್ಟ್ ಕಛೇರಿಯ ಎದುರು ರಾಜಭವನ ರಸ್ತೆಯಲ್ಲಿತ್ತು. ಇದರ ಹೊಸ ಕಟ್ಟಡ ಅಲ್ಲಿಯೇ ಪಕ್ಕದಲ್ಲಿ ಕಟ್ಟಿದ್ದರು.

1980ರಲ್ಲಿ ಹಾಲಿ ಇರುವ ಬಿಪಿಒ ಕಟ್ಟಡವನ್ನು ಹೊಡೆದು ಹಾಕಿ ಹೊಸದಾದ ಭವ್ಯ ಕಟ್ಟಡ ಅದೇ ಸ್ಥಳದಲ್ಲಿ ಕಟ್ಟಿರುತ್ತಾರೆ. ಕೇಂದ್ರೀಯ ಟೆಲಿಗ್ರಾಫಿ ಕಛೇರಿ ಮೊಟ್ಟಮೊದಲು 1855ರಲ್ಲಿ ಹಳೆಯ ಮ್ಯೂಸಿಯಂ ರಸ್ತೆಯಲ್ಲಿ ಪ್ರಾರಂಭವಾಗಿ ರಾತ್ರಿ ಹಗಲು ಕೆಲಸ ಮಾಡುತ್ತಿತ್ತು. ಇದೇ ವರ್ಷದಲ್ಲಿಯೇ ಬೆಂಗಳೂರು ಮತ್ತು ಮದ್ರಾಸ್ ಟೆಲಿಗ್ರಾಫ್ ಲೈನ್ ಪ್ರಪ್ರಥಮವಾಗಿ ಕಾರ್ಯಾರಂಭ ಮಾಡಿದರು.

ಬೆಂಗಳೂರಿನಲ್ಲಿ ಚಿಕ್ಕದೇವರಾಜ ಒಡೆಯರ್ (1673–1704) ಪ್ರಪ್ರಥಮವಾಗಿ ಅಂಚೆ ಪೋಸ್ಟ್ ರವಾನಿಸುವ ಪದ್ಧತಿಯನ್ನು ತಂದಿದ್ದರು ಅಂಚೆ ಎಂದರೆ ಹಂಸ ಎಂದರ್ಥ. ಹಂಸ, ನಳ ದಮಯಂತಿರವರ ಪರಸ್ಪರ ಭಾವನಾತ್ಮಕ ವಿಚಾರಗಳನ್ನು ಇವರೀರ್ವರಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ತಿಳಿಸುವ ಕೆಲಸ ಮಾಡುತ್ತಿತ್ತು ಎಂದು ಪುರಾಣದಿಂದ ತಿಳಿದು ಬರುತ್ತದೆ. ನಂತರ, ಇವರ ಆಳ್ವಿಕೆಯಲ್ಲಿ ಅಠಾರ ಕಛೇರಿಯಲ್ಲಿ ಅಂಚೆ ಕೆಲಸ ಕಾರ್ಯಗಳಿಗೆ ಭಾವಡಿಯಲ್ಲಿ ಅಂದಿನ ಪೋಲೀಸ್ ಪದ್ಧತಿಯಲ್ಲಿ ಗುಪ್ತ ಇಲಾಖೆಯವರು ನಿರ್ವಹಿಸುತ್ತಿದ್ದರು. ಬರುಬರುತ್ತಾ ಹಲವು ಅಧೀನ ಕಛೇರಿಗಳು ಪ್ರಾರಂಭವಾಗಿ ಬೆಂಗಳೂರಿನ ಎಲ್ಲಾ ಜನರಿಗೂ ಇದರ ಉಪಯುಕ್ತತೆ ಪಡೆಯುವಂತಾಯಿತು.

ಹ್ಯೂ ಡೇಲಿ ಮೆಮೊರಿಯಲ್ ಹಾಲ್

ಬೆಂಗಳೂರಿನ ಮಿಥಿಕ್ ಸೊಸೈಟಿ ಡೇಲಿಯ ಜ್ಞಾಪಕಾರ್ಥವಾಗಿ ಬ್ರಿಟೀಷರು ಮತ್ತು ಭಾರತದ ನಾಗರೀಕರು ಜೊತೆಗೂಡಿ 1917ರಲ್ಲಿ ಕಟ್ಟಿರುವ ಕಟ್ಟಡ. 5ನೇ ಮೇ 1909ರಲ್ಲಿ ಎಫ್. ಜಿ. ರಿಚ್ಚಾರ್ಡ್ ಅಂದಿನ ಬೆಂಗಳೂರು ಕಂಟೋನ್ಮೆಟ್ ಪ್ರದೇಶದ ಕಲಕ್ಟರೆ ಆಗಿದ್ದರು. ಅವರ ಮನೆಯಲ್ಲಿ 17 ಜನ ಜೊತೆಗೂಡಿ ಸೇರಿ, ದಕ್ಷಿಣ ಭಾರತದ

ಇತಿಹಾಸ ಬಗ್ಗೆ ಸಂಶೋಧನೆ ಮಾಡಲು ಪುಸ್ತಕ, ಭಂಡಾರ ತರೆಯಲು ಮತ್ತು ಅಳವಾದ ಅಭ್ಯಾಸ ಮಾಡಲು ಈ ಸಂಸ್ಥೆಯನ್ನು ಸ್ಥಾಪಿಸಿದರು. ಅಂದಿನ ಇತಿಹಾಸಕಾರರು ಹಾಗೂ ಸಂಶೋಧಕರು ಆದ ಡಾ. ಜಿ. ಎಫ್. ಫ್ಲೀಟ್, ಡಾ. ಬಿ.ಜೆ. ರೈಸ್, ಡಾ. ಜವ್ವೆಲ್ ಡುಬ್ರಿಯಲ್, ಸರ್ ಜಾನ್ ಮಾರ್ಷಲ್, ಪ್ರೊ. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್, ಟಿ.ಎ.ಗೋಪಿನಾಥರಾವ್, ಮಹೋಪಾಧ್ಯಾಯ, ಆರ್. ನರಸಿಂಹಚಾರ್, ವೆಂಕಯ್ಯ.ಹೆಚ್, ಕೃಷ್ಣಶಾಸ್ತ್ರಿ, ಡಾ.ಎ. ವೆಂಕಟಸುಬ್ಬಯ್ಯ, ಡಾ. ಆರ್. ಶಾಮಶಾಸ್ತ್ರಿ, ಪ್ರೊ. ಕೆ.ಎನ್. ಶಾಸ್ತ್ರಿ, ಪ್ರೊ. ಬಿ.ಎಂ.ಶ್ರೀಕಂಠಯ್ಯ, ಟಿ.ಟಿ. ಶರ್ಮಾನ್ ಅಚಿಡ್ ಡಾ. ಎರಿ.ವಿ ಕೃಷ್ಣರಾವ್ ಜೊತೆಗೂಡಿ ಸಂಸ್ಥಾಪಕರಾದರು. ನಂತರ ಒಂದು ವರ್ಷದಲ್ಲಿಯೇ 174 ಸದಸ್ಯರಾದರು. ಇದು ಸಂಸ್ಥಾಪಕರಿಗೆ ಆಶ್ಚರ್ಯ ಹಾಗೂ ಸಂತೋಷಪಟ್ಟರು. ಇದು ಮುಂದಿನ ಬೆಳವಣಿಗೆಯ ಬಗ್ಗೆ ಭರವಸೆ ಮೂಡಿತು.

ಇದೇ ತರಹ ಉತ್ತರ ಭಾರತದಲ್ಲಿ ರಾಯಲ್ ಎಶಿಯಾಟಿಕ್ ಸೊಸೈಟಿ, ಕಲ್ಕತ್ತ ಹಾಗೂ ಭಾರತ ಇತಿಹಾಸ ಸಂಶೋಧಕ ಮಂಡಲ ಪುಣೆಯಲ್ಲಿ ಭಾರತದ ಇತಿಹಾಸದ ಬಗ್ಗೆ ಹೆಚ್ಚಿನ ಸಂಶೋಧನೆ ಕೈಗೊಂಡಿದ್ದರು.

(ಅಂಟೋನೈನ್‌ಟ್ಟೇ ಮೇರಿ ತಬಾರ್ಡ್) Antoinette Marie Tabard was a French priest who was destined to come India and leave his indelible mark on Bangalore in the Form of the Daily memorial. ಈತನು 1886ರಲ್ಲಿ ಬೆಂಗಳೂರಿಗೆ ಬಂದು ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಉಪಾಧ್ಯಾಯರಾಗಿ ಕೆಲಸಕ್ಕೆ ಸೇರಿದರು. ಈತನು ಭಾರತಕ್ಕೆ ಬಂದ ಉದ್ದೇಶ ಮಿಷನರಿಯಾಗಿ, ಆದ್ದರಿಂದ ಬರೀ ಪಾಠ ಹೇಳುವ ಕೆಲಸ ಈತನಿಗೆ ತೃಪ್ತಿ ಆಗಲಿಲ್ಲ. ಈತ ಬ್ರಿಟೀಷ್ ಡಾ. ಕ್ಲೆಯೆನರ್‌ಗೆ ತನ್ನ ಕೊರತೆಯನ್ನು ತಿಳಿಸಿದನು. ನಾನು ಬೇರೆ ಜಿಲ್ಲೆಗಳಿಗೆ ಹೋಗಿ, ಜನರ ಜೊತೆಯಲ್ಲಿ ಕೆಲಸ ಮಾಡುತ್ತಾ ನಾನು ಗುರುತಿಸಿಕೊಳ್ಳಬೇಕು ಎಂದು ಕೇಳಿದ ಮೇಲೆ ಈತನನ್ನು ತಮಿಳು ಭಾಷೆ ಕಲಿಯಲು ಮೈಸೂರಿನಲ್ಲಿರುವ ರವರೆಂಟ್ ಫಾದರ್ ರಿಯಾಟೀರು ಹತ್ತಿರ ಕಳುಹಿಸಿದರು.

ಬೆಂಗಳೂರಿನಲ್ಲಿ ಫಾದರ್ ಕ್ಯೂನಾರ್ಡ್, ಪ್ಯಾರೀಸ್ ಪ್ರೀಸ್ಟ್ ಆಫ್ ಸೆಂಟ್ ಪ್ಯಾಟ್ರಿಕ್ಸ್ ಕ್ಯಾತೆಡ್ರೆಲ್ ತೀರಿ ಹೋದರು. ಈ ಜಾಗವನ್ನು ಭರ್ತಿ ಮಾಡಲು ಫಾದರ್ ಟಬಾರ್ಡ್ ರವರನ್ನು ಮೈಸೂರಿನಿಂದ ಬೆಂಗಳೂರಿಗೆ ಕರೆಯಿಸಿ ಚಾಪ್ಲೇನ್ ಆಗಿ ನೇಮಕ ಮಾಡಿದರು. 1891 ರಿಂದ 1926ರವರೆಗೆ ಚಾಪ್ಲೀನ್ ಅಲ್ಲಿ ತಂಗಿದ್ದರು. ಚಾಪ್ಲೀನ್ ಬೆಂಗಳೂರಿನಲ್ಲಿ ಬ್ರಿಟೀಷ್ ಸೈನಿಕರ ದಂಡು ತಂಗಿದ್ದ ಸ್ಥಳದಲ್ಲಿ ಅವರ ಶುಶ್ರೂಷೆ ಮಾಡುವ ಸೇವೆಯಲ್ಲಿ ನಿರತನಾಗಿದ್ದನು. ಪಾದರ್ ತಬಾರ್ಡ್ ಡೇಲಿ ಮೆಮೋರಿಯಲ್ ಹಾಲೆನ್ ಮಿಥಿಕ್ ಸೊಸೈಟಿಯನ್ನು ಭದ್ರಪಡಿಸಲು ಶ್ರಮಿಸಿದರು. ಅಂದಿನ ಕಲೋನೆಲ್ ದೇಶ ರಾಜ್ ಅರಸ್ ರವರು ಅಪೇರ್ ಆಫ್ ವೈಟ್ ಮೂಲ್ಸ್ ಕೊಡುವುದಕ್ಕೆ ಮುಂದಾದರಂತೆ, ಆಗ ಇವರು ಇದರ ಬದಲು ನಗದು ಹಣ ಕೊಟ್ಟರೆ ಮಿಥಿಕ್ ಸೊಸೈಟಿಗೆ ಸಹಾಯ ಮಾಡಿದಂತಾಗುತ್ತದೆ ಎಂದು ತಿಳಿಸಿದರಂತೆ. ಅದರಂತೆ ಮರು ದಿವಸವೇ ದಿ ಪೇರ್ ಆಫ್ ಮೂಲ್ಸ್ ಜೊತೆಯಲ್ಲಿ ರೂ. 500–00 ರ ಚೆಕ್ಕನ್ನು ಕಳುಹಿಸಿಕೊಟ್ಟರಂತೆ. ಫಾದರ್ ಟಬಾರ್ಡ್ ಅಂದಿನ ಮಹಾರಾಜರಿಂದ ಸೆನೆ ಟಾಪ್ ರಸ್ತೆ (ಈಗಿನ ನೃಪತುಂಗ ರಸ್ತೆ)ಯಲ್ಲಿ ಜಮೀನು ಪಡೆದು ಅಲ್ಲಿ ಡೆಲಿ ಮೆಮೋರಿಯಲ್ ಹಾಲ್ 1917ರಲ್ಲಿ ಕಟ್ಟಿಸಿ ಹಾಲಿ ಮನೆಯಲ್ಲಿ ಇದ್ದ ಗ್ರಂಥ ಭಂಡಾರವನ್ನು ತಂದು ವಿಸ್ತರಿಸಿದರು ಹಾಗೂ 3 ತಿಂಗಳಿಗೊಮ್ಮೆ ಅಲ್ಲಿ ನಡೆದ ಚಟುವಟಿಕೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಣೆ ಮಾಡಲು ಬುನಾದಿ ಹಾಕಿದರು. ಇದು ಈಗಲೂ ಸಹ ಮುಂದುವರೆದಿರುವುದನ್ನು ನಾವು ಕಾಣಬಹುದು. 2009ರಲ್ಲಿ ಶತಮಾನೋತ್ಸವವನ್ನು ಆಚರಣೆ ಮಾಡಿರುವುದನ್ನು ನಾವು ಗಮನಿಸಬಹುದು.

ಈ ಕಟ್ಟಡವು ಗ್ರೀಕ್-ರೋಮನ್ ಶೈಲಿಯಲ್ಲಿ ಕಟ್ಟಿದೆ. ಎತ್ತರವಾದ ಟೆರೇಸ್, ವಿಶಾಲವಾದ ಹಾಲ್, ದೊಡ್ಡ ಕಿಟಕಿಗಳು, ರಸ್ತೆಯಿಂದ ಕಟ್ಟಡದವರೆಗೆ ವಿಶಾಲವಾದ ಜಾಗ ಈ ಕಟ್ಟಡಕ್ಕೆ ಶೋಭೆಯಿಂದ ಅಂದವಾಗಿ ಮಿನುಗುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆರಿಟೇಜ್ ಕಟ್ಟಡಗಳ ಪಟ್ಟಿಯಲ್ಲಿ ಇದು ಕೂಡ ಸೇರಿದೆ.

ರಾಜ ಭವನ

ಕರ್ನಾಟಕದ ಅತ್ಯಂತರ ಗೌರವಯುತ ದೊಡ್ಡ ಹುದ್ದೆಯ ರಾಜ್ಯಪಾಲರು ವಾಸಿಸುತ್ತಿರುವ ಕಟ್ಟಡ. ಹಾಗೂ ಕಛೇರಿಯು ಸಹ ಅಲ್ಲಿಯೇ ಇದೆ. ಸರ್ ಮಾರ್ಕ್ ಕಬ್ಬನ್‌ರವರು ಸಣ್ಣಮಟ್ಟ ಬೆಟ್ಟಗುಡ್ಡಗಳಿಂದ ಕೂಡಿದ ಹಾಗೂ ಹೈ ಗ್ರೌಂಡ್ಸ್ ಮತ್ತು ಸರ್ಕಾರಿ ಪೋಸ್ಟ್ ಕಛೇರಿಯ ಮಧ್ಯಭಾಗದ 91.3 ಎಕರೆ ಜಮೀನು ಖರೀದಿಸಿ 1842ರಲ್ಲಿ ಎ ಮ್ಯಾನ್‌ಷನ್ ಕಟ್ಟಡ ಕಟ್ಟಿದರು. ಅಂದಿನ ರೆಸಿಡೆಂಟ್ ವಾಸ ಮಾಡುತ್ತಿದ್ದರು. ಇದನ್ನು ಅಂದಿನ ಮೈಸೂರು ಸರ್ಕಾರ 1862ರಲ್ಲಿ ಪುನಃ ಖರೀದಿಸಿ ಉಪಯೋಗಿಸುತ್ತಿದ್ದರು. 1960ರಲ್ಲಿ ರಾಜ ಭವನ ಎಂದು ನಾಮಕರಣ ಮಾಡಿ, ರಾಜ್ಯಪಾಲರು ವಾಸ ಮಾಡುತ್ತಿದ್ದಾರೆ.

"This is a perfectly composed building of stately pillar, Inonic pilasters and systematically-set pediment windows". It has a wide garden in which many images are displayed. It has a magnificent ball room also.

ಗಾಜಿನ ಮನೆ

30 ನವೆಂಬರ್ 1889ರಲ್ಲಿ ರಾಜಕುಮಾರ ಆಲ್ಬರ್ಟ್ ವಿಕ್ಟರ್ ವೇಲ್ಸ್ ದೇಶದವರು ಗಾಜಿನ ಮನೆಗೆ ಗುದ್ದಲಿ ಪೂಜೆ ಮಾಡಿದರು. ಇದರ ನಕ್ಷೆ ಕ್ರಿಸ್ಟಲ್ ಅರಮನೆಯ ಶೈಲಿ ಮಾದರಿಯಲ್ಲಿತ್ತು. ಇದರ ವೆಚ್ಚ ರೂ. 75000-00 ಇದಕ್ಕೆ ಆಲ್ಬರ್ಟ್ ವಿಕ್ಟರ್ ಕನ್‌ಸರ್‌ವೇಟರಿ ಎಂದು ಕರೆದರು.

1935ರಲ್ಲಿ ಗಾಜಿನ ಮನೆಯ ಪೂರ್ವ ಭಾಗದಲ್ಲಿ ಸ್ವಲ್ಪ ಭಾಗ ಸೇರಿಸಿಕೊಂಡರು. ಇದರ ಸುತ್ತಳತೆ 2180 ಚದರ ಮೀಟರ್‌ಗಳು. ಲಾಲ್‌ಬಾಗ್ ವಿಸ್ತೀರ್ಣ ಸುಮಾರು 97 ಎಕರೆಗಳು. ಇದು ತೋಟಗಾರಿಕೆಯ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಚಟುವಟಿಕೆಗಳಲ್ಲಿ ಕರ್ನಾಟಕದಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತದೆ.

This is heritage structure-European Architecture is very sensitive to the surroundings climate. Asian Architecture as prevalent in China and the UAE is probably all about showcasing Wealth. In India, we prefer to copy western buildings to a great extent.

ಲಾಲ್‌ಬಾಗ್ ಗ್ರಂಥ ಭಂಡಾರ ವಿಲಿಯಂ ನ್ಯೂ ರವರಿಂದ 1863-73ರ ಅವಧಿಯಲ್ಲಿ ಸ್ಥಾಪನೆಯಾಯಿತು. ಇದು 130 ವರ್ಷಗಳ ಇತಿಹಾಸವಿದೆ. ಇಲ್ಲಿ 19ನೇ ಶತಮಾನದ ತೇಲ ಚಿತ್ರಗಳಿವೆ. ಇದು ಏಷ್ಯಾದ ಅತಿ ಹಳೆಯ ಗ್ರಂಥಾಲಯಗಳಲ್ಲಿ ಒಂದು.

ಕೆಂಪು ಬಣ್ಣದ ಕಂಬಗಳು, ಹಸಿರು ಬಣ್ಣದ ಗ್ರಿಲ್‌ಗಳು, ಅಗಲವಾದ ಮುಖ್ಯ ಬಾಗಿಲು, ಕಿಟಕಿಗಳಿಂದ ಕೂಡಿದ ಸುಂದರವಾದ ಬಂಗಲೆ.

1863-73ರ ಅವಧಿಯಲ್ಲಿ ವಿಲಿಯಂ ನ್ಯೂ ಉದ್ಯಾನವನದ ಮೇಲ್ವಿಚಾರಕರಾಗಿದ್ದರು. ಆ ಅವಧಿಯಲ್ಲಿ ಗ್ರಂಥಾಲಯ ಸ್ಥಾಪಿಸಿದರು. ಪ್ರತಿ ಸಸ್ಯ ಪ್ರಬೇಧವನ್ನು ಶಾಸ್ತ್ರೀಯವಾಗಿ ಅರಿಯಲು ಗ್ರಂಥ ಅವಶ್ಯಕ ಎಂದು

ಸಂಗ್ರಹಕ್ಕೆ ತೊಡಗಿದರು. ದೇಶ ವಿದೇಶಗಳ ಅನೇಕ ಗ್ರಂಥಾಲಯಗಳಿಗೆ ತೆರಳಿ ಅಧ್ಯಯನ ನಡೆಸಿದರು. ಅಲ್ಲಿನ ವ್ಯವಸ್ಥೆ, ಸೌಲಭ್ಯ, ವೀಕ್ಷಿಸಿ, ಅಧ್ಯಯನ ನಡೆಯಿಸಿ, ಉತ್ತಮ ಗಾಳಿ, ಬೆಳಕು ಲಭ್ಯವಿರುವಂತೆ ಕಟ್ಟಡ ನಿರ್ಮಿಸಿದ್ದರು. ಅಂದಿನ ಗ್ರಂಥಾಲಯದ ಕಟ್ಟಡವೇ ಇಂದು ತೋಟಗಾರಿಗೆ ಇಲಾಖೆಯ ಆಡಳಿತ ಕಛೇರಿಯಾಗಿ ಮಾರ್ಪಟ್ಟಿದೆ. ಹಿಂದೆ ನಿರ್ದೇಶಕರ ವಸತಿ ಇದ್ದ ಕಟ್ಟಡದಲ್ಲಿ ಇಂದು ಗ್ರಂಥಾಲಯವಿದೆ. ಇದು ಮುಖ್ಯ ದ್ವಾರದಲ್ಲಿಯೇ ಇದೆ.

ಮೆಯೋ ಹಾಲ್ ಕಟ್ಟಡ

ಇತ್ತೀಚೆಗೆ ಬೆಂಗಳೂರಿನ ಸಂಸ್ಥಾಪಕ ಹಿರಿಯ ಕೆಂಪೇಗೌಡರ ವಸ್ತು ಸಂಗ್ರಹಾಲಯಕ್ಕೆ ಕಾಯ್ದಿರಿಸಿದೆ. ಇದರ ಹಿಂದೆ 1883ರಿಂದ ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿಗಳು ಹಾಗೂ ಸಭೆಗಳು ನಡೆಯುತ್ತಿದ್ದವು. ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಕಛೇರಿಯ ಆವರಣದಲ್ಲಿ ಶಾಶ್ವತವಾದ ಸಭೆ ನಡೆಸಲು ಹೊಸದಾಗಿ ಕಟ್ಟಡ ಕಟ್ಟಿರುವುದರಿಂದ ಅಂದಿನಿಂದ ಇಲ್ಲಿ ಸಭೆಗಳು ನಡೆಯುತ್ತಿವೆ. ಈ ಕಟ್ಟಡವು ಎಂ.ಜಿ.ರಸ್ತೆ ಹಾಗೂ ರೆಸಿಡೆನ್ಸಿ ರಸ್ತೆಯ ಮಧ್ಯದಲ್ಲಿದ್ದು, ಯುಟಿಲಿಟಿ ಕಟ್ಟಡದ ಪಕ್ಕದಲ್ಲಿದೆ.

ಈ ಭಾರತದ ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ಮೇಯೋರವರ ಜ್ಞಾಪಕಾರ್ಥವಾಗಿ 1872ರಲ್ಲಿ ಪ್ರಾರಂಭವಾಗಿ 1883ರಲ್ಲಿ ಪೂರ್ಣ ಕಟ್ಟಿದ ಕೆಂಪು ಬಣ್ಣದ ಕಟ್ಟಡ, ಇದರ ವೆಚ್ಚ ರೂ. 40030–00 ಇದರಲ್ಲಿ ರೂ. 25,042 ಸಾರ್ವಜನಿಕರಿಂದ ಸಂಗ್ರಹವಾಗಿದೆ. ನಂತರ ರೂ. 5000–00ಗಳನ್ನು ಫರ್ನಿಶಿಂಗ್‌ಗಾಗಿ ಖರ್ಚಾಗಿದೆ. ಈ ಕಟ್ಟಡವು ಜೂನ್ 1883ರಲ್ಲಿ ಸ್ಥಳೀಯ ಬೆಂಗಳೂರು ಮುನಿಸಿಪಲ್ ಕಮೀಷನ್ ಇಲಾಖೆಗೆ ಕೆಲವು ಷರತ್ತಿನೊಂದಿಗೆ ಬಿಟ್ಟುಕೊಡಲಾಯಿತು. ಇದು ಎರಡು ಅಂತಸ್ತಿನ ಕೆಂಪು ಬಣ್ಣವುಳ್ಳ ಕಟ್ಟಡ. ಮೊದಲಿನ ಅಂತಸ್ತಿನ ಹಾಲ್ ಸಾರ್ವಜನಿಕರಿಗೆ ಸಭೆಗಳನ್ನು ನಡೆಸಲು ಅವಕಾಶ ಕಲ್ಪಿಸಬೇಕೆಂದು ತಿಳಿಸಿತ್ತು.

ಈ ಕಟ್ಟಡದ ಮೇಲ್ಭಾಗದಿಂದ ನೋಡಿದರೆ ಮಾಣಿಕ ಕಾ ಪೇರೇಡ್ ಮೈದಾನ, ಹಲಸೂರು ಕೆರೆ ಮತ್ತು ಇತರೆ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಉಲ್ಲಾಸವಾಗಿರುತ್ತದೆ. ಈ ತರಹ ಕಟ್ಟಡಗಳನ್ನು ನೋಡಲು ಸ್ಫೂರ್ತಿಧಾಯಕವಾಗಿರುತ್ತದೆ ಹಾಗೂ ಸುಂದರವಾಗಿರುತ್ತದೆ.

ಈತನ ಹೆಸರಿನಲ್ಲಿ ಮೇಯೋ ಆಸ್ಪತ್ರೆ ಹಾಗೂ ಮೇಯೋ ಕಲೆ ಮತ್ತು ಸಂಸ್ಕೃತಿಯ ಪಾಠಶಾಲೆ ಲಾಹೋರಿನಲ್ಲಿರುವುದು ಸಹ ತಿಳಿದು ಬರುತ್ತದೆ.

"A remarkable brick and mortar structure.". Its tall tapering Tuscan Columns have gold painted Corinthian capitals. The mouldings atop have minute friezes in mortar. The buildings in elevation" is remarkable for its composition of architravated and pendimented windows, varied with key-stoned arches, beautifully executed consoles, balustrated ledges and typically Greek Cornice and wooden floors".

By the side of Meyo Hall building station public offices constructed in 1904 Sir James Bordilan the then British Resident inaugurated this building. This building is also in Stylistic consonance with the Mayohall building.

1880ರಲ್ಲಿ ಬೆಂಗಳೂರು ಅರಮನೆ ಲಂಡನ್ ನಲ್ಲಿರುವ ವಿಂಡ್ಸನ್ ಕ್ಯಾಸಲ್ ಕಟ್ಟಡದ ಶೈಲಿ ಮಾದರಿಯಲ್ಲಿ ವಿಸ್ತಾರವಾದ ಉದ್ಯಾನವನದಲ್ಲಿ ಕಟ್ಟಿರುತ್ತಾರೆ. ಕಟ್ಟಡದ ಒಟ್ಟು ಸುತ್ತಳತೆ 45000 ಚದರಡಿಗಳು. ಇದರ ಒಟ್ಟು

ವೆಚ್ಚ ರೂ. 10.00 ಲಕ್ಷಗಳು, ಇದು ಒಂದು ಖಾಸಗಿ ಕಟ್ಟಡ, ಇದರ ಮಾಲೀಕರು ರೆವರೆಂಡ್ ಎನ್ ಗ್ಯಾರಟಿ, ಪ್ರಸಿದ್ಧ ಮಿಶನರಿ ಹಾಗೂ ವಿದ್ಯಾವಂತನು, ಬೆಂಗಳೂರು ಸೆಂಟ್ರಲ್ ಹೈಸ್ಕೂಲಿನಲ್ಲಿ ಮೊಟ್ಟಮೊದಲನೆಯ ಪ್ರಾಂಶುಪಾಲರು, ತನ್ನ ಸ್ವಂತ ಹಣದಿಂದ ಈ ಕಟ್ಟಡವನ್ನು ಕಟ್ಟಿದ್ದನು. ರಿಚರ್ಡ್ ಶ್ಯಾಂಕಿ ಅಂದಿನ ಮೈಸೂರಿನ ಮುಖ್ಯ ಅಭಿಯಂತರರವರ ಕಾಲದಲ್ಲಿ ಶ್ರೀ ಹೆಚ್. ಹೆಚ್. ಮಹಾರಾಜರವರು ಈ ಕಟ್ಟಡವನ್ನು ಖರೀದಿಸಿದರು. 1890ರಲ್ಲಿ ಕಟ್ಟಡದ ಉತ್ತರ ಭಾಗದಲ್ಲಿ ಕ್ವಾಡ್ರಾಂಗಲ್ ಜೊತೆಯಲ್ಲಿ ಕಟ್ಟಡದ ಒಂದು ಭಾಗವನ್ನು ಸಹ ಕಟ್ಟಿಸಿದರು. ಮುಖ್ಯ ಅರಮನೆಗೆ ಒಳಗಡೆಯಿಂದ ತಿರುಗಾಡಲು ದಾರಿ, ಇದರ ಮೇಲೆ ಮೇಲ್ಛಾವಣಿ ಇರಿಸಿ ಸುಂದರವಾಗಿ ತಿರುಗಾಡಲು ಕಟ್ಟಿಸಿರುತ್ತಾರೆ. ಜೆ.ಡಬ್ಲ್ಯೂ, ಮಾರೀಸ್ ಈ ಅರಮನೆಯನ್ನು ನೋಡಿ ಹೀಗೆ ಹೇಳಿದನಂತೆ.

"Until it has now become one of the finest palaces on this side of India". A life size image of N.Venkatasamiraju Daroga of the palace garden between 1887-1927 is displayed in the palace for his devoted service to enhance the beauty of the palace by raising its beautiful garden.

It is two storeyed. Its interior too is meticulously decorated with mouldings floral and geomatrical designs brought in mortar, splender columns with artistic capitals and the halls are embellished with gorgeous Chandelliers. It has fortified Towers and Turrested parapets reminding one of Tuder architecture. "A bigarre vision of a past era of England was transported thousands of miles away to the city". This structure in granite has Roman and projections of many geometric patterns, the Circle, the Octagon and the square. From Intricately carved banisters to brass in laid rosewood doors, stained glass windows and chandellers made from Belgian crystal, the palance excudes class and style in abundant measure.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್

ಮುಖ್ಯ ಕಟ್ಟಡ 1913ರಲ್ಲಿ ಪೂರ್ಣಗೊಂಡಿತು. ಆಮಶೆಡ್ ಜೀ ಸುಸರೆ ವಾಂಜಿ ಟಾಟಾರವು 1898ರಲ್ಲಿ ಈ ಕಟ್ಟಡದ ಉದ್ದೇಶವನ್ನು ಮನಗಂಡು ಒಂದು ಸಮಿತಿ ಮಾಡಿ ಚರ್ಚಿಸಿ, ವಿಜ್ಞಾನದ ಮಹತ್ವದ ಬಗ್ಗೆ ಒಂದು ಕರಡು ಪತ್ರವನ್ನು ತಯಾರಿಸಿ ಅಂದಿನ ಲಾರ್ಡ್ ಕರ್ಜನ್ ಭಾರತದ ವೈಸ್ ರಾಯ್‌ರವರಿಗೆ ಕಳುಹಿಸಿ ಒಪ್ಪಿಗೆ ಪಡೆದರು. ಇದರ ಜೊತೆಯಲ್ಲಿ ಪ್ರಾರಂಭದಲ್ಲಿ ಹಣದ ಬಳಕೆಯ ಬಗ್ಗೆ ಎಂಡೋಮೆಂಟ್ ಮಾಡಿ ಈ ಸಂಸ್ಥೆ ಬೆಳೆಯಲು ಟಾಟಾರವರು ಸಹಕರಿಸಿದರು. ಟಾಟಾರವರು ಸಂಸ್ಥೆಯನ್ನು ಬಲಪಡಿಸಲು ಗಮನವಿಟ್ಟರೆ ಮಾರಿಸ್ ಟ್ರಾವರ್ಸ್ ವಿಜ್ಞಾನದ ಜ್ಞಾನವನ್ನು ಬಲಪಡಿಸಿ ಅಭಿವೃದ್ಧಿಪಡಿಸಲು ಗಮನ ಸೆಳೆಯುತ್ತಿದ್ದರು. ಸರ್. ಕೆ. ಶೇಷಾದ್ರಿ ಅಯ್ಯರ್ ದಿವಾನರ ಸ್ವಪ್ರಯತ್ನದಿಂದ 372 ಎಕರೆ ಜಮೀನು ಮುಫತ್ತಾಗಿ ನೀಡಿದರು. ಹಾಗೂ ಕಟ್ಟಡ ಕಟ್ಟಲು ರೂ. 5 ಲಕ್ಷಗಳು ಮತ್ತು ವರ್ಷಕ್ಕೆ ರೂ. 30000–00 ನಂತೆ, ನಂತರ ಇದು ರೂ. 50000–00 ಗಳಿಗೆ ಏರಿತು. ಮೊರಿಸ್ ಟ್ರಾವರ್ಸ್ ಇದರ ಮೊದಲನೆಯ ಡೈರೆಕ್ಟರ್ ಆದರು. ಈ ಸಂಸ್ಥೆಯನ್ನು ಬಲಪಡಿಸಲು 1933ರಲ್ಲಿ ಸರ್. ಸಿ.ವಿ. ರಾಮನ್‌ರವರು ಭಾರತೀಯ ಮೊಟ್ಟ ಮೊದಲನೆಯ ಡೈರೆಕ್ಟರ್ ಆಗಿ ನೇಮಕವಾದರು. 1938ರಿಂದ

1947ರವರೆಗೆ ಸರ್. ಎಂ. ವಿಶ್ವೇಶ್ವರಯ್ಯ ನವರು ಅಧ್ಯಕ್ಷರಾಗಿದ್ದರು. ಇತರೆ ಗಣ್ಯರು ವಿಕ್ರಮ ಸಾರಬಾಯಿ, ಹೋವಮಿ ಬಾಬಾ ಮತ್ತು ಜೆ. ಸಿ. ಘೋಷ್, ಸತೀಶ ದಿವಾನ್ ಮತ್ತು ಸಿ. ಎನ್. ಆರ್. ರಾವ್ ಇತರರು ಗಣ್ಯವ್ಯಕ್ತಿಗಳು ಸಹ ಇಲ್ಲಿ ಇದ್ದರು. ಈ ಸಂಸ್ಥೆಯು ಯೂನಿರ್ವಸಿಟಿ ಮಟ್ಟದ ಎಲ್ಲಾ ಅಧಿಕಾರಿಗಳನ್ನು ಹೊಂದಿತ್ತು. ಮತ್ತು ವಿಜ್ಞಾನದ ವಿಷಯಕ್ಕೆ ಸಂಬಂಧಪಟ್ಟಂತೆ ವಿವಿಧ ಅಂಗಾಂಗಗಳ ಭಾಗಗಳನ್ನು ಶಿಸ್ತಿನಿಂದ ನಡೆಸುತ್ತಿದ್ದರು. ಇದು ಭಾರತದಲ್ಲೇ ಬಹು ಪ್ರಸಿದ್ಧವಾದ ಸಂಸ್ಥೆ ಎಂದು ಕೀರ್ತಿ ಪಡೆದಿದೆ. 27–05–2008ರಂದು ಶತಮಾನೋತ್ಸವ ಆಚರಿಸಿದರು.

One of the very beautiful and imposing buildings in Bangalore is the main block of the Indian Institute of Science with its 160 feet Tall Central tower which is tapering in three levels. It stands out from amidst the Mangalore tiled roof of the two storied building. "Topped with a pinnacled pavilion, the tower is flanked by two small cupolas, each with a niche". The central part crowned with a pediment is composed of two grand columns. The two blocks projecting at the either end of this long central Hall spread over either side of the is of grey granite with gabled roofing. It was designed by C.F. Sevens and company of Bombay and cost Rs. 4.11 lakhs. Infront of this building in classical style is erected the statue of Jemshedji Nusserwanji Tata. The pestal of the statute, designed in Parsee architectural style has the magnificent stature of Jove with Thunderbolt to represent electricity, Vulcan with anvil for beating steel, Minerva with her distal covered with flax and callipoe representing research. This highly artistic composition tries to project the aims of the institute. Abundance and knowledge are the two others statues here supporting the Central shaft of the composition, this was installed in 1916. The garden that surrounds it adds to the beauty of the whole structure.

ಕುಮಾರ ಕೃಪ ವಿಶ್ರಾಂತಿ ಭವನ (1880)

ಇದು ಹೈಗ್ರೌಂಡ್ಸ್‌ನಲ್ಲಿದೆ. 1880ರಲ್ಲಿ ಸರ್. ಎಂ. ಕೆ. ಶೇಷಾದ್ರಿ ಅಯ್ಯರ್‌ರವರು ಕಟ್ಟಿಸಿದ ಖಾಸಗಿ ಕಟ್ಟಡ. ನಂತರ ಹಲವು ಮುಖ್ಯ ಮಂತ್ರಿಗಳು ಇಲ್ಲಿ ವಾಸವಾಗಿದ್ದರು. ಸರ್ಕಾರ ವಿಶ್ರಾಂತಿ ಭವನ ಎಂದು ಪರಿಗಣಿಸಿದೆ. ಇದರಲ್ಲಿ ರಾಜಕೀಯ ಧುರೀಣರು, ಸಾರ್ವಜನಿಕರ ಕೆಲಸ ಕಾರ್ಯಗಳ ಬಗ್ಗೆ ಆಗಾಗ್ಗೆ ಇಳಿದುಕೊಂಡು ಚರ್ಚಿಸಲು ತೀರ್ಮಾನಿಸಲು ಉಪಯೋಗಿಸುತ್ತಿರುತ್ತಾರೆ.

This building a two storied granite structure and its, rows of parapets at various levels are variegated in design. It has a beautiful fountain at his front.

ಬಾಲಬ್ರೂಯ ಕಟ್ಟಡ

ಇದು 1860ರಲ್ಲಿ ಕಟ್ಟಿದ ಕಟ್ಟಡ. ಇದು ಪ್ಯಾಲೇಸ್ ರಸ್ತೆಯಲ್ಲಿದೆ. ಸರ್ ಮಾರ್ಕ್ ಕಬ್ಬನ್‌ರವರು ಇಸ್ಲೇ ಆಫ್ ಮ್ಯಾನ್ (ಯು.ಕೆ) ಊರಿನವರು ಆದ್ದರಿಂದ ಬಾಲ ಬ್ರೂಯ ಎಂದು ಹೆಸರಿಸಿದರು. ಬಾಲಬ್ರೂಯ

ಎಂದರೆ ರಿವರ್ ಬ್ಯಾಂಕ್ ಘಾರಂರಲ್ಲಿ ಪ್ರಮುಖರಾದ ಸರ್. ಎಂ. ವಿಶ್ವೇಶ್ವರಯ್ಯನವರು ಹಾಗೂ ಕೆಲವರು ಮುಖ್ಯ ಮಂತ್ರಿಗಳು ಅಂದರೆ ಶ್ರೀ ದೇವರಾಜ್ ಅರಸ್‌ರವರು ಸಹ ಈ ಕಟ್ಟಡದಲ್ಲಿ ವಾಸ ಮಾಡಿದ್ದರು. ರವೀಂದ್ರನಾಥ ಟಾಗೂರರವರು ಸಹ ಸ್ವಲ್ಪ ದಿವಸ ಅಲ್ಲಿ ತಂಗಿದ್ದರು.

Its wide porch has Tuscan pillars with Dorie Capitals.

ಕಾರ್ಲೆಟನ್ ಕಟ್ಟಡ:

ಕಟ್ಟಡದಲ್ಲಿ ಈಗ ಸಿ.ಒ.ಡಿಯ ಮುಖ್ಯ ಕಛೇರಿ ಇದೆ. ಬ್ರಿಟೀಷ್ ಆಕ್ಷನರ್ ಕಾರ್ಲೆಟನ್‌ರವರು 1880ರಲ್ಲಿ ಕಟ್ಟಿದ್ದು, ಇದರಲ್ಲಿ ಸರ್ ಮಿರ್ಜಾರವರು ರೆಸಿಡೆನ್ಸಿ ಆಗಿ ವಾಸಮಾಡಿದರು. ಡಾ. ವಿ. ಕೆ. ಗೋಕಾಕ್, ಉಪ ಕುಲಪತಿಯವರು ವಾಸವಾಗಿದ್ದರು. The building has fine Corninthian pillars adorning its Verandah.

ಪಾರ್ಕ್ ಹೌಸ್ ಕಟ್ಟಡ:

ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮೀಷನ್ ಇಲಾಖೆ ಕೆಲಸ ಮಾಡುತ್ತಿದೆ. ಇದು 1929ರಲ್ಲಿ ಕಟ್ಟಿದ್ದು, ಕಂಟೋನ್ಮೆಂಟ್ ಪ್ರದೇಶದ ಕಲೆಕ್ಟರ್ ಇಲ್ಲಿ ವಾಸವಾಗಿದ್ದರು.

This two storied building with tied roofing has a two-storeyed Porch too. The Porch has flat roof.

Sri Krishna Rajendra Silver Jubilee Institute

This building at K.R. Circle, Bangalore infront of this building 100` height of Sir M.Vishveshwaraiah Bronze Statue with a central clock tower, tapering at four levels with a cupola atop. This stone structure is two storeyed. The upper story has tall Tuscan stone columns. It has a life size statute of Sir M. Vishveshwaraiah in Bronze infront. (Wrought by Shilpa Basavanna of Mysore).

ಓಂ ಭವನ ಕಟ್ಟಡ

ಈ ಕಟ್ಟಡ ಸುಮಾರು 200 ವರ್ಷಗಳ ಹಿಂದಿನ ಕಟ್ಟಡ. ನೇಪಾಲಿನ ರಾಜರವರ ಮನೆತನದ ಖಾಸಗಿ ಕಟ್ಟಡ. ಈಗ ಎಸ್. ಪಿ. ಪೋಲಿಸ್ ಇಲಾಖೆಯ ಗುಪ್ತಚರ ಇಲಾಖೆ ಗ್ರಾಮಾಂತರ ಬೆಂಗಳೂರು ಜಿಲ್ಲೆಯವರು ಕೆಲಸ ಮಾಡುತ್ತಿದ್ದಾರೆ.

6 ಎಕರೆ ಜಾಗದಲ್ಲಿ ಕಟ್ಟಿದ ಕಟ್ಟಡ ಕನ್ನಿಂಗ್ ಹ್ಯಾಮ್ ರಸ್ತೆ ಮತ್ತು ಮುಲ್ಲರ್ ರಸ್ತೆ ಕೂಡವ ವೃತ್ತದ ಪಕ್ಕದಲ್ಲಿ ಚಂದ್ರಿಕಾ ಹೋಟೆಲ್‌ನ ಹತ್ತಿರದಲ್ಲಿದೆ.

ಏಪ್ರಿಲ್ 2006ರಲ್ಲಿ ನೇಪಾಲಿನ ಕನ್ನೆ ಅಧಿಕಾರವನ್ನು ಪಾರ್ಲಿಮೆಂಟ್‌ಗೆ ವಹಿಸಿದನು. ನಂತರ ಮಾಂಸ್ಟ್ ಚುನಾವಣೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಜಯಗಳಿಸಿದ ಹಿನ್ನೆಲೆಯಲ್ಲಿ ರಾಜು ನೇಪಾಲನ್ನೇ ತ್ಯಜಿಸಿದನು.

ಗೋಡೆಗಳ ಜೊತೆಯಲ್ಲಿ ಅಲ್ಲಲ್ಲಿ ಗುಂಡಾಕಾರದ ಕಂಬಗಳನ್ನು ಸೇರಿಸಿ 2 ಅಂತಸ್ತಿನ ಗಟ್ಟಿಯಾದ ಕಟ್ಟಡ, ಹಾಲ್ ಹಾಗೂ ಕೊಠಡಿಗಳು ದೊಡ್ಡದಾಗಿದ್ದು ಕಟ್ಟಡದ ಮುಂದಿನ ಮಧ್ಯಭಾಗ ಬರೀ ಗೋಳಾಕಾರದ ಕಂಬಗಳ ಬಾಲ್ಕನಿಯಿದೆ. ಕಟ್ಟಡದ ಎರಡು ಅಂಚಿನಲ್ಲಿ ಗೋಳಾಕಾರದ ಕೊಠಡಿಗಳು ಇದ್ದು ಅಗಲವಾದ ಕಿಟಕಿಗಳಿಂದ ಶೋಭಿಸುತ್ತಿದೆ. ಬಿಳಿ ಪೆಯಿಂಟ್‌ನಿಂದ ಅಲಂಕಾರವಾಗಿ ಕಾಣುತ್ತದೆ. ಮುಂದುಗಡೆ ಕಾರಂಜಿ ಜೊತೆಯಲ್ಲಿ ಉದ್ಯಾನವನವಿದೆ. ಇಲ್ಲಿ ದೊಡ್ಡ ಮರಗಳು ಒಳ್ಳೆಯ ನೆರಳನ್ನು ಕೊಡುತ್ತದೆ.

ಬೆಂಗಳೂರು ಕ್ಲಬ್:

142 ವರ್ಷಗಳ ಇತಿಹಾಸವಿದೆ. 1863ರಲ್ಲಿ ಕಟ್ಟಿರುವ ಕಟ್ಟಡ. ಇದರ ಉದ್ದೇಶ ಉತ್ತಮ ಗುಣಮಟ್ಟಗಳಲ್ಲಿ ಕ್ರೀಡೆ ಮುಂದುವರೆಸಲು ಹಾಗೂ ಸೇವೆಯಲ್ಲಿರುವವರಿಗೆ ಮಾತ್ರ ಅವಕಾಶವಿತ್ತು. 1942ರ ನಂತರ ಸಾರ್ವಜನಿಕರಿಗೂ ಸಹ ಸದಸ್ಯರಾಗಲು ನಿಯಮಗಳನ್ನು ಸಡಿಲಿಸಿದರು. ಈ ಕಟ್ಟಡದಲ್ಲಿ Tombola whist drive, swimming, Tennis, Squash, Badminton and library facilitiesಗಳಿವೆ.

ಬೋರಿಂಗ್ ಇನ್ಸ್‌ಟಿಟ್ಯೂಟ್ ಸಂಸ್ಥೆಯು

ಎಲ್. ಬಿ. ಬೋರಿಂಗ್ ಅಂದಿನ ಮುಖ್ಯ ಕಮಿಷನರ್ ಮೈಸೂರು ಮತ್ತು ಕೂರ್ಗ್‌ರವರು ಕೆಲವು ಜನರನ್ನು ಸೇರಿಸಿಕೊಂಡು ತನ್ನ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದನು. ನಂತರ 1888ರಲ್ಲಿ ಈ ಸಂಸ್ಥೆಗೆ "ಬೋರಿಂಗ್ ಇನ್ಸ್ಟಿಟ್ಯೂಟ್" ಎಂದು ನಾಮಕರಣ ಮಾಡಿದರು. ಇದರ ಉದ್ದೇಶ Literary ಹಾಗೂ Scientific ಅಭಿವೃದ್ಧಿಗೆ ಕಾದಿರಿಸಿದ್ದರು. ಈಗ ಪುಸ್ತಕ ಭಂಡಾರ ಟೆನ್ನಿಸ್, ಬ್ಯಾಡ್‌ಮಿಂಟನ್, ಟೇಬಲ್ ಟೆನ್ನಿಸ್, ಬಿಲ್ಲಿಯಾರ್ಡ್ಸ್ ಮತ್ತು ಇಸ್ಪೀಟ್ ಆಟಗಳಿಂದ ಕೂಡಿದೆ. ಚಲನಚಿತ್ರ, ಮ್ಯೂಜಿಕ್ ಪ್ರದರ್ಶನ, ನೃತ್ಯ, ನಗುವಿನ ಆಟ, ಸಾಯಂಕಾಲದಲ್ಲಿ ಮಕ್ಕಳ ಆಟಪಾಠಗಳಿವೆ.

ಸೆಂಟ್ರಲ್ ಕಾಲೇಜು:

ಆವರಣದಲ್ಲಿ 1866ರಲ್ಲಿ ಸರ್ಕಾರಿ ಹೈಸ್ಕೂಲ್ ಸ್ಥಾಪನೆಯಾಗಿ 1870ರಲ್ಲಿ ಅದು ಕಾಲೇಜು ಶಿಕ್ಷಣವಾಗಿ ಮಾರ್ಪಡಿಸಿ, ಸೆಂಟ್ರಲ್ ಕಾಲೇಜು ಎಂದು ಹೆಸರಿಸಿದರು. ಇದು ಮದ್ರಾಸ್ ವಿಶ್ವವಿದ್ಯಾಲಯದ ಶೈಕ್ಷಣಿಕ ಮಾನ್ಯತೆ ಪಡೆದಿತ್ತು. ಇದು ಕೆಂಪುಬಣ್ಣದ ಇಂಡೋ–ಯುರೋಪಿನ ಶೈಲಿಯಲ್ಲಿ ಕಟ್ಟಿರುತ್ತಾರೆ. ನೋಡುವುದಕ್ಕೆ ಸುಂದರವಾಗಿದೆ.

1. ಸಿಟಿ ಮಾರ್ಕೆಟ್‌ನಲ್ಲಿರುವ ಮುಂಭಾಗದ ಮಧ್ಯದಲ್ಲಿ ದೊಡ್ಡದಾದ ಗಡಿಯಾರವುಳ್ಳ ಕೆಂಪುಬಣ್ಣದ ಕಟ್ಟಡ.
2. ಜಾನ್‌ಸನ್ ಮಾರ್ಕೆಟ್ ಕಟ್ಟಡ, ಅಶೋಕನಗರ, ಬೆಂಗಳೂರು
3. ರಸಲ್ ಮಾರ್ಕೆಟ್ ಕಟ್ಟಡ ಶಿವಾಜಿನಗರ. 1920ರಲ್ಲಿ ಕಟ್ಟಲಾಗಿದೆ.
4. ಮಿತ್ರಾಲಯ ಬಾಲಕಿಯರ ಪ್ರೌಢಶಾಲೆ, ಪಿ. ಕಾಳಿಂಗರಾವ್‌ರಸ್ತೆ, ಬೆಂಗಳೂರು
5. ಲಂಡನ್ ಮಿಷನ್ ಬಾಲಕಿಯರ ಬೋರ್ಡಿಂಗ್ ಶಾಲೆ ಕಟ್ಟಡ.

6. ಯುನಿವರ್ಸಿಟಿ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ಕೆ.ಆರ್. ವೃತ್ತ, ಬೆಂಗಳೂರು
7. ಸೆಂಟ್ ಜೋಸೆಫ್ ಕಾಲೇಜು ಕಟ್ಟಡ, ರೆಸಿಡೆನ್ಸಿ, ರಸ್ತೆ, ಬೆಂಗಳೂರು
8. ಬಿಷಪ್ ಕಾಟನ್ ಸ್ಕೂಲ್ ಮತ್ತು ಕಾಲೇಜು (ಕೋಎಜುಕೇಶನ್), ಬೆಂಗಳೂರು
9. ನಿಮಾಮ್ಸ್ ಆಸ್ಪತ್ರೆ ಕಟ್ಟಡ, ಬೆಂಗಳೂರು
10. ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು
11. ಮಿಂಟೋ ಆಸ್ಪತ್ರೆ, ಬೆಂಗಳೂರು
12. ಮಾತಾ ಆಸ್ಪತ್ರೆ, ಬೆಂಗಳೂರು
13. ಬೋರಿಂಗ್ ಆಸ್ಪತ್ರೆ, ಬೆಂಗಳೂರು
14. ಬೆಂಗಳೂರು ಸಿಟಿ ಶೈಲಿ ಸ್ಟೇಷನ್ ಹಳೇ ಕಟ್ಟಡ ಪ್ಲಾಟ್ ಫಾರಂ 5ರಲ್ಲಿದೆ.
15. ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್ ಹಳೆಯ ಕಟ್ಟಡಗಳು ಬ್ರಿಟಿಷರ ಕಾಲದವು.

ಈ ಮೇಲ್ಕಂಡ ಸಾರ್ವಜನಿಕ ಕಟ್ಟಡಗಳು ಬ್ರಿಟಿಷ್ ಕಾಲದ ಗುರುತಿನ ಭವ್ಯ, ಸುಂದರ, ಮತ್ತು ಇಂಡೋ–ಯುರೋಪ್ ಶೈಲಿಯಲ್ಲಿ ಕಟ್ಟಿದ ಕಟ್ಟಡಗಳು.

ಗ್ರಂಥಗಳು

1. Dr. Suryanatha Kamath, Chief Editor, Karnataka State Gazeteer Bangalore, published Government of Karnataka Bangalore-1990 (p.238, 239, 949)
2. T.P. Issar, The city beautiful, Bangalore Art Commission published by marketing consultants and agencies ltd, 42, Miller Road, Bangalore-560052
3. T.P. Issar, Bloosoms of Bangalore by production assistance and processing Marketing consultants and Agencies std. 42, Miller Road, Bangalore-1994
4. Tarakashyap, Flowers an Indina Perspective published by Internations Centre for Indian Art and Cultural studies, Bangalore.
5. History of Lalbagh, published by the Mysore State Botanical gardens, Bangalore.
6. B.L. Rice, Mysore Gazetter vol.1, published at Mysore in general.
7. ಡಾ. ತುಳಸಿರಾಮನಾಯಕ್, ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ, ಬೆಂಗಳೂರು–2010
8. ವಿಜಯಕರ್ನಾಟಕ, ಶುಕ್ರವಾರ 10–12–2010 ದಿನಪತ್ರಿಕೆ
9. Bangalore Mirror Daily News Magzine
10. The Himance Daily Newspaper, Saturday 1-4 2006.

42. ಬೆಂಗಳೂರಿನ ಪತ್ರಿಕೆಗಳು (1859-1900)

ಡಾ. ಎಚ್. ಪಿ. ಶಶಿಧರ ಮೂರ್ತಿ

ದೇಶ ವಿದೇಶಗಳ ಪ್ರಚಲಿತ ಸುದ್ದಿ ಸಮಾಚಾರಗಳನ್ನು ನೀಡಲೆಂದು ದಿನ ಅಥವಾ ವಾರಪತ್ರಿಕೆಗಳು ಪ್ರಕಟಿಸಲ್ಪಡುತ್ತವೆ. ಸಮೂಹ ಸಂಪರ್ಕ ಮಾಧ್ಯಮಗಳಲ್ಲಿ ಅತ್ಯಂತ ಹಳೆಯ ಮತ್ತು ಸಾಂಪ್ರದಾಯಿಕವಾದದ್ದು ಎನಿಸಿಕೊಂಡಿರುವ ವರ್ತಮಾನ ಪತ್ರಿಕೆಗಳ ಮೂಲಕ ವಿಧವಿಧವಾದ ವಿಷಯಗಳು, ಅಭಿಪ್ರಾಯಗಳು, ಜಾಹೀರಾತುಗಳು, ಸಂಪಾದಕೀಯ ಲೇಖನಗಳು ಮತ್ತು ಮನೋರಂಜಕ ಸಂಗತಿಗಳನ್ನು ಪ್ರತಿದಿನ ಅಥವಾ ನಿರ್ದಿಷ್ಟ ಅಲ್ಪಕಾಲಿಕ ಅವಧಿಯಲ್ಲಿ ತಲುಪಿಸಲಾಗುತ್ತದೆ.

ಕ್ರಿ. ಪೂ. 59ರಲ್ಲಿಯೇ ರೋಮ್‌ನಲ್ಲಿ ಜೂಲಿಯಸ್ ಸೀಸರನು 'ನಿತ್ಯದ ವಿದ್ಯಾಮಾನಗಳು' (Acta Diurna) ಎಂಬ ವಾರ್ತಾ ಪುಟವನ್ನೂ ಪ್ರಕಟಿಸಬೇಕೆಂದು ಆದೇಶ ನೀಡಿದ್ದನು. ಕ್ರಿ. ಶ. 8ನೇ ಶತಮಾನದಲ್ಲಿ ಪ್ರಪ್ರಥಮ ಚೀನಿ ವರ್ತಮಾನ ಪತ್ರಿಕೆ ಪ್ರಕಟವಾಯಿತು. ಹದಿನೈದನೇ ಶತಮಾನದ ಮಧ್ಯಾವಧಿಯಲ್ಲಿ ಜೊಹಾನ್ ಗುಟಿನ್‌ಬರ್ಗ್ ಎಂಬುವನು ಚಲಿಸುವ ಮುದ್ರಾಕ್ಷರ (ಅಚ್ಚು) ಕಂಡುಹಿಡಿಯುವ ಮೂಲಕ ವರ್ತಮಾನ ಪತ್ರಿಕೆಗಳ ಬೆಳವಣಿಗೆಗೆ ಒಂದು ಪ್ರಮುಖವಾದ ಕೊಡುಗೆಯನ್ನಿತ್ತನು. ಹದಿನಾರನೇ ಶತಮಾನದಲ್ಲಿ ವೆನಿಸ್ ಮತ್ತು ಕಲೋನ್‌ಗಳಲ್ಲಿ ವರ್ತಮಾನ ಪತ್ರಿಕೆಗಳು ಪ್ರಕಟವಾಗತೊಡಗಿದವು. ವರ್ತಮಾನ ಪತ್ರಿಕೆಯ ವಿನ್ಯಾಸದಲ್ಲಿ ಹೊರಬಂದ ಪ್ರಥಮ ಪತ್ರಿಕೆಯೆಂದರೆ 'ದಿ ಲಂಡನ್ ಗೆಜೆಟ್' (1665). ಪ್ರಪ್ರಥಮ ಇಂಗ್ಲಿಷ್ ದಿನಪತ್ರಿಕೆ

'ದಿ ಲಂಡನ್ ಡೇಲಿ' 1702ರಲ್ಲಿ ಪ್ರಾರಂಭಿಸಲ್ಪಟ್ಟಿತು. 'ದಿ ಬೊಸ್ಟನ್ ನ್ಯೂಸ್ ಲೆಟರ್' 1704ರಲ್ಲಿ ಪ್ರಕಟವಾಗಿ ಅಮೇರಿಕ ಸಂಯುಕ್ತ ಸಂಸ್ಥಾನಗಳ ಮೊಟ್ಟಮೊದಲ ವರ್ತಮಾನ ಪತ್ರಿಕೆ ಎನಿಸಿಕೊಂಡಿತು. 'ದಿ ಜರ್ನಲ್ ಡಿ ಫ್ರಾನ್ಸ್' 1777 ರಿಂದ ಪ್ಯಾರಿಸ್ ನಗರದಿಂದ ಪ್ರಕಟಣೆಯಾಗತೊಡಗಿತು.

ಮುಂದೆ 'ದಿ ನ್ಯೂಯಾರ್ಕ್ ಸನ್' (1833), 'ದಿ ನ್ಯೂಯಾರ್ಕ್ ಹೆರಾಲ್ಡ್' (1835), ಮತ್ತು

'ದಿ ನ್ಯೂಯಾರ್ಕ್ ಟ್ರಿಬ್ಯೂನ್' (1841) ಅಲ್ಪ ವೆಚ್ಚದಲ್ಲಿ ಪ್ರಕಟವಾಗತೊಡಗಿ ಜನಸಾಮಾನ್ಯರಿಗೂ ತಲುಪತೊಡಗಿದವು.

ಬೇರೆ ದಿಕ್ಕುಗಳಲ್ಲಿದ್ದಂತೆ, ಪತ್ರಿಕೆಗಳ ಬೆಳವಣಿಗೆಯಲ್ಲಿ ಭಾರತದ ಸಾಧನೆ ಬ್ರಿಟನ್ನಿನ ಸಾಧನೆಯ ಒಂದು ಮಂದ ಪ್ರತಿಛಾಯೆ ಮಾತ್ರ ಎನ್ನಲಾಗಿದೆ. ಇದಕ್ಕೆ ಕಾರಣಗಳು ಹಲವಾರು. ಬ್ರಿಟನ್ನಿನಲ್ಲಿ 19ನೇ ಶತಮಾನದ ಅಂತ್ಯದ ವೇಳೆಗೆ ಪ್ರಜಾಪ್ರಭುತ್ವ ನೆಲೆಗೊಂಡಿತ್ತು; ಅಕ್ಷರತೆ ಸಾರ್ವತ್ರಿಕವಾಗಿತ್ತು; ಮತ್ತು ಆರ್ಥಿಕಾಭಿವೃದ್ಧಿ ಉನ್ನತ ಮಟ್ಟಕ್ಕೇರಿತ್ತು. ಇದರಿಂದಾಗಿ, ವರ್ತಮಾನ ಪತ್ರಿಕೆಗಳು ಪ್ರತಿಯೊಂದು ಕುಟುಂಬದ ಅವಶ್ಯಕತೆ ಎನಿಸಿದ್ದವು. ಭಾರತದಲ್ಲಿನ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿತ್ತು. ಸಾರ್ವಜನಿಕಾಭಿಪ್ರಾಯಕ್ಕೆ ಬೆದರುತ್ತಿದ್ದ ಪರದೇಶಿ ಸರ್ಕಾರ ಪತ್ರಿಕೆಗಳ ಬೆಳವಣಿಗೆಯನ್ನು ಹೇಗೆ ಸಹಿಸಲು ಸಾಧ್ಯ? ಭಾರತದಲ್ಲಿ ಕಂಡುಬರುತ್ತಿದ್ದ ಸಾರ್ವತ್ರಿಕ ಅನಕ್ಷರತೆ ಮತ್ತು ತೀವ್ರ ಬಡತನ ಪತ್ರಿಕೆಗಳ ಅಭಿವೃದ್ಧಿಗೆ ಯಾವದೇ ರೀತಿಯ ಸಹಕಾರವನ್ನು ನೀಡುವದು ಸಾಧ್ಯವಿರಲಿಲ್ಲ. ಪಾಶ್ಚಿಮಾತ್ಯ ವಿದ್ಯೆ ಮತ್ತು ನಾಗರೀಕತೆ ಹರಡುತ್ತಾ ಸಾಗಿದಂತೆ ಭಾರತದಲ್ಲಿಯೂ ಪತ್ರಿಕೋದ್ಯಮ ನಿಧಾನಗತಿಯಲ್ಲಿ ಬೆಳೆಯತೊಡಗಿತು.

ಭಾರತದಲ್ಲಿ ಪತ್ರಿಕೋದ್ಯಮದ ಆರಂಭ ಕೆಲವು ಆಂಗ್ಲೋ-ಇಂಡಿಯನ್ನರು ಮಾಡಿದ ದುರ್ಬಲ ಪ್ರಯತ್ನಗಳಿಂದ ಆಯಿತು. ಜೇಮ್ಸ್ ಆಗಸ್ಟಸ್ ಹಿಕ್ಕಿ 28ನೇ ಜನವರಿ 1780ರಂದು ಪ್ರಾರಂಭಿಸಿದ 'ಬೆಂಗಾಲ್ ಗೆಜೆಟ್' ಅಥವಾ 'ಕಲ್ಕತ್ತ ಜನರಲ್ ಅಡ್ವರ್‌ಟೈಜರ್' ಭಾರತದಲ್ಲಿ ಪ್ರಕಟವಾದ ಅತ್ಯಂತ ಹಳೆಯ ವರ್ತಮಾನ ಪತ್ರಿಕೆಯಾಗಿದೆ. ಇದರ ಹಿಂದೆಯೇ 'ಕಲ್ಕತ್ತ ಗೆಜೆಟ್' ಮತ್ತು 'ಕಲ್ಕತ್ತ ಕ್ರಾನಿಕಲ್' ಹೊರಬಂದವು. ಇದೇ ರೀತಿಯ ಪತ್ರಿಕೆಗಳು ಮದ್ರಾಸ್ (ಚನ್ನೈ) ಮತ್ತು ಬಾಂಬೆ (ಮುಂಬಯಿ) ಯಿಂದಲೂ ಪ್ರಕಟವಾಗುತ್ತಿದ್ದವು. ಇಸವಿ 1799ರಲ್ಲಿ ಕಲ್ಕತ್ತದಿಂದ 7, ಮದ್ರಾಸಿನಿಂದ 2 ಮತ್ತು ಬಾಂಬೆಯಿಂದ 2 ವಾರ ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಭಾರತೀಯರಿಂದಲೇ ಪ್ರಾರಂಭಿಸಲ್ಪಟ್ಟ ಎರಡು ವಾರಪತ್ರಿಕೆಗಳಿದ್ದವು, ಒಂದು ಇಂಗ್ಲಿಷ್‌ನಲ್ಲಿ ಮತ್ತೊಂದು ಬಂಗಾಳಿಯಲ್ಲಿ. ಈ ಎರಡಕ್ಕೂ ಪ್ರೇರಣೆ ನೀಡಿದ್ದವನೆಂದರೆ ಖ್ಯಾತ ಸಮಾಜ ಸುಧಾರಕ ರಾಜಾರಾಮ್ ಮೋಹನರಾಯ್. ಬಂಗಾಳದಲ್ಲಿ 1823ರ ವೇಳೆಗೆ 3, ಪರ್ಷಿಯನ್‌ನಲ್ಲಿ 3, ಮತ್ತು ಗುಜರಾತಿಯಲ್ಲಿ 1 ಭಾರತೀಯರಿಂದಲೇ ಪ್ರಕಟಿಸಲ್ಪಡುತ್ತಿದ್ದ ವಾರ ಪತ್ರಿಕೆಗಳಿದ್ದವು. ಪ್ರಕಟಣಾ ಪೂರ್ವ ಸೆನ್ಸಾರ್ ಷಿಪ್ 1818ರವರೆಗೆ ಜಾರಿಯಲ್ಲಿತ್ತು. ಆ ವರ್ಷ (1818) ಬಂದ ರೆಗ್ಯುಲೇಷನ್ನನ್ನು ಸಂಬಂಧಿಸಿದವರೆಲ್ಲರೂ ಪಾಲಿಸಬೇಕಾಯಿತು. 'ಕಲ್ಕತ್ತ ಜರ್ನಲ್'ನ ಸಹಸ್ರ ಪ್ರತಿಗಳು 1822ರಲ್ಲಿ ಮಾರಾಟವಾದಾಗ ಗಾಬರಿಗೊಂಡ ಬ್ರಿಟಿಷ್ ಆಡಳಿತಗಾರರು ಅದರ ಸಂಪಾದಕನಾಗಿದ್ದ ಬಕಿಂಗ್‌ಹ್ಯಾಮ್ ಎಂಬುವನನ್ನು ಮಾರನೇ ವರ್ಷವೇ ತಾಯ್ನಾಡಿಗೆ ರವಾನಿಸಿದ್ದರು. ಭಾರತದಲ್ಲಿ ಪತ್ರಿಕೋದ್ಯಮ ಇಂತಹ ಅಲ್ಪ ಪ್ರಯತ್ನಗಳಿಂದ ಪ್ರಾರಂಭವಾಗಿ ನಿಧಾನವಾಗಿ ಆದರೆ ದೃಢವಾಗಿ ಬೆಳವಣಿಗೆ ಕಾಣುತ್ತಾ ಸಾಗಿತು.

ಮೊದಲಿನಿಂದಲೂ ಆಂಗ್ಲೋ-ಇಂಡಿಯನ್ ಮತ್ತು ಭಾರತೀಯ ಪತ್ರಿಕೆಗಳ ನಡುವೆ ಅಭಿಪ್ರಾಯ ಭೇದ ಕಂಡುಬರುತ್ತಿತ್ತು. ಆಂಗ್ಲೋ ಇಂಡಿಯನ್ ಪತ್ರಿಕೆಗಳು ಆಡಳಿತ ಯಂತ್ರ ಕುರಿತಂತೆ ಟೀಕೆ ಟಿಪ್ಪಣಿಗಳು ಮತ್ತು ಅಧಿಕಾರಿಗಳ ನಡತೆ ಕುರಿತಾದ ಸಾಮಾಜಿಕ ಹರಟೆಗೇ ಆದ್ಯತೆ ನೀಡುತ್ತಿದ್ದವು; ಇದಕ್ಕೆ ತದ್ವಿರುದ್ಧವಾಗಿ ಭಾರತೀಯ ಪತ್ರಿಕೆಗಳು ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದವು. ಹತ್ತೊಂಬತ್ತನೇ ಶತಮಾನದ ದ್ವಿತೀಯಾರ್ಧ ಅನೇಕ ವೃತ್ತ ಪತ್ರಿಕೆಗಳ ಪ್ರಾರಂಭವನ್ನು ಕಂಡಿತು. ರಾಜಕೀಯ ಏರುಪೇರುಗಳ ನಡುವೆ ಅವುಗಳಲ್ಲಿ ಕೆಲವು ಪತ್ರಿಕೆಗಳು ದೀರ್ಘಕಾಲ ಚಲಾವಣೆಯಲ್ಲಿ ಉಳಿದವು. ರಾಬರ್ಟ್ ನೈಟ್ 1861ರಲ್ಲಿ 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯನ್ನು ಸ್ಥಾಪಿಸಿದನು. ಅವನೇ 1875ರಲ್ಲಿ ಕಲ್ಕತ್ತದಲ್ಲಿ ಸ್ಟೇಟ್ಸ್‌ಮ್ಯಾನ್" ಪತ್ರಿಕೆಯನ್ನು ಸ್ಥಾಪಿಸಿದನು. ಅಲಹಾಬಾದ್‌ನಲ್ಲಿ 1869ರಲ್ಲಿ 'ಪಯೋನೀರ್', ಮದ್ರಾಸ್‌ನಲ್ಲಿ 1868ರಲ್ಲಿ 'ಮದ್ರಾಸ್ ಮೇಲ್' ಆಂಗ್ಲೋ ಇಂಡಿಯನ್ನರಿಂದ ಪ್ರಾರಂಭಗೊಂಡ ಪತ್ರಿಕೆಗಳು. ಭಾರತೀಯರೇ ಸ್ಥಾಪಿಸಿದ ಪತ್ರಿಕೆಗಳಲ್ಲಿ ಹೆಸರಿಸಲೇಬೇಕಾದವೆಂದರೆ, ಮದ್ರಾಸಿನ 'ದಿ ಹಿಂದೂ' ವಾರ ಪತ್ರಿಕೆ (1868) ಮತ್ತು ಕಲ್ಕತ್ತದ 'ಅಮೃತ್ ಬಜಾರ್ ಪತ್ರಿಕೆ (1869). 'ದಿ ಹಿಂದೂ' 1869ರಲ್ಲಿ ದಿನಪತ್ರಿಕೆಯಾಗಿ ಪರಿವರ್ತನೆ ಹೊಂದಿತು. ಅನೇಕ ಭಾರತೀಯ ಭಾಷೆಗಳಲ್ಲಿ 19ನೇ ಶತಮಾನದ ದ್ವಿತೀಯಾರ್ಧದಲ್ಲಿ ಸಾಕಷ್ಟು ಸಂಖ್ಯೆಯ ಪತ್ರಿಕೆಗಳು ಪ್ರಕಟವಾಗತೊಡಗಿದವು. ಆ ಹೊಸ ಪತ್ರಿಕೆಗಳು ರಾಜಕೀಯ ನಾಯಕರ ಹಿಡಿತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು.

ಬೆಂಗಳೂರು ನಗರದಲ್ಲಿ ಪತ್ರಿಕೆಗಳ ಬೆಳವಣಿಗೆಗೆ ಅಗತ್ಯವಾದ ಮುದ್ರಣಾಲಯಗಳನ್ನು ಕುರಿತಂತೆ ಹೇಳುವದಾದರೆ, 1841-42ರಲ್ಲಿ ಸರ್ಕಾರಿ ಮುದ್ರಣಾಲಯದ ಕನ್ನಡ ವಿಭಾಗ ಪ್ರಾರಂಭವಾಯಿತು. ಗ್ಯಾರೆಟ್ ಮಹಾಶಯನ ನೇತೃತ್ವದಲ್ಲಿ 1858ರಲ್ಲಿ ಸರ್ಕಾರಿ ಮುದ್ರಣಾಲಯವು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆಯಾಯಿತು. ಆ ಕಾಲದಲ್ಲಿ ಬೆಂಗಳೂರಿನಲ್ಲಿ 7 ಖಾಸಗಿ ಮುದ್ರಣಾಲಯಗಳೂ ಇದ್ದವು. ಬೆಂಗಳೂರಿನಲ್ಲಿ 1875ರ ವೇಳೆಗೆ ಒಟ್ಟು 14 ಮುದ್ರಣಾಲಯಗಳಿದ್ದವು. ಮೈಸೂರು ಸಂಸ್ಥಾನವು ಒಡೆಯರ್ ವಂಶದ ಹತ್ತನೇ ಚಾಮರಾಜರಿಗೆ ಹಿಂತಿರುಗಿಸಲ್ಪಟ್ಟಾಗ (25ನೇ ಮಾರ್ಚ್ 1881) ಮೈಸೂರು ಸಂಸ್ಥಾನದಲ್ಲಿ 33 ಮುದ್ರಣಾಲಯಗಳಿದ್ದವು.

ಹತ್ತೊಂಬತ್ತನೇ ಶತಮಾನದ ಅಂತ್ಯದ ವೇಳೆಗೆ ಮೈಸೂರು ಸಂಸ್ಥಾನದಲ್ಲಿ ಮುದ್ರಣಾಲಯಗಳಿದ್ದವು; ಅವುಗಳಲ್ಲಿ ಬೆಂಗಳೂರಿನಲ್ಲಿದ್ದವು.

ವೈಜ್ಞಾನಿಕ ಮತ್ತು ಸಾಹಿತ್ಯ ಸಂಘಗಳು (Scientific and Literary Societies) ಪತ್ರಿಕೋದ್ಯಮದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿವೆ. ಇಂತಹವುಗಳಲ್ಲಿ ಹೆಸರಿಸಬೇಕಾದವೆಂದರೆ:

- ಬುಕ್ ಸೊಸೈಟಿ, 1833.
- ಲಿಟರರಿ ಅಂಡ್ ಸೈಂಟಿಫಿಕ್ ಇನ್‌ಸ್ಟಿಟ್ಯೂಟ್, 1868.
- ಸೆಯ್ಂಟ್ ಜಾನ್ಸ ಲೈಬ್ರರಿ ಫಾರ್ ಪೆನ್‌ಷನರ್ಸ್, 1854.
- ಹಿಂದೂ ಲಿಟರರಿ ಯೂನಿಯನ್, 1862.
- ಮಹೊಮೆಡನ್ ಲೈಬ್ರರಿ, 1862.
- ಕಂಟೋನ್ಮೆಂಟ್ ಮ್ಯೂಚ್ಯುವಲ್ ಇಂಪ್ರೊವ್‌ಮೆಂಟ್ ಸೊಸೈಟಿ.
- ಪಿಕ್‌ನಿಕ್ ಕ್ಲಬ್, 1874.
- ರಿಚ್ಮಂಡ್ ಟೌನ್ ಲಿಟರರಿ ಅಸೋಸಿಯೇಷ್ರ್, 1875.
- ಬೆಂಗಳೂರು ಹಿಂದು ಅಸೋಸಿಯೇಷ್ರ್, 1881.
- ಬೆಂಗಳೂರು ಲಿಟರರಿ ಯೂನಿಯನ್, 1874.
- ಬೆಂಗಳೂರು ಯಂಗ್‌ಮೆನ್ಸ್ ಯೂನಿಯನ್, 1883.

ಈ ಎಲ್ಲಾ ಸಮಾಜ ಅಥವಾ ಸಂಘಗಳು (Societies) ಸಂಪೂರ್ಣ ಖಾಸಗಿ ಯತ್ನಗಳಾಗಿದ್ದವು. ಸಾಮಾನ್ಯವಾಗಿ ಅವುಗಳ ಉದ್ದೇಶಗಳೆಂದರೆ, ಮನೋರಂಜನೆ, ಬೌದ್ಧಿಕ ಸುಧಾರಣೆ (intellectual improvement), ಪ್ರವಚನ (Instruction), ಓದುವುದು (Reading) ಮತ್ತು ಚರ್ಚಾಗೋಷ್ಠಿ (Group discussion) ಗಳನ್ನು ನಡೆಸುವುದು. ಈ ಎಲ್ಲಾ ಸಮಾಜಗಳ ಒಟ್ಟು ಸದಸ್ಯತ್ವ ಕೆಲವು ನೂರುಗಳನ್ನು ಮೀರಿರಲಿಲ್ಲ. ಸರ್ಕಾರದಿಂದ ಯಾವುದೇ ರೀತಿಯ ಸಹಾಯವನ್ನು ಇವುಗಳಿಗೆ ನೀಡುತ್ತಿರಲಿಲ್ಲ ಮತ್ತು ಯಾವುದೇ ಸಮಾಜವನ್ನು ನೋಂದಾಯಿಸಿರಲಿಲ್ಲ. ಕಡ್ಡಾಯವಾಗಿ ಒಂದು ಓದುವ ಕೊಠಡಿ (Reading Room) ಇರುತ್ತಿದ್ದ ಇಂತಹ ವೈಜ್ಞಾನಿಕ ಮತ್ತು ಸಾಹಿತ್ಯಕ ಸಮಾಜಗಳು ಆಗ ಪ್ರಕಟವಾಗುತ್ತಿದ್ದ ಪತ್ರಿಕೆ ಮತ್ತು ನಿಯತಕಾಲಿಕೆಗಳಿಗೆ ಖಾಯಂ ಚಂದಾದಾರರು. ಇವುಗಳು ಸಮಾಜದ ಪ್ರತಿಷ್ಠಿತರನ್ನೇ ಸದಸ್ಯರನ್ನಾಗಿ ಹೊಂದಿರುತ್ತಿದ್ದು ಅವರಲ್ಲಿ ಅನೇಕರು ಪತ್ರಿಕೆಗಳ ವೈಯಕ್ತಿಕ ಚಂದಾದಾರರಾಗಿರುತ್ತಿದ್ದರು.

ಗ್ರಂಥಾಲಯ ಚಳವಳಿ ಸಹಾ ಹತ್ತೊಂಬತ್ತನೇ ಶತಮಾನದ ಮೈಸೂರು ಸಂಸ್ಥಾನದಲ್ಲಿ ಇನ್ನೂ ಆರಂಭಿಕ ಹಂತದಲ್ಲಿಯೇ ಇತ್ತು. ಆಗ ಇದ್ದ ಗ್ರಂಥಾಲಯಗಳಲ್ಲಿ ಬಹುತೇಕ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿಯೇ ಇದ್ದವು. ಬೆಂಗಳೂರಿನಲ್ಲಿದ್ದ ಗ್ರಂಥಾಲಯಗಳೆಂದರೆ:

- ಮೈಸೂರು ಸರ್ಕಾರಿ ವಸ್ತು ಸಂಗ್ರಹಾಲಯದ ಗ್ರಂಥಾಲಯ.
- ದಿವಾನ್ (ಕಛೇರಿ) ಗ್ರಂಥಾಲಯ.

- ವೆಸ್ಲಿಯನ್ ಪ್ರೆಸ್ ಯುನೈಟೆಡ್ ತಿಯೊಲಾಜಿಕಲ್ ಕಾಲೇಜ್ ಗ್ರಂಥಾಲಯ.
- ಸೆಂಟ್ರಲ್ ಕಾಲೇಜ್ ಗ್ರಂಥಾಲಯ.
- ಸರ್ಕಾರಿ ಪ್ರೌಢಶಾಲಾ ಗ್ರಂಥಾಲಯ.
- ಅಪ್ಪರ್ ರೆಸಿಡೆನ್ಸಿ ಗ್ರಂಥಾಲಯ.

ವೃತ್ತ ಪತ್ರಿಕೆಗಳ ಚಂದಾದಾರ ವರ್ಗಕ್ಕೆ ಈ ಗ್ರಂಥಾಲಯಗಳು ಸೇರಿದ್ದವು. ಇವುಗಳೇ ಅಲ್ಲದೆ ಬೆಂಗಳೂರಿನಲ್ಲಿ ಪ್ರಕಾಶಿತವಾಗುತ್ತಿದ್ದ ದಿನಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಸಂಸ್ಥಾನದ ಬೇರೆ ಜಿಲ್ಲೆಗಳಲ್ಲಿದ್ದ ಪ್ರೌಢಶಾಲೆಗಳ ಸಣ್ಣಪುಟ್ಟ ಗ್ರಂಥ ಭಂಡಾರಗಳೂ ತರಿಸಿಕೊಳ್ಳುತ್ತಿದ್ದವು. ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಮುಖ್ಯೋಪಾಧ್ಯಾಯರೇ ಮುಂತಾದವರೂ ಪತ್ರಿಕೆಗಳ ಚಂದಾದಾರರಾಗಿರುತ್ತಿದ್ದುದೂ ಉಂಟು.

ವಿಶ್ವಾದ್ಯಂತ ದಿನನಿತ್ಯ ಸಂಭವಿಸುವ ಮುಖ್ಯವಾದ ಘಟನೆಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಕುತೂಹಲ ಆ್ಯಂಗ್ಲೋ-ಇಂಡಿಯನ್ ವಿದ್ಯಾವಂತ ವರ್ಗದಲ್ಲಿ ಇತ್ತು. ಇಂತಹವರ ಮೇಲ್ಪಂಕ್ತಿ ಮತ್ತು ಇಂಗ್ಲಿಷ್ ವಿದ್ಯಾಪ್ರಸಾರ ಕ್ರಮೇಣ ಭಾರತೀಯ ಕಲಿತ ವರ್ಗದಲ್ಲಿಯೂ ಪತ್ರಿಕೆಗಳತ್ತ ಆಸಕ್ತಿ ಬೆಳೆಯಲು ಕಾರಣವಾಯಿತು. ಮೈಸೂರು ಸಂಸ್ಥಾನದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸದ ಆರಂಭ ಕಮ್ಮೀಷನರ ಆಡಳಿತಾವಧಿ (1831–1881) ಯಲ್ಲಿಯೇ ಆದರೂ ಬೆಳವಣಿಗೆ ಅತ್ಯಂತ ಮಂದಗತಿಯದಾಗಿತ್ತು. ಇದಕ್ಕೆ ಮುಖ್ಯ ಕಾರಣವೆಂದರೆ ಮಿತವ್ಯಯವೇ ದಕ್ಷ ಆಡಳಿತದ ಅಳತೆಗೋಲೆಂದು ಭಾವಿಸಿದ್ದ ಕಮ್ಮಿಷನರ್ ಮಾರ್ಕ್ ಕಬ್ಬನನ ಅನಾಸಕ್ತಿ; ಸ್ವಂತ ಖರ್ಚಿನಲ್ಲಿ ವಿದ್ಯೆ ಕಲಿಯಲು ದೇಶೀಯರಿಗಿದ್ದ ನಿರುತ್ಸಾಹ. ಪ್ರಸಿದ್ಧ 'ಹ್ಯಾಲಿಫ್ಯಾಕ್ಸ್ ಡಿಸ್‌ಪ್ಯಾಚ್' (1854) ಕೂಡ ಬೆಂಗಳೂರು ಸರ್ಕಾರಿ ಪ್ರೌಢಶಾಲೆಯ ಸ್ಥಾಪನೆಗಷ್ಟೇ ಇಲ್ಲಿ ಸೀಮಿತವಾಯಿತು. ಸಂಸ್ಥಾನದಾದ್ಯಂತ ಆಗ ದೇಶೀಯ ಮತ್ತು ಇಂಗ್ಲಿಷ್ ಶಿಕ್ಷಣಕ್ಕಾಗಿ ಸರ್ಕಾರ ಮಾಡುತ್ತಿದ್ದ ವೆಚ್ಚ ಒಂದು ಲಕ್ಷ ರೂಪಾಯಿಗಳಿಗೂ ಕಡಿಮೆ ಇತ್ತು. ಸರ್ಕಾರಕ್ಕಿಂತಲೂ ಕ್ರಿಶ್ಚಿಯನ್ ಮಿಷನರಿಗಳು ಮತ್ತು ಸ್ಥಳೀಯ ಖಾಸಗಿ ಸಂಸ್ಥೆಗಳು ಶಾಲೆಗಳನ್ನು ನಡೆಸುವುದರಲ್ಲಿ ಹೆಚ್ಚಿನ ಆಸಕ್ತಿ ಮತ್ತು ಶ್ರದ್ಧೆಯಿಂದ ದುಡಿಯುತ್ತಿದ್ದರು. ಸಂಸ್ಥಾನದ ಎಲ್ಲಾ ಬಗೆಯ ಶಾಲೆಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ 1861ರಲ್ಲಿ 15000 ಕ್ಕಿಂತಲೂ ಕಡಿಮೆ ಇತ್ತು. ಅಂಕಗಣಿತ, ಬಡ್ಡಿ ಲೆಕ್ಕಾಚಾರ, ಕಟ್ಟಡಗಳ ನಿರ್ಮಾಣ ವೆಚ್ಚದ ಅಂದಾಜು, ಜಮೀನಿನ ವಿಸ್ತೀರ್ಣದ ಅಳತೆ, ಮತ್ತು ತಮ್ಮ ಮಾತೃಭಾಷೆಯಾದ ಕನ್ನಡವನ್ನು ಸರಿಯಾಗಿ ತಿಳಿಯದಿದ್ದ ದೇಶೀಯರಿಗೆ ಅದನ್ನು ವ್ಯಾಕರಣ ಬದ್ಧವಾಗಿ ಕಲಿಸುವುದು ಪಠ್ಯಕ್ರಮಣಿಕೆಯ ಮುಖ್ಯ ವಿಷಯಗಳಾಗಿದ್ದವು.

ಕಾಲಕ್ರಮೇಣ ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವಾಯಿತು. ಓರ್ವ ಚಂದಾದಾರನು ತರಿಸುತ್ತಿದ್ದ ಪತ್ರಿಕೆಯನ್ನು ಅನೇಕರು ಓದುತ್ತಿದ್ದರು. ಸರ್ಕಾರಿ ಕಛೇರಿಗಳು ಶಾಲಾ-ಕಾಲೇಜುಗಳ ಗ್ರಂಥಾಲಯಗಳು, ಕ್ಲಬ್ಬುಗಳು, ವಿವಿಧ ಸಂಘ ಸಂಸ್ಥೆಗಳು ತರಿಸುತ್ತಿದ್ದ ಪತ್ರಿಕೆಗಳು ಹೆಚ್ಚು ಸಂಖ್ಯೆಯ ಓದುಗರನ್ನು ಪಡೆದಿರುತ್ತಿದ್ದವು. ಸಾಕ್ಷರತೆಯ ಪ್ರಮಾಣ ಜಾಸ್ತಿಯಾಗುತ್ತಾ ಹೋದಂತೆ ವೃತ್ತಾಂತ ಪತ್ರಿಕೆಗಳಿಗೆ ಚಂದಾದಾರರು ಹೆಚ್ಚುತ್ತಾ ಹೋದರು.

ಮೈಸೂರು ಸಂಸ್ಥಾನದಲ್ಲಿ ಪತ್ರಿಕೋದ್ಯಮದ ಪ್ರಾರಂಭಿಕ ವರ್ಷಗಳು (1900ರವರೆಗೆ) ಎಂಬ ಈ ಲೇಖನ ಸಮಗ್ರವಾದುದೂ ಅಲ್ಲ, ಸಂಪೂರ್ಣವಾದುದೂ ಅಲ್ಲ. ಇತಿಹಾಸ ಪ್ರಜ್ಞೆಯ ಕೊರತೆ ನಮ್ಮ ಸಂಸ್ಕೃತಿ / ಪರಂಪರೆಯ ಅವಿಭಾಜ್ಯ ಅಂಗವಾಗಿ ಹಿಂದಿನಿಂದಲೂ ಕಂಡುಬರುತ್ತಿದೆ. ಇಂತಹ ಮನೋಭಾವದಿಂದಾಗಿ ಅತ್ಯಮೂಲ್ಯ ಐತಿಹಾಸಿಕ ದಾಖಲೆಗಳು ಸರಿಯಾಗಿ ಸಂರಕ್ಷಿಸಲ್ಪಡದೇ ಹಾಳಾಗಿ ಹೋಗಿವೆ. ಎಲ್ಲೋ ಅಲ್ಲೊಂದು ಇಲ್ಲೊಂದು ಎಂಬಂತೆ ಹಳೇ ಪತ್ರಿಕೆಗಳು ಸರ್ಕಾರದ ಅಭಿಲೇಖಾಗಾರದ (Archival Repository) ಕಡತಗಳಲ್ಲಿ

ಹುದುಗಿ ಹೋಗಿರುವುದುಂಟು. ಬೇರೆ ವ್ಯವಹಾರಗಳ ಸಂದರ್ಭದಲ್ಲಿ ಇಂತಹವು ಕಡತ ಸೇರಿರುವ ಸಂಭವವೇ ಅಧಿಕ; ಪ್ರಜ್ಞಾಪೂರ್ವಕವಾಗಿ ಅವುಗಳನ್ನು ಸಂರಕ್ಷಣೆ ಮಾಡಿರುವ ಉದಾಹರಣೆ ಇವುಗಳಲ್ಲ. ಅಚ್ಚುಕೂಟಗಳ ಬಗೆಗೆ ಮಾಹಿತಿ ನೀಡುವಾಗ ಕೆಲವೊಮ್ಮೆ ಅವುಗಳಲ್ಲಿ ಅಚ್ಚಾಗುತ್ತಿದ್ದ ಪತ್ರಿಕೆಗಳನ್ನು ಕುರಿತಂತೆ ಲಭ್ಯವಿದ್ದ ಮಾಹಿತಿಯನ್ನು ಸೇರಿಸಿರುವ ಸಂದರ್ಭಗಳುಂಟು.

ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು, ತಮಿಳುನಾಡು, ಕೇರಳ, ಗೋವಾ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳ ಪತ್ರಾಗಾರಗಳು ಮತ್ತು ನವದೆಹಲಿಯಲ್ಲಿರುವ ಭಾರತದ ರಾಷ್ಟ್ರೀಯ ಅಭಿಲೇಖಾಗಾರ ಇವುಗಳಲ್ಲಿ ಹಿಂದಿನ ಮೈಸೂರು ಸಂಸ್ಥಾನದಲ್ಲಿ ಪ್ರಕಾಶನಗೊಳ್ಳುತ್ತಿದ್ದ ಪತ್ರಿಕೆಗಳ ಹಲವು ಸಂಪುಟ ಯಾ ಸಂಚಿಕೆಗಳು ಲಭ್ಯವಿವೆ. ಅನೇಕ ಖಾಸಗಿ ಸಂಘ–ಸಂಸ್ಥೆಗಳಲ್ಲಿಯೂ ಅಪೂರ್ವ ಆದರೆ ಅಪೂರ್ಣ ಹಳೇ ಪತ್ರಿಕೆಗಳ ಸಂಗ್ರಹಗಳಿವೆ. ಇಂತಹವುಗಳಲ್ಲಿ ಹೆಸರಿಸಬೇಕಾದವೆಂದರೆ ವಿಶ್ವವಿದ್ಯಾಲಯಗಳ ಗ್ರಂಥ ಭಂಡಾರಗಳು, ಬೆಂಗಳೂರಿನಲ್ಲಿರುವ ಯುನೈಟೆಡ್ ತಿಯೋಲೊಜಿಕಲ್ ಕಾಲೇಜಿನ ಗ್ರಂಥ ಭಂಡಾರ ಮತ್ತು ಗೋಖಲೆ ಸಾರ್ವಜನಿಕ ವ್ಯವಹಾರಗಳ ಸಂಸ್ಥೆ, ಇತ್ಯಾದಿ. ಲಂಡನ್ನಿನಲ್ಲಿರುವ ಇಂಡಿಯಾ ಆಫೀಸ್ ರೆಕಾರ್ಡ್ಸ್ ಕಛೇರಿಯಲ್ಲಿ ಸಹ ಮೈಸೂರು ಸಂಸ್ಥಾನದಲ್ಲಿ 19ನೇ ಶತಮಾನದಲ್ಲಿ ಪ್ರಕಟವಾಗುತ್ತಿದ್ದ ಅನೇಕ ಪತ್ರಿಕೆಗಳ ಸಂಚಿಕೆಗಳು ಲಭ್ಯ ಇರುವುದಾಗಿ ತಿಳಿದುಬರುತ್ತದೆ.

ಮೈಸೂರು ಸಂಸ್ಥಾನದಲ್ಲಿ 19ನೇ ಶತಮಾನದಲ್ಲಿ ಪತ್ರಿಕೋದ್ಯಮದ ಸ್ಥಿತಿಗತಿಗಳನ್ನು ಕುರಿತಾದ ಒಂದೇ ಒಂದು ಸಮಗ್ರ, ಸಂಪೂರ್ಣ, ಮತ್ತು ಅಧಿಕಾರಯುತವಾದ ಸಂಶೋಧನಾ ಗ್ರಂಥವೂ ಇದುವರೆಗೆ ಪ್ರಕಟಿಸಲ್ಪಟ್ಟಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ವಿಷಯ ಕುರಿತಂತೆ ಅನೇಕ ಬಿಡಿ ಲೇಖನಗಳು ಪತ್ರಿಕೆಗಳಲ್ಲಿ, ಸಂಶೋಧನಾ ಗ್ರಂಥಗಳಲ್ಲಿ ಪ್ರಕಟಗೊಂಡಿವೆ; ಕೆಲವು ಪುಸ್ತಕಗಳ ಒಂದು ಅಧ್ಯಾಯ ಅಥವಾ ಭಾಗವಾಗಿ ಕೂಡ ಈ ವಿಷಯ ಕಂಡುಬಂದಿದೆ. ಅವುಗಳ ವಿವರಗಳಿಗೆ ಇಲ್ಲಿ ಹೋಗುವುದಿಲ್ಲ. 'ಕರ್ನಾಟಕ ಥ್ರೂ ದಿ ಏಜೆಸ್' (1968) ಎಂಬ ಇತಿಹಾಸ ಗ್ರಂಥದಲ್ಲಿ ಪ್ರಕಟವಾಗಿರುವ 'ಹಿಸ್ಟೋರಿ ಆಫ್ ಕನ್ನಡ ಜರ್ನಲಿಸಂ' (ಪುಟ 831 ರಿಂದ) ಎಂಬ ಲೇಖನದಲ್ಲಿ ಕಂಡುಬರುವ ದೋಷಗಳು ಈ ವಿಷಯ ಕುರಿತಂತೆ ಇರುವ ತಿಳವಳಿಕೆ ಎಷ್ಟೊಂದು ಅಲ್ಪ ಮತ್ತು ಪೊಳ್ಳು ಎಂಬುದಕ್ಕೆ ಒಂದು ಉದಾಹರಣೆ ಮಾತ್ರ. ಬೆಂಗಳೂರು ಜಿಲ್ಲಾ ಗ್ಯಾಸೆಟಿಯರ್ (1990) ಕೂಡ ಈ ವಿಷಯದಲ್ಲಿ ಲೋಪದೋಷಗಳಿಂದ ಮುಕ್ತವಾಗಿಲ್ಲವೆಂಬುದನ್ನು ಗಮನಿಸಬಹುದು (ನೋಡಿ ಪುಟ 886–895). ಈ ಬಗ್ಗೆ ಗಂಭೀರ ಅಧ್ಯಯನದ ಅಗತ್ಯ ಇದೆ ಎಂಬುದಕ್ಕೆ ಇಷ್ಟು ಸಾಕು.

ಕೇವಲ ಒಂದೇ ಒಂದು ಸಂಚಿಕೆ ಲಭ್ಯವಿರುವ 'ದಿ ಬೆಂಗಳೂರ್ ಹೆರಾಲ್ಡ್' ಬಹುಶಃ ಮೈಸೂರು ಸಂಸ್ಥಾನದ ಅತ್ಯಂತ ಹಳೆಯ ವರ್ತಮಾನ ಪತ್ರಿಕೆ ಎನ್ನಬಹುದು. ಅದು 1851ನೇ ಇಸವಿಯಲ್ಲಿ ಪ್ರಾರಂಭಿಸಲ್ಪಟ್ಟು, ಪ್ರತಿ ಮಂಗಳವಾರ ಮತ್ತು ಶುಕ್ರವಾರ (Bi-weekly) ಪ್ರಕಟವಾಗುತ್ತಿದ್ದ ಪತ್ರಿಕೆಯಾಗಿತ್ತು. ಇಸವಿ 1862–63ರ ಮೈಸೂರಿನ ಆಡಳಿತ ವರದಿಯ ಪ್ರಕಾರ ಅದರ ಸಂಪಾದಕ ಆರ್. ಎಚ್. ಜೇಮ್ಸ್ ಎಂಬುವನು. ಆ ಪತ್ರಿಕೆ ಕೊಲಂಬಿಯನ್ ಪ್ರೆಸ್‌ನಲ್ಲಿ ಮುದ್ರಿಸಲ್ಪಡುತ್ತಿತ್ತು. ಇದು 1871–72ನೇ ಇಸವಿಯಿಂದ ವಾರಕ್ಕೆ ಮೂರು ಬಾರಿ ಪ್ರಕಟಣೆಯಾಗುತ್ತಿತ್ತು.

'ಮೈಸೂರು ವೃತ್ತಾಂತ ಬೋಧಿನಿ' ಯೇ ಮೈಸೂರು ಸಂಸ್ಥಾನದಲ್ಲಿ ಪ್ರಕಟವಾದ ಪ್ರಪ್ರಥಮ ಕನ್ನಡ ವರ್ತಮಾನ ಪತ್ರಿಕೆ ಎನ್ನಲಾಗಿದೆ. ಆಗಸ್ಟ್ 14, 1865 ನೇ ದಿನಾಂಕದ 'ಕರ್ನಾಟಕ ಪ್ರಕಾಶಿಕಾ' ಪತ್ರಿಕೆಯಲ್ಲಿ ಕಂಡುಬರುವ 'ಈ ಮೈಸೂರು ಸೀಮೆಯಲ್ಲಿ ಮಾತ್ರ ವೃತ್ತಾಂತ ಪತ್ರಿಕೆ ಯಾವ ಭಾಷೆಗಳೊಳಗೂ ಹೇರಳವಾಗಿಲ್ಲವು.

ಈಚೆಗೆ ದೇಶಭಾಷೆಯಲ್ಲಿ ಕೆಲವು ಪತ್ರಿಕೆಗಳು ಹುಟ್ಟಿದವು, (ಒತ್ತು ನನ್ನದು). ಅವುಗಳೊಳಗೆ 'ವೃತ್ತಾಂತ ಬೋಧಿನಿ'. . . ಎಂಬುದು ಮಾತ್ರ 5 ವರುಷಗಳು ನಡೆಯಿತು'. ಎಂಬ ವಾಕ್ಯವು ಸೂಚಿಸುವಂತೆ ಅಲ್ಪಾಯುಗಳಾದ ಇನ್ನೂ ಕೆಲವು ಕನ್ನಡ ಪತ್ರಿಕೆಗಳು 1859ಕ್ಕೂ ಮುನ್ನ ಪ್ರಕಟವಾಗಿರುವ ಸಾಧ್ಯತೆಯನ್ನು ನಿರಾಕರಿಸುವಂತಿಲ್ಲ. ಜೂನ್ 6, 1859ರಂದು ಆರಂಭವಾದ 'ಮೈಸೂರು ವೃತ್ತಾಂತ ಬೋಧಿನಿ' ಎಂಬ ಕನ್ನಡ–ಇಂಗ್ಲಿಷ್ ಎರಡೂ (Bi-lingual) ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದ ವಾರಪತ್ರಿಕೆ ಟಿ.ಭಾಷ್ಯಾಚಾರಿ ಎಂಬುವರಿಂದ ಸಂಪಾದಿಸಲ್ಪಡುತ್ತಿತ್ತು. ಇದು ಆಗ ಬೆಂಗಳೂರಿನಲ್ಲಿದ್ದ ಕೃಷ್ಣವಿಲಾಸ ಪ್ರೆಸ್‌ನಲ್ಲಿ ಮುದ್ರಣವಾಗುತ್ತಿತ್ತು. ಐದು ವರ್ಷಗಳ ಪರ್ಯಂತ ನಡೆದ ಈ ಪತ್ರಿಕೆ ಕಾರಣಾಂತರದಿಂದ ನಿಂತುಹೋಯಿತು.

ಹತ್ತೊಂಬತ್ತನೇ ಶತಮಾನದಲ್ಲಿ ಮೈಸೂರು ಸಂಸ್ಥಾನದಿಂದ ಪ್ರಕಟವಾಗುತ್ತಿದ್ದ ಪತ್ರಿಕೆಗಳಲ್ಲಿ ಈ ಕೆಳ ಕಾಣಿಸಿರುವವು ಬೆಂಗಳೂರು ನಗರದಿಂದ ಹೊರಡುತ್ತಿದ್ದವು.

'ಬೆಂಗಳೂರು ಹೆರಾಲ್ಡ್' (ದ್ವೈವಾರ) ಪತ್ರಿಕೆ, ಸಂಪಾದಕ ಆರ್. ಎಚ್. ಜೇಮ್ಸ್.

'ಮೈಸೂರು ವೃತ್ತಾಂತ ಬೋಧಿನಿ' (ವಾರ ಪತ್ರಿಕೆ), ಸಂಪಾದಕ ಬಿ.ಭಾಷ್ಯಾಚಾರಿ.

'ದಿ ನ್ಯೂಸ್ ರೆಕಾರ್ಡರ್' (ಮೈಸೂರು ವೃತ್ತಾಂತ ಬೋಧಿನಿಯ ಇಂಗ್ಲಿಷ್ ಆವೃತ್ತಿ. ದಿನಾಂಕ 18ನೇ ಜನವರಿ 1862ರಂದು ಪ್ರಾರಂಭಿಸಲ್ಪಟ್ಟ ಇದನ್ನು ದಿನಾಂಕ 15ನೇ ಏಪ್ರಿಲ್ 1863ರವರೆಗೆ ಎಚ್. ಎಲ್. ಹ್ಯೂಗೆಸ್ ಸಂಪಾದಿಸುತ್ತಿದ್ದರು. ನಂತರ ಬಿ. ಭಾಷ್ಯಾಚಾರಿ ಇದರ ಸಂಪಾದಕರಾದರು.

'ಕಾಸಿಮುಲ್ ಅಕ್ಬಾರ್' ಕಾಸಿಂ ಘಂ 1862ರಿಂದ ಸಂಪಾದಿಸಿ ಪ್ರಕಟಿಸುತ್ತಿದ್ದ ಉರ್ದು (ಹಿಂದುಸ್ಥಾನಿ) ವಾರಪತ್ರಿಕೆಯಾಗಿತ್ತು. ಮೊದಲು ಕಾಸಿಮುಲ್ ಅಕ್ಬಾರ್ ಮುದ್ರಣಾಲಯದಿಂದ ಮುದ್ರಣವಾಗುತ್ತಿದ್ದ ಈ ಪತ್ರಿಕೆ 1887–88ರವರೆಗೆ ವಾರಕ್ಕೆರಡು ದಿನಗಳು ಪ್ರಕಟವಾಗುತ್ತಿದ್ದು 1888–89ನೇ ವರ್ಷದಿಂದ ವಾರಕ್ಕೆ ಮೂರು ಬಾರಿ (ಮಂಗಳವಾರ, ಗುರುವಾರ ಮತ್ತು ಶನಿವಾರ) ಪ್ರಕಟವಾಗುತ್ತಿತ್ತು. ಮಹೊಮೆದ್ ಖಾಸಿ ಘಂ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಮುನಿಸಿಪಾಲಿಟಿಯ ಸದಸ್ಯರೂ ಆಗಿದ್ದವರು.

'ಕರ್ನಾಟಕ ಪ್ರಕಾಶಿಕಾ' ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ (Bi-lingual) ಪ್ರಕಟವಾಗುತ್ತಿದ್ದ ವಾರಪತ್ರಿಕೆ. ದಿನಾಂಕ 14–08–1865ರಿಂದ ಪ್ರಾರಂಭವಾದ ಇದನ್ನು ಬಿ. ತಿರುಮಲಾಚಾರಿ ಎಂಬವರು ಸಂಪಾದಿಸುತ್ತಿದ್ದರು. ಮುಂದೆ ಇದು ಟಿ. ಜಿ. ಶ್ರೀನಿವಾಸಾಚಾರ್ ಮತ್ತು ಎಂ. ಶ್ರೀನಿವಾಸಾಚಾರ್ ಎಂಬವರಿಂದ ಸಂಪಾದಿಸಲ್ಪಟ್ಟಿತು.

'ದಿ ಮೈಸೂರ್ ಗೆಜೆಟ್' ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮೈಸೂರು ಸರ್ಕಾರ ಪ್ರಕಟಿಸುತ್ತಿದ್ದ ವಾರದ ಅಧಿಕೃತ ವರ್ತಮಾನ ಪತ್ರಿಕೆ. ಎಲ್. ರಿಕೆಟ್ಸ್ ಎಂಬವರು ಇದರ ಪ್ರಾರಂಭಿಕ ಸಂಪಾದಕರು. ಏಪ್ರಿಲ್ 1866ರಿಂದ ಪ್ರಾರಂಭಿಸಲ್ಪಟ್ಟ ಈ ವಾರಪತ್ರಿಕೆ ಇದುವರೆಗೂ ನಿರಂತರವಾಗಿ ನಡೆದು ಬಂದಿದೆ ಎಂಬುದನ್ನು ಇಲ್ಲಿ ಗಮನಿಸಬಹುದು. ಪ್ರಾರಂಭದಿಂದ ಇದುವರೆಗೂ ಸರ್ಕಾರಿ ಮುದ್ರಣಾಲಯದಿಂದಲೇ ಇದನ್ನು ಪ್ರಕಟಿಸಲಾಗುತ್ತಿದೆ.

'ಬೆಂಗಳೂರು ಸ್ಪೆಕ್ಟೇಟರ್' ಎಂಬ ಇಂಗ್ಲಿಷ್ ತ್ರೈವಾರ (Tri-weekly) ಪತ್ರಿಕೆ ಪ್ರಾಯಶಃ 1873ರಿಂದ ಸ್ಪೆಕ್ಟೇಟರ್ ಮುದ್ರಣಾಲಯದಿಂದ ಪ್ರಕಟವಾಗುತ್ತಿತ್ತು. ಇದರ ಸಂಪಾದಕರು ಟಿ.ಟಿ. ಲಿಯೋನಾರ್ಡ್. ಒಂದನೇ ಏಪ್ರಿಲ್ 1895ರಿಂದ ಇದು ನಿಂತುಹೋಯಿತು.

ಸರಿಸುಮಾರು ಇದೇ ಅವಧಿಯಲ್ಲಿ (1873) ಪ್ರಾರಂಭಿಸಲ್ಪಟ್ಟ 'ಬೆಂಗಲೂರು ಎಕ್ಸಾಮಿನರ್' ಸಿ.ಹೇಗ್ ಎಂಬವನ ಸಂಪಾದಕತ್ವದಲ್ಲಿ 1873ನೇ ಇಸವಿಯಿಂದ ವಾರಕ್ಕೆ ಮೂರು ಬಾರಿ ಪ್ರಕಟವಾಗುತ್ತಿತ್ತು.

'ದಿ ಡೇಲಿ ಪೋಸ್ಟ್' ಎಂಬ ಇಂಗ್ಲಿಷ್ ತ್ರೈವಾರ ಪತ್ರಿಕೆ (ಸಂಜೆ) ಆರ್. ಎಫ್. ಹೇಯ್ಸ್ ಎಂಬವನ ಸಂಪಾದಕತ್ವದಲ್ಲಿ 1873ನೇ ಇಸವಿಯಿಂದ ಪ್ರಕಟವಾಗುತ್ತಿತ್ತು.

'ಬೆಂಗಳೂರ್ ಅಡ್ವರ್‌ಟೈಸರ್' ಎಂಬ ಇಂಗ್ಲಿಷ್ ವರ್ತಮಾನ ಪತ್ರಿಕೆ ಕೊಲಂಬಿಯಾ ಮುದ್ರಣಾಲಯದಿಂದ ಮುದ್ರಿಸಲ್ಪಡುತ್ತಿತ್ತು. ಕೆಂಟ್ ಎಂಬುವನು 1878–79ರಲ್ಲಿ ಇದನ್ನು ಸಂಪಾದಿಸುತ್ತಿದ್ದನು; ತಿರುವೆಂಗಡಂ ಪಿಳ್ಳೆ 1879 ರಲ್ಲಿ ಇದರ ಸಂಪಾದಕರಾಗಿದ್ದರು.

'ಬೆಂಗಳೂರ್ ಪೋರ್ಟ್‌ನೈಟ್ಲಿ ಪೊಲೀಸ್ ನ್ಯೂಸ್' 1886–87ರಿಂದ ವಿ. ಬಿ. ಸುಬ್ಬಯ್ಯ ಮತ್ತು ಮಕ್ಕಳಿಂದ ಮೈಸೂರು ಬುಕ್ ಡಿಪೊ ಪ್ರೆಸ್‌ನಿಂದ ಮುದ್ರಣವಾಗಿ ಹೊರಬರುತ್ತಿತ್ತು. ಅದೇ ವರ್ಷದಿಂದಲೇ ಕನ್ನಡ ವೃತ್ತಪತ್ರಿಕೆ 'ಧರ್ಮ ತತ್ವ' ಸಿ. ರಾಮಚೆಟ್ಟಿಯವರ ಸಂಪಾದಕತ್ವದಲ್ಲಿ ವಿಚಾರ ದರ್ಪಣ ಮುದ್ರಣಾಲಯದಲ್ಲಿ ಅಚ್ಚಾಗಿ ಪ್ರಕಟಿಸಲಾರಂಭವಾಯಿತು.

ಬಿ. ನರಸಿಂಗರಾವ್‌ರವರ ಸಂಪಾದಕತ್ವದಲ್ಲಿ 1894–95ರಲ್ಲಿ ಪ್ರಾರಂಭವಾದ 'ಸೂರ್ಯೋದಯ' ಮೈಸೂರು ಸಂಸ್ಥಾನದಲ್ಲಿ ಪ್ರಕಾಶಿತವಾದ ಪ್ರಪ್ರಥಮ ದಿನಪತ್ರಿಕೆ. ಕೇವಲ ಆರೇ ತಿಂಗಳ ತರುವಾಯ ಇದನ್ನು ವಾರ ಪತ್ರಿಕೆಯನ್ನಾಗಿ ಬದಲಾಯಿಸಬೇಕಾಯಿತು. ಹತ್ತೊಂಬತ್ತನೇ ಶತಮಾನದ ಅಂತ್ಯದವರೆಗೂ ಮೈಸೂರು ಸಂಸ್ಥಾನದಲ್ಲಿ ಇನ್ನೊಂದು ದಿನ ಪತ್ರಿಕೆ ಹುಟ್ಟಲಿಲ್ಲ.

'ಮೈಸೂರು ಸ್ಟ್ಯಾಂಡರ್ಡ್' ಮತ್ತು 'ಕರ್ನಾಟಕ ಕೇಸರಿ' 1895ರಿಂದ ಪ್ರಕಟವಾಗುತ್ತಿದ್ದ ವಾರ ಪತ್ರಿಕೆಗಳು. 'ಮೈಸೂರು ಸ್ಟ್ಯಾಂಡರ್ಡ್' ನ ಸಂಪಾದಕರು ಎಂ. ಗೋಪಾಲ ಅಯ್ಯಂಗಾರ್. ಅನೇಕ ನಿಯತಕಾಲಿಕೆಗಳು ಈ ಅವಧಿಯಲ್ಲಿ (ಅಂದರೆ 1900ರವರೆಗೆ) ಮೈಸೂರು ಸಂಸ್ಥಾನದಲ್ಲಿ ಪ್ರಕಟವಾಗುತ್ತಿದ್ದವು. ಅವುಗಳಲ್ಲಿ ಬೆಂಗಳೂರು ನಗರದಿಂದ ಪ್ರಕಟವಾಗುತ್ತಿದ್ದವೆಂದರೆ:

ಪ್ರಾರಂಭದ ವರ್ಷ	ಹೆಸರು	ಸಂಪಾದಕರು
1862	ಹಾರ್ವೆಸ್ಟ್ ಫೀಲ್ಡ್, ಇಂಗ್ಲಿಷ್ ಮಾಸಿಕ	ಬೆಂಜಮಿನ್ ರೈಸ್, ಕ್ರೈಸ್ತ ಧರ್ಮ ಪ್ರಚಾರಕ
1862	ಅರುಣೋದಯ, ಇಂಗ್ಲಿಷ್ ಮತ್ತು ಕನ್ನಡ ಮಾಸಿಕ	ಬೆಂಜಮಿನ್ ರೈಸ್, ಕ್ರೈಸ್ತ ಧರ್ಮ ಪ್ರಚಾರಕ
1872–73	ತಾಲಿಸ್ಮ ಕರ್ತಾನ್, ಉರ್ದು ಪಾಕ್ಷಿಕ	ಮಹೊಮೆದ್ ಷರೀಫ್
1872–73	ಸುಜನ ರಂಜನಿ, ಕನ್ನಡ	ಟಿ. ಜೆ. ಅಗಬ್ರಮ್ ಪಿಳ್ಳೈ
	ಮೊಸುರೈ ಮಹೆಮದಿ, ಉರ್ದು	ಮಹೊಮೆದ್ ಷರೀಫ್
	ಕರ್ನಾಟಕ ವಾಗ್ಜೀವಿನಿ	ವಿ. ಎಸ್. ಸುಬ್ಬಯ್ಯ

1879–80	ಮೈಸೂರಿಯನ್ ಅಂಡ್ ಅಗ್ರಿಕಲ್ಚುರಲ್ ಗೆಜೆಟ್, ಇಂಗ್ಲಿಷ್	ಸ್ಮಿತ್, ನಾರಾಯಣ ಚೆಟ್ಟಿ ಮತ್ತು ಕಂ.
1891–92	ಶಾಸ್ತ್ರ ಸಂಜೀವಿನಿ	ದಕ್ಷಿಣಾ ಮೂರ್ತಿ ಶಾಸ್ತ್ರಿ 1893–94 ರಿಂದ ಡಿ. ಸುಬ್ಬಾಶಾಸ್ತ್ರಿ
1892–93	ಕಾವ್ಯಾಂಬುಧಿ	ಸಿ. ಬಿ. ಪದ್ಮರಾಜ ಪಂಡಿತ
	ಬುದ್ಧಜನ ಮನೋರಂಜನಿ	ಸಿ. ಬಿ. ಪದ್ಮರಾಜ ಪಂಡಿತ

ಇವೇ ಅಲ್ಲದೆ, 'ಪ್ರೆಸ್ ಅಂಡ್ ಪಾಲಿಟಿಕ್ಸ್ ಇನ್ ಅನ್ ಇಂಡಿಯನ್ ಸ್ಟೇಟ್–ಮೈಸೂರ್' (1859–1947) ಎಂಬ ಗ್ರಂಥದಲ್ಲಿ (1997) ಡಾ. ಆರ್. ರಾಮಕೃಷ್ಣನ್ ಇನ್ನೂ ಕೆಲವು ಪತ್ರಿಕೆಗಳನ್ನು ಹೆಸರಿಸಿದ್ದಾರೆ. (ನೋಡಿ: ಪುಟ 142 ರಿಂದ 145). 'ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್ – ಬೆಂಗಳೂರ್ ಡಿಸ್ಟ್ರಿಕ್' (1990) ಸಂಪುಟದ ಪುಟ 894 ರಿಂದ 895ರಲ್ಲಿ ಕೂಡ ಬೆಂಗಳೂರಿನಲ್ಲಿ 19ನೇ ಶತಮಾನದ ಅವಧಿಯಲ್ಲಿ ಪ್ರಕಟವಾಗುತ್ತಿದ್ದ ವರ್ತಮಾನ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಒಂದು ಪಟ್ಟಿ ಇದೆ. ಇವೆಲ್ಲವುಗಳ ಕುರಿತು ಹೆಚ್ಚಿನ ವಿವರಗಳೇನೂ ಲಭ್ಯವಾಗಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು.

ಒಮ್ಮೆ ಪ್ರಾರಂಭವಾದರೆ ನಿರಂತರವಾಗಿ ಈ ಎಲ್ಲಾ ಪತ್ರಿಕೆಗಳು ಮತ್ತು ನಿಯತ ಕಾಲಿಕೆಗಳು ನಡೆದು ಬರುತ್ತಿದ್ದವೆಂದಾಗಲೀ ಮತ್ತು ಪತ್ರಿಕೆಗಳ ಸಂಖ್ಯೆ ವರ್ಷೇ ವರ್ಷೇ ವೃದ್ಧಿಸುತ್ತಾ ಇತ್ತು ಎಂದೇನೂ ನಾವು ಭಾವಿಸಬೇಕಾಗಿಲ್ಲ. ಈ ಕೆಳಗಿನ ವಿವರಗಳು ಆಸಕ್ತಿದಾಯಕವಾಗಿವೆ.

1862ರ ಪಟ್ಟಿ

1. 'ಹಾರ್ವೆಸ್ಟ್ ಫೀಲ್ಡ್' ಎಂಬ 24 ಪುಟಗಳ ಇಂಗ್ಲಿಷ್ ಮಾಸಿಕ ವೆಸ್ಲಿಯನ್ ಮಿಷನ್ ಪ್ರೆಸ್‌ನಿಂದ ಮುದ್ರಿತ.

ಬೆಲೆ	–	1 ರೂ 4 ಆಣೆ
ಪ್ರತಿಗಳು	–	750
ಮುಕ್ಕಟೆ	–	260
ಮಾರಾಟ	–	250

2. 'ಅರುಣೋದಯ' ಎಂಬ 34 ಪುಟಗಳ ಕನ್ನಡ ಮತ್ತು ಇಂಗ್ಲಿಷ್ ಮಾಸಿಕ, ವೆಸ್ಲಿಯನ್ ಮಿಷನ್ ಪ್ರೆಸ್‌ನಿಂದ ಮುದ್ರಿತ.

ಬೆಲೆ	–	1 ರೂ 00 ಆಣೆ
ಪ್ರತಿಗಳು	–	750

3. 'ಬೆಂಗಳೂರು ಹೆರಾಲ್ಡ್' ಎಂಬ ದ್ವೈವಾರ ಪತ್ರಿಕೆ. ಆರ್. ಎಚ್. ಜೇಮ್ಸ್ ಸಂಪಾದಕರಾಗಿದ್ದ ಇದನ್ನು ಕೊಲಂಬಿಯನ್ ಪ್ರೆಸ್‌ನಲ್ಲಿ ಮುದ್ರಿಸುತ್ತಿದ್ದರು.

ಪ್ರತಿಗಳು – 250

ಚಂದಾದರ – 1 ರೂ 8 ಆಣೆ

4. 'ಮೈಸೂರು ರೆಕಾರ್ಡರ್' ಎಂಬ ವಾರ ಪತ್ರಿಕೆ ರೆಕಾರ್ಡರ್ ಪ್ರೆಸ್‌ನಿಂದ ಎಚ್. ಎಲ್. ಹ್ಯೂಗೆಸ್‌ರವರ ಸಂಪಾದಕತ್ವದಲ್ಲಿ ಸೆಪ್ಟೆಂಬರ್ 1862 ರಿಂದ 15ನೇ ಏಪ್ರಿಲ್ 1863ರವರೆವಿಗೂ ನಂತರ ಮಾಲೀಕರಾಗಿದ್ದ ಬಿ. ಭಾಷ್ಯಾಚಾರಿಯವರ ಸಂಪಾದಕತ್ವದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗುತ್ತಿತ್ತು. ಪ್ರತಿಗಳು – 350

5. 'ಮೈಸೂರು ವೃತ್ತಾಂತ ಬೋಧಿನಿ' ಎಂಬ ವಾರ ಪತ್ರಿಕೆ ಕನ್ನಡದಲ್ಲಿ ಬಿ. ಭಾಷ್ಯಾಚಾರಿಯವರ ಸಂಪಾದಕತ್ವದಲ್ಲಿ ಕೃಷ್ಣ ವಿಲಾಸ ಪ್ರೆಸ್‌ನಿಂದ ಪ್ರಕಟವಾಗುತ್ತಿತ್ತು. ಪ್ರತಿಗಳು – 450

6. 'ಕಾಸಿಮುಲ್ ಅಕ್ಬಾರ್' ಎಂಬ ವಾರಪತ್ರಿಕೆ ಉರ್ದುವಿನಲ್ಲಿ ಕಾಸಿಮುಲ್ ಅಕ್ಬಾರ್ ಪ್ರೆಸ್ಸ್‌ನಿಂದ ಮಹೊಮದ್ ಕಾಸಿಂ ಘಂರವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು. ಪ್ರತಿಗಳು – 164

1874–75ರ ಪಟ್ಟಿ

1. ಸರ್ಕಾರಿ ಮುದ್ರಣಾಲಯದಿಂದ ಪ್ರಕಟವಾಗುತ್ತಿದ್ದ 'ದಿ ಮೈಸೂರು ಗೆಜೆಟ್' ಎಂಬ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ವಾರಪತ್ರಿಕೆ.

2. ಆಲ್ಬಿಯನ್ ಮುದ್ರಣಾಲಯದಿಂದ ಪ್ರಕಟವಾಗುತ್ತಿದ್ದ 'ಮೈಸೂರು ವೃತ್ತಾಂತ ಬೋಧಿನಿ' ಎಂಬ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ಪತ್ರಿಕೆ. ಪ್ರತಿಗಳು – 500

3. ಎಕ್ಸಾಮಿನರ್ ಪ್ರೆಸ್‌ನಿಂದ ಪ್ರಕಟವಾಗುತ್ತಿದ್ದ 'ಬೆಂಗಳೂರು ಎಕ್ಸಾಮಿನರ್'.

4. ಕರ್ನಾಟಕ ಪ್ರೆಸ್‌ನಿಂದ ಪ್ರಕಟವಾಗುತ್ತಿದ್ದ 'ಕರ್ನಾಟಕ ಪ್ರಕಾಶಿಕಾ' ಎಂಬ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ಪತ್ರಿಕೆ.

5. ಸ್ಪೆಕ್ಟೇಟರ್ ಪ್ರೆಸ್‌ನಿಂದ ಪ್ರಕಟವಾಗುತ್ತಿದ್ದ 'ಬೆಂಗಳೂರ್ ಸ್ಪೆಕ್ಟೇಟರ್'.

6. ಬಹ್ರುಲ್ ಇಸ್ಲಾಂ ಪ್ರೆಸ್‌ನಿಂದ ಉರ್ದು ಭಾಷೆಯಲ್ಲಿ ಪ್ರಕಟವಾಗುತ್ತಿದ್ದ ತ್ರೈಮಾಸಿಕ (ಖಿಡು–ಟಂಟಿಣಖಟಥಿ) 'ಮನ್ಸೂರ್ ಮುಹಮ್ಮದಿ'.

7. ಫಿರ್ದೂಸಿ ಪ್ರೆಸ್‌ನಿಂದ ಉರ್ದು ಭಾಷೆಯಲ್ಲಿ ಪ್ರಕಟವಾಗುತ್ತಿದ್ದ 'ಮೈಸೂರ್ ಅಕ್ಬಾರ್' ಎಂಬ ಪತ್ರಿಕೆ.

ಪ್ರತಿಗಳು – 300

8. ಚಾಮರಾಜ ಪ್ರೆಸ್‌ನಿಂದ ಉರ್ದು ಭಾಷೆಯಲ್ಲಿ ಪ್ರಕಟವಾಗುತ್ತಿದ್ದ 'ಖಾಸಿಂ–ಉಲ್–ಅಕ್ಬಾರ್' ಎಂಬ ವಾರ ಪತ್ರಿಕೆ.

ಆಡಳಿತ ವರದಿಯಲ್ಲಿ ಕಂಡು ಬರದಿದ್ದರೂ 'ಡೇಲಿ ಪೋಸ್ಟ್' ಎಂಬ ಸಂಜೆ ಪತ್ರಿಕೆ ಇಂಗ್ಲಿಷ್‌ನಲ್ಲಿ 1873ರಿಂದ ಪ್ರಕಟವಾಗುತ್ತಿತ್ತು. ಇದು ಅನೇಕ ವರ್ಷಗಳ ಕಾಲ ಮುಂದುವರೆಯಿತು.

1879–80ರ ಪಟ್ಟಿ

1. ಆಲ್ಬಿಯನ್ ಪ್ರೆಸ್‌ನಿಂದ ಇಂಗ್ಲಿಷ್‌ನಲ್ಲಿ ಮುದ್ರಿತವಾಗುತ್ತಿದ್ದ 'ಮೈಸೂರಿಯನ್ ಅಂಡ್ ಅಗ್ರಿಕಲ್ಚುರಲ್ ಗೆಜೆಟ್' (ಮಾಲೀಕ ಸ್ಮಿತ್, ನಾರಾಯಣ ಚೆಟ್ಟಿ ಅಂಡ್ ಕೊ.),

2. ಬಹ್ರುಲ್ ಇಸ್ಲಾಂ ಪ್ರೆಸ್‌ನಿಂದ ಉರ್ದುವಿನಲ್ಲಿ ಪ್ರಕಟವಾಗುತ್ತಿದ್ದ ಖಾಸಿಂ ಘಂ ಸಂಪಾದಕತ್ವದ 'ಖಲಂದ್ ಅಕ್ಬಾರ್',
3. ಕೊಲಂಬಿಯಾ ಪ್ರೆಸ್‌ನಿಂದ ಇಂಗ್ಲಿಷ್‌ನಲ್ಲಿ ತಿರುವೆಂಗಡಮ್ ಪಿಳ್ಳೆ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ಬೆಂಗಳೂರ್ ಅಡ್ವರ್‌ಟೈಸರ್',
4. ಎಕ್ಸಾಮಿನರ್ ಪ್ರೆಸ್‌ನಿಂದ ಎಚ್. ಎಫ್. ಹೇಯ್ಸ್ ಸಂಪಾದಕತ್ವದಲ್ಲಿ 'ಬೆಂಗಳೂರು ಎಕ್ಸಾಮಿನರ್' ಮತ್ತು 'ಮೈಸೂರು ವೃತ್ತಾಂತ ಬೋಧಿನಿ',
5. ಕರ್ನಾಟಕ ಪ್ರೆಸ್‌ನಿಂದ ಪಿ.ಸಿ.ಶ್ರೀನಿವಾಸಾಚಾರಿಯ ಸಂಪಾದಕತ್ವದಲ್ಲಿ 'ಕರ್ನಾಟಕ ಪ್ರಕಾಶಿಕಾ' (ಕನ್ನಡ),
6. ಮೈಸೂರು ಸರ್ಕಾರದ ಮುದ್ರಣಾಲಯದಿಂದ 'ಮೈಸೂರು ಗೆಜೆಟ್',
7. ಸ್ಪೆಕ್ಟೇಟರ್ ಪ್ರೆಸ್‌ನಿಂದ ಟಿ.ಟಿ.ಲಿಯೊನಾರ್ಡ್ ಸಂಪಾದಕತ್ವದಲ್ಲಿ 'ಬೆಂಗಳೂರ್ ಸ್ಪೆಕ್ಟೇಟರ್' (ಇಂಗ್ಲಿಷ್),
8. ವಿಕ್ಟೋರಿಯಾ ಪ್ರೆಸ್‌ನಿಂದ ವಿ.ಎಸ್. ಸುಬ್ಬಯ್ಯ ಸಂಪಾದಕತ್ವದಲ್ಲಿ 'ಕರ್ನಾಟಕ ವಾಗ್ಜೀವಿನಿ' (ಕನ್ನಡ),

1881–82ರ ಪಟ್ಟಿ

1. 'ಕರ್ನಾಟಕ ಪ್ರಕಾಶಿಕಾ' ಟಿ. ಶ್ರೀನಿವಾಸಾಚಾರ್‌ರವರಿಂದ ಸಂಪಾದಿಸಲ್ಪಡುತ್ತಿತ್ತು.
2. 'ಮೈಸೂರು ಗೆಜೆಟ್'.
3. ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ (Cantonment) ನಿಂದ ಪ್ರಕಟವಾಗುತ್ತಿದ್ದ ಪತ್ರಿಕೆಗಳ ಬಗ್ಗೆ ಮಾಹಿತಿಯನ್ನು 1881–82ನೇ ವರ್ಷದಿಂದ ಆಡಳಿತ ವರದಿಯಲ್ಲಿ ನೀಡುತ್ತಿರಲಿಲ್ಲ. ಆದರೆ ಅಲ್ಲಿ ಅನೇಕ ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಅವುಗಳಲ್ಲಿ 'ವೃತ್ತಾಂತ ಬೋಧಿನಿ', 'ಕಾಸಿಮುಲ್ ಅಕ್ಬಾರ್', 'ಬೆಂಗಳೂರು ಸ್ಪೆಕ್ಟೇಟರ್, 'ಡೇಲಿ ಪೋಸ್ಟ್', 'ಬೆಂಗಳೂರು ಎಕ್ಸಾಮಿನರ್', 'ಅಡ್ವರ್‌ಟೈಸರ್' ಮುಂತಾದವು ಸೇರಿದ್ದವು. ಇದು ಮುಂದಿನ ದಿನಗಳಲ್ಲೂ ಮುಂದುವರೆಯಿತು ಎಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು.

1886–87 ರಿಂದ 1890–91ರ ಪಟ್ಟಿ

1. 'ಕರ್ನಾಟಕ ಪ್ರಕಾಶಿಕ'.
2. 'ಮೈಸೂರು ಗೆಜೆಟ್'.
3. 'ಧರ್ಮ ತತ್ವ' (ಸಂಪಾದಕ ಸಿ.ರಾಮಚೆಟ್ಟಿ).
4. ಶ್ರೀ ರಾಜರಾಜೇಶ್ವರಿ ಪ್ರೆಸ್‌ನಿಂದ ದಕ್ಷಿಣಾ ಮೂರ್ತಿ ಶಾಸ್ತ್ರಿಯವರ ಸಂಪಾದಕತ್ವದಲ್ಲಿ 'ಶಾಸ್ತ್ರ ಸಂಜೀವಿನಿ' ಎಂಬ ಕನ್ನಡ ಪತ್ರಿಕೆ.
5. ಮೈಸೂರು ಬುಕ್‌ಪೋಸ್ಟ್ ಪ್ರೆಸ್‌ನಿಂದ 'ಪೊಲೀಸ್ ಸರ್‌ಕ್ಯುಲರ್ ಕ್ವಾರ್ಟರ್ಲೀ'.

1891–92 ರಿಂದ 1894–95ರ ಪಟ್ಟಿ

1. ಕರ್ನಾಟಕ ಪ್ರೆಸ್‌ನಿಂದ ಪ್ರಕಟವಾಗುತ್ತಿದ್ದ ಟಿ.ಸಿ. ಶ್ರೀನಿವಾಸಾಚಾರ್ ಸಂಪಾದಕತ್ವದ 'ಕರ್ನಾಟಕ ಪ್ರಕಾಶಿಕಾ'.

2. ಮೈಸೂರು ಬುಕ್ ಡಿಪೋ ಪ್ರೆಸ್‌ನಿಂದ ಪ್ರಕಟವಾಗುತ್ತಿದ್ದ 'ಪೋಲೀಸ್ ಸರ್‌ಕ್ಯುಲರ್ ಕ್ವಾರ್ಟರ್ಲೀ'.
3. ಶ್ರೀ ರಾಜರಾಜೇಶ್ವರಿ ಪ್ರೆಸ್‌ನಿಂದ ದಕ್ಷಿಣಾಮೂರ್ತಿ ಶಾಸ್ತ್ರಿಯವರ ಸಂಪಾದಕತ್ವದಲ್ಲಿ 'ಶಾಸ್ತ್ರಸಂಜೀವಿನಿ' (ಕನ್ನಡ) ನಿಯತಕಾಲಿಕ.
4. ಮೈಸೂರು ಸರ್ಕಾರದ ಮುದ್ರಣಾಲಯದಿಂದ 'ದಿ ಮೈಸೂರು ಗೆಜೆಟ್' ವಾರಪತ್ರಿಕೆ.
5. ಶ್ರೀ ಭಾರತಿ ಭವನ ಪ್ರೆಸ್‌ನಿಂದ ಸಿ.ಬಿ.ಪದ್ಮರಾಜ ಪಂಡಿತರ ಸಂಪಾದಕತ್ವದಲ್ಲಿ 'ಕಾವ್ಯಾಂಬುಧಿ' ಮತ್ತು 'ಬುದ್ಧಜನ ಮನೋರಂಜನಿ'.
6. ಸೂರ್ಯೋದಯ ಪ್ರೆಸ್‌ನಿಂದ ಬಿ. ನರಸಿಂಗರಾವ್‌ರವರ ಸಂಪಾದಕತ್ವದಲ್ಲಿ 'ಸೂರ್ಯೋದಯ' (1894–95).

ಇದರ ನಂತರ ಇಸವಿ 1900ರವರೆಗೆ ಮಿತ ಸಂಖ್ಯೆಯ ಹೊಸಪತ್ರಿಕೆಗಳು ಪ್ರಾರಂಭವಾಗಿರಬಹುದು. ಈ ಬಗ್ಗೆ ಈಗಾಗಲೇ ಸೂಚಿಸಿರುವಂತೆ ಡಾ. ಆರ್. ರಾಮಕೃಷ್ಣನ್‌ರವರ 'ಪ್ರೆಸ್ ಅಂಡ್ ಪಾಲಿಟಿಕ್ಸ್ ಇನ್ ಮೈಸೂರ್' (1859–1947) ಎಂಬ ಗ್ರಂಥದ ಅಪೆಂಡಿಕ್ಸ್ 1 (ಪುಟ 142–145) ದನ್ನು ನೋಡಬಹುದು. ಹತ್ತೊಂಬತ್ತನೇ ಶತಮಾನದಲ್ಲಿ ಬೆಂಗಳೂರು ನಗರದ ಪತ್ರಿಕೋದ್ಯಮದ ಇತಿಹಾಸ ಅಗತ್ಯ ಮಾಹಿತಿಯ ಕೊರತೆಯಿಂದಾಗಿ ಅಪೂರ್ಣವಾಗಿಯೇ ಉಳಿಯಲಿದೆ. ಅಂದಿನ ಪತ್ರಿಕೆಗಳ ಧ್ಯೇಯೋದ್ದೇಶಗಳನ್ನು ಕುರಿತಂತೆ 'ಮೈಸೂರು ವೃತ್ತಾಂತ ಬೋಧಿನಿ' ತನ್ನ ಸಂಪಾದಕೀಯ ಲೇಖನದಲ್ಲಿ ಹೇಳುವುದಿಷ್ಟು (ನವೆಂಬರ್ 17, 1882):

'ವೃತ್ತಾಂತ ಪತ್ರಿಕೆಯೆಂದರೆ, ಜನಗಳಿಗೆ ಕಂಣಿನಂತಾ ಸಾಧನವಾಗಿರುತ್ತದೆ. ಅದರ ದೆಸೆಯಿಂದಾ ಬೇರೆ ಬೇರೆ ದೇಶಗಳಲ್ಲಿ ವಾಸಮಾಡುವ ಜನಗಳು ತಾವು ಹೋಗಿ ನೋಡಬಹುದೆಂದು ಮನಸ್ಸಿನಲ್ಲಿಯೂ ಸಹ ಚಿಂತಿಸುವಲಿಕ್ಕಾಗದಷ್ಟು ದೂರ ದೇಶದ ವೃತ್ತಾಂತಗಳನ್ನು ತಮ್ಮ ಸ್ವಂತ ಕಣ್ಣುಗಳಿಂದಲೇ ನೋಡಿದಂತೆ ತಿಳಿದು ಕೊಳ್ಳಬಹುದು. ಅಂತಾ ವೃತ್ತಾಂತಗಳನ್ನು ತಿಳಿದುಕೊಂಡದ್ದರಿಂದ ಆ ದೇಶದ ಜನಗಳ ಪ್ರಕೃತಿಯೂ, ಅವರ ವಿದ್ಯಾಬುದ್ಧಿ ಕೌಶಲಗಳು, ವೃತ್ತಿ ಪರಾಕ್ರಮ ಮುಂತಾದವುಗಳೂ, ಈ ಭೂಮಿಯ ಸ್ವರೂಪ ಗುಣಗಳೂ, ಅಲ್ಲಿ ಹುಟ್ಟುವ ಪದಾರ್ಥಗಳ ವಿವರವೂ, ಇನ್ನೂ ಇರತಕ್ಕ ನಾನಾವಿಧ ವಿಶೇಷಗಳೂ ಸಹ ತಿಳಿಯಲ್ಪಡುತ್ತವೆ. ಹೀಗೆಯೇ ಅನೇಕ ವೃತ್ತಾಂತ ತಿಳಿಸತಕ್ಕ ಒಂದು ಪತ್ರಿಕೆಯು ಏಕ ಕಾಲದಲ್ಲಿ ಬಹು ಮಂದಿಗೆ ಸಿಕ್ಕಬೇಕಾದರೆ ಪೂರ್ವಕಾಲದಲ್ಲಿ ಸುಲಭವಾದ ವಸ್ತುವಾಗಿರಲಿಲ್ಲವು. ಈಗಲಾದರೋ ಅದಕ್ಕೆ ತಕ್ಕ ಸಾಧನಗಳೆಲ್ಲವೂ ಬುದ್ಧಿವಂತ ರಾದವರಿಂದ ಉಂಟುಮಾಡಲ್ಪಟ್ಟಿದೆಯಾಗಿ ಸದರಹೂ ಕೆಲಸವೆಲ್ಲವೂ ಸುಲಭವಾಗಿಯೇ ನಿರ್ವಹಿಸಲ್ಪಡುತ್ತದೆ. ಅದಕ್ಕೆ ಜನಗಳು ಕೊಡತಕ್ಕದ್ದು ಸ್ವಲ್ಪವೇ. ಈ ಮೇರೆ ಅಲ್ಪ ಶ್ರಮದಿಂದ ಬಹಳ ಪ್ರಯೋಜನಕರವಾದಂತಾ ವಸ್ತುವು ಲಭಿಸುವುದು ವಿಶೇಷವಾದದ್ದಲ್ಲವೆ?

'ಪ್ರಯೋಜನವೆಂದರೆ ಕೆಲವರಿಗೆ ತಿಳಿಯದೇಯಿದ್ದಿತೇನೋ. . . ದೇಶವನ್ನು ಆಳುವವರು ಮಾಡುವ ಕಟ್ಟಳೆಗಳನ್ನು ಆಯಾ ಕಾಲದಲ್ಲಿ ಅವರ ಪ್ರಜೆಗಳು ತಿಳಿದುಕೊಂಡು ವರ್ತಿಸುವದೊಂದು ಸಕಲ ಜನಗಳಿಗೂ ಅವಶ್ಯಕವಾಗಿರುತ್ತದೆ. ಎರಡನೇದು, ಆಯಾ ಕಾಲದಲ್ಲಿ ಸರಕಾರದೊಳಗೆ ನಡೆಯುವ ಉದ್ಯೋಗಗಳ ಬದಲಾವಣೆಯೂ ಸಹ ಅನೇಕರಿಗೆ ತಿಳಿಯಬೇಕಾದ್ದಾಗಿರುತ್ತದೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಬೇಕಾದವರಿಗೆ ಆಯಾ ಸ್ಥಳದ ಹವಾ ವಗೈರೆ ಸಂಗತಿ ಅಗತ್ಯವಾದದ್ದು. ವ್ಯಾಪಾರ ಮಾಡುವವರು ಅಲ್ಲಿಯಲ್ಲಿ ಪದಾರ್ಥಗಳ ಕ್ರಮ ಮುಂತಾದ್ದು ತಿಳಿಯದಿದ್ದರೆ ಅವರಿಗೆ ಅನುಕೂಲತೆಯಿಲ್ಲ. ಹೀಗೆ ಯೆಲ್ಲರಿಗೂ

ಪ್ರಯೋಜನಕರವಾದದ್ದು ಒಬ್ಬೊಬ್ಬರಿಗೆ ಪ್ರಯೋಜನವಾದದ್ದೂ ಸಹ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತದೆ. 'ಮುಖ್ಯವಾಗಿ ಇಂಗ್ಲಿಷ್‌ನವರು ವೃತ್ತಾಂತ ಪತ್ರಿಕೆಗಳ ಪ್ರಯೋಜನಗಳನ್ನು ವಿವರಿಸುವಾಗ ನಾನಾ ವಿಧವಾಗಿ ಹೇಳಿ ಕಡೆಗೆ ವೃತ್ತಾಂತ ಪತ್ರಿಕೆಯು ತಿಳಿಯದಂತವರಿಗೆ ತಿಳಿಯದ್ದನ್ನೂ, ತಿಳಿದವರಿಗೆ ಮರತದ್ದನ್ನೂ ಬೋಧಿಸುತ್ತಾಗಿ ಯೆಲ್ಲರಿಗೂ ಬೇಕಾದ್ದೆಂದು ಹೇಳಬಹುದೆನ್ನುತ್ತಾರೆ.'

ಅಂದಿನ ಪತ್ರಿಕೆಗಳಲ್ಲಿ ಬರುತ್ತಿದ್ದ ಸುದ್ದಿ ಸಮಾಚಾರಗಳನ್ನು ಈ ರೀತಿ ವರ್ಗೀಕರಿಸಬಹುದಿತ್ತು: ಒಳದೇಶ ವೃತ್ತಾಂತ; ಇಂಡಿಯಾ / ಹೊರನಾಡಿನ ವೃತ್ತಾಂತ; ವಿದೇಶಿ / ಹೊರದೇಶಗಳ ವೃತ್ತಾಂತ; ಸಂಪಾದಕೀಯ; ಬೇರೆ ಪತ್ರಿಕೆಗಳಿಂದ ಆಯ್ದ ಸುದ್ದಿ, ಸಾಮಾನ್ಯ ಮತ್ತು ಚಿಲ್ಲರೆ ವಿಷಯಗಳು; ವಿಶೇಷ ಬಾತ್ಮಿದಾರರ ವರದಿಗಳು; ಸರ್ಕಾರಿ ಮತ್ತು ಖಾಸಗಿ ಪ್ರಕಟಣೆಗಳು, ಪ್ರಸಿದ್ಧ ಪತ್ರಿಕೆಗಳು; ಜಾಹೀರಾತುಗಳು; ಓದುಗರ ಪತ್ರಗಳು ಇತ್ಯಾದಿ.

ಸ್ವಲ್ಪ ವಿಶದೀಕರಿಸಿ ಹೇಳುವುದಾದರೆ ಅಂದಿನ ಪತ್ರಿಕೆಗಳಲ್ಲಿ ಸಾಮಾನ್ಯವಾಗಿ ಪ್ರಕಟವಾಗುತ್ತಿದ್ದ ವಾರ್ತೆಗಳೆಂದರೆ;

1) ರಥೋತ್ಸವಗಳು, ಜಾತ್ರೆಗಳು, ಹಬ್ಬಗಳು, ಕ್ಷಾಮ ಡಾಮರಗಳು ಮುಂತಾದವುಗಳ ವಿವರಗಳು.

2) ಮಲೇರಿಯಾ, ಪ್ಲೇಗ್, ಜ್ವರ, ಸಿಡುಬು, ಕಾಮಾಲೆ, ವಾಂತಿ–ಭೇಧಿ ಮುಂತಾದ ಉಪದ್ರವಗಳು ಎಲ್ಲೆಲ್ಲಿ ಕಂಡುಬರುತ್ತಿವೆ ಮತ್ತು ಆ ಬಗ್ಗೆ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು.

3) ಪ್ರಯಾಣಿಕರಿಗೆ ಸೂಚನೆಗಳು; ರೇಲ್ವೆ ಮಾಹಿತಿ; ಸ್ಟೀಮರುಗಳ ಆಗಮನ ಮತ್ತು ನಿರ್ಗಮನ (ಮದ್ರಾಸ್, ಬಾಂಬೆ ಮತ್ತು ಕಲ್ಕತ್ತ ಬಂದರುಗಳಿಗೆ ಸಂಬಂಧಿಸಿದಂತೆ); ಎತ್ತಿನ ಗಾಡಿಗಳಲ್ಲಿ ದೂರದೂರದ ಸ್ಥಳಗಳಿಗೆ ಪ್ರಯಾಣಿಸುವವರಿಗೆ ದರ, ಪ್ರಯಾಣ ದಿನಾಂಕ ಇತ್ಯಾದಿ ವಿವರಗಳ ಮಾಹಿತಿ.

4) ರಾಜಕೀಯ, ಆಡಳಿತಾತ್ಮಕ ಸುದ್ದಿಗಳು; ಕಮ್ಮಿಷನರು, ದಿವಾನರು, ಮಹಾರಾಜರು ಮತ್ತು ಉನ್ನತಾಧಿಕಾರಿಗಳ ಪ್ರವಾಸದ ಸುದ್ದಿಗಳು; ಸರ್ಕಾರಿ ನೌಕರರ ವರ್ಗಾವಣೆ, ನೇಮಕಾತಿ, ಪದೋನ್ನತಿ ಕುರಿತಾದ ಆದೇಶಗಳು; ಮತ್ತು ಮುನಿಸಿಪಾಲಿಟಿ ಕುರಿತ ಸುದ್ದಿಗಳು.

5) ಕಳ್ಳತನ, ದರೋಡೆ, ಕೊಲೆ, ಮೋಸ, ನ್ಯಾಯಾಲಯ, ಪೊಲೀಸ್, ಮುಂತಾದ ವಿಷಯಗಳಿಗೆ ಸಂಬಂಧಿಸಿದ ಸುದ್ದಿಗಳು.

6) ರಸ್ತೆ ಮತ್ತು ರೇಲ್ವೆ ರಸ್ತೆಗಳಲ್ಲಿ ಸಂಭವಿಸುವ ಅಪಘಾತಗಳು, ಮೇಲ್ ಗಾಡಿ ದರೋಡೆ, ಇತ್ಯಾದಿ ವಾರ್ತೆಗಳು.

7) ಶಾಲಾ ಕಾಲೇಜುಗಳ ಆರಂಭ, ರಜೆ ಅವಧಿ, ವಿದ್ಯಾರ್ಥಿಗಳಿಗೆ ಪರೀಕ್ಷೆ ಮುಂತಾದ ವಿಷಯಗಳ ಕುರಿತ ಮಾಹಿತಿ.

8) ಮಿಲಿಟರಿಗೆ ಸಂಬಂಧಿಸಿದ ಸುದ್ದಿಗಳು, ಸಂಪಾದಕರಿಗೆ ಓದುಗರು ಬರೆಯುತ್ತಿದ್ದ ಪತ್ರಗಳು.

9) ಬೇರೆ ಪತ್ರಿಕೆಗಳಿಂದ ಆಯ್ದು ಪ್ರಕಟಿಸುತ್ತಿದ್ದ ಮುಖ್ಯವಾದ, ರೋಚಕವಾದ ಮತ್ತು ರಂಜನೀಯ ವಾರ್ತೆಗಳು.

10) ದೂರ ಪ್ರಾಂತಗಳ ಮತ್ತು ವಿದೇಶದ ಸುದ್ದಿಗಳು.

11) ಮುಖ್ಯವಾದ ವಾರ್ತೆಗಳನ್ನು ಕುರಿತಂತೆ ಬರೆಯುತ್ತಿದ್ದ ಸಂಪಾದಕೀಯಗಳು.

12) ವಿವಿಧ ಜಾಹೀರಾತುಗಳು.

13) ಪತ್ರಿಕೆಯ ಚಂದಾದರ ಮತ್ತು ಚಂದಾ ಬಾಕಿ ಉಳಿಸಿಕೊಂಡವರಿಗೆ ಛೀಮಾರಿ ಹಾಕುತ್ತಿದ್ದ ಸಂಗತಿಗಳು.

ಇನ್ನುಳಿದಂತೆ, ಸಾಮಾನ್ಯವಾಗಿ ಓರ್ವ ಬರಹಗಾರ – ಸಾಮಾನ್ಯವಾಗಿ ಸಂಪಾದಕ ಇಡೀ ಪತ್ರಿಕೆಯನ್ನು ಸಿದ್ಧಪಡಿಸುತ್ತಿದ್ದನು. ಮಾಹಿತಿಯನ್ನು ಸಂಗ್ರಹಿಸುತ್ತಿದ್ದ ಮೂಲಗಳೆಂದರೆ ಅಂಚೆ ಮತ್ತು ಟೆಲಿಗ್ರಾಫ್ (ಪತ್ರಗಳು ಟೆಲಿಗ್ರಾಂ, ಇತ್ಯಾದಿ); ಸರ್ಕಾರಿ ಆದೇಶಗಳು ಮತ್ತು ಪ್ರಕಟಣೆಗಳು ಇತ್ಯಾದಿ; ಪೋಲಿಸ್ ಮೂಲಗಳು; ನ್ಯಾಯಾಲಯ ಮೂಲಗಳು; ಒಮ್ಮೊಮ್ಮೆ ವಿಶೇಷ ಬಾತ್ಮಿದಾರರಿಂದ; ಬೇರೆ ಪತ್ರಿಕೆಗಳಿಂದ ಮುಖ್ಯವಾಗಿ ದೂರ ಪ್ರಾಂತಗಳಲ್ಲಿ (ಮದ್ರಾಸ್, ಬಾಂಬೆ, ಕಲ್ಕತ್ತ ಮುಂತಾದವು) ಪ್ರಕಟವಾಗುತ್ತಿದ್ದಂಥವು. ಓದುಗರ ಪತ್ರಗಳು, ದೂರುಗಳು, ಅಜ್ಞಾತರು ನೀಡುತ್ತಿದ್ದ ಸುದ್ದಿಗಳು ಮುಂತಾದವನ್ನು ನಂಬತಕ್ಕದ್ದೆಂದು ಅನಿಸಿದರೆ ಪ್ರಕಟಿಸಲಾಗುತ್ತಿತ್ತು. ಮುಖ್ಯವಾದ ರಾಜಕೀಯ ಮತ್ತು ಆಡಳಿತಾತ್ಮಕ ಸುದ್ದಿಗಳನ್ನು ಸಂಪಾದಕೀಯದಲ್ಲಿ ಕೂಲಂಕಷವಾಗಿ ವಿಶ್ಲೇಷಿಸಲಾಗುತ್ತಿತ್ತು. ಉಳಿದಂತೆ, ಸಂಪಾದಕೀಯ ಬರಹಗಳು ನೀತಿ ನಿಯಮಗಳು, ಮತ್ತು ಸನ್ನಡತೆಯೇ ಮುಂತಾದ ನೈತಿಕ ವಿಷಯಗಳ ಬೋಧನೆಗೆ ಒತ್ತು ನೀಡುತ್ತಿದ್ದವು. ಒಟ್ಟಿನಲ್ಲಿ ಸಾಮಾನ್ಯ ಜನರ ಮೇಲೆ ವರ್ತಮಾನ ಪತ್ರಿಕೆಗಳ ಪ್ರಭಾವ ಹೆಚ್ಚೇನೂ ಇರಲಿಲ್ಲ. ಆದರೂ 19ನೇ ಶತಮಾನದ ಅಂತ್ಯದ ಕಾಲಕ್ಕೆ ದೊಡ್ಡ ಪಟ್ಟಣಗಳಲ್ಲಿ ರಾಜಕೀಯ ಚರ್ಚೆ ಮಾಡುವ ಹವ್ಯಾಸ ಪತ್ರಿಕೆಗಳಿಂದಾಗಿ ಸ್ಥಿರಗೊಂಡಿತ್ತಲ್ಲದೇ ವರ್ಷೇವರ್ಷೇ ಜನಪ್ರಿಯವಾಗುತ್ತಿತ್ತು.

ಈ ಅವಧಿಯಲ್ಲಿ (1859–1900) ಸರ್ಕಾರ ಮತ್ತು ಪತ್ರಿಕೆಗಳ ಸಂಬಂಧ ಬಹುತೇಕ ಉತ್ತಮವಾಗಿತ್ತೆಂದೇ ಹೇಳಬೇಕು. ಹತ್ತೊಂಬತ್ತನೇ ಶತಮಾನದ ಕೊನೆಯ ದಶಕದಿಂದ ಸರ್ಕಾರ ಮತ್ತು ಪತ್ರಿಕೆಗಳ ಸಂಬಂಧ ಸ್ವಲ್ಪ ಅಹಿತಕರ ತಿರುವನ್ನು ಪಡೆದುಕೊಂಡಿತೆನ್ನಬಹುದು. ದಿವಾನ್ ಶೇಷಾದ್ರಿ ಅಯ್ಯರ್ (1883–1901) ಸರ್ಕಾರಿ ಹುದ್ದೆಗಳಿಗೆ ಮೈಸೂರಿನವರನ್ನು ಕಡೆಗಣಿಸಿ ಮದ್ರಾಸಿಗಳನ್ನು ನೇಮಕ ಮಾಡುತ್ತಿರುವುದಾಗಿ ಮೈಸೂರಿಗರಿಗಿದ್ದ ಅಸಮಾಧಾನ ಕುರಿತಂತೆ 'ಕರ್ನಾಟಕ ಪ್ರಕಾಶಿಕಾ' ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದುದು ಇದಕ್ಕೆ ಒಂದು ಕಾರಣ. 'ವೃತ್ತಾಂತ ಚಿಂತಾಮಣಿ', 'ಸೂರ್ಯೋದಯ ಪ್ರಕಾಶಿಕ' ಮತ್ತು 'ದೇಶಾಭಿಮಾನಿ' ಕೂಡ ದಿವಾನರ ವಿರುದ್ಧ ಪದೇ ಪದೇ ಟೀಕೆಗಳನ್ನು ಮಾಡುತ್ತಿದ್ದವು. ಮಹಾರಾಜ ಚಾಮರಾಜೇಂದ್ರ ಒಡೆಯರು ಮತ್ತು ಪರಕಾಲ ಮಠದ ಸ್ವಾಮಿಯವರನ್ನು ಅವಹೇಳನ ಮಾಡಿ 'ದೇಶಾಭಿಮಾನಿ' ಪತ್ರಿಕೆ (ಮೈಸೂರು) ಫೆಬ್ರುವರಿ 5 ಮತ್ತು ಮಾರ್ಚ್ 10ರ ನಡುವೆ (1894) ಪ್ರಕಟಿಸಿದ ನಾಲ್ಕು ಲೇಖನಗಳು ದಿನಾಂಕ 15ನೇ ಮಾರ್ಚ್ 1894ರಿಂದ ಅದರ ಪ್ರಕಟಣೆಯನ್ನು ಸರ್ಕಾರವು ತಾತ್ಕಾಲಿಕವಾಗಿ ರದ್ದುಪಡಿಸಲು ಕಾರಣವಾದವು. ರೀಜೆಂಟ್ ಕೆಂಪ ನಂಜಮ್ಮಣ್ಣಿ ವಾಣಿವಿಲಾಸರವರು ಅರಮನೆಯಲ್ಲಿ ದಕ್ಷಿಣ ಭಾರತದ ಕೆಲವು ನೃತ್ಯಗಾತಿ (ದೇವದಾಸಿಯರು)ಯರನ್ನು ಸತ್ಕರಿಸಿದರೆಂಬ ಸುಳ್ಳು ವರದಿಯನ್ನು ಛಾಪಿಸಿದ ತಪ್ಪಿಗಾಗಿ 'ಮೈಸೂರ್ ಸ್ಟಾಂಡರ್ಡ್' ಪತ್ರಿಕೆಯ ಸಂಪಾದಕರಿಂದ ತಪ್ಪೊಪ್ಪಿಗೆಯನ್ನು ಬಲವಂತವಾಗಿ ಪಡೆಯಲಾಯಿತು (1897). ಸರ್ಕಾರಿ ನೌಕರರು ಪತ್ರಿಕೆಗಳೊಂದಿಗೆ ಸಂಪರ್ಕವಿರಿಸಿಕೊಳ್ಳಕೂಡದೆಂದು ಮತ್ತು ಸಂಸ್ಥಾನದ ಸರ್ಕಾರ ಮತ್ತು ಬ್ರಿಟಿಷ್ ಸರ್ಕಾರದ ಸಂಬಂಧಗಳು ಅಥವಾ ಅವುಗಳ ಹಕ್ಕುಗಳು ಮತ್ತು ಭಾದ್ಯತೆಗಳನ್ನು ಕುರಿತಂತೆ ಯಾವುದೇ ಪತ್ರಿಕೆಯೊಡನೆ ಚರ್ಚಿಸಕೂಡದೆಂಬ ನಿಯಮವನ್ನು ಡಿಸೆಂಬರ್ 1893 ರಿಂದ ಜಾರಿಗೊಳಿಸಲಾಯಿತು.

1. C. Hayavadana Rao, Mysore; Gazetteer, Vol. IV; Mysore Govt. Press: Bangalore, 1929.

2. 'Karnataka Through the Ages', Literary and Cultural Development Department, Govt. of Mysore; Hosali Press: Bangalore, 1968.

3. ಡಾ. ಡಿ. ವಿ. ಗುಂಡಪ್ಪ, 'ವೃತ್ತ ಪತ್ರಿಕೆ, ಅದರ ಚರಿತ್ರೆ, ಅದರ ಸ್ವಾತಂತ್ರ್ಯ; ಕಾವ್ಯಾಂಜಲಿ ಪ್ರಕಾಶನ, 2ನೇ ಆವೃತ್ತಿ; ಮೈಸೂರು, 1968.
4. Dr. Suryanath Kamath, 'Karnataka State Gazetteer- Bangalore District', Govt. of Karnataka; Lotus Printers: Bangalore, 1990.
5. N.S. Chandrashekhar, 'Dewan Rangacharlu', Publications Division; Govt. of India: New Delhi, 1977.
6. N.S. Chandrashekhar, 'Dewan Seshadri Iyer', Publications Division' Govt. of India: New Delhi, 1981.
7. Dr. R. Ramakrishnan, 'Press and Politics in an Indian State-Mysore (1859-1947); Swabhimana Prakashana: Channarayapattana, 1997.
8. ಹಾವನೂರು, ಎಸ್. ಕೆ. ಹೊಸಗನ್ನಡದ ಅರುಣೋದಯ; ಮೈಸೂರು ವಿಶ್ವವಿದ್ಯಾನಿಲಯ; ಮೈಸೂರು.
9. Report on the Administration of Mysore for the years from 1862-63 to 1900-1901

43. ಸ್ವಾತಂತ್ರ್ಯಪೂರ್ವದಲ್ಲಿ ಬೆಂಗಳೂರಿನಲ್ಲಿ ಪತ್ರಿಕೋದ್ಯಮ

ಈಚನೂರು ಕುಮಾರ್

ಸ್ವಾತಂತ್ರ್ಯಪೂರ್ವದಲ್ಲಿ ಬೆಂಗಳೂರು ನಗರದಲ್ಲಿ ಬೆಳೆದ ಪತ್ರಿಕೋದ್ಯಮ ಅಪಾರವಾಗಿಯೇ ಇದೆ. ಬಹುಪಾಲು ವೃತ್ತಿಪರವಾಗಿತ್ತು. ಈ ದೃಷ್ಟಿಯಿಂದ ಸ್ವಾತಂತ್ರ್ಯ ದಕ್ಕುವವರೆಗೆ ಪತ್ರಿಕಾಂಗ ಸಂಪೂರ್ಣ ವೃತ್ತಿ ಪರತೆಯನ್ನು ಕಾಪಾಡಿಕೊಂಡಿತ್ತು. ಈ ಹೊತ್ತಿನ ಉದ್ಯಮ ಆಗಿರಲಿಲ್ಲ.

ಸುಮಾರು 88 ವರ್ಷಗಳ ಅವಧಿಯ ಇಲ್ಲಿನ ಪತ್ರಿಕಾ ವೃತ್ತಿ ವಿವಿಧ ಮುಖವುಳ್ಳದ್ದಾಗಿತ್ತು, ವೈವಿಧ್ಯಮಯವಾಗಿತ್ತು. ಎಲ್ಲ ಕ್ಷೇತ್ರಗಳ ಆಗುಹೋಗು ಕುರಿತಾದ ದಿನ, ವಾರ, ಪಾಕ್ಷಿಕ, ಮಾಸ, ಅರೆವಾರ್ಷಿಕ, ವಾರ್ಷಿಕ, ಪತ್ರಿಕೆಗಳು ಸೇರಿ ನೂರೈವತ್ತಕ್ಕೂ ಹೆಚ್ಚನ್ನು ಗುರುತಿಸಲಾಗಿದೆ.

ಈ ಪೈಕಿ 9 ದಿನ, '9 ವಾರ, 39 ಮಾಸ, 1 ಪಾಕ್ಷಿಕ, 1 ಅರೆವಾರ್ಷಿಕ, 4 ವಾಣಿಜ್ಯ, 24 ಸಾಹಿತ್ಯ, 21 ಸುದ್ದಿ, 2 ರಾಜಕೀಯ, 6 ಧಾರ್ಮಿಕ, 1 ಮಾಹಿತಿ, 4 ಶಿಕ್ಷಣ, 1 ಸೇವೆ, 2 ಕಾನೂನು, 2 ಪೊಲೀಸ್, 1 ವಿಜ್ಞಾನ, 2 ಆರೋಗ್ಯ, 1 ಪ್ರಾಣಿದಯೆ, 3 ಚಲನಚಿತ್ರ, 1 ಇತಿಹಾಸ, 1 ರಂಗಭೂಮಿ, 1 ಕಲೆ, 4 ಹಾಸ್ಯ, 3 ಕನ್ನಡಪರ, 2 ಸಹಕಾರ, 11 ಜನಾಂಗೀಯ, 5 ಗ್ರಾಮಾಭಿಮುಖಿ, 2 ಜ್ಯೋತಿಷ, 6, ಸನಾತನ, 1 ಮಹಿಳಾಪರ, 1 ಕೃಷಿ, ಇತರ ಕ್ಷೇತ್ರದ ಪತ್ರಿಕೆಗಳು ಆಗಿಹೋಗಿವೆ. ಆಗು ಮಾಡಿವೆ.

ಕನ್ನಡವಲ್ಲದೆ ಸಂಸ್ಕೃತ, ಇಂಗ್ಲಿಷ್, ತೆಲುಗು, ತಮಿಳು ಭಾಷೆಯಲ್ಲೂ ಬಂದಿವೆ. 'ಮೈಸೂರು ವೃತ್ತಾಂತ ಭೋದಿನಿ' ಎಂಬ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ವಾರಪತ್ರಿಕೆ 1859 ರಲ್ಲಿಯೇ ಪ್ರಾರಂಭವಾಗಿದ್ದು, ಕೈ ತಪ್ಪಿಹೋಗಿದ್ದ ಆಡಳಿತಾಧಿಕಾರವನ್ನು ರಾಜರಿಗೆ ವಾಪಸು ಮಾಡಬೇಕೆಂದು ಇಂಗ್ಲಿಷರೊಂದಿಗೆ ನೇರ ಚಳವಳಿ ಮಾಡಿ ಯಶಸ್ವಿಯಾಗಿದೆ.

'ಕರ್ನಾಟಕ ಪ್ರಕಾಶಿಕಾ' ಕೂಡ ಇಂಗ್ಲಿಷ್, ಕನ್ನಡ ವಾರಪತ್ರಿಕೆಯಾಗಿ 1862ರಲ್ಲಿ ಪ್ರಾರಂಭವಾಗಿ, ವಿಧವಾ ವಿವಾಹ, ಸ್ತ್ರೀ ಶಿಕ್ಷಣ, ಸಾಮಾಜಿಕ ಸಂಗತಿಗಳಲ್ಲಿ ಪ್ರಗತಿಪರ ನಿಲುವು ತಾಳಿತು. ಆನಂತರ ಜನಿಸಿದ ಕಾಂಗ್ರೆಸ್ ವಿಚಾರ ಧಾರೆಗೂ ಬೆಂಬಲಕೊಟ್ಟಿದೆ.

ಪಕ್ಕಾ ವೃತ್ತ ಪತ್ರಿಕೆ ಆಗಿ 'ಮೈಸೂರು ಗೆಜೆಟ್' ಎಂಬ ಹೆಸರಿನೊಡನೆ ಏಪ್ರಿಲ್ 1866ರಿಂದಲೂ ಸರಕಾರಿ ವಿಷಯಗಳನ್ನು ಅಧಿಕೃತವಾಗಿ ಪ್ರಕಟಿಸಿ ಈಗಲೂ ಅಧಿಸೂಚನೆ, ಆದೇಶ, ಸುತ್ತೋಲೆ, ಪ್ರಕಟಣೆ, ಅಧಿನಿಯಮ ಇತ್ಯಾದಿಗಳನ್ನು ಪ್ರತಿವಾರವೂ ತನ್ನ 9 ಭಾಗಗಳಲ್ಲಿ ಪ್ರಕಟಿಸುತ್ತಾ ಬರುತ್ತಿರುವ ನಮ್ಮ ನಾಡಿನ ಹಿರಿಯ ಪತ್ರಿಕೆ 'ಕರ್ನಾಟಕ ರಾಜ್ಯಪತ್ರ' (Karnataka Gazette) ನಾಡ ಬದುಕಿನಲ್ಲಿ ಪ್ರಧಾನ ಪಾತ್ರ ವಹಿಸುತ್ತಾ ಬಂದಿದೆ.

ವಾರಕ್ಕೆರಡು ಸಲದ 'ಮೈಸೂರು ಸ್ಟ್ಯಾಂಡರ್ಡ್', ಕನ್ನಡ ಮತ್ತು ಸಂಸ್ಕೃತದ 'ಕಾವ್ಯಕಲ್ಪದ್ರುಮ', 'ವಿದ್ಯಾನಂದಿನಿ', 'ಬೋಧಕ-ಬೋಧಿನಿ' ಶಿಕ್ಷಣ ಸುದ್ದಿಗೆ ಮೀಸಲು. 'ಹಿತವಾದಿ', 'ಭಕ್ತಿ ಸಂದೇಶ' ಪತ್ರಿಕೆಗಳಾದರೆ ಆರ್ಥಿಕ ವಿಚಾರದ 'ಅರ್ಥಸಾಧಕ ಪತ್ರಿಕೆ' ಜೊತೆಗೆ ವಾಣಿಜ್ಯ ವಿಷಯದಲ್ಲಿಯೂ ಕೆಲಸ ಮಾಡಿದೆ. ಕನ್ನಡತ್ವಕ್ಕಾಗಿಯೇ ಕನ್ನಡ ಜ್ಯೋತಿ, ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕನ್ನಡ ನುಡಿ ಮುಖ್ಯವಾಗಿವೆ.

ಡಿ. ವಿ. ಗುಂಡಪ್ಪ, ತಿ. ತಾ. ಶರ್ಮ, ಎಲ್. ರಿಕೆಟ್ಸ್, ಸುಬೋಧ ರಾಮರಾವ್, ದ.ಕೃ. ಭಾರದ್ವಾಜ್, ಎಸ್.ಎನ್.ಸುಬ್ಬರಾವ್, ಕಲ್ಯಾಣಮ್ಮ, ರುಕ್ಮಿಣಿಯಮ್ಮ, ವೀರಕೇಸರಿ ಸೀತಾರಾಮಶಾಸ್ತ್ರಿ, ಎಚ್. ಕೆ.ವೀರಣ್ಣಗೌಡ, ಪಿ.ಆರ್. ರಾಮಯ್ಯ, ಅನಕೃ, ಬಸವರಾಜ ಕಟ್ಟೀಮನಿ, ಬಿ. ಶಿವಮೂರ್ತಿ ಶಾಸ್ತ್ರಿ, ತರಾಸು, ದೇವುಡು, ಕೆ. ಸಂಪದ್ಗಿರಿರಾವ್, ನ. ಭದ್ರಯ್ಯ, ಇನ್ನೂ ಅನೇಕರ ಪತ್ರಿಕಾ ವೃತ್ತಿ, ವೃತ್ತಿ ಗಣನೀಯ, ಮನನೀಯ. ಈ ಮಹನೀಯರ ಪತ್ರಿಕಾ ವೃತ್ತಿಗೊಂದು ಘನತೆ, ಸಂಹಿತೆ, ಶಿಸ್ತು ತಂದಿತ್ತು ಅವತ್ತವತ್ತಿನ ಸಂಗತಿಗಳನ್ನು ಸತ್ಯಕ್ಕೆ ಹತ್ತಿರ ಹತ್ತಿರವಾಗಿ ತಿಳಿಸಿವೆ. ಜೊತೆಗೆ ವಾಚಕ ಲೋಕವನ್ನು ಎಚ್ಚರಿಸಿ ಆ ಸಮುದಾಯವನ್ನು ಬೆಳೆಸಿದ್ದಾರೆ. ಅಭಿಪ್ರಾಯ ರೂಪಕ ವಲಯವನ್ನಾಗಿ ನಾಡಿನಲ್ಲಿ ರೂಪಿಸಿದುದು ಬೆಂಗಳೂರು ಪತ್ರಿಕೆಗಳ ನೆಚ್ಚಿನ ಕೆಲಸವಾಗಿತ್ತು.

ವೃತ್ತಿಗೊಂದು ಹೊಸ ಆಯಾಮ, ವ್ಯಕ್ತಿಗೊಂದು ಘನತೆ, ಜನಕ್ಕೊಂದು ವಿಚಾರ, ಆಚಾರ, ಉಚ್ಚಾರ, ನಡೆನುಡಿ, ಸೇವೆ, ಕಲೆ, ನಗು, ಕತೆ–ವ್ಯಥೆ, ಹೋರಾಟ, ಚಳವಳಿ, ಕಾನೂನು ಪರಿಜ್ಞಾನ ನೀಡಿ ಬೆಳೆದು ನಿಂತ ಈ ವೃತ್ತಿಯ ಶಕ್ತಿ ದೊಡ್ಡದೇ. ಇದು ಆಕರ್ಷಕ ಹಾಗೂ ಅನನ್ಯ.

ಆವತ್ತಿನ ಅನೇಕ ಪತ್ರಿಕೆಗಳು ಧ್ಯೇಯ ವಾಕ್ಯಗಳನ್ನು ಇಟ್ಟುಕೊಂಡು ವೃತ್ತಿ ಪರವಾಗಿ ಬೆಳೆದು ಬೆಳಗಿವೆ. ಉದಾಹರಣೆಗೆ ಕೆಲವನ್ನು ಇಲ್ಲಿ ನೋಡಬಹುದು.

1. ಪ್ರಪಂಚದ ಸೊಗ್ಸು ತೋರ್ಸೋದೆ ನಮ್ಮ ಕಸ್ಬು
2. ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ
3. ಸ್ವಾತಂತ್ರ್ಯ ಸ್ವರ್ಗ ಸ್ವಾವಲಂಬನೆಯೇ ಸ್ವರ್ಗದ ಹಾದಿ
4. ಆರ್ಯ ನೃಪವಂಶೀಯ ಸಮಾಜ ಪತ್ರಿಕೆ.
5. ಸುಖ ದುಃಖೇ ಸಮೇಕೃತ್ವಾ ಲಾಭಾ ಲಾಭೌ ಜಯಾ ಜಯೌ...
6. ನ್ಯಾಯ ಏವ ಜಯತೇ

ಮೈಸೂರಿನಿಂದಲೂ ಬೆಂಗಳೂರಿಗೆ ಬಂದು ಪತ್ರಿಕೆ ನಡೆಸಲಾಗಿದೆ. ಅಲ್ಲಿನ ಪತ್ರಿಕೆಗಳು ಇಲ್ಲಿಯೂ ತಮ್ಮ ಆವೃತ್ತಿ ತಂದಿವೆ. ಇನ್ನೂ ಕೆಲವು ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಾಡಿವೆ.

ಮೂರು ತಿಂಗಳಿಗೊಮ್ಮೆ ಹೊರಡುತ್ತಿದ್ದ ಹಿಂದಿ–ಇಂಗ್ಲಿಷ್ ಪತ್ರಿಕೆ 'ಖಜೈಮ್ ಉಲ್ ಅಕ್ಬರ್', 'ತಾಲೀಸ್ ಮೆ ಕರ್ತನ್' ವಾರಪತ್ರಿಕೆಯಾಗಿ ಬಂದಿವೆ. 1862 ರಲ್ಲಿ ವಾರಪತ್ರಿಕೆಯಾಗಿ 'ಹಾರ್ವೆಸ್ಟ್ ಫೀಲ್ಡ್', 1868ರಲ್ಲಿ 'ಬೆಂಗಳೂರು ಹೆರಾಲ್ಡ್', 1873ರಲ್ಲಿ 'ಬೆಂಗಳೂರ್ ಎಕ್ಸಾಮಿನರ್', 'ಮೈಸೂರ್ ಬಜೆಟ್', '1874ರಲ್ಲಿ ಲಾ ಜರ್ನಲ್', 'ಬೆಂಗಳೂರು ಗಾರ್ಡಿಯನ್' ಇಂಗ್ಲಿಷ್ ಭಾಷೆಯಲ್ಲಿ ಬಂದಿವೆ.

1890–91ರಲ್ಲಿ ಕನ್ನಡದಲ್ಲಿ ಬಂದಂಥವು: 'ಪೋಲೀಸ್ ಸರ್ಕ್ಯೂಲರ್', 'ಶಾಸ್ತ್ರ ಸಂಜೀವಿನಿ', 'ಆರ್ಯಮತ ಸಂಜೀವಿನಿ'. 1893ರಲ್ಲೇ 'ವೀರಶೈವ ಮತಪತ್ರಿಕೆ' ಕನ್ನಡದಲ್ಲಿದ್ದರೆ 1894ರಲ್ಲಿ 'ಸೂರ್ಯೋದಯ', 1895ರಲ್ಲಿ 'ಮೈಸೂರು ಸ್ಟಾಂಡರ್ಡ್', 'ಸುರಭಿ', 'ಕನ್ನಡ ನುಡಿ', 'ವಿವೇಕ ದೀಪಿಕೆ' ಬಂದು 1897ರಲ್ಲಿ 'ಬೆಂಗಳೂರು ನ್ಯೂಸ್', 'ವಿವೇಕಾನಂದ' ಬಂದಿವೆ. 1898 ರಲ್ಲಿ 'ಕೇಸರಿ', 'ಜಯಧ್ವಜ', 'ಮೈಸೂರು ಪೋಲೀಸ್ ಗೆಜೆಟ್', 'ವೇದಾಂತ ವಾದವಲ್ಲಿ', 1899ರಲ್ಲಿ 'ನಡೆಗನ್ನಡಿ', 'ಕರ್ನಾಟಕ ಕಾವ್ಯಕಲಾನಿಧಿ', 'ಹಿಂದೂ ಮತ ಪ್ರಕಾಶಿಕ', 1900 ರಲ್ಲಿ 'ಸವಿನುಡಿ', 1906–07 ರಲ್ಲಿ 'ದಿನಪತ್ರಿಕೆಗಳಾಗಿ ಭಾರತಿ', 'ಸಮಾಚಾರ ಸಂಗ್ರಹ' ಬಂದಿವೆ.

1911ರಲ್ಲಿ ಕೆ. ಎಸ್. ಪುಷ್ಪ ಅಯ್ಯರ್, 'ಮೈಸೂರು ಕೋ ಆಪರೇಟಿವ್ ಬುಲೆಟಿನ್' ತಂದಿದ್ದಾರೆ. 1913ರಲ್ಲಿ ಎಂ. ಎನ್. ಲಿಂಗಪ್ಪ ನವರು 'ಕುರುವಿಜಯ', ದ್ವೈವಾರಪತ್ರಿಕೆಯನ್ನು ಡಿ. ವಿ. ಗುಂಡಪ್ಪ ಅವರು 'ದಿ ಕರ್ನಾಟಕ' ಹೊರಡಿಸಿದ್ದಾರೆ.

ನಂತರದ ವರ್ಷಗಳಲ್ಲಿ ಬಂದ ಪತ್ರಿಕೆಗಳು ಶೀರ್ಷಿಕೆಯ ಆಶಯಕ್ಕೆ ದುಡಿದಿವೆ. ಎಷ್ಟೋ ಪತ್ರಿಕೆಗಳು ಪತ್ರಿಕಾಲಯಗಳ ಶ್ರೇಣೀಕೃತ ಹುದ್ದೆಯನ್ನು ಸೃಷ್ಟಿಸಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಸುದ್ದಿಗಾರರನ್ನು ನೇಮಿಸಿಕೊಂಡು ಆದಷ್ಟು ಸಂಭಾವನೆಯನ್ನು ಕೊಟ್ಟಿರುವುದು ವಿಶೇಷವಾಗಿದೆ.

ಸನ್‌ಶೀ, 'ಸ್ಟೇಟ್ ಅಡ್ವರ್ಟೈಸರ್', 'ಆನಂದ ಚಂದ್ರಿಕೆ', 'ಬ್ರಹ್ಮವಿದ್ಯಾ', 'ದೇಶಾಭ್ಯುದಯ', 'ನನ್ನಪತ್ರಿಕೆ',

ಕೆ. ಶಿವರಾಮದಾಸ್ ಅವರು ತೆಲುಗಿನ ತಿಂಗಳ ಪತ್ರಿಕೆ 'ರಾಜಹಂಸ' ನಡೆಸಿದ್ದಾರೆ. ಎಂ. ಅಬ್ದುಲ್ ರಹೀಂ ಉರ್ದು ಮಾಸ ಪತ್ರಿಕೆ 'ಬಾದರ್' ನಡೆಸಿದ್ದಾರೆ. 1923ರಲ್ಲಿ ಕೆ. ಎಂ. ಜುಫಾರಿಯವರು ಅಲ್‌ಕಲಂ ತಂದಿದ್ದಾರೆ.

ಮೆಕ್ ಡಿ ಟಾಮ್ಲಿನ್‌ಸನ್ ಎಂಬುವವರು 'ವಿಮೆನ್ಸ್ ಫ್ರೆಂಡ್', 'ಟ್ರೆಶರ್ ಚೆಸ್ಟ್' ತಂದಿದ್ದಾರೆ. ದೇವುಡು ನರಸಿಂಹಶಾಸ್ತ್ರಿಯವರು 'ಹೊಸಹಾದಿ', 'ನಮ್ಮ ಪುಸ್ತಕ' ತಂದು ಕನ್ನಡ ವಾಚಕ ಲೋಕವನ್ನು ಬೆಳೆಸಿದ್ದಾರೆ.

ಪತ್ರಿಕಾ ವೃತ್ತಿಯಲ್ಲಿ ಪತ್ರಿಕೆಗಳ ಸಂಗ್ರಹ ಕೆಲಸ ಆಗ ಕಡಮೆ. ಇರುವವು ಕಡಮೆ, ಕೇವಲ ಒಂದೋ ಎರಡೋ ಪ್ರತಿಗಳು, ಸರಕಾರಿ ಮತ್ತಿತರ ದಾಖಲೆಗಳಲ್ಲಿ ಹೆಕ್ಕಿ ತಂದಿರುವ ಈ ಶೀರ್ಷಿಕೆಗಳನ್ನು ಆಧರಿಸಿಯೇ ತಿಳಿಯಬೇಕು. ಪತ್ರಿಕಾ ಸಂಗ್ರಹ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಹೆಚ್ಚಾಗಿ ಸಾಧ್ಯವಾಗಿದೆ.

ಆಧಾರ

ಈ ಲೇಖನಕ್ಕೆ ಪ್ರೊ. ನಾಡಿಗ್ ಕೃಷ್ಣಮೂರ್ತಿಯವರ ಭಾರತೀಯ ಪತ್ರಿಕೋದ್ಯಮ, ಮಾಧ್ಯಮ ಅಕಾಡೆಮಿಯ ಪ್ರಕಟಣೆಗಳು, ಪ್ರೆಸ್ ಅಂಡ್ ಪಾಲಿಟಿಕ್ಸ್ (ಆರ್. ರಾಮಕೃಷ್ಣನ್). ಮೈಸೂರು ವಿವಿಯ ಪತ್ರಿಕಾ ಕ್ಯಾಟಲಾಗ್, ಡಾ. ಶ್ರೀನಿವಾಸ ಹಾವನೂರರ ಕನ್ನಡದ ಬಿಡಿ ಲೇಖನ ಮತ್ತು ಕನ್ನಡ ವಿಶ್ವಕೋಶವನ್ನು ಗಮನಿಸಲಾಗಿದೆ.

44. ಬೆಂಗಳೂರು: ಹದಿನೆಂಟನೆ ಶತಮಾನದ ಪ್ರಮುಖ ವ್ಯಾಪಾರಿ ಕೇಂದ್ರ

ಶ್ರೀ ಎಸ್. ಪುರುಷೋತ್ತಮ

ಪೀಠಿಕೆ

ಕ್ರಿ.ಶ. 1ನೇ ಶತಮಾನದ ವೇಳೆಯಲ್ಲೇ ಬೆಂಗಳೂರು ರೋಮನ್ ಸಾಮ್ರಾಜ್ಯದ ಜೊತೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದುದರ ಬಗ್ಗೆ ಕುರುಹುಗಳು ಲಭ್ಯವಾಗಿದ್ದು, ಬೆಂಗಳೂರು ಆ ವೇಳೆಗಾಗಲೇ, ಒಂದು ಜಗಜ್ಜಾಹಿರ ವ್ಯಾಪಾರಿ ಕೇಂದ್ರವಾಗಿ ಬೆಳೆದಿತ್ತು ಎಂಬುದನ್ನು ತಿಳಿಸುತ್ತವೆ. ಈ ಕಾಲದ ವ್ಯಾಪಾರ ಸಂಪರ್ಕವು ಪ್ರಾಥಮಿಕ ಸ್ವರೂಪದ್ದಾಗಿದ್ದು, ಕೇವಲ ಅಪರೂಪದ ಬೆಲೆಬಾಳುವ ಸ್ವಾಭಾವಿಕ ಲಭ್ಯ ಸರಕುಗಳ ವಿನಿಮಯಗೊಳಿಸಿಕೊಳ್ಳುವುದಾಗಿತ್ತು. ಈ ಹಂತದ ವ್ಯಾಪಾರ ಕೇವಲ ಎರಡು ನಿರ್ಧಿಷ್ಠ ನಗರಗಳ ನಡುವಿನ ವಹಿವಾಟಾಗಿತ್ತು.

ಕ್ರಿ.ಶ.17–18ನೇ ಶತಮಾನಕ್ಕೆ ಬಂದಾಗ, ಅದು ಆಧುನಿಕ ಪೂರ್ವಯುಗದಿಂದ ಆಧುನಿಕಯುಗದೆಡೆಗೆ ಸಂಕ್ರಮಿಸುತ್ತಿದ್ದ ಸಂಕ್ರಮಣಕಾಲ. ಈ ಕಾಲದಲ್ಲಿ ಎಲ್ಲೆಡೆ ಹಣ ಚಲಾವಣೆ ಬಿರುಸಿನಿಂದ ಕೂಡಿತ್ತು. ವ್ಯಾಪಕವಾಗಿ ಕಂಡುಬಂದ ನಗದೀಕರಣ ಜನರ ಸಾಂಪ್ರಾದಾಯಿಕ ಕೃಷಿ–ಕೈಗಾರಿಕಾ ಚಟುವಟಿಕೆಗಳಲ್ಲಿ ಪರ್ಯಾಯಗಳನ್ನು ಕಂಡುಕೊಳ್ಳಲು ಪ್ರೇರೆಪಿಸಿತು.(ಉದಾ: ವಾಣಿಜ್ಯ ಬೆಳೆಗಳನ್ನು ವಿಸ್ತಾರವಾಗಿ ಬೆಳೆಯ ತೊಡಗಿದುದು; ರೇಷ್ಮೇ ಉದ್ಯಮದಂತಹ ಉದ್ದಿಮೆಗಳು ವ್ಯವಸ್ಥಿತವಾಗಿ ಬೆಳವಣಿಗೆಗೊಂಡದ್ದು ಇತ್ಯಾದಿ). ಇದು ಜನರ ಹೆಚ್ಚಿನ ಗಳಿಕೆಗೆ ಅವಕಾಶ ಮಾಡಿಕೊಟ್ಟಿತು. ಹೆಚ್ಚುವರಿ ಗಳಿಕೆಯನ್ನು ಮತ್ತೆ ಬಂಡವಾಳವಾಗಿ ಹೂಡುವ ಪ್ರಕ್ರಿಯೆ ಅರ್ಥವ್ಯವಸ್ಥೆಯಲ್ಲಿ ನೆಲೆಗೊಂಡಿತ್ತು. ಇದೇ, ಸಂದರ್ಭದಲ್ಲಿ ಇಡೀ ದಕ್ಷಿಣ ಭಾರತಾದ್ಯಂತ ವ್ಯಾಪಾರಿ ಸಂಪರ್ಕ ಜಾಲ ವೇರ್ಪಟ್ಟಿತ್ತು. ಈ ಎಲ್ಲ ಆರ್ಥಿಕ ಬೆಳವಣಿಗೆಗಳು ಈ ಸಂಕ್ರಮಣ ಕಾಲಾವಧಿಯ ಲಕ್ಷಣಗಳಾಗಿವೆ.

ಹದಿನೆಂಟನೇ ಶತಮಾನದ ಈ ಎಲ್ಲ ಲಕ್ಷಣಗಳ ಹಿನ್ನೆಲೆಯಲ್ಲಿ ಬೆಂಗಳೂರು ಇಡೀ ದಕ್ಷಿಣ ಭಾರತದಲ್ಲಿ ತನ್ನ ವ್ಯಾಪಾರಿ ಜಾಲವನ್ನು ಹರಡಿಕೊಂಡ ಬಗೆ; ಬೆಂಗಳೂರಿನ ಸುತ್ತಲ ಪಟ್ಟಣಗಳು ಅದರಲ್ಲೂ – ಯಲಹಂಕ, ದೊಡ್ಡಬಳ್ಳಾಪುರ,ದೇವನಹಳ್ಳಿ, ಕನಕಪುರ, ಚಿಕ್ಕಬಳ್ಳಾಪುರ, ಕೋಲಾರ, ಹೊಸಕೋಟೆ, ಮುಳಬಾಗಿಲು, ಶಿಡ್ಲಘಟ್ಟ, ತುಮಕೂರು, ಸಿರಾ, ನೆಲಮಂಗಲ, ಮಾಗಡಿ, ರಾಮನಗರ, ಆನೇಕಲ್ಲು, ಚನ್ನಪಟ್ಟಣ, ಕೃಷ್ಣಗಿರಿ, ಶ್ರೀರಂಗಪಟ್ಟಣ, ಬಂಗಾರಪೇಟೆ, ಗೌರಿಬಿದನೂರು–ಇವು ಹೇಗೆ ಬೆಂಗಳೂರಿನ ಸ್ಯಾಟಲೈಟ್(ಬೆಂಗಳೂರು ಅವಲಂಬಿತ)ನಗರಗಳಾಗಿ ಬೆಳೆದವು; ಬೆಂಗಳೂರು ಒಂದು ಯಶಸ್ವಿ ವ್ಯಾಪಾರೀ ಕೇಂದ್ರವಾಗಿ ಅಭಿವೃದ್ಧಿ ಹೊಂದಲು ಮತ್ತು ಧೀರ್ಘಕಾಲ ವ್ಯಾಪಾರೀ ಕೇಂದ್ರವಾಗಿಯೇ ನೆಲೆಗೊಳ್ಳಲು ಇಲ್ಲಿನ ಭೌಗೋಳಿಕ ಪರಿಸರ ಮತ್ತು ರಾಜ್ಯ ಅರ್ಥವ್ಯವಸ್ಥೆ (ಇದರಲ್ಲಿ ಭೌಗೋಳಿಕ ಲಕ್ಷಣಗಳು, ಪ್ರಾಕೃತಿಕ ಸಂಪನ್ಮೂಲ, ಋತು–ಮಾಸಗಳು, ಜನರ ಕುಶಲವಂತಿಕೆ, ಸಾಮರ್ಥ್ಯ, ಕೃಷಿ, ಕೈಗಾರಿಕಾ ಚಟುವಟಿಕೆ, ಹಣಕಾಸು, ಮಾರುಕಟ್ಟೆ, ಸಾರಿಗೆ, ವ್ಯಾಪಾರಿ ಮಾರ್ಗ ಜನರ ಕೊಡು–ಕೊಳ್ಳುವಿಕೆ–ಈ ಎಲ್ಲವೂ) ಎಷ್ಟರ ಮಟ್ಟಿಗೆ ಕಾರಣೀಕೃತವಾಗಿವೆ; ವಿಸ್ತಾರಗೊಳ್ಳುತ್ತಿದ್ದ, ಆರ್ಥಿಕ ಚಟುವಟಿಕೆಯ ಪರಿಣಾಮವಾಗಿ ಬೆಂಗಳೂರು ಹೇಗೆ ರಾಜಕೀಯ ಶಕ್ತಿಗಳ ಹಿತಾಸಕ್ತ ಕೇಂದ್ರಭಾಗವಾಗಿ ಪರಿಣಮಿಸತೊಡಗಿತು.–ಈ ಎಲ್ಲ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಬೆಂಗಳೂರು ಭೌಗೋಳಿಕ ವಿಸ್ತೀರ್ಣ-ಪ್ರಾಕೃತಿಕ ಸಂಪತ್ತು.

ಬೆಂಗಳೂರು ಜಿಲ್ಲೆ 120 140 ಮತ್ತು 130 31' ಉತ್ತರ ಅಕ್ಷಾಂಶ 770 7 ಮತ್ತು 780 4' ಪೂರ್ವ ರೇಖಾಂಶದಲ್ಲಿದೆ. ಕ್ರಿ.ಶ.1860 ರ ವೇಳೆಗೆ ಬೆಂಗಳೂರಿನ ವಿಸ್ತೀರ್ಣವು ಉತ್ತರ-ದಕ್ಷಿಣ 85 ಮೈಲುಗಳು ಮತ್ತು ಪೂರ್ವ-ಪಶ್ಚಿಮ 60 ಮೈಲು ಪ್ರದೇಶಗಳಷ್ಟು ವಿಸ್ತಾರತೆಯಿಂದ ಕೂಡಿದ್ದು, ಅದರ ಒಟ್ಟಾರೆ ಒಳ ವಿಸ್ತೀರ್ಣವು 3.061 ಚದರ ಮೈಲುಗಳು. ಇದರಲ್ಲಿ 1.398 ಚದರ ಮೈಲು ಪ್ರದೇಶವು ಸಾಗುವಳಿಗೆ ಒಳಪಟ್ಟಿದ್ದರೆ, 961 ಚದರ ಮೈಲು ಪ್ರದೇಶವು ಸಾಗುವಳಿಗೆ ಒಳಪಡದ ಮತ್ತು ಸಾಗುವಳಿ ಯೋಗ್ಯವಲ್ಲದ ಪ್ರದೇಶವಾಗಿತ್ತು.[1] ಜಿಲ್ಲೆಯ ಪ್ರಮುಖ ಭಾಗವು ಅರ್ಕಾವತಿ ಕಣಿವೆಗಳಿಂದ ಆವೃತ್ತವಾಗಿದ್ದು, ದಕ್ಷಿಣಕ್ಕೆ ಕಾವೇರಿ ಹರಿಯುತ್ತದೆ. ಪೂರ್ವದಲ್ಲಿ ದಕ್ಷಿಣ ಪಿನಾಕಿನಿ ನದಿಯ ದಕ್ಷಿಣ ಭಾಗದ ಮೇಲ್ದಂಡೆಯಿಂದ ಆವೃತ್ತವಾಗಿದ್ದರೆ, ಪಶ್ಚಿಮದಲ್ಲಿ ಶಿಂಶಾ ನದಿಯ ಅತ್ಯಲ್ಪ ಭಾಗವು ಈ ಜಿಲ್ಲೆಗೆ ಸೇರ್ಪಡೆಗೊಂಡಂತಿದೆ.[2] ಉತ್ತರದಲ್ಲಿ ನಂದಿದುರ್ಗದಿಂದ ಓಡಿದು, ದಕ್ಷಿಣಕ್ಕೆ ಪಶ್ಚಿಮ ಬೆಂಗಳೂರು ಅಲ್ಲಿಂದ ಆನೇಕಲ್ಲುವರೆಗಿನ ಉದ್ದವಾದ ಭಾಗವು ಎತ್ತರ ಸಾಲುಗುಡ್ಡಗಳಿಂದ ಆವೃತ್ತವಾಗಿದ್ದು, ಅರ್ಕಾವತಿ ಕಣಿವೆಗಳಿಗೆ ಹೊಂದಿಕೊಂಡಂತಿದೆ. ದಕ್ಷಿಣ ಪಿನಾಕಿನಿಯು ಅರ್ಕಾವತಿ ಕಣಿವೆ ಮತ್ತು ಈ ಸಾಲುಗುಡ್ಡ ನಡುವೆ ಹರಿದಿದ್ದು, ಈ ಎರಡನ್ನು ಬೇರ್ಪಡಿಸಿದೆ.[3]

ಬೆಂಗಳೂರು ಮತ್ತು ಅದರ ಸುತ್ತಲಿನ ಪ್ರದೇಶ ಸಾಮಾನ್ಯ ಕೆಂಪು ಮಣ್ಣಿನಿಂದ ಕೂಡಿರುವಂತಹದ್ದು. ಇದು ಕೃಷಿ ಬೆಳೆಗೆ ಪೂರಕವಾದುದು. ಭೂಮಿಯ ಬಣ್ಣ ತೆಳು ಕೆಂಪಿನಿಂದ, ಚಾಕಲೈಟ್ ಮಾದರಿಯ ಕಡು ಕೆಂಪಿನವರೆಗೆ ಗ್ರಾನೈಟ್ ಕಲ್ಲು ಮಿಶ್ರಣದಿಂದ ಕೂಡಿದೆ.[4] ಇಲ್ಲಿನ ಪ್ರಮುಖ ಬೆಳೆಗಳೆಂದರೆ-ರಾಗಿ, ಅವರೆ, ಜೋಳ, ಸೂರ್ಯಕಾಂತಿ, ರೇಷ್ಮೇ, ಗೋಧಿ, ನವಣೆ, ಸಜ್ಜೆ, ಅಲಸಂದೆ, ಹೆಸರು, ಹುರುಳಿ, ತೊಗರಿ, ಉದ್ದು, ಹರಳು, ಹೊಂಗೆ, ಹುಚ್ಚೆಳ್ಳು, ಕಬ್ಬು, ಅಡಿಕೆ, ಹುಣಿಸೆಹಣ್ಣು, ತೆಂಗಿನಕಾಯಿ, ಸೀಗೇಕಾಯಿ, ವೀಳ್ಯದೆಲೆ, ಬಾಳೆ ಹಾಗೂ ವಿವಿಧ ತರಕಾರಿಗಳು.

ಬೆಂಗಳೂರು ಮತ್ತು ಸುತ್ತಲಿನ ಪ್ರದೇಶದಲ್ಲಿ ಹೇರಳವಾಗಿ ದೊರೆಯುವ ಸ್ವಾಭಾವಿಕ ಸಂಪನ್ಮೂಲಗಳೆಂದರೆ ಬೆಲೆಬಾಳುವ ಬಂಡೆಗಲ್ಲುಗಳು ಹಾಗೂ ಕಬ್ಬಿಣದ ಅದಿರು. ಇಂದಿನ ರಾಮನಗರದ ರಾಮಗಿರಿ ಬೆಟ್ಟಗಳಲ್ಲಿ ಹೇರಳವಾದ ಗ್ರಾನೈಟ್ ಮತ್ತು ಸಣ್ಣ ಸಣ್ಣ ಹರಳಿನ ರೂಪದ ಕಲ್ಲಿದ್ದಲು, ಬೆಣಚುಕಲ್ಲು ಇದರಲ್ಲಿ ಅಧಿಕ ಪ್ರಮಾಣದ ಕೆಂಪು ಸಲ್ಫರ್ ಹೊಂದಿರುತ್ತದೆ. ನದೀ ತೀರ ಭಾಗದಲ್ಲಿ ಅತಿ ಹೊಳೆಯುವ ಬೆಣಚುಕಲ್ಲಿನ ಶಿಲಾಸ್ಫಟಿಕ ಹೇರಳವಾಗಿದೆ. ಇಲ್ಲಿನ ಕಣಿವೆಗಳಲ್ಲಿ ಕಬ್ಬಿಣದ ಅದಿರು ಮತ್ತು ಸುಣ್ಣಕಲ್ಲು ಹೇರಳ ಪ್ರಮಾಣದಲ್ಲಿ ದೊರೆಯುತ್ತದೆ. ಮಾಗಡಿಯಿಂದ ಏಳು ಮೈಲು ದೂರದಲ್ಲಿರುವ ಸಾವನದುರ್ಗ ಮತ್ತು ಅಲ್ಲಿನ ಸಮೀಪ ಪ್ರದೇಶದಲ್ಲಿ ಕಬ್ಬಿಣದ ಅದಿರು ಹೇರಳವಾಗಿದೆ. [5]

ಇಷ್ಟೆಲ್ಲ ಸ್ವಾಭಾವಿಕ ಸಂಪನ್ಮೂಲ, ನೀರಾವರಿ ಸೌಕರ್ಯ, ಸಾಗುವಳಿ ಜಮೀನನ್ನು ಹೊಂದಿರುವ ಬೆಂಗಳೂರು ಪ್ರದೇಶವು ಕ್ರಿ.ಶ.18ನೇ ಶತಮಾನದ ವೇಳೆಗೆ ಇಡೀ ದಕ್ಷಿಣ ಭಾರತದಲ್ಲಿಯೇ ಒಂದು ಪ್ರಮುಖ ಕೈಗಾರಿಕಾ ವಲಯ ಹಾಗೂ ವಾಣಿಜ್ಯ ನಗರಿಯಾಗಿ ಬೆಳವಣಿಗೆಗೊಳ್ಳತೊಡಗಿತು. ಬೆಂಗಳೂರು ಅದರ ಸುತ್ತಲಿನ ಪಟ್ಟಣಗಳ ಜೊತೆ ಸಂಪರ್ಕ ಬೆಸೆದು, ಅದರಾಚೆಗೂ ತನ್ನ ವ್ಯಾಪಾರಿ ಸಂಪರ್ಕ ಜಾಲವನ್ನು ಚಾಚಿಕೊಂಡಿತು. ಹೈದರಾಬಾದಿನ ನಿಜಾಮು, ಮರಾಠರು, ಆರ್ಕಾಟ್ ನವಾಬರು, ಮಂಗಳೂರು-ಹೀಗೆ ರಾಜಕೀಯ-ಭೌಗೋಳಿಕ ಎಲ್ಲೆ ಮೀರಿ ಬೆಂಗಳೂರು ಪಟ್ಟಣ ಇಡೀ ದಕ್ಷಿಣ ಭಾರತವನ್ನು ವ್ಯಾಪಾರೀ ದೃಷ್ಟಿಯಿಂದ ಒಗ್ಗೂಡಿಸಿತು.

ಬೆಂಗಳೂರು: ಇಡೀ ದಕ್ಷಿಣ ಭಾರತದಲ್ಲಿ ಬೆಸೆದಿದ್ದ ವ್ಯಾಪಾರಿ ಸಂಪರ್ಕ

ಕ್ರಿ.ಶ.17ನೇ ಶತಮಾನದ ವೇಳೆಗೆ ದಕ್ಷಿಣ ಭಾರತಾದ್ಯಂತ ಅನೇಕ ಪಟ್ಟಣ, ವೇಂಟೆ(ಪೇಟೆ)ಗಳು ವ್ಯವಸ್ಥಿತವಾಗಿ ಬೆಳವಣಿಗೆಗೊಂಡಿದ್ದರ ಆಧಾರಗಳು ಸಿಗುತ್ತವೆ. ಉದಾಹರಣೆಗೆ ಯಲಹಂಕ ನಾಡಪ್ರಭು ಇಮ್ಮಡಿ ಕೆಂಪೇಗೌಡನ ಕ್ರಿ.ಶ.1625 ರ ತೆಲುಗು ಶಾಸನವೊಂದು ಬೆಂಗಳೂರು ಇತರ ಪಟ್ಟಣಗಳೊಂದಿಗೆ ಹೊಂದಿದ್ದ ವ್ಯಾಪಾರೀ ಸಂಪರ್ಕ ವರ್ತಕರ ಕುರಿತಾಗಿ ಈ ರೀತಿ ಉಲ್ಲೇಖಿಸುತ್ತದೆ.

"ಅಯ್ಯವೊಳೆ ಮುಖ್ಯಸ್ಥರು, ಪೆನುಗೊಂಡ, ಬೆಂಗಳೂರು, ಗೂಳೂರು, ಚಿಕ್ಕನಾಯನಿಪಲ್ಲಿ ಬಳ್ಳಾಪುರಂ, ತಾಟಪರ್ತಿ, ಚಂದ್ರಗಿರಿ, ಕೋಳಾಲ, ಕೊತ್ತಕೋಟ, ಕಾವೇರಿಪಟ್ಲಂ, ಶ್ರೀರಂಗಪಟ್ಲ, ನರಶೀಪುರಂ, ಬೇಲೂರು, ಹೆಬುರು, ನಾಗಮಂಗಲ, ಯಿಕ್ಕೇರಿ, ಬಸ್ತಿಪಲ್ಲಿ ಮುಂತಾದ ನಾನಾದೇಶಿಯರು ಬೆಂಗಳೂರಿನ ಮುತ್ಯಾಲಪೇಟೆ, ರಂಗನಾಥಸ್ವಾಮಿ ಪಡಿತರ ನೈವೇದ್ಯ, ತಿರುನಾಳು ಮೊದಲಾದ ಧರ್ಮಕಾರ್ಯಗಳಿಗೆ ಪಡಿಕವ' ಟಪ', ಅರವೀಸ," ಮುಂತಾದ ದಾನಗಳಿಗಾಗಿ ಇಮ್ಮಡಿ ಕೆಂಪೇಗೌಡರಿಗೆ ಕೋರಿದ ಉಲ್ಲೇಖವಿದೆ.[6]

ವಿವಿಧ ಔದ್ಯೋಗಿಕ ಹಾಗೂ ವರ್ತಕ ವರ್ಗಗಳಿಂದಲೇ ಕೂಡಿದಂತಹ ಅನೇಕ ಪೇಟೆಗಳು ಸುಮಾರು 17–18ನೇ ಶತಮಾನದ ಅವಧಿಯಲ್ಲೇ ರೂಪುಗೊಂಡವು. ಅವುಗಳಲ್ಲಿ–ಅಕ್ಕಿಪೇಟೆ, ಅಂಚೇಪೇಟೆ, ಅರಳೇಪೇಟೆ, ಬಳೇಪೇಟೆ, ಚಿಕ್ಕಪೇಟೆ, ದೊಡ್ಡಪೇಟೆ, ಗಾಣಿಗರಪೇಟೆ, ಹಲಸೂರು ಪೇಟೆ, ಹುರಿಯೊಪೇಟೆ, ಕೊಮಟಿಪೇಟೆ, ಕುಂಬಾರಪೇಟೆ, ಮನವರ್ತಪೇಟೆ, ಮುತ್ಯಾಲಪೇಟೆ, ನಗರ್ತಪೇಟೆ, ಪಟ್ನೂಲ್ಪೇಟೆ, ರಾಗಿಪೇಟೆ, ಸುಣ್ಕಲ್ಪೇಟೆ, ತರಗುಪೇಟೆ, ತಿಗಳರಪೇಟೆ ಮತ್ತು ಉಪ್ಪಾರಪೇಟೆಗಳು.

ಹದಿನೆಂಟನೆ ಶತಮಾನದ ಅಂತ್ಯದ ವೇಳೆಗೆ ಬೆಂಗಳೂರು ಇಡೀ, ದಕ್ಷಿಣ ಭಾರತದಲ್ಲೆ, ರಾಜಕೀಯ, ಭೌಗೋಳಿಕ ಎಲ್ಲೆ ಮೀರಿ ಒಂದು ಪ್ರಮುಖ ವ್ಯಾಪಾರೀ ಕೇಂದ್ರವಾಗಿ ಬೆಳವಣಿಗೆಗೊಂಡಿತ್ತು. ದೂರದ ಮರಾಠ, ನಿಜಾಮ, ಪೂನಾ, ಬರ್ಹಾನ್ಪುರ, ಆರ್ಕಾಟ್ ಪ್ರಾಂತ್ಯಗಳಿಂದ ವರ್ತಕರು ಬೆಂಗಳೂರಿಗೆ ಬಂದು ವ್ಯಾಪಾರ ವಹಿವಾಟನ್ನು ನಡೆಸುತ್ತಿದ್ದರು. ಈ ಕುರಿತಾಗಿ ಫ್ರಾನ್ಸಿಸ್ ಬುಕನನ್[7] ತನ್ನ ಪ್ರವಾಸಿ ಸಮೀಕ್ಷೆಯಲ್ಲಿ ದಾಖಲಿಸುತ್ತಾನೆ.

ಬೆಂಗಳೂರು ಹಾಗೂ ದೂರದ ಮರಾಠ ಮತ್ತು ನಿಜಾಮ ಪ್ರಾಂತ್ಯಗಳ ನಡುವೆ ವ್ಯಾಪಾರಿ ಸಂಪರ್ಕವನ್ನು ಬೆಸೆಯುವಲ್ಲಿ ಮುಖ್ಯಪಾತ್ರ ವಹಿಸಿದವರು–ಬೆಂಗಳೂರಿನಲ್ಲಿ ನೆಲೆಸಿದ್ದ, ಬಳ್ಳಾರಿ, ಆದೋನಿ, ಅಂಗಡಿ, ಧಾರವಾಡ, ಹುಬ್ಬಳ್ಳಿ, ನರಗುಂದ, ನವಲಗುಂದ ಮತ್ತು ಗುತ್ತಿ ಮೂಲದ ವರ್ತಕರು. ಇವರು ಈ ಪ್ರದೇಶಗಳಿಂದ ಬೆಂಗಳೂರಿಗೆ ಬಂದು ನೆಲೆಸಿ, ದೂರದ ಈ ಪ್ರಾಂತ್ಯಗಳ ಜೊತೆ ವ್ಯಾಪಾರ–ವಹಿವಾಟು ನಡೆಸುತ್ತಿದ್ದರು. ತಾವು ಈ ಪ್ರಾಂತ್ಯಗಳಲ್ಲಿ ಖರೀದಿಸಿದ ವಸ್ತುಗಳನ್ನು ಬೆಂಗಳೂರಿನ ಸ್ಥಳೀಯ ವರ್ತಕರಿಗೆ ಮಾರಾಟ ಮಾಡುತ್ತಿದ್ದರು.

ವರ್ತಕರು ಮರಾಠ ಮತ್ತು ನಿಜಾಮ ಪ್ರಾಂತ್ಯಗಳಲ್ಲಿ ಯಾವುದೇ, ಗಲಭೆ ಅಥವಾ ಭೀತಿಯನ್ನು ಎದುರಿಸುತ್ತಿರಲಿಲ್ಲ. ಬದಲಾಗಿ ಈ ಪ್ರಾಂತ್ಯಗಳಲ್ಲಿ ಹೆಚ್ಚಿನ ವ್ಯಾಪಾರೀ ಸುಂಕವನ್ನು ತೆರಬೇಕಿತ್ತು. ಈ ಪ್ರಾಂತ್ಯಗಳಿಂದ ಬೆಂಗಳೂರಿಗೆ ನಗದಿಗೆ ಪ್ರತಿಯಾಗಿ ಹತ್ತಿಉಣ್ಣೆ, ನಿತ್ಯ ಬಳಕೆಯ ಬಟ್ಟೆ, ನೇಯ್ಗೆಗೆ ಉಪಯೋಗಿಸುವ ಕೆಂಪು ಮತ್ತು ಬಿಳಿ ಸಾಧಾರಣಾ ಹತ್ತಿ ಎಳೆಗಳು(ಲಡಿಗಳು); ನಿತ್ಯ ಬಳಕೆ ವಸ್ತುಗಳು ಅದರಲ್ಲಿ ಬಿಳಿ, ಕೆಂಪು ಮತ್ತು ನೀಲಿ ವರ್ಣದ ವಸ್ತ್ರಗಳು; ಮಸ್ಲಿನ್ ಎಂದು ಕರೆಯುವ ವಸ್ತ್ರ; ಧೋತ್ರ–ಚಿತ್ತಾರದಿಂದ ಕೂಡಿರುವ ರೇಷ್ಮೇ ಅಂಚಿನ ಹತ್ತಿ ಬಟ್ಟೆ; ಎರಡರಿಂದ ಮೂರು ಪಗೋಡ ಬೆಲೆ ಬಾಳುವ ಹಾಸುಗಂಬಳಿ; ಗೋಧಿ; ಖರ್ಜೂರ; ಒಣದ್ರಾಕ್ಷಿ ರವಾನೆಯಾಗುತ್ತಿತ್ತು. ಬೆಂಗಳೂರಿನಿಂದ ಈ ಪ್ರದೇಶಗಳಿಗೆ ವರ್ಣರಂಜಿತ ಹತ್ತಿ ಮತ್ತು ರೇಷ್ಮೇ

ವಸ್ತ್ರಗಳು ಸಾಗಣೆಗೊಳ್ಳುತ್ತಿದ್ದವು. ಪೂನಾದಿಂದ ಗೊಸ್ಸೈ ವರ್ತಕರು ಶಾಲುಗಳನ್ನು, ಕಾಶ್ಮೀರದಿಂದ ಕಸ್ತೂರಿ ಮತ್ತು ಸೂರತ್ ನಿಂದ ಹವಳಗಳನ್ನು ಬೆಂಗಳೂರಿಗೆ ತಂದು ನಗದಿಗೆ ಮಾರಾಟ ಮಾಡುತ್ತಿದ್ದರು. ಬರ್ಹಾನ್ಪುರದಿಂದ ಪಠಾಣ ವರ್ತಕರು ಚಿನ್ನದ ಜರತಾರಿ ವಸ್ತ್ರ ಮತ್ತು ನೇಯುವ ದಾರವನ್ನು(ಲಡಿಗಳನ್ನು)ತಂದು ನಗದಿಗೆ ಮಾರಾಟ ಮಾಡುತ್ತಿದ್ದರು. ಹೈದರಾಬಾದು ನಿಜಾಮ ಸಂಸ್ಥಾನದ ಹೈದರಾಬಾದ್, ನಾರಾಯಣ್ ಪೇಟ್ ಹಾಗೂ ಇತರ ಕಡೆಗಳಿಂದ ಪಠಾಣ ಮತ್ತು ಗುಜರಾತಿ ವರ್ತಕರು, ಬೆಲೆಬಾಳುವ ಹತ್ತಿವಸ್ತ್ರ, ಮಕ್ಕಳ ಉಡುಪು, ಚಿನ್ನ, ಬೆಳ್ಳಿಯ ಆಭರಣಗಳನ್ನು ಮುಸಲ್ಮಾನ ಮುಖ್ಯಸ್ಥರ ಮಕ್ಕಳಿಗಾಗಿ ತಂದು ನಗದಿಗೆ ಮಾರಾಟ ಮಾಡುತ್ತಿದ್ದರು.

ವಲ್ಲಜಪೇಟೆ (ಬಂಗಾರಪೇಟೆ?)ಯ ಮುಖಾಂತರವಾಗಿ ಆರ್ಕಾಟ್ ನವಾಬ ಪ್ರಾಂತ್ಯ ಹಾಗೂ ಬೆಂಗಳೂರಿನ ನಡುವೆ ವ್ಯಾಪಾರ-ವಹಿವಾಟು ಸಂಪರ್ಕವೇರ್ಪಟ್ಟಿತ್ತು. ಈ ಪ್ರಾಂತ್ಯದಿಂದ ಪ್ರಮುಖವಾಗಿ, ಉಪ್ಪು, ಗಂಧಕ, ತವರ, ಸೀಸ, ಸತುವು, ತಾಮ್ರ, ಯೂರೋಪಿಯನ್ ಉಕ್ಕು, ನೀಲಿ, ಜಾಕಾಯಿ, ಕರ್ಪೂರ, ಮೋದಿ ಎಂದು ಕರೆಯಲ್ಪಡುವ ಔಷಧೀಯ ಕಾಂಡ, ಯಾಲಕ್ಕಿ, ವಿವಿಧ ಬಗೆಯ ಕಚ್ಚಾ ರೇಷ್ಮೇ(ಬಿಳಿಚೀನ, ಕಸ್ತೂರಿಚೀನ, ರಾಜನಗರೀ, ಕುಮೇರ್ಚಾನಿ, ಸೆಯಿದಾಬಾದ್ ಮತ್ತು ಕಯ್ಯ ಎಂಬ ಹೆಸರಿನವು), ಬಂಗಾಳ, ಚೀನಾ, ವಲಿಂದ ಮತ್ತು ಬರ್ಹಾನ್ಪುರ ರೇಷ್ಮೇ ವಸ್ತ್ರಗಳು; ಕಾಂಜೀವರಂ ಮತ್ತು ಅರ್ನೀ ಹತ್ತಿ ಉಡುಪುಗಳು; ಇಂಗ್ಲೀಷ್ ಉಣ್ಣೆ ಬಟ್ಟೆ, ಕಂಬಳಿ ಮತ್ತು ನಾರಿನ ದಪ್ಪಬಟ್ಟೆ(ಗೋಣಿವಸ್ತ್ರ), ಉಂಡೆದಾರ, ಲಾಲಪೇಟೆ, ವಲ್ಲಜಪೇಟೆ ಮತ್ತು ತಿರುಪತ್ತೂರುಗಳಿಂದ ಇಂಗ್ಲೀಷ್ ಮತ್ತು ಸ್ಥಳೀಯ ಕಾಗದ; ಇಂಗ್ಲೀಷ್ ಗೃಹನಿರ್ಮಾಣ ಸರಕುಗಳು; ಕನ್ನಡಕಗಳು; ಚೀನಾದ ಸಕ್ಕರೆ ಅಚ್ಚು; ಬಂಗಾಳದ ಸಕ್ಕರೆ; ಖರ್ಜೂರ ಮತ್ತು ಬಾದಾಮಿ-ಹೀಗೆ ವಿವಿಧ ರೀತಿಯ ಸರಕುಗಳು ಬೆಂಗಳೂರು ಪೇಟೆಗೆ ಬರುತ್ತಿದ್ದವು. ಅಂತೆಯೇ, ಬೆಂಗಳೂರಿನಿಂದ ವೀಳ್ಯದೆಲೆ, ಶ್ರೀಗಂಧ, ಕರೀಮೆಣಸು, ಯಾಲಕ್ಕಿ, ಸೀಗೇಕಾಯಿ ಮತ್ತು ಹುಣಿಸೇಹಣ್ಣು ಅಲ್ಲಿನ ಮಾರುಕಟ್ಟೆಗಳಿಗೆ ಸಾಗಣೆಯಾಗುತ್ತಿದ್ದವು.

ಆರ್ಕಾಟ್ ನವಾಬನ ಆಡಳಿತವು ಒಂದು ಎತ್ತಿನ ಬಂಡಿಯಷ್ಟು ಪ್ರಮಾಣದ ಹತ್ತಿಬಟ್ಟೆಯ ಮೇಲೆ 4 ಪಗೋಡಗಳಷ್ಟು ಸುಂಕವನ್ನು(ಅದು ಶೇಕಡ 4ರಷ್ಟು ಸುಂಕವಾಗುತ್ತಿತ್ತು). ವಿವಿಧ ಬಗೆಯ ಸಣ್ಣ ಪ್ರಮಾಣದ ವಸ್ತುಗಳಿಗೆ, ಅದೇ ಒಂದು ಎತ್ತಿನ ಬಂಡಿಯಷ್ಟು ಪ್ರಮಾಣದ ಈ ವಸ್ತುಗಳಿಗೆ 2 1/2 ಪಗೋಡ ಸುಂಕವನ್ನು ವಿಧಿಸುತ್ತಿದ್ದರು.(ಇಲ್ಲಿ ಶೇಕಡವಾರು ಲೆಕ್ಕವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ). ಉಪ್ಪಿನ ಮೇಲೆ ಯಾವುದೇ, ಕರವನ್ನು ವಿಧಿಸುತ್ತಿರಲಿಲ್ಲ. ವ್ಯಾಪಾರಿಗಳು ಈ ಕರವನ್ನು ಆಸಕ್ತಿಯಿಂದ ಸರಿಯಾದ ವೇಳೆಗೆ ಸಲ್ಲಿಸುತ್ತಿದ್ದರು. ರಾಜ್ಯವು ಬಂದ ಸುಂಕಾದಾಯದಿಂದ ವ್ಯಾಪಾರಿಗಳಿಗೆ ಸೂಕ್ತ ರಕ್ಷಣೆಯನ್ನು ಒದಗಿಸುತ್ತಿತ್ತು. ಹೆದ್ದಾರಿಯ ಪ್ರತಿ ಪಟ್ಟಣ ಕೇಂದ್ರದಲ್ಲಿ ಕರ ವಸೂಲಿ ಕೇಂದ್ರಗಳನ್ನು ತೆರೆದಿತ್ತು.[8] ಹೀಗೆ ಉತ್ತರದಲ್ಲಿ ಗುಜರಾತಿನಿಂದ ಪೂನಾ, ಹುಬ್ಬಳ್ಳಿ, ಧಾರವಾಡ ಮಾರ್ಗವಾಗಿ ದಕ್ಷಿಣದಲ್ಲಿ ಕಾರ್ನಾಟಿಕ್-ಸೇಲಂ ವರೆಗೆ, ಪಶ್ಚಿಮದಲ್ಲಿ ಮಂಗಳೂರಿನಿಂದ ಪೂರ್ವದಲ್ಲಿ ಹೈದರಾಬಾದ್ ನಿಜಾಮ ಪ್ರಾಂತ್ಯದವರೆಗೆ ಒಟ್ಟಾರೆ ಇಡೀ ದಕ್ಷಿಣ ಭಾರತದಲ್ಲಿ ಬೆಂಗಳೂರು ವ್ಯಾಪಾರ-ವಹಿವಾಟಿನ ಜಾಲವನ್ನು ಹರಡಿತ್ತು.

ಬೆಂಗಳೂರು ಮತ್ತು ಸುತ್ತಲ ಪಟ್ಟಣಗಳು

ಬೆಂಗಳೂರು ಹದಿನೆಂಟನೇ ಶತಮಾನದ ವೇಳೆಗೆ ಇಡೀ, ಭಾರತದ ಪ್ರಮುಖ ವ್ಯಾಪಾರೀ ನಗರವಾಗಿ ಬೆಳೆದುದರ ಫಲಿತವಾಗಿ, ಅದರ ಸುತ್ತಲಿನ 40-50 ಮೈಲು ಅಂತರದ ಅನೇಕ ಪಟ್ಟಣಗಳು ಶೀಘ್ರ ಬೆಳವಣಿಗೆಗೊಳ್ಳಲು ಸಾಧ್ಯವಾಯಿತು. ಇದರಲ್ಲಿ ಯಲಹಂಕ, ದೊಡ್ಡಬಳ್ಳಾಪುರ, ದೇವನಹಳ್ಳಿ, ಕನಕಪುರ,

ಕಾನಕನಹಳ್ಳಿ, ಚಿಕ್ಕಬಳ್ಳಾಪುರ, ಕೋಲಾರ, ಹೊಸಕೋಟೆ, ಮುಳಬಾಗಿಲು, ಶಿಡ್ಲಘಟ್ಟ, ತುಮಕೂರು, ಸಿರಾ, ನೆಲಮಂಗಲ, ಮಾಗಡಿ, ರಾಮನಗರ, ಆನೇಕಲ್ಲು, ಚನ್ನಪಟ್ಟಣ, ಕೃಷ್ಣಗಿರಿ, ಶ್ರೀರಂಗಪಟ್ಟಣ, ಬಂಗಾರಪೇಟೆ, ಗೌರಿಬಿದನೂರು, ಚಿತ್ರದುರ್ಗ, ಬಳ್ಳಾರಿ– ಹೀಗೆ ಹತ್ತು ಹಲವು ಪಟ್ಟಣಗಳು ಸುಮಾರು 30–40 ಮೈಲು ಅಂತರದಲ್ಲಿ ತ್ವರಿತವಾಗಿ ಈ ಸಂದರ್ಭದಲ್ಲಿ ಬೆಳವಣಿಗೆಗೊಂಡವು. ಈ ಪಟ್ಟಣಗಳು ಬೆಂಗಳೂರಿಗೆ 1–2 ದಿನಗಳಲ್ಲಿ ಎತ್ತಿನ ಬಂಡಿಗಳಲ್ಲಿ ಬಂದು ವ್ಯಾಪಾರ–ವಹಿವಾಟು ಮುಗಿಸಿ, ಹಿಂದಿರುವಂತಹ ಅವಕಾಶ ಹೊಂದಿದ್ದವು.

ಸರ್ಜಾಪುರ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ಶಿಡ್ಲಘಟ್ಟ, ಕೋಲಾರ, ಮುಳಬಾಗಿಲು, ತುಮಕೂರು, ಮಾಗಡಿ ಮತ್ತು ಕೃಷ್ಣಗಿರಿಗಳಿಂದ ನೇಕಾರರು ಮತ್ತು ರೇಷ್ಮೇ ವರ್ತಕರು ಬೆಂಗಳೂರಿಗೆ ಬಂದು ಅಲ್ಲಿನ ನೇಕಾರರು ನೇಯ್ದ ವಸ್ತ್ರಗಳನ್ನು ಮಾರಾಟಮಾಡಿ ವರ್ತಕರಿಂದ ಹತ್ತಿ ಮತ್ತು ರೇಷ್ಮೆಯನ್ನು ಕೊಂಡು ತಮ್ಮ ಊರುಗಳಿಗೆ ಮರಳುತ್ತಿದ್ದರು.

ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ಶಿಡ್ಲಘಟ್ಟ ಇವು ರಾಜಕೀಯವಾಗಿ ಒಂದು ಸಣ್ಣ ಸಂಸ್ಥಾನವಾಗಿದ್ದು, 1760 ರ ವೇಳೆಯಲ್ಲಿ ನಾರಾಯಣಸ್ವಾಮಿ ಎಂಬುವವನು ಇದರ ನಾಯಕ–ಪಾಳೇಗಾರನಾಗಿದ್ದನು. ಇವನ ಕಾಲಾವಧಿಯಲ್ಲಿ ಈ ನಾಲ್ಕು ಊರುಗಳ ಒಟ್ಟಾರೆ ವಾರ್ಷಿಕ ವರಮಾನ 100.000 ಪಗೋಡಗಳಾಗಿದ್ದವು.[9]

ಯಲಹಂಕ, ದೊಡ್ಡಬಳ್ಳಾಪುರ,ದೇವನಹಳ್ಳಿ, ಕನಕಪುರ, ಚಿಕ್ಕಬಳ್ಳಾಪುರ, ಕೋಲಾರ, ಹೊಸಕೋಟೆ, ಮುಳಬಾಗಿಲು, ಶಿಡ್ಲಘಟ್ಟ, ತುಮಕೂರು, ಸಿರಾ, ನೆಲಮಂಗಲ, ಮಾಗಡಿ, ರಾಮನಗರ, ಆನೇಕಲ್ಲು, ಚನ್ನಪಟ್ಟಣ, ಕೃಷ್ಣಗಿರಿ, ಶ್ರೀರಂಗಪಟ್ಟಣ, ಬಂಗಾರಪೇಟೆ, ಗೌರಿಬಿದನೂರು– ಸುತ್ತಲಿನ ಪಟ್ಟಣಗಳ ಹಾಗೂ ಆದರಾಚೆಯಿರುವ ಪಟ್ಟಣಗಳು ಯಲಹಂಕ, ದೊಡ್ಡಬಳ್ಳಾಪುರ,ದೇವನಹಳ್ಳಿ, ಕನಕಪುರ, ಚಿಕ್ಕಬಳ್ಳಾಪುರ, ಕೋಲಾರ, ಹೊಸಕೋಟೆ, ಮುಳಬಾಗಿಲು, ಶಿಡ್ಲಘಟ್ಟ, ತುಮಕೂರು, ಸಿರಾ, ನೆಲಮಂಗಲ, ಮಾಗಡಿ, ರಾಮನಗರ, ಆನೇಕಲ್ಲು, ಚನ್ನಪಟ್ಟಣ, ಕೃಷ್ಣಗಿರಿ, ಶ್ರೀರಂಗಪಟ್ಟಣ, ಬಂಗಾರಪೇಟೆ, ಗೌರಿಬಿದನೂರು– ಪೇಟೆಯ ಜೊತೆ ಹೊಂದಿದ್ದ ವ್ಯಾಪಾರೀ ಸ್ವರೂಪದ ವಿವರವನ್ನು ಕೆಳಕಂಡ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕ್ರ. ಸಂ	ಹೊರ ಊರುಗಳಿಂದ ಬೆಂಗಳೂರಿಗೆ ಬರುತ್ತಿದ್ದ ಸರಕುಗಳು	ಬೆಂಗಳೂರಿನಿಂದ ಹೊರ ಊರುಗಳಿಗೆ ರಫ್ತಾಗುತ್ತಿದ್ದ ಸರಕುಗಳು
1	ಶ್ರೀರಂಗಪಟ್ಟಣ: ಮೆಣಸು, ಶ್ರೀಗಂಧ, ಅರಿಶಿಣ	ಶ್ರೀರಂಗಪಟ್ಟಣಕ್ಕೆ ಇಲ್ಲಿ ತಯಾರಾಗುತ್ತಿದ್ದ ಎಲ್ಲ ವಿಧದ ಬಟ್ಟೆ ರಫ್ತಾಗುತ್ತಿತ್ತು
2	ಗುಬ್ಬಿ: ಮೆಣಸು, ಅಡಿಕೆ, ತೆಂಗಿನಕಾಯಿ, ಯಾಲಕ್ಕಿ	ನಗರ ಪ್ರಾಂತ್ಯಕ್ಕೆ – ಬಿದನೂರು, ಬೊಂಗುಂಜಿ, ಶೃಂಗೇರಿ, ಕಿಗ್ಗ, ಕೊಪ್ಪ, ಕಳಸ ಮತ್ತು ಮುತ್ತೂರುಗಳಿಗೆ– ಧಾನ್ಯಗಳು; ತಂಬಾಕು; ಹುಣಿಸೆಹಣ್ಣು; ಕಂಬಳಿ;ಮಸ್ಲಿನ್;ವರ್ಣರಂಜಿತ ಹತ್ತಿ ವಸ್ತ್ರಗಳು ಮತ್ತು ರೇಷ್ಮೇ ವಸ್ತ್ರಗಳು.[10]
3	ಹೊಸಕೋಟೆ ಮತ್ತು ಕೋಲಾರ: ಎತ್ತಿನ ಜೋಡಿಗಳು	
4	ಚಿತ್ರದುರ್ಗ: ಹಾಸುಗಂಬಳಿ	

5 ದೊಡ್ಡಬಳ್ಳಾಪುರ: ಉತ್ತಮ ಗುಣಮಟ್ಟದ ಕೆಂಪುಹತ್ತಿಯಿಂದ ತಯಾರಾದ ಬಟ್ಟೆ.

6 ನಾಮಗುಂಡ್ಲ (ನಂದಿದುರ್ಗದ ಆಚೆಯಿದೆ.) :ಬೆಲ್ಲ, ಕಚ್ಚಾ ಸಕ್ಕರೆ, ಸಕ್ಕರೆಅಚ್ಚು.

7 ಕೋಲಾರ ಮತ್ತು ನರಸಾಪುರ: ಅಡಿಕೆ, ಮೆಣಸು.

8 ಗೌರಿಬಿದನೂರು, ಸಿರಾ, ಚಿತ್ರದುರ್ಗ ಮತ್ತು ಬಳ್ಳಾರಿ: ಕಪ್ಪು ಹಾಸು ಗಂಬಳಿ

9 ಕೆಳಗಣ ಕಾರ್ನಾಟಿಕ್ ಪ್ರದೇಶ: ಸಿದ್ಧ ಉಡುಪು

10 ನಗರ ಮತ್ತು ಪಶ್ಚಿಮ ಘಟ್ಟ ಪ್ರದೇಶಗಳಿಂದ: ಶ್ರೀಗಂಧ

11 ನಗರ, ಬಿದನೂರು, ಬೋಗುಂಜಿ, ಶೃಂಗೇರಿ, ಕೊಪ್ಪ, ಕಿಗ್ಗ,ಕಳಸ ಮತ್ತು ಮುತ್ತೂರುಗಳಿಂದ: ವೀಳ್ಯದೆಲೆ, ಕರಿಮೆಣಸು, ಶ್ರೀಗಂಧ ಮತ್ತು ಯಾಲಕ್ಕಿ.

12 ಮಧುರೈ, ಡೆಂಕಣಿಕೋಟೆ, ದೇವರಾಯನ ಕೋಟೆ ಮತ್ತು ಕಪಾಲದುರ್ಗದ ಉತ್ತರಕ್ಕಿರುವ ಪ್ರದೇಶಗಳಿಂದ: ದ್ವಿತೀಯ ಗುಣಮಟ್ಟದ ಶ್ರೀಗಂಧ.

ಸಾರಿಗೆ

ಎತ್ತಿನ ಬಂಡಿ ಅಂದಿನ ಬಹುಮುಖ್ಯ ಸಾರಿಗೆ ಸಾಧನವಾಗಿತ್ತು. ಎತ್ತಿನ ಬಂಡಿಯ ಮುಖಾಂತರವೇ ಸರಕು–ಸರಂಜಾಮುಗಳನ್ನು ಸಾಗಿಸಲಾಗುತ್ತಿದ್ದು, ಎತ್ತುಗಳು ಜನರ ದೈನಂದಿನ ಜೀವನದಲ್ಲಿ ಬಹುಮುಖ್ಯ ಆರ್ಥಿಕ ಮೌಲ್ಯವನ್ನು ಗಳಿಸಿಕೊಂಡಿದ್ದವು. ಗಂಟೆಯೊಂದಕ್ಕೆ ಸುಮಾರು 6 ಮೈಲುಗಳು ಕ್ರಮಿಸುತ್ತಿದ್ದು, ಬೆಂಗಳೂರಿನಿಂದ 30–40 ಮೈಲು ಅಂತರದಲ್ಲಿರುವ ಪಟ್ಟಣಗಳು ಮುಂಜಾನೆ 3–4 ಗಂಟೆ ಸಮಯಕ್ಕೆ ತಮ್ಮ ಊರುಗಳಿಂದ ಹೊರಟು, ಬೆಂಗಳೂರು ಪೇಟೆಯನ್ನು ತಲುಪಿ, ತಮ್ಮ ವ್ಯಾಪಾರ–ವಹಿವಾಟುಗಳನ್ನು ಮುಗಿಸಿ, ಪುನಃ ರಾತ್ರಿಯ ವೇಳೆಗೆ ತಮ್ಮ ಊರುಗಳನ್ನು ತಲುಪುತ್ತಿದ್ದರು. ಸುಮಾರು 80–100 ಮೈಲು ದೂರದ ಊರು ಗಳಿಂದ ಬರುತ್ತಿದ್ದ, ವ್ಯಾಪಾರಸ್ಥರು ಸಮೀಪದ ಊರುಗಳಲ್ಲಿ ಒಂದು ರಾತ್ರಿ ತಂಗಿದ್ದು, ಮರುದಿನದ ರಾತ್ರಿಯ ವೇಳೆಗೆ ತಮ್ಮ ಊರುಗಳನ್ನು ತಲುಪುತ್ತಿದ್ದರು. ಎತ್ತುಗಳು ಉಳುಮೆ ಮತ್ತು ಸಾರಿಗೆ ಉದ್ದೇಶದಿಂದ ಹೆಚ್ಚು ಅವಶ್ಯಕವಿದ್ದ ಅಂದಿನ ಸಂದರ್ಭದಲ್ಲಿ ಎತ್ತುಗಳನ್ನು ಮಾರಾಟಮಾಡುವ ಮತ್ತು ಕೊಂಡು ಕೊಳ್ಳುವ ಸಲುವಾಗಿ

ಪ್ರತ್ಯೇಕ ಸಂತೆ ಅಥವಾ ಪರಿಷೆಗಳನ್ನು ಏರ್ಪಡಿಸಲಾಗುತ್ತಿತ್ತು. ಅಂದು ಆ ಊರು ಮತ್ತು ಆ ಊರಿನ ಸುತ್ತ ಮುತ್ತಲ ಊರುಗಳಲ್ಲಿ ಹಬ್ಬದ ವಾತಾವರಣ ನೆಲೆಗೊಳ್ಳುತ್ತಿತ್ತು. ಡಿಸೆಂಬರ್ ಮಾಹೆಯಲ್ಲಿ ನಡೆಯುವ ದೊಡ್ಡಬಳ್ಳಾಪುರ ಸಮೀಪದ ಘಾಟಿ ಸುಬ್ರಹ್ಮಣ್ಯ ಜಾತ್ರೆ; ಮಾರ್ಚ ಮಾಹೆಯಲ್ಲಿ ಜರುಗುವ ಆನೇಕಲ್ಲು ತಾಲ್ಲೂಕಿನ ಹುಸ್ಕೂರಿನ ಮದ್ದೂರಮ್ಮ ಪರಿಷೆ ಮತ್ತು ಅಕ್ಟೋಬರ್ ಮಾಹೆಯಲ್ಲಿ ಹೊಸಕೋಟೆ ತಾಲ್ಲೂಕಿನ ನಲ್ಲೂರಿನಲ್ಲಿ ಜರುಗುವ ಗಂಗಾದೇವಿ ಪರಿಷೆ ಹೀಗೆ ಹತ್ತು ಹಲವು ಕಡೆಗಳಲ್ಲಿ ಇಂದಿಗೂ ಪರಿಷೆ–ಉತ್ಸವಗಳು ಆಚರಣೆಗೊಳ್ಳುತ್ತಾ, ಬಂದಿವೆ.

ಬೆಂಗಳೂರು: ರಾಜಕೀಯ ಹಿತಾಸಕ್ತ ಕೇಂದ್ರವಾಗಿ.

ಬೆಂಗಳೂರು ಒಂದು ವ್ಯಾಪಾರೀ ಕೇಂದ್ರವಾಗಿ, ಆರ್ಥಿಕ ಶಕ್ತಿಯಾಗಿ ಬೆಳೆದ ಮೇಲೆ(ಕ್ರಿ.ಶ.17ನೇ ಶತಮಾನ ಹಾಗೂ ಆ ನಂತರದಲ್ಲಿ), ಇದು ಒಂದು ರಾಜಕೀಯ ಹಿತಾಸಕ್ತ ಕೇಂದ್ರ ಭಾಗವಾಗಿಯೂ ಪರಿಣಮಿಸ ತೊಡಗಿತು.

ಆರ್ಥಿಕವಾಗಿ ಪ್ರಬಲಗೊಳ್ಳುತ್ತಿದ್ದ, ಬೆಂಗಳೂರಿಗೆ ಇಮ್ಮಡಿ ಕೆಂಪೇಗೌಡನಿಂದ, ಇದರ ರಕ್ಷಣೆಗಾಗಿ ಕೋಟೆ ನಿರ್ಮಾಣ ಮಾಡಿದುದು; ಕ್ರಿ.ಶ.1638 ರಲ್ಲಿ ಬಿಜಾಪುರದ ಸುಲ್ತಾನ್ ಮಹಮದ್ ಆದಿಲ್ ಷಾ ನು ನಾಗಮಂಗಲ ಮತ್ತು ಬೇಗೂರು ಪಾಳೇಗಾರರ ನೆರವಿನಿಂದ ಬೆಂಗಳೂರಿನ ಮೇಲೆ ಮುತ್ತಿಗೆ ಹಾಕಿ, ಅಂದಿನ ಮೂರನೇ ಕೆಂಪೇಗೌಡನ ಪ್ರಭಾವವನ್ನು ಕೇವಲ ಮಾಗಡಿಗೆ ಸೀಮಿತಗೊಳಿಸಿದುದು; ನಂತರ ಸುಲ್ತಾನನ ಸೈನ್ಯಾಧಿಕಾರಿಯಾಗಿದ್ದ, ಷಹಜಿ ಅದನ್ನು ಪಡೆದುಕೊಳ್ಳುವ ಸಲುವಾಗಿ ನಡೆಸಿದ ಪ್ರಯತ್ನ; ಮುಂದೆ ಅದು ಅವನ ಮೂವರು ಮಕ್ಕಳಲ್ಲಿ ಸಾಂಬಾಜಿ, ವೆಂಕೋಜಿ ಮತ್ತು ಶಿವಾಜಿಯರ ಕೈಗೆ ಬದಲಾದುದು; ಆ ನಂತರದಲ್ಲಿ ಚಿಕ್ಕದೇವರಾಜ ಒಡೆಯರು ಮೊಗಲರ ಸೈನ್ಯಾಧಿಕಾರಿ ಖಾಸಿಂ ಖಾನನಿಂದ ಗುತ್ತಿಗೆ ಆಧಾರದ ಮೇರೆಗೆ ಪಡೆದುಕೊಂಡದ್ದು; ಮುಂದೆ ಇಲ್ಲಿನ ರಾಜಕೀಯ ಅನಿಶ್ಚಿತತೆಯ ಲಾಭಪಡೆದ ಹೈದರ್ 1758 ರ ವೇಳೆಗೆ ಬೆಂಗಳೂರು ಒಳಗೊಂಡಂತೆ ಮೈಸೂರು ಪ್ರಾಂತ್ಯವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡದ್ದು–ಈ ಎಲ್ಲ ರಾಜಕೀಯ ಪ್ರಯತ್ನಗಳು ಬೆಂಗಳೂರು ಒಂದು ರಾಜಕೀಯ ಆಯಕಟ್ಟು ಅಂತೆಯೇ, ಒಂದು ಸಂಪದ್ಭರಿತ ನಗರಿಯಾಗಿದ್ದುದೇ, ಕಾರಣ. 11

ಕ್ರಿ.ಶ.1690 ರಲ್ಲಿಯೇ, ಈ ನಗರದಲ್ಲಿ ಸುಮಾರು 12.000 ನೇಕಾರರು ತಮ್ಮ ಅಸ್ತಿತ್ವವನ್ನು ಪಡೆದುಕೊಂಡಿದ್ದರು ಎಂದರೆ, ಇಲ್ಲಿನ ಉದ್ಯಮ ಸ್ವರೂಪ, ಜನರ ಕುಶಲವಂತಿಕೆ, ಸಾಮರ್ಥ್ಯ ಹಾಗೂ ಈ ನಗರ ಹರಡಿದ್ದ ವ್ಯಾಪಾರೀ ಜಾಲದ ಬಗೆಯನ್ನು ಏಕಕಾಲಕ್ಕೆ ನಮ್ಮ ಮುಂದಿಡುತ್ತದೆ.

ಉಪಸಂಹಾರ

ಬೆಂಗಳೂರು ಮೂಲತಃ ಸ್ವಾಭಾವಿಕ ಸಂಪನ್ಮೂಲಗಳು ಹಾಗೂ ರಾಜ್ಯ ಅರ್ಥವ್ಯವಸ್ಥೆಯಿಂದ ಆರ್ಥಿಕ ಬಲಿಷ್ಠತೆಯನ್ನು ಸಾಧಿಸಿಕೊಂಡಿರುವಂತಹದ್ದು. ಇದು ಮೂರ್ತ ಸ್ವರೂಪ ಪಡೆದದ್ದು, ಕ್ರಿ.ಶ.17–18ನೇ ಶತಮಾನದಲ್ಲಿ ಆದ ಆರ್ಥಿಕ ಸಂಕ್ರಮಣಾವಸ್ಥೆಯಲ್ಲಿ. ಬೆಂಗಳೂರು ಯಾವುದೇ, ಒಬ್ಬ ಆಳ್ವಿಕೆಗಾರನ ಇಲ್ಲವೇ, ಸಾಮ್ರಾಜ್ಯ ಸಂಸ್ಥಾನದ ಕೊಡುಗೆಯ ಫಲವಾಗಿ ಬೆಳೆದದ್ದು ಎಂದು ಬಹುಶಃ ನಾವು ಕಲ್ಪಿಸಿಕೊಂಡದ್ದನ್ನು ಮರುಚಿಂತಿಸುವ ಅವಶ್ಯಕತೆಯಿದೆ. ಇಲ್ಲಿನ ರಾಜಕೀಯ ಶಕ್ತಿಗಳು ಅಂದಂದು ಬೆಳೆದಿದ್ದ, ಬೆಳೆಯುತ್ತಿದ್ದ, ಆರ್ಥಿಕಾಭಿವೃದ್ಧಿಗೆ ಸಹಕಾರವನ್ನು ರಕ್ಷಣೆಯನ್ನು ನೀಡಿರಬಹುದು. ಅದು ಬಿಟ್ಟರೆ, ಆ ರಾಜಕೀಯ ಶಕ್ತಿಗಳೇ, ಸೃಷ್ಟಿಸಿದಂತೂ ಅಲ್ಲ.

ಉದಾಹರಣೆಗೆ ಹೇಳುವುದಾದರೆ, ಹೈದರ್ ಎಷ್ಟೇ ಸಮರ್ಥನಾಗಿದ್ದರೂ, ಮೈಸೂರು ಸಂಸ್ಥಾನದಿಂದ ಒದಗಿದ ಪಿತೂರಿ ಮತ್ತು ಖಂಡೇರಾಯನಿಂದ ಸಂಭವಿಸಿದ ಅವಗಢದಿಂದ ಪಾರಾಗಲು ಬೆಂಗಳೂರಿನ ಸಾಹುಕಾರರು ಇಲ್ಲವೇ, ವರ್ತಕರು ಅವನಿಗೆ ಅಗತ್ಯ ದ್ರವ್ಯವನ್ನು(ಸುಮಾರು 4 ಲಕ್ಷವರಹ) 12 ನೀಡಿದ್ದರು ಎಂದರೆ, ಅಲ್ಲಿನ ಆರ್ಥಿಕ ಸಾಮರ್ಥ್ಯದ ಜೊತೆಗೆ, ಅವರಿಗೆ ರಾಜಕೀಯ ಅವಲಂಬನವಿರಲಿಲ್ಲವೆಂಬುದನ್ನು ಮನದಟ್ಟು ಮಾಡುತ್ತದೆ. ರಾಜ್ಯವೂ ಸಹ ಒಂದಲ್ಲ ಒಂದು ರೀತಿಯಲ್ಲಿ ಬೆಳೆಯುತ್ತಿದ್ದ ಆರ್ಥಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದುದನ್ನು ಕಾಣುತ್ತೇವೆ.

ಆಕರಗಳು

1. Gazetteer of India, Govt of Karnataka. Mysore. Vol.II: Ed: Benjamin Lewis Rice, Westminister Archibald constable and company 2. Whitehall Gardens. S.W.2004(1876). P.2.
2. ನೋ. ಅದೇ. ಪು. 3.
3. ನೋ. ಅದೇ. ಪು. 3.
4. ನೋ. ಅದೇ. ಪು. 4–5.
5. ನೋ. ಅದೇ. ಪು. 2–3.
6. Epigraphia Carnatica. Vol. IX. ಬೆಂ. ಶಾಸನ ಸಂಖ್ಯೆ. 1.
7. ಬ್ರಿಟಿಷ್ ಗವರ್ನರ್ ಜನರಲ್ ಫೆ.24. 1800 ರಲ್ಲಿ ಹೊರಡಿಸಿದ ಆದೇಶದ ಮೇರೆಗೆ ಫ್ರಾನ್ಸಿಸ್ ಬುಕನನ್ ಅಂದಿನ ಮೈಸೂರು ಮತ್ತು ಮಲಬಾರ್ ಪ್ರಾಂತ್ಯಗಳ ಕೃಷಿ, ಪಶುಸಂಗೋಪನೆ, ಗಣಿ, ಅಲ್ಲಿನ ಭೌಗೋಳಿಕ ಸಂಪನ್ಮೂಲ, ಉದ್ದಿಮೆ, ವಾತಾವರಣ, ಋತು–ಮಾಸಗಳು, ಜನ–ಜೀವನ ಮುಂತಾದ ವಿಷಯಗಳ ಕುರಿತಾದ ಸಮಗ್ರ ಸಮೀಕ್ಷೆ ನಡೆಸಿದ್ದಾನೆ. ಈ ಸಮೀಕ್ಷಾ ವರದಿ 1805 ರಲ್ಲಿ ಮೂರು ಸಂಪುಟಗಳಲ್ಲಿ ಪ್ರಕಟಗೊಂಡಿತು. ಫ್ರಾನ್ಸಿಸ್ ಬುಕನನ್ ಲಂಡನ್ನಿನ ರಾಯಲ್ ಸೊಸೈಟಿ ಮತ್ತು ಸೊಸೈಟಿ ಆಫ್ ಆಂಟಿಕ್ವೇರಿಸ್ ನಲ್ಲಿ ಫೆಲೊ(ಸಂಶೋಧಕನಾಗಿ)ಆಗಿ; ಏಷಿಯಾಟಿಕ್ ಸೊಸೈಟಿ ಆಫ್ ಕಲ್ಕತ್ತಾದ ಫೆಲೊ ಆಗಿ ಮತ್ತು ಬ್ರಿಟಿಷ್ ಈಸ್ಟ್ ಇಂಡಿಯಾ ಬಂಗಾಳ ವಿಭಾಗದ ವೈದ್ಯಕೀಯ ಸೇವೆಯಲ್ಲಿಯೂ ಕಾರ್ಯನಿರ್ವಹಿಸಿದ್ದನು.
8. Buchanan,Francis., A Journey From Madras Through the countries of Mysore, Canara and Malabar.vol.1. The Honourable the Directors of the East India Company London.1807.pp.198-201.
9. ನೋ. ಅದೇ. ಪು. 329–30.
10. ಫ್ರಾನ್ಸಿಸ್ ಬುಕನನ್ ತನ್ನ ಪ್ರವಾಸಿ ಸಮೀಕ್ಷೆಯಲ್ಲಿ ನೀಡಿರುವ ವಿವರಗಳ ಆಧಾರದ ಮೇಲೆ ಈ ಕೋಷ್ಟಕ ನೀಡಲಾಗಿದೆ.
11. Annaswamy.T.V., Bengaluru To Bangalore- Urban History of Bangalore From The Pre Historic period to the end of 18th c., Vengadam publications., Bangalore. 2003.
12. ನೋ. ಅದೇ. ಪು. 165.

45. ಬೆಂಗಳೂರಿನ ಬ್ಯಾಂಕಿಂಗ್ ಉದ್ಯಮದ ಆರಂಭ ಮತ್ತು ಬೆಳವಣಿಗೆ 1956ರವರೆಗೆ

ಡಾ. ಎಂ. ಬಿ. ಪಾಟೀಲ್

ಬ್ಯಾಂಕಿಂಗ್ ವಲಯದಲ್ಲಿ ಬೆಂಗಳೂರು ನಗರ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿರುವುದು. ಇತ್ತೀಚಿನ 2011ರ (ಪ್ರಾಥಮಿಕ ಹಂತ) ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 16 ಅಂದರೆ ಕರ್ನಾಟಕದ ಪ್ರತಿ ಆರು ಜನರಲ್ಲಿ ಒಬ್ಬರು ಬೆಂಗಳೂರಿನಲ್ಲಿ ವಾಸವಾಗಿರುವರು. 2001–2011 ದಶಕದ ಅವಧಿಯಲ್ಲಿ ರಾಜ್ಯದ ಜನಸಂಖ್ಯೆಯ ಹೆಚ್ಚಳದಲ್ಲಿ ಶೇ. 37 ಬೆಂಗಳೂರಿನ ಪಾಲು ಇರುವುದು. ಇಂದು ಬೆಂಗಳೂರಿನ ಜನಸಂಖ್ಯೆಯು ಸುಮಾರು 95.88ಲಕ್ಷ ಎಂದು ವರದಿಯಾಗಿದೆ. 2008ರ ಭಾರತೀಯ ರಿಜರ್ವ ಬ್ಯಾಂಕಿನ ವರದಿಯಂತೆ ಭಾರತ ದೇಶದ ಆಯ್ದ 200 ಪ್ರಮುಖ ಬ್ಯಾಂಕಿಂಗ್ ಕೇಂದ್ರಗಳ ಪೈಕಿ, ಠೇವಣಿ ಸಂಗ್ರಹಣೆ, ಸಾಲನೀಡಿಕೆ, ಹೊಂದಿರುವ ಶಾಖೆಗಳು ಈ ಮಾನದಂಡದಿಂದ ಬೆಂಗಳೂರು ನಗರ 3ನೇ ಸ್ಥಾನದಲ್ಲಿ ಇರುವುದು. ಮೊದಲನೇ ಎರಡು ಸ್ಥಾನಗಳಲ್ಲಿ ಕ್ರಮವಾಗಿ ಮುಂಬಯಿ ಮತ್ತು ದೆಹಲಿ ಇವೆ. ಆರ್. ಬಿ. ಐ. ವರದಿಯ ಪ್ರಕಾರ ಸೆಪ್ಟೆಂಬರ್ 2008ರಲ್ಲಿ ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿ ಇದ್ದ ವಿವಿಧ ವಾಣಿಜ್ಯ ಬ್ಯಾಂಕುಗಳ ಶಾಖೆಗಳ ಸಂಖ್ಯೆ 1116 (ಈ ಪೈಕಿ 14 ವಿದೇಶಿ ಬ್ಯಾಂಕುಗಳ ಶಾಖೆಗಳೂ ಸೇರಿವೆ), ಅವುಗಳು ಸಂಗ್ರಹಿಸಿದ್ದ ಒಟ್ಟು ಠೇವಣಿ ಮತ್ತು ಸಾಲ ನೀಡಿಕೆ ಮೊತ್ತ ಕ್ರಮವಾಗಿ ರೂ. 140, 309 ಕೋಟಿ ಮತ್ತು ರೂ. 115,935 ಕೋಟಿ ಎಂದು ವರದಿಯಾಗಿದ್ದು, ರಾಜ್ಯದಲ್ಲಿದ್ದ ಒಟ್ಟು ವಾಣಿಜ್ಯ ಬ್ಯಾಂಕುಗಳ ಶಾಖೆಗಳ ಸಂಖ್ಯೆ 2357 ಇದ್ದರೆ, ರಾಷ್ಟ್ರಾದ್ಯಂತ ಇದ್ದ ವಾಣಿಜ್ಯ ಬ್ಯಾಂಕ್ ಶಾಖೆಗಳ ಸಂಖ್ಯೆ 77069 ಅಂದರೆ ಪ್ರತಿ 15000 ಜನಸಂಖ್ಯೆಗೆ ಒಂದು ಶಾಖೆಯು ಕಾರ್ಯನಿರ್ವಹಿಸುವುದು.

ಬೆಂಗಳೂರು ನಗರದ ವಿಶೇಷತೆ

ಅಧ್ಯಯನ ದೃಷ್ಟಿಯಿಂದ ಬ್ಯಾಂಕಿನ ವಲಯವನ್ನು ಸಂಘಟಿತ ವಲಯ (Organised Sector) ಮತ್ತು ಅಸಂಘಟಿತ ವಲಯ (Unorganised Sector) ಎಂದು ವಿಭಾಗಿಸಲಾಗುವುದು ಭಾರತದಲ್ಲಿ ಸಂಘಟಿತವಲಯದ ಬ್ಯಾಂಕಿನ ಉದ್ಯಮಕ್ಕೆ 1800 ರಿಂದ ಇಂದಿನವರೆಗೆ ಸುಮಾರು 200ಕ್ಕೂ ಹೆಚ್ಚು ವರ್ಷಗಳ ಇತಿಹಾಸ ಇದ್ದರೆ ಅಸಂಘಟಿತ ವಲಯಕ್ಕೆ ಇನ್ನೂ ಪ್ರಾಚೀನ ಇತಿಹಾಸ ಇರುವುದು. ಇದರ ಅಸ್ತಿತ್ವದ ಚರಿತ್ರೆಯನ್ನು ಪ್ರಾಚೀನ ಮತ್ತು ಮಧ್ಯಕಾಲದಿಂದಲೇ ಗುರುತಿಸಬಹುದು. ಅಸಂಘಟಿತ ವಲಯದ ಬ್ಯಾಂಕಿನ ಉದ್ಯಮದಲ್ಲಿ ಪ್ರಮುಖವಾಗಿ, ಗುರುತಿಸಲ್ಪಡುವವರು ಖಾಸಗಿ ಸಾಹುಕಾರರು (Private Money Lenders). ಲೇವಾದೇವಿ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವ ಯಾವುದೇ ವ್ಯಕ್ತಿ ಅಥವಾ ವರ್ತಕರನ್ನು ಸಾಹುಕಾರನೆಂದು ಗುರುತಿಸಬಹುದು. ಪ್ರಾಚೀನ ಕಾಲದಲ್ಲಿ ಸಾಲದ ಮೇಲೆ ವರ್ಣಾಶ್ರಮ ಪ್ರಕಾರ ಬೇರೆಬೇರೆ ದರದ ಬಡ್ಡಿಯನ್ನು ಆಕರಿಸಲಾಗುತ್ತಿತ್ತು. ಶೂದ್ರರು ಅತ್ಯಂತ ಹೆಚ್ಚಿನ ಬಡ್ಡಿ ತೆರುತ್ತಿದ್ದರು.

18ನೇ ಶತಮಾನದ, ಬೆಂಗಳೂರಿನ ಖಾಸಗಿ ಲೇವಾದೇವಿಗಾರರು (Indigenous Bankers)

18ನೇ ಶತಮಾನದಲ್ಲಿ ಬೆಂಗಳೂರಿನಲ್ಲಿ ಅನೇಕ ಖಾಸಗಿ ಸಾಹುಕಾರರು ವರ್ತಕರು ವ್ಯಾಪಾರದೊಂದಿಗೆ ಹಣದ ಲೇವಾದೇವಿಯನ್ನು ಮಾಡುತ್ತಿದ್ದರು. ಈ ವ್ಯವಹಾರ ಯಾವುದೇ ಅಪಾಯ ಇಲ್ಲದೇ ಸುಲಭವಾಗಿ ಹಣವನ್ನು ಸಂಪಾದಿಸುವ ಉದ್ಯಮವಾಗಿದ್ದು, ಹೆಚ್ಚಾಗಿ ಹಣವುಳ್ಳ ಶ್ರೀಮಂತರು, ಅಧಿಕಾರಿ ವರ್ಗದವರು, ಜಮೀನುದಾರರು, ಮಠಮಾನ್ಯದವರು ಈ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರು. ಇದು ಸಮಾಜದ ಒಂದು ಪ್ರತಿಷ್ಠಿತ ಉದ್ಯೋಗವಾಗಿತ್ತು. ವರ್ತಕರು ಅರಮನೆ ಮತ್ತು ಗುರುಮನೆಗೆ ನಿಕಟವಾಗಿದ್ದರು.

ಅಧಿಕೃತ ದಾಖಲೆಗಳ ಪ್ರಕಾರ ನವಾಬ ಹೈದರಾಲಿಯು 1760ರಲ್ಲಿ ಬೆಂಗಳೂರಿನ ಬ್ಯಾಂಕರುಗಳಿಂದ ರೂ. 4 ಲಕ್ಷ ತನ್ನ ಸೈನಿಕರ ಕಾರ್ಯಾಚರಣೆಯ ವೆಚ್ಚಕ್ಕೆ ಸಾಲ ಪಡೆದಿದ್ದನು. (Bangalore District Gazetteer) ಹೈದರ ಆಲಿ ಸಹ ಸ್ವತಃ ಬ್ಯಾಂಕರ್ ಆಗಿದ್ದನು. ಅವನು ತನ್ನ ಸೇವಕರಲ್ಲಿ ಯಾರಿಗಾದರೂ ಹಣ ಸಾಲ ನೀಡಿದಾಗ ಅವರು ಅದನ್ನು ಮರುಪಾವತಿ ಮಾಡಲು ತಪ್ಪಿದ್ದಲ್ಲಿ ಅವರ ಸಂಬಳದಲ್ಲಿ 1/3 ಭಾಗವನ್ನು ತಡೆಹಿಡಿಯಲಾಗುತ್ತಿತ್ತು. (History of Mysore by C. Hayavadana Rao). 1799ರಲ್ಲಿ ಟಿಪ್ಪು ಪತನಾ ನಂತರ ಉತ್ತರದ ದೇಶಗಳಿಂದ ಅನೇಕ ಲೇವಾದೇವಿಗಾರರು ಪ್ರಮುಖವಾಗಿ ಮಾರವಾಡಿಗಳು, ಗುಜರಾತಿಗಳು, ಜೈನರು, ಮುಲ್ತಾನಿ ಬ್ಯಾಂಕರ್ಸ್ ಮತ್ತು ತಮಿಳುನಾಡಿನಿಂದ ಚೆಟ್ಟಿಯಾರರು ಬೆಂಗಳೂರಿಗೆ ಬಂದು ಲೇವಾದೇವಿ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕಾಲಕ್ರಮೇಣ ಸ್ಥಳೀಯರೇ ಆದರು. 1951ರ ಜನಗಣತಿ ವರದಿಯ ಪ್ರಕಾರ ಬೆಂಗಳೂರು ನಗರಕ್ಕೆ 6257 ಹೊರನಾಡಿನವರು ವ್ಯಾಪಾರ ವಾಣಿಜ್ಯ ಉದ್ದೇಶಕ್ಕೆ ಬಂದಿದ್ದರು. ಅವರಲ್ಲಿ 46 ಭಾರತದ ಹೊರಗಿನಿಂದ ಬಂದವರು, 109 ತಮಿಳುನಾಡು ಮತ್ತು 314 ಭಾರತದ ಇತರೇ ಪ್ರದೇಶಗಳಿಂದ ಬಂದು ಇಲ್ಲಿ ಲೇವಾದೇವಿ ವ್ಯವಹಾರದಲ್ಲಿ ತೊಡಗಿದ್ದರು. ಇವರೊಂದಿಗೆ ಸ್ಥಳೀಯರೂ ಇದ್ದರು. ಇದರಿಂದ ಈ ಪ್ರದೇಶ ಲೇವಾ-ದೇವಿ ವ್ಯವಹಾರಕ್ಕೆ ಸೂಕ್ತ ಸ್ಪಂದನೆ ನೀಡುವ ಪ್ರದೇಶ ಎಂದು ತಿಳಿದುಬರುವುದು. ದಾಖಲೆಗಳಿಂದ ತಿಳಿದುಬರುವಂತೆ 1861ರ ಸುಮಾರಿಗೆ ಬೆಂಗಳೂರಿನ ಕಂಟೋನ್‌ಮೆಂಟ್ ಪ್ರದೇಶದಲ್ಲಿ ಅನೇಕ ಜನ ಸೈನ್ಯದ ಅಧಿಕಾರಿಗಳು ಮತ್ತು ಅವರ ವಿಧವೆಯರು ಲೇವಾದೇವಿಯಲ್ಲಿ ತಮ್ಮನ್ನು ಆಳವಾಗಿ ತೊಡಗಿಸಿಕೊಂಡಿದ್ದರು ಎಂಬುದು ಸಮಕಾಲೀನ ದಾಖಲೆಗಳಿಂದ ತಿಳಿದುಬರುವುದು. ಈ ವ್ಯವಹಾರ ಬಹು ವ್ಯಾಪಕವಾಗಿ ನಡೆಯುತ್ತಿದ್ದುದರಿಂದ ವ್ಯವಹಾರಗಳಲ್ಲಿ ಉಂಟಾಗುತ್ತಿದ್ದ ವ್ಯಾಜ್ಯ (Disputes) ಗಳನ್ನು ಬಗೆಹರಿಸಲು 1863ರಲ್ಲಿ ಲಘು ವ್ಯವಹಾರ ನ್ಯಾಯಾಲಯ (small cause court) ಗಳನ್ನು ಆರಂಭಿಸಲಾಯಿತು. ಇವುಗಳು ರೂ. 500ರ ಒಳಗಿನ ವಿವಾದಗಳನ್ನು ನಿರ್ಣಯಿಸುತ್ತಿದ್ದವು. "The respectable ladies found it inconvenient to attend existing court meant for other commoners." ಆದ್ದರಿಂದ ಈ ವಿಶೇಷ ನ್ಯಾಯಾಲಯಗಳನ್ನು ಆರಂಭಿಸಲಾಯಿತು ಎಂದು ತಿಳಿದುಬರುವುದು. ದಂಡು ಪ್ರದೇಶದ ಲೇವಾದೇವಿ ವ್ಯವಹಾರವನ್ನು ಕುರಿತಂತೆ ಕಮೀಷನರ್ ಬೌರಿಂಗ್ 1872ರಲ್ಲಿ ತಮ್ಮ "Eastern Experiences" ನಲ್ಲಿ ಈ ರೀತಿ ದಾಖಲಿಸಿರುವರು, "ಸ್ಥಳೀಯ ಬ್ಯಾಂಕರುಗಳ ನಡವಳಿಕೆ, ವಿಶ್ವಾಸಾರ್ಹತೆ, ಜಗತ್ತಿನ ಇತರೇ ಯಾವುದೇ ಬ್ಯಾಂಕರುಗಳ ಅರ್ಹತೆ, ಗುಣಮಟ್ಟಕ್ಕೆ ಕಡಿಮೆಯಾಗಿರಲಿಲ್ಲ." ಇಂಗ್ಲೆಂಡಿನ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಅವರು 1895ರಲ್ಲಿ ಬೆಂಗಳೂರಿನಲ್ಲಿ ಕೆಲವು ಕಾಲ ಸೈನ್ಯದ ಅಧಿಕಾರಿಯಾಗಿದ್ದರು. ದಂಡು ಪ್ರದೇಶದ ಖಾಸಗಿ ಸಾಹುಕಾರರ ವ್ಯವಹಾರ ಕೌಶಲ್ಯವನ್ನು ಕುರಿತಂತೆ ಅವರು ಹೇಳಿರುವಂತೆ ಅಂದಿನ ಕಾಲದ ಬಡ್ಡಿದರ ತಿಂಗಳಿಗೆ ಶೇ. 2 ಆಗಿತ್ತು (ಆಗಿನ ಕಾಲಕ್ಕೆ ಅದು ದುಬಾರಿಬಡ್ಡಿ). ಈ ವ್ಯವಹಾರದಿಂದ ಸಾಹುಕಾರರು ಸಾಕಷ್ಟು ಹಣ ಸಂಪಾದನೆ ಮಾಡಿ ಒಳ್ಳೆಯ ಜೀವನ ನಡೆಸುತ್ತಿದ್ದರು, ಲೋಭಿಗಳಾಗಿದ್ದರು, ದುರಾಸೆ ಉಳ್ಳುವರು ಆಗಿದ್ದರು. ಅದರಲ್ಲೂ

ಯಾವುದೇ ರೀತಿಯ ದಯೆ, ದಾಕ್ಷಿಣ್ಯ, ಅನುಕಂಪ ಇಲ್ಲದೇ ಸಾಲಗಾರರನ್ನು ಹಿಂಸಿಸಿ ಸಾಲ ವಸೂಲಿ ಮಾಡುತ್ತಿದ್ದರು. He describes those Gentlemen, and Found them agreeable very fat, very urbane, quite honest and mercilessly rapacious they hardly ever had bad debts.

A Guide to Bangalore (1905) ಪುಸ್ತಕದಲ್ಲಿ ವರದಿಯಾಗಿರುವಂತೆ St John Hills, Commercial Street, Halasoor, Shooley ಮುಂತಾದ ದಂಡಿನ ತುಕಡಿಗಳು ವಾಸಿಸುವ ಪ್ರದೇಶಗಳಲ್ಲಿ ಈ ಖಾಸಗಿ ಸಾವುಕಾರರು ಪ್ರತಿ ಒಂದು ಸೈನಿಕ ನೆಲೆಗೆ ದುಬಾರಿ ಬಡ್ಡಿಯಿಂದ ಸಾಲ ಪೂರೈಸಿ ನಿಜವಾಗಿ ಜನರ ರಕ್ತ ಹೀರಿ ಸಾಕಷ್ಟು ಸಂಪತ್ತನ್ನು ಗಳಿಸುತ್ತಿದ್ದರು ಎಂದು ಕಠೋರವಾಗಿ ಟೀಕಿಸಲಾಗಿದೆ. ಈ ಸಾಲನೀಡುವ ಸಂಸ್ಥೆಗಳನ್ನು" ಹಿಂದು ಬ್ಯಾಂಕರ್ಸ್ ಮತ್ತು ಸಾಹುಕಾರರು ಎಂದು ವರ್ಣಿಸಲಾಗಿದೆ.

ವ್ಯವಹಾರ ನಿಯಂತ್ರಣ

ದಂಡು ಪ್ರದೇಶದಂತೆ ಬೆಂಗಳೂರು ಪೇಟೆಯಲ್ಲಿಯೂ ಸಹ ಈ ರೀತಿ ಖಾಸಗಿ ಸಾಹುಕಾರರು ಬಡ ಅನಕ್ಷರಸ್ಥ, ಅಸಹಾಯಕ ಸಾಲಗಾರರನ್ನು ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆ ಮಾಡುವುದು ಮುಂದುವರೆದಿತ್ತು. ಅಂತಿಮವಾಗಿ ಖಾಸಗಿ ಸಾಹುಕಾರರ ವ್ಯವಹಾರಗಳನ್ನು ನಿಯಂತ್ರಿಸಲು ಸ್ವಾತಂತ್ರ್ಯ ಪೂರ್ವದಲ್ಲಿಯೇ, ಅಂದರೆ 1923ರಲ್ಲಿ. ಅಂದಿನ ಮೈಸೂರು ಸರ್ಕಾರ Mysore Usurious Loans Act, Mysore Debt Conciliation Act, 1937 ಮತ್ತು 1939ರಲ್ಲಿ Mysore Money Lenders Act ಮುಂತಾದ ಕಾನೂನುಗಳನ್ನು ತಂದರು. ಈ ಮೂಲಕ ಬಡ ಸಾಲಗಾರರ ಶೋಷಣೆ ತಕ್ಕಮಟ್ಟಿಗೆ ಕಡಿಮೆ ಮಾಡುವ ಪ್ರಯತ್ನ ಮಾಡಲಾಯಿತು. ಸರ್ಕಾರ ನ್ಯಾಯಯುತ ಬಡ್ಡಿದರಗಳನ್ನು ನಿರ್ಧರಿಸಿತು. 1939ರ ಕಾಯಿದೆ ಪ್ರಕಾರ ಆಧಾರರಹಿತ ಸಾಲದ ಮೇಲೆ ಶೇ 12ರ ಸರಳ ಬಡ್ಡಿ ಮತ್ತು ಆಧಾರದ ಸಾಲದ ಮೇಲೆ ಶೇ 9ರ ಸರಳ ಬಡ್ಡಿಯನ್ನು ನಿಗದಿಪಡಿಸಲಾಯಿತು. ಅಲ್ಲದೇ, ಸಾಲಗಾರನನ್ನು ಸಾಲಿಗನು ಹಿಂಸಿಸುವುದು ಶಿಕ್ಷಾರ್ಹ ಅಫರಾಧವೆಂದು ಪರಿಗಣಿಸಲಾಯಿತು. ಗ್ರಾಮೀಣ ಮತ್ತು ನಗರ ಪ್ರದೇಶದಲ್ಲೂ ಈ ಶೋಷಣೆಯ ಸಾಲ ವ್ಯವಸ್ಥೆ 'ಜೀತಪದ್ಧತಿಯು' ಬೆಳೆದು ಬರಲು ಮತ್ತು ಮುಂದುವರೆಯಲು ಸಹಾಯಕವಾಯಿತು.

ಸಂಘಟಿತ ವಲಯದ ಬ್ಯಾಂಕಿಂಗ್ (Organised sector)

ಬೆಂಗಳೂರು ನಗರಕ್ಕೆ ಸೀಮಿತವಾದಂತೆ ಸಂಘಟಿತ ವಲಯದಲ್ಲಿ ಬ್ಯಾಂಕಿಂಗ್ ಉದ್ಯಮದ ಆರಂಭವನ್ನು 1–7–1864 ರಿಂದ ಗುರ್ತಿಸಬಹುದು. 1864ರಿಂದ ಅಂದಿನ ಬ್ರಿಟಿಷ್ ಸರ್ಕಾರದ ಆಡಳಿತಕ್ಕೆ ಒಳಪಟ್ಟು ದಂಡುಪ್ರದೇಶದಲ್ಲಿ ಅಂದಿನ ಮದ್ರಾಸ್ ಪ್ರೆಸಿಡೆನ್ಸಿ ಬ್ಯಾಂಕಿನ (1843) ಒಂದು ಶಾಖೆಯನ್ನು ಆರಂಭಿಸಲಾಯಿತು. ನಂತರ 1868ರಲ್ಲಿ ಅದನ್ನು ಇಂದಿನ ಸೆಂಟ್‌ಮಾರ್ಕ್ಸ್ ರಸ್ತೆಗೆ ವರ್ಗಾಯಿಸಲಾಯಿತು. 18–19ನೇ ಶತಮಾನದಲ್ಲಿ ಅಸಂಘಟಿತ ಮತ್ತು ಸಂಘಟಿತ ವಲಯಗಳಲ್ಲಿ ನಗರದಲ್ಲಿ ಬ್ಯಾಂಕಿನ ಉದ್ಯಮ ನಿರೀಕ್ಷೆ ಮೀರಿ ಬೆಳೆಯಲು ಈ ಕೆಳಗಿನ ಚಾರಿತ್ರಿಕ ಘಟನೆಗಳು ಪ್ರಮುಖ ಕಾರಣಗಳು ಎಂದು ಹೇಳಬಹುದು.

1. 1831–81ರ ಅವಧಿಯ ಬ್ರಿಟಿಷ್ ಕಮಿಷನರ್ ಅವರ ಆಡಳಿತದಲ್ಲಿ ಮೈಸೂರಿನ ಆಡಳಿತದಲ್ಲೂ ಆಧುನಿಕತೆಯ ಯುಗ ಆರಂಭಗೊಂಡು ವಾಣಿಜ್ಯ, ವ್ಯಾಪಾರ, ಕೈಗಾರಿಕೆ, ಬ್ಯಾಂಕಿಂಗ್ ವಲಯವನ್ನು ಸಹ ಪ್ರವೇಶ ಮಾಡಿತು. ಇದು ಕಂಪನಿ ವಲಯದಲ್ಲೂ ಕೂಡ ಬಂಡವಾಳ ಸಂಸ್ಥೆಗಳ ರಚನೆಗೆ ಉತ್ತಮ ಅವಕಾಶವನ್ನು ಒದಗಿಸಿತು. (Formation of Joint Stock Companies)

2. ಸಂಸ್ಥಾನದ ರಾಜಧಾನಿಯನ್ನು 1831ರಲ್ಲಿ ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಿದ್ದರಿಂದ ಬೆಂಗಳೂರು ನಗರದ ಸರ್ವಾಂಗೀಣ ಬೆಳವಣಿಗೆಗೆ ಒಂದು ಅತ್ಯಂತ ಪ್ರಮುಖ ತಿರುವು ದೊರೆತಂತಾಯಿತು.
3. ಶ್ರೀರಂಗಪಟ್ಟಣದ ಪತನದ ನಂತರ (1799) ಬೆಂಗಳೂರಿನಲ್ಲಿ ಕಂಟೋನ್‌ಮೆಂಟ್ (ದಂಡುಪ್ರದೇಶ) 1809ರಲ್ಲಿ ರಚನೆಯಾದದ್ದು. ಯುರೋಪಿಯನ್ನರ ವಲಸೆಗೆ ಮತ್ತು ನಗರದ ವ್ಯಾಪಾರ, ವಾಣಿಜ್ಯ ಅಭಿವೃದ್ಧಿಗೆ ಒಂದು ಪೂರಕ ಅಂಶವಾಯಿತು.
4. 1860ರ ಅಮೇರಿಕೆಯ Cotton Boom ಭಾರತ ಒಳಗೊಂಡಂತೆ ಬೆಂಗಳೂರು ನಗರದ ವ್ಯಾಪಾರ, ವಾಣಿಜ್ಯ ಅಭಿವೃದ್ಧಿಗೆ ಒಂದು ಅತ್ಯಂತ ಪೂರಕವಾದ ಆರ್ಥಿಕ ಅಂಶವಾಯಿತು.
5. 1857ರ ನಂತರ ಕಂಪೆನಿ ವಲಯದ ವ್ಯವಹಾರದಲ್ಲೂ Limited Liability ನೇಮಕ ಹೊಣೆಗಾರಿಕೆ ತತ್ವವನ್ನು ಅಳವಡಿಸಿದ್ದರಿಂದ ವ್ಯಾಪಕ ಪ್ರಮಾಣದಲ್ಲಿ ಕೂಡುಬಂಡವಾಳ ಸಂಸ್ಥೆಗಳು ಖಾಸಗಿ ವಲಯದಲ್ಲಿ ಆರಂಭಗೊಂಡು ಆ ಮೂಲಕ ಬ್ಯಾಂಕಿನ ಉದ್ಯಮ ದೇಶವ್ಯಾಪ್ತಿ ಹರಡಲು ಅನುಕೂಲವಾಯಿತು.
6. 1906ರ ಸ್ವದೇಶಿ ಆಂದೋಲನ ದೇಶೀಯ ನಾಯಕರನ್ನು ಈ ದಿಸೆಯಲ್ಲಿ ಪ್ರೇರೇಪಿಸಿತು.

ಬೆಂಗಳೂರಿನ ಅತ್ಯಂತ ಹಳೆಯ ಬ್ಯಾಂಕ್ ಕಂಪನಿಗಳು

ಲಭ್ಯವಿರುವ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ಆರಂಭಗೊಂಡ ಅತ್ಯಂತ ಹಳೆಯ ಖಾಸಗಿ ವಲಯ (ಕಡಿುತಚಣಜ ಖಜಛಿಣಂಡಿ) ಬ್ಯಾಂಕಿಂಗ್ ಕಂಪನಿಗಳಲ್ಲಿ Bangalore Bank Ltd and Mysore Bank Corporation ಅತ್ಯಂತ ಹಳೆಯವು. ಈ ಎರಡೂ ಸಂಸ್ಥೆಗಳು 1868ರಲ್ಲಿ ಆರಂಭಗೊಂಡವು. ಇವುಗಳ ಷೇರು ಬಂಡವಾಳ ಅನುಕ್ರಮವಾಗಿ ರೂ. 7ಲಕ್ಷ ಮತ್ತು ರೂ. 1.50 ಲಕ್ಷ ಎಂದು ತಿಳಿದು ಬರುವುದು. 1869ರಲ್ಲಿ ಹಿಂದು ದ್ರವ್ಯ ಶೇಖರ ನಿಧಿ ಮತ್ತು ಕರ್ನಾಟಕ್ ಬ್ಯಾಂಕ್ (ಲಿ) ಎಂಬ ಎರಡು ಕಂಪನಿಗಳು ಕ್ರಮವಾಗಿ ರೂ. 50000 ಮತ್ತು ರೂ. 150000 ಬಂಡವಾಳದೊಂದಿಗೆ ಆರಂಭಗೊಂಡವು. 1868ರಿಂದ 1889ರವರೆಗಿನ 21 ವರ್ಷಗಳ ಅವಧಿಯಲ್ಲಿ ಸುಮಾರು 32 ವಿವಿಧ ಗಾತ್ರದ, ಧರ್ಮ, ಜಾತಿ, ವ್ಯಕ್ತಿ ಮತ್ತು ಪಂಗಡಗಳನ್ನು ಪ್ರತಿನಿಧಿಸುವ ಚಿತ್ತಾಕರ್ಷಕ ಹೆಸರಿನಿಂದ ಹಣಕಾಸು ಸಂಸ್ಥೆಗಳು ಮೂಡಿ ಬಂದವು. ಈ ಅಂಕಿ ಅಂಶಗಳು ಈ ನೆಲದ ಆರ್ಥಿಕ ಫಲವತ್ತತೆಯ ಪರಿಚಯವನ್ನು ಮಾಡಿಕೊಡುತ್ತವೆ. ಆದರೆ ಹುಟ್ಟಿದ ಎಲ್ಲಾ ಸಂಸ್ಥೆಗಳು ಬದುಕಲಿಲ್ಲ. ಬಹುಪಾಲು ಆರಂಭದ ದಿನಗಳಲ್ಲಿಯೇ ನಾನಾ ಕಾರಣಗಳಿಂದ ಕಮರಿಹೋದವು. ಈ ಮೇಲೆ ಹೇಳಿದ 32 ಬ್ಯಾಂಕಿಂಗ್ ಕಂಪನಿಗಳಲ್ಲಿ ಕಂಟೋನ್ಮೆಂಟ್ ಪ್ರದೇಶದಲ್ಲಿಯೇ ಆರು ಬ್ಯಾಂಕುಗಳು ಇದ್ದವು. ಈ ಬ್ಯಾಂಕುಗಳಲ್ಲಿ ಸಾಲದ ಮೇಲಿನ ಬಡ್ಡಿ ನೀಡಿಕೆ, ಅವುಗಳ ಮರುಪಾವತಿ ಮತ್ತು ಇತರೇ ಸೇವೆಗಳಲ್ಲಿ ಪರಸ್ಪರ ಅನಾರೋಗ್ಯಕರ ಸ್ಪರ್ಧೆ ಇರುತ್ತಿತ್ತು.

(ಅವುಗಳ ವಿವರ ಅನುಬಂಧ-1)

ಅಂದಿನ ಬ್ಯಾಂಕುಗಳೂ ಸಹ ಸಾಲವನ್ನು ಕೇವಲ ವಾಣಿಜ್ಯ ಉದ್ದೇಶಗಳಿಗೆ ಮಾತ್ರವೇ ಅಲ್ಲದೇ ಮದುವೆ, ಮುಂಜಿ ಇತ್ಯಾದಿ ಉದ್ದೇಶಗಳಿಗೂ ನೀಡುತ್ತಿದ್ದವು. ಕೃಷ್ಣರಾಜ ಪುರದಲ್ಲೂ ಕೋದಂಡರಾಮಸ್ವಾಮಿ ಪ್ರೇರೇಪಿತ ಪರಸ್ಪರ ಧನ ಸಹಾಯ ಲೋಕಮನೋರಂಜನಿ ಕಂಪನಿ 1895ರಲ್ಲಿ ಆರಂಭಗೊಂಡು ಈ ಉದ್ದೇಶಗಳಿಗೆ ಸಾಲ ನೀಡುತ್ತಿತ್ತು. ಸದರಿ ಕಂಪನಿಯ ಬಂಡವಾಳ ರೂ. 16860 ಆಗಿತ್ತು. ಈ ಕಂಪನಿಯು 1895ರಲ್ಲಿಯೇ

ನಿಂತುಹೋಯಿತು. 1930ರಲ್ಲಿ ಶ್ರೀಮನ್ ಮಧ್ವಸಿದ್ಧಾಂತ ಅಭಿವೃದ್ಧಿಕಾಯ್ದೆ ಬ್ಯಾಂಕ್ ಆರಂಭಗೊಂಡಿತ್ತು. ಅಂದಿನ ಬಹುಪಾಲು ಬ್ಯಾಂಕಿಂಗ್ ಕಂಪನಿಗಳಿಗೆ ಸುಭದ್ರವಾದ ಆರ್ಥಿಕ ತಳಹದಿ ಇರಲಿಲ್ಲ, ವ್ಯಕ್ತಿ ನೈಪುಣ್ಯತೆ ಇರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅವುಗಳ ಕಾರ್ಯವಿಧಾನದಲ್ಲೂ ಇಂದಿನಂತೆ ಸರ್ಕಾರದ ಯಾವುದೇ ನಿಯಂತ್ರಣ ಇರಲಿಲ್ಲ. ಬಹುಪಾಲು ಕಂಪನಿಗಳು ಬ್ಯಾಂಕಿನ ವ್ಯವಹಾರದೊಂದಿಗೆ ಇತರೆ ವಾಣಿಜ್ಯ ವ್ಯವಹಾರಗಳನ್ನು ಸಹ ನಡೆಸುತ್ತಿದ್ದವು. ಈ ಕಾರಣಗಳಿಂದ 1876ರಿಂದ 1895ರ ಎರಡು ದಶಕಗಳ ಅವಧಿಯಲ್ಲಿ 32 ಬ್ಯಾಂಕುಗಳ ಪೈಕಿ 24 ಅವಸಾನಗೊಂಡು ಕೇವಲ 8 ಬಂದಂತೆ ಉಳಿದವು. ಆರಂಭದ ಬ್ಯಾಂಕಿಂಗ್ ಕಂಪನಿಗಳ ಪೈಕಿ ಬೆಂಗಳೂರು ಯೂನಿಯನ್ ಬ್ಯಾಂಕ್ 1890ರಿಂದ 50 ವರ್ಷಗಳ ಸುದೀರ್ಘ ಸೇವೆಯ ನಂತರ 1940ರಲ್ಲಿ ಮುಚ್ಚಿತು.

1949ರ ಪೂರ್ವದಲ್ಲೂ 1913ರಿಂದ 1944ರವರೆಗೆ, ಆರಂಭಗೊಂಡ 15 ಬ್ಯಾಂಕ್‌ಗಳ ಪೈಕಿ Bank of Mysore 1913, ದೇವಾಂಗ ಬ್ಯಾಂಕ್ 1926 (1963ರಲ್ಲಿ ವಿಜಯಾ ಬ್ಯಾಂಕಿನೊಂದಿಗೆ ವಿಲೀನಗೊಂಡಿತು), ಮೈಸೂರು ಇಂಡಸ್ಟ್ರಿಯಲ್ ಬ್ಯಾಂಕ್ (1920), ವೈಶ್ಯಬ್ಯಾಂಕ್ (1930) ಪ್ರಮುಖವಾದವುಗಳು. 1949ರ ಪೂರ್ವದ 15 ಬ್ಯಾಂಕ್‌ಗಳ ಪೈಕಿ ಇಂದಿಗೂ ಕಾರ್ಯ ನಿರ್ವಹಿಸುತ್ತಿರುವವು ಕೇವಲ ಎರಡು. ಮೈಸೂರು ಬ್ಯಾಂಕ್ ಮತ್ತು ಖಾಸಗಿ ವಲಯದ ವೈಶ್ಯ ಬ್ಯಾಂಕ್.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಇಂದಿನ ಎಸ್. ಬಿ. ಎಂ. 1913ರಲ್ಲಿ ಅಂದಿನ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರ ಪ್ರಯತ್ನ ಮತ್ತು ಸಂಸ್ಥಾನದ ಆರ್ಥಿಕ ಅಭಿವೃದ್ಧಿಯಲ್ಲಿ ಅವರಿಗಿದ್ದ ತೀವ್ರ ಆಸಕ್ತಿಯ ಫಲವಾಗಿ 'ಮೈಸೂರು ಬ್ಯಾಂಕ್' ಎಂಬ ಹೆಸರಿನಿಂದ ಸರ್ಕಾರದಿಂದ ಪ್ರಾಯೋಜಿಸಲ್ಪಟ್ಟಿತು. ಈ ಬ್ಯಾಂಕನ್ನು ಮೈಸೂರು ಕಂಪನಿ ಕಾನೂನು 1895ರ ಅಡಿಯಲ್ಲಿ ಆರಂಭಿಸಲಾಯಿತು. ಅಂದಿನ ಮೈಸೂರು ಸರ್ಕಾರ ಈ ಬ್ಯಾಂಕಲ್ಲಿ ಬಂಡವಾಳದ ಪಾಲುದಾರಿಕೆ ಹೊಂದಿದ್ದಲ್ಲದೇ ಠೇವಣಿಯಲ್ಲೂ ಹಣ ಹೂಡಿತ್ತು ಮತ್ತು ಆರಂಭದ ವರ್ಷಗಳಲ್ಲಿ ಭಾಗಶಃ ನಿರ್ವಹಣಾ ವೆಚ್ಚವನ್ನು ಸಹ ಭರಿಸುತ್ತಿದ್ದಾಗ ದೇಶದ ಇತರೇ ಬ್ಯಾಂಕುಗಳು ರಾಜ್ಯದ ಬ್ಯಾಂಕಿಂಗ್ ನಕ್ಷೆಯಲ್ಲಿ ಮೂಡಿಬರುವ ಪೂರ್ವದಲ್ಲಿಯೇ ಮಾದರಿ ಮೈಸೂರು ರಾಜ್ಯದ ಅಭಿವೃದ್ಧಿಗೆ ಈ ಬ್ಯಾಂಕು ತನ್ನದೇ ಆದ ಕೊಡುಗೆಯನ್ನು ನೀಡಿರುವುದು ಗಮನಾರ್ಹ.

ಆಡಳಿತದಲ್ಲಿ ಅಪಾರ ಅನುಭವ ಹೊಂದಿದ್ದ ಮತ್ತು ಮೈಸೂರು ಸಂಸ್ಥಾನದ ಆಡಳಿತ ಮಂಡಳಿಯ ಸದಸ್ಯರಾಗಿ ನಿವೃತ್ತರಾಗಿದ್ದ ಸರ್. ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು ಈ ಬ್ಯಾಂಕಿನ ಪ್ರಥಮ ಅಧ್ಯಕ್ಷರಾಗಿದ್ದರು. ಬ್ಯಾಂಕಿಂಗ್ ವ್ಯವಹಾರ ತಜ್ಞರಾದ ವಿ.ಐ.ಸಿ. ರೋಸ್ ಎಂಬ ಇಂಗ್ಲೀಷ್ ಅಧಿಕಾರಿ ಪ್ರಥಮ ಮ್ಯಾನೇಜರ್ ಆಗಿದ್ದರು (State Bank of India). ಭಾರತೀಯ ಸ್ಟೇಟ್ ಬ್ಯಾಂಕ್ 1955ರಲ್ಲಿ ಅಸ್ಥಿತ್ವಕ್ಕೆ ಬರುವ ಪೂರ್ವದಲ್ಲಿ ಈ ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕಿನ ಪ್ರತಿನಿಧಿಯಾಗಿ ಸರ್ಕಾರದ ಖಜಾನೆಯ (Treasury) ವ್ಯವಹಾರವನ್ನು ನೋಡಿಕೊಳ್ಳುತ್ತಿತ್ತು.

ಇತರೇ ಪ್ರದೇಶಗಳ ಬ್ಯಾಂಕುಗಳು

ಸ್ವಾತಂತ್ರ್ಯ ಪೂರ್ವದ ಮತ್ತು ನಂತರದ ವರ್ಷಗಳಲ್ಲಿ ಬೆಂಗಳೂರಿನಲ್ಲಿ ಉಂಟಾದ ವಾಣಿಜ್ಯ ವ್ಯವಹಾರ, ಕೈಗಾರಿಕೆ, ನಗರೀಕರಣ, ಹೊರರಾಜ್ಯಗಳಿಂದ ವಲಸೆ, ಕೇಂದ್ರ ಸರ್ಕಾರದ ಉದ್ಯಮಗಳ ಆರಂಭ ಮುಂತಾದ ಹತ್ತು ಹಲವಾರು ವಾಣಿಜ್ಯ ಮತ್ತು ಕೈಗಾರಿಕಾ ಚಟುವಟಿಕೆಗಳಿಂದಾಗಿ ಹೊರರಾಜ್ಯಗಳ ಮತ್ತು ನಮ್ಮದೇ ರಾಜ್ಯದ

ದಕ್ಷಿಣ ಕನ್ನಡ ಮೂಲದ ಬ್ಯಾಂಕುಗಳು ಬೆಂಗಳೂರಿನಲ್ಲಿ ತಮ್ಮ ಶಾಖೆಗಳನ್ನು ಆರಂಭಿಸಿದವು. ಅವುಗಳಲ್ಲಿ ಪ್ರಮುಖವಾದವುಗಳು – ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ (1911) ಮತ್ತು ಇಂಪೀರಿಯಲ್ ಬ್ಯಾಂಕ್ (1921), ಬೆಂಗಳೂರು. ಇದು 1936ರಲ್ಲಿ ಪೇ ಆಫೀಸ್‌ನ್ನು ಆರಂಭಿಸಿತು. ಮುಂದೆ 1943 ಪೇ ಆಫೀಸು ಶಾಖೆಯಾಯಿತು. ಮಂಗಳೂರು ಮೂಲದ ಸಿಂಡಿಕೇಟ್ ಬ್ಯಾಂಕ್ 1933ರಲ್ಲಿ ಬೆಂಗಳೂರಿನಲ್ಲಿ ತನ್ನ ಒಂದು ಶಾಖೆಯನ್ನು ಆರಂಭಿಸಿತು.

1930–1940ರ ದಶಕದಲ್ಲಿ 53 ಕೂಡು ಬಂಡವಾಳ ಸಂಸ್ಥೆಗಳು (Joint Stock Co) ಹಳೇ ಮೈಸೂರು ಸಂಸ್ಥಾನದಲ್ಲಿ ಬ್ಯಾಂಕಿಂಗ್ ಸೇವೆಯಲ್ಲಿ ತೊಡಗಿದ್ದವು. ಆ ಪೈಕಿ ಬಹುಪಾಲು ಬೆಂಗಳೂರು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. 1952ರಲ್ಲಿ ಬೆಂಗಳೂರು ನಗರದಲ್ಲಿ ವಿವಿಧ 20 ಬ್ಯಾಂಕಿಂಗ್ ಕಂಪನಿಗಳ 36 ಶಾಖೆಗಳು ಕಾರ್ಯ ನಿರ್ವಹಿಸುತ್ತಿದ್ದವು ಆ ಪೈಕಿ ಒಂದು ವಿದೇಶಿ ಬ್ಯಾಂಕಿನ ಶಾಖೆಯಾಗಿತ್ತು. ಲಂಡನ್ ಮೂಲದ (1862) Grindlays Bank, 1951ರಲ್ಲಿ ಒಂದು ಶಾಖೆಯನ್ನು ಆರಂಭ ಮಾಡಿತ್ತು. ಇದು ನಗರದ ಪ್ರಥಮ ವಿದೇಶಿ ಬ್ಯಾಂಕಿನ ಶಾಖೆ (ಇಂದು 14 ವಿದೇಶಿ ಬ್ಯಾಂಕುಗಳ ಶಾಖೆಗಳಿವೆ)., ಸ್ವಾತಂತ್ರ್ಯ ನಂತರದ ದಶಕಗಳಲ್ಲಿ ಬ್ಯಾಂಕಿನ ಕಂಪನಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಯಿತು. ಕಾರಣ, 1949ರಲ್ಲಿ ದೇಶಾದ್ಯಂತ ಜಾರಿಯಲ್ಲಿ ಬಂದ ಬ್ಯಾಂಕಿಂಗ್ ಕಂಪನಿಗಳ ನಿಯಂತ್ರಣಾ ಕಾನೂನು ಮತ್ತು ಅದರ ಅನುಷ್ಠಾನ. ಈ ಕಾನೂನು ದೇಶದ ಬ್ಯಾಂಕಿನ ಉದ್ಯಮಕ್ಕೆ ಅದರ ಅಡಿಪಾಯಕ್ಕೆ ಆರ್ಥಿಕ ಭದ್ರತೆಯನ್ನು ಮತ್ತು ಸಂಸ್ಥೆಯನ್ನು ನಿರ್ವಹಿಸಲು ಇರಬೇಕಾದ ಹೊಣೆಗಾರಿಕೆ, ಆರ್ಥಿಕ ಮಾನದಂಡ ಮುಂತಾದವುಗಳನ್ನು ಕಡಿಮೆಮಾಡಿ ಜಾರಿಯಲ್ಲಿ ತರಲಾಯಿತು. ಅನೇಕ ಆರ್ಥಿಕವಾಗಿ ಸಬಲವಲ್ಲದ ಸಂಸ್ಥೆಗಳನ್ನು ಸಬಲ ಸಂಸ್ಥೆಗಳೊಂದಿಗೆ ವಿಲೀನಗೊಳಿಸಲಾಯಿತು. ಅಸಮರ್ಥ ಸಂಸ್ಥೆಗಳ ಲೈಸೆನ್ಸ್ ರದ್ದುಪಡಿಸಲಾಯಿತು.

ಈ ಮೇಲಿನ 20 ಬ್ಯಾಂಕಿಂಗ್ ಕಂಪನಿಗಳ ಪೈಕಿ, ಎಸ್. ಬಿ. ಎಂ. ಮತ್ತು ವೈಶ್ಯ ಬ್ಯಾಂಕುಗಳು ಇಂದಿಗೂ ಕಾರ್ಯನಿರ್ವಹಿಸುತ್ತಿವೆ. ಸ್ಥಳೀಯ ದೇವಾಂಗ ಬ್ಯಾಂಕು (1926) 37 ವರ್ಷದ ನಂತರ 1963ರಲ್ಲಿ ವಿಜಯ ಬ್ಯಾಂಕಿನೊಂದಿಗೆ ವಿಲೀನವಾಯಿತು. ದೇವಾಂಗ ಬ್ಯಾಂಕಿನ ಸಂಸ್ಥಾಪಕರಲ್ಲಿ ಐವರು ಬಟ್ಟೆ ವ್ಯಾಪಾರಿಗಳಾಗಿದ್ದರು. ಹತ್ತಿ ವ್ಯಾಪಾರ ಮಾಡುತ್ತಿದ್ದ ರಾವಸಾಹೇಬ ಎಂ. ಹಂಪಯ್ಯನವರು ಈ ಬ್ಯಾಂಕನ್ನು ಆರಂಭಮಾಡಿದ್ದರು. ವೈಶ್ಯ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರು ಮಾರ್ಗಪುರಂ ಚಂಗಯ್ಯ ಚೆಟ್ಟಿಯವರು ಮೈಸೂರು ಆರ್ಯ ವೈಶ್ಯ ಮಹಾಸಭೆಯ ಸ್ಥಾಪಕರು ಮತ್ತು ನಿವೃತ್ತ ಜಿಲ್ಲಾಧಿಕಾರಿಯಾಗಿದ್ದರು.

ಕರ್ನಾಟಕ ಮೂಲದ ಬ್ಯಾಂಕುಗಳಲ್ಲದೇ ಹೊರರಾಜ್ಯಗಳ ಬ್ಯಾಂಕುಗಳು ಅಂದರೆ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ, ಹಿಂದು ಬ್ಯಾಂಕ್ ಆಫ್ ಕರೂರು, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯ, ಇಂಡಿಯನ್ ಬ್ಯಾಂಕ್, ಪಲಾಯಿ ಸೆಂಟ್ರಲ್ ಬ್ಯಾಂಕ್, ಪಂಜಾಬ್ ನಾಷನಲ್ ಬ್ಯಾಂಕ್, ಸೇಲಮ್ ಬ್ಯಾಂಕ್, ಟ್ರಾವಂಕೋರ ಬ್ಯಾಂಕ್, ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್ 1952ರಲ್ಲಿ ಬೆಂಗಳೂರು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಅಲ್ಲದೇ ದಕ್ಷಿಣ ಕನ್ನಡ ಮೂಲದ ಕೆನರಾ, ಸಿಂಡಿಕೇಟು, ಕಾರ್ಪೋರೇಷನ್ ಮತ್ತು ಕರ್ನಾಟಕ ಬ್ಯಾಂಕುಗಳು ತಮ್ಮ ಶಾಖೆಗಳನ್ನು ಈ ಮೊದಲೇ ಆರಂಭಿಸಿದ್ದವು.

ಈ ರಾಜ್ಯದಲ್ಲಿ ವ್ಯಾಪಾರವಾಗಿ ಬೆಳೆಯುತ್ತಿದ್ದ ಬ್ಯಾಂಕಿಂಗ್ ಉದ್ಯಮವನ್ನು ನಿಯಂತ್ರಿಸಲು ಸಹಾಯಕವಾಗುವಂತೆ ಭಾರತೀಯ ರಿಜರ್ವ ಬ್ಯಾಂಕ್ (ಆರ್. ಬಿ. ಐ) 1953ರಲ್ಲಿ ತನ್ನ ಬೆಂಗಳೂರು ಶಾಖೆಯನ್ನು ಆರಂಭಿಸಿತು.

ಸಹಕಾರಿ ವಲಯದ ಬ್ಯಾಂಕುಗಳು

ವಾಣಿಜ್ಯ ಬ್ಯಾಂಕುಗಳಂತೆ ಬೆಂಗಳೂರು ನಗರದಲ್ಲಿ ಅನೇಕ ಸಹಕಾರಿ ವಲಯದ ಬ್ಯಾಂಕುಗಳು ವಿಶೇಷವಾಗಿ ಅರ್ಬನ್ ಕ್ರೆಡಿಟ್ ಸೊಸಾಯಿಟಿಗಳು, ಬ್ಯಾಂಕುಗಳು, ಸಹಕಾರಿ ಚಳವಳಿಯ ಆರಂಭದ ದಶಕಗಳಿಂದಲೇ ಮೂಡಿ ಬಂದಿರುವುವು. ಮೈಸೂರು ಸಹಕಾರಿ ಕಾನೂನು ಆರಂಭದಿಂದಲೇ ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸಾಯ ಸಾಲ ಸಹಕಾರಿ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿದಂತೆ ನಗರ ಪ್ರದೇಶಗಳಲ್ಲಿಯೂ ಅರ್ಬನ್ ಕ್ರೆಡಿಟ್ ಸಹಕಾರಿ ಸಂಘಗಳು ಮೂಡಿಬರಲು ಅನೇಕ ಪೂರಕ ಕ್ರಮಗಳನ್ನು ಕೈಗೊಂಡಿತ್ತು. ಕರ್ನಾಟಕದಲ್ಲಿ ಪ್ರಥಮ ಅರ್ಬನ್ ಕ್ರೆಡಿಟ್ ಕೊ ಆಪರೇಟೀವ್ ಸೊಸಾಯಿಟಿ 18–10–1905ರಲ್ಲಿ ಇಂದಿನ ಗದಗ ಬೆಟಗೇರಿಯಲ್ಲಿ ಆರಂಭಗೊಂಡರೆ, ಬೆಂಗಳೂರು ನಗರದಲ್ಲಿ ಅದೇ ವರ್ಷ ಡಿಸೆಂಬರ್‌ಲ್ಲಿ ಆರಂಭಗೊಂಡ Bangalore City Co-op Credit Society ಮುಂದೆ 1907ರಲ್ಲಿ ಬ್ಯಾಂಕಾಗಿ ಪರಿವರ್ತನೆಗೊಂಡಿತು. ಇದು ನಗರದ ಪ್ರಥಮ ಅರ್ಬನ್ ಕ್ರೆಡಿಟ್ ಕೋ ಆಪರೇಟಿವ್ ಸೊಸ್ಯೆಯಿಟಿ. 1904ರಲ್ಲಿ Bangalore Central Co-op Bank ಆರಂಭಿಸ ಲಾಯಿತು. ಇದು ನಗರದ ಅತ್ಯಂತ ಹಳೆಯ ಪ್ರಮುಖ ಬ್ಯಾಂಕುಗಳಲ್ಲಿ ಒಂದಾಗಿದ್ದು ಹಲವಾರು ಕಾರಣಗಳಿಂದ 2006ರಲ್ಲಿ ಸ್ಥಗಿತಗೊಂಡಿತು. ನಂತರ ಈ ಬ್ಯಾಂಕಿನ ಎಲ್ಲಾ ವ್ಯವಹಾರಗಳನ್ನು ಮುಂಬೈ ಮೂಲದ ಶಾಮರಾವ್ ವಿಠಲ್ ಸಹಕಾರಿ ಬ್ಯಾಂಕ್ (1905) ವಹಿಸಿಕೊಂಡು ಸಮರ್ಪಕವಾಗಿ ಮುನ್ನಡೆಸುತ್ತಿದೆ. ಆರಂಭದ ದಿನಗಳಲ್ಲಿ Central Co-op Bank, ಸಹಕಾರಿ ಸಂಘಗಳಿಗೆ ಹಣಕಾಸಿನ ನೆರವನ್ನು ಒದಗಿಸುವ ಕೇಂದ್ರೀಯ ಹಣಕಾಸು ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿತ್ತು (Central Financing Agency). 1915ರಲ್ಲಿ Mysore Provincial Co-op Bank ಆರಂಭಗೊಂಡ ನಂತರ ಕೇಂದ್ರೀಯ ಹಣಕಾಸು ಸಂಸ್ಥೆಯ ಕಾರ್ಯವನ್ನು ಅದಕ್ಕೆ ವಹಿಸಲಾಯಿತು. ಮುಂದೆ 1927ರಲ್ಲಿ State Co-op Apex Bank ಆರಂಭಗೊಂಡ ನಂತರ Central Co-op Bank ನಗರಕ್ಕೆ ಸೀಮಿತಗೊಂಡು ಒಂದು ಪಟ್ಟಣ ಸಹಕಾರಿ ಬ್ಯಾಂಕಾಗಿ ಮುಂದುವರೆಯಿತು. ಈ ಬ್ಯಾಂಕಿನ ಆರಂಭಕ್ಕೆ ಅಂದಿನ ಮೈಸೂರು ಸರ್ಕಾರದವರು ರೂ. 10000 ಠೇವಣಿ ಮತ್ತು 35000 ಸಾಲ ನೀಡುವ ಮೂಲಕ ಪ್ರೋತ್ಸಾಹಿಸಿದರು 1922–23ರ ಆರಂಭದಲ್ಲಿ ಮೈಸೂರು ಬ್ಯಾಂಕಿನ ಅಧ್ಯಕ್ಷರಾದ ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು ಇದರ ಅಧ್ಯಕ್ಷರಾಗಿ ಇದರ ಅಭಿವೃದ್ಧಿಗೆ ಕಾರಣಕರ್ತರಾಗಿದ್ದರು. ಇನ್ನುಳಿದಂತೆ ಬೆಂಗಳೂರು ನಗರದಲ್ಲಿ ಅನೇಕ ಪಟ್ಟಣ ಸಹಕಾರ ಬ್ಯಾಂಕುಗಳು ಮೂಡಿಬಂದವು. ಅವುಗಳಲ್ಲಿ ಬಹುಪಾಲು ಇಂದಿಗೂ ಕಾರ್ಯ ನಿರ್ವಹಿಸುತ್ತಿರುವುದು ಪ್ರಮುಖವಾಗಿ ಭಾವಸಾರ ಕ್ಷತ್ರಿಯ ಸ.ಸ.ಬ್ಯಾಂಕ್ (1916), ಮಲ್ಲೇಶ್ವರಂ ಸ.ಸ. ಬ್ಯಾಂಕ್ (1920), ಧಾನ್ಯ ವರ್ತಕರ ಸಹಕಾರಿ ಬ್ಯಾಂಕ್ ಜಿ. ಎಂ. ಸಿ (1927); Comptroller Office Employees Credit Society 1916 (1967 ರಲ್ಲಿ ಬ್ಯಾಂಕಾಯಿತು); Mysore State Land Mortgage Bank, 1929; ಕರ್ನಾಟಕ ರಾಜ್ಯ ಸಹಕಾರಿ ಕೈಗಾರಿಕಾ ಬ್ಯಾಂಕ್, 1952; A.G. Office and RBI Office Employees Co-op Bank, 1955; ಮತ್ತು ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ 1955. ಇವುಗಳು ಬೆಂಗಳೂರು ನಗರದ 1956ರ ಪೂರ್ವದ ಪ್ರಮುಖ ಸಹಕಾರಿ ಬ್ಯಾಂಕಿಂಗ್ ಸಂಸ್ಥೆಗಳು. ಇಂದು ರಾಜ್ಯದಲ್ಲಿಯೇ ಅತ್ಯಂತ ಹೆಚ್ಚಿನ ಸಂಖ್ಯೆಯ ಪಟ್ಟಣ ಸಹಕಾರಿ ಬ್ಯಾಂಕುಗಳು (52) ಬೆಂಗಳೂರು ನಗರದಲ್ಲಿ ಇವೆ. ಇವುಗಳಲ್ಲಿ ಕೆಲವು ಬ್ಯಾಂಕುಗಳು Scheduled ಬ್ಯಾಂಕಿನ ಸ್ಥಾನ ಮಾನಗಳನ್ನು ಹೊಂದಿರುವುದಲ್ಲದೇ. ನಗರದಲ್ಲಿ ವ್ಯಾಪಕವಾದ ಶಾಖೆಗಳ ಜಾಲವನ್ನು ಸಹ ಹೊಂದಿವೆ.

ಗ್ರಂಥಾವಲೋಕನ

1. ಕರ್ನಾಟಕ ಸಹಕಾರಿ ಕೈಪಿಡಿ, ಭಾರತಿ ಪ್ರಕಾಶನ; ಬೆಂಗಳೂರು 1972.
2. ಬೆಂಗಳೂರು ಜಿಲ್ಲಾ ಗ್ಯಾಸೆಟಿಯರ್, 1990.
3. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಸಂಪುಟ.1, 1982.
4. Directory of Urban Co-op Bank, Karnataka Urban Bank Federation; Bangalore, 1995.
5. ಬೆಂಗಳೂರು ದರ್ಶನ ಸಂಪುಟ.1; ಉದಯಭಾನು ಕಲಾಸಂಘ, ಬೆಂಗಳೂರು–2005.
6. ಪತ್ರಿಕಾ ಪ್ರಕಟಣೆಗಳು.

ಅನುಬಂಧ – 1

1876ರಲ್ಲಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬ್ಯಾಂಕಿಂನ ಕಂಪನಿಗಳ ವಿವರಣೆ.

ಕ್ರಮ. ಸಂಖ್ಯೆ	ಬ್ಯಾಂಕಿಂಗ್ ಕಂಪನಿಯ ಹೆಸರು	ನೋಂದಣಿ ವರ್ಷ	ಷೇರು ಬಂಡವಾಳ ರೂಗಳಲ್ಲಿ
1	ಬೆಂಗಳೂರು ಬ್ಯಾಂಕ್	1868	700000
2	ಮೈಸೂರು ಬ್ಯಾಂಕ್ ಕಾರ್ಪೋರೇಷನ್	1868	200000
3	ಹಿಂದು ದ್ರವ್ಯ ಶೇಖರನಿಧಿ	1869	50,000
4	ಕರ್ನಾಟಕ ಬ್ಯಾಂಕ್	1869	150000
5	ಹಿಂದು ಬ್ಯಾಂಕ್	1870	200000
6	ಮಹಾರಾಷ್ಟ್ರ ಬ್ಯಾಂಕ್	1871	50,000
7	ಟೌನ್ ಬ್ಯಾಂಕ್	1871	50,000
8	ಪೇಟೆ ಮರ್ಚೆಂಟ್ ಬ್ಯಾಂಕ್	1872	300000
9	ಧನಾದಿ ವೃದ್ಧಿ ಬ್ಯಾಂಕ್	1872	25000
10	ಬೇಲಿ ಬ್ಯಾಂಕ್	1872	20000
11	ಅಲಸೂರು ಬ್ಯಾಂಕ್	1873	50000
12	ಕಮರ್ಷಿಯಲ್ ಬ್ಯಾಂಕ್	1873	50000
13	ಕಲ್ಯಾಣ ಪುರಿ ಬ್ಯಾಂಕ್	1873	100000
14	ಮುರಹರಸ್ವಾಮಿ ಬ್ಯಾಂಕ್	1874	20000
15	ಅಲಸೂರು ಜನೋಪಕಾರ ಬ್ಯಾಂಕ್	1874	20000
16	ಯುನೈಟೆಡ್ ನೇಟಿವ್ ಬ್ಯಾಂಕ್	1874	50000

17	ಲಕ್ಷ್ಮೀ ವಿಲಾಸ ಬ್ಯಾಂಕ್	1875	50000
18	ಅಲಸೂರು ಹಿಂದು ಪಂಥ	1875	20000
19	ಅಲಸೂರು ಹಿಂದು ದ್ರವ್ಯ ಪೋಷಿಣಿ ಸಂಗಮ್	1875	40000
20	ಕಂಟೋನ್‌ಮೆಂಟ್ ಕ್ಯಾಮಿರಿ ಕೋಡ್ ಸೇವಿಂಗ್ಸ್ ಬ್ಯಾಂಕ್	1875	50000
21	ಪ್ರೊವಿನ್ಸಿಯಲ್ ಬ್ಯಾಂಕ್	1875	100000
22	ದೊಡ್ಡ ಪೇಟೆ ರಾಜಧಾನಿ ಬ್ಯಾಂಕ್	1875	20000
23	ಕಂಟೋನ್‌ಮೆಂಟ್ ಜನರಲ್ ಬ್ಯಾಂಕ್	1875	50000
24	ಕೃಷ್ಣರಾಜೇಂದ್ರ ಬ್ಯಾಂಕ್	1876	2000

46. ಬೆಂಗಳೂರಿನಲ್ಲಿ ಸಾಹಿತ್ಯದ ಬೆಳವಣಿಗೆ

ಶ್ರೀ ಬೆಳ್ಳೂರು ವೆಂಕಟಪ್ಪ

1911ರಲ್ಲಿ ಪಂಜೆ ಮಂಗೇಶರಾಯರು ಬರೆದ ಕನ್ನಡದ ಮೊಟ್ಟ ಮೊದಲ ಸ್ವಾತಂತ್ರ್ಯ ಆಧುನಿಕ ಕವಿತೆ 'ಹೊಲೆಯನು ಯಾರು'ಗೆ ನೂರು ವರ್ಷ ತುಂಬಿದೆ. 1911ಕ್ಕಿಂತಲೂ ಹಿಂದಕ್ಕೆ ಕನಿಷ್ಟ ನೂರು ವರ್ಷಗಳಲ್ಲಿ ಬೆಂಗಳೂರು ಆಧುನಿಕವಾಗಿತ್ತು. ಆದರೆ ಸಾಹಿತ್ಯ ಮಾತ್ರ ತನ್ನ 1000 ವರುಷಗಳ ಪರಂಪರೆಯನ್ನು ಚಾಚೂತಪ್ಪದೇ ಅನುಸರಿಸುತ್ತಾ ಬಂದಕಾರಣ ಆಧುನಿಕಗೊಂಡಿರಲಿಲ್ಲ. ಹಾಗಾಗಿ ಕನ್ನಡ ಸಾಹಿತ್ಯವೇ ಆಧುನಿಕಗೊಂಡಿರದೇ ಇದ್ದಾಗ 1911ಕ್ಕಿಂತ ಹಿಂದಿನ ಆಧುನಿಕ ಬೆಂಗಳೂರಿನ ಸಾಹಿತ್ಯದ ಬೆಳವಣಿಗೆ ಮಹತ್ವದ್ದಲ್ಲ ಎಂದೇ ಹೇಳಬೇಕು. ಆದರೂ–ಪ್ರಾಚೀನ ಕನ್ನಡ ಸಾಹಿತ್ಯವನ್ನು, ಪ್ರಾಚೀನ ಶಾಸನ ಸಂಪತ್ತಿಯನ್ನು ಸಂಶೋಧಿಸಿ, ಸಂಪಾದಿಸಿಕೊಟ್ಟ ಅನೇಕ ವಿದ್ವಾಂಸರ ಕೆಲಸ ಆ ನೂರುವರುಷಗಳಲ್ಲಿ ಜರುಗಿದೆ. ಇದು ಶ್ಲಾಘನೀಯ ವಿಚಾರ. ಹಲ್ಮಿಡಿ ಶಾಸನ, ಕಪ್ಪೆಅರೆಭಟ್ಟನಶಾಸನ, ಕುವರಲಕ್ಷ್ಮಣನ ಶಾಸನ, ಬೆಳ್ತೂರು ಶಾಸನ, ಶ್ರವಣಬೆಳಗೊಳದ ಶಾಸನಗಳು–ಹೀಗೆ ನೂರಾರು ಕನ್ನಡದ ಶಾಸನಗಳನ್ನು ಸಂಶೋಧಿಸಿದ ಕಾಲ ಇದಾಗಿತ್ತು. ಹಾಗೆಯೇ ಪಂಪಭಾರತ, ಕವಿರಾಜಮಾರ್ಗ, ವಡ್ಡಾರಾಧನೆ, ಆದಿಪುರಾಣ, ಶಬ್ದಮಣಿದರ್ಪಣ, ಯಶೋಧರ ಚರಿತ್ರೆ, ನಾಗಚಂದ್ರನ ರಾಮಚಂದ್ರಚರಿತಪುರಾಣ, ವಚನಗಳು, ಕುಮಾರವ್ಯಾಸಭಾರತ, ಭರತೇಶವೈಭವ, ಕೀರ್ತನೆಗಳು– ಹೀಗೆ ಕನ್ನಡದ ಪ್ರಾಚೀನ ಸಾಹಿತ್ಯವನ್ನು ಆಧುನಿಕ ಕಾಲಕ್ಕೆ ಉಳಿಸಿದ ವಿದ್ವಾಂಸರು ಈ ಕಾಲದವರು. ಅಷ್ಟೇ ಅಲ್ಲ ಅವರಲ್ಲಿ ಹೆಚ್ಚಿನವರು ಬೆಂಗಳೂರಿನಲ್ಲಿ ನೆಲೆಸಿದ್ದವರು ಮತ್ತು ಕ್ರಿಶ್ಚಿಯನ್ ಪಾದ್ರಿಗಳಾಗಿದ್ದರು ಎಂಬುದು ವಿಶೇಷ. ಕಿಟೆಲ್, ಬಿ.ಎಲ್. ರೈಸ್, ಮೊಗ್ಲಿಂಗ್, ಎಂ. ಎಚ್. ಕೃಷ್ಣ, ನಂದಿಮಠ, ಹಳಕಟ್ಟಿ ಇಂಥ ನೂರಾರು ಹೆಸರುಗಳನ್ನು ಸ್ಮರಿಸಬಹುದು. ಪ್ರಾಚೀನ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಆಧುನಿಕ ಜಗತ್ತಿಗೆ ಪರಿಚರಿಸಿದ ಈ ವಿದ್ವಾಂಸರ ಕೊಡುಗೆಯನ್ನು ನಾವು ಸ್ಮರಿಸಬೇಕು.

ಬೆಂಗಳೂರು ಬ್ರಿಟಿಷರ ಕೇಂದ್ರವಾಗಿತ್ತು. ಆಧುನಿಕ ಸರ್ಕಾರಗಳಿಗೂ ರಾಜಧಾನಿಯಾಗಿದೆ. ಆದ್ದರಿಂದಲೇ ಸರ್ಕಾರಿ ಉದ್ಯೋಗಿಗಳೆಲ್ಲ ಬೆಂಗಳೂರಿನಲ್ಲೇ ಇದ್ದವರಾಗಿದ್ದರು. ಈ ಹಿಂದಿನ 200 ವರ್ಷಗಳ ಬೆಂಗಳೂರಿನ ಚರಿತ್ರೆಯನ್ನು ಗಮನಿಸಿದರೆ ಇದು ನಿಜವೆನಿಸುತ್ತದೆ. ಸಾಮಾನ್ಯವಾಗಿ ಆ ಕಾಲಕ್ಕೆ ಅಕ್ಷರಸ್ಥ ಜನರೆಲ್ಲ ಉದ್ಯೋಗಿಗಳೇ ಆಗಿದ್ದರು. ಈ ಉದ್ಯೋಗಿಗಳ ಇರುವಿಕೆ ಬೆಂಗಳೂರಿನಲ್ಲಿ ಸಾಹಿತ್ಯದ ಬೆಳವಣಿಗೆಗೆ ದಾರಿಯಾಯಿತು ಎಂದು ತಿಳಿದಿದ್ದೇನೆ. ಅಲ್ಲದೆ ಆರಂಭದಲ್ಲೂ ಬೆಂಗಳೂರು ವಿದ್ಯಾನಿಲಯದಲ್ಲಿ ಬೋಧಿಸುತ್ತಿದ್ದವರೇ ಹೆಚ್ಚಾಗಿ ಕನ್ನಡ ಸಂಶೋಧನೆ, ಸಾಹಿತ್ಯದ ಬೆಳವಣಿಗೆಯಲ್ಲಿ ತೊಡಗಿಸಿಕೊಂಡಿದ್ದವರು. ಆನಂತರದ ದಿನಗಳಲ್ಲಿ ವಿದ್ಯಾರ್ಥಿಗಳೆಲ್ಲಾ ಬರವಣಿಗೆಯನ್ನು ಮುಂದುವರಿಸಿದರು. ಇದು ಸ್ವತಂತ್ರಪೂರ್ವದಲ್ಲಿ ಇದ್ದ ಸ್ಥಿತಿ. ಈಗಲೂ ನಾವು ಬೆಂಗಳೂರಿನ ಪರಿಸರದಲ್ಲಿ ಗುರುಶಿಷ್ಯರ ಪರಂಪರೆಯನ್ನು ಕಾಣಬಹುದು. ಚಿದಾನಂದಮೂರ್ತಿ, ಜಿ. ಎಸ್. ಶಿವರುದ್ರಪ್ಪ, ಪಿ. ಲಂಕೇಶ್– ಇಂಥ ದೊಡ್ಡ ಸಾಹಿತಿಗಳ ಸುತ್ತ ದೊಡ್ಡ ಶಿಷ್ಯವರ್ಗದ ಲೇಖಕರೇ ಇದ್ದಾರೆ. ಕೆ. ವಿ. ಎನ್, ಸಿ. ವೀರಣ್ಣ, ಎಚ್.ಎಸ್.ಆರ್, ಸಿ.ಜಿ.ಕೆ, ಡಿ. ಆರ್. ನಾಗರಾಜು ಇಂಥ ಸಾಹಿತ್ಯ–ಸಂಸ್ಕೃತಿ–ಭಾಷೆ ಚಿಂತಕರೆಲ್ಲ ಶಿಷ್ಯ ವರ್ಗದ ಅಗ್ರಗಣ್ಯರಾಗಿದ್ದಾರೆ. ಈ ಶಿಷ್ಯವರ್ಗದ ಅಗ್ರಗಣ್ಯರು ಸೃಷ್ಟಿಸಿರುವ ಹೊಸ ತಲೆಮಾರಿನ ಲೇಖಕರು ಇವತ್ತಿನ ಕನ್ನಡದ ಬಹುಮುಖ್ಯ ಚಿಂತಕರೆನಿಸಿದ್ದಾರೆ. ಈ ಪೈಕಿ ಎಲ್. ಎನ್. ಮುಕುಂದರಾವ್, ಕೆ. ವೈ. ನಾರಾಯಣಸ್ವಾಮಿ, ರಾಮಲಿಂಗಪ್ಪ ಬೇಗೂರು–ಇಂಥ ನೂರಾರು ಹೆಸರುಗಳನ್ನು ಪಟ್ಟಿಮಾಡುತ್ತಾ ಹೋಗಬಹುದು.

ಕನ್ನಡ ನವೋದಯ ಸಾಹಿತ್ಯ ಪಂಥ ಉಳಿದು ಬೇರೆಲ್ಲ ಪಂಥಗಳು ಹುಟ್ಟಿದ್ದು ಬೆಂಗಳೂರಿನಲ್ಲಿ ಎಂಬುದು ಆಶ್ಚರ್ಯ. ನಗರದ ಒತ್ತಡ–ವ್ಯತ್ಯಾಸದ ಮನಸ್ಸುಗಳ ನಡುವೆ ಸೃಜನಶೀಲ ಸಾಹಿತ್ಯ ಪಂಥಗಳು ಹುಟ್ಟಿ ಬೆಳೆದದ್ದು ಹೆಮ್ಮೆಯ ವಿಚಾರ. ಆದರೆ, ಈ ಸೃಜನಶೀಲ ಮನಸ್ಸುಗಳೆಲ್ಲ ಹಳ್ಳಿಯಿಂದ ಬಂದವರು ಎಂಬುದನ್ನೂ ಮರೆಯಬಾರದು. ಏನೇ ಇರಲಿ ಆಧುನಿಕ ಸಾಹಿತ್ಯದ ಬೆಳವಣಿಗೆಗೆ ಬೆಂಗಳೂರಿನ ಕೊಡುಗೆ ಅನನ್ಯವಾದುದು. ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಸಾಹಿತ್ಯ ಚಳವಳಿಗಳು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವು ಎಂಬುದು ಸೂರ್ಯಸತ್ಯ. ಅಷ್ಟೇ ಅಲ್ಲ, ಕನ್ನಡ ಚಳವಳಿ, ಪರಿಸರಗಳ ಚಳವಳಿ, ದಲಿತ ಚಳವಳಿ, ಶೂದ್ರಚಳವಳಿಗಳಿಗೂ ಬೆಂಗಳೂರೇ ಆವಾಸಸ್ಥಾನ. ಆದ್ದರಿಂದ ಸ್ವಾತಂತ್ರೋತ್ತರ ದಿನಗಳಲ್ಲಿ ಬೆಂಗಳೂರು ಬಹುವಿಧದಲ್ಲಿ ಕನ್ನಡ ಸಂಸ್ಕೃತಿಗೆ ಜೀವತುಂಬಿದೆ ಎಂಬುದನ್ನು ಮರೆಮಾಚುವಂತಿಲ್ಲ.

ನವೋದಯ ಬೆಂಗಳೂರಿನ ಹೊರಗಿನ ಪರಿಸರದಲ್ಲಿ ಹುಟ್ಟಿ ಬೆಳೆದರೂ–ಅನೇಕ ನವೋದಯ ಕವಿಗಳು ಬೆಂಗಳೂರಿನಲ್ಲಿ ಇದ್ದರು. ಕೆ. ಎಸ್. ನರಸಿಂಹಸ್ವಾಮಿ, ಜಿ.ಎಸ್. ಶಿವರುದ್ರಪ್ಪ, ಎಂ. ವಿ. ಸೀತಾರಾಮಯ್ಯ,

ವಿ. ಸೀತಾರಾಮಯ್ಯ, ನಿಸಾರ್ ಅಹಮದ್, ಡಿವಿಜಿ–ಇವರೆಲ್ಲ ಬೆಂಗಳೂರಿನ ಪರಿಸರದಲ್ಲಿ ನವೋದಯ ಸಾಹಿತ್ಯಕ್ಕೆ ನೀರೆರೆದರು. ಸ್ವಲ್ಪಕಾಲ ಬಿ.ಎಂ.ಶ್ರೀ ಅವರು ಕಾರ್ಯನಿಮಿತ್ತ ಬೆಂಗಳೂರಿನಲ್ಲಿ ವಾಸವಿದ್ದರು ಎನ್ನಲಾಗಿದೆ. ಜಗತ್ತಿನ ಯುದ್ಧಗಳು, ಬರಗಾಲಗಳು, ಆಧುನಿಕ ನಗರಗಳು ಸೃಷ್ಟಿಸಿದ ನರಕಗಳು, ಶ್ರಮ ಸಮುದಾಯದ ಕೊಟ್ಯಾನು ಕೋಟಿ ಸಮಸ್ಯೆಗಳನ್ನು ಕಂಡುಂಡವರು ನಮ್ಮ ಪ್ರಗತಿಶೀಲರು. ಇಂಥ ಸಾಮಾಜಿಕ ವಿಷಯಗಳನ್ನು ವಸ್ತುವಾಗಿಸಿ ಕತೆ–ಕಾದಂಬರಿಗಳನ್ನು ಬರೆದು ಬೀದಿ ಸುತ್ತಾತ್ತಾ ಕನ್ನಡವನ್ನು ಕಟ್ಟಿದರು. ಈ ಪಂಥದ ಅಗ್ರಗಣ್ಯ ನೇತಾರದಲ್ಲಿ ಅನಕೃ, ನಿರಂಜನ ಪ್ರಮುಖರು. ಇವರಿಬ್ಬರ ಸಹವರ್ತಿಯಲ್ಲಿ ಕನ್ನಡ ಪ್ರಗತಿಶೀಲ ಸಾಹಿತ್ಯ ಒಂದು ಮಹತ್ತರ ಹೆಜ್ಜೆಯಾಯಿತು. ಬೆಂಗಳೂರಿನ ಆಧುನಿಕ ಪರಿಸರದಲ್ಲಿ ಇಂಥ ಚಳವಳಿಯನ್ನು ಕಟ್ಟಿ ಬೆಳೆಸಿದ ಕೀರ್ತಿ ಈ ಮಹನೀಯರದು. ಇವರ ಅನುಯಾಯಿಗಳಾಗಿದ್ದ ಅನೇಕರು ಸಾಹಿತ್ಯ ಕೃಷಿ ಮಾಡಿದ್ದಾರೆ. ಇವರು ಕಟ್ಟಿದ್ದ ಸಾಹಿತ್ಯ ಚಳವಳಿ ಇವತ್ತಿಗೂ ಕನ್ನಡದ ವ್ಯಕ್ತಿಯಾಗಿದೆ. ಅಷ್ಟೇ ಅಲ್ಲದೇ, ಮುಂದಿನ ಸಾಹಿತ್ಯ ಪಂಥಗಳಿಗೆ ಒಂದು ದಿವ್ಯಮಾರ್ಗವನ್ನು ತೋರಿಸಿದ್ದೂ ಈ ಪಂಥದ ಹೆಗ್ಗಳಿಕೆ ಎಂದೇ ಹೇಳಬೇಕು. ಮುಂಬಯಿ ಪರಿಸರದಿಂದ ಪ್ರಗತಿಶೀಲ ಚಳವಳಿಯಲ್ಲಿ ಗುರುತಿಸಿಕೊಂಡ ವ್ಯಾಸರಾಯ ಬಲ್ಲಾಳರು ಈಗ ಬೆಂಗಳೂರಿನಲ್ಲಿಯೇ ನೆಲೆ ನಿಂತಿದ್ದಾರೆ. ಹೀಗೆ ಎಷ್ಟೋ ಲೇಖಕರು ಉದ್ಯೋಗ ನಿಮಿತ್ತ ಹೊರಗಿನ ಪರಿಸರದಲ್ಲಿ ಇದ್ದವರೆಲ್ಲ ಬೆಂಗಳೂರಿನಲ್ಲಿ ಬಂದು ನೆಲೆಸಿರುವುದನ್ನು ಕಾಣಬಹುದು. ಪ್ರಗತಿಶೀಲ ಕಾಲದಲ್ಲಿ ಬರೆದ ಇನ್ನೂ ಅನೇಕ ಲೇಖಕರ ಹೆಸರುಗಳನ್ನು ಇಲ್ಲಿ ಹೇಳಬಹುದು. ಕುಮಾರ ವೆಂಕಟಪ್ಪ, ಅನುಪಮಾ ನಿರಂಜನ, ಮ.ರಾಮಮೂರ್ತಿ, ಕೊ. ಚೆನ್ನಬಸಪ್ಪ ಇನ್ನೂ ಅನೇಕ ಬೆಂಗಳೂರಿನ ಸಾಹಿತಿಗಳು ಪ್ರಗತಿಶೀಲ ಪಂಥದಲ್ಲಿ ಗುರುತಿಸಿಕೊಂಡಿದ್ದರು. ನವ್ಯದ ಅಗ್ರಗಣ್ಯ ಕವಿಗಳೆಲ್ಲ ಬೆಂಗಳೂರಿನಲ್ಲಿ ವಾಸವಿದ್ದರು ಎಂದು ಹೇಳುವುದು ತುಂಬ ಸಂತಸದ ವಿಚಾರ. ಕನ್ನಡಕ್ಕೆ ನವನವೀನ ಆಯಾಮವನ್ನು, ವಿಭಿನ್ನ ಚಿಂತನೆಯನ್ನು ಹೊಚ್ಚಹೊಸ ಶೈಲಿಯನ್ನು ಪರಿಚಯಿಸಿದವರು ಈ ನವ್ಯರು. ಹೆಸರೇ ಸೂಚಿಸುವಂತೆ ಇವರದು Modernism. ಹಾಗಾದರೇ, ಈ ಹಿಂದಿನ ತನ್ನ ಸಾಹಿತ್ಯ modern ಆಗಿರಲಿಲ್ಲವೇ? ಆಗಿತ್ತು. ಆದರೆ ಅದು Romanticism ರೂಪದ್ದಾಗಿತ್ತು. ಆದರೆ ನವ್ಯರದು Realistic ಸ್ವರೂಪದ ಎರಡನೇ ಘಟ್ಟದ ಆಧುನಿಕ ಸಾಹಿತ್ಯವಾಗಿತ್ತು. ಆಧುನಿಕ ಕನ್ನಡ ಸಾಂಸ್ಕೃತಿಕ ನವ್ಯ ಪಂಥ ನೀಡಿದ್ದ ಸ್ಪರ್ಶ ತುಂಬಾ ಬೆಲೆಯುಳ್ಳದ್ದು. ನಾನು ಆಧುನಿಕ ಬೆಂಗಳೂರಿನ ನಿಜವಾದ ಆಧುನಿಕ ಸಾಹಿತ್ಯ ಎಂದು ಹೇಳಲು ಇಷ್ಟ ಪಡುತ್ತೇನೆ. ಗೋಪಾಲಕೃಷ್ಣ ಅಡಿಗರ ಮತ್ತು ವಿನಾಯಕ ಕೃಷ್ಣ ಗೋಕಾಕರ ಸಂಸರ್ಗದಲ್ಲಿ ಅರಳಿದ ನವ್ಯಕ್ಕೆ ಅನೇಕ ಹೊಸಕಾಲೀನ ಲೇಖಕರು ಚಿಟ್ಟೆಗಳಂತೆ ಮುತ್ತಿದರು. ಈ ಪೈಕಿ ಪಿ. ಲಂಕೇಶ್, ಯು.ಆರ್. ಅನಂತಮೂರ್ತಿ

ಕಾರ್ನಾಡ್, ಸುಮತೀಂದ್ರ ನಾಡಿಗ್, ತೇಜಸ್ವಿ, ಬಿ. ಸಿ. ರಾಮಚಂದ್ರಶರ್ಮ, ಚಂದ್ರಶೇಖರ ಕಂಬಾರ, ಎಕ್ಕುಂಡಿ, ಗಂಗಾಧರ ಚಿತ್ತಾಲ, ಚಂಪಾ ಹೆಸರಿಸಲೇ ಬೇಕಾದ ಮುಖ್ಯರು. ಈ ತಲೆಮಾರಿನ ಸಾಹಿತ್ಯ ಪಂಥ ಇಂದಿಗೂ ಕನ್ನಡಕ್ಕೆ ಮಾದರಿಯಾಗಿಯೇ ಉಳಿದುಕೊಂಡು ಬೆಳೆಯುತ್ತಾ ಬಂದಿದೆ. ಈ ನವ್ಯ ತಲೆಮಾರಿನ ಕವಿಗಳನ್ನು ನವ್ಯ ಕವಿತೆ ಬಂಧಿಸಿದೆ. ಈಗ ಬರೆಯುತ್ತಿರುವ ಎನ್. ಎನ್. ಮುಕುಂದರಾವ್, ನಾಗತ್ತಿಹಳ್ಳಿ ರಮೇಶ್, ವಿ. ಎಂ. ಮಂಜುನಾಥ್, ಬಿ. ಆರ್. ಲಕ್ಷ್ಮಣರಾವ್, ಎಸ್. ಎನ್. ವೆಂಕಟೇಶಮೂರ್ತಿ, ವಿ. ಆರ್. ಕಾರ್ಪೆಂಟರ್,

ಎಚ್. ಎಲ್, ಪುಷ್ಪ, ಆರ್. ಜಿ. ಹಳ್ಳಿ ನಾಗರಾಜ, ಬೇಗೂರು ರಾಮಲಿಂಗಪ್ಪ, ಜಯಶಂಕರ್ ಹಲಗೂರು, ನಟರಾಜ್ ಹುಳಿಯಾರ್, ಎಸ್. ಜಿ. ಸಿದ್ಧರಾಮಯ್ಯ, ಎಲ್. ಹನುಮಂತಯ್ಯ ಮುಂತಾದ ಹಿರಿ–ಕಿರಿಯ ಕವಿಗಳು ಕವಿಯತ್ರಿಯರು ನವ್ಯದ ಸೊಬಗಿನಲ್ಲಿ ಕವಿತೆ ಬರೆಯುವುದನ್ನು ಕಾಣಬಹುದು. ಇನ್ನೂ ಹೇಳಲೇಬೇಕಾದ ವಿಚಾರವೆಂದರೆ ಕನ್ನಡದ ಬಂಡಾಯ ಮತ್ತು ದಲಿತ ಸಾಹಿತ್ಯಕ್ಕೆ ಬೆಂಗಳೂರಿನ ಪರಿಸರವೇ ಮೂಲ ನೆಲೆ. ಬರಗೂರು ರಾಮಚಂದ್ರಪ್ಪ ಈ ಚಳವಳಿಯ ಪ್ರೇರಕರೆನ್ನಬಹುದು. ಬಂಡಾಯದಿಂದ ಕವಲೊಡೆದ ದಲಿತ ಸೂತ್ರದಲ್ಲಿ ಸಿದ್ಧಲಿಂಗಯ್ಯ, ಎಲ್. ಹನುಮಂತಯ್ಯ ಅಗ್ರಗಣ್ಯರು, ಎರಡನೇ ತಲೆಮಾರಿನವರಾದ ಸುಬ್ಬು ಹೊಲೆಯೂರ್, ವಡ್ಡಗೆರೆ ನಾಗರಾಜಯ್ಯ, ಎಲ್. ಆನಂದ್ ಮುಂತಾದವರನ್ನು ಇಲ್ಲಿ ಹೆಸರಿಸಬೇಕು. ಆದರೆ ನವ್ಯದ ರೀತಿ ಬಂಡಾಯ ದಲಿತ ಸಾಹಿತ್ಯ ಮುಂದಿನ ತಲೆಮಾರನ್ನು ಸೃಷ್ಟಿಸಲಿಲ್ಲ ಎಂಬುದನ್ನು ಒಪ್ಪಬೇಕು. ಇದು ಈ ಸಾಹಿತ್ಯ ಪಂಥದ ವಿಫಲತೆಯನ್ನು ಸೂಚಿಸುತ್ತದೆ.

ಇಷ್ಟಲ್ಲದೇ ಬಂಡಾಯದಲ್ಲಿ ಮಹಿಳಾ ಸಂವೇದನೆ ಮತ್ತು ಮುಸ್ಲಿಂ ಸಂವೇದನೆ ಸಾಹಿತ್ಯವನ್ನೂ ಗುರುತಿಸಬಹುದು. ಬಿ. ಟಿ. ಲಲಿತಾ ನಾಯಕ್, ಮಹಿಳಾ ಧ್ವನಿಯಾಗಿರುವ ಲೇಖಕಿಯರಲ್ಲಿ ಮುಖ್ಯರು. ಸೃಜನೇತರ ಕ್ಷೇತ್ರದಲ್ಲಿ, ಅಂದರೆ ವಿಮರ್ಶೆ, ಸಂಶೋಧನೆ, ಭಾಷಾವಿಜ್ಞಾನ, ಅನುವಾದ, ಸಂಪಾದನೆ, ಸಂಕೀರ್ಣ– ಈ ಬಗೆಯ ಸಾಹಿತ್ಯ ನಿರ್ಮಿಸುತ್ತಿರುವ ಲೇಖಕರ ದೊಡ್ಡ ಪಡೆಯೇ ಆಧುನಿಕ ಬೆಂಗಳೂರಿನಲ್ಲಿ ನೆಲೆನಿಂತಿದೆ. ಈ ಪೈಕಿ ಈ ಸಮ್ಮೇಳನದ ಅಧ್ಯಕ್ಷರಾಗಿರುವ ಚಿದಾನಂದ ಮೂರ್ತಿ ಒಂದು ಮೇರು ಪರ್ವತ. ಅವರು ಈ ವಯಸ್ಸಿನಲ್ಲೂ ಅನೇಕ ಮೈಚಳಕ್ ಎನ್ನಿಸುವಂಥ ಸಂಶೋಧನೆಯನ್ನು ಮಾಡುತ್ತಿದ್ದಾರೆ. ಇವತ್ತಿನ ಅನೇಕ ಹೊಸಕಾಲದ ಪ್ರಯೋಗಗಳಿಗೆ ಸವಾಲಾಗಿಯೂ ತಮ್ಮ ವಾದ ಮಂಡಿಸುತ್ತಿದ್ದಾರೆ. ಇಂಥ ಹಿರಿಯರ ಅನುಭವವನ್ನೂ ಅನುಮಾನದಿಂದ ನೋಡಲಾಗದು. ಭಾಷಾ ವಿಜ್ಞಾನ ಕ್ಷೇತ್ರದಲ್ಲಿ, ಕನ್ನಡ ಶಾಸನ ಅಧ್ಯಯನ ಕ್ಷೇತ್ರದಲ್ಲಿ, ಕನ್ನಡ ಸಾಂಸ್ಕೃತಿಕ ಅಧ್ಯಯನ ಕ್ಷೇತ್ರದಲ್ಲಿ ಚಿ. ಮೂ. ಅವರ ಹೆಜ್ಜೆ ಗುರುತುಗಳು ಅಳಿಸಲಾರದವು. ಇಂಥ ಕನ್ನಡದ ಶಕ್ತಿ ಈ ಹೊತ್ತಿನಲ್ಲಿ ಹೇಳುವ ಅನೇಕ ವಿವಾದಾತ್ಮಕ ಹೇಳಿಕೆಗಳನ್ನು ಟೀಕಿಸುವ ಮುನ್ನ ಯೋಚಿಸಬೇಕಾಗಿದೆ. ಇದೇ ಸಾಲಿನಲ್ಲಿ, ಚಿ. ಮೂ. ಅವರ ಶಿಷ್ಯ ಕೋಟಿಯೂ ಕೆಲಸ ಮಾಡುತ್ತಾ ಬಂದಿದೆ. ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸ ಆಯಾಮವನ್ನು ನೀಡಿದ ಸಿ. ವೀರಣ್ಣ, ಆಧುನಿಕ ಭಾಷಾ ವಿಜ್ಞಾನಕ್ಕೆ ನವೀನ ಚಿಂತನೆಗಳನ್ನು ಒದಗಿಸುತ್ತಿರುವ ಕೆ. ವಿ. ನಾರಾಯಣ್, ಭಾಷಾ ವಿಜ್ಞಾನದ ಜ್ಞಾನ ಭಂಡಾರವೇ ಆಗಿರುವ ಹಂಪ ನಾಗರಾಜಯ್ಯ, ನರಹಳ್ಳಿ ಬಾಲಸುಬ್ರಹ್ಮಣ್ಯ, ಸಿ. ಎನ್. ರಾಮಚಂದ್ರನ್, ಡಿ. ಆರ್. ನಾಗರಾಜು, ಎಂ. ಎಚ್. ಕೃಷ್ಣಮೂರ್ತಿ, ಸಾ. ಶಿವರಾಜಯ್ಯ, ಎಲ್. ಎನ್. ಶೇಷಾದ್ರಿರಾವ್, ಬಸವರಾಜು ಕಲ್ಗುಡಿ ಇಂಥ ಘಟಾನುಘಟಿ ವಿದ್ವಾಂಸರು ಈ ಆಧುನಿಕ ಬೆಂಗಳೂರಿನ ಕನ್ನಡದ ಮುತ್ತು ರತ್ನಗಳು ಎಂದೇ ಹೇಳಬೇಕು. ಇಷ್ಟಲ್ಲದೇ ಇನ್ನೂ ಅನೇಕರು ಯಾವ ಕ್ಷೇತ್ರಕ್ಕೂ ಒಳಪಡದೆ, ನಾಟಕವಾದರೆ ನಾಟಕ, ಕಾದಂಬರಿಯಾದರೆ ಕಾದಂಬರಿ, ಕತೆಯಾದರೆ ಕತೆ, ಜೀವನಚರಿತ್ರೆ ಆದರೆ ಜೀವನ ಚರಿತ್ರೆ, ಪತ್ರಿಕಾ ಲೇಖನವಾದರೆ ಪತ್ರಿಕಾ ಲೇಖನ, ಸಿನಿಮಾ ಗೀತೆಗಳನ್ನು ಬರೆಯುವ ಅವಕಾಶಗಳು ಸಿಕ್ಕರೆ ಅವನ್ನು ಬರೆಯುತ್ತಾ ಒಟ್ಟಿನಲ್ಲಿ ಲೇಖನಕಲೆಯನ್ನು ಮುಂದುವರೆಸಿರುವ

ನೂರಾರು ಲೇಖಕರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅವರೆಲ್ಲರ ಹೆಸರನ್ನೂ ಇವು ಹೇಳುವುದಕ್ಕೆ ಸಮಯ ಇಲ್ಲ. ಆದರೂ ರಾಜಪ್ಪ ದಳವಾಯಿ, ಸಿದ್ಧಲಿಂಗಯ್ಯ ಕಂಬಾಳು ಇಂಥ ಹೆಸರುಗಳನ್ನು ಇಲ್ಲಿ ದಾಖಲಿಸಬಹುದು.

ಸಾಹಿತ್ಯ ಕ್ಷೇತ್ರವಲ್ಲದೆ, ಸಿನಿಮಾ, ನಾಟಕ, ಕಲೆ ಇಂಥ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಆಧುನಿಕ ಬೆಂಗಳೂರಿನ ಪ್ರತಿಭೆಗಳನ್ನು ಮರೆಯುವಂತಿಲ್ಲ. ದೊಡ್ಡರಂಗೇಗೌಡ, ನಾಗತಿಹಳ್ಳಿ ಚಂದ್ರಶೇಖರ್, ಎಂ. ಎಸ್. ಮೂರ್ತಿ, ಮರುಳಸಿದ್ದಪ್ಪ, ಜಯಂತಕಾಯ್ಕಿಣಿ, ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಗುಡಿಹಳ್ಳಿ ನಾಗರಾಜು, ಸಿ.ಜಿ.ಕೆ, ಬಿ. ಶ್ರೀನಿವಾಸರಾಜು, ನಾಗೇಶ್. ಆರ್, ಲಕ್ಷ್ಮೀಪತಿ ಕೋಲಾರ, ಕುಮಾರ್. ಎಚ್, ಕಪ್ಪಣ್ಣ, ನಾಗರಾಜಮೂರ್ತಿ, ಬಿ. ಸುರೇಶ್, ಮುಂತಾದವರ ಕನ್ನಡದ ಸೇವೆಯನ್ನು ಸ್ಮರಿಸಬಹುದು.

47. ಮಹಾತ್ಮ ಗಾಂಧೀಜಿ ಮತ್ತು ಬೆಂಗಳೂರು

ಶ್ರೀ ಗವಿಸಿದ್ದಯ್ಯ

ಮಹಾತ್ಮ ಗಾಂಧೀಜಿಯವರು ಐದು ಸಾರಿ ಬೆಂಗಳೂರಿಗೆ ಆಗಮಿಸಿದ್ದರು. ಬೇರೆ-ಬೇರೆ ಹೋರಾಟಗಳ ಹಿನ್ನಲೆಯಲ್ಲಿ ವಿಶೇಷವಾಗಿ ಖಾದಿ ಪ್ರಚಾರಕ್ಕಾಗಿ, ಹರಿಜನೋದ್ಧಾರಕ್ಕಾಗಿ ಹಾಗೂ ಆರೋಗ್ಯ ಸುಧಾರಣೆಗಾಗಿ ಗಾಂಧೀಜಿ ಬೆಂಗಳೂರಿಗೆ ಆಗಮಿಸಿದ್ದರು.

ಗಾಂಧೀಜಿಯವರು 1915ರಲ್ಲಿ ಮತ್ತು 1920ರಲ್ಲಿ ಒಂದು ದಿನದ ಭೇಟಿಗಾಗಿ ಮಾತ್ರ ಆಗಮಿಸಿ ಒಂದೆರಡು ಸಭೆಗಳಲ್ಲಿ ಮಾತ್ರ ಭಾಗವಹಿಸಿ ವಾಪಸ್ಸಾದರು. ಅನಂತರ 1927ರಲ್ಲಿ ಅನಾರೋಗ್ಯದ ನಿಮಿತ್ತ ನಂದಿ ದುರ್ಗಕ್ಕೆ ಆಗಮಿಸಿ ಸುಮಾರು 45 ದಿನಗಳ ಕಾಲ ತಂಗಿದ್ದರು. ಗಿರಿಧಾಮದಿಂದ ಹಿಂತಿರುಗಿ ಬೆಂಗಳೂರಿನ ಪ್ರಸಿದ್ಧವಾದ ಕುಮಾರಕೃಪಾ ಅತಿಥಿ ಗೃಹದಲ್ಲಿ ಸುಮಾರು ಮೂರು ತಿಂಗಳು ತಂಗಿದ್ದರು. ಆಮೇಲೆ ಮತ್ತೆ 1934ರಲ್ಲಿ ಮೂರು ದಿನಗಳ ಕಾಲ ಮೈಸೂರು ಸಂಸ್ಥಾನದಲ್ಲಿ ಸಂಚರಿಸಿ ಖಾದಿ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪುನಃ 1936ರಲ್ಲಿ ಎರಡನೇ ಬಾರಿಗೆ ತುಸು ಅನಾರೋಗ್ಯದ ಕಾರಣ ನಂದಿಗಿರಿ ಧಾಮದಲ್ಲಿ ತಂಗಿ, ಮೂರು ವಾರಗಳ ವಿಶ್ರಾಂತಿ ಪಡೆದರು. ಗಾಂಧೀಜಿಯವರು ಬಂದಾಗ ಅವರನ್ನು ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸುವಾಗ, ನಂತರ ಗಿರಿಧಾಮದಲ್ಲಿ ತಂಗಿದ್ದಾಗ, ಕುಮಾರ ಕೃಪಾದಲ್ಲಿ ಇಳಿದು ಕೊಂಡಿದ್ದಾಗ ಬೆಂಗಳೂರಿನ ಹಾಗೂ ದಕ್ಷಿಣ ರಾಜ್ಯಗಳ ಹಲವಾರು ಗಣ್ಯರು ಗಾಂಧೀಜಿಯವರನ್ನು ಭೇಟಿ ಮಾಡಿ, ಅವರಿಗೆ ತಮ್ಮ ಕೈಲಾದ ನಿಧಿ ಸಮರ್ಪಿಸುವುದರ ಜೊತೆಗೆ ಅವರೊಡನೆ ಹಲವಾರು ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಅಲ್ಲದೆ, ಗಾಂಧೀಜಿಯವರು ಬೆಂಗಳೂರಿನಲ್ಲಿದ್ದಾಗ ಹಲವಾರು ಸಂಘ-ಸಂಸ್ಥೆಗಳಿಗೆ ಹೋಗಿದ್ದರಲ್ಲದೆ, ಅನೇಕ ವ್ಯಕ್ತಿಗಳನ್ನು ಭೇಟಿಮಾಡಿ, ಆಗಿನ ಪ್ರಚಲಿತ ವಿದ್ಯಮಾನಗಳ ಬಗ್ಗೆ ಸಂವಾದ ಮತ್ತು ಚರ್ಚೆ ನಡೆಸಿದ್ದಾರೆ; ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸಿದ್ದಾರೆ. ಇಂತಹ ಮಹಾನ್ ವ್ಯಕ್ತಿ ಮೈಸೂರು ಸಂಸ್ಥಾನದಲ್ಲಿ ಇಷ್ಟೊಂದು ಧೀರ್ಘಕಾಲದವರೆಗೆ ತಂಗಿದ್ದರು ಎಂದರೆ ಅದು ಸಂಸ್ಥಾನದ ಸೌಭಾಗ್ಯವೇ ಸರಿ. ಈ ನಿಟ್ಟಿನಲ್ಲಿ ಗಾಂಧೀಜಿಯವರು ತಮ್ಮ ಬೆಂಗಳೂರಿನ ಭೇಟಿಯಲ್ಲಿ ಕೈಗೊಂಡ ವಿವಿಧ ವಿಶೇಷ ವಿಷಯಗಳ ಬಗ್ಗೆ ವಿವರವಾದ ಮಾಹಿತಿಯನ್ನು ಓದುಗರಿಗೆ ತಿಳಿಸಲು ಗಾಂಧೀಜಿ ಬೆಂಗಳೂರು ಭೇಟಿ ಕುರಿತ ಈ ಕಿರು ಲೇಖನವನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ. ಈ ಲೇಖನವನ್ನು ಸಿದ್ಧಪಡಿಸಲು ವಿವಿಧ ಗ್ರಂಥಾಲಯಗಳಲ್ಲಿ ಲಭ್ಯವಿರುವ ಗ್ರಂಥಗಳನ್ನು ಉಪಯೋಗಿಸಿ ಕೊಂಡಿರುವುದರ ಜೊತೆಗೆ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು, ಮತ್ತು ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು, ಇಲ್ಲಿರುವ ಪತ್ರಿಕಾ ವರದಿಗಳ ತಣುಕುಗಳನ್ನು, ಸ್ಮರಣ ಸಂಚಿಕೆಗಳಲ್ಲಿನ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಜೊತೆಗೆ, ಕೆಲವು ಗಣ್ಯವ್ಯಕ್ತಿಗಳೊಡನೆ ಮಾತಾಡಿದಾಗ ತಿಳಿದ ಕೆಲವು ಮಹತ್ವದ ಮಾಹಿತಿಯನ್ನು ಲಭ್ಯವಿರುವ ದಾಖಲೆಗಳೊಡನೆ ಹೋಲಿಸಿ, ಪರಿಷ್ಕರಿಸಿದ ವಿಚಾರಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಗಾಂಧೀಜಿಯವರು ಪ್ರಥಮ ಬಾರಿಗೆ 1915ರಲ್ಲಿ ಡಿ. ವಿ. ಜಿಯವರ ಪ್ರಯತ್ನದಿಂದ ಬೆಂಗಳೂರಿಗೆ ಬಂದಿದ್ದರು. ಆಗ ಅವರು ಎರಡು ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಅಂದೇ ಮುಂಬಯಿಗೆ ಹೊರಟುಹೋದರು.

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿದ್ದಾಗ ಸತ್ಯಾಗ್ರಹ ಚಳವಳಿಗಾಗಿ ಸಂಸ್ಥಾನದ ಕನ್ನಡಿಗರು, ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ಸಾಹಿತಿ ಡಿ.ವಿ.ಜಿ ಯವರು, ಸುಮಾರು 1600/–ರೂಪಾಯಿಗಳ ದೇಣಿಗೆಯನ್ನು ಸಂಗ್ರಹಿಸಿಟ್ಟರು. ದಿವಾನ್ ವಿಶ್ವೇಶ್ವರಯ್ಯನವರು ಸಹ ವೈಯಕ್ತಿಕವಾಗಿ ನೀಡಿದ್ದ ರೂಪಾಯಿ 200/–ಗಳ ದೇಣಿಗೆಯನ್ನು ಮದ್ರಾಸ್ ಪತ್ರಕರ್ತ ಜಿ. ಎ. ನಟೇಶ್ ಮೂಲಕ ದಕ್ಷಿಣ ಆಫ್ರಿಕಾದಲ್ಲಿದ್ದ ಗಾಂಧೀಜಿಗೆ ತಲುಪಿಸಿದ್ದರು. ಇದನ್ನು ಮರೆಯದ ಗಾಂಧೀಜಿಯವರು ದಕ್ಷಿಣ ಭಾರತದ ಪ್ರವಾಸಕ್ಕಾಗಿ ಮದ್ರಾಸ್‌ಗೆ ಬಂದಾಗ ನಟೇಶನ್ ಅವರ ಕೋರಿಕೆ ಮೇರೆಗೆ 1915 ಮೇ ಎಂಟರಂದು ಬೆಂಗಳೂರಿಗೆ ಬಂದರು. ಅವರ ಜೊತೆ ಪತ್ನಿ ಕಸ್ತೂರಿ ಬಾ ಸಹ ಆಗಮಿಸಿದ್ದರು. ಗಾಂಧೀಜಿ ತೆರಳುವ ರಸ್ತೆಗಳನ್ನು ತಳಿರು ತೋರಣಗಳಿಂದ ಸಿಂಗರಿಸಿದ್ದರು. ಇದರ ನೇತೃತ್ವವನ್ನು ಮೈಸೂರು ಸಂಸ್ಥಾನದ ನ್ಯಾಯವಾದಿಗಳಾಗಿದ್ದ ನಾಗೇಶ್ವರ ಅಯ್ಯರ್ ವಹಿಸಿದ್ದರು. ಗಾಂಧೀಜಿ ಕಸ್ತೂರಿ ಬಾ ಅವರೊಡನೆ ಸರಳ ಉಡುಪಿನಲ್ಲಿ ಗುಜರಾತಿ ಉದ್ದನೆಯ ಅಂಗಿ, ಕಚ್ಚೆ ಪಂಚೆ ಮತ್ತು ಕಾಥೆವಾಡದ ರುಮಾಲು ಧರಿಸಿದ್ದರು. ಅವರು ರೈಲಿನಿಂದ ಇಳಿದ ತಕ್ಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಗಾಂಧೀಜಿಗೆ, ಬಳೆಪೇಟೆ ಮಾತೃ ಮಂದಿರದ ಸ್ತ್ರೀಯರು ಕಸ್ತೂರಿ ಬಾ ರವರಿಗೆ ಮಾಲಾರ್ಪಣೆ ಮಾಡಿ ಸ್ವಾಗತಿಸಿದರು.

ರೈಲು ನಿಲ್ದಾಣದ ಹೊರಗೆ ಬಂದಾಗ ಗಾಂಧೀಜಿಯವರನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲು ಕುದುರೆ ಸಾರೋಟು ಸಿದ್ಧವಾಗಿತ್ತು. ಆದರೆ ಉತ್ಸಾಹಿ ಯುವಕರು ಹಾಗೂ ವಿದ್ಯಾರ್ಥಿಗಳು ಗಾಡಿಗೆ ಕಟ್ಟಿದ್ದ ಸಾರೋಟದ ಕುದುರೆಯನ್ನು ಬಿಚ್ಚಿ, ಗಾಂಧೀಜಿಯವರ ಗೌರವಾರ್ಥವಾಗಿ ಸಾರೋಟನ್ನು ಎಳೆಯಲು ಮುಂದಾದಾಗ, ಗಾಂಧಿ ಖಂಡಿತ ಬೇಡ ಎಂದು ಹೇಳಿ, ಸ್ಟೇಷನ್ನಿನಿಂದ ಅವರು ತಂಗುವ ಬಿಡಾರಕ್ಕೆ ಎಷ್ಟು ದೂರ ಎಂದು ಕೇಳಿದರು. ಸುಮಾರು ಅರ್ಧಮೈಲಿ ಎಂದು ತಿಳಿದ ತಕ್ಷಣ ತಾನು ನಡೆದು ಬರುವುದಾಗಿ ತಿಳಿಸಿದರು. ಜಯ ಘೋಷಗಳೊಂದಿಗೆ ಶೇಷಾದ್ರಿ ರಸ್ತೆಯಲ್ಲಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಾಗಿದ್ದ ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್‌ರವರ ನಿವಾಸದಲ್ಲಿ ಏರ್ಪಾಡಾಗಿದ್ದ ಬಂಗಲೆಗೆ ಬಂದರು.

ಬೆಂಗಳೂರು ನಗರಕ್ಕೆ ಆಗಮಿಸಿದ ನಂತರ ಸ್ವಲ್ಪ ವಿಶ್ರಮಿಸಿಕೊಂಡ ಗಾಂಧೀಜಿ, ಪ್ರಥಮ ಸಾರ್ವಜನಿಕ ಕಾರ್ಯಕ್ರಮವಾಗಿ 'ಮೈಸೂರು ದೇಶ ಸೇವಾ ಸಂಘ'ದ ಉದ್ಘಾಟನೆಯನ್ನು ಬೆಂಗಳೂರಿನ ಇಂಟರ್ ಮೀಡಿಯಟ್ ಕಾಲೇಜಿನ ದೊಡ್ಡ ಮಂದಿರದಲ್ಲಿ ನೆರವೇರಿಸಿದರು (ಮೇ 8 1915), ಡಿ. ವಿ. ಗುಂಡಪ್ಪನವರು ಮತ್ತು ಗೋಖಲೆ ಸೋಷಿಯಲ್ ಕ್ಲಬ್ ಈ ಸಭೆಯನ್ನು ಏರ್ಪಡಿಸಿತ್ತು. ಗಣ್ಯರಿಂದ ಸಭೆ ತುಂಬಿತ್ತು. ಸಾಮಾನ್ಯವಾಗಿ ಯಾವ ಬಹಿರಂಗ ಸಭೆಯಲ್ಲೂ ಭಾಗವಹಿಸದಿದ್ದ ದಿವಾನ್ ಟಿ. ಅನಂದರಾಯರು ಅಂದು ಈ ಸಭೆಗೆ ಆಗಮಿಸಿದ್ದರು. ಮೈಸೂರಿನಿಂದ ಹರ್ಡೇಕರ್ ಮಂಜಪ್ಪ, ವೆಂಕಟಕೃಷ್ಣಯ್ಯನವರು ಸಹ ಆಗಮಿಸಿದ್ದರು. ಈ ಸಭೆಯಲ್ಲಿ ಇಂಗ್ಲೀಷಿನಲ್ಲಿದ್ದ ಮಾನಪತ್ರವನ್ನು ಕೆ. ಎಸ್. ಕೃಷ್ಣ ಅಯ್ಯರ್‌ರವರೂ, ಕನ್ನಡದಲ್ಲಿದ್ದ ಮಾನಪತ್ರವನ್ನು

ಡಿ. ವಿ. ಗುಂಡಪ್ಪನವರೂ ಓದಿ ಗಾಂಧೀಜಿಗೆ ಒಪ್ಪಿಸಿದರು. ಗಾಂಧೀಜಿ ಈ ಸಭೆಯಲ್ಲಿ ದಿವಂಗತ ಗೋಪಾಲಕೃಷ್ಣ ಗೋಖಲೆಯವರ ಭಾವಚಿತ್ರವನ್ನು ಅನಾವರಣಗೊಳಿಸಿದರು. ನಂತರ ಗಾಂಧೀಜಿಯವರನ್ನು ಕುದುರೆ ಗಾಡಿಯಲ್ಲಿ ಅವರ ಬಿಡಾರಕ್ಕೆ ಕರೆದು ತರಲಾಯಿತು. ಅವರ ಜೊತೆ ಪುಟ್ಟಣಶೆಟ್ಟರು, ವೆಂಕಟಕೃಷ್ಣಯ್ಯನವರು ಸಹ ಬಂದರು. ಗಾಂಧೀಜಿ ಬಿಡಾರದಲ್ಲಿ ಕೆಲವು ನಾಗರೀಕರನ್ನು ಹಾಗೂ ಕೆಲವು ಪ್ರಮುಖರನ್ನು ಭೇಟಿ ಮಾಡಿದರು. ನಂತರ ಸಂಜೆ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವ ಗಾಜಿನ ಮನೆಯಲ್ಲಿ ಒಂದು ಬಹಿರಂಗ ಸಭೆ ನಡೆಯಿತು. ಬೆಂಗಳೂರಿನ ಪೌರಸಭೆಯ ಅಧ್ಯಕ್ಷರಾಗಿದ್ದ ಪುಟ್ಟಣಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಹಾಗೂ ಇವರು ಗಾಂಧೀಜಿಯವರನ್ನು ಸಭೆಯಲ್ಲಿ ಪರಿಚಯಿಸಿ, ಅವರು ದಕ್ಷಿಣ ಆಫ್ರಿಕಾದಲ್ಲಿ ಮಾಡಿದ ಹೋರಾಟವನ್ನು ವಿವರಿಸಿದರು ಮತ್ತು ರೇಷ್ಮೆ ವಸ್ತ್ರದಲ್ಲಿ ಮುದ್ರಿಸಿದ್ದ ಬಿನ್ನವತ್ತಳೆಯನ್ನು ಅರ್ಪಿಸಿದರು. ಗಾಂಧೀಜಿ ಈ ಸಮಾರಂಭದಲ್ಲಿ ಮಾತನಾಡಿ, ಮೈಸೂರು

ಶ್ರೇಷ್ಠವಾದ ಸಂಸ್ಥಾನ. ಬ್ರಿಟಿಷ್ ಅಧಿಕಾರಿಗಳಿಗೆ ಹಾಗೂ ರಾಜಕಾರಣಿಗಳಿಗೆ ನೀವು ಇದನ್ನು ತಿಳಿಸಬಹುದು, ಹೇಗೆಂದರೆ ಮೈಸೂರಿನಲ್ಲಿ ರಾಮರಾಜ್ಯವನ್ನು ಸ್ಥಾಪಿಸುವ ಮೂಲಕ ಹಾಗೂ ಜನರು ಯಾರ ಅಪ್ಪಣೆಯನ್ನು ಒಪ್ಪಿಕೊಳ್ಳುತ್ತಾರೋ, ಅಂತಹವರನ್ನು ಆಯ್ಕೆ ಮಾಡುವ ಮೂಲಕ ಎಂದು ತಿಳಿಸಿದರು. ನಂತರ ಸಭೆಯು ಕೆ.ಜಿ.ಎಫ್.ನ ಷಣ್ಮುಗಂ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ಬೆಂಗಳೂರಿನ ಬಳೇಪೇಟೆ ಶ್ರೀನಿವಾಸ ಮಂದಿರದ ಮಾತೃ ಮಂದಿರದ ಸ್ತ್ರೀಯರು ಹಾಗೂ ಸುಂದರಬಾಯಿ ಟಿ. ಆನಂದರಾವ್ ಮುಂತಾದವರು ಕಸೂರ ಬಾ ರವರನ್ನು ಸನ್ಮಾನಿಸಿದರು. ಹಾಗೂ ದಂಡು ಪ್ರದೇಶದ ನಾಗರೀಕರ ವತಿಯಿಂದ ಶ್ರೀಮತಿ ತಂಗವೇಲು ಅವರು ಕಸ್ತೂರ ಬಾ ರವರನ್ನು ಸನ್ಮಾನಿಸಿದರು. ಲಾಲ್ ಬಾಗ್‌ನ ಸಭೆಯ ನಂತರ ಸಂಜೆ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರು ಗಾಂಧೀಜಿಯವರನ್ನು ಅವರ ಬಿಡಾರದಲ್ಲಿ ಭೇಟಿ ಮಾಡಿದ್ದರು. ಗಾಂಧೀಜಿಯವರು ವಿಶ್ವೇಶ್ವರಯ್ಯನವರ ಜೊತೆ ಮಾತನಾಡಲು ತಾವು ತಂಗಿದ್ದ ಬಂಗಲೆಯ ಒಂದು ಮೂಲೆಯಲ್ಲಿ ಮೇಜಿನ ಮೇಲೆ ದೀಪವನ್ನಿಟ್ಟು ವಿಶ್ವೇಶ್ವರಯ್ಯನವರ ಜೊತೆ ಗುಜರಾತಿಯಲ್ಲಿ ಮಾತುಕತೆ ನಡೆಸಿದರು. ಇವರ ಭೇಟಿ ಸುಮಾರು ಒಂದು ಘಂಟೆಗೂ ಹೆಚ್ಚುಕಾಲ ಜಿ. ಎ. ನಟೇಶ್ ರವರೊಡಗೂಡಿ ನಡೆಯಿತು. ಮಾರನೇ ದಿನ ಗಾಂಧೀಜಿಯವರು ಪತ್ನಿ ಸಮೇತರಾಗಿ ಮೂರನೆ ದರ್ಜೆ ರೈಲಿನಲ್ಲಿ ಮುಂಬಯಿಗೆ ಪ್ರಯಾಣ ಬೆಳಸಿದರು.

ಗಾಂಧೀಜಿಯವರು 1920ನೆ ಇಸವಿಯಷ್ಟರಲ್ಲಿ ಖಿಲಾಫತ್ ಚಳವಳಿಯನ್ನು ಬ್ರಿಟಿಷರ ವಿರುದ್ಧ ಪರಿಣಾಮಕಾರಿಯಾಗಿ ಪ್ರಾರಂಭಿಸಿದರು. ಇದರಿಂದ ಹಿಂಧೂ ಮತ್ತು ಮುಸ್ಲಿಂರಲ್ಲಿ ಐಕ್ಯತೆಯನ್ನು ಮೂಡಿಸಿ ರಾಷ್ಟ್ರೀಯ ಉದ್ದೇಶಗಳಿಗೆ ಮುಸ್ಲಿಂರ ಸಹಕಾರ ಪಡೆಯುವುದು ಅವರ ಉದ್ದೇಶವಾಗಿತ್ತು. ಈ ಕಾರಣಕ್ಕಾಗಿ ಗಾಂಧೀಜಿಯವರು ದಕ್ಷಿಣ ಭಾರತದಲ್ಲಿ ಸಂಚರಿಸಿ ಎಲ್ಲಾ ಮುಸ್ಲಿಂ ಜನಾಂಗದವರಿಗೆ ಖಿಲಾಫತ್ ಚಳವಳಿಯ ಬಗ್ಗೆ ತಿಳಿಸಲು ಮುಸ್ಲಿಂ ಜನಾಂಗದ ಮುಖಂಡರಾದ ಮಹಮ್ಮದ್ ಆಲಿ, ಶೌಕತ್ ಆಲಿ ಮತ್ತು ಯಾಕಬ್ ಹುಸೇನ್‌ರೊಡಗೂಡಿ ದಕ್ಷಿಣ ಭಾರತದಲ್ಲಿ ಸಂಚರಿಸುತ್ತಾ ದಿನಾಂಕ 21-08-1920 ರಂದು ಬೆಂಗಳೂರಿಗೆ ಸೇಲಂನಿಂದ ಕಾರಿನಲ್ಲಿ ಬಂದರು.

ಅಂದೇ ಅವರು ದಂಡು ಪ್ರದೇಶದ ರೈಲ್ವೆ ನಿಲ್ದಾಣದ ಹತ್ತಿರದಲ್ಲಿರುವ ಈದ್ಗಾ ಮೈದಾನದಲ್ಲಿ (ಈಗಿನ ಬೆನ್‌ಸನ್ ಟೌನ್) ಏರ್ಪಾಡಾಗಿದ್ದ ಸಮಾರಂಭಕ್ಕೆ ತೆರಳಿದರು. ದಂಡು ಪ್ರದೇಶದ ನಾಗರೀಕರು ಉತ್ಸಾಹದಿಂದ ಜಮಾಯಿಸಿದ್ದರು. ಮೈಸೂರಿನಿಂದಲೂ ಸಾವಿರಾರು ಜನ ರೈಲಿನಲ್ಲಿ ಬಂದಿದ್ದರು. ದಂಡು ಪ್ರದೇಶದ ಶ್ರೀಮಂತ ಹಾಜಿ ಉಸ್ಮಾನ್ ಸೇಠ್, ರಾಮಲಾಲ್ ತಿವಾರಿ ಮುಂತಾದವರು ಉಪಸ್ಥಿತರಿದ್ದರು. ಹಲಸೂರಿನ ಜೀವಣ್ಣರಾಯರು ಸ್ವಯಂ ಸೇವಕರಾಗಿ ಸಂಘಟನೆಯ ಜವಾಬ್ದಾರಿ ಹೊತ್ತಿದ್ದರು.

ಗಾಂಧೀಜಿಯವರು ಪಂಚೆ, ಬಿಳಿ ಟೋಪಿ ಧರಿಸಿದ್ದರು. ಗಾಂಧೀಜಿಯ ಜೊತೆ ವೇದಿಕೆಯಲ್ಲಿ ಕಲಾಮಂದಿರದ ಅ. ನ. ಸುಬ್ಬರಾಯರು, ಗಾಂಧೀಜಿ ಪುತ್ರ ದೇವದಾಸ್‌ಗಾಂಧಿ ಕುಳಿತಿದ್ದರು. ಈ ಸಮಾರಂಭದಲ್ಲಿ ನಿಟ್ಟೂರು ಶ್ರೀನಿವಾಸರಾಯರು, ನಿಜಲಿಂಗಪ್ಪನವರು, ಸಿದ್ದವನಹಳ್ಳಿ ಕೃಷ್ಣಶರ್ಮರು,

ಎಂ. ಎನ್. ಕೃಷ್ಣರಾವ್ ಮುಂತಾದ ಗಣ್ಯರು ಭಾಗವಹಿಸಿದ್ದರು. ಮಳೆಯ ನಡುವೆಯೂ ಗಾಂಧೀ ಉರ್ದುವಿನಲ್ಲಿ ಭಾಷಣ ಮಾಡಿದರು ಮತ್ತು ಬ್ರಿಟೀಷರ ವಿರುದ್ಧ ಅಸಹಕಾರ ಚಳವಳಿ ನಡೆಸುವಂತೆ ಕೋರಿದರು. ನಂತರ ಬೆಂಗಳೂರು ಖಿಲಾಫತ್ ಕಮಿಟಿಯವರು ಸಂಗ್ರಹಿಸಿದ್ದ 25000/- ರೂಪಾಯಿಗಳನ್ನು ಗಾಂಧೀಜಿಯವರಿಗೆ ಅರ್ಪಿಸಲಾಯಿತು. ಸಭೆಯ ಬಳಿಕ ಗಾಂಧೀಜಿಯವರು ದಂಡು ಪ್ರದೇಶದ ರೈಲ್ವೆ ನಿಲ್ದಾಣದಿಂದಲೇ ಮದ್ರಾಸ್‌ಗೆ

ಪ್ರಯಾಣ ಬೆಳೆಸಿದರು. ಆದರೂ ಗಾಂಧೀಜಿ ಎರಡನೇ ಬಾರಿ ಬೆಂಗಳೂರಿಗೆ ಭೇಟಿನೀಡಿ, ಪ್ರಾಂತದ ಜನರಲ್ಲಿ ಸ್ವಾತಂತ್ರ್ಯ ಭಾವನೆ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರದ ಬಗ್ಗೆ ಅರಿವು ಮೂಡಿಸಲು ಯತ್ನಿಸಿದರು. ಅದರಿಂದ ಕೆಲವರು ಪ್ರೇರಿತರಾದುದ್ದನ್ನು ಕಾಣಬಹುದು.

ನಂತರ ಗಾಂಧೀಜಿಯವರು ಅಖಿಲ ಭಾರತ ಮಟ್ಟದಲ್ಲಿ ಖಾದಿ ಪ್ರಚಾರ ಪ್ರಾರಂಭಿಸಿದರು. ಅವಿರತ ಪ್ರವಾಸದಿಂದ ಹಾಗೂ ಬಿಡುವಿಲ್ಲದ ಕಾರ್ಯಕ್ರಮಗಳಿಂದ ಅವರ ಆರೋಗ್ಯ ಕೆಟ್ಟಿತು. ರಕ್ತದ ಒತ್ತಡ ಹೆಚ್ಚಾಯಿತು. ಅವರಿಗೆ ಸಂಪೂರ್ಣ ವಿಶ್ರಾಂತಿ ಬೇಕೆಂದು ವೈದ್ಯರು ಸಲಹೆ ನೀಡಿದರು. ಇದರಿಂದ ಗಾಬರಿಗೊಂಡ ಅವರ ಅನುಯಾಯಿಗಳು ಹಾಗು ಅವರ ಜೊತೆಯಲ್ಲಿದ್ದ ಕಸ್ತೂರ ಬಾ, ಕೃಷ್ಣದಾಸ್, ದೇವದಾಸ್‌ಗಾಂಧಿ, ಕಾಂತಿಲಾಲ್ ಗಾಂಧಿ ಮೊದಲಾದವರು ಗಾಂಧೀಜಿಯವರನ್ನು ಬೆಳಗಾಂನಿಂದ ನೇರವಾಗಿ ಬೆಂಗಳೂರಿಗೆ ಕರೆತಂದರು. ಅಲ್ಲದೆ ಮೈಸೂರು ಸರ್ಕಾರ ಸಹ ಅವರಿಗೆ ವಿಶ್ರಾಂತಿ ಪಡೆಯಲು ನಂದಿದುರ್ಗಕ್ಕೆ ಆಹ್ವಾನಿಸಿತು. ಈ ಕಾರಣದಿಂದ ಗಾಂಧೀಜಿಯವರು ಸುಮಾರು 45 ದಿನಗಳ ಕಾಲ ಬೆಂಗಳೂರಿನಲ್ಲಿದ್ದರು. ಗಾಂಧಿಜಿಯವರು ತಂಗುವ ಗಿರಿಧಾಮದ ಪೂರ್ವಸಿದ್ಧತೆಗಾಗಿ ಮಹದೇವ ದೇಸಾಯಿ, ರಾಜಗೋಪಾಲಚಾರಿ ಮತ್ತು ಗಂಗಾಧರರಾವ್ ದೇಶಪಾಂಡೆಯವರು ಆಗಮಿಸಿ, ತಂಗಲು ಬೇಕಾದ ಎಲ್ಲಾ ಅನುಕೂಲಗಳನ್ನು ಕೋಲಾರದ ಜಿಲ್ಲಾಧಿಕಾರಿಗಳ ಸಹಾಯದಿಂದ ಕೈಗೊಂಡರು.

ಗಾಂಧೀಜಿಯವರು ನಂದಿ ಬೆಟ್ಟಕ್ಕೆ ಬರುವ ಮೊದಲು ಆಗಿನ ಕಾಂಗ್ರೆಸ್ ನಾಯಕರಾಗಿದ್ದ ಕೆ.ಟಿ. ಬಾಷ್ಯಂ ಎಂ.ಜಿ. ಲಕ್ಷೀನರಸು ಹಾಗೂ ಹಂಜಾ ಹುಸೇನ್ ಮತ್ತು ನ್ಯಾಯಮೂರ್ತಿ ನಾಗೇಶ್ವರ್ ಅಯ್ಯರ್‌ರವರನ್ನೊಳಗೊಂಡ ಒಂದು ಸ್ವಾಗತ ಸಮಿತಿಯ ರಚನೆಯಾಗಿ ಗಾಂಧೀ ನಿಧಿಗಾಗಿ ಹಣವನ್ನು ಶೇಖರಿಸಲಾಯಿತು. ಗಾಂಧೀಜಿಯವರು ಏಪ್ರಿಲ್ 20.1927ರಂದು ಬೆಂಗಳೂರಿಗೆ ಬಂದರು. ಅವರನ್ನು ರೈಲು ನಿಲ್ದಾಣದಲ್ಲಿ ಖಾದಿಧಾರಿಗಳಾದ ಹಂಜಾ ಹುಸೇನ್‌ರವರು ಬರಮಾಡಿಕೊಂಡು ನೇರವಾಗಿ ಗಾಂಧೀಜಿಯವರನ್ನು ನಂದಿ ಬೆಟ್ಟಕ್ಕೆ ಕರೆದುಕೊಂಡು ಹೋದರು.

ಗಾಂಧೀಜಿಯವರು ಅಸ್ವಸ್ಥರಾಗಿದ್ದ ಕಾರಣ ಅವರನ್ನು ಪರೀಕ್ಷಿಸಲು ಡಾ. ಸಿ. ಬಿ. ರಾಮರಾಯರು ರೈಲ್ವೆ ಸ್ಟೇಷನ್ನಿಗೆ ಬಂದಿದ್ದರು. ನಂತರ ನಂದಿದುರ್ಗಕ್ಕೆ ಲಂಡನ್ ಮಿಷನ್ನಿನ ದಯಾಜೀವಿ ಡಾ. ಥಾಂಪ್ಸನ್‌ರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಡಾ. ಎಸ್. ಸುಬ್ಬರಾಯರು, ಕೃಷ್ಣಸ್ವಾಮಿಯವರು ಬಂದಿದ್ದರು. ಗಾಂಧೀಜಿಯವರನ್ನು ಪರೀಕ್ಷಿಸಿದ ವೈದ್ಯರು ಸಂಯಮಶೀಲ ಗಾಂಧೀಜಿಯವರಿಗೆ ರಕ್ತದೊತ್ತಡ ಹೇಗೆ ಬಂತು? ಎಂದು ಆಶ್ಚರ್ಯ ವ್ಯಕ್ತ ಪಡಿಸಿದಾಗ ಗಾಂಧೀಜಿ–ಎತ್ತರದ ಸ್ಥಳದಲ್ಲಿ ವಾಸ ಮಾಡುವುದು ನನ್ನ ಆರೋಗ್ಯಕ್ಕೆ ಭಾದಕವಲ್ಲವೆಂದು ನಂಬಿಕೆ ಇದೆಯಾ? ಎಂದು ವೈದ್ಯರನ್ನು ಕೇಳೀದರು.

ಗ್ರಂಥಗಳಿಂದಲೂ ಭರವಸೆ ಕೊಡಬಲ್ಲೆ ಎಂದು ವೈದ್ಯರು ತಿಳಿಸಿದರು. ಗಾಂಧೀಜಿಯವರು ನಂದಿದುರ್ಗದಲ್ಲಿ ವಾಸ್ತವ್ಯಹೊಡಿದ ಪ್ರಥಮ ದಿನ ಆಂಧ್ರ ವಿಶ್ವವಿದ್ಯಾಲಯದ ಸ್ಥಾನಪತಿಗಳಾದ ಶ್ರೀ ಕಟ್ಟಿಮಂಚಿ ರಾಮಲಿಂಗರೆಡ್ಡಿಯವರು ಮಹಾತ್ಮರನ್ನು ಕಾಣಲು ಬಂದಿದ್ದರು ಹಾಗೂ ಮೈಸೂರು ಸಂಸ್ಥಾನದ ಶಿಕ್ಷಣ ಅಧಿಕಾರಿಗಳಾಗಿದ್ದ ಕೆ. ಮ್ಯಾಥನ್‌ರವರು ಗಾಂಧೀಜಿಯವರನ್ನು ಭೇಟಿ ಮಾಡಿದ್ದರು. ಇವರ ಜೊತೆ ಗಾಂಧೀಜಿಯವರು ಪ್ರಾಥಮಿಕ ಶಾಲೆಗಳಲ್ಲಿ ಚರಕ ಶಿಕ್ಷಣ ನೀಡುವ ವಿಚಾರದ ಬಗ್ಗೆ ಮಾತನಾಡಿದರು. ಹಾಗೂ ಚರಕ ಶಿಕ್ಷಣ ನೀಡಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನ ಪಡುವುದಾಗಿ ಮ್ಯಾಥನ್‌ರವರು ಗಾಂಧೀಜಿಗೆ ತಿಳಿಸಿದರು.

ಗಾಂಧೀಜಿಯವರು ನಂದಿದುರ್ಗದಲ್ಲಿದ್ದಾಗ ಸಂಸ್ಥಾನದ ಹಿರಿಯ ಅಧಿಕಾರಿಯೊಬ್ಬರು ಗಾಂಧೀಜಿಯವರನ್ನು ಭೇಟಿ ಮಾಡಿ, ಜನರ ಆರ್ಥಿಕ ದಾಹದ ಬಗ್ಗೆ ಚರ್ಚಿಸಿದರು. ಅದಕ್ಕೆ ಗಾಂಧೀಜಿ ಈ ಆರ್ಥಿಕ ದಾಹ ವಿದ್ಯಾವಂತ ವರ್ಗದ ಬಗ್ಗೆ ಮಾತ್ರ ನಿಜ ಇರಬಹುದು ಆದರೆ ಬಡವರ ಪಾಲಿಗೆ ಆರ್ಥಿಕ ವಿಷಯವೇ

ಆಧ್ಯಾತ್ಮೀಯ ವಿಷಯ. ಹೊಟ್ಟೆಗೆ ಇಲ್ಲದೆ ಸಾಯುವ ಜನರಿಗೆ ಬೇರೆ ಯಾವ ಬಗೆಯ ಪ್ರಚೋದನೆಯೂ ಇಲ್ಲ. ರಾಷ್ಟ್ರದ ದಾರಿದ್ರ್ಯ, ರೋಗ, ಸೋಮಾರಿತನ ಯಾವಾಗ ನನ್ನ ಮನಸಿಗೆ ಬಂತೂ, ನನ್ನ ಕಾಯಿಲೆ ಅದರ ಮುಂದೆ ಏನು ಮಹಾ? ನನ್ನ ಹೃದಯದಲ್ಲಿ ಆಳವಾಗಿ ನಾಟಿ ಹೋಗಿದೆ ಈ ದುರಾವಸ್ಥೆಯ ಪ್ರಜ್ಞೆ, ಆದ್ದರಿಂದ ವಿಶ್ರಾಂತಿಯ ಬದಲು, ಬಡಗಿ ಸಾಮಾನು ತಂದು ಕೊಡಿ, ಮುರುಕು ರಾಟೆ, ಸೊಟ್ಟ ಕದಿರು ಇವೆ. ಅದನ್ನು ಸರಿ ಮಾಡುತ್ತೇನೆ ಎಂದು ಗಾಂಧೀಜಿ ತಿಳಿಸಿದರು. ನಂತರ ಗಾಂಧೀಜಿಯವರು ಎರಡನೇ ದಿನ ದಿವಾನ್ ಸರ್. ಮಿರ್ಜಾ ಇಸ್ಮಾಯಿಲ್‌ರವರು ಮತ್ತು ಕೆ.ಪಿ. ಪುಟ್ಟಣಶೆಟ್ಟಿಯವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಆ ದಿನ ಸಂಜೆ ಅವರು ಸಹ ಗಾಂಧೀಜಿಯವರು ನಡೆಸುತ್ತಿದ್ದ ಭಜನೆಯಲ್ಲಿ ಭಾಗವಹಿಸಿದರು. ರಾತ್ರಿ ಗಾಂಧೀಜಿಯವರು ಪಂಡಿತ ತಾರಾನಾಥರೊಂದಿಗೆ ಯೋಗ ಮತ್ತು ರೋಗ ನಿವಾರಣೆಗಳಿಗೆ ಇರುವ ಸಂಬಂಧ ಕುರಿತು ಚರ್ಚಿಸಿದರು.

ನಂದಿದುರ್ಗದಲ್ಲಿ ಗಾಂಧೀಜಿ ಸೇವೆಯನ್ನು ಗಂಗಾಧರ ರಾಯರು ಮಾಡುತ್ತಿದ್ದರು. ಹಾಗೂ ಅವರನ್ನು ಜೋಪಾನವಾಗಿ ಆರೈಕೆ ಮಾಡುತ್ತಿದ್ದರು. ಗಾಂಧೀಜಿಯವರಿಗೆ ಬೇಕಾಗುತ್ತಿದ್ದ ಮೇಕೆ ಹಾಲಿಗಾಗಿ ದಿವಾನ್ ಮಿರ್ಜಾ ಇಸ್ಮಾಯಿಲ್ ರವರು ಸಂಸ್ಥಾನದ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಪತ್ರ ಬರೆದು ಉತ್ತಮ ತಳಿಯ ಹಾಗೂ ಹೆಚ್ಚು ಹಾಲು ನೀಡುವ ಮೇಕೆಗಳನ್ನು ನಂದಿ ಧಾಮಕ್ಕೆ ಕಳುಹಿಸಿಕೊಡುವಂತೆ ಸೂಚನೆ ನೀಡಿದ್ದರ ಮೇರೆಗೆ, ಉತ್ತಮ ತಳಿಯ 36 ಆಡುಗಳು ನಂದಿದುರ್ಗಕ್ಕೆ ಬಂದಿದ್ದವು. ಪ್ರತಿದಿನ ಗಾಂಧೀಜಿಗೆ ಬೇಕಾಗುತ್ತಿದ್ದ ಮೂರು–ನಾಲ್ಕು ಪಾವು ಹಾಲನ್ನು ಈ ಮೇಕೆಗಳಿಂದಲೇ ಒದಗಿಸಲಾಗುತ್ತಿತ್ತು. ನಂದಿದುರ್ಗದಲ್ಲಿ ಗಾಂಧೀಜಿಯವರ ಆರೈಕೆ ಮಾಡಲು ರಾಜಗೋಪಾಲಚಾರ್ಯರು ಸಹ ನಂದಿಗೆ ಆಗಮಿಸಿದ್ದರು. ಗಾಂಧೀಜಿ ಸೇವೆಗಾಗಿ ಸ್ವಯಂಸೇವಕರ ದಂಡೇ ನಂದಿದುರ್ಗಕ್ಕೆ ಬಂದಿತ್ತು. ಶ್ರೀ ರಾಜಾರಾಮ್ ಅಯ್ಯಂಗಾರ್ಯರು ಸ್ವಯಂ ಸೇವಕರ ಗುಂಪಿನ ನೇತೃತ್ವವಹಿಸಿದ್ದು, ಅವರ ಕೈಕೆಳಗೆ ಬೆಂಗಳೂರು ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಹುರುಪು–ಹುಮ್ಮಸ್ಸಿನಿಂದ ಗಾಂಧೀಜಿ ಸೇವೆಗೆ ಬರುತ್ತಿದ್ದರು. ಪ್ರತಿ ವಾರವೂ ಒಂದೊಂದು ಹೊಸತಂಡ ಗಾಂಧೀಜಿ ಸೇವೆಗಾಗಿ ನಂದಿಗೆ ಬರುತ್ತಿತ್ತು. ಇವರೆಲ್ಲರೂ ಖಾದಿ ಧರಿಸಿ ಸೇವೆಯಲ್ಲಿ ತೊಡಗುತ್ತಿದ್ದುದ್ದು ಒಂದು ವಿಶೇಷ. ಪೌರಸಭೆಯವರು ಕಳೂಹಿಸುತ್ತದ್ದ ಭಂಗಿಗಳು ಸಹ ಖಾದಿ ವಸ್ತ್ರಧಾರಿಗಳೇ ಹಾಗೂ ಚಿಕ್ಕಬಳ್ಳಾಪುರದಿಂದ ಬರುತ್ತಿದ ಕ್ಷೌರಿಕ ಸಹ ಖಾದಿ ಧರಿಸಿ, ಗಾಂಧೀಜಿಯವರ ಸೇವೆ ಮಾಡುತ್ತಿದ್ದ.

ಗಾಂಧೀಜಿಯವರು ನಂದಿದುರ್ಗದಲ್ಲಿದ್ದ ಸಮಯದಲ್ಲಿ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರು ಅವರ ನಿಕಟ ಸಂಪರ್ಕವಿಟ್ಟುಕೊಂಡಿದ್ದರು. ಗಾಂಧೀಜಿಯವರನ್ನು ನೋಡಲು ಕೆಲವು ಅಧಿಕಾರಿಗಳು, ಅಧಿಕಾರೇತರರು ಸಹ ಬರುತ್ತಿದ್ದರು. ಒಮ್ಮೆ ಸಹಕಾರ–ಸಂಘಗಳ ರಿಜಿಸ್ಟ್ರಾರ್‌ರವರು ಗಾಂಧೀಜಿಯವರನ್ನು ಭೇಟಿ ಮಾಡಿ, ಸಹಕಾರಿ ಆಂದೋಲನದ ಬಗ್ಗೆ ಹಾಗೂ ಅದರ ಪ್ರಗತಿ ಬಗ್ಗೆ ಹೇಳುತ್ತಿದ್ದರು. 'ಅವರಿಗೆ ಗಾಂಧೀಜಿ ಹೇಳಿದರು. 'ರೈತರನ್ನು ಖಾದಿ ಸೇವೆಗೆ ಸೇರಲು ಹೇಳಿ ಅಥವಾ ಗೋಪಾಲನೆ, ಕ್ಷೀರವೃದ್ಧಿ ಮತ್ತು ಚರ್ಮಗಾರಿಕೆಗಳಲ್ಲಿ ತಜ್ಞರಾಗಿ ದನಗಳನ್ನು ಉಳಿಸುವಂತೆ ಹೇಳಿ'.

ಗಾಂಧೀಜಿಯವರನ್ನು ಭೇಟಿ ಮಾಡಲು ನಂದಿದುರ್ಗಕ್ಕೆ ಒಬ್ಬ ನ್ಯಾಯಾಧೀಶರು ಬಂದಿದ್ದರು. ಅವರು ಗಾಂಧೀಜಿಗೆ ಹೇಳಿದರು, 'ನೀವು ಸಂಪೂರ್ಣವಾಗಿ ಗುಣಮುಖ ಆಗುವವರವಿಗೂ ನಂದಿಯಲ್ಲೇ ಇರಬೇಕು.ಇದರಿಂದ ಈ ಸ್ಥಳವು ಪ್ರಾಮುಖ್ಯತೆ ಹೊಂದಿ, ಇಲ್ಲಿಗೆ ಹೆಚ್ಚು–ಹೆಚ್ಚು ಜನರು ಬಂದು, ಇದರಿಂದ ಸಂಸ್ಥಾನಕ್ಕೆ ಹೆಚ್ಚಿನ ಆದಾಯ ಬರುವುದು'. ಅದಕ್ಕೆ ಗಾಂಧಿ ಹೇಳಿದರು, 'ಹೆಚ್ಚಿನ ಜನ ಬಂದು ಆದಾಯ ಹೆಚ್ಚಾದಾಗ ಆದಾಯದ ಅರ್ಧದಷ್ಟನ್ನು ಖಾದಿ ನಿಧಿಗೆ ನೀಡಬೇಕು'.. ನಂತರ ಒಬ್ಬ ಡೆಪ್ಯೂಟಿ ಕಮಿಷನರ್

ಆಫ್ ಎಕ್ಸೈಜ್ ಗಾಂಧೀಜಿಯವರನ್ನು ಭೇಟಿ ಮಾಡಲು ಬಂದಿದ್ದರು. ಇವರ ಜೊತೆ ಗಾಂಧೀಜಿ ಚರ್ಚಿಸುತ್ತಾ, ಕುಡಿತದ ವಿಷಯವಾಗಿ ಟಿಪ್ಪು ಕೈಗೊಂಡ ಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸ್ವತಃ ಟಿಪ್ಪು ಎಂದೂ ಕುಡಿತದ ಚಟಕ್ಕೆ ಬಲಿಯಾಗಿರಲಿಲ್ಲ. ಹೆಂಡಕ್ಕೆ ತವರು ಮನೆಯಾದ ಈಚಲು ಗಿಡಗಳನ್ನೆಲ್ಲಾ ಕಡಿದು ಹಾಕುವಂತೆ ಟಿಪ್ಪು ಅಪ್ಪಣೆ ಮಾಡಿದ್ದ, ಈ ಆಜ್ಞೆಯನ್ನು ಶ್ರೀರಂಗಪಟ್ಟಣದ ಸುತ್ತ-ಮುತ್ತ ಜಾರಿಗೂ ತಂದ. ಹೆಂಡದಂಗಡಿ ಕಡಿಮೆ ಮಾಡಿ, ಮಾದಕ ಪದಾರ್ಥಗಳನ್ನು ಅವನು ನಿಷೇಧಿಸಿದ ಬಗ್ಗೆ ಗಾಂಧೀ ಮಾತನಾಡಿದರು. ಗಾಂಧೀಜಿ ತಮ್ಮ ಆರೋಗ್ಯ ವಿಚಾರಿಸಲು ಬಂದ ಎಕ್ಸೈಜ್ ಕಮೀಷನ್ನರಿಗೂ ಕೂಡ ಕುಡಿತದ ಕೆಟ್ಟ ಚಟದ ಬಗ್ಗೆ ತಿಳಿಸಿ ಹೇಳಿದರು.

ಗಾಂಧೀಜಿಯವರ ಆರೋಗ್ಯ ವಿಚಾರಣೆ ಮಾಡುವ ಸಲುವಾಗಿ ನ್ಯಾಯಮೂರ್ತಿ ಶ್ರೀನಿವಾಸ ಶಾಸ್ತ್ರಿಗಳು ಸರ್ಕಾರದ ಪ್ರತಿನಿಧಿಯಾಗಿ ಬಂದಿದ್ದರು. ಇದಕ್ಕೂ ಮೊದಲು ಒಮ್ಮೆ ಇವರು ಗಾಂಧೀಜಿಯವರನ್ನು ನೋಡಲು ಬಂದಿದ್ದರು. ಮೊದಲನೇ ಸಲ ಬಂದಾಗ ಶಾಸ್ತ್ರಿಗಳು ತಮ್ಮ ಹೆಂಡತಿಯನ್ನು ಸಹ ಕರೆದು ತಂದಿದ್ದರು. ಆಗ ಶ್ರೀಮತಿ ಶಾಸ್ತ್ರಿಗಳಿಗೆ ಕಸ್ತೂರ ಬಾರವರು ತಮ್ಮ ಕೈನಿಂದ ನೇಯ್ಗೆ ಮಾಡಿದ್ದ ರವಿಕೆಗಳನ್ನು ತೋರಿಸಿ, ಆಕೆಯ ಮನ ಒಲಿಸಿ, ಎರಡು ರವಿಕೆ ಬಟ್ಟೆಯನ್ನು ನೀಡಿದ್ದರು. ಗಾಂಧೀಜಿ ಮಾತ್ರ ಖಾದಿಯ ಬಗ್ಗೆ ಮಾತೇ ಅಡಲಿಲ್ಲ. ಗಾಂಧೀಜಿಯವರನ್ನು ಭೇಟಿ ಮಾಡಲು ದಿವಾನ್ ಮಿರ್ಜಾ ಇಸ್ಮಾಯಿಲ್‌ರವರನ್ನು ವಿಶ್ವೇಶ್ವರಯ್ಯನವರು ನಂದಿದುರ್ಗಕ್ಕೆ ಕರೆತಂದಿದ್ದರು. ಪರಸ್ಪರ ಪರಿಚಯವಾದ ಮೇಲೆ ಗಾಂಧೀಜಿಗೆ ವಿಶ್ವೇಶ್ವರಯ್ಯನವರು ಕೇಳಿದರು. 'ಮೈಸೂರು ಆಡಳಿತವನ್ನು ಒಮ್ಮೆ ರಾಮರಾಜ್ಯ ಎಂದಿದ್ದಿರಿ. ಅದು ಯಾವ ಕಾಲ?' 'ನೀವು ದಿವಾನರಾಗಿದ್ದಾಗ ರಾಮರಾಜ್ಯವಾಗಿತ್ತು. ಆಮೇಲೆ ಹಾಗೆ ಉಳಿಯಲಿಲ್ಲ ಎನ್ನುತ್ತೀರೇನು ನೀವು?' ಎಂದು ನಗುತ್ತಾ ಗಾಂಧೀಜಿ ಕೇಳಿದರು. ಗಾಂಧೀಜಿಯವರಿಗೆ ಅವರೇ ಹೇಳಿದ್ದ ಮಾತು ಮರೆತು ಹೋದಂತಿತ್ತು.

ಗಾಂಧೀಜಿ ವಿಶ್ವೇಶ್ವರಯ್ಯನವರ ಜೊತೆ ಗೋರಕ್ಷಣೆ, ಗೋ ಸಂವರ್ಧನೆ, ಸಂಸ್ಥಾನದ ಕ್ಷೀರ ಕ್ಷೇತ್ರಗಳು, ಚರ್ಮಾಲಯಗಳು ಮುಂತಾದವುಗಳ ಬಗ್ಗೆ ಮಾತನಾಡಿದರು. ನಂತರ ವಿಶ್ವೇಶ್ವರಯ್ಯನವರ ಜೊತೆ ಇದ್ದ ದಿವಾನ್ ಮಿರ್ಜಾ ಇಸ್ಮಾಯಿಲ್‌ರವರನ್ನು ಕುರಿತು ಗಾಂಧೀಜಿಯವರು, 'ರಾಜ್ಯದ ಉನ್ನತ ಅಧಿಕಾರಿಗಳು ಕೆಲವರು ತಾವು ಖಾದಿ ಹಾಕಲು ಸರಕಾರವೇ ಅಡ್ಡಿ ಎನ್ನುತ್ತಾರೆ, ಇದು ಆಶ್ಚರ್ಯವಲ್ಲವೆ?' ಎಂದು ಪ್ರಶ್ನಿಸಿದರು. ಅದಕ್ಕೆ ದಿವಾನರು 'ಯಾರು ಆ ಅಧಿಕಾರಿ? ರಾಟೆಯಲ್ಲಿ ನೇಯುವುದನ್ನು ಜನಪ್ರಿಯಗೊಳಿಸಲು ಪ್ರಯತ್ನಿಸುತ್ತಿರುವ ಅಧಿಕಾರಿಗಳು ಖಾದಿ ಹಾಕಿದರೆ ಬೇಡ ಎನ್ನುತ್ತೇವೆಯೆ? ನಾನು ಅವರನ್ನು ಪ್ರೋತ್ಸಾಹಿಸುತ್ತೇನೆ' ಎಂದು ಹೇಳಿದರು. ಬೆಂಗಳೂರಿನ ಬಾಲಿಕ ಪಾಠಶಾಲೆಯ ಹುಡುಗಿಯರು ಗಾಂಧೀಜಿಯವರನ್ನು ನೋಡಿಕೊಂಡು ಹೋಗಲು ನಂದಿಗೆ ಬಂದಿದ್ದರು. ಅವರು ಅಲ್ಲಿ ಇದ್ದ ಸಮಯದಲ್ಲಿ ಗಾಂಧೀಜಿಗೆ ಸ್ವರ್ಗವೇ ಸಿಕ್ಕ ಹಾಗಾಯಿತು. ಹುಡುಗಿಯರು ಬೆಂಗಳೂರಿಗೆ ಹೋದ ಮೇಲೆ ದಿನವೂ ಗಾಂಧೀಜಿಯವರು ಬೇಗ ಗುಣಮುಖರಾಗಲೆಂದು, ನಾವೆಲ್ಲಾ ಸಾಮೂಹಿಕ ಪ್ರಾರ್ಥನೆ ಮಾಡಿ, 'ದೇವರಲ್ಲಿ ಬೇಡಿಕೊಳ್ಳುತ್ತೇವೆ' ಎಂದು ಪತ್ರ ಬರೆದರು. ಅವರಿಗೆ ಗಾಂಧೀಜಿಯವರು ಉತ್ತರ ಬರೆಯುತ್ತಾ, 'ಪ್ರೀತಿಯ ಪುಟ್ಟ ಹಕ್ಕಿಗಳೇ' ಎಂದು ಕರೆದು, 'ನಿಮ್ಮ ಪತ್ರ ನನಗೆ ಬಲ ನೀಡುವ ಪೌಷ್ಟಿಕ ಔಷಧ ಇದ್ದ ಹಾಗೆ' ಎಂದು ತಿಳಿಸಿದರು. ಗಾಂಧೀಜಿಯವರನ್ನು ಕಾಣಲು ಕಾಂಗ್ರೆಸ್ ಅಧ್ಯಕ್ಷರಾದ ಎಸ್. ಶ್ರೀನಿವಾಸಯ್ಯನವರು ನಂದಿಗೆ ಆಗಮಿಸಿದ್ದರು. ಅವರು ಬೊಂಬಾಯಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಬಗ್ಗೆ ಗಾಂಧೀಜಿಯವರ ಜೊತೆ ಚರ್ಚಿಸಿದರು.

ಮದರಾಸಿನ ಮಿತವಾದಿ, ವೃದ್ಧರಾದ ಎಲ್. ಎ. ಗೋವಿಂದರಾಘವ ಅಯ್ಯರ್ ಬಂದರು ಗಾಂಧೀಜೀಯವರ ಆರೋಗ್ಯದ ದೃಷ್ಟಿಯಿಂದ ಅವರು ಗಾಂಧೀಜಿಯವರನ್ನು ಚರ್ಚೆಗೆ ಎಳೆಯದೆ, ಆಗಾಗ ಬಂದು ನೋಡಿಕೊಂಡು ಹೋಗುತ್ತೇನೆ ಎಂದು ತಿಳಿಸಿ ನಿರ್ಗಮಿಸಿದರು. ಹೀಗೆ ಪ್ರತಿದಿನ ಗಾಂಧೀಜಿಯವರ ದರ್ಶನಕ್ಕಾಗಿ ಸಾವಿರಾರು ಜನರು ಬರುತ್ತಿದ್ದರು. ಅವರೊಡನೆ ಬಾಪೂಜಿಯವರು ಸಮಾಧಾನ ಚಿತ್ತರಾಗಿ ಚರ್ಚಿಸುತ್ತಿದ್ದರು. ಬಂದವರಿಗೆಲ್ಲಾ ಪಕ್ಕದ ಭೋಜನ ಶಾಲೆಯಲ್ಲಿ ಊಟ–ತಿಂಡಿಗಳ ವ್ಯವಸ್ಥೆ ಮಾಡಲಾಗಿತ್ತು. ಪ್ರತಿ ದಿನ ನಂದಿ ದುರ್ಗದ ವಾತಾವರಣಕ್ಕೆ ಗಾಂಧೀಜಿಯವರು ಚೇತರಿಕೊಳ್ಳುತ್ತಿದ್ದರು. ಹಾಗೂ ಪ್ರತಿದಿನ ಪ್ರಾರ್ಥನೆ ಮತ್ತು ಭಜನೆಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ದಿನದಿಂದ ದಿನಕ್ಕೆ ಗಾಂಧೀಜಿಯವರ ಆರೋಗ್ಯ ಸುಧಾರಣೆಯಾಗಿ ನಂದಿಯಿಂದ ಬೆಂಗಳೂರಿಗೆ ಹೊರಡಲು ಸಿದ್ಧರಾಗುತ್ತಿದ್ದರು.

ಈ ನಡುವೆ ದುರ್ಗಕ್ಕೆ ಒಬ್ಬ ವಿದೇಶಿ ಮಹಿಳೆ ರಂಗೂನಿನಿಂದ ಗಾಂಧೀಜೀಯವರ ದರ್ಶನಕ್ಕಾಗಿ ಬಂದಿದ್ದಳು. ಆಕೆ ಖಾದಿ ಸೀರೆ ಧರಿಸಿದ್ದು, ಆಕೆಗೆ ನೂಲುವುದು ಮತ್ತು ನೇಯುವುದು ಗೊತ್ತಿತ್ತು. ಆಕೆ ಬಂದು ಗಾಂಧೀ ಪಾದತಲದಲ್ಲಿ ಐದು ರೂಪಾಯಿಗಳನ್ನಿರಿಸಿ, ಅದನ್ನು ಗಾಂಧೀಜಿಯವರು ಸಮರ್ಪಿಸಿಕೊಳ್ಳುವಂತೆ ಕೋರಿದಳು. ನಂತರ ಚಿತ್ತೂರಿನ ಸಿ. ದೊರೆಸ್ವಾಮಿ ಅಯ್ಯಂಗಾರ್ಯರು ಗಾಂಧೀಜಿಯವರನ್ನು ನೋಡಲು ನಂದಿಗೆ ಬಂದಿದ್ದರು. ಇವರು ಸದಾ ಖಾದಿ ವಸ್ತ್ರಧಾರಿಗಳು–ಕಾಂಗ್ರೆಸ್ ಸದಸ್ಯರಿಗೆ ನೂಲುವುದು ಕಡ್ಡಾಯ ಎಂದಾಗ, ಅವರು ನೂಲುವುದನ್ನು ಮೊದಲು ಕಲಿತರು. ಅಂದಿನಿಂದ ನೂಲುತ್ತಿರುವುದಾಗಿಯೂ ಹೇಳಿ, ತಮ್ಮಲ್ಲಿದ್ದ ಅತ್ಯುತ್ತಮ ಹಂಜಿಗಳನ್ನು ಗಾಂಧೀಜಿಗೆ ಅರ್ಪಿಸಿದರು. ಇವರ ಜೊತೆ ಗಾಂಧೀಜಿಯವರು ನಿಯಮಿತವಾಗಿ ಪ್ರತಿದಿನ ಅರ್ಧಗಂಟೆ ನೂಲುವುದರ ಬಗ್ಗೆ ಚರ್ಚಿಸಿ, ಅವರನ್ನು ಬೀಳ್ಕೊಟ್ಟರು. ನಂತರ ಗಾಂಧೀಜಿಯವರನ್ನು ಕಾಣಲು ಚಿಕ್ಕಬಳ್ಳಾಪುರದಲ್ಲಿ ಸುಮಾರು 35 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಒಬ್ಬ ಪಾದ್ರಿ, ಸ್ನೇಹ ಮಿಲನಕ್ಕಾಗಿ ಬಂದಿದ್ದರು. ತಾನು ಮಾಡಿದ ಕೆಲಸದ ಬಗ್ಗೆ ಕನ್ನಡದಲ್ಲೂ, ತೆಲುಗಿನಲ್ಲೂ ತಿಳಿಸಿದರು. ಗಾಂಧೀಜಿಯವರು ಕುಟೀರೋದ್ಯೋಗಗಳನ್ನು ಪುನರುಜ್ಜೀವನಗೊಳಿಸಿದ್ದಕ್ಕಾಗಿ ಒಂದು ಒಳ್ಳೆಯ ಮಾತು ಆಡಿದರು.

ನಂದಿ ದುರ್ಗದಲ್ಲಿದ್ದಾಗ ಗಾಂಧೀಜಿಯವರು ಹಠಯೋಗದಲ್ಲಿ ಒಂದಾದ ನೇತಿ ಪದ್ಧತಿಯನ್ನು ಪ್ರತಿ ಭಾನುವಾರ ಅನುಸರಿಸುತ್ತಿದ್ದರು. ರಕ್ತದೊತ್ತಡ ಕಡಿಮೆಯಾಗಲು ಶೀರ್ಷಾಸನ ಮಾಡುತ್ತಿದ್ದರು. ಇದಕ್ಕಾಗಿ ಗಾಂಧೀಜಿಯವರು ಪುಣೆಯ ಬಳಿ ಇದ್ದ ಲೋನಾವಾಳಾ ಆಶ್ರಮದಲ್ಲಿನ ಪ್ರಸಿದ್ಧ ಯೋಗ ಪ್ರವೀಣ ಸ್ವಾಮಿ ಕುವಲಯಾನಂದ ಮತ್ತು ಅವರ ಕೆಲವು ಶಿಷ್ಯರನ್ನು ನಂದಿಧಾಮಕ್ಕೆ ಬರಮಾಡಿಕೊಂಡರು. ಇವರು ಗಾಂಧೀಜಿಯವರ ಜೊತೆ ಎಂಟು ದಿನಗಳಿದ್ದರು. ಔದ್ ಸಂಸ್ಥಾನದ ಸಾತವಳೇಕರ್ ಅವರು ವೇದಾಧ್ಯಯನ, ಸೂರ್ಯ ನಮಸ್ಕಾರ, ಅಂಗ ಸಾಧನೆಯಲ್ಲಿ ಪ್ರಸಿದ್ಧರು. ಹಾಗೂ ಚಿತ್ರಕಾರರೂ ಆಗಿದ್ದರು. ಇವರು ಗಿರಿಧಾಮದಲ್ಲಿದ್ದವರಿಗೆಲ್ಲಾ ಆ ವಿದ್ಯೆಗಳನ್ನು ಅಭ್ಯಾಸ ಮಾಡಿಸಿದರು.

ಗಿರಿಧಾಮದಲ್ಲಿದ್ದ ಗಾಂಧೀಜಿಯವರಿಗೆ ಸುಲ್ತಾನ್ ಪೇಟೆಯ ವೆಂಕಟಪ್ಪ ಎಂಬ ಕ್ಷೌರಿಕನು ಪ್ರತಿ ಭಾನುವಾರ ಬೆಟ್ಟಕ್ಕೆ ಬಂದು ಕ್ಷೌರ ಮಾಡುತ್ತಿದ್ದನು. ಒಮ್ಮೆ ಅವನು ಕ್ಷೌರ ಮಾಡುತ್ತಿದ್ದ ಕತ್ತಿಯು ಹಳೆಯದಾದ ಕಾರಣ ಒಂದು ಹೊಸ ವಿದೇಶಿ ಕತ್ತಿಯನ್ನು ಖರೀದಿಸಿ ತಂದು ಗಾಂಧೀಜಿಯವರಿಗೆ ಕ್ಷೌರ ಮಾಡಲು ಹೋದಾಗ ಗಾಂಧೀಜಿಯವರು ಆ ಕತ್ತಿಯನ್ನು ತೆಗೆದುಕೊಂಡು ನೋಡಿದರು. ಅದರ ಮೇಲೆ 'ಮೇಡ್–ಇನ್–ಜರ್ಮನಿ' ಕಾಪ್ ಮನ್ ಕಂಪನಿ ಎಂದು ಬರೆದಿದ್ದನ್ನು ಕಂಡು ಗಾಂಧೀಜಿಯವರಿಗೆ ಕಸಿವಿಸಿಯಾಯಿತು.

ಬೆಂಗಳೂರು ಮಾಡರ್ನ್ ಹಿಂದೂ ಹೋಟೆಲ್ ಮಾಲೀಕರಾದ ಕೆ. ಟಿ. ಅಪ್ಪಣ್ಣನವರು, ಮದರಾಸ್ ಲಂಚ್ ಹೋಂ ಮಾಲೀಕರಾದ ಶಂಕರ್ ಅಯ್ಯರ್‌ರವರು, ಮದರಾಸಿನ ಮಾಜಿ ಮೇಯರಾಗಿದ್ದ ಎಸ್. ಸತ್ಯಮೂರ್ತಿಯವರು ಗಾಂಧೀ ದರ್ಶನಕ್ಕಾಗಿ ಗಿರಿಧಾಮಕ್ಕೆ ಆಗಮಿಸಿದ್ದರು. ಗಾಂಧೀಜಿಯವರನ್ನ ಕಾಣಲು ಮೇ ಕೊನೆಯ ವಾರದಲ್ಲಿ ಜಮನಲಾಲ್ ಬಜಾಜ್, ಕೊಂಡಾ ವೆಂಕಟಪ್ಪಯ್ಯ, ಸಿ.ಎಫ್. ಆಂಡ್ರ್ಯೂಸ್, ವಲ್ಲಭಬಾಯಿ ಪಟೇಲ್, ಕಮಲ ನೆಹರೂ, ಸರೋಜಿನಿ ನಾಯ್ಡು ಮುಂತಾದ ಗಣ್ಯರೆಲ್ಲ ಆಗಮಿಸಿದ್ದರು. ಬಾಬು ರಾಜೇಂದ್ರ ಪ್ರಸಾದ್‌ರವರು ಕಾಲು ನಡಿಗೆಯಲ್ಲಿ ನಂದಿ ಬೆಟ್ಟ ಹತ್ತಿ ಗಾಂಧೀಜಿಯವರನ್ನು ನೋಡಲು ಬಂದು, ಕೆಲವು ದಿನಗಳ ಕಾಲ ಅಲ್ಲೆ ತಂಗಿದ್ದು, ಗಾಂಧೀಜಿಯವರ ಜೊತೆಯಲ್ಲಿ ಬೆಂಗಳೂರಿಗೆ ಆಗಮಿಸಿದರು. ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ ತಮ್ಮ ವಕೀಲ ವೃತ್ತಿಯನ್ನು ಬಿಟ್ಟು ಗಾಂಧೀ ಸೇವೆಗಾಗಿ ಗಿರಿಧಾಮದಲ್ಲಿ ಉಳಿದರು.

ಸತತ ಎರಡು ತಿಂಗಳು ಪೂರ್ತಿ ಗಾಂಧೀಜಿ ಗಿರಿಧಾಮದಲ್ಲಿ ಇದ್ದು, ಅಲ್ಲಿನ ವಾತಾವರಣದಿಂದಾಗಿ ಪೂರ್ಣ ಗುಣಮುಖರಾದರು. ಅವರಿಗಿದ್ದ ರಕ್ತದೊತ್ತಡ ಇಳಿಮುಖವಾಗಿ, ಗಾಂಧೀ ಲವಲವಿಕೆಯಿಂದ ಓಡಾಡುವಂತಾದರು. ಆದರೂ ಇನ್ನೂ ಹೆಚ್ಚಿನ ವಿರಾಮಕ್ಕಾಗಿ ಜೂನ್ ಇಪ್ಪತ್ತನೆ ತಾರೀಕಿನವರವಿಗೂ ಗಾಂಧಿ ಗಿರಿಧಾಮದಲ್ಲೇ ಇರಬೇಕೆಂದು ನಿಗದಿಯಾಗಿದ್ದರು ಸಹ, ಜೂನ್ 4ರಂದು ಮೋತಿಲಾಲ್ ನೆಹರೂರವರು ಬೆಂಗಳೂರಿಗೆ ಬರುತ್ತಿರುವ ವಿಷಯ ತಿಳಿದ ಗಾಂಧೀಜಿಯವರು ನಂದಿಬೆಟ್ಟ ಇಳಿದು ಜೂನ್ 5ರಂದು ಬೆಳಗ್ಗೆ ಬೆಂಗಳೂರಿಗೆ ಬಂದರು. ಮಧ್ಯೆ ದಾರಿಯಲ್ಲಿ ಚಿಕ್ಕಬಳ್ಳಾಪುರದಲ್ಲಿ ಸ್ವಲ್ಪ ಹೊತ್ತು ತಂಗಿದ್ದರು. ಇಲ್ಲಿನ ಜನತೆ ಗಾಂಧೀಜಿಯವರಿಗೆ ಬಿನ್ನವತ್ತಳೆಯನ್ನು ಹಾಗೂ ನಿಧಿಯನ್ನು ಅರ್ಪಿಸಿದರು. ಅಲ್ಲದೆ ಅದೇ ಊರಿನ ಹರಿಜನ ಸಮುದಾಯದವರು ಕೂಡ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು.

ಬೆಂಗಳೂರಿನಲ್ಲಿ ಗಾಂಧಿ ಸರ್ಕಾರಿ ಅತಿಥಿ ಗೃಹ ಕುಮಾರ ಕೃಪಾದಲ್ಲಿ ತಂಗಿದ್ದರು. ಇದು ಶೇಷಾದ್ರಿ ಅಯ್ಯರ್‌ರವರು ವಾಸವಾಗಿದ್ದ ಮನೆಯಾಗಿತ್ತು. ಗಾಂಧೀಜಿಯವರು ಬೆಂಗಳೂರಿನಲ್ಲಿ ತಂಗಿದ್ದಾಗ ಪ್ರತಿದಿನವೂ ಸಂಜೆ ಪ್ರಾರ್ಥನೆಗೆ ಜನ ಸಾಗರೋಪಾದಿಯಲ್ಲಿ ಆಗಮಿಸುತ್ತಿದ್ದರು. ಪ್ರತಿ ದಿನವೂ ಜನರ ಗುಂಪು ಹೆಚ್ಚಾಗುತ್ತಿದ್ದುದ್ದನ್ನು ಗಮನಿಸಿ, ಗಾಂಧೀಜಿಯವರು ಕೆಲವು ನಿಬಂಧನೆಗಳನ್ನು ಹಾಕಿದರು. ಅವುಗಳೆಂದರೆ, 'ನನ್ನ ಸುತ್ತ ಗುಂಪು ಕಟ್ಟಬಾರದು. ಸಂಜೆ ವೇಳೆಯಲ್ಲಿ ನಾನು ಗಾಳಿ ಸೇವನೆಗೆ ಹೊರಡುವಾಗ ನನ್ನ ಹಿಂದೆ ಯಾರೂ ಬರಬಾರದು. ನಾನಿನ್ನೂ ರೋಗಿ. ನನಗೆ ವಿಶ್ರಾಂತಿ ಬೇಕು. ಶಾಂತವಾಗಿ ನಾನು ತಿರುಗಾಡಲು ಹೋಗುವಾಗ ತೊಂದರೆ ಕೊಡಬೇಡಿ'. ಅಲ್ಲಿ ಸೇರುತ್ತಿದ್ದ ಜನತೆಯ ಬಗ್ಗೆಯೂ ಒಂದೆರಡು ಮಾತುಗಳನ್ನು ಹೇಳಿದರು. ಅದೇನೆಂದರೆ, ನೀವು ಯಾವುದೇ ಪಂಥ, ಜಾತಿ ಮತಕ್ಕೆ ಸೇರಿದ್ದರೂ ಎಲ್ಲರೂ ಪ್ರಾರ್ಥನೆಯಲ್ಲಿ ಭಾಗವಹಿಸಬಹುದು, ಶ್ಲೋಕಗಳ ಪಠಣವಾದ ಮೇಲೆ 'ರಘಪತಿ ರಾಘವ ರಾಜಾರಾಂ ಪತಿತ ಪಾವನ ಸೀತಾರಾಂ' ಭಜನೆಯಲ್ಲಿ ಧ್ವನಿಗೂಡಿಸಬೇಕು ಮುಂತಾಗಿ ತಿಳಿಸಿದರು. 'ದೀನ-ದಲಿತ, ಪತಿತರನ್ನು ಕಾಪಾಡುವ ದೇವರನ್ನು ನಾವು ಪ್ರಾರ್ಥಿಸುತ್ತೇವೆ. ಆದ್ದರಿಂದ ಪ್ರತಿದಿನ ನೀವು ಖಾದಿ ಧರಿಸಿ ಬನ್ನಿ; ಏಕೆಂದರೆ ದಿನ-ದಲಿತ ಪತಿತರೊಂದಿಗೆ ನಮ್ಮನ್ನು ಖಾದಿ ಜೋಡಿಸುತ್ತದೆ' ಎಂದು ಹಿತವಚನ ಹೇಳಿದರು.

ಗಾಂಧೀಜಿಯವರು 'ಕುಮಾರ ಕೃಪಾ'ದಲ್ಲಿ ತಂಗಿದ್ದಾಗ ಅವರನ್ನು ಕಾಣಲು 'ದಿ ಹಿಂದೂ' ಪತ್ರಿಕೆಯ ಸಂಪಾದಕರಾಗಿದ್ದ ಶ್ರೀನಿವಾಸನ್ ಮತ್ತು ಮೈಸೂರು ಸಂಸ್ಥಾನದ ವಾಣಿಜ್ಯ ಕೈಗಾರಿಕೆ ಇಲಾಖೆಯ ಶಾಖಾಧ್ಯಕ್ಷರಾಗಿದ್ದ ರಂಗನಾಥರಾವ್ ಬಂದಿದ್ದರು. ಇವರೊಡನೆ ಗಾಂಧೀಜಿಯವರು ಖಾದಿ ಮತ್ತು ಖಾದಿ ನೇಯುವ ರಾಟೆಯ ಬಗ್ಗೆ ಚರ್ಚಿಸಿದರು. ರಂಗನಾಥ್‌ರವರು ಸಂಸ್ಥಾನದ ಕಾರ್ಖಾನೆಗಳಲ್ಲಿ ತಯಾರಾಗುತ್ತಿದ್ದ ರಾಟೆಗಳನ್ನು ಗಾಂಧೀಜಿಗೆ

ತೋರಿಸುತ್ತಾ, ನೂಲುವುದನ್ನು ಹೇಗೆ ಜನಪ್ರಿಯಗೊಳಿಸಬೇಕೆಂದು ಕೇಳಿದರು. ಇವರೊಡನೆ ಗಾಂಧೀ ರಾಟೆ ಮತ್ತು ಕೆಲವು ಚಿಕ್ಕ-ಪುಟ್ಟ ವಿಷಯಗಳ ಬಗೆಗೂ ಚರ್ಚಿಸಿದರು. 'ಗಂಟು ಕಟ್ಟಿದ ಅರಳೆಯಿಂದ ನೂಲಬೇಡಿ. ಜನರೇ ತಮ್ಮ ಹತ್ತಿಯನ್ನು ತಾವೇ ಹಿಂಜಿಕೊಳ್ಳಲಿ. ಯಂತ್ರದ ಪಿಂಜಣಿಯಿಂದ ಹತ್ತಿಯ ಜೀವಾಳ ಹೋಗುತ್ತದೆ. ಶ್ರಮದ ವಿಭಜನೆ ಒಳ್ಳೆಯದಲ್ಲ. ಆದ್ದರಿಂದ, ನೂಲುವುದರ ಜೊತೆಗೆ ಹಿಂಜುವುದನ್ನು ಸಹ ಕಲಿಸಬೇಕು. ಪ್ರತಿಯೊಂದು ಹಳ್ಳಿಯೂ ತನ್ನ ಹತ್ತಿಯನ್ನು ಬೆಳೆದುಕೊಳ್ಳಬೇಕು' ಗಾಂಧೀಜಿ ಆಗ ಜನರಿಗೆ ಶಾಸ್ತ್ರೀಯ ಗೋ ರಕ್ಷಣೆ ಮಾಡುವ ಬಗ್ಗೆ ಕೂಡ ಕೆಲವು ಸಲಹೆಗಳನ್ನು ನೀಡಿದರು.

ಗಾಂಧೀಜಿ ಬೆಂಗಳೂರಿನಲ್ಲಿದ್ದಾಗ ಒಮ್ಮೆ ವಿಜ್ಞಾನ ಮಂದಿರದ ಆವರಣದಲ್ಲಿ ಓಡಾಡುತ್ತಿದ್ದರು. ಅದನ್ನು ಗಮನಿಸಿದ ಕೆಲವು ಹುಡುಗರು ಅವರ ನಿಲಯಕ್ಕೆ ಗಾಂಧೀಜಿಯವರನ್ನು ಆಹ್ವಾನಿಸಿದಾಗ, 'ನಿಮ್ಮನ್ನು ನೋಡಲು ನಾನು ಬಂದಿಲ್ಲ. ನಿಮ್ಮ ಮಂದಿರದ ಬಯಲನ್ನು ನೋಡಲು ಬಂದಿದ್ದೇನೆ' ಎಂದು ನಗುತ್ತಾ ಗಾಂಧೀಜಿ ಹೇಳಿದರು. ನೀವೆಲ್ಲರೂ ಖಾದಿ ತೊಟ್ಟು ಖಾದಿಗಾಗಿ ನಿಧಿ ಸಂಗ್ರಹಿಸಿ, ಕರೆದರೆ ಬರುವುದಾಗಿ ತಿಳಿಸಿ, ಖಾದಿ ತಯಾರಿಸುವುದರಿಂದ ಹಾಗೂ ಅದನ್ನು ಧರಿಸುವುದರಿಂದ ಆಗುವ ಉಪಯೋಗಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಗಾಂಧೀಜಿಯವರ ಆಶಯ ಸಂಸ್ಥಾನದ ಎಲ್ಲಾ ಶಾಲೆಗಳಲ್ಲಿ ನೂಲುವುದನ್ನು ಕಡ್ಡಾಯ ಮಾಡುವುದಾಗಿತ್ತು. ಶಾಲೆಯಲ್ಲಿ ಮೊದಲು ಪ್ರಾರ್ಥನೆ ಮಾಡುವಂತೆ ಅರ್ಧಗಂಟೆ ನೂಲುವಿಕೆಯಿಂದ ಶಾಲೆ ಪ್ರಾರಂಭಿಸಬೇಕೆಂದು, ಸರ್ಕಾರಿ ಕಛೇರಿಗಳಲ್ಲಿ ನೌಕರರು ತಮ್ಮ ಮೇಜಿನ ಮೇಲೆ ತಕಲಿ ರಾಟೆಯಿಂದ ಅರ್ಧಗಂಟೆ ನೂಲಲೇಬೇಕೆಂದು ನಾನು ವೈಸ್‌ರಾಯ್ ಆಗಿದ್ದರೆ ಕಡ್ಡಾಯ ಮಾಡುತ್ತಿದ್ದೆ ಎಂದು ಗಾಂಧೀಜಿ ತಮ್ಮ ಆತ್ಮ ಕಥನದಲ್ಲಿ ಹೇಳಿಕೊಂಡಿದ್ದಾರೆ.

ಒಮ್ಮೆ ಒಬ್ಬ ಹೆಂಗಸು ಗಾಂಧೀಜಿಯವರನ್ನು ನೋಡಲು ಕುಮಾರ ಕೃಪಾಗೆ ಬಂದಿದ್ದಳು. ಅವಳು ಗಾಂಧೀಜಿಯವರ ದರ್ಶನ ಮಾಡಿ, ಮಕ್ಕಳಾಗುವಂತೆ ಆಶೀರ್ವಾದ ಪಡೆಯಲು ಬಂದಿದ್ದಳು. ಈ ವಿಚಾರವನ್ನು ತಿಳಿದ ಗಾಂಧೀಜಿ, ಮೈಸೂರು ಸಂಸ್ಥಾನದಲ್ಲಿ ಸುಂದರವಾದ ಅನೇಕ ಬಡ ಮಕ್ಕಳಿದ್ದಾರೆ. ಅವುಗಳಲ್ಲಿ ಯಾರನ್ನಾದರೂ ದತ್ತು ತೆಗೆದುಕೊಂಡರೆ, ಹಸಿದ ಮಕ್ಕಳಿಗೆ ಅನ್ನ ನೀಡಿದಂತಾಗುತ್ತದೆ. ಬಟ್ಟೆ ಇಲ್ಲದವರಿಗೆ ಬಟ್ಟೆ ನೀಡಿದಂತಾಗಿ, ನೆಲೆ ಇಲ್ಲದವರಿಗೆ ನೆಲೆ ನೀಡಿದಂತಾಗುತ್ತದೆ ಎಂದು ಆ ಹೆಂಗಸಿಗೆ ಕಿವಿ ಮಾತು ಹೇಳಿದರು. ಇದರಿಂದ ಆ ಮಹಿಳೆ ಸಂತಸದಿಂದ ಹೊರಟು ಹೋದಳು. ಬೆಂಗಳೂರಿನ ಕೆಲವು ತರುಣ-ತರುಣಿಯರು ಗಾಂಧೀಜಿಯವರ ಹಸ್ತಾಕ್ಷರಕ್ಕಾಗಿ ಬಂದಾಗ, ಅದಕ್ಕೆ ಬೆಲೆ ಕೊಡಬೇಕೆಂದೂ, ಖಾದಿ ಧರಿಸಬೇಕೆಂದೂ, ಪ್ರತಿದಿನ ಅರ್ಧ ಗಂಟೆ ನೂಲುವುದನ್ನು ಅಭ್ಯಾಸ ಮಾಡಬೇಕೆಂದೂ ಗಾಂಧೀಜಿ ತಿಳಿಸಿದರು. ಇದರಿಂದ ಸ್ಫೂರ್ತಿಗೊಂಡ ತರುಣಿಯೊಬ್ಬಳು ಬೆಲೆ ನೀಡಿ, ಗಾಂಧೀಜಿಯವರ ಹಸ್ತಾಕ್ಷರ ಪಡೆದಳು. ಅದಕ್ಕೆ ಗಾಂಧೀ, 'ಒಮ್ಮೆ ಮಾತು ಕೊಟ್ಟರೆ ಅದನ್ನು ನಡಸಲೇಬೇಕು; ಮಾತು ಮುರಿಯುವುದು ತಲೆ ಒಡೆಯುವುದಕ್ಕಿಂತ ಘೋರ' ಎಂದು ತಿಳಿಸುತ್ತಾ ತಮ್ಮ ಹಸ್ತಾಕ್ಷರ ನೀಡಿದರು.

ಗಾಂಧೀಜಿಯವರು ಬೆಂಗಳೂರಿನಲ್ಲಿದ್ದಾಗ ಅವರನ್ನು ಕಾಣಲು ಮದನಮೋಹನ ಮಾಳವೀಯ ಆಗಮಿಸಿದ್ದರು. ಇವರು ಬೆಂಗಳೂರಿನ ಶಂಕರಮಠದಲ್ಲಿ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಸಂಸ್ಕೃತದಲ್ಲಿ ಭಾಷಣ ಮಾಡಿದರು, ಅಸ್ಪೃಶ್ಯತಾ ನಿವಾರಣೆಗೆ ಇವರು ಶ್ರಮಿಸುತ್ತಿದ್ದರು. ಹಾಗೂ ಗಾಂಧೀಜಿಯವರ ಬಗ್ಗೆ ಆಧರಾಭಿಮಾನ .ಹೊಂದಿದ್ದವರು. ಹಾಗೂ ಬೆಂಗಳೂರಿನಲ್ಲಿ ಗಾಂಧೀಜಿಯವರು ವಾಸ್ತವ್ಯ ಹೂಡಿದ್ದಾಗ ಇವರೂ ಬೇರೊಂದು ಪ್ರತ್ಯೇಕವಾದ ಬಿಡಾರದಲ್ಲಿ ವಾಸ್ತವ್ಯವಿದ್ದರು.

ಸರ್. ಬ್ರಜೇಂದ್ರನಾಥ್ ಸೀಲ್‌ರವರು, ಮೈಸೂರು ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿದ್ದವರು. ಇವರು ಕಲ್ಕತ್ತ ಭೇಟಿಯ ನಂತರ ಗಾಂಧೀಜಿಯವರನ್ನು ನೋಡಲು ಬೆಂಗಳೂರಿಗೆ ಆಗಮಿಸಿದ್ದರು. ಉಭಯ ಕುಶಲೋಪರಿ ಬಳಿಕ ಇಬ್ಬರ ಮಧ್ಯೆ ಚರ್ಚೆ ನಡೆಯಿತು. ಗಾಂಧೀಜಿ ಬ್ರಜೇಂದ್ರನಾಥರನ್ನು ಕೇಳಿದರು, 'ಬಂಗಾಳದ ಯುವಕರಿಗೂ ಈ ಪ್ರದೇಶಗಳ ಯುವಕರಿಗೂ ಏನು ವ್ಯತ್ಯಾಸ?' ಅದಕ್ಕೆ ಬ್ರಜೇಂದ್ರನಾಥರು, 'ಬಂಗಾಳಿ ಯುವಕರು ಭಾವಪೂರ್ಣರು ಹಾಗೂ ಧ್ಯೇಯ ವಾದಿಗಳು. ಅವರಿಗೆ ಊಹಾ ಶಕ್ತಿ ಮತ್ತು ಕೋಮಲತನವಿದೆ. ಆದರೆ ಮಾನೋಧಾರ್ಡ್ಯ ಕಡಿಮೆ. ದಕ್ಷಿಣದ ಯುವಕರು ಹೆಚ್ಚು ವ್ಯವಹಾರ ಸಮರ್ಥರು ಹಾಗೂ ಅವರು ಎಲ್ಲವನ್ನೂ ಕಲಿಯಲು ಬಯಸುತ್ತಾರೆ. ವ್ಯವಹಾರ ಸೂಕ್ಷ್ಮತೆಯನ್ನು ವಶಮಾಡಿಕೊಳ್ಳಬಲ್ಲ ಚತುರರು' ಎಂದು ತಿಳಿಸಿದರು.

ಗಾಂಧೀಜಿಯವರು ಪಶುಪಾಲನೆ ಹಾಗೂ ಪಿಂಜಾರ ಪೋಲುಗಳ ಸುಧಾರಣೆಗಾಗಿ ಚರ್ಚಿಸಲು ಒಂದು ಸಭೆಯನ್ನು ಕರೆದಿದ್ದರು. ಈ ಸಭೆಯಲ್ಲಿ ಕೇಂದ್ರ ಸರ್ಕಾರದ ಪರವಾಗಿ ಬೆಂಗಳೂರು ಇಂಪೀರಿಯಲ್ ಡೈರಿ ಫಾರಂನ ನಿರ್ದೇಶಕರಾದ ವಿಲಿಯಂ ಸ್ಮಿತ್‌ರವರು ಭಾಗವಹಿಸಿದ್ದರು. ನಂತರ ಕೆಲವು ದಿನಗಳ ಕಾಲ ಗಾಂಧೀಜಿಯವರು ಅಡುಗೋಡಿಯಲ್ಲಿದ್ದ ಇಂಪೀರಿಯಲ್ ಮಿಲ್ಕ್ ಡೈರಿಗೆ ಭೇಟಿ ಕೊಟ್ಟಿದ್ದರು. ಇವರ ಜೊತೆ ಮದನ ಮೋಹನ ಮಾಳವೀಯರವರು ಸಹ ಡೈರಿಗೆ ಭೇಟಿ ನೀಡಿದ್ದರು. ಕೊನೆಯ ದಿನ ಗಾಂಧೀಜಿಯವರು ಸಂದರ್ಶನ ಪುಸ್ತಕದಲ್ಲಿ 'ಎಂ. ಕೆ. ಗಾಂಧಿ, ಫಾರ್ಮರ್, ಸಬರಮತಿ' ಎಂದು ಬರೆದು ಎಲ್ಲರಿಗೂ ಆಶ್ಚರ್ಯ ಉಂಟು ಮಾಡಿದರು. ನಂತರ ಗಾಂಧೀಜಿಯವರು ದಕ್ಷಿಣ ಭಾರತದ ಖಾದಿ ಪ್ರದರ್ಶನವನ್ನು ನ್ಯಾಷನಲ್ ಹೈಸ್ಕೂಲ್‌ನಲ್ಲಿ ಉದ್ಘಾಟಿಸುತ್ತಾ, ಖಾದಿ ಚಳವಳಿಯ ಉದ್ದೇಶ ಹಾಗು ಅದರಲ್ಲಿ ಸಾಧಿಸಿದ ಪ್ರಗತಿ ಬಗ್ಗೆ ತಿಳಿಸಿದರು. ಈ ಪ್ರದರ್ಶನಕ್ಕೆ ಬೆಂಗಳೂರಿನ ಜನ ಆಸಕ್ತಿಯಿಂದ ಬರುತ್ತಿದ್ದರು. ಗಾಂಧೀಜಿಯವರ ಭಾಷಣ ಆಲಿಸುತ್ತಿದ್ದರು. ಇದು ಬೆಂಗಳೂರಿನ ಜನರ ಸಂಸ್ಕೃತಿಯನ್ನು ತೋರಿಸುತ್ತದೆ ಎಂದು ಗಾಂಧೀ 'ಯಂಗ್ ಇಂಡಿಯಾ' ದಲ್ಲಿ ಬರೆದಿದ್ದಾರೆ. ಇದೇ ಸಮಯದಲ್ಲಿ ನ್ಯಾಷನಲ್ ಹೈಸ್ಕೂಲ್ ಆವರಣದಲ್ಲಿ ಆರಂಭಿಸಲಾಗಿದ್ದ ವ್ಯಾಯಾಮ ಶಾಲೆಯನ್ನು ದಿನಾಂಕ: 20–08–1927ರಂದು ಗಾಂಧೀಜಿಯವರು ಉದ್ಘಾಟಿಸಿದರು.

ಮೈಸೂರು ಸಂಸ್ಥಾನದ ಆಗಿನ ನ್ಯಾಯಾಧೀಶರಾಗಿದ್ದ ಶಂಕರನಾರಾಯಣರವರು ಬೆಂಗಳೂರಿನ ವಿದ್ಯಾರ್ಥಿ ನಿಲಯದ ಆದಿ–ಕರ್ನಾಟಕ ಹುಡುಗರನ್ನು ಗಾಂಧೀಜಿಗೆ ಭೇಟಿ ಮಾಡಿಸಲು ಕುಮಾರ ಕೃಪಾಗೆ ಕರೆದು ತಂದರು. ಈ ಹುಡುಗರು ಗಾಂಧೀಜಿ ಮತ್ತು ಮದನ ಮೋಹನ ಮಾಳವೀಯರ ಮುಂದೆ ಕುಳಿತು ಸಂಸ್ಕೃತ ಶ್ಲೋಕಗಳನ್ನು ಹೇಳಿದರು. ಹಿಂದಿ, ತಮಿಳು ಮತ್ತು ಕನ್ನಡಗಳಲ್ಲಿ ಭಜನೆ ಮಾಡಿದರು. ನಂತರ ಗಾಂಧೀಜಿಯವರು ಈ ಹುಡುಗರಿಗೆ ಉಪದೇಶ ನೀಡುತ್ತಾ, 'ನಿಮ್ಮ ತಂದೆ–ತಾಯಿ ಅಥವಾ ಆದಿ–ಕರ್ನಾಟಕದವರು ಹೆಂಡ ಕುಡಿಯುತ್ತಾರೆ, ಗೋಮಾಂಸ ತಿನ್ನುತ್ತಾರೆ; ನೀವು ಅವರಂತೆ ಮಾಡಬೇಡಿ. ಇವೆಲ್ಲವನ್ನು ಬಿಟ್ಟು ಬಿಡಬೇಕು. ನಿಮ್ಮ ನಿಲಯ ಪಾಲಕರಿಗೆ ಖಾದಿ ಬಟ್ಟೆ ಕೊಡುವಂತೆ ಕೇಳಬೇಕು. ಖಾದಿ ತೊಡಬೇಕು, ನೂಲುವುದನ್ನು ಕಲಿಯಬೇಕು ಹಾಗೂ ಖಾದಿ ಪ್ರದರ್ಶನಕ್ಕೆ ಹೋಗಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿ ಅವರನ್ನು ಕಳುಹಿಸಿದರು.

ಮತ್ತೊಮ್ಮೆ ಗಾಂಧೀಜಿಯವರು ಕುಮಾರ ಕೃಪಾ ಅತಿಥಿಗೃಹದ ಮೊಗಸಾಲೆಯಲ್ಲಿ ರಾಟೆಯಿಂದ ನೂಲುತ್ತಿರುವಾಗ ಡೇವಿಸ್ ದಂಪತಿಗಳಾದ ಶ್ರೀಮತಿ ಮತ್ತು ಶ್ರೀ ಜೆರೋಮ್‌ರವರು ಬಂದರು. ಇವರ ಜೊತೆ ಗಾಂಧೀಜಿ ಖಾದಿ ಬಗ್ಗೆ ಪ್ರಸ್ತಾಪಿಸಿ, ವಿದ್ಯಾರ್ಥಿಗಳ ವೇಷ–ಭೂಷಣ, ಪರದೇಶಿ ತಿಂಡಿ–ತಿನಿಸುಗಳ ಬಗ್ಗೆ ಚರ್ಚಿಸಿದರು. ಚರ್ಚೆಯ ಸಂದರ್ಭದಲ್ಲಿ ಜೆರೊಮ್‌ಗೆ ಗಾಂಧಿಯವರು ಹೇಳಿದರು: 'ಪಾದ್ರಿಗಳು ಈ ದೇಶದಲ್ಲಿರಬೇಕೆಂದರೆ ಅವರ ಮನೋಧರ್ಮ ಬದಲಾಯಿಸಿಕೊಳ್ಳಬೇಕು. ಇತರ ಮತದವರು ಹೇಳಿದ್ದನ್ನು

ಹಳಿದು, ತಮ್ಮ ಮತದ ಉಪದೇಶವೇ ಶ್ರೇಷ್ಠ ಎಂಬ ಅವರ ಭಾವನೆ ಬದಲಾಗಬೇಕು. ಆವರ ಬಳಿಗೆ ಗುರುಗಳಂತೆ, ಪೋಷಕರಂತೆ ಹೋಗಬಾರದು. ಅವರಲ್ಲಿಯೇ ಒಬ್ಬರಂತೆ ಹೋಗಿ, ಅವರ ನಡುವೆ ಕೆಲಸ ಮಾಡಬೇಕು. ಅವರಿಗೆ ಉಪಕಾರ ಮಾಡಲು ಹೋಗಬಾರದು. ಅವರ ಸೇವೆ ಮಾಡಲು ಹೋಗಬೇಕು' ಎಂದು ಗಾಂಧೀಜಿ ತಿಳಿಸಿದರು.

ಇದೇ ವೇಳೆಗೆ ಬೆಂಗಳೂರಿನಲ್ಲಿ ಖಾದಿ ನಿಧಿಗೆ ದೇಣಿಗೆ ಸಂಗ್ರಹಿಸುವ ಸಲುವಾಗಿ ಅಮೆಚೂರ್ ನಾಟಕ ಸಂಸ್ಥೆಯವರು ನಾಟಕ ಏರ್ಪಡಿಸಿದ್ದರು. ಈ ನಾಟಕ ನೋಡಲು ಗಾಂಧೀಜಿಯವರು ಬಂದಿದ್ದರು. ಪಂಡಿತ ತಾರಾನಾಥರು ಅಮೆಚೂರ್ ನಾಟಕ ಅಸೋಷಿಯನ್ ನಾಟಕದಲ್ಲಿ ಪಾತ್ರ ಮಾಡಿದ್ದರು. ನಾಟಕದಿಂದ ಬಂದ ಮೊತ್ತವನ್ನು ಖಾದಿ ನಿಧಿಗೆ ನೀಡಲಾಯಿತು. ನಾಟಕ ಹಿಂದಿ ಭಾಷೆಯದು. ವಸ್ತು ಕಬೀರದಾಸರು. ಗಾಂಧೀಜಿ ಕೊನೆಯ ತನಕ ನಾಟಕ ವೀಕ್ಷಿಸಿದರು. ನಾಟಕದ ಕೊನೆಯಲ್ಲಿ ಸಂಘದ ಅಧ್ಯಕ್ಷರಾದ ಬಾಲಸುಂದರ್ ಅಯ್ಯರ್‌ರವರು ಗಾಂಧೀ ಖಾದಿ ನಿಧಿಗೆ 500/-ರೂಪಾಯಿಗಳ ದೇಣಿಗೆ ನೀಡಿದರು. ಗಾಂಧೀಜಿ ಇದಕ್ಕೆ ಪ್ರತಿಕ್ರಿಯಿಸಿ ನಟರಲ್ಲಿ ಅನೇಕರು ಖಾದಿಧಾರಿಗಳಾಗಿರುವದು ಸಂತೋಷ. ಉತ್ತಮ ನಟನೆ ಮಾಡಿದ್ದಾರೆ. ಇದನ್ನೇ ಅವರ ಬದುಕಿನ ಶಾಶ್ವತ ಭಾಗವಾಗಿ ಅಳವಡಿಸಿಕೊಳ್ಳಲಿ ಎಂದು ತಿಳಿಸುತ್ತಾ, ಈ ದಿನದ ಸಂಜೆಯ ಅನುಭವ ನನ್ನ ನೆನಪಿನಲ್ಲಿ ಪ್ರಧಾನವಾಗಿರುವುದೆಂದು ತಿಳಿಸಿದರು. ನಂತರ ಗಾಂಧೀಜಿಯವರು ಯಲಹಂಕ ಹೆಂಚಿನ ಕಾರ್ಖಾನೆಗೆ ಭೇಟಿ ಕೊಟ್ಟರು. ಈ ಸಮಯದಲ್ಲಿ ಕಾರ್ಖಾನೆ ಕಾರ್ಮಿಕರು 500/- ರೂಪಾಯಿಗಳ ನಿಧಿಯನ್ನು ನೀಡಿದರು. ಕಾರ್ಖಾನೆ ಮಾಲೀಕರಾದ ವೇಣುಗೋಪಾಲ್ ಮೊದಲಿಯಾರ್‌ರವರು ಗಾಂಧೀಜಿಯವರ ಬೆಂಗಳೂರು ಭೇಟಿಯ ಸಮಯದಲ್ಲಿ ಸಹಾಯ ಮಾಡಿದರು.

ಮತ್ತೊಂದು ದಿನ ಮಾಸ್ತಿಯವರು ಮಹಾತ್ಮರನ್ನು ಕಾಣಲು ಪತ್ನಿ ಮತ್ತು ಮಕ್ಕಳ ಸಮೇತ ಕುಮಾರ ಕೃಪಾಗೆ ಬಂದಿದ್ದರು. ಗಾಂಧೀಜಿಯವರು ಮೌನ ವ್ರತದಲ್ಲಿದ್ದ ಕಾರಣ ಮಾತನಾಡಲಿಲ್ಲ. ಕೇವಲ ಸಂಜ್ಞೆ ಮೂಲಕ ಮಾತಾಡಿ ಹಿಂತಿರುಗಿದರು.

ದಕ್ಷಿಣ ಭಾರತದ ಹಿಂದಿ ಪ್ರಚಾರ ಸಭೆಯ ಮುಖಂಡರಾದ ಹರಿಹರಶರ್ಮರವರು ಗಾಂಧೀ ಬೆಂಗಳೂರಿನಲ್ಲಿರುವ ಅವಕಾಶ ಉಪಯೋಗಿಸಿಕೊಂಡು, ಅವರ ಅಧ್ಯಕ್ಷತೆಯಲ್ಲೇ ಅಖಿಲ ಕರ್ನಾಟಕ ಪ್ರಥಮ ಹಿಂದಿ ಪ್ರಚಾರ ಸಮ್ಮೇಳನವನ್ನು ಜುಲೈ 9 ಮತ್ತು 10 ರಂದು ಮೆಜೆಸ್ಟಿಕ್ ನಾಟಕ ಮಂದಿರದಲ್ಲಿ ಆಯೋಜಿಸಿದ್ದರು. ಈ ಸಭೆಯಲ್ಲಿ ಗಾಂಧೀಜಿ ಭಾಗವಹಿಸಿದ್ದರು. ಆಯೋಜಕರು ಇದಕ್ಕಾಗಿ 4000/-ರೂಪಾಯಿ ಸಂಗ್ರಹಿಸಿ, ಸಮ್ಮೇಳನದ ಕೊನೆಯ ದಿನ ಗಾಂಧೀಜಿಗೆ ನೀಡಿದರು. ಗಾಂಧೀಜೀಯವರು ಈ ಸಮ್ಮೇಳನದಲ್ಲಿ ಮಾತನಾಡಿ, ದಕ್ಷಿಣ ಭಾರತೀಯರಿಗೆ ಹಿಂದಿ ಪ್ರಚಾರವನ್ನು ಹೆಚ್ಚು ದಕ್ಷತೆಯಿಂದ, ಒಳ್ಳೆಯ ತಳಹದಿಯ ಮೇಲೆ ನಡೆಸುವಂತೆ ವಿನಂತಿ ಮಾಡಿದರು. ದಕ್ಷಿಣದಲ್ಲಿರುವ ನೀವು ಹಿಂದಿ ಕಲಿಯದೆ ಇದ್ದರೆ ಉತ್ತರ ದಕ್ಷಿಣಗಳಿಗೆ ನಡುವೆ ಅಡ್ಡವಾಗಿರುವ ವಿಂಧ್ಯ ಪರ್ವತವನ್ನು ದಾಟಲು ಆಗುವುದಿಲ್ಲ. ನೀವು ಕೇವಲ ಪ್ರಾಂತೀಯರಾಗಿರಬೇಕಾಗುತ್ತದೆ. ಆದ್ದರಿಂದ ನೀವು ಹಿಂದಿ ಕಲಿಯಬೇಕೆಂದು ಹೇಳಿದರು.

ಗಾಂಧೀಜಿಯವರನ್ನು ಕಾಣಲು ಟಿ.ಪಿ. ಕೈಲಾಸಂರವರು ಸಹ ಬಂದಿದ್ದರು. ಆದರೆ ಅವರು ಗಾಂಧೀಜಿಯವರು ಹತ್ತಿರ ಹೋಗದೆ ದೂರದಲ್ಲಿ ನಿಂತು ಅವರ ದರ್ಶನ ಪಡೆದು ಹೋದರಂತೆ. ಹಾಗೂ ಅವರಲ್ಲಿ ಪರಮಾತ್ಮನ ಸ್ವರೂಪವನ್ನು ಕಂಡರಂತೆ. ದಿನಾಂಕ 12-07-1927ರಂದು ಬೆಂಗಳೂರಿನಲ್ಲಿ ವಿದ್ಯಾರ್ಥಿ ಸಮುದಾಯದ ವತಿಯಿಂದ ಮೆಜೆಸ್ಟಿಕ್ ಮಂದಿರದಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಸಭೆಯಲ್ಲಿ ವಿದ್ಯಾರ್ಥಿಗಳು ಸಂಗ್ರಹಿಸಿದ್ದ

1700/- ರೂಪಾಯಿಗಳ ನಿಧಿಯನ್ನು ಗಾಂಧೀಜಿಯವರಿಗೆ ಸಮರ್ಪಿಸಲಾಯಿತು. ದೇವನಾಗರಿಯಲ್ಲಿ ಬರೆದ ಒಂದು ಬಿನ್ನವತ್ತಳೆಯನ್ನು ಗಾಂಧೀಜಿಗೆ ನೀಡಿದರು. ಇದಕ್ಕೆ ಗಾಂಧೀಜಿ ಪ್ರತಿಕ್ರಿಯಿಸಿ ವಿದ್ಯಾರ್ಥಿಗಳು ಹಿಂದಿ ಕಲಿಯುವಂತೆ, ಕುಡಿತದ ಕೆಟ್ಟ ಚಾಳಿಯಿಂದ, ಮಾದಕ ದ್ರವ್ಯ ಸೇವನೆಯಿಂದ ಮುಕ್ತರಾಗುವಂತೆ ಮತ್ತು ನಾಲಿಗೆ ನಿಗ್ರಹ ಬ್ರಹ್ಮಚರ್ಯ ಪರಿಪಾಲನೆ ಹಾಗೂ ಸರಳ ಜೀವನ ಅನುಸರಿಸುವಂತೆ ಉಪದೇಶ ನೀಡಿದರು.

ಬೆಂಗಳೂರಿನಲ್ಲಿ ಬಹಳ ಕಾಲ ತಂಗಿದ್ದ ಗಾಂಧೀಜಿಯವರು ಟಾಟಾ ಭಾರತೀಯ ವಿಜ್ಞಾನ ಸಂಸ್ಥೆಗೆ ದಿನಾಂಕ: 13-03-1927ರಂದು ಭೇಟಿ ನೀಡಿದ್ದರು. ವಿಜ್ಞಾನ ಸಂಸ್ಥೆಯ ವಿದ್ಯಾರ್ಥಿಗಳು ಗಾಂಧೀಜಿ ನಿಧಿಗಾಗಿ 325/- ರೂಪಾಯಿಗಳನ್ನು ನೀಡಿದರು. ನಂತರ ಗಾಂಧೀ ಅಲ್ಲಿ ಮಾತನಾಡುತ್ತಾ, ಇಲ್ಲಿರುವ ದೊಡ್ಡ ಪ್ರಮಾಣದ ಯಂತ್ರೋಪಕರಣ, ಪ್ರಯೋಗ ಶಾಲೆ ಮತ್ತು ಟಾಟಾರವರು ಹೂಡಿರುವ ಬೃಹತ್ ಬಂಡವಾಳ ಹಾಗೂ ಮೈಸೂರು ಸರ್ಕಾರ ನೀಡಿರುವ ಸಹಾಯ ಧನ-ಇವೆಲ್ಲ ಜನರ ತೆರಿಗೆಯಿಂದ ಬಂದುದಾಗಿದ್ದು, ಇದನ್ನು ಜೋಪಾನ ಮಾಡಬೇಕಾದ ಅಗತ್ಯದ ಬಗ್ಗೆ ತಿಳಿಸಿಕೊಟ್ಟರು. 1927ರಲ್ಲಿ ಭಾರತದ ವೈಸ್ ರಾಯ್ ಆಗಿದ್ದ ಲಾರ್ಡ ಇರ್ವಿನ್ ರವರು ಮೈಸೂರಿಗೆ ಬಂದ ಸಮಯದಲ್ಲಿ ಅವರ ಪತ್ನಿ ಲೇಡಿ ಇರ್ವಿನ್ ಅವರು ಬೆಂಗಳೂರಿನಲ್ಲಿ ಭೇಟಿ ಮಾಡುವ ಸಂಸ್ಥೆಗಳ ಪೈಕಿ ಬೆಂಗಳೂರಿನ ಶಂಕರಪುರದ ಮಹಿಳಾ ಸಮಾಜವೂ ಒಂದಾಗಿತ್ತು. ಆದರೆ ಗಾಂಧೀಜಿಯವರ ಖಾದಿ ಪ್ರಚಾರ, ಹರಿಜನೋದ್ಧಾರ, ಸತ್ಯ, ಅಹಿಂಸೆ ಹಾಗೂ ರಾಷ್ಟ್ರೀಯ ಸ್ವಯಂ ಸೇವೆ ಮುಂತಾದ ಸಂಘಟಿತ ಹೋರಾಟದ ಮೂಲಕ ಪ್ರೇರಿತರಾಗಿದ್ದ ಕೆಲವು ಮಹಿಳಾ ಸದಸ್ಯರು ಲೇಡಿ ಇರ್ವಿನ್ ಭೇಟಿಗೆ ಒಪ್ಪದೆ, ಬೆಂಗಳೂರಿನಲ್ಲಿರುವ ಮಹಾತ್ಮರನ್ನೇ ಆಹ್ವಾನಿಸುವಂತೆ ಮಹಿಳಾ ಸಮಾಜದ ಅಧ್ಯಕ್ಷರಾದ ಪಾರ್ವತಮ್ಮ ಚಂದ್ರಶೇಖರ್ ರವರಿಗೆ ಒತ್ತಾಯ ಹಾಕಿದ ಪರಿಣಾಮವಾಗಿ ದಿನಾಂಕ: 13-07-1927 ರಂದು ಸಂಜೆ ಶಂಕರಪುರದ ಮಹಿಳಾ ಸಮಾಜದವರು ಏರ್ಪಡಿಸಿದ್ದ ಸಂಗೀತ ಕೂಟದಲ್ಲಿ ಗಾಂಧೀಜಿಯವರು ಭಾಗವಹಿಸಿದ್ದರು. ಈ ಕೂಟದಲ್ಲಿ ಗಾಂಧೀಜಿಯವರಿಗೆ 225/- ರೂಪಾಯಿಗಳ ನಿಧಿಯನ್ನು ನೀಡಲಾಯಿತು. ಇದರಿಂದ ತೃಪ್ತರಾಗದ ಗಾಂಧೀಜಿಯವರು 'ದರಿದ್ರ ನಾರಾಯಣನಿಗೆ ತೃಪ್ತಿಯಾಗುವುದೇ ಇಲ್ಲ. ನೀವು ಎಷ್ಟು ಹಣ-ಒಡವೆ ನೀಡಿದರೂ ಇನ್ನೂ ಜಾಗ ಇರುತ್ತದೆ. ನಿಮ್ಮ ಒಡವೆಗಳು ನಿಮ್ಮ ಸ್ತ್ರೀಧನ, ನಿಮ್ಮ ಮನಸ್ಸಿಗೆ ಬಂದ ಹಾಗೆ ಕೊಟ್ಟು ಬಿಡಬಹುದು. ನಿಮಗೆ ಅಧಿಕಾರವಿದೆ' ಎಂದಾಗ ಮಹಿಳಾ ಸಮಾಜದ ಹೆಂಗಸರು ತಮ್ಮ ಬಳಿ ಇದ್ದ ಉಂಗುರ, ಬಳೆಗಳನ್ನು ಹಾಗೂ ಹಣವನ್ನು ನೀಡಲು ಮುಂದಾದರು. ಆ ಗುಂಪಿನಲ್ಲಿ ಓರ್ವ 9 ವರ್ಷದ ಹುಡುಗಿ ಸಹ ಕಾಣಿಕೆ ನೀಡಿದಳು. ನಂತರ ದಿನಾಂಕ 17-07-1927ರಂದು ಬೆಳಗ್ಗೆ ಬೆಂಗಳೂರಿನ ಪೌರಸಭೆಯವರು ಒಂದು ಬಿನ್ನವತ್ತಳೆಯನ್ನು ನೀಡಿದರು. ಇದಕ್ಕೆ ಉತ್ತರವಾಗಿ ಗಾಂಧೀಜಿ ಪೌರಸಭೆ ವ್ಯಾಪ್ತಿಯ ನಗರದಲ್ಲಿರುವ ಬಡವರು, ಹರಿಜನರು, ಭಂಗಿಗಳ ಜೀವನ ಉತ್ತಮಪಡಿಸುವ ಬಗ್ಗೆ ಮಾತನಾಡಿದರು.

ದಿನಾಂಕ 26-07-1927ರಂದು ದಂಡು ಪ್ರದೇಶದ ರೈಲ್ವೆ ನಿಲ್ದಾಣದ ಹತ್ತಿರವಿರುವ ಯುನೈಟೆಡ್ ಥಿಯಾಲಾಜಿಕಲ್ ಕಾಲೇಜಿಗೆ ಗಾಂಧೀಜಿಯವರು ಸಿ.ಎಫ್. ಅಂಡ್ರ್ಯೂಸ್‌ರವರ ಜೊತೆ ಭೇಟಿ ನೀಡಿದರು. ಮತ್ತೆ ಅದೇ ದಿವಸ ಮಿಥಿಕ್ ಸೊಸೈಟಿಗೆ ಭೇಟಿಕೊಟ್ಟು ಅಲ್ಲಿದ್ದವರನ್ನು ಕುರಿತು ನಿಮ್ಮಲ್ಲಿ ಕೆಲವರು ಈ ಅಸ್ಪೃಶ್ಯತೆಯ ಕಳಂಕ ಈ ದೇಶಕ್ಕೆ ಏಕೆ ಬಂತು? ಎಂಬ ವಿಷಯವಾಗಿ ಸಂಶೋಧನೆ ಮಾಡಿ ಎಂದು ತಿಳಿಸಿದರು.

29-07-1927 ರಂದು ಗಾಂಧೀಜಿ ಲಂಡನ್ ಮಿಷನ್ ಬಾಲಿಕಾ ಪಾಠಶಾಲೆಗೆ ಭೇಟಿ ನೀಡಿದ್ದರು. ಆಗ ಅಲ್ಲಿನ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಸೇರಿ ಗಾಂಧೀಜಿಯವರಿಗೆ ಒಂದು ಪುಟ್ಟ ನಿಧಿಯನ್ನು ನೀಡಿ, ಬಿನ್ನವತ್ತಳೆ ಅರ್ಪಿಸಿದರು. ಇವರಿಗೂ ಸಹ ಖಾದಿ ಧರಿಸುವ ಬಗ್ಗೆ ತಿಳುವಳಿಕೆ ನೀಡಿದರು. ದಿನಾಂಕ 30-07-

1927ರಂದು ಚಾಮರಾಜೇಂದ್ರ ಸಂಸ್ಕೃತ ಪಾಠ ಶಾಲೆಗೆ ಭೇಟಿ ನೀಡಿದ್ದರು. ಈ ಶಾಲೆಯ ಪ್ರಾಂಶುಪಾಲರ ಪುತ್ರಿಯಾದ ಶಾರದಾಂಬ ಶ್ರೀಕಂಠಯ್ಯನವರು ಗಾಂಧೀಜಿಯವರ ಮೇಲೆ ಒಂದು ಗೀತೆ ರಚಿಸಿ, ತಮ್ಮ ಮಗಳ ಕೈಯಲ್ಲಿ ಹಾಡಿಸಿದ್ದಕ್ಕೆ ಮೆಚ್ಚಿ, ಗಾಂಧೀಜಿಯವರು ಅವಳ ಬೆನ್ನು ತಟ್ಟಿ ತಮ್ಮ ಕೊರಳಿನಲ್ಲಿದ್ದ ಹಾರ ಹಾಕಿದರು. ಅಂದೇ ಸಂಜೆ ಗಾಂಧೀಜಿಯವರು ವಾಣಿವಿಲಾಸ ಬಾಲಿಕಾ ಶಾಲೆಗೆ ಭೇಟಿ ನೀಡಿದರು. ದುಬಾರಿ ವೆಚ್ಚದ ಶಿಕ್ಷಣ ಪಡೆದ ಮೇಲೆ ಸಮಾಜದ ಋಣ ತೀರಿಸುವಂತೆ ಕರೆಕೊಟ್ಟರು.

ದಿನಾಂಕ: 30–08–1927ರಂದು ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ಒಂದು ಬೃಹತ್ ಸಭೆ ನಡೆಯಿತು. ಎಲ್ಲಾ ಜಿಲ್ಲಾ ಸ್ವಾಗತ ಸಮಿತಿ ಅಧ್ಯಕ್ಷರು, ಕಾರ್ಯದರ್ಶಿಗಳು, ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು, ಎಂ. ಎನ್. ಕೃಷ್ಣರಾಯರು, ಕಾರ್ಯದರ್ಶಿ ಡಿಸೋಜ, ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರು, ಕೆ. ಪಿ. ಪುಟ್ಟಣ್ಣ ಶೆಟ್ಟರು, ಪಾರ್ವತಮ್ಮ ಚಂದ್ರಶೇಖರ್‌ರವರು, ರಾಜಗೋಪಾಲಚಾರ್ಯರು, ಗಂಗಾಧರರಾವ್ ದೇಶಪಾಂಡೆ ಮುಂತಾದ ಗಣ್ಯರು ಬಂದಿದ್ದರು. ಈ ಸಭೆಯಲ್ಲಿ 10000/– ರೂಪಾಯಿಗಳ ನಿಧಿಯನ್ನು ಗಾಂಧೀಜಿಗೆ ಅರ್ಪಿಸಿದರು. ಸಭೆಯಲ್ಲಿ ಹಂಜಾ ಹುಸೇನ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಜಮಖಂಡಿ ಭೀಮರಾಯರು, ಎಚ್. ವಿ. ಸುಬ್ರಮಣ್ಯರವರು ಸಭೆಯ ಒಳನುಗ್ಗಿ, ಹಂಜಾ ಹುಸೇನ್‌ರವರು ಅಧ್ಯಕ್ಷತೆ ವಹಿಸಬಾರದು ಎಂದು ಗಲಾಟೆ ಮಾಡಿದರು. ಗಾಂಧೀಜಿಯವರು ಹೇಳಿದರೂ ಕೇಳದೆ ಅವಾಂತರವಾದಾಗ, ಅವರನ್ನು ಸಭೆಯಿಂದ ಹೊರಗೆ ಕಳುಹಿಸಲಾಯಿತು.

ಗಾಂಧೀಜಿಯವರು ಲಾಲ್‌ಬಾಗ್ ಸಭೆಯಲ್ಲಿ ಮಾತನಾಡಿ ಸಂಸ್ಥಾನದ ಪ್ರಸಿದ್ಧ ಇಂಜೀನಿಯರ್ ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ದಿವಾನ್ ಮಿರ್ಜಾ ಇಸ್ಮಾಯಿಲ್‌ರು ಸಂಸ್ಥಾನಕ್ಕೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು. ಅಲ್ಲದೆ ಇತರೆ ಕಡೆಗಳಿಗಿಂತ ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಪುರೋಭಿವೃದ್ಧಿಯನ್ನು ನಾನು ಕಂಡಿದ್ದೇನೆ. ಅನೇಕ ವಿಷಯಗಳಲ್ಲಿ ಸಂಸ್ಥಾನ ಮುಂದಿದೆ. ಮಹಾರಾಜರು, ಮಹಾಜನರು ಮನಸ್ಸು ಮಾಡಿದರೆ ಮೈಸೂರನ್ನು ರಾಮರಾಜ್ಯ ಮಾಡಬಹುದು ಎಂದು ಹೇಳುತ್ತಾ ತಮ್ಮ ಭಾಷಣ ಮುಕ್ತಾಯಗೊಳಿಸಿದರು.

ಲಾಲ್ ಬಾಗ್ ಸಭೆಯ ನಂತರ ಕುಮಾರ ಕೃಪಾದಲ್ಲಿ ರಾತ್ರಿ ಪ್ರಾರ್ಥನೆ ನಡೆಯಿತು. ಈ ಪ್ರಾರ್ಥನಾ ಸಭೆಯಲ್ಲಿ ಸಿ.ಎಫ್. ಅಂಡ್ರ್ಯೂಸ್, ಜೆರೋಮ್ ಅವರೂ ಇದ್ದರು. ಗಾಂಧೀಜಿ ಈ ಪ್ರಾರ್ಥನಾ ಸಭೆಯನ್ನು ಆಶೀರ್ವದಿಸಿ ಈ ಸಂತೋಷ ಕೂಟ ನನಗೆ ಶಾಶ್ವತ ಅನುಭವ ಹಾಗೂ ಇದರ ಪ್ರಭಾವ ನನ್ನ ಮನಸ್ಸಿಗೆ ಶಾಶ್ವತ ನೆನಪಾಗುವುದು ಎಂದು ಹೇಳಿದರು.

ಗಾಂಧೀಜಿಯವರು ಬೆಂಗಳೂರಿನ ಕುಮಾರ ಕೃಪಾ ಅತಿಥಿ ಗೃಹದಲ್ಲಿ ಸುಮಾರು 87ದಿನಗಳು ತಂಗಿದ್ದರು. 22 ದಿನಗಳು ಬೆಂಗಳೂರಿನ ಹೊರಗಡೆ ಪ್ರವಾಸ ಮಾಡಿ, 65 ದಿನಗಳು ಸಂಪೂರ್ಣವಾಗಿ ಬೆಂಗಳೂರಿನಲ್ಲಿದ್ದರು. ಗಾಂಧೀಜಿಯವರು ಬೆಂಗಳೂರು ಬಿಡುವ ಮುನ್ನ ಕುಮಾರ ಕೃಪಾದಲ್ಲಿ ಅವರಿಗೆ ಸೇವೆ ಮಾಡಿದ ಅಡಿಗೆಯವರು, ಜವಾನರು, ಪೌರಕಾರ್ಮಿಕ ಸಹಾಯಕರು, ಕಸ ಮತ್ತು ಪಾತ್ರೆ ತೊಳೆಯುವವರು ಎಲ್ಲರನ್ನೂ ಕರೆಸಿ, ಅವರಿಗೆ ಹೀಗೆ ಹೇಳಿದರು– 'ನಾನು ನನ್ನ ಜೀವಮಾನದಲ್ಲಿ ನನ್ನ ಸೇವೆ ಮಾಡುತ್ತಿದ್ದವರನ್ನು ಎಂದೂ ಜವಾನರೆಂದು ಎಣಿಸಿಲ್ಲ. ಎಣಿಸುವುದೂ ಇಲ್ಲ. ಅವರನ್ನು ಸದಾ ಸಹೋದರರೆಂದು ಭಾವಿಸುತ್ತೇನೆ. ನಿಮ್ಮ ಸೇವೆಯನ್ನು ನಾನೆಂದಿಗೂ ಮರೆಯಲಾರೆ. ಅದಕ್ಕೆ ನಾನು ಯಾವ ಪ್ರತಿಫಲವನ್ನೂ ನೀಡಲಾರೆ. ಭಗವಂತ ನಿಮಗೆಲ್ಲಾ ಶ್ರೇಯಸ್ಸನ್ನುಂಟು ಮಾಡಲಿ, ನಿಮ್ಮನ್ನು ರಕ್ಷಿಸಲಿ' ನಂತರ ಜಟಕಾ ಬಂಡಿಯಲ್ಲಿ ರೈಲ್ವೆ ನಿಲ್ದಾಣಕ್ಕೆ ಹೊರಟರು. ರೈಲ್ವೆ ನಿಲ್ದಾಣದಲ್ಲಿ ಸ್ವಯಂ ಸೇವಕರು, ಅವರ ನಾಯಕರಾದ ಸಂಪತ್‌ಗಿರಿರಾಯರು, ಹಂಜಾ ಹುಸೇನರು,

ಭಾಷ್ಯಂ ಅಯ್ಯಂಗಾರ್ಯರು, ಲಕ್ಷ್ಮೀನರಸುರವರು ಬಂದು ಗಾಂಧೀಜಿಯವರನ್ನು ಬೀಳ್ಕೊಟ್ಟರು. ಭಾಷ್ಯಂರವರು ಗಾಂಧೀಜಿಯವರ ಪಾದಗಳನ್ನು ಮುಟ್ಟಿ ನಮಸ್ಕರಿಸಿ, ಅವರ ಹಳೆಯ ಚಪ್ಪಲಿಗಳನ್ನು ಕೊಡುವಂತೆ ಕೇಳಿದರು. ಅವುಗಳನ್ನು ತೆಗೆದುಕೊಂಡು ಅವರ ಮನೆಯ ತನಕ ತಲೆಯ ಮೇಲೆ ಹೊತ್ತುಕೊಂಡು ಹೋದರು. ಮಹಾತ್ಮಾ ಗಾಂಧೀಜಿ ಜೈ ಎಂದು ಘೋಷಣೆ ಮೊಳಗುತ್ತಿರಲು, ರೈಲು ವೆಲ್ಲೂರಿನ ಕಡೆ ಹೊರಟಿತು. ಹೀಗೆ ಗಾಂಧೀಜಿಯವರು 30–08–1927ರಂದು ಬೆಂಗಳೂರಿನಿಂದ ನಿರ್ಗಮಿಸಿದರು.

1934ರ ಜನವರಿ 4 ರಂದು ಗಾಂಧೀಜಿಯವರು ಎರಡನೇ ಬಾರಿ ಬೆಂಗಳೂರಿಗೆ ಆಗಮಿಸಿ, ಹಿಂದೆ ಉಳಿದುಕೊಂಡಿದ್ದ ಕುಮಾರ ಕೃಪಾ ಅತಿಥಿ ಗೃಹದಲ್ಲೇ ತಂಗಿದ್ದರು. ಈ ಬಾರಿಯ ಪ್ರವಾಸದಲ್ಲಿ ಗಾಂಧೀಜಿಯವರು ಹರಿಜನೋದ್ಧಾರಕ್ಕೆ ಸಂಬಂಧಿಸಿದ ಕಾರ್ಯಕ್ರಮ ರೂಪಿಸಿ, ಅವರ ಉದ್ಧಾರಕ್ಕಾಗಿ ದೇಶದಾದ್ಯಂತ ಪ್ರವಾಸ ಮಾಡುತ್ತಾ 1934ರ ಜನವರಿಯಲ್ಲಿ ಮೈಸೂರು ಸಂಸ್ಥಾನಕ್ಕೆ ಆಗಮಿಸಿದರು. ಈ ಬಾರಿಯ ಪ್ರವಾಸದಲ್ಲಿ ಗಾಂಧೀ ಜೊತೆ ಮೀರಬೇನ್, ಜಮ್ನಾಲಾಲ್ ಬಜಾಜ್ ಮುಂತಾದವರಿದ್ದರು. ಇವರನ್ನು ಸ್ವಾಗತಿಸಲು ರೈಲು ನಿಲ್ದಾಣಕ್ಕೆ ಸುಬ್ಬರಾಮ ಶೆಟ್ಟಿ, ವಿ. ವೆಂಕಟಪ್ಪ, ತಗಡೂರು ರಾಮಚಂದ್ರರಾಯ್, ಜೆ. ಆರ್. ಶ್ರೀನಿವಾಸ ಅಯ್ಯಂಗಾರ್ ಮುಂತಾದವರು ತೆರಳಿದ್ದರು. ಬೆಳಗ್ಗೆ ಸುಮಾರು 8.30 ಗಂಟೆಗೆ ಹಿಂದೂಪುರದ ಕಡೆಯಿಂದ ಗೌರಿಬಿದನೂರಿಗೆ ಆಗಮಿಸಿ ಅಲ್ಲಿ 500/– ರೂಪಾಯಿಗಳ ನಿಧಿ ಸ್ವೀಕರಿಸಿ, ನಂತರ ದೊಡ್ಡಬಳ್ಳಾಪುರಕ್ಕೆ ಬಂದು, ಅಲ್ಲಿನ ಜನರು ಸಮರ್ಪಿಸಿದ ಮೂರು ನಿಧಿಗಳನ್ನು ಪಡೆದು ಮುಂದೆ ಯಲಹಂಕದ ವೇಣುಗೋಪಾಲ್ ಮೊದಲಿಯಾರ್‌ರ ಮನೆಗೆ ಭೇಟಿ ನೀಡಿದರು. ನಂತರ ಮೊದಲಿಯಾರ್ ಜೊತೆಯಲ್ಲಿ ತುಮಕೂರಿಗೆ ತೆರಳಿ, ಅಲ್ಲಿನ ಸಾರ್ವಜನಿಕರಿಂದ 1000/– ರೂಪಾಯಿಗಳ ನಿಧಿ ಸ್ವೀಕರಿಸಿದರು. ಅಲ್ಲಿಂದ ರಾಮಲಿಂಗ ಮೊದಲಿಯಾರರ ಮನೆಗೆ ತೆರಳಿದರು. ಅವರು ನೀಡಿದ 1000/– ರೂಪಾಯಿಗಳ ನಿಧಿಯನ್ನು ಸ್ವೀಕರಿಸಿದರು. ಗಾಂಧೀಜಿ ಭೇಟಿಯಿಂದ ಪ್ರಭಾವಿತರಾದ ರಾಮಲಿಂಗ ಮೊದಲಿಯಾರರು ಮುಂದೆ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಒಂದು ಖಾದಿ ಅಂಗಡಿಯನ್ನು ತೆರೆದರು. ಮಲ್ಲೇಶ್ವರಂ ಕಾರ್ಯಕ್ರಮದ ನಂತರ ದಂಡು ಪ್ರದೇಶದಲ್ಲಿನ ಆರ್. ಬಿ. ಎ. ಎನ್. ಎಂ. ಎಸ್. ಪ್ರೌಢಶಾಲೆ ಆವರಣದಲ್ಲಿ ಸೇರಿದ್ದ ಮಹಿಳೆಯರ ಸಭೆಯಲ್ಲಿ ಭಾಗವಹಿಸಿದರು. ನಂತರ ಮುತ್ತು ಎಂಬ ಕೆಲಸಗಾರನ ಮನೆಗೆ ಭೇಟಿ ನೀಡಿದ್ದರು. ಅವನು ಹರಿಜನ ಯುವಕನಾಗಿದ್ದು, ಹರಿಜನ ಸಂಘದ ಸದಸ್ಯರಲ್ಲಿ ಉಂಟಾದ ವೈಮನಸ್ಸಿನಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದನು. ಅವನನ್ನು ಸಂತೈಸಿ ಅಂದೇ ರಾತ್ರಿ ರೈಲು ಮೂಲಕ ಮೈಸೂರಿಗೆ ತೆರಳಿದರು.

ದಿನಾಂಕ: 06–04–1924ರಂದು ಮೈಸೂರಿನಿಂದ ವಾಪಸ್ಸು ಬಂದ ಗಾಂಧೀಜಿ ಕೆಂಗೇರಿ ಗ್ರಾಮದ ಗುರುಕುಲ ಆಶ್ರಮಕ್ಕೆ ಭೇಟಿ ನೀಡಿದರು. ಅಲ್ಲಿ ನಿರ್ಮಿಸಲಾಗಿದ್ದ ಗುರುಕುಲ ಗ್ರಾಮ ಸೇವಾ ಕೇಂದ್ರವನ್ನು ಉದ್ಘಾಟಿಸಿದರು. ಬೆಂಗಳೂರು ಜಿಲ್ಲಾ ಬೋರ್ಡಿನವರು ಹರಿಜನರಿಗಾಗಿ ಕಟ್ಟಿಸಿದ್ದ ಬಾವಿಯಿಂದ ನೀರು ಸೇದಿ, ಆ ನೀರನ್ನು ತೀರ್ಥದಂತೆ ಜನರಿಗೆ ಹಂಚುವ ಮೂಲಕ ಬಾವಿಯನ್ನು ಉದ್ಘಾಟನೆ ಮಾಡಿದರು. 1934ರ ಜನವರಿಯಲ್ಲಿ ಮೈಸೂರು ಸಂಸ್ಥಾನದ ಪ್ರವಾಸದಲ್ಲಿ ಗಾಂಧೀಜಿ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ತಂಗಿದ್ದರು. ಹಿಂದೆ 1927ರಲ್ಲಿ ಇದ್ದಂತೆ ಈಗಲೂ ಜನಸಾಗರ ಇದ್ದು, ಅದೇ ಪ್ರೀತಿ, ಮತ್ತು ವಿಶ್ವಾಸದಿಂದ ಜನ ಸೇರುತ್ತಿದ್ದರು. ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು ಆಗಾಗ ಬಂದು ಗಾಂಧೀಜಿಯವರ ಆರೋಗ್ಯ ವಿಚಾರಿಸಿಕೊಳ್ಳುತ್ತಿದ್ದರು. ಈ ಬಾರಿ ಗಾಂಧೀ ಬೆಂಗಳೂರಿಗೆ ಬಂದಾಗ ಅವರ ಜೊತೆ ಕಸ್ತೂರಿ ಬಾ ಮತ್ತು ಮಹದೇವ ದೇಸಾಯಿಯವರು ಇರಲಿಲ್ಲ. ಕಾರಣ ಅವರಿಬ್ಬರೂ ಯರವಾಡಾ ಜೈಲಿನಲ್ಲಿದ್ದರು. ಈ ಭೇಟಿಯ ಸಮಯದಲ್ಲಿ ಒಂದೆರಡು ಮಹಿಳಾ ಸಭೆಗಳು ನಡೆದವು. ಈ ಸಭೆಗಳಲ್ಲಿ ಗಾಂಧೀಜಿಯವರು, 'ಹರಿಜನರನ್ನು ನಮ್ಮ ಒಡಹುಟ್ಟಿದವರಂತೆ

ಕಂಡರೆ ಪುಣ್ಯ ಬರುತ್ತದೆ' ಎಂದು ತಿಳಿಸಿದರು. ಬೆಂಗಳೂರಿನಲ್ಲಿ ಹಾಗೂ ಇತರೆ ಕಡೆಗಳಲ್ಲಿ ಹರಿಜನರ ಉದ್ಧಾರಕ್ಕಾಗಿ ಸರ್ಕಾರ ಕೈಗೊಂಡಿದ್ದ ಕಾರ್ಯಗಳನ್ನು ಪರಿಶೀಲಿಸಿದ ಗಾಂಧೀಜಿ, ಮೈಸೂರು ಸರ್ಕಾರದ ಸಹಾನುಭೂತಿಯನ್ನು ಪ್ರಶಂಸಿಸಿದರು.

ಜನವರಿ 7, 1934ರಂದು ಬೆಂಗಳೂರಿನ ಅಫೆಕ್ಸ್ ಬ್ಯಾಂಕಿನ ಸಭಾಂಗಣದಲ್ಲಿ ಒಂದು ಸಭೆ ಏರ್ಪಾಡಾಗಿತ್ತು. ಆ ಸಭೆಯಲ್ಲಿ ಗಾಂಧಿ ಭಾಷಣ ಮಾಡಿದರು ಹಾಗೂ ನಿಧಿ ಸಂಗ್ರಹಿಸಿದರು. ಹರಿಜನರಿಗೆ ಅಂತರ್ ಮತ್ತು ಬಹಿರ್ ಶುದ್ಧಿಯ ಸೂತ್ರವನ್ನು ಅಳವಡಿಸಿಕೊಳ್ಳುವಂತೆ, ಗೋಮಾಂಸ ಸೇವಿಸದಂತೆ ಬುದ್ಧಿವಾದ ಹೇಳಿದರು; ಮದ್ಯಪಾನ ಬಿಡುವಂತೆ ವಿನಂತಿಸಿದರು. ಅಂದೇ ಸಂಜೆ ಪೌರಸಭೆಯವರು ಒಂದು ನಿಧಿಯನ್ನು ಕೊಟ್ಟು, ಕರಂಡಕದಲ್ಲಿ ಬಿನ್ನವತ್ತಳೆ ನೀಡಿದರು. ಸಭೆಯಲ್ಲಿ ಅನೇಕ ವಸ್ತುಗಳನ್ನು ಹರಾಜು ಹಾಕಲಾಯಿತು. ಇದರಿಂದ ಬಂದ ಹಣವನ್ನು ಗಾಂಧೀಜಿಯವರಿಗೆ ಸಮರ್ಪಿಸಲಾಯಿತು.

ದಿನಾಂಕ: 07–01–1934ರ ಬೆಳಗ್ಗೆ ಮಾಗಡಿ ರಸ್ತೆಯ ಆದಿಜಾಂಬವಾಭಿವೃದ್ಧಿ ಸಂಘದ ವಿದ್ಯಾರ್ಥಿ ಮಂದಿರದ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಇದನ್ನು ಬಾಪೂಜಿ ವಿದ್ಯಾರ್ಥಿನಿಲಯ ಎಂದು ಹೆಸರಿಸಿ, ನಂತರ ದೀನ ಸೇವಾ ಸಂಘಕ್ಕೆ ಭೇಟಿ ನೀಡಿದಾಗ, ಅವರಿಗೆ ಒಂದು ಬಿನ್ನವತ್ತಳೆ ನೀಡಲಾಯಿತು. ಮದ್ದೂರಾಮಯ್ಯ ಶೆಟ್ಟಿ ಸ್ಮಾರಕ ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೆಯನ್ನು ಗಾಂಧೀಜಿಯವರು ನೆರವೇರಿಸಿದರು. ನಂತರ ಶ್ರೀರಾಮಪುರದ ಸೇವಾಶ್ರಮಕ್ಕೆ ಭೇಟಿ ನೀಡಿ, ಅಲ್ಲಿನ ಹರಿಜನರ ವಾಸಗೃಹಗಳನ್ನು ಪರಿಶೀಲಿಸಿದರು. ಸಂಜೆ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಭಾರಿ ಬಹಿರಂಗ ಸಭೆಯಲ್ಲಿ ಭಾಗವಹಿಸಿ, ಗಾಂಧೀಜಿ ಮಾತನಾಡಿದರು. ನಂತರ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಮೆಜೆಸ್ಟಿಕ್ ಮಂದಿರದ ಮುಂದೆ ಏರ್ಪಡಿಸಿದ್ದ ಖಾದಿ ಪ್ರದರ್ಶನವನ್ನು ವೀಕ್ಷಿಸಲು ಗಾಂಧೀಜಿ ಕಲಾ ಮಂದಿರಕ್ಕೆ ಭೇಟಿ ನೀಡಿದ್ದರು. ಈ ಪ್ರದರ್ಶನದಲ್ಲಿ ಸುದರ್ಶನ ಚರಕದ ಜೊತೆ ಗಾಂಧೀಜಿಯವರು ಸ್ವಹಸ್ತದಿಂದ ನೇಯ್ದ ಬಟ್ಟೆ ಪ್ರದರ್ಶನಗೊಂಡಿತ್ತು. ಆನಂತರ ಗಾಂಧೀಜಿಯವರು ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಖಾದಿ ಅಂಗಡಿ ಶಾಖೆಯನ್ನು ಉದ್ಘಾಟಿಸಿದರು. ನಂತರ ಅವಿನ್ಯೂ ರಸ್ತೆಯ ಚಿಂತನಪಲ್ಲಿ ವೆಂಕಟಮುನಯ್ಯ ಶೆಟ್ಟಿ ಛತ್ರದಲ್ಲಿ ಸಾಮಾಜಿಕ ಕಾರ್ಯಕರ್ತರನ್ನುದ್ದೇಶಿಸಿ ಹರಿಜನರ ಏಳ್ಗೆ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು. ನಂತರ 08–01–1934ರಲ್ಲಿ ಶಂಕರಪುರದ ಮಹಿಳಾ ಸಮಾಜಕ್ಕೆ ಅವರ ಕೋರಿಕೆ ಮೇರೆಗೆ ತೆರಳಿದರು. ಅಲ್ಲಿ ಗಾಂಧೀಜಿಯವರಿಗೆ ಹಿಂದಿಯಲ್ಲಿ ಒಂದು ಬಿನ್ನವತ್ತಳೆ ಅರ್ಪಿಸಿದರು ಹಾಗೂ ಹರಿಜನರ ಕಲ್ಯಾಣಕ್ಕಾಗಿ ಸಂಗ್ರಹಿಸಿದ್ದ 567/– ರೂಪಾಯಿಗಳ ನಿಧಿಯನ್ನು ಹಾಗೂ ಆಭರಣಗಳನ್ನು ನೀಡಿದರು. ದಿನಾಂಕ 09–01–1934 ರಂದು ಬೆಳಗ್ಗೆ ವಿಶ್ವೇಶ್ವರಪುರಂನಲ್ಲಿರುವ ಅಶಕ್ತ ಪೋಷಕ ಸಭಾಗೆ ತೆರಳಿ ಅವರಿಗೆ ಹಾರೈಸಿದರು. ನಂತರ ಗಾಂಧೀಜಿ ಮಲಬಾರಿನ ಕಡೆ ಹೊರಡುವಾಗ ರೈಲ್ವೆ ನಿಲ್ದಾಣದಲ್ಲಿ ಅವರನ್ನು ಅಪಾರ ಸಂಖ್ಯೆಯ ಅಭಿಮಾನಿಗಳು, ಸ್ವಯಂ ಸೇವಕರು ಹಾಗೂ ಗಣ್ಯರು ಬೀಳ್ಕೊಟ್ಟರು.

ಹರಿಜನೋದ್ಧಾರ ಕಾರ್ಯಕ್ರಮಗಳ ಎರಡನೇ ಹಂತವಾಗಿ 1936ರ ಮೇ ಮಾಹೆಯಲ್ಲಿ ನಾಲ್ಕು ದಿನಗಳ ಕಾಲ ಗಾಂಧೀಜಿ ಬೆಂಗಳೂರಿಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ರಾಮೇಶ್ವರ, ನೆಹರೂ, ಶಾಂತಿ ಬೆಹನ್, ಕುಸುಮ ಬೆಹನ್, ಕಾಲೇಲ್ಕರ್, ಕನ್ನಯ್ಯಲಾಲ್ ಗಾಂಧಿ, ನವೀನ ಚಂದ್ರ ಗಾಂಧಿ ಮತ್ತು ಕಸ್ತೂರಿ ಬಾ ಆಗಮಿಸಿದ್ದರು. ಈ ಬಾರಿ ಗಾಂಧೀಜಿಯವರ ತಂಡವನ್ನು ನಗರಸಭೆಯ ಅಧ್ಯಕ್ಷರಾಗಿದ್ದ ಬಿ. ಕೆ. ಗರುಡಾಚಾರ್ಯರು ಸ್ವಾಗತಿಸಿ ಬರಮಾಡಿಕೊಂಡರು. ರೈಲ್ವೆ ಸ್ಟೇಷನ್ನಿನಿಂದ ಸಿ. ವಿ. ರಾಮನ್‌ರ ಪತ್ನಿ ಲೋಕ ಸುಂದರಿ ರಾಮನ್, ತಮ್ಮ ಮೋಟಾರಿನಲ್ಲಿ ಗಾಂಧಿಯವರನ್ನು ಕುಮಾರ ಕೃಪಾಗೆ ಕರೆದು ತಂದರು. ಈ ಬಾರಿಯ ಭೇಟಿಯಲ್ಲಿ

ಗಾಂಧೀಜಿಯವರಿಗೆ ರಕ್ತದೊತ್ತಡ ಸ್ವಲ್ಪ ಜಾಸ್ತಿಯಾಗಿ, ವೈದ್ಯರ ಸಲಹೆ ಮೇರೆಗೆ ವಿಶ್ರಾಂತಿ ಪಡೆಯ ಬೇಕಾಯಿತು. ಕುಮಾರ ಕೃಪಾದಲ್ಲಿ ದಿವಾನ್ ಮಿರ್ಜಾ ಇಸ್ಮಾಯಿಲ್ ಮತ್ತು ಮುಖ್ಯಕಾರ್ಯದರ್ಶಿ ಎ. ವಿ. ಅಮರನಾಥನ್ ಗಾಂಧೀಜಿಯನ್ನು ಸಂದರ್ಶಿಸಿದರು. ನಂತರ ಅಲ್ಲಿಂದ ನಂದಿ ಬೆಟ್ಟಕ್ಕೆ ವಿಶ್ರಾಂತಿಗಾಗಿ ತೆರಳುವಾಗ ದಂಡು ಪ್ರದೇಶದಲ್ಲಿ ಹಾದು ಹೋಗುವ ಸಂದರ್ಭದಲ್ಲಿ ಆ ಪ್ರದೇಶದ ಹಲವಾರು ನಾಗರೀಕರು ಅವರನ್ನು ನೋಡಲು ಬಂದರು.

ಗಾಂಧೀಜಿಯವರು ಇಪ್ಪತ್ತು ದಿವಸಗಳ ಕಾಲ ಗಿರಿಧಾಮದಲ್ಲಿ ವಿಶ್ರಾಂತಿ ಪಡೆದರು. ಆಗ ಚನ್ನಗಿರಿ ಬೆಟ್ಟದ ಓಂಕಾರ ಸ್ವಾಮಿಗಳು ಗಾಂಧೀಜಿಯವರನ್ನು ಭೇಟಿ ಮಾಡಲು ಬಂದಿದ್ದರು. ಅವರೊಡನೆ ಗಾಂಧೀಜಿಯವರು ಮಾನವನ ಮೂಲಭೂತ ಸಮಸ್ಯೆಗಳ ಬಗ್ಗೆ ಮಾತನಾಡಿದರು. ಅಲ್ಲದೆ ಮೇ 30ನೇ ತಾರೀಕು ಕೋಲಾರ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಚಂಗಲರಾಯ ರೆಡ್ಡಿಯವರು ಗಾಂಧೀಜಿಯವರನ್ನು ಭೇಟಿ ಮಾಡಲು ನಂದಿ ಬೆಟ್ಟಕ್ಕೆ ಆಗಮಿಸಿ ಗಾಂಧೀಜಿಯವರಿಗೆ 1600/- ರೂಪಾಯಿಗಳ ನಿಧಿಯನ್ನು ಸಮರ್ಪಿಸಿದರು. ನಂತರ ಮೇ 30, 1936ರ ವರೆವಿಗೂ ಗಾಂಧೀಜಿಯವರು ನಂದಿಬೆಟ್ಟದಲ್ಲಿ ವಿಶ್ರಾಂತಿ ಪಡೆದು ನಂತರ ಬೆಂಗಳೂರಿಗೆ ಬಂದರು. ಆಗ ಸ್ವಲ್ಪ ಕಾಲ ರೇಸ್‌ಕೋರ್ಸ್ ಬಳಿಯ "ರೇಸ್ ವ್ಯೂ" ಬಂಗಲೆಯಲ್ಲಿ ತಂಗಿದ್ದರು. ಬೆಂಗಳೂರಿನಲ್ಲಿ ಮಹದೇವ ದೇಸಾಯಿ, ವಲ್ಲಭಬಾಯಿ ಪಟೇಲರ ಜೊತೆ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್ ಪಾಪ್‌ಗೆ ಭೇಟಿ ನೀಡಿದರು. ಅಲ್ಲಿನ ಇಂಜಿನಿಯರ್ ಅಪ್ಪಾದೊರೈ ಅವರು ಗಾಂಧೀಜಿಯವರನ್ನು ಸ್ವಾಗತಿಸಿದರು. ಗಾಂಧೀಜಿಯವರು ಚರಕ ತಯಾರಿಕೆ ಮತ್ತು ಅವುಗಳ ಗುಣಮಟ್ಟದ ಬಗ್ಗೆ ಪರಿಶೀಲಿಸಿದರು. ನಂತರ ಸರ್ಕಾರಿ ಸಾಬೂನು ಕಾರ್ಖಾನೆಗೆ ಭೇಟಿ ನೀಡಿದರು. ದಿನಾಂಕ 05-06-1936ರಂದು ಸರ್. ಸಿ. ವಿ. ರಾಮನ್ ಅವರ ಆಹ್ವಾನದ ಮೇರೆಗೆ ಟಾಟಾ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಿದ್ದರು. ಗಾಂಧೀಜಿಯವರು ಬೆಂಗಳೂರಿನಲ್ಲಿದ್ದಾಗ ಹಿಂದಿ ಪ್ರಚಾರ ಸಭೆಯ ಕರ್ನಾಟಕ ಶಾಖೆಯ ವತಿಯಿಂದ ಹಿಂದಿಯಲ್ಲಿ ತೇರ್ಗಡೆಯಾದವರಿಗೆ ಪ್ರಮಾಣ ಪತ್ರ ವಿತರಣೆ ಸಮಾರಂಭವನ್ನು ಬೆಂಗಳೂರಿನ ಪುರ ಭವನದಲ್ಲಿ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಹಲವಾರು ಜನ ಹಿಂದಿ ಪರಿಷತ್ತಿನ ಪ್ರಶಸ್ತಿ ಪಡೆದವರಿದ್ದರು. ಅಧ್ಯಕ್ಷತೆಯನ್ನು ಕನ್ನೆಲಾಲ್ ಮುನ್ಷಿಯವರು ವಹಿಸಿದ್ದರು. 1936 ಜೂನ್ 10, 11 ಮತ್ತು 12ರಂದು ಮೂರು ದಿನಗಳು ಬೆಂಗಳೂರು ಕೆಂಗೇರಿಯ ಗುರುಕುಲ ಆಶ್ರಮದಲ್ಲಿ ನಡೆದ ದಕ್ಷಿಣ ಭಾರತದ ಹರಿಜನ ಕೆಲಸಗಾರರ ಸಮ್ಮೇಳನದಲ್ಲಿ ಗಾಂಧೀಜಿ ಭಾಗವಹಿಸಿದ್ದರು. ಅಲ್ಲದೆ ಅಸ್ಪೃಶ್ಯತೆ ತೊಡೆದು ಹಾಕುವ ಬಗ್ಗೆ ಮತ್ತು ಅದರ ಆಚರಣೆ ಮಾಡುವ ಬಗ್ಗೆ ಗಾಂಧೀಜಿ ಈ ಸಭೆಯಲ್ಲಿ ಮಾತನಾಡಿ 'ಅದೊಂದು ಪಾಪ, ಅಸ್ಪೃಶ್ಯತೆಗೆ ಶಾಸ್ತ್ರಗಳಲ್ಲಿ ಆಧಾರವಿಲ್ಲ' ಎಂದು ತಿಳಿಸಿದರು. ಈ ಸಮ್ಮೇಳನದಲ್ಲಿ ಕೆಲವು ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಹರಿಜನರಿಗೆ ದೇವಸ್ಥಾನ ಪ್ರವೇಶ, ಅಸ್ಪೃಶ್ಯತಾ ನಿವಾರಣೆಗಾಗಿ ಮಾಡಬೇಕಾದ ಕಾರ್ಯಕ್ರಮಗಳು, ಹಾಗೂ ಹರಿಜನರಿಗೆ ಬಾವಿ, ಕೆರೆ, ಗುಡಿ ಮುಂತಾದ ಕಡೆ ಮುಕ್ತ ಅವಕಾಶ ಮತ್ತು ಪ್ರವೇಶ ನೀಡುವಂತೆ ಒತ್ತಾಯದ ನಿರ್ಣಯ ಕೈಗೊಳ್ಳಲಾಯಿತು. ಗಾಂಧೀಜಿಯವರು ಮತ್ತು ಅವರ ಸಂಗಡಿಗರು ಕೊನೆಯ ಬಾರಿ ನೀಡಿದ ಭೇಟಿಯ ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ ಪ್ರಜಾ ಸಂಯುಕ್ತ ಪಕ್ಷವು ಕಾಲಾನಂತರದಲ್ಲಿ ಕಾಂಗ್ರೆಸ್ ಪಕ್ಷದೊಂದಿಗೆ ವಿಲೀನವಾಗಿ, ಮೈಸೂರು ಸ್ಟೇಟ್ ಕಾಂಗ್ರೆಸ್ ಸ್ಥಾಪನೆಗೆ ಕಾರಣವಾಯಿತು.

ಗಾಂಧೀಜಿಯವರು ಮೈಸೂರು ಸಂಸ್ಥಾನವನ್ನು ಐದು ಬಾರಿ ಸಂದರ್ಶಿಸಿ, ಖಾದಿ ಪ್ರಚಾರ ಮತ್ತು ಹರಿಜನರ ಉದ್ಧಾರಕ್ಕಾಗಿ, ಅಸ್ಪೃಶ್ಯತೆ ನಿವಾರಣೆಗಾಗಿ ಕೈಗೊಂಡ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಪ್ರಚಾರ ಮಾಡಿ, ಸಂಸ್ಥಾನದ ಜನತೆಯಲ್ಲಿ ವಿಶೇಷವಾಗಿ ಬೆಂಗಳೂರಿನ ಜನತೆಯಲ್ಲಿ ಖಾದಿ ಬಗ್ಗೆ ಅಭಿಮಾನ ಮೂಡುವಂತೆ ಮಾಡಿದರು. ಅವರು ಮೈಸೂರು ಸಂಸ್ಥಾನದಲ್ಲಿ ಹೆಚ್ಚಾಗಿ ಬೆಂಗಳೂರಿನ ಜನತೆ ತೋರಿದ ಪ್ರೀತಿ, ಗೌರವಗಳ

ಬಗೆಗೆ ತಮ್ಮ ಮೆಚ್ಚುಗೆ ಹಾಗು ತೃಪ್ತಿ ವ್ಯಕ್ತಪಡಿಸುವುದರ ಮೂಲಕ ಅವರ ಬೆಂಗಳೂರು ಭೇಟಿ ಇತಿಹಾಸದ ಪುಟಗಳಲ್ಲಿ ಅವಿಸ್ಮರಣೀಯವಾಗುವಂತೆ ಮಾಡಿದರು.

ಆಕರ ಗ್ರಂಥಗಳು

1. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು — ಡಾ. ಸೂರ್ಯನಾಥ ಯು ಕಾಮತ್
2. ಗಾಂಧೀ ಮತ್ತು ಕರ್ನಾಟಕ — ಸಿದ್ದವನಹಳ್ಳಿ ಕೃಷ್ಣಶರ್ಮ
3. ಬೆಂಗಳೂರಿನಲ್ಲಿ ಮಹಾತ್ಮ ಗಾಂಧೀ — ವೇಮಗಲ್ ಸೋಮಶೇಖರ್
4. ನಂದಿಗಿರಿ ಧಾಮದಲ್ಲಿ ಗಾಂಧೀ — ವೇಮಗಲ್ ಸೋಮಶೇಖರ್
5. ಜ್ಞಾಪಕ ಚಿತ್ರಶಾಲೆ — ಡಿ.ವಿ.ಗುಂಡಪ್ಪ
6. ಗಾಂಧೀ ಶತಾಬ್ದಿ ಸಂಸ್ಮರಣೆ — ಉತ್ತರ ಕನ್ನಡ ಜಿಲ್ಲೆ ಕಾಂಗ್ರೆಸ್ ಪರಿಷತ್ತು, 1970
7. ಎಚ್. ಆರ್. ವೆಂಕಟರಮಣ ಅಯ್ಯರ್ — ಖಾದಿ ಮತ್ತು ಸಮಾಜ ಸೇವೆ ಸವಿ ನೆನಪುಗಳು ಕರ್ನಾಟಕ ಸರ್ವೋದಯ ಸಂಘ, ಬೆಂಗಳೂರು
8. ವಿ.ಎಸ್. ನಾರಾಯಣ ರಾವ್ — ಮಹಾತ್ಮರ ಮಾರ್ಗ, ಪ್ರಸಾರಾಂಗ, ಬೆಂಗಳೂರು ವಿ.ವಿ. 1977
9. ಕಲಾಮಂದಿರ ಅಮೃತ ಮಹೋತ್ಸವ ಸ್ಮರಣ — 1919–1914 ಸಂಚಿಕೆ
10. Souvenior of Freedom Fighters Association — Editor: Kannan, 1975

48. ಬೆಂಗಳೂರಿನ ಸಂಘ ಸಂಸ್ಥೆಗಳು ಮತ್ತು ಸ್ವಾತಂತ್ರ್ಯ ಚಳವಳಿ

ಶ್ರೀ ಎಚ್. ಕೃಷ್ಣೇಗೌಡ

ನಾಗರೀಕ ಮಾನವ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ತತ್ವದಡಿಯಲ್ಲಿ ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ಹಕ್ಕುಗಳ ರಕ್ಷಣೆಗಾಗಿ,ಧಾರ್ಮಿಕ ಉದ್ದೇಶಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಸಂಘಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಾ ಬಂದ. ಬೆಂಗಳೂರಿನ 1898ರ ವಿವೇಕಾನಂದರ ಭೇಟಿ, 1915ರ ಗಾಂಧೀಜಿ ಭೇಟಿ, 1911ರಲ್ಲಿ ಮದ್ರಾಸಿನಿಂದ ಬೆಂಗಳೂರಿಗೆ ಆಗಮಿಸಿದ್ದ ಶಾರದಾ ದೇವಿಯವರ ಭೇಟಿ, ರವೀಂದ್ರನಾಥ ಠಾಕೂರರ ಭೇಟಿ, ಉಮಾಬಾಯಿ ಕುಂದಾಪುರ, ಕಮಲಾದೇವಿ ಚಟ್ಟೋಪಾಧ್ಯಾಯ ಈ ಎಲ್ಲಾ ಮಹನೀಯರ ಭೇಟಿ, ಪ್ರಭಾವದಿಂದ ಅನೇಕ ಸಂಘಗಳು ಬೆಂಗಳೂರಿನಲ್ಲಿ ಸ್ಥಾಪನೆಗೊಂಡವು. ಬೆಂಗಳೂರಿನಲ್ಲಿ ಸಕ್ರಿಯವಾಗಿದ್ದ ಅನೇಕ ಸಂಘಟನೆಗಳ ಬಗೆಗೆ ಮಾತನ್ನಾಡುವಾಗ ಅವುಗಳ ಮಹತ್ವ ಅರಿವಿಗೆ ಬಾರದಿದ್ದರು ಅವು ಜನಮುಖಿ ನಿಲುವುಗಳನ್ನು ಪ್ರತಿನಿಧಿಸಿ ಸಾಮಾಜಿಕವಾಗಿ ಧಾರ್ಮಿಕವಾಗಿ, ಜಡ್ಡುಗಟ್ಟಿದ್ದ ಅಜ್ಞಾತವಾಗಿ ಉಳಿದಿದ್ದ ಜನ ಸಮುದಾಯಗಳನ್ನು ಎಚ್ಚರಿಸುವ ಕೆಲಸ ಮಾಡಿದವು. ತಮ್ಮ ಸೇವಾ ಕೈಂಕರ್ಯಗಳ ಮೂಲಕ ಬಡವರಿಗೆ, ಅನಾಥರಿಗೆ, ದೀನದಲಿತರಿಗೆ ರಕ್ಷಣೆ ನೀಡಿ ಆತ್ಮಸ್ಥೈರ್ಯ ತುಂಬಿ ಆರ್ಥಿಕ ಬುನಾದಿ ಹಾಕಿ ಕೊಟ್ಟವು. ಅವು ಜಾರಿಗೆ ತಂದ ಸಮಾಜ ಸುಧಾರಣೆಗಳು ರಾಷ್ಟ್ರೀಯ ಭಾವನೆಯ ಪ್ರತೀಕವಾಗಿದ್ದು, ಪರೋಕ್ಷವಾಗಿ ಸ್ವಾತಂತ್ರ್ಯ ಚಳವಳಿಯತ್ತ ಜನತೆ ಅಭಿಮುಖವಾಗಲು ಪ್ರೇರಣೆ ನೀಡಿದವು. ಅದರಲ್ಲೂ ಹರಿಜನೋದ್ಧಾರ ಕಾರ್ಯಕ್ರಮಗಳಿಗೆ ಎಲ್ಲ ವರ್ಗಗಳ ಜನ ಸ್ಪಂದಿಸಿದ ರೀತಿ ಆ ಕಾಲ ಘಟ್ಟದ ಮಹತ್ವದ ಬೆಳವಣಿಗೆ. ಮಹಿಳೆಯರು ಸಹ ಜಾಗೃತರಾಗಿ ತಮ್ಮ ಮೇಲಿನ ದೌರ್ಜನ್ಯದ ಹೇರಿಕೆಗಳನ್ನು ಸಾತ್ವಿಕವಾಗಿ ವಿರೋಧಿಸಿದರು. ವಿಧವಾ ವಿವಾಹ ಮತ್ತು ಸ್ತ್ರೀ ಸ್ವಾತಂತ್ರ್ಯ ವಿಚಾರ ಮಹತ್ವ ಪಡೆಯಲು, ಸ್ವಾತಂತ್ರ್ಯ ಚಳವಳಿ ಪ್ರೇರಣೆಯಾಯಿತು. ಜಾತಿ ಸಂಘಟನೆಗಳು ಹುಟ್ಟಿಕೊಂಡು ಅವು ಸಹ ತಮ್ಮ ತಮ್ಮ ವರ್ಗದ ಉದ್ಧಾರಕ್ಕಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ರಾಜಕೀಯ ಪ್ರಜ್ಞೆ ಮೂಡಿಸಿ ಲಭ್ಯ ಅವಕಾಶಗಳ ಬಗೆಗೆ ಅರಿವು ಮೂಡಿಸಿದವು. ರಾಜಕೀಯ ಅವಕಾಶಗಳನ್ನು ಪಡೆದುಕೊಳ್ಳಲು ಒತ್ತಡ ಹೇರಲಾಯಿತು. ಅಲ್ಲದೆ ಅವಕಾಶಗಳನ್ನು ಪಡೆದುಕೊಳ್ಳಲು ಅನೇಕ ವೇದಿಕೆಗಳು ಹುಟ್ಟಿಕೊಂಡು ಸ್ವಾತಂತ್ರ್ಯ ಚಳವಳಿಯ ಹೋರಾಟದೊಂದಿಗೆ ಕೈಜೋಡಿಸಿದವು ಎನ್ನಬಹುದು.

ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಪೂರ್ವದ ಬೆಂಗಳೂರು ನಗರದಲ್ಲಿ ಸುಮಾರು 100ಕ್ಕೂ ಹೆಚ್ಚಿನ ಸಂಘಸಂಸ್ಥೆಗಳನ್ನು ಗುರ್ತಿಸಿ ಅವುಗಳನ್ನು ಸಾಮಾಜಿಕ, ಧಾರ್ಮಿಕ, ಸಾಮುದಾಯಿಕ, ಯುವಕ ಸಂಘಗಳು, ಕಾರ್ಮಿಕ ಹಾಗೂ ಶೈಕ್ಷಣಿಕ ಸಂಘಗಳು, ರಾಜಕೀಯ ಸಂಘಗಳು, ಸಾಂಸ್ಕೃತಿಕ ಸಂಘಗಳು ಮುಂತಾಗಿ ವಿಂಗಡಿಸಬಹುದಾಗಿದೆ.

ಸಾಮಾಜಿಕ ಸಂಘಗಳಲ್ಲಿ 1934 ರಲ್ಲಿ ಸ್ಥಾಪನೆಗೊಂಡ 'ಹರಿಜನ ಸೇವಕ ಸಂಘ' ಬಹಳ ಪ್ರಮುಖವಾದದ್ದು. ಮಾಜಿ ದಿವಾನ್ ಮಾಧವರಾಯರು ಇದರ ಪ್ರಥಮಾಧ್ಯಕ್ಷರಾಗಿದ್ದು. ಕೆ. ಟಿ. ಭಾಷ್ಯಂ, ಮುನ್ನಾಜಿರಾಯರು, ತಗಡೂರು ರಾಮಚಂದ್ರರಾಯರು, ವಿ. ವೆಂಕಟಪ್ಪ ಇವರೆಲ್ಲ ಪ್ರಮುಖ ಕಾರ್ಯಕರ್ತರಾಗಿದ್ದರು.[1] ಹರಿಜನರಿಗೆ, ಶಿಕ್ಷಣ, ದೇವಾಲಯ ಪ್ರವೇಶ, ಸಾರ್ವಜನಿಕ ಕೆರೆ, ಬಾವಿ ಬಳಸಲು ಅವಕಾಶ ಕಲ್ಪಿಸುವುದರ ಮೂಲಕ ಅವರಲ್ಲಿ ಜಾಗೃತಿ ಮೂಡಿಸಿತು. ದಿನಾಂಕ: 22ನೇ ನವೆಂಬರ್ 1944 ರಂದು ಬೆಂಗಳೂರಿಗೆ ಆಗಮಿಸಿದ್ದ ಡಾ॥ ಅಂಬೇಡ್ಕರ್, ಡಿಪ್ರೆಸ್ಡ್‌ಕ್ಲಾಸಸ್ ಪೆಡರೇಷನ್ ವತಿಯಿಂದ ಏರ್ಪಡಿಸಿದ್ದ ಸಭೆಯಲ್ಲಿ ಮಾತನ್ನಾಡಿದರು.[2] ಶ್ರೀ ರಾಮಪುರ ಲೇಬರ್

ಕಾಲೋನಿಯಲ್ಲಿದ್ದ 'ಸಮಾಜ ಸೇವಾ' ಸಂಘವು ಡಬ್ಲ್ಯೂ ಹೆಚ್. ಹನುಮಂತಪ್ಪ, ಕೃಷ್ಣಸ್ವಾಮಿಪಿಳ್ಳೈ ನೇತೃತ್ವದಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿತ್ತು. 1933ರಲ್ಲಿ ಎಂ.ಎ. ಪರಶುರಾಮ್‌ರವರಿಂದ ಅರಳೇಪೇಟೆಯಲ್ಲಿ ಸ್ಥಾಪನೆಯಾದ ದರಿದ್ರನಾರಾಯಣ ಸಂಘವು ಪ್ರಮುಖವಾಗಿದ್ದು, ದೇಶದ ಸ್ವಾತಂತ್ರ್ಯ, ಪ್ರಜೆಗಳ ಹಾಗೂ ಕಾರ್ಮಿಕ ವರ್ಗದ ಕಲ್ಯಾಣ, ಶಿಕ್ಷಣ ಪ್ರಚಾರದಂತಹ ಉದ್ದೇಶಗಳನ್ನು ಹೊಂದಿ ಸ್ವಾತಂತ್ರ್ಯ ಚಳವಳಿಯಲ್ಲಿ ನೇರವಾಗಿ ಭಾಗವಹಿಸಿತ್ತು. ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ಪ್ರಾಣಿಬಲಿ ವಿರುದ್ಧ ಮತ್ತು ಖಾದಿ ಪ್ರಚಾರ ಕಾರ್ಯಗಳಿಗಾಗಿ ಶ್ರಮಿಸುತ್ತಿತ್ತು. ಸಂಘದ ಸದಸ್ಯರೆಲ್ಲ ಖಾದಿಧರಿಸಿ ಕಾಂಗ್ರೆಸ್ ಸದಸ್ಯರಾಗಿ ಸೇವಾ ಕಾರ್ಯದಲ್ಲಿ ತೊಡಗಬೇಕಾಗಿತ್ತು.[3]

1937ರ ಮೇ ತಿಂಗಳಲ್ಲಿ ಸ್ಥಾಪನೆಗೊಂಡ ಜನಜಾಗೃತಿ ಸಂಘದ ಅಧ್ಯಕ್ಷರಾಗಿ ಬಿ.ಎಂ. ಸೀನಪ್ಪ, ಕಾರ್ಯದರ್ಶಿಯಾಗಿ ಶ್ರೀನಿವಾಸಮೂರ್ತಿ, ಖಜಾಂಚಿಯಾಗಿ ಎನ್.ಪಿ.ಶಂಕರ್ ನೇಮಕಗೊಂಡರು. ರಾಷ್ಟ್ರಮಟ್ಟದಲ್ಲಿ ಸಂಘದ ಶಾಖೆಯಾಗಿದ್ದು, ಸಾಮಾಜಿಕ ಬದಲಾವಣೆ ಬಯಸಿ, ಸಾರ್ವಜನಿಕ ಹಿತಕ್ಕಾಗಿ ದುಡಿಯುವ ಸೇವಾಭಾವನೆ ಹೊಂದಿದ್ದ ಅವಿವಾಹಿತರಿಗೆ ಸದಸ್ಯತ್ವ ನೀಡಲಾಗುತ್ತಿತ್ತು. ಸಾರ್ವಜನಿಕರು ನಿರ್ಭೀತಿಯಿಂದ ಬದುಕುವ ಅವಕಾಶ, ಸರ್ಕಾರದ ದಮನಕಾರಿ ನೀತಿಯ ಖಂಡನೆ, ಖೈದಿಗಳ ಹಿತರಕ್ಷಣೆ, ಜೈಲುಸುಧಾರಣೆ, ನಿರುದ್ಯೋಗ ನಿವಾರಣೆ, ಸಾಮಾಜಿಕ ಸಮಸ್ಯೆಗಳ ನಿವಾರಣೆ, ಚಳವಳಿ ಸಂಬಂಧ ಮರಣ ಹೊಂದಿದ ಕುಟುಂಬದವರಿಗೆ ಪರಿಹಾರ, ಸತ್ಯಾಗ್ರಹಿಗಳಿಗೆ ಬೆಂಬಲ, ಕರಪತ್ರಗಳ ಮೂಲಕ ಸಾರ್ವಜನಿಕರಿಂದ ಪ್ರತಿಭಟನೆ ಏರ್ಪಡಿಸುವಂತಹ ಈ ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿತ್ತು.[4] ಉದಾಹರಣೆಗೆ "45 ಮೈಸೂರು ಪೊಲೀಸ್ ರೆಗ್ಯುಲೇಷನ್ ಆಕ್ಟ್" ಸರ್ಕಾರದಿಂದ ಜಾರಿಯಾದಾಗ ಅದರ ವಿರುದ್ಧ ಉಗ್ರ ಪ್ರತಿಭಟನೆ ಮಾಡಿತು. ಸಮಾಜವಾದಿ ಹಾಗೂ ಕಾಂಗ್ರೆಸ್ ನಾಯಕ ಮಸಾನಿ ಸಭೆಗೆ ಸಂಘದ ಕಛೇರಿಯಲ್ಲಿ ಅವಕಾಶ ಮಾಡಿತು. ನಾರಿಮನ್ ಸಭೆಗೆ ವ್ಯವಸ್ಥೆ ಮಾಡಿದ್ದನ್ನು ಗಮನಿಸಬಹುದಾಗಿದೆ.

ರಾಷ್ಟ್ರಮಟ್ಟದ ಸಂಘದ ಶಾಖೆಯಾಗಿ, ಬೆಂಗಳೂರಿನಲ್ಲಿ ಸಿವಿಲ್ ಲಿಬರ್ಟಿ ಯೂನಿಯನ್ ಪ್ರಾರಂಭವಾಯಿತು. ಅಧ್ಯಕ್ಷರಾಗಿ ಎಲ್.ಎಸ್.ರಾಜು, ಕಾರ್ಯದರ್ಶಿಯಾಗಿ ಎನ್. ಬಾಲಕೃಷ್ಣ , ಖಜಾಂಚಿಯಾಗಿ ವಾಜಪೇಯಿ ವೆಂಕಟೇಶಯ್ಯನವರು, ಸದಸ್ಯರಾಗಿ ಹೆಚ್.ಬಿ.ಗುಂಡಪ್ಪಗೌಡ, ಹೆಚ್.ಆರ್. ಗುರುವಾರೆಡ್ಡಿ, ಎಸ್.ಡಿ.ವೆಂಕಟರಮಣ, ತಗಡೂರು ರಾಮಚಂದ್ರರಾವ್ ಕಾರ್ಯನಿರ್ವಹಿಸುತ್ತಿದ್ದರು.[5] ಪತ್ರಿಕಾ ಸ್ವಾತಂತ್ರ್ಯಕ್ಕೆ ಅವಕಾಶ ಮಾಡಿಕೊಡುವುದು, ಸ್ತ್ರೀ ಪುರುಷರ ನಡುವೆ ಸಮಾನತೆ, ಖೈದಿಗಳ ಹಿತರಕ್ಷಣೆ, ಜೈಲುಗಳ ಸುಧಾರಣೆ ಹಿನ್ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಚಾಮರಾಜ ಪೇಟೆಯ 50 ವರ್ಷದ ಕಾಳಪ್ಪ ಎಂಬುವವರು 16 ವರ್ಷದ ಹುಡುಗಿಯೊಡನೆ ವಿವಾಹವಾಗುತ್ತಿದ್ದನ್ನು ಖಂಡಿಸಿ ಅವರ ವಿರುದ್ಧ ಉಗ್ರ ಪ್ರತಿಭಟನೆ ಮಾಡಿ ತಡೆಯಿತು. ಎನ್.ಎನ್. ಚಂದೂರ್ ರವರಿಂದ ಸ್ಥಾಪನೆಯಾದ ರಾಷ್ಟ್ರಸೇವಾ ಸಂಘ ಮಲ್ಲೇಶ್ವರಂನಲ್ಲಿನ ದೀನಸೇವಾ ಸಂಘ, ಹಾಗೂ "ಸಿವಿಕ್ ಆಂಡ್ ಸೋಷಿಯಲ್ ಪ್ರೋಗ್ರೆಸ್ ಅಸೋಸಿಯೇಷನ್" ಇವುಗಳ ಚಟುವಟಿಕೆಗಳು ಶ್ಲಾಘನೀಯವಾದವು. ಸಿವಿಕ್ ಅಸೋಸಿಯೇಷನ್‌ಗೆ 1937ರಲ್ಲಿ ಗಾಂಧೀಜಿ ಭೇಟಿ ನೀಡಿ ಯುವಕರು ರಾಜಕೀಯ ಪ್ರವೇಶಿಸಬೇಕು ಎಂದು ಹೇಳಿದರು.

ಧಾರ್ಮಿಕ ಸಂಘಟನೆಗಳಲ್ಲಿ ವೀರೇಶಲಿಂಗಂ ಪಂತಲು ಪ್ರಭಾವದಿಂದ ಸ್ಥಾಪನೆಯಾದ ಬ್ರಹ್ಮಸಮಾಜ, ವಿಶ್ವೇಶ್ವರಾನಂದ ಸರಸ್ವತಿಯವರಿಂದ ಆರ್ಯಸಮಾಜ, ಅನಿಬೆಸೆಂಟ್, ಅರುಂಡಲೆ ವಾಡಿಯರಿಂದ ಥಿಯೋಸಾಫಿಕಲ್ ಸೊಸೈಟಿ ಪ್ರಾರಂಭವಾದವು. ಇವು ಸಾಮಾಜಿಕ ಸಮಸ್ಯೆಗಳ ನಿವಾರಣೆ, ವಿಧವಾ ವಿವಾಹಕ್ಕೆ ಪ್ರೋತ್ಸಾಹ ಮತ್ತಿತರ ಧ್ಯೇಯಗಳನ್ನು ಹೊಂದಿ, ಜನರಲ್ಲಿ ಧಾರ್ಮಿಕವಾಗಿ, ಸಾಮಾಜಿಕವಾಗಿ ಜಾಗೃತಿ ಮೂಡಿಸಿದವು. ಬ್ರಹ್ಮ

ಸಮಾಜದ ಧುರೀಣರಾದ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯರ್ ಒಂದು ಸ್ಕೂಲನ್ನು ಸ್ಥಾಪಿಸಿ ಅದರ ಮುಖ್ಯೋಪಾಧ್ಯಯರನ್ನಾಗಿ ಬಿಪಿನ್ ಚಂದ್ರಪಾಲ್‌ರವನ್ನು ನೇಮಿಸಿದ್ದರು. ಒಂದು ವರ್ಷ ಸೇವೆ ಸಲ್ಲಿಸಿದ ಬಿಪಿನ್ ಚಂದ್ರಪಾಲ್ ಪ್ರಭಾವ ಬೆಂಗಳೂರಿನ ಜನತೆ ಮೇಲಾಯಿತು.[6] ಆರ್ಯ ಸಮಾಜದ ಮುಖ್ಯಸ್ಥರಾಗಿ ಸುಬ್ಬನರಸಿಂಹಶಾಸ್ತ್ರಿ, ಶ್ರೀ ರಾಮಚಂದ್ರರಾವ್‌ಶಿಂಧೆ ಕಾರ್ಯನಿರ್ವಹಿಸಿದರು.[7] 1898ರಲ್ಲಿ ಸ್ವಾಮಿ ವಿವೇಕಾನಂದರು. ಬೆಂಗಳೂರಿಗೆ ಭೇಟಿ ನೀಡಿ ಕಂಟೋನ್ಮೆಂಟ್‌ನ ಡಾ॥ ಪಲ್ಪು ಮನೆಯಲ್ಲಿ ಎರಡು ದಿವಸ ತಂಗಿದ್ದು, ತಮ್ಮ ಭಾಷಣ, ಚಿಂತನೆ, ತೇಜಸ್ಸಿನ ಮುಖಾಂತರ ಬೆಂಗಳೂರಿನ ಜನತೆ ಮೇಲೆ ಅಪಾರ ಪ್ರಭಾವ ಬೀರಿದರು. ಇವರ ಪ್ರಭಾವದಿಂದಲೇ 1904ರಲ್ಲಿ ಬೆಂಗಳೂರಿನಲ್ಲಿ ರಾಮಕೃಷ್ಣ ಮಿಷನ್ ಸ್ಥಾಪನೆಯಾಯಿತು. ಕ್ರಿ.ಶ. 1335ರಲ್ಲಿಯೇ ಬೆಂಗಳೂರಿಗೆ ಕ್ರೈಸ್ತ ಮಿಷನರಿಗಳ ಪ್ರವೇಶವಾಯಿತೆನ್ನಲಾಗಿದೆ. ಆನೆಕಲ್ಲಿನಲ್ಲಿರುವ ಸಮಾಧಿಶಿಲೆ ಸಾಕ್ಷಿಯಾಗಿದೆ. ನಂತರ ಬೆಂಗಳೂರಿನಲ್ಲಿ 1820 ರಲ್ಲಿ ಲಂಡನ್ ಮಿಷನ್, 1830 ರಲ್ಲಿ ವೆಸ್ಲಿಯನ್ ಮೆಥಾಡಿಸ್ಟ್ ಮಿಷನರಿ ಸೊಸೈಟಿ, 1851ರಲ್ಲಿ ಬಾಸೆಲ್ ಮಿಷನ್ 1862ರಲ್ಲಿ ಕ್ರಿಶ್ಚಿಯನ್ ವರ್ನಾಕ್ಯೂಲರ್ ಸೊಸೈಟಿ, ಮುಂತಾದವು ಧರ್ಮ ಪ್ರಚಾರದ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡು, ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಪತ್ರಿಕೆಗಳ ಪ್ರಾರಂಭ ಮುದ್ರಣ ಯಂತ್ರಗಳ ಬಳಕೆಯಿಂದ ಜನರ ಮೌಢ್ಯತೆ ತೊಲಗಿಸಿ ಆಧುನಿಕ ಚಿಂತನೆಗಳು ಮೊಳಕೆಯೊಡಯುವಂತೆ ಮಾಡಿದವು. 1928ರ ಗಣೇಶನ ಗಲಾಟೆ ಬೆಂಗಳೂರಿನಲ್ಲಿ ಜರುಗಿದ ನಂತರ, ಸಂಪಿಗೆ ವೆಂಕಟಪತಯ್ಯನವರ ಅಧ್ಯಕ್ಷತೆಯಲ್ಲಿ ಸ್ಥಾಪನೆಯಾದ ಹಿಂದೂ ಮಹಾಸಭೆ ಸಕ್ರಿಯ ಸಂಘಟನೆಯಲ್ಲಿ ತೊಡಗಿತು. ಇದರ ಕಾರ್ಯಕ್ರಮಗಳು ಸೆಂಟ್ರಲ್ ಕಾಲೇಜಿನ ಹಾಸ್ಟಲ್‌ನಲ್ಲಿ ಜರುಗುತ್ತಿದ್ದವು[8] "ಹಿಂದೂಗಳ ಒಗ್ಗಟ್ಟಿನಲ್ಲಿ ದೇಶ ಸ್ವಾತಂತ್ರ್ಯ ಹೊಂದಲು ಹಾಗೂ ಅದರ ಅಖಂಡತೆ ಉಳಿಯಲು ಸಾಧ್ಯ" ಎಂದು ಹೇಳಿತು. ಇದಕ್ಕೆ ಪ್ರತಿಸ್ಪರ್ಧಿಯಾಗಿ ಮುಸ್ಲಿಂ ಲೀಗ್ ಸ್ಥಾಪನೆಯಾಗಿ ಜಿನ್ನಾನ ನಾಯಕತ್ವದಲ್ಲಿ ಬೆಂಬಲ ವ್ಯಕ್ತ ಪಡಿಸಿತು.

ಸಾಮುದಾಯಿಕ ಸಂಘಗಳು ಸ್ಥಾಪನೆಯಾಗಿ ತಮ್ಮ ಜನರ ಹಿತ ರಕ್ಷಣೆ, ಶಿಕ್ಷಣ ಮತ್ತು ಏಳಿಗೆಗೆ ಶ್ರಮಿಸತೊಡಗಿದವು. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದವುಗಳೆಂದರೆ 1906ರ ಏಪ್ರಿಲ್‌ನಲ್ಲಿ ಸ್ಥಾಪನೆಗೊಂಡ ಒಕ್ಕಲಿಗರ ಸಂಘ, 1904ರ ಲಿಂಗಾಯಿತ ಸಂಘ, 1909ರ ಮಹಮಡನ್ ಅಸೋಸಿಯೇಷನ್, ಕುರುಬರ ಸಂಘ, ದೇವಾಂಗ ಸಂಘ, ಲಂಬಾಣಿ ಜನರ ಮಹಾಸಭೆ, ಮರಾಠ ಮಹಾಸಭೆ, ವಹ್ನಿಕುಲ ಕ್ಷತ್ರಿಯರ ಸಭೆ, ಆಂಧ್ರ ದೇವಾಂಗ ಸಮಾಜ, ಹೊಯ್ಸಳ ಕರ್ನಾಟಕ ಬ್ರಾಹ್ಮಣರ ಸಂಘ, ಡಿಪ್ರೆಸ್ಡ್ ಕ್ಲಾಸಸ್ ಮಿಷನ್, ಕಣಿಯರ ಸಂಘ ಮುಂತಾದವು ತಮ್ಮ ತಮ್ಮ ಸಮುದಾಯದ ಹಿತಾಸಕ್ತಿ ಹಾಗೂ ತಮ್ಮದೇ ಪ್ರಾತಿನಿಧ್ಯ ಪಡೆದುಕೊಳ್ಳಲು ಸ್ಥಾಪನೆಗೊಂಡ ಈ ಸಂಘಗಳು, ಶಿಕ್ಷಣದ ಮುಖಾಂತರ ಸಮುದಾಯಗಳಲ್ಲಿ ಅರಿವು ಮೂಡಿಸಿ ವಸಾಹತುಶಾಹಿ ವಿರುದ್ಧ ಜನರು ತಿರುಗಿ ಬೀಳಲು ಕಾರಣವಾದವು.

ಮಹಿಳಾ ಸಂಘಟನೆಗಳು ಬೆಂಗಳೂರಿನಲ್ಲಿ 1910 ರವರೆಗೆ ಇರಲಿಲ್ಲ. 1910ರಿಂದ 1930ರವರೆಗೆ ಅನೇಕ ಸಂಘಗಳು ಪ್ರಾರಂಭವಾದವು. ಮುಖ್ಯವಾಗಿ ನಗರದ ಡಿ.ವಿ.ಜಿ ರಸ್ತೆಯಲ್ಲಿ ಅಬಲಾಶ್ರಮ 1911ರಲ್ಲಿ ಬಾಲ ವಿಧವೆ ಕೃಷ್ಣಮ್ಮನವರಿಂದ ಸ್ಥಾಪನೆಯಾಯಿತು.9 1913ರಲ್ಲಿ ಪಾರ್ವತಮ್ಮ ಪುಟ್ಟಣ್ಣಚೆಟ್ಟಿಯವರಿಂದ ಶಾರದ ಸ್ತ್ರೀಸಮಾಜ, ಮಲ್ಲೇಶ್ವರಂ ಮಹಿಳಾ ಸಮಾಜ, ಆರ್ಯ ಸಹೋದರಿಯರ ಸಂಘ, ಸೇವಾ ಸದನ, ಅಕ್ಕಮಹಾದೇವಿ ಸಮಾಜ ಮುಂತಾದವು ಸ್ಥಾಪನೆಯಾದವು. ಇವು ಮಹಿಳೆಯರಿಗೆ ಶಿಕ್ಷಣ, ಕುಶಲಕಲೆ ತರಬೇತಿ, ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಅವರಲ್ಲಿ ಜಾಗೃತಿ ಮೂಡಿಸಿದವು. ಉದಾಹರಣೆಗೆ 20ನೇ ಮೇ 1915ರಂದು ಶಾರದಾ ಸ್ತ್ರೀ ಸಮಾಜದಲ್ಲಿ ಸೌಭಾಗ್ಯವತಿ ಸರಸ್ವತಿ ದೇವಿಯವರಿಂದ "ನಿಜ" ಎಂಬ ವಿಷಯವಾಗಿ ಉಪನ್ಯಾಸ ಏರ್ಪಡಿಸಲಾಗಿತ್ತು.[10] ಥಿಯೋಸಾಫಿಕಲ್ ಸೊಸೈಟಿ ಮಂದಿರದಲ್ಲಿ ನಂಜನಗೂಡಿನ

ತಿರುಮಲಾಂಬಾ ರವರು "ಸೇವೆ, ಕಾಯಕ" ವಿಷಯವಾಗಿ ಉಪನ್ಯಾಸ ನೀಡಿದರು. ಪಾರ್ವತಮ್ಮ ಪುಟ್ಟಣ್ಣ ಚೆಟ್ಟಿ ಲಕ್ನೊದಲ್ಲಿ ಜರುಗಿದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ ಬೆಂಗಳೂರಿಗೆ ಮರಳಿದ ಮೇಲೆ, ಥಿಯೋಸಾಫಿಕಲ್ ಮಂದಿರದಲ್ಲಿ ಲಕ್ನೊ ಪಟ್ಟಣದ ಅನುಭವ ಹಾಗೂ ಸಭೆಯ ತೀರ್ಮಾನಗಳನ್ನು ಕುರಿತು ತಮ್ಮ ಅನುಭವ ತಿಳಿಸಿದರು.[11] ಮಲ್ಲೇಶ್ವರಂ ಮಹಿಳಾ ಸೇವಾ ಸಮಾಜದವರು "ಗಾಂಧಿ ನಿಧಿ" ಸಂಗ್ರಹಿಸಿ 1936ರಲ್ಲಿ ಗಾಂಧೀಜಿಯನ್ನು ಆಹ್ವಾನಿಸಿ ತಮ್ಮ ಆಭರಣಗಳನ್ನೆಲ್ಲಾ ಹರಿಜನೋದ್ಧಾರ ನಿಧಿಗೆ ನೀಡಿದರು. ಗಾಂಧೀಜಿ ಅವರ ಸೇವಾಕಾರ್ಯಗಳನ್ನು ಪ್ರಶಂಸಿದರು. ಹೀಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಅಪ್ರತ್ಯಕ್ಷವಾಗಿ ತೊಡಗಿಸಿಕೊಂಡಿದ್ದರು.

ಸಾಂಸ್ಕೃತಿಕ ಸಂಘಗಳು, ಅಪ್ರತ್ಯಕ್ಷವಾಗಿ ಸ್ವಾತಂತ್ರ್ಯ ಚಳವಳಿಗೆ ಪೂರಕವಾಗಿ ಶ್ರಮಿಸಿವೆ.ಅಂತವುಗಳಲ್ಲಿ 1870ರಲ್ಲಿ ಸ್ಥಾಪನೆಗೊಂಡ ಲಿಟರರಿ ಯೂನಿಯನ್, 1919ರಲ್ಲಿ ಬೆಂಗಳೂರಿನ ಬಳೇಪೇಟೆಯಲ್ಲಿ ಅ.ನ. ಸುಬ್ಬರಾಯ ರಿಂದ ಸ್ಥಾಪನೆಯಾದ ಕಲಾಮಂದಿರ, ಬೈದರಹಳ್ಳಿ ಯೂತ್ ಕ್ಲಬ್, ವ್ಯಾಯಾಮಶಾಲೆಗಳು ಮುಂತಾದವು. ಕಲಾಮಂದಿರ, ಮೆಜೆಸ್ಟಿಕ್ ಥಿಯೇಟರ್ ಎದುರಿನ ಆನಂದ ಮಹಲ್‌ನಲ್ಲಿದ್ದು ಇದು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಸ್ವಾತಂತ್ರ್ಯ ಚಳುವಳಿ ಕೇಂದ್ರವೂ ಆಗಿತ್ತು.[12] ರುಮಾಲೆ ಚನ್ನಬಸವಯ್ಯನವರು ಇಲ್ಲಿಯ ವಿದ್ಯಾರ್ಥಿಯಾಗಿದ್ದು ನಂತರ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ಬೈದರಹಳ್ಳಿ "ಯೂತ್ ಕ್ಲಬ್" ವತಿಯಿಂದ "ಭಾರತಿ ನಾಟಕ ಸಭಾ' ಸ್ಥಾಪಿಸಿ ಇವರು, ಮೈಸೂರು ಕಾಂಗ್ರೆಸ್ ಅಧೀವೇಶನದಲ್ಲಿ ಟಿ.ಪಿ. ಕೈಲಾಸಂ, ಗಾಂಧೀಜಿ ರಚನಾತ್ಮಕ ಕಾರ್ಯಕ್ರಮಗಳ ಸಂಬಂಧ ರಚಿಸಿದ್ದ ನಾಟಕಗಳನ್ನು ಅಭಿನಯಿಸುತ್ತಿದ್ದರು.[13]

ಬೆಂಗಳೂರಿನ ಯುವಕ ಸಂಘಗಳು ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮದೇ ಪಾತ್ರ ವಹಿಸಿಸಿರುವುದನ್ನು ಕಾಣಬಹುದು ಈ ನಿಟ್ಟಿನಲ್ಲಿ ಮಹಾತ್ಮ ಗಾಂಧಿ ತರುಣದ ಸಂಘ, ಮುಂದೆ ನ್ಯಾಷನಲ್‌ಯೂತ್ ಲೀಗ್ ಎಂಬ ಹೆಸರಿನಲ್ಲಿ ಪ್ರಸಿದ್ಧವಾಯಿತು. ಬೆಂಗಳೂರು ಸಿಟಿ ಇದರ ಕಾರ್ಯಕ್ಷೇತ್ರವಾಗಿದ್ದು ಯುವಕರನ್ನು ಸಂಘಟಿಸಿತು. ಬಸವನಗುಡಿ ತಿಲಕ್ ಸ್ಮಾರಕ ಸಂಘ, ಮೈಸೂರು ಸ್ಟೇಟ್ ಮುಸ್ಲಿಂ ಯೂತ್ ಲೀಗ್, ಬಸವನಗುಡಿ ಯುವಕ ಸಂಘ, ಗುಟ್ಟಹಳ್ಳಿ ಮಿತ್ರಕೂಟ, ಭಾರತಕುಮಾರ ಸಂಘ ಪ್ರಮುಖವಾದವು. ಯುವಕ ಸಂಘಗಳ ವತಿಯಿಂದ ಗಾಂಧೀಜಯಂತಿ, ದೇಶಭಕ್ತರ ದಿನ, ಧ್ವಜಾರೋಹಣ ದಿನ, ಮಹದೇವದೇಸಾಯಿ ದಿನ ಹೀಗೆ ರಾಷ್ಟ್ರನಾಯಕರ ಹೆಸರಿನಲ್ಲಿ ಆಚರಣೆ ಮಾಡಿ ಚಳವಳಿಗಾರರಿಗೆ ಬೆಂಬಲ ನೀಡುತ್ತಿದ್ದರಲ್ಲದೇ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸುತ್ತಿದ್ದರು.[14]

ವಿದ್ಯಾರ್ಥಿ ಸಂಘಟನೆಗಳು, ಇಂಟರ್ ಮೀಡಿಯೇಟ್ ಕಾಲೇಜು ಸಂಘ, ಬೆಂಗಳೂರು ಸ್ಟೂಡೆಂಟ್ಸ್ ಆರ್ಗನೈಜೇಷನ್, ಮುಸ್ಲಿಂ ಸ್ಟೂಡೆಂಟ್ಸ್ ಫೆಡರೇಷನ್, 1945ರ ವಿದ್ಯಾರ್ಥಿ ಕಾಂಗ್ರೆಸ್ ಮುಂತಾದವು. 1928ರ ಗಣಪತಿ ಗಲಾಟೆ ನಂತರ ವಿದ್ಯಾರ್ಥಿಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಹೆಚ್ಚು ಸಕ್ರಿಯವಾಗಿ ಭಾಗವಹಿಸತೊಡಗಿದರು. ಇಂಟರ್ ಮೀಡಿಯಟ್ ವಿದ್ಯಾರ್ಥಿಸಂಘದ ಆಶ್ರಯದಲ್ಲಿ 1939ರಲ್ಲಿ ಶರತ್‌ಚಂದ್ರಬೋಸ್‌ರವರಿಂದ ಉಪನ್ಯಾಸ ಏರ್ಪಡಿಸಲಾಗಿತ್ತು.[15]

ಇಂಟರ್ ಮೀಡಿಯೆಟ್ ಕಾಲೇಜು ಸಂಘದ ವತಿಯಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿ ಸಿ.ರಾಜಗೋಪಾಲಚಾರಿ ಭಾಗವಹಿಸಿ ಮಾತನ್ನಾಡಿ ವಿದ್ಯಾರ್ಥಿಗಳು ರಾಜಕೀಯ ಪ್ರವೇಶ ಮಾಡಬೇಕೆಂದರು. 1945ರಲ್ಲಿ ಸ್ಥಾಪನೆಗೊಂಡ ವಿದ್ಯಾರ್ಥಿ ಕಾಂಗ್ರೆಸ್ ವಾರ್ಷಿಕ ಸಮಾವೇಶಗಳನ್ನು ವಿಜೃಂಭಣೆಯಿಂದ ನಡೆಸುತ್ತಿತ್ತು. 4ನೇ ನವೆಂಬರ್ 1946ರಲ್ಲಿ 2ನೇ ಸಮಾವೇಶ ಜರುಗಿ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಉಪಾಧ್ಯಕ್ಷ ರವೀಂದ್ರ

ವರ್ಮ ಅಧ್ಯಕ್ಷತೆ ವಹಿಸಿದ್ದರು. ಜವಾಬ್ದಾರಿ ಸರ್ಕಾರ ಸ್ಥಾಪನೆ ಕರ್ನಾಟಕದ ಏಕೀಕರಣ, ವಂದೇ ಮಾತರಂ ಹಾಡದ ವಿ.ವಿ. ನೀತಿ ಖಂಡಿಸಿ ನಿರ್ಣಯ ತೆಗೆದುಕೊಳ್ಳಲಾಯಿತು. ಕಮಲಾದೇವಿ ಚಟ್ಟೋಪಾಧ್ಯಾಯರವರು ಭಾಗವಹಿಸಿದ್ದರು.[16]

ಬೆಂಗಳೂರಿನಲ್ಲಿ ಕಾರ್ಮಿಕ ಸಂಘಗಳಾದ ಮೈಸೂರು ಸ್ಟೇಟ್ ಲೇಬರ್ ಫೆಡರೇಷನ್, ಹೋಟೆಲ್ ಸರ್ವೆಂಟ್ಸ್ ಅಸೋಸಿಯೇಷನ್, ಜಟಕ ಚಾಲಕರ ಸಂಘ, ಸ್ಕ್ಯಾವೆಂಜರ್ಸ್ ಸಂಘ, ಪೀಸ್ ಗೂಡ್ಸ್ಮರ್ಚೆಂಟ್ಸ್ ಸಂಘ, ಹೋಟೆಲ್ ಮಾಲೀಕರ ಸಂಘ ಸಹ ಸ್ವಾತಂತ್ರ್ಯ ಚಳುವಳಿಗೆ ಪೂರಕವಾಗಿ ಶ್ರಮಿಸಿವೆ.

ಶೈಕ್ಷಣಿಕ ಸಂಸ್ಥೆಗಳಲ್ಲಿ, ದೇಶೀ ವಿದ್ಯಾಶಾಲೆ, ಹಿಂದಿ ಪ್ರಚಾರಕ ಸಂಘ, ರಿಯಾಸತ್ ಹಿಂದಿ ಪ್ರಚಾರ ಸಮಿತಿ, ಸ್ವಯಂ ಸೇವಾ ದಳದ ಶಾಖೆಗಳು, ರಾಜಕೀಯ ಸಂಘಟನೆಗಳಲ್ಲಿ, ಪ್ರಜಾಮಿತ್ರ ಮಂಡಲಿ, ಪ್ರಜಾಪಕ್ಷ, ಸಂಯುಕ್ತ ಪ್ರಜಾಪಕ್ಷ, ಮೈಸೂರು ಕಾಂಗ್ರೆಸ್, ರ್‍ಯಾಡಿಕಲ್ ಕಾಂಗ್ರೆಸ್ ಪಾರ್ಟಿ ಮುಂತಾದವು ಜನರಲ್ಲಿ ಜಾಗೃತಿ ಮೂಡಿಸಿ, ವಸಾಹತುಶಾಹಿ ದಬ್ಬಾಳಿಕೆಯನ್ನು, ಸರ್ಕಾರದ ದಮನ ಕಾರಿ ನೀತಿಯನ್ನು ಅವರಿಗೆ ತಿಳಿಸಿ ಜಾಗೃತರನ್ನಾಗಿ ಮಾಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕುವಂತೆ ಪ್ರೇರೇಪಿಸಿದವು.

ಅಡಿಟಿಪ್ಪಣಿಗಳು

1. ಡಾ॥ ಕಾಮತ್ 'ಸೂರ್ಯನಾಥ', 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ದ್ವಿತೀಯ ಸಂಪುಟ; ಗೀತಾಬುಕ್ 'ಹೌಸ್ ಮೈಸೂರು', 1977 ಪುಟ- 627.
2. ಎಸ್.ಟಿ.ಮೂರ್ತಿ ಮತ್ತು ಆರ್.ಗೋಪಾಲಸ್ವಾಮಿ ಅಯ್ಯರ್, ಗಾಂಧೀ ಅಧ್ಯಯನ ಮಾಲೆ, ಬೆಂ.ವಿ.ವಿ.ಪುಟ- 15
3. ಕೃಷ್ಣ ಶರ್ಮ ಸಿದ್ಧವನಹಳ್ಳಿ, 'ಗಾಂಧೀ ಮತ್ತು ಕರ್ನಾಟಕ' ಗಾಂಧೀ ಸ್ಮಾರಕ ನಿಧಿ; ಬೆಂಗಳೂರು: 1969, ಪುಟ 139.
4. ಎಸ್.ಬಿ.ಎ. ನಂ. 37/36, 12ನೇ ಮೇ 1937 ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು.
5. ಸೋಮಶೇಖರ್ ವೇಮಗಲ್, ಬೆಂಗಳೂರಿನಲ್ಲಿ ಮಹಾತ್ಮಗಾಂಧೀ, ಭಾರತೀಯ ವಿದ್ಯಾಭವನ, 2004, ಪುಟ- 90.
6. ಚಂದ್ರಪಾಲ್ ಬಿಪಿನ್, ಮೆಮೋರಿಸ್ ಆಫ್ ಮೈಲೈಫ್ ಆಂಡ್ ಟೈಮ್, 1932, ಪುಟ-309
7. ಎಸ್.ಬಿ.ಎ. ನಂ. 23/43, 5ನೇ ಜೂನ್ 1943, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಡಾ॥ ಬಿ.ಎನ್.ಸುಮಿತ್ರಬಾಯಿ, ಕಲ್ಯಾಣ ಸರಸ್ವತಿ, ಕರ್ನಾಟಕ ಲೇಖಕೀಯರ ಸಂಘ-1992, ಪುಟ-14
9. ಮೈಸೂರು ಸ್ಟಾರ್ ಪತ್ರಿಕೆ 25ನೇ ಭಾನುವಾರ ಮೇ 1915. ಬಸವ ಸಮಿತಿ, ಬೆಂಗಳೂರು.
10. ವೃತ್ತಾಂತ ಪತ್ರಿಕೆ 8ನೇ ಜೂನ್ 1916. ಗೋಖಲೆ ಅಧ್ಯಯನ ಕೇಂದ್ರ ಬೆಂಗಳೂರು.
11. ---ಅದೇ--- 29ನೇ ಮಾರ್ಚ್ 1917.
12. ಎಸ್.ಬಿ.ಎ. ನಂ, 29/42, 18ನೇ ಜುಲೈ 1942 ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು.
13. ಎಸ್.ಬಿ.ಎ. ನಂ, 42/44, 14ನೇ ಅಕ್ಟೋಬರ್ 1944 ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು.
14. ಎಸ್.ಬಿ.ಎ. ನಂ, 13/45, 31ನೇ ಮಾರ್ಚ್ 1945 ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು.
15. ವಿಶ್ವ ಕರ್ನಾಟಕ ರಾಷ್ಟ್ರೀಯ ವಾರ ಪತ್ರಿಕೆ 25ನೇ ಮಾರ್ಚ್ 1939. ಗೋಖಲೆ ಅಧ್ಯಯನ ಕೇಂದ್ರ ಬೆಂಗಳೂರು.
16. ಎಸ್.ಬಿ.ಎ. ನಂ. 50/43, 11ನೇ ನವೆಂಬರ್, 1943, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು.

49. ಬೆಂಗಳೂರಿನ ಉತ್ಸವಗಳು, ಜಾತ್ರೆಗಳು ಮತ್ತು ಪರಿಷೆಗಳು

ಡಾ. ಎಚ್. ಜಯಮ್ಮ ಕರಿಯಣ್ಣ

ಜನಜೀವನದ ಬದುಕಿನಲ್ಲಿ ಹಬ್ಬಗಳು ದೇವರ ಉತ್ಸವಗಳು, ಜಾತ್ರೆಗಳು, ಪರಿಷೆಗಳು ಮುಂತಾದವು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ನಡೆದುಬರುತ್ತಿವೆ. ಆಯಾ ಪ್ರದೇಶಗಳಲ್ಲಿ ನಡೆಯುವ ಧಾರ್ಮಿಕ ಸಂಬಂಧದ ಆಚರಣೆಗಳು ಮತ್ತು ನೆಂಟರಿಷ್ಟರು ಮತ್ತು ಸ್ನೇಹಿತರು ಒಂದು ಕಡೆ ಭೇಟಿಯಾಗಿ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಳ್ಳುವುದಕ್ಕೆ ಅವಕಾಶವನ್ನು ಒದಗಿಸಿಕೊಡುತ್ತವೆ. ಹಬ್ಬ, ಜಾತ್ರೆ ಮತ್ತು ಪರಿಷೆಗಳು ಬಹು ಮುಖ್ಯ ಪಾತ್ರ ವಹಿಸುತ್ತಾ ಬಂದಿವೆ. ಅಲ್ಲದೆ ಇದು ಮನುಷ್ಯನ ಬದುಕಿನಲ್ಲಿ ನೆಮ್ಮದಿಯನ್ನು ಕಂಡುಕೊಳ್ಳುವ ತಳಹದಿಯೂ ಹೌದು. ಹಿಂದೆ ಸಣ್ಣ ಪ್ರಮಾಣದಲ್ಲಿ ಕೌಟುಂಬಿಕ ಆಚರಣೆಯಾಗಿ ಪ್ರಾರಂಭವಾದ ಈ ಆಚರಣೆಗಳು ಆರ್ಥಿಕ ದೃಢತೆಯ ಜೊತೆಗೆ ಜನಸಂಖ್ಯೆಯ ಬಾಹುಳ್ಯವು ಕಾರಣವಾಗಿ ಇಂದು ಸಾಮೂಹಿಕ ಕಾರ್ಯಕ್ರಮಗಳಾಗಿ ಅದ್ದೂರಿಯಾಗಿ ನಡೆದು ಬರುತ್ತಿವೆ.

ಬೆಂಗಳೂರು ಮೊದಲು ಸಣ್ಣ ಪುಟ್ಟ ಹಳ್ಳಿಗಳಿಂದ ಕೂಡಿತ್ತು. ಆ ಹಳ್ಳಿಗಳನ್ನೆಲ್ಲಾ ತನ್ನ ಒಡಲೊಳಗೆ ಸೇರಿಸಿ ಕೊಂಡು ಮಹಾ ನಗರವಾಗಿದೆ. ಆಗ ಊರುಗಳಲ್ಲಿ, ಹಳ್ಳಿಗಳಲ್ಲಿ ಅಕ್ಕಪಕ್ಕದ ಗ್ರಾಮಗಳ ಜನರನ್ನು ಆಹ್ವಾನಿಸಿ ಜಾತ್ರೆ ಉತ್ಸವಗಳನ್ನು ಆಚರಿಸಲಾಗುತ್ತಿತ್ತು. ಈಗ ಅದೇ ಜಾತ್ರೆ ಉತ್ಸವಗಳು ದೊಡ್ಡ ಪ್ರಮಾಣದಲ್ಲಿ ಮೂರುದಿವಸ, ಐದುದಿವಸ, ಒಂಬತ್ತು ದಿವಸಗಳಂತೆ ನಡೆಯುವುದರ ಜೊತೆಗೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಅದ್ದೂರಿಯಾಗಿ ನಡೆಯುವಂತೆ ಆಗಿದೆ. ಕನ್ನಡಿಗರ ಬದುಕಿನಲ್ಲಿ ಈ ಜಾತ್ರೆ, ಪರಿಷೆ, ಉತ್ಸವ, ತೇರು, ರಥೋತ್ಸವ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿ ಬೆರೆತು ಹೋಗಿವೆ.

ಅತ್ತಿಗುಪ್ಪೆಯ ಶ್ರೀಲಕ್ಷ್ಮೀನರಸಿಂಹಸ್ವಾಮಿ ಬ್ರಹ್ಮರಥೋತ್ಸವ

ವಿಜಯನಗರ 2ನೆಯ ಹಂತದಲ್ಲಿ ಅತ್ತಿಗುಪ್ಪೆ ಗ್ರಾಮವಿದೆ. ಅದು ಈಗಲೂ ಗ್ರಾಮತಾಣ್ಯವಾಗಿಯೇ ಉಳಿದಿದೆ. ಇಲ್ಲಿ ಪ್ರಾಚೀನವಾದ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯ ದೇವಾಲಯವಿದೆ. ಇದು ಏಳು ಊರುಗಳಿಗೆ ಸೇರಿದ ದೇವಾಲಯ. ಇದನ್ನು ಇತ್ತೀಚೆಗೆ ಸ್ಥಳಿಯರು ಜೀರ್ಣೋದ್ಧಾರ ಮಾಡಿಸಿದ್ದಾರೆ. ಶ್ರೀಲಕ್ಷ್ಮೀನರಸಿಂಹಸ್ವಾಮಿಗೆ ಪಾಂಚರಾತ್ರಾಗಮೋಕ್ತ ರೀತಿಯಲ್ಲಿ ಪೂಜೆಗಳು ನಡೆಯುತ್ತವೆ. ಹೋಳಿ ಹುಣ್ಣಿಮೆಯಲ್ಲಿ ಹುಣ್ಣಿಮೆ ದಿನವೂ ಸೇರಿದಂತೆ ಹತ್ತು ದಿನಗಳು ವಿವಿಧ ರೀತಿಯ ರಥೋತ್ಸವಗಳು ನಡೆಯುತ್ತವೆ. ಹುಣ್ಣಿಮೆಯ ಹಿಂದಿನ ದಿನ ಸ್ವಾಮಿಯ ಬ್ರಹ್ಮರಥೋತ್ಸವ ನಡೆಯುತ್ತದೆ. ಈ ಹಬ್ಬವನ್ನು ಸ್ವಾಗತಿಸಲು ಮತ್ತು ಆಚರಿಸಲು ಊರಿನ ಜನತೆ ತಮ್ಮ ತಮ್ಮ ಮನೆಗಳಿಗೆ ಸುಣ್ಣ ಬಣ್ಣ ಸಾರಣೆ ಕಾರಣೆ ಮಾಡಿಸುವ ತಯಾರಿಯನ್ನು ತಿಂಗಳ ಮೊದಲೇ ನಡೆಸು ತ್ತಾರೆ. ತಮ್ಮ ಮೂಲಕ ಹೇಳಿಕೆ (ಸಾರುತ್ತಾರೆ) ನೀಡುತ್ತಾರೆ. ಮೊದಲ ದಿನ ದೇವರಿಗೆ ವಿಶೇಷ ಅಭಿಷೇಕ ಪೂಜೆ. ಸಂಜೆ ಜಾತ್ರೆಗೆ ಅಂಕುರಾರ್ಪಣೆ ಮಾಡಿ ಧ್ವಜಾರೋಹಣದ ನಂತರ ಶೇಷವಾಹನೋತ್ಸವ ನಡೆಯುತ್ತದೆ. ಇದೇ ರೀತಿ ಪ್ರತಿದಿನವೂ ವಿವಿಧ ಪೂಜಾ ಕೈಂಕರ್ಯಗಳ ಜೊತೆಗೆ ಹನುಮಂತ ವಾಹನೋತ್ಸವ, ಗರುಡೋತ್ಸವ ಮೊದಲಾದ ಉತ್ಸವಗಳು ನಡೆಯುತ್ತವೆ. ಹುಣ್ಣಿಮೆಗೆ ಮೂರು ದಿನ ಮೊದಲು ಬೆಳಗ್ಗೆ ದೇವರ ಕಾಶೀ ಯಾತ್ರೆ

ಉತ್ಸವ, ಧಾರೆಮಂಟಪದ ಸೇವೆಯಲ್ಲಿ ಶ್ರೀಲಕ್ಷ್ಮೀದೇವಿಗೆ ಮತ್ತು ಸ್ವಾಮಿಗೆ ಕಲ್ಯಾಣೋತ್ಸವ ನಡೆಯುತ್ತದೆ. ರಾತ್ರಿ ಶಯನೋತ್ಸವ ನಡೆಯುತ್ತದೆ. ಮರುದಿನ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯ ಬ್ರಹ್ಮರಥೋತ್ಸವ. ತೇರಿನ ಮೆರವಣಿಗೆ ಊರಿನ ಬೀದಿ ಬೀದಿಗಳಲ್ಲಿ ನಡೆಯುತ್ತದೆ. ಅಖಂಡ ದೀಪೋತ್ಸವ, ಹೂವಿನ ಪಲ್ಲಕ್ಕಿ ಉತ್ಸವ ನಂತರ ಕರಿಯಣ್ಣ ಮತ್ತು ಕೆಂಚಣ್ಣರ ಹಲಗೆಗಳನ್ನು (ಮುಖವಾಡಗಳು) ಧರಿಸಿದ ಯುವಕರಿಬ್ಬರು ಮಣೆ ಸೇವೆಯಲ್ಲಿ ಪಾಲುಗೊಳ್ಳುತ್ತಾರೆ. ಅದೇ ದಿನ ರಾತ್ರಿ ಊರಿನ ಮಹಿಳೆಯರು ಹೆಣ್ಣುಮಕ್ಕಳು ಅಲಂಕರಿಸಿಕೊಂಡು ತಂಬಿಟ್ಟಿನ ಆರತಿಯನ್ನು ಮೆರವಣಿಗೆಯಲ್ಲಿ ತಂದು ದೇವರಿಗೆ ಒಪ್ಪಿಸುತ್ತಾರೆ. ಹರಕೆ ಹೊತ್ತ ಕೆಲವರು ಬಾಯಿಗೆ ಬೀಗ ಚುಚ್ಚಿಸಿಕೊಳ್ಳುತ್ತಾರೆ. ಮರುದಿನ ಮುಂಜಾನೆ ಸುಮಾರು ಐದು ಗಂಟೆಯೊಳಗೆ ದೇವಾಲಯಕ್ಕೆ ಮಡಿಯಲ್ಲಿ ಬಂದ ವ್ಯಕ್ತಿ ಐದು ದಿನಗಳು ಉಪವಾಸವಿದ್ದು ದೇವಾಲಯದ ಮುಂದಿರುವ ಗರುಡಗಂಬದ ಮೇಲೇರಿ ಅಲ್ಲಿ ನೆರೆದ ನೂರಾರು ಜನ ಭಕ್ತರಿಗೆ, ಗ್ರಾಮಕ್ಕೆ ಅಂದರೆ ಗ್ರಾಮವಾಸಿಗಳಿಗೆ ಮತ್ತು ಬಾಲಹುಟ್ಟಿರುವುದಕ್ಕೆ (ಪ್ರಾಣಿಗಳಿಗೆ) ಒಳಿತು ಕೆಡಕುಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತಾನೆ. ಈತ ದೇವಾಲಯಕ್ಕೆ ಸಂಬಂಧಿಸಿದ ದಾಸಪ್ಪನ ಕುಟುಂಬಕ್ಕೆ ಸೇರಿದ ವ್ಯಕ್ತಿ. ಭವಿಷ್ಯ ಹೇಳಿದ ನಂತರ ಪುನಃ ಸ್ನಾನ ಪೂಜೆ ನೆರವೇರಿಸುತ್ತಾನೆ. ಅದೇ ದಿನ ದೇವಾಲಯದಲ್ಲಿ ಭಕ್ತರಿಗೆ ಮತ್ತು ಊರ ಜನರಿಗೆಲ್ಲಾ ಅನ್ನಸಂತರ್ಪಣೆ ನಡೆಯುತ್ತದೆ. ಈ ಜಾತ್ರೆಗೆ ಏಳು ಊರಿನ ಭಕ್ತರಲ್ಲದೆ ಬೇರೆ ಸ್ಥಳಗಳಲ್ಲಿ ನೆಲಸಿರುವ ವಂಶಸ್ಥರು ಬಂದು ಸೇರುತ್ತಾರೆ. ಈ ಒಂಬತ್ತು ದಿನಗಳು ಒಂದಲ್ಲ ಒಂದು ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಜೊತೆಗೆ ಕೀಲುಕುದುರೆ ಮತ್ತಿತರ ಪ್ರದರ್ಶನಗಳು ನಡೆಯುತ್ತವೆ. ನವರಾತ್ರಿಯಲ್ಲಿ ವಿಜಯದಶಮಿಯಂದು ಬನ್ನಿ ಮರದ ಪೂಜೆ ನೆರವೇರಿಸಲು ಉತ್ಸವ ನಡೆಯುತ್ತದೆ. ಜಾತ್ರೆಗೆ ಎಲ್ಲಾ ತರಹದ ವ್ಯಾಪಾರಿಗಳು ಬಂದಿರುತ್ತಾರೆ. ಇದು ಊರ ಹಬ್ಬದಂತೆ ಕಂಡರೂ ಜಾತ್ರೆ ಮತ್ತು ರಥೋತ್ಸವಗಳು ಬಹಳ ಅದ್ದೂರಿಯಾಗಿ ನಡೆಯುತ್ತವೆ.

ಕಾಮನ ಹುಣ್ಣಿಮೆಯು ಪೌರಾಣಿಕ ಅಂಶಗಳಿಂದ ಕೂಡಿದೆ. ವಿಷ್ಣು ಪುರಾಣ, ಲಿಂಗ ಪುರಾಣಗಳ ಪ್ರಕಾರ ಪರಮೇಶ್ವರನ ಉಗ್ರ ತಪಸ್ಸಿಗೆ ಭಂಗ ತಂದ ಮನ್ಮಥ ಶಿವನ ಉರಿಗಣ್ಣಿಗೆ ಸಿಕ್ಕಿ ಭಸ್ಮವಾದ. ಮನ್ಮಥನ ಪತ್ನಿ ರತಿಯ ಪ್ರಾರ್ಥನೆಗೆ ಶಿವ ಕನಿಕರಿಸಿ ಕಾಮನನ್ನು ಅನಂಗನಾಗಿ ಬಾಳುವಂತೆ ಅನುಗ್ರಹಿಸಿದ. ಈ ಕಥಾನಕದ ಕಲ್ಪನೆಯಂತೆ ರತಿ ಮನ್ಮಥರನ್ನು ಪೂಜಿಸಿ ಹಾಡಿ ಕುಣಿದು ಅನಂತರ ಕಾಮನನ್ನು ಸುಡುವ ಸಂಪ್ರದಾಯ ಕರ್ನಾಟಕದಲ್ಲಿದೆ. ಮರುದಿನ ಓಕುಳಿಯ ಆಟವಾಡಿ ಹೂರಣ ಹೋಳಿಗೆ ತಿಂದು ಹಬ್ಬ ಆಚರಿಸುವ ಪದ್ಧತಿ ಉತ್ತರ ಕರ್ನಾಟಕದಲ್ಲಿದೆ. ಅಲ್ಲದೆ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯ ಜಯಂತಿಯಂದು ಅಡ್ಡಪಲ್ಲಕ್ಕಿ ರಥೋತ್ಸವ ಅದ್ದೂರಿಯಾಗಿ ನಡೆಯುತ್ತದೆ.

ನಮ್ಮ ನಾಡಿನಲ್ಲಿ ನಡೆಯುವ ಎಲ್ಲ ಜಾತ್ರೆಗಳ ಸ್ವರೂಪ ಮತ್ತು ಅವುಗಳ ಹಿನ್ನೆಲೆ ಒಂದೇ ರೀತಿಯಲ್ಲಿರುವುದು ಕಂಡುಬರುತ್ತದೆ. ಶಿಷ್ಟ ದೇವರುಗಳ ಜಾತ್ರೆಗಳಿಗಿಂತ ಗ್ರಾಮೀಣರು ನಡೆಸುವ ಜಾತ್ರೆಗಳು ಭಿನ್ನವಾಗಿರುತ್ತವೆ. ಶಿಷ್ಟ ದೇವರ ಜಾತ್ರೆಗಳಿಗೆ ಪೌರಾಣಿಕ ಹಿನ್ನೆಲೆಯಲ್ಲಿ ತಿಥಿ, ವಾರ, ನಕ್ಷತ್ರಗಳನ್ನು ಅವಲಂಬಿಸಿ ಪೂಜಾ ಕಾರ್ಯಗಳು ಶಾಸ್ತ್ರಬದ್ಧವಾಗಿ ನಡೆಯುತ್ತವೆ. ಅಲ್ಲದೆ ಯಾವುದೇ ಒಂದು ಜಾತಿಗೆ ಸಂಬಂಧಿಸಿದಂತೆ ಜಾತ್ರೆ ನಡೆಯುತ್ತಿದ್ದರೂ ಎಲ್ಲ ವರ್ಗದವರೂ ಭಾಗವಹಿಸಿ ಅದು ತಮ್ಮ ದೈವವೇ ಎಂಬ ರೀತಿಯಲ್ಲಿ ಭಾವಿಸಿ ಆಚರಿಸುತ್ತಾರೆ. ಇದರಿಂದ ಜನರಲ್ಲಿ ಭಾವನಾತ್ಮಕ ಏಕತೆ ಇರುತ್ತದೆ.

ಜಾತ್ರೆಗೆ ಆರ್ಥಿಕವಾಗಿ, ಐತಿಹಾಸಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಹಲವು ಮುಖಗಳಿವೆ. ಜಾತ್ರೆಯ ನೆಪದಲ್ಲಿ ನೆಂಟರಿಷ್ಟರೆಲ್ಲಾ ಬಂದು ಸೇರುತ್ತಾರೆ. ವ್ಯಾಪಾರಿಗಳಿಗೂ ಇದೊಂದು ಒಳ್ಳೆ ಅವಕಾಶ. ಮೊದಲು ಆಯಾ ಸ್ಥಳಕ್ಕೆ ಹೊಂದಿಕೊಂಡಂತಹ ಪದಾರ್ಥಗಳು ಮಾರಾಟಕ್ಕೆ ಸೀಮಿತವಾಗಿದ್ದ

ಜಾತ್ರೆಯಲ್ಲಿ ಈಗ ಅಂಗಡಿ ಸಾಲುಗಳಲ್ಲಿ ಪಾತ್ರೆ, ಪ್ಲಾಸ್ಟಿಕ್, ಬಟ್ಟೆ ಮುಂತಾದ ಹೂವು, ಹಣ್ಣು, ಕಾಯಿ ಅಂಗಡಿಗಳಲ್ಲದೆ, ಮನರಂಜನೆ ಒದಗಿಸುವವರೆಲ್ಲಾ, ಕೋತಿ ಕುಣಿಸುವ, ಕರಡಿ ಆಡಿಸುವ ದೊಡ್ಡರಾಟೆ ತಿರುಗಿಸುವವರು ಮುಂತಾದವರೆಲ್ಲಾ ಬಂದಿರುತ್ತಾರೆ. ಬೋಂಡ, ಬಜ್ಜಿ, ಪಾನಿಪೂರಿ ಇತ್ಯಾದಿ ಸಣ್ಣಪುಟ್ಟ ಅಂಗಡಿಗಳು ಠಿಕಾಣಿ ಹೂಡಿರುತ್ತವೆ.

ಶ್ರೀಶನಿದೇವರ ಅಡ್ಡಪಲ್ಲಕ್ಕಿ ರಥೋತ್ಸವ

ವಿಜಯನಗರದಿಂದ ಮೈಸೂರು ರಸ್ತೆಗೆ ಸೇರುವ ಮುಖ್ಯ ರಸ್ತೆಯ ಬಲಭಾಗದಲ್ಲಿರುವ ದೀವಟಿಗೆರಾಮನಹಳ್ಳಿ ಅಥವಾ ದೀವಟ್ರಾಮನಹಳ್ಳಿ ಎಂದು ಕರೆಯಲಾಗುತ್ತಿದ್ದ ಹಳ್ಳಿ, ಈಗ ದೀಪಾಂಜಲಿ ನಗರವಾಗಿದೆ. ದೀಪಾಂಜಲಿ ಅಡ್ಡಪಲ್ಲಕ್ಕಿಯಲ್ಲಿರಿಸಿ ರಥೋತ್ಸವ ನಡೆಯುತ್ತದೆ. ಇಡೀ ದಿನ ಸ್ವಾಮಿ ಸನ್ನಿಧಿಗೆ ಭಕ್ತರು ಬಂದು ವಿಶೇಷ ಪೂಜೆ ಪುನಸ್ಕಾರ ಸಲ್ಲಿಸುತ್ತಾರೆ. ಮರುದಿನ ಮುಂಜಾನೆ ದೇವಸ್ಥಾನದಲ್ಲಿ ಅನ್ನಸಂತರ್ಪಣೆ ನಡೆಯುತ್ತದೆ.

ಶ್ರೀಗಾಳಿ ಆಂಜನೇಯಸ್ವಾಮಿ ರಥೋತ್ಸವ

ಮೈಸೂರು ರಸ್ತೆಯಲ್ಲಿರುವ ಬಾಪೂಜಿ ನಗರದಲ್ಲಿ ಶ್ರೀಗಾಳಿ ಆಂಜನೇಯ ಸ್ವಾಮಿಯ ಪ್ರಸಿದ್ಧ ದೇವಾಲಯವಿದೆ. ಅದೇ ಆವರಣದಲ್ಲಿ ಶ್ರೀರಾಮದೇವರ ಮತ್ತು ಶ್ರೀನಿವಾಸದೇವರ ಗುಡಿಗಳು ಇವೆ. ಇಲ್ಲಿ ಅಮಾವಾಸ್ಯೆಯ ದಿನದಂದು ಶ್ರೀಗಾಳಿ ಆಂಜನೇಯಸ್ವಾಮಿ ಸನ್ನಿಧಿಯಲ್ಲಿ ಪೂಜೆ ಮಾಡಿಸಿ, ಮಕ್ಕಳಿಗೆ ಯಂತ್ರ ಕಟ್ಟಿಸಿ ಮಂತ್ರಿಸಿದ ನಿಂಬೆಹಣ್ಣು ಪಡೆಯಲು ಭಕ್ತರು ಬೆಳಗ್ಗೆಯಿಂದಲೇ ಸರತಿಯ ಸಾಲಿನಲ್ಲಿ ನಿಲ್ಲುತ್ತಾರೆ. ಮಂಗಳವಾರ ಮತ್ತು ಭಾನುವಾರಗಳಂದು ಇದೇ ರೀತಿ ಜನಸಂದಣಿ ಇರುತ್ತದೆ. ಇಲ್ಲಿ ಮುಖ್ಯವಾಗಿ ಶ್ರೀರಾಮನವಮಿಯಂದು ಮತ್ತು ಹನುಮಜಯಂತಿಯಂದು ವಿಶೇಷ ಪೂಜೆ ನಡೆಯುತ್ತದೆ. ಆ ಎರಡು ದಿನಗಳು ಸ್ವಾಮಿಯ ರಥೋತ್ಸವಗಳು ಜರುಗುತ್ತವೆ. ಸಾವಿರಾರು ಭಕ್ತರಿಂದ ತುಂಬಿದ ರಸ್ತೆಯಲ್ಲಿ ಅಂದು ವಾಹನಗಳು ಸಂಚರಿಸದಂತೆ ನಿರ್ಬಂಧವಿರುತ್ತದೆ. ಆ ದಿನಗಳಲ್ಲಿ ರಸ್ತೆಯ ಉದ್ದಕ್ಕೂ ಅನೇಕ ಕಡೆ ನೀರುಮಜ್ಜಿಗೆ, ಪಾನಕ, ಕೋಸಂಬರಿ, ಪುಳಿಯೋಗರೆ, ಚಿತ್ರಾನ್ನ ಮೊದಲಾದ ತಿಂಡಿ ತಿನಿಸುಗಳನ್ನು, ತಾತ್ಕಾಲಿಕ ಅರವಂಟಿಗೆಯ ಮೂಲಕ ಭಕ್ತರು ದಾರಿಹೋಕರನ್ನು ಸ್ವಾಗತಿಸಿ ವಿತರಿಸುತ್ತಾರೆ. ಆ ಎರಡೂ ದಿನಗಳು ನಡೆಯುವ ಅದ್ದೂರಿಯ ರಥೋತ್ಸವದ ಜೊತೆಗೆ ಅಂಗಡಿ ಮುಂಗಟ್ಟುಗಳು ಬಂದು ಜಾತ್ರೆಯು ನಡೆಯುತ್ತದೆ.

ದೊಡ್ಡಬಸವಣ್ಣನ ಜಾತ್ರೆ ಅಥವಾ ಕಡಲೆಕಾಯಿ ಪರಿಷೆ

ಹಿಂದೆ ಸುಂಕೇನಹಳ್ಳಿ ಎಂದು ಕರೆಯಲಾಗುತ್ತಿದ್ದ ಹಳ್ಳಿ ಈಗ ಬಸವನಗುಡಿಯಾಗಿದೆ. ಅಲ್ಲಿ ಹಳೆಯ ಕಾಲದ ದೊಡ್ಡ ಬಸವಣ್ಣನ ದೇವಾಲಯವಿದ್ದು ನಿತ್ಯ ಪೂಜಾಕಾರ್ಯಗಳು ನಡೆಯುತ್ತವೆ. ಪ್ರತಿ ಸೋಮವಾರ ವಿಶೇಷ ಪೂಜೆ ನಡೆಯುತ್ತದೆ. ಆದರೆ ಕಾರ್ತಿಕಮಾಸದ ಕಡೆಯ ಸೋಮವಾರ ಮತ್ತು ಮಂಗಳವಾರ ನಡೆಯುವ ಕಡಲೆಕಾಯಿ ಪರಿಷೆಯ ವಿಷಯ ಮಹತ್ವವಾಗಿದೆ. ಆ ಎರಡು ದಿನಗಳಲ್ಲಿ ಬೆಂಗಳೂರಿನ ನಾನಾ ಮೂಲೆಗಳಿಂದ ಜನ ಸಾಗರವೇ ಹರಿದು ಬಂದು ದೊಡ್ಡ ಬಸವಣ್ಣನ ದರ್ಶನ ಮಾಡಿ ಪೂಜೆ ಸಲ್ಲಿಸುತ್ತಾರೆ. ಪರಿಷೆಯಲ್ಲಿ ತಿರುಗಾಡುತ್ತಾ ಕಡಲೆಕಾಯಿಯನ್ನು ತಿಂದು ಸೇರುಗಟ್ಟಲೆ ಕೊಂಡು ಹೋಗುತ್ತಾರೆ. ಅಲ್ಲದೆ ಅದೇ ಆವರಣದಲ್ಲಿರುವ ದೊಡ್ಡ ಗಣಪತಿ, ಈಶ್ವರ, ಮಲ್ಲಿಕಾರ್ಜುನ, ಕಾರಂಜಿ ಆಂಜನೇಯ ದೇವಾಲಯಗಳನ್ನು ಸಂದರ್ಶಿಸುತ್ತಾರೆ. ಜಾತಿ ಮತಗಳ ಭೇದವಿಲ್ಲದೆ ಎಲ್ಲ ಧರ್ಮದವರು ಪರಿಷೆಯಲ್ಲಿ ಭಾಗವಹಿಸುತ್ತಾರೆ. ಪರಿಷೆಯಲ್ಲಿ ಹಲವು

ಜಾತಿಯ ಕಡಲೆಕಾಯಿ ರಾಶಿ ರಾಶಿ ಹಸಿ, ಬಿಸಿ, ಹುರಿದ ಗಡಂಗ್ ಕಡ್ಲೆಕಾಯಿ, ಬೆಲ್ಲ ಮಾರಾಟವಾಗುತ್ತವೆ. ಪರಿಷೆಯಲ್ಲಿ ಅಥವಾ ಈ. ಜಾತ್ರೆಯಲ್ಲಿ ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳು, ತಿಂಡಿ ತಿನಿಸುಗಳ ಅಂಗಡಿಗಳು ಸ್ಥಾಪನೆಯಾಗಿರುತ್ತವೆ. ವರ್ಷಕ್ಕೊಂದು ಸಾರಿ ನಡೆಯುವ ಈ ಜಾತ್ರೆಯಲ್ಲಿ ಅಬಾಲವೃದ್ಧರಾದಿಯಾಗಿ ಕಾಲೇಜು, ಹೈಸ್ಕೂಲು ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಬಡವ ಬಲ್ಲಿದರೆಂಬ ಭೇದವಿಲ್ಲದೆ ಪರಿಷೆಯಲ್ಲಿ ಪಾಲುಗೊಳ್ಳುವುದು ಒಂದು ವಿಶೇಷವಾಗಿದೆ.

ಇಲ್ಲಿ ಕಡಲೆಕಾಯಿ ಪರಿಷೆ ನಡೆಯುವುದಕ್ಕೆ ವಿಶೇಷವಾದ ಕಥೆಯನ್ನು ಹೇಳುತ್ತಾರೆ. ಹಿಂದೆ ಈ ಪ್ರದೇಶವೆಲ್ಲ ಕೃಷಿಭೂಮಿಯಾಗಿದ್ದು ರೈತರು ಇಲ್ಲಿ ವಿಶೇಷವಾಗಿ ಕಡಲೆಕಾಯಿಯನ್ನು ಬೆಳೆಯುತ್ತಿದ್ದರಂತೆ. ರೈತರು ಬೆಳೆದ ಫಸಲು ರಾತ್ರಿ ವೇಳೆಯಲ್ಲಿ ನಾಶವಾಗುತ್ತಿದ್ದುದನ್ನು ಕಂಡು ರೈತರಿಗೆ ದಿಕ್ಕು ತೋಚದಂತಾಯಿತು. ಹೀಗೆ ಕಷ್ಟಪಟ್ಟು ಬೆಳೆದ ಪಸಲು ನಾಶವಾಗುತ್ತಿರುವುದನ್ನು ಕಂಡು ಹಿಡಿಯಲು ರಾತ್ರಿ ಕೆಲವರು ಹೊಲದಲ್ಲಿ ಕಾವಲು ಕುಳಿತರು. ಹೀಗೆ ಕಾವಲು ಕುಳಿತ ಕೆಲವು ರೈತರು ಮಧ್ಯರಾತ್ರಿಯ ಆವೇಳೆಯಲ್ಲಿ ಒಂದು ಬಸವ (ಗೂಳಿ) ಬಂದು ಬೆಳೆದ ಫಸಲನ್ನು ತಿಂದು ಅಲ್ಲಿಯೆ ಹರಿಯುತ್ತಿದ್ದ ವೃಷಭಾವತಿ ನದಿಯಲ್ಲಿ ನೀರು ಕುಡಿದು ಹೋಗುವುದನ್ನು ನೋಡಿದರು. ಮರುದಿನ ಕಾವಲು ಕುಳಿತ ರೈತರಲ್ಲಿ ಒಬ್ಬ ಧೈರ್ಯವಹಿಸಿ ದೊಣ್ಣೆಯಿಂದ ಗೂಳಿಯನ್ನು ಹೊಡೆದು ಓಡಸಲೆಂದು ಅದರ ಹತ್ತಿರ ಹೋಗುತ್ತಿದ್ದಂತೆ ಬಸವ ನಿಂತಲ್ಲಿಯೇ ಕಲ್ಲಾಯಿತಂತೆ. ಇದು ಸಾಮಾನ್ಯ ಬಸವನಲ್ಲವೆಂದು ಭಾವಿಸಿ ಪ್ರಾರ್ಥಿಸಿಕೊಂಡಾಗ ಕಾರ್ತಿಕ ಮಾಸದ ಕಡೆಯ ಸೋಮವಾರ ನನ್ನ ಹೆಸರಿನಲ್ಲಿ ಪೂಜೆಸಲ್ಲಿಸಿ ಪರಿಷೆ ನಡೆಸುವಂತೆ ಅಶರೀರವಾಣಿ ಕೇಳಿಸಿದಂತೆ. ಅನಂತರ ಫಸಲಿಗೆ ಯಾವ ತೊಂದರೆಯೂ ಇಲ್ಲವಾಗಿ ಅಂದಿನಿಂದ ರೈತರು ಪರಿಷೆ ನಡೆಸಿಕೊಂಡು ಬರುತ್ತಿರುವುದಾಗಿ ಹೇಳುತ್ತಾರೆ. ದೇವಾಲಯದಲ್ಲಿರುವ ಬಸವಣ್ಣ ಉದ್ಭವಮೂರ್ತಿ ಎಂಬ ಹೇಳಿಕೆಯೂ ಇದೆ. ಈಚಿನ ಸಂಶೋಧನೆಗಳ ಪ್ರಕಾರ ಇದು ಮಾಗಡಿ ಕೆಂಪೇಗೌಡನ ಕಾಲದ್ದೆಂದು ತಿಳಿದುಬರುತ್ತದೆ.

ಇನ್ನೊಂದು ಐತಿಹ್ಯದಂತೆ ಕಾವಲು ಕಾಯುತ್ತಿದ್ದ ವ್ಯಕ್ತಿ ಫಸಲನ್ನು ತಿನ್ನುತ್ತಿದ್ದ ಬಸವನ ರೌದ್ರ, ರೂಪವನ್ನು ಕಂಡು ಹೆದರಿ ಪ್ರಾರ್ಥನೆ ಮಾಡಿಕೊಂಡು 'ಸ್ವಾಮಿ ನಾವು ಕಷ್ಟಪಟ್ಟು ಬೆಳೆದ ಫಸಲನ್ನು ನಾಶಮಾಡಬೇಡ. ಪ್ರತಿವರ್ಷ ಕಾರ್ತಿಕಮಾಸದಲ್ಲಿ ಕಡೆಯ ಸೋಮವಾರ ನಿನ್ನ ಹೆಸರಿನಲ್ಲಿ ಕಡಲೆಕಾಯಿ ಪರಿಷೆ ಮಾಡುತ್ತೇವೆ ಎಂದು ಬೇಡಿಕೊಂಡನಂತೆ. ಆಗ ಸ್ವಾಮಿ ಇದೇ ರೂಪದಲ್ಲಿ ನಾನು ಇಲ್ಲಿ ನೆಲಸುತ್ತೇನೆ. ನಿಮಗೆ ಒಳ್ಳೆಯದಾಗಲಿ ಎಂದು ಆಶೀರ್ವದಿಸಿದನಂತೆ. ಅಲ್ಲಿ ಕಲ್ಲಾಗಿ ನೆಲೆನಿಂತ ಬಸವಣ್ಣ ಬೃಹದಾಕಾರದಲ್ಲಿ ಬೆಳೆಯುತ್ತಾ ಹೋದ. ಆಗ ಬಸವನ ಬೆಳವಣಿಗೆಯನ್ನು ನಿಲ್ಲಿಸಲು ಅವನ ಬೆನ್ನ ಮೇಲೆ ಗಡಾರಿಯಿಂದ ಹೊಡೆದರಂತೆ. ಅಂದಿನಿಂದ ಬೆಳೆಯುವುದು ನಿಂತಿತು ಎನ್ನುವ ಹೇಳಿಕೆಯಂತೆ ಇಂದಿಗೂ ಬಸವನ ಬೆನ್ನ ಮೇಲೆ ಗಡಾರಿ ಕಾಣುತ್ತದೆ. ಅಲ್ಲದೆ ಅಂದು ಬಾಜಿ ಕಟ್ಟಿ ಮೂಟೆಗಟ್ಟಲೆ ಕಡಲೆಕಾಯಿ ತಿಂದರು ಯಾರಿಗೂ ತೊಂದರೆ ಆಗುವುದಿಲ್ಲವೆಂಬ ಪ್ರತೀತಿ ಇದೆ. (ಬಾಲ್ಯದಲ್ಲಿ ನನ್ನ ಅಜ್ಜಿ ಹೇಳಿದ್ದು).

ಧರ್ಮರಾಯನ ಕರಗ ಅಥವಾ ದ್ರೌಪದಿ ಶಕ್ತ್ಯೋತ್ಸವ

ಕರ್ನಾಟಕದಲ್ಲಿ ಹೊಸಕೋಟೆ, ಕೋಲಾರ, ಅನೇಕಲ್ಲು ಮೊದಲಾದ ಕಡೆಗಳಲ್ಲಿ ಕರಗ ಉತ್ಸವಗಳು ನಡೆಯುತ್ತವೆ. ಬೆಂಗಳೂರಿನ ಧರ್ಮರಾಯನ ಕರಗ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದೆ ಮತ್ತು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಇದು ದ್ರೌಪದಿ ಮೂಲದ, ಕುಂಭ ಪ್ರಾಧಾನ್ಯತೆಯ ದುರ್ಗಾದೇವಿಯ ಕಥೆಯನ್ನು ಹೇಳುತ್ತದೆ. ಇದು ಶಕ್ತಿದೇವತೆಯ ಆರಾಧನೆಯಾಗಿದ್ದು ಸ್ತ್ರೀಶಕ್ತಿಯನ್ನು ಓಲೈಸುವಿಕೆ ಅಥವಾ ಮಾತೃದೇವತೆಯ ಪೂಜೆಯಾಗಿದೆ.

ಅಗ್ನಿದೇವನ ವರಪ್ರಸಾದದಿಂದ ಅಗ್ನಿಯಲ್ಲಿ ಜನಿಸಿದ ದ್ರೌಪದಿಯು ವಹ್ನಿಕುಲ ಕ್ಷತ್ರಿಯರ ಅಥವಾ ತಿಗಳ ಜನಾಂಗದವರ ಮನೆದೇವತೆ, ಈಕೆಯ ಹೆಸರಿನಲ್ಲಿ ಒಂಭತ್ತು ದಿನಗಳು ವಿವಿಧ ಪೂಜಾಕಾರ್ಯಗಳು ನಡೆಯುತ್ತವೆ. ಚೈತ್ರಪೂರ್ಣಿಮೆಗೆ ಒಂಬತ್ತು ದಿನ ಮೊದಲು ಧರ್ಮರಾಯನ ದೇವಸ್ಥಾನದ ಪ್ರಾಂಗಣದ ದೇವ ಮೂಲೆಯಲ್ಲಿ ಧ್ವಜಸ್ತಂಭದ ಸ್ಥಾಪನೆ ಮಾಡುತ್ತಾರೆ. ಆ ನಂತರವೇ ಕರಗದ ಉತ್ಸವಕ್ಕೆ ನಾಂದಿ ಹಾಡಿದಂತೆ, ಧ್ವಜಸ್ತಂಭದ ಬಿದಿರನ್ನು ಮೊದಲೆ ಆಯ್ಕೆ ಮಾಡಿ ಸಿದ್ಧಪಡಿಸಿಟ್ಟಿರುತ್ತಾರೆ. ಅಂದು ಬಿದಿರನ್ನು ಆಯ್ಕೆ ಮಾಡಿಟ್ಟ ಸ್ಥಳದಿಂದ ಪೂಜಾ ಸಾಮಗ್ರಿಗಳ ಜೊತೆಗೆ ಮಂಗಳವಾದ್ಯದ ಮೆರವಣಿಗೆಯಲ್ಲಿ ತರುತ್ತಾರೆ. ಅಂದು ಗೌಡ, ಗಣಾಚಾರಿ, ಘಂಟೆಪೂಜಾರಿ, ಕರಗ ಹೊರುವ ಪೂಜಾರಿ, ವೀರಕುಮಾರರು ಹಾಗೂ ಕರಗಕ್ಕೆ ಸಂಬಂಧಿಸಿದ ಮುಖ್ಯ ವ್ಯಕ್ತಿಗಳೆಲ್ಲಾ ಸೇರಿ ಮಡಿಯಲ್ಲಿ ಧ್ವಜಸ್ತಂಭಕ್ಕೆ ಕಂಕಣ ಕಟ್ಟುವರು. ನಂತರ ಅವರೆಲ್ಲರೂ ತಮ್ಮ ಬಲಗೈಗೆ ಕಂಕಣ ಧರಿಸುತ್ತಾರೆ. ಅಂದಿನಿಂದ ಈ ಜನಾಂಗದ ಪ್ರತಿ ಕುಟುಂಬದ ವ್ಯಕ್ತಿಗಳೆಲ್ಲರೂ ತಮ್ಮ ಮನೆಗಳಲ್ಲಿ ಮಡಿಯಿಂದ ತಯಾರಿಸಿದ ಆಹಾರದ ಹೊರತು ಬೇರೆಲ್ಲಿಯೂ ಆಹಾರವನ್ನು ಸ್ವೀಕರಿಸುವುದಿಲ್ಲ. ಇದು ಮನೆಯಲ್ಲಿರುವ ಎಲ್ಲಾ ವ್ಯಕ್ತಿಗಳಿಗೂ ಅನ್ವಯಿಸುತ್ತದೆ. ಅಲ್ಲದೆ ಹೊಸ ಮಡಕೆ ಅಥವಾ ಹೊಸ ಪಾತ್ರೆಯಲ್ಲಿ ಸಿದ್ಧ ಪಡಿಸಿದ ಆಹಾರವನ್ನು ಬಾಳೆ ಎಲೆಯ ಮೇಲೆ ಬಡಿಸಿಕೊಂಡು ಊಟಮಾಡುತ್ತಾರೆ. ಶುದ್ಧ ಶಾಖಾಹಾರ ಮಾತ್ರ ಉಪಯೋಗಿಸುತ್ತಾರೆ. ಬೀಡಿ, ಸಿಗರೇಟು, ಮದ್ಯ, ಮಾಂಸ ಈ ದಿನಗಳಲ್ಲಿ ನಿಷಿದ್ಧ. ಈ ನಿಯಮಗಳನ್ನು ಪ್ರತಿಯೊಬ್ಬರೂ ಶ್ರದ್ಧಾಭಕ್ತಿಯಿಂದ ಪಾಲಿಸಿಕೊಂಡು ಬರುತ್ತಾರೆ.

ಧ್ವಜಾರೋಹಣದ ದಿವಸ ಕರಗ ಹೊರುವ ವ್ಯಕ್ತಿಯನ್ನು ಆತನ ಮನೆಯಿಂದ ದೇವಸ್ಥಾನಕ್ಕೆ ಕರೆತರುವ ಮೊದಲು ಆತನ ಹೆಂಡತಿಯ ಮಾಂಗಲ್ಯ ಮತ್ತಿತರ ಒಡವೆ ವಸ್ತುಗಳ ಸಹಿತ ಆತನನ್ನು ದೇವಸ್ಥಾನಕ್ಕೆ ಕರೆತರುತ್ತಾರೆ. ಅಂದಿನಿಂದ ಕರಗದ ಸಂಪ್ರದಾಯವೆಲ್ಲಾ ಮುಗಿಯುವವರೆಗೆ ಆತನು ತನ್ನ ಹೆಂಡತಿಯ ಮುಖವನ್ನು ನೋಡುವಂತಿಲ್ಲ. ದೇವಸ್ಥಾನದ ಆವರಣ ಬಿಟ್ಟು ಹೊರಗೆಲ್ಲೂ ಹೋಗುವಂತಿಲ್ಲ. ಆಕೆಯು ಸಹ ಮನೆಬಿಟ್ಟು ಹೊರಗೆಲ್ಲೂ ಹೋಗುವಂತಿಲ್ಲ. ಯಾರೊಡನೆಯೂ ಮಾತಾಡುವಂತಿಲ್ಲ. ಕರಗದ ಆಚರಣೆಯ ಸಂಪ್ರದಾಯವೆಲ್ಲಾ ಮುಗಿದ ಮೇಲೆ ಅವರಿಗೆ ಮತ್ತೆ ಮದುವೆಯ ಶಾಸ್ತ್ರಗಳನ್ನು ಮಾಡುವರು.

ಹಿಂದೆ ಕರಗದಲ್ಲಿ ಪಾಲ್ಗೊಳ್ಳುವ ಎಲ್ಲರೂ ಒಂಬತ್ತು ದಿನಗಳು ಒಂಬತ್ತು ಕೆರೆಗಳಲ್ಲಿ ಮಿಂದು ಬಂದು ಪೂಜೆ ಸಲ್ಲಿಸುತ್ತಿದ್ದರು. ಈಗ ಆ ಕೆರೆಗಳೆಲ್ಲಾ ಬತ್ತಿ ಹೋಗಿ ಸಾಮಾಜಿಕ ಬಳಕೆಗಾಗಿ ಉಪಯೋಗವಾಗುತ್ತಿವೆ. ಆದ್ದರಿಂದ ಪೂಜಾರಿ ಮಾತ್ರ ಬಾವಿಗಳಿರುವ ಒಂಬತ್ತು ದೇವಸ್ಥಾನಗಳಲ್ಲಿ ಸ್ನಾನಮಾಡಿ ಪೂಜೆ ಸಲ್ಲಿಸಿ ದೇವಾಲಯಕ್ಕೆ ಬರುತ್ತಾನೆ. ಕಂಕಣ ಧರಿಸಿದವರೆಲ್ಲರೂ ಆ ಒಂಬತ್ತು ದಿನಗಳು ಬೆಳಗಿನಿಂದ ಉಪವಾಸವಿದ್ದು ರಾತ್ರಿ ದೇವಸ್ಥಾನದಲ್ಲಿ ಪೂಜೆ, ಮಂಗಳಾರತಿಯ ನಂತರ ಅವರವರ ಮನೆಗಳಲ್ಲಿ ಊಟ ಮಾಡುತ್ತಾರೆ.

ಧ್ವಜಾರೋಹಣದ ಆರನೆಯ ದಿನ ದೇವಾಲಯದಲ್ಲಿ ಆರತಿ ಉತ್ಸವ ನಡೆಯುತ್ತದೆ. ಅಂದಿನ ದಿನ ದೇವಾಲಯದ ನಾಲ್ಕು ದಿಕ್ಕಿಗೂ ತ್ರಿಶೂಲಧಾರಿಗಳು ಪೋತರಾಜನ ವಿಗ್ರಹದೊಂದಿಗೆ ಕುಲಬಾಂಧವರ ಮತ್ತು ಸೇವಾರ್ಕರ್ತರ ಮನೆಗಳಿಗೆ ಹೋಗಿ ಪೂಜೆ ಸ್ವೀಕರಿಸಿ ದೇವಾಲಯಕ್ಕೆ ಹಿಂದಿರುಗಿ ಬರುತ್ತಾರೆ. ಇಡೀ ರಾತ್ರಿ ಬೆಳಗಿನ ಜಾವದವರೆಗೆ ಮಕ್ಕಳಿಂದ ವಿವಿಧ ಕ್ರೀಡೆಗಳು ನಡೆಯುತ್ತವೆ.

ಏಳನೆಯ ದಿನ ಅತ್ಯಂತ ಮಹತ್ವದ ದಿನ. ಅಂದು ಹಸಿ ಕರಗ ನಡೆಯುತ್ತದೆ. ಆ ದಿನ ಕೆಂಪಾಂಬುಧಿ ಮುಂತಾದ ಒಂಬತ್ತು ಕೆರೆಗಳಲ್ಲಿ ಪೂಜೆ ಸಲ್ಲಿಸಿ ಮಣ್ಣನ್ನು ಸಂಗ್ರಹಿಸಲು ಘಂಟೆ ಪೂಜಾರಿ, ವೀರಕುಮಾರರು ಮೊದಲಾದವರು ಹೋಗಿ ಮೆರವಣಿಗೆಯಲ್ಲಿ ತರುತ್ತಿದ್ದರು. ಈಗ ಬೆಂಗಳೂರಿನ ಅನೇಕ ಕೆರೆಗಳು ಮುಚ್ಚಿ

ಹೋಗಿರುವುದರಿಂದ ಬೇರೆ ರೀತಿಯಲ್ಲಿ ಸಂಗ್ರಹಿಸಿದ ಮಣ್ಣನ್ನು ತಂದು ಪುರಾತನ ಕೆರೆಗಳಲ್ಲಿ ಒಂದಾದ ಸಂಪಂಗಿಕೆರೆ ಅಂಗಳದಲ್ಲಿ ಸ್ಥಳ ಶುದ್ಧಿ ಮಾಡಿ ಹಸಿ ಕರಗದ ತಯಾರಿ ನಡೆಸುತ್ತಾರೆ. (ಈ ಸ್ಥಳವನ್ನು ಕಣ ಎಂದು ಕರೆಯುತ್ತಾರೆ) ಅಲ್ಲಿ ಕರಗ ಹೊರುವ ವ್ಯಕ್ತಿಗೆ ಮಂಗಳ ದ್ರವ್ಯಗಳಿಂದ ಸ್ನಾನ ಮಾಡಿಸಿ ದೇವಿ ಆರಾಧನೆಗೆ ಕಣದಲ್ಲಿ ಸಜ್ಜು ಮಾಡುತ್ತಾರೆ. ಬಿಳಿಯ ರೇಷ್ಮೆ ಪಂಚೆ/ಪೈಜಾಮ ಧರಿಸಿದ ಮೇಲೆ ಕೆಂಪು/ಕಂದು ಬಣ್ಣದ ವಸ್ತ್ರವನ್ನು ಸೊಂಟಕ್ಕೆ ಬಿಗಿದು ಕಟ್ಟಿ ತಲೆಗೆ ಜರಿ ಅಂಚಿನ ಪೇಟದಿಂದ ಅಲಂಕರಿಸುತ್ತಾರೆ. ಹಣೆಗೆ ಮೂರು ಕೋಲು ನಾಮವಿಡುತ್ತಾರೆ. ಅಲಂಕರಿಸಿದ ಖಡ್ಗಗಳನ್ನು ಹಿಡಿದ ವೀರಕುಮಾರರು ಕರಗ ಹೊರುವ ಪೂಜಾರಿಯನ್ನು ಅರ್ಧಚಂದ್ರಾಕಾರದಲ್ಲಿ ಸುತ್ತುವರಿದು ನಿಲ್ಲುತ್ತಾರೆ. ಅಷ್ಟರಲ್ಲಿ ಕಣದ ಮಂಟಪದಲ್ಲಿ ಕೆಂಪು ಬಣ್ಣದ ವಸ್ತ್ರ ಮತ್ತು ಆಭರಣಗಳಿಂದ ಅಲಂಕೃತವಾದ ಹಸಿಕರಗ ಸ್ಥಾಪಿಸಲಾಗಿರುತ್ತದೆ. (ಇಲ್ಲಿ ತಾಂತ್ರಿಕ ಪೂಜೆಯ ರಹಸ್ಯ ಕಾಪಾಡಿಕೊಳ್ಳಲು ಅದನ್ನು ಗೌಪ್ಯವಾಗಿಟ್ಟಿರುತ್ತಾರೆ) ಮಂತ್ರದಂಡ ಮತ್ತು ಬಾಕುವನ್ನು ಕರಗ ಹೊರುವ ಪೂಜಾರಿಯಿಂದ ಪೂಜೆ ಮಾಡಿಸುತ್ತಾರೆ. ಈ ಸಮಯದಲ್ಲಿ ಘಂಟೆ ಪೂಜಾರಿಗಳು, ಗಣಾಚಾರಿಗಳು, ಗೌಡರು, ಕುಲಪುರೋಹಿತರು ಮೊದಲಾದವರೆಲ್ಲಾ ಸೇರಿ 'ಗೋವಿಂದ ಗೋವಿಂದ' ಎನ್ನುತ್ತಾ ಶ್ರೀಮನ್ನಾರಾಯಣನ ಸ್ಮರಣೆ ಮಾಡುತ್ತಾ ಶಕ್ತಿದೇವತೆಯನ್ನು ಆವಾಹನೆ ಮಾಡುತ್ತಾರೆ. ಖಡ್ಗ ಹಿಡಿದ ವೀರಕುಮಾರರು 'ಗೋವಿಂದೋ ಡಿ ಡಿಕ್ ಡಿ' ಎಂದು ಭಗವಂತನ ಧ್ಯಾನ ಮಾಡುತ್ತಾ ಅಲಗು ಸೇವೆ ಸಲ್ಲಿಸುತ್ತಾರೆ. ಅಷ್ಟರಲ್ಲಿ ಕರಗ ಹೊರುವ ಪೂಜಾರಿ ಹೆಂಡತಿಯ ಮಾಂಗಲ್ಯ ಮತ್ತು ಇತರ ಆಭರಣಗಳನ್ನು ಕೊರಳಲ್ಲಿ ಧರಿಸಿರುತ್ತಾನೆ. ಹಳದಿ ಸೀರೆಯನ್ನುಟ್ಟು ಹೂವಿನ ಜಡೆಗಳಿಂದ ಅಲಂಕರಿಸಿದ ಮೇಲೆ ಆತನ ಮೇಲೆ ಶಕ್ತಿದೇವತೆ ಆವಿರ್ಭವಿಸಿ ಎಡಭಾಗದ ಕಂಕುಳಲ್ಲಿ ಹಸಿಕರಗವು ಅಲಂಕರಿಸುತ್ತದೆ. ಮಂತ್ರದಂಡವನ್ನು ಮತ್ತು ಹರಿತವಾದ ಹೊಳೆಯುವ ಬಾಕುವನ್ನು ಹಿಡಿದು ವೀರಕುಮಾರರ ಬೆಂಗಾವಲಿನಲ್ಲಿ ಸಪ್ತಮಾತೃಕೆಯರಿರುವ ಏಳುಸುತ್ತಿನ ಕೋಟೆಯಲ್ಲಿ ಪೂಜೆ ಸ್ವೀಕರಿಸಿ ದೇವಸ್ಥಾನಕ್ಕೆ ಬಂದು ಮಂಡಿಯೂರಿ ನಿಲ್ಲುತ್ತದೆ. ನಂತರ ದೇವಾಲಯವನ್ನು ಪ್ರದಕ್ಷಿಣೆ ಮಾಡಿ ಭಕ್ತರಿಗೆಲ್ಲಾ ದರ್ಶನ ಕೊಡುತ್ತಾ ಗರ್ಭಗುಡಿಯಲ್ಲಿ ಹಸಿ ಕರಗವನ್ನು ಸ್ಥಾಪಿಸಲಾಗುತ್ತದೆ.

ಎಂಟನೆಯ ದಿನ ರಾತ್ರಿ ಕುಲಸ್ಥ ಮಹಿಳೆಯರು ಮಡಿಯಲ್ಲಿ ಅಕ್ಕಿ ಮತ್ತು ಬೆಲ್ಲದ ಜೊತೆ ಪಾತ್ರೆಯನ್ನು ತಂದಿಟ್ಟುಕೊಂಡು ಪೊಂಗಲು ತಯಾರಿಸಿ ದೇವರಿಗೆ ಪೊಂಗಲುಸೇವೆ ಸಲ್ಲಿಸುತ್ತಾರೆ. ಆ ರಾತ್ರಿ ಮಹಾಭಾರತದ ಆದಿಶಕ್ತಿ ದ್ರೌಪದಿ ದೇವಿಯ ಕಥಾಕಾಲಕ್ಷೇಪ ನಡೆಸುತ್ತಾರೆ. ನಂತರ ಪೊಂಗಲು ಪ್ರಸಾದವನ್ನು ಭಕ್ತರಿಗೆಲ್ಲಾ ವಿತರಿಸುತ್ತಾರೆ.

ಒಂಬತ್ತನೆಯ ದಿನ ಅಂದರೆ ಚೈತ್ರಮಾಸದ ಪೂರ್ಣಿಮೆಯ ದಿವಸ ದೇವಾಲಯದ ಗರ್ಭಗುಡಿಯಲ್ಲಿ ಗಣಾಚಾರಿ, ಘಂಟೆ ಪೂಜಾರಿ, ಕುಲಪುರೋಹಿತರು, ಪೂಜಾರಿಗಳು ಸೇರಿ ಮಂತ್ರದ್ರವ್ಯಗಳಿಂದಲೂ ಮಲ್ಲಿಗೆ ಹೂವುಗಳಿಂದಲೂ ಆದಿಶಕ್ತಿಯನ್ನು ಅಲಂಕರಿಸಿರುತ್ತಾರೆ. ಕರಗವನ್ನು ಹೊರುವ ಪೂಜಾರಿಯು ಮಾಂಗಲ್ಯ ಮತ್ತು ಇತರ ಆಭರಣಗಳನ್ನು ಧರಿಸಿರುತ್ತಾರೆ. ಎಲ್ಲರೂ ವೇದಮಂತ್ರಗಳಿಂದ ಅರ್ಚನೆ ಮಾಡಿ ಶಕ್ತಿಯನ್ನು ಧ್ಯಾನಿಸುತ್ತಾರೆ. ಆಗ ಪೂಜಾರಿಗೆ ಭಕ್ತಿಯು ಆವಿರ್ಭವಿಸಿ ದೇವತಾ ಸಾನ್ನಿಧ್ಯವಾಗುತ್ತದೆ. ಕರಗವು ಪೂಜಾರಿಯ ಶಿರದಲ್ಲಿ ವಿಜೃಂಭಿಸುತ್ತದೆ. ಆ ಕ್ಷಣ ವೇದಘೋಷ, ಗೋವಿಂದ ನಾಮಾವಳಿಯ ಘೋಷಣೆಗಳು ಮುಗಿಲು ಮುಟ್ಟುತ್ತಿರುವಂತೆ ಮಂಡಿಯೂರಿ ಗರ್ಭಗುಡಿಯನ್ನು ಪ್ರದಕ್ಷಿಣೆ ಮಾಡಿ ಒಂದು ಕೈಲಿ ಮಂತ್ರದಂಡ ಮತ್ತೊಂದು ಕೈಲಿ ಕಿರುಗತ್ತಿಯನ್ನು ಹಿಡಿದು ಹೊರಬರುವ ಕರಗವು ಭಕ್ತಾದಿಗಳಿಗೆ ದರ್ಶನ ಕೊಡುತ್ತಿರುವಂತೆಯೇ 'ಗೋವಿಂದ ಗೋವಿಂದ ಡಿಕ್ ಡಿ' ಎನ್ನುವ ವೀರಕುಮಾರರ ಅಲಗುಸೇವೆ ಪ್ರತಿಧ್ವನಿಸುತ್ತದೆ. ಕರಗವು ಅಲ್ಲಿ ಇರುವ ಗಣಪತಿಯ ಗುಡಿಯಲ್ಲಿ ಶ್ರೀಮುತ್ಯಾಲಮ್ಮನ ಗುಡಿಯಲ್ಲಿ ಆರತಿ ಸ್ವೀಕರಿಸಿ ಹೊರಬರುತ್ತದೆ. ಹತ್ತಿರದಲ್ಲಿರುವ ಮಸ್ತಾನಸಾಬ್

ದರ್ಗಾದಲ್ಲಿ ಪೂಜೆ ಸ್ವೀಕರಿಸಿ ಅಲ್ಲಿಂದ ನಗರದ ಪ್ರಮುಖ ಬೀದಿಗಳ ಮೂಲಕ ಭಕ್ತರಿಗೆ ದರ್ಶನ ನೀಡುತ್ತಾ ನಡುವೆ ಸಿಗುವ ಎಲ್ಲಾ ಪುರಾತನ ದೇವಾಲಯಗಳಲ್ಲಿ ಪೂಜೆ ಸ್ವೀಕರಿಸಿ ಸೂರ್ಯೋದಯಕ್ಕೆ ಮುನ್ನ ಕರಗ ಧರ್ಮರಾಯನ ದೇವಾಲಯಕ್ಕೆ ಹಿಂತಿರುಗುತ್ತದೆ.

ಕರಗ ಸಂಚರಿಸುವ ನಗರದ ಹಳೆಯ ರಸ್ತೆಗಳಲ್ಲಿ ಜನರು ಸಂಭ್ರಮ ಮತ್ತು ಕುತೂಹಲದಿಂದ ಕರಗದೇವತೆಯ ದರ್ಶನಕ್ಕಾಗಿ ಕಾದು ನಿಂತಿರುತ್ತಾರೆ. ಕರಗ ಸಂಚರಿಸುವ ನಗರದ ಒಂಬತ್ತು ಬಾಗಿಲುಗಳಲ್ಲಿಯೂ ರಸ್ತೆಯ ಉದ್ದಕ್ಕೂ ಸ್ಥಳೀಯ ಧರ್ಮಕರ್ತರು ಮತ್ತು ಸಂಘ ಸಂಸ್ಥೆಗಳಿಂದ ಅರವಂಟಿಗೆಗಳ ವ್ಯವಸ್ಥೆ ಮಾಡಿರುತ್ತಾರೆ. ಕರಗದ ಉತ್ಸವಕ್ಕಾಗಿ ದೂರ ದೂರದ ಊರುಗಳಿಂದ ಬರುವ ಸಾವಿರಾರು ಭಕ್ತರಿಗೆ, ಪಾನಕ, ನೀರುಮಜ್ಜಿಗೆ, ಕೋಸಂಬರಿಗಳನ್ನು ನೀಡಿ ಸತ್ಕರಿಸುವ ವ್ಯವಸ್ಥೆ ಉಂಟು ಮತ್ತು ಅಲ್ಲಲ್ಲಿ ಅನ್ನಛತ್ರಗಳನ್ನು ಏರ್ಪಡಿಸಿ ಹಸಿದ ಜನರು ಉಂಡು ತೃಪ್ತರಾಗುತ್ತಾರೆ.

ಹುಣ್ಣಿಮೆಯ ಹಿಂದಿನ ರಾತ್ರಿಯಿಂದಲೇ ನಗರ ಪ್ರದೇಶದಲ್ಲಿನ ಸುಮಾರು 108ಕ್ಕಿಂತ ಹೆಚ್ಚಿನ ದೇವಸ್ಥಾನಗಳ ದೇವರ ಉತ್ಸವ ಮೂರ್ತಿಗಳನ್ನು ಪಲ್ಲಕ್ಕಿ, ರಥಗಳಲ್ಲಿ ಅಲಂಕರಿಸಿ ಮೆರವಣಿಗೆಯಲ್ಲಿ ಮಾರ್ಕೆಟ್ ಮತ್ತು ಅವೆನ್ಯೂ ರಸ್ತೆಯಲ್ಲಿ ಬಂದು ಕರಗ ದೇವತೆಯನ್ನು ಸ್ವಾಗತಿಸಲು ಎದುರು ನೋಡುತ್ತಿರುತ್ತವೆ. ಬೆಳಗ್ಗೆ ಶ್ರೀರಂಗಸ್ವಾಮಿ ಗುಡಿಯಿಂದ ಶ್ರೀರಂಗನಾಥನ ಬೆಳ್ಳಿಯ ರಥ ಹೊರಡುತ್ತದೆ. ಮಧ್ಯಾಹ್ನ ಹಲಸೂರಿನಲ್ಲಿ ಶ್ರೀ ಸೋಮೇಶ್ವರನ ರಥೋತ್ಸವ ನಡೆಯುತ್ತದೆ. ಕರಗದ ಜೊತೆಗೆ ಒಂದೇ ಕಡೆಯಲ್ಲಿ ಈ ಎಲ್ಲ ದೇವರುಗಳ ದರ್ಶನವು ಲಭ್ಯವಾಗಿ ಜನ ಭಕ್ತಿಯಿಂದ ಪುಳಕಿತರಾಗುತ್ತಾರೆ. ಇಡೀ ರಾತ್ರಿ ನಗರದ ದೇವಸ್ಥಾನಗಳ ಮತ್ತು ಕಟ್ಟಡಗಳ ಮುಖ್ಯ ಬೀದಿಗಳಲ್ಲಿನ ಕಟ್ಟಡಗಳು ವಿದ್ಯುತ್ ದೀಪಗಳಿಂದ ಅಲಂಕೃತವಾಗಿರುತ್ತವೆ.

ಹೂವಿನ ಕರಗ ನಡೆದ ಮರುದಿನ ಅಂದರೆ ಧ್ವಜಾರೋಹಣವಾದ ಹತ್ತನೆಯ ದಿನ ಸಂಜೆ ದೇವಸ್ಥಾನದ ಆವರಣದಲ್ಲಿ ವಸಂತೋತ್ಸವವನ್ನು ನಡೆಸುವರು. ಅಂದು ರಾತ್ರಿ ಘಂಟೆ ಪೂಜಾರಿಯಿಂದ ಪೋತರಾಜನ ಚರಿತ್ರೆಯ ಪಾರಾಯಣ ನಡೆಯುತ್ತದೆ. ಪಾರಾಯಣದ ನಂತರ ಪೋತರಾಜನ ರೋಷವನ್ನು ಸಾಂತ್ವನಗೊಳಿಸಲು ಒಂದು ಮೇಕೆಯನ್ನು ಕಡಿದು ಸಮರ್ಪಿಸುತ್ತಾರೆ. ನಂತರ ಮಹಾಮಂಗಳಾರತಿ ಮಾಡುತ್ತಾರೆ. ಈ ಸೇವಾಕ್ರಮಕ್ಕೆ 'ಗಾವು' ಸೇವೆ ಎಂದು ಕರೆಯುತ್ತಾರೆ.

ಹನ್ನೊಂದನೆಯ ದಿನ ರಾತ್ರಿ ರಥೋತ್ಸವನ್ನು ನಡೆಸುತ್ತಾರೆ. ಆನಂತರ ಧ್ವಜಸ್ತಂಭಕ್ಕೆ ಪೂಜೆಯನ್ನು ಮಾಡಿ ದೇವಸ್ಥಾನದಲ್ಲಿ ಪುಣ್ಯಾಹ, ಹೋಮಗಳನ್ನು ಮಾಡಿ ಕುಲಸ್ಥರೆಲ್ಲರೂ ಸೇರಿ ಏರಿಸಿದ ಧ್ವಜವನ್ನು ಇಳಿಸುತ್ತಾರೆ. ಅಂದು ಕಂಕಣ ಧರಿಸಿದ್ದವರೆಲ್ಲರೂ ಅದನ್ನು ವಿಸರ್ಜಿಸುವರು. ನಂತರ ಆಡಳಿತ ಮಂಡಳಿಯವರು, ಯಜಮಾನರು, ಗೌಡರು ಎಲ್ಲರೂ ಸೇರಿ ಗಣಾಚಾರಿಗಳನ್ನು, ಘಂಟೆಪೂಜಾರಿಗಳನ್ನು ಮತ್ತು ಪೂಜಾರಿಯವರನ್ನು ಮಂಗಳವಾದ್ಯಗಳೊಂದಿಗೆ ಅವರವರ ಮನೆಗೆ ಬಿಟ್ಟು ಬರುತ್ತಾರೆ. ಇಲ್ಲಿಗೆ ಕರಗದ ಶಕ್ತ್ಯೋತ್ಸವ ಮುಗಿಯುತ್ತದೆ.

ಕರಗದ ಆಚರಣೆಗೆ ಕೆಲವು ಐತಿಹ್ಯಗಳು ಕೇಳಿಬರುತ್ತವೆ, ಅವುಗಳಲ್ಲಿ ಒಂದೆರಡನ್ನು ಇಲ್ಲಿ ತಿಳಿಸಲಾಗಿದೆ. ಅಗ್ನಿಕನ್ಯೆಯಾದ ದ್ರೌಪದಿ ಪಾಂಡವರೊಡನೆ ಸ್ವರ್ಗಾರೋಹಣ ಮಾಡುತ್ತಿರುವಾಗ ಹಿಂದೆ ಉಳಿಯುತ್ತಾಳೆ. ಆಗ ಆಕೆ ದಿಕ್ಕುಗಾಣದೆ ದೇವತೆಗಳನ್ನು ಪ್ರಾರ್ಥಿಸುತ್ತಾಳೆ. ಆಗ ಆಕೆಯ ಸುತ್ತಲೂ ಕತ್ತಿ, ಡಮರು, ತ್ರಿಶೂಲ, ಘಂಟೆಗಳನ್ನು ಹಿಡಿದ ವೀರಕುಮಾರರು ಭೂಮಿಯಿಂದ ಉದ್ಭವಿಸಿ ನೃತ್ಯ ಮಾಡುತ್ತಾರೆ. ಆಗ ಶಕ್ತಿ ದೇವತೆಯಾದ ದ್ರೌಪದಿಯು ವೀರಕುಮಾರರಿಗೆ ನಾಡಿನಲ್ಲಿ ಕರಗ ಉತ್ಸವವನ್ನು ಪ್ರಚಾರಗೊಳಿಸುವಂತೆ ಅನುಗ್ರಹಿಸಿದಳೆಂಬ ಹೇಳಿಕೆ ಇದೆ. ಇನ್ನೊಂದು ಐತಿಹ್ಯದ ಪ್ರಕಾರ ಸ್ವರ್ಗಾರೋಹಣ ಸಂದರ್ಭದಲ್ಲಿ ಹಿಂದೆ ಉಳಿದ ದ್ರೌಪದಿ ಮೂರ್ಛಿತಳಾಗುತ್ತಾಳೆ.

ಎಚ್ಚರವಾದಾಗ ಪಾಂಡವರ್ಯಾರೂ ಕಾಣಬರುವುದಿಲ್ಲ. ಆಗ ಭಯ ಭೀತಳಾಗುತ್ತಾಳೆ. ಆ ಸಮಯದಲ್ಲಿ ತಿಮಿರಾಸುರ ನೆಂಬ ರಾಕ್ಷಸ ಒಂಟಿಯಾಗಿರುವ ದ್ರೌಪದಿಯ ಸೌಂದರ್ಯವನ್ನು ಕಂಡು ಪೀಡಿಸಲಾರಂಭಿಸುತ್ತಾನೆ. ಆಗ ದ್ರೌಪದಿ ಶ್ರೀಕೃಷ್ಣನನ್ನು ಪ್ರಾರ್ಥಿಸುತ್ತಾಳೆ. ಕೃಷ್ಣ ದ್ರೌಪದಿಗೆ ಆ ರಕ್ಕಸನನ್ನು ನಿಗ್ರಹಿಸುವ ಶಕ್ತಿ ಅವಳಿಗಿರುವುದನ್ನು ಜ್ಞಾಪಿಸುತ್ತಾನೆ. ಆಗ ದ್ರೌಪದಿಯು ವಿರಾಟ್ರೂಪವನ್ನು ತಾಳಿ ತಲೆಯಮೇಲೆ ಕುಂಭವನ್ನು ಧರಿಸಿದಳು. ಅದೇ ಇಂದು ಆರಾಧನೆಯಾಗುತ್ತಿರುವ ಕರಗ ಶಕ್ತ್ಯೋತ್ಸವ ಎನ್ನುತ್ತಾರೆ. ಕರಗ ಮೂಲದ ಬಗ್ಗೆ ಅಸ್ಪಷ್ಟತೆ ಇದ್ದರೂ ಈ ಆಚರಣೆಯ ಮೂಲಕ ಆದಿಶಕ್ತಿಯನ್ನು ಆರಾಧಿಸುವ ಸಂಪ್ರದಾಯವೆಂದು ಹೇಳಬಹುದು.

ಮಲ್ಲೇಶ್ವರದ ಗಂಗಮ್ಮದೇವಿ ಕರಗ

ಧರ್ಮರಾಯಸ್ವಾಮಿ ಕರಗದಂತೆಯೇ ಬೆಂಗಳೂರು ನಗರದ ಅನೇಕ ಕಡೆಗಳಲ್ಲಿ ಅಂದರೆ ಕಲಾಸಿಪಾಳ್ಯದ ಧರ್ಮರಾಯ ದ್ರೌಪದಮ್ಮನ ಕರಗ, ಕೆಂಗೇರಿಯ ಎಲ್ಲಮ್ಮದೇವಿ, ಅತ್ತಿಗುಪ್ಪೆಯ ಚೌಡೇಶ್ವರಿದೇವಿ ಹೀಗೆ ಹಲವು ದೇವರುಗಳ ಹೆಸರಿನಲ್ಲಿ ಕರಗ ಉತ್ಸವಗಳು ನಡೆದು ಪ್ರಸಿದ್ಧವಾಗಿವೆ. ಆದರೆ ಬೇರೆ ರೀತಿಯಲ್ಲಿ ಸ್ವಲ್ಪ ಭಿನ್ನವಾಗಿ ನಡೆಯುವ ಮಲ್ಲೇಶ್ವರದ ಗಂಗಮ್ಮನ ಕರಗವು ಧರ್ಮರಾಯಸ್ವಾಮಿ ಕರಗವಾದ ಇಪ್ಪತ್ತು ದಿನಗಳ ಬಳಿಕ ನಡೆಯುತ್ತದೆ. 'ತಮಿಳುನಾಡಿನ ಗುಡಿಯಾತ್ತಂ' ನಿಂದ ಬಂದ ಕಣ್ಣಪ್ಪನಾಯ್ಕರ್ ಎಂಬಾತ 1928ರಲ್ಲಿ ಗಂಗಮ್ಮನ ಕರಗದ ಆಚರಣೆಯನ್ನು ಪ್ರಾರಂಭಿಸಿದ. ಮಣ್ಣಿನಿಂದ ತಯಾರಿಸಿದ ಗಂಗಮ್ಮನ ಮೂರ್ತಿಯನ್ನು ಟಾಟಾ ಸಂಸ್ಥೆಯ ಬಳಿ ಇರುವ ಮಾರಮ್ಮನ ಗುಡಿಯಲ್ಲಿಟ್ಟು ಹೂವಿನಿಂದ ಅಲಂಕರಿಸುವುದೊಂದು ವಿಶೇಷ. ಮರುದಿನ ಸ್ಯಾಂಕಿಟ್ಯಾಂಕಿ ಕೆರೆಯಲ್ಲಿ ದೇವಿಗೆ ಪ್ರಾಣಪ್ರತಿಷ್ಠೆ ಮಾಡಿ ವಾದ್ಯಮೇಳಗಳ ಸಹಿತ ಮೆರವಣಿಗೆಯಲ್ಲಿ ಗಂಗಮ್ಮನ ದೇವಸ್ಥಾನಕ್ಕೆ ತಂದು ಪೂಜಿಸುತ್ತಾರೆ. ಗಂಗಮ್ಮನ ಕರಗದ ಮೆರವಣಿಗೆಗೆ ಕಣ್ಣಪ್ಪನಾಯ್ಕರ್ ತಮಿಳುನಾಡಿನಿಂದ ಎರಡು ವಾರಕ್ಕೆ ಮೊದಲೇ ಪಾಂಬೈ ವಾದ್ಯಮೇಳಗಳನ್ನು ಕರೆಸುತ್ತಿದ್ದನಂತೆ, ಇಂದಿಗೂ ತಮಿಳು ನಾಡಿನಿಂದಲೇ ಪಾಂಬೈ ವಾದ್ಯಮೇಳಗಳು ಬರುತ್ತಿವೆ. ಗಂಗಮ್ಮನ ಕರಗವು ಅಂದಿನಿಂದ ಇಂದಿನವರೆಗೆ ತಪ್ಪದೆ ಪ್ರತಿವರ್ಷ ನಡೆದುಕೊಂಡು ಬರುತ್ತಿದೆ. ಸಾಂಸ್ಕೃತಿಕವಾಗಿ ವಿನೋದಕರ ಆಟಗಳು, ನಂದಿಕೋಲು ಕುಣಿತ, ಪಾಂಬೈ ಆಟ, ಮೆಟ್ಟುಪಾಳ್ಯಂ ಡ್ರಮ್ಸ್, ಕೀಲುಕುದುರೆ ಮೊದಲಾದವು ಈ ಉತ್ಸವದ ಆಕರ್ಷಣೆಯಾಗಿದೆ.

ವಸಂತಪುರದ ವಲ್ಲಭರಾಯಸ್ವಾಮಿ ರಥೋತ್ಸವ

ವಸಂತಪುರದ ವಲ್ಲಭರಾಯಸ್ವಾಮಿ ದೇವಾಲಯವನ್ನು ಒಂದು ಸಾವಿರ ವರ್ಷಗಳ ಹಿಂದೆ ಮಾಂಡವ್ಯ ಋಷಿಗಳು ಸ್ಥಾಪಿಸಿದರೆಂದು ದೇವಾಲಯದ ಮೂಲಗಳು ಹೇಳುತ್ತವೆ. ಗರ್ಭಗುಡಿಯಲ್ಲಿ ಶಂಖ, ಚಕ್ರಧರಿಸಿರುವ, ಅಭಯ ಮತ್ತು ವರದ ಹಸ್ತಗಳಿರುವ ಶ್ರೀನಿವಾಸನ ವಿಗ್ರಹವಿದೆ. ಶ್ರೀದೇವಿ, ಭೂದೇವಿಯರು ಎಡಬಲ ಭಾಗಗಳಲ್ಲಿದ್ದಾರೆ. ಬೆಟ್ಟದಲ್ಲಿ ವಸಂತತೀರ್ಥ, ಶಂಖತೀರ್ಥ, ಚಕ್ರತೀರ್ಥ, ಪಲ್ಲವತೀರ್ಥ ಮತ್ತು ದೇವಿ ತೀರ್ಥಗಳೆಂಬ ಪಂಚ ತೀರ್ಥಗಳಿವೆ. ಕಲ್ಯಾಣಿ ತೀರದಲ್ಲಿ ಗಜೇಂದ್ರ ಮೋಕ್ಷ ಮಂಟಪವಿದೆ. ವಲ್ಲಭರಾಯಸ್ವಾಮಿಯ ದೇವಾಲಯದ ಪಕ್ಕದಲ್ಲಿ ಭವಾನಿ ಶಂಕರ ದೇವಾಲಯವಿದೆ. ಪ್ರದಕ್ಷಿಣಾ ಪಥದ ಒಳಗೋಡೆಯಲ್ಲಿ ಸುಂದರ ಚಿತ್ರಗಳಿವೆ. ಇಲ್ಲಿ ರಾಮನವಮಿ, ವೈಕುಂಠ ಏಕಾದಶಿ, ನವರಾತ್ರಿಗಳಲ್ಲಿ ಹಾಗೂ ಮುಖ್ಯ ಸಂದರ್ಭಗಳಲ್ಲಿ ಉತ್ಸವ ಮತ್ತು ಬ್ರಹ್ಮೋತ್ಸವಗಳು ನಡೆಯುತ್ತವೆ.

ಶ್ರೀಕೋದಂಡರಾಮಸ್ವಾಮಿ ದೇವರ ಬ್ರಹ್ಮರಥೋತ್ಸವ

ಬನ್ನೇರುಘಟ್ಟ ರಸ್ತೆಗೆ ಸೇರಿರುವ ಹುಳಿಮಾವು ಗ್ರಾಮದ ಸೋಮೇಶ್ವರ ದೇವಾಲಯದಲ್ಲಿ ಪ್ರಾಚೀನ ಸೂರ್ಯ, ಭೈರವನ ಶಿಲ್ಪಗಳಿವೆ. ಇದೇ ಹುಳಿಮಾವಿನಲ್ಲಿ ಇರುವ ಗುಹಾಂತರ ದೇವಾಲಯದಲ್ಲಿ ರಾಮಲಿಂಗೇಶ್ವರನನ್ನು ಪ್ರತಿಷ್ಠೆ ಮಾಡಲಾಗಿದೆ. ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆ ಮತ್ತು ಉತ್ಸವಗಳು ನಡೆಯುತ್ತವೆ. ಇಲ್ಲಿ ಶ್ರೀರಮಾನಂದರ ಗದ್ದುಗೆ ಇದೆ. ಅವರು ಜೀವಂತ ಸಮಾಧಿಯಾದ ಕಥೆ ಪ್ರಚಲಿತವಿದೆ. ಶ್ರೀಕೋದಂಡಸ್ವಾಮಿ ದೇವರ ಬ್ರಹ್ಮರಥೋತ್ಸವ ಇಲ್ಲಿ ನಡೆಯುತ್ತದೆ. ರಥೋತ್ಸವಕ್ಕೆ ಮೊದಲು ಮಹಿಳೆಯರು ಪೂರ್ಣಕುಂಭ, ಆರತಿ ತಂದು ಪೂಜೆ ಸಲ್ಲಿಸುತ್ತಾರೆ. ಕತ್ತಲಾಗುತ್ತಿರುವಂತೆ ಶ್ರೀ ಕೋದಂಡರಾಮಸ್ವಾಮಿಯ ಪಲ್ಲಕ್ಕಿ ಬ್ರಹ್ಮರಥೋತ್ಸವ ನಡೆಯುತ್ತದೆ. ಆಗ ಅಲ್ಲಿ ಮುತ್ತುರಾಯ, ಆಂಜನೇಯ, ವಿನಾಯಕ, ಶ್ರೀಕೃಷ್ಣ, ಆಲದಮರ ದೊಡ್ಡಮ್ಮದೇವಿ, ಮಾರಮ್ಮ, ಶಿರಡಿ ಸಾಯಿಬಾಬಾ ಮೊದಲಾದ ದೇವರುಗಳ 40 ಪಲ್ಲಕ್ಕಿಗಳು ಗ್ರಾಮದ ಪ್ರದಕ್ಷಿಣೆಯಲ್ಲಿ ಪಾಲುಗೊಳ್ಳುತ್ತವೆ. ಸುತ್ತುಮುತ್ತಲ ಗ್ರಾಮಸ್ಥರಲ್ಲದೆ ಆಂಧ್ರಪ್ರದೇಶ, ತಮಿಳುನಾಡಿನಿಂದಲೂ ಭಕ್ತರು ಬಂದು ಉತ್ಸವದಲ್ಲಿ ಭಾಗವಹಿಸುತ್ತಾರೆ. ಮೆರವಣಿಗೆಯಲ್ಲಿ ಭಾಗವಹಿಸುವ ಪಲ್ಲಕ್ಕಿ ಉತ್ಸವಗಳು ಸುಂದರವಾಗಿ ಅಲಂಕೃತಗೊಂಡು ಭಕ್ತ ಜನರ ಮನ ಸೂರೆಗೊಳ್ಳುತ್ತವೆ.

ಗವಿಗಂಗಾಧರೇಶ್ವರನ ರಥೋತ್ಸವ

ಗವಿಪುರಂ ಗುಟ್ಟಹಳ್ಳಿಯಲ್ಲಿ ಪ್ರಾಚೀನ ಗವಿಗಂಗಾಧರೇಶ್ವರನ ದೇವಾಲಯವಿದೆ. ಹುಟ್ಟು ಬಂಡೆಯಲ್ಲಿ ರಚಿತವಾಗಿರುವ ದೇವಾಲಯ ಗುಹೆಯ ಒಳಭಾಗದಲ್ಲಿದೆ. ಗವಿಯಂತಿರುವ ಗರ್ಭಗುಡಿಯಲ್ಲಿ ಲಿಂಗವಿದೆ. ಮುಂದೆ ಕಂಬಗಳ ನಡುವೆ ನಂದಿಯ ಶಿಲ್ಪವಿದೆ. ದೇವಾಲಯದ ಆವರಣದಲ್ಲಿ ಸುಮಾರು ಹತ್ತು ಅಡಿ ಎತ್ತರದ ಏಕಶಿಲೆಯ ತ್ರಿಶೂಲ, ಡಮರು, ಸೂರ್ಯಪಾನವಿರುವ ಕಂಬಗಳಿವೆ. ಈ ಗುಹಾಲಯವು ಹಿಂದೆ ಕಾಳಾಮುಖ ಯತಿಗಳ, ನಾಥಪಂಥದ ಯೋಗಿಗಳ ಕೇಂದ್ರವಾಗಿತ್ತೆಂದೂ ಹೇಳಲಾಗುತ್ತದೆ. ಇಲ್ಲಿ ಶಿವರಾತ್ರಿಯಲ್ಲಿ ರಥೋತ್ಸವ ನಡೆಯುತ್ತದೆ. ಮಕರ ಸಂಕ್ರಾಂತಿಯ ದಿವಸ ಸೂರ್ಯನ ಕಿರಣಗಳು ಶಿವಲಿಂಗದ ಮೇಲೆ ಬೀಳುವುದನ್ನು ನೋಡಲು ಸಾವಿರಾರು ಜನ ಸೇರುತ್ತಾರೆ. ಇದು ಕ್ರಿ. ಶ. 10ನೆಯ ಶತಮಾನಕ್ಕಿಂತ ಮೊದಲೆ ನಿರ್ಮಾಣವಾಗಿರುವ ದೇವಾಲಯ.

ಕೋಟೆ ಶ್ರೀಪ್ರಸನ್ನ ವೆಂಕಟರಮಣಸ್ವಾಮಿ ಉತ್ಸವ

ಶಾಸನೋಕ್ತ ಕೋಟೆ ಶ್ರೀವೆಂಕಟರಮಣಸ್ವಾಮಿ ದೇವಾಲಯವನ್ನು ಕ್ರಿ. ಶ. 1681ರಲ್ಲಿ ಕಟ್ಟಿಸಿ ನೂತನವಾಗಿ ವೆಂಕಟೇಶ್ವರಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿದವರು ಮೈಸೂರು ಅರಸರಾದ ದೇವರಾಜ ಒಡೆಯರ ಮಗ ಚಿಕ್ಕದೇವರಾಜ ಒಡೆಯರು. ಕಂಠೀರವ ನರಸರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ಆಳ್ವಿಕೆ ಮಾಡುತ್ತಿರುವಾಗ ತಮ್ಮ ತಂದೆ ಚಿಕ್ಕದೇವರಾಜ ಒಡೆಯರು ಮಾಡಿಸಿದ ವೆಂಕಟೇಶ್ವರಸ್ವಾಮಿಯ ದೀಪಾರಾಧನೆಗೆ ನಾಲ್ಕು ಹಳ್ಳಿಗಳನ್ನು ದಾನವಾಗಿ ನೀಡಿದ್ದನ್ನು ಕ್ರಿ. ಶ. 1705ರ ಶಾಸನ ಉಲ್ಲೇಖಿಸುತ್ತದೆ. ಈ ದೇವಾಲಯದಲ್ಲಿ ವೈಕುಂಠ ಏಕಾದಶಿಯಂದು ವಿಶೇಷ ಪೂಜೆ ಅಲಂಕಾರ ಮತ್ತು ಉತ್ಸವಗಳು ನಡೆಯುತ್ತವೆ. ಸಾವಿರಾರು ಭಕ್ತರು ಅಂದು ಬೆಳಗಿನ ಜಾವ ನಾಲ್ಕು ಗಂಟೆಯಿಂದಲೇ ಸ್ವಾಮಿಯ ದರ್ಶನಕ್ಕೆ ಬರುತ್ತಾರೆ. ಅಂದು ವಿಶೇಷವಾಗಿ ನಿರ್ಮಿಸಿದ ವೈಕುಂಠ ದ್ವಾರದ ಮೂಲಕ ಹೋಗಿ ಸ್ವಾಮಿಯ ದರ್ಶನ ಪಡೆದು ಕೃತಾರ್ಥರಾಗುತ್ತಾರೆ. ಅಲ್ಲದೆ ಜೇಷ್ಠ ಮಾಸದಲ್ಲಿ ದೇವಾಲಯದ ಆವರಣದಲ್ಲಿ 16 ದಿನಗಳೂ ಬೆಳಗ್ಗೆ, ಮಧ್ಯಾಹ್ನ, ಸಂಜೆ ಹಲವು ರೀತಿಯ ಪೂಜಾ ಕಾರ್ಯಗಳು ನಡೆಯುತ್ತವೆ. ಮೊದಲ ದಿನ ಬೆಳಗ್ಗೆ ಸ್ನಪನಸೇವೆ (ಸ್ನಾನ/ಅಭಿಷೇಕ) ಮತ್ತು ದೀಕ್ಷಾವಸ್ತ್ರ ಸಮರ್ಪಣೆ, ಸಂಜೆ

ಅಂಕುರಾರ್ಪಣೆ, ಯಾಗಶಾಲಾರಾಧನೆ ಮತ್ತು ಹೋಮ ನಡೆಯುತ್ತವೆ. ಅಂದಿನಿಂದ ಹದಿನೈದು ದಿನಗಳೂ ಬೆಳಗ್ಗೆ ವಿವಿಧ ಪೂಜೆಗಳು ನಡೆದರೆ ಸಂಜೆ ಅಥವಾ ರಾತ್ರಿ ಹಂಸವಾಹನೋತ್ಸವ, ಚಂದ್ರಮಂಡಲೋತ್ಸವ, ಸೂರ್ಯಮಂಡಲೋತ್ಸವ, ಶೇಷವಾಹನೋತ್ಸವ, ಹನುಮಂತೋತ್ಸವ, ಕಲ್ಯಾಣೋತ್ಸವ, ಘೋಲೋತ್ಸವ, ವೈರಮುಡಿ ಉತ್ಸವ, ಉಯ್ಯಾಲೋತ್ಸವ, ಪುಷ್ಪ ಸುದರ್ಶನೋತ್ಸವ ಮತ್ತು ಶಯನೋತ್ಸವ ನಡೆಯುತ್ತದೆ. ಅಲ್ಲಿ ಮೊದಲು ಶೈವದೇವಾಲಯ ಇತ್ತೆಂದು ತಿಳಿದುಬರುತ್ತದೆ.

ಶ್ರೀ ಸುಬ್ರಹ್ಮಣ್ಯಸ್ವಾಮಿಯ ಬೆಳ್ಳಿ ರಥೋತ್ಸವ

ವಿಶ್ವೇಶ್ವರಪುರದ ಸಜ್ಜನರಾವ್ ವೃತ್ತದಲ್ಲಿರುವ ಶ್ರೀಸುಬ್ರಹ್ಮಣ್ಯಸ್ವಾಮಿ ದೇವಾಲಯವನ್ನು ಸ್ವಾಮಿಯ ಪ್ರೇರಣೆಯಂತೆ ಸಜ್ಜನರಾವ್ ಎಂಬ ಮಹನೀಯರು 1934ರಲ್ಲಿ ಕಟ್ಟಿಸಿದರು. ಶ್ರೀಕೃಷ್ಣ, ದಕ್ಷಿಣಾಮೂರ್ತಿ, ಆಂಜನೇಯ, ಗಣೇಶ, ವಳ್ಳಿದೇವಸೇನ ಸಮೇತ ಶ್ರೀಸುಬ್ರಹ್ಮಣ್ಯಸ್ವಾಮಿಯನ್ನು ಶೃಂಗೇರಿಯ ಜಗದ್ಗುರುಗಳಾಗಿದ್ದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ನೇತೃತ್ವದಲ್ಲಿ ಪ್ರತಿಷ್ಠೆ ಮಾಡಲಾಗಿದೆ. ಮಾರ್ಗಶಿರ ಶುದ್ಧ ಷಷ್ಠಿಯಂದು ಇಪ್ಪತ್ತು ಮೂರು ಅಡಿ ಎತ್ತರವಿರುವ ಬೆಳ್ಳಿ ರಥದಲ್ಲಿ ಶ್ರೀಸುಬ್ರಹ್ಮಣ್ಯಸ್ವಾಮಿಯ ರಥೋತ್ಸವ ನಡೆಯುತ್ತದೆ. ಅಲ್ಲಿ ಜರುಗುವ ಜಾತ್ರೆಯು ಅದ್ದೂರಿಯಾಗಿ ನಡೆದು ಸಾವಿರಾರು ಭಕ್ತರು ಸೇರುತ್ತಾರೆ. ರಥೋತ್ಸವ ನಡೆಯುತ್ತಿರುವಾಗ ಒಂದು ಹಿಡಿ ಉಪ್ಪು ಮತ್ತು ಮೆಣಸಿನ ಕಾಳನ್ನು ರಥದ ಮೇಲೆ ಎರಚಿದರೆ ಕಿವಿ ಸೋರುವಿಕೆ ಮತ್ತು ಚರ್ಮರೋಗ ನಿವಾರಣೆ ಆಗುವುದೆಂಬ ಪ್ರತೀತಿ ಇದೆ. ಕೆಲವರು ಬಾಳೆಹಣ್ಣು ಮತ್ತಿತರ ಪದಾರ್ಥಗಳನ್ನು ಎಸೆಯುತ್ತಾರೆ. ಇಲ್ಲಿ ನಡೆಯುವ ಜಾತ್ರೆಯಲ್ಲಿ ಹಲವು ವಿಧವಾದ ಅಂಗಡಿ ಮುಂಗಟ್ಟುಗಳು ತೆರೆದು ವ್ಯಾಪಾರದ ಜೋರು ನಡೆಯುತ್ತದೆ.

ವಾಸವಿದೇವಿಯ (ಕನ್ನಿಕಾ ಪರಮೇಶ್ವರಿ) ಬೆಳ್ಳಿ ರಥೋತ್ಸವ

ಇದೇ ವಿಶ್ವೇಶ್ವರಪುರದಲ್ಲಿ ವಾಸವಿದೇವಿಯ ದೇವಾಲಯವಿದೆ. ಈ ದೇವಿ ಆರ್ಯವೈಶ್ಯರ ಆರಾಧ್ಯದೇವತೆ. ವೈಶಾಖಮಾಸದ ದಶಮಿಯಲ್ಲಿ ಮೂರು ದಿವಸ ಪೂಜೆ ಪುನಸ್ಕಾರಗಳಿಂದ ದೇವಿಯನ್ನು ಆರಾಧಿಸುತ್ತಾರೆ. ಈ ದೇವಾಲಯದ ಗರ್ಭಗೃಹದಲ್ಲಿ ಸುಮಾರು ಮೂಡು ಅಡಿ ಎತ್ತರದ ಅಮೃತಶಿಲೆಯಲ್ಲಿ ದೇವಿಯ ಶಿಲ್ಪವಿದೆ. ಈ ದೇವಿಯನ್ನು ವಾಸವಿ ಎಂದೂ ಕನ್ನಿಕಾ ಪರಮೇಶ್ವರಿ ಎಂದೂ ಕರೆಯುತ್ತಾರೆ. ವಾಸವಿ ಜಯಂತಿಯಂದು ಬೆಳ್ಳಿ ರಥೋತ್ಸವ ನಡೆಯುತ್ತದೆ. ಆರ್ಯವೈಶ್ಯ ಜನಾಂಗದವರು ಮಾತ್ರವಲ್ಲದೆ ಅನೇಕ ಮತಸ್ಥರು ರಥೋತ್ಸವದಲ್ಲಿ ಭಾಗವಹಿಸುತ್ತಾರೆ.

ಹಲಸೂರಿನ ಶ್ರೀಸೋಮೇಶ್ವರನ ರಥೋತ್ಸವ

ಹಲಸೂರಿನಲ್ಲಿ ಶ್ರೀಸೋಮೇಶ್ವರ ದೇವಾಲಯವು ಸುಮಾರು ಹತ್ತನೇ ಶತಮಾನಕ್ಕಿಂತ ಹಿಂದಿನದು. ಗರ್ಭಗೃಹದಲ್ಲಿರುವ ಶಿವಲಿಂಗ ಮತ್ತು ಪ್ರದಕ್ಷಿಣಾ ಪಥದಲ್ಲಿರುವ ಕೋಷ್ಠಗಳಲ್ಲಿ ಪ್ರಾಚೀನ ಜೇಷ್ಠಾದೇವಿ, ದಕ್ಷಿಣಾ ಮೂರ್ತಿ ಶಿಲ್ಪಗಳಿವೆ. ನವರಂಗದ ಕಂಬಗಳು, ದ್ವಾರಗೋಪುರದಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಧರ್ಮರಾಯ ಸ್ವಾಮಿ ಕರಗವಾದ ಹತ್ತು ದಿವಸಗಳಲ್ಲಿ ಶ್ರೀ ಸೋಮೇಶ್ವರನ ರಥೋತ್ಸವ ಬಹಳ ಅದ್ಧೂರಿಯಾಗಿ ನಡೆಯುತ್ತದೆ. ಇಲ್ಲಿ ಸಣ್ಣ ಪುಟ್ಟ 108 ಪಲ್ಲಕ್ಕಿಗಳ ಮೆರವಣಿಗೆಯು ರಾತ್ರಿ ಹನ್ನೊಂದು ಗಂಟೆಯ ಮೇಲೆ ಪ್ರಾರಂಭವಾಗಿ ಬೆಳಗಿನವರೆಗೆ ನಡೆಯುತ್ತದೆ. ದೇವಾಲಯದಲ್ಲಿ ಸುಂದರವಾದ ನಂದಿ ಶಿಲ್ಪವಿದೆ.

ಕಾಡು ಮಲ್ಲೇಶ್ವರನ ರಥೋತ್ಸವ

ಮಲ್ಲೇಶ್ವರದಲ್ಲಿರುವ ಕಾಡು ಮಲ್ಲೇಶ್ವರನ ಗುಡಿಯು ದ್ರಾವಿಡ ಶೈಲಿಯಲ್ಲಿದೆ. ಕನ್ನಡ ಭಾಷೆಯಲ್ಲಿ ದಾನ ಶಾಸನವಿದೆ. ಗರ್ಭಗುಡಿಯಲ್ಲಿ ಉದ್ಭವ ಲಿಂಗವಿದೆ. ಬಲಗಡೆಯ ಗರ್ಭಗೃಹದಲ್ಲಿ ಲಕ್ಷ್ಮೀ, ವಿಷ್ಣುವಿನ ಶಿಲ್ಪಗಳಿವೆ. ಎಡಗಡೆಯ ಗರ್ಭಗೃಹದಲ್ಲಿ ಕಾಶಿ ವಿಶ್ವೇಶ್ವರ ಮತ್ತು ಪಾರ್ವತಿಯ ಶಿಲ್ಪಗಳಿವೆ. ಇಲ್ಲಿ ಶಿವರಾತ್ರಿಯ ಮರುದಿನ ರಥೋತ್ಸವ ನಡೆಯುತ್ತದೆ.

ಶ್ರೀಬನಶಂಕರಿ ದೇವಿಯ ಉತ್ಸವ

ಬಾದಾಮಿಯ ಶ್ರೀಬನಶಂಕರಿ ದೇವಿಯ ಪರಮಭಕ್ತ ಬಸಪ್ಪಶೆಟ್ಟರು ಬೆಂಗಳೂರಿನಲ್ಲಿ ವಾಸವಾಗಿದ್ದರು. ಅವರು ಪ್ರತಿವರ್ಷ ತಪ್ಪದೆ ಅಲ್ಲಿಗೆ ಹೋಗಿ ದೇವಿಯ ದರ್ಶನ ಪಡೆದು ಬರುತ್ತಿದ್ದರು. ಹೀಗಿರುವಾಗ ಅವರಿಗೆ ವೃದ್ಯಾಪ್ಯ ಬಂದಾಗ ಬಾದಾಮಿಯವರೆಗೆ ಹೋಗಿ ಬರುವ ಶಕ್ತಿ ಕುಗ್ಗಿತು. ದೇವಿಯನ್ನು ಕಾಣುವುದು ಹೇಗೆ ಎಂಬ ಚಿಂತೆ ಆವರಿಸಿ ದೇವಿ ಸನ್ನಿಧಿಯಲ್ಲಿ ತಮ್ಮ ದುಃಖ ತೋಡಿಕೊಂಡರು. ಜಗನ್ಮಾತೆ ಬಾದಾಮಿ ದೇವಾಲಯದ ಅರ್ಚಕರ ಕನಸಿನಲ್ಲಿ ನನ್ನ ಭಕ್ತ ಇಲ್ಲಿ ಬಂದಿದ್ದಾನೆ ಅವನಿಗೆ ನನ್ನ ಪಂಚಲೋಹದ ವಿಗ್ರಹ ನೀಡುವಂತೆ ಹೇಳಿದಳಂತೆ, ಬಸಪ್ಪಶೆಟ್ಟಿಯ ಕನಸಿನಲ್ಲಿ ನಿನ್ನ ಊರಿಗೆ ನಾನು ಬರುವೆನೆಂದು ಹೇಳಿದಳು. ಅದರಂತೆ ಅರ್ಚಕರಿಂದ ದೇವಿಯ ಪಂಚಲೋಹದ ವಿಗ್ರಹವನ್ನು ತಂದು ಜ್ಯೋತಿ ಕುರುಹು ನೀಡಿದ ಕಡೆ ಭಕ್ತರ ನೆರವಿನಿಂದ ದೇವಾಲಯವನ್ನು ಈಗಿರುವ ಜಾಗದಲ್ಲಿ ಕಟ್ಟಲಾಯಿತು. ಆಗ ಸುತ್ತಮುತ್ತಲ ಮೂರು ಹಳ್ಳಿಗಳಿಗೆ ಗ್ರಾಮದೇವತೆಯಾಗಿ ಭಕ್ತರ ಕಷ್ಟಗಳನ್ನು ಪರಿಹರಿಸುತ್ತಿದ್ದಳು. ಮೂಲ ಬಾದಾಮಿ ಬನಶಂಕರಿ ದೇವಾಲಯದಲ್ಲಿ ನಡೆಯುವ ಎಲ್ಲಾ ಪೂಜಾ ಕೈಂಕರ್ಯಗಳು ಬನಶಂಕರಿಯಲ್ಲಿರುವ ಬನಶಂಕರಿ ದೇವಾಲಯದಲ್ಲಿಯೂ ನಡೆಯುವಂತೆ ಮುಲುಕು ನಾಡು ಶಾಸ್ತ್ರಿಗಳಿಂದ ಪೂಜೆ ನಡೆಯುವಂತೆ ಏರ್ಪಾಡು ಮಾಡಿದರು. ಗರ್ಭಗೃಹದಲ್ಲಿ ಸಿಂಹಾರೂಢಳಾದ ದೇವಿಯ ಪ್ರತಿಮೆ ಇದೆ. ಅಷ್ಟಭುಜೆಯಾದ ದೇವಿಯ ಪಾದದ ಬಳಿ ರಾಕ್ಷಸನ ರುಂಡವಿದೆ. ಈಗ ಇಲ್ಲಿ ಶುಕ್ರವಾರ, ಮಂಗಳವಾರ ಮತ್ತು ಭಾನುವಾರಗಳಂದು ನಡೆಯುವ ರಾಹುಕಾಲದ ವಿಶೇಷ ಪೂಜೆಗಳು ಮಹತ್ವ ಪಡೆದಿವೆ. ಭಕ್ತರು ಸಂಕಲ್ಪ ಉಪವಾಸ ವ್ರತಮಾಡಿ 16 ರಾಹುಕಾಲದ ಪೂಜೆಯನ್ನು ನಿಂಬೆಹಣ್ಣಿನ ರಸ ತೆಗೆದು ಸಿಪ್ಪೆಯ ಹಿಂಭಾಗದಲ್ಲಿ ತುಪ್ಪದ ದೀಪಹಚ್ಚಿ ಆರತಿ ಬೆಳಗಿ ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳುತ್ತಾರೆ. ಪ್ರತಿ ಹುಣ್ಣಿಮೆಯಂದು ದೇವಿಗೆ ಉಯ್ಯಾಲೆ ಸೇವೆ, ಕೂಷ್ಮಾಂಡ ಸೇವೆ ನಡೆಯುತ್ತದೆ. ಬಾದ್ರಪದ ಹುಣ್ಣಿಮೆಯಂದು ಉತ್ಸವ ನಡೆಯುತ್ತದೆ. ಪುಷ್ಯ ಶುದ್ಧ ಪೂರ್ಣಿಮೆಯಂದು ನರಳುತ್ತಿರುವವರು ತಟ್ಟೆಯಲ್ಲಿನ ಅಕ್ಕಿಯ ಮೇಲೆ ಎರಡು ಬೆಲ್ಲದ ಅಚ್ಚುಗಳಲ್ಲಿ ತುಪ್ಪದ ದೀಪಹಚ್ಚಿ ಆರತಿ ಮಾಡಿ ಪ್ರದಕ್ಷಿಣೆ ಹಾಕುತ್ತಾ ತಮ್ಮ ತೊಂದರೆ ನಿವಾರಣೆ ಮಾಡಿಕೊಳ್ಳುವರು. ಸಂಕ್ರಾಂತಿಯ ನಂತರ ಬರುವ ಬನದ ಹುಣ್ಣಿಮೆಯಂದು ಬನಶಂಕರಿದೇವಿಯನ್ನು ಮಲ್ಲಿಗೆ ಹೂವುಗಳಿಂದ ಅಲಂಕರಿಸಿ ಮುಖ್ಯ ಬೀದಿಗಳಲ್ಲಿ ರಥೋತ್ಸವದ ಮೆರವಣಿಗೆ ಮಾಡುತ್ತಾರೆ. ಬೆಂಗಳೂರಿನ ಬನಶಂಕರಿಯು ಮೂಲ ಬಾದಾಮಿ ಬನಶಂಕರಿದೇವಿಯಷ್ಟೇ ಪ್ರಸಿದ್ಧಳಾದ ದೇವತೆ, ಇತ್ತೀಚೆಗೆ ದೇವಾಲಯವನ್ನು ಧಾರ್ಮಿಕ ದತ್ತಿ ಇಲಾಖೆ ನವೀಕರಿಸಿ ಭಕ್ತರ ಪೂಜೆಗೆ ಅನುಕೂಲವಾಗುವಂತೆ ಮಾಡಿದೆ.

ಅಣ್ಣಮ್ಮ ದೇವಿ ಉತ್ಸವ

ಗಾಂಧಿನಗರದಲ್ಲಿ ಪ್ರಾಚೀನ ಗ್ರಾಮದೇವತೆ ಅಣ್ಣಮ್ಮನ ದೇವಾಲಯವಿದೆ. ಅಲ್ಲಿ ಸಪ್ತಮಾತೃಕೆಯರ ಪ್ರತೀಕವಾಗಿ ಏಳು ಸಣ್ಣಕಲ್ಲುಗಳಿವೆ. ಚಿಕ್ಕ ಮಕ್ಕಳಿಗೆ ತಗಲುವ ಸಿಡಿಬು, ದಡಾರ, ಅಮ್ಮ, ವಾಂತಿ, ಭೇದಿ ಇಂತಹ ಕಾಯಿಲೆಗಳು

ಬಂದಾಗ ಈ ತಾಯಿಗೆ ಹರಕೆ ಮಾಡಿಕೊಳ್ಳುವರು. ದೇವಿಯ ಮನಸ್ಸು ಶಾಂತವಾಗಿರಲೆಂದು ಮೊಸರನ್ನದ ತಳಿಗೆಯನ್ನು ಮತ್ತಿತರ ವಸ್ತುಗಳನ್ನು ಒಪ್ಪಿಸುವ ಮೂಲಕ ಮಂಗಳವಾರ, ಶುಕ್ರವಾರ, ಭಾನುವಾರಗಳಂದು ಭಕ್ತರಿಂದ ದೇವಾಲಯ ತುಂಬಿರುತ್ತದೆ. ಅಣ್ಣಮ್ಮದೇವಿಯ ಹಲವು ಉತ್ಸವ ಮೂರ್ತಿಗಳಿದ್ದು ನಗರದ ಅನೇಕ ಬಡಾವಣೆಯ ಭಕ್ತರು ತೆಗೆದುಕೊಂಡು ಹೋಗಿ ಅವರವರ ಶಕ್ತ್ಯಾನುಸಾರ ಮೂರುದಿನ ಐದು ದಿನಗಳು ಅಲಂಕೃತ ಚಪ್ಪರದಲ್ಲಿರಿಸಿ ಅದ್ದೂರಿಯಾಗಿ ಪೂಜಿಸಿ ಪಲ್ಲಕ್ಕಿ, ರಥಗಳಲ್ಲಿರಿಸಿ ಮೆರವಣಿಗೆ ಮಾಡಿ ಸಂತೋಷ ಪಡುತ್ತಾರೆ. ಅಲ್ಲಿರುವಷ್ಟು ದಿನಗಳು ಆ ಬಡಾವಣೆಯ ಹೆಂಗಸರು ಮಕ್ಕಳಿಂದ ಹಾಗೂ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಜೆ ವೇಳೆ ಏರ್ಪಡಿಸಿ ನಡೆಸುತ್ತಾರೆ. ಇದು ಹೆಚ್ಚಾಗಿ ಚೈತ್ರ ವೈಶಾಖ ಮಾಸಗಳಲ್ಲಿ ನಗರದ ಬಡಾವಣೆಗಳಲ್ಲಿ ಒಂದಲ್ಲ ಒಂದು ಕಡೆ ನಡೆಯುತ್ತಿರುತ್ತದೆ. ನವರಾತ್ರಿಯಲ್ಲಿ ಒಂಬತ್ತು ದಿನಗಳು ದೇವಿಯನ್ನು ವಿವಿಧ ಒಡವೆ ವಸ್ತುಗಳಿಂದ ಕೆಲವು ತರಕಾರಿಗಳಿಂದ ಅಲಂಕಾರ ಮಾಡಿ ದೇವಿಯನ್ನು ಹಲವು ಹೆಸರುಗಳಿಂದ ಕರೆದು ಉತ್ಸವ ನಡೆಯುತ್ತದೆ.

ಬಿನ್ನಿಪೇಟೆಯ ಅಂಗಾಳ ಪರಮೇಶ್ವರಿ ಉತ್ಸವ

ಈ ದೇವಾಲಯ 1975ರಿಂದ ಕಾಟನ್ ಪೇಟೆಯಲ್ಲಿದ್ದುದನ್ನು 1988 ಆಗಸ್ಟ್ ಹತ್ತರಂದು ಬಿನ್ನಿಪೇಟೆಯ ವಿಸ್ತಾರವಾದ ಜಾಗದಲ್ಲಿ ಹೊಸ ದೇವಾಲಯವನ್ನು ಕಟ್ಟಿಸಿ ದೇವಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಈ ದೇವಿಗೆ ಶಿವರಾತ್ರಿಯಲ್ಲಿ ಮೂರು ದಿನ ವಿಶೇಷವಾದ ಪೂಜೆಗಳು ನಡೆಯುತ್ತವೆ. ಶಿವರಾತ್ರಿಯ ಹಿಂದಿನ ದಿನ ಮಹಿಳೆಯರು ತರುವ ಐದು ಸಾವಿರ ಲೀಟರ್ ಹಾಲಿನಿಂದ ದೇವಿಗೆ ಅಭಿಷೇಕವಾಗುತ್ತದೆ. ಎರಡನೆಯ ದಿನ ಅಂದರೆ ಶಿವರಾತ್ರಿಯ ದಿನ ದೇವಿಯ ರಥೋತ್ಸವ ನಡೆಯುತ್ತದೆ. ರಾತ್ರಿ ಕರಗದ ಉತ್ಸವ ನಡೆಯುತ್ತದೆ. ಮೂರನೆಯ ದಿನ ಅರಿಸಿನ ನೀರಿನಿಂದ ಅಭಿಷೇಕವಾಗುತ್ತದೆ. ಅಮಾವಾಸ್ಯೆಯ ದಿನ ಸ್ಮಶಾನದಲ್ಲಿ ರುದ್ರಭೂಮಿ ಪೂಜೆ ನಡೆಯುತ್ತದೆ. ರಾಜಗೋಪುರ ದಾಟಿ ಒಳಗೆ ಹೋದರೆ ಬಲಭಾಗದಲ್ಲಿ ಪವಾಡರಾಯನ ಬೃಹದಾಕಾರದ ವಿಗ್ರಹವಿದೆ. ಈತ ರೇಣುಕೆಯ ಮಗ, ಪರಶುರಾಮನ ಅಣ್ಣ, ಪಕ್ಕದಲ್ಲಿ ಕರುಪಣ್ಣಸ್ವಾಮಿ ವಿಗ್ರಹವಿದೆ. ಅಂಗಾಳ ಪರಮೇಶ್ವರಿ ಬೆಸ್ತರಮನೆಯ ಹೆಣ್ಣು ಮಗಳೆಂದು ಹೇಳುತ್ತಾರೆ. ಇದು ತಮಿಳು ಮೂಲದ ಭಕ್ತರಿಗೆ ಸೇರಿದ ದೇವಸ್ಥಾನ ಎಂದು ಹೇಳಲಾಗಿದೆ.

ಹರೋಹರ ಜಾತ್ರೆ

ನರಹರಿರಾಯನ ಗುಡ್ಡದಲ್ಲಿ ಕುಮಾರಸ್ವಾಮಿ ದೇವಾಲಯ ಪ್ರಾರಂಭವಾಯಿತು. ಅದೇ ಆವರಣದಲ್ಲಿ ಸುಬ್ರಹ್ಮಣ್ಯಸ್ವಾಮಿ ದೇವರ ಪ್ರತಿಷ್ಠಾಪನೆ ಆಯಿತು. ಅಲ್ಲಿ ಬಾಣೇಶ್ವರ, ಜಲಕಂಠೇಶ್ವರ ಗುಡಿಗಳು ನಿರ್ಮಾಣವಾದವು. ನರಹರಿರಾಯನ ಗುಡ್ಡದಲ್ಲಿ ನಡೆಯುವ ಹರೋಹರ ಜಾತ್ರೆಗೆ ತಮಿಳು ಜನಾಂಗದವರು ಆಡಿಕೃತ್ತಿಕೆ ಅಥವಾ ತಿರುಪ್ಪಾವೆಯಂದು ಹರಕೆ ಹೊತ್ತ ಸ್ತ್ರೀ ಪುರುಷರು ಮತ್ತು ಚಿಕ್ಕ ಮಕ್ಕಳು ಉಪವಾಸವಿದ್ದು ತಮ್ಮ ಎರಡು ಭುಜಗಳ ಮೇಲೆ ಕಾವಡಿ ಹೊತ್ತು ಬಂದು ತಮ್ಮ ಹರಕೆ ಸಲ್ಲಿಸುವರು. ಕಾವಡಿ ಹೊತ್ತು ಬರುವ ಭಕ್ತರು ಅರಿಸಿನ ಬಣ್ಣದ ಉಡುಪು ಧರಿಸಿ ಕೊರಳಲ್ಲಿ ಹೂವಿನ ಮಾಲೆ ಹಾಕಿಕೊಂಡು ರಸ್ತೆಯ ಉದ್ದಕ್ಕೂ ಹರೋಹರ ಎಂದು ಹೇಳುತ್ತಾ ಗಂಟೆಯನ್ನು ಬಾರಿಸುತ್ತಾ ಬರುತ್ತಾರೆ. ತಮಿಳರಿಗೆ ಇದೊಂದು ವಿಶೇಷವಾದ ಹಬ್ಬ.

ಮಾವಳ್ಳಿ ಬಿಸಿಲು ಮಾರಮ್ಮನ ಜಾತ್ರೆ

ದೊಡ್ಡಮಾವಳ್ಳಿಯಲ್ಲಿ ದೊಡ್ಡ ಅರಳಿ ಮರದ ಅಡಿಯಲ್ಲಿ ಬಿಸಿಲು ಮಾರಮ್ಮನ ಗುಡಿ ಇದೆ. ಇಲ್ಲಿ ಪ್ರತಿ ಮೂರು ವರ್ಷಕೊಮ್ಮೆ ನಾಲ್ಕು ದಿನ ಗ್ರಾಮದೇವತೆಯ ಜಾತ್ರೆ ನಡೆಯುತ್ತದೆ. ಜಾತ್ರೆಯ ಮೊದಲ ದಿನ ಸೋಮವಾರದ ಸಂಜೆ ಲಾಲ್‌ಬಾಗ್ ಕೋಟೆ ರಸ್ತೆಯಲ್ಲಿರುವ ಶ್ರೀಭೋಗನಂಜುಂಡೇಶ್ವರಸ್ವಾಮಿಗೆ ಬೆಲ್ಲದಾರತಿ ಮಾಡುವುದರಿಂದ ಜಾತ್ರೆ ಪ್ರಾರಂಭವಾಗುತ್ತದೆ. ಮರುದಿನ ಮಾರಮ್ಮ ದೇವಾಲಯದ ಆವರಣದಲ್ಲಿರುವ ಉಯ್ಯಾಲೆಯಲ್ಲಿ ದೇವಿ ಆಸೀನಳಾಗುತ್ತಾಳೆ. ಆಗ ಮನೆಗೊಂದು ಕೊಡದಂತೆ ಮಂಗಳದ್ರವ್ಯದ ನೀರು ತಂದು ತಾಯಿಗೆ ಅಭಿಷೇಕ ಮಾಡುತ್ತಾರೆ. ನಂತರ ವಿಶೇಷ ಪುಷ್ಪಾಲಂಕಾರ ಮಾಡಿ ಮಧ್ಯಾಹ್ನ ಪೂಜೆ ಮಂಗಳಾರತಿ ಆಗುತ್ತದೆ. ಬಿಸಿಲು ಮಾರಮ್ಮ ದೇವತೆಯ ಆವರಣದಲ್ಲಿ ರಾತ್ರಿ ಹನ್ನೆರಡು ಗಂಟೆಗೆ ಅಗ್ನಿಕುಂಡದ ಪೂಜೆ ನಡೆದು ಹರಕೆ ಹೊತ್ತವರು ಬಾಯಿಬೀಗ ಚುಚ್ಚಿಸಿಕೊಳ್ಳುವರು. ಭಕ್ತರು ತಮ್ಮ ಹರಕೆಯಂತೆ ಕುರಿ ಕೋಳಿಗಳನ್ನು ಬಲಿಯಾಗಿ ಅರ್ಪಿಸುವರು. ನಂತರ ನೈವೇದ್ಯದ ಕೆಂಪು ಅನ್ನವನ್ನು ಸರಿ ರಾತ್ರಿಯಲ್ಲಿ ಊರಿನ ಪ್ರತಿ ಗಲ್ಲಿಯಲ್ಲಿಯೂ 'ಬಲಿಯೋ ಬಲಿ ಬಲಿಯೋ ಬಲಿ' ಎಂದು ಹೇಳುತ್ತಾ ಸಿಂಪಡಿಸುವ ಸಂಪ್ರದಾಯವಿದೆ. ಹೀಗೆ ಮಾಡುವುದರಿಂದ ಊರಿಗೆ ಶಾಂತಿ ಸಮೃದ್ಧಿ ಉಂಟಾಗುತ್ತದೆ ಎಂಬ ನಂಬಿಕೆ ಇದೆ.

ಮೂರನೆಯ ದಿನ ಬೆಳಗಿನ ಜಾವ ಲಾಲ್‌ಬಾಗ್ ಕೋಟೆ ಸರ್ಕಾರಿ ಶಾಲೆಯ ಆವರಣದಿಂದ

ಶ್ರೀ ಸತ್ಯಮ್ಮತಾಯಿ, ದಂಡುಪಾಳ್ಯದ (ಕಲಾಸಿಪಾಳ್ಯ) ಶ್ರೀದುರ್ಗಮ್ಮತಾಯಿ, ಚಿಕ್ಕಮಾವಳ್ಳಿ ಮಾರಮ್ಮ ಈ ಎಲ್ಲಾ ದೇವತೆಗಳ ಉತ್ಸವಗಳೊಂದಿಗೆ ಸುಧಾಮನಗರ ಮತ್ತಿತರ ಗ್ರಾಮಗಳ ಮಹಿಳೆಯರು ವೈವಿಧ್ಯಮಯ ಆರತಿಗಳೊಂದಿಗೆ ಬಿಸಿಲು ಮಾರಮ್ಮನ ದೇವಸ್ಥಾನ ಸೇರುತ್ತಾರೆ. ಬೆಳಗ್ಗೆ ಆರು ಗಂಟೆಗೆ ಅಗ್ನಿಕುಂಡಕ್ಕೆ ಮಹಾಮಂಗಳಾರತಿ ಆದ ನಂತರ ಆರತಿ ಹೊತ್ತ ಮಹಿಳೆಯರು ಭಕ್ತಿಯಿಂದ ಅಗ್ನಿಕುಂಡದ ಮೇಲೆ ಹಾಯುತ್ತಾರೆ. ನಂತರ ದೇವಿಗೆ ವಿಶೇಷ ಪೂಜೆ ನಡೆಯುತ್ತದೆ. ಮಧ್ಯಾಹ್ನ ಗ್ರಾಮದ ಜನತೆ ಜಾತ್ರೆಗೆ ಬಂದ ತಮ್ಮ ನೆಂಟರಿಷ್ಟರನ್ನು, ಸ್ನೇಹಿತರನ್ನು ಆಹ್ವಾನಿಸಿ ಊಟೋಪಚಾರಗಳಿಂದ ಸತ್ಕರಿಸುತ್ತಾರೆ. ನಾಲ್ಕನೆಯ ದಿನ ಮಧ್ಯಾಹ್ನ ಉಟ್ಲುಕಾಯಿ ಹೊಡೆಯುವ ಕಾರ್ಯಕ್ರಮದ ನಂತರ ಸಂಜೆ ಇತರ ದೇವತೆಗಳ ಉತ್ಸವಗಳು ಬಾಣ ಬಿರುಸುಗಳ ಹಾಗೂ ಮಂಗಳವಾದ್ಯಗಳ ಜೊತೆ ಮೆರವಣಿಗೆಯಲ್ಲಿ ಬಿಸಿಲು ಮಾರಮ್ಮ ದೇವಿಯ ಆವರಣದಿಂದ ಹೊರಟು ಊರಿನ ಎಲ್ಲಾ ಬೀದಿಗಳ ಮೂಲಕ ತಮ್ಮ ತಮ್ಮ ಸ್ಥಳಗಳನ್ನು ಸೇರುತ್ತವೆ.

ಮೊಹರಂ ಆಚರಣೆಯ ಉತ್ಸವ

ಇಸ್ಲಾಂ ಸಂವತ್ಸರದ ತಿಂಗಳ ಹತ್ತನೆಯ ದಿನ ಮಹಮದ್ ಪೈಗಂಬರನ ಮೊಮ್ಮಗನಾದ ಇಮಾಮ್ ಹುಸೇನ್ ಮತ್ತು 72 ಜನ ಸಂಗಡಿಗರು ಹತ್ಯೆಯಾದ ದಿನದ ನೆನಪಿಗಾಗಿ ಮುಸ್ಲಿಂ ಜನಾಂಗದವರು ಮೊಹರಂ ಹಬ್ಬವನ್ನು ಆಚರಿಸುತ್ತಾರೆ. ಆ ರಾತ್ರಿ ಪಂಜಾ ಮತ್ತು ತಾಜಿಯಾ ಮೆರವಣಿಗೆಯಲ್ಲಿ ಊರ ಹೊರಗಿನ ನೀರಿನಲ್ಲಿ ವಿಸರ್ಜಿಸುತ್ತಾರೆ. ಮೊಹರಂ ಹಬ್ಬವನ್ನು ಬಾಬಯ್ಯನ ಹಬ್ಬವೆಂದು ಕರೆಯುತ್ತಾರೆ. ಕಲಾಸಿಪಾಳ್ಯದ ಬಸ್ ನಿಲ್ದಾಣ, ಮೈಸೂರು ರಸ್ತೆ, ಮಾರ್ಕೆಟ್, ಅವಿನ್ಯೂ ರಸ್ತೆ ದರ್ಗಾ, ಮಾಮೂಲು ಪೇಟೆಯ ಮಸ್ತಾನ್‌ಸಾಬರ ದರ್ಗಾ ಮೊದಲಾದ ಕಡೆ ಪಂಜಾ ಇಡುವುದುಂಟು. 'ಯಾಲೀದೂಲ ಹುಸ್ಸೇನ್ ಹುಸ್ಸೇನ್ ಯಾಲೀ ಮಾಮ್ ದೀನ್ ಕ್ಯಾ ಹುಸ್ಸೇನ್ ಬಾ ಹುಸ್ಸೇನ್ ದೀನ್ ದೀನ್ ಎಂಬ ಘೋಷಣೆ ಮಾಡುತ್ತಾರೆ. ಸ್ತ್ರೀ ಪುರುಷರು ಮಾತಮ್ ಮಾಡಿಕೊಂಡು ದುಃಖಿಸುತ್ತಾರೆ. ಈ ಸಂದರ್ಭದಲ್ಲಿ ಧಾರ್ಮಿಕ ಪುರುಷರು ಅನುಭವಿಸಿದ ಕಷ್ಟಗಳನ್ನು ಮತ್ತು

ಅವರ ಮರಣವನ್ನು ಜ್ಞಾಪಿಸಿಕೊಳ್ಳುತ್ತಾರೆ. ಈ ಮೆರವಣಿಗೆಯಲ್ಲಿ ಹುಲಿವೇಷ, ಕೋಡಂಗಿವೇಷಗಳಲ್ಲಿ ಕುಣಿಯುವ ಮೂಲಕ ಜನರ ಮನರಂಜನೆಗೆ ಅವಕಾಶ ಮಾಡಿಕೊಡುತ್ತಾರೆ. ಈ ಮೆರವಣಿಗೆಯಲ್ಲಿ ಹಿಂದೂಗಳೂ ಸಹ ಭಾಗವಹಿಸುತ್ತಾರೆ.

ಉರಸ್ (ಉತ್ಸವ)

ಇಸ್ಲಾಂ ಧರ್ಮ ಪ್ರಚಾರಕರಾದ ಸೂಪಿಸಂತರ ಗೋರಿಗಳಲ್ಲಿ ವಲೀ (ಸಂತ) ಇರುವನೆಂಬ ನಂಬಿಕೆ ಇದೆ. ವಲೀಗಳು ಹುಟ್ಟಿದ ಅಥವಾ ಸತ್ತ ದಿನದಂದು ವರ್ಷಕ್ಕೊಮ್ಮೆ ಉರುಸ್ ನಡೆಸುತ್ತಾರೆ. ಆ ದಿನ ಊರಿನ ಪ್ರಮುಖ ಬೀದಿಗಳಲ್ಲಿ 'ಜುಲಸ್' ಹೊರಡುತ್ತದೆ. ಒಬ್ಬ ವ್ಯಕ್ತಿ ಕುದುರೆಯ ಮೇಲೆ ಕುಳಿತು ತನ್ನ ತಲೆಯ ಮೇಲೆ ಗಂಧ ಮತ್ತು ಪುಷ್ಪಗಳನ್ನು ಹೊತ್ತಿರುತ್ತಾನೆ. ಕೆಲವರು ಹೂವು ಮತ್ತು ಬಟ್ಟೆಯ 'ಗಿಲೇಫ್' ಹಿಡಿದಿರುತ್ತಾರೆ. ಒಬ್ಬ ಸಾಂಬ್ರಾಣಿ ಹೊಗೆ ಹಾಕುವ ಊದ್‌ದಾನಿ (ಧೂಪ್‌ದಾನಿ) ಹಿಡಿದಿರುತ್ತಾನೆ. ಫಕೀರರು 'ದೈರಾ' ಬಾರಿಸುತ್ತಾ ವಲೀಗಳ ಹೆಸರನ್ನು ಕೂಗುತ್ತಾರೆ. ಭಕ್ತಾದಿಗಳು 'ಫಾತೇಹಾ' ಓದಿಸುತ್ತಾರೆ. ಮೇಲ್ವಿಚಾರಕ ನವಿಲುಗರಿಯ ಕಟ್ಟನ್ನು ಭಕ್ತಾದಿಗಳ ತಲೆಯ ಮೇಲಿಟ್ಟು ಮುಖದ ಮೇಲಿಂದ ನೀವಾಳಿಸುವನು. ಫಕೀರರು ಗೋರಿಯ ಮೇಲೆ ಗಿಲೇಫ್ ಹೊದಿಸಿ ಗಂಧ ಪುಷ್ಪಗಳನ್ನು ಇಡುವರು. ಹರಕೆ ಮಾಡಿಕೊಂಡ ಹಿಂದೂಗಳು ಸಹ ಅಂದು ಗಂಧ ಪುಷ್ಪಗಳನ್ನು ಗೋರಿಗಳ ಮೇಲಿಡುವರು. ಮೆರವಣಿಗೆಯಲ್ಲಿ ಧಾರ್ಮಿಕ ಹಾಡು-ಗೀತೆಗಳನ್ನು ಹಾಡುವರು. ವಿವಿಧ ವೇಷಗಳ ಪ್ರದರ್ಶನ ನಡೆಯುತ್ತದೆ. ವಾರ್ಷಿಕ ಉರುಸ್ ಹಿಂದೂ ಮುಸ್ಲಿಂರ ಭಾವೈಕದ ಸಂಕೇತವಾಗಿ ಸೂಫಿಸಂತರ ಗೋರಿಗಳಲ್ಲಿ ನಡೆಯುತ್ತದೆ. ಇದು ಸೂಫಿಸಂತರ ಹಬ್ಬ. ವಿಶೇಷವಾಗಿ ಮಾಮೂಲುಪೇಟೆಯ ಮಸ್ತಾನ್ ಸಾಬರದರ್ಗಾ, ಆರ್. ಸಿ. ಕಾಲೇಜ್ ಹತ್ತಿರದ ಏಕೀನ ಸಾವಲಿದರ್ಗ. ಮುರುಫಮಲ್ಯೆ, ಅಮ್ಮಾಜಾನ್ ಬಾವಾಜಾನ್, ಖಕೇಶ್ ಮೊಲ್ಲಾ ಮೊದಲಾದ ಕಡೆ ಸಂತರ ಉರುಸ್ ಪ್ರಸಿದ್ಧವಾಗಿದೆ.

ಸಂತ ಮೇರಿಯಮ್ಮನ ಜಾತ್ರೆ

ಶಿವಾಜಿನಗರದಲ್ಲಿರುವ (ಬಿಳಿಹಕ್ಕಿಹಳ್ಳಿ) ಸಂತ ಮೇರಿಯಮ್ಮನ ಪ್ರಾಚೀನವಾದ ದೇವಾಲಯದಲ್ಲಿ ಸಂತ ಮೇರಿಯಮ್ಮನ ಜಾತ್ರೆ ಪ್ರತಿ ವರ್ಷ ಸೆಪ್ಟೆಂಬರ್ ಎಂಟನೇ ತಾರೀಖಿನಂದು ಅದ್ದೂರಿಯಾಗಿ ನಡೆಯುತ್ತದೆ. ಯೇಸುವಿಗೆ ಜನ್ಮಕೊಟ್ಟ ಮೇರಿ ಮಾತೆಯನ್ನು ಕನ್ಯಾಮೇರಿ, ಸಂತಮೇರಿ, ಕಾಣಿಕೆ ಮಾತೆ, ಆರೋಗ್ಯಮಾತೆ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಮೇರಿಮಾತೆ ಜಾತ್ರೆಯ ಮೊದಲ ಒಂಬತ್ತು ದಿನಗಳಲ್ಲಿ ಬೈಬಲ್ ಓದುವ, ಕೇಳುವ, ಪ್ರಾರ್ಥನೆ, ಪೂಜೆ ಧ್ಯಾನಗಳಿಂದ ಆತ್ಮ ಶುದ್ಧಿಯನ್ನು ಮಾಡಿಕೊಳ್ಳುತ್ತಾರೆ. ಈ ಪ್ರಶಸ್ತ ಆಚರಣೆಯನ್ನು 'ನೊವೇನಾ' ಎಂದು ಕರೆಯುತ್ತಾರೆ. ಈ ದಿನಗಳಲ್ಲಿ ಬಡರೋಗಿಗಳಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವರು. ವೈವಾಹಿಕ ಜೀವನದಲ್ಲಿ 50 ವರ್ಷಗಳನ್ನು ಕಳೆದ ಹಿರಿಯ ದಂಪತಿಗಳನ್ನು ಸತ್ಕರಿಸಿ ಗೌರವಿಸುತ್ತಾರೆ. ಸರಳ ಸಾಮೂಹಿಕ ವಿವಾಹಕಾರ್ಯಗಳನ್ನು ಹಮ್ಮಿಕೊಳ್ಳುತ್ತಾರೆ. ಹತ್ತನೆಯ ದಿನ ಅಲಂಕರಿಸಿದ ಆರೋಗ್ಯ ಮಾತೆಯ ತೇರಿನ ಮೆರವಣಿಗೆ ನಡೆಯುತ್ತದೆ. ಇದು ಕ್ಯಾಥೋಲಿಕ್ ಕ್ರೈಸ್ತರ ದೊಡ್ಡ ಜಾತ್ರೆ.

ಬಾಲ ಯೇಸುವಿನ ಜಾತ್ರೆ

ವಿವೇಕನಗರದಲ್ಲಿ (ಸೊಣ್ಣೇನಹಳ್ಳಿ) ಪ್ರತಿವರ್ಷ ಜನವರಿ ಹದಿನಾಲ್ಕರಂದು ಬಾಲ ಯೇಸುವಿನ ಜಾತ್ರೆ ನಡೆಯುತ್ತದೆ. ಜಾತ್ರೆಗೆ ಮೊದಲ ಒಂಬತ್ತು ದಿನಗಳು ನೊವೇನ ಪೂಜಾ ಕಾರ್ಯಗಳು ನಡೆಯುತ್ತವೆ. ಹತ್ತನೆಯ

ದಿನ ಅಲಂಕರಿಸಿದ ಬಾಲ ಯೇಸುವಿನ ತೇರಿನ ಮೆರವಣಿಗೆ ಆಗುತ್ತದೆ. ಮೆರವಣಿಗೆಯಲ್ಲಿ ಲಕ್ಷಾಂತರ ಭಕ್ತರು ಸೇರುತ್ತಾರೆ. ಬಾಲ್ಯದಲ್ಲಿ ಯೇಸು ಮಾಡಿದ ಪವಾಡಗಳು ಈ ಜಾತ್ರೆಗೆ ಮುಖ್ಯ ಕಾರಣವಾಗಿದೆ. ಭಕ್ತರು ತಮ್ಮ ಕಷ್ಟಗಳ ನಿವಾರಣೆಗೆ, ರೋಗರುಜಿನಗಳ ಪರಿಹಾರಕ್ಕೆ ಹರಕೆ ಮಾಡಿಕೊಂಡು ಯೇಸುವನ್ನು ಆರಾಧಿಸುತ್ತಾರೆ. ಇಲ್ಲಿ 1971ರಿಂದ ಬಾಲ ಯೇಸುವಿನ ಪವಾಡ ಪ್ರತಿಮೆಯ ಪೂಜೆ ನಡೆದುಬರುತ್ತಿದೆ. ಇತ್ತೀಚೆಗೆ ಆಧುನಿಕ ದೇವಾಲಯ ನಿರ್ಮಾಣವಾಗುತ್ತಿದೆ.


ಅನ್ನಮ್ಮ ಬೆಟ್ಟದ ಶಿಲುಬೆ ಯಾತ್ರೆ (ಜಾತ್ರೆ)

ಉತ್ತರಹಳ್ಳಿ ಕ್ಷೇತ್ರಕ್ಕೆ ಸೇರಿದ ಹನುಮಗಿರಿ ಗುಡ್ಡದ ಮೇಲೆ ಸುಮಾರು 50–60 ವರ್ಷಗಳ ಹಿಂದೆ ಯಾರೋ ಶಿಲುಬೆ ನೆಟ್ಟಿದ್ದರು. ಅನ್ನಮ್ಮ ಎಂಬ ಕ್ರೈಸ್ತ ಭಕ್ತೆ ಪ್ರತಿ ದಿನವೂ ಶಿಲುಬೆಯ ಬಳಿಗೆ ಹೋಗಿ ಪೂಜೆ ಸಲ್ಲಿಸಿ ಬರುತ್ತಿದ್ದಳಂತೆ. ಆಕೆ ವಿಧಿವಶಳಾದ ಮೇಲೆ ಆಕೆಯ ಶವವನ್ನು ಬೆಟ್ಟದ ತಪ್ಪಲಲ್ಲಿ ಸಮಾಧಿ ಮಾಡಿದ್ದಾರೆ. ಅನ್ನಮ್ಮನ ಹೆಸರಿನಲ್ಲಿ ಐತಿಹ್ಯ ಮತ್ತು ಹಾಡುಗಳು ಹುಟ್ಟಿ ಪ್ರಚಲಿತವಾಗಿವೆ. ಇಲ್ಲಿ ಪ್ರತಿವರ್ಷ ತಪಸ್ಸು ಕಾಲದ ಐದನೇ ಭಾನುವಾರ ದೊಡ್ಡ ಜಾತ್ರೆ ನಡೆಯುತ್ತದೆ. ಈ ಜಾತ್ರೆಗೆ ಮೊದಲ ನಲವತ್ತು ದಿನಗಳು ಕ್ರೈಸ್ತರು ಸಾತ್ವಿಕ ಜೀವನ ನಡೆಸುತ್ತಾರೆ. ಯೇಸುಕ್ರಿಸ್ತನು ಶಿಕ್ಷೆಗೆ ಗುರಿಯಾಗಿ ಶಿಲುಬೆ ಹೊತ್ತು ನಡೆಯುವಾಗ ಸಂಭವಿಸಿದ ಹದಿನಾಲ್ಕು ಘಟನೆಗಳನ್ನು ನೆನೆದು ಶೋಕಾಚರಣೆ ಪ್ರಾರ್ಥನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಆ ದಿನ ಸಂಜೆ ಕ್ರಿಸ್ತನ ಶವಯಾತ್ರೆಯು ನಡೆಯುತ್ತದೆ. ಈ ಯಾತ್ರೆಯ ಜಾತ್ರೆಯಲ್ಲಿ ಅಧಿಕ ಜನರು ಭಾಗವಹಿಸುತ್ತಾರೆ. ಅನಂತರ ಸಾಮೂಹಿಕ ಭೋಜನದ ವ್ಯವಸ್ಥೆಯೂ ಇರುತ್ತದೆ.

ಇಲ್ಲಿ ಬೆಂಗಳೂರು ನಗರದಲ್ಲಿ ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಕೆಲವು ಮುಖ್ಯವಾದ ಜಾತ್ರೆ, ಉತ್ಸವ ಅಥವಾ ರಥೋತ್ಸವ ಮತ್ತು ಪರಿಷೆಗಳನ್ನು ಮಾತ್ರ ದಾಖಲಿಸಲಾಗಿದೆ. ಗಣೇಶನ ಉತ್ಸವ ಮೆರವಣಿಗೆಗಳು ಅತಿ ಹೆಚ್ಚಾಗಿ ಬೀದಿ ಬೀದಿಗಳಲ್ಲಿ ಅದ್ದೂರಿಯಾಗಿ ನಡೆಯುತ್ತವೆ. ಹಾಗೆ ಕೆಂಪೇಗೌಡರ ಕಾಲದಲ್ಲಿ ಕಟ್ಟಿಸಿದ ಬಂಡಿಮಾಂಕಾಳಮ್ಮ, ಹಟ್ಟಿಲಕ್ಕಮ್ಮ, ಮಾರಮ್ಮ, ಪಟಾಲಮ್ಮ, ಚೌಡಮ್ಮ ಮುಂತಾದ ದೇವತೆಗಳ ಹೆಸರಿನಲ್ಲಿ ಕರಗ ಅಥವಾ ಜಾತ್ರೆಗಳು ನಡೆಯುತ್ತವೆ. ಅವುಗಳ ವಿವರಗಳನ್ನು ಕೈಬಿಡಲಾಗಿದೆ.

ಆಧಾರ ಗ್ರಂಥಗಳು

1. ಕೆ. ಲಕ್ಷ್ಮಣ, ತಿಗಳ ಜನಾಂಗದ ಇತಿಹಾಸ ಮತ್ತು ಕರಗ ಶಕ್ತ್ಯೋತ್ಸವ, ಬೆಂಗಳೂರು 1999.
2. ಲಕ್ಷ್ಮೀಪತಿ ಮಾವಳ್ಳಿ, ನಮ್ಮ ಮಾವಳ್ಳಿ, ಬೆಂಗಳೂರು 2009.
3. ಎಲ್. ಎಸ್. ಶೇಷಗಿರಿರಾವ್ (ಪ್ರಸಂ) ಬೆಂಗಳೂರು ದರ್ಶನ ಸಂಪುಟ.1, ಉದಯಭಾನು ಕಲಾಸಂಘ, ಬೆಂಗಳೂರು, 2005.
4. ದೇವಸ್ಥಾನಗಳಲ್ಲಿ ನಡೆಯುವ ಉತ್ಸವ ಮತ್ತು ರಥೋತ್ಸವಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ ಮಾಹಿತಿ.



1. ಅತ್ತಿಗುಪ್ಪೆಯ ನರಸಿಂಹ ದೇವಾಲಯ



2. ಅತ್ತಿಗುಪ್ಪೆಯ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ



3. ಧರ್ಮರಾಯನ ಗುಡಿ



4. ಕಾಡು ಮಲ್ಲೇಶ್ವರನ ರಥ



5. ಅಣ್ಣಮ್ಮ ದೇವಿ

50. ಬೆಂಗಳೂರಿನ ಆಡಳಿತಾಧಿಕಾರಿಗಳು

ಡಾ. ಕೆಳದಿ ವೆಂಕಟೇಶ ಜೋಯಿಸ್

ಚಿಕ್ಕದೇವರಾಜ ಒಡೆಯರು ಬೆಂಗಳೂರನ್ನು ತಮ್ಮ ವಶಕ್ಕೆ ತೆಗೆದುಕೊಂಡ ಮೇಲೆ ಆಡಳಿತ ಸೌಕರ್ಯಕ್ಕಾಗಿ ತಕ್ಕ ವ್ಯವಸ್ಥೆ ಮಾಡಿದರು. ಆಗ ಬೆಂಗಳೂರು ಪ್ರಾಂತದಲ್ಲಿ ವರ್ತೂರು, ಬೇಗೂರು, ವಸಂತಪುರ, ಕೆಂಗೇರಿ, ಯಶವಂತಪುರ, ಯಲಹಂಕ, ಕೃಷ್ಣರಾಜಪುರ, ಹಲಸೂರು, ಹೆಸರುಘಟ್ಟ, ಹೆಬ್ಬಾಳ ಮತ್ತು ನಾಗವಾರ ಹೀಗೆ ಹನ್ನೆರಡು ಹೋಬಳಿಗಳು ಸೇರಿದ್ದವು. ಈ ಒಂದೊಂದು ಹೋಬಳಿಗೂ ಒಬ್ಬೊಬ್ಬ ಹೋಬಳಿದಾರ್ ಅಥವಾ ಶೇಕದಾರ್ ಎಂಬ ಅಧಿಕಾರಿ ಇರುತ್ತಿದ್ದನು. ಇಡೀ ಬೆಂಗಳೂರು ಪ್ರಾಂತದ ಆಡಳಿತವನ್ನು ನೋಡಿಕೊಳ್ಳಲು ಓರ್ವ ಆಡಳಿತಾಧಿಕಾರಿ ಇದ್ದನು. ಇವನನ್ನು ಕೆಲ ಕಡೆ ಪಾರುಪತ್ತೆಗಾರ ಎಂದೂ ಕರೆದಿರುವುದಿದೆ. ಈತನು ಕೋಟೆಯ ರಕ್ಷಣೆ ಮತ್ತು ಮೇಲ್ವಿಚಾರಣೆಗಳ ಕಡೆಗೂ ಗಮನ ಕೊಡಬೇಕಾಗಿತ್ತು. ಈತನ ಕೈಕೆಳಗೆ ಕೋಟೆಯ ರಕ್ಷಣೆಗಾಗಿ ಕಿಲ್ಲೆದಾರ ಎಂಬ ಒಬ್ಬ ಅಧಿಕಾರಿ ಇರುತ್ತಿದ್ದನು.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ದಳವಾಯಿ ದೊಡ್ಡಯ್ಯ ಬೆಂಗಳೂರು ಪಟ್ಟಣದಲ್ಲಿ ಸಂಚರಿಸಿ ತನ್ನ ಕಣ್ಣಿಗೆ ಕಂಡ ಲೋಪದೋಷಗಳನ್ನು ಸರಿಪಡಿಸಲು ಪ್ರಯತ್ನಿಸಿದ. ಹೋಬಳಿ ಕೇಂದ್ರಗಳಿಗೆ ವಾರಕ್ಕೊಮ್ಮೆ ದೊಡ್ಡಯ್ಯ ಹೋಗುವುದರ ಜೊತೆ ಅಲ್ಲಿಯ ಜನರ ಕಷ್ಟ ಸುಖ ವಿಚಾರಿಸುತ್ತಿದ್ದನು. ದಳವಾಯಿ ದೊಡ್ಡಯ್ಯನು ಶಿಸ್ತಿನ ಅಧಿಕಾರಿಯಾಗಿದ್ದು ಕಂದಾಯ ವಸೂಲಿ ಮುಂತಾದ ಕೆಲಸಗಳಿಗಾಗಿ ಶಾನುಭೋಗ ತಮ್ಮಯ್ಯನೆಂಬ ಬ್ರಾಹ್ಮಣನನ್ನು ಸಹಾಯಕ್ಕಾಗಿ ನೇಮಿಸಿಕೊಂಡಿದ್ದನು. ಈ ತಮ್ಮಯ್ಯನ ಬಳಿ ಅನೇಕ ಕರಣಿಕರು, ಗುಮಾಸ್ತರು ಕೆಲಸ ಮಾಡುತ್ತಿದ್ದರು. ದಳವಾಯಿ ದೊಡ್ಡಯ್ಯನ ತರುವಾಯ ದಳವಾಯಿ ಮಾಲಾರಂಗಯ್ಯ (ದೊಡ್ಡಯ್ಯನ ಸಮೀಪ ಬಂಧು) ನೆಂಬಾತನು ಬೆಂಗಳೂರಿನ ಪಾರುಪತ್ತೆಗಾರನಾದನು. ಇವನು ವಿಭವ ಸಂವತ್ಸರದಿಂದ ಬಹುಧಾನ್ಯದವರೆಗೆ ಅಧಿಕಾರದಲ್ಲಿದ್ದನು. ಇವನ ಕಾಲದಲ್ಲಿ ವ್ಯವಸಾಯಗಾರರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿತು. ನೀರಾವರಿ ಸೌಲಭ್ಯದ ಕಡೆ ಇವನಿಗೆ ಹೆಚ್ಚಿನ ಆಸಕ್ತಿಯಿತ್ತು. ಕಂದಾಯ ವಸೂಲಿ ಕೆಲಸದಲ್ಲಿ ಮುತುವರ್ಜಿ ವಹಿಸುತ್ತಿದ್ದನು. ಮುಂದೆ ಬಂದ ಪಾರುಪತ್ತೆಗಾರನಾದ ಗುರಿಕಾರ ಮಲ್ಲರಾಜಯ್ಯನು ಮಹಾರಾಜರ ಸಮೀಪ ಬಂಧುವಾಗಿದ್ದು ಬಹಳ ದಕ್ಷತೆಯಿಂದ ಆಳ್ವಿಕೆ ನಡೆಸಿದನು. ಇವನು ಕೇವಲ ಎರಡು ವರ್ಷ ಅಧಿಕಾರದಲ್ಲಿದ್ದರೂ ಸಹ ತರಿ, ಖುಷ್ಕಿ, ಬಾಗಾಯಿತು ಜಮೀನುಗಳಿಂದ ಸರಕಾರಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದನು. ಮಲ್ಲರಾಜಯ್ಯನ ನಂತರ ಕಳಲೆ ಮನೆತನದ ದಳವಾಯಿ ನಂಜರಾಜಯ್ಯನು ಅಧಿಕಾರಕ್ಕೆ ಬಂದನು. ಇವನು ಚಿತ್ರಭಾನು ಸಂವತ್ಸರದಿಂದ ವಿರೋಧಿ ಸಂವತ್ಸರದವರೆಗೆ ಅಧಿಕಾರದಲ್ಲಿದ್ದನು. ಇವನು ಬೆಂಗಳೂರಿನ ವರ್ತಕರಿಗೆ ಹೆಚ್ಚಿನ ಪ್ರೋತ್ಸಾಹವಿತ್ತನು. ವ್ಯಾಪಾರಾಭಿವೃದ್ಧಿಯೇ ದೇಶಾಭಿವೃದ್ಧಿಗೆ ಮೂಲ ಎಂಬುದು ಇವನ ಅಭಿಪ್ರಾಯವಾಗಿತ್ತು. ಹೊರನಾಡಿನಿಂದ ಶ್ರೀಮಂತ ವ್ಯಾಪಾರಿಗಳನ್ನು ಕರೆಯಿಸಿ ಬೆಂಗಳೂರಿನಲ್ಲಿ ಅವರನ್ನು ನೆಲೆಗೊಳಿಸಿದನು.

ನಂಜರಾಜಯ್ಯನ ನಂತರ ಕಂಠೀರವಯ್ಯನೆಂಬಾತನು ಎರಡು ವರ್ಷ ಪಾರುಪತ್ತೆಗಾರನಾಗಿದ್ದನು. ಇವನು ಮತ್ತು ಇವನ ನಂತರ ಬಂದ ಲಿಂಗರಾಜಯ್ಯ ಬೆಂಗಳೂರು ಪಟ್ಟಣದ ಅನೇಕ ಸ್ಥಳಗಳಲ್ಲಿ ಕೊಳ, ಕಲ್ಯಾಣಿಗಳನ್ನು ಕಟ್ಟಿಸಿದರು. ಒಂದು ಬಳೇಪೇಟೆಯ ಉತ್ತರಭಾಗಕ್ಕೆ, ಧರ್ಮಾಂಬುಧಿಕೆರೆಯ ಪೂರ್ವ ಭಾಗದಲ್ಲಿ, ಯಶವಂತಪುರದ

ಮಾರ್ಗದಲ್ಲಿ ಆಯಾಕಾರದಲ್ಲಿ ಕಟ್ಟಲಾಗಿತ್ತು. ಪಕ್ಕದಲ್ಲಿದ್ದ ಮಠದವರೂ ಛತ್ರದವರೂ ಈ ಕಲ್ಯಾಣಿಯ ನೀರನ್ನು ಬಳಸುತ್ತಿದ್ದರು. ಅಣ್ಣಮ್ಮ ದೇವಾಲಯದ ಪಕ್ಕದಲ್ಲಿ ಒಂದು ಕಲ್ಯಾಣಿಯನ್ನು ಕಟ್ಟಲಾಗಿತ್ತು. ಯಾತ್ರಾರ್ಥಿಗಳು ಸ್ನಾನಕ್ಕೆ ಇದನ್ನು ಬಳಸುತ್ತಿದ್ದರು. ಅಕ್ಕಪಕ್ಕದವರಿಗೆ ಕುಡಿಯುವ ನೀರಿಗೆ ಇದು ಆಸರೆಯಾಗಿತ್ತು. ಉಪ್ಪಾರ ಪೇಟೆಯಲ್ಲಿ ಮತ್ತೊಂದು ಕಲ್ಯಾಣಿ ಇತ್ತು. ಇದು ಬಳೇಪೇಟೆ ನರಸಿಂಹಸ್ವಾಮಿ ಗುಡಿಯ ಸಮೀಪದಲ್ಲಿ ಇತ್ತು. ಬೆಂಗಳೂರಿನಲ್ಲಿ ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಿಕೊಡುವ ಪ್ರಯತ್ನ ಇವರ ಕಾಲದಲ್ಲಿ ಆಯಿತು.

ಲಿಂಗರಾಜಯ್ಯನ ನಂತರ ಹೆಬ್ಬಣ್ಣ ಅಥವಾ ಹಿರಿಯಣ್ಣ ಎಂಬ ಬಡಗನಾಡು ಬ್ರಾಹ್ಮಣ ಪಾರುಪತ್ತೆಗಾರಿಕೆ ನಡೆಸಿದನು. ಮೈಸೂರು ಅರಸರ ಆಪ್ತನಾಗಿದ್ದ ಇವನು ಜಯ ನಾಮ ಸಂವತ್ಸರದಿಂದ ಪ್ಲವಂಗ ನಾಮ ಸಂವತ್ಸರದವರೆಗೆ 14 ವರ್ಷ ಅಧಿಕಾರದಲ್ಲಿದ್ದನು. ಇವನಿಗೆ ಚಿಕ್ಕಪೇಟೆಯ ಕಾಶಿ ವಿಶ್ವೇಶ್ವರ ಕಂದಾಚಾರದ ಶಾನುಭೋಗ ಎಂದು ಕರೆಯುತ್ತಿದ್ದರು. ಈತನು ಚಿಕ್ಕಪೇಟೆಯ ಕಾಶಿವಿಶ್ವೇಶ್ವರ ದೇವಾಲಯದ ಬಳಿ ಒಂದು ಕಲ್ಯಾಣಿಯನ್ನು ನಿರ್ಮಿಸಿದನು. ಈ ದೇವಾಲಯದಲ್ಲಿ ಅನ್ನದಾನ ನಡೆಯುತ್ತಿದ್ದು ಸಾರ್ವಜನಿಕರು ಸ್ವಯಿಚ್ಛೆಯಿಂದ ಇದರಲ್ಲಿ ಪಾಲ್ಗೊಳ್ಳುತ್ತಿದ್ದರು. ಇವನ ಕಾಲದಲ್ಲಿ ಚಿಕ್ಕದೇವರಾಜ ಒಡೆಯರ ಆಡಳಿತ ಮುಗಿದು ಅವರ ಮಗ ಕಂಠೀರವ ನರಸರಾಜರ ಆಳ್ವಿಕೆ ಪ್ರಾರಂಭವಾಯಿತು. ಈ ಹಿರಿಯಣ್ಣನ ನಂತರ ಬೇರಿಕೆ ಶ್ರೀನಿವಾಸಯ್ಯ ಎಂಬುವನು ಪಾರುಪತ್ತೆಗಾರನಾದನು. ಇವನ ನಂತರ ಹಿರಿಯಣ್ಣನ ಬಂಧು ಬಡಗನಾಡು ವೆಂಕಣ್ಣನಿಗೆ ಪಾರುಪತ್ತೆಗಾರಿಕೆ ದೊರೆಯಿತು. ಇವನು ಕೀಲಕ ಸಂವತ್ಸರದಿಂದ ಪ್ರಮಾದೀಚ ಸಂವತ್ಸರದವರೆಗೆ ಆರು ವರ್ಷಗಳ ಕಾಲ ಅಧಿಕಾರದಲ್ಲಿದ್ದರು. ಈ ಸಮಯದಲ್ಲಿ ವೆಂಕಯ್ಯನ ಮೇಲೆ ಒಳಸಂಚು ನಡೆಸಿದ ಕೃಷ್ಣಯ್ಯ ಎಂಬುವನು ಅರಸರಿಗೆ ಚಾಡಿ ಹೇಳಿದನು. ಅರಸರು ಯೋಚಿಸದೆ ವೆಂಕಯ್ಯನನ್ನು ತೆಗೆದುಹಾಕಿ ಅವರ ಜಾಗಕ್ಕೆ ಕೃಷ್ಣಯ್ಯನನ್ನು ನೇಮಿಸಿದರು. ಇವನು ಒಂದು ವರ್ಷ ಕೆಲಸ ಮಾಡಿ ಓಡಿ ಹೋದನು. ನಂತರ ವೆಂಕಯ್ಯನು ಶ್ರೀರಂಗಪಟ್ಟಣದಲ್ಲಿ ಮಹಾರಾಜರನ್ನು ಕಂಡು ಕೃಷ್ಣಯ್ಯನ ಕುತಂತ್ರ ವಿವರಿಸಿ ಹೇಳಿದನು. ತಾನು ನಿರಪರಾಧಿ ಎಂದು ಸಾಬೀತು ಪಡಿಸಿದನು. ಇದರಿಂದ ಅವನಿಗೆ ಮತ್ತೆ ಪಾರುಪತ್ತೆಗಾರಿಕೆ ದೊರೆಯಿತು. ನಂತರ ಈತನು ಒಂದು ವರ್ಷ ಪಾರುಪತ್ತೆಗಾರನಾಗಿದ್ದನು. ಆ ವೇಳೆಗೆ ಓಡಿಹೋಗಿದ್ದ ಕೃಷ್ಣಯ್ಯನು ಹಿಂತಿರುಗಿ ಬಂದು ವೆಂಕಯ್ಯನಲ್ಲಿ ಕ್ಷಮೆ ಕೇಳಿ ಅವನೊಡನೆ ಒಟ್ಟಿಗೆ ಆಡಳಿತ ನಡೆಸಲು ಮುಂದಾದನು. ಇಬ್ಬರೂ ಒಟ್ಟಾಗಿ ಎಂಟು ವರ್ಷಕಾಲ ಪಾರುಪತ್ತೆಗಾರರಾಗಿ ಆಡಳಿತ ನಡೆಸಿದರು. (ಪ್ರಮಾದೀಚ ದಿಂದ ರಾಕ್ಷಸಾಮ ಸಂವತ್ಸರದವರೆಗೆ) ಶ್ರೀರಂಗಪಟ್ಟಣದಲ್ಲಿ ದೊಡ್ಡ ಕೃಷ್ಣರಾಜ ಒಡೆಯರ ಆಳ್ವಿಕೆ ಪ್ರಾರಂಭವಾಯಿತು. ಇವರ ಕಾಲದಲ್ಲಿ ಕತ್ತಿ ಗೋಪಾಲರಾಜಯ್ಯ ಎಂಬುವನು ಬೆಂಗಳೂರು ಪಾರುಪತ್ತೆಗಾರನಾದನು. ಈತ ನಳ ಸಂವತ್ಸರದಿಂದ ಪಿಂಗಳ ನಾಮ ಸಂವತ್ಸದವರೆಗೆ ಎರಡು ವರ್ಷಕಾಲ ಅಧಿಕಾರ ನಡೆಸಿದನು. ಈತನು ಕೆಂಗೇರಿ ಹೋಬಳಿಗೆ ಸೇರಿದ ಘಾಟೆಗರಾ ಎಂಬ ಹಳ್ಳಿಯನ್ನು ಅಗ್ರಹಾರವಾಗಿ ಪರಿವರ್ತಿಸಿ ಅದಕ್ಕೆ ನಂಜರಾಜ ಅಗ್ರಹಾರ ಎಂದು ನಾಮಕರಣ ಮಾಡಿ ಸ್ಥಳೀಯ ಬ್ರಾಹ್ಮಣರಿಗೆ ದಾನ ಮಾಡಿದನು. ಕತ್ತಿ ಗೋಪಾಲಯ್ಯನ ನಂತರ ಕಂಟೀರವಯ್ಯನೆಂಬುವನು ಕಳಾಯುಕ್ತಿ ನಾಮ ಸಂವತ್ಸರದವರೆಗೆ ಆಡಳಿತ ನಡೆಸಿದನು. ನಂತರ ಈ ಕೆಳಗೆ ಕಂಡ ಹದಿನೈದು ಜನ ಪಾರುಪತ್ತೆಗಾರರು ಕ್ರಮವಾಗಿ ಕೆಲಸವನ್ನು ನಿರ್ವಹಿಸಿದರು: 1). ಸುಂಗಯ್ಯ 2 ವರ್ಷ, 2). ಉಗ್ರಾಣದ ಸುಬ್ಬರಾಯರು 11 ವರ್ಷ, 3). ಬಾಳೂರು ವೆಂಕಣ್ಣ 1 ವರ್ಷ, 4). ಸುಂಕದ ಲಕ್ಷ್ಮೀರಮಣಯ್ಯ 1 ವರ್ಷ, 5). ಕಸಬಾ ವೆಂಕಟಗಿರಯ್ಯ 1 ವರ್ಷ, 6). ಕೋಡಂಬಳ್ಳಿ ನರಸಯ್ಯ 1 ವರ್ಷ, 7). ಅನಂತಗಿರಿ ದೇವರಸಯ್ಯ, 1 ವರ್ಷ, 8). ಅಪ್ಪರೆಡ್ಡಿ ಕೆಂಪೇಗೌಡ, 1 ವರ್ಷ, 9). ಅಪ್ಪರೆಡ್ಡಿ ಲಿಂಗನರಸಯ್ಯ, 1 ವರ್ಷ, 10). ಕೋರಾದಾಸಪ್ಪ 1 ವರ್ಷ, 11). ಕೆಂಚಬಸೆಟ್ಟಿ, 1 ವರ್ಷ, 12). ಅಚ್ಚಣ್ಣ, 1 ವರ್ಷ, 13). ಚನ್ನರಾಜಯ್ಯ, 1 ವರ್ಷ, 14). ತಿಮ್ಮರಾಜಯ್ಯ 1 ವರ್ಷ.

ಕೆಂಚಬಸೆಟ್ಟಿ ಕಾಲದಲ್ಲಿ ಆಡಳಿತವು ಬಹಳ ಮಟ್ಟಿಗೆ ಹದಗೆಟ್ಟು ಆತನು ಅನೇಕ ಅಪಾದನೆಗಳಿಗೆ ಗುರಿಯಾದನು. ಆದ ಕಾರಣ ಮೈಸೂರು ದೊರೆಗಳು ವಿಚಾರಣೆ ನಡೆಸಿ ಆತನನ್ನು ಶಿಕ್ಷೆಗೆ ಗುರಿಪಡಿಸಿ, ಪಾರುಪತ್ತೆದಾರ್ ಕೆಲಸದಿಂದ ವಜಾ ಮಾಡಿದರು. ಇವನಾದ ಮೇಲೆ ಮೂರು ಮಂದಿ ಪಾರುಪತ್ತೆಗಾರರು ಅಂದ್ರೆ ಅಚ್ಚಣ್ಣ, ಚೆನ್ನರಾಜಯ್ಯ, ತಿಮ್ಮರಾಜಯ್ಯ ಕೆಲಸ ಮಾಡಿದರು. ಕಡೆಯವನಾದ ತಿಮ್ಮರಾಜಯ್ಯನ ಕಾಲದಲ್ಲಿ ಮೈಸೂರು ಅರಸರು ತಮ್ಮ ಅಧಿಕಾರವನ್ನೆಲ್ಲಾ ಕಳೆದುಕೊಂಡು ಹೈದರಾಲಿಯ ಅಧಿಕಾರಕ್ಕೆ ಒಳಪಟ್ಟು ಹೆಸರಿಗೆ ಮಾತ್ರ ರಾಜರಾಗಿದ್ದರು.

ಬೆಂಗಳೂರು ಪ್ರಾಂತ್ಯದ ಜಹಗೀರುದಾರನಾದ ಮೇಲೆ ಹೈದರಾಲಿಯು ಬೆಂಗಳೂರನ್ನೇ ತನ್ನ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಇಲ್ಲಿಂದಲೇ ಎಲ್ಲ ಪತ್ರ ವ್ಯವಹಾರಗಳನ್ನೂ ನಡೆಸುತ್ತಿದ್ದನು. ಅದೇ ಸಮಯದಲ್ಲಿ ಹೈದರಾಲಿಯು ರಾಜ್ಯದಾದ್ಯಂತ ತನ್ನ ಕಡೆಯವರನ್ನೇ ಅಧಿಕಾರಿಗಳನ್ನಾಗಿ ನೇಮಿಸಿದನು. ಹೀಗಾಗಿ ಬೆಂಗಳೂರಿನ ಪಾರುಪತ್ತೇಗಾರರ ಬದಲಾಗಿ ತನ್ನ ಖಿಲ್ಲೇದಾರನಾಗಿದ್ದ ಕಬೀರ್ ಬೇಗ್ ಎಂಬಾತನನ್ನು ಅಮಲ್ದಾರನನ್ನಾಗಿ ನೇಮಿಸಿದನು.

ಬೆಂಗಳೂರು ತನ್ನ ವಶಕ್ಕೆ ಬಂದ ಮೇಲೆ ಹೈದರಾಲಿಯು ಮಾಡಿದ ಮೊದಲ ಕೆಲಸ ಕೋಟೆಗಳ ಪುನರ್ನಿರ್ಮಾಣ. ಆಗಿನ ಕಿಲ್ಲೇದಾರ್ ಇಬ್ರಾಹಿಂ ಸಾಹೇಬ ಕೋಟೆಯ ಗೋಡೆಗಳನ್ನು ಕಲ್ಲಿಂದ ಕಟ್ಟಿಸಿದನು. ಸುಮಾರು 72 ತೋಪುಗಳನ್ನು ಕೋಟೆಯ ಮೇಲೆ ಸ್ಥಾಪಿಸಲಾಯಿತು. ಬೆಂಗಳೂರಿನಲ್ಲಿ ಬಂದೂಕು ಮತ್ತು ತೋಪಿನ ಕಾರ್ಖಾನೆ ಸ್ಥಾಪಿಸಲ್ಪಟ್ಟಿದ್ದವು. ಹೈದರನ ಕಾಲದಲ್ಲಿ ಕಿಲ್ಲೇದಾರರುಗಳಾಗಿ 1). ಇಬ್ರಾಹಿಂ ಸಾಹೇಬ್, 10 ವರ್ಷ, 2). ಹೊಸೇನ್ ಸಾಹೇಬ್, 2 ವರ್ಷ, 3). ಮಿರ್ಜಾ ಇಸ್ಮಾಯಿಲ್ ಹೊಸೇನ್ ಬೇಗ್, 6 ವರ್ಷ,

4). ಹೈದರ್ ಹುಸೇನ್, 5 ವರ್ಷ, ಒಟ್ಟು 23 ವರ್ಷಗಳು (ಹೈದರಾಲಿಯು ಬೆಂಗಳೂರನ್ನು ವಶಕ್ಕೆ ತೆಗೆದುಕೊಂಡದ್ದು 1759ರಲ್ಲಿ ಮರಣ ಹೊಂದಿದ್ದು 1782ರಲ್ಲಿ ಅಂದರೆ 23 ವರ್ಷಗಳ ಕಾಲ ಈ ಕಿಲ್ಲೇದಾರರು ಕೆಲಸ ಮಾಡಿದರು.

ಹೈದರನ ಕಾಲದಲ್ಲಿ ಇದ್ದ ಬೆಂಗಳೂರು ತಾಲ್ಲೂಕು ಅಮಲ್ದಾರರು

(1). ಕಬೀರ್ ಬೇಗ್, 2 ವರ್ಷ, (2). ಜಾಫರ್ ಅಲಿಖಾನ್, 8 ವರ್ಷ, (3). ಗುಲಾಂ ರಜ್ಜ, 3 ವರ್ಷ, (4). ದಾಸಪ್ಪ, 9 ವರ್ಷ ಟಿಪ್ಪು ಅಮಲ್ದಾರ್ ದಾಸಪ್ಪನನ್ನು ವಜಾ ಮಾಡಿ ಅವನ ಸ್ಥಾನಕ್ಕೆ ಗುಲಾಂ ಹೈದರ್ ಎಂಬುವನನ್ನು ನೇಮಕ ಮಾಡಿದನು. ಈತ 8 ವರ್ಷಗಳ ಕಾಲ ಬೆಂಗಳೂರಿನ ಅಮಲ್ದಾರನಾಗಿದ್ದನು. ಅಲ್ಲದೆ ಅರ್ಕಾಟ್ ಪ್ರದೇಶದ ರಾಯಜೀಯವರ ಅಳಿಯ ಜೋಗೀ ಪಂತ್ (ಜೋಗೀ ಪಂಡಿತ್)ನನ್ನು ಟಿಪ್ಪು ಬೆಂಗಳೂರು ಪ್ರದೇಶಕ್ಕೆ ಅಸೂಫ (ಜಿಲ್ಲಾಧಿಕಾರಿಗೆ ಸಮ)ನಾಗಿ ನೇಮಿಸಿದನು. ಅವನ ಅಧಿಕಾರದ ದಕ್ಷತೆ ಅವನಿಗೆ ರಾಯಜಿ ಎಂಬ ಬಿರುದನ್ನು ತಂದುಕೊಟ್ಟಿತು. ಇವನ ಕೈಕೆಳಗೆ ಬೆಂಗಳೂರು ಪ್ರಾಂತ್ಯದ ಎಲ್ಲಾ ಅಮಲ್ದಾರರು ಬರುವಂತೆ ಹುಕುಂ ಹೊರಡಿಸಲಾಗಿತ್ತು. ಇವನು ಕ್ರೋಧಿ ನಾಮ ಸಂವತ್ಸರದಿಂದ ಸಾಧಾರಣ ಸಂವತ್ಸರದವರೆಗೆ ಏಳು ವರ್ಷಕಾಲ ಆಡಳಿತ ನಡೆಸಿದನು. ಮುಂದೆ ಅವನು ಕೊಲೆಯಾದನು. ಇಂಗ್ಲೀಷರಿಂದ ಪುನಃ ಟಿಪ್ಪೂ ಬೆಂಗಳೂರನ್ನು ವಶಪಡಿಸಿಕೊಂಡ ಮೇಲೆ ಗುಲಾಂ ಹೈದರನನ್ನು ವಜಾ ಮಾಡಿ ಹೈದರ್ ಬೇಗ್ ಎಂಬುವನನ್ನು ಅಮಲ್ದಾರನನ್ನಾಗಿ ನೇಮಿಸಿದನು. ಇವನು ಎರಡು ವರ್ಷ ಕೆಲಸ ಮಾಡಿದನು. ಈತನ ಬಳಿಕ ಮಸ್ತಾನ್ ಸಾಹೇಬ್ ಅಮಲ್ದಾರನಾಗಿ ಒಂದು ವರ್ಷ ಆಡಳಿತ ನಡೆಸಿ ಮುಂದೆ ಅಸೂಫ ಪದವಿಗೇರಿದನು. ಅವನ ಜಾಗದಲ್ಲಿ ಮೀರ್ ಮಹಮದ್ ನೇಮಕವಾಗಿ ಒಂದು ವರ್ಷಕಾಲ ಆಡಳಿತ ನಡೆಸಿದನು. ಇವನ ನಂತರ ಮಹಮದಾಲಿ ಮಹಕರ್ ಎಂಬಾತನು

ಅಮಲ್ದಾರನಾಗಿ ನಂತರ ಅಸೂಫ್ ಆಗಿ ರಾಕ್ಷಸ ಸಂವತ್ಸರದಿಂದ ಸಿದ್ಧಾರ್ಥಿ ಸಂವತ್ಸರದವರೆಗೆ 5 ವರ್ಷ ಆಳ್ವಿಕೆ ನಡೆಸಿದನು. ಈ ಐದು ವರ್ಷಗಳಲ್ಲಿ ಅಮಲ್ದಾರರಾಗಿ (1). ಅಬ್ದುಲ್ ಕರೀಂ, ಒಂದು ವರ್ಷ ಆರು ತಿಂಗಳು, (2). ಗುಲಾಂ ಮೋಹಿಯುದ್ದೀನ್, ಒಂದು ವರ್ಷ ಆರು ತಿಂಗಳು, (3). ಗುಲಾಂ ಮಹಮದ್, ಎರಡು ವರ್ಷ ಆಡಳಿತ ನಡೆಸಿದರು. ಟಿಪ್ಪು ನಂತರ ದಿವಾನ್ ಪೂರ್ಣಯ್ಯನವರು ಅಧಿಕಾರದಲ್ಲಿದ್ದಾಗ (1). ವೆಂಕಟಯ್ಯ, 1 ವರ್ಷ, (2). ಶೇಷಗಿರಿರಾವ್, 1 ವರ್ಷ ಮತ್ತು ಮಾಧವರಾವ್, 6 ವರ್ಷ ಕಾಲ ಅಮಲ್ದಾರರಾಗಿ ಆಡಳಿತ ನಡೆಸಿದರು.

51. ಬೆಂಗಳೂರಿನ ಹಳೆಯ ಪೇಟೆಯ ಗರಡಿಗಳು

ಹರಿಹರ ಶ್ರೀನಿವಾಸರಾವ್

'ಗರುಡ ಎಂದರೆ ಅಂಗ ರಕ್ಷಕ. ಅಂಗ ರಕ್ಷಕನಿಗೆ ಮಲ್ಲವಿದ್ಯೆ ಅಥವಾ ಕುಸ್ತಿಯ ಜ್ಞಾನ ಅವಶ್ಯ. ಅದನ್ನು ರೂಢಿಮಾಡುವ ಸ್ಥಳ ಗರಡಿ. ಇದು ಕುಸ್ತಿ ಶಾಲೆ ಅಥವಾ ಕುಸ್ತಿ ಪಟುಗಳು ತರಬೇತಿಗೊಳ್ಳುವ ಸ್ಥಳ. ರಾಮಾಯಣ, ಮಹಾಭಾರತಗಳಿಂದಲೂ ಉಲ್ಲೇಖಿತವಾಗಿ, ಮಾನಸೋಲ್ಲಾಸ, ಪಂಪಭಾರತ, ರನ್ನನ ಗದಾಯುದ್ಧ, ಶಿವತತ್ವರತ್ನಾಕರ ಮುಂತಾದ ಕಾವ್ಯಗಳಲ್ಲಿ ಮಲ್ಲಯುದ್ಧದ ಬಗ್ಗೆ ವಿವರಣೆ ಸಿಗುತ್ತದೆ. ಈ ವಿದ್ಯೆಯಲ್ಲಿ ನಿಷ್ಣಾತರಾಗಿ ತಮ್ಮ ಹೆಸರಿನ ಕೊನೆಗೆ 'ಮಲ್ಲ' ಎನ್ನುವ ಉಪನಾಮವನ್ನೇ ಸೇರಿಸಿಕೊಂಡಿರುವುದಕ್ಕೆ ಆಹವ ಮಲ್ಲ, ತ್ರಿಭುವನ ಮಲ್ಲ ಇತ್ಯಾದಿ ಹೆಸರುಗಳು ಉದಾಹರಣೆಯಾಗಿವೆ. ಇವುಗಳು ಬಿರುದುಗಳಾಗಿಯೂ ಶಾಸನೋಕ್ತವಾಗಿವೆ. ಆದ್ದರಿಂದ ಪ್ರಾಚೀನ ರಾಜರು ಅಂಗಸಾಧನೆಯೊಂದಿಗೆ ಬೌದ್ಧಿಕವಾಗಿಯೂ ಉನ್ನತಿಯನ್ನು ಹೊಂದಿರುವುದು ತಿಳಿದುಬರುತ್ತದೆ.

ಈ ನೆಲೆಯಿಂದ ಬೆಂಗಳೂರಿನ ಹಳೆಯ ಪೇಟೆಗಳಲ್ಲಿ ಕಂಡುಬರುವ, ಅಲ್ಲದೆ ಕೆಲವು ಹೆಸರಿಗೆ ಮಾತ್ರ ಉಳಿದಿರುವಂಥ ಗರಡಿ ಮನೆಗಳ ಪಟ್ಟಿ ಹೀಗಿದೆ.

ಕ್ರ.ಸ.	ಹೆಸರುಗಳು	ಪೇಟೆ/ಗಲ್ಲಿಗಳು	ಇಂದಿನ ಸ್ಥಿತಿ
1.	ಕುಂಜಣ್ಣನವರ ಗರಡಿ	ತಿಗಳರ ಪೇಟೆ	ಇದೆ
2.	ಅಣ್ಣಯ್ಯಪ್ಪನವರ ಗರಡಿ	ತಿಗಳರ ಪೇಟೆ	ಇದೆ
3.	ವೆಂಕಟದಾಸಪ್ಪನವರ ಗರಡಿ	ದೊಡ್ಡಪೇಟೆ	ಇದೆ
4.	ಗಾಣಿಗರ ಗರಡಿ	ಚೆನ್ನಕೇಶವ ದೇವಸ್ಥಾನದ ರಸ್ತೆ	ಇಲ್ಲ
5.	ಚಿಕ್ಕ ಅಣ್ಣೆಮ್ಮ ಗರಡಿ	ಕಬ್ಬನ್ ಪೇಟೆ	ದೇವಸ್ಥಾನ ಕಟ್ಟುತ್ತಿದ್ದಾರೆ
6.	ಆನೆಕಲ್ಲಪ್ಪನ ಮಠದ ಗರಡಿ	ಕಬ್ಬನ್ ಪೇಟೆ	ಷಾಪಿಂಗ್ ಕಾಂಪ್ಲೆಕ್ಸ್ ಆಗಿದೆ
7.	ಮುರಾರಿ ಸ್ವಾಮಿ ಗರಡಿ	ಅರಳೇ ಪೇಟೆ	ಇದೆ
8.	ಬೀರೇದೇವರ ಅಥವಾ ಪೈಲ್ವಾನ್ ದಾಸಪ್ಪನವರ ಗರಡಿ	ಸೂಪರ್ ಟಾಕೀಸ್ ಪಕ್ಕದ ಗಲ್ಲಿ	ಇದೆ

9.	ಚಿಕ್ಕಗರಡಿ	ಶೆಟ್ಟಿ ಮುದ್ದಣ್ಣ ಗಲ್ಲಿ	ಇದೆ
10.	ಅರಳೇಪೇಟೆ ಗುರು ಮಹಂದಾತ್‌ರವರ ದೊಡ್ಡಗರಡಿ	ಅರಳೇ ಪೇಟೆ	ಇದೆ
11.	ನಾನಾರಾವ್ ಗರಡಿ ಭಾವಸಾ ಕ್ಷತ್ರಿಯರು ನಡೆಸುತ್ತಿದ್ದಾರೆ.	ಬಳೇಪೇಟೆ	ಇದೆ
12.	ಜಟ್ಟಿಗರಡಿ	ಬಿ.ವಿ.ಕೆ ಐಯ್ಯಂಗಾರ್ ರಸ್ತೆ ಟೆಂಪೂ ನಿಲ್ದಾಣದ ಹತ್ತಿರ	ರಾಮ ಮಂದಿರ ಕಟ್ಟುತ್ತಿದ್ದಾರೆ
13.	ಬಳೇಗರಡಿ	ಬಳೇಪೇಟೆ	ಇದೆ
14.	ಭೋರಿಮುನಿಯಪ್ಪ ಅವರ ಗರಡಿ	ಸೂಪರ್ ಟಾಕೀಸ್ ಹತ್ತಿರ	ಇದೆ

ಮೇಲೆ ಹೇಳಿದ ಒಟ್ಟು 14 ಗರಡಿಗಳಲ್ಲಿ 3 ಮಾತ್ರವೇ ಸ್ಥಿತ್ಯಂತರ ಹೊಂದಿರುವುದನ್ನು ಗಮನಿಸಿ. ಇಲ್ಲಿಯ ಪ್ರತಿ ಚದರ ಮೀಟರ್ ಜಾಗದ ಬೆಲೆ ಕೆಲವು ಸಾವಿರ ರೂಪಾಯಿಗಳು! ಹೀಗಿದ್ದು ಇಲ್ಲಿಯ ಮಹಾನ್ ಜನಪದರು ಕೇವಲ ಅಭಿಮಾನ, ಜನಸೇವೆಯನ್ನೇ ಪ್ರಮುಖ ಗುರಿಯಾಗಿಸಿಕೊಂಡು ಥಳಕು ಬಳುಕಿನ ಜಿಮ್ಸ್‌ಗಳಿಗೆ ಮಾರುಹೋಗದೇ ದೇಶೀಯ ರೀತಿಯಲ್ಲೇ ಅಂಗಸಾಧನೆಯನ್ನು ಬಡಹುಡುಗರಿಗೆ ಮತ್ತ ಅಂಗಸಾಧನೆಯಲ್ಲಿ ಇಚ್ಛೆ ಇದ್ದು ತೊಡಗಿಸಿಕೊಳ್ಳುವವರಿಗೆ ಕಡಿಮೆ ವೆಚ್ಚ ಅಥವಾ ಉಚಿತವಾಗಿಯೇ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವುದು ಆಶ್ಚರ್ಯ ಮತ್ತು ಕುತೂಹಲವನ್ನುಂಟು ಮಾಡುತ್ತದೆ. ಬೆಂಗಳೂರಿನ ಗರಡಿಗಳು ಕೇವಲ ರೌಡಿಗಳನ್ನು ತಯಾರಿಸುತ್ತವೆ ಎಂದು ಬೊಬ್ಬೆ ಹಾಕುವ ಪತ್ರಿಕೆಗಳವರು ಇಲ್ಲಿ ನಡೆವ ಅಂಗಸಾಧನೆ, ಶಿಸ್ತು, ಸಂಯಮ ಶೀಲತೆ, ಪರಿಶ್ರಮಗಳನ್ನೊಮ್ಮೆ ನೋಡಿ ಬಂದರೆ ಅವರ ಮನಸ್ಸು, ಆಲೋಚನೆಗಳು ಧನಾತ್ಮಕವಾಗಿ ಪರಿವರ್ತನೆಗೊಳ್ಳುವುದರಲ್ಲಿ ಸಂಶಯವಿಲ್ಲ.

ಸ್ಥಳನಾಮದ ಹಿನ್ನಲೆಯಲ್ಲಿ ಈ ಗರಡಿಗಳ ಹೆಸರುಗಳನ್ನು ಹೀಗೆ ಪರಿಶೀಲಿಸಲಾಗಿದೆ.

ಅ) ಕುಲಕ್ಕೆ ಸಂಬಂಧಿಸಿದಂತೆ ಇರುವ ಹೆಸರು

ಗಾಣಿಗರ ಗರಡಿ–ಗಾಣಿಗರು

ನಾನಾರಾವ್ ಗರಡಿ–ಭಾವಸಾರ ಕ್ಷತ್ರಿಯ ಜನಾಂಗದವರು

ಆ) ಜಟ್ಟಿಗಳನ್ನೇ ತಯಾರಿಸುವ ಹೆಸರು–ಜಟ್ಟೀಗರಡಿ

ಇ) ದೊಡ್ಡಗರಡಿ, ಚಿಕ್ಕಗರಡಿ–ವಿಸ್ತೀರ್ಣವನ್ನು ತಿಳಿಸುತ್ತದೆ.

ಈ) ಜನಪದ ದೇವರ ಹೆಸರು–ಚಿಕ್ಕ ಅಣ್ಣೆಮ್ಮ, ಬೀರೇ ದೇವರು

ಉ) ಮಠಗಳು–ಅನೇಕಲ್ಲಪ್ಪನ ಮಠ, ಮುರಾರಿ ಸ್ವಾಮಿಮಠ

ಊ) ವ್ಯಕ್ತಿ ವಿಶೇಷ–ಕುಂಜಣ್ಣನವರು–ಸುಮಾರು 100 ವರ್ಷದ ಹಿಂದೆ ಇದ್ದವರು

ಅಣ್ಣಯ್ಯಪ್ಪ–ಪೈ. ಅಣ್ಣಯ್ಯಪ್ಪ ರಸ್ತೆಯ ಹೆಸರೇ ಇದೆ.

ವೆಂಕಟದಾಸಪ್ಪ, ನಾನಾರಾವ್.

ಒಂದು ಹೊತ್ತಿಗೆಯಾಗುವಷ್ಟು ವಿಷಯಗಳು ಸ್ಥಳನಾಮಗಳ ಬಗ್ಗೆ ಇದೆ. ಇದು ಒಂದು ಕ್ಷಕಿರಣವಷ್ಟೇ.

ಇತಿಹಾಸದ ಪುಟಗಳಲ್ಲಿ

ಬೆಂಗಳೂರಿನ ಇತಿಹಾಸ ಪುಸ್ತಕದಲ್ಲಿ ಶ್ರೀಯುತ ಬ.ನ. ಸುಂದರರಾಯರು ಹೀಗೆ ದಾಖಲಿಸಿದ್ದಾರೆ. "ಬೆಂಗಳೂರಿನಲ್ಲಿ ಕತ್ತೀಗೋಪಾಲರಾಜ ಆರಸರು ಪಾರುಪತ್ತೇದಾರರಾಗಿದ್ದರು. (ಪುಟ. 136. ಬೆಂಗಳೂರಿನ ಪೇಟೆ ಕೋಟೆಗಳೆರಡೂ ಅಭಿವೃದ್ಧಿಯಾದದ್ದು ಇವರ ಕಾಲದಲಿಯೇ) ಇವರು ಕೋಟೆಯೊಳಗಡೆ ಒಂದು ಭವ್ಯವಾದ ಬಂಗಲೆಯಲ್ಲಿ ವಾಸಿಸುತ್ತಿದ್ದರು. ಆಗ ಬೆಂಗಳೂರಿನ 'ಆರಳೇ ಪೇಟೆ' ಯಲ್ಲಿ ಒಂದು ಗರಡಿ ಮನೆಯಿತ್ತು (ಪುಟ. 137). ಹೈದರನು ತನ್ನ ಬಿಡುವಿನ ವೇಳೆಯಲ್ಲಿ ಆ ಗರಡಿ ಮನೆಗೆ ಹೋಗುತ್ತಿದ್ದನು. ಅಲ್ಲಿ ಲಾಠಿ ಬರಸೆ, ಕುಸ್ತಿ, ಮೊದಲಾದ ಸಮರೋಚಿತವಾದ ಅಂಗಸಾಧನೆಗಳನ್ನು ಕಲಿತುಕೊಂಡು ಕಟ್ಟುಮಸ್ತಾದ ಆಳಾದನು.

ದಿನಗಳೆದಂತೆ ಹೈದರಾಲಿಯು ಯುವಕನಾಗಿ ಗಟ್ಟಿಮುಟ್ಟಾದ ಆಳಾದನು. ಅವನಿಗೆ ಕತ್ತೀಗೋಪಾಲರಾಜ ಆರಸರು, ಮನೆಗೆಲಸವನ್ನು ತಪ್ಪಿಸಿ, ಬೇರೆ ಜವಾಬ್ದಾರಿಯುತವಾದ ಕೆಲಸ ವಹಿಸಿದರು. ಹೀಗಿರುವಾಗ ಕ್ರಿ.ಶ. 1749ರಲ್ಲಿ ಚಿಕ್ಕಪ್ಪಗೌಡನೆಂಬುವನು ದೇವನಹಳ್ಳಿಯಲ್ಲಿ ಪಾಳೇಗಾರನಾಗಿದ್ದಾಗ ಮೈಸೂರು ಸೈನಿಕರು ದೇವನಹಳ್ಳಿಗೆ ಮುತ್ತಿಗೆ ಹಾಕುವ ಸಂದರ್ಭ ಬಂದೊದಗಿತು. ಕತ್ತೀಗೋಪಾಲ ಅರಸರೇ ಈ ಮುತ್ತಿಗೆಯ ದಳಪತಿ ಆಗಿದ್ದರು. ಈ ಮುತ್ತಿಗೆ 9 ತಿಂಗಳ ಕಾಲ ನಡಿಯಿತು. ಇದರಲ್ಲಿ ಹೈದರನೂ ಸೈನಿಕನಾಗಿ ಸೇರಿಕೊಂಡಿದ್ದನು. ಈ ಮುತ್ತಿಗೆಯಲ್ಲಿ ತೋರಿದ ಧೈರ್ಯ, ಸಾಹಸಗಳು ಆಂದಿನ ಸರ್ವಾಧಿಕಾರಿಯಾಗಿದ್ದ ನಂಜರಾಜಯ್ಯನ ಮೆಚ್ಚುಗೆ ಗಳಿಸಿದವು. ಅನಂತರ ಹೈದರನು ಐವತ್ತು ಸಾವಿರ ಕುದುರೆ ಸವಾರರು ಮತ್ತು ಇನ್ನೂರು ಕಾಲಾಳುಗಳಿದ್ದ ಪಡೆಯ ದಳಪತಿಯಾಗಿ ನೇಮಿಸಲ್ಪಟ್ಟನು. ಇದೇ ಸಮಯದಲ್ಲಿ ಹೈದರನು ಬೆಂಗಳೂರಿನ ಗರಡಿಮನೆ ಪೈಲ್ವಾನರನ್ನೆಲ್ಲಾ ಬಳಸಿಕೊಂಡನು. ಇಲ್ಲಿಯ ಎಲ್ಲಾ ಗರಡಿಮನೆಗಳು ಸ್ಥಾಪನೆಗೊಂಡಿದ್ದು ಯಾವಾಗ? ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟವಾದರೂ ದೊಡ್ಡಗರಡಿ ಅಲ್ಲಿರುವ ಶಿಲಾಲೇಖದ ಪ್ರಕಾರ ಕ್ರಿ.ಶ. 1680 ಆಂದರೆ ಈಗ್ಗೆ 318 ವರ್ಷಗಳ ಹಿಂದೆ! ಅಷ್ಟೇ ಅಲ್ಲ ಕತೀಗೋಪಾಲರಾಯರ ಮನೆಯಲ್ಲಿದ್ದ ಹೈದರ್ ಅರಳೇಪೇಟೆಯಲ್ಲಿರುವ ಈ ದೊಡ್ಡ ಗರಡಿಯಲ್ಲಿಯೇ ಅಂಗಸಾಧನೆ ಮಾಡಿ, ಕೋಟೆಯೊಳಗಿನ ಪೈಲ್ವಾನರುಗಳ ನಿಕಟ ಸಂಬಂಧವಿರಿಸಿಕೊಂಡಿದ್ದ ರಿಂದಲೇ ಅವನು ಕ್ರಿ.ಶ. 1749ರಲ್ಲಿ ದೇವನಹಳ್ಳಿಯ ಮುತ್ತಿಗೆಯಲ್ಲಿ ಗೆದ್ದು ದಳಪತಿಯಾಗಿದ್ದಿರಬೇಕೆನ್ನುವ ಸತ್ಯ ಸಂಗತಿಗೆ ಒತ್ತು ಸಿಗುತ್ತದೆ. ಈ ದೊಡ್ಡ ಗರಡಿಯು 1927 ಮತ್ತು ಕ್ರಿ. ಶ.1973 ಹೀಗೆ ಎರಡು ಸಲ ಪುನರ್ ನಿರ್ಮಾಣಗೊಂಡಿರುವುದಕ್ಕೂ ದಾಖಲೆಗಳಿವೆ. ಇಂದಿಗೂ ಗುರು ಮಹಾಂದಾತ್ ದೊಡ್ಡಗರಡಿ ಎಂದೇ ಕರೆಯಲ್ಪಡುವ ಈ ಗರಡಿಯ ಸಂಸ್ಥಾಪಕರು ಮಹಾಂದಾತ್ ಗೋಪಾಲರಾಯರು. ಉತ್ತರ ಭಾರತದ ಕಾನ್ಪುರದ ಕಡೆಯಿಂದ ಬಂದವರಾಗಿಯೂ, ಬ್ರಹ್ಮಚಾರಿಗಳಾಗಿದ್ದು ಕುಸ್ತಿಪಟ್ಟುಗಳನ್ನು ಸ್ವತಃ ಹೇಳಿಕೊಡುತ್ತಿದ್ದರಂತೆ. ಇನ್ನೊಂದು ಕುತೂಹಲಭರಿತ ಸಂಗತಿ ಎಂದರೆ ಮೊದಲು ಈ ಗರಡಿಯು ರಾಮಭಜನಾ ಮಂದಿರವಾಗಿದ್ದು, ಅನಂತರ

ಗರಡಿಮನೆಯಾಗಿ ಪರಿವರ್ತಿತವಾಗಿದೆ. ಇದರ ಆಡಳಿತವನ್ನು ಗೋಣಿಗ ಜನಾಂಗದವರು ನೋಡಿಕೊಳ್ಳುತ್ತಿದ್ದರು. ಅವರಿಗೂ ಮತ್ತು ಗೌಡ ಜನಾಂಗದವರಿಗೂ ಭಿನ್ನಾಭಿಪ್ರಾಯ ಬಂದು ಕೊನೆಗೆ ಪೈಲ್ವಾನ್ ತಿಮ್ಮರಾಯಪ್ಪನರ ಸುಪರ್ದಿಗೆ ಬಂದಿತು. ಇದು ನಡೆದ ಕಾಲ ತಿಳಿದಿಲ್ಲವಾದರೂ ಅವರು ಸಮಾಜ ಸೇವಕರಾಗಿದ್ದರೆನ್ನಲು ಈಗ ಅವರ ಹೆಸರಿನಲ್ಲಿಯೇ ಇರುವ ಒಂದು ರಸ್ತೆ ತಿಳಿಸುತ್ತದೆ. ಅವರ ನಂತರದ ವಂಶಾವಳಿ ಹೀಗಿದೆ.

ಪೈ॥ ತಿಮ್ಮರಾಯಪ್ಪ

|

ಪೈ॥ ಕೆಂಪಣ್ಣ ರಾಮಣ್ಣ

|

ಪುರುಷೋತ್ತಮ

ಪೈ॥ ಕೆಂಪಣ್ಣನವರು ಎನ್. ಜಿ. ಈ. ಎಫ್. ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ತಮ್ಮ ಸೈಟನ್ನೇ ಮಾರಿ ಮುತ್ತಾತ ತಿಮ್ಮರಾಯಪ್ಪನವರ ಹೆಸರಿನಲ್ಲಿ 1991, 1993 ಹಾಗೂ 1995ರಲ್ಲಿ ರಾಜ್ಯ ಮಟ್ಟದ ಕುಸ್ತಿ ಪಂದ್ಯಗಳನ್ನು ನಡೆಸಿದ್ದಾರೆ.

ಅಣ್ಣಯ್ಯಪ್ಪನವರ ಗರಡಿಯ ಸ್ಥಾಪನೆ ಅಲ್ಲಿಯೇ ಬರೆದಿರುವಂತೆ ಕ್ರಿ. ಶ. 1890. ಈಗಿನ ಕಟ್ಟಡದ ಪುನರ್ ನಿರ್ಮಾಣವಾಗಿರುವುದು ಕ್ರಿ. ಶ. 1949. ಕುಂಜಣ್ಣನವರ ಗರಡಿ ಪ್ರಾರಂಭವಾದದ್ದು ಸುಮಾರು ಒಂದು ನೂರು ವರ್ಷಗಳ ಹಿಂದೆ ಎಂದು ಅದನ್ನು ನಡೆಸುತ್ತಿರುವ ಶ್ರೀ ಪೈ। ಜಯರಾಂ ಅವರ ಅಭಿಪ್ರಾಯ. ಇವರ ಸಮಾಜ ಸೇವೆ ಕುಸ್ತಿ ಮತ್ತು ಅಂಗ ಸಾಧನೆಯನ್ನು ಗುರ್ತಿಸಿ, 1998ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯವರು ಕೆಂಪೇಗೌಡ ಪ್ರಶಸ್ತಿಯನ್ನು ನೀಡಿದ್ದಾರೆ.

ಗರಡಿ ಮನೆಯಲ್ಲಿ ಉಪಯೋಗಿಸುವ ಕೆಲವು ಸಾಮಾಗ್ರಿಗಳು:

1. ಸಾಂಬ್ರಾಣಿ ಕಲ್ಲು – ಚಿಕ್ಕದು. ಇದನ್ನು ಮುಂಗೈ ವ್ಯಾಯಾಮಕ್ಕೆ ಉಪಯೋಗಿಸುತ್ತಾರೆ.
2. ದೊಡ್ಡ ಸಾಂಬ್ರಾಣಿ ಕಲ್ಲು – ಕತ್ತಿನ ಮತ್ತು ಭುಜಗಳನ್ನು ಬಲಗೊಳಿಸಲು ಇದು ದುಂಡಗಿದ್ದು, ಮಧ್ಯದಲ್ಲಿ 3/4 ಅಡಿ ವ್ಯಾಸದ ರಂಧ್ರ ಹೊಂದಿದ್ದು, ಹೊರಗಡೆ ವ್ಯಾಸ 2 $^1/_4$' ಇರುತ್ತದೆ. ಭಾರು ಸು. 20 ಕೆ. ಜಿ.
3. ಬಲದಂಡೆ – ಭುಜಗಳಿಗೇ ಇರುವ ಪ್ರತ್ಯೇಕ ಉಪಕರಣ.
4. ಕಲ್ಲಿನ ಗುಂಡುಗಳು : ಬಾಹು ಬೆನ್ನುಗಳಿಗೆ ಇದನ್ನು ಅವುಗಳ ಮೇಲೆ ತಿರುಗಿಸಿ, ಗಟ್ಟಿಗೊಳ್ಳಲು ಸಹಾಯ ಮಾಡುತ್ತವೆ. ಇವು ಗಾತ್ರ, ತೂಕಗಳಲ್ಲಿ ಚಿಕ್ಕವೂ–ದೊಡ್ಡವೂ ಇರುತ್ತವೆ.
5. ಮಲ್ಲಕಂಭ–ಹುಣಸೇ ಮರದಿಂದ ಮಾಡಿರುವ ಸುಮಾರು 5 ಅಡಿ ಎತ್ತರವಿರುವ ಇವುಗಳಿಗೆ ಎಣ್ಣೆಯನ್ನು ಹಚ್ಚಿಯೂ ರೋಚಕವಾದ ವ್ಯಾಯಾಮ ಮಾಡುತ್ತಾರೆ. ಕುಂಜಣ್ಣನವರ ಗರಡಿ, ಮಹಾಂದಾತ ಅವರ ದೊಡ್ಡಗರಡಿಯಲ್ಲಿ ನೋಡಬಹುದಾಗಿದೆ.
6. ಗದೆ–ಮರದ ಗದೆಗಳು–ಕೈಗಳಿಗೆ ಶಕ್ತಿ ಬರಲು ಇದರ ಉಪಯೋಗ.

7. ವಜ್ರಮುಷ್ಠಿ: ವಜ್ರಗಳಿಂದ ಕೂಡಿದ ಚೂಪಾದ ಮೊನೆಯುಳ್ಳ ಆಯುಧ.

8. ವಿವಿಧ ರೀತಿಯ ಕತ್ತಿಗಳು, ಲಾಠಿಗಳು ಇತ್ಯಾದಿ.

9. ಡಂಬಲ್ಸ್, ನೂಲಿನ ಹಗ್ಗ...ಮುಂತಾದವು.

ಪೂರ್ವಭಾವಿ ವ್ಯಾಯಾಮ : ಕುಸ್ತಿಯ ಅಖಾಡಕ್ಕೆ ಇಳಿಯುವ ಮುನ್ನ ಕೆಲವು ಪೂರ್ವಭಾವಿ ವ್ಯಾಯಾಮಗಳನ್ನು ಮಾಡಲೇಬೇಕೆಂಬ ಪದ್ಧತಿ ಇದೆ. ಅವುಗಳಲ್ಲಿ ಕೆಲವು ಹೀಗಿವೆ:

1) ದೌಡು: ಓಡುವುದು

2) ಉಠ್-ಬೈಠ್ - ಕುಳಿತು ಏಳವುದು

3) ದಂಡ ಹೊಡೆಯುವುದು

4) ಮಣ್ಣಿಕುರಾಯಿಸುವುದು: ಸು. 10 ಕೆ. ಜಿ. ಮಣ್ಣನ್ನು ಒಂದೇ ಬಾರಿಗೆ ಸವಿಕೆಯಿಂದ ತಿರುಗಿಸುವುದು.

5) ಸೂರ್ಯ ನಮಸ್ಕಾರ

6) ಹಗ್ಗದಾಟ

ಕುಸ್ತಿಯ ನಂತರದ ವ್ಯಾಯಾಮ

ಮಣ್ಣಲ್ಲಿ ಮಲಗಿ ದೇಹದ ಮೇಲೆ ಮಣ್ಣನ್ನು ಎಳೆದುಕೊಳ್ಳುವುದು, ನೀರು ಸೇದುವುದು, ತಣ್ಣೀರಿನ ಸ್ನಾನ, ಎಣ್ಣೆಯನ್ನು ಹಚ್ಚಿಕೊಳ್ಳುವುದು...ಇತ್ಯಾದಿ.

ಮಣ್ಣಿನ ವೈಜ್ಞಾನಿಕ ವಿಶ್ಲೇಷಣೆ

ಪೂರ್ವಭಾವೀ ವ್ಯಾಯಾಮದಲ್ಲಿ ಗರಡಿ ಮನೆಯ ಕೆಂಪು ಮಣ್ಣನ್ನು ಮತ್ತೆ ಮತ್ತೆ ಸನಿಕೆಯ ಮೂಲಕ ತಿರುವಿ ಹಾಕುವುದರಿಂದ ಅವರ ಬಾಹುಗಳಿಗೆ ಅಷ್ಟೇ ಅಲ್ಲ, ಇಡೀ ದೇಹವೇ ಮಣ್ಣಿನ ಸೂಕ್ಷ್ಮಾಣುಗಳ ಸಂಪರ್ಕ ಹೊಂದಿ ಪ್ರಕೃತಿ ಚಿಕಿತ್ಸೆಯಲ್ಲಿ ಹೇಳಿರುವಂತೆ ಔಷಧೀಯ ಗುಣಗಳನ್ನು ಅವರಿಗೆ ಅರಿವಿಲ್ಲದಂತೆಯೇ ಪಡೆಯುತ್ತಾರೆನ್ನುವುದನ್ನು ಹೀಗೆ ಸಮರ್ಥಿಸುತ್ತದೆ.

1. ಮಣ್ಣಿನ ಬೇರೆ ಬೇರೆ ಪದರುಗಳಲ್ಲಿ ವಿದ್ಯುತ್ ಕಾಂತೀಯತೆ ಹೊಂದಿದ್ದ ಋಣಾತ್ಮಕ ಮತ್ತು ಧನಾತ್ಮಕ ಕಣಗಳಿರುತ್ತವೆ. ಅದನ್ನು ತಿರುವಿ ಹಾಕವುದರಿಂದ ಈ ವಿದ್ಯುತ್‌ಕಾಂತೀಯ ಗುಣಗಳು ಹೆಚ್ಚಾಗಿ, ಕಾರ್ಬಾನಿಕ್ ಅಣುಗಳಿರುವ ದೇಹಭಾಗವು ಅದು ಕಡಿಮೆ ಇರುವ ದೇಹದ ಇತರ ಭಾಗಗಳಿಗೂ ಪ್ರಾಕೃತಿಕ ಜೈವಿಕ ಚೇತನ (Magnetic Bio engery) ವನ್ನು ತಲುಪಿಸಿ ಆ ಭಾಗಗಳಿಗೆ ಹೆಚ್ಚಿನ ಉಲ್ಲಾಸವನ್ನು ಹಾಗೂ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

2. ಹೊಸದಾಗಿ ಉತ್ಪತ್ತಿಗೊಂಡ ಜೀವಕಣಗಳನ್ನು ಅಲ್ಟ್ರಾ (Altra) ಕಿರಣ (ವಿಕಿರಣ)ಗಳಿಂದ ರಕ್ಷಿಸುತ್ತವೆ.

3. ಪ್ಯಾಥೋಜನ್ಸ್ (Pathogens) ಮತ್ತಿತರ ರೋಗಯುಕ್ತ ಕಣಗಳನ್ನು ನಾಶ ಮಾಡುತ್ತದೆ. ಅದು ಅತ್ಯುತ್ಕೃಷ್ಟ ರೋಗ ನಿರೋಧಕವೂ (Antibiotech) ಹೌದು. ಡಾ. ಷೆಲ್‌ಮನ್ ಎಂಬ ವೈದ್ಯನು 1943ರಲ್ಲಿ ಕ್ಷಯ ರೋಗದ ಅಣುಗಳನ್ನು ಮತ್ತು ಮಣ್ಣಿನ ಕಣಗಳ ಸಂಶೋಧನೆ ಮತ್ತು 'ಮಣ್ಣಿನ ವಾಸನೆ'ಯ ಸಹಾಯದಿಂದಲೇ ಕಂಡುಹಿಡಿದ!

4. ಎಮರೋಲ್ಡ್ ಎಂಬ ವಿಜ್ಞಾನಿ ಮಣ್ಣಿನ ರೋಗ ನಿಧಾನದ ಬಗ್ಗೆ ಮಾರುಹೋಗಿ 'The greatest Medicine in the world is mud only' ಎಂದು ಉದ್ಗರಿಸಿದ. ಆತ 10 ಸಾವಿರ ಮೈಕ್ರೋಬ್ಸ (micro bacteria) ಗಳನ್ನು ಕಂಡು ಹಿಡಿದು ಅದರ ರೋಗ ನಿರೋಧಕ ಗುಣಗಳ ಬಗ್ಗೆ ವಿವರಿಸಿದ್ದಾನೆ.

ಇದನ್ನೇ ಆಧಾರವಾಗಿಟ್ಟುಕೊಂಡು ನಾನು ಪೈಲ್ವಾನರನ್ನು ಸಂಪರ್ಕಿಸಿದಾಗ ಬಿ.ಇ., ಸಿವಿಲ್ ಎಂಜಿನಿಯರ್ ವಿದ್ಯಾರ್ಥಿ, ಬಿ. ಎ. ವಿದ್ಯಾರ್ಥಿಗಳಿಂದ ಹಿಡಿದು ಹೋಟೆಲ್ ಮಾಣಿಗಳ ತನಕ ಎಲ್ಲರೂ ಉದ್ಗರಿಸಿದ್ದು ಒಂದೇ ಈ ಮಿಟ್ಟೀ ನಮ್ಮ ತಾಯಿಗಿಂತ ಹೆಚ್ಚು. ಕುಸ್ತಿ ಆಡಿದ ನಂತರ ಮೈ ಮೇಲೆ ಮಣ್ಣೆರಚಿಕೊಳ್ಳುತ್ತಾ 1/2 ಗಂಟೆ ಕಾಲ ಮಲಗಿದರೆ ದೇಹದ ನೋವು ಮರೆತು ಮನಸ್ಸಿನ ಡೋಲಾಯ ಸ್ಥಿತಿ ಎಂದೂ ಕಂಡಿಲ್ಲ ಎಂಬುದು. ಈ ಅನುಭವದ ಗಮನವಿರಿಸಿಕೊಂಡು ಮಣ್ಣಿನ ನುಣುಪಿನ ಬಗ್ಗೆ ವೈಜ್ಞಾನಿಕ ಪರೀಕ್ಷೆ ನಡೆಸಿದಾಗ ದೊಡ್ಡ ಗರಡಿಯ ಕೆಂಪು ಮಣ್ಣಿನ ಕಣಗಳು 75 ಮತ್ತು 200 ಮೈಕ್ರಾನ್ ಜರಡಿಗಳ ಮೂಲಕ ಹಾದು ಹೋಗಿದ್ದುದರಿಂದ ಇದರ ಹುಂಡಿ ಅಳತೆ ಮತ್ತು ಮೃದುತ್ವದ ಮಹತ್ವದ ಅರಿವುಂಟಾಯಿತು. ಈ ಕೆಂಪು ಹುತ್ತದ ಮಣ್ಣಿಗೆ ಹಬ್ಬ ಹರಿದಿನಗಳಲ್ಲಿ ಪೂಜೆ ಮಾಡಿ ದುಂಡು ಮಲ್ಲಿಗೆ, ಕಡಲೇಕಾಯಿ, ಎಣ್ಣೆ, ಎಳ್ಳೆಣ್ಣೆ, ಕುಂಕುಮಗಳಂಥ ಔಷಧಿ ಗುಣವುಳ್ಳ ವಸ್ತು ಗಳನ್ನು ಆಗಾಗ ಬೆರಸುತ್ತಾರೆಂದೂ ತಿಳಿದು ಬಂತು. ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮಿಯವರ ಆಶ್ರಯದಲ್ಲಿಯ ಗರಡಿಯ ಮಣ್ಣಿಗೆ ವಿಶೇಷವಾದ ಔಷಧೀ ಸಸ್ಯಗಳ ಕಷಾಯವನ್ನು ಬೆರೆಸಿದ್ದರೆಂಬ ಮಾಹಿತಿ ಇಲ್ಲಿ ದಾಖಲಾರ್ಹ.

ಭಾರತೀಯ ಕುಸ್ತಿ ಪಟುಗಳಲ್ಲಿ 4 ವಿಧ. ಇವು ಕರ್ನಾಟಕದಲ್ಲಿಯೂ ಪ್ರಚಲಿತವಿದೆ.

1) ದೈಹಿಕ ಬಲವನ್ನು ಉಪಯೋಗಿಸಿ ಹಾಕುವ ಪಟ್ಟು – ಭೀಮಸೇನೀ

2) ಕೈಚಳಕದ ಪಟ್ಟುಟ–ಜಾಂಬವತೀ

3) ಕೈ ಕಾಲುಗಳನ್ನು ಮುರಿಯುವಂಥಪಟ್ಟು–ಜರಾಸಂಧೀ

ಕುಸ್ತಿಯ ಪಂದ್ಯಾಟಗಳು ನಡೆಯುವ ಸ್ಥಳವನ್ನು 'ಅಖಾಡ'ವೆನ್ನುತ್ತಾರೆ. ಈ ಅಖಾಡವನ್ನು ಜರಾಸಂಧನ ಅಖಾಡವೆಂದೇ ಕರೆಯುತ್ತಾರೆ. ಹಲವು ಶತಮಾನಗಳೇ ಉರುಳಿ ಹೋಗಿದ್ದರೂ ಜರಾಸಂಧನ ಹೆಸರು ಅಜರಾಮರವಾಗಿ ಇನ್ನೂ ಉಳಿದು ಬಂದಿರುವುದು ಆತನ ಸಾಧನೆಯ ದ್ಯೋತಕವಲ್ಲದೆ ಮತ್ತೇನು?

ತಮ್ಮ ಸ್ನಾಯು ಬಲದಿಂದಷ್ಟೇ ಗೆಲ್ಲಬಯಸುವ ಜಟ್ಟಿಗಳು ಸಾಮಾನ್ಯವಾಗಿ ಭೀಮಸೇನೀ ಪಟ್ಟುಗಳನ್ನು ಉಪಯೋಗಿಸುತ್ತಾರೆ. ಹನುಮಂತೀ ಪಟ್ಟಿನ ಪ್ರಭುತ್ವವನ್ನು ಸಾಧಿಸುವುದು ನುರಿತ ಶಿಕ್ಷಕರ ನೇತೃತ್ವದಲ್ಲದಷ್ಟೇ ಸಾಧ್ಯ. ಇದನ್ನು ಅಭ್ಯಾಸ ಮಾಡಿದವರ ತಮಗಿಂತಲೂ ಬಲಿಷ್ಠರಾದವರನ್ನು ಸೋಲಿಸಲು ಶಕ್ತರಾಗುತ್ತಾರೆ. ಜಾಂಬವತೀ ಪಟ್ಟನ್ನು ಹಾಕಿ ಎದುರಾಳಿಯನ್ನು ನಿಶ್ಚೇಷ್ಠಿತನನ್ನಾಗಿ ಮಾಡಿ ಬಹಳ ಬೇಗನೇ ಆಯಾಸಗೊಳ್ಳುವಂತೆ ಮಾಡಬಹುದು. ಆದರೆ ಇದರಲ್ಲಿ ನೆಲಕ್ಕೆ ಕೆಡಹುವುದು ಕಷ್ಟ.

ಕುಸ್ತಿ ಪಟ್ಟುಗಳಲ್ಲಿ 2 ಪ್ರಮುಖ ವಿಭಾಗಗಳುಂಟು.

1) ಕುಸ್ತಿ ಕೆಲಸ–ಪಟ್ಟುಗಳನ್ನು ಹಾಕುವುದು

2) ಪ್ರತಿಕೆಲಸ–ತೋಡುಗಳು, ಪಟ್ಟುಗಳನ್ನು ಬಿಡಿಸಿಕೊಳ್ಳುವುದು.

ಈ ಕುಸ್ತಿ ಕೆಲಸಗಳಲ್ಲಿ 50ಕ್ಕೂ ಹೆಚ್ಚಿನ ವೈವಿಧ್ಯಮಯ ಪಟ್ಟುಗಳಿದ್ದು, ಅವುಗಳಲ್ಲಿ ಗೆರೆ ಎಳೆದಿರುವ ಕೆಲವೊಂದನ್ನು ಈಗಲೂ ಉಪಯೋಗಿಸುತ್ತಿದ್ದಾರೆ.

ಕ್ರ.ಸ.	ಸಂಸ್ಕೃತ	ಉರ್ದು	ಕನ್ನಡ
1.	ಜಯಡಿಂಡಿಮ	ಮುಲ್ತಾನಿ	
2.	1) ನಂದಿಘೋಷ	ಗಜಾಡೋಲ್	
	2) ಉರಗ ಬಂಧ		
3.	ಸುಪ್ರತೀತಕ	ಟಾಂಗ್	ಜನಿವಾರ
4.	ಅರಿರುದ್ರ	ಬಾಹರ್ ಟಾಂಗ್	ಉಲ್ಟಾ ಜನಿವಾರ
5.	ಹಸ್ತಿಮಲ್ಲ	ದೋಬಿಚಟ್	
	ಖೊಪ್ಪರ		
6.	ವಜ್ರಸೂರ್ಯ	ಕುಹರ	
7.	ಯಕ್ಷಬಂಧ	–	ಕೊಕ್ಕರೆ
8.	ದೇವದತ್ತ	ಬಾರಲ್ಲಿ	ಚಡಿಕೆ
9.	ಮಲ್ಲಚಕ್ರ	ಗಿರ್ರ	ಮಲ್ಲಚಕ್ರ
10.	ಮಣಿ ಭದ್ರತೋರಹತ್ತ	ದಸ್ತಿ	
11.	ಗಂಭೀರವೇಥಿ	–	–
12.	ಮಾರ್ತಾಂಡ	ಮೋಹು	
13.	ಸಂದರ್ಶನ ಬಿಸಲೇವು	ಕಾಚ	–
14.	ಮಣಿಗ್ರೀವ	ರೂಂ	ನಿಲುವು ತಿರುಗಣೆ
15.	ಭೀಮಬಂಧ	–	–
16.	ಪಾತಾಳ ಬಂಧ	–	–
17.	ವಾಲಿಪ್ರಹಾರ	ಕಲಾರ್‌ಜಿಂಗ್	–
18.	ಮಹಾಶಂಖ	ಕಮ್ಚಿ	–
19.	ಊರ್ಧ್ವಲ್ಲುಂಠನ	ಅಧಾಸಮಟ್	–
20.	ವಿಜಯನಾರಸಿಂಹ	ಸಕ್ಕಿಮಟ್	–
21.	ಏಕಪಾದ ಬಂಧ	–	ಅರಲಗಡಿ
22.	ಜೀಮೂತ ಬಂಧ	ಜೋಲಿ	
23.	ಕೀಚಕ ಬಂಧ	ತಳಹತ್ತ	ತಳಹತ್ತ
24.	ವ್ಯಾಘ್ರನಖ	ವೆರತೊಲಗು	–

25.	ಮಯೂರ	–	ಕರಿವಳ
26.	ಬ್ರಹ್ಮಸರ್ಪ	–	ನಿಲುವು ತಿರುಗಣೆ
27.	ಐರಾವತ	ಪಿಬ್ಬಿ	–
28.	ಚತುರ್ಗತಿ	ಚೌಲಂಗ	–
29.	ಪಕ್ಷಿಸಿಂಃ	ಉಖಾಡ್	ಮಲ್ಲಗಂಟು
30.	ಕೂರ್ಮಬಂಧ	ಮಚ್ಚಿಕೋಣ	ಅಡಿಮಂಡಿ
31.	ಅನಂತವಿಜಯ	ದುವಲಂಗ	ಚಪ್ಪಡಿ
32.	ಗರುಡವಿಕ್ರಮ	–	ಬಂಧಪಟ್ಟಸ
33.	ಊರ್ಧ್ವಚಕ್ರ	ಕೋನಿಬಿಸಲೇವು	–
34.	ಜಾಂಬಲುಕೋನಿ	–	ಕಾಲುಸುತ್ತಿ
35.	ಬಾಹುಬಂಧ	–	ಅರಲಗಡಿ
36.	ಅಜಗರ ಬಂಧ	–	ಗಳಹತ್ತ
37.	ನಾಗಬಂಧ	–	ರಣುವಟ್ಟ
38.	ಅಮೋಘ ಬಂಧ	–	ಅಗಡಿ
39.	ಉರಗ ಬಂಧ	ಪತ್ರಜಂಕಾರ್	–
40.	ಮತ್ಸಬಂಧ	–	ಖಮ್ಮರಿ
41.	ನಂದಿನಿಕಂದ	–	–
42.	ಬಾಹುಜಟ	ಸಾಂಡಿ	ಸಿರಲಗಡಿ
43.	ನೀಲಧ್ವಜ	–	ಡೊಕ್ಕರ
44.	ಅಂಗಬಂಧ	ಛಡಿಮೋಹು	–
45.	ಭದ್ರಬಂಧ	–	ಮಢಾಳಾಂಕ
46.	ಪುರೋಲುಂಠನ	–	ಬೊಕ್ಕಯ್ಯ
47.	ಹನುಮಬಂಧ	–	ಕುಹರ
48.	ಬೇತಾಳ ಬಂಧ	–	ವಟ್ಟತಳ
49.	–	ಏಕ್‌ಟಾಂಗ್	–
50.	–	ತಲ್ವಾರ್ ಜಂಗ್	–

51.		ಡೂಬ್	
52.		ಮಂಕೀರೋಲ್ (ಇಂಗ್ಲೀಶ್ ಭಾಷೆ)	–
53.	–	ಆರಮ್ಸ್ ಥ್ರೋ (ಇಂ)	–
54.	–		ಅಂಟು ಮುರಿಯುವುದು
55.	–	–	<u>ಕಾಲಿಗೆ ಪಟ್ಟು</u>
56.	–	ಸಿಂಗಲ್ ನೆಲ್ಸನ್ (ಇಂ.)	–
57.		ಡಬಲ್ ನೆಲ್ಸನ್ (ಇಂ)	–

ಈ ಮೇಲಿನ ಪಟ್ಟುಗಳು ಪಂಪಭಾರತ, ಗದಾಯುದ್ಧ, ಭರತೇಶ ವೈಭವ, ಗದುಗಿನ ಭಾರತ ಇತ್ಯಾದಿ ಕಾವ್ಯಗಳಲ್ಲಿಯೂ ದೊರೆಯಬಹುದಾಗಿದ್ದರೂ, ಲೇಖನಭಾರದಿಂದ ಅವುಗಳ ಪರಿಶೀಲನೆ ಮಾಡಲಾಗಿಲ್ಲ. ಆದರೆ ಒಂದೆರಡು ಕುಸ್ತಿ ಕೆಲಸ (ಪಟ್ಟು)ಗಳಿಗೆ ತೋಡು ಎಂದರೆ ಆ ಬಂಧನಗಳನ್ನು ಬಿಡಿಸಿಕೊಳ್ಳುವ ಬಗೆಗಳನ್ನೀಗ ಪರಿಶೀಲಿಸೋಣ (ಈ ಕುಸ್ತಿ ಕೆಲಸಗಳು ಸುಲಭವಾಗಿ ಅರ್ಥವಾಗಲು ದ್ವಿತೀಯ ಪುರುಷ ಏಕವಚನವನ್ನು ಬಳಸಲಾಗಿದೆ)

ಸುಪ್ರತೀಕ: ಟಾಂಗ್: ಇದು ಕುಸ್ತಿಯ ಹೆಸರಾದ ದೊಡ್ಡ ಕೆಲಸಗಳ ಸಾಲಿಗೆ ಸೇರುತ್ತದೆ. ಈ ಪ್ರಕಾರದಲ್ಲಿ ಪ್ರಾವೀಣ್ಯತೆ ಪಡೆದವರ ಕಾಲನ್ನು ಹಿಡಿಯಲು ಎಲ್ಲರೂ ಹಿಂದೆಗೆಯುತ್ತಾರೆ. ನಿನ್ನ ಎದುರಾಳಿಯು ಎಡಗಾಲನ್ನು ಮುಂದಿಟ್ಟು ನಿಂತಿರುವನೆಂದು ಭಾವಿಸುವ (ಚಿತ್ರ ನೋಡಿ), ಈಗ ನೀನು ನಿನ್ನ ಬಲತೋಳನ್ನು ಅವನ ಬಲತೋಳಿಗೆ ಮೇಲುಗಡೆಯಿಂದ ಸುತ್ತಿ, ಅದೇ ಕಾಲದಲ್ಲಿ ನಿನ್ನ ಬೆನ್ನನ್ನು ತಟ್ಟನೇ ಅವನ ಕಡೆಗೆ ತಿರುಗಿಸಿ, ತಿರುಗಿಸುತ್ತಿದ್ದ ಹಾಗೆ ಮುಂದಿರುವ ಅವನ ಎಡಗಾಲಿನ ಒಳಗಡೆ ನಿನ್ನ ಬಲಗಾಲನ್ನು ಸೇರಿಸಿ ಎಗರಿಸು. ಇದು ಸರಿಯಾಗಿ ಅಭ್ಯಾಸವಾದಲ್ಲಿ ಕುಸ್ತಿಯ ಅನೇಕ ಸಂದರ್ಭಗಳಲ್ಲಿ ಉಪಯೋಗಕ್ಕೆ ಬರುವುದು. ಒಂದು ವೇಳೆ ನಿನ್ನ ಎದುರಾಳಿಯು, ನೀನು ಅವನ ಬಲಗೈಯನ್ನು ಹಿಡಿಯಲು ಹೋದಾಗ, ಅವನು ಎಡಗೈಯಿಂದ ವಿರೋಧಿಸುವ ಸಂದರ್ಭವಿದ್ದಲ್ಲಿ ಅಥವಾ ಅವನು ಜಾಗರೂಕನಾಗಿದ್ದಲ್ಲಿ, ಆಗ ನಿನ್ನ ಬಲಗೈಯನ್ನು ಅವನಿಗೆ ಕಾಣುವಂತೆ ಅವನ ಮುಂದೆ ಹಾಯಿಸದೆ, ಅವನ ಭುಜದ ಮೇಲಿರುವ ನಿನ್ನ ಬಲಗೈಯನ್ನು ಅವನ ತಲೆಯ ಮೇಲಿಂದ ಹಾಯಿಸಿ, ಅವನ ಬಲತೋಳನ್ನು ಹಿಡಿ, ಎದುರಾಳಿಯು ಬೆನ್ನ ಹಿಂದಿರುವಾಗಲೂ ಈ ಕೆಲಸವನ್ನು ಮಾಡಬಹುದು.

ಪ್ರತಿ ಕೆಲಸಗಳು : (ತೋಡುಗಳು):

ಪ್ರತಿ ಕೆಲಸ: 1. ಚಿತ್ರ ನೋಡಿ : ಎದುರಾಳಿಯು ಈ ಕೆಲಸ ಮಾಡಲು ಒಳಗಡೆಗೆ ಸೇರಿಸುವ ಅವನ ಬಲಗಾಲನ್ನು ನಿನ್ನ ಎಡಗೈಯಿದ ಕೆಳಗಡೆ ಅದುಮಿ ಹಿಡಿ.

ಪ್ರತಿ ಕೆಲಸ : 2. ಚಿತ್ರ ನೋಡಿ: ನಿನ್ನ ಎಡಗೈಯನ್ನು ಹಿಂದಿನಿಂದ ಅವನ ಎಡತೊಡೆಯ ಮೇಲ್ಭಾಗಕ್ಕೆ ಸೇರಿಸಿ ಎದುರಾಳಿಯನ್ನು ಮೇಲಕ್ಕೆತ್ತು. ಜಯ ಭೈರವ ಮತ್ತು ಜಯಡಿಂಡಿಮ (ಮಲ್ತಾನಿ, ನಂದಿಘೋಷ, ಉರಗ ಬಂಧ) ಕೆಲಸಗಳಲ್ಲಿ ನಿನ್ನ ಎಡಗೈಯಿಂದ ಎದುರಾಳಿಯ ಬಲಗೈಯನ್ನು ಸುತ್ತಿ ಹಿಡಿದು, ನಿನ್ನ ಬಲಗಡೆಗೂ ಮತ್ತು ನಿನ್ನ ಬಲಗೈಯಿಂದ ಎದುರಾಳಿಯ ಎಡಗೈಯನ್ನು ಸುತ್ತಿ ನಿನ್ನ ಎಡಗಡೇಗೆ ಕಲಿ ಹೊಡೆಯವುದು

(ಅಭ್ಯಾಸ ಮಾಡುವುದು) ಸರಿಯಷ್ಟೆ. ಆದರೆ ಸುಪ್ರತೀಕ (ಟಾಂಗ್) ಮಾಡುವಾಗ ಮಾತ್ರ ನೀನು ಸುತ್ತಿಕೊಂಡಿರುವ ಕೈ ಕಡೆಯೇ ಕಲಿ ಹೊಡೆಯಬೇಕು. ಈ ವಿಶೇಷ ಬದಲಾವಣೆಯನ್ನು ಗಮನಿಸಬೇಕು.

ಪ್ರತಿ ಕೆಲಸ 3: ಮೇಲೆ ಹೇಳಿದಂತೆ ಎದುರಾಳಿಯ ಕೆಲಸಕ್ಕೆ ತಡೆಹಾಕಿದ ತಕ್ಷಣ, ತಡೆ ಹಾಕಿದ ಕೈಯನ್ನು ಎದುರಾಳಿಯ ಬೆನ್ನಿಗೆ ಸೇರಿಸಿ, ಅವನು ಸುತ್ತ ಹಿಡಿದ ನಿನ್ನ ಕೈಯನ್ನು ಸರ್ರನೆ ಎದೆಯ ಮೇಲೇರಿಸಿ, ಅವನ ಕತ್ತಿನ ಎಡಪಕ್ಕದಿಂದ ಹಾದು ಬೆನ್ನ ಕಡೆಗಿರುವ ನಿನ್ನ ಮತ್ತೊಂದು ಕೈಗೆ ಸೇರಿಸಿ (ಜನಿವಾರದಂತೆ) ಎದುರಾಳಿಯನ್ನು ಬಂಧಿಸಿ, ಅವನನ್ನು ಹಿಂದಕ್ಕೆ ಮುರಿ, ಎದುರಾಳಿಯ ಬೆನ್ನು ಮೂಳೆಯಲ್ಲುಂಟಾಗುವ ಅಸಹ್ಯ ವೇದನೆಯನ್ನು ತಡೆಯಲಾರದೆ, ಹಿಂದಕ್ಕೆ ಒರಗುತ್ತಾನೆ. ಈ ಪ್ರತಿ ಕೆಲಸವನ್ನು ಜಯ ಭೈರವದಲ್ಲೂ ಸಹ ಉಪಯೋಗಿಸಬಹುದು. ಅಲ್ಲದೇ ಈ ಕೆಲಸವನ್ನು ಪ್ರತ್ಯೇಕವೆಂದೇ ಪರಿಗಣಿಸಿ ಮಾಡಬಹುದು.

ಎದುರಾಳಿಯು ಬೆನ್ನ ಕಡೆಗಿದ್ದ ಅವನು ನೀನು ಮಾಡುವ ಸುಪ್ರತೀತಿ, ಬ್ರಹ್ಮ ಸರ್ಪ, ಐರಾವತ ಮೊದಲಾದ ಯಾವ ಕೆಲಸಕ್ಕೂ ಸಿಕ್ಕಬಾರದೆಂಬ ಉದ್ದೇಶ್ಯದಿಂದ ನಿನ್ನ ನಡುವನ್ನು ಹಿಡಿದು ನಿನ್ನ ಕಾಲಿನ ಹಾಗೂ ಕೈ ಅಳತೆಗಿಂತ ದೂರವಾಗಿ, ಬಹಳ ಹಿಂದಕ್ಕೆ ಕಾಲುಗಳನ್ನು ಕಟ್ಟಿ ನಿಂತಿರುವಾಗ ಮುಂದೆ ಹೇಳುವಂತೆ ಮಿಂಚಿನ ವೇಗದಲ್ಲಿ ಮಾಡುವುದನ್ನು ಕಲಿ. ಈಗಾಗಲೇ ಹೇಳಿರುವಂತೆ ಎದುರಾಳಿಯು ನಿನ್ನ ನಡುವನ್ನು ಹಿಡಿದು ನಿಂತಿರುವಾಗ ಅವನ ಬಲಗೈಯನ್ನು ನಿನ್ನ ಬಲಗೈಯಿಂದ ಸುತ್ತಿ ಹಿಡಿದು ಅತ್ಯಂತ ರಭಸದಿಂದ ನಿನ್ನ ಬಲವನ್ನೆಲ್ಲಾ ಪ್ರಯೋಗಿಸಿ, ನಿನ್ನ ಎದುರಾಳಿಯನ್ನು ಮುಂದಕ್ಕೆಳೆದು, ಜೊತೆಯಲ್ಲೇ ನೀನು ಸಹ ಮುಖ ಕೆಳಗಾಗಿ ಮುಂದಕ್ಕೆ ಬೀಳು. ಹೀಗೆ ನೀನು ಬೀಳುವಾಗ ಜೊತೆಯಲ್ಲೇ ನಿನ್ನ ಎದುರಾಳಿಯು ನಿನ್ನ ಹಿಂದೆಯೇ ಬೀಳುವನು. ಆದ್ದರಿಂದ ನೀನು ಅವನನ್ನು ಎಳೆದು ಮುಂದಕ್ಕೆ ಬೀಳುತ್ತಿದ್ದ ಹಾಗೆಯೇ ನಿನ್ನ ಬಲಗಾಲಿನಿಂದ ಬಾಹ್ಯ ಸುಪ್ರತೀಕವನ್ನು ಪ್ರಯೋಗಿಸು.

ಕುಸ್ತಿ: ಕೆಲಸ 2. ಅರಿರುದ್ರ-ಕರವಲಯ-ಬಾಹರ್ ಟಾಂಗ್: ಇದು ಸುಪ್ರತೀಕದ ಸ್ವಲ್ಪ ಬದಲಾವಣೆಯಿಂದ ಮಾಡುವ ಕೆಲಸ. ಸುಪ್ರತೀಕದಲ್ಲಿ ಎದುರಾಳಿಯ ಯಾವ ಕಾಲು ಮುಂದಿದೆಯೋ ಅದರ ಎದುರು ಗಡೆಯ ಕೈ ಸುತ್ತಿದರೆ, ಬಾಹ್ಯ ಸುಪ್ರತೀಕದಲ್ಲಿ ಎದುರಾಳಿಯ ಯಾವ ಕಾಲು ಮುಂದಿದೆಯೋ, ಆ ಕಡೆಯ ಕೈಯನ್ನು ಸುತ್ತಿ, ಎದುರಾಳಿಯ ಕಡೆಗೆ ಬೆನ್ನು ತಿರುಗಿಸಿ, ನಮ್ಮ ಮುಂದಿರುವ ಕಾಲಿನಿಂದ, ಎದುರಾಳಿಯು ಮುಂದಿರುವ ಕಾಲನ್ನು ಹೊರಗಡೆಯಿಂದ ಗೆಣ್ಣಿನ ಮೇಲ್ಭಾಗಕ್ಕೆ ಕಟ್ಟಿ ಹೊಡೆಯಬೇಕು. ಆಗ ಎದುರಾಳಿಯು ವಜ್ರದಂತೆ, ಛತ್ರಪತಿ ಅಥವಾ ಮತ್ತಾವ ಕೆಲಸಕ್ಕಾದರೂ, ನಮ್ಮ ಪಕ್ಕದಲ್ಲಿ ಹಾದು ಹೋಗುವಂತೆ ಮಾಡುವಲ್ಲಿ ಬಹಳ ಅನುಕೂಲವಾಗುವುದು.

ಕುಸ್ತಿ ಕೆಲಸ 2: ಹಸ್ತಿ ಮಲ್ಲ- ಖೊಪ್ಪರ -ದೋಬಿಚಾಟ್. ಈ ಕೆಲಸವನ್ನು ಎದುರಾಳಿಯು ಅವನ ಕೈಯನ್ನು ನಿನ್ನ ಕತ್ತಿನ ಮೇಲೆ ಹಾಕಿದಾಗ ಆಗಲೀ ಅಥವಾ ಕೈ ಮಿಲನ ಮಾಡುತ್ತಿರುವಾಗ ಆಗಲೀ ಮಾಡಬಹುದು. ಕೆಲವರು ಎದುರಾಳಿಯು ತಗ್ಗಿದಾಗ ಮಾಡಿದರೆ, ಮತ್ತೆ ಕೆಲವರು ಎದುರಾಳಿಯು ಎದೆಯೆತ್ತಿ ನಿಂತಿದ್ದಾಗಲೂ ಮಾಡುವರು. ಇವೆಲ್ಲವೂ ಆವರವರ ಅಭ್ಯಾಸಕ್ಕೆ ಅನುಗುಣವಾಗಿರುತ್ತವೆ.

ಪ್ರತಿಕೆಲಸ-ತೋಡುಗಳು: ಎದುರಾಳಿಯು ಈ ಕೆಲಸ ಪ್ರಯೋಗಿಸುವಷ್ಟರಲ್ಲೇ ನಿನ್ನ ಎಡಗೈಯನ್ನು ಅವನ ಎರಡು ತೊಡೆಗಳ ಮಧ್ಯೆ ಪೃಷ್ಟದ ಕೆಳಗಡೆ ತೂರಿಸಿ ಅವನನ್ನು ಮೇಲಕ್ಕೆತ್ತು.

ಎದುರಾಳಿಯು ನಿನ್ನನ್ನು ಎಗರಿಸುವಷ್ಟರಲ್ಲೇ ಅವನ ಬೆನ್ನಿನ ಮೇಲೆ ನಿನ್ನ ಎದೆಯ ಪ್ರದೇಶವನ್ನು ಊರಿ ಚಕ್ರಾಕಾರವಾಗಿ ಅವನ ಎಡಗಡೆಗೆ ತಿರುಗಿಸಿ ಅವನಿಗೆ ಎದುರಾಗಿ ನಿಲ್ಲು.

ಅವನ ಎಡಸೊಂಟವನ್ನು ನಿನ್ನ ಎಡಗೈಯಿಂದ ನಿನ್ನ ಬಲ ಭಾಗಕ್ಕೆ ತಳ್ಳಿ. ನೀನು ಎದುರಾಳಿಯ ಎಡಭಾಗಕ್ಕೆ ಸರಿದು ಹೋಗು. ಹೀಗೆ ಅವನ ಸೊಂಟವನ್ನು ಎಳೆಯುವಾಗ, ಅದು ಸರಾಗವಾಗಿ, ನಿನ್ನ ಬಲಗಡೆಗೆ ಸರಿದು ಹೋಗಲು ಅನುಕೂಲವಾಗುವಂತೆ, ನಿನ್ನ ಕೆಳಹೊಟ್ಟೆಯ ಭಾಗವನ್ನು ಹಿಂದಕ್ಕೆ ಸರಿಸು.

ಕುಸ್ತಿ ಕೆಲಸ-4: ಮಣಿಗ್ರೀವ-ನಿಲುವ ತಿರುಗಣಿ ರೂಂ ಬಲಗಾಲನ್ನು ಮುಂದಿಟ್ಟು ನಿಂತಿರುವ ಎದುರಾಳಿಯ ಬಲಗೈ ಹಸ್ತ ಅಥವಾ ಮಣಿಕಟ್ಟನ್ನು ನಿನ್ನ ಎಡಗೈಯಲ್ಲಿ ಹಿಡಿದು ಸಾಧ್ಯವಾದಷ್ಟು ಅವನ ಕೈಯನ್ನು ನಿನ್ನ ಬಲಗಡೆಗೆ ಅಂಗೈ ನೆಲದ ಕಡೆಗೆ ನೋಡುವಂತೆ ತಿರುಗಿಸು. ಹೀಗೆ ತಿರುಗಿಸುತ್ತಿರುವ ವೇಳೆಯಲ್ಲೇ, ನಿನ್ನ ಬಲಗೈಯನ್ನು ಅವನ ಮೊಳಕೈ ಮೇಲ್ಗಡೆಗೆ ಒತ್ತುತ್ತಾ, ನಿನ್ನ ಹಸ್ತವನ್ನು ಅವನ ಬಲಗಾಲ ತೊಡೆಯ ಒಳಗಡೆ ಇಟ್ಟು, ಪಕ್ಕದಿಂದ ಹಾದು ಅವನ ನಡುವನ್ನು ಹಿಡಿ.

ಹಿಂದಕ್ಕೆ ಹೋಗುವುದರ ಬದಲು ಅವನ ತೊಡೆಯ ಒಳಗಡೆ ತೇಲಿಸುವ ನಿನ್ನ ಕೈಯಿಂದ, ಅವನ ತೊಡೆಯನ್ನು ಹಾಗೆಯೇ ಮೇಲಕ್ಕೆತ್ತಿ ಅವನ ತೊಡೆಯನ್ನು ನಿನ್ನ ಬಲಗಾಲಿನಿಂದ ಹೊಡೆಯಲು ಅವಕಾಶವಿದೆ.

ಪ್ರತಿ ಕೆಲಸ 1. : ಎದುರಾಳಿಯು ನಿನ್ನ ಬೆನ್ನು ಹಿಡಿಯುವ ಮಾರ್ಗದಲ್ಲಿ ನಿನ್ನ ಬಲ ಪಕ್ಕಕ್ಕೆ ಬಂದೊಡನೆ ಅವನ ತೊಡೆಯ ಒಳಗಡೆ ಬಲಗೈಯನ್ನು ಸೇರಿಸಿ, ಅವನ ಮುಂಭಾಗವನ್ನು ಸೇರಿಸಿ ಬೆನ್ನು ಹಿಡಿ.

ಪ್ರತಿ ಕೆಲಸ 2 . ಅವನು ನಿನ್ನ ಬೆನ್ನ ಕಡೆಗೆ ಹೋಗುತ್ತಿರುವಂತೆಯೇ ಅವನ ಬಲಗೈಯನ್ನು ಹಿಡಿದು ಬಾಹು ಸುಪ್ರತೀಕವಾದ ಹೊಡಿ.

ಕುಸ್ತಿ ಕೆಲಸ: ಯಕ್ಷ ಬಂಧ –ಕೊಕ್ಕರೆ ಚಿತ್ರ ನೋಡಿ. ಎದುರಾಳಿಯು ಕಾಲು ಕೆಳಗೆ ನೀನು ನುಗ್ಗಿದಾಗ, ಅವನು ನಿನ್ನ ಬೆನ್ನಿನ ಮೇಲೆ ಎದೆಯೂರಿ ಅದುಮಲು ಪ್ರಯತ್ನಿಸುವ ವೇಳೆಯಲ್ಲಿ ಈ ಕೆಲಸ ಮಾಡಬೇಕಾಗುತ್ತದೆ. ಆದರೆ ಚತುರನಾದ ಎದುರಾಳಿ, ತೂಕವನ್ನು ನಿನ್ನ ಬೆನ್ನಿನ ಮೇಲೆ ಬಿಡದೆ ಕತ್ತಿನ ಮೇಲೆ ಬಿಟ್ಟು, ಅವನ ಕಡೆ ಎಳೆದು ಕುಳ್ಳಿರಿಸಲು ಪ್ರಯತ್ನಿಸಿದರೆ ಆಗ ತೊಂದರೆಯಾಗುವುದು. ಇದಕ್ಕಿಂತ ಉತ್ತಮವೆಂದರೆ, ಎದುರಾಳಿಯು ಎದುರಿಗೆ ನಿಂತು, ಕಟಿಯ ಮೇಲೆ ಕೈ ಇಡುವ ಮೊದಲು ನಿನ್ನ ಕೈಗಳೊಡನೆ ಕೈಗಳನ್ನು ಮಿಲನ ಮಾಡುತ್ತಾ, ಹಿಡಿಯುತ್ತ, ಬಿಡುವು ಪಡೆಯುವುದು ಸ್ವಾಭಾವಿಕ. ಈ ವೇಳೆಯಲ್ಲಿ ಅವನ ಎರಡೂ ಕೈಗಳನ್ನು ನಿನ್ನ ಎರಡೂ ಕೈಗಳಿಂದ ಹತ್ತಿರಕ್ಕೆ ತಂದು ನೀನು ನುಗ್ಗುವಷ್ಟು, ಅಂದರೆ ನಿನ್ನ ಎದೆಯಗಲಕ್ಕೆ ಹಿಡಿದು ಸರ್‍ರನೆ ತಲೆ ತಗ್ಗಿಸಿ, ಮುಂದೆ ನುಗ್ಗಿ ನಿನ್ನ ತಲೆಯನ್ನು ಅವನ ಎದೆಯ ಕೆಳಗಡೆ ಹೊಟ್ಟೆಯ ಬಳಿ ಸೇರಿಸು. ಹೀಗೆ ಮಾಡುವಾಗ ಹಿಡಿದಿರುವ ಅವನ ಎರಡೂ ಕೈಗಳನ್ನು ಎಳೆದು, ಆಕೈಗಳು ನಿನ್ನ ಬೆನ್ನನ್ನು ಸುತ್ತಿ ಎದೆಯ ಕೆಳಗಡೆ ಬರುವಂತೆ ಹಿಡಿ. ಈಗ ನಿನ್ನ ಬೆನ್ನಿನ ಮೇಲೆ ಅವನ ದೇಹದ ಮುಕ್ಕಾಲು ಭಾಗ ಆಶ್ರಿತವಾಗಿದ್ದು, ಅವನ ತೋಳುಗಳು ನಿನ್ನ ಎದೆಗೆ ಇರುತ್ತವೆ. ಕಣ್ಣುಮುಚ್ಚಿ ತೆಗೆಯುವಷ್ಟು ತಡವಾದರೂ, ನಿನ್ನ ವೇಗ ಕುಂದಿ, ಎದುರಾಳಿಯು ನಿನ್ನ ಮೇಲೆ ಅವನ ಸಂಪೂರ್ಣ ಬಲ ಹಾಗೂ ತೂಕವನ್ನು ನಿನ್ನ ಬೆನ್ನ ಕಡೆ ಎಳೆಯುತ್ತಾ, ಅವನು ನಿನ್ನನ್ನು ಅಮುಕಲು ಪ್ರಯತ್ನಿಸುವ ಮೊದಲೇ, ಅವನ ಹೊಟ್ಟೆಯ ಬಳಿಯಿರುವ ತಲೆಯಿಂದ ಅವನನ್ನು ಬೆನ್ನಿನ ಕಡೆಗೆ ಚಿಮ್ಮಿ ಎಗರಿಸಿ, ಬಲಗಾಲು ಅಥವಾ ಎಡಗಾಲಿನ ಚಪ್ಪಡಿ ಬಿಟ್ಟು ಕುಳಿತು ಕೋ. ಸರಿಯಾಗಿ ಅಭ್ಯಾಸ ಮಾಡದಿದ್ದಲ್ಲಿ, ಎದುರಾಳಿಯನ್ನು ಹಿಂದಕ್ಕೆ ಚಿಮ್ಮುವ ರಭಸದಲ್ಲಿ ನಿನ್ನ ಸಮತ್ವ ತಪ್ಪಿ ಹಿಂದಕ್ಕೆ ಬಿದ್ದು ನಿನ್ನ ಬೆನ್ನು ನೆಲಕ್ಕೆ ತಾಕುವ ಸಂಭವವಿರುತ್ತದೆ. ಆದ್ದರಿಂದ ಚಪ್ಪಡಿ ಬಿಟ್ಟು ಕೂತೊಡನೆ, ಚಪ್ಪಡಿ ಬಿಟ್ಟ ದಿಕ್ಕಿನಲ್ಲೇ ನಿನ್ನ ಶರೀರವನ್ನು ತುಸು ತಿರುಗಿಸಿ, ನೆಲದ ಕಡೆಗೆ ಮುಖ ಮಾಡಿ ಕೂರಲು ಕಲಿ. ಅಥವಾ ಹಿಂದಕ್ಕೆ ವಾಲಿ ಬೀಳುತ್ತಿರುವ ನೀನು, ನಿನ್ನ ತಲೆಯನ್ನು ಎದುರಾಳಿಯ ಮೇಲೆ ಊರು.

ಧ್ಯಾನದಲ್ಲಿಡಬೇಕಾದ ಮುಖ್ಯ ವಿಷಯವೆಂದರೆ, ನೀನು ನುಗ್ಗುವ ವೇಗದಲ್ಲೇ ತಡಮಾಡದೆ, ಗೂಳಿಯು ನುಗ್ಗಿ, ಎತ್ತಿ ಚಿಮ್ಮುವ ವರಸೆಯಲ್ಲೇ ಕೆಲಸ ಮಾಡು.

ಪ್ರತಿ ಕೆಲಸ–1 : ಈ ಕೆಲಸವನ್ನು ನಿನ್ನ ಮೇಲೆ ಪ್ರಯೋಗಿಸುವ ಎದುರಾಳಿಯು ನಿನ್ನನ್ನು ಮುಂದುಗಡೆಯಿಂದ ಮೇಲಕ್ಕೆ ಎಗರಿಸುವನಷ್ಟೆ. ಆದ್ದರಿಂದ ನಿನ್ನ ಕಾಲುಗಳನ್ನು ಸ್ವಲ್ಪವಾದರೂ ಸಡಿಲವಾಗಿಡದೆ ಭದ್ರವಾಗಿ ಊರಿ, ದೇಹದ ಭಾರವನ್ನೆಲ್ಲಾ ಹಿಂದೆ ಬಿಟ್ಟು, ಎದುರಾಳಿಯನ್ನು ನಿನ್ನ ಎರಡೂ ಕೈಗಳಿಂದಲೂ ಬಲವಾಗಿ ಅದುಮಿ ಹಿಡಿ.

ಪ್ರತಿ ಕೆಲಸ: 2: ಎದುರಾಳಿಯು ನಿನ್ನ ಕೈಗಳನ್ನು ಮೈಕಟ್ಟು ಅಥವಾ ಮುಂಗೈಗಳನ್ನು ಹಿಡಿದು ಸುತ್ತಿಕೊಳ್ಳದೆ ನಿನ್ನ ತೋಳಿನ ಮೇಲ್ಭಾಗವನ್ನು ಹಿಡಿದು ಸುತ್ತಿಕೊಂಡು ಎದುರಾಳಿಯು ಮೇಲೇಳದಂತೆ ಸಾಧ್ಯವಾದಷ್ಟು ಅಮುಕುತ್ತಾ ನಿನ್ನ ಎರಡು ಕೈಗಳನ್ನೂ ಅವನ ಪಕ್ಕದಿಂದ ಕಂಕುಳ ಕೆಳಗಡೆ ಹಾಯಿಸಿ ಕತ್ತಿನ ಹಿಂಭಾಗಕ್ಕೆ ತಂದು ಬಂಧಿಸು.

ಪ್ರತಿಕೆಲಸ 3: ಅವನು ನಿನ್ನ ಕೈಗಳನ್ನು ಸುತ್ತಿ ಹಿಡಿಯುತ್ತಿದ್ದ ಹಾಗೆಯೇ, ನಿನ್ನ ಯಾವುದಾದರೂ ಒಂದು ಕೈಯನ್ನು ಅವನ ಪಕ್ಕದಿಂದ ಕಂಕುಳ ಕಡೆ ಹಾಯಿಸಿ, ಅವನ ಕತ್ತಿನ ಮೇಲ್ಗಡೆಗೆ ಬರುವಂತೆ ಇಟ್ಟುಕೋ.

ಪ್ರತಿಕೆಲಸ 4: ಅವನು ನಿನ್ನ ಕೈಗಳನ್ನು ಸುತ್ತಿ ಹಿಡಿಯುತ್ತಿದ್ದಂತೆಯೇ ಸರ್ರನೆ, ನಿನ್ನ ಎರಡು ಕಾಲುಗಳನ್ನು ಸಹ ನಿನ್ನ ಎದುರು ದಿಕ್ಕಿಗೆ ಅಂದರೆ ಅವನ ಕಡೆಗೆ ಅಗಲವಾಗಿ ಜಾರಿಸಿ, ಜಾರುತ್ತಿರುವ ವೇಗದಲ್ಲೇ ನೀನು ನನಗೆ ಅನುಕೂಲವಾದ ದಿಕ್ಕಿಗೆ ತಿರುಗಿ ಅವನ ಎದೆಯ ಮೇಲೇರಲು ಪ್ರಯತ್ನಿಸು.

ಉಪ ಸಂಹಾರ

ಹೈದರಾಲೀ ಖಾನನು ದೇವನಹಳ್ಳಿ ಯುದ್ಧದಲ್ಲಿ ಭಾಗವಹಿಸಿ ಬೆಂಗಳೂರಿನ ಗರಡಿ ಮನೆಯ ಪೈಲ್ವಾನರನ್ನೆಲ್ಲಾ ಬಳಸಿಕೊಂಡದ್ದು ಕ್ರಿ. ಶ. 1749ರಲ್ಲಿ. ಅರಳೇ ಪೇಟೆಯಲ್ಲಿರುವ ದೊಡ್ಡ ಗರಡಿ, ಅಲ್ಲಿರುವ ಶಿಲಾಲೇಖದ ಪ್ರಕಾರ ಕ್ರಿ. ಶ. 1680ರಲ್ಲೇ ಸ್ಥಾಪಿತಗೊಂಡಿತ್ತು. ಅಲ್ಲದೇ ಕತ್ತೀಗೋಪಾಲರಾಯರ ಮನೆಯೂ ಹಳೆಯ ಕೋಟೆಯೊಳಗಡೆಯೇ ಇದ್ದಿತೆಂದು ಬ. ನ. ಸುಂದರರಾಯರು ದಾಖಲಿಸಿದ್ದಾರೆ. ಈ ಆಧಾರಗಳ ಮೇಲೆ ಹೈದರಾಲಿಯು ದೊಡ್ಡ ಗರಡಿಯಲ್ಲಿಯೇ ಅಂಗಸಾಧನೆ ಮಾಡಿ ಕಟ್ಟುಮಸ್ತಾದ ಆಳಾದನೆಂದು ನಿರ್ಧರಿಸಬಹುದು. ಹಳೆಯಪೇಟೆಯ ಗರಡಿಗಳಲೆಲ್ಲಾ ಹಳೆಯದಾದ ಮತ್ತು ಸ್ಥಾಪನೆಯ ಇಸವಿಯೂ ಇರುವ ಗರಡಿ ಇದೊಂದೇ ಆಗಿರುವುದು ಈ ನಿರ್ಧಾರಕ್ಕೆ ಹೆಚ್ಚಿನ ಒತ್ತು ಸಿಗುತ್ತದೆ.

ಇಂಥಹ ಚಾರಿತ್ರಿಕ, ವೈಜ್ಞಾನಿಕ, ಸಾಮಾಜಿಕ ಮಹತ್ವದ ಅಂಶಗಳನ್ನೊಳಗೊಂಡ ಗರಡಿ ಮನೆಗಳನ್ನು ತಮ್ಮ ಮನೆ, ದೇವಾಲಯಗಳಿಗಿಂತ ಹೆಚ್ಚಿಗೆ ಪ್ರೀತಿಸುತ್ತಾ, ಎಷ್ಟೇ ಆರ್ಥಿಕ ಆಮಿಷಗಳಿದ್ದರೂ ಕೇವಲ ಅಭಿಮಾನ, ಜನಸೇವೆಯ ಉದ್ದೇಶಕ್ಕಾಗಿಯೇ ಉಳಿಸಿಕೊಂಡು ಬಂದಿರುವ ಇಲ್ಲಿನ ಜನತೆಯನ್ನು ವಿದ್ವಾಂಸರು ಗುರುತಿಸಬೇಕು, ಸರಕಾರವು ಪುರಸ್ಕರಿಸಬೇಕು.

ಜನಸಾಮಾನ್ಯರಲ್ಲಿ 'ಗರಡಿ' ಎಂದರೆ ಸಮಾಜಘಾತುಕರನ್ನು ತಯಾರಿಸುವ ಕಾರ್ಖಾನೆಗಳೆಂಬ ಹಣೆಪಟ್ಟಿಯನ್ನು ಕಟ್ಟದೇ ಅಲ್ಲಿ ನಡೆಯುವ ದೈಹಿಕ ಅಂಗಸಾಧನೆಯ ವೈಜ್ಞಾನಿಕ ವಿಶ್ಲೇಷಣೆಗೆ ಗುರಿಮಾಡಿ, ಮೇಲೆ ಹೇಳಿರುವಂಥ ಉತ್ತಮ ಅಂಶಗಳನ್ನು ಬೆಳಕಿಗೆ ತಂದದ್ದೇ ಆದರೆ ಕುಸ್ತಿಯು ಕರಾಟೆ, ಜುಡೆಗೆ ಕುಂಪೂ, ಮುಂತಾದ ಯುದ್ಧ ಕಲೆ ಅಂಗಸಾಧನೆಗಳಷ್ಟೇ ಉತ್ಕೃಷ್ಟವಾದದ್ದು ಎಂದು ಸಾಬೀತು ಪಡಿಸುವುದು ಕಷ್ಟವೇನಲ್ಲ. ಅಲ್ಲದೇ ದಿಕ್ಕು ತಪ್ಪುತ್ತಿರುವ ಯುವಜನತೆಗೆ ಅಂಗಸಾಧನೆಯ ಮಹತ್ವವೂ ತಿಳಿದು ಈ ಕಡೆಗೆ ಅವರ ಗಮನ ಸೆಳೆಯಬಹುದು.

ಕ್ರಿಕೆಟ್‌ಗೆ ಕೊಡುವ ಆರ್ಥಿಕ ಬೆಂಬಲ ಹಾಗೂ ಮಾಧ್ಯಮಗಳ ಪ್ರಚಾರದಲ್ಲಿ ಕೇವಲ 4ನೇ ಒಂದಂಶದ ಹಣವನ್ನು ಖರ್ಚುಮಾಡಿ ಪೌಷ್ಠಿಕ ಆಹಾರ ಮತ್ತು ಇನ್ನೂ ಲಭ್ಯವಿರುವ ಹಿರಿಯ ನುರಿತ ಕುಸ್ತಿ ಪಟುಗಳಿಂದ ತರಬೇತಿಯನ್ನು ಒದಗಿಸಿದ್ದೇ ಆದಲ್ಲಿ ನಮ್ಮ ಇಲ್ಲಿಯ ಪೈಲ್ವಾನರೂ ರಾಷ್ಟ್ರೀಯ ಅಂತರ ರಾಷ್ಟ್ರೀಯ ಖ್ಯಾತಿಯನ್ನು ಗಳಿಸುವುದರಲ್ಲಿ ಸಂಶಯವಿಲ್ಲ ಎನ್ನುವುದಕ್ಕೆ ಈ ಸಮೀಕ್ಷೆಯಲ್ಲಿ ನಾನು ಸಂದರ್ಶಿಸಿದ ಬಿ. ಇ., ಬಿ.ಎ. ಹುಡುಗರೂ, ಹೋಟೆಲ್ ಮಾಣಿಗಳು, ಮೆಕ್ಯಾನಿಕ್‌ಗಳೂ ಸಾಕ್ಷಿಯಾಗಿದ್ದಾರೆ. ಮೆಕ್ಯಾನಿಕ್ ಕೆ. ಶೇಖರ್ (25ರ ಯುವಕ) ಈಗಾಗಲೇ ರಾಜ್ಯ ಮಟ್ಟದ 2 ಪ್ರಶಸ್ತಿಗಳನ್ನೂ 20 ಕ್ಕೂ ಹೆಚ್ಚು ಪಂದ್ಯಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾರೆ.

ಕುಸ್ತಿ ಕೆಲಸಗಳು : ತೋಡುಗಳಲ್ಲಿ ವಿವರಿಸಿರುವಂತೆ ಜಾಂಬವತೀ, ಜರಾಸಂಧ, ಹನುಮಾನ್ ಪಟ್ಟುಗಳು ದೇಹದಾರ್ಢ್ಯತೆ, ಅಂಗಸಾಧನೆ, ಸ್ನಾಯುಗಳ ಶಕ್ತಿಯನ್ನಷ್ಟೇ ಅಲ್ಲದೇ ಸಮಯ ಪ್ರಜ್ಞೆ ಹಾಗೂ ಬುದ್ಧಿಮತ್ತೆ ಸೇರಿದಂತೆ ಮಿಂಚಿನ ಕಾರ್ಯಾಚರಣೆ ಅತಿಮುಖ್ಯವೆನ್ನುವ ಅಂಶಗಳನ್ನು ದೃಢೀಕರಿಸುತ್ತವೆ. ಆದ್ದರಿಂದ ಇವು ಕೇವಲ ಪುರಾಣಗಳಲ್ಲಿ ಸ್ಥಾನ ಪಡೆದಿರುವ ಐತಿಹ್ಯ ಸಂಗತಿಗಳಾಗಿರದೆ ಇಂದಿಗೂ ಉಳಿದು ಬಂದಿರುವ ಅವರ ಸಾಧನೆ ಹೆಸರುಗಳನ್ನೇ ಹೊತ್ತ ಕುಸ್ತಿಯ ಅಥವಾ ಮಲ್ಲಯುದ್ಧದ ಸೂಕ್ಷ್ಮ ತಾಂತ್ರಿಕ ಅಂಶಗಳಾಗಿವೆ ಎನ್ನುವುದರಲ್ಲಿ ಯಾವ ಸಂಶಯವಿಲ್ಲ.

52. ಬೆಂಗಳೂರು ಬಂಟರು

ಡಾ. ಇಂದಿರಾ ಹೆಗ್ಡೆ

ಕರ್ನಾಟಕದ ಕರಾವಳಿ ಭಾಗದ ದಕ್ಷಿಣದ ಕಾಸರಗೋಡಿನಿಂದ ಉತ್ತರದ ಬೈಂದೂರಿನವರೆಗಿನ ಪ್ರದೇಶ 'ತುಳುನಾಡು' ಎಂದು ಇತಿಹಾಸದಲ್ಲಿ ಗುರುತಿಸಿಕೊಂಡಿದೆ. ಈ ಭಾಗ ಬಂಟರ ಮೂಲ ನೆಲೆ. ಕುಂದಾಪುರ ತಾಲೂಕಿನಲ್ಲಿ 'ನಾಡವರು' ಎಂದು ಗುರುತಿಸಿಕೊಂಡಿದ್ದ ಬಂಟರ ಸಮಾನ ಸಮುದಾಯ ಆಧುನಿಕ ದಿನಗಳಲ್ಲಿ ಬಂಟರು ಎಂದು ಗುರುತಿಸಿಕೊಳ್ಳುತ್ತಿದ್ದಾರೆ. ಸುಮಾರು 17ನೆಯ ಶತಮಾನದವರೆಗೆ 'ಬಂಟ' ಎಂಬ ಪದ ಗುಣವಾಚಕವಾಗಿ ರೂಢಿಯಲ್ಲಿ ಇತ್ತು. 17 ಶತಮಾನದ ಅನಂತರ ಬಂಟ ಎಂಬ ಪದ ಜಾತಿವಾಚಕವಾಗಿ ಬಳಕೆಗೆ ಬಂದಿರಬೇಕು, ಆದರೂ ಬಂಟರನ್ನು ಮತ್ತು ಬಂಟ ಜೈನರನ್ನು, 'ಬಾರಗರು' ಎನ್ನುವ ರೂಢಿ 20ನೆಯ ಶತಮಾನದ ಮಧ್ಯಕಾಲದವರೆಗೆ ಇತ್ತು. ಬಂಟರನ್ನು 'ನಾಡವರು' ಮತ್ತು 'ಸೆಟ್ಟ್ರ' ಎಂದು 21ನೆಯ ಶತಮಾನದಲ್ಲಿ ಕೂಡಾ ಕರೆಯುವ ರೂಢಿ ಮುಂದುವರಿದಿದೆ. ಇವರನ್ನು ತುಳುಭಾಷೆಯಲ್ಲಿ 'ಒಕ್ಕೆಲಕುಲು' ಎಂದು ಕರೆಯುತ್ತಾರೆ.

ಬಂಟರು ಜಮೀನ್ದಾರಿ-ರೈತ ಜನರು. ಆದರೆ ಇವರು ಯೋಧಮೂಲದ ಬಂಟರೂ ಆಗಿದ್ದರು. ಗ್ರಾಮೀಣ ಹಂತದಲ್ಲಿ ಆ ಕಾಲದಲ್ಲಿ ಇದ್ದ ರಾಜಕೀಯ ಅಧಿಕಾರ ಈಗ ಕಳೆದುಕೊಂಡಿದ್ದರೂ ಅಂದಿನ ರಾಜಕೀಯ ಅಧಿಕಾರದ ಕುರುಹುಗಳನ್ನು ನೆಲೆದ ಪರಂಪರೆಯ ಉಪಾಸನೆಯಲ್ಲಿ ಕಾಣಬಹುದು.

ಶ್ರೀ ದೇವರಾಜ್ ಅರಸರು 1970ರ ದಶಕದಲ್ಲಿ ಹೊರಡಿಸಿದ ಭೂ ಸುಧಾರಣಾ ಮಸೂದೆಯ 'ಉಳುವವನೇ ಹೊಲದೊಡೆಯ' ಎಂಬ ಘೋಷ ವಾಕ್ಯ ಕೃಷಿಕರಾಗಿದ್ದ ಬಂಟರ ನೆಲದ ಬದುಕನ್ನು ಅಲ್ಲಾಡಿಸಿತು. ಜೊತೆಗೇ ಈ ಮಸೂದೆಯು ಅವರಲ್ಲಿ ಹೊಸ ಸವಾಲನ್ನು ಎದುರಿಸುವ ಕೆಚ್ಚನ್ನು ಸೃಷ್ಟಿಸಿತು. ಅಲ್ಲಿಯವರೆಗೆ ತಮ್ಮ ಕುಟುಂಬದ ಬಡತನಕ್ಕೆ ಆಧಾರವಾಗಲೆಂದು ಬಡ ಕುಟುಂಬದಿಂದ ಕೆಲವರು ಮುಂಬಯಿಗೆ ಹೋಗಿದ್ದರು. ಆ ಕಾಲದಲ್ಲಿ ಕರಾವಳಿ ಕರ್ನಾಟಕದ ಈ ಭಾಗ ಮದ್ರಾಸ್ ಪ್ರೆಸಿಡೆನ್ಸಿಯ ವ್ಯಾಪ್ತಿಯಲ್ಲಿ ಇದ್ದುದರಿಂದ ಕೆಲವು ರಾಜಕೀಯ ವ್ಯಕ್ತಿಗಳು ಮತ್ತು ಕೆಲವರು ವಿದ್ಯಾರ್ಜನೆಗೆಂದು ಮದ್ರಾಸಿಗೆ ಹೋಗಿ ನೆಲೆಸಿದ್ದರು. ಕರ್ನಾಟಕದ ರಾಜಧಾನಿ ಬೆಂಗಳೂರು ಆದ ಮೇಲೆ ಬಡವ ಶ್ರೀಮಂತರೆನ್ನದೆ ಬೆಂಗಳೂರಿನತ್ತ ಬರುವವರ ಸಂಖ್ಯೆ ಹೆಚ್ಚಾಯಿತು. ಆದರೆ ಭೂಮಸೂದೆಯ ಬಿರುಗಾಳಿಗೆ ತತ್ತರಿಸಿದವರಿಗೆ ಆಧಾರ ಕೊಟ್ಟಿದ್ದು ಬಂಟ ಹಿರಿಯರಿಂದ ಸ್ಥಾಪಿತವಾಗಿ ತನ್ನ ಶಾಖೆಗಳನ್ನು ಬೆಳೆಸಿಕೊಳ್ಳುತ್ತಿದ್ದ ವಿಜಯಬ್ಯಾಂಕ್, ಜಮೀನ್ದಾರಿ ಮನೆಗಳ ಶ್ರೀಮಂತ ಬಂಟರು ಬೆಂಗಳೂರಿನತ್ತ ಮುಖಮಾಡಿದ್ದು ಈ ಕಾಲದಲ್ಲಿ.

ಬೆಂಗಳೂರಲ್ಲಿ ಬಂಟರ ಸಂಘ

ಬೆಂಗಳೂರು ಬಂಟರ ಸಂಘದಲ್ಲಿ ಸಿ.ಎಲ್.ನಾಯಕರು ಅಧ್ಯಕ್ಷರಾಗಿದ್ದು ಡಾ.ಎನ್.ಆಳ್ವ ಕಾರ್ಯದರ್ಶಿ ಆಗಿದ್ದ ಕಾಲದಲ್ಲಿ (11 ಏಪ್ರಿಲ್ 1960ರಲ್ಲಿ) ಮಂಗಳೂರು ಬಂಟರ ಸಂಘಕ್ಕೆ ಇಂಗ್ಲಿಷಿನಲ್ಲಿ ಬರೆದ ಪತ್ರದಲ್ಲಿ-ಮೂರು ವರುಷಗಳ ಹಿಂದೆ ಸ್ಥಾಪಿತವಾದ ಸಂಘ ಎಂದು ಬರೆಯಲಾಗಿದೆ. ಜೊತೆಗೆ ಈ ಪತ್ರದಲ್ಲಿ, ಬೆಂಗಳೂರಲ್ಲಿ ತಾಂತ್ರಿಕ ಮತ್ತು ಇತರ ವೃತ್ತಿನಿರತ ವಿದ್ಯಾಭ್ಯಾಸದಲ್ಲಿ ಬಂಟರ ಅನೇಕ ವಿದ್ಯಾರ್ಥಿಗಳು ತೊಡಗಿರುವುದಾಗಿಯೂ,

ಹೋಟೇಲುಗಳಲ್ಲಿ ಹಾಗೂ ಹಾಸ್ಟೆಲುಗಳಲ್ಲಿ ಅವರಿಗೆಲ್ಲ ಒಂದೇ ಕಡೆ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುವುದು ಎಂದೂ ಬರೆದಿರುವರು. 20 ವಿದ್ಯಾರ್ಥಿಗಳನ್ನು ಸೇರಿಸಿ ಜಾತ್ಯಾತೀತ ಹಾಸ್ಟೆಲ್ ನಡೆಸಲು ಕೆಲವರು ಆಸಕ್ತಿ ತೋರಿಸಿದುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. (ಈ ದಾಖಲೆ ನೀಡಿದವರು ಎಸ್. ಆರ್. ಹೆಗ್ಡೆ, ಮಾಜಿ ಕಾರ್ಯದರ್ಶಿ, ಬೆಂಗಳೂರು ಬಂಟರ ಸಂಘ.) ದಿನಾಂಕ 30–3–1960ರಂದು ನಡೆದ ಬಂಟರ ಸಂಘದ ಸಭೆಯಲ್ಲಿ 31 ಮಂದಿ ಸಮಾನ ಮನಸ್ಕ ಸಮಾಜ ಬಾಂಧವರು ಭಾಗವಹಿಸಿದ್ದರು. ಆ ದಿನ ವಿಜಯ ಬ್ಯಾಂಕ್‌ನ ಕಛೇರಿಯಲ್ಲಿ ಈ ಸಭೆ ನಡೆದಿತ್ತು. ಅಲ್ಲಿ 'ಇದು ಮಂಗಳೂರು ಸಂಘದ ಶಾಖೆ' ಎಂದು ನಿರ್ಣಯ ತೆಗೆದುಕೊಂಡಿತ್ತು. ಆದರೆ 1973 ಸೆಪ್ಟಂಬರ್ 20 ರಂದು ಬೆಂಗಳೂರಿನ ಬಂಟರ ಸಂಘವು ನೊಂದಾಯಿಸಲ್ಪಟ್ಟಿದೆ. ಆ ಪ್ರಕಾರ ಬೆಂಗಳೂರಲ್ಲಿ ಬಂಟರ ಸಂಘದ ಸ್ಥಾಪಕ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆ (ಕೆದಿಂಜೆ ಕಾಂತಪ್ಪ ಹೆಗ್ಗಡೆ).

ಬೆಂಗಳೂರಿನ ಶೇಷಾದ್ರಿ ಪುರಂನಲ್ಲಿ ಸಂಘದ ಕಛೇರಿ ಇತ್ತು. ಭಾರತದ ಪ್ರಸಿದ್ಧ ಉದ್ಯಮಿ ತಿಮ್ಮಪ್ಪ ಭಂಡಾರಿಯವರ ಮಗ ಬಿರ್ಮು ಟಿ.ಭಂಡಾರಿಯವರು ತಮ್ಮ ತಂದೆ ತಿಮ್ಮಪ್ಪ ಭಂಡಾರಿ ಮತ್ತು ತಾಯಿ ರಾಧಾಬಾಯಿಯವರ ಪರವಾಗಿ ಬೆಂಗಳೂರಿನ ವಿಜಯನಗರದಲ್ಲಿ 2 ಎಕ್ರೆ 39 ಗುಂಟೆ ಜಮೀನನ್ನು ದಿನಾಂಕ 29–3–1975ರಂದು ಬೆಂಗಳೂರು ಬಂಟರ ಸಂಘಕ್ಕೆ ಅಂದಿನ ಅಧ್ಯಕ್ಷ ಇರ್ಮಾಡಿ ಆನಂದ ಶೆಟ್ಟಿಯವರಿಗೆ ದಾನ ಪತ್ರದ ಮೂಲಕ ಹಸ್ತಾಂತರಿಸಿದರು.

ತಿಮ್ಮಪ್ಪ ಭಂಡಾರಿಯವರ ನಿವೇಶನದಲ್ಲಿ ಚಿಕಿತ್ಸಾ ಕೇಂದ್ರ ಸ್ಥಾಪಿಸುವ ಉದ್ದೇಶದಿಂದ ಕಟ್ಟಡವೊಂದನ್ನು ನಿರ್ಮಿಸಿದರೂ ಅದು ಕಾರ್ಯ ನಿರ್ವಹಿಸಿದ್ದು ಮಹಿಳಾ ವಸತಿ ಗೃಹ ಆಗಿ, ಮುಂದೆ ಈ ಕಟ್ಟಡವನ್ನು ನವೀಕರಿಸಲಾಯಿತು. ಈಗ ಉತ್ತಮ ಮಹಿಳಾ ವಸತಿ ಗೃಹ ನಡೆಸುತ್ತಿದ್ದಾರೆ. ಆರಂಭದಲ್ಲಿ ಎಲ್ಲಾ ಸಮುದಾಯದ ಮಹಿಳೆಯರಿಗೂ ಇಲ್ಲಿ ಅವಕಾಶ ನೀಡಲಾಗಿತ್ತಾದರೂ ಇತ್ತೀಚಿನ ವರ್ಷಗಳಲ್ಲಿ ಬಂಟರ ಮಹಿಳೆಯರು ಮಾತ್ರ ನೆಲೆಸಿದ್ದಾರೆ.

1988ರಲ್ಲಿ ಸಂಘದ ಅಧ್ಯಕ್ಷರಾದ ನಿವೃತ್ತ ಪೋಲೀಸ್ ಅಧಿಕಾರಿ ಶ್ರೀನಿವಾಸ ಆಳ್ವರ ಕಾಲದಲ್ಲಿ ಬೆಂಗಳೂರು ಬಂಟರ ಸಂಘವು 'ಸ್ನೇಹ ಸಂದೇಶ' ಎಂಬ ಮಾಸ ಪತ್ರಿಕೆಯನ್ನು ಹೊರತಂದಿತು. ಮುಂದೆ ಅದು 'ಸ್ನೇಹ ಚಿಂತನೆ' ಎಂದು R.N.Iಯಲ್ಲಿ ನೋಂದಣಿಗೊಂಡಿತು. ಎಸ್. ಆರ್. ಹೆಗ್ಡೆಯವರು ಈ ಪತ್ರಿಕೆಯ ಸ್ಥಾಪಕ ಸಂಪಾದಕರಾಗಿದ್ದರು.

ಬೆಂಗಳೂರಿನ ವಿಜಯನಗರದಲ್ಲಿ ಇರುವ ಜಮೀನಿನಲ್ಲಿ ಆಗಿನ ಅಧ್ಯಕ್ಷರಾದ ಶ್ರೀನಿವಾಸ ಆಳ್ವರವರು ಭೂಮಿ ದಾನಿಗಳಾದ 'ರಾಧಾ ಬಾಯಿ ತಿಮ್ಮಪ್ಪ ಭಂಡಾರಿ'ಯವರ ಹೆಸರಲ್ಲಿ 1250 ಆಸನಗಳ ಉನ್ನತ ಸಭಾಭವನವನ್ನು ಸದಸ್ಯರ ಮತ್ತು ದಾನಿಗಳ ನೆರವಿನಿಂದ ನಿರ್ಮಿಸಿದರು. ಮುಂದೆ ಹರೀಶ್ ಶೆಟ್ಟಿಯವರ ಅಧ್ಯಕ್ಷಾವಧಿಯಲ್ಲಿ ಇದನ್ನು ಹವಾನಿಯಂತ್ರಿತ ಸಮುದಾಯ ಭವನವಾಗಿ ಪರಿವರ್ತಿಸಲಾಯಿತು. ಕಾಪು ದಿವಾಕರ ಶೆಟ್ಟಿಯವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಮುಖ್ಯ ಸಭಾಭವನದ ಬಳಿ ಹೋಟೆಲ್ ಉದ್ಯಮಿ ಪ್ರಕಾಶ್ ಶೆಟ್ಟಿಯವರ ನೆರವಿನಿಂದ 'ಆಶಾ ಪ್ರಕಾಶ್ ಶೆಟ್ಟಿ' ಭವನ ನಿರ್ಮಾಣವಾಯಿತು. ಇಲ್ಲಿ ಸಂಘದ ಕಛೇರಿ ಮತ್ತು ಒಂದು ಸಣ್ಣ ಹವಾ ನಿಯಂತ್ರಿತ ಚಾವಡಿ ಇದೆ. ಮುಂಡಾಲ ಗುತ್ತು ತಿಮ್ಮಪ್ಪರೈ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಬೆಂಗಳೂರು ಬಂಟರ ಸಂಘದ ಸಂಕೀರ್ಣದಲ್ಲಿ ಗಣಪತಿ ದೇವಸ್ಥಾನವನ್ನು ನಿರ್ಮಿಸಿ ದಿನಾಂಕ 19–11–2000ರಲ್ಲಿ ಗಣಪತಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಯಿತು.

1995ರಲ್ಲಿ ಚೌಟರ ಅಧ್ಯಕ್ಷಾವಧಿಯಲ್ಲಿ ಬೆಂಗಳೂರಲ್ಲಿ ವಿಶ್ವ ಬಂಟರ ಸಮ್ಮೇಳನ ನಡೆದು ಅಭೂತ ಪೂರ್ವ ಯಶಸ್ಸುಗಳಿಸಿತು. ಈ ಸಮ್ಮೇಳನ ವೇದಿಕೆಯನ್ನು ವಿಶ್ವದಾದ್ಯಂತದ ಇರುವ ಬಂಟರು ಹಂಚಿಕೊಂಡಿದ್ದು ವಿಶೇಷ.

ಮಾತ್ರವಲ್ಲ ಖ್ಯಾತ ಬಾಲಿವುಡ್ ತಾರೆಯರಾದ, ಸುನಿಲ್ ಶೆಟ್ಟಿ, ಶಿಲ್ಪಾ ಶೆಟ್ಟಿ, ಗಾಯಕಿ ಶ್ವೇತಾ ಶೆಟ್ಟಿ ಮುಂತಾದವರು ಸಭೆಗೆ ಮೆರಗು ನೀಡಿದ್ದರು. ಈ ಸಮಾರಂಭದಲ್ಲಿ ಅಹರ್ನಿಶಿ ದುಡಿದ ಡಾ. ಜೀವರಾಜ ಆಳ್ವರು ಸಾಂಸ್ಕೃತಿಕ ಕಾರ್ಯಕ್ರಮದ ರೂವಾರಿಯಾಗಿದ್ದರು. ಈ ಸಮ್ಮೇಳನವನ್ನು ಅಂದಿನ ಪ್ರಧಾನ ಮಂತ್ರಿ ದೇವೇಗೌಡರು ಉದ್ಘಾಟಿಸಿದರು. ಈ 2000ರಲ್ಲಿ 'ಶತಮಾನದ ಮಹಿಳೆಯರು' ಎಂಬ ಬಂಟ ಮಹಿಳೆಯರ ಸಮಾವೇಶವನ್ನು ಬೆಂಗಳೂರು ಬಂಟರ ಸಂಘದ ಮಹಿಳಾ ವಿಭಾಗದವರು ನಡೆಸಿದರು. ಇದರಲ್ಲಿ ಪುರುಷರೂ ಭಾಗವಹಿಸಿದ್ದರು.

ಬೆಂಗಳೂರು ಬಂಟರ ಸಂಘದ ಸೇವಾಕಾರ್ಯ

ಬೆಂಗಳೂರು ಬಂಟರ ಸಂಘವು ಅನೇಕ ವಿಭಾಗಗಳನ್ನು ತೆರೆದಿದ್ದು ಆಯಾ ವಿಭಾಗಗಳ ಮೂಲಕ ಸಮಾಜ ಸೇವೆಯನ್ನು ಮಾಡುತ್ತಿದೆ. ಕಾರ್ಗಿಲ್ ಯೋಧರಿಗೆ 1 ಲಕ್ಷದ ನೆರವು, ಗುಜರಾತ್ ಪರಿಹಾರ ನಿಧಿಗೆ ಒಂದು ಲಕ್ಷದ ನೆರವನ್ನು ಬೆಂಗಳೂರು ಬಂಟರ ಸಂಘವು ನೀಡಿದೆ. ಬೆಂಗಳೂರು ಬಂಟರ ಸಂಘದ ವೈದ್ಯಕೀಯ ವಿಭಾಗವು ಉಚಿತ ಮೆಡಿಕಲ್ ಕ್ಯಾಂಪ್ ಮಾತ್ರವಲ್ಲ ರಕ್ತನಿಧಿಯನ್ನೂ ನಡೆಸುತ್ತಿದೆ. ಉಚಿತ ವೈದ್ಯಕೀಯ ಸೇವೆ ಅಲ್ಲದೆ ಪ್ರತಿವರ್ಷ ಬೆಂಗಳೂರಿನ ಮಹಿಳೆಯರಿಗೆ ಮತ್ತು ತುಳುನಾಡಿನ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ನೀಡುತ್ತಿದೆ. ತಮ್ಮ ಸಮಾಜದ ಬಡ ಮಹಿಳೆಯರಿಗೆ ಮದುವೆಯ ಸಂದರ್ಭದಲ್ಲಿ ಉಚಿತ ಚಿನ್ನದ ಕರಿಮಣಿ ಸರ ನೀಡುತ್ತದೆ. ರೋಗಿಗಳಿಗೂ ಧನ ಸಹಾಯ ಮಾಡುತ್ತಿದೆ. ವಧುವರರ ಸಮಾವೇಶವನ್ನು ವರ್ಷಕ್ಕೆ ಒಮ್ಮೆ ನಡೆಸಿ ವರದಕ್ಷಿಣೆ ರಹಿತ ವಿವಾಹಕ್ಕೆ ಉತ್ತೇಜನ ನೀಡುತ್ತಿದೆ. ಈ ಸಂಘದ ಮಹತ್ಸಾಧನೆ ಎಂದರೆ ಬಡ ವಿದ್ಯಾಕಾಂಕ್ಷಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಿರುವುದು. ಆರಂಭದ ವರ್ಷ 1993ರಲ್ಲಿ 44,000 ರೂಪಾಯಿಯನ್ನು ವಿದ್ಯಾರ್ಥಿ ವೇತನಕ್ಕೆ ಮೀಸಲಿರಿಸಿದ ಸಂಘ ಈಗ 20 ಲಕ್ಷರೂಪಾಯಿಗಳವರೆಗೆ ವಿದ್ಯಾರ್ಥಿ ವೇತನ ನೀಡುತ್ತಿದೆ. ಬಡ್ಡಿರಹಿತ ಸಾಲ ರೂಪವಾಗಿಯೂ ವಿದ್ಯಾರ್ಥಿವೇತನ ನೀಡುತ್ತಿದೆ. ಬಂಟರ ಸಂಘ ನಡೆಸುವ ಈ ಶಾಲೆಯಲ್ಲಿ ತಮ್ಮ ಸಿಬ್ಬಂದಿಯ ಮಕ್ಕಳಿಗೆ ಮಾತ್ರವಲ್ಲ ಬಂಟರ ಸಂಘದ ಸಭಾಭವನ ನಿರ್ವಹಣೆಯ ಶ್ರಮಿಕರ ಮಕ್ಕಳಿಗೂ ಮುಕ್ತ ವಿದ್ಯಾರ್ಥಿ ವೇತನ ನೀಡುತ್ತದೆ. ಅಂಗವಿಕಲರಿಗೆ ವಿಶೇಷ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

ಸಂಚಾರಿ ಪೋಲೀಸರಿಂದ ರಸ್ತೆ ನಿಯಮಗಳ ಬಗ್ಗೆ ತಿಳುವಳಿಕೆಯಂತಹ ಸಾರ್ವಜನಿಕ ಸೇವಾಕಾರ್ಯಗಳು ಇಲ್ಲಿ ನಡೆಯುತ್ತಿರುತ್ತವೆ. ಅನೇಕ ವರ್ಷಗಳಿಂದ ನಿರಂತರವಾಗಿ ಚಿನ್ಮಯ ಮಿಷನಿನ ಸ್ವಾಮಿ ಬ್ರಹ್ಮಾನಂದ ಸರಸ್ವತಿಯವರಿಂದ ಗೀತಾ ಜ್ಞಾನಯಜ್ಞಗಳು ನಡೆಯುತ್ತಿದ್ದುವು. ಕಳೆದ ಎರಡು ಮೂರು ವರ್ಷಗಳಿಂದ ಇವೆರಡೂ ನಿಂತಿವೆ. ಬೆಂಗಳೂರಿನ ಬಂಟರ ಸಂಘವು ಯಕ್ಷಗಾನ ಅಕಾಡೆಮಿಯನ್ನು ಸ್ಥಾಪಿಸಿ ಆಸಕ್ತ ವಿದ್ಯಾರ್ಥಿಗಳಿಗೆ ಯಕ್ಷಗಾನ ಕಲಿಸುವ ತರಬೇತಿ ಸಂಸ್ಥೆಯನ್ನು ಆರಂಭಿಸಿದೆ. ಪ್ರತಿವರ್ಷ ಇಲ್ಲಿ ಉಚಿತವಾಗಿ ಯಕ್ಷಗಾನ ಪ್ರದರ್ಶನ ನಡೆಯುತ್ತದೆ.

ಈಗ ಬೆಂಗಳೂರು ಬಂಟರ ಸಂಘದ ಸದಸ್ಯರ ಸಂಖ್ಯೆಯು 8224 ಆಗಿದೆ.

ಬೆಂಗಳೂರು ಬಂಟರ ಸಂಘದಲ್ಲಿ ಶೈಕ್ಷಣಿಕ ಕೇಂದ್ರ

ವ್ಯಾಪಾರೋದ್ಯಮಿಗಳಾಗಿ ಹಣಗಳಿಕೆಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವ ಬಂಟರು ಶಿಕ್ಷಣ ಕೇಂದ್ರವನ್ನು ವ್ಯಾಪಾರದ ನೆಲೆಗಳನ್ನಾಗಿ ಮಾಡದೆ ಇರುವುದು ಆಶ್ಚರ್ಯ. ಚಿಕ್ಕಮಂಗಳೂರು ಕಾಫಿ ತೋಟದ ಮಾಲಿಕ, ಕೆ.ಪಿ.ರಾಮಣ್ಣ ಶೆಟ್ಟಿಯವರ ಆಶಯದಂತೆ ಬಡವರಿಗಾಗಿಯೇ 'ಶ್ರೀ ರಾಮ ಕೃಷ್ಣ ವಿದ್ಯಾನಿಕೇತನ' ಎಂಬ

ಹೆಸರಲ್ಲಿ ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಾಲೆಯನ್ನು ಬೆಂಗಳೂರು ಬಂಟರ ಸಂಘವು ತನ್ನ ನಿವೇಶನದಲ್ಲಿ 1991ರ ಜುಲಾಯಿ ತಿಂಗಳಲ್ಲಿ ಆರಂಭಿಸಿತು. ಕೆ. ಶ್ರೀನಿವಾಸ ಆಳ್ವರ ಅಧ್ಯಕ್ಷಾವಧಿಯಲ್ಲಿ 3 ವಿದ್ಯಾರ್ಥಿಗಳಿಂದ ಆರಂಭಗೊಂಡ ಈ ವಿದ್ಯಾ ಸಂಸ್ಥೆಯ ಶಿಕ್ಷಕಿ ಮತ್ತು ಮುಖ್ಯೋಪಾಧ್ಯಾಯಿನಿಯಾಗಿ ನಿವೃತ್ತ ಹೈಸ್ಕೂಲು ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೃಷ್ಣವೇಣಿಯವರು ಜವಾಬ್ದಾರಿ ಹೊತ್ತಿದ್ದರು. 2002ರಲ್ಲಿ 4ನೆಯ ತರಗತಿಯವರೆಗೆ ಬೆಳೆದ ಈ ಶಿಕ್ಷಣ ಸಂಸ್ಥೆ ಮುಂದೆ ತನ್ನ ಮಗ್ಗುಲು ಬದಲಾಯಿಸಿದೆ. ಪ್ರಸಿದ್ಧ ಉದ್ಯಮಿ ಆರ್. ಎನ್. ಶೆಟ್ಟಿ ಬಂಟರ ಸಂಘ ನಡೆಸುವ ಶಾಲೆಯನ್ನು ವಿಸ್ತರಿಸುವ ಆಶಯದಿಂದ ಸುಸಜ್ಜಿತ ಬಹು ಮಹಡಿ ಕಟ್ಟಡ ಕಟ್ಟಿ ತಾವು ದಾನರೂಪದಲ್ಲಿ ಬಂಟರ ಸಂಘಕ್ಕೆ ನೀಡಿದರು. ಆಗ 'ಶ್ರೀ ರಾಮ ಕೃಷ್ಣ ವಿದ್ಯಾನಿಕೇತನ' ಎಂಬ ಹೆಸರನ್ನು ಅಳಿಸಿ ಆರ್. ಎನ್. ಎಸ್. ವಿದ್ಯಾ ನಿಕೇತನ ಎಂದು ಈ ಶಾಲೆಯನ್ನು ನಾಮಕರಣ ಮಾಡಲಾಯಿತು. ಮುಂದೆ 2004ರಲ್ಲಿ 'ಬಂಟರ ಸಂಘ ಆರ್. ಎನ್. ಎಸ್. ವಿದ್ಯಾ ನಿಕೇತನ' ಎಂದು ಮರು ನಾಮಕರಣವಾಯಿತು. ಕನ್ನಡ ಮಾಧ್ಯಮದಿಂದ ಆರಂಭಗೊಂಡ ಈ ಶಾಲೆಯು ಮುಂದೆ ಕೇಂದ್ರ ಸರಕಾರದ ಸಿಬಿಎಸ್ಸಿಯ ಪಠ್ಯಕ್ರಮವನ್ನು ಅಳವಡಿಸಿಕೊಂಡಿತು. ಈಗ ಈ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣ ಸಿಬಿಎಸ್ಸಿಯ ಪಠ್ಯಕ್ರಮದಲ್ಲಿ ನಡೆಯುತ್ತಿದೆ. 8,9,10ನೆಯ ಕೆಲವು ತರಗತಿಗಳನ್ನು ಸಿಬಿಎಸ್‌ಸಿ ಮತ್ತು ರಾಜ್ಯ ಪಠ್ಯಕ್ರಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ.

ಈಗ ಪದವಿ ಪೂರ್ವ ಶಿಕ್ಷಣ ತರಗತಿಗಳು ಇಲ್ಲಿವೆ. ಒಟ್ಟು 2715 ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಶಿಕ್ಷಣ ಕ್ಷೇತ್ರವನ್ನು ಇನ್ನೂ ವಿಸ್ತರಿಸುವ ಯೋಜನೆಯ ರೂಪುರೇಷೆಗಳನ್ನು ಬೆಂಗಳೂರು ಬಂಟರ ಸಂಘವು ಹಾಕಿದ್ದು ಈ ದಿಸೆಯಲ್ಲಿ ಕಾರ್ಯೋನ್ಮುಖವಾಗಿದೆ.

ಬಂಟರ ಇತರೆ ಶಿಕ್ಷಣ ಕ್ಷೇತ್ರಗಳು

ನ್ಯಾಯವಾದಿ ಕೆ. ಎಸ್. ಹೆಗ್ಡೆಯವರ ಮುಂದಾಳತ್ವದಲ್ಲಿ 1979ರಲ್ಲಿ 7 ಮಂದಿ ಸಮಾನ ಮನಸ್ಕ ಪ್ರಾಜ್ಞರಿಂದ ಗ್ರಾಮೀಣ ಮಕ್ಕಳಿಗಾಗಿ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲೆಂದೇ ಒಂದು ಸಂಘಟನೆಯನ್ನು ಕರಾವಳಿಯ ನಿಟ್ಟೆ ಗ್ರಾಮೀಣ ಪ್ರದೇಶದಲ್ಲಿ ಆರಂಭಿಸಿದರು. ಹೀಗೆ ಆಗಸ್ಟ್ 30–1979ರಲ್ಲಿ ನಿಟ್ಟೆ ಎಜ್ಯುಕೇಷನ್ ಟ್ರಸ್ಟ್ ಆರಂಭವಾಯಿತು. ತುಳುನಾಡಿನ ಕುಗ್ರಾಮವೊಂದರಲ್ಲಿ ಆರಂಭವಾದ ಈ ಶಿಕ್ಷಣ ಸಂಸ್ಥೆ ಇಂದು ಹೈಸ್ಕೂಲ್‌ವರೆಗಿನ ಕೆಲವು ಶಾಖೆಗಳನ್ನು ತುಳುನಾಡಿನಲ್ಲಿ ಹೊಂದಿದೆ. ಮೆಡಿಕಲ್, ಡೆಂಟಲ್, ಇಂಜಿನಿಯರಿಂಗ್–ಮುಂತಾದ ಆಧುನಿಕ ಸಮೂಹ ಶಿಕ್ಷಣ ಸಂಸ್ಥೆಗಳನ್ನು ಇದು ನಡೆಸುತ್ತಿದೆ. ನಿಟ್ಟೆ ಶಿಕ್ಷಣ ಸಂಸ್ಥೆ ಈಗ ಬೆಂಗಳೂರಲ್ಲೂ ಕೆಲವು ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ.

ಬೆಂಗಳೂರಿನ ಯಲಹಂಕದಲ್ಲಿ ಸುಮಾರು 23 ಎಕ್ರೆ ಪ್ರದೇಶದಲ್ಲಿ ನಿಟ್ಟೆ ಮೀನಾಕ್ಷಿ ಇನ್‌ಸ್ಟೂಟ್ ಆಫ್ ಟೆಕ್ನಾಲಜಿ (NMIT)ಯ ನಿರ್ಮಾಣ 2001ರಲ್ಲಿ ಆಯಿತು. ಒಃಂ ವಿದ್ಯಾರ್ಥಿಗಳಿಗಾಗಿ ನಿಟ್ಟೆಯವರ ಕಾಲೇಜು ಬೆಂಗಳೂರಲ್ಲಿ ನಡೆಸಲಾಗುತ್ತದೆ. ದೇವನಹಳ್ಳಿ ರೂರಲ್ ಎಜುಕೇಷನ್ ಟ್ರಸ್ಟ್ (Pharmacy/Pharmacology), ಶಾವಿಗೆ ಹಿಲ್ ಮಲ್ಲೇಶ್ವರ ಜೆ.ಪಿ.ನಗರ ಕನಕಪುರ ರಸ್ತೆಯಲ್ಲಿದೆ.

ಇವರ ಉಖಅಇಯು MDI and IIMs ಕಾರ್ಪೊರೇಟ್ ಶಿಕ್ಷಣ ವ್ಯವಸ್ಥೆಯನ್ನು ಹೊಂದಿದೆ. Dr. NSAM First Grade College ಬೆಂಗಳೂರಿನಲ್ಲಿದೆ. ಹೀಗೆ ಇನ್ನೂ ಕೆಲಕೊಡುಗೆಗಳು ನಿಟ್ಟೆ ಸಮೂಹ ಶಿಕ್ಷಣ ಸಂಸ್ಥೆಯವರಿಂದ ಬೆಂಗಳೂರಿಗೆ ದಕ್ಕಿವೆ.

R.N.S ಇಂಜಿನಿಯರಿಂಗ್ ಕಾಲೇಜು

ಬಂಟರ ಶೈಕ್ಷಣಿಕ ವಲಯಕ್ಕೆ ಸೇರಿದ ವಿದ್ಯಾ ಸಂಸ್ಥೆಗಳಲ್ಲಿ ಆರ್. ಎನ್. ಶೆಟ್ಟಿ ಇಂಜಿನಿಯರಿಂಗ್ ಕಾಲೇಜು ಕೂಡ ಒಂದು. ಇವಲ್ಲದೆ ಆರ್. ವಿ. ರಸ್ತೆಯಲ್ಲಿ ಇರುವ ಬೆಂಗಳೂರು ಹಾಸ್ಪಿಟಲ್ಸ್ ತನ್ನ ಸಂಕೀರ್ಣದಲ್ಲಿ 2003–04ರ ಶೈಕ್ಷಣಿಕ ವರ್ಷದಿಂದ School of Nursing ಆರಂಭಿಸಿದೆ.

ಕೆಲವು ವರ್ಷಗಳ ಹಿಂದೆ ಉಪೇಂದ್ರ ಶೆಟ್ಟಿ ಮತ್ತವರ ಗೆಳೆಯ ಸೇರಿ ಯೂನಿವರ್ಸಲ್ ಕೋಚಿಂಗ್ ಸೆಂಟರ್ ಮೂಲಕ I.A.S ಮತ್ತು K.P.S.C ಪರೀಕ್ಷಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಇಲ್ಲಿ ಶಿಕ್ಷಣ ಪಡೆದ ಸುಮಾರು 87 ಮಂದಿ ಆಕಾಂಕ್ಷಿಗಳು ಖ.ಂ.ಖ ಮತ್ತು ಏ.ಕ.ಖ.ಅ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದಾರೆ.

ಬೆಂಗಳೂರಲ್ಲಿ ಕೃಷಿಕರಾಗಿ ಬಂಟರು

ಸಾಂಸ್ಕೃತಿಕ ಪಲ್ಲಟಗಳನ್ನು ಸವಾಲಾಗಿ ಸ್ವೀಕರಿಸಿ ಹೊಸ ಸಾಧ್ಯತೆಗಳನ್ನು ಅರಸಿಘಟ್ಟ ಹತ್ತಿ ರಾಜಧಾನಿಗೆ ಬಂದವರು ಬಂಟರು. ಇಲ್ಲಿ ಕಾಲೂರಿ ಸ್ವಲ್ಪ ಹಣಸಂಪಾದನೆಯಾದ ಕೂಡಲೇ 'ಮಣ್ಣಿನ ಮಗ' ಎಂಬ ವಾಂಛೆಯನ್ನು ಬಿಟ್ಟುಕೊಡದೆ ಬೆಂಗಳೂರಲ್ಲೂ ತಮ್ಮ ಕುಲ ಕಸುಬು ರೈತ ಕೆಲಸವನ್ನು ಮುಂದುವರಿಸಿದ ಅನೇಕ ಬಂಟರನ್ನು ನಾವು ಕಾಣಬಹುದು. ಇಂತವರಲ್ಲಿ ಹೆಚ್ಚಿನವರು ಉಳಿದ ಕ್ಷೇತ್ರದಲ್ಲಿ ಸಂಪಾದಿಸಿದ ಹಣವನ್ನು ಕೃಷಿಯಲ್ಲಿ ತೊಡಗಿಸಿದರೆ ಪ್ರಸಾದ ಶೆಟ್ಟಿಯವರು ಆರಂಭದಿಂದಲೂ ಕೃಷಿಯನ್ನೇ ಅವಲಂಬಿಸಿ ಬೆಂಗಳೂರಲ್ಲಿ ಬದುಕನ್ನು ಕಟ್ಟಿಕೊಂಡವರು. ಸುಮಾರು 1958–60ರಲ್ಲಿ ಬೆಂಗಳೂರಿನ ಹೊರವಲಯದ ರಾಮಸಂದ್ರದಲ್ಲಿ 50 ಎಕ್ರೆ ಭೂಮಿ ಪಡೆದು ಸ್ವಂತ ಕೃಷಿಯನ್ನು ಆರಂಭಿಸಿದರು. ಇರ್ಮಾಡಿ ಜಯಪ್ರಸಾದರವರು. ಇದಕ್ಕೂ ಮೊದಲು ಇವರ ಭಾವ ಗೋಪಿನಾಥರ ಭೂಮಿಯನ್ನು ಗೇಣಿಗೆ ಪಡೆದು ವ್ಯವಸಾಯ ಮಾಡುತ್ತಿದ್ದರು 1960ರ ಅನಂತರ ಇವರು ಸ್ವಂತ ಭೂಮಿಯಲ್ಲಿ ಕೃಷಿ ಕಾಯಕವನ್ನು ಆರಂಭಿಸಿದರು. ಆರಂಭದಲ್ಲಿ ಜಾನುವಾರುಗಳಿಗೆ ಹುಲ್ಲು ಬೆಳೆಸುತ್ತಿದ್ದು ಬೆಂಗಳೂರಲ್ಲಿ ಇದ್ದ ಅನೇಕ ಖಾಸಗಿ ಡೈರಿಗಳಿಗೆ ಹುಲ್ಲನ್ನು ಒದಗಿಸುತ್ತಿದ್ದರು 1968ರ ನಂತರ ಸುಮಾರು 50 ಎಮ್ಮೆ 75 ಹಸುಗಳ ಡೈರಿಯನ್ನು 1975ರವರೆಗೆ ನಡೆಸಿದವರು. ಇಲ್ಲಿಯ ಪ್ರಮುಖ ಹೋಟೆಲುಗಳಿಗೆ ಇವರ ಹಾಲು ಪೂರೈಕೆಯಾಗುತ್ತಿತ್ತು. ಇವಲ್ಲದೆ ಭತ್ತ, ತೆಂಗು, ಕೊಕ್ಕೋ ಹೈಬ್ರೀಡ್ ಬೀನ್ಸ್, ಬಾರ್ಲಿ, ಕಬ್ಬು ಮುಂತಾದ ಬೆಳೆಯನ್ನು ಬೆಳೆಯುತ್ತಿದ್ದಾರೆ. ಈಗ ಇವರ ತೋಟವನ್ನು ಬೆಂಗಳೂರು ಪ್ರಾಧಿಕಾರ ಕೆಂಪೇಗೌಡ ಬಡಾವಣೆ ನಿರ್ಮಿಸಲು ಸ್ವಾಧೀನ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಇನ್ನೂ ಕೆಲವಾರು ಬಂಟರು ಕೃಷಿಯನ್ನು ಪರ್ಯಾಯ ಕಸುಬಾಗಿ ಬೆಂಗಳೂರಲ್ಲಿ ಮುಂದುವರಿಸಿದ್ದಾರೆ. ನೆಲಮಂಗಲ–ಮಂಗಳೂರು ರಸ್ತೆಯಲ್ಲಿ ಕೆಲವೇ ಕಿಲೋಮೀಟರ್ ಒಳಗೆ ಸುಮಾರು 50 ಎಕ್ರೆಯಲ್ಲಿ ತೆಂಗು– ಮುಂತಾದ ಕೃಷಿಯಲ್ಲಿ ಬೆಂಗಳೂರಿನ ಪ್ರಸಿದ್ಧ ಅಡ್‌ಲ್ಯಾಬ್ ಸಂಸ್ಥೆಯ ಸೀತಾರಾಮ ರೈಯವರು ತೊಡಗಿದ್ದಾರೆ.

ಅಗ್ರೋ ಕೆಮಿಕಲ್ ಖ್ಯಾತಿಯ ಜಿ. ಬಿ. ಶೆಟ್ಟಿಯವರು ಕುಣಿಗಲ್ ರಸ್ತೆಯಲ್ಲಿ 30 ಎಕ್ರೆಯಲ್ಲಿ ಸಾವಯವ ಕೃಷಿಯಲ್ಲಿ ತೊಡಗಿದ್ದಾರೆ. ಇವರಲ್ಲದೆ ವಿ.ಟಿ.ಸುಂದರರಾಜ ಶೆಟ್ಟಿ 12 ಎಕ್ರೆಯಲ್ಲಿ ದ್ರಾಕ್ಷಿ ಬೆಳೆಯುತ್ತಾರೆ. ಜೆ.ಎಸ್.ಶೆಟ್ಟಿಯವರಿಗೆ ಕೆಂಗೇರಿ ವರ್ತುಲ ರಸ್ತೆ ಬಳಿ 3 ಎಕ್ರೆ ತೋಟ ಇದೆ. ದಿವಂಗತ ಪ್ರಭಾಕರ ಶೆಟ್ಟಿಯವರು 8 ಎಕ್ರೆ, ಪಿ.ಕೆ. ಶೆಟ್ಟಿ ಸುಮಾರು 10 ಎಕ್ರೆ ದ್ರಾಕ್ಷಿ ಮತ್ತು ತೆಂಗು, 4 ಎಸ್ ಗ್ರೂಪ್ ಸದಾನಂದ ಶೆಟ್ಟಿ ಸುಮಾರು 16 ಎಕ್ರೆ (ಈಗಲೂ ಅವರ ಮಕ್ಕಳು ಮುಂದುವರಿಸಿದ್ದಾರೆ) ತೋಟವನ್ನು ಬೆಳೆಸಿದ್ದಾರೆ. ಉದ್ಯಮಿ ಆರ್. ಎನ್. ಶೆಟ್ಟಿ ಕೆಂಗೇರಿ ಹೋಬಳಿಯ ಶ್ರೀನಿವಾಸಪುರದಲ್ಲಿ 100 ಎಕ್ರೆ ಭೂಮಿಯಲ್ಲಿ ಕುಲಕಸುಬು ಕೃಷಿಯನ್ನು ಮಾಡುತ್ತಿದ್ದಾರೆ.

ಈಗ 50 ಎಕ್ರೆ ಆರ್. ಎನ್. ಎಸ್. ಇಂಜಿನಿಯರಿಂಗ್ ಕಾಲೇಜು ಕಬಳಿಸಿದೆ. ಉಳಿದ 50 ಎಕ್ರೆಯಲ್ಲಿ ಭತ್ತ, ದ್ರಾಕ್ಷಿ ಮುಂತಾದ ವೈವಿಧ್ಯಮಯ ಬೆಳೆ ತೆಗೆಯುತ್ತಿದ್ದಾರೆ. ಡೈರಿಯೂ ಇವರಲ್ಲಿ ಇತ್ತು. ಹೀಗೆ ಅನೇಕ ಬಂಟರು ಇಲ್ಲಿ ಕೃಷಿಯನ್ನು ಮುಂದುವರಿಸಿದ್ದಾರೆ.

ರಾಜಕೀಯ ರಂಗ

ರಾಜಕೀಯವಾಗಿ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿದ್ದ ಕರ್ನಾಟಕದ ಕರಾವಳಿ ಭಾಗದ ರಾಜಧಾನಿ ಬೆಂಗಳೂರು ಆದ ಮೇಲೆ ಇಲ್ಲಿ ಚುನಾವಣೆಗೆ ನಿಂತು ಬೆಂಗಳೂರಿಗೆ ಆಯ್ಕೆಯಾಗಿ ಬಂದವರಲ್ಲಿ ಬಂಟರೂ ಇದ್ದರು. ಅಂತವರಲ್ಲಿ ನಾಗಪ್ಪ ಆಳ್ವರು ಒಬ್ಬರು. ವೈದ್ಯರಾಗಿರುವಾಗಲೂ ಸೇವಾ ಭಾವನೆಯಿಂದ ವೃತ್ತಿನಿರತರಾಗಿದ್ದ ಆಳ್ವರು 1957ರ ಚುನಾವಣೆಯಲ್ಲಿ ವಿಧಾನ ಸಭೆಗೆ ಸುರತ್ಕಲ್ ಕ್ಷೇತ್ರದಿಂದ ಆಯ್ಕೆಯಾಗಿ ಬೆಂಗಳೂರಿಗೆ ಬಂದರು. 1962ರಲ್ಲಿ ಇವರು ಕರ್ನಾಟಕ ಶಾಸಕಾಂಗ ಸಭೆಗೆ ಮರು ಆಯ್ಕೆಯಾಗಿ ಆರೋಗ್ಯಮಂತ್ರಿಯಾಗಿ ದುಡಿದರು. ಮುಂದೆ 1970ರಲ್ಲಿ ರಾಜ್ಯ ಸಭೆಗೆ ಆಯ್ಕೆಯಾಗಿ 1976ರಲ್ಲಿ ರಾಜಕೀಯ ನಿವೃತ್ತಿ ಪಡೆದು ಬೆಂಗಳೂರಲ್ಲಿ ವಿಶ್ರಾಂತ ಜೀವನ ನಡೆಸಿದರು.

1967ರಲ್ಲಿ ನಡೆದ ಪ್ರಾದೇಶಿಕ ಚುನಾವಣೆಯಲ್ಲಿ ವಿಧಾನ ಸಭೆಗೆ ಬಹುಮತದಿಂದ ಆಯ್ಕೆಯಾದ ಕೆ.ಕೆ.ಹೆಗ್ಡೆ 1968ರಲ್ಲಿ ಬಿ.ಡಿ.ಜತ್ತಿಯವರ ಮಂತ್ರಿಮಂಡಲದಲ್ಲಿ ಆರೋಗ್ಯ ಮಂತ್ರಿಗಳಾಗಿ 4 ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಇವರು ತಮ್ಮ ಕೊನೆಯ ಚುನಾವಣೆಯಲ್ಲಿ ಸೋತರು.

ಕೆ. ನಾಗಪ್ಪ ಆಳ್ವರ ಮಗ, ಡಾ. ಜೀವರಾಜ ಆಳ್ವ 20ರ ಹರಯದಲ್ಲಿಯೇ 1978ರ ಚುನಾವಣೆಯಲ್ಲಿ ಬೆಂಗಳೂರಿನ ಮಲ್ಲೇಶ್ವರಂನಿಂದ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾದರು. ರಾಮಕೃಷ್ಣ ಹೆಗ್ಡೆಯವರ ರಾಜಕೀಯ ಆಪ್ತ ಶಿಷ್ಯರಾಗಿದ್ದವರು. ಯುವಜನ ಇಲಾಖೆ, ಕ್ರೀಡಾ ಹಾಗೂ ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು. ಇವರು ತಮ್ಮ 20ರ ಹರಯದಿಂದಲೇ ಬೆಂಗಳೂರಿನ ಸಾಂಸ್ಕೃತಿಕ ಹರಿಕಾರನಾಗಿ ದುಡಿದ ಕ್ರಿಯಾಶೀಲ ವ್ಯಕ್ತಿ. ಮುಂದೆ ಮಂಗಳೂರು, ಉಡುಪಿಯಿಂದ ವಿಧಾನ ಸಭೆಗೆ ಆಯ್ಕೆಯಾಗಿ ಬಂದವರಲ್ಲಿ ಬಂಟರೂ ಇದ್ದಾರೆ.

ಬ್ಯಾಂಕಿಂಗ್ ಕ್ಷೇತ್ರ

1931ರಂದು ವಿಜಯಬ್ಯಾಂಕ್ ಮಂಗಳೂರಲ್ಲಿ ಅತ್ತಾವರ ಬಾಲಕೃಷ್ಣ ಹೆಗ್ಡೆ ಮತ್ತು ಸಂಗಡಿಗರಿಂದ ಸ್ಥಾಪನೆಯಾಗಿದೆ. ಸುಂದರರಾಮ ಶೆಟ್ಟಿಯವರು 1946ರಲ್ಲಿ ವಿಜಯ ಬ್ಯಾಂಕ್ ಸೇರಿದರು. ಈಗ ಅದರ ಪ್ರಧಾನ ಕಛೇರಿ ಬೆಂಗಳೂರಲ್ಲಿ ಇದೆ. ಭೂಮಸೂದೆಯಿಂದಾಗಿ ಬಂಟರು ತಮ್ಮ ಮೂಲ ಕೃಷಿ ನೆಲವನ್ನು ಕಳೆದುಕೊಳ್ಳುವ ಕಾಲಕ್ಕೆ ವಿಜಯಬ್ಯಾಂಕ್ ತನ್ನ ಶಾಖೆಗಳನ್ನು ವಿಸ್ತರಿಸಿಕೊಂಡಿತ್ತು. ಹೀಗಾಗಿ ಸಹಜವಾಗಿಯೇ ಅನೇಕ ವಿದ್ಯಾವಂತ ಬಂಟರು ವಿಜಯ ಬ್ಯಾಂಕ್‌ನಲ್ಲಿ ಉದ್ಯೋಗ ಗಳಿಸಿಕೊಂಡರು. ವಿಜಯಬ್ಯಾಂಕ್‌ನೊಂದಿಗೆ ಬಂಟರ ಬೆಂಗಳೂರು ನಂಟೂ ಹೆಚ್ಚಾಯಿತು.

ವೈದ್ಯಕೀಯ ರಂಗ

ಬೆಂಗಳೂರನ್ನು ವಿಶ್ವ ವಿಖ್ಯಾತಗೊಳಿಸುವಲ್ಲಿ ಮಾಹಿತಿ ತಂತ್ರಜ್ಞಾನದ ಜೊತೆಗೆ ನಾರಾಯಣ ಹೃದಯಾಲಯದ ಪದ್ಮಶ್ರೀ ಪುರಸ್ಕೃತ ಡಾ. ದೇವಿ ಪ್ರಸಾದ ಶೆಟ್ಟಿಯ ಪಾತ್ರವೂ ಇದೆ. ವಿದೇಶದಲ್ಲಿ ವೈದ್ಯಕೀಯದಲ್ಲಿ ಉಚ್ಚ ಶಿಕ್ಷಣ

ಪಡೆದು ಹೃದಯ ಶಸ್ತ್ರ ಚಿಕಿತ್ಸೆಯಲ್ಲಿ ನೈಪುಣ್ಯ ಸಾಧಿಸಿ ಆಗಲೇ ಪ್ರಸಿದ್ಧಿ ಪಡೆದು ಕಲ್ಕತ್ತಾಗೆ ಹೃದಯ ತಜ್ಞರಾಗಿ ಬಂದು ನೆಲೆಸಿ, ಯಶಸ್ವೀ ಹೃದಯ ಚಿಕಿತ್ಸೆಯ ಮೂಲಕ ವಿಶ್ವದ ಜನರ ಗಮನ ಸೆಳೆದರು. ಮಣಿಪಾಲ್ ಸಂಸ್ಥೆಯವರು 1997ರಲ್ಲಿ 450 ಹಾಸಿಗೆಗಳ ಮಣಿಪಾಲ್ ಆಸ್ಪತ್ರೆಯನ್ನು ಬೆಂಗಳೂರಲ್ಲಿ ಸ್ಥಾಪಿಸುವಲ್ಲಿ ದೇವಿಪ್ರಸಾದ ಶೆಟ್ಟಿಯವರೂ ಕಾರಣರಾಗಿದ್ದರು. ಇಲ್ಲಿಂದ ಆರಂಭವಾಗುತ್ತದೆ ದೇವಿಪ್ರಸಾದ ಶೆಟ್ಟಿಯವರ ಬೆಂಗಳೂರು ನಂಟು. ಅಲ್ಲಿಂದೀಚೆಗೆ ಬೆಂಗಳೂರು ಜಗತ್ತಿನ ಹೃದಯ ರೋಗಿಗಳಿಗೆ ಭರವಸೆಯ ಬೆಳಕು ಕಾಣುವ ತಾಣವಾಯಿತು.

2002ರಲ್ಲಿ ಡಾ. ದೇವಿ ಪ್ರಸಾದರ ಕನಸಿನ ಆಸ್ಪತ್ರೆ 'ನಾರಾಯಣ ಹೃದಯಾಲಯ' ಬೆಂಗಳೂರಿನ ಬೊಮ್ಮಸಂದ್ರದಲ್ಲಿ ಸ್ಥಾಪನೆಯಾಯಿತು. ವಿಶ್ವದ ಬಡ ರಾಷ್ಟ್ರಗಳಿಂದ ಮಾತ್ರವಲ್ಲ ಮುಂದುವರಿದ ರಾಷ್ಟ್ರಗಳಿಂದಲೂ ಇಲ್ಲಿ ರೋಗಿಗಳು ಬರುತ್ತಿದ್ದಾರೆ. ಇಲ್ಲಿಗೆ ಬರುವ ಸುಮಾರು 73 ರಾಷ್ಟ್ರಗಳ ಹೃದಯ ರೋಗಿಗಳಿಗೆ ಅದರಲ್ಲೂ ವಿಶೇಷವಾಗಿ ಮಕ್ಕಳಿಗೆ ಬೆಂಗಳೂರಿನ ನಾರಾಯಣ ಹೃದಯಾಲಯ ಆಪತ್ಭಾಂದವನಂತೆ ಕೆಲಸ ಮಾಡುತ್ತಿದೆ. ವಿಶ್ವದಲ್ಲಿಯೇ ಅತ್ಯಧಿಕ ಶಸ್ತ್ರಚಿಕಿತ್ಸೆ ನಡೆಯುವ ಆಸ್ಪತ್ರೆ ಇದು. 1000 ಹಾಸಿಗೆಗಳ ನಾರಾಯಣ ಹೃದಯಾಲಯದಲ್ಲಿ 24 ಆಪರೇಷನ್ ಥಿಯೇಟರ್ಸ್ ದಿನಕ್ಕೆ 50 ಮೇಜರ್ ತೆರೆದ ಹೃದಯದ ಶಸ್ತ್ರಚಿಕಿತ್ಸೆ ನಡೆಯುತ್ತಿದೆ.

ಡಾ. ದೇವಿ ಪ್ರಸಾದ್ ಶೆಟ್ಟಿಯವರು ಮೈಕ್ರೋಚಿಪ್ ಕ್ಯಾಮರಾದ ನೆರವಿನಿಂದ ತೆರೆದ ಶಸ್ತ್ರಕ್ರಿಯೆಯ ಮೂಲಕ ಹೃದಯದ ರಂಧ್ರವನ್ನು ಮುಚ್ಚಿದವರಲ್ಲಿ ವಿಶ್ವದಲ್ಲಿಯೇ ಮೊದಲಿಗರು. Neo-natal open-heart surgery ಯಲ್ಲಿ ಭಾರತದಲ್ಲಿ ಮೊದಲಿಗರು. ಅಲ್ಲದೆ ಬದಲೀ ಶಸ್ತ್ರಚಿಕಿತ್ಸೆಯನ್ನು ಮೊತ್ತ ಮೊದಲಿಗೆ ಭಾರತದಲ್ಲಿ ಅಂದರೆ ಬೆಂಗಳೂರಲ್ಲಿ ಮಾಡಿ ಹೊಟ್ಟೆಯ blood vessels ಉಪಯೋಗಿಸಿ ಹೃದಯದಲ್ಲಿ ತಡೆಹಿಡಿದ arteries ಸರಾಗವಾಗಿ ಕೆಲಸ ಮಾಡುವಂತೆ ಮಾಡಿದವರಲ್ಲಿ ಮೊದಲಿಗರು.

ಮಕ್ಕಳ ಹೃದಯದ ಶಸ್ತ್ರಚಿಕಿತ್ಸೆಯಲ್ಲಿ ನಾರಾಯಣ ಹೃದಯಾಲಯ ವಿಶ್ವದಲ್ಲಿ ಪ್ರಥಮ. ತೃತೀಯ ಪೀಳಿಗೆ (3rd generation) ಕೃತಕ ಹೃದಯ (artificial heart from ventracor) ವನ್ನು ಜೋಡಿಸುವುದರಲ್ಲಿ (implant) ಏಷ್ಯಾದಲ್ಲೇ ಈ ಆಸ್ಪತ್ರೆ ಪ್ರಥಮ. ಹೃದಯಕ್ಕೆ ಸಂಬಂಧಿಸಿದ (dynamic cardiomyoplasty operation) ಯಶಸ್ವಿ ಶಸ್ತ್ರ ಚಿಕಿತ್ಸೆಯನ್ನು ನಡೆಸಿದವರಲ್ಲಿ ಇವರು ಮೊದಲಿಗರು.

ತಮ್ಮ ತಜ್ಞ ವೈದ್ಯ ಮಿತ್ರರ ಸಹಕಾರದಿಂದ ದೇವಿಪ್ರಸಾದರು ತಮ್ಮ ಕನಸಿನ 'ನಾರಾಯಣ ಹೆಲ್ತ್ ಸಿಟಿ'ಯನ್ನು ಸ್ಥಾಪಿಸಿ ವಿಶ್ವವಿಖ್ಯಾತಗೊಳಿಸಿದರು. ಇಲ್ಲಿ ಅಪಘಾತಕ್ಕೊಳಗಾದ ರೋಗಿಗೆ ಆಸ್ಪತ್ರೆ, ನರರೋಗಿಗಳ ಆಸ್ಪತ್ರೆ, ನೇತ್ರಾಲಯ, ಮಕ್ಕಳ ಆಸ್ಪತ್ರೆ ಮತ್ತು ಕ್ಯಾನ್ಸರ್ ಸಂಶೋಧನೆ–ಹೀಗೆ ಪ್ರತ್ಯೇಕ ಆಸ್ಪತ್ರೆಗಳ ಘಟಕಗಳಿವೆ.

ನಾರಾಯಣ ಹೃದಯಾಲಯವು ಅಕಾಡೆಮಿಕ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್‌ನ್ನು ನಡೆಸುತ್ತಿದೆ. ಇಲ್ಲಿ ಈಗಾಗಲೇ 49 ತರಬೇತಿ ಕಾರ್ಯಕ್ರಮಗಳು ನಡೆದಿವೆ. ಯೂನಿವರ್‌ಸಿಟಿ ಗ್ರ್ಯಾಂಟ್ಸ್ ಕಮಿಷನ್ನಿನಿಂದ ನಾರಾಯಣ ಹೃದಯಾಲಯವು ಅಕಾಡೆಮಿಕ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಡೀಮ್ಡ್ ಯೂನಿವರ್‌ಸಿಟಿ ಆಗಲು ಅನುಮೋದನೆ ಗೊಂಡಿದೆ. ಲಂಡನ್‌ನಲ್ಲಿರುವ Thrombosis Research Institute ಇದನ್ನು ಪ್ರಾಯೋಜಿಸಿದೆ. ಈ ಮೂಲಕ ನಾರಾಯಣ ಹೆಲ್ತ್ ಸಿಟಿ ಕ್ಯಾಂಪಸ್‌ನಲ್ಲಿ ಸಂಶೋಧನಾ ಲ್ಯಾಬ್‌ನ್ನು ಆರಂಭಿಸಿ ಈಗ 30 ವಿಜ್ಞಾನಿಗಳು ಇಲ್ಲಿ ಹೃದಯ ಸ್ತಂಭನ ತಡೆಯುವ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆ.

ಇವರ ಯೋಜನೆಗಳು ಇನ್ನೂ ಬಹಳಷ್ಟಿವೆ. 500 ಹಾಸಿಗೆಗಳ ಮೈಕ್ರೋ ಸಾಯನ್ಸ್ ಸಿಟಿ, 500 ಹಾಸಿಗೆಗಳ ನೆಫ್ರೋಲಾಜಿ ಸೆಂಟರ್, ಮಕ್ಕಳಿಗಾಗಿ ಮತ್ತು ಮಹಿಳೆಯರಿಗಾಗಿ ಮೀಸಲಾದ 500 ಹಾಸಿಗೆಗಳ ಆಸ್ಪತ್ರೆ–ಹೀಗೆ ದಿನಾ 15000 ರೋಗಿಗಳಿಗೆ ಚಿಕಿತ್ಸೆ ನೀಡಬಲ್ಲ 5000 ಹಾಸಿಗೆಗಳ ಆಸ್ಪತ್ರೆಯ ಯೋಜನೆ ಪ್ರಗತಿಯಲ್ಲಿದೆ.

ಬಡವರಿಗೆ ಹೃದಯ ಶಸ್ತ್ರ ಚಿಕಿತ್ಸೆ ಯೋಜನೆ ತೆರೆದ ಹೃದಯ ಶಸ್ತ್ರಚಿಕಿತ್ಸೆಯು ಬಡ ರೋಗಿಗಳಿಗೂ ಲಭ್ಯವಾಗುವಂತೆ ನೋಡಿಕೊಳ್ಳುವುದರಲ್ಲಿಯೂ ನಾರಾಯಣ ಹೃದಯಾಲಯ ಮುಂದಾಗಿದೆ. ಬಡವರ ಆಶಯಕ್ಕೆ ತಕ್ಕಂತೆ ಇವರು ಆಯೋಜಿಸಿದ package pricing system ಮೂಲಕ ಅನೇಕ ಬಡವರೂ ಇಲ್ಲಿ ಹೃದಯಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಸಾಧ್ಯವಾಗಿದೆ. Assembly line heart surgeryಯೂ ಬಡವರಿಗೆ ಎಟಕುವಲ್ಲಿ ಇವರ ಪ್ರಯತ್ನ ಶ್ಲಾಘನೀಯ.

ಇಲ್ಲಿ ಬರುವ ರೋಗಿಗಳಿಗೆ ಅನುಕೂಲವಾಗಲೆಂದು ಮೈಕ್ರೋ ಹೆಲ್ತ್ ಇನ್ಸೂರೆನ್ಸ್ 'ಯಶಸ್ವಿನಿ'ಯನ್ನು ಕರ್ನಾಟಕ ಸರಕಾರದ ಸಹಭಾಗಿತ್ವದೊಂದಿಗೆ ನಾರಾಯಣ ಹೃದಯಾಲಯ ಆರಂಭಿಸಿದೆ. ಇದು ಗ್ರಾಮೀಣ ರೈತರಿಗಾಗಿ ಸರಕಾರದ ಯೋಜನೆ. ವರ್ಷಕ್ಕೆ ಈ ಯೋಜನೆಯಲ್ಲಿ 60 ರೂಪಾಯಿಯನ್ನು ಗ್ರಾಮೀಣ ರೈತ ಜನರಿಂದ ಪಡೆಯಲಾಗುತ್ತದೆ. ಈ ಮೂಲಕ ಮೊದಲನೆಯ ವರ್ಷ ಅಂದರೆ ಜೂನ್ 2004ರಲ್ಲಿ 9039 ಮೇಜರ್ ಶಸ್ತ್ರಚಿಕಿತ್ಸೆಗಳನ್ನು ಮಾಡಿದೆ. ಈಗಾಗಲೇ ಇದು 35814 ಹೊರರೋಗಿಗಳಿಗೆ ಸೇವೆ ಒದಗಿಸಿದೆ. ಭಾರತದ ಎಲ್ಲಾ ರಾಜ್ಯಗಳಲ್ಲಿ ನಾರಾಯಣ ಹೃದಯಾಲಯದ ಅನೇಕ ಶಾಖೆಗಳನ್ನು ಸ್ಥಾಪಿಸಿ ಶ್ರಮಿಕರಿಗಾಗಿ ಅರ್ಪಿಸುವ ಯೋಜನೆ ಇದೆ.

ನಾರಾಯಣ ನೇತ್ರಾಲಯ

ನಾರಾಯಣ ನೇತ್ರಾಲಯದ ಹೆಸರು ಬೆಂಗಳೂರಿಗೆ ಚಿರ ಪರಿಚಿತ. ದಕ್ಷಿಣ ಭಾರತದ ಐದು ಮೇಲ್ದರ್ಜೆಯ ಕಣ್ಣಾಸ್ಪತ್ರೆಗಳಲ್ಲಿ ಒಂದು ಎಂದು ನಾರಾಯಣ ನೇತ್ರಾಲಯವನ್ನು 2007ರಲ್ಲಿ 'Express Healthcare' ಘೋಷಿಸಿದೆ. ಇದರ ಸ್ಥಾಪಕರು ಮತ್ತು ಆಡಳಿತ ನಿರ್ದೇಶಕರು ಕುಂದಾಪುರದ ಡಾ. ಭುಜಂಗ ಶೆಟ್ಟಿ. 1982ರಲ್ಲಿ ಶ್ರೀರಾಂಪುರದಲ್ಲಿ 'ನಾರಾಯಣ ನೇತ್ರಾಲಯ'ವನ್ನು ತೆರೆದು ಮುಂದೆ ಅದನ್ನು ಯಶವಂತಪುರಕ್ಕೆ ಸ್ಥಳಾಂತರಿಸಿದರು. ಈಗ ನಾರಾಯಣ ನೇತ್ರಾಲಯ Post Graduate Institute of Ophthalmology ಆಗಿಯೂ ಕೆಲಸಮಾಡುತ್ತಿದೆ. 300 ಹಾಸಿಗೆಗಳ ಈ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯಲ್ಲಿ ದಿನಕ್ಕೆ 500 ಕ್ಯಾಟ್‌ರ್ಯಾಕ್ಸ್ ಆಪರೇಷನ್ ಮಾಡಲಾಗುತ್ತದೆ. ನಾರಾಯಣ ಹೆಲ್ತ್ ಸಿಟಿ ಬೊಮ್ಮಸಂದ್ರದಲ್ಲೂ ನಾರಾಯಣ ನೇತ್ರಾಲಯದ ಶಾಖೆಯನ್ನು ತೆರೆಯಲಾಗಿದೆ. ಕಣ್ಣಿಗೆ ಸಂಬಂಧಿಸಿದಂತೆ ತರಬೇತಿ, ಶಿಕ್ಷಣ ಮತ್ತು ಸಂಶೋಧನಾ ಕೇಂದ್ರಗಳು ಇಲ್ಲೂ ಇವೆ. ಬೆಂಗಳೂರಿನ ಕಾಸಲ್ ಸ್ಟ್ರೀಟ್‌ನಲ್ಲಿ ನಾರಾಯಣ ನೇತ್ರಾಲಯದ ಮೂರನೆಯ ಶಾಖೆಯನ್ನು 20,000 ಚದರ ಕಿಲೋಮೀಟರ್ ವ್ಯಾಪ್ತಿಯ ಆಸ್ಪತ್ರೆಯ ಕಟ್ಟಡದಲ್ಲಿ ಆರಂಭಿಸಲಾಗಿದೆ.

The KIDROP model set-up by Narayana Nethralaya Post Graduate Institute of Opthalmology, Bangalore, in early 2008, is the first Tele-Rop initiative in any developing country to address the issue of unscreened rural infants by the use of Tele-Ophthalmology.

The KIDROP (ಕರ್ನಾಟಕ ಸ್ಟೇಟ್ ಇಂಟರ್‌ನೆಟ್ ಅಸಿಸ್ಟೆಡ್ ಡಯಾಗ್ನೋಸಿಸ್ ಆಫ್ ರೇಟಿನೋಪತಿ) ಟಂಜಜಟ ನ್ನು ನಾರಾಯಣ ನೇತ್ರಾಲಯದ ಸ್ನಾತಕೋತ್ತರ ನೇತ್ರ ತಜ್ಞ ಸಂಸ್ಥೆಯು 2008ರ ಬೆಂಗಳೂರಲ್ಲಿ ಸ್ಥಾಪಿಸಿತು. ನಿರ್ಲಕ್ಷಿತ ಗ್ರಾಮೀಣ ಮಕ್ಕಳ ಕಣ್ಣಿನ ಸಮಸ್ಯೆಗಳಿಗೆ (Tele-Ophthalmology) ಯಾವುದೇ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮೊದಲ Tele-Rop initiative ಇದಾಗಿದೆ. ಇವರ ಯೋಜನೆಯಾದ ನ್ಯಾಷನಲ್ ರೂರಲ್ ಹೆಲ್ತ್ ಮಿಷನ್ ಕರ್ನಾಟಕದ 12 ಜಿಲ್ಲೆಗಳಿಗೆ ವಿಸ್ತರಿಸಲಿದೆ. ಎಳೆಯ ಮಕ್ಕಳ ದೃಷ್ಟಿಹೀನತೆಯನ್ನು ಹೋಗಲಾಡಿಸಲು

ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದೊಂದಿಗೆ ಆರಂಭವಾದ ದೇಶದ ಮೊತ್ತ ಮೊದಲ ಯೋಜನೆ ಇದು. ಈ ಯೋಜನೆಯಡಿ 2 ವರ್ಷಗಳಲ್ಲಿಯೇ ಕರ್ನಾಟಕದ ಗ್ರಾಮೀಣ ಪ್ರದೇಶದ ಸುಮಾರು 3000 ಹಸುಳೆಗಳ ದೃಷ್ಟಿದೋಷವನ್ನು ಪತ್ತೆ ಹಚ್ಚಲಾಗಿದೆ. 1994ರಿಂದಲೂ 72 ಶಾಲೆಗಳ 26312 ಮಕ್ಕಳಿಗೆ ಉಚಿತ ಕಣ್ಣು ಪರೀಕ್ಷೆ ನಡೆಸಲಾಗಿದೆ. ಅಲ್ಲದೇ ಈ ಶಾಲೆಗಳ ಇಬ್ಬರು ಮೂವರು ಶಿಕ್ಷಕಿಯರಿಗೆ ನಾರಾಯಣ ನೇತ್ರಾಲಯದಲ್ಲಿ ದೃಷ್ಟಿದೋಷದ ಪ್ರಥಮ ಜ್ಞಾನವನ್ನು ನೀಡಲಾಗಿದೆ. 1994ರಿಂದಲೂ ಕರ್ನಾಟಕದಲ್ಲಿ ಸುಮಾರು 436 ಉಚಿತ ಕಣ್ಣು ಪರೀಕ್ಷೆಯ ಶಿಬಿರಗಳನ್ನು ನಡೆಸಿದೆ. 'ಸೇವಾ ಭಾರತಿ' ಮತ್ತು 'ಅರುಣ ಚೇತನ್' ಎನ್ನುವ ಎರಡು ಪ್ರಮುಖ ಎನ್.ಜಿ.ಒಗಳ ಸಹಯೋಗದೊಂದಿಗೆ ಗುಡಿಸಲು ನಿವಾಸಿಗಳ 10 ವರ್ಷದ ಒಳಗಿನ ಮಕ್ಕಳಿಗಾಗಿ ಉಚಿತ ಪರೀಕ್ಷೆ ಮತ್ತು ಚಿಕಿತ್ಸೆ Slum 10K project ಯನ್ನು 2010ರ ಒಳಗೆ ನಡೆಸಲಾಗಿದೆ. 7696ಮಕ್ಕಳು ಇದರ ಲಾಭ ಪಡೆದಿದ್ದಾರೆ. ಇವರ ಸಹಾಯ ಹಸ್ತ ಪಾವಗಡ ತಾಲೂಕಿನವರೆಗೂ ಚಾಚಿದೆ.

1994ರಲ್ಲಿ ಡಾ. ರಾಜಕುಮಾರ್ ತಮ್ಮ ಕಣ್ಣುಗಳ ದಾನ ನೀಡುವ ಮೂಲಕ ಕಣ್ಣಿನ ಬ್ಯಾಂಕಿಗೆ ಇಲ್ಲಿ ಚಾಲನೆ ನೀಡಿದ್ದಾರೆ. ರಾಜಕುಮಾರ್ ಅವರ ಸಾವಿನ ಮೊದಲನೆಯ ವರ್ಷದಲ್ಲಿ ಈ ಬ್ಯಾಂಕ್‌ನಲ್ಲಿಯೇ 300% ಕಣ್ಣುಗಳ ಸಂಗ್ರಹವಾಗಿದೆ. ಕಾಂಗ್ರೆಸ್ ಯುವ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಯಡ್ಯೂರಪ್ಪ, ಲೋಕಾಯುಕ್ತ ಸಂತೋಷ್ ಹೆಗ್ಡೆ, ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು. ಹೀಗೆ ರಾಜಕುಮಾರ್ ಐ ಬ್ಯಾಂಕಿಗೆ ಅನೇಕ ಪ್ರಜ್ಞಾವಂತರು ಕಣ್ಣುಗಳನ್ನು ದಾನ ನೀಡುವುದಾಗಿ ಘೋಷಿಸಿಕೊಂಡಿದ್ದಾರೆ.

ದಿ ಬೆಂಗಳೂರು ಹಾಸ್ಪಿಟಲ್ (THE BANGALORE HOSPITAL)

ಡಾ. ಶಂಕರ ಶೆಟ್ಟಿಯವರ ಬೆಂಗಳೂರು ಆಸ್ಪತ್ರೆ ಆರ್. ವಿ. ರಸ್ತೆಯಲ್ಲಿ ಇದೆ. 'ಶುಶ್ರೂತಾ ಮೆಡಿಕಲ್ ಏಡ್ಸ್ ಮತ್ತು ಸಂಶೋಧನಾ ಆಸ್ಪತ್ರೆ ಲಿಮಿಟೆಡ್' ಇನ್ಸ್‌ಟ್ಯೂಟ್‌ನಿಂದ ಇದು ಸ್ಥಾಪನೆಗೊಂಡಿದೆ. ಇದರ ಮುಖ್ಯ ಧ್ಯೇಯಗಳು ವೈದ್ಯಕೀಯ ಆರೋಗ್ಯ ಮತ್ತು ವೈದ್ಯಕೀಯ ಶಾಲೆ ಕಾಲೇಜುಗಳ ಸ್ಥಾಪನೆ, ನರ್ಸಿಂಗ್, ಸಂಶೋಧನೆ ಇತ್ಯಾದಿ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳು. ಕೆಲವು ಪ್ರಜ್ಞಾವಂತ ವೈದ್ಯರ ಕನಸಿನಂತೆ ಇದು 1991ರಲ್ಲಿ 15 ಕೋಟಿ ರೂಪಾಯಿಗಳಿಂದ ಕಟ್ಟಿದ 'ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಕಾರ್ಯಾರಂಭ ಮಾಡಿದೆ. ಈ ಆಸ್ಪತ್ರೆಯ ಕಾರ್ಯ ಯೋಜನೆಯ ಪ್ರಮುಖರಲ್ಲಿ ಡಾ. ಶೇಖರ ಶೆಟ್ಟಿ ಒಬ್ಬರು. ಇಲ್ಲಿ 350 ಉದ್ಯೋಗಿಗಳು ಕಾರ್ಯನಿರತರಾಗಿದ್ದಾರೆ. ಕೇಂದ್ರೀಯ ಪರೀಕ್ಷಾ ಮಂಡಳಿಯು ಆಸ್ಪತ್ರೆಯಲ್ಲಿ ಆರಂಭಿಸಿರುವ ಸರ್ಜರಿ, ಮೆಡಿಸನ್ ಮತ್ತು ಅನೆಸ್ತೇಸಿಯಾ ಸ್ನಾತಕೋತ್ತರ ಪದವಿಗಳನ್ನು ಇಲ್ಲಿ ಅಧಿಕೃತವಾಗಿ (accredited) ಬೋಧಿಸಿ ನೀಡಲಾಗುತ್ತದೆ.

ಬೆಂಗಳೂರು ಆಸ್ಪತ್ರೆಯು ಬೆಂಗಳೂರು ಗ್ರಾಮಾಂತರದ ತಿಪ್ಪಮಾರನಹಳ್ಳಿಯನ್ನು ದತ್ತು ಪಡೆದಿದೆ. ಪ್ರತಿ ತಿಂಗಳೂ ತಿಪ್ಪಮಾರನ ಹಳ್ಳಿಯ ಸುತ್ತ ಮುತ್ತಲಿನ ಅನೇಕ ಹಳ್ಳಿಗಳಿಂದ ಬರುವ ಜನರು ಇಲ್ಲಿ ನಡೆಯುವ ಶಿಬಿರದಿಂದ ಲಾಭ ಪಡೆಯುತ್ತಿದ್ದಾರೆ. ವಿಶೇಷ ವೈದ್ಯಕೀಯ ಸೇವೆಯ ಅಗತ್ಯ ಉಳ್ಳವರನ್ನು ಬೆಂಗಳೂರು ಆಸ್ಪತ್ರೆಗೆ ಸೇರಿಸಿ ಅಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಆರ್ಥಿಕವಾಗಿ ಹಿಂದುಳಿದವರಿಗೆ ಈ ಶೀಬಿರದಿಂದ ಉಚಿತ ಶಸ್ತ್ರ ಚಿಕಿತ್ಸೆಯ ಸೇವೆಯು ದೊರೆಯುತ್ತದೆ. ಇಃ ರ ಇನ್ನೊಂದು ಸಮಾಜ ಸೇವಾ ಸಂಸ್ಥೆ ಮುತ್ತಪ್ಪ ಅತ್ತಾವರ ಟ್ರಸ್ಟ್ ಮೂಲಕವೂ ಗ್ರಾಮೀಣ ಮತ್ತು ಇತರೆ ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತ ವೈದ್ಯಕೀಯ ಸೇವೆ ಸಿಗುತ್ತದೆ. ಬನ್ನೇರು ಘಟ್ಟ ರಸ್ತೆಯಲ್ಲಿರುವ ಡಾ. ವಿವೇಕ ರೈ ಅವರ 30 ಹಾಸಿಗೆಗಳ ಸಾಯಿರಾಮ್ ಆಸ್ಪತ್ರೆಯು ಉಚಿತ ಡಯಾಲಿಸಿಸ್ ಸೇವೆಯನ್ನು ಆರ್ಥಿಕವಾಗಿ ಹಿಂದುಳಿದವರಿಗೆ ಒದಗಿಸುತ್ತದೆ. ಇಂತಹ ಸೇವೆಯನ್ನು ಆರಂಭಿಸಿದವರಲ್ಲಿ ಇವರೇ ಮೊದಲಿಗರು. ಸೆಂಟ್ರಲ್ ಜೈಲಿಗೂ ಇವರ ಸೇವೆ ಒದಗಿದೆ.

ಜಾಲಹಳ್ಳಿ ಕ್ರಾಸ್‌ನಲ್ಲಿ ಇರುವ ಡಾ. ಜಗದೀಶ ಶೆಟ್ಟಿ ಮತ್ತು ಡಾ. ವೀಣಾ ಶೆಟ್ಟಿ ದಂಪತಿಗಳ ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾದ 100 ಹಾಸಿಗೆಗಳ ಪ್ರೀಮಿಯರ್ ಸಂಜೀವಿನಿ ಉಚಿತ ವೈದ್ಯಕೀಯ ಸೇವೆ ನೀಡಲೆಂದು ಶಿಬಿರಗಳನ್ನು ನಡೆಸುತ್ತಿದೆ. ಬನ್ನೇರು ಘಟ್ಟ – ಹುಳಿಮಾವು ರಸ್ತೆಯಲ್ಲಿರುವ ಡಾ. ಸುರೇಶ್ ಶೆಟ್ಟಿಯವರ ಶ್ರೀ ಕೃಷ್ಣ ಆಸ್ಪತ್ರೆ ಜಯನಗರದಲ್ಲಿರುವ ಡಾ. ಮಮತಾ ಹೆಗ್ಡೆ ಅವರ ಮಮತಾ ಹಾಸ್ಪಿಟಲ್ ಇವು ಮುಖ್ಯವಾದವು.

ಇವಲ್ಲದೆ ಸುಮಾರು 10 ಹಾಸಿಗೆಗಳಿಂದ ಆರಂಭವಾಗಿ 100 ಹಾಸಿಗೆಗಳಿಗೆ ಮೇಲ್ಪಟ್ಟು ಅನೇಕ ಆಸ್ಪತ್ರೆಗಳನ್ನು ಬೆಂಗಳೂರಿನ ನಗರದಲ್ಲಿ ಬಂಟ ವೈದ್ಯರಿಂದ ನಡೆಸಲಾಗುತ್ತಿದೆ. ಹೀಗೆ ವೈದ್ಯಕೀಯ ಸೇವೆಯ ಮೂಲಕ ನಾರಾಯಣ ಹೃದಯಾಲಯ, ನಾರಾಯಣ ನೇತ್ರಾಲಯ, ಬೆಂಗಳೂರು ಆಸ್ಪತ್ರೆ ಮಾತ್ರವಲ್ಲದೇ ಇತರೆ ಬಂಟ ವೈದ್ಯರೂ ಸಮಾಜಸೇವೆಯನ್ನು ಮಾಡುತ್ತಿದ್ದಾರೆ. ಕೆಲವು ನುರಿತ ವೈದ್ಯರು ಮಲ್ಟಿ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಆಡಳಿತ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಮಾಜದ ಅನೇಕ ವೈದ್ಯರು ನಗರದ ಹಲವಾರು ಆಸ್ಪತ್ರೆಗಳಲ್ಲಿ ವಿಶೇಷ ಪರಿಣಿತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸ್ವಂತ ಚಿಕಿತ್ಸಾ ಕೇಂದ್ರಗಳು ಅನೇಕ ಇವೆ. ಹೀಗೆ ಬೆಂಗಳೂರಿನ ವೈದ್ಯಕೀಯ ಕ್ಷೇತ್ರಕ್ಕೆ ಬಂಟರ ಕೊಡುಗೆ ಗಮನಾರ್ಹವಾದುದು.

ಕುಲಪತಿಗಳು

ಶೈಕ್ಷಣಿಕ ಕ್ಷೇತ್ರದಲ್ಲಿಯೂ ವೈದ್ಯ ವೃತ್ತಿಯಲ್ಲಿ ಮುಂದುವರಿದು ಕುಲಪತಿಗಳಾಗಿರುವವರಲ್ಲಿ ಬಂಟರೂ ಇರುವುದು ಗಮನಾರ್ಹ. ಭೂಮಸೂದೆಯ ಆನಂತರದ ಅಂದರೆ 20ನೆಯ ಶತಮಾನದ 70ರ ದಶಕದಲ್ಲಿ ಬಂಟರು ಶಿಕ್ಷಣದತ್ತ ಹೆಚ್ಚು ಒಲವು ತೋರಿದ್ದು. ಈ ಕೆಳಗಿನವರು ಬೆಂಗಳೂರಲ್ಲಿ ವೈದ್ಯಕೀಯ ವಿಶ್ವ ವಿದ್ಯಾಲಯಗಳ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ರಾಜೀವ ಗಾಂಧಿ ವಿಶ್ವ ವಿದ್ಯಾಲಯ– ಡಾ ಚಂದ್ರ ಶೇಖರ ಶೆಟ್ಟಿ (ಮಾಜಿ) ದೇವರಾಜ Health University (ಆರೋಗ್ಯ ವಿಶ್ವ ವಿದ್ಯಾಲಯ) ಡಾ. ಚಂದ್ರ ಶೇಖರ ಶೆಟ್ಟಿ ರಾಜೀವ ಗಾಂಧಿ ವಿಶ್ವ ವಿದ್ಯಾಲಯ, ಡಾ. ರಮಾನಂದ ಶೆಟ್ಟಿ (ಇವರು ಚಂದ್ರ ಶೇಖರ ಶೆಟ್ಟಿಯವರ ಕಿರಿಯ ಸೋದರ). ಬೆಂಗಳೂರು ವಿಶ್ವ ವಿದ್ಯಾಲಯದ ಕುಲಪತಿಗಳಾಗಿ ಡಾ. ಎನ್. ಆರ್. ಶೆಟ್ಟಿ ಕಾರ್ಯನಿರ್ವಹಿಸಿದ್ದರು. ಶಿಕ್ಷಕರಾಗಿ ಪ್ರೊಫೆಸರರಾಗಿ ಕೆಲವರು ಕೆಲಸ ನಿರ್ವಹಿಸುತ್ತಿದ್ದಾರೆ.

ಕೈಗಾರಿಕಾ ಕ್ಷೇತ್ರದಲ್ಲಿ ಬಂಟರು

ವೀರಪ್ಪ ಮೊಯಿಲಿಯವರು ಕೈಗಾರಿಕಾ ಮಂತ್ರಿಯಾಗಿದ್ದಾಗ ಬೆಂಗಳೂರಿನಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂಬಯಿಯ ಕನ್ನಡಿಗರನ್ನು ಆಮಂತ್ರಿಸಿದ್ದರು. ಅದರಿಂದ ಪ್ರೇರಣೆಗೊಂಡ ಅನೇಕ ಶ್ರೀಮಂತ ಮುಂಬಯಿ ಕನ್ನಡಿಗರು ಬೆಂಗಳೂರಿನ ಪೀಣ್ಯ, ರಾಜಾಜಿನಗರದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿದರು. ಇಂಥವರಲ್ಲಿ ಮುಂಚೂಣಿಯಲ್ಲಿ ಮಾತ್ರವಲ್ಲ ಸಂಖ್ಯೆಯಲ್ಲೂ ಬಂಟರೇ ಹೆಚ್ಚಾಗಿದ್ದರು. ಈಗ ಅನೇಕ ಬಂಟರು ಮೈಕ್ರೋ ಮತ್ತು ಮೀಡಿಯಮ್ ಕೈಗಾರಿಕೆಗಳನ್ನು ಸಲೀಸಾಗಿ ನಡೆಸುತ್ತಿದ್ದಾರೆ. ಸಣ್ಣ ಕೈಗಾರಿಕೆಗಳ ಸಂಘ (ಕಾಶಿಯಾದ) ಸುಮಾರು 300 ಸದಸ್ಯ ಕೈಗಾರಿಕೆಗಳಲ್ಲಿ ಬಂಟರದೇ ಸುಮಾರು 190 ಸಣ್ಣ ಕೈಗಾರಿಕೆಗಳಿವೆ. ಸುಮಾರು 15ರಿಂದ 20 ಮೀಡಿಯಮ್ ಅಥವಾ ಬೃಹತ್ ಉದ್ಯಮಗಳಿವೆ. ಕೆಲವರು ಯಂತ್ರಗಳನ್ನೂ ರಫ್ತು ಮಾಡುತ್ತಿದ್ದಾರೆ. ಅನೇಕರು ತಮ್ಮ ಉತ್ಪಾದನೆಗಳಿಗೆ ಬ್ರಾಂಡ್ ಹೆಸರುಗಳಿಸಿದ್ದಾರೆ. ಉದಾಹರಣೆಗೆ ಡಾ. ಸುಭಾಷ್ ಚಂದ್ರ ಶೆಟ್ಟಿ ಇವರ CONFIDENT DENTAL EQUPMENTS LTD ಇಂದು ವಿಶ್ವ ವಿಖ್ಯಾತವಾಗಿದೆ. ಇಲ್ಲಿ ತಯಾರಾಗುವ ಉತ್ಕೃಷ್ಟ ದರ್ಜೆಯ ದಂತ ವೈದ್ಯ ವೃತ್ತಿಗೆ ಬೇಕಾಗಿರುವ ಅತ್ಯಾಧುನಿಕ ಯಂತ್ರಗಳು ವಿದೇಶಗಳಿಗೂ ರಫ್ತು

ಆಗುತ್ತಿವೆ. CONFIDENT DENTAL EQUIPMENTS ಬ್ರ್ಯಾಂಡೆಡ್ ಪ್ರೊಡಕ್ಟ್ ಈ ಕಾರ್ಖಾನೆ ಬೆಂಗಳೂರಿನ ಕಾಮಾಕ್ಷಿಪಾಳ್ಯದಲ್ಲಿ ಇದೆ. ಬ್ರ್ಯಾಂಡಡ್ ಪ್ರೊಡಕ್ಟ್ ತಯಾರಿಸುವ ಇನ್ನೂ ಹಲವಾರು ಘಟಕಗಳು ಬೆಂಗಳೂರಿನಲ್ಲಿವೆ.

ಜಿ.ಪಿ. ಶೆಟ್ಟಿ ಬೆಂಗಳೂರಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆ ಸ್ಥಾಪಿಸಿದ ಬಂಟರಲ್ಲಿ ಮೊದಲಿಗರು. ಇವರ ಮಗ ಈಗ ಸಾವಯವ ಗೊಬ್ಬರದ ಕಾರ್ಖಾನೆಯನ್ನು ನಡೆಸುತ್ತಾರೆ. ಬೆಂಗಳೂರಿನ ಶಶಿಧರ ಶೆಟ್ಟಿಯವರ ರಾಸಾಯನಿಕ ಗೊಬ್ಬರ ಕಾರ್ಖಾನೆ ಭಾರತದಾದ್ಯಂತ ತನ್ನ ಕಛೇರಿಗಳನ್ನು ಹೊಂದಿದೆ.

ಬೆಂಗಳೂರಿನ ಬಿ.ಎಚ್.ಇ.ಎಲ್, ಎಚ್. ಎ. ಎಲ್ – ಮುಂತಾದ ಸಾರ್ವಜನಿಕ ಉದ್ದಿಮೆಗಳಿಗೆ ಬಿಡಿಭಾಗಗಳನ್ನು ಪೂರೈಕೆ ಮಾಡುವ ಅನೇಕ ಸಣ್ಣ ಕೈಗಾರಿಕೆಗಳನ್ನು ಬೆಂಗಳೂರು ಬಂಟರು ಸ್ಥಾಪಿಸಿ ಮುನ್ನಡೆಸುತ್ತಿದ್ದಾರೆ. ಪೂರ್ಣಿಮಾ ಪ್ರಿಂಟರ್ಸ್ ವಿದೇಶಿ ಕಂಪೆನಿಗಳಿಂದಲೂ ಬೇಡಿಕೆ ಪಡೆಯುತ್ತಿದೆ. ಉದ್ಯಮಿ ಆರ್ ಎನ್ ಶೆಟ್ಟಿಯ ಹೆಸರು ಸರಿ ಸುಮಾರು ಎಲ್ಲರಿಗೂ ಚಿರ ಪರಿಚಿತ. ಇವರದು ಬಹುಮುಖ ಪ್ರತಿಭೆ: ಆರ್ ಎನ್ ಶೆಟ್ಟಿ ಕಂಪನಿಗಳು ಕೇಂದ್ರ ಕಛೇರಿಯನ್ನು ಬೆಂಗಳೂರಲ್ಲಿ ಹೊಂದಿವೆ. 1967ರಲ್ಲಿ ಗುತ್ತಿಗೆದಾರರಾಗಿ ಔದ್ಯಮಿಕ ರಂಗವನ್ನು ಪ್ರವೇಶಿಸಿದ ಇವರದು ನಿಲ್ಲದ ಪಯಣ.

ಆರ್. ಎನ್. ಶೆಟ್ಟಿ ಕಂಪೆನಿ (ಕಟ್ಟಡ ನಿರ್ಮಾಣ ಗುತ್ತಿಗೆ) ನವೀನ್ ಮೆಕ್ಯಾನಾಯಿಸ್ಡ್ ಕನ್‌ಸ್ಟ್ರಕ್ಷನ್ ಕಂಪೆನಿ, ಮುರುಡೇಶ್ವರ ಸಿರಾಮಿಕ್ ಲಿಮಿಟೆಡ್, ನವೀನ್ ಹೋಟೆಲ್ಸ್ ಲಿಮಿಟೆಡ್, ಶ್ರೀ ಮುರುಡೇಶ್ವರ ಟೈಲ್ಸ್ ಪ್ರೈವೇಟ್ ಲಿಮಿಟೆಡ್, ಮುರುಡೇಶ್ವರ ಪವರ್ ಕಾರ್ಪೊರೇಷನ್ ಲಿಮಿಟೆಡ್, ಮುರುಡೇಶ್ವರ ಫೈನಾನ್ಸ್ ಮತ್ತು ಲೀಸಿಂಗ್ ಲಿಮಿಟೆಡ್, ಮಾರುತಿ ಕಾರ್ ಮಾರಾಟ ಮಾಡುವ ಆರ್. ಎನ್. ಶೆಟ್ಟಿ ಮೋಟಾರ್ಸ್ ಯಶವಂತಪುರ. ನವೀನ್ ಸ್ಟ್ರಕ್ಚರ್ಸ್ ಮತ್ತು ಇಂಜಿನಿಯರಿಂಗ್ ಕಂ.ಪ್ರೈವೇಟ್ ಲಿಮಿಟೆಡ್ ಮುಂತಾದವು.

ಸಮಾಜ ಸೇವೆಗಾಗಿ ಆರ್. ಎನ್. ಎಸ್. ಟ್ರಸ್ಟ್ ಇದೆ. ಇವರು ಕಟ್ಟಿದ ಬೆಂಗಳೂರಿನ ಪಂಚತಾರಾ ಹೋಟೆಲ್ ತಾಜ್ ರೆಸಿಡೆನ್ಸಿ. ಆರ್. ಎನ್. ಶೆಟ್ಟಿಯವರು ಈ ಕಟ್ಟಡವನ್ನು ಕಟ್ಟಿ ಅದರ ನಿರ್ವಹಣೆಯನ್ನು ತಾಜ್ ಗ್ರೂಪ್‌ಗೆ ಲೀಸ್ ನೀಡಿದರು. ಯಶವಂತಪುರದಲ್ಲಿಯೂ ಇನ್ನೊಂದು ಪಂಚತಾರಾ ಹೋಟೆಲ್ ಕಟ್ಟಡ ಮೇಲೇಳುತ್ತಿದೆ. ಇದರ ನಿರ್ವಹಣೆಯ ಜವಾಬ್ದಾರಿಯನ್ನೂ ತಾಜ್ ಗುಂಪಿಗೆ ನೀಡಲಿದ್ದಾರೆ. ಯಶವಂತಪುರದಲ್ಲಿ 'ಸ್ವಾತಿ ನಿವಾಸ' ಎಂಬ ಹೆಸರಿನಲ್ಲಿ ಬೃಹತ್ ಸಮೂಹ ವಸತಿ ಸಮುಚ್ಚಯವನ್ನು ಇವರು ನಿರ್ಮಿಸಿದ್ದಾರೆ. ಇವರು 1977ರಲ್ಲಿ ಸ್ಥಾಪಿಸಿದ ಮುರುಡೇಶ್ವರ ಕಂಪೆನಿಯ ಪ್ರಧಾನ ಕಛೇರಿ ತಾಜ್ ಹೋಟೆಲಿನ ಹಿಂಭಾಗದಲ್ಲಿದೆ. ಮುರುಡೇಶ್ವರ ಟೈಲ್ಸ್ ಮುಂದೆ ಮುರುಡೇಶ್ವರ ಸಿರಾಮಿಕ್ಸ್ ಪ್ರೈವೇಟ್ ಲಿಮಿಟಿಡ್ ಆಗಿ ಸಾರ್ವಜನಿಕ ಉದ್ದಿಮೆ ರಂಗಕ್ಕೆ ಪ್ರವೇಶ ಪಡೆಯಿತು. ಇನ್ನೂ ಅನೇಕ ವಾಸ್ತು ಶಿಲ್ಪಿಗಳು, ಕಟ್ಟಡ ಗುತ್ತಿಗೆದಾರರು ಮತ್ತು ಸಮೂಹ ವಸತಿ ಗೃಹಗಳ ನಿರ್ಮಾಪಕರು ಬೆಂಗಳೂರಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂತವರಲ್ಲಿ ಒಬ್ಬರಾದ ಚಾರ್ಟರ್ಡ್ ಬಿಲ್ಡರ್ಸ್ ಒಂದು ಅನಾಥಾಶ್ರಮವನ್ನೂ ನಡೆಸುತ್ತಿದ್ದಾರೆ.

ಮಹಿಳಾ ಉದ್ಯಮಿಗಳು

ದಕ್ಷಿಣ ಕನ್ನಡದ ಮಹಿಳೆಯರು ಸಮರ್ಥ ವ್ಯಕ್ತಿತ್ವದ ದಾಖಲೆ ನಿರ್ಮಿಸಿದ್ದಾರೆ. ಇಂತಹ ಹಿನ್ನೆಲೆಯಿಂದ ಮಹಿಳೆಯರು ಬೆಂಗಳೂರಲ್ಲೂ ತಮ್ಮ ಕಾರ್ಯಕ್ಷೇತ್ರವನ್ನು ಸ್ಥಾಪಿಸಿಕೊಂಡು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಸಣ್ಣ ಉದ್ಯಮಗಳನ್ನು ನಡೆಸುವ ಅನೇಕ ಮಹಿಳೆಯರನ್ನು ನಾವು ಬೆಂಗಳೂರಲ್ಲಿ ಕಾಣಬಹುದು. ಐ.ಟಿ.ಕಂಪೆನಿ, ಇನ್‌ವೆಂಟ್ ಮ್ಯಾನೇಜ್‌ಮೆಂಟ್, ಇಂಟೀರಿಯರ್ ಡೆಕೊರೇಟಿಂಗ್, ಸರ್ವೀಸ್ ಗಾರ್ಮೆಂಟ್ಸ್ ಕಂಪೆನಿ– ಹೀಗೆ

ಹತ್ತು ಹಲವು ಕ್ಷೇತ್ರಗಳಲ್ಲಿ ಬೆಂಗಳೂರಿನ ಬಂಟ ಮಹಿಳೆಯರು ತಮ್ಮ ಕ್ರಿಯಾಶೀಲತೆಯ ಲಾಭವನ್ನು ಹೊರ ಜಗತ್ತಿಗೆ ನೀಡುತ್ತಿದ್ದಾರೆ. ತಮ್ಮ ತಂದೆಯ ಅನಂತರ ಶ್ರೀಮತಿ ಸ್ಮಿತಾ ಶೆಟ್ಟಿಯವರು ಫೋರ್ ಎಸ್. ಎಸ್. ಎಂಬ ಬೃಹತ್ ಉದ್ಯಮದ ಆಡಳಿತ ನಿರ್ದೇಶಕರಾಗಿದ್ದಾರೆ.

ವಾಸ್ತು ವಿನ್ಯಾಸದಲ್ಲಿ ಅನೇಕ ಮಹಿಳೆಯರು ತೊಡಗಿಕೊಂಡಿದ್ದರೂ ಗಾಯತ್ರಿ ಮತ್ತು ನಮಿತಾ ಎಸೋಶಿಯೇಷನ್ ತಮ್ಮ ಸಾಂಪ್ರದಾಯಿಕ ಶೈಲಿಗೆ ಪ್ರಸಿದ್ಧಿ. ಶೃಂಗೇರಿಯಲ್ಲಿ ಗುರುಕುಲ ಮಾದರಿಯಲ್ಲಿ ಇವರು ನಿರ್ಮಿಸಿದ ನೆಲೆಗಳಿಗೆ ಕೇಂದ್ರ ಸರಕಾರದಿಂದ ಬಹುಮಾನ ಲಭಿಸಿದೆ. ಇವಲ್ಲದೆ ಕೇಂದ್ರ ಮತ್ತು ರಾಜ್ಯ ಸರಕಾರ ಕೊಡಮಾಡುವ ಅನೇಕ ಬಹುಮಾನಗಳನ್ನು ತಮ್ಮ ಸೃಷ್ಟಿಶೀಲ ಪ್ರತಿಭೆಗೆ ಇವರು ದಕ್ಕಿಸಿಕೊಂಡಿದ್ದಾರೆ. ಅಂತರಾಷ್ಟ್ರೀಯ ಮಟ್ಟದಲ್ಲೂ ಗಾಯತ್ರಿಯವರು ತಮ್ಮ ಸೃಷ್ಟಿ ಶೀಲತೆಗೆ ಖ್ಯಾತಿ ಗಳಿಸಿದ್ದಾರೆ. ಮತ್ತೋರ್ವ ಯಶಸ್ವೀ ಉದ್ಯಮ ಶೀಲೆ ಕಮಲಾ ರಘುನಾಥ್ ಆರಂಭಿಸಿದ 'ಅಮೂಲ್ಯ. ಗಿಫ್ಟ್ ಸೆಂಟರ್' ಇದು ಬೃಹತ್ ಉದ್ಯಮವಾಗಿ ಬೆಳೆದಿದೆ.

ಕಾಶಿಯಾ ಅಧ್ಯಕ್ಷರಾಗಿ ಬಂಟರು

2004–05ರ ಅವಧಿಯಲ್ಲಿ ಹರಿಪ್ರಸಾದ್ ಹೆಗ್ಡೆ ಮತ್ತು 2007–08ರ ಅವಧಿಯಲ್ಲಿ ಎಮ್. ಸಿ. ಆರ್. ಶೆಟ್ಟಿಯವರುಗಳು ಕಾಶಿಯಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಅವೇಕ್ ಮಹಿಳಾ ಉದ್ಯಮಿಗಳ ಸಂಸ್ಥೆಯ ಅಧ್ಯಕ್ಷರಾಗಿ ಗೀತಾ ಎಲ್ ಎನ್ ಶೆಟ್ಟಿ ಅಧಿಕಾರ ನಡೆಸಿದ್ದರು.

ಹೋಟೆಲ್ ಉದ್ಯಮದಲ್ಲಿ ಬಂಟರು

ಮುಂಬಯಿಯಲ್ಲಿ ಹೋಟೆಲ್ ಉದ್ಯಮದಲ್ಲಿ ಏಕಮೇವಾದ್ವಿತೀಯರಾಗಿ ಮೆರೆದ ಬಂಟರು ಬೆಂಗಳೂರಲ್ಲಿ ಹೋಟೆಲ್ ರಂಗದಲ್ಲಿ ತಮ್ಮ ಛಾಪನ್ನು ಇನ್ನೂ ಮೂಡಿಸಿಲ್ಲ. ಆದರೂ ಇಲ್ಲಿ ಸುಮಾರು 600 ಸಣ್ಣ ದೊಡ್ಡ ಹೋಟೆಲುಗಳಿವೆ ಎಂದು ಬಂಟ ಹೋಟೆಲುಗಳ ಸಂಘದ ಅಧ್ಯಕ್ಷ ಹರಿಪ್ರಸಾದ ಶೆಟ್ಟಿಯವರು ಹೇಳುತ್ತಾರೆ. 1995ರಲ್ಲಿ ಬೆಂಗಳೂರಲ್ಲಿ ನಡೆದ ವಿಶ್ವ ಬಂಟರ ಸಮ್ಮೇಳನದಲ್ಲಿ ಅತಿಥೇಯರ ಊಟದ ಜವಾಬ್ದಾರಿ ಹೊತ್ತ ಹೋಟೆಲುಗಳವರು ಅಂದಿನ ಐಕಮತ್ಯದಿಂದ ಪ್ರೇರಿತರಾಗಿ ಮುಂದೆ ಬಂಟರ ಹೋಟೆಲುಗಳ ಸಂಘವನ್ನು ಕಟ್ಟಿ ಬೆಳೆಸಿದರು. ಈ ಸಂಘದಲ್ಲಿ ನೋಂದಾಯಿಸಲ್ಪಟ್ಟ ಹೋಟೆಲುಗಳು 300. ಈ ಸಂಘವು ತನ್ನ ಹೋಟೆಲುಗಳ ಯೋಗಕ್ಷೇಮದತ್ತ ಗಮನ ಹರಿಸುವುದಲ್ಲದೆ ಬೆಂಗಳೂರು ಬಂಟರ ಸಂಘದ ಸಹಯೋಗದೊಂದಿಗೆ ಸಮಾಜ ಸೇವಾಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತಿದೆ.

ಬೆಂಗಳೂರಿನಲ್ಲಿ ಮೊತ್ತ ಮೊದಲು ಹೋಟೆಲ್ ಆರಂಭಿಸಿದವರು ಎಮ್. ಎಸ್. ರಾಮಣ್ಣ ಶೆಟ್ಟಿಯವರು. ಇವರು ಕಲಾಸಿ ಪಾಳ್ಯದಲ್ಲಿ 'ರಾಮಣ್ಣ ಕೆಫೆ' ಎಂಬ ಸಣ್ಣ ಹೋಟೆಲ್ ತೆರೆದರು. ಆ ದಿನಗಳಲ್ಲಿ ಬೆಂಗಳೂರಲ್ಲಿ ಬ್ರಾಹ್ಮಣರ ಪ್ರಭಾವ ಹೆಚ್ಚಾಗಿ ಇತ್ತು. ಹೀಗಾಗಿ ಈ ಹೋಟೆಲುಗಳ ಮಾಲಿಕರು 'ರಾವ್' ಎಂದು ತಮ್ಮದಲ್ಲದ ಉಪನಾಮವನ್ನು ರೂಢಿಸುವ ಅಗತ್ಯ ಇತ್ತು. ಹನುಮಂತನಗರದಲ್ಲಿ ಗಣೇಶರಾಯರು ಇಂಥವರಲ್ಲಿ ಒಬ್ಬರು. ಅಂದಿನ ದಿನಗಳಲ್ಲಿ ಬೆಂಗಳೂರಿಗೆ ಬರುವ ವಿದ್ಯಾರ್ಥಿಗಳಿಗೆ ಇವರೆಲ್ಲ ಉಚಿತ ವ್ಯವಸ್ಥೆಯನ್ನು ತಮ್ಮ ಹೋಟೆಲುಗಳಲ್ಲಿ ಕಲ್ಪಿಸುತ್ತಿದ್ದರು. ಇಂದಿನ ದಿನಗಳಲ್ಲಿ ಗಮನ ಸೆಳೆಯುವ ಬಂಟರ ಹೋಟೆಲುಗಳೆಂದರೆ ಪ್ರಕಾಶ್ ಶೆಟ್ಟಿಯವರ ಬಂಜಾರ, ಸಾನಾದಿಗೆ, ನಾಲ್ಕು ಮಂದಿ ಮಿತ್ರರ ಸಹಭಾಗಿತ್ವದಲ್ಲಿ ಸ್ವಾತಿ ರೆಸ್ಟೋರೆಂಟ್‌ಗಳು (ಸ್ಥಾಪನೆ 1994), ಹೋಟೆಲ್ ಚಂದ್ರಿಕಾ, ಗಂಧರ್ವ ಸಿಪ್–ಅಂಡ್–ಡೈನ್ ಇತ್ಯಾದಿ.

ಕನ್ನಡ ಚಿತ್ರ ರಂಗ

ಮುಂಬಯಿಯಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆದು ಕನ್ನಡವನ್ನು ಕಲಿಯುವ ಅವಕಾಶದಿಂದ ವಂಚಿತಳಾಗಿದ್ದರೂ ಪ್ರಸಿದ್ಧ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಕನ್ನಡದ 'ಪ್ರೀತ್ಸೋದ್ ತಪ್ಪಾ' ಎಂಬ ಸಿನಿಮಾದಲ್ಲಿ ರವಿಚಂದ್ರನ್ ಜೊತೆ ನಟಿಸಿದ್ದಾಳೆ.

ಸಂಗೀತ ನಿರ್ದೇಶಕ ಗುರುಕಿರಣ್-ಕಿರುತೆರೆಯಲ್ಲೂ ನಟಿಸುತ್ತಾರೆ. ಇವರು ಚಿತ್ರ ನಿರ್ಮಾಪಕನಾಗಿ ಫಿಲ್ಮ್ ಫೇರ್ ಪ್ರಶಸ್ತಿ ಪಡೆದಿದ್ದಾರೆ.

ತನ್ನ ಸಿನಿಮಾಕ್ಕೆ ಪ್ರಶಸ್ತಿ ಪಡೆದ ಶಿವಧ್ವಜ (ಶಿವರಾಮ ಶೆಟ್ಟಿ) ಉತ್ತಮ ನಟ ಮತ್ತು ನಿರ್ಮಾಪಕ. ವಿಶಿಷ್ಟ ಪ್ರತಿಭೆಯ ಸುನಿಲ್ ಶೆಟ್ಟಿ, ವಿನಯ ಶೆಟ್ಟಿ, ಪ್ರಕಾಶ್ ರೈ, ಹೀಗೆ ಅನೇಕರನ್ನು ಹೆಸರಿಸಬಹುದು. ಇವರಲ್ಲದೆ ಕಿರುತೆರೆಯಲ್ಲಿ ಭವ್ಯಶ್ರೀ ರೈ, ಶಿವರಂಜಿನಿ, ತೊಕ್ಕುಟ್ಟು ಉಷಾ ಭಂಡಾರಿ, ಸುರೇಶ್ ರಾಜ್ (ಸುರೇಶ್ ರೈ) ರಾಜೇಶ್ ಶೆಟ್ಟಿ, ಸಂಗೀತ ಶೆಟ್ಟಿ, ವಿಭಾ ರೈ, ಭಾಗ್ಯಶ್ರೀ ರವಿ, ಮಂಜು ಭಾಷಿಣಿ-ಹೀಗೆ ಅನೇಕರನ್ನು ಹೆಸರಿಸಬಹುದು.

ಬಾಲಿವುಡ್ ಪ್ರಸಿದ್ಧ ಸಂಗೀತ ನಿರ್ದೇಶಕ ಸಂದೀಪ್ ಚೌಟ ಕನ್ನಡ ಹಾಡುಗಳಿಗೆ ಸಂಗೀತವನ್ನು ನೀಡಿದ್ದಾರೆ. ರಾಮ ಶೆಟ್ಟಿ-ಹಿಂದಿ, ತುಳು ಮತ್ತು ಕನ್ನಡ ಸಿನಿಮಾಗಳಲ್ಲಿ ದುಡಿಯುವ ಸಾಹಸ ನಿರ್ದೇಶಕ. ರಾಮ ಶೆಟ್ಟಿ 'ಎ.ಕೆ.47', 'ಅಪ್ಪು', 'ಶರವೇಗದ ಸರದಾರ' ಸಹಿತ ಸುಮಾರು 10 ಕನ್ನಡ ಚಿತ್ರಗಳಿಗೆ ಸಾಹಸ ನಿರ್ದೇಶನ ಮಾಡಿದ್ದಾರೆ. ಅಮರನಾಥ ಹೆಗ್ಡೆ ಮತ್ತು ಶ್ರೀನಿವಾಸ ಸೂಡರವರು ಲೋಟಸ್ ಲಾಂಛನದಡಿಯಲ್ಲಿ ನಿರ್ಮಿಸಿರುವ "ಶಂಕರ ಪುಣ್ಯ ಕೋಟಿ" 2008-2009ರ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಗಳಿಸಿರುತ್ತದೆ. ಆ್ಯಡ್ ಲ್ಯಾಬ್ ಮನಮೋಹನ ಶೆಟ್ಟಿ ಬೆಂಗಳೂರಿನಲ್ಲಿ ತಮ್ಮ ಕಂಪೆನಿಯನ್ನು ಸೀತಾರಾಮ ರೈಯವರ ಸಹಯೋಗದೊಂದಿಗೆ ನಡೆಸುತ್ತಿದ್ದಾರೆ.

ಸಾಹಿತ್ಯ ಕ್ಷೇತ್ರ: ಉಷಾ ಪಿ ರೈ, ಪ್ರಭಾಕರ ರೈ, ಡಾ. ಶಂಕರ ಶೆಟ್ಟಿ-ಇವರೆಲ್ಲ ಬೆಂಗಳೂರಿನಲ್ಲಿರುವ ಕನ್ನಡ ಬರಹಗಾರರು. ಡಾ. ಶೇಖರ ಶೆಟ್ಟಿಯವರ ಮತ್ತು ಡಾ. ಜಯರಾಮ ರೈ ಅವರ ವೈದ್ಯಕೀಯಕ್ಕೆ ಸಂಬಂಧಿಸಿದ ಪುಸ್ತಕಗಳು ಪ್ರಕಟವಾಗಿವೆ. ರಂಗಭೂಮಿ ತುಳು ಸಾಹಿತಿ ಉದ್ಯಮಿ ಡಿ.ಕೆ ಚೌಟರು ಕನ್ನಡ-ತುಳು ನಾಟಕ ನಿರ್ದೇಶಕರಾಗಿ, ಕಾರ್ಯಕ್ರಮ ಸಂಯೋಜಕರಾಗಿ ಕೆಲಸ ಮಾಡುತ್ತಿದ್ದಾರೆ. ಕಲಾವಿದ ಅಡಪರ ಹೆಸರು ಚಿರಪರಿಚಿತ. ಲೇಖಕಿ ಸಂಶೋಧಕಿ ಡಾ. ಇಂದಿರಾ ಹೆಗ್ಡೆ ಬೆಂಗಳೂರಿನ ಅರುಂಧತಿ ಬಡಾವಣೆಯ (ಕೊಳೆಗೇರಿ) ಸರಕಾರಿ ಶಾಲೆಯ ಸ್ಥಾಪಕ ಸದಸ್ಯರು.

ಸಾರ್ವಜನಿಕ ಸೇವಾ ರಂಗ

ರೋಟರಿ ಕ್ಲಬ್ ಮತ್ತು ಲಯನ್ಸ್ ಸೇವಾ ಸಂಸ್ಥೆಗಳ ಮೂಲಕ ಬಂಟರು ಸಾರ್ವಜನಿಕ ಸೇವಾಸಂಸ್ಥೆಗಳಲ್ಲಿ ಮಾತ್ರ ತೊಡಗಿಸಿಕೊಂಡಿಲ್ಲ. ವ್ಯಕ್ತಿಗತವಾಗಿಯೂ ಸೇವೆ ಮಾಡುವವರಿದ್ದಾರೆ. ಬೆಂಗಳೂರಿನ ದೇವಿಪ್ರಸಾದ್ ಶೆಟ್ಟಿಯವರದು ಇಂತಹ ವಿಶಿಷ್ಟ ಸೇವೆ. 1983ರಲ್ಲಿ ಇವರು ರಕ್ತದಾನವನ್ನು ಆರಂಭಿಸಿದವರು. ಇದುವರೆಗೆ 103 ಬಾರಿ 283 ಯುನಿಟ್ ರಕ್ತವನ್ನು ದಾನ ಮಾಡಿದ್ದಾರೆ. ಇವರು 1977ರಲ್ಲಿ ಪ್ರಾರಂಭಿಸಿದ 'ಸುರಕ್ಷಾ' ಸಂಸ್ಥೆ ನಗರ ಮತ್ತು ಗ್ರಾಮೀಣ ಪ್ರದೇಶದ ಬಡವರ ಅವಶ್ಯಕತೆಗಳನ್ನು ಗುರುತಿಸಿ ನೆರವು ನೀಡುತ್ತಿದೆ. ಉಚಿತ ವೈದ್ಯಕೀಯ ಶಿಬಿರಗಳನ್ನು ಸುರಕ್ಷಾ ಮೂಲಕ ನಡೆಸುತ್ತಿದ್ದಾರೆ. ಆರ್ಥಿಕ ಸ್ಥಿತಿ ಗತಿ ತೀರಾ ಹದಗೆಟ್ಟವರ ಚಿಕಿತ್ಸಾ ವೆಚ್ಚವನ್ನು ಈ ಸಂಸ್ಥೆಯೇ ಭರಿಸಿರುತ್ತದೆ. ಅಲ್ಲದೆ ಸಾಮಾನ್ಯ ವರ್ಗದವರಿಗೂ ರಿಯಾಯತಿಯ ಚಿಕಿತ್ಸಾ ಸೌಲಭ್ಯ ಒದಗಿಸಿಕೊಟ್ಟಿದ್ದಾರೆ. 2007ರಿಂದ ಈವರೆಗೂ 3500ಕ್ಕೂ ಅಧಿಕ ರೋಗಿಗಳು ಮೇಲ್ಮಟ್ಟದ ಆಧುನಿಕ ಚಿಕಿತ್ಸಾ

ಸೌಲಭ್ಯವನ್ನು ಈ ಸಂಸ್ಥೆಯ ಮೂಲಕ ಪಡೆದಿದ್ದಾರೆ. ಇವರು ಅಧ್ಯಕ್ಷರಾಗಿರುವ ಈ ಸುರಕ್ಷಾ ಸಂಸ್ಥೆಯು ಎಂ. ಎಸ್. ರಾಮಯ್ಯ ಆಸ್ಪತ್ರೆಯ ಸಹಯೋಗದೊಂದಿಗೆ ಸುಮಾರು 51 ಅಂಗ ವೈಕಲ್ಯ ಶಸ್ತ್ರ ಚಿಕಿತ್ಸೆಗಳನ್ನು ಬೆಂಗಳೂರು ನಗರ ಮತ್ತು ಗ್ರಾಮೀಣ ಬೆಂಗಳೂರಿನ ಅಂಗ ವಿಕಲರಿಗೆ ಮಾಡಿಸಿದೆ. ಬೆಂಗಳೂರಿನ ಗ್ರಾಮಾಂತರ ಪ್ರದೇಶದಲ್ಲಿ 3000 ಮಕ್ಕಳಿಗೆ ಪೋಲಿಯೋ ಪ್ರತಿಬಂಧಕ ಲಸಿಕೆ, 22000ಕ್ಕೂ ಅಧಿಕ ಹೋಂಗಾರ್ಡ್ ಸ್ವಯಂ ಸೇವಕರಿಗೆ ಉಚಿತ ವೈದ್ಯಕೀಯ ಸೇವೆ ಮತ್ತು ಕಣ್ಣಿನ ಪೊರೆಗೆ ಶಸ್ತ್ರಕ್ರಿಯೆ ಮುಂತಾದ ಅನೇಕ ರೀತಿಯ ವೈದ್ಯಕೀಯ ಸೇವೆಯೂ ಇವರಿಂದ ನಡೆದಿದೆ. ಸುಮಾರು 7000 ಜನರಿಗೆ ವೈದ್ಯಕೀಯ ವಿಮಾ ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ.

ಸುಮಾರು 537 ಮಂದಿ ನಿರುದ್ಯೋಗಿ ಯುವಕರಿಗೆ ವಾಹನಾ ಚಾಲನಾ ತರಬೇತಿಯನ್ನು ನೀಡಿ ಅವರನ್ನು ಸ್ವಾವಲಂಬಿಗಳಾಗಿ ಮಾಡುವಲ್ಲಿ ಇವರ ಪಾತ್ರ ಹಿರಿದು. ಗ್ರಾಮೀಣ ಪ್ರದೇಶದ 10000ಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ. ಬಡ ವಿದ್ಯಾರ್ಥಿಗಳ ದತ್ತು ಸ್ವೀಕಾರವನ್ನೂ ಮಾಡಿದ್ದಾರೆ. ಒಟ್ಟು 547 ಮಹಿಳಾ ಸ್ವಸಹಾಯ ಗುಂಪುಗಳು ಇವರ ಕ್ರಿಯಾ ಯೋಜನೆಯಡಿ ಹುಟ್ಟಿಕೊಂಡಿವೆ.

ಸಮಾಜ ಸೇವೆಯಲ್ಲಿ ಇನ್ನೊಂದು ಹೆಸರು ಸರಳಾ ಶೆಟ್ಟಿಯವರು. ಮಹಿಳಾ ದಕ್ಷತಾ ಸಮಿತಿಯ ಬೆಂಗಳೂರು ಘಟಕದ ಅಧ್ಯಕ್ಷರಾಗಿ ಇವರು ಅರ್ಥಪೂರ್ಣ ಕೆಲಸ ಮಾಡುತ್ತಿದ್ದಾರೆ. ಕೌನ್ಸೆಲಿಂಗ್ ಮಾತ್ರವಲ್ಲ ಅಬಲೆಯರಿಗೆ ರಕ್ಷಣೆಯನ್ನೂ ನೀಡುತ್ತಿದ್ದಾರೆ ಮತ್ತು ಅವರು ಸ್ವಾವಲಂಬಿಯಾಗುವಲ್ಲಿ ಹೆಚ್ಚು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಬಡ, ಅನಕ್ಷರಸ್ಥ ಮಹಿಳೆಯರು ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ.

ಸರಕಾರಿ ಕೆಲಸ

ಬಂಟರು ಉದ್ಯಮಶೀಲರು, ಹೀಗಾಗಿ ಸರಕಾರಿ ಕೆಲಸಗಳಲ್ಲಿ ಅವರ ಸಂಖ್ಯೆ ಗಮನಕ್ಕೆ ಬಾರದಷ್ಟು ಕಡಿಮೆ. 10 ಸಾವಿರ ಲಂಚ ಕೊಟ್ಟು ಕೆಲಸ ಪಡೆಯುವುದಕ್ಕಿಂತ ಅದನ್ನು ಮೂಲ ಬಂಡವಾಳವನ್ನಾಗಿ ತೊಡಗಿಸಿ ಉದ್ಯಮರಂಗಕ್ಕೆ ಕಾಲಿಡುವುದರಲ್ಲಿಯೇ ಇವರು ತೃಪ್ತರು. ಹೀಗೆ ಸರಕಾರಿ ನೌಕರಿ ಪಡೆಯಲು ನೀಡಬೇಕಾಗಿರುವ ಲಂಚದ ಹಣವನ್ನು ಉದ್ಯಮಕ್ಕೆ ತೊಡಗಿಸಿ ಉದ್ಯೋಗ ನೀಡುವ ಜನಗಳು ಇವರು. ಆದರೆ ಹೋಟೆಲುಗಳಲ್ಲಿ ದುಡಿಯುವ ಕಾರ್ಮಿಕರಾಗಿ ಬಂಟರೂ ಇದ್ದಾರೆ.

ಆದರೂ ಅಲ್ಲೊಂದು ಇಲ್ಲೊಂದು ಸರಕಾರಿ ಅಧಿಕಾರಿಗಳು ಕಾಣಬರುತ್ತಾರೆ. ನಾಲ್ಕು ಮಂದಿ ಪೋಲೀಸ್ ಇಲಾಖೆಯಲ್ಲಿ ಬೆಂಗಳೂರಲ್ಲಿ ಕಾಣುತ್ತಿದ್ದಾರೆ. ಒಂದಿಬ್ಬರು ಕೆ.ಪಿ.ಎಸ್. ಅಧಿಕಾರಿಗಳಾಗಿದ್ದರೆ, ಒಬ್ಬ ಮಹಿಳಾ ಕೆ.ಪಿ.ಎಸ್. ಅಧಿಕಾರಿ ಇದ್ದಾರೆ. ಲೋಕಾಯುಕ್ತ ಸಂತೋಷ್ ಹೆಗ್ಡೆ ಜೊತೆ ಕೆಲಸ ಮಾಡುವ ಅಧಿಕಾರಿ ಮಧುಕರ್ ಶೆಟ್ಟಿ ಖ್ಯಾತ ಪತ್ರಕರ್ತ ವಡ್ಡರ್ಸೆ ರಘುರಾಮ ಶೆಟ್ಟಿಯ ಮಗ.

ಸಂಘ ಸಂಸ್ಥೆಗಳು: ಅನೇಕ ಸಂಘ ಸಂಸ್ಥೆಗಳು ಬೆಂಗಳೂರು ಬಂಟರಿಂದ ಆರಂಭವಾಗಿದೆ. ಅದರಲ್ಲಿ ಗಮನ ಸೆಳೆಯುವದೆಂದರೆ ಭೂಗತ ಜಗತ್ತಿನಿಂದ ಜೈಲು ಶಿಕ್ಷೆ ಅನುಭವಿಸಿ ಹೊರಬಂದ ಮುತ್ತಪ್ಪ ರೈ. ಅವರು ಸ್ಥಾಪಿಸಿದ ಜಯ ಕರ್ನಾಟಕ ಸಂಸ್ಥೆಯ ಅನೇಕ ಶಾಖೆಗಳು ಕರ್ನಾಟಕದಾದ್ಯಂತ ಇವೆ. ಇವಲ್ಲದೆ ಕೆಲವು ಜನಪರ ಕೆಲಸಗಳನ್ನೂ ಮುತ್ತಪ್ಪ ರೈ ಮಾಡುತ್ತಿದ್ದಾರೆ.

ಮೇಲಿನ ವಿವರಗಳು ಬೆಂಗಳೂರಲ್ಲಿ ವಾಸವಾಗಿರುವ ಬಂಟರ ಕಾರ್ಯಕ್ಷೇತ್ರಗಳ ಒಂದು ಇಣುಕು ನೋಟವಷ್ಟೆ.

53. ಬೆಂಗಳೂರಿನ ಅಭಿವೃದ್ಧಿಗೆ ಒಕ್ಕಲಿಗರ ಸಂಘದ ಪಾತ್ರ

ಡಾ. ಬಿ. ಪಾಂಡುಕುಮಾರ್

ಕ್ರಿ. ಶ. ಇಪ್ಪತ್ತನೆಯ ಶತಮಾನದ ಆರಂಭವು ಮಹತ್ವಪೂರ್ಣವಾದದ್ದು. ಅದರಲ್ಲೂ ವಿಶೇಷವಾಗಿ ಬೆಂಗಳೂರು ಸರ್ವತೋಮುಖವಾಗಿ ಬೆಳೆಯಲು ಬೆಳಗಲು ಕಾರಣವಾಯಿತು. ಹೇಗೆಂದರೆ 1905ರಲ್ಲಿ ಬೆಂಗಳೂರು ಷಹರಿಗೆ ವಿದ್ಯುತ್ ದೀಪ ಬರುವುದರೊಂದಿಗೆ ದೇಶದಲ್ಲೇ ಬೆಂಗಳೂರು ಹೆಸರು ವಾಸಿಯಾದ ನಗರವಾಯಿತು. ಎಲ್ಲಕ್ಕಿಂತಲೂ ಮಿಗಿಲಾಗಿ ಮೈಸೂರು ಸಂಸ್ಥಾನವನ್ನು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಆಳ್ವಿಕೆ ಮಾಡುತ್ತಿದ್ದ ಕಾಲವದು. ಸಾಹಿತ್ಯ, ಶಿಕ್ಷಣ, ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ಸಂಸ್ಕೃತಿಯು ಬೆಳೆಯಿತು. 1905ರಲ್ಲಿ ಲಿಂಗಾಯತ ಶಿಕ್ಷಣ ಸಂಸ್ಥೆ ಸ್ಥಾಪನೆಯಾದರೆ 1906ರಲ್ಲಿ 'ಒಕ್ಕಲಿಗರ ಸಂಘ' ಸ್ಥಾಪನೆಯಾಯಿತು. ಈ ಎರಡು ಸಂಸ್ಥೆಗಳಿಗೆ ಆಳರಸರ ಕೃಪಾ ಕಟಾಕ್ಷವಿದ್ದಿತು. ಈ ಮೇಲ್ಕಂಡ ಎರಡೂ ಸಂಸ್ಥೆಗಳು ಬ್ರಾಹ್ಮಣೇತರರಿಗೆ ವಿದ್ಯಾದಾಸೋಹ ಮಾಡುವ ಸಂಸ್ಥೆಗಳಾದವು.

ಹತ್ತೊಂಬತ್ತು, ಇಪ್ಪತ್ತನೆಯ ಶತಮಾನದಲ್ಲಿ ಪುನರುಜ್ಜೀವನದ ಪ್ರಭಾವ, ಬ್ರಿಟಿಷರ, ಆಳರಸರ ಪ್ರಭಾವದಿಂದಾಗಿ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ಮೊಳಕೆ ಒಡೆಯಿತು. ಒಡೆಯರ ಕೇಂದ್ರ ಸ್ಥಾನವಾಗಿದ್ದ ಮೈಸೂರು ಮತ್ತು ಬ್ರಿಟಿಷರ ದಂಡು ಪ್ರದೇಶವಾಗಿದ್ದ ಬೆಂಗಳೂರು ಶಿಕ್ಷಣ ಕೇಂದ್ರಗಳಾಗಿ ಬೆಳೆಯತೊಡಗಿದವು. ಬ್ರಿಟಿಷರ ಪ್ರಭಾವ ಹಾಗೂ ಪ್ರೋತ್ಸಾಹದಿಂದಾಗಿ ಯುರೋಪಿಯನ್ ಮಾದರಿಯ ಶಿಕ್ಷಣ ತಲೆ ಎತ್ತಿತ್ತು. ಒಂದು ಅಂಕಿ ಅಂಶದ ಪ್ರಕಾರ (Report on the administration of Mysore-1906-07 chapter VII) 1906–07ರ ಸಮಯದಲ್ಲಿ ಮೈಸೂರಿನಲ್ಲಿ ಒಟ್ಟು 24 ವಿದ್ಯಾರ್ಥಿ ನಿಲಯಗಳು ಅಸ್ತಿತ್ವದಲ್ಲಿದ್ದವು. ಅವುಗಳಲ್ಲಿ 10 ಸರ್ಕಾರಿ ವಿದ್ಯಾರ್ಥಿ ನಿಲಯಗಳಾಗಿದ್ದರೆ, 2 ಅನುದಾನ ಪಡೆಯುತ್ತಿದ್ದ ವಿದ್ಯಾರ್ಥಿ ನಿಲಯಗಳು ಅಸ್ಥಿತ್ವದಲ್ಲಿದ್ದವು. ಈ ಎಲ್ಲಾ ವಿದ್ಯಾರ್ಥಿ ನಿಲಯಗಳ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 1232.

ಒಕ್ಕಲಿಗರ ಸಂಘ ಸ್ಥಾಪನೆ:

ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಆದರೆ ಹಿಂದುಳಿದ ಹಾಗೂ ಕೃಷಿಯನ್ನೇ ಅವಲಂಬಿಸಿದ್ದ ಒಕ್ಕಲು ಮಕ್ಕಳು ಬೆಂಗಳೂರಿನಂತ ಷಹರಿನಲ್ಲಿ ವ್ಯಾಸಂಗ ಮಾಡುವುದು ದುಸ್ತರವಾಗಿತ್ತು. ಇಂತಹ ಸಮಯದಲ್ಲಿ ಕೆ.ಹೆಚ್.ರಾಮಯ್ಯ, ಬಿ.ಪುಟ್ಟಯ್ಯ, ಪ್ಲೀಡರ್ ಕೆಂಪಣ್ಣ, ಬ್ಯಾರಿಸ್ಟರ್ ನಾಗಪ್ಪರವರಂತಹ ಒಕ್ಕಲಿಗ ಗಣ್ಯ ವ್ಯಕ್ತಿಗಳು ಒಕ್ಕಲು ಮಕ್ಕಳಿಗೆ ಅನುಕೂಲವಾಗಲು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ತೀರ್ಮಾನಿಸಿದರು.

ಸಂಘ ಸ್ಥಾಪನೆ

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರೆಂಬ ಭಾವನೆ ಅತಿಯಾಗಿತ್ತು. ಶಿಕ್ಷಣ, ಉದ್ಯೋಗ ಸೇರಿದಂತೆ ನಾನಾ ರಂಗಗಳಲ್ಲಿ ಒಕ್ಕಲಿಗರು ಹಿಂದುಳಿದ್ದರು. ಬೆರಳೆಣಿಕೆಯಷ್ಟು ಜನ ಒಕ್ಕಲಿಗರು ಸಮಾಜ ಮತ್ತು ಸರ್ಕಾರದಲ್ಲಿ ಒಳ್ಳೆಯ ಸ್ಥಾನ ಮಾನವನ್ನು ಹೊಂದಿದ್ದರು. ಬಿ. ನಾಗಪ್ಪನವರು ಇಂಗ್ಲೆಂಡಿಗೆ ತೆರಳಿ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಹಿಂತಿರುಗಿ ಬಂದು ಬೆಂಗಳೂರಿನಲ್ಲಿ ತಮ್ಮ ವಕೀಲಿ ವೃತ್ತಿಯನ್ನು

ಪ್ರಾರಂಭಿಸಿದರು. ಒಮ್ಮೆ ಅಮಲ್ದಾರ್ ಬಿ.ಎನ್. ಚನ್ನಿಗಪ್ಪನವರು ಮತ್ತು ಬ್ಯಾರಿಸ್ಟರ್ ನಾಗಪ್ಪನವರು ತಮ್ಮ ಮನೆಯಲ್ಲಿ ಕುಳಿತು ಮುಂದುವರಿದ ಇಂಗ್ಲೆಂಡಿನ ಹಾಗೂ ಹಿಂದುಳಿದಿರುವ ತಮ್ಮ ದೇಶದ ಜನರ, ಜಾತಿ ಮತ್ತು ಜನಾಂಗದ ಸ್ಥಿತಿಗತಿಗಳನ್ನು ಮಾತನಾಡುತ್ತಾ ಹೋಲಿಕೆ ವ್ಯತ್ಯಾಸಗಳನ್ನು ಇಲ್ಲಿನ ಆಗುಹೋಗುಗಳನ್ನು ಪರಸ್ಪರ ಮಾತನಾಡುವ ಸಮಯದಲ್ಲಿ ಒಕ್ಕಲಿಗ ಜನಾಂಗ ಬಹಳ ಹಿಂದುಳಿದಿದೆ. ನಮ್ಮ ಜನಾಂಗದವರು ಶಿಕ್ಷಣ, ಉದ್ಯೋಗದಂತಹ ವಿಷಯಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುವುದಿಲ್ಲ. ಆದ ಕಾರಣ ತಮ್ಮಂತಹವರು ಏಕೆ ಒಂದು ಸಂಘವನ್ನು ಸ್ಥಾಪಿಸಬಾರದು ಎಂದು ಆಲೋಚಿಸಿದರು. ಇದೇ ಸಮಯಕ್ಕೆ ಅಮಲ್ದಾರರಾಗಿದ್ದ ಚನ್ನಿಗಪ್ಪನವರು ಒಕ್ಕಲಿಗರು ಎಂಬ ಕಾರಣದಿಂದ ಸರ್ಕಾರದಿಂದ ಬಡ್ತಿ ಸೇರಿದಂತೆ ಯಾವುದೇ ಸೌಲಭ್ಯಗಳಿಲ್ಲದೆ ವಂಚಿತರಾಗಿದ್ದರು. ನಮ್ಮಂತಹವರಿಗೇ ಇಂತಹ ಸ್ಥಿತಿ ಬಂದಿರಬೇಕಾದರೆ ಶ್ರೀಸಾಮಾನ್ಯರ ಪಾಡೇನು? ಎಂದು ಯೋಚಿಸಿ ಸಂಘ ಸ್ಥಾಪನೆಗೆ ಮುಂದಾದರು. ಆ ಯೋಚನೆ ತಮ್ಮ ತಲೆಗೆ ಬಂದ ಕೂಡಲೆ ನಾಗಪ್ಪನವರ ಮಾವಂದಿರಾದ ಟಿ. ಬೈಯ್ಯಣ್ಣನವರಲ್ಲಿಗೆ ಚನ್ನಿಗಪ್ಪ ಮತ್ತು ನಾಗಪ್ಪನವರು ಹೋಗಿ ಅವರಲ್ಲಿ ಉದ್ದೇಶವನ್ನು ಹೇಳಿಕೊಂಡರು. ಯೋಜನೆಯನ್ನು ಒಪ್ಪಿದ ಬೈಯಣ್ಣನವರು ತಮ್ಮ ಕೈಲಾದ ಸಹಾಯವನ್ನು ಮಾಡುವುದಾಗಿ ಹೇಳಿದರು. ಇದರಿಂದ ಸ್ಫೂರ್ತಿಗೊಂಡ ಚನ್ನಿಗಪ್ಪ ಮತ್ತು ನಾಗಪ್ಪನವರು ಒಕ್ಕಲಿಗ ಗಣ್ಯ ವ್ಯಕ್ತಿಗಳಾದ ಎಂ.ಸುಬ್ಬಯ್ಯ, ಬಿ.ಕೆಂಪಣ್ಣ, ಎಂ.ಎಲ್. ಶ್ಯಾಮಗೌಡ, ಎಸ್. ಪುಟ್ಟಣ್ಣ, ಕೆ.ಹೆಚ್.ರಾಮಯ್ಯ, ಸಿ.ಲಕ್ಷ್ಮಣಗೌಡ, ಬಿ.ಎಸ್.ಮಾರಪ್ಪ, ಬಿ.ಎಸ್.ಮುನಿಸ್ವಾಮಪ್ಪ ಇನ್ನೂ ಮುಂತಾದವರಿಗೆ ತಮ್ಮ ಉದ್ದೇಶವನ್ನು ತಿಳಿಸಿ ಅವರ ನೆರವನ್ನೂ ಕೋರಿದರು. (ಬಿ. ಪಿ. ರಾಧಾಕೃಷ್ಣ, ನನ್ನ ತಂದೆ–1951 ಬೆಂ.ಪುಟ–19)

ಬಿ. ಪುಟ್ಟಯ್ಯನವರನ್ನು ಅಧ್ಯಕ್ಷರನ್ನಾಗಿ, ಕೆ. ಹೆಚ್. ರಾಮಯ್ಯನವರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಿದರು. ಉಪಸಮಿತಿಗೆ 49 ಮಂದಿ ಸ್ಥಳೀಯ ಮಹನೀಯರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಿಕೊಂಡರು. ತಮ್ಮ ಉದ್ದೇಶವನ್ನು ಬೆಂಗಳೂರು ಸುತ್ತಮುತ್ತ ಇರುವ ಗ್ರಾಮೀಣ ಪ್ರದೇಶಗಳಲ್ಲಿ ಸಭೆ ಸಮಾರಂಭಗಳನ್ನು ನಡೆಸಿ ಗ್ರಾಮಗಳಲ್ಲಿದ್ದ ಒಕ್ಕಲಿಗರನ್ನು ಬರಮಾಡಿಕೊಂಡು ಇನ್ನು 15 ದಿನಗಳಲ್ಲಿ ಮತ್ತೊಂದು ಸಭೆ ನಡೆಸಬೇಕೆಂದು ತೀರ್ಮಾನಿಸಿದರು.

1906 ಏಪ್ರಿಲ್ 29 ಭಾನುವಾರ ಸಂಜೆ 3 ಗಂಟೆಗೆ ಅದೇ ದೊಡ್ಡಣ್ಣನವರ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಸಭೆ ಸೇರಿ ಒಕ್ಕಲಿಗ ಜನಾಂಗವನ್ನು ಒಗ್ಗೂಡಿಸಲು ಒಂದು ವಿನಂತಿ ಪತ್ರವನ್ನು ರಚಿಸಿದರು.

ಈ ಮೇಲ್ಕಂಡ ಸಭೆಗಳಲ್ಲಿ ಸೇರಿದ ಒಕ್ಕಲಿಗ ಕುಲಪುತ್ರರು ತಮ್ಮ ತನು, ಮನ, ಧನಗಳನ್ನು ಅರ್ಪಿಸಿ ಸಂಘ ಸ್ಥಾಪನೆಗೆ ಕಾರಣಬದ್ಧರಾದರು. ಸಂಘ ಸ್ಥಾಪನೆಗೆ ಕಾಯಾ, ವಾಚಾ, ಮನಸಾ, ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಎಂ. ಸುಬ್ಬಯ್ಯನವರು ಲಾಲ್‌ಬಾಗ್ ರಸ್ತೆಯಲ್ಲಿದ್ದ ತಮ್ಮ ಚಾಮುಂಡೇಶ್ವರಿ ಮುದ್ರಣಾಲಯದಲ್ಲಿ ಸಂಘಕ್ಕೆ ಸಂಬಂಧಿಸಿದ್ದನ್ನು ಉಚಿತವಾಗಿ ಮುದ್ರಿಸಿಕೊಟ್ಟರು ಮತ್ತು ಸಂಘದ ವಿಚಾರವಾಗಿ ಸಭೆ ಸಮಾರಂಭವನ್ನು ನಡೆಸಲು ತಮ್ಮ ಖಾಸಗಿ ಬಂಗಲೆಯಲ್ಲಿ ಸ್ಥಳಾವಕಾಶವನ್ನು ನೀಡಿದರು. ಸ್ವಲ್ಪ ದಿನಗಳು ಕಳೆದ ನಂತರ ಬ್ಯಾರಿಸ್ಟರ್ ಬಿ.ನಾಗಪ್ಪನವರು ದಿವಾನ್ ವಿ.ಪಿ.ಮಾಧವರಾಯರನ್ನು ಕಂಡು ತಮ್ಮ ಧ್ಯೇಯೋದ್ದೇಶಗಳನ್ನು ಹೇಳಿಕೊಳ್ಳಲಾಗಿ ದಿವಾನರು ಒಂದು ಮನವಿ ಪತ್ರವನ್ನು ತಯಾರಿಸಿ ಕೊಡುವಂತೆ ಕೇಳಿದರು. ಸಂಘದ ಕಟ್ಟಡಗಳನ್ನು ಕಟ್ಟುವುದಕ್ಕೆ ಬೆಂಗಳೂರಿನಲ್ಲಿ ಒಂದು ವಿಸ್ತಾರವಾದ ಜಾಗವನ್ನು ಕೇಳಿಕೊಂಡರು. ಮನವಿಪತ್ರವನ್ನು ಓದಿದ ದಿವಾನರು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಹೇಳಿದರು. ಸ್ವಲ್ಪ ದಿನ ಕಳೆದ ಮೇಲೆ ಸರ್ ಮುಟ್ಟಣ್ಣಚೆಟ್ಟಿಯವರೊಡನೆ ಒಕ್ಕಲಿಗ ನಾಯಕರು ಸಮಾಲೋಚಿಸಿ ದಿವಾನರನ್ನು ಅವರೆಲ್ಲರೂ ಬೇಟಿ ಮಾಡಿ ಒಕ್ಕಲಿಗರ ಸಂಘದ ಪ್ರಥಮ ಮಹಾಸಭೆಗೆ ದಯಮಾಡಿಸಬೇಕೆಂದು ಕೇಳಿಕೊಂಡರು ಹಾಗೂ ಒಪ್ಪಿಸಿಯೇ

ಬಿಟ್ಟರು. ತಂಡ ಅಂದು ಬ್ರಿಟಿಷ್ ರೆಸಿಡೆಂಟರಾಗಿದ್ದ ಫ್ರೇಜರ್ ಅವರನ್ನು ಕಂಡು ಅವರ ಸಹಾನುಭೂತಿಯನ್ನು ಪಡೆಯಿತು.

ಸಂಘವೆಂಬ ರಥಕ್ಕೆ ರಾಮಯ್ಯ–ಪುಟ್ಟಯ್ಯ ಎಂಬ ಜೋಡಿ ಚಕ್ರಗಳು

ಒಕ್ಕಲಿಗರ ಸಂಘದ ಸ್ಥಾಪನೆಗೆ ಮತ್ತು ಒಕ್ಕಲಿಗ ಜನಾಂಗದಲ್ಲಿ ತಿಳುವಳಿಕೆ ಮೂಡಿಸಲು ಕೆ.ಹೆಚ್.ರಾಮಯ್ಯನವರನ್ನು ಜನಾಂಗದ ಹಿರಿಯರು ನೇಮಿಸಿದರು. ರಾಮಯ್ಯನವರು ಮಳೆ ಬಿಸಿಲೆನ್ನದೆ ಬೆಂಗಳೂರು ಗ್ರಾಮಾಂತರ ಪ್ರದೇಶವೇ ಅಲ್ಲದೆ ನಾಡಿನ ಉದ್ದಗಲಕ್ಕೂ ಎಲ್ಲ ಪ್ರದೇಶಗಳಲ್ಲೂ ಜನರನ್ನು ಉದ್ದೇಶಿಸಿ ಆಡು ಭಾಷೆಯಲ್ಲಿ ಭಾಷಣ ಮಾಡಿ ಎಲ್ಲರ ಮನಗೆದ್ದರು. ಅವರ ಭಾಷಣ ಕೇಳಿದ ಬಹಳಷ್ಟು ಜನ ಸ್ಫೂರ್ತಿಗೊಂಡರು. ರಾಮಯ್ಯನವರನ್ನು ಅವತಾರ ಪುರುಷ, ಒಕ್ಕಲಿಗ ಕುಲಪುತ್ರನೆಂದು ಹೊಗಳಿದರು. ಆಗಿನ ಎಂಟು ಜಿಲ್ಲೆಗಳ ಎಲ್ಲಾ ತಾಲ್ಲೂಕು, ಗ್ರಾಮಗಳಲ್ಲಿ ಸಂಚಾರ ಮಾಡಿ ಜನಾಂಗವನ್ನು ಜಾಗೃತಗೊಳಿಸಿದರು. ದಿವಾನ್ ಮಾಧವರಾಯರು ಜಿಲ್ಲೆಯ ಎಲ್ಲಾ ಅಮಲ್ದಾರರಿಗೆ ಅಧೀನ ಅಧಿಕಾರಿಗಳಿಗೆ ಸುತ್ತೋಲೆಯನ್ನು ಕಳುಹಿಸಿದ್ದರಲ್ಲದೆ ರಾಮಯ್ಯನವರಿಗೆ ಅಧಿಕೃತ ಪತ್ರವನ್ನು ನೀಡಿದರು. ಹೀಗೆ ದಿವಾನರು ಪ್ರತ್ಯೇಕವಾಗಿ, ಪರೋಕ್ಷವಾಗಿ ಸಂಘದ ಸ್ಥಾಪನೆಗೆ ನೆರವಾದರು. ರಾಮಯ್ಯನವರು ತಾವು ಉದ್ದಾಮ ಪಂಡಿತರೆಂದಾಗಲೀ, ಸರ್ಕಾರಿ ನೌಕರನ ಗತ್ತು ಗಮ್ಮತ್ತುತನವನ್ನಾಗಲೀ ತೋರಿಸದೆ ಆಡು ಭಾಷೆ ಮತ್ತು ತಿಳಿಹಾಸ್ಯದೊಂದಿಗೆ ಜನರ ಮನಸ್ಸನ್ನು ಗೆದ್ದರು.

ಒಕ್ಕಲಿಗರ ಸಂಘ ಸ್ಥಾಪನೆಯ ಭಿತ್ತಿ ಪತ್ರ ಎಲ್ಲಿವರೆಗೆ ತಲುಪಿತೆಂದರೆ ಚಿತ್ರದುರ್ಗದ ಅಮಲ್ದಾರರ ಕಛೇರಿಯಲ್ಲಿ ನೌಕರಿಯಲ್ಲಿದ್ದ ಬಿ.ಪುಟ್ಟಯ್ಯನವರಿಗೂ ತಲುಪಿತು. ಭಿತ್ತಿಪತ್ರವನ್ನು ಓದಿದ ಪುಟ್ಟಯ್ಯನವರು ಆ ಕೂಡಲೆ ರಾಮಯ್ಯನವರನ್ನು ಭೇಟಿ ಮಾಡಿ ವಿಚಾರ ತಿಳಿದುಕೊಂಡರು. ರಾಮಯ್ಯನವರು ಮತ್ತು ಪುಟ್ಟಯ್ಯನವರು ಕೇವಲ ಸ್ನೇಹಿತರು ಮಾತ್ರವಲ್ಲ ಬಂಧುಗಳೂ ಆಗಿದ್ದರು. ರಾಮಯ್ಯನವರು ಪುಟ್ಟಯ್ಯನವರನ್ನು ಜನಾಂಗದ ಅಭಿವೃದ್ಧಿಗೆ ದುಡಿಯಬೇಕೆಂದು ಕೇಳಿಕೊಳ್ಳಲಾಗಿ ಪುಟ್ಟಯ್ಯನವರು ಒಪ್ಪಿದರು.

ಒಕ್ಕಲಿಗರ ಸಂಘದ ಮೊದಲನೆಯ ಮಹಾಸಭೆ 1908 (ವಾರ್ಷಿಕ ಸಭೆ)

ಶ್ರೀ ರಾಮಯ್ಯನವರು, ಬ್ಯಾರಿಸ್ಟರ್ ನಾಗಪ್ಪನವರು ಸೇರಿ ಪಟ್ಟಣ ಗ್ರಾಮವೆನ್ನದೆ ಎಲ್ಲೆಡೆಗಳಿಂದ ಜನಾಂಗದ ಮಹನೀಯರು ಬೆಂಗಳೂರಿನಲ್ಲಿ ನಡೆಯುವ ಮಹಾಸಭೆಗೆ ಬರುವ ವ್ಯವಸ್ಥೆಯನ್ನು ಮಾಡಿದ್ದರು. 1906 ಅಕ್ಟೋಬರ್ 8 ಮತ್ತು 9 ನೇ ತಾರೀಖುಗಳಲ್ಲಿ ಒಕ್ಕಲಿಗರ ಮಹಾಸಭೆಯನ್ನು ಜರುಗಿಸಿದರು. ಈ ಸಭೆಗೆ ಮಂಡ್ಯದ ನಾಗಮಂಗಲ ಭಾಗದ ಗಣ್ಯವ್ಯಕ್ತಿಗಳೂ, ಕುಣಿಗಲ್ ಪ್ರಾಂತ್ಯದ ಆಜಾನುಬಾಹುಗಳಾದ ಗೌಡರು, ಶಿವಮೊಗ್ಗದ ಸುತ್ತಮುತ್ತಲಿನ ಪ್ರಾಂತ್ಯದ ಚಟುವಟಿಕೆಯುಳ್ಳ ನಾಮಧಾರಿ ಗೌಡರು, ಮಂಜರಾಬಾದ್ ಸೀಮೆಯ ನಾಡಗೌಡರು, ಕೋಲಾರ ಜಿಲ್ಲೆಯ ರೆಡ್ಡಿ ಒಕ್ಕಲಿಗರು, ತೆಲುಗು ರೆಡ್ಡಿಗೌಡರು, ಬೆಂಗಳೂರಿನ ನಿವಾಸಿಗಳು ತಂಡೋಪತಂಡವಾಗಿ ಸಾವಿರಾರು ಸಂಖ್ಯೆಯಲ್ಲಿ ಬಂದರು. ರಾಮಯ್ಯನವರು, ಬ್ಯಾರಿಸ್ಟರ್ ನಾಗಪ್ಪನವರು,

ಟಿ. ಬಯ್ಯಣ್ಣನವರು ಇನ್ನೂ ಮುಂತಾದವರು ಬಹಳ ಉತ್ಸಾಹದಿಂದ ಪಾಲ್ಗೊಂಡುದೇ ಅಲ್ಲದೆ ಬಂದ ಹಾಗೂ ಬರುತ್ತಿದ್ದ ಅತಿಥಿಗಳನ್ನು ಯೋಗ್ಯರೀತಿಯಲ್ಲಿ ಬರಮಾಡಿಕೊಳ್ಳುತ್ತಿದ್ದರು. ಎಲ್ಲೆಲ್ಲೂ ಸಂತೋಷ ಸಡಗರದಿಂದ ಬೀಗುವವರೇ ಹೆಚ್ಚು ಮಂದಿಯಿದ್ದರು. ಅದುವರೆವಿಗೂ ಒಕ್ಕಲಿಗ ಎಂದೆನಿಸಿಕೊಳ್ಳುವುದೇ ಅವಮಾನವೆಂದು ತಿಳಿದುಕೊಂಡಿದ್ದವರಿಗೆ ಒಕ್ಕಲಿಗ ಜನಾಂಗ ಅಥವಾ ಜಾತಿ ಎಂದು ಕರೆದುಕೊಳ್ಳಲು ಅಭಿಮಾನ ಹುಟ್ಟಿತು.

ದಿವಾನ್ ವಿ.ಪಿ. ಮಾಧವರಾಯರು ಅನಿವಾರ್ಯ ಕಾರಣಗಳಿಂದ ಹಾಗೂ ಕೆಲಸದ ಒತ್ತಡದಿಂದ ಮಹಾಸಭೆಗೆ ಬರಲಾಗದೆ ಅಂಡರ್ ಸೆಕ್ರೆಟರಿ ರಾವ್ ಬಹದ್ದೂರ್ ಎಂ. ಶ್ಯಾಮರಾಯರ ಕೈಯಲ್ಲಿ ತಾವು ಸಿದ್ಧಪಡಿಸಿದ ಭಾಷಣವನ್ನು ಸಭೆಯಲ್ಲಿ ಓದಲು ತಿಳಿಸಿದ್ದರು. ಅದರಂತೆ ಎಂ. ಶ್ಯಾಮರಾಯರು ದಿವಾನರ ಭಾಷಣವನ್ನು ಮಹಾಸಭೆಗೆ ಓದಿ ತಿಳಿಸಿದರು. ದಿವಾನರು ಜನಾಂಗದ ಹಾಗೂ ಸಂಘದ ಮೇಲೆ ಇಟ್ಟಿರುವ ಆದರಾಭಿಮಾನಗಳನ್ನು ಈ ಭಾಷಣದ ಮೂಲಕ ತಿಳಿದುಕೊಂಡ ಸಭೆಯು ದೀರ್ಘ ಕರತಾಡನಗಳನ್ನು ಹಾಕುವುದರ ಮೂಲಕ ಸ್ವಾಗತಿಸಿತು. ಇದೇ ಸಂದರ್ಭದಲ್ಲಿ ನಾಡಿನ ಶ್ರೀಮಂತ ಗುತ್ತಿಗೆದಾರರೆಂದೇ ಖ್ಯಾತರಾಗಿದ್ದ ಬಿ. ಎಸ್. ಮಾರಪ್ಪ ಮತ್ತು ಅವರ ಸಹೋದರ ಬಿ. ಎಸ್. ಮುನಿಸ್ವಾಮಪ್ಪನವರು ವಿದ್ಯಾರ್ಥಿನಿಲಯದ ಕಟ್ಟಡ ಕಟ್ಟಿಸಲು 30 ಸಾವಿರ ರೂಪಾಯಿಗಳನ್ನು ಕೊಡುವುದಾಗಿ ತಿಳಿಸಿದರು. ಮಹಾಸಭೆಯು ಮಾರಪ್ಪ ಮತ್ತು ಮುನಿಸ್ವಾಮಪ್ಪನವರ ಉದಾರತನವನ್ನು ಕೊಂಡಾಡಿತು.

ಅದರಂತೆ 1907 ಅಕ್ಟೋಬರ್ 17ರಂದು ಮೈಸೂರಿನಲ್ಲಿ ಬ್ಯಾರಿಸ್ಟರ್ ಬಿ.ನಾಗಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮಹಾರಾಜರು ದಯಮಾಡಿಸಿ ಎರಡನೆಯ ಮಹಾಸಭೆಯನ್ನು ತಮ್ಮ ಅಮೃತಹಸ್ತದಿಂದ ಉದ್ಘಾಟಿಸಿದರು. ಜನಾಂಗದ ಜನರ ಉತ್ಸಾಹ, ಶಿಸ್ತು, ಸಂಯಮ, ಸ್ವಾಮಿಭಕ್ತಿಯನ್ನು ಕಂಡು ಅರಸರು ಸುಪ್ರೀತರಾದರು.

1906ರಲ್ಲಿ ಪ್ರಾರಂಭಗೊಂಡ ಒಕ್ಕಲಿಗರ ಸಂಘವು ಜನಾಂಗದ ಗಣ್ಯವ್ಯಕ್ತಿಗಳ ಶ್ರಮದ ಫಲವಾಗಿ 1907 ಸೆಪ್ಟೆಂಬರ್ 9ನೇ ತಾರೀಖು ರಿಜಿಸ್ಟ್ರಾರ್ ಕಛೇರಿಯಲ್ಲಿ ಅಧಿಕೃತವಾಗಿ 'ಒಕ್ಕಲಿಗರ ಸಂಘ' ವೆಂಬ ತನ್ನ ಹೆಸರನ್ನು ನೊಂದಾಯಿಸಿತು. ಸಂಘವು ರೈತರ ಹಾಗೂ ರೈತ ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿನಿಲಯವನ್ನು ಸ್ಥಾಪನೆ ಮಾಡಿ ಒಕ್ಕಲುತನವನ್ನೇ ನಂಬಿರುವ ಗ್ರಾಮೀಣ ಭಾಗದ ಒಕ್ಕಲಿಗರ ಮತ್ತು ಒಳಪಂಗಡಗಳ ವಿದ್ಯಾರ್ಥಿಗಳಿಗೆ ಆಶ್ರಯ ನೀಡಲು ತೀರ್ಮಾನಿಸಿತು. ಅದಕ್ಕಾಗಿ ತನ್ನದೇ ಆದ ನಿವೇಶನವನ್ನೂ ಪಡೆದು ಆ ನಿವೇಶನದಲ್ಲಿ ಸ್ವಂತ ಕಟ್ಟಡವನ್ನು ಕಟ್ಟಿಸಲು ತೀರ್ಮಾನಿಸಿತು. ಬೆಂಗಳೂರು ಪಟ್ಟಣದಲ್ಲಿ ವಾಸಯೋಗ್ಯ ನಿವೇಶನವನ್ನು ಆಳರಸರಿಂದ ಪಡೆದುಕೊಂಡಿತು. ನಂತರ ಜನಾಂಗದ ಉದಾರಿಗಳಿಂದ ಸಹಾಯ ಪಡೆದು ಕಟ್ಟಡ ಕಟ್ಟಲು ತೀರ್ಮಾನಿಸಿತು. ಸಂಘವು ತನ್ನ ಕಾರ್ಯ ಚಟುವಟಿಕೆಗಳನ್ನು ಸಾಂಗವಾಗಿ ನೆರವೇರಿಸಿಕೊಂಡು ಹೋಗಲು ದ್ವಿಮುಖ ಆಡಳಿತ ಕ್ರಮವನ್ನು 1907ರಿಂದ 1935ರವರೆಗೆ ಅನುಸರಿಸಿತು. ಎಕ್ಸಿಕ್ಯುಟಿವ್‌ಕೌನ್ಸಿಲ್ (ಕಾರ್ಯಕಾರಿ ಸಮಿತಿ) ಎಂದರೆ ಸಂಘದ ಪ್ರಮುಖ ಆಡಳಿತವನ್ನು ಅಭಿವೃದ್ಧಿಕಾರ್ಯ, ಲೆಕ್ಕಪತ್ರ ಇತ್ಯಾದಿ ವ್ಯವಹಾರಗಳನ್ನು ನೋಡಿಕೊಳ್ಳುವ ಒಂದು ಸಮಿತಿ. ಜನರಲ್ ಕೌನ್ಸಿಲ್ (ಸಾಮಾನ್ಯ ಆಡಳಿತ) ಒಕ್ಕಲಿಗರ ಸಂಘದ ಒಳಾಡಳಿತ ಎಂದರೆ ಸಂಘದ ವಿದ್ಯಾರ್ಥಿನಿಲಯ, ಕಟ್ಟಡ ಕಟ್ಟಿಸುವಿಕೆ, ಮುದ್ರಣಾಲಯ ಇತ್ಯಾದಿ ನೋಡಿಕೊಳ್ಳಲು ತೀರ್ಮಾನಿಸಿತು.

ಒಕ್ಕಲಿಗರ ಪತ್ರಿಕೆ

ಪತ್ರಿಕೆಗಳು ಅಂದಿನ ಸಮಾಜ, ಸರ್ಕಾರವನ್ನು ಪ್ರತಿಬಿಂಬಿಸುವ ಪ್ರಚಾರ ಮಾಧ್ಯಮವಾಗಿದ್ದುದರಿಂದ ತಮ್ಮ ಜನಾಂಗದ ಜನರನ್ನು ಪ್ರೋತ್ಸಾಹಿಸುವ ಹಾಗೂ ತಮ್ಮ ಧ್ಯೇಯೋದ್ದೇಶಗಳನ್ನು ಸಮಾಜಕ್ಕೆ ಸರ್ಕಾರಕ್ಕೂ ತಿಳಿಸುವ ಉದ್ದೇಶದಿಂದ ತಮ್ಮದೇ ಆದ ಪತ್ರಿಕೆಯೊಂದಿದ್ದರೆ ಹೇಗೆ ಎಂದು ಕೆ.ಹೆಚ್. ರಾಮಯ್ಯನವರು ಮತ್ತು ಬಿ.ಪುಟ್ಟಯ್ಯನವರು ಯೋಚಿಸಿದರು. ಇವರು ಒಮ್ಮೆ "ನಮ್ಮ ಜನಾಂಗದವರು ಒಕ್ಕಲುತನವನ್ನೇ ನಂಬಿರುವ ಜನ; ಆದುದರಿಂದ ವ್ಯವಸಾಯ, ಪಶುಸಂಗೋಪನೆ, ಕೃಷಿಗೆ ಸಂಬಂಧಿಸಿದ ಮಾಹಿತಿ ನೀಡುವುದು, ನಮ್ಮ ಸಮಾಜವನ್ನು ಎಚ್ಚರಿಸುವುದು ಹಾಗೂ ಸರ್ಕಾರಕ್ಕೆ ರೈತರ ಕಷ್ಟಸುಖಗಳನ್ನು ತಿಳಿಸಲು ನಮ್ಮ ಸಂಘದ ವತಿಯಿಂದ

'ಒಕ್ಕಲಿಗರ ಪತ್ರಿಕೆ' ಎಂಬ ಪತ್ರಿಕೆಯನ್ನು ಪ್ರಾರಂಭಿಸೋಣ" ಎಂದು ತೀರ್ಮಾನಿಸಿದರು. ಅಂದು ಪತ್ರಿಕೆಗೆ 'ಒಕ್ಕಲಿಗರ ಪತ್ರಿಕೆ' ಎಂಬ ಹೆಸರಿಡಲು ಕಾರಣವೇನೆಂದರೆ ಒಕ್ಕಲುತನ ಮಾಡುವ ಸಮಸ್ತ ಜನಗಳಿಗೆ ಅನುಕೂಲವಾಗಲೆಂದೇ ವಿನಃ ಜಾತಿ ಸೂಚಕ ಪತ್ರಿಕೆಯನ್ನು ಹೊರತರುವ ಉದ್ದೇಶದಿಂದಲ್ಲ.

ರಾಮಯ್ಯನವರು ಪುಟ್ಟಯ್ಯನವರನ್ನು ಕುರಿತು "ಏನಯ್ಯ ನಾನು ಉತ್ಸವ ಮೂರ್ತಿಯಾದರೆ ನೀನು ಪೂಜಾ ಮೂರ್ತಿ. ಒಂದಿಲ್ಲದಿದ್ದರೆ ಮತ್ತೊಂದು ಶೋಭಿಸುವುದಿಲ್ಲ. ಸಂಘ ಉದ್ಧಾರವಾಗಬೇಕಾದರೆ ಎರಡೂ ಇರಬೇಕು. ನಾವಂತು ಒಕ್ಕಲಿಗರ ಪತ್ರಿಕೆಯನ್ನು ಹೊರಡಿಸಬೇಕೆಂದಿದ್ದೇವೆ. ನೀನು ಪತ್ರಿಕೆ ಕೆಲಸವನ್ನೂ ಹಾಗೂ ಸಂಘದ ಕೆಲಸವನ್ನೂ ವಹಿಸಿಕೊಂಡುಬಿಡು. ಸರ್ಕಾರಿ ನೌಕರ ನಿನ್ನ ಯೋಗ್ಯತೆಗೆ ತಕ್ಕಂತೆ ಸಿಗುವುದಿಲ್ಲ. ಸಂಘದಲ್ಲಿ ದುಡಿದರೆ ಹಾಗೂ ಕುಲಜನರ ಸೇವೆ ಮಾಡಿದರೆ ಆತ್ಮಸಂತೋಷ ಉಂಟಾಗುತ್ತದೆ" ಎಂದು ಹೇಳಿದರು. ಇದಕ್ಕೆ ಸಹಮತ ಸೂಚಿಸಿದ ಪುಟ್ಟಯ್ಯನವರು ಸಂಘದ ಹಾಗೂ ಪತ್ರಿಕೆಯ ಜವಾಬ್ದಾರಿ ಹೊರಲು ಯೋಜನೆಯನ್ನು ರೂಪಿಸಿದರು. ಪತ್ರಿಕೆಯ ಪ್ರಕಟಣೆಗೆ ಎಲ್ಲಾ ಸಜ್ಜಾಯಿತು.

'ಒಕ್ಕಲಿಗರ ಪತ್ರಿಕೆ'ಯ ಮೊದಲನೆಯ ಸಂಚಿಕೆ 1907ರ ಮಾರ್ಚಿ 15ರಂದು ಯುಗಾದಿ ಹಬ್ಬದ ದಿನ ಅರಳೇಪೇಟೆಯಿಂದ ಪ್ರಕಟವಾಯಿತು. 'ಒಕ್ಕಲಿಗರ ಪತ್ರಿಕೆ'ಯನ್ನು ಆಗಿನ ಬೆಂಗಳೂರಿನ ಕೋಟೆಯಲ್ಲಿ 'ಸ್ಟಾಂಡರ್ಡ್' ಮತ್ತು 'ನಡೆಗನ್ನಡಿ' ಎಂಬ ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದ ಶ್ರೀನಿವಾಸ ಅಯ್ಯಂಗಾರ್ ಮುದ್ರಣಾಲಯದಲ್ಲಿ ಅಚ್ಚು ಹಾಕಿಸಲು ಏರ್ಪಾಡು ಮಾಡಿದರು. ಸುಮಾರು ಒಂದೂವರೆ ವರ್ಷ ಬಿ. ಪುಟ್ಟಯ್ಯನವರು ಪತ್ರಿಕೆಯ ವಿಷಯಗಳನ್ನೆಲ್ಲ ತಾವೇ ಬರೆದು, ಅಚ್ಚುಹಾಕಿಸಿ ಅದಕ್ಕೆ ಸಂಬಂಧಪಟ್ಟ ಪತ್ರ ವ್ಯವಹಾರ ಇತ್ಯಾದಿ ಸಮಸ್ತ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು.

ಪತ್ರಿಕೆಯು ದಿನಕಳೆದಂತೆ ಜನಪ್ರಿಯತೆಗಳಿಸುತ್ತಾ ಬೆಳೆಯಿತು. ಸ್ವತಂತ್ರವಾಗಿ ಪತ್ರಿಕೆಯನ್ನು ಹೊರಡಿಸಲು ಸಕಲ ಸಿದ್ಧತೆಯನ್ನು ಮಾಡಿಕೊಂಡರು. ಉರಿಗಾಂನ ಬೈಯಣ್ಣನವರು ಮತ್ತು ನೀಲಗಿರಿ ರಂಗೇಗೌಡರ ಪರಿಶ್ರಮ ಮತ್ತು ಉದಾರ ಮನೋಭಾವದಿಂದಾಗಿ ಮುದ್ರಣಾಲಯದ ಸ್ಥಾಪನೆಯ ಮಹೋತ್ಸವವು 15-03-1907ರಂದು ದಿವಾನ್ ವಿ.ಪಿ,ಮಾಧವರಾಯನ ಅಧ್ಯಕ್ಷತೆಯಲ್ಲಿ ಬೈಯಣ್ಣನವರ ಅರಳೇಪೇಟೆಯ ಮನೆಯಲ್ಲಿ ನೆರವೇರಿತು. ಮುದ್ರಣಾಲಯವನ್ನು ಸ್ಥಾಪಿಸುವ ವಿಚಾರದಲ್ಲಿ ಬೈಯಣ್ಣನವರು ಆಗಿನ ಸರ್ಕಾರಿ ಮುದ್ರಣಾಲಯದ ಸೂಪರಿಂಡೆಂಟರಾಗಿದ್ದ ಮಿಸ್ಟರ್ ಏಟ್ಸರವರ ಮನೆಗೆ ಹೋಗಿ ಅವರಿಂದ ಅನೇಕ ಸಲಹೆ ಸೂಚನೆಗಳನ್ನು ಪಡೆದು ಉತ್ತಮವಾದ ಮುದ್ರಣ ಸಾಮಗ್ರಿಗಳನ್ನು ತರಿಸಿಕೊಟ್ಟರು. ಕೆಲವು ವರ್ಷಗಳ ನಂತರ 1973ರಲ್ಲಿ ಪತ್ರಿಕಾ ಕಾರ್ಯಾಲಯವು ವಿಶ್ವೇಶ್ವರಪುರದ ಒಕ್ಕಲಿಗರ ಸಂಘದ ಮುದ್ರಣಾಲಯಕ್ಕೆ ಸ್ಥಳಾಂತರಗೊಂಡಿತು. ಒಕ್ಕಲಿಗರ ಪತ್ರಿಕೆಯು ಸುಮಾರು 65 ರಿಂದ 70 ವರ್ಷಗಳ (1973) ಸುದೀರ್ಘ ಇತಿಹಾಸವನ್ನೊಳಗೊಂಡಿದೆ.

ಹೀಗೆ ಒಕ್ಕಲಿಗರ ಸಂಘವು ವಿದ್ಯಾರ್ಥಿ ನಿಲಯ, ಶಾಲಾ, ಕಾಲೇಜುಗಳನ್ನು ಸ್ಥಾಪಿಸಿದುದೇ ಅಲ್ಲದೇ 'ಒಕ್ಕಲಿಗರ ಪತ್ರಿಕೆ'ಯನ್ನು ಹುಟ್ಟುಹಾಕಿ 70-80 ವರ್ಷಗಳ ಕಾಲ ಕನ್ನಡ ಪತ್ರಿಕೋದ್ಯಮಕ್ಕೆ ತನ್ನ ಕೊಡುಗೆಯನ್ನು ಕೊಟ್ಟಿದೆ. ಒಟ್ಟಾರೆ ಹೇಳುವುದಾದರೆ ಬೆಂಗಳೂರಿನ ಅಭಿವೃದ್ಧಿಗೆ ಒಕ್ಕಲಿಗರ ಸಂಘವು ತನ್ನ ಕೊಡುಗೆಯನ್ನು ನೀಡಿದೆ.

ಇತರೆ:

1. ಹಿಂದುಳಿದ ಸಮುದಾಯಗಳು, ಬ್ರಾಹ್ಮಣೇತರ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಶಾಲಾ, ಕಾಲೇಜು, ವಿದ್ಯಾರ್ಥಿ ನಿಲಯಗಳ ಸ್ಥಾಪನೆಗೆ ಕಾರಣವಾದವು.
2. ಪತ್ರಿಕೋದ್ಯಮಕ್ಕೆ ಈ ವರ್ಗಗಳು ಧುಮುಕಿದವು.
3. 1917ರಲ್ಲಿ ಹಿಂದುಳಿದ ವರ್ಗಗಳ ಆಂದೋಲನವಾಗಿ ಲೆಸ್ಲಿ ಮಿಲ್ಲರ್ ಆಯೋಗ ರಚನೆಯಾದದ್ದು ಇಂತಹ ಸಂಘ-ಸಂಸ್ಥೆಗಳ ಹೋರಾಟದಿಂದಾಗಿ.
4. ನಾಡಿನಾದ್ಯಂತ ಕನ್ನಡ ಪತ್ರಿಕೆಗಳು ಹುಟ್ಟಿ ಬೆಳೆಯಲು ಒಕ್ಕಲಿಗರ ಸಂಘ ತನ್ನದೇ ಕೊಡುಗೆಯನ್ನು ನೀಡಿರುತ್ತದೆ.

54. ಬೆಂಗಳೂರಿನಲ್ಲಿ ಇಂಗ್ಲಿಷ್ ಶಿಕ್ಷಣದ ಆರಂಭ

ಡಾ. ಜೆ. ವಿ. ಗಾಯತ್ರಿ

1854ರ ಪ್ರಸಿದ್ಧ 'ಹ್ಯಾಲಿಫ್ಯಾಕ್ಸ್ ಡಿಸ್ಪಾಚ್' ನಂತೆ ಪಾಶ್ಚಾತ್ಯ ಮಾದರಿಯ ವಿದ್ಯಾಭ್ಯಾಸ ಅತ್ಯಂತ ಸೂಕ್ತವಾದುದೆಂದು ಪರಿಗಣಿಸಲ್ಪಟ್ಟಿದ್ದರೂ ಭಾರತದ ಇತರ ಪ್ರಾಂತ್ಯಗಳಂತೆ ಮೈಸೂರಿನಲ್ಲಿ ಬ್ರಿಟಿಷ್ ಕಮ್ಮಿಷನರ್‌ಗಳ ಆಡಳಿತದಲ್ಲಿ ವ್ಯವಸ್ಥಿತ ರೀತಿಯ ವಿದ್ಯಾಭ್ಯಾಸದ ಪದ್ಧತಿಯಿರಲಿಲ್ಲ. ಇಂಗ್ಲಿಷ್ ಭಾಷೆ ಉನ್ನತಮಟ್ಟದ ವಿದ್ಯಾಸಂಸ್ಥೆಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದಿದ್ದರೂ ಸಹ ಕೆಳಗಿನ ತರಗತಿಗಳಲ್ಲಿ ದೇಶೀಯ (vernacular) ಭಾಷೆ ಬಳಕೆಯಲ್ಲಿತ್ತು. ಐರೋಪ್ಯ ಕೃತಿಗಳನ್ನು ಆಯಾಯ ಸ್ಥಳಿಯ ಭಾಷೆಗಳಿಗೆ ಭಾಷಾಂತರಿಸಿದ್ದರಿಂದ ಅಂದಿನ ಸಮಾಜದ ಎಲ್ಲಾ ವರ್ಗದ ಜನಗಳಿಗೂ ಇಂಗ್ಲಿಷ್ ಭಾಷೆಯ ಪ್ರಜ್ಞೆ ಮಾಡಿತು. ಬ್ರಿಟಿಷ್ ಇಂಡಿಯಾದಲ್ಲಿ ಇಂಗ್ಲಿಷ್ ಶಿಕ್ಷಣವಿಲ್ಲದ ವ್ಯಕ್ತಿ ಸರ್ಕಾರದ ಉನ್ನತ ಹುದ್ದೆಗೆ ಹೋಗಲು ಸಾಧ್ಯವಿಲ್ಲವೆನ್ನುವಷ್ಟು ಇಂಗ್ಲಿಷ್ ವಿದ್ಯಾಭ್ಯಾಸದ ಬಗ್ಗೆ ಜನಗಳಿಗೆ ಅರಿವುಂಟಾಯಿತು.

ಮೈಸೂರಿನಲ್ಲಿ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು 1832ರಲ್ಲಿ ಇಂಗ್ಲೀಷನ್ನು ಪರಿಚಯಿಸಿದ ಮೊದಲಿಗರು, 'ರಾಜಾ ಉಚಿತ ಶಾಲೆ' ಎಂದು ಸ್ಥಾಪಿಸಲ್ಪಟ್ಟ ಈ ಇಂಗ್ಲಿಷ್ ಶಾಲೆ ಮಿಷನರಿ ಹಡ್ಸನ್‌ರವರ ಮೇಲ್ವಿಚಾರಣೆಯಲ್ಲಿ ಮೈಸೂರಿನಲ್ಲಿ ನಡೆಯುತ್ತಿತ್ತು.

ಕ್ರೈಸ್ತಧರ್ಮ ಪ್ರಚಾರ ಮತ್ತು ಮತಾಂತರ ಮುಖ್ಯ ಧ್ಯೇಯವಾಗಿದ್ದಾಗ್ಯೂ ಪ್ರಾರಂಭದ ದಿಶೆಯಲ್ಲಿ (1840 ರಿಂದ 1854ರವರೆಗೆ) ಮೈಸೂರಿನಲ್ಲಿ ಮಿಷನರಿಗಳು ಮಾಡಿದ ಇಂಗ್ಲಿಷ್ ಪ್ರಚಾರಕಾರ್ಯ ಪ್ರಶಂಸನೀಯವಾದುದು. ದಿ ಲಂಡನ್ ಮಿಷನ್, ದಿ ಬೇಸಲ್ ಮಿಷನ್ ಮತ್ತು ದಿ ವೆಸ್ಲಿಯನ್ ಮಿಷನ್ ಇಂಗ್ಲಿಷ್ ಭಾಷಾ ಪ್ರಚಾರಕಾರ್ಯದಲ್ಲಿ ಮುಂದಾಳತ್ವ ವಹಿಸಿದ್ದವು. ಇವುಗಳ ಪೈಕಿ ಲಂಡನ್ ಸೊಸೈಟಿ ಅತ್ಯಂತ ಹಳೆಯ ಮಿಷನ್ ಆಗಿದ್ದು, 1824ರಲ್ಲಿ ರೆವರೆಂಡ್ ಎಸ್. ಲಾಡ್ಲರ್ ಮತ್ತು ರೆವರೆಂಡ್ ಫೋರ್ಬ್ಸ್‌ರವರಿಂದ ಸ್ಥಾಪಿಸಲ್ಪಟ್ಟಿತು. ಇವರಿಬ್ಬರೂ ನುರಿತ ವಿದ್ವಾಂಸರು ಮತ್ತು ಐರೋಪ್ಯ ಪ್ರಾಧ್ಯಾಪಕರುಳ್ಳ ಒಂದು ಇಂಗ್ಲಿಷ್ ಕಾಲೇಜನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂಬ ಅಭಿಲಾಷೆ ಹೊಂದಿದ್ದರು. ಈ ಯೋಜನೆ ಬೆಂಗಳೂರಿನ ಪ್ರಜೆಗಳಿಂದ ಸ್ವಾಗತಿಸಲ್ಪಟ್ಟರೂ ನಿರ್ದೇಶಕರ ಸಮಿತಿ (Board of Directors)ಯ ಮಂಜೂರಾತಿ ದೊರಕದೆ ಬೆಂಗಳೂರು ಅಂದು ಉನ್ನತ ಮಟ್ಟದ ವಿದ್ಯಾಸಂಸ್ಥೆ ಯೊಂದನ್ನು ಕಳೆದುಕೊಂಡಿತು.

ಬೆಂಜಮಿನ್ ರೈಸ್ (1814–1887) ಬೆಂಗಳೂರಿನಲ್ಲಿ ನೆಲಸಿದ್ದ ಮತ್ತೊಬ್ಬ ಮಿಷನರಿಯಾಗಿದ್ದು, ವಿದ್ಯಾಭ್ಯಾಸದ ಪ್ರಗತಿಗೆ ಶ್ರಮಿಸಿದವನಾಗಿದ್ದ, ಬೆಂಗಳೂರಿನ ಲಂಡನ್ ಮಿಷನ್‌ನಲ್ಲಿ ಮೂರು ತಮಿಳು ದಿನದ ಶಾಲೆಗಳಲ್ಲದೆ ಇಂಗ್ಲಿಷ್ ಮತ್ತು ಕನ್ನಡ ಬೋಧಿಸುತ್ತಿದ್ದ ಅನಾಥ ಬಾಲಕರ ಕೇಂದ್ರವೊಂದಿತ್ತು. ಅಲ್ಲದೆ ಶ್ರೀಮತಿ ರೈಸ್ ಮತ್ತು ಶ್ರೀಮತಿ ಸ್ಯೂವೆಲ್‌ರವರ ಮೇಲ್ವಿಚಾರಣೆಯಲ್ಲಿ ಬಾಲಕಿಯರ ಬೋರ್ಡಿಂಗ್ ಶಾಲೆಯೊಂದು 1841ರಲ್ಲಿದ್ದು ಇಂಗ್ಲಿಷ್ ಮತ್ತು ತಮಿಳಿನಲ್ಲಿ ಬೋಧನೆ ನಡೆಯುತ್ತಿತ್ತು.

ವೆಸ್ಲಿಯನ್ ಸೊಸೈಟಿ: ಬೆಂಗಳೂರಿನ ದಂಡಿನಲ್ಲಿ 1834ರಲ್ಲಿ ಹಡ್ಸನ್‌ರಿಂದ ಸ್ಥಾಪಿಸಲ್ಪಟ್ಟಿದ್ದ ಇಂಗ್ಲಿಷ್ ಶಾಲೆಯ ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ಕಮ್ಮಿಷನರ್ ಸರ್ ಮಾರ್ಕ್ ಕಬ್ಬನ್‌ರವರು ಸಂತುಷ್ಟರಾಗಿದ್ದರು ಮತ್ತು ಶಾಲೆಗೆ ಗೌರ್ನರ್ ಜನರಲ್ ಲಾರ್ಡ್ ಬೆಂಟಿಂಕರು ಮೂರು ನೂರು ರೂಪಾಯಿಗಳ ಸಹಾಯ ಧನ ಕೊಟ್ಟಿದ್ದರು.[1] 1840ರಲ್ಲಿ ಈ ಮಿಷನರಿಯು ಬೆಂಗಳೂರಿನಲ್ಲಿ ಪಠ್ಯ ಪುಸ್ತಕಗಳ ಪ್ರಕಟಣೆಗಾಗಿ ಒಂದು ಪ್ರೆಸ್ ಪ್ರಾರಂಭಿಸಿದರು. ವೆಸ್ಲಿಯನ್ ಮಿಷನ್ ಪ್ರಾರಂಭಿಸಿದ ದೇಶೀಯ ವಿದ್ಯಾಸಂಸ್ಥೆ (Native Educational Institution) ಗೆ ಕಮ್ಮಿಷನರ್‌ರವರಿಂದ ಮಾಹೆಯಾನ 50 ರೂ. ಗಳ ಭತ್ಯೆ ಸಿಗುತ್ತಿತ್ತು. 1851ರಲ್ಲಿ ಈ ದೇಶೀಯ ವಿದ್ಯಾಸಂಸ್ಥೆಯು ಪ್ರೌಢಶಾಲೆಯಾಗಿ ಮಾರ್ಪಾಟಾಗಿ ಪ್ರಾಂತ್ಯದ ಇತರ ವಿದ್ಯಾಸಂಸ್ಥೆಗಳಿಗೆ ಮಾದರಿಯಾಯಿತು. ಈ ಶಾಲೆಯಲ್ಲಿ ಬೈಬಲ್ ಬಗ್ಗೆ ಶಿಕ್ಷಣ ನೀಡುತ್ತಿದ್ದರು. ಹಾಜರಿ ಐಚ್ಛಿಕವಾಗಿರುತ್ತಿತ್ತು. 1852ರಲ್ಲಿ ಈ ಸಂಸ್ಥೆಯಲ್ಲಿ 400 ಬಾಲಕರಿಗೆ ಸ್ಥಳಾವ ಕಾಶವಿದ್ದು 200 ಬಾಲಕರು ಒಳ್ಳೆಯ ಇಂಗ್ಲಿಷ್ ಶಿಕ್ಷಣ ಪಡೆಯುತ್ತಿದ್ದರು. ಒಬ್ಬ ಇನ್‌ಸ್ಪೆಕ್ಟರನ್ನು ನೇಮಿಸಿ, ಈ ಸಂಸ್ಥೆಗೆ ಭೇಟಿ ನೀಡಿ ವರದಿ ಸಲ್ಲಿಸುವಂತೆ ಮತ್ತು ವಿದ್ಯಾರ್ಥಿಗಳು ಸಾರ್ವಜನಿಕ ಸೇವೆಗೆ ಅರ್ಹರಾಗಲು ತಕ್ಕ ವಿಷಯಗಳ ಅಭ್ಯಾಸದ ಬಗ್ಗೆ ದೇಶೀಯ ಮತ್ತು ಐರೋಪ್ಯರನ್ನೊಳಗೊಂಡ ವಿದ್ಯಾಸಮಿತಿ (Education Board)ಯೊಂದನ್ನು ರಚಿಸುವಂತೆ ವಿದ್ಯಾಸಮಿತಿಯ ಕಾರ್ಯದರ್ಶಿಗಳಾದ ಜೆ. ಗ್ಯಾರೆಟ್ ಮತ್ತು ಕೃಷ್ಣಂನಾಯ್ಡುರವರು 19ನೇ ಮಾರ್ಚ್ 1852ರಲ್ಲಿ ಸರ್ಕಾರಕ್ಕೆ ನೀಡಿದ್ದ ಸಲಹೆಗೆ 1ನೇ ಜುಲೈ 1852ರಲ್ಲಿ ಕಬ್ಬನ್‌ರ ಮಂಜೂರಾತಿ ದೊರಕಿತು.[2]

ಈ ಶಾಲೆಗಳು 300–400 ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯ ಬಗ್ಗೆ ಅರೆ ತಿಳುವಳಿಕೆ ನೀಡಿ ಉನ್ನತ ಹುದ್ದೆಗೂ ಅವಕಾಶವಿಲ್ಲದೆ, ಜನಗಳಿಗೆ ಉಪಯೋಗವಾಗದಿರುವುದಕ್ಕೆ ಶಿಕ್ಷಕರ ಅಲ್ಪವೇತನ, ತರಬೇತಿಯಿಲ್ಲದಿರುವುದೇ ಕಾರಣವೆಂದು ಭಾವಿಸಿದ ರೆವರೆಂಡ್ ಗ್ಯಾರೆಟ್‌ರವರು 11ನೇ ಅಕ್ಟೋಬರ್ 1853ರಲ್ಲಿ ಬೆಂಗಳೂರು ದೇಶಿಯ ವಿದ್ಯಾಸಂಸ್ಥೆಯಲ್ಲಿ ನಾರ್ಮಲ್ ತರಬೇತಿ ತರಗತಿಯೊಂದನ್ನು ಪ್ರಾರಂಭಿಸುವಂತೆಯೂ ಬೆಂಗಳೂರು ಪೇಟೆ ಮತ್ತು ಬೆಂಗಳೂರು ದಂಡು ಇಲ್ಲಿ ತಲಾ ಒಂದೊಂದು ಇಂಗ್ಲೀಷ್ ಶಾಲೆಯನ್ನು ಪ್ರಾರಂಭಿಸಿದಲ್ಲಿ ಭಾಷಾ ಪ್ರಚಾರಕ್ಕೆ ಸಹಾಯಕವಾಗುವುದೆಂದೂ ಸಲಹೆ ಮಾಡಿದರು.[3] ವಿದ್ಯಾರ್ಥಿವೇತನ ಪಡೆಯುವ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಕೇಂದ್ರೀಯ ಸಂಸ್ಥೆಗೆ ಉನ್ನತ ತರಗತಿಗೆ ಭರ್ತಿ ಮಾಡುವಂತೆ ಸಲಹೆ ನೀಡಿದ್ದುದಲ್ಲದೆ 500 ರೂ.ಗಳನ್ನು ಈ ಕೆಳಗಿನಂತೆ ವಿನಿಯೋಗಿಸಲು ಸೂಚಿಸಿದರು:

ಬೆಂಗಳೂರು ದಂಡಿನ ನೂತನ ಶಾಲೆಗೆ	–	ರೂ. 200
ನಾರ್ಮಲ್ ತರಬೇತಿ ತರಗತಿಯ ಇಂಗ್ಲಿಷ್ ಶಿಕ್ಷಕರಿಗೆ	–	ರೂ. 180
ನಾರ್ಮಲ್ ತರಬೇತಿ ತರಗತಿಯ ದೇಶೀಯ ಶಿಕ್ಷಕರಿಗೆ ಪುಸ್ತಕ ಉಪಕರಣಗಳ ಖರೀದಿಗೆ	–	ರೂ. 120

1856ರಲ್ಲಿ ದೇಶೀಯ ವಿದ್ಯಾಸಂಸ್ಥೆಗೆ ನೀಡುತ್ತಿದ್ದ ಭತ್ಯೆ 800 ರೂ; ಶಾಲೆಯ 150 ರೂ. ಬೆಲೆಯ ಕಟ್ಟಡ ವೆಸ್ಲಿಯನ್ ಮಿಷನ್‌ಗೆ ಸೇರಿತ್ತು.[4] ಈ ಸಂಸ್ಥೆಯಲ್ಲಿದ್ದ ವೈಜ್ಞಾನಿಕೋಪಕರಣ ಸಾವಿರ ಪೌಂಡ್ ಬೆಲೆಯದಾಗಿತ್ತು. 1858–1859ರಲ್ಲಿ ಮಿಷನರಿಯಿಂದ ಬೇರ್ಪಟ್ಟ ಈ ಶಾಲೆಯು ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಸೇರಿದ ಸಂಪೂರ್ಣ ಸರ್ಕಾರಿ ಸಂಸ್ಥೆಯಾಯಿತು.

ಬೆಂಗಳೂರು ಪ್ರೌಢಶಾಲೆ: ಬೆಂಗಳೂರು ಪ್ರೌಢಶಾಲೆಯು 1875ರಲ್ಲಿ 'ಸೆಂಟ್ರಲ್ ಕಾಲೇಜು' ಎಂದು ಕರೆಯಲ್ಪಟ್ಟು ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಸೇರಿದ ಪ್ರಥಮದರ್ಜೆ ಕಾಲೇಜಾಯಿತು. ರೆವರೆಂಡ್ ಜೆ. ಗ್ಯಾರೆಟ್‌ರವರು ಈ ಕಾಲೇಜಿನ ಪ್ರಥಮ ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಸಿದರು. ಅಲ್ಲಿನ ವಿದ್ಯಾರ್ಥಿಯಾಗಿದ್ದ ದಿವಂಗತ

ಡಾ. ಆರ್. ನರಸಿಂಹಾಚಾರ್ಯರು ತಮ್ಮ ನೆನಪುಗಳನ್ನು ತಿಳಿಸುತ್ತಾ, 'ಪ್ರೌಢಶಾಲೆಯೆಂದು ಕರೆಯಲ್ಪಟ್ಟರೂ ಇಲ್ಲಿ ಬಿ.ಎ. ಪದವಿ ತರಗತಿಯವರೆಗೆ ಕಲಿಸಲಾಗುತ್ತಿತ್ತು. ನಾನು 1878ರಲ್ಲಿ ಸೆಂಟ್ರಲ್ ಕಾಲೇಜನ್ನು ಸೇರಿದಾಗ ಅಲ್ಲಿ ಬಿ. ಎ., ಎಫ್. ಎ. ತರಗತಿಗಳಲ್ಲದೆ ಚಿಕ್ಕ ಅಂದರೆ ಅಕ್ಷರಾಭ್ಯಾಸದ ತರಗತಿಯೂ ನಡೆಯುತ್ತಿತ್ತು. ಎಲ್ಲವೂ ಇಂದಿನ ಗ್ರಂಥಭಂಡಾರವಿರುವ ಮಧ್ಯದ ಬ್ಲಾಕಿನಲ್ಲಿ ನಡೆಯುತ್ತಿತ್ತು"[5] ಎಂದು ಸ್ಮರಿಸಿಕೊಂಡಿದ್ದಾರೆ. 1879ರಲ್ಲಿ ಪ್ರಾಂಶುಪಾಲರಾಗಿದ್ದ ಚಾರ್ಲ್ಸ್ ವಾಟರ್ಸ್‌ರವರು ಆರ್. ನರಸಿಂಹಾಚಾರ್ಯರು ಎಫ್. ಎ. ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದಾಗ ಸಂತೋಷ ತಡೆಯಲಾರದೆ ತರಗತಿಯಲ್ಲಿ ತಮ್ಮ ಟೊಪ್ಪಿಗೆಯನ್ನು ಎಸೆದು ಕುಣಿದಾಡಿದರಂತೆ, ಅಂದಿನ ಕಾಲದಲ್ಲಿ ಐರೋಪ್ಯ ಪ್ರಾಧ್ಯಾಪಕರೊಬ್ಬರು ತಮ್ಮ ವಿದ್ಯಾರ್ಥಿಯೊಬ್ಬನ ವಿದ್ಯಾಪ್ರಗತಿಯ ಬಗ್ಗೆ ವಹಿಸುತ್ತಿದ್ದ ಆಸ್ಥೆ, ಕಾಳಜಿಯನ್ನು ಇಲ್ಲಿ ನಾವು ಗಮನಿಸಬಹುದು.

ಈ ಸಂಸ್ಥೆಯ ವಿದ್ಯಾರ್ಥಿಗಳು 1863ರಲ್ಲಿ ಪ್ರಥಮವಾಗಿ ಮೆಟ್ರಿಕ್ಯುಲೇಷನ್ ಮತ್ತು 1866ರಲ್ಲಿ ಬಿ. ಎ. ಪರೀಕ್ಷೆಗೆ ಹಾಜರಾಗಿದ್ದು, ಮೂವರು ಐರೋಪ್ಯ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. 1861ರಲ್ಲಿ ಒಂದು ನಾರ್ಮಲ್ ಶಾಲೆ ಮತ್ತು 1862ರಲ್ಲಿ ಒಂದು ಇಂಜಿನಿಯರಿಂಗ್ ಶಾಲೆ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟವು.

ಇವೆಲ್ಲವೂ ಇಂಗ್ಲಿಷ್ ಶಿಕ್ಷಣದ ಬಗ್ಗೆ ಜನಗಳಿಗಿದ್ದ ಉತ್ಸಾಹ ಮತ್ತು ಪ್ರತಿಕ್ರಿಯೆಯನ್ನು ಸ್ಪಷ್ಟಪಡಿಸಿದರೂ ಇದು ಕೇವಲ ಸಮಾಜದ ಒಂದು ವರ್ಗದ ಜನಗಳಿಗೆ ಮತ್ತು ಹೆಚ್ಚಾಗಿ ಪಟ್ಟಣವಾಸಿಗಳಿಗೆ ಸೀಮಿತವಾಗಿತ್ತು. ಬಹಳ ಜನ ಮತಾಂತರದ ಭಯದಿಂದ ತಮ್ಮ ಮಕ್ಕಳನ್ನು ಇಂಗ್ಲೀಷ್ ಶಾಲೆಗಳಿಗೆ ಕಳುಹಿಸಲು ಇಚ್ಛಿಸುತ್ತಿರಲಿಲ್ಲ. ಇಂಗ್ಲಿಷ್ ವಿದ್ಯಾಭ್ಯಾಸ ಪಟ್ಟಣದಲ್ಲಾದರೂ ಹೆಚ್ಚಾಗಿ ಉಚ್ಚ ಜಾತಿಯ ಹೆಣ್ಣುಮಕ್ಕಳಿಗೆ ಲಭ್ಯವಿರುತ್ತಿತ್ತು.

ಉಲ್ಲೇಖಗಳು

1. ಶ್ರೀನಿವಾಸ ಹಾವನೂರ: ಹೊಸಗನ್ನಡದ ಅರುಣೋದಯ, ಪು.79
2. Education File 1 of 1854, sl.1-2
3. Education File 1 of 1854, sl.1-2
4. Education File 1 of 1856, sl.1-2

55. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ

ಡಾ. ಹರಿಹರ ಶ್ರೀನಿವಾಸರಾವ್

ಮನುಷ್ಯನಿಗೆ ಮೂಲಭೂತವಾಗಿರುವ ಕುಡಿಯುವ ನೀರನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ಹಾಗೆಯೇ ಉಪಯೋಗಿಸಿದ ನೀರನ್ನು ಸಮರ್ಪಕವಾಗಿ ಒಳಚರಂಡಿ ವ್ಯವಸ್ಥೆಯ ಮೂಲಕ ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡದಿದ್ದಲ್ಲಿ ಸೊಳ್ಳೆಗಳ ಕಾಟದಿಂದ ಸಾಂಕ್ರಾಮಿಕ ರೋಗ, ಇತ್ಯಾದಿಗಳು ಉಂಟಾಗುತ್ತವೆ ಎನ್ನುವುದು ಸಾಮಾನ್ಯವಾಗಿ ತಿಳಿದ ವಿಷಯವೇ ಆಗಿದೆ. ಈ ಕಾರ್ಯಗಳಿಗೆಂದೇ ಇರುವ ನಗರ ಸಭೆಗಳು, ವಿಶೇಷವಾಗಿ ಬೆಂಗಳೂರಿನಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬೆಂ.ನೀ.ಸ.ಒ.ಚ.ಮಂ), 1964 ಡಿಸೆಂಬರ್ 2 ರಂದು ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿತು. ಇದಕ್ಕೂ ಮುನ್ನ 1922ರಲ್ಲೇ ನಗರಕ್ಕೆ ಒಳ ಚರಂಡಿ ವ್ಯವಸ್ಥೆ ಇದ್ದಿತು.

ಇತಿಹಾಸ

ಶ್ರೀರಂಗಪಟ್ಟಣದ ಯುದ್ಧವಾಗಿ ಟಿಪ್ಪು ಸತ್ತನಂತರ ಅಲ್ಲಿದ್ದ ಬ್ರಿಟಿಷರ ಸೈನ್ಯದ ಬೀಡನ್ನು ಸಾಂಕ್ರಾಮಿಕ ರೋಗಗಳಿಂದ ತಪ್ಪಿಸಲು ಬೆಂಗಳೂರಿಗೆ ಸ್ಥಳಾಂತರಿಸಬೇಕೆಂಬ ಪ್ರಸ್ತಾಪ ಬಂದಾಗ ಆಗಿನ ಗವರ್ನರ್ ಜನರಲ್ ಮಾಕ್ವಿಸ್ ವೆಲ್ಲೆಸ್ಲಿ ಅದನ್ನ ವಿರೋಧಿಸಿದನಂತೆ. ಏಕೆಂದರೆ ಆಗ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿತ್ತು. ಕ್ರಿ. ಶ. 1805ರಲ್ಲಿ ವೆಲ್ಲೆಸ್ಲಿ ಸ್ವದೇಶಕ್ಕೆ ಹೋದ ನಂತರ ಈ ಸೈನ್ಯವು ಬೆಂಗಳೂರಿನ ದಂಡು ಪ್ರದೇಶ (ಕಂಟೋನ್ಮೆಂಟ್)ವಾಗಿ ಬೆಳೆಯಿತು. ಆಗ 125ಎಕರೆ ಪ್ರದೇಶಷ್ಟು ವಿಸ್ತಾರವಾಗಿದ್ದ ಹಲಸೂರು ಕೆರೆ ನೀರಾವರಿಗೆ ಉಪಯೋಗವಾಗುತ್ತಿದ್ದಿತು. ಕಮಿಷನರ್ ಬೌರಿಂಗ್ ಈ ಕೆರೆಯನ್ನು ದಂಡಿನ ಪ್ರದೇಶದವರಿಗೆ ಕುಡಿಯುವ ನೀರು ಒದಗಿಸಲು ನೀರಿನ ಕೊಳವನ್ನಾಗಿ ಪರಿವರ್ತಿಸಿದ.

ಬೆಂಗಳೂರಿನ ಹವಾಮಾನ, ಕೈಗಾರಿಕೀಕರಣ, ವ್ಯಾಪಾರಗಳಿಂದಾಗಿ ಇಲ್ಲಿಗೆ ಬಂದು ನೆಲೆಸುವವರ ಸಂಖ್ಯೆ ಹೆಚ್ಚಾದಂತೆಲ್ಲಾ ಇಲ್ಲಿನ ಕೆರೆ ಕಟ್ಟೆಗಳು, ಕಲ್ಯಾಣಿ, ಕೊಳಗಳು, ಸೇದುವ ಬಾವಿಗಳು ನೀರಿನ ಪೂರೈಕೆಗೆ ಸಾಲದಾದವು. 1876–77ರಲ್ಲಿ ಬಂದ ಬರವೂ ಇನ್ನೊಂದು ಪ್ರಮುಖ ಕಾರಣವಾಯಿತು. ಕುಡಿಯುವ ನೀರಿಗಾಗಿಯೇ 1885ರಲ್ಲಿ ಸ್ಯಾಂಕಿ ಕೆರೆ ನಿರ್ಮಾಣವಾಯಿತು. ಆಗ ಈ ಕಾರ್ಯಕ್ಕೆ ವೆಚ್ಚವಾದ ಹಣ 5.75ಲಕ್ಷ ರೂಪಾಯಿಗಳು. ಈ ಕೆರೆಯಿಂದ ಧರ್ಮಾಂಬುಧಿ ಕೆರೆಗೆ ನೀರು ಹರಿಯುವಂತೆ ಕಾಲುವೆಯ ವ್ಯವಸ್ಥೆಯೂ ಇದ್ದಿತು. ನಗರವು ಬೆಳೆದಂತೆಲ್ಲಾ ನೀರಿನ ಬೇಡಿಕೆ ಹೆಚ್ಚಾದಾಗ ದಿವಾನ್ ಶೇಷಾದ್ರಿ ಅಯ್ಯರ್ ಅವರು 1896ರಲ್ಲಿ ಹೆಸರುಘಟ್ಟ ಜಲಾಶಯದಿಂದ ನೀರು ತರುವ ವ್ಯವಸ್ಥೆ ಮಾಡಿದರು. ಅವರ ಕಾಲದಲ್ಲಿ 'ನಲ್ಲಿ ನೀರಿನ' ಸಂಪರ್ಕ ಕಲ್ಪಿಸಲಾಯಿತು. ಇದು ಎಷ್ಟು ಜನಪ್ರಿಯವಾಯಿತೆಂದರೆ ಇದನ್ನು 'ಶೇಷಾದ್ರಿ ಕಾಫಿ' ಎಂದೇ ಕರೆಯುತ್ತಿದ್ದರು. ಆಗ ಬೆಂಗಳೂರಿನ ಜನಸಂಖ್ಯೆ 1,80,000 ಇದ್ದಿತು. ಬೆಳೆಯುತ್ತಿರುವ ನಗರಕ್ಕೆ ಇದೂ ಸಾಲದಾಯಿತು. ಆಗ ಸರ್. ಎಂ. ವಿಶ್ವೇಶ್ವರಯ್ಯನವರ ಸಲಹೆಯಂತೆ ಅರ್ಕಾವತಿ, ಕುಮುದ್ವತಿ ನದಿ ಸಂಗಮ ಭಾಗದ ತಿಪ್ಪಗೊಂಡನಹಳ್ಳಿ ಬಳಿ 1933ರಲ್ಲಿ ಜಲಾಶಯ ನಿರ್ಮಾಣವಾಯಿತು. ಪ್ರಾರಂಭದಲ್ಲಿ 16 ದಶಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತಿದ್ದುದನ್ನು 30 ದಶಲಕ್ಷ ಗ್ಯಾಲನ್ನಿಗೆ ಏರಿಸಲಾಯಿತು.

ನಗರದಲ್ಲಿ ಬೃಹತ್ ಕೈಗಾರಿಕೆಗಳು ತಲೆಯೆತ್ತಿದಂತೆಲ್ಲಾ ನೀರಿನ ಅಭಾವವೂ ಹೆಚ್ಚಾಗಿ ಜಲತಜ್ಞರ ಅಭಿಪ್ರಾಯ ಮತ್ತು ಒತ್ತಾಯದ ಮೇರೆಗೆ 1964ರಲ್ಲಿ ಕೈಗೆತ್ತಿಕೊಂಡ ಕಾವೇರಿ ಮೊದಲ ಹಂತ 1974ರಲ್ಲಿ ಅನುಷ್ಠಾನಕ್ಕೆ ಬಂದಾಗ 35ಕೋಟಿ ರೂಪಾಯಿ ಖರ್ಚಾಗಿತ್ತು. ವಿಶ್ವ ಬ್ಯಾಂಕಿನ ನೆರವನ್ನು ಈ ಯೋಜನೆಗೆ ತೆಗೆದುಕೊಳ್ಳಲಾಗಿತ್ತು. ಶಿವನಸಮುದ್ರದ ಬಳಿ ಕಾವೇರಿ ನೀರನ್ನು ಮೇಲಕ್ಕೆತ್ತಿ 69 ಅಂಗುಲ ವ್ಯಾಸದ ಕೊಳವೆ ಮೂಲಕ 75 ಕಿ.ಮೀ ದೂರದ ಬೆಂಗಳೂರಿಗೆ ಹರಿಸಲಾಯಿತು. ಈ ಯೋಜನೆಯ ಸರಿಯಾದ ನೀರ ಹರಿವಿನ ವ್ಯವಸ್ಥೆಗೆಂದು ಬ್ಯೂಗಲ್ ರಾಕ್ (5 ದಶಲಕ್ಷ ಗ್ಯಾಲನ್), ಭೈರಸಂದ್ರ (3 ದಶಲಕ್ಷ ಗ್ಯಾಲನ್), ಸಿವಿಲ್ (3 ದಶಲಕ್ಷ ಗ್ಯಾಲನ್), ಎಂ. ಎನ್. ಕೃಷ್ಣರಾವ್ ಪಾರ್ಕ್ (2 ದಶಲಕ್ಷ ಗ್ಯಾಲನ್), ಕೆಂಪೇಗೌಡ ನಗರ (2 ದಶಲಕ್ಷ ಗ್ಯಾಲನ್), ಧಾರಣ ಶಕ್ತಿಯ ಟ್ಯಾಂಕ್‌ಗಳನ್ನು ನಿರ್ಮಿಸಲಾಯಿತು. ಹೀಗೆ ಕಾವೇರಿ ಮೊದಲ ಹಂತದಿಂದ 30 ದಶಲಕ್ಷ ಗ್ಯಾಲನ್ ನೀರು ಒದಗಿಸಲಾಗುತ್ತಿತ್ತು. ಆದರೆ ಬೇಸಗೆಯಲ್ಲಿ ಲಭ್ಯವಾಗುತ್ತಿದ್ದ ನೀರು 15 ದಶಲಕ್ಷ ಗ್ಯಾಲನ್‌ಗಳು ಮಾತ್ರ. ಈ ಕೊರತೆಯನ್ನು ನೀಗಿಸಲು ಕಾವೇರಿ ಎರಡನೇ ಹಂತದ ನೀರಿನ ಯೋಜನೆ ಪ್ರಾರಂಭ ಮಾಡಲಾಯಿತು. ಈ ವೇಳೆಗೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ದೊರಕುತ್ತಿದ್ದ ನೀರಿನ ಪ್ರಮಾಣವೂ ಕಡಿಮೆಯಾಗಿತ್ತು. ಕಾವೇರಿ ಮೊದಲ ಹಂತ ಅನುಷ್ಠಾನಕ್ಕೆ ಬಂದಾಗ ಬೆಂಗಳೂರಿನ ಜನ ಸಂಖ್ಯೆ 29ಲಕ್ಷ ದಾಟಿತ್ತು. ಹೀಗಾಗಿ 1982ರಲ್ಲಿ, 55ಕೋಟಿ ರೂಪಾಯಿಗಳ ಅಂದಾಜು ವೆಚ್ಚದ 2ನೇಹಂತದ ಯೋಜನೆ ಅನುಷ್ಠಾನಕ್ಕೆ ಬಂದಿತು. ಇದರಿಂದ 30 ದಶಲಕ್ಷ ಗ್ಯಾಲನ್ ನೀರು ದಿನ ಒಂದಕ್ಕೆ ಲಭ್ಯವಾಯಿತು. 1985ರಲ್ಲಿ ಕಾವೇರಿ 3ನೇ ಹಂತದ ಯೋಜನೆ ಅನುಷ್ಠಾನಕ್ಕೆ ಬಂದಾಗ ದಿನವಹಿ 270 ದಶಲಕ್ಷ ಲೀಟರ್ ಪೂರೈಕೆಯಾಯಿತು. ಇದರೊಂದಿಗೆ ಕಾವೇರಿ 4ನೇ ಹಂತದ ಯೋಜನೆ 1998ರಲ್ಲಿ ಪ್ರಾರಂಭವಾಗಿ 2002ರ ಜುಲೈನಲ್ಲಿ ಅನುಷ್ಠಾನಗೊಂಡಿತು. ಇದರಿಂದ ದಿನ ಒಂದಕ್ಕೆ 270 ದಶಲಕ್ಷ ಲೀಟರ್ ನೀರು ಸಾಗಣೆಯಾಗುತ್ತಿದೆ. ಜಪಾನಿನ ಅಂತರ ರಾಷ್ಟ್ರೀಯ ಸಹಕಾರ ಬ್ಯಾಂಕಿನ ಆರ್ಥಿಕ ಸಹಾಯದ ಅಡಿಯಲ್ಲಿ ಈ ಯೋಜನೆ ಕೈಗೊಳ್ಳಲಾಯಿತು. ನೀರಿನ ಸಂಸ್ಕರಣೆಗಾಗಿಯೇ 11,000 ಕೋಟಿ ರೂಪಾಯಿ ಯೋಜನೆಯನ್ನು ರೂಪಿಸಿ ಹೊಸತಾಗಿ ಹೆಗ್ಗನ ಹಳ್ಳಿ, ಕೊತ್ತನೂರು ದಿಣ್ಣೆ, ಜಿ.ಕೆ.ವಿ.ಕೆ ಕ್ಯಾಂಪಸ್, ಹೂಡಿ, ಸಿಂಗಾಪುರ, ಕೋಡಿ ಚಿಕ್ಕನಹಳ್ಳಿ ಮತ್ತು ವೀರಸಂದ್ರಗಳಲ್ಲಿ 12 ರಿಂದ 48 ದಶಲಕ್ಷ ಲೀಟರ್ ನೀರು ಸಂಗ್ರಹಣಾ ಸಾಮರ್ಥ್ಯದ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಇಷ್ಟೆಲ್ಲಾ ಇದ್ದರೂ ಹೊಸದಾಗಿ ಸೇರ್ಪಡೆಗೊಂಡಿರುವ ನಗರದ 27 ವಾರ್ಡ್‌ಗಳಿಗೆ ಕಾವೇರಿ ನೀರಿನ ಸೌಲಭ್ಯವಿಲ್ಲದಾಗಿದೆ. ಈಗ ಪ್ರತಿದಿನ 900 ದಶಲಕ್ಷ ಲೀಟರ್ ನೀರು ಸರಬರಾಜಾಗುತ್ತಿದ್ದು ಅದು ಮುಂದಿನ ವರ್ಷಗಳಲ್ಲಿ 1500 ಲೀಟರ್‌ಗೆ ಏರಲಿದೆ ಎಂದು ಅಂದಾಜು ಮಾಡಲಾಗಿದೆ.

ಈಗ ನೀರಿನ ಸರಬರಾಜು ವ್ಯವಸ್ಥೆಯೂ ಸುಧಾರಣೆಗೊಳ್ಳುತ್ತಿದೆ. ಮಳವಳ್ಳಿ-ಕೊಳ್ಳೇಗಾಲ ರಸ್ತೆಯ ನಂತರ ಬೆಂಗಳೂರಿನಿಂದ 105 ಕಿ.ಮೀ ದೂರವಿರುವ 'ಶಿವ ಅಣೆಕಟ್ಟೆಗೆ' ಕಾವೇರಿ ನದಿ ನೀರನ್ನು ಎತ್ತಿ ಅಲ್ಲಿಂದ ನೆಟ್ಟಕಲ್ಲು ಜಲಾಶಯಕ್ಕೆ ಹರಿಸುತ್ತಾರೆ. ಇಲ್ಲಿಂದ ತೊರೆಕಾಡನಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿ ಮೂಲಕ ನಗರದ ಬೇರೆ ಬೇರೆ ಟ್ಯಾಂಕ್‌ಗಳಿಗೆ ಬಿಡಲಾಗುತ್ತದೆ. ಹಳೆಯ ಪೈಪ್‌ಗಳ ದುರಸ್ತಿಗೆಂದು 400 ಕೋಟಿ ರೂಪಾಯಿ ಯೋಜನೆ ರೂಪಿಸಿ ಜಪಾನ್ ಬ್ಯಾಂಕಿನ ನೆರವನ್ನು ಕೋರಲಾಗಿದೆ.

ಕೊಳವೆ ಬಾವಿ

ಕುಡಿಯುವ ನೀರನ್ನು ಹೊರತುಪಡಿಸಿ 10 ರಿಂದ 20 ದಶಲಕ್ಷ ಲೀಟರ್ ನೀರನ್ನು ಕೈಗಾರಿಕೆ, ಕಟ್ಟಡ ನಿರ್ಮಾಣ, ಉದ್ಯಾನವನ ಇತ್ಯಾದಿಗಳಿಗೆ ಒದಗಿಸಬೇಕಾಗಿದೆ. ಆದ್ದರಿಂದ ನೇರವಾಗಿ ನೆಲದಡಿಯ ಅಂತರ್ಜಲವನ್ನೇ

ಹೊರ ತೆಗೆಯಲಾಗುತ್ತಿದೆ. ಜೊತೆಗೆ ಬಹುಮಹಡಿ ಕಟ್ಟಡಗಳಿಗಾಗಿ, ಮಿತಿಮೀರಿದ ನೀರೆಳತದಿಂದಾಗಿ ಅಂತರ್ಜಲ ಮಟ್ಟವು ದಿನೇ ದಿನೇ ಕುಸಿಯತೊಡಗಿದೆ. ಇದರ ಜೊತೆಗೆ ಸ್ಪರ್ಧಿಸಲಾರದೇ ತೆರೆದ ಬಾವಿಗಳು ಒಣಗಿವೆ. ಕೊಳವೆ ಬಾವಿಗಳಿಂದ ಗಂಟೆಗೆ 200 ಗ್ಯಾಲನ್ ನೀರನ್ನು ಪಡೆಯಲಾಗುತ್ತಿದೆ. 5903 ಕೊಳವೆ ಬಾವಿಗಳಲ್ಲಿ 2097 ಬಾವಿಗಳಿಗೆ ಸಬ್ ಮರ್ಸಿಬಲ್ ಪಂಪ್‌ಗಳನ್ನು ಅಳವಡಿಸಲಾಗಿದೆ. ಉಳಿದ 3806 ಬಾವಿಗಳಿಗೆ ಕೈ ಪಂಪ್‌ಗಳನ್ನು ಅಳವಡಿಸಲಾಗಿದೆ. ಕಟ್ಟಡ ಕಟ್ಟಲು 500 ಲೀ. ಸಾಮರ್ಥ್ಯದ ಟ್ಯಾಂಕರ್‌ನಿಂದ ಪ್ರತಿ ಲೋಡಿಗೆ 150 ರಿಂದ 350 ರೂಪಾಯಿಗಳ ದರದಲ್ಲಿ ನೀರು ಸರಬರಾಜು ಮಾಡುವ ಖಾಸಗಿ ಕಂಪನಿಗಳು ಸಾಕಷ್ಟಿವೆ. ನೀರಿನ ಗುಣಮಟ್ಟವೂ ಕಡಿಮೆಯಾಗಿರುವುದು ಕಂಡುಬಂದಿದೆ. ಪಶ್ಚಿಮ ಬೆಂಗಳೂರು ವಿಭಾಗದಲ್ಲಿಯ ಕೊಳವೆ ಬಾವಿಗಳಲ್ಲಿಯ ನೀರಿನಲ್ಲಿ ನೈಟ್ರೇಟ್ ಅಂಶ ಹೆಚ್ಚಾಗಿರುವ ಅಂಶವು ಬೆಳಕಿಗೆ ಬಂದಿದೆ. ಜೊತೆಗೆ ಚರಂಡಿ ನೀರಿನ ಕಲುಷಿತ ಅಂಶಗಳು, ಕಾರ್ಖಾನೆಗಳಿಂದ ವಿಸರ್ಜನೆಯಾಗುವ ತ್ಯಾಜ್ಯ ಪದಾರ್ಥಗಳು ನೀರನ್ನು ಇನ್ನಷ್ಟು ಕಲುಷಿತಗೊಳಿಸುತ್ತಿವೆ.

ಅಂತರ್ಜಲ

ಮಿತಿ ಮೀರಿದ ಅಂತರ್ಜಲದ ಉಪಯೋಗದಿಂದಾಗಿ ಕೇವಲ ಎರಡು ದಶಕಗಳ ಹಿಂದೆ 30 ಮೀ (90 ಅಡಿ)ಗೆ ದೊರೆಯುತ್ತಿದ್ದ ನೀರು ಈಗ 90ರಿಂದ 300ಮೀ (300 ಅಡಿಯಿಂದ 1000 ಅಡಿ) ಆಳಕ್ಕೆ ಇಳಿದು ಹೋಗಿದೆ. ಬರಿದಾದ ಅಂತರ್ಜಲ ಮರುಪೂರಣವಾಗುವುದು ಮಳೆ ನೀರು ಇಂಗಿದಾಗ ಮಾತ್ರ, ಆದರೆ ಕಾಂಕ್ರೀಟ್ ಕಾಡಾಗಿ ಬೆಂಗಳೂರು ಪರಿವರ್ತನೆ ಹೊಂದುತ್ತಿರುವಾಗ, ಜಲೆ ಮರುಪೂರಣಕ್ಕಾಗಿ ವಿಶೇಷ ವ್ಯವಸ್ಥೆ ಮಾಡದಿದ್ದರೆ ಅಂತರ್ಜಲ ಪರಿಸ್ಥಿತಿ ಇನ್ನೂ ಕಷ್ಟಕರವಾಗುತ್ತದೆ. ಬೆಂಗಳೂರಿನ ಸುತ್ತಲಿದ್ದ ಗದ್ದೆಗಳೆಲ್ಲ ಈಗ ನಗರದ ಭಾಗವೇ ಆಗಿರುವುದು ಇದಕ್ಕೆ ಮುಖ್ಯ ಕಾರಣ. ಇಲ್ಲಿ ಇದ್ದ ಅನೇಕ ಕೆರೆಗಳ ಸಂಖ್ಯೆ ದಿನ ದಿನಕ್ಕೂ ಇಳಿಮುಖವಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಒಳ ಚರಂಡಿ ವ್ಯವಸ್ಥೆ

ಈ ಹಿಂದೆ ಹೇಳಿದಂತೆ ಬೆಂಗಳೂರು ಚಿಕ್ಕದಾಗಿದ್ದಾಗ ಒಳಚರಂಡಿ ವ್ಯವಸ್ಥೆಯನ್ನು 1922ರಲ್ಲೇ ಮಾಡಲಾಗಿತ್ತು. ಅದು ಈಗಿನ ಹೃದಯ ಭಾಗಕ್ಕೆ ಮಾತ್ರ ಸೀಮಿತವಾಗಿತ್ತು. 1960ರ ದಶಕದಲ್ಲಿ ಬೆಂಗಳೂರಿನ ಜಲ ಹಾಗೂ ಒಳ ಚರಂಡಿ ವ್ಯವಸ್ಥೆ ಮಂಡಳಿ ಪ್ರಾರಂಭವಾದ ನಂತರ ಈ ಕಾರ್ಯ ಇನ್ನಷ್ಟು ವಿಸ್ತಾರವಾಯಿತು. ಈಗ ಸುಮಾರು 12 ಇಂಚಿನ (11.8') ಸ್ಟೋನ್ ವೇರ್ ಪೈಪ್‌ಗಳನ್ನು ಉಪಯೋಗಿಸಲಾಗುತ್ತಿದೆ. ಇವುಗಳನ್ನು ಸಿಮೆಂಟಿನ 82.7 ಇಂಚಿನ ಕೊಳವೆಗಳೊಂದಿಗೆ ಜೋಡಿಸಲಾಗುತ್ತಿದೆ. ಈಗ ವೃಷಭಾವತಿ, ಕೋರಮಂಗಲ, ಚೆಲ್ಲಘಟ್ಟ, ಹೆಬ್ಬಾಳ, ಮಡಿವಾಳ ಮತ್ತು ಕೆಂಪಾಂಬುಧಿ ಕೆರೆಗಳ ಹತ್ತಿರ 5 ಶುದ್ಧೀಕರಣ ಘಟಕಗಳು ಕಾರ್ಯಾಚರಣೆಯಲ್ಲಿವೆ. 2003ನೇ ಇಸವಿಯಲ್ಲಿ ಪ್ರಾರಂಭವಾದ ಮೈಸೂರು ರಸ್ತೆಯಲ್ಲಿರುವ ವೃಷಭಾವತಿ ಶುದ್ಧೀಕರಣ ಘಟಕದಿಂದ 60 ಮಿಲಿಯನ್ ಲೀಟರ್‌ಗಳಷ್ಟು ತೃತೀಯ ಹಂತದ ಶುದ್ಧೀಕರಣ ನೀರನ್ನು ಒದಗಿಸಲಾಗುತ್ತಿದೆ. ಹುಡ್ಕೋ ಮತ್ತು ಫ್ರೆಂಚ್ ದೇಶದ ಆರ್ಥಿಕ ಸಹಕಾರದೊಂದಿಗೆ ನಿರ್ಮಿಸಲಾಗಿರುವ ಈ ಘಟಕ ಏಷ್ಯಾದಲ್ಲೇ ಅತಿ ದೊಡ್ಡದು ಎನ್ನಲಾಗಿದೆ. ಇದಕ್ಕೆ ಆದ ಖರ್ಚು 100 ಕೋಟಿ ರೂಪಾಯಿಗಳು. ವೃಷಭಾವತಿ ನದಿಗೆ ಸಾಗುವ ನೀರನ್ನು ಮೈಲಸಂದ್ರದ ಹತ್ತಿರ ಶುದ್ಧೀಕರಿಸಲಾಗುತ್ತದೆ. ವಿದ್ಯುತ್ ನಿಗಮ 35 ಎಂ. ಎಲ್. ಡಿ. ನೀರನ್ನು ಕೇಳಿದೆ. ಅಲ್ಲದೆ 1. ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ ಪ್ರೈಸಸ್ 2. ಪುಲಿಕೇಶಿ ಪವರ್ ಕಾರ್ಪೋರೇಷನ್

3. ಸುಭಾಷ್ ಪ್ರಾಜೆಕ್ಟ್ ಹೀಗೆ ಒಟ್ಟು 7 ಘಟಕಗಳನ್ನು ಯೋಜಿಸಲಾಗಿದೆ. ಯಲಹಂಕದ ಶುದ್ಧೀಕರಣ ಘಟಕವು 2003ರಲ್ಲಿ ಕಾರ್ಯಾರಂಭ ಮಾಡಿದ್ದು ಪ್ರತಿದಿನ 10 ದಶಲಕ್ಷ ಲೀ. ಮೂರನೇ ದರ್ಜೆ ಶುದ್ಧೀಕರಿಸಿದ ನೀರನ್ನು ಒದಗಿಸುತ್ತಿದೆ.

ಬೆಳ್ಳಂದೂರು-ಕೋರಮಂಗಲ-ಚೆಲ್ಲಘಟ್ಟ ತ್ಯಾಜ್ಯ ಶುದ್ಧೀಕರಣ ಘಟಕಗಳು

ಹೆಚ್ಚಾದ ಮಳೆ ನೀರು ಹರಿದು ಹೋಗುವಂತೆ ಮಾಡಲಾಗುವ ಹಾಗೂ ಒಳಚರಂಡಿಗಳೂ ಸೇರಿದಂತೆ ಒಟ್ಟು 20 ಕಾಲುವೆಗಳನ್ನು ಬೆಳ್ಳಂದೂರು ಕೆರೆಗೆ ಜೋಡಿಸಲಾಗಿದೆ. ಇವುಗಳಲ್ಲಿ ಒಂದು ಕಾಲುವೆಯ ನೀರು ಮಾತ್ರವೇ ಕೋರಮಂಗಲ ಚೆಲ್ಲಘಟ್ಟ (ಕೆ. ಸಿ.)ದ ಘಟಕದಿಂದ ಶುದ್ಧಿಯಾಗುತ್ತಿದೆ. ಇದಲ್ಲದೆ ಬೇಲೂರು, ನಾಗಸಂದ್ರಗಳಲ್ಲಿಯೂ 2 ಘಟಕಗಳಿವೆ. ಅವುಗಳ ಸಾಮರ್ಥ್ಯ 216 ಹಾಗೂ 30 ದಶಲಕ್ಷ ಲೀ.ಗಳು. ಈ ಶುದ್ಧೀಕರಣ ಘಟಕಗಳಿಗೆ ಕರ್ನಾಟಕ ಸರ್ಕಾರವು ಒಂದು ತಿಂಗಳಿಗೆ 5 ಕೋಟಿ ರುಪಾಯಿಗಳನ್ನು ವೆಚ್ಚ ಮಾಡುತ್ತಿದೆ. ಈ ಒಳಚರಂಡಿಯ ಉದ್ದ 2.75 ಕಿ.ಮೀ. ಈ ಘಟಕದ ಜಲಶುದ್ಧೀಕರಣ ವ್ಯವಸ್ಥೆಯ ಸ್ಥೂಲ ಹಾಗೂ ಸಂಕ್ಷಿಪ್ತ ವಿವರ ಹೀಗಿದೆ:

1. ಜೈವಿಕವಾಗಿ ಕೊಳೆಯುವ ವಸ್ತುಗಳಲ್ಲದೆ ಪ್ಲಾಸ್ಟಿಕ್ ಇತ್ಯಾದಿಗಳನ್ನು ಜರಡಿಗಳ ಮೂಲಕ ಬೇರ್ಪಡಿಸುವುದು. ಈ ತ್ಯಾಜ್ಯವನ್ನು ಮರು ಬಳಕೆಗಾಗಿ ಮಾರಾಟ ಮಾಡುವುದು.
2. ಸಂಯುಕ್ತ (ಇನಾರ್‌ಗ್ಯಾನಿಕ್) ವಸ್ತುಗಳನ್ನು ಬೇರ್ಪಡಿಸುವುದು
3. ನೀರನ್ನು ವಾಯುಚಲನೆಗೆ (ಏರಿಯೇಷನ್) ಒಡ್ಡುವುದರಿಂದ ಅದರಲ್ಲಿಯ ಸಾರಜನಕ ಅಂಶವು ಇಲ್ಲದಂತಾಗುತ್ತದೆ. ಅಲ್ಲದೆ ಆಮ್ಲಜನಕವು ಹೆಚ್ಚಾಗಿ ಒದಗುವುದರಿಂದ ಅದು ಬ್ಯಾಕ್ಟೀರಿಯಾಗಳ ವೃದ್ಧಿಗೂ ಸಹಾಯಕವಾಗುತ್ತದೆ. ಈ ವಿಧಾನವನ್ನು ಜೈವಿಕ ಶುದ್ಧೀಕರಣ (ಬ್ಯಾಕ್ಟೀರಿಯಾಲಾಜಿಕಲ್ ಟ್ರೀಟ್‌ಮೆಂಟ್) ಎಂದು ಕರೆಯುತ್ತಾರೆ.
4. ಮುಂದೆ ನೀರಿನಲ್ಲಿರುವ ಘನ ಹಾಗೂ ದ್ರವರೂಪದ ಜೈವಿಕ ತ್ಯಾಜ್ಯಗಳನ್ನು ಬೇರೆ ಬೇರೆ ಮಾಡಿ ಕೊಳವೆಗಳ ಮೂಲಕ ಜಲತ್ಯಾಜ್ಯವನ್ನು ಬೆಳ್ಳಂದೂರು ಕೆರೆಗೆ ಹರಿಸುತ್ತಾರೆ.
5. ರಾಡಿಗೊಳಿಸಿದ ಜೈವಿಕ ಕಶ್ಮಲವನ್ನು ಇನ್ನೊಂದು ಕಡೆಗೆ ಹರಿಸಿ ಅದರಲ್ಲಿರುವ ಹೆಚ್ಚಿನ ನೀರಿನ ಅಂಶವನ್ನು ಬೇರ್ಪಡಿಸಲಾಗುತ್ತದೆ.
6. ಜೈವಿಕ ತ್ಯಾಜ್ಯವನ್ನು 200 ಬೆಡ್‌ಗಳ ಮೂಲಕ ಚೆನ್ನಾಗಿ ಒಣಗಿಸುತ್ತಾರೆ.
7. ಹೀಗೆ ಮರು ಶುದ್ಧೀಕರಿಸಿದ ನೀರನ್ನು ಲಾರಿಗಳ ಮೂಲಕ ಸಾಗಿಸಿ ಮಾರಾಟ ಮಾಡಲಾಗುತ್ತದೆ.

ಕಸದಿಂದ ವಿದ್ಯುತ್ ಉತ್ಪಾದನೆ

ಬೆಂಗಳೂರು ಮಹಾನಗರದಲ್ಲಿ ನಿತ್ಯ 2020 ಮೆಟ್ರಿಕ್ ಟನ್ ಘನ ತ್ಯಾಜ್ಯವಸ್ತು ಸೃಷಿಯಾಗುತ್ತಿದ್ದು ಈ ಕಸವನ್ನು ವಿದ್ಯುತ್ತಾಗಿ ಪರಿವರ್ತಿಸಲು ಮಹಾನಗರಪಾಲಿಕೆಯು ಯೋಜನೆಯೊಂದನ್ನು ಗೌಅತ್ರಿ ರಿಸೋರ್ಸ್ ರಿಕವರಿ (ಲಿ) ಎಂಬ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಪ್ರತಿನಿತ್ಯ 100 ಮೆಟ್ರಿಕ್ ಟನ್ ಕಸದಿಂದ 7.5 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಈ ಯೋಜನೆಗೆ 155 ಎಕರೆ ಪ್ರದೇಶವನ್ನು ಕೊಡಲಾಗಿದೆ. ಇದರಲ್ಲಿ

19 ಎಕರೆ ಪ್ರದೇಶದಲ್ಲಿ ಈ ಸ್ಥಾವರ ಕಾರ್ಯ ನಿರ್ವಹಿಸಲಿದೆ. ಯೋಜನೆಯ ವೆಚ್ಚ 50 ಕೋಟಿ (ಆಕರ: ನ್ಯೂ ಇಂಡಿಯನ್ ಎಕ್ಸಪ್ರೆಸ್ 15.06.2005).

ಕೊಳಚೆ ನೀರಿನ ಉಪಯೋಗ

ಬೆಂಗಳೂರಿನಲ್ಲಿ 14 ಕೊಳಚೆ ನೀರಿನ ಶುದ್ಧೀಕರಣ ಘಟಕಗಳು ಇನ್ನೂ ಉಪಯೋಗಿಸಲ್ಪಡಬೇಕಾಗಿವೆ. ತ್ಯಾಜ್ಯ ನೀರನ್ನು ಉಪಯೋಗಿಸಲು ಜನರು ಸಿದ್ಧರಿಲ್ಲದಿರುವುದೇ ಇದಕ್ಕೆ ಕಾರಣವೆಂದು ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ತಿಳಿಸುತ್ತದೆ. ಪ್ರತಿದಿನ ಒಂದು ಸಾವಿರ ಮಿಲಿಯನ್ ಲೀ. ಕೊಳಚೆ ನೀರು ಉತ್ಪತ್ತಿಯಾಗುತ್ತದೆ. ಅದರಲ್ಲಿ 30 ಎಂ.ಎಲ್.ಡಿ. ನೀರನ್ನು ಶುದ್ಧೀಕರಿಸಲಾಗುತ್ತಿದೆ. ಬಳಕೆಗೆ ಉಪಯೋಗವಾಗುತ್ತಿರುವುದು 9 ಎಂ.ಎಲ್.ಡಿಗಳು ಮಾತ್ರ, ಉಳಿದುದನ್ನು ಕೆರೆ ಇತ್ಯಾದಿಗಳಿಗೆ ಬಿಡಲಾಗುತ್ತಿದೆ.

ಒಂದು ಕಡೆ ತ್ಯಾಜ್ಯ ನೀರನ್ನು ಉಪಯೋಗಿಸದಿರುವ ಪರಿಸ್ಥಿತಿ ಇದ್ದರೆ, ಇನ್ನೊಂದು ಕಡೆ ಅದರ ಕೊರತೆ ಇರುವ ಸ್ಥಿತಿಯೂ ಇದೆ. ಉದಾಹರಣೆಗೆ, ಯಲಹಂಕದ ರೈಲ್ವೆ ವಲಯದಲ್ಲಿ 2.5 ಲಕ್ಷ ಲೀಟರ್ ತ್ಯಾಜ್ಯ ನೀರಿನ ಅವಶ್ಯಕತೆ ಇದೆ. ಆದರೆ ಅಲ್ಲಿ ದೊರಕುತ್ತಿರುವುದು 1.5 ಲಕ್ಷ ಲೀ. ಮಾತ್ರ. ಜಕ್ಕೂರಿನಿಂದ ದೊರೆಯುವ ನೀರನ್ನು ಯಲಹಂಕಕ್ಕೆ ಕೊಂಡೊಯ್ಯುವ ಯೋಜನೆಯೂ ಇದೆ. ಮತ್ತಿಕೆರೆಯ ಜೆ. ಪಿ. ಪಾರ್ಕ್‌ನ ಹತ್ತಿರದಿಂದ ದೊರೆಯುವ ತ್ಯಾಜ್ಯ ನೀರು 5 ರಿಂದ 6 ಎಂ. ಎಲ್. ಡಿ. ಅದರಲ್ಲಿ ಅರ್ಧದಷ್ಟನ್ನು (3 ಎಂ.ಎಲ್.ಡಿ) ಶುದ್ಧೀಕರಿಸಲಾಗುತ್ತಿದೆ. ಇದರಲ್ಲಿ ರೈಲ್ವೆ ಮತ್ತು ಸೈನಿಕ ಸಂಸ್ಥೆಗಳು ಹಾಗೂ ಪಾರ್ಕ್‌ಗಳಿಗಾಗಿ ತಲಾ ಒಂದೊಂದು ಎಂ. ಎಲ್. ಡಿ. ನೀರನ್ನು ಉಪಯೋಗಿಸಲಾಗುತ್ತಿದೆ. ಉಳಿದ ನೀರನ್ನು ಪೈಪ್ ಲೈನ್‌ಗಳ ಮೂಲಕ ಹೆಬ್ಬಾಳದ ಶುದ್ಧೀಕರಣ ಘಟಕಕ್ಕೆ ಕಳಿಸುವ ಯೋಜನೆ ಇದೆ. (ಆಕರ: ಡೈಲಿ ನ್ಯೂಸ್ ಅನಾಲಿಸಿಸ್ 14 ಮಾರ್ಚ್ 2011)

ಕೆರೆ ಉಳಿಸಿ ಆಂದೋಳನಗಳು

ಸರ್ಕಾರ ಏನೇ ಸುತ್ತೋಲೆಗಳನ್ನು ಹೊರಡಿಸಿದರೂ ಸಾರ್ವಜನಿಕ ಕಾಳಜಿ ಇಲ್ಲದೇ ಯಾವ ಯೋಜನೆಗಳೂ ಯಶಸ್ವಿಯಾಗಲಾರವು. ಹೆಬ್ಬಾಳ್ ಲೇಕ್‌ಪಾರ್ಕ್ ಅಸೋಸಿಯೇಷನ್‌ನಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳು, ಖ್ಯಾತ ಕೈಗಾರಿಕೋದ್ಯಮಿಗಳು, ಹೆಬ್ಬಾಳ ಕೆರೆಯ ಪುನರುಜ್ಜೀವನಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡುತ್ತಿವೆ. ಇದಕ್ಕೆ ಬೆಂಬಲವಾಗಿ ನಿಂತಿರುವ ಅರಣ್ಯ ಇಲಾಖೆ 25 ಕೈಗಾರಿಕೆಗಳ ನೆರವನ್ನು ಪಡೆಯಲು ಉದ್ದೇಶಿಸಿದೆ. ವಿದ್ಯಾರಣ್ಯಪುರದ ಬಳಿಯ ಬಿ.ಇ.ಎಲ್. ಕಾಲೋನಿ ಮತ್ತು ಅರಣ್ಯ ಇಲಾಖೆಗಳು ಜಂಟಿಯಾಗಿ ಪ್ರಯತ್ನಿಸಿ ನರಸೀಪುರ ಕೆರೆಯನ್ನು ಉಳಿಸಿಕೊಂಡು, ಇದೀಗ ಪುನರುಜ್ಜೀವನ ಕಾರ್ಯವನ್ನು ಸಮರ್ಥವಾಗಿ ಪೂರೈಸಿದ್ದಾರೆ. 22 ಎಕರೆ ವಿಸ್ತಾರವಾಗಿರುವ ಈ ಕೆರೆಯನ್ನು ಅಭಿವೃದ್ಧಿಪಡಿಸಿ ಜಲ ಶುದ್ಧೀಕರಣ ಘಟಕ ತೆರೆಯಲು ಸಾರ್ವಜನಿಕರಿಂದ 60 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ. ಕೆರೆಯ ಮಧ್ಯೆ ದ್ವೀಪ ನಿರ್ಮಿಸಿ ಗ್ರಂಥಾಲಯವನ್ನು ಸ್ಥಾಪಿಸಲಾಗುತ್ತಿದೆ.

ಬೆಂಗಳೂರಿನ ಹೊರವಲಯದಲ್ಲಿ 200 ಅಡಿ ರಸ್ತೆ ನಿರ್ಮಾಣ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬನ್ನೇರುಘಟ್ಟ ರಸ್ತೆಯಲ್ಲಿರುವ ಗೊಟ್ಟಿಗೆರೆ ಕೆರೆ ಸ್ವಾಧೀನಪಡಿಸಿಕೊಳ್ಳಲು ಹೊರಟಾಗ ಅನೇಕ ಮೂಲಗಳಿಂದ ತೀವ್ರ ಪ್ರತಿರೋಧ ವ್ಯಕ್ತವಾಯಿತು. 120 ಎಕರೆ ವಿಸ್ತೀರ್ಣಉಳ್ಳ ಈ ಕೆರೆ ಹುಳಿಮಾವು, ಮಡಿವಾಳ ಮತ್ತು ಬೆಳ್ಳಂದೂರು ಕೆರೆಗಳ ಸರಮಾಲೆಯ ಒಂದು ಕೊಂಡಿ. 2000 ಜನ ಗೊಟ್ಟಿಗೆರೆ ಗ್ರಾಮಸ್ಥರಿಗೆ ಇದು ನೀರಿನ ಮೂಲ. ಗ್ರಾಮದ 20 ಕೊಳವೆ ಬಾವಿಗಳು ಹಾಗೂ ತೆರೆದ ಬಾವಿಗಳಿಗೆ ನೀರಿನ ಮೂಲಸ್ಥಾನ.

ಈಗಾಗಲೇ ಕೆರೆಯ ಹತ್ತಿರ ಇಟ್ಟಿಗೆ ಭಟ್ಟಿ ಇತ್ಯಾದಿಗಳಿದ್ದು ಪೂರ್ತಿ ಕೆರೆಯನ್ನೇ ಕಸದ ತೊಟ್ಟಿಯಂತೆ ಬಳಸಲಾಗುತ್ತಿದೆ. ಇಂಡಿಯನ್ ಸೊಸೈಟಿ ಫಾರ್ ಎನ್‌ವೈರ್‌ನಮೆಂಟಲ್ ಸ್ಟಡೀಸ್, ವೈಲ್ಡ್ ಫ್ಯಾಷನ್, ವೈಲ್ಡ್ ಇಂಡಿಯಾ, ಎನ್. ಎಂ. ಕೆ. ಆರ್. ವಿ. ಕಾಲೇಜಿನ ವಿದ್ಯಾರ್ಥಿನಿಯರು ಸರ್ಕಾರದ ವಿರುದ್ಧ 1996ರಲ್ಲೇ ದೊಡ್ಡದಾಗಿ ಪ್ರತಿಭಟನೆ ನಡೆಸಿದ್ದರು. ಗೊಟ್ಟಿಗೆರೆ ಕೆರೆ ಉಳಿಸಲು ಹೈಕೋರ್ಟಿನಲ್ಲಿ ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದರ ಫಲವಾಗಿ 200 ಅಡಿ ರಸ್ತೆಯನ್ನು ಕೆರೆಗೆ ಅಡ್ಡಬರದಂತೆ ಅಂಚಿನಲ್ಲಿ ನಿರ್ಮಾಣ ಮಾಡಲು ನ್ಯಾಯಾಲಯ ಸೂಚಿಸಿತು (ಆಕರ: ಬೆಂಗಳೂರು ದರ್ಶನ 2005)

ನೀರಿನ ವ್ಯಾಪಾರೀಕರಣ

ನೀರಿನ ನಿಯಂತ್ರಣ ಯಾವಾಗಲೂ ಶಕ್ತಿಯ ಮೂಲ ಮತ್ತು ತಾರತಮ್ಯತೆಯ ಸಂಕೇತ. ಇದು ಇತ್ತೀಚೆಗೆ ವಾಣಿಜ್ಜೀಕರಣಗೊಂಡು ಪ್ರಪಂಚದ ಎಲ್ಲ ಭಾಗಕ್ಕೂ ಹಬ್ಬುತ್ತಿರುವುದು ವಿಷಾದದ ಸಂಗತಿ. ನಮ್ಮ ರಾಜ್ಯದ್ದೇ ಆದ ಇತ್ತೀಚಿನ ಉದಾಹರಣೆ ಹೀಗಿದೆ. ಉತ್ತರ ಅಮೇರಿಕಾದ 16 ಜನ ಹಿರಿಯ ಜಲ ಅಭಿಯಂತರರು ಮಾರ್ಚ್ 2011ರಲ್ಲಿ ಬೆಂಗಳೂರಿಗೆ ಬಂದಿದ್ದರು. ನೀರಿನ ವ್ಯಾಪಾರೀಕರಣ ಉದ್ಯಮ (ವಾಟರ್ ಟ್ರೇಡ್ ಮಿಷನ್) ಅವರ ಭೇಟಿಯ ಉದ್ದೇಶವಾಗಿತ್ತು. ಇದು ಅಮೇರಿಕಾ ಸರ್ಕಾರದ ವಾಣಿಜ್ಯ ವಿಭಾಗದ ಸೇವೆ ಎಂದು ಹೇಳಲಾಗಿದೆ. '50 ಬಿಲಿಯನ್ ಡಾಲರ್ ಮೌಲ್ಯದ ಹಿಂದೂ ದೇಶದ ಮಾರುಕಟ್ಟೆಯನ್ನು ತನ್ನದಾಗಿಸಿಕೊಳ್ಳುವ ಉದ್ದೇಶ ಹೊಂದಲಾಗಿದೆ'. 'ದಿ ಹಿಂದೂ' ದಿನ ಪತ್ರಿಕೆ (ಮಾರ್ಚ್ 20, 2011)ಯ ವಿಶ್ಲೇಷಣೆಯ ಪ್ರಕಾರ ಈ ಜಲ ವ್ಯಾಪಾರೀಕರಣ ನೀತಿಯನ್ನು ನಮ್ಮ ದೇಶದ ಜನರಿಗೆ ತಿಳಿಯದಂತೆ ಗೌಪ್ಯವಾಗಿ ಇಡಲಾಗಿದೆ. ಇದರಲ್ಲಿಯ ಕಾನೂನು ಹಾಗೂ ಇತರ ಒಪ್ಪಂದಗಳನ್ನು ಅಮೇರಿಕಾ ಮತ್ತು ಅಲ್ಲಿಯ ಕಂಪೆನಿಗಳಿಗೆ ಮೂರು ತಿಂಗಳು ಮುಂಚಿತವಾಗಿಯೇ ಅಂತರ್ಜಾಲ ತಾಣಗಳಲ್ಲಿ ಪ್ರಚಾರ ಮಾಡಲಾಗಿದೆ. ಆದರೆ ಬೆಂಗಳೂರಿನ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ ಅಧಿಕಾರಿಗಳಿಗೆ ಈ ವಿಷಯ ತಿಳಿದದ್ದು 16 ಜನ ಅಭಿಯಂತರರು ಅವರ ಕಚೇರಿಗೆ ಭೇಟಿ ಕೊಟ್ಟ ಅನಂತರವೇ ಎನ್ನುವುದು ಗಮನಾರ್ಹ. ಇಂತಹ ಒಪ್ಪಂದಗಳು ನಮ್ಮ ದೇಶಕ್ಕೆ ಹೊಂದಿಕೊಳ್ಳುತ್ತವೆಯೇ? ಅವುಗಳ ಪೂರ್ವಾಪರಗಳ ಚರ್ಚೆಯಾಗಿ, ಜನಾಭಿಪ್ರಾಯಕ್ಕೆ ಒಳಪಡಿಸಿಯೇ ನಮ್ಮ ಸರಕಾರಗಳು ಮುಂದಿನ ಕ್ರಮಕೈಗೊಳ್ಳಬೇಕಾಗುತ್ತದೆ. ಶುದ್ಧನೀರಿನ ಪೂರೈಕೆ ನಮ್ಮ ಅಭಿಯಾನದ ಗುರಿ ಎನ್ನುವುದು ಈ ಕಂಪನಿಗಳ ಸೂತ್ರವಾಗಿದೆ. ಒಂದೊಮ್ಮೆ ನೀರಿನ ವ್ಯಾಪಾರೀಕರಣ ಜಾರಿಗೆ ಬಂದರೆ ಇದರ ಬಿಸಿ ಈಗಾಗಲೇ 12 ರಿಂದ 120ರೂಪಾಯಿಗಳ (ಸ್ಟಾರ್ ಹೋಟೆಲುಗಳಲ್ಲಿ) ವರೆಗೆ ಮಾರಾಟ ಮಾಡಲಾಗುತ್ತಿರುವ ಬಾಟಲಿ ನೀರಿಗೆ ನಾವು ತೆರಬೇಕಾದ ಬೆಲೆ ಊಹಿಸಲೂ ಅಸಾಧ್ಯವೆನ್ನುವುದನ್ನು ಸರ್ಕಾರ ಹಾಗೂ ಸಾರ್ವಜನಿಕರು ಯೋಚಿಸಬೇಕಾದ ಕಾಲ ಈಗ ಸನ್ನಿಹಿತವಾಗಿದೆ.

56. ಬೆಂಗಳೂರಿನ ಆಸ್ಪತ್ರೆಗಳು (1957ರವರೆಗೆ)

ಡಾ. ಬಿ. ಆರ್. ಭಾರತಿ

ಪೀಠಿಕೆ

'ಶರೀರಮಾದ್ಯಂ ಖಲುಧಮ್ಮ ಸಾಧನಮ್' ಎನ್ನುವ ಮಾತು ಯೋಗಸೂತ್ರದಲ್ಲಿ ಪ್ರಮುಖವಾದುದು. ಶರೀರವು ಆರೋಗ್ಯವಾಗಿದ್ದರೆ ಯಾವುದೇ ಕೆಲಸ ಕಾರ್ಯವನ್ನು ಸುಗಮವಾಗಿ ನಡೆಸಲು ಸಾಧ್ಯವಾಗುತ್ತದೆ. ಭಾರತದಲ್ಲಿ ಪ್ರಾಚೀನ ಕಾಲದಿಂದ ಆಯುರ್ವೇದ ಚಿಕಿತ್ಸಾ ಪದ್ಧತಿ, ಸಿದ್ಧಯೋಗ, ಪ್ರಕೃತಿ ಚಿಕಿತ್ಸಾ ಪದ್ಧತಿಗಳು ಪ್ರಚಲಿತವಾಗಿದ್ದುವು. ಇವುಗಳ ಜೊತೆಗೆ ನಾಟೀ ವೈದ್ಯವೂ ಇತ್ತು.

ಬೆಂಗಳೂರು ನೆಯ್ಗೆಗೆ ಹೆಸರಾಗಿದ್ದ ನಗರವಾಗಿತ್ತು. ಸೇನಾನೆಲೆಯಾಗಿಯೂ ಪ್ರಸಿದ್ಧವಾಗಿದ್ದ ಪ್ರದೇಶ ಇದು. ಆಹ್ಲಾದಕರ ಹವಾಮಾನದ ಪರಿಣಾಮದಿಂದಾಗಿ ಅನೇಕ ಜನರು ತಮ್ಮ ನೆಲೆಯನ್ನು ಇಲ್ಲಿಯೇ ಕಂಡುಕೊಂಡಿದ್ದರು. ಜನಸಂಖ್ಯೆಯ ಜೊತೆ ರೋಗರುಜಿನಗಳು ಇದ್ದುವಾದ್ದರಿಂದ ವೈದ್ಯರುಗಳೂ ಸಾಕಷ್ಟಿದ್ದರು ಎಂದು ಊಹಿಸಬಹುದು. ಮೂರನೆಯ ಮೈಸೂರು ಯುದ್ಧದ ನಂತರ ಸುಮಾರು 1795 ರಲ್ಲಿ ಆಧುನಿಕ ವೈದ್ಯಪದ್ಧತಿಗಳು ಇಲ್ಲಿಗೆ ಬಂದವು. ಇದಕ್ಕೆ ಕಾರಣಕರ್ತರು ಆರನೆಯ ನಿಜಾಮ ನಾಸಿರ್-ಉದ್-ದೌಲರು. ಮುಂದೆ 1831ರಲ್ಲಿ ಲಸಿಕೆಗಳು ಪ್ರಚಾರ ಪಡೆದುವು. ಬೆಂಗಳೂರಿನಲ್ಲಿ ಆರಂಭವಾದ ಚಿಕಿತ್ಸೆ, ಸೇವಾ ಸೌಲಭ್ಯಗಳೆಡೆಗೆ ಒಂದು ಸಿಂಹಾವಲೋಕನ ಮಾಡುವ ಪ್ರಯತ್ನ ಇಲ್ಲಿದೆ.

ಯಲಹಂಕ ಗೇಟ್ ಬಳಿ ಒಂದು ಸಣ್ಣ ಔಷಧಾಲಯವಿತ್ತು. ಅದೇ ಮೊದಲ ಸರ್ಕಾರಿ ಆಸ್ಪತ್ರೆ ಎಂದು ಊಹಿಸಬಹುದಾದರೂ ಅದಕ್ಕೆ ಯಾವುದೇ ಆಧಾರಗಳೂ ಇಲ್ಲ. ಬೆಂಗಳೂರು ನಗರದಲ್ಲಿ 1886ರಲ್ಲಿ ಬೌರಿಂಗ್ ಆಸ್ಪತ್ರೆ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗಳು ಮೊದಲಿಗೆ ಪ್ರಾರಂಭವಾದವು. ನಂತರ 1886ರಲ್ಲಿ ಸೇಂಟ್ ಮಾರ್ಥಾಸ್ ಆಸ್ಪತ್ರೆ, 1990ರಲ್ಲಿ ವಿಕ್ಟೋರಿಯಾ ಆಸ್ಪತ್ರೆಗಳು ಪ್ರಾರಂಭವಾದವು. ಅದಾದ ನಂತರ ಅನೇಕ ಸರ್ಕಾರಿ ಆಸ್ಪತ್ರೆಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ಮುಖ್ಯವಾಗಿ ವಾಣೀವಿಲಾಸ ಆಸ್ಪತ್ರೆ, ಮಿಂಟೋ ನೇತ್ರ ಚಿಕಿತ್ಸಾ ಪ್ರಾದೇಶಿಕ ಕೇಂದ್ರ (1896), ಎಸ್.ಡಿ.ಎಸ್. ಕ್ಷಯ ಆಸ್ಪತ್ರೆ, ರಾಷ್ಟ್ರೀಯ ಮಾನಸಿಕ ಹಾಗೂ ನರರೋಗಗಳ ಆಸ್ಪತ್ರೆ, ಕುಷ್ಠ ರೋಗದ ಆಸ್ಪತ್ರೆ ಮುಂತಾದುವುಗಳನ್ನು ಹೆಸರಿಸಬಹುದು. ಖಾಸಗಿಯಾಗಿ ಡಾ. ದಯಾಳು ಅವರಿಂದ ಬೆಂಗಳೂರು ನರ್ಸಿಂಗ್ ಹೋಂ ಸ್ಥಾಪಿತವಾಯಿತು. ಈ ಒಂದೊಂದು ಆಸ್ಪತ್ರೆಯೂ ಪ್ರಾರಂಭವಾದ ಹಿನ್ನೆಲೆ ವಿಶೇಷವಾಗಿವೆ.

ಡಿಸ್ಪೆನ್ಸರಿಗಳು

ಬ್ರಿಟಿಷರು ಬೆಂಗಳೂರಿಗೆ ಬಂದು ಸೈನ್ಯದ ನೆಲೆಯನ್ನು ಸ್ಥಾಪಿಸಿದ ಪ್ರದೇಶವು 'ದಂಡು' ಪ್ರದೇಶವೆಂದೇ ಹೆಸರಾಗಿದೆ. ಸೈನ್ಯ ಮತ್ತು ಅದರ ಅನೇಕ ಅಧಿಕಾರಿಗಳ ಸಂಸಾರಗಳು ಹಾಗೂ ಇತರ ಯುರೋಪಿಯನ್ನರೂ ಈ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಈ ಸಂದರ್ಭದಲ್ಲಿ ಅಲೋಪತಿ ವೈದ್ಯಪದ್ಧತಿ ಇಲ್ಲಿ ಆರಂಭವಾಯಿತು. 1833ರಲ್ಲಿ ಬೆಂಗಳೂರಿನ ಕೋಟೆಯಲ್ಲಿದ್ದ ಟಿಪ್ಪುವಿನ ಅರಮನೆಯ ಕಮಿಷನರ್ ಅವರ ಕಛೇರಿಯ ಒಂದು ಕೊಠಡಿಯಲ್ಲಿ ಪ್ರಪ್ರಥಮ ಆಧುನಿಕ ವೈದ್ಯಕೀಯ ಡಿಸ್ಪೆನ್ಸರಿ ಪ್ರಾರಂಭವಾಯಿತು. 1834ರಲ್ಲಿ ದಂಡು ಪ್ರದೇಶದಲ್ಲಿ

ಇನ್ನೊಂದು ಡಿಸ್ಪೆನ್ಸರಿಯನ್ನು ಪ್ರಾರಂಭಿಸಲಾಯಿತು. ಆಧುನಿಕ ವೈದ್ಯ ವಿಜ್ಞಾನದ ಅಲೋಪತಿ ವೈದ್ಯಪದ್ಧತಿ ಹೆಚ್ಚು ಜನಪ್ರಿಯವಾಗತೊಡಗಿತು. ಮುಸ್ಲಿಮರ ಪ್ರವೇಶದಿಂದ ಬಂದ ಯುನಾನಿ ಚಿಕಿತ್ಸಾ ಪದ್ಧತಿ, ಆಯುರ್ವೇದ ಪದ್ಧತಿ ಇವುಗಳ ಚಿಕಿತ್ಸಾ ಕ್ರಮ ಮತ್ತು ಕಾಯಿಲೆ ವಾಸಿಯಾಗುವ ನಿಧಾನಗತಿಗಿಂತ ಅಲೋಪತಿಯ ಶೀಘ್ರ ಶಮನಗುಣವೇ ಅದರ ಜನಪ್ರಿಯತೆಗೆ ಕಾರಣವಾಯಿತೆನ್ನಬಹುದು.

ಕಂಟೋನ್ಮೆಂಟ್ ಪ್ರದೇಶದಲ್ಲಿ ಹಲವಾರು ಡಿಸ್ಪೆನ್ಸರಿಗಳು ಮತ್ತು ಆಸ್ಪತ್ರೆಗಳು ಪ್ರಾರಂಭವಾದುವು. 'ಚರ್ಚ್ ಆಫ್ ಸೌತ್ ಇಂಡಿಯಾ ಆಸ್ಪತ್ರೆ' (ಹಿಂದಿನ ಜನಾನ ಮುಸ್ಲಿಂ ಆಸ್ಪತ್ರೆ) 1893ರಲ್ಲಿ ಪ್ರಾರಂಭವಾಯಿತು. ಆಘಾ ಅಬ್ದುಲ್ಲ ಸೇಟ್ ಅವರ ದಾನದಿಂದ ಅಲಸೂರು (1923–24) ಮತ್ತು ಶೂಲೆ (1923–24) ಪ್ರದೇಶಗಳಲ್ಲಿ ಎರಡು ಸಾದತ್ ಡಿಸ್ಪೆನ್ಸರಿಗಳು ಮುನಿಸಿಪಾಲಿಟಿ ವತಿಯಿಂದ ಸ್ಥಾಪಿತವಾದುವು. ಲ್ಯಾಂಗಫರ್ಡ್ ಟೌನಿನಲ್ಲಿ 'ಐಸೊಲೇಷನ್ ಆಸ್ಪತ್ರೆ' ಪ್ರಾರಂಭವಾಯಿತು. ರಾವ್ ಬಹಾದ್ದೂರ್ ಬಿ.ಪಿ. ಅಣ್ಣಸ್ವಾಮಿ ಮೊದಲಿಯಾರ್ ಅವರ ದಾನದಿಂದ ಫ್ರೇಜರ್ ಟೌನಿನಲ್ಲಿ ಅಣ್ಣಾಸ್ವಾಮಿ ಮೊದಲಿಯಾರ್ ಡಿಸ್ಪೆನ್ಸರಿ (1923–24) ಪ್ರಾರಂಭವಾಯಿತು. 1899ರಲ್ಲಿ ಆರಂಭವಾದ ಇಂಡೋ ಆರ್ಯನ್ ಡಿಸ್ಪೆನ್ಸರಿಗೆ ದಿವಾನ್ ಪಿ.ಎನ್.ಕೃಷ್ಣಮೂರ್ತಿಯವರು ಪೋಷಕರಾಗಿದ್ದರು. ವಿ.ಡಿ.ಪಂಡಿತರು ಇದರ ಜವಾಬ್ದಾರಿಯನ್ನು ಹೊತ್ತಿದ್ದರು.

ಆಸ್ಪತ್ರೆಗಳು

ಮೊದಲ ಅಲೋಪತಿ ಆಸ್ಪತ್ರೆ 1839ರಲ್ಲಿ ಆರಂಭವಾಯಿತು. ಬೆಂಗಳೂರಿನ ಪೇಟೆ ಪ್ರದೇಶದಲ್ಲಿ ಪ್ರಾರಂಭವಾದ ಈ ಆಸ್ಪತ್ರೆ ಸ್ವಲ್ಪ ಕಾಲದಲ್ಲಿಯೇ ಹೆಸರುವಾಸಿಯಾಯಿತು. ಇದರ ಪರಿಣಾಮವಾಗಿ 50 ಹಾಸಿಗೆಗಳುಳ್ಳ ಆಸ್ಪತ್ರೆಯ ಕಟ್ಟಡವು 1847ರಲ್ಲಿ ನಿರ್ಮಾಣವಾಯಿತು. ಇದು ಮುಂದೆ 1852, 1865 ಮತ್ತು 1866ರಲ್ಲಿ ವಿಸ್ತಾರಗೊಂಡಿತು. ಕಮೀಷನರ್ ಕಛೇರಿಯಲ್ಲಿದ್ದ ಡಿಸ್ಪೆನ್ಸರಿಗೂ 1849ರಲ್ಲಿ ಪ್ರತ್ಯೇಕ ಕಟ್ಟಡವನ್ನು ನಿರ್ಮಿಸಲಾಯಿತು. 1852ರ ಹೊತ್ತಿಗೆ ದಂಡುಪ್ರದೇಶದ ಬಜಾರಿನಲ್ಲಿ 70 ಹಾಸಿಗೆಗಳುಳ್ಳ ಆಸ್ಪತ್ರೆಯು ಪ್ರಾರಂಭವಾಯಿತು.

1845ರಲ್ಲಿ ಕುಷ್ಟ ರೋಗಿಗಳ ವಸತಿ ಕೇಂದ್ರವೊಂದು ಸ್ಥಾಪಿತವಾಯಿತು. 1850ರಲ್ಲಿ ಮನೋರೋಗಿಗಳ ವಸತಿ ಕೇಂದ್ರವೊಂದು ಸ್ಥಾಪಿತವಾಯಿತು. ಮೈಸೂರಿನ ಕಮೀಷನರ್ ಅವರಿಗೆ ಸರ್ಜನ್ ಆಗಿದ್ದವರು ಬೌರಿಂಗ್ ಆಸ್ಪತ್ರೆ, ಕುಷ್ಟ ಮತ್ತು ಮನೋರೋಗಗಳ ಕೇಂದ್ರಗಳ ಜವಾಬ್ದಾರಿ, ಲಸಿಕೆ ನೀಡುವ ಜವಾಬ್ದಾರಿಗಳನ್ನು ಹೊತ್ತಿದ್ದರು. ಇದೇ ರೀತಿ ಬಳೇಪೇಟೆಯ ಡಿಸ್ಪೆನ್ಸರಿ ಮತ್ತು ಕೇಂದ್ರ ಕಾರಾಗೃಹದ ಸೂಪರಿಂಟೆಂಡೆಂಟ್ ಆಗಿ ಒಬ್ಬ ವೈದ್ಯಾಧಿಕಾರಿ ಕಾರ್ಯನಿರ್ವಹಿಸುತ್ತಿದ್ದನು.

ಬೌರಿಂಗ್ ಆಸ್ಪತ್ರೆ ಮತ್ತು ಲೇಡಿ ಕರ್ಜನ್ ಆಸ್ಪತ್ರೆ

1866ರಲ್ಲಿ ಬ್ರಿಟೀಷರು ಹೆಚ್ಚಾಗಿ ವಾಸಿಸುತ್ತಿದ್ದ ಶಿವಾಜಿನಗರ ಪ್ರದೇಶದಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಲುಪಕ್ರಮಿಸಿದರು. ಪ್ಯಾರಿಸ್ಸಿನಲ್ಲಿದ್ದ ಲಾರಿಬೋಸಿ ಕಟ್ಟಡದ ನೀಲನಕ್ಷೆಯನ್ನು ಆಧಾರವಾಗಿಟ್ಟುಕೊಂಡು ಕಟ್ಟಿದ ಈ ಆಸ್ಪತ್ರೆ 1868ರಲ್ಲಿ ಪೂರ್ಣಗೊಂಡು ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಆಗ ಮೈಸೂರು ರಾಜ್ಯದ ಕಮೀಷನರ್ ಆಗಿದ್ದ ಬೌರಿಂಗ್ ಅವರ ಹೆಸರನ್ನೇ ಈ ಆಸ್ಪತ್ರೆಗೆ ಇಡಲಾಯಿತು. 1900ರವರೆಗೆ ಈ ಆಸ್ಪತ್ರೆಯ ಆಡಳಿತ ಮತ್ತು ಖರ್ಚುವೆಚ್ಚಗಳನ್ನು ಮುನಿಸಿಪಲ್ ಕಮೀಷನ್ ನಿಯಂತ್ರಿಸುತ್ತಿತ್ತು. 1900 ಏಪ್ರಿಲ್‌ನಲ್ಲಿ ಈ ಜವಾಬ್ದಾರಿಯನ್ನು ಅಂದಿನ ಬ್ರಿಟೀಷರ ಭಾರತ ಸರ್ಕಾರವು ಹೊತ್ತಿದ್ದು ಹಳೆಯ ಕಟ್ಟಡಕ್ಕೆ ಹಲವು ಹೊಸ ಕೊಠಡಿಗಳನ್ನು ಸೇರಿಸಿ ನವೀಕರಣ ಮಾಡಲಾಯಿರು. 1900 ಡಿಸೆಂಬರ್ 10ರಂದು ಲೇಡಿ ಕರ್ಜನ್ ಅವರು

ಈ ಭಾಗವನ್ನು ಉದ್ಘಾಟಿಸಿದ್ದರಿಂದ ಇದನ್ನು ಲೇಡಿ ಕರ್ಜನ್ ಮಹಿಳೆಯರ ಹಾಗೂ ಮಕ್ಕಳ ಆಸ್ಪತ್ರೆ ಎಂದು ನಾಮಕರಣ ಮಾಡಲಾಯಿತು. ಒಂದೇ ಆವರಣದಲ್ಲಿದ್ದರೂ ಈ ಎರಡೂ ಆಸ್ಪತ್ರೆಗಳು ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುತ್ತಿದ್ದುವು. 1911ರಲ್ಲಿ ಒಬ್ಬ ಸೂಪರಿಂಟೆಂಡೆಂಟರ ಅಧೀನದಲ್ಲಿ ಕಾರ್ಯ ನಿರ್ವಹಿಸತೊಡಗಿತು. ಇಂಗ್ಲೆಂಡಿನಲ್ಲಿ ಓದಿ ತರಬೇತಿ ಹೊಂದಿದ್ದ ವಿಶೇಷ ತಜ್ಞರುಗಳು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದುದರಿಂದ ಈ ಆಸ್ಪತ್ರೆಗಳು ಜನಪ್ರಿಯವಾಗಿ ಸದಾಕಾಲ ರೋಗಿಗಳಿಂದ ತುಂಬಿರುತ್ತಿದ್ದುವು. 1923–24ರ ಅವಧಿಯಲ್ಲಿ ನರ್ಸ್‌ಗಳಿಗೆ ತರಬೇತಿ ನೀಡಲು ಒಂದು ನರ್ಸಿಂಗ್ ಶಾಲೆಯನ್ನು ಇಲ್ಲಿ ಪ್ರಾರಂಬಿಸಲಾಯಿತು. 1928–29ರಲ್ಲಿ ತನ್ನದೇ ಆದ ಎಕ್ಸ್‌ರೇ ಘಟಕವನ್ನು ಅದು ಹೊಂದಿತು. 1947ರಲ್ಲಿ ಭಾರತಕ್ಕೆ ಸ್ವತಂತ್ರ ಬಂದಾಗ ಈ ಎರಡೂ ಆಸ್ಪತ್ರೆಗಳು ಮೈಸೂರು ಸರ್ಕಾರದ ಅಧೀನಕ್ಕೊಳಪಟ್ಟವು. 1855ರಿಂದ 1885ರವರೆಗಿನ ಅಂಕಿ ಅಂಶಗಳನ್ನು ಗಮನಿಸಿದರೆ ಆಧುನಿಕ ವೈದ್ಯಪದ್ಧತಿಯನ್ನು ಸದುಪಯೋಗ ಮಾಡಿಕೊಂಡವರ ಸಂಖ್ಯೆ ತಿಳಿಯುತ್ತದೆ. 1855–56ರಲ್ಲಿ 1,696 ಒಳರೋಗಿಗಳು, 11,243 ಹೊರರೋಗಿಗಳು, 1865–66ರಲ್ಲಿ 1800 ಒಳರೋಗಿಗಳು, 18,711 ಹೊರರೋಗಿಗಳು, 1875–76ರಲ್ಲಿ 1,482 ಒಳರೋಗಿಗಳು 47,604 ಹೊರರೋಗಿಗಳು, 1880–81ರಲ್ಲಿ 1688 ಒಳರೋಗಿಗಳು 46,040 ಹೊರರೋಗಿಗಳು 1884–85ರಲ್ಲಿ 1451 ಒಳರೋಗಿಗಳು 41,608 ಹೊರರೋಗಿಗಳು ಚಿಕಿತ್ಸೆ ಪಡೆದಿದ್ದರು. ಎಂದು ತಿಳಿದುಬರುತ್ತದೆ. ಅಂಕಿ ಅಂಶಗಳಿಂದ ಅಂದು ಬೆಂಗಳೂರು ಪ್ರದೇಶದಲ್ಲಿ ಕಂಡುಬರುತ್ತಿದ್ದ ಸಾಮಾನ್ಯ ರೋಗಗಳ ಬಗ್ಗೆಯೂ ಅರಿವಾಗುತ್ತದೆ. ಮುಖ್ಯವಾಗಿ ಚರ್ಮರೋಗಗಳು ಅದರಲ್ಲೂ ಕಜ್ಜಿ, ವಿವಿಧ ಜ್ವರಗಳು, ಕಣ್ಣಿನ ಸೋಂಕುಗಳು, ಭೇದಿ, ಆಮಶಂಕೆ, ಶ್ವಾಸಕೋಶಕ್ಕೆ ಸಂಬಂಧಿಸಿದ ಸೋಂಕುಗಳು ಮತ್ತು ಲೈಂಗಿಕ ರೋಗಗಳು ಸಾಮಾನ್ಯವಾಗಿ ಕಂಡುಬರುತ್ತಿದ್ದ ರೋಗಗಳು.

1890ರವರೆಗೆ ಬೆಂಗಳೂರಿನ ಸಾರ್ವಜನಿಕ ಆಸ್ಪತ್ರೆ ಇದೊಂದೇ ಇದ್ದುದ್ದು. ಆರಂಭದಲ್ಲಿ 104 ಹಾಸಿಗೆಗಳಿದ್ದು ಅವುಗಳಲ್ಲಿ 24 ಹಾಸಿಗೆಗಳು ಮಾತ್ರ ಸ್ತ್ರೀಯರಿಗೆ ಮೀಸಲಾಗಿದ್ದುವು. ಇಲ್ಲಿ ಕ್ಷಕಿರಣ ಪರೀಕ್ಷೆ ಮತ್ತು ರೋಗಲಕ್ಷಣ ಶಾಸ್ತ್ರದ ಪರೀಕ್ಷೆಗಳು ಲಭ್ಯವಿದ್ದುವು. 1947ರ ನಂತರ ಸರ್ಕಾರದ ವೈದ್ಯ ಇಲಾಖೆ ಗಂಟಲು ರೋಗಗಳ ವಿಭಾಗ, ಮಕ್ಕಳ ರೋಗಗಳ ವಿಭಾಗ ಮತ್ತು 40 ಹಾಸಿಗೆಗಳ ಶಸ್ತ್ರಚಿಕಿತ್ಸಾ ವಿಭಾಗಗಳನ್ನು ಸೇರಿಸಿತು.

ಹೆರಿಗೆ ಆಸ್ಪತ್ರೆ

1880ರಲ್ಲಿ ಸೆನಟಾಫ್ (ಇಂದಿನ ನೃಪತುಂಗ ರಸ್ತೆ) ರಸ್ತೆಯಲ್ಲಿ ಬೆಂಗಳೂರಿನ ಮೊದಲ ಹೆರಿಗೆ ಆಸ್ಪತ್ರೆ ರಾವ್ ಬಹದದ್ದೂರ್ ಎಲೆ ಮಲ್ಲಪ್ಪಶೆಟ್ಟಿಯವರ ದಾನದಿಂದ ಪ್ರಾರಂಭವಾಯಿತು. 1883ರಲ್ಲಿ ಬೆಂಗಳೂರು ಮುನಿಸಿಪಾಲಿಟಿಯ ಸ್ವಾಧೀನಕ್ಕೆ ಬಂದ ಈ ಆಸ್ಪತ್ರೆಯ ಜವಬ್ದಾರಿ ಮೈಸೂರು ಸರ್ಕಾರದ ಸೀನಿಯರ್ ಸರ್ಜನ್ನರ ಮೇಲಿತ್ತು. 1884ರವರೆಗೆ ಹೆರಿಗೆಯ ಆಸ್ಪತ್ರೆಯಾಗಿದ್ದು ಅನಂತರ ಇತರ ರೋಗಿಗಳಿಗೂ ಸೇವೆಯನ್ನು ವಿಸ್ತರಿಸಲಾಯಿತು. 1886ರವರೆಗೆ ಬೆಂಗಳೂರಿಗೆ ಇದೊಂದೇ ಹೆರಿಗೆ ಆಸ್ಪತ್ರೆಯಾಗಿತ್ತು. 1881ರಿಂದ 1885 ರವರೆಗೆ 370 ಒಳರೋಗಿಗಳು, 15,790 ಹೊರರೋಗಿಗಳು ಇಲ್ಲಿ ಚಿಕಿತ್ಸೆ ಪಡೆದ್ದಿದ್ದರೆಂದು ಅಲ್ಲಿನ ಅಂಕಿ ಅಂಶ ಗಳು ತಿಳಿಸುತ್ತವೆ. ಇವರಲ್ಲಿ ಉಚ್ಚ ಜಾತಿಯ ಮಹಿಳೆಯರು ಇರಲಿಲ್ಲವೆಂಬುದು ಅಧ್ಯಯನಯೋಗ್ಯ ವಿಚಾರವಾಗಿದೆ. ಪ್ರಾರಂಭವಾದ ಎಲ್ಲ ಆಸ್ಪತ್ರೆಗಳು ಮೈಸೂರಿನಲ್ಲಿ ಇಂಡಿಯನ್ ಮೆಡಿಕಲ್ ಡಿಪಾರ್ಟಮೆಂಟಿನ ಡೆಪ್ಯೂಟಿ ಸರ್ಜನ್ ಜನರಲ್ ಅವರ ವ್ಯಾಪ್ತಿಗೆ ಬೆಂಗಳೂರಿನ ಎಲ್ಲ ವೈದ್ಯಕೀಯ ಸಂಸ್ಥೆಗಳೂ ಒಳಪಟ್ಟಿದ್ದುವು.

ಸೇಂಟ್ ಮಾರ್ಥಾಸ್ ಆಸ್ಪತ್ರೆ

1854ರಲ್ಲಿ ಬೆಂಗಳೂರಿನ ಬಿಷಪ್ ಷಾರ್ಬೊನೆ ಅವರ ಆಹ್ವಾನದ ಮೇರೆಗೆ ಹೆಣ್ಣುಮಕ್ಕಳ ಗುಂಪೊಂದು ಪಾಂಡಿಚೇರಿಯಿಂದ ಬೆಂಗಳೂರಿಗೆ ಬಂತು. ಇವರು ಅನಾಥ ಹೆಣ್ಣುಮಕ್ಕಳಿಗೆ ಬದುಕುವ ದಾರಿ ತೋರಲು ಬಂದಿದ್ದರು. ಬೆಂಗಳೂರಿನ ಮ್ಯೂಸಿಯಂ ರಸ್ತೆಯಲ್ಲಿ ಒಂದು ಕಾರಾಗೃಹವಿದ್ದು ಆ ಕತ್ತಲ ಗೃಹವನ್ನು ಹೆಣ್ಣುಮಕ್ಕಳ ಶಾಲೆ, ಮಕ್ಕಳ ಮನೆ, ಸಂತ್ರಸ್ತ ಹೆಣ್ಣು ಮಕ್ಕಳಿಗೆ ಆಶ್ರಯ ನೀಡುವ ತಾಣವನ್ನಾಗಿ ಮಾಡಿಸಿದವರು ಈ ಸಿಸ್ಟರ್ಸ್ ಆಫ್ ಗುಡ್ ಶೆಪರ್ಡ್‌ಗಳು, 1870-80ರಲ್ಲಿ ಒದಗಿದ ಭೀಕರ ಕ್ಷಾಮದಿಂದಾಗಿ ವಿಪರೀತ ಸಂಖ್ಯೆಯಲ್ಲಿ ಜನರು ಮರಣಕ್ಕೀಡಾದರು. ಜೊತೆಗೆ ನಾನಾ ರೀತಿಯ ರೋಗರುಜಿನಗಳೂ ಹೆಚ್ಚಿದವು. ಈ ಸಂದರ್ಭದಲ್ಲಿ ಗುಡ್ ಶೆಫರ್ಡ್ ಸಂಸ್ಥೆಯ ಸುಪೀರಿಯರ್ ಆಗಿದ್ದ ಸಿಸ್ಟರ್ ವೈಸಿಟೇಶನ್ ಲ್ಯೂಶ್ ಅವರು ಸುಸಜ್ಜಿತ ಆಸ್ಪತ್ರೆಯನ್ನು ಕಟ್ಟಲು ಯೋಚಿಸಿದಾಗ ಫ್ರೆಂಚ್ ಮೂಲದ ಪಾದ್ರಿಯಾಗಿದ್ದ ಫಾದರ್ ಬಾನಿಟೈನ್ ಅವರು ನೆರವಾದರು. ಇವರಿಬ್ಬರ ಪ್ರಯತ್ನದಿಂದ ಸೇಂಟ್ ಮಾರ್ಥಾಸ್ ಆಸ್ಪತ್ರೆ ಜನಸೇವೆಗೆ ಮುಡಿಪಾಯಿತು. ಜುಲೈ 28 1884ರಂದು ಮೈಸೂರಿನ ಅಂದಿನ ಮಹಾ ರಾಜರಾಗಿದ್ದ ಚಾಮರಾಜ ಒಡೆಯರು ಇಪ್ಪತ್ತು ಎಕರೆ ಭೂಮಿಯನ್ನು ನೀಡಿದರು. ಲ್ಯೂಶ್ ಮನೆತನದವರು ಖರ್ಚು ವೆಚ್ಚದ ಗಣನೀಯ ಭಾಗವನ್ನು ಭರಿಸಿದರೆ 'ಫ್ರೆಂಚ್ ಫಾರಿನ್ ಮಿಷನ್ ಫಾದರ್'ಗಳು ಹಣವನ್ನು ನೀಡಿದರು. ಬೆಂಗಳೂರಿನ ಜನತೆ ಉದಾರತೆಯಿಂದ ಆರ್ಥಿಕ ನೆರವು ನೀಡಿತು. ಈ ಎಲ್ಲರ ಉದಾರತೆಯಿಂದಾಗಿ ಆಸ್ಪತ್ರೆ ನಿರ್ಮಾಣವಾದರೂ ಅಲ್ಲಿ ಕಾರ್ಯನಿರ್ವಹಿಸಲು ವೈದ್ಯರು ಶುಶ್ರೂಷಕಿಯರು, ಇತರ ಕೆಲಸಗಾರರು ಇರಲಿಲ್ಲ. ಈ ಸಂದರ್ಭದಲ್ಲಿ ಬೆಂಗಳೂರು ಪೇಟೆಯಲ್ಲಿದ್ದ ಸರ್ಕಾರದ ಪುಟ್ಟ ಡಿಸ್ಪೆನ್ಸರಿಯ ಸಿಬ್ಬಂದಿಗೇ ಹೊಸ ಆಸ್ಪತ್ರೆಯ ಜವಾಬ್ದಾರಿಯನ್ನು ವಹಿಸಲಾಯಿತು. ಮುಂದೆ 1887ರ ಹೊತ್ತಿಗೆ ಈ ಎರಡು ವೈದ್ಯಕೀಯ ಘಟಕಗಳು ಒಂದೇ ಆದವು. ಆದರೆ ಈ ಎರಡೂ ಘಟಕಗಳ ಉದ್ದೇಶ ಬೇರೆ ಬೇರೆಯಾಗಿದ್ದುದರಿಂದ 1892ರಲ್ಲಿ ಅವು ಬೇರ್ಪಟ್ಟವು. ನಂತರ 1893ರಲ್ಲಿ ಮೈಸೂರು ಸರ್ಕಾರವು 700 ಹಾಸಿಗೆಗಳ ಎಲ್ಲಾ ಸೌಕರ್ಯಗಳನ್ನುಳ್ಳ ಬೇರೊಂದು ಆಸ್ಪತ್ರೆಯನ್ನು ನಿರ್ಮಿಸಿತು. ಅದಕ್ಕೆ 'ವಿಕ್ಟೋರಿಯಾ ಆಸ್ಪತ್ರೆ' ಎಂದು ನಾಮಕರಣ ಮಾಡಲಾಯಿತು.

ಸೇಂಟ್ ಮಾರ್ಥಾಸ್ ಆಸ್ಪತ್ರೆಯ ಜನನಕ್ಕೆ ಕಾರಣವಾದ ಸಿಸ್ಟರ್ ಲ್ಯೂಶ್ ಅವರು ರೋಮ್‌ನಲ್ಲಿ ಅನಿರೀಕ್ಷಿತವಾಗಿ ಮಡಿದರು. ಆಸ್ಪತ್ರೆಯ ಪದಾಧಿಕಾರಿಗಳು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಚಡಪಡಿಸುತ್ತಿದ್ದುದರಿಂದ ಆಸ್ಪತ್ರೆಯನ್ನು ಮುಚ್ಚಬೇಕು ಅಥವಾ ಮಾರಬೇಕು ಎಂದು ಯೋಚಿಸಿದರು. 'ಕೀಪ್ ದಿ ಹಾಸ್ಪಿಟಲ್' ಎನ್ನುವ ಸಂದೇಶ ತಾರನ್ನು (ಟೆಲಿಗ್ರಾಂ) ಮದರ್ ಜನರಲ್ ಅವರು ಕಳುಹಿಸಿದುದರಿಂದ ಆಸ್ಪತ್ರೆ ಉಳಿಯಿತು. ಈ ತಾರು ಬೆಂಗಳುರು ತಲುಪಲು 24 ದಿವಸ ಎರಡು ಗಂಟೆ 15 ನಿಮಿಷಗಳು ತೆಗೆದುಕೊಂಡಿತು. ಇಂದಿಗೂ ಇದನ್ನು ಬೆಂಗಳೂರಿನ ಆರ್ಚ್‌ಡಯೋಸಿಸ್‌ನಲ್ಲಿ ಸಂರಕ್ಷಿಸಿಡಲಾಗಿದೆ. 1895ರಲ್ಲಿ ಸಿಸ್ಟರ್ ಹಯಾಸಿಂಥ್ ಗೋನ್ನೆಟ್ ಎಂಬ ಸ್ವಿಟ್ಜರ್ಲೆಂಡಿನ ಮಹಿಳೆ ಆಸ್ಪತ್ರೆಯ ಹೊಣೆ ಹೊತ್ತರು. ನೋಡಲು ಪುಟ್ಟದಾಗಿದ್ದರೂ ಕಾರ್ಯಕ್ಷಮತೆಯಲ್ಲಿ ದಕ್ಷರಾಗಿದ್ದ ಸಿಸ್ಟರ್ ಹಯಾಸಿಂಥ್ ಅಪಾರವಾದ ಆತ್ಮವಿಶ್ವಾಸದಿಂದ ಸತತವಾಗಿ 20 ವರ್ಷಗಳ ಜವಾಬ್ದಾರಿಯುತ ಆಡಳಿತವನ್ನು ನಡೆಸಿದರು ಮುತ್ತು ಆಸ್ಪತ್ರೆಯ ಸರ್ವತೋಮುಖ ಅಭಿವೃದ್ಧಿಗೆ ತಮ್ಮ ಜೀವನವನ್ನೇ ಅರ್ಪಿಸಿದರು. ಇವರ ಆಡಳಿತ ಮತ್ತು ವ್ಯವಹಾರ ಅನುಕರಣೀಯವಾಗಿತ್ತು.

ಅಂದಿನ ಬೆಂಗಳೂರು ಮುನಿಸಿಪಲ್ ಬೋರ್ಡಿನವರು ಪ್ರತಿ ತಿಂಗಳು 200 ರೂಪಾಯಿಗಳ ಗ್ರಾಂಟನ್ನು ಮಾರ್ಥಾಸ್ ಆಸ್ಪತ್ರೆಗೆ ನೀಡುತ್ತಿದ್ದುದನ್ನು ನಿಲ್ಲಿಸಬೇಕೆಂದು ಯೋಚಿಸಿದಾಗ ಜನರು ಅದನ್ನು ಪ್ರತಿಭಟಿಸಿದರು. ವಿಕ್ಟೋರಿಯಾ ಆಸ್ಪತ್ರೆ ಮತ್ತು ಮಾರ್ಥಸ್ ಆಸ್ಪತ್ರೆಗಳು ನಗರದ ಎರಡು ತುದಿಗಳಲ್ಲಿವೆ. ಆದುದರಿಂದ ವಿಕ್ಟೋರಿಯಾ

ಆಸ್ಪತ್ರೆಯಷ್ಟೇ ಒಳ್ಳೆಯ ಸೇವಾ ಸೌಲಭ್ಯಗಳು ಇಲ್ಲಿಯೂ ಇದ್ದುದರಿಂದ ಯಾವ ಕಾರಣಕ್ಕೂ ಗ್ರಾಂಟನ್ನು ನಿಲ್ಲಿಸಬಾರದೆಂದು ತೀರ್ಮಾನಿಸಲಾಯಿತು. 1920ರ ಹೊತ್ತಿಗೆ ಸೇಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಗಂಡಸರಿಗೆ ಮತ್ತು ಹೆಂಗಸರಿಗೆ ಒಂದೊಂದು ವಾರ್ಡುಗಳಿದ್ದುವು. ಒಂದು ಹೊರರೋಗಿಗಳ ವಿಭಾಗವಿತ್ತು. ಅನಾರೋಗ್ಯ ಮತ್ತು ನಿವೃತ್ತಿಯಾದ ಕ್ರೈಸ್ತ ಧರ್ಮೀಯರಿಗೆಂದು ಆರು ಕೋಣೆಗಳಿದ್ದುವು. ಮೊಟ್ಟಮೊದಲ ಬಾರಿಗೆ ಕಣ್ಣಿನ ಚಿಕಿತ್ಸೆಗಾಗಿ ಮೀಸಲಾದ ಒಂದು ಘಟಕವೂ ಇಲ್ಲಿತ್ತು. ಮುಂದೆ ಅಭಿವೃದ್ಧಿ ಹೊಂದುತ್ತ ಬಂದ ಆಸ್ಪತ್ರೆಯು 1929ರಲ್ಲಿ ವಿಸ್ತೃತವಾದ ಹೊರರೋಗಿಗಳ ವಿಭಾಗವನ್ನು ಉದ್ಘಾಟಿಸಲು ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಮಿರ್ಜಾ ಒಸ್ಮಾಯಿಲ್ ಅವರನ್ನು ಆಹ್ವಾನಿಸಿತ್ತು. ಆ ಸಂದರ್ಭದಲ್ಲಿ ಅವರು ಆಸ್ಪತ್ರೆಯ ಸೇವೆಗಳ ಬಗ್ಗೆ ಮುಕ್ತಕಂಠದಿಂದ ಹೊಗಳಿದರೆಂದು ತಿಳಿದುಬರುತ್ತದೆ. ನಂತರ 50ರ ದಶಕದಲ್ಲಿ ಒಂದು ಹೆರಿಗೆ ವಾರ್ಡ್, ಮಕ್ಕಳ ವಾರ್ಡ್, ಎಕ್ಸರೇ ಘಟಕ, ದಂತಶಾಸ್ತ್ರ ವಿಭಾಗ ಮತ್ತು ರಕ್ತನಿಧಿ ಸೇವೆಗಳೂ ಸೇರ್ಪಡೆಯಾದುವು.

ವಿಕ್ಟೋರಿಯಾ ಆಸ್ಪತ್ರೆ

1893ರಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ಆಸ್ಪತ್ರೆಯು ಡಿಸ್ಟ್ರಿಕ್ಟ್ ಲಾಕಪ್‌ನಲ್ಲಿ ಪ್ರಾರಂಭವಾಯಿತು. 22-6-1877ರಲ್ಲಿ ಮೈಸೂರು ರೀಜೆಂಟ್ ಆಗಿದ್ದ ಮಹಾರಾಣಿ ಕೆಂಪನಂಜಮ್ಮಣ್ಣಿಯವರು ಈ ಆಸ್ಪತ್ರೆಗೆ ಅಸ್ತಿಭಾರ ಹಾಕಿದರು. ಮುಂದೆ 1900ರಲ್ಲಿ ಆಸ್ಪತ್ರೆಯು ಸ್ವಂತ ಕಟ್ಟಡ ಹೊಂದಿ, 8-12-1900ರಂದು ಅಂದಿನ ಭಾರತದ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್‌ರವರು ಆಸ್ಪತ್ರೆಯನ್ನು ಸಾಂಕೇತಿಕವಾಗಿ ಉದ್ಘಾಟಿಸಿದರು. ಬೆಂಗಳೂರಿನ ಹಳೇಪೇಟೆಯ ಸಮೀಪದಲ್ಲಿದ್ದ ಈ ಆಸ್ಪತ್ರೆಯನ್ನು 'ವಿಕ್ಟೋರಿಯಾ ಆಸ್ಪತ್ರೆ' ಎಂದು ಕರೆಯಲಾಯಿತು. ಕಾರಣ ಇದು ವಿಕ್ಟೋರಿಯಾ ಸಾಮ್ರಾಜ್ಞಿಯ ಆಳ್ವಿಕೆಯ ಅರವತ್ತು ವರ್ಷಗಳು ತುಂಬಿದ ಸಂದರ್ಭದ ಕೊಡುಗೆಯಾಗಿದ್ದುದರಿಂದ ಈ ಹೆಸರಿನ್ನಿಡಲಾಯಿತು.

ಆಸ್ಪತ್ರೆಯು ಆರಂಭದಲ್ಲಿ ನೂರು ಹಾಸಿಗೆಗಳನ್ನು ಹೊಂದಿದ್ದು, ಎಂಟು ವಿಭಾಗಗಳು, ಒಂದು ಶಸ್ತ್ರಚಿಕಿತ್ಸಾ ವಿಭಾಗ ಮತ್ತು ಒಂದು ಸಣ್ಣ ಪ್ರಯೋಗಾಲಯವನ್ನು ಹೊಂದಿತ್ತು. 1904ರಲ್ಲಿ ಪ್ರಯೋಗಾಲಯ ಬೇರೆ ಕಟ್ಟಡಕ್ಕೆ ಸ್ಥಳಾಂತರವಾಯಿತು. 1951ರಲ್ಲಿ ಸ್ವಂತ ಕಟ್ಟಡವನ್ನು ಹೊಂದಿದ ಪೆಥಾಲಜಿ ವಿಭಾಗ ಸೇರ್ಪಡೆಯಾಯಿತು. 1912ರಲ್ಲಿ ಕ್ಷ-ಕಿರಣ ಯಂತ್ರವನ್ನು ಸ್ಥಾಪಿಸಲಾಯಿತು. ಮತ್ತು 1930ರ ಹೊತ್ತಿಗೆ ಪೂರ್ಣಪ್ರಮಾಣದ, ಪೂರ್ಣಾವಧಿಯ ಕ್ಷ-ಕಿರಣ ವಿಭಾಗ ಪ್ರಾರಂಭವಾಯಿತು. ಈ ವಿಭಾಗ 1934ರಲ್ಲಿ ನೂತನ ಕಟ್ಟಡಕ್ಕೆ ಸ್ಥಳಾಂತರವಾಯಿತು. 1917ರಲ್ಲಿ ಆರಂಭವಾದ ದಂತವೈದ್ಯ ವಿಭಾಗವು ನಲವತ್ತೊಂದು ವರ್ಷಗಳ ನಂತರ ದಂತಕಾಲೇಜಾಯಿತು. 1942ರಲ್ಲಿ ಸಿರೂರ್ ಕಾರ್ಡಿಯಾಕ್ ಬ್ಲಾಕ್ ಪ್ರಾರಂಭವಾಯಿತು. 1955ರಲ್ಲಿ ಖಾಸಗಿಯಾಗಿ ಪ್ರಾರಂಭವಾದ ಬೆಂಗಳೂರು ವೈದ್ಯಮಹಾವಿದ್ಯಾಲಯವನ್ನು (ಬೆಂಗಳೂರು ಮೆಡಿಕಲ್ ಕಾಲೇಜ್) ಮುಂದೆ ಮೈಸೂರು ಸರ್ಕಾರವೇ ವಹಿಸಿಕೊಂಡಿತು. ಪ್ರಸೂತಿಶಾಸ್ತ್ರ, ನೇತ್ರಶಾಸ್ತ್ರ ಮತ್ತು ಮಕ್ಕಳ ರೋಗಗಳ ಚಿಕಿತ್ಸಾ ಆಸ್ಪತ್ರೆಗಳು ವಿಕ್ಟೋರಿಯಾ ಆಸ್ಪತ್ರೆಗೆ ಹೊಂದಿಕೊಂಡಿದ್ದುವು.

ವಿಕ್ಟೋರಿಯಾ ಆಸ್ಪತ್ರೆ ಮೊದಲು ಪ್ರಾರಂಭವಾದಾಗ ಬ್ರಾಹ್ಮಣ ವೀರಶೈವ ಮತ್ತು ಇತರ ವರ್ಗಗಳಿಗೆ ಪ್ರತ್ಯೇಕ ವಾರ್ಡುಗಳಿದ್ದುವುವೆಂದು ತಿಳಿದುಬರುತ್ತದೆ. 1939-40ರಲ್ಲಿ ವಿಕ್ಟೋರಿಯಾ, ವಾಣೀವಿಲಾಸ ಮತ್ತು ಮಿಂಟೋ ಆಸ್ಪತ್ರೆಗಳಲ್ಲಿ ಒಟ್ಟು 1,51,473 ರೋಗಿಗಳು ಚಿಕಿತ್ಸೆ ಪಡೆದಿದ್ದರೆಂದು ತಿಳಿದುಬರುತ್ತದೆ. 1942ರಲ್ಲಿ ಸಿರೂರ್ ಕಾರ್ಡಿಯಾಕ್ ಬ್ಲಾಕ್ ಆರಂಭವಾಯಿತು.

ಮಿಂಟೋ ಕಣ್ಣಾಸ್ಪತ್ರೆ

1896 ನವೆಂಬರ್ ಒಂಬತ್ತರಂದು ಮಿಂಟೋ ಕಣ್ಣಿನ ಆಸ್ಪತ್ರೆಯು ಬೆಂಗಳೂರಿನ ಸಂತೆಪೇಟೆಯ ರಸ್ತೆಯಲ್ಲಿ ಸಣ್ಣ ನೇತ್ರ ಚಿಕಿತ್ಸೆಯ ಕ್ಲಿನಿಕ್ ಆಗಿ ಆರಂಭವಾಯಿತು. ನಂತರ 1903ರ ವೇಳೆಗೆ ರೋಗಿಗಳ ಸಂಖ್ಯೆ ಹೆಚ್ಚಾಗಿ ಲಾಲ್‌ಬಾಗ್ ಸಮೀಪದ ಲಾಡ್ಜ್ ಒಂದಕ್ಕೆ ಸ್ಥಳಾಂತರಗೊಂಡಿತು. ಮಹಾರಾಜರಿಗೆ ಮನವಿ ಸಲ್ಲಿಸಿದಾಗ ಚಾಮರಾಜ ಪೇಟೆಯಲ್ಲಿ ಸ್ಥಳ ದೊರೆತು ನಾಲ್ವಡಿ ಕೃಷ್ಣರಾಜ ಒಡೆಯರು 1910 ಡಿಸೆಂಬರ್ 17ರಂದು, ಆಸ್ಪತ್ರೆಗೆ ಶಿಲಾನ್ಯಾಸ ಮಾಡಿದರು. 1913 ಜನವರಿ 31 ರಂದು ಮಹಾರಾಜರು ವೈಸರಾಯ್ ಮಿಂಟೋ ಅವರ ನೆನಪಿಗಾಗಿ ಆಸ್ಪತ್ರೆಗೆ ಮಿಂಟೋ ಆಸ್ಪತ್ರೆ ಎಂದು ಹೆಸರಿಟ್ಟು ಉದ್ಘಾಟಿಸಿದರು. 1956ರಲ್ಲಿ ಮಿಂಟೋ ಆಸ್ಪತ್ರೆ ಅಧ್ಯಾಪನ ಸಂಸ್ಥೆಯಾಯಿತು.

ವಾಣೀವಿಲಾಸ ಆಸ್ಪತ್ರೆ

ಅಂತರರಾಷ್ಟ್ರೀಯ ಮಹಿಳಾ ದಿನವಾದ 8.3.1935ರಂದು ಶ್ರೀಕೃಷ್ಣರಾಜ ಒಡೆಯರ್ ಅವರು ಮಹಿಳಾ ಆಸ್ಪತ್ರೆಯೊಂದನ್ನು ಉದ್ಘಾಟಿಸಿದರು. ಈ ಆಸ್ಪತ್ರೆಗೆ ಒಡೆಯರವರ ತಾಯಿಯವರಾದ ವಾಣೀವಿಲಾ ಅಮ್ಮಣ್ಣಿಯವರ ಹೆಸರನ್ನು ಇಡಲಾಯಿತು. ಆರಂಭದಲ್ಲಿ 150 ಸ್ತ್ರೀಯರಿಗೆ ಮತ್ತು 100 ಮಕ್ಕಳಿಗೆ ಸೇವಾ ಸೌಲಭ್ಯವನ್ನು ಕಲ್ಪಿಸಲಾಗಿದ್ದಿತು.

ವೆಂಕಟೇಶ್ವರ ಕಿವಿ, ಮೂಗು ಮತ್ತು ಗಂಟಲು ರೋಗಗಳ ಚಿಕಿತ್ಸಾ ಸಂಸ್ಥೆ

ಕಿವಿ, ಮೂಗು ಮತ್ತು ಗಂಟಲು ರೋಗಗಳ ಚಿಕಿತ್ಸೆಯು ಮೊದಲು ವಿಕ್ಟೋರಿಯಾ ಆಸ್ಪತ್ರೆಯಲ್ಲಿಯೇ ನಡೆಯುತ್ತಿದ್ದುವು. 1950 ಹೊತ್ತಿಗೆ ಪ್ರತ್ಯೇಕ ವಿಭಾಗವಾಗಿ ವೆಂಕಟೇಶ್ವರ ಕಿವಿ, ಮೂಗು ಮತ್ತು ಗಂಟಲು ರೋಗಗಳ ಚಿಕಿತ್ಸಾ ಸಂಸ್ಥೆ ಪ್ರಾರಂಭವಾಯಿತು.

ಹೆರಿಗೆ ಆಸ್ಪತ್ರೆಗಳು

ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ: ಇದು 1925ರಲ್ಲಿ ಪ್ರಾರಂಭವಾಯಿತು. ಇದನ್ನು ಮುಸ್ಲಿಮ್ ಮಹಿಳೆಯರಿಗೆಂದೇ ಪ್ರತ್ಯೇಕವಾಗಿ ಕಟ್ಟಲಾಗಿತ್ತು.

ಕೆ.ಸಿ. ಆಸ್ಪತ್ರೆ : 1939ರಲ್ಲಿ ಮಲ್ಲೇಶ್ವರದ ಹತ್ತಿರ ಕೆಂಪಚಲುವಾಂಬ ಆಸ್ಪತ್ರೆಯು ಆರಂಭವಾಯಿತು. ಸರ್ಕಾರವು ಸ್ಥಾಪಿಸಿದ ಮೊದಲ ಹೆರಿಗೆ ಆಸ್ಪತ್ರೆ ಇದಾಗಿದೆ. ಪ್ರಾರಂಭದಲ್ಲಿ ಇದು 40 ಹಾಸಿಗೆಗಳ ಸೌಲಭ್ಯವನ್ನು ಹೊಂದಿತ್ತು.

ಹೆರಿಗೆ ಆಸ್ಪತ್ರೆ: 1939ರಲ್ಲಿ ಚಲ್ಲಾರಾಮ್ ಹೆರಿಗೆ ಆಸ್ಪತ್ರೆ ಪ್ರಾರಂಭವಾಯಿತು. ಇದರಲ್ಲಿ 24 ಹಾಸಿಗೆಗಳ ಸೌಲಭ್ಯವನ್ನು ಕಲ್ಪಿಸಲಾಗಿತ್ತು.

ಮಾನಸಿಕ ಆಸ್ಪತ್ರೆ

1848ರಲ್ಲಿ ಅವೆನ್ಯೂ ರಸ್ತೆಯಲ್ಲಿ ಲ್ಯುನಾಟಿಕ್ ಅಸ್ಯೆಲಂ ಎಂಬ ಹೆಸರಿನಿಂದ ಮನೋರೋಗಿಗಳಿಗೆ ಚಿಕಿತ್ಸೆ ನೀಡಲು ಆಸ್ಪತ್ರೆಯೊಂದು ಪ್ರಾರಂಭವಾಯಿತು. 1925ರಲ್ಲಿ ಇದಕ್ಕೆ ಹುಚ್ಚಾಸ್ಪತ್ರೆ ಎಂದು ಹೆಸರಿತ್ತು. ಮೈಸೂರು ಬ್ಯಾಂಕಿನ ಹಿಂಭಾಗದಲ್ಲಿ ಹುಚ್ಚಾಸ್ಪತ್ರೆ ಇದ್ದು, ಈ ರಸ್ತೆಗೆ ಹಾಸ್ಪಿಟಲ್ ಲೇನ್ ಎಂದೇ ಹೆಸರಿತ್ತು. ಆಸ್ಪತ್ರೆಯ ಸೂಪರಿಂಟೆಂಡೆಂಟ್ ಆಗಿದ್ದ ಗೋವಿಂದಸ್ವಾಮಿಯವರು ದಿವಾನ್ ಮಿರ್ಜಾ ಇಸ್ಮಾಯಿಲ್ ಅವರಲ್ಲಿ ಮನವಿ

ಸಲ್ಲಿಸಿ ಲಕ್ಕಸಂದ್ರ ಹೊಸೂರು ರಸ್ತೆಯಲ್ಲಿ ಸ್ಥಳವನ್ನು ಮಂಜೂರು ಮಾಡಲು ಕೋರಿದರು. 1936ರಲ್ಲಿ ದಿವಾನ್ ಮಿರ್ಜಾ ಇಸ್ಮಾಯಿಲ್ಲರ ಕಾಲದಲ್ಲಿ ಕಟ್ಟಡದ ಮಂಜೂರಾತಿ ದೊರೆತು, 1937ರ ನವೆಂಬರ್‌ನಲ್ಲಿ ಕಟ್ಟಡದ ಕೆಲಸ ಪೂರ್ಣವಾಯಿತು. ಆಗ ಈ ಆಸ್ಪತ್ರೆಯನ್ನು ಮಾನಸಿಕ ಆಸ್ಪತ್ರೆ ಎಂದು ಕರೆಯಲಾಯಿತು.

ಈ ಆಸ್ಪತ್ರೆಯಲ್ಲಿ 1942ರಲ್ಲಿ ಭಾರತದಲ್ಲೇ ಮೊದಲ ಬಾರಿಗೆ ಮಾನಸಿಕ ರೋಗಿಯೊಬ್ಬನ ಮೆದುಳು ಶಸ್ತ್ರಚಿಕಿತ್ಸೆಯನ್ನು ಮಾಡಲಾಯಿತು. ಡಾ ವರ್ಮ ಮತ್ತು ಡಾ.ಬಿ.ಎಸ್. ಬಾಲಕೃಷ್ಣರಾವ್ ಅವರು ಈ ಮೆದುಳು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದರು. ಮೈಸೂರು ಮಹಾರಾಜರ ಕುಟುಂಬದವರು ನೀಡಿದ ದಾನದಿಂದಾಗಿ 1955ರಲ್ಲಿ ಸ್ನಾತಕೋತ್ತರ ಡಿಪ್ಲೊಮಾ ತರಗತಿಗಳು ಈ ಆಸ್ಪತ್ರೆಯಲ್ಲಿ ಪ್ರಾರಂಭವಾದುವು.

ಕ್ಷಯರೋಗ ಆಸ್ಪತ್ರೆ

ಕ್ಷಯ ರೋಗವು ಬೆಂಗಳೂರನ್ನು ಕಾಡಿದ ದೊಡ್ಡ ರೋಗವಾಗಿದೆ. 1913ರಿಂದ ಕ್ಷಯರೋಗದ ಬಗ್ಗೆ ಮಾಹಿತಿ ದೊರೆಯುತ್ತದೆ. 1926–27ರಲ್ಲಿ ಡಾ.ಪಿ.ಎಸ್.ಚಂದ್ರಶೇಖರ್ ಅವರು ನಡೆಸಿದ ಅಧ್ಯಯನವು ಬೆಂಗಳೂರಿನಲ್ಲಿ ಕ್ಷಯ ರೋಗವು ಹೇಗಿತ್ತು ಎನ್ನುವುದರ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಅಂಕಿಅಂಶಗಳ ಪ್ರಕಾರ 1913ರಿಂದ 1926ರವರೆಗೆ ಕ್ರಮವಾಗಿ 144, 189, 192, 208, 296, 278, 291, 273, 266, 303, 319, 383, 391, 327 ಸಾವುಗಳು ಕ್ಷಯದಿಂದಾಗಿ ಸಂಭವಿಸಿವೆ. ಬೆಂಗಳೂರು ನಗರದಲ್ಲಿಯೇ ಶೇಕಡ 21.4ರಷ್ಟು ಕ್ಷಯರೋಗಿಗಳಿದ್ದರೆಂದು ದಾಖಲಿಸಲಾಗಿದೆ. ಗಮನಾರ್ಹ ಅಂಶವೆಂದರೆ ಹಿಂದೂಗಳಲ್ಲಿ ಗಂಡಸರಿಗೆ ಕ್ಷಯವು ಹೆಚ್ಚಾಗಿ ಬರುತ್ತಿತ್ತು. ಮುಸಲ್ಮಾನರು ಮತ್ತು ಕ್ರೈಸ್ತರಲ್ಲಿ ಹೆಂಗಸರನ್ನು ಹೆಚ್ಚಾಗಿ ಈ ರೋಗವು ಕಾಡುತ್ತಿತ್ತು. ಅರಳೆಪೇಟೆ, ಗಾಣಿಗರಪೇಟೆ, ಚಾಮರಾಜಪೇಟೆಗಳಲ್ಲಿ ಹೆಚ್ಚಿನ ಸಂಖ್ಯೆಯ ಕ್ಷಯರೋಗಿಗಳಿದ್ದು ಸಾವುಗಳು ಕೂಡಾ ಹೆಚ್ಚಾಗಿ ಇಲ್ಲಿಯೇ ಸಂಭವಿಸಿವೆ. ಬೆಂಗಳೂರಿನ ಸುತ್ತಮುತ್ತಲೂ ಕೂಡ ಕ್ಷಯರೋಗವು ಹೆಚ್ಚಾಗಿತ್ತು. ಮುಖ್ಯವಾಗಿ ಆನೇಕಲ್ಲು, ಸರ್ಜಾಪುರ, ವರ್ತೂರು, ಶೆಟ್ಟಿಹಳ್ಳಿ ಮತ್ತು ಯಲಹಂಕಗಳಲ್ಲಿ ಕ್ಷಯರೋಗ ವ್ಯಾಪಿಸಿತ್ತು.

ಲೇಡಿ ವಿಲ್ಲಿಂಗ್‌ಟನ್ ಕ್ಷಯ ಆಸ್ಪತ್ರೆಗೆ ಗ್ವಾಲಿಯರ್ ಮಹಾರಾಜರಾದ ಶ್ರೀ ಜಿವಾಜಿರಾವ್ ಸಿಂಧಿಯ ಅವರು ಜೂನ್ 22, 1936ರಲ್ಲಿ ಶಿಲಾನ್ಯಾಸ ಮಾಡಿದರು. 1939ರ ಮಾರ್ಚ್ 28ರಂದು ಇಪ್ಪತ್ತು ಹಾಸಿಗೆಗಳುಳ್ಳ ಆಸ್ಪತ್ರೆಯು ಆರಂಭವಾಯಿತು. ಕೆಂಪೇಗೌಡ ರಸ್ತೆಯಲ್ಲಿ ಲೇಡಿ ವಿಲ್ಲಿಂಗ್‌ಟನ್ ಕ್ಷಯ ಕೇಂದ್ರವಿತ್ತು. ಕೆಂಪೇಗೌಡ ಚಿತ್ರಮಂದಿರದ ಎದುರಿಗಿದ್ದ ಈ ಆಸ್ಪತ್ರೆಯು ನಂತರದ ದಿನಗಳಲ್ಲಿ ಲೇಡಿ ವಿಲ್ಲಿಂಗ್‌ಟನ್ ಕ್ಷಯ ಪ್ರಾತ್ಯಕ್ಷಿಕಾ ಹಾಗೂ ತರಬೇತಿ ಕೇಂದ್ರವಾಯಿತು.

ಎಸ್.ಡಿ.ಎಸ್. ಕ್ಷಯ ಮತ್ತು ಎದೆಯ ರೋಗಗಳ ಆಸ್ಪತ್ರೆ

1944 ಡಿಸೆಂಬರ್ 11ರಂದು ಮೈಸೂರಿನ ಮಹಾರಾಜರು ಕ್ಷಯರೋಗದ ಆಸ್ಪತ್ರೆಗೆ ಶಿಲಾನ್ಯಾಸ ಮಾಡಿದರು. 1948 ಜನವರಿ 30 ರಂದು 50 ಹಾಸಿಗೆಗಳ ಸೌಲಭ್ಯವುಳ್ಳ ಆಸ್ಪತ್ರೆಯಾಗಿ ಉದ್ಘಾಟನೆಯಾಯಿತು. ಶ್ರೀ ದೇವರಾವ್ ಶಿವರಾಮ್‌ರವರು ತಮ್ಮ ಪತ್ನಿ ಶ್ರೀಮತಿ ಶಾಂತಾಬಾಯಿಯವರ ಹೆಸರಿನಲ್ಲಿ ಒಂದು ಲಕ್ಷರೂಪಾಯಿ ದಾನಮಾಡಿದರು. ಆದ್ದರಿಂದ ಈ ಆಸ್ಪತ್ರೆಗೆ ಎಸ್.ಡಿ.ಎಸ್. ಸ್ಯಾನಿಟೋರಿಯಮ್ ಎಂದೇ ಹೆಸರಿಡಲಾಯಿತು.

ಮುಂದೆ ಎಸ್.ಡಿ.ಎಸ್. ಕ್ಷಯ ಮತ್ತು ಎದೆಯ ರೋಗಗಳ ಆಸ್ಪತ್ರೆಯೆಂದು ಮರುನಾಮಕರಣ ಮಾಡಲಾಯಿತು. 1957ರಲ್ಲಿ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದ ಬೋಧಕ ಆಸ್ಪತ್ರೆಯಾಗಿ ಸ್ನಾತಕ ಮತ್ತು ಸ್ನಾತಕೋತ್ತರ

ವಿದ್ಯಾರ್ಥಿಗಳಿಗೆ ವರದಾನವಾಯಿತು.

1947ರಲ್ಲಿ ಸಂಸ್ಥೆ ಆರಂಭವಾದಾಗ ಆಸ್ಪತ್ರೆಯು ಬೆಂಗಳೂರು ನಗರದಿಂದ ದೂರವಿತ್ತು. ಅಲ್ಲಿ ದಟ್ಟತೋಪು, ತಂಪಾದ ಹವಾಮಾನದಿಂದಾಗಿ ಶುದ್ಧ ಹವೆಯಿಂದ ಕೂಡಿದ್ದು, ಪರಿಸರವು ಕ್ಷಯ ರೋಗವನ್ನು ಗುಣಪಡಿಸಲು ಹೇಳಿ ಮಾಡಿಸಿದಂತಿತ್ತು.

ಈ ಆಸ್ಪತ್ರೆಯು ಕ್ಷಯರೋಗಿಗಳಿಗೆ ದೀರ್ಘ ಕಾಲದ ಚಿಕಿತ್ಸೆ ಹಾಗೂ ಪುನರ್ವಸತಿಗೆ ಗಮನ ನೀಡಿ, ನಂತರ ಮನೆಯವರಿಗೆ ತಿಳಿಹೇಳಿ ಮತ್ತು ಕ್ಷಯರೋಗ ವಾಸಿಯಾದವರಿಗೆ ಎಲ್ಲರಂತೆ ಬದುಕುವ ಅವಕಾಶವನ್ನು ಒದಗಿಸುತ್ತಿತ್ತು. ಈ ರೀತಿ ಕ್ಷಯ ವಾಸಿಯಾದವರನ್ನು ಪುವ್ಯವಸ್ಥಿತರನ್ನಾಗಿ ಮಾಡುವ ಕಾರ್ಯಕ್ರಮ ಅತ್ಯಂತ ಸ್ತುತ್ಯಾರ್ಹವಾಗಿತ್ತು. ಏಕೆಂದರೆ ಒಂದು ಕಾಲದಲ್ಲಿ ಕ್ಷಯ ಎಂದರೆ ಸಾವಿನ ರೂಪವೆಂದೇ ಭಾವಿಸಲಾಗುತ್ತಿತ್ತು. ಕ್ಷಯರೋಗಿಗಳನ್ನು ಕುಷ್ಠರೋಗಿಗಳಂತೆ ದೂರವಿರಿಸುವ ಪದ್ಧತಿಯಿತ್ತು. ಮನೆಯಲ್ಲಿ ಇಟ್ಟುಕೊಂಡು ಚಿಕಿತ್ಸೆ ನಡೆಸುವುದಕ್ಕೂ ಹೆದರುತ್ತಿದ್ದರು. ಹಳೆಯ ಸಿನೆಮಾಗಳಲ್ಲಿ ಕೂಡ ಇದನ್ನು ಪ್ರಧಾನವಾಗಿ ತೋರಿಸಿದ ಉದಾಹರಣೆಗಳಿವೆ. ಹೀಗಾಗಿ ಕ್ಷಯ ಮತ್ತು ವಿವಿಧ ಸೋಂಕು ರೋಗಿಗಳಿಗಾಗಿಯೇ ಒಂದು ಆಸ್ಪತ್ರೆಯನ್ನು ಬೆಂಗಳೂರಿಂದ ಹೊರಗೆ ಹಳೆಯ ಮದ್ರಾಸ್ ರಸ್ತೆಯಲ್ಲಿ ಪ್ರಾರಂಭಿಸಿ, ರೋಗನಿವಾರಣೆಗೆ ಪ್ರಯತ್ನಪಡಲಾಗಿತ್ತು. ಈ ಆಸ್ಪತ್ರೆಯನ್ನು 'ಐಸೋಲೇಶನ್ ಆಸ್ಪತ್ರೆ' ಎಂದು ಕರೆಯಲಾಯಿತು.

ಕ್ಷಯರೋಗ ಸಾಂಕ್ರಾಮಿಕ ರೋಗವಾಗಿದ್ದು ಪ್ರಮುಖವಾಗಿ ಗಾಳಿಯಿಂದ ಹರಡುವ ರೋಗ. ವಿಶ್ವ ಆರೋಗ್ಯ ಸಂಸ್ಥೆಯು 2000 ನೆಯ ವರ್ಷದಲ್ಲಿ ನೀಡಿದ ವರದಿ ಪ್ರಕಾರ ಭಾರತದಲ್ಲಿಯೇ ಪ್ರತಿವರ್ಷ ಇಪ್ಪತ್ತು ಲಕ್ಷ ಜನರು ಈ ರೋಗದಿಂದ ಮರಣ ಹೊಂದುತ್ತಿದ್ದಾರೆ. ಈ ರೋಗವನ್ನು ಹತೋಟಿಯಲ್ಲಿಡಬಲ್ಲ ಲಸಿಕೆ ಮತ್ತು ಪ್ರತಿಜೈವಿಕಗಳು ಇದ್ದರೂ ಅವೆಲ್ಲವೂ ಹಳೆಯದಾಗಿ ಹೋಗಿವೆ. ಕ್ಷಯ ಅಜೇಯವಾಗಿ ಉಳಿದಿದೆ. ಕ್ಷಯದ ಬಗ್ಗೆ ಸಂಶೋಧನೆ ಮಾಡಬಲ್ಲಂತಹ ಉತ್ಸಾಹಿಗಳು ಕಡಿಮೆ ಇದ್ದರೂ ಬೆಂಗಳೂರಿನ 'ಆಸ್ಟ್ರಜೆನೆ' ಸಂಸ್ಥೆಯು ಈ ನಿಟ್ಟಿನಲ್ಲಿ ಸಂಶೋಧನೆ ಕೈಗೊಂಡಿದೆ. ಸುಮಾರು 65 ಜನ ಸಂಶೋಧಕರು ಇಲ್ಲಿ ಕ್ಷಯ ನಿವಾರಣೆ ಕುರಿತು ಸಂಶೋಧನೆ ನಡೆಸುತ್ತಿದ್ದಾರೆ.

ಕುಷ್ಠರೋಗ ಆಸ್ಪತ್ರೆ

ಕುಷ್ಠರೋಗ ಅತ್ಯಂತ ಭಯಾನಕ ರೋಗವಾಗಿದ್ದು ಇಂದಿಗೂ ಕುಷ್ಠರೋಗಿಯನ್ನು ಅತ್ಯಂತ ಕೀಳಾಗಿ ಕಾಣಲಾಗುತ್ತಿದೆ. ಅವರನ್ನು ದೂರವಿರಿಸುವ ಪದ್ಧತಿಯೂ ಕಡಿಮೆಯಾಗಿಲ್ಲ. ಬೆಂಗಳೂರಿನ ವಿಚಾರದಲ್ಲಿ ಹೇಳುವುದಾದರೆ 1845 ರಲ್ಲಿ ಬೆಂಗಳೂರಿನ ಪ್ರಮುಖ ಭಾಗವಾದ ಪೇಟೆಯಲ್ಲಿ ಸಣ್ಣದಾಗಿ ಕುಷ್ಠರೋಗದ ಆಸ್ಪತ್ರೆ ಪ್ರಾರಂಭವಾಯಿತು. ಅಂದಿನ ನಗರದ ಹೊರಭಾಗವಾದ ಮಾಗಡಿ ರಸ್ತೆಯಲ್ಲಿ ದೊಡ್ಡ ಆಸ್ಪತ್ರೆಯನ್ನು 1857 ರಲ್ಲಿ ಕಟ್ಟಲಾಯಿತು. ಈ ಆಸ್ಪತ್ರೆಯಲ್ಲಿ ಇಪ್ಪತ್ತೈದು ರೋಗಿಗಳು ಮತ್ತು 1874 ರಲ್ಲಿ ಇಪ್ಪತ್ತಾರು ರೋಗಿಗಳಿದ್ದರೆಂಬ ದಾಖಲೆಗಳಿವೆ.

ಈ ಸಂಸ್ಥೆಯನ್ನು 1957 ರವರೆಗೆ 'ಸಾಂಸರ್ಗಿಕ ರೋಗಗಳ ಆಸ್ಪತ್ರೆ'ಯೆಂದು ಕರೆಯಲಾಗುತ್ತಿದ್ದು, 1958ರ ಹೊತ್ತಿಗೆ ಕೇಂದ್ರ ಕುಷ್ಠರೋಗಿಗಳ ಆಶ್ರಯಧಾಮ ಅಥವಾ 'ಸೆಂಟ್ರಲ್ ಲೆಪ್ರಸೋರಿಯಂ' ಎಂದು ಹೆಸರನ್ನು ಬದಲಿಸಲಾಯಿತು. ಆರಂಭದಲ್ಲಿ ಔಷಧಿ ಚಿಕಿತ್ಸೆ ಮತ್ತು ಪುನರ್ವಸತಿ ಸೇವೆಗಳು ಮಾತ್ರ ಲಭ್ಯವಿದ್ದು, 1964–65ರಲ್ಲಿ ಶಸ್ತ್ರ ಚಿಕಿತ್ಸಾ ವಿಭಾಗವೂ ಆರಂಭವಾಯಿತು. ಭಾರತ ಸರ್ಕಾರದ ರಾಷ್ಟ್ರೀಯ ಕುಷ್ಠ ನಿವಾರಣ ಕಾರ್ಯಕ್ರಮವು

1954–55ರ ಹೊತ್ತಿಗೆ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಈ ಕಾರ್ಯಕ್ರಮದಲ್ಲಿ ಮೂರು ಮುಖ್ಯ ಗುರಿಗಳಿದ್ದವು. ಮೊದಲನೆಯದು ಸೋಂಕು ಹೊಂದಿದವರಿಗೆ ಚಿಕಿತ್ಸೆ ನೀಡಿ ಸೋಂಕುರಹಿತರನ್ನಾಗಿ ಮಾಡಿ ಗುಣಪಡಿಸುವುದು. ಎರಡನೆಯದು ಸೋಂಕು ಪೀಡಿತ ವ್ಯಕ್ತಿಗಳ ಅಂಗಾಂಗಗಳು ವಿರೂಪಗೊಳ್ಳುವುದನ್ನು ತಡೆಗಟ್ಟುವುದು. ಮೂರನೆಯದು ಜನಸಮುದಾಯದಲ್ಲಿ ಕುಷ್ಠರೋಗವು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು.

ಎಚ್.ಎ.ಎಲ್. ಆಸ್ಪತ್ರೆ

1940 ರಲ್ಲಿ ಎಚ್. ಎ. ಎಲ್ ಆಸ್ಪತ್ರೆಯು ಪ್ರಾಥಮಿಕ ಚಿಕಿತ್ಸಾ ಕೇಂದ್ರವಾಗಿ ಪ್ರಾರಂಭವಾಯಿತು. 1952 ರಲ್ಲಿ ಹೊರರೋಗಿಗಳ ವಿಭಾಗ ಮತ್ತು 1953 ರಲ್ಲಿ ಒಂದು ಹೆರಿಗೆ ವಾರ್ಡ್, ಒಂದು ಕ್ಷಯದ ವಾರ್ಡ್ ಮತ್ತು ಸಾಮಾನ್ಯ ರೋಗಗಳ ವಾರ್ಡನ್ನು ಸ್ಥಾಪಿಸಲಾಯಿತು.

ಭಾರತೀಯ ವೈದ್ಯಕೀಯ ಶಿಕ್ಷಣ

ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆಯು 1924ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಯಿತು.

ಮುಕ್ತಾಯ

ಬೆಂಗಳೂರಿನಲ್ಲಿ ಪ್ರಾರಂಭದ ಕಾಲದಿಂದ (1957ರವರೆಗೆ) ಇದ್ದ ಡಿಸ್ಪೆನ್ಸರಿ ಸರ್ಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ'ಗಳನ್ನು ಗಮನಿಸಿದಾಗ, ಅವುಗಳು ಬೆಳೆಯಲು ಸರ್ಕಾರ, ಖಾಸಗಿ ಸಂಸ್ಥೆಗಳು ವ್ಯಕ್ತಿಗಳು ನೀಡಿದ ನೆರವು ಎದ್ದುಕಾಣುತ್ತದೆ. ಅಂದಿನ ಕಾಲಕ್ಕೆ ಅವರು ನೀಡಿದ ನೆರವಿನಿಂದಾಗಿ ಸಹಸ್ರಾರು ಜನರು ಉಪಕೃತರಾಗಿದ್ದಾರೆ. ಈ ಆಸ್ಪತ್ರೆಗಳು ಮುಂದೆಯೂ ನಿರಂತರವಾಗಿ ಸೇವೆ ಸಲ್ಲಿಸುವುದರಲ್ಲಿ ಸಂಶಯವಿಲ್ಲ. ಆದರೆ ಅಂದಿನ ಸ್ಥಿತಿಗೂ ಇಂದಿನ ಸ್ಥಿತಿಗೂ ಬಹಳಷ್ಟು ಬದಲಾವಣೆಗಳಾಗಿವೆ. ಆಧುನಿಕ ವಿಜ್ಞಾನವು ಮುಂದು ವರೆದಂತೆ ವೈದ್ಯವಿಜ್ಞಾನವೂ ಮುಂದುವರಿದಿದ್ದು ಅದಕ್ಕೆ ಬೇಕಾದ ಆಧುನಿಕ ಸೌಲಭ್ಯಗಳು ಇವುಗಳಲ್ಲಿ ಲಭ್ಯವಿವೆ.

1957ರ ನಂತರ ಹಳೆಯ ಆಸ್ಪತ್ರೆಗಳು ಮತ್ತಷ್ಟು ವಿಸ್ತಾರವಾಗಿ ಬೆಳೆದು ವೈದ್ಯಶಿಕ್ಷಣ, ಸಂಶೋಧನೆ ಮುಂತಾದವುಗಳ ಸೌಲಭ್ಯಗಳನ್ನು ಪಡೆದುಕೊಂಡಿದೆ. ಹೊಸ ಸಂಶೋಧನೆಗಳಿಂದಾಗಿ ಚಿಕಿತ್ಸಾ ಕ್ರಮಗಳಲ್ಲಿಯೂ ಗಮನಾರ್ಹ ಬದಲಾವಣೆಗಳಾಗಿವೆ. ಜೊತೆಗೆ ಹೊಸ ಹೊಸ ಬೃಹದಾಸ್ಪತ್ರೆಗಳೂ ಪ್ರಾರಂಭವಾಗಿವೆ. ವಿಕ್ಟೋರಿಯಾ ಆಸ್ಪತ್ರೆಯ ಭಾಗವಾಗಿದ್ದ ಜಯದೇವ ಹೃದ್ರೋಗ ವಿಭಾಗ ಇಂದು 'ಜಯದೇವ ಹೃದ್ರೋಗ ಸಂಶೋಧನಾ ಕೇಂದ್ರ ಮತ್ತು ಆಸ್ಪತ್ರೆ' ಯಾಗಿ ಪ್ರತ್ಯೇಕವಾಗಿ ಬೆಳೆದಿದೆ. 'ಹುಚ್ಚಾಸ್ಪತ್ರೆ' ಯು 'ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ' ಯಾಗಿದೆ. ಕಿದ್ವಾಯಿ ಸ್ಮಾರಕ ಸಂಸ್ಥೆ, ವೊಕಾರ್ಡ್, ಬೆಂಗಳೂರು ಆಂಕಾಲಜಿ ಸಂಸ್ಥೆ ನಾರಾಯಣ ಹೃದಯಾಲಯ, ಮುಂತಾದವು ಇಡೀ ಭಾರತದಲ್ಲಿ ತಮ್ಮ ವಿಶೇಷತೆಗಳಿಗಾಗಿ ಹೆಸರುಗಳಿಸಿರುವ ಸಂಸ್ಥೆಗಳಾಗಿವೆ. ಇಂದು ಬೆಂಗಳೂರು ವೈದ್ಯಕೀಯ ನಗರವೆಂದೇ ಪ್ರಸಿದ್ಧವಾಗಿದೆ.

57. ಬೆಂಗಳೂರು ಕಂಟೋನ್ಮೆಂಟ್: ಕೆಲವು ನೋಟಗಳು

ಡಾ. ಎಸ್. ಕೆ. ಅರುಣಿ

ಬೆಂಗಳೂರು ಕಂಟೋನ್ಮೆಂಟಿಗೆ 2009ರಲ್ಲಿ 200 ವರ್ಷಗಳು ತುಂಬಿದವು. ಬೆಂಗಳೂರು ಕಂಟೋನ್ಮೆಂಟ್ ನಮ್ಮ ನಾಡಿನ ಆಧುನಿಕ ಸಂಸ್ಕೃತಿ ಹಾಗೂ ವೈಚಾರಿಕತೆಗೆ ಅವ್ಯಕ್ತ ಹಾಗೂ ವ್ಯಕ್ತ ರೂಪದಲ್ಲಿ ಕೊಡುಗೆ ನೀಡಿವೆ. 1809ರಲ್ಲಿ ಸ್ಥಾಪನೆಯಾದ ಬ್ರಿಟಿಷ್ ಕಂಟೋನ್ಮೆಂಟ್ ಮೂಲದಲ್ಲಿ ಬ್ರಿಟಿಷರ ಸೈನ್ಯ ಹಾಗೂ ಅವರ ಹಿತಾಸಕ್ತಿ ಕಾಯ್ದುಕೊಳ್ಳುವ ಸೀಮಿತ ಉದ್ದೇಶ ಹೊಂದಿತ್ತು. ನಂತರ ಅದು ಸಾಮ್ರಾಜ್ಯಶಾಹಿ ಧೋರಣೆಯೊಂದಿಗೆ ಐರೋಪ್ಯ ಸಂಸ್ಕೃತಿಯ ಕೇಂದ್ರ ಸ್ಥಾನವಾಯಿತು. 34 ಚದರ ಕಿ.ಮೀ ವಿಸ್ತೀರ್ಣದ ಬ್ರಿಟಿಷ್ ಕಂಟೋನ್ಮೆಂಟ್ ಇಂದಿನ ರಾಜಭವನದಿಂದ ಎನ್. ಈ. ಇ. ಎಫ್ (ಬಿನ್ನಮಂಗಲ)ವರೆಗೂ ಹಾಗೂ ದಕ್ಷಿಣದಲ್ಲಿ ಅಗರದಿಂದ ಉತ್ತರದಲ್ಲಿ ಟ್ಯಾನರಿ ರಸ್ತೆಯವರೆಗೂ ವಿಸ್ತರಿಸಿಕೊಂಡಿತ್ತು. ಇದು ಪ್ರಾರಂಭಿಕವಾಗಿ ಹಲಸೂರು ಹಾಗೂ ದೊಮ್ಮಲೂರು ಬಳಿಯ ಎರಡು ಪ್ರತ್ಯೇಕ ಸೇನಾ ನೆಲೆಗಳಿಗೆ ಮಾತ್ರ ಕಂಟೋನ್ಮೆಂಟ್ ಯೋಜಿತವಾಗಿತ್ತು. ಕಾಲಕ್ರಮೇಣ ಬ್ರಿಟಿಷರು ಆರ್ಥಿಕವಾಗಿ ಪ್ರಬಲರಾದಂತೆ ಬೆಂಗಳೂರು ಒಳಗೊಂಡು ಭಾರತದ ಇತರೆ ಬ್ರಿಟಿಷ್ ಕಂಟೋನ್ಮೆಂಟ್‌ಗಳನ್ನು ಸುಧಾರಿಸುವುದರ ಜತೆಗೆ ಐರೋಪ್ಯ ಮಾದರಿಯ ನಗರಗಳನ್ನಾಗಿ ಅಭಿವೃದ್ಧಿಪಡಿಸಿದರು. ಭಾರತದಲ್ಲಿ ಬ್ರಿಟಿಷರ 40 ಕ್ಕೂ ಹೆಚ್ಚು ಕಂಟೋನ್ಮೆಂಟ್‌ಗಳಿದ್ದವು. ಅವುಗಳಲ್ಲಿ ಬೆಂಗಳೂರು, ಬೆಳಗಾವಿ, ಲಿಂಗಸುಗೂರು ಇತ್ಯಾದಿ ಕರ್ನಾಟಕದಲ್ಲಿದ್ದವು.

ಕಂಟೋನ್ಮೆಂಟ್ ಸ್ಥಾಪಿಸುವ ಉದ್ದೇಶ–ಬ್ರಿಟಿಷ್ ಸೈನ್ಯದ ಸುರಕ್ಷತೆ, ತನ್ನ ವಶದಲ್ಲಿರುವ ಪ್ರದೇಶಗಳ ಸ್ಥಳೀಯರು ಅಥವಾ ಅರಸರು ಪುನಃ ದಂಗೆ ಏಳಬಾರದು ಎಂಬುದಾಗಿತ್ತು. ಬೆಂಗಳೂರಿನ ಹವಾಗುಣ, ಪ್ರಶಾಂತತೆ ಕಾರಣಗಳಿಗಾಗಿ ಹಾಗೂ ಮದ್ರಾಸ್ ಪ್ರಾಂತ್ಯ ಮತ್ತು ಮೈಸೂರು ಪ್ರಾಂತ್ಯಗಳಿಗೆ ಹೆಬ್ಬಾಗಿಲಿನಂತಿದೆ ಎಂಬ ಕಾರಣಕ್ಕೆ ಈ ಪ್ರದೇಶವನ್ನು ಬ್ರಿಟಿಷರು ತಮ್ಮ ಕಂಟೋನ್ಮೆಂಟ್‌ಗಾಗಿ ಆಯ್ಕೆ ಮಾಡಿಕೊಂಡರು. ಸುಮಾರು 150 ವರ್ಷ ಕಾಲ ಬ್ರಿಟಿಷರ ಕಪಿಮುಷ್ಠಿಯಲ್ಲಿದ್ದರೂ ಸ್ಥಳೀಯ ಸಂಸ್ಕೃತಿ ಹಾಗೂ ಸಂಪ್ರದಾಯಗಳಿಗೆ ಮನ್ನಣೆ ನೀಡಿ ತನ್ನೊಂದಿಗೆ ರೂಢಿಸಿಕೊಂಡಿತು. ಈ ನೆಲದ ಸೊಗಡಿನೊಂದಿಗೆ ಐರೋಪ್ಯ ಸಂಸ್ಕೃತಿಯನ್ನು ಸುತ್ತಲಿನ ಪ್ರದೇಶಗಳಲ್ಲಿ ಹರಡುತ್ತಾ ಆಧುನಿಕ ಭಾರತದ ಬಹುಮೆಚ್ಚಿನ ನಗರವಾಗಿ ಬೆಂಗಳೂರನ್ನು ರೂಪಿಸುವಲ್ಲಿ ಬೆಂಗಳೂರಿನ ಬ್ರಿಟಿಷ್ ಕಂಟೋನ್ಮೆಂಟ್ ಪಾತ್ರ ಬಹು ಪ್ರಮುಖವಾದದ್ದು. ಶಿಕ್ಷಣ, ವಿಜ್ಞಾನ, ಆಧುನಿಕ ವೈಚಾರಿಕತೆ ಮತ್ತಿತರ ಪ್ರಮುಖ ರಂಗಗಳಿಗೆ ಹೊಸ ಆಲೋಚನೆಗಳನ್ನು ಒದಗಿಸಿದ್ದು ಕಂಟೋನ್ಮೆಂಟ್.

ಸ್ಥಾಪನೆ

ದಾಖಲೆಗಳ ಪ್ರಕಾರ, ಬೆಂಗಳೂರು ಕಂಟೋನ್ಮೆಂಟ್ ಕ್ರಿ. ಶ. 1809ರಲ್ಲಿ ಸ್ಥಾಪನೆಗೊಂಡಿದ್ದರ ಹಿಂದೆ ಒಂದು ಕುತೂಹಲಕರ ಕಥೆ ಇದೆ. 1799ರಲ್ಲಿ ಟಿಪ್ಪುಸುಲ್ತಾನನ್ನು ಸೋಲಿಸಿ ಮೈಸೂರು ರಾಜ್ಯವನ್ನು ವಶಕ್ಕೆ ತೆಗೆದುಕೊಂಡ ನಂತರ ಬ್ರಿಟಿಷರು ಟಿಪ್ಪುವಿನ ಅಳಿದುಳಿದ ಸೈನಿಕರು ಪುನಃ ಸಂಘಟಿತರಾಗಿ ತಮ್ಮ ವಿರುದ್ಧ ದಂಗೆ ಏಳಬಾರದು ಎಂಬ ಉದ್ದೇಶದಿಂದ ಶ್ರೀರಂಗಪಟ್ಟಣದಲ್ಲಿ ಬ್ರಿಟಿಷ್ ಕಂಟೋನ್ಮೆಂಟನ್ನು ಸ್ಥಾಪಿಸಿದರು.

ಆದರೆ, ಬ್ರಿಟಿಷರಿಗೆ ಟಿಪ್ಪುವಿನ ಸೈನಿಕರಿಗಿಂತಲೂ ಅಲ್ಲಿಯ ಸೊಳ್ಳೆಗಳು ತುಂಬಾ ತೊಂದರೆ ಕೊಟ್ಟವು. ಸೊಳ್ಳೆಗಳನ್ನು ಎದುರಿಸಲಾಗದೇ ಬ್ರಿಟಿಷ್ ಸೈನ್ಯ ಶ್ರೀರಂಗಪಟ್ಟಣದಿಂದ ಬೆಂಗಳೂರಿನ ಹೊರವಲಯದಲ್ಲಿ ಕಂಟೋನ್ಮೆಂಟನ್ನು ಸ್ಥಾಪಿಸಲು ಯೋಜಿಸಿತು. ಬೆಂಗಳೂರಿನ ಪೂರ್ವ ದಿಕ್ಕಿನಲ್ಲಿರುವ ಹಲಸೂರು ಹಾಗೂ ದೊಮ್ಮಲೂರು ಒಳಗೊಂಡ ಹಲವು ಗ್ರಾಮಗಳನ್ನು ವ್ಯಾಪಿಸಿದ ಬ್ರಿಟಿಷ್ ಕಂಟೋನ್ಮೆಂಟ್ ಉದಯವಾಯಿತು.

ಸ್ಥಳ ಆಯ್ಕೆ ಹಿನ್ನೆಲೆ

ಕ್ರಿ. ಶ. 1800ರೊಳಗೆ ಬ್ರಿಟಿಷರಿಗೆ ಬೆಂಗಳೂರು ಚಿರಪರಿಚಿತ ಸ್ಥಳವಾಗಿತ್ತು. 3ನೇ ಆಂಗ್ಲೋ–ಮೈಸೂರು ಯುದ್ಧ (ಕ್ರಿ. ಶ. 1791ರಲ್ಲಿ) ನಡೆದ ಸಂದರ್ಭದಲ್ಲಿ ಬ್ರಿಟಿಷ್ ಸೈನ್ಯ ಬೆಂಗಳೂರನ್ನು ವಶಪಡಿಸಿಕೊಂಡಿತು. ಮುಂದಾಲೋಚನೆಯಾಗಿ ಈಗಿನ ಮೇಕ್ರಿ ಸರ್ಕಲ್ ಬಳಿಯ ವಾಯು ಸೇನಾ ನೆಲೆಯ ಪ್ರದೇಶ ಹಾಗೂ ದೊಮ್ಮಲೂರು ಬಳಿಯ ಕಮಾಂಡೋ ಆಸ್ಪತ್ರೆಯ ಮುಂಭಾಗದ ಸೇನಾ ನೆಲೆಯ ಪ್ರದೇಶದಲ್ಲಿ ಬ್ರಿಟಿಷರ ಸೈನ್ಯವನ್ನು ಕ್ಯಾಂಪ್‌ಗಳ ರೂಪದಲ್ಲಿ ಇರಿಸಿದ್ದರು. 3ನೇ ಆಂಗ್ಲೋ–ಮೈಸೂರು ಯುದ್ಧದ ನಕ್ಷೆಗಳಲ್ಲಿ ಆ ಕಾಲದ ಬ್ರಿಟಿಷರ ಈ ಠಾಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಟಿಪ್ಪು ಸುಲ್ತಾನನನ್ನು ಸಂಪೂರ್ಣವಾಗಿ ಸೋಲಿಸಿದ ನಂತರ ಬ್ರಿಟಿಷರು ತಮ್ಮ ಅಧೀನದಲ್ಲಿದ್ದ ರಾಮಗಿರಿ, ಸಾವನದುರ್ಗ ಅಥವಾ ಹೊಸೂರು ಕೋಟೆಗಳನ್ನು ಬಿಟ್ಟು ಬದಲಿಗೆ ಬೆಂಗಳೂರನ್ನು ಮಾತ್ರ ಕಂಟೋನ್ಮೆಂಟ್‌ಗೆ ಆಯ್ಕೆ ಮಾಡಿಕೊಂಡಿರುವ ಉದ್ದೇಶ ಸ್ಪಷ್ಟ–ಇದು ಆಯಕಟ್ಟಿನ ಸ್ಥಳ. 1800ರ ಅವಧಿಗೆ ಬ್ರಿಟಿಷರು ಮದ್ರಾಸ್ ಪ್ರಾಂತ್ಯದಲ್ಲಿ ಪ್ರಬಲವಾಗಿ ನೆಲೆಯೂರಿದ್ದರು. ಮೈಸೂರು ಪ್ರಾಂತ್ಯದ ದ್ವಾರದಂತಿದ್ದ ಬೆಂಗಳೂರು ಸೂಕ್ತ ಸ್ಥಳವೆನಿಸಿತು. ಬೆಂಗಳೂರು ಪ್ರದೇಶದಿಂದ ಮೈಸೂರು, ಮಂಗಳೂರು, ಚಿತ್ರದುರ್ಗ ಅಥವಾ ಮಲಬಾರ ಸ್ಥಳಗಳಿಗೆ ಬ್ರಿಟಿಷ್ ಸೈನ್ಯವನ್ನು ತಕ್ಷಣವೇ ರವಾನಿಸಬಹುದಿತ್ತು. ಈ ಒಂದು ಕಾರಣದಿಂದಾಗಿಯೇ ಸ್ವತಂತ್ರ ಭಾರತದ ನಂತರವೂ ಭಾರತೀಯ ಸೇನಾ ನೆಲೆಯನ್ನು ಬೆಂಗಳೂರಿನಲ್ಲಿ ಉಳಿಸಿಕೊಂಡಿದ್ದು.

ಕಾಲೋನಿಯಾಗಿ ಪರಿವರ್ತನೆ

ಬೆಂಗಳೂರು ಬ್ರಿಟಿಷ್ ಕಂಟೋನ್ಮೆಂಟ್ ಪ್ರಾರಂಭದಲ್ಲಿ ಕೇವಲ ಒಂದು ಸೈನ್ಯ ಜಮಾವಣೆಯ ಠಾಣವಾಗಿತ್ತು. ಹಲಸೂರು ಕೆರೆಯ ಸುತ್ತಲಿನ ಬಯಲು ಪ್ರದೇಶ ಹಾಗೂ ಸೂಳ್ಯ–ದೊಮ್ಮಲೂರು ಗ್ರಾಮಗಳ ಹೊರಪ್ರದೇಶಗಳಲ್ಲಿ ಪ್ರತ್ಯೇಕ ಸೇನಾ ನೆಲೆಗಳಿದ್ದವು. ಸೈನಿಕರ ಆರೋಗ್ಯ, ಸುರಕ್ಷತೆಗೆ ಸಂಬಂಧಿಸಿದಂತೆ ಮತ್ತು ಸ್ವಚ್ಛತೆಗಾಗಿ ಒಳಚರಂಡಿ ಹೀಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು. ಬ್ರಿಟಿಷ್ ಸೈನಿಕರ ಅನುಕೂಲಕ್ಕಾಗಿ ಚರ್ಚ್, ಬಜಾರ್ ಹಾಗೂ ಸೇವಕರ ಕಾಲೋನಿ ಇತ್ಯಾದಿ ಒಂದೊಂದಾಗಿ ನಿರ್ಮಾಣವಾದವು. 1880ರ ಹೊತ್ತಿಗೆ ಬೃಹತ್ ಬ್ರಿಟಿಷ್ ಕಾಲೋನಿಯಾಗಿ ಪರಿವರ್ತನೆಯಾಯಿತು. ಈ ಕಂಟೋನ್ಮೆಂಟ್‌ನಲ್ಲಿ ಬ್ರಿಟಿಷ್ ಅಥವಾ ಐರೋಪ್ಯ ಜನಾಂಗದ ಸೈನ್ಯ ಹಾಗೂ ದೇಶೀಯ (ನೇಟಿವ್ ಟ್ರೂಪ್ಸ್) ಸೈನ್ಯ ಎಂಬ ಎರಡು ದೊಡ್ಡ ಬ್ರಿಟಿಷ್ ಸೇನೆ ಇಲ್ಲಿ ಜಮಾವಣೆ ಮಾಡಲಾಗಿತ್ತು. ಈ ಸೇನಾ ನೆಲೆಯಲ್ಲಿ ಕಾಲ್ದಳ, ಅಶ್ವದಳ, ಕಾವಲು ಪಡೆ, ಪರ್ವತಾರೋಹಿಗಳ ದಳ, ಯಂತ್ರಬಳಸುವ ಸೈನ್ಯ, ಸರಕು ಸಾಗಿಸುವ ಪಡೆ ಇತ್ಯಾದಿ ಸೇನಾ ಪಡೆಗಳು ನೆಲೆಗೊಂಡಿದ್ದವು. ಈ ಸೇನಾ ಪಡೆಗಳನ್ನು ತುಕಡಿಗಳ ಮಾದರಿಯಲ್ಲಿ ನಿಯೋಜಿಸಿ ಪ್ರತ್ಯೇಕ ಬ್ಯಾರಕ್‌ಗಳನ್ನು ನಿರ್ಮಿಸಿ ನೆಲೆಯುರಿಸಲಾಗಿತ್ತು. ಈ ಎಲ್ಲ ಸೈನಿಕರಿಗೆ ಈಗಿನ ದೂರದರ್ಶನ ಕೇಂದ್ರ ಕಛೇರಿಯ ಉತ್ತರದಲ್ಲಿ ಆರ್‌ಟಿ ನಗರಕ್ಕೆ ಹೋಗುವ ಮಾರ್ಗದಲ್ಲಿರುವ ಪ್ಯಾರಾಚೂಟ್ ರಿಜಿಮೆಂಟ್ ಟ್ರೈನಿಂಗ್ ಸೆಂಟರ್ ಹತ್ತಿರದ ಸರ್ಕಲ್ ಒಂದು ಕೇಂದ್ರ ಸ್ಥಳವಾಗಿತ್ತು. ಈಗಲೂ ಈ ವೃತ್ತದಲ್ಲಿ

ಬ್ರಿಟಿಷರ ಕಾಲದ ಸ್ಮಾರಕ ಕಾಣುತ್ತೇವೆ. ಆದರೆ 1860ರ ನಂತರ ಬ್ರಿಟಿಷರು ಭಾರತದಲ್ಲಿ ಭದ್ರವಾಗಿ ನೆಲೆಯೂರಿ ಆರ್ಥಿಕ ಹಾಗೂ ರಾಜಕೀಯವಾಗಿ ಬಲಗೊಳ್ಳುತ್ತಿದ್ದಂತೆ ಬೆಂಗಳೂರು ಒಳಗೊಂಡು ಭಾರತಾದ್ಯಂತ ಬ್ರಿಟಿಷರ ಸೇನಾ ನೆಲೆಗಳನ್ನು ಅಭಿವೃದ್ಧಿಗೊಳಿಸುವುದು ಇಲ್ಲವೇ ಅವುಗಳ ಬಳಿಯಲ್ಲಿಯೇ ಹೊಸ ಕಾಲೋನಿಗಳನ್ನು ರಚಿಸುವ ಸಂಪ್ರದಾಯ ಪ್ರಾರಂಭ ಮಾಡಿದರು. ಇದಕ್ಕೆ ಬೆಂಗಳೂರ ಹೊರತಾಗಲಿಲ್ಲ. ಬ್ರಿಟಿಷ್ ಸೇನಾ ನೆಲೆಗಳು ಪಕ್ಕದ ಗ್ರಾಮಗಳನ್ನು ಅಧೀನಕ್ಕೆ ತೆಗೆದುಕೊಂಡು ಅನೇಕ ಕಾಲೋನಿಗಳ ಮಾದರಿಯಲ್ಲಿ ಆಯೋಜಿಸಿ ಬ್ರಿಟಿಷ್ ಅಥವಾ ಐರೋಪ್ಯ ನಾಗರಿಕರಿಗೆ ಮನೆಗಳನ್ನು ನಿರ್ಮಿಸಲು ಅನುಮತಿ ನೀಡಿತು. ಇದರೊಂದಿಗೆ ಕಂಟೋನ್ಮೆಂಟ್ ಒಂದು 'ಬ್ರಿಟಿಷರ ಕಾಲೋನಿ'ಯಾಗಿ ರೂಪಿತಗೊಂಡಿತು. ಕ್ರೈಸ್ತ ಪಾದ್ರಿಗಳು, ಸೇನಾ ಅಧಿಕಾರಿಗಳು, ವ್ಯಾಪಾರಿಗಳು, ವಿವಿಧ ನಾಗರಿಕ ಸೇವಾ ಅಧಿಕಾರಿಗಳು, ವೈದ್ಯರು ಮತ್ತಿತರರು ಬೆಂಗಳೂರು ಕಂಟೋನ್ಮೆಂಟ್ ಪ್ರದೇಶದಲ್ಲಿ ನೆಲೆಯೂರಿದರು. ವಿವಿಧ ವರ್ಗದ ಹುದ್ದೆಯ ಜನಾಂಗದವರು ಇಲ್ಲಿ ವಾಸಿಸುವುದರೊಂದಿಗೆ ಬೆಂಗಳೂರು ಕಂಟೋನ್ಮೆಂಟ್ ಒಂದು ಬಹುಸಂಸ್ಕೃತಿಯ, ಬಹುಭಾಷಿಕರ ಬ್ರಿಟಿಷ್ ಕಾಲೋನಿಯಾಗಿ ಪರಿವರ್ತನೆಯಾಯಿತು.

ಉಗಮ

ಉತ್ತರ ಹಾಗೂ ದಕ್ಷಿಣ ದಿಕ್ಕಿನ ಪ್ರತ್ಯೇಕವಾದ ಎರಡು ಸೇನಾ ನೆಲೆಗಳನ್ನು ಸಂಪರ್ಕಿಸಲು ರೂಪಿಸಲಾದ ಸೌಥ್ ಪರೇಡ್ ಅಥವಾ ಈಗಿನ ಎಂ.ಜಿ.ರಸ್ತೆಯು ಬೆಂಗಳೂರು ಕಂಟೋನ್ಮೆಂಟ್ ಚರಿತ್ರೆ ಬದಲಾಯಿಸಿದ ರಸ್ತೆ ಎನ್ನಬಹುದು. ಮೂಲತಃ ಇದು ಸೈನಿಕರ ಪರೇಡ್ ಗ್ರೌಂಡ್ ಬದಿಯ ರಸ್ತೆಯಾಗಿದ್ದು, ಕಂಟೋನ್ಮೆಂಟ್ ಪ್ರದೇಶದ ಕೇಂದ್ರ ಸ್ಥಾನವಾಗಿತ್ತು. ಎಂ. ಜಿ. ರಸ್ತೆಯಿಂದ ಇದರ ಉತ್ತರ ಹಾಗೂ ದಕ್ಷಿಣ ದಿಕ್ಕಿನ ವಿವಿಧ ಬಡಾವಣೆಗಳಿಗೆ ಸಂಪರ್ಕಿಸುವ ಮುಖ್ಯರಸ್ತೆ. ಇದರಿಂದ ವಿರಾಮದ ವೇಳೆಯಲ್ಲಿ ಬ್ರಿಟಿಷ್ ಸೈನಿಕರು, ಅಧಿಕಾರಿಗಳು ಸೌಥ್ ಪರೇಡ್ ರಸ್ತೆಯ ವಿವಿಧ ಮಳಿಗೆ, ಹೋಟೆಲ್ ಹಾಗೂ ಮನೋರಂಜನಾ ತಾಣಗಳಲ್ಲಿ ಸೇರುತ್ತಿದ್ದರು. ಕ್ರಮೇಣ ಈ ರಸ್ತೆ ಆಧುನಿಕ ಶೈಲಿಯ ಹಾಗೂ ತಾಣವಾಗಿ ಬೆಳೆಯತೊಡಗಿತು. ಇಂದಿಗೂ ಎಂ. ಜಿ. ರಸ್ತೆ ಬೆಂಗಳೂರಿನ ಪ್ರತಿಷ್ಠಿತ ರಸ್ತೆಗಳಲ್ಲಿ ಒಂದು. ಆಧುನಿಕ ಶೈಲಿಯ ಬಾರ್, ಕ್ಲಬ್ ಹಾಗೂ ದೊಡ್ಡಮಳಿಗೆಗಳನ್ನು ಇಲ್ಲಿ ಕಾಣುತ್ತೇವೆ.

ಕಂಟೋನ್ಮೆಂಟ್ ಹಾಗೂ ಹಳೆ–ಬೆಂಗಳೂರು

ಕೆಂಪೇಗೌಡ ನಿರ್ಮಿಸಿದ ಬೆಂಗಳೂರು, ಆದಿಲ್ ಶಾಹಿಗಳು, ಮರಾಠರು ಹಾಗೂ ಹೈದರಾಲಿ–ಟಿಪ್ಪುಸುಲ್ತಾನರಿಂದ ನಿರ್ಮಿತವಾದ ಒಂದು ಭದ್ರವಾದ ಕೋಟೆಯುಕ್ತ ನಗರವಾಗಿತ್ತು. ದೇವಾಲಯ, ಮಸೀದಿ, ದರ್ಗಾ, ಮಠ ಇತ್ಯಾದಿಗಳಿಂದ ಕೂಡಿದ ಮಧ್ಯಯುಗೀನ ಸಂಸ್ಕೃತಿ ಪ್ರತಿಬಿಂಬಿಸುವ ನಗರವಾಗಿತ್ತು. ಇದಕ್ಕೆ ತದ್ವಿರುದ್ಧವಾದ ಆಧುನಿಕ ಸಂಸ್ಕೃತಿ ಹಾಗೂ ಸೌಕರ್ಯವುಳ್ಳ ಬ್ರಿಟಿಷ್ ಕಂಟೋನ್ಮೆಂಟ್ 19ನೇ ಶತಮಾನದಲ್ಲಿ ಸ್ಥಾಪನೆಯಾಯಿತು. ಕ್ರಮೇಣ ಈ ಎರಡು ನಗರಗಳು ಪರಸ್ಪರ ಅನುಸಂಧಾನ ಪಡೆದು ಆಧುನಿಕ ಭಾರತದ ಬಹುಸಂಸ್ಕೃತಿ, ಭಾಷಿಕ ಹಾಗೂ ಜನಾಂಗದ ಒಂದು ಸಂಯುಕ್ತ ನಗರವಾಗಿ ಬೆಳೆಯಿತು. ಹಳೆಯ ಬೆಂಗಳೂರು ಮೈಸೂರು ಸಂಸ್ಥಾನಕ್ಕೆ ಒಳಪಟ್ಟಿದ್ದರೆ, ಕಂಟೋನ್ಮೆಂಟ್ ಪ್ರದೇಶ ಮದ್ರಾಸ್ ಸರ್ಕಾರಕ್ಕೆ ಒಳಪಟ್ಟಿತ್ತು. ಆಡಳಿತಾತ್ಮಕವಾಗಿ ಮಾತ್ರ ಪ್ರತ್ಯೇಕವಾಗಿದ್ದರೂ ಭಾವನಾತ್ಮಕವಾಗಿ ಈ ಎರಡೂ ಏಕರೂಪತೆಯನ್ನು ಪಡೆದಿದ್ದವು. ಪರಸ್ಪರ ದ್ವೇಷಿಸುತ್ತಿದ್ದರೂ ಕಂಟೋನ್ಮೆಂಟ್ ನಿವಾಸಿಗಳು ಹಳೆಯ ಬೆಂಗಳೂರಿನ ಸ್ಮಾರಕಗಳಾದ ಕಾವಲುಗೋಪುರ, ಲಾಲ್‌ಬಾಗ್ ಇತ್ಯಾದಿ ಬಗ್ಗೆ ವಿಸ್ಮಯ ವ್ಯಕ್ತಪಡಿಸುವುದರ ಜತೆಗೆ ಅವುಗಳನ್ನು ಗೌರವಿಸುವುದನ್ನು ಕಾಣುತ್ತೇವೆ. ಅದರಂತೆ ಹಳೆ ಬೆಂಗಳೂರಿನ ನಿವಾಸಿಗಳು ಕಂಟೋನ್ಮೆಂಟ್‌ನಲ್ಲಿಯ ಆಧುನಿಕ ಜೀವನಶೈಲಿ, ಆಧುನಿಕ ಸಾಧನಗಳು, ಶಿಸ್ತಿನ ಜೀವನ, ಶಿಕ್ಷಣ ಮತ್ತಿತರ

ವಿಷಯಗಳ ಬಗ್ಗೆ ಅಚ್ಚರಿಪಡುತ್ತಾ, ತಮ್ಮ ಜೀವನ ಶೈಲಿಯನ್ನು ಆಧುನೀಕರಿಸುವತ್ತ ದಾಪುಗಾಲು ಹಾಕುತ್ತಿದ್ದರು. ವೈರುಧ್ಯಗಳ ನಡುವೆಯೂ ಪರಸ್ಪರರ ಬಗ್ಗೆ ಹೆಮ್ಮೆ ಇತ್ತು. ಇವರಿಬ್ಬರ ಸಂಪರ್ಕ ಸೇತುವೆ ಈಗಿನ ಕಬ್ಬನ್‌ಪಾರ್ಕ್ ಆಗಿತ್ತು. ಕಬ್ಬನ್‌ಪಾರ್ಕ್ ನಿರ್ಮಾಣದ ಒಳ ಉದ್ದೇಶ ಮುಖ್ಯವಾಗಿ ಕಂಟೋನ್ಮೆಂಟ್ ಬ್ರಿಟಿಷ್ ನಿವಾಸಿಗಳು ಹಳೆ-ಬೆಂಗಳೂರಿನ ಸ್ಥಳೀಯರನ್ನು ದೂರವಿರಿಸುವುದಾಗಿತ್ತು. ಆದರೆ, ಕ್ರಮೇಣ ಬೆಂಗಳೂರಿನ ನಿವಾಸಿಗಳು ಐರೋಪ್ಯರ ಜೀವನ ಶೈಲಿ ರೂಢಿಸಿಕೊಂಡಿದ್ದರಿಂದ ಕಬ್ಬನ್‌ಪಾರ್ಕ್ ಇವರಿಬ್ಬರಿಗೂ ವಿಚಾರ ವಿನಿಮಯ ಮಾಡುವ ತಾಣವಾಗಿ ರೂಪಿತವಾಯಿತು. ಮನೋರಂಜನೆ, ಆಧುನಿಕ ಸಲಕರಣೆ ಇತ್ಯಾದಿ ಹಳೆ-ಬೆಂಗಳೂರು ನಿವಾಸಿಗಳು ಕಂಟೋನ್ಮೆಂಟ್‌ಗಳಿಗೆ ಭೇಟಿ ನೀಡಿದರೆ, ಕರಗ ಅಥವಾ ಉರುಸ್‌ಗಳಂತಹ ಕಾರ್ಯಕ್ರಮಗಳ ಅವಲೋಕನಕ್ಕಾಗಿ ಕಂಟೋನ್ಮೆಂಟ್ ನಿವಾಸಿಗಳು ಹಳೆ ಬೆಂಗಳೂರು ನಗರಕ್ಕೆ ಭೇಟಿ ಕೊಡುತ್ತಿದ್ದರು.

ಸಮೀಕರಣ

ಬ್ರಿಟಿಷ್ ಸಾಮ್ರಾಜ್ಯದ ಧೋರಣೆಯಾಗಿ ಹಾಗೂ ಭಾರತದಾದ್ಯಂತ ಹರಡಿಕೊಂಡಿದ್ದ ಬ್ರಿಟಿಷ್ ಪ್ರದೇಶಗಳಿಗೆ ವೇಗದ ಸಂಪರ್ಕ ಜೋಡಿಸುವ ಸಂಕೇತವಾಗಿ ಸ್ಥಾಪನೆಗೊಂಡ ರೈಲ್ವೆ ಸಂಪರ್ಕ ಯೋಜನೆ ಬೆಂಗಳೂರಿನ ಪಾಲಿಗೂ ಒಂದು ವರವಾಯಿತು. ಮದ್ರಾಸ್ ಪ್ರಾಂತ್ಯಗಳಿಗೆ ಮೈಸೂರು ಹಾಗೂ ಮಲೆನಾಡಿನ ಪ್ರದೇಶಗಳಿಂದ ಸರಕುಗಳನ್ನು ರಫ್ತು ಮಾಡುವ ಉದ್ದೇಶದಿಂದ ಬೆಂಗಳೂರಿನ ಮೂಲಕ ರೈಲ್ವೆ ಮಾರ್ಗಗಳನ್ನು 1864ರೊಳಗೆ ನಿರ್ಮಿಸಿ ರೈಲ್ವೆ ಸಂಚಾರವನ್ನು ಇಲ್ಲಿಯ ನಾಗರಿಕರಿಗೆ ಒದಗಿಸಲಾಯಿತು. ಈ ಮಾರ್ಗಗಳು ದಕ್ಷಿಣ ಭಾರತದ ವಿವಿಧ ಪ್ರದೇಶಗಳಿಗೆ ಮುಖ್ಯವಾಗಿ ತಮಿಳುನಾಡಿನ ಜೋಳಾರಪೇಟ, ಮದ್ರಾಸ್, ಮಧುರೈ, ಕನ್ಯಾಕುಮಾರಿ ಇತ್ಯಾದಿ ಪ್ರದೇಶಗಳಿಗೆ ಸಂಪರ್ಕ ಜೋಡಿಸಲ್ಪಟ್ಟವು. ಇದರಿಂದಾಗಿ ಮದ್ರಾಸಿಗರ ವಲಸಿಗರಿಗೆ ಅನುಕೂಲ ಒದಗಿಸುವುದು ಒಂದೆಡೆಯಾದರೆ ಮದ್ರಾಸ್ ಅಥವಾ ತಮಿಳೂ ಸಂಸ್ಕೃತಿ ಬೆಂಗಳೂರಿನಲ್ಲಿ ಹರಡಲು ಪೂರಕ ವಾಯಿತು. ಇಂದಿಗೂ ಬಹುತೇಕ ರೈಲುಗಳು ಕಂಟೋನ್ಮೆಂಟ್ ರೈಲು ನಿಲ್ದಾಣದ ಮೂಲಕ ಹಳೆಯ ವಲಸಿಗರ ಕಾಲೋನಿಗಳನ್ನು ಬಳಸಿಕೊಂಡು ಮದ್ರಾಸ್ ಅಥವಾ ಮುಂಬೈಗಳಿಗೆ ತೆರಳುವುದನ್ನು ಗಮನಿಸಬಹುದು. ಬೆಂಗಳೂರು ಒಂದು ಬಹು ಸಂಸ್ಕೃತಿ ಹಾಗೂ ಭಾಷಿಕರ ನಗರವಾಗಿ ಬೆಳೆಯಲು ರೈಲು ಸಂಚಾರ ಪೂರಕ ಕೊಡುಗೆಯನ್ನು ನೀಡಿರುವುದು ಸ್ಪಷ್ಟ.

ಮೂರು ನಗರಗಳೇ

ಬೆಂಗಳೂರಿನ ಮೂಲ ನಿವಾಸಿಗಳಿಂದ ಪ್ರತ್ಯೇಕವಾಗಿ ವಾಸಿಸುವ ಉದ್ದೇಶದಿಂದ ಸ್ಥಾಪಿತವಾದ ಕಂಟೋನ್ಮೆಂಟ್ ಪ್ರದೇಶ ಒಂದು ಪ್ರತ್ಯೇಕ ಕಾಲೋನಿ ಅಥವಾ ನಗರವಾಗಿ ಬೆಳೆಯುವುದರೊಂದಿಗೆ ಬೆಂಗಳೂರು ಎರಡು ಪ್ರತ್ಯೇಕ ನಗರಗಳಾಗಿ 19ನೇ ಶತಮಾನದಲ್ಲಿ ಬೆಳೆಯಿತು. ಇವುಗಳನ್ನು ಐರೋಪ್ಯ ದಾಖಲೆಗಳು ತಿಳಿಸುತ್ತವೆ. 1. ಮೂಲ ಬೆಂಗಳೂರು ನಗರ (ನೇಟಿವ್ ಸಿಟಿ), 2. ಬಿಳಿಯರ ನಗರ (ವೈಟ್ ಸಿಟಿ) ಎಂದು ಗುರುತಿಸುತ್ತವೆ. ಮದ್ರಾಸ್ ಅಥವಾ ಪಾಂಡಿಚೆರಿ ನಗರಗಳಲ್ಲಿ ಗುರುತಿಸುವಂತೆ ಬೆಂಗಳೂರಿನಲ್ಲಿಯೂ ಬ್ಲಾಕ್ ಸಿಟಿ ಮತ್ತು ವೈಟ್ ಸಿಟಿ ಎಂದು ಕ್ರಮೇಣ ಗುರುತಿಸಲ್ಪಟ್ಟವು. 1880ರ ದಶಕದಲ್ಲಿ ಡಾ. ಎಸ್. ವೈಟ್ ಎಂಬುವರ ಹೆಸರಿನಲ್ಲಿ 'ವೈಟ್‌ಫೀಲ್ಡ್' ಎಂಬ ಪ್ರತ್ಯೇಕ ನಗರ ನಿರ್ಮಿಸಲಾಯಿತು. ಈ ನಗರ ಆಂಗ್ಲೋ-ಇಂಡಿಯನ್ ನಾಗರಿಕರ ನೆಲೆ ಯಾಯಿತು. ಇದರೊಂದಿಗೆ ಬೆಂಗಳೂರು ಮೂರು ಪ್ರತ್ಯೇಕ ನಗರಗಳಾಗಿ ಮಾರ್ಪಟ್ಟಿತು. ಇವು ಬ್ಲ್ಯಾಕ್, ವೈಟ್ ಹಾಗೂ ಆಂಗ್ಲೋ-ಇಂಡಿಯನ್ ನಗರಗಳೆಂಬ ಹೆಸರಿನಿಂದ ಗುರುತಿಸಲ್ಪಟ್ಟವು. ಈ ರೀತಿಯ ಮೂರು ಜನಾಂಗಗಳ ಪ್ರತ್ಯೇಕ ನಗರಗಳ ನಿರ್ಮಾಣ ದಕ್ಷಿಣ ಭಾರತದಲ್ಲಿ ಕಂಡುಬರುವ ಏಕೈಕ ಉದಾಹರಣೆ ಇದಾಗಿದೆ.

58. ಬೆಂಗಳೂರು ಜಿಲ್ಲೆಯ ಚಿತ್ರಕಲೆ

ಡಾ. ಅ. ಲ. ನರಸಿಂಹನ್

ಬೆಂಗಳೂರು ಜಿಲ್ಲೆಯಲ್ಲಿ ನಾಲ್ಕು ತಾಲೂಕುಗಳಿವೆ. ಅವೆಂದರೆ ಬೆಂಗಳೂರು ಉತ್ತರ, ದಕ್ಷಿಣ, ಪೂರ್ವ ಮತ್ತು ಆನೇಕಲ್ಲು ಇಲ್ಲಿ ಪ್ರಾಚ್ಯವಸ್ತುಗಳು ದೊರಕಿವೆಯಾದರೂ ಗವಿಗಂಗಾಧರ ಮತ್ತು ಹುಳಿಮಾವುಗಳಲ್ಲಿ ಪುರಾತನ ಗುಹಾಲಯಗಳು ಇವೆಯಾದರೂ ಚಿತ್ರಕಲೆಯ ಕುರುಹುಗಳೇನೂ ಕಂಡುಬರುವುದಿಲ್ಲ.

ಕೆಂಪೇಗೌಡರ ಕಾಲದ ಮಾಗಡಿಯ ಸೋಮೇಶ್ವರ ದೇವಾಲಯದ ಹಜಾರ ಮತ್ತು ಒಳ ಭಿತ್ತಿಗಳಲ್ಲಿ ಚಿತ್ರಕಲೆಯ ಕುರುಹುಗಳು ಕಂಡುಬರುವುದಾದರೂ ಬೆಂಗಳೂರಿನಲ್ಲಿ ನೋಡಸಿಗುವುದಿಲ್ಲ. ಆದರೆ ಇಂದಿನ ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿರುವ ರಾಮ ದೇವಾಲಯದಲ್ಲಿ ಭಿತ್ತಿಯ ತೊಲೆಗಳ ಮೇಲೆ ಕೆಲವು ಚಿತ್ರಗಳಿದ್ದು ಅವುಗಳಲ್ಲಿ ದಶಾವತಾರ ಚಿತ್ರಗಳನ್ನು ಗುರುತಿಸಬಹುದಿತ್ತು. ಚಿತ್ರಗಳು ಮೈಸೂರು ಶೈಲಿಯಲ್ಲಿದ್ದು ಕಳೆದ ಶತಮಾನದ ಆರಂಭ ಭಾಗದಲ್ಲಿ ರಚಿತವಾಗಿದ್ದಿರಬಹುದು. ಸುಮಾರು ಇಪ್ಪತ್ತು ವರ್ಷಗಳ ಕೆಳಗೆ ದೇವಾಲಯವನ್ನು ನವೀಕರಿಸಿದಾಗ ಭಿತ್ತಿಚಿತ್ರಗಳನ್ನು ತೆಗೆದುಹಾಕಲಾಯಿತು.

ಸಾಹಿತ್ಯಕವಾಗಿ ಇರುವ ಉದಾಹರಣೆ ಎಂದರೆ, ಹದಿನಾರನೆಯ ಶತಮಾನದಲ್ಲಿ ರಚಿತವಾದ 'ಶಿವಭಾರತ'ದಲ್ಲಿ ಚಿಕ್ಕಪೇಟೆ ಪ್ರದೇಶದಲ್ಲಿ ಶಹಜಿಯ 'ಗೌರೀವಿಲಾಸ' ಎಂಬ ಮನೆ ಇದ್ದುದಾಗಿ ತಿಳಿಸುವುದಲ್ಲದೆ ಕೋಟೆಯ ವರ್ಣನೆಯ ಸಂದರ್ಭದಲ್ಲಿ ಅರಮನೆಯ ಮೇಲೆ ಬಣ್ಣ ಬಣ್ಣದ ಬಾವುಟಗಳು ಹಾರಾಡುತ್ತಿದ್ದವೆಂದು ಕೆಲವು ಮನೆಗಳ ಗೋಡೆಗಳ ಮೇಲೆ ಅಂದವಾದ ಚಿತ್ರಗಳನ್ನು ವಿವಿಧ ಬಣ್ಣಗಳಿಂದ ಬಿಡಿಸಲಾಗಿದ್ದು ಬಹಳ ಆಕರ್ಷಕ ವಾಗಿದ್ದವು ಎಂದು ವರ್ಣಿಸಿರುವುದು ತಿಳಿದುಬರುತ್ತದೆ. ಅಂತೆಯೇ ಮರಾಠಿಯ 'ಶಿವಕಥೆ'ಯಲ್ಲಿ 1640–42 ರಲ್ಲಿ ಶಿವಾಜಿಯು ಬೆಂಗಳೂರಿನಲ್ಲಿ ಇದ್ದಾಗ ನಿಂಬಾಳ್ಕರ್ ಮನೆತನದ ಸಮಿಬಾಯಿ ಎಂಬಾಕೆಯನ್ನು ವಿವಾಹವಾಗಿದ್ದು ವಿವಾಹ ಮಂಟಪದ ಗೋಡೆಗಳಲ್ಲಿ ವರ್ಣ ಚಿತ್ರಗಳಿದ್ದುವೆಂದು ಹೇಳಿರುವುದಾಗಿ ಸೂರ್ಯನಾಥ ಕಾಮತರು ತಿಳಿಸುತ್ತಾರೆ.

ಬೆಂಗಳೂರಿನ ನಗರ್ತಪೇಟೆಯಲ್ಲಿ ಒಡವೆಗಳನ್ನು ಮಾಡುವ ಶಿಲ್ಪಿಗಳೂ ನೆಲೆಸಿದ್ದು ಅವರು ಚಿತ್ರಗಳನ್ನು ರಚಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಇವು ಅಂದಿನ ಮೈಸೂರು ಸಾಂಪ್ರದಾಯಿಕ ಚಿತ್ರಗಳಾಗಿದ್ದು ಸ್ಥಳೀಯರ ಬೇಡಿಕೆಗೆ ಪೂರಕವಾಗಿದ್ದಿರಬಹುದು. ಇಂದಿಗೂ ಪೇಟೆ ಪ್ರದೇಶದ ಹಳೆಯ ದೇವಾಲಯಗಳಲ್ಲಿ, ರಾಮ ಮಂದಿರಗಳಲ್ಲಿ, ಗರಡಿಮನೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದೊಡ್ಡ ಅಳತೆಯಲ್ಲಿ ರಚಿತವಾದ ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಗಳನ್ನು ಕಾಣಬಹುದು. ವಣಿಜ ಕುಲದವರು ದೇವರ ಚಿತ್ರಪಟಗಳೆಂದಾದರೂ ಈ ಕಲೆಗೆ ಪ್ರೋತ್ಸಾಹ ನೀಡಿದರು. ಪ್ರಾಸಂಗಿಕವಾಗಿ ಒಂದೆರಡು ಉದಾಹರಣೆಗಳನ್ನು ನೀಡಬಹುದು. ಚಿಕ್ಕಪೇಟೆಯಲ್ಲಿರುವ ನನ್ನ ಗೆಳೆಯರೊಬ್ಬರ ಮನೆಯಲ್ಲಿ ಹತ್ತಕ್ಕೂ ಹೆಚ್ಚು ದೊಡ್ಡ ಅಳತೆಯ, ಶೈವ ಪರವಾದ ಸಾಂಪ್ರದಾಯಿಕ ಚಿತ್ರಗಳಿವೆ. ಅಲ್ಲಮನ ಸಹಿತ ಚತುರಾಚಾರ್ಯರಿರುವ, ಬಸವಣ್ಣರಾದಿ ನೂರಾರು ವಚನಕಾರರಿಂದ ಕೂಡಿರುವ ಅಪರೂಪದ ಚಿತ್ರಬಂಧವೂ ಅವರಲ್ಲಿದೆ. ಸೂರ್ಯನಾಥ ಕಾಮತರ ಗೆಳೆಯರಾಗಿದ್ದ ರಮೇಶನ್ ಎಂಬುವವರ ಮನೆ ಲಿಂಗರಾಜಪುರದಲ್ಲಿದ್ದು ಅಲ್ಲಿ ಅವರ ಪೂರ್ವಜರು ಸಂಗ್ರಹಿಸಿದ್ದ ಐದಾರು ಸಾಂಪ್ರದಾಯಿಕ ಚಿತ್ರಗಳಿದ್ದು

ಪ್ರತಿಯೊಂದೂ ಆರು ಅಡಿ ಉದ್ದ ಮತ್ತು ನಾಲ್ಕು ಅಡಿ ಎತ್ತರದ ಅಳತೆಯುಳ್ಳದಾಗಿತ್ತು. ಅವು ರಾಮ ಪಟ್ಟಾಭಿಷೇಕ, ಗಿರಿಜಾಕಲ್ಯಾಣ ಮುಂತಾದ ವಿಷಯಗಳಿಗೆ ಸಂಬಂಧಿಸಿದ್ದವಾಗಿದ್ದವು. ಇಡೀ ಕೋಣೆಯನ್ನು ಈ ಚಿತ್ರಗಳು ತೂಗಿಹಾಕಲೆಂಬಂತೆ ವಿಶೇಷವಾಗಿ ರೂಪಿಸಿದಂತಿದ್ದವು. (ಬೆಂಗಳೂರಿನ ವಾಸದ ಮನೆಗಳಲ್ಲಿರುವ ಸಾಂಪ್ರದಾಯಿಕ ಬಿಡಿ ಚಿತ್ರಕಲೆಯ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ಮಾಡಲು ಅವಕಾಶವಿದೆ).

ಪ್ರಾಚ್ಯವಸ್ತು ಇಲಾಖೆಯ ವ್ಯಾಪ್ತಿಗೆ ಬರುವಂತಹ ಇನ್ನೊಂದು ಕಲಾಪ್ರಕಾರವೆಂದರೆ, ಟಿಪ್ಪುವಿನ ಹಾಗೂ ಆ ನಂತರದ ಕಾಲದಲ್ಲಿ ವಿದೇಶೀ ಪ್ರವಾಸಿ ಕಲಾವಿದರು ರಚಿಸಿದ ಗ್ರಾಫಿಕ್ ಪ್ರಿಂಟ್ಸ್‌ಗಳು. ಅವುಗಳಲ್ಲಿ ಬೆಂಗಳೂರು ಸೇರಿದಂತೆ ಟಿಪ್ಪುವಿನ ರಾಜ್ಯಾಡಳಿತ ಪ್ರದೇಶಗಳ ದೃಶ್ಯಗಳನ್ನು ನೋಡಬಹುದು. ಈ ಕಲಾವಿದರುಗಳಲ್ಲಿ ಹೆಚ್ಚಿನವರು ಈಸ್ಟ್ ಇಂಡಿಯಾ ಕಂಪನಿಯ ಸೈನ್ಯಾಡಳಿತ ವಿಭಾಗದಲ್ಲಿ ಇದ್ದವರು. ಹಾಗಾಗಿ ಇವರುಗಳು ಕೋಟೆ ಕೊತ್ತಲಗಳ ಅರಮನೆಗಳ ಚಿತ್ರಗಳನ್ನು ರಚಿಸಿದ್ದಾರೆ. ವಿಶೇಷವಾಗಿ ಗಿರಿದುರ್ಗಗಳನ್ನು ಚಿತ್ರಿಸಿರುವುದು ಗಮನಾರ್ಹ. ಇವು ಇಂದಿನ ಛಾಯಾಚಿತ್ರಗಳಂತೆ ಅಧಿಕಾರಿಗಳಿಗೆ ನೆರವಾಗಿರಬಹುದು. ಇದೇ ಸಂದರ್ಭದಲ್ಲಿ ಬೇರೆ ಬೇರೆ ಭೂಮಾಪನಾಧಿಕಾರಿಗಳು ರಚಿಸಿದ ನಕ್ಷೆಗಳು ಈ ಮಾತನ್ನು ಹೆಚ್ಚು ಸ್ಪಷ್ಟಪಡಿಸುತ್ತವೆ. ಇಂಗ್ಲೆಂಡಿನಿಂದ 64 ಮಂದಿ ಮತ್ತು ಯುರೋಪಿನ ಇತರ ದೇಶಗಳಿಂದ ಸುಮಾರು ಮುವ್ವತ್ತು ಮಂದಿ ಕಲಾವಿದರು ಬಂದಿದ್ದರೆಂದು ತಿಳಿದುಬರುತ್ತದೆ. ಅವರುಗಳಲ್ಲಿ ಐದಾರು ಮಂದಿ ಕಲಾವಿದೆಯರೂ ಇದ್ದರು. ಈ ಎಲ್ಲ ಕಲಾವಿದರುಗಳ ಪೈಕಿ ಹಳೆಯ ಮೈಸೂರು ಪ್ರದೇಶಕ್ಕೆ ಬಂದು ಚಿತ್ರಿಸಿದವರಲ್ಲಿ ರಾಬರ್ಟ್ ಹೋಮ್, ಜೇಮ್ಸ್ ಹಂಟರ್ ಪ್ರಮುಖರು. ಅಲ್ಲದೆ ಚಾರ್ಲ್ಸ್ ಗೋಲ್ಡ್, ರಾಬರ್ಟ್ ಕೋಲ್ ಬ್ರೂಕ್, ಡ್ಯಾನಿಯಲ್ ಸಹೋದರರು ಹಾಗೂ ಸ್ಥಳೀಯನೇ ಆಗಿದ್ದ ಮೆಡೋಸ್ ಟೈಲರ್ ಮುಂತಾದವರನ್ನು ಉದಾಹರಿಸಬಹುದು. ಇತ್ತೀಚೆಗೆ ಟಿಪ್ಪುವಿಗೆ ಸಂಬಂಧಿಸಿದ ಮಾಹಿತಿ ಹೆಚ್ಚಾಗಿ ಬೆಳಕಿಗೆ ಬರುತ್ತಿದ್ದು ಹೆಸರು ತಿಳಿದಿರುವ ಇಲ್ಲವೇ ಅಜ್ಞಾತ ಕಲಾವಿದರ ಕೃತಿಗಳನ್ನು ಅಂತರ್‌ಜಾಲತಾಣಗಳಲ್ಲಿ ನೋಡಬಹುದು. ರಾಬರ್ಟ್ ಹೋಮ್ ಇಂಗ್ಲೆಂಡಿನ ಯಾರ್ಕ್ ಶೈರ್‌ನಲ್ಲಿ 1752ರಲ್ಲಿ ಜನಿಸಿ ಆಂಗ್ಲಕ್ ಕುಲ್ಫ್ ಮನ್ ಬಳಿ ಚಿತ್ರಕಲೆ ಅಭ್ಯಸಿಸಿ, ಇಟಲಿಯಲ್ಲಿ ಭಾವಚಿತ್ರ ಕಲಾವಿದನಾಗಿದ್ದು 1791ರಲ್ಲಿ ಬಂದು ಮದ್ರಾಸ್ (ಚೆನ್ನೈ), ಕೋಲ್ಕತ್ತಾ, ಲಕ್ನೋ ಇತ್ಯಾದಿ ಕಡೆಗಳಲ್ಲಿ ಚಿತ್ರ ರಚಿಸುತ್ತಿದ್ದು 1834ರಲ್ಲಿ ಭಾರತದಲ್ಲಿಯೇ ತೀರಿಕೊಂಡ, ಹೋಮ್ ಮದ್ರಾಸ್‌ಗೆ ಬಂದಾಗ ಬೆಂಗಳೂರಿನಲ್ಲಿ ಬ್ರಿಟಿಷರು ಮತ್ತು ಟಿಪ್ಪುವಿನ ನಡುವೆ ಯುದ್ಧ ನಡೆಯುತ್ತಿತ್ತು. ಹೋಮ್ ಸೈನ್ಯಾಧಿಕಾರಿಗಳ ಅಪ್ಪಣೆ ಪಡೆದು ಕಾರನ್‌ವಾಲೀಸ್‌ನಿಂದ "ಯುದ್ಧ ದೃಶ್ಯಗಳ ಅಧಿಕೃತ ಕಲಾವಿದ" (ವಾರ್ ಆರ್ಟಿಸ್ಟ್) ಎಂದು ನೇಮಿಸಲ್ಪಟ್ಟ. ಯುದ್ಧದ ಸಂದರ್ಭದಲ್ಲಿಯೂ ಆ ನಂತರವೂ ಮೈಸೂರು ಸೀಮೆಯಲ್ಲಿ ಸಂಚರಿಸಿ ಇಲ್ಲಿಯ ಭೂದೃಶ್ಯಗಳನ್ನು ತೈಲವರ್ಣದಲ್ಲಿ ರಚಿಸಿದ. ಇವುಗಳನ್ನು ಆಧರಿಸಿ ಆತನೇ 'ಸೆಲೆಕ್ಟ್ ವ್ಯೂಸ್ ಇನ್ ಮೈಸೂರು, ದಿ ಕಂಟ್ರಿ ಆಫ್ ಟಿಪ್ಪೂ ಸುಲ್ತಾನ್ ಫ್ರಂಮ್ ದಿ ಡ್ರಾಯಿಂಗ್ಸ್ ಟೇಕನ್ ಆನ್ ದಿ ಸ್ಪಾಟ್ ವಿಥ್ ಹಿಸ್ಟಾರಿಕಲ್ ಡಿಸ್‌ಕ್ರಿಪ್‌ಶನ್' ಎಂಬ ಹೆಸರಿನಲ್ಲಿ ಗ್ರಾಫಿಕ್ ಮುದ್ರಣದ ಚಿತ್ರ ಸಂಪುಟವನ್ನು 1794ರಲ್ಲಿ ಹೊರತಂದ. ಇದರಲ್ಲಿಯ 29 ಚಿತ್ರಗಳಲ್ಲಿ ಎಂಟು ಬೆಂಗಳೂರಿಗೆ ಸಂಬಂಧಿಸಿದವು. ಹೋಮ್‌ನ ಗ್ರಾಫಿಕ್ ಚಿತ್ರಗಳೆಲ್ಲಾ ಏಕವರ್ಣದವು. ನನ್ನ ಗಮನಕ್ಕೆ ಬಂದಂತೆ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆಯಲ್ಲಿ ಏಕೈಕ ಪ್ರತಿಯೊಂದು ಈ ಹಿಂದೆ ಇತ್ತು.

ಜೇಮ್ಸ್ ಹಂಟರ್ ಬಗ್ಗೆ ಹೆಚ್ಚಿಗೆ ತಿಳಿದುಬರುವುದಿಲ್ಲ. ಈತ ಸಹ ಕಂಪನಿಯ ಸೈನ್ಯದಲ್ಲಿ ಲೆಫ್ಟಿನೆಂಟ್ ಆಗಿದ್ದು, ಬೆಂಗಳೂರಿನ ಮುತ್ತಿಗೆಯಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದ. ಪ್ರಾಯಶ ಈ ಯುದ್ಧದ ಸಂದರ್ಭದಲ್ಲಿಯೇ 1792ರಲ್ಲಿ ಸತ್ತಂತೆ ತಿಳಿದುಬರುತ್ತದೆ. ಆ ನಂತರ 1804ರಲ್ಲಿ ಲಂಡನ್ ಎಡ್ವರ್ಡ್ ಒರ್ಮೆ ಎಂಬಾತ ಹಂಟರನ ಸುಮಾರು ನಲವತ್ತು ಕೃತಿಗಳನ್ನು ಗ್ರಾಫಿಕ್ ಮಾಧ್ಯಮಕ್ಕೆ ಅಳವಡಿಸಿ 'ಪಿಕ್ಚರಸ್ಕ್ ಸೀನರಿ ಇನ್ ದಿ ಕಿಂಗ್‌ಡಮ್

ಆಫ್ ಮೈಸೂರು' ಎಂಬ ಹೆಸರಿನಲ್ಲಿ ಮುದ್ರಿಸಿ ಪ್ರಕಟಿಸಿದ. ಇವುಗಳಲ್ಲಿ ಹನ್ನೊಂದು ಚಿತ್ರಗಳು ಬೆಂಗಳೂರಿಗೆ ಸಂಬಂಧಿಸಿದವು. ಇವು ಸಹ ಮೊದಲಿಗೆ ಏಕವರ್ಣದ ರೇಖಾಚಿತ್ರದಂತೆ ಮುದ್ರಿಸಿ ನಂತರ ಬಣ್ಣ ಹೆಚ್ಚಿರುವಂಥಹವು. ಬೆಂಗಳೂರಿನಲ್ಲಿ ಈ ಸಂಪುಟದ ಒಂದಕ್ಕಿಂತ ಹೆಚ್ಚು ಪ್ರತಿಗಳು ನೋಡ ಸಿಗುತ್ತವೆ. ಈಚೆಗೆ ಖಾಸಗಿ ಪ್ರಕಾಶಕರು ಈ ಕೃತಿಗಳನ್ನು ಡಿಜಿಟಲ್ ಮುದ್ರಣಕ್ಕೆ ಅಳವಡಿಸಿ ಮಾರಾಟ ಮಾಡುತ್ತಿದ್ದಾರೆ.

ರಾಬರ್ಟ್ ಹೈಡ್ ಕೋಲ್‌ಬ್ರೂಕ್ 1762ರಲ್ಲಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಜನಿಸಿದ. ಈತನ ಚಿಕ್ಕಪ್ಪ ಈಸ್ಟ್ ಇಂಡಿಯಾ ಕಂಪನಿಯಲ್ಲಿ ವೈದ್ಯನಾಗಿದ್ದು, ಕೋಲ್‌ಬ್ರೂಕ್ ಸಹ 1778ರಲ್ಲಿ ಭಾರತಕ್ಕೆ ಬಂದು ಬಂಗಾಳ ಇನ್‌ಫೆಂಟ್ರಿಯಲ್ಲಿ ಲೆಫ್ಟಿನೆಂಟ್ ಆಗಿ ಸೇರಿದ. ಈತ ಭೂ ಸರ್ವೇಕ್ಷಕನೂ ಆಗಿದ್ದರಿಂದ ಕಾರನ್ ವಾಲೀಸ್‌ನ ಜೊತೆಯಲ್ಲಿ ಮೈಸೂರು ಯುದ್ಧಕ್ಕೆ ಕಳಿಸಿಕೊಡಲಾಯಿತು. ಈತ 1791–92ರಲ್ಲಿ ಟಿಪ್ಪುವಿನ ಪ್ರಾಂತದ ವಿವರವಾದ ಭೂ ನಕ್ಷೆಗಳನ್ನು ಸಿದ್ಧ ಪಡಿಸಿದ. ಅಂತೆಯೇ ಇಲ್ಲಿಯ ದೃಶ್ಯಗಳನ್ನು ಚಿತ್ರಿಸಿದ. ಈತ ಮೈಸೂರಿನಲ್ಲಿ ಇದ್ದಾಗಲೇ 1792ರಲ್ಲಿ 'ಟ್ವೆಲ್ವ್ ವ್ಯೂಸ್ ಆಫ್ ಪ್ಲೇಸಸ್ ಇನ್ ದ ಕಿಂಗ್‌ಡಮ್ ಆಫ್ ಮೈಸೂರು' ಎಂಬ ತನ್ನ ಚಿತ್ರ ಸಂಪುಟದ ಮಾರಾಟದ ಬಗ್ಗೆ ಕೋಲ್ಕತಾ ಗೆಜೆಟ್‌ನಲ್ಲಿ ಜಾಹಿರಾತು ನೀಡಿದ್ದ. ಮುಂದೆ ಕೆಲವೇ ವರ್ಷಗಳಲ್ಲಿ ಈ ಚಿತ್ರ ಸಂಪುಟ ಮೂರು ಮರು ಮುದ್ರಣವನ್ನು ಕಂಡಿತು. 1808ರಲ್ಲಿ ಈತ ನಿಧನ ಹೊಂದಿದ ನಂತರ 1812ರಲ್ಲಿ ಇದರ ಫ್ರೆಂಚ್ ಆವೃತ್ತಿ ಪ್ರಕಟವಾಯಿತು. ಸಂಪುಟದ 12 ಚಿತ್ರಗಳ ಪೈಕಿ ಬೆಂಗಳೂರಿನ ದೃಶ್ಯವೆಂದರೆ ಲಾಲ್‌ಬಾಗ್ ತೋಟ ಒಂದೇ.

ವಿದೇಶೀ ಕಲಾವಿದರಲ್ಲಿ ಪ್ರಮುಖರಾದವರೆಂದರೆ ಥಾಮಸ್ ಡ್ಯಾನಿಯಲ್ ಮತ್ತು ಆತನ ಸೋದರ ಸಂಬಂಧಿ ವಿಲಿಯಂ ಡ್ಯಾನಿಯಲ್ ಅವರುಗಳು. 1786ರಲ್ಲಿ ಭಾರತಕ್ಕೆ ಬಂದಿದ್ದು ಬೆಂಗಳೂರಿನ ದೃಶ್ಯಗಳೂ ಸೇರಿದಂತೆ ನೂರಾರು ಭೂದೃಶ್ಯಗಳ ಸ್ಕೆಚ್ ರಚಿಸಿಕೊಂಡು ಇಂಗ್ಲೆಂಡ್‌ಗೆ ಹೋದಮೇಲೆ 1795–1808ರ ಅವಧಿಯಲ್ಲಿ ಒರಿಯಂಟಲ್ ಸೀನರಿ ಎಂಬ ಹೆಸರಿನಲ್ಲಿ 144 ಚಿತ್ರಗಳುಳ್ಳ ಆರು ಸಂಪುಟಗಳನ್ನು ಹೊರತಂದರು. ಈ ಸರಣಿಯ ಕೃತಿಗಳೆಲ್ಲವನ್ನೂ ನೋಡಲು ಸಾಧ್ಯವಿಲ್ಲದಿದ್ದರೂ ದೊರೆಯುವ ಬೆಂಗಳೂರಿನ ದೃಶ್ಯಗಳಲ್ಲಿ ಕೆಲವನ್ನು ಮರು ಜೋಡಣೆ ಮಾಡಿ ಗ್ರಾಫಿಕ್ ಮಾಧ್ಯಮಕ್ಕೆ ಅಳವಡಿಸಿಕೊಂಡಿದ್ದಾರೆ.

ಇವರುಗಳಲ್ಲದೆ ಕ್ಯಾಪ್ಟನ್ ಅಲನ್ 1802ರಲ್ಲಿ 'ವ್ಯೂಸ್ ಇನ್ ಮೈಸೂರ್ ಕಂಟ್ರಿ' ಯನ್ನೂ, ಕ್ಯಾಪ್ಟನ್ ಚಾರ್ಲ್ಸ್ ಗೋಲ್ಡ್ 1806ರಲ್ಲಿ 'ಒರಿಯಂಟಲ್ ಡ್ರಾಯಿಂಗ್ಸ್ ಸ್ಕೆಚ್ಡ್ ಬಿಟ್ವೀನ್ ದಿ ಇಯರ್ಸ್ 1791–1798' ನ್ನೂ ಪ್ರಕಟಿಸಿದರು. 1800ರಲ್ಲಿ ಬಂದ ಬುಕನನ್ ತನ್ನ ವರದಿಯಲ್ಲಿ ಬೆಂಗಳೂರಿಗೆ ಸಂಬಂಧಿಸಿದ ರೇಖಾಚಿತ್ರವನ್ನು ನೀಡಿದ್ದಾನೆ.

1853ರ ವೇಳೆಗೆ ಬೆಂಗಳೂರಿಗೆ ಛಾಯಾಚಿತ್ರ ಬಂದಿದ್ದು ಕೆಲವು ಚಿತ್ರಗಳು ನೋಡಸಿಗುತ್ತವೆ. ಚಾಮರಾಜ ಒಡೆಯರು ಸ್ವತಃ ಛಾಯಾಚಿತ್ರಗ್ರಾಹಕರಾಗಿದ್ದು, ದಿವಾನ್ ರಂಗಾಚಾರ್ಲು ಅವರ ಚಿತ್ರವನ್ನು ತೆಗೆದಿದ್ದರು. ಮುಂದಿನ ಹತ್ತಾರು ವರ್ಷಗಳಲ್ಲಿ ತೆಗೆದ ಅನೇಕ ಛಾಯಾಚಿತ್ರಗಳು ಅಲ್ಲಲ್ಲಿ ಪ್ರಕಟವಾಗಿವೆ. 1900ರ ಪ್ಲೇಗ್ ವರದಿಯಲ್ಲಿ ಛಾಯಾಚಿತ್ರಗಳನ್ನು ಕಲ್ಲಚ್ಚು ಮಾಧ್ಯಮಕ್ಕೆ ಅಳವಡಿಸಿ ಮುದ್ರಿಸಿದೆ.

ರಾಜ ರವಿವರ್ಮ ಹೊಸ ಮೈಸೂರು ಅರಮನೆಗೆ ಕೆಲವು ಚಿತ್ರಗಳನ್ನು ರಚಿಸಿಕೊಟ್ಟಿದ್ದರು. ಕೆಲವು ಖಾಸಗೀ ವ್ಯಕ್ತಿಗಳಲ್ಲೂ ಈತನ ಕೃತಿಗಳು ಇರುವಂತೆ ತಿಳಿದುಬರುತ್ತದೆ. ಇವುಗಳನ್ನು ಚಿತ್ರಿಸಿ ನೂರು ವರ್ಷಗಳಾದುದರಿಂದ ಇವು ಪ್ರಾಚ್ಯವಸ್ತು ಇಲಾಖೆಯ ಸುಪರ್ದಿನಲ್ಲಿ ಬರುತ್ತದೆ. ತಮ್ಮಲ್ಲಿ ಇರಿಸಿಕೊಳ್ಳಲು ಇಲ್ಲವೇ ಹರಾಜು ಹಾಕಲು ಇಲಾಖೆಯ ಅನುಮತಿಯ ಅವಶ್ಯಕತೆಯಿದೆ. ಈಚೆಗೆ ಬೆಂಗಳೂರು ಮೂಲದ ಕಲಾಕೃತಿಗಳನ್ನು ಹರಾಜು ಹಾಕುವ ಸಂಸ್ಥೆಯೊಂದು ರವಿವರ್ಮನ ಕೃತಿಗಳನ್ನು ಹರಾಜಿಗೆ ಇರಿಸಿದ್ದು ನ್ಯಾಯಾಂಗ ಪ್ರಕರಣಕ್ಕೆ ಗುರಿಯಾಗಿತ್ತು.

59. ಬೆಂಗಳೂರು ಕೃಷ್ಣರಾಜವಿಲಾಸ ಮುದ್ರಾಕ್ಷರ ಶಾಲೆ

ಡಾ. ಬಿ. ನಂಜುಂಡಸ್ವಾಮಿ

ಮೈಸೂರು ರಾಜ್ಯದ ಮಹಾರಾಜರಾಗಿ ಆಡಳಿತ ನಡೆಸಿದ ಮುಮ್ಮಡಿ ಕೃಷ್ಣರಾಜ ಒಡೆಯರ್ (1799–1868) ಅವರ ಸಾಹಿತ್ಯಕ, ಸಾಂಸ್ಕೃತಿಕ ಕೊಡುಗೆಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ. ಮೈಸೂರು ಜಗನ್ಮೋಹನ ಅರಮನೆಯಲ್ಲಿ ಶಿಲಾಲಿಪಿ ಯಂತ್ರವನ್ನು ಸ್ಥಾಪಿಸಿ ಹತ್ತಾರು ಕೃತಿಗಳನ್ನು ಮುದ್ರಣ ಮಾಡಿಸಿದರು. ಕ್ರೈಸ್ತ ಧರ್ಮದವರು ತಮ್ಮ ಬೈಬಲ್ ಗ್ರಂಥ ಪ್ರಚಾರಕ್ಕೆ ಮುದ್ರಣಯಂತ್ರಗಳನ್ನು ಸ್ಥಾಪಿಸಿ ಧರ್ಮಪ್ರಚಾರಕ್ಕೆ ಉಪಯೋಗಿಸುತ್ತಾ ಇದ್ದುದನ್ನು ಗಮನಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರು, ಕನ್ನಡನಾಡಿನ ಸಾಹಿತ್ಯ ಕೃತಿಗಳನ್ನು ಮುದ್ರಿಸಿದರೆ ಮೂಲಹಸ್ತಪ್ರತಿ ರೂಪದಲ್ಲಿ ಇದ್ದ ಒಂದು ಪ್ರತಿ ಸಾವಿರ ಪ್ರತಿಯಾಗಿ ತನ್ನ ಪಾಲಿನ ಸೇವೆಯನ್ನು ಮಾಡುತ್ತದೆ ಎಂಬುದನ್ನು ಅರಿತು, ತಮಗೆ ಇದ್ದ ನಿರ್ಬಂಧದ ನಡುವೆಯೂ ಪರೋಕ್ಷವಾಗಿ ಬೆಂಗಳೂರಿನ ಕೃಷ್ಣರಾಜವಿಲಾಸ ಮುದ್ರಾಕ್ಷರ ಶಾಲೆಯ ಸ್ಥಾಪನೆಗೆ ಕಾರಣಕರ್ತರಾದರು. ಈ ಮುದ್ರಾಕ್ಷರ ಶಾಲೆಯಲ್ಲಿ 'ಕನ್ನಡ ಜೈಮಿನಿ ಭಾರತವು' ಮುದ್ರಣವಾಗಿದೆ. ಮುಖಪುಟದ ಶಿರೋಭಾಗದಲ್ಲಿ ಇಂಗ್ಲೀಷಿನಲ್ಲಿ ಶ್ರೀ ಅವತಾರಿಕೆ ಎಂದು ಮುದ್ರಿಸಲಾಗಿದೆ.

ಶ್ರೀ ಮನ್ಮಹೀಮಂಡಲ ಮಂಡನಾಯಮಾನಮಾದ, ಈ ಕರ್ಣಾಟದೇಶದೋಳ್ ಸಕಲಜನ ವ್ಯವಹಾರಯೋಗ್ಯ ವಾಗಿಯೂ, ಬಹುವಿಧ ಲಕ್ಷ್ಯ ಲಕ್ಷಣ ಗ್ರಂಥ ಪರಿಷ್ಕೃತವಾಗಿಯೂ ಯಿರುತ ಕನ್ನಡ ಭಾಷೆಯೊಳು ಮಹಾಕವಿಗಳಿಂದ ನಾನಾ ವಿಧ ಕಥಾ ವಸ್ತುಗುಣ ವರ್ಣನಾಲಂಕಾರ ರಸಭರಿತಗಳಾದ ಅನೇಕ ಪ್ರಬಂಧಗಳು ರಚಿಸಲ್ಪಟ್ಟು ಸಹೃದಯ ಹೃದಯಾಹ್ಲಾದಕರಗಳಾಗಿವೆ.

ಲೋಕದೊಳಾಯಾ ಭಾಷೆಗಳಲ್ಲಿ ಗ್ರಂಥಗಳು ಪಂಡಿತ ಪರಿಗ್ರಹಾರ್ಹವಾಗುವುದಕ್ಕೆ ವಕ್ತೃ ವಿಷಯ ವಚನ ವೈಲಕ್ಷಣ್ಯಗಳೂ ಮುಖ್ಯ ನಿಮಿತ್ತಗಳಾಗಿರುತ್ತವೆಯಾಗಿ ಪ್ರಕೃತದಲ್ಲಿ ಜೈಮಿನಿ ಭಾರತವೆಂಬುವೀಯುತ್ತಮ ಕನ್ನಡ ಕಾವ್ಯವು, ನಿಸ್ತುತೋದ್ದಂಡ ಪಂಡಿತ ಪ್ರಕಾಂಡಮಂಡಿತಮಾದ ದೇವಪುರ ದೋಳ್ನಿಯತವಾಸುಮಂಗೆಯಿದಿರ್ದ ಲಕ್ಷ್ಮೀಪತಿ ನಾಂಕ ಕವಿಸಾರ್ವಭೌಮ ನಿಂ ವಿರಚಿಸಲ್ಪಟ್ಟದರಿಂ ವಿಶ್ರುತ ವಕ್ತೃ ವೈಲಕ್ಷಣ್ಯಲಕ್ಷಿತಮಾಗಿದೆ. ಸಂತತ ಹರಿಚರಣ ಸರಸಿಜ ನಿಧ್ಯಾನ ಸಂಪನ್ನ ಪ್ರಾಜ್ಯ ಸಾಮ್ರಾಜ್ಯ ಪೂಜ್ಯರಾದ ಪಾಂಡವರ ಉತ್ತಮ ಗುಣಮಹಿಮಾ ನುವರ್ಣನ ಸಂದರ್ಭದಿಂ ಸಕಲನಿಗಮ ಪ್ರಶಸ್ತ ವಾಸುದೇವಸ್ತುತಿ ರೂಪಮಾಗಿರುವುದರಿಂದ ಪ್ರಕಟಿತ ವಿಷಯ ಗೌರವಾಸ್ಪದವಾಯಿತು ಮತ್ತು ನಿರ್ದುಷ್ಟಾರ್ಥ ಪುಷ್ಪ ಗಂಭೀರ ಮೈದುಳ ಮಧುರಪದಪುಂಜ ರಂಜಿತವಾಗಿಯೂ, ವಿಶೇಷ ತಾತ್ಪರ್ಯ ನಿಗೂಢಷಗಿಯೂ ಅಪೂರ್ವ ಸದ್ಯುಕ್ತಿಯುಕ್ತವಾಗಿಯೂ ಶೋಭಿಸುವದರಿಂ ವಚನ ವೈಲಕ್ಷಣ್ಯ (ವ) ಂಪಡೆದು ರಸಿಕಜನ ಹೃದಯಾಪ್ಯಾಯಕವಾಗಿಯೂ, ಭಾವಜ್ಞ ಸಂಭಾವ್ಯಮಾಗಿಯೂ ಸುಕವಿಜನೋಪಲಾಲ್ಯ ಮಾನವಾಗಿಯೂಯಿದೆ.

ಮುಖ್ಯವಾಗಿ ಯಿ ಕನ್ನಡ ಕಾವ್ಯವು ಆದಿಕಾವ್ಯಾದಿಗಳಂತೆ ಉತ್ತಮ ಕಾವ್ಯಲಕ್ಷಣ ಲಕ್ಷಿತವಾಗಿಯೂ, ನೀತಿಪ್ರಧಾನಮಾಗಿಯೂ, ಸುಲಲಿತಮಾಗಿಯೂ, ಯಿರುವರರಿಂದ ಕರ್ಣಾಟ ಭಾಷಾವ್ಯುತ್ಪತ್ಸುಗಳಿಗತ್ಯಂತೋಪ ಯೋಗಿಯಾಗಿದೆ ಮತ್ತು ಪೂರ್ವೋಕ್ತ ಹೇತುಗಳಿಂ ಮಹಾಭಾರತೋ ಪಾದಿಯಲಿ ಪಠನಯೋಗ್ಯವಾಗಿಯೂ ಯಿದೆ.

ಇಂತಾ ಉತ್ತಮ ಗ್ರಂಥವು ಅಪ್ರಚುರಮಾಗಿರುವದಂ ಚಿಂತಿಸಿ ಸರ್ವಜನ ಸುಲಭವಾಗುವ ಬಗೆಯಂ ವಿಚಾರಿಸುವಲ್ಲಿ ಇದರ ಪ್ರಾಚೀನಗಳಾದ ಅನೇಕ ಪ್ರತಿಗಳಂ ತರಿಸಿನೋಡಿ ಅವುಗಳೊಗಣ ಲೇಖಕ ಪ್ರಮಾದಜನಿತ ದೋಷಗಳಂ ಪರಿಹರಿಸಿ ಛಂದಶ್ಯಾಸ್ತ್ರಾನುಗುಣಮಾಗಿ ಷಟ್ಪದಿಗಳಂ ಪರಿಷ್ಕರಿಸಿ ಮುದ್ರಿಸಬೇಕಾದದೇ ಕರ್ತವ್ಯಮಾಗಿ ತೋರಲರಿದರಿಂದ ಹಾಗೆಯೇ ಇದು ಶ್ರೀಕೃಷ್ಣರಾಜ ಸಾರ್ವಭೌಮ ಪ್ರಸಾದ ವ್ಯವಸ್ಥಾಪಿತ ಕೃಷ್ಣರಾಜವಿಲಾಸಾಕ್ಷರ ಮುದ್ರಾಶಾಲೆಯೋಳ್ಮುದ್ರಿಸಿ ಪ್ರಚುರ ಮಾಡಲ್ಪಟ್ಟಿತಾಗಿ ರಸಿಕರಿದಂ ಪರಿಗ್ರಹಿಸಬಹುದು.

ಕ್ರಿ. ಶ. 1861ರಲ್ಲಿ ಬ್ರಿಟಿಷ್ ಕಮ್ಮಿಷನರುಗಳು ಮೈಸೂರು ರಾಜ್ಯದ ಆಡಳಿತ ನಡೆಸುತ್ತಾ ಇದ್ದರು. ಆಗ ಕಮೀಷನರಾಗಿ ಕರ್ನಲ್ ಮಾರ್ಕ್ ಕಬ್ಬನ್ (1834–61) ಶ್ರೀಮನ್ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಕಾರ್ಯವೈಖರಿಯನ್ನು ಹದ್ದಿನ ಗಣ್ಣಿನಲ್ಲಿ ನೋಡುತ್ತಾ ಇದ್ದರು. ಭಾರತ ದೇಶದಲ್ಲಿ ಧರ್ಮಪ್ರಚಾರ ಧರ್ಮಗಳಿಂದ ಮಾತ್ರ ಸಾಧ್ಯ ಎಂದು ತಿಳಿದಿದ್ದ ಮುಮ್ಮಡಿಯವರು ಮುದ್ರಾಕ್ಷರ ಶಾಲೆಯನ್ನು ಪ್ರಾರಂಭಿಸಿ ಪ್ರಾಚೀನ ಗ್ರಂಥಗಳ ಪ್ರಕಟಣೆಗೆ ಬಹು ದೊಡ್ಡ ಶ್ರೀಕಾರವನ್ನು ಹಾಕಿದರು. ಇಲ್ಲಿ 'ಪ್ರಸಾದ ವ್ಯವಸ್ಥಾಪಿತ' ಅಂದರೆ ಮುದ್ರಣಯಂತ್ರ ಸ್ಥಾಪನೆಗೆ ದ್ರವ್ಯ ಸಹಾಯ. ಈ ಮುದ್ರಾಕ್ಷರ ಶಾಲೆ ಬೆಂಗಳೂರಿನಲ್ಲಿ ಎಲ್ಲಿತ್ತು. ಎಲ್ಲಿಯವರೆಗೆ ಕೆಲಸ ಮಾಡಿತು. ಎಷ್ಟು ಗ್ರಂಥಗಳನ್ನು ಮುದ್ರಣ ಮಾಡಿತು ಎನ್ನುವ ವಿಷಯವನ್ನು ಸಂಶೋಧಿಸಬೇಕಾಗಿದೆ.

'ಜೈಮಿನಿ ಭಾರತ' ಗ್ರಂಥದ ಸಂಪಾದಕ ಅಜ್ಞಾತ, ಆದರೆ ಆತನಿಗೆ ಹಸ್ತಪ್ರತಿ ಸಂಪಾದನೆ ಬಗ್ಗೆ ತಿಳುವಳಿಕೆ ಇತ್ತು 'ಪ್ರಾಚೀನಗಳಾದ ಅನೇಕ ಪ್ರತಿಗಳಂ ತರಿಸಿ ನೋಡಿ ಅವುಗಳೊಗಣ ಲೇಖಕ ಪ್ರಮಾದಜನಿತ ದೋಷಗಳಂ ಪರಿಹರಿಸಿ ಛಂದಶ್ಯಾಸ್ತ್ರಾನುಗುಣವಾಗಿ ಷಟ್ಪದಿಗಳಂ ಪರಿಷ್ಕರಿಸಿ' 'ಮುದ್ರಿಸಬೇಕಾದದೇ ಕರ್ತವ್ಯವಾಗಿ ತೋರಲರಿಂದ ಎಂಬ ಮಾತು ಹಸ್ತಪ್ರತಿ ಶಾಸ್ತ್ರದ ಪ್ರಕಾದ ಬಹಳ ಬೆಲೆಯುಳ್ಳದು. ಕ್ರಿ. ಶ. 1861ರಲ್ಲಿ ಮುದ್ರಣವಾದ ಈ ಗ್ರಂಥದಲ್ಲಿ ಪುಟಗಳು 2+387+1 ಇದ್ದು ಕೃತಿಯ ಅಂತ್ಯದಲ್ಲಿ 'ಚತುಸ್ತ್ರಿಂಶತ್ಸಂಧಿಸಂಪೂರ್ಣಂ ಅಂತು ಸಂಧಿ 34ಕ್ಕೆ ಪದ್ಯಗಳು 1908ಕ್ಕೆ ಮಂಗಳಮಸ್ತು ಜೈಮಿನಿ ಭಾರತವು ಮುಗಿದುದು, ಎಂದಿದೆ. ಆದಿಯಲ್ಲಿ ಅವತಾರಿಕೆ ನಂತರ ವಿಷಯಾನುಕ್ರಮಣಿಕೆ, ಸಂಧಿ ಹೆಸರು ಮತ್ತು ಪುಟ ಸಂಖ್ಯೆ ಕೊಟ್ಟಿದ್ದಾರೆ. ಸಂಧಿಗೆ ಸಂಖ್ಯೆಗಳನ್ನು ಕೊಟ್ಟಿಲ್ಲ. ಅಂತ್ಯದಲ್ಲಿ ಒಂದು ಪುಟ ಅಶುದ್ಧ ಶುದ್ಧ ಪತ್ರಿಕೆಯು ಪ್ರಕಟವಾಗಿದ್ದು ಅದರಲ್ಲಿ ಗ್ರಂಥಪೂರ್ತಿ 27 ಅಶುದ್ಧ ಪದಗಳ ಪಟ್ಟಿ ಕೊಟ್ಟಿದ್ದಾರೆ. ಇಂತಹ ಗ್ರಂಥಕ್ಕೆ ಅಂದಿನ ದಿನಮಾನಕ್ಕೆ ಮುದ್ರಣದೋಷಗಳು ಕಡಿಮೆ.

1869ರಲ್ಲಿ ಬೆಂಗಳೂರಿನ ಕೃಷ್ಣರಾಜ ವಿಲಾಸ ಮುದ್ರಾಕ್ಷರ ಶಾಲೆಯಿಂದ 'ನ್ಯಾಯದರ್ಪಣ' ಎಂಬ ಗ್ರಂಥ ಮುದ್ರಣವಾಗಿದೆ. ಈ ಕೃತಿಯ ಕರ್ತೃ, ಮಂಗಳೂರು ಜಿಲ್ಲಾ ಪುತ್ತೂರು ತಾಲ್ಲೂಕು ಮುನಸೀಫರಾಗಿಯೂ 'ವಕೀಲರ ನಡವಳಿಕೆ' 'ವಕೀಲ ಧರ್ಮ' ಎಂಬ ಗ್ರಂಥಗಳನ್ನು ರಚಿಸಿದವರಾಗಿಯೂ ಇರುವ ತುಪಾಕಿ ಸುಬ್ಬಂಣಾಚಾರ್ಯರಿಂದ ರಚಿಸಲ್ಪಟ್ಟಿದ್ದು, 1869ರಲ್ಲಿ ಕೃಷ್ಣರಾಜ ವಿಲಾಸ ಮುದ್ರಾಕ್ಷರ ಶಾಲಾಧಿಕಾರಿಗಳಾಗಿದ್ದವರು ಬ॥ ನಾರಾಯಣಶೆಟ್ಟಿಯವರು. ಹಳೆಯ ಮುದ್ರಿತ ಗ್ರಂಥಗಳನ್ನು ಪರಿಶೀಲಿಸಿ ಕೃಷ್ಣರಾಜ ವಿಲಾಸ ಮುದ್ರಾಕ್ಷರ ಶಾಲಾ ಇತಿಹಾಸವನ್ನು ರಚಿಸಬಹುದು. ಸಾಹಿತ್ಯ ಸಂಸ್ಕೃತಿ ಪ್ರಸಾರಕ್ಕೆ ಮುಮ್ಮಡಿಯವರ ಕಾಣಿಕೆಯಲ್ಲಿ 'ಕೃಷ್ಣರಾಜ ವಿಲಾಸ ಮುದ್ರಾಕ್ಷರ ಶಾಲೆ' ಬಹುದೊಡ್ಡ ಕಾಣಿಕೆಯನ್ನು ಕೊಟ್ಟಿದ್ದು, ಅದನ್ನು ನಾವು ಸೂಕ್ಷ್ಮವಾಗಿ ಅಧ್ಯಯನ ಮಾಡಬೇಕಾಗಿದೆ.

60. ಬೆಂಗಳೂರು ನಗರದ ವಿದ್ಯುದೀಕರಣ

ಸತ್ಯಾಚಾರ್ಯ ವೆಂಕಟೇಶ್

ಬೆಳಕು ಮತ್ತು ಶಾಖದ ಅಧಿದೇವತೆಗೆ 'ಅಗ್ನಿ' ಎಂದು ಕರೆದು ಪೂಜಿಸುವ ಸಂಪ್ರದಾಯ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಇದೆ. ಈ ಅಗ್ನಿ ಅವ್ಯಕ್ತರೂಪದಲ್ಲಿ ನಾನಾ ವಸ್ತುಗಳಲ್ಲಿ ಅಡಗಿರುತ್ತದೆ. ಉದಾಹರಣೆಗೆ, ಕಟ್ಟಿಗೆ, ಕಲ್ಲಿದ್ದಲು, ಪೆಟ್ರೋಲಿಯಂ ಇತ್ಯಾದಿ. ಹತ್ತೊಂಬತ್ತನೇ ಶತಮಾನದ ಕೊನೆಯ ದಶಕದವರೆಗೂ ನಮಗೆ ತಿಳಿದಿದ್ದ ಬೆಳಕು ಶಕ್ತಿಯ ಮೂಲಗಳೆಂದರೆ ಕಟ್ಟಿಗೆ, ಇದ್ದಿಲು, ಕಲ್ಲಿದ್ದಲು ಇತ್ಯಾದಿ. ಮುಂದೆ ಬೆಂಕಿಯಿಂದ ನೀರನ್ನು ಕಾಯಿಸಿ ಉಗಿಯಾಗಿ ಪರಿವರ್ತಿಸಿ ಅದರಿಂದ ದೋಣಿಚಾಲನೆ, ಗಿರಣಿಗಳನ್ನು ನಡೆಸುವುದು ಮುಂತಾದ ಕಾರ್ಯಗಳನ್ನು ಮಾಡಿಸುವ ಪದ್ಧತಿ ರೂಢಿಗೆ ಬಂದಿತು. ಇವೆಲ್ಲಾ ಶಕ್ತಿ ಮೂಲಗಳು ಕಡಿಮೆ ಪ್ರಮಾಣದಲ್ಲಿ ಮತ್ತು ಕೆಲವೇ ಕೆಲವು ಕಾರ್ಯಗಳಿಗೆ ಉಪಯೋಗವಾಗುವಂತಹವು.

ಥಾಮಸ್ ಆಲ್ವ ಎಡಿಸನ್ ಎಂಬ ಖ್ಯಾತ ವಿಜ್ಞಾನಿ ತನ್ನ ಪ್ರಯೋಗ ಶಾಲೆಯಲ್ಲಿ 1879ರ ಜನವರಿ ಒಂದನೇ ತಾರೀಖು ವಿದ್ಯುತ್‌ಚ್ಛಕ್ತಿಯನ್ನು ಉತ್ಪಾದಿಸಿ ಏಕಕಾಲಕ್ಕೆ ಅನೇಕ ದೀಪಗಳನ್ನು ಹೊತ್ತಿಸುವಲ್ಲಿ ಯಶಸ್ವಿಯಾದನು. ಮುಂದೆ ಈ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಅನೇಕ ಕ್ರಾಂತಿಕಾರಿ ಬೆಳವಣಿಗೆಗಳಾದವು. ಡೈನಮೋ ಬಳಸಿ ವಿದ್ಯುತ್ತನ್ನು ಉತ್ಪಾದಿಸುವ ಮತ್ತು ಉತ್ಪಾದನಾ ಕ್ಷೇತ್ರದ ಬಹಳ ಸಮೀಪದಲ್ಲಿ ಅದನ್ನು ಹಲವಾರು ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳುವ ಯತ್ನಗಳು ಯಶಸ್ವಿಯಾದವು. ಮುಂದೆ ಅಮೆರಿಕಾದ ವೆಸ್ಟಿಂಗ್‌ಹೌಸ್ ವಿದ್ಯುತ್ ಕಂಪನಿಯು ಟ್ರಾನ್ಸ್‌ಫಾರ್ಮರ್ ಅಥವಾ ಪರಿವರ್ತಕವನ್ನು ಸಂಶೋಧಿಸಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿದ್ಯುತ್ತನ್ನು ಸಾಗಿಸಿ ಉಪಯೋಗಿಸುವ ಯತ್ನದಲ್ಲಿ ಯಶಸ್ವಿಯಾಯಿತು. 1886ರಲ್ಲಿ ಅಮೆರಿಕಾದ ಜನರಲ್ ಎಲೆಕ್ಟ್ರಿಕ್ (General Electric Co.,) ಕಂಪನಿ ಕೂಡ ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣದ ಕ್ಷೇತ್ರಕ್ಕೆ ಕಾಲಿರಿಸಿತು. ಅಮೆರಿಕಾ ಮತ್ತು ಯೂರೋಪಿನ ದೇಶಗಳಲ್ಲಿ ವಿದ್ಯುತ್ ಉತ್ಪಾದನೆ, ಪ್ರಸರಣ ಹಾಗೂ ಬಳಕೆಯು ನಿಧಾನವಾಗಿ ಜನಪ್ರಿಯವಾಯಿತು.

ಭಾರತ ದೇಶದಲ್ಲಿ ಆಗ ಆಡಳಿತ ನಡೆಸುತ್ತಿದ್ದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಗಮನವನ್ನು ಈ ಅಸಾಧಾರಣ ಬೆಳವಣಿಗೆ ಸೆಳೆಯದೆ ಬಿಡಲಿಲ್ಲ. 1886ರಲ್ಲಿ ಇಂದಿನ ಕರ್ನಾಟಕದ (ಅಂದಿನ ಬಾಂಬೆ ಪ್ರೆಸಿಡೆನ್ಸಿ) ಗೋಕಾಕ್ ಜಲಪಾತದ ಜಲಶಕ್ತಿಯನ್ನು ಬಳಸಿ ವಿದ್ಯುತ್ ಉತ್ಪಾದಿಸಿ ಅದರ ಸಮೀಪದಲ್ಲಿದ್ದ ಹತ್ತಿ ಗಿರಣಿಯ ಯಂತ್ರಗಳನ್ನು ಚಾಲನೆ ಮಾಡಲು ಬಳಸಲಾಯಿತು.

ಇದಾದ ನಂತರ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಖ್ಯಾತಿಯನ್ನು ಗಳಿಸಿದ್ದು ಹಿಂದಿನ ಮೈಸೂರು ಸಂಸ್ಥಾನ. 1831ರಿಂದ 1881ವರೆಗೆ ಮೈಸೂರು ಸಂಸ್ಥಾನವನ್ನು ಆಳಿದ ಸರ್. ಮಾರ್ಕ್ ಕಬ್ಬನ್, ಎಲ್. ಬಿ. ಬೌರಿಂಗ್, ಸ್ಯಾಂಡರ್ಸ್ ಮತ್ತು ಗಾರ್ಡನ್ ಮುಂತಾದ ಬ್ರಿಟಿಷ್ ಕಮ್ಮಿಷನ್ನರುಗಳು ಇಲ್ಲಿ ಅನೇಕ ಸುಧಾರಣೆಗಳನ್ನು ತಂದು ರಾಜ್ಯದ ಅಭ್ಯುದಯಕ್ಕೆ ಬಲವಾದ ಅಡಿಪಾಯವನ್ನು ಹಾಕಿದ್ದು ಸತ್ಯವಾದರೂ, ಕ್ಷಾಮ, ಮಲೇರಿಯ, ಪ್ಲೇಗ್ ಮುಂತಾದ ಸಂಕ್ರಾಮಿಕ ಜಾಡ್ಯಗಳ ಪ್ರಭಾವದಿಂದ ಸಂಸ್ಥಾನದ ಆರ್ಥಿಕ ಚೈತನ್ಯವು ಉಡುಗಿ ಹೋಗಿತ್ತು. 25ನೇ ಸೆಪ್ಟೆಂಬರ್ 1881ರಂದು ಮೈಸೂರಿನ ಆಡಳಿತವನ್ನು ಪುನಃ ಒಡೆಯರ್ ವಂಶದವರಿಗೆ ಒಪ್ಪಿಸಿ ಬ್ರಿಟಿಷರು ಹೊರ

ನಡೆದರು. ಆಗ ಮೈಸೂರು ಸಂಸ್ಥಾನದ ಮಹಾರಾಜರಾಗಿ ಆಡಳಿತ ವಹಿಸಿಕೊಂಡವರು ಹತ್ತನೆಯ ಚಾಮರಾಜೇಂದ್ರ ಒಡೆಯರ್‌ರವರು. ಇವರು ಉನ್ನತ ವಿದ್ಯಾಭ್ಯಾಸವನ್ನು ಸಮರ್ಥ ಯೂರೋಪಿಯನ್ ಗುರುಗಳ ಮಾರ್ಗದರ್ಶನದಲ್ಲಿ ಮಾಡಿದ್ದರು. ಹೊಸ ವಿಚಾರಗಳಿಗೆ ಸ್ಪಂದಿಸುವ ಮನೋಭಾವನೆಯನ್ನು ಹೊಂದಿದ್ದ ಚಾಮರಾಜೇಂದ್ರ ಒಡೆಯರ್ ಮೈಸೂರು ಸಂಸ್ಥಾನ ಕಂಡ ಅತ್ಯಂತ ಜನಾನುರಾಗಿ ದೊರೆಗಳಲ್ಲಿ ಒಬ್ಬರು. ಇವರ ಅಧಿಕಾರಾವಧಿಯಲ್ಲಿ (1881 ರಿಂದ 1896) ದಿವಾನಗಿರಿ ಮಾಡಿದ ಸಿ. ವಿ. ರಂಗಾಚಾರ್ಲು ಮತ್ತು ಸರ್. ಕೆ. ಶೇಷಾದ್ರಿ ಅಯ್ಯರ್ ಇವರು ಮಹಾ ಮೇಧಾವಿಗಳಾಗಿದ್ದರಲ್ಲದೆ, ಅಭಿವೃದ್ಧಿ ಮತ್ತು ಜನಪರ ಕಾರ್ಯಗಳಲ್ಲಿ ವಿಪರೀತ ಆಸಕ್ತಿ ಹೊಂದಿದ್ದರು.

ಮೊದಲನೇ ದಿವಾನರ ಕಾಲದಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆ ಮತ್ತು ಬೆಂಗಳೂರು-ಮೈಸೂರು ರೈಲು ಸಂಪರ್ಕದ ಉದ್ಘಾಟನೆ ಪ್ರಮುಖ ಘಟನೆಗಳೆನಿಸಿದವು. ಎರಡನೆಯ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರ್ (1883 ಜನವರಿಯಿಂದ ಮಾರ್ಚ್ 1901ರವರೆಗೆ) ರವರ ಧೀರ್ಘ ಆಡಳಿತದ ಅವಧಿಯಲ್ಲಿ ಮೈಸೂರು ಸಂಸ್ಥಾನವು ಆರ್ಥಿಕ ಅಭಿವೃದ್ಧಿಯತ್ತ ದಾಪು ಕಾಲುಗಳಿಂದ ಮುನ್ನಡೆಯಿತು. ರಾಜ್ಯದಲ್ಲಿ, ಅಷ್ಟೇಕೆ ಇಡೀ ಏಷ್ಯಾ ಖಂಡದಲ್ಲಿ ಭಾರಿ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣ ಹಾಗೂ ಬಳಕೆಯು ಕಂಡು ಬಂದಿದ್ದು ಇದೇ ಅವಧಿಯಲ್ಲಿಯೇ. ರಾಜ್ಯದ ಕೈಗಾರಿಕೆಗಳ, ರೈಲ್ವೆಯ ಮತ್ತು ಕೃಷಿಯ ಬೆಳವಣಿಗೆಯಲ್ಲಿ ಶೇಷಾದ್ರಿ ಅಯ್ಯರ್‌ರವರಿಗೆ ಅತೀವ ಆಸಕ್ತಿ ಇತ್ತು. ಬೆಂಗಳೂರು ಮತ್ತು ಮೈಸೂರು ನಗರಗಳ ಸರ್ವತೋಮುಖ ಅಭಿವೃದ್ಧಿ ಇವರ ಕಾಲದಲ್ಲಿ ಪ್ರಾರಂಭವಾಯಿತು. (ನೀರು ಸರಬರಾಜು, ಚರಂಡಿ ವ್ಯವಸ್ಥೆ, ಹೊಸ ಬಡಾವಣೆಗಳ ನಿರ್ಮಾಣ ಇತ್ಯಾದಿ).

ಸರ್. ಕೆ. ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ಆದ ಅತ್ಯಂತ ಅದ್ಭುತವಾದ ಎರಡು ಬೆಳವಣಿಗೆಗಳನ್ನು ನೆನಪಿಸಿಕೊಳ್ಳಬೇಕು: 1) ಕೋಲಾರ ಜಿಲ್ಲೆಯಲ್ಲಿ ಚಿನ್ನದ ಗಣಿಗಾರಿಕೆಯನ್ನು ಲಾಭದಾಯಕವಾಗಿ ಪ್ರಾರಂಭಿಸಿದ್ದು ಮತ್ತು, 2) ಶಿವನ ಸಮುದ್ರದ ಬಳಿ ಕಾವೇರಿ ನದಿಯ ನೀರನ್ನು ಬಳಸಿ ವಿದ್ಯುತ್ ಉತ್ಪಾದಿಸಿ ಅದನ್ನು ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ಬೆಂಗಳೂರು, ಮೈಸೂರು ಮುಂತಾದ ಪಟ್ಟಣಗಳಿಗೆ ಸಾಗಿಸಿ ಅನೇಕ ಉದ್ದೇಶಗಳಿಗೆ ಒದಗಿಸಿದ್ದು.

ಶಿವನ ಸಮುದ್ರದಲ್ಲಿ ವಿದ್ಯುತ್ ಉತ್ಪಾದನೆಯ ಅಂತಿಮ ಹಂತ ತಲುಪುವವರೆಗೆ ಇವರ ಮಾರ್ಗದರ್ಶನದಲ್ಲಿಯೇ ಕೆಲಸ ಕಾರ್ಯಗಳು ಮುಂದುವರಿದವು. ಈ ಕಾರ್ಯದಲ್ಲಿ ಅವರ ಜೊತೆ ಸಹಕರಿಸಿದವರಲ್ಲಿ ಕೆಲವರ ಹೆಸರುಗಳನ್ನಾದರೂ ಇಲ್ಲಿ ಸ್ಮರಿಸಲೇ ಬೇಕು. "ಎಡ್ಮಂಡ್ ಬೌರಿಂಗ್ ಬನ್, ಹೊಮ್ಮೆ, ಮೈಸೂರು ರೆಸಿಡೆಂಟ್ ಆಗಿದ್ದ ಹೆಂಡರ್‌ಸನ್, ಮೈಸೂರು ಚೀಫ್ ಇಂಜಿನಿಯರ್ ಆಗಿದ್ದ ಕರ್ನಲ್ ಬೊವೆನ್ ಮತ್ತು ಕ್ಯಾಂಪಬೆಲ್, ಎ. ಸಿ. ಜೆ. ಲಾಬಿನೀರ್ (A.C.J. Lotebiniere) ಮುಂತಾದವರು ಮತ್ತು ಮುಖ್ಯ ಇಂಜಿನೀಯರ್ ಮೆಕ್‌ನೀಲ್ ಕ್ಯಾಂಬೆಲ್‌ರವರುಗಳು, ಉಳಿದ ಆಡಳಿತಾತ್ಮಕ ತಾಂತ್ರಿಕ ಮತ್ತು ಆರ್ಥಿಕ ಸಂಗತಿಗಳು ಈ ಲೇಖನದ ವ್ಯಾಪ್ತಿಗೆ ಅಪ್ರಸ್ತುತ.

ಅಮೇರಿಕದ ಜನರಲ್ ಇಲೆಕ್ಟ್ರಿಕ್ (ಜಿ. ಇ.) ಕಂಪನಿಯ ತಂಡವು ಶಿವನ ಸಮುದ್ರದಲ್ಲಿ ಸ್ಥಾವರದ ಕಾಮಗಾರಿಗಳನ್ನು ನಡೆಸಿಕೊಟ್ಟಿತು. ಒಂದನೇ ಮಾರ್ಚ್ 1902ರ ವೇಳೆಗೆ ಶಿವನ ಸಮುದ್ರದಿಂದ ಕೋಲಾರ ಚಿನ್ನದಗಣಿಯವರೆಗೆ ಸುಮಾರು 92 ಮೈಲಿ ಉದ್ದದ ವಿದ್ಯುತ್ ಜಾಲವನ್ನು ನಿರ್ಮಾಣ ಮಾಡಲಾಯಿತು. ದಿನಾಂಕ 30ನೇ ಜೂನ್ 1902ರಂದು ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿ ಕೋಲಾರದ ಚಿನ್ನದ ಗಣಿಗೆ ಒದಗಿಸುವ ಕಾರ್ಯವನ್ನು ಪ್ರಾರಂಭಿಸಲಾಯಿತು (35,000 ವೋಲ್ಟ್ಸ್). 1902ರ ಜುಲೈ 15ರಿಂದ ನಿರಂತರ

ವಿದ್ಯುತ್ ಹರಿವು ಪ್ರಾರಂಭವಾಯಿತು. ಆಗ ರಾಜ್ಯದ ದಿವಾನರಾಗಿದ್ದವರು ಸರ್. ಪಿ. ಎನ್. ಕೃಷ್ಣಮೂರ್ತಿ ಮತ್ತು ಬ್ರಿಟಿಷ್ ರೆಸಿಡೆಂಟ್‌ರಾಗಿದ್ದವರು ಕರ್ನಲ್ ಡೊನಾಲ್ಡ್ ರಾಬರ್ಟ್‌ಸನ್. ಇವರೇ ಅಂದು ಕೋಲಾರ ಚಿನ್ನದ ಗಣಿಯನ್ನು ಉದ್ಘಾಟಿಸಿದ್ದು.

ಮಾರ್ಚ್ 1904ರಲ್ಲಿ ಮೈಸೂರು ಸರ್ಕಾರವು ಬೆಂಗಳೂರು ಕಂಟೋನ್ಮೆಂಟ್ ಪ್ರದೇಶ ಮತ್ತು ಬೆಂಗಳೂರು ಪೇಟೆಗಳಿಗೆ ವಿದ್ಯುತ್ ದೀಪಗಳನ್ನು ಹಾಕುವ ಯೋಜನೆಯನ್ನು ಸಿದ್ಧಪಡಿಸಿತು. ಇದಕ್ಕಾಗಿ ಎರಡು ನಗರಸಭೆ (Municipality)ಗಳನ್ನು ಸಂಪರ್ಕಿಸಿ. ಕೆಲವು ಶರತ್ತುಗಳ ಮೇಲೆ ಬೀದಿ ದೀಪಗಳಿಗೆ ತಾನು ವಿದ್ಯುತ್ ಪೂರೈಸುವುದಾಗಿ ತಿಳಿಸಿತು. ಈ ಸೇವೆಗಳಿಗಾಗಿ ನಗರ ಸಭೆಗಳು ವಾರ್ಷಿಕ 25 ಸಾವಿರ ರೂಪಾಯಿಗಳನ್ನು ನೀಡಲು ಒಪ್ಪಬೇಕೆಂದು ತಿಳಿಸಲಾಯಿತು. ಮೇಜರ್ ಎ. ಸಿ. ಜೆ. ಲಾಬಿನೀರ್ ಮೂಲಕ ಮಾಡಲಾದ ಈ ಪ್ರಸ್ತಾಪನೆಗೆ ಎರಡೂ ನಗರ ಸಭೆಗಳು ಒಪ್ಪಿಗೆ ನೀಡಿದವು. ಬೀದಿ ದೀಪಗಳಿಗೆ ವಿದ್ಯುತ್ ಒದಗಿಸುವ ಜೊತೆ ಜೊತೆಗೆ ಮಿತ ಪ್ರಮಾಣದಲ್ಲಿ ಗೃಹ ಉಪಯೋಗಕ್ಕೂ ವಿದ್ಯುತ್ ಒದಗಿಸುವ ನಿರ್ಧಾರವನ್ನು ಸರ್ಕಾರವು ಪ್ರಕಟಿಸಿತು. ಇದಕ್ಕಾಗಿ ಪ್ರತ್ಯೇಕ ಕರಾರನ್ನು ಪ್ರತಿಯೊಂದು ಗೃಹದ ಮಾಲೀಕರು ವಿದ್ಯುತ್ ಇಲಾಖೆಯೊಡನೆ ಮಾಡಿಕೊಳ್ಳಬೇಕಾಗಿತ್ತು. ಸಣ್ಣ ಪುಟ್ಟ ಕೈಗಾರಿಕೆಗಳಲ್ಲಿ ಮೊಟಾರುಗಳ ಚಾಲನೆಗೆ ವಿದ್ಯುತ್ ಒದಗಿಸುವುದಾಗಿಯೂ ಸರ್ಕಾರವು ತಿಳಿಸಿತು.

ಕಂಟೋನ್ಮೆಂಟ್ ಮುನಿಸಿಪಾಲಿಟಿಯ ಅಧಿಕಾರಿಗಳು ಭಾರತ ಸರ್ಕಾರದ ಅನುಮತಿ ಬರಲು ವಿಳಂಬವಾದುದರಿಂದ ಸ್ವಲ್ಪ ಕಾಲದ ನಂತರ ವಿದ್ಯುತ್ ಸಂಪರ್ಕ ಪಡೆಯುವುದಾಗಿ ತಿಳಿಸಿದರು. ಇದರಿಂದಾಗಿ ಕಂಟೋನ್ಮೆಂಟಿನಲ್ಲಿ ವಾಸವಾಗಿದ್ದ ನಾಗರೀಕರಿಗೆ ಬಹಳವೇ ನಿರಾಸೆಯಾಗಿತ್ತು. ಬೆಂಗಳೂರು ಪೇಟೆಯ ಬೀದಿ ದೀಪಗಳಿಗೆ ವಿದ್ಯುತನ್ನು ನೀಡುವ ಕಾರ್ಯಕ್ರಮವು 5ನೇ ಆಗಸ್ಟ್ 1905ರಂದು ಸಂಜೆ ಬೆಂಗಳೂರು ಪೇಟೆಯ ಸಿಟಿ ಮಾರ್ಕೆಟ್ ಬಳಿ ನಿರ್ಮಿಸಲಾಗಿದ್ದ "ಎ" ಸ್ಟೇಷನ್ (ನಂ.1) ನಲ್ಲಿ ನಡೆಯಿತು. ಆಗ ಅಲ್ಲಿ ಬೆಂಗಳೂರು ಪೇಟೆಯ ಪ್ರಮುಖ ಅಧಿಕಾರಿಗಳು ಮತ್ತು ನಾಗರೀಕರ ದಂಡೇ ನೆರೆದಿತ್ತು. ಅವರೆಲ್ಲರ ಸಮಕ್ಷಮದಲ್ಲಿ ಬ್ರಿಟಿಷ್ ರೆಸಿಡೆಂಟ್ ಸರ್. ಜಾನ್. ಹೆವೆಟ್ (Sir. John Hewet) ರವರು ಗುಂಡಿಯೊತ್ತುವ ಮೂಲಕ ಬೆಂಗಳೂರು ಪೇಟೆಯ ಬೀದಿ ದೀಪಗಳ ವ್ಯವಸ್ಥೆಯನ್ನು ಉದ್ಘಾಟಿಸಿದರು. ಬೆಂಗಳೂರು ಆಗ ದೇಶದಲ್ಲಿಯೇ ವಿದ್ಯುತ್ ದೀಪಗಳಿಂದ ಬೆಳಗಿದ ಪ್ರಪ್ರಥಮ ನಗರವೆಂಬ ಹೆಮ್ಮೆಗೆ ಪಾತ್ರವಾಯಿತು. ಆ ವರ್ಷದ ಅಂತ್ಯದ ವೇಳೆಗೆ 1395 ವಿದ್ಯುತ್ ಬೀದಿ ದೀಪಗಳನ್ನು ನಗರದಾದ್ಯಂತ ಅಳವಡಿಸಲಾಗಿತ್ತು. ಇದರ ನಿರ್ವಹಣೆಯ ಜವಾಬ್ದಾರಿಯನ್ನು ಬೆಂಗಳೂರು ಪೇಟೆ ಮುನಿಸಿಪಾಲಿಟಿಯು ಗೊಮೆಡ್ ಎಂಬ ಕಂಪನಿಗೆ ರೂ. 20,000 ರೂಪಾಯಿಗಳ ವಾರ್ಷಿಕ ಗುತ್ತಿಗೆಗೆ ನೀಡಿದ್ದಿತು.

ಬೆಂಗಳೂರು ಕಂಟೋನ್ಮೆಂಟ್ ('ಸಿ' ಮತ್ತು 'ಬಿ' ಸ್ಟೇಷನ್) ನ ಬೀದಿಗಳಿಗೆ ವಿದ್ಯುತ್ ದೀಪಗಳನ್ನು ಅಳವಡಿಸಿ ದಿನಾಂಕ 31ನೇ ಡಿಸೆಂಬರ್ 1907ರ ಮಂಗಳವಾರ ಸಂಜೆ 6 ಘಂಟೆಗೆ ಉದ್ಘಾಟಿಸಲಾಯಿತು. ಪೆರೇಡ್ ಮೈದಾನದ ಪೂರ್ವದ ತುದಿಯಲ್ಲಿ ನಿರ್ಮಿಸಲಾಗಿದ್ದ ಸಂಖ್ಯೆ (2) ಬಿ ಸ್ಟೇಷನ್‌ನ ಆವರಣದಲ್ಲಿ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಆಗ ಅಲ್ಲಿ ನೆರೆದಿದ್ದ ಪ್ರಮುಖರೆಂದರೆ ಬ್ರಿಟಿಷ್ ರೆಸಿಡೆಂಟರಾಗಿದ್ದ ಸ್ಟೂವರ್ಟ್ ಫ್ರೇಸರ್, ಪ್ರಥಮ ಕೌನ್ಸಿಲರ್ ಆನಂದರಾವ್. ಅಲ್ಲಿ ಕಂಟೋನ್ಮೆಂಟ್ ಮುನಿಸಿಪಾಲಿಟಿಯ ಎಲ್ಲಾ ಕಮ್ಮಿಷನರುಗಳು (councilors), ನಗರದ ಹಿರಿಯ ನಾಗರೀಕರು, ಅಧಿಕಾರಿಗಳೂ ಮುಂತಾದವರು ಉಪಸ್ಥಿತರಿದ್ದರು. ಆ ಸಂದರ್ಭದಲ್ಲಿ ಸಭಿಕರನ್ನು ರಂಜಿಸಲು ದಿ ಬೆಂಗಳೂರು ರೈಫಲ್ಸ್ ವಾಲಂಟೀಯರ್ಸ್‌ನ ಬ್ಯಾಂಡ್ ತಂಡದವರು ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿದ್ಯುದ್ದೀಪಗಳನ್ನು ಬಟನ್ ಒತ್ತುವ ಮೂಲಕ ಬೆಳಗಿಸಿದವರು ಮಿಸಸ್ ಮಲಾರ್ ಎಂಬ ಇಂಗ್ಲೀಷ್ ಮಹಿಳೆ ಎನ್ನಲಾಗಿದೆ.

1905ಕ್ಕೆ ಮುಂಚೆ ಬೀದಿ ದೀಪಗಳನ್ನು ಸೀಮೆ ಎಣ್ಣೆಯಿಂದ ಉರಿಸುತ್ತಿದ್ದರು. ಆ ಕಂಬಗಳಿಗೆ 'ಲಾಂದ್ರ ಕಂಬ' ಎಂದು ಕರೆಯುತ್ತಿದ್ದರು. ಈ ಕಂಬಗಳ ಮೇಲೆ ಲಾಂದ್ರಗಳನ್ನು ನೇತುಹಾಕಿ ಬತ್ತಿಗಳಿಂದ ಉರಿಸುತ್ತಿದ್ದರು. ಪ್ರತಿದಿನ ಸಂಜೆ ಅವುಗಳನ್ನು ಹೊತ್ತಿಸಲು ಪ್ರತಿ ಪ್ರದೇಶದಲ್ಲಿಯೂ ಒಬ್ಬ ಸೀಮೆ ಎಣ್ಣೆಯನ್ನು ಲಾಂದ್ರಕ್ಕೆ ಹಾಕುತ್ತಾ ಸಾಗಿದರೆ ಹಿಂದಿನಿಂದ ಮತ್ತೊಬ್ಬ ಬತ್ತಿಯನ್ನು ಸರಿಪಡಿಸಿ ದೀಪಗಳನ್ನು ಹೊತ್ತಿಸುತ್ತಾ ಸಾಗುತ್ತಿದ್ದನು. ಈ ದೀಪಗಳ ನಿರ್ವಹಣೆಯನ್ನು ವಾರ್ಷಿಕ ಗುತ್ತಿಗೆಗೆ ನೀಡಲಾಗುತ್ತಿತ್ತು.

ದಿನಾಂಕ 02–01–1908ರ ದಿ ಡೈಲಿ ಪೋಸ್ಟ್ ಪತ್ರಿಕೆಯಲ್ಲಿ ಬಂದಿದ್ದ ಈ ಕೆಳಗಿನ ವಾಕ್ಯಗಳು ವಿದ್ಯುತ್ ಸಂಪರ್ಕದ ಬಗ್ಗೆ ಅಂದಿನ ಜನರ ಉತ್ಸಾಹ ಮತ್ತು ಭಾವನೆಗಳನ್ನು ಸುಂದರವಾಗಿ ನಮ್ಮ ಮುಂದೆ ಇರಿಸಲು ಸಮರ್ಥವಾಗಿವೆ.

"To say that the new light is an improvement on the ancient system of illuminating the streets with pre-historic "oil buttis" is but a mild way of putting it. As a matter of fact, there can be no comparison between the two systems, though the municipality did try to show the contrast by having the old street lamps lit. The clear radiance of the powerful electric bulbs made the ill-kept, smoky, murky oil lamps appear like fire-flies in the distance.."

ಇದಾದ ನಂತರ ಮೈಸೂರು ನಗರಕ್ಕೆ (ದಿನಾಂಕ ನವೆಂಬರ್ 1907) ಮತ್ತು ರಾಜ್ಯದ ಇತರೆ ಪಟ್ಟಣ ಪ್ರದೇಶಗಳಿಗೆ ವಿದ್ಯುತ್ ಸರಬರಾಜನ್ನು ಪ್ರಾರಂಭಿಸಲಾಯಿತು. ಅದಕ್ಕನುಗುಣವಾಗಿ ವಿವಿಧ ಹಂತಗಳಲ್ಲಿ ವಿದ್ಯುದುತ್ಪಾದನೆಯನ್ನು ಕೂಡ ಹೆಚ್ಚಿಸುತ್ತಾ ಬರಲಾಯಿತು.

61. ಬೆಂಗಳೂರಿನ ಬೆಳವಣಿಗೆಗೆ ದಿವಾನರುಗಳಾದ ಸರ್. ಕೆ. ಶೇಷಾದ್ರಿ ಅಯ್ಯರ್ ಮತ್ತು ವಿ.ಪಿ ಮಾಧವರಾವ್ ಅವರ ಕೊಡುಗೆಗಳು

ಡಾ. ಸುರೇಶ್ ಮೂನ

ದಿವಾನ್ ಸರ್. ಕೆ. ಶೇಷಾದ್ರಿ ಅಯ್ಯರ್

ಇವರು 1880ರ ಡಿಸೆಂಬರ್ 2ನೇ ತಾರೀಖಿನಿಂದ ದಿವಾನರಾಗಿ ನೇಮಕಗೊಂಡರು. ಆಗ ಅವರಿಗಿನ್ನೂ 36 ವರ್ಷ ವಯಸ್ಸು. ಇವರು ಅಧಿಕಾರವನ್ನು ಸ್ವೀಕರಿಸಿದಾಗ ರಾಜ್ಯದ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಎರಡನೆಯದಾಗಿ ಮಹಾರಾಜರು ಇನ್ನೂ ಚಿಕ್ಕವರಾಗಿದ್ದರು ಹಾಗೂ ರಾಜಮಾತೆಯವರಿಗೆ ಇನ್ನೂ ಆಡಳಿತಾತ್ಮಕ ವಿಷಯಗಳ ಬಗ್ಗೆ ಹೆಚ್ಚು ಅನುಭವವಿರಲಿಲ್ಲ. ಹೀಗಾಗಿ ಎಲ್ಲೇ ಸ್ವಲ್ಪ ನ್ಯೂನತೆಗಳಾಗಲೀ ತೊಂದರೆಗಳಾಗಲೀ ಕಂಡುಬಂದಲ್ಲಿ ಅದು ದಿವಾನರ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತಿತ್ತು. ಆದರೆ ಇನ್ನೂ ಚಿಕ್ಕ ವಯಸ್ಸಿನ ಶೇಷಾದ್ರಿ ಅಯ್ಯರ್ ಇವೆಲ್ಲವನ್ನೂ ಧೈರ್ಯ ಹಾಗೂ ಬುದ್ಧವಂತಿಕೆಯಿಂದ ಎದುರಿಸಿ ಬೆಂಗಳೂರು ಹಾಗೂ ರಾಜ್ಯದ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಕೈಗೊಂಡರು. ಇವರು ಮಹಾರಾಜ ಚಾಮರಾಜೇಂದ್ರ ಒಡೆಯರ ಕಾಲದಲ್ಲಿ 12 ವರ್ಷಗಳು, ಮಹಾರಾಣೀ ಕೆಂಪನಂಜಮ್ಮಣ್ಣಿಯವರ ಕಾಲದಲ್ಲಿ ಆರು ವರ್ಷಗಳು ಹೀಗೆ 18 ವರ್ಷಗಳಷ್ಟು ದೀರ್ಘಕಾಲ ರಾಜ್ಯಾಡಳಿತವನ್ನು ನಡೆಸಿದರು.

ದಿವಾನರಾಗಿ ಬಂದ ಕೂಡಲೇ ಇವರು ರಾಜ್ಯದ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಪ್ರಯತ್ನಿಸಿದರು. ಕೇಂದ್ರ ಸರ್ಕಾರದ ಸಾಲದ ಮರುಪಾವತಿಯನ್ನು 1896ರವರೆಗೆ ಮುಂದೂಡುವಂತೆ ಬ್ರಿಟಿಷ್ ಸರ್ಕಾರದ ಮನವೊಲಿಸಿದರು. ರೆವಿನ್ಯೂ, ಅಬಕಾರಿ, ಅರಣ್ಯ ಹಾಗೂ ಇನ್ನೂ ಹಲವಾರು ಇಲಾಖೆಗಳಿಂದ ಹೆಚ್ಚು ಆದಾಯ ಬರುವ ಹಾಗೆ ನಿರ್ಮಾಣ ಕಾರ್ಯಗಳನ್ನು ಪ್ರಾರಂಭಿಸಲಾಯಿತು. 1883ರ ವೇಳೆಗೆ ಹರಿಹರ, ಹಿಂದೂಪುರ, ಕೆಜಿಎಫ್ ಮುಂತಾದ ಸ್ಥಳಗಳಿಗೆ ಬೆಂಗಳೂರಿನಿಂದ ರೈಲ್ವೆ ಸಂಪರ್ಕ ಕಲ್ಪಿಸಲಾಯಿತು. ಅದೇ ವರ್ಷವೇ ಮೈಸೂರು–ನಂಜನಗೂಡು, ಬೇಲೂರು–ಶಿವಮೊಗ್ಗ ರೈಲ್ವೆ ಮಾರ್ಗಗಳೂ ನಿರ್ಮಾಣವಾದವು. ದಕ್ಷಿಣ ಮರಾಠ ರೈಲ್ವೆ ಕಂಪೆನಿ ಹಾಗೂ ಮದ್ರಾಸ್ ರೈಲ್ವೆ ಕಂಪನಿಗಳಿಗೆ ಈ ಎಲ್ಲಾ ಮಾರ್ಗಗಳ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಲಾಗಿತ್ತು. ಈ ರೈಲ್ವೆ ಮಾರ್ಗಗಳ ನಿರ್ಮಾಣದಿಂದಾಗಿ ಬೆಂಗಳೂರು ಹಾಗೂ ರಾಜ್ಯದ ಪ್ರಗತಿಯ ವೇಗ ಹೆಚ್ಚಾಯಿತು. 1884ರಲ್ಲಿ 'ದಿ ಮೈಸೂರ್ ಸ್ಪಿನ್ನಿಂಗ್ ಅಂಡ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ' ಮತ್ತು 1888ರಲ್ಲಿ 'ದಿ ಬೆಂಗಳೂರ್ ವುಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಲಿಮಿಟೆಡ್' ಪ್ರಾರಂಭವಾದವು. ಹಬೆಯ ಶಕ್ತಿಯೊಂದಿಗೆ ಪ್ರಾರಂಭಗೊಂಡ ಈ ಮಿಲ್‌ಗಳು ಬೆಂಗಳೂರಿನ ಕೈಗಾರಿಕಾ ಬೆಳವಣಿಗೆಗೆ ಭದ್ರ ಬುನಾದಿಯನ್ನು ಹಾಕಿದವು. 1897ರಲ್ಲಿ ರಾಜ್ಯ ಹಾಗೂ ಹೊರರಾಜ್ಯಗಳ ದೊಡ್ಡ ಹಾಗೂ ಸಣ್ಣ ಕೈಗಾರಿಕಾ ಘಟಕಗಳಿಗೆ ಯಂತ್ರೋಪಕರಣಗಳನ್ನು ತಯಾರಿಸಿಕೊಡುವ ದಿ ಗವರ್ನಮೆಂಟ್ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಶಾಪನ್ನು ಸ್ಥಾಪಿಸಲಾಯಿತು. 1888ರಲ್ಲಿ ಮೈಸೂರಿನಲ್ಲಿ ನಡೆದ ಕೈಗಾರಿಕೆ ಹಾಗೂ ವ್ಯವಸಾಯ ಕ್ಷೇತ್ರದ ವಸ್ತು ಪ್ರದರ್ಶನವು ರಾಜ್ಯದ ಪ್ರಗತಿಯನ್ನು ಪ್ರತಿಬಿಂಬಿಸುತ್ತಿತ್ತು. ಕೋಲಾರದ ಚಿನ್ನದ ಗಣಿಯ ಪ್ರಾರಂಭ ಈ ಕಾಲದಲ್ಲಿ ಆದ ಮತ್ತೊಂದು ಪ್ರಮುಖ

ಬೆಳವಣಿಗೆ. ಎಂ. ಎಫ್. ಲ್ಯಾವಲೆ ಎಂಬಾತ 1873ರಲ್ಲಿ ಉರಿಗಾಂ ಎಂಬಲ್ಲಿ ಈ ಗಣಿಗಾರಿಕೆಯನ್ನು ಪ್ರಾರಂಭಿಸಿದರು. ಇದರಿಂದ ರಾಜ್ಯಕ್ಕೆ ಇನ್ನಷ್ಟು ಆದಾಯ ಬರುವಂತಾಯಿತು. 1899ಕ್ಕೂ ಮುಂಚೆಯೇ ಶಿವನಸಮುದ್ರ ಜಲಪಾತದಿಂದ ವಿದ್ಯುತ್ತನ್ನು ಪಡೆಯುವ ಬಗ್ಗೆ ಯೋಜನೆಯನ್ನು ತಯಾರಿಸಲಾಯಿತು. ಇದಕ್ಕೆ ರೀಜೆಂಟ್ ರಾಣಿಯವರೂ ದಿವಾನ್ ಕೆ. ಶೇಷಾದ್ರಿ ಅಯ್ಯರ್ ಅವರೂ ಒಪ್ಪಿಗೆಯಿತ್ತರು. 1900ರ ಆಗಸ್ಟ್ 10ರಂದು ಈ ಕಾರ್ಯಾರಂಭವಾಗಿ 1902ರ ಜೂನ್ 30ರಂದು ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಒದಗಿಸಲಾಯಿತು. ವೇಗವಾಗಿ ಬೆಳೆಯುತ್ತಿದ್ದ ಬೆಂಗಳೂರಿಗೆ ನೀರು ಒದಗಿಸುವುದೂ ಕಷ್ಟವಾಗಿತ್ತು. ಆಗ ದಿವಾನರು ಹೆಸರುಘಟ್ಟದ ದೊಡ್ಡಕೆರೆಯಿಂದ ನೀರನ್ನು ಒದಗಿಸುವ ವ್ಯವಸ್ಥೆ ಮಾಡಿದರು. ಈ ಯೋಜನೆಯು ಬಹಳ ಜನಪ್ರಿಯವಾಗಿ ಜನರು ನಲ್ಲಿ ನೀರನ್ನು 'ಶೇಷಾದ್ರಿ ಅಯ್ಯರ್ ಕಾಫಿ' ಎನ್ನುತ್ತಿದ್ದರಂತೆ! ಶಿಕ್ಷಣ ಕ್ಷೇತ್ರದಲ್ಲೂ ಈ ಕಾಲದಲ್ಲಿ ಸುಧಾರಣೆಗಳಾದವು. ಹೆಚ್ಚು ಸಂಸ್ಕೃತ ಶಾಲೆಗಳನ್ನು ತೆರೆಯಲಾಯಿತು. ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಲಾಯಿತು. ಬಾಲಕಿಯರಿಗಾಗಿ ಬೆಂಗಳೂರಿನಲ್ಲಿ ಪ್ರಾರಂಭಿಸಿದ ಅರ‍್ಯ ಬಾಲಿಕಾ ಪಾಠಶಾಲೆಯು ಅವುಗಳಲ್ಲಿ ಒಂದು, ಒಮ್ಮೆ ರೆಸಿಡೆಂಟರು ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಭೇಟಿಯಿತ್ತಾಗ ಇಲ್ಲಿ ತೆಗೆದುಕೊಳ್ಳುತ್ತಿದ್ದ ಫೀ ಬಹಳ ಕಡಿಮೆಯಾಗಿದ್ದರಿಂದ ಮದ್ರಾಸ್ ಪ್ರಾಂತ್ಯದಿಂದಲೂ ಇಲ್ಲಿಗೆ ಶಿಕ್ಷಣಕ್ಕಾಗಿ ಜನರು ಬಂದಿರುವುದನ್ನು ಗಮನಿಸಿದರು. ಬೇರೆ ರಾಜ್ಯಗಳ ರೀತಿಯಲ್ಲಿ ಇಲ್ಲೂ ಫೀ ಹಣವನ್ನು ಜಾಸ್ತಿ ಮಾಡುವಂತೆ ದಿವಾನರಿಗೆ ಸೂಚಿಸಿದರು. ಆದರೆ ದಿವಾನರು, ಶಿಕ್ಷಣವು ಬಡವರಿಗೂ ಲಭ್ಯವಾಗಬೇಕು ಎಂಬುದೇ ಮಹಾರಾಜರ ತತ್ವ, ಆದ್ದರಿಂದ ಫೀ ಹಣವನ್ನು ಹೆಚ್ಚಿಸಲಾಗುವುದಿಲ್ಲ ಎಂದು ಉತ್ತರಿಸಿದಾಗ ರೆಸಿಡೆಂಟರು ಮಹಾರಾಜರಿಗೆ ಹಾಗೂ ದಿವಾನರಿಗೆ ಶಿಕ್ಷಣದ ಬಗ್ಗೆ ಇದ್ದ ಕಾಳಜಿಯನ್ನು ಮೆಚ್ಚಿಕೊಂಡರಂತೆ.

ದಿವಾನ್ ಕೆ. ಶೇಷಾದ್ರಿ ಅಯ್ಯರ್ ಅವರ ಕಾಲದಲ್ಲಿ ಬೆಂಗಳೂರಿನಲ್ಲಿ ಆದ ಇನ್ನೂ ಹಲವಾರು ಸುಧಾರಣೆಗಳು ಹೀಗಿವೆ.

1. ಇಂದು ಪ್ರಸಿದ್ಧವಾಗಿರುವ ಮಿಂಟೋ ಕಣ್ಣಾಸ್ಪತ್ರೆಯು ಪ್ರಾರಂಭಗೊಂಡಿದ್ದು ಈ ಕಾಲದಲ್ಲಿಯೇ. 1896ರ ನವೆಂಬರ್ 9 ರಂದು ಚಿಕ್ಕಪೇಟೆಯ ಕಟ್ಟಡವೊಂದರಲ್ಲಿ ಸಣ್ಣ ಪ್ರಮಾಣದಲ್ಲಿ ನೇತ್ರ ಚಿಕಿತ್ಸಾಲಯವಾಗಿ ಪ್ರಾರಂಭವಾಯಿತು. ಅಂದು ಒಂಬತ್ತು ಜನ ದೃಷ್ಟಿದೋಷವುಳ್ಳವರಿಗೆ ಚಿಕಿತ್ಸೆ ನೀಡಲಾಗಿತ್ತು. ಡಾ. ಎಸ್. ವಿ. ರಾಮಸ್ವಾಮಿ ಅಯ್ಯಂಗಾರ್ ಎಂಬುವವರು ಆಗ ಇಂಗ್ಲೆಂಡಿನಿಂದ ಕಣ್ಣಿನ ಬಗ್ಗೆ ವಿಶೇಷ ಪರಿಣಿತಿ ಪಡೆದು ಬಂದಿದ್ದರಿಂದ ಅವರನ್ನು ಮೆಡಿಕಲ್ ಆಫೀಸರ್ ಆಗಿ ನೇಮಿಸಲಾಗಿತ್ತು. ಇದು ಕ್ರಮೇಣ ದೊಡ್ಡದಾಗಿ ಇಂದು ಚಾಮರಾಜಪೇಟೆ ಒಂದನೇ ಮುಖ್ಯರಸ್ತೆಯಲ್ಲಿ ಮಿಂಟೋ ಕಣ್ಣಾಸ್ಪತ್ರೆ ದೊಡ್ಡ ಹಾಗೂ ಸುಂದರ ಕಲ್ಲಿನ ಕಟ್ಟಡದಲ್ಲಿದೆ.

2. ಲಾಲ್‌ಬಾಗ್‌ನ ಪ್ರಮುಖ ಆಕರ್ಷಣೆಯಾದ ಗ್ಲಾಸ್‌ಹೌಸ್ ನಿರ್ಮಾಣವಾದದ್ದು ಇವರ ಕಾಲದಲ್ಲಿಯೇ. 1888ರಲ್ಲಿ 'ಪ್ರಿನ್ಸ್ ಆಫ್ ವೇಲ್ಸ್ ಆಲ್ಬರ್ಟ್ ವಿಕ್ಟರ್ ಅವರು ಬೆಂಗಳೂರಿಗೆ ಬಂದಿದ್ದಾಗ ಅವರ ಕೈಯಲ್ಲಿ ಈ ರಚನೆಗೆ ಶಂಕುಸ್ಥಾಪನೆ ಮಾಡಿಸಲಾಯಿತು. ಲಾಲ್‌ಬಾಗಿನ ಮೇಲ್ವಿಚಾರಕರಾಗಿದ್ದ ಜಾನ್ ಕೆಮರಾನ್ ಅವರು ಒಂದು ವರ್ಷದಲ್ಲಿ ಈ ರಚನೆಯನ್ನು ನಿರ್ಮಿಸಿದರು. ಅಂದಿನಿಂದ ಇಂದಿನವರೆಗೆ ಫಲಪುಷ್ಪ ಪ್ರದರ್ಶನಗಳು, ಅನೇಕ ಸಮಾರಂಭಗಳೂ ಇಲ್ಲಿ ನಡೆಯುತ್ತಾ ಬಂದಿವೆ.

3. ಇಂಗ್ಲೆಂಡಿನ ಮಹಾರಾಣಿ ವಿಕ್ಟೋರಿಯಾ ಅವರ ಆಳ್ವಿಕೆಯ ವಜ್ರಮಹೋತ್ಸವವನ್ನು 1897ರ ಜೂನ್ 21 ಹಾಗೂ 22ರಂದು ವೈಭವದಿಂದ ಆಚರಿಸಲಾಯಿತು. ಬೆಂಗಳೂರಿನಲ್ಲಿ ಈ ಸಂದರ್ಭದ ನೆನಪಿಗಾಗಿ

ರೀಜೆಂಟ್ ಮಹಾರಾಣಿಯವರು ಸಾರ್ವಜನಿಕರಿಗಾಗಿ ಆಸ್ಪತ್ರೆಯನ್ನು ಕಟ್ಟಲು ಈಗಿನ ಸಿಟಿ ಮಾರ್ಕೆಟ್ಟಿನ ಎದುರು ಶಂಕುಸ್ಥಾಪನೆ ಮಾಡಿದರು. 1900ರಲ್ಲಿ ಸಂಪೂರ್ಣಗೊಂಡ ಈ ಆಸ್ಪತ್ರೆಯನ್ನು ವಿಕ್ಟೋರಿಯಾ ಆಸ್ಪತ್ರೆ ಎಂದು ಕರೆಯಲಾಯಿತು. ಲಾರ್ಡ್ ಕರ್ಜನ್ ಇದರ ಉದ್ಘಾಟನೆ ಮಾಡಿದರು.

4. ಬೆಂಗಳೂರಿನ ಲಾಲ್‌ಬಾಗಿನಲ್ಲಿ ಮೈಸೂರಿನ ಕರ್ಜನ್ ಪಾರ್ಕ್‌ನಿಂದ ತಂದ ಚಾಮರಾಜ ಒಡೆಯರ ಪ್ರತಿಮೆಯನ್ನು ಲಾಲ್‌ಬಾಗಿನಲ್ಲಿ ಸ್ಥಾಪಿಸಲಾಯಿತು. ಇದೇ ಸಮಯದಲ್ಲಿ ಕಬ್ಬನ್‌ಪಾರ್ಕ‌ನಲ್ಲಿಯೂ ಚಾಮರಾಜ ಒಡೆಯರ ಅಮೃತಶಿಲೆಯ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತು.

ಹಾಗೆಯೇ ಶೇಷಾದ್ರಿ ಅಯ್ಯರ್ ಅವರ ಕಾಲದಲ್ಲಿ ಪ್ರಾರಂಭಗೊಂಡ ಬಸವನಗುಡಿ ಮತ್ತು ಮಲ್ಲೇಶ್ವರ ಬಡಾವಣೆಗಳು ಪ್ರಗತಿ ಕಂಡವು. ಈ ಹೊಸ ಬಡಾವಣೆಗಳ ರಚನಾ ಕಾರ್ಯದಲ್ಲಿ ಅಂದಿನ ಬೆಂಗಳೂರು ತಾಲ್ಲೂಕು ಅಮಲ್ದಾರರಾಗಿದ್ದ ಕೆ. ಈ. ಶಾಮಣ್ಣನವರು ಬಹಳ ಶ್ರಮ ವಹಿಸಿ ದುಡಿದಿದ್ದರು.

ಇವರ ಕಾಲದಲ್ಲಿ ಗಣ್ಯ ವ್ಯಕ್ತಿಗಳಾದ ಲಾರ್ಡ್ ಡಫರಿನ್, ರಾಜಕುಮಾರ ಅಲ್ಬರ್ಟ್ ವಿಕ್ಟರ್, ಲಾರ್ಡ್ ಲ್ಯಾನ್ಸ್‌ಡೋನ್, ಸರ್ ಜಾರ್ಜ್ ವೆಲ್ಲಸ್ಲೀ, ಎಲ್ವಿನ್, ಲಾರ್ಡ್ ಕರ್ಜನ್ ಮುಂತಾದವರು ಬೆಂಗಳೂರಿಗೆ ಭೇಟಿ ನೀಡಿದ್ದರು. ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ದೇಶ ಸಂಚಾರ ಮಾಡುತ್ತಾ ಕನ್ನಡ ನಾಡಿಗೆ ಬಂದದ್ದೂ ಇವರ ಕಾಲದಲ್ಲಿಯೇ. ಬೆಂಗಳೂರಿಗೆ ಬಂದಿದ್ದಾಗ ಇವರ ಅಪೂರ್ವ ತೇಜಸ್ಸನ್ನು ಕಂಡ ದಿವಾನರು ಮಹಾರಾಜ ಚಾಮರಾಜ ಒಡೆಯರಲ್ಲಿಗೆ ಕರೆದುಕೊಂಡು ಹೋಗಿ ಪರಿಚಯಿಸಿದರು. ಈ ಪರಿಚಯವೇ ಮುಂದೆ ವಿವೇಕಾನಂದರು ಶಿಕ್ಯಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸುವ ಮೂಲಕ ವಿಶ್ವ ಪ್ರಸಿದ್ಧರಾಗಲು ಕಾರಣವಾಯಿತು. ಅದೇ ರೀತಿ ಥಿಯಾಸಾಫಿಕಲ್ ಸೊಸೈಟಿಯ ಅನಿಬೆಸೆಂಟ್ ಬೆಂಗಳೂರಿಗೆ ಬಂದಿದ್ದಾಗ ಡಿಸ್ಟ್ರಿಕ್ಟ್ ಆಫೀಸಿನ ಆವರಣದಲ್ಲಿ ಬಾಷಣ ಮಾಡಿದ್ದರು. ಅವರ ಭಾಷಣದಿಂದ ಪ್ರಭಾವಿತರಾದ ಅವರು ಅನಿಬೆಸೆಂಟನ್ನು ಮುಖತಃ ಕಂಡು ಮಾತಾಡಿದ್ದರು. ಶೃಂಗೇರಿಯ ಜಗದ್ಗುರುಗಳ ಬಗ್ಗೆಯೂ ಇವರಿಗೆ ಅಪಾರ ಭಕ್ತಿ. ಬೆಂಗಳೂರಿನಲ್ಲಿ ಶಂಕರ ಮಠದ ಸ್ಥಾಪನೆಯಾಗಬೇಕೆಂಬುದು ಇವರ ಆಸಕ್ತಿಯಾಗಿತ್ತು.

ಇವರ ಕಾರ್ಯತತ್ಪರತೆಯನ್ನು ಮೆಚ್ಚಿದ ವಿಕ್ಟೋರಿಯಾ ರಾಣಿಯವರು ಇವರಿಗೆ 1887ರಲ್ಲಿ ಸಿ.ಎಸ್.ಐ ಬಿರುದನ್ನು 1893ರಲ್ಲಿ ಕೆ.ಸಿ.ಎಸ್.ಐ ಬಿರುದನ್ನೂ ಕೊಟ್ಟರು. ಮೈಸೂರು ಮಹಾರಾಜರು 'ರಾಜ್ಯ ದುರಂಧರ' ಎಂಬ ಬಿರುದನ್ನು ಕೊಟ್ಟರು. ಡಿವಿಜಿಯವರು 'ಈ ಬಿರುದು ವಾಸ್ತವವಾಗಿ ಬಿರುದಲ್ಲ. ಅದು ಯತಾರ್ಥವಾಚಕ, 'ರಾಜ್ಯ ದುರಂಧರ' ಎಂಬ ಮಾತು ಹೇಗೆ ಗಂಭೀರವಾದ ದೃಷ್ಟಿಯುಳ್ಳದ್ದೋ ಹಾಗೆಯೇ ಅದು ಶೇಷಾದ್ರಿ ಅಯ್ಯರ್‌ರವರ ಕಾರ್ಯಸಾಧನೆಯ ವಿಷಯದಲ್ಲಿ ಅನ್ಯೂನಾಧಿಕವಾಗಿ ಒಪ್ಪತಕ್ಕದ್ದು' ಎಂದಿದ್ದಾರೆ. ಇಂಡಿಯನ್ ಸಿವಿಲ್ ಸರ್ವೀಸ್ ಅಧಿಕಾರಿ ಮತ್ತು ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯಾದ ಸಂಪಾದಕರೂ ಆದ ಡಬ್ಲ್ಯೂ.ಹಂಟರ್, ಶೇಷಾದ್ರಿ ಅಯ್ಯರ್ ಇವರನ್ನು ಕುರಿತು 'He gave his head to Herbert Spencer and heart to Parabramha' ಎಂದಿದ್ದಾರೆ. ಡಿವಿಜಿಯವರು ಇವರನ್ನು ಯುರೋಪ್ ಖಂಡದಲ್ಲಿ ರಾಜ್ಯವಿಚಕ್ಷಣರೆಂದು ಪ್ರಸಿದ್ಧರಾದ ಬಿಸ್ಮಾರ್ಕ್ ಮತ್ತು ಕೇವೂರ್ ಅವರಿಗೆ ಹೋಲಿಸಿದ್ದಾರೆ. ಹಾಗೆಯೇ ಲಾರ್ಡ್ ಕರ್ಜನ್ನನ ತೀವ್ರ ವಿಮರ್ಶೆಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಐದನೆಯ ಜಾರ್ಜ್ ಪ್ರಭುಗಳೂ ಇವರ ಸೇವೆಯನ್ನು ಕೊಂಡಾಡಿದ್ದಾರೆ.

ಹೀಗೆ ಹದಿನೆಂಟು ವರ್ಷಗಳ ಕಾಲ ದಿವಾನ್ ಪದವಿಯಲ್ಲಿದ್ದು ರಾಜ್ಯದ ಏಳಿಗೆಗೆ ಸತತವಾಗಿ ಶ್ರಮಿಸಿದ ದಿವಾನ್ ಶೇಷಾದ್ರಿ ಅಯ್ಯರರು 1900ರ ಆಗಸ್ಟ್ ಹನ್ನೊಂದರಂದು ರಜೆ ಪಡೆದರು. ನಂತರ 1901 ಮಾರ್ಚ್ 18ರಂದು ದಿವಾನ್ ಪದವಿಯಿಂದ ವಿಶ್ರಾಂತಿ ಪಡೆದರು. ಅನಂತರ 1901ರ ನವೆಂಬರ್ 12ರಂದು ನಿಧನರಾದರು.

12 ವರ್ಷಗಳ ನಂತರ ವೈಸ್‌ರಾಯ್ ಲಾರ್ಡ್ ಹಾರ್ಡಿಂಜ್ ಇವರ ಆಕರ್ಷಕ ಕಂಚಿನ ಪ್ರತಿಮೆ (ರಾಬರ್ಟ್ ಕೋಲ್‌ಜಾನ್ ಎಂಬ ಶಿಲ್ಪಿಯಿಂದ ನಿರ್ಮಿತ)ಯನ್ನು 1915ರಲ್ಲಿ ಕಬ್ಬನ್ ಪಾರ್ಕಿನಲ್ಲಿ ಅನಾವರಣ ಮಾಡಿದರು. ಈ ಪ್ರತಿಮೆಯ ಹಿಂದಿರುವ ಆಕರ್ಷಕ ಕೆಂಪು ಕಟ್ಟಡಕ್ಕೆ ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಸ್ಟೇಟ್ ಸೆಂಟ್ರಲ್ ಲೈಬ್ರರಿ ಎಂಬ ಹೆಸರಿದೆ. ಮಲ್ಲೇಶ್ವರದ ಬಳಿಯ ಶೇಷಾದ್ರಿಪುರದ, ಟಿ. ಆನಂದರಾವ್ ವೃತ್ತದಿಂದ ಕೆ. ಆರ್. ವೃತ್ತದವರೆಗಿನ ಶೇಷಾದ್ರಿ ರಸ್ತೆ, ಬೆಂಗಳೂರು ಗಾಲ್ಫ್‌ಕೋರ್ಸ್ ಬದಿಯ ಕುಮಾರ ಕೃಪ ಇವೆಲ್ಲವೂ ಶೇಷಾದ್ರಿ ಅಯ್ಯರ್ ಅವರ ನೆನಪನ್ನು ತರುತ್ತವೆ. ಇಂದು ನಗರದ ಸುಂದರ ಪಾರಂಪರಿಕ ಕಟ್ಟಡವಾಗಿರುವ 'ಕುಮಾರ ಕೃಪ' ಶೇಷಾದ್ರಿ ಅಯ್ಯರ್ ಅವರು ವಾಸವಾಗಿದ್ದ ಮನೆ. ಇದನ್ನು ಈರೋಡ್ ಸುಬ್ಬರಾಯರು ಕಟ್ಟಿಸಿದರು. ಈ ಮನೆಯ ಬಳಿಯ ಬಡಾವಣೆಗೆ ಕುಮಾರಪಾರ್ಕ್ ಎಂದು ಹೆಸರು. ಕುಮಾರ್‌ಪಾರ್ಕ್ ವೆಸ್ಟ್‌ನ ಸರ್ಪೆಂಟೈನ್ ರಸ್ತೆ ಮತ್ತು 3ನೇ ಮೈನ್‌ರಸ್ತೆಯ ನಡುವೆ ಸಣ್ಣ ಪಾರ್ಕ್ ಇದೆ. ಇಲ್ಲಿನ ಒಂದು ಸಣ್ಣ ದಿಣ್ಣೆಯೂ ಶೇಷಾದ್ರಿ ಅಯ್ಯರ್ ಅವರ ಸ್ಮಾರಕವೇ. ಅಲ್ಲಿ Sacred to the memory of Rajyadhurandhara Sir.K. Sheeshadri Iyer, KCSI, Dewan of Mysore 1883–1901 & Lady Seshadri Iyer ಎಂಬ ಫಲಕವಿದೆ. ಅವರು ನಿಧನರಾದಾಗ ಅವರ ಪಾರ್ಥಿವ ಶರೀರವನ್ನು ಇಲ್ಲಿ ದಹನ ಮಾಡಲಾಗಿತ್ತು. ಆದರೆ ಇದು ಕೆ. ಶೇಷಾದ್ರಿ ಅಯ್ಯರ್ ಅವರ ಸ್ಮಾರಕವೆಂಬುದು ಬಹಳ ಜನರಿಗೆ ತಿಳಿಯದು.

ದಿವಾನ್ ವಿ.ಪಿ. ಮಾಧವರಾವ್

ಇವರು ದಿವಾನ್ ಪಿ. ಎನ್. ಕೃಷ್ಣಮೂರ್ತಿಗಳ ನಂತರ ಆ ಸ್ಥಾನಕ್ಕೆ 1906ರಲ್ಲಿ ನೇಮಕಗೊಂಡರು. ದಿವಾನ್ ವಿ.ಪಿ. ಮಾಧವರಾವ್ ಕಾಲದಲ್ಲಿ ಬೆಂಗಳೂರಿಗೆ ನೀರು ಸರಬರಾಜು ಮಾಡುವ ಯೋಜನೆ ಮುಕ್ತಾಯ ಘಟ್ಟಕ್ಕೆ ಬಂತು. ಇದೇ ಸಂದರ್ಭದಲ್ಲಿ ರೇಸ್‌ಕೋರ್ಸ್‌ಗೆ ಸ್ವಲ್ಪ ದೂರದಲ್ಲಿ ಒಂದು ಜಲಾಶಯವನ್ನು ನಿರ್ಮಿಸಲಾಯಿತು. ಆ ವೇಳೆಗೆ ರಿಚರ್ಡ್ ಸ್ಯಾಂಕಿ ಎಂಬ ರಾಜ್ಯದ ಮುಖ್ಯ ಇಂಜಿನಿಯರ್, ಅನೇಕ ಉತ್ತಮ ಅಭಿವೃದ್ಧಿ ಯೋಜನೆಗಳನ್ನು ಯಶಸ್ವಿಯಾಗಿ ನೆರವೇರಿಸಿ ಪ್ರಸಿದ್ಧರಾಗಿದ್ದರು. ಅವರ ಗೌರವಾರ್ಥ ಈ ಕೆರೆಗೆ "ಸ್ಯಾಂಕಿ ಟ್ಯಾಂಕ್" ಎಂದೇ ಹೆಸರನ್ನಿಡಲಾಯಿತು.

ವಿ.ಪಿ. ಮಾಧವರಾಯರು ಬೆಂಗಳೂರಿನಲ್ಲಿ ವಾಸವಾಗಿದ್ದುದು ಪಠಾಣಭವನ ಎಂಬ ಬಂಗಲೆಯಲ್ಲಿ, ರೇಸ್‌ಕೋರ್ಸ್ ರಸ್ತೆಯ ಎದುರಿಗೆ ದಿವಾನ್ ಪಿ. ಎನ್. ಕೃಷ್ಣಮೂರ್ತಿಗಳ 'ಪೂರ್ಣಪ್ರಸಾದ' ಬಂಗಲೆಯ ಹಿಂಭಾಗದಲ್ಲೇ ಈ ಮನೆ ಇಂದಿಗೂ ಇದೆ. ಅತ್ಯಂತ ವಿಭಿನ್ನ ಹಾಗೂ ವಿಶಿಷ್ಟ ವಾಸ್ತುಶಿಲ್ಪಿಯ ಈ ಕಲ್ಲಿನ ಕಟ್ಟಡ ಬೆಂಗಳೂರಿನ ಕೆಲವು ಪ್ರಮುಖ ಪಾರಂಪರಿಕ ಕಟ್ಟಡಗಳಲ್ಲಿ ಒಂದು. ಮಾಧವರಾಯರ ವರ್ಚಸ್ಸಿಗೆ ತಕ್ಕಂತೆ ಈ ಕಟ್ಟಡವೂ ವಿಶೇಷ ಆಕರ್ಷಣೆಯಿಂದ ಕೂಡಿತ್ತು. ಅತಿಥಿ ಅಭ್ಯಾಗತರ ಸೇವೆಗಳೂ ಅನ್ನದಾನವೂ ಧಾರ್ಮಿಕ ಕಾರ್ಯಗಳೂ ಇಲ್ಲಿ ಯಥೇಚ್ಛವಾಗಿ ನಡೆಯುತ್ತಿದ್ದುವು.

ದಕ್ಷಿಣ ಬೆಂಗಳೂರಿನ ಶಂಕರಪುರದ ಶಂಕರಮಠದ ಸ್ಥಾಪನೆ, ಕಟ್ಟಡ ನಿರ್ಮಾಣ, ಇವೆಲ್ಲದರ ಮೂಲ ಕಲ್ಪನೆ ಹಾಗೂ ಯೋಜನೆಗಳು ರೂಪುಗೊಂಡಿದ್ದು ಈ ಪಠಾಣ ಭವನದಲ್ಲಿಯೇ, ಶೃಂಗೇರಿ ಶಂಕರಮಠದ ಗುರುಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವನರಸಿಂಹ ಭಾರತಿಗಳು 26–04–1907ರ ಶುಕ್ರವಾರದಂದು ಬೆಂಗಳೂರಿಗೆ ಬಂದರು. ಧರ್ಮ ಪಾರಾಯಣರಾಗಿದ್ದ ವಿ.ಪಿ.ಮಾಧವರಾಯರು ಗುರುಗಳು ತಮ್ಮ ಮನೆಯಲ್ಲೇ ಉಳಿಯಬೇಕೆಂದು ಭಿನ್ನವಿಸಿಕೊಂಡರು. ಅದರಂತೆ ಶ್ರೀಗಳು ಈ ಮನೆಯಲ್ಲೇ ಬಿಡಾರ ಹೂಡಿದರು. ಹಿಂದೆ ದಿವಾನ್ ಕೆ. ಶೇಷಾದ್ರಿ ಅಯ್ಯರ್ ಅವರು ಶೃಂಗೇರಿಯಲ್ಲಿ ಗುರುಗಳೊಂದಿಗೆ ಬೆಂಗಳೂರಿನಲ್ಲಿ ಶಂಕರಮಠ ಸ್ಥಾಪನೆಯ ಬಗ್ಗೆ ಪ್ರಸ್ತಾಪಿಸಿದ್ದರೂ

ಅದಕ್ಕೆ ಸ್ಪಷ್ಟರೂಪ ಈಗ ಬಂತು. ದಿವಾನ್ ಬಹದ್ದೂರ್ ರಾಮಚಂದ್ರ ಅಯ್ಯರ್ ಅವರು 25 ಸಾವಿರ ರೂ. ಗಳನ್ನು ಇದಕ್ಕಾಗಿ ಕೊಡುವುದಾಗಿ ಹೇಳಿದರು. ಗುರುಗಳ ಆದೇಶದಂತೆ ದಿವಾನರೇ ಕಟ್ಟಡಕ್ಕಾಗಿ ನಿವೇಶನ ಗೊತ್ತು ಮಾಡುವುದು, ನಕ್ಷೆಯನ್ನು ಸಿದ್ಧಗೊಳಿಸುವುದು, ನಿರ್ಮಾಣದ ಮೇಲ್ವಿಚಾರಣೆ ನೋಡಿಕೊಳ್ಳುವುದು. ಉದ್ಘಾಟನೆ ಮಾಡಿಸುವುದು ಇವೇ ಮುಂತಾದ ಎಲ್ಲ ಜವಾಬ್ದಾರಿಗಳನ್ನು ವಹಿಸಿದರು. ಕಟ್ಟಡದ ಕೆಲಸ ಪ್ರಾರಂಭವಾದ ಮೇಲೆ ದಿವಾನರು ಬೆಳಿಗ್ಗೆ ಒಂಭತ್ತು ಹತ್ತುಗಂಟೆಯ ವೇಳೆಗೆ ಅಲ್ಲಿಗೆ ಬರುತ್ತಿದ್ದರು. ಆಗ ಛಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳು, ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳು, ರಾಮಾಶಾಸ್ತ್ರಿಗಳು ಹಾಗೂ ಮತ್ತಿತರ ಪ್ರಸಿದ್ಧ ವಿದ್ವಾಂಸರು, ಸರ್. ಕೆ. ಪಿ. ಪುಟ್ಟಣ್ಣಚೆಟ್ಟಿ, ಎಚ್. ರಾಮಯ್ಯ, ಬಿ. ವಿ. ಲಕ್ಷ್ಮಣರಾಯರೇ ಮೊದಲಾಗಿ ಅನೇಕ ಗಣ್ಯರೂ ಇಲ್ಲಿಗೆ ಬಂದು ದಿವಾನರೊಂದಿಗೆ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಮೊದಲು ಶಂಕರಾಚಾರ್ಯರ ಗುಡಿ ಸಿದ್ಧವಾಯಿತು. ಅದರ ಉದ್ಘಾಟನೆಗೆ ದಿವಾನರು ತಮ್ಮ ಮನೆಯಿಂದ ಸಲಕರಣೆಗಳನ್ನು ತರಿಸಿ ವ್ಯವಸ್ಥೆ ಮಾಡಿದ್ದರು. ಕಾಲಟಿಯಲ್ಲಿ ಪ್ರತಿಷ್ಠೆ ಮಾಡುವುದಕ್ಕಾಗಿ ತಯಾರಾಗಿದ್ದ ಅಮೃತಶಿಲೆಯ ಪ್ರತಿಮೆಯನ್ನೇ ಇಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ 1910ರ ಫೆಬ್ರವರಿಯಲ್ಲಿ ಮಠದ ನಿರ್ಮಾಣ ಮುಗಿದ ಮೇಲೆ ಕಾಲಟಿಯಿಂದ ಬಂದ ಗುರುಗಳು ಶಾಸ್ತ್ರೋಕ್ತವಾದ ರೀತಿಯಲ್ಲಿ ಮಠದ ಪ್ರವೇಶ ಮಾಡಿದರು. ನಂತರ ಇಲ್ಲಿ ವೇದ ಪಾಠಶಾಲೆಗಳು ಪ್ರಾರಂಭವಾದವು.

ಡಿವಿಜಿಯವರು ಇವರ ಬಗ್ಗೆ ಹೀಗೆ ಬರೆಯುತ್ತಾರೆ. 'ರಾಜ್ಯಾಧಿಕಾರಿಗೆ ಬೇಕಾದ ಮೂರು ಗುಣಗಳು– ಆಕರ್ಷಕವಾದ ಸ್ವರೂಪ ಮತ್ತು ವಾಕ್ಕು, ಕಾರ್ಯಪಟುತ್ವ, ಹೊಸ ಸಾಧನೆಯ ವಿಷಯದಲ್ಲಿ ಉತ್ಸಾಹ– ಇವೆಲ್ಲವೂ ಇವರಲ್ಲಿತ್ತು. ಒಂದು ಸಾವಿರ ಮಂದಿಯ ಗುಂಪಿನಲ್ಲಿ ಇವರಿದ್ದರೆ 'ಇವರು ಯಾರು' ಎಂದು ಕೇಳುವ ವರ್ಚಸ್ಸು, ಎತ್ತರ, ದಿರುಸಿನ ಅಚ್ಚುಕಟ್ಟು ಅವರದು'.

ಆಕರಗಳು

1. ದಿವಾನ್ ಕೆ. ಶೇಷಾದ್ರಿ ಅಯ್ಯರ್ – ಎನ್. ಎಸ್. ಚಂದ್ರಶೇಖರ್
2. ಡಿ. ವಿ. ಜಿಯವರ ಜ್ಞಾಪಕ ಚಿತ್ರಶಾಲೆ
3. ಬೆಂಗಳೂರಿನ ಇತಿಹಾಸ – ಬ. ನ. ಸುಂದರ ರಾವ್
4. ಸಂದರ್ಶನಗಳು
5. ನನ್ನ ಲೇಖನಗಳು

62. ಪ್ರಥಮ ಮಹಾಯುದ್ಧದಲ್ಲಿ ಬೆಂಗಳೂರಿನ ಪಾತ್ರ (1914-18)

ಶ್ರೀ ವೇಮಗಲ್ ಸೋಮಶೇಖರ್

ಪ್ರಥಮ ಮಹಾಯುದ್ಧವು 1914ರಲ್ಲಿ ಪ್ರಾರಂಭವಾದಾಗ ಮೈಸೂರು ಸಂಸ್ಥಾನದ 'ಮೈಸೂರು ಇಂಪೀರಿಯಲ್ ಸರ್ವೀಸ್ ಲ್ಯಾನ್ಸರ್ಸ್' ಎಂಬ ಸೈನ್ಯದ ದಳವು ಮಹಾಯುದ್ಧಕ್ಕೆ ಸನ್ನದ್ಧವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮನವಿ ಮೇರೆಗೆ ಯುದ್ಧ ನಿಧಿಯನ್ನು ಪ್ರಾರಂಭಿಸಿ ಹಣವನ್ನು ಸಂಗ್ರಹಿಸಿದರು. ಈ ಕಾರ್ಯಕ್ಕಾಗಿ ಬೆಂಗಳೂರು ನಗರದಲ್ಲಿ ಕೆಲವು ಗಣ್ಯ ವ್ಯಕ್ತಿಗಳನ್ನು ಸರ್ಕಾರ ನೇಮಿಸಿತು. ಹಣ ಸಂಗ್ರಹಣೆಗಾಗಿ ಅಠಾರ ಕಛೇರಿಯಲ್ಲಿ 'ವಾರ್‌ಲೋನ್' ಕಛೇರಿಯನ್ನು ಮತ್ತು ಇತರೆ ಕೆಲಸಗಳಿಗಾಗಿ ನೃಪತುಂಗ ರಸ್ತೆಯಲ್ಲಿರುವ ವೈ.ಎಂ.ಸಿ.ಎ. ಕಟ್ಟಡದಲ್ಲಿ ಏರ್ಪಾಟು ಮಾಡಿದರು. ನವಸೈನಿಕರನ್ನು ಯುದ್ಧರಂಗಕ್ಕೆ ಜಮಾಯಿಸಲು ಎಫ್. ಎಸ್. ರಾಘವಾಚಾರ್ಯರನ್ನು ಬೆಂಗಳೂರು ಜಿಲ್ಲೆಯ ರಿಕ್ರೂಟ್‌ಮೆಂಟ್ ಅಧಿಕಾರಿಯನ್ನಾಗಿ ನೇಮಿಸಲಾಯಿತು.

ಈ ವಿಷಯವನ್ನು ತಿಳಿದುಕೊಂಡು ತುಮಕೂರು ಜಿಲ್ಲೆಯ ಮೂಡಿಗೆರೆ ನಿವಾಸಿ ಸೈಯದ್ ಇಮಾಮ್ ಎಂಬುವರು ತಮ್ಮ ಒಬ್ಬ ಮಗನನ್ನು ಮತ್ತು ಇಬ್ಬರು ಮೊಮ್ಮಕ್ಕಳನ್ನು ಕರೆದುಕೊಂಡು ಬೆಂಗಳೂರು ನಗರಕ್ಕೆ ಆಗಮಿಸಿ ಸೇನೆಗೆ ಸೇರಿಸಿದರು. ಇದಕ್ಕೆ ಮೊದಲಿನಿಂದಲೇ ಇಮಾಮ್ ಅವರ ಹಿರಿಯ ಮಗ ಯುದ್ಧರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದನು. ಖಾತುಂಬೀ ಎಂಬ ಮುಸ್ಲಿಮ್ ಮಹಿಳೆಯು ತಾನಾಗಿಯೇ ಸೈನ್ಯದ ರಿಕ್ರೂಟ್‌ಮೆಂಟ್ ಕಛೇರಿಗೆ ಆಗಮಿಸಿ ತನಗಿದ್ದ ಒಬ್ಬನೇ ಮಗನನ್ನು ಸೈನ್ಯಕ್ಕೆ ಸೇರಿಸಿದಳು. ನಗರದಲ್ಲಿ ಪೆನ್‌ಷನ್ ಸಿಪಾಯಿ ಆಗಿದ್ದು ನಂತರ ಪ್ರಸಿದ್ಧ ವರ್ತಕರಾಗಿದ್ದ ಸೈಯದ್ ಅಹಮದ್ ಅವರು 135 ಹೊಸ ಸೈನಿಕರು ನೇಮಕವಾಗಲು ವಿಶೇಷವಾಗಿ ನೆರವಾದರು. ಕಾವಲ್ ಬೈರಸಂದ್ರದ ಪಟೇಲ್ ವೆಂಕಟಸ್ವಾಮಿ ಈ ಯುದ್ಧಕ್ಕೋಸ್ಕರ ಸಹಾಯ ಮಾಡುವುದಕ್ಕಾಗಿ ಮಾತುಕೊಟ್ಟು 54 ಜನರು ನೇಮಕವಾಗಲು ಕಾರಣನಾದನು. ವೃದ್ಧನಾಗಿದ್ದ ರಾಮಸ್ವಾಮಿ ಎಂಬ ಪೆನ್‌ಷನ್ ಸಿಪಾಯಿಯು ಬಹಳ ಸಾಹಸಮಾಡಿ 17 ಜನ ಯುವಕರನ್ನು ಆಯ್ಕೆ ಮಾಡಿಸಿದನು. ಇವರುಗಳಿಗೆ ಇಂಡಿಯಾ ಸರ್ಕಾರದವರು 'ರಿಕ್ರೂಟ್ ಮೆಂಟ್ ಬಾಡ್ಜಸ್, ಎಂಬ ಪದಕಗಳನ್ನು ದಯಪಾಲಿಸಿ ಪುರಸ್ಕರಿಸಿದರು.

ಲಾಲ್‌ಬಾಗ್‌ನ ತೋಟದ ಪಾಠಶಾಲೆಯಲ್ಲಿ ತರಬೇತಿ ಪಡೆದಿದ್ದ ಒಬ್ಬ ಉತ್ತಮ ತೋಟಗಾರನನ್ನು ಬಾಗ್ದಾದ್‌ಗೆ ಕಳುಹಿಸಿಕೊಡಲಾಯಿತು. ಈತನು ಅಲ್ಲಿ ಮದರಾಸ್ ತೋಟಗಾರರ ದಳದ ಯೂನಿಟ್ಟಿನಲ್ಲಿ ಕಮಾಂಡರ್ ಆಗಿ ಒಳ್ಳೆಯ ಕಾರ್ಯನಿರ್ವಹಿಸಿದನು.

ನಗರದ ಸೆಂಟ್ರಲ್ ಜೈಲಿನಿಂದ 244 ಖೈದಿಗಳನ್ನು ಮೆಸೊಪೊಟೋಮಿಯಾದ ಸೈನ್ಯದಳದಲ್ಲಿ ಪೋರ್ಟರ್ಸ್ ಆಗಿ ಕೆಲಸ ಮಾಡುವುದಕ್ಕಾಗಿ ಕಳುಹಿಸಿಕೊಡಲಾಯಿತು. ಮತ್ತು ಈ ಜೈಲಿನಲ್ಲೇ ತಯಾರಾಗುತ್ತಿದ್ದ ನೂರಾರು ಕಂಬಳಿಗಳನ್ನು ಹಾಗೂ ನಗರದಲ್ಲಿ ಪ್ರಸಿದ್ಧಿ ಪಡೆದಿದ್ದ ಸುಬ್ಬಯ್ಯ ಶೆಟ್ಟರ್ ಕಂಬಳಿ ಕಾರ್ಖಾನೆಯಿಂದ ಒಂದು ಲಕ್ಷ ರೂಪಾಯಿಯ ಕಂಬಳಿಗಳನ್ನು ಸರಬರಾಜು ಮಾಡಲಾಯಿತು.

ಬೌರಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಅಲ್ಲಿನ ಸದಸ್ಯರು 'ಬಾವುಟದ ಉತ್ಸವ'ವನ್ನು ಆಚರಿಸಿ ಹಣವನ್ನು ಸಂಗ್ರಹಿಸಿದರು. ಒಂದು ನಾಟಕ ಮಂಡಳಿಯವರು ಸಹ ತಮ್ಮ ಕೆಲವು ನಾಟಕಗಳಿಂದ ವಸೂಲಾದ ಹಣದಲ್ಲಿ 262 ರೂ. 4 ಆಣೆಯನ್ನು ಮತ್ತು ಹೆಚ್ಚಿನದಾಗಿ 73.2 ರೂಪಾಯಿಗಳನ್ನು ಸಹಾಯ ಮಾಡಿದರು.

ನಗರದ ವಿವಿಧ ಮಹಿಳಾ ಸಮಾಜದವರು ಅನೇಕ ಸಾಂಸ್ಕೃತಿಕ ಉತ್ಸವಗಳನ್ನು ಆಚರಿಸಿ ಹಣವನ್ನು ಸಂಗ್ರಹಿಸಿದರು. ಈ ಸಮಾಜಗಳ ಪೈಕಿ ಚಾಮರಾಜಪೇಟೆಯ ಶಾರದ ಸ್ತ್ರೀ ಸಮಾಜದ ಮಹಿಳೆಯರೆಲ್ಲರೂ ಸೇರಿ 'ಒಂದು ಪೌಂಡ್‌ದಿನ' ಎಂಬ ಸಾಂಸ್ಕೃತಿಕ ಉತ್ಸವವನ್ನು ಆಚರಿಸಿ ಹಣವನ್ನು ಸಂಗ್ರಹಿಸಿದರು. ಜೊತೆಗೆ ಸಿದ್ಧಪಡಿಸಿದ ಉಡುಪುಗಳನ್ನು ಮತ್ತು 18 ಜೊತೆ ಚಪ್ಪಲಿಗಳನ್ನು ಯುದ್ಧರಂಗಕ್ಕೆ ಕಳುಹಿಸಿಕೊಟ್ಟರು. ಮೈಸೂರು ಸಂಸ್ಥಾನದಿಂದ ಹೊರದೇಶಗಳಿಗೆ ಹೋಗಿದ್ದ ಸೈನಿಕರಿಗೆ ನಗರದ ಪ್ರಜೆಗಳು ಈ ಕೆಳಕಂಡ ದಿನ ಬಳಕೆ ಪದಾರ್ಥಗಳನ್ನು ಕಳುಹಿಸಿಕೊಟ್ಟರು:

ಬೀಡಿಗಳು 20 ಸಾವಿರ, ಬಿರಿ ಹಾಕಿದ ಸುಣ್ಣ 2 ಪೌಂಡ್, ಸಿಗರೇಟು 1 ಸಾವಿರ, ಉಪ್ಪಿನಕಾಯಿ 15 ಪೌಂಡ್, ಉಂಡೆನಶ್ಯ 500 ತೊಲ, ಹುರಿಗಾಳು 50ಸೇರು, ಅಡಿಕೆಪುಡಿ 200 ಪೌಂಡ್, ಮತ್ತು ಹಪ್ಪಳ, ಜಿಂತಾನ್ ಪ್ಯಾಕೆಟ್ 50 ಪೌಂಡ್.

ಈ ರೀತಿಯಾಗಿ ಇನ್ನೂ ಅನೇಕ ಸಾಂಬಾರ್ ಪದಾರ್ಥಗಳನ್ನು, ಬಟ್ಟೆ ಬರೆಗಳನ್ನು, ಪುಟ್‌ಬಾಲ್, ಕ್ರಿಕೆಟ್ ಆಟದ ಸಾಮಗ್ರಿಗಳನ್ನು ಕಳುಹಿಸಿಕೊಟ್ಟರು.

ಈ ಯುದ್ಧದ ಸಂಬಂಧದಲ್ಲಿ ಸಹಾಯ ಮಾಡಿದ ವರ್ತಮಾನ ಪತ್ರಿಕೆಗಳು; ಕರ್ನಾಟಕ ಅರ್ಥಸಾಧಕ ಪತ್ರಿಕೆ, ಸಂಪದಭ್ಯುದಯ, ಒಕ್ಕಲಿಗರ ಪತ್ರಿಕೆ ಮತ್ತು ದಿನ ಅಂಚೆ. ಈ ಪತ್ರಿಕೆಗಳೆಲ್ಲವೂ ಯುದ್ಧಕ್ಕೆ ಸಂಬಂಧಪಟ್ಟ ಸಭೆಗಳು, ನಿಧಿಸಂಗ್ರಹಣೆ, ವಾರ್ತೆಗಳು, ಹಾಗೂ ಇತರೆ ವಿಷಯಗಳನ್ನು ಉಚಿತವಾಗಿ ಪ್ರಕಟಿಸುತ್ತಿದ್ದವು. ನಗರದ ಪಬ್ಲಿಸಿಟಿ ಬೋರ್ಡ್‌ನವರು ಚಿತ್ರ ಸಹಿತ ದೊಡ್ಡ ದೊಡ್ಡ ಸೂಚನಾಪತ್ರಗಳನ್ನು ಕನ್ನಡ ಮತ್ತು ಇಂಗ್ಲಿಷಿನಲ್ಲಿ ಪ್ರಚಾರ ಪಡಿಸಿದರು. ಯುದ್ಧಕ್ಕೆ ಸಂಬಂಧಪಟ್ಟ ಮಾಹಿತಿಯುಳ್ಳ ಕೆಲವು ಕಿರು ಪುಸ್ತಕಗಳನ್ನು ನಗರದ ಮುಖ್ಯ ಕಛೇರಿಗಳಿಗೆ ಕಳುಹಿಸಿಕೊಟ್ಟರು.

ನಗರದಲ್ಲಿ ತಂಗಿದ್ದ ಬ್ರಿಟಿಷ್ ಸೈನಿಕರಿಗಾಗಿ ವೈ.ಎಂ.ಸಿ.ಎ ಸಂಘದವರು ವಿಶೇಷವಾಗಿ ಸಹಾಯಮಾಡಿದರು. ಇವರಿಗೆ ನಗರಕ್ಕೆ ಸಮೀಪದಲ್ಲಿದ್ದ ಅಲಸೂರು, ಹೆಬ್ಬಾಳ, ಆಗರಂಗಳಲ್ಲಿ ಪ್ರತ್ಯೇಕವಾದ ಶಿಬಿರಗಳನ್ನು ಪ್ರಾರಂಭಿಸಿದರು. ಅಲ್ಲೆಲ್ಲಾ ಸಭೆ, ಸಂಗೀತ, ವಿನೋದ ಹಾಗೂ ವಾದ್ಯಗೋಷ್ಠಿಗಳು ನಡೆಯುತ್ತಿದ್ದುವು. ಹಲವಾರು ಆಟಪಾಟಗಳು ಹಾಗೂ ಮದ್ಯಪಾನೀಯದ ಏರ್ಪಾಟು ಮಾಡಲಾಗಿತ್ತು. ಇವರೆಲ್ಲರ ಉಪಯೋಗಕ್ಕಾಗಿ ಮೂರು ಮೋಟಾರು ಗಾಡಿಗಳನ್ನು ಒದಗಿಸಿದ್ದರು. ಈ ಮೋಟಾರುಗಳಲ್ಲಿ ಆಗಾಗ್ಗೆ ನಗರದ ರೇಷ್ಮೆಯ ಕಾರ್ಖಾನೆ, ಗಂಧದೆಣ್ಣೆಯ ಕಾರ್ಖಾನೆ, ನೂಲಿನ ಕಾರ್ಖಾನೆ, ಹೊಗೆ ಸೊಪ್ಪಿನ ಕಾರ್ಖಾನೆ, ಲಾಲ್‌ಬಾಗ್, ದೊಡ್ಡ ಬಸವಣ್ಣನ ಗುಡಿ ಇನ್ನೂ ಮುಂತಾದ ಸ್ಥಳಗಳಿಗೆ ಆ ಸೈನಿಕರು ಭೇಟಿಕೊಡುತ್ತಿದ್ದರು.

1918 ನವಂಬರ್ 11ರಂದು ಜರ್ಮನಿಯೊಂದಿಗೆ ಯುದ್ಧ ವಿಶ್ರಾಂತಿಯ ಒಪ್ಪಂದವು ಪೂರೈಸಿತೆಂದು ನಗರಕ್ಕೆ ವರ್ತಮಾನ ತಲುಪಿತು. ಈ ಸಮಾಚಾರವನ್ನು ನಗರದ ಅಂಗಡಿಗಳ ಮುಂದೆ ಪ್ರಚಾರಪಡಿಸಿದರು. ಪ್ರಜೆಗಳೂ ಸಂತೋಷಪಟ್ಟು ಬಹು ಉತ್ಸಾಹದಿಂದ ಮನೆ ಬಾಗಿಲುಗಳನ್ನು ಅಲಂಕರಿಸಿದರು. ಎಲ್ಲಾ ದೇವಾಲಯಗಳಲ್ಲೂ, ಚರ್ಚ್‌ಗಳಲ್ಲೂ ಘಂಟಾನಾದಗಳು ಮೊಳಗಿದರೆ ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆಗಳು ನಡೆದುವು ಈ ಕಾರಣದಿಂದಾಗಿ 7–12–1918ನೆ ಶನಿವಾರದಂದು ಪಬ್ಲಿಕ್ ರಜಾದಿನವೆಂದು ಘೋಷಿಸಲಾಯಿತು.

ಅಂದು ಪೂರ್ತಿಯಾಗಿ 'ವಿಜಯೋತ್ಸವ'ವು ಬಹು ವಿಜೃಂಭಣೆಯಿಂದ ನಡೆಯಿತು. ನಗರದ ಮೈಸೂರು ಬ್ಯಾಂಕ್ ಸರ್ಕಲ್‌ನಿಂದ ಬೆಳಗ್ಗೆ 8 ಗಂಟೆಗೆ ಮೆರವಣಿಗೆ ಪ್ರಾರಂಭವಾಗಿ ಸೈನ್ಯ ಸವಾರರು, ವಾದ್ಯ ಮತ್ತು ನಿಶಾನೆಗಳೊಂದಿಗೆ ಅವಿನ್ಯೂರಸ್ತೆ, ಕೋಟೆಯ ಮೂಲಕ ಸಿಟಿ ಇನ್‌ಸ್ಟಿಟ್ಯೂಟ್, ಮಿಂಟೋ ಆಸ್ಪತ್ರೆ, ಚಾಮರಾಜಪೇಟೆ ಮೊದಲನೆ ಮುಖ್ಯ ರಸ್ತೆಯನ್ನು ಹಾದು ಮೈಸೂರು ರೋಡ್ ಸರ್ಕಲ್‌ನಲ್ಲಿರುವ ಪೋಲಿಸ್ ಮೈದಾನಕ್ಕೆ ಹೊರಟಿತು. ರಾಜಕುಮಾರ ಸಿ. ದೇವರಾಜ ಅರಸ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಬಿ. ಎಫ್. ಬೌರಿಂಗ್, ಚೀಫ್ ಕಮಾಂಡೆಂಟ್ ಕರ್ನಲ್ ಜಿ. ದೇವರಾಜ ಅರಸ್ ಅವರುಗಳು ಮೆರವಣಿಗೆಯ ಮುಖಂಡತ್ವವನ್ನು ವಹಿಸಿದ್ದರು. ಹಾದಿಯು ಚಪ್ಪರ ತೋರಣಗಳಿಂದ ಅಲಂಕೃತಗೊಂಡಿತ್ತು. ಅಲ್ಲಲ್ಲಿ ಜನರು ಸೈನಿಕರಿಗೆ ಪುಷ್ಪಗುಚ್ಛಗಳನ್ನು, ಹಾರಗಳನ್ನು ಅರ್ಪಿಸುತ್ತಿದ್ದರು.

ಸಿಟಿ ಇನ್‌ಸ್ಟಿಟ್ಯೂಟ್ ಮತ್ತು ಮಿಂಟೋ ಆಸ್ಪತ್ರೆಯ ವರ್ತುಲಗಳಲ್ಲಿ ಜಯಸೂಚಕಗಳಾದ ಕಮಾನುಗಳನ್ನು ನಿರ್ಮಿಸಿದರು. ಮೊದಲಿನ ಕಮಾನಿನ ಮೇಲೆ 'ಜಯ' ಎಂಬ ಫಲಕವೂ ಎರಡನೆಯ ಕಮಾನಿನ ಮೇಲೆ 'ಶಾಂತಿ' ಎಂಬ ಫಲಕವೂ ಕಂಗೊಳಿಸುತ್ತಿದ್ದವು. ಸುಮಾರು 10 ಗಂಟೆಗೆ 1600 ಜನ ಪೋಲಿಸರು ಪೋಲಿಸ್ ಮೈದಾನದಲ್ಲಿ ನೆರೆದಿದ್ದರು. 21 ತೋಪುಗಳು ಉಡಾಯಿಸಲ್ಪಟ್ಟವು. ಜಯಘೋಷಗಳನ್ನು ಮಾಡಿದರು. ಕೆ. ಪಿ. ಪುಟ್ಟಣ್ಣಶೆಟ್ಟರು ಮಹಾರಾಜರ ನಿರೂಪವನ್ನು ಇಂಗ್ಲಿಷ್‌ನಲ್ಲಿ ಓದಿದ ನಂತರ ಮಹಮದ್ ಅಬ್ಬಾಸ್‌ಖಾನ್ ಅವರು ಕನ್ನಡದಲ್ಲಿ ಆ ನಿರೂಪವನ್ನು ಭಾಷಾಂತರ ಮಾಡಿದರು.

ಸಭೆ ನಡೆದ ನಂತರ ಮಧ್ಯಾಹ್ನ ಹಳೇತರಗು ಪೇಟೆ, ಗಾಣಿಗರ ಪೇಟೆ, ನಗರ್ತರಪೇಟೆಗಳಲ್ಲಿ ಪ್ರಸಿದ್ಧ ವ್ಯಾಪಾರಿಗಳಾಗಿದ್ದಂಥ ಮಂಡಿ ಹರಿಯಣ್ಣನವರು, ಯಜಮಾನ್ ಬಸವಪ್ಪನವರು ಮತ್ತು ಬಿ. ರಾಜಪ್ಪನವರು ಸೇರಿ ಆರು ಸಾವಿರಕ್ಕೂ ಹೆಚ್ಚು ಜನಕ್ಕೆ ಭೋಜನವನ್ನು ಏರ್ಪಡಿಸಿದ್ದರು. ಮುನಿಸಿಪಲ್ ಕೌನ್ಸಿಲರ್‌ಗಳಾದ

ಬಿ. ಉಸ್ಮಾನ್‌ಖಾನ್ ಅವರು ಗಾಣಿಗರ ಪೇಟೆಯಲ್ಲಿ ಸುಮಾರು ಎರಡು ಸಾವಿರ ಜನ ಮುಸ್ಲಿಮ್ ಬಡವರಿಗೆ ಅನ್ನದಾನವನ್ನು ಮಾಡಿದರು.

ಊಟವಾದನಂತರ ಧನಲಕ್ಷ್ಮೀ ಥಿಯೇಟರ್ (ನಾಟಕ ಶಾಲೆ) ಯಲ್ಲಿ ವಿನೋದ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ವಿಜಯೋತ್ಸವದ ಪ್ರಯುಕ್ತ ಸಾಯಂಕಾಲ 6 ಗಂಟೆಗೆ ಏಕಕಾಲದಲ್ಲಿ 2000 ವಿದ್ಯುದ್ದೀಪಗಳು ಹಚ್ಚಲ್ಪಟ್ಟು ಎಲ್ಲರಿಗೂ ಆನಂದವನ್ನುಂಟುಮಾಡಿತು. ಎಲ್ಲಾ ಕಟ್ಟಡಗಳು, ಕಮಾನುಗಳು, ಬೆಳಕಿನಿಂದ ಪ್ರಕಾಶಿಸಿದುವು. ರಾತ್ರಿ ಏಳುಗಂಟೆಯ ಮೇಲೆ ಫೌಜಿನ ಕವಾಯಿತು ನಂತರ ಪಟಾಕಿ ಬಾಣ ಬಿರುಸುಗಳಿಂದ ಬಹು ಸಂಭ್ರಮದಿಂದ ನಡೆದು ರಾತ್ರಿ 9 ಗಂಟೆಗೆ ಅಂದಿನ ವಿಶೇಷ ವಿಜಯೋತ್ಸವ ಸಮಾರಂಭ ಮುಕ್ತಾಯಗೊಂಡಿತು.

63. ಬೆಂಗಳೂರು ಜಿಲ್ಲೆಯ ನೃತ್ಯ ಇತಿಹಾಸ

(ಕ್ರಿ. ಶ. 9ನೇ ಶತಮಾನದಿಂದ ಕ್ರಿ ಶ 13ನೇ ಶತಮಾನದವರೆಗೆ)

ಡಾ. ಕರುಣಾ ವಿಜಯೇಂದ್ರ

ನೃತ್ಯ ಮಾನವನ ಅಭಿವ್ಯಕ್ತಿಯ ಒಂದು ಸರಳ, ಹರ್ಷ, ಸುಂದರ ಸಂವಹನ ಮಾಧ್ಯಮ. ಆದಿಮಾನವನ ಕಾಲದಿಂದಲೂ ಇದರ ಬೆಳವಣಿಗೆ, ಅನುಕರಣ, ಅನುವರಣ ಪ್ರಕ್ರಿಯೆ ನಿರಂತರವಾಗಿ ನಡೆದಿದೆ. ಕ್ರಿಸ್ತಶಕದ ಆರಂಭದ ಹೊತ್ತಿಗೆ 'ನಾಟ್ಯಶಾಸ್ತ್ರ' ಗ್ರಂಥಾಧಾರಿತವಾಗಿ ನರ್ತನವು ಪ್ರಚಲಿತಕ್ಕೆ ಬಂದಿತು. ಸೃಷ್ಟಿಯ ಅನುಕರಣವು ಪ್ರಕೃತಿಯ ತಾಣಗಳಲ್ಲಿ ನಡೆಯುತ್ತಿದ್ದುದ್ದು ನಂತರ ಕಾಲಾನುಕ್ರಮದಲ್ಲಿ ಯಜ್ಞ, ಯಾಗಗಳಲ್ಲಿ ಪ್ರಸ್ತುತವಾಗಿ, ಯಜ್ಞ ಕಾರ್ಯಗಳ ಪ್ರತಿರೂಪವಾಗಿ ಬೆಳೆದ 'ದೇವಾಲಯಗಳಲ್ಲಿ ನೃತ್ಯವು ನೆಲೆನಿಂತಿತು.

'ದೇವಾಲಯ'ವೆಂಬುದು ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ ಅನೇಕ ಸೇವೆಗಳು ಅದರಲ್ಲಿ ಸಮ್ಮಿಳಿತಗೊಂಡು ಅನೇಕ ಕಲೆಗಾರಿಕೆಗಳಿಗೆ ಪರಿಚಾರಿಕೆಗಳಿಗೆ ಆಶ್ರಯ ತಾಣವಾಯಿತು. ಅನೇಕ ಕಲಾವಿದರು ಹಾಗೂ ಕಲೆಯೂ ದೇವಾಲಯವೆಂಬ ಒಂದು ಸಾಂಸ್ಕೃತಿಕ ವೇದಿಕೆಯಲ್ಲಿ ಬೆಳೆಯುವುದಕ್ಕೆ ಅವಕಾಶಗಳು ಒದಗಿಬಂದವು.

ದೇವಾಲಯಗಳಲ್ಲಿ ಪ್ರಸ್ತುತವಾಗುತ್ತಿದ್ದ ಸೇವೆಗಳಲ್ಲಿ ದೇವಭೋಗವೆಂಬುದು ಅತ್ಯಂತ ಪ್ರಾಚೀನ ಪದ್ಧತಿ. ಸಾಧಾರಣವಾಗಿ ದೇವಾಲಯಗಳಲ್ಲಿ ನಿತ್ಯಸೇವೆ, ಪಕ್ಷ, ಮಾಸ, ಸಂವತ್ಸರ, ಪರ್ವ ಸೇವೆಗಳೆಂಬ ಅನೇಕ ವಿಧವಾದ ಸೇವಾ ಕೈಂಕರ್ಯಗಳಿರುತ್ತವೆ. ದೇವಭೋಗವೆಂಬುದು ಆಲಯದಲ್ಲಿ ಸ್ಥಾಪಿತಮೂರ್ತಿಗೆ ನಡೆಯುವ 'ನಿತ್ಯಸೇವೆ' ಎಂಬುದಾಗಿ ತಿಳಿಯಬಹುದು. ಈ ಸೇವೆಗಾಗಿ ಕ್ರಿ. ಶ. 150ರಿಂದಲೂ ಕರ್ನಾಟಕದ ದೇವಾಲಯಗಳಲ್ಲಿ ದಾನಗಳನ್ನು ಕೊಟ್ಟಿರುವ ದಾಖಲೆಗಳು ದೊರೆಯುತ್ತವೆ. ಹೀಗಾಗಿ ಇದೊಂದು ಬಹಳ ಪ್ರಾಚೀನವಾದ ಪದ್ಧತಿ ಎಂದು ಪರಿಗಣಿಸಬಹುದು.

ಕಾಲಾನಂತರದಲ್ಲಿ ಆಗಮರೀತ್ಯಾ ದೇವಾಲಯ ನಿರ್ಮಾಣ ಹಾಗೂ ಸೇವೆಗಳು ಪ್ರಸ್ತುತವಾಗಲು ಆರಂಭವಾದಾಗ ಇದೇ ದೇವಭೋಗವು 'ಅಂಗಭೋಗ' ಮತ್ತು 'ರಂಗಭೋಗ'ವಾಗಿ 2 ಭಾಗವಾಯಿತು. ಸ್ಥಾಪಿತ ಮೂರ್ತಿಗೆ ನಡೆಯುವ ಮೊದಲ ಎಲ್ಲಾ ಸೇವೆಗಳು ಅಂದರೆ ಆಚಮನದಿಂದ ಅಭಿಷೇಕ, ಅಲಂಕಾರ, ಆರತಿ, ಮಹಾನೈವೇದ್ಯ, ಮಹಾಆರತಿಯವರೆಗಿನ ಎಲ್ಲಾ ಸೇವೆಗಳನ್ನು ಅಂಗಭೋಗವೆಂದೂ, ತದನಂತರ ಸ್ಥಾಪಿತ ಮೂರ್ತಿಯನ್ನು (ದೇವನನ್ನು) ಅತಿಥಿಯೆಂದೇ ಪರಿಗಣಿಸಿ ಆತನ ಮನಸ್ಸನ್ನು ಆಹ್ಲಾದ ಪಡಿಸಲಿಕ್ಕಾಗಿ ನಡೆವ ಷೋಡಷೋಪಚಾರ ಸೇವೆಗಳಲ್ಲಿ ಒಂದಾದ ಸಂಗೀತ–ನೃತ್ಯ–ವಾದ್ಯ ಸೇವೆಗಳನ್ನು ರಂಗಭೋಗವೆಂದು ಪರಿಗಣಿಸಲಾಯಿತು. ಹೀಗೆ ನವರಂಗದಲ್ಲಿ ಸ್ಥಾಪಿತಮೂರ್ತಿಯ ಮುಂದೆ ನಡೆಸಲಾಗುತ್ತಿದ್ದ/ನಡೆಯುತ್ತಿದ್ದ ಕಲಾಸೇವೆಯೇ ರಂಗಭೋಗ. ಈ ರಂಗಭೋಗವು ಸುಮಾರು ಕ್ರಿ. ಶ. 7–8ನೇ ಶತಮಾನಕ್ಕೆ ಆರಂಭವಾದರೂ ಕ್ರಿ. ಶ. 10ನೇ ಶತಮಾನದ ನಂತರ ತನ್ನ ನೆಲೆಯನ್ನು ದೇವಾಲಯದಲ್ಲಿ ಸ್ಪಷ್ಟವಾಗಿ ಗುರುತಿಸಿಕೊಂಡಿದ್ದಲ್ಲದೆ ತಾನೂ ಬೆಳೆದು ಅದರೊಟ್ಟಿಗೆ ಇತರ ಕಲೆಗಳು ಬೆಳೆಯಲು ಅವಕಾಶ ಒದಗಿಬಂದಿತು. ಆಲಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಇಂದಿಗೆ ನಮಗೆ ಉಳಿದು ಬಂದಿರುವ 'ನೃತ್ಯ ಸಂಸ್ಕೃತಿ'ಯ ಮೂಲವನ್ನು ಅದು ಬೆಳೆಸಿತ್ತು, ಪೋಷಿಸಿತ್ತು, ರಕ್ಷಿಸಿತ್ತು.

ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಕ್ರಿ. ಶ. 8ನೇ ಶತಮಾನದ ನಂತರ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿದ್ದ ದೇವಾಲಯಗಳು ಮತ್ತು ಶಾಸನಗಳ ಆಧಾರದಲ್ಲಿ ರಂಗಭೋಗದ ವಿಚಾರವಾಗಿ ಕೆಲವು ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನವಿದೆ. ಮೊದಲ ಹಂತದ ಅಧ್ಯಯನಕ್ಕೆ ಶಾಸನಗಳನ್ನು ಪ್ರಥಮ ಆಕರವಾಗಿ ಬಳಸಿಕೊಳ್ಳಲಾಗಿದೆ. ಇಂದಿಗೂ ಉಳಿದು ಬಂದಿರುವ ದೇವಾಲಯಗಳು, ದೇವಾಲಯ ವಾಸ್ತುಶಿಲ್ಪ, ನೃತ್ಯಶಿಲ್ಪಗಳು ಪೂರಕ ಆಕರಗಳಾಗಿವೆ. ಎರಡನೇ ಹಂತದ ಅಧ್ಯಯನಕ್ಕೆ ಅನೇಕ ವಿದ್ವಾಂಸರ, ಕ್ಷೇತ್ರಕಾರ್ಯದಲ್ಲಿ ಆಕ್ಷೇತ್ರಕ್ಕೆ ಸಂಬಂಧಪಟ್ಟವರ ಸಂಧರ್ಶನಗಳನ್ನು, ಬರವಣಿಗೆಗಳನ್ನು ಹಾಗೂ ಅನೇಕ ಗ್ರಂಥಗಳು, ಪುಸ್ತಕಗಳು, ನಿಯತಕಾಲಿಕೆಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಯನಕ್ಕೆ ಬೆಂಗಳೂರು ನಗರ ಜಿಲ್ಲೆಯನ್ನು ಮಾತ್ರ ಇಲ್ಲಿ ಪರಿಗಣಿಸಿ ಇದರೊಳಗೆ ಬರುವ ಶಾಸನಗಳು, ದೇವಾಲಯಗಳನ್ನು ಅನುಲಕ್ಷಿಸಿ ಈ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಮೊದಲಿಗೆ ಶಾಸನಾಧಾರವನ್ನು ಗಮನಿಸಿದಾಗ ಕ್ರಿ. ಶ. 840ರ ನೊಳಂಬ ಶಿವಮಾರನ ಒಂದು ಶಾಸನದಲ್ಲಿ ನೊಳಂಬರಾಜ ಶಿವಮಾರ ಮೊರಸುನಾಡನ್ನು ಮಹಾಬಲಿವಂಶದವನಾಗಿ ಆಳುತ್ತಿರುವಾಗ ನಿಪ್ಪಣ್ಣನ ಮಗ ಅಣ್ಣಿಗನು ರಾಜನಿಂದ ದೇವಭೋಗಕ್ಕಾಗಿ ದಾನವನ್ನು ಪಡೆದಿರುವ ವಿಷಯ ಪ್ರಸ್ತಾಪಗೊಂಡಿದೆ. 'ದೇವಭೋಗ' ಪದ್ಧತಿ ಕ್ರಿ. ಶ. 9ನೇ ಶತಮಾನಕ್ಕೆ ಬೆಂಗಳೂರಿನಲ್ಲಿದ್ದ ಇದರಿಂದ ತಿಳಿಯುತ್ತದೆ. (ಎ.ಕ.9 (ಆ) ಬೆಂಗಳೂರು, 40, ಕ್ರಿ. ಶ. 840)

ವಿಜಯನಗರ ಕಾಲಕ್ಕೆ ದೊರಕುವ ಶಾಸನಗಳಲ್ಲಿ ರಂಗಭೋಗದ ವಿವರಗಳು ದೊರೆಯುತ್ತವೆ. ಕ್ರಿ. ಶ. 1431ರ ದೇವರಾಯನ ಕಾಲದ ಶಾಸನವು ಬಹಳ ಮುಖ್ಯ ಶಾಸನವಾಗಿ ದೊರೆಯುತ್ತದೆ. ಯಶವಂತಪುರದ ಕೊಡಿಗೆಹಳ್ಳಿ ಗ್ರಾಮಕ್ಕೆ ವಾಯುವ್ಯ, ಆಂಜನೇಯ ದೇವಾಲಯಕ್ಕೆ ಪಶ್ಚಿಮಭಾಗದಲ್ಲಿ ದೊರೆತಿರುವ ಈ ಶಾಸನದಲ್ಲಿ ಅನೇಕ ಗ್ರಾಮಗಳನ್ನು ಒಳಗುಮಾಡಿಕೊಂಡು 'ಸೋಮದೇವ'ನ ನೈವೇದ್ಯ ಕಾಲದ ಅಷ್ಟಭೋಗ ಸರ್ವಮಾನ್ಯಕ್ಕಾಗಿ ಅದಲ್ಲದೆ ವಿಶೇಷವಾಗಿ ಅಂಗಭೋಗಕ್ಕಾಗಿ ರಂಗಭೋಗಕ್ಕಾಗಿ, ಅವರು ನಡೆಸುವ ಕಟ್ಟಳೆಗಾಗಿ, ನಂತರ ನೈವೇದ್ಯ ಕಾಲದ ಪಾತ್ರದವರಿಗಾಗಿ 2 (ಪ್ರಮುಖ ನರ್ತಕಿಯರು), ನಟ್ಟವರಿಗಾಗಿ 2 (ನಟ್ಟುವಕಾರ– ತಾಳವನ್ನು ಹಾಕುವವ– ನರ್ತಕಿಯರ ಆಚಾರ್ಯ), ಮದ್ದಳೆ ನುಡಿಸುವವರಿಗಾಗಿ (ಮೃದಂಗದ ರೀತಿಯ ವಿವಿಧ ವಾದ್ಯಗಳನ್ನು ನುಡಿಸುವವರು) ರಂಗಮಂಟಪದ ಚಿತ್ತಾರ ಬಿಡಿಸುವವನಿಗಾಗಿ, ಉಪಾಂಗದವರು ಅಂದರೆ ಇಲ್ಲಿನ ವಿವರವನ್ನು ಗಮನಿಸಿದಾಗ ಬಹುಶಃ ನೃತ್ಯ ಕಾರ್ಯಕ್ರಮದಲ್ಲಿ 3 ಭಾಗಗಳಿದ್ದು ಮಾರ್ಗ ಮತ್ತು ದೇಸಿ ರೀತಿಯ ನೃತ್ಯಗಳು ಪ್ರಸ್ತುತವಾಗುತ್ತಿದ್ದಿರಬೇಕು (ಈ ರೀತಿಯ ಪದ್ಧತಿ ವಿಜಯನಗರ ಅರಸರ ಕಾಲಕ್ಕೆ ರೂಢಿಯಲ್ಲಿತ್ತು). ಇಲ್ಲಿ ನಿರ್ದೇಶಿಸಿರುವಂತೆ ಉಪಾಂಗದವ ದೇಸಿ ನರ್ತನಕಾರನಾಗಿರುವ ಸಾಧ್ಯತೆಗಳಿವೆ. ಇಲ್ಲಿ ಉಪಾಂಗದವರಾದ ಕಂಸಾಳೆಯವನಿಗಾಗಿ ನಿರ್ದೇಶಿಸಿ ದಾನಕೊಡಲಾಗಿದೆ. 'ಕಂಸಾಳೆ' ವಿಜಯನಗರ ಕಾಲಕ್ಕೆ ಚಾಲ್ತಿಯಲ್ಲಿದ್ದ ಅತ್ಯಂತ ಸುಂದರವಾದ ದೇಶಿ ನೃತ್ಯ. ಅಂತಹ ನೃತ್ಯ ಮಾಡುವವರಿಗೂ ದಾನಗಳ ಕೊಡಲಾಗಿದೆ. (ನನ್ನ ಮಟ್ಟಿಗೆ ಕಂಸಾಳೆ ನೃತ್ಯವನ್ನು ಉಲ್ಲೇಖಿಸುವ ಅತಿ ಪ್ರಾಚೀನ ಶಾಸನವು ಇದಾಗಿದೆ). ಒಟ್ಟಾರೆಯಾಗಿ ರಂಗಭೋಗ ಸೇವೆಯನ್ನು ನಡೆಸುವ ಏಳು ಜನ ಕಲಾವಿದರಿಗೆ ದಾನಗಳನ್ನು ಕೊಡಲಾಗಿದೆ. ರಂಗಭೋಗ ಸೇವೆಯಲ್ಲಿ ಸಾಧಾರಣವಾಗಿ ಪಾತ್ರದವರಿಗೆ, ಮದ್ದಳೆಯವರಿಗೆ, ಕೆಲವೊಮ್ಮೆ ನಟ್ಟುವಗರಿಗೆ ದಾನವನ್ನು ಕೊಡುವುದು ಸರ್ವೇಸಾಮಾನ್ಯ. ಆದರೆ ಇಲ್ಲಿ ದೇಸಿ ನರ್ತಕನಿಗೂ ಹಾಗೂ ರಂಗಮಂಟಪವನ್ನು ಉತ್ತಮ ಸ್ಥಿತಿಯಲ್ಲಿಡಲು ಸಹಾಯಕನಾಗುವ ಚಿತ್ತಾರ ಬಿಡಿಸುವ ಕಲಾವಿದನಿಗೂ ದಾನವನ್ನು ಕೊಟ್ಟಿರುವುದು ವಿಶೇಷ. ಇದರಿಂದ ಈ ವೇಳೆಗೆ ಈ ದೇವಾಲಯದಲ್ಲಿ (ದೇವಾಲಯದ ಹೆಸರು ಶಾಸನದಲ್ಲಿ ಸ್ಪಷ್ಟವಿಲ್ಲ) ರಂಗಭೋಗವು ಬಹಳ ವಿಜೃಂಭಣೆಯಿಂದ ಪ್ರಸ್ತುತವಾಗುತ್ತಿದ್ದ ಅಂಶವು ಸ್ಪಷ್ಟವಾಗುತ್ತದೆ. (ಎ.ಕ. 9. ಹ.ಆ ಬೆಂಗಳೂರು. 127. 1431)

ಕ್ರಿ. ಶ. 1530ರ ಅಚ್ಯುತರಾಯನ ಕಾಲದ ಶಾಸನದಲ್ಲಿ ಹಾರೋಹಳ್ಳಿ ಗ್ರಾಮದ ಬಳಿಯ ಒಂದು ದೇವಾಲಯದ ಅಂಗರಂಗಭೋಗಕ್ಕಾಗಿ ದಾನಕೊಟ್ಟ ಉಲ್ಲೇಖವಿದೆ. ದೇವಾಲಯದ ಹೆಸರು ಸ್ಪಷ್ಟವಿಲ್ಲ. ಸೋಲೂರು ನಾಯಕನ ಮಗ ಕೃಷ್ಣಪ್ಪನಾಯಕ ಎಂಬುವನು ಅಚ್ಯುತರಾಯನ ಅಧಿಕಾರಿಗಳ ಅಣತಿಯ ಮೇರೆಗೆ ದೇವಾಲಯಕ್ಕೆ ದಾನವನ್ನು ಒಪ್ಪಿಸುತ್ತಾನೆ. ಇತರ ವಿವರಗಳು ಲಭ್ಯವಿಲ್ಲ. (ಎ.ಕ.9 (ಹ.ಆ). ಬೆಂಗಳೂರು. 28, 1530). ಮತ್ತೊಂದು ಶಾಸನವೂ ಸಹ ಅಚ್ಯುತರಾಯನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಯಾವ ದೇವಾಲಯಕ್ಕೆ ಯಾವ ದೇವರಿಗೆ ಎಂಬ ವಿವರವು ಶಾಸನದಲ್ಲಿ ಸ್ಪಷ್ಟವಿಲ್ಲ. 'ಅಂಗರಂಗವೈಭೋಗಕ್ಕಾಗಿ' ದಾನಕೊಟ್ಟ ವಿವರಗಳಿವೆ. ಕೆಂಪದೇವರಸ ಎಂಬುವರು ದೇವಾಲಯಕ್ಕೆ ದಾನಕೊಟ್ಟಿದ್ದಾರೆ. ಶಾಸನದಲ್ಲಿ ಅಂಗರಂಗಭೋಗಕ್ಕಾಗಿ ಎಂಬ ಸಾಲು ಮಾತ್ರ ಸ್ಪಷ್ಟವಾಗಿದೆ. ಇದರಿಂದ ರಂಗಭೋಗವು ಅಸ್ತಿತ್ವದಲ್ಲಿದ್ದ ಕುರುಹು ದೊರೆಯುತ್ತದೆ. (ಎ.ಕ.9 (ಹ.ಆ) ಬೆಂಗಳೂರು. 57, ಕ್ರಿ. ಶ. 1532).

ಇವು ರಂಗಭೋಗವನ್ನು ನೇರವಾಗಿ ಉಲ್ಲೇಖಿಸುವ ಶಾಸನಾಧಾರಗಳಾಗಿವೆ. ಇವಲ್ಲದೆ, ಶಾಸನಾಧಾರಿತ ಆಗಮರೀತ್ಯಾ ಸ್ಥಾಪಿತವಾದ ಅನೇಕ ದೇವಾಲಯಗಳು ಇಂದಿಗೂ ಉಳಿದು ಬಂದಿವೆ. ಅವುಗಳಲ್ಲಿ ಕೆಲವು ದೇವಾಲಯಗಳನ್ನು ಕಾಲಾನುಕ್ರಮದಲ್ಲಿ ಹೆಸರಿಸುವುದಾದರೆ ಯಲಹಂಕ ಹೋಬಳಿಯ ಯಲಹಂಕ ಕೋಟೆಯ ಗೋಪಾಲಕೃಷ್ಣ ದೇವಾಲಯ (ಕ್ರಿ. ಶ. 1410); ಬೆಂಗಳೂರು ದೊಮ್ಮಲೂರು ಚೊಕ್ಕನಾಥ ದೇವಾಲಯ (ಕ್ರಿ. ಶ. 1440); (ಇದು ಇಂದಿಗೆ ಸಂಪೂರ್ಣವಾಗಿ ಜೀರ್ಣೋದ್ಧಾರವಾಗಿ ಸಮಕಾಲೀನ ದೇವಾಲಯದ ಮಾದರಿಯನ್ನು ಹೊಂದಿದೆ); ಬೆಂಗಳೂರು ಬಳ್ಳಾಪುರ ಪೇಟೆ ರಂಗನಾಥ ದೇವಾಲಯ (ಕ್ರಿ. ಶ. 1628) (ಇಂದಿನ ಬೆಂಗಳೂರು ನಗರದ ಮಧ್ಯದಲ್ಲಿರುವ ಪ್ರಾಚೀನ ದೇವಾಲಯ, ತಕ್ಕ ಮಟ್ಟಿಗೆ ಜೀರ್ಣೋದ್ಧಾರವಾಗಿದೆ); ಮತ್ತು ಬೆಂಗಳೂರು ಬಳೇಪೇಟೆಯ ಸುಗ್ರೀವ ವೆಂಕಟರಮಣಸ್ವಾಮಿ ದೇವಾಲಯ (ಕ್ರಿ. ಶ. 1430); ಮತ್ತು ಬೆಂಗಳೂರು ಚಿಕ್ಕಪೇಟೆಯ ಮಂಚಿ ಸೋಮೇಶ್ವರ ದೇವಾಲಯ (ಕ್ರಿ. ಶ. 1855).

ಉಲ್ಲೇಖಿತ ಈ ದೇವಾಲಯಗಳಿಗೆ ಶಾಸನಾಧಾರಿತವಾಗಿ ಅನೇಕ ಸೇವೆಗಳಿಗೆ ದಾನವನ್ನು ಕೊಡಲಾಗಿದೆ. ಆಗಮರೀತ್ಯ ಈ ದಾನಗಳನ್ನು ಕೊಡುವಾಗ ರಂಗಭೋಗವು ಇದ್ದಿರಬಹುದಾದ ಸಾಧ್ಯತೆಗಳಿವೆ. ಮೇಲೆ ಉಲ್ಲೇಖಿಸಿರುವ ಎಲ್ಲ ದೇವಾಲಯಗಳನ್ನು ಸಂದರ್ಶಿಸಿದಾಗಲೂ ಒಂದಿಲ್ಲೊಂದು ದೇವಾಲಯದ ವಾಸ್ತುವಿನಲ್ಲಿ ನೃತ್ಯ ಶಿಲ್ಪಗಳಿದ್ದ ಕುರುಹುಗಳು ದೊರೆತಿವೆ. ಹಾಗೆಯೇ ಮೌಖಿಕ ಆಧಾರದಲ್ಲಿ ಹೇಳುವುದಾದರೆ, ಸುಮಾರು ಕ್ರಿ. ಶ. 19–20ನೆಯ ಶತಮಾನದಲ್ಲಿ ಈ ದೇವಾಲಯಗಳಲ್ಲಿ (ಕೆಲವು) ದೇವದಾಸಿಯರಿಂದ ನೃತ್ಯಸೇವೆ ನಡೆಯುತ್ತಿದ್ದ ವಿಷಯವೂ ತಿಳಿದುಬರುತ್ತದೆ. ('ದೇವದಾಸಿ' ನೃತ್ಯ ಪದ್ಧತಿಯ ಮೂಲ ರಂಗಭೋಗವೇ ಆಗಿದ್ದರೂ, ವಿಜಯನಗರದ ಪತನಾನಂತರ ಇದರಲ್ಲಿನ ಸೇವಾ ಬದ್ಧತೆ ಕಡಿಮೆಯಾಗಿ ಸಾಮಾಜಿಕವಾಗಿ ಇವರು ತಮ್ಮ ಸ್ಥಾನದಲ್ಲಿ ಸ್ವಲ್ಪ ಇಳಿಮುಖವನ್ನು ಕಂಡವರು. ಆಶ್ರಯದಾತರ ದಾಸಿಯರಾಗಿ, ದೇವಾಲಯಗಳಲ್ಲಿ ತಮ್ಮ ವಂಶಪಾರಂಪರ್ಯವಾದ ಪರಂಪರೆಯನ್ನು ಮುಂದುವರೆಸಿದ ಕಲಾವಿದರು.

ಈ ದೇವಾಲಯಗಳಲ್ಲದೆ ಬೆಂಗಳೂರಿನ ಅನೇಕ ಪ್ರಾಚೀನ ದೇವಾಲಯಗಳ ಪಟ್ಟಿ ಇಂತಿದೆ:

ಗುಟ್ಟಹಳ್ಳಿಯ ಗವಿಗಂಗಾಧರೇಶ್ವರ ದೇವಾಲಯ ಕ್ರಿ. ಶ. 7–8ನೇ ಶತಮಾನ; ಬೇಗೂರಿನ ನಗರೇಶ್ವರ ದೇವಾಲಯ ಕ್ರಿ. ಶ. 9–10ನೇ ಶತಮಾನ; ಬೇಗೂರಿನ ನಾಗೇಶ್ವರ ಚೋಳೇಶ್ವರ ದೇವಾಲಯ; ಹಲಸೂರಿನ ಸೋಮೇಶ್ವರ ದೇವಾಲಯ ಕ್ರಿ. ಶ. 10ನೇ ಶತಮಾನ; ಬನ್ನೇರು ಘಟ್ಟದ ಚಂಪಕಧಾಮಸ್ವಾಮಿ ದೇವಾಲಯ ಕ್ರಿ. ಶ. 14ನೇ ಶತಮಾನ; ದೊಮ್ಮಲೂರಿನ ಚೊಕ್ಕನಾಥ ದೇವಾಲಯ (ಚೋಳರ ಶೈಲಿ) 15 ನೇ ಶತಮಾನ; ಹೊಸೂರು

ಬೆಟ್ಟದ ಮೇಲಿರುವ ಸೋಮೇಶ್ವರ ದೇವಾಲಯ; 15ನೇ ಶತಮಾನದ ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಾಲಯ; ಕ್ರಿ. ಶ. 16ನೇಯ ಶತಮಾನದ ಮಲ್ಲೇಶ್ವರದ ಲಕ್ಷ್ಮೀ ನರಸಿಂಹ ದೇವಾಲಯ; ಕ್ರಿ. ಶ. 16ನೆಯ ಶತಮಾನದ ಬಳ್ಳಾಪುರ ಪೇಟೆಯ ರಂಗನಾಥ ಸ್ವಾಮಿ ದೇವಾಲಯ; ಕ್ರಿ. ಶ. 16ನೆ ಶತಮಾನದ ಹುಳಿಮಾವು ಗುಹಾಂತರ ದೇವಾಲಯ; ರಾಮಲಿಂಗೇಶ್ವರ, ಸೋಮೇಶ್ವರ ದೇವಾಲಯಗಳು; ಗಾಂಧಿನಗರದ ಗ್ರಾಮದೇವತೆ ಅಣ್ಣಮ್ಮದೇವಿ ದೇವಾಲಯ (ಸುಮಾರು ಕ್ರಿ. ಶ. 10ನೇ ಶತಮಾನ, ಆದರೆ ಈಗ ಮೂಲ ಸ್ವರೂಪದಲ್ಲ)

ಕೋಟೆ ವೆಂಕಟರಮಣ ದೇವಾಲಯ ಕ್ರಿ. ಶ. 1690–95ರಲ್ಲಿ ಚಿಕ್ಕದೇವರಾಯ ಒಡೆಯರಿಂದ ನಿರ್ಮಾಣ, 20ನೇ ಶತಮಾನದಲ್ಲಿ ಲಕ್ಷ್ಮೀದೇವಿ ಆಲಯ ಸೇರ್ಪಡೆ. (ಆಧಾರ ಡಾ. ಕೆ. ವಸಂತಲಕ್ಷ್ಮೀ, ಬೆಂಗಳೂರಿನ ಇತಿಹಾಸ ಪ್ರಸಿದ್ಧ ದೇವಾಲಯಗಳು, ಬೆಂಗಳೂರು ದರ್ಶನ–ಸಂಪುಟ.1) ಈ ಎಲ್ಲ ದೇವಾಲಯಗಳು ತಕ್ಕಮಟ್ಟಿಗಿನ ಜೀರ್ಣೋದ್ಧಾರವನ್ನು ಕಂಡು ಉತ್ತಮಸ್ಥಿತಿಯಲ್ಲಿವೆ. ಇವುಗಳಲ್ಲದೆ, ಇಂದಿನ ಹಳೆಬೆಂಗಳೂರು ಅಥವಾ ಬೆಂಗಳೂರಿನ ಮಧ್ಯಭಾಗದಲ್ಲಿ ಕೆಲವು ದೇವಾಲಯಗಳು ಇಂತಿವೆ:

ಉಪ್ಪಾರ ಪೇಟೆಯ ಕಾಶಿ ವಿಶ್ವೇಶ್ವರ ದೇವಾಲಯ, ಅರಳೇ ಪೇಟೆಯ ತೋಟದ ವೀರಭದ್ರ ದೇವಾಲಯ, ಅರಳೇಪೇಟೆಯ ಆದಿನಾರಾಯಣ ದೇವಾಲಯ, ಅರಳೇಪೇಟೆಯ ಅರಳೇಶ್ವರ ದೇವಾಲಯ; ಕಬ್ಬಿನ ಗಾಣಿಗರ ಓಣಿಯ ಚೌಡೇಶ್ವರ ದೇವಾಲಯ, ಮಾಮೂಲು ಪೇಟೆಯ ಶ್ರೀಕೃಷ್ಣನ ದೇವಾಲಯ, ತಿಗಳರ ಪೇಟೆಯ ಧರ್ಮರಾಯ ದೇವಾಲಯ. ಇವುಗಳಲ್ಲಿ ಕೆಲವೊಂದು ಸಂಪೂರ್ಣವಾಗಿ ಹಾಳಾಗಿಹೋಗಿರುವ, ಶಿಥಿಲಾವಸ್ಥೆಯಲ್ಲಿರುವ ತಕ್ಕಮಟ್ಟಿಗಿನ ಜೀರ್ಣೋದ್ಧಾರವನ್ನು ಕಂಡಿರುವ, ಹಳೆಯ ಯಾವ ಕುರುಹು ಇರದೆ ಸಂಪೂರ್ಣವಾಗಿ ನವೀಕರಣಗೊಂಡಿರುವ (ಉದಾ ಆದಿನಾರಾಯಣ) ದೇವಾಲಯಗಳಾಗಿವೆ. ಕ್ರಿ. ಶ. 15–16ನೆಯ ಶತಮಾನದ ನಂತರದಲ್ಲಿ ನಿರ್ಮಾಣವಾಗಿರುವ ಈ ಎಲ್ಲಾ ದೇವಾಲಯಗಳಲ್ಲಿ 18–19ನೇ ಶತಮಾನದವರೆಗೂ ಅನೇಕ ಸೇವೆಗಳು ಅಸ್ತಿತ್ವದಲ್ಲಿದ್ದು ತದನಂತರದಲ್ಲಿ ಹಾಳಾಗಿರುವ ಸಂದರ್ಭಗಳೇ ಹೆಚ್ಚಿವೆ. ಹೆಚ್ಚಾಗಿ ಆಶ್ರಯದಾತರಿಲ್ಲದೇ ಹಾಳಾಗಿರುವ ಪ್ರಸಂಗಗಳೇ ಹೆಚ್ಚು.

ಇನ್ನೊಂದು ಬಹುಮುಖ್ಯವಾದ ಅಂಶವೇನೆಂದರೆ, ದೇವಾಲಯಗಳಲ್ಲಿ ನೃತ್ಯ, ಸಂಗೀತ ಸೇವೆ ಇದ್ದಾಗ ತಕ್ಕಮಟ್ಟಿಗೆ ಉತ್ತಮ ಪರಿಸ್ಥಿತಿ ಇದ್ದಿರಬಹುದಾದ ಸಾಧ್ಯತೆಗಳಿವೆ. ರಂಗಭೋಗವೆಂಬ ಉತ್ತಮ ಸೇವಾ ಪದ್ಧತಿ ಸ್ವಲ್ಪ ತನ್ನ ಸ್ಥಾನ ಮಾನ ಚೌಕಟ್ಟುಗಳಿಂದ ಹೊರಬಂದು 'ದೇವದಾಸಿ' ಪದ್ಧತಿಯಾಗಿದ್ದರೂ 'ಕಲೆ'ಗೆ ಕಿಂಚಿತ್ತಾದರೂ ಪ್ರಾಮುಖ್ಯತೆಯನ್ನು, ಪೋಷಣೆಯನ್ನು ಕೊಡುವ ಸಹೃದಯ ಕಲಾರಸಿಕರಿಂದ ಹೇಗೋ ದೇವಾಲಯದ ನಿರ್ವಹಣೆ ನಡೆದಿದ್ದಿರಬಹುದು. ಆದರೆ ಕ್ರಿ. ಶ 1920ರ ನಂತರ ಒಂದು ದಶಕದ ಮಟ್ಟಿಗೆ ದಕ್ಷಿಣ ಭಾರತಾದ್ಯಂತ ನಡೆದ (ಬ್ರಿಟಿಷ್ ಸರ್ಕಾರದ ಆಜ್ಞೆಯ ಮೇರೆಗೆ) ಆ್ಯಂಟಿ ನಾಚ್ ಮೂವ್‌ಮೆಂಟ್– ದೇವಾಲಯ ನೃತ್ಯವನ್ನು ಕಾನೂನು ಬಾಹಿರವೆಂದು ಪರಿಗಣಿಸಿ ಬಹಿಷ್ಕರಿಸಿದ ಫಲವಾಗಿ ಸುಮಾರು ಪ್ರತಿಶಕ 80 ಭಾಗ ದೇವಾಲಯಾಶ್ರಿತ ನರ್ತಕರು, ಕಲಾವಿದರು ಅತಂತ್ರರಾದರು. ಅವರ ದೇವಾಲಯದ ವತಿಯ ದೇಣಿಗೆಗಳು. ಆಸ್ತಿಗಳು ಬ್ರಿಟಿಷ್ ಸರ್ಕಾರದ ಪಾಲಾದವು. ಅನೇಕ ಕಡೆ ಈ ಆಸ್ತಿದೇಣಿಗೆಗಳಲ್ಲಿ ದೇವಾಲಯವು ನಡೆಯುತ್ತಿದ್ದ ನಿದರ್ಶನಗಳೂ ಇವೆ. ಈ ಎಲ್ಲಾ ಜಂಜಾಟದಲ್ಲಿ ಅತ್ಯಂತ ಉತ್ಕೃಷ್ಟವಾಗಿದ್ದ ದೇವಾಲಯ ನೃತ್ಯ ಪರಂಪರೆ ಅಳಿವಿನಂಚಿಗೆ ಇಳಿಯಿತು. ದುರಾದೃಷ್ಟವೆಂದರೆ ದೇವಾಲಯದಲ್ಲಿ ಸೇವೆಗೈಯುತ್ತಿದ್ದ ದೇವದಾಸಿಯ 'ಕಲೆ' ನಶಿಸಿತು.

ಈ ಎಲ್ಲಾ ವೈಪರೀತ್ಯಗಳಿಂದಾಗಿ ಸಣ್ಣ ಸಣ್ಣ ದೇವಾಲಯಗಳು ಆಶ್ರಯದಾತರಿಲ್ಲದೇ ಸಂಪೂರ್ಣವಾಗಿ ನಶಿಸಿಹೋಗುತ್ತಿವೆ... ಹೋಗಿವೆ. ಇಂತಿದ್ದರೂ ಕೆಲವು ದೇವಾಲಯಗಳು ಇಂದಿಗೂ ಉತ್ತಮ ಸ್ಥಿತಿಯಲ್ಲಿ

ಉಳಿದಿವೆ. ಪೂಜಾ–ಪದ್ಧತಿಗಳು ಅಸ್ತಿತ್ವದಲ್ಲಿವೆ. ಆದರೆ ಎಲ್ಲಿಯೂ ಈಗ ನೃತ್ಯ–ಸಂಗೀತಸೇವೆ ಎಂಬುದು ಜಾರಿಯಲ್ಲಿ ಇಲ್ಲ. ಕ್ಷೇತ್ರ ಕಾರ್ಯದ ಹಿನ್ನೆಲೆಯಲ್ಲಿ ಹೇಳುವುದಾದರೆ, ಇಂದಿಗೂ ಬೇಗೂರು, ಹಲಸೂರು, ಕಾಡು ಮಲ್ಲೇಶ್ವರ, ರಂಗನಾಥ ದೇವಾಲಯ ಇವು ಮೂಲಸ್ವರೂಪಕ್ಕೆ ಯಾವುದೇ ಧಕ್ಕೆಯಾಗದಂತೆ ಉಳಿದುಬಂದಿವೆ. (ನರ್ತನ ಶಿಲ್ಪಗಳ ಆಧಾರದಲ್ಲಿ) ಜೀರ್ಣೋದ್ಧಾರದ ಭರಾಟೆಯಲ್ಲಿ ಅನೇಕ ಮಾರ್ಪಾಡುಗಳಾಗುತ್ತಿದ್ದರೂ ಕೆಲವೊಂದು ಕುರುಹುಗಳು ನಿದರ್ಶನಗಳು ಅಧ್ಯಯನಾಕಾಂಕ್ಷಿಗಳಿಗೆ ದೊರೆವ ಮಟ್ಟದಲ್ಲಾದರೂ ಉಳಿದುಬಂದಿವೆ. ಕೆಲವು ದೇವಾಲಯಗಳು ಬಹಳ ಆಧುನೀಕರಣಕ್ಕೆ ಒಳಗಾಗಿದ್ದರೆ, ಕೆಲವೊಂದು ದೇವಾಲಯಗಳು ಸಂಪೂರ್ಣ ಶಿಥಿಲಾವಸ್ಥೆಯಲ್ಲಿ ಬಿದ್ದಿವೆ. (ಉದಾ ತೋಟದ ವೀರಭದ್ರ ದೇವಾಲಯ).

ಇದುವರೆವಿಗೆ ಉಲ್ಲೇಖಿಸಿರುವ ಎಲ್ಲ ದೇವಾಲಯಗಳ ಕ್ಷೇತ್ರಕಾರ್ಯವನ್ನು ಕೈಕೊಂಡಿದ್ದರೂ ವಿಷಯ ವಿಶ್ಲೇಷಣೆಯ ಆಧಾರದಲ್ಲಿ 2 ದೇವಾಲಯಗಳನ್ನು ಮಾತ್ರ ಅನುಲಕ್ಷಿಸಿ ವಾಸ್ತು ಶಿಲ್ಪದ ಹಿನ್ನೆಲೆಯಲ್ಲಿ ದೊರಕುವ ಶಿಲ್ಪಗಳ ವಿಶ್ಲೇಷಣೆಯನ್ನು ಕೊಡಲಾಗುತ್ತಿದೆ. ಇದಕ್ಕಾಗಿ ಬೇಗೂರಿನ ನಗರೇಶ್ವರ ದೇವಾಲಯ ಹಾಗೂ ಹಲಸೂರಿನ ಸೋಮೇಶ್ವರ ದೇವಾಲಯವನ್ನು ಆರಿಸಿಕೊಳ್ಳಲಾಗಿದೆ. ಬೇಗೂರಿನ ನಗರೇಶ್ವರ ಮತ್ತು ಹಲಸೂರಿನ ಸೋಮೇಶ್ವರ ದೇವಾಲಯಗಳಲ್ಲಿ ಇಂದಿಗೂ ಆಗಮೋಕ್ತಾವಾಗಿ ಸೇವಾಕೈಂಕರ್ಯಗಳು ನಡೆದುಬಂದಿವೆ. ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ, ಪರ್ವೋತ್ಸವ, ಜಾತ್ರಾ ಮಹೋತ್ಸವಗಳು ಬಹು ವಿಜೃಂಭಣೆಯಿಂದಲೇ ನಡೆಯುತ್ತಿವೆ. ಮುಖ್ಯವಾಗಿ, ಜಾತ್ರಾ ಮಹೋತ್ಸವಗಳಲ್ಲಿ, ಬ್ರಹ್ಮರಥೋತ್ಸವದ ಸಂದರ್ಭಗಳಲ್ಲಿ ಅನೇಕ ಜಾನಪದ ನೃತ್ಯಗಳು, ಮೆರವಣಿಗೆಗಳಲ್ಲಿ ನಡೆವುದು ಸಾಮಾನ್ಯವಾಗಿದೆ. 'ಜಾನಪದ ನೃತ್ಯಕ್ಕೆ' ನೃತ್ಯದ ಕುರುಹು ಸೀಮಿತವಾಗಿದೆ. ಇವುಗಳಲ್ಲದೆ, ಇನ್ನೂ ಅನೇಕ ದೇವಾಲಯಗಳಲ್ಲಿಯೂ ಸಹ ನಂದಿಕೋಲು, ಕಂಸಾಳೆ ನೃತ್ಯಗಳು ಜಾತ್ರಾ ಮಹೋತ್ಸವ, ಬ್ರಹ್ಮೋತ್ಸವ, ರಥೋತ್ಸವದ ಅಂಗವಾಗಿ ನಡೆದು ಬಂದಿರುವುದು ತಿಳಿಯುತ್ತದೆ.

ಬೇಗೂರಿನ ನಗರೇಶ್ವರ ದೇವಾಲಯದ ವಾಸ್ತುಶಿಲ್ಪವನ್ನು ಗಮನಿಸಿದಾಗ ದೇವಾಲಯದ ನವರಂಗ, ಸುಖನಾಸಿ ದ್ವಾರಮಂಟಪದ ಇಕ್ಕೆಲಗಳಲ್ಲಿ, ಸುಖನಾಸಿಯ ಕಂಬಗಳಲ್ಲಿ, ಶಿಲ್ಪ ಸಮುಚ್ಚಯಗಳಲ್ಲಿ ನೃತ್ಯದ ಅನೇಕ ಶಿಲ್ಪಗಳಿದ್ದು, ಇವುಗಳಲ್ಲಿ ನರ್ತಕ, ನರ್ತಕಿಯರು, ಮದ್ದಳೆಗಾರರು, ವಿವಿಧ ವಾದ್ಯಗಳನ್ನು ನುಡಿಸುವವರು. ನಟ್ಟುವಿಗ, ಹೀಗೆ ರಂಗಭೋಗ ಪರಿವಾರದವರೆಲ್ಲರೂ ನಿರೂಪಿತರಾಗಿರುವುದನ್ನು ಕಾಣಬಹುದು. ಇಲ್ಲಿನ ಶಿಲ್ಪಗಳಲ್ಲಿ ಬಹಳ ಸ್ಪಷ್ಟವಾಗಿ ಮಾರ್ಗನೃತ್ಯ ಪದ್ಧತಿ ಹಾಗೂ ದೇಸಿ ನೃತ್ಯಪದ್ಧತಿಯ ಶಿಲ್ಪಗಳನ್ನು ಆ ನೃತ್ಯಗಳಲ್ಲಿನ ವಿಶೇಷತೆಗಳನ್ನು ಸೂಕ್ಷ್ಮ ವಿವರಗಳನ್ನು ಸಹ ಕಾಣಬಹುದಾಗಿದೆ. ಹೆಚ್ಚಾಗಿ ಈ ಶಿಲ್ಪಗಳು ಕರ್ನಾಟಕದಲ್ಲಿ ಚೋಳರ ಶೈಲಿಯನ್ನು ಆಧರಿಸಿ ನಿರ್ಮಿಸಿದ ಶಿಲ್ಪಗಳಾಗಿವೆ. ತಕ್ಕಮಟ್ಟಿಗೆ ಉತ್ತಮಸ್ಥಿತಿಯಲ್ಲಿವೆ. ದೊರಕುವ ಈ ಎಲ್ಲ ಮಾಹಿತಿಗಳಿಂದ, ಈ ದೇವಾಲಯದಲ್ಲಿ ನರ್ತನ ಸೇವೆ ನಡೆದಿರಬಹುದೆಂದು ಊಹಿಸಬಹುದಾಗಿದೆ. ಹಾಗೆಯೇ ಇನ್ನೊಂದು ಬಹು ಮುಖ್ಯ ಅಂಶವೆಂದರೆ ಬೇಗೂರಿನ ನಗರೇಶ್ವರ ದೇವಾಲಯ ಪ್ರಾಚೀನ ದೇವಾಲಯ ಕ್ರಿ. ಶ. 8–9ನೇ ಶತಮಾನಕ್ಕೆ ಕರ್ನಾಟಕದಲ್ಲಿ ರಂಗಭೋಗವು ಅಸ್ತಿತ್ವವನ್ನು ಪಡೆಯುತ್ತಿದ್ದಂತಹ ಕಾಲ. ಈ ಕಾಲದಲ್ಲಿ ನಿರ್ಮಾಣವಾಗಿರಬಹುದಾದ ಬೇಗೂರಿನ ದೇವಾಲಯದಲ್ಲಿ ದೊರೆವ ಈ ಶಿಲ್ಪಗಳು 'ನೃತ್ಯ ಸಂಸ್ಕೃತಿ' ಆ ಕಾಲಕ್ಕೆ ಯಾವ ಶ್ರೀಮಂತಿಕೆಯಲ್ಲಿತ್ತು ಎಂಬುದನ್ನು ಸಾಬೀತುಗೊಳಿಸುತ್ತವೆ.

ಕ್ಷೇತ್ರಕಾರ್ಯದ ಇನ್ನೊಂದು ಬಹುಮುಖ್ಯ ದೇವಾಲಯ ಹಲಸೂರಿನ ಸೋಮೇಶ್ವರ ದೇವಾಲಯ ಇಂದಿನ ಬೆಂಗಳೂರಿನಂತಹ ನಗರ ಪ್ರದೇಶದಲ್ಲಿ ಅತ್ಯಂತ ಸುವ್ಯವಸ್ಥಿತ ರೀತಿಯಲ್ಲಿ ಅಸ್ತಿತ್ವದಲ್ಲಿರುವ ದೇವಾಲಯವಾಗಿದೆ. ವಿಶಾಲವಾದ ಪ್ರದೇಶದಲ್ಲಿ ಶೈವಾಗಮದ ರೀತಿಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು 2, 3,

ಹಂತಗಳಲ್ಲಿ ಜೀರ್ಣೋದ್ಧಾರವನ್ನು ಕಂಡಿದೆ. ಆದರೆ ಮೂಲ ರಚನೆ, ಶಿಲ್ಪಸಮುಚ್ಚಯ ವಾಸ್ತುಶಿಲ್ಪಕ್ಕೆ ಅಂತಹಧಕ್ಕೆ ಉಂಟಾಗಿಲ್ಲ. ಈ ದೇವಾಲಯದ ಶಿಲ್ಪಗಳಲ್ಲಿ ನೃತ್ಯ ವಿಷಯಕ್ಕೆ ಪೂರಕವಾದ ಬಹಳಷ್ಟು ಮಾಹಿತಿ ಲಭ್ಯವಾಗಿದೆ. ವಿಶಾಲವಾದ ದೇವಾಲಯದ ಪ್ರಮಾಣಕ್ಕೆ ತಕ್ಕಂತೆ ಮುಖ್ಯದ್ವಾರ ಮತ್ತು ಗೋಪುರವಿದೆ. ಮುಂದೆ ನಂದಿಮಂಟಪವಿದೆ. ದೇವಾಲಯದ ಮುಖಮಂಟಪ/ನವರಂಗ ವಿಶಾಲವಾಗಿವೆ. ಇದು ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಮುಖಮಂಟಪ ನಂತರ ಸಣ್ಣದ್ವಾರದಿಂದ ಒಳ ಹೋದಾಗ ಪ್ರದಕ್ಷಿಣಾ ಪಥವಿದೆ. ನಂತರ ದ್ವಾರದಿಂದ ಒಳಗೆ ಸುಖನಾಸಿ ಗರ್ಭಗೃಹವಿದೆ. ಇವು ಇಂದಿಗೆ ಸಾಕಷ್ಟು ನವೀಕರಣವಾಗಿವೆ. ದೇವಾಲಯದ ನವರಂಗ ಅಥವಾ ಮುಖಮಂಟಪದ ಕಂಬಗಳು ಮಾತ್ರ ಯಥಾಸ್ಥಿತಿಯಲ್ಲಿವೆ. ಕಂಬಗಳಲ್ಲಿ ಸುಂದರವಾದ ವಿಜಯನಗರ ಶೈಲಿಯ ಶಿಲ್ಪಗಳಿವೆ. ಇಲ್ಲಿನ ಕಂಬಗಳಲ್ಲಿ ದೊರಕುವ ನೃತ್ಯ ಶಿಲ್ಪಗಳನ್ನು ವಿಷಯ ವಿಶ್ಲೇಷಣೆಯ ಅನುಕೂಲಕ್ಕಾಗಿ 3 ರೀತಿಯಾಗಿ ವಿಂಗಡಿಸಲಾಗಿದೆ:

1. ಕಥೆಯಾಧಾರಿತ, ವಿಷಯಾಧಾರಿತ ಶಿಲ್ಪಗಳು;
2. ಮಾರ್ಗಪದ್ಧತಿಯ ನೃತ್ಯಶಿಲ್ಪಗಳು ಮತ್ತು
3. ದೇಸಿ ಪದ್ಧತಿಯ ನೃತ್ಯ ಶಿಲ್ಪಗಳು

1ನೆಯ ರೀತಿಯ ಶಿಲ್ಪಗಳಲ್ಲಿ ಭಾಗವತ, ಪುರಾಣ, ಉತ್ಸವಗಳಿಗೆ ಸಂಬಂಧಿಸಿದಂತೆ ಶಿಲ್ಪಗಳನ್ನು ಗುರುತಿಸಬಹುದಾಗಿದೆ. ಇದರಲ್ಲಿ ಶ್ರೀ ಕೃಷ್ಣನ ಬಾಲ್ಯದ ಅನೇಕ ಘಟನೆಗಳು ನಿರೂಪಿತವಾಗಿವೆ. ಯಶೋದಾ ಕೃಷ್ಣ, ಬೆಣ್ಣೆಯನ್ನು ಕೈಯಲ್ಲಿ ಹಿಡಿದ ನವನೀತಚೋರ ಕೃಷ್ಣ, ಕಾಳಿಂಗ ನರ್ತನ, ಕ್ರೀಡಾಕೃಷ್ಣ ಹೀಗೆ ಅನೇಕ ಕಥೆಗಳಾಧಾರಿತ ಶಿಲ್ಪಗಳಿವೆ. ಈ ಶಿಲ್ಪಗಳು ದೇವಾಲಯದ ಬಲಭಾಗದಲ್ಲಿ ಮುಂಭಾಗದಲ್ಲಿ ಹೆಚ್ಚಾಗಿವೆ. ಹಾಗೆಯೇ ದೇವಾಲಯದ ಬಲಭಾಗದಲ್ಲಿ ಹಿಂಭಾಗದಲ್ಲಿ ಮಾರ್ಗಪದ್ಧತಿಯ ನೃತ್ಯಶಿಲ್ಪಗಳು, ನರ್ತಕಿಯರು, ಅವರ ವಿವಿಧ ಭಾವ-ಭಂಗಿಗಳ ನರ್ತನ ಶಿಲ್ಪಗಳು ಕಾಣಸಿಗುತ್ತವೆ. ರಂಗಭೋಗ ಪರಿವಾರದವರ ಅಭ್ಯಾಸದ ಸೇವೆಯಲ್ಲಿ ನಿರತರಾಗಿರುವ ಶಿಲ್ಪಗಳು ದೇವಾಲಯದ ಹೊರಭಾಗದಲ್ಲಿ (ಪ್ರದಕ್ಷಿಣಾ ಪಥವಾಗಿ)ನ ಗೋಡೆಯಲ್ಲಿ ನಿರೂಪಿತವಾಗಿವೆ. ಇದರಲ್ಲಿ ಹಾಡುವವರು, ಚಾಮರಸೇವಕಿಯರು, ಮದ್ದಳಿಗರು, ನಟ್ಟುವಣರ ನರ್ತಕಿಯರು, ಇತರ ರಂಗಭೋಗ ಕಲಾವಿದರು ನಿರೂಪಿತರಾಗಿದ್ದಾರೆ.

ದೇವಾಲಯದ ಎಡಭಾಗದ ಕಂಬಗಳಲ್ಲಿ ವೈವಿಧ್ಯಪೂರ್ಣವಾದ ದೇಸಿ ಪದ್ಧತಿಯಲ್ಲಿ ನರ್ತಿಸುತ್ತಿರುವ ಅನೇಕ ನರ್ತಕರ ಶಿಲ್ಪಸಮುಚ್ಚಯವಿದೆ. ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ, ಜಕ್ಕಣೀನೃತ್ಯ, ಸಿಂಹನೃತ್ಯ, ಪ್ರೇಂಖಣ, ಹಲಗೆನೃತ್ಯ, ಬಂಧನೃತ್ಯ, ಪೇರಣಿನೃತ್ಯ ಹೀಗೆ ವಿಜಯನಗರ ಕಾಲದಲ್ಲಿ ಪ್ರಸ್ತುತವಾಗುತ್ತಿದ್ದ, ಬಹಳ ಪ್ರಸಿದ್ಧ ಹಾಗೂ ಸಾಮಾನ್ಯ ಜನರ ಮನ್ನಣೆಗೆ ಪಾತ್ರವಾಗಿದ್ದ ಈ ಎಲ್ಲಾ ನೃತ್ಯಗಳ ಶಿಲ್ಪಗಳೂ ಇಲ್ಲಿವೆ. ಇವು ಆ ಕಾಲದ ಕರ್ನಾಟಕದ ಅತ್ಯಂತ ಪ್ರಸಿದ್ಧ ದೇಸಿ ನೃತ್ಯಗಳಾಗಿದ್ದವು.

ಇವಿಷ್ಟೇ ಅಲ್ಲದೆ, ಮುಖ್ಯದ್ವಾರದಿಂದ ಗರ್ಭಗೃಹಕ್ಕೆ ಹೋಗುವ ದಾರಿಯ ಮೇಲ್ಛಾವಣಿಯ ಇಕ್ಕೆಲಗಳಲ್ಲಿ ಸಾಲಾಗಿ ಒಂದು ಕಡೆ ವಸಂತೋತ್ಸವದ ನೃತ್ಯಶಿಲ್ಪಗಳೂ, ಇನ್ನೊಂದೆಡೆ ಕೋಲಾಟದ ನೃತ್ಯದ ಶಿಲ್ಪಗಳು ಇವೆ. ವಸಂತೋತ್ಸವ ಹಾಗೂ ಕೋಲಾಟ ವಿಜಯನಗರದ ಕಾಲಕ್ಕೆ ಅತ್ಯಂತ ಪ್ರಸಿದ್ಧ ಹಾಗೂ ದೇವಾಲಯಗಳಲ್ಲಿ ನಡೆಯುತ್ತಿದ್ದ ಉತ್ಸವರೂಪಿ ನೃತ್ಯ ಸೇವೆಗಳು. ಇದರಲ್ಲಿ, ದೇವಾಲಯ ವರ್ಗದವರು, ರಾಜಮನೆತನದವರು, ಕಲಾವಿದರು, ಸಾಮಾನ್ಯ ಜನರು ಎಲ್ಲರೂ ಸೇರಿ ಬಹು ವಿಜೃಂಭಣೆ ಮತ್ತು ಉತ್ಸಾಹದಲ್ಲಿ ನೆರವೇರಿಸುತ್ತಿದ್ದ ಉತ್ಸವ ಹಾಗೂ ನೃತ್ಯೋತ್ಸವ ಕಾಣಬರುತ್ತವೆ. ಇದರ ಕುರುಹನ್ನು ಈ ಮೇಲ್ಛಾವಣೆ ಶಿಲ್ಪಗಳಲ್ಲಿ ಕಾಣಬಹುದು.

ನರ್ತಕರ ನರ್ತನ ಶೈಲಿ, ಎರಚಾಟ, ಕಾಲಿನ ಮಣಿಗಳಿಂದ ನರ್ತನದ ಬೀಸು ಮತ್ತು ನರ್ತನದಲ್ಲಿನ ಉತ್ಸಾಹ ಬಹು ಸ್ಪಷ್ಟವಾಗಿ ಕಂಡುಬರುತ್ತವೆ.

ಒಟ್ಟಾರೆಯಾಗಿ ಹಲಸೂರಿನ ಸೋಮೇಶ್ವರ ದೇವಾಲಯವು ನೃತ್ಯ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ದೇವಾಲಯಗಳಲ್ಲಿ ಒಂದು ಪ್ರಮುಖ ದೇವಾಲಯವೆಂದು ಪರಿಗಣಿಸಬಹುದಾಗಿದೆ. ಇದಲ್ಲದೆ ಆ ಕಾಲದ ಬೆಂಗಳೂರಿನ ನಕ್ಷೆಯನ್ನು ಗಮನಿಸಿ ಹೇಳುವುದಾದರೆ ಅರಳೇ ಪೇಟೆಯಿಂದ ತಿಗಳರ ಪೇಟೆಯವರೆಗಿನ ಪ್ರದೇಶದಲ್ಲಿ ಬರುವ ಎಲ್ಲ ದೇವಾಲಯಗಳಲ್ಲಿ ತಕ್ಕಮಟ್ಟಿಗೆ (ಕ್ರಿ. ಶ. 18–19–20ನೇ ಶತಮಾನ) ದೇವದಾಸಿಯರಿಂದ ನರ್ತನ ಸೇವೆ ನಡೆದಿತ್ತು ಎಂಬುದು. ಅವರನ್ನು 'ಟಾಫೆ'ಯವರೆಂದು ಕರೆಯುತ್ತಿದ್ದರು. ಇವರು ಆಹ್ವಾನದ ಮೇರೆಗೆ ದೇವಾಲಯಗಳಿಗೆ ಹೋಗಿ 'ನರ್ತನ ಸೇವೆ'ಯನ್ನು ಸಲ್ಲಿಸುತ್ತಿದ್ದರು. ಇಂದಿಗೂ ಇಲ್ಲಿನ ಅನೇಕ ದೇವಾಲಯಗಳಲ್ಲಿ ದೇಸಿ ನೃತ್ಯಗಳಾದ ನಂದಿಕೋಲು, ಡೊಳ್ಳುಕುಣಿತ, ಕಂಸಾಳೆ ನೃತ್ಯಗಳಿಂದಲೇ ಅನೇಕ ಪೂಜಾ ಕಾರ್ಯಗಳು ಆರಂಭವಾಗುತ್ತವೆ. ಮತ್ತು ಇವರು ಒಂದು ದೇವಾಲಯದಿಂದ ಇನ್ನೊಂದು ದೇವಾಲಯಕ್ಕೆ ಹೋಗಿ ಪಂಜು, ದಂಡ, ಹೋಮ, ನೈವೇದ್ಯಗಳನ್ನು ಅರ್ಪಿಸಿ ಬರುವ, ಧ್ವಜಾರೋಹಣದ ಧ್ವಜಗಳನ್ನು ವಿನಿಮಯಮಾಡಿಕೊಳ್ಳುವ ಪದ್ಧತಿಇದೆ. ಮಾರ್ಗಪದ್ಧತಿಯ ನೃತ್ಯಸೇವೆ ನಶಿಸಿದರೂ–ದೇಸಿ ನೃತ್ಯಪದ್ಧತಿ ಅಸ್ತಿತ್ವದಲ್ಲಿರುವ ಜನಪದೀಯ ಸಂಸ್ಕೃತಿ ಮುಂದುವರೆದಿರುವುದು ತಿಳಿಯುತ್ತದೆ. ತಿಗಳರ ಪೇಟೆಯಲ್ಲಿರುವ ಧರ್ಮರಾಯ ದೇವಾಲಯದ 'ಕರಗ' ಪ್ರಸಿದ್ಧ ಮಹೋತ್ಸವ. ಈ ಉತ್ಸವದಲ್ಲಿಯೂ ಸಹ ಅನೇಕ ದೇಸಿಪದ್ಧತಿಯ ನೃತ್ಯಗಳು ನಡೆಯುತ್ತವೆ.

ಈ ಎಲ್ಲ ಹಿನ್ನೆಲೆಯಲ್ಲಿ ಗಮನಿಸಿದಾಗ 'ಬೆಂಗಳೂರು' ಅಸ್ತಿತ್ವಕ್ಕೆ ಬರುವ ಮೊದಲಿಗೂ ನೃತ್ಯವಿತ್ತು. ಬಂದನಂತರವೂ ಸಹ ಅನೇಕ ದೇವಾಲಯಗಳು ನಿರ್ಮಾಣವಾಗಿ ಆ ದೇವಾಲಯಗಳಲ್ಲಿ ದೊರೆವ ದಾನದತ್ತಿಗಳ, ಆಶ್ರಯದಾತರ, ಪೋಷಕರ ಆಧಾರದ ಮೇಲೆ ನರ್ತನ ಸೇವೆಗಳು ನಡೆಯುತ್ತಿದ್ದವು. ಅನೇಕ ವಿಧವಾದ ಮಾರ್ಗ, ದೇಸಿ, ಜನಪದ ನೃತ್ಯಗಳು ಅಸ್ತಿತ್ವದಲ್ಲಿದ್ದದ್ದು ಅಸ್ತಿತ್ವದಲ್ಲಿರುವ ವಿಚಾರಗಳು ಈ ಮೂಲಕ ತಿಳಿದುಬಂದಿವೆ.

ಆಧಾರ ಸೂಚಿ

1. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ.9 ಹಳೆಯ ಆವೃತ್ತಿ ಬೆಂಗಳೂರು ಜಿಲ್ಲೆ
2. ಮೈಸೂರು ಗ್ಯಾಸೆಟಿಯರ್, ಸಂಪಾದಕರು ಸಿ. ಹಯವದನರಾವ್
3. ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್, ಸಂಪಾದಕರು, ಡಾ. ಸೂರ್ಯನಾಥ್ ಕಾಮತ್
4. ಬೆಂಗಳೂರು ದರ್ಶನ, ಸಂಪುಟ.1, 2, ಪ್ರಸಂ. ಪ್ರೊ. ಎಲ್. ಎಸ್. ಶೇಷಗಿರಿರಾವ್, ಸಂ. ಡಾ. ಸೂರ್ಯನಾಥ ಕಾಮತ್, ಪ್ರೊ. ಎಂ. ಎಚ್. ಕೃಷ್ಣಯ್ಯ; ಉದಯಭಾನು ಕಲಾಸಂಘ; ಬೆಂಗಳೂರು, 2005.
5. ಇತಿಹಾಸ ದರ್ಶನ, ಸಂಪುಟಗಳು, 14, 17, 24, 33; ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು
6. ಮುರಳಿವಾಣಿ, ಶ್ರೀ ಬಿ.ವಿ.ಕೆ ಶಾಸ್ತ್ರಿಗಳ ಸಮಗ್ರ ಸಂಪುಟ ಮತ್ತು ಅಭಿನಂದನಾಗ್ರಂಥ; ಬೆಂಗಳೂರು ಗಾಯನ ಸಮಾಜ: ಬೆಂಗಳೂರು, 1999



1. ಬೇಗೂರು ದೇವಾಲಯ ಸಮುಚ್ಚಯದ
ಒಂದು ನೋಟ



2. ಬೇಗೂರು ನಗರೇಶ್ವರ ದೇವಾಲಯದ
ನವರಂಗದ ಕಂಬಗಳಲ್ಲಿನ ನರ್ತನ ಶಿಲ್ಪಗಳು



3. ಬೇಗೂರು ನಗರೇಶ್ವರ ದೇವಾಲಯದ
ನವರಂಗದ ಕಂಬಗಳಲ್ಲಿನ ನರ್ತನ ಶಿಲ್ಪಗಳು



4. ಹಲಸೂರು ಸೋಮೇಶ್ವರ ದೇವಾಲಯದ ನವರಂಗ



5. ಹಲಸೂರು ಸೋಮೇಶ್ವರ ದೇವಾಲಯದಲ್ಲಿನ ಕಂಬಗಳಲ್ಲಿನ ನರ್ತನ ಶಿಲ್ಪಗಳು, ದೇಸಿನೃತ್ಯ, ಜಕ್ಕಣೀ ನೃತ್ಯ



6. ದೇಸಿ ನೃತ್ಯ



7. ಸಿಂಹ ನೃತ್ಯ



8. ದೇಸಿ ನೃತ್ಯ




9. ದೇಸಿ ನೃತ್ಯ



10. ಪ್ರೇಂಖಣ ನೃತ್ಯ



11. ಹಲಗೆ ನೃತ್ಯ (ತಮಟೆ ನೃತ್ಯ)



13. ವಸಂತೋತ್ಸವದ /ಕೋಲಾಟ ನೃತ್ಯದ ಶಿಲ್ಪಗಳು



14. ರಂಗಭೋಗಕಲಾವಿದರು– ನರ್ತಕಿ, ನಟ್ಟುವಕಾರ



12. ಬಂಧ ನೃತ್ಯ

64. ಲಾಲ್‌ಬಾಗ್ ಉದ್ಯಾನವನ (1760–1932)

ಪ್ರೊ॥ ವಿನೋದಾ ರಾವ್

ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಅಥವಾ ಕೆಂಪು ತೋಟ ಮೂಲತಃ ಒಂದು ರಾಜೋದ್ಯಾನ. ಇಸವಿ 1760ರಲ್ಲಿ ಬೆಂಗಳೂರು ಕೋಟೆಯಿಂದ ಪೂರ್ವಕ್ಕೆ ಸುಮಾರು ಒಂದು ಮೈಲು ಮತ್ತು ಕೆಂಪೇಗೌಡ ಗೋಪುರದಿಂದ ಕೆಲವು ನೂರು ಗಜಗಳ ದೂರದಲ್ಲಿ ಒಂದು ವಿಶ್ರಾಂತಿ ಧಾಮ ಮತ್ತು ಹಣ್ಣುಗಳ ತೋಟವನ್ನು ಹೈದರಾಲಿಯು ಸೃಷ್ಟಿಸಿದನು. ಅಂದು ಅದು 40 ಎಕರೆಗಳಷ್ಟು ಮಾತ್ರ ವಿಸ್ತಾರವಾಗಿತ್ತು. ಇಂದು 97 ಎಕರೆಗಳಷ್ಟು ವಿಸ್ತಾರವಾಗಿದೆ.

ಪ್ರಾರಂಭವಾದ ವರ್ಷ ಕ್ರಿ.ಶ. 1760ರಿಂದ ತೋಟಗಾರಿಕಾ ಸಂಶೋಧನೆಯಲ್ಲಿ ತೊಡಗಿಸಿಕೊಂಡದ್ದಲ್ಲದೇ ಮೈಸೂರು ರಾಜ್ಯದ ತೋಟಗಾರಿಕೆ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿಯ ಹಿಂದೆ ಇರುವ ಬೃಹತ್ ಶಕ್ತಿಯಾಗಿ ಲಾಲ್‌ಬಾಗ್ ಬೆಳೆದು ಉಳಿದು ಬಂದಿದೆ. ನಿಜ ಹೇಳಬೇಕೆಂದರೆ, ಲಾಲ್‌ಬಾಗ್ ಕೇವಲ ಒಂದು ತೋಟವಲ್ಲ; ಅನೇಕ ಪೀಳಿಗೆಗಳ ಮೆಚ್ಚುಗೆ ಮತ್ತು ಕೊಡುಗೆಗಳನ್ನು ಪಡೆದಿರುವ ಇದೊಂದು ಸಾರ್ವಜನಿಕ ಸಂಸ್ಥೆ, ರಾಜ್ಯದ ಪರಂಪರಾ ತಾಣಗಳಲ್ಲಿ ಒಂದು.

ಲಾಲ್‌ಬಾಗಿನ ಹೆಸರನ್ನು ನಾಲ್ಕು ವಿಧಗಳಲ್ಲಿ ವರ್ಣಿಸಲಾಗುತ್ತದೆ:

1. ಅದನ್ನು ಬೆಳೆಸಿರುವ ಜಮೀನಿನ ಕೆಂಪು ವರ್ಣದ ಮಣ್ಣಿನಿಂದಾಗಿ (Red Soil);
2. 'ಲಾಲ್' ಪದಕ್ಕಿರುವ 'ಪ್ರೀತಿಪಾತ್ರ' ಎಂಬ ಅರ್ಥದಿಂದಾಗಿ;
3. ಇಲ್ಲಿದ್ದ ಅನೇಕ ಬಗೆಯ ಕೆಂಪುವರ್ಣದ ಹೂವುಗಳನ್ನು ಕಂಡ ಬಾಲಕ ಟಿಪ್ಪು ಸುಲ್ತಾನ್ ಲಾಲ್‌ಬಾಗ್ 'ಲಾಲ್‌ಬಾಗ್' ಎಂದು ಆನಂದದಿಂದ ಕೂಗಿಕೊಂಡನೆಂಬ ಕಾರಣದಿಂದಾಗಿ;
4. 'ಲಾಲ್' ಎಂದರೆ 'ಮಾಣಿಕ್ಯ' (Ruby) ಎಂದು ಅರ್ಥ ಇರುವುದರಿಂದ ಅದು 'ಮಾಣಿಕ್ಯಗಳ ತೋಟ' (Garden of Rubies) ಎಂದೂ ಕರೆದಿರುವರು.

ಈ ತೋಟವನ್ನು ಮೊಘಲಾಯಿ ಶೈಲಿಯಲ್ಲಿ ಬೆಳೆಸಲಾಯಿತು. ಪ್ರಾರಂಭದಲ್ಲಿ ದೂರ ದೂರದ ಸ್ಥಳಗಳಾದ ದೆಹಲಿ, ಲಾಹೋರ್, ಮುಲ್ತಾನ್, ಆರ್ಕಾಟ್‌ಗಳಿಂದಲೂ ತದನಂತರ ಮಾರಿಷಸ್, ಅರೇಬಿಯಾ, ಚೀನಾ, ಆಫ್ರಿಕಾ ಮುಂತಾದ ದೇಶಗಳಿಂದಲೂ ಇಲ್ಲಿಗೆ ವಿಧವಿಧವಾದ ಸಸ್ಯಗಳನ್ನು ತಂದು ಪರಿಚಯಿಸಲಾಯಿತು. ತಿಗಳರೆಂಬ ತೋಟಗಾರಿಕೆಯನ್ನೇ ಪ್ರಧಾನ ಕಸುಬನ್ನಾಗಿ ಮಾಡಿಕೊಂಡಿದ್ದ ಒಂದು ಜಾತಿಯ ಜನರನ್ನು ಹೈದರಾಲಿಯು ಮದ್ರಾಸ್ ಪ್ರೆಸಿಡೆನ್ಸಿ ಪ್ರದೇಶಗಳಲ್ಲಿ ತನ್ನ ಆಕ್ರಮಣಕಾರಿ ದಾಳಿಗಳಿಂದ ಹಿಂತಿರುಗುವಾಗ ಕರೆದುಕೊಂಡು ಬಂದು ಬೆಂಗಳೂರಿನ ಸುತ್ತಮುತ್ತ ನೆಲೆಗೊಳಿಸಿದ್ದನು. ಅವರಲ್ಲಿ ಅನೇಕ ತೋಟಗಾರರು ಲಾಲ್‌ಬಾಗಿನಲ್ಲಿ ಮತ್ತು ಬೆಂಗಳೂರಿನ ವಿವಿಧ ಭಾಗಗಳಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಶ್ರಮಿಸಿದರು. ಮಾವಿನ ಹಣ್ಣುಗಳನ್ನು ವಿಶೇಷವಾಗಿ ಇಷ್ಟಪಡುತ್ತಿದ್ದ ಟಿಪ್ಪು ಅನೇಕ ಜಾತಿಯ ಮಾವಿನ ಮರಗಳನ್ನು ಲಾಲ್‌ಬಾಗಿನಲ್ಲಿ ನೆಟ್ಟು ಬೆಳೆಸಲು ಪ್ರೋತ್ಸಾಹವಿತ್ತನು. ಅವನಿಂದಲೇ ನೆಟ್ಟಲ್ಪಟ್ಟವೆಂದು ಗುರುತಿಸಲಾಗಿರುವ ಎರಡು–ಮೂರು ಮಾವಿನ ಮರಗಳು ಇಂದಿಗೂ ಲಾಲ್‌ಬಾಗಿನಲ್ಲಿ ಇವೆಯೆಂದು ನಂಬಲಾಗಿದೆ. ವಿಶ್ವದ ಬೇರೆ ಬೇರೆ ಭಾಗಗಳಿಂದ

ತಂದ ಸೈಪ್ರೆಸ್ ಮುಂತಾದ ಹೆಚ್ಚು ನೆರಳನ್ನು ಕೊಡುವಂತಹ ಬೃಹತ್ ವೃಕ್ಷಗಳನ್ನು ಇಲ್ಲಿ ನೆಟ್ಟು ಬೆಳೆಸಲಾಯಿತು. ಭಾರಿ ಸಂಖ್ಯೆಯಲ್ಲಿ ಬಾಳೆ, ಹಲಸು, ಸೀತಾಫಲ, ಪನ್ನೇರಳೆ (Peaches), ಪರಂಗಿ, ಅಂಜೂರ ಮುಂತಾದ ವಿಧವಿಧವಾದ ಹಣ್ಣಿನಮರ/ ಗಿಡಗಳನ್ನು ಇಲ್ಲಿ ಬೆಳೆಸಿದರು. ಇಲ್ಲಿ ಪ್ರಾರಂಭದಿಂದಲೂ ಯಥೇಚ್ಛವಾಗಿ ಬೆಳೆಸುತ್ತಾ ಬಂದಿರುವ ಹೂವುಗಳಲ್ಲಿ ಹೆಸರಿಸಲೇ ಬೇಕಾದವೆಂದರೆ ಚಂಪಕ, ಗುಲಾಬಿಗಳು ಮತ್ತು ಅನೇಕ ವಿಧವಾದ ಕಾಡು ಹೂಗಳು (Wild flowers). ಮುಂದೆ ಲಾಲ್‌ಬಾಗಿನಲ್ಲಿ ತರಕಾರಿಗಳನ್ನು ಬೆಳೆಸುವುದು, ಪಶುಸಂಗೋಪನೆ ಮತ್ತು ಕೃಷಿ ಕಾರ್ಯಗಳಿಗೂ ಅವಕಾಶಗಳು ದೊರೆತವು.

1831ರಲ್ಲಿ ಮೈಸೂರು ಸಂಸ್ಥಾನದ ಆಡಳಿತವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಬ್ರಿಟಿಷ್ ಕಮ್ಮಿಷನರ ನಿಯಂತ್ರಣಕ್ಕೆ ತೆಗೆದುಕೊಂಡಾಗ ಒಂದು ಕೃಷಿ–ತೋಟಗಾರಿಕಾ ಸೊಸೈಟಿ (Agri-horticultural Society) ಯನ್ನು ಸ್ಥಾಪಿಸಲಾಯಿತು. ಮೈಸೂರಿನ ಮುಖ್ಯ ಕಮ್ಮಿಷನರಿಂದ ನೇಮಿಸಲ್ಪಟ್ಟ ಓರ್ವ ತೋಟಗಾರಿಕಾ ಸಲಹೆಗಾರನು (Botonical Advisor) 1842ರಿಂದ ಇಲ್ಲಿ ಕಾರ್ಯನಿರ್ವಹಿಸ ತೊಡಗಿದನು.

1856ರಲ್ಲಿ ಲಾಲ್‌ಬಾಗ್ ಒಂದು ಸಸ್ಯಶಾಸ್ತ್ರೀಯ ಉದ್ಯಾನ (Botonical Garden) ಆಗಿ ಪರಿವರ್ತನೆಗೊಂಡಿತು. ಲಂಡನ್ನಿನ ಕ್ಯೂ (kew) ತೋಟಗಾರಿಕಾ ಕ್ಷೇತ್ರದಿಂದ ಓರ್ವ ವೃತ್ತಿನಿರತ ತೋಟಗಾರಿಕಾ ತಜ್ಞನ ಸೇವೆಯನ್ನು ಲಾಲ್‌ಬಾಗಿಗೆ ಎರವಲು ಆಧಾರದಲ್ಲಿ ಪಡೆದುಕೊಳ್ಳಲಾಯಿತು. ಏಪ್ರಿಲ್ 1858ರಲ್ಲಿ ವಿಲಿಯಂ ನ್ಯೂ (William New) ಎಂಬ ಹೆಸರಿನ ಆ ತಜ್ಞನು ಲಾಲ್‌ಬಾಗಿಗೆ ಬಂದು ಸೇರಿದನು. ಲಾಲ್‌ಬಾಗಿನ ಸೌಂದರ್ಯವನ್ನು ಹೆಚ್ಚಿಸಲು ಅನೇಕ ಪ್ರಯತ್ನಗಳನ್ನು ವಿಲಿಯಂ ನ್ಯೂ ಮಾಡಿದನಲ್ಲದೇ ಹಲವಾರು ಆರ್ಥಿಕ ಮೌಲ್ಯವುಳ್ಳ ಸಸ್ಯಗಳನ್ನು ಪರಿಚಯಿಸಿದನು ಮತ್ತು ಅವುಗಳನ್ನು ಸ್ಥಳೀಯ ತೋಟಗಾರರಿಗೆ ಕೂಡ ಪ್ರಯೋಗ ಮತ್ತು ಪ್ರಸರಣದ ಉದ್ದೇಶಗಳಿಗೆ ಒದಗಿಸಲು ತೊಡಗಿದನು. ಇಷ್ಟೇ ಅಲ್ಲದೆ, ಅನೇಕ ವಿಧವಾದ ಸಸ್ಯಗಳನ್ನು ವಿನಿಮಯದ ಆಧಾರದ ಮೇಲೆ ಭಾರತದ ಅನೇಕ ಭಾಗಗಳಲ್ಲಿರುವ ತೋಟಗಾರಿಕೆ ಮತ್ತು ಸಸ್ಯಶಾಸ್ತ್ರೀಯ ಕ್ಷೇತ್ರಗಳಿಗೆ ಮತ್ತು ವಿದೇಶೀಯ ಇದೇ ರೀತಿಯ ಸಂಸ್ಥೆಗಳಿಗೆ ಒದಗಿಸುವ ಪರಿಪಾಠವನ್ನು ಇವನು ಆರಂಭಿಸಿದನು. ಪ್ರಪ್ರಥಮ ಬಾರಿಗೆ ಗೊಬ್ಬರ ಒದಗಿಸುವ, ಆಳವಾದ ಸೋರುಗಾಲುವೆ (trench) ನಿರ್ಮಿಸುವ ಮತ್ತು ಅನುಪಯುಕ್ತ ಕಳೆಸಸ್ಯಗಳ ಕ್ರಮವಾದ ನಿರ್ಮೂಲನಾ ಪದ್ಧತಿಗಳನ್ನು ಇವನೇ ಯಶಸ್ವಿಯಾಗಿ ಪರಿಚಯಿಸಿದನಲ್ಲದೇ ಸ್ಥಳೀಯ ತೋಟಗಾರರು ಮತ್ತು ಸಾರ್ವಜನಿಕರಿಗೆ ಈ ಪದ್ಧತಿಗಳನ್ನು ಪ್ರಾತ್ಯಕ್ಷಿಕೆಗಳ (demonstration) ಮೂಲಕ ಅರ್ಥ ಮಾಡಿಸಲು ಶ್ರಮಪಟ್ಟನು. 1874ರಿಂದ 1908ರ ಅವಧಿಯಲ್ಲಿ ಲಾಲ್‌ಬಾಗಿನ ಸೂಪರಿಂಟೆಂಡೆಂಟ್ ಆಗಿ ಕಾರ್ಯನಿರ್ವಹಿಸಿದ ಜಾನ್ ಕ್ಯಾಮೆರಾನ್ (John Cameron) ಲಾಲ್‌ಬಾಗಿನ ಪ್ರಧಾನ ವಾಸ್ತುಶಿಲ್ಪಿ ಎನಿಸಿಕೊಂಡಿದ್ದಾನೆ. ಈತನ ಬಹುಮುಖ್ಯ ಕೊಡುಗೆ ಎಂದರೆ ಆರ್ಥಿಕವಾಗಿ ಉಪಯೋಗಿ ಎನಿಸಿದ ಸಸ್ಯಗಳನ್ನು ಲಾಲ್‌ಬಾಗಿಗೆ ಮಾತ್ರವೇ ಅಲ್ಲದೆ ರಾಜ್ಯದ ಉಳಿದ ಭಾಗಗಳಿಗೂ ಪರಿಚಯಿಸಿದ್ದು, ದೇಶೀ ತೋಟಗಾರರಿಗೆ ಈ ಮೂಲಕವಾಗಿ ಒಂದು ಲಾಭದಾಯಕ ಜೀವನ ಮಾರ್ಗವು ತೆರೆಯಲ್ಪಟ್ಟು ಅನೇಕರು ಹೂವಿನ ವ್ಯಾಪಾರಿಗಳಾಗಿ ಮತ್ತು ಬೀಜಗಳ ಸರಬರಾಜುದಾರರಾಗಿ ಮುಂದೆ ಬಂದರು. ಇಲ್ಲಿ ವಿಧವಿಧವಾದ ಹೂವುಗಳು ಮತ್ತು ತರಕಾರಿ/ ಹಣ್ಣುಗಳನ್ನು ಯಥೇಚ್ಛವಾಗಿ ಬೆಳೆಯಲು ಅನುಕೂಲಗಳಿದ್ದುದರಿಂದ ಲಾಲ್‌ಬಾಗ್ ತೋಟವನ್ನು ನಾನಾ ಪ್ರಕಾರವಾಗಿ ವಿಸ್ತರಿಸಲು ಮತ್ತು ಅಲಂಕರಿಸಲು ಕ್ರಮ ತೆಗೆದುಕೊಳ್ಳಲಾಯಿತು. ಜೆ. ಕ್ಯಾಮೆರೂನನ ಕೈಕೆಳಗೆ ಲಾಲ್‌ಬಾಗಿನ ವಿಸ್ತೀರ್ಣ 100 ಎಕರೆಗಳಷ್ಟಾಯಿತು. ಯಥೇಚ್ಛವಾಗಿ ನೀರು ಲಭ್ಯವಿದ್ದುದರಿಂದ ಅನೇಕ ಕಡೆಗಳಲ್ಲಿ ಸುಂದರವಾದ ಫ್ಲವರ್ ಬೆಡ್ಸ್‌ಗಳು, ಎರಡೂ ಬದಿಗಳಲ್ಲಿ ಸುಂದರವಾದ ಗಿಡಗಳಿಂದ ಕೂಡಿದ್ದ ನಡೆದಾಡುವ ಹಾದಿಗಳು (walk) ಮುಂತಾದವು ಕಂಡುಬಂದವು. ಇಲ್ಲಿ ಒಂದು ಪ್ರತ್ಯೇಕವಾದ ಪಿಕ್‌ನಿಕ್

ಪೆವಿಲಿಯನ್ ಎದ್ದು ನಿಂತಿತು ಮತ್ತು ವೇಲ್ಸ್‌ನ ರಾಜಕುಮಾರ ಆಲ್ಬರ್ಟ್ ವಿಕ್ಟರ್ ಇಲ್ಲಿಗೆ ಭೇಟಿ ನೀಡಿದಾಗ (30–11–1889) ಸುಂದರವಾದ ಗಾಜಿನ ಮನೆ (glass house) ನಿರ್ಮಾಣಕ್ಕೆ ಅಸ್ತಿಭಾರ ಹಾಕಿದರು. ಇದು ಪೂರ್ಣಗೊಂಡ (1893) ನಂತರ ಒಂದು ವಸ್ತುಪ್ರದರ್ಶನದ ಹಾಲ್ ಆಗಿ ಉಪಯೋಗಕ್ಕೆ ದೊರೆಯಿತು. ಇಲ್ಲಿಯೇ ಅರೆವಾರ್ಷಿಕ ಫಲಪುಷ್ಪ ಪ್ರದರ್ಶನಗಳನ್ನು ಬಹಳ ಯಶಸ್ವಿಯಾಗಿ ನಡೆಸಲಾರಂಭಿಸಿದರು. ಇದರ ಮುಂದುಗಡೆ ನಿರ್ಮಿಸಿದ ಟೆರೇಸಿನಲ್ಲಿ ಒಂದು ಸುಂದರವಾದ ಕಾರಂಜಿಯನ್ನು ಇದೇ ಅವಧಿಯಲ್ಲಿ ಕಟ್ಟಲಾಯಿತು. ಮುಖ್ಯದ್ವಾರದ ಬಳಿಯಲ್ಲಿಯೂ ಒಂದು ದೊಡ್ಡ ಕಾರಂಜಿಯನ್ನು ಮುಂದೆ ನಿರ್ಮಿಸಿದರು. ರಾಯನ್ ಸರ್ಕಲ್‌ನಿಂದ ಕಲಾಸಿಪಾಳ್ಯಕ್ಕೆ ಹೋಗುವ ರಸ್ತೆಯನ್ನು 'ಆಲ್ಬರ್ಟ್ ವಿಕ್ಟರ್ ರೋಡ್' ಎಂಬ ಹೆಸರನ್ನೇ ಇಟ್ಟಿದ್ದಾರೆ.

ಬ್ಯಾಂಡ್ ಸ್ಟ್ಯಾಂಡ್ ಬಳಿಯಲ್ಲಿ ಗಾರ್ಡನ್ ಸೀಟ್ಸ್‌ಗಳನ್ನು ಲಾಲ್‌ಬಾಗಿಗೆ ವಿಹಾರಕ್ಕಾಗಿ ಬರುವವರಿಗಾಗಿ ಹಾಕಿಸಲಾಯಿತು. ಪ್ರತೀ ಸಂಜೆಯೂ ವಿದ್ಯಾರ್ಥಿಗಳು, ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಲಾಲ್‌ಬಾಗಿಗೆ ಭೇಟಿ ನೀಡಿ ಕಾಲ ಕಳೆಯುವ ಪರಿಪಾಠ ಜನಪ್ರಿಯವಾಯಿತು. ಇಲ್ಲೊಂದು ಚಿಕ್ಕ ವನ್ಯ ಮೃಗಗಳ ಸಂಗ್ರಹಾಲಯ (menagerie) ಕೂಡ ಇದ್ದು ಬಹಳವಾಗಿ ಚಿಕ್ಕ ಮಕ್ಕಳನ್ನು ಆಕರ್ಷಿಸುತ್ತಿತ್ತು. ದೇಶೀ ಮತ್ತು ವಿದೇಶೀ ಹಣ್ಣುಗಳನ್ನು ಇಲ್ಲಿ ಯಥೇಚ್ಛವಾಗಿ ಬೆಳೆಯುತ್ತಿದ್ದುದೊಂದು ವಿಶೇಷ.

ಪ್ರತೀ ಜುಲೈ–ಆಗಸ್ಟ್ ತಿಂಗಳಲ್ಲಿ ಮತ್ತು ಜನವರಿ–ಫೆಬ್ರವರಿ ತಿಂಗಳಲ್ಲಿ ಲಾಲ್‌ಬಾಗಿನ ಅರೆವಾರ್ಷಿಕ ಫಲಪುಷ್ಪ ಪ್ರದರ್ಶನಗಳು ನಡೆದು ಭಾರಿ ಸಂಖ್ಯೆಯ ಜನರನ್ನು ಆಕರ್ಷಿಸುತ್ತಿದ್ದವು. ಹೂವು, ಹಣ್ಣು ಮತ್ತು ತರಕಾರಿ ಕೃಷಿಯಲ್ಲಿ ತೊಡಗಿಸಿಕೊಂಡ ಯುರೋಪಿಯನ್ ಮತ್ತು ದೇಶೀ ತೋಟಗಾರರು ಉತ್ಸಾಹದಿಂದ ಅವುಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಲು ಪೈಪೋಟಿ ನಡೆಸುತ್ತಿದ್ದರು. ಬಂಗಾರ, ರಜತ ಮತ್ತು ಕಂಚಿನ ಪದಕಗಳನ್ನು ಶ್ರೇಷ್ಠ ಉತ್ಪನ್ನಗಳನ್ನು ಪ್ರದರ್ಶಿಸಿದವರಿಗೆ ನೀಡಲಾಗುತ್ತಿತ್ತು.

ಕೃಂಬೀಗಲ್ (Krumbegal) 1908ರಲ್ಲಿ ಲಾಲ್‌ಬಾಗಿನ ಸೂಪರಿಂಟೆಂಡೆಂಟ್ ಆಗಿ ನೇಮಕವಾದ ಮೇಲೆ ಲಾಲ್‌ಬಾಗನ್ನು ಕೇಂದ್ರವಾಗಿಟ್ಟುಕೊಂಡು ರಾಜ್ಯದ ಬೇರೆಬೇರೆ ಜಿಲ್ಲೆಗಳಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲು ಯತ್ನಿಸಿದನು. ತೋಟಗಾರಿಕೆಯಲ್ಲಿ ಮೈಸೂರು ಇಡೀ ಭಾರತದಲ್ಲಿಯೇ ಒಂದು ಪ್ರಮುಖ ಕೇಂದ್ರವಾಗಿ ಹೊರಹೊಮ್ಮಲು ಸಾಧ್ಯವೆಂದು ಅವನು ಭವಿಷ್ಯ ನುಡಿದಿದ್ದನು. ಅದು ಇಂದು ನಿಜವಾಗಿದೆ. ರಾಜ್ಯದ ಹವಾಮಾನವು ತೋಟಗಾರಿಕೆಗೆ ಸೂಕ್ತವಾಗಿರುವುದರಿಂದ ಹೂವು, ತರಕಾರಿ ಮತ್ತು ಹಣ್ಣುಗಳು ಮಾತ್ರವೇ ಅಲ್ಲದೆ ವಾಣಿಜ್ಯ ಬೆಳೆಗಳಿಗೂ ಆದ್ಯತೆ ನೀಡಬಹುದಾಗಿದೆ ಎಂದು ಕೃಂಬೀಗಲ್ ಒತ್ತಿ ಹೇಳಿದನು. ವಿದೇಶಿ ಅಲಂಕಾರಿಕ ಸಸ್ಯಗಳ ಪರಿಚಯ, ಪ್ರಸರಣ, ಹೊಂದಿಸಿಕೊಳ್ಳುವಿಕೆ ಮತ್ತು ಜನಪ್ರಿಯಗೊಳಿಸುವಿಕೆ ಇವನ ಅಧಿಕಾರವಧಿಯಲ್ಲಿ ಬಹಳವಾಗಿ ನಡೆಯಿತು. ಆರ್ಥಿಕವಾಗಿ ಮತ್ತು ಕೈಗಾರಿಕೆಗಳಿಗೆ ಮುಖ್ಯವೆನಿಸುವ ಅನೇಕ ಸಸ್ಯಗಳನ್ನು–ರಬ್ಬರ್, ನಾರು (fibrous plants), ಬಣ್ಣಗಳನ್ನು ನೀಡುವ ಸಸ್ಯ (indigo, etc), ಗೋಂದುಗಳು (gums), ಟೀ, ರಾಳ, ಇತ್ಯಾದಿ–ಕೃಂಬೀಗಲ್ ಹೆಚ್ಚು ಹೆಚ್ಚಾಗಿ ರಾಜ್ಯಾದ್ಯಾಂತ ಲಾಲ್‌ಬಾಗ್ ಮೂಲಕ ಜನಪ್ರಿಯಗೊಳಿಸಿದನು. ಇವನು ರಾಜ್ಯದ ಅನೇಕ ಕಡೆಗಳಲ್ಲಿ ಪಾರ್ಕುಗಳನ್ನು ಅಭಿವೃದ್ಧಿ ಪಡಿಸಲು ಕೂಡ ಶ್ರಮಿಸಿದನು. ಬೆಂಗಳೂರು ಅರಮನೆಯ ಪಾರ್ಕ್, ಕಬ್ಬನ್ ಪಾರ್ಕ್, ಮೈಸೂರು ಅರಮನೆ ಉದ್ಯಾನ, ಕರ್ಜನ್ ಪಾರ್ಕ್, ಮುಂತಾದ ಉದ್ಯಾನವನಗಳನ್ನು ಇವನೇ ಉತ್ತಮಪಡಿಸಿದನು.

ಲಾಲ್‌ಬಾಗಿಗೆ ಸಂಬಂಧಿಸಿದಂತೆ ಹೇಳಬೇಕಾದ ಇನ್ನೂ ಅನೇಕ ವಿಷಯಗಳಿವೆ: ಗಾಜಿನ ಮನೆ, ಕ್ಯಾಟಲಾಗ್ ಕಾರ್ಯ, ಸಸ್ಯಗಳ ರೇಖಾ ಚಿತ್ರಗಳ ರಚನೆ (botanical drawings), herbarium, carid specimen ಆರ್ಥಿಕ

ಸಸ್ಯಗಳ ಬ್ಯೂರೋ (Bureau of Economic botany), ಹಣ್ಣುಗಳು ಮತ್ತು ಬೀಜಗಳ ಅಧ್ಯಯನ (carpology), ಕೀಟ ಶಾಸ್ತ್ರ, ಪ್ರಧೂಮೀಕರಣ (fumigation), ತೋಟಗಾರಿಕಾ ತರಪೇತು, ಗ್ರಂಥಭಂಡಾರ, ಜಲ ಸಂಪನ್ಮೂಲಗಳು (water resources), ಫಲಪುಷ್ಪ ಪ್ರದರ್ಶನಗಳು (horticultural shows), ಕಾಡು ಮೃಗಗಳ ಸಂಗ್ರಹ (menagerie), ಪಕ್ಷೀಗೃಹ (aviary), ಬೀಜ ಪರೀಕ್ಷಾ ಪ್ರಯೋಗಾಲಯ (seed testing laboratory). ಇವುಗಳ ಚಟುವಟಿಕೆಗಳನ್ನು ಇಲ್ಲಿ ವಿವರಿಸಿಲ್ಲ.

65. ಬೆಂಗಳೂರಿನ ಹೋಟೆಲ್ ಉದ್ಯಮ – ಒಂದು ಅವಲೋಕನ

ಶ್ರೀಮತಿ ಪದ್ಮಾಶೇಷಾದ್ರಿ

"ಅತಿಥಿ ದೇವೋ... ಭವ" "ಅನ್ನದಾತ ಸುಖೀಭವ" ಎಂಬ ವೇದೋಕ್ತಿಯು ನಮ್ಮ ಪರಂಪರೆಯಲ್ಲಿ ಹಾಸುಹೊಕ್ಕಾಗಿದೆ. ನಮ್ಮ ದೇಶ, ರಾಜ್ಯದಲ್ಲಿ ಈ ಆತಿಥ್ಯ ಉದ್ಯಮ ರಾಜಮಹಾರಾಜರ ಕಾಲದಿಂದ ಆರಂಭವಾಗಿ ಇಂದು ಬೃಹದಾಕಾರವಾಗಿ ಬೆಳೆದು ನಿಂತಿದೆ. ನಮ್ಮ ರಾಜ್ಯದ ಹೋಟೆಲ್ ಮತ್ತು ಉಪಾಹಾರ ಮಂದಿರಗಳ ಬೆಳವಣಿಗೆಯ ಬಗ್ಗೆ ಒಂದು ಅವಲೋಕನ ಮಾಡುವ ಪ್ರಯತ್ನ ಈ ಲೇಖನದ ಉದ್ದೇಶ.

ಇದರ ಪರಿಕಲ್ಪನೆ ಅತಿಪ್ರಾಚೀನವಾದುದು. ಹಿಂದಿನ ಕಾಲದಲ್ಲಿ ಮನೆಗಳು, ಗೃಹಗಳೇ ಅನ್ನಛತ್ರಗಳಾಗಿದ್ದವು. ಅಜ್ಜಿಯರು ಯಾತ್ರಾರ್ಥಿಗಳ ಅತಿಥ್ಯದ ಹೊಣೆ ಹೊರುತ್ತಿದ್ದರು. ನಂತರದ ಕಾಲದಲ್ಲಿ ಅಡುಗೂಲಜ್ಜಿಯ ಮನೆಗಳ ಜೊತೆಗೆ ರಾಜಮಹಾರಾಜರ ಅನ್ನಛತ್ರಗಳು, ಧರ್ಮ ಛತ್ರಗಳು, ಅರವಟ್ಟಿಗೆ, ಧರ್ಮಶಾಲೆಗಳು ಪ್ರವಾಸಿಗರಿಗೆ ತಂಗುದಾಣವಾಗಿದ್ದವು. 19ನೆಯ ಶತಮಾನದಲ್ಲಿ ಆಂಗ್ಲ ಪ್ರವೃತ್ತಿಯ ಶೈಲಿಯ ಹೋಟೆಲ್‌ಗಳು ಪ್ರಾರಂಭವಾದವು. 1880ರಷ್ಟು ಹಿಂದೆಯೇ ಬೆಂಗಳೂರು ದಂಡುಪ್ರದೇಶದಲ್ಲಿ ಈಗ ತಾಜ್‌ಗುಂಪಿನ ಆಡಳಿತದಲ್ಲಿರುವ ವೆಸ್ಟ್ ಎಂಡ್ ಹೋಟೆಲ್ ಬ್ರಾನ್ಸನ್ ಎಂಬ ಐರೋಪ್ಯ ಮಹಿಳೆಯಿಂದ ಆರಂಭಗೊಂಡಿತು. ಆಗ ಅದರ ಹೆಸರು 'ಬ್ರಾನ್ಸನ್ ವೆಸ್ಟ್ ಎಂಡ್'.

ಇದೇ ಸಮಯದಲ್ಲಿ ದ್ವಾರಸಮುದ್ರ ಅಯ್ಯರ್‌ಗಳು, ಕೋಲಾರದ ಕಡೆಯಿಂದ ಅವನಿ ನರಸಿಂಹರಾವ್ ಬೆಂಗಳೂರಿನಲ್ಲಿ ತಿಂಡಿ ಹೋಟೆಲ್ ಆರಂಭಿಸಿದರು. ಆ ದಿನಗಳಲ್ಲಿ ರೈಲು ನಿಲ್ದಾಣಗಳಲ್ಲಿ ಶಾಖಾಹಾರಿ ಮತ್ತು ಮಾಂಸಾಹಾರಿ ಉಪಾಹಾರ ಮಂದಿರಗಳಿದ್ದವು. 1898ರಲ್ಲಿ ಕೆ.ಟಿ.ಅಪ್ಪಣ್ಣ ಎಂಬ ಯುವಕ ಚಿಕ್ಕಪೇಟೆಯಲ್ಲಿ ಕಾಫಿ ಕ್ಲಬ್ ಒಂದನ್ನು ಸ್ಥಾಪಿಸಿದರು. ಇದೇ ಸಮಯದಲ್ಲಿ ದಕ್ಷಿಣ ಕನ್ನಡದ (ಆಗ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು) ಜನ ಉದ್ಯೋಗ ನಿರ್ವಹಣೆಗಾಗಿ ವಲಸೆ ಬಂದು ಸ್ವಲ್ಪ ಬಂಡವಾಳದಿಂದ ಪಾತ್ರೆ, ಒಲೆ, ಸಟ್ಟುಗ, ಎಗ್ಗೆ, ಬಾಂಡಿಗಳೊಡನೆ ಸಣ್ಣ ಹೋಟೆಲ್‌ಗಳನ್ನು ಆರಂಭಿಸಿದರು. ಆಗಿನ ಕಾಲದಲ್ಲಿ ಮಡಿವಂತರ ದೃಷ್ಟಿಯಲ್ಲಿ ಕಾಫಿತಿಂಡಿಗಾಗಿ ಉಪಾಹಾರ ಮಂದಿರಕ್ಕೆ ಹೋದರೆ ಅಪಾಹಾರಮಾಡಿದಂತೆ ಎಂಬ ಭಾವನೆಯಿತ್ತು. ಅನೇಕ ಗ್ರಾಹಕರು ಹಿಂದುಗಡೆ ಬಾಗಿಲಿನಿಂದ ಮುಸುಕು ಹಾಕಿಕೊಂಡು ಹೋಟೆಲಿನಿಂದ ಹೊರಗೆ ಹೋಗುತ್ತಿದ್ದರು.

ಇದೇ ವೇಳೆಗೆ ಉಡುಪಿಯ ಸೀತಾರಾಮಾಚಾರ್ಯ ಮದ್ರಾಸ್ ಮತ್ತು ಮೈಸೂರುಗಳಲ್ಲಿ 'ದಾಸ ಪ್ರಕಾಶ್ ಗುಂಪಿನ' ಹೋಟೆಲುಗಳನ್ನು ಆರಂಭಿಸಿದರು. ಇದಕ್ಕೂ ಮುಂಚೆ ಇವರು ರೈಲ್ವೇ ನಿಲ್ದಾಣಗಳಲ್ಲಿ ಉಪಾಹಾರ ಮಂದಿರಗಳ ಗುತ್ತಿಗೆ ಪಡೆದು ಯಶಸ್ವಿಯಾಗಿ ನಿರ್ವಹಿಸಿದ್ದರು. 1905ರಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ರಾಜ್ಯದ ದಿವಾನರಾಗಿ Industrialise or perish "ಕೈಗಾರಿಕೆ ಆರಂಭಿಸಿ ಇಲ್ಲದಿದ್ದರೆ ಉಳಿಗಾಲವಿಲ್ಲ" ಎಂಬುದನ್ನು ಎಲ್ಲರಿಗೂ ಅರಿವು ಮಾಡಿಕೊಟ್ಟು ಉದ್ದಿಮೆ ಬೆಳವಣಿಗೆಗೆ ಪ್ರೇರಣೆ ನೀಡಿದರು.

1920ರಿಂದ 1940ರವರೆಗೆ ಒಂದು ಮನೆ, ಮಳಿಗೆಯನ್ನು ಬಾಡಿಗೆಗೆ ಪಡೆದು ರುಚಿರುಚಿಯಾದ ಅಡುಗೆ ಕಾಫಿ ತಿಂಡಿಗಳನ್ನು ಮಾಡಿ ಹಾಕಿ ಬಾಳೆ ಎಲೆ ಅಥವಾ ಮುತ್ತುಗದೆಲೆಯಲ್ಲಿ ಊಟ ಬಡಿಸುತ್ತಿದ್ದರು. ಸರ್. ಎಂ. ವಿ. ನೀಡಿದ ಪ್ರೇರಣೆಯಿಂದ ಹೋಟೆಲ್ ಉದ್ಯಮದ ಪ್ರಾಮುಖ್ಯತೆ, ಉಪಯುಕ್ತತೆ ತಿಳಿದುಕೊಂಡು ಕೆ. ಎ.

ಅಪ್ಪಣ್ಣನವರು ಇಂದಿನ ಆನಂದರಾವ್ ವೃತ್ತದ ಬಳಿ 'ಮಾಡರ್ನ್ ಹಿಂದೂ ಹೋಟೆಲ್' ಎಂಬ ಲಾಡ್ಜಿಂಗ್ ಮತ್ತು ಉಪಾಹಾರ ಮಂದಿರ ಆರಂಭಿಸಿದರು. (1900ರಲ್ಲಿ)

1905ರಲ್ಲಿ ಚಿಕ್ಕಪೇಟೆಯಲ್ಲಿ ಉಡುಪಿ ಹೋಟೆಲ್, ಬಾಂಬೆ ಆನಂದ್ ಭವನ, ಬಳೇಪೇಟೆಯ ಉಡುಪಿ ಕೃಷ್ಣಭವನ ಮತ್ತು ಮಲಬಾರ್ ಹೋಟೆಲ್ ಆರಂಭವಾದವು. ಕೋಲಾರ ಜಿಲ್ಲೆಯ ದೇವರಾಯ ಸಮುದ್ರಂಗೆ ಸೇರಿದ್ದ ಅಯ್ಯರ್ ಪಂಗಡದವರು ಅಲ್ಲಲ್ಲಿ ಚಿಕ್ಕಪ್ರಮಾಣದ ಹೋಟೆಲ್‌ಗಳನ್ನು ನಡೆಸುತ್ತಿದ್ದರು. ಅದರ ಪೈಕಿ ವೈ. ವಿ. ಸುಬ್ರಹ್ಮಣ್ಯರವರ ಸೆಂಟ್ರಲ್ ಟಿಫನ್ ರೂಮ್, ರಾಮರಾಯರ ಬೆಣ್ಣೆದೋಸೆ ಹೋಟೆಲ್ ಮುಂತಾದವು ಬೆಂಗಳೂರಿನ ರಸಿಕ ನಾಗರೀಕರಿಗೆ ಆಕರ್ಷಣೆಯ ಕೇಂದ್ರಗಳು.

ಆ ದಿನಗಳಲ್ಲಿ ಹೋಟೆಲ್ ಉದ್ಯಮಕ್ಕೆ ಹೆಚ್ಚು ಮೊತ್ತದ ಹಣವನ್ನು ಒಮ್ಮೆಲೇ ತೊಡಗಿಸಬೇಕಾಗಿರಲಿಲ್ಲ. ಉತ್ತಮ ದರ್ಜೆಯ ತಾಜಾತರಕಾರಿಗಳನ್ನು ಬೆಳೆಗಾರರು ಬೆಳಿಗ್ಗೆ ಹೋಟಲ್‌ಗೆ ತಂದುಹಾಕಿ ವಾರಾಂತ್ಯದಲ್ಲಿ ಹಣವನ್ನು ಸ್ವೀಕರಿಸುತ್ತಿದ್ದರು. ಹಾಲಿನ ಉತ್ಪಾದನೆ ಅತ್ಯುತ್ತಮವಾಗಿತ್ತು. ಗೌಳಿಗರಲ್ಲಿ ಪೈಪೋಟಿಯಾಗಿ ಹಾಲನ್ನು ಹೋಟೆಲಿಗೆ ತಂದುಹಾಕಿ ವಾರಕ್ಕೊಮ್ಮೆ ಹಣ ಪಡೆಯುತ್ತಾ ತಮ್ಮ ವ್ಯಾಪಾರ ವೃದ್ಧಿಸಿಕೊಳ್ಳುತ್ತಿದ್ದರು. ದಿನಸಿ ಚೀಟಿಯನ್ನು ಮಂಡೀಪೇಟೆಗೆ ಕಳಿಸಿದರೆ ಅವರೇ ಕೈಗಾಡಿಗಳಲ್ಲಿ ತಂದು ಹಾಕಿ ಹದಿನೈದು ದಿನಗಳ ನಂತರ ಹಣವನ್ನು ಪಡೆಯುತ್ತಿದ್ದರು.

ಇವೆಲ್ಲವೂ ಉದ್ದಿಮೆದಾರರಿಗೆ ಪ್ರೇರಣೆ ನೀಡುತ್ತಿದ್ದವು. ಅದೇ ಸಮಯದಲ್ಲಿ ಸಿ. ಈ. ಶಾಸ್ತ್ರಿಗಳು ಎಲ್ಲಾ ಸಮಲತ್ತುಗಳನ್ನು ಒಳಗೊಂಡ ಸ್ವೀಟ್ ಮೀಟ್ ಸ್ಟಾಲ್, ಊಟ, ವಸತಿ, ಫಲಹಾರ ಎಲ್ಲವನ್ನೂ ಒಂದೇ ಸೂರಿನಡಿಯಲ್ಲಿ ನೀಡುವಂತೆ ಅಣಿಗೊಳಿಸಲ್ಪಟ್ಟ ಶಾಸ್ತ್ರೀಸ್ ಹೋಟೆಲ್ ಅಂಡ್ ರೆಸ್ಟೋರೆಂಟ್ ಆರಂಭಿಸಿದರು. ಪ್ರಚಂಡ ಪ್ರಚಾರದಿಂದ ಇದರ ಪ್ರಾರಂಭೋತ್ಸವವನ್ನು ನ್ಯಾಯಾಧೀಶರಾಗಿದ್ದ ಚಂದ್ರಶೇಖರವರು ನೆರವೇರಿಸಿದರು; ಬೆಂಗಳೂರಿನ ನಾಗರತ್ನಮ್ಮನವರ ಸಂಗೀತ ಆ ಸಮಾರಂಭಕ್ಕೆ ಮೆರಗು ನೀಡಿತ್ತು.

ಇದೇ ಸಮಯದಲ್ಲಿ ಹೋಟೆಲ್ ಉದ್ಯಮಕ್ಕೆ ಒಂದು ಸಂಘಟನೆ ಬೇಕೆಂದು ಮನಗಂಡು ಈ ಉದ್ಯಮದಲ್ಲಿ ಹಿರಿಯರಾಗಿದ್ದ ಬಿ. ಟಿ. ರಾಮಯ್ಯನವರು ಸ್ಥಾಪಕ ಅಧ್ಯಕ್ಷರಾಗಿ 'ಬೃಹತ್ ಬೆಂಗಳೂರು ಹೋಟೆಲ್ ಸಂಘ'ವನ್ನು 1936ರಲ್ಲಿ ಕೆ. ಟಿ. ಅಪ್ಪಣ್ಣ ಅಧ್ಯಕ್ಷರಾಗಿ, ಸಿ. ಈ. ಶಾಸ್ತ್ರಿಯವರು ಖಜಾಂಚಿಗಳಾಗಿ ಆರಂಭಿಸಿದರು. ಆ ಕಾಲದಲ್ಲೇ ಮಾರಾಟ ತೆರಿಗೆಯನ್ನು ಹೆಚ್ಚಿಸಿದಾಗ ಸಂಘದ ಮೂಲಕ ಪ್ರತಿಭಟಿಸಿದರು.

ನಂತರದ ದಿನಗಳು ಹೋಟೆಲ್ ಉದ್ಯಮಕ್ಕೆ ಬಹಳ ಅನುಕೂಲವಾಗಿದ್ದ ದಿನಗಳು. ಅನೇಕ ಐರೋಪ್ಯ ಮಾದರಿ ಹೋಟೆಲ್‌ಗಳು ತೆರೆಯಲ್ಪಟ್ಟವು ದಕ್ಷಿಣ ಕನ್ನಡದ ಜನ ಹೆಚ್ಚುಹೆಚ್ಚಾಗಿ ಬೆಂಗಳೂರಿಗೆ ಬಂದು ಇನ್ನೂ ಅನೇಕ ಹೋಟೆಲ್‌ಗಳನ್ನು ಆರಂಭಿಸಿದರು. ಮಿನರ್ವ ವೃತ್ತದ ಬಳಿಯ ಎಂ.ಟಿ.ಆರ್, ಗಾಂಧಿ ಬಜಾರಿನ ವಿದ್ಯಾರ್ಥಿ ಭವನ ಜನರಿಗೆ ಆಹಾರ ಊಟಗಳ ಸರಬರಾಜು ಮಾಡುವುದರಲ್ಲಿ ತೊಡಗಿ ಈಗಲೂ ಜನಪ್ರಿಯವಾಗಿವೆ.

ಮೊದಲನೆಯದಾಗಿ ರುಚಿರುಚಿಕರವಾದ ತಿಂಡಿತಿನಿಸುಗಳು, ಜನರಿಗೆ ಆಹ್ಲಾದಕರವಾದ ವಾತಾವರಣ ಮತ್ತು ಆರಾಮದಾಯಕ ವಸತಿ ಗೃಹಗಳು ಉದ್ದಿಮೆಯಲ್ಲಿ ಹಾಸುಹೊಕ್ಕಾಗಿವೆ. ದಾಕ್ಷಿಣಾತ್ಯ ತಿಂಡಿಗಳ ಜೊತೆಗೆ ಉತ್ತರದೇಶದ ತಿಂಡಿಗಳು 1960ರಿಂದ ಆರಂಭವಾದವು. ಇದರೊಡನೆ ಚೈನೀಸ್, ಕಾಂಟಿನೆಂಟಲ್, ಮೆಕ್ಸಿಕನ್, ಇಟ್ಯಾಲಿಯನ್, ಬೇಕರಿ ತಿಂಡಿಗಳು, ಬೇಲ್‌ಪೂರಿ ಚಾಟ್ಸ್‌ಗಳನ್ನು ನೀಡುವ ಹೋಟೆಲ್‌ಗಳು ಆರಂಭಗೊಂಡವು. ತಂದೂರಿ ರೋಟಿ ಇತ್ಯಾದಿ ತಿಂಡಿಗಳು, ಸಸ್ಯಾಹಾರಿ, ಮಾಂಸಾಹಾರಿ ವ್ಯಂಜನಗಳು, ಆಂಧ್ರ, ಕೇರಳದ ಊಟ ತಿಂಡಿಗಳು (ಮೀನು) ಜನರಿಗೆ ಅವರ ಜಿಹ್ವಾಚಾಪಲ್ಯ ತೀರಿಸಲು ಆರಂಭಗೊಂಡವು.

1970ರಲ್ಲಿ ಸರಕಾರ ಪ್ರವಾಸೋದ್ಯಮ ಒಂದು ಮುಖ್ಯವಾದ ಕೈಗಾರಿಕೆ ಎಂದು ಘೋಷಿಸಿ ಇದರ ಅಭಿವೃದ್ಧಿಗೆ ಬೇಕಾದ ಹೆಚ್ಚಿನ ಉತ್ತೇಜನಗಳನ್ನು ನೀಡಲು ಮುಂದಾಯಿತು. ನಕ್ಷತ್ರಗಳ ಹೋಟೆಲ್‌ಗಳನ್ನು ತೆರೆದು ಹೆಚ್ಚು ಹೆಚ್ಚು ಬಂಡವಾಳವನ್ನು ತೊಡಗಿಸಲು ಬೇಕಾದ ಸ್ನೇಹಮಯ ವಾತಾವರಣವನ್ನು ನಿರ್ಮಾಣಮಾಡಿತು. ನಗರದ ಜನರ ಜೀವನಶೈಲಿಯಲ್ಲಿ ಬದಲಾವಣೆ ಬಂದಿತು. ಕೆಲಸದ ಒತ್ತಡ, ಒಟ್ಟು ಕುಟುಂಬಗಳು ಕಡಿಮೆಯಾಗಿ, ಹೋಟೆಲಿನ ಮೇಲೆ ಅವಲಂಬನೆ ಹೆಚ್ಚಾಯಿತು. ಆಗ ಬಂದಿದ್ದು ಹವಾನಿಯಂತ್ರಿತ ಕೊಠಡಿಗಳು, ಪಾರ್ಟಿ ಹಾಲ್‌ಗಳು, ಸಮ್ಮೇಳನಗಳನ್ನು ಸಮಾರಂಭಗಳನ್ನು ನಡೆಸುವಂತಹ ಹೋಟೆಲ್‌ಗಳು. ಜನರ ನಾಡಿಮಿಡಿತವನ್ನು ಆಧರಿಸಿ ನವ್ಯ, ದಿವ್ಯ, ಭವ್ಯ ಹೋಟೆಲ್‌ಗಳು ಅಭಿವೃದ್ಧಿಗೊಂಡವು.

1990ರಿಂದ ದೇಶದಲ್ಲಿ ಆಗಲಾರಂಭಿಸಿದ ಆರ್ಥಿಕ ರಂಗದಲ್ಲಿ ಬದಲಾವಣೆ, ಮುಕ್ತ ಮಾರುಕಟ್ಟೆ ಇವೆಲ್ಲಾ ವಿದೇಶಿ ಬಂಡವಾಳ ಹೂಡಿಕೆಗೆ ಪ್ರೇರಣೆ ನೀಡಿದವು. ಇದರ ಫಲವೇ ನಾವು ಇಂದು ನೋಡುತ್ತಿರುವ ಮ್ಯಾರಿಯಟ್, ಶಿವನಸಮುದ್ರ, ರಾಸಿಮಿ ಗುಂಪು, ರ‍್ಯಾಡಿಸನ್ ಮುಂತಾದ ಹೋಟೆಲ್ ಸರಪಳಿಗಳು. ಬೆಂಗಳೂರಿನಲ್ಲಿ ನಮ್ಮ ದೇಶದ ಅತಿಗಣ್ಯ ಹೋಟೆಲ್ ಸಮೂಹಗಳಾದ ಒಬೆರಾಯ್, ಐ.ಟಿ.ಸಿ, ಹಾಲೀಡೇ ಒ ಇನ್, ತಾಜ್‌ಗುಂಪುಗಳು ಅತಿ ಆಕರ್ಷಣೆಗಳಿಂದ ಕೂಡಿದ ಹೋಟೆಲ್‌ಗಳನ್ನು ಆರಂಭಿಸಿದರು.

ಸ್ವರ್ಗಸುಖವನ್ನು ನೀಡುವಂತಹ ಒಳಾಲಂಕಾರ, ಪೀಠೋಪಕರಣಗಳ ವ್ಯವಸ್ಥೆ, ವೈವಿಧ್ಯಮಯ ಸ್ವಾದರದಿಂದ ಕೂಡಿದ ಪದಾರ್ಥಗಳು, ಮಸಾಜ್ ಪಾರ್ಲರುಗಳು, ಈಜು ಕೊಳಗಳು, ಇಂದಿನ ಸ್ಟಾರ್ ಹೋಟೆಲುಗಳಲ್ಲಿರುತ್ತವೆ. ಅರಮನೆಗಳು ಹೋಟೆಲ್‌ಗಳಾಗಿ ಪರಿವರ್ತನೆಗೊಂಡಿವೆ. ವಿಶ್ವದ ಅಗ್ರಮಾನ್ಯ ಹೋಟೆಲ್‌ಗಳ ಸರಪಳಿಗಳು ಇಲ್ಲಿ ತಮ್ಮ ಹೋಟೆಲನ್ನು ಆರಂಭಿಸಿವೆ. ಇದಕ್ಕೆ ತಕ್ಕಂತೆ ಸ್ಪರ್ಧೆ. ಸರಕಾರದ ತೆರಿಗೆಗಳು ಈ ಉದ್ದಿಮೆಯ ಅಭಿವೃದ್ಧಿಗೆ ಸ್ವಲ್ಪ ತಡೆಯನ್ನು ನೀಡುತ್ತಿವೆ. ಸರಕಾರ ಈ ಉದ್ದಿಮೆಯನ್ನು ಪ್ರವಾಸೋದ್ಯಮದ ಅತಿಮುಖ್ಯ ಅಂಗ ಎಂದು ಪರಿಗಣಿಸಿ ತಮ್ಮ ವಿದೇಶಿ ಹಣ ಹೆಚ್ಚಾಗ ಬೇಕೆಂದರೆ, ಇದರ ಬಗ್ಗೆ ಇನ್ನು ಹೆಚ್ಚಿನ ಗಮನ ನೀಡಿ ಸವಲತ್ತುಗಳನ್ನು ಸೌಲಭ್ಯಗಳನ್ನು ನೀಡಿ ಪ್ರೋತ್ಸಾಹಿಸಬೇಕಾದ ಪರಿಸ್ಥಿತಿಯುಂಟಾಗಿದೆ. ಈಚೀಚೆಗೇನೇ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ತನ್ನ 75ನೇಯ ವರ್ಷದ ಅಮೃತ ಮಹೋತ್ಸವವನ್ನು ಅತಿ ವಿಜೃಂಭಣೆಯಿಂದ ಆಚರಿಸಿತು. ಹೋಟೆಲುಗಳೂ ಇಂದು ಲಕ್ಷಾಂತರ ಜನರಿಗೆ ನೌಕರಿಯನ್ನು ಒದಗಿಸಿವೆ. ನಮ್ಮ ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ನೀಡುತ್ತಿರುವುದರ ಜೊತೆಗೆ ಜನ ಸಾಮಾನ್ಯರ ಆರೋಗ್ಯದ ಬಗ್ಗೆ ಕಾಳಜಿಯನ್ನು ಹೊಂದಿವೆ.

ಅತಿಥಿಯನ್ನು ದೇವರಾಗಿ ಪರಿಗಣಿಸಿ ಸಾರ್ಥಕತೆಯ ಜೀವನದ ರಂಗದಲ್ಲಿ ಮಹತ್ವದ ಪಾತ್ರವಹಿಸುತ್ತಿರುವ ಈ ಹೋಟೆಲ್ ಉದ್ಯಮ ಯುವಕರ ಕನಸನ್ನು ನನಸುಮಾಡುವ ಲಾಭಕರವಾದ ಉದ್ಯಮವಾಗಿ ಇನ್ನೂ ಬೆಳೆದು ಸಾಧಿಸಲು ಅವಕಾಶಗಳಿವೆ.

66. ಬೆಂಗಳೂರು ನಾಗರತ್ನಮ್ಮವರು ಕಲೆ ಮತ್ತು ಸಾಮಾಜಿಕ ಅಸ್ತಿತ್ವದ ಛಾತಿಯ ಸಂಕೇತ

(1ನೇ ನವೆಂಬರ್ 1878–19ನೇ ಮೇ 1952)

ಡಾ. ಬಿ. ಲೀಲಾ

19–20ನೆಯ ಶತಮಾನದಲ್ಲಿ ಸ್ತ್ರೀಯರ ಪ್ರಗತಿಯನ್ನು ವೀಕ್ಷಿಸಿದಾಗ, ಭಾರತದ ಮಹಿಳೆಯು ಸಮಾಜದಲ್ಲಿ ತನ್ನ ದೃಢವಾದ ಸ್ಥಾನವನ್ನು ತನ್ನ ಭದ್ರತೆಗಾಗಿಯೂ ಮತ್ತು ಸಮಾನತೆಗಾಗಿಯೂ ಹೊಡೆದಾಡಿ ಗುರುತಿಸಿಕೊಂಡಿರುವುದನ್ನು ಕಾಣುತ್ತೇವೆ. ಕರ್ನಾಟಕದಲ್ಲಿ ಸಾಮಾಜಿಕ ಪರಿವರ್ತನೆಯನ್ನು ವೀಕ್ಷಿಸಿದಾಗ 20ನೇ ಶತಮಾನದ ಪೂರ್ವಾರ್ಧದಲ್ಲಿ ಜಾಗೃತಿಗೊಂಡಂತೆ ಕಾಣುತ್ತದೆ. 20ನೇ ಶತಮಾನದಲ್ಲಿ ಸಮಾಜ ಸುಧಾರಕರೆಂದು ಕಾಣುವ ಹಲವು ಮುಖಂಡರು (ಸಾಮಾಜಿಕ ಮುಖಂಡರು) ಸಾಮಾಜಿಕ ಪ್ರಶ್ನೆಗಳನ್ನು ಕೇವಲವಾಗಿ ನೋಡಿದ್ದುಂಟು.

ಮೈಸೂರಿನ ಮಟ್ಟಿಗೆ ಹೇಳುವುದಾದರೆ ಹಲವಾರು ಸಂಘ ಸಂಸ್ಥೆಗಳು ಮತ್ತು ಆಂಗ್ಲ ವಿದ್ಯಾಭ್ಯಾಸ ಹೊಂದಿದ ಹಲವು ಮಹಿಳೆಯರು, ಸ್ತ್ರೀ ಏಳ್ಗೆಗೆ ಶ್ರಮಿಸಿದ ಉದಾಹರಣೆ ಕೊಡಬಹುದು.[1] ಆದರೆ ಇವೆಲ್ಲಾ ಕುಲೀನರಲ್ಲಾದ ಪ್ರಯತ್ನಗಳು. ಆದರೆ ದೇವದಾಸಿ ಸಮುದಾಯದಲ್ಲಿ ಜನ್ಮತಾಳಿ ತನ್ನ ಜೀವನವನ್ನು ರೂಪಿಸಿಕೊಂಡು ಮತ್ತು ಸ್ವಜನರ ಬೆಂಬಲವಿಲ್ಲದೆ ಏಕಾಂಗಿಯಾಗಿ ಪುರುಷ ಪ್ರಧಾನವಾದ ಸಮಾಜದಲ್ಲಿ ಹೊಡೆದಾಡಿ ಸಮಾಜ ಸುಧಾರಕರನ್ನು ಎದುರಿಸಿ ವೇದಿಕೆಯಲ್ಲಿ ಸಮನ್ವಯತೆಯನ್ನು ತಂದುಕೊಟ್ಟು ಕಲೆಯ ಮರ್ಯಾದೆಯನ್ನು ಏರಿಸಿದ ತ್ಯಾಗಿ ಸೇವಾಸಕ್ತೆ ಬೆಂಗಳೂರು ನಾಗರತ್ನಮ್ಮ ಸ್ತ್ರೀ ಸಮುದಾಯಕ್ಕೆ ಮಾನ್ಯರು.

ಬೆಂಗಳೂರು ನಾಗರತ್ನಮ್ಮನವರ ಜೀವನವನ್ನು ಗಮನಿಸಿದಾಗ ನಮಗೆ ಕಂಡುಬರುವುದು ಅವರ ಸಾಮಾಜಿಕ ಕಳಕಳಿ, ಸ್ಥೈರ್ಯ ಮತ್ತು ಅಸಾಧಾರಣ ಬುದ್ಧಿ ಮತ್ತೆ ದಿಟ್ಟ ನಿಲುವು. ಮತ್ತೂ ಮುಂದಕ್ಕೆ ಹೋದರೆ ಪುರುಷ ಪ್ರಧಾನವಾದ ಸಮಾಜದಲ್ಲಿ ಅವರ ಪ್ರಯೋಗ, ಅದರಿಂದ ಉಂಟಾದ ಕಷ್ಟ ನಷ್ಟಗಳು ಮತ್ತು ಅವರ ಸತ್ಯ ಸಮರ್ಥನೆ.

ನಾಗರತ್ನಮ್ಮನವರನ್ನು ಸ್ವತಃ ಬಲ್ಲ ಮತ್ತು ಅವರ ಸಂಗೀತವನ್ನು ಕೇಳಿರುವ ಡಿ.ವಿ. ಗುಂಡಪ್ಪನವರು 'ನಾಗರತ್ನಮ್ಮ ಕಲಾವಿದೆಯಾಗಿ ಹೆಚ್ಚಿನ ಸಾಧನೆ ಮಾಡಬಹುದೆಂದು ಊಹಿಸಿ ಮಗಳನ್ನು ತನ್ನ ತಮ್ಮ ವೆಂಕಟಸ್ವಾಮಿಯಪ್ಪನವರ ಹತ್ತಿರ ಬಿಟ್ಟು, ಸಂಗೀತ, ನೃತ್ಯ ಕಲಿಸಲು ಏರ್ಪಾಡು ಮಾಡಿದಳು. ಆಗ ನಾಗರತ್ನಮ್ಮನಿಗೆ 12–13 ವಯಸ್ಸು. ನಾಗರತ್ನಮ್ಮನನ್ನು ಸೋದರಿಯಂತೆ ಕಂಡ ವೆಂಕಟಸ್ವಾಮಿಯಪ್ಪ ತಮಿಳು ಭಾಷೆಯನ್ನು ಕಲಿಸಲು ಒಬ್ಬ ಗುರುಗಳನ್ನು ಏರ್ಪಾಡು ಮಾಡಿದರು. ಹೀಗೆ, ಚಿಕ್ಕ ವಯಸ್ಸಿನಲ್ಲಿಯೇ ನಾಗರತ್ನಮ್ಮ ಕನ್ನಡ, ಇಂಗ್ಲೀಷ್ ಸಂಸ್ಕೃತಿ, ತೆಲುಗು ಭಾಷೆಯನ್ನು ಕಲಿತಿದ್ದರು. ಇದಲ್ಲದೆ ಸಂಗೀತ, ಶಾಸ್ತ್ರ, ಭಾಷೆಗಳ ಮೇಲೆ ಹಿಡಿತವನ್ನೂ ಚಿಕ್ಕ ವಯಸ್ಸಿನಲ್ಲಿಯೇ ಸಾಧಿಸಿದ್ದರು. 1903ರಲ್ಲಿ ನಾಗರತ್ಮಮ್ಮ ಮದ್ರಾಸಿಗೆ ತೆರಳಿದರು. ಸಾಕಷ್ಟು ಸಂಗೀತದಲ್ಲಿ ಪರಿಣಿತಿ ಹೊಂದಿದ್ದ ನಾಗರತ್ನಮ್ಮ ತಮ್ಮ ವಿದ್ಯಾಭ್ಯಾಸವನ್ನು ಬೂಬಿ ಶ್ರೀನಿವಾಸ ಐಯಂಗಾರ್ ಹತ್ತಿರ ಮುಂದುವರಿಸಿದರು.

ನಾಗರತ್ನಮ್ಮನವರ ಜೀವನವನ್ನು ನಾವು ಮೂರು ಘಟ್ಟಗಳಲ್ಲಿ ಗುರುತಿಸಬಹುದು. 1910ರಲ್ಲಿ ನಾಗರತ್ನಮ್ಮ ಆಂಧ್ರ ಕವಿಯಿತ್ರಿ ಮುದ್ದು ಪಳನಿ ಬರೆದ 'ರಾಧಿಕ ಸಾಂತವನಮ್'[3] ಎಂಬ 18ನೇ ಶತಮಾನದ ಕವಿತೆಯನ್ನು

ಪ್ರಕಟಿಸಿದರು. ಈ ಪ್ರಕಟಣೆಯನ್ನು ಹೊರತರಲು ನಾಗರತ್ನಮ್ಮನವರಿಗೆ ಹಲವು ನಿಶ್ಚಿತವಾದ ಕಾರಣಗಳಿದ್ದವು. ಇದನ್ನು ವಿವರಿಸಬೇಕಾದರೆ ತಂಜಾವೂರಿನ ನೌಕರ ಕಾಲವನ್ನು ಪರಿಚಯಿಸಬೇಕು. ವಿಜಯನಗರದ ಪತನದ ನಂತರ ತಂಜಾವೂರಿನ ಸಾಕಷ್ಟು ಕಲಾವಿದರನ್ನು ಪೋಷಿಸಿ ಆಶ್ರಯವನ್ನು ಕಲ್ಪಿಸಿ, ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತವನ್ನು ಪೋಷಿಸಿದರು ತಂಜಾವೂರಿನ ನಾಯಕರು. ಕಲೆಗಳನ್ನಲ್ಲದೆ ಹಸ್ತಪ್ರತಿಗಳ ಜತನವಾಗಿವೆ. ನಾಯಕರ ನಂತರ ಬಂದ ತಂಜಾವೂರಿನ ಮರಾಠರ ಆಳ್ವಿಕೆಯಲ್ಲೂ ಕಲೆಯ ಬಹುಮುಖ ಪ್ರಗತಿಯನ್ನು ಕಾಣುತ್ತೇವೆ. ತುಲಜನು ವ್ಯಾಸರಾಯರು ತಮ್ಮ ಗುರುವೆಂದು ತಿಳಿಸಿರುವನು. ಇವನ ಕಾಲದಲ್ಲಿ ರಚಿಸಿದ ಸಂಗೀತ ಸಾರಾಮೃತ ಒಂದು ಉತ್ತಮ ಕೃತಿ. ಏಕೋಜಿ (1736–39) ಸಂಗೀತ ಸಾಹಿತ್ಯ ಮತ್ತು ನೃತ್ಯವನ್ನು ಪ್ರೋತ್ಸಾಹಿಸಿದ್ದು ತಿಳಿದಿದೆ. ಪ್ರತಾಪಸಿಂಹ (1739–1763) ತುಕೋಜಿಯ ಮಗ ಸ್ವತಃ ಕವಿ ಮತ್ತು ಕಲಾವಿದ. ಇವನ ಆಸ್ಥಾನದಲ್ಲಿ ಹಲವಾರು ಕಲಾವಿದರು ಆಶ್ರಯ ಹೊಂದಿದ್ದರು. ಇವನ ಕಾಲದ ಕವಿಗಳಾದ ವೀರಭದ್ರಯ್ಯ ಮತ್ತು ಮಾತೃ ಭೂತಕವಿ ಮುಖ್ಯರು. ಸಂಗೀತ ಸರ್ವಾರ್ಥಸಾರ ಸಂಗ್ರಹದಲ್ಲಿ ಪ್ರತಾಪಸಿಂಹನ ಬಗ್ಗೆ ರಚಿಸಿದ ರಚನೆ ಇದೆ. ಸ್ವತಃ ಕವಿಯಾದ ಪ್ರತಾಪಸಿಂಹ ಮತ್ತೊಬ್ಬ ಕಲಾವಿದೆಯನ್ನು ಗೌರವಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಮುದ್ದುಪಳಿನಿ ಆ ಕಾಲದ ರಾಜನರ್ತಕಿ ಮತ್ತು ತೆಲುಗು ಕಾವ್ಯ ಪಂಡಿತೆ. ಮುದ್ದುಪಳಿನಿಯ ಮತ್ತೊಂದು ಕಾವ್ಯ 'ಸಪ್ತಪಾದಲು'.

19–20ನೆಯ ಶತಮಾನದಲ್ಲಿ ಮುದ್ದುಪಳಿನಿ ಕೃತಿ 'ರಾಧಿಕಾ ಸಾಂತವನಮ್' ಅತ್ಯಂತ ವಿಮರ್ಶೆಗೆ ಒಳಪಟ್ಟಿತು. ನೃತ್ಯಗಾರ್ತಿಯರು ಮತ್ತು ದೇವದಾಸಿಯರು ಅದರಲ್ಲೂ ಆಸ್ಥಾನಕ್ಕೆ ಸೇರಿದವರನ್ನು ಜನರು ಗೌರವದಿಂದ ಕಾಣುತ್ತಿದ್ದರು. ತೆಲುಗು ದೇಶದಲ್ಲಿ ಸಾಮಾಜಿಕ ಕ್ರಾಂತಿ ಇತ್ತಾದರೂ 1910ರಲ್ಲಿಪ್ರಕಟವಾದ 'ರಾಧಿಕಾಸಾಂತವನಮ್' ಮೂಲಕ ಅದು ಸ್ಫೋಟಿಸಿತು. 'ರಾಧಿಕಾಸಾಂತವನಮ್' ಶೃಂಗಾರ ಪ್ರಧಾನವಾದ ಸುಮಾರು 500 ಪುಟದ ಕವಿತೆ. ಇದರಲ್ಲಿ ರಾಧೆ, ಕೃಷ್ಣನ ಅಗಲಿಕೆಯ ನೋವು ಮತ್ತು ರಾಧೆ ಸಾಕಿದ ಇಲ ಎಂಬ ಕುಮಾರಿಯನ್ನು ಕೊಟ್ಟು ಕೃಷ್ಣನಿಗೆ ವಿವಾಹ ಮತ್ತು ರಾಧೆ ಇಲಾಗೆ ಮದುವೆ ಮಾಡಿಕೊಟ್ಟ ಮೇಲೂ ಕೃಷ್ಣನ ಹಂಬಲ ಬಿಡಲಾರಳು. ಮತ್ತು ಕೃಷ್ಣ–ರಾಧೆ ಸಾಂತ್ವನ. ಇದು ಒಟ್ಟು ಕಥೆ. ಇದು ರಾಧೆ–ಕೃಷ್ಣರ ಪ್ರೀತಿಯನ್ನು ಎತ್ತಿಹಿಡಿಯುವ ಶೃಂಗಾರ ಪ್ರಧಾನವಾದ ಕಾವ್ಯ. ಇದು ಒಬ್ಬ ಮಹಿಳೆಯ ಕೃತಿ ಆದ್ದರಿಂದ ಹೆಚ್ಚು ವಿವಾದಾಸ್ಪದವಾಯಿತು. ಆಂಧ್ರದ ವಿವೇಕವರ್ದಿನಿ ಪತ್ರಿಕೆ ಸಾಮಾಜಿಕ ಪ್ರಶ್ನೆಗೆ ಹೆಚ್ಚು ಒತ್ತು ಕೊಡುತ್ತಿತ್ತು. 1887 'ರಾಧಿಕಸಾಂತವನಮ್' ಮೊದಲನೆ ಮುದ್ರಣ ಕಂಡಿತು. 1907 ಮರುಮುದ್ರಣ ಕಂಡಿತು. ನಾಗರತ್ನಮ್ಮನವರಿಗೆ ರಾಧಿಕಾ ಸಾಂತವನಮ್ ಒಂದು ಪ್ರಬಂಧದಲ್ಲಿ ಕಂಡುಬಂದು, ಅದನ್ನು ಓದಿದಾಗ, ಮುದ್ರಣ ದೋಷ ಕಂಡುಬಂದಿತು. ಮತ್ತು ಪರಿಷ್ಕರಿಸಿದ ಆವೃತ್ತಿಯನ್ನು ನೋಡಿದಾಗ ಹಲವಾರು ಅಸಾಮಂಜಸ್ಯ ಕಂಡುಬಂತು. 'ರಾಧಿಕಾಸಾಂತವನಮ್' ಮೇಲೆ ನಾಗರತ್ಮಮ್ಮನವರದು ಅಸಾಧಾರಣ ಅಭಿಮಾನ ಮತ್ತು ಹೊಸ ಮುದ್ರಣದಲ್ಲಿ ತಪ್ಪುಗಳನ್ನು ಸರಿಪಡಿಸಬಹುದೆಂಬ ನಂಬಿಕೆ ಅದೂ ಅಲ್ಲದೆ ಪುಸ್ತಕವನ್ನು ಬರೆದವಳು ಮಹಿಳೆ ಮತ್ತು ಸ್ವಜನಾಂಗಕ್ಕೆ ಸೇರಿದವಳು ಎಂಬ ಹೆಮ್ಮೆ.

ಆದರೆ 'ರಾಧಿಕಾಸಾಂತವನಮ್' ಕಾವ್ಯದಲ್ಲಿ 'ಅಶ್ಲೀಲ ಮತ್ತು ಶೃಂಗಾರ ವರ್ಣನೆ ಹೆಚ್ಚಾಗಿದೆಯೆಂದು ಐ.ಪಿ.ಸಿ. ಸೆಕ್ಷನ್ 293 ಮೂಲಕ ಪ್ರಕಟಣೆ'[2] ಅಪರಾಧವಾಗಿ ಪರಿಣಮಿಸಿತು. ಬ್ರಿಟೀಷ್ ಸರ್ಕಾರ ಪುಸ್ತಕ ಪ್ರಕಟಣೆಯನ್ನು ನಿಷೇಧಿಸಿತು. ಡೆಪ್ಯುಟಿ ಕಮೀಷನರ್ ಕನ್ನಿಂಗ್‌ಹ್ಯಾಮ್ ಎಲ್ಲಾ ಪುಸ್ತಕಗಳನ್ನು ವಶಪಡಿಸಿಕೊಂಡನು. ಮುದ್ದುಪಳಿನಿ ಒಬ್ಬ ವೇಶ್ಯೆ; ಶೃಂಗಾರ ರಸವೆಂದು ಕರೆದು ಹಲವೆಡೆ ಅವಳ ಅಪಕ್ವವಾದ ಕಾಮವನ್ನು ಬಿಂಬಿಸಿದ್ದಾಳೆ. ಅವಳು ವೇಶ್ಯೆಯಾದ್ದರಿಂದ ಸಾಮಾನ್ಯ ಹೆಂಗಸರಿಗೆ ಇರಬಹುದಾದ ವಿನಯ ಅವಳಿಗಿಲ್ಲ. ಮತ್ತವಳ ಕವಿನೆ ವಿನಾಶಕಾರಿ. [3] ಹೀಗೆಂದು ಟೀಕಿಸಿ ಪ್ರಕಟಿಸಿದರು. ಇದಕ್ಕೆ ನಾಗರತ್ನಮ್ಮ ಕೊಟ್ಟ ಉತ್ತರ; ಮುದ್ದುಪಳಿನಿಯನ್ನು

ವೇಶ್ಯೆಯೆಂದು ಟೀಕಿಸಬಹುದು ಮತ್ತು ಅವಳ ಬರವಣಿಗೆ ಅಪಕ್ವ ಕಾಮವನ್ನು ಚಿತ್ರಿಸಿರುವುದನ್ನು ಖಂಡಿಸಬಹುದು. ಆದರೆ ಇದಕ್ಕಿಂತ ಅಶ್ಲೀಲ ಕವಿತೆಗಳು, ಪ್ರಕಟಣೆಯಾಗಿಲ್ಲವೆ? ವೀರೇಶ ಲಿಂಗಂ ತಮ್ಮ ಪತ್ರಿಕೆಯಲ್ಲಿ ದೇವದಾಸಿ ಪದ್ಧತಿಯನ್ನು ಟೀಕಿಸಿದ್ದಲ್ಲದೆ ಆ ವೃತ್ತಿಯನ್ನು ಖಂಡಿಸಿ 'ವೇಶ್ಯಾಪ್ರಿಯ ಪ್ರಹಸನಮ್' ಎಂಬ ನಾಟಕ ಬರೆದು ಪ್ರಕಟಿಸಿದರು. ಇದನ್ನು ಓದಿದ ಸಾಮಾನ್ಯ ಜನತೆ ದೇವದಾಸಿ ಪದ್ಧತಿಯನ್ನು ಖಂಡಿಸಿತು.

ಸರ್ಕಾರ ಪ್ರಕಟಣೆ ಮಾಡಿದ ವಾವಿಳ್ಳ ವೆಂಕಟೇಶ್ವರಲು ಶಾಸ್ತ್ರಿಗಳಿಗೆ ಕ್ಷಮಾಪಣೆ ಕೋರಲು ತಿಳಿಸಿತು. ಶಾಸ್ತ್ರಿಗಳು ಅಪೀಲು ಮಾಡಿದ್ದರಿಂದ ಅಶ್ಲೀಲ ಭಾಗಗಳನ್ನು ತೆಗೆದು ಮುದ್ರಿಸಬಹುದೆಂದಿತು. ಆದರೆ 1927ರಲ್ಲಿ ಸರ್ಕಾರ ಪ್ರಕಟಣೆಯನ್ನು ಸ್ಥಗಿತಗೊಳಿಸಿತು.

ಅದು ವಿಕ್ಟೋರಿಯಾ ರಾಣಿಯ ಕಾಲ ಮತ್ತು ಸ್ಥಳೀಯರಿಗೆ ಯಾವ ರೀತಿ ವಿದ್ಯಾಭ್ಯಾಸ[4] ಕೊಡಬೇಕು ಮತ್ತು ಅವರನ್ನು ಹೇಗೆ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಬಹುದು ಎಂದು ಯೋಚಿಸಿದ್ದ ಸಾಮ್ರಾಜ್ಯಶಾಹಿಗಳು, ಪುಸ್ತಕ ಪ್ರಕಟಣೆ ವಿಚಾರದಲ್ಲಿ ಕೂಡ ಹೆಚ್ಚಿನ ಜಾಗರೂಕತೆ ವಹಿಸಿದ್ದರು. ಮತ್ತು ಈ ವಿಷಯದಲ್ಲಿ ಮುತುವರ್ಜಿ ವಹಿಸಿದ ನಾಗರತ್ನಮ್ಮ ಒಬ್ಬ ದೇವದಾಸಿ ಮನೆತನದ ಹೆಣ್ಣುಮಗಳು. ಹೆಸರಾಂತ ಸಂಗೀತ ಮನೆತನ ಮತ್ತು ಸಾರ್ವಜನಿಕವಾಗಿ ಪರಿಚಿತಳು. ಅದೂ ಅಲ್ಲದೆ ಸಾರ್ವಜನಿಕ ಚರ್ಚೆಗಳಲ್ಲಿ ಮುಂದಾಳು. ಅವಳ ವಿದ್ವತ್, ಕೊಡುಗೆ ಪ್ರಸಿದ್ಧವಾಗಿತ್ತು. ಭಾರತಕ್ಕೆ ಸ್ವಾತಂತ್ರ ಬಂದನಂತರ ತೆಲುಗು ದೇಶದ ಮುಖ್ಯಮಂತ್ರಿ ಟಿ. ಪ್ರಕಾಶಂ ಪುಸ್ತಕ ಪ್ರಕಟಣೆಗೆ ಅವಕಾಶ ಮಾಡಿ 1952ರಲ್ಲಿ ಮರು ಮುದ್ರಣ ಕಂಡಿತು.

ತ್ಯಾಗರಾಜರ ಆರಾಧನೆ ಮತ್ತು ನಾಗರತ್ನಮ್ಮ

ತಿರುವಾಯೂರಿನಲ್ಲಿ ನಡೆಯುವ ತ್ಯಾಗರಾಜ ಆರಾಧನೆಯಲ್ಲಿ ಎಲ್ಲರೂ ಒಂದುಗೂಡಿ ಹಾಡುವುದನ್ನು ನೋಡುವಾಗ ಆರಾಧನೆಯ ಹಿನ್ನೆಲೆಯಲ್ಲಿ ನಾಗರತ್ನಮ್ಮನವರ ಪರಿಶ್ರಮ ಇದೆ ಎಂಬುದು ಎಲ್ಲರಿಗೂ ವಿದಿತವಾದ ವಿಷಯ. ಆದರೆ ಇದಕ್ಕೆ ನಾಗರತ್ನಮ್ಮ ಪಟ್ಟ ಕಷ್ಟ ಅಪಾರ.

ತ್ಯಾಗರಾಜರ ನಿಧನವಾದದ್ದು (1847) ತ್ಯಾಗ ರಾಜರು ದೇಹತ್ಯಾಗ ಮಾಡುವುದಕ್ಕೆ ಮೊದಲು ಸನ್ಯಾಸ ಸ್ವೀಕರಿಸಿದ್ದರಿಂದ, ಮೊಮ್ಮಗ ಆರಾಧನೆ ಮಾಡುತ್ತಿದ್ದನು. ಮೊಮ್ಮಗ ಗತಿಸಿದ ನಂತರ ಶಿಷ್ಯರು ಮುಂದುವರಿಸಿದರು. ಇದರಲ್ಲಿ ಶೂಲ ಮಂಗಲಂ, ವೈದ್ಯನಾಥ ಭಾಗವತರ್ ಮತ್ತು ನರಸಿಂಹ ಪಂಜುಭಾಗವತರ್ ಸಹೋದರರು ಮುಖ್ಯರು. ಮೊದಲು ಸಮಾಧಿ ಸ್ಥಳದಲ್ಲಿ, ಪೂಜೆ, ಬ್ರಾಹ್ಮಣ ಭೋಜನ ನಡೆಯುತ್ತಿತ್ತು. ಆದರೆ ಸಂಗೀತ ಇರುತ್ತಿರಲಿಲ್ಲ. 1908 ಮೊದಲ ಬಾರಿಗೆ ಸಂಗೀತ ನಡೆಯಿತು. ಆದರೆ ಅಣ್ಣ ತಮ್ಮಂದಿರಲ್ಲಿ ಒಮ್ಮತ ಇಲ್ಲದಿದ್ದರಿಂದ ಎರಡು ಪಂಗಡಗಳಾಯಿತು. ನರಸಿಂಹ ಭಾಗವತರ್ ಪಂಗಡ (ಪೆರಿಯ ಕಾಚಿ – Big party) ಪಂಜು ಭಾಗವತರ್ (ಚಿನ್ನ ಕಾಚಿ–Small party) ಎಂದು ಗುರುತಿಸಿಕೊಂಡರು. ಸಂಗೀತ ಮತ್ತು ಹರಿಕಥೆಗೆ ಪ್ರಾಮುಖ್ಯತೆ ಕೊಟ್ಟರು. ಮೊದಲನೆಯದು ಪೂರ್ತಿ ಬ್ರಾಹ್ಮಣರ ಗುಂಪು. ಎರಡನೆಯದ್ದರಲ್ಲಿ ಎಲ್ಲಾ ಗುಂಪಿನವರು ಪಾಲ್ಗೊಂಡಿದ್ದರು. ನಾಗರತ್ನಮ್ಮನ ಗುರುಗಳಾದ ಪೂಚಿ ನರಸಿಂಹ ಐಯಂಗಾರ್ ತ್ಯಾಗರಾಜರ ಗುರುಗಳಾದ ಪೂಚಿ ನರಸಿಂಹ ಐಯಂಗಾರ್ ತ್ಯಾಗರಾಜರ ಆರಾಧನೆ ಕ್ರಮವಾಗಿ ನಡೆಯಬೇಕು ಎಂದು ನಿಶ್ಚಯಿಸಿದವರಲ್ಲಿ ಒಬ್ಬರು.[5]

ತ್ಯಾಗರಾಜರ ಆರಾಧನೆ 1906–21ರವರೆಗೆ ನಡೆದಿದ್ದರೂ ಹೆಂಗಸರಿಗೆ ಹಾಡಲು ಅವಕಾಶವಿರಲಿಲ್ಲ. ಹಲವು ವಿದ್ವಾಂಸರು ಎರಡು ಪಕ್ಷದಲ್ಲೂ ಭಾಗವಹಿಸಿ ತಮ್ಮ ಗೌರವವನ್ನು ಸಲ್ಲಿಸುತ್ತಿದ್ದರು. ಮೈಸೂರು ಆಸ್ಥಾನ ವಿದ್ವಾನ್ ಮುತ್ತಯ್ಯ ಭಾಗವತರ್ ಹಲವಾರು ಬಾರಿ ಒಮ್ಮತ ತರಲು ಯತ್ನಿಸಿದರೂ ಸಫಲವಾಗಲಿಲ್ಲ. 1921ರ ಹೊತ್ತಿಗೆ

ನಾಗರತ್ನಮ್ಮ ಸಂಗೀತದಲ್ಲಿ ಹೆಸರು ಮಾಡಿದ್ದರು ಮತ್ತು ಜೀವಿತ ಕಾಲದಲ್ಲಿ ಗಳಿಸಿದ ಸಮಸ್ತಗಳಿಕೆಯನ್ನೂ ತ್ಯಾಗರಾಜರಲ್ಲಿ ಸಮರ್ಪಿಸಲು ಸಿದ್ಧವಾದರು. 1921 ನಾಗರತ್ನಮ್ಮ ತ್ಯಾಗರಾಜರ ಸಮಾಧಿಯನ್ನು ನವೀಕರಿಸಲು ತಮ್ಮ ಖುದ್ದು ಹಣದಿಂದ ಸುತ್ತಮುತ್ತ ಇದ್ದ ಜಾಗವನ್ನು ಕೊಂಡರು. 1925 ತ್ಯಾಗರಾಜರ ಸಮಾಧಿಯನ್ನು ನವೀಕರಿಸಲು ತಮ್ಮ ಖುದ್ದು ಹಣದಿಂದ ಸುತ್ತಮುತ್ತ ಇದ್ದ ಜಾಗವನ್ನು ಕೊಂಡರು. 1925 ತ್ಯಾಗರಾಜರ ಪುತ್ಥಳಿಯನ್ನು ಸ್ಥಾಪಿಸಿ, ಪೂಜಾ ಏರ್ಪಾಡು ಮಾಡಿ, ಆ ವರುಷದ ಆರಾಧನೆಯಲ್ಲಿ ಎಲ್ಲರೂ ಆರಾಧನೆ ಮಾಡುವುದು ಒಳಿತೆಂದು ತಿಳಿಸಿದರು. ಆದರೆ ಮೂರು ಪಕ್ಷದಲ್ಲಿ ಒಮ್ಮತ ಏರ್ಪಡಲಿಲ್ಲ. ಮತ್ತು ಮಹಿಳೆಯರಿಗೆ ಆರಾಧನೆಯಲ್ಲಿ ಹಾಡಲು ಅವಕಾಶವಿರಲಿಲ್ಲ.

1927 ತ್ಯಾಗರಾಜ ಆರಾಧನೆಯಲ್ಲಿ ನಾಗರತ್ನಮ್ಮನಿಗೆ ಹಾಡಬೇಕೆನ್ನಿಸಿತು. ಆದರೆ ಸಾಯಂಕಾಲ ಹಾಡಲು ಕುಳಿತಾಗ, ಪಕ್ಕವಾದ್ಯದವರು ಸಾಥಿ ಮಾಡಲು ಒಪ್ಪಲಿಲ್ಲ. ಇದರಿಂದ ರೊಚ್ಚಿಗೆದ್ದ ನಾಗರತ್ನಮ್ಮ 1928ರಲ್ಲಿ ತಮ್ಮ ಹಣದಿಂದ ಆರಾಧನೆ ದಿವಸದ ಹೊತ್ತಿಗೆ ಪೆಂಡಾಲು ಹಾಕಿಸಿ ಕಛೇರಿ ಏರ್ಪಡಿಸಿದರು. ಬಹು ಯಶಸ್ವಿಯಾಗಿ ನಡೆದ ಕಛೇರಿಗಳು ಜನರ ಮನ್ನಣೆ ಪಡೆಯಿತು. ಇಲ್ಲಿ ಪೂರ್ತಿ ಹೆಂಗಸರಿಗೆ ಹಾಡಲು ನಾಗರತ್ನಮ್ಮ ಅವಕಾಶ ಮಾಡಿಕೊಟ್ಟರು. ಇದಕ್ಕೆ ಯಾವ ಪ್ರತಿಭಟನೆ ಬರಲಿಲ್ಲ. ಇದು ಒಂದು ಮುಖ್ಯವಾದ ಘಟ್ಟ ಎಂದು ಗುರುತಿಸಬಹುದು. 1928 ಆರಾಧನೆ ನಡೆದರೂ ಮೂರು ಪಕ್ಷಗಳ ಸಂಘಟನೆ 1940ರಲ್ಲಿ ಸಾಧ್ಯವಾಯಿತು. ಒಕ್ಕೂಟಕ್ಕೆ ಪ್ರಯತ್ನಿಸಿದವರಲ್ಲಿ ಎಸ್. ವೈ. ಕೃಷ್ಣಸ್ವಾಮಿ [6] ಮುಖ್ಯಸ್ಥರು. ಆಗ ಎಸ್. ವೈ. ಕೃಷ್ಣಸ್ವಾಮಿ ಕಾವೇರಿ ನದಿ ಮುಖ್ಯಸ್ತ ಅಧಿಕಾರಿಯಾಗಿ ನೇಮಿಸಲ್ಪಟ್ಟಿದ್ದರು. ಸಂಗೀತದಲ್ಲಿ ವಿಶೇಷ ಆಸಕ್ತಿಯಿದ್ದವರು, ಮೂರು ಪಕ್ಷಗಳನ್ನು ಒಂದು ಗೂಡಿಸಲು ಯತ್ನಿಸಿ ಸಫಲವಾದರು. ಇವರಿಗೆ ಎಲ್ಲಾ ಸಂಗೀತ ವಿದ್ವಾಂಸರ ಬೆಂಬಲವಿತ್ತು. ಸರ್ವಸಮ್ಮತವಾದ ಈ ಪ್ರಯತ್ನ 'ತ್ಯಾಗಬ್ರಹ್ಮ ಮಹೋತ್ಸವ' ಸಂಘಟನೆಯಲ್ಲಿ ಮುಕ್ತಾಯವಾಯಿತು. 1940ರಲ್ಲಿ ಆರಾಧನೆ ತ್ಯಾಗ ಬ್ರಹ್ಮ ಮಹೋತ್ಸವ ಪರವಾಗಿ ನಡೆದು ನಾಗರತ್ನಮ್ಮ ಎಲ್ಲಾ ವಿದ್ವಾಂಸರ ಮಧ್ಯೆ ಅಮೋಘವಾದ ಕಛೇರಿಯನ್ನು ನಡೆಸಿದರೆಂದು ತಿಳಿಯಬಂದಿದೆ. ಹೀಗೆ ಪುರುಷರಿಗೆ ಮೀಸಲಾದ ಸಮಾಜದಲ್ಲಿ ತಮ್ಮ ಹಕ್ಕನ್ನು ನಾಗರತ್ನಮ್ಮ ಸಮರ್ಥಿಸಿಕೊಂಡರು. ತ್ಯಾಗರಾಜರ ಪಂಚರತ್ನ ಕೃತಿಗಳನ್ನು ಎಲ್ಲರೂ ಕೂಡಿ ಹಾಡುವುದನ್ನು ಮೊದಲನೆ ಬಾರಿಗೆ ರೂಡಿಗೆ ತರಲಾಯ್ತು. ಈಗ ಅತ್ಯಂತ ಜನಪ್ರಿಯವಾಗಿದೆ. ಮೊದಲನೆ ವರ್ಷದ ಆರಾಧನಾ ಪ್ರಾರಂಭೋತ್ಸವ ಸಿ. ರಾಜಗೋಪಾಲಾಚಾರ್ ಅವರಿಂದ ನಡೆಯಿತು.

ಸಮಕಾಲೀನ ಕಲಾವಿದರಲ್ಲಿ, ನಾಗರತ್ನಮ್ಮ ಸರ್ಕಾರಕ್ಕೆ ಕಂದಾಯ ಕಟ್ಟುತ್ತಿದ್ದ ಏಕೈಕ ಮಹಿಳೆ.[7] ಅಂದರೆ ಅವರ ಆದಾಯ ಹೆಚ್ಚಾಗಿತ್ತು. ನಾಗರತ್ನಮ್ಮ ತಮ್ಮ ಉಯಿಲಿನಲ್ಲಿ ಸ್ಪಷ್ಟವಾಗಿ ಹಲವು ಉಪನಿಯಮಗಳನ್ನು ಅಳವಡಿಸಿದ್ದರಿಂದ ಅದರಲ್ಲಿ ಮಧ್ಯೆ ಪ್ರವೇಶ ಮಾಡಲು ಯಾರಿಗೂ ಸಾಧ್ಯವಾಗಲಿಲ್ಲ. ಅವರ ಉಯಿಲು ಪ್ರಕಾರ ತನ್ನ ಸಮಸ್ತ ಸ್ವತ್ತನ್ನು ಟ್ರಸ್ಟಿಗೆ ಒಪ್ಪಿಸಿರುವರು. ಸಮಾಧಿಯ ಮೇಲ್ವಿಚಾರಣೆಗೆ ಇದರಿಂದ ಬರುವ ಹಣ ಉಪಯೋಗಿಸುವುದು. (3) ಮತ್ತು ಮಹಿಳಾ ಕಲಾವಿದರಿಗೆ ಆದ್ಯತೆ ಮತ್ತು ದೇವದಾಸಿಯರಿಗೆ ಹಾಡಲು ಅವಕಾಶ (3) ಸತ್ತನಂತರ ತಮ್ಮ ಬೃಂದಾವನ ತ್ಯಾಗರಾಜರ ಸಮಾಧಿ ಎದುರಿಗೆ ಇರತಕ್ಕದ್ದು.[8] ಪೂಜೆಯನ್ನು ತಮಿಳು ಅಥವಾ ತೆಲುಗು ಬ್ರಾಹ್ಮಣರು ಮುಂದುವರಿಸತಕ್ಕದ್ದು.

ತ್ಯಾಗರಾಜರ ಆರಾಧನೆ ಮೊದಲು ಸಾಮಾನ್ಯ ಶಿಷ್ಯರಿಂದ ಪ್ರಾರಂಭಿಸಿ ಅದರಿಂದ ಎರಡು ಪಕ್ಷವಾಗಿ ಹೋಳಾಗಿ ಮತ್ತೆ ಒಬ್ಬ ಮಹಿಳೆಯ ಸರ್ವಸ್ವ ತ್ಯಾಗದಿಂದ ಒಂದುಗೂಡು ಒಂದು ಪ್ರತಿಷ್ಠೆಯ ಸಂಕೇತವಾಗಿ ಮೆರೆಯುತ್ತಿದೆ. ಮತ್ತು ಏಕೈಕ ಮಹಿಳೆಯು ಸ್ಥಾನಮಾನಕ್ಕೆ ಹೋರಾಡಿ ಪುರುಷ ಪ್ರಧಾನವಾದ ಸಮಾಜದಲ್ಲಿ ಅಸ್ತಿತ್ವವನ್ನು ಸಾಧಿಸಿದ ನಾಗರತ್ನಮ್ಮನಿಗಿದ್ದ ಉದ್ದೇಶ ಗುರುಪೂಜೆ. ನಾಗರತ್ನಮ್ಮನವರಿಗೆ ಯಾವ ಜನಾಂಗದ

ಸಹಾಯವಿರಲಿಲ್ಲ ಒಬ್ಬಿಬ್ಬರ ಸಹಾಯ ಇದ್ದಿರಬಹುದು. ಒಬ್ಬರೇ ಆ ಕಾಲದ ಸಮಾಜ ಸುಧಾರಣಾ ಪ್ರವರ್ತಕರಾದ ವೀರೇಶಲಿಂಗ ಪಂತುಲುವನ್ನು ಎದುರು ಹಾಕಿಕೊಂಡುದುಂಟು. ಇದಕ್ಕಾಗಿ ನಾಗರತ್ನಮ್ಮ ದೊಡ್ಡ ಬೆಲೆ ತೆರಬೇಕಾಯ್ತು. ಇದು ಕೇವಲ ಒಬ್ಬ ದೇವದಾಸಿ ಎಂಬ ಕಾರಣಕ್ಕಾಗಿ. ಆದರೆ ಇದೇ ಸಮಾಜ ಅವರನ್ನು ತ್ಯಾಗರಾಜರ ಪಕ್ಕದಲ್ಲಿ ಪೂಜಿಸುತ್ತಿರುವುದನ್ನು ನೋಡಬಹುದು. ತನ್ನ ಸಮಸ್ತ ಚರ, ಆಸ್ತಿಯನ್ನು ತ್ಯಾಗರಾಜರ ಸಮಾಧಿಗೆ ಅರ್ಪಿಸಿದ ನಾಗರತ್ನಮ್ಮನಿಗೆ ಇದಕ್ಕಾಗಿ ಹಡೆದಾಡಲು ಸಾಧ್ಯವಾಯಿತು. ಈ ಕೊಡುಗೈ ದಾನಕ್ಕೆ ಇಂದಿನ ಪೀಳಿಗೆ ಋಣಿಯಾಗಿರಬೇಕು. ಇನ್ನೊಂದು ಉದಾಹರಣೆ ಕೊಡಬೇಕೆಂದರೆ ತಮಿಳುನಾಡಿನ ದೇವದಾಸಿ ರಾಮಾಮೃತ ಅಮ್ಮಾಳ್ ಸ್ವಾಭಿಮಾನ ಚಳುವಳಿಯಲ್ಲಿ ಭಾಗವಹಿಸಿ ದೇವದಾಸಿಯರು ಎಚ್ಚೆತ್ತುಕೊಳ್ಳಬೇಕೆಂದು ಭಾಷಣಮಾಡಿ 1936ರಲ್ಲಿ 'ದಾಸಿಗಳಿಲ್ ಮೋಸವಲೈ' ಎಂಬ ಕಾದಂಬರಿ ಬರೆದಳು. ಇದರಿಂದ ದೇವದಾಸಿ ಹೆಣ್ಣು ಮಕ್ಕಳು ಹೊರಗೆ ಬಂದು, ದೇವದಾಸಿ ವೃತ್ತಿಯನ್ನು ತೊರೆದು ಗೃಹಸ್ಥರಾದರು ಮತ್ತು ರಾಮಾಮೃತ ಅಮ್ಮಾಳ್ ವೃತ್ತಿಯನ್ನು ತೊರೆದು ಸಂಗೀತಕ್ಕೆ ತನ್ನನ್ನು ಅರ್ಪಿಸಿಕೊಂಡಿದ್ದನ್ನೂ ನೋಡಬಹುದು. ನಾಗರತ್ನಮ್ಮ ಮತ್ತು ರಾಮಾಮೃತಮ್ ಇಬ್ಬರೂ ದೂರದರ್ಶಿಗಳು ಮತ್ತು ಸ್ವಪ್ರಯತ್ನದಿಂದ ಸಮಾಜದ ಉನ್ನತಿಗೆ ಶ್ರಮಿಸಿದವರು.

ನಾಗರತ್ನಮ್ಮನವರ ಮೈಸೂರಿನ ಕಾಳಜಿ ಅಪಾರವಾದದ್ದು. ಮದ್ರಾಸಿನಲ್ಲಿ ಮೈಸೂರಿನವರಿಗೆಂದು ಒಂದು ಸತ್ರ ಕಟ್ಟಿಸಲು ನಾಗರತ್ನಮ್ಮ ಬೆಂಗಳೂರು, ಮೈಸೂರಿನಲ್ಲಿ ಓಡಾಡಿ ಹಣಕೊಡಿಸಿದರು. ಅದೂ ಅಲ್ಲದೆ ಬಿಡಾರಂ ಕೃಷ್ಣಪ್ಪನವರ ಕಛೇರಿ ಮದ್ರಾಸಿನಲ್ಲಿ ಏರ್ಪಾಡು ಮಾಡಿದ್ದರಿಂದ ಬಿಡಾರಂ ಕೃಷ್ಣಪ್ಪನವರ ಕಛೇರಿ ಮದ್ರಾಸಿನಲ್ಲಿ ಪ್ರಖ್ಯಾತವಾಯಿತೆಂದು ಡಿ. ವಿ. ಗುಂಡಪ್ಪನವರು ತಮ್ಮ ಜ್ಞಾಪಕ ಚಿತ್ರಶಾಲೆಯಲ್ಲಿ ತಿಳಿಸಿರುತ್ತಾರೆ. (ಡಿ. ವಿ. ಗುಂಡಪ್ಪ, ಜ್ಞಾಪಕ ಚಿತ್ರಶಾಲೆ, ಸಂ.2, ಪು.42).

ಸಂಗೀತ ಪ್ರಪಂಚದಲ್ಲಿ ಐದು ದಶಕಗಳು ಸಾಮ್ರಾಜ್ಞೆಯಂತಿದ್ದ ಬೆಂಗಳೂರಿನ ನಾಗರತ್ನಮ್ಮ (19 ಮೇ 1952) ನಿಧನರಾದರು. ನಾಗರತ್ನಮ್ಮನವರ ಧ್ವನಿ ಮುದ್ರಿಕೆ ಅತ್ಯಂತ ಕಡಿಮೆ. ಆದ್ದರಿಂದ ಅವರು ಕೊಟ್ಟಿರುವ ಅಸಂಖ್ಯಾತ ಕಛೇರಿಗಳು ಯಾವ ಮಟ್ಟದಲ್ಲಿ ಇದ್ದವು ಎಂಬುದನ್ನು ಆ ಕಾಲದ ಪ್ರಸಿದ್ಧ ಪತ್ರಿಕೆಗಳು ಮತ್ತು ಹಲವು ಹಿರಿಯರಿಂದ ತಿಳಿಯಬಹುದು. ನಾಗರತ್ನಮ್ಮನವರ ದಿನಚರಿ ಪುಸ್ತಕದಿಂದ ಹಲವಾರು ವಿಷಯ ಸಂಗ್ರಹಿಸಬಹುದಾಗಿದೆ. ಅವರಿಗೆ ಭಾಷೆಗಳ ಹಿಡಿತವಿತ್ತು. ಮತ್ತು ಸಂಗೀತ ಅಭಿನಯ ಕರಗತವಾಗಿದ್ದರಿಂದ ಉತ್ತಮ ಮಟ್ಟದಲ್ಲಿ ಇತ್ತೆಂದು ವಿದ್ವಾಂಸರ ಅಭಿಪ್ರಾಯ. ಅವರ ದಿನಚರಿ ಪುಸ್ತಕದಿಂದ (1905–1931) ಗಮನಿಸಿದಾಗ ಅವರು 12359 ಕಛೇರಿಗಳನ್ನು ಕೊಟ್ಟಿರುವುದಾಗಿ ತಿಳಿದುಬರುತ್ತೆ. ಮತ್ತು ಅದರಿಂದ ಎರಡು ಲಕ್ಷದಷ್ಟು ಹಣ ಸಂಪಾದನೆ ಮಾಡಿ ಅದನ್ನು ಧರ್ಮಕಾರ್ಯಕ್ಕೆ ವಿನಿಯೋಗಿಸಿರುವರು. ಇದು ಅವರ ಉಯಿಲಿನಲ್ಲಿ ದಾಖಲಿಸಿರುವರು. ನಾಗರತ್ನಮ್ಮನಿಗೆ ಸಂದ ಅಪಾರ ಗೌರವಗಳಲ್ಲಿ ಗೃಹಲಕ್ಷ್ಮಿ ಸ್ವರ್ಣ ಪ್ರಧಾನ ಕಂಕಣ ಕೂಡ ಮುಖ್ಯವಾಗಿದೆ. ಇನ್ನು ಕೃತಿ ರಚನೆಯನ್ನು ಗಮನಿಸಿದಾಗ ಅವರ ಭಾಷಾ ಹಿಡಿತ, ಪಾಂಡಿತ್ಯವನ್ನು ಗುರುತಿಸಬಹುದು.

1. ತ್ಯಾಗರಾಜ ಅಷ್ಟೋತ್ತರ ಶತನಾಮಾವಳಿ (ಸಂಸ್ಕೃತ)
2. ದೇವದಾಸಿ ಪ್ರಬೋಧ ಚಂದ್ರೋದಯಮ್ (ತೆಲುಗು)
3. ಪಂಚೇಕರಣ ಭೌತಿಕ ವಿವೇಕ ವಿಲಕ್ಕಮ್ (ತಮಿಳು)

ಮೇಲೆ ಕಾಣಿಸಿದ ಮೂರು ಪುಸ್ತಕಗಳ ಕರ್ತೃ ನಾಗರತ್ನಮ್ಮ ಕಾಲ ಬದಲಾದಂತೆ ತ್ಯಾಗರಾಜರ ಸಮಾಧಿಯ ಎದುರಿಗೆ ನಡೆಯುವ ಉತ್ಸವದಲ್ಲಿ ಮಾರ್ಪಾಟಾಗಿದ್ದರೂ ನಾಗರತ್ನಮ್ಮನವರ ಉದ್ದೇಶ ಸಫಲವಾಗಿದೆ. ಇದನ್ನು ನಮ್ಮ ಮೈಸೂರಿನವರೇ ಆದ ನಾಗರತ್ನಮ್ಮ ಜಗತ್ತಿಗೆ ಕೊಟ್ಟ ಕೊಡುಗೆ ಅನ್ನೋಣವೆ? ಖಂಡಿತಾ ಹೌದು.

ಪ. ರಾಗ ಸುಧಾರಸ ಪಾನಮು ಜೇಸಿ ರಾಜಿಲ್ಲವೇ ಮನಸಾ

ಅ. ಯಾಗಯೋಗ ತ್ಯಾಗ ಭೋಗ ಫಲಮೊಸಗೇ

ಚ. ಸದಾಶಿವ ಮಯಮಗ ನಾದೋಂಕಾರ ಸ್ವರ ಮಿದುಲು ಜೀವನ್ಮುಕ್ತುಲಿನಿ ತ್ಯಾಗರಾಜ ದೆಲಿಯು

ಕನ್ನಡಕ್ಕೆ ಅನುವಾದಿಸಿದಲ್ಲಿ:

ರಾಗಾಮೃತವು, ಯೋಗ, ತ್ಯಾಗ, ಭೋಗ

ಮನಸ್ಸೇ ಇದನ್ನು ಸಂಪೂರ್ಣವಾಗಿ ಗ್ರಹಿಸು

ನಾದ, ಓಂಕಾರ ಸ್ವರ ಇವುಗಳು ಸದಾಶಿವನ ಸ್ವರೂಪ

ಇದನ್ನು ತಿಳಿದವರು ಪರಮಾತ್ಮನ ಸ್ವರೂಪ

ತ್ಯಾಗರಾಜರ ಅಂಧೋಲಿಕ ರಾಗದ ಈ ಕೃತಿಯನ್ನು ಗಮನಿಸಿದಾಗ, ಬೆಂಗಳೂರು ನಾಗರತ್ನಮ್ಮ ಸಂಪೂರ್ಣವಾಗಿ ಈ ಕೃತಿಗೆ ಹತ್ತಿರವಾಗಿದ್ದಾರೆ ಅನ್ನಿಸುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. Leela B. 'Reform and Womens Revival in Mysore in the 19th and 20th century; an analysis (in) R. Srinivasan ed. Puspanjali; Essays on Gandhian themes in honour of Dr. Usha Mehta. 1999, p.293-316
2. ಡಿ. ವಿ. ಗುಂಡಪ್ಪ, 1970, ಕಲೋಪಾಸಕರು, ಸಂ.2, ಪು.35
3. ಮೈಸೂರು ಆಸ್ಥಾನದಲ್ಲಿ ಸಾಕಷ್ಟು ಮನ್ನಣೆ ಪಡೆದಿದ್ದರು. ಮೈಸೂರಿನ ಗಿರಿಭಟ್ಟ ತಮ್ಮಯ್ಯ ಅವರನ್ನು ಪ್ರೋತ್ಸಾಹಿಸಿದರು.
4. ರಾಧಿಕಾಸಾಂತವನಮ್ ಮುದ್ದುಪಳಿನಿ ಬರೆದ ಶೃಂಗಾರ ರಸವನ್ನು ಬಿಂಬಿಸುವ ಉತ್ತಮ ಕೃತಿ.
5. ವಾವಿಳ್ಳ ವಿ. ವೆಂಕಟಶಾಸ್ತ್ರುಲು ಆ ಕಾಲದ ಅತ್ಯಂತ ಪ್ರಸಿದ್ಧ ಮುದ್ರಕರು See Bhashoddaraka Sri Venkateshwara Sastrulu Comemoration Volume. 1941.
6. Susie Tharu and K. Lalitha ed. Women Writing in India, Vol. p. 1-7, 1991. (See also) Priyadarshini Vijaisri, Recasting the Devadasi p.264-68, 2004
7. B.K. Boman Behram; Education Controversies in India, n.d.
8. For Details (See) Sruti March 2001 (See also) V.Sriram; Several male musicians and one women and V. Sriram; Tyagaraja Aradhana in Tiruvalyaru (in) Madras Musings, Jan 1-16, 2006. ಇದಕ್ಕೆ ನಾಗರತ್ನಮ್ಮ ಯಾವ ಪ್ರತಿಭಟನೆಯನ್ನೂ ಎದುರಿಸಬೇಕಾಗಲಿಲ್ಲ. ಬನ್ನಿಬಾಯಿ ಹರಿಕಥೆ ಮತ್ತು ಬಿ. ಎಸ್. ರಾಜ ಐಯಂಗಾರ್ ಕಛೇರಿಯನ್ನು ನಾಗರತ್ನಮ್ಮ ಏರ್ಪಡಿಸಿದ್ದರು.
9. S. Y. Krishnaswamy, Memories of a Mediocre man, ಪುಸ್ತಕದಿಂದ ಹೆಚ್ಚು ವಿಷಯಗಳನ್ನು ತಿಳಿಯಬಹುದು.
10. Sriram V.Her Lord was Tyagaraja (in) Madras Musings, Jan 1-15-2006, p.7
11. Sruti, Manna Srinivasan, April 2004, p.22-23
12. Grihalakshmi, March 1949.

67. ವಲಸಿಗರ ಬೆಂಗಳೂರು

ಶ್ರೀ ರಾ. ನಂ. ಚಂದ್ರಶೇಖರ

ಅಣ್ಣಾಸಾಮಿ ಮೊದಲಿಯಾರ್ ರಸ್ತೆ, ಅರುಣಾಚಲ ಮೊದಲಿಯಾರ್ ರಸ್ತೆ, ವೇಲು ಮೊದಲಿಯಾರ್ ರಸ್ತೆ, ಪಳನಿ ಮೊದಲಿಯಾರ್ ರಸ್ತೆ, ಮೊದಲಿಯಾರ್ ಲೇನ್, ಮೊದಲಿಯಾರ್ ಗಾರ್ಡನ್, ವೀರಪಿಳ್ಳೈ ಸ್ಟ್ರೀಟ್, ನಾರಾಯಣ ಪಿಳ್ಳೈ ಸ್ಟ್ರೀಟ್, ತಾಮರೈ ಕಣ್ಣನ್ ರಸ್ತೆ, ಪುಲಿಯಾರ್ ಕೊಯಿಲ್, ಯಲ್ಲಮ್ಮ ಕೊಯಿಲ್, ವಣ್ಣಾರ ಪೇಟೆ, ಮಾಮೂಲ್ ಪೇಟೆ, ರಾಣಾಸಿಂಗ್ ಪೇಟೆ, ಸೌರಾಷ್ಟ್ರ ಪೇಟೆ, ತೆಲುಗರ ಪೇಟೆ, ತಿಗಳರ ಪೇಟೆ, ಆಂಧ್ರ ಕಾಲೋನಿ, ಆಂಧ್ರಲೇನ್, ತಂಬುಚೆಟ್ಟಿ ಪಾಳ್ಯ, ಮುರುಗೇಶ ಪಾಳ್ಯ, ಮಂಗಮ್ಮ ಪಾಳ್ಯ, ಮುನಿರೆಡ್ಡಿ ಪಾಳ್ಯ, ದಿವಾನ್ ಪಾಳ್ಯ, ಕಲಾಸಿಪಾಳ್ಯ, ಸಲ್ಲಮ್ಮ ಲೇಔಟ್, ಗುಪ್ತಾ ಲೇಔಟ್, ಕುಪ್ಪುಸ್ವಾಮಿ ಬ್ಲಾಕ್, ಆರ್ಮುಗಂ ಬ್ಲಾಕ್, ಶಿವನಚೆಟ್ಟಿ ಗಾರ್ಡನ್, ಪಾರ್ಸಿ ಗಾರ್ಡನ್, ಈಜಿಪುರ, ವೇಲುಮುರುಗಪುರ, ಸಗಾಯಪುರ, ಸಿಂಧಿ ಕಾಲೋನಿ, ಬಂಬೂ ಬಜಾರ್, ಪೆದ್ದಗುಂಟ, ಪಟ್ನೂಲ್ ಪೇಟೆ, ಪಾಟರಿ ಟೌನ್, ಅಣ್ಣ ನಗರ, ಪೆರಿಯಾರ್ ನಗರ, ಎಂ.ಜಿ.ಆರ್. ಕಾಲೋನಿ, ರಾಜಾಜಿನಗರ, ಶಿವಾಜಿನಗರ. ಈ ಹೆಸರುಗಳು ಬೇರೆ ಯಾವುದೋ ರಾಜ್ಯದ ನಗರದ ಹೆಸರುಗಳಲ್ಲ, ಬೆಂಗಳೂರಿನ ರಸ್ತೆ, ಬಡಾವಣೆ ಹೆಸರುಗಳು. ಬ್ರಿಟಿಷರ ಕಾಲದ ಹೆಸರುಗಳನ್ನೂ ಪಟ್ಟಿ ಮಾಡಿದರೆ ಅದೇ ಕಿರು ಪುಸ್ತಕವಾಗಿ ಬಿಡುತ್ತದೆ. ಬೆಂಗಳೂರಿನಲ್ಲಿ ಸುಮಾರು 500 ರಸ್ತೆಗಳಿಗೆ ಹೆಸರಿಡಲಾಗಿದೆ. ಅವುಗಳಲ್ಲಿ 80%ರಷ್ಟು ಪರಭಾಷೆ, ಪರಪ್ರಾಂತಗಳ ಮೂಲದವು. ಸುಮಾರು 262 ಬಡಾವಣೆಗಳಲ್ಲಿ ಅರ್ಧದಷ್ಟಕ್ಕೆ ವಲಸಿಗರ ಹೆಸರುಗಳೇ! ಇದು ಬೆಂಗಳೂರಿನಲ್ಲಿ ವಲಸಿಗರ ಸುಭದ್ರ ಸ್ಥಿತಿಯನ್ನು ಸೂಚಿಸುತ್ತದೆ.

ಕನ್ನಡಿಗರ ಹೆಸರಿನ ರಸ್ತೆಗಳಿವೆ, ಆದರೆ ಕನ್ನಡಿಗರಿಲ್ಲ

ಬೆಂಗಳೂರಿನಲ್ಲಿ ಕನ್ನಡಿಗರ ಹೆಸರಿನ ರಸ್ತೆಗಳೂ ಇವೆ. ಆದರೆ, ಅಲ್ಲೂ ವಲಸಿಗರೇ ಇದ್ದಾರೆ. ಬೆಂಗಳೂರ ನಿರ್ಮಾತೃ ಕೆಂಪೇಗೌಡ ಹೆಸರಿನಲ್ಲಿ ಪ್ರಮುಖ ರಸ್ತೆಯಿದೆ. ಆ ರಸ್ತೆಯಲ್ಲಿ 'ಕೆಂಪೇಗೌಡ' ಹೆಸರಿನ ಚಿತ್ರಮಂದಿರವೂ ಇತ್ತು. ಅದರ ಮಾಲೀಕ ಗುಜರಾತಿ. ಆ ಚಿತ್ರಮಂದಿರದ ಜಾಗದಲ್ಲಿ 'ಕೆಂಪೇಗೌಡ ಪ್ಲಾಜ' ಬಂದಿದೆ. ಪರಿಸ್ಥಿತಿ ಬದಲಾಗಿಲ್ಲ. ಅದರ ಒಡೆಯ ಗುಜರಾತಿಯೇ! ಕೆಂಪೇಗೌಡ ರಸ್ತೆಯಲ್ಲಿ ಕನ್ನಡಿಗರ ಅಂಗಡಿ, ಕಟ್ಟಡಗಳನ್ನು ಕಾಣಲು ಭೂತಗನ್ನಡಿಯಲ್ಲಿ ಹುಡುಕಬೇಕು. ದಣಿಯಾಗ ಬೇಕಿದ್ದ ಕನ್ನಡಿಗ ಇಲ್ಲಿ ಕೂಲಿ ಮಾಡಲು ವಲಸಿಗ ದಣಿಗಳ ಕೃಪಾಭಿಕ್ಷೆಗೆ ಕಾಯಬೇಕಾದ ದುರವಸ್ಥೆಯಿದೆ. ಇಷ್ಟೇ ಮಹತ್ವ ಪಡೆದುಕೊಂಡಿರುವ ಇನ್ನೊಂದು ರಸ್ತೆ ಸಾದರ ಪತ್ರಪ್ಪಗಲ್ಲಿ. ಅದು ಎಲ್ಲ ಬಗೆಯ ಎಲೆಕ್ಟ್ರಾನಿಕ್ಸ್ ಉಪಕರಣ, ಬಿಡಿಭಾಗಗಳಿಗೆ ರಾಷ್ಟ್ರಮಟ್ಟದ ಪ್ರಸಿದ್ಧಿ ಪಡೆದಿದೆ. ಸಾದರ ಪತ್ರಪ್ಪಗಲ್ಲಿಯೆಂದರೆ ಯಾರಿಗೂ ಗೊತ್ತಿಲ್ಲ. ಅದು ಎಸ್. ಪಿ. ರೋಡ್ ಆಗಿದೆ. ಇಲ್ಲಿಯೂ ಕನ್ನಡಿಗ ಕಾಣುವುದಿಲ್ಲ. ಉತ್ತರದ ಹಿಂದಿವಾಲಾಗಳದ್ದೇ ಯಜಮಾನಿಕೆ. ಈ ಎರಡು ರಸ್ತೆಗಳಿಗಷ್ಟೇ ಈ ಸ್ಥಿತಿ ಸೀಮಿತವಾಗಿಲ್ಲ. ಇಡೀ ನಗರವನ್ನು ವ್ಯಾಪಿಸಿದೆ. ಮಾರತಹಳ್ಳಿ ಸಮೀಪ ಒಂದು ಸುಸಜ್ಜಿತ ಬಡಾವಣೆ ನಿರ್ಮಾಣ ವಾಗಿದೆ. ಅಲ್ಲಿ ನಿವೇಶನಕೊಳ್ಳಲು ನನ್ನ ಮಿತ್ರರೊಬ್ಬರು ದಲ್ಲಾಳಿಯನ್ನು ಸಂಪರ್ಕಿಸಿದರು. ನಿವೇಶನಗಳನ್ನೂ ತೋರಿಸಿದರು. ಆದರೆ ಕೊಳ್ಳಲಾಗಲೇ ಇಲ್ಲ. ಕಾರಣ, ಅಲ್ಲಿನ ನಿವೇಶನಗಳನ್ನು ಮಲೆಯಾಳಿಗಳಿಗೆ ಮಾತ್ರ

ನೀಡುವುದು! ಎಷ್ಟೋ ಬಡಾವಣೆಗಳಲ್ಲಿ ಕನ್ನಡಿಗರಿಗೆ ಬಾಡಿಗೆ ಮನೆ ಸಿಗುವುದಿಲ್ಲ. ಕೊಳ್ಳಲು ಫ್ಲಾಟ್‌ಗಳು ಸಿಗುವುದಿಲ್ಲ. ಕನ್ನಡ ಕ್ರೈಸ್ತರಿಗೆ ಕನ್ನಡದಲ್ಲಿ ಪ್ರಾರ್ಥನೆ ಸಲ್ಲಿಸಲು ಚರ್ಚ್‌ಗಳು ಸಿಗುವುದಿಲ್ಲ.

ಬ್ರಿಟಿಷ್ ಮೂಲದ ಹೆಸರನ್ನು ಬದಲಿಸಿ, ಕನ್ನಡನಾಡು-ನುಡಿಗೆ ಸಂಬಂಧಿಸಿದ ಹೆಸರುಗಳನ್ನು ಮರು ನಾಮಕರಣ ಮಾಡಿದೆ. ವಲಸಿಗರು ಇದನ್ನು ಬಳಸುವುದಿರಲಿ ಸಹಿಸಲೂ ಸಿದ್ಧರಿರಲಿಲ್ಲ. ಹೊಸ ಹೆಸರಿನ ಮೇಲೆ ಟಾರು ಬಳಿದು ಹಳೇ ಹೆಸರನ್ನೇ ದೊಡ್ಡದಾಗಿ ಬರೆದರು. ಮಿಲ್ಲರ್ ರಸ್ತೆಗೆ ಬಸವೇಶ್ವರ ರಸ್ತೆ ಎಂದು ಮರುನಾಮಕರಣ ಮಾಡಿದ್ದನ್ನು ಸಹಿಸದ ವಲಸಿಗರು 'ಬಸವೇಶ್ವರ' ಎಂಬುದನ್ನು ಅಳಿಸಿ ಮತ್ತೆ 'ಮಿಲ್ಲರ್' ಎಂದು ಬರೆದರು. ಇದು ಕೆಲವೆಡೆ ಉದ್ವಿಗ್ನತೆ ಸೃಷ್ಟಿಸಿತ್ತು. ಗವೀಪುರ ಬಡಾವಣೆಗೆ 'ಮಾಸ್ತಿ ನಗರ' ಎಂದು ಹೆಸರಿಸಿ ಎಂಬ ಒತ್ತಾಯಕ್ಕೆ ಕಾಲು ಶತಮಾನ. ಆದರೆ ಮಾಸ್ತಿ ಹೆಸರು ಬಂದಿಲ್ಲ. ಬಿ.ಎಂ.ಶ್ರೀ, ಕುವೆಂಪು ಮುಂತಾದ ಕನ್ನಡ ಪ್ರತಿಮೆಗಳ ಸ್ಥಾಪನೆಗೆ ನಿರಂತರ ಪ್ರಯತ್ನಪಟ್ಟರೂ ವರ್ಷಗಳೇ ಕಾಯಬೇಕಾಯಿತು. ಆದರೆ, ತಿರುವಳ್ಳವರು ಪ್ರತಿಮೆ ಸ್ಥಾಪನೆಗೆ ಏಪ್ರಿಲ್ 17, 1991ರಂದು ತಮಿಳು ಸಂಘ ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸುತ್ತದೆ. ಎರಡನೇ ದಿನ ಅಂದರೆ, ಏಪ್ರಿಲ್ 19, 1991ರಂದು ಅನುಮತಿ ಸಿಗುತ್ತದೆ. ಅಂದೇ ರಾಜ್ಯ ಸರ್ಕಾರ ಪ್ರತಿಮೆ ಸ್ಥಾಪನೆಯನ್ನು ಅನುಮೋದಿಸುತ್ತದೆ. ಇದು ವಲಸಿಗರ ಪ್ರಾಬಲ್ಯಕ್ಕೆ ಹಿಡಿದ ಕನ್ನಡಿ.

ಎಲ್ಲೆಲ್ಲೂ ವಲಸಿಗರೇ

ಬೆಂಗಳೂರಿನಲ್ಲಿ ಶಿಕ್ಷಣ ಕ್ಷೇತ್ರ ವ್ಯಾಪಾರವಾಗಿ, ಲಾಭದಾಯಕ ಉದ್ಯಮವಾಗಲು, ಜನರಲ್ಲಿ ಇಂಗ್ಲೀಷ್ ಮಾಧ್ಯಮದ ವ್ಯಾಮೋಹ ಹೆಚ್ಚಲು ವಲಸಿಗರೇ ಕಾರಣ. ಚರ್ಚ್‌ಗಳು ನಡೆಸುವ ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳಲ್ಲಿ ತಮಿಳರು, ಮಲೆಯಾಳಿಗಳದ್ದೇ ಆಡಳಿತ. ಬಾಲ್ಡವಿನ್, ಕಾರ್ಮೆಲ್, ಕುಮರನ್ಸ್, ನ್ಯಾಷನಲ್ಸ್, ಕ್ರೈಸ್ಟ್ ಕಾಲೇಜು (ವಿ.ವಿ), ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಅಮೃತಾನಂದಮಯಿ ಇಂಜಿನಿಯರಿಂಗ್ ಕಾಲೇಜು ಮುಂತಾದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಮಲೆಯಾಳಿಗಳ ವಶದಲ್ಲಿವೆ. ಆಕ್ಸ್‌ಫರ್ಡ್, ಪಿ.ಇ.ಎಸ್, ಕೇಂಬ್ರಿಡ್ಜ್, ಕೃಪಾನಿಧಿ, ಸಪ್ತಗಿರಿ, ಕಮ್ಮವಾರಿ, ವೇಮನ ಹೀಗೆ ಸಾಲು ಸಾಲು ಶಿಕ್ಷಣ ಸಂಸ್ಥೆಗಳ ಮಾಲೀಕತ್ವ ಆಂಧ್ರ ಮೂಲದವರ ವಶದಲ್ಲಿದೆ. ತಮಿಳರು ಮತ್ತು ಉತ್ತರ ಭಾರತದವರ ಆಡಳಿತದಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಪಟ್ಟಿ ಮಾಡುವುದು ತೀರ ಕಷ್ಟದ ಕೆಲಸ. ಎಚ್.ಎ.ಎಲ್. ಸಮೀಪವಿರುವ ಕೈರಾಳಿ ಸಮಾಜದ ಕಟ್ಟಡ ಕನ್ನಡ ಸಾಹಿತ್ಯ ಪರಿಷತ್ ಕಟ್ಟಡಕ್ಕಿಂತ ದೊಡ್ಡದು, ಭವ್ಯವಾದದ್ದು. ಇಂದಿರಾ ನಗರದಲ್ಲಿರುವ ಈಸ್ಟರ್ನ್ ಕಲ್ಚರಲ್ ಅಸೋಸಿಯೇಷನ್ ಜೊತೆಗೆ ಇನ್ನಷ್ಟು ಕೇರಳೀಯ ಸಂಘಗಳು, ತಮಿಳು ಮನ್ರಂ, ತಮಿಳು ಸಂಘ, ಮರಾಠಿ, ಮುಂತಾದ ವಲಸಿಗೆ ಸಮುದಾಯಗಳ ಕಟ್ಟಡಗಳನ್ನು ಕಂಡಾಗ ಕನ್ನಡಿಗರು ಕೀಳರಿಮೆಯಿಂದ ಕುಸಿದು ಹೋಗುವುದು ಖಚಿತ. ಇನ್ನು ಆಸ್ಪತ್ರೆ, ಛತ್ರಗಳಲ್ಲೂ ವಲಸಿಗರದೇ ಮೇಲುಗೈ.

ಕೃಷ್ಣರಾಜ ಮಾರುಕಟ್ಟೆಗೆ ಹೋದರೆ ಅಲ್ಲಿ ಕಾಣುವುದು ತಮಿಳು, ಉರ್ದು ಭಾಷಿಕರ ಅಂಗಡಿಗಳೇ. ನಗರದ ಯಾವ ಮೂಲೆಗೆ ಹೋದರೂ ಕೂಲಿಗಳು ತಮಿಳು, ವ್ಯಾಪಾರಿಗಳಲ್ಲೂ ಅನ್ಯಭಾಷಿಕರೇ ಅಧಿಕ. ಬಳೇ ಪೇಟೆ, ಚಿಕ್ಕಪೇಟೆ, ಗಾಂಧಿನಗರಗಳ ಬಹುಮಟ್ಟಿನ ವ್ಯಾಪಾರಿಗಳಲ್ಲಿ ಮಾರ್ವಾಡಿಗಳು, ಗುಜರಾತಿಗಳು, ತಮಿಳರೇ ಕಾಣುತ್ತಾರೆ. ಕನ್ನಡಿಗರೂ ಇದ್ದಾರೆ. ಹುಡುಕಲು ಶ್ರಮಿಸಬೇಕು. ಕೆಮಿಕಲ್ಸ್ ವ್ಯಾಪಾರವಂತು 90%ರಷ್ಟು ಉತ್ತರದವರ ಕೈಲಿದೆ.

ಕೇಂದ್ರ ಸರ್ಕಾರದ ಉದ್ಯಮಗಳು, ಸಂಸ್ಥೆಗಳು, ಕಛೇರಿಗಳು, ಸಾರ್ವಜನಿಕ ವಲಯದ ಉದ್ಯಮಗಳು, ಖಾಸಗಿ ಉದ್ಯಮಗಳಲ್ಲಿ ಕನ್ನಡಿಗರನ್ನು ಬಿಟ್ಟು ಉಳಿದವರಿಗೆ ಮಾತ್ರ ಉದ್ಯೋಗ ಅನ್ನುವ ವಾತಾವರಣವಿತ್ತು. ಕನ್ನಡ ಚಳವಳಿಯ ಪರಿಣಾಮ, ರಾಜ್ಯ ಸರ್ಕಾರದ ಕ್ರಮಗಳಿಂದ ಕನ್ನಡಿಗರಿಗೆ ಕೆಲಸಗಳಲ್ಲಿ ಅವಕಾಶಗಳು ಸಿಗುತ್ತಿವೆ ಅನ್ನುವ ಸಂದರ್ಭದಲ್ಲೇ ಜಾಗತೀಕರಣದ ಪರಿಣಾಮವಾಗಿ ತಮಿಳು, ಮಲೆಯಾಳಿಗಳ ಜೊತೆಗೆ ಉತ್ತರ ಭಾರತದ ಹಿಂದಿವಾಲಗಳೂ ಕನ್ನಡಿಗರ ಉದ್ಯೋಗ ಕಸಿಯಲು ಮುಂದಾಗಿದ್ದಾರೆ. ಎಚ್. ಎ. ಎಲ್. ನಂತಹ ಕಾರ್ಖಾನೆಗಳಲ್ಲಿ ಅಧಿಕಾರಿ ವರ್ಗ ಪೂರ್ಣವಾಗಿ ಹಿಂದಿಯವರ, ಒರಿಯದವರ ಪಾಲಾಗುತ್ತಿದೆ.

ಬೆಂಗಳೂರಿನ ರಾಜಕೀಯದಲ್ಲೂ ವಲಸಿಗರ ಪ್ರಾಬಲ್ಯವಿದೆ. ಒಂದು ಕಾಲದಲ್ಲಿ ತಮಿಳು ನಾಡಿನ ಪ್ರಾದೇಶಿಕ ಪಕ್ಷಗಳಾದ ಡಿ.ಎಂ.ಕೆ, ಎ.ಐ.ಡಿ.ಎಂ.ಕೆ.ಯ ಅಭ್ಯರ್ಥಿಗಳು ಬೆಂಗಳೂರಿನಿಂದ ನಗರ ಪಾಲಿಕೆ, ವಿಧಾನಸಭೆಗೆ ನಿರಂತರವಾಗಿ ಆಯ್ಕೆಯಾಗುತ್ತಿದ್ದರು. ಈಗ ಎಲ್ಲ ರಾಜಕೀಯ ಪಕ್ಷಗಳಲ್ಲಿ ವಲಸಿಗರು ನುಸುಳಿದ್ದಾರೆ. ಕನಿಷ್ಠ 1/3 ಭಾಗದಷ್ಟು ನಗರ ಪಾಲಿಕೆ ಸದಸ್ಯರು ಪರಭಾಷಿಕರು. ತಿರುವಳ್ಳವರ ಪ್ರತಿಮೆ ಸ್ಥಾಪನೆಯ ಹಿಂದೆ ತಮಿಳರನ್ನು ಓಲೈಸುವ ಹುನ್ನಾರವಿತ್ತು ಎಂಬುದನ್ನು ಸುಲಭವಾಗಿ ತಳ್ಳಿಹಾಕಲಾಗದು. ಬೆಂಗಳೂರಿನ ಭೂಗತ ಲೋಕದಲ್ಲಿ ವಲಸಿಗರ ಪ್ರಾಬಲ್ಯ ಹೆಚ್ಚಿದೆ.

ಸ್ಥಳೀಯ ನಿರಾಶ್ರಿತನಾಗಿರುವ ಕನ್ನಡಿಗ

ಬೆಂಗಳೂರಿಗೆ ಬಂದಿರುವ ಬಹಳಷ್ಟು ತಮಿಳರು, ಕೂಲಿಗಳು, ಕಟ್ಟಡದ ಕೆಲಸಗಾರರು, ರಸ್ತೆ, ಕೈಗಾರಿಕೆಗಳಲ್ಲಿ ಕಾರ್ಮಿಕರು. ಇದೇ ರೀತಿ ಕೈಗಾರಿಕೆಗಳಲ್ಲಿನ ಕಾರ್ಮಿಕರು, ಆಸ್ಪತ್ರೆ ದಾದಿಯರು, ಕಛೇರಿ ಸಹಾಯಕರು, ಡಾಟ ಎಂಟ್ರಿ ಮಾಡುವವರು ಮಲೆಯಾಳಿಗಳು, ಪೌರಕಾರ್ಮಿಕರೆಲ್ಲ ತೆಲುಗರು, ವ್ಯಾಪಾರದಲ್ಲಿ ಸೇಟು-ಮಾರ್ವಾಡಿಗಳು. ಹೀಗೆ ಕೆಲವು ಕ್ಷೇತ್ರಗಳು ವಲಸಿಗರದೇ ಸ್ವಾಮ್ಯವಾಗಿ, ಸ್ಥಳೀಯರು ಆ ಕ್ಷೇತ್ರ ಪ್ರವೇಶಿಸುವುದೇ ಅಸಾಧ್ಯ ಅನ್ನುವ ಪರಿಸ್ಥಿತಿಯಿದೆ. ಇಂತಹ ಸನ್ನಿವೇಶದಲ್ಲಿ ಆತ್ಮವಿಶ್ವಾಸ ಕಳೆದುಕೊಂಡು ಸ್ಥಳೀಯರು 'ನಾವು ನಿಷ್ಪ್ರಯೋಜಕರು' ಅನ್ನುವ ಹಂತ ತಲುಪಿ, ವಲಸಿಗರು ಸಮರ್ಥರು ಎನ್ನುವ ಭ್ರಮೆಗೆ ಬಂದು ಬಿಡುತ್ತಾರೆ ಎಂದು ಮನೋವಿಜ್ಞಾನಿಗಳು ಹೇಳುತ್ತಾರೆ.

1991ರಲ್ಲಿ ಕಾವೇರಿ ಮಧ್ಯಂತರ ತೀರ್ಪು ಬಂದಾಗ ಬೆಂಗಳೂರಿನಲ್ಲಾದ ಗಲಭೆಯಿಂದ ತಮಿಳರು ಊರುಗಳಿಗೆ ತೆರಳಿದರು. ಆಗ ಕಟ್ಟಡಗಳ ನಿರ್ಮಾಣ ಕೆಲಸ ಸ್ಥಗಿತವಾಗುವ ಹಂತ ತಲುಪಿತ್ತು. ತಮಿಳರಿಗಿಂತ ಉತ್ತಮ ಕೆಲಸ ಮಾಡುವ ಉತ್ತರ ಕರ್ನಾಟಕದವರನ್ನು ಒಪ್ಪಲು ಬೆಂಗಳೂರಿನ ವಲಸಿಗ ಗುತ್ತಿಗೆದಾರರು ಸಿದ್ಧರಿರಲಿಲ್ಲ. ಇನ್ನು ಬೆಂಗಳೂರಿನಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ / ಆಗಿರುವ ದೇವಸ್ಥಾನಗಳ ಗೋಪುರಗಳು ತಮಿಳು ಸಂಸ್ಕೃತಿಯ ಅನುಕರಣೆಯಂತೆ ಕಾಣುತ್ತವೆ. ಕಣ್ಣಿಗೆ ರಾಚುವ ಬಣ್ಣ, ತಮಿಳರನ್ನು ಹೋಲುವ ವಿಗ್ರಹಗಳು. ಇದಕ್ಕೆ ಕಾರಣ ಗೋಪುರದ ಕೆಲಸ ಮಾಡುವವರು ತಮಿಳರು ಮಾತ್ರ. ಸಂಗೀತ, ಶಿಲ್ಪ, ನೃತ್ಯ ಕ್ಷೇತ್ರಗಳಲ್ಲಿ ತಮಿಳರದೇ ಪ್ರಾಬಲ್ಯ. ನಾವು ತಮಿಳರೇ ಶ್ರೇಷ್ಠ ಎಂದು ಒಪ್ಪಿದ್ದೇವೆ. ಹಾಗಾಗಿ ಸ್ಥಳೀಯ ಕಲಾವಿದರನ್ನು ಕೇಳುವವರೇ ಇಲ್ಲ.

ಆರ್ಥಿಕವಾಗಿ ಕನ್ನಡಿಗರನ್ನು ಸುಲಿಯುತ್ತಿರುವ ಮಾರವಾಡಿ, ಸಿಂಧಿಗಳ ಜೊತೆಗೆ ಸದ್ದಿಲ್ಲದೆ ದಂಡು ದಂಡಾಗಿ ಬಂದು ಉತ್ತರ ಭಾರತೀಯರು ವ್ಯಾಪಾರ, ವಾಣಿಜ್ಯ ಕ್ಷೇತ್ರದಲ್ಲಿ ಹಿಡಿತ ಸಾಧಿಸಿದ್ದಾರೆ. ಒಂದು ಕಾಲದಲ್ಲಿ ತಮಿಳು, ತೆಲುಗು, ಮಲೆಯಾಳಿಗಳ ಹಾವಳಿ ಮಾತ್ರ ಇತ್ತು. ಇಂದು ಬೆಂಗಳೂರಿನಲ್ಲಿ ಹಿಂದಿವಾಲಾಗಳ ಹಾವಳಿ

ಅತಿ ಆಯಿತು ಅನ್ನಿಸುತ್ತದೆ. ಜಯನಗರ ವಾಣಿಜ್ಯ ಸಮುಚ್ಚಯದಂತಹ ಅಚ್ಚಗನ್ನಡ ಜಾಗಗಳಲ್ಲೂ ಹಿಂದಿ ತನ್ನ ಪ್ರಭಾವ ಬೀರಿದೆ. ತರಕಾರಿ ಮಾರುವವರೂ ಹಿಂದಿಯಲ್ಲಿ ಮಾತನಾಡುತ್ತಾರೆ. ಹಿಂದಿ ಜನ ಮರಾಠದ ಸಂಸ್ಕೃತಿ ನಾಶಮಾಡಿ, ಫ್ಲಾಟ್ ಸಂಸ್ಕೃತಿಯನ್ನು ಹರಡುತ್ತಿದ್ದಾರೆ. ಜೊತೆಗೆ ಕನ್ನಡವನ್ನು 'ಕನ್ನಡ್' ಮಾಡಿದ್ದಾರೆ. 'ರಾಷ್ಟ್ರ ಭಾಷೆ ಹಿಂದಿ' ಮಾತೃಭಾಷೆಯ ಜನ ಕನ್ನಡ ಕಲಿಯಬೇಕಿಲ್ಲ ಎಂಬ ಧಿಮಾಕು ಅವರದು. ಮಾಜಿ ಸೈನಿಕರಿಗೆ ಮೀಸಲಾದ ಹುದ್ದೆಗಳು ತಮಿಳರ ಪಾಲಾಗುತ್ತಿವೆ. ಕಾರ್ಖಾನೆಗಳು, ಆಸ್ಪತ್ರೆ ಕೆಲಸಗಳು ಶತಮಾನಗಳಿಂದ ತಮಿಳು, ಮಲೆಯಾಳಿಗಳಿಗೆ ಮೀಸಲಾಗಿವೆ. ಕಾರ್ಖಾನೆಗಳ ಕಾಲೋನಿಗಳನ್ನು 'ಮಿನಿ ಕೇರಳ', 'ಮಿನಿ ತಮಿಳು ನಾಡು' ಎಂದು ಜನ ಗುರುತಿಸುವ ಕಾಲವೊಂದಿತ್ತು. ಈಗ ಅವು 'ಮಿನಿ ಉತ್ತರ ಭಾರತ'ವಾಗುತ್ತಿವೆ.

2001ರ ಜನಗಣತಿಯಂತೆ ಬೆಂಗಳೂರಿನಲ್ಲಿ ಕನ್ನಡಿಗರ ಸಂಖ್ಯೆ 39. 43%. ಗ್ರಾಮಾಂತರ ಪ್ರದೇಶ ಸೇರಿಸಿಕೊಂಡರೂ 42.01% ಮಾತ್ರ. ಅಧಿಕೃತವಾಗಿ 22 ಭಾಷೆಗಳನ್ನಾಡುವ ಜನ ಇಲ್ಲಿದ್ದಾರೆ (ವಿವರದ ಕೋಷ್ಟಕ ಕೆಳಗಿದೆ) ಜನಗಣತಿಯಲ್ಲಿ ಸೇರದ ಇನ್ನು 10 ಭಾಷೆಗಳ ಜನ ಇಲ್ಲಿದ್ದಾರೆಂದು ತಜ್ಞರು ಹೇಳುತ್ತಾರೆ. ಬೆಂಗಳೂರನ್ನು ಕೇಂದ್ರಾಡಳಿತ ಪ್ರದೇಶ ಮಾಡುವಂತೆ ತಮಿಳರು ವಿ.ವಿ.ಗಿರಿ ರಾಷ್ಟ್ರಪತಿಗಳಾಗಿದ್ದಾಗ ಒಮ್ಮೆ, ಆರ್. ವೆಂಕಟರಾಮನ್ ರಾಷ್ಟ್ರಪತಿಯಾದಾಗ ಮಗದೊಮ್ಮೆ, ಮನವಿಯನ್ನು ನೀಡಿದ್ದರು. ಕನ್ನಡ ನಾಡಿನ ರಾಜಧಾನಿ ಬಹುಭಾಷಾನಗರ ಎಂದು ಹೆಮ್ಮೆಯಿಂದ ಗುರುತಿಸಿಕೊಳ್ಳುತ್ತಿರುವುದಕ್ಕೆ ಏನೆನ್ನಬೇಕು.

ಬೆಂಗಳೂರು ನಗರ ಜಿಲ್ಲೆ ಭಾಷಾವಾರು ಜನಸಂಖ್ಯೆ (2001ರ ಜನಗಣತಿ)

ಮಾತೃ ಭಾಷೆ	**ಒಟ್ಟು**	**%**	**ಗ್ರಾಮೀಣ**	**%**	**ನಗರ**	**%**
ಕನ್ನಡ	2715223	42.01	471823	60.99	2243400	39.43
ತಮಿಳು	1204745	18.64	79662	10.30	1125083	19.77
ತೆಲುಗು	1011179	15.64	149457	19.32	861722	15.15
ಉರ್ದು	843602	13.05	46033	5.95	797569	14.02
ಹಿಂದಿ	222668	3.45	11372	1.47	211296	3.71
ಮಲೆಯಾಳಂ	193101	2.99	6287	0.81	186814	3.28
ಮರಾಠಿ	144863	2.24	6039	0.78	138824	2.44
ಕೊಂಕಣಿ	46466	0.72	781	0.10	45685	0.80
ಗುಜರಾತಿ	30052	0.46	308	0.04	29744	0.52
ಬೆಂಗಾಲಿ	22153	0.34	933	0.12	21220	0.37
ಪಂಜಾಬಿ	10374	0.16	224	0.03	10150	0.18
ಸಿಂಧಿ	10317	0.16	9	0.00	10308	0.18
ನೇಪಾಳಿ	4875	0.08	558	0.07	4317	0.08

ಅಸ್ಸಾಮಿ	1494	0.02	81	0.01	1413	0.02
ಮಣಿಪುರಿ	688	0.01	19	0.00	669	0.01
ಡೋಗರಿ	353	0.01	0	0.00	669	0.01
ಮೈಥಿಲಿ	263	0.00	7	0.00	256	0.00
ಸಂಸ್ಕೃತ	239	0.00	4	0.00	235	0.00
ಬೋಡೋ	57	0.00	7	0.00	50	0.00
ಸಂತಾಲಿ	53	0.00	4	0.00	49	0.00
ಇತರೆ	638	0.01	20	0.00	618	0.01

(2011ರ ಜನಗಣತಿಯಲ್ಲಿ ವಲಸಿಗರ ಸಂಖ್ಯೆ ಇನ್ನಷ್ಟು ಹೆಚ್ಚಿರುವ ಸಾಧ್ಯತೆಯಿದೆ).

ಕಣ್ಮರೆಯಾಗುತ್ತಿರುವ ಕನ್ನಡ ದೇವರುಗಳು

ಅನ್ಯಪ್ರಾಂತೀಯ ಜನ ಮಾತ್ರ ವಲಸೆ ಬರುತ್ತಿಲ್ಲ. ಅವರೊಟ್ಟಿಗೆ ಅಲ್ಲಿನ ದೇವರ್ರೂ ಕರೆತರುತ್ತಿದ್ದಾರೆ. ಅಯ್ಯಪ್ಪ, ಕರಿಮಾರಿ ಅಮ್ಮನ್, ಆಂಕಾಳಪರಮೇಶ್ವರಿ, ಓಂಶಕ್ತಿ, ಮೇಲ್ಮದ ಮತ್ತೂರ್, ಅಮ್ಮನ್ ಕೊಯಿಲ್‌ಗಳು ಬರುತ್ತಿವೆ. ಸಂತೋಷಿಮಾ, ಕಾಳಿಮಾತಾ, ವೈಷ್ಣೋದಿ, ಸಾಯಿ ಮಂದಿರಗಳೂ ಬರುತ್ತಿವೆ. ಮಾರಮ್ಮ ಮಾರಿಯಮ್ಮನ್ ಆದರೆ ಜಲಗೇರಮ್ಮ ವೆಳ್ಳರಿಯಮ್ಮನ್ ಆಗಿದ್ದಾಳೆ. ಹಟ್ಟಿಲಕ್ಕಮ್ಮ, ಮಿಡಿಚಲಮ್ಮ, ಹಳೆಯೂರಮ್ಮ ಪ್ಲೇಗಮ್ಮ ಎಲ್ಲ ಮರೆಯಾಗುತ್ತಿದ್ದಾರೆ. ಗುಡಿ, ದೇವಸ್ಥಾನಗಳು ಮಂದಿರ್, ಕೊಯಿಲ್, ದೇವಸ್ವಂ, ಟೆಂಪಲ್‌ಗಳಾಗುತ್ತಿವೆ. ನಮ್ಮ ದೇವರುಗಳು ಕೇವಲ ಜನಪ್ರಿಯತೆಯನ್ನಲ್ಲ, ಶಕ್ತಿಯನ್ನೂ ಕಳೆದುಕೊಳ್ಳುತ್ತಿವೆ ಅನ್ನುವ ಭಾವನೆ ಕನ್ನಡಿಗರದು. ಅದಕ್ಕೊಂದು ಉದಾಹರಣೆ ಕರ್ನಾಟಕದಲ್ಲಿ ಎಷ್ಟೊಂದು ಶನಿ ದೇವಸ್ಥಾನಗಳಿದ್ದರೂ ಶನಿಕಾಟವಿದೆ ಎಂದು ನಮ್ಮ ರಾಜಕಾರಣಿಗಳಿಗನಿಸಿದರೂ ಅವರೂ ನೇರವಾಗಿ ಹೋಗುವುದು ತಮಿಳುನಾಡಿನ ಕಾರೈಕಲ್ ಸನಿದೇವರ್ (ಶನಿಮಹಾತ್ಮ) ಹತ್ತಿರಕ್ಕೆ. ಇತ್ತೀಚೆಗೆ ಕನ್ನಡ ಕಾರ್ಯಕರ್ತೆಯೊಬ್ಬರ ಮನೆಗೆ ಹೋಗಿದ್ದೆ. ಅವರ ಮನೆಯಲ್ಲೊಂದು ಚಿಕ್ಕ ತಮಿಳು ಫಲಕವಿತ್ತು. ಅದೇನೆಂದು ವಿಚಾರಿಸಿದೆ. 'ಅದೇನೋ ಅರುಳ್ ಅಂತ. ಈ ಬರಹವಿದ್ದರೆ ದುಷ್ಟ ಶಕ್ತಿಗಳು ಮನೆ ಪ್ರವೇಶಿಸುವುದಿಲ್ಲ' ಎಂದರು. ಕನ್ನಡದಲ್ಲಿ ಬರೆದರಾಗದೇ? ಎಂದು ಕೇಳಿದಾಗ 'ಅದರ ಶಕ್ತಿ ಕ್ಷೀಣಿಸುತ್ತದೆ' ಎಂದರು. ಇಂತಹ ಸಂಗತಿಗಳು ಮಹತ್ವದ್ದೇನಲ್ಲ. ಇದು ಮಾನಸಿಕವಾಗಿ ಕನ್ನಡಿಗರು ದುರ್ಬಲರಾಗುತ್ತಿದ್ದಾರೆ ಎಂಬುದನ್ನು ಸಾದರ ಪಡಿಸುತ್ತವೆ ಎಂಬುದನ್ನು ತಳ್ಳಿಹಾಕಲಾಗದು. ಇತಿಹಾಸ ಪ್ರಸಿದ್ಧ 'ನರಹರಿರಾಯರಗುಡ್ಡ'ವನ್ನು ಕೆಲವು ವರ್ಷಗಳ ಹಿಂದೆ 'ಪೊನ್ನುಮಲೈ' ಎಂದು ಕರೆದು ತಮಿಳು ಬೋರ್ಡ್ ಹಾಕಿದ್ದರು. ಕನ್ನಡ ಹೋರಾಟಗಾರರು ಜಾಗೃತರಾಗಿ ಅದನ್ನು ಕಿತ್ತುಹಾಕಿದರು.

ಇನ್ನೊಂದು ಸಂಗತಿ ಇಲ್ಲಿ ಪ್ರಸ್ತಾಪಿಸಬೇಕು. ಬೆಂಗಳೂರು ತುಂಬ ಆಂಧ್ರ, ಪಂಜಾಬಿ, ಗುಜರಾತಿ, ರಾಜಸ್ಥಾನಿ, ತಮಿಳುನಾಡು ಶೈಲಿ ಹೋಟಲ್‌ಗಳು ಹೆಚ್ಚುತ್ತಿವೆ. ನಮ್ಮ ಯುವ ಜನತೆ ಪರ ಪ್ರಾಂತದ ಆಹಾರಗಳಿಗೆ ಮಾರು ಹೋಗಿದ್ದಾರೆ. ನಿಧಾನವಾಗಿ ನಮ್ಮ ತಿಂಡಿ, ತಿನಿಸುಗಳು ಕಣ್ಮರೆಯಾಗುತ್ತಿವೆ. ವೇಷಭೂಷಣಗಳಲ್ಲೂ ನಮ್ಮ ಸಾಂಪ್ರದಾಯಿಕ ಉಡುಪು ಹಿಂದೆ ಸರಿದಿದೆ. ಇವೆಲ್ಲ ಅಸ್ಮಿತೆಯನ್ನು ನಾಶಮಾಡುತ್ತಿರುವ ಸಂಗತಿಗಳು.

ಹೊಸ ತಂತ್ರಜ್ಞಾನಗಳಾದ ಐ.ಟಿ, ಬಿ.ಟಿ, ಪರಿಸರ ವಿಜ್ಞಾನ, ಆರ್ಥಿಕ ವ್ಯವಸ್ಥೆಗಳು ಈಗಾಗಲೇ ಶೋಷಿತ ಸ್ಥಳೀಯ ಸಮುದಾಯವನ್ನೇ ತುಳಿಯುತ್ತಿವೆ. ಕನ್ನಡ ಚಳವಳಿ ಆರಂಭವಾದದ್ದೇ ವಲಸಿಗರ ಆಕ್ರಮಣದಿಂದ 'ಕನ್ನಡ-ಕನ್ನಡಿಗ-ಕರ್ನಾಟಕ'ವನ್ನು ಉಳಿಸಲು. ಕನ್ನಡ ಚಿತ್ರರಂಗ ಇನ್ನೂ ತಮಿಳರ ಹಿಡಿತದಲ್ಲೇ ಇದೆ. ಚಿತ್ರದ ಭಾಷೆ ಕನ್ನಡವಾದರೂ ಲೈಟ್ ಬಾಯ್‌ನಿಂದ ಹಿಡಿದು, ತೆರೆಯ ಹಿಂದಿರುವ ತಂತ್ರಜ್ಞರಲ್ಲಿ 80%ರಷ್ಟು ತಮಿಳರು. ಕನ್ನಡದ ಕೃತಿ, ಕಲಾವಿದರಿಗೆ ಅವಕಾಶ ನೀಡದೇ ಪರ ಪ್ರಾಂತ್ಯದ ಕಲಾವಿದರಿಗೆ ಬೆಂಗಳೂರಿನ ಸಾರ್ವಜನಿಕ ಸಂಗೀತ ಕಛೇರಿಗಳಲ್ಲಿ ಮಣೆ ಹಾಕುತ್ತಿದ್ದುದನ್ನು ವಿರೋಧಿಸಿ 1962ರಲ್ಲಿ ಅ.ನ.ಕೃ. ಮಾ.ರಾಮಮೂರ್ತಿ ಮುಂದಾಳುತನದಲ್ಲಿ ಆರಂಭಗೊಂಡ ಚಳವಳಿ ವಲಸಿಗರ ದಬ್ಬಾಳಿಕೆಯನ್ನು ಪ್ರತಿಭಟಿಸಿದ ಮೊದಲ ಹೋರಾಟ. ಅಂದಿನಿಂದ ಇಂದಿನವರೆಗೆ ನಡೆದಿರುವ ಕನ್ನಡ ಹೋರಾಟಗಳೆಲ್ಲ ವಲಸಿಗರಿಂದ 'ಕನ್ನಡ ಭಾಷೆ ಮತ್ತು ಸಂಸ್ಕೃತಿ' ಸಂರಕ್ಷಿಸಲೇ ನಡೆದಿವೆ.

ಇಂಗ್ಲಿಷ್, ಹಿಂದಿ ಆಗಮನಕ್ಕೆ ಮುನ್ನ ಯಾರು ಎಲ್ಲಿಗೆ ಹೋದರೂ ಅಲ್ಲಿನ ಭಾಷೆಯನ್ನು ಕಲಿಯುವುದು ಅನಿವಾರ್ಯವಾಗಿದ್ದರಿಂದ, ವಲಸಿಗರು ದ್ವೀಪಗಳಾಗಿ ಉಳಿಯದೇ ಮುಖ್ಯವಾಹಿನಿಯಲ್ಲಿ ಬೆರೆತು ಹೋಗುತ್ತಿದ್ದರು.

ವಲಸೆಯ ಚಾರಿತ್ರಿಕ ಹಿನ್ನೋಟ: ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ ನೆಲಸುವುದೇ ವಲಸೆ. ವಲಸೆ ಮಾನವನ ಇತಿಹಾಸದಷ್ಟೇ ಹಳೆಯದು. ಉತ್ತಮ ವಾತಾವರಣ ಹಾಗೂ ಆಹಾರಗಳು ವಲಸೆಯ ಮೂಲ ಆಶಯಗಳು. ನಾಗರೀಕತೆಯು ಬೆಳೆಯಲು ವಲಸೆಯೂ ಒಂದು ರೀತಿಯಲ್ಲಿ ಕಾರಣ. ಹೀಗೆ ಮಾನವನ ಬದುಕಿನೊಂದಿಗೆ ಬೆಳೆದು ಬಂದ ವಲಸೆಯು ಇಂದಿನ ಜಾಗತಿಕ ವ್ಯವಸ್ಥೆಯಿಂದ ಸೃಷ್ಟಿಯಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಇತ್ಯಾದಿ ಸಮಸ್ಯೆಗಳ ಮೇಲೂ, ದೈನಂದಿನ ಜನಜೀವನದ ಮೇಲೂ ಬೀರಿರುವ ಪರಿಣಾಮ ಅತ್ಯಂತ ಸಂಕೀರ್ಣವಾದದ್ದು. ಆರಂಭದಲ್ಲಿ ಬೆಂಗಳೂರಿಗೆ ಬಂದ ವಲಸಿಗರು ಬೆರೆತುಹೋದರು. ಅವರು ಪ್ರತ್ಯೇಕವಾಗಿ ಉಳಿಯಲು ಪ್ರಯತ್ನಿಸಿದ್ದು, 19ನೆಯ ಶತಮಾನದ ನಂತರ. ಆದರೆ, ಅದರ ಮೂಲವಿರುವುದು 16ನೇ ಶತಮಾನದಲ್ಲಿ.

ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಆಂಧ್ರ ತೀವ್ರ ಬರಗಾಲಕ್ಕೆ ತುತ್ತಾಯಿತು. ಆಗ ಅಲ್ಲಿನ ರೈತರು (ರೆಡ್ಡಿಗಳು), ನೇಕಾರರು (ತೆಲುಗು ದೇವಾಂಗ) ದೊಡ್ಡ ಸಂಖ್ಯೆಯಲ್ಲಿ ಬೆಂಗಳೂರಿಗೆ ಬಂದರು. ವಿಜಾಪುರದ ದೊರೆ ರಣದುಲ್ಲಾಖಾನ್ ಮುಮ್ಮಡಿ ಕೆಂಪೇಗೌಡನನ್ನು ಸೋಲಿಸಿ ಷಾಜಿ ಭೋಂಸ್ಲೆಯನ್ನು ಬೆಂಗಳೂರಿನ ಜಾಗೀರುದಾರನನ್ನಾಗಿ ನೇಮಿಸಿದನು. ಷಾಜಿ ಜೊತೆ ದೊಡ್ಡ ಸಂಖ್ಯೆಯಲ್ಲಿ ಮರಾಠಿಗರು ಬಂದರು. ಕ್ರಿ. ಶ. 1699 ರಲ್ಲಿ ಚಿಕ್ಕದೇವರಾಯನು ಬೆಂಗಳೂರು ಅರಸನಾದ ಮೇಲೆ ಶ್ರೀವೈಷ್ಣವರಿಗೆ (ಅಯ್ಯಂಗಾರ್) ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು.

ಇವನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ತಿರುಮಾಲಾರ್ಯ ಮಧುರೈ ನಾಯಕರ ಆಸ್ಥಾನದಲ್ಲಿ ಮಂತ್ರಿಯಾಗಿದ್ದವನು. ವಿಷ್ಣು ದೇವಾಲಯಗಳ ಪೂಜೆ ಮತ್ತಿತರ ಕೆಲಸಗಳಿಗೆ ತಮಿಳುನಾಡಿನಿಂದಲೇ ಶ್ರೀ ವೈಷ್ಣವರನ್ನು ಕರೆತಂದರು. ಮಂತ್ರಿಯಾಗಿ ತಿರುಮಲಾರ್ಯ ತನ್ನ ವರ್ಚಸ್ಸನ್ನು ಬಳಸಿ ಆಯಕಟ್ಟಿನ ಸ್ಥಳಗಳಲ್ಲಿ ತನ್ನವರನ್ನು ಪ್ರತಿಷ್ಠಾಪಿಸಿದ 'ವಿದ್ವತ್ ಒಪ್ಪಂದ' ಎನ್ನುವ ಹೆಸರಿನಲ್ಲಿ ದೊಡ್ಡ ಸಂಖ್ಯೆಯ ಜನರನ್ನು ಕರೆತಂದ. ನಿಪುಣತೆಯ ಹೆಸರಿನಲ್ಲಿ ಅಯ್ಯರ್‌ಗಳನ್ನು ಕರೆತಂದ. ಇದೇ ಕಾಲದಲ್ಲಿ 12000 ನೇಕಾರರು ತಮಿಳುನಾಡಿನಿಂದ ಬಂದರು (ಬಾರಮಹಲ್ ನೇಕಾರರು).

ಕನ್ನಡಿಗರನ್ನು ಕಾಡಿದ ವಲಸಿಗರ ಹಾವಳಿ

ಹೈದರ್ ರಾಜನಾದ ಮೇಲೆ ಲಾಲ್‌ಬಾಗ್ ಕೆಲಸಕ್ಕೆ ತಮಿಳುನಾಡಿನ ಸೇಲಂನಿಂದ ಕೆಲಸಗಾರರನ್ನು ಕರೆತಂದ; ಮರಾಠಿಗಳನ್ನು ಅರಮನೆ ಕೆಲಸಕ್ಕೆ ನೇಮಕ ಮಾಡಿಕೊಂಡ. ಸ್ಥಳೀಯರನ್ನು ನಂಬದ ಟಿಪ್ಪು ಮರಾಠಿ ಸೈನಿಕರನ್ನು ಕರೆತಂದು, ಅವರನ್ನು ಸ್ಥಳೀಯರೊಡನೆ ಬೆರೆಯಲು ಬಿಡದೆ, ಸ್ಥಳೀಯರನ್ನು ಹತ್ತಿಕ್ಕಲು ಬಳಸಿದ. ಮೈಸೂರಿನ ಅರಸರು ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಲು ಕಂಪನಿ ಸರ್ಕಾರದೊಡನೆ ರಾಜಿ ಮಾಡಿಕೊಂಡು ಹೊರಗಿನವರನ್ನು ದಿವಾನರಾಗಿ ಒಪ್ಪಿಕೊಂಡಿದ್ದರಿಂದ ವಲಸೆ ಹೆಚ್ಚಿತು. ದಿವಾನರು ರಾಜ್ಯ ಸರ್ಕಾರದ ಎಲ್ಲ ಹುದ್ದೆಗಳಿಗೆ ತಮ್ಮ ರಾಜ್ಯದವರನ್ನೇ ಕರೆತಂದರು. ದಿವಾನರ ಕಛೇರಿ ಬೆಂಗಳೂರಿನಲ್ಲಿದ್ದುದರಿಂದ ವಲಸಿಗರು ಇಲ್ಲೇ ಉಳಿದರು. ವಲಸಿಗರು ಹೇಗೆ ಸ್ಥಳೀಯ ಪ್ರಗತಿಗೆ ವಿರುದ್ಧವಾಗಿದ್ದರು ಎಂಬುದಕ್ಕೆ ಮಾಸ್ತಿ ಅವರ ಆತ್ಮಕಥನದಲ್ಲಿ ನಿದರ್ಶನವಿದೆ.

ವಿಶ್ವೇಶ್ವರಯ್ಯ ಚೀಫ್ ಎಂಜಿನಿಯರ್ ಆದ ನಂತರ ಹಲವು ಅಭಿವೃದ್ಧಿ ಯೋಜನೆ ಹಮ್ಮಿಕೊಂಡಿದ್ದು ಎಲ್ಲರಿಗೂ ತಿಳಿದ ಸಂಗತಿ. ಅವರು ಕಾವೇರಿ ನದಿಯ ನೀರನ್ನು ಬಳಸಿಕೊಳ್ಳಲು ಕನ್ನಂಬಾಡಿ ಅಣೆಕಟ್ಟು ಕಟ್ಟುವ ನಿರ್ಧಾರ ಮಾಡಿದಾಗ ತಮಿಳು ಮೂಲದ ಕೆಲ ಅಧಿಕಾರಿಗಳು ತಿರುಚ್ಚಿ, ತಂಜಾವೂರು ರೈತರಿಗೆ ತೊಂದರೆ ಆಗುತ್ತದೆ; ಮೇಲಿನವರು ನೀರು ಹಿಡಿದಿಟ್ಟುಕೊಳ್ಳುವುದು ಸರಿಯಲ್ಲ ಎಂದು ಅಪಸ್ವರ ಎತ್ತಿದ್ದು ಅನಂತರ ಬೆಂಗಳೂರಿನ ತಮಿಳು ಸಂಘ ಅಣೆಕಟ್ಟು ನಿರ್ಮಿಸುವುದನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ ಸಂಗತಿಗಳನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ತಮ್ಮ ಆತ್ಮಕತೆ 'ಭಾವ–2'ರಲ್ಲಿ ಪ್ರಸ್ತಾಪಿಸಿದ್ದಾರೆ. 'ತಮಿಳರ ಮನೋಭಾವ' ಎಂಬ ಉಪಶೀರ್ಷಿಕೆಯಲ್ಲಿ ಇಂತಹ ಹಲವು ನಿದರ್ಶನಗಳನ್ನು ನೀಡಿದ್ದಾರೆ. ಇದೇ ಸಂದರ್ಭದಲ್ಲಿ ನಡೆದ 'ಬೆಂಗಳೂರು ವಣಿಕರ ಸಭೆಯಲ್ಲಿ ಕೆ. ಪಿ. ಪುಟ್ಟಣ್ಣ ಶೆಟ್ಟರು ಸ್ಥಳೀಯರ ಕೈಯಲ್ಲಿನ ವ್ಯಾಪಾರ ವ್ಯವಹಾರಗಳು ಪರಸ್ಥಳದವರ ಕೈಗೆ ಹೋಗುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಇದಕ್ಕೆ ಪೂರಕವಾಗಿ ವೆಂಕಟಕೃಷ್ಣಯ್ಯ (ತಾತಯ್ಯ) ನವರ ಸಂಪಾದಕತ್ವದ 1912ರ ಸಾಧ್ವಿ ಪತ್ರಿಕೆಯಲ್ಲಿ 'ಬೆಂಗಳೂರಿನ ಚಿಕ್ಕ ಪೇಟೆ, ದೊಡ್ಡ ಪೇಟೆ, ಮಂಡಿ ಪೇಟೆ ಮುಂತಾದ ಪೇಟೆಗಳಲ್ಲಿ ಬಣಜಿಗ ಲಿಂಗಾಯತರು ತಮ್ಮ ಅಂಗಡಿಗಳನ್ನು–ಮಂಡಿಗಳನ್ನು ಮರವಾಡಿಗಳಿಗೆ ಮಾರುತ್ತಿದ್ದಾರೆ. ಗುಜರಿ–ಲೋಹದ ವ್ಯಾಪಾರ ತುರಕರ ಕೈಯಲ್ಲಿದೆ. ದಿನಸಿ ತೆಲುಗರ ಕೈಯಲ್ಲಿದೆ. ತರಕಾರಿ ವ್ಯಾಪಾರ ತಮಿಳರ ಕೈಗೆ ಹೋಗುತ್ತಿದೆ. ಮರಮಟ್ಟುಗಳ ವ್ಯಾಪಾರ ಮಲೆಯಾಳಿಗಳು, ಮುಸಲ್ಮಾನರ ವಶಕ್ಕೆ ಹೋಗುತ್ತಿವೆ' ಎಂದು ಹೇಳಿದ್ದು ವರದಿಯಾಗಿವೆ.

ತಮಿಳರನ್ನು ಪೋಷಿಸಿದ ಆಂಗ್ಲರು

ಬೆಂಗಳೂರಿನಲ್ಲಿ ತಮಿಳರ ಸಂಖ್ಯೆ ಹೆಚ್ಚಲು ಕಾರಣ ಬ್ರಿಟಿಷರು. ಬೆಂಗಳೂರಿನ ದಂಡು ಪ್ರದೇಶ ನೇರವಾಗಿ ಆಂಗ್ಲರ ಆಡಳಿತದಲ್ಲಿತ್ತು. ಮದ್ರಾಸಿನಲ್ಲಿ ಅವರ ಆಡಳಿತ ಕೇಂದ್ರವಿದ್ದುದರಿಂದ ಆಯ್ಕೆ ಅಲ್ಲೇ ನಡೆಯುತ್ತಿತ್ತು. ಚಿನ್ನದ ಗಣಿ, ಮಿಲಿಟರಿ 515 ವರ್ಕ್‌ಷಾಪ್, ಸಿಗರೇಟು ಕಂಪನಿ, ಎಚ್. ಎ. ಎಲ್. ಮುಂತಾದ ಬೆಂಗಳೂರಿನ ಸುತ್ತು ಮುತ್ತಲಿನ ಹಳೆಯ ಕಛೇರಿ, ಕೈಗಾರಿಕೆಗಳಲ್ಲಿ ತಮಿಳರ ಪ್ರಾಬಲ್ಯ ಹೆಚ್ಚಿತು. ಮದ್ರಾಸ್‌ನಿಂದ ಬೆಂಗಳೂರಿಗೆ ವರ್ಗವಾಗಿ ಬಂದ ಬ್ರಿಟಿಷ್ ಅಧಿಕಾರಿಗಳು ತಮ್ಮ ಅಡಿಗೆಯವರಿಂದ ಹಿಡಿದು ಮಾಲಿಯವರೆಗೆ ಎಲ್ಲ ಸೇವಕರನ್ನೂ ತಮಿಳು ನಾಡಿನಿಂದಲೇ ಕರೆತಂದರು. ಭಾರತ ಸ್ವಾತಂತ್ರ್ಯವಾದ ಮೇಲೆ ಬ್ರಿಟಿಷರು ತಮ್ಮ ತಾಯ್ನಾಡಿಗೆ ಮರಳಿದರು. ಆದರೆ, ಅವರು ಕರೆತಂದ ತಮಿಳರು ಇಲ್ಲೇ ಉಳಿದು ದಂಡು ಪ್ರದೇಶ ಮತ್ತು ಅದರ ಆಸುಪಾಸಿನ ಪ್ರದೇಶಗಳಲ್ಲಿ ತಮ್ಮ ವಸಾಹತು ಎಂಬಂತೆ ನೆಲೆಯೂರಿದ್ದಾರೆ. ಈವರಿಗೂ ತಮಿಳರನ್ನು 'ಬ್ಲ್ಯಾಕ್ ಬ್ರಿಟಿಷ್'ರೆಂದು ಕೆಲವರು ಗುರುತಿಸುತ್ತಾರೆ. ಕಾರ್ಖಾನೆಗಳಲ್ಲಿ ಕೆಲಸ ಮಾಡಿ ಅನುಭವವಿದ್ದ ಇವರು ಬೆಂಗಳೂರಿನಲ್ಲಿ ಪ್ರಾರಂಭವಾದ ಎಲ್ಲ

ಕಾರ್ಖಾನೆಗಳಿಗೆ ನುಸುಳಿದರು. 1898ರಲ್ಲಿ ನಗರದಲ್ಲಿ ಪ್ಲೇಗ್ ಬಂದು ಎರಡು ಬಟ್ಟೆಗಿರಣಿಗಳು ಮುಚ್ಚಿದವು. ಅವುಗಳನ್ನು ಪುನರ್ ಆರಂಭಿಸಲು ತಮಿಳು ನಾಡಿನ ಆರ್ಕಾಟ ಜಿಲ್ಲೆಯಿಂದ 1600 ಕಾರ್ಮಿಕರನ್ನು ಕರೆತರಲಾಯಿತು. ಇವರು ಹಳೆಯ ಬೆಂಗಳೂರಿನಲ್ಲೇ ನೆಲಸಿದರು. ಅರಳೇ ಪೇಟೆ, ಅಕ್ಕಿ ಪೇಟೆ, ಮಾಗಡಿ ರಸ್ತೆ, ಮೆಜೆಸ್ಟಿಕ್‌ಗಳಲ್ಲಿ ತಮಿಳರ ಸಂಖ್ಯೆ ಹೆಚ್ಚಲು ಅರಳೆಗಿರಣಿಗಳೇ ಕಾರಣ.

ಕರ್ನಾಟಕ ಏಕೀಕರಣವಾದ ನಂತರವೂ ಬೆಂಗಳೂರಿನಲ್ಲಿ ಕನ್ನಡಿಗರ ಸ್ಥಿತಿ ಸುಧಾರಿಸಲಿಲ್ಲ. 'ತಮಿಳು ನಾಡಿನಲ್ಲಿ ಡಿ.ಎಂ.ಕೆ ಅಸ್ತಿತ್ವಕ್ಕೆ ಬಂದ ಮೇಲೆ ಬೆಂಗಳೂರಿನಲ್ಲಿ ತಮಿಳರ ಆಕ್ರಮಣಕಾರಿ ಪ್ರವೃತ್ತಿ ಹೆಚ್ಚಿದೆ. ಜನನಿಬಿಡ ಸ್ಥಳಗಳಾದ ರೈಲ್ವೆ ನಿಲ್ದಾಣ, ಗಾಂಧಿನಗರ, ಬಳೇಪೇಟೆ, ಅರಳೇ ಪೇಟೆ, ಶ್ರೀರಾಮಪುರ, ಇಡೀ ದಂಡು ಪ್ರದೇಶಗಳಲ್ಲಿ ಕನ್ನಡ ಕಾಣದು-ಕೇಳದು' ಎಂದು 1960ರಲ್ಲಿ ಅ.ನ.ಕೃ ಹೇಳಿದ್ದಾರೆ. 'ನಗರಸಭೆ ಆರ್ಟಿಸ್ಟ್, ಪೈಂಟರ್ ಹುದ್ದೆಗೆ ತಮಿಳು, ತೆಲುಗು ಭಾಷಾಜ್ಞಾನ ಅಪೇಕ್ಷಣೀಯ' ಎಂದು ಜಾಹೀರಾತಿನಲ್ಲಿದೆ. ಕೈಗಾರಿಕಾ ಪ್ರದೇಶಗಳಲ್ಲಂತು ತಮಿಳು, ಮಲೆಯಾಳಂ ವ್ಯವಹಾರಿಕ ಭಾಷೆಯಾಗಿತ್ತು. ಅದರ ವಿವರ ನಮೂದಿಸಿದರೆ ಹಲವು ಪುಟಗಳೇ ಬೇಕು.

ಅ.ನ.ಕೃ, ರಾಮಮೂರ್ತಿ ನೇತೃತ್ವದ ಚಳವಳಿಯಿಂದ ಕನ್ನಡಿಗರು ಜಾಗೃತರಾದಾಗ ಅದನ್ನು ತಮಿಳರಿಗೆ ಸಹಿಸಲಾಗಲಿಲ್ಲ. 13-08-1963 ರಂದು 'ಬೆಂಗಳೂರು ಜನಸಂಖ್ಯೆ 35% ತಮಿಳರು. ಕೇಂದ್ರ, ರಾಜ್ಯ, ಖಾಸಗೀ ಉದ್ಯಮಗಳಲ್ಲಿ ಹೆಚ್ಚಿನ ಉತ್ಪಾದನೆ ಮಾಡಿ ರಾಜ್ಯದ ಅಭಿವೃದ್ಧಿಗೆ ನೆರವಾಗುತ್ತಿದ್ದಾರೆ. ಕ್ರೀಡಾರಂಗದಲ್ಲೂ ರಾಜ್ಯವನ್ನೂ ಪ್ರತಿನಿಧಿಸುವವರು ತಮಿಳರು. ಹೀಗೆ ನಾಡುಕಟ್ಟಿದ ತಮಿಳು ಜನಾಂಗಕ್ಕೆ ಇತ್ತೀಚೆಗೆ ಕನ್ನಡ ದುರಭಿಮಾನಿಗಳು ತೊಂದರೆ ನೀಡುತ್ತಿದ್ದಾರೆ. ನಗರದಲ್ಲಿ ಅಲ್ಪಭಾಷಾ ಸಂಖ್ಯಾತರು ನಿರ್ಭಯವಾಗಿ ಜೀವಿಸುವ ವಾತಾವರಣವಿರಬೇಕು ಎಂದು ಕೇಂದ್ರ ಅಲ್ಪ ಸಂಖ್ಯಾತ ಆಯೋಗಕ್ಕೆ ತಮಿಳು ಸಂಘ ಮನವಿ ಸಲ್ಲಿಸಿತ್ತು. ಮನವಿಗೆ ಮಾಜಿ ಉಪಮೇಯರ್ ಜಯಶೀಲನ್, ಪಳನಿವೇಲು, ಕೆ. ಗೋವಿಂದರಾಜಾ ಮತ್ತು ಪ್ರೊ. ಧರ್ಮಲಿಂಗಂ ಸಹಿ ಮಾಡಿದ್ದರು. 'ಬೆಂಗಳೂರಿನ ಬಹುಭಾಷಾ ಸಂಸ್ಕೃತಿಯನ್ನು ನಾಶಪಡಿಸುತ್ತಿರುವ ಕನ್ನಡ ಚಳವಳಿಯನ್ನು ಬಹಿಷ್ಕರಿಸಿ ಎಂದು ವೈ.ಟಿ. ರಾಜಗೋಪಾಲ ನಾಯ್ಡು ರಾಜ್ಯ ಸರ್ಕಾರಕ್ಕೆ ಪತ್ರ ಬರೆದರು.

68. ಹತ್ತೊಂಬತ್ತನೇ ಶತಮಾನದಲ್ಲಿ ಬೆಂಗಳೂರು ಕಂಟೋನ್ಮೆಂಟ್

ಡಾ. ಸಿ. ರಾಮೇಗೌಡ

ಪೀಠಿಕೆ

ಶ್ರೀರಂಗಪಟ್ಟಣದ ಪತನದ ನಂತರ ಕೆಲವು ವರ್ಷಗಳ ಕಾಲ ಬ್ರಿಟಿಷರ ಸಹಾಯಕ ಸೈನ್ಯ ಅಲ್ಲಿಯೇ ನೆಲೆ ನಿಂತಿತ್ತು. ಅಲ್ಲಿನ ಹವಾಮಾನವು ಬ್ರಿಟಿಷ್ ಸೈನಿಕರ ಸ್ವಾಸ್ಥ್ಯಕ್ಕೆ ಹಾನಿಕರವೆಂದು ಕಂಡು ಬಂದ ಕಾರಣದಿಂದ ಕಂಪನಿ ಸರ್ಕಾರವು 1809ನೇ ಇಸವಿಯಿಂದ[1] ಶ್ರೀರಂಗಪಟ್ಟಣವನ್ನು ಹಂತಹಂತವಾಗಿ ತೊರೆದು ಬೆಂಗಳೂರಿನ ಕೋಟೆಗೆ ಅವರನ್ನು ಸ್ಥಳಾಂತರಿಸಿತು. ಬೆಂಗಳೂರಿನ ಹವಾಮಾನವು ಹಿತಕರವಾಗಿದ್ದು, ಸ್ಥಳೀಯರು ಮತ್ತು ಯುರೋಪಿಯನ್ನರ **ದೇಹ ಪ್ರಕೃತಿಗೆ** ಸೂಕ್ತವಾಗಿ ಒಗ್ಗುತ್ತಿತ್ತು. ಇದಕ್ಕಾಗಿ 1807ರಷ್ಟು ಹಿಂದೆಯೇ ಮದ್ರಾಸ್ ಸರಕಾರವು ಮೈಸೂರು ಸರಕಾರವನ್ನು ಸಂಪರ್ಕಿಸಿ ಬೆಂಗಳೂರು ಕೋಟೆಯ ಈಶಾನ್ಯ ದಿಕ್ಕಿನಲ್ಲಿ ಸುಮಾರು ನಾಲ್ಕು ಮೈಲುಗಳ ದೂರದ ಹಲಸೂರು ಗ್ರಾಮದ ಬಳಿ ಬ್ರಿಟಿಷ್ ಸೈನಿಕರಿಗಾಗಿ ಅವಶ್ಯಕವಾದ ಜಮೀನು ಮುಂತಾದ ಸಹಾಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡಿತು. [2] 1808ರ ವೇಳೆಗೆ ಬ್ರಿಟಿಷ್ ದಂಡು ಪ್ರದೇಶ (Cantonment) ದ ಸ್ಥಾಪನೆಗಾಗಿ ಅವಶ್ಯಕವಾದಷ್ಟು ಜಾಗವನ್ನು ಬ್ರಿಟಿಷ್ ರೆಸಿಡೆಂಟನ ನಿಯಂತ್ರಣಕ್ಕೆ ನೀಡಿದರು. [3] ಮಹಾರಾಜರು ಈ ಜಾಗದ ಮೇಲಿನ ಸಾರ್ವಭೌಮತ್ವವನ್ನು ಬಿಟ್ಟುಕೊಟ್ಟಿರಲಿಲ್ಲವಾಗಿ ದಂಡು ಪ್ರದೇಶವು ಒಂದು ರೀತಿಯಲ್ಲಿ "ವಿದೇಶೀ ನೆಲದೊಳಗಿದ್ದ ಒಂದು ನೆಲೆಯಾಗಿತ್ತು, ಇಲ್ಲಿನ ವಸತಿ ಗೃಹಗಳನ್ನು ಮಹಾರಾಜರ ಸರಕಾರದಿಂದ ವಿಚಿತ್ರವೆನ್ನಬಹುದಾದರೂ ಕಾನೂನು ಬದ್ಧವಾದ ರೀತಿಯಲ್ಲಿ ಪಡೆಯಲಾಗಿತ್ತು.[4] ಹೆಚ್ಚುವರಿ ಜಮಿನನ್ನು ಅಗತ್ಯಾನುಸಾರ – ಮನೆಗಳಿಗಾಗಿ, ಬ್ಯಾರಕ್ಕುಗಳಿಗಾಗಿ, ಕವಾಯಿತು ಮೈದಾನ, ಇತ್ಯಾದಿ ರಾಜನು ನೀಡುತ್ತಿದ್ದನಾದರೂ ದಂಡು ಪ್ರದೇಶಕ್ಕೆ "ಒಂದು ಕಾಲ್ಪನಿಕ ಗಡಿ"ಯನ್ನು ಗೊತ್ತುಪಡಿಸಲು ಮಾತ್ರ ಒಪ್ಪಲಿಲ್ಲ.[5]

ಆದರೆ, ಮಹಾರಾಜರು ದಂಡು ಪ್ರದೇಶದ ಜಮೀನುಗಳ ವಿಷಯದಲ್ಲಿಯಾಗಲೀ ಅಥವಾ ಆದರ ಆಂತರಿಕ ಅರ್ಥ ವ್ಯವಸ್ಥೆ ಕುರಿತಾಗಲಿ ಮಧ್ಯೆ ಪ್ರವೇಶಿಸದೆ ತಟಸ್ಥನಾಗಿರುತ್ತಿದ್ದನು; ಮತ್ತು ರೈತರಿಗೆ ಆ ಪ್ರದೇಶದಲ್ಲಿ ಯಾವುದೇ ಜಮೀನನು ಕೃಷಿ ಉದ್ದೇಶಗಳಿಗಾಗಿ ನೀಡಕೊಡದೆಂದು ಫೌಜುದಾರನಿಗೆ ಆದೇಶಿಸಿದ್ದನು. ದಂಡು ಪ್ರದೇಶದ ಸ್ಥಾಪನೆ ಸಂಬಂಧ ನೀಡಲಾಗಿದ್ದ ಜಾಗದ ನಾಗರೀಕ ಮತ್ತು ಅಪರಾಧ ಅಧಿಕಾರವನ್ನು ಮೈಸೂರು ಸರಕಾರದ ಪೊಲಿಸ್ ಸೂಪರಿಂಟೆಡೆಂಟನೇ ಚಲಾಯಿಸುತ್ತಿದ್ದನು. ಕಾರ್ಯಕಾರಿ ಅಧಿಕಾರವನ್ನು ಹೊಂದಿದ್ದ ಬ್ರಿಟಿಷ್ ರೆಸಿಡೆಂಟ್ ಮತ್ತು ಮಿಲಿಟರಿ ಅಧಿಕಾರಿಗಳು ಮದ್ರಾಸ್ ಪ್ರಾಂತ ಸರಕಾರದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

ಪ್ರಾರಂಭ

ಬೆಂಗಳೂರು ಪೇಟೆಯ ಈಶಾನ್ಯ ದಿಕ್ಕಿನಲ್ಲಿ ಬ್ರಿಟಿಷ್ ಕಂಟೋನ್‌ಮೆಂಟ್ 1811 ರಿಂದ ಅಸ್ತಿತ್ವಕ್ಕ ಬಂದಿತು.[6] ಆಗ ಅದರ ವಿಸ್ತೀರ್ಣ 11 1/4 ಚದರ ಮೈಲುಗಳಾಗಿತ್ತು. ಅಲ್ಲಿ ಎರಡು ಬ್ರಿಟಿಷ್ ರೆಜಿಮೆಂಟುಗಳು ವಾಸ್ತವ್ಯ ಹೂಡಿದವು ಮತ್ತು ಸಿಪಾಯಿಗಳ ವಾಸದ ಮನೆಗಳೇ ಮುಂತಾದ ಮಿಲಿಟರಿ ಕಟ್ಟಡಗಳು ನಿರ್ಮಿಸಲ್ಪಟ್ಟವು. ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ 1811 ರಲ್ಲಿ ಅಕ್ಟೋಬರ್ ಮಾಹೆಯಲ್ಲಿ ಬೆಂಗಳೂರಿಗೆ ಬ್ರಿಟಿಷ್ ರೆಸಿಡೆಂಟ್ ಕೋಲ್ ಸಾಹೇಬನ ಜೊತೆ ಭೇಟಿ ನೀಡಿದರು. ಆ ಭೇಟಿಯ ವಿವರಣೆ ಹೀಗಿದೆ.[7]

"ಅಲ್ಲಿ ನಗರವನ್ನು ಪ್ರವೇಶಿಸುವಾಗ ಒಂದು ಪಾರ್ಶ್ವದಲ್ಲಿ ಎರಡು ರೆಜಿಮೆಂಟ್ ಬ್ರಿಟಿಷ್ ಕ್ಯಾವಲ್ರಿ (British Cavalry) ಎಂದರೆ ಕುದುರೆ ಸವಾರರೂ ಮತ್ತೊಂದು ಪಾರ್ಶ್ವದಲ್ಲಿ ಐದು ರೆಜಿಮೆಂಟ್ ಇನ್‌ಫೆನ್‌ಟ್ರಿ (Infantry) ಎಂದರೆ ಸಿಪಾಯಿಗಳು ಖಾಸ್ ಸವಾರಿಯೊಂದಿಗೆ ಬಂದು ಖಾವಂದರಿಗೆ ಕ್ರಮವಾಗಿ ತೋಫು ಮುಂತಾದ ಮರ್ಯಾದೆಗಳು ನಡೆದವು. ಅದೇ ತಿಂಗಳು 14ನೆಯ ತಾರೀಖಿನಲ್ಲಿ ದೊರೆಗಳವರು ಕುದುರೆ ಜೂಜನ್ನು ಪರಾಂಬರಿಸಲು ದಯ ಮಾಡಿದಾಗ ಅವರಿಗೋಸ್ಕರ ಅನೇಕ ಜನ ಇಂಗ್ಲೀಷ್ ಸರದಾರರೂ, ಭಾರಿ ಉದ್ಯೋಗಸ್ಥರೂ, ಮುಖಂಡರಾದ ಇತರ ಪ್ರಜೆಗಳೂ ಸೇರಿ ರಮಣೀಯವಾದ ಒಂದು ನೋಟದ ಸ್ಥಾನ (Stand)ವನ್ನು ನಿರ್ಮಿಸಿ ಅಲ್ಲಿಗೆ ಖಾವಂದರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡು ಸನ್ಮಾನಿಸಿದರು. ಮಾರನೆಯ ದಿನ 15ನೆಯ ತಾರೀಖಿನಲ್ಲಿ ಖಾವಂದರು ಕೋಟೆಯ ಅರಮನೆಯಲ್ಲಿ ದರ್ಬಾರು ಮಾಡಿ ಅಲ್ಲಿ ಅನೇಕ ಜನ ಇಂಗ್ಲೀಷ್ ಸರದಾರರನ್ನೂ ಅವರ ಸ್ತ್ರೀ ಜನ ಖಾವಂದರು ಇಂಗ್ಲೀಷ್ ಸೇನೆಯ ಪ್ರತಿಯೊಂದು ಯುರೋಪಿಯನ್ ರೆಜಿರ್ಮೆಟಿಗೂ ಒಂದೊಂದು ಸಾವಿರ ವರಹವನ್ನೂ ಪ್ರತಿಯೊಂದೊ ನೇಟಿವ್ ರೆಜಿರ್ಮೆಟಿಗೂ ಐದು ನೂರು ವರಹವನ್ನೂ ಬಹುಮಾನವಾಗಿ ದಯಪಾಲಿಸಿದರು."

ಬೆಂಗಳೂರಿನ ಇತಿಹಾಸಕಾರ ಎಂ. ಫಜ್ಯುಲ್ ಹಸನ್ ವರ್ಣಿಸಿರುವಂತೆ[8] "ದಂಡು ಪ್ರದೇಶದ ಅಂಚಿನಲ್ಲಿ ಬಹಳ ಬೇಗನೇ ಖಾಸಗಿ ವಸತಿ ಗೃಹಗಳು ತಲೆ ಎತ್ತಿದವು. ಬ್ರಿಟಿಷ್ ಸೈನಿಕರ ಇರವು ತೆರದ ಲಾಭಕರ ವ್ಯಾಪಾರ, ಸರಕಾರಿ ಮತ್ತು ಖಾಸಗಿ ಉದ್ಯೋಗಾವಕಾಶ ಮತ್ತು ಹೆಚ್ಚೆಚ್ಚು ಗಳಿಸುವ ಅವಕಾಶಗಳು ಸ್ಥಳೀಯ ಜನರು ಭಾರಿ ಸಂಖ್ಯೆಯಲ್ಲಿ ಬಂದು ನೆಲೆಸಲು ಪ್ರೋತ್ಸಾಹ ನೀಡಿದವೆನ್ನಬೇಕು. ಬೆರಗುಗೊಳಿಸುವ ರೀತಿಯಲ್ಲಿ ಮಾರಾಟದ ವಿವಿಧ ಸರಕುಗಳನ್ನು ಪ್ರದರ್ಶನ ಮಾಡುತ್ತಿದ್ದ ಬಜಾರು ಬಜಾರುಗಳು ಎದ್ದು ನಿಂತವು. ನವೀನ ಉತ್ಸಾಹದೊಡನೆ ತಮ್ಮ ಅರುಣ ವರ್ಣದ ಸಮವಸ್ತ್ರದಲ್ಲಿರುತ್ತಿದ್ದ ಧನಿಕರಾದ ಯುರೋಪಿಯನ್ನರೊಡನೆ ಜವಳಿ ವ್ಯಾಪಾರಿಗಳು, ಹಣ್ಣು ಮಾರಾಟಗಾರರು ಮತ್ತು ಕಿರಾಣಿ ವರ್ತಕರು ತಮ್ಮ ವ್ಯವಹಾರಗಳನ್ನು ಪ್ರಾರಂಭಿಸಿದರು. ನಿಧಾನವಾಗಿ ಬೋಳಾದ ಜಾಗಗಳಲ್ಲಿ ನಿರ್ಮಿಸಲ್ಪಟ್ಟವು ಮತ್ತು ಅಂಗಡಿಗಳು, ಮಸೀದಿಗಳು, ದೇವಾಲಯಗಳು ಹಾಗೂ ಚರ್ಚುಗಳು ಅವುಗಳ ಬದಿಗಳಲ್ಲಿ ನಿರ್ಮಾಣಗೊಂಡವು. ಕ್ಷಿಪ್ರದಲ್ಲಿಯೇ ಚಟುವಟಿಕೆಯಿಂದ ಸದಾ ಗಿಜುಗುಟ್ಟುತ್ತಿದ್ದ ಒಂದು ದೇಶೀ ಪಟ್ಟಣವು ತಲೆ ಎತ್ತಿತ್ತು."

ವಿಶೇಷವೆಂದರೆ ಪ್ರಾರಂಭದಿಂದಲೂ ಬೆಂಗಳೂರು ದಂಡು ಪ್ರದೇಶ ಅಥವಾ ಕಂಟೋನ್ಮೆಂಟ್ ಬೃಹತ್ ನಗರ (Metropolitan City)ದ ವೈಲಕ್ಷಣ್ಯಗಳನ್ನು ಮೈಗೂಡಿಸಿಕೊಂಡೇ ಬೆಳೆಯಿತು; ಯುರೋಪಿಯನ್ನರು, ಆ್ಯಂಗ್ಲೋ–ಇಂಡಿಯನ್ನರು, ಯುರೇಪಿಯನ್ನರು, ಮುಸಲ್ಮಾನರು, ದೇಶೀಯ ಕ್ರಿಶ್ಚಿಯನ್ನರು ಮತ್ತು ಹಿಂದೂಗಳು ಅಲ್ಲಿ ಕಂಡು ಬರುತ್ತಿದ್ದರು. ತಮಿಳರು, ತೆಲುಗರು ಮತ್ತು ಉತ್ತರ ಭಾರತೀಯರು ಕೂಡ ಅಲ್ಲಿ ಗಣನೀಯ ಸಂಖ್ಯೆಯಲ್ಲಿ ಬಂದು ನೆಲೆಸಿದ್ದರು.

ಸೈನ್ಯದ ದಳಪತಿಯೇ ಪ್ರಾರಂಭದಲ್ಲಿ ದಂಡಿನ ಹಿಂಬಾಲಕರು ಮುಂತಾದವರಿಗೆ ನಿವೇಶನ ನೀಡುತ್ತಿದ್ದನು. ಕೆಲವೊಮ್ಮೆ ಮಹಾರಾಜರ ಸರಕಾರ ಕೂಡ ನೇರವಾಗಿ ಜಮೀನು ಅಥವಾ ನಿವೇಶನಗಳನ್ನು ಮಂಜೂರು ಮಾಡುತ್ತಿದ್ದೂದು ಉಂಟು.

ದಳಪತಿಗೆ ದಂಡು ಪ್ರದೇಶದಲ್ಲಿ ನೆಲೆಸಿದ್ದ ನಾಗರೀಕರ ಮೇಲೆ ಯಾವುದೇ ಅಧಿಕಾರವೂ ಇರಲಿಲ್ಲ; ಅಪರಾಧಿಗಳಿಗೆ ಶಿಕ್ಷೆ ನೀಡಲೂ ಅವನಿಗೆ ಸಾಧ್ಯವಿರಲಿಲ್ಲ. ಬೆಂಗಳೂರು ವಿಭಾಗದ ಫೌಜುದಾರ ಮತ್ತು ಬೆಂಗಳೂರು ತಾಲೂಕಿನ ಅಮಲುದಾರ ದಂಡು ಪ್ರದೇಶದ ನಾಗರೀಕರಿಗೆ ಸಂಬಂಧಿಸಿದಂತೆ ಕಾನೂನು–ಸುವ್ಯವಸ್ಥೆ ಕಾಪಾಡುವ ಹೊಣೆ ನಿರ್ವಹಿಸುತ್ತಿದ್ದರು. ಮದ್ರಾಸ್ ಸರಕಾರದ ಒತ್ತಾಯದ ಮೇರೆಗೆ ಓರ್ವ ಕಮ್ಮಿಸೇರಿಯಟ್ ಅಧಿಕಾರಿಯನ್ನು ಬೆಂಗಳೂರಿನ ಪೊಲೀಸ್ ಸೂಪರಿಂಟೆಂಡೆಂಟ್ ಆಗಿ ನೇಮಕ ಮಾಡಲು ರಾಜನು ಸಮ್ಮತಿಸಬೇಕಾಯಿತು. ಆ ಅಧಿಕಾರಿಗೆ ಚಿಕ್ಕಪುಟ್ಟ ಅಪರಾಧಗಳಿಗೆ ಶಿಕ್ಷೆ ನೀಡುವ ಅಧಿಕಾರವನ್ನು ರಾಜ ನೀಡಿದನು. ಸೈನಿಕರಿಗೆ ಸಂಬಂಧಿಸಿದಂತೆ ಸಹ ಪೊಲಿಸ್ ಸೂಪರಿಂಟೆಂಡೆಂಟ್‌ಗೆ ಸೂಕ್ತ ಅಧಿಕಾರವನ್ನು ನೀಡಲಾಯಿತು. ಆದರೆ, ದಳಪತಿಯ ಅಧೀನದಲ್ಲಿ ಅವನು ಕಾರ್ಯ ನಿರ್ವಹಿಸಬೇಕಾಗಿತ್ತು. ಮಿಲಿಟರಿಯವರನ್ನೂ ಹೊರತುಪಡಿಸಿ ದಂಡು ಪ್ರದೇಶದಲ್ಲಿ ವಾಸವಾಗಿದ್ದವರೆಲ್ಲರೂ ಮಹಾರಾಜರ ಪ್ರಜೆಗಳ ಸ್ಥಾನಮಾನವನ್ನು ಹೊಂದಿದ್ದರಲ್ಲದೇ, ತೆರಿಗೆಗಳನ್ನು ಮೈಸೂರು ಸರ್ಕಾರಕ್ಕೆ ನೀಡುತ್ತಿದ್ದರು; ಅಲ್ಲದೇ, ಮೈಸೂರು ಸರ್ಕಾರಕ್ಕೆ ನೀಡುತ್ತಿದ್ದರು; ಮೈಸೂರು ಸರ್ಕಾರದ ನಾಗರೀಕ ಮತ್ತು ಅಪರಾಧಿ ನ್ಯಾಯ ಪರಧಿಯಲ್ಲಿಯೇ ಅವರು ಇರಬೇಕಾಗಿತ್ತು.

ಬ್ರಿಟಿಷ್ ಕಮೀಷನರ್

ನಗರದ ಪ್ರಾಂತ್ಯದಲ್ಲಿ 1830–31ರಲ್ಲಿ ನಡೆದ ಬಂಡಾಯವನ್ನು ಹತ್ತಿಕ್ಕುವಲ್ಲಿ ಮಹಾರಾಜರ ಸರ್ಕಾರ ಪೂರ್ಣ ಯಶಸ್ಸು ಕಾಣದ ಹಿನ್ನೆಲೆಯಲ್ಲಿ ಬ್ರಿಟಿಷರು ಸಹಾಯಕ ಸೈನ್ಯವನ್ನು ಬಳಸಿ ದಂಗೆಕೋರರನ್ನು ನಿಯಂತ್ರಿಸಿದರು. ದುರಾಡಳಿತದಿಂದಾಗಿ ಈ ದಂಗೆಯು ಸಂಭವಿಸಿತೆಂದು ಆರೋಪಿಸಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ರಾಜ್ಯಾಡಳಿತದ ಅಧಿಕಾರವನ್ನು ಕಂಪನಿ ಸರ್ಕಾರವೇ ಕುಸಿದುಕೊಂಡಿತು (19ನೇ ಅಕ್ಟೋಬರ್ 1831). ಗವರ್ನರ್ ಜನರಲ್ ಲಾರ್ಡ್ ನಿಲಿಯಂ ಬೆಂಟಿಕನು ಸರಕಾರದ ನಿಯಂತ್ರಣವನ್ನು ಇಬ್ಬರು ಆಯುಕ್ತರಿಗೆ ವಹಿಸಿಕೊಟ್ಟನು. ಹಿರಿಯ ಆಯುಕ್ತ (Senior Commencer)ನನ್ನ ಗರ್ವನರ ಜನರಲ್ಲನೇ ನೇಮಕ ಮಾಡುವುದೆಂದೂ ಕಿರಿಯ ಆಯುಕ್ತ (Junior Commencer)ನನ್ನ ಮದ್ರಾಸ್ ಸರಕಾರವು ನೇಮಕ ಮಾಡುವುದೆಂದೂ ತೀರ್ಮಾನವಾಯಿತು. ಇಸವಿ 1832ರ ಜೂನ್ ಮಾಹೆಯವರೆಗೆ ಕಮಿಷನರುಗಳು ಮದ್ರಾಸ್ ಸರಕಾರದ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಅದೇ ತಿಂಗಳು ಅವರನ್ನು ಇಂಡಿಯಾ ಸರಕಾರದ ನೇರ ನಿಯಂತ್ರಣಕ್ಕೆ ತರಲಾಯಿತು. ಏಪ್ರಿಲ್ 1834ರಿಂದ ಕರ್ನಲ್ ಮಾರಿಸನ್ ಮೈಸೂರು ಸಂಸ್ಥಾನದ ಏಕೈಕ ಆಯುಕ್ತನಾಗಿ ಅಧಿಕಾರ ವಹಿಸಿಕೊಂಡನು. ಆದರೆ ಜೂನ್ 1834ರಲ್ಲಿ ಮಾರ್ಕ್ ಕಬ್ಬನ್ ಮೈಸೂರು ಸಂಸ್ಥಾನದ ಏಕೈಕ ಕಮೀಷನರನಾಗಿ ನೇಮಕಗೊಂಡನು. ಅಂದಿನಿಂದ 1861ರ ಮಾರ್ಚ್ ಮಾಹೆಯವರೆಗೆ ಕಬ್ಬನ್ ಆಯುಕ್ತರ ಹುದ್ದೆಯಲ್ಲಿ ಮುಂದುವರೆದನು. ಅವನ ನಿವೃತ್ತಿಯ ನಂತರ ಲೆವಿನ್ ಚಿನ್ಥಾಂ ಬೌರಿಂಗನು ಮುಖ್ಯ ಆಯುಕ್ತರ ಹುದ್ದೆಗೆ ನೇಮಕಗೊಂಡು 1870ರವರೆವಿಗೆ ಮುಂದುವರೆದನು. ನಂತರ ಕ್ರಮವಾಗಿ ಕರ್ನಲ್ ಮೀಡ್ (ಫೆಬ್ರುವರಿ 1870), ಆರ್.ಎ. ಡಲೈಲ್ (ಏಪ್ರಿಲ್ 1875), ಸಿ.ಬಿ. ಸ್ಯಾಂಡರ್ಸ್ (ಏಪ್ರಿಲ್ 1876) ಮತ್ತು ಜೇಮ್ಸ್ ಗೋರ್ಡನ್ (ಏಪ್ರಿಲ್ 1878) ಮುಖ್ಯ ಆಯುಕ್ತರ ಹುದ್ದೆ ನಿರ್ವಹಿಸಿದರು.

ಬೆಳವಣಿಗೆ

ಬೆಂಗಳೂರನ್ನು 1832ರಲ್ಲಿ ಸಂಸ್ಥಾನದ ರಾಜಧಾನಿಯನ್ನಾಗಿ ಮಾಡಲಾಯಿತು. ಇದರಿಂದಾಗಿ ದಂಡು ಪ್ರದೇಶದ ಮಹತ್ವ ಸಾಕಷ್ಟು ಹೆಚ್ಚಿತು. ಕಾಲ ಸರಿದಂತೆಲ್ಲಾ ಯುರೋಪಿಯನ್ ನಾಗರೀಕ ಅಧಿಕಾರಿಗಳ ಸಂಖ್ಯೆ ಹೆಚ್ಚಿತು. ಅವರ ಅಗತ್ಯಗಳನ್ನು ಪೂರೈಸುವ ಸಲುವಾಗಿ ದಾದಿಯರು, ಅಡುಗೆಯವರು, ಮನೆ ಕೆಲಸದವರು, ಮಾಲಿಗಳು, ಪಲ್ಲಕ್ಕಿ ಹೊರುವವರು, ಗಾಡಿ ಹೊಡೆಯುವವರು, ಸಿಂಪಿಗರು, ಅಗಸರು, ಬಡಗಿಗಳು ಮುಂತಾದವರೆ ಸಂಖ್ಯೆ ಹೆಚ್ಚುತ್ತಾ ಸಾಗಿತು. ಅನೇಕ ನಿವೃತ್ತ ಅಧಿಕಾರಿಗಳು ಸಹ ಬೆಂಗಳೂರಿನ ಹಿತಕರ ವಾತಾವರಣದಿಂದ ಆಕರ್ಷಿತರಾಗಿ ಬಂದು ನೆಲೆಸಲಾರಂಭಿಸಿದರು. ಆ ವೇಳೆಗೆ ಬೆಂಗಳೂರು ಕಂಟೋನ್ಮೆಂಟಿನ ಬಹುಭಾಗ ನಿರ್ಮಾಣಗೊಂಡಿತ್ತು. ಹುಜಾರರ (Light armed horse soldiers) ಸಾಲುಗಳು, ಹಿಂಬಾಲಕರ ಸಾಲುಗಳು, ನಿವೃತ್ತರ ಸಾಲುಗಳು ಮಾತ್ರವೇ ಅಲ್ಲದೆ ಹಿರಿಯ ಮಿಲಿಟರಿ ಮತ್ತು ನಾಗರೀಕ ಅಧಿಕಾರಿಗಳ ವಿಶಾಲವಾದ ಬಂಗಲೆಗಳು ನಿರ್ಮಾಣವಾಗಿದ್ದವು. ಕ್ಯಾವಲ್ರಿ ರಸ್ತೆ, ಆರ್ಟಿಲರಿ ರಸ್ತೆ, ಇನ್‌ಫನ್‌ಟ್ರಿ ರಸ್ತೆ, ಬ್ರಿಗೇಡ್ ರಸ್ತೆ, ಸೌತ್ ಪೆರೇಡ್ ರಸ್ತೆ, ರೆಸಿಡೆನ್ಸಿ ರಸ್ತೆ. ಮ್ಯೂಸಿಯಂ ರಸ್ತೆ ಮುಂತಾದವನ್ನು ಕಟ್ಟಲಾಗಿತ್ತು. ಬೆಂಗಳೂರು ಮತ್ತು ಮದ್ರಾಸ್ (ಚನ್ನೈ) ನಡುವೆ ಜಾಲಾರಪೇಟೆ ಮೂಲಕ ಒಂದು ರೈಲ್ವೆ ಮಾರ್ಗ ನಿರ್ಮಾಣವಾಗಿತ್ತು. (1864) ರೈಲ್ವೆ ಸ್ಟೇಷನ್‌ನಿಂದ ನಗರದ ಎಲ್ಲಾ ಭಾಗಗಳಿಗೂ ಸಂಪರ್ಕ ಕಲ್ಪಿಸುವ ಸಲುವಾಗಿ ಎರಡು ಮುಖ್ಯವಾದ ರಸ್ತೆಗಳನ್ನು ನಿರ್ಮಿಸಲಾಯಿತು. ಒಂದು ದೇಶೀಯ ಬಜಾರುಗಳ ಅತ್ಯಂತ ಜನದಟ್ಟಣೆಯುಳ್ಳ ಭಾಗಗಳನ್ನು ಹಾದು ರೈಲ್ವೆ ಸ್ಟೇಷನ್‌ನಿಂದ ಕಂಟೋನ್ಮೆಂಟ್ ಪ್ರದೇಶಕ್ಕೆ ತಲುಪುತ್ತಿತ್ತು ಮತ್ತು ಇನ್ನೊಂದು ರಸ್ತೆ ಪೇಟೆಯ ಉತ್ತರ ಭಾಗಕ್ಕೆ ಸಂಪರ್ಕ ಕಲ್ಪಿಸುತ್ತಿತ್ತು. ಈ ಎರಡು ಹೊಸ ರಸ್ತೆಗಳ ನಿರ್ಮಾಣಕ್ಕಾಗಿ ಸುಮಾರು 300 ಮನೆಗಳು ಮತ್ತು ಗುಡಿಸಲುಗಳನ್ನು ಕೆಡವಲಾಯಿತು ಮತ್ತು ನೈರ್ಮಲ್ಯದ ದೃಷ್ಟಿಯಿಂದ ಅನೇಕ ರೀತಿಯ ಪ್ರಯೋಜನಗಳನ್ನು ದಕ್ಕಿಸಿಕೊಳ್ಳಲಾಯಿತು.[9]

ಮುನಿಸಿಫಲ್ ಕಮ್ಮಿಟಿ ಸ್ಥಾಪನೆಯಾಗುವುದಕ್ಕಿಂತ ಪೂರ್ವದಲ್ಲಿಯೇ ಕಂಟೋನ್ಮೆಂಟ್ ಒಂದು ರೀತಿಯ ನೈರ್ಮಲ್ಯ ಏರ್ಪಾಡನ್ನು ಹೊಂದಿತ್ತು. ಆದರೂ ಮುನಿಸಿಪಲ್ ಬೋರ್ಡ್‌ನ ಸ್ಥಾಪನೆ (ಆಗಸ್ಟ್ 1862)ಯಾದ ನಂತರ ಪ್ರಾಣಿ ವಧಾ ಗೃಹಗಳು, ಪಾಯಖಾನೆಗಳು ಮತ್ತು ಮೂತ್ರದ ಮನೆಗಳು ಕಟ್ಟಲ್ಪಟ್ಟವು. ಅಷ್ಟೇ ಅಲ್ಲದೆ ಚರಂಡಿಗಳು, ಕಸದ ಡಬ್ಬಿಗಳು ಮತ್ತು ನೀರಿನ ತೊಟ್ಟಿಗಳು ನಾಗರೀಕರ ಉಪಯೋಗಕ್ಕಾಗಿ ಒದಗಿಸಲ್ಪಟ್ಟವು.[10] ಒಣ ಮಣ್ಣಿನ ಪದ್ಧತಿ (Dry Earth System) 1867–68 ರಿಂದ ಪರಿಚಯಿಸಲ್ಪಟ್ಟಿತು. ಮತ್ತು ಪ್ರಾರಂಭದಲ್ಲಿ ಐದು ಹೊಸ ಚಕ್ರಾಕಾರದ ಪಾಯಖಾನೆಗಳು ಕಟ್ಟಲ್ಪಟ್ಟವು.[11] ಅದೇ ಕಾಲದಲ್ಲಿ ಒಂದು ಮೀನಿನ ಮಾರುಕಟ್ಟೆಯನ್ನು ನಿರ್ಮಿಸಲಾಯಿತು. ಮತ್ತು ಹಲವಾರು ಕೊಳಚೆ ಪ್ರದೇಶಗಳ ಮೂಲಕ ರಸ್ತೆಗಳು ತೆರೆಯಲ್ಪಟ್ಟವು. [12]

ದಂಡು ಪ್ರದೇಶವು 1875ರ ವೇಳೆಗಾಗಲೇ ಅನೇಕ ಉಪನಗರಗಳನ್ನು ಹೊಂದಿತ್ತಲ್ಲದೆ ದೊಡ್ಡ ದೊಡ್ಡ ಸಾರ್ವಜನಿಕ ಕಟ್ಟಡಗಳ ನಿರ್ಮಾಣವನ್ನು ಕಂಡಿತ್ತು. ಕೋಲ್ಸ್ ಪಾರ್ಕ್, ರಿಚ್ಮಂಡ್ ಟೌನ್ ಪಾರ್ಕ್, ರಾಕ್‌ಡೇಲ್ ಪಾರ್ಕ್, ಹಲಸೂರು ರಾಕ್, ಪೆರೇಡ್ ಗ್ರೌಂಡ್ ಮತ್ತು ಪೋಲೋ ಗ್ರೌಂಡ್ ದಂಡು ಪ್ರದೇಶದಲ್ಲಿದ್ದವು. ಬೌರಿಂಗ್ ಮತ್ತು ಲೇಡಿ ಕರ್ಜನ್ ಹಾಸ್ಪಿಟಲ್, ಹಲಸೂರು ಡಿಸ್ಪೆನ್ಸರಿ ದಂಡು ಪ್ರದೇಶದ ಜನರ ಆರೋಗ್ಯ ಸುಧಾರಣೆಗೆ ಶ್ರಮಿಸುತ್ತಿದ್ದವು.

1861ರ ಆಡಳಿತ ಹಸ್ತಾಂತರ

ಮುಂದೆ, 25ನೇ ಮಾರ್ಚ್ 1881 ರಂದು ಹತ್ತನೇ ಚಾಮರಾಜೇಂದ್ರ ಒಡೆಯರವರಿಗೆ ಮೈಸೂರು ಸಂಸ್ಥಾನದ ಆಡಳಿತವನ್ನು ಬ್ರಿಟಿಷರು ಹಿಂದಕ್ಕೆ ಕೊಟ್ಟಾಗ ಅಧಿಕಾರ ಹಸ್ತಾಂತರ ದಸ್ತಾವೇಜೊಂದಕ್ಕೆ (Instrument of Transfer) ಉಭಯತ್ರರೂ ಸಹಿ ಮಾಡಬೇಕಾಯಿತು. ಆ ಒಪ್ಪಂದದ 9ನೇ ಕಲಮಿನ ಪ್ರಕಾರ ಮೈಸೂರು ಸಂಸ್ಥಾನದ ಯಾವುದೇ ಭಾಗದಲ್ಲಿ ಅಗತ್ಯಾನುಸಾರ ಬ್ರಿಟಿಷ್ ಕಂಟೋನ್ಮೆಂಟುಗಳನ್ನು ಸ್ಥಾಪಿಸಲು ಅಥವಾ ನಿರ್ವಹಿಸಲು ಮಹಾರಾಜನು ಒಪ್ಪಿಗೆ ನೀಡಲೇಬೇಕಾಗಿತ್ತು. ಅಂತಹ ಪ್ರದೇಶಗಳಿಗೆ ಬೇಕಾಗುವ ಜಮೀನನ್ನು ಪುಕ್ಕಟ್ಟೆಯಾಗಿ ಮಹಾರಾಜನು ನೀಡಬೇಕಾಗಿತ್ತಲ್ಲದೆ ಹಾಗೆ ಕೊಡ ಮಾಡಿದ ಜಾಗಗಳ ಮೇಲಿನ ತನ್ನ ಅಧಿಕಾರಗಳನ್ನು ಸಹ ಬಿಟ್ಟು ಕೊಡಬೇಕಾಗಿತ್ತು. ಅಂತಹ ಕಂಟೋನ್ಮೆಂಟ್ ಅಥವಾ ದಂಡು ಪ್ರದೇಶಗಳಲ್ಲಿ ಸಾರ್ವಜನಿಕ ನೈರ್ಮಲ್ಯ ವ್ಯವಸ್ಥೆ ಮಾಡುವ ಮತ್ತು ಸೈನಿಕರಿಗೆ ತೆರಿಗೆಯಿಲ್ಲದೆ ಅಗತ್ಯ ಸೌಕರ್ಯ ಮತ್ತು ಸರಬರಾಜುಗಳನ್ನು ಒದಗಿಸಬೇಕಾದ ಬಾಧ್ಯತೆ ಸಹ ಮಹಾರಾಜನದೇ ಆಗಿತ್ತು.

ನಾಗರೀಕ ಮತ್ತು ದಂಡು ಪ್ರದೇಶ

ಅದರಂತೆ 1ನೇ ಏಪ್ರಿಲ್1881 ರಂದು (25ನೇ ಮಾರ್ಚ್ 1881 ರಿಂದ ಪೂರ್ವಾನ್ವಯಾಗುವಂತೆ) ಬ್ರಿಟಿಷ್ ಸರಕಾರದ ಸಂಪೂರ್ಣ ನಿಯಂತ್ರಣಕ್ಕೆ ಯಾವುದೇ ವೆಚ್ಚಗಳಿಲ್ಲದೆ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (Civil and Military station)ನಲ್ಲಿ ಸೇರಿಹೋಗಿದ್ದ ಎಲ್ಲಾ ಜಮೀನುಗಳನ್ನು ಮಹಾರಾಜನು ವಹಿಸಿಕೊಟ್ಟನು. [13]

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿನ ಅಭಿವೃದ್ಧಿಯಲ್ಲಿ ಅದೊಂದು ಮಹತ್ವದ ಹೆಜ್ಜೆಯಾಗಿತ್ತು. ಇದಾದ ನಂತರ ದಂಡು ಪ್ರದೇಶ ತೀವ್ರಗತಿಯಲ್ಲಿ ಬೆಳೆಯಲಾರಂಭಿಸಿತು. ಬ್ರಿಟಿಷ್ ರೆಸಿಡೆಂಟನು ಸ್ಥಳೀಯ ಸರಕಾರದ ಅಧಿಕಾರಗಳನ್ನು ವಹಿಸಿಕೊಂಡನು; ಪೊಲೀಸ್ ನಾಗರೀಕ ಮತ್ತು ಅಪರಾಧ ನ್ಯಾಯಾಲಯ, ಕಂದಾಯ ಸ್ಥಳೀಯ ಸ್ವಯಮಾಡಳಿತ ಮುಂತಾದ ಆಡಳಿತಾತ್ಮಕ ವಿಷಯಾಂಶಗಳು ಬೆಳೆಯಲಾರಂಭಿಸಿದವು. ಸ್ಥಳೀಯ ಸರಕಾರವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಮದ್ರಾಸ್ ಪ್ರಾಂತ್ಯದ ನಾಗರೀಕ ಅಧಿಕಾರಿಗಳು ಸಂತೋಷದಿಂದ ವಹಿಸಿಕೊಂಡರು. ರೆಸಿಡೆಂಟನ ಕೋರ್ಟು ಕಂಟೋನ್ಮೆಂಟ್ ಪ್ರದೇಶದ ಉಚ್ಚ ನ್ಯಾಯಾಲಯದಂತೆ ಕಾರ್ಯ ನಿರ್ವಹಿಸಲಾರಂಭಿಸಿತು; ಅದರ ತೀರ್ಮಾನವನ್ನು ಪ್ರೀವಿ ಕೌನ್ಸಿಲ್ (Privy Council)ನ ಮುಂದೆ ಮಾತ್ರ ಪ್ರಶ್ನಿಸಬಹುದಾಗಿತ್ತು. ಓರ್ವ ಪೊಲೀಸ್ ಆಯುಕ್ತನು ನೇಮಕಗೊಂಡನು. ವ್ಯಾಪಾರ-ವಾಣಿಜ್ಯ ಏಳಿಗೆಯಾದಂತೆ ಕಂದಾಯ ಮತ್ತು ಆದಾಯಕರ ಇಲಾಖೆಗಳೂ ಬಂದವು. ಒಂದು ಮುನಿಸಿಪಲ್ ಬೋರ್ಡನ್ನು 1862ನೇ ಇಸವಿಯಿಂದಲೇ ಅಸ್ತಿತ್ವಕ್ಕೆ ತರಲಾಗಿತ್ತು. ಪಾಳು ಭೂಮಿಯಾಗಿದ್ದ ಪ್ರದೇಶವೊಂದು ಪ್ರತ್ಯೇಕ ಪ್ರಾಂತ್ಯವೇ ಆಗಿ ಪರಿವರ್ತನೆಗೊಂಡು ಅದ್ಭುತ ಇಲ್ಲಿ ಘಟಿಸಿತ್ತು.

ಅನೇಕ ಕ್ಲಬ್ಬುಗಳು, ಗ್ರಂಥಾಲಯಗಳು, ಶಾಲೆಗಳು, ಚರ್ಚುಗಳು, ಅನಾಥಾಲಯಗಳು, ಮುದ್ರಣಾಲಯಗಳು ಸ್ಥಾಪನೆಯಾಗಿದ್ದವು. ಮೌಸುರಾಯ್ ಮಹೊಮೆದಿ, ಖಾಸಿಮುಲ್ ಅಕ್ಬಾರ್, ಬೆಂಗಳೂರು ಎಕ್ಸಾಮಿನರ್ ಕರ್ನಾಟಕ ಪ್ರಕಾಶಿಕಾ, ಬೆಂಗಳೂರು ಸ್ಪೆಕ್ಟೇಟರ್, ಮೈಸೂರು ವೃತ್ತಾಂತ ಬೋಧಿನಿ ಮತ್ತು ಮೈಸೂರು ಗಜೆಟ್ ಆ ವೇಳೆಗೆ ಪ್ರಕಟವಾಗುತ್ತಿದ್ದವು. ಬೆಂಗಳೂರಿನಿಂದ ಜಾಲಾರ್ ಪೇಟೆ ಮಾರ್ಗವಾಗಿ ಮದ್ರಾಸಿಗೆ ರೈಲ್ವೆ ಸಂಪರ್ಕ (1864) ಉಂಟಾಗಿತ್ತು. ಆರ್ಥಿಕ ಚಟುವಟಿಕೆಗಳು ಚುರುಕುಗೊಳ್ಳಲು ಅದು ತುಂಬಾ ಸಹಾಯಕಾರಿಯಾಗಿತ್ತು. ಧಾತು-

ಈಶ್ವರ ಸಂವತ್ಸರಗಳಲ್ಲಿ (1876–1878) ಸಂಭವಿಸಿದ ಅಪಾರ ಜೀವಹಾನಿಗೆ ಕಾರಣವಾದ ಕ್ಷಾಮದ ಅವಧಿಯಲ್ಲಿ ಮದ್ರಾಸ್– ಬೆಂಗಳೂರು ರೈಲು ಮಾರ್ಗವು ಸಂಸ್ಥಾನದ ಜೀವನಾಡಿಯಾಗಿ ಲಕ್ಷಾಂತರ ಜನರ ಜೀವ ಉಳಿಸಿದ ಪ್ರಶಂಸೆಗೆ ಪಾತ್ರವಾಯಿತು. ನವೆಂಬರ್ 1877 ರಿಂದ ಅದು ಪ್ರತಿನಿತ್ಯವು 400 ರಿಂದ 500 ಟನ್ನುಗಳಷ್ಟು ಧಾನ್ಯವನ್ನು ಮದ್ರಾಸ್‌ನಿಂದ ಬೆಂಗಳೂರಿಗೆ ತಂದು ಹಾಕುತ್ತಿತ್ತು. ಇದು 9,00,000 ಜನರಿಗೆ ಸಾಕಾಗುವಷ್ಟಾಗಿದ್ದರೂ ಮೇನಲ್ಲಿ 100,000 ನಿರ್ಗತಿಕರನ್ನು ಗಂಜಿ ಕೇಂದ್ರಗಳಲ್ಲಿ ನೋಡಿಕೊಳ್ಳಲಾಗುತ್ತಿತ್ತು. ಇದರ ಜೊತೆಜೊತೆಗೇ ಕ್ಷಾಮ ಪರಿಹಾರ ಕಾಮಗಾರಿಗಳನ್ನು ನವೆಂಬರ್ 1878ರ ವರೆಗೆ ಮುಂದುವರೆಸಬೇಕಾಯಿತು.[15]

ದಂಡು ಪ್ರದೇಶವನ್ನು 1881ರಿಂದ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (Civil and Military station) ಎಂದು ಕರೆಯಲಾರಂಭಿಸಿದರು. ಇದರಲ್ಲಿ ಹಲಸೂರು, ಬ್ಲಾಕ್‌ಪಲ್ಲಿ, ದೊಡ್ಡಕುಂಟೆ, ಬ್ಯಾಡರಹಳ್ಳಿ, ಅಕ್ಕಿತಿಮ್ಮನಹಳ್ಳಿ, ದೂಕನುಹಳ್ಳಿ, ದೊಮ್ಮಲೂರು, ಬಿನ್ನಮಂಗಲ, ನೀಲಸಂದ್ರ ಮುಂತಾದ ಹಳ್ಳಿಗಳು ಸೇರ್ಪಡೆಯಾಗಿದ್ದವು. ಅಲ್ಲಿ 18 ಉಪನಗರಗಳಿದ್ದವು. ಮತ್ತು ಅದು 12 1/2 ಚದರ ಮೈಲುಗಳಷ್ಟು ವಿಸ್ತಾರ ಹೊಂದಿತ್ತು.

ನೀರು ಸರಬರಾಜು

ಕಂಟೋನ್ಮೆಂಟಿನ ಸ್ಥಾಪನೆಯಾದಾಗ ಬಾವಿಗಳಿಂದ ನೀರನ್ನು ಪಡೆದುಕೊಳ್ಳಲಾಗುತ್ತಿತ್ತು; ಆದರೆ, ಕ್ಯಾವಲ್ರಿ ಬ್ಯಾರಕ್ಸ್ ಮುಂತಾದ ಭಾಗಗಳಿಗೆ ದೊಡ್ಡದಾಗಿದ್ದ ಹಲಸೂರು ಕರೆ ಮತ್ತು ಅದಕ್ಕೆ ಸಮೀಪದಲ್ಲಿದ್ದ ಬಾವಿಗಳಿಂದ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಇವುಗಳಿಂದ ದೊಡ್ಡ ಬಂಡೆಯೊಂದರ ತುದಿಗೆ ಪಂಪು ಮಾಡಿ ಅಲ್ಲಿಂದ ಪೈಪುಗಳ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಕಂಟೋನ್ಮೆಂಟ್ ಬಜಾರ್ ಮತ್ತು ಸಿಪಾಯಿಗಳ ಸಾಲು (Sppoy Lines) ಗಳಿಗೆ 1873 ರಿಂದ ಮಿಲ್ಲರ್ಸ್ ಕೆರೆಗಳ (Miller's Tanks) ಸರಣಿಯಿಂದ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಇತ್ತು. ಶೂಲೆ ಭಾಗಕ್ಕೂ ಒಂದು ಪ್ರತ್ಯೇಕ ಕರೆ ಇತ್ತು.

ಬೆಳೆಯುತ್ತಿದ್ದ ಕಂಟೋನ್ಮೆಂಟ್ ಪ್ರದೇಶಕ್ಕೆ ಸಾಕಷ್ಟು ಪ್ರಮಾಣದಲ್ಲಿ ನೀರು ಸರಬರಾಜಾಗದೇ ಇದ್ದುದ್ದರಿಂದ ಸ್ಯಾಂಕಿ ಕೆರೆಯನ್ನು ಹೊಸತಾಗಿ ನಿರ್ಮಿಸಲಾಯಿತು. ಇದು 1882 ರಿಂದ ನೀರು ಸರಬರಾಜು ಮಾಡಲಾರಂಭಿಸಿದರೂ ಹೆಚ್ಚಿನ ಉಪಯೋಗವೇನೂ ಆಗಲಿಲ್ಲ. 1876–78ರ ಕ್ಷಾಮ ಸಂಭವಿಸಿದಾಗ ಕೆಲವೇ ವರ್ಷಗಳ ಹಿಂದೆ ನಿರ್ಮಾಣವಾಗಿದ್ದ ಮಿಲ್ಲರ್ಸ್ ಕೆರೆಗಳು ಸಂಪೂರ್ಣವಾಗಿ ವಿಫಲವಾದವು. ಬೆಂಗಳೂರಿನ ಪರಿಸರದಲ್ಲಿ ಅನೇಕ ಮೈಲುಗಳವರೆಗೆ ಹೊಸ ಕೆರೆಗಳ ನಿರ್ಮಾಣಕ್ಕೆ ಸೂಕ್ತವೆನ್ನಬಹುದಾದ ನಿವೇಶನ ಎಲ್ಲಿಯೂ ಉಳಿದಿರಲಿಲ್ಲ.[16] ಸ್ಯಾಂಕಿ ಕೆರೆಯು 21/2 ಚದರ ಮೈಲುಗಳಷ್ಟು ಪ್ರದೇಶದಲ್ಲಿ ಬೀಳುವ ಮಳೆ ನೀರನ್ನು ಸಂಗ್ರಹಿಸುತ್ತಿತ್ತು. ಮತ್ತು ಧರ್ಮಾಂಬುಧಿ ಮತ್ತು ಮಿಲ್ಲರ್ಸ್ ಕೆರೆಗಳಿಗೆ ಜೋಡಿಸಲ್ಪಟ್ಟಿತ್ತು. ಆದರೆ ಕಂಟೋನ್ಮೆಂಟ್ ಪ್ರದೇಶಕ್ಕೆ ಹೆಚ್ಚುತ್ತಲೇ ಸಾಗುತ್ತಿದ್ದ ಜನರ ವಲಸೆ ಜಲಕ್ಷಾಮಕ್ಕೆ ತನ್ನದೇ ಕೊಡುಗೆಯನ್ನು ನೀಡುತ್ತಿತ್ತು.

ಬೆಂಗಳೂರಿನ ನೀರು ಸರಬರಾಜಿನ ಸಮಸ್ಯೆಗೆ ಒಂದು ಸಮರ್ಥ ಉತ್ತರವನ್ನು ಮಹಾರಾಜ ಚಾಮರಾಜೇಂದ್ರ ಒಡೆಯರ ಆಸಕ್ತಿಯಿಂದಾಗಿ ಕಂಡು ಹಿಡಿಯಲಾಯಿತು. ಆಗ ದಿವಾನರಾಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರರ ದೂರದೃಷ್ಟಿಯ ಫಲವಾಗಿ ಬೆಂಗಳೂರಿನ ಈಶಾನ್ಯ ದಿಕ್ಕಿನಲ್ಲಿ ಸುಮಾರು 13 ಮೈಲುಗಳ ದೂರದಲ್ಲಿ ಹರಿಯುವ ಅರ್ಕಾವತಿ ನದಿಗೆ ಅಡ್ಡಲಾಗಿ ಹೆಸರಘಟ್ಟ ಜಲಾಶಯವನ್ನು 20,78,641 ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಯಿತು. ಇದರ ನಿರ್ಮಾಣವನ್ನು ಪೂರ್ಣಗೊಳಿಸಿ 23ನೇ ಜೂನ್ 1896 ರಿಂದ ಬೆಂಗಳೂರು ಪೇಟೆಗೆ ನೀರನ್ನು ಪೈಪುಗಳ ಮೂಲಕ ಸರಬರಾಜು ಮಾಡಲಾರಂಭಿಸಿದರು. [17]

ಸ್ವಲ್ಪ ಕಾಲಾ ನಂತರ, ಅಂದರೆ ಫೆಬ್ರವರಿ 1897ರಲ್ಲಿ ಮೈಸೂರು ಸರ್ಕಾರ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ಸ್ ನಡುವೆ ಆದ ಒಪ್ಪಂದದ ಪ್ರಕಾರ ಚಾಮರಾಜ ಜಲಾಶಯದಲ್ಲಿ ಸಂಗ್ರಹವಾಗುವ ನೀರಿನಲ್ಲಿ ನಿರ್ದಿಷ್ಟ ಭಾಗವನ್ನು ಬೆಂಗಳೂರು ಕಂಟೋನ್ಮೆಂಟ್ ಅಥವಾ ನಾಗರೀಕ ಮತ್ತು ದಂಡು ಪ್ರದೇಶಕ್ಕೂ ಒದಗಿಸಬೇಕಾಯಿತು. 18 ಹೀಗಾಗಿ 19ನೇ ಶತಮಾನದ ಅಂತ್ಯದ ವೇಳೆಗೆ ಬೆಂಗಳೂರು ಪಟ್ಟಣ ಮತ್ತು ಕಂಟೋನ್ಮೆಂಟ್‌ಗಳೆರಡಕ್ಕೂ ಅಗತ್ಯಾನುಸಾರ ನೀರನ್ನು ಸರಬರಾಜು ಮಾಡುವ ಏರ್ಪಾಟಾಗಿತ್ತು.

ನೈರ್ಮಲ್ಯ ವ್ಯವಸ್ಥೆ

ನೈರ್ಮಲ್ಯದ ನಿಯಮಗಳನ್ನು ಭಾರತೀಯ ಪಟ್ಟಣಗಳು ಮತ್ತು ಹಳ್ಳಿಗಳಲ್ಲಿ ಜಾರಿಗೆ ತರುವುದು ಕಷ್ಟಸಾಧ್ಯವಾದ ಕಾರ್ಯವಾಗಿತ್ತು. ಇದಕ್ಕೆ ಜನರ ಅಜ್ಞಾನವು ಒಂದು ಕಾರಣವಾದರೆ ಬದಲಾವಣೆ ಅಥವಾ ಸುಧಾರಣೆಗಳನ್ನು ಪ್ರತಿರೋಧಿಸುವ ಅವರ ಜಾಯಮಾನವು ಇನ್ನೊಂದು ಕಾರಣವಾಗಿತ್ತು. ಇವುಗಳಲ್ಲದೆ ಹಣಕಾಸಿನ ತೊಂದರೆ ಮತ್ತು ಕೇಂದ್ರೀಯ ಪ್ರಾಧಿಕಾರವು ನೀಡುವ ಆದೇಶಗಳನ್ನು ಜಾರಿಗೊಳಿಸುವಂತಹ ಪಾರುಪತ್ಯಗಾರರ ಅಲಭ್ಯತೆ ಕೂಡ ಕಾರಣವಾಗಿದ್ದವು. ಇಷ್ಟೆಲ್ಲಾ ತೊಂದರೆಗಳ ನಡುನಡುವೆ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಯಿತೆನ್ನುವುದು ಬೆಂಗಳೂರು ನಾಗರೀಕ ಮತ್ತು ದಂಡು ಪ್ರದೇಶದ ಮಟ್ಟಿಗಂತೂ ನಿಜವಾದುದು.

ಏಪ್ರಿಲ್ 1, 1871 ರಿಂದ ಮುನಿಸಿಪಲ್ ರೆಗ್ಯುಲೇಷನ್ (1871) ಜಾರಿಗೆ ತರಲ್ಪಟ್ಟಿತು. ಅದನ್ನು ಏಪ್ರಿಲ್ 1883ರಲ್ಲಿ ತಿದ್ದುಪಡಿ ಮಾಡಲಾಯಿತು. ಇದು ಉತ್ತಮ ನೈರ್ಮಲ್ಯ ವ್ಯವಸ್ಥೆಗಾಗಿ ಅನೇಕ ಮುನಿಸಿಪಲ್ ಕಮೀಷನರುಗಳನ್ನು ಹೊಂದಲು ಅವಕಾಶ ಕಲ್ಪಿಸಿತು. ಕಂಟೋನ್ಮೆಂಟ್ ಮತ್ತು ಪೇಟೆ ಮುನಿಸಿಪಾಲಟಿಗಳೆರಡಕ್ಕೂ ಸೇರಿಸಿ ಒಬ್ಬನೇ ಅಧ್ಯಕ್ಷನನ್ನು ನೇಮಕ ಮಾಡಲಾಯಿತು. ಮೈಸೂರು ಸಂಸ್ಥಾನದ ಆಡಳಿತವನ್ನು ಒಡೆಯರ್ ವಂಶದವರಿಗೆ ಹಿಂತಿರುಗಿಸಿದ (1881) ನಂತರ ಕಂಟೋನ್ಮೆಂಟ್ ಮುನಿಸಿಪಾಲಿಟಿಯು ಪ್ರತ್ಯೇಕಗೊಂಡು ಬ್ರಿಟಿಷ್ ರೆಸಿಡೆಂಟನ ನಿಯಂತ್ರಣಕ್ಕೆ ಒಳಗಾಯಿತು. 1891–92ರಲ್ಲಿ ಬೆಂಗಳೂರು ನಗರದ ಒಟ್ಟು ಜನಸಂಖ್ಯೆ 1,80,366 ಆಗಿತ್ತು. ಅದರಲ್ಲಿ ನಾಗರೀಕ ಮತ್ತು ದಂಡು ಪ್ರದೇಶದ ಪಾಲು 100,081 ಆಗಿತ್ತು. ಕಂಟೋನ್ಮೆಂಟ್ ಪ್ರದೇಶದ ಕಲುಷಿತ ನೀರು ಒಂದು ದೊಡ್ಡ ಚರಂಡಿಯ ಮೂಲಕ ಹಲಸೂರಿನಿಂದಾಚೆಗೆ ಹರಿದು ಹೋಗುವ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಅಲ್ಲಿ ಅದನ್ನು ಕೃಷಿ ಮತ್ತು ತೋಟಗಾರಿಕೆಗೆ ಬಳಸುತ್ತಿದ್ದರು.[19]

ಪ್ಲೇಗ್

ಮುಂಬಯಿಯಲ್ಲಿ 1896ರಲ್ಲಿ ಕಾಣಿಸಿಕೊಂಡ ಪ್ಲೇಗ್ ಪಿಡುಗು 1897ರ ಅಂತ್ಯದ ವೇಳೆಗೆ ಹುಬ್ಬಳ್ಳಿ ಮೂಲಕ ಬೆಂಗಳೂರಿಗೂ ವ್ಯಾಪಿಸಿಕೊಂಡಿತು. ಎಷ್ಟೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದರೂ ಆಗಸ್ಟ್ 1898ರ ವೇಳೆಗೆ ಪ್ಲೇಗ್ ಬೆಂಗಳೂರಿನಲ್ಲಿಯೂ ಕಾಣಿಸಿಕೊಂಡಿತು. ನವೆಂಬರ್ 15ನೇ ತಾರೀಖಿನವರೆಗೂ ಬಹಳ ತೀವ್ರವಾಗಿ ಕಾಡಿದ ಪ್ಲೇಗ್ ರೋಗವು ನಂತರ ಕಡಿಮೆಯಾಗುತ್ತಾ ಮೇ 12ರ ವೇಳಗೆ ಮರೆಯಾಯಿತು. ಸಾವಿರಾರು ಜನರು ಬೆಂಗಳೂರು ಪೇಟೆ ಮತ್ತು ದಂಡು ಪ್ರದೇಶದಲ್ಲಿ ಇದರಿಂದ ಸಾವಿಗೀಡಾದರು. ಇದರ ನೇರ ಪರಿಣಾಮವೆಂದರೆ ನೈರ್ಮಲ್ಯ ವ್ಯವಸ್ಥೆಯನ್ನು ಬಲಪಡಿಸಲು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದು. ಇದರಿಂದಾಗಿ ದಂಡು ಪ್ರದೇಶದಲ್ಲಿಯೂ ಹೊಸ ಬಡಾವಣೆಗಳು ತಲೆಯೆತ್ತಿದ್ದವು.

ಉಲ್ಲೇಖಿಗಳು

1. ಪು. 382, ಎಂ. ಶಾಮರಾವ್, ಮಾಡರ್ನ್ ಮೈಸೂರ್. ಹಿಗ್ಗಿನ್ ಭಾಥಮ್ ಅಂಡ್ ಕೋ., ಬೆಂಗಳೂರು 1936
2. ಪು. 128. ಫಜ್ಯುಲ್ ಹಸನ್, ಬೆಂಗಳೂರು ಥ್ರೂ ದಿ ಸೆಂಚುರೀಸ್; ಹಿಸ್ಟಾರಿಕಲ್ ಪಬ್ಲಿಕೇಷನ್ಸ್: ಬೆಂಗಳೂರು, 1972.
3. ಪುಟ 51. ಬಿ.ಎಲ್. ರೈಸ್, "ಮೈಸೂರ್ ಗ್ಯಾಸೆಟಿಯರ್, ಸಂ. II, ಮೈಸೂರು ಜಿಲ್ಲಾವಾರು; ವೆಸ್ಟ್‌ಮಿನ್ಸ್‌ಸ್ಟರ್, 1897.
4. – ಅದೇ –
5. 1856–57ರ ಜನರಲ್ ಅಂಡ್ ಮಿಸ್ಸೆಲೇನಿಯಸ್ ಕಡಿತ ಸಂಖ್ಯೆ 2 ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು.
6. ಪು. 48 ಬಿ.ಎಲ್. ರೈಸ್, "ಮೈಸೂರ್ ಗ್ಯಾಸೆಟಿಯರ್, ಸಂ.II"ಸರ್ಕಾರಿ ಮುದ್ರಣಾಲಯ; ಬೆಂಗಳೂರು–1877
7. 42–42, ಬಿ ರಾಮಕೃಷ್ಣರಾವ್, ಶ್ರೀಮನ್ಮಹಾರಾಜರವರ ವಂಶಾವಳಿ, ದ್ವಿತೀಯ ಸಂಪುಟ; ಸರ್ಕಾರದ ಶಾಖಾ ಮುದ್ರಣಾಲಯ; ಮೈಸೂರು, 1922.
8. ಪುಟ 125, ಬಿ ರಾಮಕೃಷ್ಣರಾವ್, ಶ್ರೀಮನ್ಮಹಾರಾಜರವರ ವಂಶಾವಳಿ, ದ್ವಿತೀಯ ಸಂಪುಟ; ಸರ್ಕಾರದ ಶಾಖಾ ಮುದ್ರಣಾಲಯ; ಮೈಸೂರು, 1922.
9. ಮೈಸೂರು ರಾಜ್ಯದ ವಾರ್ಷಿಕ ಆಡಳಿತ ವರದಿ 1862–63. P. 35
10. ಮೈಸೂರು ರಾಜ್ಯದ ವಾರ್ಷಿಕ ಆಡಳಿತ ವರದಿ 1865–66. P. 34
11. ಮೈಸೂರು ರಾಜ್ಯದ ವಾರ್ಷಿಕ ಆಡಳಿತ ವರದಿ 1867–68. P. 22
12. ಮೈಸೂರು ರಾಜ್ಯದ ವಾರ್ಷಿಕ ಆಡಳಿತ ವರದಿ 1867–68. P. 128.
13. Treaties and engagement sounds, relating to India and the neighbouring countries, p. 254
14. Rise and end of the C and M station of Bangalore, H. Narasaiah. p. 5
15. P. 440. Mysore Gazetters Part I, B.L. Rice; West minister 1897.
16. ಪುಟ 53. ಬಿ.ಎಲ್. ರೈಸ್, "ಮೈಸೂರ್ ಗ್ಯಾಸೆಟಿಯರ್, ವೆಸ್ಟ್‌ಮಿನಿಸ್ಟರ್ 1897.
17. ಪುಟ 187, ಬೆಂಗಳೂರು ಥ್ರೂ ದಿ ಸೆಂಚುರೀಸ್, ಎಂ. ಫಜ್ಲುಲ್ ಹಸನ್; ಹಿಸ್ಟಾರಿಕಲ್ ಪಬ್ಲಿಕೇಷನ್ಸ್; ಬೆಂಗಳೂರು 1970.
18. ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿನಾಂಕ 8ನೇ ಅಕ್ಟೋಬರ್ 1897 ರಂದು ದಿವಾನ್ ಸರ್. ಕೆ. ಶೇಷಾದ್ರಿ ಅಯ್ಯರರು ಮಾಡಿದ ಭಾಷಣ.

69. ಬೆಂಗಳೂರಿನ ಧಾರ್ಮಿಕ ಸಮುದಾಯಗಳು ಸಮಾಜ ಸೇವೆ ಮತ್ತು ರಾಜಕಾರಣ (1900–1948)

ಶ್ರೀ ಚಿಕ್ಕಚೆನ್ನಯ್ಯ

ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದ ಬೆಂಗಳೂರು ದಕ್ಷಿಣ ಭಾರತದ ಪ್ರಮುಖ ವಾಣಿಜ್ಯ ಹಾಗೂ ರಾಜಕೀಯ ಕೇಂದ್ರವಾಗಿ ಬೆಳವಣಿಗೆ ಕಂಡಿತಲ್ಲದೇ, ಅಂದಿನ ರಾಷ್ಟ್ರೀಯ ನಾಯಕರೊಂದಿಗೆ ನಿರಂತರ ಸಂಪರ್ಕವನ್ನು ಬೆಳೆಸಿಕೊಂಡಿತ್ತು. ಮೈಸೂರು ಸಂಸ್ಥಾನದ ಇತರ ಭಾಗಗಳಿಗಿಂತ ಬೆಂಗಳೂರು ರಾಷ್ಟ್ರೀಯ ವಿಚಾರಧಾರೆಗಳನ್ನು ಹರಡಲು ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆ ಕೈಗೊಳ್ಳಲು ರಾಜಕೀಯವಾಗಿ ಸಂಘಟನೆಗೊಳ್ಳಲು ಪ್ರಶಸ್ತ ಸ್ಥಳವಾಗಿತ್ತು. ಇಲ್ಲಿ ಸ್ವಾತಂತ್ರ್ಯ ಚಳವಳಿಯು ತೀವ್ರಗೊಳ್ಳಲು ಹಾಗೂ ರಾಷ್ಟ್ರೀಯ ಚಳವಳಿಯೊಂದಿಗೆ ಗುರ್ತಿಸಿಕೊಳ್ಳಲು ಇದೇ ಅಂಶಗಳು ಒತ್ತಾಸೆಯಾಗಿದ್ದವು. ಇಲ್ಲಿಗೆ ಸ್ವಾಮಿ ವಿವೇಕಾನಂದ (1898), ಡಾ. ಅನಿಬೆಸೆಂಟ್, ಮಹಾತ್ಮಾಗಾಂಧಿ, ರವೀಂದ್ರನಾಥ ಠಾಗೂರ್, ಆಲಿ ಸಹೋದರರು ಸೇರಿದಂತೆ ಹಲವು ಗಣ್ಯರು, ವಿವಿಧ ಸಂಘಟನೆ ಮುಖಂಡರು ಭೇಟಿಕೊಟ್ಟಿದ್ದರು. 1866ರಲ್ಲಿ ಬೆಂಗಳೂರಿನಲ್ಲಿ ಬ್ರಹ್ಮ ಸಮಾಜ, 1866ರಲ್ಲಿ ಥಿಯೋಸಾಫಿಕಲ್ ಸೊಸೈಟಿ, 1894ರಲ್ಲಿ ಆರ್ಯ ಸಮಾಜ, 1904ರಲ್ಲಿ ರಾಮಕೃಷ್ಣಾಶ್ರಮ, 1904ರಲ್ಲಿ ವೀರಶೈವ ಮಹಾಸಭಾ, 1909ರಲ್ಲಿ ಮಹಮಡನ್ ಅಸೋಸಿಯೇಷನ್ ಸ್ಥಾಪನೆಗೊಂಡವು.

ಬ್ರಹ್ಮಸಮಾಜ

ಬೆಂಗಳೂರಿನಲ್ಲಿ ವೀರೇಶಲಿಂಗ ಪಂತುಲುರವರಿಂದ ಬ್ರಹ್ಮಸಮಾಜ ಶಾಖೆ, ವಿಶ್ವೇಶ್ವರಾನಂದ ಸರಸ್ವತಿಯವರಿಂದ ಆರ್ಯ ಸಮಾಜ ಶಾಖೆ, ಡಾ. ಅನಿಬೆಸೆಂಟ್, ಅರುಂಡಲೆ ಬಿ. ಪಿ. ವಾಡಿಯ, ಮತ್ತು ಸಂಪದ್ಗಿರಿರಾವ್ ಇವರಿಂದ ಥಿಯೋಸಾಫಿಕಲ್ ಸೊಸೈಟಿ ಪ್ರಾರಂಭವಾದವು. ಇವೆಲ್ಲ ಸಾಮಾಜಿಕ ಸಮಸ್ಯೆಗಳಾದ ಅಸ್ಪೃಶ್ಯತೆ ನಿವಾರಣೆ, ಜಾತಿಪದ್ಧತಿ ನಿಷೇಧ, ಬಾಲ್ಯವಿವಾಹ ನಿಷೇಧ, ವಿಧವಾ ವಿವಾಹಕ್ಕೆ ಪ್ರೋತ್ಸಾಹ ಮತ್ತಿತರ ಧ್ಯೇಯ ಗಳನ್ನೊಳಗೊಂಡು ಕಾರ್ಯ ನಿರ್ವಹಿಸುತ್ತಿದ್ದವು. ಇವುಗಳಲ್ಲಿ ಬಹಳ ಪ್ರಮುಖವಾದದ್ದು ಬ್ರಹ್ಮಸಮಾಜ. ಇದು ರಾಜರಾಮ್ ಮೋಹನ್ ರಾಯ್‌ರವರ ವಿಗ್ರಾಹಾರಾಧನೆಯ ಖಂಡನೆಯೆಡೆ ಗಮನ ಹರಿಸಿತು. ಅವರ ಭಾಷಣ 'ತತ್ವಭೋದಿನಿ' ಪತ್ರಿಕೆಯಲ್ಲಿ ಬರುತ್ತಿತ್ತು. ಈ ಪತ್ರಿಕೆಯ ಧೋರಣೆ ಹಿಂದೂ ಸಮಾಜದ ಹುಳುಕನ್ನು ಮತ್ತು ಸಾಮ್ರಾಜ್ಯಶಾಹಿ ನಡವಳಿಕೆಯನ್ನು ಖಂಡಿಸುವುದೇ ಆಗಿತ್ತು. ಈ ಪತ್ರಿಕೆ ತಮಿಳಿನಲ್ಲಿ ಪ್ರಕಟಗೊಳ್ಳುತ್ತಿದ್ದರಿಂದ ರಾಜಪೇಯಿಲುನಾಯ್ಡು ತನ್ನ ಇತರ ಸಂಗಡಿಗರಿಗೆ ಪತ್ರಿಕೆಯಲ್ಲಿದ್ದ ಸುದ್ದಿಯನ್ನು ವಿವರಿಸುತ್ತಿದ್ದು, ಅದರಲ್ಲಿ ಅತ್ಯಂತ ಆಕರ್ಷಿತವಾದ್ದೆಂದರೆ ವಿಗ್ರಹಾರಾಧನೆಯ ಖಂಡನೆ, ಬರ್ಮದಲ್ಲಿ ಈ ರಾಜವೇಲುನಾಯ್ಡು ತನ್ನ ಸಂಗಡಿಗರಿಗೆ ಬ್ರಹ್ಮ ಸಮಾಜದ ಬಗ್ಗೆ ವಿವರಿಸಿ ಚರ್ಚಿಸುತ್ತಿದ್ದರು ಮತ್ತು ಆಸಕ್ತಿಯನ್ನು ಹುಟ್ಟಿಸುವ ಮೂಲಕ ಬರ್ಮಾದಲ್ಲಿ ಬ್ರಹ್ಮಸಮಾಜ ಸ್ಥಾಪಿಸಿದರು. ನಂತರ 1872ರಲ್ಲಿ ಬರ್ಮಾದ ರೆಜಿಮೆಂಟನ್ನು ಬೆಂಗಳೂರಿಗೆ ವರ್ಗಾಯಿಸಿದ್ದರಿಂದ ಸಮಾಜವೂ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿತ್ತು. ಆಗ ಮದ್ರಾಸ್ ಮತ್ತು ಬೆಂಗಳೂರಿಗೆ ಸಮಾಜದ ಸಂಪರ್ಕವೂ ಹೆಚ್ಚಾಯಿತು. ಇದೇ ಸಮಯದಲ್ಲಿ ಪೂನಾ ಚಂದ್ರಶೇಖರ್ ಐಯ್ಯರ್ ಎಂಬುವರು ವಿಗ್ರಹಾರಾಧನೆ ತಮಗೆ ಒಗ್ಗದ ಮಾರ್ಗವೆಂದರಿತು ಬ್ರಹ್ಮ ಸಮಾಜದ ಪೋಷಣೆಗೆ ನಿಂತರು.

ಅವರು ಹಲವಾರು ವರ್ಷಗಳು ಸನ್ಯಾಸಿಯಂತೆ ತಿರುಗಾಡಿ 1866ರಲ್ಲಿ ಬೆಂಗಳೂರಿನಲ್ಲಿ ನೆಲೆಸಿದಾಗ ಅವರಿಗೆ ಹಲವಾರು ಅನುಯಾಯಿಗಳು ದೊರೆತರು. ಅವರು ಬ್ರಹ್ಮ ಸಮಾಜದ ಅತ್ಯಂತ ಮೇಧಾವಿ ಮತ್ತು ಪ್ರಭಾವಶಾಲಿ ಬೋಧಕರಾದರು. ಕ್ರಮೇಣ ಬ್ರಹ್ಮಾನಂದ ಸ್ವಾಮಿಯಾಗಿ ವಿಗ್ರಹರಾಧನೆ, ಮೂಢನಂಬಿಕೆ, ಜಾತಿಪದ್ಧತಿ ಇವುಗಳನ್ನು ಖಂಡಿಸಿ ಸೂಕ್ತ ರೀತಿಯಲ್ಲಿ ಬೋಧನೆ ಮಾಡತೊಡಗಿದರು. ಇದೇ ರೀತಿ ರೆಜಿಮೆಂಟಲ್ ಹೈಸ್ಕೂಲಿನ ಪ್ರಾಧ್ಯಾಪಕರಾದ ಗೋಪಾಲಸ್ವಾಮಿಯವರ ನಿಷ್ಠೆ ಮತ್ತು ಸೇವೆಯಿಂದ ಸಮಾಜವು ಪ್ರಬಲವಾಯಿತಲ್ಲದೆ ಸಮಾಜಕ್ಕೆ ಅರ್ಕಾಟ್ ನಾರಾಯಣಸ್ವಾಮಿಯವರಂತಹ ಪ್ರಮುಖ ಧುರೀಣರು ಸೇರುವಂತಾದರು. ಅವರು ಬೆಂಗಳೂರಿನ ವರ್ತಕವರ್ಗದ ಪ್ರಮುಖರಾಗಿದ್ದವರು. ಅವರ ಸಹಾಯದಿಂದ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಸಿಕ್ಕಿತು. ಪಂಡಿತ ಶಿವನಾಥ ಶಾಸ್ತ್ರಿಗಳ ದೇಶ ಪರ್ಯಾಟನೆ ಬೆಂಗಳೂರಿನಲ್ಲಿ ನವಚೇತನವನ್ನು ಉಂಟು ಮಾಡಿತು. ಮೈಸೂರಿನ ಮೊದಲನೇ ದಿವಾನರಾದ ಸಿ. ರಂಗಾಚಾರ್ಲುರವರು ತಾವೇ ಸ್ಥಾಪಿಸಿದ 'ಮೈಸೂರು ಲಿಟರರಿ ಯೂನಿಯನ್' ಸಂಸ್ಥೆಯಲ್ಲಿ ಬ್ರಹ್ಮ ಸಮಾಜದ ಧುರೀಣರಾದ ಪಂಡಿತ ಶಿವನಾಥ ಶಾಸ್ತ್ರಿಗಳ ಭಾಷಣವನ್ನು ಏರ್ಪಡಿಸಿ 1881 ತಾವೇ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಶಿವಾನಾಥ ಶಾಸ್ತ್ರಿಗಳು ಮತ್ತೆರಡು ಭಾರಿ ಬೆಂಗಳೂರಿಗೆ 1884 ಮತ್ತು 1904ರಲ್ಲಿ ಭೇಟಿ ಕೊಟ್ಟು 15 ದಿವಸ ತಂಗಿದ್ದು ಬ್ರಹ್ಮಸಮಾಜದ ತತ್ವಗಳನ್ನು ಸಾಕಷ್ಟು ಪ್ರಚಾರ ಮಾಡಿದರು. ಶಾಸ್ತ್ರಿಗಳ ಆಗಮನ ಬೆಂಗಳೂರಿನ ನಾಗರಿಕರಲ್ಲಿ ಹೆಚ್ಚು ಪ್ರಭಾವವನ್ನು ಉಂಟುಮಾಡಿತು. ರಂಗಾಚಾರ್ಯ ಸಹ ಇವರ ಪ್ರಭಾವಕ್ಕೆ ಒಳಗಾಗದರು. ಬ್ರಹ್ಮ ಸಮಾಜದ ತತ್ವಗಳನ್ನು ಸಂಸ್ಥಾನವು ನೆರೆಹೊರೆ ಪ್ರಾಂತ್ಯಗಳಿಗಿಂತ ಹೆಚ್ಚಾಗಿ ಪ್ರಚಾರ ಮಾಡಿತು. 1894ರಲ್ಲಿ ಬಾಲ್ಯವಿವಾಹವನ್ನು ಸಶಕ್ತ ಕಾನೂನಿನ ಮುಖಾಂತರ ನಿಲ್ಲಿಸುವಂತೆ ಮಾಡಿದ ಕೀರ್ತಿ ಶೇಷಾದ್ರಿ ಅಯ್ಯರ್‌ರವರದ್ದು, ಬ್ರಹ್ಮ ಸಮಾಜದ ಪ್ರಭಾವದಿಂದಾದದ್ದು ಎಂದೇ ಗುರ್ತಿಸಲಾಗಿದೆ. 1910ರಲ್ಲಿ ವಿರೇಶಲಿಂಗಂ ಪಂತುಲು ಅವರ ಆಗಮನ ಬೆಂಗಳೂರು ನಿವಾಸಿಗಳಲ್ಲಿ ಪರಿಣಾಮವನ್ನು ಉಂಟುಮಾಡಿತು. ವಿರೇಶಲಿಂಗಂರವರು ಬೆಂಗಳೂರಿನ ತಮ್ಮ ಮನೆಯಲ್ಲಿ ಸಾಮಾಜಿಕ ಸುಧಾರಣೆಗೆ ಆಸ್ತಿಬಾರ ಹಾಕಿದರು ಎನ್ನಬಹುದು. ಮೈಸೂರು ದೇಶದ ಮೊದಲನೆ ವಿಧವಾ ವಿವಾಹ ಅವರ ಮನೆಯಲ್ಲಿ 1910ರಲ್ಲಿ ನಡೆಯಿತು. ಆದರೆ ಈ ಮದುವೆ ಹೊರಗೆ ದಂಡಿನಲ್ಲಿ ನಡೆಯಿತು. ಆದರೆ ಇದಕ್ಕೆ ಮೊದಲೇ 'ಕರ್ನಾಟಕ ಪ್ರಕಾಶಿಕ' ಎಂಬ ಕನ್ನಡ ಪತ್ರಿಕೆ 1ನೇ ಜೂನ್ 1896ರಲ್ಲಿ ಈ ರೀತಿ ಬರೆಯಿತು. 'ಮೈಸೂರಿಗೆ ಸಾಮಾಜಿಕ ಸುಧಾರಕರು ಬಂದದ್ದು ವ್ಯರ್ಥವಾಗಲಿಲ್ಲ. ಯಾಕೆಂದರೆ ವಿಧವಾ ವಿವಾಹಕ್ಕೆ ಸಾಕಷ್ಟು ವಿರೋಧವಿದ್ದರೂ ಬೆಂಗಳೂರಿನಲ್ಲಿ ವಿಧವಾ ವಿವಾಹ ನಡೆದಿದೆ'. ಈ ಎರಡು ಹೇಳಿಕೆಗಳನ್ನು ಗಮನಿಸಿದಾಗ 1896ಕ್ಕಿಂತ ಮೊದಲೇ ಸಮಾಜ ಸುಧಾರಣಾ ಜಾಗೃತಿ ಸಂಸ್ಥಾನದಲ್ಲಿ ಇತ್ತೆಂಬುದು ವ್ಯಕ್ತವಾಗುತ್ತದೆ. 1881ರಲ್ಲಿ ಬಿಪಿನ್ ಚಂದ್ರಪಾಲರು ರಾವ್ ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾದರು. ಇದು ಸಮಾಜ ವಿಸ್ತರಣದಲ್ಲಿ ಒಂದು ಮೈಲಿಗಲ್ಲು ಎನ್ನಬಹುದು. ಕಂಟೋನ್ಮೆಂಟ್‌ನ ಬ್ರಹ್ಮ ಸಮಾಜವು ಒಂದು ಬ್ರಹ್ಮಮಂದಿರವನ್ನು ಕಟ್ಟಿತು ಮತ್ತು ವಿರೇಶಲಿಂಗಂ ಪಂತುಲುರವರ ಸಹಾಯದಿಂದ ಸಮಾಜದ ಬೆಳವಣಿಗೆ ಸಾಧ್ಯವಾಯಿತು. ನಗರದ ಇನ್ನೊಂದು ಸಮಾಜವು ಹನುಮಂತಪ್ಪನವರ ನೇತೃತ್ವದಲ್ಲಿ ಬೆಳೆಯಿತು. ಕಂಟೋನ್ಮೆಂಟ್ ಸಮಾಜವು ಡಾ. ಎಸ್. ವಿ. ರಾಮಸ್ವಾಮಿ ಐಯ್ಯಂಗಾರ್‌ರವರ ನೇತೃತ್ವದಲ್ಲಿ ಮುಂದುವರೆಯಿತು. ರಾಮಸ್ವಾಮಿ ಐಯ್ಯಂಗಾರ್‌ರವರು ಬ್ರಹ್ಮ ಸಮಾಜದ ತತ್ವದ ಪ್ರಕಾರ ಮದುವೆಯಾದರು ಮತ್ತು ಅಜಿತ್ ಮೋಹನ್‌ರವರ ಬೆಂಬಲದಿಂದ ಸಮಾಜದ ಕರ್ತವ್ಯವನ್ನೂ ನಿರ್ವಹಿಸಿದರು. ಬೆಂಗಳೂರು ಕಂಟೋನ್ಮೆಂಟ್ ಸಮಾಜಕ್ಕೆ ಒಂದು ಸ್ವರೂಪವನ್ನು ಕೊಟ್ಟವರು ನಾರಾಯಣಸ್ವಾಮಿ ಮೊದಲಿಯರ್. ತಮ್ಮ ಉದಾರವಾದ ದಾನದಿಂದ ಬ್ರಹ್ಮ ಮಂದಿರವನ್ನು ಕಟ್ಟಿಸಿದ್ದಲ್ಲದೆ, ಅದನ್ನು ನಡೆಸಿಕೊಂಡು ಬರತಕ್ಕಂತಹ ಜನರನ್ನೂ ನೇಮಿಸಿ ಭದ್ರವಾದ ಬುನಾದಿಯನ್ನು ಹಾಕಿದರು. ಬ್ರಹ್ಮಮಂದಿರದ ಶಂಕುಸ್ಥಾಪನೆ ಮಾಡಿದವರು ಪ್ರತಾಪಚಂದ್ರ ಮಜಮ್‌ದಾರರು (1896).

ರಾವ್‌ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯರ್ (1827–1900) ಬಿಪಿನ ಚಂದ್ರಪಾಲ್‌ರಂತಹ ಕರ್ತವ್ಯ ಶಾಲಿಯನ್ನು ತಾವು ಸ್ಥಾಪಿಸಿದ ಸ್ಕೂಲಿಗೆ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಿದರು. ಕ್ಷಾಮಪೀಡಿತ ಪ್ರದೇಶವಾದ ಮದ್ರಾಸ್ ಮತ್ತಿತರ ಊರಲ್ಲಿ ಸಂಚರಿಸಿ ಕರಾರಿನ ಮೇಲೆ ಅಕ್ಕಿ ಸರಬರಾಜು ಮಾಡುತ್ತಿದ್ದು ಆಂಗ್ಲ ಸರ್ಕಾರದಿಂದ ಉನ್ನತ ಹುದ್ದೆಯನ್ನು ಹೊಂದಿದ್ದರು. ತಮ್ಮ ಹಣದ ಸದ್ವಿನಿಯೋಗ ಮಾಡಬಯಸಿದ ಮೊದಲಿಯಾರರು ಬ್ರಹ್ಮ ತತ್ವಗಳನ್ನು ಮೆಚ್ಚಿದ್ದಲ್ಲದೆ ನಮ್ಮ ದೇಶದ ಪ್ರಜೆಗಳು ಉತ್ತಮ ವ್ಯಾಸಂಗವನ್ನು ಹೊಂದಬೇಕೆಂಬ ಇಚ್ಛೆಯಿಂದ ಪಂಡಿತ ಶಿವಾನಾಥಶಾಸ್ತ್ರಿಗಳಿಗೆ ತಮ್ಮ ಸ್ಕೂಲಿಗಾಗಿ ಮುಖ್ಯೋಪಾದ್ಯಾಯರನ್ನು ಸೂಚಿಸಲು ಕೋರಿದಾಗ ಅವರು ಬಿಪಿನ್ ಚಂದ್ರಪಾಲರನ್ನು ಸೂಚಿಸಿದರು. ಪಾಲ್‌ರವರು ತಮ್ಮ ವಿದ್ಯಾರ್ಥಿ ದೆಸೆಯಿಂದಲೇ ಪಂಡಿತ ಶಿವಾನಾಥಶಾಸ್ತ್ರಿಗಳ ಬ್ರಹ್ಮಸಮಾಜಕ್ಕೆ ಒಲಿದರು. ಕೇಶವ್ ಚಂದ್ರಸೇನ್ ಮತ್ತು ಅವರ ಧರ್ಮ ಪ್ರಚಾರಕರ ನೇತೃತ್ವಕ್ಕಿಂತ ಶಿವಾನಾಥ ಶಾಸ್ತ್ರಿಗಳ ಬ್ರಹ್ಮತತ್ವ ನನಗೆ ಹಿಡಿಸಿತು ಎಂದು ಅವರು ತಮ್ಮ ಆತ್ಮ ಚರಿತ್ರೆಯಲ್ಲಿ ಹೇಳಿದ್ದಾರೆ. ಬಿಪಿನ್ ಚಂದ್ರಪಾಲ್ ಇವರು ಮುಖ್ಯೋಪಾಧ್ಯಾಯ ಹುದ್ದೆಯನ್ನು ವಹಿಸಲು ಬೆಂಗಳೂರಿಗೆ ಬಂದಾಗ (1881) ಅವರಿಗೆ ಕನ್ನಡ ಅಥವಾ ತಮಿಳು ಭಾಷೆಯ ಪರಿಚಯವಿಲ್ಲದ್ದರಿಂದ ಮೊದಲನೇ ದಿವಸದಿಂದ ತಳಮಳ ಎದುರಿಸಬೇಕಾಯಿತು.

ಬ್ರಹ್ಮಸಮಾಜದ ಅನುಸಾರ ಮುಂಬೈನಲ್ಲಿ ವಿಧವೆಯನ್ನು ಮದುವೆಯಾದವರ ಪೈಕಿ ಪಾಲ್‌ರವರೇ ಮೊದಲಿಗರು. ತಮ್ಮ ಮುಖ್ಯೋಪಾಧ್ಯಾಯರ ಹುದ್ದೆಯನ್ನು ಪಾಲ್ ಕೇವಲ ಒಂದೇ ವರುಷ ಅಲಂಕರಿಸಿದ್ದರೂ ಅವರ ವರ್ಚಸ್ಸು ಬೆಂಗಳೂರಿನಲ್ಲಿ ಪಸರಿಸಿತ್ತು. ಅವರು ಕಾರಣಾಂತರದಿಂದ 1882ರಲ್ಲಿ ಕಲ್ಕತ್ತಗೆ ಹಿಂದಿರುಗಿದರು. ಡಬ್ಲ್ಯೂ.ಹೆಚ್.ಹನುಮಂತಪ್ಪ (1885–1977) ಇವರು ಹಿರಿಯ ಬ್ರಹ್ಮಾನುಯಾಯಿಗಳಲ್ಲಿ ಒಬ್ಬರು. ಬೆಂಗಳೂರಿನ ಗಾಂಧಿನಗರದ ಐದನೇ ಮುಖ್ಯರಸ್ತೆ ಅವರ ಹೆಸರಿನಲ್ಲಿ ಕರೆಯಲ್ಪಟ್ಟಿದೆ. ಇವರು ತಮ್ಮ ಚಿಕ್ಕವಯಸ್ಸಿನಲ್ಲಿಯೇ ಬ್ರಹ್ಮಾನಂದಸ್ವಾಮಿಗಳ ಶಿಷ್ಯರಾಗಿ ಬ್ರಹ್ಮಧರ್ಮವನ್ನು ಪ್ರಸಾರ ಮಾಡಿದರು. ಅವರು ಬ್ರಹ್ಮ ಧರ್ಮವೆಂಬ ಪುಸ್ತಕವು ನನ್ನ ಆದರ್ಶ ದೀವಿಗೆಯಾಗಿದೆ ಎಂದಿರುವರು. ಇವರು ಬೆಂಗಳೂರಿನ ಗಂಗಾಧರಶೆಟ್ಟಿ ರೋಡಿನಲ್ಲಿ ಮತ್ತು ಕಾಟನ್ ಪೇಟೆಯಲ್ಲಿ ಇರುವ ಬ್ರಹ್ಮಸಮಾಜಗಳಿಗೆ ಅತ್ಯಂತ ಪ್ರೋತ್ಸಾಹವನ್ನು ಕೊಟ್ಟರು. ಗಾಂಧೀಜಿಯವರ ಪ್ರಭಾವ ಇವರ ಮೇಲಾಯಿತು. ಹಲವಾರು ವಿದ್ಯಾಸಂಸ್ಥೆಗಳನ್ನು ನಡೆಸಿಕೊಂಡು ಬಂದರು. ಇವರು ಬೆಳೆಸಿದ ವಿದ್ಯಾಸಂಸ್ಥೆಗಳೆಂದರೆ ಅಪ್ಪಾವ್ರಪಿಳೆ, ಹೆಣ್ಣು ಮಕ್ಕಳ ಶಾಲೆ, ಗಾಂಧಿನಗರದ ಹೈಸ್ಕೂಲ್ ಮತ್ತು ವಯಸ್ಕರ ವಿದ್ಯಾಸಂಘ. ಇವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು, ಮೈಸೂರು ಕಾಂಗ್ರೆಸ್ ನಾಯಕರು, ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ವಿರೇಶಲಿಂಗಂ ಪಂತುಲು ಬ್ರಹ್ಮಸಮಾಜವನ್ನು ಕಾಟನ್‌ಪೇಟೆಯಲ್ಲಿ ಕಟ್ಟಿಸಿಕೊಟ್ಟ ಮೇಲೆ ಇವರು ಅದರಲ್ಲಿ ಅತ್ಯಂತ ಉತ್ಸಾಹವನ್ನು ತೋರಿದರು. ಮೂರು ದಶಕಗಳಿಗಿಂತ ಹೆಚ್ಚುಕಾಲ ಬ್ರಹ್ಮಸಮಾಜ ಪಂಥವನ್ನು ಬೆಳೆಸಲು ಪ್ರಯತ್ನಿಸಿದರು. ಬ್ರಹ್ಮಸಮಾಜದ ವಿದ್ಯಾಸಂಸ್ಥೆಗಳು ಜಾತಿಮತ ತೊರೆದು ಶಿಕ್ಷಣ ನೀಡಿದವು. ಅಂತಹವುಗಳೆಂದರೆ ಬೆಂಗಳೂರಿನ ಮೇಜರ್ ಅಪ್ಪಾವ್ರ ಪಿಳ್ಳೆ ಸ್ಕೂಲು ಪ್ರಮುಖವಾದದ್ದು. ಬೆಂಗಳೂರಿನ ಬ್ರಹ್ಮಸಮಾಜದ ಪ್ರಮುಖ ಅನುಯಾಯಿಗಳೆಂದರೆ ಡಾ. ಎನ್. ಗುರುದಾಸ್, ವೈ. ಮುನಿಸಾಮಪ್ಪ, ಬಿ. ಎ. ಚಂದ್ರಶೇಖರ್, ಪೊನ್ನಗೋಪಾಲಸ್ವಾಮಿ, ಬಿ. ಸಿ. ಪ್ರಭಾಕರ್, ಕೆ. ನಾರಾಯಣರಾವ್ ಮೊದಲಾದವರು. ಬೆಂಗಳೂರಿನ ಬ್ರಹ್ಮ ಸಮಾಜದ ಬಗ್ಗೆ ತಿಳಿಸುವ ಪ್ರಮುಖ ದಾಖಲೆಗಳೆಂದರೆ 1870 ಭಕ್ತಿ ಸುಧಾರಣೆ, 1895 ಬ್ರಹ್ಮಧರ್ಮನುಸಾರ, ಕಾದಂಬರಿಕಾರ್ತಿ ಆರ್. ಕಲ್ಯಾಣವನ್ನು 'ಇಂದಿರೆ' ಎಂಬ ಕಾದಂಬರಿ ಬರೆದು ಅದರಲ್ಲಿ ವಿಧವಾ ವಿವಾಹ ಪ್ರೋತ್ಸಾಹಿಸಿದ್ದಾರೆ. ಬ್ರಹ್ಮ ಸಮಾಜದ ತತ್ವಾದರ್ಶಗಳನ್ನು ಪಾಲಿಸಲು 1903ರಲ್ಲಿ 'ದೇಶಾಭ್ಯುದಯ ಸಂಘ' ಸ್ಥಾಪನೆಯಾಯಿತು. ಇದರ ಮುಖ್ಯಸ್ಥರಾದ ವೆಂಕಟವರದಯ್ಯಂಗಾರರು ವಿಧವಾ ವಿವಾಹವಾಗಿದ್ದಲ್ಲದೇ

ಈ ಸಂಘದಡಿಯಲ್ಲಿ 'ಹಿತವಾದಿ' ಎಂಬ ಪತ್ರಿಕೆಯನ್ನು ಹೊರತಂದರು. ಆದರೆ ಇವೆಲ್ಲ ಕುಲೀನರಲ್ಲಿ ನಡೆದ ಅಲ್ಪಸ್ವಲ್ಪಪ್ರಯತ್ನಗಳು ಮಾತ್ರ. ಬ್ರಹ್ಮ ಸಮಾಜ ರಾಜಕೀಯೇತರ ಧಾರ್ಮಿಕ ಸಂಘಟನೆಯಾಗಿ ಬೆಂಗಳೂರಿನಲ್ಲಿ ಗಮನಾರ್ಹ ಸೇವೆ ಸಲ್ಲಿಸಿತು.

ಥಿಯಾಸಾಫಿಕಲ್ ಸೊಸೈಟಿ

ಮೇಡಂ ಬ್ಲವಾಟ್‌ಸ್ಕಿಯವರಿಂದ ಪ್ರಭಾವಿತರಾಗಿ ಮದರಾಸಿನಲ್ಲಿ ಮೊದಲಿಗೆ ಅನಿಬೆಸೆಂಟ್‌ರವರಿಂದ ಪ್ರಾರಂಭ ವಾಯಿತು. ನಂತರ 1916ರಲ್ಲಿ ಬೆಂಗಳೂರಿನಲ್ಲಿ ಡಾ. ಅನಿಬೆಸೆಂಟ್ ಪ್ರಭಾವದಿಂದ ಸ್ಥಾಪನೆಯಾಯಿತು. ಮದರಾಸಿನ ಕಡೆ ಅನಿಬೆಸೆಂಟ್‌ರವರಿಗೆ ಅನ್ನವಸಂತಮ್ಮ ಎಂಬ ಹೆಸರಿತ್ತು. ಭಾರತೀಯರಲ್ಲದವರು ನಮ್ಮ ದೇಶದ ಚಳವಳಿಗೆ, ನಮ್ಮ ರಾಷ್ಟ್ರೀಯತೆಗೆ, ನಮ್ಮ ದೇಶೋದ್ಧಾರಕ್ಕೆ ಅನೇಕರು ಶ್ರಮಿಸಿದ್ದಾರೆ. ಅಂತವರಲ್ಲಿ ಅಗ್ರಗಣ್ಯರೆಂದರೆ ಅನಿಬೆಸೆಂಟ್. ಭಾರತದ ಸಂಸ್ಕೃತಿಯಲ್ಲಿನ ಹಿರಿಮೆಯನ್ನು ಜಗತ್ತಿಗೆ ತಿಳಿಸಿ, ಭಗವದ್ಗೀತೆಯನ್ನು ಇಂಗ್ಲೀಷಿಗೆ ಅನುವಾದ ಮಾಡಿದರು. 'ಸೆವೆನ್‌ಗ್ರೇಟ್ ರಿಲಿಜಿಯನ್ಸ್ ಆಫ್ ಇಂಡಿಯಾ' ಎಂಬ ವಿಷಯದ ಬಗ್ಗೆ ಭಾಷಣ ಮಾಡಿ ಖ್ಯಾತಿಗಳಿಸಿದರು. ಉಚಿತವಾಗಿ ಸಣ್ಣ ಸಣ್ಣ ಪುಸ್ತಕ ವಿತರಿಸಿದರು. ರಾಷ್ಟ್ರೀಯತೆ ಹುಟ್ಟಿಸಿ, ಜನರಲ್ಲಿ ಆತ್ಮವಿಶ್ವಾಸ, ಆತ್ಮಗೌರವವನ್ನು ಬೆಳೆಸಿದರು. ಡಾ. ಅನಿಬೆಸೆಂಟ್ ಹಾಗೂ ಥಿಯೋಸಾಫಿಕಲ್ ಸೊಸೈಟಿಯಿಂದ ಪ್ರಭಾವಿತರಾಗಿ ಅನೇಕರು ಅವರ ಅನುಯಾಯಿಗಳಾಗಿ ಥಿಯೋಸಾಫಿಕಲ್ ಸೊಸೈಟಿ ಶಾಖೆಗಳನ್ನು ಬೇರೆಡೆಯೂ ಸ್ಥಾಪಿಸಿದರು. ದೊಡ್ಡಬಳ್ಳಾಪುರದಲ್ಲಿ ಟಿ. ಸಿದ್ಧಲಿಂಗಯ್ಯನವರು, ರಾಮನಗರದಲ್ಲಿ ಸುಬ್ಬರಾವ್,

ಕೆ. ಸತ್ಯನಾರಾಯಣ ಅಯ್ಯಂಗಾರ್, ಗುರುಲಿಂಗಯ್ಯ, ಚನ್ನಪಟ್ಟಣದಲ್ಲಿ ವಿ. ವೆಂಕಟಪ್ಪ, ಹೆಚ್. ಕೆ. ವೀರಣ್ಣಗೌಡ, ಸದಸ್ಯರಾಗಿ ಸಕ್ರಿಯ ಕಾರ್ಯಕರ್ತರಾದರು. ಬೆಂಗಳೂರಿನಲ್ಲಿ ಎಸ್. ಎಸ್. ಸೆಟ್ಲೂರ್‌ರವರು ಮುಖ್ಯ ಥಿಯೋಸಾಫಿಸ್ಟ್ ಸದಸ್ಯರಾಗಿದ್ದರು. ಇವರೆಲ್ಲ ನಂತರದಲ್ಲಿ ಕಾಂಗ್ರೆಸ್ ಸದಸ್ಯರಾಗಿ ನಾಯಕರಾಗಿ ಬೆಂಗಳೂರು ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಹೀಗೆ 1894ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡ ಆರ್ಯ ಸಮಾಜದ ಮುಖ್ಯಸ್ಥರಾಗಿ ಸುಬ್ಬನರಸಿಂಹ ಶಾಸ್ತ್ರಿ ಹಾಗೂ ಶ್ರೀರಾಮಚಂದ್ರರಾವ್ ಶಿಂಧೆ ಕಾರ್ಯನಿರ್ವಹಿಸಿ, ಅದರ ಸಿದ್ಧಾಂತ ಪ್ರಚಾರ, ಸೇವಾ ಕಾರ್ಯ ಕೈಗೊಂಡರು. ಇದು ಸಮಾಜಸೇವೆಗೆ ಕೊಟ್ಟಷ್ಟೇ ಪ್ರಾಶಸ್ತ್ಯವನ್ನು ಭಾರತೀಯ ರಾಜಕಾರಣದಲ್ಲಿ ಆಗಬಹುದಾದ ಬದಲಾವಣೆಗಳಿಗೂ ನೀಡಿತು.

1898ರಲ್ಲಿ ಸ್ವಾಮಿ ವಿವೇಕಾನಂದರು ಬೆಂಗಳೂರಿಗೆ ಭೇಟಿ ನೀಡಿ ಕಂಟೋನ್ಮೆಂಟ್‌ನ ಡಾ. ಪಲ್ಪುರವರ ಮನೆಯಲ್ಲಿ ಎರಡು ದಿವಸ ತಂಗಿದ್ದು, ತಮ್ಮ ಭಾಷಣ, ಚಿಂತನೆ, ತೇಜಸ್ಸಿನ ಮುಖಾಂತರ ಬೆಂಗಳೂರಿನ ನಾಯಕರು ಹಾಗೂ ಜನರ ಮೇಲೆ ಅಪಾರ ಪ್ರಭಾವ ಬೀರಿದರು. ಚನ್ನಪಟ್ಟಣದವರಾಗಿದ್ದು, ಬೆಂಗಳೂರಿನ ನಿವಾಸಿಯಾಗಿದ್ದ ಜಸ್ಟೀಸ್ ಎಸ್. ಎಸ್. ಸೆಟ್ಲೂರ್ ವಿವೇಕಾನಂದರ ಅನುಯಾಯಿಯಾದರು. 1904ರಲ್ಲಿ ಬೆಂಗಳೂರಿನಲ್ಲಿ ರಾಮಕೃಷ್ಣ ಮಿಷನ್ ಸ್ಥಾಪನೆಯಾಯಿತು. ಬೆಂಗಳೂರಿನಲ್ಲಿ ಸ್ಥಾಪನೆಗೊಂಡಿದ್ದ ರಾಮಕೃಷ್ಣ ಮಿಷನ್ ಸಂಸ್ಥೆಗೆ ಶ್ರೀರಾಮಕೃಷ್ಣ ಪರಮಹಂಸರ ಪತ್ನಿ ಶ್ರೀಮತಿ ಶಾರದ ದೇವಿಯವರು ಮಾರ್ಚ್ 1911ರಲ್ಲಿ ಮದ್ರಾಸಿನಿಂದ ಬೆಂಗಳೂರಿಗೆ ಬಂದು ಭಾಷಣ ಮಾಡಿದರು. ಆರ್ಯ ಸಮಾಜಾಭಿಮಾನಿಗಳೂ ಅಮ್ಮನವರ ದರ್ಶನ ಮಾಡಿ ಅವರ ಭಾಷಣ ಕೇಳಿದರು. ರಾಮಕೃಷ್ಣ ಮಿಷನ್ ಸ್ವಾಮಿ ವಿವೇಕಾನಂದರ ಪ್ರಭಾವದಿಂದ ಹಿಂದುಳಿದವರಿಗಾಗಿ ಅನೇಕ ಸವಲತ್ತುಗಳು ದೊರೆಯುವಂತಾಯಿತು. ಅಸ್ಪೃಶ್ಯತೆ ನಿವಾರಣೆಗೆ ಮುಂದಾದ ಮೈಸೂರು ಸರ್ಕಾರ ದೇವಾಲಯ ಪ್ರವೇಶ, ಸಾರ್ವಜನಿಕ ಸ್ಥಳಗಳನ್ನು ಹಾಗೂ ಸಾರ್ವಜನಿಕ ಕೆರೆಕಟ್ಟೆ ಬಳಸುವ

ವಿಧೇಯಕವನ್ನು ಜಾರಿಗೆ ತರಲು ಈ ಸಂಘಟನೆಯ ಪ್ರಭಾವವೇ ಕಾರಣ. ಪಂಚಮರೆಂದು ಪರಿಗಣಿಸಿ ಅವರ ಶಿಕ್ಷಣಕ್ಕೆ ಪೂರಕ ಕ್ರಮಕೈಗೊಂಡಿತು. 1930ರಲ್ಲಿ ಸಂಸ್ಥಾನದ ಕಾನೂನು ಸಲಹೆಗಾರರಾಗಿ ಡಾ. ಅಂಬೇಡ್ಕರ್‌ರವರನ್ನು ನೇಮಿಸಿಕೊಂಡಿತು. ಹೀಗೆ ಹಿಂದುಳಿದವರಲ್ಲಿ ಜಾಗೃತಿ ಉಂಟಾಗಿ ರಾಷ್ಟ್ರೀಯ ಚಳವಳಿ ಪ್ರಬಲವಾಗಲು ಕಾರಣವಾಯಿತು.

ಮಿಷನರಿಗಳು

ಬೆಂಗಳೂರಿಗೆ ಕ್ರೈಸ್ತರ ಪ್ರವೇಶ 1335ರಲ್ಲಿಯೇ ಆಯಿತೆಂದು ಹೇಳಲಾಗಿದೆ. ಅಂದರೆ ಕ್ರಿ. ಶ. 1400ರ ವೇಳೆಗೆ ಜಿಲ್ಲೆಯಲ್ಲಿ ಕ್ರೈಸ್ತರು ನೆಲೆಸಿದ್ದರು ಎಂಬುದನ್ನು ದೃಢೀಕರಿಸಲು ಆನೇಕಲ್ಲಿನಲ್ಲಿರುವ ಸಮಾಧಿ ಶಿಲೆ ಸಾಕ್ಷಿಯಾಗಿದೆ. ಬೆಂಗಳೂರಿನಲ್ಲಿ 1820ರಲ್ಲಿ ಲಂಡನ್ ಮಿಷನ್, 1830ರಲ್ಲಿ ವೆಸ್ಲಿಯನ್ ಮೆಥಾಡಿಸ್ಟ್ ಮಿಷನರಿ ಸೊಸೈಟಿ, 1815ರಲ್ಲಿ ಬಾಸೆಲ್ ಮಿಷನ್, 1862ರಲ್ಲಿ ಕ್ರಿಶ್ಚಿಯನ್ ವರ್ನಾಕ್ಯೂಲರ್ ಸೊಸೈಟಿ, 1882ರಲ್ಲಿ ಫಾರಿನ್ ಮಿಷನ್ ಸೊಸೈಟಿ ಸ್ಥಾಪನೆಗೊಂಡವು. ಧರ್ಮ ಪ್ರಚಾರ ಇವುಗಳ ಮುಖ್ಯ ಗುರಿಯಾಗಿದ್ದರೂ ಇವುಗಳಿಂದ ಪ್ರಾರಂಭವಾದ ಶಿಕ್ಷಣ ಸಂಸ್ಥೆಗಳು, ಪತ್ರಿಕೆಗಳು, ಆಂಗ್ಲಭಾಷಾ ಬೋಧನೆ, ಮುದ್ರಣ ಕಾರ್ಯ ಮುಂತಾದವುಗಳಿಂದ ಜನರಲ್ಲಿ ಮೌಢ್ಯತೆ ತೊಲಗಿ, ಆಧುನಿಕ ಚಿಂತನೆಗಳು ಮೊಳಕೆಯೊಡೆದವು. 1925ರಲ್ಲಿ ಬೆಂಗಳೂರಿನಲ್ಲಿ ಬ್ರಹ್ಮವಿದ್ಯಾ ಸಮಾಜದ ಸ್ಥಾಪನೆಯಾಯಿತು. ಭಾನುವಾರದಂದು ಸಭೆ ಜರುಗುತ್ತಿದ್ದು ಇಲ್ಲಿ ಭಜನೆ ಸಹ ಜರುಗುತ್ತಿದ್ದು ಎಲ್ಲರೂ ಭಾಗವಹಿಸುತ್ತಿದ್ದರು.

ಇದರ ಸಂಸ್ಥಾಪಕರು ವೆಸ್ಲಿಯನ್ ಮಿಷನ್ ಶಾಲೆ ಹೆಡ್‌ಮಾಸ್ಟರ್ ಮಾ. ಎಂ. ದೇವಾನುಮಯ್ಯನವರು. ಇದರ ವಾರ್ಷಿಕ ಮಹೋತ್ಸವ 26 ಜುಲೈ 1931ರಲ್ಲಿ ನಡೆಯಿತು. ದಾಸಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಮ. ಸಂಜೀವಯ್ಯನವರಿಂದ ಸಂಘದ ವರದಿ ವಾಚನ ಜಾನಯ್ಯನವರು, ಸ್ಕೌಟ್‌ಮಾಸ್ಟರ್ ಕೃಪದಾಸಯ್ಯನವರು, ಬೆಂಗಳೂರಿನಿಂದ ಬಂದಿದ್ದ ಸಿ.ಕೆ. ಕಳಸ್ಯ ಸಂಘದ ಮೆಂಬರುಗಳಾದ ಮುನಿವೆಂಕಟಯ್ಯ ಜಾನ್ ವೆಸ್ಲಯ್ಯನವರು ಅರ್ಥಗರ್ಭಿತವಾದ ಭಾಷಣ ಮಾಡಿದರು. ನೆರೆದಿದ್ದ ಜನ ಭಾಷಣದಿಂದ ಪ್ರಭಾವಿತರಾಗಿ ಉದಾರವಾಗಿ ಹಣ ಸಹಾಯ ಮಾಡಿದರು. ಈ ಹಣದಿಂದ ವಾಚನಾಲಯ, ಅನಾಥರಿಗೆ ಶಿಕ್ಷಣ, ದುರ್ನಡತೆ ಬಿಡಿಸುವುದಕ್ಕೆ ಪ್ರಯತ್ನ, ದೇವತಾ ಕಾರ್ಯಗಳಿಗೆ ಸಹಾಯ ಮಾಡಿದಲ್ಲದೆ ಮಂಗಳವಾರ ಪೇಟೆ ಮುಂತಾದೆಡೆ ಪ್ಲೇಗ್‌ನಿಂದ ಮಡಿದವರ ಮನೆಯವರಿಗೆ ಚಿಕಿತ್ಸೆ ಕೊಡಿಸಲಾಯಿತು.

ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಚಳುವಳಿಯು ಹರಳುಗಟ್ಟಲು ಇದೇ ಧಾರ್ಮಿಕ ಸಂಘಟನೆಗಳು ತಮ್ಮದೇ ಕೊಡುಗೆ ನೀಡಿವೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದರೂ ಸೈದ್ಧಾಂತಿಕವಾಗಿ ಪರಸ್ಪರ ವಿರುದ್ಧ ವಿಚಾರಧಾರೆಗಳನ್ನು ಪ್ರತಿಪಾದಿಸುತ್ತಾ ಬಂದ ಹಿಂದೂ ಮಹಾಸಭೆ ಹಾಗೂ ಮುಸ್ಲಿಂ ಲೀಗ್‌ನ ವಿಚಾರಧಾರೆಗಳ ಭಿನ್ನವಾಗಿದ್ದವು. ಈ ಎರಡು ಸಂಘಟನೆಗಳ ನಾಯಕರು ಕೆಲವೊಮ್ಮೆ ಅಖಿಲ ಭಾರತ ಕಾಂಗ್ರೆಸ್ ಸಂಘಟನೆಯ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದರು.

ಮುಸ್ಲಿಂ ಲೀಗ್

ಭಾರತೀಯ ರಾಜಕಾರಣದಲ್ಲಿ ಮತೀಯ ರಾಜಕಾರಣವನ್ನು ಬ್ರಿಟಿಷರು ತಮ್ಮ 'ವಿಭಜಿಸಿ ಆಳು' ಎಂಬ ನೀತಿಯ ಅನ್ವಯ ಹಿಂದೂ ಮತ್ತು ಮುಸ್ಲಿಂರಲ್ಲಿ ಮತಭೇದದ ಭೂತ ಸೃಷ್ಟಿಸಿದರು. ಇದರಿಂದ ಧಾರ್ಮಿಕ

ಹಿತಾಸಕ್ತಿಗಳು ಸ್ವಾತಂತ್ರ್ಯ ಚಳವಳಿಯನ್ನು ನಿಯಂತ್ರಿಸುವ ಹಾಗು ಮುನ್ನಡೆಸುವ ಶಕ್ತಿ ಪಡೆದುಕೊಂಡವು. ಆದರೆ ಬ್ರಿಟಿಷರ ದಾಸ್ಯದಿಂದ ಮುಕ್ತಗೊಳ್ಳುವ ಇವುಗಳ ಏಕೋದ್ದೇಶಕ್ಕೆ ಯಾವುದೇ ಅಡ್ಡಿಯಿರಲಿಲ್ಲ. ರಾಜಕೀಯವಾಗಿ ಸ್ಥಾನಮಾನಗಳಿಸಿಕೊಳ್ಳುವ, ವಿಶೇಷ ಹಕ್ಕುಗಳು ಹಾಗೂ ಅವಕಾಶಗಳಿಸಿಕೊಳ್ಳುವ ಅವುಗಳ ಚಿಂತನೆಯ ಪರಿಣಾಮವಾಗಿ ಮುಸ್ಲಿಂ ಲೀಗ್ 1906ರಲ್ಲಿ ಸ್ಥಾಪನೆಯಾಯಿತು. ಮುಸ್ಲಿಂ ಲೀಗ್ ಸ್ಥಾಪನೆಯ ಸಂದರ್ಭದಲ್ಲಿ ನವಾಬ್ ವಖರ್ ಉಲ್ ಮುಲ್ಕ್ ಅವರ ಅಭಿಪ್ರಾಯ ಮುಸ್ಲಿಂರಿಗಿದ್ದ ಆತಂಕವನ್ನು ಹಾಗೂ ಅವರ ಅಸ್ತಿತ್ವದ ಪ್ರಶ್ನೆಯನ್ನು ಮುಂದು ಮಾಡುತ್ತದೆ. "ಭಾರತದಲ್ಲಿ ಬ್ರಿಟಿಷರ ಆಡಳಿತವು ಕಣ್ಮರೆಯಾದರೆ ದೇವರೇ ಕಾಪಾಡಬೇಕು! ಹಿಂದುಗಳು ಅದರ ಮೇಲೆ ಪ್ರಭುತ್ವ ನಡೆಸುತ್ತಾರೆ. ನಮ್ಮ ಜೀವ ಆಸ್ತಿ ಹಾಗೂ ಮರ್ಯಾದೆಗಳು ನಿರಂತರ ಅಪಾಯಕ್ಕೆ ಗುರಿಯಾಗುತ್ತವೆ". ವಾಸ್ತವ ಪರಿಸ್ಥಿತಿ ಸಂಪೂರ್ಣವಾಗಿ ಬೇರೆಯೇ ಇತ್ತೆಂಬುದು ಮಾತ್ರ ಸತ್ಯ.

ಹೈದರಾಲಿ ಹಾಗೂ ಟಿಪ್ಪು ಸುಲ್ತಾನರ ಕಾಲದಲ್ಲಿ ಇಲ್ಲಿ ನೆಲಸಿದ ಮುಸ್ಲಿಮರು ಹಿಂದೂಗಳೊಂದಿಗೆ ಸೌಹಾರ್ದತೆಯಿಂದಲೇ ಇದ್ದರು. ಬಿಜಾಪುರ ಸುಲ್ತಾನ ಆದಿಲ್ ಷಾ, ಮೊಗಲ್ ಸೇನಾಧಿಪತಿಗಳ ದಾಳಿಯ ಕಾಲದಲ್ಲೂ ಹಾಗೂ ಶಿವಾಜಿಯ ಪ್ರಭಾವ ಇದ್ದ ಕಾಲದಲ್ಲೂ ಮುಸ್ಲಿಮರು ಸೈನಿಕರಾಗಿ ಉದ್ಯೋಗ ಗಿಟ್ಟಿಸಿಕೊಂಡಿದ್ದರು. ನಂತರ ವ್ಯಾಪಾರ, ಕೃಷಿ, ಆಡಳಿತ ಕಾರ್ಯಗಳಲ್ಲೂ ಭಾಗಿಯಾದರು. 1906ರಲ್ಲಿ ಮುಸ್ಲಿಂ ಲೀಗ್ ಸ್ಥಾಪನೆಗೊಂಡಾಗ ಅದರ ಒಂದು ಶಾಖೆಯು ಕ್ರಮೇಣ ಬೆಂಗಳೂರಿನಲ್ಲೂ ಸ್ಥಾಪನೆಯಾಯಿತು. ಆದರೆ ಅದು ಇಲ್ಲಿ ಪರಿಣಾಮಕಾರಿ ಸಂಘಟನೆಯಾಗಿ ಬೆಳೆಯಲಾಗಲಿಲ್ಲ. ಅಂದಿನ ಬೆಂಗಳೂರು ನಗರದ ಪ್ರಭಾವಿ ಮುಸ್ಲಿಂ ನಾಯಕರೆಲ್ಲ ರಾಷ್ಟ್ರೀಯ ಕಾಂಗ್ರೆಸ್ ಇಲ್ಲವೇ ಪ್ರಜಾಪಕ್ಷದೊಂದಿಗೆ ಗುರ್ತಿಸಿಕೊಂಡಿದ್ದರು. ಹಿಂದೂಗಳ ರಾಜಕೀಯ ಸಂಸ್ಥೆಯ ವಿರುದ್ಧ ಸಂಘಟನೆಗೊಳ್ಳುವ ಪ್ರಭಾವಿ ಕಾರಣಗಳೂ ಇರಲಿಲ್ಲ. ಮೈಸೂರು ಮಹಾರಾಜರಿಗೆ ತಮ್ಮ ನಿಷ್ಠೆಯನ್ನು ಬಹಿರಂಗವಾಗಿಯೇ ಘೋಷಿಸಿಕೊಂಡಿದ್ದರು. ಮಹಾರಾಜರು ಮುಸ್ಲಿಮರಿಗೂ ಮಹತ್ವದ ಸ್ಥಾನ ನೀಡಿದ್ದರು.

ಸರ್ ಮಿರ್ಜಾ ಇಸ್ಮಾಯಿಲ್‌ರಂತಹ ಉದಾರವಾದಿ ದಿವಾನರಿದ್ದುದು ಮುಸ್ಲಿಮರ ಮತೀಯ ಸಂಘಟನೆ ಪ್ರಬಲವಾಗಿ ಬೆಳೆಯದಿರಲು ಪ್ರಮುಖ ಕಾರಣ. ಆದರೂ ಮಿರ್ಜಾ ಲೀಗ್ ಮಹಮ್ಮದೀಯರನ್ನು ಪ್ರತಿನಿಧಿಸುವ ಅವರ ಪರ ಅಧಿಕೃತ ವಾಣಿಯಿಂದ ಮಾತನಾಡಬಲ್ಲ ಏಕಮಾತ್ರ ಸಂಸ್ಥೆ ಎಂದು ಕರೆದಿದ್ದರು. ಮುಸ್ಲಿಂ ಲೀಗ್‌ನ ಸಭೆಗಳು ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯ ಮುಸ್ಲಿಂ ಸೆಂಟ್ರಲ್ ಹಾಲ್‌ನಲ್ಲಿ ಜರುಗುತ್ತಿದ್ದವು. ಇಲ್ಲಿ ಹೆಚ್ಚಾಗಿ ರಾಷ್ಟ್ರೀಯ ಮಟ್ಟದ ಮುಸ್ಲಿಂ ಲೀಗ್‌ನ ನಿರ್ಣಯಗಳನ್ನು ಬೆಂಬಲಿಸಿ ಠರಾವು ಹೊರಡಿಸುತ್ತಿದ್ದರು. ಮೈಸೂರು ಸ್ಟೇಟ್ ಮುಸ್ಲಿಂ ಲೀಗ್ ಎಂದು ಇಲ್ಲಿನ ಪ್ರಾಂತಿಯ ಶಾಖೆಯನ್ನು ಕರೆಯಲಾಗಿತ್ತು. ಬೆಂಗಳೂರಿನ ಮುಸ್ಲಿಂ ಯುವ ವರ್ತಕರೇ ಈ ಸಭೆಗೆ ಹೆಚ್ಚಾಗಿ ಸೇರುತ್ತಿದ್ದರು. ಅಂದಿನ ಮುಸ್ಲಿಮರ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚಿಸಲಾಗುತ್ತಿತ್ತು. ಹೈದ್ರಾಬಾದಿನ ನಿಜಾಂನನ್ನೇ ಭಾರತೀಯ ಮುಸ್ಲಿಮರ ಏಕೈಕ ನಾಯಕ ಎಂಬ ಭಾವನೆಯನ್ನು ಇಲ್ಲಿ ಬಿತ್ತಲಾಗುತ್ತಿತ್ತು. ಮುಸ್ಲಿಮರಿಗೆ ಅಗತ್ಯ ಶಿಕ್ಷಣ ಹಾಗೂ ಇತರ ಸವಲತ್ತುಗಳನ್ನು ಒದಗಿಸುವಂತೆ ನಿರ್ಣಯ ಕೈಗೊಳ್ಳುತ್ತಿದ್ದರು. ಮೈಸೂರಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರಿಗೆ ತಮ್ಮ ಹಲವು ಬೇಡಿಕೆಗಳನ್ನು ಸಲ್ಲಿಸಿದರು. ಮುಸ್ಲಿಂ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯ ಹಾಗೂ ಸವಲತ್ತು ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆಯಿಟ್ಟರು. ಉನ್ನತ ಹುದ್ದೆಗಳಿಗೆ ಮುಸ್ಲಿಮರನ್ನು ನೇಮಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದರು. ಮೈಸೂರು ಸರ್ಕಾರವು ಮುಸ್ಲಿಮರ ವಿಚಾರದಲ್ಲಿ ಉದಾರವಾಗಿಯೇ ವರ್ತಿಸಿತು.

ಮುಸ್ಲಿಂ ಲೀಗ್ ಬೆಂಗಳೂರಿನಲ್ಲಿ ಪ್ರಬಲ ನೆಲೆ ಕಂಡುಕೊಂಡಿದ್ದು ಖಿಲಾಫತ್ ಚಳವಳಿ ನಂತರವೇ. 1920ರ ಹೊತ್ತಿಗೆ ಗಾಂಧೀಜಿ ಹಾಗೂ ಆಲಿ ಸಹೋದರರಿಂದಾಗಿ ಭಾರತದಲ್ಲಿ ಖಿಲಾಫತ್ ಚಳವಳಿ ಪ್ರಬಲಗೊಂಡಿತು.

1920ರ ಆಗಸ್ಟ್ 20 ರಂದು ಶೌಕತ್ ಆಲಿ ಮತ್ತು ಮಹಮ್ಮದ್ ಆಲಿಯೊಂದಿಗೆ ಬೆಂಗಳೂರಿಗೆ ಆಗಮಿಸಿದರು. ಅಂದು ಮೋದಿ ಅಬ್ದುಲ್ ಗಫರ್ ಎಂಬುವವರು ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. 1921 ನವೆಂಬರ್ 17ರಂದು ಪ್ರಿನ್ಸ್ ಆಫ್ ವೇಲ್ಸ್ ಭಾರತಕ್ಕೆ ಭೇಟಿ ಕೊಟ್ಟಿದ್ದನ್ನು ವಿರೋಧಿಸಿ ಬೆಂಗಳೂರಿನ ಕಂಟೋನ್ಮೆಂಟ್‌ನಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದಾಗ ಪೋಲೀಸರ ಗುಂಡಿಗೆ ಅಬ್ದುಲ್ ರಜಾಕ್ ಮತ್ತು ದಸ್ತಗೀರ್ ಸಾಬ್ ಎಂಬುವವರು ಬಲಿಯಾದರು. ಪಿಕೆಟಿಂಗ್ ನಡೆಸಿದ್ದಕ್ಕಾಗಿ ಮೀರ್ ಅಬ್ದುಲ್ಲಾ, ಅಬ್ದುಲ್ ಸುಬಾನ್‌ಗೆ ಒಂಬತ್ತು ತಿಂಗಳ ಶಿಕ್ಷೆಯಾಯಿತು. ಆಗ ಹಿಂದೂ ಮುಸ್ಲಿಮರು ಒಟ್ಟಾಗಿಯೇ ಹೋರಾಟ ನಡೆಸಿದರು.

1928ರ ಗಣೇಶ ಗಲಾಟೆ ಇಲ್ಲಿನ ಮುಸ್ಲಿಮರ ಆಸಕ್ತಿಯನ್ನು ಸೆಳೆಯಿತಲ್ಲದೇ ಹಿಂದೂಗಳ ಪ್ರಾಬಲ್ಯದಲ್ಲಿ ಮುಸ್ಲಿಮರ ಹಿತಾಸಕ್ತಿಗಳ ಕಡೆಗಣನೆ ಆಗದಿರಲು ಎಲ್ಲಾ ಮುಸ್ಲಿಮರು ಒಂದಾಗಿ ಸಂಘಟಿತರಾಗುವ ಅವಶ್ಯಕತೆಯತ್ತ ಮನಗಂಡರು. ಮಹಮ್ಮದ್ ಶರೀಫ್, ಅಬ್ಬಾಸ್ ಖಾನ್, ಅಬ್ದುಲ್ ಜಬ್ಬಾರ್ ಅವರೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡಿದ್ದ ಇಲ್ಲಿನ ಮುಸ್ಲಿಮರು, ಮುಸ್ಲಿಮ್‌ಲೀಗ್ ಚಟುವಟಿಕೆಗಳಲ್ಲಿ ಭಾಗಿಯಾದರು. ಮಹಮ್ಮದ್ ಹನೀಫ್, ಸೈಯ್ಯದ್ ಹಾಫೀಜ್, ಮೊಯ್ಯುದ್ದೀನ್ ಬೇಗ್, ಸೈಯದ್ ಅಜೀಮ್ ಮುಂತಾದವರು ರಾಮನಗರ, ಚನ್ನಪಟ್ಟಣಗಳಲ್ಲೂ ಮುಸ್ಲಿಂ ಲೀಗ್ ಸಂಘಟನೆಗೆ ತೊಡಗಿದರು. ಹೀಗೆ ಮುಸ್ಲಿಮರು ರಾಜಕೀಯವಾಗಿ ಸ್ಥಾನಮಾನಗಳಿಸಿಕೊಂಡು ತಮ್ಮದೇ ಹಕ್ಕುಗಳಿಗಾಗಿ ಬೇಡಿಕೆ ಇತ್ತರು. ಆದರೆ 1928ರ ಗಣೇಶ ಗಲಾಟೆ ಲೀಗ್‌ನ ಸಂಘಟನೆಗೆ ಮಹತ್ವದ ತಿರುವು ನೀಡಿತು.

ಅಂದಿನ ಪ್ರಜಾಮಿತ್ರ ಮಂಡಳಿಯ ಮುಖಂಡರಾಗಿದ್ದ ಹಾಗೂ ಸರ್ ಮಿರ್ಜಾ ಇಸ್ಮಾಯಿಲ್‌ರ ನಿಕಟವರ್ತಿಯಾಗಿದ್ದ ಅಬ್ಬಾಸ್ ಖಾನ್‌ರೇ ಗಣೇಶ ಗಲಾಟೆಗೆ ಕಾರಣರೆಂದು ಕೆಲವು ಮುಖಂಡರು ನೇರವಾಗಿ ಆಪಾದಿಸಿದ್ದರು. ಅಬ್ಬಾಸ್‌ಖಾನ್ ಆಗ ಬೆಂಗಳೂರು ನಗರಸಭೆಯ ಅಧ್ಯಕ್ಷರೂ ಆಗಿದ್ದರು. ಇವರ ಮನೆ ಸುಲ್ತಾನ ಪೇಟೆಯ ಆರ್ಕಾಟ್ ಶ್ರೀನಿವಾಸಚಾರ್ ರಸ್ತೆಯಲ್ಲಿತ್ತು. ಇದರ ಪಶ್ಚಿಮಕ್ಕೆ ಒಂದು ಸರ್ಕಾರಿ ಶಾಲೆಯಿತ್ತು. 1928ರಲ್ಲಿ ಆ ಶಾಲೆಯ ಕಟ್ಟಡ ರಿಪೇರಿ ಮಾಡುವಾಗ ಗುತ್ತಿಗೆದಾರರು ಅಲ್ಲಿನ ಗಣೇಶ ವಿಗ್ರಹವನ್ನು ಸ್ಥಳಾಂತರಿಸಿದ್ದರು. ಆಗ ಅಲ್ಲಿನ ಶಾಲೆಯ ಬಾಲಕರು ಮತ್ತು ಜನರು ಗಣೇಶನನ್ನು ಹಿಂದೆ ಇಟ್ಟಿದ್ದ ಜಾಗದಲ್ಲೇ ಪ್ರತಿಷ್ಠಾಪಿಸಬೇಕೆಂದು ಚಳವಳಿ ಆರಂಭಿಸಿದರು. ಈ ಚಳವಳಿಗೆ ಅಂದಿನ 'ವೀರಕೇಸರಿ', 'ವಿಶ್ವ ಕರ್ನಾಟಕ', 'ಪ್ರಜಾಮಿತ್ರ', 'ನವಜೀವನ', 'ಮೈಸೂರು ಸ್ಟಾರ್' ಪತ್ರಿಕೆಗಳು ಬೆಂಬಲ ನೀಡಿದವು. ಜುಲೈ 29 ರಂದು ವಿದ್ಯಾರ್ಥಿ ಚಳುವಳಿಯ ಮುಂದಾಳುವಾಗಿದ್ದ ಸುಬ್ರಮಣ್ಯಂ, ರಾಮಲೀಲಾ ತಿವಾರಿ ಹಾಗೂ ಭೀಮರಾವ್ ಎಂಬುವವರನ್ನು ಬಂಧಿಸಲಾಯಿತು. ಈ ಬಂಧನವನ್ನು ವಿರೋಧಿಸಿ ಪ್ರತಿಭಟನೆ ನಡೆಸಿದರು. ಪ್ರತಿಭಟನೆ ಹಾಗೂ ನಾಯಕರ ಒತ್ತಡಕ್ಕೆ ಮಣಿದ ಸರ್ಕಾರ ಪ್ರತಿಮೆಯನ್ನು ಅದರ ಹಿಂದಿನ ಸ್ಥಳದಲ್ಲೇ ಪ್ರತಿಷ್ಠಾಪಿಸಿತು ಮತ್ತು ನಾಯಕರನ್ನೂ ಸರ್ಕಾರ ಬಿಡುಗಡೆ ಮಾಡಿತು. ಮತ್ತೆ ನಾಯಕರು ಮೆರವಣಿಗೆಯಲ್ಲಿ ತೆರಳುತ್ತಿದ್ದಾಗ ಗಣೇಶನನ್ನು ಪ್ರತಿಷ್ಠಾಪಿಸಿರುವ ಸ್ಥಳದ ಬಳಿ ಚಪ್ಪಲಿ ತೂರಾಟ ನಡೆಸಿದರು. ಮುಸಲ್ಮಾನರ ಗುಂಪು ಲಾಠಿಗಳನ್ನು ಬೀಸುತ್ತ ಜನರನ್ನು ಬಡಿಯ ತೊಡಗಿದರು. ಆಗ ಹಲವು ಮಂದಿ ಗಾಯಗೊಂಡರು. ಅವರಲ್ಲಿ ಪೋಲೀಸ್ ಅಧಿಕಾರಿಗಳು ಸೇರಿದ್ದರು. ನಗರದಲ್ಲಿ ಮತೀಯ ಸೌಹಾರ್ದ ಕದಡಿದ ಪ್ರಥಮ ಘಟನೆ ಇದಾಗಿತ್ತು. ಈ ಸುದ್ದಿ ಲಂಡನ್, ದೆಹಲಿ, ಮುಂಬೈ, ಕಲ್ಕತ್ತ, ಚೆನ್ನೈಗಳಿಗೂ ಹಬ್ಬಿತು. ಗಲಭೆ ನಿಯಂತ್ರಿಸುವಲ್ಲಿ ಸರ್ಕಾರ ಸಹ ಸರಿಯಾಗಿ ನಿಭಾಯಿಸಲಿಲ್ಲ ಎಂದು ಮುಂದೆ ನೇಮಕವಾದ ವಿಶ್ವೇಶ್ವರಯ್ಯ ಸಮಿತಿ ಹೇಳಿತು. ಮಿರ್ಜಾ ಇಸ್ಮಾಯಿಲ್‌ರ ಕಾರ್ಯವೈಖರಿಯನ್ನು ಹಿಂದೂಗಳು ಟೀಕಿಸಿದರು. ಈ ಘಟನೆ ಹಿಂದೂ ಹಾಗೂ ಮುಸ್ಲಿಮರಲ್ಲಿ ಬಾರಿ ಬಿರುಕನ್ನೇ ಸೃಷ್ಟಿಸಿತು. ಮುಂದೆ ಮುಸ್ಲಿಂ ಲೀಗ್ ಮುಸ್ಲಿಮರ ಹಿತಾಸಕ್ತಿಗಳ ಬಗ್ಗೆ ಬಹಿರಂಗವಾಗೇ ಚರ್ಚಿಸತೊಡಗಿತು. ಮುಸ್ಲಿಂ ಲೀಗನ್ನು ಕಾಂಗ್ರೆಸ್‌ಗೆ ಪರ್ಯಾಯವಾಗಿ ಬ್ರಿಟಿಷ್ ಸರ್ಕಾರ

ಪ್ರಚೋದಿಸಿತು. ಇಲ್ಲಿನ ಮುಸ್ಲಿಮರು ಕ್ರಮೇಣ ಕಾಂಗ್ರೆಸ್ ಹಾಗೂ ಇತರ ರಾಜಕೀಯ ಸಂಘಟನೆಗಳಿಂದ ದೂರವಾಗಿ ಮುಸ್ಲಿಂ ಲೀಗ್ ಮುಸ್ಲಿಮರ ಏಕೈಕ ರಾಜಕೀಯ ಸಂಸ್ಥೆ ಎಂದು ಮಾನ್ಯ ಮಾಡಿದರು. ಮುಸ್ಲಿಮರಲ್ಲಿ ಐಕ್ಯತೆ, ಜಾಗೃತಿ ಮೂಡಿಸಲು ಮುಸ್ಲಿಂಲೀಗ್ ಅಖಿಲ ಭಾರತ ನಾಯಕರನ್ನು ಆಹ್ವಾನಿಸಿ ಸಭೆ ಸಮಾರಂಭ ಏರ್ಪಡಿಸುತ್ತಿತ್ತು. ಜಿನ್ನಾರನ್ನು ಬೆಂಗಳೂರಿಗೆ ಕರೆಸಲು ತೀರ್ಮಾನಿಸಿತು. ಲಿಯಾಖತ್ ಆಲಿಖಾನ್‌ರಿಗೂ ಆಹ್ವಾನ ಕೊಟ್ಟಿತು. ಮಹಮ್ಮದ್ ಶರೀಷ್, ಓಎಸ್‌ಎನ್ ಶರೀಫ್ ಮಹಮ್ಮದ್ ಸೇಟ್ ಮತ್ತು ಅಬ್ಬಾಸ್ ಖಾನ್ ಜವಾಬ್ದಾರಿ ಸರ್ಕಾರಕ್ಕಾಗಿ ಬೇಡಿಕೆ ಇತ್ತರು. ಹೈದ್ರಾಬಾದಿನ ಮೌಲ್ವಿ ಅಬ್ದುಲ್ ಹಸನ್‌ರನ್ನು ಕರೆಸಿ ವಿಶೇಷ ಅಧಿವೇಶನವನ್ನು (1944 30/12)ರಲ್ಲಿ ನಡೆಸಿತು. ಅಖಿಲ ಭಾರತ ಮುಸ್ಲಿಂ ಲೀಗ್‌ನ ಅಧ್ಯಕ್ಷ ಬಹದ್ದೂರ್ ಯಾರ್ ಜಂಗ್‌ನ ಮರಣಕ್ಕೆ ಸಂತಾಪ ಸಭೆ ನಡೆಸಿತು. ಮುಸ್ಲಿಂ ಲೀಗ್ ಅಂದು ಜರುಗಿದ ಚುನಾವಣೆಯಲ್ಲೂ ಸ್ಪರ್ಧಿಸಿತು. ಬೆಂಗಳೂರು ಸಿಟಿ ಮತ್ತು ಜಿಲ್ಲೆಯಿಂದ ಒ.ಎಸ್.ಎನ್. ಶರೀಫ್ ಸ್ಪರ್ಧಿಸಿದ್ದರು. ಆದರೆ ಇವರು ಪರಾಭವಗೊಂಡರು. ಲಿಯಾಖತ್ ಆಲಿಖಾನ್ ಬೆಂಗಳೂರಿಗೆ ಭೇಟಿ ಕೊಟ್ಟು ಬೆಂಗಳೂರು ಕೂರ್ಗ್ ಮುಸ್ಲಿಂ ಲೀಗ್ ಶಾಖೆಯ ಉದ್ಘಾಟನೆಯಲ್ಲಿ ಪಾಲ್ಗೊಂಡರು. ಇವರ ಜೊತೆ ಅಂದಿನ ಮುಸ್ಲಿಂಲೀಗ್ ಅಧ್ಯಕ್ಷ ಸಿದ್ಧಿಕಿ ಅಲಿಖಾನ್ ಅವರು ಬಂದಿದ್ದರು. ಈ ಕಾರ್ಯಕ್ರಮ ಕಂಟೋನ್ಮೆಂಟ್ (ಸಿ ಅಂಡ್ ಎಂ) ಸ್ಟೇಷನ್‌ನಲ್ಲಿ ಜರುಗಿತು. ಮುಸ್ಲಿಂ ಲೀಗ್ ವಂದೇ ಮಾತರಂ ಗೀತೆಯನ್ನು ಶಾಲೆಯಲ್ಲಿ ಹಾಡುವುದನ್ನು ಆಕ್ಷೇಪಿಸಿತು. ಅಲ್ಲದೆ ಮುಖ್ಯ ನ್ಯಾಯಾಧೀಶ (ಮೈಸೂರು) ಹುದ್ದೆಗೆ ಹೊರಗಿನವರನ್ನು ನೇಮಿಸದೇ ಅಬ್ದುಲ್ ಗನಿಯನ್ನೇ ನೇಮಿಸುವಂತೆ ಒತ್ತಾಯಿಸಿತು. 10–05–1945ರಲ್ಲಿ ಮುಸ್ಲಿಂ ಲೀಗ್ ಮುತ್ತು ದಖ್ಖನ್ ಮುಸ್ಲಿಂ ಲೀಗ್ ರಾಜ್ಯಮಟ್ಟದ ಜಂಟಿ ಸಮಾವೇಶ ಏರ್ಪಡಿಸಿತು. ಈ ಸಭೆಯಲ್ಲಿ ಮಜ್ಲಿಸ್ ಇ ಇತ್ತೆಹದುಲ್ ಮುಸ್ಲಿಮೀನ್‌ದ ಅಧ್ಯಕ್ಷ ಮೌಲ್ವಿ ದಾಬುಲ್ ಹಸನ್ ಭಾಗವಹಿಸಿದ್ದರು. ಬೆಂಗಳೂರು ನಗರದ ಮುಸ್ಲಿಂ ಲೀಗ್ ಅಧ್ಯಕ್ಷ ಜನಾಬ್ ಅಬ್ದುಲ್ ಹಸನ್ ಸೈಯ್ಯದ್ ಆಲಿ ಅಧ್ಯಕ್ಷತೆ ವಹಿಸಿದ್ದರು. ಕೊಲ್ಲಾಪುರ, ಭೂಪಾಲ್, ಹೈದ್ರಾಬಾದ್, ಬಂಗನಪಲ್ಲಿ ಹಾಗೂ ಇತರ ಸ್ಥಳಗಳ ಮುಸ್ಲಿಂ ಪ್ರತಿನಿಧಿಗಳು ಭಾಗವಹಿಸಿದ್ದರು. ಮಹಮ್ಮದ್ ಶರೀಫ್ ತನ್ನ ಸ್ವಾಗತ ಭಾಷಣದಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ ಪ್ರತಿಪಾದಿಸಿದನು. ಅಲ್ಲದೆ ಹಿಂದೂಗಳಿಂದ ತಮಗೆ ರಕ್ಷಣೆ ಬೇಕೆಂದು ಈ ಸಭೆ ನಿರ್ಣಯಿಸಿತು. ಬೆಂಗಳೂರು ಇಂಜನಿಯರಿಂಗ್ ಕಾಲೇಜಿನ ಗೋಪಾಲ ಕೃಷ್ಣರಾವ್ ಟಿಪ್ಪುವಿನ ಜೀವನ ಸಾಧನೆಗಳ ಬಗೆಗೆ ಬಾಷಣ ಮಾಡಿದರು. 28.10.1945ರಂದು ಅಂಜುಮಾನೆ ಇತ್ತೆ ಹಾದ್ ಇಸ್ಲಾಂನ್ನಲ್ಲಿ ಸಮಾವೇಶಗೊಂಡು ಟಿಪ್ಪು ಸುಲ್ತಾನ್ ಉರುಸ್ ಆಚರಿಸಿತು ಮತ್ತು 31.10.45ರಂದು ಟಿಪ್ಪು ಸುಲ್ತಾನ ಡೇ ಆಚರಿಸಲಾಯಿತು. ಮೈಸೂರು ರಾಜ್ಯ ಮುಸ್ಲಿಂ ಲೀಗ್ ನೇತೃತ್ವದಲ್ಲಿ ನಡೆದ ಸಭೆಗೆ ಮಹಮ್ಮದ್ ಶರೀಫ್, ಸೈಯ್ಯದ್ ನಜೀಮುಲ್ಲಾ (ಚನ್ನಪಟ್ಟಣ), ಸೈಯ್ಯದ್ ಬಕಾರ್ (ಬೆಂಗಳೂರು ನಗರ), ಶಹಾಬುದ್ದೀನ್ (ಹೈದ್ರಾಬಾದ್) ಮುಂತಾದವರು ಭಾಗವಹಿಸಿದ್ದರು. ಲೀಗ್‌ನ ಇಂತಹ ಕಾರ್ಯಕ್ರಮಗಳಲ್ಲಿ ವಕೀಲರು, ವಿದ್ಯಾರ್ಥಿಗಳು, ಪತ್ರಿಕಾ ಸಂಪಾದಕರು ಭಾಗವಹಿಸುತ್ತಿದ್ದರು.

ಮುಸ್ಲಿಂ ಲೀಗ್‌ನ 9ನೇ ರಾಜ್ಯ ಮಟ್ಟದ ಸಮಾವೇಶಕ್ಕೆ ಹೈದ್ರಾಬಾದ್‌ನ ಮುಜ್ಲಿಸ್ ಇ ಇತ್ತೇಹಾದುಲ್‌ನ ಅಧ್ಯಕ್ಷ ಹಾಗೂ ವಕೀಲ ಅಬ್ದುಲ್ ಹಸನ್ ಸೈಯ್ಯದ್ ಆಲಿಯನ್ನು ಆಹ್ವಾನಿಸಲಾಗಿತ್ತು. ಇಲ್ಲಿ ಗಾಂಧಿ–ಜಿನ್ನಾ ಮಾತುಕತೆಯ ಬಗೆಗೆ ಖಂಡನಾ ನಿರ್ಣಯ ಕೈಗೊಳ್ಳಲಾಯಿತು. ಮುಸ್ಲಿಮರಿಗಾಗಿ ಪ್ರತ್ಯೇಕ ಪಾಕಿಸ್ತಾನ ರಚನೆಗೆ ಒತ್ತಾಯಿಸಲಾಯಿತು. ಹೈದ್ರಾಬಾದಿನಲ್ಲಿ ಜರುಗುವ ಇತ್ತೇಹದುಲ್ ಮುಸಲ್ಮಾನ ಸಮಾವೇಶಕ್ಕೆ ಎ.ಜೆ. ಖಲೀಲ, ಹಕೀಂ ಸೈಯ್ಯದ್ ಬಾಕರ್, ಗೌಸ್ ಮೊಯ್ಯಿದ್ದೀನ್ ಮತ್ತು ಅಬ್ದುಲ್ ಗನಿಯವರನ್ನು ಆಹ್ವಾನಿಸಲಾಯಿತು. ಸರ್ಕಾರವು ಶ್ರೀರಂಗಪಟ್ಟಣದಲ್ಲಿ ಟಿಪ್ಪು ಸುಲ್ತಾನ ಡೇ ಆಚರಣೆ ನಿಷೇಧಿಸಿರುವ ಬಗ್ಗೆ ಸಭೆ ಖಂಡನಾ ನಿರ್ಣಯ ಕೈಗೊಂಡಿತು. ಇದೇ ರೀತಿ ಮುಸ್ಲಿಂ ಲೀಗ್ ಬೆಂಗಳೂರಿನಲ್ಲಿ ಜಲ್ಸಾಡೇ, ಜಿನ್ನಾ ಜನ್ಮ ದಿನಾಚರಣೆಗಳನ್ನು

ಆಚರಿಸಿತು. ಇಲ್ಲಿನ ಮುಸ್ಲಿಂ ವಿದ್ಯಾರ್ಥಿಗಳು ಲಾಹೋರ್‌ನ ಕಾಕಟ್‌ಗರ್ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದರು. ಇದರಿಂದಾಗಿ ಹಿಂದೂ ಸಭಾದಂತ ಸಂಘಟನೆಗಳು ಮುಸ್ಲಿಂ ಲೀಗ್ ಚಟುವಟಿಕೆಗಳು ರಾಷ್ಟ್ರವಿರೋಧಿ ಎಂದು ಜರೆದವು.

ಹಿಂದೂ ಮಹಾಸಭಾ

ಹಿಂದೂಗಳೂ ತಮ್ಮ ಮನೆ, ಮಠ, ಧರ್ಮಗಳ ರಕ್ಷಣೆಗಾಗಿ ಎದ್ದು ನಿಲ್ಲಲು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿ 1916ರಲ್ಲಿ ಹಿಂದೂ ಮಹಾಸಭಾವನ್ನು ಸ್ಥಾಪಿಸಿಕೊಂಡರು. ಬೆಂಗಳೂರಿನ ಆರ್ಯ ಸಮಾಜದ ಶುದ್ಧಿ ಚಳವಳಿ ಹಿಂದೂಗಳನ್ನು ಪ್ರತಿನಿಧಿಸುವ ರಾಜಕೀಯ ಸಂಸ್ಥೆ ಸ್ಥಾಪಿಸಿಕೊಳ್ಳಲು ಪ್ರಚೋದನೆ ನೀಡಿತು. ಅದರಲ್ಲೂ 1928ರ ಗಣೇಶ ಗಲಾಟೆ ಇಲ್ಲಿ ಹಿಂದೂ ಮಹಾಸಭಾವನ್ನು ಆರಂಭಿಸಲು ಅಥವಾ ಪುನರಾರಂಭಿಸಲು ನೇರ ಕಾರಣವಾಯಿತು. ಆದರೆ ಅದನ್ನು ಮುಸ್ಲಿಂಲೀಗ್‌ಗೆ ಹೋಲಿಸಿದರೆ ಅದು ಅಸ್ವಸ್ಥ ಮಗುವಿನಂತಿತ್ತು. ಆದರೂ ಅದು ದೇಶದಲ್ಲಿ 1926–28ರ ವೇಳೆಗೆ ಶಾಸನ ಸಭೆಗಳಲ್ಲಿ ಪ್ರಭಾವಶಾಲಿಯಾಗಿ ಬೆಳೆದಿತ್ತು ಎಂಬುದು ಗಮನಾರ್ಹ. ಬೆಂಗಳೂರು ನಗರದಲ್ಲಿ 1928ರಲ್ಲಿ ಅಸ್ತಿತ್ವಕ್ಕೆ ಬಂದ ಹಿಂದೂ ಮಹಾಸಭೆಯ ಅಧ್ಯಕ್ಷರಾಗಿ ಸಂಪಿಗೆ ವೆಂಕಟಪತಯ್ಯ, ಕಾರ್ಯದರ್ಶಿಗಳಾಗಿ ವಾಜಪೇಯಿ ವೆಂಕಟೇಶಯ್ಯ ನೇಮಿಸಲ್ಪಟ್ಟರು. ಇವರು ಮುಸ್ಲಿಂ ಲೀಗ್‌ನ ಚಟುವಟಿಕೆಗಳು ಕ್ರಿಶ್ಚಿಯನ್ ಮಿಷನರಿಗಳ ಮತಾಂತರದಂತಹ ವಿಚಾರಗಳಿಂದ ಎಚ್ಚೆತ್ತು ಹಿಂದೂ ಮಹಾಸಭೆಯನ್ನು ಸಂಘಟಿಸುವ ಪ್ರಯತ್ನ ಮಾಡಿದರು. ಇಡೀ ದೇಶದಲ್ಲಿಯೇ ಹೆಚ್ಚು ಮಿಷನರಿಗಳು ಮೈಸೂರು ಸಂಸ್ಥಾನದಲ್ಲಿ (ಸುಮಾರು 600 ಜನ) ಸಕ್ರಿಯವಾಗಿದ್ದುದು ಇವರ ಆತಂಕಕ್ಕೆ ಕಾರಣವಾಗಿತ್ತು. ಹೀಗಾಗಿ ಹಿಂದೂಗಳ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಸ್ವಾತಂತ್ರ್ಯಕ್ಕೆ ಚ್ಯುತಿ ಬರದೇ ಇರಲು ಹಿಂದೂಗಳಿಗಾಗಿ ಸಭಾವನ್ನು ಸಂಘಟಿಸುವ ದೀಕ್ಷೆ ತೊಟ್ಟರು. ಮೈಸೂರು ಇತರ ಭಾಗಗಳಲ್ಲಿ ದಲಿತರು ಸೇರಿದಂತೆ ಇತರರು ಮತಾಂತರಗೊಂಡಿದ್ದು ಅಂತವರನ್ನು ಶುದ್ಧಿ ಚಳುವಳಿ ಮೂಲಕ ಅವರ ಮಾತೃ ಧರ್ಮಕ್ಕೆ ಸೇರಿಸಿಕೊಳ್ಳುವ ಸಂಕಲ್ಪ ಮಾಡಿದರು. ಹಿಂದೂ ಮಹಾಸಭಾದ ಸಭೆಯನ್ನು ಬೆಂಗಳೂರು ಮೆಜೆಸ್ಟಿಕ್ ನಾಟಕ ಮಂದಿರದಲ್ಲಿ 15–12–1929ನೇ ಭಾನುವಾರ ಸಭೆಯನ್ನು ಡಾ. ರಾವ್ ಬಹದ್ದೂರ್ ಸಿ.ಬಿ.ರಾಮರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಇಲ್ಲಿ ಸಾವಿರಾರು ಮಂದಿ ಹಿಂದೂ ಸಮಾಜದ ಉದ್ಧಾರಕ್ಕೆ ಸಂಕಲ್ಪ ತೊಟ್ಟರು.

ನಂತರ 30–01–1945ರಂದು ಹಿಂದು ಮಹಾಸಭಾದ ಅಧ್ಯಕ್ಷರಾಗಿದ್ದ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಬೆಂಗಳೂರಿಗೆ ಭೇಟಿಕೊಟ್ಟು ಸೆಂಟ್ರಲ್ ಕಾಲೇಜಿನ ಯೂನಿಯನ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಬಂಗಾಳ ಸರ್ಕಾರ ಕ್ಷಾಮವನ್ನು ಎದುರಿಸುವಲ್ಲಿ ತಾರತಮ್ಯ ಎಸಗುತ್ತಿರುವುದನ್ನು ಗಮನಕ್ಕೆ ತಂದರು. ನಂತರ ಮುನ್ಸಿಸಿಪಲ್ ಗಾರ್ಡನ್ನಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದರು. ಅಲ್ಲಿ ಲಾಹೋರ್ ಅಧಿವೇಶನದಲ್ಲಿ ಪಾಕಿಸ್ತಾನ ಬೇಡಿಕೆ ಬಗ್ಗೆ ನಿರ್ಣಯಿಸಿದ್ದನ್ನು ಖಂಡಿಸಲಾಯಿತು. ಈ ಸಭೆಯಲ್ಲಿ 5000ಕ್ಕೂ ಹೆಚ್ಚು ಜನ ಸಾರ್ವಜನಿಕರು ಭಾಗವಹಿಸಿದ್ದರು. ಅಂದು ಹಿಂದೂ ಮಹಾಸಭಾ ಅಧ್ಯಕ್ಷರಾಗಿ ಎಂ. ಸಿ. ಮಲ್ಲಪ್ಪ ನೇಮಕವಾಗಿದ್ದರು. ಚನ್ನಪಟ್ಟಣ, ರಾಮನಗರ, ಕಾನಕಾನಹಳ್ಳಿ, ಮಾಗಡಿಗಳಲ್ಲೂ ಹಿಂದು ಮಹಾಸಭಾದ ಶಾಖೆಗಳು ಸ್ಥಾಪನೆಗೊಂಡವು. ಮೈಸೂರು ಸ್ಟೇಟ್ ಹಿಂದೂ ಮಹಾಸಭಾದ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಯನ್ನು ಚನ್ನಪಟ್ಟಣದಲ್ಲಿ ನಡೆಸಲಾಯಿತು. 4ನೇ ರಾಜ್ಯಮಟ್ಟದ ಮಹಾಸಭಾ ಅಧಿವೇಶನವನ್ನು ಕಾನಕಾನಹಳ್ಳಿಯಲ್ಲಿ ಏರ್ಪಡಿಸಿತು. ಇಲ್ಲಿಯೇ ಮೈಸೂರು ಸ್ಟೇಟ್ ಹಿಂದೂ ವಿದ್ಯಾರ್ಥಿಗಳ 3ನೇ ಸಮ್ಮೇಳನ ಜರುಗಿತು. ಡಾ. ಶ್ಯಾಮ್ ಪ್ರಸಾದ್

ಮುಖರ್ಜಿಯವರನ್ನು ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮಾಡಿ ಸ್ವಾಗತಿಸಲಾಯಿತು. ಈ ಸಮಾವೇಶವು ಎರಡು ದಿನ ಕಾಲ ನಡೆಯಿತು. ಅಂದಿನ ಮಹಾಸಭಾದ ಎಂ.ಸಿ ಮಲ್ಲಪ್ಪ, ಭೂಪಾಲಂ ಚಂದ್ರಶೇಖರಯ್ಯ, ಜಿ. ವಿ. ರಾಮಾಚಾರ್, ಲಿಂಗೇಗೌಡ, ಹಿಂದೂ ಮಹಾಸಭಾದ ಉಪಾಧ್ಯಕ್ಷ ವರದರಾಜಲು ನಾಯ್ಡು (ಮದ್ರಾಸ್) ಶಿವಮೂರ್ತಿಶಾಸ್ತ್ರಿ, ಸುಬ್ಬರಾವ್, ಮಹಾದೇವಪ್ಪ ಮುಂತಾದವರು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ 800ಕ್ಕಿಂತಲೂ ಹೆಚ್ಚು ಜನ ಭಾಗವಹಿಸಿದ್ದರು. ದಕ್ಷಿಣ ಭಾರತದಲ್ಲಿ ಜಾತಿ ಮತ್ತು ಕೋಮು ಭಿನ್ನತೆಯಿಂದ ಲಿಂಗಾಯಿತರು. ಬ್ರಾಹ್ಮಣರು, ಬ್ರಾಹ್ಮಣೇತರ ಮುಂತಾದ ಗುಂಪುಗಳು ಹುಟ್ಟಿಕೊಂಡಿರುವುದರಿಂದ ಹಿಂದೂಗಳನ್ನು ರಾಜಕೀಯವಾಗಿ ಸಂಘಟಿಸಲು ಮಹಾಸಭಾವು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಗಣೇಶ ಹಬ್ಬದ ಆಚರಣೆ, ಶಿವಾಜಿ ದಿನ, ಸಾವರ್ಕರ್ ಜಯಂತಿ, ಇಂಡೋನೇಷ್ಯಾ ದಿನಾಚರಣೆ, ಸುಭಾಷ್ ಚಂದ್ರ ಬೋಸ್, ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆಗಳನ್ನು ಆಚರಿಸುವ ಮೂಲಕ ಹಿಂದೂಗಳಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ನಡೆಸಿತು. ಅಲ್ಲದೇ ಅದು ಗೋಹತ್ಯೆ ನಿಷೇಧವನ್ನು ಜಾರಿಗೆ ತರುವಂತೆ ಮಹಾರಾಜರಲ್ಲಿ ಪ್ರಾರ್ಥಿಸಿತು. 30 ಕೋಟಿ ಜನಸಂಖ್ಯೆ ಇರುವ ಹಿಂದೂ ದೇಶದಲ್ಲಿ ಮುಸ್ಲಿಮರಿಗೆ ಶಾಸನಸಭೆಗಳಲ್ಲಿ ಪ್ರತ್ಯೇಕ ಸ್ಥಾನ ನೀಡುವುದು ಉಚಿತವಲ್ಲ. ಮುಸ್ಲಿಂ ವಿದ್ಯಾರ್ಥಿಗಳಿಗೆ ಕೊಟ್ಟಿರುವ ವಿಶೇಷ ಸವಲತ್ತುಗಳನ್ನು ಹಿಂದೂ ವಿದ್ಯಾರ್ಥಿಗಳಿಗೂ (ಶೇ.94 ರಷ್ಟು ಇರುವ) ನೀಡಬೇಕೆಂದು ಒತ್ತಾಯಿಸಿತು. ಕಾಳಸಂತೆ ವ್ಯಾಪಾರ ತಡೆ, ಮೈಸೂರು ಪ್ರತಿನಿಧಿಸಭೆಯಲ್ಲಿ ಮಂತ್ರಿಗಳ ವಿರುದ್ಧ ಅವಿಶ್ವಾಸ ಗೊತ್ತುವಳಿಗೆ ಅವಕಾಶ, ರೇಷ್ಮೆ ಮೇಲಿನ ನಿರ್ಬಂಧ ರದ್ಧತಿ, ರಾಜ್ಯದ ಅರಮನೆ ಹಾಗೂ ಮುಜರಾಯಿ ದೇವಾಲಯಗಳಿಗೆ ಹರಿಜನರಿಗೂ ಪ್ರವೇಶ ಮುಂತಾದ ವಿಚಾರಗಳನ್ನು ಪ್ರತಿಪಾದಿಸಿತು. ಗೋಹತ್ಯೆ ನಿಷೇಧವನ್ನು ಮಾಡಲು ಸರ್ಕಾರವನ್ನು ಒತ್ತಾಯಿಸಿತು.

ಬೆಂಗಳೂರಿನಲ್ಲಿ ಮುಸ್ಲಿಂ ಲೀಗ್ ಪಾಕಿಸ್ತಾನ ರಚನೆ ಸಂಬಂಧ ಜಿನ್ನಾರ ಘೋಷಣೆಗೆ ಹೆಚ್ಚಿನ ಮಹತ್ವ ಕೊಟ್ಟ ನಂತರ ಮಹಾಸಭಾದ ಚಟುವಟಿಕೆಗಳು ಚುರುಕುಗೊಂಡವು. ಸಾವರ್ಕರ್ ಪ್ರತಿಪಾದಿಸಿದ ಹಿಂದೂರಾಜ್ ಬೆಂಬಲಿಸಿ ಸಂಘವು ನಿರ್ಣಯ ಕೈಗೊಂಡಿತು. ಮುಸ್ಲಿಮರನ್ನು ಕಾಂಗ್ರೆಸ್ ಓಲೈಸುವ ನೀತಿ ಹಾಗೂ ಸಿ.ರಾಜ್‌ಗೋಪಾಲ್ ಫಾರ್ಮುಲಾವನ್ನು 1945ರ ಹೊತ್ತಿಗೆ ವಿರೋಧಿಸಿತು. ಆಲ್ ಇಂಡಿಯಾ ಹಿಂದೂ ಮಹಾಸಭಾದ ಉಪಾಧ್ಯಕ್ಷರಾಗಿದ್ದ ಮೂಂಜೆ ಬೆಂಗಳೂರಿಗೆ ಭೇಟಿ ಇತ್ತಾಗ ಸಾರ್ವಜನಿಕ ಭಾಷಣದಲ್ಲಿ ಇವುಗಳನ್ನು ಪ್ರತಿಪಾದಿಸಿದರು. (23.01.1945). ಇವರು ಮುನ್ಸಿಪಲ್ ಗಾರ್ಡನ್ ಮತ್ತು ಯೂನಿವರ್ಸಿಟಿ ಯೂನಿಯನ್‌ನಲ್ಲಿ ಭಾಷಣ ಮಾಡಿದರು. ಈ ಸಭೆಯಲ್ಲಿ ಹಿಂದೂ ಸಾರ್ವಭೌಮತೆ ಮತ್ತು ಸಂಸ್ಕೃತಿಗೆ ಧಕ್ಕೆಯಾಗಿದೆ ಎಂದು ಪ್ರತಿಪಾದಿಸಲಾಯಿತು. ಹಿಂದೂ ಮಹಾಸಭಾದ ಮೂಲಕ ಹಿಂದೂಗಳ ಐಕ್ಯತೆಗೆ ಒತ್ತು ನೀಡಲಾಯಿತು. ಹಿಂದೂ ಮಹಾಸಭಾದ ಭೂಪಾಲಂ ಚಂದ್ರಶೇಖರಯ್ಯ, ರಾಮಚಂದ್ರ, ಜಿ. ವಿ. ರಾಮಾಚಾರ್, ಎಂ. ಸಿ. ಮಲ್ಲಪ್ಪ ಮುಂತಾದವರು. ಮದ್ರಾಸು ಕಾಥೇವಾರ, ಕೊಲ್ಲಾಪುರಗಳಲ್ಲಿ ಜರುಗಿದ ಹಿಂದೂ ಮಹಾಸಭಾದ ಸಭೆಗಳಲ್ಲಿ ಭಾಗವಹಿಸಿದರು. 1947ರಲ್ಲಿ ಪಾಕಿಸ್ತಾನ ಇಬ್ಭಾಗಿಸುವ ಸರ್ಕಾರದ ನಿರ್ಧಾರವನ್ನು ಖಂಡಿಸಲಾಯಿತು. 10–15–1947ರಂದು ಹಿಂದೂ ಮಹಾಸಭೆ, ಸ್ವಾತಂತ್ರ್ಯ ದಿನಾಚರಣೆ ಆಚರಿಸುವ ನಿರ್ಣಯ ಕೈಗೊಂಡಿತು. ಅದೇ ದಿನ ವಿ.ಡಿ. ಸಾವಕರ್ ರತ್ನಗಿರಿ ಜೈಲಿನಿಂದ ಬಿಡುಗಡೆ ಹೊಂದುವವರಾಗಿದ್ದರು.

ಸ್ವಾತಂತ್ರ್ಯ ಚಳವಳಿಯಲ್ಲಿ ಮತೀಯಾಧಾರಿತ ಸಂಘಟನೆಗಳ ಹೋರಾಟ ಭಾರತದ ರಾಜಕೀಯ ಚರಿತ್ರೆಯ ದಿಕ್ಕನ್ನೇ ಬದಲಿಸಿತು. ಇದರೊಂದಿಗೆ ಸ್ವಾತಂತ್ರ್ಯಾನಂತರ ಕೋಮುವಾದಿ ರಾಜಕಾರಣ ಬಲ ಪಡೆದುಕೊಂಡಿತು. ಆದರೆ ಸ್ವಾತಂತ್ರ್ಯ ಪೂರ್ವದ ಧಾರ್ಮಿಕ ಸಂಘಟನೆಗಳ ರಾಜಕಾರಣ ಆಯಾಯ ಸಮುದಾಯಗಳ ಹಿತಾಸಕ್ತಿ ರಕ್ಷಣೆಗೆ ಬದ್ಧವಾಗಿದ್ದರೂ ಮುಸ್ಲಿಂ ಲೀಗ್ ದೇಶ ವಿಭಜನೆಗೆ (ಪಾಕಿಸ್ತಾನ ರಚನೆ) ಬೆಂಬಲಿಸಿದ್ದು ಹಿಂದೂಗಳಿಗೆ

ಅಸಹನೀಯ ವಿಚಾರವೇ ಆಗಿತ್ತು. ಸ್ವಾತಂತ್ರ್ಯಾನಂತರ ಕೋಮುವಾದಿ ರಾಜಕಾರಣ ತೀವ್ರಗೊಳ್ಳಲು ಇದೇ ಸಂಘಟನೆಗಳು ಕಾರಣವಾದವು ಕೂಡ.

ಆಕರ ಗ್ರಂಥಗಳು

1. ಸ್ಪೆಷಲ್ ಬ್ರಾಂಚ್ ಅಬ್‌ಸ್ಟ್ರಾಕ್ಟ್ಸ್ ರಿಪೋರ್ಟ್ಸ್, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು (1928–47).
2. ಚಟರ್ಜಿ ನಿರ್ಮಲ್ ಚಂದ್ರ; ಹಿಂದೂ ಪಾಲಿಟಿಕ್ಸ್, ದಿ ಮೆಸೇಜ್ ಆಫ್ ಮಹಾಸಭಾ, 1945
3. ವಿಶ್ವಕರ್ನಾಟಕ, 17 ನವೆಂ 1928, 14 ಅಕ್ಟೋಬರ್ 1928, ಮೈಸೂರು
4. ಇಂದ್ರ ಪ್ರಕಾಶ್; ಹಿಂದೂ ಮಹಾಸಭಾ, ಅ.ಭಾ.ಹಿ.ಮ, ಡೆಲ್ಲಿ
5. ಸೀತಾರಾಮ್ ಗೋಯಲ್; ಕಾಸಸ್ ಅಂಡ್ ಕಾನ್ಸಿಕ್ವೆನ್ಸಸ್ ವಾಯ್ಸ್ ಆಫ್ ಇಂಡಿಯಾ ನ್ಯೂ ಡೆಲ್ಲಿ 2002.
6. ವಿ.ಎಸ್. ನಾರಾಯಣರಾವ್; ಸರ್ ಮಿರ್ಜಾ ಇಸ್ಮಾಯಿಲ್; ಕಸಾಪ, ಬೆಂ., 1975
7. ಎನ್. ಪಿ. ಶಂಕರನಾರಾಯಣರಾವ್; ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ, 1991
8. ಹೂ.ವೆ.ಶೇಷಾದ್ರಿ; ಕನ್ನಡಕ್ಕೆ ಕಾ.ಶಿ. ನಾಗರಾಜ್, ದೇಶ ವಿಭಜನೆಯ ದುರಂತ ಕಥೆ, 1995
9. ಡಾ. ಸೂರ್ಯನಾಥ ಕಾಮತ್; ಬೆಂಗಳೂರು ಜಿಲ್ಲಾ (ನಗರ) ಗ್ಯಾಜೆಟಿಯರ್
10. ಖಾಸಗಿ ದಾಖಲೆಗಳ ಸಂಗ್ರಹ, ಕ.ರಾ.ಪ.ಇ., ಬೆಂಗಳೂರು.
11. ಬಿಪಿನ್ ಚಂದ್ರ ಮತ್ತು ಚೌದರಿ; ಇಂಡಿಯನ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್ ನ್ಯಾ.ಬು.ಟ್ರಸ್ಟ್, ಡೆಲ್ಲಿ
12. ಆರ್. ಸಿ. ಮಜುಂದಾರ್; ಹಿಸ್ಟರಿ ಆಫ್ ದಿ ಫ್ರೀಡಂ ಮೂವ್‌ಮೆಂಟ್.

70. ಹತ್ತೊಂಬತ್ತನೆಯ ಶತಮಾನದಲ್ಲಿ ಬೆಂಗಳೂರಲ್ಲಿ ಕೈಗಾರಿಕೆಗಳು

ಡಾ. ಸೂರ್ಯನಾಥ್ ಕಾಮತ್

ಹತ್ತೊಂಬತ್ತನೆಯ ಶತಮಾನದಲ್ಲಿ ಬೆಂಗಳೂರು ಬ್ರಿಟಿಷರ ವಶಕ್ಕೆ ಬಂದು ಮೈಸೂರು ಅರಸರ ಆಡಳಿತಕ್ಕೆ ಸೇರಿತ್ತು. ಮೊದಲಬಾರಿ ಬೆಂಗಳೂರು ದೀರ್ಘಕಾಲ ಶಾಂತಿಯನ್ನು ಕಂಡು ಇಲ್ಲಿ ವ್ಯಾಪಾರ ಹಾಗೂ ಕೈಗಾರಿಕೆಗಳ ವಿಸ್ತರಣೆ ಆಯಿತು. ಆದರೆ ಇಲ್ಲಿನ ಗೃಹಕೈಗಾರಿಕೆಗಳ ಸಮೃದ್ಧಿ ಶತಮಾನದ ಆರಂಭದ 2-3 ದಶಕಗಳಲ್ಲಿ ಕಣ್ಮರೆಯಾಯಿತು. ಇದಕ್ಕೆ ಇಂಗ್ಲೆಂಡಿನಲ್ಲಿ ಆದ ಕೈಗಾರಿಕಾ ಕ್ರಾಂತಿಯೇ ಕಾರಣ. ಬುಕನನ್ 1800ರಲ್ಲಿ ಚಿತ್ರಿಸಿದ್ಧ ಇಲ್ಲಿನ ಗೃಹ ಕೈಗಾರಿಕೆಗಳು, ಜವಳಿ ಉದ್ದಿಮೆ ತೀರ ಹಿನ್ನೆಡೆ ಪಡೆಯಿತು. ಆದರೆ ಮುಂದೆ ಆದ ಬ್ಯಾಂಕಿಂಗ್ ಉದ್ದಿಮೆ, ಸಾರಿಗೆ ಸಂಪರ್ಕಗಳ ವೃದ್ಧಿ ಯಾಂತ್ರಿಕ ಕೈಗಾರಿಕೆಗಳ ಬೆಳವಣಿಗೆಗೆ ಕಾರಣವಾಯಿತು.

ಕೆಂಪೇಗೌಡರು ಸು. 1537ರಲ್ಲಿ ಬೆಂಗಳೂರು ಕೋಟೆ ಕಟ್ಟಿ ತಮ್ಮ ರಾಜಧಾನಿಯಾಗಿ ಮಾಡಿಕೊಂಡರು. ಅವರ ವಂಶದ 100 ವರ್ಷದ ಆಡಳಿತ ಕಾಲದಲ್ಲಿ ಇಲ್ಲಿ ಸ್ಥಾಪನೆಗೊಂಡ ಹಲವಾರು ವೃತ್ತಿ ಪರ ಕುಶಲ ಕರ್ಮಿಗಳ ಬೀದಿಗಳು, ವಸ್ತುಗಳ ಮಾರಾಟ ಕೇಂದ್ರಕ್ಕಿಂತ ಹೆಚ್ಚಾಗಿ ಉತ್ಪಾದನಾ ಕೇಂದ್ರಗಳ ಕೂಡ ಆಗಿದ್ದವು. ಯಂತ್ರಗಳಿಂದ ಸಾಮೂಹಿಕ ಉತ್ಪಾದನಾ ಕೇಂದ್ರ (ಮಾಸ್ ಪ್ರೊಡಕ್ಷನ್)ವಾಗಿರುವುದರ ಬದಲು ಕರ ಕೌಶಲ್ಯದಿಂದ ಜನ ಸಮೂಹದ (ಪ್ರೊಡೆಕ್ಷನ್ ಬೈ ದ ಮಾಸಸ್) ಆಗಿ ಕರಾಗ್ರೇ ಎಂದರೆ ಸಂಪತ್ತು ಕೈಯ ತುದಿಯಲ್ಲಿ ಇದೆ. (ಹುಟ್ಟುತ್ತದೆ)

ಪ್ರಾಚೀನ ಎಂಬ ಮಾತನ್ನು ನಿಜವಾಗಿ ಕೆಂಪೇಗೌಡರ ಆಡಳಿತ ಕಾಲದಲ್ಲಿ ಅರಳೇಪೇಟೆ (ಜವಳಿ), ಕುರುಬರ ಪೇಟೆ (ಕಂಬಳಿ), ಗೊಲ್ಲರ ಪೇಟೆ (ಹಾಲು, ತುಪ್ಪ), ತಿಗಳರಪೇಟೆ (ಹಣ್ಣು, ಹೂ, ತರಕಾರಿ) ಗಾಣಿಗರ ಪೇಟೆ (ಎಣ್ಣೆ) ಸುಣಕಲ್ ಪೇಟೆ (ಸುಣ್ಣ), ಕುಂಬಾರಪೇಟೆ (ಮಡಿಕೆ, ಹೆಂಚು), ಬಳೇಪೇಟೆ, ಉಪ್ಪಾರ ಪೇಟೆ (ಉಪ್ಪು) ಹೀಗೆ ಹಲವು ಬಳಕೆ ವಸ್ತುಗಳನ್ನು ತಯಾರಿಸುವ ಕುಶಲ ಕರ್ಮಿಗಳ ಸಣ್ಣ ಕೈಗಾರಿಕಾ ಕೇಂದ್ರಗಳು ಈ ಬೀದಿಗಳು. ಇನ್ನೂ ಹಲವು ವೃತ್ತಿಪರ ಪೇಟೆಗಳಿದ್ದವು.

ಹೈದರ್ ಅಲಿ ಕಾಲದಲ್ಲೇ ಇಲ್ಲಿ ಸಾಕಷ್ಟು ಲೇವಾದೇವಿಕಾರರಿದ್ದು, ಹೈದರ್‌ಗೆ ಲಕ್ಷ ಲಕ್ಷ ಸಾಲ ಕೊಟ್ಟವರಿದ್ದರು. ಆಗಲೇ ಚಿಕ್ಕದೇವರಾಯರು 12,000 ನೇಕಾರರನ್ನು ತಂದು ಬೆಂಗಳೂರಲ್ಲಿ ನೆಲೆ ನಿಲ್ಲಿಸಿದ್ದರೆಂದು ಹಯವದನ ರಾಯರು ಹೇಳಿದ್ದಾರೆ. ತಂಜಾವೂರಿನಿಂದ ರೇಷ್ಮೆ ನೇಕಾರರನ್ನೂ ಹೈದರ್ ಇಲ್ಲಿಗೆ ಕರೆ ತಂದು ಈ ವೃತ್ತಿಯಲ್ಲಿ ಬೆಳೆಯಲು ಕಾರಣನಾಗಿದ್ದ. ಇದಕ್ಕೂ ಮೊದಲು ಷಹಜಿಯ ಆಡಳಿತ ಕಾಲದಲ್ಲಿ ಮರಾಠಿ ಕುಶಲ ಕರ್ಮಿಗಳೂ ಇಲ್ಲಿಗೆ ವಲಸೆ ಬಂದಿದ್ದು ಅದರಲ್ಲಿ ಮರಾಠಿ ಭಾಷಿಕ ಸ್ವಕುಳ ಸಾಳಿ ಎಂಬ ನೇಕಾರರು ಇದ್ದರು.

ಶ್ರೀರಂಗಪಟ್ಟಣದ ಪತನ ಆದ ನಂತರ ಒಂದೂವರೆ ಲಕ್ಷ ಜನಸಂಖ್ಯೆಯ ಆ ರಾಜಧಾನಿಯ, ಆಸ್ಥಾನದ ಮನ್ನೆಯರು, ಶ್ರೀಮಂತರು ಖರೀದಿಸುತ್ತಿದ್ದ ರೇಷ್ಮೆ ಮತ್ತು ಇತರ ವಿಲಾಸ ವಸ್ತುಗಳ ಮಾರುಕಟ್ಟೆ ಮಾಯವಾಗಿ ಬುಕನನ್ ಬಂದಾಗ ಬೆಂಗಳೂರಿನ ಉತ್ಪಾದಕರು ತೊಂದರೆ ಅನುಭವಿಸುತ್ತಿದ್ದರೆಂದು ಹೇಳಿದ್ದಾನೆ. ಹೀಗಿದ್ದರೂ ಮುಂದಿನ ಎರಡು, ಮೂರು ದಶಕಗಳಲ್ಲಿ ಹಲವು ವೃತ್ತಿಗಳವರು ತಮ್ಮ ಉತ್ಪಾದನೆ ಮುಂದುವರಿಸಿ, ಕ್ರಮೇಣ

ಇಂಥ ವೃತ್ತಿಗಳು ಹಿಂಜರಿತ ಕಂಡವು. ಹೈದರ್ ತಾರಾ ಮಂಡಲಪೇಟೆಯಲ್ಲಿ ಸ್ಥಾಪಿಸಿದ್ದ ಲೋಹತಿಕರ್ಮದ ಕಾರ್ಖಾನೆ (ಇಲ್ಲಿ ಫಿರಂಗಿ ಖಡ್ಗ, ಶಸ್ತ್ರಾಸ್ತ್ರ, ಮದ್ದುಗುಂಡು ತಯಾರಿಸಲು ಮಾತ್ರ) ತಕ್ಷಣ ತೀರ ಹಿನ್ನಡೆ ಕಂಡಿತ್ತು. ಸ್ಥಳೀಯ ಕುಮ್ಮಾರರು ಕೂಡ ಕೈಗಾರಿಕಾ ಕ್ರಾಂತಿಯ ನಂತರ ಹಿನ್ನೆಡೆ ಕಂಡರು.

ಹೈದರನ ನ್ಯಾಯನಿಷ್ಠೆಯ ಆಡಳಿತದಿಂದ ಬೆಂಗಳೂರು ಆರ್ಥಿಕ ಚಟುವಟಿಕೆಗಳ ಒಂದು ಗಣ್ಯ ಕೇಂದ್ರವಾಗಿದ್ದು, ಮುಂದೆ 1791ರಲ್ಲಿ ಬೆಂಗಳೂರು ಕೋಟೆ ಕಾರ್ನ್‌ವಾಲಿಸನ ವಶವಾಯಿತು. ಆಗ ಬ್ರಿಟಿಷ್ ಸೈನಿಕರು ಪಟ್ಟಣವನ್ನು ಲೂಟಿ ಮಾಡಿದರು.

ತಿರುಗಿ ಅದು ಟಿಪ್ಪುವಿನ ವಶಕ್ಕೆ ಬಂದಾಗ ಅನೇಕ ಗೊಂದಲ, ಗಡಿಬಿಡಿ, ಆಶಾಂತಿಗಳು ಹರಡಿ, ಇಲ್ಲಿನ ವಾಣಿಜ್ಯ ಕುಂದಿತು ಇಲ್ಲಿನ ಅನೇಕ ವ್ಯಾಪಾರಿಗಳು ಬ್ರಿಟಿಷರ ರಾಜ್ಯವಾದ ಮದ್ರಾಸ್ ಪ್ರಾಂತ್ಯಕ್ಕೆ ಹೋದರು. ಆದರೆ 1799ರ ನಂತರ ಪರಿಸ್ಥಿತಿ ಸುಧಾರಿಸಿತು. ಆಗಲೇ ಮದ್ರಾಸ್ ಪ್ರಾಂತ್ಯದಲ್ಲಿ ವಾಸ ಮಾಡಿ ಬ್ರಿಟಿಷರ ಶಾಂತ ಆಡಳಿತದ ಪರಿಚಯ ಪಡೆದ ಇಂಥವರು ಬೆಂಗಳೂರಿಗೆ ಮರಳಿ 100ರ ಹೊತ್ತಿಗೆ ಪರಿಸ್ಥಿತಿ ಶೀಘ್ರ ಬದಲಾಯಿತು, ಎಂದು ಬುಕನನ್ ಹೇಳುತ್ತಾನೆ.

ಬೆಂಗಳೂರಲ್ಲಿ 1800ರ ನಂತರ ಹತ್ತಿ ಮತ್ತು ಉಣ್ಣೆ, ನೇಯ್ಗೆ ಬೆಳೆಯಿತು. ಕನ್ನಡ ಮತ್ತು ತೆಲುಗು, ದೇವಾಂಗದವರು, ತೊಗಟರು, ಬಿಳಿ ಮಗ್ಗ ಅಥವಾ ಸಾಲಿಗಳು, ಕುರುಹಿನಶೆಟ್ಟರು ಹೊಲೇರು, ಅಲ್ಲದೆ ಖತ್ತೇರಿ ಅಥವಾ ಕ್ಷತ್ರಿಗಳು ಹಾಗೂ ಪಟ್ವೆಗಾರರೆಂಬ ಮತ್ತು ಕೇವಲ ರೇಷ್ಮೆ ಮತ್ತು ಕಲಾಪತ್ ನೇಕಾರರು ಇಲ್ಲಿನ ನೇಯ್ಗೆ ಉದ್ದಿಮೆಯ ಸಮೃದ್ಧಿಗೆ ಹಿಂದಿನಿಂದ ಕಾರಣರು ಎಂದಿದ್ದಾನೆ. ಅವನು ಗೋಣಿಚೀಲ ನೇಯುವ ಗೋಣಿಗರನ್ನೂ ಉಲ್ಲೇಖಿಸುತ್ತಾನೆ. ಇವರು ಕತ್ತಾಳೆ ನಾರು ಬಳಸುತ್ತಿದ್ದರು. ಬ್ರಾಹ್ಮಣರ ವಿನಾ ಎಲ್ಲಾ ಜಾತಿಯ ಮಹಿಳೆಯರೂ ಮನೆಯಲ್ಲೇ ಚರಖದಿಂದ ಹತ್ತಿ ನೂಲು ತೆಗೆಯುತ್ತಾರೆ. ಅವರು ಜಮೀನನಲ್ಲಿ ದುಡಿಯುವ ಕಾರ್ಮಿಕರಷ್ಟೇ ಕೂಲಿ ಸಂಪಾದಿಸುತ್ತಾರೆ. ಈ ನೂಲಿನ ಲಡಿಗಳನ್ನು ಅವರು ವಾರದ ಸಂತೆಗೆ ಒಯ್ದು ಮುಂದಿನ ವಾರದ ನೂಲುವಿಕೆಗೆ ಬೇಕಾದ ಕಚ್ಚಾಹತ್ತಿ ಮತ್ತು ಇತರೆ ಲವಾಜಮೆ ವಸ್ತುಗಳನ್ನು ಪಡೆಯುತ್ತಾರೆ ಎಂದಿದ್ದಾನೆ. ಬಳ್ಳಾರಿ ಹಾಗೂ ಕೃಷ್ಣಾನದಿ ಕಣಿವೆಯ ನೂಲಿಗಿಂತ ಇಲ್ಲಿನ ನೂಲು ಹೆಚ್ಚು ನವಿರು, ಎಂದು ಅವನು ಪ್ರಶಂಸಿಸಿದ್ದಾನೆ.

ಬೆಂಗಳೂರಿನ ನೇಕಾರರು ಬಹಳ ಜಾಣ್ಮೆಯವರು ಎಂದಿದ್ದ ಅವನು ಶ್ರೀರಂಗಪಟ್ಟಣದ ಪತನದ ನಂತರ (1799) ಅವರು ಬಹಳ ಹಿಂದೆ ಇದ್ದ ವಿಪುಲ ಗ್ರಾಹಕರನ್ನು ಪಡೆಯುತ್ತಿಲ್ಲ. ರೇಷ್ಮೆ ನೇಕಾರರು, ಶ್ರೀರಂಗಪಟ್ಟಣದ ಪತನದ ನಂತರ ತೀರ ಅನಾನುಕೂಲತೆಗಳಿಗೆ ಒಳಗಾಗಿದ್ದಾರೆ ಎಂದಿದ್ದಾನೆ.

ಬೆಂಗಳೂರು ಚರ್ಮ ಹದ ಮಾಡುವಿಕೆ, ಗಾಣಗಾರಿಕೆ ಹಾಗೂ ಇತರೆ ಗೃಹ ಕೈಗಾರಿಕೆಗಳ ಕ್ಷೇತ್ರದಲ್ಲಿ ಸಮೃದ್ಧಿ ಹೊಂದಿದೆ ಎಂದು ಅವನು ತಿಳಿಸಿದ್ದಾನೆ.

ಇದಲ್ಲದೆ ಬೆಂಗಳೂರು ಪರಿಸರದಲ್ಲಿ ಈ ಪಟ್ಟಣದ ಜತೆ ಸಂಪರ್ಕವುಳ್ಳ, ಅಗರ, ಹೆಸರುಘಟ್ಟ, ಹಲಸೂರು, ವರ್ತೂರು, ಕೆಂಗೇರಿಗಳು ಇಲ್ಲಿನ ವಾಣಿಜ್ಯಕ್ಕೆ ನೆರವಾಗುತ್ತಿವೆಯೆಂದು ಬುಕನನ್ ಹೇಳಿದ್ದಾನೆ. ಈ ಎಲ್ಲಾ ಸ್ಥಳಗಳಲ್ಲೂ ಬೆಂಗಳೂರಲ್ಲೂ ಸಗಟು ವ್ಯಾಪಾರ ಬಣಜಿಗ, ಲಿಂಗಾಯಿತರ ಹಾಗೂ ಚಿಲ್ಲರೆ ವಾಣಿಜ್ಯ ತೆಲುಗು ಭಾಷಿಕರಾದ ಕೋಮಟಿಗರ ಕೈಯಲ್ಲಿದೆ ಎಂದು ವಿವರಿಸಿದ್ದಾನೆ. ಇಲ್ಲಿನ ಅರಳೇಪೇಟೆ (ನೇಯ್ಗೆ)ಯವರು ಇಡೀ ಮೈಸೂರು ರಾಜ್ಯದಲ್ಲಿ ಪ್ರಸಿದ್ಧರಾಗಿದ್ದಾರೆ. ಇಲ್ಲಿನ ಉತ್ಪನ್ನಗಳು ಮಂಗಳೂರು, ಬಳ್ಳಾರಿ, ಮುಂಬೈ ಹಾಗೂ ಬಂದರು ಇರುವ ಕೇಂದ್ರಗಳಿಗೆ ನಿರ್ಯಾತವಾಗುತ್ತದೆ. ಬಳ್ಳಾರಿ, ಆದೋನಿ, ಹುಬ್ಬಳ್ಳಿ, ನರಗುಂದ, ನವಲುಗುಂದ ಹಾಗೂ ಬಂಗಾಳಗಳ ವ್ಯಾಪಾರಿಗಳು ಇಲ್ಲಿನ ಉತ್ಪನ್ನಗಳ ಖರೀದಿಗೆ ಬರುತ್ತಲೇ ಇರುತ್ತಾರೆ ಎಂದಿದ್ದಾನೆ.

ಹೈದರಾಬಾದ್ ಹಾಗೂ ಆರ್ಕಾಟ್ ನಗರಗಳ ಜೊತೆ ವ್ಯಾಪಾರ ಮಾಡುವುದನ್ನು ಟಿಪ್ಪು ಪ್ರತಿ ಬಂಧಿಸಿದ್ದ. ಆದರೆ 1791ರಲ್ಲಿ ಅದು ಮತ್ತೇ ಆರಂಭವಾಯಿತು. ಬ್ರಿಟಿಷ್ ಸೇನೆ ಬೆಂಗಳೂರನ್ನು ಲೂಟಿ ಮಾಡಿದ ಮೇಲೆ ಹಾಗೂ ಮುಂದೆ ಬೆಂಗಳೂರಿನ ವ್ಯಾಪಾರಿಗಳನ್ನು, ನಗರವನ್ನು ತ್ಯಜಿಸಿದ್ದರೂ ಈಗ (1799ರ ನಂತರ) ಎಲ್ಲ ದೆಸೆಗಳಿಂದಲೂ ಜನರ–ವ್ಯಾಪಾರಿಗಳು, ಕುಶಲಕರ್ಮಿಗಳು ಬೆಂಗಳೂರಿಗೆ ವೇಗವಾಗಿ ವಲಸೆ ಬರುತ್ತಿದ್ದಾರೆಂದು ಅವನು ಹೇಳುತ್ತಾನೆ. ಇದರಿಂದ ಇಲ್ಲಿ ಕೈಗಾರಿಕೆಗಳು ಸಮೃದ್ಧವಾಗುತ್ತಿವೆ.

ತಾನು ಬೆಂಗಳೂರಿನ ಸುಂಕದಕಟ್ಟೆಗಳಲ್ಲಿ ವಿಚಾರಿಸಿ, ಸಂಗ್ರಹಿಸಿದ ಮಾಹಿತಿಯಂತೆ ಒಂದು ವಿಶಿಷ್ಟ ವರ್ಷದಲ್ಲಿ 50 ಗಾಡಿ ಹೇರಿನಲ್ಲಿ ಹತ್ತಿ ನೂಲು, 230 ಗಾಡಿ ಹೇರಿನಲ್ಲಿ ಕಚ್ಚಾ ರೇಷ್ಮೆ ಹಾಗೂ ಮದ್ರಾಸ್‌ನಿಂದ 7000 ಗಾಡಿ ಹೇರು ಉಪ್ಪು ಹಾಗೂ 400 ಹೇರು ಸಾಗರೋತ್ತರ ವಸ್ತುಗಳು ಬೆಂಗಳೂರಿಗೆ ಬರುತ್ತಿದ್ದವು. ನೂಲು ಹಾಗೂ ಕಚ್ಚಾ ರೇಷ್ಮೆ ಇಲ್ಲಿನ ಮಗ್ಗಗಳಲ್ಲಿ ಬಳಕೆಯಾಗುವ ಪ್ರಮಾಣ ಇಲ್ಲಿ ಊಹಿಸಬಹುದು.

ಆದರೆ ಕೈಗಾರಿಕಾ ಕ್ರಾಂತಿಯ ನಂತರ ಇಲ್ಲಿನ ಬಹುತೇಕ ಕೈಗಾರಿಕೆಗಳು ಸೊರಗಿದವು. ಮುಂದೆ 1809 ರಿಂದ ಬೆಂಗಳೂರಲ್ಲಿ ದಂಡಿನ ಶಿಬಿರವಾಗಿ ಆಗಿ ಇಲ್ಲಿ ಒಂದು ಹೊಸ ಅವಳಿ ನಗರವಾದಾಗ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. ಕಮೀಷನರ್ ಆಡಳಿತ ಬಂದು 1831ರಲ್ಲಿ ಬೆಂಗಳೂರು, ಮೈಸೂರು ರಾಜ್ಯದ ರಾಜಧಾನಿಯಾಗಿ ಆರ್ಥಿಕ ಚಟುವಟಿಕೆ ಹೆಚ್ಚಿತು. ದಂಡು ಪ್ರದೇಶದಲ್ಲಿ ವ್ಯವಸ್ಥಿತ ರಸ್ತೆಗಳ ಜಾಲ ಬೆಳೆದು ಅನೇಕ ಹೊಸ ಪೇಟೆಗಳು ಉದಿಸಿದವು. ತಮಿಳುನಾಡಿನಿಂದ ಬಂದ ಜನರ ವಲಸೆ ಹೆಚ್ಚಿತು. ಅಲ್ಲಿಯೂ ಸಮಗಾರರು, ಬಡಗಿಗಳು, ತಡಿಕೆ ಬುಟ್ಟಿ ಹೆಣೆಯುವವರು, ಕಟ್ಟಡ ರಚಿಸುವವರು ಬಂದು ನೆಲಸಿ, ಗುಡಿ ಕೈಗಾರಿಕೆ ಬೆಳೆಯಿತು. ಇಟ್ಟಿಗೆ ಉತ್ಪಾದನೆ ಹೆಚ್ಚಿತು. 1843ರಲ್ಲಿ ಬೆಂಗಳೂರಲ್ಲಿ ಖಾಸಗೀ ಲೇವಾದೇವಿ ಹೆಚ್ಚಿತು. ಕಬ್ಬನ್ ಕಮಿಷನರ್ ಆದಾಗ (1834) ಅವನು ಸಂಸ್ಥಾನದ ಎಲ್ಲಾ ಮುಖ್ಯ ನಗರಗಳನ್ನು ಬೆಂಗಳೂರು ಜೊತೆ ಜೋಡಿಸುವ ಸರ್ವಋತು ರಸ್ತೆಗಳನ್ನು ನಿರ್ಮಿಸಿ ವಾಣಿಜ್ಯ ಸಂಪರ್ಕ ಬೆಳೆಯುವಲ್ಲಿ ಸಾಧ್ಯವಾಯಿತು. ಬೆಂಗಳೂರಲ್ಲಿ ಮುದ್ರಣವು ಕ್ರೈಸ್ತ ಮಿಶನರಿ ಗ್ಯಾರಟ್‌ರ ಯತ್ನದಿಂದ 1840ರಲ್ಲಿ ಸ್ಥಾಪನೆಯಾಗಿ, ಮುಂದೆ ಅದು ಸರಕಾರೀ ಮುದ್ರಣಾಲಯವಾಗಿ ನೂರಾರು ಜನರಿಗೆ ಉದ್ಯೋಗ ನೀಡಿತು. 1870ರಲ್ಲಿ ನಡೆದ ಜನಗಣತಿಯಿಂದ ಹಳೇ ಪಟ್ಟಣ (ಪೇಟಾ)ದಲ್ಲಿ 53,000 ಹಾಗೂ ದಂಡು ಪ್ರದೇಶದಲ್ಲಿ 79,000 ಜನಸಂಖ್ಯೆ ಇದೆ ಎಂದು ಬೌರಿಂಗ್ ಹೇಳಿದ್ದಾನೆ. ಕಬನ್‌ನ ಯತ್ನದಿಂದ 1864ರಲ್ಲಿ ಬೆಂಗಳೂರು ಜಾಲಾರ್ ಪೇಟೆಗೆ ರೈಲು ಸಂಪರ್ಕ ಲಭಿಸಿತು. ಮದ್ರಾಸ್ ಬಂದರಿನ ಜೊತೆ ನೇರ ಸಂಪರ್ಕ ಬಂತು. 1861ರಲ್ಲಿ ಬೆಂಗಳೂರಲ್ಲೂ ದಂಡು ಪ್ರದೇಶದಲ್ಲೂ ಪುರಸಭೆಗಳಾದವು. 1882ರಲ್ಲಿ ಮೈಸೂರು–ಬೆಂಗಳೂರು ರೈಲು ಮಾರ್ಗವು, ಭಾರೀ ಕ್ಷಾಮದ (1876–78) ಕಾಲದ ಅಭಾವ ಕಾಮಗಾರಿಯಾಗಿ ನಡೆದು ಸಿದ್ಧವಾಯಿತು. ಇದರ ಹಿಂದೆ ಬೆಂಗಳೂರು–ತುಮಕೂರು ಮಾರ್ಗ 1884ರಲ್ಲಿ ಸಿದ್ಧವಾಯಿತು. ಈ ರೈಲು ಮಾರ್ಗಗಳು ಕೈಗಾರಿಕೆಯ ಬೆಳವಣಿಗೆಗೆ ನೀಡಿದ ಕೊಡುಗೆ ಗಮನಾರ್ಹ.

ಬೆಂಗಳೂರು ನಗರದಲ್ಲಿ ಜಮಖಾನೆಯ ನೇಯ್ಗೆ 19ನೇ ಶತಮಾನದಲ್ಲಿ ಇದ್ದು ಇಲ್ಲಿನ ಸುಂದರ ಜಮಖಾನೆಗಳು ತಮ್ಮ ವಿನ್ಯಾಸ ಮತ್ತು ಕಲಾವಂತಿಕೆಯಿಂದ ಪ್ರಸಿದ್ಧವಾಗಿ ಇಂಗ್ಲೆಂಡಿನಲ್ಲಿ ಇದರ ಖ್ಯಾತಿ ಹರಡಿತ್ತು. ಬೆಂಗಳೂರಲ್ಲಿ ಸ್ಥಾಪನೆಗೊಂಡು ಕೇಂದ್ರ ಜೈಲು ಕೂಡ ಜಮಖಾನೆಗಳ ಉತ್ಪಾದನೆಯಲ್ಲಿ ಎತ್ತಿದ ಕೈಯಾಗಿತ್ತು.

ಅಮೇರಿಕದ ಯಾದವೀ ಯುದ್ಧದ ಕಾಲದಲ್ಲಿ (1861–64) ದೇಶದಲ್ಲಿ ಕಾಣಿಸಿದ ಹತ್ತಿ ಉಬ್ಬರ (ಬೂಮ್)ನಿಂದ ಬೆಂಗಳೂರಲ್ಲಿ ಅನೇಕ ಹತ್ತಿ ಹದ ಮಾಡುವ ಜನ್ನಿಂಗ್ ಹಾಗೂ ನೂಲಿನ ಗಿರಣಿಗಳು ಕಾಣಿಸಿದವು. ಬೆಂಗಳೂರಲ್ಲಿ 1884ರಲ್ಲಿ ಹಬೆಯ ಶಕ್ತಿ ಬಳಸಿ ಬಿನ್ನಿಮಿಲ್ ಆರಂಭವಾಯಿತು. ಇದಕ್ಕೂ

ಮೊದಲು ಸಹಕಾರಿ ತಾಂತ್ರಿಕ ಶಾಖೆಯ ಮುಖ್ಯಸ್ಥ. ಎಸ್. ಲೀ ಎಂಬಾತನು 1875 ರಿಂದ ಕೈ ಮಗ್ಗ ಜಮಖಾನೆ ಉತ್ಪನ್ನ ಮಾಡುತ್ತಿದ್ದನು. 1879ರಲ್ಲಿ ಹಬೆಯಂತ್ರದ ಬಳಕೆಯಿಂದ ಈ ಕಾರ್ಖಾನೆ ಬೆಳೆಸಿ, ಇಲ್ಲಿ 12 ಅಶ್ವಶಕ್ತಿಯ ಯಂತ್ರ ಚಾಲನೆ ಮಾಡಿದನು. ಈ ಸಂಸ್ಥೆಯ ಶೇರುಗಳನ್ನು ಜನರು ಖರೀದಿಸಿ 1884ರಲ್ಲಿ ಇದು ವ್ಯವಸ್ಥಿತ ಕಾರ್ಖಾನೆ **ಬೆಂಗಳೂರು ಉಲನ್ ಕಾಟನ್ ಎಂಡ್ ಸಿಲ್ಕ್ ಮಿಲ್** ಆಯಿತು. ಸರಕಾರವೂ ಇವರ ಷೇರುಗಳನ್ನು ಖರೀದಿಸಿತು. ಇದನ್ನು 1884ರಲ್ಲಿ ಬಿನ್ನಿ ಕಂಪನಿ ಖರೀದಿಸಿತು. 1886ರಲ್ಲಿ ಇದರ ಬಂಡವಾಳ ಹತ್ತು ಲಕ್ಷ ರೂ. ಆಗಿತ್ತು. ನೂರಾರು ಜನ ಉದ್ಯೋಗ ಪಡೆದರು.

ಇದೇ ಕಾಲಕ್ಕೆ ಮೈಸೂರು ಸ್ಪಿನ್ನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ 4.50 ಲಕ್ಷ ಷೇರು ಬಂಡಾವಳದಿಂದ ಆರಂಭವಾಗಿ ಮುಂದೆ 1890ರಲ್ಲಿ ಇದರ ಮಾಲೀಕತ್ವ ಬದಲಾಯಿತು. 1901ರಲ್ಲಿ ಶಿರೂರ್ ಅಂಡ್ ಕೊ ಇದನ್ನು ಖರೀದಿ ಮಾಡಿತು. ಇದರಲ್ಲಿ 630 ಕಾರ್ಮಿಕರಿದ್ದರು. 1897ರಲ್ಲಿ ಸರಕಾರದ ಕೇಂದ್ರ ಕೈಗಾರಿಕಾ ಕಾರ್ಯಾಗಾರ ಸ್ಥಾಪನೆಯಾಗಿ ಯಾಂತ್ರೀಕೃತ ಕೈಗಾರಿಕೆಗಳಿಗೆ ಬೇಕಾದ ಯಂತ್ರ ಸಲಕರಣೆಗಳು, ತರಬೇತಿ ಪಡೆದ ತಾಂತ್ರಿಕರ ಪೂರೈಕೆ ನಡೆಸಿತು. ಮರಾಮತ್ ಇಲಾಖೆಗೆ ಕೂಡ ಸಲಕರಣೆ ಒದಗಿಸಿತು. ರಸ್ತೆ, ರೈಲು ನಿರ್ಮಾಣ ಅನೇಕರಿಗೆ ಉದ್ಯೋಗ ಒದಗಿಸಿತು.

ಹತ್ತೊಂಬತ್ತನೆಯ ಶತಮಾನದ ಆರಂಭಕ್ಕೆ ಪ್ರಬಲ ಗೃಹ ಕೈಗಾರಿಕೆಗಳ ಕೇಂದ್ರವಾಗಿದ್ದ ಬೆಂಗಳೂರಿನ ಗುಡಿಕೈಗಾರಿಕೆಗಳು ಸೊರಗಿ ಕುಶಲ ಕರ್ಮಿಗಳು ಉದ್ಯೋಗದ ಕಳೆದುಕೊಂಡು ಹಸಿದು ಪ್ರಾಣಬಿಟ್ಟ ಪ್ರಸಂಗಗಳಿವೆ.

ಅನೇಕರು ರಸ್ತೆ ಕೂಲಿ ಕೆಲಸಕ್ಕೆ ಹೋದರು. ಆದರೆ ಶತಮಾನದ ಕೊನೆಗೆ ಯಾಂತ್ರಿಕ ಕೈಗಾರಿಕೆಗಳು ಆರಂಭವಾದವು. 1898–99ರ ಭಾರೀ ಪ್ಲೇಗ್ ಪಿಡುಗಿನಿಂದ ಸಾವಿರಾರು ಜನರು ಸತ್ತರು. ಹೊಸ ಕಾರ್ಖಾನೆಗಳು ಮುಚ್ಚಿದವು. ಮುಂದೆ ಉತ್ತರ ಅರ್ಕಾಟ್ ಜಿಲ್ಲೆಯಿಂದ 500 ಕಾರ್ಮಿಕರನ್ನು ಕರೆಸಿ ಕಾರ್ಖಾನೆಗಳನ್ನು ಮತ್ತೆ ಆರಂಭಿಸಿದರು. ಬೆಂಗಳೂರು ದಕ್ಷಿಣ ಭಾರತದ ಒಂದು ಗಣ್ಯ ಕೈಗಾರಿಕಾ ಕೇಂದ್ರವಾಗಿ ಶತಮಾನದ ಕೊನೆಗೆ ಬೆಳೆಯುವಂತಾಯಿತು. 1900ರಲ್ಲಿ ಶಿವನ ಸಮುದ್ರದ ವಿದ್ಯುತ್ ಉತ್ಪಾದನೆ 20ನೇ ಶತಮಾನದ ಬೆಂಗಳೂರಿನ ವೇಗದ ಅಭಿವೃದ್ಧಿಗೆ ಹಾದಿ ಮಾಡಿತು. ಇಲ್ಲಿಗೆ 1905ರಲ್ಲಿ ವಿದ್ಯುತ್ ಬಂತು.

ಆಧಾರ

1. ಬುಕಾನನ್ ಫ್ರಾನ್ಸಿಸ್, ಜರ್ನಿ ಭಾಗ 1, 1805
2. ಹಯವದನರಾವ್, ಹಿಸ್ಟರಿ ಆಫ್ ಮೈಸೂರ್, ಭಾಗ 2, 1948.
3. ಕಾಮತ್, ಸೂರ್ಯನಾಥ ಬೆಂಗಳೂರು ಜಿಲ್ಲಾ ಗೆಸಿಟಿಯರ್ 1990.

71. ಕನ್ನಡ ಸಾಹಿತ್ಯ ಪರಿಷತ್ತು: ಸಂಚಲನ ಸಾಧನೆ

ಡಾ. ಎಂ.ಜಿ. ನಾಗರಾಜ್

ನಮ್ಮ ರಾಷ್ಟ್ರೀಯ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿ ಬರುವ ಉಲ್ಲೇಖಗಳಿಂದ ಕರ್ನಾಟಕದ ಪ್ರಾಚೀನತೆಗೆ ಸಾಕ್ಷ್ಯ ಒದಗುತ್ತದೆ. ಭೌಗೋಳಿಕವಾಗಿ, ಸಾಹಿತ್ಯಕವಾಗಿಯೂ ಅವಕ್ಕೆ ಮೌಲ್ಯವಿದೆ. ಸಿಂಧೂ ಸಂಸ್ಕೃತಿ ಕಾಲದ ಸುಮಾರಿಗೆ ಅಥವಾ ಮುನ್ನವೆ ಕನ್ನಡ ಮೂಲದ ಶಬ್ದಗಳು ಬ್ರಾಹೂಯಿ ಭಾಷೆಯಲ್ಲಿ ಬೆಲೂಚಿಸ್ಥಾನ ಪ್ರದೇಶದಲ್ಲಿ ಪ್ರಚಲಿತವಾಗಿದ್ದುವೆನ್ನಲಾಗಿದೆ. ಕ್ರಿ.ಪೂ. ಸು. ೨೫೭ರ ಅಶೋಕನ ಶಾಸನಗಳೂ ಭೌಗೋಳಿಕವಾಗಿ ಯಾವುದೇ ಹೆಸರಿನಿಂದ ಹೇಳಿರಲಿ ಸತಿಯಪುತ, ಸುವರ್ಣಗಿರಿ– ಇಸಿಲಾ ಶಬ್ದಗಳ ಮೂಲಕ ಕರ್ನಾಟಕ ಪ್ರದೇಶವನ್ನು ಲಕ್ಷಿಸಿದ್ದುದರ ಪುರಾವೆ ಕಾಣಬರುತ್ತದೆ.

ಸಾತಕರ್ಣಿಗಳ ಕಾಲಕ್ಕೆ ಕುಂತಲದೇಶವೆಂದು (ಕ್ರಿ.ಶ. ೧–೨ನೇ ಶತಮಾನ) ಕರ್ನಾಟಕವು ಹೆಸರುಟ್ಟಿತ್ತು. ಕ್ರಿ.ಶ. ಸು. ೧೨೦೦ರ ಅಬಲೂರು ಶಾಸನದಲ್ಲಿ ಕುಂತಳದೇಶದ ವರ್ಣನೆ ನೀಡುತ್ತ: *'ಜಂಬುದ್ವೀಪದ ತೆಂಕಲು ನೀಳ ನಿಷಧ ಹಿಮವನ್ತ ಪರ್ವ್ವತಂಗಳೊಳವಲ್ಲಿ ॥ವ್ರಿ॥ ಎಸೆಗುಂ..... ॥ ಆ ಹಿಮಗಿರೀನ್ದ್ರದ ದಕ್ಷಿಣ ಪಾರ್ಶ್ವವರ್ತ್ತಿಯಪ್ಪ ಭಾರತ ವರ್ಷದೊಳು ಕುಂತಳದೇಶವೆಂಬುದಧಿಕ ಶೋಭವೆತ್ತೆಸುವುದಲ್ಲಿ ॥ ಸೊಗಯಿಪುದಲನ್ದೆಯೆಂಬುದು ನಗರಂ ಚೆಲುವೆಸೆದು..... ವಿಬುಧ ಜನದಿಂದಗಣಿತ ಧನಧಾನ್ಯ ಜಳಸಮ್ರಿದ್ಧಿಯಿನೆಂದುಂ ॥ಮತ್ತ॥..... ಸುಕೇಶಿಯುಂ ಮಂಜುಘೋಷೆಯುಂ'*

–ಹೀಗೆ ವರ್ಣನೆ ಮುಂದುವರಿದು ಹೋಗಿದೆ. ಇದರಲ್ಲಿ ಜಂಬುದ್ವೀಪದ ದಕ್ಷಿಣಕ್ಕೆ ಹಿಮಾಲಯ, ಅದರ ದಕ್ಷಿಣ ಪಾರ್ಶ್ವಕ್ಕೆ **ಕುಂತಳದೇಶ** ಶೋಭಿಸಿತ್ತು. ಸಮೃದ್ಧಿಯಿಂದ ಕೂಡಿ, ಜ್ಞಾನಿಗಳಿಂದ ಶೋಭಿಸಿತ್ತು. ಅಲ್ಲಿಯ ಜನವಾಣಿ ತಣ್ಪಿನದಾಗಿತ್ತು; ಇಂಪಿನದಾಗಿತ್ತು; ಚೆಲುವಿನದಾಗಿತ್ತು, ಎನ್ನುವಾಗ 'ಭಾಷಿಕ' ಹಾಗೂ ಆ ಭಾಷೆ ಆಡುವ ಜನರ ಸೌಂದರ್ಯದ ಚಿತ್ರ, ಸಂಸ್ಕೃತಿಯ ಚಿತ್ರ ದೊರಕುತ್ತದೆ. ಅದು ಕನ್ನಡದ ಪರಂಪರೆ, ಚೆಲುವು, ಶೋಭೆ. ಹೀಗಿದ್ದ ಪರಂಪರೆಗೆ ಪರಕೀಯ ಆಕ್ರಮಣದಿಂದ ತೊಡಕುಗಳು ತಾಗಿ ಹಿಂಜರಿತ ಕಂಡದ್ದುಂಟು. ಆಂಗ್ಲರ ಭಾಷೆಯನ್ನು ಹೇರಿದ ಮೇಲಂತೂ ಕನ್ನಡಕ್ಕೆ ಅಸ್ಮಿತೆಯ ಸವಾಲು ಎದುರಾಯಿತು. ಜನತೆಯ ಒಳಭಾಷೆಯಾಗಿ ಸಾಹಿತ್ಯದ ಭಾಷೆಯಾಗಿ ಅದು ಉಳಿದಿತು ಸರಿ. ಪ್ರಾಚೀನದಲ್ಲಿ ಕ್ರಿ.ಶ. ೮೫೦ರ 'ಕವಿರಾಜಮಾರ್ಗ'ಕ್ಕೂ ಮುಂಚೆ ಕನ್ನಡದಲ್ಲಿ ಗದ್ಯ ಪದ್ಯ ರಚನೆ ಇತ್ತು, ಎಂದು ಆಧಾರ ಕೊಟ್ಟು ಹೇಳುವುದುಂಟು. ಈ ಹಿನ್ನೆಲೆಗಳೆಲ್ಲ ಮುಸುಳಿಹೋಗಿ ಆಡಳಿತ ಭಾಷೆಯಾಗಿ ಬಂದ ಇಂಗ್ಲಿಷ್, ಪರ್ಷಿಯನ್ ಹಾಗು ಇತರ ಭಾಷೆಗಳ ಚಾಚು, ಕನ್ನಡಕ್ಕೆ ತೊಡರುಗಾಲನ್ನು ಬಲವಾಗಿಯೆ ಇಟ್ಟವು. ಆಗ ಕನ್ನಡ ನೆಲದ ಶಕ್ತಿ ತನ್ನ ಸ್ವಾಭಿಮಾನದ ಕಹಳೆಯನ್ನು ಊದಬೇಕಾಯಿತು. ಇಂಥದೇ ಪರಿಸ್ಥಿತಿ ದೇಶದ ವಿವಿಧ ಭಾಷಾ ಪ್ರದೇಶಗಳಲ್ಲಿ ಒದಗಿದಾಗ ಅಲ್ಲಿನವರು ಎಚ್ಚೆತ್ತು ಭಾಷಾ ಹಿನ್ನೆಲೆಯ ಚಟುವಟಿಕೆಗಳನ್ನು ಹೆಚ್ಚು ಮಾಡತೊಡಗಿದರು.

ಕನ್ನಡ ಭಾಷೆ, ಸಂಸ್ಕೃತಿಯ ಉಳವಿಗೆ, ಕನ್ನಡಿಗರ ಶ್ರೇಯಕ್ಕೆ ಸಂಘಟನೆ ಅವಶ್ಯವಾಯಿತು. ಭಿನ್ನ ಭಿನ್ನ ಭಾಷೆಗಳ ಆಡಳಿತ ಪ್ರದೇಶಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರ ಐಕ್ಯತೆ ಅಗತ್ಯವಾಯಿತು. ಅವರು ಆಡುತ್ತಿದ್ದ ಕನ್ನಡ ಭಾಷೆಯ ಮೇಲೆ ಅನ್ಯಭಾಷಾ ಪ್ರಭಾವ ಬಿದ್ದು ಅವರ ಕನ್ನಡ ಉಚ್ಚಾರಣೆಯ ಶೈಲಿಯೆ ಕನ್ನಡದ ಸೊಗಸಿಲ್ಲದೆ

ಕುಂಠಿತಗೊಂಡಿತ್ತು. ಇದರ ಪ್ರತಿಫಲವೆಂದರೆ ೧೯ನೇ ಶತಮಾನದ ಆದಿಭಾಗದಿಂದಲೂ ಕನ್ನಡಿಗರೇ ಆಗಿದ್ದರೂ ವಿವಿಧ ಪ್ರದೇಶಗಳ ಜನ ಪರಸ್ಪರ ಅಪರಿಚಿತರಂತೆ ವ್ಯವಹರಿಸುವ ಅಸಹಜ ಪರಿಸ್ಥಿತಿ ಉಂಟಾಗಿತ್ತು ಎಂಬ ಅಭಿಪ್ರಾಯಗಳೂ ಸೂಕ್ತವೆ ಆಗಿದ್ದುವು. ಈ ಕಾರಣ ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಪ್ರಗತಿಯ ಅವಶ್ಯಕತೆಯನ್ನು ಮನಗಂಡ ಕನ್ನಡಾಭಿಮಾನಿಗಳು ಕನ್ನಡಿಗರ ಐಕ್ಯತೆಯತ್ತ ಗಮನ ಹರಿಸಿದರು.

ಈ ದಿಸೆಯಲ್ಲಿ ಮೊದಲಿನ ಪ್ರಯತ್ನವಾಗಿ ಮೈಸೂರು ಅರಸರಾಗಿದ್ದ ಶ್ರೀಮಚ್ಚಾಮರಾಜೇಂದ್ರ ಒಡೆಯರ್ ಅವರ ಪ್ರೇರಣೆ, ಪ್ರೋತ್ಸಾಹ, ಆಸರೆ ಒದಗಲಾಗಿ ಮೈಸೂರಿನಲ್ಲಿ **ಕರ್ಣಾಟಕ ಭಾಷೋಜ್ಜೀವಿನಿ ಸಭಾವು** ಸ್ಥಾಪಿತಗೊಂಡಿತು. ವಿದ್ವಾಂಸರಿಂದ ಕನ್ನಡ ಕೃತಿಗಳು ಬರೆಯಲ್ಪಟ್ಟು ಪ್ರಕಟವಾಗತೊಡಗಿದುವು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಬಿತ್ತನಗೊಂಡ ಸಾಹಿತ್ಯ ಕೃಷಿ ಮುಂದುವರಿಯಿತು. ಇದರಿಂದ ಸ್ಫೂರ್ತಿಗೊಂಡಂತೆ ಭಾಷಾಪ್ರೇಮದ ಬೀಜ, ಧಾರವಾಡದಲ್ಲಿ ೨೦.೦೭.೧೮೯೦ರಲ್ಲಿ ಆಲೂರು ಸ್ಥಾಪಿಸಿದ **ಕರ್ನಾಟಕ ವಿದ್ಯಾವರ್ಧಕ ಸಂಘ**ದ ಮೂಲಕ ಮತ್ತಷ್ಟು ಬಿತ್ತನೆ ಆಯಿತು ಎಂಬ ಅಭಿಪ್ರಾಯ ಮಾ.ನಾ.ಚೌಡಪ್ಪ ಅವರದಾಗಿದೆ. ಈ ಸಂಸ್ಥೆ ಕನ್ನಡ ಗ್ರಂಥ ಪ್ರಕಟನೆ–ಸಂಸ್ಕೃತಿ–ಇತಿಹಾಸದ ಬಗ್ಗೆ ಸಂಶೋಧನೆಗೆ ಒತ್ತಾಸೆ ನೀಡಿತು. ೧೮೯೬ರಲ್ಲಿ 'ವಾಗ್ಭೂಷಣ' ಎಂಬ ಮಾಸಪತ್ರಿಕೆಯನ್ನು ಆರಂಭಿಸಿ ಅನೇಕ ಗ್ರಂಥಗಳನ್ನು ಪ್ರಕಟಿಸಿತು. ಮೈಸೂರು ಮಹಾರಾಜರೂ ಈ ಸಂಘದ ಕಟ್ಟಡಕ್ಕಾಗಿ ಆರುಸಾವಿರ ರೂ.ಗಳ ಧನಸಹಾಯ ಮಾಡಿದರು. ಏಕೋಭಾವದ ಸಂಕೇತವಾಗಿ ಈ ಸಂಘದ ಕಟ್ಟಡಕ್ಕೆ 'ಶ್ರೀ ಚಾಮರಾಜ ಮಂದಿರ' ಎಂಬ ಹೆಸರನ್ನು ಇಡಲಾಯಿತು.

ಇನ್ನು ಕನ್ನಡಿಗರನ್ನು ಒಂದೇ ಆಡಳಿತದಡಿಯಲ್ಲಿ ತರಬೇಕೆನ್ನುವ ಪ್ರಯತ್ನಕ್ಕೆ ಆಲೂರು ವೆಂಕಟರಾವ್, ಎಮ್.ಎ.ದೇಶಪಾಂಡೆ, ರಾಜಪುರೋಹಿತ, ಎಸ್.ಜಿ.ನರಸಿಂಹಾಚಾರ್ಯ ಮುಂತಾದವರು ಮುಂದಾದರು. ಮದರಾಸು, ಬೊಂಬಾಯಿ, ಮೈಸೂರು ಹೈದರಾಬಾದ್ ಸಂಸ್ಥಾನದ ಆಡಳಿತದ ಕನ್ನಡನಾಡಿನ ಭಾಗಗಳನ್ನೆಲ್ಲ ಒಂದುಗೂಡಿಸುವ ಪ್ರಯತ್ನ ಅದಾಗಿತ್ತು. ಈ ನಿಟ್ಟಿನಲ್ಲಿ ೨೦ನೇ ಶತಮಾನದ ಆರಂಭದ ದಶಕಗಳಲ್ಲಿ ಸಂಸ್ಥಾಪನಾ ಜಾಗೃತಿಯೂ ಕನ್ನಡದ ಪ್ರಾತಿನಿಧಿಕ ಸಂಸ್ಥೆಯ ಸ್ಥಾಪನೆಗೆ ಪ್ರೇರಣೆಯ ಅವಸರಗಳಿಗೆ ಕಾರಣವಯಿತು.

೧೯೦೫ರಲ್ಲಿ ಗುಬ್ಬಿ ತೋಟದಪ್ಪ ಧರ್ಮಛತ್ರ, ೧೯೦೫ರಲ್ಲಿ ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ (ಮೈಸೂರು ಲಿಂಗಾಯಿತ ವಿದ್ಯಾಭಿವೃದ್ಧಿ ನಿಧಿ ಸಂಸ್ಥೆ), ೧೯೦೯ರಲ್ಲಿ ಮಿಥಿಕ್ ಸೊಸೈಟಿ, ಸ್ಥಾಪನೆಗೊಂಡವು. ಆದರೆ ಅವುಗಳ ವ್ಯಾಪ್ತಿಯಲ್ಲಿ ಭಾಷಿಕ ವಿಷಯಗಳಿಗೆ ಹೆಚ್ಚು ಒತ್ತು ಇರಲಿಲ್ಲ. ಈ ಸಂದರ್ಭದಲ್ಲಿ ಬಂಗಾಳದ ವಿಭಜನೆ (೧೯೦೫)ಯ ಘಟನೆ, ಭಾಷಾ ಸ್ವಾತಂತ್ರ್ಯ, ಪ್ರಾಂತ್ಯಾಭಿಮಾನಗಳಿಗೆ ಹೊಸ ಸಂವೇದನೆ ದೊರಕಿತು. ಉತ್ಕಲ ಐಕ್ಯಪರಿಷತ್, ಮಂಗೀಯ ಸಾಹಿತ್ಯ ಪರಿಷತ್‌ಗಳ ಕಾರಣ ಭಾಷಾ ಜಾಗೃತಿ ಆ ಪ್ರದೇಶಗಳಲ್ಲಿ ಉಂಟಾಯಿತು. ಒರಿಸ್ಸಾ, ಬಿಹಾರ, ಬಂಗಾಳ ಪ್ರಾಂತ್ಯಗಳು ಉದಿಸಿದುವು. ಇವೆಲ್ಲ ಕೂಡ ಕನ್ನಡಿಗರನ್ನು ಪ್ರಭಾವಿಸಿತು. ಈ ನಿಟ್ಟಿನಲ್ಲಿ **ಕರ್ಣಾಟಕ ಸಾಹಿತ್ಯ ಪರಿಷತ್ತಿನ** ಸ್ಥಾಪನೆಗೆ ಜನಮನ ಮಿಡಿಯಿತು.

ಮೈಸೂರಿನ ಸರ್ವತೋಮುಖ ಪ್ರಗತಿಗೆ ಸಲಹೆ ಸೂಚನೆಗಳನ್ನು ನೀಡಲು ಅಂದಿನ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರು 'ಮೈಸೂರು ಸಂಪದಭ್ಯುದಯ ಸಮಾಜ'ವನ್ನು ರಚಿಸಿದ್ದರು. ಈ ಸಂಸ್ಥೆಯು ೧೯೧೪ರ ತನ್ನ ವಾರ್ಷಿಕ ಅಧಿವೇಶನದಲ್ಲಿ:

> *'ಕನ್ನಡ ಭಾಷೆಯಲ್ಲಿ ವಿವಿಧ ಗ್ರಂಥಗಳ ಕರ್ತೃಗಳನ್ನು ಪ್ರೋತ್ಸಾಹಿಸಲು 'ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದು ಇರಬೇಕು. ಸರ್ಕಾರದವರು ಈ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ವಿಶೇಷ ಸಹಾಯ ಮಾಡುವುದು ಉಚಿತವೆಂದು ಸಂಪದಭ್ಯುದಯ ಸಮಾಜವು ಸರ್ಕಾರಕ್ಕೆ ಶಿಫಾರಸು ಮಾಡಬೇಕು'*

–ಎಂಬ ನಿರ್ಣಯ ಅಂಗೀಕೃತವಾಯಿತು. ಈ ತೀರ್ಮಾನಕ್ಕೆ ಅನುಗುಣವಾಗಿ ೧೯೧೪ನೆಯ ಅಕ್ಟೋಬರ್ ೩೧ರಲ್ಲಿ ಈ ಸಮಾಜದ ಎಚ್.ವಿ. ನಂಜುಂಡಯ್ಯನವರ ಉಸ್ತುವಾರಿಯ ವಿದ್ಯಾವಿಷಯಕ ಮಂಡಲಿಯವರು ಉಪಸಮಿತಿಯನ್ನು ರಚಿಸಿದರು. ಈ ಸಂಬಂಧದ ಪೂರ್ವಭಾವಿ ಸಿದ್ಧತೆಗಳನ್ನು ಕೈಗೊಳ್ಳುವಂತೆ ಉಪಸಮಿತಿಗೆ ಸೂಚಿಸಲಾಯಿತು. ಈ ಸಮಿತಿಯ ಸದಸ್ಯರಾಗಿ ರಾ॥ಬ॥ ಎಂ.ಶಾಮರಾವ್, ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾವ್ ಹಾಗೂ ಡಾ॥ ಪಿ.ಎಸ್. ಅಚ್ಯುತರಾಯರು ನೇಮಿತರಾದರು. ಕನ್ನಡನಾಡುಗಳ ಪ್ರಮುಖರನ್ನು ಆಹ್ವಾನಿಸುವುದು; ಕರ್ಣಾಟಕ ಭಾಷಾ ಪರಿಷ್ಕರಣಕ್ಕೆ, ಕರ್ಣಾಟಕ ಗ್ರಂಥಾಭಿವೃದ್ಧಿಗೆ ಅನುಕೂಲವಾಗುವಂತ ಸಂಘವೊಂದನ್ನು ಏರ್ಪಡಿಸುವ ಕಾರ್ಯವನ್ನು ನಿರ್ವಹಿಸುವುದು ಈ ಉಪಸಮಿತಿಯ ಕಾರ್ಯ ಎಂದು ಆದೇಶವನ್ನು ಅವರಿಗೆ ನೀಡಲಾಯಿತು.

ಈ ಉಪಸಮಿತಿಯು ಕನ್ನಡ ನಾಡಿನ ವಿವಿಧ ಭಾಗಗಳ ವಿದ್ವಾಂಸರಿಂದ ಕನ್ನಡ ಭಾಷಾ ಸಾಹಿತ್ಯದ ಅಭಿವೃದ್ಧಿ ಕುರಿತಾಗಿ ಲೇಖನಗಳನ್ನು ತರಿಸಿಕೊಂಡಿತು. ಆ ಲೇಖನಗಳಲ್ಲಿ ಕನ್ನಡ ನಾಡಿನ ವಿವಿಧ ಭಾಗಗಳಲ್ಲಿಯ ಕನ್ನಡ ಭಾಷಿಕರಲ್ಲಿ ಐಕ್ಯಮತ, ಸೌಹಾರ್ದ ಹೆಚ್ಚಿಸಿರುವ ಬಗೆಗಳು; ಆಯಾ ಭಾಗಗಳಲ್ಲಿ ಪ್ರಚಾರದಲ್ಲಿರುವ ಗ್ರಾಂಥಿಕ ಭಾಷೆಯನ್ನು ಒಂದೇ ರೂಪಕ್ಕೆ ತರಲು ತಕ್ಕ ಮಾರ್ಗೋಪಾಯಗಳು; ಕನ್ನಡದ ವಿದ್ಯಾರ್ಥಿಗಳಿಗೆಲ್ಲ ಏಕರೂಪದ ಪಠ್ಯಗಳ ಪುಸ್ತಕವನ್ನು ರೂಪಿಸುವ ಪ್ರಯತ್ನಗಳು; ಕನ್ನಡ ಮಾತಾಡುವ ಜನಸಾಮಾನ್ಯರಲ್ಲಿ ಲೋಕವ್ಯವಹಾರಜ್ಞಾನ ವನ್ನು ಸುಲಭವಾಗಿ ಹರಡಲು ಬೇಕಾದ ಪುಸ್ತಕಗಳ ತಯಾರಿ ಹಾಗೂ ಪ್ರಚಾರ ವಿವಿಧ ಶಾಸ್ತ್ರ-ಶಿಸ್ತುಗಳ ಸಂಬಂಧದ ಪಾರಿಭಾಷಿಕ ಶಬ್ದಗಳನ್ನು ನಿರ್ಣಯಿಸಲು ಬೇಕಾದ ಮಾರ್ಗೋಪಾಯಗಳು ಇತ್ಯಾದಿಗಳು ಸಮಿತಿಯ ಆಶಯದಂತೆ ಇದ್ದುವು. ಈ ಲೇಖನಗಳಲ್ಲಿಯ ಸಲಹೆ ಸೂಚನೆಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವ ಉದ್ದೇಶದಿಂದ ೦೩.೦೫.೧೯೧೫ರಂದು ಬೆಂಗಳೂರಿನಲ್ಲಿ ಸಮ್ಮೇಳನವನ್ನು ವ್ಯವಸ್ಥೆ ಮಾಡ ಲಾಯಿತು. ತದನುಗುಣವಾಗಿ ಅಂದು ಮಧ್ಯಾಹ್ನ ಮೂರು ಗಂಟೆಗೆ ಬೆಂಗಳೂರು ಸರ್ಕಾರಿ ಪ್ರೌಢಶಾಲೆಯ ವಿಶಾಲವಾದ ಹಜಾರದಲ್ಲಿ ಸಮ್ಮೇಳನವು ಪ್ರಥಮವಾಗಿ ಆರಂಭವಾಯಿತು.

ಈ ಪ್ರಥಮ ಸಮ್ಮೇಳನಕ್ಕೆ ಧಾರವಾಡ, ಬಿಜಾಪುರ, ಬೆಲ್ಗಾಮ್, ಕಾರವಾರ, ಬೊಂಬಾಯಿನಗರ, ಬೊಂಬಾಯಿ ಅಧಿಪತ್ಯದ ದೇಶೀಯ ಸಂಸ್ಥಾನಗಳು, ಮದರಾಸು ನಗರ, ಬಳ್ಳಾರಿ, ದಕ್ಷಿಣ ಕನ್ನಡ, ಮೈಸೂರು ಸಂಸ್ಥಾನದ ಡಿಸ್ಟ್ರಿಕ್ಟುಗಳು –ಈ ಪ್ರದೇಶಗಳಿಂದ ಪ್ರಮುಖರೂ, ವಿದ್ವಾಂಸರೂ, ಪ್ರತಿನಿಧಿಗಳೂ ಸಮ್ಮೇಳನಕ್ಕೆ ಬಂದು ಶೋಭೆ ತಂದಿದ್ದರು. ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘ, ಕರ್ಣಾಟಕ ವಿದ್ಯಾ ವ್ಯಾಸಂಗ ಸಮಾಜ, ಬೊಂಬಾಯಿ ನಗರದ ಕರ್ಣಾಟಕ ಸಭೆ, ಮೈಸೂರು ಸಂಸ್ಥಾನದ ಕಾಲೇಜ್ ಮತ್ತು ಹೈಸ್ಕೂಲುಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಧಾರ್ವಾಡದ 'ಕರ್ಣಾಟಕ ವೃತ್ತ' ಮತ್ತು 'ಧನಂಜಯ', ಹುಬ್ಬಳ್ಳಿಯ 'ಸಚಿತ್ರ ಭಾರತ', ಮಂಗಳೂರಿನ 'ಸ್ವದೇಶಾಭಿಮಾನಿ' ಮತ್ತು ಮೈಸೂರು ಸಂಸ್ಥಾನದ ವೃತ್ತಾಂತ ಪತ್ರಿಕೆಗಳ ಸಂಪಾದಕರು ಹಾಜರಿದ್ದರು. ಅಂದರೆ ಕನ್ನಡ ಹೃದಯ, ಮನಸ್ಸುಗಳು ಇಂಥ ಒಂದು ಘಳಿಗೆಗೆ ಕಾತರಿಸಿದ್ದುವು ಎಂಬುದಕ್ಕೆ ಈ ಸಮ್ಮೇಳನ ಸಾಕ್ಷಿಯಾಗಿತ್ತೆನ್ನಬೇಕು. ಕನ್ನಡದ ನಂಟಿನ ಒಂದು ಚೈತ್ರೋತ್ಸಾಹ ಇಲ್ಲಿ ಎದ್ದು ಕಾಣುತ್ತದೆ.

ಈ ಸಮ್ಮೇಳನ ನಾಲ್ಕು ದಿನಗಳ ಕಾಲ ನಡೆಯಿತು. ನೆರೆದಿದ್ದ ಕನ್ನಡಿಗರು ಆಯ್ಕೆ ಮಾಡಿದಂತೆ ಸಮ್ಮೇಳನದ ಮೊದಲ ದಿನದ ಅಧಿವೇಶನದ ಅಧ್ಯಕ್ಷರು ರಾಜಮಂತ್ರ ಪ್ರವೀಣ ಎಚ್.ವಿ. ನಂಜುಂಡಯ್ಯನವರು ಆಗಿದ್ದರು. ಎರಡನೆಯ ದಿನಕ್ಕೆ ರಾಜಸಭಾಭೂಷಣ ದಿ॥ ಬ॥ ಕೆ.ಪಿ.ಪುಟ್ಟಣ್ಣಶೆಟ್ಟರು, ಮೂರು ಮತ್ತು ನಾಲ್ಕನೆಯ ದಿನದ ಅಧಿವೇಶನಗಳಿಗೆ ಕರ್ಪೂರ ಶ್ರೀನಿವಾಸರಾಯರು ಅಧ್ಯಕ್ಷರಾಗಿದ್ದರು. ಸಮ್ಮೇಳನದ ಸಮಾರೋಪವನ್ನು ಎಚ್.ವಿ. ನಂಜುಂಡಯ್ಯನವರೇ ಮಾಡಿದರು.

ಎರಡನೆಯ ದಿವಸದ ಅಧಿವೇಶನದಲ್ಲಿ ಅಂಗೀಕೃತವಾದ ಮೂರು ನಿರ್ಣಯಗಳು: ಕರ್ಣಾಟಕ ಭಾಷಾ ಸಂಸ್ಕರಣ ಆಗಬೇಕು; ಕರ್ಣಾಟಕ ಗ್ರಂಥಾವಳಿಯ ಅಭಿವೃದ್ಧಿಗಾಗಿ ಬೆಂಗಳೂರಿನಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಎಂಬ ಹೆಸರಿನ ಪ್ರಧಾನ ಸಭೆಯೊಂದು ಸ್ಥಾಪಿತವಾಗಬೇಕು; ಬೊಂಬಾಯಿ, ಮದರಾಸು, ಹೈದರಾಬಾದ್, ಕೊಡಗು ಪ್ರಾಂತ್ಯಗಳಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಶಾಖೆಗಳಿರಬೇಕು. ಈ ಪರಿಷತ್ತಿನ ಉದ್ದೇಶಗಳನ್ನೇ ಹೊಂದಿ ಕೆಲಸ ಮಾಡುವ ಇತರ ಸಂಘಗಳನ್ನು ತನ್ನ ಜೊತೆಗೆ ಸೇರಿಸಿಕೊಳ್ಳಲು ಪರಿಷತ್ತಿಗೆ ಅಧಿಕಾರವಿರಬೇಕು; ಕರ್ಣಾಟಕ ಸಾಹಿತ್ಯ ಪರಿಷತ್ತಿನ ರಚನಾಕ್ರಮ (ಅಂಗರಚನೆ) ಮತ್ತು ನಿಯಮಗಳ ಮಸೂದೆಯನ್ನು ತಯಾರುಮಾಡಿ, ಉಪ ಸಮಿತಿಯು ಮೂರನೇ ದಿವಸವೇ ಒಪ್ಪಿಸಬೇಕು ಎಂದೆಲ್ಲ ಆದುವು. ಆ ಉಪಸಮಿತಿಯಲ್ಲಿ ಎಂ. ವೆಂಕಟಕೃಷ್ಣಯ್ಯನವರು, ದೇಶಪಾಂಡೆ ರಾಮಚಂದ್ರರಾಯರು, ಸೆಟ್ಲೂರರು, ಲಿಂಗರಾಜ ಅರಸಿನವರು, ಕರಿಗುದರಿ ನಾರಾಯಣರಾಯರು, ಬಿ. ರಾಮರಾಯರು, ಪಂಡಿತ ರಾಘವೇಂದ್ರಾಚಾರ್ಯರು ಸೇರಿ ಈ ಕಾರ್ಯ ಮಾಡಬೇಕು ಎಂದೆಲ್ಲ ಆಗಿದ್ದುವು.

ಅಂಗರಚನೆ, ನಿಬಂಧನೆಗಳು ಸಿದ್ದವಾಗಿ ಮೂರನೆಯದಿನ ಸಮ್ಮೇಳನ ಮುಂದಿಟ್ಟು ಚರ್ಚೆ ನಡೆದು, ಆನಂತರ ಅವನ್ನು ಅಂಗೀಕರಿಸಲಾಯಿತು. ಈ ಮೂಲ ಅಂಗರಚನೆಯಲ್ಲಿ ೩೧ ಕಲಮುಗಳು ಐದು ನಿಬಂಧನೆ ಗಳಿದ್ದು, ಅದು ವಿಧಿವತ್ತಾಗಿ ಕಾರ್ಯಗತವಾಗಿ ಕರ್ಣಾಟಕ ಸಾಹಿತ್ಯ ಪರಿಷತ್ತು ೦೫.೦೫.೧೯೧೫ರಂದು ಸ್ಥಾಪಿತವಾಯಿತು.

ಕರ್ಪೂರ ಶ್ರೀನಿವಾಸರಾಯರು ಅಂದು ೫೦೦ ರೂ. ನೀಡಿ ಪರಿಷತ್ತಿನ ಆಶ್ರಯದಾತರಾದರು; ೪೧ ಜನ ಆಜೀವ ಸದಸ್ಯರು, ಪ್ರಥಮ ವರ್ಗದ ಸದಸ್ಯರು ೪೨, ದ್ವಿತೀಯ ವರ್ಗದ ಸದಸ್ಯರು ೨೯ ಮಂದಿ ಆದರು. ಪರಿಷತ್ತಿಗೆ ವಾಗ್ದಾನವಾಗಿ ೨೫೫೦ ರೂ. ಉಚಿತ ಧನದ ಮೊತ್ತವಾಗಿತ್ತು. ವಾರ್ಷಿಕ ಚಂದಾಹಣ ೬೨೪ ರೂ. ಸಂಗ್ರಹವಾಯಿತು.

ಅಂದು ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಎಚ್.ವಿ. ನಂಜುಂಡಯ್ಯನವರು ಅಧ್ಯಕ್ಷರಾಗಿ ಆಯ್ಕೆಗೊಂಡರು. ಕೋಶಾಧ್ಯಕ್ಷರು, ಕಾರ್ಯದರ್ಶಿಗಳು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಮೈಸೂರು ಸಂಸ್ಥಾನಕ್ಕೆ ಸರ್ದಾರ್ ಎಂ. ಕಾಂತರಾಜೇ ಅರಸ್, ದಿ॥ ಬ॥ ಕೆ.ಪಿ. ಪುಟ್ಟಣಶೆಟ್ಟಿ ಇತ್ಯಾದಿ ೧೨ ಜನ ಸದಸ್ಯರು, ಬೊಂಬಾಯಿ ಅಧಿಪತ್ಯಕ್ಕೆ ವಿ.ಬಿ. ಜೋಷಿ ಇತ್ಯಾದಿ ಎಂಟು ಸದಸ್ಯರು, ಮದರಾಸು ಅಧಿಪತ್ಯಕ್ಕೆ ಬಿ.ರಾಮರಾಯರು ಕೂಡಿ ಐದು ಸದಸ್ಯರು, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೆ ಟಿ.ಎಸ್. ಚಿಕ್ಕೋಡಿ, ಆರ್.ಎಸ್. ಮಂಗೂಲಿ, ಹೈದರಾಬಾದ್ ಕರ್ಣಾಟಕಕ್ಕೆ ಬಿ. ಕೃಷ್ಣಯ್ಯಂಗಾರ್, ಆರ್. ತಾತಾ, ಕೊಡಗು ಪ್ರಾಂತಕ್ಕೆ ರಾ॥ ಬ॥ ಎಂ. ಮುತ್ತಣ್ಣನವರು ಚುನಾಯಿತರಾದರು. ಈ ಪಟ್ಟಿ ಅಖಿಲ ಕರ್ಣಾಟಕ ಪ್ರಾತಿನಿಧ್ಯವನ್ನುಳ್ಳದ್ದಾಗಿತ್ತು, ಎಂಬುದು ಆಯ್ಕೆಯಿಂದಲೇ ವಿದಿತವಾಗಿತ್ತು. ಈ ನಿರ್ವಾಹಕ ಮಂಡಲಿಯಲ್ಲಿ ಕೆಲವಾರು ಪಂಡಿತರೂ, ಇದ್ದು ಮೈಸೂರು, ಮದರಾಸು, ಮುಂಬಯಿ ಅಧಿಪತ್ಯಕ್ಕೆ ಸೇರಿದವರಾಗಿದ್ದರು.

ಈ ಪರಿಷತ್ತಿನ ಪುರೋಭಿವೃದ್ಧಿಗಾಗಿ ಮೈಸೂರು ಸರ್ಕಾರ ಹಾಗೂ ಮೈಸೂರು ರಾಜಮನೆತನವೂ ವಿಶೇಷ ಆಸಕ್ತಿ ವಹಿಸಿದುವು. ಶ್ರೀ ಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು, ಪರಿಷತ್ತಿನ ಮಹಾಪೋಷಕರಾಗಿದ್ದರು. ಶ್ರೀ ಯುವರಾಜ ಕಂಠೀರವ ನರಸಿಂಹರಾಜ ಒಡೆಯರು, ಅವರ ಪುತ್ರ ಶ್ರೀ ಜಯಚಾಮರಾಜ ಒಡೆಯರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ೧೯೧೭ರಲ್ಲಿ ಮೈಸೂರಿನಲ್ಲಿ ನಡೆದ ಮೂರನೆ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ಶ್ರೀ ಕಂಠೀರವ ನರಸಿಂಹರಾಜ ಒಡೆಯರು ನೆರವೇರಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರು

೧೯೪೦ರ ಪರಿಷತ್ತಿನ ರಜತೋತ್ಸವದಲ್ಲಿ ಪಾಲ್ಗೊಂಡರು. ೧೯೨೦ರಿಂದ ೧೯೪೦ರವರೆಗೆ ಪರಿಷತ್ತಿನ ಅಧ್ಯಕ್ಷ ಸ್ಥಾನ, ಮೈಸೂರಿನ ರಾಜಮನೆತನದಲ್ಲಿ ಅಲಂಕಾರಿಕ ಗೌರವ ಸ್ಥಾನವಾಗಿತ್ತು.

ಪರಿಷತ್ತಿನ ಮೊದಲ ಸಮ್ಮೇಳನ ಸಭೆಯಲ್ಲಿ ಪರಿಷತ್ತಿನ ಉದ್ದೇಶಗಳನ್ನು ಮುಂದಿಡಲಾಯಿತು: ಕನ್ನಡ ಭಾಷೆಯ ವ್ಯಾಕರಣ, ಚರಿತ್ರೆ, ನಿಘಂಟು ಬರೆಸುವುದು; ಪಾರಿಭಾಷಿಕ ಶಬ್ದಗಳ ಕೋಶ ಪ್ರಕಟನೆ; ತತ್ತ್ವಶಾಸ್ತ್ರ, ಪ್ರಕೃತಿವಿಜ್ಞಾನ, ಸಾಹಿತ್ಯ ಸಂಬಂಧದ ಕನ್ನಡ ಗ್ರಂಥಗಳನ್ನು ಬರೆಸಿ, ಪ್ರಚುರಗೊಳಿಸುವುದು; ಅನ್ಯಭಾಷೆಯ ಉತ್ತಮ ಕೃತಿಗಳ ಕನ್ನಡಾನುವಾದದ ಪ್ರಕಟನೆ; ಪ್ರಾಚೀನ ಉತ್ಕೃಷ್ಟ ಗ್ರಂಥಗಳ ಸಂಗ್ರಹ, ಪರಿಷ್ಕರಣ ಪ್ರಕಟನೆ, ವಸ್ತು ಸಂಗ್ರಹಾಲಯದ ಏರ್ಪಾಟು; ಪಂಡಿತ ಯೋಗ್ಯ ಲೇಖನಗಳ ಕನ್ನಡ ಪತ್ರಿಕೆಗಳ ಪ್ರಕಟನೆ; ಕರ್ಣಾಟಕದ ಗ್ರಂಥಕರ್ತ ಬರೆದ ಪುಸ್ತಕಗಳನ್ನು ಕೊಳ್ಳುವುದು; ಕನ್ನಡ ಅಥವಾ ಸಂಸ್ಕೃತಿ ವಿದ್ವಾಂಸರಿಗೆ ಸಂಶೋಧನ ಕಾರ್ಯಕ್ಕೆ ಪಂಡಿತ ವೇತನ ಕೊಡುವುದು; ಕನ್ನಡದ ವಾಚನಾಲಯ, ಪುಸ್ತಕ ಭಂಡಾರಗಳನ್ನು ಸ್ಥಾಪಿಸುವುದು; ಕನ್ನಡನಾಡಿನ ಗಣ್ಯರನ್ನು ಆಹ್ವಾನಿಸಿ ಸಮಾಲೋಚನ ಸಭೆ ಏರ್ಪಡಿಸುವುದು, ವಿದ್ವಾಂಸರಿಂದ ಉಪನ್ಯಾಸ ಮಾಡಿಸುವುದು ಇತ್ಯಾದಿಗಳೇ ಆ ಉದ್ದೇಶಗಳಾಗಿದ್ದುವು. ಆದರೆ ಸಾಮಾನ್ಯ ಜನರಿಗೆ ನಿಲುಕುವ ಸಾಹಿತ್ಯ, ಜನಪದ ಸಾಹಿತ್ಯ, ಜನಪದ ಸಾಹಿತ್ಯ ಕಲೆ ಕುರಿತಾದ ವಿಷಯಗಳ ಪ್ರಸ್ತಾಪ ಇಲ್ಲಿ ಕಂಡುಬಂದಿಲ್ಲ. ಆದರೆ ಮುಂದೆ ಪರಿಷತ್ತು ಇದನ್ನೆಲ್ಲ ಅಳವಡಿಸಿಕೊಂಡು ಸಾಗಿ ಬಂದಿದೆ.

ಪರಿಷತ್ತಿಗೆ ತನ್ನ ಕಾರ್ಯೋದ್ದೇಶಗಳನ್ನು ವಿಸ್ತರಿಸಲು ಸಮಸ್ಯೆಗಳೂ ಇದ್ದುವು. ಪರಿಷತ್ತು ಸ್ಥಾಪಿತವಾದ ಮೇಲೆ ಸುಮಾರು ೧೮ ವರ್ಷಗಳವರೆಗೆ ಬಾಡಿಗೆ ಕಟ್ಟಡಗಳಲ್ಲಿದ್ದು ತನ್ನ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿತ್ತು. ಪರಿಷತ್ತು ಆರಂಭವಾದಾಗ ಅದರ ಕಛೇರಿಯು ಚಾಮರಾಜಪೇಟೆ ನಾಲ್ಕನೇ ಮುಖ್ಯರಸ್ತೆಯ –ಇಂದಿನ ಜೂಬಿಲಿ ನರ್ಸಿಂಗ್ ಹೋಂ ಎದುರಿನ ನಾನಾರಾಯರ ಮನೆಯ ಕೊಠಡಿಯೊಂದರಲ್ಲಿತ್ತು. ೧೯೨೭ರಲ್ಲಿ ಶಂಕರಪುರದ ನಾಲ್ಕನೆಯ ರಸ್ತೆಯಲ್ಲಿನ ಶ್ರೀ ವಾಜಪೇಯಂ ಸೂರಪ್ಪನವರ ಮನೆಯನ್ನು ಪೂರ್ತಿಯಾಗಿ ತಿಂಗಳಿಗೆ ಮೂವತ್ತು ರೂ. ಬಾಡಿಗೆಯಂತೆ ತೆಗೆದುಕೊಳ್ಳಲಾಯಿತು. ನಂತರ 'ಗಾಂಧಿ ಮೈದಾನ'ವೆಂದು ಕರೆಯುತ್ತಿದ್ದ ಹಾರ್ಡಿಂಜ್ ರಸ್ತೆ (ಇಂದು ಪಂಪ ಮಹಾಕವಿ ರಸ್ತೆ) ಎದುರಿನ ಬಯಲು ಪ್ರದೇಶವನ್ನು ಮಿರ್ಜಾ ಇಸ್ಮಾಯಿಲ್ ದಿವಾನರು ಪರಿಷತ್ತಿಗೆ ಸ್ಥಳವಾಗಿ ಸೂಚಿಸಿದರು. ಅದೇ ಇಂದು ಪರಿಷತ್ತಿನ ಕಟ್ಟಡಗಳಿರುವ ನೆಲೆ.

೧೯೩೧ರ ಏಪ್ರಿಲ್ ೧೨ನೇ ತಾರೀಖಿನಂದು ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಎಂಜಿನಿಯರ್ ವೃತ್ತಿಯ **ಶ್ರೀ ಕರ್ಪೂರ ಶ್ರೀನಿವಾಸರಾಯರು** ಪರಿಷತ್ತಿನ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದರು. ಕಟ್ಟಡದ ವಿನ್ಯಾಸ, ರಚನೆಗೆ ಗಮನಕೊಟ್ಟರು. ನಿರ್ಮಾಣಕ್ಕೆ ನಿಧಿ ಸಂಗ್ರಹಿಸಿದರು. ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ೫ ಸಾವಿರ ರೂ. ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರು ೨ ಸಾವಿರ ರೂ. ಪರಿಷತ್ ಅಧ್ಯಕ್ಷ ಶ್ರೀ ಕಾಂತರಾಜ ಅರಸರು ೫ ಸಾವಿರ ರೂ.ಗಳ ದಾನ ನೀಡಿದರು. ಸರ್ ಮಿರ್ಜಾ ಇಸ್ಮಾಯಿಲ್ ಅವರು ಸರ್ಕಾರ ದಿಂದ ೧೫,೭೮೯ ರೂ.ಗಳನ್ನು ಮಂಜೂರು ಮಾಡಿದರು. ಈ ಎಲ್ಲ ನೆರವುಗಳಿಂದ ಸಿದ್ಧವಾದ ಕಟ್ಟಡಕ್ಕೆ 'ಶ್ರೀ ಕೃಷ್ಣರಾಜ ಪರಿಷನ್ಮಂದಿರ' ಎಂಬ ಹೆಸರು ಕೊಡಲಾಯಿತು. ೧೯೩೩ ಮೇ ೨೯ರಂದು ಇದರ ಉದ್ಘಾಟನೆ ಆಗಿ ಪರಿಷತ್ತಿನ ಕಛೇರಿಯನ್ನು ಇಲ್ಲಿಗೆ ವರ್ಗಾಯಿಸಲಾಯಿತು. ಇಲ್ಲಿಂದಾಚೆಗೆ ಪರಿಷತ್ತು ಕೇವಲ ಪಂಡಿತರ ಕೂಟ ಎಂಬ ಭಾವನೆಯನ್ನು ಹೋಗಿಸಿ ಜನಸಾಮಾನ್ಯರ ಒಡನಾಟವೂ ಹೆಚ್ಚಿತು. ಹೊಸ ರೂಪ ಒದಗಿಸಿತು. ಕಾರ್ಯ ಚಟುವಟಿಕೆಗಳು ಬಹುವಾಗಿ ಬೆಳೆದವು. ಇದಕ್ಕೆಲ್ಲ ನೇತೃತ್ವವಾದವರು ೧೯೩೪ರಲ್ಲಿ ಪರಿಷತ್ತಿನ ಉಪಾಧ್ಯಕ್ಷರಾದ ಡಿ.ವಿ. ಗುಂಡಪ್ಪನವರು.

ಪರಿಷತ್ತು ೧೯೧೫ರಲ್ಲಿ ಆರಂಭವಾದ ಮೇಲೆ ಸುಮಾರು ೧೮ ವರ್ಷಗಳ ಕಾಲ ಪಾಂಡಿತ್ಯ ಹಾಗೂ ಸಾಹಿತ್ಯ ಪೋಷಣೆಗೆ ನೆರವಾದವರು ಕೆಲವಾರು ವರ್ಷ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರು. ಪಂಪಭಾರತ, ಪಂಪ ರಾಮಾಯಣ ಮತ್ತು ಇವುಗಳ ನಿಘಂಟು, ಚಾವುಂಡರಾಯ ಪುರಾಣ, ಸೋಮೇಶ್ವರ ಶತಕ, ಶಬ್ದಮಣಿದರ್ಪಣ ಮುಂತಾದ ಪ್ರಾಚೀನ ಕನ್ನಡ ಕೃತಿಗಳ ಸಂಪಾದನೆ ಮತ್ತು ಪ್ರಕಟನೆಗಳಾದುವು. ಪಂಪರಾಮಾಯಣದ ಗದ್ಯಾನುವಾದ, ಜೈಮಿನಿಭಾರತದ ಗದ್ಯಾನುವಾದ, ಷಟ್ಪದಿ ಕಾವ್ಯಗಳ ನಿಘಂಟು, ಕುಸುಮಾವಳಿ ಕಾವ್ಯ, 'ಜ್ಯೋತಿರ್ವಿನೋದಿನಿ' ಎಂಬ ವೈಜ್ಞಾನಿಕ ಗ್ರಂಥ, ಇವೆಲ್ಲ ಈ ಅವಧಿಯಲ್ಲಿ ಪ್ರಕಟವಾದುವು.

ಈ ಅವಧಿಯಲ್ಲಿ ಪರಿಷತ್ತಿನ ಸಮಸ್ಯೆ ಎಂದರೆ ಆರ್ಥಿಕ ಸಮಸ್ಯೆ ಆಗಿತ್ತು. ಮೈಸೂರು ಸಂಸ್ಥಾನದಿಂದ ಬರುತ್ತಿದ್ದ ಮಾಸಿಕ ೧೩೦ ರೂ.ಗಳ ಸಹಾಯವು, ಅಂದಿನ ಪರಿಷತ್ತಿನ (ಹೊರ) ಕಛೇರಿ ಬಾಡಿಗೆ, ಸಿಬ್ಬಂದಿ ಖರ್ಚಿಗಷ್ಟೆ ಸಾಕಾಗುತ್ತಿತ್ತು. ಗ್ರಂಥಕರ್ತರಿಗೆ, ಹೊಸ ಪುಸ್ತಕ ಬರೆಸುವಲ್ಲಿ ನೀಡಲು ದ್ರವ್ಯವು ಸಾಲುತ್ತಿರಲಿಲ್ಲ. ಪರಿಷತ್ತಿಗೆ ಸುಶಿಕ್ಷಿತ ವರ್ಗದಿಂದ ಕನ್ನಡದೊಲವಿನವರು ಹೆಚ್ಚು ಬೇಕಾಗಿತ್ತು. ಪರಿಷತ್ತಿನ ಕಛೇರಿ ಖರ್ಚಿನ ಅರ್ಧಭಾಗ ಚಂದಾ ಹಣದ ವಸೂಲಿಯಿಂದ ನಡೆಯಬೇಕಿತ್ತು. ಅದಕ್ಕೆ ಸ್ಪಂದನೆ ಸಾಕಷ್ಟು ದೊರಕಿರಲಿಲ್ಲ. ಪರಿಷತ್ಪತ್ರಿಕೆಗೂ ಚಂದಾ ಬರುವುದು ಕಷ್ಟವಾಗಿತ್ತು. ಪರಿಷತ್ಪತ್ರಿಕೆ ಮೊದಲಿಗೆ ೧೯೧೬ರಿಂದ ತ್ರೈಮಾಸಿಕವಾಗಿ ಆರಂಭವಾಯಿತು. ಆದರೆ ಅದಕ್ಕೆ ಲೇಖನಗಳನ್ನು ಒದಗಿಸುವ ಸಮರ್ಥರ ಅಭಾವವೂ ಇತ್ತು. ಆದರೂ ಕರ್ಣಾಟಕ ವರ್ಣಮಾಲೆಯ ಉತ್ಪತ್ತಿ ಮತ್ತು ಚರಿತ್ರೆ, ಕನ್ನಡ ಸಆಹಿತ್ಯ ಮತ್ತು ಕವಿಗಳು, ಬುಕ್ಕರಾಯ ಚರಿತ್ರೆ, ಕರ್ಣಾಟಕ ರಾಜ್ಯ ವೃತ್ತಾಂತ, ಕೈಫಿಯತ್ತು, ಮಹಮದ್ ಗವಾನನ ಜೀವನ ಚರಿತ್ರೆ, ನೃಪತುಂಗ, ಲಕ್ಷ್ಮೀಶ ಕವಿಗಳು, ಭಾಸನ ದೂತವಾಕ್ಯ ಏಕಾಂಕ ನಾಟಕ, ಈ ಬಗೆಯೆಲ್ಲ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾದುವು.

ಡಿ.ವಿ.ಗುಂಡಪ್ಪನವರು ಉಪಾಧ್ಯಕ್ಷರಾಗಿ ೧೯೩೩ರಲ್ಲಿ ಬಂದಮೇಲೆ ಪರಿಷತ್ತಿನ ಕಾರ್ಯಾಲಯಕ್ಕೆ ಪದವೀಧರರನ್ನು ಕನ್ನಡದಲ್ಲಿ ಪಾಂಡಿತ್ಯವುಳ್ಳ ಸಿಬ್ಬಂದಿಯನ್ನು ನೇಮಿಸಿಕೊಂಡರು. ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿದರು. ಪರಿಷತ್ತಿನ ಅಂಗರಚನೆ ನಿಬಂಧನೆಗಳಲ್ಲಿ ಆಗಿದ್ದ ತಿದ್ದುಪಡಿಗಳನ್ನು ಕ್ರೋಢೀಕರಿಸಿ ಅಧಿಕೃತ ನಿಬಂಧನಾವಳಿ ಪ್ರತಿಯನ್ನು ಪ್ರಕಟಿಸಿದರು. ಸಾರ್ವಜನಿಕರನ್ನು ಆಕರ್ಷಿಸುವಂಥ ಸಭೆ ಸಮಾರಂಭಗಳನ್ನು ಏರ್ಪಡಿಸಿದರು. ಕಾವ್ಯವಾಚನದ ವ್ಯವಸ್ಥೆ ಮಾಡಿದರು. ಗಮಕಕಲಾ ಪ್ರಚಾರ, ಗಮಕ ತರಗತಿಗಳನ್ನು ಆರಂಭಿಸಿದರು. ೧೯೩೪ರಲ್ಲಿ (ಮೇ ೬ರಿಂದ) ಒಂದು ವಾರ ಕಾಲ ಅಪೂರ್ವವಾದ ಗ್ರಂಥ ಪ್ರದರ್ಶನ ಏರ್ಪಡಿಸಿದ್ದರು. ೨೪೬೨ ಪುಸ್ತಕಗಳನ್ನು ಅಂದರೆ ಕನ್ನಡ ಪುಸ್ತಕಗಳನ್ನು ಗ್ರಂಥ ಪ್ರದರ್ಶಿಗೆ ಏರ್ಪಡಿಸಿದರು. ಪರಿಷತ್ತಿನ ಕಾರ್ಯಕ್ರಮಗಳನ್ನು ಪರಿಚಯಿಸಲು, ಅಪೂರ್ವ ಗ್ರಂಥ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಹಳ್ಳಿ ಹಳ್ಳಿಗೂ ಕನ್ನಡ ವಾಹಿನಿಯನ್ನು ಹರಿಸುವ ಪ್ರಯತ್ನ ಮಾಡಿದರು. ಸಂಚಾರೋಪನ್ಯಾಸ ಯೋಜನೆಯನ್ನು ರೂಪುಗೊಳಿಸಿದರು. ವಸಂತ ಸಾಹಿತ್ಯೋತ್ಸವ ಕಾರ್ಯಕ್ರಮಗಳನ್ನು ಮಾಡಿದರು.

ಪರಿಷತ್ಪತ್ರಿಕೆ: ಪರಿಷತ್ತು ಆರಂಭವಾದಾಗಲೆ ಪರಿಷತ್ಪತ್ರಿಕೆ ಮೂರ್ತಿಂಗಳೋಲೆಯಾಗಿ ಪ್ರಕಟವಾಗುತ್ತಿತ್ತು. ಅದರಲ್ಲಿ ವಿದ್ವತ್ ಬರಹಗಳೇ ಹೆಚ್ಚಿಗಿರುತ್ತಿತ್ತು. ಈ ಕಾರಣ ಸಾಮಾನ್ಯ ಸದಸ್ಯರು ಮತ್ತು ಸಾರ್ವಜನಿಕ ಸಂಪರ್ಕ ಬೆಳೆಸಿಕೊಳ್ಳಲು ಪರಿಷತ್ ಪತ್ರಿಕೆಯ 'ಸಂಗ್ರಹಪ್ರತಿ'ಯನ್ನು ಪ್ರಕಟಿಸುವ ಯೋಜನೆಯನ್ನು ಪರಿಷತ್ತು ರೂಪಿಸಿತು. ಅದರಲ್ಲಿ ಎರಡು ವಿಭಾಗಗಳನ್ನು ಮಾಡಿ ಆರು ರೂ. ವಾರ್ಷಿಕ ಚಂದಾ ನೀಡುವವರಿಗೆ 'ಪರಿಷತ್‌ಪತ್ರಿಕೆ'ಯನ್ನು, ಮೂರು ರೂ. ವಾರ್ಷಿಕ ಚಂದಾ ನೀಡುವವರಿಗೆ 'ಸಂಗ್ರಹಪ್ರತಿ'ಯನ್ನು ಕೊಡುವ ವ್ಯವಸ್ಥೆಯಾಯಿತು. ಪರಿಷತ್

ಪತ್ರಿಕೆಯಲ್ಲಿ ಇರುತ್ತಿದ್ದ ಸಂಪಾದಕೀಯ ಟಿಪ್ಪಣಿಗಳು, ವಾರ್ತೆಗಳು ಕಾರ್ಯಸಮಿತಿಯ ನಿರ್ಣಯಗಳು, ಪ್ರಚಾರಕ್ಕೆ ಅನುಕೂಲವಾದ ಲೇಖನ ಸಂಗ್ರಹಗಳು ಇವನ್ನು ಈ 'ಸಂಗ್ರಹಪ್ರತಿ' ಒಳಗೊಂಡಿರುತ್ತಿತ್ತು.

ಡಿ.ವಿ.ಗುಂಡಪ್ಪನವರ ಕಾಲದಲ್ಲಿ ಉಪನ್ಯಾಸ ಸಮಿತಿ, ಪುಸ್ತಕ ಭಂಡಾರ ಉಪಸಮಿತಿ, ದ್ರವ್ಯಾನುಕೂಲ ಉಪಸಮಿತಿಗಳನ್ನು ರೂಪಿಸಲಾಯಿತು. ಸಮಸ್ತ ಕರ್ನಾಟಕದ ಪ್ರಾತಿನಿಧ್ಯದ ೧೫ ಜನರ ಸಂಪಾದಕ ಮಂಡಲಿಯನ್ನು ನಿಯಮಿಸಲಾಯಿತು. ಎ.ಆರ್. ಕೃಷ್ಣಶಾಸ್ತ್ರಿಗಳು ಪರಿಷತ್ಪತ್ರಿಕೆಯ ಸಂಪಾದಕರಾದರು. ಪತ್ರಿಕೆಯ ಸ್ವರೂಪವನ್ನು ನಿರ್ಣಯಿಸಲಾಯಿತು. ಭಾಷಾಶಾಸ್ತ್ರ, ಕಾವ್ಯಮೀಮಾಂಸೆ, ಸಾಹಿತ್ಯ ಚರಿತ್ರೆ, ಐತಿಹಾಸಿಕ ವಿಚಾರಗಳ ಕುರಿತಾಗಿ ಸ್ವತಂತ್ರ ಲೇಖನಗಳಿರಬೇಕು; ಸಂಸ್ಕೃತದಿಂದ, ಇಂಗ್ಲಿಷಿನಿಂದ ಪ್ರಮಾಣಗ್ರಂಥಗಳ ಅನುವಾದ, ಪ್ರೌಢಕಾವ್ಯ, ಜನಪದ ಸಾಹಿತ್ಯ, ಶಾಸನ, ಕೈಫಿಯತ್ತು ಮುಂತಾದವುಗಳ ಬಗ್ಗೆ ಪ್ರಬಂಧಗಳು, ಗ್ರಂಥ ವಿಮರ್ಶೆಗೆ ಗ್ರಂಥಸ್ವೀಕಾರ, ಪರಿಷತ್ತಿನ ಸಮಿತಿಗಳು ಹಾಗೂ ಅಂಗಸಂಸ್ಥೆಗಳ ಕಾರ್ಯಕಲಾಪಗಳು, ಸಂಪಾದಕೀಯ ಟೀಕೆ, ಪ್ರಾಚ್ಯಲೇಖನಮಾಲೆ, ವಿನಿಮಯ ಪತ್ರಿಕೆಗಳ ಪಟ್ಟಿ, ಪರಿಷತ್ಪ್ರಕಟನೆಗಳು ಚಂದಾವಿವರ ಕಾರ್ಯಸಮಿತಿ, ಸಂಪಾದಕ ಸಮಿತಿ ಪಟ್ಟಿಗಳು, ಗ್ರಂಥಭಂಡಾರಕ್ಕೆ ಸೇರಿದ ಪುಸ್ತಕಗಳ ಹೆಸರು, ಪರಿಷತ್ತಿನಲ್ಲಿಯ ಉಪನ್ಯಾಸ ಮತ್ತು ಪರಿಷತ್ತಿನ ಕಾರ್ಯಕಲಾಪಗಳು ಇವೆಲ್ಲ ಇರಬೇಕೆಂದಾಗಿ ಅವುಗಳು ಪ್ರಕಟವಾಗುತ್ತಿದ್ದವು.

ಸಾಹಿತ್ಯೋತ್ಸವ: ೧೯೩೪ರ ಮೇ ತಿಂಗಳಲ್ಲಿ ಪರಿಷತ್ತಿನಲ್ಲಿ ವಿಶೇಷ ಸಾಹಿತ್ಯೋತ್ಸವವನ್ನು ಉಪಾಧ್ಯಾಯರಿಗೆ ಹಾಗೂ ಇತರ ವಿಚಾರವಂತರಿಗೆ ಅನುಕೂಲಿಸುವ ದೃಷ್ಟಿಯಿಂದ, ಶಾಸ್ತ್ರಪರಿಣತದಿಂದ ಈ ವಿಚಾರೋಪನ್ಯಾಸ ಮಾಲೆ ನಡೆಯಿತು. ಆಧುನಿಕ ವಿಜ್ಞಾನ, ಪ್ರಪಂಚದ ಈಗಿನ ಬಡತನ, ಮೈಸೂರಿನ ವಾಸ್ತುಶಿಲ್ಪ, ಹಿಂದೂ ದರ್ಶನಗಳು, ಜೀವವಿಜ್ಞಾನ, ಇಂಡಿಯ ದೇಶದ ಸಂಯುಕ್ತ ರಾಜ್ಯ ರಚನೆ, ನಾವು ಆಡುವ ಮಾತು, ಅಂತಾರಾಷ್ಟ್ರೀಯ ಸೌಹಾರ್ದ, ಕಾಳಿದಾಸನ ಕವಿತೆ, ಕನ್ನಡದಲ್ಲಿ ಹೊಸ ಸಾಹಿತ್ಯದ ರೀತಿ, ಭರತ ಖಂಡಕ್ಕೆ ಇಂದಿನ ಭೂಸ್ವರೂಪ ಬಂದ ಬಗೆ ಇತ್ಯಾದಿ ಕುರಿತ ಉಪನ್ಯಾಸಗಳ ನಡೆದುವು. ಪ್ರಶ್ನೋತ್ತರಗಳು ಕಾವ್ಯಪಠನ, ನಾಟಕ, ದೀಪ ಚಿತ್ರ ಪ್ರದರ್ಶನ, ೧೯೦೧ರಿಂದ ೧೯೩೪ರವರೆಗೆ ಪ್ರಕಟವಾದ ಸಮಗ್ರ ಗ್ರಂಥಗಳ ಮೊದಲ ಬಾರಿಯ ಪ್ರದರ್ಶನ ಏರ್ಪಾಟಾಗಿತ್ತು. ತದನಂತರ ಬೇರೆಡೆ ಬಂದು ಈ ಉತ್ಸವದಲ್ಲಿ ಪಾಲ್ಗೊಂಡವರಲ್ಲಿ ತಮ್ಮ ತಮ್ಮ ಊರುಗಳಲ್ಲಿ ಕರ್ನಾಟಕ ಸಂಘಗಳನ್ನು ಸ್ಥಾಪನೆ ಮಾಡಿ ಪರಿಷತ್ತಿನ ಅಂಗಸಂಸ್ಥೆಗಳಾಗಿಸಬೇಕು, ಗ್ರಂಥಪಠನ ಕಾರ್ಯಗಳನ್ನು ಏರ್ಪಡಿಸಬೇಕು ಎಂಬ ವಿನಂತಿಯನ್ನು ಉಪಾಧ್ಯಕ್ಷರು ಮಾಡಿದರು.

ವಾಕ್ ಪ್ರತಿಭೆಯ ಸಾಹಿತ್ಯ ಪ್ರಚಾರಕ್ಕೆ ಅನುಕೂಲಿಸುವಂತೆ, ಗಮಕಕಲೆ ಕಾವ್ಯ ಪ್ರಚಾರಕ್ಕೆ ಅನುಕೂಲವೆಂದು ಪರಿಷತ್ತಿನಲ್ಲಿ ಗಮಕ ತರಗತಿಗಳನ್ನು ಆರಂಭಿಸಿದರು. ೧೯೩೫ರಲ್ಲಿ ಅಖಿಲ ಕರ್ನಾಟಕ ಸಂಘಗಳ ಸಮ್ಮೇಳನವನ್ನು ವಿಶೇಷ ಸಾಹಿತ್ಯೋತ್ಸವ ಸಂದರ್ಭದಲ್ಲಿ ನೇರ್ಪುಗೊಳಿಸಿದ್ದು ಬೆಂಗಳೂರು ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘ; ಈ ಸಮ್ಮೇಳನದ ಎರಡನೆಯ ಅಧಿವೇಶನವನ್ನು ಮರುವರ್ಷ ಪರಿಷತ್ತು ನಡೆಸಿತು.

ಶ್ರೀ ಬಿ.ಎಂ.ಶ್ರೀಕಂಠಯ್ಯನವರು ೧೯೩೭ ಡಿಸೆಂಬರ್ ೨೬ರಿಂದ ೨೮ರವರೆಗೆ ಜಮಖಂಡಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ನಡೆದ ನಂತರ ಪರಿಷತ್ತಿನ ಉಪಾಧ್ಯಕ್ಷತೆಯನ್ನು ವಹಿಸಿಕೊಂಡರು. ಅವರು ತಮ್ಮ ವಿದ್ವತ್ ಪ್ರತಿಭೆ, ಭಾಷಾ ಪಾಂಡಿತ್ಯ, ವಾಗ್ಮಿತೆ, ರಸಜ್ಞತೆ; ವರ್ಚಸ್ವಿ ವ್ಯಕ್ತಿತ್ವದಿಂದ ನಾಡಿನೆಲ್ಲೆಡೆ ಸಂಚರಿಸಿ ಜನರಲ್ಲಿ ಕನ್ನಡದ ಬಗ್ಗೆ ಆಸಕ್ತಿ, ಅಭಿಮಾನ, ಹೆಮ್ಮೆಯನ್ನು ಮೂಡಿಸಿದರು. ಪರಿಷತ್ತು ಕನ್ನಡಿಗರ **ಸಾರ್ವಜನಿಕ ವಿದ್ಯಾಪೀಠ** ಎಂದು ಸಾರಿದರು.

ಪರಿಷತ್ತಿನ ವತಿಯಿಂದ 'ಕನ್ನಡ ಬಾವುಟ' ಎಂಬ ಕಾವ್ಯ ಸಂಕಲನವನ್ನು ಸಿದ್ದಪಡಿಸಿದರು. ಅದರಲ್ಲಿ ಏಳನೆಯ ಶತಮಾನದಿಂದ ೨೦ನೆಯ ಶತಮಾನದವರೆಗಿನ ಕನ್ನಡದ ಬೆಳೆಯನ್ನು ಶಾಸನಗಳು, ಪೂರ್ವಸಾಹಿತ್ಯ ನಾಡಪದಗಳು, ಆಧುನಿಕ ಕವಿತೆ ಎಂಬ ನಾಲ್ಕು ವಿಭಾಗಗಳಲ್ಲಿ ಮಂಡಿಸಲಾಗಿದೆ. ಕನ್ನಡಿಗರು ಬೆಳೆದುಬಂದ ಸಮುದಾಯ ಜೀವನಕ್ಕೆ ನಿಷ್ಠೆಯ ಸಂಕೇತವಾಗಿ, ಸರ್ವಾರ್ಪಣ ಸಿದ್ಧತೆಯ ಕುರುಹು ಈ ಬಾವುಟ ಎಂಬುದು ಅವರ ಚಿಂತನಕಲ್ಪವಾಗಿತ್ತು. ಅದಕ್ಕನುಗುಣವಾಗಿ ಕನ್ನಡ ನಾಡಿನ ಭೂಪಟದ ನಕ್ಷೆಯ ಸಹಿತದ ಲಾಂಛನವಾಗಿ ಕನ್ನಡ ಬಾವುಟವನ್ನು ರೂಪಿಸಿ ಕನ್ನಡಿಗರಿಗೊಪ್ಪಿಸಿದರು. ಅದರ ಕಲಾವಿದರು ಶ್ರೀ ಇನಾಮತಿ ಅವರು. ಬಿ.ಎಂ.ಶ್ರೀ. ಅವರು ಪರಿಷತ್ತಿನಲ್ಲಿ ಮಹಿಳೆಯರಿಗೆ ಸ್ಥಾನ ಕಲ್ಪಿಸಲು ೧೯೩೮ರಲ್ಲಿ ಮಹಿಳಾ ಶಾಖೆಯನ್ನು ಆರಂಭಿಸಿದರು. ಇದು ಅವರ ಸ್ತ್ರೀ–ಪುರುಷರ ಬಗ್ಗೆ ಇದ್ದ ಸಮಾನ ದೃಷ್ಟಿಯ ದ್ಯೋತಕವಾಗಿತ್ತು.

ಪರಿಷತ್ತು ತನ್ನ ಮುಖವಾಣಿಯಾಗಿ ಪರಿಷತ್ಪತ್ರಿಕೆಯನ್ನು ಹಾಗೂ 'ಸಂಗ್ರಹಪ್ರತಿ'ಯನ್ನು ಹೊರಡಿಸುತ್ತಿತ್ತಷ್ಟೆ. ಶ್ರೀಸಾಮಾನ್ಯರು ಮತ್ತು ಸಾರ್ವಜನಿಕರೊಡನೆ 'ಸಂಪರ್ಕವನ್ನು ವಿಸ್ತಾರಗೊಳಿಸುವ ಸಲುವಾಗಿ ಬಿ.ಎಂ.ಶ್ರೀ. ಅವರು ೧೯೩೮ನೇ ಅಕ್ಟೋಬರ್ ೪ರಂದು ವಿಜಯದಶಮಿಯಲ್ಲಿ ಪರಿಷತ್ತಿನ ಮುಖಪತ್ರವಾಗಿ **ಕನ್ನಡ ನುಡಿ** ವಾರಪತ್ರಿಕೆಯನ್ನು ಆರಂಭಿಸಿದರು. 'ಜನಸಾಮಾನ್ಯರಲ್ಲಿ ಸ್ತ್ರೀಯರಲ್ಲಿ ಕನ್ನಡಿಗರಾಗಿ ಕನ್ನಡದ ಅಕ್ಕರೆ ಇರಬೇಕಾದ ಸಾರ್ವಜನಿಕರಲ್ಲಿ ಕನ್ನಡ ತಿಳುವಳಿಕೆಯನ್ನು ಸಾಹಿತ್ಯ–ಸಂಸ್ಕೃತಿಗಳ ಸಾಮಾನ್ಯ ಜ್ಞಾನವನ್ನು ಕನ್ನಡ ನಾಡಿನ ಇಂದಿನ ಪರಿಸ್ಥಿತಿಯನ್ನು ಮುಂದಿನ ನಮ್ಮ ಆಶೋತ್ತರಗಳನ್ನು ಹರಡುವುದೂ ಸಾರ್ವಜನಿಕರ ವಿದ್ಯಾಪೀಠವಾಗುವುದು ಪರಿಷತ್ತಿನ ಕರ್ತವ್ಯ' ಎಂದು 'ಕನ್ನಡ ನುಡಿ'ಯನ್ನು ಹೊರಡಿಸಲಾಗಿದೆ ಎಂಬ ಘೋಷ ಅವರದಾಗಿತ್ತು. ಈ ಪತ್ರಿಕೆಯ ಮೊದಲ ಸಂಪಾದಕರಾಗಿ **ಶ್ರೀ ಅ.ನ.ಕೃಷ್ಣರಾಯರು** ನಿಯೋಜಿತರಾದರು. ಆದರೆ 'ಕನ್ನಡ ನುಡಿ'ಯನ್ನು ವಾರಪತ್ರಿಕೆಯಾಗಿ ನಡೆಸಿಕೊಂಡು ಹೋಗಲು ನಿರೀಕ್ಷಿತ ಆರ್ಥಿಕ ಬೆಂಬಲ ಒದಗಲಿಲ್ಲ. ಹೀಗಾಗಿ ಪರಿಷತ್ತು ಅದನ್ನು ಮಾಸಪತ್ರಿಕೆಯಾಗಿ ನಡೆಸಿಕೊಂಡು ಬಂದಿತು. ೧೯೪೯ರ ನವೆಂಬರ್‌ನಿಂದ ಪಕ್ಷಪತ್ರಿಕೆಯನ್ನಾಗಿ ನಡೆಸಿಕೊಂಡು ಬಂದರೂ ಸದಸ್ಯ ಬಲ ಹೆಚ್ಚಾಗಲಾಗಿ ೧೯೯೧ರಿಂದ ಮಾಸಿಕವಾಗಿ ಇಂದಿಗೂ ಮುಂದುವರಿದಿದೆ.

ಅ.ನ.ಕೃ. ಅವರು ಮೊದಲ ೪೨ ಸಂಚಿಕೆಗಳಿಗೆ ಸಂಪಾದಕರಾಗಿ ದುಡಿದರು. ೧೯೩೮ರ ಬಳ್ಳಾರಿ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಡಾ. ಆರ್.ಆರ್. ದಿವಾಕರ್ ಅವರು ಮುಂದೆ ಹಿಂದಿ ಪ್ರಚಾರಕ್ಕೆ ಹೋದುದು ಅ.ನ.ಕೃ. ಅವರಿಗೆ ಹಿಡಿಸಲಿಲ್ಲ. ಕನ್ನಡ ನಾಡಿನ ಏಕೀಕರಣಕ್ಕೆ ಕುತ್ತು ಬಂದಿರುವಾಗ ಶ್ರೀ ದಿವಾಕರರು ಹಿಂದೀ ಪ್ರಚಾರಕ್ಕೆ ಹೊರಟಿರುವುದು, ಸ್ವಂತ ಮನೆಯೇ ಹೊತ್ತಿ ಉರಿಯುವಲ್ಲಿ ಪಕ್ಕದ ಮನೆಯಲ್ಲಿ ತೋಟ ಮಾಡಲು ಹೋದಂತೆ ಎಂಬ ಅಭಿಪ್ರಾಯವನ್ನು ತಮ್ಮ 'ಕನ್ನಡನುಡಿ' ಸಂಪಾದಕೀಯದಲ್ಲಿ ಬರೆದರು. ಈ ಬಗ್ಗೆ ದಿವಾಕರರು ಆಕ್ಷೇಪವೆತ್ತಲಾಗಿ, ಪರಿಷತ್ತಿನ ಕಾರ್ಯಸಮಿತಿ ಅ.ನ.ಕೃ. ಅವರು ತಮ್ಮ ಕ್ಷಮಾಪಣೆ ಬರೆದು ಪ್ರಕಟಿಸಲು ಒತ್ತಾಯಿಸಿತು. ಅ.ನ.ಕೃ. ಪರಿಷತ್ತಿನ ಕಾರ್ಯಸಮಿತಿಯ ೨೧.೦೭.೧೯೩೯ರ ತೀರ್ಮಾನವನ್ನು ಒಪ್ಪದೆ ಸಂಪಾದಕತ್ವಕ್ಕೆ ರಾಜೀನಾಮೆ ನೀಡಿ ಹೊರಬಂದರು.

ಬಿ.ಎಂ.ಶ್ರೀ. ಅವರು ೧೯೩೮ರಲ್ಲಿ ಮೈಸೂರು ಉತ್ತರ ಕರ್ನಾಟಕ, ಮಂಗಳೂರು ಮತ್ತು ಕೊಡಗು, ಹೈದರಾಬಾದ್ ಎಂಬ ನಾಲ್ಕು ಪ್ರಾಂತ ಸಮಿತಿಗಳನ್ನು ರಚಿಸಿದರು. ಆ ಸಮಿತಿಗಳ ಹಣಕಾಸಿನ ವ್ಯವಸ್ಥೆಗಾಗಿ ಆಯಾ ಭಾಗದ ಸದಸ್ಯರಿಂದ ವಸೂಲಾದ ಚಂದಾಹಣದ ಪೈಕಿ ಮೂರರಲ್ಲೊಂದು ಪಾಲನ್ನು ಪ್ರಾಂತ ಸಮಿತಿಗಳಿಗೆ ಕೊಡಬೇಕೆಂದಾಯಿತು. ಈ ಸಮಿತಿಗಳ ಸಹಕಾರದಿಂದ ವಸಂತಸಾಹಿತ್ಯೋತ್ಸವ, ಜಿಲ್ಲಾಸಾಹಿತ್ಯ ಸಮ್ಮೇಳನಗಳು ನಡೆದುವು.

ಪರಿಷತ್ತಿಗೆ ಸ್ವಂತ ಅಚ್ಚುಕೂಟವನ್ನು 'ಪರಿಷತ್ಪತ್ರಿಕೆ', 'ಕನ್ನಡನುಡಿ', ಗ್ರಂಥಪ್ರಕಟನೆ ಹಾಗೂ ಇತರ ಮುದ್ರಣ ಕಾರ್ಯಕ್ಕಾಗಿ ಅಗತ್ಯವೆಂದು ೧೯೩೯ರಲ್ಲಿ ಆರಂಭಿಸಲಾಯಿತು. ಈ ಅಚ್ಚುಕೂಟವನ್ನು ಆರಂಭಿಸಲು ೬೫೦೦ ರೂ.ಗಳ ಅಂದಾಜು ವೆಚ್ಚವಾಗಿತ್ತು. ಆ ಮೊತ್ತದಲ್ಲಿ ೫ ಸಾವಿರ ರೂ.ಗಳನ್ನು ಬಿ.ಎಂ.ಶ್ರೀ. ಅವರು ದಾನವಾಗಿ ನೀಡಿದರು. ಮರುವರ್ಷ ಮತ್ತೆ ಒಂದು ಸಾವಿರ ರೂ.ಗಳನ್ನು ಕೊಟ್ಟರು. ಪರಿಷತ್ತಿನ ಆವರಣದಲ್ಲಿಯೇ ಇರಬೇಕೆಂದು ೧೨೦೦ ರೂ.ಗಳ ವೆಚ್ಚದಲ್ಲಿ ಮುದ್ರಣಾಲಯದ ಕಟ್ಟಡವನ್ನು ನಿರ್ಮಿಸಲಾಯಿತು. ಮುಂದೆ ಅದನ್ನು ವಿಸ್ತರಿಸಲಾಯಿತು. ಬಿ.ಎಂ.ಶ್ರೀ. ಅವರ ಕೊಡುಗೆಯ ಸ್ಮರಣೆಗಾಗಿ **ಬಿ.ಎಂ.ಶ್ರೀ ಅಚ್ಚುಕೂಟ** ಎಂದು ಅದು ಹೆಸರುಗೊಂಡಿತು. ಬಿ.ಎಂ.ಶ್ರೀ ಅವರು ಅದನ್ನು 'ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟ' ಎಂದು ಮೊದಲಿಗೆ ಕರೆದಿದ್ದರು. ಸರ್ಕಾರಿ ಮುದ್ರಣಾಲಯದ ಮುಖ್ಯಾಧಿಕಾರಿಗಳಾಗಿದ್ದ ಬಿ.ಪುಟ್ಟಯ್ಯನವರು ಆರಂಭ ಕಾಲಕ್ಕೆ ಅಚ್ಚುಕೂಟದ ಗೌರವ ಮೇಲ್ವಿಚಾರಕರಾಗಿ, ಸುವ್ಯವಸ್ಥಿತ ರೀತಿಯಲ್ಲಿ ಅದನ್ನು ಕಟ್ಟಿ ಬೆಳೆಸಿದರು.

೧೯೪೦ರಲ್ಲಿ ಕನ್ನಡ ಸಾಹಿತ್ಯ ವ್ಯಾಸಂಗ ಮಾಡಲು ಅಪೇಕ್ಷೆಯುಳ್ಳವರಿಗೆಂದು ಕನ್ನಡ ಸಾಹಿತ್ಯ ಪರೀಕ್ಷೆಗಳನ್ನು ಬಿ.ಎಂ.ಶ್ರೀ ಅವರು ಆರಂಭಿಸಿದರು. ೧೯೪೦ರ ಜೂನ್ ತಿಂಗಳಿಂದ ಕನ್ನಡ ಅಣುಗಕಾವ್ಯ, ಜಾಣ ಪರೀಕ್ಷೆಗಳನ್ನು ಪ್ರಾರಂಭಿಸಲಾಯಿತು. ೧೯೬೬ರಿಂದ 'ಕನ್ನಡರತ್ನ' ಪರೀಕ್ಷೆಯೂ ಆರಂಭವಾಯಿತು. ೧೯೭೨ರಿಂದ 'ಕನ್ನಡ ಪ್ರವೇಶ' ಎಂಬ ಪ್ರಾಥಮಿಕ ಪರೀಕ್ಷೆಯೂ ಆರಂಭವಾಯಿತು.

ಕನ್ನಡ-ಕನ್ನಡ ನಿಘಂಟುವಿನ ರಚನೆಗೆ ೧೯೪೧ರ ಹೈದರಾಬಾದ್ ಸಾಹಿತ್ಯ ಸಮ್ಮೇಳನದಲ್ಲಿ ರಂ.ಶ್ರೀ. ಮುಗಳಿ ಅವರು ಸೂಚಿಸಿದಂತೆ, ನಿರ್ಣಯವಾಯಿತು. ಐದು ಸಾವಿರ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಕೋಶ ಪ್ರಕಟನೆ ಕೆಲಸವನ್ನು ಕೈಗೆತ್ತಿಕೊಳ್ಳಬಹುದೆಂದು ಸಮಿತಿಯು ವರದಿ ಮಾಡಿತು. ಆ ಕಾರ್ಯಕ್ಕಾಗಿ ಡಾ. ಎ.ಆರ್. ಕೃಷ್ಣಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ವಿದ್ವತ್ ಸಂಪಾದಕ ಮಂಡಲಿ ರಚಿತವಾಯಿತು. ಈ ಮಂಡಲಿಯ ಪ್ರಥಮ ಸಭೆ ೧೮.೧೨.೧೯೪೩. ಸೇರಿತು. ೨೨.೦೧.೧೯೪೪ರಿಂದ ಕೋಶದ ಕಾರ್ಯಾಲಯ ಆರಂಭವಾಯಿತು.

ಪರಿಷತ್ತು ಆರಂಭವಾದಂದಿನಿಂದಲೇ ಈ ನಿಘಂಟು ರಚನಾ ಗುರಿ ಹೊಂದಿತ್ತು. ೧೯೧೯ರಿಂದ ಈ ಪ್ರಯತ್ನ ಮಾಡತೊಡಗಿತ್ತು. 'ಷಟ್ಪದಿ ಕಾವ್ಯಗಳ ಕನ್ನಡ-ಕನ್ನಡ ನಿಘಂಟು' ಹಲವು ಪ್ರಾಚೀನ ನಿಘಂಟುಗಳಿಂದ ಸಂಗ್ರಹಿಸಿದ 'ನಿಘಂಟುಗಳ ನಿಘಂಟು', 'ಪಂಪಭಾರತ ನಿಘಂಟು'ಗಳ ಹಸ್ತಪ್ರತಿಗಳನ್ನು ೧೯೩೦ರ ವೇಳೆಗೆ ಬೆಳ್ಳಾವೆ ವೆಂಕಟನಾರಣಪ್ಪನವರು ವಿದ್ವಾಂಸರ ಸಹಾಯದಿಂದ ಸಿದ್ಧಗೊಳಿಸಿದ್ದರು. ಒಂದು ಪ್ರಮಾಣಭೂತವಾದ ನಿಘಂಟು ಕನ್ನಡಕ್ಕೆ ಕನ್ನಡದಲ್ಲಿ ಅರ್ಥವಿವರಿಸಲು ಅಗತ್ಯವಿತ್ತು. ಅದು ಡಾ. ಎ.ಆರ್. ಕೃ. ಅವರ ಸಂಪಾದಕತ್ವದಲ್ಲಿ ಆರಂಭವಾಯಿತು.

೧೯೧೫ರಲ್ಲಿ ಪರಿಷತ್ತು ಆರಂಭಗೊಂಡಂದಿನಿಂದ **ಕರ್ಣಾಟಕ ಸಾಹಿತ್ಯ ಪರಿಷತ್ತು** ಎಂಬ ಹೆಸರಿನಿಂದಲೇ ಅಧಿಕೃತವಾಗಿ ಚಾಲ್ತಿಗೊಂಡಿತ್ತು. ೧೯೩೮ರಲ್ಲಿ ಬಿ.ಎಂ.ಶ್ರೀ ಅವರು ಬರುವವರೆಗೂ ಹಾಗೆಯೇ ಹೆಸರಿತ್ತು. ಪರಿಷತ್ಪತ್ರಿಕೆಗೆ 'ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ' ಎಂದಿದ್ದುದನ್ನು ಏಪ್ರಿಲ್ ೧೯೩೮ರಂದು ಬಿ.ಎಂ.ಶ್ರೀ ಅವರ ಅನುಮತಿ ಪಡೆದು 'ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆ' ಎಂದು ಮುದ್ರಿಸಲಾಯಿತು. ಈ ಬಗ್ಗೆ ಆಕ್ಷೇಪ ಬಂದು 'ನ', 'ಣ'ಗಳ ಬಗ್ಗೆ ಸಮರ್ಥನೆ ನಿರಾಕರಣೆ ಆಯಿತು. ಕೊನೆಗೆ ೧೯೩೮ನೇ ಡಿಸೆಂಬರ್‌ನಲ್ಲಿ ಬಳ್ಳಾರಿಯಲ್ಲಿ ನಡೆದ ನಿಕಟ ಸದಸ್ಯರ ಸಭೆಯಲ್ಲಿ, ಇನ್ನು ಮುಂದೆ ಪರಿಷತ್ತನ್ನು **ಕನ್ನಡ ಸಾಹಿತ್ಯ ಪರಿಷತ್ತು** ಎಂದು ಕರೆಯಬೇಕೆಂದು ಬಹುಮತದಿಂದ ತೀರ್ಮಾನವಾಯಿತು. ತತ್ಪರಿಣಾಮವಾಗಿ ಪರಿಷತ್ಪತ್ರಿಕೆಯನ್ನು **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ** ಎಂದು ಮಾರ್ಪಾಟು ಮಾಡಲಾಯಿತು.

(೧೯೩೮–೪೩)ರ ಅವಧಿಯಲ್ಲಿ ಬಿ.ಎಂ.ಶ್ರೀ. ಉಪಾಧ್ಯಕ್ಷರಾಗಿದ್ದ ಅವಧಿಯಲ್ಲಿ ಅಂದರೆ ೧೯೪೦ನೇ ಜೂನ್ ೩೦ ಮತ್ತು ಜುಲೈ ೧ನೇ ತಾರೀಖಿನಲ್ಲಿ ಪರಿಷತ್ತಿನ ಬೆಳ್ಳಿಯ ಹಬ್ಬವು ಬೆಂಗಳೂರು ಪುರಭವನದಲ್ಲಿ ಬಹಳ ವೈಭವದಿಂದ ನಡೆಯಿತು. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಸಮಾರಂಭವನ್ನು ಉದ್ಘಾಟಿಸಿದರು.

ಬಿ.ಎಂ.ಶ್ರೀ. ಅವರ ನಂತರ ೧೯೪೩ರಿಂದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪರಿಷತ್ತಿನ ಉಪಾಧ್ಯಕ್ಷರಾದರು. ಇವರು ಸ್ವಂತ ವೆಚ್ಚದಲ್ಲಿ ಪ್ರವಾಸ ಹೋಗಿ ಪರಿಷತ್ತಿನ ಪ್ರಚಾರ ಮಾಡಲಾಗಿ ಸದಸ್ಯರ ಸಂಖ್ಯೆ ಎರಡೂವರೆ ಸಾವಿರಕ್ಕೇರಿತು. ದತ್ತಿ ನಿಧಿಗಳು ದೊರೆತು ಸಾಹಿತ್ಯ, ಶಾಸ್ತ್ರಗಳನ್ನು ಕುರಿತ ಉಪನ್ಯಾಸ, ಸ್ಪರ್ಧೆಗಳ ಏರ್ಪಾಟು ಆಯಿತು. ೪ರಿಂದ ೬ ತಿಂಗಳ ಅವಧಿಯ ಗಮಕದ ಪ್ರೌಢ ತರಗತಿಗಳನ್ನು ಆರಂಭಿಸಲಾಯಿತು. ಗ್ರಾಮೀಣರನ್ನು ಪರಿಷತ್ತಿನಲ್ಲಿ ತೊಡಗಿಸುವ ಯೋಜನೆಗಳನ್ನು ರೂಪಿಸಲಾಯಿತು. 'ಕನ್ನಡ ಸರಸ್ವತಿ ಹಳ್ಳಿಗೆ ಬಂದಳು' ಎಂಬ ಮಾತು ಜನವಾಡಿಕೆಯಾಗಿಬಿಟ್ಟಿತು.

ಪರಿಷತ್ತಿನ ಅಂಗರಚನೆಯಲ್ಲಿ ಅಧ್ಯಕ್ಷರು ಬೆಂಗಳೂರಿನ ಹೊರಗೆ ಇದ್ದರೂ, ಉಪಾಧ್ಯಕ್ಷರು ಕಾರ್ಯದರ್ಶಿ, ಕೋಶಾಧ್ಯಕ್ಷರು ಬೆಂಗಳೂರು ವಾಸಿಗಳಾಗಿರಬೇಕೆಂದು ನಿಯಮವಾಗಿತ್ತು. ೧೯೪೭ರವರೆಗೆ ಈ ವ್ಯವಸ್ಥೆ ಮುಂದುವರಿಯಿತು. ೧೯೪೭ರ ಡಿಸೆಂಬರ್ ೨೯ರಂದು ಕಾಸರಗೋಡುವಿನಲ್ಲಿ ನಡೆದ ಸಕಲ ಸದಸ್ಯರ ಸಭೆಯಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೇ ಪರಿಷತ್ತಿಗೆ ಪ್ರಸಕ್ತ ವರ್ಷದಲ್ಲಿ ಅಧ್ಯಕ್ಷರಾಗಿ ಆಡಳಿತ ನಿರ್ವಹಿಸಬೇಕು. ಉಪಾಧ್ಯಕ್ಷ ಸ್ಥಾನದ ಅಗತ್ಯವಿಲ್ಲ. ಅಧ್ಯಕ್ಷರು ಕೆಲಸ ಮಾಡಲು ಅನಾನುಕೂಲವೆಂದು ತಿಳಿಸಿದಾಗ, ಕಾರ್ಯಸಮಿತಿ ಕಾರ್ಯಾಧ್ಯಕ್ಷರನ್ನು ನಿಯಮಿಸಿಕೊಳ್ಳಬೇಕು. ಈ ನಿರ್ಣಯವು ಈ ವರ್ಷದಿಂದಲೇ ಜಾರಿ ಎಂದಾಯಿತು. ಅಂತಾಗಿ ಕಾಸರಗೋಡು ಸಮ್ಮೇಳನಾಧ್ಯಕ್ಷರಾಗಿದ್ದ ತಿ.ತಾ.ಶರ್ಮರು ಪರಿಷತ್ತಿನ ಅಧ್ಯಕ್ಷರಾದರು. ಅವರು ಪರಿಷತ್ತಿನ ಆಡಳಿತವನ್ನು ನಿರ್ವಹಿಸಬೇಕಾಯಿತು. ಇದರಿಂದ ಪರಿಷತ್ತಿನ ಅಧ್ಯಕ್ಷರು ವರ್ಷೇ ವರ್ಷೇ ಬದಲಾಗಬೇಕಾಯಿತು. ಅಂತಾಗಿ ಅಲ್ಪಾವಧಿಯಲ್ಲಿ ಸ್ವತಂತ್ರ ಯೋಜನೆಯನ್ನು ರೂಪಿಸುವುದು ಕಷ್ಟಸಾಧ್ಯವಾಯಿತು. ಅಂತಾಗಿ ಹಿಂದಿನ ನಿರ್ಣಯವನ್ನು ಮರುಪರಿಶೀಲಿಸಲು ತಿ.ತಿ. ಶರ್ಮರ ಅಧ್ಯಕ್ಷತೆಯಲ್ಲಿ ಉಪಸಮಿತಿ ರಚಿತವಾಯಿತು. ೧೯೪೯ರಲ್ಲಿ ಕಲ್ಬುರ್ಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ರೆವರೆಂಡ್ ಉತ್ತಂಗಿ ಚೆನ್ನಪ್ಪನವರು, ಧಾರವಾಡದಲ್ಲಿದ್ದು, ಅಲ್ಲಿಂದ ಬೆಂಗಳೂರಿಗೆ ಬಂದಿರುವುದು ಸಾಧ್ಯವಾಗಲಿಲ್ಲ. ಅಂತಾಗಿ ಕಾರ್ಯದರ್ಶಿಗಳಾಗಿದ್ದ ಸಿದ್ದನಹಳ್ಳಿ ಕೃಷ್ಣಶರ್ಮ ಪರಿಷತ್ತಿನ ಕಾರ್ಯಭಾರವನ್ನು ನಿರ್ವಹಿಸಬೇಕಾಯಿತು. ಆ ನಂತರ ಪರಿಷತ್ತಿನ ಆರ್ಥಿಕ ಅಗತ್ಯ ಹೆಚ್ಚಾಗಿ ನಿಭಾಯಿಸಲು ಕಷ್ಟವಾಗಿತ್ತು. ಮೈಸೂರು ಸರ್ಕಾರವು **ಕನ್ನಡ–ಕನ್ನಡ ಕೋಶ**ದ ಸಿದ್ಧತೆಗೆ ವಾರ್ಷಿಕ ಸಹಾಯಧನವನ್ನು ಒಂದು ಸಾವಿರದಿಂದ ೧೯೪೯ರಲ್ಲಿ ಎರಡು ಸಾವಿರಕ್ಕೇರಿಸಿದ್ದೊಂದೇ ಸಮಾಧಾನವಾಗಿತ್ತು.

೧೯೫೦ರಲ್ಲಿ ಸೊಲ್ಲಾಪುರ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಎಂ.ಆರ್.ಶ್ರೀ ಅವರ ಕಾಲಕ್ಕೆ ಸಕಲ ಸದಸ್ಯರ ವಿಶೇಷ ಸಭೆಯು, ಆ ಅಧಿವೇಶನದಲ್ಲಿಯೆ ನಡೆಯಿತು. ಅಲ್ಲಿ ಸಕಲಸದಸ್ಯರ ಸಭೆಯಲ್ಲಿ ನಿರ್ಣಯವಾದಂತೆ ಅಧ್ಯಕ್ಷರು ಆಯ್ಕೆಯಾಗಿ ಅವರು ಮೂರು ವರ್ಷಗಳ ಕಾಲ ಅಧಿಕಾರ ನಿರ್ವಹಿಸಬೇಕೆಂದಾಯಿತು. ಎಂ.ಆರ್.ಶ್ರೀ. ಅವರ ಅವಧಿಯಲ್ಲಿ ಪುಸ್ತಕ ಪ್ರಕಟನೆ, ವಾಚನಾಲಯ, ಸರಸ್ವತೀಭಂಡಾರವು ಅಭಿವೃದ್ಧಿಗೊಂಡವು. ಕನ್ನಡನುಡಿ ಮಾಸಪತ್ರಿಕೆಯಾಗಿ ಮಾರ್ಪಟ್ಟಿತು. ಸರ್ಕಾರದ ಸಂಸ್ಕೃತಿ ಯೋಜನೆ ಪರಿಷತ್ತಿನ ಕಾರ್ಯಕ್ಕೆ ಸಹಕಾರಿ ಆಯಿತು. ಕರ್ನಾಟಕ ಸಂಘಗಳನ್ನು ಗ್ರಾಮ, ತಾಲೂಕು, ಜಿಲ್ಲೆಗಳಲ್ಲಿ ಸ್ಥಾಪಿತವಾಗಬೇಕು ಎಂದು ಹೇಳಿ ಅವುಗಳ ಕಾರ್ಯಗಳ ರೂಪುರೇಷೆಗಳನ್ನು ಮುಂದಿಟ್ಟರು. ಅಧಿಕಾರ ಅವಧಿ ಮುನ್ನವೆ ನಿಧನರಾಗಲಾಗಿ ಮಾಸ್ತಿಯವರು ಸುಮಾರು

೮ ತಿಂಗಳ ಕಾಲ ೧೯೫೩-೫೪ರಲ್ಲಿ ಪರಿಷತ್ತಿನ ಅಧ್ಯಕ್ಷತೆಯನ್ನು ನಿರ್ವಹಿಸಿದರು. ನಂತರ ಎ.ಎನ್. ಮೂರ್ತಿರಾಯರು ವಾರ್ಷಿಕ ಸಭೆಯಲ್ಲಿ ಆಯ್ಕೆಗೊಂಡು ಅಧಿಕಾರ ಸೂತ್ರವಹಿಸಿದರು.

ಶ್ರೀ ಎ.ಎನ್.ಮೂರ್ತಿರಾಯರ ಕಾಲದಲ್ಲಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಸ್ಥಾಪಿಸಿದ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಚಟುವಟಿಕೆಗಳಲ್ಲಿ ಪರಿಷತ್ತು ಭಾಗಿಯಾಗುವಂತಾಯಿತು. ಸಾಂಸ್ಕೃತಿಕ ಗ್ರಂಥಗಳ ಪ್ರಕಟನ ಕಾರ್ಯವನ್ನು ಸರ್ಕಾರ ಪರಿಷತ್ತಿಗೆ ವಹಿಸಿತು. ಉದಾರ ಧನಸಹಾಯ ಮಾಡಿತು. ಅಂತಾಗಿ ಕನ್ನಡ ಬಾವುಟ, ಸೋಮೇಶ್ವರ ಶತಕ ಗ್ರಂಥಗಳ ಪುನರ್ಮುದ್ರಣವಾದವು. ಪ್ಲೇಟೊ ಆದರ್ಶರಾಜ್ಯ, ನಕ್ಷತ್ರದರ್ಶನ ಇತ್ಯಾದಿ ಹೊಸ ಪುಸ್ತಕಗಳು ಪ್ರಕಟವಾದವು. ಕರ್ನಾಟಕದ ಕವಿಚರಿತೆ, ಅತ್ಯುತ್ತಮ ಕನ್ನಡ ಕಥೆಗಳ ಸಂಕಲನವನ್ನು ಕೈಗೆತ್ತಿಕೊಳ್ಳಲಾಯಿತು. ಆಧುನಿಕ ಕನ್ನಡ ಗ್ರಂಥಸೂಚಿಯನ್ನು ಸಿದ್ದಪಡಿಸಲಾಯಿತು. ಪರಿಷತ್ತಿನ ರಂಗಮಂಟಪ, ಸಭಾಮಂದಿರವನ್ನು ಸುಸಜ್ಜಿತಗೊಳಿಸಲಾಯಿತು. ನಾಟಕಸ್ಪರ್ಧೆ, ನಾಟಕೋತ್ಸವಗಳೂ ನಡೆದವು. ಮೂರ್ತಿರಾಯರ ನಂತರ ಜೂನ್ ೧೯೫೬ರಲ್ಲಿ ಆ॥ವಿ॥ ಬಿ.ಶಿವಮೂರ್ತಿಶಾಸ್ತ್ರಿಗಳು ಪರಿಷತ್ತಿನ ಅಧ್ಯಕ್ಷರಾದರು.

ಆ॥ವಿ॥ ಬಿ.ಶಿವಮೂರ್ತಿಶಾಸ್ತ್ರಿಗಳ ಕಾಲದಲ್ಲಿ ವಿಸ್ತೃತ ಮೈಸೂರು ರಾಜ್ಯದ ರಚನೆಯಾಗಿ ಕನ್ನಡ ರಾಜ್ಯೋದಯವಾಯಿತು. ಇವರು ಪರಿಷತ್ತಿಗೆ ಅಖಿಲ ಕರ್ನಾಟಕ ವ್ಯಾಪ್ತಿಯನ್ನು ತಂದುಕೊಟ್ಟವರಲ್ಲಿ ಒಬ್ಬರಾದರು. ಇವರು ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದವರು.

ಪರಿಷತ್ತು ಏರ್ಪಡಿಸುತ್ತಿದ್ದ (೧೯೧೫ರಿಂದ) ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಒಟ್ಟಾರೆ ಅಭಿಪ್ರಾಯ ಕರ್ನಾಟಕ ಏಕೀಕರಣದ ಬೀಜಗಳನ್ನು ಬಿತ್ತುವಲ್ಲಿಯೇ ಇತ್ತು. ನಾಡು, ನುಡಿಗಳ ಸಂಘಟನೆ, ಐಕ್ಯತೆ ಕನ್ನಡಿಗರ ಹಸನು ಬದುಕು ಎಂದಾಗಿತ್ತು. ಪರಿಷತ್ತು ಕೇವಲ ಸಾಹಿತ್ಯಿಕ ಸಂಸ್ಥೆ ಎನಿಸದೆ ಕರ್ನಾಟಕದ ಹಂಚಿ ಹರಿದು ಹೋಗಿದ್ದ ಭಾಗಗಳನ್ನು ಒಂದುಗೂಡಿಸುವ ತುಡಿತವೂ ಅದಕ್ಕಿತ್ತು. ಕನ್ನಡಿಗರನ್ನು ಏಕೀಕರಣಕ್ಕೆ ಅದು ಸಜ್ಜುಗೊಳಿಸಿತು. ಮಾನ್ಯ ಎಸ್. ನಿಜಲಿಂಗಪ್ಪನವರು, ಕನ್ನಡನಾಡು ಒಂದಾಗಬೇಕು, ಕನ್ನಡ ಜನರೆಲ್ಲ ಒಂದಾಗಬೇಕು ಎಂದು ಅಡಿಗಲ್ಲು ಹಾಕಿ ಕರ್ನಾಟಕಕ್ಕೆ ಸ್ಥೂಲರೂಪ ಕೊಟ್ಟ ಕೀರ್ತಿ ಕನ್ನಡ ಸಾಹಿತ್ಯ ಪರಿಷತ್ತಿನದು, ಎಂದು ರಾಜ್ಯೋತ್ಸವ ಸಂದರ್ಭದಲ್ಲಿ ಹೇಳಿದ್ದು, ಪರಿಷತ್ತಿನ ಕನ್ನಡ ನಾಡು ನುಡಿಯ ಮಣಿಹಕ್ಕೆ ಸಲ್ಲಿಸಿದ ಕೃತಜ್ಞತೆಯ ಕುರುಹಾಗಿತ್ತು. ಎಲ್ಲ ಕನ್ನಡಿಗರ ಅಸ್ಮಿತೆ ಎದ್ದು ಕಾಣಲು ಪರಿಷತ್ತಿನ ಪ್ರಯತ್ನಗಳೂ ಕಾರಣವಾಗಿದ್ದುವು. ನಾಡಿನ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಜಾನಪದ, ಪರಂಪರೆಯನ್ನು ಕನ್ನಡಿಗರಿಗೆ ಅರಿವಿಗೆಳೆಸಿ ಒಂದುಗೂಡಿಸುವ ಪ್ರಯತ್ನವು ಏಕೀಕರಣಕ್ಕೆ ವಾಣಿಯಾಯಿತು. ಪರಿಷತ್ಪತ್ರಿಕೆ, ಕನ್ನಡನುಡಿಯ ಈ ದಿಸೆಯ ಲೇಖನಗಳು, ಕವನಗಳು, ನಾಡವರ ಏಕೀಕರಣ ಮಾನಸಕ್ಕೆ ಹದುಳವಾದುವು.

ಶಾಸ್ತ್ರಿಗಳು ಪರಿಷತ್ತು ನಡೆಸುತ್ತಿದ್ದ ಗಮಕ ತರಗತಿಗಳ ಜೊತೆಗೆ ದಾಸರಪದಗಳು, ಶಿವಶರಣರ ವಚನಗಳು, ದೇಶಭಕ್ತಿಗೀತೆಗಳು ಇವನ್ನು ಸಂಗೀತಶಾಸ್ತ್ರಕ್ಕೆ ಅಳವಡಿಸಿ ಹಾಡುವ ತರಗತಿಗಳನ್ನು ಆರಂಭಿಸಿದರು.

ಕನ್ನಡ ರಾಜ್ಯೋದಯ ಸಂದರ್ಭದ ಸಂತೋಷಾರ್ಥವಾಗಿ ೧೨.೧೨.೧೯೫೬ರಂದು ಪರಿಷತ್ತಿನಲ್ಲಿ ಹಿಂದಿನ ಸಮ್ಮೇಳನಗಳ ಅಧ್ಯಕ್ಷರುಗಳಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಿದರು. ಪರಿಷತ್ತಿನ ಮಹಾಪೋಷಕರೂ ಮೈಸೂರು ರಾಜ್ಯಪಾಲರೂ ಆಗಿದ್ದ ಶ್ರೀ ಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರು ಈ ಸಮಾರಂಭದ ಉದ್ಘಾಟನೆ ಮಾಡಿದರು. ಶಾಸ್ತ್ರಿಗಳು ಕನ್ನಡನಾಡಿನ ಉದ್ದಗಲಕ್ಕೆ ಸಂಚಾರಮಾಡಿ ಕೀರ್ತನೆ, ಭಾಷಣಗಳ ಮೂಲಕ ಕನ್ನಡನುಡಿ ಮತ್ತು ಗಡಿಯ ಬಗ್ಗೆ ಜಾಗೃತಿಯನ್ನುಂಟುಮಾಡಿದರು.

ಕನ್ನಡ-ಕನ್ನಡ ನಿಘಂಟುವಿನ ರಚನೆಯ ಅಭಿಲಾಷೆ ಇವರ ಕಾಲದಲ್ಲಿ ಸ್ಥಿರಗೊಂಡಿತು. ಅದರ ಕಛೇರಿಗೆ ಸ್ಥಳಾವಕಾಶವನ್ನು ಕಲ್ಪಿಸಲು ಅಚ್ಚುಕೂಟದ ಕಟ್ಟಡವನ್ನು ವಿಸ್ತರಿಸಿ, ಮಹಡಿಯನ್ನು ಕಟ್ಟಿಸಿದರು. ಆಧುನಿಕ ಯಂತ್ರ ಸಾಮಗ್ರಿಗಳನ್ನು ಪಡೆದು ನಿಘಂಟನ್ನು ಅಲ್ಲಿಯೇ ಮುದ್ರಿಸುವ ವ್ಯವಸ್ಥೆ ಮಾಡಿದರು. ೧೫ ಲಕ್ಷ ರೂ.ಗಳ ೫ ವರ್ಷದ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆ ಪಡೆದು ನಿಘಂಟು ಸಿದ್ಧತೆಗೆ ಭದ್ರವಾದ ಅಡಿಪಾಯ ಹಾಕಿದರು. ೧೯೭೪ ಏಪ್ರಿಲ್ ೨೬ರಂದು ಕನ್ನಡ-ಕನ್ನಡ ನಿಘಂಟುವಿನ **ಮೊದಲ ಸಂಚಿಕೆ** ಪ್ರಕಟವಾಯಿತು. ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಿಂದ ಆರಂಭಿಸಿ ಸಹಸ್ರಾರು ಶಾಸನಗಳಿಂದ ಅಪೂರ್ವ ಶಬ್ದಗಳನ್ನು ಭಾಷಾಶಾಸ್ತ್ರ-ತತ್ತ್ವಗಳಿಗನುಗುಣವಾಗಿ ವೈಜ್ಞಾನಿಕವಾಗಿ ಸಂಗ್ರಹಿಸಿ ಸಂಪಾದಿಸುವ ಗುರಿಯಲ್ಲಿ ಪ್ರಕಟವಾದ ಸಂಚಿಕೆ ಅದಾಗಿತ್ತು. ಅದನ್ನು ಸಂಪಾದಿಸಿದ್ದವರು ಡಿ.ಎಲ್. ನರಸಿಂಹಾಚಾರ್, ಎಲ್.ಗುಂಡಪ್ಪ ಮತ್ತು ಎನ್. ಬಸವಾರಾಧ್ಯರು. ಮುಂದೆ ೧೨ ಸಂಚಿಕೆಯವರೆಗೆ ಸಿದ್ಧವಾಗಿ ನಿಘಂಟುವಿನ ಮೊದಲ ಸಂಪುಟವೆನಿಸಿತು (ಅಕಾರದಿಂದ ಓಕಾರದವರೆಗಿನದು ಸುಮಾರು ೧೩೨೦ ಪುಟಗಳಷ್ಟರದು). ಶಿವಮೂರ್ತಿಶಾಸ್ತ್ರಿಗಳ ನಂತರ ಬಂದವರು. ಪ್ರೊ. ಜಿ. ವೆಂಕಟಸುಬ್ಬಯ್ಯನವರು.

ಪ್ರೊ. ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷಗಿರಿಯು ೧೯೭೪ರ ಅಕ್ಟೋಬರ್‌ನಲ್ಲಿ ಆರಂಭಗೊಂಡಿತು. ಅವರು ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಪ್ರಜ್ಞೆಯನ್ನು ಮೂಡಿಸಿದವರು. ಪರಿಷತ್ತಿನ ಕಾರ್ಯಕ್ಕೆ ತರುಣ ಅಧ್ಯಾಪಕ ವರ್ಗವನ್ನು, ವಿದ್ಯಾರ್ಥಿಗಳನ್ನು ಅಣಿಗೊಳಿಸಿದರು. ಪರಿಷತ್ತಿಗೆ ಸರ್ಕಾರದ ವಾರ್ಷಿಕ ಸಹಾಯಧನವನ್ನು ೨೫ ಸಾವಿರಗಳಿಗೆ ಹೆಚ್ಚಿಸಿಕೊಂಡದ್ದು ಅವರ ವಿಶೇಷ. ಕಾಯಕಾರಿ ಸಮಿತಿಗೆ ಜಿಲ್ಲಾವಾರು ಪ್ರಾತಿನಿಧ್ಯ ದೊರೆಯುವ ಏರ್ಪಾಡು ಮಾಡಿದರು. ಸರ್ಕಾರದ ವಿದ್ಯಾಇಲಾಖೆ ವಿಶ್ವವಿದ್ಯಾಲಯ, ಪತ್ರಿಕಾಕ್ಷೇತ್ರ, ಮಹಿಳಾ ವರ್ಗದಿಂದ ಒಬ್ಬೊಬ್ಬ ಪ್ರತಿನಿಧಿಗೆ ಅಂಗರಚನೆಯಲ್ಲಿ ಅವಕಾಶ ನೀಡುವಂತೆ ಮಾಡಿದ್ದರಿಂದ ಪರಿಷತ್ತಿನ ವ್ಯಾಪ್ತಿ ವಿಸ್ತರಿಸಿತು. ಅವರು ಸಂಪಾದಿಸಿದ 'ಕರ್ಣರಸಾಯನಂ' ಎಂಬ ಕೃತಿಯು ಶಾಲಾ-ಕಾಲೇಜಿಗೆ ಪಠ್ಯಪುಸ್ತಕವಾಯಿತು. ಅದರಿಂದ ಬಂದ ಹಣವನ್ನು ಪರಿಷತ್ತಿಗೆ ಸಲ್ಲುವಂತೆ ಮಾಡಿದರು.

೧೯೭೯ನೇ ಮೇ ೧೨ರಂದು **ಶ್ರೀ ಜಿ. ನಾರಾಯಣ** ಅವರು ಅಧ್ಯಕ್ಷರಾಗಿ ಆಯ್ಕೆಯಾದರು. ಅವರು ಹಾಸ್ಯಕ್ಕೆ ಮೀಸಲಿದ್ದ 'ವಿನೋದ' ಮಾಸಪತ್ರಿಕೆಯ ಸಂಪಾದಕರಾಗಿ ಮುದ್ರಣಾಲಯದ ಒಡೆಯರೂ, ತರುಣ ಸಾಹಿತಿಗಳಲ್ಲಿ ಪರಿಚಿತರಾಗಿದ್ದರು. ಬೆಂಗಳೂರು ನಗರ ಪಾಲಿಕೆಯ ಮೇಯರ್ ಆಗಿ ಸೇವೆ ಸಲ್ಲಿಸಿದವರಾಗಿದ್ದರು. ೨೫.೧೦.೧೯೭೯ರ ಪರಿಷತ್ತಿನ ಕಾರ್ಯಸಮಿತಿಯಲ್ಲಿ ಹಾಗೂ ಮರುದಿನ ನಡೆದ ಸಕಲ ಸದಸ್ಯರ ಸಭೆಯಲ್ಲಿ ಪರಿಷತ್ತಿನ ಅಭಿವೃದ್ಧಿಗಾಗಿ ಮಂಡಿಸಿದ ತ್ರೈವಾರ್ಷಿಕ ಯೋಜನೆಗೆ ಮಂಜೂರಾತಿ ದೊರೆಯಿತು. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಪರಿಷತ್ತಿಗೆ ಜಿಲ್ಲಾ ಘಟಕಗಳ ರಚನೆ; ೧೯೮೦ರ ಡಿಸೆಂಬರ್‌ನಲ್ಲಿ ಯೋಜಿತ ಪರಿಷತ್ತಿನ ಸುವರ್ಣ ಮಹೋತ್ಸವ, ಸಾಹಿತ್ಯ ಸಮ್ಮೇಳನ ನಡೆಸಿ ಸ್ಮರಣಸಂಚಿಕೆ ಪ್ರಕಟನೆ; 'ಕನ್ನಡನುಡಿ'ಯನ್ನು ಪಕ್ಷ ಪತ್ರಿಕೆಯಾಗಿ ಪ್ರಕಟಿಸುವುದು; ಪುನರ್‌ಮುದ್ರಣವಾಗಬೇಕಾದ ಪ್ರಾಚೀನ ಗ್ರಂಥಗಳು, ಭಾಷಾ ಕೃತಿಗಳನ್ನು ಪ್ರಕಟಿಸಬೇಕು; ಮೂರು ವರ್ಷದ ಅವಧಿಯಲ್ಲಿ ನೂರು ಪುಸ್ತಕಗಳ ಪ್ರಕಟನೆ; ಹೆಚ್ಚು ದತ್ತಿಗಳನ್ನು ಪಡೆದು, ದತ್ತಿ ಉಪನ್ಯಾಸಗಳನ್ನು ಬೇರೆ ಜಿಲ್ಲೆಗಳಲ್ಲಿ ನಡೆಸಿ ಅವನ್ನು ಗ್ರಂಥರೂಪದಲ್ಲಿ ತರುವುದು; ವಾರ್ಷಿಕ ಜಿಲ್ಲಾ ಸಮ್ಮೇಳನ, ವಸಂತೋತ್ಸವ ಹಮ್ಮಿಕೊಳ್ಳುವುದು; ಲೇಖಕರ ಉತ್ತಮ ಕೃತಿಗಳ ಪ್ರಕಟನೆ ಹಾಗೂ ಅದಕ್ಕೇ ಬೇಕಾದ ೧೫ ಲಕ್ಷ ರೂ.ಗಳನ್ನು ಸರ್ಕಾರ ಮತ್ತು ಸಾರ್ವಜನಿಕರಿಂದ ಪಡೆಯುವ ಪ್ರಯತ್ನ ಮಾಡುವುದು ಎಂದು ರೂಪಿಸಿದ ಯೋಜನೆಯನ್ನು ಜಿ. ನಾರಾಯಣ ಅವರು ಕಾರ್ಯಗತಗೊಳಿಸಿದರು. ಇದಲ್ಲದೆ ಜಿಲ್ಲಾ ಸಮಿತಿಯಲ್ಲಿ ಪ್ರತಿ ತಾಲೂಕಿನ ಪ್ರತಿನಿಧಿ ಮಹಿಳಾಪ್ರತಿನಿಧಿ ಶಿಕ್ಷಕ ಪ್ರತಿನಿಧಿ ಇಬ್ಬರು ಸಾಹಿತಿಗಳು ಕನ್ನಡ ಸಂಘಸಂಸ್ಥೆಗಳ ಪ್ರತಿನಿಧಿ ಇರುವಂತೆ

ಅಂಗರಚನೆಯಲ್ಲಿ ತಿದ್ದುಪಡಿಯನ್ನು ಜಾರಿಗೊಳಿಸಿದರು. ಹೀಗಾಗಿ ೧೯೭೦ರಲ್ಲಿ ನಾಡಿನ ಎಲ್ಲ ಜಿಲ್ಲಾ ಸಮಿತಿಗಳು ರೂಪುಗೊಂಡು ಪರಿಷತ್ತಿನ ಚಟುವಟಿಕೆಗಳಿಗೆ ಇಂಬಾದುವು. ಸಾಹಿತ್ಯ ಕಮ್ಮಟ, ಸಾಕ್ಷರತಾ ಪ್ರಸಾರ ಕಾರ್ಯಗಳೂ ರೂಪುಗೊಂಡವು. ಕನ್ನಡೇತರರಿಗೆ ಕನ್ನಡ ಕಲಿಕೆಯ ಸೌಲಭ್ಯ ಒದಗಿಸಲಾಯಿತು. ಹೊರನಾಡ ಕನ್ನಡ ಸಂಘಗಳಿಗೆ ನೆರವನ್ನು ನೀಡಲಾಯಿತು. ನಾಡಿನ ಹಳ್ಳಿಹಳ್ಳಿಗಳಿಗೆ ಇವರ ಕಾಲದಲ್ಲಿ ಪರಿಷತ್ತು ಪರಿಚಯಗೊಂಡಿತು.

೧೯೭೦ರ ಡಿಸೆಂಬರ್‌ನಲ್ಲಿ ಪರಿಷತ್ತಿನ ಸುವರ್ಣ ಮಹೋತ್ಸವವು ನಡೆಯಿತು. ಫೋರ್ಟ್ ಹೈಸ್ಕೂಲ್ ಮೈದಾನದಲ್ಲಿ ನಡೆದ ಈ ಮಹೋತ್ಸವ ಸಂದರ್ಭದಲ್ಲಿ ಸುವರ್ಣ ಮಹೋತ್ಸವ ಕಟ್ಟಡದ ಶಂಕುಸ್ಥಾಪನೆ, ಸುವರ್ಣ ಮಹೋತ್ಸವ ಸಂಪುಟ 'ಚಿನ್ನದ ಬೆಳಸು' ಬಿಡುಗಡೆ, ಪರಿಷತ್ತಿನ ೧೪ ಹೊಸ ಪ್ರಕಟನೆಗಳ ಬಿಡುಗಡೆ, 'ಅಂತರ್‌ಭಾರತಿ' ಸಾಹಿತ್ಯ ವಿಚಾರ ಸಂಕಿರಣ, ಕನ್ನಡ ಸಾಹಿತಿಗಳು ಮತ್ತು ಕಲಾವಿದರಿಗೆ ಸನ್ಮಾನ ಇತ್ಯಾದಿಗಳು ನಡೆದುವು. ಇದೇ ಸಂದರ್ಭದಲ್ಲಿ ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಪ್ರೊ. ದೇ. ಜವರೇಗೌಡರ ಅಧ್ಯಕ್ಷತೆಯಲ್ಲಿ ೧೯೭೦ನೇ ಡಿಸೆಂಬರ್ ೨೭ರಿಂದ ೨೯ರವರೆಗೆ ನಡೆಯಿತು. ೧೯೭೦ರ ಸುವರ್ಣ ಮಹೋತ್ಸವದ ಸಂದರ್ಭದ ಇನ್ನೊಂದು ಪ್ರಮುಖ ಚಾರಿತ್ರಿಕ ಘಟನೆ ಎಂದರೆ ಕನ್ನಡ–ಕನ್ನಡ ನಿಘಂಟಿನ ಪ್ರಥಮ ಸಂಪುಟದ ಬಿಡುಗಡೆ. ಡಾ. ಡಿ.ಎಲ್.ನರಸಿಂಹಾಚಾರ್ ಅವರು ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರು, ಪ್ರಧಾನ ಸಂಪಾದಕರಾಗಿ, ಕ.ವೆಂ. ರಾಘವಾಚಾರ್, ಉಪಾಧ್ಯಕ್ಷರಾಗಿ ಎನ್. ಬಸವಾರಾಧ್ಯರ ಸಂಪಾದಕತ್ವದಲ್ಲಿ 'ಅ'ನಿಂದ 'ಓ' ಅಕ್ಷರವರೆಗಿನ ಪದಗಳ ಕೋಶ ಸಂಪುಟವಾಗಿತ್ತು. ಈ ಸಂಪುಟದಲ್ಲಿ ಕ್ರಿ.ಶ. ಸು. ೪೫೦ರ ಹಲ್ಮಿಡಿ ಶಾಸನದಿಂದ ಹಿಡಿದು ೧೯೬೫ರವರೆಗೆ ಪ್ರಕಟವಾದ ಪುಸ್ತಕಗಳಿಂದ ಶಬ್ದ ಸಂಗ್ರಹಣ ಕಾರ್ಯವಾಗಿದೆ. ಶಾಸನಗಳಲ್ಲಿ ದೊರೆಯುವ ಸಂಸ್ಕೃತ, ದೇಶ್ಯ, ಅನ್ಯದೇಶ, ತತ್ಸಮ ತದ್ಭವ ಶಬ್ದಗಳನ್ನು ಗಮನಿಸಲಾಗಿದೆ. ೧೨೫೦ರ ಒಳಗಿನ ಗ್ರಂಥಗಳಿಂದಲೂ ಹೀಗೆಯೆ ಗಮನಿಸಲಾಗಿದೆ. ಕ್ರಿ.ಶ.ಸು. ೧೮೦೦ರ ಒಳಗೆ ರಚಿತವಾದ ಗ್ರಂಥ, ಶಾಸನಗಳಲ್ಲಿನ ಅಪೂರ್ವ, ಅತಿಮುಖ್ಯ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಕೈಬರಹದ ಪ್ರತಿಗಳಲ್ಲಿಯ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಅಂಕಿತ ವೈಶಿಷ್ಟ್ಯದ ಮುಖ್ಯ ಉಲ್ಲೇಖಗಳನ್ನು ಪರಿಗಣಿಸಲಾಗಿದೆ. ಚಾರಿತ್ರಿಕ ವಿಧಾನಗಳ ಬಳಕೆ ಪ್ರಯೋಗಗಳ ಸೂಚನೆ, ನಿಷ್ಪತ್ತಿ ವಿಧಾನಗಳನ್ನು ಬಳಸಲಾಗಿದೆ. ಕನ್ನಡನಾಡು ಅಷ್ಟೇ ಅಲ್ಲ ಇಡೀ ಭಾರತದಲ್ಲಿ ಇದೊಂದು ವಿಶಿಷ್ಟ ನಿಘಂಟು ಸಂಪಾದನಾ ಕಾರ್ಯವಾಗಿದೆ.

ಸಾಹಿತ್ಯ ಪ್ರಸಾರ ಯೋಜನೆಯಾಗಿ ಪುಸ್ತಕ ವರ್ಷ ಕಾರ್ಯಕ್ರಮವನ್ನು ರೂಪಿಸಲಾಯಿತು. ಯುನೆಸ್ಕೊ ಘೋಷಿಸಿದ ವಿಶ್ವಪುಸ್ತಕ ವರ್ಷವು ೧೯೭೨ ಆಗಿತ್ತು. ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬವೂ ಆಗಿತ್ತು. ಈ ಎಲ್ಲ ಸಂದರ್ಭಗಳ ಕಾರಣ ಗ್ರಂಥ ಪ್ರಸಾರ ಚಳುವಳಿಯನ್ನೇ ರೂಪಿಸಿದಂತಾಯಿತು. ಪುಸ್ತಕ ಮಾರಾಟ ಮಾಡಿ ಕನ್ನಡ ಲೇಖಕರಿಗೆ ಪ್ರಕಾಶಕರಿಗೆ ವಿಶೇಷ ನೆರವು ಒದಗಿಸಲಾಯಿತು. ಬೆಂಗಳೂರಿನಲ್ಲಿ ೧೧.೦೨.೧೯೭೨ರಂದು ವಿವಿಧ ಬಡಾವಣೆಗಳಿಗೆ ಲೇಖಕರು, ಕವಿಗಳು ಪುಸ್ತಕಗಳನ್ನು ಹೊತ್ತೊಯ್ದು ಮನೆಮನೆಗೆ ಹೋಗಿ ಪ್ರಚಾರ ಮಾಡಿದರು. ಅದು ಅಕ್ಷರ ಪಾದಯಾತ್ರೆಯಾಗಿತ್ತು. ಅಕ್ಷರಶಃ ಸರಸ್ವತಿಯ ತೇರು ಮನೆಮನೆಗೆ ಸಾಗಿತ್ತು. ಅದರ ಪರಿಣಾಮ ಮೂರು ಲಕ್ಷಕ್ಕೂ ಮೀರಿದ ರೂಪಾಯಿಗಳಷ್ಟು ಪುಸ್ತಕಗಳು ಖರ್ಚಾದವು. ಹೀಗೆಯೇ 'ಅಂತರ್‌ಭಾರತಿ' ಪುಸ್ತಕ ಪ್ರದರ್ಶನವು ೦೫.೦೮.೧೯೭೩ರಿಂದ ೧೫.೦೮.೧೯೭೩ರವರೆಗೆ ವಿಧಾನಸೌಧದಲ್ಲಿ ನಡೆದು; ೧೫ ಸಾವಿರಕ್ಕೂ ಹೆಚ್ಚು ಗ್ರಂಥಗಳು ಪ್ರದರ್ಶಿತವಾದುವು. 'ಅಂತರ್‌ಭಾರತಿ' ಎಂಬ ಇಂಗ್ಲಿಷ್ ಸ್ಮರಣಸಂಚಿಕೆಯೂ ಪ್ರಕಟವಾಯಿತು. ಪರಿಷತ್ತಿನ ಸಾಹಿತ್ಯ ಪ್ರಸಾರ ಯೋಜನೆಯ ಈ ರಾಷ್ಟ್ರೀಯ ಪ್ರದರ್ಶನದ ಸಮಯದಲ್ಲಿ ಸಮಾರೋಪಗೊಂಡಿತು. ೧೯೭೨ರ ಫೆಬ್ರುವರಿಯಲ್ಲಿ ಬೆಂಗಳೂರಿನಲ್ಲಿ ಅಖಿಲ ಕರ್ನಾಟಕ ಗಮಕ ಸಮ್ಮೇಳನ ಹಾಗೂ ಅಖಿಲ ಕರ್ನಾಟಕ ಕೀರ್ತನಕಾರರ ಸಮ್ಮೇಳನವನ್ನು ೧೯೭೨ರ ಡಿಸೆಂಬರ್ ೩೦, ೩೧ರಂದು ಪರಿಷತ್ತು ನಡೆಸಿತು. ೧೯೭೩ರಲ್ಲಿ

ಪರಿಷತ್ತಿನ ಸುವರ್ಣಮಹೋತ್ಸವ ಕಟ್ಟಡವು ನಿರ್ಮಾಣಗೊಂಡಿತು. ಗಮಕ ತರಗತಿ ಕೋಣೆ, ಗ್ರಂಥಭಂಡಾರ, ವಾಚನಾಲಯ, ಸಂಶೋಧನಾ ವಿದ್ಯಾರ್ಥಿಗಳಿಗೆ ಸೌಕರ್ಯ, ವಸ್ತುಸಂಗ್ರಹಾಲಯ, ಕಾಗದಪತ್ರ ಸಂಗ್ರಹಣೆಯ ನೆಲಮಾಳಿಗೆ, ಕನ್ನಡ ಶೀಘ್ರಲಿಪಿ, ಬೆರಳಚ್ಚು ತರಗತಿಗಳಿಗೆ ಈ ಕಟ್ಟಡವು ಆಶ್ರಯಸ್ಥಾನವಾಯಿತು.

ಕನ್ನಡ-ಕನ್ನಡ ನಿಘಂಟಿನ ೨ನೆಯ ಸಂಪುಟವು ೧೯೭೬ರಲ್ಲಿ, ೩ನೆಯ ಸಂಪುಟವು ೧೯೭೭ರಲ್ಲಿ, ಎಂ. ಮರಿಯಪ್ಪ ಭಟ್ಟರ ಅಧ್ಯಕ್ಷತೆಯ ಸಂಪಾದಕ ಸಮಿತಿಯಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಉಪಾಧ್ಯಕ್ಷತೆ, ಪ್ರಧಾನ ಸಂಪಾದಕತ್ವದಲ್ಲಿ ಬಿಡುಗಡೆಗೊಂಡವು. ಅದು ಜಿ. ನಾರಾಯಣರ ಕಾಲದಲ್ಲಿಯೆ ಆಯಿತು. ಇದಲ್ಲದೆ ಜನಸಾಮಾನ್ಯರ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಂದು ಸಾವಿರ ಪುಟಗಳಲ್ಲಿ ಒಂದು ಲಕ್ಷ ಪದಗಳುಳ್ಳ ಸಂಕ್ಷಿಪ್ತ ಕನ್ನಡ ನಿಘಂಟನ್ನು ರತ್ನಕೋಶ ಮಾದರಿಯಲ್ಲಿ ೫೦ ಸಾವಿರ ಪ್ರತಿಗಳನ್ನು ಅಚ್ಚುಮಾಡಿ ೦೨.೧೦.೧೯೭೫ರಲ್ಲಿ ಬಿಡುಗಡೆ ಮಾಡಲಾಯಿತು. ಬಿಡುಗಡೆಯ ದಿನವೇ ಅಪಾರವಾಗಿ ಬಂದ ಮುಂಗಡ ಬೇಡಿಕೆಯನ್ನು ಗಮನಿಸಿ ೧ ಲಕ್ಷ ಪ್ರತಿಗಳ ಮುದ್ರಣಕ್ಕೆ ಸರ್ಕಾರವು ನೆರವಾಯಿತು. ವೆಚ್ಚದ ಅರ್ಧದಷ್ಟು ಹಣವನ್ನು ನೀಡಿತು. ಕೆಲವು ವಾರಗಳಲ್ಲಿಯೆ ಮೊದಲ ಮುದ್ರಣದ ಎಲ್ಲ ಪ್ರತಿಗಳು ಖರ್ಚಾಗಿಬಿಟ್ಟವು.

೧೯೭೪ರ ರಾಜ್ಯೋತ್ಸವ ಸಂದರ್ಭದಲ್ಲಿ ಸರ್ವಜ್ಞ ಕವಿಯ ಚತುಶ್ಶತಮಾನೋತ್ಸವದ ಆಚರಣೆಯನ್ನು ಪರಿಷತ್ತು ಯೋಜಿಸಿತು. ರಾಷ್ಟ್ರಪತಿಗಳು ಉತ್ಸವದ ಉದ್ಘಾಟನೆ ಮಾಡಿದರು. ಇದೇ ವಾರದಲ್ಲಿ ನಾಡಿನ ೨೦೦ಕ್ಕೂ ಹೆಚ್ಚಿನ ಹಳ್ಳಿ ಪಟ್ಟಣಗಳಲ್ಲಿ ಸರ್ವಜ್ಞೋತ್ಸವ ನಡೆಯಿತು. ಕವಿಯ ಭಾವಚಿತ್ರದ ಮೆರವಣಿಗೆ, ವಚನಸ್ಪರ್ಧೆ, ವಿಮರ್ಶೆ, ಕವಿ-ಕಾವ್ಯ ಕುರಿತ ಉಪನ್ಯಾಸ, ವಿಚಾರಗೋಷ್ಠಿಗಳು ವೈಶಿಷ್ಟ್ಯಪೂರ್ಣವಾಗಿ ನಡೆದುವು. ಕವಿಯ ಆಯ್ದ ವಚನಗಳ (೧೦೦೦ದಷ್ಟು) ಸಂಕಲನವನ್ನು ಪರಿಷತ್ತು ಪ್ರಕಟಿಸಿತು. ವಚನ ಬಾಯಿಪಾಠ ಸ್ಪರ್ಧೆಯನ್ನು ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಿ ಅಲ್ಲಿ ಆಯ್ಕೆಯಾದವರು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಗೆಲ್ಲಬೇಕಾಗಿತ್ತು. ಈ ಸ್ಪರ್ಧೆಯಲ್ಲಿ ಬೀದರ್ ಜಿಲ್ಲೆಗೆ ಪ್ರಥಮ ಬಹುಮಾನ ದೊರತದ್ದು ವಿಶೇಷ. ಹೀಗೆಯೇ ರಾಜ್ಯಮಟ್ಟದ ನಾಟಕ ಸ್ಪರ್ಧೆಯನ್ನು ಪರಿಷತ್ತು ವ್ಯವಸ್ಥೆ ಮಾಡಿತ್ತು. ೧೯೭೫ರಲ್ಲಿ ಯುನೆಸ್ಕೋದ ಅಂತಾರಾಷ್ಟ್ರೀಯ **ಮಹಿಳಾವರ್ಷ ಯೋಜನೆಯನ್ನು** ಪರಿಷತ್ತು ಅಂಗೀಕರಿಸಿ ಆಚರಿಸಿತು. ತಾಲೂಕುಮಟ್ಟದಿಂದ ರಾಜ್ಯಮಟ್ಟದವರೆಗೆ ವಿಚಾರಗೋಷ್ಠಿ, ಪ್ರದರ್ಶನ, ಗಮಕವಾಚನ, ಸಾಕ್ಷರತಾ ತರಗತಿಗಳನ್ನು ಮಹಿಳೆಯರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸುಮಾರು ೨೦೦ ಗೋಷ್ಠಿಗಳು ನಡೆದುವು. ಮಹಿಳಾ ಸಂಬಂಧೀ ೨೫ ಪುಸ್ತಕಗಳೂ ಪ್ರಕಟವಾದುವು. ಉದಯೋನ್ಮುಖ ಲೇಖಕಿಯರ ತರಬೇತಿ ಶಿಬಿರವೂ ನಡೆಯಿತು. ೧೪೪ ಲೇಖಕಿಯರು ಇದರಲ್ಲಿ ಪಾಲ್ಗೊಂಡಿದ್ದರು. ೧೯೭೬ರ ಫೆಬ್ರವರಿ ತಿಂಗಳಲ್ಲಿ ಅಂತಾರಾಷ್ಟ್ರೀಯ ಮಹಿಳಾವರ್ಷದ ರಾಜ್ಯಮಟ್ಟದ ಸಮ್ಮೇಳನವು ಬೆಂಗಳೂರಿನಲ್ಲಿ ನಡೆದು ರಾಜ್ಯಪಾಲ ಉಮಾಶಂಕರ್ ದೀಕ್ಷಿತ್ ಅವರು ಅದನ್ನು ಉದ್ಘಾಟಿಸಿದರು. ಮಹಿಳೆಯರು ಬರೆದ ೯ ಪುಸ್ತಕಗಳು, ಸ್ಮರಣಸಂಚಿಕೆ ಬಿಡುಗಡೆಗೊಂಡವು. ಸಮ್ಮೇಳನದ ಸ್ಮರಣೆಗಾಗಿ ೧೦ ಸಾವಿರ ರೂ.ಗಳ ದತ್ತಿನಿಧಿ ಸ್ಥಾಪಿಸಲಾಯಿತು. ಅದರ ಬಡ್ಡಿ ಹಣದಿಂದ ಪ್ರತಿವರ್ಷ ಮಹಿಳೆಯರಿಗಾಗಿ ಪ್ರತ್ಯೇಕ ಬಹುಮಾನವನ್ನು ಕೊಡಲಾಗುತ್ತಿದೆ.

ಜನಪದ ಕಲೆ ಸಾಹಿತ್ಯ, ಸಂರಕ್ಷಣೆ, ಸಂವರ್ಧನೆಯತ್ತವೂ ಪರಿಷತ್ತು ಗಮನ ಹರಿಸಿತ್ತು. ಗ್ರಾಮಜೀವನಕ್ಕೆ ಸಂಬಂಧಿಸಿದ ಹಬ್ಬಹರಿದಿನ, ಹಾಡು ಹಸೆ, ಕಥೆ, ಲಾವಣಿ ಸಂಪ್ರದಾಯ, ಆಟ, ಕುಣಿತ, ಸಾಹಿತ್ಯ ಸಂಗ್ರಹ, ಪರಿಶೋಧನೆ, ಪ್ರಕಟನೆ, ಜನಪದ ಕಲಾವಸ್ತುಗಳ ಸಂಗ್ರಹ ಹಾಗೂ ಕಲಾ ಪ್ರದರ್ಶನ; ಸಾಹಿತ್ಯ ಸಮ್ಮೇಳನಗಳಲ್ಲಿ ಜಾನಪದ ಸಾಹಿತ್ಯ, ಸಂಸ್ಕೃತಿ, ಕಲೆ ಸಂಬಂಧದ ಗೋಷ್ಠಿಗಳ ಏರ್ಪಾಟು; ಗ್ರಾಮೀಣರ ಬಳಕೆ ಶಬ್ದಗಳ ಸಂಗ್ರಹ ಹಾಗೂ ಜಾನಪದ ವಿಶ್ವಕೋಶ ತಯಾರಿ, ಇವನ್ನೆಲ್ಲ ಪರಿಷತ್ತು ಪಂಚವಾರ್ಷಿಕ ಯೋಜನೆಯಲ್ಲಿ ಹಮ್ಮಿಕೊಂಡಿತು.

ಜನಪದ ಸಾಹಿತ್ಯ ಪ್ರಕಟನೆಯ ತ್ರೈಮಾಸಿಕ ಯೋಜನೆಯಲ್ಲಿ 'ಸೋಬಾನೆ ಚಿಕ್ಕಮ್ಮನ ಪದಗಳು'; 'ಬಯಲು ಸೀಮೆಯ ಜಾನಪದ ಗೀತೆಗಳು' ಇತ್ಯಾದಿ ಕೃತಿಗಳನ್ನು ಪರಿಷತ್ತು ಪ್ರಕಟಿಸಿತು. ಜಾನಪದ ಸ್ನಾತಕೋತ್ತರ ಪದವೀಧರರನ್ನು ಹಳ್ಳಿಹಳ್ಳಿಗಳಿಗೆ ಕಳುಹಿಸಿ ಗ್ರಾಮಕಲೆಗಳ, ಕಲಾವಿದರ ಮಾಹಿತಿಯನ್ನು ಸಮಗ್ರವಾಗಿ ಸಂಗ್ರಹಿಸಲಾಯಿತು. ಈ ಮಾಹಿತಿಯನ್ನು **ಕರ್ನಾಟಕದ ಜನಪದ ಕಲೆಗಳು** ಎಂಬ ಬೃಹತ್ ಸಚಿತ್ರ ವರ್ಣಚಿತ್ರಗಳೂ ಸೇರಿದಂಥ ಕೃತಿಯನ್ನು ಸಂಪಾದಿಸಿ ೧೯೭೭ರಲ್ಲಿ ಪ್ರಕಟಿಸಲಾಗಿದೆ. ಹೆಚ್.ಎಲ್. ನಾಗೇಗೌಡರ ಅಧ್ಯಕ್ಷತೆಯ ಸಂಪಾದಕರ ಮಂಡಲಿಯಲ್ಲಿನ ಹತ್ತು ವಿದ್ವಾಂಸರಲ್ಲಿ ಗೊ.ರು. ಚನ್ನಬಸಪ್ಪನವರು ಈ ಕೃತಿಯ ಸಂಪಾದಕರಾಗಿ ಎಚ್.ಎಸ್. ಸಿದ್ದಗಂಗಪ್ಪನವರು ಸಹಾಯಕ ಸಂಪಾದಕರಾಗಿ ಈ ಕೃತಿಯನ್ನು ಹೊರತಂದಿದ್ದಾರೆ.

ಜಿಲ್ಲಾ ಜನಪದ ಕಲಾಮಹೋತ್ಸವವನ್ನು ಆನೇಕಲ್ಲಿನಲ್ಲಿ ಮೊದಲಾಗಿ ೦೯.೦೮.೧೯೭೫ ಹಾಗೂ ೧೦.೦೮.೧೯೭೫ರಂದು ನಡೆಸಲಾಯಿತು. ಉತ್ಸವದ ಉದ್ಘಾಟನೆಯನ್ನು ಹೆಚ್.ಎಲ್. ನಾಗೇಗೌಡರು ಮಾಡಿದರು, ಜಿ. ನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು. ಪೂಜಾಕುಣಿತ, ಪಟದ ಕುಣಿತ, ಕೋಲಾಟ, ಚೌಡಿಕೆ, ಭಾಗವಂತಿಕೆ ಮೇಳ ಡಿಕಾಂಬರಿವೇಷ, ನಂದಿಧ್ವಜ ಕುಣಿತ, ಗೊರವರ ಕುಣಿತ, ಲಂಬಾಣಿ ನೃತ್ಯ, ತೊಗಲು ಬೊಂಬೆಯಾಟ ಇತ್ಯಾದಿಗಳ ಪ್ರದರ್ಶನ ಅಲ್ಲಿತ್ತು. ೧೯೭೬ರ ನವೆಂಬರ್ ೧೫ರಿಂದ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ಎಲ್ಲ ಜಿಲ್ಲೆಗಳಿಂದ ಕರೆಸಿದ್ದ ೭೦೦ ಕಲಾವಿದರಿಂದ ಬೃಹತ್ ಜನಪದ ಕಲಾಮಹೋತ್ಸವವು ರಾಜ್ಯಮಟ್ಟದಲ್ಲಿ ನಡೆಯಿತು. ಜಾನಪದ ವಿಚಾರಗೋಷ್ಠಿ, ಗೀತಗೋಷ್ಠಿಗಳೂ ನಡೆದುವು. ಗೊ.ರು. ಚನ್ನಬಸಪ್ಪನವರು ಈ ಎಲ್ಲಾ ಚಟುವಟಿಕೆಗಳ ಸಂಚಾಲಕರಾಗಿದ್ದರು.

ಶ್ರೀ ಜಿ. ನಾರಾಯಣ ಅವರ ಅಧಿಕಾರಾವಧಿಯಲ್ಲಿ ನಾಲ್ಕು ಸಾಹಿತ್ಯ ಸಮ್ಮೇಳನಗಳು ನಡೆದುವು. ಮಂಡ್ಯದಲ್ಲಿ ನಡೆದ ೪೮ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶ್ರೀಮತಿ ಜಯದೇವಿ ತಾಯಿ ಲಿಗಾಡೆ ಅಧ್ಯಕ್ಷೆಯಾದದ್ದು ವಿಶೇಷ; ಮಹಿಳೆಗೆ ಪರಿಷತ್ತಿನ ಇತಿಹಾಸದಲ್ಲಿ ಮೊದಲಾಗಿ ಸಂದ ಗೌರವವದು. ೧೯೭೬ರ ಶಿವಮೊಗ್ಗದಲ್ಲಿ ನಡೆದ ೪೯ನೇ ಕನ್ನಡ ಸಾಹಿತ್ಯ ಸಮ್ಮೇಳನದಿಂದ **ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ** ಎಂಬ ಅಭಿದಾನ ಚಾಲ್ತಿಗೊಂಡಿತು.

ಪ್ರಾಚೀನ ತಾಳೆ ಓಲೆ ಗ್ರಂಥಗಳು, ಕೈಬರಹದ ವಸ್ತುಗಳು ಅತ್ಯಂತ ಹಳೆಯದೆನ್ನಲಾದ ಕ್ರಿ.ಶ. ೧೫೭೬ರಲ್ಲಿ ಪ್ರತಿ ಮಾಡಿದ ಕುಮಾರವ್ಯಾಸನ 'ಕರ್ನಾಟ ಭಾರತ ಕಥಾ ಮಂಜರಿ' ಹಸ್ತಪ್ರತಿಯು ಪರಿಷತ್ತಿನ ಸಂಗ್ರಹದಲ್ಲಿದೆ. ಎಸ್. ಶಿವಣ್ಣನವರು ಈ ತಾಳೆ ಓಲೆಗಳ ಪಟ್ಟಿಮಾಡಿ ಬರೆದುಕೊಟ್ಟಿದ್ದನ್ನು ಪರಿಷತ್ತು ಪ್ರಕಟಿಸಿದೆ. ಗಣ್ಯ ಸಾಹಿತಿ, ಕಲಾವಿದರ ಗಮಕಿಗಳ ಕೀರ್ತನಕಾರರ, ಪ್ರತಿಭಾನ್ವಿತರ ಧ್ವನಿ ಮುದ್ರಿಕೆಗಳ ಭಂಡಾರ ೧೯೭೫ರಿಂದ ಪ್ರಾರಂಭವಾಗಿ ಸುಮಾರು ೨೦೦ಕ್ಕೂ ಹೆಚ್ಚು ಧ್ವನಿಮುದ್ರಿಕೆಗಳನ್ನು ಸಂಗ್ರಹಿಸಲಾಗಿದೆ. ಸಾಕ್ಷ್ಯಚಿತ್ರಗಳನ್ನೂ ತಯಾರಿಸಿಡಲಾಗಿದೆ.

೧೪.೦೯.೧೯೭೪ರಲ್ಲಿ ಅಸ್ತಿತ್ವಕ್ಕೆ ಬಂದ ವಸ್ತುಸಂಗ್ರಹಾಲಯಕ್ಕೆ ಪೂರಕವಾಗಿ ಸಂಶೋಧನ ವೇದಿಕೆಯೂ ರೂಪುಗೊಂಡಿತು. ಪ್ರಾಚೀನ ಕೆಲವು ಶಿಲಾಶಾಸನಗಳ ನಕಲನ್ನು (ಎಸ್ಟಾಂಪೇಜ್) ಸಂಗ್ರಹಿಸಿಡಲಾಗಿದೆ. ಶಾಸನಗಳನ್ನು ಓದುವುದು ನಕಲು ತೆಗೆಯುವುದು ಶಾಸನದ ಅರ್ಥ ಶಾಸನಲಿಪಿಯ ಇತಿಹಾಸ, ಶಾಸನಶಿಲ್ಪ, ಶಾಸನ ಪಠ್ಯವನ್ನು ಅರ್ಥೈಸಿ, ವ್ಯಾಖ್ಯಾನಿಸುವುದು ಇತ್ಯಾದಿ ಕುರಿತಂತೆ **ಶಾಸನಶಾಸ್ತ್ರ** ತರಗತಿಯನ್ನು ಆರಂಭಿಸಲಾಯಿತು (೧೯೭೪-೭೫). ಆಗ ೩೪ ವಿದ್ಯಾರ್ಥಿಗಳಿದ್ದರು. 'ಶಾಸನ ಸಂಗ್ರಹ' ಎಂಬ ಎ.ಎಂ.ಅಣ್ಣಿಗೇರಿ, ಆರ್. ಶೇಷಶಾಸ್ತ್ರಿ ಸಂಪಾದಿತ ಶಾಸನ ಪಠ್ಯಪುಸ್ತಕವನ್ನು ೧೯೭೫ರಲ್ಲಿ ಪ್ರಕಟಿಸಿ ಬಳಸಲಾಯಿತು. ಶಾಸನ ಪ್ರವೇಶ ತರಗತಿಯು ನಂತರ, ಮುಂದಿನ ವರ್ಷಗಳಲ್ಲಿ ಪ್ರೌಢ ತರಗತಿಯೂ ಆರಂಭವಾಯಿತು. ಡಾ॥

ದೇವರಕೊಂಡಾರೆಡ್ಡಿಯವರು ಆಗ ಶಾಸನ ಕೇಂದ್ರದ ಸಂಚಾಲಕರಾಗಿದ್ದರು. ಜಿ.ನಾರಾಯಣ ಅವರು ಶಾಸನ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಕರೆದು (ಪತ್ರಬರೆದು ೦೭.೧೨.೧೯೭೭ರಂದು ಸಂಶೋಧನಾ ಸಲಹಾ ಸಮಿತಿ ಸಭೆಗೆ ಆಹ್ವಾನಿಸಿದ್ದರು.) ಸಲಹೆಗಳನ್ನು ಸ್ವೀಕರಿಸಿ ಸೌಲಭ್ಯ ಕುರಿತಾಗಿ ವಿಚಾರಿಸಿ ತಮ್ಮ ಕಾಳಜಿಯನ್ನು ತೋರಿಸುತ್ತಿದ್ದರು. ಇಂದಿಗೂ ಸತತವಾಗಿ ಶಾಸನ ತರಗತಿಗಳು ನಡೆದು ಬಂದಿವೆ. ಅಲ್ಲಿ ತರಬೇತಿ ಪಡೆದವರಲ್ಲಿ ಇಂದು ಆ ಕ್ಷೇತ್ರದಲ್ಲಿ ಹೆಸರು ಮಾಡಿದವರಿದ್ದಾರೆ.

ದತ್ತಿನಿಧಿಯು ಬಿ.ಎಂ.ಶ್ರೀ. ಅವರ ಕಾಲದಲ್ಲಿ ೫ ಸಾವಿರವಿದ್ದದ್ದು, ಮಾಸ್ತಿ, ಬಿ. ಶಿವಮೂರ್ತಿಶಾಸ್ತ್ರಿಗಳ ಕಾಲದಲ್ಲಿ ಹೆಚ್ಚುಗೊಂಡಿತು. ಜಿ. ನಾರಾಯಣರ ಕಾಲಕ್ಕೆ ಅದರ ಮೊತ್ತ ೭೭ ಸಾವಿರವನ್ನು ಮೀರಿತ್ತು. ಇಂದು ಅದು ಮೂರುವರೆ ಕೋಟಿಯನ್ನು ದಾಟಿದೆ.

ಪರಿಷತ್ತಿನ ವಜ್ರಮಹೋತ್ಸವವು ಐತಿಹಾಸಿಕವಾಗಿ ಅದು ಬೆಳೆದುದರ ಸಾಕ್ಷೀಕೃತ ಘಟನೆ; ಅದು ಪರಿಷತ್ತಿಗೆ ಕೀರ್ತಿಯ ಗರಿ, ಸಾಧಿಸಿದ ಯಶೋಗಾಥೆ, ೧೯೭೭ರ ಏಪ್ರಿಲ್ ೨೩ ರಿಂದ ೨೮ರ ವರೆಗೆ ಆರು ದಿನಗಳ ಕಾಲ ಅದು ವೈಶಿಷ್ಟ್ಯಪೂರ್ಣವಾಗಿ ನಡೆಯಿತು. ವಜ್ರಮಹೋತ್ಸವ ವರ್ಷದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿವಿಧ ಸ್ಪರ್ಧೆಗಳು, ಉಪನ್ಯಾಸಗಳು ನಡೆದುವು. ಗಮಕ, ದೇವರನಾಮ, ಪ್ರಬಂಧ ರಚನೆ, ವಚನಗಾಯನ, ಭಾವಗೀತೆ, ಜನಪದ ಗೀತೆ, ಕಂಠ ಪಾಠ, ಶೀಘ್ರಲಿಪಿ, ಏಕಾಂಕ ನಾಟಕ, ಮಕ್ಕಳ ಸಾಹಿತ್ಯ, ಜನಪದ ಸಾಹಿತ್ಯ, ಪ್ರವಾಸ ಕಥನ, ಸಾಹಿತ್ಯ ವಿಮರ್ಶಾಲೇಖನಗಳು, ವಿಜ್ಞಾನ ಲೇಖನಗಳು, ಚಲನಚಿತ್ರ ವಿಮರ್ಶೆ, ರಂಗಭೂಮಿ, ಭಾಷಾಂತರ ಕಲೆ ಕುರಿತೆಲ್ಲ ಸ್ಪರ್ಧೆಯ ವಿಷಯಗಳಾಗಿದ್ದುವು. ಬೆಂಗಳೂರು ನಗರದ ವಿವಿಧ ಬಡಾವಣೆಗಳಲ್ಲಿ, ಕನ್ನಡ ಸಂಘ ಸಂಸ್ಥೆಗಳ ನೆರವಿನಿಂದ ಈ ಸ್ಪರ್ಧೆಗಳು ನಡೆದುವು. ಕನ್ನಡ ಸಾಹಿತ್ಯ ಮತ್ತು ಕಲಾಕ್ಷೇತ್ರಗಳಲ್ಲಿ ಮಹತ್ತರ ಸೇವೆ ಸಲ್ಲಿಸಿದವರಿಗೆ ಸನ್ಮಾನಗಳಾದವು. ವಿಮರ್ಶಾಗೋಷ್ಠಿ, ಭಾರತೀಯ ಸೋದರ ಭಾಷೆಗಳಲ್ಲಿಯ ಪ್ರಗತಿ ಕುರಿತು ಅಂತರ ಭಾರತಿ ಸಾಹಿತ್ಯ ಗೋಷ್ಠಿ ನಡೆಯಿತು. ಅದರಲ್ಲಿ ಭಾರತದ ವಿವಿಧ ಭಾಷೆಯ ವಿದ್ವಾಂಸರು, ಜ್ಞಾನಪೀಠ ಪ್ರಶಸ್ತಿ ವಿಜೇತರು ಪಾಲ್ಗೊಂಡಿದ್ದರು ವಿವಿಧ ಭಾಷೆಗಳ ಸಾಹಿತ್ಯ ಅಕಾಡೆಮಿ ಅಧ್ಯಕ್ಷರ ಗೋಷ್ಠಿಯ ವ್ಯವಸ್ಥೆಯೂ ಇತ್ತು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪ್ರದಾನ ಸಮಾರಂಭವು ಮೊದಲ ಬಾರಿಗೆ ದೆಹಲಿಯಿಂದ ಹೊರಗಡೆ ನಡೆಯಲಾಗಿ, ಪರಿಷತ್ತು, ಈ ವಜ್ರಮಹೋತ್ಸವ ಸಂದರ್ಭದಲ್ಲಿ ವೇದಿಕೆಯನ್ನು ಒದಗಿಸಿಕೊಟ್ಟಿತು. ಕನ್ನಡ-ಕನ್ನಡ ನಿಘಂಟಿನ ಮೂರನೆಯ ಸಂಪುಟವೂ ಈ ಸಂದರ್ಭದಲ್ಲಿ ನಡೆಯಿತು. 'ಕೌಸ್ತುಭ' ಎಂಬ ಸ್ಮರಣ ಸಂಚಿಕೆಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪ್ರಕಟಿಸಲಾಯಿತು. ವಜ್ರಮಹೋತ್ಸವದ ಸವಿನೆನಪಿಗಾಗಿ ಸುಮಾರು ಆರು ಲಕ್ಷದ ವೆಚ್ಚದಲ್ಲಿ ಸೂಕ್ತ ಸೌಕರ್ಯಗಳನ್ನೊಳಗೊಂಡ ಹೊಸ ಕಟ್ಟಡಕ್ಕೆ ಶಂಕುಸ್ಥಾಪನೆ ಆಯಿತು, ೧೯೭೮ರಲ್ಲಿ ಭಾರತದ ರಾಜಧಾನಿ ನವದೆಹಲಿಯಲ್ಲಿ ೫೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲಾಯಿತು. ಡಾ. ಜಿ.ಪಿ. ರಾಜರತ್ನಂ ಸಮ್ಮೇಳನಾಧ್ಯಕ್ಷರಾಗಿದ್ದರು. ಪ್ರಧಾನಿ ಮುರಾರ್ಜಿದೇಸಾಯಿ ಸಮ್ಮೇಳನವನ್ನು ಉದ್ಘಾಟಿಸಿದರು. ಎರಡು ಸಾವಿರ ಪ್ರತಿನಿಧಿಗಳನ್ನು ಕರೆದೊಯ್ಯುವ ರೈಲು ಪ್ರಯಾಣ ವ್ಯವಸ್ಥೆಯನ್ನು ಮಾಡಲಾಗಿತ್ತು.

ಶ್ರೀ ಜಿ. ನಾರಾಯಣ ಅವರ ಕಾಲದಲ್ಲಿ ವಸ್ತುಶಃ ಪರಿಷತ್ತಿನ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳು ನಾಡಿನ ಹಳ್ಳಿಹಳ್ಳಿಗಳಿಗೂ ವ್ಯಾಪಿಸಿದುವು. ಅಲ್ಲಿ ನಡೆಯುತ್ತಿದ್ದ ಮುಖ್ಯ ಸಮಾರಂಭಗಳಿಗೂ ಅವರು ಹಾಜರಾಗಿ ಭಾಷಣ ಮಾಡಿ ಉಪಯುಕ್ತ ಸಲಹೆಗಳನ್ನು ನೀಡುತ್ತಿದ್ದರು. ರಾಮನಗರದಲ್ಲಿ ಕನ್ನಡ ಸಾಹಿತ್ಯ ಸಮಿತಿಯನ್ನು ರೂಪಿಸಿಕೊಂಡು ೮-೧-೧೯೭೮ನೇ ಭಾನುವಾರದಂದು ನಾವು ಕಿರು ಕನ್ನಡ ಸಾಹಿತ್ಯ ಸಮ್ಮೇಳನವನ್ನು

ಮಾಡಿದಾಗ, ಪ್ರೀತಿಯಿಂದ ಬಂದು ಸಮ್ಮೇಳನದ ಉದ್ಘಾಟನೆ ಮಾಡಿದರು. ಶ್ರೀ ಎಲ್.ಎಸ್. ಶೇಷಗಿರಿರಾವ್ ಅವರು ಸಮ್ಮೇಳನಾಧ್ಯಕ್ಷರಾಗಿದ್ದರು, ಪ್ರೊ. ಸಿ.ಡಿ. ನರಸಿಂಹಯ್ಯ ಅವರು ಮುಖ್ಯ ಅತಿಥಿಗಳಾಗಿದ್ದರು. ವಿಚಾರಗೊಷ್ಠಿ, ಮಹಿಳಾಗೋಷ್ಠಿ, ಕವಿಗೋಷ್ಠಿಗಳು ಬಹಳ ಯಶಸ್ವಿಯಾಗಿ ನಡೆದುವು ಸಿದ್ಧಯ್ಯ ಪುರಾಣಿಕರು ಸಮಾರೋಪ ಭಾಷಣ ಮಾಡಿದರು. ಹೀಗೆ ಶ್ರೀ ಜಿ. ನಾರಾಯಣರು ಗ್ರಾಮೀಣ ಕಾರ್ಯಕ್ರಮಗಳನ್ನು ಬಹಳ ಪ್ರೋತ್ಸಾಹಿಸುತ್ತಿದ್ದರು. ತತ್ಫಲವಾಗಿ ಡಾ. ಶ್ರೀ ಜಚನಿ ಅವರ ಅಧ್ಯಕ್ಷತೆಯ ವಚನ-ದಾಸ ಸಾಹಿತ್ಯ ಸಮ್ಮೇಳನ, ಅಂತರಾಷ್ಟ್ರೀಯ ಮಕ್ಕಳ ವರ್ಷ, ಕನ್ನಡ ಮತ್ತು ಉರ್ದು ಕವಿಗಳ ರಾಜ್ಯಮಟ್ಟದ ಸಮ್ಮೇಳನಗಳು ಅಲ್ಲಿ ಯಶಸ್ವಿಯಾಗಿ ನಡೆದುವು. ಶ್ರೀ ಜಿ. ನಾರಾಯಣ ಅವರು ಈ ಸಮಾರಂಭಗಳಿಗೂ ಆಗಮಿಸಿ ಶುಭಕೋರಿದ್ದರು. ತದನಂತರ ನಾನು ಬೆಂಗಳೂರು ಜಿಲ್ಲಾ ಗ್ರಾಮಾಂತರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಟಿ.ಎನ್. ಕುಮಾರಸ್ವಾಮಿಯವರು ಅಧ್ಯಕ್ಷರಾಗಿ ಇಡೀ ೧೧ ತಾಲ್ಲೂಕುಗಳಲ್ಲಿ ವಸಂತ ಸಾಹಿತ್ಯೋತ್ಸವ, ಆನೇಕಲ್‌ನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ಜಿ. ನಾರಾಯಣ ಅವರು ಪ್ರೇರಿಸಿದ ಉತ್ಸಾಹ, ಪ್ರೋತ್ಸಾಹಗಳೇ ಕಾರಣವಾಗಿತ್ತು. ಈ ಚಟುವಟಿಕೆಗಳ ನಿರಂತರತೆ, ಗೊ.ರು.ಚನ್ನಬಸಪ್ಪನವರ ಅವಧಿಯಲ್ಲಿ ಕೇಂದ್ರ ಪರಿಷತ್ತಿನ ಕಾರ್ಯದರ್ಶಿಯಾಗು(೧೯೭೩-೭೫)ವವರೆಗೆ ನನ್ನನ್ನು ಎಳೆದೊಯ್ದಿತ್ತು. ಜಿ. ನಾರಾಯಣ ಅವರು 'ಮಾರ್ಗ' ಹಾಗೂ 'ದೇಸಿ' ಪಥಗಳಲ್ಲಿ ಸಮಸಮವಾಗಿ ಸಂಚಲಿಸಿದರು.

ಡಾ. ಹಂಪ ನಾಗರಾಜಯ್ಯ ಅವರು ೨೩.೭.೧೯೭೮ರಂದು ಪರಿಷತ್ತಿನ ಅಧ್ಯಕ್ಷರಾದರು. ಇವರ ಅಧಿಕಾರಾವಧಿಯಲ್ಲಿ ಪಂಪ, ಕುಮಾರವ್ಯಾಸ, ರನ್ನ, ರತ್ನಾಕರವರ್ಣಿ, ಹರಿಹರ, ರಪಾಘವಾಂಕ, ಲಕ್ಷ್ಮೀಶ, ರುದ್ರಭಟ್ಟ, ಚಾಮರಸ, ಬಿ.ಎಂ.ಶ್ರೀ. ಮುಂತಾದ ಕವಿ ಶ್ರೇಷ್ಠರ ಕುರಿತ ವಿಚಾರ ಸಂಕಿರಣಗಳು ಅವರವರ ಜನ್ಮಸ್ಥಳದಲ್ಲಿ ನಡೆದುವು. ಏಳು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು, ಜಿಲ್ಲಾ ಸಮಿತಿಗಳ ವತಿಯಿಂದ ವಸಂತ ಸಾಹಿತ್ಯೋತ್ಸವ ರಾಜ್ಯೋತ್ಸವಗಳು ಎಡೆಬಿಡದೆ ನಡೆದುವು. ೨೦ಕ್ಕೂ ಹೆಚ್ಚು ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ನಡೆದವು. ಅಖಿಲ ಕರ್ನಾಟಕ ಗಮಕ ಸಮ್ಮೇಳನ, ಕೀರ್ತನಕಾರರ ಸಮ್ಮೇಳನ, ಶೀಘ್ರಲಿಪಿ ಮತ್ತು ಬೆರಳಚ್ಚುಗಾರರ ಸಮ್ಮೇಳನವನ್ನು ವ್ಯವಸ್ಥೆಗೊಳಿಸಲಾಯಿತು. ಭಾಷೆ, ಗಡಿ ಸಮಸ್ಯೆ, ಗೋಕಾಕ್ ವರದಿ, ಹಾಸ್ಯ ಸಾಹಿತ್ಯ ಕುರಿತ ವಿಚಾರ ಸಂಕಿರಣಗಳು ನಡೆಸಲಾಯಿತು. ಜಾನಪದ ಮೇಳ, ಗೊಂಬೆಯಾಟ ಮೇಳ ಏರ್ಪಾಟು ಆಯಿತು. ೧.೩೦ ಲಕ್ಷ ರೂ.ಗಳಷ್ಟು ದತ್ತಿ ನಿಧಿಯನ್ನು ಸಂಗ್ರಹಿಸಲಾಯಿತು. ಗೀತಸಂಧ್ಯಾ ಕಾರ್ಯಕ್ರಮ, ಅಂತಾರಾಷ್ಟ್ರೀಯ ಮಕ್ಕಳ ವರ್ಷ ಆಚರಣೆ, ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ, ಪತ್ರಿಕೋದ್ಯಮ ತರಬೇತಿಯನ್ನು ವ್ಯವಸ್ಥೆ ಮಾಡಲಾಯಿತು. ೧೯೮೧ರಲ್ಲಿ **ವಜ್ರಮಹೋತ್ಸವ ಕಟ್ಟಡ**ವನ್ನು ಪೂರ್ಣಗೊಳಿಸಲಾಯಿತು. ಡಾ. ಹಾ.ಮಾ. ನಾಯಕ್ ಸೂಚಿತ ಪರಿಷತ್ತಿನ ಆರ್ಥಿಕ ಸ್ವಾವಲಂಬನೆಗೆ ಅಮೃತನಿಧಿ ಸಂಗ್ರಹ, 'ಒಬ್ಬ ಕನ್ನಡಿಗ ಒಂದು ರೂಪಾಯಿ' ಘೋಷಣೆಯೊಂದಿಗೆ ಆರಂಭವಾಯಿತು. ಗುರಿ, ಒಂದು ಕೋಟಿ ಇತ್ತು. ೧೯.೫.೧೯೮೫ರಲ್ಲಿ ಪರಿಷತ್ತಿಗೆ ೭೦ ವರ್ಷಗಳು ತುಂಬಿದ ಗುರುತಿಗಾಗಿ 'ಅಮೃತ ಮಹೋತ್ಸವ'ವನ್ನು ಆಚರಿಸಿ ಹಿಂದಿದ್ದ ಪರಿಷತ್ತಿನ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ಇವರ ಅವಧಿಯಲ್ಲಿ ೩೦೦ಕ್ಕೂ ಹೆಚ್ಚು ಕೃತಿ ಸಾರಸ್ವತ ಪ್ರಕಟವಾಯಿತು. ಇವರ ಅವಧಿಯಲ್ಲಿ ಸಾಹಿತ್ಯ ಸಮ್ಮೇಳನಗಳ ಸುಗ್ಗಿಯೇ ನಡೆದಿತ್ತು. ಶ್ಯಾಮಸುಂದರ್ ನೇತೃತ್ವದ ಏಕಸದಸ್ಯ ಆಯೋಗದ ವಿಚಾರಣೆಯೂ ಪರಿಷತ್ ಸಂಬಂಧ ಆಯಿತು.

ಫೆಬ್ರವರಿ ೧೯೮೬ರಲ್ಲಿ **ಶ್ರೀ ಹೆಚ್.ಬಿ. ಜ್ವಾಲನಯ್ಯ**ನವರು ಪರಿಷತ್ ಅಧ್ಯಕ್ಷರಾಗಿ ಬಂದರು. ಗ್ರಾಮೀಣ ಸಾಹಿತ್ಯ ಪ್ರಭೆಯನ್ನು ಗುರುತಿಸಿ, ಸಾಹಿತ್ಯ ಕಮ್ಮಟಗಳನ್ನು ನಡೆಸಿ ಪುಸ್ತಕ ಬರೆಸುವ ಯೋಜನೆ ಇವರ ಕಾಲದ್ದು. ಲೇಖಕ ಪ್ರಕಾಶಕರು, ಖಾಸಗಿ ಪ್ರಕಾಶಕರ ಪುಸ್ತಕಗಳನ್ನು ಪರಿಷತ್ತಿನ ಮಾರಾಟ ವಿಭಾಗದಲ್ಲಿರಿಸಿ, ಮಾರಾಟ

ವ್ಯವಸ್ಥೆ ಮಾಡಿದರು. ಬೆಂಗಳೂರಿನ ಬಡಾವಣೆಗಳಲ್ಲಿ ಗಮಕ ಪ್ರಚಾರದ ಅಂಗವಾಗಿ 'ಗಮಕ ಚಕ್ರ' ಕಾರ್ಯಕ್ರಮ ನಡೆಸಿದರು. ಕನ್ನಡನಾಡಿನ ಸಾಂಸ್ಕೃತಿಕ ಸ್ಮಾರಕಗಳ ಜ್ಞಾನಪೀಠ ಪ್ರಶಸ್ತಿ ವಿಜೇತರ ಚಿತ್ರಗಳಿರುವ ಶುಭಾಶಯ ಕಾರ್ಡುಗಳನ್ನು ಮುದ್ರಿಸಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಸಹಕಾರದೊಂದಿಗೆ ಮಾರಾಟದ ವ್ಯವಸ್ಥೆ ಮಾಡಿದರು. ೫೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಗುಲ್ಬರ್ಗದಲ್ಲಿ ನಡೆಸಿದರು.

೧೯೮೭ನೇ ಸೆಪ್ಟೆಂಬರ್‌ನಲ್ಲಿ ಸರ್ಕಾರದ ಆದೇಶದಂತೆ ಪರಿಷತ್ತಿನಗೆ ಆಡಳಿತಾಧಿಕಾರಿಗಳಾಗಿ ಅ.ರಾ. ಚಂದ್ರಹಾಸ ಗುಪ್ತ ಅವರು ೨.೧೧.೧೯೮೭ ರಿಂದ ಕಾರ್ಯನಿರ್ವಹಿಸಿದರು. ಇವರು ಪರಿಷತ್ತಿನ ಕಛೇರಿ ವ್ಯವಹಾರವನ್ನು ಅಚ್ಚುಕಟ್ಟಾಗಿ ಕಡತಗಳ ವ್ಯವಸ್ಥೆಗೆ ಒಳಪಡಿಸಿದರು. ಕನ್ನಡ ನಿಘಂಟಿನ ಐದನೇ ಸಂಪುಟವನ್ನು ಪ್ರಕಟಿಸಿದರು. ನಿಬಂಧನೆಗಳ ತಿದ್ದುಪಡಿಗಾಗಿ ಹಿಂದಿನ ಸಮ್ಮೇಳನಾಧ್ಯಕ್ಷರುಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿದರು. ಇವರ ನಂತರ ೩೦.೨.೧೯೮೮ರಲ್ಲಿ ಐ.ಎಂ. ವಿಠಲಮೂರ್ತಿ ಅವರ ಆಡಳಿತಾಧಿಯಾಗಿ ಬಂದರು. ಸರ್ಕಾರದ ಆದೇಶದ ಶ್ಯಾಮಸುಂದರ್ ತನಿಖಾ ವರದಿಯನ್ನು ಮುದ್ರಿಸಿ ಮಾರಾಟಕ್ಕಿಡಲಾಯಿತು. ಸಕಲ ಸದಸ್ಯರ ವಿಶೇಷ ಸಭೆ ಕರೆದು ನಿಬಂಧನೆಗಳ ತಿದ್ದುಪಡಿಗೆ ಅಂಗಿಕಾರ ಪಡೆದು ನಿಯಮ ರೀತ್ಯ ಸೊಸೈಟಿ ರಿಜಿಸ್ಟಾರ್ ಅವರ ಒಪ್ಪಿಗೆಯನ್ನು ದೊರಕಿಸಿಕೊಂಡರು. ಪರಿಷತ್ತಿನ ಚುನಾವಣೆ ನಡೆಸಲು ಚುನಾವಣಾಕಾಧಿಕಾರಿಯ ನೇಮಕವಾಯಿತು. ೨೯.೧.೧೯೮೯ ರಂದು ಕಾರ್ಯ ಸಮಿತಿಗೆ ಚುನಾವಣೆ ನಡೆದು. ೨.೨.೧೯೮೯ ರಂದು ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರು ಪರಿಷತ್ತಿನ ಅಧ್ಯಕ್ಷರಾಗಿ ಅಧಿಕಾರ ವಹಿಸಿದರು.

ಪ್ರೊ. ಜಿ.ಎಸ್.ಸಿದ್ದಲಿಂಗಯ್ಯ ಅವರ ಅವಧಿಯಲ್ಲಿ ರಾಜ್ಯೋತ್ಸವ ಹಾಗೂ ಯುಗಾದಿಯಂದು ಕವಿಗೋಷ್ಠಿಯನ್ನು ಏರ್ಪಡಿಸಲಾಗುತ್ತಿತ್ತು. ಯುವಕವಿಗಳಿಗೆ ಕಾವ್ಯ ಕಮ್ಮಟ, ಯುವ ಕವಿ, ಕತೆಗಾರರಿಗೆ ಸ್ಪರ್ಧೆ ಏರ್ಪಾಟು, ಅಲ್ಲಿ ಆಯ್ಕೆಯಾದ ಕಥೆ, ಕವನಗಳ ಸಂಕಲನಗಳನ್ನು ಪ್ರಕಟಿಸಲಾಯಿತು. ನವಸಾಕ್ಷರಮಾಲೆಯಡಿ ಪುಸ್ತಕಗಳ ಪ್ರಕಟನೆ ಹೊಸದಾಗಿ ಓದು ಕಲಿತವರಿಗಾಗಿ ಆಯಿತು. ಪರಿಷತ್ತಿಗೆ ಲಾಂಛನವಿದ್ದರೂ ಧ್ವಜವಿರಲಿಲ್ಲ. ಅದನ್ನು ಕಲಾವಿದ ಕಮಲೇಶ್‌ರಿಂದ ವಿನ್ಯಾಸಗೊಳಿಸಿ ಕಾರ್ಯ ಸಮಿತಿಯಿಂದ ೧೬.೧.೧೯೯೦ ರಂದು ಅಂಗೀಕಾರವಾಯಿತು. ಅದನ್ನು ಸಮ್ಮೇಳನ, ಸಮಾರಂಭಗಳಲ್ಲಿ ಹಾರಿಸುವ ಪದ್ಧತಿ ಬಂತು. ಪರಿಷತ್ತಿನ ಕಟ್ಟಡದ ಮೇಲೆ ಅದರ ನಿತ್ಯ ಹಾರಾಟವಾಯಿತು. 'ಹೊಸ ಕನ್ನಡ ಸಾಹಿತ್ಯದ ನಿರ್ಮಾಪಕರು' ಮಾಲಿಕೆ, ಪಿಎಚ್.ಡಿ. ಪ್ರಬಂಧಗಳ ಪ್ರಕಟನೆ ಅದುವು. ಬಂಡಾಯ ಸಾಹಿತ್ಯ ಸಮಾವೇಶ, ಮಹಾರಾಷ್ಟ್ರ, ಕೇರಳದಲ್ಲಿ ಪರಿಷತ್ತಿನ ವಿಶೇಷ ಘಟಕಗಳ ಸ್ಥಾಪನೆ, ತಾಲ್ಲೂಕು ಘಟಕಗಳ ಸ್ಥಾಪನೆ, ಮತದಾನ ಕೇಂದ್ರಗಳ ಸುಲಭ ವ್ಯವಸ್ಥೆ ಮಾಡಲಾಯಿತು. ಜನಪದ ಸಾಹಿತಿ ಡಾ. ಸಿಂಪಿ ಲಿಂಗಣ್ಣನವರಿಗೆ ಪರಿಷತ್ತಿನ ಗೌರವ ಸದಸ್ಯತ್ವ ನೀಡಲಾಯಿತು. ೧೯೮೯ ರಿಂದ ೧೯೯೨ರ ವರೆಗೆ ಮೂರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸಲಾಯಿತು. ಈ ಸಮ್ಮೇಳನಗಳಲ್ಲಿ 'ಹೊಸಶೋಧ'ಗಳನ್ನು ಕುರಿತ ಗೋಷ್ಠಿಯನ್ನು ಮೊದಲ ಬಾರಿಗೆ ಏರ್ಪಡಿಸಲಾಗಿತ್ತು. ಇದಲ್ಲದೆ ದಾವಣಗೆರೆಯಲ್ಲಿ ನಡೆದ ೬೧ನೇ ಸಮ್ಮೇಳನದಲ್ಲಿ ಪ್ರತಿದಿನ ಸಂಜೆ 'ಸಾಹಿತ್ಯ ಸಂವಾದ' ಏರ್ಪಡಿಸಿದುದು ಸಾಹಿತ್ಯಾಸಕ್ತರನ್ನು ಬಹಳವಾಗಿ ಆಕರ್ಷಿಸಿತು. ಮುಂದಿನ ಸಮ್ಮೇಳನಗಳಿಗೆ ಅದು ನಾಂದಿಯಾಗಿತ್ತು. ಕನ್ನಡ ನಾಡಗೀತೆ, ಭಾವಗೀತೆಗಳ ಗಾಯನ ಕಾರ್ಯಕ್ರಮವಾಗಿ 'ಕಾವ್ಯ ಕಾವೇರಿ', ಸಂಶೋಧನ ಉಪನ್ಯಾಸ, ಚರ್ಚಾಗೋಷ್ಠಿ 'ಸೃಜನ ವೇದಿಕೆ' ರೂಪುಗೊಂಡು ಸಾಂಸ್ಕೃತಿಕ, ಸಾಹಿತ್ಯಿಕ ಆಕರ್ಷಣೆಯಾಗಿ ಚಾಲ್ತಿಗೊಂಡಿತು. ಜಿಲ್ಲೆಗಳಲ್ಲಿ ಪರಿಷತ್ತಿನ ಅಮೃತ ಮಹೋತ್ಸವ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ೧೯೯೧ರ ನವೆಂಬರ್ ೧೨ ರಿಂದ ೧೯ರವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪರಿಷತ್ತಿನ **ಅಮೃತ ಮಹೋತ್ಸವವು** ವೈಭವದಿಂದ ನಡೆಯಿತು. 'ಕನ್ನಡ ನುಡಿಗೆ' ೫೦ ವರ್ಷ ತುಂಬಿದ ಸ್ಮರಣೆಗಾಗಿ 'ಕನ್ನಡ ನುಡಿಯ ಸುವರ್ಣೋತ್ಸವ ಸಂಚಿಕೆ'ಯನ್ನೂ ಹೊರತರಲಾಯಿತು.

೧೪.೫.೧೯೯೨ರಲ್ಲಿ ಚುನಾಯಿತರಾದ **ಶ್ರೀ ಗೊ.ರು. ಚನ್ನಬಸಪ್ಪನವರು,** ಪ್ರೊ. ಜಿ.ಎಸ್. ಸಿದ್ದಲಿಂಗಯ್ಯನವರ ನಂತರ ಪರಿಷತ್ತಿನ ಅಧ್ಯಕ್ಷರಾದರು. ಇವರು ಪರಿಷತ್ತಿನ ಸಭಾಭತ್ಯೆಯನ್ನು ತೆಗೆದುಕೊಳ್ಳದೇ ಪರಿಷತ್ತಿಗೇ ಅರ್ಪಿಸಿ, ಕಛೇರಿಗೆ ಕೆಲಸದ ದಿನವಿರಲಿ, ಬಿಡುವಿನ ದಿನವಿರಲಿ ಅಲ್ಲಿಗೆ ಬಂದು ಬೆಳಗಿನಿಂದ ಸಂಜೆಯವರೆಗೆ ಕಾರ್ಯತತ್ಪರರಾಗಿರುತ್ತಿದ್ದರು. ಅಧಿಕಾರ ವಹಿಸಿದ ಕೂಡಲೇ ತ್ರೈವಾರ್ಷಿಕ ಯೋಜನೆಯನ್ನು ಸಿದ್ಧಮಾಡಿ ಕಾರ್ಯೋನ್ಮುಖರಾದರು. ಅಮೃತನಿಧಿ ಸಂಗ್ರಹಕ್ಕಾಗಿ ವರ್ಣಗಳ ಅಮೃತ ನಿಧಿ ಚೀಟಿಗಳನ್ನು ಮುದ್ರಿಸಿ, ಜಿಲ್ಲಾ ಮತ್ತು ತಾಲ್ಲೂಕು ಘಟಕಗಳಿಗೆ ವಿತರಿಸಿ ಮಾರಾಟ ಮಾಡಿಸಿ ಪರಿಷತ್ತಿಗೆ ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸಿದರು. ಬೆಂಗಳೂರಿನಲ್ಲಿ ಪಾದಯಾತ್ರೆ ನಡೆಸಿ ಆ ಚೀಟಿಗಳನ್ನು ಮಾರಾಟ ಮಾಡಿದರು. ಸರ್ಕಾರಿ ನೌಕರರಿಂದ ತಲಾ ೨೦ ರೂ.ಗಳನ್ನು ಸಂಗ್ರಹಿಸುವ ಪ್ರಯತ್ನ ಮಾಡಿದರು. ಅದು ಭಾಗಶಃ ಯಶಸ್ವಿಯಾಯಿತು. ರಾಜ್ಯ ಸರ್ಕಾರ ಅಮೃತನಿಧಿಗೆ ದೇಣಿಗೆಯಾಗಿ ೧೦ ಲಕ್ಷ ರೂ.ಗಳನ್ನು ನೀಡಿತು. ಅಮೃತ ನಿಧಿಗೆ ಸುಮಾರು ೨೫ ಲಕ್ಷ ರೂ.ಗಳ ಸಂಗ್ರಹವಾಯಿತು. ಆ ನಿಧಿಯ ಬಡ್ಡಿಯನ್ನು ಮಾತ್ರ ಕಾರ್ಯಕ್ರಮಗಳಿಗೆ ಬಳಸಲು ನಿರ್ಣಯವಾಗಿದೆ. ಗೊ.ರು.ಚ. ಅವರು ದತ್ತಿನಿಧಿಯ ಮೊತ್ತವನ್ನು ಆವರೆಗೆ ಇದ್ದ ೪.೫ ಲಕ್ಷ ರೂ.ಗಳಿಂದ ಇಪ್ಪತ್ತು ನಾಲ್ಕು ಲಕ್ಷಕ್ಕೆ ಏರಿಸಿದರು. ಇಡೀ ವರ್ಷ ನಾಡಲ್ಲಿ ಪರಿಷತ್ತಿನ ಕಾರ್ಯ ನಡೆಯಬೇಕೆಂಬುದು ಅವರ ಆಶಯವಾಗಿತ್ತು. ತಾಂತ್ರಿಕ ಸಾಹಿತ್ಯ ಕುರಿತ ಪ್ರಾತ್ಯಕ್ಷಿಕೆ, ಉಪನ್ಯಾಸವನ್ನು ಆಧುನಿಕ ತಂತ್ರಜ್ಞಾನದ ಮೂಲಕ ಕನ್ನಡದ ಅಧ್ಯಯನ ಸಂಶೋಧನ, ಪ್ರಗತಿಗೆ ಬಳಸಿಕೊಳ್ಳುವ ಬಗ್ಗೆ ಮಾಡಿಸಿದರು.

ನಾಟಕ, ಸಾಹಿತ್ಯ, ಮಕ್ಕಳ ಸಾಹಿತ್ಯ, ಚಲನಚಿತ್ರ ಸಾಹಿತ್ಯ, ಸಮೂಹ ಮಾಧ್ಯಮ ಸಾಹಿತ್ಯ, ಮಹಿಳಾ ಸಾಹಿತ್ಯ, ಚಾರಣ ಸಾಹಿತ್ಯ, ಜಾನಪದ ಸಾಹಿತ್ಯ ಇತ್ಯಾದಿ ಸಾಹಿತ್ಯ ಸಮಾವೇಶಗಳನ್ನು ನಡೆಸಿದರು. ಅದೊಂದು ರೀತಿ ಮಾಸಿಕ ಸಮಾವೇಶವೆಂಬಂತೆ, ವಿವಿಧ ಸ್ಥಳಗಳಲ್ಲಿ ನೆರವೇರಿಸಿದಂತಾಗಿತ್ತು. ಪ್ರಖ್ಯಾತ ಕವಿಗಳು ಸ್ವರಚಿತ ಕವನವನ್ನು ಓದಿದ ಮೇಲೆ, ಅದನ್ನು ಸಂಗೀತಗಾರರು ವಾದ್ಯ ಸಮೇತ ಹಾಡುವ ಕಾರ್ಯಕ್ರಮ ಗೀತ ಸಂಗೀತವನ್ನು ಕೊಪ್ಪಳದಲ್ಲಿ ೧೯೯೩ರಲ್ಲಿ ನಡೆದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೊದಲ ಬಾರಿಗೆ ಅಳವಡಿಸಿ ಮಾಡಿದ ಪ್ರಯೋಗ ಬಹಳ ಯಶಸ್ವಿಯಾಯಿತು. ಮುಂದಿನ ಎಲ್ಲ ಸಮ್ಮೇಳನಕ್ಕೂ ಇದೇ ನಾಂದಿಯಾಯಿತು. ಕೆಲವು ಜಿಲ್ಲಾ ಸಮ್ಮೇಳಗಳಲ್ಲಿಯೂ ಇದರ ಅಳವಡಿಕೆಯಾಯಿತು. ೧೯೯೪ರ ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ, ೧೯೯೫ರ ೬೪ನೇ ಮಧೋಳ ಸಮ್ಮೇಳನಗಳು ಯಶಸ್ವಿಯಾಗಿ ನಡೆದುವು. 'ಕಾವ್ಯ ಕಾವೇರಿ' ಕಾರ್ಯಕ್ರಮವನ್ನು ಪರಿಷ್ಕರಿಸಿ, ಸಂಗೀತ ಕಾಲವಿದರನ್ನು ತೊಡಗಿಸಿ ಹೆಚ್ಚು ಆಕರ್ಷಣೀಯವಾಗಿ ಮಾಡಲಾಯಿತು. ಪರಿಷತ್ತಿನಿಂದ ಮೊದಲ ಬಾರಿಗೆ 'ಹಚ್ಚೇವು ಕನ್ನಡದ ದೀಪ' ಹಾಡಿನ ಮೂಲಕ ಧ್ವನಿಸುರಳಿಯನ್ನು ಹೊರತರಲಾಯಿತು; ಹೀಗೆಯೇ 'ಏರಿಸಿ ಹಾರಿಸಿ ಕನ್ನಡದ ಬಾವುಟ' ಹಾಡೂ ಕೂಡ ನಾಡಿನಲ್ಲೆಡೆ ಜನಪ್ರಿಯವಾಗಿದೆ. ಈ ಧ್ವನಿಸುರುಳಿಗಳು ಪರಿಷತ್ತಿಗೆ ಸಂಪನ್ಮೂಲವೂ ಆಗಿ ಬಂದುವು.

ಪರಿಷತ್ತಿನ ಸಂಶೋಧನಾ ವಿಭಾಗವನ್ನು ಸಂಶೋಧನಾ ಕೇಂದ್ರವಾಗಿ ಅಭಿವೃದ್ಧಿಗೊಳಿಸುವ ಪ್ರಯತ್ನವಾಯಿತು. ಡಾ. ಎಂ. ಚಿದಾನಂದಮೂರ್ತಿ ಅವರು ಈ ಕೇಂದ್ರದ ಗೌರವ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ತಿಂಗಳ ಕೊನೆಯ ಗುರುವಾರ ಮಾಸಿಕ ಸಂಶೋಧನ ಉಪನ್ಯಾಸವನ್ನು ಏರ್ಪಡಿಸಲಾಗುತ್ತಿತ್ತು. ಶಾಸನ ತರಗತಿ ವಿದ್ಯಾರ್ಥಿಗಳಿಗೂ ಇದು ಬಹಳ ಉಪಯುಕ್ತವಾಗಿರುತ್ತಿತ್ತು.

ಉದಯೋನ್ಮುಖ ಸಾಹಿತಿಗಳಿಗೆಂದು, ಸಂಶೋಧನ ಕಮ್ಮಟ ಮಕ್ಕಳ ಸಾಹಿತ್ಯ ರಚನಾ ಕಮ್ಮಟ. ನಾಟಕ ರಚನಾ ಕಮ್ಮಟಗಳನ್ನು ವಿವಿಧ ಕಡೆ ಏರ್ಪಡಿಸಲಾಗುತ್ತಿತ್ತು. ಶಾಲಾ, ಕಾಲೇಜುಗಳಲ್ಲಿ ರಂಗಯಾತ್ರಾ ಸ್ಪರ್ಧೆಗಳನ್ನು,

ರಂಗಭೂಮಿಯ ತಿಳುವಳಿಕೆಗಾಗಿ ಏರ್ಪಡಿಸಲಾಗುತ್ತಿತ್ತು. ಪರಿಷತ್ತಿನ ಅತ್ಯುಚ್ಚ ಮನ್ನಣೆಯಾದ ಗೌರವ ಸದಸ್ಯತ್ವವನ್ನು ವಿದ್ವಾಂಸರನ್ನು ಆಯ್ದು ನೀಡಲಾಯಿತು; ಅನುಗುಣ ವಾಚಿಕೆಗಳನ್ನು, ಆಕರ್ಷಕ ಫಲಕದೊಡನೆ ರೂಪಿಸಿ ನೀಡಲಾಯಿತು. ಪರಿಷತ್ತಿನ ಜಿಲ್ಲಾ ಘಟಕಗಳಿಗೆ ವಾರ್ಷಿಕವಾಗಿ ಒಂದು ಲಕ್ಷ ರೂ.ಗಳ ಅನುದಾನವನ್ನು ರಾಜ್ಯ ಸರ್ಕಾರವು ನೀಡುವಂತೆ ಆದೇಶ ಹೊರಡಿಸುವಲ್ಲಿ ಸಫಲರಾದರು. ಇವರ ಅವಧಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಸಾಹಿತ್ಯ ಸಮ್ಮೇಳನಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಜರುಗಿದುವು. ೭೮ನೇ ಸಕಲ ಸದಸ್ಯರ ಸಭೆಯನ್ನು ೧೯೯೪ನೇ ಸಾಲಿನಲ್ಲಿ ಬೆಂಗಳೂರಿನ ಹೊರಗಡೆ, ಧಾರವಾಡದಲ್ಲಿ ನಡೆಸಿ ಹೊಸ ಹಾದಿ ತೋರಿದರು. 'ಸಮುದಾಯ ಸಾಹಿತ್ಯ ಮಾಲೆ' ಶೀರ್ಷಿಕೆಯಡಿ ಸಾಮಾನ್ಯ ಜನ ಸಮುದಾಯಕ್ಕೆ ಅನುಕೂಲಿಸುವ ವಿಷಯಗಳನ್ನೊಳಗೊಂಡ ಕೆಲವು ಪುಸ್ತಕಗಳನ್ನು ಪ್ರಕಟಿಸಲಾಯಿತು. ಅನೇಕ ಸಂಪ್ರಬಂಧಗಳನ್ನು ಮುದ್ರಿಸಲಾಯಿತು.

೧೯೯೩ರಲ್ಲಿ ಡಾ. ಜಿ.ಎಸ್. ಗಾಯಿಯವರು ಸಂಪಾದಕ ಮಂಡಲಿಯ ಅಧ್ಯಕ್ಷರಾಗಿದ್ದು, ಎನ್. ಬಸವಾರಾಧ್ಯರ ಪ್ರಧಾನ ಸಂಪಾದಕತ್ವದಲ್ಲಿ ಕನ್ನಡ-ಕನ್ನಡ ನಿಘಂಟಿನ ಏಳನೇ ಸಂಪುಟವೂ ಗೊ.ರು.ಚ. ಅವರ ಅವಧಿಯಲ್ಲಿ ಪ್ರಕಟವಾಯಿತು. ಪ್ರೊ. ಎಸ್. ಶ್ರೀನಿವಾಸನ್, ಜಿ. ಚನ್ನವೀರಸ್ವಾಮಿಗಳು ಕಾರ್ಯದರ್ಶಿಗಳಾಗಿದ್ದು, ಪ್ರೊ. ಎಚ್.ಆರ್. ದಾಸೇಗೌಡ ಅವರು ಕೋಶಾಧಿಕಾರಿಗಳಾಗಿದ್ದರು. ಈ ಮುನ್ನ ಕನ್ನಡ-ಕನ್ನಡ ನಿಘಂಟಿನ ಎರಡರಿಂದ ಆರನೇ ಸಂಪುಟದವರೆಗೆ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಪ್ರಧಾನ ಸಂಪಾದಕರಾಗಿ ಪ್ರಕಟ ಮಾಡಿದ್ದರು.

೧೯೯೪-೯೫ರಲ್ಲಿ ಡಾ. ಜಿ.ಎಸ್. ಗಾಯಿಯವರ ಸಂಪಾದಕ ಮಂಡಲಿಯ ಅಧ್ಯಕ್ಷತೆ, ಎನ್. ಬಸವರಾಧ್ಯರ ಪ್ರಧಾನ ಸಂಪಾದಕತ್ವದಲ್ಲಿ ೮ನೇ ಕನ್ನಡ-ಕನ್ನಡ ನಿಘಂಟು ಸಂಪುಟ ಸಿದ್ಧವಾಗುತ್ತಿದ್ದ ಸಭೆಗಳಲ್ಲಿ ಪರಿಷತ್ತಿನ ಕಾರ್ಯದರ್ಶಿಯಾಗಿ ನಾನು ಪಾಲ್ಗೊಳ್ಳುತ್ತಿದ್ದೆ. ಆ ಸಭೆಗಳಲ್ಲಿ ನಡೆಯುತ್ತಿದ್ದ ವಿದ್ವಾಂಸರ ಚರ್ಚೆಗಳು, ಒದಗುತ್ತಿದ್ದ ಸಲಹೆಗಳು, ಸೂಚಿಸುತ್ತಿದ್ದ ಪರ್ಯಾಯಗಳು ಅವರ ವಿದ್ವತ್ತಿನ ಪರ್ಿ ಕ್ವ ಫಲಗಳಂತೆ ಕಾಣುತ್ತಿದ್ದವು. ಆ ಸಭೆಗಳಲ್ಲಿ ಪಾಲ್ಗೊಳ್ಳುವುದೇ ಒಂದು ಸೌಭಾಗ್ಯ ಯೋಗವೆಂದೆನಿಸುತ್ತಿತ್ತು. ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಎಂ. ಚಿದಾನಂದಮೂರ್ತಿ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಡಾ. ಕೆ.ವಿ. ರಮೇಶ್, ಡಾ. ಕೆ. ಕೃಷ್ಣಮೂರ್ತಿ, ಮುಂತಾದವರು ಇದ್ದು, ಎಲ್ಲ ಸದಸ್ಯರೂ ವಿದ್ವನ್ಮಣಿಗಳೇ. ಈ ನಿಘಂಟು ಸಂಪಾದಕ ಸಮಿತಿಯಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯ, ಡಾ. ಆರ್.ಸಿ. ಹಿರೇಮಠ, ಡಾ. ಹಾ.ಮಾ. ನಾಯಕರು ಸದಸ್ಯರಾಗಿದ್ದರು.

ನಿಘಂಟು ಸಭೆಯಲ್ಲಿ 'ಸಿರಿಯಕ್ಕ' ಎಂಬ ಶಬ್ದದ ಬಗ್ಗೆ "ಲಕ್ಷ್ಮಿಯ ಅಕ್ಕ, ದಾರಿದ್ರ್ಯದ ಅಧಿದೇವತೆ, ಜ್ಯೇಷ್ಠಾದೇವಿ" ಎಂದು ನಿರ್ಧರಿಸುವಲ್ಲಿ ನಡೆದ ವಿದ್ವತ್‌ಚರ್ಚೆ ನನ್ನ ಮಾನಸ ನಯನದ ಮುಂದೆ ಇಂದೂ ಜೀವಂತವಿದೆ. ಆ ಶಬ್ದಕ್ಕೆ ನೇತ್ಯಾತ್ಮಕ ವಿಪರೀತಾರ್ಥ ಕೊಡದೆ, ಅನರ್ಥ ನೀಡಿ ಸ್ತ್ರೀಚಾರಿತ್ರ್ಯಕ್ಕೆ ಹಾನಿಯಾಗದಂತೆ ವಾಸ್ತವ ಶಬ್ದಾರ್ಥವನ್ನು ಕೊಟ್ಟದ್ದು ನಿಜಕ್ಕೂ ಸ್ತುತ್ಯರ್ಹ. ಈ ೮ ಸಂಪುಟಗಳಲ್ಲಿ ಮೊದಲನೆಯದು ೧೯೭೦ರಲ್ಲಿ ಪ್ರಕಟವಾದರೆ ಕೊನೆಯದು ೧೯೯೫ರ ನವೆಂಬರ್ ೨೯ರಂದು ಪ್ರಕಟವಾಯಿತು. ೨೫ ವರ್ಷಗಳಲ್ಲಿ ಬಂದ ಈ ಎಂಟು ಸಂಪುಟಗಳು ಡೆಮ್ಮಿ ಚತುಷ್ಪತ್ರ ಆಕಾರದಲ್ಲಿ ಪ್ರಕಟವಾಗಿವೆ. ತೆಲುಗು, ತಮಿಳು, ಮಲೆಯಾಳಂ ಇತ್ಯಾದಿ ದೇಶೀ ಭಾಷೆಗಳ ನಿಘಂಟುಗಳ ಕಾರ್ಯವಿಧಾನ ತಗುಲಿರುವ ವೆಚ್ಚಕ್ಕೆ ಹೋಲಿಸಿದರೆ ಕನ್ನಡ-ಕನ್ನಡ ನಿಘಂಟುವಿಗೆ ತಗುಲಿರುವ ಸಮಯ, ವೆಚ್ಚ ಅತಿಯಲ್ಲ. ಅಲ್ಲದೆ, ನಿಘಂಟು ಶಬ್ದಗಳು ಬಳಸಿಕೊಂಡಿರುವ ಆಕರಗಳು, ನೀಡಿರುವ ಲಕ್ಷ್ಯಗಳು, ಶಾಸನ, ಸಾಹಿತೋಕ್ತ ಪ್ರಯೋಗಗಳು, ವಿವೇಚನೆ, ಇಡೀ ರಾಷ್ಟ್ರದ ಯಾವ ನಿಘಂಟುಗಳಲ್ಲಿ ಈ ಇದರಂತೆ ಕಾಣಬರುವುದಿಲ್ಲವೆನ್ನಲಾಗಿದೆ. ಹೀಗಾಗಿ ಕರ್ನಾಟಾಂತರ್ಗತ ಭಾರತ ಮಾತೆಯ ನಿಸ್ವನಗಳು ಈ ಶಬ್ದಕೋಶಗಳಲ್ಲಿ ಅನುರಣಿಸಿರುವ ಮಹತ್ತರ ಕೊಡುಗೆಗಳಂತಿವೆ.

ಪರಿಷತ್ತು ಸ್ಥಾಪನೆಯಾಗಿ ೮೦ ವರ್ಷಗಳು ತುಂಬಿದ ನೆನಪಿಗಾಗಿ ೧೯೯೫ ಮೇ ೩, ೪, ೫ನೇ ತಾರೀಖುಗಳಂದು, 'ಪರಿಷತ್ತು ೮೦' ವರ್ಷಾಚರಣೆಯನ್ನು ಆಚರಿಸಲಾಯಿತು.

ಡಾ. ಸಾ.ಶಿ. ಮರುಳಯ್ಯ ಅವರು ಮುಂದಿನ ಅಧ್ಯಕ್ಷರಾಗಿ, ೧೯೯೫ರ ಜೂನ್ ೧೮ ರಂದು ಅಧಿಕಾರವಹಿಸಿದರು. ಇವರ ಅವಧಿಯಲ್ಲಿ ಕಂಪ್ಯೂಟರ್ ವಿಭಾಗ ಸ್ಥಾಪನೆ ಆಯಿತು. ಪೂರ್ಣಗೊಂಡಿದ್ದ ಕನ್ನಡ-ಕನ್ನಡ ನಿಘಂಟಿನ ೮ನೇ ಸಂಪುಟ ಬಿಡುಗಡೆ ಆಯಿತು. ಇದರ ಬಿಡುಗಡೆಯ ಸಂದರ್ಭದಲ್ಲಿ ಪ್ರಧಾನ ಸಂಪಾದಕ ಪ್ರೊ. ಎನ್. ಬಸವಾರಾಧ್ಯರನ್ನು ಸನ್ಮಾನಿಸಲಾಯಿತು. ದತ್ತಿದಾನಿಗಳ ಹೆಸರಿನಲ್ಲಿ ಪ್ರತಿವರ್ಷ ಪುಸ್ತಕವೊಂದನ್ನು ಪ್ರಕಟಿಸುವ 'ಪುಸ್ತಕ ದತ್ತಿ ಯೋಜನೆ' ಆರಂಭವಾಯಿತು. ಪರಿಷತ್ತಿನ ನೌಕರರ ವೇತನಕ್ಕೆ ಸಂಬಂಧಿಸಿದಂತೆ ಅನುದಾನ ಸಂಹಿತೆಗೆ ೧೯೯೬ ಜೂನ್ ೧ ರಿಂದ ಸರ್ಕಾರ ಒಳಪಡಿಸಿ ಜಾರಿಗೆ ಕೊಟ್ಟಿತು. ಇದರಿಂದಾಗಿ ನೌಕರರ ಸಂಬಳಕ್ಕೆ ಪ್ರತ್ಯೇಕ ಸಹಾಯ ಧನ ಬರುತ್ತಿದೆ. ಕೊಳವೆ ಭಾವಿ ತೆಗೆಸಿ ಪರಿಷತ್ತಿನ ನಿರಂತರ ನೀರನ ಸೌಲಭ್ಯವನ್ನು ಒದಗಿಸಲಾಯಿತು. ಪರಿಷತ್ತಿನ ಕಾರ್ಯಗಳಿಗೆ ಓಡಾಟಕ್ಕೆಂದು ಅಧ್ಯಕ್ಷರಿಗಾಗಿ ೧೯೯೫ರಲ್ಲಿ ಕಾರನ್ನು ಪರಿಷತ್ತು ಖರೀದಿಸಿತು. ಚಲನಚಿತ್ರ ಸಾಹಿತ್ಯ ಚಿಂತನ ಗೋಷ್ಠಿ, ಉದಯೋನ್ಮುಖ ದಲಿತ ಬರಹಗಾರರಿಗೆ ಸಾಹಿತ್ಯ ಕಮ್ಮಟವನ್ನು ಏರ್ಪಡಿಸಲಾಯಿತು. ಸಾಮಾಜಿಕ ಚಿಂತನ ಮಾಲೆ, ಉಪೇಕ್ಷಿತ ಸಾಹಿತ್ಯ ಮಾಲೆ, ಭಾಷಾಂತರ ಮಾಲಿಕೆ, ರಳ ನಿಘಂಟು, ಪಡೆನುಡಿಕೋಶ, ಸಂಕ್ಷಿಪ್ತ ನಿಘಂಟುವಿನ ಪರಿಷ್ಕೃತ ಮುದ್ರಣ ಇತ್ಯಾದಿ ಪ್ರಕಟಣ ಕಾರ್ಯವನ್ನು 'ಸಹೃದಯ ಸಾಹಿತ್ಯ ಯೋಜನೆ'ಯಡಿ ಕೈಗೊಳ್ಳಲಾಯಿತು. ಪ್ರತಿವರ್ಷ ಕನ್ನಡದ ಶ್ರೇಷ್ಠ ಬರಹಗಾರರಿಗೆ ನೀಡುವ **ಚಾವುಂಡರಾಯ ಪ್ರಶಸ್ತಿ**ಯನ್ನು ೨೦ ಸಾವಿರ ರೂ. ನಗದು, ಪ್ರಶಸ್ತಿ ಫಲಕದ ಮೂಲಕ, ೧೯೯೪ರಲ್ಲಿ ಸ್ಥಾಪಿಸಿದ ದತ್ತಿನಿಧಿ ನೀಡಲಾಯಿತು. ಜಿಲ್ಲಾ ಕೇಂದ್ರಗಳಲ್ಲಿ ನಡೆಯುತ್ತಿದ್ದ 'ಕಾವ್ಯ ಕಾವೇರಿ' ಕನ್ನಡ ಗೀತೆಗಳ ಗಾಯನ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಡನೆ ಏರ್ಪಡಿಸಲಾಯಿತು. ಅಖಿಲ ಭಾರತ ೬೫ನೇ ಕನ್ನಡ ಸಾಹಿತ್ಯ ಸಮ್ಮೇಳನ, ಹಾಸನದಲ್ಲಿ ೬೬ನೇ ಸಮ್ಮೇಳನವನ್ನು ಮಂಗಳೂರಿನಲ್ಲಿ ನಡೆಸಲಾಯಿತು.

ಕರ್ನಾಟಕ ಮಾತೆಯ ವರ್ಣತೈಲ ಚಿತ್ರವನ್ನು 'ಜಯ ಹೇ ಕರ್ನಾಟಕ ಮಾತೆ' ಎಂಬ ಕವಿ ಘೋಷದೊಡನೆ ಬರೆಸಲಾಯಿತು. ಪರಿಷತ್ತಿನ ಸನ್ಮಾನ ಫಲಕ, ಪ್ರಮಾಣ ಪತ್ರಗಳಲ್ಲಿ ಈ ಚಿತ್ರದ ಅಳವಡಿಕೆ ಇದೆ.

'ಸಂಪತ್ತಿನಲ್ಲಿ ಕರ್ನಾಟಕ ಒಂದು ಚಿಂತನೆ' ಎಂಬ ವಿಚಾರಗೋಷ್ಠಿಯನ್ನು ಕರ್ನಾಟಕದ ಸಂಸದರಿಗಾಗಿ ಏರ್ಪಡಿಸಲಾಯಿತು. ಶ್ರೀಲಂಕಾದ ಸಂಸ್ಕೃತಿ ಸಚಿವಾಲಯದ ಮುಖ್ಯಸ್ಥ, ಲೇಖಕ, ಶ್ರೀ ಅಭಯಚಂದ್ರ ಅವರೊಡನೆ ಸಾಹಿತ್ಯಿಕ ಸಂವಾದ, ಜಪಾನಿನ ಇತಿಹಾಸ ಸಂಶೋಧಕ ಓತೋನೋ ಬೊಹಿರೋ ಅವರ ಉಪನ್ಯಾಸ, ಪರಿಶಿಷ್ಟ ವರ್ಗ, ಜಾತಿಯ ಉದಯೋನ್ಮುಖ ಬರಹಗಾರರಿಗೆ ಸಾಹಿತ್ಯ ರಚನಾ ಕಾರ್ಯಾಗಾರ (೧೯೯೫), ಚಲನಚಿತ್ರ ಮತ್ತು ಚಿತ್ರಸಾಹಿತ್ಯ ಕುರಿತ ವಿಚಾರ ಸಂಕಿರಣ, ಮಲೆಯಾಳಂ ಸಾಹಿತ್ಯ ಜ್ಞಾನಪೀಠ ಪ್ರಶಸ್ತಿ ವಿಜೇತ ಎಂ.ಟಿ. ವಾಸುದೇವ ನಾಯರ್ ಅವರಿಗೆ ಸನ್ಮಾನ ಕಾರ್ಯಕ್ರಮಗಳು ನಡೆದುವು.

ಪರಿಷತ್ತಿನ ೮೪ನೇ ಹುಟ್ಟುಹಬ್ಬದ ಸಮಯದಲ್ಲಿ (೫-೬-೧೯೯೮) ಹಿಂದಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಡಾ. ದೇ. ಜವರೇಗೌಡ, ಡಾ. ಕೆ.ಎಸ್. ನರಸಿಂಹಸ್ವಾಮಿ, ಜಾ. ಜಿ.ಎಸ್. ಶಿವರುದ್ರಪ್ಪ, ಎಚ್.ಎಲ್, ನಾಗೇಗೌಡ, ಪ್ರೊ. ಚನ್ನವೀರಕಣವಿ, ಕಯ್ಯಾರ ಕಿಞ್ಞಣ್ಣರೈ ಅವರುಗಳನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವಿರೇಂದ್ರ ಹೆಗ್ಗಡೆಯವರು ಶಾಲು ಹೊದಿಸಿ ಗೌರವ ಅರ್ಪಿಸಿದರು. ನಂತರ ಈ

ಅಧ್ಯಕ್ಷರ ಕಾಲಾವಧಿಯಲ್ಲಿ 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' 'ಕನ್ನಡ ನುಡಿ' ಸಂಪಾದಕರಿಗೆ ಬಹುಶಃ ಮೊಟ್ಟಮೊದಲಿಗೆ ಸನ್ಮಾನ ಮಾಡಲಾಯಿತು. ಆಗ ಪರಿಷತ್ಪತ್ರಿಕೆ ಸಂಪಾದಕರಾಗಿದ್ದವರು ಎಂ.ಜಿ. ನಾಗರಾಜ್ ಮತ್ತು ಪ್ರೊ. ಎಸ್. ಶ್ರೀನಿವಾಸನ್, ಕನ್ನಡ ನುಡಿಯ. ಸಂಪಾದಕರಾಗಿದ್ದವರು. ಎಚ್.ಪಿ. ಫಿಲೋಮಿನಾ, ಡಾ. ವರದಾ ಶ್ರೀನಿವಾಸ್ ಅವರು.

ಕನ್ನಡದಲ್ಲಿ ಟೀಕು ಸಾಹಿತ್ಯ, ಉದ್ಧರಣೆ ಸಾಹಿತ್ಯ, ಸ್ತೋತ್ರ ಸಾಹಿತ್ಯ, ಸೋಬಾನ ಸಾಹಿತ್ಯ ಮುಂತಾದ ಅಲಕ್ಷಿತ ಸಾಹಿತ್ಯ ಪ್ರಕಾರಗಳ ಬಗ್ಗೆ ತಜ್ಞರಿಂದ ಉಪನ್ಯಾಸ ಮಾಲೆಯನ್ನು ಏರ್ಪಡಿಸಿ ಅವುಗಳ ಪ್ರಕಟನಾ ಕಾರ್ಯವನ್ನು ಕೈಗೆತ್ತಿಕೊಳ್ಳಲಾಯಿತು. ಕನ್ನಡ ಚಲನಚಿತ್ರ ರಂಗದ ಮೇರುನಟ, ವರನಟ ಡಾ. ರಾಜ್‌ಕುಮಾರ್ ಅವರಿಗೆ 'ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ'ಯಂಥ ಅತ್ಯುನ್ನತ ಗೌರವ ಪ್ರಶಸ್ತಿ ಬಂದಾಗ ಪರಿಷತ್ತು, ಸನ್ಮಾನ ಸಮಾರಂಭವನ್ನು ಏರ್ಪಡಿಸಿತು. ಡಾ. ರಾಜ್‌ಕುಮಾರ್ ಅವರು ಪ್ರಶಸ್ತಿಯ ಮೊತ್ತವಾದ ಒಂದು ಲಕ್ಷ ರೂ.ಗಳನ್ನು ದತ್ತಿನಿಧಿಯಾಗಿ ಪರಿಷತ್ತಿಗೆ ನೀಡಿದರು. ಆ ನಿಧಿಯಿಂದ ಆ ಪ್ರಕಾರಕ್ಕೆ ಸಂಬಂಧಿಸಿದ ಪುಸ್ತಕ ಪ್ರಕಟಣೆಗೆ ಬಳಸಲಾಗುತ್ತಿದೆ. ಕನ್ನಡ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಅಂಚೆ ಚೀಟಿ ಬಿಡುಗಡೆ ಸಮಾರಂಭವನ್ನು ಏರ್ಪಡಿಸಲಾಯಿತು. ೧೯೯೫–೯೮ರ ವರೆಗಿನ ಡಾ. ಸಾ.ಶಿ. ಮರುಳಯ್ಯ ಅವರ ಕಾಲದಲ್ಲಿ ಮೈಸೂರು ಮತ್ತು ಬೆಂಗಳೂರು ಮುಕ್ತ ವಿಶ್ವವಿದಾಲಯದ ಕನ್ನಡ ಎಂ.ಎ., ಅಂತಿಮ ತರಗತಿಗಳಿಗೆ ದತ್ತಿ ನಿಧಿಯಾಶ್ರಯದಲ್ಲಿ ತರಬೇತಿ ಶಿಬಿರವನ್ನು ನಡೆಸಲಾಗುತ್ತಿತ್ತು. **ಕರ್ನಾಟಕ ಏಕೀಕರಣ ಸಿದ್ಧಿ, ಸಾಧನೆ** ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಪರಿಷತ್ತಿನ ಪಾತ್ರ ಬಿಂಬಿಸಿರುವ **ಬಿಡುಗಡೆಯ ಮಡಿಲಲ್ಲಿ,** ಎಂಬ ಕೃತಿಗಳು ಸುವರ್ಣ ಸ್ವಾತಂತ್ರೋತ್ಸವದ ಅಂಗವಾಗಿ ಬಿಡುಗಡೆ ಆದುವು. (೧೫–೦೮–೧೯೯೭). ಡಾ. ಸಾ.ಶಿ. ಮರುಳಯ್ಯನವರ ನಂತರ ಶ್ರೀ ಎನ್. ಬಸವಾರಾಧ್ಯರು ೫.೭.೧೯೯೮ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದರು.

ಶ್ರೀ ಎನ್. ಬಸವಾರಾಧ್ಯರು ೧೦–೭–೧೯೯೮ ರಂದು ಅಧಿಕಾರ ವಹಿಸಿಕೊಂಡಮೇಲೆ ಅವರ ಗುರಿ ಪರಿಷತ್ತಿಗೆ ಆರ್ಥಿಕ ದೃಢತೆ ತಂದುಕೊಡಬೇಕೆಂಬುದಾಗಿತ್ತು. ಹಾಗೂ ಆಧುನಿಕ ತಂತ್ರಜ್ಞಾನವನ್ನು ಸಾಹಿತ್ಯಭಿವೃದ್ಧಿಯ ಅಂಶಗಳಿಗೆ ಬಳಸಿಕೊಳ್ಳಬೇಕೆಂಬುದಾಗಿತ್ತು. ಅಂತಾಗಿ ಬಿ.ಎಂ.ಶ್ರೀ. ಅಚ್ಚುಕೂಟವನ್ನು ಆಧುನಿಕರಣಗೊಳಿಸಿದರು. ಅಚ್ಚುಮೊಳೆಯ ಬದಲು ಡಿ.ಟಿ.ಪಿ. ವ್ಯವಸ್ಥೆಯನ್ನು ಅಣಿಗೊಳಿಸಿದರು. ಆಫ್‌ಸೆಟ್ ಯಂತ್ರಗಳು, ಅವುಗಳಿಗೆ ಪೂರಕವಾದ ಉಪಕರಣಗಳನ್ನು ತರಿಸಲಾಯಿತು. ವಜ್ರಮಹೋತ್ಸವ ಕಟ್ಟಡದ ನೆಲಮಹಡಿಯ ಭಾಗವನ್ನು ಸಿಂಡಿಕೇಟ್ ಬ್ಯಾಂಕ್‌ಗಾಗಿ ವಿನ್ಯಾಸಗೊಳಿಸಿದರು. ಮಾಸಿಕ ಆದಾಯ ಮೂಲವಾಗಿ ಬ್ಯಾಂಕ್‌ನ ಬಾಡಿಗೆ ಹಣ ಬರತೊಡಗಿತು.

ಸಂಕ್ಷಿಪ್ತ ನಿಘಂಟು, ರತ್ನಕೋಶದ ಪರಿಷ್ಕೃತ ಆವೃತ್ತಿ, ಕನ್ನಡ–ಕನ್ನಡ ಬೃಹತ್ ನಿಘಂಟಿನ ಪರಿಷ್ಕೃತ ಮೊದಲ ಸಂಪುಟವನ್ನು ಸಿದ್ಧಪಡಿಸಿದರು. ನೂರು ಆಯ್ದ ಪುಸ್ತಕಗಳ ಮರುಮುದ್ರಣ ಕಾರ್ಯದಲ್ಲಿ ತೊಡಗಿದರು. 'ಜ ಟಿ' ನಿಂಘಟು ರಚಿತವಾಗಿ ಬಿಡುಗಡೆ ಆಯಿತು. ಇವುಗಳ ಮುದ್ರಣ ವೆಚ್ಚಕ್ಕಾಗಿ ಸರ್ಕಾರದಿಂದ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರ ಕಾಲದಲ್ಲಿ ಒಂದು ಕೋಟಿ ರೂ.ಗಳ ಧನಸಹಾಯ ಪಡೆದರು. ಶ್ರೀ ಕೃಷ್ಣರಾಜ ಪರಿಷನ್ಮಂದಿರ ಕಟ್ಟಡದ ಧ್ವನಿ ವ್ಯವಸ್ಥೆಯನ್ನು ನವೀಕರಿಸಿದರು. ಕ್ಷಿಪ್ರ ಪತ್ರ ವ್ಯವಹಾರಕ್ಕೆ ಫ್ಯಾಕ್ಸ್ ಯಂತ್ರ ವ್ಯವಸ್ಥೆ, ಆಂತರಿಕ ದೂರವಾಣಿ ವ್ಯವಸ್ಥೆಯನ್ನು ಅಳವಡಿಸಿದರು. ಪರಿಷತ್ತಿನ ಘಟಕಗಳ ಜಿಲ್ಲೆ, ತಾಲ್ಲೂಕು ನಿವೇಶನ, ಸಾಹಿತ್ಯಭವನಕಟ್ಟಡಗಳ ವಿನ್ಯಾಸ, ದಾಖಲೆ ಪತ್ರಗಳು ಹಕ್ಕುದಾರಿಕೆ ಇತ್ಯಾದಿ ವಿಷಯಿಕ ಉಪನಿಬಂಧನೆಗಳನ್ನು ರೂಪಿಸಿ ಕಾರ್ಯ ಸಮಿತಿಯ ಅಂಗೀಕಾರ ಪಡೆದು ಜಾರಿಗೆ ತರಲಾಯಿತು. ಇದರಿಂದ ಖಾಸಗೀ ವಶಪ್ರಯತ್ನಗಳಿಗೆ ತಡೆಹಾಕಿದಂತಾಯಿತು. ೧೯೯೯ರಲ್ಲಿ ಕನಕಪುರದಲ್ಲಿ ೬೭ನೇ ಅ.ಭಾ ಕನ್ನಡ ಸಾಹಿತ್ಯ ಸಮ್ಮೇಳನ,

೨೦೦೦ ದಲ್ಲಿ ಬಾಗಲಕೋಟೆಯಲ್ಲಿ ೬೮ನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನವನ್ನು ವೈಭವದಿಂದ ನಡೆಸಲಾಯಿತು. ಕನಕಪುರ ಸಮ್ಮೇಳನ ಸಮಯದಲ್ಲಿ ೬೭ ಪುಸ್ತಕಗಳನ್ನು ಪ್ರಕಟಿಸಲಾಯಿತು. ಮುದ್ರಣಕ್ಕೆ ಸ್ವಾಗತ ಸಮಿತಿಯಿಂದ ಉಚಿತವಾಗಿ ಕಾಗದವನ್ನು ಪಡೆಯಲಾಯಿತು. ಪರಿಷತ್ತಿನ ವಸ್ತು ಸಂಗ್ರಹಾಲಯದಲ್ಲಿದ್ದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ ಪ್ರತಿಮೆಯನ್ನು ವಜ್ರಮಹೋತ್ಸವ ಕಟ್ಟಡದಲ್ಲಿ ಎಲ್ಲರಿಗೂ ಕಾಣುವಂತೆ ಅಧ್ಯಕ್ಷರ ಕಛೇರಿಯ ಮುಂಬದಿ ತೆರೆದ ಆವರಣದಲ್ಲಿ ಕಂಬದ ಪೀಠದ ಮೇಲೆ ಸ್ಥಾಪಿಸಲಾಯಿತು.

೨೦೦೦ರ ಜುಲೈ ೩೧ರಂದು ನರಹಂತಕ, ಕಾಡುಗಳ್ಳ ವೀರಪ್ಪನ್, ಕನ್ನಡ ಚಲನ ಚಿತ್ರ ರಂಗದ ವರನಟ ಡಾ॥ ರಾಜಕುಮಾರ್ ಅವರನ್ನು ಅಪಹರಿಸಿ ೧೦೮ ದಿನಗಳ ಅರಣ್ಯ ಬಂಧನದ ನಂತರ ಬಿಡುಗಡೆ ಮಾಡಿದ. ಇದಕ್ಕೆ ವೀರಪ್ಪನ್ ಆಪ್ತ ನೆಡುಮಾರನ್ ನೆರವಾದರೆಂದು ಖಾಸಗಿ ಸಾರ್ವಜನಿಕ ಸನ್ಮಾನದ ಸಮಾರಂಭವೊಂದಕ್ಕೆ ಬೆಂಗಳೂರಿನಲ್ಲಿ ತಯಾರಿಯಾಗಿತ್ತು. ಆದರೆ ನೆಡುಮಾರನ್ ವಿಶಾಲ ತಮಿಳು ರಾಷ್ಟ್ರ ಪ್ರತಿಪಾದನೆಯಲ್ಲಿ **ತಮಿಳು ರಾಷ್ಟ್ರದಲ್ಲಿ ಕನ್ನಡ ನೆಲವೇ** ಒಳಗೊಂಡಿದೆ ಎನ್ನುವುದಿತ್ತು. ಇಂಥ ವಿಕೃತ, ಆಕ್ರಮಣ ಭಾವನೆಯುಳ್ಳವರಿಗೆ ಇಲ್ಲಿ ಸನ್ಮಾನ ಬೇಡ ಎಂಬ ಕನ್ನಡ ಸಂಘಸಂಸ್ಥೆಗಳು ಭಾವನೆಗಳನ್ನೂ ಎತ್ತಿ ಹಿಡಿದು, ಪರಿಷತ್ತು, ಆ ಸಮಾರಂಭವನ್ನು ರದ್ದುಗೊಳಿಸುವಂತೆ ಮಾಡಿತು.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಪ್ರಕಟಣೆಯ ಸುಮಾರು ಏಳುವರ್ಷಗಳ ಕಾಲ ಹಿಂದೆಬಿದ್ದಿತ್ತು. ಡಾ. ಸಾ.ಶಿ.ಮ.ರುಳಯ್ಯನವರ ಕಾಲದಲ್ಲಿ ೧೯೯೭ರಲ್ಲಿ ಮರುಹುಟ್ಟು ಪಡೆದು ಷಾಣ್ಮಾಸಿತವಾಗಿ ಪ್ರೊ. ಎಸ್. ಶ್ರೀನಿವಾಸನ್, ಎಂ.ಜಿ. ನಾಗರಾಜ್ ಅವರ ಸಂಪಾದಕತ್ವದಲ್ಲಿ ಮುಂದುವರಿಯಿತು. ನಂತರ ಸಹಸ್ರಮಾನ ೨೦೦೦ ದವರೆಗೆ ಪೂರ್ಣವಾಗಿ ಎನ್ ಬಸವಾರಾಧ್ಯರು ಈ ಸಂಪಾದಕತ್ವದ ಹೊಣೆಯನ್ನು ಇದೇ ಸಂಪಾದಕರಿಗೆ ವಹಿಸಲಾಗಿ ಮೂರು ವರ್ಷ ಕಾಲ ಅವರು ಸೇವೆಯನ್ನು ಸಲ್ಲಿಸಿ ಸಹಸ್ರಮಾನ ವಿಶೇಷ ಸಂಪುಟವನ್ನು ಹೊರತಂದರು.

ಪರಿಷತ್ತಿನ ೨೧ನೆಯ ಅಧ್ಯಕ್ಷರಾಗಿ ೧೧-೭-೨೦೦೧ರಂದು ಧರ್ಮದರ್ಶಿ **ಶ್ರೀ ಹರಿಕೃಷ್ಣ ಪುನರೂರು** ಅವರು ಅಧಿಕಾರ ಸ್ವೀಕರಿಸಿದರು. ಅವರು ದಕ್ಷಿಣ ಕನ್ನಡ ಜಿಲ್ಲೆಯ ಪರಿಷತ್ತಿನ ಘಟಕದ ದೀರ್ಘಕಾಲ ಅಧ್ಯಕ್ಷರಾಗಿದ್ದು ಕೇಂದ್ರ, ಪರಿಷತ್ತಿನ ಕಾರ್ಯಸಮಿತಿಯಲ್ಲಿದ್ದು ಪರಿಷತ್ತಿನ ಆಗುಹೋಗುಗಳ ಅನುಭವ ಪಡೆದವರಾಗಿದ್ದರು.

ಇವರ ಕಾಲದಲ್ಲಿ ಈಗಾಗಲೇ ಇದ್ದ ಪರಿಷತ್ತಿನ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಜೊತೆಗೆ ಹೋಬಳಿ ಹಾಗೂ ಗ್ರಾಮ ಘಟಕಗಳನ್ನು ತೆರೆಯಲವಕಾಶವಾಯಿತು. **ಗ್ರಾಮ ಸರಸ್ವತಿ** ನಳನಳಿಸತೊಡಗಿದಳು. ಹೋಬಳಿ, ಗ್ರಾಮ ಸಾಹಿತ್ಯ ಸಮ್ಮೇಳನಗಳು ನಡೆದುವು. ಜಿಲ್ಲಾವಾರು ಕಥಾಸಂಕಲನಗಳು ಪ್ರಕಟವಾದುವು. ಜಿಲ್ಲಾಧ್ಯಕ್ಷರುಗಳಿಗೆ ಸಂಚಾರ ಸೌಲಭ್ಯಕ್ಕಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಉಚಿತ ಪ್ರಯಾಣದ ಬಸ್ ಪಾಸ್ ಸೌಲಭ್ಯವನ್ನು ಕಲ್ಪಿಸಿದರು. ಅದು ಇಂದಿಗೂ ನಡೆದು ಬಂದಿದೆ.

ಸಂಕ್ಷಿಪ್ತ ನಿಘಂಟು ರತ್ನಕೋಶ, ಪರಿಷ್ಕೃತ ಬೃಹತ್ ನಿಘಂಟುವಿನ ಮೊದಲ ಸಂಪುಟ, ಸುಭಾಷಿತ ಮಂಜರಿ, ಇತ್ಯಾದಿ ಕೃತಿಗಳು ಪ್ರಕಟವಾದುವು. ಸಂಕ್ಷಿಪ್ತ ಕನ್ನಡ – ಇಂಗ್ಲೀಷ್ ನಿಘಂಟುವನ್ನು ಪ್ರಕಟಿಸಿದರು. ಪರಿಷತ್ತಿನ ಯೋಜನೆಗಳಿಗೆ ೫೦ ಲಕ್ಷ ರೂ. ಅನುದಾನವನ್ನು ರಾಜ್ಯ ಸರ್ಕಾರದಿಂದ ಪಡೆದು. ಅದು ಮುಂದಿನ ಬಡ್ಜೆಟ್‌ನಲ್ಲಿಯೂ ಮೀಸಲಾಗುವಂತೆ ಸರ್ಕಾರಿ ಆದೇಶವಾಗುವಂತೆ ನೋಡಿಕೊಂಡರು. ೧೦೧ ಪುಸ್ತಕಗಳನ್ನು **'ಕುವೆಂಪು ಜನ್ಮ ಶತಮಾನೋತ್ಸವ ಮಾಲಿಕೆ'**ಯಡಿ ಪ್ರಕಟಿಸಿ, ಶತಮಾನೋತ್ಸವ ವರ್ಷವನ್ನು ಔಚಿತ್ಯಪೂರ್ಣವಾಗಿ ಆಚರಿಸಿದರು.

ವಜ್ರಮಹೋತ್ಸವ ಕಟ್ಟಡದ ೨ನೇ ಮಹಡಿಯಲ್ಲಿದ್ದ ಕಾರ್ಯದರ್ಶಿಗಳ ಕೊಠಡಿಗಳನ್ನು ಮೊದಲನೆ ಮಹಡಿಗೆ ಸ್ಥಳಾಂತರಿಸಿದರು. **ಪಂಪ ಸಭಾಂಗಣ**ವೆಂಬ ಸರಳ ಸಭಾಂಕಣವನ್ನು ರೂಪಿಸಿದರು. ಈಗ ಅಧ್ಯಕ್ಷರು, ಕಾರ್ಯದರ್ಶಿಗಳ ಕೊಠಡಿ, ಪಂಪ ಸಭಾಂಗಣ, ಒಂದನೇ ಮಹಡಿಯಲ್ಲಿವೆ.

ಷಾಣ್ಮಾಸಿಕವಾಗಿದ್ದ ಕನ್ನಡ ಸಾಹಿತ್ಯ ಪರಿಷತ್ರಿಕೆಯನ್ನು ತ್ರೈಮಾಸಿಕವಾಗಿ ಪ್ರಕಟವಾಗುವಂತೆ ಮಾಡಿದರು. ಇವರ ಅವಧಿಯಲ್ಲಿ ೩೩೭ ಪುಸ್ತಕಗಳ ಪ್ರಕಟಣೆ ಆಯಿತು. ಪರಿಷತ್ತಿನ ಅತ್ಯುನ್ನತ ಮನ್ನಣೆ ಆದ 'ಗೌರವ ಸದಸ್ಯತ್ವ'ವನ್ನು ಡಾ. ಪಾಟಿಲ ಪುಟ್ಟಪ್ಪ, ಡಾ. ಎಸ್.ಕೆ. ಕರೀಂಖಾನ್, ಎನ್ಕೆ ಕುಲಕರ್ಣಿ ಅವರಿಗೆ ಪ್ರದಾನಮಾಡಿದರು. ಎಂ.ಪಿ. ಫಂಡ್‌ನಿಂದ ಗ್ರಂಥ ಭಂಡಾರಕ್ಕಾಗಿ ೧೫ ದೊಡ್ಡ ಕಪಾಟುಗಳನ್ನು ಒದಗಿಸಿಕೊಂಡರು.

ರಾಜ್ಯ ಕೇಂದ್ರ ಗ್ರಂಥಾಲಯ, ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪರಿಷತ್ತಿನ ಗ್ರಂಥಭಂಡಾರಕ್ಕೆ ಮೌಲಿಕ ಕೃತಿಗಳನ್ನು ಉಚಿತವಾಗಿ ಪಡೆದುಕೊಂಡರು. ಪರಿಷತ್ತಿನ ಪುಸ್ತಕಗಳ ಮಾರಾಟವು ಹೊರ ಊರಿನಲ್ಲಿ ಹೆಚ್ಚಲು ಕ್ರಮಗೈಗೊಂಡರು. 'ಕನ್ನಡನುಡಿ'ಗೆ ಜಾಹೀರಾತನ್ನು ೫ ಸಾವಿರದ ಬದಲು ೨೦ ಸಾವಿರ ರೂ.ಗಳಷ್ಟು ವಾರ್ತಾಇಲಾಖೆಯಿಂದ ಬರುವಂತೆ ಮಾಡಿದರು. ಪರಿಷತ್ತಿನ ನೌಕರರ ಉಪಾದಾನ ಹಣವನ್ನು ಪಾವತಿಸುವಂಥ ಯೋಜನೆಗೆ ಬಾಕಿ ಇದ್ದ ಪ್ರೀಮಿಯಂ ೨೫ ಲಕ್ಷರೂ.ಗಳನ್ನು ಸಂದಾಯ ಮಾಡಿ, ನಿಂತಿದ್ದ ಯೋಜನೆಯನ್ನು ಪುನರಾರಂಭಿಸಿ, ಇದ್ದ ಅಡ್ಡಿ ಆತಂಕಗಳನ್ನು ತಪ್ಪಿಸಿದರು: ಸಿಬ್ಬಂದಿಗಳ ಜೀವನಾನುಕೂಲಗಳಿಗೆ ನೆರವಾಗಿದ್ದರು.

೬೯, ೭೦ ಮತ್ತು ೭೧ನೇ ಸಾಲಿನ ಅ.ಭಾ.ಕ. ಸಾಹಿತ್ಯ ಸಮ್ಮೇಳನಗಳನ್ನು ಅನುಕ್ರಮವಾಗಿ, ತುಮಕೂರು, ಬೆಳಗಾವಿ, ಮತ್ತು ಮೂಡುಬಿದಿರೆಯಲ್ಲಿ ನಡೆಸಿದರು.

ರಾಜ್ಯ ಸರ್ಕಾರವು ಹೊಸ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಿದುದನ್ನು ವಿರೋಧಿಸಿ, ತುಮಕೂರು ಸಮ್ಮೇಳನದಲ್ಲಿ ನಿರ್ಣಯಮಾಡಿ ಚಳುವಳಿ ನಡೆಸಿದಾಗ ಸರ್ಕಾರ ಆ ಅನುಮತಿಯನ್ನು ಹಿಂದೆಗೆದುಕೊಂಡಿತು. ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಪರೀಕ್ಷೆಗಳಲ್ಲಿ ಕನ್ನಡ ವಿಷಯದಲ್ಲಿ ಪೂರ್ಣ ಅಂಕ ಸಂಪಾದಿಸಿದ ವಿದ್ಯಾರ್ಥಿಗಳನ್ನು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ವಿಷಯಗಳಲ್ಲಿ ಪಿ.ಎಚ್‌ಡಿ. ಪದವಿ ಪಡೆದವರನ್ನೂ ಆಯಾ ವರ್ಷ ಸಾರ್ವಜನಿಕವಾಗಿ ಸನ್ಮಾನಿಸುವ ಪದ್ಧತಿಯನ್ನು ಜಾರಿಗೆ ತಂದರು.

ಕುವೆಂಪು ಅವರ ನಾಡಗೀತೆ 'ಜೈ ಭಾರತ ಜನನಿಯೆ ತನುಜಾತೆ ಜಯಹೇ ಕರ್ನಾಟ ಮಾತೆ'ಯಲ್ಲಿ ಮೊದಲಿದ್ದ 'ಮಧ್ವ' ರ ಹೆಸರನ್ನು ಮುಂದುವರಿಸಬೇಕೆಂದು ಅವರು ಹೇಳಿದ್ದು ವಾದ ಪ್ರತಿವಾದಗಳಿಗೆ ಅವಕಾಶ ಮಾಡಿತ್ತು. ಪರಿಷತ್ತಿಗಾಗಿ ಏಕರೂಪದ ಕನ್ನಡ ಬಾವುಟ ವಿನ್ಯಾಸದತ್ತ ಗಮನಹರಿಸಿದರು. ಆದರೆ ಆ ಬಗ್ಗೆ ಮ. ರಾಮಮೂರ್ತಿಯವರು ರೂಪಸಿದ್ದ ಬಾವುಟದ ಬಗ್ಗೆಯೇ ಪ್ರತಿಪಾದನೆ ಸಂಘ ಸಂಸ್ಥೆಗಳಿಂದ ಆದದ್ದರಿಂದ ಹರಿಕೃಷ್ಣ ಪುನರೂರು ಮತ್ತು ಆ ಬಗ್ಗೆ ಪ್ರಸ್ತಾಪ ಮಾಡಲಿಲ್ಲ.

ಕಾವೇರಿ ಜಲವಿವಾದ ತಮಿಳುನಾಡು ಸೃಷ್ಟಿಸಿದ ಕ್ಯಾತೆಗಳ ಕಾರಣವೆ ಆಗಿತ್ತು. ಕರ್ನಾಟಕದಲ್ಲಿ ತೀವ್ರ ಅನಾವೃಷ್ಟಿಯ, ಬರದ ಕಾರಣ, ಪ್ರಾಧಿಕಾರದ ಸೂಚನೆಯಂತೆ ೧೧ ಟಿ.ಎಂ.ಸಿ. ನೀರಿನ ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೆ ಬಿಡುವ ಸ್ಥಿತಿಯಲ್ಲಿರಲಿಲ್ಲ. ೨೦೦೧ರಲ್ಲಿ ಕರ್ನಾಟಕ ತನ್ನ ಕಷ್ಟ ಹೇಳಿಕೊಂಡರೂ ಕೊನೆಗೆ ಅದನ್ನು ೬ ಟಿ.ಎಂ.ಸಿ. ನೀರನ್ನು ಬಿಡುಗಡೆ ಮಾಡಲು ಪ್ರಧಾನಿಯವರ ಆದೇಶವಾಯಿತು. ಕರ್ನಾಟಕಕ್ಕೆ ಇದೂ ತೀರ ಕಷ್ಟವಾದರೂ ಜನರ ಪ್ರಬಲ ಪ್ರತಿಭಟನೆಗಳ ನಡುವೆ ನೀರನ್ನು ಬಿಡುಗಡೆ ಮಾಡಿತ್ತು ಸರ್ಕಾರ. ಈ ಸಂದರ್ಭದಲ್ಲಿ ರೈತ ಸಂಘಟನೆಗಳು, ಕನ್ನಡ ಶಕ್ತಿಕೇಂದ್ರ, ಕನ್ನಡ ಚಳವಳಿ ನಾಯಕರು ಪ್ರತಿಭಟಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ಈ ಸಂದರ್ಭದಲ್ಲಿ ಪಾದಯಾತ್ರೆಯ ಮೂಲಕ ಅಧ್ಯಕ್ಷರ ನೇತೃತ್ವದಲ್ಲಿ ಪ್ರತಿಭಟನೆಯನ್ನು

ಕನ್ನಡ ಸಂಘಟನೆಗಳನ್ನು ಸೇರಿಸಿಕೊಂಡು ಮಾಡಿತು. ಅಂದರೆ ನಾಡಿನ ಸಾಹಿತ್ಯ ನುಡಿ, ನೆಲದ ಹಿತಾಸಕ್ತಿಯಷ್ಟೇಯಲ್ಲದೆ ನಾಡಿನ ಜಲದ ಹಿತಾಸಕ್ತಿಗೆ ಮುಳುವಾದಾಗ ಪರಿಷತ್ತು ಎದ್ದು ನಿಲ್ಲುತ್ತಿದ್ದುದರ ಕುರುಹು ಇದಾಗಿತ್ತು.

ಧರ್ಮದರ್ಶಿ ಹರಿಕೃಷ್ಣ ಪುನರೂರರ ನಂತರ (ನಿ)ಇಂಗ್ಲೀಷ್ ಪ್ರಾಧ್ಯಾಪಕ, ಕವಿ, ನಾಟಕಕಾರ, ಪ್ರೊ॥ ಚಂದ್ರಶೇಖರ ಪಾಟೀಲರು ಪರಿಷತ್ತಿನ ಅಧ್ಯಕ್ಷರಾದರು.

೨-೧೧-೨೦೦೪ ರಂದು **ಪ್ರೊ॥ ಚಂದ್ರಶೇಖರ ಪಾಟೀಲರು** ಪರಿಷತ್ತಿನ ಅಧಿಕಾರ ಗದ್ದುಗೆ ಹಿಡಿದರು. ಅವರ ಗಮನ ಇಂಗ್ಲೀಷ್ ಮಾಧ್ಯಮ ಶಾಲೆಗಳತ್ತ ಹೋಯಿತು. ಆ ಶಾಲೆಗಳ ವಿರುದ್ಧ ಮಾತೃಭಾಷಾ ಮಾಧ್ಯಮದ ವಿಷಯವಾಗಿ ಬೃಹತ್ ಧರಣಿ ಸತ್ಯಾಗ್ರಹವನ್ನೂ ಪರಿಷತ್ತಿನ ಆವರಣದಲ್ಲಿ ಸಂಘಟಿಸಿದರು. ಸಮಾನ ಶಿಕ್ಷಣ ನೀತಿಗೆ ಆಗ್ರಹಿಸಿ ಮಾತೃಭಾಷಾ ಮಾಧ್ಯಮ ಅಳವಡಿಕೆ ಬಗ್ಗೆ ಕೇಂದ್ರದಿಂದ ಹಿಡಿದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಚಳವಳಿ ನಡೆಸಿ ಸರ್ಕಾರದ ಗಮನವನ್ನು ಪರಿಷತ್ತು ಸೆಳೆಯಿತು. ಇಂಗ್ಲಿಷ್ ಭಾಷೆಯಲ್ಲಿ ಪ್ರಾಥಮಿಕ ೫ ನೆಯ ತರಗತಿಯಿಂದ ಒಂದು ಭಾಷೆಯಾಗಿ ಕಲಿಕೆಗೆ ಅವಕಾಶ ಕೇಂದ್ರ ಪಠ್ಯಕ್ರಮದ ಶಾಲಾ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಬಗ್ಗೆ ಕೇಂದ್ರವನ್ನು, ರಾಜ್ಯ ಸರ್ಕಾರವು ಒತ್ತಾಯಿಸಬೇಕು. ಎಂದು ಪರಿಷತ್ತು ಆರಂಭಿಸಿದ ಚಳವಳಿ ಯಶ ಪಡೆಯಿತು. ಸರ್ಕಾರದ ವತಿಯಿಂದ ಆಗ ಶಿಕ್ಷಣ ತಜ್ಞರನ್ನು, ಸಾಂಸ್ಕೃತಿಕ, ಸಾಹಿತ್ಯ ಲೋಕದ ಮುಖ್ಯರವನ್ನು ಮನೋವಿಜ್ಞಾನಿ, ಕಾನೂನು ಪರಿಣತರು, ಕನ್ನಡ ಸಂಘಟನೆಗಳ ಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳನ್ನು, ಶಿಕ್ಷಣ ಸಚಿವರು ದಿನಾಂಕ ೧೨-೫--೨೦೦೫ ರಂದು ಸಮಾಲೋಚನೆಗೆ ಆಹ್ವಾನಿಸಿ, ಸಮಸ್ಯೆಗಳನ್ನು ಚರ್ಚಿಸಿದರು.

ಪರಿಷತ್ತಿಗೊಂದು ಹೊಸ ಯೋಜನೆ **ಪುಸ್ತಕ ಸಂತೆ**ಯನ್ನು ೨೦೦೫ರಲ್ಲಿ ಆರಂಭಿಸಲಾಯಿತು. ಪ್ರತಿ ಶನಿವಾರ, ಪರಿಷತ್ತಿನ ಅಂಗಳದಲ್ಲಿ ಕನ್ನಡ ಪುಸ್ತಕ ಪ್ರಕಾಶಕರು, ಮರಾಟಗಾರರನ್ನು ಕೂಡಿಸಿ ರಿಯಾಯಿತಿ ದರದಲ್ಲಿ ಕನ್ನಡ ಪುಸ್ತಕಗಳನ್ನು ಮಾರಾಟ ಮಾಡುವ ವ್ಯವಸ್ಥೆ ಅದಾಗಿತ್ತು. ಅಂದು ಗಣ್ಯ ಅತಿಥಿ ಉಪನ್ಯಾಸ, ಹಾಡು, ನೃತ್ಯ ಇತ್ಯಾದಿ ಕಾರ್ಯಕ್ರಮಗಳೂ ಜೊತೆಗೂಡಿದ್ದುವು.

೨೦೦೬ರಲ್ಲಿ ಬಿದರ್‌ನಲ್ಲಿ ಜನವರಿ ೨೭ ರಿಂದ ೨೯ರ ವರೆಗೆ ನಡೆದ ೭೨ನೇ ಅ.ಭಾ.ಕ. ಸಾಹಿತ್ಯ ಸಮ್ಮೇಳನದಲ್ಲಿ ಜಾಗತೀಕರಣ, ಕನ್ನಡ ಮಾಧ್ಯಮ, ಶಾಸ್ತ್ರೀಯ ಭಾಷೆಯಾಗಿ ಕನ್ನಡ ಹಾಗು ಸಮಸ್ಯೆಗಳ ವಿಚಾರಗೋಷ್ಠಿ ನಡೆದುವು. ಸಾಮಾಜಿಕ ಶೈಕ್ಷಣಿಕ ಕಾಳಜಿಗಳ ಕುರುಹು ಇದಾಗಿತ್ತು. ಹಿರಿಯ ಸಾಹಿತಿಗಳೊಡನೆ ಸಂವಾದ ಹಾಗೂ ಪುಸ್ತಕಗಳ ಪ್ರಕಟಣೆಯೂ ಆಯಿತು. ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯಂದು (೫-೫-೨೦೦೬) ವಸಂತೋತ್ಸವ, ಬಹುಭಾಷಾ ಕವಿಗೋಷ್ಠಿಯನ್ನು (ಕನ್ನಡ, ಹಿಂದಿ, ಉರ್ದು, ಕೊಂಕಣಿ, ಕೊಡವ, ತುಳು) ಏರ್ಪಡಿಸಲಾಗಿತ್ತು. **ಅಧ್ಯಕ್ಷರ ಪುಸ್ತಕನಿಧಿ** ಎಂದು ಆರಂಭಿಸಿ ಸಂಗ್ರಹಿತ ಗ್ರಂಥಗಳ ಕೊಡುಗೆಯನ್ನು ಗಡಿನಾಡು ಹಾಗೂ ಗ್ರಾಮೀಣ ಗ್ರಂಥಾಲಯಗಳಿಗೆ ಉಚಿತವಾಗಿ ಕಳುಹಿಸಿದರು. ನಾಡೋಜ ದೇ. ಜವರೇಗೌಡರಿಗೆ ೨೦೦೭ನೇ ಸಾಲಿನ, ಪರಿಷತ್ತಿನಲ್ಲಿ ಸ್ಥಾಪಿಸಿರುವ ಬೆಂ.ಮ.ಸಾ. ಸಂಸ್ಥೆ **ನೃಪತುಂಗ ಪ್ರಶಸ್ತಿ**ಯನ್ನು ೧-೩-೨೦೦೮ರಂದು ಪ್ರದಾನ ಮಾಡಲಾಯಿತು. ಬೆಂ.ಮ.ಸಾ.ಸಂಸ್ಥೆ ಸ್ಥಾಪಿತ ೧.೫ ಕೋಟಿ ರೂ ವತಿಯಿಂದ **ಅರಳು ಪ್ರಶಸ್ತಿಯನ್ನು** ೩೪ ವರ್ಷ ಮೀರದ ಕನ್ನಡ ಯುವಲೇಖಕರಿಗೆ ಮೊದಲ ಬಾರಿಗೆ ನೀಡಲಾಯಿತು. ತಮಿಳು ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಸಿಕ್ಕಿ, ಅದರ ಅಭಿವೃದ್ಧಿಗಾಗಿ ಕೋಟಿಗಟ್ಟಲೆ ಹಣ ಬಂದಂತೆ ತಮಿಳಿನಂತೆಯೇ ಪ್ರಾಚೀನವಾಗಿರುವ ಕನ್ನಡ ಭಾಷೆಗೂ ಶಾಸ್ತ್ರೀಯ ಭಾಷಾಸ್ಥಾನ ಸಿಗಬೇಕೆಂದು ಹೋರಾಡಿದ ಕನ್ನಡಾಭಿಮಾನಿಗಳ ಹೋರಾಟಕ್ಕೆ ಪರಿಷತ್ತು ನಾಯಕತ್ವ ಒದಗಿಸಿತು. ೭೩ನೆಯ ಅ.ಭಾ.ಕ. ಸಾಹಿತ್ಯ ಸಮ್ಮೇಳನವು

೨೦೦೬ರ ಡಿಸೆಂಬರ್ ೨೦ರಿಂದ ೨೩ರ ವರೆಗೆ ಶಿವಮೊಗ್ಗದಲ್ಲಿ ನಡೆದಾಗ ಭಾಷಾ ಅಲ್ಪಸಂಖ್ಯಾತ ವರ್ಗದಿಂದ ಬಂದ ಹಿರಿಯ ಕವಿ ಪ್ರೊ॥ ಕೆ.ಎಸ್. ನಿಸಾರ್ ಅಹಮದ್ ಅವರನ್ನು ಆಯ್ಕೆ ಮಾಡಿ ಗೌರವನ್ನು ಸೂಚಿಸಿತು. ಪರಿಷತ್ತಿಗೆ, ವೆಬ್‌ಸೈಟ್ ನಿರ್ಮಾಣ (ಅಂತರ್ಜಾಲ) ಇ-ಮೇಲ್ ಸೌಲಭ್ಯವನ್ನು ಒದಗಿಸಲಾಯಿತು. ಆಗಸ್ಟ್ ೨೦೦೬ರ ೧೯ ಹಾಗು ೨೦ರಂದು ಕನ್ನಡ ಗುಣಕ ಸಮ್ಮೇಳನವನ್ನು ಏರ್ಪಡಿಸಲಾಯಿತು.

ಕರ್ನಾಟಕ ಮಹಾರಾಷ್ಟ್ರ ಗಡಿವಿವಾದಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿತ್ತು. ಭಾರತ ಸರ್ಕಾರ ಕೋರ್ಟಿಗೆ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಹಿಂದೆಗೆದುಕೊಂಡದ್ದು ಕನ್ನಡಿಗರಲ್ಲಿ ತೀವ್ರ ಆಕ್ರೋಶಕ್ಕೆಡೆಯಾಯಿತು. ಮಹಾಜನ್ ವರದಿ ಜಾರಿಗಾಗಿ ೪-೧೦-೨೦೦೬ ರಂದು 'ಮಹಾಜನ್ ವರದಿ' ಯನ್ನು ಜಾರಿಗೆ ತರಲು ಒತ್ತಾಯ ಹಾಕಿ 'ಕರ್ನಾಟಕ ಬಂದ್'ಗೆ ಕನ್ನಡ ಸಂಘ ಸಂಸ್ಥೆಗಳು ಕರೆ ನೀಡಿದ್ದವು. ಪರಿಷತ್ತು ಪ್ರಧಾನ ಭೂಮಿಕೆಯಲ್ಲಿ ತೋರಿಕೊಂಡಿತು. ಜಿಲ್ಲಾ, ತಾಲ್ಲೂಕು ಘಟಕಗಳು 'ಬಂದ್' ಅನ್ನು ಆಚರಿಸಲು ಪರಿಷತ್ತಿನ ಸೂಚನೆ ಆಯಿತು. ಅದರ 'ಶಕ್ತಿ'ದರ್ಶನವೂ ಸರ್ಕಾರಕ್ಕೆ ಮತ್ತೊಮ್ಮೆ ಆಯಿತು. ಕನ್ನಡದ ಸಮಸ್ಯೆಗಳಿಗೆ, ಪರಿಷತ್ತನ್ನು **ಸಮರ್ಥ ವೇದಿಕೆ** ಎಂದು ತೋರಿಸಿಕೊಡಲಾಯಿತು.

೨೮-೮-೨೦೦೬ರ ಇವರ ಕಾಲದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಮಾನಿತ ೯ ತಿಂಗಳ ಅವಧಿಯ ಶಾಸನ ಶಾಸ್ತ್ರ ಡಿಪ್ಲೊಮ ಕೋರ್ಸ್ ಗೆ ಶಾಸನ ಶಾಸ್ತ್ರ ಸಂಶೋಧನ ಕೇಂದ್ರ ರೂಪುಗೊಂಡಿತು. ಡಾ. ಎಂ.ಜಿ. ನಾಗರಾಜ್ ಅವರು ಆ ಕೇಂದ್ರದ ಗೌರವ ನಿರ್ದೇಶಕರಾಗಿ ೨೦೦೬ರಿಂದ ೨೦೧೦ರ ವರೆಗೆ ಸೇವೆ ಸಲ್ಲಿಸಿದರು. ಈ ಕೇಂದ್ರದಲ್ಲಿ ಶಾಸನ ಡಿಪ್ಲೊಮ ತರಗತಿಗಳಿಗೆ ಮಾಸಿಕ ವಿಶೇಷ ಉಪನ್ಯಾಸಗಳನ್ನು ವ್ಯವಸ್ಥೆ ಮಾಡಲಾಗುತ್ತಿತ್ತು. ಇದಲ್ಲದೆ ೨೦-೫-೨೦೦೭ರಂದು 'ಶಾಸನ -ಇತಿಹಾಸ' ಎಂಬ ವಿಷಯದ ಕುರಿತು ವಿದ್ವಾಂಸರಿಂದ, ೨-೩-೨೦೮ರಂದು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ವಿದ್ಯಾರ್ಥಿಗಳಿಂದ ಪ್ರಬಂಧ ಮಂಡನೆ ಆಯಿತು. ೧೯೩-೯೫ರಲ್ಲಿ ಡಾ. ಚಿದಾನಂದಮೂರ್ತಿ ಅವರು 'ಸಂಶೋಧನ ಕೇಂದ್ರ'ದ ನಿರ್ದೇಶಕರಾಗಿದ್ದು, ಆ ನಂತರ ಕೇಂದ್ರದ ಕಾರ್ಯಾನುಸರಣೆಯಲ್ಲಿರಲಿಲ್ಲ. ಅಂತಾಗಿ ೨೦೦೬ರಲ್ಲಿ ಅದು ಮತ್ತೆ ಪುನರ್ ರೂಪುಗೊಂಡಿತು. ೨೦೧೦ರ ವರೆಗೂ ನಡೆದು ಬಂದಿತು. ಈಗ ಶಾಸನ ತರಗತಿಗಳು ಮಾತ್ರ ನಡೆಯುತ್ತಿವೆ. ಜಾನಪದ ತರಗತಿಗಳು ಹಂಪನಾ ಅವರ ಕಾಲದಲ್ಲಿ ಮೊದಲ ಬಾರಿಗೆ ಪ್ರವೇಶ, ಪ್ರೌಢ ತರಗತಿಗಳಾಗಿ ಆರಂಭವಾಗಿ ನಡೆದು ಕೆಲಕಾಲನಿಂತು ಹೋಗಿತ್ತು. ಮತ್ತೆ ಡಾ. ಆರ್. ಕೆ. ನಲ್ಲೂರು ಪ್ರಸಾದ್ ಅವರ ಕಾಲದಲ್ಲಿ ಆರಂಭವಾಗಿತ್ತು. ಪ್ರೊ. ಚಂದ್ರಶೇಖರ ಪಾಟೀಲರ ನಂತರ **ಡಾ. ಆರ್.ಕೆ. ನಲ್ಲೂರ್ ಪ್ರಸಾದ್** ಅವರು ಆಗಸ್ಟ್ ೨೦೦೮ರಲ್ಲಿ ಬಂದು ಪರಿಷತ್ ಅಧ್ಯಕ್ಷರಾಗಿ ಮೂರುವರೆ ವರ್ಷಕಾಲ ಸೇವೆ ಸಲ್ಲಿಸಿದರು. ತಮ್ಮ ಅವಧಿಯಲ್ಲಿ ನಾಲ್ಕು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದರು. ಇವರು ಪರಿಷತ್ತಿನ ಜಿಲ್ಲಾ ಘಟಕಗಳ ಸಾಹಿತ್ಯ ಸಮ್ಮೇಳನಕ್ಕೆ ಒಂದು ಲಕ್ಷವಿದ್ದ ಅನುದಾನವನ್ನು ೫ ಲಕ್ಷಕ್ಕೆ, ತಾಲೂಕು ಘಟಕಗಳಿಗೆ ಸಾಹಿತ್ಯ ಸಮ್ಮೇಳನಕ್ಕಾಗಿ ಒಂದು ಲಕ್ಷ ರೂ. ಅನುದಾನದ ಯೋಜನೆಯನ್ನು ಒದಗಿಸಿದರು. ಅದರಿಂದ ಆ ಸಮ್ಮೇಳನಗಳು ಹೆಚ್ಚು ಅರ್ಥಪೂರ್ಣವಾಗಿ ನಡೆಯಲು ಅವಕಾಶವಾದುವು. ಸಮ್ಮೇಳನವಲ್ಲದೆ, ಸಂಶೋಧನ ಕಮ್ಮಟ, ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳಲು ಅವುಗಳಿಗೆ ಸಾಧ್ಯವಾಯಿತು. ಜೊತೆಗೆ ಆಯಾ ಸಮ್ಮೇಳನಗಳಲ್ಲಿ ಮಂಡಿತ ಪ್ರಬಂಧಗಳ ಸಂಕಲನವನ್ನು ಪ್ರಕಟಮಾಡಿರುವ ಜಿಲ್ಲೆಯ ಸಾಹಿತ್ಯ, ಇತಿಹಾಸ, ಸಂಸ್ಕೃತಿ ಜನಾಂಗಗಳ ಕುರಿತು ಲೇಖನಗಳು ಆ ಸಂಕಲನದಲ್ಲಿದ್ದು ಅದು ಉಪಯುಕ್ತ ಮಾಹಿತಿಯ ಕೋಶವಾಗಿತ್ತು. ಇದಲ್ಲದೆ ಜಿಲ್ಲಾ ಘಟಕಗಳ ವತಿಯಿಂದ **ಗ್ರಾಮಸಿರಿ** ಎಂಬ ಹೊಸ ಕಾರ್ಯ ಆರಂಭಗೊಂಡಿತು. ಅದು ಗ್ರಾಮೀಣ ಸಂಸ್ಕೃತಿಯ ಎಲ್ಲ ಆಯಾಮಗಳನ್ನು ಪರಿಚಯಿಸಿ ಗ್ರಾಮೀಣರ ಸಾಹಿತ್ಯಿಕ ಆಸಕ್ತಿಯನ್ನು ಉತ್ತೇಜಿಸಿದ ಯಶಸ್ವಿ ಕಾರ್ಯಕ್ರಮವಾಗಿತ್ತು

ನಲ್ಲೂರರ ಅವಧಿಯಲ್ಲಿ ಸಾಹಿತ್ಯಿಕ 'ಶ್ರೀ ವಿಜಯ' ಪ್ರಶಸ್ತಿ ಕೊಡಲಾಯಿತು. ಕನ್ನಡ-ಕನ್ನಡ ಬೃಹತ್ ನಿಘಂಟುಗಳು ಪುನರ್ಮುದ್ರಣವಾದುವು, (ಎಂಟು ಸಂಪುಟಗಳು). ವಲಯ ಕನ್ನಡ ಸಾಹಿತ್ಯ ಸಮ್ಮೇಳನಗಳು ನಡೆದವು. ಪುಸ್ತಕ ಮಾರಾಟದಿಂದ ಬರುವ ಹಣವನ್ನು ಶಾಶ್ವತ ನಿಧಿಯನ್ನಾಗಿಸಿದರು. ಕುವೆಂಪು ಸಭಾಂಗಣವನ್ನು, ವಜ್ರಮಹೋತ್ಸವ ಕಟ್ಟಡದ ಮೂರನೇ ಮಹಡಿಯಲ್ಲಿ ರೂಪಿಸಿದರು. ಕೃಷ್ಣರಾಜ ಪರಿಷನ್ಮಂದಿರದ ಸಭಾಂಗಣದಲ್ಲಿದ್ದ ಸಾಹಿತ್ಯ ಸಾಧಕರ ಭಾವಚಿತ್ರಗಳನ್ನು ಒಂದೇ ಗಾತ್ರಕ್ಕೆ ಹೊಂದಿಸಿ ಕುವೆಂಪು ಸಭಾಂಗಣದಲ್ಲಿ ಅಲಂಕರಿಸಿದರು. ಪರಿಷತ್ತನ್ನು ಆರ್ಥಿಕವಾಗಿ ಸದೃಢಗೊಳಿಸಿದರು. ಸರ್ಕಾರದ ಅನುದಾನ ಪಡೆದು ಸಂಶೋಧನಾ ವಿಭಾಗವನ್ನು ಪ್ರತ್ಯೇಕವಾಗಿ ರೂಪಿಸಿದರು. ಡಾ. ಎಚ್. ಜಯಮ್ಮ ಕರಿಯಣ್ಣ ಅವರು ಆ ವಿಭಾಗದ ಮೇಲ್ವಿಚಾರಕರಾಗಿದ್ದರು. ಪರಿಷತ್ತಿನ ಸಿಬ್ಬಂದಿಗಳ ಸಂಬಳ ಸಾರಿಗೆಯನ್ನು ಹೆಚ್ಚಿಸಿದರು. ದತ್ತಿ ನಿಧಿಯು ಸುಮಾರು ಮೂರುವರೆ ಕೋಟಿಗೂ ಮೀರಿತು. ಸದಸ್ಯರ ಸಂಖ್ಯೆ ಒಂದು ಲಕ್ಷ ನಲವತ್ತು ಸಾವಿರವನ್ನು ಮೀರಿತು. ದತ್ತಿಗಳ ಸಂಖ್ಯೆ ಇಂದು ೧೪೦೦ ರಷ್ಟು ಸಂಖ್ಯೆಗೆ ಮುಟ್ಟಿರುವುದು. ಪರಿಷತ್ತಿನ ಮೇಲಿನ ನಂಬಿಕೆಯ ಕುರುಹಾಗಿದೆ. ಇವರ ಕಾಲದಲ್ಲಿ ಶಾಸನ ಶಾಸ್ತ್ರ ಸಂಶೋಧನ ಕೇಂದ್ರದಲ್ಲಿ (೬-೬-೨೦೧೦) 'ಶಾಸನೋಕ್ತ ಸಣ್ಣ ರಾಜವಂಶ'ಗಳ ಕುರಿತು ವಾರ್ಷಿಕ ವಿಶೇಷ ವಿಚಾರ ಗೋಷ್ಠಿಯು ನಡೆಯಿತು. ತಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದಂತೆ, ಗುರಿ ಸಾಧಿಸಿದ ತೃಪ್ತಿ ಅವರದಾಗಿದೆ.

ಫೆಬ್ರವರಿ ೨೭, ೨೦೧೨ರಂದು ಡಾ. ನಲ್ಲೂರು ಪ್ರಸಾದ್ ಅವರ ಅಧಿಕಾರಾವಧಿಯು ಮುಗಿಯಲಾಗಿ, ಅಧ್ಯಕ್ಷರ ಮುಂದಿನ ಅಧ್ಯಕ್ಷರ ಚುನಾವಣೆಯು ಆಗುವವರೆಗೆ ಡಾ. ಮನುಬಳಿಗಾರ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಯಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿದರು.

ಡಾ. ಆರ್.ಕೆ. ನಲ್ಲೂರು ಪ್ರಸಾದ್ ಅವರ ನಂತರ ೩, ಮೇ ೨೦೧೨ ರಲ್ಲಿ ಪರಿಷತ್ತಿನ ಅಧ್ಯಕ್ಷರಾಗಿ **ಶ್ರೀ ಪುಂಡಲೀಕ ಹಾಲಂಬಿಯವರು** ಅಧಿಕಾರ ಸ್ವೀಕರಿಸಿದರು. ಅವರು ಕಳೆದ ೧೪ ವರ್ಷಗಳಿಂದ ಪರಿಷತ್ತಿನ ಕಾರ್ಯದರ್ಶಿ, ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿದವರು. ಅವರು ತಮ್ಮ ಪ್ರಣಾಳಿಕೆಯಲ್ಲಿನ ೧೧ ಅಂಶಗಳಲ್ಲಿ ಪರಿಷತ್ತನ್ನು ಸಾಮಾಜಿಕ-ಪ್ರಾದೇಶಿಕ ಪ್ರತಿಭಾ ನ್ಯಾಯಗಳಡಿಯಲ್ಲಿ ಕಟ್ಟುವುದು, ಬೆಳೆಸುವುದು; ಆರ್ಥಿಕ ಸ್ವಾವಲಂಬನೆ, ಘಟಕಗಳು ನಿರಂತರ ಕ್ರಿಯಾಶೀಲ, ಶಿಸ್ತುಬದ್ಧ ಕಾರ್ಯಕ್ರಮಗಳ ಚಾಲನೆ, ಸಂಶೋಧನೆ-ಪ್ರಕಟಣೆಗೆ ಆದ್ಯತೆ, ಶತಮಾನೋತ್ಸವದ ಆಚರಣೆಯನ್ನು ಗ್ರಾಮದಿಂದ ಹಿಡಿದು ರಾಜಧಾನಿಯ ವರೆಗೆ ಅಚ್ಚುಕಟ್ಟಾಗಿ ನಡೆಸುವಿಕೆ, ಕಿರಿಯ ಸಾಹಿತಿಗಳಿಗೆ ಪ್ರೋತ್ಸಾಹ, ಹಿರಿಯ ಸಾಹಿತಿಗಳ ಸಲಹೆ, ಕನ್ನಡ ಸಂಘಟನೆಗಳ ಸಹಕಾರ ಪಡೆಯುವುದು, ಹಿಂದಿನ ಅಧ್ಯಕ್ಷರುಗಳ ಕಾಲದಲ್ಲಿ ಅಳವಡಿಕೆಯಾದ ಪರಿಷತ್ತಿನ ಮಹತ್ತನ್ನು ಹೆಚ್ಚಿಸಿದ ಎಲ್ಲ ಕಾರ್ಯಕ್ರಮಗಳ ಅನುಷ್ಠಾನ ಕುರಿತೆಲ್ಲ ಹೇಳಿರುವಂತೆ ಈಗ ನಡೆಯಲಾರಂಭಿಸಿದ್ದಾರೆ.

ಇತ್ತೀಚೆಗೆ ಸರ್ಕಾರ ಆಂಗ್ಲ ಮಾಧ್ಯಮವನ್ನು ೬ನೇ ತರಗತಿಯಿಂದಲೇ ಹೇರುವ ಪ್ರಯತ್ನಕ್ಕೆ ವಿರೋಧ ಮಾಡಿದ್ದಾರೆ. ಆ ಬಗ್ಗೆ ಪ್ರತಿಭಟನಾ ಧರಣಿಯನ್ನು ಪರಿಷತ್ತಿನ ಆವರಣದಲ್ಲಿ ಎಲ್ಲ ಕನ್ನಡ ಸಂಘಟನೆಗಳನ್ನು ಸಾಹಿತಿಗಳನ್ನು, ಆಹ್ವಾನಿಸಿ ಆರಂಭಿಸಿದ್ದಾರೆ. ಜಿಲ್ಲಾ ತಾಲ್ಲೂಕು ಘಟಕಗಳಿಂದಲೂ ಪ್ರತಿಭಟನೆಗಳನ್ನು ನಡೆಸಲಾರಂಭಿಸಿದ್ದಾರೆ. ಇಂಗ್ಲೀಷ್ ಭಾಷಾಕಲಿಕೆ ಇರಲಿ, ಈ ಹಂತದಲ್ಲಿ ಇಂಗ್ಲಿಷ್ ಮಾಧ್ಯಮ ಬೇಡ ಎಂಬುದು ಅವರ ನಿಲುವು. ಜುಲೈ ತಿಂಗಳಲ್ಲಿ ಪರಿಷತ್ತಿನಲ್ಲಿ ನಡೆದ ಸಾಹಿತ್ಯ ದತ್ತಿ ಪ್ರಶಸ್ತಿಗಳನ್ನು ಅಚ್ಚುಕಟ್ಟಾಗಿ ೩೧ ಸಾಹಿತಿಗಳಿಗೆ ವಿತರಿಸಿದ ಸಮಾರಂಭದ ಸಮಯದಲ್ಲಿ ನಾಡವರಿಗೆ ಈ ಬಗ್ಗೆ ಕರೆಕೊಟ್ಟು ತಮ್ಮ 'ನುಡಿಯ ಕಾಳಜಿ'ಯನ್ನು ವ್ಯಕ್ತ ಮಾಡಿದ್ದಾರೆ.

ಪರಿಷತ್ತು ಆರಂಭವಾಗಿನಿಂದ ಸಂಚಲಿಸಿದ ಅಧ್ಯಕ್ಷರ ಪ್ರಯತ್ನಗಳನ್ನು ನೋಡಿದರೆ ನಾಡು-ನುಡಿಯ ಬಗ್ಗೆ ಅವರ ಅತೀವ ಹಂಬಲ, ಕಾಳಜಿಗಳ ಚಿತ್ರ ಸಿಗುತ್ತದೆ. ತಮ್ಮ ಕಾಲದ ಅಗತ್ಯಗಳಿಗನುಗುಣವಾಗಿ ಕಾರ್ಯಾವಸರಗಳನ್ನು ತೋರಿದ್ದಾರೆ. ಈ ನಿಟ್ಟಿನಲ್ಲಿ ಪಾಂಡಿತ್ಯಕ್ಕೆ ಗ್ರಂಥ ಪ್ರಕಟನೆಗೆ ಆರ್ಥಿಕ ಸದೃಢತಗೆ, ಸಮ್ಮೇಳನಗಳ ಅಚ್ಚುಕಟ್ಟಿಗೆ, ಕನ್ನಡ ಸಂಘಟನೆಗಳ ಒಕ್ಕೂಟಗಳಿಗೆ, ನಾಡು-ನುಡಿಯ ಸಮಸ್ಯೆಗಳಿಗೆ ಕನ್ನಡಿಗರ ಏಕೀಕರಣಕ್ಕೆ ಪರಿಷತ್ತಿನ ಪ್ರಗತಿಗೆ ತಮ್ಮ ತನುಮನ ಧನವನ್ನು ಅರ್ಪಿಸಿ ಸೇವೆ ಮಾಡಿದ ಅಂಶ ಕಾಣುತ್ತದೆ. ಅದರಲ್ಲಿ ಪರಿಶ್ರಮವಿದೆ. ತುಡಿತವಿದೆ. ಪ್ರತಿಭೆ ಇದೆ, ಹೊಸ ನೋಟಗಳಿವೆ. ಚಳುವಳಿಗೂ ಸೈ, ಸಾಂತ್ವನಕ್ಕೂ ಸೈ ಎನ್ನುವುದು ಕೆಲವಾರು ಅಧ್ಯಕ್ಷರ ಒಲವುಗಳಲ್ಲಿ ಕಾಣಬರುತ್ತದೆ. ಕೆಲವು ದಶಕಗಳಿಂದ ಕೇವಲ ಸಾಹಿತ್ಯಕ್ಕೇ ಸಮೇಳನಗಳಲ್ಲಿ ಒತ್ತುಕೊಡುವ ಬದಲು, ನೆಲ, ಜಲ, ನುಡಿ, ಗಡಿ, ನಾಡು ಸಮಸ್ಯೆಗಳ ಬಗ್ಗೆ; ಕಲೆ, ಕೃಷಿ, ಶೋಧಗಳ ಬಗ್ಗೆ ವಿಚಾರಗಳನ್ನು ಮಂಡಿಸಲು ಅವಕಾಶ ಮೂಡಿರುವುದು ಕಾಲೀನ ಜಾಯಮಾನಕ್ಕೆ ಪರಿಷತ್ತು ಸ್ಪಂದಿಸಿರುವುದೂ ಕಾಣುತ್ತದೆ. ಈ ಪರಿಷತ್ತು ಶತಮಾನೋತ್ಸವದ ಅಂಚಿಗೆ ತಾಗುತ್ತಿದೆ. ಸಮಸ್ತ ಕನ್ನಡಿಗರ ಆಶೋತ್ತರಗಳಿಗೆ ಅದು ಸ್ಪಂದಿಸುತ್ತ ನಿರಂತರ ಕಾರ್ಯಶೀಲತೆಯಿಂದ ಕಂಗೊಳಿಸಲಿ ಎಂಬುದು ನಾಡವರ ಆಶಯ.

ನೆರವಾದ ಗ್ರಂಥಗಳು

೧. ಪರಿಷತ್ತಿನ ಬೃಹತ್ ಕನ್ನಡ -ಕನ್ನಡ ನಿಘಂಟು ಸಂಪುಟಗಳು

೨. ವೆಂಕಟೇಶ ಸಾಂಗಲಿ., ೧೯೭೭, **ನಮ್ಮ ಪರಿಷತ್ತು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩. **ಚಿನ್ನದ ಬೆಳಸು** (ಸ್ಮರಣ ಸಂಪುಟ)., (ಸಂ.) ಎಂ.ವೀ. ಸೀತಾರಾಮಯ್ಯ

೪. ಜಗನ್ನಾಥ ಹೇಮಾದ್ರಿ., ೨೦೦೬ **ಕನ್ನಡ ಸಾಹಿತ್ಯ ಪರಿಷತ್ತು,** ಕ.ಸಾ.ಪ. ಬೆಂಗಳೂರು.

೫. **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ** ಹಾಗೂ **ಕನ್ನಡ ನುಡಿಯ** ಕೆಲವು ಸಂಚಿಕೆಗಳು



೧೯೭೮ರಲ್ಲಿ ರಾಮನಗರದ ಕನ್ನಡ ಸಾಹಿತ್ಯ ಸಮಿತಿ ಆಶ್ರಯದಲ್ಲಿ ನಡೆದ ಕಿರುಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಭಾಷಣವನ್ನು ಮಾಡುತ್ತಿರುವ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣರವರು. ಚಿತ್ರದಲ್ಲಿ ಡಾ. ಸಿದ್ಧಯ್ಯ ಪುರಾಣಿಕ್ ಮತ್ತು ಸಮಿತಿಯ ಅಧ್ಯಕ್ಷರಾದ ಡಾ. ಎಸ್.ಎಲ್. ತಿಮ್ಮಯ್ಯ.



ಕನ್ನಡ ಸಾಹಿತ್ಯ ಪರಿಷತ್ತಿನ ಆದಿಕಟ್ಟಡ ಮತ್ತು ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಮೊದಲಿನ ಪ್ರವೇಶದ್ವಾರ (ಇಂದು ಪುಸ್ತಕ ಪ್ರದರ್ಶನ ಮತ್ತು ಮಾರಾಟ ವಿಭಾಗವನ್ನು ಹೊಂದಿದೆ)



ಕನ್ನಡ ಸಾಹಿತ್ಯ ಪರಿಷತ್ತಿನ ಆದಿಕಟ್ಟಡ ಮತ್ತು ವಜ್ರಮಹೋತ್ಸವ ಕಟ್ಟಡ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರತಿಮೆ, ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಸಿಬ್ಬಂದಿ ಕಛೇರಿ, ಪಂಪ ಸಭಾಂಗಣ, ಕುವೆಂಪು ಸಭಾಂಗಣ ವಿಭಾಗಗಳಲ್ಲಿವೆ.



ಕನ್ನಡ–ಕನ್ನಡ ನಿಘಂಟುವಿನ ಎಂಟನೇ ಸಂಪುಟದ ಬಿಡುಗಡೆಯಾದ ಸಂದರ್ಭದಲ್ಲಿ ಪ್ರಧಾನ ಸಂಪಾದಕರಾದ ಪ್ರೊ. ಎನ್. ಬಸವಾರಾಧ್ಯರನ್ನು, ಪ್ರೊ. ಎ.ಎನ್. ಮೂರ್ತಿ ರಾಯರು ಸನ್ಮಾನಿಸುತ್ತಿರುವ ದೃಶ್ಯ. ಚಿತ್ರದಲ್ಲಿ ಪರಿಷತ್ತಿನ ಅಧ್ಯಕ್ಷ ಡಾ. ಸಾ.ಶಿ. ಮರುಳಯ್ಯನವರು.



ಪರಿಷತ್ ಧ್ವಜ ಅಮೃತ ಕಳಶ ಓಲೆಗರಿ,
ಕಾಳು ತುಂಬಿದ ತೆನೆಧಾರಿಣಿ ಅಭಯಹಸ್ತೆ



ಕನ್ನಡ ಸಾಹಿತ್ಯ ಪರಿಷತ್ತಿನ ಲಾಂಛನ



ಕನ್ನಡ ಸಾಹಿತ್ಯ ಪರಿಷತ್ತಿನ ಸರಸ್ವತಿ ಭಂಡಾರದ ಪ್ರವೇಶ ದ್ವಾರ




೧೯೭೩ರಲ್ಲಿ ನಿರ್ಮಿತವಾದ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡ



ಕನ್ನಡ ಸಾಹಿತ್ಯ ಪರಿಷತ್ತಿನ ೮೪ನೇ ಹುಟ್ಟುಹಬ್ಬದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಮತ್ತು ಕನ್ನಡನುಡಿಯ ಸಂಪಾದಕರುಗಳಿಗೆ ರಾಜರ್ಷಿ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಿಂದ ಸನ್ಮಾನ



ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡ, ಅಚ್ಚುಕೂಟ 'ಸರಸ್ವತಿ ಭಂಡಾರ' ವಿಭಾಗಗಳನ್ನು ಹೊಂದಿದೆ



ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಭಾವಚಿತ್ರ

ಪರಿಷತ್ತಿನ ವಾರ್ಷಿಕ ದತ್ತಿ ಪ್ರಶಸ್ತಿ ಸಮಾರಂಭದ ಉದ್ಘಾಟನೆ ಮಾಡುತ್ತಿರುವ ಮಾಜಿ ಅಧ್ಯಕ್ಷ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ನಿಕಟಪೂರ್ವ ಅಧ್ಯಕ್ಷ ಪ್ರೊ. ಆರ್.ಕೆ. ನಲ್ಲೂರುಪ್ರಸಾದ್, ಹಾಲಿ ಅಧ್ಯಕ್ಷ ಶ್ರೀ ಪುಂಡಲೀಕ ಹಾಲಂಬಿ





ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಾಹಿತ್ಯ ದತ್ತಿ ಪ್ರಶಸ್ತಿ ವಿಜೇತರೊಡನೆ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ (ಮಾಜಿ ಅಧ್ಯಕ್ಷರು), ಪ್ರೊ. ಆರ್.ಕೆ. ನಲ್ಲೂರು ಪ್ರಸಾದ್ (ನಿಕಟಪೂರ್ವ ಅಧ್ಯಕ್ಷರು), ಶ್ರೀ ಪುಂಡಲೀಕ ಹಾಲಂಬಿ (ಹಾಲಿ ಅಧ್ಯಕ್ಷರು)

72. ಬೇಗೂರಿನ ಅಗ್ರಹಾರದ ಐತಿಹ್ಯ

ಡಾ. ಎಂ. ವಿ. ಶ್ರೀನಿವಾಸ

ಬೇಗೂರು ಬಹು ಪ್ರಾಚೀನ ಕಾಲದಿಂದಲೂ ಒಂದು ಸಾಂಸ್ಕೃತಿಕ, ಧಾರ್ಮಿಕ ಕೇಂದ್ರವಾಗಿದ್ದಿತು. ಇಲ್ಲಿ ಹಲವಾರು ದೇವಾಲಯಗಳೂ, ಧಾರ್ಮಿಕ ಕೇಂದ್ರಗಳೂ, ಶೈಕ್ಷಣಿಕ ಸಂಸ್ಥೆಗಳೂ ಕಾರ್ಯಶೀಲವಾಗಿದ್ದವು. ಇಲ್ಲಿನ ಜನ ಸುಸಂಪನ್ನರೂ, ವಿದ್ಯಾವಂತರೂ ಆಗಿದ್ದರು.

ಮಧ್ಯಕಾಲೀನ ಯುಗದಲ್ಲಿ ಬೇಗೂರು ಒಂದು ಪ್ರಸಿದ್ಧ ಅಗ್ರಹಾರವಾಗಿದ್ದಿತು. ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ ಬೇಗೂರಿನಲ್ಲಿ 300 ಜನ ಬ್ರಾಹ್ಮಣರಿದ್ದರು. ಇವರಲ್ಲದೆ ಬೇಸಾಯಗಾರರೂ ಇತರ ವೃತ್ತಿಯವರೂ ಈ ಊರಿನಲ್ಲಿದ್ದರು. ಕಾಳಂಭಟ್ಟ ಎನ್ನುವ ಬ್ರಾಹ್ಮಣ ಬೇಗೂರಿನ ಅಗ್ರಹಾರದಲ್ಲಿ ವಾಸಿಸುತ್ತಿದ್ದ. ಅವನಿಗಿದ್ದ ಒಬ್ಬಳೇ ಮಗಳು ಅಮೃತ. ಈಕೆ ನೋಡುವುದಕ್ಕೆ ಲಕ್ಷಣವಾಗಿದ್ದಂತೆ ಚುರುಕುಬುದ್ಧಿಯುಳ್ಳವಳಾಗಿದ್ದು ಓದುವುದರಲ್ಲಿ ತೀವ್ರ ಆಸಕ್ತಿಯನ್ನೂ ಬೆಳಸಿಕೊಂಡಿದ್ದಳು. ಕಾಲಕ್ರಮದಲ್ಲಿ ಆಕೆ ಆಧ್ಯಾತ್ಮ ಮಾರ್ಗದಲ್ಲಿ ಆಸಕ್ತಳಾಗಿ ಧರ್ಮ ಗ್ರಂಥಗಳಲ್ಲಿ, ಜಿಜ್ಞಾಸೆಗಳಲ್ಲಿ, ಜಪ ತಪಗಳಲ್ಲಿ ನಿರತಳಾಗಿರುತ್ತಿದ್ದಳು.

ಮಗಳ ಮನೋಭಾವವನ್ನು ಕಂಡು ಅವಳ ತಂದೆ ತಾಯಿಗಳು ವ್ಯಾಕುಲರಾದರು. ತನ್ನ ವಯಸ್ಸಿನ ಹುಡುಗಿಯರೊಂದಿಗೆ ಆಡಿಕೊಂಡಿರಬೇಕಾದ ಬಾಲಿಕೆ, ಗಂಭೀರವಾದ ಪಾರಮಾರ್ಥ ಚಿಂತನೆ ತೊಡಗಿರುವುದನ್ನು ನೋಡಿ ಗಾಬರಿಯಾದ ಕಾಳಂಭಟ್ಟ ಮಗಳ ಮದುವೆಯನ್ನು ಮಾಡಲು ನಿರ್ಧರಿಸಿದ್ದನು. ಮೇಲಾಗಿ ಹೆಣ್ಣು ಮಕ್ಕಳು ಋತುಮತಿಯಾಗುವುದಕ್ಕೆ ಮುನ್ನ ಅವರಿಗೆ ವಿವಾಹಮಾಡಬೇಕಾದುದು ಅಂದಿನ ಸಂಪ್ರದಾಯವಾಗಿದ್ದಿತು. ವಿವಾಹಕ್ಕೆ ಮೊದಲೇ ಬಾಲಕಿಯು ಋತುಮತಿಯಾದರೆ ಅವಳ ಕಣ್ಣಿಗೆ ಬಟ್ಟೆಯನ್ನು ಕಟ್ಟಿ, ಕಾಡಿಗೆ ಬಿಡಬೇಕೆಂಬ ಪದ್ಧತಿಯಿದ್ದಿತು. ಅಗ್ರಹಾರದ ಬ್ರಾಹ್ಮಣರು ಅಮೃತಳ ವಿವಾಹವನ್ನು ಮಾಡುವಂತೆ ಕಾಳಂಭಟ್ಟರಿಗೆ ಎಚ್ಚರಿಕೆ ಕೊಟ್ಟಿದ್ದರು.

ಅಮೃತ ವಿವಾಹವಾಗುವುದಕ್ಕೆ ಒಪ್ಪದೇ ಎಂದಿನಂತೆ ಧ್ಯಾನ ಪೂಜೆ ಪಾರಾಯಣಗಳಲ್ಲಿ ಮಗ್ನಳಾಗಿದ್ದಳು. ತಾನು ಗೃಹಿಣಿಯಾಗಿ ಬಾಳುವುದನ್ನು ಇಚ್ಛಿಸುವುದಿಲ್ಲವೆಂದು ತಿಳಿಸಿದಾಗ ಪೋಷಕರು ಅತೀವ ಚಿಂತೆಗೀಡಾದರು. ಕಡೆಗೆ ಬೇಗೂರಿನ ಗುರುಕುಲದ ಒಬ್ಬ ಬಾಲಕನನ್ನು ಹುಡುಕಿ ಅವನೊಡನೆ ಅಮೃತಳ ವಿವಾಹ ಮಾಡಲು ನಿಶ್ಚಯಿಸಿದ್ದರು. ಅಮೃತ ತನಗೆ ವಿವಾಹ ಮಾಡಿದರೆ ಮನೆಯವರು ತೀವ್ರವಾದ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆಂದು ಎಚ್ಚರಿಸಿದಳು. ಅದನ್ನು ಮುಗ್ಧ ಬಾಲಕಿಯ ಪ್ರಲಾಪವೆಂದು ಭಾವಿಸಿದ ಪಾಲಕರು ಅಮೃತಳ ವಿವಾಹವನ್ನು ಮಾಡಿ ಮುಗಿಸಿದರು.

ತಂದೆ ತಾಯಿಯರು ತಮಗೆ ಗಂಡಾಂತರ ತಪ್ಪಿತೆಂದು ನಿಟ್ಟುಸಿರುಬಿಟ್ಟರು. ಆದರೆ ಅಮೃತ ತನ್ನ ಪತಿಯಾದ ವ್ಯಕ್ತಿಯನ್ನು ಕರೆಸಿಕೊಂಡಳು. ಆತ ಬಂದು ನೋಡಿದಾಗ ಅಮೃತಳ ದೇಹವನ್ನು ಕತ್ತರಿಸಿ ಎಸೆದಂತೆ ಕಾಣಿಸಿತು. ಆತ ಗಾಬರಿಯಿಂದ ಓಡಿಹೋಗಿ ಬಂಧುಗಳಿಗೆ ತಿಳಿಸಿದ. ಅವರೆಲ್ಲ ಬಂದು ನೋಡಿದಾಗ ಅಮೃತ ಪದ್ಮಾಸನದಲ್ಲಿ ಕುಳಿತು ಧ್ಯಾನಾಸಕ್ತಳಾಗಿದ್ದಳು. ಅಮೃತ ತನ್ನನ್ನು ಮದುವೆಯಾದ ಬಾಲಕನನ್ನು ಮತ್ತೆ ಕರೆಸಿ ಆತಕೂಡಲೆ ಕಾಶಿಗೆ ಹೋಗಿ ಅಲ್ಲಿ ವಿವಿಧ ವಿದ್ವಾಂಸರಿಂದ ವಿದ್ಯೆಯನ್ನು ಕಲಿತುಕೊಂಡು ಬರುವಂತೆ ಆಜ್ಞೆನೀಡಿದಳು.

ಅಮೃತಳನ್ನು ವಿವಾಹವಾಗಿದ್ದ ಯುವಕ (ವಯಸ್ಸು 14-15) ಕಾಶಿಗೆ ಎಲ್ಲರಂತೆ ನಡೆದು ಹೋದ ಹಲವು ತಿಂಗಳ ಪ್ರಯಾಣ ಮಾಡಿ ಕಾಶಿ ಸೇರಿದ ಕೆಲವು ತಿಂಗಳ ಕಾಲ ಆತನ ಬಗ್ಗೆ ಯಾವ ಸುದ್ದಿಯೂ ಇರಲಿಲ್ಲ. ಆನಂತರ ಬೇಗೂರಿಗೆ ಒಂದು ಕೆಟ್ಟಸುದ್ದಿ ಬಂದು ತಲುಪಿತು. ಅಮೃತಳ ಪತಿಯಾಗಿದ್ದ ವ್ಯಕ್ತಿ ಆಕಸ್ಮಿಕವೊಂದರಲ್ಲಿ ಗಂಗೆಗೆ ಬಿದ್ದು ಮೃತನಾಗಿದ್ದ. ಕಾಳಂಬಟ್ಟರ ಕುಟುಂಬ ಶೋಕಸಾಗರದಲ್ಲಿ ಮುಳುಗಿತು. ಬ್ರಾಹ್ಮಣ ಸಂಪ್ರದಾಯದಂತೆ ಅಮೃತ ವಿಧವೆಯರು ಅನುಸರಿಸಬೇಕಾದ ನೀರಿ ನಿಯಮಗಳನ್ನು ಪಾಲಿಸಬೇಕಾಯಿತು ಆದರೆ ಅಮೃತ ಯಾವುದೇ ಕಟ್ಟು ಪಾಡುಗಳನ್ನೂ ಅನುಸರಿಸಲು ನಿರಾಕರಿಸಿದಳು. ಅವಳು ಗ್ರಂಥಪಠಣ, ಧ್ಯಾನ, ಆರಾಧನೆಗಳಲ್ಲಿ ತೊಡಗಿಸಿಕೊಂಡಳು. ಅಗ್ರಹಾರದ ಜನರು ಈಕೆ ಕೇಶಮುಂಡನ ಮಾಡಿಸಿ ಕೆಂಪು ಸೀರೆ ಉಟ್ಟು ಮೂಲೆಯೊಂದರಲ್ಲಿ ಕುಳಿತಿರಬೇಕೆಂದು ಆಗ್ರಹಪಡಿಸಿದರು.

ಅಮೃತ ಊರಿನ ಜನರ ನಂಬಿಕೆ, ಸಮಾಜಪದ್ದತಿಗಳನ್ನು ಧಿಕ್ಕರಿಸಿದಳು. ಬಾಲ್ಯವಿವಾಹ, ಪುರುಷ ಪ್ರಧಾನ ಸಮಾಜದ ಸ್ತ್ರೀ ಶೋಷಣೆಗಳನ್ನು ವಿರೋಧಿಸಿ, ಸನಾತನಿಗಳಿಗೆ ಪ್ರತ್ಯುತ್ತರ ನೀಡಿದಳು. ಆಕೆ ಊರಿನ ಸ್ತ್ರೀಯರನ್ನು ಬಾಲಕ ಬಾಲಕಿಯರನ್ನೂ ಸಂಧಿಸಿ, ಮೂಢನಂಬಿಕೆ, ಅನಾಚಾರಗಳನ್ನೂ ತೊರೆಯಬೇಕೆಂದು ಮನವಿ ಮಾಡಿದಳು.

ಬೇಗೂರಿನ ಅಗ್ರಹಾರದ ಮುಖಂಡರಿಗೆ ಅಮೃತಳ 'ಧರ್ಮವಿರೋಧಿ' ವರ್ತನೆ ದೊಡ್ಡಸಮಸ್ಯೆಯಾಗಿ ಕಾಡಿತು. ತಾವು ವೇದಪುರಾಣ ಶಾಸ್ತ್ರಗಳಲ್ಲಿ ನಿಷ್ಣಾತರೆಂತಲೂ, ತಮ್ಮ ಅಭಿಪ್ರಾಯ, ಸಲಹೆಗಳನ್ನು ಉಲ್ಲಂಘಿಸುವುದು ಸಾಧ್ಯವಿಲ್ಲವೆಂದೂ ಅವರು ವರ್ತಿಸಿದರು. ತಮ್ಮ ಕಣ್ಣಮುಂದೆ ಹುಟ್ಟಿ ಬೆಳೆದ ಈ ಬಾಲಕಿಯು ತಮ್ಮ ಆಚಾರ ವಿಚಾರಗಳನ್ನು ಪ್ರಶ್ನಿಸಿದ್ದನ್ನು ಕಂಡು ಅವರು ಕೆಂಡಾಮಂಡರಾದರು. ಕಾಳಂಭಟ್ಟ ಅವರ ಪತ್ನಿ ಅಮೃತಳಿಗೆ ಈ ವಿಷಯವನ್ನು ತಿಳಿಸಿದರೂ ಪ್ರಯೋಜನವಾಗಲಿಲ್ಲ.

ಬೇಗೂರಿನ ಬ್ರಾಹ್ಮಣ ವರ್ಗಕ್ಕೆ ತಮ್ಮ ಆಜ್ಞೆಯನ್ನು ಧಿಕ್ಕರಿಸಿದ ಈ ಬಾಲಕಿಯ ಉದ್ಧಟತನವ ಮೆಟ್ಟಿಕ್ಕುವುದು ದೊಡ್ಡಸಮಸ್ಯೆಯಾಯಿತು. ಅವರು ಶೃಂಗೇರಿಮಠಕ್ಕೆ ದೂರು ನೀಡಿದರು. ಮಠದ ಏಜೆಂಟರು ಬೇಗೂರಿಗೆ ಆಗಮಿಸಿ, ತುಂಟ ಬಾಲಕಿಯನ್ನೂ ಸಂಧಿಸಿದರು. ಅಮೃತ ಸ್ತ್ರೀಯು ಪುರುಷನಷ್ಟೇ ಸ್ವತಂತ್ರಳೆಂದೂ, ಆದ್ಯಾತ್ಮ ಮಾರ್ಗದಲ್ಲಿ ಮುಂದುವರೆಯಲು ಯಾವ ಅಡ್ಡಿಯೂ ಇರಬಾರದೆಂದೂ ವಾದಿಸಿದಳು. ಅರ್ಥವಿಲ್ಲದ ಆಚರಣೆಗಳನ್ನೂ ಆಚರಿಸಲು ತಾನು ಒಪ್ಪುವುದಿಲ್ಲವೆಂದು ದೃಢಪಡಿಸಿದಳು. ವಿಧವೆಯರು ಅನುಸರಿಸಬೇಕಾದ ಕಟ್ಟುಪಾಡುಗಳನ್ನು ಧಿಕ್ಕರಿಸಿ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಬೇಕೆಂಬ ತನ್ನ ನಿರ್ಧಾರವನ್ನು ಪ್ರಕಟಿಸಿದಳು.

ಬೇಗೂರಿನ ಹಲವಾರು ಸ್ತ್ರೀಯರನ್ನು ಅಮೃತ ಪರಿವರ್ತಿಸುವ ಕಾರ್ಯವನ್ನು ಕೈಗೊಂಡಳು. ಆದರೆ ಅಗ್ರಹಾರದ ಬ್ರಾಹ್ಮಣರು ತಮ್ಮ ಧರ್ಮಶಿಕ್ಷಣ ಕಾರ್ಯವನ್ನೂ ಬಿಡಲಿಲ್ಲ. ಶೃಂಗೇರಿ ಜಗದ್ಗುರುಗಳಿಗೆ ಅವರು ದೂರುನೀಡಿ ಜಗದ್ಗುರುಗಳು ಕೆಲದಿನಗಳಾದ ಮೇಲೆ ಆಗಮಿಸಿದರು. ಅಮೃತಳ ಕುಟುಂಬದವರು ಸ್ವಾಮಿಗಳನ್ನು ನೋಡಲು ಹೋಗಲಿಲ್ಲ. ಕಡೆಗೆ ಆ ಸ್ವಾಮಿಗಳೇ ಅಮೃತಳನ್ನೂ ನೋಡಿ ಅವಳ ಒಂದು ದೇವಾಲಯಕ್ಕೆ ಬಂದರು. ಅಮೃತ ಸ್ವಾಮಿಗಳನಡುವೆ ಧರ್ಮಶಾಸ್ತ್ರ ಪುರಾಣಗಳನ್ನು ಕುರಿತ ಧೀರ್ಘ ಚರ್ಚೆಯಾಯಿತು. ಈ ಭೇಟಿಯ ನಂತರ ಶೃಂಗೇರಿ ಸ್ವಾಮಿಗಳು ತಮ್ಮ ಶಿಷ್ಯರನ್ನು ಬೇಗೂರಿನ ಬ್ರಾಹ್ಮಣರನ್ನ ಕರೆದು ಈಕೆ ಸಾಮಾನ್ಯ ವ್ಯಕ್ತಿಯಲ್ಲವೆಂದು ಹೇಳಿ ಶಕ್ತಿ ಆಕೆಯನ್ನು ತನ್ನ ಪಾಡಿಗೆ ಬಿಟ್ಟು ಬಿಡಬೇಕೆಂದು ತಿಳಿಸಿದರು.

ಆದರೆ ಬೇಗೂರಿನ ಸಂಪ್ರದಾಯಸ್ಥ ಬ್ರಾಹ್ಮಣರಿಗೆ ಈ ತೀರ್ಮಾನ ಒಪ್ಪಿಗೆಯಾಗಲಿಲ್ಲ. ಅಮೃತಳ ವರ್ತನೆ ಅವರಿಗೆ ಸವಾಲಾಗಿದ್ದಿತು. ಆದರೆ ಊರಿನ ಅನೇಕ ಜನರಿಗೆ ಸುತ್ತಮುತ್ತಲಿನ ಜನರಿಗೆ, ಅಮೃತ ಒಬ್ಬ ಕ್ರಾಂತಿಕಾರಿ ವೀರಮಹಿಳೆಯಾಗಿ ಕಾಣಿಸಿದಳು. ಅದರಲ್ಲೂ ಹಿಂದುಳಿದ ವರ್ಗದ ಸ್ತ್ರೀಯರಿಗೆ ಆಕೆ ಆದರ್ಶವಾದಳು ಅವಳ

ಖ್ಯಾತಿ ಹೆಚ್ಚುತ್ತಾ ಹೋದಂತೆ ಬೇಗೂರಿನ ಅಗ್ರಹಾರದ ಮುಖಂಡರ ಅಸಮಾಧಾನ ಹೆಚ್ಚಿತು. ಕಾಳಂಭಟ್ಟರ ಕುಟುಂಬದ ಮೇಲೆ ಅವರು ಬಹಿಷ್ಕಾರವನ್ನು ವಿಧಿಸಿದರು. ಭಟ್ಟರು ಊರು ಬಿಟ್ಟು ಮೈಸೂರಿಗೆ ಹೋಗಿ ನೆಲಸಿದರು. ಅಮೃತ ಬೇಗೂರಿನ ಹಳೆದೇವಾಲಯದ ಒಂದು ಮಂಟಪದಲ್ಲಿ ಒಬ್ಬಳೇ ಜೀವಿಸುತ್ತಿದ್ದಳು. ಕೆಲವು ಗ್ರಾಮಸ್ಥರು ಅವಳಿಗೆ ಹಾಲು ಹಣ್ಣು, ಆಹಾರವನ್ನು ಒದಗಿಸುತ್ತಿದ್ದರು.


ಈ ಮಧ್ಯೆ ಸುಂದರಿ ಅಮೃತಳ ಮೇಲೆ ಕೆಲವರ ಕಣ್ಣು ಬಿದ್ದಿತು. ಆದರೆ ಅಮೃತ ಬಾಹ್ಯ ಜೀವನದ ಆಕರ್ಷಣೆ ವ್ಯಾಮೋಹಗಳನ್ನು ಮೆಟ್ಟಿ ನಿಂತು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದೆ ಸಾಗಿದ್ದಳು. ಪ್ರಾಪಂಚಿಕ ಸುಖ ಸಂಪತ್ತುಗಳಿಂದ ಬಿಡುಗಡೆ ಹೊಂದಿ ಆತ್ಮಶೋಧನೆಯ ಕಾರ್ಯದಲ್ಲಿ ತಲ್ಲೀನರಾಗಿದ್ದರು. ಅಮೃತ ಊರಿನ ಜನರಿಗೆ ಆಗಾಗ ಆಧ್ಯಾತ್ಮಿಕ ತತ್ವಗಳನ್ನು ಬೋಧಿಸುತ್ತಿದ್ದಳು. ಗ್ರಾಮೀಣ ಜನತೆಯಲ್ಲಿ ಮನೆ ಮಾಡಿದ್ದ ಮೌಢ್ಯ, ಮೂಢನಂಬಿಕೆಗಳನ್ನು ತೊಲಗಿಸಿ ಪ್ರತಿಯೊಬ್ಬರೂ ಪರಹಿತವನ್ನು ಗಮನದಲ್ಲಿಟ್ಟುಕೊಂಡು ಜೀವಿಸಬೇಕೆಂದು ಕರೆಯಿತ್ತರು. ಬೇಗೂರಿನ ಜನರು ಆಕೆಯನ್ನೇ ನಂಬಿಕೆಯಿಟ್ಟು ಆಕೆಯನ್ನು ಪೂಜ್ಯಭಾವನೆಯಿಂದ ನೋಡುತ್ತಿದ್ದರು. ತಮ್ಮ ಸಂಕಷ್ಟಗಳನ್ನು ಅವಳ ಬಳಿ ಹೇಳಿಕೊಳ್ಳುತ್ತಿದ್ದಳು. ಅನೇಕ ರೋಗಿಗಳಿಗೆ ಅಮೃತ ಔಷಧಿ ಕೊಟ್ಟು ಗುಣಪಡಿಸುತ್ತಿದ್ದಳು. ಹೀಗೆ ಅಮೃತ ಬೇಗೂರಿನಲ್ಲಿ ಮಾತ್ರವಲ್ಲದೆ ಪಕ್ಕದ ಕೆಲವು ಹಳ್ಳಿಗಳಲ್ಲೂ ತನ್ನ ಯೋಗ ಸಾಧನೆ ಆಧ್ಯಾತ್ಮಿಕ ಮನೋಭಾವನೆಯಿಂದ ಮನೆಮಾತಾಗಿದ್ದಳು. ಹೀಗೆ ಹಲವಾರು ವರ್ಷಗಳು ಬೇಗೂರು ಗ್ರಾಮದಲ್ಲಿ ದೇವಿ ಸಮಾನಳಾಗಿ ಪೂಜಿಸಲ್ಪಡುತ್ತಿದ್ದ ಅಮೃತ ತಾನು ಜೀವ ಸಮಾಧಿಗೆ ಪ್ರವೇಶಿಸುವುದಾಗಿ ಪ್ರಕಟಿಸಿದಳು. ತನ್ನ ಸುತ್ತಲಿನ ಜನರಿಗೆ ಸಮಾಧಿಗೆ ಅಗತ್ಯವಾದ ವ್ಯವಸ್ಥೆಯನ್ನು ಮಾಡುವಂತೆ ತಿಳಿಸಿದಳು. ಅಮೃತ ತನ್ನ ಜೀವನವನ್ನು ಕೊನೆಗಾಣಿಸುವ ಮುನ್ನ ಬೇಗೂರಿನ ಬ್ರಾಹ್ಮಣರಿಗೆ ಒಂದು ಶಾಪವನ್ನು ನೀಡಿದರು. ತನ್ನನ್ನು ವಿಧವಿಧವಾಗಿ ಹಿಂಸಿಸಿದ ಊರಿನ ಮತಾಂಧ ಬ್ರಾಹ್ಮಣರು ಊರಿನಲ್ಲಿ ಉಳಿಯಕೂಡದೆಂದು ಶಾಪವಿತ್ತರು. ಅಮೃತಳು ಜೀವ ಸಮಾಧಿಯಾದ ನಂತರ ಬೇಗೂರಿನ ಬ್ರಾಹ್ಮಣರು ಅನೇಕ ವಿಧವಾದ ಕಷ್ಟ ಕಾರ್ಪಣ್ಯಗಳಿಗೆ ಗುರಿಯಾದರು. ಕಡೆಗೆ ಇಡೀ ಗ್ರಾಮದಲ್ಲಿ ಒಬ್ಬರೂ ಬ್ರಾಹ್ಮಣರು ಇಲ್ಲದಂತಾಯಿತು. ಕ್ರಾಂತಿಕಾರಿ ಸನ್ಯಾಸಿನಿ, ಅಮೃತಳ ನೆನಪು ಬೇಗೂರಿನ ಜನ ಮನಸ್ಸಿನಿಂದ ಎಂದಿಗೂ ಮರೆಯಾಗಲಿಲ್ಲ. ಅಮೃತಳ ಕೆಲವು ಭಕ್ತರು ಆಕೆಗೋಸ್ಕರ ಒಂದು ದೇವಾಲಯವನ್ನು ನಿರ್ಮಿಸಲು ತೀರ್ಮಾನಿಸಿದರು. ಪಟೇಲ್ ಕೃಷ್ಣಪ್ಪನವರು ತಮ್ಮ ಕನಸಿನಲ್ಲಿ ಅಮೃತಳು ಕಾಣಿಸಿಕೊಂಡಳೆಂದು ಅದರಂತೆ ಆಕೆಯ ಮೂರ್ತಿಯನ್ನು ರಚಿಸಬೇಕೆಂದು ತಿಳಿಸಿದರು. ಅದರಂತೆ ಶಿವಾರ ಪಟ್ಟಣದ ಶಿಲ್ಪಿಗಳಿಂದ ಮೂರು ಅಡಿ ಯೋಗಿನಿ ಮೂರ್ತಿಯ ಶಿಲ್ಪವನ್ನು ಕೆತ್ತಿಸಿ, ಬೇಗೂರಿನ ದೇವಾಲಯದಲ್ಲಿ ಅದನ್ನು ಪ್ರತಿಷ್ಠಾಪಿಸಲಾಯಿತು. ಈ ದೇವಾಲಯದಲ್ಲಿ ಊರಿನ ಜನರು ಪೂಜೆ ಆರಾಧನೆಯನ್ನು ನಡೆಸುತ್ತಾರೆ. ಆದರೆ ಬ್ರಾಹ್ಮಣರು ಯಾರೂ ಈ ಮಂದಿರಕ್ಕೆ ಪ್ರವೇಶ ಮಾಡುವಂತಿಲ್ಲ. ಅಮೃತ ಕಾಲಕ್ರಮದಲ್ಲಿ ಅಮ್ಮಣ್ಣಮ್ಮ ಎಂದಾಯಿತು. ಈಕೆಯು ಊರಿನ ಜನರಿಗೆ ಆರಾಧ್ಯ ದೇವತೆಯಾಗಿದ್ದಾಳೆ. ಊರಿನ ಪೂರ್ವ ಭಾಗದಲ್ಲಿರುವ ಈ ದೇವಾಲಯದಲ್ಲಿ ಪೌರ್ಣಿಮ ದಿನ ವಿಶೇಷ ದಿನಗಳಲ್ಲಿ ಪೂಜೆಯನ್ನು ಮಾಡುತ್ತಾರೆ. ಅನೇಕರು ಆಕೆಯ ಚಿತ್ರವನ್ನು ಮನೆಯಲ್ಲಿಟ್ಟು, ಪೂಜಿಸುತ್ತಾರೆ. ಅಮ್ಮಣ್ಣಮ್ಮ ದೇವಿಯನ್ನು ಆರಾಧಿಸುವುದರಿಂದ ತಮ್ಮೆಲ್ಲಾ ಕಷ್ಟಗಳು ಪಾರಾಗುವುದೆಂದು ಊರಿನ ಜನರು ನಂಬುತ್ತಾರೆ. ಆಕೆಯನ್ನು ಕುರಿತು ಅನೇಕ ಜನಪದ ಹಾಡುಗಳೂ ಪ್ರಚಲಿತವಾಗಿವೆ. ಅವುಗಳಲ್ಲಿ ಒಂದನ್ನು ಇಲ್ಲಿ ಕೊಡಲಾಗಿದೆ.

ಅಮ್ಮ ಅಮ್ಮ ಅಮ್ಮಣ್ಣಮ್ಮ
ನಮಗೆಲ್ಲ ಗುರು ನೀನಮ್ಮ

ಬ್ರಾಹ್ಮಣರ ಕುಲದಲಿ ಜನಿಸಿದೆ
ವೈರಾಗ್ಯ ನಿಧಿ ಎನಿಸಿದೆ
ಪವಾಡ ತೋರಿದ ಗುರು ನೀನಾದೆ
ಪವನ ಬಂಧಿಸಿ ಪಾರಾದೆ
ಜೀವನ ಸಮಾಧಿಯು ನೀನಾದೆ
ದೇವಿಯು ಆದೆ ಗುರುವಾದೆ
ಪಾವನ ಮಾಡು ನಮ್ಮನ್ನು
ಜೀವನ ಮಾರ್ಗವ ತೋರಮ್ಮ

ಭಾರತೀಯರು ಹಾಗೂ ವಿದೇಶಿಯರು ಸೇರಿದಂತೆ ಎಲ್ಲರ ಗಮನವನ್ನು ತನ್ನತ್ತ ಸೆಳೆಯುವಲ್ಲಿ ಬೆಂಗಳೂರು ನಗರ ಜಿಲ್ಲೆ ಯಶಸ್ವಿಯಾಗಲು ಅದರ ಅಸಾಮಾನ್ಯ ಆಕರ್ಷಣೆಯೇ ಕಾರಣ. ಈ ಜಿಲ್ಲೆಯ ಸಮಗ್ರ ಅಧ್ಯಯನ ಕುರಿತು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಸಹಯೋಗದೊಂದಿಗೆ 2011ರ ಏಪ್ರಿಲ್ ತಿಂಗಳ ದಿನಾಂಕ 12 ಮತ್ತು 13 ರಂದು ಬೆಂಗಳೂರು ನಗರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ಬೆಂಗಳೂರು ನಗರ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿ ಕುರಿತಂತೆ ಇತ್ತೀಚಿನ ವರ್ಷಗಳಲ್ಲಿ ವಿದ್ವಾಂಸರು ಮಾತ್ರವಲ್ಲದೇ ಜನ ಸಾಮಾನ್ಯರೂ ಸಹ ಆಸಕ್ತಿ ವಹಿಸುತ್ತಿರುವುದು ಸಂತೋಷದ ವಿಷಯವಾಗಿದೆ. ಪ್ರಸ್ತುತ ಸಮ್ಮೇಳನದಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿರುವ ವಿದ್ವಾಂಸರು ಬೆಂಗಳೂರು ನಗರ ಜಿಲ್ಲೆಯ ಇತಿಹಾಸ, ಪುರಾತತ್ವ, ಸಂಸ್ಕೃತಿ ಮತ್ತು ಆರ್ಥಿಕಾಭಿವೃದ್ಧಿ ಮುಂತಾದ ವಿಷಯಗಳ ಬಗ್ಗೆ ಉಪಯುಕ್ತ ಮತ್ತು ಆಸಕ್ತಿದಾಯಕ ಮಾಹಿತಿ ಮತ್ತು ಒಳನೋಟಗಳನ್ನು ನೀಡಿರುತ್ತಾರೆ. ಹಿಂದಿನ ಸಮ್ಮೇಳನಗಳಲ್ಲಿ ಮಂಡಿಸಿದ ಇತರೆ ಜಿಲ್ಲೆಗಳ ಇತಿಹಾಸ ಮತ್ತು ಪುರಾತತ್ವ ಕುರಿತ ಸಂಪುಟಗಳನ್ನು ಪ್ರಕಟಿಸಿರುವ ರೀತಿಯಲ್ಲೆಯೇ ಬೆಂಗಳೂರು ನಗರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಸಂಪುಟವನ್ನು ಇಲಾಖೆಯು ಅಚ್ಚುಕಟ್ಟಾಗಿ ಸಂಪಾದಿಸಿ ಪ್ರಕಟಿಸಿರುತ್ತದೆ. ಈ ಸಂಪುಟವನ್ನು ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಬಗೆಗೆ ಆಸಕ್ತಿದಾಯಕ ವಿದ್ವಾಂಸರು, ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ತೆರೆದ ಮನಸ್ಸಿನಿಂದ ಸ್ವಾಗತಿಸುತ್ತಾರೆಂದು ಭಾವಿಸಲಾಗಿದೆ.



ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಮೈಸೂರು